ಪೇಶಾವರದಲ್ಲಿನ [illegible] ಕೈದುಮಾಡಿ [illegible] ಕೈದುಮಾಡಿದ [illegible] ಸರಕಾರದ ವಕ್ಷ್ಯಭಾಷಣಗಳ [illegible] ಸ್ಥಿತಿಯು [illegible] ಭಾರತೀಯ ವಾತಾವರಣವು [illegible] ಸೂಚಿಸುತ್ತದೆ ಪೇಶಾವರದ ಕೊಂಗ್ರೆಸ್ ಸಂಸ್ಥೆಗಳು [illegible] ವಿರೋಧವಾದವುಗಳೆಂದು ನಿರ್ಧರಿಸಲ್ಪಡಲಾಗಿ ಕೈದುಗಳು ನಡೆಯುತ್ತಿವೆ ಪೋಲೀಸರ ಕೈಗೆ [illegible] ಕೊಟ್ಟು [illegible] ನನ್ನಿಂದ ಮುಂಬಯಿಗೆ [illegible] ಖಾನರು [illegible] ಕೈದುಮಾಡ [illegible] ಜನರಲ್ ಸೆಕ್ರೆಟರಿಯಾಗಿ [illegible] ಜವಾಹರಲಾಲರನ್ನೂ [illegible] ಸಂಯುಕ್ತಪ್ರಾಂತ್ಯದ ಕೊಂಗ್ರೆಸ್ ಕಮಿಟಿಯ [illegible] ಸ್ಥಾನೀಯ ವರನ್ನೂ ಕೈದುಮಾಡಿ [illegible] ಈ ವರ್ತನೆಗಳೆಲ್ಲ ಕೊಂಗ್ರೆಸ್ಸಿನ ಮೇಲೆ [illegible] ಗಾಂಧಿ ಅರ್ವಿನ್ [illegible] ಮಹಾತ್ಮಾ ಗಾಂಧಿಯವರು ಇಲ್ಲಿಗೆ [illegible] ಸರಕಾರವು ಹೀಗೆ ಮಾಡುತ್ತಿರುವುದೆಂದರೆ ಏನೋ ವಿಚಿತ್ರ ವಿಷಯವಿದೆ [illegible] ಘಟನೆಗಳಲ್ಲಿ [illegible] ಕಟ್ಟಿದೆ [illegible] ಇದರಿಂದ ತಿಳಿದ ಅದರೂ ಚಿಂತೆಯಿಲ್ಲ ನಾವು ನಮ್ಮ ಮುಂದಾಳು ಮಹಾತ್ಮಾ ಗಾಂಧಿಯವರ ಅಪ್ಪಣೆಯೇನಿರುವುದೋ [illegible] ಒಂದೋ ನಾವು ವಿಜಯಿಗಳಾಗಬೇಕು ಒಂದೋ ಭಾರತೀಯರು ಭೂತಲದಿಂದ ನಿರ್ಮೂಲರಾಗಬೇಕು. ಹಾಗೂ ನಾವು ಸ್ವಾತಂತ್ರ್ಯವನ್ನು ಪಡೆಯಲೇ ಬೇಕು ಗೌರವದಿಂದ ಸಾಯಲು ಸಮಯವು ಸನ್ನಿಹಿತವಾಗುತ್ತಿದೆ ಆ ಶುಭ ಸಮಯವನ್ನು ಆನಂದದಿಂದ ನಿರೀಕ್ಷಿಸೋಣ ಶಿಕ್ಷೆಗಳನ್ನು ಸಮಾಧಾನದಿಂದ ಅನುಭವಿಸೋಣ" ಎಂದಿರುವರು.

"ದರಿದ್ರನಾರಾಯಣನಾಗಮನ"

ಹನ್ನೊಂದು ಮಂದಿಗಳಿಗೆ ಗುಂಡೇಟು – ಮರಣ.

ಮಹಾತ್ಮಾ ಗಾಂಧಿಯವರು ದಶಂಬರ ೨೮ನೇ ದಿನ ಬೆಳಗ್ಗೆ ೮ ಘಂಟೆಗೆ 'ಪಿಲ್ಸನ್ನ' ಸ್ಟೀಮರಿನಲ್ಲಿ ಮುಂಬಾಯಿಗೆ ತಲಪಿದರು ಏಣಿ ಇಳಿಸಲಾಗಿ ಶ್ರೀಮತಿ ಕಸ್ತೂರಿಬಾಯಿ, ವಲ್ಲಭಭಾಯಿ ಪಟೇಲ್ ಮತ್ತು ಕಾರ್ಯಕಾರಿ ಮಂಡಳಿಯ ಇನ್ನಿತರ ಸದಸ್ಯರೂ ಸ್ಟೀಮರಿಗೆ ಹೋದರು ಕಸ್ತೂರಿಬಾಯಿಯವರು ಪತಿಯ ಪಾದಗಳಿಗೆರಗಿದರು. ಗಾಂಧಿಯವರು ಅವರ ಬೆನ್ನು ತಟ್ಟಿ ಎಬ್ಬಿಸಿದರು. ವಲ್ಲಭಭಾಯಿಯವರು ಪುಷ್ಪ ಮಾಲಿಕೆಯನ್ನು ಹಾಕಿ ಅವರನ್ನಪ್ಪಿಕೊಂಡರು. ಗಾಂಧೀಜೀಯವರು ಅವರ ಬೆನ್ನಿಗೂ ತಟ್ಟಿದರು ಮೌನವ್ರತದಿನವಾದುದರಿಂದ ಅವರು ಯಾರೊಡನೆಯೂ ಮಾತನಾಡಲಿಲ್ಲ ಜನಜನಿನಲ್ಲಿ 'ಗಾಂಧಿಕೀ ಜೈ' ಎಂಬ ಜಯಘೋಷವು ಘಂಟಾಘೋಷವಾಗಿ ಪ್ರತಿಧ್ವನಿಸಿತು ಅಬ್ಬಾಸ್ ತಯ್ಯಾಬ್ಜಿ ಡಾ|| ಅನ್ಸಾರಿ ಮೊದಲಾದವರನ್ನು ಗಾಂಧೀಜೀಯವರು ಆನಂದದಿಂದ ತಬ್ಬಿಕೊಂಡರು

ಮೋಲ್ ಸ್ಟೇಷನಿಗೆ ತಲಪುತ್ತಲೇ ಅಲ್ಲಿ ಗಾಂಧಿಯವರ ಕೊರಳಿಗೆ ಹೂವಾಲೆಗಳು ಬೆಟ್ಟವಿಲ್ಲದವಷ್ಟು ಬಿದ್ದುವು ಸ್ಟೇಷನಿನೊಳಗೆ ಹೋಗಲು ಟಿಕೇಟಿತ್ತಾದರೂ ಜನಸಮುದಾಯವು ಕಿಕ್ಕಿರಿದುಹೋಯಿತು ಶ್ರೀಯುತ ಸುಭಾಷ್ಚಂದ್ರ ಬೋಸರೂ ಅವರ ಅನುಯಾಯಿಗಳೂ ಗಾಂಧೀಜೀಯವರಿಗೆ ಬಂಗಾಳ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಪರವಾಗಿ ಹೂಮಾಲೆ ಹಾಕುವಾಗ ಬಹಳವಾದ ಸಂತೋಷ ಸೂಚಕ ಚಿಹ್ನೆಯು ಜನರಿಂದ ಕಂಡುಬಂತು ತಮಿಳುನಾಡಿನ ಪರವಾಗಿ ಶ್ರೀ ರಾಜಗೋಪಾಲಾಚಾರ್ಯ ಮೊದಲಾದವರಿದ್ದರು

ವಲ್ಲಭಭಾಯಿ ಪಟೇಲರು ಗಾಂಧೀಜೀಯವರಿಗೊಂದು ಮುದ್ರೆ ಹಾಕಿದ ಕಾಗದವನ್ನು ಕೊಟ್ಟರು ಜವಾಹರಲಾಲರು ತನ್ನ ಬಂಧನದ ಮೊದಲು ಗಾಂಧೀಜೀಯವರಿಗೆ ಬರೆದಿರುವ ಕಾಗದವದೆಂದು ತಿಳಿಯಲಾಯಿತು

ಲಕ್ಷಗಟ್ಟಲೆ ಜನತಂಡದ ಮಧ್ಯ ಗಾಂಧೀಜೀಯವರ ಮೋಟಾರು ಕಾರು ಮಣಿಭವನದತ್ತ ಕಡೆ ಹೊರಟಿತು ದಾರಿಯುದ್ದಕ್ಕೂ ಸ್ವಯಂಸೇವಕರೂ ಸೇವಿಕೆಯರೂ ರಾಷ್ಟ್ರಧ್ವಜ ಸಮೇತರಾಗಿ ನಿಂತಿದ್ದು ಜಯಘೋಷವನ್ನಿತ್ತಿದರು ಶ್ರೀಯುತ ವಿಠಲ್‌ಭಾಯಿ ಪಟೇಲರು ಗಾಂಧೀಜೀಯವರೊಡನಿದ್ದರು

ಅವರ ಮೋಟಾರಿನ ಹಿಂದೆ ನೂರಾರು ಮೋಟಾರುಕಾರುಗಳು ಸಾಲುಗಟ್ಟಿ ಹೊರಟವು

ತನ್ಮಧ್ಯೆ ಅಸ್ಪೃಶ್ಯರ ಮುಂದಾಳೆಂದೆನಿಸಲ್ಪಟ್ಟ ಡಾ|| ಅಂಬೆಡ್ಕಾರರ ಅನುಯಾಯಿಗಳಾದ ಕೆಲವರು ಕಪ್ಪು ಪತಾಕೆಗಳನ್ನು ಹಿಡಿದುಕೊಂಡು 'ಗಾಂಧಿಯು ನಮ್ಮ ಕೇಳಿಕೆಗಳಿಗೆ ಅಡ್ಡ ಬಂದಿರುವ'ನೆಂದು ಆರ್ಭಟಿಸಿದರು ಕೆಲವು ಕೊಂಗ್ರೆಸುವಾಲರಿಗೂ ಅಂಬೆಡ್ಕಾರರ ಆ ಮಂದಮತಿಗಳಿಗೂ ಕೈಕೈ ನಡೆಯಿತು ದ್ವಿಪಕ್ಷಗಳಿಂದಲೂ ಕೆಲವರು ಆಸ್ಪತ್ರೆಗೊಯ್ಯಲ್ಪಟ್ಟರು ಅಂಬೆಡ್ಕಾರ್ ಅನುಯಾಯಿಗಳು ದೊಣ್ಣೆ ಲಾಠಿಗಳನ್ನು ಹಿಡಿದುಕೊಂಡಿದ್ದರು ಹೋರಾಟವು ಮೊದಲಾಗಿ ಕೂಡಲೆ ಪೋಲೀಸರು ಅಲ್ಲಿಗೆ ಬಂದು ಅಂಬೆಡ್ಕಾರರ ಜನರೊಡನಿದ್ದ ಕೋಲುಗಳನ್ನು ಕಸಿದುಕೊಂಡು ಕೊನೆಗೆ ಅವರೆಲ್ಲರನ್ನೂ ಅಲ್ಲಿಂದ ಓಡಿಸಿಬಿಟ್ಟರು

ಮೌನವ್ರತದ ಅದಿಯಲ್ಲಿ ಗಾಂಧೀಜೀಯವರ ತನ್ನ ಕಾರ್ಯಕಲಾಪಗಳೇನಿರುವುವೆಂಬುದರ ಕುರಿತು ಹೀಗೆ ಹೇಳಿದರು 'ನಾನು ಭಾರತವನ್ನು ಸಮೀಪಿಸಿರುವೆನು ನನ್ನ ಜವಾಬ್ದಾರಿಕೆಯು ಅಮೋಘವಾಗಿರುವುದು ಆದುದರಿಂದ ನಾನು ಅವಸರದಿಂದ ಯಾವ ಕೆಲಸವನ್ನೂ ಮಾಡಬಾರದು ಭಾರತೀಯ ಸ್ವಾತಂತ್ರ್ಯ ಸಾಧನೆಗಾಗಿ ತೀಕ್ಷ್ಣ ಚಳವಳವನ್ನು ಹೂಡುವುದರ ಮೊದಲು ನಾನು ನನ್ನಲ್ಲಿರುವ ಸಕಲ ಸಾಧನೆ ಸಂಪೂರ್ಣವಾಗಿ ಉಪಯೋಗಿಸಿ ನೋಡುವೆನು ಅವುಗಳು ನಿರರ್ಥಕವಾಗುವುವೋ ನೋಡುವೆನು ನಾನು ಸನ್ಮಾರ್ಗ ಸೂಚನೆಗಾಗಿ ಭಗವಂತನೊಡನೆ ಅನವರತವೂ ಬೇಡುತ್ತಿರುವೆನು ನನ್ನ ಧರ್ಮತತ್ವಕ್ಕನುಗುಣವಾಗಿ ನಾನು ನಿಶ್ಚಲವಾಗಿ ನಿಂತರೆ ಆತನು ನನ್ನ ಕೈಬಿಟ್ಟುಬಿಡಲಾರನೆಂದು ನನಗೆ ಗೊತ್ತಿರುತ್ತದೆ. ಯುರೋಪಿಯ ದೇಶಸಂಚಾರದಿಂದಾಗಿ ಸತ್ಯ ಮತ್ತು ಅಹಿಂಸಾ ತತ್ವಗಳ ಮೇಲಿನ ನನ್ನ ವಿಶ್ವಾಸವು ಅಭಿವೃದ್ಧಿಗೊಂಡಿದೆ. ನನ್ನ ಜೀವಮಾನದಲ್ಲಿ ಈ ವಿಶ್ವಾಸವನ್ನು ಪರಿಪಾಲಿಸುವ ಕೆಲಸಕ್ಕಿಂತ ಘನವಾದ ಇನ್ನೊಂದು ಕೆಲಸವು ನನಗಿಲ್ಲ" ಎಂದರು

ಸಂಜೆಯಲ್ಲಿ ಗಾಂಧೀಜೀಯವರು ತನ್ನ ಮೌನವ್ರತವನ್ನು ಕೊನೆಗಾಣಿಸಿದರು ಅವರ ಮಾತುಗಳನ್ನು ಕೇಳಬೇಕೆಂದು ತವಕಗೊಳ್ಳುತ್ತಿದ್ದ ಜನರು ಪತ್ರಿಕಾಪ್ರತಿನಿಧಿಗಳೂ ಅವರಿಗೆ ವಿವಿಧ ಪ್ರಶ್ನೆಗಳನ್ನು ಹಾಕಿದರು ಅದಕ್ಕೆ ಗಾಂಧೀಜೀಯವರು ಹೇಳಿದ್ದೇನೆಂದರೆ —ನಾನು ಪ್ರಧಾನ ಮಂತ್ರಿಯವರ ಹೇಳಿಕೆಯನ್ನೂ ಪಾರ್ಲಿಮೆಂಟಿನಲ್ಲಿ ಭಾರತದ ಕುರಿತು ನಡೆದ ಚರ್ಚೆಯನ್ನೂ ಚೆನ್ನಾಗಿ ಪರಿಶೋಧಿಸಿರುವೆನು ಜವಾಹರಲಾಲ್, ಶೇರ್ವಾನಿ, ಅಬ್ದುಲ್‌ಘಫರ್‌ಖಾನ್ ಮೊದಲಾದವರನ್ನು ದಸ್ತಗಿರಿಮಾಡಿದುದರಿಂದ ಸರಕಾರವು ಕೊಂಗ್ರೆಸ್ಸಿನೆದುರು ಪ್ರತಿಸ್ಪರ್ಧೆಗೆ ನಿಂತಿದೆಯೆಂದೇ ತಿಳಿಯಲಾಗುತ್ತದೆ ಸರಕಾರವು ಡಿಲ್ಲಿ ತಹನಾಮೆಗೆ ವಿರೋಧವಾಗಿ ನಡೆದಿರುವುದೋ ಇಲ್ಲವೋ ಎಂದು ನಿರ್ಧರಿಸುವ ಕೆಲಸದ ಹೊಣೆಗಾರಿಕೆಯು ಕೊಂಗ್ರೆಸ್ಸಿನ ಅಧ್ಯಕ್ಷರ ಹಸ್ತದಲ್ಲಿದೆ. ರೌಂಡ್ ಟೇಬಲ್ ಪರಿಷತ್ತಿನ ಕಮಿಟಿಗಳು ಹಿಂದೂದೇಶಕ್ಕೆ ಬಂದು ಕೆಲಸಮಾಡಲಿವೆ ಇದೇ ವಾತಾವರಣವೇ ಕಟ್ಟಹೋದರೆ ಆ ಕಮಿಟಿಗಳು ಹೇಗೆ ತಮ್ಮ ಕಾರ್ಯಕಲಾಪಗಳನ್ನು ಸಾಂಗವಾಗಿ ನೆರವೇರಿಸುವುವೋ ತಿಳಿಯದು ಈ ವಿಷಯವನ್ನು ಸರಕಾರವೇ ಆಲೋಚಿಸಬೇಕು ಲಂಡನಿನಲ್ಲಿ ಜರಗಿದುದು ರೌಂಡ್ ಟೇಬಲ್ ಪರಿಷತ್ತಲ್ಲ — ತರ್ಕ ಸಂಘ! ಅದು ನಿಜವಾಗಿಯೂ ರೌಂಡ್ ಟೇಬಲ್ ಪರಿಷತ್ತು ಅಲ್ಲವೇ ಅಲ್ಲ ಭಾರತೀಯರು ಇನ್ನೊಂದು ಸಮರಕ್ಕೆ ತೊಡಗದಂತೆ ನಾನು ವ್ಯವಸ್ಥೆಮಾಡಲು ನನ್ನ ಚೈತನ್ಯವಿದ್ದಷ್ಟು ಒಟ್ಟಿಗೆ ಹೆಣಗಾಡುವೆನು ನನ್ನ ಹೆಣಗಾಟದಿಂದೇನೂ ಸಾರ್ಥಕ್ಯವಾಗುವುದಿಲ್ಲವೆಂದಾದರೆ ಮತ್ತು ವಿಚಾರಿಸಿ ವ ಬಂದಿತ ಯೋಜನೆಯನು ಮಾಡಿಕೊಳ್ಳುವೆನು ಆದರೆ ಸ್ವಲ್ಪ ಮಾತ್ರಕ್ಕೂ ಅವಸರಿಸೆನು ರೌಂಡ್‌ಟೇಬಲ್ ಪರಿಷತ್ತಿಗೆ ಒಬ್ಬ ಪ್ರತಿನಿಧಿಯನ್ನು ಕಳುಹಿಸಿದುದು ಅಸಮಂಜಸವಾಯಿತೆಂದು ಜಯಕರರು ವಿಮರ್ಶಿಸಿ ಹೇಳುತ್ತಿರುವರು ಆದರೆ ನನ್ನ ಅಭಿಮತವೇನೆಂದರೆ ಕೊಂಗ್ರೆಸ್ಸು ತನ್ನ ದೃಢವಾದ ಧೋರಣೆಯಂತೆ ಒಬ್ಬ ಪ್ರತಿನಿಧಿಯನ್ನೇ ಚುನಾಯಿಸಿದುದು ಅತ್ಯುತ್ತಮವೇ ಆಯಿತು ಇನ್ನೂ ಕೆಲವು ಪ್ರತಿನಿಧಿಗಳನ್ನು ಕೊಂಗ್ರೆಸ್ಸು ಲಂಡನಿಗಟ್ಟುತ್ತಿದ್ದರೆ ಅದು ನಿಜವಾಗಿಯೂ ಘೋರ ತಪ್ಪಾಗುತ್ತಿತ್ತು ಅಲ್ಪಸಂಖ್ಯಾಕರ ಮುಂದಿನ ಗತಿಯೇನಿರುವುದೆಂದು ಒಂದು ಪ್ರಶ್ನೆಯಿರುತದೆ ಅಲ್ಪಸಂಖ್ಯಾಕರು ನಮ್ಮಂತೆಯೇ ಎಲುಬು ಮಾಂಸವುಳ್ಳವರು ಅವರಿಗೂ ನಮಗೂ ಏನೊಂದೂ ಭೇದವಿಲ್ಲ ಅಲ್ಪಸಂಖ್ಯಾಕರು ಏಳಿಗೆಯಾಗುವುದಾದರೆ, ಬೇಕಾದರೆ ನಾನಾದರೂ ಸಾಯುವೆನು"

ಈ ಎಲ್ಲಾ ವಿಚಾರಗಳ ಕುರಿತು ಗಾಂಧೀಜೀಯವರು ವರ್ಕಿಂಗ್ ಕಮಿಟಿಯವರೊಡನೆ ಆಲೋಚಿಸಿದರು ವೈಸ್ರಾಯರು ಹೇಳಿ ಕಳುಹಿಸಿದರೆ ನಾನು ಅವರನ್ನು ಸಂದರ್ಶಿಸುವುದಕ್ಕಾಗಿ ಹೋಗುವೆನೆಂದು ಹೇಳಿರುವರು ಮುಂದಕ್ಕೆ ರಾಜಿ ಪಂಚಾಯತಿಯೋ ಅಥವಾ ಶಾಂತಿಮಯ ಸಮರವೋ ಏನು ಬೇಕೆಂದು ನಿರ್ಧರಿಸುವ ಬಹುಭಾರವು ಅಖಿಲ ಭಾರತ ಕೊಂಗ್ರೆಸ್ ಸಭೆಯ ಕೈಯಲ್ಲಿದೆ ಡಾ|| ಪಟ್ಟಾಭಿ ರಾಜಗೋಪಾಲಾಚಾರ್ಯ ದೇಶಪಾಂಡೆ ಸುಭಾಸ್ ಬೋಸರೊಡನೆ ಗಾಂಧೀಜೀಯವರು ಮಾತುಕತೆಗಳನ್ನು ನಡೆಸಿ ಅಭಿಪ್ರಾಯ ವಿನಿಮಯವನ್ನು ಮಾಡಿಕೊಂಡರು

೧೪ ಜನರಿಗೆ ಗುಂಡೇಟು — ಮರಣ

ಮಹಾತ್ಮರು ಇತ್ತ ಹಿಂದೂದೇಶಕ್ಕೆ ಕಾಲಿಡುವಾಗ, ಅತ್ತ ಪೇಶಾವರದಲ್ಲಿ ಕ್ಷೋಭೆಯೆದ್ದಿತು ಕೆಂಪಂಗಿಯ ಸ್ವಯಂಸೇವಕರು ಮೆರವಣಿಗೆ ಮಾಡಬಾರದಾಗಿ ಶಾಸನ ಅವರ ಮುಂದಾಳುವಾದ ಅಬ್ದುಲ್ ಘಫರ್ ಖಾನರನ್ನು ಗಡಿಪಾರು ಮಾಡಲಿರುವರೆಂಬುದನ್ನು ಕೇಳಿದ ಪಠಾಣರೂ, ಬಹುಮಂದಿ ಮುಸಲ್ಮಾನರೂ ಉದ್ವಿಗ್ನಗೊಂಡಿರುವರು, ಕಾಯಿದೆಗೆ ವಿರೋಧವಾಗಿ ತಮ್ಮ ಚಳವಳವನ್ನು ಸ್ವಹಸ್ತ ಬಹಿರಂಗವಾಗಿ ನಡೆಸುತ್ತಿರುವರು. ಘಫರ್ ಖಾನರ ಬಂಧನವನ್ನು ಕೇಳಿ ಗಡಿಪ್ರಾಂತ್ಯದ ವೃದ್ಧರೂ, ಯುವಕರೂ, ಮಕ್ಕಳೂ ಮರುಗಿದರು. ಅನೇಕ ಸ್ತ್ರೀಯರು ಬಹುತರವಾಗಿ ಶೋಕಿಸಿದರು ತಾ ೨೪ನೇ ದಿನ್ನ ಕೊಹಾಟ್ ಎಂಬಲ್ಲಿನ ಕೆಂಪಂಗಿ'ಯ ೫೦೦ ಮಂದಿ ಸ್ವಯಂಸೇವಕರು ಒಂದು ಮೆರವಣಿಗೆಯನ್ನು ಮಾಡಿದರು ಅವರನ್ನು ಚದರಿಸಲು ಪೋಲೀಸ ಫೌಜು ಹೋಯಿತು ಮೆರವಣಿಗೆಯು ಒಂದಿಂಚು ಕದಲಲಿಲ್ಲ ಲಾಠಿ ಚಾರ್ಜು ನಡೆಯಿತು ಅದಕ್ಕೂ ಕೂಡಾ ಕೆಂಪಂಗಿಯವರು ಬಗ್ಗಲಾರದಾದರು. ಅಷ್ಟರಲ್ಲಿ ಎಲ್ಲಿಂದಲೋ ಕಲ್ಲುಗಳ ಸುರಿಮಳೆಯು ಇನ್ಸ್‌ಪೆಕ್ಟರರ ಮತ್ತು ಪೋಲೀಸರ ಮೇಲೆ ಬಿತ್ತೆಂಬ ವಾರ್ತೆ ಜನರು ಇಂಡಿಯನ್ ಬುಲ್ಲೆಟ್ಸ್ (ಕಲ್ಲು)ಗಳನ್ನು ಬಿಸಾಡುವುದನ್ನು ನೋಡಿ ಪೋಲೀಸರ ಇಂಗ್ಲಿಷ್ ಬುಲ್ಲೆಟ್ (ಗುಂಡು)ಗಳನ್ನು ಹಾರಿಸಿದರು ೫೦೦ ಜನರಲ್ಲಿ ಅನೇಕರಿಗೆ ಜಖಂ ಆಗಿದೆ ಪತ್ರಿಕೆಗಳೇನೋ ೫೦ ಜನರಿಗೆ ಗಾಯವಾಗಿದೆಯೆಂದೂ ೧೪ ಜನರು ಮಡಿದರೆಂದೂ ಹೇಳುತ್ತಿದೆ ಇದಾದ ಮೇಲೆ ಇನ್ನೊಂದು ತಂಡವು ೨೦೦೦ ಮಂದಿಗಳನ್ನೊಡಗೂಡಿ ಬಂತು. ಆ ತಂಡವನ್ನು ಪೋಲೀಸರು ನಿರ್ಬಂಧಿಸಿ ಹಿಡಿದರು ಕೆಂಪಂಗಿಯ ಸಂಗಡದ ಸಕ್ರಿಟರಿಯವರನ್ನು ಕೈದುಮಾಡಿದ್ದಾರೆ ಪೇಟೆಯಲ್ಲೆಲ್ಲಿಯೂ ಪೋಲೀಸರಿಗೆ ಭಯವನ್ನು ಹುಟ್ಟಿಸುವ ನೋಟೀಸುಗಳು ಹಚ್ಚಲ್ಪಟ್ಟಿದ್ದು ಅಧಿಕಾರಿಗಳು ಹೆಚ್ಚಿನ ಜಾಗರೂಕತೆಯಲ್ಲಿರುವರು ಟಪ್ಪಾಲ ಕಾಗದಗಳೂ ತಂತಿಗಳೂ ಪರಿಶೋಧಿಸಲ್ಪಡುತ್ತಿವೆ ಪೇಶಾವರ ಜಿಲ್ಲೆಯಲ್ಲಿ ಮತಸಂಬಂಧವಾದ ಸಭೆಗಳನ್ನಲ್ಲದೆ ಇನ್ನಾವ ಕುರಿತೂ ಸಭೆಗಳಾಗಬಾರದೆಂಬದಾಗಿ ಡಿ ಮೆಜಿಸ್ಟ್ರೇಟರ ಅಪ್ಪಣೆಯಾಗಿದೆ ದಿನಂಪ್ರತಿ ಕೈದುಗಳು ಅಧಿಕವಾಗುತ್ತಿವೆ

ಕಾನ್ಪುರದಲ್ಲಿಯೂ ತಂದಾಯ ನಿರಾಕರಣೆಯ ಚಳವಳವು ಪ್ರಾರಂಭವಾಗಿದೆ ಅಲ್ಲಿಯ ಕೆಲವು ಸ್ವಯಂ ಸೇವಕರು ತೆರಿಗೆ ನಿರಾಕರಣೆಯನ್ನು ಪುಷ್ಟೀಕರಿಸಿ ಪ್ರೋತ್ಸಾಹಿಸಿ, ನೋಟೀಸುಗಳನ್ನು ಹಂಚಿದರು ಒಂದು ಜಾತ್ರೆಯು ನಡೆಯುವಲ್ಲಿಯೂ ಈ ಸ್ವಯಂ ಸೇವಕರು ಹೋಗಿದ್ದರು ಇದನ್ನು ತಿಳಿದು ಅಲ್ಲಿಗೆ ಪೋಲೀಸರನ್ನಟ್ಟಿದರು ಪೋಲೀಸರು ಬಂದು ಲಾಠಿ ಚಾರ್ಜುಮಾಡಿದರು ೧೭ ಕೈದುಗಳಾಗಿವೆ ಕಾನ್ಪುರದಲ್ಲಿ ೧೪೪ನೇ ಸೆಕ್ಷನ್ ಜಾರಿಯಲ್ಲಿದೆ

ತಾ ೨೮ನೇ ಸಂಜೆ ಮಹಾತ್ಮರು ಆಜಾದ್ ಮೈದಾನಿನಲ್ಲೊಂದು ಭಾಷಣಮಾಡಿದರು ಲಕ್ಷೋಪಲಕ್ಷ ಜನರು ನೆರೆದಿದ್ದರು. ಅಂಗಡಿಗಳೂ, ಶೋಪುಗಳೂ ಮುಚ್ಚಲ್ಪಟ್ಟು ಅವುಗಳ ಮಾಲೀಕರು ಮೈದಾನಿಗೆ ಹೋದರು ಮಹಾತ್ಮ ಮುಖಪ್ರಭಾವವು ಕಳೆಗೂಂದಿತ್ತು ಅವರು ಹೆಚ್ಚಿನ ಚೈತನ್ಯವಂತರಾಗಿರುವರು ಅವರು ಸಭಿಕರಿಗೆ ಹೇಳುವಾಗ "ನನ್ನ ಬಂಧುಗಳೇ ಇನ್ನೊಂದು ಸಮರವು ತಲದೋರಬೇಕೆಂದಾದರೆ ನಾನದಕ್ಕೆ ಸಿದ್ಧನೇ ಇದ್ದೇನೆ ಅದು ಇದು ಎಷ್ಟುಮಾತ್ರಕ್ಕೂ ನಡೆಯಬಾರದೆಂಬ ಉತ್ಕಟೇಚ್ಛೆಯಿಂದಲೇ ನಾನು ಇನ್ನೂ ಕೆಲವು ಕಾರ್ಯಗಳನ್ನು ಮಾಡಲಿದ್ದೇನೆ ಇನ್ನೊಂದು ಚಳವಳವು ಪ್ರಾರಂಭವಾದರೆ ಭಾರತದ ಪುತ್ರ ಪುತ್ರಿಯರೆಲ್ಲರೂ ಕಳೆದ ಒಕ್ಕಿಂತಲೂ ಹೆಚ್ಚಿನ ಸಹಾಯವನ್ನು ಮಾಡಬೇಕೆಂದು ಸರ್ವರೂ ಅಹಿಂಸೆಯ ಧೋರಣೆಯನ್ನೇ ಪರಿಪಾಲಿಸಬೇಕು ಕಾರಣ ಸತ್ಯಾಗ್ರಹವನ್ನು ಬಿಡುವುದೆಂದರೆ ಪಿಶಾಚರು ನಮ್ಮೊಡನೆ ರಾಜಿಯಾಗುವರೆಂಬ ವಾರ್ತೆಯಿದೆ ಆದರೆ ಅಹಿಂಸಾಮಯ ಸತ್ಯಾಗ್ರಹವು ಹಿಂದೀಯರ ಪ್ರಾಮುಖ್ಯ ಸೂತ್ರಗಳಲ್ಲೊಂದಾಗಿರುತ್ತದೆ ಅದನ್ನು ಬಿಡಲು ಭಾರತೀಯರಿಗೆ ಎಷ್ಟುಮಾತ್ರವೂ ಸಾಧ್ಯವಿಲ್ಲ' ಎಂದರು

ಇನ್ನು ಭಾರತದ ಮುಂದಿನ ಇತಿಹಾಸವು ಹೇಗೆ ನಡೆಯಲಿರುವುದೆಂದು ಮುಂಬಾಯಿಯಲ್ಲಿ ಜರಗುತ್ತಲಿರುವ ವರ್ಕಿಂಗ್ ಕಮಿಟಿಯ ಸಭೆಯಲ್ಲಿ ತೀರ್ಮಾನವಾಗಬೇಕು ಇಷ್ಟರ ತನಕ ಯಾವ ನಿರ್ಧಾರವೂ ಆಗಿರುವುದಿಲ್ಲ ಹಿಂದೂದೇಶದಲ್ಲಿ ಇತ್ತೀಚೆಗೆ ನಡೆದ ಘಟನೆಗಳನ್ನು ಲಂಡನಿನಲ್ಲಿ ಮಂತ್ರಿವರ್ಯರು ಕೇಳಿ ಬಹಳ ಖೇದಗೊಂಡಿರುವರು "ಹಿಂದೂದೇಶದ ಪರಿಸ್ಥಿತಿಯು ನಿಜವಾಗಿಯೂ ಶೋಚನೀಯಕರವಿರುತ್ತದೆ" ಎಂದು ಮಂತ್ರಿವರ್ಯರೆನ್ನುತ್ತಿದ್ದಾರೆ ಅವರೂ ಕೂಡಾ ಇಲ್ಲಿ ನಡೆಯುವ ಹಿಂಸೆ ಮತ್ತು ಅಕ್ರಮಗಳನ್ನು ಖಂಡಿಸುತ್ತಿರುವರು

ವಿವಿಧ ಸಮಾಚಾರಗಳು.

ಗಂಡಬೇಕೋ ಹಣಬೇಕೋ?

ಈ ಕಷ್ಟ ಸಮಸ್ಯೆಯಲ್ಲಿ ಇಂಗ್ಲೆಂಡಿನ ಕೆಂಟ್ ಜಿಲ್ಲೆಯ ನ್ಯೂಲಿನ್ ಎಂಬ ೬೪ ವರ್ಷ ಪ್ರಾಯದ ಒಬ್ಬ ಐಶ್ವರ್ಯವಂತನು ೨೪ ವರ್ಷದ ಒಬ್ಬ ತರುಣಿಯನ್ನು ಸಿಲುಕಿಸಿದನು. ನ್ಯೂಲಿನನು ತಾನು ಸಾಯುವ ಮೊದಲು ಒಬ್ಬ ಬೋಧಕನ ಮಗಳಾದ ಈ ತರುಣಿಯನ್ನು ಕಂಡು ಮುದಿ ಸಂತೋಷದಿಂದ ಮೆಚ್ಚಿದನು. ಆ ಮೆಚ್ಚುಗೆಯ ದೆಸೆಯಿಂದಾಗಿ ತನ್ನ ಮನೆ, ಆಸ್ತಿಪಾಸ್ತಿ, ಮೋಟಾರುಗಳು, ೫೦,೦೦೦ ಪವನುಗಳನ್ನೆಲ್ಲಾ ಅವಳ ಹೆಸರಿನಲ್ಲಿ ಬರೆದು ಉಯಿಲು ಮಾಡಿ ಪ್ರಾಣ ಬಿಟ್ಟನು. ಮಾತ್ರ ಆ ಉಯಿಲಿನಲ್ಲಿ ಮುದುಕನ ಶರ್ತವೇನೆಂದರೆ "ತರುಣಿಯು ಕೊನೆಯ ತನಕ ವಿವಾಹವಾಗುವುದಿಲ್ಲವಾದರೆ ಮಾತ್ರ ನನ್ನ ಸಕಲವೂ ಅವಳಿಗೆ. ವಿವಾಹವಾದರೆ ಏನೂ ಸಿಗಲಾರದು" ಈ ಶರ್ತವನ್ನು ನೋಡಿ ತರುಣಿಗೆ ಆಶ್ಚರ್ಯವೆನಿಸಿತು. ಆದರೂ ಕೆಲಸಮಯ ಹಣಕ್ಕಾಗಿ ವಿವಾಹವಾಗದೇನೆ ಕುಳಿತಳು ಆದರೆ ಎಷ್ಟು ಕುಳಿತಾಳು? ಆದು ಕೂಡಾ ಹಣದ ಮಧ್ಯೆ? ಒಬ್ಬ ಮದನಮೂರ್ತಿಯು ಅವಳನ್ನು ತನ್ನ ಪ್ರಣಯದ ಬಲೆಗೆ ಹಾಕಿಕೊಂಡಾಯಿತು. ತರುಣಿಗೆ ಹಣಬೇಕೋ ಗಂಡಬೇಕೋ ಚಿಂತೆಯುಂಟಾಯಿತು. ಬಹಳ ಪೇಚಾಡಿದ್ದಾಯಿತು. ತಾನು ವಿವಾಹವಾಗುವನೆಂದಳು. ಆವಳಿಗನುಕೂಲವಾಗಿ ನ್ಯಾಯಾಧೀಶರೂ ಮುದುಕನ ಆ ಶರ್ತವನ್ನು ಉಯಿಲಿನಿಂದ ತೆಗೆದು, ಯುವತಿಯು ಮದುವೆಯಾದರೂ ಕೂಡಾ ಅವಳಿಗೆ ಉಯಿಲಿನ ಆಸ್ತಿಯು ದೊರೆಯಬೇಕೆಂದು ವ್ಯವಸ್ಥೆ ಮಾಡಿದರು.

* * *

ಉಡಿಗೆತೊಡಿಗೆಗಾಗಿ ೩೦೦೦ ಪವನು!

ಲಂಡನ್ ನಗರದ ಬೊಂಡ್ ಸ್ಟ್ರೀಟ್ ಎಂಬಲ್ಲಿ ಒಂದು ವಸ್ತ್ರದ ಮಳಿಗೆಯಲ್ಲಿ ಮಿಸೆಸ್ ಗಾರ್ಡನ್ ಎಂಬ ಸ್ತ್ರೀಯೊಬ್ಬಳು ದೊಡ್ಡ ಗಿರಾಕಿ. ಇವಳ ಉಡಿಗೆ ತೊಡಿಗೆಗಾಗಿ ಇವಳ ಗಂಡನು ವರುಷಕ್ಕೆ ೨೦೦೦ ಪವನುಗಳನ್ನು ಸಂತೋಷದಿಂದ ಕೊಡುತ್ತಿದ್ದನು. ಅವಳಿಗೆ ಫೇಶನಿಗೆ ಇಷ್ಟು ಸಾಲದೆ ಹೋಗಿ ಅವಳು ಆ ಮಳಿಗೆಯಲ್ಲಿ ಒಂದೇ ಉಸುರಿನಿಂದ ಸಾಲ ಮಾಡಲುಪಕ್ರಮಿಸಿದಳು. ಈ ವರ್ಷದ ಅವಳ ಲೆಖ್ಖಾಚಾರವಾಗಿ ಅವಳು ಒಂದು ಸಾವಿರ ಪವನುಗಳನ್ನು ವಸ್ತ್ರದಂಗಡಿಯಲ್ಲಿ ಸಾಲ ಮಾಡಿದುದಾಗಿ ತಿಳಿದುಬಂತು. ಕಂಪೆನಿಯವರು ಹಣ ವಸೂಲಿ ಕೇಳಿದರು. ಆದು ಸಿಗಲಿಲ್ಲ. ಗಾರ್ಡನ್ ಮತ್ತು ಅವಳ ಗಂಡನ ಮೇಲೆ ಕಂಪೆನಿಯವರ ದಾವೆ ನಡೆಯಿತು. ಬುದ್ಧಿವಂತ ಜಡ್ಜರು ಗಂಡನನ್ನು ಬಿಟ್ಟರು. ಉಡಿಗೆತೊಡಿಗೆಗಾಗಿ ಗಂಡನಿಂದ ವರುಷಕ್ಕೆ ಎರಡು ಸಾವಿರ ಪವನುಗಳನ್ನು ಪಡೆದೂ, ಮತ್ತೂ ಒಂದು ಸಾವಿರ ಪವನು ಸಾಲ ಮಾಡಿದ ಹೆಂಡತಿಯನ್ನು ಹಿಡಿದರು. ಅವಳ ಮೇಲೆ ಡಿಕ್ರಿಯಾಯಿತು. ಇಂಗ್ಲಾಂಡಿನಲ್ಲಿ ಉಡಿಗೆತೊಡಿಗೆಗಾಗಿ ಸಾಧಾರಣ ಸ್ತ್ರೀಯಾದ ಗಾರ್ಡನಳು ೩೦೦೦ ಪವನುಗಳನ್ನು ವ್ಯಯಿಸಿರುವುದನ್ನು ನೋಡಿ ಧನಿಕರ ಹೆಣ್ಮಕ್ಕಳು ಆಶ್ಚರ್ಯಗೊಂಡಿರುವರು.

* * *

ಪ್ರೇಮ ಭಂಗವಾಯಿತು!

ಆಸ್ಟ್ರೇಲಿಯಾದಲ್ಲಿ ಸ್ಟೆಲ್ಲಾವೆಲ್ ಎಂಬ ಒಬ್ಬ ರಮಣಿ ಬಹಳ ಚೆಲುವೆ. ಇವಳ ಚೆಲುವಿಕೆಯು ನಾಟಕ ಕಂಪೆನಿಯವರನ್ನೂ, ಸಿನೇಮಾ ಕಂಪೆನಿಯವರನ್ನೂ ಆಕರ್ಷಿಸಿತು. ಇವಳು ಅಭಿನಯಗಾರಳಾದಳು. ಒಬ್ಬ ಅಮೇರಿಕಾನನು ಇವಳ ಮೋಹಪಾಶಕ್ಕೆ ಬಿದ್ದು ಇವಳನ್ನು ವಿವಾಹವಾದನು. ಸ್ವಲ್ಪಕಾಲ ಸಂತೋಷದಿಂದ ಕಳೆಯಿತು. ಕೊನೆಗೆ ಏನೋ ಒಂದು ಮನಃಕ್ಲೇಶ ಸಂಬಂಧ ಸ್ಟೆಲ್ಲವೆಲ್ಲಳು ಗಂಡನನ್ನು ಬಿಟ್ಟು ಬಿಟ್ಟಳು. ಅಭಿನಯಗಾರಳಾಗಿ ಮೆರೆದಳು. ಇಂಗ್ಲೆಂಡಿನಲ್ಲಿ ದಿಕ್ಕಾ ಸಂಸ್ಥಾನದ ಮಹಾರಾಜರು ಇವಳನ್ನು ಕಂಡು ಮೋಹಪಾಶಕ್ಕೆ ಬಲಿಬಿದ್ದರು. ಹೇಗೋ ಮಾಡಿ ಎಷ್ಟೋ ಹಣ ವ್ಯಯಿಸಿ ಅವಳನ್ನು ಪ್ರೇಮಿಸಿ ವಿವಾಹವಾದರು. ಹಿಂದೂಮತಕ್ಕೆ ಸೇರಿಸಿ ಅವಳಿಗೆ ಸೀತಾದೇವಿ ಎಂದು ನಾಮಕರಣ ಮಾಡಿದರು. ಮಹಾರಾಜರೂ ಸೀತಾದೇವಿಯೂ ಕೆಲವು ವರುಷಗಳನ್ನು ಸಂತೋಷದಿಂದ ಕಳೆದರು. ಸ್ವಲ್ಪಕಾಲ ಕಳೆಯಲು ಪ್ರೇಮಾರಂಭದ ಭರವು ಕುಂದಿತು. ಸೀತೆಗೂ ರಾಜರಿಗೂ ಜಗಳವಾಯಿತು. ದಾವೆಯು ನಡೆಯಿತು. ತನ್ನ ವಂಶಪಾರಂಪರ್ಯವಾಗಿ ಬಂದ ಕೆಲವು ಆಭರಣಗಳನ್ನೂ ದ್ರವ್ಯಗಳನ್ನೂ ಸೀತೆಯು ಅಪಹರಿಸಿಕೊಂಡು ಹೋದಳೆಂಬ ಆರೋಪದ ಮೇಲೆ ರಾಜರು ದಾವೆ ಮಾಡಿದರು. ದಾವೆಯು ವಿಚಾರಣೆಯಾಗಿ ೧೧೦೦ ಪವನುಗಳನ್ನು ರಾಜರು ಸೀತಾದೇವಿಗೆ ಕೊಡಬೇಕೆಂದಾಯಿತು. ಅದಕ್ಕೆ ರಾಜರು ಒಪ್ಪಿದರೂ ಆ ಒಪ್ಪಿಗೆಗನುಕೂಲವಾಗಿ ವರ್ತಿಸಲಾರದಾದರು. ಪ್ರಿವಿ ಕೌನ್ಸಿಲಿಗೆ ಅಪ್ಪೀಲಾಯಿತು. ಆದರೂ ಪ್ರೇಮಪಾಶವಲ್ಲವೇ? ಅದರ ಪ್ರಭಾವದಿಂದ ಅಪ್ಪೀಲಿನಲ್ಲಿಯೂ ಮಹಾರಾಜರು ಗೆಲ್ಲಲಿಲ್ಲ. ಅಂತೂ ಇಂತೂ ಮನಸೋತುದರಿಂದ ಧನವೂ ಸೋತಿತು! ಪ್ರೇಮ ಭಂಗವಾಯಿತು.

ಸರದಾರ ವಲ್ಲಭಭಾಯಿಯವರು

ಅಖಿಲಭಾರತ ಸ್ವದೇಶೀ ವಸ್ತು ಪ್ರದರ್ಶನದ ಉದ್ಘಾಟನದ ಸಮಾರಂಭದ ಸಮಯಕ್ಕೆ ಬಂದ ಅನೇಕ ಸಂದೇಶಗಳಲ್ಲಿ ಕೆಳಗಿನದೊಂದು ಆ ಸಮಯದಲ್ಲಿ ಅದನ್ನು ಓದಲಾಯಿತು. ರಾಷ್ಟ್ರಪತಿ ಸರದಾರ ವಲ್ಲಭಭಾಯಿಯವರು ಸಂದೇಶದಲ್ಲಿ ಈ ಪ್ರಕಾರ ತಿಳಿಸಿರುವರು:

ನಮ್ಮಲ್ಲಿನ ಆರ್ಥಿಕ ಸೂರೆಯನ್ನು (Economic Exploitation) ರಕ್ಷಣಾತ್ಮಕ ಕರಗಳಿಂದಾಗಲೀ (Protecting Tariff) ಇಲ್ಲವೇ ಅವಶ್ಯವಾದ ಸರಕುಗಳನ್ನು ದೇಶದಲ್ಲಿ ತುಂಬದಂತೆ ಪ್ರತಿಬಂಧಿಸುವ ಕಾನೂನುಗಳನ್ನು ಇತರ ರಾಷ್ಟ್ರಗಳಂತೆ ವಿಧಿಸಲು ನಮಗೆ ರಾಷ್ಟ್ರೀಯ ಸರಕಾರವೆಂಬ ಸಂಗತಿಯು ಕರ್ನಾಟಕದವರಿಗೆ ಗೊತ್ತು. ಅಂದ ಬಳಿಕ ನಮ್ಮ ಅಸಹಾಯ ಸ್ಥಿತಿಯಲ್ಲಿ ಸ್ವದೇಶೀ ವ್ರತ ತತ್ವವೆಂದರೆ ಒಂದು ವಿಶಿಷ್ಟವಾದ ಅರ್ಥವುಂಟು. ನಮ್ಮ ಸ್ವಾತಂತ್ರ್ಯವು ಬಿಕ್ಕಟ್ಟಿನ ಸ್ಥಿತಿಯಲ್ಲಿರುವ ಕಾರಣ ಅದರಿಂದ ಹೊರಹೊರಡಲು ದುಸ್ತರವಾಗಿದ್ದ ವೇಳೆಯಲ್ಲಿ ಪಂಡಿತ ಜವಾಹರಲಾಲಜೀಯವರಿಗೆ ಕೆಲವು ಸ್ವದೇಶೀ ವಸ್ತು ಪ್ರದರ್ಶನವನ್ನು ತೆರೆಯಲು ವಿಶ್ವಾಸವಿತ್ತು. ಅವರ ಈ ತ್ಯಾಗದ ಮಹತ್ವವನ್ನು ಗಣನೆಗೆ ತಂದು ಕರ್ನಾಟಕದವರು ಪ್ರದರ್ಶನವನ್ನು ಸಂಪೂರ್ಣ ಯಶಸ್ವಿಯನ್ನಾಗಿ ಮಾಡುವರೆಂದು ನನ್ನ ಭರವಸೆ.

* * *

ಕರ್ನಾಟಕಕ್ಕೆ

ಪಂಡಿತ ಜವಾಹರಲಾಲರ ಸಂದೇಶವು.

ಪಂಡಿತ ಜವಾಹರಲಾಲರು ತಮ್ಮ ೪ ದಿವಸಗಳ ಅವಿಶ್ರಾಂತ ಪ್ರವಾಸವನ್ನು ತೀರಿಸಿಕೊಂಡು ಕರ್ನಾಟಕವನ್ನು ಬಿಟ್ಟುಹೋಗುವಾಗ ಕರ್ನಾಟಕದ ಜನತೆಗೆ ಕೆಳಗಿನ ಸಂದೇಶವನ್ನು ಕೊಟ್ಟರು.

"ನನ್ನ ಸಂಗಡ ಕೆಲಸ ಮಾಡುವಂತಹ ಡಾ. ಹರ್ಡೀಕರರ ಆಮಂತ್ರಣದ ಮೇರೆಗೆ ಹಿಂದೂಸ್ಥಾನಿ ಸೇವಾದಲದ ಮೊದಲನೆಯ ಪ್ರದೇಶೀಯ ಸಮಾರಂಭದಲ್ಲಿ ಹಾಜರು ಇರುವುದಕ್ಕಾಗಿಯೂ, ಮತ್ತು ಸೇವಾದಲದ ಶಿಕ್ಷಣ ಹೊಂದಿದ ಸೈನಿಕರಿಗೆ ಪ್ರಮಾಣಪತ್ರಗಳನ್ನು ಕೊಡುವುದಕ್ಕಾಗಿಯೂ ನಾನು ಕರ್ನಾಟಕಕ್ಕೆ ಬಂದೆನು. ಸಂಯುಕ್ತ ಪ್ರಾಂತದಲ್ಲಿ ದಿನದಿನಕ್ಕೆ ಪರಿಸ್ಥಿತಿಯು ಬಿಕ್ಕಟ್ಟಿನದಾಗಲಾರಂಭಿಸಿದ್ದರಿಂದ ನನಗೆ ಇಲ್ಲಿಗೆ ಬರಲು ಸಮಯವು ಸಿಗುವುದು ದುಸ್ತರವಾಗಿತ್ತು. ಆದರೂ ಕೊನೆಗೆ ಇಲ್ಲಿಗೆ ಬರಲು ಮತ್ತು ಕರ್ನಾಟಕದ ಕೆಲವೊಂದು ಭಾಗವನ್ನು ಕಾಣಲು ಆಯಿತೆಂದು ಹೇಳಲಿಕ್ಕೆ ಆನಂದವಾಗುತ್ತದೆ. ಮೊಟ್ಟಮೊದಲು ಇದೇ ಕರ್ನಾಟಕದ ಪ್ರವಾಸ ಮಾಡುವುದು ಮನಸ್ಸಿನಲ್ಲಿರಲಿಲ್ಲ. ಆದ್ದರಿಂದಲೇ ನನ್ನ ಗೆಳೆಯರ ಸಂಗಡಿಗರ ಪ್ರೇಮಪೂರ್ವಕವಾದ ಆಮಂತ್ರಣಕ್ಕೆ ಒಲ್ಲೆನೆಂದು ಹೇಳುವುದು ಸಾಧ್ಯವಿಲ್ಲ. ಆದರೂ ಸಂದರ್ಶಿಸಬೇಕೆಂದು ಇಚ್ಛಿಸಿದ ಎಲ್ಲಾ ಸ್ಥಳಗಳಿಗೆ ಹೋಗುವುದೂ ನನ್ನಿಂದಾಗಲಿಲ್ಲ. ಸಾಧ್ಯವಾದಷ್ಟು ಮುಖ್ಯ ಮುಖ್ಯ ಸಂಸ್ಥಾನಗಳನ್ನೊಳಗೊಂಡ ನನ್ನ ಪ್ರವಾಸದ ಕಾರ್ಯಕ್ರಮವನ್ನು ಏರ್ಪಡಿಸುವುದು ಡಾ. ಹರ್ಡೀಕರರಿಗೂ ಕರ್ನಾಟಕ ಪ್ರಾಂತಿಕ ಕಾಂ. ಕಮಿಟಿಯ ಪದಾಧಿಕಾರಿಗಳಿಗೂ ಕಠಿಣವಿತ್ತೆಂಬುದು ನನಗೆ ಗೊತ್ತಿದೆ. ಅವರು ತಮಗೆ ಸಾಧ್ಯವಿದ್ದಷ್ಟು ಮಾಡಿದರು. ಸರ್ವಸಾಧಾರಣವಾಗಿ ಪ್ರತಿಯೊಂದು ಕಡೆಗೂ ಹೋಗುವುದು ಅಶಕ್ಯವಾಗಿದ್ದ ನನ್ನ ಬಿನ್ನಹದ ಮೇರೆಗೆ ಚೆನ್ನಾಗಿ ಕೆಲಸಮಾಡಿದಂತಹ ಕೇಂದ್ರಗಳಿಗೆ. ಅನೇಕ ಊರುಗಳಿಗೆ ಹೋಗುವುದನ್ನೂ ಬಿಟ್ಟುಬಿಡಬೇಕಾಯಿತು. ಇದರಲ್ಲಿ ಏನಾದರೂ ತಪ್ಪಿದ್ದರೆ ಅದು ನನ್ನದಿದೆ. ಅದಕ್ಕಾಗಿ ನಾನು ಕ್ಷಮೆ ಬೇಡುತ್ತೇನೆ. ನಾನು ಅಗತ್ಯವಾಗಿ ಹೋಗಬೇಕಾದ ಹಾದಿಯ ದಾರಿಯಲ್ಲಿರುವ ಸ್ಥಳಗಳನ್ನು ಮಾತ್ರ ಸಂದರ್ಶಿಸಿದೆನು. ಕೆಲವ ಸುತ್ತುಮುತ್ತಲಿನ ಸ್ಥಾನಗಳಿಗೆ ಹೋಗಲಿಕ್ಕೆ ಸಮಯವು ಅನುಕೂಲವಾಗಲಿಲ್ಲ. ನನ್ನ ಪ್ರವಾಸದ ಕಾರ್ಯಕ್ರಮವನ್ನು ಏರ್ಪಡಿಸುವುದರಲ್ಲಿ ಪರಿಶ್ರಮಪಟ್ಟ ಡಾ| ಹರ್ಡೀಕರರಿಗೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ಕಾರ್ನಾಡ ಸದಾಶಿವರಾಯರಿಗೂ ಹಾಗೂ ಕರ್ನಾಟಕ ಸೇವಾದಲದ ಅಧಿಪತಿಗಳಾದ ಶ್ರೀ ದಿವಾಕರ ರಂಗರಾಯರಿಗೂ ನಾನು ತುಂಬ ಕೃತಜ್ಞನಾಗಿದ್ದೇನೆ.

ನನ್ನ ಕರ್ನಾಟಕದ ಪ್ರವಾಸದ ನಾಲ್ಕು ದಿವಸಗಳ ಕಾರ್ಯಕ್ರಮದಿಂದ ಚಿಕ್ಕದು ಹೋಗಿದ್ದವು. ಹೋಗಿ ಬಂದು ಆನಂದದಾಯಕವೂ ಆಗಿದ್ದವು. ಏಕೆಂದರೆ ನಾನು ಹೋದಹೋದಲ್ಲಿ ಜನರಲ್ಲಿ ಉತ್ಸಾಹವನ್ನೂ ಮುಂದೆ ಬರುವ ಎಲ್ಲಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲಿಕ್ಕೆ ಬೇಕಾಗುವಂತಹ ಎಲ್ಲ ಸಿದ್ಧತೆಗಳನ್ನೂ ಅವರಲ್ಲಿ ಕಂಡೆನು. ಹಾದಿಯ ಮೇಲಿನ ಹಳ್ಳಿಗಳಲ್ಲಿಯೂ ಪೇಟೆ ಪಟ್ಟಣ ಹಳ್ಳಿಯೂ ನನ್ನ ಮೇಲೆ ತಮ್ಮ ಮಮತೆಯ ಸ್ನೇಹದ ಮತ್ತು ಪ್ರೇಮದ ಮಳೆಗರೆದ ಅಸಂಖ್ಯ ಜನರ ಗುಂಪುಗಳನ್ನೂ ನೋಡಿ ನನಗೆ ಆನಂದಾಶ್ಚರ್ಯವಾಯಿತು. ಈ ಉತ್ಸಾಹ, ಈ ಪ್ರೇಮ ನನ್ನಂಥ ಒಬ್ಬ ವ್ಯಕ್ತಿಗೆ ಅಲ್ಲವೆಂದು ನಾನು ಬಲ್ಲೆನು. ಆದರೆ ಅದು ಯಾವ ಉಚ್ಚ ಧ್ಯೇಯದ ಪ್ರತಿನಿಧಿಯೆಂದು ನನ್ನನ್ನು ಭಾವಿಸುವರೋ ಅದಕ್ಕಾಗಿ ಎಂದು ನಾನು ತಿಳಿಯುತ್ತೇನೆ. ಗತವೈಭವದಿಂದ ತುಂಬಿದ ಶೂರ ಕರ್ನಾಟಕದ ಸ್ಮರಣೆಯುಳ್ಳದ್ದೂ ಮತ್ತು ಬೇಗನೇ ಜರಗುವ ನಮ್ಮ ಸತ್ವಪರೀಕ್ಷೆಯ ಕಾಲದಲ್ಲಿ ಕರ್ನಾಟಕಸ್ಥರು ಉತ್ತೀರ್ಣರಾಗದೇ ಇರಲಾರರೆಂಬುದು ಪೂರ್ಣಭರವಸೆಯಿಂದ ಇಲ್ಲಿಂದ ನಾವು ಹೋಗುತ್ತಿದ್ದೇವೆ. ಕರ್ನಾಟಕವು ತನ್ನ ದಿವ್ಯವಾದ ವೈಭವದ ಇತಿಹಾಸಕ್ಕೆ ಇನ್ನೊಂದು ತೇಜೋಮಯವಾದ ಪುಟವನ್ನು ಜೋಡಿಸಲಿ.

ಜವಾಹರಲಾಲ ನೆಹರು

ದಿವಾಳಿ ಹೋಯಿತು!

ಹಿಂದೂದೇಶದಲ್ಲಿ ಹಿಂದೀಯರ ಕೈಯಲ್ಲಂತೂ ಕಾಸಿಲ್ಲದೆ ಕಂಗಾಲು ಸ್ಥಿತಿಯು ಸನ್ನಿಹಿತವಾಗಿದೆಯಷ್ಟೆ! ವಿದೇಶಗಳಲ್ಲೂ ಬೇಂಕು ವಾಣಿಜ್ಯ ವ್ಯವಹಾರಗಳ ಆಫೀಸು ಕಾರ್ಖಾನೆಗಳೂ ದಿವಾಳಿ ಹೋಗುತ್ತಿವೆ. ಜರ್ಮನಿಯ ಬರ್ಲಿನ್‌ನಲ್ಲಿ ಬೋರ್ಸಿಗ್ ಎಂಬ ಪ್ರಖ್ಯಾತ ಲೋಹದ ಕಾರ್ಖಾನೆಯು ಬಾಗಿಲು ಹಾಕಿ ದಿವಾಳಿ ಹೋಯಿತು. ಅದರ ಸಾಮಾನುಗಳು ಮುಂಚೆ ಹಿಂದೂದೇಶಕ್ಕೆ ಶೇಕಡಾ ೮೦ರಷ್ಟು ಬರುತ್ತಿದ್ದು ಈಗ ಸಂಪೂರ್ಣ ಸ್ಥಬ್ಧವಾಗಿದೆ. ಇದರಿಂದಾಗಿ ಅದರಲ್ಲಿ ಕೆಲಸಮಾಡುತ್ತಿದ್ದ ೪೦೦೦ ಕೆಲಸಗಾರರೂ ಕೂಡ ಹೊರಡಬೇಕಾಯಿತು. ಈ ಕಾರ್ಖಾನೆಗೆ ೯೦ ವರುಷ ಪ್ರಾಯವಾಗಿತ್ತು. (ಮನುಷ್ಯನು ೮೦ರಲ್ಲಿ ಸಾಯುತ್ತಾನೆ) ಹಾಗೆ ಇದೂ ಸತ್ತಿತು. ಅಲ್ಲಿಯೇ ಇರುವ ಇನ್ನೊಂದು ಲೆಸ್ಸಿನ್ ಕಬ್ಬಿಣ ಕಾರ್ಖಾನೆಯೆಂಬುದೂ ಕಣ್ಣು ತೆರೆಯುತ್ತದೆ. ಲಂಡನ್ ನಗರದಲ್ಲಿ ಕೆಲವು ಕಾರ್ಖಾನೆಗಳೂ ಅಲುಗಾಡುತ್ತಿವೆ. ಲಂಕೆಶಯರ್ ಮೆಂಚೆಸ್ಟರುಗಳಲ್ಲಿಯ ಹತ್ತಿಯ ಕಾರ್ಖಾನೆಗಳೂ ವಸ್ತ್ರದ ಗಿರಣಿಗಳೂ ಸಿದ್ಧವಾಗುತ್ತಿವೆ. ಮುಕ್ಕಾಲು ಪಾಲು ವ್ಯಾಪಾರವು ಬಿದ್ದು ಹೋಗಿದೆ. ಇನ್ನು ಕಾಲುಪಾಲು ಇದೆ. ಆ ಮೇಲೆ —

* * *

ಕವೀಂದ್ರ ರವೀಂದ್ರರು

ಹಿಂದೀಯ ಕವಿಪುಂಗವರಲ್ಲಿ ಪ್ರಕೃತ ವಂಗೀಯ ಕವಿಗಳಾದ ರವೀಂದ್ರನಾಥ ಠಾಕೂರ್ ಅವರ ತೀಯಲಿಸ್ಬಹುದು. ಇವರು ಭರತ ಭೂಮಿಗೆ ಮಾತ್ರವಲ್ಲ, ಅಖಿಲ ಭೂಮಂಡಲದ ಕವಿಗಳ ತಿಲಕಪ್ರಾಯರು. ಇವರು ಪ ಗಭೂಮಿಯವ. ಬಂಗಾಳ ಮಂಡಲ ಅನೇಕ ವರ್ಷಗಳಿಂದ ಅತಿಗೆ ಸಾಹಿತ್ಯ ಶ್ರೇಷ್ಠತೆ ಸಾಹಿತ್ಯ ಸಮ್ರಾಟರಾದ ಬಂಕಿಮಚಂದ್ರ ಚಟರ್ಜಿಯವರ ನೋವೆಲುಗಳಿಗೂ ಕಾದಂಬರಿಗಳಿಗೂ ತರುದತ್ತಾದೇವಿ ಅವರಿಂದ್ರ ಮೊದಲಾದ ಸಂಸ್ಕೃತ ಸೇವಕರ ಗ್ರಂಥಗಳಿಗೆ ಕವರು ಹುಟ್ಟಿಗಿ ಉಜ್ವಲ ಕೀರ್ತಿಪ್ರಭೆಯಿಂದ ಬೆಳಗುತ್ತಿರುವ ಪ್ರಾಂತ್ಯವಾಗಿದೆ. ಇಂದು ವಂಗೀಯ ಸಾಹಿತ್ಯ ಕಲ್ಲೋಲಿನಿಯು. ಹಾತಂಕ ಪ್ರವಾಹವಾಗಿ ಪ್ರವಹಿಸುತ್ತಿದೆ. ಅದರಲ್ಲಿ ಅನುಪಮವಾದ ಪತಿಮೆಯ ತೇಜವು ಕಂಗೊಳಿಯುತ್ತಿರುವುದು ದೈವದಾಸನಾ ಉಪದೇಶಕರು ಆದ ಚೈತನ್ಯರಂಥ ಕಲಾರಾಧಕರಿಗೆ ಬಹುಕವು ಮಹತ್ವಭೂಮಿ. ವಂಗೀಯ ಸಂಸ್ಕೃತಿಯಲ್ಲಿ ಉದಿತ ಪುರಿತರಾದ ನಮ್ಮ ಕವೀಂದ್ರ ರವೀಂದ್ರರು ಲೋಕದ ಪ್ರತಿಯೊಂದು ದೇಶ ಮನೆ ಮನಸ್ಸು ಕಾಡಿಸಿ ಮಹಿಮಾಕಲನಸ ಕ್ಯವನ್ನು ಪಡಿಗಿಸಿದರು. ಅವರ ಕವನಗಳು ಕಥೆಗಳು ಕಾವ್ಯಗಳು ವ್ಯಂಗ್ಯಾತ್ಮಕ ಭಾವವನ್ನು ಗರ್ಭೀಕರಿಸಿಕೊಂಡು ಆ ಕ್ರಮವಾದ ಮಧುರತ್ವವನ್ನು ಪಡೆದು ವಿರಾಜಿಸುತ್ತಿವೆ. ಅವರ ನಾಟಕಗಳಂತೂ ಸರ್ವತ್ರ ಸರ್ವಕಾಲದಲ್ಲಿ ಸರ್ವರಿಂದಲೂ ಆದರಣೀಯವಾಗುತಿವೆ. ಅವರ ಗೀತೆಗಳು ಅನ್ಯಗಾಲಪಾತ್ರೀಕ ಧಾರ್ಮಿಕ ವಿಷಯಗಳ ಕತೆಗೆ ಸರಸ ಮಹತ್ತರ ಮತ್ತು ವಿಚಿತ್ರ ವಿಗಡಣೆಯೊಂದಿಗೆ ಸೇರಿರುತ್ತದೆ. ಅವರ ಗೀತಾಂಜಲಿಯಂತೂ ನಮ್ಮ ನಿಮ್ಮ ಮನೆಮನೆ ಹೋದಲ್ಲೆಲ್ಲ ಪ್ರಖ್ಯಾತವಾಗಿದೆ. ಅದರಲ್ಲಿನ ಜಯ ಜಯ ಭಾರತ ಭಾಗ್ಯವಿಧಾತ ಎಂಬ ಹಾಡು ಅದೆಷ್ಟು ಮಧುರ! ಸ್ವಾತಂತ್ರ್ಯಯುಕ್ತ! ಅದರಲ್ಲಿ ಅವರ ದೇಶಪ್ರೇಮವು ಒಡೆದು ಕಾಣುತ್ತಿರುವುದು. ಇನ್ನು ಅವರ ಸ್ವಾರ್ಥತ್ಯಾಗವನ್ನು ಕಾಣಬೇಕಾದರೆ ಅವರು ತನಗಿದ್ದ ಸರ್ ಪದವನ್ನು ಬಿಟ್ಟುಕೊಟ್ಟುದರ ಕಾರಣವನು ವಿಚಾರಿಸಬೇಕು. ಅದು ಸರ್ವರಿಗೂ ತಿಳಿದ ವಿಷಯವೇ.

ಈ ಮಹಾಶಯರು ನಮ್ಮ ಭಾರತ ಭೂಮಿಯ ಕವಿಗಳಲ್ಲಿ ರಿಗೆ ಆದರ್ಶಪ್ರಾಯರಾಗಿರುವರು. ಹಿಂದೀಯ ಭಾಷೆಗಳೆಲ್ಲಾ ಇವರನ್ನು ಅನುಕರಿಸುತ್ತಿವೆ. ರವೀಂದ್ರರು ನಮ್ಮ ದೇಶದವರೆಂಬುದೇ ನಮ್ಮ ಅಭಿಮಾನದ ಕಾರಣ. ಅವರನ್ನು ಆದರಿಸುವವರು ಯಾರೂ ಇಲ್ಲವೆಂಬುದೇ ನಮಗೆ ಅವರ ಮೇಲಿನ ವಿಶ್ವಾಸವಿದೆಯೆಂಬುದು. ರವೀಂದ್ರರ ನವೀನ ಛಂದಸ್ಸಿನ ಒಂದು ಒಂದು ನವೀನ ಭಾವದ ಕೃತಿಗಳು ಲೋಕವಿಖ್ಯಾತವಾಗಿವೆಯಲ್ಲದೆ ಅವುಗಳಿಗೆ ನೋಬೆಲ್ ಪಾರಿತೋಷಕವು ಸಿಕ್ಕಿದುದು ಆನಂದಕರ. ಪ್ರಕೃತಿ ಸೌಂದರ್ಯವನ್ನು ಸವಿಗೆಲ್ಲ ಕೇಂದ್ರೀಕರಿಸಿ ಅತೀಕವಿಯವನ್ನು ಮೂರ್ತಿಗೊಳಿಸಿ ದೇಶಪ್ರೇಮವನ್ನು ಕ್ರೋಢೀಕರಿಸಿ ರಸಪಾತ್ರದ ಒರೆಹಗಳನ್ನೋ ಕವನ ಕಾವ್ಯಗಳನ್ನೋ ಬರೆಯುವವರು ಯಾರೆಂದರೆ ಚಿಕ ಮಾಂಗಳೂ. ರವೀಂದ್ರರನ್ನೇ ಬೆರಳು ತೋರಿ ಸೂಚಿಸಬಹುದು.

ಇವರಿಗೆ ಇಂದ ಎಪ್ಪತ್ತು ವರುಷಗಳು. ಈ ಸಮಯದಲ್ಲಿ ಅವರ ಜೀವಿತವನ್ನೂ ಗುಣಕಥನವನ್ನೂ ನಾವು ಮಾಡಬೇಕಾಗಿದೆ. ಅದೇ ಈ ಲೇಖನದ ಮೂಲೋದ್ದೇಶವಾಗಿದೆ. ಕವೀಂದ್ರ ರವೀಂದ್ರರು ಚಿರಕಾಲ ಬಾಳಿ ಸಾಹಿತ್ಯೋನ್ನತಿಯನ್ನು ಬಗೆದು ಸರ್ವತ್ರಗಣನೀಯವಾದ ರಸಾತ್ಮಕಲಹರಿಯ ಕವಿತ್ವವನ್ನು ರಚಿಸಿ ತಮ್ಮ ತ್ರಿಕಾಲಕಲ್ಪನಾ ಪ್ರತಿಭೆಯಿಂದ ಲೋಕವನ್ನೆಲ್ಲ ಬೆಳಗಿಸಿ ಅವರ ರಚನಾಶಕ್ತಿಯ ಮೂಲಬೀಜಗಳನ್ನು ಹಿಂದೀ ಕವಿಗಳ ಹೃದಯಕ್ಷೇತ್ರದಲ್ಲಿ ಬಿತ್ತಿ ಅವು ಚಿಗುರಿಬೆಳೆದು ಫಲಬಿಡುವಂತಹ ಉದ್ವಿಕ್ತಕಾರ್ಯವನ್ನು ಸಗಿ ಭಾರತೀಯ ಸಾರಸ್ವತವನ್ನು ಪ್ರಪಂಚವಂದ್ಯವನ್ನಾಗಿ ಮಾಡುವ ಉತ್ಕಟೇಚ್ಛೆಯಿಂದ ಮೆರೆಯಲೆಂದು ಭಗವಾನ್ ಪರಮಾತ್ಮನಲ್ಲಿ ಕರ ಜೋಡಿಸಿ ಅನವರತವೂ ಪ್ರಾರ್ಥಿಸುವೆವು. ಹಾರೈಸುವೆವು.

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯರಾಗಿ ಸರಕಾರದಿಂದ ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧರಾದ 'ಭಿಷಕ್ಕ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ [illegible] ಸ್ಥಾಪನೆ [illegible] ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ [illegible] [illegible] ರೋಗಗಳ ವಿವರವಾದ ಲಕ್ಷಣಗಳು [illegible] ದೂರ ದೇಶದ ರೋಗಿಗಳು ತಮ್ಮ [illegible] ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಲಕ್ಕುದು.

ಭಾರತ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ)

ಮೂಲವ್ಯಾಧಿ

ರಕ್ತ ಅಥವಾ ತಜ್ಜನ್ಯವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ ಗುಣಬರದಿದ್ದಲ್ಲಿ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂದಿಯಿಡುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವುಳ್ಳ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೇಜ ಅಮೋಘ ಒಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
23 ಕಾಂಬಾರವಾಡಿ 4ನೇ ಗಲ್ಲಿ
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೋ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ನಿಃಕ್ಕಳಿದ ಎಲ್ಲವನ್ನು ಬಹಿಷ್ಕರಿಸಿ ಬಾಟ್ಲಿವಾಲರ ಅತ್ಯುತ್ತಮವನ್ನೇ ಉಪಯೋಗಿಸಿ

ಬಾಟ್ಲಿವಾಲರ

ಎಗ್ಯೂ ಮಿಕ್ಶರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು 50 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯದ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್ ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್

ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dadar Bombay 14

ತಂತಿ ವಿಳಾಸ — SIRINDHUN Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಹೆಂಗಸರ ಮೂರು ರತ್ನಗಳು

ಸೌಂದರ್ಯ—ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಪಥ್ಯ ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣ ಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ—ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ—ರಕ್ತಶುದ್ಧಿಗೆ ಇದು ಈ ಕಾಲದಲ್ಲಿ ಅತು ತ್ಯುತ್ತಮವಾದುದು.

ಹೊಸ ಔಷಧ

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ ವಾಚುಗಳೂ ಕ್ಲೋಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು ಕ್ಲಾಕು, ಟೈಮ್‌ಪೀಸು, ಗ್ರಾಮೊಫೋನು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು ರಿಪೇರಿ ಮಾಡುವಾಗ ಶುದ್ಧಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸಿ.— ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳೊಳಗೆ ಏನಾದರೂ ಎಳ್ಳಷ್ಟು ಕೊರತೆ ಕಂಡುಬಂದರೆ ಅವುಗಳನ್ನು ಉಚಿತವಾಗಿ ಸರಿಪಡಿಸಿ ಕೊಡುವ ನಿಯಮವು ದೊರಕುವುದು

[illegible]ರಿ ನಾಯಕರ ಚರಿತ್ರೆ

ಲೇಖಕ:— ಶ್ರೀ। ಎಮ್. ಜಿ. ಐಗಳ್.

[ಹಿಂದಿನ ಸಂಚಿಕೆಯಿಂದ ಮುಂದುವರಿಸಿರುವುದು]

೫ನೇ ಅಧ್ಯಾಯ

ಹಿರಿಯ ವೆಂಕಟಪ್ಪ ನಾಯಕ

ಧರ್ಮಶೀಲ ನಾಯಕನು ಶಿವನಾಯುಜ್ಯವನ್ನು ಪಡೆದ [illegible] ತಮ್ಮನಾದ ಹಿರಿಯ ವೆಂಕಟಪ್ಪ ನಾಯಕನಿಗೆ [illegible] ಶಕ ವರುಷ ೧೫೦೫ನೆಯ ಚಿತ್ರಭಾನು ಸಂವತ್ಸರದ [illegible] ಶುದ್ಧ ೫ ಯಲ್ಲಿ ಇಕ್ಕೇರಿ ಪುರದ ಅರಮನೆಯಲ್ಲಿ [illegible]ಕವಾಯಿತು

[illegible]ಪ್ಪನಾಯಕ ಕಾಲದ ವರೆಗೆ ಈ ನಾಯಕರು [illegible]ರದ ಅರಸರಿಗೆ ಕಪ್ಪ ಕೊಡುತ್ತಾ ಆಳಿಕೊಂಡು ಬರು[illegible] ವೆಂಕಟಪ್ಪನಾಯಕನು ಸ್ವತಂತ್ರನಾಗಿ ಆಳಲಾರಂಭಿ[illegible] [illegible] ಪೋರ್ತುಗೀಸರ ಹಾವಳಿಯು ಕರಾ[illegible] [illegible] ಎಲ್ಲಾ ಒಂತು. ಅಲ್ಲಲ್ಲಿ ಆಳುತ್ತಿದ್ದ [illegible] ಕಪ್ಪವನ್ನು ಕೊಡದೆ ಸ್ವತಂತ್ರನಾಗಿ ಆಳಲಾ[illegible] ಪೋರ್ತುಗೀಸರು ಈ ಒಳಅರಸುಗಳಿಗೆ ಸಹಾಯ [illegible]ಡುತ್ತಿದ್ದರು

[illegible]ನಾದ ಕೆಲವು ವರುಷಗಳ ಮೇಲೆ ಇವನಿಗೆ ಭದ್ರಪ [illegible]ಂಬ ಮಗನು ಹುಟ್ಟಿದನು ಹಿರಿಯಮ್ಮನೆಂಬ ಮಗಳೂ [illegible] ಈ ಹಿರಿಯಮ್ಮನು ಪ್ರಾಯಭರಿತಳಾಗಲು ನೀಲೆ [illegible]ಂಬೂರ ಸೀಮೆಯ ಒಡೆಯನಾದ ವಿರಪಣ ಒಡೆ[illegible] ವಿವಾಹಮಾಡಿಕೊಟ್ಟನು ಅವಳಲ್ಲಿ ಸದಾಶಿವಯ್ಯ[illegible]ನು ಹುಟ್ಟಿದನು ಅನಂತರ ಭದ್ರಪನಾಯಕನಿಗೆ [illegible] ವೆಂಕಟಾದ್ರಿನಾಯಕನ ಮಗಳಾದ ಬಸವಮ್ಮ [illegible] ಕುಮಾರಿಯನ್ನು ಕೊಟ್ಟು ದಾನಿವಾಸದ ಸೀಮೆಯ ಹೊಳೆಯೆಂಬ ಸ್ಥಳದಲ್ಲಿ ಅತ್ಯಂತ ಸಂಭ್ರಮದಿಂದ ವಿವಾ[illegible] ವೆಂಕಟಾದ್ರಿನಾಯಕನು ತನ್ನ ಮಗಳ ಬಳು[illegible] [illegible] ಜಾಗರದ ಸೀಮೆಕೋಟೆಯನ್ನು ಕೊಟ್ಟನು. ವೆಂಕ[illegible]ನು ಈ ಕೋಟೆಯನ್ನು ಭದ್ರವಾಗಿ ಕಟ್ಟಿಸಿ [illegible]ಕ್ಕೇರಿ [illegible]ಂದನು ಅನಂತರ ತನ್ನ ಮಗನಾದ ಭದ್ರಪನಾಯಕ[illegible]ನ್ನ ಅಣ್ಣ ರಾಮರಾಜನಾಯಕನ ಮಕ್ಕಳಾದ ವೀರ[illegible] ಮತ್ತು ಬಸವಲಿಂಗನಾಯಕರನ್ನೂ ತನ್ನ ಚಿಕ್ಕಂದೆ [illegible] ಚಿಕ್ಕಸಂಕಣನಾಯಕನ ಮಗನಾದ ಸಿದ್ಧಪನಾಯಕ[illegible] [illegible]ಷಿಸುತ್ತಾ ರಾಜ್ಯವಾಳಿಕೊಂಡಿದ್ದನು

[illegible] ಶ ೧೫೭೦ರಲ್ಲಿ ಅಹಮದನಗರದ ನಿಜಾಮಶಾಯಿ[illegible] [illegible] ಮುರ್ತಜಾ, ನಿಜಾಮ ಶಾ ಅರಸನೂ, [illegible]ರದ ಅದಿಲ್‌ಶಾಹಿ ಅರಸನಾದ ಅಲ್ಲಿ ಅದಿಲ್ ಶಹ [illegible] ಪೋರ್ತುಗೀಸರನ್ನು ಓಡಿಸಿಬಿಡಬೇಕೆಂಬ [illegible] [illegible] ೧೫೭೦ರಲ್ಲಿ [illegible] [illegible]ದ ನಂತರ ವಿಜಯ ನಗರದ [illegible] [illegible] ಮನಸ್ಸು ಪೋರ್ತುಗೀಸರ ಕಡೆಗೆ ತಿರುಗಿ[illegible] ಅರಸರಿಗೆ ಸ್ವಲ್ಪ ವಿಶ್ರಾಂತಿಯು ಸಿಕ್ಕಿತು ಕ್ರಿ.ಶ [illegible]ರಲ್ಲಿ ಈ ಇಬ್ಬರು ಸುಲ್ತಾನರ ಸ್ನೇಹವನ್ನು ಮುರಿಸಿ [illegible] ಬೆಳಸಿ ಅಹಮದ ನಗರದ ಸುಲ್ತಾನನನ್ನು [illegible] ರಾಜ್ಯವನ್ನು ಜಯಿಸಬೇಕೆಂದೂ, ವಿಜಾಪುರದ ಅರಸ[illegible] ದಿಕ್ಕಿನ ರಾಜ್ಯವನ್ನು ಜಯಿಸಬೇಕೆಂದೂ ಆಲೋಚ[illegible]ತು. ಬಿಜಾಪುರದ ಅರಸನು ಬಂಕಾಪುರಿಯ ಹತ್ತಿರವಿರು[illegible]ಯನ್ನು ಹಿಡಿದನು ಅನಂತರ ಅಟ್ಟಳದ ರಾಣಿಯೂ [illegible]ಕ್ಕೆ ಕಪ್ಪ ಕೊಡಲಾರಂಭಿಸಿದಳು. ಸೋಂದದ ಅರ[illegible] ಶ. ೧೫೭೩ರಿಂದ ಬಿಜಾಪುರಕ್ಕೆ ಕಪ್ಪ ಕೊಡಲಾರಂಭಿ[illegible]ದನು. ಆದೋನಿಯನ್ನು ಜಯಿಸಿದ ನಂತರ ನವಣೂರು, [illegible]ಕೊಂಡಾ ಮತ್ತು ಉತ್ತರಕನ್ನಡವನ್ನು ಜಯಿಸಿದನು ಇದಾದ [illegible]ಡಲೇ ವೆಂಕಟಪ್ಪನಾಯಕನು ತನ್ನ ರಾಜ್ಯವನ್ನು ಭದ್ರವಾಗಿ[illegible]ಕೊಳ್ಳಬೇಕೆಂದು ಸೈನ್ಯವನ್ನು ಕೂಡಿಸುತ್ತಾ ಇದ್ದನು.

ಕ್ರಿ. ಶ ೧೫೭೫ರಲ್ಲಿ ಬಿಜಾಪುರದ ಸುಲ್ತಾನನಾದ ಅಲೀ ಇಬ್ರಾಹಿಮ ಅದಿಲ್ ಶಹಾನು ಇಕ್ಕೇರಿ ರಾಜ್ಯವನ್ನು ಸ್ವಾಧೀನ[illegible]ಲಿಕ್ಕೆ ದೊಡ್ಡದಾದ ಸೈನ್ಯವನ್ನು ಕೂಡಿಸಿ ಮಂಜುಳಖಾನ [illegible]ದಖಾನ' ಬಹಿಲೆಮ್‌ಖಾನ, ಸಂಜರಖಾನ, ಆನೆ, [illegible]ಗಳ ಸೇನಾಧಿಪತಿಯಾದ ಕಾರೆಯುಖಾನ, ಸಲಾಬತಖಾನ [illegible]ಗಳ ಸಂಗಡ ಅಂಬರಖಾನ ಸಾಮಗ್ರಿಗಳ ಸಹಿತ [illegible]ನ, ಅಹಮದಖಾನ ಮುಂತಾದ ಸೇನಾಧಿಪತಿ[illegible] [illegible]ದರ ಮಲ್ಲಿನಾಯಕ, ಬರಗಿಯ ದೇವನಾಯಕ ಮುಂತಾದವರೊಡನೆ ಇಕ್ಕೇರಿ ರಾಜ್ಯವನ್ನು ಪ್ರವೇಶಿಸಿದರು ಅಂಬರಖಾನನು ಜಡೆಯದ ಕೋಟೆಗೆ ಮುತ್ತಿಗೆ ಹಾಕಿದನು ವೆಂಕಟಪ್ಪನಾಯಕನು ಅವನೊಡನೆ ಯುದ್ಧಮಾಡಿ ಆ ಕೋಟೆಯನ್ನು ಸ್ವಾಧೀನ ಪಡಿಸಿಕೊಂಡನು. ಅನಂತರ ಹನುಮಪ್ಪನಾಯಕನು ಆನೆ, ಸೈನ್ಯ ಸಹಿತ ಬಂದು ಉಡುಗಣಿಯ ಕೋಟೆಯನ್ನು ಹಿಡಿದಿರಲು ಬಿಜಾಪುರದ ಆ ಸೈನ್ಯವನ್ನು ಮುರಿದು ಆ ಕೋಟೆಯನ್ನು ಸ್ವಾಧೀನಪಡಿಸಿಕೊಂಡನು. ಅದರ ತರುವಾಯ ಹಾನಗಲ್ಲು ಮತ್ತು ಗುತ್ತಿಯ ಕೋಟೆಗಳನ್ನು ಹಿಡಿದು ಬಿಜಾಪುರ ಸೈನ್ಯವನ್ನು ಜಯಿಸಿ ಆ ಕೋಟೆಗಳನ್ನು ಸ್ವಾಧೀನಪಡಿಸಿಕೊಂಡನು. ಅದಲ್ಲದೆ ವಿಜಯನಗರದ ಅರಸನಾದ ರಾಮರಾಯನು ದೊಡ್ಡ ಸಂಕಣನಾಯಕನಾದ ರಾಮರಾಜನಾಯಕನಿಗೆ ಹಾಲುಬೆಣ್ಣೆ ಕುಂಬಳಿಯಾಗಿ ಬಿಟ್ಟ ಮಾಸೂರ ಸೀಮೆಯನ್ನು ಮಂಜುಳಖಾನನು ವಶಮಾಡಿಕೊಂಡಿರಲು ಅವನನ್ನು ಮುರಿದೋಡಿಸಿ ಅವನಿಗೆ ಮಂಜುಳಖಾನನೆಂದು ಹೆಸರಿಟ್ಟನು

[illegible]ತಾನು ಕಳುಹಿಸಿದ ಸೈನ್ಯವನ್ನೆಲ್ಲಾ ಸೋಲಿಸಿ ವೆಂಕಟಪ್ಪನಾಯಕನು ಓಡಿಸಲು, ಅಲೀ ಇಬ್ರಾಹಿಮ ಅದಿಲ್‌ಶಹನು ಸಿಟ್ಟುಗೊಂಡು ತಿರಿಗೊಂದು ಸೈನ್ಯವನ್ನು ಕಳುಹಿಸಿದನು ಆ ಯುದ್ಧದಲ್ಲಿ ವೆಂಕಟಪ್ಪನಾಯಕನು ಎರಡೂ ಕೈಗಳಲ್ಲಿ ಕತ್ತಿಗಳನ್ನು ಹಿಡಿದು ಯುದ್ಧಮಾಡಿದ್ದರಿಂದ ಇವನಿಗೆ ದೋಬಂಡರಾಯ ಎಂಬ ಬಿರುದು ಬಂತು.

ಈ ಯುದ್ಧದಲ್ಲಿ ಬಿಜಾಪುರದ ಸೈನ್ಯವನ್ನು ಓಡಿಸಿದ ನಂತರ ಚಿಕ್ಕಸಂಕಣನಾಯಕನ ಮಗನಾದ ಸಿದ್ಧಪ್ಪನಾಯಕನಿಗೆ ಇಬ್ಬರು ಕನ್ಯೆಯರನ್ನು ವಿವಾಹಮಾಡಿದನು ತನ್ನ ಮಗನಾದ ಭದ್ರಪನಾಯಕನಿಗೆ [illegible]ಯ ನಾಯಕನ ಮಗಳನ್ನು ಮದುವೆ ಮಾಡಿದನು. ಇವನಿಗೆ ರಾಮಲಿಂಗನಾಯಕ, ವೀರಭದ್ರನಾಯಕ [illegible] ಇಬ್ಬರು ಗಂಡುಮಕ್ಕಳು ಹುಟ್ಟಿದರು ರಾಮಲಿಂಗನಾಯಕನು ಮಗುವಾಗಿರುವಾಗಲೇ ಕಾಲವಾದನು. ಭದ್ರಪ್ಪನಾಯಕನಿಗೆ ಒಬ್ಬ ಮಗಳು ಹುಟ್ಟಿದಳು ಅವಳನ್ನು ತನ್ನ ಮಗಳೂ ಬಂಬೂರ ವಿರೂಪಣನಾಯಕನ ರಾಣಿಯೂ ಆಗಿದ್ದ ಹಿರಿಯವ್ವನ ಮಗನಾದ ಸದಾಶಿವಯ್ಯನಿಗೆ ವಿವಾಹ ಮಾಡಿಕೊಟ್ಟನು. ಆ ಕನ್ಯೆಯಲ್ಲಿ ವೆಂಕಟಯ್ಯ (ಅಂಧಕ) ಭದ್ರಯ್ಯ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಹೀಗೆ ವೆಂಕಟಪ್ಪನಾಯಕನು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೊಡನೆ ಸುಖದಿಂದ ರಾಜ್ಯಭಾರಮಾಡಿಕೊಂಡಿದ್ದನು ತನ್ನ ಮಗನಾದ ಭದ್ರಪನಾಯಕನು ಕಾಲವಾಗಲು ಸ್ವಲ್ಪ ಸಮಯ ವೆಂಕಟಪ್ಪನಾಯಕನು ಪುತ್ರಶೋಕದಿಂದ ವ್ಯಾಕುಲಚಿತ್ತನಾಗಿದ್ದು ಅಧ್ಯಾತ್ಮಶಾಸ್ತ್ರ ವಿಚಾರಮಾಡಿ ಮನಸ್ಸಿಗೆ ಸಮಾಧಾನ ಮಾಡಿಕೊಂಡನು. ಅನಂತರ ಮೊಮ್ಮಗನಾದ ವೀರ ಭದ್ರಪನಾಯಕನಿಗೆ ಕೊಟ್ಟೂರಮ್ಮಾಜಿಯ ಇಬ್ಬರು ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟನು. ಚಿಕ್ಕತಂದೆಯಾದ ಚಿಕ್ಕಸಂಕಣನಾಯಕನ ಮಗನಾದ ಸಿದ್ಧಪ್ಪನಾಯಕನ ಮೊದಲನೆ ಹೆಂಡತಿಯಲ್ಲಿ ಶಿವಪ್ಪನಾಯಕನೆಂಬ ಮಗನೂ, ಪರಮೇಶ್ವರಮ್ಮ, ನಾಗಾಜಮ್ಮ, ಚೆನ್ನಮ್ಮ ಎಂಬ ಮೂವರು ಹೆಣ್ಣುಮಕ್ಕಳೂ ಹುಟ್ಟಿದರು ಸಿದ್ಧಪ್ಪನಾಯಕನ ಎರಡನೇ ಹೆಂಡತಿಯಲ್ಲಿ ವೆಂಕಟಪ್ಪನಾಯಕನೆಂಬ ಮಗನು ಹುಟ್ಟಿದನು. [ಸಶೇಷ]

ಖಾದಿಯೂ ವಿದೇಶಿ ವಸ್ತ್ರ ಬಹಿಷ್ಕಾರವೂ

ಸೆಪ್ಟಂಬರ ೩೦ಕ್ಕೆ ಅಂತ್ಯವಾಗುವ ೧೯೨೯ ೧೯೩೦.

	೧೯೨೯	೧೯೩೦
ಖಾದಿ ಉತ್ಪನ್ನ	ರೂ ೩೧,೫೫,೪೮೭	ರೂ. ೫೬,೦೦,೪೯೬
ಖಾದಿ ಮಾರಾಟ	ರೂ ೩೯,೪೩,೦೭೭	ರೂ. ೬೬,೪೪,೫೫೩
ಖಾದಿ ಭಂಡಾರಗಳು	೩೮೪	೬೦೦
ಉತ್ಪನ್ನ ಕೇಂದ್ರಗಳು	೧೭೯	೩೫೯
ಮಾರಾಟ ಅಂಗಡಿಗಳು	೨೦೫	೨೪೧
ಚರಖಾ ಸಂಘದ ಅಂಗಡಿಗಳು	೧೯೦	೨೨೧
ಆಶ್ರಿತ ಅಂಗಡಿಗಳು	೬೦	೮೧
ಸ್ವತಂತ್ರ ಅಂಗಡಿಗಳು	೧೨೪	೨೯೮

ಅಲ್ಲದೆ ಸುಮಾರು ೬೦೦೦ ಹಳ್ಳಿಗಳಲ್ಲಿ ಈ ಖಾದೀ ಚಳುವಳಿಕೆಗಳು ಕಂಡುಬಂದಿರುವುದಾಗಿಯೂ, ಸರಿಯಾದ ಲೆಕ್ಕ ಪರಿಶೋಧನೆಗಳು ಬಾರದಿದ್ದಾಗ್ಯೂ ನೂಲುವವರು ೩೯,೭೬೯ ಮತ್ತು ನೇಯುವವರು (ಖಾದಿ) ೧೧,೪೭೬ ಎಂದು ತಿಳಿಯುತ್ತದೆ ಒಂದು ವರುಷದಿಂದೀಚೆಗೆ ಖಾದಿಯ ಕ್ರಯವು ಕೂಡ ನೇಕಡಾ ೧೫ರಂತೆ ತಗ್ಗಿರುವುದಾಗಿಯೂ ಉತ್ಪನ್ನ ಮತ್ತು ಮಾರಾಟವು ಕ್ರಮದಂತೆ ೬೮ ಮತ್ತು ೬೧ ಹೆಚ್ಚಿದೆಯೆಂದೂ ಕಂಡುಬರುತ್ತದೆ. ಒಟ್ಟು ಭಂಡವಾಳ ರೂ ೨೬,೨೫,೬೮೧—೨—೦ ಖಾದಿಯ ಬಗ್ಗೆ ವಿನಿಯೋಗಿಸಲ್ಪಟ್ಟಿದೆ

ಅಂದರೆ ಖಾದಿ ಉತ್ಪನ್ನ ಮತ್ತು ವಿಕ್ರಯದ ವರುಷದಿಂದ ವರುಷದ ಲೆಕ್ಕಪಟ್ಟಿಗಳಿಂದ ಖಾದಿಯು ಕ್ರಮೇಣ ಅಭಿವೃದ್ಧಿಗೊಳ್ಳುತ್ತಿರುವುದಾಗಿದ್ದರೂ ಹಿಂದೀಯರ ನಿರುದ್ಯೋಗದ ಸಮಸ್ಯೆಯ ಒರೇ ಸ್ವಲ್ಪಾಂಶವು ಮಾತ್ರ ಸುಧಾರಿಸಿಕೊಂಡಿದೆಯೆಂದು ಸ್ಪಷ್ಟವಾಗುವುದು. ನಮ್ಮ ದೇಶಬಾಂಧವರು ವಿಶಿಯಗಟ್ಲೆ ನಿರುದ್ಯೋಗಿಗಳಾಗಿ ಇಳುವೆ ಸಾಕಷ್ಟು ಉದ್ಯೋಗವಿಲ್ಲದೆ ಬರೆ ಹೊಟ್ಟೆ ಅಥವಾ ಅರೆ ಹೊಟ್ಟೆಯಿಂದ ನರಳುತ್ತಿರಲು ಈ ನಿರುದ್ಯೋಗ ಸಮಸ್ಯೆಯು ಎಷ್ಟು ಮಹತ್ವದ್ದು ಮತ್ತು ಅಗಾಧವಾಗಿದೆಯೆಂದು ಊಹಿಸತಕ್ಕದ್ದು ಅದುದರಿಂದ ಖಾದಿಯನ್ನು ಧರಿಸುತ್ತಿರುವುದು ನಿಜ ದೇಶಪ್ರೇಮಿಯ ಬಾಹ್ಯ ಚಿಹ್ನೆಯಾಗಿದೆ ಮಾತ್ರವಲ್ಲದೆ, ಅದು ಎಡನೆಯೇ ಮಹತ್ವಾದ ರಾಜಕೀಯ ಸಾಧನವೆಂದೂ ಆರ್ಥಿಕ ಹಾಗೂ ಸಮಾಜಿಕ ರೀತಿಯಲ್ಲಿಯೂ ಪ್ರಬಲ ಸಾಧನವೆಂದೂ ತಿಳಿಯತಕ್ಕದ್ದಾಗಿದೆ. ಎಲ್ಲಿ ಉಪವಾಸವು ನೆಲೆಸಿರುವುದೋ ಅಲ್ಲಿ ಹಸಿವಡಗಿಸುವುದಾಗಿಯೂ ಎಲ್ಲಿ ವಿರಾಮ ಕಾಲದಲ್ಲಿ ಉಪವೃತ್ತಿಯಿಲ್ಲವೋ ಅಲ್ಲಿ ಉದ್ಯೋಗವನ್ನೊದಗಿಸುವುದಾಗಿಯೂ ದೇಶದ ದಾರಿದ್ರ್ಯವನ್ನು ದೂರಮಾಡಬಲ್ಲ ಖಾದಿಯು ಆಧುನಿಕ ನವನಾಗರಿಕತೆಯಿಂದ [illegible] ಸೌಭಾಗ್ಯವನ್ನನುಭವಿಸಿ ಹೆಚ್ಚಳ ಪಡುತ್ತಿದ್ದ ವಿಶ್ವಿಮಾತ್ಯರನ್ನು [illegible]ಂಗೆ ಡಿಸಿತಲ್ಲ! ಅತಿ ಬಲಾಢ್ಯವೆನಿಸಿದ್ದ ಮಹಾ ಸಾಮ್ರಾಜ್ಯವನ್ನೇ ಅಲುಗಾಡಿಸಿತೆಂದ ಮೇಲೆ ಖಾದಿಗೆ ಬೇರೆ ನಿದರ್ಶನಗಳು ಬೇಕಾಗಿವೆಯೆ?

ಕಳೆದ ವರುಷ ಸಮಗ ಹಿಂದೂದೇಶದಲ್ಲಿ ಸತ್ಯಾಗ್ರಹ ಚಳವಳಿಂದ ಖಾದಿಯ ಬೇಡಿಕೆಯು ಅತಿಯಾಯಿತೆಂದು ಒಪ್ಪ ಹೇಳಲಾಗಿದೆಯಷ್ಟೆ! ಅಗ್ನಿ ರಾಷ್ಟ್ರಜಾಗ್ರತಿಯ ಚಿಹ್ನೆಯಾಗಿ ದೇಶಪ್ರೇಮಿಗಳು ಖಾದಿಯನ್ನು ಉತ್ಸಾಹ ಮಮತೆಗಳಿಂದ ಕೈಕೊಂಡದ್ದೇನೂ ಸ್ವಾಭಾವಿಕವಾಗಿದೆ ಅಂತೆಯೆ ಖಾದಿ ಕೇಂದ್ರಗಳಲ್ಲಿ ಉತ್ಪನ್ನವು ಅಭಿವೃದ್ಧಿಗೊಳಿಸಲ್ಲದೆ ಹೊಸತಾಗಿ ಖಾದಿ ಕೇಂದ್ರಗಳನ್ನುಂಟುಮಾಡಿ ಖಾದಿ ಪೂರೈಕೆಯು ಸ್ವಲ್ಪ [illegible]ಯಲ್ಲಿಯೇ ಸಾಕಾಗುವಷ್ಟಾಯಿತು ಒಂದೇ ವರುಷದೊಳಗಿನ ಹತ್ತು ವರುಷಗಳಲ್ಲಾದುದಕ್ಕಿಂತ ಹೆಚ್ಚಾದ ರೀತಿಯಲ್ಲಿ ಅಭಿವೃದ್ಧಿ ಹೊಂದಿರುವ ಈ ಬಡಜನರ ಖಾದಿಯನ್ನು ಅಸಡೆ ಮಾಡಿ ಕುಗ್ಗಿಸಲಾಗದು, ಇದನ್ನು ಕೂಡಿ ಮಟ್ಟಿಗೆ ಮುಂದೆ ತರುವುದು ಪ್ರತಿಯೊಬ್ಬ ಹಿಂದೀಯನ ಆದ್ಯ ಕರ್ತವ್ಯವಾಗಿದೆ ಸತ್ಯಾಗ್ರಹ ಸಮರದಲ್ಲಿದ್ದ ಉತ್ಸಾಹವು ಈಗ ಸಂಧಾನ ಕಾಲದಲ್ಲೂ ಪ್ರಜ್ವಲವಾಗಿಯೇ ಇರಬೇಕು

ವಿದೇಶೀ ವಸ್ತ್ರ ಬಹಿಷ್ಕಾರದಲ್ಲಿ ದೇಶೀ ಗಿರಣಿಗಳ ಮಾನ್ಯಮಾಡಿದಾಗ್ಯೂ ಕಾಂಗ್ರೆಸ್ ಖಾದಿಯ ಮೇಲಣ [illegible]ವನ್ನು ಕಡಿಮೆಮಾಡಿಲ್ಲ ಖಾದಿಯ ಸ್ಥಾನವನ್ನು ದೇಶೀ ವಸ್ತ್ರವು ಎಷ್ಟು ಮಾತ್ರಕ್ಕೂ ಹೊಂದಲಾಗದು. ಎಲ್ಲಿ ದೊರೆಯುವುದಿಲ್ಲವೋ ಅಲ್ಲಿ ಮಾತ್ರ ದೇಶೀ ಗಿರಣಿ [illegible] ಉಪಯೋಗಿಸಬೇಕಾಗಿದೆ ಸದ್ಯಕ್ಕೆ ಖಾದಿಯು [illegible]ದ್ದರೂ ಕೂಡ ಅದರ ಸಂಗ್ರಹವು ಇರುತ್ತ ವಿ[illegible] [illegible]ಷ್ಕಾರದ ಕಾರ್ಯಕ್ರಮದಲ್ಲಿ ಖಾದಿಯು ಅತ್ಯ[illegible] [illegible]ನವನ್ನು ಹೊಂದಿದೆ ಖಾದಿಯುತ್ಪನ್ನದ ವಿಕಾಸ[illegible]ಗಳನ್ನು ಕರಗತ ಮಾಡಿಯೇ ವಿದೇಶೀ ವಸ್ತ್ರ [illegible] ಅಲ್ಪ ಸಂಖ್ಯಾಕರಾದ ಭಂಡವಾಳಗಾರರಿಗಲ್ಲ!

ಬಡ ಹಳ್ಳಿವಾಸಿಗಳಿಗೂ ಪ್ರಯೋಜನಕಾರಿಯಾಗಿ ಮಾಡಿ, ಯಶಸ್ವೀಯನ್ನಾಗಿ ಮಾಡಬಹುದಲ್ಲದೆ, ಬೇರೆ ಗತ್ಯಂತರವೇ ಇಲ್ಲ. ಈ ಬಹಿಷ್ಕಾರದ ಫಲವು ಪರಿಣಾಮಕಾರಿಯಾಗಬೇಕಾದರೆ ಜೀವನಾಧಾರವಾದ ಚರಕವನ್ನು ಸಾಧ್ಯವಿದ್ದಷ್ಟು ತೀವ್ರರೀತಿಯಲ್ಲಿ ಪ್ರಚಾರಮಾಡಿದರೆ ಮಾತ್ರ ಸಾಧ್ಯವಿದೆ ಆದುದರಿಂದ ಕರಾಚಿ ಕಾಂಗ್ರೆಸ್ಸಿನಲ್ಲಿ ಬಹಿಷ್ಕಾರ ಕಾರ್ಯಕ್ರಮದಲ್ಲಿ ಖಾದಿಗೆ ಹಿರಿಯ ಅದೇ ಪ್ರಾಧಾನ್ಯವನ್ನು ಕೊಟ್ಟಿರುವುದಾಗಿದೆ ಕಳೆದ ವರುಷದ ಅನುಭವದಿಂದ ಖಾದಿಯ ಬೇಡಿಕೆಯು ಎಷ್ಟು ಅಪಾರವಾಗಿದ್ದರೂ ಖಾದಿಯ ಪೂರೈಕೆಯನ್ನು ಅಲ್ಪಾವಧಿಯಲ್ಲಿ ಸಾಧಿಸಲಿಕ್ಕೆ ಆಗುವುದರಿಂದ, ಸದ್ಯ ಪ್ರಚಲಿತವಾಗಿರುವ ಖಾದಿ ಕಾರ್ಯವನ್ನು ಅಲ್ಲಿಗೆ ತಡೆಯದೆ, ನೂಲುವುದನ್ನು ಖಾದಿ ಧರಿಸುವುದನ್ನು ಮತ್ತಷ್ಟು ಪುಷ್ಟೀಕರಿಸುವುದು ಅತ್ಯಾವಶ್ಯಕವಾಗಿದೆ. ಕೊನೆಯ ಪಕ್ಷಕ್ಕೆ ಖಾದಿಯು ಸದ್ಯತೆಯಾರಾದ ಹಾಗೆ ಕೊಂಡುಕೊಂಡಾದರೂ ರಾಷ್ಟ್ರದೇಳಿಗೆಯ ಹವ್ಯಾಸವನ್ನು ಜಾಗ್ರತವಾಗಿಡಬೇಕು ಬಹಳವೇಕೆ, ಖಾದಿಯೊಡನೆಯೇ ಜಾಗ್ರತೆ, ಸ್ವಾವಲಂಬನ, ಆತ್ಮಗೌರವ ಹಾಗೂ ಆತ್ಮಸಂಯಮ—ಅಂದರೆ ಅಖಿಲ ಹಿಂದೂದೇಶದ ಮೂಲೆಯಗಟ್ಲೆ ಗೃಹಗಳಲ್ಲಿ ಸ್ವರಾಜ್ಯ ಮಂತ್ರವೇ ಸಾರಲ್ಪಡುತ್ತಿಲು, ಸುಖದ ಹಾದಿಯಾಗಿರುವ ಖಾದಿಯನ್ನು ಧರಿಸಿಯಾದರೂ ಮಾತೃಭೂಮಿಯ ಋಣವನ್ನು ಮುಕ್ತಿಗೊಳಿಸಬೇಕು.

ವಂದೇ ಮಾತರಂ

ಶ್ರೀ. ನಾ. ಶೈ.

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

ಉಪಯೋಗಿಸಲ್ಪಟ್ಟ ಔಷಧಗಳು.

1 **ಧಾತುಪುಷ್ಟಿ ಲೇಹ**—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ ಸ್ವಪ್ನದಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಿಳುಪುವದು ಇತ್ಯಾದಿ ರೋಗಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮೂರು ಡಬ್ಬಿಗಳಿಗೆ ರೂ 7

2. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟುರೋಗಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ ಪ ಊರ್ಧ್ವ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಅತೀ ಶೀಘ್ರದಲ್ಲಿಯೇ ಗುಣಪಡಿಸುವುದು ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರಯಿಸಿರುವವು ಕ್ರಯ 1 ಬಾಟಲಿ ಔಷಧಕ್ಕು ಒಂದು ಡಬ್ಬಿ ಮಾತ್ರೆಗೂ ರೂ. 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ 6—4—0.

3 **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು ಹಳದಿಯಂತೆ ಹೋಗುವ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ.

4. **ಮಲೇರಿಯಾ ಜ್ವರ ನಿವಾರಣೆ**—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1ಕ್ಕೆ ರೂ 1—8—0 3 ಬಾಟ್ಲಿಗಳಿಗೆ ರೂ 4—4—0.

5 **ಬಾಲಗ್ರಹ ಗುಟಿಕೆ**—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ... 3ಕ್ಕೆ ರೂ 1—12—0

6 **ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ**—ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ. 1—8—0 3ಕ್ಕೆ 4—4—0

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕಂತಹ ಔಷಧವನ್ನು ಕಳುಹಿಸುವೆವು ... ಕೆಟಲಾಗು ತರಿಸಿ ನೋಡಿರಿ

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ ಅತಿಸಾರ, ಅಜೀರ್ಣದಿಂದಾದ ಎಂತಹ ಉಷ್ಣಕಟವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದು HEDAJURIN DYSENTERY CHOLERA CURE ಹಿಂದೀಯರಿಂದಲ್ಲದೇ ... ವ್ಯಾಪಾರಕ್ಕೆ ತರಲ್ಪಟ್ಟದು.

ಔನ್ಸಿನ ಕ್ರಯ ಆಣೆ 0—15—0 2 ಔನ್ಸಿನ ಬಾಟಲಿಗೆ ರೂ 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು, ಡೊಂಗರಕೇರಿ ರಸ್ತೆ, ಮಂಗಳೂರು

ದಿ ಕೆಣಿ ಡಿಸ್ಪೆನ್ಸರಿ. ಕೊಡಿಯಾಲಬೈಲ್ ಪೋಸ್ಟು ...

'If every Wife knew what every Widow knows every Husband would be Insured'

PLACE YOUR LIFE ASSURANCE WITH

THE SOUTH INDIAN

...ng for your clients

1 Low rates of Premium

2. Liberal Policy Conditions

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.

Where in CANARA DISTRICTS & HYDERABAD STATE

...s of Agency please apply to —

H R K IYENGAR, Chief Agent

S. I. G. A Co. Ltd, Sanyasiguddy, MANGALORE

...nts — PANDALAI & CO ... cleau Street, G T MADRAS

ಜೀವವಿಮೆ ಮಾಡಿಸಿರಿ.

ದಿ ಸೌತ್ ಇಂಡಿಯನ್ ಜನರಲ್ ಏಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರೀಮಿಯಂ ದರಗಳು ಕಡಿಮೆ!

ಶರ್ತಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನನ್ನೂ ಸ್ವಲ್ಪ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಅಯ್ಯಂಗಾರ್,

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ

ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,

ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ,

78 ಮೆಕಲೀನ್ ಸ್ಟ್ರೀಟ್, ಜಿ. ಟಿ. ಮದ್ರಾಸು

ಉತ್ತಮ ಪುಸ್ತಕಗಳು ಬೇ...

ಹೆಗ್ಗಡದೇವೆ ಶ್ರೀ ಶೇಷಾಚಲ ಗ್ರಂಥಮಾಲೆ

... ಕಳಿಮೋ ಕೊಲೆಯೋ—ಬೆಲೆ ... ಬೆಲೆ ... ರಾಮಚಂದ್ರ ಬೆಲೆ ... ಸ್ವಂತಸಾಕ ಬೆಲೆ ... ಅಣೆ,

ಈ ಹೊಸ ಪುಸ್ತಕಗಳನ್ನು ತರಿಸಿ ಓದಿ ...

ಮಹಾ ಸಾಧು ತುಕಾರಾಮ ಬುವಾ

ಶ್ರೀ ಸಮರ್ಥ ರಾಮದಾಸರು ಬೆಲೆ ೧—೨—೦

... ಚರಿತ್ರಾತ್ಮಕ ಪುಸ್ತಕಗಳೂ ಹಾಗೂ ಕಲ್ಯಾಣಿ ಬೆಲೆ ೮ ಅಣೆ ಎಂಬ ಮನೋಹರ ಪತ್ತೇದಾರಿ ಕಾ... ಹೊಸ ಆವೃತ್ತಿಯೂ ಮಾರಾಟಕ್ಕೆ ಸಿದ್ಧವಾಗಿವೆ

ಇವಲ್ಲದೆ ನಮ್ಮಲ್ಲಿ ಐತಿಹಾಸಿಕ ಸಾಮಾಜಿಕ ... ಕಥಾ ... ನಾಟಕಗಳೂ, ಪಾರಮಾರ್ಥಿಕ ಮುಂತಾದ ೧೦೦—೧೫೦ ...ಗಳೂ ದೊರೆಯುತ್ತವೆ ಕ್ಯಾಟಲಾಗ್ ತರಿಸಿ ನೋಡಿರಿ.

ವಿಳಾಸ— ...

ಪ್ರೊಪ್ರೈಟರ್, ಶ್ರೀ ಶೇಷಾಚಲ ಪ್ರೆಸ್ ಮತ್ತು ... ಪೋ ಆನಂದವನ, ...

INSURE WITH

The Popular Insurance Co.

Head Office MANGALORE

First of its kind in the West Coast

CHAIRMAN

Dewan Bahadur N Subba Ra...

STRIKING FEATURES

Policy Conditions Liberal

Claims Settlement Prompt

MANAGEMENT PURITY IN ...

Ensure the Absolute Safety Com... and Happiness of your Dear Ones

WANTED INFLUENTIAL AGENTS

LIBERAL TERMS TO COMMITTEEMEN

For further particulars apply to the Head Office

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಾಪರಿಲ್ಲ

ಕೆಟ್ಟ ರಕ್ತಕ್ಕೆ ...

ವರ್ಷ ... ನ ಭವ ...

... ವರೇ ಹೇಳುತ್ತಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಪ್ರೊಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಅಂಡ್ ಸ...

... ಪುರದ್ವಾರ ಮುಂಬಾಯಿ ... ಸೋಲ್ ಏಜಂಟ್ ...

... ವ್ಯವಹಾರ ಇಂಗ್ಲಿಷ್ ಅಥವಾ ... ಯಲ್ಲಿ ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕೆ

ಕಾಫಿ ಪ್ಲಾಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ಸಿಂ ತೆಗೆದ ಕೊಳ್ಳುವವರಿಗೆ ರಿಯಾಯಿತಿ ದರ

ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ

ಮೆನೇಜರ್

ಶಾರದಾ ಪ್ರೆಸ್

ರಥಬೀದಿ ...

EDITED, PRINTED & PUBLISHED BY V S KAMATH AT M/T A SHARADA PRESS, MANGALORE.

ಚಂದಾನಿರ್ಣಯ: — ವರ್ಷ ಒಂದಕ್ಕೆ ರೂಪಾಯಿ 2 – 0 – 0. Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2 – 13 –

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ | ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರಗಣದಿಂ | ಹರುಷವಾಯಿತೆ! ಮತ್ತೆ ಬ್ರಿಸದ ಸುಡುತ ಉರುತಿರುವ ||
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ | ತೆರಳ ಎಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೨೬. ಮಂಗಳೂರು ತಾ ೮ನೇ ಶುಕ್ರವಾರ ಜನವರಿ ೧೯೩೨ (8 – 1 – 32.) ಸಂಚಿಕೆ ೨

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI. **Branches:—COONDAPOOR & Mangalore**

ಹೆಡ್ ಆಫೀಸು — ಉಡುಪಿ. ಶಾಖೆ — ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000 Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 30TH DAY OF NOVEMBER 1931

	CAPITAL AND LIABILITIES	Rs		PROPERTY AND ASSETS	Rs
1	Paid up Capital	2,25,000–0–0	1	Premises Building Furniture etc	[illegible]
2	Reserve and other funds	2,04,400–0–0	2	Government securities & Treasury Bill	840[illegible]
3	Deposits	20[illegible]550	3	Authorised Investments	[illegible]
4	Due to Bankers	[illegible]	4	Bills for collection per contra	2,83[illegible]
5	Sundries	[illegible]	5	Sundries	3[illegible]0
6	Bills for collection	[illegible]		Cash in hand & with banks	[illegible]
	Total	26[illegible]84		Total	[illegible]84[illegible]

Office of the Corporation, UDIPI, S K 2–12–'31 **N. ANANDA RAO** *Manager*

ಅಮೃತಾಂಜನ.

ತಲೆ ಕೆಮ್ಮು ತ ನೋವು ವಾತ ಸುಟ್ಟಹೋಗುವಿಕೆ ಮತ್ತು ಮನುಷ್ಯರಿಗೆ ಭಂಗ ಕೊಡತಕ್ಕ ಉಳಿದ ನೋವು ಇನ್ನಿತರ ಎಲ್ಲಾ ತರದ ಬೇನೆಗಳು ಇದು ಎದೆಯೊಳ್ಳಿ ಅವುಗಳನ್ನು ಓಡಿಸುತ್ತದೆ ಈ ಬೇನೆಗಳು ಅಮೃತಾಂಜನವು ಸ್ವಲ್ಪ ಸಮಯ ಸ್ವಸ್ಥ ಗುಣಪಡಿಸುತ್ತದೆ ಎಲ ಅಮೃತಾಂಜನವಿದರೋ ಅಲ್ಲಿ ಈ ಬೇನೆಗಳ ಸುಳಿವೇ ಇ ಕ್ರಯ ಅಂದವಾದ ಬಾಕ್ಸದ ಒಂದು ಬಟ್ಟಿಗೆ 8 ಆಣೆಗಳು ಎಲಾ ಕಡೆಗಳಲ್ಲೂ ದೊರೆಯುತ್ತದೆ

ಗಜಕರ್ಣ ಮುಲಾಮು — (ರಾಜ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ತೋಡಿನಿತ್ತ ಇತ್ಯಾದಿಗಳಿಗೆ ಅತ್ಯಕ ಮ ಮದ್ದು ಎರಡೇ ಸಾರ ತಗಲಿಸುವಿಕೆಯಿಂದ ಗುಣವಾಗುತ್ತದೆ ಹಳೇ ಮತ್ತು ಬಹಳ ಸಮಯದಿಂದಿರುವ ಬಿಂಗನ್ನು ತೆಗೆದುಬಿಡುತ್ತದೆ ಬಟ್ಟಿಗೆ 0 – 4 – ಡಜನ್ನಿಗೆ 3 – 8 – 0

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ದೋಂಗರೆ

ಇವರು

ಬಾಲಾಮೃತ.

ವನ್ನು ಕೊಡುವುದರಿಂದ ಮಕ್ಕಳು ಸಶಕ್ತರೂ, ಪುಷ್ಟರೂ ಮತ್ತು ಸಂತೋಷಚಿತ್ತರೂ ಆಗುವರು.

ಕೇ. ಟಿ. ದೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜೆಂಟರು — ದಿ ಯು ಬಿ ಮತ್ತು ..., ಮಂಗಳೂರು

ಮಾರಾಟಕ್ಕೆ ಸಿದ್ಧವಾಗಿದೆ

ತ್ವರೆಮಾಡಿರಿ ತ್ವರೆಮಾಡಿರಿ

೧೯೩೨ನೇ ವರ್ಷದ ಪಾಕೆಟ ಡೈರಿಗಳು

ದೊಡ್ಡ ಸೈಜ್	0—10—0
ದೊಡ್ಡ ಸೈಜ್ ಮುಚ್ಚಳ ಇದ್ದದ್ದು	0—12—
ಸಣ್ಣ ಸೈಜ್	0— 6—0
,, ಮುಚ್ಚಳ ಇದ್ದದ್ದು	0— 8—0
ಸಣ್ಣ ಸೈಜ್ ಸ್ಪಿಸ್ ಬ್ಯಾಂಡ್	0— 5—0

ವ್ಯಾಪಾರಸ್ಥರಿಗೂ ರಖಂ ತೆಗೆದುಕೊಳ್ಳುವವರಿಗೂ ಧಾರಾಳ ಕಮಿಶನು ಕೊಡಲಾಗುವುದು

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಮೆನೇಜರ,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣ ಪ್ರದರ್ಶನ.

ಈ ಪ್ರದರ್ಶನವು ಮಾನ್ಯ ಮದ್ರಾಸ್ ಸರಕಾರದ ವಿದ್ಯಾಮಂತ್ರಿಯು ಮಂತ್ರಿಗಳಿಂದ ಇದೇ ಜನವರಿ ೧೯ನೇ ತಾರೀಕಿನ ಬೆಳಗ್ಗೆ ೧೦ ಘಂಟೆಗೆ ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ತೆರೆಯಲ್ಪಡುವುದು. ಈ ಪ್ರದರ್ಶನವು ೧೯ನೇ ತಾರೀಕಿನಿಂದ ೨೧ನೇ ತಾರೀಕಿನ ಸಾಯಂಕಾಲದ ವರೇಗೆ ತೆರೆದಿರಲಾಗುವುದು.

ಇದಕ್ಕೆ ಸಾಹಿತ್ಯ ಸಂಗ್ರಹಗಳನ್ನು ಕಳುಹಿಸಲಿರುವವರು ಈ ಕೆಳಗಿನ ಸೂಚನೆಗಳನ್ನು ಸ್ಮರಣೆಯಲ್ಲಿಡಬೇಕಾಗುವುದು.

೧ ಸಾಹಿತ್ಯಗಳನ್ನು ತಯಾರಿಸಿದ ಶಾಲೆ, ತಯಾರಿಸಿದ ಉಪಾಧ್ಯಾಯ ಅಥವಾ ವಿದ್ಯಾರ್ಥಿಯ ಹೆಸರು, ವಿದ್ಯಾರ್ಥಿಯು ಕಲಿಯುವ ಕ್ಲಾಸು, ವಿದ್ಯಾರ್ಥಿಯ ಪ್ರಾಯ, ಇಷ್ಟನ್ನು ಸ್ಪಷ್ಟವಾಗಿ ಕಾಣಿಸುವ ಚೀಟುಗಳನ್ನು ಆಯಾಯ ವಸ್ತುವಿಗೆ ಅಂಟಿಸುವದಲ್ಲದೆ ಆಯಾಯ ಶಾಲೆಯಿಂದ ಕಳುಹಿಸುವ ವಸ್ತುಗಳ ೨ ಪಟ್ಟಿಗಳನ್ನು ತಯಾರಿಸಿ ಒಂದು ಪಟ್ಟಿಯನ್ನು ಶಾಲಾ ಹೆಡ್ ಮಾಸ್ತರರು ಇಟ್ಟುಕೊಂಡು ಉಳಿದ ಪಟ್ಟಿಯನ್ನು ಈ ಆಫೀಸಿಗೆ ರವಾನಿಸಿಕೊಡಬೇಕು.

೨ ವಸ್ತುಗಳನ್ನು ಹಾಳಾಗದಂತೆ ಭದ್ರವಾಗಿ ಪೇಕಿಂಗ್ ಮಾಡಬೇಕು.

೩ ಇಂಥಾ ತಾರೀಕಿನ ಇಂಥಾ ಘಂಟೆಗೆ ಬಿಡುವ ಇಂಥಾ ಕಂಪೆನಿಯ ಬಸ್ಸಿನಲ್ಲಿ ರವಾನಿಸಲಾಗುತ್ತದೆ ಎಂಬುದನ್ನು ಮುಂದಾಗಿ ಪತ್ರದ್ವಾರ ಇಲ್ಲಿ ತಿಳಿಸಬೇಕು.

೪ ಆಯಾಯ ಶಾಲೆಗೆ ಸದರಿ ಸಾಹಿತ್ಯಗಳನ್ನು ಪ್ರದರ್ಶನದ ನಂತರ ಹಿಂದಕ್ಕೆ ಕಳುಹಿಸುವ ಖರ್ಚನ್ನು ಈ ಆಫೀಸಿನವರು ತೆರುವರು.

೫ ವಸ್ತುಗಳು ಪೇಕಿಂಗಿನ ಅಜಾಗ್ರತೆಯಿಂದ ಅಥವಾ ಬೇರೆ ಯಾವುದಾದರೂ ಕಾರಣದಿಂದ ಹಾಳಾಗಿ ಹೋದಲ್ಲಿ ಅದರ ನಷ್ಟಕ್ಕೆ ಈ ಆಫೀಸಿನವರು ಜವಾಬ್ದಾರರಲ್ಲ.

ಪ್ರದರ್ಶನವನ್ನು ನೋಡುವುದಕ್ಕೆ ಎಲ್ಲಾ ಉಪಾಧ್ಯಾಯರು ಬರಬೇಕಾಗಿ ಅಪೇಕ್ಷಿಸಲಾಗುತ್ತದೆ. ಹಾಗೆ ಬರುವಲ್ಲಿ ತಂತಮ್ಮ ಶಾಲೆಗಳಿಗೆ ರಜಾ ಕೊಡುವ ಸಂದರ್ಭದಲ್ಲಿ ಆ ಶಾಲೆಯ ಆಯಾಯ ಶಾಲೆಯ ಹೆಡ್ ಮಾಸ್ತರರು ಆ ಶಾಲೆಯ ಮೆನೇಜರರಿಗೆ ಮುಂದಾಗಿಯೇ ತಿಳಿಸಿ ಅವರ ಅಪ್ಪಣೆಯನ್ನು ಪಡಕೊಳ್ಳುವುದಕ್ಕೆ ಏರ್ಪಡಿಸುವುದು ಒಳ್ಳೇಯದು.

ಪ್ರದರ್ಶನಕ್ಕೆ ಬರುವ ಉಪಾಧ್ಯಾಯರಿಗೆ ಊಟ ಫಲಹಾರ ವಗೈರೆಗೆ ಏರ್ಪಡಿಸುವುದಕ್ಕೆ ದ್ರವ್ಯಾನುಕೂಲದ ಅಭಾವದಿಂದ ಸಾಧ್ಯವಾಗಲಾರದು. ಆದರೆ ಸದರಿ ಟ್ರೈನಿಂಗ್ ಶಾಲೆಯ ಬಳಿಯಲ್ಲಿಯೇ ಅನುಕೂಲವಾಗಿ ೩-೪ ಫಲಹಾರದ ಹೋಟೆಲುಗಳಿರುವುದರಿಂದ ಬರುವ ಉಪಾಧ್ಯಾಯರಿಗೆ ವಿಶೇಷ ಅಡಚಣೆಯಾಗಲಾರದು.

ಉಳ್ಳಾಲ ಮಂಗೇಶರಾವ್
ಸೆಕ್ರೆಟರಿ ದ. ಕ. ಶಿಕ್ಷಣ ಪ್ರದರ್ಶನ ಕಮಿಟಿ.

ತಿಳಿಯಬೇಕಾದ ವಿಷಯಗಳು.

ಸಾಧಾರಣವಾಗಿ ಒಂದು ನಾಯಿಯು ಸುಮಾರು ೧೪ ವರ್ಷ ಕಾಲ ಬದುಕುವುದು. ಬಾವುಟದ ಕಂಬವು ಸಮತಳವಾದ ಸ್ಥಳದಿಂದ ಮೇಲಕ್ಕೆ ಎತ್ತು ಹಾರಲಾರದು. ಒಂದು ದೊಡ್ಡ ತಿಮಿಂಗಿಲದಿಂದ ಸುಮಾರು ೩೦ ಟನ್ ಎಣ್ಣೆಯು ದೊರೆಯುತ್ತದೆ. ಒಂದೇ ಒಂದು ನೊಣದ ಸಂತತಿಗಳಿಂದ ೪ ವರ್ಷದಲ್ಲಿ ೩,೫೦,೦೦೦ ನೊಣಗಳಾಗುತ್ತವೆ. ಬೆಳಿಯ ಉಷ್ಟ್ರಪಕ್ಷಿಯ ಗರಿಗಳಿಗೆ ೧ ಪೌಂಡಿಗೆ ಸುಮಾರು ೫೦೦ ರೂಪಾಯಿಂದ ೬೫೦ ರೂಪಾಯಿ ಬೆಲೆಯಾಗುವುದು. ಮೀನುಗಳೂ ನೊಣಗಳೂ ಕಂಬಳಿ ಹುಳಗಳೂ ಶೀತ ದೇಶದಲ್ಲಿ ಶೈತ್ಯದಿಂದ ಘನೀಭೂತವಾಗಿ ಹೋಗುವುದುಂಟು. ಹಾಗಿದ್ದರೂ ಜೀವವಿರುತ್ತದಂತೆ. ಪ್ರತಿ ವರ್ಷದಲ್ಲಿ ೭ ಕೋಟಿ ಪ್ರಾಣಿಗಳನ್ನು ಅವುಗಳ ತುಪ್ಪಟ ಸಹಿತವಾದ ಚರ್ಮಕ್ಕಾಗಿಯೇ ಕೊಲ್ಲುತ್ತಾರೆ. ಭಯವನ್ನು ಹೊಂದಿದಾಗ ಉಷ್ಟ್ರಪಕ್ಷಿಯು ೨೫ ಮೈಲು ಓಡಬಲ್ಲದು. ಪ್ರತಿ ವರ್ಷದಲ್ಲಿಯೂ ಷೆಫೀಲ್ಡ್ ಪಟ್ಟಣವೊಂದರಲ್ಲಿಯೇ ಚೂರಿಯ ಹಿಡಿಗಾಗಿ ೭೦ ಲಕ್ಷ ಪ್ರಾಣಿಗಳ ಕೊಂಬನ್ನೂ ಎಲುಬನ್ನೂ ಉಪಯೋಗಿಸುತ್ತಾರೆ. ವಿಮಾನದಲ್ಲಿ ೪ ಮೈಲು ಎತ್ತರವಿದ್ದರೂ ನಾಯಿಯು ಬೊಗಳುವುದು ಕೇಳುವುದು. ಒಂದು ಕುದುರೆಯ ಚರ್ಮತ್ರಿಂತ ಆನೆಯದ್ದೇ ದೊಡ್ಡದಂತೆ. ಪ್ರಾಣಿಶಾಸ್ತ್ರಜ್ಞರಿಗೆ ಇದುವರೆಗೆ ೬,೬೦,೦೦೦ ಪ್ರಾಣಿಗಳ ಪರಿಚಯವಾಗಿದೆಯಂತೆ.

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ಪೊಳಲಿ ಊರಿನ ವ್ಯವಹಾರ ಸಂಕಷ್ಟ.

ಪೊಳಲಿಯು ಕರಿಯಂಗಳ ಗ್ರಾಮಕ್ಕೆ ಸೇರಿದುದು. ಇಲ್ಲಿಂದ ಮಂಗಳೂರಿಗೆ ನೈರುತ್ಯಕ್ಕೆ ೧೨ ಮೈಲು ದೂರ. ಗುರುಪುರಕ್ಕೆ ಒಂದು ಗಂಟೆಯ ದಾರಿ. ಕರುನಾಯು ೧೫ ನಿಮಿಷದಲ್ಲಿ ಮಂಗಳೂರನ್ನು ಸೇರುವ ಸೌಕರ್ಯವುಂಟು. ಹೀಗಿರುತ್ತಾ ಈ ಊರಿನ ಮುಕೆಗಾರರು ಬಾಹೆಮಂಗಳೂರಿನಲ್ಲಿರುವರು. ಈ ಗ್ರಾಮಕ್ಕೆ ಮೆಜಿಸ್ಟ್ರೇಟರ ಕೋರ್ಟು ಡಿ ತಹಶೀಲದಾರ ಕಚೇರಿ, ಸೊಸೈಟಿ ಯೂನಿಯನ್ ಎಲ್ಲಾ ಬಂಟ್ವಾಳದಲ್ಲಿ. ಇಲ್ಲಿಗೆ ಹೆಲ್ತ್ ಇನ್ಸ್‌ಪೆಕ್ಟರ್ ಬೆಳ್ತಂಗಡಿಯವರು. ತಾಲೂಕು ಮಂಗಳೂರು. ಅಬ್ಕಾರಿ ಇನ್ಸ್‌ಪೆಕ್ಟರ್ ಗುರುಪುರದಲ್ಲಿರುವವರು. ಮುನಸೀಫ ಕೋರ್ಟು, ರಿಜಿಸ್ಟ್ರಿ ಆಫೀಸು, ತಾಲೂಕು ಆಫೀಸು, ಶಾಲಾ ಡಿ ಇನ್ಸ್‌ಪೆಕ್ಟರ ಆಫೀಸು ಇವೆಲ್ಲಾ ಮಂಗಳೂರಿನಲ್ಲಿ. ಇಲ್ಲಿಯವರಿಗೆ ಯಾವ ಪ್ರಯಾಣ ಸೌಕರ್ಯವಿರುವುದಿಲ್ಲ. ಆದುದರಿಂದ ಸಮ್ಮಂಧಪಟ್ಟ ಡಿಪಾರ್ಟಮೆಂಟಿನವರು ಇನ್ನಾದರೂ ಜನರಿಗಿರುವ ಸೌಕರ್ಯಗಳನ್ನು ನೋಡಿಕೊಂಡು ಅನುಕೂಲವಿರುವ ಸ್ಥಳದ ಆಫೀಸುಗಳಿಗೇನೆ ಈ ಗ್ರಾಮವನ್ನು ಯೋಜಿಸಿ ಮಾಡುತ್ತಿದ್ದರೆ ಊರಿಗೆ ಉಪಕಾರವಾಗುತ್ತಿತ್ತು. ಗುರುಪುರದಿಂದ ಪೊಳಲಿ ವರೆಗೆ ರಸ್ತೆಯನ್ನು ಹಾಕಿಸುತ್ತಿದ್ದರೆ ಎಷ್ಟೋ ಒಳ್ಳೇದಿತ್ತು. ಈ ರಸ್ತೆಯ ಬಗ್ಗೆ ಈ ಮೊದಲೇ ಸೆಂಕ್ಷನಾದರೂ ಈಗ ವಿನಾಯಿತೇ? ಈಗಂತೂ ಎಲ್ಲಾ ಡಿಪಾರ್ಟಮೆಂಟಿಗೂ ದುಡ್ಡಿಲ್ಲದ ಬೊಬ್ಬೆಯಾದರೂ ಮೊದಲೇ ಸೆಂಕ್ಷನ್ ಆದ ಕಾರಣ ಅಷ್ಟು ಕಷ್ಟವಿರದು.

'ಊರವ'

Influential Agents Wanted Everywhere on

a Monthly Pay of Rs. 25/- and 2½ % Commission on sales. Selected candidates will have to invest Rs. 50

Apply with a stamped envelope to —

M. S. Nayar,
Dt. Inspector,
Britannia Tea Company—Ottapalam

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

800 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—0—0

ಬಿಕ್ತ್ರೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನೆಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೋಘವಾಗಿರುತ್ತದೆ.

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್ ಸೀತಾರಾಘವ ವೈದ್ಯಶಾಲಾ ಮೈಸೂರು

ಏಜೆಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫಾಕ್ಟರಿ
ಮಂಗಳೂರು ಬಂದರ ಪೇಟೆ

The Zandu Pharmaceutical Works, Ltd., Bombay, 14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ 'ಝಂಡೂ'ಯವರ

ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಇದು ಆವಳೀಕ ಮತ್ತು ಇತರ ವನಸ್ಪತಿಗಳನ್ನು ಸೇರಿಸಿ ಶಾಸ್ತ್ರರೀತ್ಯಾ ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ಕೆಮ್ಮು, ಎದೆ ನೋವು, ಸ್ವರಭಂಗ ಮೊದಲಾದ ರೋಗಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ವೀರ್ಯ ವೃದ್ಧಿ, ರಕ್ತವೃದ್ಧಿ ಪುಷ್ಟಿ ಹೀನತೆ, ಜ್ಞಾನಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತರನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

ಕ್ರಯ 1 ಪಾವು ಸೀಸೆ ರೂ 2—8—0, ½ ಪಾ. ರೂ. 1—5—0, ¼ ಪಾ. ರೂ 0—13—0

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ದಿ ಯೂನಿಯನ್ ಎಜೆನ್ಸಿ.
ಸಿರ್ಸಿ ಏಜಂಟರು — ಎಸ್. ಎಲ್. ಭಾರತಪ್ಪ ಎಂಡ್ ಬ್ರದರ್ಸ್
ಸಬ್ ಏಜಂಟರು — ಯು. ಜನಾರ್ಧನರಾವ್, ಪುತ್ತೂರು, ದ. ಕನ್ನಡ.
ಬೆಂಗಳೂರು ಏಜಂಟರು — ತಿಪ್ಪಣ್ಣ ಶೆಟ್ಟಿ, ಬುಸ್‌ಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಂಕುಶ ತೈಲ.—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ —ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡ 1ಕ್ಕೆ ರೂಪಾಯಿ 3—12—0 ಅಂಚೆ ವೆಚ್ಚ ಬೇರೆ

ಕಸ್ತೂರಿ ಮಿತ್ರಣಾ!
ದಶಮೂಲ ಸುಖಪ್ರದ ಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಸ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು

ರಸಾಯನ ಗುಣದಿಂದ ಬಾಣಂತಿಯು—ಗರ್ಭಧಾರಣೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2—0—0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ ಆರ್ಯವೈದ್ಯರತ್ನ ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ

ಅಪೇಕ್ಷಿಸುವ ಬಹುಮಾನಗಳು

ಹೆಗಲಿಗೆ ಹಾಕುವ ಬೆಳೆ ಬ್ಯಾದ ಕಾಶೀ ಶಾಲುಗಳು 6 ಮೊಳ ಉದ್ದ 2 ಮೊಳ ಅಗಲ ರೂ ... ಯಿಂದಾಯಿತು ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಿಕೆ ಖಣಗಳು, ಮುಡಿಗಳು, ಎಂಬ್ರಾಯಿಡರಿ, ... ವೇಷ್ಟಿ, ಇತ್ಯಾದಿ ಉತ್ಕೃಷ್ಟ ಶಾಲು, ಬಸ್ತ್ರ ರೇಶ್ಮೆ, ಧೋತರ, ಕಸ್ತೂರಿ, ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು ಜರಿಟೊಪ್ಪಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು.

ವಿಳಾಸ —

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಣಿಕರ್ಣಿಕಾ ಘಾಟ್ ಕಾಶೀ ಬನಾರಸ್ ಸಿಟಿ

The Udipi Mutual Benefit Fund, UDIPI.
ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾತರದ ವಹಿವಾಟುಗಳೂ, ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ, ಪ್ರೊಪ್ರೈಟರ್.

The Canara Bank Limited, Mangalore.
ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

BRANCHES -Karkal Kasargod, Cochin, Udipi Gangolli Coondapur, Bombay Puttur, Calicut & Alleppey

ಬ್ರಾಂಚುಗಳು—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲೆಪ್ಪಿ

Authorised and fully paid up Capital Rs 300 000 - 0 - 0	ಅಧಿಕಾರಕೊಡಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ 300 ... 0 —
Reserve and other sinking Funds Rs 489,500 - 0 0	ರಿಜರ್ವು ಮತ್ತು ಇತರ ಫಂಡುಗಳು ರೂ. 489 ... 0 —
Amount invested on G P Notes Rs 817 097 - 2 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817 ... — 2 —
Rates of interest on fixed deposits at Head Office and Branch 6¼% for 2 Years 6% ,, 1 Year	ಖಾಯಂ ಠೇವಣಿಗಳ ಮೇಲೆ ಕೊಡತಕ್ಕ ಬಡ್ಡಿ ದರ—ಎರಡು ವರುಷಗಳಿಗೆ ನೂರಕ್ಕೆ 6¼ ಒಂದು ವರುಷಕ್ಕೆ ನೂರಕ್ಕೆ 6
Season deposit of Rs 1000/- & above terminable by the end of June are received at 6¼% p a.	ಸೀಸನ್ ಡಿಪಾಸಿಟ್ ... ಜೂನ್ ತಿಂಗಳು ... ನೂರಕ್ಕೆ 6¼

Cur ent Account Deposits received and interest allowed on daily balance of Rs 50 and above that on multiple of Rs 10 @ 3% from 1st January to 30th June and @ 2% from 1st July to 31st December No interest will be allowed unless the depositor has not less than Rs 5 during a period of 3 months ending either 30th June or 31st December in any year

Except by special arrangement no interest is allowed on sums exceeding Rs 10 000 in the case of Head Office and Bombay & Cochin Branches and on sums exceeding Rs 5,000 in the case of the remaining Branches

Short notice deposits requiring one week notice of withdrawal given at any time after one month from the date of deposit are received and interest allowed at 4 per annum Interest on such deposit will cease on notice

For further particulars please apply to

Canara Bank Ltd, Mangalore 16—2—93

K. Venkat Rao
Secretary

The Pangal Nayak Bank, Ltd.

Head Office Udipi — *Established 1920* — **Branch Office Mangalore**

Authorised Capital Rs 2 00,000	Paid up Capital Rs 1 75 000-
Issued Capital Rs 1 75,000-	Reserve and other Funds Rs 1,64 000

1. **Receives Fixed Deposits at the following favourable rates**

For 3 months at 5 — For 12 15 18 or 21 months at 6

6 or 9 months at 5½ — 24 months at 6

Interest being payable every 3 months

ಖಾಯಂ ಠೇವಣಿಗಳು ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಕರಾರಿನ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ನೂರಕ್ಕೆ 5 — 12 15 18 ಯಾ 21 ತಿಂಗಳಿಗೆ ನೂರಕ್ಕೆ 6

6 ಯಾ 9 ತಿಂಗಳಿಗೆ ನೂರಕ್ಕೆ 5½ — 24 ತಿಂಗಳಿಗೆ ನೂರಕ್ಕೆ 6

2. **Current Accounts** opened free of charge and interest allowed **Cumulative Savings Bank and Short Notice Deposits** received at favourable rates of interest

3. The Bank transacts every description of Banking business

4. For full particulars and for copies of the amended **Rules of Business** please apply to the **Secretary** at the Head Office at Udipi or to the **Agent** Mangalore Branch.

Office of the Bank, Udipi 1-4-31

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಹುಡುಗ
ಮೂವತ್ತು	ರಲ್ಲಿ	ಮುಚ್ಚಟ
ನಲವತ್ತು	ರಾಗ	ನರಳುವನು
ಐವತ್ತು	ರಲ್ಲಿ	ಆಲಸ್ಯ
ಅರುವತ್ತು	ತಲುಪಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಅವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 64 ಟೀಸಾ ಬಜಾರ್ ಮದ್ರಾಸ್

ಅಖಿಲಭಾರತ ಶಿಕ್ಷಣ ಪರಿಷತ್ತು

ಈ ಸಲ ಬೆಂಗಳೂರಲ್ಲಿ, ಸರ್ ಸಿ. ವಿ ರಾಮನ್‌ರವರು ದೇಹಾಲಸ್ಯದಿಂದ ಬರಲಾರದಾದ ಕಾರಣ, ಮೈಸೂರು ವಿದ್ಯಾ ಇಲಾಖಾ ಡೈರೆಕ್ಟರಾಗಿರುವ ಶ್ರೀ| ಎನ್ ಎಸ್ ಸುಬ್ಬರಾವ್ ರವರ ಅಧ್ಯಕ್ಷತೆಯಲ್ಲಿ ಸೇರಿತು. 'ಉಪಾಧ್ಯಾಯರ ಗೌರವ' ವನ್ನು ಕುರಿತು ಅಧ್ಯಕ್ಷರು ಭಾಷಣಮಾಡುವಾಗ,—ಹಿಂದೆ ಗ್ರೀಕ್ ಶ್ರೀಮಂತರು ತಮ್ಮ ಮಕ್ಕಳಿಗೆ ಪಾಠ ಕಲಿಸುತ್ತಿದ್ದ ಗುಲಾಮರ ಕಡೆಗೆ ಹೇಗೆ ನಡೆದುಕೊಳ್ಳುತ್ತಿದ್ದರೋ ಅದರಂತೆ ಉಪಾಧ್ಯಾಯರ ಕಡೆಗೆ ಮಹಾಜನಗಳ ನಡವಳಿಕೆಯಿದೆ ಎಂದೂ, ಅವರಿಂದ ಇತರ ಯಾವ ಇಲಾಖೆಯಲ್ಲಿ ಕೆಲಸಮಾಡುವ ಯಾವ ನೌಕರನಿಗಿಂತಲೂ ಉಪಾಧ್ಯಾಯನು ಕಿಂಚಿತ್ತಾದರೂ ಕಡಮೆ ಗೌರವಾರ್ಹನಾಗಿಲ್ಲವೆಂಬುದನ್ನು ಜನತೆಯು ತಿಳಿದು ವರ್ತಿಸಬೇಕೆಂದೂ ಒತ್ತಿ ಹೇಳಿರುವರು. ವಿದ್ಯಾಂಗದಲ್ಲಿದ್ದು, ಒಡಲು ತಲಬುಳ್ಳ, ಅಮಿತಜವಾಬುದಾರಿ ಹೊತ್ತಿರುವ ಉಪಾಧ್ಯಾಯರಿಗೋಸ್ಕರ ಶರವಾಗಿ ಇಷ್ಟು ಸ್ವಲ್ಪದರಲ್ಲಿ ಸಂಪೂರ್ಣ ಅರ್ಥಗರ್ಭಿಸಿ ಮಾತನಾಡಿದ ಅಧಿಕಾರಿಗಳಲ್ಲಿ ಇವರೇ ಮೊದಲಿನವರೆನ್ನಬಹುದು. ಮೈಸೂರಿನ ಶಾಲಾ ಉಪಾಧ್ಯಾಯರುಗಳಾದರೂ ಇವರಾದರ್ಶಕ್ಕೆ ಪಾತ್ರರಾಗಿ ಬರುತ್ತ, ಬ್ರಿಟಿಷ ಇಂಡಿಯಾದ ಉಪಾಧ್ಯಾಯರುಗಳನ್ನು ಸಮಾಜದಲ್ಲಿ ಮೇಲ್ಪಟ್ಟಿಗೆ ಏರಿಸಲು ಇಲ್ಲಿನ ಜನತೆಗೆ ಸ್ಪಷ್ಟ ಪ್ರತ್ಯಕ್ಷ ದೃಷ್ಟಾಂತಗಳಾಗಬಾರದೇಕೆ?

ಶಿಕ್ಷಣ ವಿಷಯಗಳಲ್ಲಿ

ಜೀವನಸಾಗಿಸಲು ಅಗತ್ಯವಾಗಿರುವ ಸಂಪಾದನೆಗೆ ಅನುಕೂಲತೆ ಒದಗಿಸುವ ವಿಷಯಗಳಾವುವು? ಓದುಬರಹ ಲೆಕ್ಕ ಮೊದಲಾದುವು ಸಾಮಾನ್ಯವೇ, ಮಿಕ್ಕ ವಿದ್ಯಾಭ್ಯಾಸವೆಲ್ಲವು ಕೇವಲ ಕಾಗದದ ಮೇಲೆ ಗೀಚುವುದಕ್ಕಲ್ಲದೆ, ಅನ್ನವನ್ನು ಬೇರೆ ಉಪಾಯದಿಂದ ಪಡೆಯಲು ಕಲಿಸುವುದಾಗಿಲ್ಲ. ಪ್ರತಿಯೊಂದು ಸರಹದ್ದಿನಲ್ಲಿ ಒಂದೊಂದು ಔದ್ಯೋಗಿಕ ಶಿಕ್ಷಣ ಶಾಲೆಯನ್ನು ತೆರೆದು ಅಪಾರವಾದ ಹಣವನ್ನು ವ್ಯಯಿಸಿ ಕನಿಷ್ಠ ಪ್ರಯೋಜನ ಹೊಂದುವ ಬದಲಾಗಿ, ಆಯಾ ಊರಿಗೆ ಎಂತೆಂತಹ ಕೆಲಸಗಾರರು ಅಗತ್ಯರೆಂದು ತೋರುವುದೋ ಅಂತಹವರನ್ನು ಅಲ್ಲಲ್ಲಿನ ಕಾರ್ಖಾನೆ ಮೊದಲಾದ ಸಂಸ್ಥೆಗಳಲ್ಲಿ ತರಬೇತು ಹೊಂದುವ ಹಾಗೆ ಅನುದಿನದ ಶಾಲಾ ಶಿಕ್ಷಣದೊಡನೆ ಏನ ಕೂಡಿಸಿದರೆ ಉತ್ತಮವಾದೀತಾಗಿ ಈ ಪರಿಷತ್ತಿನ ಅಭಿಪ್ರಾಯವಾಗಿದೆ. ವಿದ್ಯಾಪ್ರಚಾರಕರೂ ಔದ್ಯೋಗಿಕ ಧಾಂಡವಾಳಗರೂ ಒಂದಾಗದೆ ಇದು ಸಾಧ್ಯವಾಗದು. ಅಕ್ಷರಸ್ಥರೇ ಮಾತ್ರವಲ್ಲದೆ, ಪದವೀಧರರೂ ಸಹ ಕಾಸಿನ ವೃತ್ತಿಯಿಲ್ಲದೆ ಅರ್ಜಿ ಬರೆವ ಉದ್ಯೋಗದಲ್ಲೇ ಮುದುಕರಾಗುವ ದುರವಸ್ಥೆಯು ಸರ್ವತ್ರ ಉಂಟಾಗಿದೆ. ಇದಕ್ಕಾಗಿ, ಪ್ರತಿಯೊಂದು ಊರಲ್ಲೂ ಅವಿದ್ಯಾಸಂಪನ್ನರು ಉದ್ಯೋಗರಹಿತರಾಗಿರುವವರು ಅವರ ಸಂಖ್ಯೆ ಎಷ್ಟು ಅವರಿಗಾಗಿ ಯಾವ ವಿಧದಿಂದ ಜೀವನಾರ್ಜನೆಗೆ ಅನುಕೂಲತೆ ಒದಗಿಸಬಹುದು ಎಂಬುದನ್ನು ಸರಕಾರವು ಗೊತ್ತುಮಾಡಬೇಕೆಂದು ಸೂಚನೆಯಾಗಿದೆ. ನಿರುದ್ಯೋಗಿಗಳಾಗಿರುವ ಪದವೀಧರರ ಸಂಖ್ಯೆಯು ಭೂತವೇ ಈಗಣ ವಿದ್ಯಾಸಂಸ್ಥೆಗಳಿಗೆ ಗ್ರಹಣಹಿಡಿಯಲು ಕಾರಣವಾಗಿ, ವಿದ್ಯಾಸಂಪಾದನೆಯಲ್ಲಿ ರುಚಿಕೆಟ್ಟಿದೆ. ಬೇರೆಯಾಗಿ ದೇಹದಾರ್ಢ್ಯವನ್ನಾದರೂ ವಿದ್ಯಾರ್ಥಿಗಳು ಸಂಪಾದಿಸಿಕೊಳ್ಳುವಂತೆ ಏರ್ಪಡಿಸುವುದರಿಂದ ಕಾರ್ಯಕ್ಷಮತೆಯಿಂದಾದರೂ ಜೀವಿಸಲು, ಕೊನೆಯ ಪಕ್ಷ ಒಳ್ಳೇ ವಯಸ್ಸಿಗೂ ಜೀವಿಸಲು ಸಾಕಷ್ಟು ಮೂಲಧನವನ್ನು, ಮನೆಮಾರಿ ವಿದ್ಯೆ ಕಲಿಯುವವರಿಗೆ ದೊರೆಯಲಾರದೇ?

ವಿದ್ಯಾರ್ಥಿಭವನಗಳು

ಎಲ್ಲಕ್ಕಿಂತಲೂ ಇವೆ ಇವುಗಳೂ ವಿಲಾಯಿತಿ ಶಾಲಾ ಭವನಗಳ ಮಾದರಿಯಲ್ಲಿವೆ. ಆದರೂ, ಆಕ್ಸ್‌ಫರ್ಡಿನಂತಹ ಉತ್ತಮ ಇಂಗ್ಲಿಷ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಿರುವ ವಿದ್ಯಾರ್ಥಿಭವನಗಳನ್ನು ಕುರಿತಾಗಿ, ವಿಮರ್ಶಿಸಿ ಬರೆದಿರುವ ಮಿ. ಎಂಟನಿ ವುಡ್ ಎಂಬವರ ಮಾತುಗಳನ್ನು ನಮ್ಮಲ್ಲಿನ ವಿದ್ಯಾರ್ಥಿ ಭವನಾಧಿಕಾರಿಗಳು ಮನಸ್ಸಿಗೆ ತಂದುಕೊಳ್ಳುವುದುತ್ತಮವಾಗಿದೆ. ಸುತ್ತಲೂ ನಿರ್ಮಲ ವಾತಾವರಣ, ಸಮೀಪದಲ್ಲೇ ತಿಳಿನೀರಿನ ಜಲಾಶಯ; ಹತ್ತಿರವೇ ಮರಗಿಡ ಬಳ್ಳಿ ಮೊದಲಾದುವು, ಇವಿಷ್ಟು ಒದಗಿದ ಬಳಿಕ, ವಿದ್ಯಾರ್ಥಿಗಳಿಗೆ ಬೇರೆ ಆಮಂತ್ರಿಸಿ ಅಲ್ಲಿ ನೆಲೆ ಮಾಡಿಸಲು ಹೇಳಿಕೊಳ್ಳುವ ಅಗತ್ಯವಿರದು. ನಂತರ ಮೇಲ್ವಿಚಾರಣೆ ಎಂದರೆ, ಧಿಕ್ಕಾರವನ್ನು, ವಿದ್ಯಾರ್ಥಿಗಳಿರುವ ಕೋಣೆಗಳ ಒಂದು ಸುತ್ತು ಸಂಚರಿಸಿ (ಅಥವಾ ವಾರಕ್ಕೊಮ್ಮೆ) ವಿದ್ಯಾರ್ಥಿಗಳಿಗೆ ನಾನಾ, ನಿಷೇಧಸೂಚಕ ಆಜ್ಞೆಗಳನ್ನು ಕೊಟ್ಟುಬಿಡುವುದೇ ಆದರೇ, ಅಷ್ಟರಲ್ಲೇ ಮುಗಿಯುವುದಿಲ್ಲ. ಹಾಸ್ಟೇಲಿನ ಸುಪರಿಂಟೆಂಡೆಂಟರು ವಿಶೇಷವಾದ ಸೂಕ್ಷ್ಮ ಎಚ್ಚರಿಕೆಯಿಂದ ಭವನನಿವಾಸಿಗಳಲ್ಲಿ ಪ್ರತಿಯೊಬ್ಬನ ಮೇಲೂ ಕಣ್ಣಿಟ್ಟು, ಅವನು ಪಾಠಪ್ರವಚನಾದಿಗಳಲ್ಲಿ ಮುಂದರಿಸುತ್ತಿದ್ದಾನೋ ಎಂಬುದನ್ನು ತಿಳಿದುಕೊಂಡು, ಭವನದಿಂದ ಹೊರಬಿದ್ದು ಜಗತ್ತಿನಲ್ಲಿ ಅವನೆಲ್ಲಿಗೆ ಹೋದರೂ, ಅಲ್ಲಿ ಸಂಪೂರ್ಣ ನಾಗರಿಕನಂತೆ ವರ್ತಿಸಲು ಅವಶ್ಯವಾದ ತಿಳುವಳಿಕೆಯುಳ್ಳವನಂತೆ ಮಾಡಿಕೊಡತಕ್ಕದು. ಮನೆಯಲ್ಲಿ ಹೆತ್ತವರ ಕಟ್ಟಿನಿಂದ ಹೊರಬಿದ್ದು, ಬೇಕಾಗುವಷ್ಟು ಹಣ ತರಿಸಿ, ದುರುಪಯೋಗ ಮಾಡಲು ಕಲಿತುಕೊಂಡು ಬಂದಷ್ಟೇ ವಿದ್ಯಾವಂತನಾಗಿ ಹಿಂದಿರುಗಿ ಹೋಗಲು, ಹಾಸ್ಟೆಲುಗಳು ಆಶ್ರಮಗಳಾಗಬಾರದು.

ಸಂಸ್ಥಾನದ ಆರೋಗ್ಯ

ಕಳೆದ ಐದು ವರ್ಷಗಳ ಸರಾಸರಿಗಿಂತ ೧೯೩೦ರಲ್ಲಿ ಮರಣ ಸಂಖ್ಯೆಯು ಇಲಿಲಳ ಹೆಚ್ಚಿದ್ದು, ೧೦ಳ೫೨ ಅಗಿಸ್ಟ್ ಕೊಲರಾ (೧೮೭೬) ರೋಗವು ಸೀಡೆಡ್ ಡಿಸ್ಟ್ರಿಕ್ಟುಗಳಲ್ಲಿ ಪ್ರಬಲವಾಗಿದ್ದು, ಸಂಸ್ಥಾನದ ೬೨ ಮ್ಯುನಿಸಿಪಾಲಿಟಿಗಳಲ್ಲಿ ಇಗನ್ನು ನುಗ್ಗಿತ. ಸಿಡುಬು (೮೦೨೫) ವ ಲಬಾರು, ತಂಜಾವೂರು, ಉತ್ತರ ಆರ್ಕಾಡು ಜಿಲ್ಲೆಗಳಲ್ಲಿ ಮುಖ್ಯ ನೆಲೆಯಾದ್ದಿತು. ಪ್ಲೇಗ್ (೧೪೮೯) ರೋಗವು ೭ ಜಿಲ್ಲೆಗಳಲ್ಲಿತ್ತು ಮೇ ಯಾದಿಂದಾದ ಮರಣಗಳನ್ನು ಪ್ರತ್ಯೇಕಿಸಿಲ್ಲ. ಈ ರೆ ಗವು ಉತ್ತರ ಜಿಲ್ಲೆಗಳಲ್ಲಿ ಕುಂದಿದ್ದಿತು. ಶ್ವಾಸಕೋಶದ ರೋಗಗಳಿಂದ ೮೫೧೧೦ ಮರಣಗಳಾದುವು. ಕಳೆದ ವರ್ಷದಲ್ಲಾದ ಖಾನೆಸುಮಾರಿಯಲ್ಲಿ ತೋರುವಂತೆ ೪೧ ಮಿಲ್ಲಿಯ ನವ್ಯ ಸಂಸ್ಥಾನದ ಜನಸಂಖ್ಯೆಗೆ ಇದೇ ಹತ್ತು ವರ್ಷಗಳಲ್ಲಿ, ಮರಣ ಸಂಖ್ಯೆಯು ಸಾವಿರಕ್ಕೆ ೨೪ ಆಯಿತಿದೆ. ಮರಣಾಂಕದ ಕೇಂದ್ರಗಳಂದರೆ, ಕ್ರಮವಾಗಿ ಮದ್ರಾಸು, ರಾಮನಾಡ, ನೀಲಗಿರಿ. ಆದರೂ ನೀಲಗಿರಿ ಹತ್ತುವರೇಕೆ?

ಮುಸ್ಲಿಮ ಪ್ರಾತಿನಿಧ್ಯದ ಪ್ರಶ್ನೆ

ಈ ವಿಷಯವಾಗಿ ವೈಸರಾಯರು, ಕಲ್ಕತ್ತೆಯ ಮುಸ್ಲಿಮರಿಗೆ ಅವರ ಅಭಿನಂದನೆಯ ಪತ್ರಿಕೆಗೆ ಉತ್ತರ ಕೊಡುವಾಗ ಕೆಲವು ಅಂತರಂಗ ವಿಚಾರಗಳನ್ನು ತಿಳಿಸಿರುವರು. 'ಸರಕಾರವೇ ಅಲ್ಪ ಸಂಖ್ಯಾಕರ ಪ್ರಾತಿನಿಧ್ಯದ ಪ್ರಶ್ನೆಯನ್ನು ಇತ್ಯರ್ಥಿಸಿದ್ದರೆ ಉತ್ತಮವಾಗುತ್ತಿದ್ದಿತೆಂದೇ ಈ ಮುಸ್ಲಿಮ ಸಭ್ಯರು ಅಭಿಪ್ರಾಯ ತಿಳಿಸಿದ್ದರು. ಈಗ ಹಿಂದೂ ಮುಸ್ಲಿಮರೊಳಗೆ ಇರುವ ಭೇದವನ್ನು ಬೇಗ ತೊಲಗಿಸಬೇಕಾಗಿ ಬಂದೀತು, ಆದರೆ ಈ ಪ್ರಶ್ನೆಯನ್ನು ಇತ್ಯರ್ಥಿಸುವುದಕ್ಕೆ ಚುನಾಯಿತ ಪ್ರತಿನಿಧಿಗಳಿಗೆ ಬಹುಕಾಲವು ತಗಲಿದರೆ, ದೇಶದ ಪ್ರಗತಿಗೆ ಹಾನಿಯುಂಟಾಗಬಹುದೆಂದೂ ನಂಬಬೇಕಾಗಿದೆ. ಈ ಬಿಕ್ಕಟ್ಟುಗಳು ಹೀಗಿದ್ದರೂ, ಎಂತಹ ತೀರ್ಮಾನವು ಆಗಬಹುದೆಂದರೂ, ನಮ್ಮ ಸರಕಾರವು ನಿಮ್ಮಂತಹ ಅಲ್ಪಸಂಖ್ಯಾಕರ ವಿಷಯವಾಗಿ ಅತ್ಯಧಿಕ ಸಹಾನುಭೂತಿಯಿಂದಲೇ ನಿಮ್ಮ ಶ್ರೇಯಸ್ಸನ್ನೂ ಹಕ್ಕುಗಳನ್ನೂ ಕಾಯುವುದು.'' ಇನ್ನು ಅಲ್ಪಸಂಖ್ಯಾಕರದೇಕೆ ಚಿಂತಬೇಕು?

ಅಹಿಂಸೆಯಿಂದ ಯುದ್ಧ ನಿವಾರಣೆ

ಆಗಬಹುದೇ? ಎಂಬ ಪ್ರಶ್ನೆಯನ್ನು ಮಹಾತ್ಮಜೀಯವರು ಅವರು ಇಂಗ್ಲೆಂಡಿನಿಂದ ಮರಳುವಾಗ ಹಡಗದಲ್ಲಿದ್ದವರು ಕೇಳಿದರು. 'ಒಂದು ಜನಾಂಗವು ಮತ್ತೊಂದು ಜನಾಂಗವನ್ನು ತನ್ನ ಲಾಭಕ್ಕಾಗಿ ಪ್ರಯೋಜನ ಮಾಡಿಕೊಳ್ಳುವ ರೀತಿಯು ಮುಗಿಯುವ ಮೊದಲು, ನಿಜವಾದ ಯುದ್ಧ ಸನ್ನಾಹ ನಿವಾರಣೆಯು ಎಂದೂ ಕೂಡಿ ಬರದು. ಜನಾಂಗಗಳ ಅತಿಲಾಲಸೆಯು ನಿರ್ನಾಮ ಹೊಂದುವ ಮೊದಲು ಅಹಿಂಸೆಯ ಪ್ರಯೋಗದಿಂದಲಾದರೂ ಯುದ್ಧ ನಿವಾರಣೆಯುಂಟಾಗದು. ಅತ್ಯಾಸೆಯಿಲ್ಲದಿದ್ದರೆ, ನೌಕಾಸೈನ್ಯವೇ ಮೊದಲಾದುವುಗಳ ಅಗತ್ಯವೆಲ್ಲಿದೆ? ಮತ್ತೊಬ್ಬನ ಮೂಲಕ ಸ್ವಲಾಭ ಸಾಧಿಸುವ ಇಚ್ಛೆಯು ಅಹಿಂಸೆಗೆ ವಿರುದ್ಧವಾದುದಾಗಿದೆ. ಅತ್ಯಾಸೆಯು ಅಳಿದರೆ, ಸೈನ್ಯಗಳು ಅನಾವಶ್ಯಕವಾದ ಭಾರಗಳೆಂದಾಗುವುವು'' ಹಣದ ಅಧಿಕಾರದ ಸೊತ್ತಿನ ಮೆರೆದಾಟದ ಲಾಲಸೆಯು ಎಂದಿಗೆ ಮಾಯವಾಗುವುದೋ, ಅಂದಿಗೇ ಮನುಷ್ಯರಿಗೆ ಅರಿಷಡ್ವರ್ಗಗಳೆಂಬ ಶತ್ರುಗಳೇ ಇಲ್ಲವಾಗುವ ಕಾರಣ ಬೇರೆ ಯಾವ ಸಂಶತ್ರುಗಳಿಗಾಗಿ ಯುದ್ಧ ಸನ್ನಾಹವು ಅಗತ್ಯವಾಗುವುದು? ಎಂಬುದೇ ಮಹಾತ್ಮರ ವಿಮರ್ಶೆ.

ಸರಕಾರವು

ಒಹಳವಾಗಿ ಆಲೋಚಿಸಿಯೂ, ಕಾಂಗ್ರೆಸ್ಸಿನ ಹೇಳಿಕೆಗಳನ್ನು ಬೆದರಿಕೆ ತೋರಿಸುವ ಕೇಳಿಕೆಗಳೆಂದು ತೀರ್ಮಾನಿಸಿಯೂ, ಕಾಂಗ್ರೆಸ್ಸಿನ ಯಾವತ್ತು ಚಟುವಟಿಕೆಗಳನ್ನು ಮೂಲೋತ್ಪಾಟನ ಮಾಡಲು ನಿರ್ಧಾರ ಮಾಡಿರುವುದನ್ನು ಎಂತಹ ಸರಕಾರದ ಹಿತಚಿಂತಕ ಪರಾಮರ್ಶಕರಿಂದಲಾದರೂ ಅಲುಗಾಡಿಸಲಾಗಲಿಲ್ಲ. ದೊರೆತನವು ತನಗೆ ಯುಕ್ತ ಕಾಣುವ ದಬ್ಬಾಳಿಕೆಗೆ ತೊಡಗಿಯೇ ಇರುವಾಗ ಕಾಂಗ್ರೆಸ್ ಸಭೆಯು ತನ್ನದೊಂದೇ ಕಾರ್ಯಕ್ರಮವನ್ನು ಪ್ರಚಾರಗೊಳಿಸಿರುವುದು. ಆರ್ಡಿನನ್ಸುಗಳು ಇನ್ನಷ್ಟು ಅಗತ್ಯ ಕಂಡಂತೆ ಮುಂದೆ ಬರುವುವು. ಸರಕಾರವು ತನಗೆ ಯುಕ್ತಕಾಣುವಂತೆ ಬೇಕಾದ ರೀತಿಯಲ್ಲಿ ಅನ್ಯಾಯವೆಂದು ತೋರುವುದನ್ನು ಅಡಗಿಸಬಹುದು. ಆದರೆ ವರ್ತಮಾನಗಳೇ ಹರಡದ ಹಾಗೆ ಅತಂಕವೇತಕ್ಕೆ? ಒಂದೇ ಊರಿನಲ್ಲಾದರೂ ಈಗಣ ದಿನಗಳಲ್ಲಿ ಬಾಯಿಗೆ ಬಂದಂತೆ ಇತ್ತಂಡಗಳಿಗೂ ನಾನಾ ಸುಳ್ಳು ಪುಕಾರೆಗಳನ್ನು ಹರಡಿಸುವ ಹಲವರು ತಮ್ಮ ಬುದ್ಧಿವಂತಿಕೆಯನ್ನು ಪ್ರಕಾಶ ಪಡಿಸುವಾಗ ಇದೇ ದಾಢ್ಯದ, ಇದೇ ಜನಾಂಗದ ಯಾವತ್ತು ಕಡೆಗಳಲ್ಲಿ ನಾನಾ ವಿಧವಾದ ವದಂತಿಗಳನ್ನು ಹರಡಿಸಲು ಜನ್ಮವೆತ್ತಿರುವ ಲಕ್ಷಾವಧಿ ಆಸಾಮಿಗಳಿಗೆ ಸುಖಜೀವನವೂ, ಇವರನ್ನು ನಂಬುವ ಇತ್ತಂಡಗಳಿಗೂ ಅವಿಶ್ವಾಸ, ಪಶ್ಚಾತ್ತಾಪಗಳೇ ಪರಿಣಾಮಗಳು ಉಂಟಾಗುವುದಕ್ಕೆ ಈ 'ಸೆನ್ಸರ್' ಬಹಿರಂಗ ನಿಷೇಧ ವಿಧಿಯು ಕಾರಣವಾಗದೇ? ಎಂದು ಪತ್ರಿಕೆಗಳೆಲ್ಲ ಕೇಳುತ್ತಲಿವೆ.

ನೋಟಗಳು
NOTE..

೧೯೩೦ನೇ ಇಸವಿಯು ಬಹಳ ಕಷ್ಟಪ್ರದವೆಂದು ನಮ್ಮ ಭಟ್ಟರು ಅಂದಾಜುಮಾಡಿತ್ತು. ೧೯೩೧ನೇ ಇಸವಿಯು ಬಂದಿತ್ತು. ಅದು ೧೯೩೦ಕ್ಕಿಂತ ಟೈಟ್ ಆಗಿತ್ತು. ೧೯೩೧ರ ಕಷ್ಟನಷ್ಟಗಳು ಹಿಂದೀಯರಿಗೆ ಬರಲಿಕ್ಕಿಲ್ಲವೆಂದು ಭಟ್ಟರ ಆಶೆಯಾಗಿತ್ತು. ಆದರೆ ಹೇಳುವುದೇನು? ಅವರ ಭಾಗ್ಯದಿಂದ ೧೯೩೧ನೇ ಇಸವಿಯ ಸೂರ್ಯನು ಮೂಡುವಾಗಲೇ ಕೆಂಬಣ್ಣದಿಂದ ಕೆಂಪೇರಿದನು ಇನ್ನೇನೋ?

* * * *

ಆದರೆ ಭಟ್ಟರು ಹೇಳಿದುದು ಸ್ವಲ್ಪ ತಪ್ಪಿಹೋಯಿತು, ಅವರ ಭವಿಷ್ಯತ್ತಿಗೂ ನಡೆದ ಘಟನೆಗೂ ಸ್ವಲ್ಪ ವ್ಯತ್ಯಾಸ ಬಂತು. ೧೯೩೦ನೇ ಜನವರಿ ೩೧ನೇ ಚಳವಳವು ಪ್ರಾರಂಭವಾಯಿತು.

* * *

ಭಟ್ಟರ ಮಾತಂತಿರಲಿ! ಮಹಾತ್ಮಾಗಾಂಧಿಯವರು ಎರವಾಡಾ ಸೆರೆಮನೆಯಲ್ಲಿ ಸಂತೋಷದಿಂದಿರುವರು. ಆ ಸೆರೆಮನೆಯ ಪರಿಚಯವು ಅವರಿಗೆ ಮುಂದೆ ಕೆಲವು ಸಲ ಆಗಿದ್ದಿತು. ಅವರು ಈಗ ನೂರು ಗಜ ನೂಲಿನ ಬದಲು ಐನೂರು ಗಜ ನೂಲನ್ನು ನೇಯುತ್ತಿರುವರು.

* * * *

ನಮ್ಮ ಮಹಾ ರಾಣಿಯವರು ಕ್ರಿಸ್‌ಮಸ್ ದಿನ ಕೆಲವು ವಸ್ತುಗಳನ್ನು ಪೇಟೆಯಿಂದ ತರಿಸಿಕೊಂಡರು. ಅವುಗಳಲ್ಲಿ ಒಂದೆರಡು ಬ್ರಿಟಿಷ ವಸ್ತುವಲ್ಲದೆ ಪರದೇಶಿಯಾಗಿದ್ದುದರಿಂದ ಅವರು ಅವುಗಳನ್ನು ಒಡನೆ ಹಿಂದೆ ಕಳುಹಿಸಿದರಂತೆ! ನೋಡಿ, ಅವರ ಸ್ವದೇಶ ಪ್ರೇಮ!

ಇನ್ನೆಲ್ಲಿಗೆ?

ಪಾರ್ಲಿಮೆಂಟಿನ ೬೦೦ ಮಂದಿ ಕನ್ಸರ್ವೇಟಿವ್ ಮೆಂಬರೂ ಸರ್ ಸಾಮುವೇಲ್ ಹೋರರಂತಹ ಇಂಡಿಯಾ ಕರಣಿಕರೂ ಭಾರತ ವರ್ಷದ ಭಾಗ್ಯವಿಧಾತರಾಗಿರುವಾಗ ಇಂಗ್ಲಂಡಿ 'ಮೆಂಚೆಸ್ಟರ್ ಗಾರ್ಡಿಯನ್'' ಪತ್ರಿಕೆ ಎನ್ನುವಂತೆ, ಕಾಂಗ್ರೆಸ್ ಸಂಸ್ಥೆಗಳನ್ನೇ ಧೂಳಾಗಿ ಹಾರಿಸಲು ಸರಕಾರವು ತವಕಗೊಳ್ಳುವಂತಾದುದು ಯಾರಿಗೂ ಆಶ್ಚರ್ಯವೆನಿಸದು. ಆದರೆ ಕಾಂಗ್ರೆಸ್ ಸಂಸ್ಥೆಗಳೇ ಇಲ್ಲದಂತಾದ್ದಲ್ಲಿ, ಮುಂದಿನವರೂ ಕಾರಾಗೃಹದಲ್ಲಿರುವಂತಾದ್ದಲ್ಲಿ, ರೌಂಡ್‌ಟೇಬಲ್ ಕಾನ್ಫರೆನ್ಸನು ಎರಡೂ ಸಲ ಸೇರಿಸಿದುದರ ಪರಿಣಾಮ ಫಲಗಳಾವುವೆಂದು ಮಾತ್ರ ಎಣಿಕೆ ಮಾಡಿದರೆ ಎಲ್ಲರೂ ಚಕಿತರಾಗಲೇ ಬೇಕಾಗುವುದು. ಈಗಣ ಪಾರ್ಲಿಮೆಂಟಿನಲ್ಲಾದರೂ ಇರುವ ಲಿಬರಲ್ ಮತ್ತು ಲೇಬರ್ ಪಕ್ಷಗಳ ಮೆಂಬರರು ಬ್ರಿಟಿಷ ಸರಕಾರವು ಈ ರೀತಿಯಾಗಿ ಮುಂದರಿದುದನ್ನು ತಿಳಿದು ನೊಂದಿವೆ. ಇದೀಗ ಹೀಗಾದಲ್ಲಿ, ಪಾರ್ಲಿಮೆಂಟಿನಲ್ಲಿ ಈ ಪಕ್ಷದವರ ಅತಂಕಗಳೇ ಹೆಚ್ಚಿ ಸಹಕಾರವು ಕಡಿಮೆಯಾಗುವುದೇನೋ ಎಂದು ಇಂಗ್ಲಿಷ ಪತ್ರಿಕೆಗಳೂ ವಿಚಾರಮಗ್ನವಾಗಿವೆ. ಬ್ರಿಟಿಷ ಮುತ್ಸದ್ದಿಗಳನ್ನು ಇನ್ನು ಕಮಿಟಿಗಳಲ್ಲಿ ಸೇರಿಸಿ ಇಲ್ಲಿಗೆ ಕಳುಹುವಾಗ ಅವರೊಡನೆ ಕೂಡಿ ಕೆಲಸಮಾಡುವ ಯೋಗ್ಯ ಹಿಂದೀ ಪ್ರತಿನಿಧಿಗಳು ಯಾರು ದೊರೆವರೋ ಉಳಿಯುವರೋ ತಿಳಿಯದಾಗಿದೆ ಎಂದು ಬ್ರಿಟಿಷ ಪತ್ರಿಕೆಗಳು ಅಭಿಪ್ರಾಯಕೊಡುತ್ತಿವೆ, ಎನ್ನುವಾಗ,— ನಾವು ಬೇರೆ ಏನನ್ನಬಹುದು?

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

(ಗುಣ ಬಾರದಿದ್ದರೆ) ೧೦೦೦ ರೂ. ಇನಾಮು (ಹಣ ಪರತ

ಪುರುಷತ್ವ ಸಂಜೀವಿನೀ ಚೂರ್ಣ (ರಜಿಸ್ಟರ್ಡ)

ಈ ಚೂರ್ಣದಿಂದ ಸ್ವಪ್ನದಲ್ಲಿ ಹಾಗೂ ಮೂತ್ರದ್ವಾರಾ ಹೋಗುವ ವೀರ್ಯವು ಕೂಡಲೆ ಒಂದಾಗುವುದು. ಗರಮಿ ಪರಮಾದಿಂದಾದ ಉಷ್ಣತಾ, ಮುಷ್ಟಿಮೈಥುನದಿಂದಲೂ, ಅತಿರತಿಯಿಂದಲೂ ಧಾತು ನೀರಾಗುವಿಕೆ, ಧಾತು ಕ್ಷೀಣತೆ ಅಶಕ್ತತೆ ಶೀಘ್ರಧಾತುಪತನ ಇವೆಲ್ಲ ರೋಗಗಳು ನಾಶವಾಗಿ ರಕ್ತಶುದ್ಧಿಯಾಗುತ್ತದೆ. ಹಸಿವೆ, ಸಾಮರ್ಥ್ಯಗಳು ಹೆಚ್ಚಾಗಿ ಕಾಂತಿಬೆಳೆಯುತ್ತದೆ ಮತ್ತು ವೀರ್ಯವು ಗಟ್ಟಿಯಾಗಿ ಗರ್ಭಧಾರಣಕ್ಕೆ ಯೋಗ್ಯವಾಗುತ್ತದೆ ಮುಖ್ಯ ಸರ್ಟಿಫಿಕೇಟು, ಮಿ. ರಾ. ವಿ. ಎಸ್ ಅಗಡೆ ಮ್ಯಾಜಿಸ್ಟ್ರೇಟ ಸಾತಾರಾ.—ಈ ಚೂರ್ಣದಿಂದ ನನಗೆ ಆಶ್ಚರ್ಯಕಾರಕ ಗುಣವಾಯಿತು ಅನೇಕ ತರದ ಅವಿಚಾರದಿಂದ ದುಷ್ಟವಾದ ವೀರ್ಯ ಹಾಗೂ ರಕ್ತವು ಇದರಿಂದ ಸತೇಜವಾಗಿ ಪ್ರಕೃತಿಯು ನೆಟ್ಟಗಾಗದೆ ಇರದು. ೨೧ ದಿವಸ ಸಾಕಾಗುವಷ್ಟು ಡಬ್ಬಿಗೆ ಕಿಮ್ಮತ್ತು ೫ ರೂ ೮ ೩ ೦||೦.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವುದು ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ ಮೈಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ ಮುಖ್ಯ ಸರ್ಟಿಫಿಕೇಟು, ಮಿ ರಾ ... ಎಸ್ ಇನ್‌ಸ್ಪೆಕ್ಟರ ಬೆಳಗಾಂವ—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತು ರೂ ೩ ೮ ೩ ೦||೦

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತರುವಾಯ ಏನ ಮಾಡಿದರೂ ಸುರುವಾಗುವುದಿಲ್ಲ ಮೊದಲ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ವೈದ್ಯ ಆರ್ ಟಿ. ಚಾಂಗದೇವ ಪೂರ್ವ ಖಾನದೇಶ— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ೫, ೮ ರೂ. ವಿ ಪಿ. ಖರ್ಚ ||

ಸೂಚನೆ:—ಯಾವದಾದರೂ ೩ ಡಬ್ಬಿಗೆ ೮ ೩ ನಾಫ ನಮ್ಮ ಈ ರಿಜಿಸ್ಟರ್ಡ ಔಷಧದ ತದ್ವತ ನಕಲು ಹೊರಟಿದೆ. ಪೂರ್ಣ ವಿಚಾರಮಾಡಿ ತರಿಸಿಕೊಳ್ಳಿರಿ ಈ ಸರ್ಟಿಫಿಕೇಟು ಸುಳ್ಳಿಯದೆಯೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಇನಾಮು

ವಿಳಾಸ—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣಯಶಸ್ಸು ಪಡೆದ

ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ

ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತ ಪಾಕು. ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿಕಳಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೋಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದರೂ ಪರಮ, ಮೈನೋವೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ ೨೧ ದಿವಸ ನಡೆಯುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ೮ ೩ ರೂ ೧ ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರು ಡಬ್ಬಿಗೆ ರೂ. ೧೫॥ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಶಾಲಾ ಮಾಸ್ತರರ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

೧ ಡಾ। ಹರೀಹರ ಶೀತಾರಾಮರಾಜವಾಡೇಕರ ಎಲ್ ಎಮ್ ಪಿ ಎಚ್ ಎಮ್ ಬಿ, ಪೋಸ್ಟ ರಾಜಿಂದಾ ಜಿ ಅಕೋಲಾ— ತಮ್ಮ ಮದನಮಸ್ತ ಪಾಕದಿಂದ ಜೀವನಶಕ್ತಿಯು ಬೆಳವಣಿಗೆಯಾಗಿ ವೀರ್ಯ ಹಾನಿಯು ಬಲಹೀನತೆಯು ಉದರ ವಿಕಾರವು, ಇಂದ್ರಿಯ ಶೈಥಿಲ್ಯವು ಸಂಧಿವಾತ ಮೊದಲಾದ ರೋಗಗಳೆಲ್ಲ ನಷ್ಟವಾಗಿ ವೀರ್ಯ, ಬಲ ಹಾಗೂ ಸ್ಮರಣಶಕ್ತಿಯು ಬೆಳೆಯುತ್ತದೆ ತಮ್ಮ ಪಾಕದ ಪ್ರಸಾರವು ಹೆಚ್ಚಲಿ ಪರಮೇಶ್ವರನು ತಮ್ಮ ಕೀರ್ತಿಯನ್ನು ಹಬ್ಬಿಸಲಿ

೨ ರಾಜವೈದ್ಯ ರಾಮಚಂದ್ರ ಗಣೇಶ ಶಾಸ್ತ್ರಿ ಜೋಶಿ, ಪೋಸ್ಟ ವಾಳವೆ ಜಿ ಸಾತಾರಾ,—ತಮ್ಮ ಮದನಮಸ್ತ ಪಾಕವನ್ನು ಮಿ. ಸ ವಾ ದೇಶಪಾಂಡೆ ತಾ ಲೋಕಲ್ ಬೋರ್ಡ ಇವರಿಗೆ ಕೊಟ್ಟೆನು ಇದರಿಂದ ಅವರ ಸ್ವಪ್ನಾವಸ್ಥೆ ಧಾತು ನೀರಾಗುವಿಕೆ, ಹಾಗೂ ಅಶಕ್ತತೆ, ಈ ರೋಗಗಳು ನೆಟ್ಟಗಾಗಿ ಹಸಿವೆ, ಶಕ್ತಿ ಮತ್ತು ತೂಕ ಬೆಳೆಯಿತು. ಇದನ್ನು ತಿಳಿಸಲು ಅತ್ಯಾನಂದವಾಗುತ್ತದೆ ಸರ್ವರು ಈ ಪಾಕದ ಅನುಭವ ತೆಗೆದುಕೊಳ್ಳಬೇಕೆಂದು ಶಿಫಾರಸು

೩. ಜಗನ್ನಾಥ ರಂಗನಾಥ ದಡಪೆ, ಸ್ಕೂಲಮಾಸ್ತರ, ಪೋಸ್ಟ ತಡವಳೆ ಜಿ ಸೊಲ್ಲಾಪೂರ.—ತಮ್ಮ ಮದನಮಸ್ತ ಪಾಕದ ಡಬ್ಬಿಯನ್ನು ಸೇವಿಸಿದೆನು, ನನಗೆ ೧೩ ತರದ ಆಶ್ಚರ್ಯಕಾರಕ ಗುಣವಾಯಿತು ತೂಕವು ೨೫ ಪೌಂಡು ಬೆಳೆಯಿತು ತಮ್ಮ ಉಪಕಾರವನ್ನು ನಾನು ಆಜನ್ಮ ಮರೆಯಲಾರೆನು

ಸೂಚನೆ— ಬೇರೆಯವರ ಅನುಭವವನ್ನು ಕೃಪೆಯಿಂದ ನಮ್ಮ ಮೇಲೆ ಹೊರಿಸಬೇಡಿರಿ ಇಷ್ಟು ಖಾತ್ರಿಯಾದರೂ ಈ ಭಾವಸಾಲಿ ಪಾಕದ ಮೇಲೆ ಯಾರ ವಿಶ್ವಾಸ ಕೊಡುವುದಿಲ್ಲವೋ ಅವರು ರೋಗಮುಕ್ತರಾಗಿ ಸಂಸಾರ ಸುಖ ಭೋಗಿಸುವ ವೇಳೆಯು ಬಂದಿಲ್ಲವೆಂದು ತಿಳಿಯಬೇಕು ಈ ಪಾಕದಲ್ಲಿ ೬೦ ವನಸ್ಪತಿ ಧಾತುಪೌಷ್ಟಿಕ ಇಲ್ಲವೆಂದೂ, ಮೇಲಿನ ಸರ್ಟಿಫಿಕೇಟು ಅಸತ್ಯವೆಂದು ಸಿದ್ಧಮಾಡಿದವರಿಗೂ ೧೧೦೦ ರೂ. ಇನಾಮು ಕೊಡುವೆವು

ಪತ್ತೆ:—ವೈದ್ಯ ಮೋಹನಲಾಲ ಎಸ್ ಔಷಧಾಲಯ,
ಮು ಪೋ. ಮಿರಜ, S M C

ಗಾಂಧೀ ಚಳವಳ.

ಕೆಲಸವಿಲ್ಲದ ಅನೇಕ ದೇಶವಿದೇಶ ಜೋತಿಷ್ಯಗಾರರು ಭಾರತದ ಭಾವೀ ಸ್ಥಿತಿಯ ಕುರಿತು ಭವಿಷ್ಯವನ್ನು ಹೇಳಿದ್ದಾರೆ "ಗಾಂಧಿಯವರು ಲಂಡನಿಗೆ ಹೋಗಿ ಮುಕ್ಕಾಲುವಾಸಿ ಸ್ವರಾಜ್ಯವನ್ನು ತರುತ್ತಾರೆ ಆ ಮೇಲೆ ದೇಶಕ್ಕೆ ಒಳ್ಳೆಯದೇ ಇದೆ"ಯೆಂದು ಇವರ ಜಾತಕದ ಫಲ! ಗಾಂಧಿಯವರು ತಂದ ಮುಕ್ಕಾಲುವಾಸಿ ಸ್ವರಾಜ್ಯವು ಹೇಗಿದೆಯೆಂದು ಈ ಗೊಡ್ಡುಗಳಿಗೆ ಈಗಾಗಲೇ ತಿಳಿದಿರಬೇಕು

\+ + + +

ಈ ಜೋತಿಷ್ಯಗಾರರೆಲ್ಲ ಗುಣಿತದ ಸಮಯದಲ್ಲಿ ಏನೋ ಒಂದು ಮಹದಿಚ್ಛೆಯನ್ನು ಮನಸ್ಸಿನಲ್ಲಿಟ್ಟುಕೊಂಡಿರುವಂತೆ ಕಾಣುತ್ತದೆ ಅಂತರ್ರಾಷ್ಟ್ರೀಯ ಭವಿಷ್ಯತ್ತನ್ನು ತಾವು ಹೇಳಿಬಿಟ್ಟು ಅದು ಒಂದು ವೇಳೆ (ದೈವವಶಾತ್) ಸರಿಯಾಗಿ ಹೋದರೆ ತಾವು ದೊಡ್ಡ ಜನ ರಾಗಬಹುದೆಂಬದಾಗಿ ಇವರು ಭಾವಿಸಿರಬೇಕು

\+ + + –

ಗಾಂಧಿ ತಂದ ಮುಕ್ಕಾಲುವಾಸಿ ಸ್ವರಾಜ್ಯವೆಂದರೆ ಬಂಗಾಳ ಓರ್ಡಿನೆನ್ಸು, ಸಂಯುಕ್ತಪ್ರಾಂತ್ಯ ಓರ್ಡಿನೆನ್ಸು, ಸರಹದ್ದಿನ ಓರ್ಡಿನೆನ್ಸು (ಒಂದಲ್ಲ ಎರಡಲ್ಲ ಮೂರು) ಅಲ್ಲದೆ ಜವಾಹರಲಾಲರ ಬಂಧನ ಖಫರ್‌ಖಾನರ ಗಡಿಪಾರು! ಗಾಂಧೀ ವಲ್ಲಭಾಯಿಯವರ ಎರೆಸ್ಟು!

\+ + + +

ಗಾಂಧಿಯವರು ಲಂಡನಿಗೆ ಹೋಗಿ ಬಂದುದರ ಫಲಿತಾಂಶ ಇವುಗಳೇ! ಅತ್ತ ಅವರು ಹಡಗಿನಿಂದಿಳಿಯುವಾಗ ಇತ್ತ ದೇಶದಲ್ಲಿ ಕೈದುಗಳು ಅವರ ಬಂಧನ ರೌಂಡ್‌ಟೇಬಲಿನಿಂದಾದ ಉತ್ತಮ ಫಲಿತಾಂಶಗಳೆಂದರೆ ಇವುಗಳೇ

\+ + + +

ಗಡಿಪ್ರಾಂತ್ಯದ ಖಫರ್‌ಖಾನರನ್ನು ಏಕೆ ಪ್ರಥಮದಲ್ಲಿಯೇ ಗಡಿಪಾರು ಮಾಡಿದರು" ಎಂಬ ಪ್ರಶ್ನೆ! ಅದಕ್ಕೂ ಸಕಾರಣವಿದೆ ಪತ್ರಿಕೆಗಳೂ, ಜನತೆಯೂ ಅಧಿಕಾರವರ್ಗದ ವರ್ತನೆಯನ್ನು ನೋಡಿ ಆಶ್ಚರ್ಯಗೊಳ್ಳುತ್ತವೆಯಾದರೂ ಅದು ಅವರ ಆ ರೀತಿಯ ಆಶ್ಚರ್ಯ ಖಂಡನ ಮಂಡನಗಳಿಗೆ ಕಿವಿಗೊಡದೆ ತನ್ನ ಧರ್ಮವನ್ನು ಮಾಡುತ್ತದೆ

\+ + – +

ಗಡಿಪ್ರಾಂತ್ಯಕ್ಕೆ ಲಂಡನಿನ ರೌಂಡ್‌ಟೇಬಲ್ ಕಮಿಟಿಗಳು ಬರಲಿವೆ ಗಡಿಪ್ರಾಂತ್ಯವನ್ನು ಅವುಗಳು ವ್ಯವಸ್ಥೆಗೊಳಿಸಲಿವೆ ಆ ಕಮಿಟಿಗಳು ನಿರ್ಧರಿಸಿರುವ ಕ್ರಮವನ್ನು ಗಡಿಪ್ರಾಂತ್ಯದ ಕೊಂಗ್ರೆಸ್ಸೂ ಅಖಿಳ ಭಾರತ ಸಭೆಯೂ ಒಪ್ಪುವುದಿಲ್ಲ

\+ + – –

ಕೊಂಗ್ರೆಸ್ಸಿಗೆ ಮನಸ್ಸಿಲ್ಲದ ಒಪ್ಪಿಗೆಯನ್ನು ನಮ್ಮ ನಾಡಿನಲ್ಲಿ ಮಾಡುವುದು ಅಗತ್ಯವಿಲ್ಲವೆಂದೇ ಖಫರ್‌ಖಾನರ ಭಾವ ಸರಕಾರವು ಹೇಳಿತು ನಾವು ಸರಹದ್ದಿನಲ್ಲಿ ಕೆಲವು ಕ್ರಮಗಳನ್ನು ಮಾಡಿಯೇ ಸಿದ್ಧನೆಂದು" ಖಫರ್‌ಖಾನರೆಂದರು ಆದರೆ ನಾನು ಅದಕ್ಕೆ ವಿರೋಧಿಯಾಗುವೆನೆಂದು ನಡೆಯಿತು! ಬಿಟ್ಟಿತೇ ತಕ್ಕಾಟ

\+ + –

ರೌಂಡ್‌ಟೇಬಲ್ ಕಮಿಟಿಗಳು ಪೇಶಾವರ ಮೊದಲಾದ ಸ್ಥಳಗಳಲ್ಲಿಗೆ ಹೋಗಿ ಸರಿಯಾದ ಕೆಲಸವನ್ನು ಮಾಡಬೇಕಾದರೆ ಅಲ್ಲಿ ತೊಂದರೆಯಿರಬಾರದು ಆ ತೊಂದರೆಯನ್ನು ತಪ್ಪಿಸುವುದಕ್ಕಾಗಿಯೇ ದೂರದೃಷ್ಟಿಯ ಸರಕಾರವು ಮೊದಲಾಗಿ ಸರಹದ್ದಿನ ಮುಂದಾಳುಗಳನ್ನು ಸೆರೆಮನೆಗೊಯ್ಯಿತೆಂದು ಒಂದು ಪತ್ರಿಕೆಯು ಹೇಳುತ್ತದೆ

\+ + + +

ಒಂದು ಪ್ರಾಂತ್ಯದಲ್ಲಿ ಯಾರಿಗೆ ಹೆಚ್ಚು ಪ್ರತಿಭೆ (Influence) ಇದೆಯೋ ಅವರನ್ನು ಮೊದಲು ಬಂಧನದಲ್ಲಿಡಬೇಕೆಂದು ಸರಕಾರದ ಈ ಸಾರಿಯ ಧೋರಣೆಯೆಂದು ಒಂದು ಪತ್ರಿಕೆಯು ಹೇಳಿದೆ.

\+ + + +

ಆದರೆ ಈ ಅಭಿಪ್ರಾಯವು ಸರಿಯೇ ಪ್ರತಿಭಾಸಂಪನ್ನನಾದವನೊಬ್ಬನನ್ನು ಸೆರೆಮನೆಯಲ್ಲಿಟ್ಟರೆ, ಅವನ ಗೈರುಹಾಜರಿಯಿಂದ ಹೆಚ್ಚಿನ ಫಲವಿದೆಯೆಂಬ ಊಹೆ ಸರಿಯಾದುದೇ"

\+ + +

ದೇಶದಲ್ಲಿ ಪ್ರತಿಭಾಸಂಪನ್ನನೊಬ್ಬನನ್ನು ಸೆರೆಮನೆಗೊಯ್ಯುವುದರಿಂದಾಗಿ ಅವನ ಪ್ರತಿಭೆ ಮುಮ್ಮಡಿಯ ದ್ವಿಗುಣಿತಶಕ್ತಿಯಿಂದ ದೇಶದಲ್ಲಿ ಮೆರೆದು, ಒಂದು ಪ್ರಚಂಡ ವಿಜಯವನ್ನುಂಟುಮಾಡಿತೇ ಹೊರತು ಅಪಜಯವನ್ನೆಂದಿಗೂ ಮಾಡಲಿಕ್ಕಿಲ್ಲ

\+ – + +

ಆದಿಯಿಂದಲೂ ಗಾಂಧಿಯನ್ನು ಅವಸ್ಥೆಗೆ ಬಿಟ್ಟಿದ್ದರೆ ಅವನ ಗೊಡವೆಗೆ ಹೋಗದಿದ್ದರೆ ಅವನು ಏನೆಂದರೆ ಏನು ಮಾಡಿದರೂ ಸುಮ್ಮಗಿರುತ್ತಿದ್ದರೆ ಗಣಿಸದಿರುತ್ತಿದ್ದರೆ ಗಾಂಧೀ ಚಳವಳಿಯು ಇಷ್ಟು ಶಕ್ತಿಯುತವಾಗುತ್ತಿರಲಿಲ್ಲವೆಂದು ಒಬ್ಬರ ಅಭಿಪ್ರಾಯ.

\+ + + –

ಇದು ಕೇವಲ ಸರಿ ಗಾಂಧಿಯವರನ್ನೂ ಅವರ ಅನುಯಾಯಿಗಳನ್ನೂ ಎಷ್ಟು ಸಲ ಸೆರೆಮನೆಗೊಯ್ದರೋ ಅಷ್ಟು ಪಾಲು ಉಬ್ಬಿ ಶಕ್ತಿಯಿಂದ ಅವರ ಅಳಿಯು ಕೈಗೂಡುತ್ತ ಬಂತು ಎಷ್ಟು ಮಂದಿ ಕೊಂಗ್ರೆಸ್‌ವಾಲರಿಗೆ ಶಿಕ್ಷೆಯಾಯಿತೋ ಅಷ್ಟು ಬಲವು ಕಾಂಗ್ರೆಸುವಾಲೆಂಗೆ ಹೊರಗಿನಿಂದ ಲಭಿಸಿತು

\+ + + +

ಗಾಂಧೀವಿಜಯದ ರಹಸ್ಯವೇ ಇದು ಅವರ ಚಳವಳದ ಗುಟ್ಟು ಅವರಲ್ಲೇ ಇರುತ್ತದೆ. ಅಂದು ಪಂಜಾಬದ ಅತ್ಯಾಚಾರವು ನಡೆದುದರಿಂದಾಗಿ ಅವರ ಚಳವಳದ ತುತೂರಿ ಧ್ವನಿಯು ಇಡೀ ಭೂಲೋಕಕ್ಕೆನೇ ಕೇಳಿಬಂತು ಒಂದು ವೇಳೆ ಅದಾಗುತ್ತಿರಲಿಲ್ಲವಾದರೆ ಬಾವಿಯೊಳಗಿನ ಕಪ್ಪೆಯ 'ಟಟರ್ ಟಟರ್' ಶಬ್ದದಂತೆ ಗಾಂಧಿಯವರ ಚಳವಳವೂ ನಿಶ್ಶಕ್ತಿಯಿಂದಿರುತ್ತಿತ್ತು

'ಸ್ವಾಭ'

ಅನುಕ್ರಮಣಿಕೆ.

ಅಗ್ರಲೇಖ -

ಹೊಸ ರಾಜನೀತಿ . . . ೩

ಸ್ವಪವಿಚಾರಗಳು . . ೪

ನೋಟಗಳು . . . ೫

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . ೬

ಒಳದೇಶ ವರ್ತಮಾನ . . ೭

ದಕ್ಷಿಣಕನ್ನಡ — ಮಂಗಳೂರು, ಉಡುಪಿ, ಕಾರ್ಕಳ, ಪುತ್ತೂರು, ಬಂಟ್ವಾಳ, ಸುಬ್ರಹ್ಮಣ್ಯ ಕುಂದಾಪುರ . . ೮

ವಿವಿಧ ಸಮಾಚಾರಗಳು . . ೧೧

ನಮ್ಮ ಶಾಲೆಗಳು ೧೦

ಬಾಪೂಜಿ, ವಲ್ಲಭಭಾಯಿ, ಸುಭಾಸ್‌ಬೋಸರನ್ನು ಬಂಧಿಸಿದರು! ೯

ಗಾಂಧೀ ವೈಸರಾಯರ ಪತ್ರವ್ಯವಹಾರ! ಅದರ ಪರಿಣಾಮ!! ೧೪

ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣಪ್ರದರ್ಶನ ಪತ್ರವ್ಯವಹಾರ ೨

ಸ್ವದೇಶಾಭಿಮಾನಿ.

ತಾ. ೮ನೇ ಶುಕ್ರವಾರ ಜನವರಿ ೧೯೩೨

ಹೊಸ ರಾಜನೀತಿ

ಮಜೂರ ಪಕ್ಷವು ಅಧಿಕಾರದಿಂದ ಹೊರಬಂದು ಇಂಗ್ಲೆಂಡಿನಲ್ಲಿ ನೆಶನಲ್ ಸರಕಾರವು ಚುನಾಯಿಸಲ್ಪಟ್ಟಿತೆಂದು ತಿಳಿದ ಕೂಡಲೇ ನಾವು ರೌಂಡ್‌ಟೇಬಲ್ ಪರಿಷತ್ತಿನ ಅಸ್ತಿತ್ವವನ್ನು ಸಾರಿದ್ದೇವೆ. ಶಂಕಿತವಾದೊಂದು ಪರಿಸ್ಥಿತಿಯು ಬರುವುದೆಂಬ ಅನುಮಾನದಿಂದಲೇ ನಾವು ಮೊದಲಿಂದಲೂ ಕಾಂಗ್ರೆಸ್ಸು ಮಜೂರ ಸರಕಾರವು ಬೀಳುವ ಮೊದಲೇ ಬ್ರಿಟಿಷ ಸರಕಾರದೊಡನೆ ಆದಷ್ಟು ಬೇಗನೆ ಒಪ್ಪಂದಕ್ಕೆ ಬರಬೇಕೆಂದು ಸೂಚಿಸುತ್ತಾ ಇದ್ದೆವು. ಮಜೂರ ಸರಕಾರದ ಔದಾರ್ಯವು ಅಷ್ಟು ಫಲಭರಿತವೆಂಬ ಭರವಸೆಯುಂಟಲ್ಲ, ಆದರೆ ಕಳೆದ ಶತಮಾನಗಳ ಇತಿಹಾಸದ ಪಾಠಗಳನ್ನು ಅವರು ಕೆಲಮಟ್ಟಿಗೆ ಮಾನಿಸಲು ತಯ್ಯಾರಿದ್ದರು. ಮಿ| ಬೆನ್ನರು ಸೆಕ್ರೆಟರಿ ಒಫ್ ಸ್ಟೇಟರಾಗಿಯೂ ಲಾರ್ಡ್ ಇರ್ವಿನರು ವೈಸರಾಯರಾಗಿದ್ದು, ಮಹಾತ್ಮಾಜೀಯವರು ಹಿಂದೀ ಧುರೀಣರಾಗಿದ್ದಾಗ ಆಗಿನ ಪರಿಸ್ಥಿತಿಗೆ ಧರ್ಮಯುದ್ಧದ ಬಂದಿಷ್ಟಾದರೂ ಹೋಲುವಿಕೆಯಿದ್ದಿತು. ಆ ದಿನಗಳು ಕಳೆದುವು. ನಾವು ವಸ್ತುಸ್ಥಿತಿಯನ್ನು ಈಗ ಚೆನ್ನಾಗಿ ಆಲೋಚಿಸಿ ಒಪ್ಪಿಕೊಳ್ಳುವುದೇ ಒಳ್ಳೆಯದು.

ಮಹಾತ್ಮಾಜೀಯವರು ಹಿಂದೂಸ್ಥಾನಕ್ಕೆ ಒರುವಾಗಲೇ ಓರ್ಡಿನೆನ್ಸುಗಳ ಸೃಷ್ಟಿಯಾದುವು. ಈಗಿನ ಓರ್ಡಿನೆನ್ಸುಗಳು ಹಿಂದೆ ಇದ್ದಿರಲಿಲ್ಲವೆಂದಲ್ಲ. ಆದರೆ ಈ ಬಾರಿ ಸರ್ ಸಾಮ್ಯುವೇಲ್ ಹೋರರು, ವಿನ್‌ಸ್ಟನ್ ಕನ್ಸರ್ವೇಟಿವ ಪಾರ್ಲಿಮೆಂಟ ಸದಸ್ಯರ ಪ್ರೋತ್ಸಾಹದಿಂದ ಚರ್ಚಿಲ್ ಸಾಹೇಬರ ಆ ತತ್ವಗಳನ್ನಿತ್ತು ಹಿಂದೂಸ್ಥಾನವನ್ನು ಆಳಲು ಕಟಿಬದ್ಧರಾಗಿದ್ದಾರೆ. ಸಮಗ್ರ ಬ್ರಿಟಿಷರ ಬಾಹುಬಲ, ಸಮಗ್ರ ಸಾಮ್ರಾಜ್ಯದ ಜನಬಲದೊಡನೆ ವಿ| ಬೆನ್ನರ ಪೂರ್ವದ ಉದಾರ ಮಾನಸಿಕತೆಯ ಧೋರಣೆಯನ್ನೂಗೆದು ಮುಂದೆ ಬಂದು ನಿಂತಿದ್ದಾರೆ. ಕಲ್ಕತ್ತದ ಯುರೋಪೀಯ ವ್ಯಾಪಾರೀ ಸಂಘಗಳ ತಮ್ಮ ಹಿಂದಿನ ಬಹಿಷ್ಕಾರ ಕಾರಣದ ನಷ್ಟಗಳನ್ನೆಣಿಕೆ ಹಾಕುತ್ತಾ ಬಲಾತ್ಕಾರದ ಸರಕಾರ ರಚನೆಯ ಒತ್ತಾಯ ಮಾಡಿದ್ದಾರೆ. ಈ ಮೂರ್ತಿಮಂತ ಶಸ್ತ್ರಾಸ್ತ್ರ ಶಕ್ತಿಗಳ ಮುಂದೆ ಕಾಯಿದೆ ಭಂಗಮಾಡುವ ಅಹಿಂಸಾವಾದಿ ಕಾಂಗ್ರೆಸ ಎಷ್ಟರದು?

ಈ ನೂತನ ಓರ್ಡಿನೆನ್ಸುಗಳು ನಮ್ಮ ವಿಚಾರವನ್ನು ಕಟ್ಟಿವೆ. ಆದುದರಿಂದ ಕಾಯಿದೆಭಂಗ ಚಳವಳದ ಮಟ್ಟಿಗೆ ಪತ್ರಿಕೆಗಳೆಂಬುವು ಇಲ್ಲವೆಂದೇ ಭಾವಿಸಬೇಕು. ಸರಕಾರದ ಶಾಸನಗಳಿಗೆ ನಾವು ತಲೆಬಗ್ಗುವೆವು. ದೇಶದಲ್ಲುಂಟಾಗುವ ಕ್ಷೋಭೆಯು ಸರಕಾರದ ಈ ಸ್ಥಿರವರ್ತನದಿಂದ ಅಣಗುವುದಾದರೆ, ಸವಿನಯ ಕಾಯಿದೆಭಂಗದಿಂದ ಉಂಟಾಗಬೇಕಾದ ಆ ಮಹಾನ್ ಕಷ್ಟಗಳೂ, ಯಜ್ಞಗಳೂ ಸಹನೆಗಳೂ ಈ ಮೂಲಕ ಅರಿಹೋಗುವುದಾದರೆ, ನಮಗೂ ಸಮ್ಮತವೇ. ಆದರೆ ಪರಿಣಾಮವನ್ನು ಯಾರು ಬಲ್ಲರು! ನಾವಿದನ್ನು ಕಲ್ಪಿಸಲೊಳಸುವುದಿಲ್ಲ.

ಹಿಂದೀಯರು ಅಧೀನ ಜನಾಂಗವು; ೩೦೦ ಮಿಲಿಯ ಜನಸಂಖ್ಯೆಯಿಂದ ಹೆಚ್ಚಿಗೆ ಪಡೆಯತಕ್ಕದ್ದೇನೂ ಇಲ್ಲ. ಇದ್ದ ಪರಿಸ್ಥಿತಿಯನ್ನು ನಾವು ತಿಳಕೊಳ್ಳುವುದು ಒಳ್ಳೇಯದು. ಇಂಗ್ಲೆಂಡು ಸಣ್ಣ ದೇಶ, ಅದರ ಜನಸಂಖ್ಯೆಯೂ ಬೆಳೆಯುತ್ತಾ ಉಂಟು; ಮಾರುಕಟ್ಟೆಗಳು ಬೇರಾಗುತ್ತಲೇ ಇವೆ. ಹಿಂದೂಸ್ಥಾನವನ್ನು ಇಂಗ್ಲೆಂಡು ಬಿಟ್ಟಿರಲಾರದು, ಅದರ ಬೆಳವಣಿಗೆಗೆ, ಅದರ ಅಸ್ತಿತ್ವಕ್ಕೆ, ಹಿಂದೂಸ್ಥಾನವು ಅದಕ್ಕೆ ಅವಶ್ಯಕ. ಚರ್ಚಿಲ್ ಸಾಹೇಬರು ಇದರ ನೆನಪರಿಕೆ ಕೊಟ್ಟಿದ್ದಾರೆ, ಇಂಚ್‌ಕೇಪ್ ಸಾಹೇಬರೂ ಆ ಅರ್ಥವನ್ನೇ ಹೇಳಿದ್ದಾರೆ, ಲೋರ್ಡ ಸೆಲ್ಬರ್ನ್ ಅವರೂ—ಜವಾಬ್ದಾರ ಸರಕಾರವನ್ನು ಹಿಂದೂಸ್ಥಾನಕ್ಕೆ ಕೊಡುವ ಯಾವ ವಾಗ್ದಾನವೂ ಇಲ್ಲವೆನ್ನುತ್ತಾರೆ, ಸ್ಪಷ್ಟ ವಕ್ತೃಗಳಾದ ಪ್ರತಿಯೊಬ್ಬರೂ ಹೇಳಿದ್ದಾರೆ. ಆದುದರಿಂದ ಆಧಾರವಿಲ್ಲದ ಆಶೆಯುಗಳನ್ನಿಟ್ಟುಕೊಳ್ಳುವುದು ಉಚಿತವಲ್ಲ. ಬ್ರಿಟಿಷರಾದರೂ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ಕೊಡುವುದೂ ನಿಸರ್ಗಸಿದ್ಧವಲ್ಲ. ಇದನ್ನು ನಾವು ಸರಿಯಾಗಿ ತಿಳಕೊಂಡರೆ ಮತ್ತೆ ಈ ಕಾಂಗ್ರೆಸ್ಸಿನ ಚಳವಳಕ್ಕೆ ಬ್ರಿಟಿಷರು ಯಾವ ರೀತಿಯಲ್ಲಿ ಮಾನಿಸಬಹುದೆಂಬುದನ್ನು ನಾವು ಗ್ರಹಿಸಿಕೊಳ್ಳಬಹುದು.

ಹಿಂದೀಯರಿಗೆ ಸ್ವಾತಂತ್ರ್ಯ ಸಿಕ್ಕಿದರೆ ಇಂಗ್ಲೆಂಡಿಗೆ ಹೆಚ್ಚಿನ ಹಿತವಿದೆ ಎಂದು ನಮ್ಮ ಧುರೀಣರು ಹೇಳಿಕೊಳ್ಳುವರು. ಇವೆಲ್ಲ ಮಾತುಗಳು ರಾಜನೀತಿ ಒಪ್ಪದನ್ನೊಪ್ಪರು ಮರವೆಗೊಳಿಸುವೆವೆನ್ನುವ ಮಾತುಗಳು. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕಿದರೆ ಅದರ ಕೃಷಿಕೈಗಾರಿಕೆಗಳು ಅಭಿವೃದ್ಧಿಯಾಗುವುವು, ಅದರ ಪರದೇಶದ ವ್ಯಾಪಾರಗಳ ಕಡಿಮೆಯಾಗುವುವು, ಒಂದೇ ಮಾತಿನಲ್ಲಿ ಹೇಳುವುದಾದರೆ, ಯುನೈಟೆಡ್ ಸ್ಟೇಟ್ಸಿನಿಂದ ಇಂಗ್ಲೆಂಡಿಗೆ ಯಾವ ಪ್ರಯೋಜನ ಉಂಟಾಗುತ್ತದೋ ಹಿಂದೂಸ್ಥಾನವು ಬೇಕಾದರೆ ಇಂಗ್ಲೆಂಡಿಗೆ ಅಷ್ಟೇ ಪ್ರಯೋಜನವಾಗುವುದು—ಅಂದರೆ ಅದು ಇಂಗ್ಲೆಂಡಿನ ಪ್ರತಿಸ್ಪರ್ಧಿಯಾಗುವುದು.

ಆದುದರಿಂದ ಇಂಗ್ಲೆಂಡಿನ ಹಿತಕ್ಕಾಗಿ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಹಿಂದೀ ಧುರೀಣರು ಹೇಳುವುದು ಕೇವಲ ಮೋಸದ ಮಾತುಗಳು, ಅವುಗಳಲ್ಲಿ ತಥ್ಯವಿಲ್ಲ, ಬ್ರಿಟಿಷರು ಅವುಗಳಿಂದ ಮೋಸಹೋಗುವುದೂ ಇಲ್ಲ.

ಇಂಗ್ಲೆಂಡವೂ ಈ ವಸ್ತುಸ್ಥಿತಿಯನ್ನು ತಿಳಕೊಂಡಂತೆ ತೋರುವುದು. ಸರಕಾರದ ಬಿಗಿಯಾದ ಧೋರಣವೂ ಸರ್ದಾರ ವಲ್ಲಭಭಾಯಿ ಮೊದಲಿನ ಸ್ವಾತಂತ್ರ್ಯ ಸಂಘಗಳನ್ನೇರ್ಪಡಿಸುವ ಕಟ್ಟಲೆಯೂ ಇದರ ಸಾಕ್ಷಿಯಾಗಿದೆ. ಹೇಗೂ ಇಂದಿನ ತೊಂದರೆಗಳಿಂದ ಹಿಂದೂಸ್ಥಾನವೂ ಗೌರವದಿಂದ ಶಾಂತತೆಯನ್ನು ಹೊಂದಿದರೆ ಅದೇ ಸಂತೋಷ ವಿಷಯವಾಗುವುದು.

ವಿದೇಶ ವರ್ತಮಾನ

ಥೇಮ್ಸ್ ನದಿ ದಡದಲ್ಲಿಯ ಸರಕುಗಳನ್ನು ಹೊತ್ತು ಆಯಾ ಸ್ಥಳಗಳಿಗೆ ಮುಟ್ಟಿಸುವ ಕೂಲಿಯವರುಗಳ ಸಣ್ಣ ಕೂಲಿಯು ಕಡಿಮೆ ಮಾಡಲ್ಪಟ್ಟುದಕ್ಕೆ ಪ್ರಚಂಡ ಮುಷ್ಕರ ಹಿಡಿದಿರುವರು. ಈ ಮುಷ್ಕರದಲ್ಲಿ ಸದ್ಯ ೫೦೦೦ ಜನರಿದ್ದು ಅದು ದಿನದಿಂದ ದಿನಕ್ಕೆ ಬೆಳೆದು ಅದರಲ್ಲಿ ಇಷ್ಟರ ತನಕ ಒಂದು ಲಕ್ಷ ಜನರು ಸೇರುವರು. ತಮ್ಮ ಮಜೂರಿಯನ್ನು ಏರಿಸಿದ ವಿನಹಾ ನಾವು ಯಾವ ಕೆಲಸವನ್ನು ಮಾಡುವುದಿಲ್ಲವಾಗಿ ದೃಢೀ ಕರಿಸಿರುವರು. ಇನ್ನು ಕೆಲವು ದಿವಸಗಳ ತನಕ ಈ ಚಳವಳವು ನಡೆದರೆ ಅಲ್ಲಿಯ ಬಂದರದಲ್ಲಿ ಯಾವ ಬಗೆಯ ಕೆಲಸಗಳನ್ನೂ ಮಾಡಲಿಕ್ಕಾಗದೆಂದೂ ಊಹಿಸಲಾಗಿದೆ. ಆಷ್ಟಾದರೂ ಯೂನಿಯನ್ನಿನವರು ತಮಗೇನು ಕಷ್ಟವಿಲ್ಲವೆನ್ನುತ್ತಿರುವರು.

ಅಮೇರಿಕಾದ ಕನ್‌ಸಲರಾದ ಕೌಲ್‌ವರ್ಥ ಚೇಂಬರ್ಲೈನ್ ಎಂಬವರು ಹರ್ಬಿನ್ ಎಂಬಲ್ಲಿ ಒಂದು ಮೋಟಾರು ಕಾರನ್ನು ಹತ್ತಲಿರುವಾಗ ಮೂರು ಮಂದಿ ಸೋಲ್ಜರುಗಳು ಅವರ ಕೆನ್ನೆಗೆ ತಲೆಗೆ ಸರಿಯಾಗಿ ಹೊಡೆದು ಅಪಮಾನಗೊಳಿಸಿದರು. ಅವರ ಕಾರಿನಲ್ಲಿ ಅಮೇರಿಕಾ ದೇಶದ ಸಣ್ಣಧ್ವಜವಿದ್ದುದೇ ಕಾರಣವಂತೆ. ಈ ವಿಷಯವಾಗಿ ಜಪಾನ ದೇಶದ ಕನ್‌ಸಲರು ತನಿಖೆ ನಡೆಸಲಿರುವರು.

ಅಮೇರಿಕಾದಲ್ಲಿ ದೊಡ್ಡ ದೊಡ್ಡ ೧೩೦ ಯುದ್ಧನಾವೆಗಳನ್ನು ೧೦ ವರ್ಷಗಳೊಳಗೆ ರಚಿಸುವುದಕ್ಕಾಗಿ ೬೧೬,೦೫೦ ೦೦೦ ಡೊಲ್ಲರುಗಳನ್ನು ವೆಚ್ಚಮಾಡಲಿರುವರು. ೧೬ ಯುದ್ಧನಾವೆಗಳು ೯೧ ೫೦೦ ೦೦೦ ಡೋಲರು ವೆಚ್ಚದಿಂದ ಈಗಾಗಲೇ ಕಟ್ಟಲ್ಪಟ್ಟಿರುತ್ತವೆ. ಇವುಗಳಲ್ಲಿ ೧೦ ೦೦೦ ಜುಹಾಜಿಗಳನ್ನು ಇರಿಸಲು ಸ್ಥಳವಿದೆ. ಇವುಗಳು ಯಾರೊಡನೆ ಯುದ್ಧಮಾಡಲು ತಯಾರಾಗುತ್ತಿವೆಯೆಂದು ತಿಳಿದುಬರಲಿಲ್ಲ.

ಒಳದೇಶ ವರ್ತಮಾನ

— ಎಲ್ಲೂರಿನಲ್ಲಿ ಕಾಂಗ್ರೆಸ್ಸಿನ ಮುಂದಾಳುಗಳಾದ ಶ್ರೀಮತಿ ದುರ್ಗಾಬಾಯಿ ಮತ್ತು ಮತ್ತು ಸೂರಿರೆಡ್ಡಿ ಹನುಮಯ್ಯ ಎಂಬಿಬ್ಬರ ಮೇಲೆ ೧೪೪ ಸೆಕ್ಷನ್ ಜಾರಿಯಾಗಿ, ಅವರು ಯಾವ ಸಭೆಕೂಟಗಳನ್ನು ಜರಗಿಸಬಾರದಾಗಿ ತಾಕೀತಾಗಿದೆ.

— ರೌಂಡ್‌ಟೇಬಲ್ ಪರಿಷತ್ತಿಗೆ ಲಂಡನಿಗೆ ಹೋಗಿದ್ದ ಅನೇಕ ಮಂದಿ ಪ್ರತಿನಿಧಿಗಳಲ್ಲೊಬ್ಬರಾದ ಶ್ರೀಮತಿ ಸುಬ್ಬರಾಯನ್‌ರವರು ವಿಮಾನದ ಮೂಲಕ ಹಾರಿ ಕರಾಚಿಯಲ್ಲಿಳಿದರು. ವಿಮಾನ ಮೂಲಕ ಪ್ರಯಾಣ ಬೆಳೆಸಿದ ಹಿಂದೀಯ ಸ್ತ್ರೀಯರಲ್ಲಿ ಇವರೇ ಪ್ರಥಮರು.

— ರಾಜಶಾಹಿಯಲ್ಲಿ ಸರಕಾರೀ ಉದ್ಯೋಗಸ್ಥರಾದ ಜತೀಂದ್ರನಾಥ ಬಿಸ್ವಾಸ್ ಎಂಬವರು ಮಲಗಿದ್ದಾಗ ಅವರ ಕೋಣೆ ಬಾಗಿಲ ಬಳಿ ಹೊರಗೆ ಕತ್ತಲೆಯಲ್ಲಿ ಬೆಕ್ಕುಗಳು ಜಗಳ ಮಾಡುವ ಶಬ್ದವಾಯಿತು. ಅವರು ಬಾಗಿಲು ತೆರೆದು ಹೊರಗೆ ಬಂದೊಡನೆ ನಾಲ್ಕು ಜನ ದರೋಡೆಗಾರರು ಮೇಲೆ ಹಾರಿ ಅವರ ಪತ್ನಿಯ ನಗನಾಣ್ಯಗಳನ್ನು ಲೂಟಿಮಾಡಿ ಅವರಿಗೆ ಹೊಡೆದು ಪಲಾಯನ ಮಾಡಿದರು. ಸೂರುಲ್ ಹುಡಾ ಎಂಬೊಬ್ಬ ಕಳ್ಳನನ್ನು ಹಿಡಿದಿರುವರು.

— ಗಾಂಧಿಜೀಯವರಿಗೆ ಭೇಟಿಕೊಡದೆ, ಅವರನ್ನು ಸೆರೆಮನೆಗಟ್ಟಿದುದರ ಸಲುವಾಗಿ ಶ್ರೀ ಪುರುಷೋತ್ತಮದಾಸ ಠಾಕೂರ್‌ದಾಸರಿಗೊಂದು ಬರೆಯುವಾಗ "ಸರಕಾರವು ತನ್ನ ಹಿಡಿತವನ್ನು ಬಹಳ ಗಟ್ಟಿ ಹಿಡಿದಿದೆ. ಪ್ರತಿಯೊಬ್ಬ ಹಿಂದೀಯನೂ ದೇಶದ ಆತ್ಮಗೌರವವು ಬಿದ್ದುಹೋಗದಂತೆ ಸಾಧಿಸಬೇಕು" ಎಂದು.

— ಗಾಂಧಿಜೀಯವರು ವೈಸರಾಯರಿಗೆ ಕೊನೆಗೆ ಬರೆದ ಪತ್ರದ ಸಾರಾಂಶವಿದು. ನಿಮ್ಮ ಆಚರಣೆಯು ಶೋಚನೀಯವಾಗಿದೆ. ನಾನು ನಂಬಿಕೆಯಿಂದ ನಿಮಗೆ ಬರೆದಿದ್ದೇ ನೀವು ಅದನ್ನು ಇನ್ನೊಂದು ರೂಪದಿಂದ ಸ್ವೀಕರಿಸಿದಿರಿ. ಒಪ್ಪಂದದ ಸಮಯದಲ್ಲಿ ಚಳವಳವು ಅಂತ್ಯಗೊಳಿಸಲ್ಪಡಲಿಲ್ಲ. ನಿವೃತ್ತಿ ಪಡಿಸಲ್ಪಟ್ಟಿತು. ಅದನ್ನು ತಿಳಿಯದಿರಿ ನನ್ನನ್ನು ನೀವೆ ಲಂಡನಿಗೆ ಕಳುಹಿಸಿದಿರಿ ಇತ್ಯಾದಿ.

— ಶ್ರೀಯುತ ವಿ. ಜೆ. ಪಟೇಲರನ್ನು ಮುಂಬಾಯಿಯಲ್ಲಿ ಕೈದು ಮಾಡಿದರು. ಅಲ್ಲಿ ಪಿಕೆಟಿಂಗ್ ಕೆಲಸವನ್ನು ನಡೆಸುತ್ತಿದ್ದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರನ್ನು ಕೈದುಮಾಡಿದರು. ಇನ್ನಿತರ ಕೈದಿಗಳ ಹೆಸರುಗಳು — ಕೆ. ಎಫ್. ನರಿಮಾನ, ಶ್ರೀಯುತ ಮುನ್ಷಿ, ಶ್ರೀಮತಿ ಮುನ್ಷಿ, ನಗಿನ್‌ದಾಸ್ ಮಾಸ್ಟರ್, ಶ್ರೀಮತಿ ಪೆರಿನ್ ಕೆಪ್ಟನ್, ಜಮ್ನಾದಾಸ್ ದ್ವಾರಕಾದಾಸ್, ಅಬಿದಾಲ್ಲಿ ಜಫರ್‌ಭಾಯಿ, ಎಸ್. ಕೆ. ಪಟೀಲ್, ಪುರುಷೋತ್ತಮದಾಸ್ ಟ್ರಿಕಂದಾಸ್, ಜಯಂತಿಲಾಲ್.

— ಬನಾರಸ್‌ನಲ್ಲಿ ಕೂಡಿದ ೨೦೦೦ ಮಂದಿಗಳನ್ನು ಪೋಲೀಸರು ಚದರಿಸಿದರು. ಅವರು ಚದರಲಿಲ್ಲ. ಯಾರೋ ಕಲ್ಲೆಸೆದರಂತೆ. ಗುಂಡು ಹಾರಿಸಲಾಗಿ ಒಬ್ಬನು ಮಡಿದನು. ಅನೇಕರಿಗೆ ಜಖಂ ಆಗಿದೆ. ಜವಾಹರಲಾಲ ನೆಹರೂಯವರಿಗೆ ಎ ಕ್ಲಾಸ ದೊರೆತಿದೆ.

— ಕಡಲೂರಿನಲ್ಲಿ ಅಂಜಲಿ ಅಮ್ಮಾಳರನ್ನೂ, ಅವರ ೧೬ ವರ್ಷದ ಮಗಳನ್ನು ಕೈದು ಮಾಡಿದರು. ಶ್ರೀಮತಿಯವರಿಗೆ ೬ ತಿಂಗಳ ಕಠಿಣ ಸಜೆಯು ಸಿಕ್ಕಿತು.

— ಕೊಯಂಬುತ್ತೂರಿನಲ್ಲಿ ಶ್ರೀಮತಿ ಸುಬ್ರಮಣ್ಯಂ ಮತ್ತು ಬಾಗೀರಥಿ ಅಮ್ಮಾಳ್ ಎಂಬಿಬ್ಬರಿಗೆ ೬ ತಿಂಗಳ ಕಠಿಣ ಸಜೆ ವಿಧಿಸಲಾಯಿತು.

— ಸರ್ ತೇಜಬಹದ್ದೂರ್ ಸಪ್ರೂಗಳ ಮುಂದಾಳುಗಳ ಬಂಧನಗಳ ಬಂಧನ ಕುರಿತು ಬರೆಯುವಾಗ ವೈಸರಾಯರು ಗಾಂಧೀ ಭೇಟಿಯಾಗುತ್ತಿದ್ದರೆ ಹೆಚ್ಚಿನ ಪ್ರಯೋಜನವಿತ್ತೆಂದೂ ಇನ್ನು ಮೇಲಾದರೂ ವೈಸರಾಯರು ಒಂದು ಸಭೆಯನ್ನು ಕರೆದು ಇತ್ಯರ್ಥಿಸಿಕೊಳ್ಳುವುದು ಕ್ರಮವೆಂದೂ ಎಂದರು.

— ಪ್ರೆಸ್ ಓರ್ಡಿನೆನ್ಸಿನ ಸಂಬಂಧವಾಗಿ ಬನಾರಿಸ್ ಆಜ್ ಪತ್ರಿಕೆಯು ಇನ್ನು ಮೇಲೆ ತನ್ನ ಅಗ್ರಲೇಖನವನ್ನು ಬರೆಯುವುದಿಲ್ಲವೆಂದು ತಿಳಿದು ಬಂದಿದೆ.

ಶ್ರೀ ಜೆ. ಎಂ. ಸೆನ್‌ಗುಪ್ತರು ದೇಶದ ಕ್ಷೋಭೆಯನ್ನು ಇಂಗ್ಲೆಂಡಿನಲ್ಲಿ ಕೇಳಿ ಅಲ್ಲಿಂದ ಕೂಡಲೇ ಬರುವುದಾಗಿ ಆಲೋಚಿಸಿರುವರು.

ಕೇರಳದ ಕೊಂಗ್ರೆಸ್ ಕಮಿಟಿಯನ್ನು ಕಾಯಿದೆ ವಿರೋಧವೆಂದು ಮಾಡಿರುವರು.

ಕಲ್ಕತ್ತದಲ್ಲಿ ಕೋಸ್ಸೀಪುರದ ಆಟ್‌ಲಾಸ್ ಜೂಟ್ ಪ್ರೆಸ್ಸಿನಲ್ಲಿ ಬೆಂಕಿಯೆದ್ದು, ಅರ್ಧ ಲಕ್ಷ ರೂಪಾಯಿ ನಷ್ಟವಾಗಿದೆ.

ಸವಿನಯ ಕಾಯಿದೆಭಂಗ ಚಳವಳವನ್ನು ಹೂಡುವವರ ಕುರಿತು ಕಾರ್ಯಕ್ರಮವನ್ನು ಕಿರಿಯ ವರ್ತಮಾನ ಅಥವಾ ಜಾಹೀರಾತಿನ ರೂಪದಿಂದ ಪ್ರಕಟಿಸಬಾರದಾಗಿ ಎಲ್ಲಾ ಪತ್ರಿಕೆಗಳಿಗೆ ತಿಳುಹಿಸಲು ಇಂಡಿಯಾ ಸರಕಾರವು ಸ್ಥಳೀಕ ಸರಕಾರಗಳನ್ನು ಕೇಳಿಕೊಂಡಿರುತ್ತದೆ. ಹಾಗೆ ಅದನ್ನು ಪ್ರಕಟಿಸಿದವರು ಸೆಕ್ಷನ್ ೧೯೦೮ರ ಕ್ರಿ. ಲಾ. ಎಮೆಂಡ್‌ಮೆಂಟ್ ಆಕ್ಟಿನ ೧೭ [೧]ಕ್ಕೆ ಗುರಿಯಾಗುತ್ತಾರೆಂದು ತಿಳಿದುಬಂದಿದೆ.

ದಕ್ಷಿಣ ಕನ್ನಡ.

ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೆಗಳು.

'ಸ್ವದೇಶಾಭಿಮಾನಿ'ಯ ದಶಂಬರ ೧೮ನೇ ತಾರೀಕಿನ ಸಂಚಿಕೆಯಲ್ಲಿ ಶ್ರೀ ಸೀತಾರಾಮ ಶಾಸ್ತ್ರಿಗಳ ದಕ್ಷಿಣ ಕನ್ನಡದ ಪತ್ರಿಕೆಗಳ ವಿಚಾರವಾಗಿ ಒಂದು ಲೇಖನವನ್ನು ಪ್ರಕಟಿಸಲ್ಪಟ್ಟಿತ್ತು. ಅದಕ್ಕೆ ಉತ್ತರವಾಗಿ ಕಂಠೀರವನ ೫ನೇ ತಾರೀಕಿನ ಸಂಚಿಕೆಯಲ್ಲಿ 'ಕನ್ನಡಿಗ' ರೊಬ್ಬರು ಬರೆದಿದ್ದರು. ಅದಕ್ಕೆ ಪ್ರತ್ಯುತ್ತರವಾಗಿ ಶ್ರೀ ಶಾಸ್ತ್ರಿಗಳು 'ಗುರಿಯಿಲ್ಲದ ಕೈ' ಎಂಬ ಲೇಖನವನ್ನು ನಮಗೆ ಕಳುಹಿಸಿದರು. ಅದೇ ಲೇಖನವು ಇದೇ ವಾರದ ಕಂಠೀರವನಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ, ನಮ್ಮ ಪತ್ರಿಕೆಯಲ್ಲಿ ಅದನ್ನು ಪುನಃ ಪ್ರಕಟಿಸುವ ಆವಶ್ಯಕತೆಯನ್ನು ನಾವು ಕಾಣುವುದಿಲ್ಲ. ಆದರೆ ಶ್ರೀ ಶಾಸ್ತ್ರಿಗಳು ತಮ್ಮ ಮೊದಲಿನ ಲೇಖನದಲ್ಲಿ ಮಾಡಿದ ಎಲ್ಲಾ ಆರೋಪಗಳು ಅಸಂಬದ್ಧವಿದ್ದು, ಆ ವಿಷಯ ಎರಡು ಮಾತುಗಳನ್ನು ಹೇಳುವುದು ಅಗತ್ಯವೆಂದು ನಮಗೂ ಕಾಣುವುದು.

ಶ್ರೀ ಶಾಸ್ತ್ರಿಗಳು ಕರ್ನಾಟಕ ಪತ್ರಿಕೆಗಳಿಗೆ ಬಾಂಧವ್ಯದ ಸೂಚನೆ'ಗಳನ್ನು ತಮ್ಮ ಮೊದಲಿನ ಲೇಖನದಲ್ಲಿ ಕೊಟ್ಟರು. ಆದರೆ ಕರ್ನಾಟಕ ಪತ್ರಿಕೆಗಳು ಆ ಲೇಖನವನ್ನು ನೋಡಿ ಇಂತಹ ಬಂಧುಗಳು ... ಶತ್ರುಗಳಿರುವುದೇ ಮೇಲೆನ್ನದಿರವು. ಪತ್ರಿಕೆಗಳಿಗೆ ... ಉದ್ದೇಶ. ಎಲ್ಲಾ ಪತ್ರಿಕೆಗಳು ದ್ವೇಷದ ಮೊಟ್ಟೆಯಿಕ್ಕಿದ ವಾಚಕರನ್ನು ಗೋಳಾಡಿಸುತ್ತವೆ. ವೃತ್ತ ಪತ್ರಿಕೆಗಳಿಗೆ ಪ್ರಕಟಿಸಬೇಕೆಂದು ನಾಟಕ ಸಂಸ್ಥೆಗಳು ಒಳ್ಳೆಯದನ್ನು, ವರ್ಗದಾರರ ಲೇಖನಗಳನ್ನು ಮಾತ್ರವೇ ಮುದ್ರಿಸುವುದು. ಪತ್ರಿಕೆಗಳಲ್ಲಿ ಜಾಹೀರಾತುಗಳು ಮಾತ್ರ ಇವೇ ಶಾಸ್ತ್ರಿಗಳಿಗೆ ಪತ್ರಿಕೆಗಳಲ್ಲಿ ಕಾಣುವ ದೋಷಗಳು; ಇಷ್ಟರಿಂದ ತೃಪ್ತರಾಗದೆ ಮಂಗಳೂರಿನ ಮೇಲೂ ಕೆಲವು ಟೀಕೆಗಳಿವೆ. ಮಂಗಳೂರು ಬಂಗಸ್ಸು ಬಯಸುವುದು, ಸುಡಿಗೆ ಪ್ರೋತ್ಸಾಹವಿಲ್ಲ, ಕಲೆಗೆ ಸಹಾನುಭೂತಿಯಿಲ್ಲ.

ಶ್ರೀ ಶಾಸ್ತ್ರಿಗಳ ಈ ಗೋಳಾಟದಿಂದ ಎರಡು ಮುಖ್ಯ ವಿಷಯಗಳು ಹೊರಗೆ ಕಾಣುತ್ತಿವೆ, ಅವರ ನಾಟಕಗಳನ್ನು ಮಂಗಳೂರು ಪತ್ರಿಕೆಗಳು ಹೊಗಳಲಿಲ್ಲ, ಅವರ ನಾಟಕಕ್ಕೆ ಮಂಗಳೂರು ಮಹಾಜನರು ಪ್ರೋತ್ಸಾಹಿಸಲಿಲ್ಲ. ಆದರೆ ಶ್ರೀ ಶಾಸ್ತ್ರಿಗಳು ತಮ್ಮ ನಾಟಕದ ನಿರಾಶೆಗಳನ್ನು ಮರೆತು ಸಹಜವಾಗಿ ಪರಿಶೀಲಿಸಿದ್ದಾದರೆ ಅವರ ಅಭಿಪ್ರಾಯಗಳು ಬದಲಾಗದಿರುತ್ತಿರಲಿಲ್ಲವೆಂದು ನಮಗೆನ್ನಿಸುತ್ತದೆ. ಪತ್ರಿಕೆಗಳಲ್ಲಿ ಜಾಹೀರಾತುಗಳಿದ್ದುದೂ ಶಾಸ್ತ್ರೀಯವರಿಗೆ ಆಗಲ್ಲ.' ವರ್ಗದಾರರ ಬಾತ್ಮಿಗಳನ್ನು ಪ್ರಕಟಿಸುವುದೂ ಅವರಿಗೆ ಆಗಲ್ಲ. ಆದರೆ ಶಾಸ್ತ್ರಿಗಳೇ 'ನನ್ನ ಲೇಖನವು ಮುದ್ರಿಸಲ್ಪಟ್ಟ ಪ್ರತಿಗಳನ್ನು ನನಗಾಗಿ ಕಳುಹಿಸಿರಿ, ವರ್ಷಕ್ಕೊಮ್ಮೆ ಬಿಲ್ ಮಾಡಿ, ಅಥವಾ ನಾನು ಹೇಳಿದಾಗ ವಿ. ಪಿ. ಮಾಡುವುದಾದರೆ ಯಾವಾಗಲೂ ಪತ್ರಿಕೆಯನ್ನು ಕಳುಹಿಸಿರಿ" ಎಂದು ಪತ್ರಿಕೆಗಳ ಆಫೀಸಿಗೆ ನಿಮ್ಮಂತಹರೇ ಬರೆಯುತ್ತಿರುವಾಗ ಪತ್ರಿಕೆಗಳು ಜಾಹೀರಾತಿನಿಂದಾದರೂ 'ಉದರ ಪೋಷಣೆ ಮಾಡಬೇಡವೆ? 'ಉದರ ಪೋಷಣೆಯಿಲ್ಲದಿದ್ದರೆ ಪತ್ರಿಕೆಗಳೂ ಬಾಳುವುದಿಲ್ಲ, ನಾಟಕ ಕಂಪೆನಿಗಳೂ ಬಾಳುವುದಿಲ್ಲ. ವರ್ಗದಾರರ ಬಾತಮಿಗಳನ್ನೇ ಮುದ್ರಿಸುವ ಬದಲು ... ಬಗ್ಗೆಯೇ ... ಉತ್ಕಟ ವರ್ಣನೆಗಳನ್ನು ಪ್ರತಿ ಪತ್ರಿಕೆಗಳೂ ವಹಿಸಿಕೊಳ್ಳುತ್ತಿವೆ ಎಂಬುವನ್ನು ನೀವು ಅರಿತಿದ್ದರೆ, ಕರ್ನಾಟಕ ಪತ್ರಿಕೆಗಳನ್ನೂ ಮಂಗಳೂರನ್ನೂ ನೀವು ನಿಮ್ಮ ನಿರಾಶೆಯ ಮಾನದಿಂದ ಅಳೆಯುತ್ತಿರಲಿಲ್ಲ. ನಿಮ್ಮ ನಾಟಕಗಳಿಗೆ ಮಂಗಳೂರಿನಲ್ಲಿ ಪ್ರೋತ್ಸಾಹ ಸಿಕ್ಕದೆ ಹೋದದ್ದಾದರೆ ... ಗಳೂರಿಗೆ ಕಲೆಗೆ ಸಹಾನುಭೂತಿಯಿಲ್ಲವೆನ್ನಬೇಡಿ, ಕಲೆಗೆ ಸಹಾನುಭೂತಿಯಿಲ್ಲದೆ ಇರಬಹುದು. ಆದರೆ ಕಲಾ ಪರಿಶೀಲನದಲ್ಲಿ ಒಳ್ಳೇದನ್ನು ತೋರಿಸಿದ್ದಾರೆಂದು ಇದರಿಂದ ನಿಮಗೆ ತಿಳಿದಿರಬಹುದು.

(ಸಂಪಾದಕ)

ಮಂಗಳೂರು:—ವಿದ್ಯಾ ಇಲಾಖೆಯ ಬಹುಮಾನಸಚಿವ ಮಂತ್ರಿಯವರು ತಾ. ೧೯—೧—೧೯೩೨ನೇ ಪೂರ್ವಾಹ್ನ ಮಂಗಳೂರು ಗವರ್ನಮೆಂಟು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಶಿಕ್ಷಣ ವಸ್ತು ಪ್ರದರ್ಶನವನ್ನು ತೆರೆಯುವರು. ತಾ. ೨೦ನೇ ಪೂರ್ವಾಹ್ನ ಮಾನ್ಯ ಮಂತ್ರಿವರ್ಯರಿಗೆ ಈ ಸಂಘದ ಪರವಾಗಿ ಒಂದು ಮಾನಪತ್ರವನ್ನು ಅರ್ಪಿಸಬೇಕಾಗಿಯೂ ತಾ. ೧೯—೧. ೩೨ನೇ ಅಪರಾಹ್ನ ೪ ಘಂಟೆ ೩೦ಕ್ಕೆ ಸದರಿ ಟ್ರೈನಿಂಗ್ ಶಾಲೆಯಲ್ಲಿ ಸಂಘದ ಮಹಾಸಭೆಯನ್ನು ನಡಗಿಸಬೇಕಾಗಿಯೂ ನಿಶ್ಚಯಿಸಿದೆ. ಅದುದರಿಂದ ಜಿಲ್ಲೆಯ ಎಲ್ಲಾ ಟೀಚರ್ ಮೆನೇಜರರೂ ದಯಮಾಡಿ ಹಾಜರಾಗಬೇಕಾಗಿ ವಿನಂತಿಯೆಂದು ದ. ಕ. ಜಿಲ್ಲಾ ಟೀಚರ್ ಮೆನೇಜರರ ಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಜನವರಿ ೧೬ ಮತ್ತು ೧೭ನೇ ತಾರೀಕಿನ ದಿನಗಳಲ್ಲಿ ದಕ್ಷಿಣ ಕನ್ನಡ ವಿದ್ಯಾರ್ಥಿ ಪರಿಷದವನ್ನು ಜರಗಿಸಬೇಕೆಂದು ಮಂಗಳೂರಿನ ವಿದ್ಯಾರ್ಥಿ ಸಂಘವು ನಿಶ್ಚೈಸಿರುತ್ತದೆ. ಅದಕ್ಕಾಗಿ ನಿಯಮಿಸಲ್ಪಟ್ಟ ಸ್ವಾಗತ ಕಮಿಟಿಯ ಅಧ್ಯಕ್ಷ ಶ್ರೀ ಬಟ್ರೀಮ್ ರಿಬೆಲೊ ಮತ್ತು ಸಂಘದ ಕಾರ್ಯದರ್ಶಿ ಶ್ರೀ ಸೂರಪ್ಪಯ್ಯ ಎಚ್. ಇವರು ಜಿಲ್ಲೆಯ ಇತರ ತಾಲೂಕುಗಳ ಹೈಸ್ಕೂಲುಗಳಿಗೆ ಹೋಗಿಬರುವರು. ಶ್ರೀಯುತ ಸಿ. ಆರ್. ರೆಡ್ಡಿಯವರು ಅಧ್ಯಕ್ಷ ಪದವಿಗೆ ಆಮಂತ್ರಿಸಲ್ಪಟ್ಟಿರುವರು. ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳೂ, ಅವರ ಹಿತಚಿಂತಕರೂ ಸಂಪೂರ್ಣ ಪ್ರೋತ್ಸಾಹ ಕೊಡಬೇಕಾಗಿ ಕೋರುತ್ತೇವೆ.

ಮಂಗಳೂರು ಪಟ್ಟಣದಲ್ಲಿ ತಾ. ೫ನೇ ದಿನ ಸೆಕ್ಷನ್ ೧೪೪ ಜಾರಿಯಾಗಿದೆ. ೩ ತಿಂಗಳ ತನಕ ಮೆರವಣಿಗೆಗಳೂ ರಾಜಕೀಯ ಸಭೆಗಳೂ ಆಗಬಾರದೆಂದಾಗಿದೆ.

ಇಲ್ಲಿಗೆ ವೀರಣ್ಣನವರ ಗುಬ್ಬಿನಾಟಕ ಕಂಪೆನಿಯು ಬೇಗನೇ ಬರಲಿರುವುದೆಂದು ಗೋಡೆನೋಟೀಸುಗಳು ಬಿದ್ದಿವೆ. ವ್ಯಾಟ್ ವೇ ಸರ್ಕಸಿನವರು ಈ ದಿನ ಉಡುಪಿಗೆ ತೆರಳಲಿರುವರು.

ಕಳೆದ ಆದಿತ್ಯವಾರ ದಿನ ವ್ಯಾಟ್‌ವೇ ಸರ್ಕಸಿನವರ ಕರಡಿಯು ಸ್ವಲ್ಪ ಉಪದ್ರವ ಕೊಟ್ಟಿತು. ಅದು ಮ್ಯಾನೇಜರನ್ನು ತಪ್ಪಿಸಿ ಓಡಿ, ಗೆಲರಿಯ ಮೇಲೆ ಕೂತಿತು. ಜನರು ಹೆದರಿ ಓಡಿದರು. ಕೊನೆಗೆ ಅತಿ ಕಷ್ಟದಿಂದ ಅದನ್ನು ಬಂಧಿಸಿದರು.

ನವವರ್ಷದ ಬಿರುದುಗಳು ನಮ್ಮ ಜಿಲ್ಲೆಯ ಈ ಕೆಳಗಿನವರಿಗೆ ಸಿಕ್ಕಿದೆ. ಸರಕಾರದ ಲೋ ಮತ್ತು ವಿದ್ಯಾಖಾತೆಯ ಸೆಕ್ರೆಟರಿಯಾಗಿರುವ ಮ. ರಾ. ರಾವ್ ಬಹದೂರ್ ಉದ್ಯಾವರ ರಾಮರಾಯರಿಗೆ ದಿವಾನ್ ಬಹದೂರ್. ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿರುವ ಮ. ರಾ. ಕೆ. ಟಿ. ಲಕ್ಷ್ಮಣರಾವ್ ಇವರಿಗೆ "ದಿವಾನ್ ಬಹದೂರ್" ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನ ಶಿರಸ್ತೇದಾರರಾಗಿರುವ ಮ. ರಾ. ಪಿ. ಎಸ್. ಭಂಡಾರ್ಕರ್‌ರವರಿಗೆ ರಾವ್ ಸಾಹೇಬ್.

ಗಾಂಧಿಮಹಾತ್ಮರವರ ಬಂಧನದ ವಾರ್ತೆಯು ಮುಂಬಾಯಿಯ ಪತ್ರದ ತಂತಿಯ ಮೂಲಕ ಇಲ್ಲಿಗೆ ಸೋಮವಾರ ಮಧ್ಯಾಹ್ನ ತಿಳಿದುಬಂತು. ಹೆಚ್ಚಿನವರು ಅದನ್ನು ನಂಬಲಾರದಾದರೂ ಸಂಜೆಯಲ್ಲಿ ನೋಟೀಸುಗಳು ಪ್ರಕಟವಾದ ಕೂಡಲೇ ಅದರ ಸತ್ಯಾಂಶವು ತಿಳಿಯಿತು. ... ಗಾಂಧಿಯವರ ಕೈದಿನ ಕುರಿತೇ ಸುದ್ದಿ. ಮರುದಿನ ಬೆಳಗ್ಗೆ ... ರಥಬೀದಿಯೂ ಬಂದರು ಹಂಪನಕಟ್ಟೆಯೂ, ಮಾರ್ಕೆಟು ವಾರ್ಡೂ ಸಂಪೂರ್ಣ ಮುಚ್ಚಲ್ಪಟ್ಟಿತ್ತು. ಮುಸಲ್ಮಾನರ ಕೆಲವು ಅಂಗಡಿಗಳು ಮುಚ್ಚಲ್ಪಟ್ಟಿದ್ದುವು.

ಕರ್ನಾಟಕ ಸಾಹಿತ್ಯದಲ್ಲಿ ಪ್ರಮುಖರೆಂದೆನಿಸಲ್ಪಟ್ಟಿರುವ ಬೆಂಗಳೂರಿನ ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಮಂಗಳೂರಿಗೆ ಚಿತ್ತೈಸಿದ್ದು ಕಳೆದ ಸೋಮವಾರದಿನ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆ, ಸೈಂಟ್ ಎಲೋಸಿಯಸ್ ಕೊಲೇಜಿನಲ್ಲಿ ವ್ಯಾಖ್ಯಾನ ಮಾಡಿರುವರು.

ಉಡುಪಿ:—ಮಹಾತ್ಮಾಗಾಂಧಿ ವಲ್ಲಭಾಯಿ ಪಟೇಲರನ್ನು ದಸ್ತಗಿರಿ ಮಾಡಿದ ಸೂಚನಾರ್ಥವಾಗಿ ಇದೇ ತಾ. ೫ರಲ್ಲಿ ಉಡುಪಿಯೂ, ಆಸುಪಾಸಿನ ಪೇಟೆಯೂರುಗಳಲ್ಲಿಯೂ ಹರತಾಳವು ಆಚರಿಸಲ್ಪಟ್ಟಿರುವುದು. ಅಂದೇ ಸಾಯಂಕಾಲ ಕಾಂಗ್ರೆಸು ಕಚೇರಿಯಿಂದ ರಾಷ್ಟ್ರಧ್ವಜದೊಡನೆ ಕಾಂಗ್ರೆಸು ಅಧಿಕಾರಿಗಳೂ ಸ್ವಯಂ ಸೇವಕರೂ ಇತರ ಕೆಲ ಮಂದಿಯೂ ಕೂಡಿ ಮೆರವಣಿಗೆ ಹೊರಟರು. ದೀವಾನ್ ಶಿಫೋರಿನ ಕೃಷ್ಣ ದೇವಾಲಯದ ಬಳಿಯ ಅಡ್ಡರಸ್ತೆಗೆ ಸದರಿ ಮೆರವಣಿಗೆಯು ತಲಪುವುದರೊಳಗೆ ಪೋಲೀಸರು ಬಂದು ಅದನ್ನು ಅಡ್ಡ ತಡೆದರು. ಆಗ ಅಲ್ಲಿ ಹಾಜರು ಇದ್ದ ಸಬ್ ಡಿವಿಜನಲ್ ಆಫೀಸರರು ಮೆರವಣಿಗೆಯ ಮುಂದಾಳುಗಳನ್ನು ಕುರಿತು ಸದರಿ ಮೆರವಣಿಗೆಯು ಮುಂದರಿದರೆ ಶಾಂತತಾಭಂಗವಾಗಬಹುದಾಗಿ ಅವರೆಲ್ಲ ... ಚದರಿ ಹಿಂತೆರಳಬೇಕಾಗಿ ಹೇಳಿದರು. ಆದರೆ ಅವರು ನಿರಾಕರಿಸಿದ್ದರಿಂದ ಸ್ವಲ್ಪ ಅವಕಾಶದ ನಂತರ ಮೆರವಣಿಗೆಯಲ್ಲಿ ಕಡೆಯದೆ ನಿಂತಿದ್ದ ಸುಮಾರು ಹತ್ತು ಜನರನ್ನು ಬಲಾತ್ಕಾರದಿಂದ ಚದರಿಸಲಾಯಿತು ಮತ್ತು ರಾಷ್ಟ್ರ ಧ್ವಜವನ್ನು ಕಿತ್ತುಕೊಳ್ಳುವ ಸಂದರ್ಭದಲ್ಲಿ ಲಾಠಿಯನ್ನೂ ಪ್ರಯೋಗಿಸಿದ್ದಾಯಿತು. ಆದರೂ ಇವರು ತಿರಿಗಿ ಅಲ್ಲಿಗೆ ಬಂದು ಸೇರಲು, ಪುನಹ ಅವರನ್ನು ಬಲಾತ್ಕಾರದಿಂದ ಚದರಿಸಿದರೂ ಅವರು ಹಿಂತೆರಳದಿರಲು ಹತ್ತು ಮಂದಿಯನ್ನು ಸೆರೆ ಹಿಡಿದು ಪೋಲೀಸು ಸ್ಟೇಶನಿಗೆ ಒಯ್ಯಲಾಯಿತು. ಶ್ರೀಗಳಾದ ನಾಗಪ್ಪ ಮಂಜುನಾಥ ನಾಯ್ಕ, ಬಿ. ಕೃಷ್ಣಯ್ಯ ಶೆಟ್ಟಿ (ತಾಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷ) ಕೆಂಪೇ ರಮಾಕಾಂತರಾವ್ (ಕಾರ್ಯದರ್ಶಿ) ಬಿ. ಸದಾಶಿವ ಹೆಗ್ಡೆ, ಕೆ. ಕಮಲಾಕ್ಷ ಕಮ್ತಿ, ಟಿ. ರಮಾನಾಥ ಪೈ ಬಿ. ದೇವರಾಯ ಕಮ್ತಿ, ಎ. ಕೇಶವ ಪೈ, ಐ. ರಾಮದಾಸ ಪೈ ಇವರೊಂಭತ್ತು ಮಂದಿ ರಾತ್ರಿ ಲೋಕಪ್ಪಿನಲ್ಲಿ ಇಡಲ್ಪಟ್ಟಿರು.

ತಾ. ೬ನೇ ಬುಧವಾರ ಮಧ್ಯಾಹ್ನ ೩ ಗಂಟೆಗೆ ಇಲ್ಲಿನ ಸ್ಟೇಶನರಿ ಮೆಜಿಸ್ಟ್ರೇಟರಿಂದ ಇವರ ತನಿಖೆಯಾಗಿ, ತೀರ್ಪು ಮರುದಿನಕ್ಕೆ ಬಾಕಿ ಇಟ್ಟಿರುತ್ತಾರೆ. ಇದೇ ದಿನ ಸಾಯಂಕಾಲ ಸೆಕ್ಷನ್ ೧೪೪ನ್ನು ತಾಲೂಕು ಕಚೇರಿಯಿಂದ ೭ ಮೈಲು ವಿಸ್ತೀರ್ಣದಲ್ಲಿ ಇಂದಿನಿಂದ ಒಂದು ತಿಂಗಳ ತನಕ ಜಾರಿಯಲ್ಲಿಡಿಸಿರುವದಾಗಿ ನೋಟೀಸುಗಳು ಪ್ರಮುಖ ಸ್ಥಳಗಳಲ್ಲಿ ಹಚ್ಚಲಾಗಿದೆ.

ಮಿ. ಕಿಲಾರಿಯವರ ವ್ಯಾಟ್‌ವೇ ಸರ್ಕಸ್ಸೂ, ಒಂದು ಟೂರಿಂಗ್ ಸಿನೇಮವೂ ಸದ್ಯದಲ್ಲಿ ಇಲ್ಲಿಗೆ ಬರುವದಂತೆ. ಗುಬ್ಬಿ ನಾಟಕ ಮಂಡಳಿಯವರಂತೂ ಬರುತ್ತಾರೆ.

ತಾ. ೧೭ಕ್ಕೆ ನಮ್ಮ ಜಿಲ್ಲೆಯನ್ನು ಸಂದರ್ಶಿಸುವ ವಿದ್ಯಾ ಮಂತ್ರಿಗಳು ಉಡುಪಿಗೆ ಬಂದಾಗ ಬೋರ್ಡ್ ಶಾಲಾ ಉಪಾಧ್ಯಾಯರು ಅವರಿಗೊಂದು ಮಾನಪತ್ರವನ್ನರ್ಪಿಸಿ ಸತ್ಕರಿಸುವರೆಂದು ಕೇಳುತ್ತೇವೆ.

ಇದೇ ತಾ. ೯ಕ್ಕೆ ಉತ್ಸವವು ಆರಂಭವಾಗುವುದು. ಪರಿಕೆಗಳ ಗಡಿಬಿಡಿಯೂ ಜನರಲ್ಲಿ ಉತ್ಸಾಹವೂ ಪಾರಿಗಳಲ್ಲಿ ನಡೆಗರದ ಶೃಂಗಾರ ಸಿದ್ಧತೆಗಳೂ ಅಷ್ಟೊಂದು ತೋರಿಬರುವುದಿಲ್ಲ. ಪರಿಯಾಯ ಜಾತ್ರೆಯು ತಾ. ೧೮ಕ್ಕೆ ನಡೆಯುವುದು. ಶೀರೂರು ಮಠದ ಯತಿಗಳು ಪಟ್ಟದಿಂದಿಳುವರು. ಸೋದೆ ಶ್ರೀ ಪಾದಂಗಳವರು ಅದನ್ನು ಏರುವರು.

ಪೊಳಲಿ—ಇಲ್ಲಿಯ 'ವಿದ್ಯಾವರ್ಧಕ ಸಂಘ'ದ ಆಡಳಿತ ಮಂಡಲಿಯ ಅನುಮತಿ ಮೇರೆಗೆ ಸಂಘದ ಕಾರ್ಯದರ್ಶಿಯೂ ಶಾಲಾ ಅಧ್ಯಾಪಕರೂ ಆದ ಟಿ. ಶಂಕರನಾರಾಯಣರಾಯರು ಶಾಲೆಯ ಬಗ್ಗೆ ಧರ್ಮ ಸಹಾಯ ಕೇಳಲು ಹೊರಟಿರುವರು. ಶಕ್ತ್ಯಾನುಸಾರ ಸಹಾಯ ಮಾಡಿ ಬಡ ಹಳ್ಳಿಯನ್ನು ಉದ್ಧಾರ ಮಾಡಿ ವಿದ್ಯಾದಾನದ ಪುಣ್ಯಕ್ಕೆ ಭಾಗಿಗಳಾಗಬೇಕಾಗಿ ಕೋರುತ್ತೇವೆ.

ಪಡುಬಿದ್ರೆ—ಇಲ್ಲಿಯ ಮಹಾಮಂಡಲ ಪ್ರಕಾರ ಆಗುವ ಕಂಬಳವು ಇದೇ ಪ್ರಜೋತ್ಪತ್ತಿ ಸಂವತ್ಸರದ ಮಕರ ಮಾಸ ದಿನ ೮ ಸಲುವ ಪುಷ್ಯ ಶು. ೧೪ (ತಾ. ೨೨—೧—೩೨)ನೆಯ ಶುಕ್ರವಾರ ದಿವಸ ಜರಗುವುದು.

ಕಾರ್ಕಳ:—ಶ್ರೀ ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯ ಬಾಲಕರ ಪತ್ರಿಕೆಯ ಎಳನೆ (ದಶಂಬರ) ತಿಂಗಳ ಸಂಚಿಕೆಯು ಹೊರಬಿದ್ದಿರುವದು. ಈ ಹಸ್ತಲಿಖಿತ ಪತ್ರಿಕೆಯಲ್ಲಿ ಮಕ್ಕಳಿಗೆ ಉಪಯುಕ್ತವಾದ ಅನೇಕ ವಾಚನೀಯ ಲೇಖನಗಳಿವೆ. ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಮೆಂಬರರೂ ಇಲ್ಲಿಯ ಸುಪ್ರಸಿದ್ಧ ವಕೀಲರೂ ಆಗಿರುವ ಇಡ್ಯ ವಾಸುದೇವಯ್ಯ ಬಿ. ಎ., ಬಿ. ಎಲ್. ರವರು ಇಂಥ ಪತ್ರಿಕೆಗಳ ಆವಶ್ಯಕತೆಯನ್ನು ಸೂಚಿಸಿ ಮುನ್ನುಡಿ ಬರೆದಿರುವರು.

ಗುರುಪುರ—ಇಲ್ಲಿ ಮದ್ರಾಸಿನ ರಾಮಕೃಷ್ಣ ಮಿಶನ್ ಸಂಘದವರು ಈ ದಿನ ೬—೧—೧೯೩೨ ಒಂದು ಆಸ್ಪತ್ರೆಯನ್ನು (dispensary) ತೆರೆದಿರುತ್ತಾರೆ. ಇದಕ್ಕೆ ೧೨೦೦ ರೂಪಾಯಿ ಗ್ರಾಂಟ್ ಸೆಂಕ್ಷನ್ ಮಾಡಿರುತ್ತಾರೆ.

ಪ್ರ ಕ ಟ ಣೆ.

ಮುಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದ ಸಮಸ್ತ ಟ್ರಸ್ಟಿಗಳಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ—

ಶ್ರೀ ದೇವಸ್ಥಾನದ ಆಡಳಿತೆ ಬಗ್ಗೆ ಎಲ್ಲ ಸ್ಕೀಮ್ ಕಲಂ ೧೨ರ ಪ್ರಕಾರ ಚರಂತಿ ಪೇಜ ಮಾಸ್ತೀವ ... ಕಮ್ಮಿಟಿ ... ತಾ. ೬—೧—೧೯೩೨ರ ಆರ್ಜಿಯನ್ನು ಪರ್ಯಾಲೋಚಿಸುವ ಬಗ್ಗೆ ಸದರಿ ಸ್ಕೀಮಿನ ೧೭ನೆ ಕಲಂ ಮೇರೆಗೆ ಇದೇ ಪ್ರಜೋತ್ಪತ್ತಿ ಸಂವತ್ಸರ ಪುಷ್ಯ ... ತಾ. ೨೪—೧—೧೯೩೨ನೇ ರವಿವಾರ ರಾತ್ರೆ ೯ ಗಂಟೆಗೆ ಶ್ರೀ ದೇವಸ್ಥಾನದ ವಸಂತ ಮಂಟಪದಲ್ಲಿ ಸಮಸ್ತ ಟ್ರಸ್ಟಿಯರು ಸಭೆ ಸೇರಬೇಕಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ.

ಮುಲ್ಕಿ
೫—೧—೩೨

U. V. Shenai,
Manager
S. V. Temple Moolky

Messrs. Shenoy Brothers & Co.,
Car Street, Mangalore.

Beg to announce to their numerous customers that they have shifted to a more commodious and better building about a hundred yards to the side of the Shree Venkatraman Temple to cope with their ever increasing business.

ಮೆಸರ್ಸ್
ಶೆಣ್ಯೆ ಬ್ರದರ್ಸ್ ಮತ್ತು ಕಂಪೆನಿ
ರಥಬೀದಿ, ಮಂಗಳೂರು.

ಹೆಚ್ಚಿನ ಸ್ಥಳ—ಸೌಕರ್ಯಗಳ ಬಗ್ಗೆ ನಮ್ಮ ಶಾಪನ್ನು ಇದೇ ರಸ್ತೆಯಲ್ಲಿರುವ ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಸಮೀಪವಾಗಿರುವ ವಿಶಾಲವಾದ ಕಟ್ಟಡಕ್ಕೆ ಒಯ್ಯಲಾಗಿದೆ ಎಂದು ಈ ಮೂಲಕ ನಮ್ಮ ಗಿರಾಕಿಗಳೆಲ್ಲರಿಗೂ ತಿಳಿಸಲಾಗುತ್ತದೆ.

ಕಾಲಿವಾಹನಶಕ ೧೮೫೪ನೆಯ ಪ್ರಜೋತ್ಪತ್ತಿ ಸಂವತ್ಸರದ ಪುಷ್ಯ ಶು॥ ೬ ಶನಿವಾರದಿಂದ ಪ್ರಜೋ. ಸಂವತ್ಸರದ ಪುಷ್ಯ ಶು॥ ೭ ಶುಕ್ರವಾರದ ವರೆಗಿನ ಪಂಚಾಂಗ

(ರವಿ ಸ್ಥಿತಿಯು ಧನು—ಮಕರ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಗತಘಳಿಗೆ	ಸೂರ್ಯ: ಉ.	ಅಸ್ತ
9	ಶನಿ	೨	೫೮ ೦	ಉ. ಷಾ	೧೩ ೨	೨೫	6.58	6.1[illegible]
10	ರವಿ	೩	೬೦ ೦	ಶ್ರವಣಾ	೧೫ ೬೧	೨೬	6.58	6.18
11	ಸೋಮ	೪	೬೦ ೦	ಧನಿಷ್ಠಾ	೧೯. ೧	೨೭	6.58	6.19
12	ಮಂಗಳ	೪	೨ ೫೯	ಶತಭಿಷಾ	೨೩ ೩೨	೨೮	6.58	6.20
13	ಬುಧ	೫	೭,೧೪	ಪೂ. ಭಾ.	೨೯. ೨	೨೯	6.59	6.20
14	ಗುರು	೬	೧೨. ೧	ಉ. ಭಾ.	೩೫ ೧೪	೩೦	6.59	6.21
15	ಶುಕ್ರ	೭	೧೭.೧೪	ರೇವತೀ	೪೧.೪೨	೧	6.59	6.21

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚಿನದು		Minimum ಕಡಿಮೆ		Rainfall. ಮಳೆ ದಿನದ ಮಳೆ	ಒಟ್ಟು ಮಳೆ.
1	90—	3	6[illegible]—	6	—	—
2	87—	5	68—	3	—	—
3	88—	3	68—	9	—	—
4	88—	4	67—	5	—	—
5	87—	9	66—	3	—	—
6	88—	5	66	7	—	—
7	87—	0	66—	6	—	149-96

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ	ಆ	ವರೆಗೆ ರೂ	ಆ
ಹೊಸ ಅಕ್ಕಿ	3—	[illegible]	4—	0
ಹಳೆ ಮುಸ್ಕಿ	[illegible]—	[illegible]	[illegible]—	[illegible]
ಹಳೆ ಗುಡ್ಡ	4—	[illegible]	4—	[illegible]
ಹಳೆ ಸುಗ್ಗಿ	[illegible]—	[illegible]	4—	4
ಊರ ಅವ್ವಲ್ ಬೆಳ್ತಿಗೆ	4—	[illegible]	5—	0
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	6—	8	—	4
ಎಲ್ಲಾರು ಬೆಳ್ತಿಗೆ ಮುಡಿ ೧ಕ್ಕೆ	4	[illegible]	—	
ಗೋಧಿ ಗೋಣಿ ೧ಕ್ಕೆ	[illegible]—	8	1—	8
ತೊಗರಿ ಗೋಣಿ ೧ಕ್ಕೆ	13—	0	16—	
ಹುರುಳಿ ಗೋಣಿ ೧ಕ್ಕೆ	6	12	7—	8
ಕಡಲೆ ಗೋಣಿ ೧ಕ್ಕೆ	8—	8	12—	8
ತೊಗರಿಬೇಳೆ ಗೋಣಿ ೧ಕ್ಕೆ	13—	8	[illegible]—	0
ಉದ್ದು ಗೋಣಿ ೧ಕ್ಕೆ	11—	8	1[illegible]	0
ಹೆಸರು ಗೋಣಿ ೧ಕ್ಕೆ	10	4	1	
ಊರು ಬೆಲ್ಲ ಖಂಡಿ ೧ಕ್ಕೆ	30—	0	32	8
ಉಪ್ಪು ಗೋಣಿ ೧ಕ್ಕೆ	4—	12	4—	14
ಒಣ ಖಂಡಿ ೧ಕ್ಕೆ	6[illegible]—		62	
ದೊಡ್ಡ ಹಿಂಡಿ ಖಂಡಿ ೧ಕ್ಕೆ	30—	0	—	
ಎಳ್ಳಿಂಡಿ ಖಂಡಿ ೧ಕ್ಕೆ	26	4	2[illegible]—	8
ದೊಡ್ಡ ಎಣ್ಣೆ ಮುಡಿ ೧ಕ್ಕೆ	6	14	6—	14
ಎಳ್ಳೆಣ್ಣೆ ಮುಡಿ ೧ಕ್ಕೆ	6—	12	7—	0
ಹರಳೆಣ್ಣೆ ಪಟ್ಟಿಗೆ ೧ಕ್ಕೆ	4—	1	8	12
ತೆಂಗಿನ ಕಲ್ಲರೆ ಮಣ ೧ಕ್ಕೆ	4	0	4—	3
ಕೊಬರಿ ಮೊಕ	4—	0	5—	0
[illegible] ೧ಕ್ಕೆ	6—	0	—	
ಕಲಿವ್ ಕಾಫಿ ಖಂಡಿ ೧ಕ್ಕೆ	217—	8	226	
ಕಾಳುಮೆಣಸು ಖಂಡಿ ೧ಕ್ಕೆ	17		180—	
ಯೇಲಕ್ಕಿ ಮಣ ೧ಕ್ಕೆ	27	[illegible]	28—	
ಗೇರುಬೀಜ ಮುಡಿ ೧ಕ್ಕೆ	4—	6	4—	12
ಕಲ್ಲಿಮಾ ಖಂಡಿ ೧ಕ್ಕೆ	35	0	37—	8
ಕಂಪ್ಯ ಕಗದು ಮಣ ೧ಕ್ಕೆ	3	[illegible]	13—	8
ಸಾಂಬ್ರಾಣಿ ಮಾತ್ರೆಗಳು ಮಣ ೧ಕ್ಕೆ	15—	0	16—	0
ಉಂಡಲಕ್ಕಿ ಸೇರು ೧ಕ್ಕೆ	16—	0	16—	8
[illegible] ಕಗದು ಮಣ ೧ಕ್ಕೆ	12—	0	12—	8
ಪದನು ೧ಕ್ಕೆ	18—	4	16—	8
ಹುಣಸೆಹುಳಿ ಖಂಡಿ ೧ಕ್ಕೆ	21—		—	
ಫಿರಂಗಿ ಕಾಫಿ ಖಂಡಿ ೧ಕ್ಕೆ	376—		406—	
ಹರಿಬಡಿಕೆ	180—		205—	
ಚಿಕಣಿಅಡಿಕೆ	140		145—	

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೆ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು, ಕೊಟ್ಟಿಗೆಹಾರಕ್ಕೆ ಸುಮಾರು 2 ಗಂಟೆಗೆ ಮೂಡಗೆರೆಗೂ, ೪॥ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪೂರ ಗೋವಾ, ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ರಾಂಡೂನ್ ಸೊರಾಬ್, ಕೆ. ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಂಬಳ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೈದು ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸಿನ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ೧॥ ದಿವಸದೊಳಗೆ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವೀಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವವರಿಗೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವೀಸಿಗೆ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲಿಚ್ಛಿಸುವವರು, ನೋಡಲು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವವರು ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಕಂಪೆನಿಯ ಬಸ್ಸುಗಳು ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

The Canara Public Conveyance Company Ltd., Mangalore

ಬಾಪೂಜಿ, ವಲ್ಲಭಭಾಯಿ, ಸುಭಾಸ್ ಬೋಸರನ್ನು

ಬಂಧಿಸಿದರು!

೧೯೩೦ರಲ್ಲಿ ಕಾಯಿದೆ ಭಂಗ ಚಳವಳವನ್ನು ಹೂಡಿ, ಉಪ್ಪಿನ ಕರೋಲ್ಲಂಘನೆ, ಶಾಸನೋಲ್ಲಂಘನೆಗಳನ್ನು ಮಾಡಿ, ತಾವೂ ಕಾರಾಗೃಹವಾಸವನ್ನನುಭವಿಸಿ, ಸಾಧಾರಣ ಒಂದು ಲಕ್ಷ ಮಂದಿಗಳನ್ನೂ ಕಾರಾಗೃಹವಾಸವನ್ನನುಭವಿಸುವಂತೆ ಮಾಡಿ, ತನ್ನ ದೃಢಪೂರ್ವಕ ಅಹಿಂಸಾಮಯ ಸತ್ಯಾಗ್ರಹದಲ್ಲಿ ವಿಜಯಿಯಾಗಿ ಭೂಲೋಕಕ್ಕೇನೇ ಒಂದು ಮಾದರಿಯಾಗಿ ಕಲಿಯುಗದ "ಪುರುಷ 'ಅವತಾರ ಪುರುಷ' 'ಎರಡನೇ ಕ್ರಿಸ್ತ' 'ಅರೆಬತ್ತಲೆಯ ಫಕೀರ'ನೆಂಬ ವಿಧವಿಧ ಹೆಸರುಗಳಿಗೊಳಗಾದ ಮಹಾತ್ಮಾ ಗಾಂಧಿಯವರು ಸರಕಾರದೊಡನೆ ಒಪ್ಪಂದ ಮಾಡಿ, ತಾನು ಹೂಡಿದ ಅಹಿಂಸಾಮಯ ಅಸಹಕಾರದ ಸತ್ಯಾಗ್ರಹವನ್ನು ಹಿಂದೆ ತೆಗೆದುಕೊಂಡರಷ್ಟೆ! ಗಾಂಧೀ ಸರಕಾರಗಳೊಳಗೆ ಅಂತಹ ರೀತಿಯಿಂದ ಒಂದು ಒಪ್ಪಂದವಾದುದನ್ನು ನೋಡಿ ಭಾರತೀಯರೆಲ್ಲರೂ ಒಮ್ಮೆ ಸಂತೋಷಗೊಂಡರು. ತಮ್ಮ ದೇಶಧುರೀಣರಿಗೂ ತಮಗೂ ಮುಂದಕ್ಕೆ ಕಾರಾಗೃಹವಾಸದ ಶಿಕ್ಷೆಯು ಅಲ್ಲಿಗೆ ಮುಗಿದು, ಇನ್ನು ಸೆರೆವಾಸಗಳನ್ನು ನೋಡುವ ಸಂದರ್ಭವು ಬರಲಿಕ್ಕಿಲ್ಲವೆಂದು ಆಲೋಚಿಸಿಕೊಂಡರು. ಇಲ್ಲದೆ ಅಂತಹ ಗಾಂಧೀ ಸರಕಾರದ ಒಡಂಬಡಿಕೆಯಾದ ನಂತರ ದೇಶದಲ್ಲಿ ಕ್ರಾಂತಿಯ ಬದಲು ಶಾಂತಿಯೂ, ಅಸಮಾಧಾನದ ಬದಲು ಸಮಾಧಾನವೂ ನೆಲೆಗೊಂಡೀತೆಂದು ಸಕಲರ ಅಭಿಮತವಿತ್ತು. ಆದರೆ ಭಾರತಭೂಮಿಯು ದೌರ್ಭಾಗ್ಯವನ್ನೆಳೆದು ೧೯೩೦ರಲ್ಲಿ ಅದು ಪಟ್ಟ ಕಷ್ಟವನ್ನು ಆ ವರುಷದಲ್ಲೇ ಬಿಟ್ಟು, ೧೯೩೨ರಲ್ಲಿ ಅಂತಹ ಕಷ್ಟವನ್ನನುಭವಿಸಲು ಅದಕ್ಕೆ ಸಂದರ್ಭವು ಒದಗಿ ಬರಲಾರದೆಂದು ಹೆಚ್ಚಿನವರು ಆಶಿಸಿದ್ದರು. ಆದರೆ "ತಾನೊಂದು ನೆನೆದರೆ ದೈವವು ಇನ್ನೊಂದನ್ನು ನೆನೆಯಿತು" ಎಂಬ ನಾಣ್ಣುಡಿಯು ೧೯೩೨ನೇ ಇಸವಿ ಜನವರಿ ಮೂರನೇ ದಿನ ಸತ್ಯವಾಯಿತು.

ನಮ್ಮ ೧೦ನೇ ಪುಟದಲ್ಲಿ ಕೊಟ್ಟ ಗಾಂಧೀ ವೈಸರಾಯರೊಳಗೆ ಚರ್ಚಿತ್ತಲಾಗ ಅವರಿಂದ ಬಂದ ಪತ್ರವ್ಯವಹಾರಗಳನ್ನು ಮನಗೊಟ್ಟು ಓದಿದವರಿಗೆ ಗಾಂಧಿಯವರ ಹಂಗಿತವೇನು ಸರಕಾರದ ಅಭಿಮತವೇನು, ಗಾಂಧಿಜೀಯವರ ಕೇಳಿಕೆಯೇನು ಸರಕಾರದ ಹೇಳಿಕೆಯೇನು, ಅಂತಹ ಹೇಳಿಕೆ ಕೇಳಿಕೆಗಳ ಪರಿಣಾಮವೇನು ಎಂದು ಸರಿಯಾಗಿ ತಿಳಿದುಬಂದೀತು. ಅಂತಹ ಪತ್ರವ್ಯವಹಾರವು ನಡೆದ ಮೇಲೆ ಕಾಂಗ್ರೆಸ್ಸಿನವರು ಅಶಾಂತರಾಗತೊಡಗಿದರು. ಗಾಂಧಿಜೀಯವರು ಒಡನೆ ಸಿದ್ಧರಾದರು. ವೈಸರಾಯರ ಖಚಿತಪೂರ್ವಕವಾದ ಉತ್ತರವನ್ನು ನೋಡಿ ಗಾಂಧಿಜೀಯವರು ಒಡನೆ ತನ್ನ ಸಮರ ಸಿದ್ಧತೆಯನ್ನು ಮಾಡಿಯೇ ಮಾಡಿದರು.

ವೈಸರಾಯರ ಉತ್ತರವನ್ನು ಕಂಡ ಧುರೀಣರು ತಮ್ಮ ತಮ್ಮ ಮುಂದಿನ ಕಾರ್ಯಗಳಿಗೆ ತೊಡಗಿದರು. ವಲ್ಲಭಭಾಯಿಯವರು ಸೆರೆಮನೆಗೆ ನಡೆಯಲು ಸಿದ್ಧರಾದರು. ಸಿ. ರಾಜಗೋಪಾಲಾಚಾರ್ಯರು ಮದ್ರಾಸಿಗೆ ತೆರಳಿದರು. ಮುಂಬಯಿ ಪಟ್ಟಣವೆಲ್ಲ ದ್ವಿತೀಯ ಸಮರಕ್ಕೆ ಸಿದ್ಧವಾಯಿತು.

೩ನೇ ದಿನ ರಾತ್ರಿ, ಗಾಂಧಿಜೀಯವರು ಮುಂಬಯಿಯ ತನ್ನ ವಾಸಸ್ಥಾನವಾದ 'ಮಣಿಭುವನ'ದ ಉಪ್ಪರಿಗೆಯಲ್ಲಿ ಮಲಗಿದ್ದರು. ದೇವದಾಸಗಾಂಧಿ ಮೊದಲಾದವರು ಕೆಳಗೆ ಜಗಲಿಯ ಮೇಲೆ ಮಲಗಿದ್ದರು. ರಾತ್ರಿ ೩ ಘಂಟೆಗೆ ಪೋಲೀಸ್ ಕಮೀಶನರಾದ ವಿಲ್ಸನರು, ಡೆಪ್ಯುಟಿ ಕಮಿಶನರಾದ ಕ್ರಿಗಾರರನ್ನೊಡಗೂಡಿ ಒಂದು ಮೋಟಾರ್ ಕಾರನ್ನು ಓಡಿಸಿಕೊಂಡು ಮಣಿಭುವನದ ಹೊರಗೆ ಕಾರನ್ನು ನಿಲ್ಲಿಸಿ ತಾವು ಒಳಗೆ ಬಂದರು. ಜಗಲಿಯ ಮೇಲೆ ಮಲಗಿದ್ದ ದೇವದಾಸಗಾಂಧಿಯವರನ್ನೆಬ್ಬಿಸಿದರು. ಅವರು ತಟ್ಟನೆದ್ದು ಆಗಂತುಕರೇನು ಬೇಕಾಗಿರುವುದೆಂದು ಪ್ರಶ್ನಿಸಿದರು. ಪೋಲೀಸರು ತನ್ನ ತಂದೆಯನ್ನು ಸೆರೆಮನೆಗೆ ಕರೆದುಕೊಂಡು ಹೋಗಲು ಬಂದಿರುವರೆಂದು ದೇವದಾಸರಿಗೆ ತಿಳಿಯದಿರಲಿಲ್ಲ. "ನಮಗೆ ಗಾಂಧಿಯವರನ್ನು ನೋಡಬೇಕಿತ್ತು; ಅವರೆಲ್ಲಿರುವರೆ"ಂದು ಪೋಲೀಸ್ ಕಮಿಶನರರ ಕೇಳಿಕೆಯಾಯಿತು. 'ಅವರು ಮಾಳಿಗೆಯ ಮೇಲೆ ಮಲಗಿರುವರು, ಬನ್ನಿ ತೋರಿಸುವೆನೆ'ಂದು ಹೇಳಿ ದೇವದಾಸರು ಪೋಲೀಸ್ ಅಧಿಕಾರಿಗಳನ್ನು ಮಾಳಿಗೆಯ ಮೇಲೆ ಕರೆದೊಯ್ದರು.

ಉಪ್ಪರಿಗೆಯಲ್ಲಿ 'ಎರಡನೇ ಕ್ರಿಸ್ತ'ನೆಂಬ ಮಹಾತ್ಮಾ ಗಾಂಧಿಯವರು ಸುಖನಿದ್ರಾವಶರಾಗಿದ್ದು, ಕೃಷ್ಣ ಜನ್ಮಸ್ಥಾನವನ್ನು ಕನವರಿಸುತ್ತಿದ್ದರು. ಎರವಾಡಾ ಜೈಲಿನ ಕನಸನ್ನು ಕಾಣುತ್ತಿದ್ದರು. ಶ್ರೀಮತಿ ಗಾಂಧಿ, ಮಿಸ್ ಸ್ಲೇಡ್, ನಾಲ್ಕು ಜನ ಇನ್ನಿತರ ಸ್ತ್ರೀಯರೂ, ಗಾಂಧಿಜೀಯರ ಸೆಕ್ರೆಟರಿಗಳೂ ಕ್ರೈಸ್ತ ಸೇವಾಸಂಘದ ಫಾದರ್ ಎಲ್ವಿನ್ ಮೊದಲಾದವರೂ ಅಲ್ಲೇ ಮಲಗಿಕೊಂಡಿದ್ದರು.

ವಿದ್ಯುತ್ ದೀಪವನ್ನು ಬೆಳಗಿಸಲಾಯಿತು. ಗಾಂಧಿಜೀಯವರನ್ನೆಬ್ಬಿಸಲಾಯಿತು. ಅಷ್ಟರಲ್ಲಿ ಎಲ್ಲರೂ ಎದ್ದುಕೊಂಡರು. ಟೆಲಿಫೋನು ಕರೆಗಳು ಪ್ರಾರಂಭಿಸಿದುವು. ಹೊರಗೆ ಮೋಟಾರ್ ಕಾರುಗಳು ಬಂದು ನಿಲ್ಲಲು, ಹೊರಗಿನ ಗಲಾಟೆಯು ಮೊದಲಾಯಿತು. "ಮಹಾತ್ಮರಿಗೆ ವಾರಂಟು! ಸಂದರ್ಶನವನ್ನು ಬಯಸುವವರು ಬೇಗನೇ ಬರಬಹುದು." ಎಂಬ ಟೆಲಿಫೋನು ವರ್ತಮಾನವು ಮುಂಬಯಿ ಪಟ್ಟಣದಲ್ಲಿ ಹಬ್ಬಿತು.

ಗಾಂಧಿಜೀಯವರೆದ್ದುಕೊಂಡರು. ತನ್ನ ಕನ್ನಡಕವನ್ನು ಆಚೆಗೆ ತಾನು ಕಣ್ಣೆಗಟ್ಟಿ ಪೋಲೀಸ್ ಅಧಿಕಾರಿಗಳನ್ನು ನೋಡಿ ನಸುನಕ್ಕರು. ಹಸನ್ಮುಖಿಗಳಾಗಿಯೇ ಇದ್ದರು. ಅಂದು ಸೋಮವಾರವಾದುದರಿಂದ ಗಾಂಧಿಜೀಯವರು ನಿತ್ಯದಂತೆ ತನ್ನ ಮೌನವ್ರತವನ್ನು ಹಿಡಿದಿದ್ದರು. ಆದುದರಿಂದ ಅವರು ಪೋಲೀಸರೊಡನೆ ಎರಡಕ್ಷರ ಮಾತನಾಡಲಿಲ್ಲ.

ಅನಂತರ ಕ್ರಿಗ ಪೋಲೀಸ ಕಮೀಶನರು ವಾರಂಟನ್ನು ಕೊಟ್ಟರು. ಗಾಂಧಿಜೀಯವರು ಹಸನ್ಮುಖರಾಗಿ ಅದನ್ನು ಸ್ವೀಕರಿಸಿ, ಮನಸ್ಸಿನಲ್ಲೇ ಓದಲು ತೊಡಗಿದರು. ಒಮ್ಮೆಲೆ ಮಿಸ್ ಸ್ಲೇಡರು ಗಾಂಧಿಜೀಯವರ ಹಿಂದಿನಿಂದ ಹೋಗಿ ವಾರಂಟಿನ ಕಾಗದದಲ್ಲೇನು ಬರೆದಿರುವುದೆಂದು ಇಣಕಿ ನೋಡಿದರು, ಮತ್ತು 'ಎರವಾಡ ಜೈಲಿಗೆ ಇದು ಕಳೆದ ಸಲದಂತೆಯೇ' ಎಂದರು. ಅಲ್ಲಿ ಕೂಡಿದ್ದ ಪತ್ರಿಕಾ ಪ್ರತಿನಿಧಿಗಳೂ, ಇನ್ನಿತರರೂ, ಶ್ರೀಮತಿ ಕಸ್ತೂರಿಬಾಯಿಯವರೂ ಒಮ್ಮೆ ಆವಾಕ್ಕಾದರು—ತಮ್ಮ ಬಾಪೂಜೀಯವರನ್ನು ಕೂಡಲೇ ಪೂನೆಯ ಎರವಾಡಕ್ಕೊಯ್ಯುವರೆಂದು ಎಲ್ಲರಿಗೂ ತಿಳಿಯಿತು.

ಗಾಂಧಿಜೀಯವರು ಓದಿದ ವಾರಂಟು ಪತ್ರದಲ್ಲಿ ಹೀಗಿತ್ತು — "೧೮೧೮ರ ರೆಗ್ಯುಲೇಶನ್ ೨ರ ಮೇರೆಗೆ ತನ್ನ ಮೇಲಿರುವ ಅಧಿಕಾರದ ಮೇರೆಗೆ, ಗವರ್ನರ್ ಇನ್-ಕೌನ್ಸಿಲ್ ಇವರು ಒಳ್ಳೇ ಮತ್ತು ಸಾಕಷ್ಟು ಕಾರಣಗಳಿಗಾಗಿ ಮೋಹನ್‌ದಾಸ್ ಕರಂಚಂದ್ ಗಾಂಧಿಯನ್ನು ಬಂಧಿಸಿ ತಮ್ಮಿಚ್ಛೆ ಬಂದಷ್ಟು ಕಾಲ ಎರವಾಡಾ ಸೆಂಟ್ರಲ್ ಸೆರೆಮನೆಯಲ್ಲಿ [illegible] ನಿರ್ಧರಿಸಿರುವುದರಿಂದ ನೀವು (ಪೋಲೀಸ್ ಕಮಿಶನರು) ಆದಷ್ಟು ತ್ವರೆಯಿಂದ ಎಂ. ಕೆ. ಗಾಂಧಿಯನ್ನು ಹಿಡಿದು ಎರವಾಡ ಸೆರೆಮನೆಯ ಸುಪರಿಂಟೆಂಡೆಂಟರಿಗೊಪ್ಪಿಸಬೇಕು. ಸಹಿ—ಮ್ಯಾಕ್ಸ್‌ವೆಲ್, ಮುಂಬಯಿ ಸರಕಾರದ ಎಕ್ಟಿಂಗ್ ಹೋಮ್ ಸೆಕ್ರೆಟರಿ."

ವಾರಂಟನ್ನು ಓದಿ ಗಾಂಧಿಜೀಯವರು ಒಮ್ಮೆ ನಸುನಕ್ಕರು. ಆ ಮೇಲೆ ಅದನ್ನು ಕಮಿಶನರ ಕೈಯಲ್ಲಿ ಹಿಂತಿರುಗಿ ಕೊಟ್ಟರು. ಅನಂತರ ಒಂದು ಚೂರು ಕಾಗದವನ್ನು ತೆಗೆದುಕೊಂಡು ಅದರಲ್ಲಿ 'ನಾನು ಕೆಲ ನಿಮಿಷಗಳಲ್ಲಿ ಖಂಡಿತವಾಗಿಯೂ ಸಿದ್ಧನಾಗುವೆನು' ಎಂದು ಬರೆದು ಆ ಚೀಟನ್ನು ಕಮಿಶನರಿಗೆ ಕೊಟ್ಟು, ಅವರ ಅಪ್ಪಣೆಪಡೆದು, ಇನ್ನೊಂದು ಕೋಣೆಗೆ ನಡೆದರು. ಪೋಲೀಸರು ಬಂದು ಬದಿಯಲ್ಲಿ ನಿಂತರು.

ಅಲ್ಲಿಂದ ಗಾಂಧಿಜೀಯವರು ಬಚ್ಚಲ ಕೊಟ್ಟಿಗೆಗೆ ಹೋಗಿ ಬಂದರು. ಶ್ರೀಮತಿ ಗಾಂಧಿಯವರು ಒಂದು ಪಾತ್ರೆಯನ್ನು ತಂದರು. ಮಿಸ್ ಸ್ಲೇಡರು ನೀರನ್ನು ತಂದರು. ಗಾಂಧಿಜೀಯವರು ತನ್ನ ಹಲ್ಲು ಮುಖವನ್ನು ತೊಳೆದರು. ಗಾಂಧಿಜೀಯವರಿಗೆ ಬೇಕಾದ ಸಾಮಾನುಗಳ ಜೈಲ್ ಚೀಲವು ಸಿದ್ಧವಿದ್ದಿತು. ಅದರಲ್ಲಿ ಅವರ ಹಾಸಿಗೆ, ಕೆಲವು ಬಗೆ ಹಣ್ಣುಗಳು, ಒಂದು ಪಾತ್ರೆ, ಒಂದು ಮುಚ್ಚಳ, ಮತ್ತು ಹಲ್ಲುಜ್ಜುವ ಬ್ರಶ್ ಮೊದಲಾದ ಎಲ್ಲ ಸಾಮಾನುಗಳಿದ್ದುವು. ಒಂದು ಕಟ್ಟಿನಲ್ಲಿ ಕೆಳಗಿನ ಪುಸ್ತಕಗಳಿದ್ದುವು: ಬುಕ್ ಆಫ್ 'ಜೂವಿಶ್ ಥಾಟ್' ಫರೆರಲ್ ಲೋಸ್ 'ಲೆಕ್ಚರ್ಸ್ ಆನ್ ದಿ ಇಸ್ಟಿ' 'ಇಶ್ಶ್ಯೂ ಆಫ್ ದಿ ಫೆಡರಲ್ ಸಿಸ್ಟಮ್' ಸಾಮ್ಯುವೆಲ್ ಹೋರ್ ರಚಿತ 'ಲೈಫ್' ಎಂಬ ಪುಸ್ತಕ, ಪ್ರಧಾನಮಂತ್ರಿ ರಾಮ್ಸೆ ಮೆಕ್‌ಡೋನಾಲ್ಡ್ ರಚಿತ 'ವಾಂಡರಿಂಗ್ಸ್ ಎಂಡ್ ಎಕ್ಸ್‌ಕರ್ಶನ್ಸ್' ಎಂಬ ಪುಸ್ತಕ, ಇದಲ್ಲದೆ ಶ್ರೀ ಮದ್ಭಗವದ್ಗೀತೆ ಇತ್ಯಾದಿ ಪುಸ್ತಕಗಳಿದ್ದುವು. ಒಂದು ಕಟ್ಟಿನಲ್ಲಿ ಹತ್ತಿ, ಸ್ಪಿಂಡಲ್ ಮೊದಲಾದುವು ಇದ್ದುವು. ಇವುಗಳನ್ನೆಲ್ಲ ಒಂದು ಮೂಟೆಯಾಗಿ ಕಟ್ಟಿ ಮೀರಾಬೆನ್ನರು ಗಾಂಧಿಜೀಯವರಿಗೆ ಅವರ ಯಾತ್ರೆಯ ಬಗ್ಗೆ ಕೊಟ್ಟರು.

ಅಷ್ಟರಲ್ಲಿ ಬಂದ ಪತ್ರಿಕಾಪ್ರತಿನಿಧಿಯು ಗಾಂಧಿಜೀಯವರು ಹಿಂದೂದೇಶಕ್ಕೊಂದು ಸಂದೇಶವನ್ನು ಕೊಡಬೇಕೆಂದು ಕೇಳಲು ಮೀರಾಬೆನ್‌ರೊಡನೆ ಹೇಳಿದರು. ಮೀರಾಬೆನ್ನರು ಗಾಂಧಿಜೀಯವರಿಗೆ ಆ ಅಭಿಪ್ರಾಯವನ್ನು ಸೂಚಿಸಿದರು. ಮಹಾತ್ಮರು ಕಾಂಗ್ರೆಸ್ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರ ಮೂಲಕ ದೇಶಕ್ಕೆ ಕಳುಹಿಸ ಬಯಸಿ ಗುಜರಾತಿಯಲ್ಲಿ ಈ ರೀತಿ ಬರೆದರು: 'ಪ್ರಿಯ ವಲ್ಲಭಭಾಯಿಯವರೇ— ಭಗವಂತನ ಕಾರುಣ್ಯವು ಅಪರಿಮಿತವಾದುದು. ಸ್ವಾತಂತ್ರ್ಯವನ್ನು ಹೊಂದುವುದಕ್ಕಾಗಿ ಜನರು ಸತ್ಯ ಮತ್ತು ಅಹಿಂಸೆಯನ್ನು ಬಿಡದಿರಲೆಂದು ಜನರಿಗೆ ತಿಳಿಸಿರಿ.' ಅದನ್ನು ಓದಿದ ಬಳಿಕ "ವಲ್ಲಭಭಾಯಿಯವರನ್ನೂ ಡೆಪ್ಯುಟಿ ಕಮಿಶನರ್ ಕ್ರೀಗ್ ಎಂಬವರು ಎರವಾಡಾ ಸೆರೆಮನೆಗೆ ಕೊಂಡು ಹೋಗಲಿರುವರು" ಎಂದು ಹೇಳಿದರು. ಅದನ್ನು ಕೇಳಿ ಗಾಂಧಿಜೀಯವರು ಮಂದಹಾಸವದನರಾದರು.

ಶ್ರೀಮತಿ ಕಸ್ತೂರಿಬಾಯಿಯವರು ಗಾಂಧಿಜೀಯವರು ಪ್ರಾರ್ಥನೆ ಮಾಡಿ ಹೊರಡಬೇಕೆಂದರು. ಆಗಲೇ ಮುಂಜಾನೆ ೩—೪೫ ಘಂಟೆಯಾಗಿತ್ತು. ಗಾಂಧಿಜೀಯವರು ಪೋಲೀಸರೊಡನೆ ಹೊರಡಲು ೫ ಮಿನಿಟುಗಳಿದ್ದುದರಿಂದ ಅವರು ಮುಹೂರ್ತವನ್ನೀಯಲಿಲ್ಲ. ಆ ವೇಳೆ ಮಹಾತ್ಮರ ಪ್ರಿಯಗಾನವಾದ "ವೈಷ್ಣವ ಜನತೊ..." ಎಂಬ ಪದ್ಯವು, ಶ್ರೀ ಹರಿದೇವ ದೇಸಾಯಿ, ಮೀರಾಬೆನ್, ಪ್ಯಾರೇಲಾಲ್, ದೇವದಾಸ್ ಮೊದಲಾದವರಿಂದ ಹಾಡಲ್ಪಟ್ಟಿತು. ಗಾಂಧಿಜೀಯವರು ಧ್ಯಾನನಿರತರಾಗಿ ನಿಂತುಕೊಂಡರು. ಅದಾದ ಮೇಲೆ ಶ್ರೀಮತಿ ಕಸ್ತೂರಿಬಾಯಿಯವರು ಗಾಂಧಿಜೀಯವರ ಹಣೆಗೆ ಕುಂಕುಮ ತಿಲಕವನ್ನಿಟ್ಟು ಗಾಂಧಿಜೀಯವರಿಗೆ ಹರಸಿ, ಅವರನ್ನು ಆಲಿಂಗಿಸಿಕೊಂಡರು. ತಾನು ಮಾಡಿದ್ದ ನೂಲಿನ ಹೂಮಾಲೆಯನ್ನು ಅವರ ಕೊರಳಿಗೆ ಹಾಕಿದರು.

ಇಷ್ಟರಲ್ಲಿ ೪ ಘಂಟೆ. ನಂತರ ಹೃದಯಭೇದಕ ನೋಟ ಕಾಣಬಂದಿತು. ಗಾಂಧಿಜೀಯವರು ಹೊರಡುವ ಸಮಯವು ಬಂದೊಡನೆ ಕೂಡಿದವರೆಲ್ಲರೂ ಕಣ್ಣೀರು ಸುರಿಸಿದರು. ಎಲ್ಲರ ವದನವೂ ಕಳೆಗುಂದಿಹೋಯಿತು. ಕಸ್ತೂರಿಬಾಯಿಯವರು ಕಣ್ಣೀರಿಕ್ಕುತ್ತ ಗಾಂಧಿಜೀಯವರ ಚರಣಗಳಿಗೆರಗಿದರು. ಗಾಂಧಿಜೀಯವರು ಅವರ ಬೆನ್ನು ತಟ್ಟಿ ಎಬ್ಬಿಸಿ ಅಳಬಾರದೆಂದು ಹೇಳಿ ಸನ್ನೆ ಮಾಡಿದರು.

ದೇವದಾಸ್ ಮೊದಲಾದ ಅವರ ಶಿಷ್ಯರೂ ಗಾಂಧಿಜೀಯವರ ಕಾಲಿಗೆರಗಿದರು. ಸಬರ್ಮತಿ ಆಶ್ರಮದ ಗಾಯನ ಮಂ

ರು ಕಣ್ಣೀರನ್ನು ಧಾರೆಯಾಕ್ಕಿ ಅಳುತ್ತಿದ್ದುದನ್ನು ನೋಡಿ ಗಾಂಧಿಜೀಯವರು ಮುಖದಲ್ಲಿ ಆಶ್ಚರ್ಯವನ್ನು ಸೂಚಿಸಿ "ಛೀ! ವೀರರಾಗಿ ಅಳುವುದೇ?" ಎಂದು ತನ್ನ ಹಾಸ್ಯಸೂಚಿತ ದೃಷ್ಟಿಯಿಂದೆಂದರು. ಆ ವೇಳೆ ಮೊರಾಬೆನ್ನರು ಬಂದು ಗಾಂಧಿಜೀಯವರ ಪಾದದಲ್ಲಿ ಬಿದ್ದು ಬಹಳವಾಗಿ ಅತ್ತರು. ಅವರು ಗಾಂಧಿಜೀಯವರ ಹಸ್ತಗಳನ್ನು ಮುದ್ದಿಸಿ, ಸಹಿಸಲಸದಳವಾದ ದುಃಖದಿಂದ ಹೊರಗೆ ಹೋದರು. ಆ ಮೇಲೆ ಗಾಂಧಿಜೀಯವರು ಮಾಳಿಗೆಯಲ್ಲಿ ತನ್ನ ಡೇರೆಯ ಬಳಿಗೆ ಹೋಗಿ ಅಲ್ಲಿ ತಾನಿಟ್ಟಿದ್ದ ಕಾಗದಪತ್ರಗಳನ್ನು ಹಿಡಿದುಕೊಂಡು ಪೋಲಿಸರೊಡನೆ ನಡೆಯಲು ಸಿದ್ಧರಾದರು. ಎಲ್ಲರೂ ಮಾಳಿಗೆಯಿಂದ ಕೆಳಗಿಳಿದರು. ಹೊರಗೆ ತಯಾರಿದ್ದ ಕಾರಿನ ಬಳಿ ಕಸ್ತೂರಿಬಾಯಿಯವರೂ, ದೇವದಾಸರೂ, ಗಾಂಧಿಜೀಯವರೂ, ಪೋಲೀಸರೂ ಬಂದರು. ಕಾರಿನ ಬಳಿ ಒಂದು ಜನತಂಡವು ಸೇರಿತು. ಅವರೆಲ್ಲರೂ "ಮಹಾತ್ಮಾ ಗಾಂಧಿ ಕೀ ಜೈ" ಎಂಬ ಜಯಕಾರವನ್ನೆತ್ತಿರು.

ಅಷ್ಟರಲ್ಲಿ ಗಾಂಧಿಜೀಯವರು ಕಾರಿನಲ್ಲಿ ಕುಳಿತರು. ಪೋಲೀಸರೂ ಅವರೊಡನೆ ಕುಳಿತರು. ಮಹಾತ್ಮರು ಕೆಳಗಿದ್ದವರ ಮೇಲೆ ಕರುಣಾ ದೃಷ್ಟಿಯನ್ನು ಬೀರಿದರು. ನಸುನಕ್ಕರು. ಅಷ್ಟರಲ್ಲಿ "ಕಾರು ನಡೆಯಲಿ" ಎಂದು ಕಮಿಶನರು ಹೇಳಿದರು. ಕಾರು ಹೊರಟಿತು. ಭಾರತ ನಿಜಪುತ್ರನು ಪುನೆಯ ಸೆರೆಮನೆಗೆಂದು ಸಂತೋಷದಿಂದ ಹೋದನು.

ವಲ್ಲಭಬಾಯಿಯವರ ಬಂಧನ.

ಗಾಂಧಿಜೀಯವರನ್ನು ಕೈದುಮಾಡಿದ ರಾತ್ರಿಯಲ್ಲೇ ಡಿಪ್ಯುಟಿ ಕಮಿಶನರಾದ ಕಾರ್ಪರೆಂಟರು ವಲ್ಲಭಬಾಯಿಯವನ್ನು ಅವರ ಮನೆಯಲ್ಲಿ ಕೈದುಮಾಡಿದರು. ತನಗೆ ವಾರಂಟು ತೋರ್ಪಡಿಸಲೇ ವಲ್ಲಭಬಾಯಿಯವರು ಕಮಿಶನರನ್ನು ನೋಡಿ 'ನಾನು ನಿರೀಕ್ಷಿಸಿದುದಕ್ಕಿಂತ ತಡವಾಗಿಯೇ ನೀವು ಬಂದಿರಿ' ಎಂದರು. ಅವರು ತನಗೆ ವಾರಂಟು ಬಂದುದನ್ನು ನೋಡಿ ಸಂತೋಷಗೊಂಡರು. ಮಲಗುವ ಹಲ್ಲುಗಳನ್ನು ತೊಳೆದು ಒಡನೆ ಕಮಿಶನರರೊಡನೆ ಮೋಟಾರಿನಲ್ಲಿ ಕುಳಿತರು. ವಲ್ಲಭಬಾಯಿಯವರು ಎರವಾಡ ಜೈಲಿನಲ್ಲಿರಬೇಕೆಂದು ವಾರಂಟಿನಲ್ಲಿ ಬರೆದಿತ್ತು. ತಾನು ಸೆರೆ ಸೇರುವಾಗ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನಕ್ಕೆ ವಲ್ಲಭಬಾಯಿಯ



ವರು ಬಾಬು ರಾಜೇಂದ್ರ ಪ್ರಸಾದರನ್ನು ಆರಿಸಿದರು. ತಾ ೪ನೇ ದಿನ ಬೆಳಗ್ಗೆ ಎಂಟು ಗಂಟೆಗೆ ಗಾಂಧೀ ವಲ್ಲಭಬಾಯಿಯವರಿಬ್ಬರೂ ಎರವಾಡಾ ಜೈಲನ್ನು ಸೇರಿದರು. ಅವರಿಗೆ ಪತ್ಯೇಕ ಪ್ರತ್ಯೇಕ ಕಾಡುಗಳನ್ನು ಬಿಟ್ಟುಕೊಟ್ಟಿದ್ದಾರೆ. ವಲ್ಲಭಬಾಯಿಯವರು ತಾನು ಹೋಗುವಾಗ ದೇಶಕ್ಕಾಗಿ ಬಿಟ್ಟುಹೋದ ಒಂದು ಸಂದೇಶವು ಈ ರೀತಿಯದು—'ರಾಷ್ಟ್ರದ ಮೇಲೆ ಸರಕಾರವು ಸಮರವನ್ನು ಹೂಡಿದೆ. ಈ ಸಾರಿ ಅಂತ್ಯದ ತನಕ ಭಯಂಕರ ಯುದ್ಧವೇ ಜರಗುವುದು. ಈ ಸಲ ಬಾಳಬೇಕೋ ಬಾಳಬೇಡವೋ ಎಂಬುದೊಂದೇ ಪ್ರಶ್ನೆ. 'ನಮ್ಮ ಸರ್ವಸ್ವವನ್ನು ಅರ್ಪಿಸಿದರೂ ಈ ಸಲದ ಚಳವಳಿಕ್ಕೆ ದೊಡ್ಡ ತ್ಯಾಗವಾಗಲಾರದು. ರಾಷ್ಟ್ರವು ಅಹಿಂಸಾಮಯ ರೀತಿಯಿಂದ ಸಂಪೂರ್ಣ ಬಲಿಯನ್ನು ಕೊಡುವುದಾಗಿ ನನ್ನ ಆಶೆಯಿದೆ. ಹೀಗಾದರೆ ನಮಗೆ ಜಯವು ಖಂಡಿತ.'"

ಬಾರ್ಡೋಲಿಗೆ ಗಾಂಧಿಯವರ ಸಂದೇಶ.

"ನನಗೆ ಗುಜರಾಥನ್ನೂ, ಅಲ್ಲಿಯ ರೈತರನ್ನೂ, ಆಶ್ರಮದ ಮಂದಿಗಳನ್ನು ನೋಡಿ ಅವರ ಮೇಲೆ ಸಹಾನುಭೂತಿಯನ್ನು ತೋರಬೇಕೆಂದು ಬಹಳ ಆಶೆಯಿತ್ತು. ಆದರೆ ಅದು ಸಾಧ್ಯವಾಗದೆ ಹೋಯಿತು. ತನ್ನನ್ನು ಸೆರೆಮನೆಯು ಕಾಯುತ್ತಿರುವಾಗ, ನಿರೀಕ್ಷಿಸುತ್ತಿರುವಾಗ ನಿಜವಾದ ಸತ್ಯಾಗ್ರಹಿಯಾದವನು ತನ್ನ ಬಂಧುಬಳಗದವರನ್ನೂ, ಇಷ್ಟಮಿತ್ರರನ್ನೂ ಭೇಟಿಯಾಗುವ ಆಶೆಯಲ್ಲಿರಲಾರನು. ಅಂತಹ ಅವಸ್ಥೆಯು ನನಗೆ ಬಂದಿದೆ. ನಾನು ಗುಜರಾಥನ್ನು ನೋಡಲಾರದೆ ಹೋದುದಕ್ಕಾಗಿ ಯಾರೂ ಬೇಸರಗೊಳ್ಳಬಾರದು. ನನ್ನ ಕರ್ತವ್ಯವು ನನ್ನನ್ನು ಅನ್ಯಥಾ ಇನ್ನೊಂದು ಕಡೆಗೆಳೆಯುತಲ್ಲದೆ ಬೇರೆಯಲ್ಲ. ಸಮರವು ನಮ್ಮ ಮುಖವನ್ನು ದಿಟ್ಟಿಸಿ ನೋಡುತ್ತಿದೆಯೆಂದು ಕಾಣುತ್ತಿದೆ. ಅದು ನೋಡುತ್ತಿರಲಿ. ಈ ಸಲದ ಯುದ್ಧವು ಅಪ್ರತಿಮವಾಗುವುದು. ಜನರು ಕಳೆದ ಸಲಕ್ಕಿಂತಲೂ ಉತ್ಕೃಷ್ಟ ತ್ಯಾಗವನ್ನು ಮಾಡಬೇಕು. ಸಂತೋಷದಿಂದಲೇ ಬಲಿಯನ್ನರ್ಪಿಸಬೇಕು. ಭೂಮಿ, ಭಂಗಾರ, ಸಾಮಾನು, ದನಕರು, ಎಲ್ಲಾ ತರದ ಸಾಧನಗಳನ್ನು ಈ ಸಲ ಬಲಿಗೊಡಬೇಕು. ಮತ್ತು ಲಾಠಿ, ಗುಂಡು, ತುಪಾಕಿಗಳ ಪೆಟ್ಟನ್ನು ತಿನ್ನಲು ಸಿದ್ಧರಿರಬೇಕು. ಅಷ್ಟಾದರೂ ಯಾರೂ ಅಹಿಂಸಾ ತತ್ವವನ್ನು ಬಿಟ್ಟು ಆಚೆ ತಪ್ಪಬಾರದು. ಹೊಡೆದವನ ಮೇಲೆ ರೋಷಗೊಳ್ಳದೆ ಅವನ ಜೀವನ ಮೇಲೆ ಕರುಣೆಯನ್ನುಳ್ಳವರಾಗಬೇಕು. ಕವಿ ಸಾಂಬಲ್ ಭಟ್ಟರೆಂದಂತೆ 'ಯಾರು ಕೆಟ್ಟದಕ್ಕಾಗಿ ಒಳ್ಳೆಯದನ್ನು ಹಿಂತಿರುಗಿ ಕೊಡುತ್ತಾನೋ ಅವನ ಜೀವನವೇ ಸಾರ್ಥಕವು.'"

ಸುಭಾಷ್ಚಂದ್ರಬೋಸರ ಬಂಧನ.

ಸುಭಾಷ್ಚಂದ್ರಬೋಸರು ತಾ ೩ನೇ ದಿನ ಮುಂಬಾಯಿಯಿಂದ ಕಲ್ಕತ್ತೆಗೆ ತೆರಳುತ್ತಿರುವಾಗ, ಮುಂಬಾಯಿಯಿಂದ ೩೦ ಮೈಲು ದೂರದಲ್ಲಿ ಕಲ್ಯಾಣ್ ಎಂಬಲ್ಲಿ ರೈಲಿನಲ್ಲಿ ಬಂಧಿಸಲ್ಪಟ್ಟರು. ಇವರು ಮುಂಬಾಯಿಯಲ್ಲಿ ಪೂರ್ಣ ಸ್ವಾತಂತ್ರ್ಯದ ಕುರಿತು ಉದ್ದಂಡವಾದ ಸ್ಟೇಟ್‌ಮೆಂಟನ್ನು ಮಾಡಿದುದೇ ಕಾರಣವೆಂದು ಕೆಲ ಪತ್ರಿಕೆಗಳು ಅಭಿಪ್ರಾಯಪಡುತ್ತಿವೆ. ಬೋಸರನ್ನು ಕೈದುಮಾಡುವಾಗ ಪೋಲೀಸರು ವಾರಂಟು ತೋರಿಸಲಿಲ್ಲವಂತೆ. ಅದರ ಬದಲು ನಿಮ್ಮನ್ನು ಕೈದುಮಾಡಲಾಗಿದೆ ಎಂದರಂತೆ. ತನ್ನ ಬಂಧನದ ಕುರಿತು ಕೇಳಿದಾಗ ಬೋಸರಿಗೆ ಏನೊಂದಿಷ್ಟು ಆಶ್ಚರ್ಯವಾಗಲಿಲ್ಲ. ಬೋಸರನ್ನು ಎಲ್ಲಿಗೆ ಕೊಂಡೊಯ್ದಿರುವರೆಂದು ತಿಳಿದುಬಂದಿಲ್ಲ.

ನಮ್ಮ ಶಾಲೆಗಳು.

೧. ಪ್ರಸ್ತಾವನೆ.

ಲೇಖಕರು.—ಶ್ರೀಯುತ ಶಿವರಾಮ ಕಾರಂತ.

ಇತ್ತ ಕೆಲವು ಸಮಯದಿಂದ ಪುತ್ತೂರು ತಾಲೂಕಿನ ಬೇರೆ ಬೇರೆ ಶಾಲೆಗಳ ಜೀವನವನ್ನು ತಿಳಿದುಕೊಳ್ಳುವ ಪ್ರಸಂಗವು ನನಗೆ ಆಗಾಗ ದೊರೆಯುತ್ತಿತ್ತು. ನಮ್ಮ ಜಿಲ್ಲೆಯ ಬೇರೆ ಕಡೆಯ ಶಾಲೆಗಳ ಸ್ಥಿತಿಯ ಅರಿವು ನನಗಷ್ಟು ಚೆನ್ನಾಗಿ ಇದ್ದಿರಲಿಲ್ಲ. ಆದರೆ ಕಳೆದ ಅಕ್ಟೋಬರ ತಿಂಗಳಲ್ಲಿ ಪುತ್ತೂರು ತಾಲೂಕು ಬೋರ್ಡಿನ ಅಧ್ಯಕ್ಷರಾದ ಶ್ರೀ ಮೊಳಹಳ್ಳಿ ಶಿವರಾಯರು ತಮ್ಮ ತಾಲೂಕಿನ ಹಾಯರ್ ಎಲಿಮೆಂಟರಿ ಶಾಲೆ ಅಧ್ಯಾಪಕ ವರ್ಗದಲ್ಲಿ ೧೮ ಮಂದಿಯನ್ನು ಕೂಡಿಕೊಂಡು, ಜಿಲ್ಲೆಯ ಇತರ ಭಾಗದ ಹಾಯರ್ ಎಲಿಮೆಂಟರಿ ಶಾಲೆಗಳ ಸಂದರ್ಶನೆಯ ವ್ಯವಸ್ಥೆಯನ್ನು ಮಾಡಿದರು. ಇತರ ಕಡೆಗಳಲ್ಲಿ ಆ ವಿದ್ಯಾಸಮಸ್ಯೆಯನ್ನು ಹೇಗೆ ಬಿಡಿಸುತ್ತಿರುವರು ಎಂಬುದನ್ನು ತಿಳಿಯುವುದು ಅವರ ಉದ್ದೇಶವಿತ್ತು. ಅವರನ್ನೊಡಗೂಡಿಕೊಂಡ, ಮಂಗಳೂರು ಉಡುಪಿ ಕಾರ್ಕಳ ಕುಂದಾಪುರ ತಾಲೂಕಿನ ಶಾಲೆಗಳಲ್ಲಿ ಹಲವನ್ನು ಕಾಣುವ ಪ್ರಸಂಗವು ನನಗೂ ಒದಗಿತು. ಮಕ್ಕಳ ಜೀವನದಲ್ಲಿ ಆಸಕ್ತಿಯುಳ್ಳ ನಾನು ಆ ಪ್ರಸಂಗವನ್ನು ಬಲು ದೊಡ್ಡ ಲಾಭವೆಂದು ತಿಳಿದೆ. ಬಂದ ಬಳಿಕ ಒಂದು ದಿವಸ 'ಸ್ವದೇಶಾಭಿಮಾನಿಯ' ಸಂಪಾದಕ ವರ್ಗದ ಶ್ರೀ. ಮುಳ್ಯ ಮಹಾಬಲ ರಾಯರೂ ನನ್ನನ್ನು ಕಂಡಿದ್ದರು. ಅವರ ಅಪೇಕ್ಷೆಯ ಮೇರೆಗೆ ನಾನು ಈ ಲೇಖನಗಳನ್ನು ಬರೆಯಲು ತೊಡಗಿದ್ದೇನೆ.

ನಾನು ಕೇವಲ ಮಕ್ಕಳ ನಲಿವು ಚೆಲುವುಗಳ ಕಡೆಗೆ ಕಣ್ಣಿಡುವವನು. ಅವರಲ್ಲಿನ ಉತ್ಸಾಹ, ಕ್ರಿಯಾಶಕ್ತಿಗಳು ಯಾವ ರೀತಿಯಿಂದ ಬೆಳೆದಿವೆ ಇಲ್ಲವೆ ಕೊಳೆತಿವೆ ಎಂದು ತಿಳಿಯುವುದು ನನ್ನ ಗುರಿ. ಆದುದರಿಂದ ನನ್ನ ಲೇಖನವು ನಮ್ಮ ವಿದ್ಯಾಭ್ಯಾಸ ಪದ್ಧತಿಯ ಟೀಕೆಯೇ ಹೊರತು ಯಾವುದೊಂದು ಶಾಲೆಯ ವಯಕ್ತಿಕ ಟೀಕೆಯಲ್ಲ. ಈ ಪ್ರವಾಸದ ಕಾಲದಲ್ಲಿ ನಾನು ಸಂದರ್ಶಿಸಿದ ಶಾಲೆಗಳು ಇವು—ಕನ್ನಂಗಾರ, ಉಳ್ಳಾಲ, ಮೂಡಬಿದರೆ, ಹಿರಿಯಡ್ಕ, ಅಲ್ಲಿಬಾಗಿಲು, ಬೆಳ್ವೆ, ಬೆಳ್ಳದ ಕಟ್ಟೆ, ಕೂರಾಡಿ, ಬೈಂದೂರು, ಕಂಗಾರು ಕಟ್ಟೆ, ಶಂಕರನಾರಾಯಣ, ಶಿರ್ವ, ಕೋಟೇಶ್ವರ, ಗಂಗೊಳ್ಳಿ, ಉದ್ಯಾವರ (ಎರಡು) ಕಟಪಾಡಿ, ಕಾಪು ಎರ್ಮಾಳ ಮೂಲ್ಕಿ, ತಲಪಾಡಿ, ಕಪಿಲು, ಬಜಪೆ, ಸುರತ್ಕಲ್, ಪಣಂಬೂರು, ಬೋಳೂರು. ಈ ಸ್ಥಳಗಳಲ್ಲಿ ನನ್ನ ಮಾತುಕಥೆಗಳು ಹಲವು ಸಾಧಾರಣ ೧—೨ ರಿಂದ ಎರಡು ತಾಸಿನ ತನಕ ಬಿಸ್ಕತ್ತು ಮಕ್ಕಳೊಡನೆಯೇ ನಡೆದಿತ್ತು. ವಿನಹ ಉಪಾಧ್ಯಾಯರೊಡನಲ್ಲ. ಆದೂ ಕೆಲವು ಶಾಲೆಗಳಲ್ಲಿ ಹುಡುಗರನ್ನು ಕಾಣಲಾರದೆ, ಅವರ ಚಿತ್ರಗಳನ್ನು ಮಾತ್ರ ಕಾಣುವಂತಾಗಿತ್ತು. ಈ ಲೇಖನವನ್ನು ಕೇವಲ ಈ ಪ್ರವಾಸವೊಂದರ ಮೇಲೆ ಆಧರಿಸದೆ, ಇತರ ಶಾಲೆಗಳೊಡನೆ ನನಗುಂಟಾದ ಪರಿಚಯದಿಂದಲೂ ಬರೆಯುತ್ತೇನೆ. ಆದುದರಿಂದ ಇದು ಯಾವುದೊಂದು ಶಾಲೆಯ ಟೀಕೆಯೂ ಅಲ್ಲ, ಪ್ರಶಂಸೆಯೂ ಅಲ್ಲ.

ಈ ಲೇಖನವನ್ನು ಬೇರೆ ಬೇರೆ ವಿಭಾಗಗಳನ್ನಾಗಿ ಬರೆಯಬೇಕೆಂದಿದ್ದೇನೆ. ಅವುಗಳು ಯಾವುವೆಂದರೆ—ಮಕ್ಕಳ ನಗು, ಮಕ್ಕಳ ಮನಸ್ಸು, ಕ್ರಿಯಾಶಕ್ತಿ, ಮಕ್ಕಳ ಆಟಗಳು, ಮಕ್ಕಳಿಗೂ ಸೃಷ್ಟಿಗೂ ಇರುವ ಸಂಬಂಧ, ಉಪಾಧ್ಯಾಯರಿಗೂ ಇರುವ ಸಂಬಂಧ, ಮಕ್ಕಳ ಶಾಲಾ ಕೆಲಸಗಳು, ತರ್ಕ, ಪ್ರಬಂಧ, ಮಕ್ಕಳ ಪಠ್ಯಪುಸ್ತಕಗಳು, ಆರೋಗ್ಯ, ಮಕ್ಕಳ ಭವಿಷ್ಯ.

ಈ ಎಲ್ಲಾ ವಿಭಾಗಗಳ ಮೇಲೆ ಬೇರೆ ಬೇರೆಯಾಗಿ ಬರೆದರೆ ಹೆಚ್ಚಿನ ಉಪಯೋಗವಾಗಬಹುದೆಂದು ಕೇವಲ ಒಂದು ಲೇಖನದಲ್ಲಿ ಇದನ್ನು ಮುಗಿಸುವ ಹವ್ಯಾಸಕ್ಕೆ ಹೋಗದೆ ಬೇರೆ ಬೇರೆ ಲೇಖನಗಳನ್ನಾಗಿ ಬರೆಯುವೆನು. ಈ ಲೇಖನಗಳು ಪ್ರತ್ಯಕ್ಷ ಅನುಭವದ ಮೇಲೂ, ಓದಿ ತಿಳಿದುದರ ಮೇಲೆ, ಮಕ್ಕಳ ಜೀವನದಿಂದ ನಾನರಿತ ಹಲವು ವಿಷಯಗಳ ಮೇಲೂ ಹೊಂದಿದೆ. ಇದೇ ಉದ್ದೇಶದಿಂದಲೇ ಪುತ್ತೂರು ತಾಲೂಕ ಬೋರ್ಡು ಅಧ್ಯಕ್ಷರ ಸಹಾಯದಿಂದ ಅವರ ತಾಲೂಕಿನ ಕೆಲವೊಂದು ಶಾಲೆಗಳಲ್ಲಿ ೪—೧೦ ದಿನಗಳ ತನಕ ವಾಸವಾಗಿದ್ದು ಮಕ್ಕಳೊಡನೆ ಒಂದಾಗಿ ಅವರ ಒಳ ಹೊರಗುಗಳನ್ನು ಕಂಡುದೂ ಅಲ್ಲದೆ, ಅವುಗಳನ್ನು ತಿದ್ದುವ, ಇಲ್ಲವೆ ಸುಧಾರಿಸು

ವಿವಿಧ ಸಮಾಚಾರಗಳು.

ಜವಾಹರಲಾಲರಿಗೆ ೨ ವರ್ಷ ಕಠಿಣ ಶಿಕ್ಷೆ ಮತ್ತು ೫೦೦ ರೂಪಾಯಿ ಜುಲುಮಾನೆ.

ಪಂಡಿತ ಜವಾಹರಲಾಲರನ್ನು ಬಂಧಿಸಿ ಅಲ್ಲಹಾಬಾದಿನ ನೈನಿ ಸೆರೆಮನೆಯಲ್ಲಿಟ್ಟಿದ್ದರಷ್ಟೆ. ೩೦ನೇ ದಿನ ಅವರ ಮೇಲಿನ ನ್ಯಾಯವಿಚಾರಣೆಯು ಜೈಲಿನೊಳಗೆಯೇ ನಡೆಯಿತು. ಸೆರೆಮನೆಯ ಹೊರಗೆ ಜನಸಂದಣಿಯು ಕೂಡಿ "ಗಾಂಧೀಜೀ ಜೈ ಜವಾಹರಲಾಲಜೀ ಜೈ" ಎಂದು ಜಯಕಾರವನ್ನೆಬ್ಬಿಸುತ್ತಿದ್ದರು. ಜೈಲಿನೊಳಗೆ ಕುರ್ಚಿಬೆಂಚುಗಳಿಡಲ್ಪಟ್ಟಿದ್ದುವು. ಪೋಲೀಸರು ಅತ್ತಿತ್ತ ತಿರುಗಾಡುತ್ತಿದ್ದರು. ಜವಾಹರಲಾಲರ ಮುಖವು ಕೊಂಚ ಕಳೆಗುಂದಿತ್ತಾದರೂ ಸಂತೋಷದಲ್ಲಿದ್ದರು. ೧೧.೩೦ಕ್ಕೆ ಮೇಜಿಸ್ಟ್ರೇಟರ ಆಗಮನವಾಯಿತು. ಒಂದರೇ ಜವಾಹರಲಾಲರ ನ್ಯಾಯವಿಚಾರಣೆ ಪ್ರಾರಂಭವಾದಿದರು.

ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರರನ್ನು ವಿಚಾರಿಸಲಾಗಿ ಅವರು ತಾನು ಡಿಸೆಂಬರ್ ೨೬ನೇ ದಿನ ಜವಾಹರಲಾಲರ ಮೇಲೆ ಅಲ್ಲಾಬಾದ್ ನಗರವನ್ನು ಬಿಡಬಾರದೆಂದು ನೋಟೀಸು ಜಾರಿಮಾಡಿದ್ದೆನು. ಆದರೂ ಅದನ್ನುಲ್ಲಂಘಿಸಿ ಹೊರಹೋಗಿದ್ದರು ಎಂದರು. ಆ ಮೇಲೆ ಪೋಲೀಸ ಸುಪರಿಂಟೆಂಡೆಂಟರ ಸಾಕ್ಷಿ ನಡೆಯಿತು. ಅವರು ತನಗೆ ಜವಾಹರಲಾಲರ ಪರಿಚಯವು ೧೯೨೧ರಿಂದ ಇದೆ. ಅವರು ತನ್ನ ಮೇಲಿನ ಶಾಸನವನ್ನುಲ್ಲಂಘಿಸಿದುದಕ್ಕಾಗಿ ಎಮರ್ಜೆನ್ಸಿ ಆರ್ಡಿನೆನ್ಸಿನ ಮೇರೆಗೆ ತಾನು ಅವರನ್ನು ಕೈದುಮಾಡಿ ನೈನಿ ಜೈಲಿಗೊಯ್ದಿರುವೆನು ಎಂದರು. ಆದಾದ ಮೇಲೆ ಮೇಜಿಸ್ಟ್ರೇಟರು ಜವಾಹರಲಾಲರಿಗೆ "ನಿಮ್ಮ ಕ್ರಾಸ್ ಎಕ್ಸಾಮಿನ್ ಮಾಡಲಿದೆಯೇ" ಎಂದು ಕೇಳಿದರು. ಅದಕ್ಕೆ ಜವಾಹರಲಾಲರು ನಿಮಗೆ ನಾನು ತೊಂದರೆಯನ್ನುಂಟು ಮಾಡಲು ನಾನು ಬಯಸುವುದಿಲ್ಲ. ಆದರೆ ಒಂದೆರಡು ಮಾತುಗಳನ್ನು ಹೇಳಲಿಕ್ಕಿರುವೆನು" ಎಂದರು.

ಪಂಡಿತ ಜವಾಹರಲಾಲ ನೆಹರುರವರು

ಮ್ಯಾಜಿ — ನಿಮ್ಮ ನ್ಯಾಯವಿಚಾರಣೆಗೆ ಸಂಬಂಧಿಸಿದ ವಿಷಯಗಳ ವಿಷಯ ನೀವು ಏನಾದರೂ ಹೇಳಲಿರುವಿರಾದರೆ ಕೋರ್ಟಿನವರನ್ನು ಹೊರಗೆ ಕಳುಹಿಸಲಿತ್ತೇನೆ. ನೀವು ನಿಮಗೆ ಬೇಕಾದುದನ್ನು ಹೇಳಬಹುದು.

ಜವಾ — ಹಾಗಾದರೆ ಇಲ್ಲೇನು ನೀವೊಂದು ರಹಸ್ಯ ವಿಚಾರಣೆಯನ್ನು ಜರಗಿಸಬೇಕೆಂದಿರುವಿರಾ?

ಮ್ಯಾಜಿ — ಅಲ್ಲ. ನೀವು ನಿಮಗೆ ಬೇಕಾದ ಏನನ್ನು ಹೇಳಬಹುದು. ನಾನು ಕೇಳಲು ಸಿದ್ಧನಿದ್ದೇನೆ.

ಜವಾ — ಇದೇನು ರಹಸ್ಯದ ನ್ಯಾಯವಿಚಾರಣೆಯೋ? ಹಾಗೆ ಸಂಗತಿಗಳನ್ನು ನಾನು ಹೇಳುವುದಿಲ್ಲ. ಕೂಡಿದ ಜನರು ಮತ್ತು ಕೋರ್ಟಿನವರ ನ್ಯಾಯಿಕ ಮಾರ್ಗವು ಸರಿಯಾಗಿದೆ. ನನ್ನ ಹೇಳಿಕೆಯಿಂದಾಗಿ ಅವರು ಹೋಗಲಿಕ್ಕಿಲ್ಲ.

ಮ್ಯಾಜಿ — ನೀವು ಏನು ಹೇಳಲಿರುತ್ತೀರೆಂದು ನನಗೆ ಈಗ ತಿಳಿಯಿತು. ಈಗ ನಾನು ನನ್ನ ಮನಸ್ಸನ್ನು ಬದಲಾಯಿಸಬೇಕು. ನೀವು ಹೇಳುವುದನ್ನು ಕೋರ್ಟಿನವರು ಕೇಳಬೇಕೆಂದು ನನ್ನ ಇಚ್ಛೆಯಾಗಿಲ್ಲದಿರುವುದರಿಂದ ನಾನು ಅವರನ್ನು ಹೊರಗೆ ಕಳುಹಿಸಲೇಬೇಕಾಗಿದೆ.

ಜವಾ — ಸರಿ. ರೈತರ ವಿಷಯ ನಾನೇನನ್ನೂ ಹೇಳಬಾರದೆಂದು ನಿಮ್ಮಿಷ್ಟವೇ? ಆದರೆ ಇಂದಿನ ನ್ಯಾಯವಿಚಾರಣೆಯಲ್ಲಿ ಮುಂದಾಗಲಿರುವ ಸಂಗತಿಗಳೂ ನನಗೆ ಸಂಬಂಧಿಸಿದುವೋ" ಎಂದು ಕೇಳಿದರು. ನ್ಯಾಯವಿಚಾರಣೆಯು ನಡೆಯಿತು. ಮೇಜಿಸ್ಟ್ರೇಟರು ಪಂಡಿತರಿಗೆ ೨ ವರ್ಷ ಕಠಿಣ ಶಿಕ್ಷೆಯನ್ನೂ, ೫೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು. ಅದನ್ನು ಸ್ವೀಕರಿಸಿ ಜವಾಹರಲಾಲರು "ಥೇಂಕ್ ಯು" ಹೇಳಿದರು.

ಬಹಳ ಸಾರೆ ಹಡೆಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವದು. [illegible] ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣೆ ಬಂದಾಗುವದು. [illegible] ಸುಲಭವಾಗುವುದಿಲ್ಲ. ಮೊದಲು ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಆರ್ ಟಿ ಚಾಂಗದೇವ ಪೂರ್ವ ಖಾನದೇಶ — ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ [illegible] ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ||

ಸೂಚನೆ:— ಯಾವದಾದರೂ ಡಬ್ಬಿಗೆ ಟ ಪಿ ನಾಥ ನಮ್ಮ ಈ ರಿಜಿಸ್ಟರ್ಡ ಔಷಧದ ಕಪಟ ನಕಲು ಹೊರಟಿದೆ. ಪೂರ್ಣ ವಿಚಾರಮಾಡಿ ತರಿಸಿಕೊಳ್ಳಿರಿ. ಈ ಸರ್ಟಿಫಿಕೇಟು ಕೂಟ್ಟಿಯದೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಇನಾಮು

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S M C

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ

ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ

ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೂಲ್ಯವಾದ ೩೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟದೆ.

ಮದನಮಸ್ತ ಪಾಕ ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ಎಲ್ಲಿದ್ದರ ಹಣವನ್ನು [illegible] ನೀವು ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ [illegible] ನಪುಂಸಕತ್ವ ಧಾತುಕ್ಷೀಣತೆ ಅಶಕ್ತತೆ ಕಾಮೋತ್ತೇಜನೆಯಾದ ಕೂಡಲೇ ವೀರ್ಯಪತನವಾಗೋಣ [illegible] ಪರಿಣಾಮ [illegible] ಸ್ವಪ್ನದೋಷ ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತದೆ. ೨೧ ದಿವಸ ಸಾಲುವ ೬೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ ೬ ರೂ ೧ [illegible] ಡಬ್ಬಿಗೆ ಖರ್ಚು ಸಹಿತ ರೂ ೧೧ ಮೂರು ಡಬ್ಬಿಗೆ ರೂ ೧೫ ಮಾತ್ರ ಪತ್ಯವಿಲ್ಲ. ಅನುಭವ ನಮ್ಮ ಪಡೆಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಶ್ರೀಮಾನ ಮಾಸ್ತರರ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

೧, ಡಾ। ಹರೀಹರ ಶೀತಾರಾಮ ರಾಜಂದೇಕರ ಎಲ್ ಎಮ್ ಓ ಎಚ್ ಎಸ್ ಜಿ ಪ್ರೋಸ್ಟ ರಾಜಂದಾ ಜಿ ಅಕೋಲಾ – ತಮ್ಮ ಮದನಮಸ್ತ ಪಾಕದಿಂದ ಜೀವನಶಕ್ತಿಯ ಬೆಳವಣಿಗೆಯಾಗಿ ವೀರ್ಯ ಹಾನಿಯ [illegible] ಬಲಹೀನತೆಯೂ ಉದರ ವಿಕಾರವು, ಇಂದ್ರಿಯ ಶೈಥಿಲ್ಯವು ಸಂಧಿವಾತ ಮೊದಲಾದ ರೋಗಗಳಲ್ಲಿ [illegible] ವೀರ್ಯ ಬಲ ಹಾಗೂ ಸ್ಮರಣಶಕ್ತಿಯು ಬೆಳೆಯುತ್ತದೆ. ತಮ್ಮ ಪಾಕದ ಪ್ರಸಾರವು ಹೆಚ್ಚಲಿ. ಪರಮೇಶ್ವರನು ತಮ್ಮ ಕೀರ್ತಿಯನ್ನು ಹಬ್ಬಿಸಲಿ

೨ ರಾಜವೈದ್ಯ ರಾಮಚಂದ್ರ ಗಣೇಶ ದೀಕ್ಷಿತ ಜೋಶಿ ಪೋಸ್ಟ ವಾಳವೆ ಜಿ ಸಾತಾರಾ, – ತಮ್ಮ ಮದನಮಸ್ತ ಪಾಕವನ್ನು ಹಿ. ಸ. ವಾ ದೇಶಪಾಂಡೆ ಡಾ ಲೋಕಲ್ ಬೋರ್ಡ ಇವರಿಗೆ ಕೊಟ್ಟೆನು. ಇದರಿಂದ ಅವರ ಸ್ವಪ್ನಾವಸ್ಥೆ ಧಾತು ನೀರಾಗುವಿಕೆ ಹಾಗೂ ಅಶಕ್ತತೆ ಈ ರೋಗಗಳು ನೆಟ್ಟಗಾಗಿ ಹಸಿವೆ, ಶಕ್ತಿ ಮತ್ತು ತೂಕ ಬೆಳೆಯಿತು. ಇದನ್ನು ತಿಳಿಸಲು ಆನಂದವಾಗುತ್ತದೆ. ಸರ್ವರು ಈ ಪಾಕದ ಅನುಭವ ತೆಗೆದುಕೊಳ್ಳಬೇಕೆಂದು ಶಿಫಾರಸು.

೩ ಜಗನ್ನಾಥ ರಂಗನಾಥ ದಡಪೆ ಸ್ಕೂಲಮಾಸ್ತರ ಪೋಸ್ಟ ಕಡವೆ ಜಿ ಕೊಲ್ಹಾಪುರ – ತಮ್ಮ ಮದನಮಸ್ತ ಪಾಕದ ೨ ಡಬ್ಬಿಯನ್ನು ಸೇವಿಸಿದೆನು. ನನಗೆ ೧೩ ತರದ ಆಶ್ಚರ್ಯಕಾರಕ ಗುಣವಾಯಿತು. ತೂಕವು ೫ ಪೌಂಡು ಬೆಳೆಯಿತು. ತಮ್ಮ ಉಪಕಾರವನ್ನು ನಾನು ಆಜನ್ಮ ಮರೆಯಲಾರೆನು

ಸೂಚನೆ— ಬೇರೆಯವರ ಅನುಭವವನ್ನು ಕೃಪೆಯಿಂದ ನಮ್ಮ ಮೇಲೆ ಹೊರಿಸಬೇಡಿರಿ. ಇಷ್ಟು ಖಾತ್ರಿಯಾದರೂ ಈ ಪ್ರಭಾವಶಾಲಿ ಪಾಕದ ಮೇಲೆ ಯಾರ ವಿಶ್ವಾಸ ಕೂಡುವುದಿಲ್ಲವೋ ಅವರು ರೋಗಮುಕ್ತರಾಗಿ ಸಂಸಾರ ಸುಖ ಭೋಗಿಸುವ ವೇಳೆಯು ಬಂದಿಲ್ಲವೆಂದು ತಿಳಿಯಬೇಕು. ಈ ಪಾಕದಲ್ಲಿ ೩೦ ವನಸ್ಪತಿ ಧಾತುಪೌಷ್ಟಿಕ ಇಲ್ಲವೆಂದೂ, ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ೧೧೦೦ ರೂ ಇನಾಮು ಕೊಡುವೆವು

ಪತ್ತೆ.— ವೈದ್ಯ ಮೋಹನಲಾಲ ಎಸ್ ಔಷಧಾಲಯ,

ಮು ಪೋ. ಮಿರಜ S M C

ಕನ್ನಡದ ದುರವಸ್ಥೆ.

ರಾಷ್ಟ್ರ ಸಂಘಟನಾ ಕಾರ್ಯವು ಭಾಷಾಪ್ರೇಮದ ಮೇಲೆ ಹೊಂದಿಕೊಂಡಿರುತ್ತದೆಂಬುದು ಅಕ್ಷರಶಃ ಸಹಜ. ಒಂದು ಭಾಷಾದೇವಿಯನ್ನು ಎಷ್ಟು ಹೆಚ್ಚು ಜನರು ಪೂಜಿಸಿದರೋ, ಅಷ್ಟು ಆ ಭಾಷೆಗೆ ಬಲ ಬರುತ್ತದೆ. ಎಷ್ಟು ಹೆಚ್ಚು ಜನರು ಅದರ ಪೂಜೆಯನ್ನು ಮರೆತು ಬಿಟ್ಟರೋ, ಅಷ್ಟು ಅಶಕ್ತಿಯನ್ನು ಆ ಭಾಷೆಯು ಹೊಂದುತ್ತದೆ

\+ \+ \+ \+

ಇಂದು ಯಾವ ಕನ್ನಡ ಪತ್ರಿಕೆಯ ಆತ್ಮನಿವೇದನೆಯನ್ನು ನೋಡಿದರೂ ಅದು ಆರ್ಥಿಕ ಮುಗ್ಗಟ್ಟು 'ಬಾಲಗ್ರಹ' 'ಕಷ್ಟ ನಷ್ಟ'ಗಳಲ್ಲಿ ಹೆಣಗಾಡಿದ್ದ ಸಂಗತಿಯೇ ತಿಳಿದು ಬರುತ್ತದೆ. ಕನ್ನಡ ಪತ್ರಿಕೆಗಳು ಆರೋಗ್ಯದಿಂದಿರುವುದು ಅಪರೂಪವೆಂದೇ ಹೇಳಬೇಕು

\+ \+ \+ \+

ಕರ್ನಾಟಕದಲ್ಲಿ ಎಷ್ಟು ಮಾಸಿಕ ಪತ್ರಿಕೆಗಳು ಹೊರಟವು! ಎಷ್ಟು ವಾರ ಪತ್ರಿಕೆಗಳು ಹೊರಟುವು? ಎಷ್ಟು ಬದುಕಿದುವು ಎಷ್ಟು ಅವಸಾನ ಹೊಂದಿದುವು ಎಂಬುದು ಎಲ್ಲರೂ ತಿಳಿದ ವಿಷಯವೇ! ಇದಕ್ಕೆಲ್ಲ ಕಾರಣವೇನು?

\+ \+ \+ \+

ಕಾರಣವೇನು? - ಜನರಲ್ಲಿ ಭಾಷಾ ಪ್ರೇಮದ ಅಭಿಮಾನ ಒಬ್ಬ ಉತ್ತಮ ಕೆಲಸಗಾರನನ್ನು ಎತ್ತಿ ಹಿಡಿದು ಅವನ ಉತ್ತಮ ಕೆಲಸದ ಫಲವನ್ನುಣ್ಣಬೇಕೆಂಬ ಆಶೆಯೂ ತೀರ ಕಡಿಮೆ. ಪ್ರೋತ್ಸಾಹದ ಸಂಗತಿಯು ತೀರ ಅಪರೂಪ

\+ \+ \+ \+

ಕನ್ನಡ ಪತ್ರಿಕೆಗಳಿಗೆ ಚಂದಾದಾರರಾಗುವುದೆಂದರೆ ಅದೊಂದು ನಷ್ಟವೆಂದೇ ಕೆಲವು ಮಹಾಶಯರ ಅಭಿಪ್ರಾಯವಿದೆ. ಎಂತಾದರೂ [illegible] ಕೆಲವು ಜನರು ಒಪ್ಪಿಯೂ [illegible] ಚಂದಾದಾರರಾಗಿ ಒಂದು ವರುಷವನ್ನು ಕಳೆದರೂ, ಮರು ವರುಷ ಅವರ ಪತ್ತೆಯೇ ಇರುವುದಿಲ್ಲ

\+ \+ \+

ಕರ್ನಾಟಕದ ಜನರಲ್ಲಿ ಹಣ ಕಡಿಮೆಯೇ? ಇಂಗ್ಲಿಷ ಪತ್ರಿಕೆಗಳಿಗೆ ವರುಷಕ್ಕೆ ನೂರಿನ್ನೂರು ರೂಪಾಯಿ ವೆಚ್ಚ ಮಾಡುತ್ತಿರುವ ಕರ್ನಾಟಕದಲ್ಲಿ ಹಣ ಕಡಿಮೆಯೇ? ಅಲ್ಲ, ಅಲ್ಲ ಹಣ ಉಂಟು ಮನಸ್ಸಿಲ್ಲ!

\+ \+ \+ \+

ಕನ್ನಡದ ದುರವಸ್ಥೆಯು ಒಂದೊಂದಾಗಿಯೇ ಇದರಿಂದಾಗಿದೆ. ಜನರ ಆಲಸ್ಯ ಕೀಳುಭಾವನೆಯೇ ಅಲ್ಲದೆ ಬೇರೆ [illegible] ವರಿಂದಲ್ಲ. ಇದು ಎಂದಿಗೆ ಪರಿಹಾರವಾದೀತು? ಇದಕ್ಕೆ ಉಪಾಯವೇನು?

\+ \+ \+ \+

ಕರ್ನಾಟಕ ಏಕೀಕರಣವು ಬೇಕೇಸೋ ನಿಜ. ಆದರೆ ಅದು ಬರೀ ಬಾಯಿ ಮಾತಿನಿಂದಾಗಿಯೂ ಕೈಗೂಡಿ ಬಾರದು. ಅದನ್ನು ಕಾರ್ಯತಃ ನೆರವೇರಿಸಲು ತಕ್ಕ ಸಂಸ್ಥೆಗಳಿರಬೇಕು

\+ \+ \+ \+

ಅದಕ್ಕೆ ಚಳವಳಿಗಳು ಬೇಗನೆ ಹಾಗೆ ಒಂದು ಸೇವೆಗೆ ಸಂಸ್ಥೆಗಳು ಬೇಕು. ಬಲವಾದ ಸಂಸ್ಥೆಗಳು ಬೇಕು. ಶಿಥಿಲವಾದ ಸಂಸ್ಥೆಗಳು ಆರಂಭಶೂರತ್ವದಿಂದ ಕೆಲಸ ಮಾಡಿ ಕೆಳಗೆ ಬಿದ್ದರೆ ಮತ್ತು ಅದರಿಂದ ಇದ್ದ ಉತ್ತಮ ಸಂಸ್ಥೆಗಳ ಕೆಲಸಕ್ಕೆ ಬಹಳ ತೊಡಕಿದೆ. ಅಂದರೆ ಶಿಥಿಲ ಸಂಸ್ಥೆಗಳು ಘನ ಸಂಸ್ಥೆಗಳ ಮಾನ್ಯತೆಯನ್ನು ತೆಗೆದು ಬಿಡುತ್ತವೆ

\+ \+ \+ \+

ಕನ್ನಡ ಸೇವಕರು ದೇಶದೇಶದಲ್ಲಿ ಸಾವಿರಾರು ಇರುತ್ತಿರುವರಾದರೂ ಅವರು ಏಕಸ್ಥರಾಗಿ ಮಾಡಿದ ಕೆಲಸದ ಫಲವು ಸಾಮಾನ್ಯ ಜನರಿಗೆ ತಿಳಿಯುವುದಿಲ್ಲ. ಅಲ್ಪ ಸಂಖ್ಯೆಯ ಮುಂದಾಳುಗಳು ಒಗ್ಗಟ್ಟಾಗಿ ಒಂದು ಕೆಲಸ ಮಾಡಿದರಾಗಲಿಲ್ಲ. ಅದಕ್ಕೆ ಬಹುಸಂಖ್ಯೆಯ ಹಿಂಬಾಲಕರ ಒತ್ತಾಸೆಯೂ ಬೇಕು

\+ \+ \+ \+

ಕರ್ನಾಟಕದಲ್ಲಿ ಜರಗುವ ಪರಿಷತ್ತು ಸಭೆ ಮೊದಲಾದುವುಗಳ ಸುದ್ದಿಯು ಮುಂದಾಳುಗಳಿಗೆ ಮಾತ್ರ ತಿಳಿದು ಬರುತ್ತದೆ. ಹಿಂಬಾಲಕರಿಗೆ ಅದರ ವರ್ತಮಾನವೇ ಇರುವುದಿಲ್ಲ. [illegible] ಬೆಂಬಲವೆಲ್ಲಿ ದೊರೆತೀತು?

\+ \+ \+ \+

ರಾಷ್ಟ್ರದ ಶಕ್ತಿಯು ರೈತರಲ್ಲಿ ಇರುವಂತೆ ಭಾಷೆಯ ಶಕ್ತಿಯು ಸಾಮಾನ್ಯ ಜನರಲ್ಲಿದೆ. ಆದುದರಿಂದ ಹಂತಹಂತದ ಸಾಮಾನ್ಯ ಜನರನ್ನು ಕಮ್ಮತ್ತ ಕಡೆಗೆಳೆಯುವುದೇ ಕನ್ನಡಾಭಿಮಾನಿಗಳ ಪ್ರಥಮ ಕರ್ತವ್ಯ

\+ \+ \+ \+

ಕನ್ನಡ ಭಾಷೆಯು ಪ್ರಚಾರಗೊಳ್ಳುವಂತಾಗಬೇಕು. ಅದನ್ನು ಆದಷ್ಟು ಹೆಚ್ಚು ಮಂದಿ ಓದಿ ಬರೆದು ತಿಳಿದುಕೊಳ್ಳುವಂತಾಗಬೇಕು. ಕನ್ನಡವಿಲ್ಲದ ಕಂದನಿಲ್ಲವೆಂದಾಗಬೇಕು

\+ \+ \+ \+

ಸದ್ಯೋಜನರ ಚಳವಳಿಗಿಂತ ಸಾಮಾನ್ಯ ಜನರಲ್ಲಿ ಕನ್ನಡವನ್ನು ಬಳಕೆಗೆ ತರುವ ಪ್ರಚಾರಕಾರ್ಯವೇ ಹಿರಿಯದಿರುವ. ಇದರಿಂದಾಗಿ ಕನ್ನಡ ಪ್ರಕೃತಿನ ದುರವಸ್ಥೆಯು ಪರಿಹಾರವಾದೀತು

—— ——

ಅನುಕ್ರಮಣಿಕೆ.

ಲೇಖನಗಳು
ಮಂಚೂರಿಯಾದಲ್ಲಿ
ಸ್ವೈರವಿಚಾರಗಳು
ಟಿಪ್ಪಣಿಗಳು
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ
ಒಳದೇಶ ವರ್ತಮಾನ ೧
ದಕ್ಷಿಣಕನ್ನಡ— ಮಂಗಳೂರು, ಉಡುಪಿ, ಕುಂದಾಪುರ, ಮುಲ್ಕಿ,
ಬಂಟ್ವಾಳ, ಪಾಣೆಮಂಗಳೂರು, ಕುರುಕಾಲು, ಕೋಟ್ಟ,
ಸುರ್ಪರ, ಪುತ್ತೂರು ೭
ವಿವಿಧ ಸಮಾಚಾರಗಳು ೧೧
ನಮ್ಮ ಶಾಲೆಗಳು ೧೪
ಹಿಂದೂದೇಶದ ಸ್ಥಿತಿಗತಿಗಳ ಕುರಿತು ಕೆಲವರ ಅಭಿಪ್ರಾಯಗಳು ,,
ಡಾ ಅನ್ಸಾರಿ ರಾಜಗೋಪಾಲಾಚಾರ್ಯ ಸತ್ಯಮೂರ್ತಿ,
ಕರ್ನಾಟಕ ಸದಾಶಿವರಾವ್, ಕಸ್ತೂರಿಬಾಯಿ ಗಾಂಧಿಯವರನ್ನು
ಕೈದು ಮಾಡಿದರು! ೯
ಬಂಧನದ ಗೊಂದಲ! ೧೦
ದ ಕ ಜಿಲ್ಲಾ ಪ್ರಾಥಮಿಕ ಶಾಲಾ ಉಪಾಧ್ಯಾಯರ ಪರಿಷತ್ತು ೩

ಸ್ವದೇಶಾಭಿಮಾನಿ.

ತಾ ೧೫ನೇ ಶುಕ್ರವಾರ ಜನವರಿ ೧೯೩೨

ಮಂಚೂರಿಯಾದಲ್ಲಿ

ಲೋಕದ ಒಂಭತ್ತು ಪ್ರಮುಖ ರಾಷ್ಟ್ರಗಳೇ ಕೂಡಿ ಕೆಲವು ವರ್ಷಗಳ ಹಿಂದೆ ಮಾಡಿದ ಒಪ್ಪಂದದ ಪ್ರಕಾರವೇ ಮಂಚೂರಿಯಾ ದೇಶದ ಸರ್ವ ಸ್ವಾಮಿತ್ವವು ಚೀನಾ ದೇಶದ್ದಾಗಿದ್ದು ಅದು ಚೀನಾ ದೇಶದ ಒಂದು ಅಂಗವಾಗಿರುವಾಗ, ಈ ಎಲ್ಲಾ ರಾಷ್ಟ್ರಗಳು ಒಪ್ಪಿ ಸಹಿ ಹಾಕಿದ ಕೆಲ್ಲೊಗ್ ಶಾಂತಿ ಸಂಧಿ (Kellog Peace Pact)ಯ ಪ್ರಕಾರ ಪಂಚಾಯಿತಿಯಿಂದಲೇ ಎಲ್ಲಾ ಭಿನ್ನತೆಗಳನ್ನು ತೀರ್ಮಾನಿಸಲು ಅವರೆಲ್ಲರೂ ಬದ್ಧರಾಗಿರುವಾಗ ಜಪಾನು ಈ ಎರಡೂ ಸಂಧಿಗಳನ್ನು ಮುರಿದು ಮಂಚೂರಿಯಾವನ್ನು ನುಗ್ಗಿ ಅದರ ಅಧಿಕಾರವನ್ನು ವಶಪಡಿಸಿಕೊಂಡಿತು. ಇದರಿಂದ ಶಾಂತಿಸ್ಥಾಪನೆಯೇ ಉದ್ದೇಶವುಳ್ಳ ಜನಾಂಗಗಳ ಸಂಘ (League of Nations)ವು ಬೆಚ್ಚಿ ಬಿದ್ದು ಜಪಾನಿನ ಕೈಯನ್ನು ತಡೆಯಲಿಕ್ಕೆ [illegible] ಬಹಿರಂಗ ವಿಚಾರಣೆ ನಡೆಸಿ [illegible] ಜಪಾನು ತನ್ನ ಹಟವನ್ನು ಬಿಡಲು ತಯಾರಿಲ್ಲ. ಲೀಗ್ ಒಫ್ ನೇಶನ್ಸಿನಲ್ಲಿ ಚೀನಾ—ಜಪಾನಿನ ಕಲಹದ ತೀರ್ಮಾನದ ಬಗ್ಗೆ ಈ ರೀತಿ ವಾತಾವರಣ ನಡೆದ ವೇಗ [illegible] ಜಪಾನಿನೊಡನೆ ಇಂಗ್ಲೆಂಡ್—ಫ್ರಾನ್ಸ್ ದೇಶಗಳ [illegible] ಕೆಲಸಗಳೇನೋ ಕೇಳಿಬರುವುದಿಲ್ಲ.

ಹೇಗೂ ಜಪಾನ ದೇಶಕ್ಕೆ ವಿರೋಧವಾಗಲು ಇಂಗ್ಲೆಂಡಿಗೂ—ಫ್ರಾನ್ಸಿಗೂ ಒಪ್ಪಿಗೆಯಿರುವುದಿಲ್ಲವೆಂಬುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಲೀಗ್ ಒಫ್ ನೇಶನ್ಸಿನಲ್ಲಿ ಇವರಿಬ್ಬರನ್ನು ಬಿಟ್ಟು ಬೇರೆಯಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸುವವರು ಬೇರೆ ಯಾರಿಲ್ಲ. ಇಂಗ್ಲೆಂಡ ತನ್ನ ಹಿಂದೆ ತನ್ನ ಸಾಮ್ರಾಜ್ಯದ ಪ್ರತಿನಿಧಿಗಳನ್ನೂ ಇಟಲಿ, ಜರ್ಮನಿಯನ್ನೂ ಇಟ್ಟುಕೊಂಡಿದೆ, ಫ್ರಾನ್ಸು ತನ್ನ ಹಿಂದೆ ಮಧ್ಯ ಯೂರೋಪಿನ ಪೋಲೇಂಡ್ ಜೆಕೋಸ್ಲೋವೇಕಿಯಾ ಮೊದಲಾದ ರಾಷ್ಟ್ರಗಳನ್ನು ಇಟ್ಟುಕೊಂಡಿದೆ. ಹೀಗಾಗಿ ಯುರೋಪಿನಲ್ಲಿ [illegible] ದೊಂದು ನಮ್ಮ [illegible] ಫ್ರಾನ್ಸು—ಇಂಗ್ಲೆಂಡ ಒಟ್ಟು ಸೇರಿದವೆಂದರೆ ಮತ್ತೆ ಲೀಗ್ ಒಫ್ ನೇಶನ್ಸಿನಲ್ಲಿ ಬೇರೆ ಅಭಿಪ್ರಾಯವನ್ನು ಕೊಡತಕ್ಕವರಿರುವುದಿಲ್ಲ.

ಚೀನಾದೇಶದ ಒಳಗಿನ ಪರಿಸ್ಥಿತಿಯು ಚೆನ್ನಾಗಿರುವುದಿಲ್ಲವೆಂಬುದು ಅತ್ಯಂತ ವಿಷಾದಕರವಿದೆ. ಚೀನಾದೇಶದ ಹಳೆಯ ಸಮ್ರಾಟನು ಸಿಂಹಾಸನದಿಂದ ತಳ್ಳಲ್ಪಟ್ಟ ಮೇಲೆ, ಪಾಶ್ಚಾತ್ಯರ ವಿದ್ಯಾಬಲದಿಂದ ಅವರ ಅನುಕರಣೆಯಲ್ಲಿಯೂ, ಚೀನಾದೇಶವನ್ನು ಒಳಹಾಕಲು ಎಂದಿನಿಂದಲೂ ಹೊಂಚುಹಾಕುತ್ತಿರುವ ಜಾಪಾನಿನ ವಿರೋಧದ ಎಚ್ಚರಿಕೆಯಿಂದಲೂ, ಪಾಶ್ಚಾತ್ಯ ರಾಷ್ಟ್ರಗಳೊಳಗೆ ಪ್ರತಿಸ್ಪರ್ಧಿಗಳು ಚೀನಾದಲ್ಲಿ ಪ್ರಾಮುಖ್ಯತೆಯನ್ನು ಪಡೆಯಬಾರದೆಂದು ಹೋರಿಕೊಂಡಿದ್ದುದರಿಂದ ಚೀನಾದೇಶಕ್ಕೆ ಲಭಿಸಿದ ಸ್ವಾತಂತ್ರ್ಯದ ಕಾರಣದಿಂದಲೂ ಚೀನಾದೇಶವು ಬೆಳೆದು ಬಲಿಷ್ಠವಾಗುವ ಸುಯೋಗವು ಇದ್ದಿತು. ಕಳೆದ ಯುರೋಪಿಯ ಯುದ್ಧವೂ ಚೀನಾದೇಶದ ಬೆಳವಣಿಗೆಗೆ ಅನುಕೂಲವಾಗಿದ್ದಿತು. ಆದರೆ ಚೀನಾದಲ್ಲಿ ದೇಶವನ್ನು ವೃದ್ಧಿಗೊಳಿಸಲು ಪ್ರಯತ್ನಿಸುವವರಿಗಿಂತ ಅಧಿಕಾರ ಸ್ವಾಧೀನತೆಗಾಗಿ ಪ್ರಯತ್ನಿಸುವವರೇ ಹಲವರು. ಇವರೊಳಗಿನ ಕಲಹಗಳಿಂದ ಚೀನದ ಶಕ್ತಿಯೂ ಹಣವೂ ದುರ್ವ್ಯಯ ಹೊಂದಿದುವು. ಚೀನಾದೇಶವು ಇನ್ನೂ ಅಖಂಡ ರಾಷ್ಟ್ರವನ್ನು ರಚಿಸಲಾರದೆ ಹೋಯಿತು, ರಾಷ್ಟ್ರಸಂರಕ್ಷಣೆಯ ಯೋಜನೆಯನ್ನು ಮಾಡದೆ ಹೋಯಿತು, ಫಲವಾಗಿ, ಚೀನಾದೇಶದ ಮೇಲೆ ದಂಡೆತ್ತಿ ಬಂದ ಜಾಪಾನನ್ನು ನಿರೋಧಿಸಲಿಕ್ಕೆ ಲಕ್ಷಾವಧಿ ಚೀನೀಯ ಯುವಕರು ಸ್ವದೇಶಪ್ರೇಮಪೂರಿತರಾಗಿ ಸಿದ್ಧರಿರುವರಾದರೂ, ಅತ್ಯಾಧುನಿಕ ಯುದ್ಧ ತರಬೇತಿಗಳ ಸನ್ನಾಹವಿರುವ ಜಾಪಾನಿನ ಬಂದು ಹಿಡಿಸೈನ್ಯವನ್ನು ಚೀನೀಯರು ಎದುರಿಸಲಾರರು.

ಆದರ ಚೀನಾದೇಶದ ಈ ಪರಿಸ್ಥಿತಿಗಾಗಿ ಅದನ್ನು ಒಲಿಸ್ಪ ಜಾಪಾನಿಗೆ ಆಹುತಿಕೊಡುವುದೆ? ಕೆಲ್ಲೊಗ್ ಶಾಂತಿ ಸಂಧಿಯ ಮತ್ತು ಲೀಗ್ ಒಫ್ ನೇಶನ್ಸಿನ ಉಪಯೋಗವೇನು? [illegible] ಚೀನಾದೇಶಗಳಿಗೆ ಕಲಹ ಹುಟ್ಟಿದಾಗ ಕೆಲ್ಲೊಗ್ ಸಂಧಿ ತೋರಿಸಿ ಅದನ್ನು ನಿಲ್ಲಿಸೋಣವೆಂದು [illegible] [illegible] ಸ್ವಂತ [illegible] ಕೆಲ್ಲೊಗ್ ಸಂಧಿಗೆ [illegible] ಆದರೆ [illegible] ಆದಲ್ಲಿದ್ದೇನೆಂದು [illegible] ಜಾಪಾನಿಗೇನ [illegible] ಇಲ್ಲದೆ ಜಪಾನಿನ [illegible] ದರ್ಶನಕ್ಕೆ [illegible] ಇಂಗ್ಲೆಂಡ್ ಫ್ರಾನ್ಸ್‌ಗಳ [illegible] ವೇನು? [illegible] ಸ್ವಾರ್ಥ [illegible] ಜನಾಂಗ ಸಂಘದ ತಂತ್ರವಾಗಿ ಪರಿಣಮಿಸುವುದೇ? ನಿರ್ಬಲ ರಾಷ್ಟ್ರಗಳ [illegible] ಹಂಚಿಕೊಳ್ಳುವುದೇ ಈ ಜನಾಂಗ ಸಂಘದ ಕೆಲಸವಾಗುವುದೇ?

ಈ ಅಂತರಾಷ್ಟ್ರೀಯ ರಾಜನೀತಿಯಲ್ಲಿ ಯ [illegible] ಸ್ಟೇಟ್ಸ್‌ನ ಅಭಿಪ್ರಾಯವೇನ? ಯುನೈಟೆಡ್ ಸ್ಟೇಟ್ಸ್‌ಗೂ ಜಪಾನಿಗೂ [illegible] [illegible] ಯುನೈಟೆಡ್ ಸ್ಟೇಟ್ಸ್ ಪ್ರೋತ್ಸಾಹಿಸ [illegible] [illegible] ಜಪಾನು [illegible] [illegible] ಆದರೆ [illegible]—ಇಂಗ್ಲೆಂಡ [illegible] ಈ [illegible] [illegible] ಎಲ್ಲಿಯೆಂದು ಹೇಳಿ [illegible] ಜಪಾನನ್ನು ವಿರೋಧಿಸುವ [illegible] [illegible] [illegible] ದೇ? ಇಲ್ಲವೇ [illegible] ಪೂರ್ವ [illegible] ಸುವುದೇ? ಹಾಗೆ [illegible] ಇಂಗ್ಲೆಂಡ ಫ್ರಾನ್ಸ್ [illegible] ಸಿದ್ಧವೇ? ಇಲ್ಲ [illegible] [illegible] ದೇಶವು [illegible] [illegible] ದೇ? [illegible] [illegible] ದೇ! ಇಲ್ಲವೇ [illegible] ಚೀನಾದೇಶಕ್ಕೆ [illegible] ಅವೇ [illegible] ಜಪಾನನ್ನು ಹಿಮ್ಮೆಟ್ಟಿಸುವುದೇ?

ಅಂತರ್ರಾಷ್ಟ್ರೀಯ ರಾಜನೀತಿಯನ್ನು ಪರಿಶೀಲಿಸುವವರ ಈ ಪ್ರಶ್ನೆಗಳ ಉತ್ತರವನ್ನು ಹುಡುಕಲು ಯತ್ನಿಸಬಹುದು.

ವಿದೇಶ ವರ್ತಮಾನ.

—ಸ್ಪೈನ್ ದೇಶದಲ್ಲಿ ಕ್ಷೋಭೆಯೆದ್ದಿದೆ ನಾಲ್ಕು ಮಂದಿ ಸಿವಿಲ್ ಕಾವಲುಗಾರರನ್ನು ಒಂದು ಪ್ರಚಂಡ ಚಳವಳಿಗಾರರು ಕೊಂದುದಕ್ಕಾಗಿ ೨೩ ಮಂದಿಗಳ ದಸ್ತಗಿರಿಯಾಗಿದೆ. ಈ ದಸ್ತಗಿರಿಗಳಾದುದರಿಂದ ಆ ಚಳವಳಿಯು ಮತ್ತಷ್ಟು ಉಗ್ರವಾಗಿದೆ. ಬ್ಯಾಂಕುಗಳನ್ನೂ ದೊಡ್ಡ ದೊಡ್ಡ ಆಫೀಸುಗಳನ್ನೂ ಸೈನಿಕರು ಕಾಯಲು ತೊಡಗುತ್ತಿರುವರು. ಅತ್ಯುಗ್ರ ಕ್ಷೋಭೆಯಾಗಲಿರುವುದೆಂದು ತಿಳಿದು ಬಂದಿದೆ. ವರ್ತಮಾನ ಪತ್ರಿಕೆಗಳಲ್ಲಿ ಟ್ರೇಮ್ ಗಾಡಿಗಳು [illegible] ದೇಶದ ಶಾಂತಿಗಾಗಿ ಯತ್ನ ನಡೆಯುವುದೆಂದು ಅಲ್ಲಿಯ ಗವರ್ನರರು ಸಾರಿರುವರು.

ನ್ಯೂಜೀಲೆಂಡಿನಲ್ಲಿ ನಿರುದ್ಯೋಗಿಗಳ ದೊಂಬಿ ಚಳವಳಿ ಹೊಂದು ಪ್ರಾರಂಭವಾಗಿದೆ. ಸಾವಿರಗಟ್ಟಲೆ ನಿರುದ್ಯೋಗಿಗಳು ಅಲ್ಲಿಯ ಅಧಿಕಾರಿಗಳ ಆಫೀಸುಗಳ ಬಾಗಿಲುಗಳಲ್ಲಿ ನಿಂತು "ನಮಗೆ ಆಹಾರ ಕೊಡಿರಿ" ಎಂದರು. ಪೋಲೀಸ ಪೌಜುಗಳಿಂದ ಪ್ರಯೋಜನಕಾರಿಯಾಗಲಿಲ್ಲ. ಸ್ತ್ರೀಯರು ಬೀದಿ ಮಾರ್ಗಗಳಲ್ಲಿ ಉದ್ದಂಡವಾಗಿ ಮಲಗಿ ತಮಗೆ ಆಹಾರ ಕೊಡಬೇಕೆಂದು ಕೇಳುತ್ತಿರುವರು. ಬೋರ್ಡಿನವರು ಸಮಾಧಾನ ಪಡಿಸುತ್ತಿರುವರು. ನಿರುದ್ಯೋಗಿಗಳಿಗೆ ಬೇಗನೇ ರಕ್ಷಣೆಯನ್ನು ಕೊಡಲಾಗುವುದೆಂದು ಸಾರಿರುವರು 'ಒಬ್ಬೊಬ್ಬನಿಗೆ ಅನ್ನ ಸಿಕ್ಕದಿರಲಾಗದು' ಎಲ್ಲರಿಗೂ ಅನ್ನ ಬೇಕೆಂಬುದೇ ಕೋಪಾಟೋಪಗೊಂಡ ಜನ ಸಂದಣಿಯ ಕೇಳಿಕೆ.

— ಎಬಿಸೀನಿಯ ದೇಶದಲ್ಲಿ ಅಡ್ಡಿಸ್ ಅಬಾಬ ಎಂಬಲ್ಲಿನ ವರ್ತಕರೂ ದಲಾಲಿಗಳೂ, ಮಹಾತ್ಮಾ ಗಾಂಧೀಜೀಯವರ ದಸ್ತಗಿರಿ ಸಂಬಂಧವಾಗಿ ಹರತಾಳವನ್ನಾಚರಿಸಿರುವರು. ಆ ವಿಷಯವನ್ನು ಮುಂಬಯಿ ಗವರ್ನರರಿಗೂ ತಿಳಿಸಿರುವರು.

ಲಂಡನಿನಿಂದ ಹಿಂದಿರುಗಿದ ಮಹಾತ್ಮಾ ಗಾಂಧೀಜೀಯವರು ಪ್ಯಾರಿಸಿಗೆ ಹೋದಲ್ಲಿ ಅವರು ಬರುವ ಮೊದಲು ಪ್ಯಾರೀಸಿನ ಒಂದು ಹೊಟೇಲಿನಲ್ಲಿ ಗಾಂಧೀಜೀಯವರ ದರ್ಶನ ಪಡೆಯಬೇಕೆಂಬ ಆರಾಧಕರಾದ ಸಾವಿರಾರು ಜನರು ನೆರೆದಿದ್ದರು. ಗಾಂಧೀಜೀಯವರು ಜಹಜಿನಿಂದ ಕೆಳಗಿಳಿದು ಆ ಹೊಟೇಲಿಗೆ ಹೋಗಿ ನಿಂತರು. ಆಗ ರಾತ್ರಿಯಾಗಿದ್ದಿತು. ಅವರೂ ಜನರು ಪುನಃ ಪುನಃ ತಂಡೋಪ ತಂಡಗಳಾಗಿಯೂ ಪತ್ರಿಕಾ ಪ್ರತಿನಿಧಿಗಳೂ ಛಾಯಾಚಿತ್ರಗಾರರೂ ಸಿನೆಮಾ ಕಂಪೆನಿಯವರೂ [illegible] ಗಾಂಧೀಜೀಯವರ ದರ್ಶನ ಹೊಂದುತ್ತಿದ್ದರು. ಇಷ್ಟೆಲ್ಲ ಸಂಭ್ರಮ ನಡೆಯುವ ಸಮಯ ಜನರ ಗಲಾಟೆಯಿಂದ ಬೊಬ್ಬೆಯೂ ಆಗುತ್ತಿತ್ತು. ಈ ಬೊಬ್ಬೆಯಿಂದ ತಮ್ಮ ನಿದ್ರೆಗೆ ಭಂಗವಾಯಿತೆಂದು ಆ ಹೊಟೇಲಿನ ನೆರೆಹೊರೆಯವರು ಹೊಟೇಲ್ ಮಾಲೀಕನ ಮೇಲೆ ಆರು ಪೌಂಡು ಪರಿಹಾರವನ್ನು ಕೊಡಿಸಬೇಕಾಗಿ ಕೋರ್ಟಿನಲ್ಲಿ ದಾವೆ ಮಾಡಿರುವರು.

ಒಳದೇಶ ವರ್ತಮಾನ

—ಪ್ರಪಂಚದಲ್ಲೇ ಅತ್ಯುನ್ನತಗೊಳಿಸಿರುವ ಮೌಂಟ್ ಎವರೆಸ್ಟನ್ನು ಹತ್ತಬೇಕೆಂದು ಸಲ್ಲಿಬರ್ಟಿನ್ ಮತ್ತು ಮೊಯ್ಸ್ಲೇ ಎಂಬಿಬ್ಬರು ಅಮೇರಿಕಾ ವೈಮಾನಿಕರು ಕಲಕತ್ತೆಯಲ್ಲಿ ಯತ್ನಿಸುವರು. [illegible] ಅಡಿಗಳ ಎತ್ತರದ ವರೆಗೂ ಅವರು ವಿಮಾನದಲ್ಲಿ ಹಾರಾಡಿದರು. ಆ ಪರ್ವತದ ತುದಿಯನ್ನು ಮುಟ್ಟಿ ಬರಬೇಕೆಂದು ಅವರು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗದೆ ಹೋಯಿತು. ಅಷ್ಟು ಎತ್ತರಕ್ಕೆ ಹೋಗಿದ್ದರೂ ಅಲ್ಲಿ ಕಡಿದಾದ ಗಾಳಿಯು ಆ ಪ್ರದೇಶದಲ್ಲಿ ಇದ್ದಿತೆಂದು ಅವರು ತಮ್ಮ ಅನುಭವವನ್ನು ಹೇಳುವರು. ಇವರು ಇನ್ನೊಂದು ಸಲ ಪ್ರಯತ್ನಿಸಿ ಮೌಂಟ್ ಎವರೆಸ್ಟನ್ನು ಹತ್ತಲಿರುವರಂತೆ.

—ದ [illegible] ಪತ್ರಿಕೆಯ ಸಂಪಾದಕರಾದ ಶ್ರೀ ಆರ್ [illegible] ದಿವಾಕರರನ್ನು ದಸ್ತಗಿರಿ ಮಾಡಿರುವರು. ಪತ್ರಿಕೆಯ ಮುದ್ರಣಾಲಯವೂ ಪೋಲೀಸರಿಂದ ವಶೀಕರಿಸಲ್ಪಟ್ಟಿದೆ.

— ಪೇಶಾವರದಲ್ಲಿನ [illegible] ನಮ್ಮಾಳಿಕರು ೧೦೦೦ ರೂಪಾಯಿ ಛತ್ರತೆಯನ್ನು ಕೊಡಬೇಕೆಂದು ಸರಕಾರವು ಕೇಳಿರುತ್ತದೆ. [illegible] ಇದಕ್ಕೆ ಮೊದಲು [illegible] ಪತ್ರಿಕೆಯ ಸಂಪಾದಕರೊಡನೆ ಇವರನ್ನು ದಸ್ತಗಿರಿ ಮಾಡಿದ್ದರು.

— ಕಲ್ಕತ್ತದಲ್ಲಿ ಸತ್ಯರಂಜನ ಬೋಸ್ ಮತ್ತು ಮನೋರಂಜನ ಗುಹ ಎಂಬಿಬ್ಬ ಯುವಕರು ಪಿಸ್ತೂಲುಗಳನ್ನು ರಹಸ್ಯವಾಗಿ ಹಿಡಿದು ಕೊಂಡು ತಿರುಗಾಡುತ್ತಿದ್ದುದನ್ನು ನೋಡಿ ಅವರನ್ನು ಪೋಲೀಸರು ಕೈದುಮಾಡಿದರು. ಅವರನ್ನು ಜಪ್ತಿಮಾಡಿದಾಗ ಅವರಲ್ಲೊಬ್ಬನ ಜೇಬಿನಲ್ಲಿ ಸಣ್ಣ ಕತ್ತಿಯೂ ಪಿಸ್ತೂಲಿನ ಗುಂಡುಗಳೂ ಇದ್ದುದು ಕಂಡು ಬಂತು.

[illegible] ಅನ್ಸಾರಿಯವರನ್ನು ಕೈದುಮಾಡಿದ ಸಂಬಂಧವಾಗಿ ಬೆಂಗಳೂರಿನ ಗಾಂಧೀ ನಗರದಲ್ಲಿ ಶ್ರೀ ಪಿ ವೆಂಕಟಪ್ಪ [illegible] ಯವರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ಸಭೆಯು ಜರಗಿತು. ಕೆಲವು ಮಂದಿ ಪೋಲೀಸ್ ಅಧಿಕಾರರು ಸಭೆಯಲ್ಲಿದ್ದರು.

— ಚಿಟ್ಟಗೊಂಗ್ ಜಿಲ್ಲೆಯ ಕೆಲವು ಶಾಲಾ ವಿದ್ಯಾರ್ಥಿಗಳು ರಾಜನೀತಿಯಲ್ಲಿ ಭಾಗವಹಿಸುತ್ತಿರುವುದರಿಂದ ಪಬ್ಲಿಕ್ ಇನ್ಸ್ಪೆಕ್ಟರ ಡೈರೆಕ್ಟರರು ಕೆಲವು ಸೆಕೆಂಡರಿ ಶಾಲೆಗಳ ಗ್ರೇಂಟನ್ನು ಕಡಿಮೆ ಮಾಡಬೇಕೆಂದು ಪ್ರಕಟಿಸಿರುವರು. ಈ ಸೆಕೆಂಡರಿ ಶಾಲೆಗಳ ಮೆನೆಜಿಂಗ್ ಕಮಿಟಿಗಳವರು ವಿದ್ಯಾರ್ಥಿಗಳನ್ನು ಒಳ್ಳೆ ನಡತೆಯಲ್ಲಿ ನಡೆಸಿ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರನ್ನು ಸಮಾಧಾನ ಪಡಿಸುವ ತನಕ ಶಾಲೆಗಳಿಗೆ ಹೆಚ್ಚಿನ ಗ್ರೇಂಟು ದೊರೆಯಲಿಕ್ಕಿಲ್ಲವಾಗಿ ತಿಳಿದು ಬಂದಿದೆ.

— ಕಲ್ಕತ್ತದಲ್ಲಿ ಜನಬಹಿಷ್ಕಾರ, ವ್ಯಾಪಾರ ಬಹಿಷ್ಕಾರವು ನಡೆಯಬಾರದೆಂದೂ ಶಾಂತವಾದ ಪಿಕೆಟಿಂಗ್ ನಡೆಯಬಾರದಾಗಿಯೂ ಆಜ್ಞಾಪಿಸಲಾಗಿದೆ.

ದಕ್ಷಿಣ ಕನ್ನಡ.

ಮಂಗಳೂರು:— ಶ್ರೀ ಕಾರ್ನಾಡ ಸದಾಶಿವರಾಯರ ನಿರ್ಬಂಧದ ಸಪ್ತಾಹದಲ್ಲಿ ಸಭೆಗೂಡಿದ ಕೆಲವು ಸ್ವಯಂಸೇವಕರ ಮೇಲೆ ಲಾಠಿ ಚಾರ್ಜು ನಡೆದಿತ್ತು. ಶ್ರೀ [illegible] ಎಂಬ ಯುವಕ ಸ್ವಯಂಸೇವಕನಿಗೆ ಪೆಟ್ಟು ಆಗಿ ಅವನನ್ನು ಆಸ್ಪತ್ರೆಗೆ ಕೊಂಡೊಯ್ದರು. ಸದಾಶಿವರಾಯರಿಗೆ ಶಿಕ್ಷೆಗೊಟ್ಟು ಮಂಗಳವಾರ ದಿನ ಬೆಳಿಗ್ಗೆ [illegible] ಘಂಟೆಯ ರೈಲು ಬಂಡಿಯಲ್ಲಿ ಕಣ್ಣಾನೂರಿಗೊಯ್ದರು. ಅವರ ದಸ್ತಗಿರಿಯ ಸಂಬಂಧವಾಗಿ ಎಲ್ಲರೂ ಹರತಾಳವನ್ನಾಚರಿಸಬೇಕೆಂದು ಅಂಗಡಿಗಳ ಬಾಗಿಲುಗಳ ಮೇಲೆ 'ಚೋಕ್'ನಿಂದ ಬರೆದಿದ್ದರು. ಬೆಳಿಗ್ಗೆ ಸಂಪೂರ್ಣ ಹರತಾಳವಾಚರಿಸಲ್ಪಟ್ಟಿಲ್ಲವಾದರೂ, ಸಂಜೆ [illegible] ಘಂಟೆಯ ಮೇಲೆ ರಥಬೀದಿ, ಹಂಪನಕಟ್ಟೆ, ಬಂದರ ಮೊದಲಾದ ಪ್ರಮುಖ ಪೇಟೆಗಳ ಸ್ಥಳಗಳಲ್ಲಿ ಹರತಾಳವಾಚರಿಸಲ್ಪಟ್ಟಿತು.

ಕಳೆದ ತಿಂಗಳಲ್ಲಿ ಪಂಡಿತ ಜವಾಹರಲಾಲ್ ನೆಹರು ಇವರಿಂದ ಹುಬ್ಬಳ್ಳಿಯಲ್ಲಿ ತೆರೆಯಲ್ಪಟ್ಟ ಅಖಿಲ ಭಾರತ ಸ್ವದೇಶೀ ಪ್ರದರ್ಶನದಲ್ಲಿ ಇಲ್ಲಿಯ ಮೆಸರ್ಸ್ [illegible] ಎಂಡ್ ಸನ್ಸ್‌ರ [illegible] ವರ್ಕ್ಸ್‌ನಲ್ಲಿ ತಯಾರಾದ ಧನುಷ್ಯಾಕಾರದ ಹಂಚುಗಳಿಗೂ [illegible] ಇತರ [illegible] ಮಾಲುಗಳಿಗೂ [illegible] ಪ್ರಶಸ್ತಿಯ ಸುವರ್ಣ ಪದಕವು ಕೊಡಲ್ಪಟ್ಟಿದೆ.

[illegible] ನಾಲ್ಕನೆಯ ಹಿಂದೀ ಪರಿಷತ್ತನ್ನು ಇದೇ [illegible] ನೇ ತಾರೀಕಿಗೆ ಸೇರಿಸಬೇಕೆಂದು ನಿರ್ಣಯಿಸಲ್ಪಟ್ಟಿದ್ದರೂ ಆ ನಿರ್ಣಯವು ಕೈಗೂಡಿಬರಲಿಲ್ಲ. ಆ ಸಭೆಯನ್ನು ಮುಂದರಿಸಬೇಕಾದ [illegible] ನೇ ತಾರೀಕಿನ ದಿನ ಕಾರ್ಯಕಾರಿ ಮಂಡಳಿಯು ಸಭೆಸೇರಿ ಸದ್ಯದ ವಾತಾವರಣವು ಪರಿಷತ್ತಿಗೆ ಅನುಕೂಲವಿಲ್ಲದಿರುವುದರಿಂದ ಪರಿಷತ್ತನ್ನು ಮುಂದರಿಸಬೇಕೆಂದು ನಿರ್ಣಯಿಸಿತು. ಸ್ವಾಗತ ಸಮಿತಿಯ ಅಧ್ಯಕ್ಷರು ಆ ಸಂಬಂಧವಾದ [illegible] ಗಳನ್ನು ನಿಲ್ಲಿಸಿ ಹಣವನ್ನು ಬ್ಯಾಂಕಿನಲ್ಲಿರಿಸಬೇಕೆಂದು ನಿರ್ಣಯಿಸಿ ಪರಿಷತ್ತಿಗನುಕೂಲವಾದ ಸಮಯವು ದೊರೆಯಬಹುದೆಂದು ನಿರೀಕ್ಷಿಸಲಾಗಿದೆ.

ಇದೇ ತಿಂಗಳಲ್ಲಿ ಸೇರಬೇಕೆಂದು ನಿಶ್ಚಯಿಸಿದ್ದ ದಕ್ಷಿಣ ಕನ್ನಡ ವಿದ್ಯಾರ್ಥಿ ಪರಿಷದವನ್ನು ಸದ್ಯದ ವಾತಾವರಣದ ಅನನುಕೂಲತೆಯಿಂದಾಗಿ ಮುಂದುವರಿಸಲಾಗಿದೆ. [illegible] ಅನುಕೂಲವಾದ ಕೂಡಲೇ ಪರಿಷದವು ಸೇರುವುದು. ಪರಿಷತ್ತಿನ [illegible] ಗಳನ್ನು ನಿಲ್ಲಿಸಿ ಹಣವನ್ನು ಬ್ಯಾಂಕಿನಲ್ಲಿಡಬೇಕೆಂದು ನಿಶ್ಚಯಿಸಿದೆ. ಪರಿಷತ್ತಿನ ಸಲುವಾಗಿ ಹಣಕೊಟ್ಟ ಮತ್ತು ಸಹಾಯ ಮಾಡಿದವರಿಗೆ ಕೃತಜ್ಞರಾಗಿರುತ್ತೇವಾಗಿ ಸದ್ರಿ ಪರಿಷದದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇಲ್ಲಿಯ ಕೊಪರೇಟಿವ್ ಟೌನ್ ಬ್ಯಾಂಕಿನ ವಾರ್ಷಿಕ ಮಹಾಸಭೆಯು ತಾ (೧೦-೧-೩೨)ನೇ ಆದಿತ್ಯವಾರ ಸದರಿ ಬ್ಯಾಂಕಿನ ಪ್ರೆಸಿಡೆಂಟರಾದ ಮ॥ ರಾ॥ ರಾ॥ [illegible] ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಸಭೆಗೆ ಸುಮಾರು [illegible] ಮೆಂಬರರಿಗಿಂತಲೂ ಹೆಚ್ಚಿನವರು ಸೇರಿದ್ದರು. ಸಭೆಯಲ್ಲಿ ಎಜೆಂಡದ ಪ್ರಕಾರ ಎಲ್ಲಾ ಕಾರ್ಯಗಳು ಯೋಗ್ಯ ರೀತಿಯಲ್ಲಿ ನಡೆದುವು.

[illegible] ವರುಷದ ಆಡಳಿತ ಮೆಂಬರರ ಚುನಾವಣೆಯು ನಡೆಯಲಾಗಿ ಕಳೆದ ವರುಷದ ಆಡಳಿತ ಮೆಂಬರರಲ್ಲಿ [illegible] ಮತ್ತು [illegible] ಅದೇ ಮಂಗಳೂರು [illegible] ಆಡಳಿತ ಮೆಂಬರರಾಗಿ ಚುನಾಯಿಸಲ್ಪಟ್ಟರು.

ಈ ಬ್ಯಾಂಕಿನ ಸಾರ್ವಜನಿಕೋಪಕಾರಿ ನಿಧಿಯಿಂದ [illegible] ಗಳನ್ನು ಕೆನರಾ ಹೈಸ್ಕೂಲಿನ ಎಸ್. ಎಸ್. ಎಲ್. ಸಿ ವಿದ್ಯಾರ್ಥಿಯಾದ ಹನುಮಂತ ಕಾಮತ್‌ಗೆ ಕೊಡುವರೇ ಮತ. ಸಭೆಯು ಸರ್ವಾನುಮತದಿಂದ ಮಂಜೂರು ಮಾಡಿದ್ದಲ್ಲದೆ ಇನ್ನು [illegible] ಈ ನಿಧಿಯಿಂದ ವಿದ್ಯಾರ್ಥಿ ವೇತನವನ್ನು ಕೊಡಬೇಕೆಂದು ನಿರ್ಣಯವಾಯಿತು.

ಇದೇ ಬ್ಯಾಂಕಿನ ಇನ್ನೊಂದು ಮಹಾಸಭೆಯು ಇದೇ ತಿಂಗಳ ತಾ. [illegible]—೧—೩೨ನೇ ಆದಿತ್ಯವಾರ ಜರಗುವುದು. ಈ ಸಭೆಯಲ್ಲಿ ಬ್ಯಾಂಕಿಗೆ ಉಂಟಾದ ನಷ್ಟದಲ್ಲಿ ರಿಜರ್ವ ಫಂಡಿಗೆ ಮೀಸಲಿರಿಸಿದ ಹಣವನ್ನು ಕಳೆದು ಬಿಡಬೇಕೆಂದು ನಿರ್ಧರಿಸಲ್ಪಡುವುದು.

ತಾ [illegible]—೧—೩೨ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು [illegible] ಮರಣಗಳೂ [illegible] ಜನನಗಳೂ ಆಗಿವೆ.

ಉಡುಪಿ:— ತಾ. [illegible]ರಲ್ಲಿ ಸದರಿ ಒಂಭತ್ತು ಸತ್ಯಾಗ್ರಹಿಗಳ ಮೇಲಣ ಖಟ್ಲೆಯ ಕುರಿತಾದ ತೀರ್ಪು ಕೊಡಲ್ಪಟ್ಟಿತು. ಅಂದಿನ ಕಛೇರಿ ಮತ್ತು ಶಾಸನ ಉಲ್ಲಂಘನೆಗಳ ಕಾರಣದಿಂದ [illegible] ತಿಂಗಳ ಮತ್ತು [illegible] ತಿಂಗಳ ಕಠಿಣ ಶಿಕ್ಷೆಯು ಎಲ್ಲರ ಮೇಲೂ ವಿಧಿಸಲಾಯಿತು. ಎಲ್ಲರಿಗೂ '[illegible]' ತರಗತಿಯೇ ವಿಧಿಸಲ್ಪಟ್ಟಿರುತ್ತದೆ.

ಇಲ್ಲಿ ಹಲವು ಸಮಯದಿಂದ ನಡೆಯುತ್ತಿದ್ದ ಕಳವುಗಳಲ್ಲಿ ಹಲವು ರೋಮನ್ ಕೆಥೊಲಿಕ್ ಕ್ರೈಸ್ತ ಯುವಕರು ಸೇರಿರುತ್ತಾರೆಂದು ತಿಳಿದು ಬಂದಿದೆ. ಈ ಪೈಕಿ ಇಬ್ಬರು ವಿದ್ಯಾರ್ಥಿಗಳಾಗಿದ್ದು, ರಿಮಾಂಡಿನಲ್ಲಿಡಲ್ಪಟ್ಟಿರುವರು.

ಉಡುಪಿ ಕಾಂಗ್ರೆಸು ಕಮಿಟಿಯು ಅರಾಜಕವೆಂದು ಮದ್ರಾಸು ಸರಕಾರದವರಿಂದ ಪ್ರಕಟಿಸಲ್ಪಟ್ಟಿದೆ.

ಜಿಲ್ಲಾ ವಿದ್ಯಾಧಿಕಾರಿಗಳು ಸ್ಥಳೀಯ ಬೋರ್ಡು ಹೈಸ್ಕೂಲಿನ ವಾರ್ಷಿಕ ಇನ್ಸ್‌ಪೆಕ್ಷನ್ ಮುಗಿಸಿಕೊಂಡು ಹೋಗಿರುವರು.

ಕುಂದಾಪುರ— ಇದೇ ತಿಂಗಳ ತಾ [illegible]ನೇ ಗುರುವಾರ ಇಲ್ಲಿ [illegible]ನೇ ಪ್ರಕರಣವು ತಾಲೂಕು ಮಚೇರಿಯಿಂದ [illegible] ಮೈಲು ವಿಸ್ತಾರಕ್ಕೆ ಜಾರಿ ಮಾಡಲ್ಪಟ್ಟಿತು. ಇದು ಬರುವ ತಿಂಗಳ [illegible]ನೇ ತಾರೀಕು ವರೆಗೆ ಇರುವುದು. ಈ ದಿನ (ತಾ [illegible]ನೇ ಗುರುವಾರ) ಪ್ರಕರಣ ಮುರಿಯುತ್ತೇನೆಂಬುದಾಗಿ ಶ್ರೀ [illegible] ಎಂಬ ಸತ್ಯಾಗ್ರಹಿಯು [illegible] ಸ್ಪೆಷಲ್ ಪೋಲೀಸರು ಇವರ ಮೇಲೆ ಲಾಠಿ ಪ್ರಹಾರ ಮಾಡಿದರು.

ತಾ [illegible]ನೇ [illegible] ಪಿಕೆಟಿಂಗ್ ನಿರೋಧಿಸುವ ಆರ್ಡಿನೆನ್ಸು (Molestation and Boycotting Ordinance) ಜಾರಿ ಮಾಡಿದ್ದಾರೆ.

ತಾ [illegible]ನೇ [illegible] ಶ್ರೀ [illegible] ನವರು [illegible] ಭಾಷಣ ಕೊಟ್ಟು [illegible]ನೇ ಪ್ರಕರಣವನ್ನು ಮುರಿದರು. ಭಾಷಣಾನಂತರ ಪೋಲೀಸರು ಅವರನ್ನು [illegible] ಸಾಯಂಕಾಲ [illegible] ಘಂಟೆಗೆ ಬಿಟ್ಟರು.

ತಾ [illegible]ನೇ ಸೋಮವಾರವೂ [illegible] ಭಾಷಣ ಮಾಡಿದರೂ ಪೋಲೀಸರು [illegible] ಬರಲೇ ಇಲ್ಲ.

ತಾ [illegible]ನೇ ಮಂಗಳವಾರ [illegible] ರಿಸರ್ವ (Reserve) ಪೋಲೀಸರು [illegible] ಶ್ರೀ [illegible] ಗೇಟ್ ಬಳಿ [illegible]. ಇನ್ನೂ ಯಾವ ಘಟನೆಗಳೇನೂ ಆಗಲಿಲ್ಲ.

ಮುಲ್ಕಿ:— ಸ್ಥಳೀಯ [illegible] ಸಂಘದ ಒಂದು [illegible] ಇದೇ ಬರುವ ತಾ [illegible]—೧—೩೨ನೇ [illegible] ಘಂಟೆ ಹೊತ್ತಿಗೆ ಶ್ರೀ [illegible] ದೇವಸ್ಥಾನದ ಎದುರು ನಡೆಯಲಿರುವುದಾಗಿ ತಿಳಿದುಬರುತ್ತದೆ.

ಇದೇ ಬರುವ ತಾ [illegible]—೧—೩೨ನೇ [illegible] ಘಂಟೆ [illegible] ಸ್ಥಳೀಯ [illegible] ಮಂಗಳೂರು ಕೆನರಾ ಹೈಸ್ಕೂಲಿನ ಅಧ್ಯಾಪಕ ಶ್ರೀ [illegible] ರವರು [illegible] ವಿಷಯದ ಕುರಿತು ಭಾಷಣ ಮಾಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಮಹಾತ್ಮಾಗಾಂಧಿ ಮತ್ತು ವಲ್ಲಭಭಾಯಿ ಪಟೇಲ ಮೊದಲಾದ ಧುರೀಣರನ್ನು ದಸ್ತಗಿರಿ ಮಾಡಿದ ಬಗೆ [illegible] ತಾ [illegible]—೧—೩೨ರಲ್ಲಿ ಇಲ್ಲಿ ಸಂಪೂರ್ಣ ಹರತಾಳವಿತ್ತು.

ಬಂಟ್ವಾಳ:— [illegible]ನೇ ತಾರೀಕಿನಲ್ಲಿ ಇಲ್ಲಿ [illegible]ನೇ ಪ್ರಕರಣವನ್ನು ಜಾರಿ ಮಾಡಿದರು. ಕೆಲವು ಸತ್ಯಾಗ್ರಹಿಗಳು [illegible] ಜನರನ್ನು [illegible] ಮಾಡಿ [illegible] ಕಂಡು [illegible] ಲಾಠಿಯ ಪ್ರಯೋಗವು ಇತ್ತು.

ಪಾಣೆಮಂಗಳೂರು— ಇಲ್ಲಿಯ ಶ್ರೀ [illegible] ಎಲಿಮೆಂಟರಿ ಶಾಲೆಯಲ್ಲಿ ಸದ್ರಿ ಶಾಲೆಯ ಪರವಾಗಿ ಮಂಗಳೂರು [illegible] ನ ನಿವೃತ್ತ ಡಿಸ್ಟ್ರಿಕ್ಟ ಇನ್ಸ್‌ಪೆಕ್ಟರ್ ಮ. ರಾ [illegible] ಮಂಗೇಶ ರಾವ್ B. A., L. T. ಯವರಿಗೊಂದು ಮಾನಪತ್ರವನ್ನು ಅರ್ಪಿಸುವ ಸಮಾರಂಭವು ಸದರಿ ಶಾಲೆಯಲ್ಲಿ ಇದೇ ಕಳೆದ ತಾ [illegible]ನೇ [illegible] ಪಾಣೆಮಂಗಳೂರು [illegible] ರವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಕಳ - ಇಲ್ಲಿಯ [illegible] ಎಲಿಮೆಂಟರಿ ಶಾಲೆಯ ಶ್ರೀಪತಿ [illegible] ವಿದ್ಯಾರ್ಥಿಯಾಗಿದ್ದು ಇಲ್ಲಿಯ [illegible] ಅಧ್ಯಾಪಕರು [illegible] ಕೊನೆಯ ತಾ [illegible]—೧೨—೩೧ರಲ್ಲಿ [illegible] ಕ್ರಿಸ್ಮಸ್ ರಜೆಯಲ್ಲಿ [illegible] ಶಾಲೆ [illegible] ತಾ [illegible]—೧—೩೨ರಲ್ಲಿ [illegible] ಘಂಟೆ [illegible] ಎಂಬ ಮರಣ ವಾರ್ತೆಯನ್ನು ತಿಳಿಸುವರೇ [illegible] ಇವರ [illegible] ಬಗ್ಗೆ ತಾ [illegible]—೧—೩೨ರಲ್ಲಿ [illegible] ತಮ್ಮ ಆಡಳಿತೆಯಲ್ಲಿರುವ ಶಾಲೆಗಳಲ್ಲಿ [illegible] ಸಭೆಗಳನ್ನು ಜರಗಿಸಿದರು. ಅಂದು ಎಲ್ಲಾ ಶಾಲೆಗಳಿಗೂ ರಜೆಯನ್ನು ಕೊಡಿಸಿದರು.

ಜೋಗಟ್ಟೆ— ಇಲ್ಲಿಯ ಬೋರ್ಡು ಮಾಪಿಳ್ಳಾ ಶಾಲೆಯಲ್ಲಿ ಕಳೆದ ತಾ [illegible]—೧—೩೨ನೇ ಶನಿವಾರ ದಿನ ಮ॥ ರಾ॥ ರಾ॥ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ಈ ಶಾಲಾ ವರ್ಧಂತ್ಯುತ್ಸವವು ಈ ದಿನದ ಕಾರ್ಯಕ್ರಮದಂತೆ ವಿಜೃಂಭಣೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಊರಿನ ಮತ್ತು ಪರಊರಿನ ಮಾನ್ಯ ಗೃಹಸ್ಥರಿಂದ ಶಾಲೆಯು ಕಿಕ್ಕಿರಿದ್ದಿತ್ತು. ಮಕ್ಕಳಲ್ಲದೆ ಸುಮಾರು [illegible] ಜನರು ನೆರೆದಿದ್ದರು. ಈ ಶಾಲಾ ವಿದ್ಯಾರ್ಥಿಗಳಿಂದ ಹಲವು ಚಳುವಳಿಗಳನ್ನು ಮಾಡಿಸಿ ಗೆದ್ದವರಿಗೆ ಇನಾಮುಗಳನ್ನು ಹಂಚಲಾಯಿತು.

ಗುರುಪುರ:— ಇಲ್ಲಿ ಶ್ರೀ ರಾಮಕೃಷ್ಣ [illegible] ಸಂಘದ ಒಂದು ಆಸ್ಪತ್ರೆಯು ಇದೇ ಕಳೆದ ತಾ. [illegible]—೧—೩೨ರಲ್ಲಿ ತೆರೆದಿದೆ ಎಂತ ಪ್ರಕಟಿಸಿದ್ದೆವಷ್ಟೆ. ಆದರೆ ಒಂದೆರಡು ದಿವಸಗಳೊಳಗೆ ಇದರ [illegible] ಇದು ಈಗ ಅಬದ್ಧವೆಂದು ತಿಳಿದುಬಂದಿದೆ.

ಇಲ್ಲಿಯೇ ಸಮೀಪ [illegible] ಒಂದು [illegible] ಜಾತಿಯ [illegible] ಕೆಲವು ದಿವಸಗಳ [illegible] ಯಾರೋ [illegible] ಕೊಂದಿರುತ್ತಾರೆ. ಕೊಂದವರು ಯಾರೆಂತ ಪತ್ತೆ ಇಲ್ಲ. ಪೋಲೀಸ ತನಿಖೆಯು ನಡೆಯುತ್ತಲಿದೆ.

ಪುತ್ತೂರು— ಈ ತಾಲೂಕಿನ [illegible] ದೃಷ್ಟಿಯಿಂದ ಅಲ್ಲಲ್ಲಿ ಪ್ರಚಾರಕಾರ್ಯವನ್ನು ನಡೆಸುವುದಕ್ಕಾಗಿ ನಾನಾಗಳ [illegible] ಸಂಘ [illegible] ಸ್ಥಾಪಿಸಲು ಅಪೇಕ್ಷಿಸುವೆವು. [illegible] ದಿವಸಗಳ [illegible] ಸಾಯಂಕಾಲ [illegible] ಘಂಟೆಗೆ [illegible] ಸಹಾಯದಿಂದ [illegible] ವ್ಯವಸ್ಥೆಯನ್ನು ಮಾಡಲು [illegible].

[illegible] ಸ್ಥಳ [illegible] ಶಾಲೆ [illegible] ಹಳ್ಳಿಯಲ್ಲಿ [illegible] ದಿವಸಗಳ [illegible] ಈ [illegible] ಮಾಡಿಕೊಳ್ಳುವುದು. ನಮ್ಮ ಉದ್ದೇಶ [illegible] ಕೃಷಿ [illegible] ಹಳ್ಳಿಯ [illegible] ನಮ್ಮ [illegible] ವಿಷಯವಾಗಿ [illegible] ಮಾಡಿಸುವುದು. [illegible] ಸಹಾಯವಾಗುವ [illegible] ಪ್ರದರ್ಶನ ಮತ್ತು [illegible] ಕೆಲವೊಂದು ವಿನೋದಗಳು.

[illegible] ಕಾರ್ಯಕ್ರಮವು ಸಂಜೆ [illegible] ಗಂಟೆಗೆ ತೊಡಗುವುದು. ಈ [illegible] ಸಭೆಗೆ ಜನರನ್ನು ಕೂಡಿಸುವುದರಲ್ಲಿ [illegible] ಗ್ರಾಮದ [illegible] ಮಾಡಿಕೊಡಬೇಕಾಗಿ [illegible] ಈ ಕೆಲಸಕ್ಕೆ [illegible] ನಮ್ಮ ಸಂಘದ [illegible] ಗ್ರಾಮಗಳ [illegible] ಯಾರೂ [illegible] ಎಲ್ಲರೂ ತಮ್ಮ ಯಾವತ್ತು ಬೆಂಬಲವನ್ನು ಕೊಡಬೇಕಾಗಿ ಬೇಡುತ್ತೇವೆ ಎಂದು ಶ್ರೀ [illegible] ಇವರು ತಿಳಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ಎರಡನೇ ಶಿಕ್ಷಣ ಪ್ರದರ್ಶನ.

ಈ ಪ್ರದರ್ಶನವು ಮಾನ್ಯ ಮದ್ರಾಸು ಸರಕಾರದ [illegible] ಮಂತ್ರಿ [illegible] ಇವರಿಂದ ಮಂಗಳೂರಿನ ಗವರ್ನಮೆಂಟು [illegible] ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಇದೇ ತಿಂಗಳ [illegible]ನೇ ತಾರೀಕಿನ ಬೆಳಿಗ್ಗೆ [illegible] ಘಂಟೆಗೆ ತೆರೆಯಲ್ಪಡುವುದು.

ಸದರಿ ಪ್ರದರ್ಶನವು [illegible]ನೇ ತಾರೀಕುಗಳಲ್ಲಿ [illegible] ತಾ [illegible]ನೇ ದಿನ ಬೆಳಿಗ್ಗೆ [illegible] ಘಂಟೆಯ ವರೆಗೆ ಆಮಂತ್ರಿತರಿಗೆ ಮಾತ್ರ ಪ್ರವೇಶ ದೊರೆಯುವುದು. ಅನಂತರ ಅದೇ ಮಧ್ಯಾಹ್ನ [illegible] ಘಂಟೆಯಿಂದ [illegible] ಘಂಟೆಯ ವರೆಗೆ [illegible] ಹೆಣ್ಣು ಮಕ್ಕಳಿಗೆ ಮಾತ್ರ ಪ್ರವೇಶ ದೊರೆಯುವುದು. [illegible] ತಾರೀಕು ಮಧ್ಯಾಹ್ನ [illegible] ಘಂಟೆಯಿಂದ [illegible] ಘಂಟೆಯ ವರೆಗೆ [illegible] ಸ್ತ್ರೀಯರಿಗೂ ಇತರ [illegible] ಮಾತ್ರ ಪ್ರವೇಶ ದೊರಕುವುದು.

ಉಪಾಧ್ಯಾಯರಿಗೂ ಮತ್ತು [illegible] ಶಾಲಾ ಮಕ್ಕಳಿಗೂ [illegible] ಪ್ರವೇಶ [illegible] ಪ್ರದರ್ಶನವನ್ನು ನೋಡಲಿಕ್ಕೆ ಬಿಡಲಾಗುವುದು. ಉಳಿದವರು ತಲೆಗೆ [illegible] ಪ್ರಕಾರ ತೆತ್ತು ಒಳಕ್ಕೆ ಬರಬೇಕಾಗುವುದು.

[illegible] ಒಳಕ್ಕೆ ಬರುವವರು ಪ್ರದರ್ಶನದ ಯಾವ ವಸ್ತುಗಳನ್ನು ಮುಟ್ಟದೆ ಅಲ್ಲಲ್ಲಿ [illegible] ಇರಿಸಿದ [illegible] ಮತ್ತು ಟ್ರೈನಿಂಗ್ ಶಾಲೆಯ ಉಪಾಧ್ಯಾಯರ ಸೂಚನೆ ನೋಡಿ ವರ್ತಿಸಬೇಕು. ಇದಕ್ಕೆ ವಿರೋಧವಾಗಿ ನಡೆಯಬಾರದೆಂದು ವಿನಂತಿ.

ಕಾಲವಾಚಕರ ೫೯೪ನೇ ಪ್ರಜೋತ್ಪತ್ತಿ ಸಂವತ್ಸರದ ಪುಷ್ಯ ಶು|| ೯ ಶನಿವಾರದಿಂದ ಪ್ರಜೋ. ಸಂ|ರದ ಪುಷ್ಯ ಶು|| ೧೫ ಶುಕ್ರವಾರದ ವರೆಗಿನ ಪಂಚಾಂಗ

(ರವಿ ಸ್ಥಿತಿಯು ಧನು—ಮಕರ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಅಸ್ತ
1[illegible]	ಶನಿ	೫ ೨೩ ೪೧		ಅಶ್ವಿನಿ	೪೮ ೨	೨	6 59	6 22
7	ರವಿ	೯ ೨೭ ೧೬		ಭರಣಿ	೫೩ ೪೬	೩	6.59	6 22
18	ಸೋಮ	೧೦ ೪೧ ೪೨		ಕೃತ್ತಿಕಾ	೫೮ ೪೪	೪	7 0	6 23
19	ಮಂಗಳ	೧೧ ೪೪ ೪೬		ರೋಹಿಣಿ	೬೦ ೦	೫	[illegible] 0	6 23
20	ಬುಧ	೧೨ ೪೬ ೪೧		ರೋಹಿಣಿ	೨ ೪೬	೬	[illegible] 0	6 24
21	ಗುರು	೧೩ ೪೭ ೧೬		ಮೃಗಶಿರಾ	೫ ೪೨	೭	[illegible] 0	6 24
22	ಶುಕ್ರ	೧೪ ೪೬ ೨೯		ಆರ್ದ್ರಾ	೬ ೪೬	೮	[illegible]	6.25

ಮಂಗಳೂರಿನ ವಾಯುಸ್ಥಿತಿ.

ತಾರೀಖು	Temperature ಉಷ್ಣ ಶೀತ — ಅತ್ಯಧಿಕ		ಅತ್ಯಲ್ಪ		Rainfall ಮಳೆ — ದಿನದ ಮಳೆ	ಒಟ್ಟು ಮಳೆ
1	90—	3	66—	6	—	—
2	87—	5	68—	3	—	—
3	88	[illegible]	68—	9	—	—
4	88 —	4	67—	5	—	—
5	87	9	66	3	—	—
6	88	5	66	7	—	—
7	87—	0	66—	6	—	149-96

ಮಂಗಳೂರಿನ ಪೇಟೆ ಧಾರಣೆ

ಜಿನಸು	ಇಂದ ರೂ	ಅ	ವರೆಗೆ ರೂ	ಅ
ಹೊಸ ಅಕ್ಕಿ	3—	[illegible]	4	
ಹಳೆಮುಷ್ಟಿ	5—	[illegible]	[illegible]—	
ಹಳೆ ಗುಡ್ಡೆ	4—		4—	[illegible]
ಹಳೆ ಸುಗ್ಗಿ	[illegible]—	8	4—	4
ಊರ ಅವ್ವಲ್ ಬೆಲ್ಲ	4	2	5—	
ರಂಗೂನು ಬೆಲ್ಲದ ಗೋಣಿ ಒಳ್ಳೆ	6—	8		4
ಎಳ್ಳಿ ರುಬೆಲ್ಲದ ಮುಡಿ ಒಳ್ಳೆ	4—	[illegible]	—	
ಗೋಧಿ ಗೋಣಿ ಒಳ್ಳೆ	9—	8	1[illegible]—	8
ತೊಗರಿ ಗೋಣಿ ಒಳ್ಳೆ	13—	0	15—	
ಹುರುಳಿ ಗೋಣಿ ಒಳ್ಳೆ	6—	12	7—	5
ಕಡಲೆ ಗೋಣಿ ಒಳ್ಳೆ	8—	8	12—	8
ಕೊಗೆಂಪ ಗೋಣಿ ಒಳ್ಳೆ	13—	8	1—	0
ಉದ್ದು ಗೋಣಿ ಒಳ್ಳೆ	11—	8	[illegible]	
ಹೆಸರು ಗೋಣಿ ಒಳ್ಳೆ	10—	4	11	
ಊರು ಬೆಲ್ಲ ಖಂಡಿ ಒಳ್ಳೆ	[illegible]—	0	32	8
ಉಪ್ಪು ಗೋಣಿ ಒಳ್ಳೆ	4—	12	4—	14
ಮೆಣಸು ಖಂಡಿ ಒಳ್ಳೆ	60—		6	
ಕೊಬ್ಬರಿ ಹಿಂಡಿ ಖಂಡಿ ಒಳ್ಳೆ	35—	0	—	
ಎಳ್ಳಿಂಡಿ ಖಂಡಿ ಒಳ್ಳೆ	26—	4	2[illegible]—	8
ಕೊಬ್ರಿ ಎಣ್ಣೆ ಮಣ ಒಳ್ಳೆ	6	14	6—	14
ಎಳ್ಳೆಣ್ಣೆ ಮಣ ಒಳ್ಳೆ	6—	12	7—	[illegible]
ಬಿಮಿನೆಣ್ಣೆ ಟಿನ್ನಿಗೆ ಒಳ್ಳೆ	4—	7	[illegible]	12
ತೆಂಗಿನ ಸಕ್ಕರೆ ಮಣ ಒಳ್ಳೆ	4—	0	4—	[illegible]
ಹೊಸ ಮೆಣಸು	4—	0	5—	
[illegible] ಮುಡಿ ಒಳ್ಳೆ	6—	0	—	
ಕೇಟಿನ್ ಕಾಫಿ ಖಂಡಿ ಒಳ್ಳೆ	21[illegible]—	8	226—	
[illegible] ಖಂಡಿ ಒಳ್ಳೆ	170—	0	180—	
ಯೋಲಕ್ಕಿ ಮಣ ಒಳ್ಳೆ	27—	0	28—	
ಗೇರುಬೀಜ ಮುಡಿ ಒಳ್ಳೆ	4—	6	4—	12
ಕಲ್ಲುಪ್ಪು ಖಂಡಿ ಒಳ್ಳೆ	35—	0	37—	8
[illegible] ಹೆಸರು ಮಣ ಒಳ್ಳೆ	13—	0	13—	8
[illegible] ಮಣ ಒಳ್ಳೆ	15—	0	16—	0
ತೆಂಗಿನೆಣ್ಣೆ ಸೇರು ಒಳ್ಳೆ	16—	[illegible]	16—	8
[illegible] ಮಣ ಒಳ್ಳೆ	12—	0	12—	8
ಜವನು ಒಳ್ಳೆ	18—	4	18—	8
[illegible] ಖಂಡಿ ಒಳ್ಳೆ	20—		—	
[illegible] ಖಂಡಿ ಒಳ್ಳೆ	375—		400—	
ಹಳೆ ಅಡಿಕೆ	150—		205—	
[illegible]	140		145—	

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ- ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲುಪಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳ ಹೊರಡುವ ಟ್ಯಾಮುಗಳ ವಿವರ

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ ಅಲ್ಲಿಂದ ಕೂಡಲೇ ಹೊರಟು ಉಪ್ಪಿ ಮೋಟಾರ ಸ್ಟೇಶನ್ ಬದ ಧರ್ಮಸ್ಥಳ ರೋಡಿಗೆ ದಿ— 1 30ಕ್ಕೂ ಬೆಳ್ತಂಗಡಿಗೆ 1 45 ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕನ್ನನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 1 ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಿಗೆರೆಗೂ 4 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದಲ್ಲಿ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್ ದಂಡೆಲ್ಪೂರ ಗೋವಾ ಲೋಂಡ ಪೂನಾ ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೆಂಗಳೂರು ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಲ್ಲಿ ಹೊರಟು ಬೆಂಗಳೂರು ಮೈಸೂರು ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಪ್ಯಾರಡೂನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವರಾದರೆ ಪ್ರತಿದಿನವೂ ನಾಲ್ಕು ಸಾರಿ ಕಂಬಳ ಮಾರ್ಗವಾಗಿಯೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ 37 ಫೀಟು ಉದ್ದವಾಗಿ ವಿಸ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕೆಂದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ೧| ದಿವಸದೊಳಗೆ ತಲ್ಪಬಹುದು 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕೆಂದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲಿಚ್ಛಿಸುವವರು ನೋಡಲು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ ಮೈಸೂರು ಕೊಡಗು ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲುಪುವವು

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary

The Canara Public Conveyance Company Ltd., Mangalore

ಡಾ. ಅನ್ಸಾರಿ, ರಾಜಗೋಪಾಲಾಚಾರ್ಯ, ಸತ್ಯಮೂರ್ತಿ, ಕಾರ್ನಾಡ್ ಸದಾಶಿವರಾವ್, ಕಸ್ತೂರಿಬಾಯಿ ಗಾಂಧಿಯವರನ್ನು

ಕೈದು ಮಾಡಿದರು

ಶ್ರೀ. ವಲ್ಲಭಭಾಯಿಯವರು ಸೆರೆಮನೆಗೆ ಹೋಗುವಾಗ ಬಾಬು ರಾಜೇಂದ್ರ ಪ್ರಸಾದರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಚುನಾಯಿಸಿದ್ದರು. ರಾಜೇಂದ್ರ ಪ್ರಸಾದರು ತುರಂಗಕ್ಕೆ ಹೋಕ್ಕುವಾಗ ಡಾ| ಅನ್ಸಾರಿಯವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದ್ದರು. ಡಾ. ಅನ್ಸಾರಿಯವರನ್ನು ತಾ [illegible] ತನಕ ಕೈದು ಮಾಡಲಿಲ್ಲ. ಮಾತ್ರ ಅವರ ಮನೆಯ ಬಾಗಲಲ್ಲಿ ಒಬ್ಬಿಬ್ಬರು ಪೋಲೀಸರು ನಿಂತು ಒಳಹೋಗುವ, ಹೊರಬರುವ ಮಂದಿಗಳ ಪರೀಕ್ಷೆಯನ್ನು ಮಾಡಿ, ತಮಗೆ ಬೇಕಾದ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು. ಆದರೆ ಡಿಲ್ಲಿಯಲ್ಲಿ ಅನ್ಸಾರಿಗಳ ಕಾರ್ಯಕಲಾಪಗಳು ಹೆಚ್ಚು ಹೆಚ್ಚಾಗುತ್ತಾ ಬಂದವು. ಅದನ್ನು ಕಂಡು ಅವರನ್ನು ಬಂಧಿಸುವ ಆಲೋಚನೆಯಾಗಿ ತಾ [illegible]ನೇ ದಿನ ಅಲ್ಲಿಯ ಅಸಿಸ್ಟಾಂಟ್ ಪೋಲೀಸ ಸುಪರಿಂಟೆಂಡೆಂಟರಾದ ಬಕ್ಷಿವಾರ್ ಆಲಿ ಎಂಬವರು ಡಾ. ಅನ್ಸಾರಿಯವರ ಮನೆಗೆ ಹೋದರು. ಅವರೊಡನೆ ಇಬ್ಬರು ಸಾರ್ಜಂಟರೂ ಇಬ್ಬರು ಪೋಲೀಸರೂ ಹೋದರು. ಡಾ. ಅನ್ಸಾರಿಯವರು ಅವರನ್ನು ತನ್ನ ಬೈಠಕುಖಾನೆಯಲ್ಲಿ ಸಂದರ್ಶಿಸಿ, ಕಾರ್ಯವೇನಿರುವುದೆಂದು ಪ್ರಶ್ನಿಸಿದರು. ಆ ಕೊಠಡಿಯಲ್ಲಿ ಅನ್ಸಾರಿಯವರ ಅಸಿಸ್ಟಾಂಟರೊಬ್ಬರೂ ಇದ್ದರು. ಸುಪರಿಂಟೆಂಡೆಂಟರು ಆ ಅಸಿಸ್ಟಾಂಟರನ್ನು ಕೋಣೆಯಿಂದ ಹೊರಗೆ ಹೋಗಬೇಕೆಂದು ಕೇಳಿಕೊಂಡರು. ಅವರು ಹಾಗೆಯೇ ಹೊರಗೆ ಹೋದರು. ಕೂಡಲೇ ಅನ್ಸಾರಿಯವರಿಗೆ ಸುಪರಿಂಟೆಂಡೆಂಟರು "ನಿಮ್ಮನ್ನು ಕೈದು ಮಾಡಿರುತ್ತೇನೆ" ಎಂದರು. ಅನ್ಸಾರಿಯವರು ಅದಕ್ಕೊಪ್ಪಿದರು. ಆಗಲೇ ಅಧಿಕಾರಿಗಳೊಡನೆ ಹೊರಟು ಅವರನ್ನು ಡಿಲ್ಲಿಯ ಸಂಟ್ರಲ್ ಜೈಲಿಗೆ ಒಯ್ಯಲಾಯಿತು. ಅವರಿಗೆ ಯುರೋಪಿಯನ್ ವಾರ್ಡನ್ನು ಬಿಟ್ಟುಕೊಟ್ಟಿರುವರು.

ಮರುದಿನ ಅವರ ನ್ಯಾಯವಿಚಾರಣೆಯು ಕೋರ್ಟಿನೊಳಗೆಯೇ ನಡೆಯಿತು. ಡಾ. ಅನ್ಸಾರಿಯವರನ್ನು ಕಾಂಗ್ರೆಸ್ಸಿನ ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆಯೆಂದೂ, ಅವರು ಅಕ್ರಮ ಕೂಟ, ಕಾಯಿದೆಭಂಗಕ್ಕೆ ಪ್ರೋತ್ಸಾಹವನ್ನೀಯುತ್ತಾರೆಂದೂ ಆರೋಪಿಸಲಾಯಿತು. ಅನ್ಸಾರಿಯವರು ತನ್ನ ಹೇಳಿಕೆಯನ್ನು ಕೊಡಬಹುದೆಂದು ಮೆಜಿಸ್ಟ್ರೇಟರು ಹೇಳಿದರು. ಆದರೆ ಅನ್ಸಾರಿಯವರು ಪ್ರತಿಮಾತನ್ನಾಡದೆ, ತಾನು ತಪ್ಪಿತಸ್ಥನು ಹೌದೆಂದು ಒಪ್ಪಿದರು. ಅವರಿಗೆ ೬ ತಿಂಗಳ ಸಾದಾ ಸಜೆಯೂ, ೨೦೦ ರೂಪಾಯಿ ಜುಲ್ಮಾನೆಯೂ ವಿಧಿಸಲಾಯಿತು. ಜುಲ್ಮಾನೆಗೆ ತಪ್ಪಿದರೆ ಪುನಃ ಒಂದೂವರೆ ತಿಂಗಳ ಸಜೆಯೂ ಆಗುವುದೆಂದು ತೀರ್ಮಾನವಾಯಿತು. ಅವರನ್ನು [illegible] (ಪಂಜಾಬ್) ಸ್ಪೆಶಲ್ ಜೈಲಿಗೆ ಒಯ್ದರು.

ಮದರಾಸಿನಲ್ಲಿ ಕಾಂಗ್ರೆಸ್ ಪ್ರಮುಖರಾದ ಸಿ. ರಾಜಗೋಪಾಲಾಚಾರ್ಯರು ಮತ್ತು ಎಸ್. ಸತ್ಯಮೂರ್ತಿಯವರು ತಾ. [illegible]ನೇ ದಿನ ಒಂದು ಮೋಟಾರಿನಲ್ಲಿ ಕುಳಿತು ಬಹಿಷ್ಕಾರದ ಕುರಿತು ಕೈಪತ್ರಗಳನ್ನು ಜನರಿಗೆ ಹಂಚಿದರು. ಇಷ್ಟರಲ್ಲಿ ಪೋಲೀಸರ ನಾಲ್ಕು ಬಸ್ಸುಗಳು ಅವರ ಮೋಟಾರಿನ ಹಿಂಗಡೆಯಿಂದ ಬಂದವು. ಅದನ್ನು ನೋಡಿ ಸತ್ಯಮೂರ್ತಿಯವರೂ ರಾಜಗೋಪಾಲಾಚಾರ್ಯರೂ ದೊಡ್ಡ ಅಂಗಡಿಯ ಬಳಿ ತಮ್ಮ ಕಾರನ್ನು ನಿಲ್ಲಿಸಿ, ಅಲ್ಲಿದ್ದ ಜನಸಂದಣಿಗೆ ನೋಟೀಸುಗಳನ್ನು ಹಂಚಿದರು. ಕೂಡಲೇ ಪೋಲೀಸು ಇನ್ಸ್ಪೆಕ್ಟರರು ಬಸ್ಸಿನಿಂದಿಳಿದು ಸತ್ಯಮೂರ್ತಿ, ರಾಜಗೋಪಾಲರ ಬಳಿ ನಿಂದು "ನೀವು ಇಲ್ಲಿ ಏನು ಮಾಡುತ್ತಿರುವಿರಿ?" ಎಂದು ಕೇಳಿದರು. ಅವರ ಪ್ರಶ್ನೆಗೆ ರಾಜಗೋಪಾಲಾಚಾರ್ಯರು ಮುಗುಳ್ನಗೆಯಿಂದ ಸ್ವಲ್ಪ ನಕ್ಕು ಒಂದೆರಡು ನೋಟೀಸುಗಳನ್ನು ಪೋಲೀಸು ಇನ್ಸ್ಪೆಕ್ಟರರಿಗೂ ಇನ್ನು ಕೆಲವು ಪೋಲೀಸರಿಗೂ ಕೊಟ್ಟರು. ಅಷ್ಟರಲ್ಲಿ ಇನ್ನೊಂದು ಬಸ್ಸು ಪೋಲೀಸರು ಬಂದರು. ಸತ್ಯಮೂರ್ತಿ ರಾಜಗೋಪಾಲಾಚಾರ್ಯರ ಮೋಟಾರು ಹೊರಡಲು ಸಿದ್ಧವಾಯಿತು. ಕೂಡಲೇ ಇನ್ಸ್ಪೆಕ್ಟರರು ಕಾರನ್ನು ನಿಲ್ಲಿಸಿ ಹೇಳಿ "ನಿಮ್ಮಿಬ್ಬರನ್ನೂ ಕೈದು ಮಾಡಿರುವೆನು" ಎಂದರು. ಅಲ್ಲೇ ಸಮೀಪ ನಿಂತಿರುವ ಶ್ರೀಮತಿ ಲಕ್ಷ್ಮೀಪತಿ (ಇವರು ಕಳೆದ ಸತ್ಯಾಗ್ರಹದಲ್ಲಿ ಹೆಚ್ಚಿನ ಶ್ರಮಪಡೆದವರು) ಎಂಬವರನ್ನೂ ಇನ್ಸ್ಪೆಕ್ಟರರು ತಮ್ಮ ಮೋಟಾರಿನಲ್ಲಿ ಕುಳ್ಳಿರಿಸಿದರು. "ಆ ಸ್ತ್ರೀಯು ನಮ್ಮೊಡನೆ ಬಂದಿರುವುದಿಲ್ಲವೆಂದು" ರಾಜಗೋಪಾಲಾಚಾರ್ಯರು ಹೇಳಿದರು. ಅದಕ್ಕೆ ಇನ್ಸ್ಪೆಕ್ಟರರು "ಹೇಗೂ ಇರಲಿ, ಇವರೂ ಬರಲಿ!" ಎಂದು ಅಪ್ಪಣೆಯಿತ್ತರು.

ಇವರೆಲ್ಲರನ್ನೂ ಕಮಿಶನರ ಆಫೀಸಿಗೆ ಕೊಂಡುಹೋಗಲಾಯಿತು.

ಅಷ್ಟರಲ್ಲಿ ಕೈದುಗಳು ನಡೆದ ಸ್ಥಳಕ್ಕೆ ನೀರಿನ ಒಂದು ಮೋಟಾರು ಬಂದಿತು. ಮಾರ್ಗದ ಇಕ್ಕಡೆಗಳಲ್ಲಿಯೂ ನಿಂತಿರುವ ಜನರ ಮೇಲೆ ಮೋಟಾರಿನ 'ಟಾಂಕಿ'ಯ ನಳಿಗೆಯಿಂದಾಗಿ ನೀರನ್ನು ಹಾಯಿಸಲಾಯಿತು. ರಭಸದಿಂದ ಹಾರುವ ನೀರಿನ ಪೆಟ್ಟಿನಿಂದ ಜನರು ದಿಕ್ಕಾಪಾಲಾದರು. ಎಲ್ಲರೂ ಒದ್ದೆಯಾದರು. ಕೆಲವರು ಸಮೀಪದ ಅಂಗಡಿಗಳೊಳಗೆ ಓಡಿದರು.

ಪೋಲೀಸ್ ಕಮಿಶನರ ಆಫೀಸಿನ ಒಂದು ಹಾಲಿನಲ್ಲಿ ಸತ್ಯಮೂರ್ತಿ, ರಾಜಗೋಪಾಲಾಚಾರ್ಯ ಶ್ರೀಮತಿ ಲಕ್ಷ್ಮೀಪತಿಯವರಿಗೆ ಕುರ್ಚಿಗಳನ್ನು ಕೊಟ್ಟು ಕುಳ್ಳಿರಿಸಲಾಯಿತು. ಶ್ರೀಮತಿ ಲಕ್ಷ್ಮೀಪತಿಯವರು ತಮ್ಮೊಡನೆ ಬರಲಿಲ್ಲವೆಂದೂ ಅವರು ಮಾರ್ಗದಲ್ಲಿ ನಿಂತುಕೊಂಡಿದ್ದರೆಂದೂ ಅವರನ್ನು ಆರೋಪಿಸಲು ಸಾಧ್ಯವಿಲ್ಲವೆಂದೂ ರಾಜಗೋಪಾಲಾಚಾರ್ಯರು ಕಮಿಶನರರಿಗೆ ಹೇಳಿದರು. ಅವರ ಹೇಳಿಕೆಯ ಸತ್ಯಾಂಶವನ್ನು ಅರಿತುಕೊಂಡ ಮೇಲೆ ಕಮಿಶನರು ಶ್ರೀಮತಿಯವರನ್ನು ಬಿಟ್ಟುಬಿಟ್ಟರು. ಮೋಟಾರ್ ಡ್ರೈವರನನ್ನೂ ಬಿಟ್ಟುಬಿಟ್ಟರು.

ಶ್ರೀ ಸತ್ಯಮೂರ್ತಿಯವರಿಗೆ [illegible] ತಿಂಗಳ [illegible] ಶ್ರೀ ರಾಜಗೋಪಾಲಾಚಾರ್ಯರವರಿಗೆ ೬ ತಿಂಗಳ ಸಾದಾ ಸಜೆಯಾಯಿತು.

[illegible] ಮಂಗಳೂರ ಶ್ರೀಯುತ [illegible] ಕಾರ್ನಾಡ ಸದಾಶಿವರಾಯರು ಕಳೆದ ಶನಿವಾರ ಇಲ್ಲಿಗೆ ಬಂದಿದ್ದರು. ಸೋಮವಾರ ದಿನ ಅವರು [illegible] ಪತ್ರಗಳನ್ನು ಹಂಚಿದುದರಿಂದ ಕೈದು ಮಾಡಲ್ಪಟ್ಟರು. ಬೆಳಿಗ್ಗೆ [illegible] ಘಂಟೆಯೊಳಗೆ ಸ್ಪೆಶಲ್ ಕೋರ್ಟು ನಡೆದು ಶ್ರೀಯುತರಿಗೆ [illegible] ವರುಷ ಸಜೆ [illegible] ವಿಧಿಸಲಾಯಿತು. ಮರುದಿನ ಮುಂಜಾನೆ ೭ ಘಂಟೆಯೊಳಗೆ ಅವರನ್ನು [illegible]ಗೆ ಕೊಂಡೊಯ್ದರು.

ಕರ್ನಾಟಕದಲ್ಲಿ

ಹಾವೇರಿಯಲ್ಲಿ ಕೆಲವು ಮಂದಿಗಳನ್ನು ದಸ್ತಗಿರಿ ಮಾಡಿರುತ್ತಾರೆ. ಹಾವೇರಿಯ ಮುನ್ಸಿಪಾಲಿಟಿಯ ಅಧ್ಯಕ್ಷರಾದ ಶ್ರೀಯುತ [illegible]ಪ್ಪ [illegible] ದಸ್ತಗಿರಿ ಮಾಡಿರುವರು. [illegible]ಪ್ಪನವರಿಗೆ ಅವರ ದಸ್ತಗಿರಿಯನ್ನು ಪೋಲೀಸರು ಹೇಳಿದೊಡನೆ ಅವರು ತಮ್ಮ ಕೈಚೀಲವನ್ನು ಹಿಡಿದುಕೊಂಡು ಹೊರಟೇ ಬಿಟ್ಟರು. [illegible] ವಾಚರಿಸಲ್ಪಟ್ಟಿತು. ಧಾರವಾಡದಲ್ಲಿ ಶ್ರೀಯುತ [illegible] ಯವರನ್ನೂ [illegible] ದೇಶಪಾಂಡೆಯವರನ್ನೂ ಬೆಳಗಾಂವಿಯ ಬಾಬು ರಾವ್ [illegible]ರನ್ನೂ ಕೈದು ಮಾಡಿರುವರು.

ಲಂಡನಿನಲ್ಲಿ

ದಿ ಕೊಮನ್‌ವೆಲ್ತ್ ಒಫ್ ಇಂಡಿಯಾ ಲೀಗ್ ಎಂಬ [illegible] ಒಂದಿರುವ ಕಷ್ಟನಿವಾರಣೆಗೆ [illegible] ಇಂಗ್ಲೆಂಡಿನಲ್ಲಿಯೂ ಒಂದು ಚಳವಳಿಯನ್ನು ಪ್ರಾರಂಭಿಸಿದ್ದಾರೆ. ಸರಕಾರದ ಆಚರಣೆಯು ಅಸಮಂಜಸವೆಂಬುದಾಗಿ ನಿರ್ಧರಿಸುವುದಕ್ಕಾಗಿಯೇ ಈ ಸಭೆಯು ಜರಗುವುದು. ಅರ್ಲ್ ರಸ್ಸೆಲ್ ಎಂಬ ಆಂಗ್ಲ ಪ್ರಮುಖರು ಈ [illegible] ಅಧ್ಯಕ್ಷ ಪದವಿಯನ್ನು ವಹಿಸಿ [illegible] ಕಾರ್ಯಗಳನ್ನು ಮಾಡುತ್ತಿರುವರು. ಇವರ ಬೆಂಬಲಕ್ಕೆ ಲೇನ್ಸ್‌ಬರಿ, ಬ್ರೋಕ್‌ವೇ, ಅರ್ನೆಸ್ಟ್ ಬೆವಿನ್ ಮೊದಲಾದ ಆಂಗ್ಲ ಪ್ರಮುಖರು ನಿಂತಿರುವರು. ಇವರು ಮನವಿಗಳನ್ನು ಇವರ ಲೋರ್ಡ್ ಸೇಂಕಿಯವರಿಗೆ ಕಳುಹಿಸುತ್ತಿರುವರು. [illegible] ಸೇಂಕಿಯವರೂ ಕೂಡಾ ಹಿಂದೂದೇಶದಲ್ಲಿ ನಡೆಯುವ ಸಂಗತಿಗಳನ್ನು ಓದಿ, ಕೇಳಿ ಮನಃಪೂರ್ವಕವಾಗಿ ನೊಂದಿರುವರು. ಇವರು ಒಂದು ವೇಳೆ ತನ್ನ ಪದವಿಗೆ ರಾಜಿನಾಮೆ ಕೊಡಲೂ ಬಹುದೆಂದು ತಿಳಿಯಲಾಗಿದೆ. ಮೆಂಚೆಸ್ಟರ್ ಚೇಂಬರ್ ಒಫ್ ಕೊಮರ್ಸ್ ಎಂಬ ತಂಡದವರು ಇಲ್ಲಿಯ ದುಃಸ್ಥಿತಿಯನ್ನು ನೋಡಿ ಹಾಹಾಕಾರವನ್ನೆಬ್ಬಿಸುತ್ತಿರುವರು. ಹಿಂದೂದೇಶದೊಡನೆ ಸರಿಯಾದ ವ್ಯಾಪಾರ ವ್ಯವಹಾರವು ನಡೆಯದಿದ್ದರೆ ಮೆಂಚೆಸ್ಟರ್ ಲಂಕೆಶಯರ್‌ಗಳು ಸೋತುಹೋಗುವುದಲ್ಲದೆ, ಇಡೀ ಬ್ರಿಟನ ಅನಾಹುತಕ್ಕೆ ಕಾರಣವಾದೀತೆಂದು ಎಚ್ಚರವಿತ್ತಿದ್ದಾರೆ.

ಮುಂಬಾಯಿಯ

ಶ್ರೀಯುತ ಜಮ್ನಾಲಾಲ್ ಬಜಾಜ್ ಬಜಾಜ್ [illegible] ಕಂಪೆನಿ ಎಂಬ ಬೇಂಕಿನಲ್ಲಿ ಕಾಂಗ್ರೆಸ್ಸಿನವರ ಲಕ್ಷಗಟ್ಟಳೆ ಹಣವಿದ್ದಿತು. ಅದನ್ನು ತಿಳಿದ ಪೋಲೀಸರು ಆ ಬೇಂಕಿನ ಲೆಕ್ಕ ಪುಸ್ತಕಗಳ ಮೇಲೊಂದು ಶಸ್ತ್ರವನ್ನು ಪ್ರಯೋಗಿಸಿ, ಅವುಗಳನ್ನು ಪರಿಶೋಧಿಸಿದರು. ಕಾಂಗ್ರೆಸ್ಸಿನ ಹೆಸರಿನಲ್ಲಿ ಕೆಲವು ಲಕ್ಷ ರೂಪಾಯಿಗಳಿರುವುದಾಗಿ ತಿಳಿದುಬಂದಿದೆ. ಅದನ್ನು ಸರಕಾರವು ವಶೀಕರಿಸುವುದರಲ್ಲಿದೆ. ಅಲ್ಲದೆ ಕಾಂಗ್ರೆಸ್ಸಿನ ಸಹಾಯಾರ್ಥವಾಗಿ ಕೊಡುವ ದ್ರವ್ಯಗಳನ್ನೂ ವಶೀಕರಿಸುತ್ತಿರುವರು.

ಶ್ರೀಮತೀ ಕಸ್ತೂರಿಬಾಯಿ ಗಾಂಧಿಯವರನ್ನು

ಬಾರ್ಡೋಲಿಯ ಸೂರತ್ ಪ್ರಾಂತ್ಯದಲ್ಲಿ ಕೈದು ಮಾಡಿದರು. ಅವರೊಡನಿದ್ದ ವಲ್ಲಭಭಾಯಿಯವರ ಪುತ್ರಿ ಮಿಸ್ ಮಣಿಬೆನ್, ಮಿಸ್ ಮಿಠುಬೆನ್ ಪೆಟಿಟ್ ಮೊದಲಾದ ಸ್ತ್ರೀಯರುಗಳನ್ನೂ ದಸ್ತಗಿರಿ ಮಾಡಿರುವರು.

ವೈಸರಾಯರು

[illegible] ಡಿಲ್ಲಿಗೆ [illegible] ಸಪ್ರೂ, ಜಯಕರ್, [illegible] ಮೊದಲಾದ ಕೆಲವು ರೌಂಡ್‌ಟೇಬಲ್ ಪ್ರತಿನಿಧಿಗಳನ್ನು [illegible] ಮಾತುಕತೆ [illegible]

ಹಿಂದೂದೇಶಕ್ಕೆ

[illegible] ಕೂಡಲೇ [illegible] ಇಂಗ್ಲೆಂಡಿನ ಪತ್ರಿಕೆಗಳ ಅಭಿಪ್ರಾಯ [illegible] ಲಂಡನಿನಿಂದ [illegible] ಹೊರಡುವ ರೌಂಡ್ ಟೇಬಲ್ [illegible] ಹಿಂದೂಸ್ಥಾನಕ್ಕೆ ಹೋಗಿ ಅದನ್ನು [illegible] ಮಾಡಿ ಅದನ್ನು [illegible] ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಡಬೇಕೆಂದು ಹೇಳುತ್ತಿವೆ.

ಮುಂಬಾಯಿ ಕ್ರೊನಿಕಲ್

ಪತ್ರಿಕೆಯು ಪತ್ರಿಕೋದ್ಯಮ [illegible] ಒಂದು [illegible] ಪತ್ರಿಕೆಗಳು ಹೋಗುವುದಿಲ್ಲವೆಂದು ತಿಳಿದುಬಂದಿದೆ.

[illegible] ರಾಜಕೀಯ ಪರಿಸ್ಥಿತಿಯು [illegible] ಮತವೇನಿರುವುದೆಂದು ಮುಂಬಾಯಿ ಗವರ್ನರರಿಗೂ, [illegible] ವೈಸ್‌ರಾಯರಿಗೂ ತಿಳಿಸಬೇಕೆಂದಿದ್ದಾರೆ. [illegible] ವೆಲ್‌ಫೇರ್ ಒಫ್ ಇಂಡಿಯಾ ಲೀಗಿನವರು ಠರಾವು ಮಾಡಿಕೊಂಡಿರುವರು. ಅಲ್ಲದೆ ಅವರ ಇನ್ನೊಂದು ಠರಾವು ಹೇಗಿರುವುದೆಂದರೆ—ಮಹಾತ್ಮಾ ಗಾಂಧಿಯವರನ್ನು [illegible] ಅವರಿಗೆ [illegible] ಸರಿಯಾದ ಅನುಕೂಲಗಳನ್ನು ಮಾಡಿಕೊಡಬೇಕು. ಅವರ ಮೇಲಿನ ನಿಬಂಧನೆಗಳು ಅದಷ್ಟು [illegible]ಬೇಕು. ಅಲ್ಲದೆ [illegible] ಮಿತ್ರರೂ [illegible] ಅವರನ್ನು ನಿರ್ಬಂಧಿಸಬಾರದು.

ಅವರ ಇನ್ನೊಂದು ಠರಾವು ಏನೆಂದರೆ—ದೇಶದಲ್ಲಿ ಒಲ್ಲಲ್ಲಿ [illegible] ಆಗುವ [illegible] ಅಲ್ಲಲ್ಲಿ [illegible] ಬ್ರಿಟಿಷ ಮತ್ತು ಹಿಂದೀ [illegible] ಸ್ಪಷ್ಟ ನಿಷ್ಪಕ್ಷಪಾತ [illegible] ದೇಶದಲ್ಲಿ ಶಾಂತಿಯು ಹುಟ್ಟುವುದಿಲ್ಲದೆ [illegible] ಸಂಬಂಧಪಟ್ಟವರು ಇನ್ನಾದರೂ ಅಂತಹವುಗಳಿಗೆ ಕೈಯಿಕ್ಕಬಾರದಾಗಿ ಈ ಸಭೆಯು ಆಶಿಸುತ್ತದೆ.

ದೇವಕೊಟ್ಟೆಯಲ್ಲಿ

ಕಾಂಗ್ರೆಸ್ಸಿನವರ ಒಂದು ಸಭೆಯು ಜರಗುವುದಾಗಿ ಡಂಗುರ ಹೊಡೆಸಲಾಯಿತು. ಅದನ್ನು ತಿಳಿದ ಅಧಿಕಾರಿಗಳು ಅದು ನಿಷಿದ್ಧವಾಗಿರುತ್ತದೆಂದು ಡಂಗುರ ಹೊಡೆದು ಸಾರಿದರು. ನಿಯಮಿತ ಕಾಲಕ್ಕೆ ಒಂದು ಸಾವಿರ ಜನರಿಂದೊಡಗೂಡಿದ ಒಂದು ಸಭೆಯು ಜರಗಿತು. ಅದನ್ನು ಪೋಲೀಸರು ಚದರಿಸಿದರು. ಕೆಲವರಿಗೆ ಜಖಂ ಆಗಿದೆ. ಮುಂದಾಳುಗಳಲ್ಲಿ ಕೆಲವರನ್ನು ಕೈದು ಮಾಡಿರುವರು.

ಬಂಧನದ ಗೊಂದಲ

ತಾರೀಖು ೬.

ಗುಂಟೂರಿನಲ್ಲಿ

ಹಿಂದೂಸ್ಥಾನೀ ಸೇವಾದಲ, ಯುತ್ ಲೀಗ್ ಸಂಸ್ಥೆಗಳು ನಿಷೇಧಿಸಲ್ಪಟ್ಟಿವೆ. ಶಾಂತಿಮಯ ಪಿಕೆಟಿಂಗ್ ಮೆರವಣಿಗೆ ಮೊದಲಾದುವು ಅಕ್ರಮವೆಂದಾಗಿವೆ

ಟ್ರಿವೇಂಡ್ರಮ್‌ನಲ್ಲಿ

ಅನೇಕ ಮುಂದಾಳುಗಳನ್ನು ಕೈದುಮಾಡಿರುವರು ಕೆಲವರಿಗೆ ಎರಡು ಮೂರು ವಾರಗಳ ಶಿಕ್ಷೆಯಾಗಿದೆ

ಪೇಶಾವರದಲ್ಲಿ

ಕೆಂಪಂಗಿಯವರ ತಂಡಗಳು ಅಲ್ಲಲ್ಲಿ ತಲೆದೋರುತ್ತಿರುವವು ಮುಂದಾಳುಗಳಾಗಿ ಬಂದವರನ್ನು ಸೆರೆಮನೆಗೊಯ್ಯುತ್ತಿರುವರು ಕೆಲವರ ಕೈಯಲ್ಲಿ ಲೈಸನ್ಸು ಇಲ್ಲದ ರೈಫಲ್‌ಗಳಿದ್ದುವೆಂದು ತಿಳಿದುಬರುತ್ತದೆ

ಪೇಶಾವರದಲ್ಲಿನ ಪಪ್ಪ ಮಹಮ್ಮದ್ ಎಂಬ ಗ್ರಾಮದಲ್ಲಿ ಚಳವಳದ ಸಂಬಂಧ ಕಾರ್ಯಕಲಾಪಗಳು ನಡೆಯುತ್ತಿರುವುದನ್ನು ನೋಡಿ ಆ ಇಡೀ ಗ್ರಾಮದವರ ಮೇಲೆ ೫೦೦೦ ರೂಪಾಯಿ ಜುಲುಮಾನೆಯನ್ನು ವಿಧಿಸಿದ್ದಾರೆ

ಡೆಕ್ಕದಲ್ಲಿ

ಏಳು ಮನೆಗಳನ್ನು ಪೋಲೀಸರು ಜಪ್ತಿಮಾಡಿದರು ಡಕ್ಕಾ ಬಾರ್ ಎಸೋಸಿಯೇಶನಿನ ಅಧ್ಯಕ್ಷರ ಮನೆಯನ್ನೂ ಇನ್ನೂ ಕೆಲವರ ಮನೆಗಳನ್ನೂ ಜಪ್ತಿ ಮಾಡಿರುವರು ೧೫ ಮಂದಿ ಯುವಕರಿಗೆ ಅವರ ಹೆತ್ತವರ ಸಮಕ್ಷಮ ಎಚ್ಚರಿಕೊಟ್ಟಿರುವರು

ಕೋಕನಾಡದಲ್ಲಿ

೧೪೪ನೇ ಸೆಕ್ಷನನ್ನು ಉಲ್ಲಂಘಿಸಿದುದಕ್ಕಾಗಿ ಶ್ರೀ ಸಾಂಬಮೂರ್ತಿ ಸತ್ಯನಾರಾಯಣ ರಾಜು ಎಂಬವರಿಗೆ ಎರಡು ವರುಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿದೆ

ಬಂಗಾಳದ ಚಂದ್‌ಪುರ್ ಎಂಬಲ್ಲಿ

ನಿಬಾರಣ್ ಚಂದ್ರದತ್ತ ಎಂಬವರನ್ನೂ ಇನ್ನೂ ಆರೇಳು ಮಂದಿಗಳನ್ನೂ ಕೈದುಮಾಡಿ ಕೊಮಿಲ್ಲಾ ಪ್ರಾಂತ್ಯಕ್ಕೆ ಕಳುಹಿಸಿರುವರು

ಮುಂಬಾಯಿಯಲ್ಲಿ

ನ ಪ ಬಿಗಳು ಕಾಂಗ್ರೆಸ್ಸಿನ ೫೦,೦೦೦ ರೂಪಾಯಿಗಳನ್ನು ವಶೀಕರಿಸಿಕೊಳ್ಳಲಿರುವರು ಸಂಜೆಯ ಹೊತ್ತಿಗೆ ಕಾಂಗ್ರೆಸ್ಸಿನವರನ್ನು ಕೈದುಮಾಡುತ್ತಿರುವರು ಸ್ತ್ರೀಯರು ಅಂಗಡಿ ಬಾಗಿಲುಗಳಲ್ಲಿ ಪಿಕೆಟ್‌ಮಾಡುತ್ತಿರುವರು

ಕಲ್ಕತ್ತದ

ಕೊರ್ಪೊರೇಶನ್ ಸಭೆಯು ಯಾವ ಕಾರಣವನ್ನೂ ಕೊಡದೆಯೇ ತನ್ನ ಸಭಾ ಕೆಲಸವನ್ನು ಒಂದು ದಿನಕ್ಕೆ ಹಿಂದಿಟ್ಟಿತು ಗಾಂಧೀಜಿಯವರ ದಸ್ತಗಿರಿ ಸಂಬಂಧವಾಗಿ ಅದು ಹೀಗೆ ಮಾಡಿದೆ ಎಂದು ತಿಳಿದುಬಂದಿದೆ

ಕಾನ್‌ಪುರದಲ್ಲಿ

ಕಾಂಗ್ರೆಸ್ ಆಫೀಸನ್ನು ಜಪ್ತಿಯು ನಡೆಯಿತು ಕೆಲವು ಸ್ತ್ರೀಯರನ್ನು ಕೈದುಮಾಡಿದರು ಒಬ್ಬ ಪೋಲೀಸನಿಗೆ ಕಲ್ಲೇಟು ಬಿದ್ದಿದೆಯಾಗಿ ತಿಳಿದುಬಂದಿದೆ

ತಾ ೮ರಲ್ಲಿ

ಕರಾಚಿಗೆ

ಹೈದರಾಬಾದಿನಿಂದ ಹೋದ ಸ್ವಾಮಿ ಗೋವಿಂದಾನಂದ್ ಎಂಬ ಡಿಕ್ಟೇಟರನ್ನೂ ದಸ್ತಗಿರಿಮಾಡಿ ಕರಾಚಿ ಸೆರೆಮನೆಗೆ ಒಯ್ದರು

ಅಮೃತಸರದಲ್ಲಿ

ಡಾ ಶಾಂತಾರಾಮ್ ಸತಿ, ಮತ್ತು ಪಂಡಿತ ಗೋವಿಂದಾನಂದ್ ಎಂಬವರನ್ನು ದಸ್ತಗಿರಿಮಾಡಿ ಸೆರೆಮನೆಗೊಯ್ದರು

ಬೆಜವಾಡದಲ್ಲಿ

ಎ ಕಲೇಶ್ವರ ರಾವ್ ಪಂತಲು ಲಕ್ಷ್ಮಯ್ಯ ಚೌಧುರಿ ಎಂಬಿಬ್ಬರು ಮುಂದಾಳುಗಳನ್ನೂ, ಇನ್ನೂ ಕೆಲವರನ್ನೂ ದಸ್ತಗಿರಿಮಾಡಿರುವರು ಇವರು ತಮ್ಮ ತಮ್ಮ ಹಾಸಿಗೆ ಆಹಾರವನ್ನು ಉಪಯೋಗಿಸಬಹುದೆಂದಪ್ಪಣೆಯಿದೆ.

ಮುಸಲೀಪಟಾಮಿನಲ್ಲಿ

ಆಂಧ್ರ ಜಾತೀಯ ಕಲಾಶಾಲೆಯ ಪ್ರಿನ್ಸಿಪಾಲರಾದ ಡಿ. ರಾಮಸ್ವಾಮಿ ಎಂಬವರು ಸೆಕ್ಷನ್ ೧೪೪ನ್ನು ಉಲ್ಲಂಘಿಸಿರುವುದಕ್ಕಾಗಿ ಅವರನ್ನು ಕೈದುಮಾಡಿರುವರು

ಬೆಂಗಳೂರಿನಲ್ಲಿ

ಕಾಯಿದೆಭಂಗ ಚಳವಳಕ್ಕೆ ಸೇರಿದ್ದ ಕೃಷ್ಣಸ್ವಾಮಿ ಧರ್ಮಲಿಂಗಮ್, ಪೆರಿಯಾಸ್ವಾಮಿ ಮೊದಲಿಯಾರ್ ಎಂಬವರಿಗೆ ಮೂರು ಮೂರು ತಿಂಗಳ ಕಠಿಣ ಸಜೆ

ಕಡಲೂರಿನಲ್ಲಿ

ವಿದೇಶಿ ವಸ್ತ್ರದಂಗಡಿಗಳನ್ನು ಪಿಕೆಟ್‌ಮಾಡುತ್ತಲಿದ್ದ ಸ್ವಯಂಸೇವಕರನ್ನು ಲಾಠಿಗಳಿಂದ ಚದರಿಸಲಾಗಿದೆ ಕೆಲವರಿಗೆ ಜಖಂ ಆಗಿದೆ

ಚಿಟ್ಟಗೊಂಗಿನಲ್ಲಿ

ರಾತ್ರಿ ಸವಾರಿ ಜಪ್ತಿಮಾಡುವಾಗ ಒಬ್ಬ ಸ್ತ್ರೀಗೆ ಹೊಡೆದುದಕ್ಕಾಗಿ ಮೂರು ಮಂದಿ ಪೋಲೀಸರ ಮೇಲೆ ದಾವೆ ನಡೆದಿದೆ

ತಾ ೯ರಲ್ಲಿ

ಮುಂಬಾಯಿಯ

ವಿಕ್ಟೋರಿಯಾ ಟರ್ಮಿನಸ್ ಎಳಿ ಎಂಪಾಯರ್ ಬಿಲ್ಡಿಂಗಿಗೆ ಗೋಡೆಯಿಂದ ನೋಟೀಸು ತಗಲಿಸಿದ್ದರು ಅದು ಹಿಂದೂಸ್ಥಾನ್ ರಿಪಬ್ಲಿಕ್ ಸೋಸೈಟಿಯವರಿಂದ ಪ್ರಕಟವಾದುದೆಂದೂ, ಅದರಲ್ಲಿ "ಸರಕಾರಿ ಉದ್ಯೋಗಸ್ಥರೆ ಎಚ್ಚರವಿರಲಿ ನಮಗೆ ಅಪ್ಪಣೆ ದೊರೆತೊಡನೆ ಬೇಕು ಬೇಕಾದವರನ್ನು ಕೊಲ್ಲುವೆವು! ಜಾಗ್ರತೆ" ಎಂದು ಬರೆಯಲ್ಪಟ್ಟಿತ್ತೆಂದೂ ತಿಳಿದುಬಂದಿದೆ ಪೋಲೀಸರು ಶೋಧನ ನಡೆಸುತ್ತಿರುವರು.

ತಿನ್ನವೆಲ್ಲಿಯಲ್ಲಿ

೪ನೇ ಆಗಸ್ಟ್ ತಿಂಗಳಲ್ಲಿ ಅಲ್ಲಿಯ ಗಣಪತಿ ಥಿಯೇಟರಿನಲ್ಲಿ ಒಬ್ಬ ಯುವಕನು ನಿಷಿದ್ಧ ಪದ್ಯವನ್ನು ಹಾಡಿದುದಕ್ಕಾಗಿ ತೀರ್ಪು ನಡೆದು ಒಂದು ವರುಷ ಕಠಿಣ ಸಜೆಯನ್ನು ವಿಧಿಸಿದರು

ನ್ಯೂ ಡಿಲ್ಲಿಯಲ್ಲಿ

ಪಂಡಿತ ಜವಾಹರಲಾಲರ ಅತ್ತೆ, ಶ್ರೀಮತಿ ರಾಜಪತಿ ಕೌಲ್, ಶ್ರೀಮತಿ ದುರ್ಗಾದೇವಿ ಶ್ರೀಮತಿ ರಾಂಪ್ಯಾರಿ ಮುಂತಾದವರನ್ನು ಕೈದುಮಾಡಿರುವರು ಎಲ್ಲರಿಗೂ ಮೂರು ಮೂರು ತಿಂಗಳ ಸಜೆಯಾಗಿದೆ ಶ್ರೀಮತಿ ರಾಜಪತಿಯವರನ್ನು 'ಎ' ಕ್ಲಾಸಿನಲ್ಲಿ ಇಟ್ಟಿರುವರು

ಡಾ. ಅನ್ಸಾರಿಯವರ

ದಸ್ತಗಿರಿ ಸಂಬಂಧ ಉತ್ಸವ ಬೋಧನೆಯನ್ನು ಮಾಡಿದ ೯ ಮಂದಿ ಸ್ವಯಂಸೇವಕರನ್ನು ಕೈದುಮಾಡಿ ಮೂರು ಮೂರು ತಿಂಗಳ ಕಠಿಣ ಸಜೆಗೊಳಗುಮಾಡಿರುವರು ಪಿಕೆಟ್ ಮಾಡಿದ ೪ ಮಂದಿ ಸ್ತ್ರೀಯರನ್ನು ಕೈದುಮಾಡಿರುವರು ಕೈದುಮಾಡಲ್ಪಟ್ಟವರನ್ನು ಬಿಡಿಸಿ ತರುವುದಕ್ಕಾಗಿ ಜನಸಂಖ್ಯೆಯು ಏರಿದ್ದರಿಂದ ಪೋಲೀಸರಿಗೆ ಕಲ್ಲು ಬಡಿಯಿತು ಕೆಲವು ಪೋಲೀಸರಿಗೆ ಗಾಯವಾಗಿದೆ

ಕಲ್ಕತ್ತದಲ್ಲಿನ

ಲಿಬರ್ಟಿ ಪತ್ರಿಕೆಯು ಸಂಪಾದಕೀಯ ಸೂಚನೆಯು ನಿಷಿದ್ಧವಾದುದರಿಂದ ಅದರ ಸಂಪಾದಕರಾದ ಸತ್ಯರಂಜನ ಭಕ್ಷಿ ಮತ್ತು ಪ್ರಿಂಟರಾದ ಫುಲಿನ್ ಬಿಹಾರಿಧರ್ ಎಂಬವರನ್ನು ದಸ್ತಗಿರಿ ಮಾಡಲಾಗಿದೆ

ಶ್ರೀಯುತ ಸುಭಾಷ್ಚಂದ್ರಭೋಸರ

ಹಿರಿಯಣ್ಣನಾದ ಶ್ರೀಯುತ ಸರತ್‌ಚಂದ್ರಭೋಸರು ಯಾವ ಸಭೆಗೂ ಸೇರಬಾರದಾಗಿಯೂ, ಕಾಯಿದೆಭಂಗ ಚಳವಳಕ್ಕೆ ಪ್ರೋತ್ಸಾಹವನ್ನೀಯ ಬಾರದಾಗಿಯೂ ಅಪ್ಪಣೆಯಾಗಿದೆ

ಬಂಗಾಳ ಓರ್ಡಿನನ್ಸಿನ

ಮೇರೆಗೆ ವಿದ್ಯಾಸಾಗರ ಕೊಲೇಜಿನ ಸಮರ್‌ಪಾಲ್ ಎಂಬ ವಿದ್ಯಾರ್ಥಿಯೊಬ್ಬರನ್ನು ದಸ್ತಗಿರಿಮಾಡಿರುವರು ಕಲ್ಕತ್ತದ ಕ್ಷೇತ್ರ ಪ್ರಾಂತ್ಯಗಳಲ್ಲಿ ದಿನಂಪ್ರತಿ ಕೈದುಗಳ ಹಿಂದೆ ಕೈದುಗಳಾಗುತ್ತವೆ

ಲಕ್ನೋವಿನಲ್ಲಿಯ

ಮುಂದಾಳುಗಳಾದ ಸಿ. ಬಿ ಗುಪ್ತ, ಎಚ್. ಪಿ. ಸಕ್ಸೇನ ಎಂಬವರನ್ನೂ ಇನ್ನಿತರರನ್ನೂ ಕೈದುಮಾಡಿದ್ದಾರೆ.

ಅಲ್ಲಹಾಬಾದಿನಲ್ಲಿ

ಶ್ರೀಮತೀ ಉಮಾ ನೆಹರೂರವರನ್ನೂ, ಇನ್ನಿತರರನ್ನೂ ಕೆಲವು ಸ್ತ್ರೀಯರನ್ನೂ ಕೈದುಮಾಡಿದ್ದಾರೆ ಶ್ರೀಮತಿ ಮೋತಿಲಾಲ ನೆಹರೂರವರ ಮೋಟಾರುಕಾರನ್ನೂ ವಶೀಕರಿಸಿಕೊಂಡಿರುವರು.

ಬೆಳಗಾಂವಿಯಲ್ಲಿ

ಶ್ರೀಯುತ ನಾರಾಯಣರಾವ್ ಜೋಶಿ, ಬಲವಂತರಾವ್ ದಾತಾರ್ ತರುಣ ಭಾರತದ ಸಂಪಾದಕರಾದ ಬಾಬುರಾವ್ ಠಾಕೂರ್, ಕೇಶವರಾವ್ ಗೋಖಲೆ ಇನ್ನಿತರರನ್ನೂ ಕೈದುಮಾಡಿದರು ಹಿಂಡಲಗಾ ಜೈಲಿಗೆ ಒಯ್ಯಲ್ಪಟ್ಟಿತು.

ಗದಗಿನಲ್ಲಿ

ಶ್ರೀ ಅನಂತರಾವ್ ಜಲೀಹಾಳ್ ಮತ್ತು ಡಾ ಹೊಯಿಲ್‌ಗೋಲ್ ಎಂಬಿಬ್ಬರು ಮುಂದಾಳುಗಳನ್ನು ಕೈದುಮಾಡಿರುವರು ಪಟ್ಟಣದಲ್ಲಿ ಹರತಾಳವಾಚರಿಸಲ್ಪಟ್ಟಿತು

ತಾರೀಖು ೧೦

ಪಾಟ್ನಾದ

ಬಂಕಿಪುರ ಮೈದಾನಿಯಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಬಾಬು ರಾಜೇಂದ್ರ ಪ್ರಸಾದರ ಬಹಿರಂಗ ಸಭೆಯು ನಡೆಯಿತು ಅವರಿಗೆ ೬ ತಿಂಗಳ ಕಠಿಣ ಸಜೆಯು ವಿಧಿಸಲಾಯಿತು ಅನುಗ್ರಹನಾರಾಯಣ ಸಿನ್ಹ ಬಲ್ದೇವ ಸಹಾಯರವರಿಗೆ ಆರು ತಿಂಗಳ ಕಠಿಣ ಸಜೆಯಾಗಿದೆ ರಾಜೇಂದ್ರರಿಗೆ 'ಎ' ಕ್ಲಾಸ್ ದೊರೆತಿದೆ ಅಲ್ಲಿ ೧೮ ಮಂದಿ ಪುರುಷರನ್ನೂ ೮ ಮಂದಿ ಸ್ತ್ರೀಯರನ್ನೂ ಕೈದುಮಾಡಿರುವರು

ಮುಂಬಾಯಿಯಲ್ಲಿ

ವಿದೇಶಿ ವಸ್ತ್ರದಂಗಡಿಗಳನ್ನು ಪಿಕೆಟ್‌ಮಾಡುವವರು ಅಂಗಡಿಯ ಎದುರು ನಿಂತು ಪಿಕೆಟ್ ಮಾಡುವುದಿಲ್ಲ ಅಂಗಡಿಯ ಬಳಿ ಅತ್ತ ಇತ್ತ ತಿರುಗಾಡಿ ಸುತ್ತಮುತ್ತಲಿಂದ ಬರುವ ಜನರನ್ನು ಪಿಕೆಟ್‌ಮಾಡುತ್ತಿರುವರು ನೋಡುವವರಿಗೆ ಅವರು ಪಿಕೆಟ್‌ಮಾಡುತ್ತಾರೆಂದು ತಿಳಿಯುವುದಿಲ್ಲ ಇದನ್ನು ನಿವಾರಿಸುವುದಕ್ಕಾಗಿ ಹಾಗೆ ದಾರಿಯಲ್ಲಿ ಅತ್ತ ಇತ್ತ ತಿರುಗುವುದನ್ನು ನಿಷೇಧಿಸಿ ಒಂದು ಓರ್ಡಿನೆನ್ಸು ಮುಂದೆ ತಂದಿರುತ್ತಾರೆ ಅಲ್ಲದೆ ಚಳವಳ ಸಂಬಂಧವಾಗಿ ಐದು ಮಂದಿಗಳು ಒಟ್ಟು ಸೇರಬಾರದಾಗಿಯೂ ಆಜ್ಞೆಯಾಗಿದೆ

ತಾರೀಖು ೧೧

ಕಲ್ಕತ್ತದಲ್ಲಿ

ಪಿಕೆಟಿಂಗಿನ ಸಂಬಂಧವಾಗಿ ೧೮ ಮಂದಿ ಯುವಕರು ಸೆರೆಮನೆಗೆ ನಡೆದರು ಕೆಲವರಿಗೆ ಆರು ಕೆಲವರಿಗೆ ಮೂರು ತಿಂಗಳ ಸಜೆಯಾಗಿದೆ

ನಾಗಪುರದಲ್ಲಿ

ಬಾಬಾಜೀ ದೇಶಮುಖರನ್ನೂ ಶ್ರೀಮತೀ ಪಕ್ವೇಕರ್ ಮೊದಲಾದ ೧೭ ಮಂದಿಗಳನ್ನೂ ಕೈದುಮಾಡಿರುವರು

ಮಧುರೆಯಲ್ಲಿ

ಮೆಸರ್ಸ್ ಎನ್ ಎಮ್ ರಾಮುಲು ಎಂಡ್ ಸನ್ಸ್ ಕಂಪೆನಿಯಲ್ಲಿ ಪೋಲೀಸರು ಜಪ್ತಿ ನಡೆಸಿದರು ಅದರ ಒಬ್ಬ ಪಾಲುಗಾರರು ತಮಿಳುನಾಡು ಕಾಂಗ್ರೆಸ್ಸಿನ ಕೋಶಾಧಿಕಾರಿಗಳಾಗಿದ್ದುದೇ ಇದಕ್ಕೆ ಕಾರಣ ಕೆಲವು ಚೆಕ್‌ಪುಸ್ತಕಗಳನ್ನೂ ಇನ್ನಿತರ ವ್ಯಾಪಾರ ಲೆಖ್ಖಪುಸ್ತಕಗಳನ್ನೂ ಪರಿಶೋಧನೆಗಾಗಿ ಕೊಂಡುಹೋಗಿರುವರು

ಪೂಲ್ಲಾಚಿಯಲ್ಲಿ

ಶ್ರೀಯುತ ಪಿ ಡಿ ಅಶರ್‌ರವರನ್ನೂ ಅವರ ಪತ್ನಿಯವರನ್ನೂ ಕೈದುಮಾಡಿದರು ಅವರಿಬ್ಬರಿಂದ ೩ ಸಾವಿರ ರೂಪಾಯಿಗಳ ಭದ್ರತೆ ಕೇಳಲಾಯಿತು ಅಶರ್‌ರವರು ಅದನ್ನು ಕೊಡಲೊಪ್ಪಲಿಲ್ಲ ಅದಕ್ಕೆ ಅವರಿಬ್ಬರಿಗೂ ಒಂದೊಂದು ವರುಷದ ಸಾದಾ ಸಜೆಯು ವಿಧಿಸಲ್ಪಟ್ಟು, 'ಎ' ಕ್ಲಾಸಿನಲ್ಲಿರಿಸಲ್ಪಟ್ಟರು

ಕಲ್ಲಿಕೋಟೆಯಲ್ಲಿ

'ಮದ್ಯಪಾನದ ಹಾನಿ''ಯೆಂಬ ನಾಟಕವನ್ನು ಅಭಿನಯಿಸಲಿದ್ದಾಗ ಅದನ್ನು ನಿಷಿದ್ಧಪಡಿಸಿದರು

ವಿವಿಧ ಸಮಾಚಾರಗಳು.

ಮಹಾತ್ಮರ ಗ್ರೇಮಫೋನ್ ಪ್ಲೇಟು— 'ದೇವರಿದ್ದಾನೆಯೋ?'

ಮಹಾತ್ಮಾಗಾಂಧಿಯವರು ಲಂಡನಿನಲ್ಲಿ ಕೊಲಂಬಿಯಾ ಗ್ರೇಮಫೋನು ಕಂಪೆನಿಯವರಿಗೆ ತನ್ನದೊಂದು ಪ್ಲೇಟನ್ನು ತೆಗೆಯಲು ಅಪ್ಪಣೆ ಕೊಟ್ಟಿದ್ದರಷ್ಟೆ. ಅವರ ದಿವ್ಯವಾಣಿಯನ್ನೊಳಗೊಂಡ ಈ ಪ್ಲೇಟುಗಳು ಕೋಟಿಗಟ್ಟಲೆ ಮಾರಾಟವಾಗಲಿರುವವೆಂದು ತಿಳಿದುಬಂದಿದೆ. ದೇಶೀಯರೂ ವಿದೇಶೀಯರೂ ಈ ಪ್ಲೇಟನ್ನು ತರಿಸಿಕೊಂಡಿರುವರು. ಭೂಲೋಕದಲ್ಲಿ ಘನಪುರುಷರೆಂದೆಣಿಸಲ್ಪಟ್ಟ ಗಾಂಧಿಜೀಯವರು ಈ ಪ್ಲೇಟಿನಲ್ಲಿ ಹೇಳಿದುದೇನೆಂದು ಗ್ರೇಮಫೋನು ಇಲ್ಲದವರೂ ಅರಿಯಬೇಕಾಗಿ ಇದನ್ನಿಲ್ಲಿ ಕೊಟ್ಟಿದೆ.

"ಚರಾಚರ ಜಗತ್ತಿನಲ್ಲಿರುವ ಎಲ್ಲಾ ವಸ್ತುಗಳಲ್ಲಿಯೂ ವ್ಯಾಪಿಸಿರುವ, ಅವರ್ಣನೀಯ ಹಾಗೂ ಅವ್ಯಕ್ತ ಚೇತನಾಶಕ್ತಿಯೊಂದುಂಟು ಅದು ನನ್ನ ಕಣ್ಣಿಗೆ ಕಾಣದಿದ್ದರೂ, ಅದು ನನಗೆ ಭಾಸವಾಗುತ್ತದೆ.

ಈ ಅಗೋಚರ ಶಕ್ತಿಯು ಎಲ್ಲೆಲ್ಲಿಯೂ ತನ್ನ ಇರುವಿಕೆಯನ್ನು ತೋರಿಸುತ್ತದೆ, ಆದರೆ ಪ್ರತ್ಯಕ್ಷ ಪ್ರಮಾಣಕ್ಕೆ ಇದು [illegible] ಏಕೆಂದರೆ ಇದು ನನ್ನ ಇಂದ್ರಿಯಗಳಿಗೆ ಕಾಣುವ ಎಲ್ಲಾ ವಸ್ತುಗಳಿಂದಲೂ ಪ್ರತ್ಯೇಕವಾದುದು. ದೇವರ ಇರುವಿಕೆಯನ್ನು ನಾವು ವಿಚಾರಪೂರ್ವಕ ಸ್ವಲ್ಪಮಟ್ಟಿಗೆ ನಿರ್ಧರಿಸಬಹುದು. ಆದುದರಿಂದಲೇ ಅದನ್ನು ನಾನು ಇಂದ್ರಿಯಾತೀತವೆಂದು ಹೇಳುವುದು.

ನಮ್ಮ ಸಾಮಾನ್ಯ ವ್ಯವಹಾರಗಳಲ್ಲಿಯೂ ಸಹ ಜನರಿಗೆ ತಮ್ಮನ್ನು ಯಾರು ಏಕೆ ಮತ್ತು ಹೇಗೆ ಆಳುವರೆಂಬ ವಿಷಯವು ತಿಳಿದಿರುವುದಿಲ್ಲ, ಆದರೂ ಯಾವುದೋ ಶಕ್ತಿಯು ಆಡಳಿತದಲ್ಲಿ ಇರುವುದೆಂದು ಅವರಿಗೆ ಗೊತ್ತುಂಟು.

ನಾನು ಮೈಸೂರು ಪ್ರಾಂತ್ಯದಲ್ಲಿ ಕೆಲವು ವರುಷಗಳ ಹಿಂದೆ ಸಂಚಾರಮಾಡುತ್ತಿದ್ದಾಗ ಕೆಲವು ಬಡಹಳ್ಳಿಯ ಜನರನ್ನು ನೋಡಿ "ಮೈಸೂರು ದೇಶವನ್ನು ಯಾರು ಆಳುವರು?" ಎಂದು ಕೇಳಲು ಯಾರೋ ದೇವರೊಬ್ಬನು ಆಳುವನೆಂದು ಅವರು ಹೇಳಿದರು. ತಮ್ಮ ರಾಜನ ವಿಷಯವಾಗಿ ಅವರಿಗೆ ಅಷ್ಟೇ ಗೊತ್ತಿದ್ದಿತು. ರಾಜಾಧಿರಾಜನಾದ ಪರಮಾತ್ಮನಿಗೂ ನನಗೂ ಇರುವ ಅಂತರವೆಂದರೆ ಆ ಬಡಜನರಿಗೂ ಅವರ ರಾಜನಿಗೂ ಇರುವ ಅಂತರಕ್ಕಿಂತ ಹೆಚ್ಚಿನದು. ಆದುದರಿಂದ ಭಗವಂತನ ಇರುವಿಕೆಯನ್ನು ನಾನು [illegible] ಅದೇನೂ ಆಶ್ಚರ್ಯದ ಸಂಗತಿಯಲ್ಲ. ಆದರೆ ಮೈಸೂರಿನ ಆ ಬಡಜನರಂತೆ, ನಾನಾದರೂ ಈ ಜಗತ್ತು ನಿಯಮಬದ್ಧವಾದುದೆಂದೂ ಚರಾಚರಪ್ರಾಣಿಗಳ ಪದಾರ್ಥಗಳೆಲ್ಲಾ ಒಂದು ದುರ್ಭೇದ್ಯವಾದ ನಿಯಮಕ್ಕೊಳಪಟ್ಟಿವೆಯೆಂದೂ ಭಾವಿಸುತ್ತೇನೆ.

ಇದೇನೂ ಕುರುಡು ನಿಯಮವಲ್ಲ. ಏಕೆಂದರೆ ಕುರುಡು ನಿಯಮವಾದರೂ ಜೀವಂತ ಪ್ರಾಣಿಗಳ ನಡತೆಯನ್ನು ಬಂಧಿಸಲಾರದಷ್ಟೇ ಅಲ್ಲ; ಶ್ರೀ ಜಗದೀಶ ಚಂದ್ರಬೋಸರ ಶೋಧಗಳಿಂದ ಈಗ ಜಡಪದಾರ್ಥವೂ ಸಜೀವವಾದುದೆಂದು ನಿರ್ಧರಿಸಲ್ಪಟ್ಟಿದೆ. ಹಾಗೆಂದ ಮೇಲೆ ಪ್ರಾಣಿವರ್ಗವನ್ನೆಲ್ಲಾ ತನ್ನ ಅಧೀನಕ್ಕೊಳಪಡಿಸಿಕೊಂಡಿರುವ ಆ ನಿಯಮವೇ "ದೇವರು" ಎನ್ನಬಹುದು.

ಆ ನಿಯಮಕ್ಕೂ ನಿಯಮಕರ್ತನಿಗೂ ಯಾವ ಭೇದವೂ ಇಲ್ಲ. ಆ ನಿಯಮದ ವಿಷಯವಾಗಿಯಾಗಲೀ, ನಿಯಮಕರ್ತನ ವಿಷಯವಾಗಿಯಾಗಲೀ ನನಗೇನೂ ತಿಳಿಯದೆಂದ ಮಾತ್ರಕ್ಕೆ ಆ ನಿಯಮವೇ ಇಲ್ಲ, ಕರ್ತನೂ ಇಲ್ಲ' ಎಂದು ನಾನು ಹೇಳಲಾರೆನು. ಮೈಸೂರು ದೇಶದ [illegible]ಇಲ್ಲವೆಂದು ಆ ದೇಶದ ಹಳ್ಳಿಯವನು ತಿಳಿದಮಾತ್ರಕ್ಕೆ ರಾಜಸತ್ತೆಯನ್ನು ಹೇಗೆ ಅವನು ಅತಿಕ್ರಮಿಸಿ ನಡೆಯಲಾರನೋ ಹಾಗೆಯೇ ನಾನಾದರೂ ಭಗವಂತನಿಲ್ಲವೆಂದು ನಾನು ಭಾವಿಸಿದ ಮಾತ್ರಕ್ಕೆ ಭಗವನ್ನಿಯಮವನ್ನು ಅತಿಕ್ರಮಿಸಲಾರೆನು. ಅಲ್ಲದೆ ನನ್ನ ಅಲ್ಪಜ್ಞತೆಯನ್ನೂ, ಅಲ್ಪ ಶಕ್ತಿಯನ್ನೂ, ಹಾಗೂ ಭಗವಂತನ ಸರ್ವಜ್ಞತೆ, ಸರ್ವಶಕ್ತಿ, ಸರ್ವೋತ್ತಮತೆ, ಇವುಗಳನ್ನೂ ನಾನು ಗ್ರಹಿಸಿ ವಿನಯದಿಂದಲೂ, ವಿಧೇಯತೆಯಿಂದಲೂ, ಭಕ್ತಿಯಿಂದಲೂ ಭಗವಂತನನ್ನು ನಂಬಿದ್ದೇ ಆದರೆ ನನ್ನ ಜೀವನಯಾತ್ರೆಯು ಸುಗಮವಾಗುವುದು. ರಾಜಾಜ್ಞೆಗೆ ಒಳಗಾದವರು ಸುಖವಾಗಿ ಜೀವಿಸುವುದೇ ಇದಕ್ಕೆ ಪ್ರತ್ಯಕ್ಷ ನಿದರ್ಶನವು.

ಪ್ರಪಂಚದಲ್ಲಿ ಪ್ರತಿ ಪದಾರ್ಥವೂ, ಪ್ರತಿ ಕ್ಷಣದಲ್ಲೂ ಮಾರ್ಪಾಟಾಗುತ್ತಿದೆ ಎಂದು ನಾನು ತಿಳಿಯಬಲ್ಲೆನು, ಆದರೆ ಈ ಬದಲಾವಣೆಗಳೆಲ್ಲಾ ಹಾಗೂ ಸೃಷ್ಟಿ, ಸ್ಥಿತಿ, ಲಯ ನಿಯಮಗಳಿಗೂ ಕಾರಣಕರ್ತನಾದ ಸರ್ವೇಶ್ವರನು ಮಾತ್ರ ಶಾಶ್ವತನು. ಆತನಿಗೆ ಎಂದಿಗೂ ಬದಲಾವಣೆ ಎಂಬುದೇ ಇಲ್ಲ. ನಮ್ಮ ಕಣ್ಣಿಗೆ ಕಾಣುವ ಎಲ್ಲವೂ ನಾಶ ಹೊಂದುವುದೇ ಹೊರತು ಆತನು ಮಾತ್ರ ಅನಂತನು.

ಈ ಪರಮಾತ್ಮನು ದಯಾಮಯನೋ ದುಃಖಕಾರಿಯೋ ಎಂದರೆ ಈತನು ಸಂಪೂರ್ಣ ದಯಾಮಯನೆಂದೇ ನನ್ನ ಭಾವನೆ. [illegible]ಮರಣದಲ್ಲಿ ಜೀವವೂ, ಅಸತ್ಯದಲ್ಲಿ ಸತ್ಯವೂ, ಅಂಧಕಾರದಲ್ಲಿ ತೇಜಸ್ಸೂ, ಸ್ಥಿರವಾಗಿರುವುದು ಎಲ್ಲ ಕಡೆಗಳಲ್ಲಿಯೂ ಕಾಣಬರುತ್ತದೆ. 'ಪ್ರಾಣ' 'ಸತ್ಯ' 'ಬೆಳಕು' ಹಾಗೂ 'ಪ್ರೇಮ'ವೂ ಸಹ ದೇವರೇ. ಆತನೇ ಸರ್ವೋತ್ತಮನಾದ ಸರ್ವೇಶ್ವರನು.

ಪರಮಾತ್ಮನ ಅಸ್ತಿತ್ವದ ಬಗ್ಗೆ ಬುದ್ಧಿಗೆ ಮಾತ್ರ ತೃಪ್ತಿಯುಂಟಾದರೆ ಸಾಲದು. ಹೃದಯದಲ್ಲಿ ಸಹ ಪರಿವರ್ತನೆಯುಂಟಾಗಬೇಕು. ಭಕ್ತನು ಮಾಡುವ ಅತ್ಯಲ್ಪ ಕಾರ್ಯದಲ್ಲಿ ಸಹ ಭಗವನ್ಮಹಿಮೆಯು ಗೋಚರವಾಗಬೇಕು. ಇದಕ್ಕೆ ಭೌತಿಕ ಇಂದ್ರಿಯಗಳ ಅನುಭವವು ಸಾಲದು, ಅವುಗಳನ್ನು ಮೀರಿದ ಅನುಭವವು ಬೇಕು. ಈ ಇಂದ್ರಿಯಗಳ ದ್ವಾರಾ ಉಂಟಾಗುವ ಜ್ಞಾನವಾದರೂ ಸತ್ಯವಾದುದೇ, ಆದರೆ ಒಮ್ಮೊಮ್ಮೆ ಭ್ರಾಂತಿ ಮೂಲಕವಾಗಿ ಸುಳ್ಳು ಹಾಗೂ ವಿಪರೀತ ಜ್ಞಾನವಾಗುವುದೂ ಉಂಟು. ಇಂದ್ರಿಯಾತೀತವಾದ ಜ್ಞಾನವು ನಿಶ್ಚಿತವಾದುದು. ತಮ್ಮ ಹೃದಯಕಮಲದಲ್ಲಿ ವಾಸಿಸುವ ಭಗವಂತನನ್ನು ಅಂತರ್ದೃಷ್ಟಿಯ ಮೂಲಕ ನೋಡಬಲ್ಲವರ ಜೀವನದಲ್ಲೇ ಉಂಟಾದ ಅದ್ಭುತ ಬದಲಾವಣೆಗಳೇ ಇದಕ್ಕೆ ಪ್ರಬಲ ನಿದರ್ಶನಗಳಾಗಿವೆ.

ಇಂತಹ ಮಹಾನೀಯರು ಎಲ್ಲಾ ದೇಶಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ ಹುಟ್ಟುತ್ತಲೇ ಇರುವರು. ಈ ಸತ್ಯವನ್ನು ತಿರಸ್ಕರಿಸುವುದಾದರೆ ಮಾನವನು ತನ್ನ ವ್ಯಕ್ತಿತ್ವವನ್ನೇ ನಂಬದಂತಾಗುವುದು.

ಪರಮಾತ್ಮನಲ್ಲಿ ಅಚಂಚಲ ಭಕ್ತಿಯುಂಟಾದರೆ ಮಾತ್ರ ಆತ್ಮಸಂದರ್ಶನವು ದೊರೆಯುವುದು. ನಿರುಪಮಾನಭಕ್ತಿಯ ಮೂಲಕವೇ ಭಕ್ತನು ತನ್ನೊಳಗಿರುವ ಪರಮೇಶ್ವರನ ಬಿಂಬವನ್ನು ಸಂದರ್ಶಿಸಬಲ್ಲನು. ಈ ವಿಷಯವನ್ನು ಪ್ರಥಕ್ಕರಿಸಲು ಬೇಕಾದಷ್ಟು ಪ್ರಮಾಣಗಳು ಬಹಿರ್ಪ್ರಪಂಚದಲ್ಲಿ ದೊರಕಲಾರವು, ಆದುದರಿಂದ ಪ್ರಪಂಚವೆಲ್ಲಾ ಒಂದು ನೈತಿಕ ಪರಿಪಾಲನೆಗೆ ಒಳಪಟ್ಟಿದೆಯೆಂದೂ ಆ ನೈತಿಕ ನಿಯಮಗಳೇ ಸರ್ವೋತ್ಕೃಷ್ಟವಾದುದೆಂದೂ ಪೂರ್ಣವಾಗಿ ನಂಬುವುದೇ ಶ್ರೇಯಸ್ಕರ. ಸತ್ಯ ಹಾಗೂ ಪ್ರೇಮಗಳಿಗೆ ವಿರುದ್ಧವಾದ ವಿಷಯಗಳನ್ನು ನಂಬದೆ ತಿರಸ್ಕರಿಸಲು ದೃಢ ವಿಶ್ವಾಸವೇ ನಿರುಪಾಯಕರವಾದ ಸಾಧನ. ಭಗವಂತನು ಇದ್ದಾನೆಂಬ ನಂಬಿಕೆಯನ್ನು ನಾನು ಕಾರ್ಯಕಾರಣ ವಾದದಿಂದ ಉಂಟುಮಾಡಲಾರೆನು. ಬುದ್ಧಿಯು ವಾದ ವಿವಾದಗಳಿಗೆ ಅತೀತವಾದುದು. ಅಸಾಧ್ಯವಾದುದನ್ನು ಸಾಧಿಸಲು ಯಾರೂ ಪ್ರಯತ್ನಿಸಬಾರದೆಂಬುದೇ ಎಲ್ಲರಿಗೂ ನನ್ನ ಬುದ್ಧಿವಾದ.

⁂ ⁂ ⁂

ಟೋಕಿಯೋ ಅರಸನ ಮೇಲೆ ಬೋಂಬು

ಜಪಾನಿನ ಅರಸರು ಹೊಸ ವರುಷದ ದಿನ ಮಿಲಿಟರಿಯವರನ್ನು ನೋಡಿಕೊಂಡು ಹಿಂದಿರುಗಿ ತನ್ನ ರಥವನ್ನೇರುವಾಗ ರಥದ ಬಳಿ ಒಂದು ಬೋಂಬು ಸ್ಫೋಟಿಸಿತು. ಅವರ ಕುದುರೆಗಳಿಗೆ ಹಾನಿ ಆಯಿತು. ದೈವವಶಾತ್ ಅವರಿಗೇನಾಗಲಿಲ್ಲ. ಅವನ್ನು [illegible]ನನ್ನು ಬಹಳ ಪ್ರಯಾಸದಿಂದ ಸೆರೆ ಹಿಡಿದರು. ಅವನ ಜೇಬಿನಲ್ಲಿ ಮತ್ತೊಂದು ಬೋಂಬು ಇದ್ದಿತಂತೆ. ಈ ಘಟನೆಯು ದೇಶದಲ್ಲೆಲ್ಲಾ [illegible]. ಜಪಾನ್ ಅರಸರು ಈ ಘಟನೆಯಿಂದ ಪಾರಾದುದಕ್ಕಾಗಿ ನಮ್ಮ ಸಾರ್ವಭೌಮರು ಸಂತೋಷ ಸೂಚಕ ತಂತಿಯೊಂದನ್ನು ಕಳುಹಿದರು. ಬೋಂಬ್ ಸ್ಫೋಟನಾದಿ ಕ್ರಾಂತಿಗಳನ್ನು ತಾವು ನಿಲ್ಲಿಸಲು ಅಸಮರ್ಥರಾದುದಕ್ಕಾಗಿ ಜಪಾನಿನ ಕೆಬಿನೆಟ್ ಸದಸ್ಯರು ತಮ್ಮ ಪದವಿಗಳಿಗೆ ರಾಜೀನಾಮೆ ಕೊಡುವರೆಂದು ತಿಳಿದು ಬಂದಿದೆ. ಅರಸರು ಅವರ ರಾಜೀನಾಮೆಯನ್ನು ಸ್ವೀಕರಿಸಲಿಕ್ಕಿಲ್ಲವೆಂದು ತಿಳಿದುಬಂದಿದೆ. ಒಂದು ವೇಳೆ ರಾಜೀನಾಮೆಯನ್ನು ಸ್ವೀಕರಿಸಿದರೆ ಅಲ್ಲಿ [illegible] ಸರಕಾರವಾಗುವುದು.

⁂ ⁂ ⁂

ಪತ್ರಿಕೆಗಳಿಗಾಗಿ ಜೀವವಿಮೆ

ಪಾಶ್ಚಾತ್ಯ ದೇಶಗಳಲ್ಲಿ ವರ್ತಮಾನ ಪತ್ರಿಕೆಗಳು ಜನಸಾಮಾನ್ಯರ [illegible] ಬಳಕೆಗೆ ಬರುವಂತೆ ಅವುಗಳ ಸಂಪಾದಕರು ನಾನಾ [illegible] ಉಪಾಯಗಳನ್ನು ಮಾಡುತ್ತಿರುವರು. ಕೆಲವರು ಅನೇಕ ರೀತಿಯ ಸೋಡಿಗಳನ್ನೆತ್ತಿ ತಮ್ಮ ಪತ್ರಿಕೆಗೆ ಚಂದಾದಾರರನ್ನು ಹೆಚ್ಚಿಸುವರು. ಕೆಲವರು ಒಂದು ಊರಿನ ಒಂದು ಪ್ರದೇಶದಲ್ಲಿ ಅಮೂಲ್ಯ ದ್ರವ್ಯವನ್ನು ಹೂತಿಟ್ಟು ಚಂದಾದಾರರು ಪತ್ರಿಕೆಗಳಲ್ಲಿ ಬೀಳುವ ಒಂದು ಒಗಟಿನ ಮೂಲಕ ಆ ದ್ರವ್ಯವನ್ನು ಸಂಪಾದಿಸುವಂತೆ ಪ್ರೇರೇಪಿಸುವರು. ಈಗೀಗ ಚಂದಾದಾರರೂ ಜೀವವಿಮೆ ಮಾಡುವ ಕ್ರಮವು ಮುಂಬಂದಿದೆ. ಒಂದು ಪತ್ರಿಕೆಯು ತನ್ನ ಚಂದಾದಾರರೊಳಗೆ ಯಾರಾದರೂ ಮೃತಪಟ್ಟರೆ ಅವರಿಗೆ ಈ ವರ್ಷ ೩೦,೦೦೦ ಪವನುಗಳನ್ನು ಕೊಡಬೇಕಾಗಿ ಚಂದಾದಾರರ ಜೀವವಿಮೆಮಾಡುತ್ತದೆ, ಇನ್ನೊಂದು ಪತ್ರಿಕೆಯು ತನ್ನ ಚಂದಾದಾರರಿಗೆ ಯಾವ ತರದ ಅಪಾಯವುಂಟಾದಾಗ್ಯೂ ವಿಮೆ ಹಣವು ಅವರಿಗೆ ಸಿಗುವಂತೆ ಏರ್ಪಾಡು ಮಾಡಿದೆ. ಒಂದೆರಡು ಪತ್ರಿಕೆಗಳು ಚಂದಾದಾರರ ಕುಟುಂಬದವರಿಗೂ ಹೆಂಡತಿಮಕ್ಕಳಿಗೂ ವರ್ಷಾಶನವನ್ನು ಕೊಡುವ ಏರ್ಪಾಡನ್ನು ಮಾಡಿವೆ. ಅಂತೂ ತಮ್ಮ ಚಂದಾದಾರರು ಹೆಚ್ಚಾಗಬೇಕೆಂದೇ ಎಲ್ಲಾ ಪತ್ರಿಕೆಗಳ ಉದ್ದೇಶ. ಅಲ್ಲದೆ ಇಂಗ್ಲೆಂಡು ಮುಂತಾದ ದೇಶಗಳಲ್ಲಿ ಪತ್ರಿಕಾ ಸಂಪಾದಕನೆಂದರೆ ಮಹದೈಶ್ವರ್ಯವಂತನೆಂಬ ಭಾವನೆಯೇ ಇರುತ್ತದೆ. ಆದುದರಿಂದಲೇ ಆಂಗ್ಲ ಪತ್ರಿಕೆಗಳಿಗೆ ಅಷ್ಟು ಗೌರವವು ಎಲ್ಲಾ ಕಡೆಯಲ್ಲೂ ದೊರೆಯುತ್ತದೆ.

ಪಿಶಾಚಿಯ ಆಟ.

ನಾಗಮಂಡಲದ ಬಡಗದ ಗ್ರಾಮದಲ್ಲಿ ಒಬ್ಬರ ಪತ್ನಿ ಸುವರ್ಣಾದೇವಿ ಎಂಬಾಕೆಗೆ ಕೆಲವು ದಿನಗಳಿಂದ ಪಿಶಾಚಿಯು ಹಿಡಿದು ಹಿಂಸೆ ಕೊಡುತ್ತಿತ್ತು. ಮೈಸೂರಿನಲ್ಲಿ ಹಾ ಅನೇಕ ದಿನ ಇಂದ್ರಜಾಲ ವಿದ್ಯೆಯಲ್ಲಿ ತಾನು ಪಾಂಡಿತ್ಯವನ್ನು ಪಡೆದಿರುವೆನೆಂದು ಜಂಭಿಸಿದ ಒಬ್ಬ ಮುಸಲ್ಮಾನ ಮಾಂತ್ರಿಕನು, ಪಿಶಾಚಿ ಹಿಡಿದವರ ಮನೆಗೆ ಹೋಗಿ ತನ್ನ ಆಟವನ್ನು ತೋರಿಸಿದನು. ಸ್ತ್ರೀಯನ್ನು ಎದುರು ಕುಳ್ಳಿರಿಸಿ ಮಂತ್ರ ಮಾಡಿದನು. ಒಡನೆ ಸ್ತ್ರೀಯು ಪಿಶಾಚಿಯ ಉಪದ್ರವದಿಂದ ಆವೇಶಗೊಂಡಳು. ಮಾಂತ್ರಿಕನು ಕೈ ಚಪ್ಪಾಳೆ ಹೊಡೆದನು. ತೂ ಚಲ್ ಜಾಹೋ ಎಂದನು. ಕೂಡಲೇ ಪಿಶಾಚಿ ಹಿಡಿದ ಸುವರ್ಣಾದೇವಿಯು ಓಡಿದಳು. ಅವಳು ಓಡುವುದನ್ನು ಎಲ್ಲರೂ ಕಣ್ಣುಬಿಟ್ಟು ನೋಡುತ್ತಲೇ ಇದ್ದರು. ಅಷ್ಟರಲ್ಲಿ ಅವಳು ಅಲ್ಲೇ ಸಮೀಪದಲ್ಲಿದ್ದ ಒಂದು ಕೆರೆಗೆ ದುಮುಕಿದಳು. ಅಷ್ಟಾಗುವಾಗಲೂ ಮಾಂತ್ರಿಕನು "ಹೋಗಬೇಡಿರಿ ಆ ಕೆರೆಯಲ್ಲೊಂದು ಪಿಶಾಚವಿದೆ. ಅದನ್ನು ಅವಳು ಈಗ ಇಲ್ಲಿಗೆ ತರುವಳೆಂ"ದನು. ಅವನ ಉಪದೇಶವು ಮುಗಿಯುವುದರೊಳಗಾಗಿ ಸುವರ್ಣಾದೇವಿಯನ್ನು ಕೆರೆಯು ನುಂಗಿತು. ಅವಳು ಮುಳುಗಿ ಮಡಿದಳು.

NOTICE.

The undersigned begs to inform the public that the Hindu Agency Motor Lorry business now being run by him and any other businesses that he may undertake in future (over and above the Chemist and Druggist business and the printing and publishing concern called the Sharada Press run by the Mangalore Trading Association which he is managing on behalf of his father) are exclusively his concerns and neither his father Mr. V. Shrinivas Kamat either in his personal or any other capacity nor the aforesaid Mangalore Trading Association of which Mr. V. Shrinivas Kamath is the sole Proprietor have any thing to do with the assets or liabilities of the said businesses of the Hindu Agency, the aforesaid Lorry business and any other business that may be started hereafter by the undersigned.

Dated 1—1—'32, Mangalore. V. Keshava Kamath.

ನೋಟೀಸು.

ಈ ಕೆಳಗೆ ಸಹಿ ಹಾಕಿರುವ ವಿ. ಕೇಶವ ಕಾಮತ್ ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ— ನಾನು ಕೆಲವು ಸಮಯದಿಂದ ನಡೆಸುತ್ತಿರುವ ಮತ್ತು ನನ್ನ ಸ್ವಂತದ 'ದಿ ಹಿಂದೂ ಏಜನ್ಸಿ' ಮತ್ತು ಈ ಕೆಲವು ವರ್ಷಗಳಿಂದ ನಡೆಸುತ್ತಿರುವ ಮೋಟಾರ ಲಾರಿ ವ್ಯವಹಾರಗಳು ಅಥವಾ ಇನ್ನು ಮುಂದೆ ನಡೆಸುವಂಥ ಇತರ ವ್ಯಾಪಾರ ವ್ಯವಹಾರಗಳು ನನ್ನ ಸಂಪೂರ್ಣ ಸ್ವಾಮ್ಯತ್ವದವುಗಳಾಗಿರುವುದರಿಂದ, ಇವುಗಳಿಂದ ಉಂಟಾಗುವ ಲಾಭ ನಷ್ಟಗಳು ಇತ್ಯಾದಿಗಳು, ನನ್ನ ತಂದೆಯವರಾದ ವಿ. ಶ್ರೀನಿವಾಸ ಕಾಮತರವರಿಗೆ ಅಥವಾ ಸದರಿ ವಿ. ಶ್ರೀನಿವಾಸ ಕಾಮತರವರ ಸಂಪೂರ್ಣ ಹಕ್ಕಿನ ಕೆಮಿಸ್ಟ್ ಮತ್ತು ಡ್ರಗಿಸ್ಟ್ ವ್ಯಾಪಾರ ವಹಿವಾಟುಗಳನ್ನೂ ಪ್ರೆಸ್ ವ ಇತರ ಪ್ರಕಟಣಾ ವಹಿವಾಟುಗಳನ್ನು ನಡೆಸುವ ಶಾರದಾ ಪ್ರೆಸ್ಸಿನ ಇತ್ಯಾದಿಗಳನ್ನು ಹೊಂದಿರುವ ಮಂಗಳೂರು ಟ್ರೇಡಿಂಗ್ ಅಸೋಸಿಯೇಶನಿಗೆ ಒಳಗಾಗತಕ್ಕವುಗಳಲ್ಲ. ಅದ್ದರಿಂದ ಸದರಿ ಮೇಲೆ ವಿವರಿಸಿದ ಮಂಗಳೂರು ಟ್ರೇಡಿಂಗ್ ಅಸೋಸಿಯೇಶನಿನ ಮೇನೇಜಮೆಂಟನ್ನು ನಾನು ನಡೆಸುತ್ತಿರುವೆನಾದರೂ ಸದರಿ ವಿ. ಶ್ರೀನಿವಾಸ ಕಾಮತರಾಗಲೀ ಮತ್ತು ಸದರಿ ಮಂಗಳೂರು ಟ್ರೇಡಿಂಗ್ ಅಸೋಸಿಯೇಶನಾಗಲೀ ಮೇಲೆ ಹೇಳಿರುವ ನನ್ನ ವಹಿವಾಟುಗಳು ಅಂದರೆ ದಿ ಹಿಂದೂ ಏಜನ್ಸಿ, ಮೋಟಾರ ಲಾರಿ ವಹಿವಾಟು ವ ಇನ್ನು ಮುಂದೆ ನಾನು ಮಾಡತಕ್ಕ ಇತರ ವಹಿವಾಟುಗಳ ಲಾಭ ನಷ್ಟಗಳಿಗೆ ಬದ್ಧರಾಗಿರುವುದಿಲ್ಲ.

ಮಂಗಳೂರು ೧೪—೧—೩೨ ವಿ. ಕೇಶವ ಕಾಮತ್

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

[illegible]

ಮ್ಯಾನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ

ಮೂಲವ್ಯಾಧಿ

[illegible]

ಕಿವುಡುತನ

[illegible]

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಶಾರದಾ ಛಾಪಖಾನೆ,

ರಥಬೀದಿ ಮಂಗಳೂರು

ಕೋ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ, ಮಂಗಳೂರು

ಮಿಕ್ಕವುಗಳೆಲ್ಲವನ್ನು ಬಹಿಷ್ಕರಿಸಿ. ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಸ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ   ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.

ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14.

Dr H L Batliwalla, Sons & Co., Ltd.
Kadell Road, P O. Dadar, Bombay, 14

ತಂತಿ ವಿಳಾಸ. – "SIRINDHUN" Bombay

ಶಪೂರ್ಜಿ ಎಚ್. ಎಲ್ ಬಾಟ್ಲಿವಾಲಾ – ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಗ್ಯಾರಂಟಿಯುಳ್ಳ ವಾಚುಗಳು!   ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಅರಿಸ್ಟ್ ಉತ್ತಮ ತರದ ವಾಚುಗಳೂ, ಕ್ಲಾಕುಗಳೂ, ಟೈಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ಜಾಗರೂಕತೆಯೂ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೊ. – ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಹಾಕಿಸಿ ಸ್ವಚ್ಛಮಾಡಿಸುವುದರಿಂದ ಸಂಚಾರ ಸಮಯಕ್ಕೆ ತೋರಿಸುವುದು

ನಮ್ಮ ಶಾಲೆಗಳು

೨ ಮಕ್ಕಳ ನಗು.

ಲೇಖಕರು:—ಶ್ರೀಯುತ ಶಿವರಾಮ ಕಾರಂತ.

ಮಕ್ಕಳ ನಗುವೇನೆಂದು ಅರಿಯದವನು ಉಪಾಧ್ಯಾಯನಾಗಲು ಅರ್ಹನಲ್ಲ. ಮಕ್ಕಳ ಶಿಕ್ಷಣವೆಂದರೆ ನಗುವಿನ ಶಿಕ್ಷಣ. ಶಿಕ್ಷಣದ ಗುರಿಯಾದರೂ ನಗುವೇ. ನಗಲಾರದ ಮಕ್ಕಳನ್ನು ನೀವೆಲ್ಲಾದರೂ ಕಂಡರೆ—ಅವಕ್ಕೆ ಶರೀರ ಸಂಬಂಧವಾದ ಇಲ್ಲವೆ ಮನಸ್ಸಿಗೆ ಸಂಬಂಧವಾದ ಬೇನೆಯಿದೆ ಎಂದು ತಿಳಿಯಬೇಕು. ಇಂದಿನ ಶಾಲೆಗಳಲ್ಲಿ ಅಲಕ್ಷಿಸಿರುವುದಾದರೆ ಅದನ್ನೇ. ಮಕ್ಕಳಿಗೆ ನಗುವೇ ಜೀವ—ಎಂದು ತಿಳಿಯದಿರುವ ತನಕ ನಾವು ವಿದ್ಯಾಭ್ಯಾಸಕ್ಕಾಗಿ ಹೋರಾಡುವುದು ವ್ಯರ್ಥ. ನಗುಮೊಗದ ಮಕ್ಕಳಿರುವ ಶಾಲೆಯೇ ಅರಳಿದ ಹೂಗಳ ಉದ್ಯಾನ. ಬಾಡಿರುವ ಮೋರೆಯ ಮಕ್ಕಳಿರುವ ಸ್ಥಳವೇ—ಮಸಣ. ಈಗ ನಾವಾವ ಶಾಲೆಯಲ್ಲಿ ಕಾಲಿಟ್ಟರೂ ಮಸಣದ ಛಾಯೆಯೇ ಒಡೆದು ಕಾಣುವುದಲ್ಲದೆ—ಉದ್ಯಾನದ ಕಳೆಯು ಅದರಲ್ಲಿಲ್ಲ! ಬಾಡಿ ಒಣಗಿದ ಗಿಡಗಳಿಗೆ ನೀರಿಂದೇನು ಬಂದೀತು?

ನಗುವೆಂಬುದು ಆರೋಗ್ಯದ ಚಿಹ್ನೆ. ನಗುವಿದ್ದರೆ ಕಾರ್ಯಶಕ್ತಿ ಉಳಿಯುವುದು. ನಗುವಿದ್ದರೆ ದೇಹಬಲ ಉಳಿಯುವುದು. ನಗುವಿದ್ದರೆ ಸುಖ ಉಳಿಯುವುದು. ನಮ್ಮ ಯಾವತ್ತು ಹೋರಾಟವು ಸುಖಕ್ಕಾಗಿದೆಯಾದರೆ, ಆನಂದವು ನಮ್ಮ ಜೀವನದ ಗುರಿಯಾದರೆ—ನಗುವುದನ್ನು ನಾವು ಮೊದಲು ಕಲಿಯಬೇಕು. ಮಕ್ಕಳಿಗೆ ಬಾಲ್ಯದಿಂದಲೂ ನಗುವಿನ ಶಿಕ್ಷಣವು ದೊರೆತದ್ದಾದರೆ, ಮುಂದೆ ಅವರ ಜೀವನದಲ್ಲಿ ತುಂಬಾ ಉತ್ಸಾಹವು ಕಂಡುಬರುವುದು. ಅದರಲ್ಲಿ ಸೋತವೆಲ್ಲೆಂದು [illegible] ಲಾಭವು ಅಣು ಮೋರೆಯವರಿಗಿರುವುದಿಲ್ಲ.

ಇಂದಿನ ನಮ್ಮ ಶಾಲೆಗಳ ಅವಸ್ಥೆಯೇನು? ಚಿಕ್ಕವನೋ ದನೋ, ಅಣ್ಣನೊಡನೆಯೋ ಶಾಲೆಗೆ ಹೋಗುತ್ತೇನೆ—ಎಂದು ಹೊರಟ ಚಿಕ್ಕ ಮಗುವೊಂದು—ಎರಡನೆಯ ಬಾರಿಗೆ ಆ ಬಯಕೆಯನ್ನು ಮಾಡುವುದಿಲ್ಲ! ಆ ಮಗುವಿನ ಕಣ್ಣಿಗೆ ಶಾಲೆಯೊಂದು ನಗುವನ್ನು ಅಪಹರಿಸುವ ರಕ್ಕಸನಾಗಿ ಕಾಣುವುದು. ಮನೆಯಲ್ಲಿ ಸದಾ ನಗುತ್ತ, ಜಿಗಿಯುತ್ತ ಜೀವಿಸಿದ ಬಾಲಕನು ಒಂದು ವರುಷ, ವರುಷವೇಕೆ? ಆರು ತಿಂಗಳ ಕಾಲ ಶಾಲೆಗೆ ಹೋದನೆಂದರೆ—ಅವನ ಮುಖವು ಶವದಂತಾಗುವುದು. ನಾನು ಹಲವು ಶಾಲೆಗಳನ್ನು ಕಂಡಿರುವೆನು. ಮಕ್ಕಳಿಗೆ ನಗುವ ಪರಿಪಾಠವೇ ಮರೆತುಹೋದಂತೆ ಕಾಣುವುದು. ಅದೂ—ಉಪಾಧ್ಯಾಯನ ದೆವ್ವವು ಎದುರಿಗಿದ್ದರೆ—ತೆನ್ನಾಲಿ ರಾಮನ ಕಥೆ ಹೇಳಿದರೂ ಅವರು ನಗುವಂತಿಲ್ಲ.

ಚಿಕ್ಕಮಕ್ಕಳು ನಕ್ಕರೆ—ಅದು ಶಾಲಾ ಶಿಸ್ತಿಗೆ ಹಾನಿ ತರುವುದಂತೆ! ಒಂದು ಶಾಲೆಯಲ್ಲಿ ಕೇವಲ [illegible] ವರುಷದ ಮಕ್ಕಳಿಂದ ಕೂಡಿದ ಮೊದಲನೆ ಕ್ಲಾಸಿನಲ್ಲಿ ಕುಳಿತಿದ್ದೆವು. ಅವರನ್ನು ಆಡಲು ಬಿಟ್ಟಂತೆ ಕುಳಿತಿದ್ದೆವು. ಮಕ್ಕಳು ಒಂದೆರಡು ಚೇಷ್ಟೆಗಳನ್ನು ಕಂಡು ನಗ ತೊಡಗಿದುವು. ಹಲವು ಮಕ್ಕಳ ಧ್ವನಿಯು [illegible] ಗದ್ದಲ(?)ವಾಗಿ ಮುಖ್ಯ ಅಧ್ಯಾಪಕರ ಕಿವಿಗೆ ಬಿಟ್ಟಿತು. ಅವರು "ರೋಷಭೀಷಣಮೂರ್ತಿಗಳಾಗಿ" ಬಂದರು. ಬಳಿಗೆ—ನಾವೇ ಮಕ್ಕಳನ್ನು ನಕ್ಕಿಗಿಸ್ಸಿದವರೆಂದು ಸಮಾಧಾನ ಪಡಿಸಬೇಕಾಯಿತು. ನಗುವೆಂಬುದು, ನವರಸಗಳಲ್ಲಿ ಅರ್ಪಿತಕಾರಿಯಾದ ರಸ. ಬುದ್ಧಿಶಕ್ತಿಯ ಬೆಳವಣಿಗೆಗೂ, ಭಾವಕ್ಕೆ ಸರಿಯಾಗಿ ಮುಖ ಬದಲಿಸುವುದಕ್ಕೂ ಅದು ಅವಶ್ಯ. ಆದರೆ ನಗುವೊಂದನ್ನು ತಡೆದು ಹಿಡಿದು ಮಗುವಿನ ಜೀವನದಿಂದ ಅಪಹರಿಸಿದರೆ, ಮುಂದೆ ಅವನ ಮುಖದಲ್ಲಿ ನವರಸಗಳ ಮೂಡುವಿಕೆಯೇ ಲೋಪವಾಗುವುದು.

ಮಕ್ಕಳ ನಗುವೇ ಅವರ ಜೀವವೆಂದು ನಾವು ತಿಳಿಯುವುದಾದರೆ ಅದನ್ನು ಅಪಹರಿಸುವವರಾರು ಎಂದು ನಾವು ವಿಚಾರಿಸಬೇಕು. ಮೊದಲಿನ ಅಪರಾಧವು ಅವರ ಉಪಾಧ್ಯಾಯನ ತಲೆಯ ಮೇಲೆ! ನಾವು ಕಂಡ ಹಲವು ಶಾಲೆಗಳಲ್ಲಿ ತೀರ ಚಿಕ್ಕ ಮಕ್ಕಳ ಉಪಾಧ್ಯಾಯರು ತರುಣರೇ ಆಗಿದ್ದರು. ಆದರೆ ಅವರ ಮೋರೆಯಲ್ಲಿ ವ್ಯಾಂಬವೂ ಇಲ್ಲ, ಕಣ್ಣಿನಲ್ಲಿ ತೇಜಸ್ಸೂ ಇಲ್ಲ. ಮುಖದಲ್ಲಿ ಸಂತಸವೂ ಇಲ್ಲ. ಕ್ಲಾಸಿನಲ್ಲಿ ಕುಳಿತಿರುವ ಉಪಾಧ್ಯಾಯರು ತೊಂಡೆ ಬೀಲಿನ ಚಪ್ಪರದ ಮೇಲೆ ನಿಲ್ಲಿಸಿದ—ಗೊಂಬೆಯಂತೆ ಕಾಣುತ್ತಿದ್ದರು. ಒಂದು ಕಡೆಯಲ್ಲಿ ಮಕ್ಕಳಿಗೆ ಉಪಾಧ್ಯಾಯರು—ಮಕ್ಕಳಿಗೆ "ಬೊಮ್ಮನಹಳ್ಳಿ ಕಿಂದರಿಜೋಗಿ" ಹಾಡಿಸುತ್ತಿದ್ದರು. ಎಂಥ ಮಕ್ಕಳಿಗೂ ಸಂತಸವುಂಟುಮಾಡುವ ಹಾಡದು. ಆದರೆ ದುರ್ದೈವ... ಮಕ್ಕಳು ಆ ಹಾಡನ್ನು ಅಳುತ್ತಿದ್ದರು! ಉಪಾಧ್ಯಾಯನು ಒಂದು ನಕ್ಕರೆ ಮಕ್ಕಳು ನೂರಿಪ್ಪತ್ತು ನಗುವರು. ಬದಲು ಇವನೇ ಸದಾ ಅಳು ಮೋರೆಯಿಂದಿದ್ದರೆ ಮಕ್ಕಳ ಗತಿಯೇನು? ಸಾಲದುದಕ್ಕೆ ಉಪಾಧ್ಯಾಯನ ಅಧಿಕಾರ ದರ್ಪ. ಅವನ ರೀತಿಯ ಬೆತ್ತ. ಒಂದು ಶಾಲೆಯಲ್ಲಿ ಬೆತ್ತವನ್ನು (ಕದ್ದು) ಅಳೆದು ನೋಡಿದೆನು. ೨ ಅಡಿ ೮ ಇಂಚು ಇತ್ತು. ಇದನ್ನು ಕಂಡರೆ ಯಾವ ಕೂಸಿಗೂ ನಗು ಬರಬೇಕು!

ನಮ್ಮ ಶಿಕ್ಷಣದ ಹವ್ಯಾಸ ಶಾಲಾ ಉಪಾಧ್ಯಾಯನಂತೆಯೇ ಇದೆ. ಶಿಶುದಲು ಮಕ್ಕಳಿಗೆ—ಬರಹ ಗಣಿತಗಳೇ ಪ್ರಥಮ ಹೆಜ್ಜೆಯಾಗಬೇಕೆಂಬ ಭ್ರಾಂತಿ ನಮ್ಮಿಂದ ದೂರಾಗಬೇಕು. ದಿನಂದಿನ—ಅವು "ಅ ಆ" ಎಂಬುದನ್ನು ಬರೆಯಬೇಕಾಗಿಲ್ಲ. [illegible] "೧ x ೧"—ಎಂದು ಕಂಠಪಾಠ ಮಾಡಬೇಕು. ಮಕ್ಕಳಲ್ಲಿ—ಬೆಳೆಯುವ, ಗುಣಿಸುವ ಆತುರವನ್ನು ತಂದು ಆ ಬಳಿಕ ಅವು ಬಂದರೆ ಆಗ ಅವುಗಳಿಗೆ ಜೀವವಿದೆ. ಬಾಲ್ಯ ಶಿಕ್ಷಣವು ಕಥೆ ಆಟಗಳಿಂದಲೇ ಆಗಬೇಕು. ಮೆಲ್ಲಗೆ ಓದು ಕಲಿಸಿ ಬಳಿಕ ಬರೆಯಲು ಕಲಿಸಿದರೆ ಸಾಕು. ಮಕ್ಕಳೊಡನೆ ಅಂಕೆಗಳು ಮಾತನಾಡುವುದಿಲ್ಲ. ಅವುಗಳನ್ನು ತಂದಿರಿಸಿ ಅವರ ಜೀವನದ ಸವಿಯನ್ನು ಕೆಡಿಸಬಾರದು.

ಇನ್ನು ಮಕ್ಕಳ ಶಿಕ್ಷಣದ ಪುಸ್ತಕವೊಂದು. [illegible] ಅವರಿಗೆ ನಗುವನ್ನು ಹುಟ್ಟಿಸುವಂಥದಾಗಿಲ್ಲ. [illegible] ಶಿಕ್ಷಣದ [illegible] ನಿರಸವಾಗಿದ್ದು—ಎಲ್ಲವನ್ನೂ [illegible] ವುದು. ಚಿಕ್ಕ ಮಕ್ಕಳಿಗೆ "ಧೈಯೆಂದರೆ [illegible]" ಅದರ ಕೆಲವು ವರುಷ ತನ್ನ ಆಯುಷ್ಯವನ್ನು ಬಿಟ್ಟ ಬಾಲಕನು [illegible] ಶಾಲೆಗಳಲ್ಲಿ [illegible] ಅದೂ ಅವನಿಗೆ [illegible] ವಾಗಿ ತೋರುವುದು. [illegible] ಹೇಳಿಸುವಾಗ ಉಪಾಧ್ಯಾಯರಿಗೆ, ಅವರ [illegible] ಸೊಗಸಾಗುವುದಿಲ್ಲ. ಬದಲು ಕೆಲವು, ಕೋಪ, ವಿರಾಮ, ವ್ಯಾಕರಣಗಳನ್ನೆ ಅವರ ಮುಂದಿರಿಸುವರು. [illegible] ದವರೂ ಇದನ್ನು [illegible] ಹೀಗಾಗಿ ಕಥೆ ಹೇಳುವುದೂ ಮಕ್ಕಳಿಗೆ ಒಂದು ಶಿಕ್ಷೆಯಾಗುವುದು.

ಉಪಾಧ್ಯಾಯರು ಮಕ್ಕಳನ್ನು ಎತ್ತಿ ಮುದ್ದಾಡುವ ಹವ್ಯಾಸವಿದ್ದಂತೆಯೇ ಕಾಣುವುದಿಲ್ಲ. ನಾವೊಂದು ಶಾಲೆಗೆ ಹೋದಾಗ—ಅಲ್ಲಿನ [illegible] ಉಪಾಧ್ಯಾಯರು [illegible] ಕಂಡು ಎಲ್ಲರೂ [illegible] ತೊಂಡಾಡಿದರು. ಅವರ ಅವನನ್ನು [illegible] ಮಕ್ಕಳು ಅವರ ಶಾಲೆಯಲ್ಲಿದ್ದರು. ಅವರನ್ನು [illegible] ಮೊದಲಿನ ಬಾಲಕನು "[illegible]" [illegible] ಅವರು ನಾನಗಲ್ಲ. ಅವರ [illegible] ಪ್ರಸಾದವಾಗದೆ [illegible] ಕೆಟ್ಟ [illegible], ತೋರಿದ ಪ್ರೇಮವನ್ನು [illegible] ಅದೊಂದು ಮಕ್ಕಳ [illegible]

ಊರ ಮಕ್ಕಳಿಗೆ—[illegible] ಪ್ರೀತಿಯ [illegible], [illegible] ಶಾಲಾ ಮಕ್ಕಳಿಗೆ [illegible] ಕಾಣುವುದು. ಈ [illegible] ಮಕ್ಕಳ [illegible] ಉತ್ಸಾಹವಾಗಿದ್ದಲ್ಲ [illegible] ನಾವು ಮಕ್ಕಳಿಂದ ಈ [illegible] ಜೀವನದಲ್ಲಿ ಮುಂದೆ [illegible] ತರವು [illegible] ವುದು.

ನಮ್ಮಲ್ಲಿ ಮಕ್ಕಳಿಗೆ ನಗು ತರುವಂಥ ಸಾಹಿತ್ಯವು ಶತ [illegible] ಇವೆ. ನಮ್ಮ [illegible] ಪುಸ್ತಕಗಳಲ್ಲಿ, [illegible] ವಾಗಿ ತತ್ವಜ್ಞಾನವೇ ತುಂಬಿದೆ. ನಾನು ತತ್ವಜ್ಞಾನಕ್ಕೆ ವಿರೋಧಿಯಲ್ಲ. ಆದರೆ ಅದನ್ನು [illegible] ಮಕ್ಕಳಿಗೆ [illegible] ಪ್ರಾರ್ಥನೆಗೆ [illegible] ಬಳಿ, ಆದರೆ [illegible] ಬೇಡ "ಮಾನವ ಜನ್ಮ ವ್ಯರ್ಥ", ಹಿಗ್ಗುವೆ ಯಾಕೋ" [illegible] ಇತ್ಯಾದಿ ಹಾಡುಗಳ [illegible] ಮಕ್ಕಳಿಗಾಗುವಂತಿಲ್ಲ. ಅವುಗಳ ನೊಡಲು ಸೊಂಪಾಗಿ ಬೆಳೆಯಲಿ, ನಗಲಿ, ಕುಣಿಯಲಿ—ಬಾಲ್ಯವು ನಿರರ್ಥಕವೆಂಬ ಮಾತುಗಳು ಬದುಕುವ ಮಕ್ಕಳಿಗೆ ಬೇಡ. ಜೀವನ್ನು ತಿಳಿಯುವುದೂ ಬಾಲ್ಯದಿಂದಲೇ. ಇದಕ್ಕೆ ಪ್ರತಿಯಾಗಿ ನಾವು ಮಕ್ಕಳ ಸಾಹಿತ್ಯವನ್ನು ಕಲ್ಪಿಸಬೇಕು. ಇಂಗ್ಲೀಷಿನ ನರ್ಸರಿ [illegible] ಸಂತಸ, ಕುಚೋದ್ಯವೂ ಯಾದರೂ ನಗಿಸಬಲ್ಲ ಹಾಡುಗಳು ಬರಲಿ. ನಗಿಸುವ ಕಥೆಗಳೂ ಪದ್ಯಪುಸ್ತಕಗಳಲ್ಲಿ ತುಂಬಾ ಇರಲಿ. ಇವು ಮೊದಲಿನ ಪೀಠಿಕೆಯಾಗಿದ್ದು—ಮುಂದೆ ಧೈರ್ಯ, ಶೌರ್ಯ, ಸ್ಥೈರ್ಯ, ಕರ್ತವ್ಯ ಸೂಚಕ ಕಥೆಗಳೂ [illegible]

ಹಿಂದೂದೇಶದ ಸ್ಥಿತಿಗತಿಗಳ ಕುರಿತು ಕೆಲವರ ಅಭಿಪ್ರಾಯಗಳು.

ಇಂದಿನ ಸ್ಥಿತಿಗತಿಗಳ ಕುರಿತು ಈ ಕೆಳಗಿನವು ಕೆಲವರ ಅಭಿಪ್ರಾಯ.

ಜಾರ್ಜ್ ಲ್ಯಾನ್ಸಬರಿ—"ಗಾಂಧಿಜೀಯವರು ಸೆರೆಯಾಳಾದರು. ಕಾಂಗ್ರೆಸ್ಸು ಕಾಯಿದೆ ವಿರೋಧವಾಯಿತು. ಈ ಘಟನೆಗಳಿಗಿಂತ ದೊಡ್ಡ ಪ್ರಳಯವೆನ್ನಿಲ್ಲ. ದಬ್ಬಾಳಿಕೆಗೆ ಆಯುಷ್ಯ ಸ್ವಲ್ಪ ಹೊತ್ತು. ಅದು ಶಾಶ್ವತವಾದ ಶಾಂತಿಯನ್ನು ತರಲಾರದು. ದಬ್ಬಾಳಿಕೆಯು ಸೋತು ಹೋಗಲೇ ಬೇಕು. ಬ್ರಿಟನು ಹಿಂದೂದೇಶವನ್ನು ಖಡ್ಗದ ಮೂಲಕ ಆಳಬಲ್ಲದೇ? ಶಕ್ತಿಯು ನಮ್ಮ ಕೈಯಲ್ಲೇ ಮುರಿದುಬೀಳುತ್ತದೆ."

ವೆಜ್‌ವುಡ್ ಬೆನ್ (ಮಾಜಿ ಸ್ಟೇಟ್ ಸೆಕ್ರೆಟರಿಯವರು)—"ತರುಣರ ಸ್ವಾಭಾವಿಕವಾದ ಸ್ವಾತಂತ್ರ್ಯಕಾಂಕ್ಷೆಯನ್ನು ದಬ್ಬಾಳಿಕೆಯಿಂದ ಮುರಿಯಬಹುದೆಂದು ಆಶೆಯಿದೆ. ಆದರೆ ಇಷ್ಟರ ತನಕದ ಜಗತ್ತಿನ ಇತಿಹಾಸವು ಆ ಆಶೆಯನ್ನು ನಿರಾಶೆಗೊಳಿಸಿದೆ. ಶಾಶ್ವತ ಸರಕಾರವು ಯಾವುದು? ಪ್ರಜಾಮತವನ್ನು ಪರಿಪಾಲಿಸಿ ಪ್ರಜೆಗಳ ಆಕಾಂಕ್ಷಾನುಸಾರವಾಗಿ ಆಳುವುದು. ಶಾಶ್ವತ ಸರಕಾರ! ಹಾಗಿಲ್ಲದ ಸರಕಾರವು ಅಸ್ಥಿರವೇ ಸರಿ. ಇಂಥದ ಸರಕಾರವನ್ನು ನೆಲೆಗೊಳಿಸುವ ಸಾಧನವೇ ಸರಕಾರವಿದ್ದಂತಿದೆ."

[illegible] ಅಧ್ಯಕ್ಷರಾದ [illegible]—(ಮೊನ್ನೆ ಇವರಿಗೆ [illegible]) [illegible]

"[illegible]"

[illegible]

"[illegible]"

1

[illegible]

ಇನ್ನೆರಡನೆಯದಾಗಿ ನಮ್ಮಲ್ಲಿ ಶಾಲೆ [illegible] ಹೊರಗಿನ ಸುಖ, ಬೆಳಕು, ತಂಪು, [illegible] ಮಕ್ಕಳ ನಗುವನ್ನು ಅಪಹರಿಸುವಂತಿವೆ. [illegible] ಗೋಡೆಗಳು, [illegible] ತೋಟ, ಗಿಡಮರಗಳು ಮಕ್ಕಳಲ್ಲಿ ಹುರುಪನ್ನು ಪ್ರೇರಿಸುತ್ತವೆ.

ನಗುವಿಲ್ಲದಲ್ಲಿ ಸೊಗಸಿಲ್ಲ—ಎಂಬುದು ಶಿಶುಶಿಕ್ಷಣದ ಮುಂಬೆಳಕಾಗ ಬೇಕಿದೆ.

೬೩ ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

ಉಪಯೋಗಿಸಲ್ಪಟ್ಟ ಔಷಧಗಳು.

1. **ಧಾತುಪುಷ್ಟಿ ಲೇಹ**—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಇತ್ಯಾದಿ ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮೂರು ಡಬ್ಬಿಗಳಿಗೆ ರೂ 7.

2. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಆಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರಯಿಸಿರುವವು ಕ್ರಯ 1 ಬಾಟಲಿ ಔಷಧಕ್ಕೂ, ಒಂದು ಡಬ್ಬಿ ಮಾತ್ರೆಗೂ ರೂ 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ 6—4—0.

3. **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿಯಂತೆ ಹೋಗುವ ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ

4. **ಮಲೇರಿಯಾ ನಿವಾರಣೆ**—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗೆಡ್ಡೆಯನ್ನು ಕರಗಿಸಿ, ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1ಕ್ಕೆ ರೂ 1—8—0 3 ಬಾಟ್ಲಿಗಳಿಗೆ ರೂ 4—4—0

5. **ಬಾಲಗ್ರಹ ಗುಟಿಕೆ**—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10 3ಕ್ಕೆ ರೂ. 1—12—0

6 **ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ**—ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ 1—8—0 3ಕ್ಕೆ 4—4—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ ರೋಗಕ್ಕೆ ತಕ್ಕನಾದ ಔಷಧಿ ರವಾನಿಸಬಹುದು ಕೆಟಲಾಗು ತರಿಸಿ ನೋಡಿರಿ

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ ಮಂಗಳೂರು, ದ. ಕ.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ ಅತಿಸಾರ, ಅಜೀರ್ಣದಿಂದಾದ ಎಂತಹ ಉತ್ಕಟವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ ಹಿಂದೀಯರಿಗಾಗಿ — HEDAURIN DYSENTERY CHOLERA CURE — ಹಿಂದೀಯರಿಂದಲೇ ವ್ಯಾಪಾರಕ್ಕೆ

ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದು — ತರಲ್ಪಟ್ಟುದು

ಬಿಲ್ಲೆನ ಕ್ರಯ ಆಣೆ 0—15—0 2 ಬಿಲ್ಲಿನ ಬಾಟಲಿಗೆ ರೂ 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಪೀಸು,
ಡೊಂಗರಕೇರಿ ರಸ್ತೆ,
ಮಂಗಳೂರು

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ. ಕನ್ನಡಾ

"If every Wife knew what every Widow knows every Husband would be Insured"

PLACE YOUR LIFE ASSURANCE WITH
THE SOUTH INDIAN
Securing for your clients
1 Low rates of Premium
2. Liberal Policy Conditions
AND FOR YOURSELF
An Agency with attractive Terms of Commission and Salary in
The South Indian General Assurance Co, Ltd.
Any where in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co. Ltd.
Sanyasiguddy, MANGALORE
Managing Agents –
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡ ವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಸೂರೆನ್ಸ್ ಕಂಪನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರೀಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಎಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನನ್ನೂ ತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಎಜಂಟರು—
ಎಚ್ ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ ಜಿ ಎ ಕಂಪನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ. ಟಿ ಮದ್ರಾಸು

ಉತ್ತಮ ಪುಸ್ತಕಗಳು ಬೇಕೇ?

ಹಾಗಾದರೆ ಶ್ರೀ ಶೇಷಾಚಲ ಗ್ರಂಥಮಾಲೆಯ

೧ ಕಳವೋ-ಕೊಲೆಯೋ-ಬೆಲೆ ೬ ಆಣೆ, ೨ ಲಲಿತೆ ಬೆಲೆ ೧೦ ಆಣೆ, ೩ ರಾಕಾಚಂದ್ರ ಬೆಲೆ ೮ ಆಣೆ, ೪ ವಿಚಿತ್ರ ಸಂಸಾರ ಬೆಲೆ ೩ ಆಣೆ.

ಈ ಹೊಸ ಪುಸ್ತಕಗಳನ್ನು ತರಿಸಿ ಓದಿ ಖಾತ್ರಿಮಾಡಿಕೊಳ್ಳಿರಿ.

ಮಹಾ ಸಾಧು ತುಕಾರಾಮ ಬುವಾ ಬೆಲೆ ೧ ರೂ ಶ್ರೀ ಸಮರ್ಥ ರಾಮದಾಸರು ಬೆಲೆ ೧-೨-೦ ಈ ಅತ್ಯುತ್ತಮ ಚರಿತ್ರಾತ್ಮಕ ಪುಸ್ತಕಗಳೂ ಹಾಗೂ ಕಳ್ಳನಿಗೆ ಕಾಣಿಕೆ ಬೆಲೆ ೮ ಆಣೆ ಎಂಬ ಸುಮನೋಹರ ಪತ್ತೇದಾರಿ ಕಾದಂಬರಿಯ ೨ನೇ ಆವೃತ್ತಿಯೂ ಮಾರಾಟಕ್ಕೆ ಸಿದ್ಧವಾಗಿವೆ

ಇವಲ್ಲದೆ ನಮ್ಮಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಕಥಾ ಕಾದಂಬರಿಗಳೂ, ನಾಟಕಗಳೂ, ಧಾರ್ಮಿಕ ಪಾರಮಾರ್ಥಿಕ ಮುಂತಾದ ೧೦೦—೧೨೫ ಬಗೆಯ ಪುಸ್ತಕಗಳೂ ದೊರೆಯುತ್ತವೆ ಕ್ಯಾಟಲಾಗ್ ತರಿಸಿ ಪುಸಕಗಳಿಗೆ ಬರೆಯಿರಿ

ವಿಳಾಸ— ಭಿ ಪ ಕಾಳೆ
ಪ್ರೊಪ್ರೈಟರ್, ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥ ಮಾಲೆ
ಪೋ ಆನಂದವನ, ಜಿ ಧಾರವಾಡ

INSURE WITH
The Popular Insurance Co. Ltd.
Head Office MANGALORE S. India
First of its kind in the West Cost
CHAIRMAN
Dewan Bahadur N Subba Rao
STRIKING FEATURES
Policy Conditions Liberal
Claims Settlement Prompt
MANAGEMENT PURELY INDIAN
Ensure the Absolute Safety Comfort and Happiness of your Dear Ones
WANTED INFLUENTIAL AGENTS
LIBERAL TERMS TO COMPETENT MEN
For further particulars apply to the Head Office

ಡಾಕ್ತರ ವಾಮನ ಗೋಪಾಳರವರ
ಐಪಿಡಾಯಿಡ್ಸ ಸಾರ್ಸಪರಿಲಾ



ಕೆಟ್ಟ ರಕ್ತಕ್ಕೆ ಪರಮೌಷಧ ೬೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ 'ಗೌತಮರಾವ್ ಕೇಶವ ಅಂಡ್ ಸನ್ಸ್,
ಫಾರ್ಮಸಿಸ್ಟ್ಸ್, ಮುಂಬಾಯಿ ೨ ಸ್ಟಾಕಿಸ್ಟ್ ಪಾ ಕಂಪೆನಿ ಪತ್ರವ್ಯವಹಾರ ಫ್ರೀ ಆಫೀಸು ಮುಂದಿರುವಲ್ಲಿ ಮಂಗಳೂರು.

ಮಾರಾಟಕ್ಕಿವೆ ಮಾರಾಟಕ್ಕಿವೆ!!
ಕಾಫಿ ಪ್ಲೆಂಟರರಿಗೂ ತೋಟದವರಿಗೂ ಬೇಕಾಗುವಂತಹ
ಚಕ್ ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

EDITED, PRINTED & PUBLISHED BY V. S. KAMATH AT M T A SHARADA PRESS, MANGALORE

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರಕ್ಷಿತುಂ ... [illegible] ... ದೇವಾ । ನ ... [illegible] ... ಧೀರಾ ॥
ದೊರೆಯಲನುಭವ ... [illegible] ... ॥
... [illegible] ... ॥

ಪುಸ್ತಕ ೨೬. ಮಂಗಳೂರು ತಾ ೨೨ನೇ ಶುಕ್ರವಾರ ಜನವರಿ ೧೯೩೨ (22 1— 32.) ಸಂಚಿಕೆ ೪

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR & Mangalore.
ಹೆಡ್ ಆಫೀಸ್.—ಉಡುಪಿ ಶಾಖೆ ಕುಂದಾಪುರ ಮತ್ತು ಮಂಗಳೂರು

NOTICE

is hereby given that under Section 37 of the Indian Companies Act No. VII of 1913 the Directors of the Corporation have resolved that the Register of members be closed from 20-1-'32 to 16-2-'32 (both days inclusive)

(BY ORDER)

Office of the Corporation, UDIPI, S. K. 7- '32. N. ANANDA RAO
Secretary & Manager



ಅಮೃತಾಂಜನ.

... [illegible] ... ಎಲ್ಲಾ ... [illegible] ...
... [illegible] ... ಅಮೃತಾಂಜನ ... [illegible] ...
ಈ ಬೇನೆಗಳ ... [illegible] ... ಎಲ್ಲಾ ಕಡೆಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು—(ರಾಜ... ಮತ್ತು ... [illegible] ...) ... [illegible] ... ಕೆಡಿಸುತ್ತದೆ ... ಬೆಲೆ 0—4—0 ... [illegible]

ಅಮೃತಾಂಜನ ಡಿಪ್ಪೋ,
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ವನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ ...

ಏಜೆಂಟ್ಸು—ದಿ ... [illegible] ...

ಮಾರಾಟಕ್ಕೆ ಸಿದ್ಧವಾಗಿದೆ.

ಕ್ಯಲೆಂಡರು ಕ್ಯಲೆಂಡರು

೧೯೩೨ನೇ ವರ್ಷದ ಪಾಕೆಟ್ ಡೈರಿಗಳು

ದೊಡ್ಡ ಸೈಜ್	1—1	—0
ದೊಡ್ಡ ಸೈಜ್ ... [illegible]	1—1	—
... ಸೈಜ್	0—	—
... [illegible]	0	8—
... ಸೈಜ್ ... [illegible]	[illegible]	—

... [illegible] ...

ಹೆಚ್ಚಿನ ಮಾಹಿತಿಗೆ ... [illegible] ...

ಮೆನೇಜರ
ಶಾರದಾ ಛಾಪಖಾನೆ
ರಥಬೀದಿ ಮಂಗಳೂರು.

ಉಡುಪಿಯ ಪರ್ಯಾಯ ಜಾತ್ರೆ

"ಜನಮರುಳೋ ಜಾತ್ರೆ ಮರುಳೋ!" ಎಂಬುದೊಂದು ಪ್ರಶ್ನೆ. ಜನಮರುಳು! ಅದರಿಂದಾಗಿ ಜಾತ್ರೆ ಮರುಳು!!! ಒಂದೊಂದು ವ್ಯಕ್ತಿಯು ಜನಮರುಳು. ಒಟ್ಟುಗೂಡಿ ಜಾತ್ರೆ ಮರುಳಾಗುತ್ತದೆ! ಅಷ್ಟೆ!

ಉಡುಪಿಯಲ್ಲಿ ಪರ್ಯಾಯ ಜಾತ್ರೆ!! ಅಲ್ಲಿ ಕಾಣಲಿರುವುದೇನು? ಮುಖ್ಯವಾಗಿ— ಜನರ ಮುಖ, ಮತ್ತು ಸಂತೆ, ನಾಟಕ, ಸಿನೆಮಾಗಳು ಅಷ್ಟೆ! ಮತ್ತು ಸ್ವಾಮಿಗಳವರ ಪರ್ಯಾಯ! ಸೋದೇ ಮಠದ ಶೃಂಗಾರ—ಮೆರವಣಿಗೆಯ ವೈಯಾರ!

ಹಿರಿಯವರು ಜಾತ್ರೆಯೆಂಬುದನ್ನು ಏಕೆ ನಿರೂಪಿಸಿರುವರು ಎಂಬುದೊಂದು ಜಿಜ್ಞಾಸೆ; ಜನರಲ್ಲಿ ವರುಷಕ್ಕೊಮ್ಮೆಯಾದರೂ ಪರಸ್ಪರ ಒಗ್ಗಟ್ಟೂ, ಮಿತ್ರತ್ವವೂ ನೆಲೆಗೊಳ್ಳಲೆಂದೇ ಜಾತ್ರೆಯ ನೆವವನ್ನು ಹೂಡಿದ್ದಾಗಿರುತ್ತದೆ.

ಅದೇನು ಹಿಂದೂಗಳಿಗೆ ಮಾತ್ರ ಸಾವಿರಾರು ಜಾತ್ರೆ, ಕ್ರೈಸ್ತರಿಗೂ ಮಹಮ್ಮದೀಯರಿಗೂ ಅಷ್ಟು ಗೌಜಿ ಇಲ್ಲ. ಮುಸಲ್ಮಾನರಿಗೆ ಜಾತ್ರೆಯೇ ಇಲ್ಲ. ಅವರ ಜಾತ್ರೆ ಮನೆಯಲ್ಲೇ! ಗೌಜಿಯ ಊಟ!

ಹಿಂದೂಗಳ ಜಾತ್ರೆಗೆ ವೆಚ್ಚವೆಷ್ಟು! ಬೊಬ್ಬೆಯೆಷ್ಟು! ಗಲಾಟೆಯೆಷ್ಟು! ವಾದ್ಯವೇನು! ಮೆರವಣಿಗೆಯೇನು! ಬೇಂಡ್ ಏನು? ಪೂಜೆ ಏನು! ಒಂದು ಜಾತ್ರೆಗೆ ಇವೆಲ್ಲಾ ಆಗತಕ್ಕವೇ?

ಇವುಗಳಿಗೇನೇ ಜಾತ್ರೆಯೆನ್ನುವುದು. ಇವುಗಳಿಲ್ಲದಿದ್ದರೆ ಜಾತ್ರೆಯಿಲ್ಲ. ಇವುಗಳಿಲ್ಲದಿದ್ದರೆ ಜನರೇ ಇಲ್ಲ.

ಉಡುಪಿಯ ಜಾತ್ರೆಗೆ ಗುಬ್ಬಿ ಕಂಪೆನಿಯೂ, ರುಸ್ತುಂ ಸರ್ಕಸ್ಸೂ ಬೊಂಬೆಯಾಟವೂ ಕಿಲಾರಿ ಸರ್ಕಸ್ಸೂ ಹೋಗಿತ್ತಂತೆ! ಒಂದು ಜಾತ್ರೆಗೆ ಇವುಗಳೂ ಆಗತಕ್ಕ! ಇವುಗಳಿಲ್ಲದಿದ್ದರೆ ಗೌಜಿಯಿಲ್ಲ. ಇವುಗಳಿದ್ದರೇನೇ ಜಾತ್ರೆಗೆ ಜಾಗ್ರತೆಯುಂಟು.

ಜಾತ್ರೆ ನೋಡುವುದೆಂದರೇನು? ನಾಟಕ, ಬಾಯಸ್ಕೋಪು, ಸರ್ಕಸು ನೋಡುವುದು. ದೇವರ ಮೂರ್ತಿಯನ್ನು ನೋಡಿ ಹರಕೆ ಸಲ್ಲಿಸುವುದು. ಇಷ್ಟಮಿತ್ರರೊಡನೆ ಮಾತನಾಡಿ ಬೀಡಿ ಸಿಗರೇಟ್ ಎಳೆಯುವುದು. ಎಲೆಯಡಿಕೆ ತಿನ್ನುವುದು ಸಿಕ್ಕ ಸಿಕ್ಕ ಕಾಫಿ ಹೋಟೇಲಿನಲ್ಲಿ ಸಿಕ್ಕ ಸಿಕ್ಕದ್ದನ್ನು ಸಿಕ್ಕ ಸಿಕ್ಕ ಹಾಗೆ ತಿನ್ನುವುದು ಇದೇ ಜಾತ್ರೆಯ ಫಲ-ಪುಣ್ಯ.

ಇಂತಹ ಜಾತ್ರೆಗಳನ್ನು ನೆರವೇರಿಸುವುದರಿಂದ ಒಂದು ದೊಡ್ಡ ಪುಣ್ಯ ಬರುತ್ತದೆ. ಈ ಜಾತ್ರೆಯ ನಿಜವಾದ ಪುಣ್ಯವು ಇದೇ! ಅದಾವುದೆಂದರೆ ನಾವು ದೇವಸ್ಥಾನಕ್ಕೆ ಕೊಡುವ ಹರಕೆ ಹರಿಕೆಗಳಿಂದ ಅದರ ಅಧಿಕಾರವನ್ನು ಬಲಪಡಿಸಿದ ಪುಣ್ಯ ಒಂದು! ದೇವಸ್ಥಾನದ ಅರ್ಚಕ, ಸ್ವಾಮಿಗಳ ವೆಚ್ಚದ ಬಗ್ಗೆ ಕೂಡಿಸಿ ಕೊಡುವ ಹಣದ ಪುಣ್ಯ ಎರಡು!!

ಹರಿಕೆ ಕಾಣಿಕೆಗಳನ್ನು ಜನರು ಕೊಟ್ಟು, ದೇವಸ್ಥಾನಗಳ ಪಂಚಾಂಗವನ್ನು ಘನಪಡಿಸಿ ಕೊಡಬೇಕೆಂದೇ ನಮ್ಮ ಹಿರಿಯರು ಈ ಪರ್ಯಾಯ, ಜಾತ್ರೆ, ಯಾತ್ರೆಗಳನ್ನು ಕಲ್ಪಿಸಿದರು. ಜನರಿಂದ ಬೇಡಿ ಹಣವನ್ನು ಕೂಡಿಸಿ ಪೂರೈಸಲಿಕ್ಕಿಲ್ಲ; ಅವರನ್ನು ಅಂಧ ಶ್ರದ್ಧೆಗೆ ಸಿಲುಕಿಸಿ, ತಮ್ಮ ದೇವಸ್ಥಾನಗಳನ್ನು ಗಟ್ಟಿಮಾಡಬೇಕೆಂಬುದಕ್ಕಾಗಿ ಈ ಗೌಜಿಯ ಸಂಭ್ರಮಗಳು ಜನಿಸಿದುವು.

~~~~

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

I. P. No. 15/1931.

ಅನಂತು ಭಟ್ಟ—ಅರ್ಜಿದಾರ.

ಉಪ್ಪಿನಂಗಡಿ ಸಹಕಾರ ಸಂಘದ ಲಿಕ್ವಿಡೇಟರ್ ಕೂಡಾ—ಎದ್ರಿರು

ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಕೊಟ್ಟ ಮೇಲೆ ತೋರುವ ಅರ್ಜಿಯು ತಾ. ೪—೨—೧೯೩೨ಕ್ಕೆ ತನಿಖೆಗೆ ಇರುತ್ತದೆಂತಲೂ ಅದರಲ್ಲಿ ತಕ್ರೀರು ಇದ್ದವರು ಸದರಿ ವ್ಯಾದೆ ದಿವಸ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದೆಂತಲೂ ಕೋರ್ಟು ಹುಕುಂ ಪ್ರಕಾರ ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

ಮೊಕ್ಕಾಂ ಪುತ್ತೂರು, ತಾ. ೧೧—೧—೩೨ | B. Shivarama Holla, Advocate for Petr.

NOTICE.

Applications are invited by the 31st for the post of curator in the civil courts situated in Mangalore. The curator is required to take charge of moveable property attached by amins under the orders of the courts and to retain it in his safe custody until it is ordered to be released, or sold.

2. The applications should be accompanied by seald tenders showing the rates which they will charge for such custody for the various kinds of moveables classified as hereunder.

3. The applicant should, if appointed, be prepared to furnish security for Rs. 2000 to satisfaction of the undersigned.

Description of moveables.

I. Live stock such as (1) Elephants, (2) Horses, (3) Bullocks and he Buffaloes, (4) Cows and she-Buffaloes. (5) Asses, Sheep, Goats and Calves. (6) Fowls

II. Furniture (a) Almirahs. (b) Tables, Chairs, Cup-boards, Benches (c) Chest of drawers, (d) Sofas, Iron safes, Pigeon holes, what-nots etc. (e) Bins for storing grains.

III. Boats, Pattamars and other sailing vessels with their sails and other accessories.

IV. Motor cars, Lorries, Motor cycles, and Cycles, Carts, Jutkas.

V. Other moveable property such as (a) House-hold utensils, (b) Cloths.

VI. Printing presses with all their accessories and other machinery.

VII. Timber of every description.

District Court, Mangalore, S. K. 10—1—1932. | N. Chandrasekhara Aiyar, District Judge.

Influential Agents Wanted Everywhere on

a Monthly Pay of Rs. 25/- and 2½ % Commission on sales. Selected candidates will have to invest Rs. 50.

Apply with a stamped envelope to:—

M. S. Nayar, Dt. Inspector,
Britannia Tea Company. Ottapalam

ರೋಗಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ.

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಅಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನಮ್ಮ ವಿಳಾಸವನ್ನೂ ರೋಗಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ.

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ.)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0.

ಅಕ್ಷೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ. ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಸ್ಫೋಟಕ, ಸಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0.

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್; ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟವನ್ ಹಾಲ್ ಹತ್ರ.

The Zandu Pharmaceutical Works, Ltd., Bombay, 14.

ದಿ ಝಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ 'ಝಂಡೂ'ಯವರ

ಅಮೋಘ ಟಾನಿಕ್ಕು! **ಚ್ಯವನಪ್ರಾಶ ಲೇಹವು.** ಅಮೋಘ ಟಾನಿಕ್ಕು!!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದೌರ್ಬಲ್ಯ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಬ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾಯಿತು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

ಕ್ರಯ 1 ಪಾನು ಸೀಸೆ ರೂ. 2—8—0, ½ ಪಾ. ರೂ. 1—5—0, ¼ ಪಾ. ರೂ. 0—13—0.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು:— ದಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು:— ಮೆಸರ್ಸ್ ಪಂಡಿತ ಮತ್ತು ಕಂಪೆನಿ.

ಮಂಗಳೂರು ಏಜಂಟರು:— ದಿ ಯೂನಿಯನ್ ಮಾರ್ಟ್.

ಸಿರ್ಸಿ ಏಜಂಟರು:— ಎಸ್. ಎಲ್. ಧಾರಪ್ಪಾ ಎಂಡ್ ಬ್ರದರ್ಸ್.

ಸಬ್ ಏಜಂಟರು:— ಯು. ಜನಾರ್ಧನರಾವ್, ಪುತ್ತೂರು, ದ. ಕನ್ನಡ.

ಬೆಂಗಳೂರು ಏಜಂಟರು:— ತಿಪ್ಪಣ್ಣ ಶೆಟ್ಟಿ, ಬುಕ್‌ಪೇಟೆ.

☞ ಕಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.
~~~~

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವ ಪುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. ೮ ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ —ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಸೇರು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿ ಮಿತ್ರರೇ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ ಸುಖಸೇವನ ಎಂಬ ಮೂರು ಗುಣಗಳು ಚಿರಸ್ಮರಣೀಯವಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷ ಅಂಶವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆರೋಗ್ಯವನ್ನಾಗಿ ಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ ಅಗ್ನಿ ಮಾಂದ್ಯ ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ 'ಆಯುರ್ವೇದಾಮೃತ' ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು.

ಹೆಗಲಿಗೆ ಹಾಕುವ ಬಿಳಿ ಬಣ್ಣದ ಕಾಶೀ ಸಿಲ್ಕುಗಳು 6 ಮೊಳ ಉದ್ದ 2½ ಮೊಳ ಅಗಲ ರೂ 5 ಲಾಗಾಯಿತು ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಕೆ ಖಣಗಳು, ಮಡಿಗಳು, ಎಲವಸ್ತ್ರ, ಬಟ್ಟಾನೆ, ಪೇಟ, ಇತ್ಯಾದಿ ಉತ್ಕೃಷ್ಟ ಶಾಲು, ಖದ್ದರ್ ಮಡಿ, ಧಾವಳಿ, ಕಸ್ತೂರಿ, ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳ ಪಟ್ಟಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ—

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ದುರ್ಗಾಘಾಟ್ ಕಾಶೀ ಬನಾರಸ್ ಸಿಟಿ

The Udipi Mutual Benefit Fund, UDIPI
ದಿ ಉಡುಪಿ ಮ್ಯುಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ನಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ, ಚಿಟಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು

ಎಂ ಮುತ್ತುಪ್ರಾಣಭಟ್ಟ. ಪ್ರೊಪ್ರೈಟರ್

The Canara Bank Limited, Mangalore.
ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906   1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal Kasargod, Cochin Udipi Gangolli Coondapur, Bombay Puttur, Calicut & Alleppey**

ಬ್ರಾಂಚ—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲೆಪೆ

Authorised and fully paid up Capital Rs 300 000 - 0 - 0	ಅಧಿಕಾರಗೊಳಿಸಲ್ಪಟ್ಟ ಪೂರ್ತಿಯಾಗಿ ಕಟ್ಟ ಮೂಲಧನವು ರೂ 300 000 0 - 0
Reserve and other sinking Funds Rs 489,500 - 0 - 0	ಕ್ಷೇಮ ನಿಧಿ ಮತ್ತು ಇತರ ಫಂಡುಗಳ ರೂ 4895 0 -
Amount invested on G P Notes Rs 817 097 - 2 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817,097 2 - 0
Rates of interest on fixed deposits at Head Office and Branch 6¼% for 2 Years 6% , 1 Year	ಕಾಯಂ ಠೇವಣಾತಿಗಳ ಮೇಲೆ ಕೊಡಲಾಗುವ ಬಡ್ಡಿದರ ಎರಡು ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇಕಡಾ 6
Season deposits of Rs 1000/- & above terminable by the end of June are received at 6¼% p a.	ಜೂನ್ ಅಂತ್ಯದ ಒಳಗೆ ಮುಗಿವ ರೂ 1000 - ಮತ್ತು ಮೇಲ್ಪಟ್ಟ ಠೇವಣಿಗಳಿಗೆ ಬಡ್ಡಿ ಸೇಕಡಾ 6¼

Current Account Deposits received and interest allowed on daily balance of Rs 50 and above that on multiples of Rs 10/ @ 3% from 1st Janauary to 30th June and @ 2% from 1st July to 31st December No interest will be allowed unless the depositor earns not less than Rs 5 during a period of 6 months ending either 30th June or 31st December in any year

Except by special arrangement no interest is allowed on sums exceeding Rs 10 000 in the case of Head Office and Cochin Branch and on sums not exceeding Rs 15 000 in the case of Bombay Branch

Short notice deposits requiring one week's notice of withdrawal given at any time after one month from the date of deposit are received and interest allowed at 4 per annum Interest on such deposits will cease on notice

For further particulars please apply to —

Canara Bank Ltd,   ***K. Venkat Rao***
Mangalore 16—2—931   *Secretary*

The Pangal Nayak Bank, Ltd.

Head Office Udipi   *Established 1920*   **Branch Office Mangalore**

Authorised Capital Rs 2 00,000-	**Paid up Capital Rs 1 75 000-**
Issued Capital Rs 1 75,000-	**Reserve and other Funds Rs 1,64 000**

1 **Receives Fixed Deposits at the following favourable rates -**

For 3 months at 5%	For 12 15 18 or 21 months at 6
6 or 9 months at 5½%	24 months at 6½

Interest being payable every 3 months

ಕಾಯಂ ಠೇವಣಾತಿಗಳು ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ಸಾ ಕೆ 5%	12 15 18 ಯಾ 21 ತಿಂಗಳಿಗೆ ಸಾ ಕೆ 6
6 ಯಾ 9 ತಿಂಗಳಿಗೆ ಸಾ ಕೆ 5½%,	24 ತಿಂಗಳಿಗೆ ಸಾ ಕೆ 6½

2 **Current Accounts** opened free of charge and interest allowed **Cumulative Savings Bank and Short Notice Deposits** received at favourable rates of interest

3 The Bank transacts every description of Banking business

4 For full particulars and for copies of the amended **Rules of Business** please apply to the **Secretary** at the Head Office at Udipi or to the **Agent** Mangalore Branch

Office of the Bank, Udipi 1—4—31   **P Laxman Nayak,** Secretary

---

ಇಪ್ಪತ್ತು	ವಯಸ್ಸಿನಲ್ಲಿ	ದುಡುಕು
ಮೂವತ್ತ	ರಲ್ಲಿ	ಮುಚ್ಚಟೆ
ನಲವತ್ತಾ	ದಾಗ	ನರಳುವಿಕೆ
ಐವತ್ತು	ಆದರೆ	ಆಲಸ್ಯ
ಅರುವತ್ತು	ತೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ.   ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ಓದಿರಿ   ಮದನಮಂಜರಿ ಫಾರ್ಮಸಿ, 1/64 ಚೀನಾ ಬಜಾರ್, ಮದ್ರಾಸ್

'ಎಷ್ಟಾದರೂ, ಬದಲಾಗಲೇಬೇಕು'

ಹಿಂದೀ ಸರಕಾರದ ದಂಡ ನೀತಿಯನ್ನು ಕುರಿತಾಗಿ ಎಲ್ಲಿ ಲ್ಲಿಯದಲೂ ಪತ್ರಿಕೆಗಳಲ್ಲಿ ಸೂಚನೆಗಳು ಬರುತ್ತಲೇ ಇವೆ ಢಿಲ್ಲಿಯಲ್ಲಿ ಒಂದು ಪ್ರತಿನಿಧಿ ಸಭೆ ಕೂಡಿಸಿ, ಈಗಣ ಸದ್ಯ ಸ್ಥಿತಿಯನ್ನು ವಿಮರ್ಶಿಸಿರಿ,—ಎಂದು ಪತ್ರಿಕೆಗಳಲ್ಲಿ ಪ್ರಮು ಖರೇ ಸರಕಾರಕ್ಕೆ ಸಿಫಾರಸು ಮಾಡುತ್ತಿರುವರು ಇದ್ದಂತೆ ಯೇ ಇರುವುದು ಸಾಧ್ಯವಲ್ಲ, ಯುಕ್ತವೂ ಅಲ್ಲ, ಈ ರೀತಿಯ ಕಚ್ಚಾಟವನ್ನು ಬೆಳೆಯಗೊಡುವುದು ಸರಕಾರಕ್ಕೂ ಜನತೆಗೂ ಹಿತಕರವಾಗಿಲ್ಲ, ಅದು ಕಾರಣ, ಪರಿಷತ್ತನ್ನು ಕೂಡಿಸಿದಲ್ಲಿ ಯಾವ ರೀತಿಯಲ್ಲಿ ಈ ಕರ್ಕಶ ಕಾಲ ವನ್ನು ಕಳೆಯಬಹುದೆಂಬುದಕ್ಕೆ ತಕ್ಕ ರೀತಿಗಳಲ್ಲಿ ಸೂಚನೆ ದೊರೆಯದಿರದು ಗಾಂಧೀಜಿಯವರಾದರೂ ಈಗಣ ವಿದ ಮಾನಗಳನ್ನು ತಿಳಿದು ಏನು ಹೇಳಲಿರುವರೋ ಅದನ್ನು ಈ ಪ್ರತಿನಿಧಿಗಳು ತಿಳಿದುಕೊಂಡು ಪರಿಷತ್ತಿಗೆ ತಿಳಿಸಿದರೆ, ವೈಸ್ರಾ ಯರು ಇಂತಹ ಸಭೆ ಕೂಡಿಸಲೊಪ್ಪುವಲ್ಲಿ, ಮುಂದೇನುಮಾಡ ಬೇಕೋ ಅದನ್ನು ತಿಳಿದುಕೊಳ್ಳಲು ಅತ್ಯನುಕೂಲ ಸಂಧಾನ ಸಾಧಕರು ಯಾರೂ ಇರುವರಾದರೆ, ಅವರು ನಿಷ್ಕ್ರಿಯರಾಗಿರ ಬಾರದು—ಎಂದು 'ಸ್ಟೇಟ್ಸ್‌ಮನ್' ಪತ್ರಿಕೆ ಬರೆದಿದೆ

ಸ್ಥಳೀಯ ಸಾಮಂತ ರಾಜರುಗಳಲ್ಲಿ ಕೆಲವರು

ವೈಸ್ರಾಯರು ಈಗ ಹೊರಡಿಸಿರುವ ಕಠಿನ ನಿಬಂಧನೆ ಗಳಿಂದ ಭಾರತ ವರ್ಷಕ್ಕೂ ತಮ್ಮ ರಾಜ್ಯಗಳಿಗೂ ಮಹೋಪ ಕಾರವಾಯಿತೆಂದೂ, ತಮ್ಮ ಸಮಸ್ತ ರಾಜ್ಯಶಕ್ತಿಯನ್ನು ವೈಸ್ರಾ ಯರ ಬೆಂಬಲಕ್ಕೆ ಅಪ್ಪಣೆಯಾದೊಡನೆ ಒಪ್ಪಿಸಲಾಗುವುದೆಂದೂ ಬರೆದು ವೈಸ್ರಾಯರಿಗೆ ಮನಃ ಶಾಂತಿಯನ್ನು ಮಾಡಿರುವರು ಅತ್ತ ಇಂಗ್ಲೆಂಡಿನಿಂದಲೂ, ಅಮೇರಿಕದಿಂದಲೂ ನೂರಾರು ಮಹಾ ಪುರುಷರೂ, ಸಭೆಗಳೂ, ಪಾರ್ಲಿಮೆಂಟು ಮೆಂಬರರೂ ಇಂತಹ ಕಾರ್ಯಕ್ರಮವು ಶೋಚನೀಯ ಪರಿಣಾಮಗಳನ್ನು ಉಂಟುಮಾಡುವುದಾದ ಕಾರಣ, ಇದನ್ನು ಬೇಗನೇ ಮುಗಿಸ ಬೇಕೆಂದು ಸೂಚಿಸಿ, ತಂತೀವಾರ್ತೆ, ಮನವಿ, ರಾವು ಮೊದ ಲಾದವುಗಳ ಮೂಲಕ ಬ್ರಿಟಿಷ ಮತ್ತು ಇಂಡಿಯಾ ಸರಕಾರ ಗಳಿಗೆ ಬರೆದುಕೊಳ್ಳುತ್ತಿರುವರು ಅವರೆಲ್ಲರೂ ಒಂದೇ ಬಗೆ ಯಾಗಿ ಭಾವನೆಗಳನ್ನುಳ್ಳವರೆಂದೂ, ಪ್ರಜಾಜನಕ್ಕೆ ಸೇರಿದವ ರೆಲ್ಲರೂ ಅವರಂತೆ ಐಕ್ಯಮತ್ಯವುಳ್ಳವರಾಗಿ ಸೂಚನೆಗಳನ್ನು ಎತ್ತುವವರೆಂದೂ ಇದರಿಂದ ತೋರುತ್ತಿದೆ

ಬ್ರೆಜಿಲ್ ಕಾಫಿ

ಬೆಳೆ ಅಧಿಕವಾಗಿ ಕ್ರಯ ಇಳಿದಿದೆಯೆಂದು ಸೇರಡು ಗಿಂದಷ್ಟು ಕಾಫಿಯನ್ನು ನಾಶಗೊಳಿಸಬೇಕಾಗಿ ಅಲ್ಲಿನ ಸರ ಕಾರವು ನಿರ್ಧರಿಸಿದೆ ಇದು ವರೆಗೆ ಈ ಅಧಿಕ ಕಾಫಿ ಯನ್ನು ಸಮುದ್ರದಲ್ಲೇ ಒಗೆದು ಬಿಡುತ್ತಿದ್ದರು ಇನ್ನು ಇದ ರಿಂದ ಏನೂ ಪ್ರಯೋಜನವನ್ನಾದರೂ ಪಡೆಯಬೇಕೆಂಬ ಇಚ್ಛೆ ಯಾಗಿದೆ ರೈಲ್ವೆ ಇಂಜಿನ ಗಳಲ್ಲಿ ಕಲ್ಲಿದ್ದಲಿನ ಬದಲಾಗಿ ಕಾಫಿಯನ್ನು ಸುಡುವ ಯೋಚನೆ ಕೆಲವರಿಗೆ ಇದರಿಂದ ಪ್ರಯಾ ಣಿಕರಿಗೆ ಪ್ರಯಾಣ ಮಾಡುವಾಗಲೆಲ್ಲ ಕಾಫಿ ಪರಿಮಳವೇ ಸುತ್ತಿಕೊಂಡು, ಕಾಫಿ ಕುಡಿಯುವ ಬದಲಾಗಿ ಅದನ್ನು ಉಸು ರಾಡಿ, ಅನ್ನಕೋಶಗಳ ಬದಲಾಗಿ ಶ್ವಾಸಕೋಶಗಳು ಹರ್ಷ ಗೊಳ್ಳುವ ಪರಿಣಾಮ ಉಂಟಾಗಬಹುದು ಅಲ್ಲದೆ ಆ ರಂಗಗಳಲ್ಲಿ ಹಾದುಹೋಗುವಾಗ, ಕಲ್ಲಿದ್ದಲಿನ ದುರ್ವಾ ಸನೆಯು ಮಾಯವಾಗಿ ವಾತಾವರಣವೆಲ್ಲ ಕಾಫೀ ಪರಿಮಳ ಗಳಿಂದ ತುಂಬುವುದು ಕಾಫಿಯಿಂದ 'ಗೇಸ್' ಹುಟ್ಟಿಸಿ, ಅದ ರಿಂದ ಊರಲ್ಲೆಲ್ಲ ಲಾಂದರ ಹಚ್ಚಿಸಬಹುದೆಂದು ಕೆಲ ವರ ಸೂಚನೆ 'ಗೇಸಿನ ನಳಿಗೆಗಳು ಒಡೆದು ಸೋರಿದರೆ ಮಾತ್ರ ರಾತ್ರಿ, ಜನರಿಗೆ ನಿದ್ದೆ ಹಿಡಿಯುವ ಬದಲಾಗಿ ಉತ್ತೇ ಜನ ಹುಟ್ಟಿ ಜಾಗರಣೆಯೇ ಘಟಿಸೀತು ಇಂತಹ ಉಪಾಯ ಗಳಿಂದ ಆಲಸ್ಯವು ಊರನ್ನು ತೊಲಗುವುದು, ಅಹರ್ನಿಶಿ ಚಟು ವಟಿಕೆಯಿಂದ ಜನರು ಧಾರಾಳವಾದ ಕೆಲಸಮಾಡುವರು ಇವರ ಕೆಲಸವನ್ನು ನೋಡಿದಾಗ ಇಂದಂತೆ ಕಡಿಮೆಮಾಡಬೇಕಾದೀತೋ ಎಂದು ಸಂದೇಹ ಹುಟ್ಟಿ, ಇನ್ನು ಕಾಫಿಯನ್ನು ಸಮುದ್ರದಲ್ಲೇ ಮುಳುಗಿಸುವರೋ ನೋಡಬೇಕು

ಮಧ್ಯಪ್ರಾಂತ್ಯದಲ್ಲಿ

ಶ್ರೀಯುತ ಅಭ್ಯಂಕರರು ಕಾಂಗ್ರೆಸ್ ಸಭಾ ನಾಯಕರು. ಇವರನ್ನು ಕೈದುಮಾಡಿ, ಆರ್ಡಿನೆನ್ಸು ಕಾನೂನಿನ ಪ್ರಕಾರ ನ್ಯಾಯ ವಿಚಾರಣೆ ನಡೆಸಿ, ಮೂರು ವರ್ಷಗಳ ಕಠಿನ ಸಜೆ ಯನ್ನೂ ೧೫,೦೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸ ಲಾಗಿದೆ ಇದೇ ಮತ್ತು ಇಂತಹ ದಂಡನೆಗಳು ಅತಿ ಕಠಿನ ವಾದುವೆಂದು ಅಲ್ಲಿನ ನ್ಯಾಯವಿಧಾಯಕ ಸಭೆಯಲ್ಲಿ ಸರ ಕಾರಕ್ಕೆ ವಿಮರ್ಶಿಸಲು ಒಂದು ಸೂಚನೆಯನ್ನು ಒಪ್ಪಿಸಲು,— ಇಂತಹ ಪ್ರತೀಕಾರ ರೂಪದ ಕಠಿನ ಹದಮೀರಿದ ದಂಡನೆ ಗಳನ್ನು ಸರಕಾರವು ಅಪೇಕ್ಷಿಸುವುದೂ ಇಲ್ಲ, ಇಂತಹ ದಂಡನೆ ಗಳ ಪುನರ್ವಿಮರ್ಶೆಮಾಡಲು ವಿಚಾರಣೆಯನ್ನು ಪ್ರಾರಂಭಿಸದೆ ಇರುವುದೂ ಇಲ್ಲ ಎಂದು ಸರಕಾರದ ಪರವಾಗಿ ಉತ್ತರ ದೊರೆ ತಿದೆ ಕಳೆದ ಕಾನೂನುಭಂಗ ಚಳವಳಿಯ ಕಾಲದಲ್ಲಿ ಇತರ ಪ್ರಾಂತಿಕ ಸರಕಾರಗಳಿಗಿಂತ ಯುಕ್ತವಾಗಿ ನಡೆದು ದೆಂದರೆ ಮಧ್ಯಪ್ರಾಂತ್ಯದ ಸರಕಾರವೇ ಎಂಬ ಬಿರುದನ್ನು ಇದು ಮುಂದಕ್ಕೂ ಊರ್ಜಿತವಿರಿಸಿಕೊಳ್ಳುವುದೆಂದು ನಂಬಬಹುದಾ ಗಿದೆ ಈ ಪ್ರಾಂತ್ಯದಲ್ಲಿ ಹಚ್ಚಾಗಿ ಈ ಆರ್ಡಿನೆನ್ಸುಗಳ ಕಾಲ ದಲ್ಲಿ ಬೆತ್ತವನ್ನೇ ಉಪಯೋಗಿಸುವರಲ್ಲದೆ, ಲಾಠಿಯನ್ನಲ್ಲ, ಎಲ್ಲ ಜಿಲ್ಲಾಧಿಕಾರಿಗಳಿಗೆ ಅತಿ ನ್ಯಾಯಪರವಾದ ದಂಡನೆಯನ್ನಲ್ಲದೆ ಬೇರೆ ವಿಧಿಸಬಾರದಾಗಿ ಸರ್ಕ್ಯುಲರು ಕೊಡಲಾಗಿದೆ

ಯುದ್ಧ ಸಾಲವನ್ನು ರದ್ದು ಮಾಡಿರಿ

ಎಂದು ಜರ್ಮನಿ ಖಂಡಿತ ತಿಳಿಸಿಯದಷ್ಟೆ ಈ ವಿಷಯ ವನ್ನು ಲೀಗ್ ಒಫ್ ನೇಶನ್ಸ್ ಸಭೆಯ ಅರ್ಥಶಾಸ್ತ್ರ ವಿಚಕ್ಷಣರು ಅದರಿಂದಾಗಲುಳ್ಳ ಪರಿಣಾಮಗಳನ್ನು ವಿಮರ್ಶಿಸಿ ಈಗಣ ಆರ್ಥಿಕ ಸ್ಥಿತಿಯು ಅತಿ ಭಯಂಕರ, ಸಂಕಟಮಯವಾಗಿದೆ ಎಂದು ಮೊದಲಾಗಿ ಸೂಚಿಸಿರುವರು ಜರ್ಮನಿಯು ಹೇಳು ವಂತೆ ಎಲ್ಲ ಯುದ್ಧ ಸಾಲಗಳನ್ನು ರದ್ದುಗೊಳಿಸಿದರೆ,—ಬ್ರಿಟಿ ಷರು ತಾವೇ ಎತ್ತಿದ ಸಾಲವೂ ಮಿತ್ರ ರಾಷ್ಟ್ರಗಳಿಗೆ ತಾವು ಕೊಟ್ಟ ಸಾಲವೂ ಕೂಡಿ, ೧೬೦೦ ಕೋಟಿ ಪವನು ಸಾಲ ಗಳನ್ನು ತಮ್ಮ ಸಾಲಗಾರರಿಗೂ ಮತ್ತೂ ತೆರಲು ಬಾಧ್ಯರಾಗು ವರು, ಇದರ ಬಡ್ಡಿ ಎಷ್ಟಾಯಿತು? ಬಡ್ಡಿ ತೆರುತ್ತಾ ಹಲವು ವರ್ಷ ಕಳೆದ ಬಳಿಕವೂ ಬ್ರಿಟಿಷರೇ ತಮ್ಮ ತೆರಿಗೆಯಿಂದ ಹುಟ್ಟುವ ಹಣದಿಂದಲೇ ಈ ಮೂಲವನ್ನು ತೆರಬೇಕಾಗುವುದು ಇಷ್ಟು ಹೊರ ರಾಜ್ಯಗಳಿಗಾಯಿತು, ಇವಲ್ಲದೆ ಬ್ರಿಟಿಷರು ಇಂಗ್ಲೆಂಡಿನಲ್ಲೇ ಎತ್ತಿದ ಸಾಲವಂತೂ ಮತ್ತೂ ತೆರಲು ಬಾಕಿ ಉಳಿಯುವುದು ಜರ್ಮನಿಗೆ ಈ ಬಳಿ ಸಾಲವು ೪೦೦ ಕೋಟಿ ಯಿದೆ, ಎಂದರೆ ತಲೆಗೆ ೬ ಪವನು, ಫ್ರಾನ್ಸಿಗೆ ೫೩೦ ಕೋಟಿ ಯಿದೆ, ತಲೆಗೆ ೧೨ ಪವನು, ಯುನೈಟೆಡ್ ಸ್ಟೇಟ್ಸಿಗೆ ೩೨೦ ಕೋಟಿ, ಎಂದರೆ ತಲಾ ೨೭ ಪವನು ಬ್ರಿಟನಿಗೆ ಇದು ೬೬೦ ಕೋಟಿ ಪವನು ಎಂದರೆ ಪ್ರತಿ ಜನಕ್ಕೆ ೧೫೦ ಪವನು ಆಗು ವುದು ಪ್ರತೀ ಜನದ ತಲೆಯ ಮೇಲೆ ಈ ೧೫೦ ಪವನಿನ ಸಾಲದ ಹೊರೆಯ ಸಂಕಟದ ಪರವಾಗಿ ಇರುವಾಗ ಇವರ ಸುಖಾನ್ವಿತ ಜೀವನ, ಈ ಶತಮಾನದ ಫ್ಯಾಶನಿನ ಜೀವನದ ಖರ್ಚು ಎಲ್ಲವನ್ನೂ ಸಾಗಿಸಬೇಕಾದರೆ ಕೈಗಾರಿಕೆಗಳಿಂದ ಎಷ್ಟು ಹಣ ಹುಟ್ಟಬೇಕು ? ಈ ಕೈಗಾರಿಕೆಗೆ ಗಿರಾಕಿಗಳು ಯಾರು? ಕಾರ್ಖಾನೆಗಳೂ ಭಂಡವಲವೂ ಕೆಲಸಗಾರರೂ ಎಲ್ಲಿ? ರಫ್ತು ಎಲ್ಲಿಗೆ? ಹಣವೆಲ್ಲಿಂದ? ಆದರೂ, ಈ ವಿಷಯವೆಲ್ಲ ತಜ್ಞರ ಅತ್ಯರ್ಥವಾಗದಿದ್ದಲ್ಲಿ, ಇಡೀ ಯುರೋಪು ಖಂಡಕ್ಕೇ ಅದ ರಲ್ಲೂ ಇಂಗ್ಲೆಂಡಿಗೇ ಗಾಢಸಂಕಟವಾಗುವುದು ಇದಕ್ಕೆ ನಿವಾರಣೆ ಏನಿದೆ?

ಸಾಮಾಜಿಕ ತಾರತಮ್ಯಗಳ ಸಮಸ್ಯೆ

ಇದನ್ನು ನಿವಾರಿಸುವುದಕ್ಕೆ ಅತ್ಯುತ್ತಮ ಉಪಾಯ ವೆಂದರೆ ಬಾಲವೀರರ ಸಂಘಗಳ ಸ್ಥಾಪನೆ ಎಂದೇ ಸ್ಕೌಟರು ಗಳ ಸಮ್ಮೇಳನ ಕಾಲದಲ್ಲಿ, ಕೊಚ್ಚಿ ರಾಜ್ಯದ ದಿವಾನರಾಗಿರುವ (ನಮ್ಮ ಜಿಲ್ಲೆಗೂ ಕೆಲ ತಿಂಗಳ ಕಲೆಕ್ಟರರಾಗಿದ್ದ) ಮಿ! ಹರ್ಬರ್ಟರವರು ತಿಳಿಸಿರು ಏಕೆಂದರೆ ಎಳೇ ವಯಸ್ಸಿ ನಲ್ಲಿಯೇ ಮಕ್ಕಳನ್ನು ಸಮಾಜ ಭೇದಗಳೇನೂ ಇಲ್ಲದಂತೆ ಉತ್ತಮ ರೀತಿಯಲ್ಲಿ ಸದ್ಭಾಂಧವ್ಯದ ಪಾಠಗಳನ್ನು ಕಲಿಸಲು ಇದೊಂದೇ ಮಾರ್ಗವು ಸದ್ಭಾಂದವ್ಯ, ಐಕ್ಯಮತ್ಯದ ಒಂದಾಗಿ ಕಾರ್ಯ ಸಾಧಿಸುವ ಪಾಠಗಳನ್ನು ಕಲಿತ ಬಾಲಕರು ಮುಂದೆಯೂ ದೊಡ್ಡವರಾಗಿಯೂ ಅವೇ ಸದ್ಗುಣಗಳಿಂದ ಸಜ್ಜ ರಿತರಾಗುವರು ಅದಲ್ಲದೆ ಸ್ಕೌಟ ಪದ್ಧತಿಯು, ಈಗ ಜನಾಂಗೀ ಜಾತ್ಯತೀಯ ಮೂಡಿರುವ ಕಾಲದಲ್ಲಿ ಆಫ್ರಿಕದ ದೂಲು ಕಾಡುಜನರ ಗುಡಿಗಾಟುಗಳಲ್ಲಿ ಮುಗಿಯದೆ, ಸರ್ವಮಾನ್ಯ ವಾದ ಜಾತೀಯ ಜೀವನದ ಗೌರವವನ್ನೂ ಹುಟ್ಟಿಸುವ ಪೌರ ರಾಗಿ ಪರಿಣಮಿಸಿದರೆ ಮೇಲಂತೆ ಸ್ಕೌಟ ಶಬ್ದವನ್ನೆ ಬಾಲ ವೀರ ಶಬ್ದದೊಡನೆ ಹೋಲಿಸಿ, ಅಗತ್ಯವಾದ ತಿದ್ದುಪಡಿಗಳನ್ನು ಶಿಕ್ಷಣ ಪದ್ಧತಿಯಲ್ಲಿ ಏರ್ಪಡಿಸುವುದು ಅವಶ್ಯವೆಂದೂ ದಿವಾ ನರು ಸೂಚಿಸಿದ್ದರೆ ಹಿಂದೀ ಬಾಲವೀರರು ಹಿಂದೀ ಜನಾಂಗ

ನೋಟಗಳು:

NOTE, .S

ಈಗ ಅಲ್ಲಲ್ಲಿ ಮೋಟರ್ ಅಪಘಾತಗಳು ಆಗುತ್ತಲೇ ಇವೆ ತಾವು ಮೋಟರ್ ಡ್ರೈವರರೆಂದು ಹೆಮ್ಮೆಪಡುವ ಡ್ರೈವರರ ಕೈಯಲ್ಲಿ ಸ್ಟಿಯರಿಂಗು ಸಿಕ್ಕಿ ಪಟ್ಟಣಕ್ಕೆ ಶಾಂತಿಯಿಲ್ಲ. ಇಂತಹ ಡ್ರೈವರುಗಳಿಗೆ ತಕ್ಕಮದ್ದನ್ನು ಸಂಬಂಧಪಟ್ಟವರು ಏಕೆ ಅರೆಯು ವುದಿಲ್ಲ ?

* * * *

ಮೊದಲನೇಯದಾಗಿ ಡ್ರೈವರುಗಳು (ಮೋಟರ್ ಬಿಡುವ ಸಮಯದಲ್ಲಾದರೂ) ಮದ್ಯ ವರ್ಜಿತರಾಗಿರಬೇಕು ಪೋಲೀ ಸರು ಡ್ರೈವರುಗಳ ಲೈಸನ್ಸು ನೋಡಿ ಮೋಟರ್ ನಡಿಸಲಪ್ಪಣೆ ಕೊಡುವಾಗ ಡ್ರೈವರು ಮದ್ಯಪಾನ ಮಾಡಿರುವರೋ ಎಂದು ಕಂಡು ಹಿಡಿಯುವುದ ಅಗತ್ಯವಿದೆ

* * * *

"ಪ್ರಸ್ತುತದ ರಾಜಕೀಯ ವಾತಾವರಣವು ಸರಿ ಯಾಗಿರುವುದಿಲ್ಲವೆಂಬ ಹೇಳಿಕೆಯ ಮೇಲೆ, ನಗರ ಸಭೆ ಹಿಂದೀ ಪರಿಷತ್ತು ವಿದ್ಯಾರ್ಥಿ ಸಂಘಗಳು ತಮ್ಮ ತಮ್ಮ ಕೆಲಸ ಗಳನ್ನು ಹಿಂದೆ ತೆಗೆದುಕೊಳ್ಳುತ್ತಿವೆ ಈ ಸಂಸ್ಥೆಗಳಿಗೂ ರಾಜ ಕೀಯ ವಾತಾವರಣಕ್ಕೂ ಏನು ಸಂಬಂಧವೋ ತಿಳಿಯದು ರಾಜ ಕೀಯ ವಾತಾವರಣವು ಎಂದು ಸರಿಯಾದೀತೆಂದು ಈ ಸಭೆ ಗಳ ಭಾವನೆ?

ವರಾಗಿ ಎಂದಿಗೆ ಒಂದು ಮತ್ತನ್ನು ಸಾಧಿಸಬೇಕಾಗುವ ಸೂಚನೆಯಾಗುತ್ತಿದ್ದಿತು!

ಸಂಯುಕ್ತ ಪ್ರಾಂತ್ಯದಲ್ಲಿ ಸ್ತ್ರೀ ಶಿಕ್ಷಣ

ಆ ಪ್ರಾಂತ್ಯದ ವಿದ್ಯಾ ಮಂತ್ರಿಗಳಾಗಿದ್ದ ಶ್ರೀ ಕೈಲಾಸ ಶ್ರೀವಾಸ್ತವರ ಪತ್ನಿಯರೇ ಅಧ್ಯಕ್ಷರಾಗಿ ಶಿಕ್ಷಿತರ ಮುಸ್ಲಿ ಮ ಮಹಿಳೆಯರು ಕೂಡಿ ಏಳು ಜನರ ಒಂದು ಕಮಿಟಿಯು ಸರಕಾರದಿಂದ ನೇಮ ಹೊಂದಿದೆ ಸ್ತ್ರೀ ಶಿಕ್ಷಣದ ಸ್ಥಿತಿಯನ್ನು ಪರೀಕ್ಷಿಸುವುದು ಉಚ್ಚ ಶಿಕ್ಷಣಕ್ಕಾಗಿ ಇರುವ ಕಾಲೇಜುಗಳ ಸಂಖ್ಯೆ ಹೆಚ್ಚಿಸಬೇಕೇ ಎಂಬುದನ್ನು ಕೈಕೊಳ್ಳ ಬೇಕೆ ಸಾಧ್ಯವಾದೀತೇ! ಹುಡುಗರನ್ನೂ ಹುಡುಗಿಯರನ್ನೂ ಒಂದೇ ವಿದ್ಯಾಶಾಲೆಯಲ್ಲಿ ಕಲಿಸುವುದು ಎಷ್ಟರಮಟ್ಟಿಗೆ ಸಾಧ್ಯವಾಗುವುದು? ಶಿಕ್ಷಕಿಯರು ಬೇಕಾದಷ್ಟು ಸಿಗುವರೇ ಸಾಕೆ! ಇನ್ನೂ ಇದರಲ್ಲಿ ಏನು ಸುಧಾರಣೆಗಳು ಬೇಕು? ಬಾಲಿಕಾ ಪಾಠಶಾಲೆಗಳಲ್ಲಿ ಹೆಣ್ಮಕ್ಕಳ ಆರೋಗ್ಯ ಪರೀಕ್ಷೆ ಮತ್ತು ವ್ಯಾ ಯಾಮಗಳನ್ನು ಹೇಗೆ ನಿರ್ಧಾರ ಮಾಡಬೇಕು ? ಅಂತಃ ಪುರದಲ್ಲಿರುವ ಸ್ತ್ರೀಯರಿಗೆ ವಿದ್ಯಾ ಪ್ರಚಾರವು ಎಂತು? ಎಂತ ಹೇಗೆ ನಡೆಸಬೇಕು ಸಾಧ್ಯ ಎಂಬುವೇ ಹಲವು ಮುಖ್ಯ ಪ್ರಶ್ನೆಗಳು ಇವು ವಿಚಾರಕ್ಕೆತ್ತಿಕೊಳ್ಳಲಾಗಿವೆ ಮದ್ರಾಸು ವಿದ್ಯಾ ಕಲಾಪೀಠವೂ ಈ ತೀರ್ಮಾನಗಳನ್ನು ನಿರೀಕ್ಷಿಸಿ ಪರೀಕ್ಷಿಸಿ ವಿಮರ್ಶಿಸಿ ಅಂಗೀಕರಿಸಬಹುದೇ!

ಜಾಪಾನಿನ ಯುದ್ಧ ಸಿದ್ಧತೆ

ಮಂಚೂರಿಯದೊಳಗಿರುವ ಚೀನಿಯರ ಎಲ್ಲ ಪ್ರಾಬಲ್ಯ ವನ್ನು ಸಂಪೂರ್ಣವಾಗಿ ಕಿತ್ತೊಗೆಯಬೇಕೆಂದು ಜಾಪಾನು ಯುದ್ಧ ಸನ್ನಾಹ ಮಾಡಿರುವುದು ಜಪಾನಿನಿಂದ ಸೇನಾಂಗ ಗಳು ಮಂಚೂರಿಯ ಕಡೆಗೆ ಹೊರಟಿವೆ ಚೀನೀಯ ಸೈನ್ಯ ವೆಲ್ಲವೂ ಕೋಟೆಗಳ ಹಿಂದಂದೇ ಜಪಾನು ರಾಯಭಾರಿ ದಿ ಎಲ್ಲಿ ನೋಡಿದರೂ ಯುದ್ಧ ಕಹಳೆಗಳು, ಯುದ್ಧ ಚಿತ್ರಗಳೇ ತುಂಬಿ ಪತ್ರಿಕೆಗಳು ಜಾಪಾನಿನ ಕಾರ್ಯಕ್ಕೆ ಮಾರಲಾಗು ತ್ತಿವೆ ಈ ಕಾರಣಗಳಿಂದ ಸತ್ತ ಜಾಪಾನಿಯರ ಭಸ್ಮಾವ ಶೇಷಗಳನ್ನು ಜಪಾನ ನಗರಗಳಲ್ಲಿ ಮೆರವಣಿಗೆ ಮಾಡುವುದ ರಿಂದ ಜಾಪಾನಿಯರು ಕ್ರೋಧದಿಂದ ಉದ್ವಿಗ್ನರಾಗಿ ಯುದ್ಧಾತುರ ರಾಗುತ್ತಿರುವರು ಜಪಾನಿನ ಒಪ್ಪಿಗೆಯಿಲ್ಲದೆ ಯಾವ ಸರಕಾರ ವನ್ನಾದರೂ ಮಂಚೂರಿಯಲ್ಲಿ ಇರಗೊಳಿಸಬಾರದೆಂದೇ ಸಂಕ ಲ್ಪವಾಗಿದೆ ಎಲ್ಲ ಚೀನೀ ಸೈನ್ಯಗಳನ್ನು ಅಲ್ಲಿಂದ ಹೊರಡಿಸಿ ಧ್ವಂಸಗೊಳಿಸಿ ಬಳಿಕ ಜಾಪಾನು ಚೀನಾ ನಗರದಲ್ಲಿ ಮಹಾ ಯುದ್ಧ ಹೂಡಿ ಅಲ್ಲಿಗೆ ದಿಗ್ವಿಜಯ ಮಾಡಿ ಮುಗಿಸಿ, ಸರ್ವಾಧಿ ಕಾರವನ್ನು ಮೆರೆಯಿಸುವುದಾಗಿ ಜಾಪಾನು ಎಣಿಸಿರುವಂತೆ 'ಟೈಮ್ಸ್' ಪತ್ರಿಕೆಗೆ ವರದಿಯ ವಾರ್ತೆ ಅದರ—ಮಂಚೂ ರಿಯ—ಮಂಗೋಲಿಯಗಳೆರಡೂ ಸ್ವತಂತ್ರವಾಗಿ ಜಾಪಾನಿನ ಅಧಿಕಾರದೊಳಗೆ ಸಾಗುವಂತೆ ಉದ್ದೇಶಗಳಾಗುವುವೆಂದೂ, ಅತ್ತ ಜಾಪಾನಿಗೆ ಮಂಚೂರಿಯವನ್ನು ನುಂಗುವ ದುರಾಶೆ ಇಲ್ಲ ವೆಂದೂ ಸಹ ಪ್ರಕಟವಾಗಿದೆ ನಿಶ್ಚಯವಾದುದೋ ಗೊತ್ತಿಲ್ಲ

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣಬಾರದಿದ್ದರೆ) ೧೦೦೦ ರೂ. ಇನಾಮು (ಹಣ ಪರತ

ಪುರುಷತ್ವ ಸಂಜೀವಿನೀ ಚೂರ್ಣ (ರಜಿಸ್ಟರ್ಡ)

ಈ ಚೂರ್ಣದಿಂದ ಸ್ವಪ್ನದಲ್ಲಿ ಹಾಗೂ ಮೂತ್ರದ್ವಾರಾ ಹೋಗುವ ವೀರ್ಯವು ಕೂಡಲೆ ನಿಂದಾಗುವುದು. ಗರಮಿ ಪರಮಾದಿಂದಾದ ಉಷ್ಣತಾ, ಮುಷ್ಟಿಮೈಥುನದಿಂದಲೂ, ಅತಿರತಿಯಿಂದಲೂ ಧಾತು ನೀರಾಗುವಿಕೆ, ಧಾತು ಕ್ಷೀಣತೆ, ಅಶಕ್ತತೆ ಶೀಘ್ರಧಾತುಪತನ ಇವೆಲ್ಲ ರೋಗಗಳು ನಾಶವಾಗಿ ರಕ್ತಶುದ್ಧಿಯಾಗುತ್ತದೆ. ಹಸಿವೆ, ಸಾಮರ್ಥ್ಯಗಳು ಹೆಚ್ಚಾಗಿ ತೂಕಬೆಳೆಯುತ್ತದೆ. ಮತ್ತು ವೀರ್ಯವು ಗಟ್ಟಿಯಾಗಿ ಗರ್ಭಧಾರಣಕ್ಕೆ ಯೋಗ್ಯವಾಗುತ್ತದೆ. ಮುಖ್ಯ ಸರ್ಟಿಫಿಕೇಟ, ಮಿ. ರಾ. ವಿ ಎಸ್ ಅಗಡೆ ಮ್ಯಾಜಿಸ್ಟ್ರೇಟ ಸಾತಾರಾ.—ಈ ಚೂರ್ಣದಿಂದ ನನಗೆ ಆಶ್ಚರ್ಯಕಾರಕ ಗುಣ ಮಾಯಿತು. ಅನೇಕ ತರದ ಅವಿಚಾರದಿಂದ ದುಷ್ಟವಾದ ವೀರ್ಯ ಹಾಗೂ ರಕ್ತವು ಇದರಿಂದ ಸತೇಜವಾಗಿ ಪ್ರಕೃತಿಯು ನೆಟ್ಟಗಾಗದೆ ಇರದು. ೨೧ ದಿವಸ ಸಾಕಾಗುವಷ್ಟು ಡಬ್ಬಿಗೆ ಕಿಮ್ಮತ್ತು ರೂ. ೩ ೮ ೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಲೇಶ [illegible] ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದ ಗರ್ಭಪತನವಾಗೋಣ, ಈ ಮೊದಲಾದ ರೋಗಗಳ ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನದ [illegible] ಪ್ರಥಮ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು, ಮಿ ರಾ ಎ ಎಸ್ [illegible] ಬೆಳಗಾಂವ—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಷ್ಟವಾದವು. ನನ್ನ ಮಿತ್ರನ ಹೆಂಡತಿಯ [illegible] ಈಗ ಮಕ್ಕಳು ಆಗಿವೆ. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ ೩. ೮. ೦. ೦

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

[illegible] ಹೆಂಗಸರಿಗೆ [illegible] ಅಶಕ್ತಿಯಾಗುತ್ತದೆ. ಬಹಳ [illegible] ಮಕ್ಕಳಾಗುವುದರಿಂದ [illegible] ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ [illegible] ಹಡೆಯುವದು ಒಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. [illegible] ಮುಟ್ಟಾಗುವಿಕೆಯು ನೇಮದಂತೆ [illegible] ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ [illegible] ಪೂರಾ ವಿಚಾರವಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ [illegible] ಪೂರ್ವ ಖಾನದೇಶ—ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ [illegible] ಡಬ್ಬಿ ಕಿ. ೪ ರೂ. ವಿ ಪಿ. ಖರ್ಚು ||

ಸೂಚನೆ:—ಯಾವದಾದರೂ ೩ ಡಬ್ಬಿಗೆ ೮ ೩. ಮಾಫ. ನಮ್ಮ ಈ ರಿಜಿಸ್ಟರ್ಡ ಔಷಧದ ಕೃತ್ರಿಮ ನಕಲು ಹೊರಟಿದೆ. ಪೂರ್ಣ ವಿಚಾರವಾಡಿ ತರಿಸಿಕೊಳ್ಳಿರಿ. ಈ ಸರ್ಟಿಫಿಕೇಟು ಖೊಟ್ಟಿಯಿದೆಯೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಇನಾಮು.

ವಿಳಾಸ—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

೧೧೦೦ ರೂ. ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣಯಶಸ್ಸು ಪಡೆದ

ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ

ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತ ಪಾಕು ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳಿಸುವೆವು. ಹಸ್ತಕ್ರಿಯೆ ಯಿಂದಲೂ ಅತಿ ಸ್ತ್ರೀಸಂಪರ್ಕದಿಂದಲೂ [illegible] ಧಾತುಕ್ಷೀಣತೆ ಅಶಕ್ತತೆ ಕಾಮೇಚ್ಛೆ ಯಾದ ಕೂಡಲೇ ವೀರ್ಯಪತನವಾಗೋಣ [illegible] ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ನಡೆಯುವ ಅರ್ಧ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ೮ [illegible] ಡಬ್ಬಿಗೆ ಖರ್ಚು ಸಹಿತ ರೂ ೧೧ ಮೂರು ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ [illegible] ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಶಾಲಾ ಮಾಸ್ತರರ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

೧ ಡಾ. ಹರೀಹರ ಶೀತಾರಾಮ ರಾಜಂದೇಕರ ಎಲ್ [illegible] ಪ್ರೋಸ್ಟ [illegible] ಅಕೋಲಾ—ತಮ್ಮ ಮದನಮಸ್ತ ಪಾಕದಿಂದ ಜೀವನಶಕ್ತಿಯು ಬೆಳವಣಿಗೆಯಾಗಿ ವೀರ್ಯ ಹಾನಿಯು ಬಲಹೀನತೆಯು ಉದರ ವಿಕಾರವು ಇಂದ್ರಿಯ ಶೈಥಿಲ್ಯವು ಸಂಧಿವಾತ ಮೊದಲಾದ ರೋಗಗಳೆಲ್ಲ ನಷ್ಟವಾಗಿ [illegible] ಹಾಗೂ ಸ್ಮರಣಶಕ್ತಿಯು ಬೆಳೆಯುತ್ತದೆ. ತಮ್ಮ ಪಾಕದ ಪ್ರಸಾರವು ಹೆಚ್ಚಲಿ. ಪರಮೇಶ್ವರನು ತಮ್ಮ ಕೀರ್ತಿಯನ್ನು ಹೆಚ್ಚಿಸಲಿ.

೨ ರಾಜವೈದ್ಯ ರಾಮಚಂದ್ರ [illegible] ಜೋಶಿ ಪೋಸ್ಟ [illegible] ತಮ್ಮ ಮದನಮಸ್ತ ಪಾಕವನ್ನು ಮಿ. ಸ ಫಾ ದೇಶಪಾಂಡೆ ತಾ ಲೋಕಲ್ ಬೋರ್ಡ ಇವರಿಗೆ ಕೊಟ್ಟೆನು. ಇದರಿಂದ ಅವರ ಸ್ವಪ್ನಾವಸ್ಥೆ ಧಾತು ನೀರಾಗುವಿಕೆ, ಹಾಗೂ ಅಶಕ್ತತೆ ಈ ರೋಗಗಳು ನೆಟ್ಟಗಾಗಿ ಹಸಿವೆ, ಶಕ್ತಿ, ಮತ್ತು ತೂಕ ಬೆಳೆಯಿತು. ಇದನ್ನು ತಿಳಿಸಲು ಅತ್ಯಾನಂದವಾಗುತ್ತದೆ. ಸರ್ವರೂ ಈ ಪಾಕದ ಅನುಭವ ತೆಗೆದುಕೊಳ್ಳಬೇಕೆಂದು ಶಿಫಾರಸು.

೩. ಜಗನ್ನಾಥ ರಂಗನಾಥ ದಡಪೆ, ಸ್ಕೂಲಮಾಸ್ತರ ಪೋಸ್ಟ ತಡವಳ ಜಿ ಸೊಲ್ಲಾಪೂರ—ತಮ್ಮ ಮದನಮಸ್ತ ಪಾಕದ ೩ ಡಬ್ಬಿಯನ್ನು ಸೇವಿಸಿದೆನು. ನನಗೆ ೧೩ ತರದ ಆಶ್ಚರ್ಯಕಾರಕ ಗುಣವಾಯಿತು. ತೂಕವು ೫ ಪೌಂಡು ಬೆಳೆಯಿತು. ತಮ್ಮ ಉಪಕಾರವನ್ನು ನಾನು ಆಜನ್ಮ ಮರೆಯಲಾರೆನು.

ಸೂಚನೆ— ಬೇಡುವವರ ಅನುಭವವನ್ನು ಕೃಪೆಯಿಂದ ನಮ್ಮ ಮೇಲೆ ಹೊರಿಸಬೇಡಿರಿ. ಇಷ್ಟು ಖಾತ್ರಿಯಾದರೂ ಈ ಪ್ರಭಾವಶಾಲಿ ಪಾಕದ ಮೇಲೆ ಯಾರ ವಿಶ್ವಾಸ ಕೂಡುವುದಿಲ್ಲವೋ ಅವರು ರೋಗಮುಕ್ತರಾಗಿ ಸಂಸಾರ ಸುಖ ಭೋಗಿಸುವ ವೇಳೆಯು ಬಂದಿಲ್ಲವೆಂದು ತಿಳಿಯಬೇಕು. ಈ ಪಾಕದಲ್ಲಿ ೬೦ ವನಸ್ಪತಿ ಧಾತುಪೌಷ್ಟಿಕ ಇಲ್ಲವೆಂದೂ, ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ೧೧೦೦ ರೂ ಇನಾಮು ಕೊಡುವೆವು.

ಪತ್ತೆ.—ವೈದ್ಯ ಮೋಹನಲಾಲ ಎಸ್ ಔಷಧಾಲಯ,
ಮು ಪೋ ಮಿರಜ S M C

ಏನು ಅನವಸ್ಥೆ?

ಈಗಿನ ಶಾಲೆಗಳಲ್ಲಿ ನಮ್ಮ ಮಕ್ಕಳು ಕಲಿಯುವುದಾದರೂ ಏನನ್ನು? ಒಂದಷ್ಟು ಇಂಗ್ಲಿಷ್ ಭಾಷೆ ಮತ್ತು ಗಣಿತವನ್ನು! ಇವುಗಳನ್ನು ನಮ್ಮ ಮಕ್ಕಳಿಗೆ ಕಲಿಸಿ ಅವರನ್ನು ಒಂದು "ದಾರಿಯಲ್ಲಿ ಹಾಕಬೇಕೆಂದು ನಮ್ಮ ಆಶೆ!

\+ \+ \+ \+

ಇಂಗ್ಲಿಷ್ ಕಲಿಯುವುದರಿಂದಲೂ, ಕನ್ನಡ ಓದುವುದರಲ್ಲಿಯೂ ಪ್ರಯೋಜನವಿದೆ ನಿಜ. ಮನುಷ್ಯನಿಗೆ ಅದೆಷ್ಟು ಹೆಚ್ಚು ಭಾಷೆ ತಿಳಿದಷ್ಟು ಶ್ರೇಯಸ್ಕರವೇ ಅಹುದು. ಆದರೆ ನಮ್ಮ ಮಕ್ಕಳಿಗೆ ಶಾಲೆಯಲ್ಲಿ ದೊರೆಯುವ ಕೆಲವು ಪಾಠಗಳನ್ನು ಪರಿಶೀಲಿಸಿದರೆ ಆಶ್ಚರ್ಯವಾಗದಿರದು.

\+ \+ \+ \+

ಎಲಿಮೆಂಟರಿ ಗಣಿತವು ಮಕ್ಕಳಿಗೆ ಅವರ ವಾರ್ಧಕ್ಯದ ತನಕವೂ ಅಗತ್ಯವಿರುತ್ತದೆ. ಆದರೆ ಆಲ್ಜಿಬ್ರ, ತ್ರಿಗೊನೊಮೆಟರಿಗಳಿಂದೇನು ಫಲವೋ?

\+ \+ \+ \+

ದೊಡ್ಡ ದೊಡ್ಡ ಸರಕಾರೀ ಉದ್ಯೋಗಸ್ಥರಾಗುವ ಅನುಕೂಲವಿದ್ದವರಿಗೆ ಆಲ್ಜಿಬ್ರ ತ್ರಿಗೊನೊಮೆಟ್ರಿಗಳನ್ನು ಕಲಿಯಲೇ ಬೇಕು. ಕಾರಣ ಅವುಗಳಿಂದ ಮುಂದಕ್ಕೆ ಅವರ ಉದ್ಯೋಗದ ಸಹಾಯ ಬೇಕೆಯುತ್ತದೆ.

\+ \+ \+ \+

ಈ ಆಲ್ಜಿಬ್ರ ತ್ರಿಗೊನೊಮೆಟರಿಗಳನ್ನು ಕಲಿತು ಒಬ್ಬನು ಮೆಟ್ರಿಕ್ ಅಥವಾ [illegible] ಯೊಳಗೆ ಶಾಲೆ ಬಿಟ್ಟು [illegible] ಕೆಲಸಕ್ಕೆ ಸೇರುವುದಾದರೆ ಆತನೇ ದೌರ್ಭಾಗ್ಯವಂತನು. ಆತನು ರಾತ್ರಿ ಹಗಲೆಯನ್ನೂ [illegible] ಈ ಆಲ್ಜಿಬ್ರ ತ್ರಿಗೊನೊಮೆಟರಿಗಳನ್ನು ಕಲಿತ ಸಮಯವು ಹಾಳಾಯಿತು!

\+ \+ \+ \+

ಈಗಿನ ಕಾಲದಲ್ಲಿ ವಿದ್ಯಾವಂತರೊಳಗೆ ನಿರುದ್ಯೋಗವು ಬೆಳೆಯುತ್ತ ಹೋಗುತ್ತಿರುವುದನ್ನು ಸರ್ವರೂ ಕಂಡು ಕೇಳಿ ಅರಿತಿರುವ ವಿಷಯ. ಆದ್ದರಿಂದ ದೊಡ್ಡ ದೊಡ್ಡ ಉದ್ಯೋಗಸ್ಥರಾಗಬೇಕೆಂಬ [illegible] ಮನಸ್ಸಿನಲ್ಲಿ [illegible] ಶಾಲೆ ಕಲಿಯುವುದು [illegible] ಈ ದಿನಗಳಲ್ಲಿ ವಿದ್ಯೆಯನ್ನು ವಿದ್ಯೆಗಾಗಿಯೇ, ಜ್ಞಾನಾರ್ಜನೆಗಾಗಿಯೇ ಕಲಿಯಬೇಕು.

\+ \+ \+ \+

ಆದರೆ ಜ್ಞಾನಾರ್ಜನೆಗಾಗಿ [illegible] ವಿದ್ಯೆ ಕಲಿಯಬೇಕೆಂದಾದರೆ ಈ ಆಲ್ಜಿಬ್ರ ತ್ರಿಗೊನೊಮೆಟರಿಗಳಿಂದಾವ ಜ್ಞಾನವು ಒಂದೀತು? [illegible] ಈ ಕಾಲದಲ್ಲಿ ಕಲಿಯುವ [illegible] ಉಪಯೋಗಿಸುವ [illegible]

\+ \+ \+

ತ್ರಿಗೊನೊಮೆಟ್ರಿ ಆಲ್ಜಿಬ್ರಗಳನ್ನು ರಾತ್ರಿ ಹಗಲು ಕಲಿತು ಕೊನೆಗೆ ಇನ್ನಿತರ ಜ್ಞಾನ ಪ್ರತಿಭೆಯಿಂದ ಉದ್ಯೋಗವನ್ನು ಸಂಪಾದಿಸಿದ ಎಷ್ಟು ಮಂದಿಯಿಲ್ಲ. ಈಗ [illegible] ಕಲಿತು ಸಮಯವನ್ನು ಹಾಳು ಮಾಡಿದೆವಲ್ಲ ಎನ್ನದವರು ಇಲ್ಲ.

\+ \+ \+ \+

ಕೆಲವರು ಅಹಾ ನಮಗೆ ಟೈಪ್‌ರೈಟಿಂಗ್ ಶಾರ್ಟ್‌ಹ್ಯಾಂಡ ಕಲಿಸುತ್ತಿದ್ದರಾಗುತ್ತಿತ್ತು ಎನ್ನುವವರು. ಕೆಲವರು ನಾವು ಬುಕ್ ಕೀಪಿಂಗ್ ಕಲಿಯುತ್ತಿದ್ದರಾಗುತ್ತಿತ್ತೆನ್ನುವರು. ಕೆಲವರು ನಮಗೆ ಚರಿತ್ರೆಯನ್ನೂ ಭೂಗೋಳವನ್ನೂ ಅಥವಾ ತತ್ವವನ್ನೂ ಸರಿಯಾಗಿ ಕಲಿಸುತ್ತಿದ್ದರಾಗುತ್ತಿತ್ತೆಂದು ಕೊರಗುವರು.

\+ \+ \+ \+

ಹೀಗೆ ಕೊರಗುವವರು ಸಾವಿರಾರು [illegible] ಇವರ ಈ ಕಷ್ಟಕ್ಕೆ [illegible] ಯಾರು? ಈಗಿನ ಶಿಕ್ಷಣ [illegible] ಅಲ್ಲ ನಿಶ್ಚಯ [illegible]

\+ \+ \+ \+

ನಮ್ಮ ಮಕ್ಕಳು ತಮ್ಮ ಭಾವೀ ಜೀವನದಲ್ಲಿ ಸುಖವನ್ನು ಅನುಭವಿಸುವಂತಾಗಬೇಕು. ಅವರಿಗೆ ಔದ್ಯೋಗಿಕ ಶಿಕ್ಷಣವನ್ನು ಕೊಡಬೇಕು. [illegible] ಕಲಿತ ಪಾಠಗಳು ಅವರ ಮುಂದಿನ ಜೀವನ ಕ್ರಮದಲ್ಲಿ ಪ್ರಯೋಜನಕ್ಕೆ ಬೀಳಬೇಕು.

\+ \+ \+ \+

ಅಥವಾ ಅವರು [illegible] ಕಲಿತ ಪಾಠಗಳಿಂದ ಅವರ ಆತ್ಮಿಕ ನೈತಿಕ ಧಾರ್ಮಿಕ ವಿಚಾರಗಳು ಸ್ಫೂರ್ತಿ ಹೊಂದಬೇಕು. ಎಂದರೇನೇ ನಾವು [illegible] ಸಾರ್ಥಕ್ಯವಾದೀತು. ನಾವು ನಮ್ಮ ಮಕ್ಕಳನ್ನು ಒಂದು [illegible] ಹಾಕಿದಂತಾಯಿತು.

\+ \+ \+ \+

ಆದರೆ ದೊಡ್ಡ ದೊಡ್ಡ ಉದ್ಯೋಗಗಳ ಕನಸು ಬಿಟ್ಟು ನಮ್ಮ ಕಣ್ಣೆದುರಿಲ್ಲದಿರುವುದರಿಂದ ನಮ್ಮ ಜೀವನವೇ ಈ ಉದ್ಯೋಗ ದೃಷ್ಟಿಯಿಂದ ತಿರುಗುತ್ತಿರುವುದರಿಂದ ನಮಗೆ ಈಗಿನ ವಿದ್ಯಾರ್ಜನೆಯ [illegible] ತಿಳಿದು ಬರುವದೇ ಅನುಕೂಲವಿಲ್ಲ.

\+ \+ \+ \+

ಇದೇನನವಸ್ಥೆ. ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಘಂಟೆ ಘಂಟೆಗೆ ಅಧಿಕವಾಗುತ್ತಿರುವಾಗ ನಮ್ಮದೇನವಸ್ಥೆ?

ಮ ಜ

ಅನುಕ್ರಮಣಿಕೆ.

ಅಗ್ರಲೇಖ.
ದಂಡನೀತಿಯ ಪರಿಣಾಮವೇನು? . . . ೬
ಸ್ಫುಟವಿಚಾರಗಳು . . . ೭
ನೋಟಿಗಳು . . . . ,,
ವರ್ತಮಾನ ಸಂಗ್ರಹಗಳು -
ವಿದೇಶ ವರ್ತಮಾನ ೬
ಒಳದೇಶ ವರ್ತಮಾನ . . . ,,
ದಕ್ಷಿಣಕನ್ನಡ— ಮಂಗಳೂರು, . . . ೮
ದಕ್ಷಿಣ ಕನ್ನಡ ಜಿಲ್ಲಾ ಎನೆಯ ಶಿಕ್ಷಣ ಪ್ರದರ್ಶನ ,,
ವಿವಿಧ ಸಮಾಚಾರಗಳು . . . ೧೦
ನಮ್ಮ ಶಾಲೆಗಳು . ೧೧
ಮತ ಭೇದಗಳೆನಿತು? . . . ,,
ವಿಚಾರಬಾಧ್ಯ . . ೯
ಬಂಧನದ ಗೊಂದಲ! ೧೦
ಉಡುಪಿಯ ಪರ್ಯಾಯ ಶಾಸ್ತ್ರ ೨

ಸ್ವದೇಶಾಭಿಮಾನಿ.

ತಾ. ೨೨ನೇ ಶುಕ್ರವಾರ ಜನವರಿ ೧೯೩೨

ದಂಡನೀತಿಯ ಪರಿಣಾಮವೇನು ?

ವಿಶಾಲದೃಷ್ಟಿಯೂ, ಅತ್ಯುಚ್ಚ ಕಲ್ಪನೆಯೂ ಉಳ್ಳ ಲೋರ್ಡ ಇರ್ವಿನರ ಆ ಪ್ರತಿಭೆಯು ಎಲ್ಲರಲ್ಲಿಯೂ ಇರಲಾರದು. "ಶಾಸನ ಸ್ನೇಹ ಧೋರಣವನ್ನು ವಹಿಸುವ ಮೊದಲು, ದಬ್ಬಾಳಿಕೆಯನ್ನು ಪೂರ್ಣ ರಭಸದಿಂದ ಮುಂದೊತ್ತುವ ಮಂತ್ರಾಲೋಚನೆ ಮಾಡಿದೆನು, ಆದರೆ ಇದರಿಂದ ಸತ್ಪರಿಣಾಮವಾಗಲಾರದೆಂಬುದಕ್ಕೆ ತುಂಬಾ ನಿದರ್ಶನಗಳನ್ನು ಕಂಡೆನು" ಎಂದು ಲೋರ್ಡ ಇರ್ವಿನರು ಇಂಗ್ಲೆಂಡಿನ ಲೋರ್ಡ್ಸರ ಪಾರ್ಲಿಮೆಂಟಿನಲ್ಲಿ ಹೇಳಿದರು. ಲೋರ್ಡ ಇರ್ವಿನರು ದಬ್ಬಾಳಿಕೆಗೇನೂ ಕಡಿಮೆಮಾಡಿಲ್ಲ, ಅವರು ಮಾಡದ ಒರ್ಡಿನೆನ್ಸುಗಳಾವುವೂ ಉಳಿರುವುವೆಂದು ಹೇಳಿರುವುದಿಲ್ಲ, ಆದರೆ ದೇಶದೊಳಗೆ ಈ ಮೂಲಕ ಉಂಟಾದ ಕ್ಷೋಭೆಯನ್ನೂ ಅಶಾಂತತೆಯನ್ನೂ ನಿವಾರಿಸುವುದು ಹೇಗೆಂದು ಅವರಿಗಿದ್ದ ಚಿಂತೆಯು ಈಗಿನ ವೈಸರಾಯರಿಗೆ ಇದೆಯೆಂದು ಹೇಳಬರುವುದಿಲ್ಲ

ಲೋರ್ಡ ಇರ್ವಿನರ ಆಡಳಿತದ ಕಾಲದಲ್ಲಿ ಇರ್ವಿನರ ಸಂಯಮದ ಕೈಯು ಕಾಣಬರುತಿತ್ತು, ಸಿವಿಲಿಯಾನರಿಗೆ ಕೈಕಟ್ಟಿದಂತಾಗಿತ್ತು, ಆ ಕಾರಣದಿಂದ ಕಾಂಗ್ರೆಸ್ಸಿನ ಮುಖಂಡರೂ ಅನುಯಾಯಿಗಳೂ ಲಾಠೀ ಪ್ರಹರಗಳಿಗೂ, ಜೈಲುಗಳಿಗೂ ತುತ್ತಾದರೂ, ಹೊರಗೆ ಬಂದಾಗ ಬ್ರಿಟಿಷ ಸರಕಾರದ ಮೇಲೆ ಯಾವ ತರದ ದ್ವೇಷಭಾವನೆಯನ್ನೂ ಇಟ್ಟುಕೊಳ್ಳಲಿಲ್ಲ, ರೌಂಡ್‌ಟೇಬಲ್ ಪರಿಷತ್ತಿಗೆ ಪ್ರತಿನಿಧಿಯನ್ನು ಕಳುಹಿಸಲು ಕಾಂಗ್ರೆಸ್ಸು ಸಮ್ಮತಿಸಿತ, ಆ ಕಾರಣದಿಂದಲೇ ಮಹಾತ್ಮಾ ಗಾಂಧಿಯವರಾದರೂ ಸ್ವಾತಂತ್ರ್ಯವಲ್ಲವಾದರೂ ಸಾಧಾರಣ ಮಟ್ಟಿನ ಸ್ವರಾಜ್ಯಕ್ಕೆ ಒಪ್ಪಿಗೆ ಕೊಟ್ಟರು. ಸ್ವಾತಂತ್ರ್ಯದ ಧ್ಯೇಯಕ್ಕೆ ಪೂರ್ಣ ಮಾತನ್ನಿತ್ತ ಮಹಾತ್ಮಾಜೀಯವರು ರೌಂಡ್‌ಟೇಬಲ್ ಪರಿಷತ್ತಿನ ನಿರ್ಬಂಧಿತ ಸೂಚನೆಗಳಿಗೆ ಸಮ್ಮತಿ ತೋರಿಯಲು ಇಳಿದುದು ಈ ಸೌಹಾರ್ದದ ರಾಜನೀತಿಯ ಸಾಮಾನ್ಯ ಪರಿಣಾಮವೆಂದು ಹೇಳಲಾಗುವುದಿಲ್ಲ ಹಿಂದೂಸ್ಥಾನವನ್ನೂ ಇಂಗ್ಲೆಂಡನ್ನೂ ಪರಸ್ಪರ ಸೌಹಾರ್ದದ ಸಹಕಾರದಲ್ಲಿ ಸೇರಿಸುವ ಈ ಉತ್ತಮ ಸಂದರ್ಭವೊಂದು ಕಳೆದುಹೋಯಿತೆಂಬುದೇ ಈಗ ಅತ್ಯಂತ ವಿಷಾದವನ್ನುಂಟುಮಾಡುವ ಘಟನೆಯಾಗಿರುತ್ತದೆ

ಪ್ರಜೆಗಳು ತಮ್ಮ ಆಶಯಗಳಿಗಾಗಿ ಹೋರಾಡುವುದಾಗಲೀ ಸರಕಾರಗಳು ತಮ್ಮ ಅಧಿಕಾರಗಳು ಸಡಿಲಾಗಿ ಅರಾಜಕತೆಯುಂಟಾಗದಂತೆ ತಮ್ಮ ಶಾಸನಗಳಿಂದ ಅಧಿಕಾರ ಲಕ್ಷಣೆ ಮಾಡುವುದಾಗಲಿ ಯಾವುದೊಂದು ರಾಷ್ಟ್ರದ ಜೀವನದ ಸಹಜವಾದ ವರ್ತನೆಗಳಾಗಿವೆ ಪ್ರಜಾ ಜನಗಳ ಚಳವಳಿವು ಹೇಗೆ ಮೇರೆ ಮೀರಿ ಹಿಂಸೆಗೆ ಸೇರಬಾರದೊ, ಹಾಗೆ ಸರಕಾರದ ಶಾಸನಗಳಾದರೂ ಪರಿಸ್ಥಿತಿಗೆ ಅವಶ್ಯವಿದ್ದ ಶಿಕ್ಷೆಗಿಂತ ಹೆಚ್ಚಿನ ಶಿಕ್ಷೆಗಳಿಂದ ಪ್ರಜೆಗಳನ್ನು ದಂಡಿಸಬಾರದೆಂಬುದೂ ಸಾಮಾನ್ಯ ನ್ಯಾಯವಾದ ರಾಜನೀತಿಯಾಗಿದೆ: ಈ ಮಾನದಿಂದ ಸರಕಾರದ ಈಗಿನ ಕೆಲಸಗಳನ್ನು ಅಳೆದರೆ, ಸರಕಾರೀ ನೌಕರರ ವರ್ತನೆಗಳು ಹಲಮಟ್ಟಿಗೆ ಮೇರೆ ಮೀರಿವೆ ಎಂದು ಹೇಳಬಹುದು.

ಮಧ್ಯಪ್ರಾಂತ್ಯದಲ್ಲಿ ಶ್ರೀ| ಅಭ್ಯಂಕರರಿಗೆ ಮೂರು ವರ್ಷದ ಸಜೆ ಮತ್ತು ೧೦ ಸಾವಿರ ರೂಪಾಯಿ ಜುಲುಮಾನೆ ವಿಧಿಸಿದ್ದು; ಏನೊಂದೂ ಆರೋಪವಿಲ್ಲದೆ, ಮುಂಬ್ಯಾ ಕ್ರೋನಿಕಲ್ ಸಂಪಾದಕರಾಗಿರುವ ಮಿ ಬ್ರೆಲ್ವಿಯವರನ್ನು ಅನುಮಾನದ ಮೇಲೆ ಒರ್ಡಿನೆನ್ಸು ಕಾನೂನಿಗೆ ಅನುಸಾರವಾಗಿ ಕೈದುಮಾಡಿ, ಕೇಡಿಯ ವರೋಪಾದಿ ಬಿಡುಗಡೆ ಮಾಡಿ, ಪೋಲೀಸರಿಗೆ ದಿನಂಪ್ರತಿ ಕಾಣಲಿಲ್ಲವೆಂದು ಪುನಃ ಕೈದುಮಾಡಿ, ಎರಡು ವರ್ಷಗಳ ಕಠಿಣ ಸಜೆಯನ್ನು ವಿಧಿಸಿದ್ದು, ಇತ್ಯಾದಿಗಳು, 'ಹಿಂದೂ' ಪತ್ರಿಕೆಯು ಹೇಳುವಂತೆ ಸರಕಾರೀ ನೌಕರರ 'ಯುದ್ಧ ಮಾನಸಿಕತೆ'ಯನ್ನು ತೋರಿಸುತ್ತದೆ

ಆದರೆ ಮದ್ರಾಸು ಪ್ರಾಂತ್ಯದ ಲಾಠಿ ಪ್ರಹರಗಳಿಗೆ ಸಮಾನವಾದುದು ಹಿಂದೂಸ್ಥಾನದ ಇತರ ಕಡೆಗಳಲ್ಲಿಯೂ ಇದೆಯೋ ಎಂಬುದಿನ್ನೂ ಗೊತ್ತಾಗಿಲ್ಲ ಸಾರ್ವಜನಿಕ ಮದರಾಸಿನ ಮುಖಂಡರೊಳಗಿನ ಸಂಘಗಳಿಗೂ ಇದರಿಂದ ನೋವಾಗಿರುತ್ತದೆ ಹೋಮ್‌ಮೆಂಬರರಾದ ಸರ್ ಮಹಮ್ಮದ ಉಸ್ಮಾನ ಸಾಹೇಬರಲ್ಲಿ ಮುಸಲ್ಮಾನ ಮುಖಂಡರೇ ಪೋಲೀಸರ ಮೇಲಿನ ಲಾಠೀ ಪ್ರಹರಗಳಿಂದ ತಮ್ಮ ಮನಸ್ಸಿನ ಮೇಲುಂಟಾದ ಕ್ಲೇಶದ ಭಾವನನ್ನು ವ್ಯಕ್ತಪಡಿಸಿದ್ದಾರೆ ಹಾಗೆಯೇ ಮದ್ರಾಸಿನ ಮಾಜಿಮಂತ್ರಿಗಳಾಗಿದ್ದ ಆರೋಗ್ಯಸ್ವಾಮಿ ಮುದಲಿಯಾರರು ಮುಂತಾಗಿ ಹಲವು ಪ್ರಮುಖರು ತಮ್ಮ ನಿಷೇಧವನ್ನು ಪ್ರಕಟಿಸಿದ್ದಾರೆ ತಿರುಪ್ಪೂರಿನಲ್ಲಿ ಲಾಠೀ ಹೊಡೆತದಿಂದ ಒಬ್ಬ ಸ್ವಯಂಸೇವಕನು ಮಡಿದುದೂ ಈ ಲಾಠೀ ಪ್ರಯೋಗದ ನಿಜವಾದ ರೂಪವನ್ನು ತೋರಿಸುತ್ತಿದೆ ಮದ್ರಾಸಿನಲ್ಲಿ ಸ್ವಯ ಸೇವಕರನ್ನು ಸ್ತ್ರೀಯರನ್ನೂ ಕೂಡ ಹೊಡೆಯುವರಂದೂ ಅವರ ಗಾಯಗಳಿಗೆ ಉಪಚಾರಮಾಡಲಿಕ್ಕೆ ಹೋದವರಿಗೆ ಕೂಡಾ ಪೋಲೀಸ್ ಲಕ್ಷ್ಯವು ತಪ್ಪುವುದಿಲ್ಲವೆಂದೂ ವರದಿ ಇದೆ ಜರ್ಮನ್ ಯುದ್ಧದಲ್ಲಿ ಕೂಡಾ ವಿದ್ದ ಪ್ರತಿಯೋಧನನ್ನು ಹೊಡೆದ ಉದಾಹರಣೆಯು ಕಾಣುವುದಿಲ್ಲ ಯುದ್ಧಕ್ಕಿಂತಲೂ ಇದು ಕಡೆಯಾಯಿತೇ?

ಹಿಂದೂಸ್ಥಾನದ—ಇಂಗ್ಲೆಂಡಿನ ಸೌಹಾರ್ದವು ಚಿರಸ್ಥಾಯಿಯಾಗಿರಬೇಕೆಂಬುದೇ ಎರಡೂ ದೇಶದ ಹಿತಚಿಂತಕರ ಆಶಯವಾಗಿದೆ ಆದರೆ ಈ ತರದ ಸಾಧನಗಳಿಂದ ಅದು ಚಿರಸ್ಥಾಯಿಯಾದೀತೇ? ಬ್ರಿಟಿಷರು ಏನ ಮಾಡಿದರೂ ಅವರನ್ನ ಮಹಾತ್ಮಾಜೀಯವರು ಪ್ರೀತಿಸಬಲ್ಲರು, ಆದರೆ ಇತರರಿಗೆ ಅಷ್ಟು ಉಚ್ಚ ಮನಸ್ಸು ಸಾಧ್ಯವಾದೀತೇ? ಮುಂದೆ ಮನಸ್ಸು ಪೂರ್ಣ ಕೆಟ್ಟುಹೋಗಲಾರದೇ?

ಸಪ್ರೂ ಜಯಕರ ಸಂಧಾನವಾದಿಗಳು ಈಗ ಏನು ಹೇಳುವರ? ರೌಂಡ್‌ಟೇಬಲ್ ಕಮಿಟಿಯೊಂದರಲ್ಲಿ ಅವರು ಸ್ವತಃ, ಮಹಾತ್ಮಾಜೀಯವರಿಂದ ರೌಂಡ್‌ಟೇಬಲ್ ಪರಿಷತ್ತಿಗೆ ಪ್ರಯೋಜನವಾಗಲಿ ವೆಂದು ಮೊದಲು ಹೇಳಿದವರು ಈಗಿನ ಈ ಕಠಿಣ ಧೋರಣೆಯಲ್ಲಿ ಆ ಕಮಿಟಿಗಳಿಂದ ಪ್ರಯೋಜನವಾದೀತೆಂದು ನೆನಸುವರ? ಇರ್ವಿನ ಆಡಳಿತದಲ್ಲಿ, ಲೇಬರ್ ಸರಕಾರದ ಸೌಹಾರ್ದದಲ್ಲಿ ರೌಂಡ್‌ಟೇಬಲ್ ಪರಿಷತ್ತು ಮಹಾತ್ಮಾಜೀಯವರಿಲ್ಲದೆ ಕೃತಕಾರ್ಯವಾಗಲಾರದಾದರೆ, ಚರ್ಚಿಲ್‌ರಂತಹರ ಪ್ರೇರಣೆಯಲ್ಲಿ ಸರ್ ಸಾಮ್ಯುವೇಲ್‌ರ ತರಹ ಸಾಮ್ರಾಜ್ಯವಾದಿಗಳ ಅಧಿಕಾರದಡಿಯಲ್ಲಿ ದೇಶದ ಪ್ರಮುಖ ಪ್ರತಿನಿಧಿಗಳು ಜೈಲಿನಲ್ಲಿರುವಾಗ ಆ ಕಮಿಟಿಗಳಿಂದ ದೇಶಕ್ಕೆ ಲಾಭವಾದೀತೇ?

ವಿದೇಶ ವರ್ತಮಾನ.

ಮಹಾತ್ಮಾ ಗಾಂಧಿಯವರ ದಸ್ತಗಿರಿಯನ್ನು ನಿಷೇಧಿಸುವು ದಕ್ಕಾಗಿ ಪ್ರಪಂಚದ ಎಲ್ಲಾ ರಾಷ್ಟ್ರಗಳು ಬೇದಸೂಚನೆಯನ್ನು ಮಾಡಬೇಕೆಂದು ಫ್ರಾನ್ಸಿನ ಸುಪ್ರಸಿದ್ಧ ತಾತ್ವಿಕ ಇದ ರೋಮನ್ ರೋಲೆಂಡರು 'ಲಂಡನಿನ ಇಂಡಿಯಾ ರಿವ್ಯೂ' ಎಂಬ ಪತ್ರಿಕೆಯಲ್ಲಿ ಸೂಚಿಸಿದ್ದಾರೆ

ರೌಂಡ್‌ಟೇಬಲ್ ಸಮಿತಿಯ ಸದಸ್ಯರ ಹೆಸರುಗಳು ಪ್ರಕಟೀಕೃತವಾಗಿವೆ ಲೋರ್ಡ್ ಲೋಥಿಯನ್ ಮೊದಲಾದವರೇ ಇದರ ಸದಸ್ಯರು ರಾಜ್ಯಾಂಗರಚನಾ ಸಂಬಂಧವಾಗಿ ಇಂಗ್ಲಾಂಡಿನಿಂದ ೨೨ ೧೪ನೇ ದಿನ ಹೊರಟಿರುವರು

- ಗಾಂಧಿಜೀಯವರ ಬಂಧವಿಮುಕ್ತಿ ಮಾಡಿ ಹಿಂದೀಯ ಸಮಸ್ಯೆಗೆ ಸಹಕಾರವನ್ನು ತೋರಿಸಬೇಕೆಂದು ಅಮೇರಿಕದ ೧೦೩ ಪ್ರಮುಖರು ಒಂದು ಅರಿಕೆಯನ್ನು ತಂತಿ ಮೂಲಕ ಪ್ರಧಾನ ಮಂತ್ರಿಯವರಾದ ಮೆಕ್‌ಡೊನಾಲ್ಡರಿಗೆ ಕಳುಹಿರುವರು ಈ ಅರಿಕೆಯು ಬಿಷಪ್ ಜೆ. ಮೆಕೊನ್ನೆಲ್, ಬಿಷಪ್ ಎಫ್ ಜಿ. ಫಿಷರ್ ಮತ್ತು ರೇವ್ಹ ಸ್ಟೀವನ್ಸ ವೈಸ ಎಂಬವರಿಂದಲೂ ಸಹಿಮಾಡಲ್ಪಟ್ಟಿರುತ್ತದೆ.

ಲಂಡನಿನ ಕೊಮನ್‌ವೆಲ್ತ್ ಒಫ್ ಇಂಡಿಯಾ ಲೀಗ್ ಎಂಬ ಸಂಸ್ಥೆಯು ತನ್ನ ಹೆಸರನ್ನು 'ಇಂಡಿಯಾ ಲೀಗ್' ಎಂಬುದಾಗಿ ಬದಲಾಯಿಸಿ, ಹಿಂದೀಯರಿಗೆ ಬೇಕಾದ ಸ್ವರಾಜ್ಯವನ್ನು ಒದಗಿಸಿ ಕೊಡಲು ಸಹಕರಿಸಬೇಕೆಂದು ನಿರ್ಧರಿಸಿರುತ್ತದೆ ಲೋರ್ಡ್ ಸೆಂಕಿಯವರು ಸರಕಾರಕ್ಕೆ ರಾಜಿನಾಮೆ ಕೊಡಬೇಕೆಂದೂ, ಸರಕಾರದ ಹಿಂದೀಯ ಧೋರಣೆಯಲ್ಲಿ ಲೇಬರ್ ಪಕ್ಷವು ಸಹಕರಿಸದೆ, ತನ್ನ ರೌಂಡ್‌ಟೇಬಲ್ ಪ್ರತಿನಿಧಿಗಳನ್ನು ಹಿಂತೆಗೆದುಕೊಳ್ಳಬೇಕೆಂದೂ, ಎಲ್ಲಾ ಕೇಂದ್ರಗಳಲ್ಲೂ ಖೇದಸೂಚಕ ಸಭೆಗಳು ಜರಗಬೇಕೆಂದೂ ಪ್ರಕಟಿಸಿರುತ್ತದೆ.

ಒಳದೇಶ ವರ್ತಮಾನ.

ಕಲ್ಕತ್ತದಲ್ಲಿ ಕಳೆದ ೩೩ ೧೬ರಲ್ಲಿ ಜರಗಲಿದ್ದ ಖಾದಿ ಪ್ರದರ್ಶನ ದಿನ ಆ ಪ್ರದರ್ಶನದ ಸೆಕೆಟರಿಯವರಾದ ... ಇ ಕಾರ್ ಎಂಬವರು ಮರಣ ಹೊಂದಿದರು ಕೂಡಲೇ ಪ್ರದರ್ಶನವು ಮುಚ್ಚಲ್ಪಟ್ಟಿತು

ಕಲ್ಕತ್ತದಲ್ಲಿ ಭಯಸೂಚಕ ಕೈ ಪತ್ರಿಕೆಗಳು ಪ್ರಕಟವಾಗುತ್ತಲಿವೆ ಒಂದು ನೋಟೀಸಿನಲ್ಲಿ 'ಪತಿ ಸ್ಪರ್ಧೆ' ಎಂಬ ಶಿರೋನಾಮೆಯು ಒಂದ ಲೇಖನವಿತ್ತು ವಿದ್ಯಾರ್ಥಿಗಳು ಅನುಸರಿಸಬೇಕಾದ ಪಠ್ಯ ಸೂಚನೆಗಳು ಅದರಲ್ಲಿ ಬರೆಯಲ್ಪಟ್ಟಿದ್ದು ಬರೆದಾತನು 'ಪರಿಶೋಧನಾಧ್ಯ ವ ಸುಸ್ಮಿನೆಂದು ಸಹಿ ಹಾಕಲ್ಪಟ್ಟಿತ್ತು

— ಸಂಯುಕ್ತ ಪ್ರಾಂತ್ಯದ ಗವರ್ನರರು ಅಲ್ಲಿಯ ವರ್ತಕರ ಸಭೆಯೊಂದನ್ನು ಉದ್ದೇಶಿಸಿ ಶಾಸನಭಂಗ ಚಳವಳಿಯಿಂದಲೂ ವಿದೇಶಿ ವಸ್ತು ಬಹಿಷ್ಕಾರದಿಂದಲೂ ಕಾಂಗ್ರೆಸ್ಸಿನ ಚಳವಳಿಯಿಂದಲೂ, ಪಿಕೆಟಿಂಗ್ ನಿಂದಲೂ ಸ್ವದೇಶದ ವರ್ತಕರಿಗೆ ಲೇಶ ನಷ್ಟವಿದೆಯೆಂದೂ ಅವುಗಳಿಂದ ಶಾಂತಿಭಂಗವೂ ವ್ಯಾಪಾರಭಂಗವೂ ಆಗುತ್ತದೆಂದೂ ಆದುದರಿಂದ ಸ್ಥಳ ವರ್ತಕರು ಅಂತಹ ಚಳವಳಿಯನ್ನು ಮುರಿಯುವಂತೆ ಯುಕ್ತಿ ದೇಶದ ಶಾಂತಿಯು ನೆಲೆಗೊಳ್ಳುವಂತೆ ಮಾಡಬೇಕೆಂದೂ ಬೋಧನ ಮಾಡಿದರು

ಓರ್‌ಪುರದಲ್ಲಿ ಒಂದು ಹಳ್ಳಿಯಲ್ಲಿ ಒಬ್ಬ ಧನಿಕನ ಮನೆಗೆ ಮೂರು ಮಂದಿಗಳು ಬೆಂಕಿ ಕೊಡಲು ಯತ್ನಿಸಿದರು ಅವರನ್ನು ಪೋಲೀಸರು ಹಿಡಿದು ಬಂಧಿಸಿದರು ಅವರನ್ನು ಸೆರೆಮನೆಗೆ ಕೊಂಡೊಯ್ಯಲಿರುವಾಗ ಸುಮಾರು ೧೨೦೦೦ ಮಂದಿಗಳು ಒಟ್ಟಾಗಿ ಬಂದು ಪೋಲೀಸರ ಮೇಲೆ ಬಿದ್ದು ಬಂಧಿಸಲ್ಪಟ್ಟವರನ್ನು ಬಿಡಿಸಿ ಬಿಟ್ಟರು ಕೋಪೋದ್ರೇಕದಿಂದಿದ್ದ ಜನ ಸಂದಣಿಯು ಲಾಠಿ ಕತ್ತಿ ಕೈದುಗಳನ್ನು ಹಿಡಿದುಕೊಂಡೇ ಬಂದಿತ್ತು.

— ಮೈಸೂರಿನ ಸಂಸ್ಕೃತ ಶಾಸ್ತ್ರದ ವಿದ್ವಾಂಸರಾದ ಶ್ರೀಯುತ ಕೆ ... ಸುದೇವಾಚಾರ್ಯರ ಸನ್ಮಾನ ಸಂಘದವರ ಶ್ರೀ ಆಚಾರ್ಯರಿಗೆ ಇದೇ ತಿಂಗಳ ೩ ... ನೇ ಸೋಮವಾರ ಸಾಯಂಕಾಲ ೬ ಗಂಟೆಗೆ ಮೈಸೂರು ಟೌನ್ ಹೋಲಿನಲ್ಲಿ ಮೈಸೂರ ನಾಗರಿಕ ಪರವಾಗಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರ ಹಸ್ತದಿಂದ ರತ್ನ ಖಚಿತವಾದ ಕಂಠಾಭರಣವನ್ನು ಕೊಡಿಸುವರು ವೃದ್ಧ ಪಿತಾಮಹ ಶ್ರೀ ... ವೆಂಕಟಕೃಷ್ಣಯ್ಯನವರು ಸನ್ಮಾನ ಸಂಘದ ಅಧ್ಯಕ್ಷಸ್ಥಾನವನ್ನಲಂಕರಿಸುವರು

ಬರ್ಮಾ ದಂಗೆಯು ಕೊನೆಗೊಂಡಿರುವುದಿಲ್ಲ ಲೊನ್ ... ಎಂಬ ಮುಂದಾಳುವನ್ನು ಹಿಡಿದಿರುವರು ... ಜಿಲ್ಲೆಯಲ್ಲಿ ದಂಗೆಯಾಗುತ್ತಿದೆ ... ಎಂಬೊಬ್ಬ ಮುಂದಾಳು ... ವನ ಹೆಂಡತಿಯನ್ನೂ ಬಹಳ ಶೋಧನೆ ಮಾಡಿ ಬಂಧಿಸಿದ್ದರ ... ಸೈನಿಕರು ದಕ್ಷಿಣಗಳನ್ನು ಕಾಯುತ್ತಿರುವರು.

— ಸರಕಾರೀ ಉದ್ಯೋಗಸ್ಥರು ಕಾಂಗ್ರೆಸ್ ಚಳವಳಿಕ್ಕೆ ಯಾವ ಸಹಾನುಭೂತಿಯನ್ನು ತೋರಿಸಬಾರದಾಗಿ ಸರಕಾರವು ಒಂದು ಸರ್ಕ್ಯುಲರನ್ನು ಹೊರಡಿಸಿದೆಯೆಂದು ಪ್ರಿಯೆಂದ್ರ ಮೂಲದಿಂದೊಂದು ವರ್ತಮಾನದೆ

ಮೈಸೂರು ಮಹಾರಾಜರು ೨೩ ೧೬ನೇ ದಿನ ಶಿವಮೊಗ್ಗಕ್ಕೆ ತಲುಪಿರುತ್ತಾರೆ ಅವರನ್ನು ವಿಜಾನರೂ ಇತರ ಸರಕಾರೀ ಉದ್ಯೋಗಸ್ಥರೂ ಸ್ವಾಗತೀಕರಿಸಿದರು.

ಒಸಾರೋಪದ ಸಂಬಂಧ ಇಂಗ್ಲೆಂಡಿಗೆ ತೆರಳಿದ್ದ ಶ್ರೀಯುತ ಜೆ ಎಂ ಸೇನಗುಪ್ತರು ೨೩ ೧೯ನೇ ದಿನ ಮುಂಬಾಯಿಗೆ ಗೇಂಜ್ ಜಹಜಿನ ಮೂಲಕ ತಲಪಿದರು ಅವರು ಸ್ಟೀಮರಿನಲ್ಲಿರುವಾಗಲೇ ಅವರನ್ನು ಬಂಧಿಸಲು ಪೋಲೀಸರು ಸಿದ್ಧತೆ ಮಾಡಿದ್ದರು ಆ ಅಟೋಚನೆಗೆ ಸ್ಟೀಮರಿನ ಕೆಪ್ಟನನು ಒಪ್ಪಲಿಲ್ಲ ಕೊನೆಗೆ ಅವರು ಜಹಜಿನಿಂದ ಕೆಳಗಿಳಿಯುತ್ತಲೇ ಅವರನ್ನು ಬಂಗಾಳ ರೆಗ್ಯುಲೇಶನಿನ ಮೂಲಕ ಕೈದು ಮಾಡಲಾಯಿತು. ಮುಂಬಾಯಿಯ ಮೊದಲಾದ ಪ್ರಾಂತ್ಯಗಳಲ್ಲಿ ಪರವಾಗಿ ಅಚಿಡಿಸಲ್ಪಟ್ಟಿದೆ ಶ್ರೀಯುತರನ್ನು ಪೂನೆಗೆ ಕೊಂಡೊಯ್ದಿರುವರು

ದಕ್ಷಿಣ ಕನ್ನಡ.

ಸ್ವೀಕಾರ

ಮಂಗಳೂರಿನ ಸುಪ್ರಸಿದ್ಧ ದಿ ಪ್ರಾವಿನ್ಶಿಯಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಇವರು ಕಳುಹಿಸಿರುವ ಈ ವರುಷದ ಕೆಲೆಂಡರನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ

ಉಡುಪಿಯ ಶ್ರೀಯುತ ಎಸ್ ಯು ಪಣಿಯಾಡಿಯವರಿಂದ ಪ್ರಕಟಿಸಲ್ಪಟ್ಟ ಆಂಗೀರಸ ಸಂವತ್ಸರದ ತುಳುನಾಡ್ ತಿಂಗಳ ಪಂಚಾಂಗ ಬೆಲೆ [illegible] ಉಪಯುಕ್ತವಾದ ಪಂಚಾಂಗವೊಂದು ನಮ್ಮ ಹಸ್ತಗತವಾಗಿದೆ ಸರ್ವರಿಗೂ ಇದು ಅತ್ಯುಪಯುಕ್ತ ಪಂಚಾಂಗವೆಂಬುದರಲ್ಲಿ ಸಂದೇಹವಿಲ್ಲ

ಬೆಂಗಳೂರಿನ ಎನ್ ಡಿ ಲಕ್ಷ್ಮಣಗೌಡ ಬಿ. ಎ. ಇವರಿಂದ ಪ್ರಕಾಶಿತವಾದ "ಪ್ರೇಮ ಪಾಶ"ವೆಂಬ ಒಂದು ಉತ್ತಮವರ್ಗದ ಸಣ್ಣ ಕಥೆ ಪುಸ್ತಕವು ನಮ್ಮ ಹಸ್ತಗತವಾಗಿದೆ ಸಮಯವೂ ಶಾಂತಿಯೂ ಜನರಲ್ಲಿ ಕಡಿಮೆಯಾಗಿರುವ ಈ ಸಮಯದಲ್ಲಿ ಇಂತಹ ಚಿಕ್ಕ ಮತ್ತು ಸುಲಲಿತವಾದ ಕಥೆಗಳಿಗೆ ಸುಸ್ವಾಗತ ಇದರ ಬೆಲೆ [illegible] ಇದರಿಂದಾಗಿ ಸಮಾಜದ ಒಂದು ಕೊರತೆಯು ಬೆಳಕಿಗೆ ಬಂದಿದೆ ಇದರ [illegible] ಲೇಖಕರು ಇನ್ನು ಇಂತಹ ಕಥೆಗಳನ್ನು ಬರೆದು ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಸಲೆಂದು ಹಾರೈಕೆ

ಮಂಗಳೂರು:— ಕಳೆದ ಸೋಮವಾರ ಜರಗಲಿದ್ದ ಇಲ್ಲಿನ ಮುನಿಸಿಪಾಲಿಟಿಯ ಸಭೆಯು ಸಭ್ಯರ [illegible] ಉಪಸ್ಥಿತಿಯು ನೆಟ್ಟಗಿಲ್ಲದಿರುವುದರಿಂದಾಗಿ ಮುಂದಕ್ಕೆ ಹಾಕಲ್ಪಟ್ಟಿದೆಯೆಂದು ಶ್ರೀ ಕಾರಂತರಿಂದ ಬಂದ ಅಭಿಮತವನ್ನು ಶ್ರೀ ಆರ್. ಡಿ [illegible] ಸಮರ್ಥಿಸಿ ಸಭೆಯು ಬರುವ ಸೋಮವಾರಕ್ಕೆ ಹಾಕಲ್ಪಟ್ಟಿದೆ

ಕುಂಬಳೆಯ ಶ್ರೀ ರಾಜಗೋಪಾಲ ಭಟ್ಟರು ರಾಜದ್ರೋಹಾತ್ಮಕವಾಗಿ ಮಾತಾಡಿದರೆಂಬ ಆಪಾದನೆಯ ಮೇರೆಗೆ ಅವರನ್ನು [illegible] ಮಾಡಿ ೬ ತಿಂಗಳ ಸಜೆ ವಿಧಿಸಲಾಯಿತು.

ನಮ್ಮ ಸಂಸ್ಥಾನದ ವಿದ್ಯಾಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿ ರೆಡ್ಡಿಯವರು ತಾ ೧೬ ೧ ೩೭ನೇ ಸಂಜೆಗೆ ಇಲ್ಲಿಗೆ ಬಂದು ೧೭—೧—೩೭ ದಿನ ಊರ ವಿ [illegible] ಗಳನ್ನು ಸಂದರ್ಶಿಸಿ ಹಿಂತಿರುಗಿದರು ತಾ ೧೮ನೇ ದಿನ ಇಲ್ಲಿಯ ಸೈಂಟ್ ಎಗ್ನೆಸ್ ಕಾಲೇಜಿನ ವಾರ್ಷಿಕೋತ್ಸವದ ಅಧ್ಯಕ್ಷಸ್ಥಾನವನ್ನು ವಹಿಸಿದರು. ಮಂಗಳವಾರ ಬೆಳಗ್ಗೆ ಎಂಟು ಗಂಟೆಗೆ ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಜರಗಿದ ಶಿಕ್ಷಣ ಪ್ರದರ್ಶನವನ್ನು ತೆರೆದರು. ಸೋಮವಾರ ದಿನ ಡಿಸ್ಟ್ರಿಕ್ಟ್ ಕ್ಲಬ್ಬಿನಲ್ಲಿ [illegible] ದಲ್ಲಿ ಮಿ ಗ್ರೇಯವರ ಭಾವಚಿತ್ರವನ್ನು ಅನಾವರಣ ಮಾಡುವ ಸಮಾರಂಭವೂ ಶ್ರೀಯುತರ ಅಧ್ಯಕ್ಷತೆಯಲ್ಲಿಯೇ ಜರಗಿತು.

ಸ್ಥಳೀಕ ಶ್ರೀ ಕೃಷ್ಣ ಸಿನೆಮಾ ಕಂಪೆನಿಗೆ ಶಾಶ್ವತ ಮಾತನಾಡುವ ಚಲಚಿತ್ರವು ಬರಲಿದೆ ಪ್ರೇಕ್ಷಕರಿಗೆ ಅನುಕೂಲವಾಗುವಂತೆ [illegible] ವಿಶಾಲತೆಯನ್ನೂ ಮಾಡಲಿರುವರೆಂದು ತಿಳಿದು ಬರುತ್ತದೆ

ಶ್ರೀಯುತ ರಂಗರಾವ್ ಕಲಟೇರಿಕರ್ ಬಿ ಎ ಎಲ್ ಎಲ್ ಬಿ ಇವರು ಕುಂದಾಪುರಕ್ಕೆ [illegible] ಶಾಸನೋಲ್ಲಂಘನೆ ಮಾಡಿದರೆಂದು ೬ ತಿಂಗಳ ಶಿಕ್ಷೆ ವಿಧಿಸಲಾಯಿತು.

ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟು ಶಿರಸ್ತೇದಾರರಾದ ಶ್ರೀಯುತ ಪಿ ಎಸ್ ಭಂಡಾರ್‌ಕಾರರವರಿಗೆ ರಾವ್ ಸಾಹೇಬ್ ಬಿರುದು ದೊರೆತ ಸಂಬಂಧವಾಗಿ ಕಳೆದ ಆದಿತ್ಯವಾರ ಶ್ರೀ ಬೆಳ್ಳಿ ಸುಬ್ಬಯ್ಯ ಶೆಟ್ಟರ ಪ್ರೇರಣೆ ಮೇರೆಗೆ ದಿವಾನ್ ಬಹದ್ದೂರ್ ಎಸ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನಲ್ಲೊಂದು ಸಭೆ ಸೇರಿತು ಟೀಪಾರ್ಟಿ, ಭಾಷಣ, ಗುಣಕಥನವಾದ ಮೇಲೆ ಸಭಾಂತ್ಯವಾಯಿತು

ತಾರೀಕು ೧೬—೧—೩೭ನೇಗೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೨೯ ಮರಣಗಳೂ ೩೩ ಜನನಗಳೂ ಆದವು

ಇದೇ ತಿಂಗಳ ತಾ ೨೪ನೇ ಆದಿತ್ಯವಾರ ಬೆಳಗ್ಗೆ ೭ ಗಂಟೆಗೆ ಡೊಂಗರಕೇರಿಯಲ್ಲಿರುವ ಬ್ರಹ್ಮ ಮಂದಿರದಲ್ಲಿ ದೇವಾರಾಧನೆ ಮತ್ತು ಮಹರ್ಷಿ ದೇವೇಂದ್ರನಾಥ ಠಾಗೋರರ ಮರಣದ ದಿನಾಚರಣೆ ಸಂಬಂಧ ಶ್ರೀಮತಿ ಸ್ವಪ್ನವತಿ ಬಾಯಿ ಸುರೇಂದ್ರನಾಥರು ಉಪನ್ಯಾಸ ಕೊಡುವರು ಎಲ್ಲರಿಗೂ ಸುಸ್ವಾಗತವಿದೆ

ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡಿನ ಸದಸ್ಯರ ಸಾಮಾನ್ಯ ಸಭೆಯೊಂದು ತಾ ೩೦ನೇ ದಿನ ಶನಿವಾರ ಹಿಂಜೆ ೪ ಘಂಟೆಗೆ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಜರಗುವುದು

ಇಲ್ಲಿಯ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ವಾರ್ಷಿಕೋತ್ಸವವು ಇದೇ ತಾ. ೨೪ನೇ ಆದಿತ್ಯವಾರ ಸಂಜೆ ಘಂಟೆ ೫ಕ್ಕೆ ಡಿಸ್ಟ್ರಿಕ್ಟ್ ಜಡ್ಜರಾದ ಶ್ರೀ ಎಸ್. ಚಂದ್ರಶೇಖರ ಅಯ್ಯರರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು. ಈ ಸಂದರ್ಭದಲ್ಲಿ 'ಸಂಶಯ ಪಿಶಾಚಿ' ಎಂಬ ನಾಟಕ ಮತ್ತು ಇತರ ಪ್ರಹಸನಗಳಿರುವುವು

ಮಾನ್ಯ ಮದ್ರಾಸ್ ಸರಕಾರದ ವಿದ್ಯಾಖಾತೆಯ ಮಂತ್ರಿವರ್ಯರಾದ ಶ್ರೀ. ನಾಮದಾರ್ ಎಸ್. ಕುಮಾರಸ್ವಾಮಿ ರೆಡ್ಡಿಯಾರ್ ಇವರಿಂದ ತಾ. 19ನೇ ದಿನ ತೆರೆಯಲಾದ

ದ. ಕ. ಜಿಲ್ಲಾ 2ನೇಯ ಶಿಕ್ಷಣ ಪ್ರದರ್ಶನ.

ಈ ವಸ್ತು ಪ್ರದರ್ಶನವು ಇದೇ ತಿಂಗಳ ತಾರೀಕು ೧೯ನೇ ದಿವಸ ಬೆಳಗ್ಗೆ ೮ ಗಂಟೆಗೆ ತೆರೆಯಲ್ಪಡುತ್ತದೆಂದು ನಿರ್ಣಯಿಸಲ್ಪಟ್ಟಿತ್ತು ಆದರೆ ಮಾನ್ಯ ವಿದ್ಯಾಮಂತ್ರಿಯವರು ಬರುವಾಗ ಸ್ವಲ್ಪ ವಿಳಂಬವಾದುದರಿಂದ ೮ ಗಂಟೆಗೆ ತೆರೆಯುವ ಸಮಾರಂಭವು ಜರಗಿತು ಇವರೊಡನೆ ಕೈಗಾರಿಕೆಯ ಡೈರೆಕ್ಟರವರೂ, ಪ್ರೈವೇಟ್ ಸೆಕ್ರೆಟರಿಯವರೂ ಬಂದಿದ್ದರು ಶಾಲೆಯ ಗೇಟಿನ ಬಳಿ ಬಂದೊಡನೆ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಅಧ್ಯಕ್ಷರೂ ಜಿಲ್ಲಾ ವಿದ್ಯಾ ಇಲಾಖಾ ಆಫೀಸರರೂ, ಟ್ರೈನಿಂಗ್ ಶಾಲೆಯ ಮುಖ್ಯ ಉಪಾಧ್ಯಾಯರಾದ ರಾ ಉಳ್ಳಾಲ ಮಂಗೇಶರಾಯರೂ ಇವರನ್ನು ಸ್ವಾಗತೀಕರಿಸಿ, ಮೊದಲೇ ಅಲಂಕರಿಸಲ್ಪಟ್ಟ ಸಭಾ ಮಂಟಪಕ್ಕೆ ಅವರನ್ನು ಕರೆದೊಯ್ಯುವಾಗ ಟ್ರೈನಿಂಗ್ ಶಾಲೆಯ ಸ್ಕೌಟು ದಳದವರು ವಂದಿಸಿದರು ಮಾನ್ಯ ಮಂತ್ರಿಗಳು ಆಗ್ರಾಸನವನ್ನು ವಹಿಸಿದೊಡನೆ ಪ್ರಾರ್ಥನೆಯಾ [illegible] ಎಜ್ಯುಕೇಶನಲ್ ಕೌನ್ಸಿಲು ಅಧ್ಯಕ್ಷರು ಕಳೆದ ಎಕ್ಸಿಬಿಶನನ್ನು [illegible] ಜರಗಿದ ನಂತರ [illegible] ಬೇರೆ ಕಾರಣಗಳಿಂದ ಅದನ್ನು ಜರಗಿಸಲು ಸಾಧ್ಯವಾಗದೆ ಈಗ ರಾ. ಉಳ್ಳಾಲ ಮಂಗೇಶರಾಯರ ಸಾಹಸದಿಂದ ಈ ವರ್ಷದ ವಸ್ತು ಪ್ರದರ್ಶನವನ್ನು ಜರಗಿಸಲು ಸಾಧ್ಯವಾಯಿತೆಂದು ಹೇಳಿ ಪ್ರದರ್ಶನವನ್ನು ತೆರೆಯಲು ಮಂತ್ರಿಯವರನ್ನು ಕೇಳಿಕೊಂಡರು ಮಂತ್ರಿವರ್ಯರು ಪ್ರದರ್ಶನವನ್ನು ತೆರೆಯುವ ಮೊದಲು, ಇಂತಹ ವಸ್ತು ಪ್ರದರ್ಶನವನ್ನು ಜರಗಿಸುವುದರಿಂದ ವಿದ್ಯಾಭಿವೃದ್ಧಿಯು ಹಲವು ರೀತಿಯಲ್ಲಿ ಹೊಂದುತ್ತದೆಂದೂ ಇದನ್ನು ತೆರೆಯಲು ತನ್ನನ್ನು ಕೇಳಿಕೊಂಡುದಕ್ಕಾಗಿ ತನಗೆ ಬಹಳ ಸಂತೋಷವಾಯಿತೆಂದೂ ಹೇಳಿ ಪ್ರದರ್ಶನವನ್ನು ತೆರೆದರು.

ಪ್ರದರ್ಶನ.

ಒಂದು ಹೋಲಿನಲ್ಲಿ ಗವರ್ನಮೆಂಟ್ ಕಾಲೇಜು ಸೈಂಟ್ ಎಲೋಶಿಯಸ್ ಕಾಲೇಜು ಕ್ರಿಶ್ಚನ್ ಹೈಸ್ಕೂಲ್ ಉಡುಪಿ ಬೋರ್ಡ್ ಹೈಸ್ಕೂಲ್ ಮುಂತಾದುವು ಇವರ [illegible] ಸಂಬಂಧವಾದ ಹವಾಮಾನ ಸ್ಟೇಶನಿನ ರೀತಿಯಲ್ಲಿ ಎತ್ತರದ ಯಂತ್ರಗಳನ್ನು ಮಾಡಿಟ್ಟಿದ್ದರು ಒಂದು ಗಾಜಿನ ಪಾತ್ರೆಯ ನೀರಿನಲ್ಲಿ ವಿಮಾನಗಳನ್ನು ಹಾಕಿ ಎಕ್ಸ್‌ಪೆರಿಮೆಂಟ್ ಮಾಡಿಟ್ಟಿದ್ದ [illegible] ಮಿಶನ್ ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ವೆಂಕಟ್ರಮಣನವರು ಹಾರುವ ರೀತಿಯ ವಿಮಾನವನ್ನು ತಯಾರಿಸಿ ತಂದು ಅದು ಹಾರುವ ಕ್ರಮಗಳನ್ನು ತೋರಿಸುತ್ತಿದ್ದರು ಅದೇ ಶಾಲೆಯ ಶ್ರೀ ಎ ಬಿ [illegible] ದರ್ಶನಗೆ [illegible] ಮಾಡುವಂತಹ [illegible] ಚಕ್ರಗಳನ್ನು [illegible] ತಯಾರಿಸಿ ತಂದಿದ್ದರು ಇತರ ಹೈಸ್ಕೂಲುಗಳ ಚಾರ್ಟುಗಳೂ ಮಾಡೆಲುಗಳೂ ಚಲೋದಾಗಿದ್ದವು [illegible] ಹೈಸ್ಕೂಲಿನವರು ಮಗ್ಗದಲ್ಲಿ ಕೂರೆದು ತಯಾರಿಸಿದ ಕೆಲಸಗಳು ಚಲೋದಾಗಿದ್ದವು ಸೈಂಟ್ ಎಗ್ನೆಸ್ ಹುಡುಗಿಯರ ಹೈಸ್ಕೂಲಿನ ಕಸೂತಿ ಕೆಲಸಗಳೂ ಚರಿತ್ರಾ ಸಂಬಂಧವಾದ ಪಟಗಳೂ, ಅಜ್ಜನು ಸೃಷ್ಟಿಸಿದ [illegible] ಅರೆ [illegible] ಅಂದವಾಗಿದ್ದವು

೨ನೇ ಹೋಲಿನಲ್ಲಿ ಹುಡುಗಿಯರ ಹೈಸ್ಕೂಲುಗಳ (ಮುಖ್ಯವಾಗಿ ಕೆಥೊಲಿಕ ಶಾಲೆಗಳ) ಕಸೂತಿ ಕೆಲಸಗಳು, ಚಾರ್ಟುಗಳು, ಪಟಗಳು ಗಮನಗಳು ಪ್ರತಿ ದಿವಸ ಪೂಜೆಯ ಸಮಯಕ್ಕೆ ಹಾಕಿಕೊಳ್ಳುವ ಅಂಗಿಗಳ ಜರಿಯ ಕೆಲಸವು ಎಲ್ಲ ಮನಸ್ಸನ್ನು ಆಕರ್ಷಿಸುತ್ತಿದ್ದವು ಕಾಗದದಿಂದ ತಯಾರಿಸಿದ ನಾನಾ ತರದ ದಾಸವಾಳ ಹೂವುಗಳೂ, ಇತರ ಹೂವುಗಳೂ ತಾಜಾ ಹೂವಿನಂತೆ ಇದ್ದುವು ಕೇಂದ್ರ [illegible] ತಯಾರಿಸಿದ ಪನ್ನೇರಳೆನ ಗೊಂಚಲು, ದ್ರಾಕ್ಷೆ ಗೊಂಚಲು ಜಂಬು ನೇರಳೆ, ಒಂದು ಕತ್ತಲೆ ಹಣ್ಣು ಕಾಫಿ ತುಂಬಿಸಿದ ಕಪ್ ಮತ್ತು ಸೋಸರ್, ಸ್ಟೀಲ್ ಗಳಲ್ಲಿಟ್ಟ ಬಾಳೆಹಣ್ಣು ಮುತ್ತಿನ ಚೂರಿನ ಉಂಡೆ ಕಾಗದದಲ್ಲಿ ಇವುಗಳನ್ನು ನೋಡಿದವರು ತಿಂದುಬಿಡುವರೋ ಎಂಬಂತೆ ಕಂಗೊಳಿಸುತ್ತಿದ್ದುವು ಕಸೂತಿ ಕೆಲಸಗಳು ಬಹಳ ಉತ್ಕೃಷ್ಟವಾಗಿದ್ದುವು

೩ನೇ ಹೋಲಿನಲ್ಲಿ ನಾನಾ ತರದ ಮೃಗಗಳ ತಲೆ ಎಲುಬುಗಳನ್ನೂ ಒಂದು ತಿಂಗಳಿನಿಂದ ೯ ತಿಂಗಳ ವರೆಗಿನ ಗರ್ಭಗಳನ್ನೂ ಪ್ರದರ್ಶಿಸಿದ್ದರು

೪ನೇ ಹೋಲಿನಲ್ಲಿ ಟ್ರೈನಿಂಗ್ ಶಾಲೆಯಲ್ಲಿ ಕಲಿಯುತ್ತಿರುವ ಉಪಾಧ್ಯಾಯರುಗಳು ತಯಾರಿಸಿದ ಚಾರ್ಟುಗಳೂ ಮಾಡೆಲುಗಳೂ ಶ್ರೀ. ತಮ್ಮಯ್ಯರೆಂಬ ವಿದ್ಯಾರ್ಥಿಯು ತಯಾರಿಸಿದ ಫಾರ್ಮ್‌ಯಾರ್ಡ [illegible] ಮಾಡೆಲುಗಳೂ, ಮರದ ಕೆತ್ತನೆಯ ಕೆಲಸಗಳೂ ನೋಡುವವರ ಮನಸ್ಸನ್ನು ಆಕರ್ಷಿಸುವಂತಿದ್ದುವು

೫ನೇ ಹೋಲಿನಲ್ಲಿ ಲೊಂಗ್‌ಮನ್ಸ್ ಕಂಪೆನಿ ಬಾಸೆಲ್ ಮಿಶನ್ ಪ್ರೆಸ್ಸಿನ ಚಾರ್ಟುಗಳೂ, ಗ್ಲೋಬುಗಳೂ, ದೇಹಶಾಸ್ತ್ರದ ಮಾಡೆಲುಗಳೂ ನವೀನ ರೀತಿಯ ತಾಜಾ ವಸ್ತುಗಳಂತಿದ್ದುವು ಬಾಸೆಲ್ ಮಿಶನಿನ [illegible] ಚಾರ್ಟುಗಳೂ ಕನ್ನಡ ಗ್ಲೋಬೂ ಹೊಸದಾಗಿ ರಚಿಸಲ್ಪಟ್ಟವಾಗಿವೆ ಲೊಂಗಮನ್ಸ್ ಕಂಪೆನಿಯ ಇಂಡಿಯದ ಉತ್ಪತ್ತಿಗೆ [illegible] ಮುಂತಾದುವುಗಳನ್ನು ವಿವರಿಸುವ ಮಾಡೆಲುಗಳು ಶಾಲೆಗಳಲ್ಲಿ ಉಪಯೋಗಿಸಲ್ಪಡಲು ಯೋಗ್ಯವಾಗಿವೆ [illegible] ತಮ್ಮ ಪುಸ್ತಕಗಳನ್ನು ಪ್ರದರ್ಶಿಸಿದ್ದರು

೬ನೇ ಹೋಲಿನಲ್ಲಿ [illegible] ಮಂಗಡಿ [illegible] ನಾನಾ ತರದ [illegible] ಬೆತ್ತ, ತೆಂಗಿನ ನಾರು ಅವೆಮುದ್ದೆಯಿಂದ ತಯಾರಿಸಿದ ವಸ್ತು [illegible] ಇದ್ದುವು ಇತರ ತಾಲೂಕುಗಳ ಉಪಾಧ್ಯಾಯರು ತಯಾರಿಸಿದ ದೇವಸ್ಥಾನಗಳ ಮಾಡೆಲುಗಳು ಕಥೆಯ ಪಟಗಳು ಇದ್ದುವು [illegible] ದಕ್ಷಿಣ ಕನ್ನಡ ಜಿಲ್ಲೆ [illegible] ಮೊದಲಾಗಿ [illegible] ಚಾರ್ಟುಗಳು [illegible] ಚಾರ್ಟುಗಳು [illegible] ತಿಂಗಳಲ್ಲಿ [illegible] ನಕ್ಷತ್ರ ಪಟಗಳು ಇವುಗಳನ್ನು ಬಂಟವಾಳ ಉಪಾಧ್ಯಾಯರ ಸಂಘದವರು ತಂದಿದ್ದರು ಬಂಟವಾಳ ರಾ [illegible] ತಯಾರಿಸಿದ ಆಟ್ಟಳಿಗೆ ಸಮೇತವಿರುವ [illegible] ಗೋಪುರದ [illegible] ಮಾಡೆಲು ನೀರಿನ [illegible] ಚಕ್ರ [illegible] ವಿದ್ಯುಚ್ಛಕ್ತಿ [illegible] ಮಾಡೆಲು ಚಲೋದಾಗಿತ್ತು ದಕ್ಷಿಣ ಕನ್ನಡ ಜಿಲ್ಲೆಯ [illegible] ಭಾಗದಲ್ಲಿ [illegible] ಅವನ್ನು [illegible] ನಾನಾ ವಿಧದ [illegible] ಇವರು ತಂದಿದ್ದರು [illegible] ಉತ್ಕೃಷ್ಟವಾಗಿದ್ದವು

೭ನೇ ಹೋಲಿನಲ್ಲಿ [illegible] ಮಂಗಳೂರು [illegible] ಎಲಿಮೆಂಟರಿ ಶಾಲೆಯ ಚಾರ್ಟುಗಳ ಮಾಡೆಲುಗಳು [illegible] ಇದ್ದುದು ಪ್ರಾಥಮಿಕವಾಗಿದೆ [illegible] ಹಾಯರ್ ಎಲಿಮೆಂಟರಿ ಶಾಲೆಯ ದಶಾವತಾರದ ಭಾಗವತರು [illegible] ಹೂವಿನ ಮುಂತಾದ ಚಿತ್ರಗಳೂ ಒಂದು ದೈವವು [illegible] ಮುದುಕನಿಗೆ ಜೋಡು [illegible] ಕೊಟ್ಟು [illegible] ಚಿತ್ರವೂ ಜನರ ಮನಸ್ಸಿನ ಆಯಾಸವನ್ನು ಪರಿಹರಿಸ [illegible] ಚಲೋದಾಗಿದ್ದವು ಹೊರಗೆ ಗವರ್ನಮೆಂಟ್ ಸೆಕೆಂಡರಿ ಟ್ರೈನಿಂಗ್ ಶಾಲೆಯ [illegible] ಮುಂತಾದುವು ಪ್ರದರ್ಶಿಸಲ್ಪಟ್ಟು [illegible] ಇವುಗಳನ್ನು ಬೆಳೆಸಲು ಸಾಧ್ಯವಿದೆ [illegible] ದ್ದವು

ಹೋಲಿನ ಎಲ್ಲಾ ವಿಷಯಗಳನ್ನು ನೋಡುವಾಗ ಇಲ್ಲಿಯ ಎಲಿಮೆಂಟರಿ ಶಾಲಾ ಉಪಾಧ್ಯಾಯರುಗಳಲ್ಲಿ ಎಷ್ಟು [illegible] ಎಷ್ಟು ಕಲಾಕೌಶಲ್ಯವಿದೆಯೆಂದೂ ಪ್ರತಿ [illegible] ಯನ್ನೂ ದೇಶಭಾಷೆಯಲ್ಲಿ ಚಿತ್ರಪಟಗಳನ್ನು ಉಂಟುಮಾಡಿ ಹುಡುಗರಿಗೆ ಕಲಿಸಲು ಶಕ್ತಿಯುಳ್ಳವರಾಗಿರುವರೆಂದೂ ಎಚಿತವಾಗುತ್ತಿದ್ದಿತು

ಪ್ರದರ್ಶನವನ್ನು ನೋಡಿದ ಮೇಲೆ ಮಂತ್ರಿಗಳು ಕಳೆದ [illegible] ಪ್ರದರ್ಶನದಲ್ಲಿ ಇನಾಮು ಪಡೆದವರಿಗೆ ಮೆಡಲು ಸರ್ಟಿಫಿಕೇಟುಗಳನ್ನು ಹಂಚಿದರು

ಎರಡ ವಸ್ತುಪ್ರದರ್ಶನವನ್ನು ನೋಡಲು ನಾವಿರ ಸ್ತ್ರೀ ಗಂಡಸರೂ, ಹೆಂಗಳೆಯರು ಮಕ್ಕಳೂ ಬರುತ್ತಲೇ ಇದ್ದರು ಪ್ರದರ್ಶನವು ೨೧ನೇ ತಾರೀಕಿಗೆ ಮುಗಿಯುವುದೆಂದು ನೋಟೀಸ ಕೊಟ್ಟಿದ್ದರೂ ೨೩ನೇ ಶನಿವಾರದ ವರೆಗೆ [illegible] ಜನರು ನೋಡಲಿಕ್ಕಾಗುವಂತೆ ಮುಂದರಿಸಿಟ್ಟುದಕ್ಕಾಗಿ ಮು. ರಾ ರಾ ಉಳ್ಳಾಲ ಮಂಗೇಶರಾಯರಿಗೆ ಧನ್ಯವಾದಗಳನ್ನರ್ಪಿಸ ಬೇಕಾಗಿದೆ

ಶಾಲಿವಾಹನಶಕ ೧೮೫೩ನೆಯ ಪ್ರಜೋತ್ಪತ್ತಿ ಸಂವತ್ಸರದ ಪುಷ್ಯ ಶು|| ೧೫ ಶನಿವಾರದಿಂದ ಪ್ರಜೊ. ಸಂ|ರದ ಪುಷ್ಯ ಬ|| ೬ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಹಸ್ಥಿತಿಯ ಧನು — ಪೆಂಠಾರ್ಕ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ಸೂರ್ಯ ಉ	ಅಸ್ತ
23	ಶನಿ	○	[illegible]	ಪುನರ್ವಸು	[illegible]	[illegible]	7 0	6 25
24	ರವಿ	೧	[illegible]	ಪುಷ್ಯ	[illegible]	೧೦	7 0	6 26
25	ಸೋಮ	೨	[illegible]	ಆಶ್ಲೇಷಾ	[illegible]	೧೦	7 0	6 26
26	ಮಂಗಳ	೩	[illegible]	ಮಘಾ	[illegible]	[illegible]	7 0	6.27
27	ಬುಧ	೪	[illegible]	ಉತ್ತರಾ	[illegible]	[illegible]	7, 0	6.27
28	ಗುರು	೫	[illegible]	ಹಸ್ತಾ	[illegible]	[illegible]	6.59	6.28
29	ಶುಕ್ರ	೬	[illegible]	ಚಿತ್ರಾ	[illegible]	[illegible]	6 59	6.28

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಜುಮುಲಾ ಮಳೆ
15	89— 9	68— 6	—	—
16	89— 7	68— 5	—	—
17	89— 9	66— 5	—	—
18	89— 5	67— 7	—	—
19	88— 6	66— 5	—	—
20	89— 9	65 7	—	—
21	87— 6	66- 8	—	149—96

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ	ಆ	ವರೆಗೆ ರೂ	ಆ
ಹೊಸ ಅಕ್ಕಿ	3	6	3	2
ಹಳೆಮುಸ್ಕಿ	5	—	5	[illegible]
ಹಳೆ ಗುಡ್ಡ	4	0	4	4
ಹಳೆ ಸುಗ್ಗಿ	3	8	4	0
ಊರ ಅಮ್ಮಲ್ ಬೆಲ್ತಿಗೆ	4	8	5	—
ರಂಗೂನು ಬೆಲ್ತಿಗೆ ಗೋಣಿ ಒಕ್ಕೆ	6	8	[illegible]	4
ಎಲ್ಲ ಬೆಳ್ತಿಗೆ ಮುಡಿ ಒಕ್ಕೆ	4	8	—	
ಗೋಧಿ ಗೋಣಿ ಒಕ್ಕೆ	9	8	1[illegible]	8
ಹೆಸರು ಗೋಣಿ ಒಕ್ಕೆ	13	0	1[illegible]	—
ಹುರುಳಿಗೋಣಿ ಒಕ್ಕೆ	6	12	[illegible]	8
ಕಡಲೆ ಗೋಣಿ ಒಕ್ಕೆ	8	8	12	8
ತೊಗರಿಬೇಳೆ ಗೋಣಿ ಒಕ್ಕೆ	13	8	[illegible]	0
ಉದ್ದು ಗೋಣಿ ಒಕ್ಕೆ	11	8	13	0
ಹೆಸರ ಗೋಣಿ ಒಕ್ಕೆ	10	4	11	
ಊರು ಬೆಲ್ಲ ಖಂಡಿ ಒಕ್ಕೆ	3	[illegible]	[illegible]5	[illegible]
ಉಪ್ಪು ಗೋಣಿ ಒಕ್ಕೆ	4	12	4	14
ಚಹಾ ಖಂಡಿ ಒಕ್ಕೆ	80	—	8[illegible]	
ಕೊಬ್ಬರಿ ಖಂಡಿ ಒಕ್ಕೆ	34	0	—	
ಎಳ್ಳೆಂದೆ ಖಂಡಿ ಒಕ್ಕೆ	26	4	2[illegible]	8
ತೆಂಗಿನ ಎಣ್ಣೆ ಮಣ ಒಕ್ಕೆ	6	14	6	1[illegible]
ಎಳ್ಳೆಣ್ಣೆ ಮಣ ಒಕ್ಕೆ	6	12	7	0
ಜಮಖಂಡಿ ಸಕ್ಕರೆ ಒಕ್ಕೆ	4	7	5	14
ಮೋರಿಸ ಸಕ್ಕರೆ ಮಣ ಒಕ್ಕೆ	4	0	4	[illegible]
ಹೊಸ ಮೆಣಸು	4	0	5	[illegible]
ಸಾಸಿವೆ ಮುಡಿ ಒಕ್ಕೆ	6	8	8	0
ಪೇಟಿಪ್ ಕಾಫಿ ಖಂಡಿ ಒಕ್ಕೆ	21[illegible]	8	2[illegible]0	—
ಕಾಳುಮೆಣಸು ಖಂಡಿ ಒಕ್ಕೆ	17[illegible]	0	180	—
ಯೇಲಕ್ಕಿ ಮಣ ಒಕ್ಕೆ	27	0	28	—
ಗೇರುಬೀಜ ಮುಡಿ ಒಕ್ಕೆ	4	6	4	12
ಕಬ್ಬಿಣ ಖಂಡಿ ಒಕ್ಕೆ	35	0	3[illegible]	8
ತಾಂಬ್ರ ತಗಡು ಮಣ ಒಕ್ಕೆ	13	0	13	8
ತಾಂಬ್ರ ಪಾತ್ರೆಗಳ ಮಣ ಒಕ್ಕೆ	15	0	16	0
ಹಿತ್ತಾಳೆ ಸೇರು ಒಕ್ಕೆ	16	0	18	8
ಹಿತ್ತಾಳೆ ತಗಡು ಮಣ ಒಕ್ಕೆ	12	0	12	8
ತವರು ಒಕ್ಕೆ	18	4	18	8
ತುಂಡು ಹುರಿ ಖಂಡಿ ಒಕ್ಕೆ	20	—	—	
ಶಿಟಿನ ಕಾಪಿ ಖಂಡಿ ಒಕ್ಕೆ	375	—	406	—
ಹಳೆ ಅಡಿಕೆ	180	—	205	—
ಹೊಸ ಅಡಿಕೆ	140	—	145	—

Chikmagalur Public Conveyance Motor Service.

CHIKMAGALUR

ಚಿಕ್ಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್.   Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ಂ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ರಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಆಕ್ಸಿಡೆಂಟು ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಪ್ಪಿ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ಡಿ. 1 ಗಂಟೆಗೂ, ಬೆಳ್ತಂಗಡಿಗೆ 1 45ಗೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ರಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಗಳೂರಿನ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಪ್ಪಿ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ ೪ ಗಂಟೆ ಒಳಗೆ ಚಿಕ್ಕಮಗಳೂರಿಗೂ ಸುಖಯಾನವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರುತ್ತದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ, ಪಂಢರಪೂರ ಗೋವಾ ಬೆಳಗಾಂ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎಚ್ ಹನುಮಂತಪ್ಪ, ಪ್ಯಾರಡೂಸ್ ಸೋರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗಿ ಬರುವ ವ್ಯವಸ್ಥೆ ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆಂದಿರುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಡಲ ತೀರದ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ಸ್ವಲ್ಪ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ಒಂದು ದಿವಸದೊಳಗೆ ತಲ್ಪಬಹುದ 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೆ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲಿಚ್ಛಿಸಿ ಬರುವ ನೋಡಲು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ 7 ಘಂಟೆಗಳೊಳಗೂ ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ಚಾರ್ಮಾಡಿ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary

The Canara Public Conveyance Company Ltd, Mangalore

ಮೀರಾಬಾಯಿ

ಪರಿಚಯ

ಗಾಂಧಿಯವರು ಲಂಡನಿಗೆ ಹೋಗಿದ್ದಾಗ ಅವರೊಡನಿದ್ದ

ಮಿಸ್. ಸ್ಲೇಡ್ – ಮೀರಾಬಾಯಿ

ಯವರ ಕುರಿತು ಮಾರ್ಗರೇಟ್ ಬಾರ್ನ್ಸ್ ಎಂಬವರು ನ್ಯೂಯೋರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಬರೆದ ಒಂದು ಲೇಖನಾಧಾರದಿಂದ.

(ಸ್ಲೇಡಳು ಗಾಂಧಿಯವರ ಸವ್ಯಶಿಷ್ಯಳೆಂಬುದು ವಾಚಕರಿಗೆ ತಿಳಿದಿರಬಹುದು)

ಮೆಡಲೀನಾ ಸ್ಲೇಡ್ ಅಥವಾ ಮೀರಾಬಾಯಿಯೆಂಬ ಹೆಸರನ್ನು ಸ್ವೀಕರಿಸಿ, ಹಿಂದೀಯರ ಕ್ರಮಗಟ್ಟಳೆಗನುಸಾರವಾಗಿ ಜೀವಿಸುವ ಈ ತರುಣಿಯ ತಂದೆಯು ಈಸ್ಟ್ ಇಂಡಿಯಾ ಸ್ಟೇಷನಿನಲ್ಲಿ ಎಡ್ಮಿರಲರಾಗಿರುವ ಸರ್ ಎಡ್ಮಂಡ್ ಸ್ಲೇಡ್ ಎಂಬವರು. ಸ್ಲೇಡಳು ತನ್ನ ಬಾಲ್ಯವನ್ನು ಬ್ರಿಟಿಷ ನಮೂನೆಯಲ್ಲೇ ಚಂದದಿಂದ ಕಳೆದಳು. ಸ್ಲೇಡಳು ಸಾಧಾರಣ ೧೫ ಅಥವಾ ೧೬ ವರುಷ ಪ್ರಾಯದವಳಾಗಿದ್ದಾಗ ಒಮ್ಮೆ ಮುಂಬಾಯಿಗೆ ಬಂದಿದ್ದಳು. ಆ ಸಮಯದಲ್ಲಿ ಅವಳ ತಂದೆಯು ಮುಂಬಾಯಿ ಗವರ್ನರರನ್ನು ಸಂದರ್ಶಿಸಿದ್ದನು.

ಆಗರ್ಭ ಆಂಗ್ಲೇಯಳಾಗಿದ್ದು ಆಂಗ್ಲ ಜೀವನವನ್ನು ನಡೆಸಿದ್ದ ಈ ಸ್ಲೇಡಳು ಮೀರಾಬಾಯಿಯೆಂಬ ನಾಮಾಂಕಿತದಿಂದ ಹೇಗೆ ಮತ್ತು ಏಕೆ ಸಬರ್ಮತಿ ಆಶ್ರಮದಲ್ಲಿ ಗಾಂಧಿಯ ಶಿಷ್ಯಳಾದಳು?

ಮಹಾತ್ಮಾ ಗಾಂಧಿಯವರ ಉಚ್ಚತಮ ಆದರ್ಶಗಳೂ ಆಧ್ಯಾತ್ಮಜೀವ ಪ್ರಥೆಯೂ ಮೀರಾಬಾಯಿಯ ಶಾಂತವಾದ ಹೃದಯದಲ್ಲಿ ಹೊಕ್ಕು ಅದನ್ನು ಚಡಪಡಿಸಿರಬೇಕು. ತಾನು ಸಬರ್ಮತಿಗೆ ಸೇರುವ ಮೊದಲು ಅವಳು ಗಾಂಧಿಯವರನ್ನು ನೋಡಿರಲಿಲ್ಲ. ಆದರೂ ಅವರ ಸಾತ್ವಿಕ ವಿಚಾರವೂ, ಅವರ ಜೀವನಾದರ್ಶವೂ ಅವಳನ್ನು ಅವರ ಕಡೆ ಸೆಳೆದಿರಬೇಕು. ಏನೋ ಒಂದು ಬಗೆಯ ಅಗೋಚರ ಶಕ್ತಿಯು ಅವಳನ್ನು ಮಹಾತ್ಮರತ್ತ ಕಡೆ ಒಯ್ದಿರಬೇಕು.

ಗಾಂಧಿಯವರ ಆತ್ಮೋನ್ನತಿ ಮಾರ್ಗ, ಅವರ ಕಾರ್ಯಕಲಾಪಗಳು ಅವರ ಪ್ರತಿಭಾ ಸಂಪನ್ನತೆಗಳನ್ನು ಸ್ಲೇಡಳು ಸೂಕ್ಷ್ಮದೃಷ್ಟಿಯಿಂದ ಪರಿಶೋಧಿಸಿದಳು. ಅಂತಹ ಪರಿಶೋಧನೆಯ ಪರಿಣಾಮವಾಗಿ ಅವಳು ಗಾಂಧಿಯವರಿಗೆ ಸಹಾಯಕಳಾಗಿ ನಿಂತಳು.

ಒಂದು ದಿನ ಮೀರಾಬಾಯಿಯು ತನಗೂ ಸಬರ್ಮತಿ ಆಶ್ರಮಕ್ಕೆ ಸೇರಿಸಿಕೊಳ್ಳಬೇಕೆಂದು ಗಾಂಧಿಯವರಿಗೊಂದು ಪತ್ರವನ್ನು ಬರೆದಳು. ಮಹಾತ್ಮರು ಅದನ್ನೋದಿ, ಏನೋ ಒಂದು ಬಗೆಯ ಆರಂಭಶೂರತೆಯಿಂದ ಸ್ಲೇಡಳು ಆ ಕಾಗದವನ್ನು ಬರೆದಿದ್ದಳೆಂದು ಭಾವಿಸಿಕೊಂಡರು. ಅಲ್ಲದೆ ವರ್ಣಭೇದ ವಿಚಾರವೂ ಅವರಲ್ಲಿ ತಲೆದೋರಿತು. ಆಂಗ್ಲಸ್ತ್ರೀಯು ಹಿಂದೀಯ ಕ್ರಮದಲ್ಲಿ ಸಬರ್ಮತಿ ಆಶ್ರಮದಲ್ಲಿ ಸನ್ಯಾಸಿನಿಯಂತೆ ಜೀವಿಸುವ ಬಗೆಯೆಂತು? ಎಂಬ ಪ್ರಶ್ನೆಯನ್ನು ಅವರು ಇತ್ಯರ್ಥಿಸಿಕೊಳ್ಳದಿರಲಿಲ್ಲ. ಆದರೂ ಪೂರ್ವ ಪಶ್ಚಿಮಗಳೊಳಗಿನ ಸಮಾಗಮದ ಸನ್ನಿವೇಶವು ಒದಗಿದುದನ್ನು ಅಲ್ಲಗಳೆಯಬಾರದೆಂದು ಅವರು ಅವಳ ಆಲೋಚನೆಯನ್ನು ಸ್ವೀಕರಿಸಿದರು. ಅದೇ ಮೇರೆಗೆ ಸ್ಲೇಡಳು ಲಂಡನಿನಲ್ಲಿದ್ದು ಒಂದು ವರುಷದ ತರಬೇತನ್ನು ಹೊಂದಬೇಕೆಂದೂ, ಆ ಸಮಯದಲ್ಲಿ ಅವಳು ಮಾಂಸ, ಮಾದಕಪದಾರ್ಥ ಐಶ್ವರ್ಯಗಳನ್ನು ತ್ಯಾಗ ಮಾಡಿ, ನೂಲುವುದನ್ನೂ ಹಿಂದೂಸ್ಥಾನೀ ಮಾತಾಡುವುದನ್ನೂ ಕಲಿಯಬೇಕೆಂದು ಗಾಂಧಿಯವರು ಅಪ್ಪಣೆ ಇತ್ತರು.

ಸ್ಲೇಡಳು ಚಂಚಲ ಮನಸ್ಸಿನವಳೆಂದು ಅವಳ ಚಿಕ್ಕತಾಯಿಯೊಮ್ಮೆ ಬರೆದಿದ್ದಳು. ಅದನ್ನು ಕೇಳಿ ಗಾಂಧಿಯವರು ಸ್ಲೇಡಳು ದೃಢಪೂರ್ವಕ ಮನಸ್ಸನ್ನು ನಂಬಲಾರದೆ ಹೋದರು. ಅವಳು ಹೀಗೆಲ್ಲಾ ಬರೆದಿರುವಳಾದರೂ, ಕ್ರಮೇಣ ಅವಳು ಈ ಜೀವನ ಮಾರ್ಗವನ್ನು ಮರೆತು ಬಿಡಲೂ ಸಾಕೆಂದು ಅವರು ಊಹಿಸಿದ್ದರು. ಅಷ್ಟರಲ್ಲೊಂದು ದಿನ ಮೀರಾಬಾಯಿಯು ತನ್ನ ಒಂದು ವರುಷದ ತರಬೇತನು ಪಡೆದು ಗಾಂಧಿಯವರ ಅಪ್ಪಣೆ ಮೇರೆಗೆ ಕಿಂಚಿತ್ತು ತಪ್ಪದೆ ಆಚರಿಸಿ, ತನ್ನ ಅವಧಿಯು ಮುಗಿದಿದೆ, ಇನ್ನಾದರೂ ತಾನು ಸಬರ್ಮತಿಯನ್ನು ಪ್ರವೇಶಿಸಲರ್ಹಳೆಂದು ಬರೆದಳು. ಅಲ್ಲದೆ ಸಬರ್ಮತಿಯಲ್ಲಿ ಗಾಂಧಿಯವರ ಶಿಷ್ಯಳಾಗಿ ಉಳಕೊಳ್ಳಬೇಕೆಂದು ತನ್ನ ಮನಸ್ಸು ತವಕಗೊಳ್ಳುತ್ತಿದೆಯೆಂದೂ ಅವಳು ಬರೆದಳು. ಆ ಪತ್ರವನ್ನು ನೋಡಿ ಗಾಂಧಿಯವರು ಆಶ್ಚರ್ಯಗೊಳ್ಳದಿರಲಿಲ್ಲ. ಅವರು ಅವಳ ಬೇಡಿಕೆಯನ್ನು ದೂರೀಕರಿಸಲಾರದಾದರು.

ಸಬರ್ಮತಿ ಆಶ್ರಮವನ್ನು ಹೊಕ್ಕಂದಿನಿಂದ ಸ್ಲೇಡಳು ಅಲ್ಲಿಯ ಕಾರ್ಯಕಲಾಪಗಳಲ್ಲಿ ಹೃದಯಪೂರ್ವಕವಾಗಿ ಭಾಗವಹಿಸಿದಳು. ಮೀರಾಬಾಯಿಯೆಂಬ ಪವಿತ್ರನಾಮವನ್ನು ಹೊಂದಿದಳು. ಆಶ್ರಮದ ಇನ್ನಿತರ ಶಿಷ್ಯರಂತೆ ಅವಳೂ, ಸತ್ಯ, ಅಹಿಂಸೆ, ವೈರಾಗ್ಯ, ಬ್ರಹ್ಮಚರ್ಯ, ಖಾದೀವ್ರತಗಳನ್ನೂ ಸ್ವೀಕರಿಸಿದಳು. ಮಹಾತ್ಮಾ ಗಾಂಧಿಯವರ ಮುಂದಾಳುತನದಿಂದ ನಡೆಯುತ್ತಿದ್ದ ಆಶ್ರಮದ ಸಕಲ ಕೆಲಸಗಳಲ್ಲೂ ಕೈಹಚ್ಚುತ್ತಿದ್ದಳು.

ದೈಹಿಕ ಸಂಬಂಧತೆಯನ್ನು ಒಳಗೊಳ್ಳುವುದರಿಂದಲೇ ಆತ್ಮೋನ್ನತಿಯು ಉಂಟಾಗುತ್ತದೆನ್ನುವ ಮಹಾತ್ಮಾ ಗಾಂಧಿಯವರು ಎಂತಹ ಕೀಳು ಕೆಲಸವನ್ನೂ ಮಾಡಲು ಹಿಂಜರಿಯುವವರಲ್ಲ. ಅವರ ಆ ಭಾವನಾ ದೃಷ್ಟಿಯೇ ಮೀರಾಬಾಯಿಯಲ್ಲೂ ಒಡಮೂಡಿತು. ಯಾವ ಹೀನ ಕೆಲಸವೂ ಅವಳಿಗೆ ಹೀನವೆಂದು ತೋರಲಿಲ್ಲ. ತೋಟಿಯ ವೃತ್ತಿ, ಗುಡಿಸುವುದು, ಅಡಿಗೆಮಾಡುವುದು, ಅಸ್ಪೃಶ್ಯ ಸೇವೆಗಳು ಅವಳ ನಿತ್ಯ ಕೆಲಸವಾದುವು. ನೀಚ ಜಾತಿಯವರ ನೀಚವೃತ್ತಿಯನ್ನು ಕೈಗೊಂಡ ಗಾಂಧೀ ಮೀರಾಬಾಯಿಯವರು ಹಿಂದೀಯ ಜನಾಂಗಕ್ಕೆಲ್ಲ ಉದಾಹರಣೆಗಳಾದರು.

ಮೀರಾಬಾಯಿಯು ಗಾಂಧಿಯವರ ಆರೋಗ್ಯವಿಚಾರ, ಕಾರ್ಯವಿಚಾರಗಳಲ್ಲೇ ನಿರತಳಾದಳು. ಅವರ ಸೇವೆಯನ್ನೇ ಬಯಸುವಳು.

ಅಂದು ಗಾಂಧೀ ಇರ್ವಿನ್ ಸಂಧಿಯು ನಡೆದಾಗ ಗಾಂಧಿಯವರು ವೈಸರಾಯರ ಮನೆಯಿಂದ ಹಿಂತಿರುಗಲು ತಡವಾಯಿತಷ್ಟೆ! ಆಗ ಅವರಿಗಾಗಿ ಫಲಾಹಾರವನ್ನು ತೆಗೆದುಕೊಂಡು ವೈಸರಾಯರ ಅರಮನೆಗೆ ಹೋದವಳು ಮೀರಾಬಾಯಿಯೇ. ಅವಳು ಅಲ್ಲಿ ವೈಸರಾಯರನ್ನು ಕಂಡಳು. ತನ್ನ ದೇಶಬಾಂಧವರಾದ ಲೋರ್ಡ್ ಇರ್ವಿನರೊಡನೆ ಅತ್ಯಂತ ಸಂತೋಷದಿಂದ ಮಾತನಾಡಿದಳು.

ಕಾಯಿದೆಭಂಗ ಚಳವಳಿಯಲ್ಲಿ ಮೀರಾಬಾಯಿಯು ರಾಜಕೀಯ ದೃಷ್ಟ್ಯಾ ಭಾಗವಹಿಸಲಿಲ್ಲ. ಸುಧಾರಣೆಯ ದೃಷ್ಟಿಯಿಂದ ಕೆಲಸ ನಡೆಸಿದಳು. ಮಹಾತ್ಮಾ ಗಾಂಧಿಯವರು ಅಂದು ಕಾಯಿದೆ ವಿರೋಧಿ ಉಪ್ಪನ್ನು ತಯಾರಿಸಲು ದಂಡಿಗೆ ಹೋದರಷ್ಟೆ. ಆದರೂ ಮೀರಾಬಾಯಿಯು ತನ್ನೊಡನೆ ಸೇರಿಕೊಳ್ಳುವುದಗತ್ಯವಿಲ್ಲವೆಂದು ಗಾಂಧಿಯವರು ಅವಳಿಗೆ ಹೇಳಿದ್ದರು. ಅವಳು ಉಪ್ಪು ತಯಾರಿಸುವ ಬದಲು ಖಾದೀ ಪ್ರಚಾರಕಾರ್ಯವನ್ನು ಮಾಡಬೇಕೆಂದು ಗಾಂಧಿಯವರು ಅವಳಿಗೆ ಅಪ್ಪಣೆಯಿತ್ತಿದ್ದರು. ಅದುದರಿಂದ ದೇಶದಲ್ಲೆಲ್ಲಾ ಜನರು ಕಾಯಿದೆಭಂಗ ಉಪ್ಪನ್ನು ತಯಾರಿಸಿ ಸೆರೆಮನೆಗೆ ನಡೆಯುತ್ತಿದ್ದಾಗ ಮೀರಾಬಾಯಿಯು ದೂರ ನಿಂತಳು. ಆ ಸಮಯಕ್ಕೆ ಅಗತ್ಯವಿದ್ದ ಖಾದೀ ಪ್ರಚಾರವನ್ನು ಮಾಡಲು ಅಖಿಲ ಭಾರತದ ಸಂಚಾರವನ್ನು ಮಾಡಿದಳು. ಅನೇಕ ದೇಶಗಳಿಗೆ ಹೋಗಿ ಅನೇಕ ಸಭೆಗಳ ಅಧ್ಯಕ್ಷತೆಯನ್ನು ವಹಿಸಿ, ಖಾದಿಯ ಉತ್ಪನ್ನದ ರೀತಿಯನ್ನೂ ಆರ್ಥಿಕಬೆಲೆಯನ್ನೂ ಜನರಿಗೆ ತಿಳಿಸಿದಳು.

ಮಹಾತ್ಮರಾಗಿರುವ ಗಾಂಧಿಯವರಿಗೆ ಅವರ ಸುಲಭಾಹಾರವನ್ನು ಸಿದ್ಧಪಡಿಸಿಕೊಡುವವಳು ಶ್ರೀಮತೀ ಮೀರಾಬಾಯಿಯು. ಗಾಂಧಿಯವರಿಗೆ ಹಾಲು, ಹಣ್ಣುಗಳನ್ನು ಸಿದ್ಧಪಡಿಸಿ ಅವರೆದುರಿಡುವವಳು ಅವಳೇ. ಅವರ ಬಟ್ಟೆಬರೆಗಳನ್ನು ಒಗೆಯುವವಳೂ, ನಮ್ರಸೇವಕಳೂ ಅವಳೇ. ಅವಳು ಉಡುವುದು ಒಂದು ಬಣ್ಣದ ಸೀರೆಯನ್ನು. ಬೋಳಿಸಿದ ತನ್ನ ತಲೆಯ ಮೇಲೆ ದಪ್ಪವಾದ ಶಾಲನ್ನು ಧರಿಸಿಕೊಳ್ಳುವಳು. ಅವಳನ್ನು ಈಗ ಗಾಂಧಿಯವರು ಹಿಂದೂದೇಶದ ನಿಜವಾದ ಪುತ್ರಿಯೆಂದೇ ಸ್ವೀಕರಿಸಿರುತ್ತಾರೆ. ಆದರೆ ಅವಳು ಹುಟ್ಟಿದುದು ಇಂಗ್ಲಾಂಡಿನಲ್ಲಿ— ಅವಳ ಹೆತ್ತವರು ಆಂಗ್ಲೇಯರು. ಬ್ರಿಟಿಷ ಎಡ್ಮಿರಲರೊಬ್ಬರು ಅವಳ ಪಿತೃ. ಇಂಗ್ಲಿಷನ್ನು ಸ್ವಚ್ಛ ರೀತಿಯಿಂದಲೇ ಅವಳು ಮಾತನಾಡುವಳು.

ಸಾರ್ವಜನಿಕ ಭಾಷಣ ಮಾಡುವುದರಲ್ಲಿ ಮೀರಾಬಾಯಿಯು ಚತುರಳೇ ಸರಿ. ಅವಳ ಪ್ರತಿಯೊಂದು ವಾಕ್ಯವೂ ಸಮತೂಕದ್ದಾಗಿ ಬಹುಬೆಲೆಯುಳ್ಳದ್ದಾಗಿತ್ತು. ವಾಗ್ಮಿಯೆಂದು ಅವಳು ಹೆಸರು ಪಡೆಯಲಿಲ್ಲವಾದರೂ, ಅವಳ ಪ್ರಬಲ ಕಾರ್ಯಾಸಕ್ತಿಯು ಅವಳನ್ನು ಆವೇಶಮಯಳನ್ನಾಗಿ ಮಾಡುತಿತ್ತು. ಮಹಾತ್ಮರು ಲಂಡನಿಗೆ ಬಂದಿದ್ದಾಗ ಅವಳು ಸಾರ್ವಜನಿಕ ಭಾಷಣವನ್ನು ಮಾಡಲಿಲ್ಲ. ಆದರೂ ಪ್ರತಿಯೊಂದು ಪ್ರಾಂತಿಕ ಸಭೆಗೂ ಹೋಗುತ್ತಿದ್ದಳು. ಲೋರ್ಡ್ ಇರ್ವಿನರು ಹಿಂದೂದೇಶದ ಹೈ ಕಮಿಶನರ ಬಗ್ಗೆ ಕೊಟ್ಟ ಒಂದು ಭೋಜನ ಸಮಾರಂಭಕ್ಕೆ ಮಹಾತ್ಮಾ ಗಾಂಧಿಯವರೂ ಹೋಗಿದ್ದರು. ಆದರೆ ಮೀರಾಬಾಯಿಯು ಮಾತ್ರ ಅದಕ್ಕೆ ಹೋಗಲಿಲ್ಲ. ತನಗೆ ತನ್ನ ಮತ್ತು ಗಾಂಧಿಯವರ ವಸ್ತ್ರವನ್ನೊಗೆಯುವ ಕೆಲಸವಿದೆಯೆಂದು ಸಟ್ಟನೆ ಕಿಂಗ್ಸ್ಲಿ ಹೋಲಿಗೆ ಹೋದಳು.

ತನ್ನನ್ನು ಮಹಾತ್ಮಾ ಗಾಂಧಿಯವರ ಉದಾತ್ತ ಆದರ್ಶಮಯ ಜೀವನ ಕ್ರಮವು ಅನವರತ ಆಕರ್ಷಿಸಿತೋ, ಅಥವಾ ಅವರ ಮೇಲಿನ ಭಕ್ತಿ ವಿಶ್ವಾಸಗಳು ತನ್ನನ್ನು ಹಾಗೆ ಮಾಡಿತೋ ಏನೆಂದು ಮೀರಾಬಾಯಿಯೇ ಹೇಳಲಸಮರ್ಥಳಾಗಿರುವಳು.

ಮಹಾತ್ಮಾ ಗಾಂಧಿಯವರದು ಯಾವ ಸಂಗತಿಯನ್ನೂ ಮರೆಮಾಚಿ, ಅಡಗಿಸಿಡಲು ಅಸಾಧ್ಯ. ಅವರ ಹಿರಿತನವು ಗೌರವಪೂರ್ವಕತೆಗೆ ಒಂದು ಬಿಟ್ಟಿರುವ. ಅವರ ಅನುಯಾಯಿಗಳ ಮೇಲೆ ಏನೋ ಒಂದು ಬಗೆಯ ಅಗೋಚರ ಶಕ್ತಿಯು ಪರಿಣಮಿಸಿರಬೇಕು. ಎಲ್ಲಿ ಗಾಂಧಿಯವರ ಹೆಸರಿದೆಯೋ ಅಲ್ಲಿ ಮೀರಾಬಾಯಿಯ ಹೆಸರೂ ಇದೆ. ಕೊಂಗ್ರೆಸ್ಸು ಅವಳನ್ನು 'ಭಾರತ ಮಾತೆಯ ನೈಜ ಪುತ್ರಿ' ಯೆಂದೆಣಿಸುತ್ತದೆ.

ಮೀರಾಬಾಯಿಯು ಒಂದೇ ಸಮನೆ ತನ್ನ ಜೀವನದಲ್ಲಿ ಮಾರ್ಪಾಟು ಹೊಂದಿದುದು ಆಶ್ಚರ್ಯಕ್ಕಿಂತಲೂ ಆಶ್ಚರ್ಯವಾಗಿದೆ. ಹಿಂದೀಯ ಸಮಸ್ಯೆಯಲ್ಲಿ ಅವಳು ರಾತ್ರಿಂದಿವವೂ ನಿರತಳಾಗಿರುವಳು. ತಾನು ಹಿಂದೂದೇಶದಿಂದ ಪ್ರತ್ಯೇಕವಲ್ಲವೆಂದೂ, ತಾನೇ ಹಿಂದೂದೇಶ, ಹಿಂದೂದೇಶವೇ ತಾನೆಂದೂ ಅವಳ ದೃಢಭಾವನೆಯಾಗಿರುತ್ತದೆ. ಅವಳು ಮೊನ್ನೆ ಲಂಡನಿಗೆ ಬರುವಾಗ "ನಾನು ಇಂಗ್ಲಾಂಡಿಗೆ ಬರದೆ ಬೇರೆ ಉಪಾಯವಿಲ್ಲ. ಅದಕ್ಕಾಗಿಯೇ ನಾನು ಒಂಟಿಯಾಗಿ ಇಂಗ್ಲಾಂಡಿಗೆ ಬರುವುದೆಂದರೆ ನನಗೆ ವಿದೇಶಕ್ಕೆ ಹೋದಂತೆಯೇ ಭಾಸವಾಗುತ್ತದೆ. ನನ್ನ ಹೃದಯವು ಹಿಂದೂದೇಶದಲ್ಲಿದೆ. ಅದು ಮುಂದಕ್ಕೂ ಅಲ್ಲೇ ಇರುವುದು" ಎಂದಳು.

ಒಂದು ಗಡಿ ದಾಟಿ ತನ್ನ ತಾಯ್ನಾಡಿನ ಮಣ್ಣನ್ನು ಬಿಟ್ಟು ಬರಲಾರದು. ಹಾಗಿರುವಾಗ ಮೀರಾಬಾಯಿಯು ತನ್ನ ಜನ್ಮಭೂಮಿಯನ್ನು ಮರೆತಿರುವುದು ಅದ್ಭುತವೇ ಸರಿ. ಮಹಾತ್ಮಾ ಗಾಂಧಿಯವರ ಸೆಕ್ರೆಟರಿಯಾಗಿ ಹದಿನಾಲ್ಕು ವರುಷಗಳಿಂದಿರುವ ಶ್ರೀಯುತ ಮಹಾದೇವ ದೇಸಾಯಿಯವರು ಹೀಗೆ ಹೇಳುವರು: "ಮೀರಾಬಾಯಿಯು ಆಶ್ರಮದ ಶಿಷ್ಯಳಾಗಿ ಅನವರತವೂ ದುಡಿಯುವಳು. ನನ್ನ ದಿವಸ ಮಹಾತ್ಮರ ಉದ್ದಿಷ್ಟವನ್ನು ಕಾರ್ಯರೂಪಕ್ಕೆ ತರಲು ಅವಳು ಹೆಣಗಾಡುವಳೆಂದು ನನ್ನ ನಂಬಿಕೆ. ನನ್ನ ಸ್ವಂತದ ದುರ್ಬಲತೆಯು ನನಗೆ ತಿಳಿದಿದೆ. ಆದರೆ ನನಗಿಂತ ಮೀರಾಬಾಯಿಯು ಹೆಚ್ಚಿನ ಆತ್ಮಶಕ್ತಿಯುಳ್ಳವಳೆಂದು ನನ್ನ ನಿರ್ಧಾರ."

(ಮೀರಾಬಾಯಿಯು ತಂದೆತಾಯಿಗಳಿಂದ ತ್ಯಜಿಸಲ್ಪಟ್ಟವಳೆಂದೂ ಅವಳು ದಾರಿ ಕಾಣದೆ ಗಾಂಧೀಜೀಯವರ ಆಶ್ರಮದ ಮರೆಹೊಕ್ಕಳೆಂದೂ ಕೆಲವು ವಿದೇಶೀಯರ ಅಭಿಪ್ರಾಯವಿತ್ತು. ಅದರ ಸತ್ಯಾಂಶದ ಕುರಿತ ಮೀರಾಬಾಯಿಯೊಡನೆ ಕೇಳಿದ್ದಲ್ಲಿ, ತಾನು ಹಾಗೆ ಹೆತ್ತವರಿಂದ ತ್ಯಜಿಸಲ್ಪಟ್ಟವಳಲ್ಲವೆಂದೂ ತನಗೆ ಅಪ್ಪ ಅಮ್ಮ, ಬಂಧುಬಳಗಗಳಿವೆಯೆಂದೂ ಆದರೂ ತನಗೆ ಯಾವುದೂ ಬೇಡವೆಂದೇ ತಾನು ಹಿಂದುಸ್ಥಾನಕ್ಕೆ ಬಂದೆನೆಂದೂ ಮೀರಾಬಾಯಿಯು ಹೇಳಿಕೆಯು. ಹಿಂದೀಯ ಜನಾಂಗದ ಸೇವೆಯನ್ನು ಮನಃಪೂರ್ವಕ ನಿರ್ವಹಿಸಿ ತಾನು ತನ್ನ ಆಧ್ಯಾತ್ಮಿಕ ವಿಚಾರವನ್ನು ಅಂತರಂಗವಾಗಿ ಪ್ರವರ್ಧಿಸಿಕೊಳ್ಳಬೇಕೆಂದೇ ಮೀರಾಬಾಯಿಯ ಉತ್ಕಟ ಆಶೆಯು. ಅವಳ ಅಂತಹ ಆಶೆಯು ಅವಳ ಜೀವಿತ ಕಾಲದೊಳಗೆ ನೆರವೇರಿ, ಮೀರಾಬಾಯಿಯು ವಿದೇಶೀಯರಿಗೆ ಆದರ್ಶ ರಮಣಿಯಾಗಲೆಂದು ಮಹಾತ್ಮರೇ ಮೊದಲಾದವರು ಹರಸಿರುವರು)

ಬಂಧನದ ಗೊಂದಲ

ತಾರೀಖು ೧೩ರಲ್ಲಿ

ಸೂರತ್ತಿನಲ್ಲಿ

ಕೈದುಮಾಡಲ್ಪಟ್ಟಿದ್ದ ಶ್ರೀಮತೀ ಕಸ್ತೂರಿ ಬಾಯಿ ಗಾಂಧಿಯವರಿಗೆ ೬ ವಾರಗಳ ಸಾದಾ ಸಜೆಯೂ 'ಎ' ಕ್ಲಾಸೂ ದೊರೆತಿದೆ ಶ್ರೀಮತಿಯವರೊಡನಿದ್ದ ಮಿಸ್ ಮಣಿಬೆನ್, ಮಿಸ್ ಮಿತುಬೆನ್ನರವರಿಗೆ ಇಬ್ಬೊಬ್ಬರಿಗೆ ೩½ ತಿಂಗಳ ಕಠಿಣ ಸಜೆಯೂ ನೂರು ನೂರು ರೂಪಾಯಿಯ ಜುಲುಮಾನೆಯೂ ಅದಕ್ಕೆ ತಪ್ಪಿದರೆ ಪುನಃ ೧೪ ದಿನಗಳ ಸಜೆಯೂ ವಿಧಿಸಲಾಗಿದೆ. ಕಸ್ತೂರಿ ಬಾಯಿಯವರು ನ್ಯಾಯತೀರ್ಪಿನಲ್ಲಿ ಭಾಗವಹಿಸಲಿಲ್ಲ "ನನಗೆ ಇಷ್ಟು ಸುಲಭವಾದ ಶಿಕ್ಷೆಯನ್ನೇಕೆ ವಿಧಿಸಿದಿರಿ?" ಎಂದು ಕೇಳಿದರು ಅದಕ್ಕೆ ಮೆಜಿಸ್ಟ್ರೇಟರು 'ನನಗೆ ಬೇರೆ ಉಪಾಯವಿಲ್ಲ" ಎಂದುತ್ತರವನ್ನಿತ್ತರು

ಸೂರತ್ತಿನ

ಒಬ್ಬ ಡಾಕ್ಟರರ ಹೆಸರಿನಲ್ಲಿ ಅಲ್ಲಿಯ ಕೊಂಗ್ರೆಸ್ಸಿನವರ ೨೫೦೦೦ ರೂಪಾಯಿಗಳಿದ್ದುದನ್ನು ಕಂಡುಹಿಡಿದಿರುವರು ಬೇಂಕ್ ಪುಸ್ತಕಗಳು ಪರಿಶೋಧಿಸಲ್ಪಡುತ್ತಿವೆ

ಮುಂಬಾಯಿಯಲ್ಲಿನ

ಮುಲ್ಜಿಜೇದಾ ಮಾರ್ಕೆಟಿನಲ್ಲಿ ಪಿಕೆಟ್ ಮಾಡುತ್ತಿದ್ದ ೨೦ ಮಂದಿ ಸ್ತ್ರೀಯರನ್ನು ಕೈದುಮಾಡಿರುವರು ಅವರೆಲ್ಲರಿಗೂ ಎಚ್ಚರಿಕೆಯನ್ನಿತ್ತು ಇನ್ನು ಪಿಕೆಟ್ ಮಾಡಿದರೆ ಎರಡು ವರುಷದ ಕಠಿಣ ಸಜೆಯು ವಿಧಿಸಲಾಗುವುದೆಂದು ಹೇಳಿ ಬಿಟ್ಟುಬಿಟ್ಟಿರುವರೆಂದು ತಿಳಿದುಬಂದಿದೆ

೧೪೪ನೇ ಸೆಕ್ಷನನ್ನುಲ್ಲಂಘಿಸಿ ಮೆರವಣಿಗೆಯನ್ನು ನಡಿಸಿದ ಹಕೀಮ್ ಮಹಮ್ಮದರನ್ನು ಇನ್ನಿಬ್ಬರು ಮುಸ್ಲಿಮ [illegible] ರನ್ನು ಕೈದುಮಾಡಿ, ಒಬ್ಬೊಬ್ಬನಿಗೆ ಎರಡು ವರುಷಗಳ ಕಠಿಣ ಸಜೆಯೂ ೫೦ ರೂಪಾಯಿಯ ಜುಲುಮಾನೆಯೂ [illegible] ಕೊಡಲು ತಪ್ಪಿದಲ್ಲಿ ಪುನಃ ೬ ತಿಂಗಳ [illegible] ಸಜೆಯೂ ವಿಧಿಸಲ್ಪಟ್ಟಿದೆ

ಎಮ್ಮೆ ಕೈದುಮಾಡಲ್ಪಟ್ಟು ಬಿಡಲ್ಪಟ್ಟ ಶ್ರೀ ಮೋಹನಚಂದ್ರ [illegible] ಎಂ [illegible] ಕೈದು ಮಾಡಿ ಎರಡು ವರ್ಷಗಳ ಕಠಿಣ ಸಜೆಗಳನ್ನು [illegible]

ಕೊಂಗ್ರೆಸ್ಸಿನ [illegible] ದಕ್ಕಾಗಿಯೂ ಬ್ಯಾನ್ ಪತ್ರಿಕೆಗಳಂತೆ ಮೂಲ ಕೊಂಗ್ರೆಸ್ ವಾರ್ತೆಯನ್ನು ಪ್ರಕಟಿಸಿದ [illegible] ೩೭ ಮಂದಿಗೆ [illegible] ಕೈದುಮಾಡಿ [illegible] ಶಿಕ್ಷೆಗಳನ್ನು ಕೊಟ್ಟಿರುವರು

ತಾರೀಖು ೧೬ರಲ್ಲಿ

ಮುಂಬಾಯಿ ಕ್ರಾನಿಕಲಿನ

ಸಂಪಾದಕರಾದ [illegible] ಬ್ರೆಲ್ವಿಯವರನ್ನು ಕೈದು ಮಾಡಿ ಎರಡು ವರುಷಗಳ ಕಠಿಣ ಸಜೆ ಕೊಟ್ಟಿರುವರು

ಅಹ್ಮದಾಬಾದಿನಲ್ಲಿ

೩೩ ಮಂದಿ [illegible] ದಸ್ತಗಿರಿ ಮಾಡಿ [illegible] ಮಂದಿಗಳನ್ನು ಬಿಟ್ಟಿರುವರು ಇನ್ನು ಕೆಲವ [illegible]

ಕರಾಚಿಯಲ್ಲಿ

[illegible] ವಿದೇಶಿ ವಸ್ತ್ರವನ್ನು ತರಿಸಿಕೊಂಡ ಗಾಡಿಯೊಂದು [illegible] ಕೊಂಗ್ರೆಸ್ ವಾಲಂಟಿಯರು ಪಿಕೆಟ್ ಮಾಡ [illegible] ಅದನ್ನು ತಿಳಿದು [illegible] ಪೋಲೀಸರು ಹೋದರು ಗಲಭೆಯಾಗುವ ಸಂದರ್ಭವನ್ನು [illegible] ಹಾಕಿದರು ಗಲಭೆಯಾಗಲಿಲ್ಲ

ಲಕ್ನೋವಿನಲ್ಲಿ

ವೃಂದಾವನದ ಪ್ರೇಮ ಮಹಾ ವಿದ್ಯಾಲಯವು ಸ್ವಾತಂತ್ರ್ಯದ ಇನ್ನಿತರ ಅನೇಕ ಕೊಂಗ್ರೆಸ್ ಕಮಿಟಿಗಳೂ ಕಾಯಿದೆ ವಿರೋಧವೆಂದಾಗಿದೆ

ಅಲ್ಲಾಹಾಬಾದಿನಲ್ಲಿ

ಶ್ರೀ ಪಂಡಿತ್ ಮೋಹನ್‌ಲಾಲ್ ನೆಹರರವರು ಮಂದಿ [illegible] ಆನಂದಭವನದ ಒಳಗಿಂದ ಹೋಗುತ್ತಿದ್ದ ಒಂದು ಮೆರವಣಿಗೆಯನ್ನು ಪೋಲೀಸರು ತಡೆದು ಪಂಡಿತರನ್ನು ಕೈದು ಮಾಡಿದರು

ಕೃಷ್ಣಕಾಂತ ಮಾಲವೀಯರು

ತನ್ನ ಸಂಪಾದಕತ್ವದಿಂದ ಹೊರಡುವ "ಅಭ್ಯುದಯ" ಪತ್ರಿಕೆಯಲ್ಲಿ ನಿಷಿದ್ಧ ಪದ್ಯವೊಂದನ್ನು ಪ್ರಕಟಿಸಿದುದಕ್ಕಾಗಿ ನ್ಯಾಯವಿಚಾರಣೆಯಾಗುತ್ತಿದೆ ಪಂಡಿತ ಜವಾಹರಲಾಲ್ ನೆಹರು ಶಿವ್ಪ್ರಸಾದ ತಂದನ್ [illegible] ಕೃಷ್ಣಕಾಂತಮಾಲವೀಯರಿಗೆ 'ಎ' ಕ್ಲಾಸ್ ಕೊಡಬಹುದೆಂದು ಸ್ಥಳೀಯ ಸರಕಾರವು ಅಪ್ಪಣೆಯಿತ್ತಿದೆ ಶ್ರೀಮತೀ ಉಮಾ ನೆಹರುರವರು ೧೪೪ನೇ ಸೆಕ್ಷನನ್ನುಲ್ಲಂಘಿಸಿದುದಕ್ಕಾಗಿ ವಿಚಾರಣೆಯು ನಡೆಯುತ್ತಿದೆ

ಅಲ್ಲಹಾಬಾದಿನಲ್ಲಿ

ಕೋವಿ ಮದ್ದುಗಳನ್ನು ಮಾಡುವ ಎರಡು ಹಿಂದೀಯ ಕಂಪೆನಿಗಳು ತಮ್ಮ [illegible] ಪೋಲೀಸ್ ಲೈಸೆನ್ಸು ಭಗ್ನವಾಗಿಡಬೇಕೆಂದಪ್ಪಣೆಯಾಗಿದೆ

ತಾರೀಖು ೧೭ರಲ್ಲಿ

ಕೊಮಿಲ್ಲದಲ್ಲಿ

[illegible] ವಿದ್ಯಾರ್ಥಿಗಳ [illegible] ಸಭೆಯೊಂದನ್ನು [illegible] ತಮ್ಮ ಮಕ್ಕಳ [illegible] ಹೇಳಿರುವರು

ಅಲ್ಲಿಯ ಶ್ರೀ ಸಿಬಾರನ್ ಗೋಸ್ ಎಂಬ ಒಬ್ಬ ವಕೀಲರನ್ನು [illegible]

ಡೆಕ್ಕಾದಲ್ಲಿ

ಮಿಸ್ [illegible] ಎಂಬವರನ್ನು ಇನ್ನಿತರ [illegible] ಮಂದಿ ಯುವಕರನ್ನು ದಸ್ತಗಿರಿ ಮಾಡಿರುವರು ಅವರಿಗೆ ಒಂದೊಂದು ತಿಂಗಳ ಸಾದಾ ಸಜೆಯಾಗಿದೆ

ಮುನ್ಶಿಗಂಜಿನಲ್ಲಿ

ಪಿಕೆಟ್ ಮಾಡಿದ ಸಂಬಂಧ ಆರು ಮಂದಿ ಯುವಕರನ್ನು ದಸ್ತಗಿರಿ ಮಾಡಿ ಒಬ್ಬೊಬ್ಬರಿಗೆ ಆರಾರು ತಿಂಗಳ ಸಜೆಯು ವಿಧಿಸಲ್ಪಟ್ಟಿದೆ

ರಾಜಶಾಹಿಯಲ್ಲಿ

[illegible] ಮಂದಿ ಕೊಂಗ್ರೆಸ್ ವಾಲಂಟಿಯರನ್ನು ದಸ್ತಗಿರಿ ಮಾಡಿ [illegible] ೫೦ ರೂಪಾಯಿ ಜುಲುಮಾನೆಯನ್ನು [illegible] ಕೇಳಿರುವರು ಅದಕ್ಕೆ ತಪ್ಪಿದರೆ [illegible] ಸಜೆಯು ವಿಧಿಸಲಾಗುವುದು [illegible] ಪತ್ರಿಕೆ ಕೊಡಲೂ ಒಪ್ಪಲಿಲ್ಲ

ಕಲ್ಕತ್ತದಲ್ಲಿನ

ಕೆಲವು [illegible] ವಿದ್ಯಾರ್ಥಿಗಳು ಕೊಂಗ್ರೆಸ್ ಗೀತಗಳನ್ನು [illegible] ಅದನ್ನು ತಿಳಿದು ಪೋಲೀಸರು [illegible] ಮೂವತ್ತು ಮಂದಿ ವಿದ್ಯಾರ್ಥಿಗಳನ್ನು ಕೈದು ಮಾಡಿದರು ಮಿಸ್ [illegible] ತರುಣಿಯೂ ಕೈದಿ [illegible] ವಿದ್ಯಾರ್ಥಿಗಳ [illegible] ಮಾಡಿದರು

ಯುತ್‌ಲೀಗಿನ

ಶ್ರೀ ನಾರಾಯಣ [illegible] ಎಂಬವರನ್ನು ಕೈದು ಮಾಡಿ ೧ ವರುಷ ಕಠಿಣ ಸಜೆಗೊಳಗಾಮಾಡಿದರು ಪಿಕೆಟಿಂಗಿನ ಸಂಬಂಧ ೫೦ ಮಂದಿಗಳನ್ನು ಕೈದುಮಾಡಿರುವರು

ನಾಗಪುರದಲ್ಲಿ

ಒಟ್ಟು [illegible] ಮಂದಿಗಳ ಕೈದುಗಳಾಗಿವೆ

ಪೇಶಾವರದಲ್ಲಿ

೩೦೦ ಮಂದಿ ಕೊಂಗ್ರೆಸ್ ಪಕ್ಷೀಯರು ಒಂದು ಕೊಂಗ್ರೆಸ್ ಆಫೀಸಿನಲ್ಲಿದ್ದರು ಅವರಿದ್ದಲ್ಲಿಗೆ ಸೈನಿಕರನ್ನೊಡಗೂಡಿ ಪೋಲೀಸ್ ಫೌಜು ಹೋಗಿ ಮಂದಾಳುಗಳನ್ನು ದಸ್ತಗಿರಿ ಮಾಡಿತು ರಾಷ್ಟ್ರಧ್ವಜವು ಕಿತ್ತು ತೆಗೆಯಲ್ಪಟ್ಟಿತು

ತಾರೀಖು ೧೮ರಲ್ಲಿ

ಲಾಹೋರಿನಲ್ಲಿ

ಡಾ ಸತ್ಯಪಾಲರನ್ನೂ, ಟ್ರಿಬ್ಯೂನ್ ಮುದ್ರಣಾಲಯದ ಮ್ಯಾನೇಜರಾದ ಶ್ರೀ ಜಗತ್ ನಾರಾಯಣರೆಂಬವರನ್ನೂ ಕೈದುಮಾಡಿದರು ಅಲ್ಲಿಯ ಪಂಜಾಬ್ ಕೊಂಗ್ರೆಸ್ ಕಮಿಟಿಯ ಎರಡನೇಯ ಡಿಕ್ಟೇಟರಾದ ಮಂಗಲ್ ಸಿಂಗ್ ಎಂಬವರನ್ನೂ ಕೈದುಮಾಡಿದರು

ಅಲ್ಲಾಹಾಬಾದಿನಲ್ಲಿ

ಶ್ರೀಮತಿ ಉಮಾ ನೆಹರುರವರ ನ್ಯಾಯವಿಚಾರಣೆಯಾಗಿ ಅವರಿಗೆ ೬ ತಿಂಗಳ ಕಠಿಣ ಸಜೆಯು ವಿಧಿಸಲಾಯಿತು ಶ್ರೀಮತಿಯವರು ನ್ಯಾಯವಿಚಾರಣೆಯಲ್ಲಿ ಭಾಗವಹಿಸಲಿಲ್ಲ

ಕೊಲೊಂಬೊವಿನ

ಕಾಂಡಿಯನ್ [illegible] ಶ್ರೀ [illegible] ಬೆರಿಸ್ಟರ [illegible] ಕಠಿಣ ಕೆಲಸದ ಸಜೆಗೂ [illegible] ಜುಲುಮಾನೆಗೂ [illegible] ಮಾಡಿ [illegible]

ಬನಾರಸ್‌ನಲ್ಲಿ

೧೯ ಮಂದಿ ಸ್ವಯಂಸೇವಕರೂ ೧೦ ಮಂದಿ ಸ್ತ್ರೀಯರೂ ಮಂದಿ ಪುರುಷರೂ ಪಿಕೆಟಿಂಗ್ ಸಂಬಂಧವಾಗಿ ಕೈದು ಮಾಡಲ್ಪಟ್ಟಿರುವರು ಬಹಿಷ್ಕಾರ ಸಂಬಂಧವಾಗಿ ಜರಗಿದ ಒಂದು ಸಭೆಯು ಪೋಲೀಸರಿಂದ ಚದರಿಸಲ್ಪಟ್ಟಿತು [illegible] ಮಂದಿಗಳಿಗೆ [illegible] ವಾರ್ತೆಯಿದೆ

ಲಕ್ನೋವಿನಲ್ಲಿ

೧೯ ಮಂದಿ ಸ್ವಯಂಸೇವಕರು [illegible] ಮಾಡಲ್ಪಟ್ಟರು [illegible] ಮಂದಿ [illegible] ಮಾಡಿರುವರೆಂದು ತಿಳಿದುಬಂದಿದೆ [illegible] ಮಂದಿ ಸ್ವಯಂಸೇವಕರಿಗೆ ವಿವಿಧ ಶಿಕ್ಷೆಯಾಗಿದೆ

ಕಾನ್‌ಪುರದಲ್ಲಿ

ವಿದೇಶಿ ವಸ್ತ್ರ ಬಹಿಷ್ಕಾರ ಸಂಬಂಧ [illegible] ಮಂದಿ ಕೊಂಗ್ರೆಸ್ಸು ವಾಲಂಟಿಯರನ್ನು ದಸ್ತಗಿರಿ ಮಾಡಿರುವರು ಗಾಂಧೀಸೇವಾ ಸಂಘದ ಸೆಕ್ರೆಟರಿಯವರಾದ ಶ್ರೀ ಬಾಲಕೃಷ್ಣರೆಂಬವರು [illegible] ದಸ್ತಗಿರಿ ಮಾಡಿರುವರು

ಮುಂಬಾಯಿಯ

ಬಂಕಸಾಲಿನ [illegible] ಸ್ವಯಂಸೇವಕರು ಪಿಕೆಟಿಂಗ್ ಮಾಡುತ್ತಿರುವಾಗ ೧೨ ಮಂದಿಗಳನ್ನು ದಸ್ತಗಿರಿಮಾಡಿ [illegible] ತಿಂಗಳ ಸಜೆಕೊಟ್ಟರು ಹಿಂದೂಸ್ತಾನೀ ಸೇವಾದಳದ ಜನರಲ್ ಸೆಕ್ರೆಟರಿಯವರಾದ ಡಾ ಹರ್ಡೀಕರರನ್ನು ಬಂಧಿಸಿದರು

ಪೂನಯಲ್ಲಿ

[illegible] ಸಭೆಯನ್ನು [illegible] ಕೊಂಗ್ರೆಸ್ಸಿನ ಡಿಕ್ಟೇಟರ್ ಶ್ರೀಮತಿ ಲಕ್ಷ್ಮೀಬಾಯಿ ಎಂಬವರನ್ನು ಇನ್ನಿತರ [illegible] ಮಂದಿಗಳನ್ನು ದಸ್ತಗಿರಿ ಮಾಡಿದರು

ಅಹ್ಮದಾಬಾದಿನಲ್ಲಿ

[illegible] ಕೊಂಗ್ರೆಸ್ ಕಮಿಟಿಯ ಸೆಕ್ರೆಟರಿಯವರಾದ ಶ್ರೀ [illegible] ಎಂಬವರನ್ನು ದಸ್ತಗಿರಿ ಮಾಡಿದ್ದರಷ್ಟೆ, ಅವರನ್ನೂ ಇನ್ನಿತರರನ್ನೂ ಬಿಡುಗಡೆಮಾಡಿದರು ಆದರೆ ಅವರು ಪೋಲೀಸರಿಗೆ ಪ್ರಮಾಣಿಕವಾಗಿ ನಡಕೊಳ್ಳದಿದ್ದುದಕ್ಕೆ ಪುನಃ ದಸ್ತಗಿರಿಮಾಡಿದರು

'ನವಜೀವನ'ದ

ಸಂಪಾದಕರಾದ ಶ್ರೀ ಮೋಹನ್‌ಲಾಲ್ ಭಟ್ ಎಂಬವರನ್ನು ಕೈದುಮಾಡಿ, ೧ ವರುಷದ ಕಠಿಣ ಶಿಕ್ಷೆಯನ್ನೂ ೨೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು ಜುಲುಮಾನೆ ಕೊಡದಿದ್ದಲ್ಲಿ ಪುನಃ ಒಂದು ತಿಂಗಳ ಶಿಕ್ಷೆ

ವಿವಿಧ ಸಮಾಚಾರಗಳು.

ವಿವಾಹದ ಮೇಲೊಂದು ಬಾಣ.

ಲಂಡನಿನಲ್ಲಿ 'ಆರ್ಚ್ ಬಿಷಪ್ ಒಫ್ ಕೆಂಟರ್‌ಬರಿ' ಇವರು ವಿವಾಹದ ಕುರಿತು ಕೆಲವು ಅಪ್ಪಣೆಗಳನ್ನೊಳಗೊಂಡ ಒಂದು ಪತ್ರವನ್ನು ಪ್ರಕಟಿಸಿರುತ್ತಾರೆ. ತನ್ನ ಕೈ ಕೆಳಗೆ ವಿವಾಹದೀಕ್ಷೆಯನ್ನು ಹೊಂದುವವರು ಈ ಅಪ್ಪಣೆಗಳನ್ನು ಪಾಲಿಸಬೇಕೆಂದು ಕೇಳಿಕೊಂಡಿರುವರು. ಅವರ ಹೇಳಿಕೆಯ ಮೇರೆಗೆ "ಹೆಂಡತಿಯು ತನಗೆ ಮಕ್ಕಳು ಬೇಡವೆಂದು ವಿವಾಹವಾಗಬಾರದು. ತೀರಿ ಹೋದ ತನ್ನ ಹೆಂಡತಿಯ ಸಹೋದರಿಯಳನ್ನು ಪುರುಷನು ವಿವಾಹವಾಗಬಾರದು. ಬೆಪ್ಟೈಸ್ ಆಗದ ವಧೂವರರಿಗೆ ಇಗರ್ಜಿಗಳಲ್ಲಿ ವಿವಾಹವನ್ನು ಮಾಡಬಾರದು. ಇವರ ಈ ಅಪ್ಪಣೆಗಳನ್ನು ವಿಮರ್ಶಿಸುವಾಗ ಲೋರ್ಡ್ ಬ್ರೆಂಟ್‌ಫೋರ್ಡರು ಬರೆಯುವುದೇನೆಂದರೆ "ಮತವಾದ ಪ್ರಶ್ನೆಗಳು ಕಾದಿರುತ್ತಿರುವ ಈ ಕಾಲದಲ್ಲಿ ಇಂತಹ ಸಮಸ್ಯೆಗಳಿಗೆ ಕೈಯಿಕ್ಕುವುದು ಸರಿಯೋ? ಮತ್ತು ಏನೂ ತಿಳಿಯದ ಒಬ್ಬ ತರುಣಿಯು ಒಬ್ಬ ಕ್ರೂರಿಷ್ಟ ಗಂಡನನ್ನು ವರಿಸಿದರೆ, ಕ್ರಮೇಣ ಅವನ ಕ್ರೂರತನದಿಂದ ಪಾರಾಗಲಾದರೂ ಅವಳಿಗೆ ಎಡೆಬೇಡವೇ?"

* * *

ಶಬ್ದವು ಬರಹರೂಪಕ್ಕೆ

ಇಂಗ್ಲೆಂಡಿನಲ್ಲಿ ಫೆಬ್ರುವರಿ ತಿಂಗಳ ಆರಂಭದಿಂದ ಟೆಲಿಫೋನ್ ಸಂಬಂಧವಿರುವ ಪ್ರತಿಯೊಂದು ಮನೆಯಲ್ಲಿಯೂ ಒಂದೊಂದು ಟೈಪ್‌ರೈಟರ್ ಯಂತ್ರವನ್ನು ಇಡುವರು. ಟೆಲಿಫೋನ್ ಯಂತ್ರಕ್ಕೂ ಟೈಪ್‌ರೈಟರಿಗೂ ಸಂಬಂಧವು ಕಲ್ಪಿಸಲಾಗುವುದು. ಟೆಲಿಫೋನ್ ಮೂಲಕ ಮಾತನಾಡುವುದರ ಬದಲಿಗೆ ಟೈಪ್‌ರೈಟನ್ನು ಉಪಯೋಗಿಸುತ್ತ ಹೋದರೆ, ದೂರದಲ್ಲಿ ಮತ್ತೊಂದು ಕಡೆಯಲ್ಲಿರುವ ಇನ್ನೊಂದು ಟೈಪ್‌ರೈಟರು ತಾನೇ ಕಾಗದದಲ್ಲಿ ಮುದ್ರಿಸಿ ಬಿಡುವುದು. ಇದರಿಂದಾಗಿ ಮಾತಿನ ಸಂದರ್ಭದಲ್ಲಿ ಮರೆತು ಹೋಗುವ ವಿಷಯಗಳೂ ಕಾಗದದಲ್ಲಿ ರಿಕಾರ್ಡಾಗುವುವು. ಈ ಬಗೆಯ ಸಂಬಂಧವನ್ನು ಇನ್ನು ಮುಂದೆ ಟೆಲಿಪ್ರಿಂಟರ್ ಎಂದು ಕರೆಯುವರು. ಟೆಲಿಫೋನಿನ ಮೂಲಕ ಕರೆಯುವಾಗ ಇನ್ನೊಂದು ಕೊನೆಯವನು ಮನೆಯಲ್ಲಿರದಿದ್ದರೂ ಕೂಡಾ ಈ ಟೆಲಿಪ್ರಿಂಟರು ಸಕಲ ಸಂಗತಿಗಳನ್ನು ಬರೆದಿಡುತ್ತದೆ. ಇದರಿಂದ ವ್ಯಾಪಾರಸ್ಥರಿಗೂ ಬಹಳ ಪ್ರಯೋಜನವಿದೆಯೆಂದು ಕಂಡುಹಿಡಿದಿದ್ದಾರೆ. ಬಾಯಿ ಮಾತನ್ನು ನಂಬಿ ಕೆಟ್ಟು ಹೋಗುವ ಪ್ರಸಂಗಗಳು ಇದರಿಂದಾಗಿ ಕಡಿಮೆಯಾದೀತೆಂದು ತಿಳಿಯಲಾಗಿದೆ.

* * *

ಲಾಭ ಯಾರಿಗೆ?

ಫ್ರಾನ್ಸ್ ದೇಶದ ಲೋಯರುಗಳ ಮುಂದೆ ಈಗೊಂದು ಗಹನವಾದ ಪ್ರಶ್ನೆಯು ಬಂದು ಕೂತಿದೆ. ಜೋಸೆಫ್ ಬೆನ್ವಾಯಟ್ ಎಂಬುವನೊಬ್ಬ ಪಬ್ಲಿಕ್ ವ್ಯಾಪಾರಿ. ಮನೆಯ ಖರ್ಚಿಗೆಂದು ಆತನು ಸ್ವಲ್ಪ ಹಣವನ್ನು ತನ್ನ ಹೆಂಡತಿಗೆ ಕೊಡುತ್ತಿದ್ದ. ಕುದುರೆ ಜೂಜು ಎಂದರೆ ಆಕೆಗೆ ಪಂಚಪ್ರಾಣ. ಮನೆ ಖರ್ಚಿಗೆಂದು ಆತನು ಕೊಡುತ್ತಿದ್ದ ಹಣದಲ್ಲಿ ಸ್ವಲ್ಪವನ್ನು ಕದ್ದು ಜೂಜಿನಲ್ಲಿ ಓಡುವ ಕುದುರೆಗಳ ಮೇಲೆ ಪಣಕಟ್ಟಿ ಜೂಜಾಡುತ್ತಿದ್ದಳು. ಒಂದಾವರ್ತಿ ಅವಳು ಪಣಕಟ್ಟಿದ ಕುದುರೆಯು ಜೂಜಿನಲ್ಲಿ ಗೆದಿತು. ಅವಳಿಗೆ ಬೇಕಾದಷ್ಟು ಹಣವು ಸಿಕ್ಕಿತು. ಈಗ ಅವಳ ಗಂಡ ಪಣಕಟ್ಟಿಸಿಕೊಳ್ಳುತ್ತಿದ್ದ ಕಂಪೆನಿಯವರ ಮೇಲೊಂದು ದಾವೆ ಹೂಡಿದ. "ನನ್ನ ಹೆಂಡತಿ ಜೂಜಿಗೆ ಕಟ್ಟಿದ್ದ ಹಣವು ಕದ್ದ ಮಾಲು, ಅದರ ಲಾಭವೆಲ್ಲ ನನಗೆ ಬರಬೇಕು" ಎಂದು ಆತನ ವಾದ. ಆತನ ವಾದ ಸರಿಯೆಂದು ಅನೇಕ ಲೋಯರುಗಳ ಅಭಿಪ್ರಾಯ. ಕಂಪೆನಿಯವರು ದಾವೆಯು ಆತನಿಗೆ ಗುಣವಾದರೆ ನಾವು ಬದುಕುವಂತೆ ಇಲ್ಲ. ಇಂತಹ ಸಾವಿರಾರು ದಾವೆಗಳಿಗೆ ನಾವು ಗುರಿಯಾಗಬೇಕಾಗುವುದು ಎನ್ನುತ್ತಿದ್ದಾರೆ. ಜೂಜಿನಲ್ಲಿ ಹಣ ಗೆದ್ದ ಆ ಹೆಂಗಸಿನ ಮೇಲೆ ಕಂಪೆನಿಯವರು ದಾವೆ ಹೂಡಿ ಅವಳಿಗೆ ಕೊಟ್ಟಿರುವ ಹಣವನ್ನೆಲ್ಲಾ ವಸೂಲು ಮಾಡಿ ಆಕೆಯ ಗಂಡನಿಗೆ ಕೊಡಬೇಕೆಂದು ಹಲವರ ಅಭಿಪ್ರಾಯ. ಲಾಭ ಯಾರಿಗೆ ಸಲ್ಲಬೇಕೆಂದು ಇನ್ನೂ ಇತ್ಯರ್ಥವಾಗಿರುವುದಿಲ್ಲ.

* * *

ಪ್ರಣಯ ಪಾಶ.

ಇಪ್ಪತ್ತಾರು ವರ್ಷ ಪ್ರಾಯದ ಆಂಗ್ಲ ತರುಣಿ ಗಂಡ ಸತ್ತು ಹೋದ ಅವಳ ಮನಸ್ಸನ್ನು ದುಃಖದ ಕಾರ್ಮುಗಿಲು ಆವರಿಸಿತು. ದುಃಖವನ್ನು ಮರೆಯಬೇಕೆಂದು ಇಂಗ್ಲೆಂಡನ್ನು ಬಿಟ್ಟು ಟರ್ಕಿ ದೇಶಕ್ಕೆ ಹೋದಳು. ಆ ದೇಶದ ಮುಖ್ಯ ಪಟ್ಟಣವಾದ ಕೊನ್‌ಸ್ಟೆಂಟಿನೋಪಲಿನಲ್ಲಿ ತನ್ನ ಮಿತ್ರರ ಮನೆಯಲ್ಲಿ ಉಳಿದುಕೊಂಡಳು. ಹಲವು ದಿನಗಳಲ್ಲಿಯೇ ಅಲ್ಲಿನ ಆಂಗ್ಲೇಯ ನಿವಾಸಿಗಳ ಪರಿಚಯವನ್ನೆಲ್ಲಾ ಪಡೆದಳು. ಸ್ವಲ್ಪ ಕಾಲ ಕಳೆಯಿತು. ಒಂದು ದಿನ ಆಕೆಯ ಸ್ನೇಹಿತರೊಬ್ಬರ ಮನೆಯಲ್ಲೊಂದು ವಿಹಾರ ಕೂಟವು ನೆರೆಯಿತು. ಆ ಸಂದರ್ಭದಲ್ಲಿ ಆಕೆಗೂ ಅಲ್ಲಿಗೆ ಬಂದಿದ್ದ ಟರ್ಕಿ ತರುಣನೊಬ್ಬನಿಗೂ ಪರಿಚಯವಾಯಿತು. ಪರಿಚಯವು ಸ್ನೇಹವಾಯಿತು. ಆಂಗ್ಲ ತರುಣಿಯೂ ತನ್ನೂರಿಗೆ ಹಿಂದಿರುಗುವ ದಿವಸ ಬಂತು. ಅಲ್ಲಿಯ ತನಕವೂ ಅವರಿಬ್ಬರಲ್ಲಿ ಪರಸ್ಪರ ಸ್ನೇಹ ಭಾವನೆಯಿತ್ತಾದರೂ, ಅದು ಪಕ್ವವಾಗಿ ಪ್ರಣಯವಾಗಿರಲಿಲ್ಲ. ಈ ಸ್ನೇಹಿತರು ಒಬ್ಬರನ್ನೊಬ್ಬರು ಅಗಲುವಾಗ ಆ ತರುಣಿಯು "ನನ್ನ ವಿಚಾರವಾಗಿ ತಮ್ಮ ಅಭಿಪ್ರಾಯವೇನು?" ಎಂದಳು. "ಸ್ತ್ರೀ ಸೌಂದರ್ಯ, ಉದಾತ್ತತೆ ಇವೆರಡೂ ನಿನ್ನಲ್ಲಿ ಒಟ್ಟುಗೂಡಿವೆ" ಎಂದನು ತರುಣ. "ನಾವು ಈಗ ಒಬ್ಬರನ್ನೊಬ್ಬರು ಅಗಲಿರುವೆವಾದರೂ ಪತ್ರ ಮುಖೇನ ನಮ್ಮ ಸ್ನೇಹವನ್ನೇಕೆ ಬೆಳೆಸುತ್ತಿರಬಾರದು?" ಎಂದಳು ತರುಣಿ. ತರುಣನು ಒಪ್ಪಿದ. ಒಬ್ಬರ ವಿಳಾಸವನ್ನು ಒಬ್ಬರು ಬರೆದುಕೊಂಡರು. ತರುಣಿಯು ಕೊನ್‌ಸ್ಟೆಂಟ್‌ನೋಪಲನ್ನು ಬಿಟ್ಟು ಒಂದು ವಾರವಾಗುವುದರೊಳಗಾಗಿ ಆಕೆಯಿಂದ ತರುಣನಿಗೊಂದು ಪತ್ರವು ಬಂತು. ಸಾಮಾನ್ಯ ರೀತಿಯಲ್ಲಿ ಪತ್ರ ವ್ಯವಹಾರವು ನಡೆದಿತ್ತು. ಹಲವು ದಿನಗಳ ಮೇಲೆ ಪತ್ರ ವ್ಯವಹಾರದಲ್ಲಿ ಪ್ರಣಯ ಸೂಚನೆಯು ತಲೆದೋರಿತು. ತರುಣನು ದಿಗ್ಭ್ರಾಂತನಾದ. "ನಿನ್ನ ಮೇಲೆ ನನಗೆ ಉತ್ಕಟ ಪ್ರೇಮವುಂಟಾಗಿದೆ. ನಾವಿಬ್ಬರೂ ಮದುವೆಯಾಗಿ ಸುಖಿಸೋಣ" ಎಂದೊಂದು ಪತ್ರ ಬಂತು. ಆ ತರುಣಿಯಿಂದ ಅದಕ್ಕೇನುತ್ತರ ಬರೆಯಬೇಕೆಂದು ತೋಚದಾಯಿತು ತರುಣನಿಗೆ. ಸುಮ್ಮನಿದ್ದ. ಅಷ್ಟರಲ್ಲಿ ತರುಣನ ಹುಟ್ಟಿದ ಹಬ್ಬವು ಬಂತು. ಆ ದಿನಕ್ಕೆ ಸರಿಯಾಗಿ ಆತನ ಪ್ರೇಯಸಿಯು ೫೦,೦೦೦ ರೂಪಾಯಿ ಬೆಲೆಯುಳ್ಳ ಒಂದು ಮೋಟಾರನ್ನು ತರುಣನಿಗೆ ಕಳುಹಿಸಿದಳು. ಅದನ್ನು ಕಂಡು ತರುಣನು ಕಕ್ಕಾಬಿಕ್ಕಿಯಾದ. ಕೊನೆಗೆ ಆ ಹಣವನ್ನು ಆಕೆಯ ಹೆಸರಿನಲ್ಲಿ ಬ್ಯಾಂಕಿನಲ್ಲಿಟ್ಟು, ಆ ಮೋಟಾರನ್ನು ಆಕೆಯ ಹೆಸರಿನಲ್ಲಿಯೇ ಸಂರಕ್ಷಿತವಾಗಿ ಇರಿಸಿದ. ತರುಣನ ಧರ್ಮಬುದ್ಧಿಯನ್ನು ಕಂಡು ಆಕೆಗೆ ಆತನ ಮೇಲಿದ್ದ ಅಭಿಮಾನವು ಇನ್ನೂ ಹೆಚ್ಚಿತು. ಕೆಲ ದಿವಸಗಳಲ್ಲಿ ಲಕ್ಷಾಂತರ ಬೆಲೆ ಬಾಳುವ ತನ್ನ ಆಸ್ತಿಯನ್ನೆಲ್ಲಾ ಆತನಿಗೆ ಕೊಟ್ಟಿರುವುದಾಗಿ ತಿಳಿಸಿ ಆತನ ಪ್ರೇಮ ಭಿಕ್ಷೆ ಬೇಡಿದಳು. ತರುಣನ ಎದೆ ಕರಗಿ ನೀರಾಗಿ ಹೋಯಿತು. ತರುಣಿಗೆ ಪ್ರೇಮ ಭಿಕ್ಷೆಯನ್ನು ನೀಡಿದನು. ಆದರೆ ತಾನು ಆಕೆಯನ್ನು ಮದುವೆಯಾದರೂ, ಇಂಗ್ಲೆಂಡಿನಲ್ಲಿರಲು ತನಗೆ ಮನಸ್ಸಿಲ್ಲವೆಂದೂ, ತಾವಿಬ್ಬರೂ ಕೊನ್‌ಸ್ಟೆಂಟಿನೋಪಲಿನಲ್ಲೇ ಇರುವಂತಾಗಬೇಕೆಂದೂ ಆಕೆಗೆ ತಿಳಿಸಿದ. ತರುಣಿಯು ಆ ಬೇಡಿಕೆಗೆ ಒಪ್ಪಿದಳು. ಕೊನ್‌ಸ್ಟೆಂಟಿನೋಪಲಿನ ಹತ್ತಿರದಲ್ಲಿ ಉತ್ತಮವಾದ ಬಂಗಲೆಯೊಂದನ್ನು ಕೊಂಡುಕೊಂಡು ಅಲ್ಲಿ ವಾಸವಾಗಬೇಕೆಂದು ಅವರಿಬ್ಬರೂ ತೀರ್ಮಾನಿಸಿರುವರು. ಆ ಮನೆಯಲ್ಲಿ ಅವರ ವಾಸಕ್ಕಾಗಿ ಸಕಲ ಸಿದ್ಧತೆಗಳು ಮುಗಿದ ಮೇಲೆ ಕೊನ್‌ಸ್ಟೆಂಟಿನೋಪಲಿನಲ್ಲಿ ಇವರೀರ್ವರ ವಿವಾಹವು ನೆರವೇರಬೇಕೆಂದು ನಿಶ್ಚಯವಾಗಿದೆ.

* * *

ಮೋಟರಿಗೆ ಮೌನವ್ರತ

ಈಗಿನ ಮೋಟರುಗಳು ಓಡುವಾಗ ಬಹಳ ಶಬ್ದವಾಗುತ್ತದಷ್ಟೆ. ಆ ಶಬ್ದವನ್ನು ನಿಲ್ಲಿಸಿ ಮೋಟಾರು ಮೌನವಾಗಿ ನಡೆಯಬೇಕೆಂಬ ಉದ್ದೇಶದಿಂದ ಇಂಗ್ಲೆಂಡಿನಲ್ಲಿ ಬಹಳ ಯತ್ನವು ನಡೆಯುತ್ತಾ ಬಂತು. ಇತ್ತೀಚಿನ ಪರಿಶೋಧನೆಯಿಂದಾಗಿ ಮೌನವಾಗಿ ಓಡುವ ಮೋಟಾರುಗಳನ್ನು ನಿರ್ಮಿಸಬಹುದೆಂದಾಗಿದೆ. ಅವನ್ನು ಹೇಗೆ ನಿರ್ಮಿಸುವರೆಂದು ಮೋಟಾರು ಪ್ರವೀಣರು ಪ್ರಕಟಿಸಿದ್ದಾರೆ. ಮೋಟಾರಿನ ಯಂತ್ರದೊಳಗೆ ಶಬ್ದವನ್ನು ಹೀರುವ ಪದಾರ್ಥ... ಮೋಟಾರು ಓಡುವಾಗ ಯಂತ್ರದಿಂದಾಗುವ ಶಬ್ದವನ್ನು ಈ ಪಕ್ಕಗಳಿಂದ ಎಳೆಸುವುವು. ಯಂತ್ರದ ನಡುಕವನ್ನೂ ಕಡಿಮೆ ಮಾಡುವಂತೆಯೂ ಯತ್ನವಾಗುತ್ತಿದೆ. ಇತ್ತೀಚಿನಲ್ಲಿ ನಿರ್ಮಿಸಲಾಗುವ ಮೋಟಾರುಗಳಿಗೆ ಈ ಪಕ್ಕಗಳನ್ನು ಇಟ್ಟು, ಯತ್ನವು ಸಾರ್ಥಕವಾಗುವುದೋ ಎಂದು ನೋಡಲಿರುವರು. ಈ ಸುದ್ದಿಯು ಮೋಟಾರು ವ್ಯಾಪಾರಿಗಳಿಗೆ ತಿಳಿದು ಬಂದು ಎಲ್ಲರೂ ತಮ್ಮ ತಮ್ಮ ಮೋಟಾರುಗಳು ಮೌನವ್ರತವನ್ನಾಚರಿಸುವಂತೆ ಮಾಡುವರು. ಈ ಮೋಟಾರುಗಳಿಗೆ ಕರ್ಣಕಠೋರವಾದ ಶಬ್ದವಿದ್ದೇ, ಸಾವಿರಗಟ್ಟಲೆ ಜನರು ಅವುಗಳ ಅಡಿಗೆ ಬಿದ್ದು ಸಾಯುತ್ತಿರುವರು; ಇನ್ನು ಶಾಂತರೀತಿಯ ಮೋಟಾರುಗಳು ಹಿಂದಿನಿಂದ ಬರುವುದನ್ನು ತಿಳಿಯದೆ ಎಷ್ಟು ಸಾವಿರ ಜನರು ಮರಣ ಹೊಂದಲಿರುವರೋ ಎಂದು ಕೆಲವರ ಅಭಿಪ್ರಾಯವಿದೆ. ಅಂತೂ ಇನ್ನು ಕೆಲವು ವರ್ಷಗಳೊಳಗೆ ಮೋಟಾರಿನ ಓಟದಲ್ಲಿ ಹೆಚ್ಚಿನ ಸುಧಾರಣೆಯಾಗಲಿದೆ.

* * *

ಕ್ರಿಸ್‌ಮಸ್ ಗಲಭೆ

ಈ ಸಲದ ಕ್ರಿಸ್‌ಮಸ್ ಸಮಯದಲ್ಲಿ ಇಂಗ್ಲೆಂಡು, ಅಮೇರಿಕಾ ಮೊದಲಾದ ದೇಶಗಳಲ್ಲಿ ಮರಣೋನ್ಮುಖರಾದ ಜನಸಂಖ್ಯೆಯು ಬಹಳ ಹೆಚ್ಚಿವೆ. ಕ್ರಿಸ್‌ಮಸ್ ಕಳೆದು ಜನವರಿ ತಿಂಗಳು ಕೂಡಾ ಇಂಗ್ಲೆಂಡಿನವರಿಗೆ ಶುಭಸೂಚನೆಯನ್ನು ಉಂಟುಮಾಡಿರುವುದಿಲ್ಲ. ಲಂಡನಿನವರು ಬಹಳ ಸುಖದಿಂದಿದ್ದಾರೆ. ಆದರೆ ಆ ಪಟ್ಟಣದ ಸುತ್ತಲಿನ ಪಟ್ಟಣ ಪ್ರಾಂತ್ಯಗಳು ನೆರೆಗೆ ಸಿಲುಕಿವೆ. ನೊಂಬಸ್ಸರಿನಲ್ಲಿ ಬಿರುಸಾದ ಮಳೆಯು ರಾತ್ರಿಹಗಲು ಸುರಿಯುತ್ತಿದೆ. ಎಲ್ಲಾ ಹೊಳೆಗಳು ನೆರೆಯಿಂದ ತುಂಬಿವೆ. ಸಂಕಗಳು ಮುಚ್ಚಲ್ಪಟ್ಟವೆ. ಕೆಲವು ಸಂಕಗಳು ಬಿದ್ದಿವೆ. ವೆಸ್ಟ್ ಸ್ಕೋಟ್‌ಲೆಂಡಿನಲ್ಲಿ ಎಲ್ಲಾ ಕಡೆಗಳಲ್ಲೂ ನೆರೆಯ ನೀರು ತುಂಬಿದೆ. ಸಾವಿರಾರು ಜನರಿಗೆ ಮನೆಯಿಲ್ಲದಂತಾಗಿದೆ. ಅಂಗಡಿ, ಮನೆಗಳ ಬಾಗಿಲುಗಳಲ್ಲಿ ಒಂದೆರಡು ಅಡಿ ನೀರು ತುಂಬಿದ್ದು, ಚಿಕ್ಕ ಮಕ್ಕಳು ಹೊರಗೆ ಹೋಗಲವಕಾಶವಿಲ್ಲ. ಕ್ಲೈಡ್ ನದಿಯು ಬಹಳ ನೆರೆಯಿಂದ ತುಂಬಿದೆ. ಕೆಲಸಕ್ಕೆ ಹೋಗುವವರು ತಮ್ಮ ಸ್ನಾನದ ಉಡುಪನ್ನು ಹಾಕಿಕೊಂಡು ನೀರಿನಲ್ಲಿ ನಡೆದು, ಈಜಾಡಿ ಹೋಗುತ್ತಿರುವರು. ಹಾಲು ಮಾರುವ ಒಬ್ಬ ಹುಡುಗನು ಸ್ನಾನದ ಉಡುಪನ್ನು ಹಾಕಿಯೇ ತನ್ನ ಕೆಲಸವನ್ನು ಪೂರೈಸಿದನು. ಮೆಂಚೆಸ್ಟರಿನಲ್ಲಿ ಒಂದು ಅಂತಸ್ತಿನ ಮೇಲೆ ಎರಡು ವಾರದ ಹಿಂದೆ ಜನಿಸಿದ ಕೂಸೂ ಅದರ ತಾಯಿಯೂ ನೀರನ್ನು ದಾಟಿಬರಲಾರದಾದರು. ಅವರ ಮನೆಯು ನೀರುಪಾಲಾಗುವ ಸ್ಥಿತಿಯಲ್ಲಿತ್ತು. ಕೊನೆಗೆ ಮೂವರು ಯುವಕರು ಬಹಳ ಸಾಧನೆಗೈದು ಒಂದು ದೋಣಿಯನ್ನು ಆ ನೀರಿನ ಮೇಲೆ ಓಡಿಸಿ, ಆ ತಾಯಿಯನ್ನೂ ಅವಳ ಕೂಸನ್ನೂ ಸಂರಕ್ಷಿಸಿದರು.

* * *

ತಿಳಿಯಬೇಕಾದುದು.

ನೀರುಹುಲಿಯ ದವಡೆಯಿಂದ ಉಂಟಾಗುವ ಎಣ್ಣೆಯು ಗಡಿಯಾರಗಳಿಗೆ ಬಹಳ ಒಳ್ಳೆಯ ದಂತೆ. ಒಂದು ಮಾಸಿನಲ್ಲಿ ಇದು ೨೦ ಚಮಚದಷ್ಟು ಮಾತ್ರ ಸಿಗುತ್ತದೆ. ಹೆಣ್ಣು ಜೇಡರ ಹುಳವು ಗಂಡಿಗಿಂತ ದೊಡ್ಡದೂ ಕ್ರೂರಿಯೂ ಆಗಿರುತ್ತದೆ. ಅದು ಅನೇಕ ಸಮಯಗಳಲ್ಲಿ ತನ್ನ ಗಂಡಂದಿರನ್ನೇ ತಿನ್ನುವುದುಂಟು. ಕಾಡು ಬಾತುಗಳು ಗಂಟೆಗೆ ೫೦ ಮೈಲು ಸ್ವರದಿಂದ ಹಾರಬಲ್ಲವು. ಇದರೂ ಭೆಳ್ಳಕ್ಕಿ ಅದಕ್ಕಿಂತಲೂ ವೇಗವಾಗಿ ಹಾರಬಲ್ಲದು. ಸ್ವಿಫ್ಟ್ ಎಂಬುದು ಗಂಟೆಗೆ ೨೦೦ ಮೈಲು ಹಾರಬಲ್ಲುದು. ಪಕ್ಷಿಗಳಲ್ಲೆಲ್ಲಾ ಬಹುಕಾಲ ಬದುಕುವುದೆಂದರೆ ಹಂಸ. ಅದು ೩೦೦ ವರ್ಷಗಳ ಪರ್ಯಂತರ ಬದುಕುವುದೂ ಉಂಟಂತೆ. ಹದ್ದು ಸಾಧಾರಣವಾಗಿ ೧೩೦ ವರುಷಗಳ ವರೆಗೂ ಬದುಕಿರುವುದು ತಿಳಿದುಬಂದಿದೆ. ವೃಥಕಾಯವಾದ ಕೋಳಿಯು ಜೀವಮಾನದಲ್ಲಿ ೩೦೦ರಿಂದ ೫೦೦ ಮೊಟ್ಟೆಗಳನ್ನು ಇಡುವುದು. ಅದರ ಎರಡನೆಯ ವರ್ಷದಲ್ಲಿಯೇ ಬಹಳ ಮೊಟ್ಟೆಗಳನ್ನು ಇಡುವುದು.

"ಕರ್ಮವೀರ"ನಿಗೆ ಕೆಲಕಾಲ ರಜೆ.

ವಾಚಕರಲ್ಲಿ ಭಿನ್ನಹ

ಕರ್ಮವೀರ ಕಾರ್ಯಾಲಯವಿದ್ದ (ಮೊಹಿನಿ ಗುರುರಾಯರ ಮನೆ) ಸ್ಥಳದಲ್ಲಿ ವಿದ್ಯಾರಣ್ಯ ಶಿಬಿರವಿರುವದೆಂದು ಮುಂಬಾಯಿ ಸರಕಾರದವರು ಅದನ್ನು 'ನೋಟಿಫಾಯ್ಡ್ ಏರಿಯಾ'ದ ಯಾದಿಯಲ್ಲಿ ಸೇರಿಸಿ ಅದರಂತೆ ತಾ. ೧೦-೧-೩೧ನೇ ದಿನ ತಮ್ಮ ವಶಕ್ಕೆ ತೆಗೆದುಕೊಂಡರು. ಕಳೆದ ವರ್ಷ ಜೂನ್ ತಿಂಗಳಲ್ಲಿ ವಿದ್ಯಾರಣ್ಯ ಶಿಬಿರವೆಂಬ ಸ್ವಯಂಸೇವಕರ ಶಿಬಿರವು ಪ್ರಾರಂಭವಾಗಿತ್ತು. ಇಲ್ಲಿಯ ಪರದೇಶಿ ಬಟ್ಟೆಯ ನಿರೋಧನ ಮಾಡುವದಕ್ಕಾಗಿ ಆ ಶಿಬಿರವು ಸ್ವಯಂಸೇವಕರಿಗಾಗಿ ಪ್ರಸ್ಥಾಪಿಸಲ್ಪಟ್ಟಿತು. ಜುಲೈ ೩೦ರಲ್ಲಿ ಕಾಂಗ್ರೆಸ್ ಮತ್ತು ಬಟ್ಟೆ ವ್ಯಾಪಾರಸ್ಥರ ನಡುವೆ ರಾಜಿಯಾಗಿ ವ್ಯಾಪಾರಸ್ಥರು ಪರದೇಶಿ ಬಟ್ಟೆಯನ್ನು ಕಟ್ಟಿಟ್ಟರಿಂದ, ಆ ಶಿಬಿರವು ಬರ್ಖಾಸ್ತಾಗಿ ಅಲ್ಲಿದ್ದ ಸ್ವಯಂಸೇವಕರು ತಮ್ಮ ತಮ್ಮ ಊರಿಗೆ ಹೋದರು. ಈ ನಿರೋಧನದ ಕೆಲಸಕ್ಕಾಗಿ ಮುಂಬಾಯಿ, ಗದಗ ಮತ್ತು ಹುಬ್ಬಳ್ಳಿ ಗ್ರಾಮಗಳಿಂದ ಸ್ವಯಂಸೇವಕರು ಬಂದಿದ್ದರು. ಜುಲೈ ೩೦ ತಿಂಗಳಲ್ಲಿ ಆ ಶಿಬಿರವು ಬಂದಾದ ನಂತರ ನಾವು ಕರ್ಮವೀರ ಕಾರ್ಯಾಲಯಕ್ಕಾಗಿ ಆ ಮನೆಯನ್ನು ಬಾಡಿಗೆಯಿಂದ ಹಿಡಿದೆವು. ಅಂದಿನಿಂದ 'ಕರ್ಮವೀರ' ಕಾರ್ಯಾಲಯವು ಅಲ್ಲಿಯೇ ಇರುವದು. ಅಲ್ಲದೆ ನಮ್ಮ ಮುದ್ರಣಾಲಯವನ್ನೂ ಅಲ್ಲಿಗೆ ತರಬೇಕೆಂದು ಬಗೆದು ತಾ. ೪-೧-೩೧ನೇ ದಿನ ಹೊಸ ಡಿಕ್ಲೇರೇಶನ ಮಾಡಿ, ಮುದ್ರಣಾಲಯವನ್ನು ಅಲ್ಲಿಗೆ ತರಲಾಯಿತು. ವಸ್ತುಸ್ಥಿತಿಯು ಹೀಗಿದ್ದರೂ ಜನವರಿ ೪ನೇ ತಾರೀಕಿನ ವರೆಗೆ ಕಾಂಗ್ರೆಸ್ ಪ್ರಚಾರಕಾರ್ಯ ಮಾಡುವ ೧೪ ಜನ ಸ್ವಯಂಸೇವಕರು ಆ ಸ್ಥಳದಲ್ಲಿದ್ದರೆಂದು ಪೋಲೀಸ ರಿಪೋರ್ಟಿನ ಆಧಾರದ ಮೇಲಿಂದ ಕಲೆಕ್ಟರರು ಕಾರ್ಯಾಲಯ ಮತ್ತು ಮುದ್ರಣಾಲಯಗಳನ್ನು ತಮ್ಮ ವಶಪಡಿಸಿಕೊಂಡಿರುವರು. ಮತ್ತು ಮುದ್ರಣಾಲಯ, ಕಾರ್ಯಾಲಯದ ಕ್ಷೇಮದ ಬಗ್ಗೆ ಮುಂಬಾಯಿ ಸರಕಾರಕ್ಕೆ ಬರೆದಿರುವೆನೆಂದೂ ಅವರು ತಿಳಿಸುವರು. ಮುಂಬಾಯಿ ಸರಕಾರದಿಂದ ಸುಮಾರು ೧೫ ದಿವಸಗಳಲ್ಲಿ ಉತ್ತರ ಬರಬಹುದು. ಅಷ್ಟು ಅವಧಿಯಲ್ಲಿ 'ಕರ್ಮವೀರ' ಪತ್ರವು ಹೊರಡಲು ಸಾಧ್ಯವಿಲ್ಲ. ಅಕಸ್ಮಾತ್ತಾಗಿ ಒದಗಿದ ಈ ಆಪತ್ತಿನಿಂದ ಪತ್ರವು ನಿಲ್ಲಿಸಲ್ಪಟ್ಟಿದ್ದಕ್ಕಾಗಿ ವಾಚಕರು ನಮ್ಮನ್ನು ಕ್ಷಮಿಸುವರಾಗಿ ನಾವು ನಂಬಿರುವೆವು. ನಮ್ಮ ಮುದ್ರಣಾಲಯವು ನಮ್ಮ ಕೈಸೇರಿದ ಮೇಲೆ 'ಕರ್ಮವೀರ'ವು ಎಂದಿನಂತೆ ಹೊರಡುವದು. ವಾಚಕರೆಲ್ಲರೂ ಕರ್ಮವೀರದ ಮೇಲೆ ಎಂದಿನಂತೆ ಪ್ರೀತಿ ವಿಶ್ವಾಸಗಳನ್ನಿಡಬೇಕಾಗಿ ಬೇಡಿಕೊಳ್ಳುವ ತಮ್ಮ ವಿಶ್ವಾಸಿಕ ಪ. ರಾ. ಪುರೋಹಿತ, ಸಂಪಾದಕ 'ಕರ್ಮವೀರ' ಧಾರವಾಡ.

ವಿ. ಸೂ.— ಕರ್ಮವೀರ ಪತ್ರಿಕೆಯು ನಿಂದಾದ ಅವಧಿಯಲ್ಲಿಯ ಸಂಚಿಕೆಗಳನ್ನು ಪತ್ರಿಕೆಯು ಪುನಃ ಹೊರಟ ಮೇಲೆ ವರ್ಗಣೀದಾರರಿಗೆ ಹೆಚ್ಚಾಗಿ ಕೊಡುವೆವು.

ಶಾಂತ್ರಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ ಕ)
ರೈಲ್ವೆ ಸ್ಟೇಶನ್ ಕಾಂಞಂಗಾಡ (S. I. R.)

ಅಖಿಲಕೇರಳ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಶಿಷ್ಯರ ... ಅನುಭವಶಾಲಿಯಾದ ... ವೈದ್ಯರಿಂದ ... [illegible]

ಚಾರದ ಪ್ರತಿ ... ವೈದ್ಯಶಾಲೆಯಲ್ಲಿ ... [illegible]

ಮ್ಯಾನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ ಕ)

ಮೂಲವ್ಯಾಧಿ

ರಕ್ತ ಅಥವಾ ಶಷ್ಕ್ಯವಾದ ಅತ್ಯಂತ ಕಠಿಣ ... ತಿನ್ನಲು ... ಪರಿಹಾರ ... ದಿನಗಳಲ್ಲಿ ... ಬೇನೆ ಸಹಿತ ನಾಶವಾಗುವುದು ... ಪ್ರಶಂಸೆ ... ಗುಣಬರದಿದ್ದರೆ ... ಕೊಡುವೆವು ಬೆಲೆ ರೂ ೩-೦-೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ... ಭಯಂಕರ ನೋವು, ಮತ್ತು ಕಿವುಡುತನ ... ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ... ಬಹಿರೋದ್ದೀಪನ ತೈಲ ... ಕಿವುಡರು ನೆಟ್ಟಗಾಗಿರುವರು ... ಹಣ ... ಬೆಲೆ ರೂ ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
23 ಕಾಂಬಾರವಾಡಿ 4ನೇ ಗಲ್ಲಿ
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ವಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ

ಬಾಟ್ಲಿವಾಲರ

ಎಗ್ಯೂ ಮಿಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.
ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು
ಬಂಡಿನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ
ಡಾ ಎಚ್ ಎಲ್ ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ ಆ ದಾದರ್ ಮುಂಬಯಿ 14

Dr H L Batl walla, Sons & Co., Ltd.
Kadell Road P O Dadar Bombay 14.

ತಂತಿ ವಿಳಾಸ:— SIRINDHUN Bombay
ಶಪೂರ್ಜಿ ಎಚ್ ಎಲ್ ಬಾಟ್ಲಿವಾಲಾ—ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್

ಶಿರಾಯಿದರ ಮೂರು ರತ್ನಗಳು

ಲೋಧ್ರ —ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಔಷಧಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣ ಪಡಿಸಿ ... ಆಯುರಾರೋಗ್ಯ ... ಕೊಡ...
ಅರ್ಕ —ಇದು ಎಲ್ಲಾ ತರದ ಜ್ವರಗಳನ್ನು ... ಪಡಿಸಿ, ಇದೇ ದೇಹವನ್ನು ಶುದ್ಧಿಗೊಳಿಸುತ್ತದೆ.
ಅಮೃತ —ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

ಕೇಸರಿ ಕುಟೀರಮ್
ಮೈಲಾಪುರ, ಮದರಾಸು.
... ಮಾರಾಟಗಾರರ ...

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ ವಾಚುಗಳೂ ಕ್ಲೋಕುಗಳೂ ಟ್ಯಾಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ ಅವುಗಳ ಸಾಮಾನುಗಳೂ ಮಾರಾಟಕ್ಕಿವೆ

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು ಕ್ಲಾಕು ಟ್ಯಾಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.
ರಿಪೇರಿ ಮಾಡುವಾಗ ಹೊಂದಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಜ್ಞಾ. ಸೂ.— ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿಸುವುದರಿಂದ ಸರಿಯಾದ ಸಮಯವು ದೊರಕುವುದು

ನಮ್ಮ ಶಾಲೆಗಳು.

೧. ಮಕ್ಕಳ ಚಟುವಟಿಕೆ.

ಲೇಖಕರು - ಶ್ರೀಯುತ ಶಿವರಾಮ ಕಾರಂತ

ಮಗುವು ಜನ್ಮವೆತ್ತಿದೊಡನೆಯೇ ಯಾವ ರೀತಿಯಿಂದ ವರ್ತಿಸುವುದೆಂಬುದನ್ನು ಪರಿಶೀಲಿಸಿದವರಿಗೆ, ಮಕ್ಕಳಿಗೂ, ಹಿರಿಯರಿಗೂ ಇರುವ ಪ್ರಾಮುಖ್ಯ ತಾರತಮ್ಯವಾವುದೆಂದು ಹೊಳೆಯದಿರಲಾರದು. ಚಿಕ್ಕದೊಂದು ಆಡಿನ ಮರಿ, ಹಸುವಿನ ಕರು, ಎಮ್ಮೆಯ ಕರು—ಇವಾದರೂ ತಮ್ಮ ಜೀವನದ ಮೊದಲನೆ ದಿನಗಳನ್ನು ಕೇವಲ ಕುಣಿತದಲ್ಲಿಯೇ ಕಳೆಯುವುವು. ಹಾಗೆಯೇ ಮಕ್ಕಳು ತಮ್ಮ ಬಾಲ್ಯವನ್ನು [illegible] ಕಳೆಯುವುವು. ಒಂದು ಕ್ಷಣವಾದರೂ ಅವುಗಳು ಸುಮ್ಮನೆ ಕುಳಿತಿರಲಾರವು. ಕೈಯಾಡಿಸುವುವು, ಕಾಲನ್ನಾಡಿಸುವುವು, ಎಲ್ಲೆಲ್ಲೋ ನೋಡುವುವು, ಒಂದು ಕ್ಷಣ ಓಡುವುವು, ಇನ್ನೊಂದು ಕ್ಷಣ ಉರುಳಾಡುವುವು, ಒಂದು ಬಾರಿ ಕೂಗುವುವು, ಇನ್ನೊಂದು ಬಾರಿ ಕಿರುಚುವುವು. ಇದು ಅವುಗಳಲ್ಲಿನ ಚಟುವಟಿಕೆಯ ಲಕ್ಷಣವು. ಮಕ್ಕಳೆಂದರೆ ಚೈತನ್ಯದ ಮೂರ್ತಿವೆಂತ ಸ್ವರೂಪವೇ ಸರಿ. ಅವುಗಳ ಲಕ್ಷ್ಯವು ಒಂದೇ ಕಡೆಯಲ್ಲಿ ಬಲ ಸಮಯ ನಿಂತಿರಲಾರದು. ಅವುಗಳು ನೂರಾರು ವಸ್ತುಗಳನ್ನು ಕಾಣುತ್ತಿರುವುವು. ನೂರಾರು ಶಬ್ದಗಳನ್ನು ಕೇಳುತ್ತಿರುವುವು. ನೂರಾರು ಪದಾರ್ಥಗಳನ್ನು ಸ್ಪರ್ಶಿಸುತ್ತಿರುವುವು. ಒಂದೊಂದರಿಂದ ಅವುಗಳ ಮೇಲೆ ಒಂದೊಂದು ಪರಿಣಾಮವುಂಟುಮಾಡುವುವು. ಎಲ್ಲವೂ ಅವಕ್ಕೆ ಹೊಸ ಹೊಸ ಅನುಭವಗಳು. ಒಂದೊಂದು ಅನುಭವವು ಅವುಗಳಲ್ಲಿ ಒಂದೊಂದು ಬಗೆಯ ಭಾವವನ್ನು ಮೂಡಿಸುವುದು. ಒಂದೊಂದು ಭಾವವು ಒಂದೊಂದು ರೀತಿಯಿಂದ ಪ್ರಕಾಶಗೊಳ್ಳುವುದು. ಇದೇ ಅವುಗಳ ಚಟುವಟಿಕೆಯ ಕಾರಣವು.

ಈ ಬಗೆಯ ಚಟುವಟಿಕೆಯನ್ನು ನಾವು ಚೇಷ್ಟೆಯೆಂದು ಕರೆಯುವೆವು. ಈಗ ನಮ್ಮನ್ನು ಒಂದು ವಿಚಿತ್ರ ಪ್ರದೇಶಕ್ಕೆ ಒಯ್ದುಬಿಡುವರೆಂದು ಊಹಿಸುವ. ಅಲ್ಲಿನ ಗಿಡಮರಗಳಾಗಲೀ, ಮನುಷ್ಯಕೋಟಿಯಾಗಲೀ, ಪಶುಪ್ರಾಣಿಯಾಗಲೀ—ನಮಗಿದುವರೆಗೂ ಪರಿಚಿತವಾದುವಲ್ಲವೆಂದೇ ತಿಳಿಯುವ. ಆಗ ನಮ್ಮ ಭಾವಗಳು ಎಷ್ಟು ವಿಚಿತ್ರವಾದ, ವೇಗವಾದ ಪರಿವರ್ತನೆಯನ್ನು ಹೊಂದುವುದಿಲ್ಲ! ಇದನ್ನು ನಮ್ಮಿಂದ ತಡೆಯುವುದು ಸಾಧ್ಯವೇ? ಆದರೆ ಕೆಲವೊಂದು ದಿನಗಳಲ್ಲಿ ಆ ವಸ್ತುಗಳ ನಮಗೆ ಪರಿಚಯವಾದರೆ, ಕೆಲವು ಪ್ರಿಯ, ಕೆಲವು ಅಪ್ರಿಯವೆಂದು ವಿಭಾಗವನ್ನು ಮಾಡಿಕೊಂಡು, ಕೆಲವು ವಸ್ತುಗಳ ಕಡೆಗೆ ಹೆಚ್ಚಿನ ಗಮನವನ್ನೂ ಕೆಲವುಗಳ ಕಡೆಗೆ ಕಡಿಮೆ ಗಮನವನ್ನೂ ಕೊಡುವೆವು. ಆಗ ನಮ್ಮ ವಿಸ್ಮಯವು ಕಡಿಮೆಯಾಗುವುದು. ಅದಕ್ಕೆ ಸರಿಯಾಗಿ ಚೇಷ್ಟೆಯೂ ಕಡಿಮೆಯಾಗುವುದು. ಮಕ್ಕಳ ಜೀವನದಲ್ಲಿ ಹೀಗಾಗುವುದೂ ಸಹ ಶಕ್ಯವಿಲ್ಲ. ಅವುಗಳಲ್ಲಿ ಸ್ಮರಣಶಕ್ತಿಯು ಕಡಿಮೆ. ನಿನ್ನೆ ಕಂಡ ವಸ್ತುವು ಮರೆಯಾಗಿ ತಿರುಗಿ ಅದು ಇಂದು ನವೀನವಾಗಿ ಕಾಣುವುದು. ಹೀಗಾ! ಪರಿಚಿತವಸ್ತುಗಳೆನಿಸುವುವೂ ಅವುಗಳಲ್ಲಿ ಚೇಷ್ಟೆಗಳನ್ನು ಹೊರಡಿಸುವುವು. ಮನಸ್ಸಿನ ಪರಿವರ್ತನೆಗೆ ಸರಿಯಾಗಿ ಅವುಗಳ ಚಲನವಲನಗಳೂ, ಕೂಗುಕೇಕೆಗಳೂ ಅನುಸರಿಸುವುವು. ಇದು ಬಾಲ್ಯದ ಸಹಜ ಗುಣ ಸ್ವಭಾವಗಳು. ಇದರಿಂದಲೇ ಬಾಲ್ಯದ ಯಾವತ್ತು ನಗುಗಳು ಮೂಡುವುವು. ಸುಖದುಃಖ ಮೊದಲಾದುವುಗಳ ಪರಿಚಯವಾದರೂ ಮಕ್ಕಳಿಗೆ ಇದರಿಂದಲೇ ಆಗಬೇಕು.

ಮಕ್ಕಳ ಶಾರೀರಿಕ ಆರೋಗ್ಯವೂ ಇದರಿಂದಲೇ ಉಳಿಯಬೇಕು. ಅವುಗಳ ಶರೀರದಲ್ಲಿ ಈ ರೀತಿಯ ಚಲನವಿಲ್ಲದೆ ಅವುಗಳು ಬೊಂಬೆಗಳಂತೆ ಮೂಲೆ ಹಿಡಿದು ಕುಳಿತಿದ್ದರೆ ಅವುಗಳ ಆರೋಗ್ಯವು ಸಹ ಉಳಿಯಲಾರದು. ಹಾಗೆ ಮೂಲೆ ಹಿಡಿಯುವ ಮಕ್ಕಳು, ಎಷ್ಟು ದುರ್ಬಲರೂ, ಚಟುವಟಿಕೆಯಿಲ್ಲದವರೂ, ಅಳು ಸ್ವಭಾವದವರೂ ಆಗಿರುವರೆಂದು ನಮಗೆ ತಿಳಿದೇ ಇರುವುದು.

ಇಂಥಾ ಹಾರಾಡುವ ಮಕ್ಕಳು ಚಿಂತೆಯಿಲ್ಲದೆ ಆನಂದವಾಗಿ ಕುಣಿಯಬಲ್ಲ ಮಕ್ಕಳು, ಶಾಲೆಯ ಗೋಡೆಗಳೊಡನೆ ಸ್ತಬ್ಧವಾಗಿ ಕುಳಿತಿರುವುದೆಂದರೆ ಎಷ್ಟು ಅಸ್ವಾಭಾವಿಕ. ಆದರೆ ನಮ್ಮ ಶಾಲೆಗಳು ಮೊದಲು ಬಯಸುವುದು ಅದನ್ನು. ಆಟ ಕಾರಾಟಗಳನ್ನು ಮಾಡುವ ಬಾಲಕನು, ಪುಂಡನೊ, ಪೋಲಿಯೋ ಅವನೇ ಉಪಾಧ್ಯಾಯನ ಕೋಪಕ್ಕೆ ಬಲಿಯಾಗುವನು. ಅದರಿಂದ ಅವನಿಗೆ ದಂಡನೆಯು ಇದ್ದೇ ಇದೆ. ಪಾಠದ ಕಾಲದಲ್ಲಿ ಮಕ್ಕಳು ಚೇಷ್ಟೆ ಮಾಡುವುದು ಶುದ್ಧ ತಪ್ಪು ಮಾತ್ರವಲ್ಲದೆ, ಅದರ ಮೊದಲು ಅಂದರೆ ಉಪಾಧ್ಯಾಯರು ಬರುವ ತನಕ ಅವನು ಗದ್ದಲ ಮಾಡಿದ್ದಾದರೆ ಅವನ ಗತಿ ಮೋಕ್ಷವೇ ಸರಿ. ಈ ರೀತಿಯಿಂದ ನಾವು ಮಕ್ಕಳನ್ನು ಸಾಧುಮಾಡಲು ನಮ್ಮ ಶಾಲೆಗಳಲ್ಲಿ ಯತ್ನಿಸುವಂತೆ ಕಾಣುತ್ತದೆ. ಇನ್ನು ಪಾಠದ ಸಮಯ ಬಂತೆಂದರೆ ಆ ಮಕ್ಕಳು ಶಿಲಾಮೂರ್ತಿಗಳಾಗಿ ಕುಳಿತಿರಬೇಕು. ದಿನಕ್ಕೆ ೫ ಗಂಟೆಯ ಸಮಯವಾದರೂ ಅವರು ಬಂಧಾವಿತರಾಗಿರಬೇಕು. ಶರೀರಶಾಸ್ತ್ರ ಬಲ್ಲವನಿಗೆ ಇದು ಅಸಂಭವವೆಂದು ತಿಳಿಯುವುದು. ಸ್ವಾಭಾವಿಕವಾಗಿ ಮಕ್ಕಳ ಗಮನವು ಒಂದು ಪಾಠದ ಕಡೆಗೆ ಹರಿಯುವಷ್ಟು ಸಮಯ ಅವುಗಳು ಸುಮ್ಮನಿರುವುವು. ಅದರ ಮೇಲೆ ಹಾಗಿರುವುದು ಅವುಗಳಿಂದ ಸಾಧ್ಯವಿಲ್ಲ. ಅದಕ್ಕಾಗಿ ಮಕ್ಕಳಿಂದ ಪಾಠಗಳ ಕಡೆಗೆ ಗಮನವನ್ನು ಬಯಸುವವರು ಅವರಿಗೆ ಆಕರ್ಷಣದಾಯಕವಾದ ರೀತಿಯಲ್ಲಿ ಶಿಕ್ಷಣ ಕೊಡುವುದೊಂದೇ ಉಪಾಯ. ಅದೂ ಒಂದು ಪಾಠ ದೀರ್ಘವಾಗಿರಬಾರದು. ಮಕ್ಕಳಿಗೆ ವೈವಿಧ್ಯವು ಬೇಕು. ಈ ಪದ್ಧತಿಯನ್ನು ನಾವು ಅನುಸರಿಸದೆ ಇರುವುದರಿಂದ, ನಮ್ಮ ಮಕ್ಕಳಲ್ಲಿರುವ ಚಟುವಟಿಕೆಯು ನಾಶವಾಗುತ್ತಾ ಬಂದು ಅವರ ಶರೀರ ಮನಗಳ ಆರೋಗ್ಯವು ನಷ್ಟವಾಗಿ ಮುಂದೆ ಅವರು ನಿರರ್ಥಕ ಜೀವಿಗಳಾಗುವರು.

ನಾವು ಹಲವು ಹಲವು ಶಾಲೆಗಳಲ್ಲಿ, ಬಾಲಕರೊಡನೆ ನಿಮ್ಮಲ್ಲಿ ಚೇಷ್ಟೆ ಮಾಡುವುದರಲ್ಲಿ ಯಾರು ಒಳ್ಳೆಯವರು? ಎಂದು ಕೇಳಿದೆವು. ಹಲವೆಡೆಗಳಲ್ಲಿ ಅಧಿಕಾಂಶ ಬಾಲಕರು ಬೇರೆಯವರನ್ನು ತೋರಿಸಲು ಯತ್ನಿಸುತ್ತಿದ್ದರು. ತಮ್ಮನ್ನು ತೋರಿಸಿಕೊಳ್ಳುವ ಸಾಹಸ ಅವರಿಗಿಲ್ಲ. ಚೇಷ್ಟೆಮಾಡುವುದು ಅಪರಾಧವೆಂದು [illegible] ಅವರ ತಲೆಯಲ್ಲಿ ತುಂಬಿದ್ದರು. ಅವೇ ಮಕ್ಕಳು, ಶಾಲೆ [illegible] ಕೇಳಿದೊಡನೆಯೇ "ಹೋ" ಎಂದು ಗದ್ದಲವೆಬ್ಬಿಸಿ, ಕೂಗಿ, ತಳ್ಳಿ ಹೋಗುತ್ತಿದ್ದರು. ಅವರಲ್ಲಿ ಚೇಷ್ಟೆಯ ಶಕ್ತಿ [illegible] ಅವರಿಗೆ [illegible] ಅದಕ್ಕೆ [illegible] ಶಿಕ್ಷಣವು ಇದ್ದೇ ಇದೆ. ಈ ರೀತಿಯ ಸಂಬಂಧ [illegible] ಉಪಾಧ್ಯಾಯರು ಮಕ್ಕಳ ಮೇಲೆ ಹೊರಿಸುವುದರಿಂದಲೇ ಮಕ್ಕಳ ಜೀವನವು ನೀರಸವೂ ನಿಸ್ತೇಜವೂ ಆಗುತ್ತಿದೆ.

ನಮ್ಮ ಉಪಾಧ್ಯಾಯವರ್ಗದಲ್ಲಿ, ಮಕ್ಕಳ ಜೀವನಕ್ಕೆ ಚೇಷ್ಟೆಯು ಅವಶ್ಯವೆಂದು ತಿಳಿಯುವವರಿದ್ದರೆ, ತಮ್ಮ ಬಾಲ್ಯದ ಲೀಲೆಗಳನ್ನು ಸ್ಮರಿಸಿ ಅದೇ ದೃಷ್ಟಿಯ ಸಹಾನುಭೂತಿಯನ್ನು ಮಕ್ಕಳ ಮೇಲೆ ತೋರಿಸಬಲ್ಲರು. ನಾವು ತಿರುಗಿದ [illegible] ಶಾಲೆಗಳಲ್ಲಿ ನಾಲ್ಕು ಮಂದಿ ಅಂಥವರು ದೊರೆಯಲಿಲ್ಲವೆಂದು ಮಕ್ಕಳ ಜೀವನದಿಂದ ತಿಳಿಯಬರುತ್ತದೆ. ಈ ಹಲವು ಅಭಿಪ್ರಾಯಗಳು ನಮ್ಮ ಶಿಕ್ಷಣ [illegible] ಬೇಕು.

ಶಾಲೆ [illegible] ಮಕ್ಕಳಂತೆ [illegible] ಮಕ್ಕಳಂತೆ [illegible] ನಾವಲ್ಲಿ ಉಪಾಧ್ಯಾಯರು [illegible] ಮಕ್ಕಳನ್ನು [illegible] ಅಟ್ಟುವ [illegible] ಮೊದಲೂ ಅವರ [illegible] ಪಾಠಗಳ ಕಾಲ [illegible] ಮನೆಗೇ ಹೋಗುವುದು [illegible] ಮಕ್ಕಳಿಗೆ ಬೇರೆ ಹುಡುಗರು ಬೇರೆ [illegible] ಉಪಾಧ್ಯಾಯರು ಮಕ್ಕಳ ಬಾಲ [illegible] ಪ್ರತ್ಯೇಕವಾಗಿ ಉಳಿಯುವುದು.

ನಾನು ಒಂದು ಶಾಲೆಯ ಹುಡುಗರಲ್ಲಿ ಈ ಪ್ರಶ್ನೆಗಳನ್ನು ಕೇಳಿದೆ. ಅದಕ್ಕೆ ಉತ್ತರಗಳು ಇಲ್ಲಿ ಇವೆ. ಇವುಗಳಿಂದ ನಮ್ಮ ಶಿಕ್ಷಣ ಸಂಬಂಧವನ್ನು ತಿಳಿಯಿರಿ.

ಪ್ರ—ನಿಮ್ಮೊಡನೆ ಉಪಾಧ್ಯಾಯರು ಆಟಕ್ಕೆ ಬರುವರೇ?

ಉ—ಕೆಲವು ಬಾರಿ.

ಪ್ರ—ನಿಮ್ಮಲ್ಲಿ ಯಾರಾದರೂ ಜಾರಿ ಬಿದ್ದರೆ, ತಪ್ಪು ಆದರೆ ಏನು ಮಾಡುವಿರಿ?

ಉ—ಸಿಟ್ಟಾಗುವುದುಂಟು, ನಗುವುದುಂಟು, ಗೇಲಿ ಮಾಡುವುದುಂಟು.

ಪ್ರ—ಉಪಾಧ್ಯಾಯರೇನು ಮಾಡುವರು?

ಉ—ತಪ್ಪಿದ ಬಾಲಕರನ್ನು ಗದರಿಸುವರು.

ಪ್ರ—ಉಪಾಧ್ಯಾಯರು ತಪ್ಪುವುದಿಲ್ಲವೇ?

ಉ—ಎಷ್ಟೋ ಬಾರಿ ತಪ್ಪುವರು.

ಪ್ರ—ಆಗ ನೀವೇನು ಮಾಡುವಿರಿ?

ಉ—ಸುಮ್ಮನಿರುವೆವು.

"ವರ್ಣಭೇದಗಳೆನಿತು?"

ಸನಾತನ ಹಿಂದೂ ಧರ್ಮೀಯರಲ್ಲಿ, ಬಹು ಪುರಾತನ ಕಾಲದಿಂದಲೂ ಬಳಕೆಯಲ್ಲಿರುವ ವರ್ಣಭೇದಗಳು ಯಾವ ಆಧಾರಗಳ ಮೇಲೆ ಕಲ್ಪಿತವಾದುವುಗಳೆಂಬುದನ್ನು ವಿಮರ್ಶಾತ್ಮಕ ದೃಷ್ಟಿಯಿಂದ ವಿಚಾರಿಸೋಣ. ಹಿಂದೂ ಧರ್ಮದಲ್ಲಿ ಪ್ರಕೃತ ಬ್ರಹ್ಮ, ಕ್ಷತ್ರಿ, ವೈಶ್ಯ, ಶೂದ್ರರೆಂಬ ಚತುರ್ವರ್ಣಗಳೂ ಅಸ್ಪರ್ಶ್ಯರೆಂಬ ಪಂಚಮ ಭೇದವೂ ರೂಢಿಯಲ್ಲಿದೆ. ಇವುಗಳಲ್ಲಿ ಪ್ರಥಮದ ನಾಲ್ಕು ವರ್ಣಗಳೇ ಮುಖ್ಯವಾದ ವರ್ಣಚತುಷ್ಟಯಗಳೆಂದು ಪರಿಗಣಿಸಲ್ಪಡುತ್ತವೆ. ಈ ಭೇದಗಳು ಮನುಷ್ಯರ ವೈಲಕ್ಷಣ್ಯಗಳಿಗನುಸಾರವಾಗಿಯಾಗಲೀ, ಮನುಷ್ಯನು ಜನ್ಮಪಡೆದ ತಂದೆ ತಾಯಿಗಳ ಮುಖೇನವಾಗಲೀ, ಅವರವರ ಗುಣನಡತೆಗಳಿಗನುಸಾರವಾಗಿಯಾಗಲೀ ರಚಿಸಲ್ಪಟ್ಟಿರಬೇಕು. ಈಗ ಸೃಷ್ಟಿವಿಚಾರವನ್ನು ಆಧರಿಸಿ ನೋಡೋಣ.

ಪರಮಾತ್ಮನು ಈ ಸೃಷ್ಟಿಕಾರ್ಯವನ್ನು ಮಾಡಿ ಮುಗಿಸಿದ ನಂತರ ಈ ಭೇದಗಳನ್ನು ನಿರೂಪಿಸಿದನೋ ಅಥವಾ ಮೊದಲೇ ಮಾನವರ ನಡೆನುಡಿಗಳು ಇಂಥಾ [illegible] ಪ್ರವಹಿಸುತ್ತಿರಬೇಕೆಂದು ನಿಶ್ಚಯಿಸಿ, ಆ ಮೇಲೆ ಸೃಷ್ಟಿಕಾರ್ಯವನ್ನು ಪ್ರಾರಂಭಿಸಿದನೋ ಎಂಬುದು [illegible] ಸಮಸ್ಯೆಯಾಗಿದೆ. ಭಗವಾನ್ ಶ್ರೀ ಕೃಷ್ಣನು ಗೀತೆಯಲ್ಲಿ "ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ" ಎಂದಿರುವನು. ಗುಣಕರ್ಮಗಳಿಂದ ವಿಭಾಗಿಸಲ್ಪಟ್ಟ ನಾಲ್ಕು ವರ್ಣಗಳು ನನ್ನಿಂದ ಸೃಜಿಸಲ್ಪಟ್ಟುವೆಂದೇ ಅದರ ಭಾವಾರ್ಥವಾಗಿದೆ. ಇದರಿಂದ ಪರಮಾತ್ಮನು ಮನುಷ್ಯನನ್ನು ಸೃಷ್ಟಿಸುವಾಗಲೇ ಅವನ ವರ್ಣವನ್ನು ನಿಶ್ಚಯಿಸಿ, ಅದಕ್ಕೆ ತಕ್ಕ [illegible] ಗುಣನಡತೆಗಳ ಸಾಂಭಾರವನ್ನು [illegible] ಕೊಡುವುದಿಲ್ಲವೆಂಬುದಾಗಿಯೂ ಮನುಷ್ಯನ ಉತ್ಕರ್ಷ [illegible] ತಾನು ಅವಲಂಬಿಸುವ [illegible] ಅನುಸಾರವಾಗಿ [illegible] ವರ್ಣದವನೆಂದು ಭಾವಿಸಲ್ಪಡಬೇಕಾಗಿ [illegible] ವರ್ಣವು [illegible] ಪರಿಗಣಿಸಲ್ಪಟ್ಟು [illegible] ಲಂಬನವಾಗುವುದಲ್ಲದೆ, ವರ್ಣಧರ್ಮವು ಯಾವನೊಬ್ಬ ವ್ಯಕ್ತಿಯಿಂದಾಗಲೀ ಶಾಸ್ತ್ರಗಳಿಂದಾಗಲೀ [illegible] ಗ್ರಂಥಗಳಿಂದಾಗಲೀ [illegible] ಕೊಡಿಸಲ್ಪಡುವುದಿಲ್ಲವೆಂದು [illegible] ಮನುಷ್ಯನ ನಾಲ್ಕು ಅವಸ್ಥೆಗಳನ್ನು ಸೂಚಿಸುವ

> ಜನ್ಮನಾ ಜಾಯತೇ ಜಂತು
> ಕರ್ಮಣಾ ಜಾಯತೇ ದ್ವಿಜ
> ವೇದಪಾರಂಗತೇ ವಿಪ್ರ
> ಬ್ರಹ್ಮಜ್ಞಾನೇತಿ ಬ್ರಾಹ್ಮಣಃ

ಎಂಬ ಶ್ಲೋಕದಲ್ಲಿಯೂ ಪೂರ್ವೋಕ್ತ ವಿಷಯವು ಪ್ರತಿಪಾದಿಸಲ್ಪಡುತ್ತದೆ. ಮನುಷ್ಯನು ಜನ್ಮಕ್ಕೆ ಬಂದೊಡನೆ [illegible] ಜಂತುಗಳಲ್ಲಿ ಒಬ್ಬನಾಗಿಯೂ, ಅನಂತರ ತಾನು ಅವಲಂಬಿಸುವ ಕರ್ಮಗಳಿಗನುಸಾರವಾಗಿ ದ್ವಿಜನಾಗಿಯೂ ಆ ಮೇಲೆ ವೇದೋಕ್ತ ಧರ್ಮಮಾರ್ಗವನ್ನು ಅರಿತು, ಅವುಗಳಿಗನುಸಾರವಾಗಿ ವಿಪ್ರನಾಗಿಯೂ ವಿಶ್ವಶ್ರೇಷ್ಠವಾದ ಬ್ರಹ್ಮಜ್ಞಾನವನ್ನು ಪಡೆದ ಬಳಿಕ ಬ್ರಾಹ್ಮಣನಾಗಿಯೂ ಸಾರ್ಥಕನಾಗುತ್ತಾನೆಂಬುದು ಭಾಸವಾಗುತ್ತದೆ.

[ಸಶೇಷ]

ಪ್ರ—ನೀವು ಹುಡುಗಿಯರೊಂದಿಗೆ [illegible] ಆಡುತ್ತೀರೋ? ([illegible] ಮಾಡುವುದು ಅಪರಾಧ)

ಉ—ಇಲ್ಲ.

ಇದರ ಕಾರಣವು ಸ್ಪಷ್ಟವಾಗಿದೆ. [illegible] ಶಿಕ್ಷಣದಲ್ಲಿ ಉಪಾಧ್ಯಾಯರು [illegible] ಹಾನಿಯೇ ಅಧಿಕ [illegible] ಕಾಲದಲ್ಲಿ [illegible] ಸಹಜವಾದ [illegible] ಈ ರೀತಿಯಿಂದ ಮಕ್ಕಳ ಜೀವನದಿಂದ [illegible] ಉಪಾಧ್ಯಾಯರು [illegible] ತನ, [illegible] ಅವರೇ [illegible] ಯಾರೆಂದು ಅವರೂ ಯೋಚಿಸುವುದು ಅವಶ್ಯವಿಲ್ಲವೇ?

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

ಉಪಯೋಗಿಸಲ್ಪಟ್ಟ ಔಷಧಗಳು.

1. ಧಾತುಪುಷ್ಟಿಲೇಹ—ಧಾತು ನಷ್ಟವಾಗುವಿಕೆ, ಧಾತು ವ ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಇತ್ಯಾದಿ ರೋಗಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0 ಮೂರು ಡಬ್ಬಿಗಳಿಗೆ ರೂ 7

2. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮುಂತಾದ ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರವಾಗಿಯೇ ಗುಣಪಡಿಸುವುದು. ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರೈಸಿರುವವು. ಕ್ರಯ 1 ಬಾಟಲಿ ಔಷಧಕ್ಕೂ, ಒಂದು ಡಬ್ಬಿ ಮಾತ್ರೆಗೂ ರೂ 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ 6—4—0.

3. ಮೇಹ ಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿ ... ಹೇ ... ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ

4. ಮಲೇರಿಯಾ ನಿವಾರಣ—ದಿನ ಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದುಸಾರಿ ಬರುವ ಜ್ವರ, ಛಳಿಗೆ ಬರುವ ಜ್ವರ, ಜ್ವರ ಗಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1ಕ್ಕೆ ರೂ 1—8—0 3 ಬಾಟ್ಲಿಗಳಿಗೆ ರೂ 4—4—0

5. ಬಾಲಗ್ರಹ ಗುಟಿಕೆ—ಬಾಲಗ್ರಹಕ್ಕೂ ಕೆಮ್ಮಿಗೂ ಜ್ವರಕ್ಕೆ ರಾಮಬಾಣ ಬಾಟ್ಲಿ 1ಕ್ಕೆ ಆಣೆ 10 3ಕ್ಕೆ ರೂ 1—12—0

6. ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ 1—8—0 3ಕ್ಕೆ 4—4—0

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ ... ರೋಗಕ್ಕೆ ತಕ್ಕವಾದ ಔಷಧ ರವಾನಿಸಬಹುದು ಕೆಟಲಾಗು ತರಿಸಿ ನೋಡಿರಿ

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ ಮಂಗಳೂರು, ದ. ಕ.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ ಅತಿಸಾರ, ಅಜೀರ್ಣದಿಂದಾದ ಎಂತಹ ಉಪದ್ರವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟುದು

HEDAURIK DYSENTERY CHOLERA CURE

ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟುದು

ಔಷಧಿ ಕ್ರಯ ಆಣೆ 0—15—0 2 ಔಷಧಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿ.

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ. ಕನ್ನಡಾ

"If every Wife knew what every Widow knows every Husband would be Insured

PLACE YOUR LIFE ASSURANCE WITH
THE SOUTH INDIAN

Securing for your clients
1. Low rates of Premium
2. Liberal Policy Conditions

AND FOR YOURSELF
An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —
H R K IYENGAR
Chief Agent
The S I G A Co. Ltd,
Sanyasiguddy MANGALORE

Managing Agents —
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡತಕ್ಕವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳ ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಷನನ್ನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್ ಆರ್ ಕೆ ಆಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್ ಜಿ. ಟಿ. ಮದ್ರಾಸು

ಉತ್ತಮ ಪುಸ್ತಕಗಳು ಬೇಕೇ?

ಹಾಗಾದರೆ ಶ್ರೀ ಶೇಷಾಚಲ ಗ್ರಂಥಮಾಲೆಯ

... ಕಳವೊ—ಕೊಲೆಯೋ—ಬೆಲೆ ೬ ಆಣೆ ೨ ಅಲಿಕ ಬೆಳಗಿಂ ಆಣೆ ೩ ರಾಕಾಚಂದ್ರ ಬೆಲೆ ... ಆಣೆ ೪ ವಿಚಿತ್ರ ಸರಕಾರ ಬೆ ೩ ಆಣೆ,

ಈ ಹೊಸ ಪುಸ್ತಕಗಳನ್ನು ತರಿಸಿ ಓದಿ ಖುಶಿಮಾಡಿಕೊಳ್ಳಿರಿ

ಮಹಾ ಸಾಧು ತುಕಾರಾಮ ಬುವಾ ಬೆಲೆ ೧ ರೂ ಶ್ರೀ ಸಮರ್ಥ ರಾಮದಾಸರು ಬೆಲೆ ೧—೨—೦ ಈ ಅತ್ಯುತ್ತಮ ಚರಿತ್ರಾತ್ಮಕ ಪುಸ್ತಕಗಳೂ ಹಾಗೂ ಕಳ್ಳನಿಗೆ ಕಾಣಿಕೆ ಬೆಲೆ ೮ ಆಣೆ ಎಂಬ ಮನೋಹರ ಪತ್ತೇದಾರಿ ಕಾದಂಬರಿಯು ಎರಡನೇ ಆವೃತ್ತಿಯೂ ಮಾರಾಟಕ್ಕೆ ಸಿದ್ಧವಾಗಿವೆ

ಇವಲ್ಲದೆ ನಮ್ಮಲ್ಲಿ ಐತಿಹಾಸಿಕ ಸಾಮಾಜಿಕ, ಪೌರಾಣಿಕ ಕಥಾ ಕಾದಂಬರಿಗಳೂ, ನಾಟಕಗಳೂ ಧಾರ್ಮಿಕ ಪಾರಮಾರ್ಥಿಕ ... ೧೦೦—೧೨೫ ಬಗೆಯ ಪುಸ್ತಕಗಳೂ ದೊರೆಯುತ್ತವೆ ... ತರಿಸಿ ಪುಸ್ತಕಗಳಿಗೆ ಬರೆಯಿರಿ

ವಿಳಾಸ— ... ಕಾಳೆ
ಪ್ರೊಪ್ರೈಟರ್ ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲಾ
ಪೋ. ಆನಂದವನ, ಜಿ. ಧಾರವಾಡ

INSURE WITH
The Popular Insurance Co. Ltd.
Head Office MANGALORE S. India
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply the Head Office

ಡಾಕ್ಟರ ವಾಮನ ಗೋಪಾಳರವರ



ಐ. ಓ. ಡಿ. ಯಿ. ಜ್ಞ ಸಾರ್ಸಪರಿಲ.
ಕೆಟ್ಟ ರಕ್ತಕ್ಕೆ ಮಹೌಷಧ ... ವರ್ಷ ... ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಆಂಡ್ ಸನ್ಸ್,
... ಮುಂಬಯಿ ...
... ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೇಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

EDITED, PRINTED & PUBLISHED BY V S. KAMATH AT M T A SHARADA PRESS, MANGALORE

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ತಣಿವವಾಯಿತೆ! ಮತ್ತೆ ವಿಷವ ಪುಡುಕ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕುದ್ರರ ತೆರದಿ ಕುಳಿತರೆ । ತೆರಳ ವಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೨೯ನೇ ಶುಕ್ರವಾರ ಜನವರಿ ೧೯೩೨ (29—1—'32.) ಸಂಚಿಕೆ :

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR. & Mangalore.

ಹೆಡ್ ಆಫೀಸು:— ಉಡುಪಿ ಶಾಖೆ ಕುಂದಾಪುರ. ಮತ್ತು ಮಂಗಳೂರು.

NOTICE

is hereby given that under Section 37 of the Indian Companies Act No. VII of 1913 the Directors of the Corporation have resolved that the Register of members be closed from 20—1—'32 to 16—2—'32 (both days inclusive)

(BY ORDER)

Office of the Corporation, UDIPI, S K 17—1—'32.

N. ANANDA RAO
Secretary & Manager

ಅಮೃತಾಂಜನ.

ಶೀತ, ಕೆಮ್ಮು, ತಲೆನೋವು ವಾತ ಸುಟ್ಟುಹೋಗುವಿಕೆ, ಮತ್ತು ಮನುಷ್ಯರಿಗೆ ದಂಗೆ ಕೊಡುವ, ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ, ಅದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತದೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ. ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ. ಕ್ರಯ ಅಂದವಾದ ಬಟ್ಟಲ ಒಂದು ಬಾಟ್ಲಿಗೆ ೧ ಆಣೆಗಳು. ಎಲ್ಲಾ ಕಡೆಗಳಲ್ಲೂ ದೊರಕುತ್ತದೆ.

ಗಜಕರ್ಣ ಮುಲಾಮು—(ರಾಜಾ ಮತ್ತು ರಾಣಿ ಮಾರ್ಕ) ಗಜಕರ್ಣ ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು. ಎರಡೇ ಸಲದ ಹಚ್ಚುವಿಕೆಯಿಂದ ಗುಣವಾಗುತ್ತದೆ. ಹಳೇ ಮತ್ತು ಬಹಳ ಸಮಯದಿಂದ ಇದ್ದ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ. ಟಿನ್ನಿಗೆ 0—4—0 ಡಜನಿಗೆ ೨—

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ವನ್ನು ಕೊಡುವುದರಿಂದ ಮಕ್ಕಳು ಪುಷ್ಟರೂ, ಪುಷ್ಟರೂ ಮತ್ತು ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜಂಟರು—ದಿ ಉಲ್ಲಾ ಮಾರ್ಟ್, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿವೆ.

ತ್ವರೆಮಾಡಿರಿ . ತ್ವರೆಮಾಡಿರಿ

೧೯೩೨ನೇ ವರ್ಷದ ಪಾಕೆಟ್ ಡೈರಿಗಳು

ದೊಡ್ಡ ಸೈಜ್	0—10—0
ದೊಡ್ಡ ಸೈಜ್ ಮುಚ್ಚಳ ಇದ್ದದ್ದು	0—12—0
ಸಣ್ಣ ಸೈಜ್	0— 6—0
„ „ ಮುಚ್ಚಳ ಇದ್ದದ್ದು	0— 8—0
ಸಣ್ಣ ಸೈಜ್ ಸ್ಲಿಪ್ ಬೈಂಡ್	0— 5—0

ವ್ಯಾಪಾರಸ್ಥರಿಗೂ ರಖಂ ತೆಗೆದುಕೊಳ್ಳುವವರಿಗೂ ಧಾರಾಳ ಕಮಿಶನು ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಮೆನೇಜರ,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಪ್ರಕಟಣೆ.

ಮಂಗಳೂರು ಶಹರಿನಲ್ಲಿ ಶರಾಬು ಗುತ್ತಿಗೆಗಳನ್ನೂ, ವಿದೇಶಿ ವ್ಯಾಪಾರಿಯ ವಸ್ತುಗಳನ್ನು ವಿಕ್ರಯಿಸುವರೆ ಇಟ್ಟಿರುವ ಅಂಗಡಿಗಳನ್ನೂ "ಪಿಕೆಟ್" ಮಾಡುವುದನ್ನು ನಿರ್ಬಂಧಿಸಿ— ವ 'ಸಿವಿಲ್ ಡಿಸೊಬಿಡಿಯನ್ಸ್' ಚಳವಳಿಕ್ಕೆ ಉತ್ತೇಜನದ ಬಗ್ಗೆ ಸಹಾನುಭೂತಿಯನ್ನು ತೋರಿಸುವ ಬಗ್ಗೆ ಜರಗಿಸುವ ಮೆರವಣಿಗೆ ಸಭೆ ಯಾ ಇತರ ಜೇಬಾವೆಗಳನ್ನು ನಿರ್ಬಂಧಿಸಿ – ಕ್ರಿಮಿನಲ್ ಪ್ರೊಸಿಜ್ಯುರ್ ಕೋಡಿನ ೧೪೪ನೇ ಪ್ರಕರಣಕ್ಕನುಗುಣವಾಗಿ ಕೊಟ್ಟ ಹುಕುಂಗಳು ಈಗ ಜ್ಯಾರಿಯಲ್ಲಿರುತ್ತವೆ, ಎಂಬುದನ್ನು ಎಲ್ಲಾ ಜನರು ತಿಳುವಳಿಕೆಯಲ್ಲಿಡಬೇಕಾಗಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅಪೇಕ್ಷಿಸುತ್ತಾರೆ

ಈ ಹುಕುಮುಗಳನ್ನು ಉಲ್ಲಂಘಿಸಿದ್ದಲ್ಲಿ ಇಂಡಿಯನ್ ಪಿನಲ್ ಕೋಡಿನ ೧೮೮ನೇ ಪ್ರಕರಣದ ಪ್ರಕಾರ ಶಿಕ್ಷಿಸಲ್ಪಡುವ ತಕ್ಸೀರನ್ನು ಮಾಡಿದಂತಾಗುವುದು

ಜನರು ಒಟ್ಟುಕೂಡಿ ಕಾನೂನಿಗೆ ವಿರೋಧವಾಗಿ ವರ್ತಿಸಿದ್ದಲ್ಲಿ ಅಂತಹ ಜನರ ಗುಂಪು ಅಕ್ರಮಕೂಟವಾಗುವುದು ಅಂಥಾ ಅಕ್ರಮ ಕೂಟವನ್ನು ಚದರುವರೆ ಅಪ್ಪಣೆ ಕೊಡುವುದು ಪೋಲೀಸಿನವರಿಗೆ ಅವರ ಕರ್ತವ್ಯವಾಗುವುದು ಅನ್ಯ ಕೂಡಲೇ ಆ ಸ್ಥಳದಲ್ಲಿ ವ ಆಸ್ಥಾನಿನಲ್ಲಿರುವ ಎಲ್ಲಾ ಜನರು ಅಲ್ಲಿಂದ ಹೋಗುವುದು ಅವರ ಕರ್ತವ್ಯ ಆ ಸ್ಥಳಕ್ಕೆ ಹೋಗುವಾಗ ಅವರ ಉದ್ದೇಶವು ಎಷ್ಟೇ ಸಾಧು ಶೀಲ ಸ್ವಭಾವದಿದ್ದರೂ ಅನಂತರ ಅಲ್ಲಿ ನಿಂತರೆ ಅವರೂ ಅಕ್ರಮ ಕೂಟಕ್ಕೆ ಸೇರಿದವರಾಗಿ ಎಲ್ಲಾ ಪರಿಣಾಮಗಳಿಗೆ ಅವರೂ ಒಳಗಾಗುವರು

ಅಪ್ಪಣೆ ಕೊಟ್ಟೊಡನೆ ಅಕ್ರಮ ಕೂಟವು ಚದರದಿದ್ದಲ್ಲಿ ಅದನ್ನು ಒತ್ತಾಯದಿಂದ ಚದರಿಸುವುದು ಪೋಲೀಸಿನವರ ಕರ್ತವ್ಯವಾಗುವುದು ಕೂಡಿದ ಗುಂಪನ್ನು ಬಲಪ್ರಯೋಗಿಸಿ ಚದರಿಸುವಾಗ್ಯೆ ಅನೇಕ ಜನರು ಓಡಲಾರಂಭಿಸುತ್ತಾರೆ ಇದರಿಂದ ಬಹಳ ಅಪಾಯಕ್ಕೆ ಎಡೆಯಾಗುತ್ತದೆ ನೋಡಲು ನಿಂತವರು ಬಹಳ ಸಮೀಪವಿದ್ದರೆ ಗುಂಪಿನಲ್ಲಿದ್ದ ಜನರೇ ಅವರನ್ನು ದೀಳಿಸಿ ಚಟುಮನ್ನುಂಟುಮಾಡಬಹುದು ಗುಂಪಿನ ಜನರನ್ನು ಪೋಲೀಸಿನವರು ಹಿಂಬಾಲಿಸಿ ಹೋಗುವಾಗ್ಯೆ ಗುಂಪಿನಲ್ಲಿ ಮೊದಲಿದ ಜನರ ಯಾರ ಬರೇ ನೋಡುವುದಕ್ಕೆ ಬಂದವರ್ಯಾರೆಂದು ಕಂಡುಹಿಡಿಯುವರೇ ಪೋಲೀಸಿನವರಿಗೆ ಕಷ್ಟವಾಗುವುದು ನೋಡಲಿಕ್ಕೆ ಬಂದವರು ಸಹಾ ಉನ್ಮತ್ತರಾಗಿ ಗೌಜಿ ಹಾಕ ವದೆ ಕಲ್ಲು ಕಡುವದೆ ಆರಂಭಿಸಿದ್ದಲ್ಲಿ ಇದು ಇನ್ನೂ ಕಷ್ಟವಾಗುವುದು ಹಾಗೆ ನೋಡಲಿಕ್ಕೆ ಬಂದವರು ಅಲ್ಲಿಂದ ಕೂಡಲೇ ಹೋಗದೆ ಪೋಲೀಸಿನವರು ಚದರುವ ಕೊಟ್ಟ ಅಜ್ಞೆಯನ್ನು [illegible] ಅಲ್ಲಿಯೇ ನಿಂತರೆ ಅವರೂ ಅಕ್ರಮ ಕೂಟದವರೇ ಎಂದು ಪೋಲೀಸಿನವರು ಎಣಿಸುವುದೂ ಅವರಿಗೆ ಸಹಾ ಪೆಟ್ಟು ಬೀಳುವ ಸಂಧಾಂತರವು ಸಂಭವಿಸುವುದೂ ಆಶ್ಚರ್ಯವಲ್ಲ

ಅದ್ದರಿಂದ ಕಾನೂನಿಗೆ ವಿರೋಧವಾಗಿ ಘಟನೆಗಳು ಸಂಭವಿಸುವವೆಂದು ತಿಳಿದಿರುವ ಸ್ಥಳಗಳಿಗೆ ಬುದ್ಧಿವಂತರು ಹೋಗರು ಅಲ್ಲಿ ಹೋಗುವ ತಮ್ಮ ಕುತೂಹಲವನ್ನು ಅಡ ಸುವದ [illegible] ಅಂತಹ ಸ್ಥಳದ ಒಳ ಅವರು ಮುಖ್ಯ ಅಕ್ರಮವಾಗಿ ಕೂಡಿದ ಜನರಿಗು ಪ್ಯ [illegible] ಪೋಲೀಸಿನವರು ಬಲಪ್ರಯೋಗವನ್ನು ಮಾಡಲಿಕ್ಕೆ ಸಾಕೆಂದು [illegible] ಅಲ್ಲಿಂದ ಅದನ್ನು ತ್ವರ ದಿಂದ ತೆರಳುವರು

ಅಕ್ರಮ ಕೂಟಗಳ ಮೇಲೆ ಹೀಗೆ ಬಲಪ್ರಯೋಗವನ್ನು [illegible] ಗಳನ್ನು ಚದರಿಸುವಾಗ್ಯೆ ಪೋಲೀಸಿನವರ ತವ [illegible] ಕರ್ತವ್ಯವನ ಮಾತ್ರ ಮಾಡ ವ ಎಂಬುದ [illegible] ತಿಳುವಳಿಕೆಯಲ್ಲಿಡಬೇಕು [illegible] ಸದ ಜನರ ಅದರಿಂದ [illegible] ಸಂಭವಿಸಿದ್ದಲ್ಲಿ ಪೋಲೀಸಿನವರಿಗೆ ದೂರುವುದು ಸರಿಯಲ್ಲವೆಂದು ಇದರಿಂದ ಎಲ್ಲವರಿಗೂ ಸಮಾಧಾನವಾಗಬೇಕು [illegible] ದಂತೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಶಾಂತಶೀಲ ಜನರೆಲ್ಲ ಸಹಕಾರವನ್ನು ಅಪೇಕ್ಷಿಸಿ ಅಂಥ ಸಹಕಾರವು ದೊರೆಯುವುದೆಂದು ಭರವಸೆ ಪಡುತ್ತಾರೆ

ಮಂಗಳೂರು ಜೆ ಹುಸೇನ್
೨೬—೧—೧೯೩೨ } ದಕ್ಷಿಣ ಕನ್ನಡ ಜಿಲ್ಲಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್

ವಿಧವಾ ವಿವಾಹ.

ಇದೊಂದು ಸಾಮಾಜಿಕ ಪ್ರಶ್ನೆ ಇದನು ಬಗೆಹರಿಸಲು ಅನೇಕಾನೇಕ ಯತ್ನಗಳು ನಡೆಯುತ್ತಲಿವೆ ಶ್ರೀ ಗಣಪತಿ ನಾರಾಯಣ ಭಕ್ತದಾಸರ ಯತ್ನವು ಸರ್ವ ಪ್ರೋತ್ಸಾಹನೀಯವಿದೆ

ಹಿಂದೂ ಜನಾಂಗದಲ್ಲಿ ವಿಧವೆಯರ ಕಠಿಣಾವಸ್ಥೆಯನ್ನು ಹೇಳತೀರದು ವಿಧವೆಯು ಸೋದರಕ್ಕೂ ಮನೆಗೂ ಕುಟುಂಬಕ್ಕೂ ಸಮಾಜಕ್ಕೂ ಅನರ್ಹಳು ಅವಳ ತಲೆಬೋಳಿಸಿ ಅವಳನ್ನು ಸಮಾಜದ ಆಕರ್ಷಣೆಯಿಂದ ದೂರೀಕರಿಸುವ ಆದೊಂದು ಕ್ರಮವು ಅತ್ಯಂತ ಖಂಡನೀಯವು

ಶೃಂಗಾರಯುಕ್ತಳಾದ ವಿಧವೆಯು ಅನ್ಯಪುರುಷರ ಕಾಮವಾಸನೆಗೆ ಬಲಿಬೀಳುತ್ತಾಳೆಂಬ ಅಂಧಶ್ರದ್ಧೆಯು ನಮ್ಮ ಪೂರ್ವಿಕರ ಮನಸ್ಸಿಗೆ ಹೊಕ್ಕಿರಬೇಕು ಅದಕ್ಕಾಗಿಯೇ ಅವರು ವಿಧವೆಯರ ತಲೆ ಬೋಳಿಸುವ ಕ್ರಮವನ್ನು ಶಾಸ್ತ್ರೀಯವೆಂದು ಮಾಡಿಬಿಟ್ಟರು

ಪೂರ್ವಿಕರ ಶಾಸ್ತ್ರಾಧಾರಗಳಿಂದ ನಮಗೆಷ್ಟು ಪ್ರಯೋಜನವಿದೆಯೋ ಅಷ್ಟೇ ಅಪ್ರಯೋಜನವೂ ಇದೆ ಸಾವಿರಾರು ವಿಧವೆಯರು ತಮ್ಮ ತಲೆಬೋಳಿಕನದಿಂದ ಪುರುಷರ ಕಾಮವಾಸನೆಗೆ ಸಿಗದೆ ರಕ್ಷಿಸಲ್ಪಡುತ್ತಾರಾದರೂ ಅಷ್ಟೇ ಸಂಖ್ಯೆಗಳವರು ಸಮಾಜಕ್ಕೆ ಚಕ್ಕಾಸಿನಷ್ಟು ಪ್ರಯೋಜನವಿಲ್ಲದೆ ನರಳುತ್ತಿರುವರು

ಚಿಕ್ಕಂದಿನಲ್ಲಿ ಗಂಡನನ್ನು ಕಳೆದುಕೊಂಡ ವಿಧವೆಗೆ ಪುನರ್ವಿವಾಹ ನಾಗದಿದ್ದರೆ ಅವಳ ಪವಿತ್ರ ಜನ್ಮವು ನಿರ್ನಾಮವಾದಂತೆಯೇ ಸರಿ ಅವಳು ಬದುಕಿಯೂ ಸತ್ತಂತೆ ಅವಳು ಜೀವಿಸಿಯೂ ಮೃತಳಾದಂತೆ ಅವಳ ಸಂಪೂರ್ಣ ಜೀವನವು ಯಾವುದಕ್ಕೂ ಬೇಡವಾದ ಕಸಕಡ್ಡಿಯಂತೆ ಲಕ್ಷಾಗಟ್ಟಳೆ ವಿಧವೆಯರ ಪವಿತ್ರಾತ್ಮವನ್ನು ಕೊಂದಿರುವ ಈ ಹಿಂದೂಸಮಾಜಕ್ಕೆ ಧಿಕ್ಕಾರ

ಧರ್ಮದ ನೆಪದಿಂದ ಸ್ತ್ರೀಯರ ಕೊರಳನ್ನು ಕೊಯ್ಯುವ ಪೂರ್ವಿಕರ ಸಂಶಯಾಸ್ಪದನೀಯವಾದ ಹೇಯವಾದ ಶಾಸ್ತ್ರಗಳು ಮಣ್ಣು ಪಾಲಾಗಲಿ ವಿಧವೆಯರು ವಿವಾಹವಾಗಬಾರದೆಂದು ಹೇಳುವ ಮಾನವನಿಗೆ ಕುಂಭೀಪಾಕನರಕ ಸಾಧನೆಯೇ ಸರಿ

ವಿಧವಾ ವಿವಾಹ ಚಳವಳಿಯನ್ನು ಮುಂದೊತ್ತುವ ಮಹನೀಯರ ಜನರ ತಂಡ ಮಾತ [illegible] ಅಕ್ಷೇಪನೆಗೆ ತಿರಿಕಿಗೊಳಗಾಗದು, ತಮ್ಮ ಕಾರ್ಯಕ್ಕೆ ಲೋಕವು ಬಾರದಂತೆ ಸಾತ್ತ್ವಿಕತನದಿಂದಿರಬೇಕು

ಪುರಾಣ ಮತವಾದಿಗಳು ತಮ್ಮ ಪ್ರತಿಪಾದನೆಗೆ ಶ್ರುತಿಸ್ಮೃತಿಗಳ ಆಧಾರಗಳನ್ನೆತ್ತುತ್ತಾರೇನೋ ನಿಜ ಆದರೆ ಅವರು ತಮ್ಮ ಪ್ರತಿಪಾದನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ತಮಗೆ ಸಮ್ಮತವಾದವುಗಳನ್ನೇ ಉದಹರಿಸುತ್ತಾರೆ ಹಾಗೆ ಮಾಡದೆ ನಿರ್ವಂಚನೆಯ ಬುದ್ಧಿಯಿಂದ ಶ್ರುತಿಸ್ಮೃತಿಗಳ ಅಭ್ಯಾಸಮಾಡಿದರೆ ವಿಧವಾ ಪುನರ್ವಿವಾಹಕ್ಕೆ ಶಾಸ್ತ್ರಗಳ ಒಪ್ಪಿಗೆಯಾದರೂ ಇದೆ ಎಂಬುದು ಅವರಿಗೆ ಸ್ಪಷ್ಟವಾಗಿ ಕಂಡುಬರದಿರಲಾರದು

ವಿಧವೆಯರ ಪುನರ್ವಿವಾಹವನ್ನು ಮಾಡಬೇಕೆಂದು ನಾವು ಪ್ರತಿಪಾದಿಸತೊಡಗಿದರೆ ಅಂಧಶ್ರದ್ಧೆಯ ಪುರಾಣಮತವಾದಿಗಳು ನಮ್ಮ ವಿರೋಧವನ್ನುಂಟುಮಾಡದಿರಲಾರರು ವಿಧವೆಯರ ಸಂಬಂಧವಾಗಿ ಅವರೆಲ್ಲರೂ ಔದಾಸೀನ್ಯವನ್ನು ತೋರಿಸುತ್ತಾರೆ ಅವರ ಈ ಉದಾಸೀನವೃತ್ತಿಯಿಂದ ಸಮಾಜ ಘಾತಕಗಳಾದ ಅನೈತಿಕ ಆಚಾರಗಳು ಪ್ರಸರಿಸಲಾರಂಭಿಸುವೆ

ಪುರಾಣಮತದಿಗಳ ಅಜ್ಞ ನಿಷ್ಠ ಗೋಳಿಮರದಲ್ಲೇ ನೇತಾಡುವ [illegible] ಕಾಲಚಕ್ರವು ದುಳುತ್ತಿರುವಂತೆ ಸಂಸ್ಕೃತಿಯೂ ಬದಲಾವಣೆ ಹೊಂದುವಂತೆ [illegible] (Policy) ಗಳನ್ನೂ ಬದಲಾಯಿಸಬೇಕೆಂದು ಅವರರಿಯರು ಅವರ ಅಂಧಶ್ರದ್ಧೆಗೆ ಧಿಕ್ಕಾರವಿರಲಿ

[illegible]

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ ಕೆಮ್ಮು ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ವಾಂತಿಭೇದಿ ಹೊಟ್ಟೆನೋವು ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

(ಪ್ಲೇಗಿಗೆ)

ಹೆತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಶೀಘ್ರವಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ 1—0—0

ಶ್ರೀನಿವಾಸ ತೈಲ

ಪ್ಲೇಗು ರೋಗಿಯ ಗಡ್ಡೆಗಳಿಗೂ ಗೆಡ್ಡೆಗೂ ತೀಕ್ಷ್ಣವ ಔಷಧ ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರ್ಯಾಂಚ್ ಆಫೀಸ್ ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್ ಸೀತಾರಾಘವ ವೈದ್ಯಶಾಲಾ ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಬಿವಣಿಗೆ ಹತ್ತಿ

The Zandu Pharmaceutical Works Ltd, Bombay, 14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹ್ಯ.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!

ಹಸಿ ಆಮಲಕ ಇನ್ನ ಇತರ ಮೂಲಿಕೆಗಳನ್ನು [illegible] ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ ಉಬ್ಬಸ ನಾನಾ ವಿಧವಾ [illegible] ಕೆಮ್ಮು ಎದೆ ನೆಗಡಿ ಸ್ವರಭಂಗ ವೃದ್ಧ್ಯಾಪ್ಯ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು [illegible] ರಕ್ತಕ್ಷೀಣತೆ ಪುಷ್ಟಿಹೀನತೆ ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಪ್ರಥಮಾವಸ್ಥೆಗೆ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪ ಜಾಡಿ ರೂ 10 – ಕ್ರಯ 1 ಪೌಂಡು ಸೀಸ ರೂ 2 8 ½ ಪಾ ರೂ 1/5 ¼ ಪಾ. ರೂ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ ಮದ್ರಾಸು
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಶಾ ಅಂಡ್ ಕಂಪೆನಿ ಡೈಮಂಡ್ ಬಿಲ್ಡಿಂಗ್ಸು
ಸಿರ್ಸಿ ಏಜಂಟರು — ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರ ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್
ಬೆಂಗಳೂರು ಏಜಂಟರು — ಬಿ ಫೂಲಚಂದ್‌ಲಾಲ್ ಕಂಪೆನಿ ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಂಕುಶ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅನುಭವಗಳಿಂದ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡ ವುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು ೬ ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿತ್ರಣೆ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆರ್ಯಶಾಸ್ತ್ರಾರೋಗ್ಯ" ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು

ಹೆಗಲಿಗೆ ಹಾಕುವ ಎಳೆ ಬಣ್ಣದ ಕಾಶೀ ಸಿಲ್ಕಿನ 6 ಮೊಳ ಉದ್ದ 2½ ಮೊಳ ಅಗಲ ರೂ 1 ರಿಂದಾಗಿಯಾಯಿತು ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಶಾಲು, ಸೀರೆಗಳು ರವಕೆ ಖಣಗಳು ಮಡಿಗಳು, ಎಲವಸ್ತ್ರ, ಬತ್ತಿನ ಪೇಟ ಇತ್ಯಾದಿ ಉಣ್ಣೆಯ ಶಾಲು, ಖದ್ದರ್ ಮಡಿ, ಧಾವಳಿ ಕಸ್ತೂರಿ ಕೇಸರಿ, ಪಚ್ಚಕರ್ಪೂರ ಇತ್ಯಾದಿಯ ಸಾಮಾನುಗಳು, ಪೂಜಾ ಸಾಮಗ್ರಿಗಳು ಜರಿಟೊಪ್ಪಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ—

ರಾವು ವಿಶ್ವನಾಥರಾವ್ ಎಂಡ್ ಬ್ರದರ್ಸ್
ನಾಗರ್ ಘಾಟ್ ಕಾಶೀ ಬನಾರಸ್ ಸಿಟಿ

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು

ಎಂ. ಮುಖ್ಯಪ್ರಾಣಭಟ್ಟ ಪ್ರೊಪ್ರೈಟರ್

The Canara Bank Limited, Mangalore.
ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

BRANCHES—Karkal Kasargod Cochin Udipi Gangolli Coondapur, Bombay Puttur, Calicut & Alleppey

ಬ್ರಾಂಚುಗಳು—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು, ಕಲ್ಲಿಕೋಟೆ ಮತ್ತು ಆಲ್ಲಪೈ

Authorised and fully paid up Capital Rs 300 000 – 0 – 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ 300,000 0 0
Reserve and other sinking Funds Rs 489 500 – 0 – 0	ಕ್ಷೇಮನಿಧಿ ಮತ್ತು ಇತರ ಫಂಡುಗಳು ರೂ 488,500 0 – 0
Amount invested on G P Notes Rs 817,097 – 2 – 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817 097 – 2 – 0
Rate of interest on fixed deposits at Head Office and Branch 6¼% for 2 Years, 6% , 1 Year	ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿದರ ಎರಡು ವರುಷಗಳಿಗೆ ಸೇಕಡಾ 6¼% 1 ವರುಷಕ್ಕೆ ಸೇಕಡಾ 6
Season deposits of Rs 1000/– & above terminable by the end of June are received at 6½% p a.	ಜೂನ್ ಆಖೈರು ಒಳಗೆ ಮುಗಿದ ಬಗೆಯ ರೂ 1 000/– ದ ಮತ್ತು ಮೇಲ್ಪಟ್ಟ ಠೇವಣಾತಿಗಳಿಗೆ ಬಡ್ಡಿದರ ಸೇಕಡಾ 6½

Current Account Deposits received and interest allowed on daily balance of Rs 50 and above that on multiple of Rs 10 @ 2% from 1st January to 30th June and @ 2% from 1st July to 31st December No interest will be allowed unless the deposits to rearn is not less than Rs 5 during a period of 6 months ending either 30th June or 31st December in any year

Except by special arrangement no interest is allowed on sums exceeding Rs 50,000 in the case of Head Office and Cochin Branch and on sums not exceeding Rs 5000 in the case of Bombay Branch

Short notice deposits requiring one week notice of withdrawal given at any time after one month from the date of deposit are received and interest allowed at 4 per annum. Interest on such deposits will cease on notice

For further particulars please apply to

Canara Bank Ltd, — **K. Venkat Rao,**
Mangalore 16—2—931 — *Secretary*

The Pangal Nayak Bank, Ltd.

Head Office Udipi — *Established 1920* — Branch Office Mangalore

Authorised Capital Rs 2,00 000	Paid up Capital Rs 1 75 000
Issued Capital Rs 1 75,000-	Reserve and other Funds Rs 1,64 000

1 **Receives Fixed Deposits at the following favourable rates**

For 3 months at 5%	For 12 15 18 or 21 months at 6
6 or 9 months at 5½%	24 months at 6¼

Interest being payable every 3 months

ಕಾಯಂ ಠೇವಣಾತಿಗಳು ಪ್ರತಿ 3 ತಿಂಗಳಿಗೆ ಬಡ್ಡಿಕೊಡುವ ಕಟ್ಟಳೆಯ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ಸಾ. ಕ 5%	12 15 18 ಯಾ 21 ತಿಂಗಳಿಗೆ ಸಾ. ಕ 6
6 ಯಾ 9 ತಿಂಗಳಿಗೆ ಸಾ ಕ 5½%,	24 ತಿಂಗಳಿಗೆ ಸಾ ಕ 6¼%

2 **Current Accounts** opened free of charge and interest allowed **Cumulative Savings Bank and Short Notice Deposits** received at favourable rates of interest

3 The Bank transacts every description of Banking business

4 For full particulars and for copies of the amended **Rules of Business** please apply to the **Secretary** at the Head Office at Udipi or to the **Agent** Mangalore Branch

Office of the Bank Udipi 1 4 – 31 — **P Laxman Nayak,** Secretary

---

ಇಪ್ಪತ್ತು	ವಯಸ್ಸಿನಲ್ಲಿ	ಹುಡುಗ
ಮೂವತ್ತು	ದಲ್ಲಿ	ಮುಚ್ಚಟ
ನಲವತ್ತು	ರಲ್ಲಿ	ನರಳುವನು
ಐವತ್ತು	ಆದರೆ	ಆಲಸ್ಯ
ಅರುವತ್ತು	ಕೋಲಿಡಲು	ಆರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಸ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್

ನಮ್ಮ ಸಾಂಪತ್ತಿಕ ಸ್ಥಿತಿಯನ್ನು ಕುರಿತು

ಶ್ರೀಮಾನ್ ಶ್ಯಾಂರಾಯ ಸಾಹೇಬರು ಭಾಷಣ ಮಾಡುವಾಗ, ಬಜೇಟು ಅಂದಾಜಿನಲ್ಲಿ ಅರ್ಧ ವರ್ಷದ ಆಯವ್ಯಯಗಳನ್ನು ತೋರಿಸುವ ಅಂಕೆಸಂಖ್ಯೆಗಳನ್ನು ತಿದ್ದಬೇಕಾಗಿ ಬರುವುದೇನೋ ನಿಜವೇ ಆದರೂ, ಇನ್ನು ತೆರಿಗೆಗಳನ್ನು ಹೆಚ್ಚಿಸುವುದಿಲ್ಲ ಎಂದು ಅಖಂಡ ಭರವಸೆ ಕೊಟ್ಟಿರುವರು. ಇದ್ದ ತೆರಿಗೆಗಳೇ ಮೊದಲೇ ಭಾರವಾಗಿದ್ದು, ಈಗ ವಿಶೇಷ ಭಾರವಾಗಿರುವಾಗ, ಇನ್ನು ಇವು ವಿಪರೀತ ಭಾರವಾಗದಂತೆ ಸರಕಾರವು ಬಡ ಪ್ರಜೆಗಳ ಮೇಲೆ ಕನಿಕರಪಟ್ಟಿರುವುದೇ ಈ ವರ್ಷದ ಗ್ರಹಫಲ. ಅದರಲ್ಲೂ "ವರ್ಷದ ಕೊನೆಗೆ ಸರಕಾರದ ಖಜಾನೆಯಲ್ಲಿ ಸಿಲ್ಕು ಉಳಿಯುವುದೆಂದು ಹೇಳಬಹುದಾಗಿದೆ, ಹೀಗಿರುವುದರಿಂದ ಪುನಃ ಆಯವ್ಯಯದ ಅಂದಾಜನ್ನು ಎಸೆಂಬ್ಲಿಯ ಮುಂದೆ ತರುವುದು ಅನಾವಶ್ಯಕ" ಎಂದರು. ಸಿಲ್ಕು ಉಳಿದರೆ ಸಂತೋಷವೆ; ಬಜೇಟನ್ನು ಚರ್ಚಿಸದಿರುವುದು ಮಾತ್ರ ಸರಿಯಾಗುವುದಿಲ್ಲ. ವ್ಯಯದ ಬಾಬುಗಳನ್ನು ಪ್ರತಿನಿಧಿ ಸದಸ್ಯರು ಚರ್ಚಿಸದೆ ಇರಲಾಗುವುದೆ? ದೇಹದಲ್ಲಿ ತುಂಬ ಮಾಂಸ ತುಂಬದೆಯೆಂದು ಉಪವಾಸ ಹಿಡಿದರೆ ಅದೆಷ್ಟು ದಿನ ಬಾಳಬಹುದು? ವೈದ್ಯರನ್ನು ವಿಚಾರಿಸಿಯೇ ಮಾಂಸದ ತ್ರಾಣಕ್ಕೆ ಅವಧಿ ಹಿಡಿಯುವುದು ಉತ್ತಮವಲ್ಲವೆ?

ಕೂಡಿಸಿಟ್ಟ ಚಿನ್ನ

ದಿಂವಲೇ ವಿಶೇಷ ಉಪಕಾರವುಂಟಾಯಿತೆಂದು ಮೈಸೂರು ಸಾಹೇಬರು ತಿಳಿಸಲು ಮರೆಯಲಿಲ್ಲ. ಭಾರತವಾಸಿಗಳು ಸ್ವರ್ಣಪ್ರಿಯರು, ಚಿನ್ನಾಭರಣಗಳಲ್ಲಿ ಆಸಕ್ತರು ಎಂದು ಹಿಂದೆ ಯಾರು ನಮ್ಮಲ್ಲಿ ದೋಷ ಎಣಿಸುತ್ತಿದ್ದರೊ, ಈಗ ಅವರೇ ಹೀಗೆ ಗಳಿಸಿಟ್ಟ ಚಿನ್ನದಿಂದ ಲೋಕೋಪಕಾರವಾಯಿತೆನ್ನುತ್ತಿರುವರು. ಇಂಗ್ಲೆಂಡಿನ ಸರಕಾರಕ್ಕೂ ಇಂಡಿಯಾ ಸರಕಾರಕ್ಕೂ, ಇಷ್ಟರೊಳಗೆ ಇಲ್ಲಿಂದ ರಫ್ತಾದ ನಲ್ವತ್ತೆಂಟು ಕೋಟಿ ರೂಪಾಯಿ ಬೆಲೆಯ ಚಿನ್ನದಿಂದ, ಕಟ್ಟಿದ ಉಸಿರು ಎಷ್ಟೋ ಮಟ್ಟಿಗೆ ಸಡಲಿಸಿದಂತಾಗಿದೆ. ಭಗವಂತನು ಭಾರತವಾಸಿಗಳಿಗೆ ಕೊಟ್ಟ ಸಮೃದ್ಧಿಯಿಂದ, ಅವರು ಹಿಂದೆ ಚಿನ್ನ ಕೂಡಿಸಿಟ್ಟರು, ಅದೇ ಭಗವಂತನು ಅನುಗ್ರಹಮಾಡದ ಈ ಕಾಲದಲ್ಲಿ ಅವರ ಚಿನ್ನ ಹೊರಗಡವಿದರು. ಚಿನ್ನದ ಮಾನವನ್ನು ಇಂಗ್ಲೆಂಡು ಬಿಟ್ಟರೂ, ಪವನಿನ ಮಾನ ಉಳಿಸಲು ಭಾರತವರ್ಷದ ಚಿನ್ನವೂ ಕೊಂಚ ಸಹಾಯಮಾಡಿದೆ. ಪಂಜಾಬಿನಲ್ಲಿ ಸೇಕಡಾ ೭೦ರಂತೆ ಮುಸ್ಲಿಮರಿರುವರಷ್ಟೆ, ಇಂಡಿಯಾದಿಂದ ರಫ್ತಾದ ಚಿನ್ನದಲ್ಲಿ ಹೆಚ್ಚಿನದು ಪಂಜಾಬಿನಿಂದ ಎಂದು ವಾರ್ತೆ. ಇವರೆಷ್ಟು ಕೂಡಿಸಿಟ್ಟಿದ್ದರು? ಇನ್ನಿಷ್ಟರಲ್ಲಿ ಎಷ್ಟು ಬೇಗನೆ ಪತಕ್ಕೆ ಮಾರಿದರು? ಎಂಬುದನ್ನು ಮುಸ್ಲಿಮ ಪರಿಷತ್ತು ವಿಚಾರಿಸಿಕೊಂಡರ ಪ್ರಯೋಜನವಿದೆ

ಮೆಕ್‌ಡೊನಾಲ್ಡರ ಇಂದ್ರಜಾಲ

ಲೇಬರ್ ಮುಖಂಡರಾಗಿದ್ದು ಸರಕಾರದ ಅಧಿಕಾರಾರೂಢರಾಗಿ ಕೊನೆಗೆ ನೆಶನಲ್ ಸರಕಾರದ ಮುಖ್ಯ ಪ್ರಧಾನರಾದಾಗಲೇ ಈ ಮಹಾತ್ಮರು 'ಸ್ವದೇಶತ್ಯಾಗಿ' ಆಗಾಗ ಹೊಡದರೆಂದು ಬ್ರಿಟಿಷ ಪತ್ರಿಕೆಗಳೆಂದುವು. ಕನ್ಸರ್ವೇಟಿವರೇ ಅಧಿಕರಿರುವ ಮಂತ್ರಿಮಂಡಲದ ನಾಯಕತ್ವವನ್ನು ಇವರು ವಹಿಸಿದಾಗ, ಕನ್ಸರ್ವೇಟಿವ್ ಪಕ್ಷದ ಮುಖಂಡರಾದ ಬಾಲ್ಡವಿನರೇ ಇವರ ಹಸ್ತ ಧಾರಗಲೊಪ್ಪಿದರು, ಅದು 'ಸ್ವದೇಶತ್ಯಾಗ' ಈಗ ಇನ್ನೊಂದು ವಿಚಿತ್ರ ವಿಚಾರವು ಹೊರಬಿದ್ದಿದೆ. ಮಂತ್ರಿಮಂಡಲದ ಮಹಾ ಮತವು ಕನ್ಸರ್ವೇಟಿವರಿಗೆ ಇರುವಾಗ, ಅವರು ತಿಳಿಸುವುದನ್ನು ಮುಖ್ಯಮಂತ್ರಿಗಳು ನಡೆಸದೆ ಇರಲಾಗುವುದಿಲ್ಲ. ಇದರಿಂದಾಗಿ ಭಾರತವರ್ಷದ ವಿಚಾರಗಳಲ್ಲಿ ತಿದ್ದುಪಡಿಗಳಾಗಿ ಹೋದುವು, ಸ್ಟೇಟ್ ಸೆಕ್ರೆಟರಿಗಳು ಕನ್ಸರ್ವೇಟಿವರಿರುವ ಕಾರಣ, ಅವರನ್ನು ತಿದ್ದಲು ಇವರಿಂದಾಗದು. ಇನ್ನು ಬ್ರಿಟಿಷ ಸರಕಾರವು ಹೊಸ ಸುಂಕಗಳನ್ನು ಇರಿಸಬೇಕೆಂದೇ ಚಡಪಡಿಸುವ ಕನ್ಸರ್ವೇಟಿವರ ಮಹಾ ಮತವು ಇವರನ್ನು ಒತ್ತಾಯಪಡಿಸುತ್ತಿರುವುದೆ, ಇವರು ಯಾವುದನ್ನು ಸೂಚಿಸಿದರೂ, ಕನ್ಸರ್ವೇಟಿವ ಪಕ್ಷದವರು ಇವರಿಗೆ ಅನುಕೂಲರಾಗಿ ರದೆ, ಮಂತ್ರಿಮಂಡಲದೊಳಗೆ ಅವರವರು ಅವರವರ ಅಭಿಪ್ರಾಯದಂತೆ ಇರಬಹುದೆಂಬ—ಇದು ವರೆಗೆ ಎಂದೂ ಇರದ—ಹೊಸ ಪದ್ಧತಿಗೂ ಇವರು ತಲೆಬಾಗಿರುವರು. ಅಂತೂ ಮಂತ್ರಿಗಳು ತಮ್ಮೊಳಗೇ ಒಪ್ಪಿಕೊಳ್ಳದಿರುವುದನ್ನು ಇವರು ಒಪ್ಪಿಕೊಂಡಂತಾಯಿತು.

ಹೊಸ ವಾಯುವ್ಯ ಸರಹದ್ದಿನ 'ಪ್ರೊವಿನ್ಸ್'

ಈ ಸರಹದ್ದಿನಲ್ಲಿ ಒಂದು ಹೊಸ ಪ್ರಾಂತ್ಯವೆಂದು ಗಣನೆಗೆ ತಂದು, ಅದನ್ನು ಒಬ್ಬ ಗವರ್ನರರ ಕೈಕೆಳಗೆ ಇಡುವುದಾಗಿ ನಿಶ್ಚಿತವಾಗಿದೆ. ಗವರ್ನರರಿಗೆ ವಾರ್ಷಿಕ ತಲಬು ಅತ್ಯಧಿಕವಾಗಿ ೬೬,೦೦೦ ರೂಪಾಯಿ, ಅವರ ಕೌನ್ಸಿಲರರಿಗೆ ರೂಪಾಯಿ ೪೨,೦೦೦, ಲೆಜಿಸ್ಲೇಟಿವ ಕೌನ್ಸಿಲಿನ ಮೆಂಬರರ ಸಂಖ್ಯೆ ೪೦,—ಎಂಬುದಾಗಿ ಪ್ರಕಟವಾಗಿದೆ. ಮದ್ರಾಸ್ ಮೊದಲಾದ ಪ್ರಾಂತ್ಯಗಳ ಗವರ್ನರರಂತೆ ಇಲ್ಲಿನ ಗವರ್ನರರಿಗೆ ಮಾಹೆಯಾನ ತಲಬು ೧೨,೦೦೦ ರೂಪಾಯಿ ಆಗಿಲ್ಲ, ಎಕ್ಸಿಕ್ಯೂಟಿವ್ ಕೌನ್ಸಿಲರರ ತಲಬೂ ತಲೆಗೆ ಒಂದು ಸಾವಿರದಷ್ಟು ಮಾಹೆಯಾನ ಕಡಿಮೆಯಾಗಿದೆ. ಹೊಸ ಪ್ರಾಂತ್ಯವನ್ನು ರಚಿಸುವಾಗ, ಈಗಣ ಆರ್ಥಿಕ ಅಡಚಣೆಯನ್ನು ಮನಸ್ಸಿಗೆ ತಂದುಕೊಂಡು ಈ ತಲಬನ್ನು ನಿಷ್ಕರ್ಷಿಸಿರುವರಾದರೆ, ಮದ್ರಾಸು ಪ್ರಾಂತ್ಯಕ್ಕೆ ಬರುವ ಮುಂದಣ ಗವರ್ನರರಿಗೂ ಸಾಧಾರಣ ಇಷ್ಟೆ ತಲಬನ್ನಿಟ್ಟರೆ ಸಾಲದಾದೀತೆ? ಅಷ್ಟುಂ ಅಂದಾಜು ಸರಿಹೋದರೆ, ಮೇಲಧಿಕಾರಿಗಳಲ್ಲಿ ಹೊಸಬರನ್ನು ನಿಯಮಿಸುವಾಗ, ಹೊಸ ಇಳಿತಲಬು ಜಾರಿಗೆ ಬರುವುದಾಗಿ ಭಾರತೀಯರು ತಮ್ಮ ಭಾಗ್ಯದೇವತೆಯನ್ನು ಪೂಜಿಸಬಹುದು.

ಲಕ್ನೋ ಮುಸ್ಲಿಮ ಪರಿಷತ್ತು

ಯಾವತ್ತು ಪಂಗಡದ ಮುಸ್ಲಿಮರೊಳಗೆ ಐಕ್ಯಮತ್ಯವನ್ನು ಬೆಳೆಸುವ ಸಾಧನಗಳನ್ನು ಮಾಡುವುದಕ್ಕಾಗಿ ಲಕ್ನೋದಲ್ಲಿ ಈ ಪರಿಷತ್ತು, ಸುಮಾರು ೬೦ ಮಹನೀಯರ ಹಾಜರಿಯಲ್ಲಿ ಸೇರಿತು. ಹೀಗಿರುವುದರಿಂದ ಸರ್ವಾನುಮತದಿಂದ ಮಂಜೂರಾಗದೆ ಯಾವ ನಿರ್ಣಯವನ್ನು ಅಂಗೀಕರಿಸುವುದಿಲ್ಲವೆಂದು ಮೊದಲೇ ನಿಶ್ಚಿತವಾಯಿತು. ಜನ್ನರು ಮಂಡಿಸಿದ ವಿಷಯ ನಿಯಾಮಕ ಸಭೆ ಪರ್ಯಾಲೋಚಿಸಿಕೊಂಡಿತು. ಬರ್ಡನ್ನರ ವಿಷಯ ಟೀಕಿಸುವ ಪ್ರಶ್ನೆಯೇ ಮೊದಲು ಬರಲು, ಕಾಂಗ್ರೆಸ್ ಧೋರಣೆಯನ್ನು ಪ್ರಶಂಸಿಸಿ ಕಲಸರು ಮಾತಾಡಲು, ಈ ವಿಷಯ ಚರ್ಚೆಯೇ ಬೇಡವೆಂದಾಯಿತು. ವಾಯುವ್ಯ ಸರಹದ್ದಿನಲ್ಲಿ ಮಾತ್ರ, ಬರ್ಡನ್ನರನ್ನು ಜಾರಿಗೆ ತಂದುದು ಅನ್ಯಾಯವೆಂದೆಂಬ ವಿಷಯ ಮಾತ್ರ ಒಪ್ಪಿತವಾಯಿತು, ಸರ್ ಫಿರೋಜ್ ಖಾನ್ ನೂನ (ಪಂಜಾಬು ಮಂತ್ರಿಯವರು) ಇಂತಹವನ್ನೆಲ್ಲ ಚರ್ಚಿಸಲು ತಾವು ಬರಲಿಲ್ಲವೆಂದು ಎದ್ದರು. ನಂತರ ಹತ್ತೇ ನಿಮಿಷಗಳಲ್ಲಿ, ಪ್ರತಿ ಒಂದೂ ವಿಷಯ ಹಲವು ವಿರೋಧಾಭಿಪ್ರಾಯಗಳು ಮುಂದಕ್ಕೆ ಬಂದ ಪ್ರಯುಕ್ತ, ಸಾಯಂಕಾಲವಾಗುವುದರೊಳಗೆ ಪರಿಷತ್ತು, ಯಾವುದೊಂದು ಮುಂದಣ ಸಭೆ ದಿನ ನಿಶ್ಚಯಿಸದೆ, ಅಸ್ತಮಿಸಿತು

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ

ದಿವಾನಬಹದ್ದೂರ್ ಆರೋಗ್ಯಸ್ವಾಮಿ ಮೊದಲಿಯಾರರು ಸರಕಾರದ ಆರ್ಥಿಕ ಧೋರಣೆಯನ್ನು ಕಠಿಣವಾಗಿ ಟೀಕಿಸಲು ತೊಡಗಿದರು. ಇವರ ಪಕ್ಷದ ಮೆಂಬರರು 'ವೈಸ್ರಾಯರು ಗಾಂಧಿಯವರನ್ನು ಕಂಡು ಮಾತಾಡಲು ಅವಕಾಶ ಕೊಡದೆ ಕಾಂಗ್ರೆಸ್ಸಿನ ಮೇಲೆ ಯುದ್ಧ ತೊಡಗಿದರಂದೂ ಇಷ್ಟು ಪ್ರಬಲವಾದ ಬಿರ್ಡನ್ನರನ್ನು ಈಗ ಜಾರಿಗೆ ತರುವ ಆವಶ್ಯಕ ಕಾರಣಗಳೇನೂ ಈ ಪ್ರಾಂತ್ಯದಲ್ಲಿ ಇಲ್ಲವೆಂದೂ, ಇದರಿಂದ ಈಗ ಅಗತ್ಯವಾಗಿರುವ ಶಾಂತ ವಾತಾವರಣವು ಉಂಟಾಗಲಾರದೆಂದೂ, ಶಾಂತರೀತಿಯಲ್ಲಿ ಪಿಕೆಟಿಂಗ್ ಮಾಡುವುದನ್ನು ಪೋಲೀಸರು ಕಾದಾಡುವುದು ರೀತಿಯಲ್ಲವೆಂದೂ, ದೇಶಭಕ್ತರ ಚಿತ್ರಗಳನ್ನು ಕಿತ್ತು ತೆಗೆಯುವುದೂ ಲಾಠಿಪ್ರಹಾರ ಮಾಡುವುದೂ ಸಿಕ್ಕಾಬಟ್ಟೆ ಬಡೆಯುವುದೂ ಮೊದಲಾದುವು ಆಕ್ಷೇಪಕರವೆಂದೂ ಇತ್ಯಾದಿ ಇತ್ಯಾದಿ ಎಷ್ಟನ್ನೇನೋ ಬರೆದು ಸರಕಾರಕ್ಕೆ ವಿಜ್ಞಾಪಿಸಿಕೊಂಡು, ಈ ವಿಷಯವಾಗಿ ಸರಕಾರವು ನ್ಯಾಯಸಾಧನೆಮಾಡದಿರುವಲ್ಲಿ ಪತ್ರಿಕಾ ಪರಿಷತ್ತು ಮಾಡಿರುವ ಕೆಲಸವನ್ನು ಮುಂದರಿಸುವುದು ಸಾಧ್ಯವಲ್ಲವೆಂದೂ ಸೂಚಿಸಿಕೊಂಡಿರುವರು. ಆದರೆ, ಈ ವಿಷಯವನ್ನು ಕುರಿತಾಗಿ ಕೌನ್ಸಿಲಿನ ಅಧಿವೇಶನದಲ್ಲಿ ಇವರು ಆವೇಶದಿಂದ ಭಾಷಣಮಾಡಿದರಾದರೂ, ಇನ್ನಿಬ್ಬರು ಇದನ್ನು ಸಮರ್ಥಿಸಿ ಮಾತನಾಡಿದರಾದರೂ, ಕೊನೆಗೆ ಗಡಿಯಾರವೇ ಇವರ ಬಾಯಿ ಬಿಗಿದು, ಸೂಚನೆಯು ಗಂಟೆ ಶಬ್ದದೊಡನೆ ಅಲ್ಲಲ್ಲಿಗೇ ಲೀನವಾಯಿತು!

ನೋಟಗಳು

NOTE....S

ದೊಡ್ಡ ದೊಡ್ಡ ಊರುಗಳಲ್ಲಿ ನಾಟಕ, ಸಿನೆಮಾ, ಮೊದಲಾದ ಸಾರ್ವಜನಿಕ ಪ್ರದರ್ಶನಾಲಯಗಳೊಳಗೆ ಪ್ರೇಕ್ಷಕರು ಬೀಡಿ ಸಿಗರೇಟ್ ಎಳೆಯ ಬಾರದಾಗಿ ಬಹಳ "ಸ್ಟ್ರಿಕ್ಟ್" ನಿಬಂಧನೆಯಿದೆ. ಕಂಪೆನಿಗಳವರೂ, ಸಂಬಂಧಪಟ್ಟ ಆರೋಗ್ಯಖಾತೆಯವರೂ ಅದನ್ನು ಸಂಪೂರ್ಣ ನಿಷೇಧಿಸುತ್ತಾರೆ. ಈ ನಿಬಂಧನೆಗಳನ್ನು ನಮ್ಮೂರವರೂ ಏಕೆ ಪಾಲಿಸಬಾರದು?

* * * *

ಹೀಗೆ ಸಾವಿರಾರು ಮಂದಿಗಳು ಕೂಡಿದ ಒಂದು ಮಂದಿರವು ಕೆಟ್ಟ ಗಾಳಿಯಿಂದ ತುಂಬುತ್ತದೆಂದು ಸಣ್ಣ ಮಗುವಿಗೂ ತಿಳಿದ ವಿಷಯ. ಅಲ್ಲದೆ ನಾವು ರಚಿಸುವ ಕಂಪೆನಿಗಳಲ್ಲಿ ಜನರ "ಸೀಟು"ಗಳಿಗೆ ಹೆಚ್ಚು ಗಮನಕೊಡುತ್ತೇವಲ್ಲದೆ, ಕಬ್ಬಿಣವನ್ನು ದೊಡ್ಡ ಮಾಡಿ ಕಟ್ಟುತ್ತೇವಲ್ಲದೆ, ಅವುಗಳಿಗೆ ಹೆಚ್ಚು ಕಿಟಿಕಿಗಳನ್ನಿಡುವುದಿಲ್ಲ—ಅಂದರೆ ಜನಸಮುದಾಯದ ಆರೋಗ್ಯಕ್ಕೆ ಮನಃಕೊಡುವುದಿಲ್ಲ

* * * *

ಸಿನೆಮಾ ನಾಟಕ ಕಂಪೆನಿಗಳಿಗೆ ಹೋಗಿ, ನಾವು ಮಸ್ತಕ ಹಿಂತಿರುಗುವಾಗ ನಮ್ಮ ಬಟ್ಟೆಬರೆಗಳನ್ನು ನಾವು ಮೂಸಿ ನೋಡಿದರೆ ಅವುಗಳಲ್ಲಿ ಹೆಚ್ಚಾಗಿ ಸಿಗರೇಟಿನ ನಾತವನ್ನೇ ಮೂಗಿಗೆ ಹೊಡೆಯುವುದು ನಮಗೆ ತಿಳಿಯದಿರದಿಕ್ಕಿಲ್ಲ.

ಬೆಜವಾಡದ ಕಲೆಕ್ಟರರು

ಈ ಊರಲ್ಲಿ ಅಲ್ಲಿಯ ಮುಖ್ಯ ವಸ್ತ್ರ ವ್ಯಾಪಾರಿಗಳ ಒಂದು ಸಭೆಯಾಗಿರಿಸಿದರು. ಖಾದಿ ಮಾರಾಟವು ಆಕ್ಷೇಪಕರವೇ? ಎಂದೊಬ್ಬ ವ್ಯಾಪಾರಿಯು ಪ್ರಶ್ನೆ ಕೇಳಲು. ಅದೇನೂ ಹಾಗಿಲ್ಲ, ಪೋಲೀಸರಾಗಲಿ ಇತರ ಸರಕಾರಿ ಅಧಿಕಾರಿಗಳಾಗಲಿ ಖಾದಿ ವ್ಯಾಪಾರಿಗಳನ್ನು ಪೀಡಿಸಿದರೆ ಅದಾ ವಿಷಯವಾಗಿಯೂ ಸರಕಾರವು ಜಾಗ್ರತೆ ತೆಗೆದುಕೊಳ್ಳುವುದು ಎಂದು ಕಲೆಕ್ಟರರ ಉತ್ತರವಾಯಿತು. ವ್ಯಾಪಾರಿಗಳಿಗೆ ಇದರಿಂದ ಎಷ್ಟೋ ಧೈರ್ಯವುಂಟಾಗಿ, ಅವರಲ್ಲನೇಕರು ಸಂಶಯ ನಿವಾರಣೆ ಹೊಂದಿತು.

ವ್ಯಾಪಾರದ ಹೀನಾವಸ್ಥೆಯ ಫಲ

ಸರಕಾರದ ಪ್ರಕಟಣೆಗಳಲ್ಲಿರುವ ಅಂಕಸಂಖ್ಯೆಗಳಿಂದಲೇ ಗೊತ್ತಾಗಬಹುದು ಈ ಫಲವು ಎಷ್ಟು ಅನಿಷ್ಟಕರವಾಗಿದೆ! ವಿದೇಶೀಯ ಬಟ್ಟೆಯು ೧೯೨೯ರಲ್ಲಿ ೧೯೩೪ ಮಿಲ್ಲಿಯ ಯಾರ್ಡ್‌ ೧೯೩೦ರಲ್ಲಿ ೨೨೮ ಮಿಲ್ಲಿಯ ಯಾರ್ಡ್‌ ೧೯೩೧ರಲ್ಲಿ ೭೦೪ ಮಿಲ್ಲಿಯ ಯಾರ್ಡ್ ಈ ದೇಶಕ್ಕೆ ಬಂದಿಳಿದಿದೆ. ಇದರಲ್ಲಿ ಇಂಗ್ಲೆಂಡಿನಿಂದ ೧೯೩೦ ೪೦, ೩೧ರಲ್ಲಿ ೨೮೦ ೧೯೩೨, ೭೦ ಮಿಲ್ಲಿಯ ಯಾರ್ಡ್ ಮಾತ್ರ ಬಂದುದು. ವಿದೇಶೀಯ ನೂಲು ಇವೇ ಮೂರು ವರ್ಷಗಳಲ್ಲಿ ೨೭ ಮಿಲ್ಲಿಯ ಯಾರ್ಡಿನಿಂದ ೧೮ ಮಿಲಿಯಕ್ಕೆ ಇಳಿದಿದೆ. ಇದರಲ್ಲಿ ಇಂಗ್ಲೀಷ ನೂಲು ೧೦೪ ಮಿಲ್ಲಿಯ ಯಾರ್ಡಿನಿಂದ ೩ರಲ್ಲಿ ಬರೇ ೪½ ಮಿಲ್ಲಿಯ ಯಾರ್ಡಿನಷ್ಟಾಗಿದೆ. ಎಂದರೆ ಇವೇ ಮೂರು ವರ್ಷಗಳಲ್ಲಿ ಇಂಗ್ಲೆಂಡಿನಿಂದ ಇಂಡಿಯಕ್ಕೆ ಬರುವ ಬಟ್ಟೆಯು ಶೇಕಡಾ ೫೫ರಷ್ಟು ನೂಲು ಅರ್ಧಾಂಶದಷ್ಟು ಕಡಿಮೆಯಾಗಿದೆ ಎಂದು ಕಸ್ಟಮ್ಸ್ ಆಫೀಸುಗಳ ರಿಟರ್ನುಗಳಿಂದ ವ್ಯಕ್ತವಾಗಿದೆ

'ಸತಿ'ಯ ಸಹಗಮನ

ಹಮೀರಪುರ ಜಿಲ್ಲಾ ಮಹೋಬದಲ್ಲಿ ಬಲ್ದೇವನೆಂಬವನ ಹೆಂಡತಿ ರಾಜರಾಣಿ ಎಂಬಾಕೆ. ಇವಳ ವಯಸ್ಸು ೩೦; ಇಬ್ಬರೂ ದಾಂಪತ್ಯ ಸ್ನೇಹದಿಂದ ಇರುತ್ತಿದ್ದರು. ಗಂಡನಿಗೆ ಹಿಂದಿನದಿನಗಳ ಕಾಯಿಲೆ ಮರಣಾಪನ್ನ ಸ್ಥಿತಿಯಲ್ಲಿದ್ದಾಗ ಹೆಂಡತಿಯನ್ನು ಕರೆದು ತನ್ನು ಸಾಯುವೆನೆಂದನು. ಅವನನ್ನು ತಾನು ಹಿಂಬಾಲಿಸುವುದಾಗಿ ಇವಳು ಮಾತುಕೊಟ್ಟಳು. ಅವನು ಮಡಿದನು. ಇವಳು ಬಂಧುಗಳನ್ನು ಕರೆದು ತಾನೂ ಸಹಗಮನ ಮಾಡುವೆನೆಂದಳು. ಇದು ಕಾನೂನಿಗೆ ವಿರೋಧವಾದ ಕಾರಣ ಹಾಗೆ ಮಾಡಿದರೆ ಅನ್ಯಾಯವೆಂದೂ, ತಮಗೆ ಶಿಕ್ಷೆಯಾದೀತೆಂದೂ ಬಂಧುಗಳು ಈ ಸಂಗತಿಯನ್ನು ಪೋಲೀಸರಿಗೆ ತಿಳಿಸಿದರು. ಪೋಲೀಸರು ಇವಳನ್ನು ಸ್ಟೇಶನಿಗೆ ಕೊಂಡೊಯ್ದು ವೈದ್ಯನಿಂದ ಅಮಲುಕರವಾದ ಇಂಜೆಕ್ಷನ್ ಕೊಡಿಸಿ, ಇವಳನ್ನು ಮಲಗಿಸಿದರು. ಆದರೆ, ನಿಷ್ಠಳಾದ ಇವಳಿಗೆ ಅಮಲು ಹತ್ತಲಿಲ್ಲ. ಹೇಗೋ ಇವಳು ಅಲ್ಲಿಂದ ಪಾರಾಗಿ ಗಂಡನ ಶವದಹನವಾಗುವಲ್ಲಿಗೆ ಬಂದು, ಉರಿಯುವ ಚಿತೆಯಲ್ಲಿ ಹಾರಿ ಸಹಗಮನವ್ರತ ಮುಗಿಸಿದಳು. ವಿಚಿತ್ರ!

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

(ಹಣ ಪರತ ಗುಣ ತೋರದಿದ್ದರೆ) **೧೦೦೦ ರೂ. ಇನಾಮು**

ಪುರುಷತ್ವ ಸಂಜೀವಿನೀ ಚೂರ್ಣ (ರಜಿಸ್ಟರ್ಡ)

ಈ ಚೂರ್ಣದಿಂದ ಸ್ವಪ್ನದಲ್ಲಿ ಹಾಗೂ ಮೂತ್ರದ್ವಾರಾ ಹೋಗುವ ವೀರ್ಯವು ಕೂಡಲೆ ಬಂದಾಗುವದು. ಗಂಮಿ ಶರಮಾದಿಂದಾದ ಉಷ್ಣತಾ, ಮುಷ್ಟಿಮೈಥುನದಿಂದಲೂ, ಅತಿಂತಿಯಿಂದಲೂ ಧಾತು ನೀರಾಗುವಿಕೆ, ಧಾತು ಕ್ಷೀಣತೆ, ಅಶಕ್ತತೆ ಶೀಘ್ರಧಾತುಪತನ ಇವೆಲ್ಲ ರೋಗಗಳು ನಾಶವಾಗಿ ರಕ್ತಶುದ್ಧಿಯಾಗುತ್ತದೆ. ಹಸಿವೆ, ಸಾಮರ್ಥ್ಯಗಳು ಹೆಚ್ಚಾಗಿ ತೂಕ ಬೆಳೆಯುತ್ತದೆ. ಮತ್ತು ವೀರ್ಯವು ಗಟ್ಟಿಯಾಗಿ ಗರ್ಭಧಾರಣಕ್ಕೆ ಯೋಗ್ಯವಾಗುತ್ತದೆ. ಮುಖ್ಯ ಸರ್ಟಿಫಿಕೇಟು, ಮಿ. ರಾ. ವಿ. ಎಸ್. ಅಗಡೆ ಮ್ಯಾಜಿಸ್ಟ್ರೇಟ ಸಾಕರ್ಗಾಂವ:—ಈ ಚೂರ್ಣದಿಂದ ನನಗೆ ಆಶ್ಚರ್ಯಕಾರಕ ಗುಣವಾಯಿತು. ಅನೇಕ ತರದ ಅವಿಚಾರದಿಂದ ದುಷ್ಟವಾದ ವೀರ್ಯ ಹಾಗೂ ರಕ್ತವು ಇದರಿಂದ ಸತೇಜವಾಗಿ ಪ್ರಕೃತಿಯು ನೆಟ್ಟಗಾಗದೆ ಇರದು. ೨೧ ದಿವಸ ಸಾಕಾಗುವಷ್ಟು ಡಬ್ಬಿಗೆ ಕಿಮ್ಮತ್ತು ೫ ರೂ. ಟ. ಖ. ೦॥೦.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೇತ್ರ ವೃಯಲ್ಲಿ ನೋವು, ಉಷ್ಣತಾ ಕ್ಷೀಣತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು, ಮಿ. ರಾ. ಎ. ಎಮ್. ಇನ್‌ಸ್ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತು ರೂ. ೩. ಟ. ಖ. ೦॥೦.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತ ನಂತರ ಏನುಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ವೈದ್ಯ ಆರ್. ಟಿ. ಚಾಂಗದೇವ ಪೂರ್ವ ಖಾನದೇಶ:—ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ೧ ಸಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚ ॥.

ಸೂಚನೆ—ಯಾವದಾದರೂ ೩ ಡಬ್ಬಿಗೆ ಟ. ಖ ಮಾಫ. ನಮ್ಮ ಈ ರಿಜಿಸ್ಟರ್ಡ ಔಷಧದ ತದ್ರೂಪ ನಕಲು ಹೊರಟಿವೆ. ಪೂರ್ಣ ವಿಚಾರಮಾಡಿ ತರಿಸಿಕೊಳ್ಳಿರಿ. ಈ ಸರ್ಟಿಫಿಕೇಟು ಕೊಟ್ಟಿಯದ್ದೆಯೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಇನಾಮು.

ವಿಳಾಸ—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

೧೧೦೦ ರೂ. ಬಕ್ಷೀಸು.

೩೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ

ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ

ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟದೆ.

ಮದನಮಸ್ತ ಪಾಕು. ರಿಜಿಸ್ಟರ್ಡ.

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೋಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥಾಪರೂ ಪರಮ, ಪ್ರಮೇಹ, ಸ್ವಪ್ನದೋಷ, ಇತ್ಯಾದಿ ರೋಗಗಳು ನಾಶವಾಗಿ ಶರೀರಕ್ಕೆ ಸಾಖಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೩೧ ದಿವಸ ಸಾಲುವ ೮೦ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ. ೫. ಟ. ಖ. ೦॥ ೧. ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ. ೧೧. ನೂರು ಡಬ್ಬಿಗೆ ರೂ. ೧॥ ಮಾತ್ರ ಪಡೆವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಶಾಲಾ ಮಾಸ್ತರರ ಪ್ರೊಸ ಸರ್ಟಿಫಿಕೇಟುಗಳನ್ನು ನೋಡಿರಿ.

೧. ಡಾ। ಹರೀಹರ ಸೀತಾರಾಮರಾಜಂದೇಕರ ಎಲ್. ಎಮ್. ಪಿ. ಎಚ್. ಎಮ್. ಬಿ. ಪೋಸ್ಟ್ ರಾಜಂಪಾ ಜಿ. ಅಕೋಲಾ: ತಮ್ಮ ಮದನಮಸ್ತ ಪಾಕದಿಂದ ಜೀವನಶಕ್ತಿಯ ಬೆಳವಣಿಗೆಯಾಗಿ ವೀರ್ಯ ಹಾನಿಯು, ಬಲಹೀನತೆಯು, ಉದರ ವಿಕಾರವು, ಇಂದ್ರಿಯ ಶೈಥಿಲ್ಯವು ಸಂಧಿವಾತ ಮೊದಲಾದ ರೋಗಗಳೆಲ್ಲ ನಷ್ಟವಾಗಿ ವೀರ್ಯ, ಬಲ ಹಾಗೂ ಸ್ಮರಣಶಕ್ತಿಯು ಬೆಳೆಯುತ್ತದೆ. ತಮ್ಮ ಪಾಕದ ಪ್ರಸಾರವು ಹೆಚ್ಚಲಿ. ಪರಮೇಶ್ವರನು ತಮ್ಮ ಕೀರ್ತಿಯನ್ನು ಹಬ್ಬಿಸಲಿ.

೨. ರಾಜವೈದ್ಯ ರಾಮಚಂದ್ರ ಗಣೇಶ ಶಾಸ್ತ್ರಿ ಜೋಶಿ, ಪೋಸ್ಟ ವಾಳವೆ, ಜಿ. ಸಾತಾರಾ; ತಮ್ಮ ಮದನಮಸ್ತ ಪಾಕವನ್ನು ಶ್ರೀ. ಸ. ವಾ. ದೇಶಪಾಂಡೆ ತಾ. ಲೋಕಲ್ ಬೋರ್ಡ ಇವರಿಗೆ ಕೊಟ್ಟೆನು. ಇದರಿಂದ ಅವರ ಸ್ವಪ್ನಾವಸ್ಥೆ, ಧಾತು ನೀರಾಗುವಿಕೆ, ಹಾಗೂ ಅಶಕ್ತತೆ, ಈ ರೋಗಗಳು ನೆಟ್ಟಗಾಗಿ ಹಸಿವೆ, ಶಕ್ತಿ, ಮತ್ತು ತೂಕ ಬೆಳೆಯಿತು. ಇದನ್ನು ತಿಳಿಸಲು ಅತ್ಯಾನಂದವಾಗುತ್ತದೆ. ಸರ್ವರೂ ಈ ಪಾಕದ ಅನುಭವ ತೆಗೆದುಕೊಳ್ಳಬೇಕೆಂದು ಶಿಫಾರಸು.

೩. ಜಗನ್ನಾಥ ರಂಗನಾಥ ದಡಪೆ, ಸ್ಕೂಲಮಾಸ್ತರ, ಪೋಸ್ಟ ತಡವಳೆ ಜಿ. ಸೋಲ್ಹಾಪೂರ.—ತಮ್ಮ ಮದನಮಸ್ತ ಪಾಕದ ೨ ಡಬ್ಬಿಯನ್ನು ಸೇವಿಸಿದೆನು. ನನಗೆ ೧೩ ತರದ ಆಶ್ಚರ್ಯಕಾರಕ ಗುಣವಾಯಿತು. ತೂಕವು ೫ ಪೌಂಡು ಬೆಳೆಯಿತು. ತಮ್ಮ ಉಪಕಾರವನ್ನು ನಾನು ಆಜನ್ಮ ಮರೆಯಲಾರೆನು.

ಸೂಚನೆ—ಬೇರೆಯವರ ಅನುಭವವನ್ನು ಕೃಪೆಯಿಂದ ನಮ್ಮ ಮೇಲೆ ಹೊರಿಸಬೇಡಿರಿ. ಇಷ್ಟು ಖಾತ್ರಿಯಿದ್ದರೂ ಈ ಪ್ರಭಾವಶಾಲಿ ಪಾಕದ ಮೇಲೆ ಯಾರ ವಿಶ್ವಾಸ ಕೂಡುವುದಿಲ್ಲವೋ ಅವರು ರೋಗಮುಕ್ತರಾಗಿ ಸಂಸಾರ ಸುಖ ಭೋಗಿಸುವ ವೇಳೆಯು ಬಂದಿಲ್ಲವೆಂದು ತಿಳಿಯಬೇಕು. ಈ ಪಾಕದಲ್ಲಿ ೬೦ ವನಸ್ಪತಿ ಧಾತುಪೌಷ್ಟಿಕ ಇಲ್ಲವೆಂದೂ, ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ೧೧೦೦ ರೂ. ಇನಾಮು ಕೊಡುವೆವು.

ಪತ್ತೆ:—ವೈದ್ಯ ಮೋಹನಲಾಲ ಎಸ್. ಔಷಧಾಲಯ,

ಮು. ಪೋ. ಮಿರಜ, S. M. C.

ಸ್ವಲ್ಪ ನಗು.

ಶಾಲೆಯಿಂದ ಪೇಟೆಗೆ ಬಂದು ವಿದ್ಯೆ ಕಲಿಯುತ್ತಿರುವ ಒಬ್ಬ ವಿದ್ಯಾರ್ಥಿಯು ತನ್ನ ಅಡಚಣೆಯ ಬಗ್ಗೆ ತನ್ನ ಎಲ್ಲಾ ಪುಸ್ತಕಗಳನ್ನು ಮಾರಿ ತಂದೆಗೆ ಹೀಗೆಂದು ಬರೆದನು. "ತಂದೆಯೇ ನಾನು ನನ್ನ ಪುಸ್ತಕಗಳಿಂದ ಬಹಳ ಸಹಾಯವನ್ನು ಹೊಂದಿದೆನು. ಪುಸ್ತಕಗಳು ಹಣ ಸಂಪಾದನೆಗೆ ದಾರಿಯಾಗಿವೆ."

\+ \+

ಒಬ್ಬ ಅಂಗಡಿಯವನು ಸಕ್ಕರೆಯೊಡನೆ ಹೊಯಿಗೆಯನ್ನು ಬೆರಸಿ ಮಾರುತ್ತಿದ್ದನು. ಒಬ್ಬ ಧನಿಕನು ಒಂದು ಮಣ ಸಕ್ಕರೆಯನ್ನು ಪಡೆದಾದ ಮೇಲೆ ಮನೆಯಲ್ಲಿ ಸಕ್ಕರೆಯೊಡನೆ ಹೊಯಿಗೆ ಇದ್ದುದನ್ನು ಕಂಡು ಅಂಗಡಿಯವನಿಗೆ ಹೀಗೆ ಬರೆದನು. "ನಿಮ್ಮ ಸಕ್ಕರೆಯನ್ನು ಹಿಂದೆ ರವಾನಿಸಿರುತ್ತೇನೆ. ಅದರಲ್ಲಿ ಹೊಯಿಗೆ ಹೆಚ್ಚಿಗೆ ಇದ್ದುದರಿಂದ ತಿನ್ನಲು ಸಾಧ್ಯವಿಲ್ಲ. ಹೊಯಿಗೆ ಕಡಿಮೆಯಿರುವುದರಿಂದ ಮನೆ ಕಟ್ಟಿಸಲಿಕ್ಕೂ ಸಾಧ್ಯವಿಲ್ಲ."

\+ \+ \+ \+

ಒಬ್ಬ ಯಜಮಾನನು ಒಳ್ಳೆ ಉಡುಪನ್ನೆಲ್ಲ ಹಾಕಿ, ತಲೆ ಬಾಚಿ, ಕನ್ನಡಿ ನೋಡಿ, ಸಮೀಪವಿದ್ದ ಕೆಲಸದ ಹುಡುಗನೊಡನೆ "ನಾನು ಈಗ ಹೇಗೆ ಕಾಣುತ್ತಿರುವೆನು?" ಎಂದು ಕೇಳಿದನು. ಅದಕ್ಕೆ ಹುಡುಗನು 'ಸಿಂಹದಂತೆ ಕಾಣುತ್ತೀರಿ' ಎಂದನು. "ನೀನು ಸಿಂಹವನ್ನೆಲ್ಲಿ ಕಂಡಿದ್ದೀ?" ಎಂದು ಯಜಮಾನನು ಪ್ರಶ್ನಿಸಲು, ಹುಡುಗನು 'ನಮ್ಮ ಅಗಸನ ಮನೆಯಲ್ಲಿ ಕಂಡಿರುತ್ತೇನೆ'ಂದನು. ಆಗ ಯಜಮಾನನು "ಅಲ್ಲಿರುವ ಕತ್ತೆಯಂತೆ ನಾನು ಕಾಣುತ್ತೇನೋ" ಎಂದು ಪ್ರಶ್ನಿಸಲು, ಹುಡುಗನು ಅಹುದೆಂದನು.

ನೋಟೀಸು.

ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದ ರೆಜಿಸ್ಟರ್ಡ ವೋಟರರು ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಸದರಿ ದೇವಸ್ಥಾನದ ವಸಂತ ಮಂಟಪದಲ್ಲಿ ಇದೇ ಕಳೆದ ತಾ. ೨೪—೧—೧೯೩೪ರಲ್ಲಿ ಕೂಡಿದ ವೋಟರರ ಮಹಾ ಸಭೆಯಲ್ಲಿ ಆದ ೨ನೇ ನಿರ್ಣಯದ ಪ್ರಕಾರ ಇದೇ ಇಸ್ವಿ ಫೆಬ್ರುವರಿ ತಾ. ೭ಕ್ಕೆ ಆದಿತ್ಯವಾರ ಶ್ಯಾಮ ೩ ಘಂಟೆ ಹೊತ್ತಿಗೆ ಕೆಳಗೆ ಬರೆದ ವಿಷಯಗಳನ್ನು ಆಲೋಚಿಸುವ ಬಗ್ಗೆ ಸದರಿ ವಸಂತ ಮಂಟಪದಲ್ಲಿ ವೋಟರರ ಮಹಾಸಭೆಯು ಜರಗುವುದರಿಂದ ಸದರಿ ಸಭೆಗೆ ಎಲ್ಲಾ ವೋಟರರು ಬರಬೇಕಾಗಿ ಅಪೇಕ್ಷಿಸಲಾಗುತ್ತದೆ.

ಆಲೋಚನೆಗೆ ಇಟ್ಟ ವಿಷಯಗಳು.

೧. ಮ. ರಾ. ರಾ. ಎಮ್. ನಾಗಪ್ಪ ಕಾಮತ್ ಕೂಡಾ ೫೧ ಜನ ವೋಟರರು ತಾ. ೨೩—೧—೩೪ರಲ್ಲಿ ಬರಕೊಂಡ ರಿಕ್ವಿಜಿಶನ್ ಅರ್ಜಿಯಲ್ಲಿ ತೋರುವಂತೆ ಮೆನೇಜರರಿಗೆ ಓವರಿಯಂ ಕೊಟ್ಟಿದ್ದರ ವಿಷಯ.

೨. ಚಾಲ್ತಿ ವರುಷಕ್ಕೆ ಶ್ರೀ ದೇವಸ್ಥಾನದಿಂದ ರಾಮಕೃಷ್ಣ ಧರ್ಮವೈದ್ಯಾಶ್ರಮದ ಮೂಲ್ಕಿ ಶಾಖೆಯ ಬಗ್ಗೆ ಕೊಡುವ ದ್ರವ್ಯ ಸಹಾಯ ಕುರಿತು.

೩. ಸದರಿ ದೇವಸ್ಥಾನದ ಪರ್ಮನೆಂಟ್ ನಾರಾಯಣ ನಾಯ್ಕರು ಬರಕೊಂಡ ಅರ್ಜಿ ವಿಷಯ.

ಇದರ ಯಥಾ ಪ್ರತಿ ಶ್ರೀ ದೇವಸ್ಥಾನದ ನೋಟೀಸು ಬೋರ್ಡಿಗೆ ಸಹಾ ಅಂಟಿಸಿಯದೆ.

ಮೂಲ್ಕಿ, } **ಎಮ್. ರಾಯಪ್ಪ ಕಾಮತ್.**
೨೭—೧—೩೪ } ಮಹಾ ಸಭೆ ಪ್ರೆಸಿಡೆಂಟ.

ಪ್ರಕಟಣೆ.

ಮಂಜೇಶ್ವರ ಶ್ರೀ ಅನಂತೇಶ್ವರ ದೇವರ ಭಂಡಾರದ ಮೆನೇಜರ್ ಕೆ. ಲಕ್ಷ್ಮಣ ಪೈಯವರು ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ—

ಶ್ರೀ ದೇವರ ಹರಕೆಯ ಚಿನ್ನಗಳು ಇದೇ ಫೆಬ್ರುವರಿ ತಿಂಗಳ ತಾರೀಕು ೨೦ನೇ ಶನಿವಾರ ದಿವಸ ಶ್ಯಾಮ ೩ ಘಂಟೆಗೆ ದೇವಸ್ಥಾನದ ಧರ್ಮ ಅಗ್ರಹಾರದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಚಿನ್ನವು ೫ ತೊಲೆಯ ಲೋಟುಗಳಾಗಿ ವಿಂಗಡಿಸಲ್ಪಟ್ಟು ವಿಕ್ರಯಿಸಲ್ಪಡುವದು. ಹರಾಜಿನಲ್ಲಿ ಯಾರು ಕರೆಯಲಿಕ್ಕೆ ಇಚ್ಛೆಯುಳ್ಳವರು ಮುಂದಾಗಿ ರೂ. ೫೦—೦—೦ನ್ನು ಎಡ್ವಾನ್ಸ ಕಟ್ಟತಕ್ಕದ್ದು. ಲೋಟುಗಳಿಗೆ ೩ ಸಾರಿ ಕರೆಯಂ ಆದ ಒಡನೆ ಪೂರಾ ಹಣ ಕೊಟ್ಟು ಅವನ್ನು ಇಸುಕೊಳ್ಳತಕ್ಕದ್ದು. ಅಪೇಕ್ಷೆಯುಳ್ಳವರು ಬರಬೇಕಾಗಿ ವಿನಂತಿ.

ಮಂಜೇಶ್ವರ, } **ಕೆ. ಲಕ್ಷ್ಮಣ ಪೈ.**
೨೭—೧—೩೪ } ಮೆನೇಜರ್.

ಅನುಕ್ರಮಣಿಕೆ.

ಅಗ್ರಲೇಖ

ಸ್ವದೇಶಿ ೧

ಸ್ಫುಟವಿಚಾರಗಳು ೪

ಸ್ಲೋಟಿಗಳು ೫

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೩

ಒಳದೇಶ ವರ್ತಮಾನ ೩-೭

ದಕ್ಷಿಣ ಕನ್ನಡ— ಮಂಗಳೂರು ಉಡುಪಿ, ಮುಲ್ಕಿ, ಗುರುಪುರ ೭

ವಿವಿಧ ಸಮಾಚಾರಗಳು ೧೧

ಗಾಂಧಿಯನ್ನು ಬಿಡುಗಡೆ ಮಾಡಿ ಹಿಂದೂದೇಶವನ್ನುದ್ಧರಿಸಿರಿ ,,

ನಮ್ಮ ಶಾಲೆಗಳು ೧೪

ಮತ ಭೇದಗಳೇತಕೆ? ,,

ದೇಶೋದ್ಧಾರವಾಗುವುದೇ ೯

ದಂಡನೀತಿಯ ದಂಡನೆ ೧೦

ವಿಧವಾವಿವಾಹ ೨

ಸ್ವದೇಶಾಭಿಮಾನಿ.

ತಾ ೨೯ನೇ ಶುಕ್ರವಾರ ಜನವರಿ ೧೯೩೧

ಸ್ವದೇಶಿ

ವ್ಯಾಪಾರದ ಮಂದಿ ಎಂಬ ಮಾತು ಈಗ ಎಲ್ಲಾ ಕಡೆಗಳಲ್ಲಿಯೂ ಜನಜನಿತವಾಗಿದೆ. ೧೯೨೯ನೇ ಇಸವಿಯಲ್ಲಿ ಮೂರು ವರ್ಷದ ಹಿಂದೆ ಪ್ರಾರಂಭವಾದ ಈ (Trade Depression) ಅಂದರೆ ವ್ಯಾಪಾರದ ಮಂದಿಯು ದಿನ ದಿನವೂ ಬೆಳೆಯುತ್ತಾ ಲೋಕದ ಜನತೆಯ ಜೀವನವನ್ನು ಕೆಡಿಸಿ, ಜನಾಂಗಗಳ ಆರ್ಥಿಕ ಅಡಿಗಟ್ಟನ್ನು ಸಡಿಲು ಮಾಡಲಾರಂಭಿಸಿ, ಸಮಗ್ರ ಲೋಕಕ್ಕೊಂದು ಕ್ರಾಂತಿಯಾಗಿಯೇ ಪರಿಣಮಿಸಿರುತ್ತದೆ. ಇದನ್ನು ನಿವಾರಿಸಲು ಹಲವು ಪ್ರಯತ್ನಗಳು ನಡಿಯುತ್ತವೆ. ಆದರೆ ಮನುಷ್ಯನ ಯಾವ ಯುಕ್ತಿಯೂ ಈ ವಿಷಯದಲ್ಲಿ ಪರಿಣಾಮಕಾರಿಯಾಗಿಲ್ಲ.

೧೯೧೪ನೇ ಇಸವಿಯಲ್ಲಿ ಪ್ರಾರಂಭವಾದ ಯುದ್ಧಕ್ಕೆ ಕಾರಣವು ವ್ಯಾಪಾರದ ತೇಜಿ' ಅಂದರೆ ಹೆಚ್ಚಿನ ಅಭಿವೃದ್ಧಿಯಾಗಿದೆ. ಇಂಗ್ಲೆಂಡು—ಜರ್ಮನಿ ಮೊದಲಾದ ರಾಷ್ಟ್ರಗಳು ವ್ಯಾಪಾರವನ್ನು ಬಹಳ ಅಭಿವೃದ್ಧಿಗೆ ತಂದಿದ್ದವು. ಆದರೆ ಒಬ್ಬರಿಗಿಂತ ಇನ್ನೊಬ್ಬರು ಮುಂದಾಗಿ ಹೋಗುವರೆಂಬ ಮಾತ್ಸರ್ಯವೇ ಆ ಬಾರಿಯ ಯುದ್ಧಕ್ಕೆ ಕಾರಣವಾಯಿತು. ಇಬ್ಬರ ನ್ಯಾಯ ಒಬ್ಬನಿಗೆ ಆಯಿವೆಂಬಂತೆ, ಅದರಿಂದ ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕಕ್ಕೂ, ಜಾಪಾನಿಗೂ ಲಾಭವಾಗಿ ಯುರೋಪಿಯ ರಾಷ್ಟ್ರಗಳು ಸಾಲದಲ್ಲಿ ಮುಳುಗಿದುವು. ಅಮೇರಿಕವು ಯುದ್ಧದ ಮೂಲಕ ಬಲಪಡಿಸಿದ ತನ್ನ ವ್ಯಾಪಾರದಲ್ಲಿ ನೂತನ ಕ್ರಮಗಳನ್ನು, (Mass Production) ಎಂದರೆ ರಾಶಿ ತಯಾರಿ ಕ್ರಮಗಳನ್ನು ಉಂಟುಮಾಡಿ ಆ ಮೂಲಕ ಲೋಕದ ವ್ಯಾಪಾರವನ್ನು ಆಕರ್ಷಿಸಿತು.

ಈ ನೂತನ ಕ್ರಮಗಳು ಇತರ ರಾಷ್ಟ್ರಗಳಿಗೂ ಉದಾಹರಣೆಗಳಾಗಿ, ಇತರ ರಾಷ್ಟ್ರಗಳೂ ಯುದ್ಧದ ನಂತರ ಸಾಮಾನು ತಯಾರಿಯನ್ನೂ ಕೈಗಾರಿಕೆಗಳನ್ನೂ ಅದೇ ರೀತಿಯಲ್ಲಿ ಮಾಡತೊಡಗಿದುವು. ಇದರಿಂದ ಯಂತ್ರೋಪಯೋಗಗಳು ಹೆಚ್ಚಿದುವು. ಸಾಮಾನು ತಯಾರಿಯು ವಿಶೇಷವಾಗಿ ಹೆಚ್ಚಿತು, ಕೆಲಸಗಾರರ ಕೂಲಿ ಹೆಚ್ಚಿತು. 'ಈ ಹೆಚ್ಚಳಿಕೆಯು ಒಂದು ಬಾರಿ ತಡೆಹೊಂದಲೇ ಬೇಕು. ಈ ತಡೆಯು ಈಗಿನ Trade Depressionನಿಂದ ಒದಗಿರುತ್ತದೆ. ಸಾಮಾನು ತಯಾರಿ ಹೆಚ್ಚಿದೆ. ಆ ತಯಾರಿಗೆ ಕೆಲಸಮಾಡುವ ಜನರ ಸಂಖ್ಯೆಯು ತಗ್ಗಿದೆ, ಆ ಕಾರಣದಿಂದ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ, ಆ ಕಾರಣದಿಂದ ಕೊಳ್ಳುವವರ ಸಂಖ್ಯೆ ತಗ್ಗಿದೆ—ಹೀಗೆ ತಯಾರಿಸಲ್ಪಟ್ಟ ಸಾಮಾನುಗಳು ಒಂದು ಕಡೆಯಿಂದ ವಿಶೇಷವಾಗಿ ಹೆಚ್ಚಿ, ಕೊಳ್ಳುವವರ ಸಂಖ್ಯೆಯು ಇನ್ನೊಂದು ಕಡೆಯಿಂದ ಸ್ವಲ್ಪಮಟ್ಟಿಗೆ ತಗ್ಗಿದರ, ಸ್ವಭಾವತಃ ಸಾಮಾನುಗಳಿಗೆ ತಕ್ಕ ಬೆಲೆಯು ಸಿಕ್ಕಲಾರದು. ಹೀಗೆಂದು ಬಹಳ ಖರ್ಚಿನಿಂದ ಏರ್ಪಡಿಸಲ್ಪಟ್ಟ ಯಂತ್ರಗಳನ್ನು ಮುಚ್ಚಿಡಲಿಕ್ಕೆ ಸಾಧ್ಯವಿಲ್ಲ, ಸಾಮಾನು ತಯಾರಿಯನ್ನು ಕಡಿಮೆಮಾಡಲಿಕ್ಕೆ ಸಾಧ್ಯವಿಲ್ಲ; ಹಾಗೆ ಮಾಡಲಿಕ್ಕೆ ಹೋಗುವುದಾದರೆ, ವಿಲಿಯಾವಧಿ ದ್ರವ್ಯ ಹಾಕಿದ ಆ ಕಾರ್ಖಾನೆಗಳ ಭಂಡವಾಳಕ್ಕೆ ಬೆಲೆ ಇಲ್ಲದಂತಾಗುವುದು; ಆ ಭಂಡವಾಳಕ್ಕೆ ಬೆಲೆ ಇಲ್ಲದೆ ಹೋದರೆ ಅದರಲ್ಲಿ ಪಾಲು ಪಡೆದ ಮಿಲಿಯಾವಧಿ ಜನರ ಆರ್ಜಿತವು ಶೂನ್ಯವಾಗುವುದು. ಈ ರೀತಿ ಸಾಮಾನು ತಯಾರಿ ಹೆಚ್ಚಾದರೂ ರಾಷ್ಟ್ರದ ಸಂಪತ್ತಿಗೆ ವಿಪತ್ತುಂಟು, ತಯಾರಿ ನಿಲ್ಲಿಸಿದರೂ ರಾಷ್ಟ್ರದ ಸಂಪತ್ತಿಗೆ ವಿಪತ್ತುಂಟು. ಈ ರೀತಿಯಲ್ಲಿ ಈ ಪರಿಸ್ಥಿತಿಯು ಯಂತ್ರಯುಗಕ್ಕೆ ಅತ್ಯಂತ ಕಠಿಣವಾದ ಪ್ರಸಂಗವನ್ನೊದಗಿಸಿರುತ್ತದೆ.

ಈ ಪರಿಸ್ಥಿತಿಯಲ್ಲಿ ಹಿಂದೂಸ್ಥಾನದ ಮೇಲೆ ಪರಿಣಾಮವೇನು? ಇಲ್ಲಿ ಯಂತ್ರಯುಗವು ಇನ್ನೂ ತನ್ನ ಪೂರ್ಣತೆಯಲ್ಲಿ ಸ್ಥಾಪಿಸಲ್ಪಟ್ಟಿಲ್ಲ. ಆದುದರಿಂದ ಭೂಲೋಕದ ಈಗಿನ ಅನುಭವದ ಸಾರವನ್ನು ಕಲಿತುಕೊಳ್ಳಲಿಕ್ಕೆ ನಮಗೆ ಉತ್ತಮವಾದ ಸಂದರ್ಭವೊಂದು ಒದಗಿರುತ್ತದೆ. ಉದಾಹರಣಾರ್ಥವಾಗಿ ಇಂಗ್ಲೆಂಡಿನ ಪರಿಸ್ಥಿತಿಯನ್ನೇ ಲಕ್ಷಿಸುವ. ಅಲ್ಲಿಯೂ ಯಂತ್ರಯುಗವು ಪ್ರಬಲವಿದೆ. ಆದರೆ ವ್ಯಾಪಾರವು ಕುಸಿದಿದೆ, ಚಲಾವಣೆ ಹಣದ ಬೆಲೆ ಬಿದ್ದುಹೋಗಿದೆ. ರಫ್ತಿಗಿಂತಲೂ ಆಮದು ಹೆಚ್ಚಾಗಿದೆ. ಇದಕ್ಕಾಗಿ ಸ್ವದೇಶಿಯ ಚಳವಳವು ಅಲ್ಲಿ ಮೊಳೆದಿದೆ. ಆದರೆ ಇಂಗ್ಲಂಡಿಗೆ ಈ ಸ್ವದೇಶೀ ಚಳವಳವು ಹೆಚ್ಚು ಲಾಭಕರವಾಗುವುದು ಕಷ್ಟ. ಏಕೆಂದರೆ ಇಂಗ್ಲಂಡಿನಲ್ಲಿ ಉಂಟಾಗುವ ಸಾಮಾನುಗಳು ಸ್ವಂತವಾಗಿ ಉಪಯೋಗಿಸಲ್ಪಡುವುದಕ್ಕಿಂತಲೂ, ಬೇರೆ ರಾಷ್ಟ್ರಗಳಿಗೆ ರಫ್ತಾಗುವುದು ಹೆಚ್ಚು. ಅಲ್ಲದೆ ಇಂಗ್ಲೆಂಡಿನ ಸ್ವಂತ ಉಪಯೋಗಕ್ಕೆ ಬೇಕಾಗುವ ಸಾಮಾನುಗಳೆಲ್ಲವೂ ಇಂಗ್ಲಂಡಿನಲ್ಲಿಯೇ ದೊರೆಯದೆ ಹೊರದೇಶಗಳಿಂದ ಆಮದಾಗಲೇ ಬೇಕು. ಆದರೂ ಕೂಡ, ಇಂಗ್ಲಂಡಿನೊಳಗೆ ಸ್ವಂತ ಸಾಮಾನುಗಳೊಡನೆ ಸ್ಪರ್ಧಿಸಲು ಆಮದಾಗುವ ಪರದೇಶೀ ಸಾಮಾನುಗಳ ಮೇಲೆ ಕರಹೊರಿಸಿ ಇಂಗ್ಲಂಡಿನಲ್ಲಿ ಇಂಗ್ಲಂಡಿನ ಸಾಮಾನುಗಳೇ ಉಪಯೋಗಿಸಲ್ಪಡುವಂತೆ ಪ್ರಯತ್ನಿಸಬೇಕಾಗಿ ಅಲ್ಲಿಯ ಬಹುಸಂಖ್ಯಾಕರ ಇಚ್ಛೆಯಿದೆ. ಇದರಿಂದ ಇಂಗ್ಲೆಂಡಿನ ಅರ್ಥ ಪರಿಸ್ಥಿತಿಯು ಸುಧಾರಿಸಬಹುದೆಂದೂ, ಚಲಾವಣೆ ಹಣದ ಬೆಲೆಯು ಪೂರ್ವಮಾನಕ್ಕೇರಿ ಬರಬಹುದೆಂದೂ, ವ್ಯಾಪಾರವು ವೃದ್ಧಿಹೊಂದಬಹುದೆಂದೂ ಅವರು ಆಶಿಸುತ್ತಾರೆ.

ಆದರೆ ಹಿಂದೂಸ್ಥಾನವು ಈ ವಿಷಯದಲ್ಲಿ ಇಂಗ್ಲೆಂಡಿಗಿಂತಲೂ ಎಷ್ಟೋ ಸುರಕ್ಷಿತವಿದೆ. ಆಹಾರದ ಬಗ್ಗೆ ಹಿಂದೂಸ್ಥಾನದ ಜನಸಂಖ್ಯೆಗೆ ಬೇಕಾಗುವಷ್ಟಕ್ಕಿಂತಲೂ ಮಿಗಿಲಾಗಿ ಇಲ್ಲಿ ತಯಾರಾಗುತ್ತಿದೆ, ಉಡಿಗೆ ಬಗ್ಗೆ ಹತ್ತಿಯೂ, ನೂಲೂ, ವಸ್ತ್ರವೂ ಇಲ್ಲಿ ಬೇಕಾದ ಹಾಗೆ ತಯಾರಿಸಬಹುದು, ತಯಾರಿಸುವ ಸಾಧನಗಳೂ ಇವೆ. ಜೀವನ ಸೌಕರ್ಯಗಳಿಗೆ ಅಗತ್ಯವಾಗಿ ಬೇಕಾಗುವ ಸರ್ವಸಾಮಾನ್ಯವಾಗಿ ಎಲ್ಲಾ ಸಾಮಾನುಗಳು ಇಲ್ಲಿ ತಯಾರಾಗುತ್ತಿವೆ, ಪ್ರೋತ್ಸಾಹ ಕೊಟ್ಟಂತೆ ಇನ್ನೂ ಹೆಚ್ಚಾಗಿ ತಯಾರುಮಾಡಬಹುದು, ಯಂತ್ರಯುಗವು ಇಲ್ಲಿ ಇನ್ನೂ ಬೇರೂರಿಲ್ಲವಾದುದರಿಂದ ಹಳ್ಳಿ ಕೈಗಾರಿಕೆಗಳನ್ನೂ, ಮನೆ ಕೈಗಾರಿಕೆಗಳನ್ನೂ ಬೆಳೆಸಿದರೆ ಧನವು ದೊಡ್ಡವರಲ್ಲಿಯೂ ಬಡವರಲ್ಲಿಯೂ ಸರಿಯಾಗಿ ವಿಸ್ತರಿಸಿ ನಿರುದ್ಯೋಗಿಗಳ ಸಂಖ್ಯೆಯು ಇಲ್ಲದೆ ಹೋಗಿ ವ್ಯಕ್ತಿಯ ಕೊಂಡುಕೊಳ್ಳುವ ಶಕ್ತಿಯು ಸ್ಥಿರವಾಗುವುದು. ಆ ರೀತಿಯ ಪ್ರತಿ ವ್ಯಕ್ತಿಯೂ ಇಂಗ್ಲಂಡಿನ ಜನರ ಉದಾಹರಣೆಯಂತೆ ಸ್ವಂತ ದೇಶದ ತಯಾರಿಯನ್ನು ಕೊಳ್ಳುವುದರಲ್ಲಿ ದೀಕ್ಷಾಬದ್ಧರಾದರೆ ಹಿಂದೂಸ್ಥಾನದ ಆರ್ಥಿಕ ಸ್ವಾತಂತ್ರ್ಯವು ತನ್ನಷ್ಟಕ್ಕೆ ಸ್ಥಾಪಿಸಲ್ಪಡುವುದು. ಜನಾಂಗದ ಸಾಂಪತ್ತಿಕ ಸೂತ್ರವು ಆಮದು ರಫ್ತುಗಳ ಮೇಲೆ ಹೊಂದಿರುವ ಆವಶ್ಯಕತೆಯಿಲ್ಲ. Support Indian Industries ಎಂದು ಸರಕಾರದ ಪ್ರೋತ್ಸಾಹಿಸಿದವರು ಕೂಡ ಲಿಯೋಗಳ ಮೇಲೆ ವರ್ತಿಸುತ್ತಿದ್ದರು. ಸ್ವದೇಶಿ ಸಾಮಾನು ಸಿಕ್ಕದ ಕಡೆಗಳಲ್ಲಿ—ಪಂಡಿತ ಮದನಮೋಹನ ಮಾಲವೀಯರು ಅನ್ನುವಂತೆ—ಅವುಗಳನ್ನು ಕೊಳ್ಳದೆಯೂ, ಸಿಕ್ಕುವಲ್ಲಿ ಅವನ್ನೇ ಉಪಯೋಗಿಸುತ್ತೆ ಹಿಂದೂಸ್ಥಾನದ ಪ್ರಜೆಗಳ ವೈಯಕ್ತಿಕ ಅಭಿವೃದ್ಧಿ ಕೂಡ ಶೀಘ್ರ ಸಾಗುವುದೆಂಬುದರಲ್ಲಿ ಸಂದೇಹವಿಲ್ಲ.

ವಿದೇಶ ವರ್ತಮಾನ.

ಅಮೇರಿಕಾ ದೇಶದ ಸಾನ್ ಸಾಲ್ವಡೋರ್ ಎಂಬ ಪ್ರಾಂತ್ಯದಲ್ಲಿ ಮಾರ್ಷಲ್ ಲೋ ಜಾರಿಯಾಗಿದೆ. ಸರಕಾರೀ ಅಧೀನಗಳು ಕ್ರಾಂತಿಕಾರರಿಂದ ಆಕ್ರಮಿತವಾಗಿವೆ. ಯುದ್ಧ ನಾವೆಗಳೂ ಆ ಸ್ಥಳಕ್ಕೆ ಹೋಗಿವೆ.

—ಜಪಾನ್ ಸೈನ್ಯವೂ ಯುದ್ಧ ನಾವೆಗಳೂ ಬಹಳ ಅವಸರದಿಂದ ಕೆಲಸ ನಡೆಸುತ್ತಿವೆ. ಜಪಾನರು ಚೈನೀಯರ ಅಧಿಕಾರವರ್ಗಕ್ಕೆ ಹೊಕ್ಕುವರೆಂದು ತಿಳಿಯಲಾಗಿದೆ. ಚೈನಾ ಪತ್ರಿಕೆಯೊಂದರ ಸಂಪಾದಕರ ಬಳಿ ಐದು ಮಂದಿ ಜಪಾನ ನೌಕಾ ಸೇನೆಯವರು ಹೋಗಿ ತಮ್ಮ ಸೈನ್ಯವನ್ನು ಅಪಮಾನಿಸಿ ಒಂದು ವಿಷಯವನ್ನು ಬರೆದುದಕ್ಕಾಗಿ ಮುದ್ರಿತವಾದ ಕ್ಷಮಾಪಣೆಯನ್ನು ಕೊಡಬೇಕೆಂದು ಗದರಿಸಿದರು.

— ಸ್ಪೈನಾ ದೇಶದಲ್ಲಿ ಒಂದು ಕ್ರಾಂತಿವಾದವು ತಲೆದೋರಿದೆ. ಸಾವಿರಾರು ಸ್ಪೇನಿಯಾರ್ಡ್ಸರು ಮುಷ್ಕರ ಹಿಡಿದು ಪೇಟೆ ಪಟ್ಟಣಗಳನ್ನು ಸೂರೆಗೊಳ್ಳುತ್ತಿರುವರು. ಪೋಲೀಸ ಮತ್ತು ಮಿಲಿಟರಿ ಪಹರೆಯು ಪಟ್ಟಣದಲ್ಲೆಲ್ಲಾ ಇದೆ. ಅಲ್ಲಲ್ಲಿ ಕೈದುಗಳೂ ನಡೆಯುತ್ತಿವೆ. ಪೋಲೀಸ್ ಸ್ಟೇಶನನ್ನು ದಾಟಿ ಹೋಗುವ ಪ್ರತಿಯೊಂದು ಮೋಟರ್ ಕಾರನ್ನೂ ಜಪ್ತಿ ಮಾಡುತ್ತಿರುವರು. ಅಲ್ಲಿಯ ಸರಕಾರವು ಕ್ರಾಂತಿವಾದಿಗಳನ್ನು ಬಗ್ಗು ಬಡಿಯಲು ಸಾವಿರಗಟ್ಟಲೆ ಜಾಸ್ತಿ ಪೋಲೀಸರನ್ನು ನೇಮಕಪಡಿಸುತ್ತಲಿದೆ.

— ಅಮೇರಿಕದ ಸಾನ್ ಸಾಲ್ವದೋರಿನಲ್ಲಿ ಸಾಂಟಾ ಲೂಸಿಯಾ ಕೆಟ್ಸಿ ಮಲ ಪಾಲಾ ಮತ್ತು ಅಂಟಿಗೂವ ಎಂಬ ದೊಡ್ಡ ದೊಡ್ಡ ಪಟ್ಟಣಗಳ ಜ್ವಾಲಾ ಮುಖಿಯ ಸ್ಫೋಟನದಿಂದಾಗಿ ನಿರ್ಮೂಲವಾದುವೆಂಬ ವಾರ್ತೆ ಬಂದಿದೆ.

ಒಳದೇಶ ವರ್ತಮಾನ

ಲಕ್ನೋ ನಗರದಲ್ಲಿ ಸ್ತ್ರೀಯರೇ ಚಳವಳವನ್ನು ಮುಂದೊತ್ತಿ ಒಯ್ಯುವುದರಿಂದ ಅವರನ್ನು ಕೈದುಮಾಡಲು ಅಲ್ಲಿ ಸ್ತ್ರೀ ಪೋಲೀಸರನ್ನು ನೇಮಕಮಾಡುತ್ತಿರುವರು. ... ಅಂದರೆ ಲೇಡಿ ಪೋಲೀಸ್ ಎಂಬ ಬಿಲ್ಲೆಯು ಅವರಿಗಿರುವುದು. ಒಬ್ಬ ಆಂಗ್ಲೋ ಇಂಡಿಯನ್ ಸ್ತ್ರೀಯನ್ನು ಈಗಾಗಲೇ ಪೋಲೀಸ್ ಹೆಡ್ ಕೊನ್ಸ್ಟೇಬಲಳನ್ನಾಗಿ ನೇಮಿಸಿರುವರು. ಅಲ್ಲಾಹಾಬಾದು ಮೊದಲಾದ ಪ್ರಾಂತ್ಯಗಳಲ್ಲಿಯೂ ಇಂತಹ ಸ್ತ್ರೀಪೋಲೀಸರನ್ನು ನೇಮಕಮಾಡಲಿರುವರು.

— ಕಲ್ಕತ್ತದಲ್ಲಿ ಒಂದು ಲಾಂಚು ಮತ್ತು ಸ್ಟೀಮರು ದಕ್ಕೆ ಬಡೆದ ಲಾಂಚು ಮುಳುಗಿತಷ್ಟೆ! ಲಾಂಚಿನೊಡನೆ ಮುಳುಗಿದ ೧೫ ವರಿಗಳ ವ್ಯಾಪಾರಿಗಳು ದೊರೆತಿವೆ. ಇನ್ನು ಕೆಲವು ಶವಗಳಿರಬಹುದೆಂದು ಊಹಿಸಲಾಗಿದೆ. ಲಾಂಚನ್ನು ಇನ್ನೂ ತನಕ ಮೇಲ್ತೆಗೆದುದಿಲ್ಲ. ಪರಿಶೋಧನೆಯು ನಡೆಯುತ್ತಿದೆ.

— ಫಾದರ್ ಎಲ್ವಿನ್ ಎಂಬವರು ಗಾಂಧಿಜೀಯವರ ಅಸ್ಪೃಶ್ಯತೆ ... ಇವರು ಪಶ್ಚಿಮೋತ್ತರ ಗಡಿಪ್ರಾಂತ್ಯಕ್ಕೆ ಹೋಗಬಾರದಾಗಿ ಗಡಿಪಾರುಮಾಡಿರುವರು. ಈಗ ಅಹ್ಮದಾಬಾದಿನಲ್ಲಿರುವರಂತೆ.

— ಕರಾಚಿಯಲ್ಲಿನ ಕೊಂಗ್ರೆಸ್ ಶಿಬಿರವನ್ನು ಪೋಲೀಸರು ವಶಪಡಿಸಿಕೊಂಡರು. ಆದರೂ ಕೊಂಗ್ರೆಸ್ ವಾಲರು ಒಂದು ಬಯಲು ಪ್ರದೇಶದಲ್ಲಿ ಗೋಣಿಗಳನ್ನು ಹಾಸಿ ಸಭೆ ನಡೆಸಿದರು. ಸಮೀಪದ ಮರದ ಮೇಲೆ ೫೦ ಅಡಿ ಎತ್ತರದಲ್ಲಿ ಕೊಂಗ್ರೆಸ ಹೌಸ್ ಎಂಬ ಬೋರ್ಡನ್ನು ತೂಗುಹಾಕಿದರು. ಇದನ್ನು ತಿಳಿದ ಪೋಲೀಸರು ಅಲ್ಲಿಗೆ ಬಂದು ಸಭೆಯನ್ನು ಚದರಿಸಿ ಗೋಣಿಗಳನ್ನು ಕೊಂಡೊಯ್ದರು. ಬೋರ್ಡನ್ನು ಮರದ ಮೇಲೆಯೇ ಬಿಟ್ಟಿರುವರು. ಕೆಲವರನ್ನು ಕೈದು ಮಾಡಿರುವರು.

ಯೆರವಾಡಾ ಸೆರೆಮನೆಯಲ್ಲಿ ತಾನೂ ವಲ್ಲಭಭಾಯಿಯವರೂ ಸುಖದಿಂದಿದ್ದೇವೆಂದೂ ದಿನಕ್ಕೆ ೨೦೦ ಗಜ ನೂಲನ್ನು ನೂಲುತ್ತಿರುವೆನೆಂದೂ ಹೆಚ್ಚಿನ ಸಮಯವನ್ನು ಪುಸ್ತಕ ವಾಚನದಲ್ಲೂ ನಿದ್ದೆಯಲ್ಲೂ ಕಳೆಯುತ್ತೇನೆಂದೂ ಗಾಂಧಿಜಿಯವರು ವಿದ್ಯಾಬಾಯಿಗೆ ಕಾಗದ ಬರೆದಿರುವರು. ಹಿಂದೂ ಪತ್ರಿಕೆಯ ಸಂಪಾದಕರಾದ ರಂಗಸ್ವಾಮಿ ಐಯ್ಯಂಗಾರರಿಗೂ ನಾನು ಸುಖದಿಂದಿದ್ದೇನೆ ಎಂದು ಗಾಂಧಿಜಿಯವರು ಬರೆದಿರುವರು.

— ೨೨ನೇ ದಿನ ಕಲ್ಕತ್ತೆಯ ಹೌರಾ ಸ್ಟೇಷನಿನಿಂದ ಅಲ್ಲಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮಿ। ಕ್ವಿಂಟನ್ ಎಂಬವರು ರೈಲಿನಲ್ಲಿ ಪ್ರಯಾಣ ಬೆಳೆಸುತ್ತಿದ್ದರು. ಆಷ್ಟರಲ್ಲಿ ಒಂದು ಬೊಂಬು ಸ್ಫೋಟನವಾಯಿತು. ಮೆಜಿಸ್ಟ್ರೇಟರಿಗೆ ಅದರ ಲಕ್ಷ್ಯವು ಸ್ವಲ್ಪ ಕಡಿಮೆಯಾದುದರಿಂದ ಅವರಿಗೆ ಶಬ್ದವು ಸರಿಯಾಗಿ ಕೇಳಲಿಲ್ಲ. ಆದರೂ ಅವರು ಗಾಬರಿಯಿಂದ ಹೊರಗೆ ಇಣಿಕಿದರು. ರೈಲಿನ ಎಲ್ಲಾ ಕೋಣೆಗಳವರೂ ಹೊರಗೆ ನೋಡುತ್ತಿದ್ದರು. ಸನ್ನೆ ಮಾಡಿ ರೈಲನ್ನು ನಿಲ್ಲಿಸಲಾಯಿತು. ಬೊಂಬು ಸ್ಫೋಟನವಾದ ಸ್ಥಳದಲ್ಲಿ ಕಪ್ಪು ಚೂರುಗಳೂ, ಕೆಲವು ಮದ್ದುಗಳೂ ಇದ್ದುವು. ಯಾರಿಗೂ ಅಪಾಯ ಆಗಲಿಲ್ಲ.

ಇಂಗ್ಲಾಂಡಿನಲ್ಲಿ ಬೈ ಬ್ರಿಟಿಷ ಎಂಬ ಚಳವಳವನ್ನು ಹೋಲುವಂತೆ ಕಾಂಚಿಯಲ್ಲಿ ಬೈ ಇಂಡಿಯನ್ ಲೀಗ್ ಎಂಬುದು ಸ್ಥಾಪಿತವಾಗಿದೆ. ಸ್ವದೇಶಿಯನ್ನು ಪ್ರಚಾರಕ್ಕೆ ತರುವುದೇ ಇದರ ಮೂಲೋದ್ದೇಶ. ಈ ಲೀಗಿಗೆ ಇಷ್ಟರಲ್ಲೇ ಕೆಲವು ಪ್ರಮುಖ ವರ್ತಕರು ಸೇರಿರುವರು.

— ಕಲ್ಕತ್ತದಲ್ಲಿ ಡಿ ಮೇಜಿಸ್ಟ್ರೇಟರಾಗಿದ್ದ ಮಿ. ಸಿ. ಜಿ. ಬಿ. ಸ್ಟಿವೆನ್ಸರನ್ನು ಕೊಂದ ಮಿಸ್ ಶಾಂತಿಗೋಸ್ ಮಿಸ್ ಸುನೀತಿ ಚೌದರಿಗಳ ನ್ಯಾಯ ವಿಚಾರಣೆಯು ಪ್ರಾರಂಭವಾಗಿದೆ.

ಕೋಶಾಧಿಕಾರಿಯವರು ಬಿಡನ್ ಮೊದಲಾದ ಪ್ರಾಂತ್ಯಗಳನ್ನು ಸಂಚರಿಸುತ್ತಾರೆ. ಈ ದಿನ ಮುಂಬಯಿಗೆ ತಲಪಲಿರುವರೆಂಬ ಸಮಾಚಾರವಾದ.

—ಗಾಂಧೀ ವಲ್ಲಭಭಾಯಿಯವರನ್ನು ಹೊರಗಿನವರು ವಾರಕ್ಕೊಮ್ಮೆ ಭೇಟಿಮಾಡಬಹುದೆಂದು ಸರಕಾರವು ಒಪ್ಪಿದೆಯಾಗಿ ತಿಳಿದು ಬಂದಿದೆ. ಕಸ್ತೂರಿಬಾಯಿಯವರೂ ಗಾಂಧೀಜಿಯವರನ್ನು ಕಂಡು ಮಾತನಾಡಬಹುದೆಂದು ಅಪ್ಪಣೆ ದೊರೆತಿದೆ.

ನ್ಯೂಡೆಲ್ಲಿಯ ಲೆಜಿಸ್ಲೇಟಿವ್ ಎಸೆಂಬ್ಲಿಯ ಅಧಿವೇಶನದಲ್ಲಿ ವೈಸರಾಯರು ಒಂದು ಭಾಷಣಮಾಡಿದರು. "ಚಳವಳವು ಕೊನೆಗಾಣದ ಯಾವ ಬಗೆಯ ರಾಜಿಪಂಚಾಯಿತಿಗೂ ಅವಕಾಶವೇ ಇಲ್ಲ"ವೆಂದು ಅವರ ಹೇಳಿಕೆ.

ಕರಾಚಿಯಲ್ಲಿನ ಒಂದು ಹೊಟೇಲಿನಲ್ಲಿ ಊಟಮಾಡುತ್ತಿದ್ದ ಸ್ವಯಂಸೇವಕರನ್ನು ಕಂಡು ಪೋಲೀಸರು ಹೊಟೇಲಿನಲ್ಲಿ ಜಪ್ತಿ ನಡೆಸಿದರು. ಸ್ವಯಂಸೇವಕರ ಊಟದ ವೆಚ್ಚವನ್ನು ಕೊಟ್ಟವರ್‍ಯಾರೆಂದು ತಿಳಿಯಲು ಪೋಲೀಸರು ಯತ್ನಿಸುತ್ತಲಿರುವರು.

—ಲಕ್ನೋ ನಗರದ ಮುಸ್ಲಿಮ್ ಮಹಾಸಭೆಯವರು ಈ ರೀತಿ ಠರಾವು ಮಾಡಿಕೊಂಡರು: 'ಪ್ರಧಾನ ಮಂತ್ರಿಯವರ ಪ್ರಕಟನೆಯು ಮುಸ್ಲಿಮ ಭಾರತಕ್ಕೆ ಅಸಂತೃಪ್ತಿಕರವಾಗಿರುವುದರಿಂದ ಸರಕಾರವು ಸಮಾಧಾನಕರವಾದ ಪ್ರಕಟನೆಯನ್ನು ಮಾಡದೆ ಹೋದರೆ ನಾವು ರೌಂಡ್‌ಟೇಬಲ್ ಕಮಿಟಿಗಳನ್ನೆಲ್ಲಾ ಬಹಿಷ್ಕರಿಸುವೆವು.'

—ಗಾಂಧೀಜೀಯವರ ಸೆಕ್ರೆಟರಿಯೂ ಇಂಗ್ಲಾಂಡಿಗೆ ಹೋಗಿದ್ದ ಶ್ರೀ. ಪ್ಯಾರೀಲಾಲ ಇವರನ್ನು ೨೫ನೇ ದಿನ ಅಹ್ಮದಾಬಾದಿನಲ್ಲಿ ಸೆರೆ ಮಾಡಿದರು. "ಯಂಗ್ ಇಂಡಿಯಾ"ದಲ್ಲಿ ಅವರು ಬರೆದ ಒಂದು ಲೇಖವೇ ಇದಕ್ಕೆ ಕಾರಣ.

—ಪಶ್ಚಿಮೋತ್ತರ ಗಡಿಪ್ರಾಂತ್ಯವನ್ನು ಗವರ್ನರರ ಪ್ರಾಂತ್ಯವನ್ನಾಗಿ ಮಾಡುವರು. ಅದರ ಗವರ್ನರರ ಸಂಬಳವು ವರುಷಕ್ಕೆ ೬೬ ಸಾವಿರ ರೂಪಾಯಿ. ಅಲ್ಲಿಯ ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರ ಸಂಖ್ಯೆಯು ೪೦. ಕಾರ್ಯಕಾರಿ ಮಂಡಳಿಯ ಸದಸ್ಯರ ಸಂಬಳವು ವರುಷಕ್ಕೆ ೪೩,೦೦೦ ರೂಪಾಯಿಯೆಂದು ನಿರ್ಣಯವಾಗಿದೆ.

—ಕಲ್ಕತ್ತದಲ್ಲಿ ಲೈಸನ್ಸು ಇಲ್ಲದ ರಿವಾಲ್ವರುಗಳನ್ನು ಹಿಡಿದುಕೊಂಡಿದ್ದುದಕ್ಕಾಗಿ ಮುಕುಲಚಂದ್ರ ರಾಯ್ ಸುಕುಮಾರ ಬೆನರ್ಜಿ ಎಂಬವರಿಗೆ ೫ ಮತ್ತು ೪ ವರ್ಷಗಳ ಕಠಿಣ ಸಜೆಯೂ, ಇಂತಹ ಅಪಾದನೆಗಾಗಿಯೇ ಇಂದುಭೂಷಣಬನರ್ಜಿ, ಬರೇಂದ್ರ ಘೋಷ್ ಎಂಬಿಬ್ಬರಿಗೆ ೫ ಮತ್ತು ೪ ವರ್ಷಗಳ ಕಠಿಣ ಸಜೆಯೂ ವಿಧಿಸಲಾಯಿತು.

—ಭೊಗೇಶ್ವರದ ಪೋಸ್ಟ್ ಮಾಸ್ಟರಾದ ಭೂಷಣ ಮುಖ್ಯೋಪಾಧ್ಯಾಯರೆಂಬವರು ಸರಕಾರದ ಹಣವಾದ ರೂ. [illegible] ದುರ್ವಿನಿಯೋಗಮಾಡಿದರೆಂಬ ಅಪಾದನೆಯ ಮೇಲೆ ೨ ವರ್ಷಗಳ ಕಠಿಣ ಸಜೆಗೆ ಗುರಿಯಾದರು.

—ಬೆನಾರೆಸ್ ಸೆಂಟ್ರಲ್ ಜೈಲಿನಲ್ಲಿ ತನ್ನೊಡನಿದ್ದ ಇನ್ನೊಬ್ಬ ಸ್ತ್ರೀಗೆ ಸರಿಯಾದ ರಕ್ಷಣೆಯಾಗದಿದ್ದುದಕ್ಕೆ ಒಬ್ಬ ಸ್ತ್ರೀಯು ಉಪವಾಸವನ್ನು ಹಿಡಿದಿರುತ್ತಾಳೆಂದು ತಿಳಿದು ಬಂದಿದೆ.

—ಮದರಾಸಿನ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿಯ ಯುನೈಟೆಡ್ ನೇಶನಲಿಸ್ಟ್ ಪಾರ್ಟಿಯು ದಿವಾನ್ ಬಹದ್ದೂರ್ ಆರ್. ಎನ್. ಅರೋಗ್ಯಸ್ವಾಮಿ ಮುದಲಿಯಾರರ ಪ್ರೇರೇಪಣೆ ಮೇರೆಗೆ ವೈಸರಾಯರು ಗಾಂಧಿಯವರಿಗೆ ಭೇಟಿ ಕೊಡದಿದ್ದುದೂ ವೈಸರಾಯರು ಓರ್ಡಿನೆನ್ಸುಗಳನ್ನು ಜಾರಿಗೆ ತಂದುದೂ ಶಾಂತಮಯ ಪಿಕೆಟಿಂಗ್ ಮಾಡುವವರು ಮೂರ್ಛೆ ತಪ್ಪಿ ಬಿದ್ದಮೇಲೂ ಪೋಲೀಸರು ಹೊಡೆಯುವುದೂ, ಕಾಂಗ್ರೆಸ್ಸನ್ನು ಬಂಧಿಸಿ, ರೌಂಡ್‌ಟೇಬಲ್ ಕಮಿಟಿಗಳ ಕೆಲಸವನ್ನು ನಿರ್ವಹಿಸಲು ಸರಕಾರವು ತೊಡಗಿದುದೂ ಖೇದಾಸ್ಪದ ಸಂಗತಿಯೆಂದು ಠರಾವು ಮಂಜೂರಾಯಿತು.

—ಮುಂಬಯಿಯಲ್ಲಿ ನಡೆದ ಕೈದಿಗಳ ಸಲುವಾಗಿ ಬೆಂಗಳೂರಿನ ಯುನಿವರ್ಸಿಟಿ ಎಂಜಿನೀಯರಿಂಗ್ ಕೋಲೇಜಿನ ವಿದ್ಯಾರ್ಥಿಗಳು ಹರತಾಳವನ್ನಾಚರಿಸಿದರು. ಅದನ್ನು ತಿಳಿದ ಅಧಿಕಾರಿಗಳು ಹರತಾಳವನ್ನಾಚರಿಸಿದ ವಿದ್ಯಾರ್ಥಿಗಳಿಗೆ ೩ ದಿನ ಗೈರ್‌ಹಾಜರು ಹಾಕುವದಾಗಿಯೂ, ಜುಲುಮಾನೆ ವಿಧಿಸುವರಾಗಿಯೂ ತಿಳಿಸಿದರು. ಇದನ್ನಾಲೋಚಿಸುವುದಕ್ಕಾಗಿ ವಿದ್ಯಾರ್ಥಿಗಳು ಸಭೆಸೇರಿ ಜುಲುಮಾನೆಯನ್ನು ಕೊಡುವುದರ ಬದಲು ಶಾಲೆಯನ್ನು ಮುಚ್ಚುವುದುತ್ತಮ, ಹರತಾಳವೂ ಮುಷ್ಕರವೂ ಪ್ರತ್ಯೇಕವಾಗಿವೆ ಎಂದು ಠರಾವು ಮಾಡಿಕೊಂಡರು. ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಸದ್ಯಕ್ಕೆ ಕ್ಷಮೆ ಇತ್ತಿರುವರು.

—ಕಲ್ಕತ್ತದಲ್ಲಿ ದಿವಂಗತ ಸಿ. ಆರ್. ದಾಸರ ಸಹೋದರಿಯಾದ ಶ್ರೀಮತಿ ಊರ್ಮಿಳಾದೇವಿಯವರನ್ನೂ ಇನ್ನಿತರ ಮೂವರನ್ನೂ ವಿದ್ಯಾಧಿಕಾರಿಯಾದ, ಶ್ರೀಯುತ ಕ್ಷಿತೀಶಚಂದ್ರ ಬೆನರ್ಜಿ ಎಂಬವರನ್ನೂ ಕೈದುಮಾಡಿರುವರು.

— + + + —

ದಕ್ಷಿಣ ಕನ್ನಡ.

ಸ್ವೀಕಾರ

ಮಂಗಳೂರು ಪ್ರೆಸ್ಸಿನವರ ಅಂದವಾದ ಕೆಲೆಂಡರೊಂದನ್ನು ಆದರದಿಂದ ಸ್ವೀಕರಿಸಿದ್ದೇವೆ.

ಶ್ರೀ ಕೆ. ಕಾಂತಪ್ಪಶೆಟ್ಟರಿಂದ ಬರೆಯಲ್ಪಟ್ಟು ಉಡುಪಿಯ ಕಿರಿಯರ ಪ್ರಸಂಗದವರಿಂದ ಪ್ರಕಾಶಿತವಾದ ತೊದಲ್ನುಡಿ ಮಾಲೆಯ 'ಸಂಶಯ ಪಿಶಾಚಿ' ಎಂಬ ಸಾಮಾಜಿಕ ನಾಟಕ ಪುಸ್ತಕವೂ [illegible] ಕೃಷ್ಣರಾಯರಿಂದ ಬರೆಯಲ್ಪಟ್ಟು, ಬೆಂಗಳೂರಿನ ವಿ. ಜಿ. ಓ. ಜನರಲ್ ಏಜನ್ಸಿಯವರಿಂದ ಪ್ರಕಟಿಸಲ್ಪಟ್ಟ 'ಹೊಸಹುಟ್ಟು' ಎಂಬ ವ್ಯಾಸ ಪುಸ್ತಕವೂ ನಮ್ಮ ಹಸ್ತಗತವಾಗಿವೆ. ವಿಮರ್ಶೆಯು ಯಥಾವಕಾಶವಾಗಿ.

ಮಂಗಳೂರು.— ಕಳೆದ ३[illegible]ನೇ ದಿನ ಇಲ್ಲಿಯ ಹಂಪನಕಟ್ಟೆಯಲ್ಲಿರುವ ವೆ[illegible] ಬ್ರದರ್ಸ್ ವಸ್ತ್ರದಂಗಡಿಯು ಶ್ರೀಗಳಾದ ಶೀನಸೆಟ್ಟಿ [illegible] ಮಾಧವಪ್ರಭು ಎಂಬೀ ಮೂವರು ಸ್ವಯಂಸೇವಕರಿಂದ ಪಿಕೆಟ್ ಮಾಡಲ್ಪಟ್ಟಿತು. ಪೋಲೀಸರ ಲಾಠಿ ಚಾರ್ಜ್ ನಡೆಯಿತು. ಜಖಂಗೊಂಡವರನ್ನು [illegible] ಹಾಕಿ ಸರಕಾರದ ಆಸ್ಪತ್ರೆಗೊಯ್ದರು.

ಕಳೆದ ವರುಷಾಂತ್ಯದಲ್ಲಿ ಇಲ್ಲಿಯ [illegible] ಬಸ್ಸಿನಲ್ಲಿ [illegible] ಕಳವು ಮಾಡಿದ [illegible] ದನಿಗೆ ಆಚೆಲ ಡಿಸೋಜ [illegible] ಕೋಯಿಲೊ ಸ್ಟೀವನ ಪತ್ರಾವ್ ಟೆಲ್ಲಿಸ್ ಸಿಕೇರ ಎಂಬ ಐದು ಮಂದಿಗಳು ಕೈದು ಮಾಡಲ್ಪಟ್ಟರು. ಅವರ ವಿಚಾರಣೆಯು [illegible] ನಡೆದು ಅವರಿಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ಎರಡು ವರ್ಷಗಳ ತನಕ ವಿಧಿಸಿದರು. ಈ ಯುವಕರಲ್ಲಿ [illegible] ಇಲ್ಲಿಯ ಸೈಂಟ್ ಎಲೋಸಿಯಸ್ ಕೋಲೇಜು ವಿದ್ಯಾರ್ಥಿಗಳೇ ಆಗಿರುತ್ತಾರೆ.

ಮೊನ್ನೆ ಆದಿತ್ಯವಾರ ಇಲ್ಲಿಯ [illegible] ಸಂಘದ ಶಾಖೆಯಲ್ಲಿಯೂ, ಸ್ವತಂತ್ರ ಭಾರತ ಸ್ವದೇಶಿ ಸ್ಟೋರ್ಸ್ ಮತ್ತು ದೇಶಬಂಧು ಸ್ವದೇಶಿ ಸ್ಟೋರ್ಸ್‌ಗಳಲ್ಲಿಯೂ ಕಾಂಗ್ರೆಸ್ ಸಂಬಂಧವುಳ್ಳ ಕಾಗದ ಪತ್ರಗಳ ಬಗ್ಗೆ ಪೋಲೀಸ್ ಜಪ್ತಿಯು ನಡೆಯಿತು. [illegible] ಸಂಘದ ಒಂದೆರಡು ಬಿಡಿ ಪುಸ್ತಕಗಳನ್ನು ತನಿಖೆ ಬಗ್ಗೆ ಕೊಂಡು ಹೋಗಿರುವರು.

३[illegible] ೨೩ನೇ ದಿನ ಬೆಳಿಗ್ಗೆ [illegible] ಗಂಟೆಗೆ ಮಾರ್ಕೆಟ್ ರಸ್ತೆಯ [illegible] ಬಿ. ವಸಂತರ ವಸ್ತ್ರದಂಗಡಿಯ ಎದುರು ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಶ್ರೀಗಳಾದ ಟಿ. ವೆಂಕಟೇಶ ಬಾಳಿಗ [illegible] ಶೆಟ್ಟಿ ಮತ್ತು ಬಿ[illegible] ಮೆಂಡನ್ ಎಂಬವರು ಪಿಕೆಟ್ ಮಾಡಿದರು. ಕೂಡಲೇ ಪೋಲೀಸ ಫೌಜು ಬಂದು ಅವರನ್ನು ಚದರಹೇಳಿತು. [illegible] ತಿರಸ್ಕೃತವಾದೊಡನೆ ಲಾಠಿ ಚಾರ್ಜ್ ನಡೆಯಿತು. ಲಾಠಿ ಪೆಟ್ಟುಗಳಿಂದ ಜಖಂ ಹೊಂದಿದ ಶ್ರೀಗಳಾದ ಕೋರಗಶೆಟ್ಟಿ ಮತ್ತು [illegible] ಮೆಂಡನ್ ರವರು ವೆನ್‌ಲೋಕ ಆಸ್ಪತ್ರೆಯಲ್ಲಿ ಗುಣ ಹೊಂದುತ್ತಿರುವರು. ಶ್ರೀ ಟಿ. ವೆಂಕಟೇಶ ಬಾಳಿಗ ಶ್ರೀ ರಾಮಕೃಷ್ಣ ನರ್ಸಿಂಗ ಹೋಮಿನಲ್ಲಿ ಚಿಕಿತ್ಸೆ ಹೊಂದುತ್ತಿರುವರು. [illegible] ಗಾಯಗೊಂಡವರನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಕಂಡಿರುವ[illegible] ಇನ್ನು ಮುಂದಕ್ಕೆ ಸ್ವಯಂಸೇವಕರ ತಲೆಗೆ ಪೆಟ್ಟುಕೊಡಲಾಗುವುದಿಲ್ಲವೆಂದೂ ಲಾಠಿಯ ಬದಲಿಗೆ [illegible] ವಾದ ಬೆತ್ತವನ್ನುಪಯೋಗಿಸಿ ಜನರನ್ನು ಚದರಿಸಲಾಗುವುದೆಂದೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಭರವಸೆ ಇತ್ತಿರುವರೆಂದು ತಿಳಿದುಬರುತ್ತದೆ.

ಕಾಂಗ್ರೆಸ್ಸಿನ ಕರಪತ್ರಗಳು ಇಲ್ಲಿ ದಿನವಾಗಿ ಹಂಚಲ್ಪಡುತ್ತಿರುವವು. [illegible] ಯಲ್ಲಿ [illegible] ಗಳಲ್ಲಿ "ಪಿಕೆಟಿಂಗ್ ಮತ್ತು [illegible] ಬರ್ಜನ [illegible] ಹೊರಡಿಸಲ್ಪಡುತ್ತಿದೆ.

ಇದೇ ತಿಂಗಳ ३[illegible]ನೇ ಆದಿತ್ಯವಾರ ಇಲ್ಲಿಯ ಟೌನ್ ಬೇಂಕಿನ ಮಹಾಸಭೆಯು ಜರಗುವುದು. ಮೆಂಬರರೆಲ್ಲರೂ ಹಾಜರಾಗಬೇಕಾಗಿ ಸದ್ರಿ ಬೇಂಕಿನ ಸೆಕ್ರೆಟರಿಯವರು ಅಪೇಕ್ಷಿಸುತ್ತಾರೆ.

[illegible] ಪತಿ ಹೈಸ್ಕೂಲಿನ ಶ್ರೀ ಸರಸ್ವತಿ ಪ್ರೋಟೋಬೇಲ್ [illegible] ಮೆಂಟ್ [illegible]ಕ್ಕೆ ಪ್ರಾರಂಭವು. ಫೆಬ್ರವರಿ [illegible] ತನಕ ಸಾಗುತ್ತಿರುವುದು. ಮೈದಾನ [illegible] ಎಲೋಸಿಯಸ್ ಕೋಲೇಜು, ಗವರ್ನಮೆಂಟ್ ಕೋಲೇಜು, ಕೆನರಾ ಹೈಸ್ಕೂಲು ಶಾಲೆಯ ಪ್ರಸ್ತುತ ಮತ್ತು ಹಳೆಯ ವಿದ್ಯಾರ್ಥಿ ಸಂಘಗಳೂ ಸ್ಪರ್ಧಿಸುವವು. ಪಂದ್ಯಾಟವು [illegible] ಸಂಜೆ ೪ ಗಂಟೆಗೆ ಪ್ರಾರಂಭವಾಗಿ ೬ ಘಂಟೆಗೆ ಅಂತ್ಯವಾಗುವುದು.

ಬರುವ ३[illegible]ನೇ ಆದಿತ್ಯವಾರ ಬೆಳಿಗ್ಗೆ ೭ ಘಂಟೆಗೆ ಡೊಂಗರಕೇರಿಯಲ್ಲಿರುವ ಬ್ರಹ್ಮಮಂದಿರದಲ್ಲಿ ದಿವಂಗತ ಸ್ವಾಮಿ ಈಶ್ವರಾನಂದ (ರಾವ್ ಸಾಹೇಬ ಕುದ್ಮುಲ ರಂಗರಾವ್) ರವರ ಮರಣ ದಿನಾಚರಣೆಗಾಗಿ ಮ. ರಾ. ಅಣ್ಣಪ್ಪನವರು ದೇವಾರಾಧನೆ ಮತ್ತು ವ್ಯಾಖ್ಯಾನ (Sermon) ನಡೆಸುವರು. ಎಲ್ಲರಿಗೂ ಸುಸ್ವಾಗತವಿದೆ.

ಇಲ್ಲಿಯ ಶ್ರೀ ಸ್ವಾಮಿ ವಿವೇಕಾನಂದ ಸೊಸೈಟಿಯ ನೇತೃತ್ವದಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಮಂದಿರದಲ್ಲಿ ३[illegible]ನೇ ಶನಿವಾರ ಸ್ವಾಮಿ ವಿವೇಕಾನಂದರ ೭೦ನೇ ಜನನ ದಿನ ಸ್ಮಾರಕ ಸಮಾರಂಭವು ಜರಗುವುದು. ಬೆಳಿಗ್ಗೆ ೭ ಘಂಟೆಯಿಂದ ೯ರ ವರೆಗೆ ಭಜನೆ ಮತ್ತು ಗಾಯನವೂ ೯ರಿಂದ ೧೦ರ ವರೆಗೆ ಶ್ರೀ ಬಿ. [illegible] ಬಾಳಿಗರ ಭಗವದ್ಗೀತಾಬೋಧನೆಯೂ, ೧೧ಕ್ಕೆ ಪೂಜೆಯೂ, ಸಂಜೆ ೪ ಘಂಟೆಗೆ ಬಡವರಿಗೆ ಅಕ್ಕಿ ಹಂಚುವಿಕೆಯೂ ಇರುವುದು. ಮರುದಿನ ಸಂಜೆ ೫ ಘಂಟೆಗೆ ಶ್ರೀ ಎ. ಶ್ರೀನಿವಾಸ ಪೈಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರಗುವುದು. ಎಲ್ಲರಿಗೂ ಸುಸ್ವಾಗತ.

ಇಲ್ಲಿಯ ಥಿಯೋಸೊಫಿಕಲ್ ಲೋಜಿನಲ್ಲಿ ೩೧ನೇ ಆದಿತ್ಯವಾರದಿಂದ ಮೊದಲ್ಗೊಂಡು 'J Krishnamurthi & Trends in Modern Thought" ಎಂಬ ಉತ್ತಮ ವ್ಯಕ್ತಿವಿಷಯಕವಾದ ಪ್ರಶ್ನೋತ್ತರಗಳೂ ಚರ್ಚೆಯೂ ನಡೆಯುವುದು. ಎಲ್ಲರಿಗೂ ಸುಸ್ವಾಗತವಿದೆಯೆಂದು ಶ್ರೀ ಎಮ್. ಎಸ್. ಮಾಧವರಾಯರು ತಿಳಿಸುತ್ತಾರೆ.

ದ. ಕ. ಜಿಲ್ಲಾ ಟೀಚರ್ ಮೆನೇಜರರ ಸಂಘ

ಈ ಸಂಘದ ಎಂಟನೆಯ ವಾರ್ಷಿಕ ಮಹಾಸಭೆಯೂ ಶಿಕ್ಷಣ ವಸ್ತು ಪ್ರದರ್ಶನ ಕಾಲದಲ್ಲಿ [illegible] ೧೯[illegible] ೧[illegible] ೧[illegible]ನೇ ಮಂಗಳವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಮಡಿಕೇರಿ ಸೆಂಟ್ರಲ್ ಸ್ಕೂಲಿನ ರಿಟಾಯರ್ಡ್ ಹೆಡ್ ಮಾಸ್ಟರಾದ ಮ. ರಾ. ರಾ. ಪಂಜೆ ಮಂಗೇಶರಾವ ಅವರ್ಗಳ್ ಬಿ. [illegible] ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗು[illegible].

ಉಡುಪಿ:— [illegible] ಕೈದುಮಾಡಲ್ಪಟ್ಟ ಇಲ್ಲಿನ [illegible] [illegible]ಗಳಿಗೆ [illegible] ತಿಂಗಳ [illegible] ವಿಧಿಸಲಾದರೂ ಅದು ಒಪ್ಪಿಗೆ [illegible] ಒಬ್ಬ [illegible] ತಿಂಗಳ ಶಿಕ್ಷೆ [illegible] ಸಲ್ಲತಕ್ಕದ್ದಾಗಿದೆ.

ಕಳೆದ ಸತ್ಯಾಗ್ರಹ ಕಾಲದಲ್ಲಿ ಪ್ರಕಟವಾಗುತ್ತಿದ್ದ [illegible] ಪತ್ರಿಕೆಯು ಪುನ ಕಲೆದೋರಿ ಈಗ್ಗೆ ಎರಡು ಸಂಚಿಕೆಗಳು ಹೊರಬಿದ್ದಿವೆ.

ಪ್ರಿವೆಂಟಿವ್ ಎಂಡ್ ಪೊಲಿಟಿಕಲ್ ಎಂಡ್ ಪಿಕೆಟಿಂಗ್ ಆರ್ಡಿನೆನ್ಸನ್ನು ಇಲ್ಲಿ ಜ್ಯಾರಿಮಾಡುವ ಅಪ್ಪಣೆ [illegible] ಪ್ರಕಟನೆಗಳು ಅಲ್ಲಲ್ಲಿ ಹಚ್ಚಲಾಗಿವೆ. ಠಂಗುರವೂ ಸಾರಲಾಗಿದೆ.

ಇದೇ [illegible] ನೇ ಸೋಮವಾರ [illegible] ಇಲ್ಲಿನ ಶಿಷ್ಯ ವರ್ಗದವರನ್ನೂ ಹಾಗೂ ಕ್ಷೇತ್ರ ದೇವಾಲಯವನ್ನೂ ಸಂದರ್ಶಿಸಲು ಹೊರಟು ಬರಲು [illegible] ಸ್ವಾಗತಿಸಿದರು. ಅವರನ್ನು ಬಿರುದಾವಳಿ [illegible] ಗಳಿಂದ ಅಲಂಕರಿಸಲ್ಪಟ್ಟ [illegible] ಮೆರವಣಿಗೆಯಿಂ[illegible] ಕೊಂಡರು.

ಶ್ರೀ [illegible] ಅನಂತಪದ್ಮನಾಭ [illegible] ಮುದ್ರಣಂಗಡಿಯನ್ನು ಸಹರೆವಾದಿ [illegible] ಮಂಗಳೂರು ವರೆಗೆ ಒಯ್ದು [illegible] ಇವರ [illegible] ಆಗಲಿದೆ.

[illegible] ಥಿಯೇಟ್ರಿಕಲ್ ಕಂಪೆನಿಯವರಿಗೆ ಶ್ರೀ [illegible] ಪಾರಿತೋಷಕವಾ[illegible] ಪದಕವು [illegible] ಆರ್ಪಿಸಲಾಯಿತು.

ಮೂಲ್ಕಿ: ಮಂಗಳೂರ ಡಿಸ್ಟ್ರಿಕ್ಟ್ ಬೋರ್ಡ್ [illegible] ಇನ್ಸ್‌ಪೆಕ್ಟರ್ ರಾ. ಕೆ. ಎಲ್. [illegible] ಇವರು ಇಲ್ಲಿ ಕೆಲವು ದಿನಗಳಿಂದ ಮೊಕ್ಕಾಂ ಮಾಡುತ್ತಿದ್ದು ನೆರೆಕರೆಯ ಶಾಲೆಗಳ ವರ್ಷಾವಧಿ ಪರೀಕ್ಷೆಯನ್ನು ನಡೆಸುತ್ತಲಿದ್ದಾರೆ.

ಇದೇ ಬರುವ [illegible]ನೇ ರವಿವಾರ [illegible] ಘಂಟೆಗೆ ವಿದ್ಯಾರ್ಥಿಗಳ [illegible] ಸಂಘದ ನೇತೃತ್ವದಲ್ಲಿ ಮಂಗಳೂರು ಕೆನರಾ ಹೈಸ್ಕೂಲಿನ ಉಪಾಧ್ಯಾಯರಾದ [illegible] ವಿದ್ಯಾರ್ಥಿಗಳಿಗೆ ಉಪದೇಶ ಎಂಬ ವಿಷಯವನ್ನೆತ್ತಿಕೊಂಡು ಭಾಷಣ ಮಾಡುವರು.

ಗಂಗೊಳ್ಳಿ.— ಇಲ್ಲಿಯ [illegible] [illegible] ದಿನವನ್ನು [illegible] [illegible] ಹಬ್ಬದ [illegible] "[illegible] ಕ್ಷಮಾಪಣೆ"

ಇಲ್ಲಿಯೇ ಸಮೀಪ [illegible] [illegible] ಕೋಟೆ [illegible] ಪ್ರೋಟೆಸ್ಟೆಂಟ್ [illegible] ಇತ್ತು. [illegible] ಕೋಟೆಗೆ [illegible] ಇದ್ದವು. ಈ ಕಟ್ಟಡವನ್ನು [illegible] (೧೦,೦೦೦) [illegible] [illegible] ಇವರಿಂದಲೇ [illegible] ಕಳೆದ [illegible] ಇದೇ [illegible] ಒಂದು [illegible] ಸಮಯ [illegible] ಗಾಮವಾಗಿ ಇದು "[illegible] ಕೋಟೆಗಳ [illegible]"

— + + + —

[illegible] ಹುಣ್ಣಿಮೆಯ ಪ್ರಜೋತ್ಪತ್ತಿ ಸಂವತ್ಸರದ ಪುಷ್ಯ ಬ॥ ೭ ಶನಿವಾರದಿಂದ ಪ್ರಜೋತ್ಪತ್ತಿ, ಸಂವತ್ಸರದ ಪುಷ್ಯ ಬ॥ ೧೪ ಶುಕ್ರವಾರದ ವರೆಗಿನ ಪಂಚಾಂಗ

(ಸೂರ್ಯ ಮಕರ— ಪ್ರಯಾಣಿಕರ).

ತಾರೀಕು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯ ಉ	ಸೂರ್ಯ ಅಸ್ತ
30	ಶನಿ	೭	೧ ೩	ಸ್ವಾತಿ	೪೩ ೩೧ ೧೬	6 59	6 29
31	ರವಿ	೮	೫೦. ೧	ವಿಶಾಖಾ	೫೩ ೪೬ ೧೭	6 59	6,29
1	ಸೋಮ	೧೦	೪೫ ೩೧	ಅನುರಾಧಾ	೪ ೩೮ ೧೮	6 59	6 30
2	ಮಂಗ	೧೧	೪೦ ೪೬	ಜ್ಯೇಷ್ಠಾ	೧ ೪೬ ೧೯	6 59	6,30
3	ಬುಧ	೧೩	೩೮ ೪೪	ಮೂಲಾ	೫೪.೩೮ ೨೦	6,59	6 31
4	ಗುರು	೧೪	೩೬.೪೬	ಪೂ. ಷಾ	೫೦ ೩೧ ೨೧	6 59	6 31
5	ಶುಕ್ರ	೧೫	೩೬,೧೪	ಉ ಷಾ	೪೬ ೩೦.೨೨	6 59	6.32

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಶಾಖ) ಹೆಚ್ಚು	Temperature. ಉಷ್ಣ (ಶಾಖ) ಕಡಿಮೆ	Rainfall ಮಳೆ ದಿನದ ಮಳೆ	Rainfall ಮಳೆ ಜುಮುಲಾ ಮಳೆ.
22	89— 9	68— 0	—	—
23	92— 6	70— 1	—	—
24	95— 1	66— 4	—	—
25	94— 0	66— 2	—	—
26	91— 9	65— 1	—	—
27	90— 9	65 1	—	—
28	89— 9	63— 9	—	149-96

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ	ಇಂದ ಆ	ವರೆಗೆ ರೂ	ವರೆಗೆ ಆ
ಹೊಸ ಅಕ್ಕಿ	3	6	3	1[illegible]
ಹಳೆಮುಸ್ಕಿ	6	[illegible]	[illegible]	[illegible]
ಹಳೆ ಗುಡ್ಡು	4	[illegible]	4	4
ಹಳೆ ಸುಗ್ಗಿ	[illegible]	8	4	0
ಊರ ಅಮ್ಮಲ್ ಬೆಳ್ತಿಗೆ	4	8	5	[illegible]
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	6	8	[illegible]	4
ಸುಬ್ಬುರಾಯಿಬೆಳ್ತಿಗೆ ಮುಡಿ ೧ಕ್ಕೆ	4	4	—	
ಗೋಧಿ ಗೋಣಿ ೧ಕ್ಕೆ	[illegible]	8	1[illegible]	[illegible]
ಸಿಹಗಿರಿ ಗೋಣಿ ೧ಕ್ಕೆ	13	0	1[illegible]	
ಹ ರುಳಗೋಣಿ ೧ಕ್ಕೆ	6	8	[illegible]	0
ಕಡಲೆ ಗೋಣಿ ೧ಕ್ಕೆ	8	8	12	8
ತೊಗರಿಬೇಳೆ ಗೋಣಿ ೧ಕ್ಕೆ	13	8	21	0
ಉದ್ದು ಗೋಣಿ ೧ಕ್ಕೆ	11	9	15	0
ಹೆಸರು ಗೋಣಿ ೧ಕ್ಕೆ	10	4	11	
ಊರು ಬೆಲ್ಲ ಖಂಡಿ ೧ಕ್ಕೆ	32	8	35	0
ಉಪ್ಪು ಗೋಣಿ ೧ಕ್ಕೆ	4	12	4	14
ಚಿಂಚ ಖಂಡಿ ೧ಕ್ಕೆ	60		62	
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	34	0	—	
ಎಳ್ಳಿಂಡಿ ಖಂಡಿ ೧ಕ್ಕೆ	26	4	[illegible]	8
ಕೊಬ್ಬರಿ ಎಣ್ಣೆ ಮುಡಿ ೧ಕ್ಕೆ	6	12	6	12
ಎಳ್ಳೆಣ್ಣೆ ಮುಡಿ ೧ಕ್ಕೆ	6	12	[illegible]	0
ಹರಳೆಣ್ಣೆ ಬೆಟ್ಟಿಗೆ ೧ಕ್ಕೆ	4	7	8	12
ಬೊಂಬಾಯಿ ಸಕ್ಕರೆ ಮಣ ೧ಕ್ಕೆ	4	0	4	3
ಹೊಸ ಮೆಣಸು	[illegible]	0	—	
ಗಾಸಿನ ಮುಡಿ ೧ಕ್ಕೆ	[illegible]	8	6	0
ನೇಟಿವ್ ಕಾಫಿ ಖಂಡಿ ೧ಕ್ಕೆ	2[illegible]	8	2	—
ಕಾಳುಮೆಣಸು ಖಂಡಿ ೧ಕ್ಕೆ	17	0	180	
[illegible] ಮುಡಿ ೧ಕ್ಕೆ	27	0	28	
ಗೇರುಬೀಜ ಮುಡಿ ೧ಕ್ಕೆ	4	6	4	12
[illegible] ಖಂಡಿ ೧ಕ್ಕೆ	3[illegible]	0	3[illegible]	8
ಕಾಂಪ್ರ ಹಗದು ಮುಡಿ ೧ಕ್ಕೆ	13	0	18	8
ಕಾಂಪ್ರ ಪಾತ್ರೆಗಳು ಮುಡಿ ೧ಕ್ಕೆ	15		16	0
[illegible] ಸೇರು ೧ಕ್ಕೆ	15	12	16	0
[illegible] ಹಗದು ಮುಡಿ ೧ಕ್ಕೆ	12	0	14	8
ಪವನು ೧ಕ್ಕೆ	18	4	18	8
[illegible] ಮುಡಿ ಖಂಡಿ ೧ಕ್ಕೆ	20		—	
[illegible] ಖಂಡಿ ೧ಕ್ಕೆ	375		400	
[illegible]	180		205	
[illegible]	140		145	

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್. Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ರಾಮುಗಳ ವಿವರ

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರು ಸ್ಟೇಶನ್ ಅದ ಧರ್ಮಸ್ಥಳ ರೋಡಿಗೆ ೧ ೩೦ಕ್ಕೂ ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಲೈಟ್ಹೌಸಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು ಮಲಬಾರ್ ಕನ್ನನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ ೪॥ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದೆಯಲ್ಲದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಾಪುರ ಗೋವಾ ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸಿಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಪ್ಯಾರಡೂನ್ ಸೋರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವವು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 47 ಪೀಟು ಉದ್ದವಾಗಿ ಎತ್ತರದ [illegible] ಶಿಲಾಪರ್ವತದ ಮೇಲೆ ನೆಲಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪ್ರಸಿದ್ಧ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ೧ ದಿವಸದೊಳಗೆ ತಲ್ಪಬಹುದ

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು, ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲಿಚ್ಛಿಸುವವರು ನೋಡಲು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Company Ltd., Mangalore

ದೇಶೋದ್ಧಾರವಾಗುವುದೇ?

ಕಳೆದ ಕೆಲವು ವರುಷಗಳು ಮಹೋತ್ಪಾತದಾಯಕವು. ಜನ, ಕುಟುಂಬ, ಸಮಾಜ, ಪಟ್ಟಣ, ದೇಶ, ವಿದೇಶ, ಸಮಗ್ರ ಪ್ರಪಂಚವೇ ಅವನತಿಯ ಕಡೆಗೆ ಧಾವಿಸುತ್ತಿದೆ. ಇಡೀ ಜಗತ್ತಿನ ವ್ಯಾಪಾರವು ಮಂದವಾಗಿದೆ. ಹತ್ತಿ, ದವಸಧಾನ್ಯ, ನಾರು ಮೊದಲಾದ ಪದಾರ್ಥಗಳ ಬೆಲೆಯು ತೀರಾ ಕಡಿಮೆಯಾಗುತ್ತಾ ಬರುತ್ತಿದೆ. ಈ ರೀತಿಯ ವ್ಯಾಪಾರ ಮಾಂದ್ಯದಿಂದ ದೇಶದ ಒಕ್ಕಲಿಗರಿಗೆ ಅತ್ಯಂತ ಹಾನಿಯು ತಟ್ಟಿರುತ್ತದೆಂದು ಬೇರೆ ಹೇಳಬೇಕಾಗಿಲ್ಲ. ಯಾವ ಹಳ್ಳಿಯನ್ನು ಕಂಡರೂ ಈ ವಿಷಯವು ಒಡೆದು ಕಾಣುವುದು. ಈ ವ್ಯಾಪಾರ ಮಾಂದ್ಯತೆಗೆ ಹಲವರು ಹಲವು ಕಾರಣಗಳನ್ನು ಮುಂದಿಡುತ್ತಿರುವರು. ವ್ಯಾಪಾರ ಮಾಂದ್ಯದ ಮುಖ್ಯ ಕಾರಣಗಳು ಇವುಗಳೆಂದು ಹೇಳಬಹುದು. ೧ ಹುಟ್ಟುವಳಿ ಹೆಚ್ಚಿದೆ, ೨ ಭಂಗಾರಕ್ಕೆ ಬರಗಾಲ ಬಂದಿದೆ, ೩ ಪ್ರಮಾಣಕ್ಕೆ ಸರಿಯಾಗದ ರೀತಿಯಲ್ಲಿ ಭಂಗಾರವು ಹಂಚಿಸಲ್ಪಡುತ್ತದೆ, ೪ ಮುಂದಕ್ಕೆ ನಡೆಯಲಿರುವ ಯುದ್ಧದ ಭಯ, ೫ ನಾಣ್ಯಗಳ ಚಲನ ಪದ್ಧತಿಯಲ್ಲಿ ಗಲಭೆ.

“ಗಾಂಧೀ ಗಲಾಟೆಯಿಂದಾಗಿ ಪದಾರ್ಥಗಳ ಬೆಲೆಯು ಬಿತ್ತೆಂದೂ, ಆದರಿಂದಾಗಿ ಪ್ರಪಂಚವು ಕಂಪಿಸಲ್ಪಟ್ಟಿತೆಂದೂ ಹೇಳುವುದು ಅಷ್ಟೊಂದು ಸಮಂಜಸವಾಗುವುದಿಲ್ಲ. ಕಾಯಿದೆ ಭಂಗ ಚಳವಳದಿಂದಲೂ ಅದರ ಪ್ರೇರೇಪಣೆಯನ್ನು ಹೊಂದಿಕೊಂಡಿದ್ದ ಬಹಿಷ್ಕಾರ ಚಳವಳದಿಂದಲೂ ಸಾಮಾನುಗಳ ಬೆಲೆಯು ಬಿತ್ತೆಂದು ಹೇಳುವುದೂ ಸರಿಯಲ್ಲ. ವಿದೇಶೀಯರು ನಮ್ಮ ಸರಕುಗಳನ್ನು ಕೊಳ್ಳದಿರುವುದರಿಂದಲೂ, ಸ್ವದೇಶೀಯರು ವಿದೇಶೀಯ ವಸ್ತ್ರಾದಿಗಳನ್ನು ಪಡೆಯದಿರುವುದರಿಂದಲೂ ಈ ಅನವಸ್ಥೆಯು ಬಂದಿತೆಂದು ಹೇಳುವುದೂ ಮೌಢ್ಯ.

[illegible] ೧೮ ವರುಷಗಳ ಹಿಂದೆ ನಡೆದ ಮಹಾ ಯುದ್ಧದ ನಂತರ ಪ್ರಪಂಚದ ಎಲ್ಲಾ ರಾಷ್ಟ್ರಗಳು ತಮತಮಗೆ ಬೇಕಾಗುವ ಮಾಲ್ಯ ಪದಾರ್ಥಗಳನ್ನು ತಾವು ತಾವೇ ಸಿದ್ಧಪಡಿಸಿಕೊಳ್ಳಲು ತೊಡಗಿದರು. ಯುದ್ಧ ಕಾಲದಲ್ಲಿ ಉಪಯೋಗಕ್ಕೆ ಬೇಕಾಗುವ ಸರಕು ಸಾಮಾನುಗಳಿಗಾಗಿ ತಾವು ಅನ್ಯದೇಶಗಳನ್ನು ಹೊಂದಿಕೊಂಡಿರುವುದು ಸರಿಯಲ್ಲವೆಂದು ಎಲ್ಲಾ ರಾಷ್ಟ್ರಗಳರಿತವು. ಅದಕ್ಕಾಗಿಯೇ ಅವುಗಳು ಒಕ್ಕಲ ವೃತ್ತಿಗೆ ಕೈಯಿಕ್ಕಿದುವು.

ಪ್ರತಿಯೊಂದು ದೇಶದಲ್ಲೂ ಒಕ್ಕಲತನವು ಹೆಚ್ಚಾಯಿತು. ಧನಿಸಾಹುಕಾರರೇ ಸಕಲ ವಿದ್ಯೆಗಳಲ್ಲಿ ಸಾಧುವಾದುದೆಂದು ಸರ್ವ ಜನಾಂಗಗಳರಿತವು. ರಷ್ಯಾ ದೇಶದಲ್ಲಿ ಸಾಗುವಳಿಯು ತೀವ್ರವಾಗಿ ನಡೆಯಿತು. ಸಾಗುವಳಿಗೆ ಬೇಕಾಗುತ್ತಿರುವ ರಷ್ಯಾ ಭೂಮಿಯು ಒಕ್ಕಲಿಗರಿಗೆ ಪಾಲುಮಾಡಿ ಕೊಡಲ್ಪಟ್ಟಿತು. ಅಲ್ಲಿಯ ಘೋರ [illegible] ನಂತರ ರಷ್ಯಾದಲ್ಲಿ ಸೋವಿಯಟ್ ಸರಕಾರವು ಸ್ಥಾಪಿತವಾದುದರಿಂದ ಒಕ್ಕಲತನವೇ ಪ್ರಧಾನ ವೃತ್ತಿಯಾಯಿತು. ದೇಶೋದ್ಧಾರವನ್ನು ಮಾಡುವುದೇ ತಮ್ಮ ಪ್ರಥಮ ಕರ್ತವ್ಯವಿದೆಯೆಂದು ರಷ್ಯಾನ ಸ್ತ್ರೀ ಪುರುಷ ಬಾಲರಾದಿಗಳೂ ಸಂಕಲ್ಪವನ್ನು ಕೈಕೊಂಡರು. ಸಕಲ ರೀತಿಯಿಂದಲೂ ದೇಶವನ್ನು ಸುಧಾರಿಸಲು ಭರಕ್ಕೆ ಸಿಲುಕಿದರು. ಕೆಲವು ವರುಷಗಳಲ್ಲೇ ಅಲ್ಲಿ ಹೇರಳವಾದ ಬೆಳೆ ಬೆಳೆದು ಧನಸಂಪತ್ತು ಹೆಚ್ಚಿ, ಜನರ ಕೈಯಲ್ಲಿ ದ್ರವ್ಯವು ಅಧಿಕವಾಗಿ ಬಡವರೆಂಬುವರು ಅಲ್ಲಿ ಇಲ್ಲದಾದರು. ಸಕಲರೂ ಐಶ್ವರ್ಯವಂತರೇ ಆದರು.

ಹೀಗೆ ಇವರು ಹೆಚ್ಚು ಹೆಚ್ಚಾಗಿ ಬೆಳೆಯುವ ದವಸ ಧಾನ್ಯವು ಪರ ಊರುಗಳಿಗೆ ರಫ್ತು ಮಾಡಲ್ಪಟ್ಟುವು. ಈ ಸರಕುಗಳು ಬಹಳ ಅಗ್ಗವಾಗಿ ದೊರೆಯುತ್ತಿದ್ದುದರಿಂದ ಅನ್ಯರಾಷ್ಟ್ರಗಳು ಇವುಗಳನ್ನು ಧಾರಾಳವಾಗಿ ಕೊಂಡುಕೊಂಡುವು. ರಷ್ಯಾದೇಶದ ಈ ಉಪಾಯವನ್ನು ನೋಡಿದ ಅಮೇರಿಕಾ, ಆಸ್ಟ್ರೇಲಿಯಾ, ಜರ್ಮನಿ, ಇಟಲಿ ಮೊದಲಾದ ದೇಶಗಳೂ ಎಚ್ಚರಗೊಂಡುವು. ಇಜಿಪ್ತ್ ದೇಶದಲ್ಲಿ ಹತ್ತಿಯ ಬೆಳೆಯನ್ನು ಪ್ರವರ್ಧಿಸಿದರು. ಅಂತೂ ಇಂತೂ ಎಲ್ಲಾ ರಾಷ್ಟ್ರಗಳು ಒಕ್ಕಲತನವನ್ನೇ ಮುಂದೊತ್ತಿಕೊಂಡು ಹೋದುವು. ಕಾರಣವಾಗಿ—ಬೆಳೆಯು ಅಧಿಕವಾಯಿತು. ಜನರಿಗೆ ಬೇಕಾದುದಕ್ಕಿಂತಲೂ ಹೆಚ್ಚು ಬೆಳೆಯು ಬೆಳೆಯಿಸಲ್ಪಟ್ಟಿತು. ಇದರೊಡನೆ ಒಕ್ಕಲತನದ ವೃತ್ತಿಯಲ್ಲಿ ನವಸುಧಾರಣೆಗಳು ತಲೆದೋರಿದುವು. ಹಳೆಯ ರೀತಿಯ ನೇಗಿಲಿನ ಬದಲಿಗೆ ಹೊಸ ರೀತಿಯ ಯಂತ್ರವು ಬಂದು ನಿಂತಿತು. ಮುಂಚಿನವರು ನಾಲ್ಕು ದಿನಗಳಲ್ಲಿ ಕಷ್ಟದಿಂದ ಮಾಡುತ್ತಿದ್ದ ಕೆಲಸವನ್ನು ಈಗಿನವರು ೪ ಘಂಟೆಗಳಲ್ಲಿ ಸುಲಭವಾಗಿ ಮುಗಿಸಿಬಿಡಲು ಸಮರ್ಥರಾದರು. ಹೀಗಾಗಿ ಪ್ರಪಂಚದಲ್ಲಿ ಒಕ್ಕಲತನದ ಗೊಂದಲವು ಪ್ರಚಂಡ ಪ್ರಭೆಯಿಂದೆದ್ದಿತು.

ಅನ್ಯರಾಷ್ಟ್ರಗಳು ಒಕ್ಕಲತನದಲ್ಲಿ ಇಷ್ಟು ಪ್ರಾಬಲ್ಯವನ್ನು ಹೊಂದಿದುವಾದರೂ ಹಿಂದೂದೇಶವು ತನ್ನ ಆದಿಯ ಕೂಪದಿಂದ ಕದಲಲಾರದಾಯಿತು. ಇದರ ಒಕ್ಕಲ ವೃತ್ತಿಯು ಈಗಲೂ ಹಳೆಯ ಪದ್ಧತಿಯನುಸಾರವಾಗಿಯೇ ಮೆಲ್ಲನೆ ನಡೆಯುತ್ತದೆ. ಆಲಸ್ಯಮಯನಾದ ವಿದ್ಯಾರ್ಥಿಯು ಬೆಳಿಗ್ಗೆ ೯ ಘಂಟೆಗೆ ಹಾಸಿಗೆಯಿಂದೆದ್ದು ಕಣ್ಣೊರಸಿ ಶಾಲೆಗೆ ಹೋಗುವಂತೆ ಹಿಂದೂದೇಶದ ಕೃಷೀವಲನಾಂಗವು ಒಕ್ಕಲ ವೃತ್ತಿಯನ್ನು ಮಾಡುತ್ತಿದೆ. ಇವರ ಈ ಮಾಂದ್ಯತೆಗೆ ಕಾರಣವಿಲ್ಲವೆಂದಲ್ಲ. ಶಾಸ್ತ್ರೀಯ ರೀತ್ಯಾ ಇವರು ಒಕ್ಕಲತನವನ್ನು ಸಾಗಿಸಬೇಕಾದರೆ ಇವರ ಕೈಯಲ್ಲಿ ಹಣ ಬೇಕು, ಜ್ಞಾನಬೇಕು, ಸರಕಾರದ ಪ್ರೋತ್ಸಾಹವು ಬೇಕು. ಅಂತರ ಪ್ರೋತ್ಸಾಹನವಿದ್ದಿರಲ್ಲವೇ ಬಾಹ್ಯ ಪ್ರೋತ್ಸಾಹನವು ಪ್ರತಿಫಲಿಸುವುದು? ಹೀಗಾಗಿ ನಮ್ಮ ದೇಶದ ಒಕ್ಕಲತನದ ಬಾಳು ಹಾಳಾಗಿದೆ. ನಾವು ಅನ್ಯರಾಷ್ಟ್ರಗಳಂತೆ ಹೆಚ್ಚಿನ ಸರಕುಗಳನ್ನು ಅಲ್ಪಾವಧಿಯೊಳಗೆ ಬೆಳೆಯಲಾರೆವು. ಅಲ್ಲದೆ ಅನ್ಯರಾಷ್ಟ್ರಗಳಂತೆ ಶ್ರೇಷ್ಠ ವಸ್ತುಗಳನ್ನು ನಾವು ತಯಾರಿಸಲಾರೆವು. ಪ್ರತಿಸ್ಪರ್ಧೆಯ ಈ ಸಮಯದಲ್ಲಿ ಜಗದೇಕವೀರ, ಅಲ್ಪಜ್ಞನೂ ಉದ್ಧಾರವಾಗುವಂತಿಲ್ಲ. ಅಂತೆಯೇ ಜಡ ರೀತಿಯ ಸಾಧನಗಳಿಂದ ನಮ್ಮ ಕೃಷೀವಲನಾಂಗವು ನಮ್ಮ ವೃತ್ತಿಗಳನ್ನು ಸಾಗಿಸುತ್ತಾ ಹೋದರೆ ಪ್ರಯೋಜನವಿಲ್ಲ.

ಅಮೇರಿಕದ ಹತ್ತಿಗೂ ನಮ್ಮ ದೇಶದ ಹತ್ತಿಗೂ ಅಜಗಜಾಂತರವಿದೆ. ಅಂದರೆ ನಮ್ಮ ಹತ್ತಿಯು ಹೆಸರುವಾಸಿಯಾಗಿದ್ದರೂ ನಮ್ಮ ಹಳೇ ಮಾದರಿಯ ಉಪಕರಣಗಳಿಂದಾಗಿ ನಾವು ಹಿಂದೆ ಬಿದ್ದು, ಈಗ ನಮ್ಮ ಹತ್ತಿಗಿಂತ ಅಮೇರಿಕದ ಹತ್ತಿಯೇ ಉತ್ತಮವೆಂದೆಣಿಸಲ್ಪಟ್ಟಿತು. ಪಂಜಾಬು ಮೊದಲಾದ ದೇಶಗಳಲ್ಲಿ ಹೇರಳ ಗೋದಿಯು ಬೆಳೆಯಿಸಲ್ಪಡುತ್ತದೆ. ಗೋದಿಯನ್ನು ರಫ್ತು ಮಾಡಲು ಪ್ರೋತ್ಸಾಹಿಸದೆ ಬೆಳೆಯುವರ್ಗ ಪ್ರತಿಕೂಲವಾಗುತ್ತ ಹೋಗುತ್ತದಾದರೂ ಅದು ವೆಚ್ಚವು ಅಮೇರಿಕ [illegible], ನಮ್ಮ ದೇಶದೊಳಗೆ ಆಸ್ಟ್ರೇಲಿಯಾ ಮೊದಲಾದ ದೇಶಗಳ ಗೋದಿಯು ಬರುತ್ತದೆ. ಈ ಗೋದಿಯು ನಮ್ಮ ದೇಶದ ಗೋದಿಗಿಂತ ಬಹಳ ಅಗ್ಗವಾಗಿ ಮಾರಲ್ಪಡುತ್ತಿರುವುದರಿಂದ ನಮ್ಮ ಗೋದಿಯನ್ನು ಮೂಲೆಗೊತ್ತಬೇಕಾಯಿತು. ಅಂದಮೇಲೆ ನಮ್ಮ ವ್ಯಾಪಾರವು ಮಂದವಾಗದೆ ಇನ್ನೇನಾದೀತು?

ಅನ್ಯರಾಷ್ಟ್ರಗಳಿಗೆ ಸ್ವಾತಂತ್ರ್ಯವಿರುವುದರಿಂದ ಅವುಗಳ ಹಣಗಳಿಗೆ ಹೆಚ್ಚಿನ ಬಾಧೆ ಕೂಡಬೇಕಾಗಿಲ್ಲ. ಅವುಗಳು ತಮ್ಮ ಸರಕುಗಳನ್ನು [illegible] ಬೆಲೆಯಿಂದ ಸಾಗಿಸಿಕೊಂಡು ಅಗ್ಗವಾಗಿ ಮಾರುತ್ತವೆ. ಆದರೆ ನಮಗೆ ಸ್ವಾತಂತ್ರ್ಯವಿಲ್ಲ. ಕಂಪೆನಿಗಳೂ ಅದರೊಡನೆ ಸ್ವಾತಂತ್ರ್ಯವೂ ಇಲ್ಲದೆ ಯಾವುದನ್ನೂ ಕೈಕೊಳ್ಳಲು ಸಾಧ್ಯವಿಲ್ಲ. ನಮ್ಮ ದೇಶದಲ್ಲಿ ಈಗೀಗ ಗೋದಿಯ ಬೆಳೆಯ ಅಧಿಕಾಧಿಕ್ಯವು ತಲೆದೋರಿದೆ. ಕೆಲವು ಪ್ರಾಂತ್ಯಗಳಲ್ಲಿ ಬೆಳೆಯಿಸಲ್ಪಟ್ಟ ಗೋದಿಗೆ ಬೆಲೆಯಿಲ್ಲದೆ, ಅದನ್ನು ದನಕರುಗಳಿಗೆ ಉಪಯೋಗಿಸುತ್ತಿದ್ದಾರೆ. ಹೀಗಾದರೆ ದೇಶೋದ್ಧಾರವಾಗುವುದೇ? ಒಕ್ಕಲತನವೇ ರಾಷ್ಟ್ರದ ಅಸ್ಥಿವಾರವು ಎಂದೆನಿಸಿದ ನಮ್ಮ ವ್ಯಾಪಾರವು ಬಿದ್ದುಹೋದ ವೇಳೆ ದೇಶೀಯ ಹಣ ಹೇಗೆ ರಕ್ಷಿಸಲ್ಪಟ್ಟೀತು?

ಕೃಷಿಕರ ಈ ದುಃಸ್ಥಿತಿಗೆ ಸಂಬಂಧಪಟ್ಟ ಅವರ ಕಂದಾಯವು, ಮತ್ತು ಗೇಣಿಗಳವೆ. ಒಂದು ಬಾಡಿಗೆಯ ಮನೆಯಲ್ಲಿನ ಹತ್ತು ಜನರಲ್ಲಿ ನಾಲ್ಕು ಜನರು ಮಡಿದುಹೋದರೂ ಮನೆಯ ಬಾಡಿಗೆಯು ಇಷ್ಟೇ ಇರುತ್ತದಲ್ಲವೇ? ಮನೆಯಲ್ಲಿನ ನಾಲ್ಕು ಮಂದಿಗಳು ಮರಣಹೊಂದಿದರು. ಆದುದರಿಂದ ಕಾರಣ ಉಳಿದವರ ಮನೆಬಾಡಿಗೆಯನ್ನಿಳಿಸುತ್ತೇನೆಂದು ಧನಿಯು ಹೇಳುವುದಿಲ್ಲ. ಯಾರು ಸತ್ತರೂ ಯಾರು ಬದುಕಿದರೂ ಮನೆಯ ಬಾಡಿಗೆಯು ನಿಯಮಿತ ಕಾಲಕ್ಕೆ ನಿಯಮಿತದಷ್ಟೇ ಕೊಡಲ್ಪಡಬೇಕು. ಅಂತೆಯೇ ಒಕ್ಕಲಿಗರ ಸರಕುಗಳ ಬೆಲೆಯು ಬಿದ್ದರೂ ಧನಿಗಳು ನಿಯಮಿತ ಗೇಣಿಯನ್ನು ಬಿಡಲಾರರು. ತನ್ನ ಒಕ್ಕಲಿಗರಲ್ಲಿ ಎಷ್ಟು ದವಸಧಾನ್ಯವು ಬೆಳೆದಿದೆ, ಅವರೆಂತಹ ಸ್ಥಿತಿಯಲ್ಲಿರುವರು? ಎಂಬುದಾಗಿ ವಿಚಾರಿಸುವ ಕೆಲಸವು ಧನಿಯ ಪಾಲಿಗೆ ಬಿದ್ದಿಲ್ಲ. ನಿಯಮಿತ ಮೊಬಲಗನ್ನು ಕಂದಾಯದ ವಸೂಲಿ ರೂಪವಾಗಿ ಖಜಾನೆಗೆ ಸಲಿಸುತ್ತಿರುವುದೂ, ಸರಕಾರಕ್ಕೆ ತನ್ನ ಪಾಲಿನ ಕಂದಾಯವನ್ನು ಸಲ್ಲಿಸುವುದೂ ಧನಿಯ ಕೆಲಸ. ಹೀಗಾಗಿ ರೈತರಿಗೆ ಅವರ ಆರ್ಥಿಕ ಸ್ಥಿತಿಗನುಕೂಲವಾದ ಕಂದಾಯವಿರುವುದಿಲ್ಲ. ಇದರಿಂದಾಗಿ ಅವರು ನೆಲವನ್ನು ಹಿಡಿಯುವ ಪ್ರಸಂಗವು ಬಂದಿದೆ. ಎಂದು ಒಕ್ಕಲಿಗನು ಅವನತಿಗಿಳಿದನೋ ಅಂದು ರಾಷ್ಟ್ರವೇ ಅಧೋಗತಿಗಿಳಿಯಿತು, ಎಂದು ಒಕ್ಕಲಿಗನು ಉನ್ನತಿಗೇರಿದನೋ, ಅಂದು ಸಮಗ್ರ ಲೋಕವೂ ಉನ್ನತಿಯ ಶಿಖರವನ್ನೇರುವುದು.

ಇನ್ನು ಎರಡನೇಯ ಕಾರಣವು ಭಂಗಾರದ ಬರಗಾಲವು. ಜಗತ್ತಿನಲ್ಲಿಯ ಅತ್ಯಂತ ಧನಾಢ್ಯ ರಾಷ್ಟ್ರಗಳೆಲ್ಲ ಭಂಗಾರದ ನಾಣ್ಯಗಳನ್ನೇ ಉಪಯೋಗಿಸುತ್ತಿರುತ್ತವೆ. ಕಾಗದದ ದ್ರವ್ಯವನ್ನು ಕಲವು ರಾಷ್ಟ್ರಗಳು ಉಪಯೋಗಿಸುತ್ತಿರುವುವಾದರೂ ಆ ಉಪಯೋಗದ ಬೆಂಬಲಾರ್ಥವಾಗಿ ಬಂಗಾರವನ್ನು ಬೇಂಕಿನಲ್ಲಿಡುವ ಪದ್ಧತಿಯಿರುತ್ತದೆ. ಅಂತೂ ಭಂಗಾರವು ಪ್ರತಿಯೊಂದು ರಾಷ್ಟ್ರದ ಅಸ್ಥಿವಾರಕ್ಕಗತ್ಯವಿರುತ್ತದೆ.

ಕಳೆದ ೨೦—೩೦ ವರುಷಗಳಿಂದ ಅನೇಕ ರಾಷ್ಟ್ರಗಳು ಬೆಳ್ಳಿಯ ನಾಣ್ಯಗಳನ್ನು ಬಿಟ್ಟು ಭಂಗಾರದ ನಾಣ್ಯಗಳನ್ನುಪಯೋಗಿಸತೊಡಗಿವೆ. ಇದರಿಂದಾಗಿ ಭಂಗಾರವು ಹೆಚ್ಚು ಹೆಚ್ಚು ಬೇಕಾಗುತ್ತ ಬಂತು. ಪರರಾಷ್ಟ್ರದವರೊಡನೆ ಸಾಧನ್ಯವಹಾರವನ್ನು ನಡೆಸಬೇಕಾದರೆ ಭಂಗಾರವು ಅವಶ್ಯವಾಗಿ ಬೇಕಾಗಿದೆ. ಬಂಗಾರವು ಒಳಕೆಯಲ್ಲಿದ್ದಷ್ಟು ಕಾಲ ವ್ಯಾಪಾರ ವಾಣಿಜ್ಯವು ಅತ್ಯುತ್ತಮ ರೀತಿಯಲ್ಲಿ ನಡೆಯಿತು. ಇಷ್ಟು ವರುಷಗಳ ವರೆಗೆ ಭಂಗಾರದ ಹುಟ್ಟುವಳಿಯು ವಾಣಿಜ್ಯದ ಬೆಳವಣಿಗೆಯ ಪ್ರಮಾಣದಿಂದಲೇ ಇದ್ದಿತು. ಆದರೆ ಇತ್ತೀಚೆಗೆ ಭಂಗಾರದ ಹುಟ್ಟುವಳಿಯು ಕಡಿಮೆಯಾಗುತ್ತ ನಡೆಯಿತು. ಬಂಗಾರದ ಹೊಸ ಹೊಸ ಗಣಿಗಳು ಇತ್ತೀಚೆಗೆ ಸಿಗಲಾರದೇ ಹೋದುವು. ಇದ್ದ ಕಣಗಳಲ್ಲಿಯೇ ಬಂಗಾರದ ಮಣ್ಣನ್ನು ತೆಗೆದು ಶುದ್ಧವಾದ ಬೇಕಾದ ಹೆಚ್ಚು ವೆಚ್ಚವು ತಗಲುತ್ತದೆ. ಹೀಗಾಗಿ ಭಂಗಾರದ ಹುಟ್ಟುವಳಿಯು ಕಡಿಮೆಯಾಗಿದೆ. ಭಂಗಾರದ ಬರಗಾಲವು ಎಂದು ತಲೆದೋರಿತೋ ಅಂದು ವಾಣಿಜ್ಯವು ಬೀಳುತ್ತದೆ. ವಾಣಿಜ್ಯವು ಬೀಳಲು ಸರಕುಗಳ ಧಾರಣೆಯೂ ಬೀಳುವದು. ಸರಕುಗಳ ಧಾರಣೆಯು ಬಿದ್ದೊಡನೆ ಒಕ್ಕಲಿಗರಲ್ಲಿ ಹಣವು ಕಡಿಮೆಯಾಗುತ್ತದೆ. ಒಕ್ಕಲಿಗರ ಕೈಯಲ್ಲಿ ಹಣವು ಕಡಿಮೆಯಾದೊಡನೆ ಪೇಟೆಗಳು ಕಂಗಾಲಾಗುತ್ತವೆ. ಪೇಟೆಯ ವರ್ತಕರು ಕಂಗಾಲಾದೊಡನೆ ಜನತೆಯು ಹಣದ ಚಿಂತಾ ಸಮುದ್ರದ ನೀರಿನಲ್ಲಿ ಮುಳುಗ ತೊಡಗುತ್ತದೆ. ಹೀಗಾದರೆ ದೇಶೋದ್ಧಾರವಾಗುವುದೇ? ಇನ್ನು ದೇಶವು ಯಾವ ಕಾಲಕ್ಕೆ ಉದ್ಧಾರವಾಗುವುದೋ?

—

೧ನೇ ಪುಟದಿಂದ ಮುಂದುವರಿದುದು

ಚಾರ್ಟರ್ಡ್ ಬೇಂಕ್ ಆಫ್ ಇಂಡಿಯಾ ಲಂಡನ್ ಬೇಂಕ್ ಮತ್ತು ಈಸ್ಟರ್ನ್ ಬೇಂಕ್ ಎಂಬ ಬೇಂಕುಗಳು ಭಂಗಾರವನ್ನು ರಫ್ತು ಮಾಡದ ಕ್ರಮವೆಂದು ತಿಳಿದ ಸ್ವಯಂಸೇವಕರು ಪಿಕೆಟ್ ಮಾಡಿದರು. ರಂಗಶಾಲೆಯನ್ನು ಪಿಕೆಟ್ ಮಾಡಿದ [illegible] ಬಂದಿ ಸ್ವಯಂಸೇವಕರಿಗೆ [illegible] ತಿಂಗಳ [illegible] ಸಜೆ

ಪೂನಾಯ

ಮುನಿಸಿಪಾಲಿಟಿಯವರು ಕಾರಣವನ್ನು ಹೇಳದೆ ತಮ್ಮ ಕಾರ್ಯಕ್ರಮವನ್ನು ಹಿಂದಕ್ಕಿಟ್ಟರು. ನಾಲ್ಕು ಮಂದಿ ಕೌನ್ಸಿಲರುಗಳನ್ನು ಕೈದುಮಾಡಿದುದಕ್ಕಾಗಿಯೇ ಹೀಗೆ ಮಾಡಿದರೆಂದು ವಾರ್ತೆ.

ಅಹ್ಮದಾಬಾದಿನಲ್ಲಿ

ಜರಗಿದ ಒಂದು ಸಭೆಯನ್ನು ಪೋಲೀಸರು ಚದರಿಸುವಾಗ ಗಾಯಗೊಂಡ ಶ್ರೀ ಸುರೇಂದ್ರ ಚಿಮನ್‌ಲಾಲ್ ಎಂಬ ಹುಡುಗನು ಮೃತಹೊಂದಿದನು.

ಮುಂಬಾಯಿಯಲ್ಲಿ

ಫ್ರೀ ಪ್ರೆಸ್ ಜರ್ನಲ್ ವರ್ತಮಾನಪತ್ರಿಕೆಯ ಸಂಪಾದಕರಾದ ಶ್ರೀ ವಿಷ್ಣು [illegible]ಯವರನ್ನು ದಸ್ತಗಿರಿ ಮಾಡಿ, ಆ ಪತ್ರಿಕೆಯ ಮುದ್ರಣಾಲಯವನ್ನೂ ಹುಡುಕಿದರು.

ಅಲ್ಲಹಾಬಾದಿನ ಯುನೈಟೆಡ್ ಪ್ರೊವಿನ್ಸಸ್ ಲಿಬರಲ್ ಎಸೋಸಿಯೇಶನ್ ಎಂಬ ಸಂಸ್ಥೆಯು ಶ್ರೀ ಸೇನಗುಪ್ತರ ದಸ್ತಗಿರಿಯ ಬಗ್ಗೆ ಖಂಡನಸೂಚನೆಯನ್ನು ಮಾಡಿ ಆ ವಿಷಯವನ್ನು ವೈಸರಾಯರಿಗೆ ತಿಳುಹಿಸಿತು.

ಮದ್ರಾಸಿನಲ್ಲಿ

ಶ್ರೀ ರಾಜಗೋಪಾಲಾಚಾರ್ಯ ಮತ್ತು ಸತ್ಯಮೂರ್ತಿಯವರನ್ನು ವೆಲ್ಲೂರು ಸೆರೆಮನೆಗೊಯ್ದರು.

ತಾರೀಖು ೨೦ರಲ್ಲಿ

[illegible] ತಾಲೂಕಿನ ಕರಂಪುರ ಎಂಬಲ್ಲಿ ಮಹಾತ್ಮಾ ಗಾಂಧಿಯವರ ಮಗ ಶ್ರೀ ರಾಮ್‌ದಾಸ್ ಗಾಂಧಿಯವರನ್ನು ದಸ್ತಗಿರಿ ಮಾಡಿದರು ಇನ್ನಿತರ ಎಂಟು ಮಂದಿ ಸ್ವಯಂಸೇವಿಕೆಯರನ್ನೂ ಕೈದುಮಾಡಿದರು.

ದಂಡನೀತಿಯ ದಂಡನೆ.

ಮೆಜಿಸ್ಟ್ರೇಟರ ಅಪ್ಪಣೆಯನ್ನುಲ್ಲಂಘಿಸಿದುದಕ್ಕಾಗಿ ಒಂದು ವರುಷದ ಕಠಿಣ ಸಜೆಗೂ, ಬಂಗಾಳ ಕಾಂಗ್ರೆಸ್ ಕಮಿಟಿಗೆ ಸಹಾಯಕರಾದುದಕ್ಕೆ ಇನ್ನೊಂದು ವರುಷದ ಕಠಿಣ ಸಜೆಗೂ ಗುರಿಯಾದರು

ಕಲ್ಕತ್ತದಲ್ಲಿನ

ನಾಲ್ಕು ಮಂದಿ ಸ್ವಯಂಸೇವಕರನ್ನು ಕೈದು ಮಾಡಿ ಒಬ್ಬೊಬ್ಬನಿಗೆ ಆರಾರು ತಿಂಗಳ ಕಠಿಣ ಸಜೆ ಕೊಟ್ಟರು ಆನಂದ ಬಜಾರ್ ಪತ್ರಿಕೆಯ ಸಂಪಾದಕರಾದ ಶ್ರೀ ಪ್ರಫುಲ್ಲ ಸರ್ಕಾರ ಎಂಬವರ ಪತ್ನಿ ಶ್ರೀಮತಿ ನಿರ್ಝರಿಣಿ ಸರ್ಕಾರ್ ಎಂಬವರನ್ನೂ ಇನ್ನಿತರ ಐದು ಮಂದಿ ಸ್ತ್ರೀಯರನ್ನೂ ದಸ್ತಗಿರಿ ಮಾಡಿ ಆರಾರು ತಿಂಗಳ ಕಠಿಣ ಸಜೆ ವಿಧಿಸಿದರು ಶ್ರೀಮತಿ ಕಲ್ಯಾಣಿ ದೇವಿ ಎಂಬ ಒಬ್ಬ ಪೋಸ್ಟ್ ಗ್ರೇಜುವೇಟರರನ್ನೂ ಇನ್ನಿತರ ಮೂರು ಮಂದಿಗಳನ್ನೂ ಕೈದುಮಾಡಿ ಎಂಟೆಂಟು ತಿಂಗಳ ಸಜೆ ವಿಧಿಸಿದರು ಪಿಕೆಟಿಂಗ್ ನಡೆಸಿದುದಕ್ಕಾಗಿ ಗಾಂಧಿಜೀಯವರ ಮಾಜಿ ಸೆಕ್ರೆಟರಿಯರಾದ ಶ್ರೀ ಕೃಪಾಲಾನಿದಾಸರನ್ನೂ, ಕ್ರೈಸ್ತಮತಸ್ಥರಾದ ಎ. ಕೆ ಜೆಕೋಬ್ ಎಂಬವರನ್ನೂ ದಸ್ತಗಿರಿ ಮಾಡಿದರು ಬಂಗಾಳ ಬಿಹಾರ, ಒರಿಸಾ ಪ್ರಾಂತ್ಯಗಳಲ್ಲೂ ಒಟ್ಟು [illegible] ಮಂದಿಗಳನ್ನು ಕೈದುಮಾಡಿರುವರು

ಬೆನಾರೆಸ್‌ನಲ್ಲಿ

ಸೆಕ್ಷನ್ [illegible]ಗಳನ್ನುಲ್ಲಂಘಿಸಿ ಸಭೆಗೂಡಿದುದಕ್ಕಾಗಿ ಶ್ರೀ ಶಿವಪ್ರಸಾದ್ ಗುಪ್ತರೆಂಬವರನ್ನೂ ಶ್ರೀ ಸಂಪೂರ್ಣಾನಂದ್ ಎಂಬವರನ್ನೂ ಕೈದುಮಾಡಿ ಆರಾರು ತಿಂಗಳ [illegible] ಸಜೆಗೂ ಇನ್ನೂ [illegible] ರೂಪಾಯಿ ಜುಲ್ಮಾನೆಗೂ ಗುರಿಪಡಿಸಿದರು ಜುಲ್ಮಾನೆ ತೆರದಿದ್ದರೆ ಒಂದೊಂದು ತಿಂಗಳ ಸಜೆ ಹೆಚ್ಚು ಉಪ್ಪಿನ ಕಾಯಿದೆಯ ನ್ನುಲ್ಲಂಘಿಸಿದುದಕ್ಕಾಗಿ [illegible] ಮಂದಿ ಸ್ವಯಂಸೇವಕರನ್ನೂ ಶಿಕ್ಷಿಸಿದರು.

ಅಲ್ಲಾಹಾಬಾದಿನಲ್ಲಿ

ಒಂದು ದೇವಸ್ಥಾನದೊಳಗೆ ಕಾಂಗ್ರೆಸ್ಸಿನ ಕೈಪತ್ರಗಳನ್ನು ಮುದ್ರಿಸುವ ಒಂದು ಮುದ್ರಾಯಂತ್ರವನ್ನು ಪೋಲೀಸಿನವರು ಪತ್ತೆಮಾಡಿದರು ಕಾಂಗ್ರೆಸ್ ಬುಲ್ಲೆಟಿನ [illegible] ಅಲ್ಲಿ ಅಚ್ಚಾಗಿ ಇಷ್ಟು ಸಮಯದಿಂದಲೂ ಹೊರಬರುತ್ತಿತ್ತು ಪೋಲೀಸ್ ಪಹರೆಯನ್ನಿಟ್ಟು ಸಾಮಾನುಗಳನ್ನು ಕೊಂಡೊಯ್ದರು [illegible] ವಣಿಗೆ ಮಾಡಿದ ಬಗ್ಗೆ ಶ್ರೀ ಶಿವಲಾಲ್‌ಚಂದ್ ಮಿಶ್ರ ಎಂಬವರನ್ನೂ, ಇನ್ನಿತರ ನಾಲ್ಕು ಮಂದಿಗಳನ್ನೂ ಶಿಕ್ಷಿಸಿದರು ಸಭೆ [illegible] ಸಾರಿದ [illegible] ಮಂದಿಗಳಿಗೆ ಒಂದೊಂದು ತಿಂಗಳ ಕಠಿಣ ಸಜೆಯು ದೊರೆಯಿತು [illegible] ಮಂದಿ ಹಳ್ಳಿಗರನ್ನೂ ಆರಾರು ತಿಂಗಳ ಕಠಿಣ ಸಜೆಗೆ ಗುರಿಪಡಿಸಿದರು

ತಾರೀಖು ೨೧ರಲ್ಲಿ

ಆರೋಗ್ಯ ಸಂಪಾದನೆಗಾಗಿ ಇಂಗ್ಲೆಂಡಿಗೆ ಹೊರಟ ಶ್ರೀ ಜೆ ಎಮ್ ಸೇನಗುಪ್ತರು ಇಟೆಲಿಯನ್ ಸ್ಟೀಮರ್ [illegible] ಎಂಬುದರಲ್ಲಿ ಮುಂಬಾಯಿಗೆ ಹಿಂತಿರುಗುತ್ತಿದ್ದರು [illegible] ಹಡಗವು ಬಂದರಿಗೆ ಬರುತ್ತಲೇ ಡೆಪ್ಯುಟಿ ಕಮಿಶನರರೂ ಇನ್ನಿತರ ಪೋಲೀಸರೂ ಹಡಗನ್ನು ಹತ್ತಿ ಶ್ರೀ ಸೇನಗುಪ್ತರನ್ನು ದಸ್ತಗಿರಿ ಮಾಡ ಬೇಕೆಂದು [illegible] ತಿಳಿದ [illegible] ಕಪ್ತಾನರು ಇಟೆಲಿಯನ್ ಧ್ವಜದಡಿಯಲ್ಲಿ ಶ್ರೀ ಸೇನಗುಪ್ತರಿರುವುದರಿಂದ ಅವರನ್ನು ಹಡಗಿನಲ್ಲಿ ಕೈದು ಮಾಡಲು ಸಾಧ್ಯವಿಲ್ಲವೆಂದರು ಅದನ್ನು ಕೇಳಿ [illegible] ಹಿಂದೆ ಬಂದು, ಪುನಃ ೭ ಘಂಟೆ ಬೆಳಿಗ್ಗೆ ದಕ್ಕೆಗೆ ಹೋಗಿ ಸೇನಗುಪ್ತರು ಇಳಿಯುವುದನ್ನು ಕಾಯುತ್ತಿದ್ದರು ಸಮಯವಿಂಗುತ್ತಲೇ ಶ್ರೀಯುತರು ಕೆಳಗೆ ಬಂದರು ಮಿಶನರರು ಒಡನೆ ಅವರನ್ನು ಬಂಗಾಳ ರೆಗ್ಯುಲೇಶನ್ III ರ ಮೇರೆಗೆ ದಸ್ತಗಿರಿ ಮಾಡಿದರು ಸೇನಗುಪ್ತರನ್ನು ಕೈದು ಮಾಡಿದ ವಾರ್ತೆಯು ಮುಂಬಾಯಿಯಲ್ಲೆಲ್ಲಾ ತತ್‌ಕ್ಷಣ ಹರಡಿ [illegible] ಹರತಾಳವಾಚರಿಸಲ್ಪಟ್ಟಿತು ಸೇನಗುಪ್ತರನ್ನು [illegible] ಕೊಂಡೊಯ್ದರು ಅವರೊಡನೆ ಅವರ ಪತ್ನಿಯು ಕೂಡ ಇದ್ದರು ಅಲ್ಲಿ ಸೇನಗುಪ್ತರು ಅವರ ಮಗ ಶಿಶಿರ್ ಸೇನಗುಪ್ತರನ್ನೂ ಇನ್ನಿಬ್ಬರು ಸೆಕ್ರೆಟರಿಗಳನ್ನೂ ಕಂಡ ಮಾತನಾಡಿದರು ಆ ವೇಳೆ ಅವರನ್ನು ಪುನಃ ಎರವಾಡಾ ಜೈಲಿಗೆ ಕೊಂಡೊಯ್ದರು ಈಗ ಎರವಾಡ ಜೈಲಿನಿಂದ ಡಾರ್ಜೀಲಿಂಗಿಗೆ ಅವರನ್ನೊಯ್ದುವರೆಂಬ ವಾರ್ತೆ ಇದೆ

[illegible] ಮಂದಿ ಸ್ವಯಂಸೇವಿಕೆಯರೂ ಒಬ್ಬ ಸ್ತ್ರೀಯೂ ರಂಗಸ್ಥಳವನ್ನು ಪಿಕೆಟ್ ಮಾಡಿದುದಕ್ಕಾಗಿ ದಸ್ತಗಿರಿಮಾಡಲ್ಪಟ್ಟರು [illegible]ಗರ್‌ದಾಸ್ ಮಾರ್ಕೆಟಿನಲ್ಲೂ ಮುಲ್ಜಿಜೇಠಾ ಮತ್ತು ಶೇಖ್‌ಮೆಮನ್ ಮಾರ್ಕೆಟಿನಲ್ಲೂ ಪಿಕೆಟಿಂಗ್ ನಡೆಯುತ್ತಿದೆ

ಮದ್ರಾಸಿನಲ್ಲಿ

ಶ್ರೀ ಎಸ್ ಶ್ರೀನಿವಾಸ ಐಯ್ಯಂಗಾರರ ಪುತ್ರಿ ಶ್ರೀಮತಿ ಅಂಬುಜಮ್ಮಾಲ್ ಎಂಬವರನ್ನೂ ದಿವಂಗತ ಸರ್ ವಿ ಭಾಷ್ಯಂ ಐಯ್ಯಂಗಾರರ ಪುತ್ರಿ ಶ್ರೀಮತಿ ಜಾನಮ್ಮಾಳ್ ಎಂಬವರನ್ನೂ ಕೈದುಮಾಡಿ ಆರಾರು ತಿಂಗಳ ಸಾದಾ ಶಿಕ್ಷೆ ಕೊಟ್ಟರು

ಅಲ್ಲಹಾಬಾದಿನಲ್ಲಿ

ಮಂಕಪುರದ ರಾಜರ ಮಗ ಕನ್‌ವಾರ್ ರಾಘವೇಂದ್ರ ಪ್ರತಾಪ್‌ಸಿಂಗ್‌ರು ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸುದುದಕ್ಕಾಗಿ ಸ್ಥಳಿನಲ್ಲಿ ಕೈದುಮಾಡಲ್ಪಟ್ಟರು

ಕರಾಚಿಯಲ್ಲಿ

ಯುರೋಪಿಯನರ ಗೋಡೌನನ್ನು ಪಿಕೆಟ್ ಮಾಡಿದ [illegible] ಮಂದಿ ಸ್ವಯಂಸೇವಕರನ್ನೂ ಒಬ್ಬ ಸ್ತ್ರೀಯನ್ನೂ ಕೈದು ಮಾಡಿದರು ಉಪ್ಪಿನ ಕಾನೂನುಲ್ಲಂಘನೆಯನ್ನು ಮಾಡಿದ [illegible] ಮಂದಿಗಳನ್ನು ಕೈದುಮಾಡಿರುವರು ಕಾಂಗ್ರೆಸ್ ಕರಪತ್ರಗಳನ್ನು ಹಂಚಿದ ಮೂವರನ್ನು ದಸ್ತಗಿರಿ ಮಾಡಿರುವರು

ಮುಂಬಾಯಿಯಲ್ಲಿ

ಕಾಂಗ್ರೆಸ್ ಬುಲೆಟಿನ್‌ಗಳನ್ನು ಹಂಚಿದ ಮೂರು ಮಂದಿ ಸ್ವಯಂಸೇವಕರನ್ನು ಕೈದು ಮಾಡಿದರು ಪಿಕೆಟರರನ್ನು ದಸ್ತಗಿರಿ ಮಾಡಿದ ಪರಿಣಾಮ [illegible]ದಾಸ್ ಮಾರ್ಕೆಟು ಮುಚ್ಚಲ್ಪಟ್ಟಿದೆ ಕಾಂಗ್ರೆಸ್ ಪಕ್ಷೀಯರೆಂದು ಸಂಶಯ ತೋರಿದವರಿಗೆ ಬೋರ್ಡಿಂಗಿನಲ್ಲಿ ರಿಗೊಡಕೂಡದೆಂದು ಪೋಲೀಸ್ ಕಮಿಶನರು [illegible] ಹೊಟೆಲ ಮ್ಯಾನೇಜರರಿಗೆ ನೋಟೀಸ ಕೊಟ್ಟರುವರು ರಂಗಸ್ಥಳವನ್ನು ಪಿಕೆಟ್ ಮಾಡಿದ [illegible] ಮಂದಿ ಕಾಂಗ್ರೆಸ್‌ವಾಲರ ನ್ಯಾಯ ವಿಚಾರಣೆ ನಡೆಯುತ್ತಿದೆ ಚೌಪಾತಿಯಲ್ಲಿ ಉಪ್ಪನ್ನು ತಯಾರಿಸಲಿದ್ದಾಗ ಪೋಲೀಸರು ಒಂದು ಮೂವರನ್ನು ದಸ್ತಗಿರಿ ಮಾಡಿದರು

ಅಹ್ಮದಾಬಾದಿನಲ್ಲಿ

ಮಹಾತ್ಮಾಜೀಯವರ ಸತ್ಯಾಗ್ರಹ ಆಶ್ರಮದಲ್ಲಿ ಆಸ್ವಸ್ಥರಿಂದಿದ್ದ ಶ್ರೀ ಸೇಠ್ ಪಂಚಾಲಭ್ಯಾ ಎಂಬವರು ಅವರ ಬಳಿ ಪತ್ರಗಳನ್ನು ಪೋಲೀಸರಿಗೆ ತೋರಿಸಬೇಕೆಂದು ನೋಟೀಸ್ ಜಾರಿ [illegible] ಪಿಕೆಟಿಂಗಿನ ಸಂಬಂಧ [illegible] ಮಂದಿಗಳನ್ನು ಕೈದುಮಾಡಿದರು ಒಂದು ಮನೆಯಲ್ಲಿದ್ದ [illegible] ಕಾಂಗ್ರೆಸ್ ಕರಪತ್ರಗಳನ್ನು ಪೋಲೀಸರು ಪತ್ತೆಮಾಡಿ ಆ ಮನೆಯ ಯಜಮಾನನನ್ನೂ [illegible] ವರುಷ ಪ್ರಾಯದ ಅವನ ಮಗನನ್ನೂ ದಸ್ತಗಿರಿಮಾಡಿರುವರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯರಾದ ಶ್ರೀ ರಾಜರಾವ್ ಎಂಬವರನ್ನೂ ಆರು ತಿಂಗಳ ಸಜೆಗೆ ವಿಧಿಸಿದರು ಗುಜರಾತ್ ವಿದ್ಯಾಪೀಠದ ಆರು ಮಂದಿಗಳು ಸ್ವತಃ ಸಭೆಯೊಂದನ್ನು [illegible] ಕೈದುಮಾಡಲ್ಪಟ್ಟರು

ತಾರೀಖು ೨೨ರಲ್ಲಿ

ಬೆನಾರೆಸ್‌ನಲ್ಲಿ

ವಿದೇಶಿವಸ್ತ್ರ ಮಾರಾಟದ ಒಂದು ಅಂಗಡಿಯಲ್ಲಿ ಪಿಕೆಟಿಂಗ್ ನಡೆಸಿದುದಕ್ಕಾಗಿ ಶ್ರೀಮತಿಗಳಾದ ಅನೂಪದೇವಿ, ಶ್ಯಾಮ್‌ದೇವಿ ರಾಮ್‌ದೇವಿ, ಭಗೀರಥಿದೇವಿ ಸರೋಜಿನಿ [illegible]ದೇವಿ [illegible] ದೇವಿ ರೇವತಿದೇವಿ ಮತ್ತು ವಿಮಲದೇವಿಯರೆಂಬ ಎಂಟು ಮಂದಿ ಸ್ತ್ರೀಯರನ್ನು ದಸ್ತಗಿರಿ ಮಾಡಿ ಒಬ್ಬೊಬ್ಬರಿಗೆ ಆರಾರು ತಿಂಗಳ ಕಠಿಣ ಸಜೆಯನ್ನು ವಿಧಿಸಿದರು ಹರತಾಳವಾಚರಿಸಲ್ಪಟ್ಟಿದೆ

ಸೂರತ್ತಿನಲ್ಲಿ

ಪಂಡಿತ ಇಂದ್ರ ಮತ್ತು ಬಿನೀಂದ್ರ [illegible]ನೂರ್ ಇವರನ್ನು ದಸ್ತಗಿರಿ ಮಾಡಿ ಮೊದಲನೆಯವರಿಗೆ [illegible] ತಿಂಗಳ ಕಠಿಣ ಸಜೆ ಮತ್ತು [illegible]೦೦ ರೂಪಾಯಿ ಜುಲ್ಮಾನೆ ಅಥವಾ ಪುನಃ ಒಂದು ವರೆ ತಿಂಗಳ ಸಜೆಯನ್ನೂ, ಎರಡನೆಯವರಿಗೆ ಆರು ತಿಂಗಳ ಸಾದಾ ಸಜೆ ಮತ್ತು ೨೦೦ ರೂಪಾಯಿ ಜುಲ್ಮಾನೆ ಅಥವಾ ಒಂದುವರೆ ತಿಂಗಳ ಸಜೆಯನ್ನೂ ವಿಧಿಸಿದರು

ಕಲ್ಕತ್ತಿದಲ್ಲಿ

ಹೌರಾ ಮ್ಯುನಿಸಿಪಾಲಿಟಿಯ ಮಾಜೀ ವೈಸ್‌ಚೆಯರ್ ಮೆನ್ ಆಗಿದ್ದ ಪ್ರೊಫೆಸರ್ ಬಿಜೊಯ ಕೃಷ್ಣ ಭಟ್ಟಾಚಾರ್ಯರು

ಲಖ್ನೋವಿನಲ್ಲಿ

೨೦ ಮಂದಿ ಸ್ವಯಂಸೇವಕರನ್ನು ಕೈದುಮಾಡಿರುವರು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ವರ್ತಕರ ಸಭೆಯೊಂದನ್ನು ಜರಗಿಸಿ ಕಾಯಿದೆಭಂಗ ಚಳವಳವನ್ನು ಮುರಿಯಬೇಕೆಂದೂ, ಸರಕಾರದೊಡನೆ ಸಹಕರಿಸಬೇಕೆಂದೂ ಕೇಳಿಕೊಂಡರು

ಮುಂಬಾಯಿಯಲ್ಲಿ

ಸಾಧಾರಣ ೨೦ ವರ್ತಕ ಸಂಘಗಳೊಟ್ಟುಗೂಡಿ ಪ್ರಚಲಿತ ಸ್ಥಿತಿಗಳ [illegible] ಮಾಡಬೇಕೆಂದು ಒಗೆದಿದ್ದುದನ್ನು ತಿಳಿದ ಕಮಿಷನರು ಆ ಸಭೆಯನ್ನೇ ಕಾಯಿದೆ ವಿರೋಧವಾಗಿ ಮಾಡಿದರು

ಕಲ್ಲಿಕೋಟೆಯಲ್ಲಿ

ಕಾಂಗ್ರೆಸ್ಸಿನ ಎರಡನೇ ಡಿಕ್ಟೇಟರರಾದ [illegible] ಶಿಂಗರ್ ಸಂಜೀವಿಪ್ರಸಾದ್ ಎಂಬವರಿಗೆ ಅಸ್ಸಿ[illegible] ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ [illegible] ಸಯ್ಯದ್ ಮಹಮ್ಮದ್ ನಾಸಿ[illegible] ಮೂರು ವರುಷಗಳ [illegible] ಸಜೆಯನ್ನೂ ೧೦೦೦ ರೂಪಾಯಿಗಳ ಜುಲ್ಮಾನೆ ಅಥವಾ ೬ ತಿಂಗಳ ಹೆಚ್ಚಿನ ಸಜೆಯನ್ನೂ ವಿಧಿಸಿದರು

ತಾರೀಖು ೨೩ರಲ್ಲಿ

ಮುಲ್ಜಿ[illegible] ವೈಟ್‌ವೆ ಲೈಡ್‌ಲವ್ ಮತ್ತು ಕಂಪೆನಿ ಎಂಬ [illegible] ಮತ್ತು ಕೃಷ್ಣನಾಥ್ [illegible] ಪಿಕೆಟ್ ಮಾಡಿದರು ಅದನ್ನು ತಿಳಿದ ಸಾರ್ಜಂಟರು ಪೋಲೀಸರು [illegible] ಕೊಂಡು [illegible] ಪಿಕೆಟರರನ್ನು ಚದರ ಹೇಳಿದರೂ ಅವರು [illegible] ಅವರ ಗಾಂಧಿ ಟೊಪ್ಪಿಗಳನ್ನು [illegible] ಹೊಡೆದು [illegible] ಮಾರ್ಗಗಳಲ್ಲಿ ಪೋಲೀಸರ ಪಹರೆ ನಿಂತಿತ

ಮುಂಬಾಯಿಯಲ್ಲಿ

ಫ್ರೀ ಪ್ರೆಸ್ ಜರ್ನಲಿನ ಸಂಪಾದಕರಾದ ಶ್ರೀ ಎಸ್ ಸದಾನಂದರನ್ನು ದಸ್ತಗಿರಿ ಮಾಡಿದರು

ಎಲ್ಲೂರಿನ

ಮ್ಯುನಿಸಿಪಲ್ ಕೌನ್ಸಿಲ್ ಮಾಜಿ ವೈಸ್ ಚೆಯರ್‌ಮೆನರಾದ ರಾವ್ ಪಿ ಜಗ[illegible]ರೆಂಬವರು ಕಾಂಗ್ರೆಸ್ ಪಕ್ಷೀಯರಾಗಿ [illegible] ಕಾಯಿದೆಭಂಗ [illegible] ಪ್ರೋತ್ಸಾಹ ಮಾಡಿದರೆಂಬ ಆಪಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟಿರುವರು

ಅಹಮ್ಮದಾಬಾದಿನ [illegible] ಸಭೆ [illegible] ನಡೆಸಿದ [illegible] ಮಂದಿ ಸ್ವಯಂಸೇವಕರನ್ನು ಕೈದುಮಾಡಿರುವರು ಇವರೆಲ್ಲರೂ [illegible] ರಾಜಕೀಯ [illegible] ಕಾಯಿದೆ ವಿರೋಧವಾಗಿ ಜರಗಿಸುವ [illegible] ಆಪಾದನೆ

ಕರಾಚಿಯಲ್ಲಿ

ಸ್ವಯಂಸೇವಕ [illegible] ಶ್ರೀ ಜಮಶೇದ್ [illegible] ಎಂಬವರನ್ನು ದಸ್ತಗಿರಿ ಮಾಡಿ [illegible] ತಿಂಗಳ ಕಠಿಣ ಸಜೆಗೆ ವಿಧಿಸಿದರು [illegible] ರೂಪಾಯಿ ಜುಲ್ಮಾನೆಯೂ ವಿಧಿಸಲಾಗಿತ್ತು [illegible] ಶ್ರೀಯುತ [illegible] ಕೊಡದಿದ್ದ [illegible] ಅವರ ಮನೆಯ [illegible] ಘಂಟೆಗೆ [illegible] ೫೦ ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ಕೊಂಡ ಹೋ[illegible] [illegible]ನೇ ಡಿಕ್ಟೇಟರರು ಶ್ರೀ [illegible]ದಾಸ್ ವಲ್ಲಬ್‌ದಾಸರೆಂಬವ ಕಾಂಗ್ರೆಸ್ಸಿನ [illegible] ಸ್ವೀಕರಿಸಬೇಕಾಗಿ ಅಪ್ಪಣೆಯಾಗಿರುತ್ತದೆ

ತಾರೀಖು ೨೪ರಲ್ಲಿ

ಮುಂಬಾಯಿಯಲ್ಲಿ

ಕಾಂಗ್ರೆಸ್ಸಿನ ೪೦ ೦೦೦ ರೂಪಾಯಿಗಳ ಸೆಂಟ್ರಲ್ ಬೇಂಕ್ ಆಫ್ ಇಂಡಿಯಾದಲ್ಲಿದ್ದುದನ್ನು ಪೋಲೀಸರು ಪತ್ತೆಮಾಡಿ ಅದಕ್ಕೆ ಮುಟ್ಟುಗೋಲು ಹಾಕಿರುವರು ಅದೇ ಬೇಂಕಿನಲ್ಲಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಹೆಸರಿನಲ್ಲಿದ್ದ [illegible] ರೂಪಾಯಿಗಳ ಮೇಲೂ ಮುಟ್ಟುಗೋಲು ಹಾಕಿರುವರು

೧೦ನೇ ಪುಟಕ್ಕೆ ಮುಂದುವರಿಯುದೆ

ವಿವಿಧ ಸಮಾಚಾರಗಳು.

ಪೋಲೀಸನ ಪ್ರಾಣ ಕೈದಿಯು ಉಳಿಸಿದುದು

ಲಂಡನಿನಲ್ಲಿ ಒಬ್ಬ ಅಪಾದಿತನು ಪೋಲೀಸನ ಕೈಯಿಂದ ತಪ್ಪಿಸಿ ಓಡಹೋದನು. ಅವನನ್ನಟ್ಟಿ ಪೋಲೀಸನು ಸಿಕ್ಕ ಸಿಕ್ಕ ಕಷ್ಟಗಳನ್ನನುಭವಿಸಿ ಓಡಿದನು. ಒಂದು ಕಡೆಯಲ್ಲಿ ಪೋಲೀಸನು ಹಾರುವಾಗ ಕಾಲು ಜಾರಿ ಒಂದು ಖನಿಗೆ ಬಿದ್ದು ಬಹಳ ಜಖಂಗೊಂಡನು. ತನ್ನ ಹಿಂಗಡೆಯಿಂದ ಓಡಿಬರುತ್ತಿದ್ದ ಪೋಲೀಸನು ಕಾಣದಿದ್ದವನ್ನು ಕಂಡ ಅಪಾದಿತನು ಪುನಃ ಹಿಂದೆ ಬಂದು ಖನಿಯಲ್ಲಿ ಬಿದ್ದಿದ್ದ ಪೋಲೀಸನನ್ನು ಕೈಕೊಟ್ಟು ಮೇಲಕ್ಕೆತ್ತಿ ಅವನನ್ನುಪಚರಿಸಿ, ಅವನು ಚೈತನ್ಯಯುಕ್ತನಾಗಲು ಪುನಃ ಓಡಿಬಿಟ್ಟನು. ಕೊನೆಗೆ ಅಪಾದಿತನನ್ನು ಹೇಗೂ ಮಾಡಿ ಹಿಡಿಯಲಾಯಿತು. ನ್ಯಾಯ ವಿಚಾರಣೆಯಾಗುವಾಗ ಘಾಯಗೊಂಡ ಪೋಲೀಸನು ನಡೆದ ಕತೆಯನ್ನು ಕೋರ್ಟಿನವರಿಗೆ ಹೇಳಿದನು.

ಬಡವರತ್ತ ಕಡೆ ನಮ್ಮ ಕರ್ತವ್ಯವೇನು?

ಶ್ರೀಮತಿ ಮೀರಾಬಾಯಿಯವರು ಬರೆಯುವುದೇನೆಂದರೆ — ಎನ್ನ ೬೩ನೇ ವರುಷದಲ್ಲಿಯೂ ಗಾಂಧಿಜಿಯವರು ಬಡವರಿಗಾಗಿ ದೀನರಿಗಾಗಿ ಸೆರೆಮನೆಗೆ ಹೋದರು. [illegible] ತಮ್ಮ ಸರ್ವಸ್ವವನ್ನು ಧಾರೆಯೆರೆದಿರುವ [illegible] ಅವರಿಗಾಗಿ ಪದೇ ಪದೇ ಕಾರಾಗೃಹವಾಸವನ್ನನುಭವಿಸುತ್ತಿರುವರು. ಅವರ [illegible] ಗೃಹದಲ್ಲಿರುವಾಗ ನಾವು ನಮ್ಮ ಬಡ ಸಹೋದರ ಸಹೋದರಿಯರಿಗಾಗಿ ಏನೂ ಮಾಡಬೇಕೆಂದಾಲೋಚಿಸ ಬೇಡವೇ? ಇಷ್ಟರ ತನಕ [illegible] ಹೆಚ್ಚಿನವರು ಅತ್ಯಲ್ಪ ಸೇವೆಯನ್ನು ಮಾಡಿರುವೆವು. ಆದರೆ ಗಾಂಧಿಜೀಯವರ ಮಹದಾದರ್ಶವನ್ನು ಕಂಡುವರೂ ನಾವು ನಮ್ಮ ಕಿಂಚಿತ್ ಸೇವೆಯನ್ನು ದೇಶಕ್ಕಾಗಿ ಮಾಡಬೇಡವೇ? ಬಡ ಜನರ ಕಷ್ಟವನ್ನು ಪರಿಹರಿಸಲು ಯಾವ ಸೇವೆಯನ್ನು ನಾವು ಮಾಡಬೇಕೆಂದು ಗಾಂಧಿಜೀಯವರೇ ಎಷ್ಟೋ ಸಲ ಹೇಳಿರುವರು. ಅರೆಹೊಟ್ಟೆಯಿಂದ ಜೀವಿಸುತ್ತಿರುವ ಬಡ ಜನರ ಸೇವೆಯನ್ನು ಹೇಗೆ ಮಾಡಬೇಕೆಂದು ಅವರು ನಮಗೆ ಬೋಧಿಸಿರುವರು. ನಮ್ಮ ಹಳ್ಳಿಗರಿಂದ ತಯಾರಿಸಲ್ಪಟ್ಟ ವಸ್ತ್ರವನ್ನೇ ನಾವು ಉಡಬೇಕು. ಅಮಿಂದ ಕಾಲದಿಂದಲೂ ನಮ್ಮ ಆರ್ಥಿಕ ಆಧಿಗಲ್ಲಾಗಿದ್ದ ಹಳ್ಳಿಯ ಕೈಗಾರಿಕೆಯನ್ನು ನಾವು ಪುನರ್ಜೀವಿಸಿ, ಖಾದಿಯನ್ನೇ ತೊಡಬೇಕು. ಈಗ ಹಳ್ಳಿಗಳ ಆರ್ಥಿಕ ಪರಿಸ್ಥಿತಿಯು ಕಂಗಾಲು ಸ್ಥಿತಿಯಲ್ಲಿದೆ. [illegible] ಖಾದಿಯನ್ನೇ ಪಡೆದರೆ ಈ ಬಡ ಜನರ ಕಷ್ಟಗಳು ಕೂಡಲೇ ಪರಿಹಾರವಾಗುವುವು. ತಮ್ಮ ಬೆಳೆಯಿಂದ ನಷ್ಟವನ್ನನುಭವಿಸಿದ ರೈತರು ತಮ್ಮ ನೂಲುವಿಕೆಯ ವೃತ್ತಿಯು ಪುನರ್ಜೀವಗೊಂಡುದನ್ನು ಕಂಡು ಈ ವೃತ್ತಿಯನ್ನೇ ಮಾಡುವರು. ಖಾದಿಗೆ ಬೇಡಿಕೆ ಬಂದರೆ ಕೂಡನೆ ಅವರು ವಸ್ತ್ರ ತಯಾರಿಯನ್ನು ಕೈಕೊಳ್ಳುವರು. ಆಗ ಸ್ವಾಭಾವಿಕವಾಗಿ ನಮ್ಮ ಹಳ್ಳಿಯ ಕೈಗಾರಿಕೆಗಳು ಉನ್ನತಿಯನ್ನು ಹೊಂದುವುವು. ಇಷ್ಟರ ತನಕ ನಮ್ಮ ಆಲಸ್ಯದಿಂದಾಗಿ ತಮ್ಮ ಚರಕಗಳನ್ನು ಮೂಲೆಗೊತ್ತಿ ಕುಳಿತಿದ್ದ ಮುದುಕಿಯರು ನೂಲುವರು. ಅವರ ಚಿಕ್ಕ ಮಕ್ಕಳು ನೂಲನ್ನು ಹತ್ತಿಯನ್ನು ಸಿದ್ಧಪಡಿಸುವರು. ಗಂಡಸರು ಮಗ್ಗಗಳನ್ನು ಸರಿಪಡಿಸುವರು. ತಮಗೆ ಉದ್ಯೋಗವಾದ ದಿನವು ಸನ್ನಿಹಿತವಾಯಿತೆಂದು ಹರಿಹರಿ ಹಿಗ್ಗುವರು. ಹೆಂಗಸರಿಗೆ [illegible] ಮೂರಾಣೆಯ ವರೆಗೆ ದಿನಕ್ಕೆ ಸಂಪಾದನೆಯಾಗುವುದು. ಗಂಡಸರಿಗೆ ತಿಂಗಳಿಗೆ ೧೫ರಿಂದ ೨೦ ರೂಪಾಯಿಯ ಸಂಪಾದನೆಯಾಗುವುದು. ಬಡತನದ ಮತ್ತು ಉಪವಾಸದ ಬಳಲುವಿಕೆಯು ಹೋಗಿ ಐಶ್ವರ್ಯದ ಮತ್ತು ಸುಖದ ದಿನಗಳು ತಲೆದೋರುವುವು. ಬಡ ಜನ ಸೇವಾ ಕರ್ತವ್ಯದ ಭಾರವು ಸಾರ್ವಜನಿಕರ ಹಸ್ತದಲ್ಲಿದೆ. ಅವರು ಶುದ್ಧ ಖಾದಿಯನ್ನು ಪಡೆಯಬೇಕು. ಗಾಂಧೀಜಿಯವರೂ ಇದರಿಂದ ಸಂತೋಷಗೊಳ್ಳುವರು.

ಪರಾರಿ ಮತ್ತು ಪತ್ತೆ

ನಾಗಪುರದಲ್ಲಿ ಶ್ರೀ ಕೃಷ್ಣಕುಮಾರ ಶ್ರೀವಾಸ್ತವನೆಂಬ ಒಬ್ಬ ತರುಣ ಇವನು ಒಬ್ಬ ಪೋಲೀಸು ಆಫೀಸರ ಮಗ. ಅಲ್ಲಿ ಒಬ್ಬ ಗರಸ್ಥರ ಮಗಳಾದ ಶ್ರೀಮತಿ ಶಾಂತಿ ಎಂಬವಳು ಶಾಲೆಗೆ ಹೋಗುತ್ತಿರುವಾಗ ಈ ತರುಣನು ಅವಳನ್ನು ಒಂದು ಮೋಟಾರಿನಲ್ಲಿ ಹಾಕಿ ಎತ್ತಲೋ ಓಡಿದ. ನಾಗಪುರದಿಂದ ೧೯ ಮೈಲುಗಳ ಆಚೆ ಕಲ್ಮೇಶ್ವರ ರೈಲ್ವೇ ಸ್ಟೇಶನಿಗೆ ಅವಳನ್ನು ತಂದು ರೈಲು ಹತ್ತಲು ಇವನು ಟಿಕೇಟನ್ನು ಪಡೆಯಹೋದುದ ಹುಡಿಗಿಯು ಬೊಬ್ಬಿಟ್ಟಳು. ಒಡನೆ ಜನಸಂದಣಿಯು ಸೇರಿ, ಕಥೆಯು ಬಯಲಿಗೆ ಬಿತ್ತು. ಸ್ಟೇಶನ್ ಮಾಸ್ಟರರು ಅವನಿಗೆ ಟಿಕೇಟು ಕೊಡಲಿಲ್ಲ. ಇದೇನು ಕಷ್ಟವೆಂದು ತರುಣನು ಆಲೋಚಿಸಿ, ಏನೋ ಗಂಡಾಂತರವು ಬಂತೆಂದು ನೆನಸಿ ಒಂದು ಮೋಟಾರಿನಲ್ಲಿ ಅವಳೊಡನೆ ಹೊರಟ. ಆದರೆ ದುರ್ದೈವವಶಾತ್ ಆ ಮೋಟರ್ ನಡೆಯಲೇ ಇಲ್ಲ. ಅಷ್ಟರಲ್ಲಿ ಅಲ್ಲಿಗೆ ಪೋಲೀಸರ ಆಗಮನವಾಯಿತು. ಅವನು ಕೈದುಮಾಡಲ್ಪಟ್ಟನು.

"ಗಾಂಧಿಯವರನ್ನು ಬಿಡುಗಡೆ ಮಾಡಿ ಹಿಂದೂದೇಶವನ್ನು ಉದ್ಧರಿಸಿರಿ"

ಒಂದು ಎಚ್ಚರಿಕೆ

ಅಮೇರಿಕಾ ದೇಶದಲ್ಲಿನ ೧೦೬ ಮಂದಿ ಧರ್ಮ ಗುರುಗಳೂ ಬಿಷಪರೂ, ಇನ್ನಿತರ ಮಹಜ್ಜನರೂ ಸೇರಿ ಪ್ರಧಾನ ಮಂತ್ರಿಯವರಿಗೊಂದು ತಂತಿಯನ್ನು ಬಿಟ್ಟಿರುವರು. ಅದು ಹೀಗಿತ್ತು: ಗಾಂಧಿಯವರನ್ನು ಬಿಡುಗಡೆ ಮಾಡಿರಿ ಮತ್ತು ಹಿಂದೂದೇಶದ ಈಗಿನ ವಿಷಮ ಸ್ಥಿತಿಯನ್ನು ಬಗೆಹರಿಸಲು ಸರಿಯಾದ ಯತ್ನವನ್ನು ಮಾಡಿರಿ.

ಮುದ್ರಾಸಿನವರ ಅರಿಕೆ.

ಪೋಲೀಸರ ಕಠಿಣ ವರ್ತನೆಗಳ ಕುರಿತು ಮದರಾಸಿನ ಹೆಚ್ಚಿನ [illegible] ಸಹಿ ಮಾಡಿರುವ ಪ್ರಕಟಣೆಯು ಹೀಗಿದೆ:

ಮದ್ರಾಸು ಪಟ್ಟಣ ಮತ್ತು ಅಧಿಕ್ಷೇತ್ರದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳು ನಮ್ಮನ್ನು ಎಚ್ಚರಗೊಳಿಸುತ್ತಿವೆ. ನಾವು ರಾಷ್ಟ್ರಸಭೆಯ ಸದಸ್ಯರೇನೂ ಅಲ್ಲ. ಆದರೂ ನಾವು ಪಟ್ಟಣಿಗರಾಗಿರುವುದರಿಂದ ಸಾರ್ವಜನಿಕ ಶಾಂತತೆಗೆ ಹೋರಾಡುವುದು ಮತ್ತು ಪೋಲೀಸರ ಕ್ರೂರ ವರ್ತನೆಗಳನ್ನು ಖಂಡಿಸುವುದು ನಮಗೆ ತೀರ ಅಗತ್ಯವೆಂದು ಕಂಡ [illegible] ಶಾಂತಿ ಸ್ಥಾಪನೆ ಮಾಡುವುದೇನೋ [illegible] ತಪ್ಪಿತಸ್ಥರನ್ನು [illegible] ಘಾಯಗೊಂಡ [illegible] [illegible] ಯಾವ ಫಲವೂ ದೊರೆಯುವುದಿಲ್ಲ.

ಪೋಲೀಸರು ಈ ರೀತಿಯ ಅಸಮ ವರ್ತನೆಗಳು [illegible] ಇದು ಏನೇನೂ ಇಲ್ಲ. ಉದಾಹರಣೆಗಾಗಿ [illegible] ನಲ್ಲಿ ಸ್ವಯಂ ಸೇವಕನೊಬ್ಬನು [illegible] ಗಾಂಧೀ ಟೊಪ್ಪಿಯನ್ನು ಹಾಕಿಕೊಂಡುದೇ ಅಪರಾಧವೆಂದು [illegible] ಮಧುರೆಯಲ್ಲಿ ಘಾಯಗೊಂಡ ಸ್ವಯಂಸೇವಕರ [illegible] ಆಸ್ಪತ್ರೆಯ [illegible] ಕೆಲವು [illegible] ಕಿತ್ತುಹಾಕಿದರೆಂದು [illegible] ಸ್ವಯಂಸೇವಕರ [illegible] ಈ ವಿಧವಾದ ವರ್ತನೆಗಳನ್ನು ನೋಡುವಾಗ ಸರಕಾರದವರು [illegible] ಪ್ರಯೋಗ [illegible] ಯನ್ನು ಮಾಡಿ ನ್ಯಾಯವಾದ ಚಟುವಟಿಕೆಗಳನ್ನು [illegible] ಕಂಗಾಲುಗೊಳಿಸುತ್ತಿರುವರೆಂದು ಸಾರ್ವಜನಿಕರಿಗೆ ತಿಳಿಯುತ್ತದೆ. [illegible] ಸರಕಾರದವರು ಸಾರ್ವಜನಿಕ [illegible] ಕಲ್ಲುಗಳೆಸೆದು ವರ್ತಿಸುತ್ತಿರುವುದರಿಂದ ಮುಂದಕ್ಕೆ ಯಾವ ರೀತಿಯ ರಾಜಕೀಯ [illegible] ನಡೆಯಬಹುದೆಂತೆ ಗುರ್ತಾವದಣವನ್ನೊಂದು [illegible] ಉಂಟು ಮಾಡುವರೆಂದು ಒತ್ತಿ ಹೇಳುತ್ತೇವೆ.

ದೇಶಕ್ಕೆ ಮಾಳವೀಯರ ಎಚ್ಚರಿಕೆ

[illegible] ಈ ಪ್ರಕಟಣೆಯನ್ನು ಮಾಡಿದರು.

[illegible] ಈ ಸಮಯದಲ್ಲಿ ಈಗಿನ [illegible] ಪ್ರಕಟಿಸು [illegible] ದೇಶಿಗರಿಗಾಗಿ [illegible] ಯನ್ನು ಎತ್ತಿ ಬರೆಯುವ ಕರ್ತವ್ಯವೊಂದು ಕಾಣುತ್ತದೆ.

[illegible] ಪ್ರಪಂಚ ಮಾಂದ್ಯವು [illegible] ರಾಷ್ಟ್ರಗಳ ಆರ್ಥಿಕ ಸ್ಥಿತಿಯೂ ಸಂದೇಹಾಸ್ಪದವಾಗಿ [illegible] ಈ ಪ್ರಪಂಚ ಮಾಂದ್ಯದಿಂದಾಗಿ ಹಿಂದೂದೇಶಕ್ಕೆ ತೊಂದರೆ [illegible] ಇಂತಹ ಮಾಂದ್ಯತೆಯು [illegible] ವಿಷಮಾವಸ್ಥೆಗೆ ಬಂದಿದೆ. ಈ ಸಾತ್ರಗಳ [illegible] ಯಾವುದಾಗಿರಬಹುದೆಂದು ನಮ್ಮಕ್ಕೆ ತಿಳಿಯಲಾಗುವುದಿಲ್ಲ. [illegible] ದೇಶಿಗರಾದರೆ ಈ ಸಂಧಿಗ್ಧ ಸ್ಥಿತಿಯಲ್ಲಿ [illegible] ಆರ್ಥಿಕ ಸ್ಥಿತಿಯು ನೆಟ್ಟಗಾಗಬೇಕು. ಆದುದರಿಂದ ಪ್ರತಿಯೊಬ್ಬ [illegible] ಅವನ ರಾಜಕೀಯ ಅಭಿಪ್ರಾಯವು ಹೇಗೂ [illegible] ಸ್ವಹಿತ ದೃಷ್ಟಿಯಿಂದ ತನ್ನ ನಿತ್ಯಾಯ ವೆಚ್ಚಗಳನ್ನು ನಿಲ್ಲಿಸಲಿ. ಈ ಕಾಲದಲ್ಲಿ ಅತ್ಯಗತ್ಯವಿರುವ ಸಂಗತಿಗಳನ್ನು ಮಾತ್ರ ಪಡೆಯಬೇಕು. ಕಾರಣ ಜನರ ಕೈಯಲ್ಲಿರುವ ಪ್ರತಿಯೊಂದು ರೂಪಾಯಿಯೂ [illegible] ಯುಳ್ಳದ್ದಾಗಿದೆ. ಇನ್ನು ಬರುವ ತಿಂಗಳುಗಳಲ್ಲಿ ತಮ್ಮ ಕೈಯೊಳಗೆ ಹೆಚ್ಚಿನ ಹಣವು ಬರಬೇಕೆಂಬ ಆಶೆಯಿಂದ ಬಡವನೂ ಧನಿಕನೂ ಇರುವುದು ಬೇಡ. ಆದುದರಿಂದ ಪ್ರತಿಯೊಬ್ಬನು ತನ್ನ ಅನುಕೂಲದ ಅತ್ಯಗತ್ಯ ವಿಷಯಗಳಿಗೆ ಮಾತ್ರ ಬೇಕಾದಷ್ಟನ್ನು ವ್ಯಯಗೊಳಿಸಿ, ಹಣವನ್ನು ಜೋಪಾನಮಾಡಿಸಲಿ. ಹಿಂದೂದೇಶವು ಮಹತ್ತರವಾದ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ದವಡೆಯೊಳಗೆ ಸಿಲುಕಿರುತ್ತದೆ. ಇಂತಹ ಸಂದಿಗ್ಧತೆಯನ್ನು ನಾವು ಪೂರ್ವಕಾಲದ ಸ್ವತಂತ್ರ ವಿಚಾರ ದೃಷ್ಟಿಯಿಂದಲೂ ಸರಳತೆಯಿಂದಲೂ ಭೇಟಿಯಾಗಬೇಕು. ತನ್ನ ಸ್ವಯಂ ಪ್ರತಿಷ್ಠೆಯನ್ನು ಮರೆಯಬೇಕು. ಡಂಬಾಚಾರಗಳನ್ನು ಬಿಡಬೇಕು. ಎಲ್ಲಾ ಬಗೆಯ ಅನಾವಶ್ಯ ವೆಚ್ಚಗಳನ್ನು ದೂರ ಮಾಡಬೇಕು. 'ಉಳಿಸಿದ ಒಂದು ರೂಪಾಯಿ ಗಳಿಸಿದ ರೂಪಾಯಿ' ಎಂಬ ಗಾದೆಯನ್ನು ಎಲ್ಲರೂ ಸ್ಮರಣೆಗೆ ತರಲಿ. ದೇಶದ ಆರ್ಥಿಕ ಮುಗಟ್ಟನ್ನು ಬಗೆಹರಿಸಲಿ. ಈ ವಿವೇಕಪರ ವಚನವನ್ನು ಪರಿಪಾಲಿಸಲಿ.

ನಾವು ತೀಕ್ಷ್ಣವಾದ ರಾಜಕೀಯ ಮಾಂದ್ಯತೆಯನ್ನು ನುಗ್ಗಬೇಕಾಗಿದೆ. ಸಾವಿರಗಟ್ಟಲೆಯಲ್ಲಿ ನಮ್ಮ ಸಹೋದರ ಸಹೋದರಿಯರನ್ನು [illegible] ಕಾರಾಗೃಹವಾಸದಲ್ಲಿ ಬಂಧಿಸಿಟ್ಟಿದ್ದಾರೆ. ಜೀವಂತ ಹಿಂದೀಯರಲ್ಲಿ ಮಹದಗ್ರಗಣ್ಯರಾದ ಮಹಾತ್ಮಾ ಗಾಂಧಿಯವರನ್ನು ಸೆರೆವಾಸಕ್ಕೆ ಸೆರೆಮನೆಯೊಳಗೆ ಹೊಕ್ಕಿಸಿರುವರು. ನಮ್ಮ ಭರತಮಾತೆಗೆ ಸ್ವಾತಂತ್ರ್ಯವು ಬೇಕು. ಅದಕ್ಕಾಗಿ [illegible] ನಮ್ಮ [illegible] ಪೂರ್ವಕಾಲದಲ್ಲಿ ನಾವು [illegible] ಧರ್ಮ [illegible] ತನಕ ನಾವು [illegible] ಗಳಲ್ಲಿರುತೇ. [illegible] ಅಂತಹ [illegible] ನಮ್ಮ [illegible] ರಾಷ್ಟ್ರ ಸೇವೆಯು [illegible] ಆರ್ಥಿಕ [illegible] ತನಕ ನಮ್ಮ [illegible] ಗಾಂಧಿಜೀಯವರೂ ಸಹೋದರ ಸಹೋದರಿಯರೂ ಸೆರೆಮನೆಯೊಳಗೆ ಇರುವರೋ ಅಂದಿನ ತನಕ ನಮ್ಮ ಉದ್ದಿಷ್ಟವು ನೆರವೇರುವುದಿಲ್ಲವೋ ಅಂದಿನ ತನಕ ನಮ್ಮ ಭಾರತ ಮಾತೆಗೆ ಸ್ವಾತಂತ್ರ್ಯವು ದೊರೆಯಲಾರದೋ ಅಂದಿನ ತನಕ [illegible] ನಾವು ಯಾವ ಬಗೆಯ [illegible] ಹಣವನ್ನು ವೆಚ್ಚಮಾಡಲಾರೆವು.

[illegible] ಅತ್ಯಗತ್ಯಕ್ಕೆ ಬೇಕಾದ ವಸ್ತುಗಳನ್ನು [illegible] ದೇಶೀಯವನ್ನೇ [illegible] [illegible] ವಸ್ತುಗಳನ್ನೇ [illegible] ಉಪದೇಶಿಸುತ್ತಿರುವೆವು.

[illegible] ನಾವು [illegible] ನಮ್ಮ ದೇಶದಿಂದ [illegible] ಕೋಟಿ [illegible] ಅನ್ಯದೇಶಕ್ಕೆ ಹೋಗುತ್ತಿದೆ. [illegible] ಸರಕುಗಳ [illegible] ನಾವು [illegible] ಕೋಟಿ ರೂಪಾಯಿಯ ಸರಕಾರೀ ಸುಂಕವನ್ನು ಕೊಟ್ಟೆವು.

[illegible] ದೇಶದ [illegible] ತತ್ವಗಳನ್ನು [illegible] ವಿಷಯಗಳನ್ನು [illegible] ಮತ್ತು ದೇಶದ ಆರ್ಥಿಕ [illegible] ಅಲ್ಲದೆ [illegible] ಆತ್ಮತ್ಯಾಗದಿಂದಲೂ [illegible] ದೇಶದ ಪ್ರಸ್ತುತ [illegible] ಯವಕ್ಕೆಯನ್ನು [illegible].

ಈ [illegible] ದೇಶ [illegible] [illegible] [illegible] ನಂಬುತ್ತೇನೆ.

"ನಾವು ರೌಂಡ್‌ಟೇಬಲ್ ಕಮಿಟಿಗಳೊಡನೆ ಸಹಕರಿಸುವುದಿಲ್ಲ"

[illegible] ಗಾಂಧಿ [illegible] ವರ್ಕಿಂಗ್ ಕಮಿಟಿಯ [illegible] ರೌಂಡ್ ಟೇಬಲ್ ಕಮಿಟಿಗಳ ಸಹಕರಿಸ [illegible] [illegible] [illegible] ಗಾಂಧಿ [illegible] ಕಮಿಟಿಯ [illegible] ಸಂದೇಶ [illegible] ಈ ಸಭೆಯ [illegible] ಶ್ರೀ [illegible] ರೌಂಡ್ ಟೇಬಲ್ ಕಮಿಟಿಗಳೊಡನೆ ಸಹಕರಿಸ [illegible] ಬಗೆದು ತನ್ನ ಪ್ರತಿನಿಧಿಯನ್ನು ಅದಕ್ಕೆ ಕಳುಹಿಸುವುದಿಲ್ಲ.'

ದಂಡನೀತಿಯ ದಂಡನೆ.

ತಾರೀಕು ೬ರಲ್ಲಿ

ಬಾರ್ಡೋಲಿ ತಾಲೂಕಿನ ಹರಿಪುರ ಎಂಬಲ್ಲಿ ಮಹಾತ್ಮಾ ಗಾಂಧಿಯವರ ಮಗ ಶ್ರೀ ರಾಮ್‌ದಾಸ್ ಗಾಂಧಿಯವರನ್ನು ದಸ್ತಗಿರಿ ಮಾಡಿದರು. ಇನ್ನಿತರ ಎಂಟು ಮಂದಿ ಸ್ವಯಂಸೇವಿಕೆಯರನ್ನು ಕೈದುಮಾಡಿದರು.

ಕಲ್ಕತ್ತದಲ್ಲಿನ

ನಾಲ್ಕು ಮಂದಿ ಸ್ವಯಂಸೇವಕರನ್ನು ಕೈದು ಮಾಡಿ ಒಬ್ಬೊಬ್ಬನಿಗೆ ಆರಾರು ತಿಂಗಳ ಕಠಿಣ ಸಜೆ ಕೊಟ್ಟರು. ಆನಂದ ಬಜಾರ್ ಪತ್ರಿಕೆಯ ಸಂಪಾದಕರಾದ ಶ್ರೀ ಪ್ರಫುಲ್ಲ ಸರ್ಕಾರ ಎಂಬವರ ಪತ್ನಿ ಶ್ರೀಮತಿ ನಿರ್ಝರಿಣಿ ಸರ್ಕಾರ್ ಎಂಬವರನ್ನೂ ಇನ್ನಿತರ ಐದು ಮಂದಿ ಸ್ತ್ರೀಯರನ್ನೂ ದಸ್ತಗಿರಿ ಮಾಡಿ ಆರಾರು ತಿಂಗಳ ಕಠಿಣ ಸಜೆ ವಿಧಿಸಿದರು. ಶ್ರೀಮತಿ ಕಲ್ಯಾಣಿ ದೇವಿ ಎಂಬ ಒಬ್ಬ ಪೋಸ್ಟ್ ಗ್ರೇಜುವೇಟರನ್ನೂ ಇನ್ನಿತರ ಮೂರು ಮಂದಿಗಳನ್ನೂ ಕೈದುಮಾಡಿ ಎಂಟೆಂಟು ತಿಂಗಳ ಸಜೆ ವಿಧಿಸಿದರು. ಪಿಕೆಟಿಂಗ್ ನಡೆಸಿದುದಕ್ಕಾಗಿ ಗಾಂಧೀಜಿಯವರ ಮಾಜಿ ಸೆಕ್ರೆಟರಿಯಾದ ಶ್ರೀ ಕೃಷ್ಣದಾಸರನ್ನೂ, ಕ್ರೈಸ್ತಮತಸ್ಥರಾದ ಪಿ. ಕೆ. ಜೆಕೊಬ್ ಎಂಬವರನ್ನೂ ದಸ್ತಗಿರಿ ಮಾಡಿದರು. ಬಂಗಾಳ ಬಿಹಾರ, ಒರಿಸಾ ಪ್ರಾಂತ್ಯಗಳಲ್ಲೂ ಒಟ್ಟು ೨೬ ಮಂದಿಗಳನ್ನು ಕೈದುಮಾಡಿರುವರು.

ಬೆನಾರೆಸ್‌ನಲ್ಲಿ

ಸಕ್ಷನ್ ೧೪೪ನ್ನುಲ್ಲಂಘಿಸಿ ಸಭೆಗೂಡಿದುದಕ್ಕಾಗಿ ಶ್ರೀ ಶಿವಪ್ರಸಾದ್ ಗುಪ್ತರೆಂಬವರನ್ನೂ ಶ್ರೀ ಸಂಪೂರ್ಣಾನಂದ್ ಎಂಬವರನ್ನೂ ಕೈದುಮಾಡಿ ಆರಾರು ತಿಂಗಳ ಕಠಿಣ ಸಜೆಗೂ ಇನ್ನೂರಿನ್ನೂರು ರೂಪಾಯಿಯ ಜುಲ್ಮಾನೆಗೂ ಗುರಿಪಡಿಸಿದರು. ಜುಲ್ಮಾನೆ ತೆರದಿದ್ದರೆ ಒಂದೊಂದು ತಿಂಗಳ ಸಜೆ ಹೆಚ್ಚು. ಉಪ್ಪಿನ ಕಾಯಿದೆಯನ್ನುಲ್ಲಂಘಿಸಿದುದಕ್ಕಾಗಿ ೧೫ ಮಂದಿ ಸ್ವಯಂಸೇವಕರನ್ನು ಶಿಕ್ಷಿಸಿದರು.

ಅಲ್ಲಾಹಾಬಾದಿನಲ್ಲಿ

ಒಂದು ದೇವಸ್ಥಾನದೊಳಗೆ ಕಾಂಗ್ರೆಸ್ಸಿನ ಕೈಪತ್ರಗಳನ್ನು ಮುದ್ರಿಸುತ್ತಿದ್ದ ಮುದ್ರಾಯಂತ್ರವನ್ನು ಪೋಲೀಸರು ಪತ್ತೆಮಾಡಿದರು. ಕಾಂಗ್ರೆಸ್ ಬುಲೆಟಿನುಗಳು ಅಲ್ಲಿ ಅಚ್ಚಾಗಿ ಇಷ್ಟು ಸಮಯ ದಿಂದಲೂ ಹೊರಬೀಳುತ್ತಿತ್ತು. ಪೋಲೀಸ್ ಪಹರೆ ನಿಟ್ಟು ಸಾಮಾನುಗಳನ್ನು ಕೊಂಡೊಯ್ದರು. [illegible] ವಣಿಗೆ ಮಾಡಿದ ಬಗ್ಗೆ ಶ್ರೀ ಎಮ್. ಎಲ್. ಚಂದ್ ಮಿತ್ರ ಎಂಬವರನ್ನೂ ಇನ್ನಿತರ ನಾಲ್ಕು ಮಂದಿಗಳನ್ನೂ ಶಿಕ್ಷಿಸಿದರು. ಸಭೆ ಕೂಡಿಸಿದ ಐದು ಮಂದಿಗಳಿಗೆ ಒಂದೊಂದು ತಿಂಗಳ ಕಠಿಣ ಸಜೆಯು ದೊರೆಯಿತು. ೧೫ ಮಂದಿ ಹಳ್ಳಿಗರನ್ನು ಆರಾರು ತಿಂಗಳ ಕಠಿಣ ಸಜೆಗೆ ಗುರಿಪಡಿಸಿದರು.

ತಾರೀಕು ೨೧ರಲ್ಲಿ

ಆರೋಗ್ಯ ಸಂಪಾದನೆಗಾಗಿ ಇಂಗ್ಲೆಂಡಿಗೆ ತೆರಳಿದ್ದ ಶ್ರೀ ಜೆ. ಎಮ್. ಸೇನಗುಪ್ತರು 'ಇಟಾಲಿಯನ್ ಸ್ಟೀಮರ್ ಗೇಂಜ್' ಎಂಬುದರಲ್ಲಿ ಮುಂಬಾಯಿಗೆ ಹಿಂತಿರುಗಿ ಬಂದರು. ಸ್ಟೀಮರು ಮುಂಜಾನೆ ೬ ಘಂಟೆಗೆ ದಕ್ಕೆ ಹಿಡಿಯಿತು. ಒಡನೆ ಡೆಪ್ಯುಟಿ ಕಮಿಶನರರೂ ಇನ್ನಿತರ ಪೋಲೀಸರೂ ಹಡಗನ್ನು ಹತ್ತಿ ಶ್ರೀ ಸೇನಗುಪ್ತರನ್ನು ದಸ್ತಗಿರಿ ಮಾಡಬೇಕೆಂದು [illegible] ತಿಳಿದ ಆ ಸ್ಟೀಮರಿನ ಕಪ್ತಾನರು 'ಇಟಾಲಿಯನ್ ಧ್ವಜದಡಿಯಲ್ಲಿ ಶ್ರೀ ಸೇನಗುಪ್ತರಿರುವುದರಿಂದ ಅವರನ್ನು ಹಡಗಿನಲ್ಲಿ ಕೈದು ಮಾಡಲು ಸಾಧ್ಯವಿಲ್ಲವೆಂದರು. ಅದನ್ನು ಕೇಳಿ ಕಮಿಶನರು ಹಿಂದೆ ಬಂದು, ಪುನಃ ೭ ಘಂಟೆ ಬೆಳಗ್ಗೆ ದಕ್ಕೆಗೆ ಹೋಗಿ ಸೇನಗುಪ್ತರು ಇಳಿಯುವುದನ್ನು ಕಾಯುತ್ತಿದ್ದರು. [illegible] ಯುವಾಗುತ್ತಲೇ ಶ್ರೀಯುತರು ಕೆಳಗೆ ಬಂದರು. ಕಮಿಶನರರು ಒಡನೆ ಅವರನ್ನು ಬಂಗಾಳ ರಗ್ಯುಲೇಶನ್ III ರ ಮೇರೆಗೆ ದಸ್ತಗಿರಿ ಮಾಡಿದರು. ಸೇನಗುಪ್ತರನ್ನು ಕೈದು ಮಾಡಿದ ವಾರ್ತೆಯು ಮುಂಬಾಯಿಯಲ್ಲೆಲ್ಲಾ ತತ್‌ಕ್ಷಣ ಹರಡಿತು. ಹರತಾಳವಾಚರಿಸಲ್ಪಟ್ಟಿತು. ಸೇನಗುಪ್ತರನ್ನು ಕಮಿಶನರು ಠಾಣೆಗೆ ಕೊಂಡೊಯ್ದರು. ಅವರೊಡನೆ ಅವರ ಪತ್ನಿಯವರೂ ಇದ್ದರು. ಅಲ್ಲಿ ಸೇನಗುಪ್ತರು ಅವರ ಮಗ ಶಿಶಿರ್ ಸೇನಗುಪ್ತರನ್ನೂ ಇನ್ನಿತರ ಸೆಕ್ರೆಟರಿಗಳನ್ನೂ ಕಂಡು ಮಾತನಾಡಿದರು. ಆ ವೇಳೆ ಅವರನ್ನು ಪುನಃ ಎರವಾಡಾ ಜೈಲಿಗೆ ಕೊಂಡೊಯ್ದರು. ಈಗ ಎರವಾಡ ಜೈಲಿನಿಂದ ಡಾರ್ಜೀಲಿಂಗಿಗೆ ಅವರನ್ನೊಯ್ಯುವರೆಂಬ ವಾರ್ತೆ ಇದೆ.

೧೫ ಮಂದಿ ಸ್ವಯಂಸೇವಿಕೆಯರೂ ಒಬ್ಬ ಸ್ತ್ರೀಯೂ ರಂಕ ಶಾಲೆಯನ್ನು ಪಿಕೆಟ್ ಮಾಡಿದುದಕ್ಕಾಗಿ ದಸ್ತಗಿರಿಮಾಡಲ್ಪಟ್ಟರು. ಮಂಗಲ್‌ದಾಸ್ ಮಾರ್ಕೆಟಿನಲ್ಲೂ, ಮುಲ್ಜಿಜೇಠಾ ಮತ್ತು ಚಲ್ಲಿಯನ್ ಮಾರ್ಕೆಟಿನಲ್ಲೂ ಪಿಕೆಟಿಂಗ್ ನಡೆಯುತ್ತಿದೆ.

ಮದ್ರಾಸಿನಲ್ಲಿ

ಶ್ರೀ ಎಸ್ ಶ್ರೀನಿವಾಸ ಐಯ್ಯಂಗಾರರ ಪುತ್ರಿ ಶ್ರೀಮತಿ ಅಂಬುಜಮ್ಮಾಳ್ ಎಂಬವರನ್ನೂ ದಿವಂಗತ ಸರ್ ವಿ ಭಾಷ್ಯಂ ಐಯ್ಯಂಗಾರರ ಪುತ್ರಿ ಶ್ರೀಮತಿ ಜಾನಮ್ಮಾಳ್ ಎಂಬವರನ್ನೂ ಕೈದುಮಾಡಿ ಆರಾರು ತಿಂಗಳ ಸಾದಾ ಶಿಕ್ಷೆ ಕೊಟ್ಟರು.

ಅಲ್ಲಹಾಬಾದಿನಲ್ಲಿ

ಮಂಕಪುರದ ರಾಜರ ಮಗ ಕನ್‌ವಾರ್ ರಾಘುವೇಂದ್ರ ಪ್ರತಾಪ್‌ಸಿಂಗರು ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸಿದುದಕ್ಕಾಗಿ ಜೈಲಿನಲ್ಲಿ ಕೈದುಮಾಡಲ್ಪಟ್ಟರು.

ಕರಾಚಿಯಲ್ಲಿ

ಯುರೋಪಿಯನರ ಗೋಡೌನನ್ನು ಪಿಕೆಟ್‌ಮಾಡಿದ ೭ ಮಂದಿ ಸ್ವಯಂಸೇವಕರನ್ನೂ ಒಬ್ಬ ಸ್ತ್ರೀಯನ್ನೂ ಕೈದುಮಾಡಿದರು. ಉಪ್ಪಿನ ಕಾನೂನುಲ್ಲಂಘನೆಯನ್ನು ಮಾಡಿದ ೩ ಮಂದಿಗಳನ್ನು ಕೈದುಮಾಡಿರುವರು. ಕಾಂಗ್ರೆಸ್ ಕರಪತ್ರಗಳನ್ನು ಹಂಚಿದ ಮೂವರನ್ನು ದಸ್ತಗಿರಿ ಮಾಡಿರುವರು.

ಮುಂಬಾಯಿಯಲ್ಲಿ

ಕಾಂಗ್ರೆಸ್ ಬುಲೆಟಿನ್‌ಗಳನ್ನು ಹಂಚಿದ ಮೂರು ಮಂದಿ ಸ್ವಯಂಸೇವಕರನ್ನು ಕೈದು ಮಾಡಿದರು. ಪಿಕೆಟರನ್ನು ದಸ್ತಗಿರಿ ಮಾಡಿದ ದಕ್ಕಾಗಿ ಮಂಗಲ್‌ದಾಸ್ ಮಾರ್ಕೆಟು ಮುಚ್ಚಲ್ಪಟ್ಟಿದೆ. ಕಾಂಗ್ರೆಸ್ ಪಕ್ಷೀಯರೆಂದು ಸಂಶಯ ತೋರಿದವರಿಗೆ ಬೋರ್ಡಿಂಗಿನಲ್ಲಿರಗೊಡಿಸಬಾರದೆಂದು ಪೋಲೀಸ್ ಕಮಿಶನರು ೧೫೨೦ ಹೋಟೆಲು ವ್ಯಾಪಾರಿಗಳಿಗೆ ನೋಟೀಸು ಕೊಟ್ಟಿರುವರು. ಅಂಕಸಾಲೆಯನ್ನು ಪಿಕೆಟ್ ಮಾಡಿದ ೧೫ ಮಂದಿ ಕಾಂಗ್ರೆಸ್‌ವಾಲರ ನ್ಯಾಯ ವಿಚಾರಣೆ ನಡೆಯುತ್ತಿದೆ. ಚೌಪಾಟಿಯಲ್ಲಿ ಉಪ್ಪನ್ನು ತಯಾರಿಸಲಿದ್ದಾಗ ಪೋಲೀಸರು ಒಂದ ಮೂವರನ್ನು ದಸ್ತಗಿರಿ ಮಾಡಿದರು.

ಅಹ್ಮದಾಬಾದಿನಲ್ಲಿ

ಮಹಾತ್ಮಜೀಯವರ ಸತ್ಯಾಗ್ರಹ ಆಶ್ರಮದಲ್ಲಿ ಅಸ್ವಸ್ಥದಿಂದಿದ್ದ ಶ್ರೀ ಸೇಠ್ ಪಂಡ್ಯಾ ಎಂಬವರು ಅವರ ಲೆಕ್ಕ ಪತ್ರಗಳನ್ನು ಪೋಲೀಸರಿಗೆ ತೋರಿಸಬೇಕೆಂದು ನೋಟೀಸ್ ಜಾರಿ ಆಗಿದೆ. ಪಿಕೆಟಿಂಗಿನ ಸಂಬಂಧ ೪೦ ಮಂದಿಗಳನ್ನು ಕೈದುಮಾಡಿದರು. ಒಂದು ಮನೆಯಲ್ಲಿ ೨೦೦ ಕಾಂಗ್ರೆಸ್ ಕರಪತ್ರಗಳನ್ನು ಪೋಲೀಸರು ಪತ್ತೆಮಾಡಿ ಆ ಮನೆಯ ಯಜಮಾನನನ್ನೂ ೧೫ ವರುಷ ಪ್ರಾಯದ ಅವನ ಮಗನನ್ನೂ ದಸ್ತಗಿರಿಮಾಡಿರುವರು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯಾದ ಶ್ರೀ ರಾಜರಾವ್ ಎಂಬವರನ್ನೂ ಆರು ತಿಂಗಳ ಸಜೆಗೆ ಗುರಿಪಡಿಸಿದರು. ಗುಜರಾತ್ ವಿದ್ಯಾಪೀಠದ ಆರು ಮಂದಿಗಳು ಗುಪ್ತ ಸಭೆಯೊಂದನ್ನು ಜರಗಿಸುತ್ತಿರುವಾಗ ಕೈದುಮಾಡಲ್ಪಟ್ಟರು.

ತಾರೀಕು ೨೨ರಲ್ಲಿ

ಬೆನಾರೆಸ್‌ನಲ್ಲಿ

ವಿದೇಶೀವಸ್ತ್ರ ಮಾರುತ್ತಿದ್ದ ಒಂದು ಅಂಗಡಿಯಲ್ಲಿ ಪಿಕೆಟಿಂಗ್ ನಡೆಸಿದಕ್ಕಾಗಿ ಶ್ರೀಮತಿಗಳಾದ ಅನೂಪದೇವಿ, ಶ್ಯಾಮ್‌ದೇವಿ ರಾಮ್‌ದೇವಿ, ಭಗೀಶ್ವರಿದೇವಿ ಸರೋಜಿನಿ ನಂದದೇವಿ, ರುಕ್ಮಿಣಿ ದೇವಿ ರೇವತಿದೇವಿ ಮತ್ತು ವಿಮಲದೇವಿಯರೆಂಬ ಎಂಟು ಮಂದಿ ಸ್ತ್ರೀಯರನ್ನು ದಸ್ತಗಿರಿ ಮಾಡಿ ಒಬ್ಬೊಬ್ಬರಿಗೆ ಆರಾರು ತಿಂಗಳ ಕಠಿಣ ಸಜೆಯನ್ನು ವಿಧಿಸಿದರು. ಹರತಾಳವಾಚರಿಸಲ್ಪಟ್ಟಿದೆ.

ಸೂರತ್ತಿನಲ್ಲಿ

ಪಂಡಿತ ಇಂದ್ರ ಮತ್ತು ಜನೇಂದ್ರ ಎಂಬವರನ್ನು ದಸ್ತಗಿರಿ ಮಾಡಿ ಮೊದಲನೆಯವರಿಗೆ ಆರು ತಿಂಗಳ ಕಠಿಣ ಸಜೆ ಮತ್ತು ೨೦೦ ರೂಪಾಯಿ ಜುಲ್ಮಾನೆ ಅಥವಾ ಪುನಃ ಒಂದುವರೆ ತಿಂಗಳ ಸಜೆಯನ್ನೂ, ಎರಡನೆಯವರಿಗೆ ಆರು ತಿಂಗಳ ಸಾದಾ ಸಜೆ ಮತ್ತು ೩೦೦ ರೂಪಾಯಿ ಜುಲ್ಮಾನೆ ಅಥವಾ ಒಂದುವರೆ ತಿಂಗಳ ಸಜೆಯನ್ನೂ ವಿಧಿಸಿದರು.

ಕಲ್ಕತ್ತದಲ್ಲಿ

ಹೌರಾ ಮ್ಯುನಿಸಿಪಾಲಿಟಿಯ ಮಾಜೀ ವೈಸ್‌ಚೇರ್ಮನ್‌ರಾಗಿದ್ದ ಪ್ರೊಫೆಸರ್ ಬಿಜೆಯ್ ಕೃಷ್ಣ ಭಟ್ಟಾಚಾರ್ಯರು ಮೆಜಿಸ್ಟ್ರೇಟರ ಅಪ್ಪಣೆಯನ್ನುಲ್ಲಂಘಿಸಿದುದಕ್ಕಾಗಿ ಒಂದು ವರುಷದ ಕಠಿಣ ಸಜೆಗೂ, ಬಂಗಾಳ ಕಾಂಗ್ರೆಸ್ ಕಮಿಟಿಗೆ ಸಹಾಯಕರಾದುದಕ್ಕೆ ಇನ್ನೊಂದು ವರುಷದ ಕಠಿಣ ಸಜೆಗೂ ಗುರಿಯಾದರು.

ಲಕ್ನೋವಿನಲ್ಲಿ

೨೦ ಮಂದಿ ಸ್ವಯಂಸೇವಕರನ್ನು ಕೈದುಮಾಡಿರುವರು. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ವರ್ತಕರ ಸಭೆಯೊಂದನ್ನು ಜರಗಿಸಿ ಕಾಯಿದೆಭಂಗ ಚಳವಳವನ್ನು ಮುರಿಯಬೇಕೆಂದೂ, ಸರಕಾರದೊಡನೆ ಸಹಕರಿಸಬೇಕೆಂದೂ ಕೇಳಿಕೊಂಡರು.

ಮುಂಬಾಯಿಯಲ್ಲಿ

ಸಾಧಾರಣ ೨೦ ವರ್ತಕ ಸಂಘಗಳೊಟ್ಟುಗೂಡಿ ಪ್ರಚಲಿತ ಸ್ಥಿತಿಗಳ ಪರ್ಯಾಲೋಚನೆ ಮಾಡಬೇಕೆಂದು ಒಗೆದಿದ್ದುದನ್ನು ತಿಳಿದ ಕಮಿಷನರು ಆ ಸಭೆಯನ್ನೇ ಕಾಯಿದೆ ವಿರೋಧವಾಗಿ ಮಾಡಿದರು.

ಕಲ್ಲಿಕೋಟೆಯಲ್ಲಿ

ಕಾಂಗ್ರೆಸ್ಸಿನ ಎರಡನೇ ಡಿಕ್ಟೇಟರಾದ [illegible] ನಂಬೂದ್ರಿಪಾದ್ ಎಂಬವರಿಗೆ ಅಲ್ಲಿಯ ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ ಮಿ. ಸಯ್ಯದ್ ಮಹಮ್ಮದ್ ಸಾಹೇಬರು ಮೂರು ವರುಷಗಳ ಕಠಿಣ ಸಜೆಯನ್ನೂ ೧೦೦೦ ರೂಪಾಯಿಗಳ ಜುಲ್ಮಾನೆ ಅಥವಾ ೬ ತಿಂಗಳ ಹೆಚ್ಚಿನ ಸಜೆಯನ್ನೂ ವಿಧಿಸಿದರು.

ತಾರೀಕು ೨೩ರಲ್ಲಿ

ಮದ್ರಾಸಿನ ವೈಟ್‌ವೆ ಲೈಡ್ಲಾ ಮತ್ತು ಕಂಪೆನಿ ಎಂಬುದನ್ನು ರಾಜರತ್ನಂ ಮತ್ತು ಕೃಷ್ಣಸ್ವಾಮಿ ಎಂಬ ಇಬ್ಬರು ಪಿಕೆಟ್ ಮಾಡಿದರು. ಅದನ್ನು ತಿಳಿದ ಸಾರ್ಜೆಂಟರು ಪೋಲೀಸು ದಂಡಗಳ ಸಮೇತ ಲಾಠಿಗಳನ್ನು ಹಿಡಿದುಕೊಂಡು ಬಂದು ಪಿಕೆಟರನ್ನು ಚದರ ಹೇಳಿದರೂ ಅವರು ಚದರಲಿಲ್ಲ. ಅವರ ಗಾಂಧಿ ಟೊಪ್ಪಿಗಳನ್ನು ಎಸೆದು ಬೆತ್ತದಿಂದ ಹೊಡೆದು ಅವರನ್ನಟ್ಟಿದರು. ಮಾರ್ಗಗಳಲ್ಲಿ ಪೋಲೀಸರ ಪಹರೆ ನಿಂತಿತ್ತು.

ಮುಂಬಾಯಿಯಲ್ಲಿ

ಶ್ರೀ ಪ್ರೆಸ್ ಜರ್ನಲಿನ ಸಂಪಾದಕರಾದ ಶ್ರೀ ಎಸ್ ಸದಾನಂದರನ್ನು ದಸ್ತಗಿರಿ ಮಾಡಿದರು.

ಎಲ್ಲೂರಿನ

ಮುನಿಸಿಪಲ್ ಕೌನ್ಸಿಲಿನ ಮಾಜಿ ವೈಸ್ ಚೇರ್ಮನರಾದ ಡಾ. ಎಚ್ ವಿ ಜೋಗಯ್ಯ ಎಂಬವರು ಕಾಂಗ್ರೆಸ್ ಪಕ್ಷೀಯರಾಗಿದ್ದು ಕಾಯಿದೆಭಂಗ ಚಳವಳಕ್ಕೆ ಪ್ರೋತ್ಸಾಹವನ್ನೀಯುತ್ತಿದ್ದರೆಂಬ ಆಪಾದನೆಯ ಮೇಲೆ ದಸ್ತಗಿರಿ ಮಾಡಲ್ಪಟ್ಟರು.

ಅಹಮ್ಮದಾಬಾದಿನ ದುಂಗಾರ್ [illegible] ದಲ್ಲಿ ಸತ್ಯಾಗ್ರಹವನ್ನು ನಡೆಸಿದ ೧೫ ಮಂದಿ ಸ್ವಯಂಸೇವಕರನ್ನು ಕೈದುಮಾಡಿದರು. ಇವರಲ್ಲದೆ ಕಲ್ಯಾಣರಾವ್ ರಾಜಕೀಯ ಸಭೆಯನ್ನು ಕಾಯಿದೆ ವಿರೋಧವಾಗಿ ಜರಗಿಸಿದ ದೇ[illegible] ಮೇಲಿನ ಆಪಾದನೆ

ಕರಾಚಿಯಲ್ಲಿ

ಸ್ವಯಂಸೇವಕ ದಳದ ಮುಖ್ಯಸ್ಥರಾದ ಶ್ರೀ ಜೆಠಾರಾಮ್ ಭವಾನಂಜಿ ಎಂಬವರನ್ನು ದಸ್ತಗಿರಿ ಮಾಡಿ ೧೫ ತಿಂಗಳ ಕಠಿಣ ಸಜೆಗೆ ಗುರಿಪಡಿಸಿದರು. ಇವರಿಗೆ ಸಾವಿರ ರೂಪಾಯಿಯ ಜುಲ್ಮಾನೆಯೂ ವಿಧಿಸಲಾಗಿತ್ತು. ಅದನ್ನು ಶ್ರೀಯುತರು ಕೊಡದಿದ್ದ ಸಲುವಾಗಿ ಅವರ ಮನೆಯ ಬಾಗಿಲನ್ನು ಒಡೆದು ಐದು ಘಂಟೆ ಕಾಲ ಹುಡುಕಿ ಸಿಕ್ಕಿದ್ದ ೫೦ ರೂಪಾಯಿ ಬೆಲೆ ಬಾಳುವ ವಸ್ತುಗಳನ್ನು ಕೊಂಡು ಹೋದರು. ಅಲ್ಲಿಯ ೯ನೇ ಡಿಕ್ಟೇಟರಾದ ಶ್ರೀ ನಂದದಾಸ್ ವಲ್ಲಭ್‌ದಾಸ್ ಎಂಬವರು ಕಾಂಗ್ರೆಸ್ಸಿನ ಒಂದು ಒಸ್ತ್ರ ಸ್ಟೇಶನ್ ನಿಲ್ಲಿಸಬೇಕೆಂಬ ಅಪ್ಪಣೆಯಾಗುತ್ತದೆ

ತಾರೀಕು ೨೪ರಲ್ಲಿ

ಮುಂಬಾಯಿಯಲ್ಲಿ

ಕಾಂಗ್ರೆಸ್ಸಿನ ೪೦,೦೦೦ ರೂಪಾಯಿಗಳ ಸೆಂಟ್ರಲ್ ಬೇಂಕ್ ಆಫ್ ಇಂಡಿಯಾದಲ್ಲಿದ್ದುದನ್ನು ಪೋಲೀಸು ಪತ್ತೆ ಮಾಡಿ ಅದಕ್ಕೆ ಮುಟ್ಟುಗೋಲು ಹಾಕಿರುವರು. ಅದೇ ಬೇಂಕಿನಲ್ಲಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಹೆಸರಿನಲ್ಲಿದ್ದ ೧೭೩ ರೂಪಾಯಿಗಳ ಮೇಲೂ ಮುಟ್ಟುಗೋಲು ಹಾಕಿರುವರು.

೧೦ನೇ ಪುಟಕ್ಕೆ ಮುಂದುವರಿಯುವುದು

ವಿವಿಧ ಸಮಾಚಾರಗಳು.

ಪೋಲೀಸನ ಪ್ರಾಣ ಕೈದಿಯು ಉಳಿಸಿದುದು

ಲಂಡನಿನಲ್ಲಿ ಒಬ್ಬ ಅಪರಾಧಿಯು ಪೋಲೀಸನ ಕೈಯಿಂದ ತಪ್ಪಿಸಿ ಓಡಿಬಿಟ್ಟನು. ಅವನನ್ನಟ್ಟಿ ಪೋಲೀಸನು ಸಿಕ್ಕ ಸಿಕ್ಕ ಕಷ್ಟಗಳನ್ನನುಭವಿಸಿ ಓಡಿದನು. ಒಂದು ಕಡೆಯಲ್ಲಿ ಪೋಲೀಸನು ಹಾರುವಾಗ ಕಾಲು ಜಾರಿ ಒಂದು ಖನಿಗೆ ಬಿದ್ದು ಬಹಳ ಜಖಂಗೊಂಡನು. ತನ್ನ ಹಿಂಗಡೆಯಿಂದ ಓಡಿಬರುತ್ತಿದ್ದ ಪೋಲೀಸನು ಕಾಣದಿದ್ದುದನ್ನು ಕಂಡ ಅಪರಾಧಿಯು ಪುನಃ ಹಿಂದೆ ಬಂದು, ಖನಿಯಲ್ಲಿ ಬಿದ್ದಿದ್ದ ಪೋಲೀಸನನ್ನು ಕೈಕೊಟ್ಟು ಮೇಲಕ್ಕೆತ್ತಿ ಅವನನ್ನುಪಚರಿಸಿ ಅವನು ಚೈತನ್ಯಯುಕ್ತನಾಗಲು ಪುನಃ ಓಡಿಬಿಟ್ಟನು. ಕೊನೆಗೆ ಅಪರಾಧಿಯನ್ನು ಹೇಗೂ ಮಾಡಿ ಹಿಡಿಯಲಾಯಿತು. ನ್ಯಾಯವಿಚಾರಣೆಯಾಗುವಾಗ ಘಾಯಗೊಂಡ ಪೋಲೀಸನು ನಡೆದ ಕತೆಯನ್ನು ಕೋರ್ಟಿನವರಿಗೆ ಹೇಳಿದನು.

ಬಡವರತ್ತ ಕಡೆ ನಮ್ಮ ಕರ್ತವ್ಯವೇನು?

ಶ್ರೀಮತಿ ಮೀರಾಬಾಯಿಯವರು ಬರೆಯುವುದೇನೆಂದರೆ —

"ಕನ್ನ ೩೩ನೇ ವರುಷದಲ್ಲಿಯೂ ಗಾಂಧಿಜಿಯವರು ಬಡವರಿಗಾಗಿ ಜೀವನಕ್ಕಾಗಿ ಸೆರೆಮನೆಗೆ ಹೋದರು. [illegible] ಅವರು ತಮ್ಮ ಸರ್ವಸ್ವವನ್ನು ಧಾರೆಯೆರೆದಿರುವರು. ಅವರಿಗಾಗಿ ಪದೇ ಪದೇ ಕಾರಾಗೃಹವಾಸವನ್ನನುಭವಿಸುತ್ತಿರುವರು. ಅವರು ಹೀಗೆ ಕೃಷ್ಣಜನ್ಮಗೃಹದಲ್ಲಿರುವಾಗ ನಾವು ನಮ್ಮ ಬಡ ಸಹೋದರ ಸಹೋದರಿಯರಿಗಾಗಿ ಏನೂ ಮಾಡಬೇಕೆಂದಾಲೋಚಿಸ ಬೇಡವೇ? ಇಷ್ಟರ ತನಕ ನಮ್ಮಲ್ಲಿ ಹೆಚ್ಚಿನವರು ಅತ್ಯಲ್ಪ ಸೇವೆಯನ್ನು ಮಾಡಿರುವೆವು. ಆದರೆ ಗಾಂಧೀಜೀಯವರ ಮಹದಾದರ್ಶವನ್ನು ಕಂಡರೂ ನಾವು ನಮ್ಮ ಕಿಂಚಿತ್ ಸೇವೆಯನ್ನು ದೇಶಕ್ಕಾಗಿ ಮಾಡಬೇಡವೇ? ಬಡ ಜನರ ಕಷ್ಟವನ್ನು ಪರಿಹರಿಸಲು ಯಾವ ಸೇವೆಯನ್ನು ನಾವು ಮಾಡಬೇಕೆಂದು ಗಾಂಧೀಜೀಯವರೇ ಎಷ್ಟೋ ಸಲ ಹೇಳಿರುವರು. ವರುಷಗಟ್ಟಲೆ ಅರೆ ಹೊಟ್ಟೆಯಿಂದ ಜೀವಿಸುತ್ತಿರುವ ಬಡ ಜನರ ಸೇವೆಯನ್ನು ಹೇಗೆ ಮಾಡಬೇಕೆಂದು ಅವರು ನಮಗೆ ಬೋಧಿಸಿರುವರು. ನಮ್ಮ ಹಳ್ಳಿಗರಿಂದ ತಯಾರಿಸಲ್ಪಟ್ಟ ವಸ್ತ್ರವನ್ನೇ ನಾವು ಉಡಬೇಕು. ಅಖಂಡ ಕಾಲದಿಂದಲೂ ನಮ್ಮ ಆರ್ಥಿಕ ಅಭಿವೃದ್ಧಿಗೆ ಹಳ್ಳಿಯ ಕೈಗಾರಿಕೆಯನ್ನು ನಾವು ಪುನರ್ಜೀವಿಸಿ ಖಾದಿಯನ್ನೇ ತೊಡಬೇಕು. ಈಗ ಹಳ್ಳಿಗಳ ಆರ್ಥಿಕ ಪರಿಸ್ಥಿತಿಯು ಕಂಗಾಲು ಸ್ಥಿತಿಯಲ್ಲಿದೆ. ನಾವೆಲ್ಲರೂ ಶುದ್ಧ ಖಾದಿಯನ್ನೇ ಪಡೆದರೆ ಈ ಬಡ ಜನರ ಕಷ್ಟಗಳು ಕೂಡಲೇ ಪರಿಹಾರವಾಗುವುವು. ತಮ್ಮ ಬೆಳೆಯಿಂದ ನಷ್ಟವನ್ನನುಭವಿಸಿದ ರೈತರು ತಮ್ಮ ನೂಲುವಿಕೆಯ ವೃತ್ತಿಯು ಪುನರ್ಜೀವನಗೊಂಡುದನ್ನು ಕಂಡು, ಈ ವೃತ್ತಿಯನ್ನೇ ಮಾಡುವರು. [illegible] ಕೂಡನೆ ಅವರು ವಸ್ತ್ರ ತಯಾರಿಯನ್ನು ಕೈಕೊಳ್ಳುವರು. ಆಗ ಸ್ವಾಭಾವಿಕವಾಗಿ ನಮ್ಮ ಹಳ್ಳಿಯ ಕೈಗಾರಿಕೆಗಳು ಉನ್ನತಿಯನ್ನು ಹೊಂದುವುವು. ಇಷ್ಟರ ತನಕ ನಮ್ಮ ಅಲಕ್ಷ್ಯದಿಂದಾಗಿ ತಮ್ಮ ಚರಕಗಳನ್ನು ಮೂಲೆಗೊತ್ತಿ ಕುಳಿತಿದ್ದ ಮಹಿಳೆಯರು ನೂಲುವರು. ಅವರ ಚಿಕ್ಕ ಮಕ್ಕಳು ನೂಲನ್ನು ಹತ್ತಿಯನ್ನು ಶುದ್ಧಪಡಿಸುವರು. ಗಂಡಸರು ಮಗ್ಗಗಳನ್ನು ಸರಿಪಡಿಸುವರು. ತಮಗೆ ಉಪ್ಪುರವಾಗುವ ದಿನವು ಸನ್ನಿಹಿತವಾಯಿತೆಂದು [illegible]. ಹೆಂಗಸರಿಗೆ ೩ ಆಣೆ ಎಂದ ಮೂರಾಣೆಯ ವರೆಗೆ ದಿನಕ್ಕೆ ಸಂಪಾದನೆಯಾಗುವುದು. ಗಂಡಸರಿಗೆ ತಿಂಗಳಿಗೆ ೧೫ರಿಂದ ೩೦ ರೂಪಾಯಿ ಸಂಪಾದನೆಯಾಗುವುದು. ಬಡತನದ ಮತ್ತು ಉಪವಾಸದ ಬಳಲುವಿಕೆಯು ಹೋಗಿ ಐಶ್ವರ್ಯದ ಮತ್ತು ಸುಖದ ದಿನಗಳು ಕಾಲಿಡೋಣವುವು. ಬಡ ಜನರ ಸೇವಾ ಕರ್ತವ್ಯದ ಭಾರವು ಸಾರ್ವಜನಿಕರ ಹಸ್ತದಲ್ಲಿದೆ. ಅವರು ಶುದ್ಧ ಖಾದಿಯನ್ನು ಪಡೆಯಬೇಕು. ಗಾಂಧೀಜೀಯವರು ಇದರಿಂದ ಸಂತೋಷಗೊಳ್ಳುವರು.

ಪರಾರಿ ಮತ್ತು ಪತ್ತೆ

ನಾಗಪುರದಲ್ಲಿ ಶ್ರೀ ಕೃಷ್ಣಕುಮಾರ ಶ್ರಾವಸ್ತವನೆಂಬ ಒಬ್ಬ ತರುಣ ಇವನು ಒಬ್ಬ ಪೋಲೀಸು ಆಫೀಸರ ಮಗ. ಅಲ್ಲಿ ಒಬ್ಬ ಗಣ್ಯರ ಮಗಳಾದ ಶ್ರೀಮತಿ ಶಾಂತಿ ಎಂಬವಳು ಶಾಲೆಗೆ ಹೋಗುತ್ತಿರುವಾಗ ಈ ತರುಣನು ಅವಳನ್ನು ಒಂದು ಮೋಟಾರಿನಲ್ಲಿ ಹಾಕಿ ಎತ್ತಲೋ ಓಡಿದ. ನಾಗಪುರದಿಂದ ೧೯ ಮೈಲುಗಳ ಆಚೆ ಕಲ್ಮೇಶ್ವರ ರೈಲ್ವೇ ಸ್ಟೇಶನಿಗೆ ಅವಳನ್ನು ತಂದು ರೈಲು ಹತ್ತಲು ಅವನು ಟಿಕೇಟನ್ನು ಪಡೆಯಹೋದಾಗ ಹುಡಿಗಿಯು ಬೊಬ್ಬಿಟ್ಟಳು. ಒಡನೆ ಜನಸಂದಣಿಯು ಸೇರಿ, ಕಥೆಯು ಬಯಲಿಗೆ ಬಿತ್ತು. ಸ್ಟೇಶನ್ ಮಾಸ್ತರರು ಅವನಿಗೆ ಟಿಕೇಟು ಕೊಡಲಿಲ್ಲ. ಇದೇನು ಕಷ್ಟವೆಂದು ತರುಣನು ಆಲೋಚಿಸಿ, ಏನೋ ಗಂಡಾಂತರವು ಬಂತೆಂದು ನೆನೆದು ಒಂದು ಮೋಟಾರಿನಲ್ಲಿ ಅವಳೊಡನೆ ಹೊರಟ. ಆದರೆ ದುರ್ದೈವವಶಾತ್ ಆ ಮೋಟಾರ್ ನಡೆಯಲೇ ಇಲ್ಲ. ಅಷ್ಟರಲ್ಲಿ ಅಲ್ಲಿಗೆ ಪೋಲೀಸರ ಆಗಮನವಾಯಿತು. ಅವನು ಕೈದುಮಾಡಲ್ಪಟ್ಟನು.

"ಗಾಂಧಿಯವರನ್ನು ಬಿಡುಗಡೆ ಮಾಡಿ ಹಿಂದೂದೇಶವನ್ನು ಉದ್ಧರಿಸಿರಿ"

ಒಂದು ಎಚ್ಚರಿಕೆ

ಅಮೇರಿಕಾ ದೇಶದಲ್ಲಿನ ೧೦೩ ಮಂದಿ ಧರ್ಮ ಗುರುಗಳೂ ಬಿಷಪರೂ, ಇನ್ನಿತರ ಮಹದ್ವ್ಯಕ್ತಿಗಳೂ ಸೇರಿ ಪ್ರಧಾನ ಮಂತ್ರಿಯವರಿಗೊಂದು ತಂತಿಯನ್ನು ಕಳುಹಿಸಿರುವರು. ಅದು ಹೀಗಿತ್ತು: 'ಗಾಂಧಿಯವರನ್ನು ಬಿಡುಗಡೆ ಮಾಡಿರಿ! ಮತ್ತು ಹಿಂದೂದೇಶದ ಈಗಿನ ವಿಷಮ ಸ್ಥಿತಿಯನ್ನು ಬಗೆಹರಿಸಲು ಸರಿಯಾದ ಯತ್ನವನ್ನು ಮಾಡಿರಿ'

ಮದ್ರಾಸಿನವರ ಅರಿಕೆ

ಪೋಲೀಸರ ಕಠಿಣ ವರ್ತನೆಗಳ ಕುರಿತು ಮದರಾಸಿನ ಹೆಚ್ಚಿನ ಪ್ರಮುಖರು ಸಹಿ ಮಾಡಿರುವ ಪ್ರಕಟಣೆಯು ಹೀಗಿದೆ:

ಮದ್ರಾಸು ಪಟ್ಟಣ ಮತ್ತು ಅಧಿಪತ್ಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಘಟನೆಗಳು ನಮ್ಮನ್ನು ಎಚ್ಚರಗೊಳಿಸುತ್ತಿವೆ. ನಾವು ರಾಷ್ಟ್ರಸಭೆಯ ಸದಸ್ಯರೇನೂ ಅಲ್ಲ. ಆದರೂ ನಾವು ಪಟ್ಟಣಿಗರಾಗಿರುವುದರಿಂದ ಸಾರ್ವಜನಿಕ ಶಾಂತತೆಗಾಗಿ ಹೋರಾಡುವುದು ಮತ್ತು ಪೋಲೀಸರ ಕ್ರೂರ ವರ್ತನೆಗಳನ್ನು ಖಂಡಿಸುವುದು ನಮಗೆ ತೀರ ಅಗತ್ಯವೆಂದು ಕಂಡು [illegible] ಸಾರ್ವಜನಿಕ ಶಾಂತಿ ಸ್ಥಾಪನೆ ಮಾಡುವುದೇ ಸರ್ಕಾರದವರ ಕೆಲಸವೇ ಸರಿ. ಆದರೆ [illegible] ತಪ್ಪು ಅಂಶಗಳನ್ನು ಪ್ರಯೋಗಿಸುವುದು ಮತ್ತು [illegible] ಘಾಯಗೊಂಡು ಬಿದ್ದವರನ್ನೆತ್ತಲು ಹೋದ [illegible] ಹೋಗದ ನೇರಾ ಹೊಡೆಯುವುದು [illegible] ನಾವು [illegible].

ಪೋಲೀಸರು ಈ ರೀತಿಯ ಅಕ್ರಮ ವರ್ತನೆಗಳನ್ನು [illegible] ಇದೇ ವಿಷಯವಿಲ್ಲ. ಉದಾಹರಣೆಗಾಗಿ ಮೊನ್ನೆ ತಾನೆ [illegible] ನಲ್ಲಿ ಸ್ವಯಂ ಸೇವಕನೊಬ್ಬನು ಲಾಠಿ ಏಟಿನಿಂದ ಮೃತಪಟ್ಟರೂ ಗಾಂಧೀ ಟೊಪ್ಪಿಯನ್ನು ಧರಿಸಿಕೊಂಡುದೇ ಅಪರಾಧವೆಂದು ಪರಿಗಣಿಸಿ ಸ್ವಯಂ ಸೇವಕರನ್ನು ಲಾಠಿಯಿಂದ ಹೊಡೆದರು. ಮಧುರೆಯಲ್ಲಿ ಘಾಯಗೊಂಡ ಸ್ವಯಂಸೇವಕರ ಉಪಚಾರಕ್ಕೆ [illegible] ಆಸ್ಪತ್ರೆಯ [illegible] ನಿರಾಕರಿಸಿದುದನ್ನು ತೆಗೆದು ಸಹಾಯಕ್ಕಾಗಿ ಬಂದ [illegible] ಪ್ರತಿ ಬಂದಕ [illegible] ಸ್ವಯಂಸೇವಕರ [illegible] ಬಿದ್ದ ಮೇಲೆ ಅವರನ್ನು ಹೊಡೆಯ [illegible]. ಈ ವಿಧವಾದ ವರ್ತನೆಗಳನ್ನು ನೋಡುವಾಗ ಸರ್ಕಾರದವರು ಜನತೆಯಲ್ಲಿ ಭಯೋತ್ಪಾದನೆಯನ್ನು [illegible] ನ್ಯಾಯವಾದ ಚಟುವಟಿಕೆಗಳನ್ನು [illegible] ಗೊಳಿಸುತ್ತಿರುವರೆಂದು ಸಾರ್ವಜನಿಕರಿಗೆ ತಿಳಿಯುತ್ತದೆ. ಪ್ರಚಲಿತ ಸ್ಥಿತಿಗಳನ್ನು ನೋಡಿ ಸರ್ಕಾರದವರು ಸಾರ್ವಜನಿಕ ಅಭಿಪ್ರಾಯವನ್ನು ಅಲ್ಲಗಳೆದು ವರ್ತಿಸುತ್ತಿರುವುದರಿಂದ ಮುಂದಕ್ಕೆ ಯಾವ ರೀತಿಯ ರಾಜಕೀಯ [illegible] ನಡೆಯಲಾರದಂತೆ [illegible] ಅವರೇ ಉಂಟು ಮಾಡುವರೆಂದು ಒತ್ತಿ ಹೇಳುತ್ತೇವೆ.

ದೇಶಕ್ಕೆ ಮಾಲವೀಯರ ಎಚ್ಚರಿಕೆ

ಪಂಡಿತ ಮಾಲವೀಯರು [illegible] ಅವರು ಮುಂಬಯಿ [illegible] ಈ ಪ್ರಕಟಣೆಯನ್ನು ಮಾಡಿದರು.

[illegible] ಈ ಸಮಯದಲ್ಲಿ ಈಗಿನ [illegible] ಪ್ರಕಟಿಸುವ [illegible] ನನಗೆ ನನ್ನ ದೇಶಬಾಂಧವರಿಗೆ [illegible] ಒತ್ತಿ ಬರೆಯುವ ಕರ್ತವ್ಯವೊಂದು ತೋರುತ್ತದೆ.

[illegible] ಸಂಚಾರ ಮಾಂದ್ಯವು ಬೆಳೆಯುತ್ತಿದೆ. [illegible] ರಾಷ್ಟ್ರಗಳ ಆರ್ಥಿಕ ಸ್ಥಿತಿಯೂ ಸಂದೇಹಾಸ್ಪದವಾಗಿದೆ. ಈ ಪ್ರಪಂಚ ಮಾಂದ್ಯದಿಂದಾಗಿ ಹಿಂದೂದೇಶಕ್ಕೆ ತೊಂದರೆ ಬಾರದಿರಲಿಲ್ಲ. ಇಂತಹ ಮಾಂದ್ಯತೆಯು ಸರ್ಕಾರದ ಕೆಟ್ಟ ಸೂತ್ರದಿಂದಾಗಿ ವಿಷಮಾವಸ್ಥೆಗೆ ಬಂದಿದೆ. ಈ ಸೂತ್ರಗಳ ಪರಿಣಾಮವು ಏನಾಗುವುದೋ ಎಂದು ಸದ್ಯಕ್ಕೆ ತಿಳಿಯಲಾಗುವುದಿಲ್ಲ. [illegible] ಈ ಸಂದಿಗ್ಧ ಸ್ಥಿತಿಯಲ್ಲಿ [illegible] ಆರ್ಥಿಕ ಸ್ಥಿತಿಯು ನೆಟ್ಟಗಿರಬೇಕು. ಆದುದರಿಂದ ಪ್ರತಿಯೊಬ್ಬ [illegible] ಯನೂ ಅವನ ರಾಜಕೀಯ ಅಭಿಪ್ರಾಯವು ಹೇಗೂ ಇರಲಿ, ಸ್ವಹಿತ ದೃಷ್ಟಿಯಿಂದ ತನ್ನ ಅನಿವಾರ್ಯ ವೆಚ್ಚಗಳನ್ನು ನಿಲ್ಲಿಸಲಿ. ಈ ಕಾಲದಲ್ಲಿ ಅತ್ಯಗತ್ಯವಿರುವ ಸಂಗತಿಗಳನ್ನು ಮಾತ್ರ ಪಡೆಯಬೇಕು. ಕಾರಣ ಜನರ ಕೈಯಲ್ಲಿರುವ ಪ್ರತಿಯೊಂದು ರೂಪಾಯಿಯೂ ಬೆಲೆಯುಳ್ಳದ್ದಾಗಿದೆ. ಇನ್ನು ಬರುವ ತಿಂಗಳುಗಳಲ್ಲಿ ತಮ್ಮ ಕೈಯೊಳಗೆ ಹೆಚ್ಚಿನ ಹಣವು ಬಂದೀತೆಂಬ ಆಶೆಯಿಂದ ಬಡವನೂ ಧನಿಕನೂ ಇರಕೂಡದು. [illegible] ಆದುದರಿಂದ ಪ್ರತಿಯೊಬ್ಬನು ತನ್ನ ಅನುಕೂಲದ ಅತ್ಯಗತ್ಯ ವಿಷಯಗಳಿಗೆ ಮಾತ್ರ ಬೇಕಾದಷ್ಟನ್ನು ವ್ಯಯಗೊಳಿಸಿ ಹಣವನ್ನು ಜೋಪಾನವಿರಿಸಲಿ. ಹಿಂದೂದೇಶವು ಮಹತ್ತರವಾದ ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಮಧ್ಯದೊಳಗೆ ಸಿಲುಕಿರುತ್ತದೆ. ಇಂತಹ ಸಂದಿಗ್ಧತೆಯನ್ನು ನಾವು ಪೂರ್ವಕಾಲದ ನೈತಿಕ ವಿಚಾರ ದೃಷ್ಟಿಯಿಂದಲೂ ಸರಳತೆಯಿಂದಲೂ ಭೇಟಿಯಾಗಬೇಕು. ತನ್ನ ಸ್ವಯಂ ಪ್ರತಿಷ್ಠೆಯನ್ನು ಮರೆಯಬೇಕು. ಡಂಬಾಚಾರಗಳನ್ನು ಬಿಡಬೇಕು. ಎಲ್ಲಾ ಬಗೆಯ ಅನಾವಶ್ಯ ವೆಚ್ಚಗಳನ್ನು ದೂರ ಮಾಡಬೇಕು. 'ರೂಪಾಯಿ ಇಟ್ಟರೆ ರೂಪಾಯಿಯೇ ಸಿಕ್ಕುತ್ತದೆ' ಎಂಬ ಗಾದೆಯನ್ನು ಎಲ್ಲರೂ ಸ್ಮರಣೆಗೆ ತರಲಿ. ದೇಶದ ಆರ್ಥಿಕ ಮುಗಟ್ಟನ್ನು ಬಗೆಹರಿಸಲಿ. ಈ ವಿವೇಕಪರ ವಚನವನ್ನು ಪರಿಪಾಲಿಸಲಿ.

ನಾವು ತೀಕ್ಷ್ಣವಾದ ರಾಜಕೀಯ ಮಾಂದ್ಯತೆಯನ್ನು ನುಗ್ಗಬೇಕಾಗಿದೆ. ಸಾವಿರಗಟ್ಟಲೆಯಲ್ಲಿ ನಮ್ಮ ಸಹೋದರ ಸಹೋದರಿಯರನ್ನು ಸೆರೆಮನೆಗಳಲ್ಲಿ ಬಂಧಿಸಿಟ್ಟಿದ್ದಾರೆ. ಜೀವಂತ ಹಿಂದೀಯರಲ್ಲಿ ಮಹದಗ್ರಗಣ್ಯರಾದ ಮಹಾತ್ಮಾ ಗಾಂಧಿಯವರನ್ನು ಸೆರೆಮನೆಯೊಳಗೆ ಹೊಕ್ಕಿಸಿರುವರು. ನಮ್ಮ ಜನ್ಮಭೂಮಿಗೆ ಸ್ವಾತಂತ್ರ್ಯವು ಬೇಕು. ಅದಕ್ಕಾಗಿ ಬಹುಸಂಖ್ಯಾತರು ಯತ್ನಿಸುತ್ತಿದ್ದಾರೆ. [illegible] ಪೂರ್ವಕಾಲದಲ್ಲಿ ನಾವು ದಾನ ಧರ್ಮ ಸ್ವಾರ್ಥತ್ಯಾಗದ ರೂಪದಿಂದ ತಪಸ್ಸನ್ನಾಚರಿಸುತ್ತಿದ್ದೆವು. ಅದು ಸ್ವರ್ಗದ ಸವಿಯೋಗ್ಯ [illegible] ಗಳಲ್ಲಾಯಿತು. ಈಗ ನಾವು ಅಂತಹ ತಪಸ್ಸನ್ನು ಮಾಡುತ್ತೇವೋ ಇಲ್ಲವೆಂಬ ಆಲೋಚನೆ ಬೇಡ, ನಮ್ಮ ಕಿಂಚಿತ್ ರಾಷ್ಟ್ರ ಸೇವೆಯು [illegible] ಎಂದಿನ ತನಕ ಪಕ್ಕಾ ಆರ್ಥಿಕ ಮಾಂದ್ಯವಿದೆಯೋ ಎಂದಿನ ತನಕ ನಮ್ಮ ಅತ್ಯಗ್ರಗಣ್ಯ ಪುರುಷರಾದ ಗಾಂಧೀಜೀಯವರೂ ಸಹೋದರ ಸಹೋದರಿಯರೂ ಸೆರೆಮನೆಯೊಳಗಿರುವರೋ ಎಂದಿನ ತನಕ ನಮ್ಮ ಉದ್ದಿಷ್ಟವು ನೆರವೇರುವುದಿಲ್ಲವೋ ಎಂದಿನ ತನಕ ನಮ್ಮ ಭಾರತ ಮಾತೆಗೆ ಸ್ವಾತಂತ್ರ್ಯವು ದೊರೆಯಲಾರದೋ ಅಂದಿನ ತನಕ, ಆ ವೇಳೆಯ ಪರಿಯಂತ ಅತ್ಯವಶ್ಯಕ [illegible] ನಾವು ಯಾವ ಬಗೆಯ ಸಣ್ಣ ಅಥವಾ ದೊಡ್ಡ ಸಂಗತಿಗಳಿಗಾಗಿಯೂ ಹಣವನ್ನು ವೆಚ್ಚ ಮಾಡಲಾರೆವು.

ನಮ್ಮ ಅತ್ಯಗತ್ಯಕ್ಕೆ ಬೇಕಾಗುವ ವಸ್ತುಗಳ [illegible] ಮಾಗಲು ಸ್ವದೇಶೀಯನ್ನೇ ಬಳಸಬೇಕು. ಇಂಗ್ಲೆಂಡಿನಲ್ಲಿ ಪ್ರತಿಯೊಬ್ಬ ಧನಿಕನೂ [illegible] ಪ್ರಧಾನ ಮಂತ್ರಿಯವರು ಜನರು ಬ್ರಿಟಿಶ ವಸ್ತುಗಳನ್ನೇ ಕೊಂಡುಕೊಳ್ಳಬೇಕೆಂದು ಉಪದೇಶಿಸುತ್ತಿದ್ದಾರೆ.

[illegible] ವರ್ಷ [illegible] ನಮ್ಮ ದೇಶದಿಂದ ೫೩ ಕೋಟಿ ರೂಪಾಯಿ ಅನ್ಯದೇಶಕ್ಕೆ ಹೋಯಿತು. [illegible] ಆಮದು ಮಾಡಿದ ಸರಕುಗಳ ಮೇಲೆ ನಾವು ೧೬ ಕೋಟಿ ರೂಪಾಯಿ ಸರಕಾರೀ ಸುಂಕವನ್ನು ಕೊಟ್ಟೆವು.

ಆದುದರಿಂದ ನನ್ನ ದೇಶದ ಬಂಧು ಭಗಿನಿಯರೆಲ್ಲರೂ ಸ್ವದೇಶೀ ತತ್ವವನ್ನು ಪುನಃ ಪೂರ್ವಕ ಕೈಕೊಂಡು [illegible] ವಸ್ತುಗಳನ್ನು ಪಡೆಯದೆ ತಮ್ಮ ಮತ್ತು ದೇಶದ ಆರ್ಥಿಕ ಏಳಿಗೆಯನ್ನುಂಟು ಮಾಡುವರಾಗಬೇಕು [illegible] ಅವರ ಪ್ರಾಣದಿಂದ ಕೋರುತ್ತೇನೆ. ಅಲ್ಲದೆ ಅವರು ಆತ್ಮತ್ಯಾಗದಿಂದಲೂ ಸರಳತೆಯಿಂದಲೂ ಜೀವಿಸಿ ದೇಶದ ಪ್ರಕೃತ ಕೋಟಲೆಯನ್ನು [illegible] ಯಾಚಿಸುತ್ತೇನೆ.

ಈ ಅರಿಕೆಯನ್ನು [illegible] ಪ್ರತಿಯೊಬ್ಬ ದೇಶಬಾಂಧವನೂ ಪ್ರತಿಯೊಬ್ಬ [illegible] ವನ್ನು [illegible] ಸಹೋದರ ಸಹೋದರಿಯರು [illegible] ವನ್ನೇ [illegible] ವಂತೆ ಮಾಡಬೇಕಾಗಿ ನಂಬುತ್ತೇನೆ.

ನಾವು ರೌಂಡ್ ಟೇಬಲ್ ಕಮಿಟಿಗಳೊಡನೆ ಸಹಕರಿಸುವುದಿಲ್ಲ

[illegible] ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀಸ್ ಸಭೆಯು [illegible] ಪುರುಷೋತ್ತಮದಾಸ್ ಠಾಕೂರ್‌ದಾಸರ ಮೂಲಕ ರೌಂಡ್ ಟೇಬಲ್ ಕಮಿಟಿಗಳಿಗೆ ಸಹಕರಿಸಲು ತಿರಸ್ಕರಿಸುತ್ತದೆ. [illegible] ಸರಕಾರದ [illegible] ಗಾಂಧೀಜೀಯವರನ್ನು [illegible] ಈ ಕಮಿಟಿಯು ಮುಂದಿನ [illegible] ಸಂದೇಹಗೊಂಡಿದೆ. ಆದುದರಿಂದ ಈ ಸಭೆಯು ತನ್ನ ಪ್ರತಿನಿಧಿಯಾದ ಶ್ರೀ ಪುರುಷೋತ್ತಮದಾಸ್ ಠಾಕೂರ್ ದಾಸರನ್ನು ರೌಂಡ್ ಟೇಬಲ್ ಕಮಿಟಿಗಳೊಡನೆ ಸಹಕರಿಸಲು ಪ್ರೇರೇಪಿಸುವ ಪ್ರಯೋಜನ ಇಲ್ಲವೆಂದು ಬಗೆದು ತನ್ನ ಪ್ರತಿನಿಧಿಯನ್ನು ಅದಕ್ಕೆ ಕಳುಹಿಸುವುದಿಲ್ಲ.

ಪರೀಕ್ಷಿಸಿರಿ! ಶಾಶ್ವಯಾಗುವಿರಿ!!
ಶೀಘ್ರತ್ತು ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಷನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ ಶಿಷ್ಯರಾಗಿ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕೇರಳ ದೇಶ ವೈದ್ಯರಿಂದ ಸ್ಥಾಪಿತವಾದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಔಷಧಿ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಭಸ್ಮ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಗಳು ನಮ್ಮಲ್ಲಿ ಯಾವಾಗಲೂ ಸಿಗುತ್ತವೆ. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೆಗೆದ ಉಷ್ಣ, ಪ್ರಾಯ, ನಿತ್ಯ ಆಹಾರದ ಕ್ರಮ, ಪ್ರಕೃತಿ ಹಿಂದೆ ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವುದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಇವೇ ಮೊದಲಾದ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ ಸಿಗಿ ಕೊಡಲಾಗುವುದಲ್ಲದೆ ಅಶಕ್ತರಾದ ಗರೀಬರಿಗೆ ಅವರ ಅಗತ್ಯವಿದ್ದ ಮದ್ದುಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸಹ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಬರಗಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ಬಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

ರಕ್ತ ಅಥವಾ ತಜ್ಜನ್ಯವಾದ ಅತ್ಯಂತ ಹಳೆಯದ ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅತಿ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂಡಿಯಿಡವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲಾ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೇಜ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೩

ವಿಳಾಸ — ಶಕ್ತಿಸುಧಾ ಕಾರ್ಯಾಲಯ
21 ಕಾಂದಾರವಾಡಿ 4ನೇ ಗಲ್ಲಿ
ಮುಂಬಯಿ

ವಿಕ್ರಯಿಸುವ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.
ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಹಿಂದಿನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರಿಯಿರಿ
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L. Batliwalla, Sons & Co., Ltd.
Kadell Road, P O Dadar, Bombay 14

ತಂತಿ ವಿಳಾಸ – 'SIRINDHUN' Bombay
ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ— ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಹೆಂಗಸರ ಮೂರು ರತ್ನಗಳು

ಕೇಸರಿ ಕುಠಾರ
ಏಜೆಂಟ್ ಮಂಗಳೂರು,
ಶ್ರೀ ಔಷಧ ಮಾರಾಟದವರಿಂದ ದೊರೆಯುತ್ತದೆ

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟ್ಯಾಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.
ರಿಪೇರಿ ಮಾಡುವಾಗ ಹಿಂದಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಪಟ್ಟಿ ಇತರ ಸೂಚನೆಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ. – ನಿಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಹಾಕಿಸಿ ಸ್ವಚ್ಛವಾಗಿಸುವುದರಿಂದ ಸರಿಯಾದ ಸಮಯವು ತೋರಿಸುವುದು

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ನಮ್ಮ ಶಾಲೆಗಳು

೪. ಮಕ್ಕಳ ಉತ್ಪಾದಕ ಶಕ್ತಿ.

ಲೇಖಕರು—ಶ್ರೀಯುತ ಶಿವರಾಮ ಕಾರಂತ

ಶಾಲೆಗಳೆಂಬುವು ಮಕ್ಕಳ ಶಿಕ್ಷಣಕ್ಕಾಗಿರುವುವು, ಗುರುವು ಏನೂ ಅರಿಯದ ಬಾಲಕನಿಗೆ ಹೇಳಿಕೊಡುವುದು, ಶಿಷ್ಯನು ಅವುಗಳನ್ನೆಲ್ಲಾ ಸಂಗ್ರಹಿಸುವುದು—ಎಂಬುದು ನಮ್ಮಲ್ಲಿ ಶಾಲೆ, ಗುರು, ಶಿಷ್ಯ—ಇವರೊಳಗಿನ ಸಂಬಂಧದ ಕಲ್ಪನೆಯು. ಮಕ್ಕಳೆಂಬವರು ಬರಿದಾದ ಬಂಡಿಗಳು. ಅವುಗಳಲ್ಲಿ ಉಪಾಧ್ಯಾಯನು ತುಂಬಿಸಿದರೆ ಮಾತ್ರ ಉಂಟು, ಇಲ್ಲವಾದರೆ ಇಲ್ಲ—ಎಂಬೀ ತಿಳಿವು ಇಪ್ಪತ್ತನೆಯ ಶತಮಾನದಲ್ಲೂ ನಮ್ಮಲ್ಲಿ ಬೇರೂರಿದೆ. ಗುರುಶಿಷ್ಯ ಸಂಬಂಧಕ್ಕೆ ಬೇರೆ ಅರ್ಥವನ್ನು ಸೂಚಿಸಿದರೆ ಒಡಂಬಡುವವರುಂಟೆಂದು ನಾವು ತಿಳಿಯೆವು. ಆದರೆ ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ಪೂರ್ವದ ಅರ್ಥವನ್ನು ಎಂದೋ ಕಿತ್ತು ಬಿಸುಟಿರುವರು. ಮಕ್ಕಳಲ್ಲಿ ಸ್ವತಂತ್ರದ ಸೃಷ್ಟಿಶಕ್ತಿಯಿರುವುದೆಂದು ಯೋಗ್ಯ ಪರಿಸ್ಥಿತಿಯನ್ನು ಕಲ್ಪಿಸಿಕೊಟ್ಟಲ್ಲಿ ಅವರೇ ನವೀನ ಉತ್ಪತ್ತಿಯನ್ನು ಮಾಡಬಲ್ಲರೆಂದು ಅವರು ಸಿದ್ಧಾಂತ ಪಡಿಸಿರುವರು. ಉಪಾಧ್ಯಾಯನಿರುವುದು ಆ ಪರಿಸ್ಥಿತಿಯನ್ನು ತಂದು ಒದಗಿಸುವುದಕ್ಕೆ ಮಾತ್ರ. ಮಕ್ಕಳು ಹೇರು ಬಂಡಿಗಳಲ್ಲ, ಉಪಾಧ್ಯಾಯನನ್ನು ಅನುಕರಿಸಬೇಕಾದ ಯಂತ್ರಗಳೂ ಅಲ್ಲ.

ಈ ನವೀನ ತತ್ವವನ್ನು ನಾವು ಒಡಂಬಡುವ ತನಕ ನಮ್ಮ ಶಿಕ್ಷಣ ಪದ್ಧತಿಯು ಪರಿಷ್ಕೃತವಾಗಲಾರದು. ನಮ್ಮ ಸುತ್ತಮುತ್ತ ನಲಿದಾಡುವ ಮಕ್ಕಳ ಆಟಪಾಟಗಳನ್ನು ಪರಿಶೀಲಿಸಿದವರಿಗೆ ತಿಳಿದೀತು—ಅವುಗಳು ಪ್ರತಿಕ್ಷಣಕ್ಕೂ ಏನನ್ನೋ, ಏನನ್ನೋ ಹೊಸ ಹೊಸತಾಗಿ ಸೃಷ್ಟಿಸಲು ಯತ್ನಿಸಿರುವುದೆಂದು. ಹಕ್ಕಿಯ ಕೂಗನ್ನು ಕೇಳಿದುವು, ಆಡಿನ ಕುಣಿತವನ್ನು ಕಂಡುವು—ತಾವೇ ಒಂದು ನವೀನ ಮೃಗವಾಗಿ ಹಕ್ಕಿಯ ಕೂಗಿಗೂ ಆಡಿನ ಕುಣಿತಕ್ಕೂ ಸಂಬಂಧವನ್ನು ತರುವ ನವೀನ ನರ್ತನವೊಂದನ್ನು ಮಾಡಿದುವು. ಇನ್ನು ನಮ್ಮ ದಿನಚರಿಯ ಹಲವು ವಸ್ತುಗಳನ್ನೂ ಕೆಲಸಗಳನ್ನೂ ಕಾಣುತ್ತವೆ. ಅವುಗಳನ್ನು ಕಂಡು, ಅವುಗಳ ವಿಷಯದಲ್ಲಿ ತಮ್ಮದೇ ಒಂದು ನವೀನ ಪ್ರಪಂಚವನ್ನೂ, ಸೃಷ್ಟಿಯನ್ನೂ ಕಲ್ಪಿಸುತ್ತವೆ. ಅವು ಆಡುತ್ತ ತೇಲಾಡುವ ಈ ಕಾಲದಲ್ಲಿ, ತಮ್ಮನ್ನು ಮರೆತುಬಿಡುತ್ತವೆ. ಒಂದು ಕ್ಷಣ ಕಮ್ಮಾರನಂತೆ ಕುಟ್ಟುವುವು, ಇನ್ನೊಮ್ಮೆ ಅರ್ಚಕನಂತೆ ಪೂಜೆಮಾಡುವುವು, ಮತ್ತೊಮ್ಮೆ ತಾಯಿಯಂತೆ ಜೋಗುಳ ಹಾಡುವುವು, ಮಗದೊಮ್ಮೆ ಮೋಟಾರಿನಂತೆ ಚಲಿಸುವುವು. ಕೈಗೊಂದು ಇದ್ದಲಿಯ ತುಂಡು ಸಿಕ್ಕಿತೆಂದರೆ ನೆಲದ ಮೇಲೂ ಗೋಡೆಯ ಮೇಲೂ ಗೀಚಿ ಗೀಚಿ ಗೊಂಬೆಗಳನ್ನು ಮಾಡುವುವು. ಆ ಚಿತ್ರಗಳು ಸ್ವರೂಪಿಕ ಅನುಕರಣೆಯಾಗಿರುವುದಿಲ್ಲ. ಅವು ಒಂದು ರೀತಿಯ ನವೀನ ಸೃಷ್ಟಿಯೇ ಸರಿ. ಅವುಗಳಲ್ಲಿ ಸ್ವರೂಪಿಕತೆಯಿಲ್ಲದಿದ್ದರೂ ಚೈತನ್ಯ, ಭಾವಗಳು ತುಂಬಿರುವುವು. ಅವುಗಳ ಹಾಡಿನಲ್ಲಿ ಸಂಗೀತಶಾಸ್ತ್ರದ ತಿಳಿವು ತುಂಬಿರುವುದಿಲ್ಲ. ಆದರೆ ಆ ಸ್ವರಮಂದಿರದ ಹಿಂದುಗಡೆ ಭಾವದ ಬಿಂದು ಮೂಡಿ ಕಾಣುತ್ತದೆ. ಇಂಥ ಸ್ವರವೇ ಆನಂದದ ಬಿಂದು, ಇಂಥದ್ದೇ ಉತ್ಸಾಹದ ಬಿಂದು, ಇಂಥದ್ದೇ ಆಕ್ರೋಶದ—ವೆಂದು ಅವುಗಳ ಸ್ವರದಿಂದ ತಪ್ಪಿಲ್ಲದೆ ಅನ್ನಬಹುದು. ಎಷ್ಟೋ ಬಾರಿ ಹರುಷದಿಂದ ನೈಮರೆತು ಕೂಗಿ ಹಾಡುವ ಮಕ್ಕಳ ಸಂಗೀತವನ್ನು ಕೇಳಿ ನಾವೇ ನೈಮರೆತು ಕೂಗಿ ಬಿಡುವೆವು. ಏತಕ್ಕೆ—ಅವರ ಹಾಡಿನಲ್ಲಿ ತೀರ ಉನ್ಮೇಷಕವಾದ ಉತ್ಪಾದಕ (ಕ್ರಿಯಾ) ಶಕ್ತಿಯಿರುವುದರಿಂದಲೇ.

ಒಂದು ನಾಟಕ ಇಲ್ಲವೆ ಬಯಲಾಟವನ್ನು ಕಂಡು ಬಂದರೆ ಅವರದೇ ಒಂದು ನಾಟಕವಾಗುವುದು. ಶಾಲೆಗೊಂದು ದಿನ ಹೋದರೆ ಅವರದೇ ಒಂದು ಶಾಲೆಯಾಗುವುದು. ಒಂದು ಮೋಟಾರನ್ನು ಕಂಡರೆ ಕಡ್ಡಿಪೆಟ್ಟಿಗೆಗಳನ್ನೂ ಗೇರುಹಣ್ಣುಗಳನ್ನೂ ತಂದು ಅವರದೇ ಒಂದು ಮೋಟಾರಿನ ರಚನೆಯಾಯಿತು. ಮಕ್ಕಳ ಅಂತರಂಗವನ್ನು ಅರಿಯಲಾರದ ನಿಮ್ಮ ಕಣ್ಣಿಗೆ ಅದು ಚೆನ್ನಾಗಿ ಕಾಣಿಸದು, ಅಥವಾ ಪ್ರತಿಯೊಂದರಲ್ಲೂ ಸ್ವಾಭಾವಿಕತೆ (Realistic)ಯನ್ನು ಬಯಸುವ ನಿಮಗೆ ಅದು ಮೋದವನ್ನುಂಟುಮಾಡಲಾರದು—ಆದರೆ ಅವರ ಪ್ರತಿ ಕೃತಿಯ ಹಿಂದೆಯೂ ಅದ್ಭುತವಾದ ಉತ್ಪಾದಶಕ್ತಿಯು ತುಂಬಿರುವುದು. ಆ ಶಕ್ತಿಯ ಪ್ರವಾಹಕ್ಕೆ ಅನುಕೂಲವಾದ—ಸಾಮಗ್ರಿಗಳನ್ನೂ, ಅವಕಾಶವನ್ನೂ ಒದಗಿಸಿಕೊಡಿರಿ. ತಪ್ಪಿದಲ್ಲಿ ಮಾರ್ಗದರ್ಶಕರಾಗಿರಿ. ಆಗ ಈ ಹಸುಕೂಸುಗಳೇ ವಿಶ್ವಕರ್ಮರಾಗುವರು. ಮಕ್ಕಳ ಉತ್ಸಾಹಕ್ಕೆ ಮಿತಿಯಿಲ್ಲ, ಕ್ರಿಯಾಶಕ್ತಿಗೆ ಎಣೆಯಿಲ್ಲ, ತಹಾಬಲಕ್ಕೆ ಗಡಿಯಿಲ್ಲ—ಈ ಮೂರು ಸೇರಿದ ಬಳಿಕ ಅವರು ಸೃಷ್ಟಿಕರ್ತರಾಗಲು ತಡವೇನು?

ನಾವು ಮಕ್ಕಳಿಗೆ ಬೇಕೆನ್ನುವಷ್ಟು ಆಟದ ಒಡವೆಗಳನ್ನೂ, ಚಿತ್ರಸಾಮಗ್ರಿಗಳನ್ನೂ, ಒಡಗಿಯ ಸಾಮಾನುಗಳನ್ನೂ ನಾಟಕದ ಸಲಕರಣೆಗಳನ್ನೂ ಒದಗಿಸಿಕೊಟ್ಟು, ಅವರ ಸ್ವಚ್ಛಂದ ವಿಹಾರಕ್ಕೆ ಎಡೆಯಿತ್ತು, ತಾಳ್ಮೆಯಿಂದ ಪರಿಶೀಲಿಸಬಲ್ಲೆವಾದರೆ ಅವರ ಊಹಾಶಕ್ತಿಯು ಯಾವಾವ ಕವಚಗಳನ್ನು ತೊಟ್ಟು ಕುಣಿಯಲು ಬರುವುದೆಂದು ಕಾಣುವುದು.

ಆದರೇನು—ಅವೇ ಮಕ್ಕಳು ನಮ್ಮ ಶಾಲೆಗಳಿಗೆ ಕಾಲಿಡತೊಡಗಿದರೆಂದರೆ ಅವರ ಈ ವಿಚಿತ್ರ ಕಲ್ಪನೆಗಳು ಬಯಲಾಗುವುವು. 'ಏನು, ಇನ್ನೂ ನೀನು ಮಗುವೇ? ಇದೀ ದಿನ ಆಟವೇ ಆಯಿತಲ್ಲ. ಪಾಠ ಓದುವುದೆಂದು?"—ಎಂಬ ಉಪದೇಶವು ತೊಡಗುವುದು. ಅವರು ಒಲು ದೊಡ್ಡ ಪಾಪಕಾರ್ಯದಲ್ಲಿ ಈ ತನಕ ಮುಳುಗಿದ್ದರೆಂಬ ಅಭಿಪ್ರಾಯವನ್ನು ಅವರಲ್ಲಿ ಮೂಡಿಸುವೆವು. ಅವರನ್ನು ಸುಧಾರಿಸುವುದಕ್ಕೆಂಬಂತೆ ಪಾಠಗಳು ತೊಡಗುವುವು. ಚರಿತ್ರೆ, ಭೂಗೋಲ, ಲೆಕ್ಕ, ಇಂಗ್ಲಿಷ್ ಇತ್ಯಾದಿ ಯಾವತ್ತು ಪಾಠಗಳ ಶಿಕ್ಷಣವು ತೊಡಗುವುವು. ಇಲ್ಲಿ ಅವರ ಬುದ್ಧಿ ಮಾಡಿದ ಅನ್ನದಂತೆ. ಇವು ವಿದ್ಯಾರ್ಥಿಯ ಜ್ಞಾನಶಕ್ತಿ ಮುಂಗವರಾಯಿತು. ಉಪಾಧ್ಯಾಯರಿಗೂ ಸ್ವತಂತ್ರ ಚಿಂತನೆಯು ಅವಶ್ಯವಿಲ್ಲ. ಪರೀಕ್ಷಾಸಮಯಕ್ಕೆ ಬಿಸ್ಸಿಗೆ ಇರಲಿ ಇಲ್ಲದಿರಲಿ ನೆಲ್ಲಿ ತುಂಬಿಸಿಕೊಳ್ಳುವುದು ಅವನ ಕೆಲಸ. ನಿಜಕ್ಕೂ ೮-೧೦ ವರುಷದ ಶಿಕ್ಷಣದಲ್ಲಿ ಹಲವು ವಿಷಯಗಳ ಹೇರುಪಂಡಿಯೇ ಅವನಾಗುವನು. ಚಿತ್ರಲೇಖನದಂಥ ವಿಷಯವು ನೀರಸವಾಗುವುದು. ಕಾರಣ, ಅಲ್ಲೂ ಅವನಿಗೆ ಸ್ವಾತಂತ್ರ್ಯವಿಲ್ಲ—ಅವನಿಗೆ ಕಂಡ ಚಿತ್ರವನ್ನು ಅವನು ಬಿಡಿಸಲಾಗದು. ಉಪಾಧ್ಯಾಯನು ಬೋರ್ಡಿನ ಮೇಲೆ ಬರೆದುದನ್ನು ನಕಲು ತೆಗೆಯಬೇಕು. ಈ ಅನುಕರಣೆಯ ಕೆಲಸದಂಥ ನಿರುತ್ಸಾಹಿ ಕೆಲಸವು ಇನ್ನಾವುದಿದೆ?

ಅಂಥ ವರುಷದ ಪ್ರಾಥಮಿಕ ಶಿಕ್ಷಣವು ದೊರೆಯಿತೆಂದರೆ ಒಂದೇ ಯಂತ್ರದಿಂದ ನಿರ್ಮಿತವಾದ ಗೊಂಬೆಗಳಂತೆ ಒಂದು ಶಾಲೆಯ ಬಾಲಕರೆಲ್ಲರೂ ಒಂದೇ ರೀತಿಯವರಾಗುವರು. ಪ್ರತಿಯೊಂದು ವ್ಯಕ್ತಿಯಲ್ಲೂ ಕಾಣಬೇಕಾದ ವೈಶಿಷ್ಟ್ಯ ವೈವಿಧ್ಯಗಳು ಅವರಿಂದ ಸಂಪೂರ್ಣವಾಗಿ ಲೋಪವಾಗುವುವು.

ಇಂಥ ಸಜೀವ ಗೊಂಬೆಗಳಿಂದ ಯಾವ ಜನಾಂಗವೂ ಉದ್ಧಾರವಾದುದೂ ಇಲ್ಲ, ಸುಖವಾದುದೂ ಇಲ್ಲ. ಜನಾಂಗವೊಂದರ ಸುಸಂತಾನಗಳು ಅಲ್ಲಿನ ವಿಲಕ್ಷಣ ಉತ್ಪಾದಕರ ಮೇಲೆ ಹೊಂದಿದೆ. ಇವರೇ ಜನಾಂಗದ ಕವಿಗಳು, ನಾಟಕಕಾರರು, ಹುಡುಗರು, ವೈಜ್ಞಾನಿಕರೂ ಆಗುವವರು. ಮಕ್ಕಳಲ್ಲಿ ಕ್ರಿಯಾಶಕ್ತಿಯು ಬೆಳೆಯುವಂತೆ ನಾವು ಪ್ರೋತ್ಸಾಹ ಕೊಟ್ಟೆವಾದರೆ, ಅವರಲ್ಲಿನ ಆನಂದವು ಉಕ್ಕೇರುವುದು. ಆನಂದವು ತುಂಬಿದಲ್ಲಿ ಉತ್ಸಾಹವು ಅಧಿಕ. ಉತ್ಸಾಹದಿಂದ ಸೃಷ್ಟಿಯು ಅಧಿಕ. ಇವೆಲ್ಲ ಪರಸ್ಪರ ಕೂಡಿರುವ ಶಕ್ತಿಗಳು. ಒಂದನ್ನು ಬಿಟ್ಟು ಒಂದಿರಲಾರದುವು. ಒಂದು ಜನಾಂಗದ ಜನರೆಲ್ಲ ಕೇವಲ ಯಾಂತ್ರಿಕವಾಗಿ ಕೆಲಸಮಾಡುವ ಮಾರ್ಗದಿಂದೂ ಅಥವಾ ಬಿಡುವಾಗಿ ಹಾಳಾದ ಗೂಡಿಯವರಂತೂ ತಿಳಿಯುವ ಅವರ ಈ ಉದ್ಯೋಗದಿಂದ ಆ ಜನಾಂಗದಲ್ಲಿ ಎಷ್ಟರ ಮಟ್ಟಿಗೆ ಆನಂದವು ನೆಲಸಬಹುದು. ಆನಂದವನ್ನು ಪಡಲಾರದೆ ಬಾಳಿ ಅವರು ಪಡೆದ ಮುಕ್ತಿ ಫಲವೇನು?

ನಮ್ಮ ಶಾಲೆಗಳು ಮೊದಲಿಗೆ ಮಕ್ಕಳ ಕ್ರಿಯಾಶಕ್ತಿ ಯಥಾರ್ಥ ಉತ್ಪಾದಕ ಶಕ್ತಿಯನ್ನು ಬೆಳೆಯಲು ಅವಕಾಶಕೊಡಬೇಕು. ಅದರ ಬೆಳವಣಿಗೆಗೆ ಬೇಕಾಗುವ ಸಾಮಗ್ರಿಗಳನ್ನು ಕೊಟ್ಟರೂ ಸಾಲದು. ಅಷ್ಟಲ್ಲ ಸ್ವಾತಂತ್ರ್ಯವೂ ದೊರೆಯಬೇಕು. ದಾಸರಾದವರು ಉತ್ಪಾದಕರಾಗಲು ಸಾಧ್ಯವಿಲ್ಲ. ಸ್ವಚ್ಛಂದ ಹಾರಾಡುವ ಹಕ್ಕಿಯ ಹಾಡೇನು? ಪಂಜರದಲ್ಲಿ ಬಂದಿಯಾದ ಹಕ್ಕಿಯ ಹಾಡೇನು?

ಹಾಗಾಯೇ ಮಕ್ಕಳ ಭಾವ ಪ್ರಕಟಣೆಗೆ ಅನುಕೂಲವಾಗುವ ಲಲಿತಕಲೆಗಳ ಶಿಕ್ಷಣವು ಮಕ್ಕಳಿಗೆ ಚಿಕ್ಕಂದಿನಿಂದಲೂ ದೊರೆಯಬೇಕು. ನಾಟಕ, ಸಂಗೀತ, ಕವಿತೆ, ನರ್ತನ, ಚಿತ್ರಲೇಖನ—ಇವೇ ಮೊದಲಾದುವು ಮಕ್ಕಳ ಶಿಕ್ಷಣದ ಜೀವಾಳಗಳಾಗಿರಬೇಕು.

(ಮುಂದರಿಯುವುದು)

"ವರ್ಣಭೇದಗಳೆನಿತು?"

ಕಳೆದ ಸಂಚಿಕೆಯಿಂದ ಮುಂದುವರಿಸಿದುದು

ಆದುದರಿಂದ ಒಬ್ಬ ಮನುಷ್ಯನು ಬ್ರಾಹ್ಮಣರಲ್ಲಿ ಜನ್ಮಗ್ರಹಣಮಾಡಿದ ಕೂಡಲೇ ಬ್ರಾಹ್ಮಣನಾಗುವುದೂ, ಶೂದ್ರನಲ್ಲಿ ಹುಟ್ಟಿದ ಕೂಡಲೇ ಶೂದ್ರನಾಗುವುದೂ ದುಸ್ತರ ವಿಷಯವಾಗಿದೆ. ಇದಕ್ಕೆ ಬಹು ಪ್ರಾಚೀನಕಾಲದಿಂದಲೂ ಹಿಂದೀಯ ಧರ್ಮಸ್ಮೃತಿ ಶಾಸ್ತ್ರಪುರಾಣ ಗ್ರಂಥಗಳಲ್ಲಿ ಅನೇಕಾನೇಕ ನಿದರ್ಶನಗಳು ದೊರೆಯುತ್ತವೆ. ಋಷಿಶ್ರೇಷ್ಠನಾದ ವಾಲ್ಮೀಕನಾಗಲೀ, ವಿಶ್ವಾಮಿತ್ರನಾಗಲೀ ಹುಟ್ಟುವಾಗಲೇ ಬ್ರಾಹ್ಮಣರಲ್ಲಿ ಜನ್ಮಧಾರಣ ಮಾಡಿಲ್ಲ. ಅವರು ತಮ್ಮ ಪೂರ್ವ ವರ್ಣದಲ್ಲಿ ಯಾವ ಯಾವ ಆಚಾರ ವಿಚಾರದಲ್ಲಿ ತಲ್ಲೀನರಾಗಿದ್ದರೆಂಬುದು ಸರ್ವವಿದಿತ ವಿಷಯವೇ ಸರಿ. ಅವರು ಮಹತ್ತರವಾದ ಬ್ರಹ್ಮಜ್ಞಾನವನ್ನು ಸಂಪಾದಿಸಿ ಲೋಕದಲ್ಲಿ ಅತೀವ ಶ್ರೇಷ್ಠರಾದ ಬ್ರಹ್ಮ ಋಷಿಗಳೆಂದು ಇಂದಿಗೂ ಪೂಜಿಸಲ್ಪಡುತ್ತಿರುವ ಕಾರಣಗಳೇನ? ಅದೇ ಅವರು ಕೈಕೊಂಡ ಗುಣಕ್ರಿಯಾ ಸಂಬಂಧ ಇನ್ನುಳಿದುದು ಅಸ್ಪೃಶ್ಯರ ಮಾತು.

ಇದೊಂದು ವರ್ಗವು ಕಲವೇ ಶತಮಾನಗಳ ಈಚಿಗೆ ಪ್ರಾದುರ್ಭವಿಸಿತೆಂದರೂ ಎನ್ನಬಹುದು. ಅಸ್ಪೃಶ್ಯ ವೆಂಬ ಶಬ್ದದ ಅರ್ಥವು ಸ್ಪರ್ಶಕ್ಕೆ ಯೋಗ್ಯರಲ್ಲ(?)ವೆಂಬುದಾಗಿದೆ. ಆದೇನು ಇಂಥಾ ಮನುಷ್ಯನನ್ನೇ ಮುಟ್ಟಬಹುದ, ಇಂಥಾ ಮನುಷ್ಯನನ್ನೇ ಮುಟ್ಟಬಾರದು ಎಂದು ಯಾವ ರೀತಿಯಲ್ಲಿಯೂ ನಿಶ್ಚಿತವಾಗಲಿಲ್ಲ. ಮಾನವ ಸಮಾಜದಲ್ಲಿ ಸ್ಪರ್ಶತೆಗೆ ಅಯೋಗ್ಯರೆಂಬ ವರ್ಗದವರು ಅಸ್ಪೃಶ್ಯರಾಗುವರು. ವಿನಾ ಅವರು ಜನ್ಮದಿಂದಾಗಲೀ, ವೈಶಿಷ್ಟ್ಯದಿಂದಾಗಲೀ, ಅವರಿಗೆ ಆ ತಿರಸ್ಕಾರವು ಬಾರದು. ಈ "ಅಸ್ಪೃಶ್ಯವರ್ಣ"ಕ್ಕೆ ಎಂದಿಗೂ ಸ್ಥಾನ ಕೊಡಲಾಗದು. ಮನುಷ್ಯನು ತನ್ನ ಶಕ್ತಿಯಿಂದಲೇ ತನ್ನನ್ನು ಕೆಡಿಸಿಕೊಳ್ಳುವಂತೆಯೂ ಸ್ವಹಸ್ತದಿಂದ ಆತ್ಮಘಾತವಾದ ಹಾಗೆಯೂ ತನ್ನ ನಡೆಯಲ್ಲಿಯೂ ನುಡಿಯಲ್ಲಿಯೂ ಪತಿತತನವನ್ನು ಪ್ರಕಟಗೊಳಿಸಿ ತನ್ನ ವರ್ಣವ್ಯವಸ್ಥೆಯ ಉಪಕ್ರಮ ತಪ್ಪಿಸಿಕೊಂಡಾಗ "ಅಸ್ಪೃಶ್ಯ"ನೆಂಬ ಪಾತ್ರಕ್ಕೆ [illegible] ಲೋಕದಲ್ಲಿ ಭಾಗಿಯಾಗುವನು.

[illegible] ಸಮಾಜದಲ್ಲಿ ಅನುವರ್ತಿಸದ [illegible] ವರ್ಣದ [illegible] ಸ್ವತೀವ ಮಾರ್ಗವಿಯದು. ಆದರೆ ಈ "ಅಸ್ಪೃಶ್ಯತೆ"ಯೆಂಬುದು ಪ್ರಸ್ತುತಕಾಲದಲ್ಲಿ ವಿಪರೀತಾರ್ಥಕ್ಕೆ ಒಳಗಾಗಿ [illegible] ಅದೊಂದು [illegible] ಜನರು ಮತಾಂಧ-[illegible] ದೊರೆವಂತೆ ಮಾಡಿರುವರು. ಈ ಕೆಲಸಕ್ಕೆ ಅನಾದಿ ಹೊಂದಿದ ಎಷ್ಟೋ ಮಂದಿ ಈಗ ತಾವೇ ಸ್ಪರ್ಶತೆಗೆ ಯೋಗ್ಯರಾಗಿ ಕಾಣುತ್ತಾರೆ.

ಹೇರಂತು ಕೆಲವರು ಇನ್ನೂ ಅವರ ಪ್ರಾದುರ್ಭಾವವನ್ನು ಆಕ್ಷೇಪಿಸಿ, ಮತ್ತೂ ಮತ್ತೂ ಅವರ ದಾರಿಗೆ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಅಡ್ಡ ಒಡ್ಡುತ್ತಿರುವ ಯೋಚನೆಯು ಎಷ್ಟು ಆಶ್ಚರ್ಯಕರ [illegible] ಬಾವಿ [illegible] ಹಾಕ್ಕೆ ಕೂಡ ಸ್ನಾನಕ್ಕು ಮಾಡುವಂತಿಲ್ಲದ [illegible] ಅವೂ ಅಲ್ಲದ ಕೆಲವು ಬ್ರಾಹ್ಮಣ( ) ನನ್ನಿಸಿಕೊಳ್ಳುವವರು [illegible] ಅವಲಂಬಿಸಿರುವ ಕೆಲವು ಮಕ್ಕಳನ್ನು ಅವಲೋಕಿಸಿ [illegible] ಅಸ್ಪೃಶ್ಯ [illegible] ಅರ್ಥವು [illegible] ರೀತಿಯಲ್ಲಿ ಉಪಯೋಗಿಸಲ್ಪಡದಲ್ಲವೆಂದು ಕಾಣುವುದೆ. ಅವರೇ [illegible] ಹೊಂದುವುದಿಲ್ಲ! ಅವರೇನೋ ಏಷ್ಟು [illegible] ಸ್ವತಂತ್ರ ಸಮಾಜದ [illegible] ಉತ್ಸಾಹವು, ಪ್ರತೀಕಾರವೂ [illegible] ಮೇಲೂ ಒಡವನ ಮೇಲೂ [illegible] ಸಮಾನತೆಯ [illegible] ಆದರೆ [illegible] ಕ್ಕೇನೇ ಜನರು ಭಯ ಪಟ್ಟು ವರ್ಣದೊಳಗೆ [illegible] ವನ್ನು [illegible] ಕೊಳ್ಳುತ್ತಿರುವರು. ಹೀಗಿರಲು ಇನ್ನು ಒಬ್ಬ ಮಾಯಾವಾದಿನಿಂದ ವರ್ಣಘಾತ ವರ್ಣಭೇದ ನಿಂದು [illegible] ದಕ್ಕು [illegible] ಇಲ್ಲ. ಅದು [illegible] ಸಮಾಜದ [illegible] ಅವನ್ನು [illegible] ವರ್ಣಭೇದ ಅಸ್ಪೃಶ್ಯತೆ [illegible] ವಾಗಿ ವಿಧಿಸುವುದಿಲ್ಲದೆ, ಅವರ ಜನ್ಮದಿಂದಾಗಲೀ ವಿಶ್ವರೂಪದಿಂದಾಗಲೀ ಎಂದು ಅಲ್ಲವೆಂಬುದು ಸಿದ್ಧಾಂತ!!!

53 ವರ್ಷಗಳ ಅನುಭವಸಿದ್ಧ ಮತ್ತು ಸಾವಿರಾರು ಜನರಿಂದ

ಉಪಯೋಗಿಸಲ್ಪಟ್ಟ ಔಷಧಗಳು.

1. **ಧಾತುಪುಷ್ಟಿ ಲೇಹ**—ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲಿ ಧಾತುವು ನಷ್ಟವಾಗುವಿಕೆ, ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ದಾಹ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಚ್ಚುವದು ಜ್ಞಾಪಕ ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು ಕ್ರಯ ಡಬ್ಬಿ 1ಕ್ಕೆ ರೂ 2—8—0. ಮೂರು ಡಬ್ಬಿಗಳಿಗೆ ರೂ 7

2. **ಅಶೋಕಾರಿಷ್ಟ ಮತ್ತು ಮಾತ್ರೆ**—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆ ನೋವು, ಸೊಂಟ ನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಒಳಜ್ವರ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಅತೀ ಶೀಘ್ರದಲಿಯೇ ಗುಣಪಡಿಸುವುದು ಅಶೋಕಾರಿಷ್ಟ ಮತ್ತು ಮಾತ್ರೆಗಳು ಸಾವಿರಾರು ಹೆಂಗಸರಿಗೆ, ಅಂತರಿಕ ಆರೋಗ್ಯವನ್ನು ಒದಗಿಸಿ ಮನೋಭಿಲಾಷೆಯನ್ನು ಪೂರಯಿಸಿರುವವು ಕ್ರಯ 1 ಬಾಟಲಿ ಔಷಧಕ್ಕೂ, ಒಂದು ಡಬ್ಬಿ ಮಾತ್ರೆಗೂ ರೂ 2—4—0 ಮೂರು ಬಾಟಲಿ ಮತ್ತು ಡಬ್ಬಿಗಳಿಗೆ ರೂ 6—4—0.

3 **ಮೇಹ ಕುಠಾರ**—ಇದು ಮೂತ್ರಸ್ಥಾನದಿಂದ ಕೆಂಪು ಬಿಳಿದು, ಹಳದಿ ಬಣ್ಣದ ಹೋ ಕಿನ್ನು ಕೀವನ್ನೂ ವ್ರಣವನ್ನೂ ಉರಿಯನ್ನೂ ಗುಣಪಡಿಸುತ್ತದೆ ಡಬ್ಬಿ 1ಕ್ಕೆ ರೂ 2—8—0 3ಕ್ಕೆ ರೂ

4. **ಮಲೇರಿಯಾ ನಿವಾರಣ**—ದಿನಬಿಟ್ಟು ಬರುವ ಜ್ವರ, 2 ಯಾ 3 ದಿವಸಕ್ಕೊಂದುಸಾರಿ ಬರುವ ಜ್ವರ, ನಡುಗಿ ಬರುವ ಜ್ವರ, ಜ್ವರ ಗೆಡ್ಡೆಯಿಂದ ಬರುವ ಜ್ವರವನ್ನು ನಿಲ್ಲಿಸಿ ಜ್ವರಗಡ್ಡೆಯನ್ನು ಕರಗಿಸಿ ಶಕ್ತಿಯನ್ನು ಉಂಟುಮಾಡುತ್ತದೆ ಬಾಟ್ಲಿ 1ಕ್ಕೆ ರೂ 1—8—0 8 ಬಾಟ್ಲಿಗಳಿಗೆ ರೂ 4—4—0

5. **ಬಾಲಗ್ರಹ ಗುಟಿಕೆ**—ಬಾಲಗ್ರಹಕ್ಕೆ, ಕಫಕ್ಕೆ, ಜ್ವರಕ್ಕೆ ರಾಮಬಾಣ. ಬಾಟ್ಲಿ 1ಕ್ಕೆ ಆಣೆ 10 3ಕ್ಕೆ ರೂ. 1—12—0.

6 **ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ** -ಬಾಣಂತಿಯರಿಗೆ ಬಾಟ್ಲಿ 1ಕ್ಕೆ ರೂ 1—8—0 3ಕ್ಕೆ 4 4—0

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ ಕಾಯಿಲೆ ಸಂಗತಿ ವಿವರವಾಗಿ ಬರೆ ದ್ದ ರೋಗಕ್ಕೆ ತಕ್ಕವಾದ ಔಷಧ ರವಾನಿಸಬಹುದು ಕೆಟಲಾಗು ತರಿಸಿ ನೋಡಿರಿ

ಎಮ್. ಗಣಪಯ್ಯ ಎಂಡ್ ಸನ್ಸ್, ರಥಬೀದಿ, ಮಂಗಳೂರು, ದ ಕ

ಆಶ್ಚರ್ಯಕರ ಔಷಧಿ

ರಕ್ತಾತಿಸಾರ ಅತಿಸಾರ, ಅಜೀರ್ಣದಿಂದಾದ ಎಂತಹ ಉಚ್ಚಾಟವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟುದು

HEDAJURIK DYSENTERY CHOLERA CURE

ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟುದು

ಔಷ್ಧಿನ ಕ್ರಯ ಆಣೆ 0—15—0 2 ಔಷ್ಧಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ ಕನ್ನಡಾ

"If every Wife knew what every Widow knows every Husband would be Insured

PLACE YOUR LIFE ASSURANCE WITH
THE SOUTH INDIAN
Securing for your clients
1 Low rates of Premium
2. Liberal Policy Conditions.
AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE
For terms of Agency please apply to—
H R K IYENGAR
Chief Agent
The S I G A Co, Ltd,
Sanyasigudde MANGALORE
Managing Agents –
K C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರೀಮಿಯಂ ದರಗಳು ಕಡಿಮೆ!
ಶರ್ತಗಳ ತೀರಾ ಸುಲಭ!
ಕನ್ನಡ ಜಿಲ್ಲೆ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನನ್ನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್ ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು

ಉತ್ತಮ ಪುಸ್ತಕಗಳು ಬೇಕೇ?

ಹಾಗಾದರೆ ಶ್ರೀ ಶೇಷಾಚಲ ಗ್ರಂಥಮಾಲೆಯ

೧ ಕಳವೋ–ಕೊಲೆಯೋ–ಬೆಲೆ ೬ ಆಣೆ, ೨ ಲಲಿತ ಬೆಲೆ ೧೦ ಆಣೆ ೩ ರಾಕಾಚಂದ್ರ ಬೆಲೆ ೮ ಆಣೆ, ೪ ವಿಚಿತ್ರ ಸಂಸಾರ ಬೆಲೆ ೬ ಆಣೆ,

ಈ ಹೊಸ ಪುಸ್ತಕಗಳನ್ನು ತರಿಸಿ ಓದಿ ಖಾತ್ರಿಮಾಡಿಕೊಳ್ಳಿರಿ

ಮಹಾ ಸಾಧು ತುಕಾರಾಮ ಬುವಾ ಬೆಲೆ ೧ ರೂ ಶ್ರೀ ಸಮರ್ಥ ರಾಮದಾಸರು ಬೆಲೆ ೧–೨–೦ ಈ ಅತ್ಯುತ್ತಮ ಚರಿತ್ರಾತ್ಮಕ ಪುಸ್ತಕಗಳೂ ಹಾಗೂ ಕಳ್ಳನಿಗೆ ಕಾಣಿಕೆ ಬೆಲೆ ೮ ಆಣೆ ಎಂಬ ಸುಮನೋಹರ ಪತ್ತೇದಾರಿ ಕಾದಂಬರಿಯು ಅನೇಕ ಆವೃತ್ತಿಯೂ ಮಾರಾಟಕ್ಕೆ ಸಿದ್ಧವಾಗಿವೆ

ಇವಲ್ಲದೆ ನಮ್ಮಲ್ಲಿ ಐತಿಹಾಸಿಕ ಸಾಮಾಜಿಕ, ಪೌರಾಣಿಕ ಕಥಾ ಕಾದಂಬರಿಗಳೂ, ನಾಟಕಗಳೂ, ಧಾರ್ಮಿಕ ಪಾರಮಾರ್ಥಿಕ ಮುಂತಾದ ೧೦೦–೧೫೦ ಬಗೆಯ ಪುಸ್ತಕಗಳೂ ದೊರೆಯುತ್ತವೆ ಕ್ಯಾಟಲಾಗ್ ತರಿಸಿ ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಭಿ ಪ ಕಾಳೆ
ಪ್ರೊಪ್ರೈಟರ್ ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ
ಪೋ: ಆನಂದವನ ಜಿ ಧಾರವಾಡ

INSURE WITH
The Popular Insurance Co. Ltd.
Head Office MANGALORE S India
First of its kind in the West Cost
CHAIRMAN
Dewan Bahadur N Subba Rao
STRIKING FEATURES
Policy Conditions Liberal
Claims Settlement Prompt
MANAGEMENT PURELY INDIAN
Ensure the Absolute Safety Comfort and Happiness of your Dear Ones
WANTED INFLUENTIAL AGENTS
LIBERAL TERMS TO COMPETENT MEN
For further particulars apply to the Head Office

ಡಾಕ್ಟರ ವಾಮನ ಗೋಪಾಳರವರ
ಐಓಡಾಯಿಜ್ಡ ಸಾರ್ಸಪರಿಲ.



ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ ಮುಂಬಯಿ ೨ ಸೊಕೆಸ್ಸ ಪಾ ಕಂಪೆ
ವಸ್ತ್ರವ್ಯಾಪಾರ ಆಂಗ್ಲೋ ಅರಬ್ ಮೆಡಿಕಲ್ ಹಾಲ್ ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!

ಕಾಫಿ ಪ್ಲೆಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚಕ್ ರೋಲ್‌ಗಳು

ಮೂರು ಸ್ಕ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

EDITED, PRINTED & PUBLISHED BY V S. KAMATH AT M T A SHARADA PRESS, MANGALORE

ಚಂದಾ ನಿರ್ಣಯಃ— ವರ್ಷ ಒಂದಕ್ಕೆ ರೂಪಾಯಿ 2—0—0   Registered ಎಂ. ಆರ್. ೩೮೨.   ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ತರುಷವಾಯಿತೆ? ಮತ್ತೆ ವಿಷವ ಮಡುಕ ಬರುತಿರುವ ॥
ಗರಲಕವರಂಜಿದರೆ? ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು । ೧ ॥

ಪುಸ್ತಕ ೨೬.   ಮಂಗಳೂರು ತಾ ೫ನೇ ಶುಕ್ರವಾರ ಫೆಬ್ರುವರಿ ೧೯೩೨   (5—2—'32.)   ಸಂಚಿಕೆ ೬

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI.   Branches:—COONDAPOOR & Mangalore
ಹೆಡ್ ಆಫೀಸು:— ಉಡುಪಿ   ಶಾಖೆ ಕುಂದಾಪುರ ಮ. ಮಂಗಳೂರು

Authorised Capital Rs. 3,50,000   Subscribed & Called up Rs. 2,25,000.
ನಿಯಮಿತ ಮೂಲಧನ ರೂ 3,50,000. ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಎತ್ತಿದ ಮೂಲಧನ ರೂ. 2,25,000

STATEMENT OF ASSETS & LIABILITIES AS ON 31ST DAY OF JANUARY 1932

	Capital and Liabilities			Property and Assets	
1	Paid up Capital	Rs 2,25,000—0—0	1	Premises Building, Furniture etc	Rs [illegible]
2	Reserve and other funds	„ 2,04,[illegible]	2	Government securities & Treasury Bills	„ [illegible]
3	Deposits	„ 19,[illegible]	3	Authorised Investments	„ [illegible]
4	Due to Bankers	„ [illegible]	4	Bills for collection	442 [illegible]
5	Sundries	„ 87,[illegible] 10	5	Sundries	[illegible]
6	Bills for collection per cont	11,442 4 0	6	Cash in hand & with bankers	[illegible]
	Total	25,37,369 10 5		Total	[illegible]

Office of the Corporation, UDIPI, S K 2—2—'32

N. ANANDA RAO
Secretary & Manager



ಅಮೃತಾಂಜನ.

ಶೀತ ತಮ್ಮು ತಲೆನೋವು ವಾತ ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ಬಂದು ತೊಂದರೆ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳನ್ನು ಇದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತವೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ. ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳು ಇರುವುದಿಲ್ಲ. ಕ್ರಯ, ಅಂದವಾದ ಟಿನ್ನಿನ ಒಂದು ಬಾಟ್ಲಿಗೆ 8 ಆಣೆಗಳು. ಎಲ್ಲಾ ಕಡೆಗಳಲ್ಲೂ ದೊರಕುತ್ತದೆ.

ಗಜಕರ್ಣ ಮುಲಾಮು — (ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು. ಎರಡೇ ಸಲದ ತಿಕ್ಕುವಿಕೆಯಿಂದ ಗುಣವಾಗುತ್ತದೆ. ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ. ಟಿನ್ನಿಗೆ 0—4 ಡಜನ್ನಿಗೆ [illegible]

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ವನ್ನು ಕೊಡುವುದರಿಂದ ಮಕ್ಕಳು ಸಶಕ್ತರೂ, ಪುಷ್ಟರೂ ಮತ್ತು ಸಂತೋಷಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪನಿ,
ಗಿರಗಾಂವ, ಮುಂಬಾಯಿ ೪.

ಏಜಂಟರು—ದಿ ಗುಲಾಬ್ ಮಾರ್ಟ್, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ.

ತ್ವರೆಮಾಡಿರಿ   ತ್ವರೆಮಾಡಿರಿ

೧೯೩೨ನೇ ವರ್ಷದ ಪಾಕೆಟ್ ಡೈರಿಗಳು

ದೊಡ್ಡ ಸೈಜ್	0—10—0
ದೊಡ್ಡ ಸೈಜ್ ಮುಚ್ಚಿಗೆ ಸಹಿತ	0—12—0
ಸಣ್ಣ ಸೈಜ್	0—[illegible]—0
„ „ ಮುಚ್ಚಿಗೆ ಸಹಿತ	0—8—0
ಸಣ್ಣ ಸೈಜ್ ಸ್ಲಿಪ್ ಎಂಡ್	0—[illegible]—0

ವ್ಯಾಪಾರಸ್ಥರಿಗೂ ರಖಂ ತೆಗೆದುಕೊಳ್ಳುವವರಿಗೂ ಧಾರಾಳ ಕಮಿಶನು ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಮೆನೇಜರ
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

[illegible] ಗೆ ಏನು?

ವಿಧವೆಯರೆ ಹೆಸರೆತ್ತಿದೊಡನೆ, ಅವರ ಪುನರ್ವಿವಾಹದ ಪರಿತು ಪ್ರಸಂಗವು ಹೊಡೆದಿದ್ದೊಡನೆ, ಆಚಾರಸಂಪನ್ನರೆಂದು ಪ್ರಸಿದ್ಧರಾದ, ಬೂಸಲೇರುವ ಸಿದ್ಧಾಂತಗಳು ನಮ್ಮ ಹಿಂದೂ ಸಮಾಜದಲ್ಲಿರುತ್ತಾರೆ. ಅವರಿಗೆ ಪುನರ್ವಿವಾಹವೆಂದರೆ ಹಾಲಾಹಲದಂತೆ ತೋರುತ್ತದೆ.

ವಿಧವೆಯರು ಪುನರ್ವಿವಾಹವಾಗಬಾರದೆಂದು ತಲೆಗಟ್ಟುವ ಈ ಸಂಕುಚಿತ ಸ್ವಭಾವದ ಪುರುಷರುಗಳು ಈ ಕಾಲದಲ್ಲೂ ಏಕೆ ತಮ್ಮ ಮನೋಭಾವವನ್ನು ಬದಲಾಯಿಸಲಾರರೆಂದು ತಿಳಿಯದು.

ವಿಧವೆಯರೆಲ್ಲರೂ ಪುನರ್ವಿವಾಹವಾಗಬೇಕೆಂಬುದಲ್ಲ! ಯುವತಿಯರಿದ್ದು, ಸಂತಾನಾಪೇಕ್ಷಿತರಿರುವುದಾದರೆ, ಅಂತಹ ವಿಧವೆಯರಿಗೆ ಪುನರ್ವಿವಾಹವನ್ನು ಮಾಡಲೇ ಬೇಕು. ಅವರನ್ನು ಯೋಗ್ಯ ವರ ಅಥವಾ ವಿಧುರರಿಗೆ ಕೊಟ್ಟು ಪುನರ್ವಿವಾಹವನ್ನು ಮಾಡಲೇಬೇಕು.

ಲೋರ್ಡ್ ಬೆಂಟಿಂಕರ ಕಾಲದಲ್ಲಿ ಸಹಗಮನ ಪದ್ಧತಿ ಇದ್ದಿತು. ಆಗಿನ ವಿಧವೆಯರು "ಸತಿ"ಯರಂತೆ ಪತಿಯ ಚಿತೆಯಲ್ಲಿ ಬಿದ್ದು ಮರಣ ಹೊಂದುತ್ತಿದ್ದರು. ಕೆಲವು ವಿಧವೆಯರು ಗಂಡನೊಡನೆ ಸಹಗಮನವನ್ನು ಮಾಡಲೊಪ್ಪದೆ, ತಪ್ಪಿಸಿ ಕೊಂಡರೂ, ಅವರನ್ನು ಪುರಾಣವಾದಿಗಳ ಕಠಿಣ ಹಸ್ತವು ಬಲಾತ್ಕಾರದಿಂದ ಬೆಂಕಿಗೆ ದೂಡುತ್ತಿದ್ದವು. ಧಿಕ್ಕಾರ ಆ ಕೈಗೆ!!!

ಆಗಿನ ಸ್ಥಿತಿಯು ಹಾಗಿದ್ದಿತು. ಸ್ತ್ರೀಯರ ಮನೋಬಲವೂ ಆತ್ಮಸ್ಥೈರ್ಯ ಮತ್ತು ಗೌರವಗಳು ಅಸ್ತಿತ್ವವು ಪತಿಪ್ರೇಮವು ಅಷ್ಟಿದ್ದಿತು. ಆದುದರಿಂದ ಆಗಿನವರು ಘೋರವಾದ ಯಾತನೆಗೆ ಸ್ವೇಚ್ಛಾವರ್ತಿಗಳಾಗಿ ಹಾರುತ್ತಿದ್ದರು.

ಈಗಿನ ಹಿಂದೂ ಸ್ತ್ರೀಯರಲ್ಲಿ ಅಂತಹ ಮಾನಸಿಕತೆಯು ಇಲ್ಲವೆಂದಲ್ಲ. ಈಗಿನ ಸ್ತ್ರೀಯರು ಅಷ್ಟೊಂದು ನಿರ್ಬಲೆಯರೆಂದಲ್ಲ. ನವ ಸಂಸ್ಕೃತಿಯು ಅಂತಹ ಯಾತನೆಯನ್ನು ಸಹಿಸುವಷ್ಟು ಶಕ್ತಿಯುತವಾಗಿಲ್ಲ. ಸಿದ್ಧವಿಲ್ಲ.

ಬಾಲ್ಯವಿವಾಹವೆಂಬ ಅವಿವೇಕದ ವರ್ತನೆಯಿಂದ ಎಷ್ಟೊಂದು ಪುರಾಣವಾದಿಗಳು ತಮ್ಮ ಮುದ್ದು ಹೆಮ್ಮಕ್ಕಳ ಸುಂದರಿಯರ ಗುಣಭರಿತೆಯರ ಜೀವನವನ್ನು ಮಣ್ಣುಗೂಡಿಸಲಿಲ್ಲ. ಎಷ್ಟೋ ರಮಣಿಯರು ಪತಿರಹಿತೆಯರಾದುದರಿಂದ ಈಗಲೂ ಕತ್ತಲೆಯ ಕೋಣೆಯಲ್ಲಡಗಿ ಬಿದ್ದುಕೊಂಡಿರುವುದಿಲ್ಲ!! ಅವರ ಯಾತನೆಯನ್ನು ಕಂಡವರಿದ್ದಾರೆಯೇ.

ಕೆಲವು ಮನೆಗಳಲ್ಲಿ ವಿಧವೆಯರು (ಅವರು ಮುಂಡೆಯರಿರಲಿ ಯೌವನೆಯರಿರಲಿ) ಬೇಗ್ಗೆ ಅಂಗಳಕ್ಕೆ ಬರಬಾರದೆಂದೂ ಮನೆಯ ಇನ್ನಿತರರು ಹಾಸಿಗೆಯಿಂದೇಳುವಾಗ ನೋಡಸಿಗಬಾರದೆಂದೂ ನಿರ್ಬಂಧವಿರುತ್ತದೆ. ಪೂಜೆಯ ಕೋಣೆ ಮಂಗಲೋತ್ಸವ ಹೂವಿನ ಪರಿಮಳ ಒಳ್ಳೆವಸ್ತ್ರ ಆಭರಣಗಳಂತೂ ವಿಧವೆಯರಿಗೆ ಉಚಿತವಾಗಿಯೂ ಇಲ್ಲ.

ಅಷ್ಟೇಕೆ? ವಿಧವೆಯರಾದ ಪವಿತ್ರ ರಮಣಿಯರಿಗೆ ಹೊಟ್ಟೆಗೆ ಸಾಕಾಗುವಷ್ಟು ಅನ್ನವನ್ನು ಹಾಕಬಾರದೆಂದೂ ಅವರು ತಮ್ಮ ಜೀವನಯಾತ್ರೆಯನ್ನು ಆದಷ್ಟು ಬೇಗನೇ ಅಂತ್ಯಗೊಳಿಸಬೇಕೆಂದೂ ಅಭಿಪ್ರಾಯವಿದೆ. ಇದನ್ನು ಕಂಡು ಆಶ್ಚರ್ಯ ಸೂಚಿಸುವವರೆಷ್ಟು ಮಂದಿ?

ಪತಿಯನ್ನು ಕಳೆದುಕೊಂಡವರು ಆತ್ಮಹತ್ಯವನ್ನು ಮಾಡಲೇ ಬೇಕು ಎಂದು ಹೇಳುವುದೊಂದು ಇನ್ನು ಉಳಿದಿರುತ್ತದೆ. ಮಿಕ್ಕ ಎಲ್ಲಾ ಬಗೆಯ ಕಷ್ಟಪರಂಪರೆಗಳನ್ನು ವಿಧವೆಯರಿಗೆ ಕೊಟ್ಟು ಪುರಾಣವಾದಿಗಳು ಬೀಸುತ್ತಿರುವರು!

ವಿವಾಹವಾಗಬೇಕೆಂದು ಇಚ್ಛಿಸುವ ವಿಧವೆಯರನ್ನು ಮದುವೆಯಾಗುವ ಧೈರ್ಯಶಾಲಿಗಳು ಹಿಂದೂ ಸಮಾಜದಲ್ಲಿ ಮುಂದೆ ಬರಬೇಕು. ಮುಂದವಾದಿಗಳ ಮಂದ ಬುದ್ಧಿಯನ್ನು ಒಗ್ಗಿ ಬಡಿದು ನೆಲಸಮಮಾಡಿ ಸಮಾಜದಲ್ಲಿನ ದುಷ್ಟ ಪದ್ಧತಿಗಳ ಕಟ್ಟನ್ನು ಒಗೆದು ಬಿಡುವ ಧೈರ್ಯವಂತರು ಎದ್ದೇಳಬೇಕು. ಎಂದರೆ ನಮ್ಮ ದೇಶದ ವಿಧವೆಯರ ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲ.

ನಮ್ಮ ಸ್ತ್ರೀ ಜನಾಂಗದ ತಿರುಳಿಗೆ ಇದೊಂದೇ ರೀತಿಯಲ್ಲಿ ಗೆದ್ದಲು ಹಿಡಿದುದಲ್ಲ! ಅನೇಕ ರೀತಿಯಲ್ಲಿನ ಕುಂದುಕೊರತೆಗಳಿವೆ.

ದೇವದಾಸೀ ಪದ್ಧತಿಯೆಂಬುದು ಹಿಂದೂಸ್ಥಾನದಲ್ಲಿ ಬಹು ಪುರಾತನ ಕಾಲದಿಂದಲೂ ಆಚರಣೆಯಲ್ಲಿ ಬರುತ್ತಿರುವುದು. ಈ ಪದ್ಧತಿಯು ಅನಾಥ ಬಾಲಿಕೆಯರ, ತರುಣಿಯರ ರಕ್ಷಣಾರ್ಥವಾಗಿಯೆಂದೇ ಕಲ್ಪಿಸಲ್ಪಟ್ಟಿತು.

ಕೆಲವು ಕಾಲದ ತನಕ ಈ ಪದ್ಧತಿಗೆ ಸಿಕ್ಕಿದ ರಮಣಿಯರು ದೇವಸ್ಥಾನಗಳಲ್ಲಿ ಭಕ್ತಿ ಸೇವೆಗಳಲ್ಲಿ ಕಾಲ ಕಳೆದರು. ಈಗ ಕೊನೆಗಳಲ್ಲಿ (ನರ್ಸ್) ದಾದಿಗಳು [illegible] ನಾಳೆಯಮಂತೆ ಅವರೂ ಇದ್ದರು.

ಅವರ ಕ್ರಮೇಣ ಆ ದೇವಸ್ಥಾನಗಳ ಅಧಿಕಾರಿಗಳ ಹೀಯವಾದ ಕಾಮದೃಷ್ಟಿಯು ರಕ್ಷಣೆಯಲ್ಲಿದ್ದ ಆ ರಮಣಿಗಳ ಮೇಲ್ಬಿತ್ತು.

ದೇವಸ್ಥಾನದೊಳಗೆ ಅರ್ಚಕರು ಅಲ್ಲಸಲ್ಲದ ಪಾಪವೃತ್ತಿಗೆ ಕೈಯಿಕ್ಕಿ ಎಷ್ಟೋ ತರುಣಿಯರ ಜೀವನವನ್ನು ಮಣ್ಣುಗೂಡಿಸಿದರು.

ಕೆಲ ಸಮಯದ ವರೆಗೆ ಈ ಗುಟ್ಟು ಹೊರಬೀಳಲಿಲ್ಲ. ಆದರೆ ಕಾಲನಲ್ಲವೇ? ಸ್ವಲ್ಪ ಕಾಲದ ನಂತರ ಅರ್ಚಕರ ನೀಚ ವೃತ್ತಿಯು ಬಯಲಿಗೆ ಬಿತ್ತು.

ಹಿಂದೂ ಜನಾಂಗದ ಕಣ್ಣುಗಳೆರಡರಲ್ಲಿ ಒಂದು ಕಣ್ಣಾದ ಸ್ತ್ರೀ ಜನಾಂಗವನ್ನು ಉದ್ಧರಿಸದೇಹೋದರೆ ಈ ಪರಿಸ್ಥಿತಿಯು ಸಂಪೂರ್ಣ ಹೊರಗೋಗುವುದು ತೀರ ಅಗತ್ಯವಿದೆ.

ನಮ್ಮ ಸ್ತ್ರೀ ಜನಾಂಗಕ್ಕಿರುವ ಇನ್ನೊಂದು ಘೋರ ಕೊರತೆಯೆಂದರೆ ("White Slave Trade") ವೇಶ್ಯಾ ಪದ್ಧತಿ.

ದೇಶದ ತರುಣರ ಪಾವನ ಜೀವನವನ್ನು ಹಾಳುಗೈದು ತಮ್ಮ ದೇಹವನ್ನು ಸಿಕ್ಕ ಸಿಕ್ಕಂತೆ ಮಾರಿ, ನೀಚ ಮತ್ತು ಪಾಪಕರ ವೃತ್ತಿಯಿಂದ ಜೀವಿಸುವ ಸಾವಿರಾರು (?) ಸ್ತ್ರೀಯರಿರುವರು. ಅವರನ್ನು ದ್ಧಾರ ಮಾಡುವುದು ದೇಶದ ಕರ್ತವ್ಯವಿದೆ.

ಅಸಹನೀಯ ಯಾತನೆಗೊಳಗಾಗದೆ ಸ್ತ್ರೀಯರು ಇಂತಹ ನೀಚ ವೃತ್ತಿಗಿಳಿಯುವುದಿಲ್ಲ. ಅನಾಥರಾಗಿ ಬಡವರಾಗಿ ದಾರಿ ಕಾಣದೆ ಈ ವೃತ್ತಿಗಿಳಿದವರೇ ಹೆಚ್ಚಲ್ಲದೆ, ಕಾಮ ಪಿಶಾಚಿಗೆ ಬಲಿಬಿದ್ದ ಈ ವೃತ್ತಿಗಿಳಿದವರು ತೀರ ವಿರಳ ಇಲ್ಲವೆಂದೇ ಹೇಳಬಹುದು.

ದೇಶದಲ್ಲಿ ವೇಶ್ಯಾಸ್ತ್ರೀಯರ ಸಂಖ್ಯೆಯು ಹೆಚ್ಚುವುದಕ್ಕೆ ಮೊದಲನೆಯದಾಗಿ ಸಮಾಜದ ಕಟ್ಟು ಕಟ್ಟಳೆಗಳೂ ಎರಡನೆಯದಾಗಿ ಬಡತನವೂ ಕಾರಣಗಳಾಗಿರುತ್ತವೆ. ಇವುಗಳ ಶಕ್ತಿಯು ಇಲ್ಲದಿರುತ್ತಿದ್ದರೆ ದೇಶದಲ್ಲಿ ವೇಶ್ಯಾಸ್ತ್ರೀಯರೆಂಬ ಪಂಗಡಗಳಿರುತ್ತಿದ್ದಿಲ್ಲ.

ಮುಂಬಾಯಿ ಮೊದಲಾದ ಕಡೆಗಳಲ್ಲಿ ವೇಶ್ಯಾಸ್ತ್ರೀಯರನ್ನು ಪಟ್ಟಣದ ಹೊರಗಟ್ಟುವ ಸಿದ್ಧತೆ ಮಾಡಿರುವರು. ಈ ಕ್ರಮವು ಇಡೀ ದೇಶಕ್ಕೂ ಹರಡಬಹುದೆಂದು ಊಹಿಸಲ್ಪಟ್ಟಿದೆ.

ಈ ಕ್ರಮವು ಇಡೀ ದೇಶದಲ್ಲಿ ಹಬ್ಬಿ ಕೊಂಡರೆ ಮತ್ತು ಹಿಂದೀಯರ ಗತಿಯನ್ನು ಹೇಳತೀರದು. ನಮ್ಮ ಅವಿವೇಕದ ವರ್ತನದಿಂದ ಮುಂದಕ್ಕೆ ವೇಶ್ಯಾಸ್ತ್ರೀಯರು ಪ್ರಾಣತ್ಯಾಗಕ್ಕೂ ಪರಧರ್ಮಾವಲಂಬನೆಗೂ ಕೈ ಹಚ್ಚಲು ಹಿಂದೆಗೆಯಲಿಕ್ಕಿಲ್ಲ.

ಅಸ್ಪೃಶ್ಯತೆಯ ಭೂತದಿಂದಾಗಿ ಸಾವಿರಗಟ್ಟಲೆ ಹಿಂದೀಯರು ಅನ್ಯಮತಕ್ಕೆ ಸೇರುವರು. ಇನ್ನು ಸ್ತ್ರೀ ಬಹಿಷ್ಕಾರದಿಂದಾಗಿ ಏನೆಲ್ಲ ಆಗಲಿರುವುದೋ ತಿಳಿದು ಬಂದಿಲ್ಲ. "ನಾನು"

ಪ್ರಕಟಣೆ.

ಮಂಗಳೂರು ತಾಲೂಕು ಮಾನಂಪಾಡಿ ಗ್ರಾಮದಲ್ಲಿರುವ ಪಾಂಡುರಂಗ ಭಟ್ರ ಮಗ ಸುಬ್ರಾಯ ಭಟ್ಟನು ಸರ್ವ ಜನರಿಗೆ ತಿಳಿಸಪಡಿಸುವದೇನಂದರೆ—

ನಾನು ಮತ್ತು ನನ್ನ ಮಗ [illegible] ತಾ ೧೦–೭–೧೯೩೦ರಲ್ಲಿ ಮಾಣೂರು ಅನಂತ ಭಟ್ರ ಮಗ ಬಾಲಣ್ಣ ಭಟ್ರಿಗೆ ರೂಪಾಯಿ 1999ಕ್ಕೆ ಒದಕೊಟ್ಟ ಕ್ರಯ ಚೀಟಿನಲ್ಲಿ ಒಳಪಡಿಸಿದ ಸೊತ್ತುಗಳ ಪೈಕಿ ಸದರಿ ಬಾಲಣ್ಣ ಭಟ್ರು ರೂಪಾಯಿ ೧೭೭೦–೯–೦ ಮಾತ್ರ ಸಲ್ಲಿಸಿರುತ್ತಾರೆ. ಬಾಕಿ ಏನೂ ಹಣ ಸಲ್ಲಿಸಲಿಲ್ಲ. ಆದ್ದರಿಂದ ಅವರಿಂದ ಸದರಿ ಆಸ್ತಿಗಳು ಸ್ವಾಧೀನಮಾಡಿಕೊಳ್ಳುವವರು ಮೇಲಿನ ಸಂಗ್ತಿ ಗಮನಕ್ಕೆ ತೆಗೆದುಕೊಳ್ಳಿ.

ಸುಬ್ರಾಯ ಭಟ್ಟನ ರುಜು

ಪ್ರಕಟಣೆ.

ಮಂಜೇಶ್ವರ ಶ್ರೀ ಮದನಂತೇಶ್ವರ ದೇವರ ಭಂಡಾರದ ಮೇನೇಜರ್ ಕೆ ಲಕ್ಷ್ಮಣ ಪೈಯು ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ಶ್ರೀ ದೇವರ ಹರಕೆ ಚಿನ್ನಗಳನ್ನು ಇದೇ ಫೆಬ್ರುವರಿ ತಾ ೫ರಲ್ಲಿ ಹರಾಜು ಮೂಲಕ ವಿಕ್ರಯಿಸುವದಾಗಿ ತಾರೀಕ ೭–೧–೩೨ರಲ್ಲಿ ಪ್ರಕಟಿಸಿತ್ತಿದ್ದೆ. ಅದನ್ನು ಪ್ರಕೃತ ವಿಕ್ರಯಿಸುವದು ಯುಕ್ತವಲ್ಲವೆಂತ ಕಂಡು ಬಂದುದರಿಂದ ಸದರಿ ತಾರೀಕಿನಲ್ಲಿ ಆದ ಹರಾಜು ಮಾಡುವದಿಲ್ಲ. ತಿಳಿದುವದು.

ಮಂಜೇಶ್ವರ
೧–೨–೧೯೩೨

ಕೆ ಲಕ್ಷ್ಮಣ ಪೈ
ಮೇನೇಜರ್

The Canara Bank, Ltd. Kasaragod
ದಿ ಕೆನರಾ ಬೇಂಕ್ ಲಿಮಿಟೆಡ್, ಕಾಸರಗೋಡು
NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಬಡ್ಡಿಯನ್ನಾಗಲಿ, ವಾಯಿದೆಗೆ ಕೊಡದೆ ಇರುವುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸುಗಳು ಇತ್ಯಾದಿ ಆಗದೆ ಬಂದಿರುವುದರಿಂದಲೂ, ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ, ನೋಟೀಸು ಖರ್ಚು, ಇತ್ಯಾದಿ ಐವೇಜುಗಳನ್ನು ಇದೇ ೧೯೩೨ನೇ ಇಸವಿ ಫೆಬ್ರುವರಿ ತಾ ೧೫ನೇ ಸೋಮವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ, ಇದೇ ೧೯೩೨ನೇ ಇಸವಿ ಫೆಬ್ರುವರಿ ತಾ ೨೨ನೇ ಸೋಮವಾರ ದಿವಸ ಮಧ್ಯಾಹ್ನ ೨ ಘಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಜ ನಂಬ್ರ 1 ಸಾಲಗಾರನ ಹೆಸರು Venkatramana Kedillaya, S/o Krishna Kedillaya Land holder Vekraje Village Kasaragod P O ಅಸ್ಲು ರೂ 40

ಜ ನಂಬ್ರ 2 ಸಾಲಗಾರನ ಹೆಸರು Kannan, S/o Kundaran Fisherman Keyoor Village Kalnad P O ಅಸ್ಲು ರೂ 30

ಜ ನಂಬ್ರ 3 ಸಾಲಗಾರನ ಹೆಸರು Abdula Beary S/o Mahamad Beary Residing near the Railway Station Kasaragod ಅಸ್ಲು ರೂ 150

ಜ ನಂಬ್ರ 4 ಸಾಲಗಾರನ ಹೆಸರು Thyampanna Shetty Grand S/o Maindappa Bunt Kudal Markala Kumbla P O ಅಸ್ಲು ರೂ 40

ಜ ನಂಬ್ರ [illegible] ಸಾಲಗಾರನ ಹೆಸರು Gopalan S/o Belchapada Fisherman Kadaparam Kasaragod P O ಅಸ್ಲು ರೂ [illegible]

ಜ ನಂಬ್ರ [illegible] ಸಾಲಗಾರನ ಹೆಸರು Mahamad S/o Abbubokar Merchant Kasaragod ಅಸ್ಲು ರೂ [illegible]

ಜ ನಂಬ್ರ 7 ಸಾಲಗಾರನ ಹೆಸರು Andi S/o Rama Fisherman Kadaparam Kasaragod P O ಅಸ್ಲು ರೂ 25

ಜ ನಂಬ್ರ 8 ಸಾಲಗಾರನ ಹೆಸರು Padmanabha Nallurava Landholder Panvalike Village Urmi Manjeshwar P O ಅಸ್ಲು ರೂ [illegible]

ಜ ನಂಬ್ರ 9 ಸಾಲಗಾರನ ಹೆಸರು Kadri Kunhi Beary S/o Badva Abdula Beary Landholder Mogral Puttur Kumbla ಅಸ್ಲು ರೂ 45

ಜ ನಂಬ್ರ 10 ಸಾಲಗಾರನ ಹೆಸರು Abdula Kadir S/o Abbubokar Merchant Adakathabail Kasaragod P O ಅಸ್ಲು ರೂ 45

ಜ ನಂಬ್ರ 11 ಸಾಲಗಾರನ ಹೆಸರು Kunhi Thiya S/o Anbadi Kudlu Village Kasaragod P O ಅಸ್ಲು ರೂ [illegible]

ಜ ನಂಬ್ರ 12 ಸಾಲಗಾರನ ಹೆಸರು Karappa Bhandary S/o Kochanna Alva Bambrana Kumbla P O ಅಸ್ಲು ರೂ [illegible]

ಜ ನಂಬ್ರ [illegible] ಸಾಲಗಾರನ ಹೆಸರು Abdula S/o Mammunhi Cultivator Kalnad P O ಅಸ್ಲು ರೂ 25

ಜ ನಂಬ್ರ 14 ಸಾಲಗಾರನ ಹೆಸರು Abdula S/o Beera Moidin Landholder, Kudlu Kasaragod P O ಅಸ್ಲು ರೂ [illegible]

ಜ ನಂಬ್ರ [illegible] ಸಾಲಗಾರನ ಹೆಸರು Chandan S/o Kadungan Gold smith Nileshwar P O ಅಸ್ಲು ರೂ [illegible]

ಜ ನಂಬ್ರ 16 ಸಾಲಗಾರನ ಹೆಸರು Ramakrishnoji S/o Appoji Cultivator Madikai Village Kanhangad P O ಅಸ್ಲು ರೂ 35

ಜ ನಂಬ್ರ 17 ಸಾಲಗಾರನ ಹೆಸರು Ambu Nair S/o Krishna Cultivator Nileshwar P O ಅಸ್ಲು ರೂ 70

Canara Bank Ltd
Kasaragod
1–2–1932

M. Damodara Hegde.
Agent

ಶಾಸ್ತ್ರೀಯ

ಅಮೂಲ್ಯ ಔಷಧಗಳು.

ಅವ್ಯಕ್ತಾಂಕುಮ ತೈಲ—ಇದು ಪೂರ್ವದಲ್ಲಿ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0 ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡ. 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷಗಳನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರ್ಜೀವಿಸುವುದು

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ ಅಗ್ನಿ ಮಾಂದ್ಯ ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ ಆಯುರ್ವೇದಸ್ವಾರಸ್ಯ ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್ ವಿ ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು

ಬೆಳ್ಳಿಯ ಹಾರ ವ ಳ ... ರಾಶಿ ಸಿಲ್ಕುಗಳು 6 ಮೊಳ ಉದ್ದ 2 ಮೊಳ ಅಗಲ ರೂ) ಲಂಗಾಯಿತ ರೂ 20 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಸಪ್ಪಾ ಸೀರೆಗಳು ರವಕೆ ಖಣಗಳು, ಮುಂಡಗಳು, ಬಟವಸ್ತ್ರ, ಪಾಶ್ಮಿನೆ ಪೇಟ ಇತ್ಯಾದಿ ಉತ್ತಮ ಶಾಲು, ಖದ್ದರ್ ವ ... ಧಾವಳಿ, ಕಸ್ತೂರಿ ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು ಜರಿ ... ಸುಗಂಧ ದ್ರವ್ಯಗಳು ಸಹಾ ಯೋಗ್ಯದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು.

ವಿಳಾಸ—

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
... ಕಾಶೀ ಬನಾರಸ್ ಸಿಟಿ

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ,ಚಿಟಿಫಂಡುಗಳೂ ನಡೆಯಿಸಲ್ಪಡುತ್ತವೆ ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ ಮುತ್ಯಾಲಭಟ್ಟ ಪ್ರೊಪ್ರೈಟರ್

The, Canara Bank Limited, Mangalore.
ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal Kasargod Cochin Udipi Gangolli Coondapur, Bombay Puttur Calicut & Alleppey

ಬ್ರಾ.—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲೆಪಿ

Authorised and fully paid up Capital Rs 300 000 - 0 - 0	ಅಧಿಕಾರ ಕೊಡಲ್ಪಟ್ಟ ಪೂರ್ಣವಾಗಿ ಕಟ್ಟ ಮೂಲಧನವು ರೂ 300) 0 -)
Reserve and other sinking Funds Rs 489 500 - 0 0	ರಿಜರ್ವ ಮತ್ತು ಇತರ ಫಂಡುಗಳು ರೂ 489,5 (0 -
Amount invested on G P Notes Rs 817 097 - 2 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817,097 - 2 - 0
Rates of interest on fixed deposits at Head Office and Branch 6¼% for 2 Years 6% , Yea	ಕಾಯಂ ಠೇವಣಿಗಳ ಮೇಲೆ ಕೊಡಲಾಗುವ ಬಡ್ಡಿ ದರ—ಎರಡು ವರುಷಗಳಿಗೆ ನೂರಕ್ಕೆ 6¼% 1 ವರುಷಕ್ಕೆ ನೂರಕ್ಕೆ 6
Season deposits of Rs 1000/- & above terminable by the end of June are received at 6¼% p a	ಸೀಸನ್ ಡಿಪಾಜಿಟ್ ರೂ 1000/- ... ಬಡ್ಡಿ ದರ ನೂರಕ್ಕೆ 6¼

Current Account Deposits received and interest allowed o daily balance of Rs 50 and above that on multiples of R 10 @ 3% from Ist Janauary to 30th June and @ 2% from Ist Jul to 31st December No interest will be allowed unless the depositor earns not less than Rs 5 during a period of 6 months endin either 30th June or 31st December in any year

Except b special a rangement no interest is allowed on sums exceeding Rs o 000/ in the case of Head Office and Cochin Branch and on sums not exceeding R 000 in the case of Bomba Branch

Short otice deposits requiring one week s notice of withdrawal given at any time after one month from the date of deposit are received and interest allowed at 4 per ann Interest o ... deposits will cease o notice

For further particulars please apply to

Canara Bank Ltd, — **K. Venkat Rao,**
Mangalore 16— —1931 — *Secretary*

The Pangal Nayak Bank, Ltd.

Head Office Udipi	*Established 1920*	Branch Office Mangalore

Authorised Capital Rs 2 00,000	Paid up Capital Rs. 1 75 000
Issued Capital Rs 1 75 000-	Reserve and other Funds Rs 1,64 000

Receives Fixed Deposits at the following favourable rates

For 3 months at 5	For 12 15 18 or 21 months at 6
6 or 9 months at 5½	24 months at 6

Interest being payable every 3 months

ಕಾಯಂ ಠೇವಣಿಗಳು ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಕರಾರಿನ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ನೂರಕ್ಕೆ 5	12 15 18 ಯಾ 21 ತಿಂಗಳಿಗೆ ನೂರಕ್ಕೆ 6
6 ಯಾ 9 ತಿಂಗಳಿಗೆ ನೂರಕ್ಕೆ 5½	24 ತಿಂಗಳಿಗೆ ನೂರಕ್ಕೆ 6

2 **Current Accounts** opened free of charge and interest allowed **Cumulative Savings Bank and Short Notice Deposits** received at favourable rates of interest

3 The Bank transacts every description of Banking business

4 For full particulars and for copies of the amended **Rules of Business** please apply to the **Secretary** at the Head Office at Udipi or to the **Agent** Mangalore Branch

Office of the Bank, Udipi 4 - 31 — **P Laxman Nayak,** Secretary

---

ಇಪ್ಪತ್ತು	ವಯಸ್ಸಿನಲ್ಲಿ	ಹುಡುಗು
ಮೂವತ್ತು	...	ಮುಟ್ಟಟ
ನಲವತ್ತು	...	ನರಳುವದು
ಐವತ್ತು	ಆದರೆ	ಆಲಸ್ಯ
ಅರುವತ್ತು	ತೋರಿದಾಗ	ಆರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಅವುಗಳನ್ನು ಪರಿಹರಿಸುವ ... ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—1—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 184 ಚೀನಾ ಬಜಾರ್ ಮದ್ರಾಸ್

ಸ್ವಾಮಿ ವಿವೇಕಾನಂದರ ಒಂದನೆ ವರ್ಧಂತಿ

ಉತ್ಸವವು ಎಷ್ಟೋ ಕಡೆಗಳಲ್ಲಿ ದೇಶದಲ್ಲೆಲ್ಲ ಸುಸೂತ್ರವಾಗಿ, ಕಾಲೋಚಿತವಾದ ರೀತಿಯಲ್ಲಿ ಆಚರಿಸಲ್ಪಟ್ಟಿದೆ. ದೇವರು, ಧರ್ಮ ಎಂಬೀ ವಿಷಯಗಳ ತಿಳಿವಳಿಕೆಯೇ ಲೋಪವಾಗುತ್ತ ಬರುವ ಈ ಕಾಲದಲ್ಲಿ ಜಗತ್ತಿನಲ್ಲಿ ನೆಲೆಗೊಳ್ಳಬೇಕಾಗಿರುವ ಶಾಂತಿ, ಸೌಹಾರ್ದ, ಪುರುಷಾರ್ಥ ಸಾಧನೆ ಮೊದಲಾದವುಗಳ ವಿಚಾರಗಳೇ ಕಡಿಮೆ ಹೊಂದುತ್ತ ಬರುವುವಾದರೆ, ಜಗತ್ತಿನ ಅವನತಿಗೆ ಹಲವು ಕಾರಣಗಳಿದ್ದರೂ, ಇವುಗಳ ವಿಚಾರದಲ್ಲಿ ಅಭಿಮಾನವಿಲ್ಲದಿರುವುದೇ ಮುಖ್ಯ ಕಾರಣವೆನಿಸುವುದು ಎಲ್ಲ ಮತಧರ್ಮಗಳ ಜಿಜ್ಞಾಸೆಯಿಲ್ಲದೆ ಸೌಹಾರ್ದವೂ ಉಂಟಾಗದು; ಅವುಗಳ ಅನುಯಾಯಿಗಳೊಳಗೆ ಶಾಂತಿಯು ನೆಲೆಗೊಳ್ಳದು. "ಎಲ್ಲರೂ ಸಹಾಯಕರಾಗಿರಿ; ಕಾದುತ್ತಿರುವ ಪಾಳೆಯಗಾರರಾಗದಿರಿ ಹಿತವನ್ನೆಲ್ಲ ಒಂದಾಗಿಸಿರಿ, ಒಂದನ್ನು ಹೀಯಾಳಿಸಿ ಮತ್ತೊಂದನ್ನು ಕೊಂಡಾಡದಿರಿ ಎಲ್ಲ ಧರ್ಮಗಳಲ್ಲಿ ಸಮತಾನತೆ ಇರಲಿ ಜೋರಾಗಿ ಕರ್ಕಶ ಕೂಗುಗಳು ಭಗವಂತನಿಗೆ ಅಶ್ರಾವ್ಯವೆನಿಸದಿರಲಿ' ಎಂಬಿಷ್ಟೇ ತತ್ವವನ್ನು ಈ ವರ್ಧಂತಿಯು ಸಾರುತ್ತಿದೆ

ಅಕ್ಷರಸ್ಥರೂ ವೋಟಿನ ಹಕ್ಕೂ

ಎಂಬ ವಿಷಯವಾಗಿ ಈಗ ಚರ್ಚಿಸಬೇಕಾಗಿದೆ ಎಂದು, ಮುಂದಣ ರಾಜಕೀಯ ತಿದ್ದುಪಡಿಗಳಲ್ಲಿ ಕುರಿತು ಓದುವವರು ಸೂಚಿಸುತ್ತಿದ್ದಾರೆ ವೋಟು ನಿರ್ಧಾರಮಾಡುವರೆ ಶಿಫಾರಸು ಕೂಡಿಸುವ ಕಮಿಟಿಯೂ ಇಲ್ಲಿಗೆ ಎಂದಿಳಿದಿದೆ ಸೈಮನ್ ಕಮಿಶನಿನವರ ಅಭಿಪ್ರಾಯದಲ್ಲಿ ಜನಸಂಖ್ಯೆಯು ಸೇಕಡಾ ೧೦ರಷ್ಟನ್ನು ವೋಟಿಗೆ ಅರ್ಹರೆಂದು ಪರಿಗಣಿಸಬೇಕೆಂದಿದೆ; ಹೀಗೆ ಮಾಡಿದರೆ ಪ್ರಾಯಸ್ಥರಲ್ಲಿ ಸೇಕಡಾ ೨೦ರಷ್ಟು ಜನರು ವೋಟಿಗೆ ಯೋಗ್ಯರಾಗುವರು ಆದರೆ, ಮಾಡುವುದೇನು? ಇವರಲ್ಲಿ ಶಿಕ್ಷಣ ದೊರೆತ ಮಂದಿ ಎಷ್ಟು? ತೀರ ಕಡಿಮೆ ದೇಶದ ಜನ ಸಂಖ್ಯೆಯಲ್ಲಿ ನೂರರಲ್ಲಿ ೧೭ ಮಂದಿ ಗಂಡಸರೂ, ೩ ಸ್ತ್ರೀಯರೂ ಶಿಕ್ಷಿತ ಪ್ರಾಯಸ್ಥರು ಎಲ್ಲ ಪ್ರಾಯಸ್ಥರನ್ನು ವೋಟಿಗೆ ಯೋಗ್ಯರೆಂದರೆ, ನೂರು ಮಿಲ್ಲಿಯ ವೋಟರರಾಗುವರು ಶಿಕ್ಷಿತರೇ ವೋಟರರಾದರೆ ಅವರಿಗೆ ಸ್ವಲ್ಪವಾದರೂ ರಾಜಕೀಯ ವಿಚಾರಗಳಲ್ಲಿ ಉಮೇದುವಾರರ ಯೋಗ್ಯತೆಯ ಮಾನವನ್ನು ತಿಳಿದುಕೊಳ್ಳುವ ಶಕ್ತಿಯಿರುವುದಲ್ಲವೆ? ಹಾಗೆಂದ ಅಶಿಕ್ಷಿತನೆಂದ ಮಾತ್ರಕ್ಕೆ ಯಾರೊಬ್ಬನೆ ವಿಚಾರಹೀನನೆನ್ನಲೂ ಆಗುವುದೆ? ಅವನ ಜೀವನಾನುಭವಕ್ಕೆ ಬೆಲೆಯಿಲ್ಲವೆ? ಆದರೆ ವಿಪರೀತ ಸಂಖ್ಯೆಯ ವೋಟರ ಸಮುದಾಯದಿಂದ ಚುನಾವಣೆಯು ಗೊಂದಲವನ್ನೆಬ್ಬಿಸುವ ಬದಲಾಗಿ ಶಿಕ್ಷಿತಪ್ರಾಯಸ್ಥರನ್ನಷ್ಟೆ ಯೋಗ್ಯರೆಂದು ಶಿಫಾರಸು ಮಾಡಿದರೆ ಸಾಕೆಂದು ಮದ್ರಾಸಿನ ಅಭಿಪ್ರಾಯವಾಗಿದೆ

ಎಸೆಂಬ್ಲಿಯಲ್ಲಿ

ಸರಕಾರದ ಈಗಣ ಧೋರಣೆಯನ್ನು ಕುರಿತು ಚರ್ಚೆ ನಡೆಯುತ್ತಿರುವುದು ಮದ್ರಾಸು ಕೌನ್ಸಿಲಿನಲ್ಲಿ ಈಗಣ ದಂಡನೀತಿಯ ಉಪಶಮನಕ್ಕೆಂದು ಮೆಂಬರರು ಸಂರಕ್ಷಣೋಪಾಯ ಮಾಡಿದುದೇ ಲಾಭವಾಯಿತಲ್ಲದೆ, ಚರ್ಚೆಯ ಅವಧಿಯಾಗುತ್ತಲೇ ಸರಕಾರದ ಧೋರಣೆಯು,—ಆಗಲೆ ಬಡಿದ ಗಂಟೆಯಂತೆ—ಒಂದೇ ಸ್ವರವಾಗಿ ನಿಂತಿತು ಎಸೆಂಬ್ಲಿಯಲ್ಲಿ ಈ ಚರ್ಚೆಗೆ ಎಂಟು ದಿನಗಳನ್ನು ಒಪ್ಪಿಸಲಾಗಿದೆ ಸರಕಾರದ ಧೋರಣೆಯು ತಪ್ಪಾಯಿತೆಂದರೆ, ಸರಕಾರದಲ್ಲಿ ಅವಿಶ್ವಾಸವನ್ನು ತೋರಿದರಾಯಿತೆ ಮಂಜೂರಾತಿ ಕೊಟ್ಟಂತಾಗುವುದೆಂದು ಸರಕಾರೀ ಪಕ್ಷದ ಅಭಿಪ್ರಾಯ, ಎಸೆಂಬ್ಲಿಯು ಮುಂದೆ ಈ ಧೋರಣೆ ಚರ್ಚಿಸಿ ತೀರ್ಮಾನ ಮಾಡಿಕೊಳ್ಳದೆ ಹೋದರೆ, ಎಸೆಂಬ್ಲಿಯಲ್ಲಿ ಸರಕಾರಕ್ಕೆ ವಿಶ್ವಾಸವಿಲ್ಲೆಂದು ತೋರುವುದಿಲ್ಲವೇ ಎಂದು ಮೆಂಬರರ ಪ್ರಶ್ನೆ ಮಧ್ಯ ವೋಟು ತೆಗೆಯುವುದಾದರೆ, ಯಾವ ಪಕ್ಷಕ್ಕೆಷ್ಟು ಸಿಗುವುದೋ ಎಂಬ ಸಂದೇಹ ಪ್ರಸ್ತುತವಿಲ್ಲ ಮುಸ್ಲಿಮ ಮೆಂಬರರಿಗೆ ಹೊಸ ಹಂಗಾಮಿ ಕೌನ್ಸಿಲರಾದ ಚಿಕ್ಕಾರಿ ನವಾಬರ 'ಚಾಪಾರ್ಟಿ' ಚಾ ಕುಡಿದ ಬಳಿಕವೂ ಹಲವು ಮುಸ್ಲಿಮರು ಹಿಂದೆ ಭಾಷಣ ಮಾಡಿದಂತೆಯೇ ಮುಂದೆಯೂ ವರ್ತಿಸಿದರೆ, ಸರಕಾರವು ಈ ಚರ್ಚೆಯಲ್ಲಿ ವಿಜಯ ಹೊಂದದು ಅಂತೂ ಹಿಂದೂಸ್ಥಾನದಲ್ಲಿ ಈಗ ಜಾರಿರುವ ಒರ್ಡಿನೆನ್ಸುಗಳಿಗೆ ಬಾಬೆಂಬಲವಿರುವುದೇ ನೋಡಬೇಕೆಂದು ಪತ್ರಿಕೆಗಳ ಕುತೂಹಲ

ಡಾ। ಪೇಟಿಕ್

ಮಿತ್ರನರಿ ವೈದ್ಯ-ವೈದಿಕರು ಲಾಠಿ ಪ್ರಹಾರಗಳಿಗೂ, ಅವಧೃತಸ್ನಾನಕ್ಕೂ ಒಳಗಾಗಿ, ಮುಂದೆ ಮೊಕದ್ದಮೆಗೂ ತಲೆಯೊಡ್ಡಿ, ಕಡೆಗೆ ಸರಕಾರವೇ ಅವರ ಮೇಲಣ ಮೊಕದ್ದಮೆಯನ್ನು ಹಿಂದಕ್ಕೆಳೆದುಕೊಂಡ ಕಾರಣ ಬದುಕಿಕೊಂಡರು. ಅವರು ಒಂದು ಹೇಳಿಕೆಯನ್ನು ನ್ಯಾಯಾಧೀಶರಿಗೆ ಒಪ್ಪಿಸಿದುದರಲ್ಲಿ ಅವರ ಮೇಲೆ ಪೋಲೀಸರು ಹೂಡಿಸಿದ ತಪ್ಪಿತಗಳಲ್ಲಿ ಒಂದೂ ಸತ್ಯವಿಲ್ಲೆಂದು ಪ್ರಕಟಪಡಿಸಲಾಗಿದೆ ಹೀಗಿರುತ್ತಾ, ಪೋಲೀಸರು ಕ್ರಮವಾಗಿ ನಡೆದಲ್ಲಿ ಅವರ ವಿಚಾರಮಾಡಲಾಗುವುದೆಂದು ಸರ್ ಮುಹಮ್ಮದ್ ಉಸ್ಮಾನರು ಕೌನ್ಸಿಲಿನಲ್ಲಿ ಬಹಿರಂಗವಾಗಿ ಹೇಳಿರುವ ಮಾತನ್ನು, ಎಷ್ಟರ ಮಟ್ಟಿಗೆ ಕಾರ್ಯತಃ ತೋರಿಸುವರೋ ತಿಳಿಯದಾಗಿದೆ ಸದ್ಯದಲ್ಲೇ ವಿಚಾರಣೆಗೆ ಹುಕುಂ ಹೊರಟಿರಬೇಕು ಸಾರ್ಜೆಂಟರು ತಪ್ಪೆಣಿಸಿದರೆಂದೂ ಆದುದರಿಂದ ಕೈಬಿಟ್ಟರೆಂದೂ ಹೇಳಬಹುದು ಅಥವಾ, ಮೆಂಬರರು ತಮ್ಮ ತಿಳಿವಳಿಕೆಗೇ ಇದು ಎಂದಿಲ್ಲವೆಂದರೂ ಹೇಳಬಹುದು ಅವರ ತಿಳಿವಳಿಕೆಯೆಂದರೆ, ಸರಕಾರೀ ಆಫೀಸರರ ಮುಖಾಂತರ ತಲಪುವ ರಿಪೋರ್ಟು ಹೊರತು ಪತ್ರಿಕೆಗಳಲ್ಲಿ ಪ್ರಕಟವಾದ 'ನ್ಯೂಸ್' ಅಲ್ಲವಷ್ಟೆ

ಮಧ್ಯ ಆಫ್ರಿಕದಲ್ಲಿ

ಹಿಂದಣ ಮಹಾಯುದ್ಧ ಕಾಲದಲ್ಲಿ ಬ್ರಿಟಿಷ ಮಂತ್ರಿಗಳಿಂದ ಅಲ್ಲಿದ್ದ ಕೆಪ್ಟನರೊಬ್ಬರಿಗೆ "ಪರದೇಶೀಯ ವಿರೋಧಿಯರನ್ನು ಕೂಡಲೇ ಕೈದು ಮಾಡತಕ್ಕದು, ಯುದ್ಧ ಪ್ರಾರಂಭವಾಗಿದೆ ಎಂದು ತಂತೀ ಮೂಲ ಅಪ್ಪಣೆ ಕೊಡಲಾಯಿತು ಕೆಪ್ಟನರು ಕೂಡಲೆ, ಎಲ್ಲ ಪರದೇಶೀಯರನ್ನು ಕೈದು ಮಾಡಿ 'ಅಪ್ಪಣೆ! ಜರ್ಮನರು, ಫ್ರೆಂಚರು ಬೆಲ್ಜಿಯನರು ಮೊದಲಾದರೆಲ್ಲರನ್ನೂ ಕೈದು ಮಾಡಿ ಮುಗಿಸಿದೆನು ಯಾರ ವಿರುದ್ಧವಾಗಿ ಇದು ಯುದ್ಧ? ನಮ್ಮ ಶತ್ರು ಇನ್ನಾರು?' ಎಂದು ತಂತೀ ಮೂಲಕ ಕೇಳಿದರಂತೆ ವಿರೋಧಿಗಳು ಯಾರೆಂದು ತಿಳಿಯದೆ ಮಿತ್ರರಾಷ್ಟ್ರದವರನ್ನೂ ಕೈದ ಮಾಡಲಾಯಿತು' ಇದೇ ಒಗೆಯಾಗಿ ಶ್ರದ್ಧಾವಂತ ಆಫೀಸರರು ಸರಕಾರದ ಕಟ್ಟಪ್ಪಣೆ ಪಾಲಿಸುತ್ತಿರುವರು ಇದರಿಂದ ನ್ಯಾಯಶೀಲರಾದವರಿಗೂ ಅನ್ಯಾಯಗಳು ಸಂಭವಿಸುತ್ತಿವೆಯೆಂದು ಎಸೆಂಬ್ಲಿಯಲ್ಲಿ ನಡೆದ ಈ ಒಗೆಯ ಒಂದು ಅಭಿಪ್ರಾಯದಿಂದ ತಿಳಿದು ಬರುತ್ತಿದೆ

ಪೇಶಾವರದ ಗಡಿನಾಡಿಗೆ ತೆರಳಿದ್ದ

ಮೌಲ್ವಿ ಶಾಫಿದಾವೂದಿಯವರು ಅಲ್ಲಿನ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಅತ್ತ ತೆರಳಿ, ಅವರು ಹಾಕಿಕೊಟ್ಟ ಶರ್ತಗಳ ಮೀರಿ ವಿಾರದೆ ವರ್ತಿಸಿ ಮರಳಿದರು ಅಲ್ಲಿ ಎಲ್ಲವೂ ಚೆಂದ ಎಂದು ಮೊದಲು ಪ್ರಕಟಿಸಿದರು ಸಾವರ್ ಎಲ್ಲಿನಥ ಅಲ್ಲಿಂದ ಗಡಿಪಾರು ಹೊಂದಿ ಬರುತ್ತಲೇ ತಾವು ಕಂಡುದನ್ನು ವಿವೇಚಿಸಿ ಒರೆದು ವಿವರಿಸಿದರು ಆಗ ದಾವೂದಿಯವರ ಓರೆಗೆ ಸ್ವಲ್ಪ ಸಂದೇಹದ ಛಾಯೆ ಹಿಡಿಯಿತ ಮುಸ್ಲಿಮ ಪರಿಷತ್ತಿನಲ್ಲೂ ಗಡಿನಾಡುಗಳಲ್ಲಿ ಒರ್ಡಿನೆನ್ಸು ಜಾರಿಯಾದುದು ಸರಿಯಾಗಿಲ್ಲೆಂದೇ ತೀರ್ಮಾನವಾಯಿತ ಈಗ ದಾವೂದಿಯವರು ಎಸೆಂಬ್ಲಿಯಲ್ಲಿ, "ಅಲ್ಲಿನ ಜನರು ಮಾತಾಡುವುದಕ್ಕೇ ಹೆದರುತ್ತಾರೆ ಪಿಸು ಮಾತಿನಲ್ಲೇ ತಮ್ಮ ದುಃಖ ಹೇಳಿಕೊಳ್ಳುತ್ತಾರೆ ಜನರನ್ನು ಒಪ್ಪುಮಾಡಿ ಮರ್ಯಾದೆಯಾಗುವ ತನಕವೂ ಹೊಡೆದರೆಂದು ಅವರ ಹೇಳಿಕೆಯಿದೆ ಅಲ್ಲಿರುವ ಇತರ ಅಧಿಕಾರಿಗಳಿಗೆ ಕಮಿಶನರರು ಹದರಿ ನ ಹಾಗೆ ನನಗೆ ಕಂಡಿತು ಸರಕಾರವು ಅಲ್ಲಿ ಪ್ರಾಂತಿಕ ಸುಧಾರಣೆ ಕೊಡುವರ ಯಥಾರ್ಥ ಮನಸ್ಸುಳ್ಳದ್ದಾದರೆ, ಅಲ್ಲಿನ ಆಫೀಸರರನ್ನೆಲ್ಲ ವರ್ಗಾಯಿಸದೆ ಅಲ್ಲಿ ಶಾಂತಿ ಉಂಟಾಗದು' ಎಂದರು ಇದರ ಅರ್ಥವೇನೋ ಹಿಂದೆ ಹಾಗೆ ಪ್ರಕಟಿಸಿ ಈಗ ಹೀಗೆ ಎಸೆಂಬ್ಲಿಯಲ್ಲಿ ಏಕೆ ಎಂದರೋ ಎಂದು ಸುಲಭದಲ್ಲಿ ತಿಳಿಯ ಬರುವ ಹಾಗಿಲ್ಲ ಕಮಿಶನರರೊಡನೆ ಸಂಭಾಷಿಸುವಾಗ ಈ ಮಾತುಗಳನ್ನೇ ಅವರು ಹೇಳಿದ್ದಿಲ್ಲ, ಈಗ ಆ ಕಮಿಶನರರು ಎಸೆಂಬ್ಲಿಯಲ್ಲಿ ಇಲ್ಲದಿರುವಾಗ ಇಂತಹ ಅಭಿಪ್ರಾಯ ತಿಳಿಸಿದರೆ ಹೇಗೆ? ಎಂದು ಕಮಿಶನರರ ಜೊತೆಯಲ್ಲಿದ್ದ ಇನ್ನೊಬ್ಬ ಮೆಂಬರರು ಇವರನ್ನು ಪ್ರಶ್ನಿಸಿದರು

ಶ್ರೀ. ಅಬ್ದುಲ್ ಮಾಟಿನ್ ಚೌಧುರಿಯವರು

ಲಾರ್ಡ ಅರ್ವಿನರು ಕೈಕೊಂಡ ನೀತಿಯನ್ನು ತ್ಯಜಿಸಿ ಗಾಂಧಿಯವರನ್ನು ಬಂಧಿಸಿ, ಉಗ್ರವಾದ ಒರ್ಡಿನೆನ್ಸುಗಳನ್ನು ಜಾರಿಗೆ ತಂದುದನ್ನು ನಿಷೇಧಿಸುವುದಕ್ಕಾಗಿಯೇ ಈ ಚರ್ಚೆಯು ಎಸೆಂಬ್ಲಿಯಲ್ಲಿ ನಡೆಯುತ್ತಿದೆ,—ಎಂದರು, ಇವರ ಅಭಿಪ್ರಾಯದಲ್ಲಿ, ನೋಕರಶಾಹಿಯು ಕುಗ್ಗುತ್ತಿರುವಾಗ, ಅದನ್ನು ಈ ಒರ್ಡಿನೆನ್ಸುಗಳಿಂದ ಆಧರಿಸಿ ನಿಲ್ಲಿಸಲಾಗುವುದಿಲ್ಲ, ಕೋಹತಿ

ನೋಟಗಳು
NOTE..S

ಕನ್ಸರ್ವೇಟಿವರ ಪತ್ರಿಕೆಗಳಲ್ಲಿ ಹದಿನೈದು ದಿನಗಳ ಹಿಂದೆ ಶುಕ್ಲಪಕ್ಷದಲ್ಲಿ, ವಿದೇಶಿ ವಸ್ತ್ರ ಬಹಿಷ್ಕಾರವು ಸೇಕಡಾ ೫೦ರಂತೆ ಯಶಸ್ವಿಯಾಗಿದೆ ಎಂದು ಪ್ರಕಟವಾಯಿತು ಈಗ ಕೃಷ್ಣಪಕ್ಷವಷ್ಟೆ, ಸರ್ ಸಾಮುವೇಲ್ ಹೋರರು 'ಈ ಬಹಿಷ್ಕಾರವು ವ್ಯರ್ಥವಾಗಿದೆ, ವ್ಯಾಪಾರವು ಸರಾಗ ನಡೆಯುತ್ತಿದೆ' ಎನ್ನುತ್ತಾರೆ ಚಂದ್ರನ ಮಹಿಮೆ! ಮುಂಬಾಯಿಯಲ್ಲಿ ಸುಂಕವೇ ದಿನಕ್ಕೆರಡು ಲಕ್ಷ ಕಡಿಮೆಯಾದಾಗ ವ್ಯಾಪಾರ ಸರಾಗವೆ?

* * * *

ಅಲ್ಲಾಹಾಬಾದಿನಲ್ಲಿ ಒಬ್ಬರನ್ನು ಕೈದು ಮಾಡಲಾಗಿದೆ. ಅವರ ಮೋಟರನ್ನು ಯಾರೂ ಕೊಂಗ್ರೆಸ್ ಕೆಲಸಕ್ಕಾಗಿ ಉಪಯೋಗಿಸಿದರೆ ಅದನ್ನು ಜಪ್ತಿಮಾಡುವುದಾಗಿ ನೋಟೀಸು ಅವರಿಗೆ ಕೊಡಲಾಗಿದೆ ಪಾಪ' ಇದು ಇಂಗ್ಲಿಷು ಮೋಟರಾದರೆ ಅದನ್ನು ಉಪಯೋಗಿಸದಂತೆ ಬಹಿಷ್ಕರಿಸುವುದೂ ಅನ್ಯಾಯವಾಗದೆ?

* * * *

ನಾಯಿ ಬಗುಳಿದರೆ ದೇವಲೋಕವು ಹಾಳಾದೀತೆ? ಎಂಬ ಗಾದೆ ಇದೆಯಲ್ಲ! ಇದೇ ಅರ್ಥದ ಮಾತಗಳನ್ನು ಈಗಿನ ಕೊಂಗ್ರೆಸ ಚಳವಳಿಕ್ಕೂ ಸರಕಾರದ ದೃಢ ಪ್ರತಿಜ್ಞೆಗೂ ಹಚ್ಚಿ ಸಾಮುವೇಲರು ಬ್ರೆಡ್‌ಫೋರ್ಡ್ ಭಾಷಣಮಾಡಿದರು ಇದಕ್ಕಿಂತಲೂ ಉತ್ತಮ ಗಾದೆ ಸಿಗುವುದು ಹೋದರಿಗಾಗಲಿ ಅವರಿಗೆ ಉತ್ತರಕೊಡಬೇಕೆನ್ನುವವರಿಗಾಗಲಿ ಷ್ಟ

ನಲ್ಲಿ ಸಣ್ಣದೊಂದು ಜುಲಿಯಸ್ ವಾಲಾ ಕಾಂಡವನ್ನು ಆದಿ ನೋಡಿರುವಿರಿ ಇದಕ್ಕೆ ಸಣ್ಣ ಡಾಯರ್ ಮಹಾಶಯರೂ ನಿಮಗೆ ಹಸ್ತಕರಾಗಿರುವರು ಆದರೂ, ಪತ್ರಿಕೆಗಳಲ್ಲಿ—ಎಲ್ಲವೂ ಶಾಂತವಾಗಿದೆ ಎಂದು ಬರೆಸುತ್ತಿದ್ದೀರಿ, ಇದು ಒಂದು ಸಿನಿಮಾ ಚಿತ್ರದ ನೆನಪು ಹುಟ್ಟಿಸುತ್ತಲಿದೆಯಲ್ಲಾ? ಎಂದು ಪ್ರಶ್ನೆಮಾಡಿದರು 'ನನ್ನೊಡನೆ ಇರದವನ ನನ್ನ ವಿರೋಧಿ ಎಂಬುದನ್ನು ಫೊರಿನ್ ಸೆಕ್ರೆಟರಿಯವರು ಇವರಿಗೆ ತಿಳಿಸದೆ ಬಿಡಲಿಲ್ಲ ೧೪ ಮಂದಿ ಅಲ್ಲಿ ಸತ್ತುದಕ್ಕೆ ಎಲ್ಲಾ ಸರಕಾರಿ ಆಫೀಸರರ ನೊಂದಿರುವರು' ಎಂದು ಈ ಸೆಕ್ರೆಟರಿಯವರು ಹೇಳಲು, ಚೌಧರಿಯವರು 'ಅಲ್ಲಿ ೬೪ ಮಂದಿ ಸತ್ತರಯ್ಯ!' ಎಂದು ತಿದ್ದಿದರು 'ಸತ್ತವರು ಎಷ್ಟೇ ಇರಲಿ, ಅವರ ರಕ್ತವು ನಮ್ಮ (ಸರಕಾರದ) ತಲೆಯ ಮೇಲೆ ಅಲ್ಲ, ಕಬ್ದುಲ್ ಗಫ್ಫಾರ್ ಖಾನರ ತಲೆಯ ಮೇಲೆ' ಎಂದು ಸೆಕ್ರೆಟರಿಯವರು ಆಭಾರವೊಂದನ್ನು ವರ್ಗಾಯಿಸಿದರು ಮತ್ತೊಬ್ಬ ಮುಸ್ಲಿಮ ಮಹನೀಯರು "ಖಾನರೂ ಗಾಂಧಿಯರೂ ತಪ್ಪಿತಸ್ಥರಾದರ ಇರಲಿ, ಸೇನಗುಪ್ತರು ಏನು ಮಾಡಿದರೆಂದು ದಂಡಿತರಾದರು? ಗಡಿನಾಡಿಗೆ ಮುಪ್ತಿ ಕಿಫಾಯತ್ ಉಲ್ಲಾರವರನ್ನು ಹೋಗಲು ಅಪ್ಪಣೆ ಕೊಡಲೇ ಇಲ್ಲವೇಕೆ?" ಎಂದು ಕೇಳಿದರು ಅಲ್ಲಿಗೆ ಮೊದಲನೆ ದಿನದ ಚರ್ಚೆ ಮುಗಿಯಿತು ಈ ಪ್ರಶ್ನೆಗೆ ಇನ್ನು ಉತ್ತರ ಕೊಡುವವರ್ಯಾರೂ ನೋಡಬೇಕು

ಮಾಲವೀಯರ ಪತ್ರ

ವೈಸ್ರಾಯರಿಗೆ ಇವರಿಗೆ ಕಾಂಗ್ರೆಸಿನವರಲ್ಲಿ ಅಪರಾಧವೇನೂ ಕಾಣುವುದಿಲ್ಲ ಮಹಾತ್ಮಾಜಿಯವರು ಶಾಂತಿ ಸಾಧನೆಗಾಗಿ ಉತ್ಸಾಹಿಗಳಾಗಿದ್ದು, ಹಾಗೆ ಶಾಂತತಾಕಾರರ ಉದ್ದೇಶಗಳನ್ನು ಸಾಧಿಸಲು ವೈಸ್ರಾಯರನ್ನು ನೋಡುವರ ಕುತೂಹಲಪೂರ್ಣವಾಗಿ ಬರದುಕೊಂಡಿದ್ದರೂ, ಸರ್ ಸಾಮುವೆಲ್ ಹೋರರು ಇವರಿಗೆ ಹಾಗೆ ಮಾಡಲು ಅವಕಾಶಕೊಡುವವೆಂದು ಮಾತ ಪತ್ರಗಳಿಂದ ವ್ಯಥಪಡಿಸಿದ್ದರೂ, ವೈಸ್ರಾಯರು ಇದೊಂದನ್ನೂ ವಿಚಾರಿಸದಂತೆ ನೋಕರಶಾಹಿಯು ಪರಿಷತ್ತಿನ ಅವಕಾಶದಲ್ಲಿ ಹೊಸ ಶಸ್ತ್ರಗಳನ್ನು ಸಜ್ಜುಗೊಳಿಸಿಟ್ಟುಕೊಂಡುದೇ ಕೊಂಗ್ರೆಸು ಧ್ವಂಸಕ್ಕಾಗಿ ಸರಕಾರವು ಮೊದಲೇ ಸಿದ್ಧವಾದಂತೆ ತೋರುವುದಾಗಿಯೂ ಅದೇ ಕಾರಣ ಗಾಂಧಿಯವರಿಗ ಭೇಟಿ ನಿರಾಕರಿಸಲಾಯಿತೆಂದೂ ಮಾಲವೀಯರ ತೀರ್ಮಾನ ಆದರ ದಂಡ ನೀತಿಯಿಂದ ಇನ್ನಷ್ಟು ಜನತೆಯಲ್ಲಿ ಕೊಂಗ್ರೆಸ ಪ್ರಚಾರವಾಗುವುದೆಂದೂ, ಜನರ ಸಹನಾಶೀಲತೆಯಿಂದ ಅವರ ಆಶಯಗಳು ದೃಢವಾಗುವುವೆಂದೂ, ಸ್ವಾತಂತ್ರ್ಯಕ್ಕಾಗಿ ಅವರ ಹೋರಾಟವು ನಿಶ್ಚಿತವಾಗುವುದೆಂದೂ, ಕೊಂಗ್ರೆಸನ್ನು ಕೊಲ್ಲುವುದೆಂದರೆ, ಭಾರತ ವರ್ಷದ ಆತ್ಮವನ್ನೇ ಕೊಲ್ಲುವಷ್ಟು ಗಾಢ ಪ್ರಯಾಸವಾಗುವ ವ್ಯರ್ಥ ಪ್ರಯತ್ನವೆಂದೂ ಇವರು ಒರೆದಿರುವರು

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣಬಾರದಿದ್ದರೆ) ೧೦೦೦ ರೂ. ಇನಾಮು (ಹಣ ಪರತ

ಪುರುಷತ್ವ ಸಂಜೀವಿನೀ ಚೂರ್ಣ (ರಜಿಸ್ಟರ್ಡ)

ಈ ಚೂರ್ಣದಿಂದ ಸ್ವಪ್ನದಲ್ಲಿ ಹಾಗೂ ಮೂತ್ರದ್ವಾರಾ ಹೋಗುವ ವೀರ್ಯವು ಕೂಡಲೆ ಒಂದಾಗ ವುದು ಗರಮಿ ಪರಮಾದಿಂದಾದ ಉಷ್ಣತಾ, ಮುಷ್ಟಿಮೈಥುನದಿಂದಲೂ, ಅತಿರತಿಯಿಂದಲೂ ಧಾತು ನೀರಾಗುವಿಕೆ, ಧಾತು ಕ್ಷೀಣತೆ, ಅಶಕ್ತತೆ ಶೀಘ್ರಧಾತುಪತನ ಇವೆಲ್ಲ ರೋಗಗಳು ನಾಶವಾಗಿ ರಕ್ತಶುದ್ಧಿಯಾಗುತ್ತದೆ ಹಸಿವೆ, ಸಾಮರ್ಥ್ಯಗಳು ಹೆಚ್ಚಾಗಿ ತೂಕದೆಳೆಯುತ್ತದೆ ಮತ್ತು ವೀರ್ಯವು ಗಟ್ಟಿಯಾಗಿ ಗರ್ಭಧಾರಣಕ್ಕೆ ಯೋಗ್ಯವಾಗುತ್ತದೆ ಮುಖ್ಯ ಸರ್ಟಿಫಿಕೇಟ್, ಮೆ ರಾ ವಿ ಎಸ್ ಅಗಡೆ ಮ್ಯಾಜಿಸ್ಟ್ರೇಟ ಸಾತಾರಾ — ಈ ಚೂರ್ಣದಿಂದ ನನಗೆ ಆಶ್ಚರ್ಯಕಾರಕ ಗುಣ ವಾಯಿತು ಅನೇಕ ತರದ ಅವಿಚಾರದಿಂದ ದುಷ್ಟವಾದ ವೀರ್ಯ ಹಾಗೂ ರಕ್ತವು ಇದರಿಂದ ಸತೇಜವಾಗಿ ಪ್ರಕೃತಿಯು ನೆಟ್ಟಗಾಗದೆ ಇರದು. ೨೧ ದಿವಸ ಸಾಕಾಗುವಷ್ಟು ಡಬ್ಬಿಗೆ ಕಿಮ್ಮತ್ತು ೫ ರೂ ಟ ಖ ೦||೦

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)

ಈ ಚೂರ್ಣವು ಕೆಂಪು, ಬಿಳಿ ಶರಗಿಗೆ ಶತ್ರುವಾಗಿರುವುದು ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೇತ್ರ ಬೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನವಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ ಮುಖ್ಯ ಸರ್ಟಿಫಿಕೇಟ್, ಮೆ ರಾ ವಿ ಎನ್ ಇನ್‌ಸ್ಪೆಕ್ಟರ ಬೆಳಗಾಂವ — ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಶೇಷವಾಯಿತು ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಲ್ಲದಂತಾದವು ೨೧ ದಿವಸದ ಡಬ್ಬಿಯ ಕಿಮ್ಮತ ರೂ ೩ ಟ ಖ ೦||೦

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಒಮ್ಮೆ ನಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಒಡತನದಲ್ಲಿ ಜೀವ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತರುವಾಯ ಏನುಮಾಡಿದರೂ ಸುರುವಾಗುವುದಿಲ್ಲ ಮೊದಲೆ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಆರ್ ಟಿ ಚಾಂಗದೇವ ಪೂರ್ವ ಖಾನದೇಶ — ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗ ಕಾರಿ ಡಬ್ಬಿ ಕಿ. ೪ ರೂ ವಿ. ಪಿ ಖರ್ಚು |

ಸೂಚನೆ.— ಯಾವದಾದರೂ ೩ ಡಬ್ಬಿಗೆ ಟ ಪಿ ಮಾಫ ನಮ್ಮ ಈ ರಿಜಿಸ್ಟರ್ಡ ಔಷಧದ ತದ್ವತ ನಕಲು ಕೊಡಬೇಡಿ ಪೂರ್ಣ ವಿಚಾರಮಾಡಿ ತರಿಸಿಕೊಳ್ಳಿರಿ ಈ ಸರ್ಟಿಫಿಕೇಟು ಕೊಟ್ಟಿಯದೆಯೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಇನಾಮು

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ ಮಿರಜ, S. M C

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ

ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ

ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಮದನಮಸ್ತ ಪಾಕು. ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ ಧಾತುಕ್ಷೀಣತೆ ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ ಗರ್ಮಿಯ ಪರಿಣಾಮ ಎಂಥದಾದರೂ ಪರಮ ನ್ಯೂನತೆ ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ ೨೦ ದಿವಸ ಸಾಲುವ ೪೦ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ ಖ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚು ಸಹಿತ ರೂ ೧೧ ಮೂರು ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸ ವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಶಾಲಾ ಮಾಸ್ತರರ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

೧ ಡಾ ಹರಿಹರ ಸೀತಾರಾಮ ರಾಜಂದೇಕರ ಎಲ್ ಎಮ್ ಪಿ ಎಚ್ ಎಮ್ ಬಿ ಪೋಸ್ಟ ರಾಜಂದಾ ಜಿ ಚೆತ್ತೊಲಾ — ತಮ್ಮ ಮದನಮಸ್ತ ಪಾಕದಿಂದ ಜೀವನಶಕ್ತಿಯ ಬೆಳವಣಿಗೆಯಾಗಿ ವೀರ್ಯ ಹಾನಿಯು ಬಲಹೀನತೆಯು ಉದರ ವಿಕಾರವು ಇಂದ್ರಿಯ ಶೈಥಿಲ್ಯವು ಸಂಧಿವಾತ ಮೊದಲಾದ ರೋಗಗಳೆಲ್ಲ ನಷ್ಟವಾಗಿ ವೀರ್ಯ ಬಲ ಹಾಗೂ ಸ್ಮರಣಶಕ್ತಿಯು ಬೆಳೆಯುತ್ತದೆ ತಮ್ಮ ಪಾಕದ ಪ್ರಸಾರವು ಹೆಚ್ಚಲಿ ಪರಮೇಶ್ವರನು ತಮ್ಮ ಕೀರ್ತಿಯನ್ನು ಹಬ್ಬಿಸಲಿ

೨ ರಾಜವೈದ್ಯ ರಾಮಚಂದ್ರ ಗಣೇಶ ಶಾಸ್ತ್ರಿ ಜೋಶಿ ಪೋಸ್ಟ ವಾಳವೆ ಜಿ ಸಾತಾರಾ — ತಮ್ಮ ಮದನಮಸ್ತ ಪಾಕವನ್ನು ಮಿ ಸ ವಾ ದೇಶಪಾಂಡೆ ತಾ ಲೋಕಲ್ ಬೋರ್ಡ ಇವರಿಗೆ ಕೊಟ್ಟೆನು ಇದರಿಂದ ಅವರ ಸ್ವಪ್ನಾವಸ್ಥೆ ಧಾತು ನೀರಾಗುವಿಕೆ, ಹಾಗೂ ಅಶಕ್ತತೆ, ಈ ರೋಗಗಳು ನೆಟ್ಟಗಾಗಿ ಹಸಿವೆ ಶಕ್ತಿ ಮತ್ತು ತೂಕ ಬೆಳೆಯಿತು ಇದನ್ನು ತಿಳಿಸಲು ಅತ್ಯಾನಂದವಾಗುತ್ತದೆ ಸರ್ವರು ಈ ಪಾಕದ ಅನುಭವ ತೆಗೆದುಕೊಳ್ಳಬೇಕೆಂದು ಶಿಫಾರಸು

೩ ಜಗನ್ನಾಥ ರಂಗನಾಥ ದಡಪೆ ಸ್ಕೂಲಮಾಸ್ತರ ಪೋಸ್ಟ ತಡವಳೆ ಜಿ ಸೊಲ್ಲಾಪೂರ — ತಮ್ಮ ಮದನಮಸ್ತ ಪಾಕದ ೩ ಡಬ್ಬಿಯನ್ನು ಸೇವಿಸಿದೆನು ನನಗೆ ೧೩ ತರದ ಆಶ್ಚರ್ಯಕಾರಕ ಗುಣವಾಯಿತು ತೂಕವು ೫ ಪೌಂಡು ಬೆಳೆಯಿತು ತಮ್ಮ ಉಪಕಾರವನ್ನು ನಾನು ಆಜನ್ಮ ಮರೆಯಲಾರೆನು

ಸೂಚನೆ— ಬೇರೆಯವರ ಅನುಭವವನ್ನು ಕೃಪೆಯಿಂದ ನಮ್ಮ ಮೇಲೆ ಹೊರಿಸಬೇಡಿರಿ ಇಷ್ಟು ಖಾತ್ರಿಯಾದರೂ ಈ ಪ್ರಭಾವಶಾಲಿ ಪಾಕದ ಮೇಲೆ ಯಾರ ವಿಶ್ವಾಸ ಕೂಡುವುದಿಲ್ಲವೋ ಅವರು ರೋಗಮುಕ್ತರಾಗಿ ಸಂಸಾರ ಸುಖ ಭೋಗಿಸುವ ವೇಳೆಯು ಬಂದಿಲ್ಲವೆಂದು ತಿಳಿಯಬೇಕು ಈ ಪಾಕದಲ್ಲಿ ೬೦ ವನಸ್ಪತಿ ಧಾತುಪೌಷ್ಟಿಕ ಇಲ್ಲವೆಂದೂ ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ೧೧೦೦ ರೂ ಇನಾಮು ಕೊಡುವೆವು

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ,

ಮು ಪೋ ಮಿರಜ S M C

ಸ್ವಲ್ಪ ನಗು.

ಒಬ್ಬ ಒಕ್ಕಲಿಗನು ತನ್ನ ಗದ್ದೆಯ ಸೌತೆಕಾಯಿಗಳು ಕಳವಾಗುತ್ತಿರುವುದನ್ನು ನೋಡಿ ಒಂದು ರಾತ್ರಿ ಬಲೆ ಬೀಸಿಟ್ಟನು ಮರುದಿನ ಬೆಳಗ್ಗೆ ನೋಡುವಾಗ ಅಲ್ಲಿ ಮಕ್ಕಳಿಗೆ ಪಾಠ ಕಲಿಸುತ್ತಿದ್ದ ಒಬ್ಬ ಉಪಾಧ್ಯಾಯನು ಒಂದೆರಡು ಸೌತೆ ಕಾಯಿಗಳ ಸಮೇತ ಬಲೆಯಲ್ಲಿದ್ದನು

\+ + + +

ಮರಣೋನ್ಮುಖನಾದ ಗಂಡ — 'ಪ್ರಿಯೇ ನಾನು ಈ ಲೋಕವನ್ನು ಬಿಟ್ಟು ಬೇಗನೇ ತೆರಳಲಿರುವೆನು ನೀನು ನಮ್ಮ ನೆರೆಯಲ್ಲಿನ ರಾಮುವನ್ನು ವಿವಾಹವಾಗು' ಹೆಂಡತಿ — (ದುಃಖದಿಂದ) "ನೀವು ಅದರ ವಿಷಯ ಆಲೋಚಿಸುವುದು ಬೇಡ. ನಾನೂ ರಾಮುವೂ ಈ ಕುರಿತು ಮೊದಲೇ ಆಲೋಚಿಸಿರುವೆವು

\+ + + +

ಒಬ್ಬ ಬ್ರಾಹ್ಮಣನು ಕೆರೆಯಲ್ಲಿ ಮೀಯುವಾಗ ನೀರಿಗೆ ಬಿದ್ದು ಈಜಾಡ ತಿಳಿಯದೆ ಮುಳುಗುವ ಪ್ರಸಂಗದಲ್ಲಿದ್ದನು ಅಷ್ಟರಲ್ಲಿ ಅವನನ್ನು ಯಾರೋ ರಕ್ಷಿಸಿದರು ಬ್ರಾಹ್ಮಣನು ಮೇಲೆ ಬಂದು ಈಜಾಡಲು ಕಲಿಯದೆ ನಾನಿನ್ನು ಯಾವ ನೀರಿಗೂ ಇಳಿಯಲಿಕ್ಕಿಲ್ಲ ಎಂದನು ಎಲ್ಲರೂ ನಕ್ಕರು

\+ + + +

ಉರಗವೆಂದರೆ ಹೊಟ್ಟೆಯಿಂದ ಹರಿಯುವ ಪ್ರಾಣಿ ಎಂದು ವಿದ್ಯಾರ್ಥಿಗೆ ಉಪಾಧ್ಯಾಯರು ಕಲಿಸಿದ್ದರು ಪರೀಕ್ಷೆಯ ದಿನ ಉರಗವೆಂದರೇನೆ ಎಂದು ಉಪಾಧ್ಯಾಯರು ಪ್ರಶ್ನಿಸಿದಾಗ ವಿದ್ಯಾರ್ಥಿಯು ಮಗು ಸ್ವಾಮಿ ಎಂದು ಬಿಟ್ಟನು

\+ + + +

ಮಂಗಳೂರಿನ ಒಬ್ಬ ವಿದ್ಯಾರ್ಥಿಯು ಮದರಾಸಿನ ತನ್ನ ಮಿತ್ರನಿಗೆ ಕೆಲವು ಪುಸ್ತಕಗಳನ್ನು ರವಾನಿಸಲು ಬರೆದನು ಮದರಾಸಿನ ಮಿತ್ರನ ಕೈಯಲ್ಲಿ ಕಾಸಿರಲಿಲ್ಲ ಅವಕ್ಕವನು ಹೀಗೆ ಬರೆದನು ಮಿತ್ರಾ ಪುಸ್ತಕಗಳನ್ನು ಕಳುಹಿಸೆಂದು ನೀನು ಬರೆದ ಪತ್ರವು ನನಗೆ ಮುಟ್ಟಿಲ್ಲ

\+ + + +

ಚಿಕ್ಕ ಹುಡುಗಿಯು ಮನೆಯ ತಟ್ಟೆಯ ಒಳಗೆ ಬೆಂಕಿಯಿಂದ ಆಡಿಗೆ ಮಾಡುವ ಆಟವಾಡುತ್ತಿದ್ದಳು ತಟ್ಟೆಗೆ ಬೆಂಕಿ ಹಿಡಿದುದನ್ನು ನೋಡಿ ತಾಯಿಯು ಗಾಬರಿಗೊಂಡಳು ತಂದೆಯು ಅವೆ ಅವಳು ಅಡಿಗೆ ಕೆಲಸವನ್ನು ಕಲಿಯಬಾರದೇ? ಮಾತ್ರ ಅತಿ ಮಾಡಬಾರದು ಎಂದನು

\+ + +

ಒಬ್ಬ ವಿದ್ಯಾರ್ಥಿಯು ಬೋರ್ಡಿಂಗಿನಲ್ಲಿ ಕೆಲವು ತಿಂಗಳು ಊಟ ಮಾಡಿ ಕೊಡದ ಹಣ ಕೊಡಲಸಮರ್ಥನಾದನು ಹೀಗೆ ಅವನು ಆ ಬೋರ್ಡಿಂಗಿನ ಯಜಮಾನನ ಬಳಿಗೆ ಹೋಗಿ ನನ್ನಲ್ಲಿ ಹಣವಿಲ್ಲ ಅದರ ಬದಲಿಗೆ ನಿಮ್ಮ ಅಂದದ ಮಗಳನ್ನು ಸಂಪೂರ್ಣ ದರ್ಮಕ್ಕೆ ಮದುವೆಯಾಗುತ್ತೇನೆ ಎಂದನು

\+

ಸ್ತ್ರೀಕ — ಭಟ್ಟರೇ ನಮ್ಮ ಕ್ಷೌರದ ಚಾರ್ಜನ್ನು ನಾವು ಏರಿಸಬೇಕೆಂದಿದ್ದೇವೆ

ಭಟ್ಟ — ಏಕೆ

ಕ್ಷೌರಿಕ — ಆರ್ಥಿಕ ಮುಗ್ಗಟ್ಟಿನಿಂದಾಗಿ ಈಗೀಗ ಜನರ ಮುಖಗಳು ದೊಡ್ಡದಾಗಿಕೊಂಡು ಬಂದಿವೆ ಅದುದರಿಂದ ನಮ್ಮ ಕೆಲಸ ಹೆಚ್ಚು ಕೆಲಸವಾಗುತ್ತದಷ್ಟೆ ಅದಕ್ಕಾಗಿ

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O P ನಂ 10 ೩೦

1 [illegible] 2 ಹುಮಾಯಿ ಸಾಹೇಬ 3 [illegible] ಹಮ್ಮದ ಸಾಹೇಬ — ಪ್ಯಾದಿ

1 5 ಅಬ್ದುರಹಿಮಾನ ಸಾಹೇಬ — ಅರ್ಜಿದಾ

ಮೇಲೆ

1 ಷರೀಫಾಬೀ 2 ಹಾಜಿ 4 5 [illegible] ಸಾಹೇಬ, A 5 ಇಸೂಫ್ ಸಾಹೇಬ, 4 1 5 ಇಬ್ರಾಹಿಮ ಸಾಹೇಬ 1 [illegible] ಸಾಹೇಬ 6 [illegible] — ರಸ್ಪಾಂಡೆಂಟು

ಮೇಲ್ಕಂಡ 1 5 [illegible] ಸಾಹೇಬ [illegible] ಮೃತ ದೇಹದ [illegible] ಆರ್ಜಿ [illegible] ನನ್ನ ಕೋರ್ಟ ಮೇಲೆ [illegible] ಮಾಡಬೇಕೆಂತ [illegible] ಮೇಲ್ಕಂಡ ಕೋರ್ಟಿನಲ್ಲಿ [illegible] ತಾ 19—2—32ನೇ ಪೂರ್ವಾಹ್ನ 11 ಘಂಟೆಗೆ [illegible] ಅಕ್ಷೇಪ [illegible] ತಾರೀಕಿಗ ಸದ್ರಿ ಕೋರ್ಟಿನಲ್ಲಿ ಹಾಜರಾಗಿ [illegible] ತಪ್ಪದ್ದು

Mangalore 1—2—1932 } K. Sadashiva Rao
Counsel for Petr

\+ + + +

ಅನುಕ್ರಮಣಿಕೆ

ಅಗ್ರಲೇಖ
- ಚೀನಾ ಜಪಾನ್ . . . ೬
- ಧೃಢವಿಚಾರಗಳು . . ೪
- ಕೋಟೆಗಳು . . . ೫

ವರ್ತಮಾನ ಸಂಗ್ರಹಗಳು
- ವಿದೇಶ ವರ್ತಮಾನ . . . ೩
- ಒಳದೇಶ ವರ್ತಮಾನ . . . ೩-೭
- ದಕ್ಷಿಣಕನ್ನಡ— ಮಂಗಳೂರು, ಉಡುಪಿ, ಕಾರ್ಕಳ, ಗುರುಪುರ ಪುತ್ತೂರು . . . ೭
- ವಿವಿಧ ಸಮಾಚಾರಗಳು . . ೧೧
- ನಮ್ಮ ಶಾಲೆಗಳು . ೧೩
- ಸಹಕಾರಿಗಳ ಮುಂದಣ ಕರ್ತವ್ಯ ೧೧
- ರಾಮ್ಸೆ ಮೆಕ್ಡೊನಾಲ್ಡ್ ಅಥವಾ ಅಧೃಷ್ಟಮಹಿಮೆ ೯
- ದಂಡನೀತಿಯ ದಂಡನೆ . ೧೦
- ವಿಧವೆಯರ ಗತಿ ಏನು? . . ೨

ಸ್ವದೇಶಾಭಿಮಾನಿ.

ತಾ. ೫ನೇ ಶುಕ್ರವಾರ ಫೆಬ್ರುವರಿ ೧೯೩೨

ಚೀನಾ-ಜಾಪಾನು

ಮಂಚೂರಿಯಾ ಭಾಗದಲ್ಲಿ ಪ್ರಾರಂಭವಾದ ಚೀನಾ—ಜಾಪಾನ ಯುದ್ಧವು ಈಗ ದಕ್ಷಿಣದಲ್ಲಿ ಶಾಂಘಾಯಿಗೂ ಪಸರಿಸಿಯದೆ. ಚೀನಾ—ಜಾಪಾನ ವೈಮನಸ್ಯ ಕ್ಲೇಶವು ಇಂದಿನದಲ್ಲ. ಅಂತಃಕಲಹಗಳಿಂದ ಬಲಹೀನವಾದ ಚೀನಾ ದೇಶವನ್ನು ಹೇಗೆ ನುಂಗಿಬಿಡಬಹುದೆಂಬ ಯೋಚನೆಯೇ ಜಾಪಾನಿಗೆ ಅಂತರಂಗದಲ್ಲಿ ಮಾತ್ರವಲ್ಲದೆ ಬಹಿರಂಗದಲ್ಲಿ ಇದ್ದೀತು. ಸ್ವಭಾವತಃ ಚೀನಾ ದೇಶದಲ್ಲಿ ಜಾಪಾನಿನ ಮೇಲೆ ಬಲವಾದ ತಿರಸ್ಕಾರವು ಬೆಳೆಯುತ್ತಾ ಬಂದಿತು. ಜಾಪಾನು ಚೀನದ ಕಡೆಗಿನ ತನ್ನ ಧೋರಣವನ್ನು ಬದಲಾಯಿಸಿ ಅದನ್ನು ತನ್ನ ವಿಶ್ವಾಸಕ್ಕೆ ಪಾತ್ರವಾಗಿ ಮಾಡಿದ್ದಾದರೆ ಜಾಪಾನು ಈ ದಿನ ಲೋಕದಲ್ಲಿ ಶ್ರೇಷ್ಠವಾದ ಜನಾಂಗವಾಗುತ್ತಿತ್ತಲ್ಲದೆ ಆಸ್ಯ ಖಂಡದ ವೇಳೆಯನ್ನೂ ಸಾಧಿಸುವಂತಾಗುತ್ತಿತ್ತು. ಆದರೆ ಜಾಪಾನಿನ ಅತಿ ಕ್ಷುದ್ರವಾದ ಸ್ವಾರ್ಥವೂ ಈ ಉದಾರವೂ ಪರಿಣಾಮಕಾರಿಯೂ ಆದ ಧೋರಣಕ್ಕೆ ಎಡೆಕೊಡಲಾರದೆ ಹೋಯಿತು.

ಜಾಪಾನಿನಲ್ಲಿ ಇಂತಹ ಸ್ವಾರ್ಥವು ಇತ್ತೆಂದು, ಪಾಶ್ಚಾತ್ಯ ರಾಷ್ಟ್ರಗಳೊಳಗೆ ಇರಲಿಲ್ಲವೆಂದು ಹೇಳಲಾಗುವುದಿಲ್ಲ. ಬ್ರಿಟಿಷರು ಶಾಂಘಾಯಿ ಮೊದಲಾದ ಚೀನೀಯ ಬಂದರುಗಳಲ್ಲಿ ಸ್ಥಾಪಿಸಿದ ವಸಾಹತುಗಳ ಇತಿಹಾಸವನ್ನು ಕಂಡರೆ ಜಾಪಾನಿನ ಈ ಧೋರಣವು ನೂತನವಲ್ಲವೆಂದು ಕಂಡುಬಾರದೆ ಇರಲಾರದು. ಆದರೆ ಪಾಶ್ಚಾತ್ಯ ರಾಷ್ಟ್ರಗಳು ಮತ್ತು ಜಾಪಾನು ಈ ಎಲ್ಲಾ ರಾಷ್ಟ್ರಗಳೊಳಗಿನ ಪರಸ್ಪರ ಅವಿಶ್ವಾಸವೇ ಈ ವರೆಗೆ ಚೀನವನ್ನು ರಕ್ಷಿಸಿತು.

ಆದರೆ ಈ ಬಾರಿ ಜಾಪಾನು ಇಷ್ಟು ಧೈರ್ಯದಿಂದ ಮುಂದುವರಿಯಲು ಕಾರಣವೇನು? ಜಾಪಾನಿನ ಬಂದು ಪ್ರತಿಸ್ಪರ್ಧಿಯೆಂದರೆ ರಶ್ಯಾ ದೇಶ. ರಶ್ಯಾ ದೇಶವು ನೂತನ ಕೈಗಾರಿಕೆಗಳ ಸ್ಥಾಪನೆಯಲ್ಲಿ ಇಡೀ ರಾಷ್ಟ್ರವನ್ನು ವ್ಯವಸ್ಥೆಗೊಳಿಸುವುದರಲ್ಲಿ ಪೂರ್ಣ ಶಕ್ತಿಯೊಡನೆ ನಿರತವಿರುವುದರಿಂದ ಜಾಪಾನಿನೊಡನೆ ಯುದ್ಧಕ್ಕೆ ಬರಲು ಅದು ತಯ್ಯಾರಿರಲಾರದೆಂದು ಜಾಪಾನೀಯರು ಭಾವಿಸಿರಬಹುದು. ಬ್ರಿಟನ ಫ್ರಾಂಚರೊಡನೆ ಜಾಪಾನು ಚೀನಾ ದೇಶದ ಹಂಚೋಣದ ಬಗ್ಗೆ ಯಾವ ತರದ ಗುಟ್ಟಿನ ಒಪ್ಪಂದ ಮಾಡಿಯದೆಂದು ಹೇಳಲಾಗುವುದಿಲ್ಲ. ಈಗಿನ ಸ್ಥಿತಿಯಲ್ಲಿ ಈ ಎರಡೂ ಪಾಶ್ಚಾತ್ಯ ರಾಷ್ಟ್ರಗಳು ಯುದ್ಧ ತಯ್ಯಾರಿಲ್ಲ, ಬದಲಿಗೆ ಬಹಳ ಲಾಭಕರವಾದ ಒಪ್ಪಂದಗಳು ಜಾಪಾನಿನೊಡನೆ ಸಾಧ್ಯವಾದರೆ ಚೀನಾ ದೇಶವು ಮಣ್ಣು ಪಾಲಾದರ ಇವರಿಗೇನು? ಇಂತಹ ಅನುಮಾನವು ಚೀನೀಯರ ಮನಸ್ಸಿನಲ್ಲಿ ಬಹುವಾಗಿ ತೋರುತ್ತದೆ, ಇಲ್ಲವಾದರೆ ಅವರು ಜಾಪಾನಿನ ಮೇಲೆ ಯುದ್ಧವನ್ನು ಸಾರಲು ಹಿಂಜರಿಯುತ್ತಿರಲಿಲ್ಲ, ಯುದ್ಧ ಸಾರಿದರೆ ಜಾಪಾನೂ, ಪಾಶ್ಚಾತ್ಯ ರಾಷ್ಟ್ರಗಳೂ ಒಳಗೊಳಗಿನ ಸಂಧಿಗಳ ಕಾರಣದಿಂದ ತನ್ನ ಮೇಲೆ ಬಿದ್ದರೆ ತಾನು ಉಳಿಯಲಿಕ್ಕಿಲ್ಲವೆಂಬ ಹೆದರಿಕೆಯು ಚೀನೀಯರಿಗೆ ಇರಬಹುದು.

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಿ। ಲೆನ್ಸಬರಿಯವರು ಜಾಪಾನು ಅಂತರ್ರಾಷ್ಟ್ರೀಯ ಪಿಂಡಾರಿಗಳಾಗಿರುವರು, ಎನ್ನುವಾಗ ಬ್ರಿಟನ ಪ್ರಧಾನ ಮಂತ್ರಿಗಳು ಹಾಗೆನ್ನಬೇಡಿ ಅವರು ನಮ್ಮ ಸ್ನೇಹಿತರು” ಎಂದರು. ಲೀಗ್ ಒಫ್ ನೇಶನ್ಸ್ ಯಾವ ತರದಲ್ಲಿಯೂ ಜಾಪಾನಿನ ಈ ದಂಡಯಾತ್ರೆಯನ್ನು ತಡಿಸಲೆತ್ನಿಸುವುದಿಲ್ಲ, ಕೆಲ್ಲೊಗ ಶಾಂತಿಸಂಧಾನವು ಅಣಗಿ ಹೋಯಿತು. ಆದರೂ ಜಿನಿವಾದಲ್ಲಿ ಲೋಕದೊಳಗೆ ಯುದ್ಧವೆಂದೂ ಆಗಬಾರದೆಂದು Disarmament conference ಲೋಕದ ಸಂಕಾರಗಳು ಈಗ ಕೂಡಿಸಿ ಚರ್ಚಿಸುವುದು ವಿಧಿಯ ಉಪಹಾಸ irony of fate ಎನ್ನಬೇಕು.

ಈ ಐತಿಹಾಸಿಕ “ಪಿಂಡಾರಿ”ತನದಲಿ ಇನ್ನುಳಿದ ಮುಖ್ಯ ರಾಷ್ಟ್ರವೆಂದ ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕ. ಅದರ ಯುನೈಟೆಡ್ ಸ್ಟೇಟ್ಸ್ ಈ ಯುದ್ಧರಂಗದಲ್ಲಿ ... ಆ ವೇಳೆ ಯಾರು ಯಾವ ಪಕ್ಷದಲ್ಲಿ ಯುದ್ಧಕ್ಕೆ ಇಳಿಯಲಾರರೆಂಬುದನ್ನು ಊಹಿಸಲು ಸಾಧ್ಯವಿಲ್ಲ. ಅಮೇರಿಕವು ಜಾಪಾನಿನ ವಿರೋಧವಾಗಿ ನಿಂತು ಶಕ್ತಿವಂತನಾದರೂ ಇಡೀ ಯುರೋಪನ್ನು ತನ್ನ ವಿರೋಧಿಯಾಗಿ ಮಾಡಲಾರದು. ಯುರೋಪಿನಲ್ಲಿ ಅಮೇರಿಕವು ಹಲವಂಶ ಮೂಲಧನವನ್ನು ಚೆಲ್ಲಿ ಹಾಕಿಯದೆ. ಈ ಯುದ್ಧದಲ್ಲಿ ... ಆ ಮೂಲಧನಕ್ಕೆ ಕೇಡನ್ನು ತಗಲುವುದು ಮಾತ್ರವಲ್ಲದೆ ಯುರೋಪಿಯ ಮಹಾಯುದ್ಧದಲ್ಲಿ ಸಂಪಾದಿಸಿದುದನ್ನು ಈ ಯುದ್ಧಕ್ಕೆ ವೆಚ್ಚಮಾಡಬೇಕಾಗುವುದು.

ಇತಿಹಾಸವು ನ್ಯಾಯಪಕ್ಷದ ವಿಜಯವನ್ನೇ ಸಾರುವುದಿಲ್ಲ. ಇತಿಹಾಸಕ್ಕೆ ನ್ಯಾಯಾನ್ಯಾಯಗಳಲ್ಲಿ ಭಿನ್ನತೆಯಿರುವುದಿಲ್ಲ. ಯುಕ್ತಿಗೂ, ಬಲ-ಕ್ಕೂ ಅದು ಮನ್ನಣೆಯಿತ್ತಷ್ಟು ನ್ಯಾಯಕ್ಕೆ ಮನ್ನಣೆಯಿಟ್ಟಿಲ್ಲ. ಆದುದರಿಂದ ಈ ಸಂದಿಗ್ಧ ಸಮಯದಲ್ಲಿ ಚೀನವು ಯುಕ್ತಿಯನ್ನೂ ಬಲವನ್ನೂ ಪ್ರಯೋಗಿಸದಿದ್ದರೆ ಚೀನದ ಮುಂದಿನ ಅಸ್ತಿತ್ವವು ಅನುಮಾನಾಸ್ಪದವಿದೆ.

ಸ್ವದೇಶಾಭಿಮಾನಿಯ ಸಾಹಿತ್ಯ ಸಂಚಿಕೆ.

ತಿಂಗಳಿಗೊಂದು ಬಾರಿ ನಾಲ್ಕು ಪುಟದ ಸಾಹಿತ್ಯ ಸಂಚಿಕೆಯನ್ನು ತೆರೆಯಲಿರುವೆವು

— ಇದರಲ್ಲಿ —

ವಾಙ್ಮಯಾತ್ಮಕ ಉಪನ್ಯಾಸಗಳು
ಸಣ್ಣ ಕಥೆಗಳು
ಕವಿತೆಗಳು
ಪುಸ್ತಕ ವಿಮರ್ಶೆ

ಮೊದಲಾದುವು ಬರುವುವು. ಲೇಖಕರು ತಮ್ಮ ಲೇಖನಗಳನ್ನು ಕಳುಹಿಸಿ ಈ ಸಂಚಿಕೆಯನ್ನು ಯಶಸ್ವಿಯಾಗಿ ಮಾಡಬೇಕಾಗಿ ಕೋರುತ್ತೇವೆ.

ಸಂಪಾದಕ

ವಿದೇಶ ವರ್ತಮಾನ.

ಚೀನಾ ಜಪಾನ್ ಯುದ್ಧ !

ಕೆಲವು ದಿವಸಗಳಿಂದಲೂ ಜಪಾನಿಗೆ ಚೀನದ ಮೇಲೆ ಕಣ್ಣಿತ್ತು. ಅಂತಹ ಸಂದರ್ಭದಲ್ಲಿ ಚೀನಿಯರು ಪುಂಡರು ಕೆಲವರು ಜಪಾನಿನ ... ಜಪಾನ್ ಪಾದ್ರಿಗಳಿಗೆ ಹೊಡೆದು ಭಂಗಪಡಿಸಿದರು. ಈ ದೂರು ಜಪಾನ್ ಸರಕಾರಕ್ಕೆ ಹೋಗಲು ಕ್ಷೋಭೆಗೆ ಪ್ರಾರಂಭವಾಯಿತು. ಜಪಾನ ಚೀನಿಯ ಸೈನಿಕರೊಡನೆ ಯುದ್ಧವಾಯಿತು. ಚೀನಿಯರ ಮಂಚೂರಿಯ ಎಂಬ ಪ್ರಾಂತ್ಯವನ್ನು ಜಪಾನರು ಹೊಕ್ಕರು. ಧನ ಜನಗಳಿಗೆ ಹೇರಳ ನಷ್ಟವಾಯಿತು. ಅಷ್ಟಾಗುವಾಗಲೂ ಚೀನಿಯ ಸರಕಾರವು ತಾಳ್ಮೆಯಿಂದಲೇ ಇತ್ತು. ಆದರೆ ದಿನೇ ದಿನೇ ಜಪಾನರ ಉಪಟಳವು ಹೆಚ್ಚಾಯಿತು. ಜಪಾನರು ಚಾಪೈ ಎಂಬ ಪಟ್ಟಣವನ್ನು ಮುತ್ತಿದರು. ಚೀನಿಯರಿಗೆ ಆ ಪಟ್ಟಣವು ಮುಖ್ಯವಾಗಿದ್ದುದರಿಂದ ಅವರು ತಮ್ಮ ರಕ್ಷಣೆಗಾಗಿ ಶಸ್ತ್ರಧಾರಿಗಳಾದರು. ಪ್ರಕಟಿಸಿ ಮಾಡಿದ ಯುದ್ಧಕ್ಕೆ ಇತ್ತಂಡಗಳೂ ಹೋಗದಿಲ್ಲವಾದರೂ ನಡೆಯುವ ಹೋರಾಟವು ನಿಜವಾದ ಘೋರ ಯುದ್ಧದ ತರಗಿರುವುದು. ಚೀನದ ಅರ್ಧ ಮಿಲಿಯ ಜನರು ಕಷ್ಟಕ್ಕೊಳಗಾಗಿರುವರು. ಜಪಾನದ ವೈಮಾನಿಕರು ರಾತ್ರಿ ಇಡೀ ಚೀನದ ಮುಖ್ಯ ಪಟ್ಟಣಗಳಿಗೆ ಬೋಂಬನ್ನೆಸೆದರು. ೩೦೦೦ಕ್ಕಿಂತಲೂ ಹೆಚ್ಚು ಮಂದಿ ಸೈನಿಕರು ಗಾಯಗೊಂಡಿರುವರು. ೬೦೦ ಮಂದಿಗಳು ಮಡಿದರು. ಸಾವಿರಗಟ್ಟಳೆ ಮನೆಮಾರುಗಳೂ ಭಂಡಸಾಲೆಗಳೂ ಧ್ವಂಸವಾಗಿವೆ. ಚೀನೀಯರು ಮತ್ತೂ ಪ್ರಬಲ ಒತ್ತಾಯವನ್ನು ಮಾಡುತ್ತಿದ್ದಿಲ್ಲವಾದರೆ ಇಡೀ ಚೀನಾ ಪಟ್ಟಣಗಳೇ ಜಪಾನ ಸೈನಿಕರ ಕೈವಶವಾಗುತ್ತಿದ್ದುವು. ಜಪಾನರ ಪಕ್ಷದಲ್ಲಿ ಇಷ್ಟರ ತನಕ ೭ ಮಂದಿಗಳು ಕೊಲ್ಲಲ್ಪಟ್ಟಿರುವರು.

ಶೆಂಘೈ ಪ್ರಾಂತ್ಯದಲ್ಲಿ ಜಪಾನರು ಧಾಳಿ ನಡೆಸಿದುದಕ್ಕಾಗಿ ಇಂಗ್ಲಾಂಡು, ಅಮೇರಿಕಾ, ಫ್ರಾನ್ಸ್ ಇಟೆಲಿ ಮೊದಲಾದ ಬಾಹ್ಯದೇಶಗಳವರು ಉದ್ವಿಗ್ನಗೊಂಡು ಜಪಾನು ಮಾಡುವುದು ಅನೀತಿಯೆನ್ನುತ್ತಿರುವರು. ಅಲ್ಲದೆ ಶೆಂಘೈಗೆ ತಮ್ಮ ರಕ್ಷಣೆಗಳಾದ ನೌಕೆಗಳನ್ನು ಕಳುಹಿಸಿದುವರು. ಸ್ಟೇಟ್ ಸೆಕ್ರೆಟರಿಗಳಾದ ಸಾಮುವೇಲ್ ಹೋರರು ಈ ಯುದ್ಧದ ಸಮಸ್ಯೆಯಲ್ಲೇ ಮನಸ್ಸಿತ್ತು, ಕೆಲಸ ನಡೆಸುತ್ತಿರುವರು. ಇಂಗ್ಲಾಂಡಿಗೆ ಸಂಬಂಧಪಟ್ಟ ಪ್ರಾಂತ್ಯಗಳ ರಕ್ಷಣೆಯನ್ನು ಮಾಡಬೇಕಾಗಿ ಕೆಲವು ಬಲವಾದ ನೌಕೆಗಳನ್ನು ಯೋಧ್ಧರ ಸಮೇತ ರವಾನಿಸಿರುವರು. ತನ್ಮಧ್ಯೆ ಚೀನಾ ಜಪಾನರು ಯುದ್ಧವನ್ನು ಹಿಂತೆಗೆಯಬೇಕೆಂದೂ, ಮಾಧ್ಯಮಿಕ ವಿಚಾರಕೂಟವೊಂದನ್ನು ಮಾಡಿ ಎಲ್ಲವನ್ನು ಇತ್ಯರ್ಥಿಸಬೇಕೆಂದೂ ಯತ್ನವು ನಡೆಯುತ್ತಲಿದೆ. ಮೊನ್ನೆ ಚೀನೀ ಸೇನಾಪತಿಯಾದ ಟ್ಯಾಂಗ್ ಕೈಶೇಕ್ ಎಂಬವರು ಸೈನಿಕರು ಸಿದ್ಧರಾಗುವುದಕ್ಕಾಗಿ ಬೋಧಿಸಿರುತ್ತಾರೆ. ದೇಶೀಯರೆಲ್ಲರೂ ಏಕರಾಗಿ ವಿರೋಧಿಯನ್ನೆದುರಿಸಬೇಕೆಂದ ಅರಿಕೆ ಮಾಡಿಕೊಂಡರು. ಅದನ್ನು ಕೇಳಿದ ಬ್ರಿಟಿಷ ರೂಟರ್ ವರ್ತಮಾನ ಸಂಚಾಲಕರು ಚೀನಾವು ಜಪಾನಿನ ಮೇಲೆ ಯುದ್ಧಕ್ಕೆ ನಿರ್ಧರಿಸಿದೆಯೆಂದು ಪ್ರಕಟಿಸಿದರು. ಮುಂಬಾಯಿ ಮೊದಲಾದ ಪ್ರಾಂತ್ಯಗಳಲ್ಲಿ ಬಹಳ ಕೋಲಾಹಲವು ತಲೆದೋರಿದೆ. ಅಲ್ಲಿ ಯುದ್ಧವು ಪ್ರಾರಂಭವಾದರೆ ಇಡೀ ಪ್ರಪಂಚದ ವ್ಯಾಪಾರಕ್ಕೆ ಬಲವು ತಗ್ಗೀತೆಂದು ಊಹಿಸಲಾಗಿದೆ. ಜಪಾನದ ಕೆಲಸಗಳನ್ನು ರಹಸ್ಯವಾಗಿ ತಿಳಿದು ಸರಕಾರಕ್ಕೆ ತಿಳಿಸುತ್ತಿದ್ದ ೧೦೦ ಮಂದಿ ಚೀನೀಯರನ್ನು ಹಿಡಿದು ತಲೆ ಕಡಿದರಾಗಿ ವರ್ತಮಾನವಿದೆ.

ತಾ ೩೧ ವರೆಗೂ ಚೈನಾ ಜಪಾನರೊಳಗೆ ಯುದ್ಧವು ನಡೆದಿತು. ೧೫೦೦೦ ಚೈನಾ ಸೈನಿಕರು ಜಪಾನರ ಧಾಳಿಗೆ ಎದುರಾಯಿಸಿ ನಿಂತಿರುವರು. ಪ್ರಖ್ಯಾತವಾದ ಒರಿಯಂಟಲ್ ಲೈಬ್ರರಿಯಲ್ಲಿ ಒಂದು ಲಕ್ಷ ಪುಸ್ತಕಗಳಿದ್ದುವು. ಆ ಪುಸ್ತಕ ಭಂಡಾರವು ಸಂಪೂರ್ಣವಾಗಿ ಸುಟ್ಟು ಹೋಗಿರುವುದು. ೬೦೦೦ ರಷ್ಯ ದೇಶಸ್ಥರು ಸ್ವಯಂಸೇವಕರಾಗಿ ಸೇರಿರುವರು. ೫೦೦೦ ಜಪಾನು ನೌಕೆಗಳು ಸಿದ್ಧವಾಗಿವೆ. ಶೆಂಘೈಯಲ್ಲಿ ಭಯಂಕರ ಸಮರವು ನಡೆಯುತ್ತಿದೆ. ... ಶೆಂಘೈಗೆ ಕಳುಹಿಸಿರುವರು. ... ಬಹಳ ಅನಾಹುತಗಳಾಗುತ್ತಿವೆ. ಯುದ್ಧವಾಗುತ್ತಿರುವ ದೇಶಗಳಲ್ಲಿರುವ ಬ್ರಿಟಿಷ್ ಜನರು ಸುರಕ್ಷಿತವಾಗುವುದಕ್ಕೆ ಯತ್ನವು ನಡೆದು ಈಗ ಎಲ್ಲರೂ ಭದ್ರದಲ್ಲಿರುವರಾಗಿ ತಿಳಿದು ಬರುತ್ತದೆ.

ಒಳದೇಶ ವರ್ತಮಾನ

— ಮಹಾತ್ಮಾ ಗಾಂಧಿಯವರ ... ಜೈಲಿನಲ್ಲಿ ಸಂದರ್ಶಿಸುವುದಕ್ಕೆ ಅವರಿಗೆ ಓದಲು ಟೈಮ್ಸ್ ಒಫ್ ಇಂಡಿಯಾ ಎಂಬ ಲೀಡರ್ ಬೊಂಬೇಕ್ರೋನಿಕಲ್ ಪತ್ರಿಕೆಗಳು ದೊರೆಯುತ್ತಿವೆ. ಗಾಂಧಿಜಿಯವರನ್ನು ಸಂದರ್ಶಿಸುವವರು ಅವರೊಡನೆ ರಾಜಕೀಯ ವಿಷಯವಾಗಿ ಸಂಭಾಷಿಸಬಾರದೆಂದಾಗಿದೆ. ಈ ಅಪ್ಪಣೆಯನ್ನು ಗಾಂಧಿಜೀಯವರೇ ... ನಿರಾಕರಿಸಿದರು. ... ಜೈಲು ರಾಜಕೀಯ ಕೈದಿಗಳಿಂದ ತುಂಬಿದೆ. ಇನ್ನು ಕೈದ ಮಾಡಲ್ಪಡುವವರನ್ನು ವಿಸಾಪುರದ ಸೆರೆಮನೆಯಲ್ಲಿ ಇಡುವರು.

— ಶ್ರೀಮತಿ ಸರೋಜಿನಿ ನಾಯಡುರವರು ಕಳೆದ ವಾರ ಮಹಾತ್ಮಾ ಗಾಂಧಿಯವರನ್ನು ಸೆರೆಮನೆಯಲ್ಲಿ ಸಂದರ್ಶಿಸಿದರು. ಎರಡು ಘಂಟೆಯ ತನಕ ಮಾತುಕತೆ ನಡೆಯಿತು. ಅವರು ಮಾತನಾಡುವಾಗ ಬಳಿಯಲ್ಲಿ ಶ್ರೀ ವಲ್ಲಭಭಾಯಿಯವರೂ ಇದ್ದರು. ಇಬ್ಬರೂ ಸುಖದಲ್ಲಿಯೇ ಇರುವರು.

— ಮುಂಬಾಯಿಯಲ್ಲಿ ಸ್ವಾತಂತ್ರ್ಯ ಘೋಷಣೆಯ ದಿನ ೧೮೧ ಮಂದಿಯನ್ನು ಕೈದುಮಾಡಿರುವರು. ಜನವರಿ ೩೦ ರಿಂದ ಒಟ್ಟು ೩೪೦ ಮಂದಿಗಳು ಮುಂಬಾಯಿ ಸೆರೆಮನೆ ಪಾಲಾದರು.

— ಬಂಗಾಲದಲ್ಲಿ ಗವರ್ನರರನ್ನು ಕೊಲ್ಲುವ ಪಿತೂರಿಯಲ್ಲಿ ... ಎಂಬ ಮೂವರು ... ಶಿಕ್ಷೆಯಾಗಿದ್ದು ಹೈಕೋರ್ಟಿನಲ್ಲಿ ಅವರಿಗೆ ಬಿಡುಗಡೆಯಾಯಿತು.

ಬಂಗಾಳದ ಕೌನ್ಸಿಲನ್ನು ತೆರೆಯುವ ಸಂದರ್ಭದಲ್ಲಿ ಅಲ್ಲಿಯ ಗವರ್ನರರು ಮಾಡಿದ ಭಾಷಣದಲ್ಲಿ ಅವರು ಸರಕಾರದ ವರ್ತನೆಯನ್ನು ಸಮರ್ಥಿಸಿದರು.

— ರಂಗೂನಿನಲ್ಲಿ ಇಬ್ಬರು ಬೌದ್ಧ ಸನ್ಯಾಸಿಗಳು ಭಿಕ್ಷೆ ಬೇಡುವಾಗ ಜಗಳವಾಡಿದರು. ಅರ್ಡಿಕ್ಕ ಎಂಬ ಸನ್ಯಾಸಿಯು ಪ್ರತಿಪಕ್ಷದವನನ್ನು ತಿವಿದು ಕೊಂದನು. ಈತನಿಗೆ ಫಾಶಿ ಶಿಕ್ಷೆಯಾಯಿತು.

— ಕಳೆದ ಶುಕ್ರವಾರ ಮುಂಬಾಯಿಯಲ್ಲಿ ನಡೆದ ಪೋಲೀಸ್ ಗೋಳಿಬಾರಿನಿಂದಾಗಿ ಒಬ್ಬನು ಮಡಿದಿದ್ದನು. ಇನ್ನೊಬ್ಬನು ೨೦ರಲ್ಲಿ ಆಸ್ಪತ್ರೆಯಲ್ಲಿ ಮಡಿದನು. ಈತನ ಹೆಸರು ಶ್ರೀ ಮಾಧವ ರಾಮ್ ಸಾಲಿಗ್ರಾಮ.

ರೌಂಡ್‌ಟೇಬಲ್ ಕಮಿಟಿಯ ಸದಸ್ಯರುಗಳು ಡಿಲ್ಲಿಗೆ ಹುಟ್ಟಿದರು ಲೋರ್ಡ್ ಲೊಥಿಯನವರು ವೈಸರಾಯರನ್ನು ಕಂಡರು. ಒಂದು ಸಭೆ ಜರಗಿ ಆದಷ್ಟು ಬೇಗನೇ ಕೆಲಸಕ್ಕೆ ತೊಡಗ ಬೇಕೆಂದಾಯಿತು.

ಮೌಲಾನಾ ಶೌಕತಾಲಿಯವರು 'ಮುಲ್ತಾನ್' ಸ್ಟೀಮರಿನಲ್ಲಿ ಮುಂಬಾಯಿಗೆ ಕಳೆದ ತಾ ೨೯ರಲ್ಲಿ ತಲಪಿದರು. ಕೊಂಗ್ರೆಸು ವಹಿಸಿದುದು ಅನ್ಯಾಯವೆಂದೂ, ಸರಕಾರವು ಮಾಡಿದ ನೀತಿಯೆಂದೂ ಅವರ ಅಭಿಪ್ರಾಯ. ಅಲ್ಲದೆ ವೈಸರಾಯರು ಒಂದು ವೇಳೆ ಗಾಂಧಿಜೀಯವರಿಗೆ ಭೇಟಿ ಕೊಡುತ್ತಿದ್ದರೆ ಅದಕ್ಕೆ ತಾನು ಜಗುಪ್ಸೆಗೊಳ್ಳುತ್ತಿದ್ದೆನೆಂದೂ ಅವರು ಹೇಳಿರುವರು.

– ಕೊಂಗ್ರೆಸ್ಸು ಗಾಂಧಿಯವರನ್ನು ಇಂಗ್ಲಾಂಡಿಗೆ ಕಳುಹಿಸುವುದಕ್ಕಿಂತ ಇನ್ನಿತರ ಒಳ್ಳೆಯವರನ್ನು ಕಳುಹಿಸುತ್ತಿದ್ದರೆ ಉತ್ತಮವಿದ್ದಿತೆಂದೂ, ಇಂಗ್ಲಾಂಡಿನಲ್ಲಿ ಗಾಂಧಿಜೀಯವರು ಸಿಕ್ಕಿಬಿದ್ದ ಮಾತನಾಡಿದರೆಂದೂ, ಶೌಕತಾಲಿಯವರೊಡನೆ ಕಳುಹಿಸಿದ ಡಾ ಅಂಬೆಡ್ಕರರ ಹೇಳಿಕೆ.

– ಮುಂಬಾಯಿಯ ಇಂಡಿಯನ್ ಮರ್ಚೆಂಟ್ಸ್ ಚೇಂಬರಿನವರು ಗಾಂಧಿಜೀಯವರ ಕೈದಿನ ಬಗ್ಗೆ ದುಃಖಸೂಚನೆ ಮಾಡುವುದಕ್ಕೂ, ಸ್ವದೇಶಿಯನ್ನು ಪುರಸ್ಕರಿಸಲಿಕ್ಕೂ ತಾ ೪ನೇ ದಿನ ಎಲ್ಲಾ ಸಂಘಗಳು ಒಂದು ಮಹಾ ಸಭೆಯನ್ನು ಜರಗಿಸಲಿದೆ ವರು.

– ಬೇಕಾದಷ್ಟು ಅಂಚೆ ಚೀಟು ತಗಲಿಸದ ೩೦೦೦ ಪೋಸ್ಟ್ ಕಾರ್ಡುಗಳು ನ್ಯೂಡಿಲ್ಲಿಯ ಪೋಸ್ಟಲ್ ಅಧಿಕಾರಿಗಳ ಕೈಗೆ ಬಂದುವೆಂದೂ, ಕಾಯಿದೆ ಸಭೆಗೆ ಅವುಗಳನ್ನು ಸುಟ್ಟು ಹಾಕಿರುವರೆಂದೂ ಎಸೆಂಬ್ಲಿಯ ವಾದವಿವಾದಗಳಿಂದೊಂದು ವಾರ್ತೆ.

– ಕಲ್ಕತ್ತದ ರೈಟರ್ ಬಿಲ್ಡಿಂಗ್ ಎಂಬಲ್ಲಿ ಒಂದು ಕೋಟೆಯಲ್ಲಿ ಎರಡು ದಿನಗಳಿಂದಲೂ ಒಳಗಿಂದ ಶಬ್ದವಾಗುತ್ತಿದ್ದುದನ್ನು ಕೇಳಿ ಸಾವಿರಾರು ಮಂದಿಗಳು ಆಶ್ಚರ್ಯ ಪಟ್ಟರು. ಒಳಗೆ ಭೂತ ವಿರುವುದೆಂಬ ಸುದ್ದಿಯು ಹರಡಿತು. ಜನತಂಡವನ್ನು ಸಮಾಧಾನ ಪಡಿಸುವುದಕ್ಕಾಗಿ ಬಾಗಿಲು ತೆರೆಯಲಾಯಿತು. ಒಂದು ಕರಿ ನಾಯಿಯು ಹೊರಗೋಡಿತು. ಆದುದರಿಂದ ಕೆಲವು ದಿನಗಳ ಮೇಲೂ ಜನಸಮೂಹವು ಅಲ್ಲಿ ನೆರೆಯುತ್ತಿತ್ತು.

ಕಲ್ಕತ್ತದ ಕೊಮಿಲ್ಲದಲ್ಲಿ ಡಿ ಮೆಜಿಸ್ಟ್ರೇಟರಾದ ಸ್ಟೀವೆನ್ಸರನ್ನು ಗುಂಡಿನಿಂದ ಕೊಂದುದಕ್ಕಾಗಿ ಸುನೀತಿ ಚೌಧುರಿ ಮತ್ತು ಶಾಂತಿ ಘೋಷ್ ಎಂಬ ತರುಣಿಯರಿಗೆ ಜನ್ಮಟಾಪು ಕರಿಯಾಳು ಶಿಕ್ಷೆಯನ್ನು ವಿಧಿಸಲಾಯಿತು. ಆ ತರುಣಿಯರು ಕುವರ ಲಾಯದಲ್ಲಿ ಬದುಕುವುದಕ್ಕಿಂತ ಸಾಯುವುದು ಲೇಸು" ಎಂದರು. ಶಿಕ್ಷೆಯು ಸಿಗುವ ದಿನ ಅವರು ಬಹಳ ಸಂತೋಷದಿಂದಲೇ ಕೋರ್ಟಿಗೆ ಹೋಗಿದ್ದರು. ಇಬ್ಬರೂ ಪರಿಮಳದ ಹೂವನ್ನು ಮುಡಿದುಕೊಂಡಿದ್ದು ಧೈರ್ಯವನ್ನೇ ಪ್ರದರ್ಶಿಸುತ್ತಿದ್ದರು. ಇವರು ಮಹಾ ಧೈರ್ಯಶಾಲಿಗಳಿರುವುದರಿಂದಲೂ ಇವರಿಗೆ ಬಾಹ್ಯಸಹಾಯವು ಇರಬಹುದೆಂದು ಊಹನೆಯಿರುವುದರಿಂದಲೂ ಇವರ ಆಚರಣೆಯನ್ನು ಗಮನಿಸತಕ್ಕುದೆಂದು ಆಜ್ಞೆ ಇದೆ.

ಮುಂಬಾಯಿಯಲ್ಲಿ ಸಭೆಗಳು ಜರಗುತ್ತಲೂ ಗಲಾಟೆಗಳಾಗುತ್ತಲೂ ಇವೆ. ಚೌಪಾತಿ ಮೊದಲಾದ ಕಡೆಗಳಲ್ಲಿ ಸಭೆಗಳು ಜರಗುವಾಗ ಪೋಲೀಸರು ಮುಂದಾಳುಗಳನ್ನು ಹಿಡಿದುಕೊಂಡು ಹೋಯ್ದರು. ಪೋಲೀಸರ ಮೇಲೆ ಕಲ್ಲೆಸೆಯುವುದಕ್ಕೂ ಕೆಲವರು ಪ್ರಾರಂಭಿಸಿದ್ದರಾಗಿ ತಿಳಿದು ಬಂದಿದೆ.

– ಪಾಟ್ನಾದ ಮೋತಿಹರಿ ಎಂಬಲ್ಲಿ ಒಂದು ಸಭೆಯು ಕೂಡಿತ್ತು. ಪೋಲೀಸರ ಆಗಮನವಾಗಿ ಜನತಂಡಕ್ಕೂ ಅವರಿಗೂ ಕೈ ಕೈಯಾಯಿತು. ಪೋಲೀಸರು ಗೋಳಿಬಾರು ಮಾಡಿದಾಗ ಇಬ್ಬರು ಮಡಿದರು. ಅನೇಕರಿಗೆ ಜಖಂ ಆಗಿದೆ. ಪಟ್ಟಣವನ್ನು ಪೋಲೀಸರು ಪಹರೆ ಮಾಡುತ್ತಿರುವರು.

– ಅಲ್ಲಹಾಬಾದಿನಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನೂ ಮಿ|ಸೆ. ಕೃಷ್ಣಾ ನೆಹರೂರನ್ನೂ ಇನ್ನಿತರ ೩೨ ಮಂದಿಗಳನ್ನು ಕೈದು ಮಾಡಿದರು. ಸಾವಿರಗಟ್ಟಲೆ ಹಳ್ಳಿಗರು ಕೂಡಿ ಒಂದು ಸಭೆ ಜರಗಿಸಲಿದ್ದರು. ಆದರೆ ಸಭೆಯ ಸ್ಥಾನವನ್ನು ಪೋಲೀಸರು ವಶೀಕರಿಸಿದುದರಿಂದ ಸಭೆ ಜರಗಲಿಲ್ಲ.

– ನ್ಯೂ ಡಿಲ್ಲಿಯ ಎಸೆಂಬ್ಲಿಯಲ್ಲಿ ಸರಕಾರವು ಪ್ರಕೃತ ಕ್ರಮವನ್ನು ಹಿಂದಕ್ಕೆಳೆದು ದೇಶವನ್ನು ಶಾಂತಿಮಯ ರೀತಿಯಿಂದಾಳಬೇಕೆಂದು ಠರಾವಾಯಿತು.

– ವೈಸರಾಯರು ಚಳವಳದ ಕುರಿತು ಯಾವ ರಾಜಿಸಂಧಾನವೂ ಇಲ್ಲವೆಂದು ಭಾಷಣ ಕೊಟ್ಟುದನ್ನು ಕೇಳಿ ಅಲ್ಲಹಾಬಾದಿನ ಲೀಡರ್ ಪತ್ರಿಕೆಯು ತಾ ೨೭ರಲ್ಲಿ ಹೀಗೆ ಬರೆಯಿತು. "ರಾಜಿ ಪಂಚಾಯಿತಿಗೆ ಎಡೆಯಿಲ್ಲವೆಂದು ಸರಕಾರವೆನ್ನುತ್ತದೆ. ಇದು ಎಷ್ಟರ ತನಕ? ಇವೆಲ್ಲ ಹೇಗೆ ಅಂತ್ಯವಾದೀತು? ಕೊಂಗ್ರೆಸ್ಸನ್ನೂ ಗಾಂಧಿಯವರನ್ನೂ ಸರಕಾರವು ಅಲ್ಲಗಳೆಯುವುದೇ? ಇನ್ನೂ ಆರ್ಡಿನೆನ್ಸುಗಳನ್ನು ಪ್ರಕಟಿಸೀತೇ? ಸರಕಾರದ ಆಶೆಯೇನು? ಕೊಂಗ್ರೆಸ್‌ವಾಲರನ್ನೂ ಕೊಂಗ್ರೆಸ್ಸನ್ನೂ ಅದು ಅಂತ್ಯದ ತನಕ ಸೆರೆಮನೆಯಲ್ಲಿರಿಸೀತೇ? ಕೊಂಗ್ರೆಸ್ಸಿನ ಶಕ್ತಿಯನ್ನು ಬುಡ ಸಮೇತ ಕೀಳಲು ಸರಕಾರಕ್ಕಾಗದೆಂದು ನಮ್ಮ ನಿರ್ಧಾರದ ಮಾತು. ರಾಜಿಯೇ ಪ್ರಾಮುಖ್ಯವು. ಇಂದಲ್ಲ, ನಾಳೆಯಲ್ಲ, ಎರಡು ದಿನಗಳ ನಂತರ ರಾಜಿಯಾಗಲೇ ಬೇಕು.

+ + + +

ದಕ್ಷಿಣ ಕನ್ನಡ

ಸ್ವೀಕಾರ

ಮೈಸೂರಿನ ಸುಪ್ರಸಿದ್ಧ ಶ್ರೀ ಸತ್ಯನಾರಾಯಣ ಪರಿಮಳ ಭಸ್ಮರಿಯವರ ಅಂದವಾದ ಕೆಲೆಂಡರೊಂದು ನಮ್ಮ ಹಸ್ತಗತವಾಗಿದೆ.

ಶ್ರೀ. ಜಿ ಎಸ್ ಬಿಡೆಯವರು 'ಸಾರಸ್ವತ'ನೆಂಬ ಸಂಕೇತ ನಾಮದಿಂದ ಬರೆದ "ಮೋಹನ ವಾಣಿ" ಎಂಬ ಪ್ರಶ್ನೋತ್ತರ ಪುಸ್ತಕವನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ. ಮಹಾತ್ಮರುಗಳ ತತ್ವವನ್ನು ತಿಳಿಯಬೇಕಾದರೆ ಇದನ್ನು ಎಲ್ಲರೂ ಓದಲೇಬೇಕು. ಕ್ರಯ ೦–೪–೦

ಮಂಗಳೂರು: — ಇಲ್ಲಿಯ ಗಣಪತಿ ಹೈಸ್ಕೂಲಿನ ಈಗಿನ ಮತ್ತು ಹಳೆ ವಿದ್ಯಾರ್ಥಿಗಳ ಒಂದು ಸಂಘವನ್ನು ಏರ್ಪಡಿಸಲಾಗುವುದೆಂದೂ ಅದಕ್ಕೆ ಸೇರಲಿರುವ ವಿದ್ಯಾರ್ಥಿಗಳಿಗೆ ಎಂಟಾಣೆಯಂತೆಯೂ ವಿದ್ಯಾರ್ಥಿಗಳಲ್ಲದವರಿಗೆ ಒಂದು ರೂಪಾಯಿಯಂತೆಯೂ ವಂತಿಗೆ ಇಟ್ಟಿರುತ್ತದೆಂದೂ ಎಲ್ಲಾ ಈಗಿನ ಮತ್ತು ಹಳೆ ವಿದ್ಯಾರ್ಥಿಗಳೂ ಇದಕ್ಕೆ ಸೇರಿ ತಮ್ಮ ಪ್ರೇಮದ ವಿದ್ಯಾಲಯ ಮತ್ತು ತನ್ಮೊಳಗಿನ ಸಂಬಂಧವನ್ನು ಬೆಳೆಸಿ ಪ್ರೋತ್ಸಾಹಿಸಬೇಕೆಂದು ಸಂಘದ ಸೆಕ್ರೆಟರಿಗಳ ಅರಿಕೆ ಇದೆ. ೨೫ ರೂಪಾಯಿ ಕೊಟ್ಟ ಹಳೆ ವಿದ್ಯಾರ್ಥಿಗಳು ಜೀವಮಾನ ಸದಸ್ಯರಾಗಿ ಅವರಿಂದ ವರ್ಷಾಂತ್ಯದ ವಂತಿಗೆಯು ತೆಗೆದುಕೊಳ್ಳಲಾಗಲಿಕ್ಕಿಲ್ಲ.

ಕಳೆದ ಆದಿತ್ಯವಾರ ದಿನ ಮುಂಜಾನೆ ಮಂಗಳೂರು ಪಟ್ಟಣದಲ್ಲಿ ರಾಷ್ಟ್ರೀಯ ಧ್ವಜದ ಗೌರವಕ್ಕೆ ೯ ಘಂಟೆ ಬೆಳಗ್ಗೆ ರಥಬೀದಿಯ ಒಂದು ಕಾದು ಹಿತ್ತಿಲಲ್ಲಿ ರಾಷ್ಟ್ರೀಯ ಧ್ವಜಾರೋಹಣವು ನಡೆದಿತ್ತು. ಕೆಲವು ತಂತಿ ಕಂಬಗಳಿಗೆ ರಾಷ್ಟ್ರೀಯ ಧ್ವಜವನ್ನು ಕಟ್ಟಿದ್ದರು. ಬಾವುಟಗಳು ಹಾರಾಡುತ್ತಿದ್ದವು. ಎಲ್ಲಕ್ಕಿಂತಲೂ ಇಲ್ಲಿಯ ಪೋರ್ಟ್ ಆಫೀಸ ಸಿಗ್ನಲ್ ಕಂಬದ ಮೇಲೆಯೂ ದೊಡ್ಡ ರಾಷ್ಟ್ರ ಧ್ವಜವು ಏರಿಸಲ್ಪಟ್ಟಿತ್ತು. ಧ್ವಜದ ಹಗ್ಗವನ್ನು ಮೇಲಿನಿಂದಲೇ ಕಡಿದು ಬಿಟ್ಟಿದ್ದರಿಂದ ಅದನ್ನು ಕೆಳಗಿಳಿಸಲು ತುಂಬಾ ಪ್ರಯಾಸವಾಯಿತು. ಸುಮಾರು ೧೧ ಘಂಟೆ ಬೆಳಗ್ಗೆ ಪೋಲೀಸ ಅಧಿಕಾರಿಗಳೂ ಪೋರ್ಟ್ ಆಫೀಸು ಅಧಿಕಾರಿಗಳೂ ಅದನ್ನು ಕೆಳಗಿಳಿಸಿದರು. ಈ ಕೆಲಸವು ಯಾರಿಂದಾಯಿತೆಂದು ತಿಳಿದು ಬರುವುದಿಲ್ಲವಾದರೂ ತನಿಖೆಗಳ ಪತ್ತೆಯನ್ನು ಮಾಡಬೇಕೆಂಬ ಆಲೋಚನೆಯಾಗಿದೆಯಾಗಿ ತಿಳಿದು ಬಂದಿದೆ. ಈ ರಾಷ್ಟ್ರಧ್ವಜವನ್ನು ಏರಿಸಿದುದರಿಂದ ಸಮುದ್ರದಲ್ಲಿ ನಿಂತಿದ್ದ ಸ್ಟೀಮರಿನವರು ಗಾಬರಿಗೊಂಡು ತಮ್ಮ ಸನ್ನೆಯನ್ನು ಮಾಡಿದರೆಂದೂ ಅವರ ಸನ್ನೆಗೆ ಉತ್ತರವಾಗಿ ಇಲ್ಲಿಯ ಪೋರ್ಟ್ ಆಫೀಸಿನವರು ದೋಣಿಯ ಮೂಲಕ ಸ್ಟೀಮರಿಗೆ ಹೋಗಿ ಸಂಗತಿಯನ್ನು ತಿಳುಹಿಸಿದರೆಂದೂ ಸುದ್ದಿ. ಈ ಘಟನೆಯ ಕುರಿತು ಪೋರ್ಟ್ ಆಫೀಸಿನವರು ತಮ್ಮ ಮೇಲಧಿಕಾರಿಗಳಿಗೂ, ತನಿಖೆಗಾಗಿ ಪೋಲೀಸ್ ಸ್ಟೇಶನಿಗೂ ಬರೆದಿರುವರಾಗಿಯೂ ವಾರ್ತೆಯಿದೆ.

ರೂ ೩೦,೦೦೦ ದೈಲ್ವೇ ಸೆಸ್ ಹಣವನ್ನು ಪಂಜಾಲಕಟ್ಟೆಯಲ್ಲಿ ಕುಮಾರಧಾರಿ ನದಿಯ ಮೇಲೆ ಸಂಕ ಕಟ್ಟಿಸುವುದಕ್ಕೆ ವಿನಿಯೋಗಿಸಬೇಕೆಂಬ ಠರಾವು ಡಿ ಬೋರ್ಡಿನ ವಿಶೇಷ ಸಭೆಯೊಂದರಲ್ಲಿ ಸರಕಾರದ ಸಮ್ಮತಿಸಮೇತ ಠರಾವಾಯಿತು. ಇದಕ್ಕೆ ತಗಲುವ ವೆಚ್ಚವನ್ನೆಲ್ಲ ಸರಕಾರವೇ ವಹಿಸುವುದೆಂಬ ಆಶೆಯಿದೆಯಂತೆ.

ಶ್ರೀ ಅತ್ತಾವರ ಬಸಪ್ಪನವರು ಸ್ವರ್ಗಸ್ಥರಾದದ್ದರಿಂದ ಅವರ ಮರಣದಿಂದಾಗಿ ಖಾಲಿಬಿದ್ದ ಮುನಿಸಿಪಲ್ ಕೌನ್ಸಿಲಿನ ಸೀಟಿಗೆ ಇಲ್ಲಿಯ ಶ್ರೀ ರಾಮಮೋಹನರಾಯರು ಚುನಾಯಿಸಲ್ಪಟ್ಟಿರುವರೆಂದು ತಿಳಿದುಬಂದಿದೆ.

ಇಲ್ಲಿಯ ರಥಬೀದಿಯ ಒಳ ರಾಮ ಹಿತ್ತಿಲಿನಲ್ಲಿ ಶ್ರೀ [illegible] ನಾಟಕ ಕಂಪೆನಿಯು ಇದ್ದ ಸ್ಥಳದಲ್ಲಿ ಅನೇಕ ದೇಶಗಳಲ್ಲಿ ಪ್ರಸಂಶಾಪತ್ರಗಳನ್ನು ಪಡೆದು ಪ್ರಖ್ಯಾತಿಗೊಂಡಿರುವ ಮೋಜಿನ ಪ್ರಖ್ಯಾತ ಪ್ರದರ್ಶನವು ಇಂದಿನಿಂದ ನಡೆಯುತ್ತಿರುವುದು. ಮಹಾಜನರ ಪ್ರೋತ್ಸಾಹಕ್ಕೆ ಯೋಗ್ಯವಾದ ಪ್ರದರ್ಶನವೆನ್ನಬಹುದು. ಟಿಕೇಟು ದರವು ಒಂದಾಣೆ ಮಾತ್ರ.

ಮೈಸೂರು 'ಸತ್ಯವಾದಿ' ಎಡಿಟರ್ ಶ್ರೀ ಕೃಷ್ಣರಾಯರು ಕುಂಬ ಕಾಯಿಲೆಯಾಗಿ ಆಸ್ಪತ್ರೆಯಲ್ಲಿ ಇರುವುದರಿಂದ ಈಚಿನ ಪತ್ರಿಕೆಗಳನ್ನು ಪ್ರಕಟಿಸಲು ಸಾಧ್ಯವಾಗಲಿಲ್ಲ. ಅವರಿಗೆ ಗುಣವಾಗುತ್ತಿರುವುದರಿಂದ ಶೀಘ್ರದಲ್ಲಿಯೇ ಸತ್ಯವಾದಿಯು ಪ್ರಕಟಿಸಲ್ಪಡುವುದಾಗಿ ಈ ಮೂಲಕ ತಿಳಿಯಪಡಿಸುತ್ತಿದ್ದೆ.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮಕ್ಕೆ ಧನ ಸಹಾಯ ಮಾಡಿದ ಮಹನೀಯರು: ೧. ಡಾಕ್ಟರ್ ಯು ಪಿ ಮಲ್ಯ ಎಲ್ ಎಂ ಎಂಡ್ ಎಸ್, ಮುನಿಸಿಪಲ್ ಕೌನ್ಸಿಲರ್ (೧೯೩೧) ರೂ ೫೦. ೨. ಕುಂಬಳೆ ಕೃಷ್ಣಪ್ರಭುಗಳವರ ಪತ್ನಿ, ಯಮುನಮ್ಮ (೧೯೩೧) ರೂ. ೫೦. ೩. ತಾ ಜಯಂತಿಲಾಲ ಶೆಟ್ಟಿ (೨೫) ರೂ ೨೫. ೪. ಸುವರ್ಣ ಕಲ್ ದೇವಪ್ಪ ಕಾಮತ್, ರೂ ೨೫. ಈ ಮೊದಲು ಜಮಾ ರೂ ೧೭೫, ಜುಮ್ಲಾ ರೂಪಾಯಿ ೩೨೫ ಎಂಬುದಾಗಿ ಸದ್ರಿ ಸಂಘದ ಒನರರಿ ಟ್ರೆಜರರ್, ಡಾ ಕೆ ಎಂ ತೆಲ್ಸ್ ಇವರು ತಿಳಿಸುತ್ತಾರೆ.

ತಾರೀಕು ೩೧–೧–೩೨ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೪೦ ಜನನಗಳೂ ೨೬ ಮರಣಗಳೂ ಆದುವು.

ಬುಧವಾರ ದಿನ ಬೆಳಗ್ಗೆ ೧೦ ಘಂಟೆಗೆ ಕಾಂಚಿ ಬ್ರದರ್ಸ್ ಜವಳಿ ಅಂಗಡಿಯನ್ನು ಶ್ರೀ ನಾರಾಯಣ ಮತ್ತು ಶ್ರೀ ನರಸಿಂಹರೆಂಬಿಬ್ಬರು ಸ್ವಯಂಸೇವಕರು ಪಹರೆ ಮಾಡಿದರು. ನಿತ್ಯದಂತೆ ಪೋಲೀಸ ಫೌಜಿನಾಗಮನವು ಅಲ್ಲಿಗಾಗಿ ಪಿಕೆಟ್ ಮಾಡುವವರು ಚದರಬೇಕೆಂದಾಜ್ಞಾಪಿಸಲಾಯಿತು. ಅವರು ಕದಲದೆ ಹೋಗಲು ಬಾಧಿಯ ಬದಲಿಗೆ ಪೋಲೀಸರು ತಮ್ಮ ಕೈಯಲ್ಲಿದ್ದ ಸಣ್ಣ ಮತ್ತು ಕಠೋರವಾದ ಬೆತ್ತವನ್ನು ಉಪಯೋಗಿಸಿದರು. ಇಬ್ಬರಿಗೂ ಅನೇಕ ಪೆಟ್ಟುಗಳು ಬಿದ್ದಿವೆ. ಬೆನ್ನು, ಕೈಕಾಲು, ತೊಡೆಗಳ ಮೇಲೆ ಪೆಟ್ಟಿನ ಗುರುತುಗಳಿವೆ. ಕಳೆದ ವಾರ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಆಶ್ವಾಸನೆಯಿತ್ತಂತೆ ಸ್ವಯಂಸೇವಕರ ಕಾಲಿಗೆ ಪೆಟ್ಟು ಬೀಳಲಿಲ್ಲವಾಗಿ ತಿಳಿದಿರುತ್ತದೆ.

ಇಲ್ಲಿಯ ಬೆಂಗರೆ (ಕದಲತಡಿ)ಯಲ್ಲಿ ಕಳೆದ ಆದಿತ್ಯವಾರ ದಿನ ಬಹು ಸಂಭ್ರಮದಿಂದ ಧ್ವಜಾರೋಹಣ ನಡೆಯಿತೆಂದೂ, ಯಾರ ತೊಂದರೆಯೂ ಇಲ್ಲದೆ ಅದು ಶಾಂತವಾಗಿಯೂ ಸಾವಕಾಶವಾಗಿಯೂ ಕೊನೆಗೊಂಡಿತೆಂದೂ ತಿಳಿದು ಬರುತ್ತದೆ.

ಇಲ್ಲಿಯ ಗಣಪತಿ ಹೈಸ್ಕೂಲಿನ ವೋಲಿಬೋಲ್ ಪಂದ್ಯಾಟವು ಮುಗಿದು ಅದರ ಸರಸ್ವತೀ ಕಪ್ ಮೂರನೇಯ ಸಲದ್ದಾಗಿ ಇಲ್ಲಿಯ ವೈ ಎಂ ಸಿ ಎ ಟೀಮಿಗೆ ದೊರೆಯಿತು. ಮುನಿಸಿಪಲ್ ಚೆಯರ್‌ಮೇನರಾದ ಶ್ರೀ ಡಾ ವಿಟ್ಠಲಶೆಟ್ಟಿ ಅಧ್ಯಕ್ಷತೆಯಲ್ಲಿ ಅದನ್ನು ಬಹುಮಾನಿಸಲಾಯಿತು.

ಬುಧವಾರ ದಿನ ತಾಲೂಕು ಆಫೀಸಿನಲ್ಲಿ ಗುತ್ತಿಗೆಗಳ ಏಲಂ ನಡೆಯಿತು. ಯಾವ ತೊಂದರೆಯೂ ಕಳೆದ ಸಲದಷ್ಟು ಜನಸಮೂಹವೂ ಇರಲಿಲ್ಲ.

ಉಡುಪಿ: — ಸ್ಥಳೀಕ ಕ್ರಿಶ್ಚಿಯನ್ ಹೈಸ್ಕೂಲಿನ ಮೆಟ್ರಿಕ್ ವಿದ್ಯಾರ್ಥಿಗಳಲ್ಲಿ ಹತ್ತು ಜನರನ್ನು ಡಿಟೆಯ್ನ್ ಮಾಡಲಾಗಿದೆ. ಆ ವಿದ್ಯಾರ್ಥಿಗಳೆಲ್ಲರೂ ಸರಕಾರಿ ಪರೀಕ್ಷೆಗೆ ಕಳುಹಿಸಲ್ಪಡುವರು. ಬೋರ್ಡ್ ಹೈಸ್ಕೂಲಿನ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗೆ ಕಳುಹಿಸಲ್ಪಡುವರು. ಆಲ್ಲರ್ ಪಾಸಿ ಕಳುಹುವ ಪದ್ಧತಿಯನ್ನು ಅವರು ರದ್ದುಗೊಳಿಸಿರುವುದು ವಿದ್ಯಾರ್ಥಿವೃಂದಕ್ಕೆ ಅತ್ಯಂತ ಪ್ರಯೋಜನಕಾರಿಯಾಗಲಿರುವುದು.

ಶ್ರೀ ಅನಂತಪದ್ಮನಾಭ ಭಟ್ಟರು ೩೦೦ ರೂಪಾಯಿ ಜುಲ್ಮಾನೆ ತಪ್ಪಿದರೆ ೬ ವಾರಗಳ ಶಿಕ್ಷೆಗೊಳಗಾಗಿ ಒಂದು ತಿಂಗಳ ಅವಧಿಯಿಂದ ಬಿಡುಗಡೆ ಹೊಂದಿರುತ್ತಾರೆ.

ಪೋಲೀಸಿನವರು ರಾಷ್ಟ್ರಧ್ವಜವನ್ನು ವಶಪಡಿಸಿಕೊಂಡು ಕಾಂಗ್ರೆಸ್ ಕಚೇರಿಗೆ ಬೀಗ ಜಡಿದಿದೆ.

ಮೈಸೂರಿನ [illegible] ಥಿಯೇಟ್ರಿಕಲ್ ಕಂಪೆನಿಯವರು [illegible] ೧೦ಕ್ಕೆ ಬರುವರು [illegible] ನಾಟಕವನ್ನು ಆಡಿಸಲು [illegible] ಇಲ್ಲಿಗೆ ಬಂದಿರುವರು. ಈ ನಾಟಕದ ಉತ್ಪತ್ತಿಯು [illegible] ಕ್ಷೇತ್ರಕ್ಕೆ ಕೊಡಲ್ಪಡುವುದಂತೆ.

ಪಂಜಾರಕಟ್ಟೆಯಲ್ಲಿ ಶ್ರೀ ಮ ವಿಟ್ಠಲ ನಾಯ್ಕರು ಕಟ್ಟಿಸಿರುವ [illegible] ಮಂದಿರದ ಸಹಾಯಾರ್ಥವಾಗಿ ತಾ [illegible]ರಲ್ಲಿ ಇದೇ ಕಂಪೆನಿಯವರು [illegible] ನಾಟಕವನ್ನು ಆಡುವರು.

ಕಾರ್ಕಳ: [illegible] ಪ್ರಕಟವಾಗುತ್ತಿರುವ [illegible] ಎಂಬ ಕೈ ಬರಹದ ಕಾಂಗ್ರೆಸ್ ಪತ್ರಗಳು ಕಾರ್ಕಳದಲ್ಲಿ ಬಿದ್ದಿರುವಂತೆ ಬರೆಯಲ್ಪಟ್ಟಿವೆ. ಇದರಿಂದ ಯಾವ ಕಾರ್ಯ ಸಾಧನೆಯಾಗುವುದೋ ಇನ್ನು ನೋಡಬೇಕಾಗಿದೆ.

ಶ್ರೀ ವೆಂ ಹಾಯರ ಎಲಿಮೆಂಟರಿ ಶಾಲೆಯ ಬಾಲಕರ ಪತ್ರಿಕೆಯ ೬ನೇ ತಿಂಗಳ (ಜನವರಿ) ಸಂಚಿಕೆಯು ಹೊರಬಿದ್ದಿರುವುದು. ಇದರಲ್ಲಿ 'ಮಕ್ಕಳಿಗೆ ಮಹಾತ್ಮಾಜಿಯವರ ಸಂದೇಶ' ತಿರುಪತಿಯಾತ್ರೆ, ಚಿತ್ರಲಿಪಿ, ಒಗಟುಗಳು, ಕಥೆಗಳು ಮೊದಲಾದ ಅನೇಕ ಲೇಖನಗಳಿರುವುವು. ಈ ಸಲದ ಸಂಚಿಕೆಯಲ್ಲಿ ಹೆಚ್ಚಿನ ಲೇಖನಗಳು ಶಾಲಾ ವಿದ್ಯಾರ್ಥಿಗಳಿಂದಲೇ ಬರೆಯಲ್ಪಟ್ಟಿರುವುವು.

ಕಾರ್ಕಳದಲ್ಲಿ ಫೆಬ್ರವರಿ ೧ನೇ ತಾರೀಕು ದಿನ ನಡೆಯುವ ಹಿಂದೀ ಪ್ರಥಮ ಮತ್ತು ಮಧ್ಯಮ ಪರೀಕ್ಷೆಗಳು [illegible] ಘಂಟೆಗೆ ಪ್ರಾರಂಭವಾಗುವವೆಂದೂ ಒತ್ತುವ [illegible] ಸಂಘಗಳ ವರೆಗೆ ಇರುವವರ ಬದಲಿಗೆ [illegible] ಘಂಟೆಯವರೆಗಿರುವುದೆಂದೂ ಮಧ್ಯಮ ಪರೀಕ್ಷೆಗೆ ಇಷ್ಟು ಪರಾಂತವಾಸಿಯ [illegible] ಎಂಬ ಪದ್ಯ ಪುಸ್ತಕವನ್ನು ತೆಗೆದು ಹಾಕಲಾಗಿದೆ ಎಂದೂ ಈ ಮೂಲಕ ಪರೀಕ್ಷೆಗೆ ಸಿಲ್ಲುವ ಉಮೇದುವಾರರಿಗೆ ತಿಳಿಸಲಾಗಿದೆ.

ಗುರುಪುರ: — ಇಲ್ಲಿಯ [illegible] ಶಾಲೆಯಲ್ಲಿ ಇತ್ತೀಚಿಗೆ ಎರಡು ದನಗಳನ್ನು ಕೊಂದು ತಿಂದ ಗಾಲಿಯನ್ನು ಇದೇ ಕಳೆದ ತಾ. ೨–೨ ತಾರೀಕಿನಲ್ಲಿ ಕ್ರಿಶ್ಚಿಯನ್ ಜಾತಿಯ ವೇಟ್ನಸ್ ಎಂಬವರು ಆದೇ ಶಾಲೆಯಲ್ಲಿ ಗುಂಡು ಇಟ್ಟು ಹಿಡಿದು ಕೊಂದಿರುತ್ತಾರೆ. ಅದರ ಚರ್ಮವನ್ನು ಸುಲಿದು ತೆಗೆದು ಮಂಗಳೂರು ತಾಲೂಕು ಆಫೀಸಿಗೆ ರವಾನಿಸಲ್ಪಟ್ಟಿತಾಗಿ ತಿಳಿದು ಬರುತ್ತದೆ.

ಪುತ್ತೂರು: — (ಪಾಣಾಜೆ) ಇಲ್ಲಿ ಪ್ರತಿ ತಿಂಗಳಲ್ಲೂ ನಡೆಯುವಂತೆ ಇದೇ ಕಳೆದ ಜನವರಿ ತಾ ೩೧ನೇ ಆದಿತ್ಯವಾರ ಬೆಳಗ್ಗೆ ಧ್ವಜವಂದನೆ ಮಧ್ಯಾಹ್ನ ೩ ಗಂಟೆಗೆ ಗ್ರಾಮಪಂಚಾಯತಿಯ ಸಭೆಯು ಮಂಗಳಗೀತದೊಡನೆ ಮುಕ್ತಾಯವಾಯಿತು.

+ + + +

ಕಾಲವಾಹಕನಕ್ಷ ರೆಯಿಂದ ಪ್ರಜೋತ್ಪತ್ತಿ ಸಂವತ್ಸರದ ಪುಷ್ಯ ಬ ೧೫ ಶನಿವಾರದಿಂದ ಪ್ರಜೋ. ಸಂವತ್ಸರದ ಮಾಘ ಶು ೬ ಶುಕ್ರವಾರದ ವರೆಗಿನ ಪಂಚಾಂಗ

(ಗ್ರಾಹಿಣಿಯ ಮಕರ— ಪ್ರಯಿಂಕೆಲ್).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಅಸ್ತ
6	ಶನಿ	●	[illegible]	ಶ್ರವಣಾ	[illegible]	[illegible]	6 58	6 32
7	ರವಿ	೧	[illegible]	ಧನಿಷ್ಠಾ	[illegible]	[illegible]	6 58	6.32
8	ಸೋಮ	೨	[illegible]	ಶತಭಿಷಾ	[illegible]	[illegible]	6 59	6 33
9	ಮಂಗಳ	೩	[illegible]	ಪೂ. ಭಾ.	[illegible]	[illegible]	6 58	6.33
10	ಬುಧ	೪	[illegible]	ಉ. ಭಾ.	[illegible]	[illegible]	6,57	6.33
11	ಗುರು	೫	[illegible]	ರೇವತಿ	[illegible]	[illegible]	6.57	6 34
12	ಶುಕ್ರ	೬	[illegible]	ಅಶ್ವಿನಿ	[illegible]	[illegible]	6 57	6.34

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಶಾಖ) Maximum ಅಧಿಕತಮ		Minimum ಅಲ್ಪತಮ		Rainfall ಮಳೆ ದಿನದ ಮಳೆ	ಜುಮಲಾ ಮಳೆ.
29	91—	3	67—	9	—	—
30	90—	6	67—	4	—	—
31	89—	6	68—	0	—	—
1	85—	9	67—	9	—	—
2	85—	7	70—	1	—	—
3	85—	9	71—	9	—	—
4	84—	7	71—	4	—	149-96

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ.	ಆ.	ವರೆಗೆ ರೂ.	ಆ.
ಹೊಸ ರಾಶಿ ಅಕ್ಕಿ	3 —	8	[illegible]	—
ಹಳೆ ಮಸ್ತಕಿ	5 —	0	5 —	[illegible]
ಹಳೆ ಗುಡ್ಡ	4 —	0	4 —	4
ಹಳೆ ಸುಗ	3 —	8	4 —	0
ಊರ ಅಮ್ವಿಲ್ ಬೆಲ್ಲ	4	8	5 —	[illegible]
ರಂಗೂನು ಬೆಲ್ಲಗೆ ಗೋಣಿ ಗಳ್ಳಿ	6 —	12	—	8
ಎಲ್ಲ ರುಚೆಲ್ಲಗೆ ಮುಡಿ ಗಳ್ಳಿ	4 —	4	—	
ಗೋದಿ ಗೋಣಿ ಗಳ್ಳಿ	[illegible] —	8	12 —	8
ಹೆಸರು ಗೋಣಿ ಗಳ್ಳಿ	13 —	0	10 —	
ಹುರುಳಿಗೋಣಿ ಗಳ್ಳಿ	6 —	8	7 —	0
ಕಡಲೆ ಗೋಣಿ ಗಳ್ಳಿ	8 —	8	12 —	8
ತೊಗರಿಬೇಳೆ ಗೋಣಿ ಗಳ್ಳಿ	13 —	8	21 —	0
ಉದ್ದು ಗೋಣಿ ಗಳ್ಳಿ	11 —	8	1[illegible] —	0
ಹೆಸರು ಗೋಣಿ ಗಳ್ಳಿ	10 —	4	11 —	
ಊರು ಬಿಲ್ಲ ಖಂಡಿ ಗಳ್ಳಿ	35 —	0	37 —	8
ಉಪ್ಪು ಗೋಣಿ ಗಳ್ಳಿ	4 —	12	4 —	14
ಬೆಲ್ಲ ಖಂಡಿ ಗಳ್ಳಿ	60 —		62 —	
ಕೊಬ್ರಿ ಖಂಡಿ ಖಂಡಿ ಗಳ್ಳಿ	33 —	0	—	
ಎಳ್ಳೆಂಡಿ ಖಂಡಿ ಗಳ್ಳಿ	26 —	4	27 —	8
ಕೊಬ್ರಿ ಎಣ್ಣೆ ಮುಡಿ ಗಳ್ಳಿ	6 —	12	6 —	1[illegible]
ಎಳ್ಳೆಣ್ಣೆ ಮುಡಿ ಗಳ್ಳಿ	6 —	12	7 —	0
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳಿ	4 —	7	8 —	12
[illegible] ಮುಡಿ ಗಳ್ಳಿ	4 —	0	4 —	3
[illegible]	4 —	0	5 —	0
ಸಾಸಿವೆ ಮುಡಿ ಗಳ್ಳಿ	[illegible] —	8	6 —	0
ಕೇಟಿನ್ ಕಾಫಿ ಖಂಡಿ ಗಳ್ಳಿ	217 —	8	2[illegible]5 —	
ಕಾಳುಮೆಣಸು ಖಂಡಿ ಗಳ್ಳಿ	170 —	0	180 —	
ಯೇಲಕ್ಕಿ ಮುಡಿ ಗಳ್ಳಿ	27 —	0	28 —	
ಗೇರುಬೀಜ ಮುಡಿ ಗಳ್ಳಿ	4 —	6	4 —	12
ಅಡಿಕೆ ಖಂಡಿ ಗಳ್ಳಿ	35 —	0	37 —	8
ತಾಂಬ್ರ ತಗಡ ಮುಡಿ ಗಳ್ಳಿ	13 —	0	13 —	8
ತಾಂಬ್ರ ಪಾತ್ರೆಗಳು ಮುಡಿ ಗಳ್ಳಿ	15 —	0	16 —	0
[illegible] ಗಳ್ಳಿ	15 —	12	16 —	0
[illegible] ತಗಡ ಮುಡಿ ಗಳ್ಳಿ	12 —	0	12 —	8
ಸತುವು ಗಳ್ಳಿ	18 —	4	14 —	8
[illegible] ಖಂಡಿ ಗಳ್ಳಿ	20 —		—	
ಪ್ಲಾಂಟೇಶನ್ ಕಾಫಿ ಖಂಡಿ ಗಳ್ಳಿ	375 —		400 —	
ಹಳೆ ಅಡಿಕೆ	180 —		205 —	
ಹೊಸ ಅಡಿಕೆ	140 —		145 —	

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ. ಕನ್ವೆಯನ್ಸ್.   Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರು ಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆಗ ಧರ್ಮಸ್ಥಳ ರೋಡಿಗೆ ಪಿ.ಎ 1 30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ದಕ್ಷಿಣ ಕನ್ನಡ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ, ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಪೂರ ಗೋವಾ, ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್. ಹನುಮಂತಪ್ಪ, ಫ್ಲೋರಡೂನ್ ಸೋರಾಬ್, ಕೆ. ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಡ್ಡಾವಳ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಕೃತಿಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ವಿಷ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ೧ ದಿವಸದೊಳಗೆ ತಲ್ಪಬಹುದು 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲಿಚ್ಛಿಸುವವರು, ನೋಡಲು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲುಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

The Canara Public Conveyance Company Ltd., Mangalore

ರಾಮ್ಸೆ ಮೆಕ್‌ಡೊನಾಲ್ಡ್

ಅಥವಾ

ಅದೃಷ್ಟಮಹಿಮೆ

"ಕಾಲನು ಕಾಲಕ್ಕೆ ಕೇಳ್ ಬಡವಂ ಬಲ್ಲಿದನಾಗನೇ?" ಎಂಬ ಸೋಮೇಶ್ವರ ಶತಕೋಕ್ತಿಯು ಬ್ರಿಟಿಷ ಸಾಮ್ರಾಜ್ಯದ ಪ್ರಧಾನ ಸಚಿವರಾಗಿರುವ ರಾಮ್ಸೆ ಮೆಕ್‌ಡೊನಾಲ್ಡರ ಜೀವನ ಚರಿತ್ರೆಗೆ ಚೆನ್ನಾಗಿ ಅನ್ವಯಿಸುತ್ತದೆ.

ಸೂರ್ಯನೇ ಮುಳುಗದಂತಹ ಬ್ರಿಟಿಷ ಅಧಿಪತ್ಯಕ್ಕೆ ಇಂದಿನ ದಿನ ಮಂತ್ರಿಯಾಗಿ, ಕಳೆದ ನಲ್ವತ್ತು ವರುಷಗಳ ಹಿಂದೆ ಬಡತನದ ಒಬ್ಬ ಗುಮಾಸ್ತನಾಗಿದ್ದವರೊಬ್ಬನು ಅದೃಷ್ಟದ ಮಹಿಮೆಯಿಂದಾಗಿ ಏರಿಸಲ್ಪಟ್ಟನೆಂದರೆ, ಅದನ್ನು ಕೇಳಿದ ಎಂತಹನಿಗೂ ಆಶ್ಚರ್ಯವಾಗದಿರಲಾರದು.

ಜೇಮ್ಸ್ ರಾಮ್ಸೆ ಮೆಕ್‌ಡೊನಾಲ್ಡರು ೧೮೬೬ರಲ್ಲಿ ಲೊಸಿಮೌತ್ ಎಂಬಲ್ಲಿ ಒಂದು ಬಡ ತಂದೆ ತಾಯಿಗಳಿಗೆ ಜನಿಸಿದರು. ಜನಿಸುವಾಗಲೇ ಮೆಕ್‌ಡೊನಾಲ್ಡರು ಬಡತನದ ಸೆರೆಯಲ್ಲಿ ಇದ್ದುದಲ್ಲದೆ ಅವರು ತನ್ನ ಸುಮಾರು ಮೂವತ್ತು ವರುಷ ಪ್ರಾಯದ ಪರಿಯಂತರವೂ ಅದೇ ಸ್ಥಿತಿಯಲ್ಲೇ ನರಳಿದರು. ತಾನು ಜನಿಸಿದ ಊರಲ್ಲೇ ಮೆಕ್‌ಡೊನಾಲ್ಡರು ದಿನಹರಣ ಮಾಡುತ್ತಿದ್ದರೆ, ಇಂದು ಅವರು ನಿಜವಾಗಿಯೂ ಕುದುರೆಗಳ ಬಾಲವನ್ನು ಹಿಡಿದು ಭೂಮಿಯನ್ನು ಉಳಬೇಕಿತ್ತು. ಆದರೆ ಅದೃಷ್ಟಮಹಿಮೆಯು ಬೇರೆ ತೆರನಾಗಿ ಕೆಲಸ ಮಾಡಿತು.

ಮೆಕ್‌ಡೊನಾಲ್ಡರಿಗೆ ಜ್ಞಾನಾಭಿವೃದ್ಧಿಯ ಹವ್ಯಾಸವು ಬಹಳ. ಸಮಾಜ ಸುಧಾರಣೆ, ಜ್ಞಾನಾರ್ಜನೆಗಳೇ ಆದಿಯಲ್ಲಿ ಅವರ ಅಂತಿಮೋದ್ದಿಷ್ಟಗಳಾಗಿ ನಿಂತುವು. ತಾನು ಹುಟ್ಟಿದ ಸ್ಮರಣಾರ್ಥವಾಗಿ ಲೋಕದಲ್ಲಿ ಏನಾದರೊಂದು ವಿಶೇಷ ಸಂಗತಿಯನ್ನು ನೆರವೇರಿಸಬೇಕೆಂಬ ಅವರ ದೃಢಸಂಕಲ್ಪವು ಅಪ್ರತಿಹತವಾಗಿತ್ತು.

ಉರಿಯುವ ಬೆಂಕಿಯು ಎಷ್ಟು ರಹಸ್ಯವಾಗಿಡಲ್ಪಟ್ಟರೂ ಅದು ಒಂದಲ್ಲ ಒಂದು ದಿನ ಬಿಡದೆ ತನ್ನ ಕೆಲಸವನ್ನು ನೆರವೇರಿಸುವಂತೆ ಮೆಕ್‌ಡೊನಾಲ್ಡರ ಆಕಾಂಕ್ಷೆಯ ತಾಪವು ಬಾಹ್ಯಪ್ರಪಂಚಕ್ಕೆ ತಾಗದಿರಲಿಲ್ಲ. ಅವರ ಮನದಿಚ್ಛೆಗಳನ್ನು ಅರಿತುಕೊಂಡ ಅವರ ಹಳ್ಳಿಯ ಉಪಾಧ್ಯಾಯರೊಬ್ಬರು ಮೆಕ್‌ಡೊನಾಲ್ಡರಿಗೆ ಹೆಚ್ಚಿನ ವಿದ್ಯೆ ಕಲಿಸಿದರು. ಅವರನ್ನು ಉಚ್ಚ ತರಗತಿಯ ಯುವಕನನ್ನಾಗಿ ಮಾಡಿದರು. ಕೊನೆಗೆ ಮೆಕ್‌ಡೊನಾಲ್ಡರನ್ನು ಒಂದು ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಗೆ ನಿಲ್ಲಿಸಿದರು.

ಈ ಸಮಯದಲ್ಲಿ ಮೆಕ್‌ಡೊನಾಲ್ಡರಿಗೆ ಸಮಾಜ ಸುಧಾರಕರೊಬ್ಬರ ಪರಿಚಯವಾಯಿತು. ಆ ವ್ಯಕ್ತಿಯು ಅವರನ್ನು ಬ್ರಿಸ್ಟಲ್ ಪ್ರಾಂತ್ಯಕ್ಕೆ ಬರಹೇಳಿ, ತನ್ನೊಡನೆ ಸಮಾಜ ಪ್ರಚಾರಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳಿತು. ಅಂದಿಗೆ ಮೆಕ್‌ಡೊನಾಲ್ಡರ ಜೀವನದಾಟಗಳಲ್ಲಿ ಒಂದು ಜನನಕ್ಕೆ ಒದಗುವಂತಾಯಿತು.

ಸುಧಾರಕರಾಗಿ ಮೆಕ್‌ಡೊನಾಲ್ಡರ ಹೆಸರು ಸಾಮಾನ್ಯ ಜನರ ನಾಲಿಗೆ ತುದಿಯಲ್ಲಿ ನಿಲ್ಲುವಂತಾಯಿತು. ಆದರೆ ಅವರ ಸುಧಾರಣೆಯ ಫಲವು ಎಷ್ಟಿತ್ತೆಂದರೆ, ಒಮ್ಮೆ ಇವರು ಭಾಷಣ ಕೊಟ್ಟ ಸಭೆಯಲ್ಲಿ ಮೂರೇ ಮಂದಿಗಳಿದ್ದರಂತೆ! ಕೊನೆಗೆ ಮೆಕ್‌ಡೊನಾಲ್ಡರು ಈ ತನ್ನ ಸುಧಾರಣಾ ವೃತ್ತಿಯಲ್ಲಿ ಅಪಜಯವನ್ನು ಹೊಂದಿ ಮನೆಗೆ ತೆರಳಿದರು.

ಆದರೂ ಮನೆಗೆ ತಲಪಿದೊಡನೆ ಮೆಕ್‌ಡೊನಾಲ್ಡರಿಗೆ ಬಹಳ ಬೇಸರವಾಯಿತು. ತಾನು ತನ್ನ ಮಹದಾಶೆಗಳಲ್ಲಿ ಜಯಶೀಲನಾಗಬೇಕಾದರೆ, ರಾಜಕೀಯ ಸಮಸ್ಯೆಗಳಲ್ಲಿ ತಲೆಯೊಡ್ಡಬೇಕೆಂಬ ಆಲೋಚನೆಯು ಅವರಲ್ಲಾಯಿತು. ಅಂತಹ ಸಮಸ್ಯೆಗಳಿಗೆ ಕೈಯಿಕ್ಕಲು ತನ್ನ ಅಂದಿನ ಚೈತನ್ಯವನ್ನು ವಿನಿಯೋಗಿಸಿದರು. ಆದರೆ ಪ್ರಯೋಜನವಾಗಲಿಲ್ಲ. ಬಡತನದ ಹೊಡೆತವು ತನ್ನ ಹೊಸ್ತಿಲಲ್ಲಿ ನಿಂತಿತು.

ಅನೇಕ ಸಮಯದ ವರೆಗೆ ಮೆಕ್‌ಡೊನಾಲ್ಡರು ಯಾವ ವೃತ್ತಿಯನ್ನೂ ಸಂಪಾದಿಸದೆ ಹೋದರು. ಕೊನೆಗೆ Cyclists Touring Club ಎಂಬ ವ್ಯಾಪಾರ ಸಂಸ್ಥೆಯಲ್ಲಿ ಲಕ್ಕೋಟೆಗಳ ಮೇಲೆ ವಿಳಾಸವನ್ನು ಬರೆಯುವ ಒಂದು ಉದ್ಯೋಗವು ಅವರಿಗೆ ಲಭಿಸಿತು. ಕೆಲವು ಶಿಲಿಂಗುಗಳ ಆಶೆಯಿಂದ ಕೆಲಸ ಮಾಡಿದರು. ಆದರೂ ಮನಃಶಾಂತಿಯು ದೊರಕಲಿಲ್ಲ. ಹಾಗಾಗುವಾಗ ಲಂಡನಿನ ಇನ್ನೊಂದು ಮಳಿಗೆಯಲ್ಲಿ ಅವರಿಗೆ ಹನ್ನೆರಡು ಶಿಲಿಂಗು ಆರು ಪೆನ್ಸುಗಳ ಮೇಲೆ ಇನ್‌ವೋಯಿಸ್ ಕ್ಲಾರ್ಕ್‌ನ ಕೆಲಸವು ಲಭಿಸಿತು.

ಇಲ್ಲಿಯೂ ಮೆಕ್‌ಡೊನಾಲ್ಡರಿಗೆ ಸಾಕಷ್ಟು ಸಂಪಾದನೆಯಾಗಲಿಲ್ಲ. ಅವರ ಅತ್ಯಲ್ಪ ಸಂಬಳವು ಕೋಣೆಯ ಬಾಡಿಗೆಯಾಗಿಯೇ ಹೋಗುತ್ತಿತ್ತು. ಊಟಕ್ಕಾಗಿ ಒಂದು ಪೈಯೂ ಅವರ ಜೇಬಿನಲ್ಲಿ ನಿಲ್ಲುತ್ತಿರಲಿಲ್ಲ. ತನ್ನಂತಹ ತರುಣರು ಭೋಜನಾಲಯಗಳಲ್ಲಿ ಸುಖಭೋಜನವನ್ನು ಮಾಡಿ ಸುಖೋಪಭೋಗಗಳಲ್ಲಿ ಮೆರೆಯುತ್ತಿರುವಾಗ ಮೆಕ್‌ಡೊನಾಲ್ಡರು ತನ್ನ ಅಂತಹ ಭೋಜನ ಸಮಯವನ್ನು Guildhall Library ಯಲ್ಲಿ ಕಳೆದರು. ಹಸಿವಿನ ತಾಪಕ್ಕೆ ಜೀನು ಹಾಕಿ ಮನಃಶಕ್ತಿಯ ಮೂಲಕ ಅದನ್ನು ಹಿಡಿದುಕೊಂಡರು. ರಾತ್ರಿಯಲ್ಲಿ Birkbeck Institute ಎಂಬ ರಾತ್ರಿಶಾಲೆಗೆ ಹೋಗಿ ಜ್ಞಾನಾಭಿವೃದ್ಧಿಯನ್ನು ಮಾಡುತ್ತಿದ್ದರು. ಅಲ್ಲದೆ ಪತ್ರಗ್ಯತಹಾರ ಮಾಡುವ ಪಾಠವನ್ನು ಅವರು ಕಲಿತರು. ಅಂತಹ ಕಷ್ಟಪರಂಪರೆಗಳ ಸಮಯದಲ್ಲೂ ಅವರು ಜ್ಞಾನಾರ್ಜನೆಗಾಗಿ ಹೆಣಗಾಡುತ್ತಿದ್ದುದನ್ನು ನೋಡಿ ಮಿತ್ರವರು ಆಶ್ಚರ್ಯಗೊಳ್ಳುತ್ತಿದ್ದರು. ಅವರು ಕರುವಿನಂತೆ ಕೆಲಸಮಾಡಿದರು. ವಿದ್ವಾಂಸರಂತೆ ವಿದ್ಯೆಗಳಿಸಿದರು.

ಅದ್ವಿತೀಯವಾಗಿ ಮೆಕ್‌ಡೊನಾಲ್ಡರಿಗೆ ಕೆಲವು ಮಿತ್ರರು ದೊರಕಿದರು. ಅವರಲ್ಲೊಬ್ಬನು ತನ್ನ (Laboratory) ಪ್ರಯೋಗ ಶಾಲೆಯನ್ನು ಮೆಕ್‌ಡೊನಾಲ್ಡರ ಉಪಯೋಗಕ್ಕೆ ಕೊಟ್ಟು, ವಿಜ್ಞಾನ ಪರಿಶೋಧನೆ ಮಾಡಲು ಎಡೆಗೊಟ್ಟರು. ಮೆಕ್‌ಡೊನಾಲ್ಡರು ಕಲ್ಲಿದ್ದಲಿನ ಪರಿಶೋಧನೆಯಲ್ಲಿ ಕೆಲವು ಸಮಯ ಕಳೆದರು. ಇವರ ಪರಿಶೋಧನೆಗಳೂ, ಪ್ರಯೋಗಕ್ರಮವೂ ಕೊಂಚಮಟ್ಟಿಗೆ ವಿಜಯಗೊಂಡಿತು. ಮೆಕ್‌ಡೊನಾಲ್ಡರಿಗೆ ಜೀವನೋತ್ಸಾಹವನ್ನು ಸ್ಫುರಿಸಿತು. ಹಾಗೆ ತಾನು ತನ್ನ ಕೆಲಸದಲ್ಲಿ ವಿಜಯಿಯಾಗುತ್ತಾ ಬರುವುದನ್ನು ಕಂಡು ಮೆಕ್‌ಡೊನಾಲ್ಡರಿಗೆ ತನ್ನ ಆ ವಿದ್ಯೆಯ ಮೂಲಕ ಒಬ್ಬ ಸಾಯನ್ಸ್ ಮಾಸ್ಟರನಾಗಬೇಕೆಂಬ ಹೊಸ ಆಶೆಯಾಯಿತು.

ತೀವ್ರವಾಗಿ ಪರಿಶ್ರಮಿಸಿದರು — ವಿಹಾರ, ಆಟಗಳನ್ನು ತ್ಯಜಿಸಿದರು. ಸದಾ ಪ್ರಯೋಗದಲ್ಲೇ ಮಗ್ನರಾದರು. ದಿನದ ಇಪ್ಪತ್ತನಾಲ್ಕು ತಾಸುಗಳಲ್ಲಿ ಇಪ್ಪತ್ತು ತಾಸುಗಳನ್ನು ಕಲಸದಲ್ಲೇ ಕಳೆದು, ಉಳಿದ ನಾಲ್ಕು ತಾಸುಗಳನ್ನು ನಿದ್ರೆಯಲ್ಲಿ ಕಳೆದರು. South Kensington ಎಂಬಲ್ಲಿನ ಸೈನ್ಸ್ ವಿದ್ಯಾನಿಕೇತನವನ್ನು ಪಡೆಯಬೇಕೆಂದು ನಿರ್ಧರಿಸಿದರು. ಪರೀಕ್ಷೆಯ ಸಮಯವು ಸನ್ನಿಹಿತವಾಯಿತು. ಆದರೇನು? ಅದೃಷ್ಟ ಮಹಿಮೆಯ ಶಕ್ತಿಯು ಅವರ ಕೊರಳಿಗೆ ವಿಜಯ ಮಾಲೆಯನ್ನಿಕ್ಕುವ ಆ ಸಮಯದಲ್ಲಿ ಮೆಕ್‌ಡೊನಾಲ್ಡರು ಅಸ್ವಸ್ಥದಲ್ಲಿ ಬಿದ್ದು ಬಿಟ್ಟರು. ಅವರ ಅಷ್ಟರ ತನಕದ ಆಶೆಯು ಗಾಳಿಯೊಡನೆ ಸೇರಿತು.

ಆ ಆಶೆಯು ಗಾಳಿಯೊಡನೆ ಹೋದರೂ ಅದರ ಬದಲಿಗೆ ಅವರ ಹೃದಯಾಗ್ನಿಯು ರಾಜಕೀಯ ವಿಷಯಗಳಿಗೆ ಚಿಕಿತ್ಸಕ. ರಾಜಕೀಯ ಸಮಸ್ಯೆಗಳಲ್ಲಿ ಆಡುವ, ಹೊಡೆದಾಡುವ ಧುರೀಣರ ಖ್ಯಾತಿವಿಖ್ಯಾತಿಯು ಮೆಕ್‌ಡೊನಾಲ್ಡರ ನಿತ್ಯದ ಕನಸಾಗಿ ನಿಂತಿತು. ತಾನು ಆ ದೇಶ ಧುರೀಣರಂತೆ ಎಂದು ಖ್ಯಾತಿಯುತನಾಗುವೆನೋ ಎಂಬ ಹಂಬಲದ ಉದಯವು ಮೆಕ್‌ಡೊನಾಲ್ಡರಲ್ಲಾಯಿತು. Socialistರೊಡನೆ ತಾನು ಸೇರಬೇಕೆಂದು ಒಮ್ಮೆ ನಿರ್ಧರಿಸಿದರು. ಇನ್ನೊಮ್ಮೆ Labour ಮಜೂರ ಪಕ್ಷದವರೊಡನೆ ಸೇರಬೇಕೆಂದು ಯೋಚಿಸಿದರು. ಇದರಲ್ಲಿ ಕೈಹಚ್ಚುವ ಮೊದಲು ಸಾರ್ವಜನಿಕ ಭಾಷಣದಿಂದಾಗಿ ಒಳ್ಳೆ ವಾಗ್ಮಿಯೆಂಬುದಾಗಿ ಜನರಿಗೆ ಗೊತ್ತುಪಡಿಸಿದರು — ಸಮಯವು ದೊರಕಿದಲ್ಲಿ ಭಾಷಣ ಕೊಟ್ಟು ಜನಮನವನ್ನು ಆಕರ್ಷಿಸಿದರು.

೧೮೯೫ರಲ್ಲಿ ಸೌತೇಂಪ್ಟನಿನ ಮಜೂರ ಪಕ್ಷದ ಪ್ರತಿನಿಧಿಯಾಗಿ ಪಾರ್ಲಿಮೆಂಟಿನ ಇಲೆಕ್ಷನಿಗೆ ನಿಂತರು. ಆದರೆ ಒಳ್ಳೇ ಅರುವತ್ತಾರು ವೋಟುಗಳು ದೊರೆತು ಅದರಲ್ಲಿ ಅಪಜಯವನ್ನು ಹೊಂದಿದರು. ಇನ್ನೂ ಒಂದೆರಡು ಸಲ ಅವರು ಯತ್ನಿಸಿದರು. ಇಲ್ಲ, ಅವರ ವಿಜಯದ ದಿನವು ಬರಲಿಲ್ಲ. ಕೊನೆಗೆ ೧೯೦೬ರಲ್ಲಿ Leicester ಪ್ರಾಂತ್ಯದ ಕಡೆಯಿಂದ ಪಾರ್ಲಿಮೆಂಟಿನ ಚುನಾವಣೆಗೆ ನಿಂತರು. ಸರಿ. ಅಂದಿಗೆ ಅದೃಷ್ಟದೇವತೆಯು ಅವರ ಮುಖವನ್ನು ನೋಡಿ ಹಸನ್ಮುಖಿಯಾದಳು. ಜಯಮಾಲೆಯು ಮೆಕ್‌ಡೊನಾಲ್ಡರಿಗೆ ದೊರೆಯಿತು.

ಪಾರ್ಲಿಮೆಂಟಿನಲ್ಲಿ ಪ್ರಥಮದಲ್ಲಾಗಿ ತನ್ನ ಸ್ವಾನುಭವದ ನಿರುದ್ಯೋಗ ಪ್ರಶ್ನೆಯ ಕುರಿತು ಭಾಷಣಮಾಡಿದರು. ರಾಜಕೀಯ ವಾತಾವರಣದಲ್ಲೂ, ಸಮಾಜಿಕ ದೆಸೆಗಳಲ್ಲೂ ಅವರ ಹೆಸರು ಖ್ಯಾತಿಗೊಂಡಿತು. ಮಾನವನು ಎಂತಹ ಸ್ಥಿತಿಯಲ್ಲಿರಲಿ, ಅವನನ್ನು ಪ್ರೇಮದ ವಾಸನೆಯು ಬಿಟ್ಟಿರುವುದಿಲ್ಲವೆಂಬಂತೆ ಮೆಕ್‌ಡೊನಾಲ್ಡರು ತನ್ನ ಮೂವತ್ತನೇ ವಯಸ್ಸಿನಲ್ಲಿ ಮಾರ್ಗರೆಟ್ ಗ್ಲೇಡ್‌ಸ್ಟನ್ ಎಂಬವಳ ಮೇಲೆ ತನ್ನ ಪ್ರೇಮ ದೃಷ್ಟಿಯನ್ನಿಟ್ಟರು. ೧೮೯೬ರಲ್ಲಿ ವಿವಾಹವಾಯಿತು. Lincoln's Inn Fields ನಂಬ್ರ ೩ ಎಂಬಲ್ಲಿ ಮನೆ ಮಾಡಿ ವಾಸಿಸಿದರು.

ಆ ಮನೆಯು ರಾಜಕೀಯ ಧುರಂಧರರ ಭೇಟಿಸ್ಥಳವಾಯಿತು. ಪ್ರಮುಖ ಮಜೂರ ಪಕ್ಷದ ಮುಂದಾಳುಗಳು ಮೆಕ್‌ಡೊನಾಲ್ಡರ ಮನೆಯಲ್ಲೇ ತಮ್ಮ ಎಲ್ಲಾ ಕಾರ್ಯ ಆಲೋಚನೆಗಳನ್ನು ಮಾಡಿದರು. ಅಂತೂ ಕೊನೆಗೆ ಮೆಕ್‌ಡೊನಾಲ್ಡರ ನಿವಾಸ ಸ್ಥಳವು ಎಲ್ಲಾ ಪ್ರತಿನಿಧಿಗಳ ಕೇಂದ್ರಸ್ಥಳವಾಯಿತು.

ಕೆಲವು ವರುಷಗಳ ನಂತರ ಅವರ ಪತ್ನಿಯು ಸ್ವರ್ಗಸ್ಥಳಾದಳು. ಮೆಕ್‌ಡೊನಾಲ್ಡರು ಮಹಾ ಶೋಕ ಸಾಗರದಲ್ಲಿ ಮುಳುಗಿದರಾದರೂ, ಅವರು ತನ್ನ ಮೇಲಿನ ಆ ಕಾರ್ಯ ಜವಾಬ್ದಾರಿಕೆಯನ್ನು ಮರೆಯಲಿಲ್ಲ.

ಮೆಕ್‌ಡೊನಾಲ್ಡರ ಜವಾಬ್ದಾರಿಕೆಯ ವಿಸ್ತೀರ್ಣ ಪ್ರೇಮ ಜೀವನದ ಸುಖಗಳಲ್ಲಿ ಅವರು ಅರಿಯಲ್ಪಟ್ಟವರೇ ಅಲ್ಲ. ಕಷ್ಟ ಪರಂಪರೆಗಳು ಸನ್ನಿಹಿತವಾದರೂ ಚಿಂತಿಲ್ಲ. ಜೀವನೋದ್ದೇಶವು ಕೈಗೂಡಿ ಬಂದರಾಯಿತು. ಎಂಬುದೇ ಅವರ ತತ್ವ.

೧೯೧೪ರ ಮಹಾ ಯುದ್ಧದ ಸಮಯದಲ್ಲಿ ಅವರು ತೋರಿದ ಸ್ವಪಕ್ಷಾಭಿಮಾನವೂ, ಕಾರ್ಯಾಸಕ್ತಿಯೂ ಅವಿರೋಧವಾದ ಪ್ರೇರಕ. ಆ ಸಮಯದಲ್ಲಿ ಅವರು ತಾನು ಮಾಡಿದ ಎಲ್ಲಾ ಕಾರ್ಯಗಳು ಸರಿಯಲ್ಲದೆ ತಪ್ಪಲ್ಲವೆಂದೇ ದೃಢಭಾವದಿಂದ ಪ್ರತಿವಾದಿಸುತ್ತಿದ್ದರು. ತನ್ನ ಆತ್ಮಗೌರವಕ್ಕೆ ಕುಂದು ತರುವ ಪ್ರಸಂಗದಲ್ಲೂ ಅವರು ಆತ್ಮಕ್ಷೋಭೆಯಿಂದ ಆಚರಿಸಿದರಲ್ಲ. ಯಾವುದೇ ಒತ್ತಾಯದಿಂದ ರಾಜಿನಾಮೆಯನ್ನು ನೇಮಿಸಿ ಬಿಟ್ಟರು. ಅವರ ಸ್ವಪಕ್ಷ ಪ್ರತಿಷ್ಠೆಗಾಗಿ ಅವರನ್ನು ದುರ್ದೆಸೆಯಲ್ಲಿ ಕೆಲವರು ನಿಂದಿಸಿದರು. ಆ ಮುಂದಾಳುಗಳ ದೃಷ್ಟಿಯಲ್ಲಿ ಮೆಕ್‌ಡೊನಾಲ್ಡರಿಗೆ ಅವರ ಗೌರವವು ದೊರೆಯದೆ ಹೋಯಿತು.

ಆದರೂ ಕೂಡ ಮೆಕ್‌ಡೊನಾಲ್ಡರು ತನ್ನ ಪ್ರತಿಷ್ಠೆಯನ್ನು ಶಿಥಿಲಗೊಳಿಸಲಿಲ್ಲ. ಅನೇಕ ಸಮಯದ ವರೆಗೆ ಅವರ ಗೌರವ ಖ್ಯಾತಿಗಳ ಮೇಲೆ ಅವರು ಅನೇಕ ಬಾರಿಗಳಲ್ಲಿ ಹೋರಾಡಿದರೂ ೧೯೨೪ರಲ್ಲಿ ಅವರ ಕಾರ್ಯಕ್ಕೆ ತಕ್ಕ ಪ್ರತಿಫಲವು ದೊರೆತೇ ಹೋಯಿತು. ಆ ವರುಷದಲ್ಲಿ ಅವರಿಗೆ ಬ್ರಿಟಿಷ ಸಾಮ್ರಾಜ್ಯದ ಮಂತ್ರಿ ಪದವಿಯು ಸಿಕ್ಕಿತು — ಒಡನೆ ಅವರು ಅಷ್ಟರ ತನಕವೂ ಹೋರಾಡಿದುದು ದೇಶದ ಏಳ್ಗೆಗಾಗಿ ಎಂದೂ, ಬ್ರಿಟಿಷ ಸಾಮ್ರಾಜ್ಯದ ಏಳ್ಗೆಗಾಗಿಯೂ ಜನರು ಅರಿತೊಡಗಿದರು. ಮೆಕ್‌ಡೊನಾಲ್ಡರ ಹೆಸರು ಸ್ವಸ್ಥಾನದಲ್ಲಿಯೂ ಪ್ರೇತವು ಪತ್ತನೆ ಏಳುವಂತೆ, ಎಲ್ಲಾ ಕಡೆ ಭೂಗತವಾದಂತೆ ಎದ್ದುಕೊಂಡಿತು. ಲೋಕ-ಪಕ್ಷದಲ್ಲಿ ಅವರ ಹೆಸರು ಪ್ರಚಂಡ ಪ್ರಖ್ಯಾತಿಯನ್ನು ಹೊಂದಿತು.

ಅವರು ಪ್ರಧಾನ ಸಚಿವರಾಗಿಯೂ Foreign Secretaryಯಾಗಿಯೂ ಕೆಲಸವನ್ನು ನಿರ್ವಹಿಸಿದರು. ಎರಡನೇ ಜವಾಬ್ದಾರಿಯಿಂದ ಅವರು ಇಡೀ ಪ್ರಪಂಚದ ಪ್ರಶಂಸೆಗೆ ಪಾತ್ರರಾದರು.

ಮೆಕ್‌ಡೊನಾಲ್ಡರು ಇಂದಿನ ದಿನ ಇಡೀ ಬ್ರಹ್ಮಾಂಡದಲ್ಲಿ ತಲೆ ಎತ್ತಿ ನಿಂತಿರುವ ಬ್ರಿಟಿಷ ಸಾಮ್ರಾಜ್ಯದ ಮೂಲಸೂತ್ರದಾರರಾಗಿ ನಿಂತಿರುವುದಲ್ಲದೆ ಹಿಂದೂದೇಶದ ಸ್ವಾತಂತ್ರ್ಯ ವಿಷಯ ಜನರು ಅವರ ಕಡೆ ಗ್ಯಾನವಿಟ್ಟು ನೋಡುತ್ತಿರುವುದಾದರೂ ಅವರಂತಹ ಅದೃಷ್ಟಶಾಲಿಗಳಾಗಬೇಕೆಂದು ಊಹಿಸುತ್ತಿದ್ದಾರೆ. ಈ ಸ್ಥಿತಿಗೆ ಅವರ ಸ್ವಪ್ರಯತ್ನ, ಧೈರ್ಯ, ವಿವೇಕದಿಂದಾಗಿಯೇ ಹೊರತಲ್ಲದೆ ಅನ್ಯ ಪ್ರೋತ್ಸಾಹದಿಂದಲ್ಲ.

ಅದೃಷ್ಟ ಮಹಿಮೆಯು ಹೇಗೆ ವರ್ತಿಸುವುದೆಂದು ಕಾಲಚಕ್ರದ ಗತಿಗೆ ಸಿಲುಕಿದ ಮಾನವ ಬಲ್ಲನು. ಹೇಳಲಸಾಧ್ಯ. ಮೆಕ್‌ಡೊನಾಲ್ಡರ ಕಥೆಯನ್ನು ಕೇಳಿದ ಸರ್ವರೂ ಜೀವನದಲ್ಲಿ ನಮ್ರತೆಯನ್ನೂ ಧೈರ್ಯವನ್ನೂ ಹೊಂದಬೇಕಾಗಿದೆ. ಅದೇ ಜೀವನ ಸಾರ್ಥಕ್ಯವು.

ದಂಡನೀತಿಯ ದಂಡನೆ.

ತಾರೀಕು ೨೯ರಲ್ಲಿ

ಮದರಾಸಿನಲ್ಲಿ ಡಾ॥ ಪಿಟನ್ ಎಂಬ ಧರ್ಮೋಪದೇಶಕ ಸುಧಾರಕರು ಖಾದಿ ತೊಟ್ಟು ವಿದೇಶಿ ವಸ್ತ್ರ ಅಂಗಡಿಯ ಬಳಿ ಪಿಕೆಟ್ ಮಾಡಿದರೆಂಬ ಆರೋಪದ ಮೇಲೆ ಪೋಲೀಸರಿಂದ ಭಂಗಗೊಳಿಸಲ್ಪಟ್ಟರು. ಬಣ್ಣದ ನೀರಿನಿಂದ ತೋಯಲ್ಪಟ್ಟರು. ಕೊನೆಗೆ ಅವರ ಮೇಲಿನ ಆರೋಪವನ್ನು ಹಿಂತೆಗೆದರು.

ಅಹ್ಮದಾಬಾದಿನ ಹಡ್ಕ್ವೀ ಎಂಬಲ್ಲಿ ಪಿಕೆಟ್ ಮಾಡುತ್ತಿದ್ದ ಸ್ವಯಂಸೇವಕರನ್ನು ಕೈದುಮಾಡಿದ ಬಗ್ಗೆ ಜನತಂಡವು ಕ್ಷೋಭೆಯನ್ನೆಬ್ಬಿಸಿತು. ಶಕ್ತಿ ಮೀರಿ ಗಲಾಟೆಯು ನಡೆದುದರಿಂದ ಪೋಲೀಸರು ತುಪಾಕಿ ಹಾರಿಸಿದರು. ಮೂರು ಮಂದಿ [illegible] ಮಡಿದು ಬಿದ್ದರು. ಅನೇಕರಿಗೆ ಜಖಂ ಆಗಿದೆಯಾಗಿ ತಿಳಿದು ಬಂದಿದೆ.

ಲಾಹೋರಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರಾದ ಶ್ರೀಯುತ ಸರ್ದಾರ್ ಸರ್ದೂಲ್ ಸಿಂಗ್ ಕವೀಶರರ ಮೇಲೆ ಪೋಲೀಸರು ನೋಟೀಸು ಜಾರಿಮಾಡಲು ಹೋದರು. ಶ್ರೀಯುವರು ಆ ನೋಟೀಸಿಗೆ ಸಹಿ ಹಾಕಲಿಲ್ಲ. ಕಾರಣ ಅದನ್ನು ಪೋಲೀಸರು ಶ್ರೀಯುತರ ಮನೆಯ ಗೋಡೆಗೆ ತಗಲಿಸಿ ನಡೆದರು.

ಇಲ್ಲಿಯ ಶ್ರೀಮತಿ ಎಲ್ ಜಡ್ ಜುಟ್ಶಿ ಎಂಬವರೂ ಡಾ॥ ಗೂರ್ಬಕ್ಷ್ ಎಂಬವರೂ ಡಿ ಮೆಜಿಸ್ಟ್ರೇಟರ ಅಪ್ಪಣೆ ವಿನಹಾ ಲಾಹೋರು ಪಟ್ಟಣದಿಂದ ಹೊರಗೆ ಹೋಗಬಾರದೆಂದೂ, ಕಾಂಗ್ರೆಸ್ಸಿನ ಕಾರ್ಯಗಳಲ್ಲಿ ಭಾಗ ವಹಿಸಬಾರದೆಂದೂ ನೋಟೀಸು ಜಾರಿಯಾಗಿದೆ.

ಅಮೃತಸರದಲ್ಲಿ ಹದಿನೈದು ಮನೆಗಳಲ್ಲಿ ಜಪ್ತಿ ನಡೆಯಿತು. ಅಲ್ಲಿಯ "ಕೀರ್ತಿ" ಪತ್ರಿಕೆಯ ಆಫೀಸು ಶೋಧನೆಗೊಳಗಾಯಿತು. ಶ್ರೀ ಶಂಕರ್ ದತ್ ಎಂಬವರ ಮನೆಯಿಂದ ಸೈಕ್ಲೋಸ್ಟೈಲ್ ಯಂತ್ರವೊಂದು ಕೊಂಡೊಯ್ಯಲ್ಪಟ್ಟಿತು.

ಮುಂಬಾಯಿಯ ಕಾಲ್ಬಾದೇವಿಯ ಬಜಾರದಲ್ಲಿ ಬಹಳ ಗಲಾಟೆ. ವಿದೇಶಿ ವಸ್ತ್ರ, ವಸ್ತುಗಳನ್ನು ರಾಶಿಯಾಗಿ ಸುಟ್ಟರು. ಮೇಜು, ಕುರ್ಚಿಗಳನ್ನೂ ಸುಟ್ಟರು. ಪೋಲೀಸರ ಆತಂಕವು ನಡೆಯುತ್ತಿವೆಯಾದರೂ ಜನರು ತಮ್ಮ ಕೆಲಸವನ್ನು ಮಾಡುತ್ತಲೇ ಇರುವರು. ಯುರೋಪಿಯನರ ಮೋಟಾರುಗಳಿಗೆ ಕಲ್ಲು ಬೀಳುತ್ತಿರುವುದೆಂದೂ ಅಲ್ಲಲ್ಲಿ ಬೆಂಕಿಯ ಹಾವಳಿಗಳು ತಲೆದೋರಿದೆಯೆಂದೂ ತಿಳಿದು ಬಂದಿದೆ. ಮ್ಯುನಿಸಿಪಾಲಿಟಿಯ ಮೂರು ಕಾರುಗಳನ್ನು ಸುಟ್ಟರು. ಮಾಂಡ್ವಿಯ ಪೋಲೀಸ್ ಚೌಕಿಗೆ ಬೆಂಕಿ ಕೊಟ್ಟರು.

ಬೊಂಬಾಯಿ ಕಾಟನ್ ಬ್ರೋಕರ್ಸ್ ಎಸೋಸಿಯೇಶನಿನ ಆನರರಿ ಸೆಕ್ರೆಟರಿಯವರಾದ ಶ್ರೀ ರತಿಲಾಲ್ ತಕ್ಕರ್ ಎಂಬವರು ಪಟ್ಟಣವನ್ನು ಇಪ್ಪತ್ತನಾಲ್ಕು ತಾಸುಗಳೊಳಗೆ ಬಿಟ್ಟು ಹೊರಡಬೇಕಾಗಿಯೂ ಪೋಲೀಸ್ ಕಮಿಶನರ ಅಪ್ಪಣೆ ಹೊರತು ಒಳ ಬರಬಾರದಾಗಿಯೂ ಅಪ್ಪಣೆಯಾಗಿದೆ.

ಇ. ಪಿ. ಎಂಡ್ ಓ. ಬೇಂಕನ್ನು ಪಿಕೆಟ್ ಮಾಡಿದ ಹದಿನಾಲ್ಕು ವರುಷದ ಒಬ್ಬ ಹುಡುಗನಿಗೆ ಚೀಫ್ ಪ್ರಸಿಡೆನ್ಸಿ ಮೆಜಿಸ್ಟ್ರೇಟರು ಹನ್ನೆರಡು ಛಡಿಯ ಶಿಕ್ಷೆಯನ್ನು ಕೊಟ್ಟರು.

ಅವರ ಮಾತು ಹೀಗಿದೆ. "ಕೆಟ್ಟ ನಡತೆಗಾಗಿಯೂ ತೊಂದರೆ ಕೊಟ್ಟುದಕ್ಕಾಗಿಯೂ ನೀನು ತಪ್ಪಿತಸ್ಥನಾಗಿರುವಿ. ನಿನ್ನ ಪ್ರಾಯವು ಒರೀ ಹದಿನಾಲ್ಕು ಹದಿನೈದು ಇರಬಹುದು. ಆದುದರಿಂದ ನಿನಗೆ ತಕ್ಕುದಾದ ಶಿಕ್ಷೆಯು ಛಡಿಗಳೆಂದೇ ನನ್ನ ಆಲೋಚನೆ. ಆದುದರಿಂದ ನಾನು ನಿನಗೆ ಒಂದು ದಿನ ಸಾದಾ ಸಜೆಯನ್ನೂ ನಿನ್ನ ಖಾಲೀ ಬೆನ್ನಿನ ಹಿಂದೆ ಕೆಳಗ ಬೆತ್ತದಿಂದ ಹದಿನೆರಡು ಛಡಿ ಶಿಕ್ಷೆಯನ್ನೂ ಕೊಟ್ಟಿರುವೆನು. ಇದರಿಂದಾಗಿ ನಿನಗೊಂದು ಒಳ್ಳೇ ಪಾಠವು ದೊರೆಯುವುದಾಗಿ ಯೋಚಿಸುತ್ತೇನೆ."

ವ್ಯಾಪಾರ ವಾಣಿಜ್ಯ ಸಂಸ್ಥೆಗಳ ಆಲೋಚನೆಯ ನಿಮಿತ್ತ ಪ್ರಮುಖ ವ್ಯಾಪಾರದಂಗಡಿಗಳು ಒಂದು ದಿನದ ಹರತಾಳವನ್ನಾಚರಿಸಿದುವು.

ಮುಂಬಾಯಿಯ ಕಾಲ್ಬಾದೇವಿ, ಭುಲೇಶ್ವರ್ ಮೊದಲಾದ ಸ್ಥಳಗಳಲ್ಲಿ ಜನಕ್ಷೋಭೆಯು ಬಹಳವಿತ್ತು. ಅದೇ ದಿನ ಸಂಜೆ ೪ ಘಂಟೆಗೆ ಗಡಿನಾಡಿನ ದಿನಾಚರಣೆಯ ಸಂಬಂಧವಾಗಿ ಮೆರವಣಿಗೆ ಇರುವುದೆಂದು ಪ್ರಕಟವಾಯಿತು. ಅದನ್ನು ಕೇಳಿದ ಪೋಲೀಸ್ ತಂಡಗಳೂ, ಮಿಲಿಟರಿಗಳೂ ಸಿದ್ಧವಾದುವು. ಪ್ರಕಟನೆಯಂತೆ ನೂರು ಮಂದಿ ಕೆಂಪಂಗಿಯವರೂ, ಇನ್ನೂರು ಮಂದಿ ಸ್ವಯಂಸೇವಕರೂ ಒಂದು ಮೆರವಣಿಗೆಯನ್ನು ಮಾಡಿದರು. ಅವರನ್ನು ಪೋಲೀಸರು ತಡೆದು ಅನೇಕರನ್ನು ಕೈದು ಮಾಡಿದರು. ಅಷ್ಟರಲ್ಲಿ ಪ್ರೇಕ್ಷಕರ ತಂಡವು ಬಹಳವಾಗಿ ರಾಷ್ಟ್ರೀಯ ಶ್ಲೋಕಗಳನ್ನು ಹಾಡಿತು. ಅವರನ್ನು ಚದರಿಸುವುದಕ್ಕಾಗಿ ಗೋಳಿಬಾರು ಮಾಡಲಾಯಿತು. ಒಬ್ಬನು ಮಡಿದನು. ಇಪ್ಪತ್ತೊಂದು ಮಂದಿಗಳಿಗೆ ಜಖಂ ಆಗಿದೆ. ಜಖಂ ಆದವರಲ್ಲೊಬ್ಬನ ಸ್ಥಿತಿಯು ವಿಷಮದ್ದಾಗಿದೆ. ಇದಾದರೂ ಕೂಡ ಜನರು ಒಮ್ಮೆ ಚದರಿ ಹೋಗಿದ್ದರೂ, ಇನ್ನೊಮ್ಮೆ ಕೂಡಿ ಪೋಲೀಸರಿಗೆ ಕಲ್ಲೆಸೆದು ವಿದೇಶಿ ವಸ್ತ್ರದ ರಾಶಿಗೆ ಬೆಂಕಿ ಕೊಟ್ಟರೆಂದು ವಾರ್ತೆ.

ಪುನೆಯಲ್ಲಿ ಗಡಿನಾಡಿನ ದಿನಾಚರಣೆ ಸಂಬಂಧವಾಗಿ "ಕೇಸರಿ" ಪತ್ರಿಕೆಯ ಸಂಪಾದಕರಾದ ಶ್ರೀ ಜಿ. ಎಸ್. ಕಾರಂದಿಕಾರರನ್ನೂ ಇನ್ನಿತರ ಹದಿನೇಳು ಮಂದಿ ಮುಂದಾಳುಗಳನ್ನೂ ಕೈದುಮಾಡಿರುವರು. 'ಸ್ವಾತಂತ್ರ್ಯ ದಿನಚರಣೆ'ಗಾಗಿ ಇಬ್ಬರು ಹುಡುಗರಿಗೆ ಎರಡೆರಡು ತಿಂಗಳ ಶಿಕ್ಷೆಯಾಗಿದೆ.

ಕರಾಚಿಯಲ್ಲಿ ಗಡಿನಾಡಿನ ದಿನಕ್ಕಾಗಿ ಎಲ್ಲೆಲ್ಲೂ ಹರತಾಳವಾಚರಿಸಲ್ಪಟ್ಟಿತು. ಎಲ್ಲಾ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಉಳಿದರು. ಜವಪುರ್ ಹೈಸ್ಕೂಲ್ ಎಂಬ ಸರಕಾರಿ ಶಾಲೆ ಮಾತ್ರ ತೆರೆಯಲ್ಪಟ್ಟಿದ್ದು ಬರೇ ಸ್ವಲ್ಪ ಹುಡುಗರು ಹಾಜರಿದ್ದರು. ಮೋಡರ್ನ್ ಹೈಸ್ಕೂಲ್ ಹುಡುಗರು ಮೆರವಣಿಗೆ ಮಾಡಿ ಇಂಡಿಯನ್ ಗರ್ಲ್ ಸ್ಕೂಲಿನ ಎದುರು ಕಪ್ಪು ಬಾವಟೆಯ ಪ್ರದರ್ಶನವನ್ನು ನಡೆಸಿದರು. ಈ ಸಂಬಂಧವಾಗಿ ಗರ್ಲ್ ಸ್ಕೂಲಿನ ಗೇಟು ಹಾಕಲ್ಪಟ್ಟಿತ್ತು. ಪ್ರದರ್ಶನವು ನಡೆಯುವಾಗ ಹುಡುಗಿಯರು ಒಳಗಿಂದಲೂ, ಹೊರಗಿಂದಲೂ ಒಂದು ಗೇಟನ್ನು ಬಲಾತ್ಕಾರದಿಂದ ತೆರೆದು ಎಲ್ಲಾ ವಿದ್ಯಾರ್ಥಿನಿಯರೂ ಮೆರವಣಿಗೆಯೊಡನೆ ಕೂಡಿದರು.

ಲಕ್ನೋವಿನ ಹರದೋಯಿ ಜಿಲ್ಲೆಯ ಪಶು ಪ್ರದರ್ಶನವು ನಡೆಯುತ್ತಿರುವಾಗ ಅಲ್ಲಿಗೆ ನಾನೂರು ಮಂದಿಗಳ ಒಂದು ಪ್ರಚಂಡ ಮೆರವಣಿಗೆಯು ಬಂತು. ತಾವು ಸರಕಾರದ ನಿಷಿದ್ಧ ಕಾನೂನುಗಳನ್ನು ಮುರಿಯುವೆವೆಂದೇ ಆ ಸಭಿಕರ ಹೇಳಿಕೆಯಿತ್ತು. ಅನೇಕರನ್ನು ಕೈದುಮಾಡಿದರು. ಆದರೂ ಜನರು ತಾವು ಒಂದೋ ಸಾಯುವೆವು, ಒಂದೋ ಕೊಲ್ಲುವೆವು ಎಂದು ಮುಂದೆ ನಡೆದರು. ಅದನ್ನು ಕಂಡು ಪೋಲೀಸರು ಗೋಳಿಬಾರು ಮಾಡಿದರು. ಮೂರು ಮಂದಿಗಳು ಮಡಿದರೆಂದೂ ಹನ್ನೊಂದು ಮಂದಿಗಳಿಗೆ ಜಖಂ ಆಗಿದೆಯೆಂದೂ ಪ್ರಕಟಣೆ.

ನ್ಯೂ ಡಿಲ್ಲಿಯ ಆರು ಮಂದಿ ಅಹರಾರ (ಮುಸ್ಲಿಮ) ಸ್ವಯಂಸೇವಕರನ್ನು ಕೈದುಮಾಡಿದರು. ಅವರ ರಕ್ಷಣೆಗಾಗಿ ಬಂದ ಇನ್ನಿತರ [illegible] ತಂಡಗಳೂ ಪೋಲೀಸರಿಗೆ ಕಲ್ಲೆಸೆದುವೆಂದೂ, ಮೋಟಾರ್ ಕಾರು ಒಂದರ ಕನ್ನಡಿಯನ್ನು ಹುಡಿಗೈದರೆಂದೂ ವಾರ್ತೆ.

ತಾರೀಕು ೩೦ರಲ್ಲಿ

ಕರಾಚಿಯಲ್ಲಿ ಮ್ಯುನಿಸಿಪಾಲಿಟಿಯ ಕಟ್ಟೋಣದ ಮೇಲೆ ರಾಷ್ಟ್ರಧ್ವಜವನ್ನೇರಿಸುವ ಕ್ಕಾಗಿ ಅದರ ಅಧ್ಯಕ್ಷರಾದ ಶ್ರೀ ಜಮ್ಶೆಡ್ ಮೆಹ್ತರಿಗೆ ಎಚ್ಚರ ಪತ್ರವೊಂದನ್ನು ಅಲ್ಲಿಯ ಕಲೆಕ್ಟರರು ಬರೆದಿದ್ದರು. ಅವರು ಅದನ್ನು ಮ್ಯುನಿಸಿಪಾಲಿಟಿ ಸಭೆಗೆ ಕಳುಹಿಸಿ, ಅಲ್ಲಿ ರಾಷ್ಟ್ರಧ್ವಜವನ್ನು ತೆಗೆಯಬೇಕೆಂದು ಪೋಲೀಸರ ಅಪ್ಪಣೆಯು ಮೇಯರಿಗೆ ಸಿಕ್ಕಿತು. ಆ ಬಳಿಕ ಧ್ವಜವು ಇಳಿಸಲ್ಪಡಲಿಲ್ಲ. ಕೊನೆಗೆ ಮೇಯರು ಕಲೆಕ್ಟರರ ಆಫೀಸಿಗೆ ಹೋದರು. ಅಲ್ಲಿ ಕಲೆಕ್ಟರರು ಧ್ವಜವನ್ನು ಕೆಳಗಿಸಬೇಕಾಗಿ ಮೇಯರಿಗೆ ಹೇಳಿದರು. ಮತ್ತು ಕಲೆಕ್ಟರರು "ನಿಮಗೊಂದು ನೋಟೀಸನ್ನು ಕಳುಹಿಸುವೆವು" ಎಂದರು. ಅದು ಸಿಕ್ಕಿಲ್ಲವೆಂದು ಮೇಯರು ಉತ್ತರವಿತ್ತರು. ಕೂಡಲೆ ಹೆಡ್ ಕ್ಲರ್ಕನು ಬರೆದಿಟ್ಟ ನೋಟೀಸು ಮೇಯರ ಹತ್ತಿರವೇ ಇತ್ತು. ಆ ಮೇಲೆ ಇನ್ನೊಂದು ನೋಟೀಸು ಕೊಟ್ಟು ಧ್ವಜವನ್ನು ಕೆಳಗಿಳಿಸಿದರು.

ಯೋತ್‌ಮಾಲಿನಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಲ್ಲೊಬ್ಬರಾದ ಶ್ರೀ ಎಮ್ ಎಸ್ ಅನಿಯವರನ್ನು ಕೈದು ಮಾಡಿ ಆರು ತಿಂಗಳ ಸಾದಾ ಸಜೆ ವಿಧಿಸಿದರು. ಅಲ್ಲಿಯ ಡಿಕ್ಟೇಟರರಾದ ಡಿ. ಎಮ್. ಡಾಮ್ಲೆ ಎಂಬವರನ್ನೂ ಕೈದು ಮಾಡಿದರು.

ಅಲ್ಲಾಹಾಬಾದಿನಲ್ಲಿ ಪೇಶಾವರ ದಿನಾಚರಣೆಯ ಸಂಬಂಧವಾಗಿ ಜರಗಿದ ಒಂದು ದೊಡ್ಡ ಸಭೆಯು ಪೋಲೀಸರಿಂದ ಚದರಿಸಲ್ಪಟ್ಟಿತು. ಕಂದಾಯ ನಿರಾಕರಣೆಯ ಕುರಿತು ಭಾಷಣ ಮಾಡಿದ ಪಂಡಿತ ಮೋಹನ್‌ಲಾಲ್ ಗೌತಮರೆಂಬವರನ್ನು ಕೈದು ಮಾಡಿದರು. ಇನ್ನೊಂದು ಸಭೆಯು ಪಟ್ಟಣದಿಂದ ಹೊರಡಿತು. ಪೋಲೀಸರು ಅವರನ್ನು ತಡೆದರು. ಎಲ್ಲರೂ ಮಾರ್ಗದ ಮೇಲೆ ಒಂದು ಘಂಟೆಯ ತನಕ ಕುಳಿತರು. ಕುಳಿತಲ್ಲಿಯೇ ಒಂದು ಭಾಷಣವನ್ನು ಮಾಡಿ ಸಭೆಯು ಮುಕ್ತಾಯವಾಯಿತು.

ಲಕ್ನೋವಿನಲ್ಲಿ ಪೇಶಾವರ ದಿನವನ್ನು ಹರತಾಳದ ಮೂಲಕ ಆಚರಿಸಿದರು. ವಿಶೇಷವೇನೂ ನಡೆದಿರುವುದಿಲ್ಲ. ಒಬ್ಬ ಸ್ತ್ರೀ ಸಮೇತ ಹದಿನೆಂಟು ಮಂದಿಗಳನ್ನು ಕೈದುಮಾಡಿರುವರು.

ಬೆನಾರಸ್‌ನಲ್ಲಿನ ಗಾಂಧೀ ಆಶ್ರಮ ಖಾದಿ ಭಂಡಾರದ ಕಟ್ಟಡದ ಮೇಲಿದ್ದ ರಾಷ್ಟ್ರಧ್ವಜವನ್ನು ಕಿತ್ತು ತೆಗೆದ ಇಬ್ಬರನ್ನು ಕೈದು ಮಾಡಿ ನಂತರ ಬಿಟ್ಟರು. ಐದು ಮಂದಿ ಸ್ತ್ರೀಯರು ಪ್ರತಿಷ್ಠಿತ ಸೆಂಕರ್ಸ ಅಂಗಡಿಗಳೆದುರು ಪಿಕೆಟ್ ಮಾಡಿದರು. ಅವರನ್ನು ಕೈದು ಮಾಡಿ ನಂತರ ಬಿಡಲಾಯಿತು. "ಅರ್ಜುನ"ದ ಮುದ್ರಣಾಲಯದ ಪ್ರೊಪ್ರೈಟರರಾದ ಶ್ರೀ ಮಹಾದೇವ ಪ್ರಸಾದ ಎಂಬವರನ್ನು ಕೈದುಮಾಡಿದರು. ಟೌನ್ ಹೋಲಿನ ಕಟ್ಟೋಣದಲ್ಲಿ ಧ್ವಜವನ್ನೇರಿಸಿದರು. ಪೋಲೀಸರು ಅದನ್ನು ಕಿತ್ತು ತೆಗೆದರು.

ನ್ಯೂ ಡಿಲ್ಲಿಯಲ್ಲಿ ಪೇಶಾವರ ದಿನಾಚರಣೆಯನ್ನು ನಡೆಸಿದರು. ಹೆಚ್ಚಾಗಿ ಹಿಂದೂ ಮುಸ್ಲಿಮರ ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ಅಲ್ಲಿಯ ಜಮೈತ್—ವುಲ್—ವುಲ್‌ಮಾದವರು ಮಸೀದಿ ಸಂಬಂಧವಾದ ಒಂದು ಮೆರವಣಿಗೆಯನ್ನು ಮಾಡಿದರು. ಮೆರವಣಿಗೆಯು ಹೋಗುತ್ತಿರುವಾಗ ಅದರೊಡನೆ ಕಾಂಗ್ರೆಸ್ಸಿನವರೂ ಧ್ವಜ ಸಮೇತ ಸೇರಿದರು. ಇದನ್ನು ಕಂಡ ಪೋಲೀಸರು ಕಾಂಗ್ರೆಸ್‌ವಾಲರನ್ನು ದಸ್ತಗಿರಿ ಮಾಡಿ ಮುಸ್ಲಿಮರನ್ನು ಬಿಟ್ಟರು. ಸುಮಾರು ನೂರು ಮಂದಿ ಕಾಂಗ್ರೆಸ್ಸಿನವರು ಕೈದು ಮಾಡಲ್ಪಟ್ಟಿರುವರು.

ಕೌನ್‌ಪುರದಲ್ಲಿ ಶ್ರೀ ಎಮ್ ಎನ್ ರೋಯರವರನ್ನು ಸಮರ್ಥಿಸಿ ಕೆಲಸಮಾಡುತ್ತಿದ್ದ ಅಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ ಇಕ್ಬಾಲ್ ಕಿಶನ್ ಕಪೂರ್ ಎಂಬವರನ್ನು ಕೈದುಮಾಡಿದರು.

ವಿಲ್ಲುಪುರವಿನಲ್ಲಿ ವಕೀಲರೊಬ್ಬರಾದ ಶ್ರೀ ವಿ. ನಾರಾಯಣ ಐಯ್ಯರ್ ಎಂಬವರು ಕರಪತ್ರಗಳನ್ನು ಹಂಚಿದುದಕ್ಕಾಗಿ ಆರು ತಿಂಗಳ ಕಠಿಣ ಸಜೆಗೊಳಗಾದರು. ಅಲ್ಲದೆ ಅವರ ಹೆಬ್ಬೆಟ್ಟು ಗುರುತನ್ನೂ ತೆಗೆದುಕೊಂಡರೆಂದು ತಿಳಿದುಬಂದಿದೆ.

ತಾ ೧ರಲ್ಲಿ

ಕೊಡಗಿನಲ್ಲಿ ಶ್ರೀಮತಿ ಪಿ. ಸೀತಮ್ಮ ಬೆಳಿಯಪ್ಪ ಎಂಬವರನ್ನು ಮತ್ತು ಇನ್ನಿತರ ಇಬ್ಬರು ಸ್ತ್ರೀಯರನ್ನೂ ಮೆರವಣಿಗೆಯ ಸಂಬಂಧ ಕೈದುಮಾಡಿ ಮೂರು ತಿಂಗಳ ಸಾದಾ ಸಜೆ ಕೊಟ್ಟರು. ಶ್ರೀ ಕೆ. ಗಣಪಯ್ಯನೆಂಬ ಸ್ವಯಂಸೇವಕರೊಬ್ಬರನ್ನೂ ಕೈದುಮಾಡಿ ಮೂರು ತಿಂಗಳ ಕಠಿಣ ಸಜೆಕೊಟ್ಟರು.

ಅಹ್ಮದಾಬಾದ್, ಕಲ್ಕತ್ತ, ಅಮೃತಸರ, ಬೆಂಗಳೂರು, ಚೆಂಗಲ್‌ಪೇಟೆ, ಮಧುರ, ಮುಸಲೀಪಟಾಂ, ವಿಶಾಗಪಟಾಂ, ಕೃಷ್ಣ, ಗುಂಟೂರು ಮೊದಲಾದ ಕಡೆಗಳಲ್ಲಿ ಹಲಕೆಲವು ಕೈದುಗಳಾಗಿವೆ.

ತಾ ೨ರಲ್ಲಿ

ಲಾಹೋರಿನಲ್ಲಿ ಕಾಂಗ್ರೆಸ್ ಆಫೀಸೂ ಸೇವಾದಳ ಆಫೀಸು ಗಾಂಧೀ ಆಶ್ರಮ, ಅಜಾದ ಸಭಾ ಬಾಲ ಭಾರತ ಸಭಾ ಮೊದಲಾದ ಸಂಸ್ಥೆಗಳು ಪೋಲೀಸರ ವಶವಾದುವು. ಸಾಮಾನು ಕಾಗದಪತ್ರ ಮೊದಲಾದವುಗಳನ್ನು ಕೊಂಡೊಯ್ದಿರುವರು. ೬ ಮಂದಿ ಸ್ವಯಂಸೇವಕರನ್ನು ಪಿಕೆಟಿಂಗಿನ ಸಂಬಂಧವಾಗಿ ಕೈದು ಮಾಡಿರುವರು.

ಅಮೃತಸರದಲ್ಲಿ ಅಮೀರಚಂದಗುಪ್ತ ಓಹೇರ್ ಶಹಾನೆ ಎಂಬವರನ್ನು ಕೈದುಮಾಡಿದರು. ಲಕ್ನೋ, ಕಲ್ಕತ್ತ, ಅಂಕೋಲಾ, ಪೂನಾ, ಮುಂಬಾಯಿ ಪ್ರಾಂತ್ಯಗಳಲ್ಲಿ ಮುಂದಾಳುಗಳ ಕೈದು ನಡೆದಿವೆ.

ವಿವಿಧ ಸಮಾಚಾರಗಳು.

ಗುರುದೇವ ಗಾಂಧಿ

ಮಹಾತ್ಮರಿಗೆ ಬಹುಮಂದಿ ಶಿಷ್ಯರಿದ್ದಾರೆ ಆದರೆ ಅವರ ಶಿಷ್ಯತ್ವವನ್ನು ಸ್ವೀಕರಿಸಿರುವ ಪಾಶ್ಚಾತ್ಯ ಸ್ತ್ರೀ ಮೀರಾಬಾಯಿಯೊಬ್ಬಳೇ. ಮೀರಾಬಾಯಿಯು ಹೊಂದಿರುವ ಈ ವಿಶೇಷ ಸ್ಥಾನವನ್ನು ಪಡೆಯಲು ಇನ್ನೊಬ್ಬ ಪಾಶ್ಚಾತ್ಯ ಸ್ತ್ರೀಯು ಟೊಂಕಕಟ್ಟಿ ನಿಂತಿದ್ದಾಳೆ. ಅವಳು ಮೀರಾಬಾಯಿಗಿಂತ ಚಿಕ್ಕ ವಯಸ್ಸಿನವಳು. ಆಕೆಯ ಈಗಿನ ಹೆಸರು ಶೀಲಾದೇವಿ. ಅವಳಿಗೀ ಹೆಸರು ಬಂದು ಬಹು ದಿನವಾಗಿಲ್ಲ. ಒಂದು ತಿಂಗಳಾಯಿತಷ್ಟೆ! ಕಳೆದ ಡಿಸೆಂಬರ್ ೨೧ನೇ ತಾರೀಕಿನ ದಿನ ಆಕೆಯು ಪವಿತ್ರವಾದ ಗಂಗಾನದಿಯಲ್ಲಿ ಮಿಂದು ಹಿಂದೂಮತವನ್ನಂಗೀಕರಿಸಿದಳು. ಅಂದು ಆಕೆಗೆ ೨೨ನೇ ಹುಟ್ಟಿದ ಹಬ್ಬ. ಆ ದಿನ ಅವಳ ಜಾತಕದ ನಕ್ಷತ್ರಗಳು ಬಹು ಶುಭದಾಯಕವಾಗಿದ್ದುವೆಂದೂ, ಆ ದಿನವೇ ಅವಳು ಹಿಂದೂಧರ್ಮವನ್ನಂಗೀಕರಿಸತಕ್ಕದ್ದೆಂದೂ ಆಕೆಯು ನಿರ್ಧರಿಸಿ ತನ್ನ ನಿರ್ಧಾರವನ್ನವಳು ನೆರವೇರಿಸಿದಳು.

ಅವಳೀಗ ಹಿಂದೂಧರ್ಮವನ್ನಂಗೀಕರಿಸಿರುವವಳಾದರೂ ಪೂರ್ವಕಾಲದ ಗ್ರೀಕರಂತೆ ಆಕೆಯು ಉಡುಪನ್ನು ಧರಿಸುತ್ತಾಳೆ. ಆ ಆಕರ್ಷಣೀಯವಾದ ಉಡುಪನ್ನೂ ಅವಳ ಅಸಾಧಾರಣ ಲಾವಣ್ಯವನ್ನೂ ಅನೇಕರು ಕಂಡು ಬೆರಗಾಗಿದ್ದಾರೆ. ಅವಳೀಗ ಕಾಶ್ಮೀರ ದೇಶದ ಸುಂದರವಾದ ಕಣಿವೆಯೊಂದರಲ್ಲಿ ವಾಸಿಸುತ್ತಿರುವಳು. ಅವಳ ಜೊತೆಯಲ್ಲಿ ಅವಳ ಮೂರು ವರ್ಷದ ಮಗುವೊಂದು ಮಾತ್ರ ಇದೆ. ಆಕೆಯು ಅಮೇರಿಕಾ ದೇಶಸ್ಥಳು. ಅಮೇರಿಕದ ಸುಪ್ರಸಿದ್ಧ ಲೇಖಕರಾದ ಜೋರ್ಜ್ ಕ್ರೇಮ್ ಕುಕ್ ಎಂಬವರ ಮಗಳು. ಆಕೆಯು ಗ್ರೀಕ್ ಶ್ರೀಮಂತನೊಬ್ಬನನ್ನು ಮದುವೆಯಾಗಿದ್ದಳು. ಕೆಲವು ಕಾಲದ ಮೇಲೆ ಆಕೆಗೆ ಅಮೇರಿಕದ ಜೀವನ ಮಾರ್ಗದಲ್ಲಿಯೂ ನಾಗರಿಕತೆಯಲ್ಲಿಯೂ ಬರೀ ಕುಳುಕು ಮಾತ್ರ ಇದೆಯೆಂದೂ ಆ ಜೀವನದಲ್ಲಿ ಸುಖವಿಲ್ಲವೆಂದೂ ತೋರಿಬಂತು. ದಾಂಪತ್ಯಜೀವನವನ್ನೂ ತ್ಯಜಿಸಿಬಿಟ್ಟಳು. ಆ ಹೊತ್ತಿಗೆ ಅವಳಿಗೊಂದು ಮಗುವಾಗಿತ್ತು. ಈಗ ಅವಳು ಗಂಡನ ಸಂಪರ್ಕವನ್ನು ಬಿಟ್ಟು ತನ್ನ ಮಗುವಿನೊಡನೆ ವಾಸಮಾಡಿಕೊಂಡಿದ್ದಾಳೆ. ಆಕೆಯ ಗಂಡನು ಅಥೆನ್ಸಿನಲ್ಲಿ ವಾಸವಾಗಿದ್ದಾನೆ.

ಈಗ ಶೀಲಾದೇವಿಗೆ ಮಹಾತ್ಮರ ಸಬರ್ಮತಿಯಲ್ಲಿ ಆಶ್ರಮ ಜೀವನವನ್ನು ನಡೆಸಬೇಕೆಂದು ಅಪೇಕ್ಷೆಯಾಗಿದೆ. ಅದಕ್ಕಾಗಿಯೇ ಅವಳು ಹಿಂದೂ ಧರ್ಮವನ್ನವಲಂಬಿಸಿದ್ದು. ತನ್ನ ಆಸ್ತಿಯೆಲ್ಲವನ್ನೂ ತನ್ನ ಮಗುವಿಗೆ ಕೊಟ್ಟುಬಿಟ್ಟು ತಾನೀಗ ಬಡತನವನ್ನಂಗೀಕರಿಸಿರುವಳು.

ತನ್ನ ಗುರುವಾದ ಮಹಾತ್ಮರು ಇಂದಿನ ಜಗತ್ತಿನ ಅತ್ಯಂತ ಶ್ರೇಷ್ಠರೆಂದೂ, ಸಕಲ ವಿಧದಲ್ಲಿಯೂ ಯೇಸು ಕ್ರಿಸ್ತನಿಗೆ ಸಮಾನರೆಂದೂ ಹೇಳುತ್ತಿರುವಳು. ಆಕೆಯು ತನ್ನ ಗುರುವರ್ಯರಾದ ಮಹಾತ್ಮರನ್ನು ಪ್ರಥಮತಃ ಕಾಶೀಕ್ಷೇತ್ರದಲ್ಲಿ ಸಂದರ್ಶಿಸಲುದ್ದೇಶಿಸಿರುವಳೆಂದು ತಿಳಿಯಬರುತ್ತದೆ.

ಮೀರಾಬಾಯಿಯು ಗಾಂಧಿಯವರ ಆಶ್ರಮಕ್ಕೆ ಬರುವುದಕ್ಕೆ ಮುಂಚೆ ಆಶ್ರಮದ ನಿಯಮಗಳನ್ನು ತನ್ನ ಜೀವನದಲ್ಲಿ ಆಚರಣೆಗೆ ತರುವುದಕ್ಕಾಗಿ ಒಂದು ವರುಷ ಕಾಲ ಶ್ರಮಿಸಿ ತನ್ನ ಜೀವನವನ್ನು ದೋಷರಹಿತವನ್ನಾಗಿ ಮಾಡಿಕೊಂಡು ನಂತರ ಮಹಾತ್ಮರ ಆಶ್ರಮವನ್ನು ಸೇರಿದಳಷ್ಟೆ. ಅದರಂತೆಯೇ ಶೀಲಾದೇವಿಯೂ ಐಹಿಕ ಸುಖಭೋಗಗಳನ್ನು ತ್ಯಜಿಸಿ ಆಶ್ರಮದ ನಿಯಮಗಳನ್ನು ತನ್ನ ಜೀವನದಲ್ಲಿ ಆಚರಣೆಗೆ ತರಲೆತ್ನಿಸುತ್ತಿದ್ದಾಳೆ. ಈಗ ಆಕೆಯು ತನ್ನ ಪೂರ್ವದ ಆಹಾರವನ್ನು ತ್ಯಜಿಸಿ ಗಾಂಧಿಜಿಯವರು ಉಪಯೋಗಿಸುವ ಸಸ್ಯಾಹಾರವನ್ನೂ ಆಡಿನ ಹಾಲನ್ನೂ ಉಪಯೋಗಿಸುತ್ತಿದ್ದಾಳೆ. ತನ್ನ ಗುರುವರ್ಯನನ್ನು ಕಾಣುವ ಮೊದಲು ತನ್ನ ಜೀವನವನ್ನು ಅತಿ ಪರಿಶುದ್ಧವನ್ನಾಗಿಸಬೇಕೆಂಬ ಆಕಾಂಕ್ಷೆಯಿಂದ ಉಪವಾಸಾದಿಗಳನ್ನೂ ಧ್ಯಾನ, ಪ್ರಾರ್ಥನೆಗಳನ್ನೂ ಆಚರಿಸುತ್ತಿದ್ದಾಳೆ. ತಕ್ಕಷ್ಟು ಕಾಲ ಸಂಸ್ಕಾರಗಳನ್ನು ಹೊಂದಿದ ಮೇಲೆ ತಾನು ಮಹಾತ್ಮರನ್ನು ನೋಡಲು ಯೋಗ್ಯಳಾಗುವೆನೆಂದು ಹೇಳುತ್ತಾಳೆ. ಇದಲ್ಲದೆ ಗಾಂಧಿಜಿಯವರ ಆಶ್ರಮದಲ್ಲಿರುವ ಪ್ರತಿಯೊಬ್ಬರೂ ಬ್ರಹ್ಮಚರ್ಯೆಯನ್ನಾಚರಿಸುವುದು ಅವಶ್ಯಕವಾದುದರಿಂದ, ಈಗ ಆಕೆಯು ಉಜ್ವಲ ಬ್ರಹ್ಮಚರ್ಯೆಯನ್ನು ಸಾಧಿಸಲು ಆರಂಭಿಸಿದ್ದಾಳೆ.

೨೨ ವರ್ಷ ಪ್ರಾಯದ, ಶ್ರೀಮಂತಿಕೆಯು ಇಂದು ಸನ್ಯಾಸವನ್ನವಲಂಬಿಸಿರುವಳು. ತಾನು ತನ್ನ ಬಾಲ್ಯದಲ್ಲಿ ಹಿಂದೂದೇಶದ ಮತಧರ್ಮಗಳ ವಿಷಯವಾಗಿ ಪುಸ್ತಕಗಳನ್ನು ಓದಿದಂದಿನಿಂದ, ಈ ಭೌತಿಕ ಬಂಧನಗಳನ್ನು ತಪ್ಪಿಸಿಕೊಳ್ಳಬೇಕೆಂದು ತನ್ನ ಮನಸ್ಸಿಗೆ ಅನ್ನಿಸಿತೆಂದೂ, ಮಹಾತ್ಮಾ ಗಾಂಧಿಯವರ ಬೋಧೆಯನ್ನು ಅನುಸರಿಸಿ ನಡೆಯುವುದರಿಂದ ನನಗೆ ಮುಕ್ತಿಯುಂಟೆಂದೂ, ಮುಂದಿಲ್ಲವಾಗಿದೆಯೆಂದೂ ಆಕೆಯು ಸೂಚಿಸಿದ್ದಾಳೆ. ಮಹಾತ್ಮರ ಆಧ್ಯಾತ್ಮಿಕ ಪ್ರಭಾವವೆಂತಹುದೆಂಬುದು ಸತ್ಯಾನ್ವೇಷಕರಾದ ಮುಮುಕ್ಷುಗಳಿಗೆ ಮಾತ್ರ ಗೊತ್ತು. ಸಾಮಾನ್ಯರಿಗೆ ಮಹಾತ್ಮರು ರಾಜಕೀಯ ಗುಲ್ಲುಗಾರ. ತಿಳಿದವರಿಗೆ ಮಹಾತ್ಮರು ಆಧ್ಯಾತ್ಮ ಸಾಮ್ರಾಜ್ಯ ಚಕ್ರವರ್ತಿ.

'ಪ್ರಜಾಮತ'.

ಮಹಿಳೆಯ 'ತಾಲಿ'ಯು ತೆಗೆಯಲ್ಪಟ್ಟಿತು

ತಲ್ಲಿಚೇರಿಯ ವಕೀಲರಾದ ಎಸ್. ಎಂ. ಡಿ. ಕ್ರಾಜ್ ಎಂಬವರು ಶ್ರೀ ಎ. ಪಿ. ನಾರಾಯಣ ನಂಬಿಯಾರ್, ಎಂ. ಎಲ್. ಸಿ. ಇವರಿಗೆ ಕಳೆದ ತಾ ೩೦ರಲ್ಲಿ ಈ ಕೆಳಗಿನ ಪತ್ರವನ್ನು ಕಳುಹಿಸಿ ಕೊಟ್ಟರು.

ಸತ್ಯ — ಜನವರಿ ತಾ ೨೭ರಲ್ಲಿ ಸಬ್ ಡಿವಿಜನಲ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿದ್ದ ನ್ಯಾಯವಿಚಾರಣೆಯನ್ನು ನಿರೀಕ್ಷಿಸುತ್ತಿರಲು ನನಗೆ ಹೇಳಿಕೆಯಾಯಿತು. ಸತ್ಯಾಗ್ರಹ ಸಂಬಂಧವಾಗಿ ಶ್ರೀಮತಿ ಎಲ್. ಎಸ್. ಪ್ರಭು ಮತ್ತು ಇನ್ನಿಬ್ಬರು ಸ್ತ್ರೀಯರನ್ನು ಈ ಕೋರ್ಟಿನಲ್ಲಿ ವಿಚಾರಿಸಲಾಯಿತು. ಶ್ರೀಮತಿ ಪ್ರಭುಗಳಿಗೆ ಅದೇ ದಿನ ಆರು ತಿಂಗಳ ಕಠಿಣ ಸಜೆ ಮತ್ತು ೧೦೦೦ ರೂಪಾಯಿ ಜುಲುಮಾನೆಯಾಯಿತು. ಊಳಿದಿಬ್ಬರಿಗೆ ಕೋರ್ಟು ಬರಖಾಸ್ತಾಗುವ ವರೆಗೆ ಶಿಕ್ಷೆಯಾಯಿತು. ತೀರ್ಮಾನವಾದ ಮೇಲೆ ಸಬ್ ಡಿವಿಜನಲ್ ಮೇಜಿಸ್ಟ್ರೇಟರಾದ ಮಿ। ಹೊಡ್‌ನೆಲ ಐ. ಸಿ. ಎಸ್. ರವರು ಶ್ರೀಮತಿ ಪ್ರಭುಗಳನ್ನು ಕುರಿತು ಜುಲುಮಾನೆಯ ಹಣಕ್ಕಾಗಿ ಮೈಮೇಲಿನ ಒಡವೆಗಳನ್ನೆಲ್ಲ ತೆಗೆದು ಕೊಡಬೇಕೆಂದು ಆಜ್ಞಾಪಿಸಿದರು. ವಿಧವೆಯಾಗದ ಹೊರತು ತೆಗೆಯಬಾರದಾದ (ತಾಲಿ) ಮಾಂಗಲ್ಯಸೂತ್ರವನ್ನಲ್ಲದೆ ಮಿಕ್ಕ ಎಲ್ಲಾ ಭಂಗಾರವನ್ನೂ ಶ್ರೀಮತಿಯವರು ತೆಗೆದುಕೊಟ್ಟರು. 'ಮಾಂಗಲ್ಯಸೂತ್ರವನ್ನು ಗಂಡಸತ್ತಲ್ಲದೆ ತೆಗೆಯುವುದು ಹಿಂದೂಧರ್ಮಸಮ್ಮತವಲ್ಲ' ವೆಂದು ನಾನು ಮಿ। ಹೊಡ್‌ವೆಲ್ಲರಿಗೆ ಅರಿಕೆಮಾಡಿಕೊಂಡೆನು. ಆದರೆ ಹೊಡ್‌ವೆಲ್ಲರು ಇದನ್ನೆಲ್ಲ ಕಿವಿಮೇಲೆ ಹಾಕಿಕೊಳ್ಳಲಿಲ್ಲ. ಅದರ ಬದಲಿಗೆ ಒಡನೆಯೆ ಕೋರ್ಟಿನಲ್ಲೇ ಆ ತಾಲಿಯನ್ನು ತೆಗೆಯಬೇಕೆಂದು ಅವರು ಒಬ್ಬ ಪೋಲೀಸನಿಗೆ ಹೇಳಿದರು. ಬಲಾತ್ಕಾರದಿಂದ ತಾಲಿಯನ್ನು ಪೋಲೀಸನವನು ಕೀಳುವನೆಂದು ಭಯಗೊಂಡು ಶ್ರೀಮತಿ ಪ್ರಭುಗಳವರು ತಾಲಿಯನ್ನು ಕೀಳಬೇಕೆಂದು ತೀರ್ಮಾನ ಕೊಟ್ಟ ನನ್ನನ್ನು ಅಪರಾಧಿಯೆನಿಸಿ ಎಂದರು. ಹಾಗೂ ಮಾಡಿದರು. ತಾಲಿಯನ್ನು ತೆಗೆಸಿದ್ದು ಹಿಂದೂಧರ್ಮ ಮತ್ತು ಸ್ತ್ರೀಯರ ಸಾಂಪ್ರದಾಯದ ಮೇಲೆ ನಡೆದ ಅತ್ಯಾಚಾರವೆಂದು ನಾನು ಹೇಳಬೇಕಾಗಿಲ್ಲ. ನಾವೀ ನಡತೆಯನ್ನು ಖಂಡಿತವಾಗಿ ವಿರೋಧಿಸದಿರಲಾಗದು. ಸಿವಿಲ್ ಪ್ರೊಸೀಜರ್ ಕೋಡಿನ ವಿಧಿಯಂತೆ ಕೂಡಾ ತಾಲಿಯನ್ನು ವಶಪಡಿಸಿಕೊಳ್ಳಲಾಗದೆಂದು ನನಗೆ ತಿಳಿದುಬಂದಿದೆ. ಮುಂದೇನು ಮಾಡಬೇಕೆಂಬ (ಸಭೆಯಲ್ಲಾಗಲೀ, ಹೊರಗಾಗಲೀ) ವಿಚಾರವು ನಿಮಗೆ ಸೇರಿದ್ದು. ಬೇಗಾದರೂ ಮಾಡಿ ತಾಲಿಯನ್ನು ಹಿಂದಕ್ಕೆ ಕೊಡುವಂತಾಗಬೇಕು.

ಈ ಮೇಲಿನ ಕುರಿತಾಗಿ ಶ್ರೀ ಎ. ಪಿ. ನಾರಾಯಣ ನಂಬಿಯಾರ್, ಎಂ. ಎಲ್. ಸಿ. ಯವರು ಕೂಡಲೇ ನ್ಯಾಯಮೇಜರರಾದ ಮಾನ್ಯ ಸರ್ ಎಂ. ಕೃಷ್ಣನ್ ನಾಯರರನ್ನು ತಾ ೩೦ನೇ ಸಂದರ್ಶಿಸಿದರು. ಈ ಅಕ್ಷೇಪಣೆಯ ಕುರಿತು ವಿಚಾರಿಸುವೆನೆಂದು ಲಾ ಮೆಂಬರರು ಆಶ್ವಾಸನೆಯಿತ್ತಿರುವರು.

ಈ ವಿಚಾರವಾಗಿ ಶ್ರೀ ಎ. ಆರ್. ವಿ. ಆಚಾರ್ ಎಂಬವರು ಬರೆಯುವಾಗ ಶ್ರೀ ಎಸ್. ಎಂ. ಡಿ. ಕ್ರಾಜರವರು ಬರೆದ ಪತ್ರವು ಪ್ರಕಟೀಕೃತವಾದುದು ಬಹಳ ಒಳ್ಳೆಯದಾಯಿತು. ಬಹಿರಂಗದ ಕೋರ್ಟಿನಲ್ಲಿ ಏನೆಲ್ಲ ನಡೆಯಿತೆಂಬ ಕೂಲಂಕುಷ ವಿಷಯಗಳ ಕುರಿತು ಹೇಳಲು ಆ ವಕೀಲರೇ ಸಮರ್ಥರಿರುವರು. ಇಂತಲ್ಲಿಂದಲೇ ಜುಲುಮಾನೆಯನ್ನು ವಸೂಲು ಮಾಡುವ ಕಾನೂನು ಹೊಸ ಓರ್ಡಿನೆನ್ಸಿಗೆ ಸೇರಿದ್ದು. ಆದರೆ ಅಂತಹ ಜುಲುಮಾನೆಯನ್ನು ಪಡೆಯಲು ಹೂಡಿದ ವಿಧಾನವು ಬಹಳ ಆಶ್ಚರ್ಯಕರವಾದುದು. ಈ ಘಟನೆಯು ಹಿಂದೂ ಮುಸಲ್ಮಾನ ಕ್ರೈಸ್ತರು ಒಪ್ಪಿಕೊಳ್ಳುವಂತಾಗಿದೆ. ಸ್ತ್ರೀಪುರುಷರ ದೇಹದ ಮೇಲಿನ ಒಡವೆಗಳನ್ನು ವಶೀಕರಿಸಿಕೊಳ್ಳುವ ಈ ರೀತಿಯು ಖಂಡನೀಯವಾಗಿದೆ. ಈ ಕುರಿತು ಜೈಲ್ ಮೆನ್ಯುವಲ್‌ನಲ್ಲಿರುವ ಒಂದು ಸೆಕ್ಷನನ್ನು ಈ ಕೆಳಗೆ ಕೊಟ್ಟು ಜೈಲಿನೊಳಗಿನ ಕೈದಿಯ ವಿಷಯ ಅದು ಏನು ಹೇಳುತ್ತಿದೆ ನೋಡಿರಿ.

ಜೈಲ್ ಮೆನ್ಯುವಲಿನ ಪರಿಚ್ಛೇದ XVIIIರ ಸೆಕ್ಷನ್ ೫೭೩ರಲ್ಲಿ ಕೈದಿಗಳಿಂದ ಒಡವೆಗಳನ್ನು ತೆಗೆದುಕೊಳ್ಳುವ ಕುರಿತು ಹೀಗೆ ಬರೆಯಲ್ಪಟ್ಟಿದೆ: ಕಠಿಣ ಶಿಕ್ಷೆಗೆ ಒಳಗಾದ ಕೈದಿಗಳನ್ನು ಜಪ್ತಿ ನಡೆಸಿ, ವಸ್ತ್ರ ಪಾಗೆ, ಭಂಗಾರ, ಹಣ, ಕಾಗದಗಳು ಇನ್ನಿತರ ಸಾಮಾನುಗಳನ್ನು ತೆಗೆದುಕೊಳ್ಳಬೇಕು. ಅವರಿಗೆ ಜೈಲಿನ ವಸ್ತ್ರವನ್ನೂ, ಜೈಲಿನ ಹಾಸಿಗೆಯನ್ನೂ ಕಾನೂನು ಮೇರೆಗೆ ಕೊಡಬೇಕು. ಸಾದಾ ಸಜೆಗೆ ಒಳಗಾದ ಕೈದಿಗಳಿಂದ ವಸ್ತ್ರ ಒಂದು ಹೊರತು ಎಲ್ಲವನ್ನೂ ತೆಗೆದುಕೊಳ್ಳಬೇಕು. ವಿಚಾರಣೆಗೊಳಗಾದವರಿಂದ ವಸ್ತ್ರ, ಹಾಸಿಗೆ, ವಾಸಗಿ ನಗಗಳು 'ಹಿಂದಿನ ಪತ್ರಗಳನ್ನಲ್ಲದೆ ಹಣಕಾಸು ಮುಂತಾದುವುಗಳನ್ನು ತೆಗೆದುಕೊಳ್ಳಬೇಕು. ಸಿವಿಲ್ ಕೈದಿಗಳಿಂದ ಅಪಾಯಕರವಾದ ವಸ್ತು ಪಲಾಯನಕ್ಕಾಧಾರವಾಗುವ ಸಾಮಾನು, ಹಣ, ಅಮಲು ಪದಾರ್ಥ ಮದ್ದು, ಅನೈತಿಕ ಪುಸ್ತಕಗಳನ್ನು ತೆಗೆದುಕೊಳ್ಳಬೇಕು.

ಬ್ರಾಹ್ಮಣರ, ಅಥವಾ ನೂಲು ಧರಿಸುವ ಇನ್ನಿತರರಿಂದ ಜನಿವಾರವನ್ನೂ, ಸ್ತ್ರೀಯಿಂದ ತಾಲಿ ಅಥವಾ ಮದುವೆಯುಂಗುರವನ್ನೂ ಯಾವ ಸಂದರ್ಭದಲ್ಲೂ ತೆಗೆಯಲೇ ಬಾರದು"

ತಲ್ಲಿಚೇರಿಯ ಸ. ಡಿ. ಮೆಜಿಸ್ಟ್ರೇಟರಾದ ಮಿ। ಹೊಡ್‌ವೆಲ್ಲರ ಈ ಕಾರ್ಯವನ್ನು ಮದ್ರಾಸಿನ ಅಖಿಲ ಭಾರತ ಸ್ತ್ರೀ ಸಮ್ಮೇಳನದ ಕೊನ್ಸಿ

ಸಬ್‌ಮೆರಿನ್ ಮುಳುಗಿತು!

೫೦ ಜನರ ಪತ್ತೆಯಿಲ್ಲ!

೧೯೩೨ರಲ್ಲಿ ೬೦ ಮಂದಿಗಳ ಸಮೇತ ಸ್ಟಾರ್ಟ್ ಪೋಯಿಂಟ್ ಎಂಬಲ್ಲಿ ಮುಳುಗಿ ಕಾಣೆಯಾದ ಸಬ್‌ಮೆರಿನ್ M 1ರೊಡನೆ ನಿರ್ಮಿಸಲ್ಪಟ್ಟ ಸಬ್‌ಮೆರಿನ್ M 2 ಜನವರಿ ತಾ ೨೬ನೇ ದಿನ ಪೋರ್ಟ್‌ಲೆಂಡ್ ಎಂಬಲ್ಲಿ ಮುಳುಗಿತು. ಅದು ಮುಳುಗಿದ್ದಲ್ಲಿಂದ ಪುನಃ ಏಳಲೇ ಇಲ್ಲ. ಕೆಲವು ಗಂಟೆಗಳ ತರುವಾಯ ಅದು ಮೇಲ್ಬರಬಹುದೆಂದು ಜನರ ಆಶೆಯಿತ್ತು. ಆದರೆ ನಿಯಮಿತ ಸಮಯವೂ ದಾಟಿ ಹೋಯಿತು. ಸಬ್‌ಮೆರಿನು ಕಾಣಲೇ ಇಲ್ಲ. ಅಷ್ಟಾಗುವಾಗ ಶೋಧನೆಗೆ ಪ್ರಾರಂಭವಾಯಿತು. ಅದನ್ನು ಹುಡುಕುವುದಕ್ಕಾಗಿ ಅನೇಕ ದೊಡ್ಡ ದೊಡ್ಡ ಸ್ಟೀಮರುಗಳು ಸಬ್‌ಮೆರಿನುಗಳೂ ತಮ್ಮ ಶೋಧ ದೀಪ (ಸರ್ಚ್ ಲೈಟ್) ಗಳನ್ನುಪಯೋಗಿಸುತ್ತ ರಾತ್ರಿ ಇಡೀ ಹುಡುಕಿದವು. ಆದರೂ ಸಬ್‌ಮೆರಿನಿನ ಪತ್ತೆಯಾಗಲಿಲ್ಲ. ಮುಳುಗಿದ ಸಬ್‌ಮೆರಿನಿನಲ್ಲಿ ಒಂದು ಸಣ್ಣ ವಿಮಾನವೂ ೫೦ ಮಂದಿಗಳೂ ಇದ್ದರು. ಸಿನೇಮಾ ಥಿಯೇಟರುಗಳಲ್ಲಿದ್ದ ನಾವಿಕರು ಈ ವರ್ತಮಾನವನ್ನು ಕೇಳಿ ಸಮುದ್ರಕ್ಕೆ ಓಡಿದರು. ಮರುದಿನವೂ ೧೨ ಹಡಗುಗಳೂ ಅನೇಕ ಸಬ್‌ಮೆರಿನುಗಳೂ ಸಬ್‌ಮೆರಿನನ್ನು ಹುಡುಕಿದರೂ ಅದರ ಪತ್ತೆಯಾಗಲಿಲ್ಲ. ಅಧಿಕಾರಿಗಳೆಲ್ಲರೂ ಕಂಗಾಲಾಗಿ ಮುಳುಗಿದವರ ಪತ್ನಿಯರಿಗೂ ಕುಟುಂಬದವರಿಗೂ ದುಃಖವಾರ್ತೆಯನ್ನು ಕಳುಹಿಸಿದರು. ಮುಳುಗಿದ ೫೦ ಮಂದಿಗಳಲ್ಲಿ ಒಬ್ಬನು ಕಳೆದ ವರ್ಷ ಮುಳುಗಿದ ಪೋಸಿಡನ್ ಸಬ್‌ಮೆರಿನಿಂದ ತಪ್ಪಿಸಲ್ಪಟ್ಟ ಸಿಪಾಯಿ ಮೊರಿಸ್ ಎಂಬವನೂ ಇದ್ದ. ಈತನು ಪೋಸಿಡನಿಂದ ಹೋದಬಿದ್ದು ಕೆಲವರನ್ನು ರಕ್ಷಿಸಿದುದಕ್ಕಾಗಿ ಸಾರ್ವಭೌಮರಿಂದ ಪದಕವನ್ನು ಪಡೆದವನು. ಮತ್ತೆರಡು ದಿನಗಳ ವರೆಗೆ ಅದರ ಶೋಧನೆಯು ನಡೆಯಿತು. ಸಮುದ್ರದ ನೀರಿನ ಮೇಲ್ಭಾಗವು ಎಣ್ಣೆಯಿಂದ ಕೂಡಿದ ಚಿಹ್ನೆಯಿಂದಾಗಿ ಕೆಲವು ಕಡೆಗಳಲ್ಲಿ ಶೋಧ ನಡೆಯುತ್ತಿದೆಯಾದರೂ ಮುಳುಗಿದವರನ್ನು ರಕ್ಷಿಸುವ ಆಶೆಯನ್ನು ಬಿಟ್ಟಿರುತ್ತಾರೆ. ಒಂದು ವಾರದಲ್ಲಿ ಮುಳುಗಿದವರ ಸ್ಮಾರಕಾರ್ಥವಾಗಿ ಒಂದು ಬಲಿದವರೂ ಪ್ರಮುಖರೂ ಹಡಗಿನಲ್ಲಿ ಸಮುದ್ರಕ್ಕೆ ಹೋಗಿ ನೀರಿನ ಮೇಲೆ ಹೂವನ್ನೆಸೆದು ಜಲಸಮಾಧಿಯನ್ನು ಪೂಜಿಸಲಿರುವರು. ಸಾರ್ವಭೌಮರು ಮೃತರ ಕುಟುಂಬಕ್ಕೆ ಶಾಂತಿಯನ್ನು ಬಯಸಿದ್ದಾರೆ. ಇಂಗ್ಲೆಂಡಿನಲ್ಲಿ ಹೆಚ್ಚಿನ ಜನರು ಈ ದುರಂತವನ್ನು ನೆನೆದು "ನಿಮ್ಮ ದುಃಖವೇ ನಮ್ಮ ದುಃಖ" ವೆಂದು ತಂತಿ ಕಳುಹಿಸುತ್ತಾರೆ.

ನೋಟೀಸು

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಪ್ರೊ. ಪಿ. ನಂ. ೩೦

೧೯೩೨ನೇ ಇಸವಿಯ ...

ಮಂಗಳೂರು ತಾಲೂಕು ಕೊಡಿಯಾಲ ಗ್ರಾಮದಲ್ಲಿ ತಾ ೨೨—೧೧—೩೧ರಲ್ಲಿ ಮೃತಪಟ್ಟ ... ಇವರ ಇಂಡಿಯಾ ... ಮ್ಯೂಚುವಲ್ ... ಲೈಫ್ ಅಶ್ಶೂರೆನ್ಸ್ ಕಂಪೆನಿಯಿಂದ ಬರತಕ್ಕ ರೂ ೫೦೦ — ವಸೂಲಾತಿ ಕುರಿತು ೧ನೇ ಅರ್ಜಿದಾರರಿಗೆ ... ಸರ್ಟಿಫಿಕೇಟು ... ಬೇಕಾಗಿ ಮೇಲೆ ಕಾಣುವ ಅರ್ಜಿದಾರರು ... ಮೇಲ್ಕಂಡ ... ಪ್ರೊ. ಪಿ. ನಂಬ್ರ ೧೯/೩೨ನೇ ಅರ್ಜಿಯು ತಾ ೨೯—೨—೩೨ಕ್ಕೆ ... ಇದಕ್ಕೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಮೇಲಣ ತಾರೀಕಿಗೆ ಈ ಕೋರ್ಟಿಗೆ ... ಕೊಡತಕ್ಕದ್ದು.

ಮಂಗಳೂರು ೨೯—೧—೩೨ }

K. Gopala Rao
Advocate for Petitioner

The Canara Bank, Limited Mangalore.

NOTICE.

Is hereby given that under section 37 of the Indian Companies Act No. VII of 1913 the Directors have resolved that the Register of members be closed from Monday 15th February to Sunday, 6th March 1932 (both days inclusive)

(By Order)

Canara Bank Ltd.
Mangalore
... 1932.

K. Venkat Rao.
Secretary

ಸ್ಟ್ಯಾಂಡಿಂಗ್ ಕಾನ್ಫರೆನ್ಸ್ ಜನರಲ್ ಕಮಿಟಿಯು ಎಂಟಿನ ರಾಷ್ಟ್ರ ಮಾಡಿಕೊಳ್ಳುವರು. ವಿಮೆನ್ಸ್ ಇಂಡಿಯನ್ ಅಸೋಸಿಯೇಶನ್ ಸಂಸ್ಥೆಯವರೂ ಆಗೆಯೇ ನಿರ್ಧರಿಸಿ ತನ್ನ ಸಮಿಯನ್ನು ವ್ಯಸನಯ ರಿಗೂ ಸ್ಥಳೀಕ ಸರಕಾರಕ್ಕೂ ತಿಳಿಸಿರುವರು.

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲಪ್ರಾಪ್ತಿ ಶೀಘ್ರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ "ಭಿಷಗ್ವರ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್" ಅವರ ಶಿಷ್ಯರಿಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಶಿಲ್ಪ ವೈದ್ಯರಿಂದ ನಡೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸೋಣಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಗಳು ನಮ್ಮಲ್ಲಿ ಯಾವಾಗಲೂ ಸಿಲುಕಿತಕ್ಕವು. ತಯಾರು ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ಸ್ತ್ರೀ ಅಥವಾ ಪುರುಷ, ಆಹಾರ ಕ್ರಮ, ವೃತ್ತಿ ಸಿಗರೇಟು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ಇತರ ತೋರಿದ ವಿವರಗಳು ನಮಗೆ ತಿಳಿಸಿದಲ್ಲಿ ಅವಶ್ಯವಾದ ಔಷಧ ಕಳುಹಿಸಲಾಗುವುದು. ಹೀಗೆ ದೂರದ ಸ್ಥಳಗಳಲ್ಲಿ ಎಷ್ಟೋ ಪ್ರಖ್ಯಾತ ನಡೆದವೆ ಎಂಬೀ ವಿವರಗಳು ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರಲ್ಲದೆ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ ಸಿಗಾ ಕೊಡೋಣಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮುಷ್ಟಿ ವಾಹಿನಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ದಾರ ವ್ಯತಿರಿಕ್ತ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ಅಸಾಧ್ಯವಾಯಿತೆನಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ. ಗುಣಬಾರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು. ಬೆಲೆ ರೂ ೩–೦–೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂದಿಯಿಡುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಚಮತ್ಕಾರಿ ಅಮೋಘ ಔಷಧಿ ಸಾವಿರಾರು ಕಿವುಡರು ಸೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ ೩

ವಿಳಾಸ — ಶಕ್ತಿಸುಧಾ ಕಾರ್ಯಾಲಯ

೨೩ ಕಾಂಬಾಟವಾಡಿ 4ನೇ ಗಲ್ಲಿ

ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸ್ಶಾಯಿಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಷ್ಟ್ರಿಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.

ಇಂಡಿನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ವಿಚಾರಕ್ಕೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.

ಕೇಡೆಲ್ ರೋಡ್ ಪೋ. ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.

Kadell Road, P O Dadar Bombay, 14.

ತಂತಿ ವಿಳಾಸ – SIRINDHUN Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ – ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

ಹೆಂಗಸರ ಮೂರು ರತ್ನಗಳು

ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯೌಷಧಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರ್ಕ — ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ — ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

ಕೊಂಡು ನೋಡಿರಿ.

The Zandu Pharmaceutical Works Ltd., Bombay, 14

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ ನಾನಾ ವಿಧವಾದ ಕೆಮ್ಮು, ಎದೆ ನೋವು, ಸ್ವರಭಂಗ, ವೃದ್ಧಾಪ್ಯ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ನಾಡಿ, ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಜ್ಞಾಪಕಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಧೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/– ಕ್ರಯ 1 ಪಾನು ಸೀಸೆ ರೂ 2/8 ½ ಪಾ ರೂ 1/5 ¼ ಪಾ. ಅ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು

ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು

ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು – ಮೈಸೂರು ಏಜಂಟರು — ಟಿ ಸಿ ನಟರಾಜ್ ಆಂಡ್ ಕೊ, ಸಯಾಜಿರಾವ್ ರೋಡ್

ಬೆಂಗಳೂರು ಏಜಂಟರು — ಬಿ ಫೂಲಚಂದ್ ಲಾಲ್ ಕಂಪೆನಿ, ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಸಹಕಾರಿಗಳ ಮುಂದಣ ಕರ್ತವ್ಯ.

[ಉಡುಪಿಯ ಸಹಕಾರಿಗಳ ಮಹಾ ಸಭೆಯಲ್ಲಿ, ಡಿಸ್ಟ್ರಿಕ್ಟ ರಿಜಿಸ್ಟ್ರಾರರಾಗಿರುವ ಶ್ರೀ. ಬಿ. ಮಾಧವ ರಾವ್, ಬಿ. ಎ. ಎಮ್. ಎಲ್., ಇವರ ಭಾಷಣದಿಂದ]

ಭೂಲೋಕದಲ್ಲೆಲ್ಲಾ ಹರಡಿರುವ ಸಾಂಪತ್ತಿಕ ದುಃಸ್ಥಿತಿಯಿಂದಲೂ, ವ್ಯವಸಾಯಿಕ ಉತ್ಪತ್ತಿಗಳ ಧಾರಣೆಯು ಇಳಿದಿರುವುದರಿಂದಲೂ, ಸಹಕಾರಿ ಸಂಘಗಳು ಬಹು ದುರ್ಬಲವಾಗಿ ದಿನೇ ದಿನೇ ಬಲಹೀನವಾಗುತ್ತಲಿವೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ, ಸಂಘಗಳ ಮೇಲಣ ವಿಶ್ವಾಸವು ಕುಂದಿಹೋಗದಂತೆಯೂ ಸಹಕಾರಿ ಚಳವಳಿಯ ಒಳ್ಳೇ ಹೆಸರನ್ನು ಕೆಡಿಸದಂತೆಯೂ ನಾವು ವಿಶೇಷ ಪ್ರಯತ್ನಗಳನ್ನು ಮಾಡಬೇಕಾಗಿದೆ. ಸಂಘಗಳ ಮೆಂಬರರಿಗೆ ಸಹಕಾರಿ ಚಳವಳಿಯ ಮುಖ್ಯ ತತ್ವಗಳನ್ನು ಗೊತ್ತು ಹಚ್ಚಿ ಕೊಡುವುದರಿಂದಲೂ, ಸಂಘಗಳ ಕೆಲಸಗಳನ್ನು ಸಾಂಗವಾಗಿ ನಡಿಯುವಂತೆ ಸಹಾಯ ಮಾಡುವುದರಿಂದಲೂ, ಮಾತ್ರ ಇದು ಸಾಧ್ಯವಾಗಬಹುದು.

ಇಂಗ್ಲೀಷು ಭಾಷೆಯ ಸಹಕಾರಿ ಸಂಘಗಳ ಪ್ರಶ್ನೋತ್ತರೀಯ ಹೊಸ ತಿದ್ದಿದ ಆವೃತ್ತಿಯ ಕನ್ನಡ ಭಾಷಾಂತರದ ನಕಲುಗಳು ಇಲ್ಲಿ ಸಿಗುವುದು ವಿಷಾದದ ಸಂಗತಿಯಾಗಿದೆ. ಸಹಕಾರಿ ಚಳವಳಿಯನ್ನು ಹರಡಿಸಲು ಸಂಘಗಳ ಮೆಂಬರರಿಗೆ ತಕ್ಕ ಬೋಧನೆಯನ್ನು ಕೊಡಲು ಮನಸ್ಸುಳ್ಳ ಸಹಕಾರಿಗಳು ಮೆನ್ಯುವಲಿನಲ್ಲಿರುವ ಮುಖ್ಯ ವಿಷಯಗಳ ತರ್ಜುಮೆ ಮಾಡುವುದು ಬಹು ಉಪಕಾರಿಯಾಗುವುದು. ಈ ಮೆನ್ಯುವಲನ್ನು ಸರಿಯಾಗಿ ಓದಿ ಮನಸ್ಸಿಗೆ ತೆಗೆದುಕೊಂಡು ಮುಖ್ಯ ಸಾರಾಂಶವನ್ನು ಕಾರ್ಯರೂಪಕ್ಕೆ ತಂದೊಡ್ಡಿದರೆ, ಚಳವಳಿಯನ್ನು ಮುಂದೆ ಸಾಗಿಸಲು ಹೆಚ್ಚಿನ ಪ್ರಯತ್ನ ಮಾಡಿದಂತೆ ಆಗುವುದರಲ್ಲಿ ಸಂದೇಹವಿಲ್ಲ. ಸಂಘಗಳನ್ನು ಸರಿಯಾಗಿ ನಡಿಸುವ ಕುರಿತು ಮನಸ್ಸಿನಲ್ಲಿಡತಕ್ಕ ಪ್ರಾಮುಖ್ಯ ವಿಷಯಗಳನ್ನು ಹೀಗೆ ಹೇಳಬಹುದು —

ಎಲ್ಲರ ಒಟ್ಟುಗೂಡುವಿಕೆಯಿಂದ ತಮ್ಮ ಪ್ರತಿಯೊಬ್ಬ ಸಾಂಪತ್ತಿಕ ಸ್ಥಿತಿಯನ್ನು ವೃದ್ಧಿಗೊಳಿಸುವ ಅದೊಂದೇ ಸರ್ವಸಾಮಾನ್ಯ ಉದ್ದೇಶದಿಂದ, ನಮ್ಮ ಸಂಘಗಳು ಜನ್ಮವೆತ್ತಿದುವು. ಆದುದರಿಂದಲೇ ಇಂತಹ ಸಂಘಗಳ ಮೂಲಮಂತ್ರವು 'ತಾನು ಪರರಿಗೆ, ಪರರು ತನಗೆ' ಎಂದೇ ಆಗಿರುತ್ತದೆ. ಈ ಉದ್ದೇಶವನ್ನು ಪೂರೈಸಿಗೊಳಿಸಬೇಕಾದರೆ, ಮೆಂಬರರು ತಮ್ಮೊಳಗೆ ಇರಬಹುದಾದ ಭಿನ್ನಾಭಿಪ್ರಾಯಗಳನ್ನಾಗಲೀ, ಸ್ವಾರ್ಥಪರತೆಯನ್ನಾಗಲೀ ಸಂಘದ ಒಳಿತಿನ ದೃಷ್ಟಿಯಲ್ಲಿ ತ್ಯಜಿಸಬೇಕಾಗಿದೆ. ಸಂಘಕ್ಕೆ ಸೇರಿದ ವ್ಯಕ್ತಿಗಳು ತಮ್ಮ ಸ್ವಾತಂತ್ರ್ಯವನ್ನು ಕಳಕೊಳ್ಳಬೇಕೆಂಬ ಅಭಿಪ್ರಾಯವಿಲ್ಲ. ಪ್ರತಿ ಒಬ್ಬ ವ್ಯಕ್ತಿ ಮೆಂಬರನೂ ಬಲಗೊಳ್ಳುವಂತೆ ಪೋಷಿಸಿ ತನ್ಮೂಲಕ ಸರ್ವ ಮೆಂಬರರ ಸಹಾಯದಿಂದ ತನ್ನ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನ ಪಡುವುದೇ ಪ್ರತಿಯೊಬ್ಬನ ಕರ್ತವ್ಯವಾಗಿದೆ. ಪರಸ್ಪರ ಸಹಾಯದಿಂದ ಸ್ವಾವಲಂಬನವನ್ನು ಕಲ್ಪಿಸಿಕೊಳ್ಳುವುದೇ, ಸಹಕಾರದ ಬೀಜಾಕ್ಷರವಾಗಿದೆ.

ನಮ್ಮ ಸಂಘಗಳು ಬಲಹೀನರಿಗೂ, ಬಡವರಿಗೂ ದಾನ ಮಾಡುವ ಧರ್ಮ ಸಂಸ್ಥೆಗಳಲ್ಲವೆಂಬ ಒಂದು ವಿಷಯವನ್ನು ಮಾತ್ರ ಮುಖ್ಯ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅವುಗಳು ವ್ಯವಹಾರವನ್ನು ಸರಿಯಾದ ವ್ಯಾವಹಾರಿಕ ರೀತಿಯಲ್ಲಿ ನಡಿಸುವ, ಸಹಕರಿಸುವ ಸಂಸ್ಥೆಗಳು. ಅವುಗಳು ಮೆಂಬರರಲ್ಲಿ ಸುವರ್ತನ, ಮಿತವ್ಯಯ, ಕಾರ್ಯಕರ್ತೃತ್ವ, ಕಾಲಕ್ಲುಪ್ತತೆ, ಪರಸ್ಪರ ಸಹಾಯ ಮುಂತಾದ ಸದ್ಗುಣಗಳನ್ನು ವೃದ್ಧಿಗೊಳಿಸಿ ಅವುಗಳ ಮೂಲಕ ಮೆಂಬರರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಲು ಏರ್ಪಟ್ಟ ಸಂಸ್ಥೆಗಳು. ಕೃಷಿ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ ಮುಂತಾದವುಗಳಿಗೆ ಬೇಕಾಗಬಹುದಾದ ಧನಸಹಾಯವನ್ನು ಕೊಟ್ಟು, ಮೆಂಬರರ ಸಾಂಪತ್ತಿಕ ಸ್ಥಿತಿಯನ್ನು ವೃದ್ಧಿಗೊಳಿಸುವುದೇ ಸಹಕಾರಿ ಸಂಘಗಳ ಮುಖ್ಯ ಉದ್ದೇಶ. ಈ ಕೆಲಸವನ್ನು ಪೂರೈಸಿಗೊಳಿಸಬೇಕಾದರೆ ಭಂಡವಾಳವು ಇತರ ಸಂಸ್ಥೆಗಳಿಗೆ ಹೇಗೆ ಆವಶ್ಯವೋ, ಅದೇ ರೀತಿಯಲ್ಲಿ, ಸಹಕಾರಿ ಸಂಘಗಳಿಗೂ ಅತೀ ಆವಶ್ಯವಾಗಿದೆ. ಭಂಡವಾಳವು ಸಹಕಾರಿ ಸಂಘಗಳಲ್ಲಿ ಹೇಗೆ ಸಹಕರಿಸಲ್ಪಡುತ್ತದೆ ಎಂಬ ವಿಷಯವನ್ನು ಕುರಿತು ಆಲೋಚಿಸುವಾ. ನಮ್ಮ ಪತ್ತಿನ ಸಹಕಾರಿ ಸಂಘಗಳು ಇಂತಹ ಭಂಡವಾಳದ ಬಗ್ಗೆ, ಸೆಂಟ್ರಲ್ ಬೇಂಕನ್ನು ಆಧರಿಸಿಕೊಂಡಿರುತ್ತವೆ. ಸೆಂಟ್ರಲ್ ಬೇಂಕುಗಳಾದರೂ ತಮ್ಮ ಭಂಡವಾಳವನ್ನು ಶೇಖರಿಸುವುದು ಹೇಗೆ? ವ್ಯಕ್ತಿ ಮೆಂಬರರೂ, ಸಂಘಗಳೂ ಕೆತ್ತ ಪಾಲುಭಂಡವಾಳವೂ ಮಾತ್ರವಲ್ಲದೆ, ಠೇವಣಾತಿಗಳೂ ಇಂತಹ ಭಂಡವಾಳದಲ್ಲಿ ಸೇರಿವೆ. ಸಂಸ್ಥೆಗಳೂ, ವ್ಯಕ್ತಿಗಳೂ ತಮ್ಮ ಉತ್ಪತ್ತಿಯಿಂದ ಉಳಿಸಿದ ಮೊತ್ತದಿಂದ ಇಂತಹ ಠೇವಣಾತಿಗಳನ್ನು ಮಾಡಿರುತ್ತಾರೆ. ಇತರ ಸಾಮಾನ್ಯ ಜೋಯಿಂಟ್ ಸ್ಟಾಕ್ ಬೇಂಕುಗಳೂ ಕೂಡ ತಮ್ಮ ಹೆಚ್ಚು ಹೆಚ್ಚಾದ ಭಂಡವಾಳದಿಂದ ವ್ಯಾಪಾರಕ್ಕೂ, ಕೈಗಾರಿಕೆಗಳಿಗೂ ಬೇಕಾದ ಸಹಾಯವನ್ನು ಕೊಡುತ್ತವೆ. ಈ ಭಂಡವಾಳದಲ್ಲಿ ಕೂಡಾ ಜನರು ಉಳಿಸಿಕೊಂಡು ಬಂದ ಹಣದಿಂದ ಇಡಲ್ಪಟ್ಟ ಠೇವಣಾತಿಗಳು ಯಥೇಷ್ಟವಾಗಿ ಇರುತ್ತವೆ. ಬೇಂಕುಗಳು ಎಷ್ಟರ ಮಟ್ಟಿಗೆ ಠೇವಣಾತಿಗಳನ್ನು ಜಾಸ್ತಿಯಾಗಿ ಸ್ವೀಕರಿಸಲು ಸಾಧ್ಯವಾಗುತ್ತವೋ ಅಷ್ಟಷ್ಟು ಮಟ್ಟಿಗೆ ವ್ಯಾಪಾರಕ್ಕೂ, ಕೈಗಾರಿಕೆಗಳಿಗೂ ಸಿಗುವ ಭಂಡವಾಳದ ಮೊತ್ತವು ಹೆಚ್ಚುತ್ತದೆ. ಒಟ್ಟಾರೆಯಲ್ಲಿ ವ್ಯಾಪಾರ, ಕೃಷಿ, ಕೈಗಾರಿಕೆ ಯಾವುದೊಂದನ್ನಾದರೂ ವೃದ್ಧಿಗೊಳಿಸಬೇಕಾದರೆ, ಭಂಡವಾಳವು ಅತೀ ಆಗತ್ಯವಾಗಿದೆ ಮತ್ತು ಇಂತಹ ಭಂಡವಾಳವು ಜನರ ಉತ್ಪತ್ತಿಯ ಉಳಿತಾಯದಿಂದಲೇ ಬರಬೇಕಾಗಿದೆ. ಇದೇ ತತ್ವವು ನಮ್ಮ ಸಂಘಗಳಿಗೂ ಲಗಾವಾಗುತ್ತದೆ. ಸಂಘಗಳ ಮೆಂಬರರೊಳಗೆ "ಮಿತವ್ಯಯ"ವನ್ನು ವೃದ್ಧಿಗೊಳಿಸುವ ವಿಷಯವು ಪವಿತ್ರವಾದ್ದೆಂದೇ ಸಹಕಾರಿ ಚಳವಳಿಯ ಕಾರ್ಯಕ್ರಮದಲ್ಲಿ "ಮಿತವ್ಯಯ" ಎಂಬ ಮಂತ್ರವನ್ನು ಮುಖ್ಯವಾಗಿಟ್ಟುಕೊಂಡಿದೆ. ಇದರಲ್ಲಿಯೂ ಪತ್ತಿನ ಚಳವಳಿಯಲ್ಲಿ "ಮಿತವ್ಯಯ" ದ ಅಭ್ಯಾಸವು ಬಹು ಪ್ರಾಮುಖ್ಯವೆಂಬುದೂ ಅದರ ವಿಕಸಿತವಾದ ಚಳವಳಿಯ ಪ್ರಯೋಜನಕಾರಿಯಲ್ಲವೆಂಬುದೂ ಖಚಿತದ ಮಾತಾಗಿದೆ. ದುರಾದೃಷ್ಟ ವಶಾತ್ ಮಿತವ್ಯಯದ ಅಭ್ಯಾಸವನ್ನು ಪ್ರಚಾರಕ್ಕೆ ತರುವ ಪ್ರಾಮುಖ್ಯತೆಯನ್ನು ಹೆಚ್ಚಿನ ಸಂಘಗಳು ಮನಸ ಮಾಡಿಕೊಳ್ಳದಿರುವುದರ ಪರಿಣಾಮವಾಗಿ ಮೆಂಬರರು ಹೆಚ್ಚು ಹೆಚ್ಚಾಗಿ ಸಾಲಗಳನ್ನು ಪಡೆಕೊಂಡು, ಅಂತ್ಯದಲ್ಲಿ ಸಂಘಗಳನ್ನು ಬಿಟ್ಟು ತೊಲಗಲು ಆಸಕ್ತರಾಗುವಂತಾಗುತ್ತದೆ. ಆದುದರಿಂದ ಈ ಅಭ್ಯಾಸವನ್ನು ಸರಿಗೊಳಿಸುವ ವಿಷಯ ಪ್ರಥಮ ಚಿಕಿತ್ಸೆಯನ್ನು ನಡಿಸಬೇಕಾಗಿದೆ. ಕೆಲವು ಸಂಘಗಳಲ್ಲಿ ಪ್ರೊವಿಡೆಂಟ್, ಮಾಸಿಕ, ಬಿಡ್ಡಾಯ ಮುಂತಾದ ಹಲವು ತರದ ಠೇವಣಾತಿಗಳನ್ನು ಮೆಂಬರರಿಂದ ಶೇಖರಿಸುತ್ತಾರೆ. ಹಿಂದೂಸ್ಥಾನದಲ್ಲಿ ಇತ್ತೀಚೆಗೆ ಏರ್ಪಟ್ಟ 'ಮಧ್ಯವರ್ತಿ ಬ್ಯಾಂಕಿಂಗ್ ಎನ್‍ಕ್ವಾಯರಿ ಕಮಿಟಿ'ಯಲ್ಲಿ ಮೆಂಬರರು ತಮ್ಮ ತಮ್ಮ ಪಾಲುಬಂಡವಾಳವನ್ನು ಹೆಚ್ಚು ಹೆಚ್ಚಾಗಿ ಶೇಖರಿಸಿ, ತನ್ಮೂಲಕ ತಮ್ಮ ಉಳಿತಾಯವನ್ನು ಒಟ್ಟುಗೂಡಿಸುವುದು, ಬಿಡ್ಡಾಯದ ಠೇವಣಾತಿಗಳನ್ನು ಒಟ್ಟುಗೂಡಿಸುವುದಕ್ಕಿಂತಲೂ ಒಳ್ಳೇದೆಂಬ ಅಭಿಪ್ರಾಯ ಪಟ್ಟಿರುತ್ತಾರೆ. ಸಂಘಗಳು ತಮ್ಮ ಸ್ವಂತ ಭಂಡವಾಳದಿಂದಲೇ ವಹಿವಾಟವನ್ನು ನಡಿಸಲು ಶಕ್ತವಾಗುವಂತೆ ಆ ಕಮಿಟಿಯ ನಿರ್ಣಯವನ್ನು ಜಾರಿಗೆ ತರಲು ಪ್ರಯತ್ನಿಸಬೇಕಾಗಿದೆ.

ಮೆಂಬರರಿಗೆ ಕೊಡಲ್ಪಡುವ ಪತ್ತಿನ ವಿಷಯ ಒಂದು ಮುಖ್ಯ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪತ್ತನ್ನು ಶೇಖರಿಸುವ ಬಗ್ಗೆ ಮಿತವ್ಯಯವನ್ನೇ ತಳಹದಿಯಾಗಿ ಇಟ್ಟುಕೊಂಡ ಮುಖ್ಯ ತತ್ವದಿಂದ ನಮ್ಮ ಸಂಘಗಳು ನಡಿಸಲ್ಪಡುತ್ತವೆ. ಈ ವಿಷಯವನ್ನು ಮೂಲಗೊತ್ತಿದ ಹಲವು ಸಂಘಗಳು ಬಹು ಕಷ್ಟಕ್ಕೆ ಈಡಾಗಬೇಕಾದ ಹಲವು ಸಂದರ್ಭಗಳು ಬಂದಿವೆ. ಈ ವಿಷಯವನ್ನು ಮೆಂಬರರು ಸರಿಯಾಗಿ ತಿಳಿದುಕೊಳ್ಳುವುದು ಅವಶ್ಯ. ಸಂಘವು ಕೊಡುವ ಸಾಲಕ್ಕೂ, ಇತರ ಧನಾಢ್ಯರು ಕೊಡಬಹುದಾದ ಸಾಲಗಳಿಗೂ ಪ್ರಾಮುಖ್ಯ ಅಂತರವು ಈ ತತ್ವದಲ್ಲಿ ಅಡಕವಾಗಿದೆ. ಧನಾಢ್ಯನು ಸಾಲ ಕೊಡುವಾಗ ಸಾಲಗಾರನ ಆಸ್ತಿಯ ಕಡೆಗೆ ನೋಡಿ, ಸಾಲಗಳನ್ನು ಕೊಡುವನು — ಸಾಲಗಾರನ ಮಿತವ್ಯಯವನ್ನು ಅಭ್ಯಸಿಸಲಿ ಯಾ ಅಭ್ಯಸಿಸದೆ ಇರಲಿ, ಯಾವುದೇ ಉದ್ದೇಶಕ್ಕೆ ಸಾಲವನ್ನು ವಿನಿಯೋಗಿಸಲಿ, ಯಾವುದೊಂದು ಕಡೆಗೂ ಅವನು ಲಕ್ಷ್ಯವನ್ನು ಕೊಡಲಾರನು. ಅವನಿಗೆ ಸಾಲಕ್ಕೆ ಸಾಕಷ್ಟು ಭದ್ರತೆ ಇದ್ದಲ್ಲಿ, ಎಷ್ಟೇ ಸಾಲವನ್ನಾದರೂ ಸಾಲಗಾರನಿಗೆ ಕೊಡಬಲ್ಲನು. ಸಾಲಗಾರನ ಮರುಪಾವತಿ ತ್ರಾಣದ ಕಡೆಗೆ ಏನನ್ನೂ ಲಕ್ಷ್ಯ ಕೊಡದೆ, ಬರೇ ಅವನ ಆಸ್ತಿಯ ಮತ್ತು ಮೂಲಗಳ ಆಧಾರದ ಮೇಲೆ ಸಾಲ ಕೊಡಬಲ್ಲನು. ಆದರೆ ಸಂಘಗಳು ಇದಕ್ಕೆ ವಿರೋಧವಾದ ತತ್ವದಿಂದಲೇ ನಡಿಸಲ್ಪಡುತ್ತವೆ — ಸಂಘವು ವ್ಯಕ್ತಿ ಮೆಂಬರ ಸಾಲಗಾರರಿಗೆ ನಷ್ಟವನ್ನು ಕಲ್ಪಿಸಿ ತನ್ಮೂಲಕ ತನ್ನ ಮುನಾಫೆಯನ್ನು ಹೆಚ್ಚಿಸುವ ದೃಷ್ಟಿಯಿಂದ ನಡಿಸಲ್ಪಡುವುದಿಲ್ಲ — ಸಂಘದಿಂದ ಕೊಡಲ್ಪಟ್ಟ ಸಾಲದ ಸದ್ವಿನಿಯೋಗದಿಂದ ಉಂಟಾದ ಉತ್ಪತ್ತಿಯಲ್ಲಿ ಬಹುದಾದ ಉಳಿತಾಯದಿಂದ ತಮ್ಮ ಸಾಲಗಳನ್ನು ಮೆಂಬರರು ಮರುಪಾವತಿ ಮಾಡುವಂತೆ ಸಂಘಗಳ ನೋಡಿಕೊಳ್ಳುತ್ತವೆ. ಹೀಗೆ ಮಾಡಿದರೆ ಮಾತ್ರ ಸಾಲವು ಫಲಕಾರಿಯಾದೀತು. ಯಾವನೊಬ್ಬನಿಗಾದರೂ ತನ್ನ ಉತ್ಪತ್ತಿಯಿಂದ ಸ್ವಲ್ಪವನ್ನಾದರೂ ಉಳಿಸಲು ಸಾಧ್ಯವಿಲ್ಲದಿದ್ದರೆ ಅವನು ಸಂಘದಿಂದ ಸಾಲ ಪಡಕೊಳ್ಳಲಿಕ್ಕೆ ಅರ್ಹನಲ್ಲ, ಉಳಿಸುವ ಶಕ್ತಿಯುಳ್ಳವನಾದರೆ ಅಂತಹ ಉಳಿತಾಯದಿಂದ ಸಾಲವನ್ನು ಮರುಪಾವತಿ ಮಾಡಲು ಶಕ್ತಿಯಿದ್ದ ಮೊತ್ತಕ್ಕಿಂತಲೂ ಜಾಸ್ತಿ ಪಡಕೊಳ್ಳಲು ಅರ್ಹನಲ್ಲ. ಎಂದರೆ ಮೆಂಬರನ ಸಾಲವನ್ನು ತೀರಿಸುವ ಸಲುವಾಗಿ ಮೆಂಬರನ ಉಳಿತಾಯದ ಶಕ್ತಿಯನ್ನೇ ನಾವು ಪರೀಕ್ಷಿಸುವವರಿದ್ದೇವೆ. ಇದರಿಂದಲೇ ಸಾಲ ಪಡಕೊಳ್ಳುವ ಯಾವ ಮೊತ್ತವು ಆಯಾ ಮೆಂಬರನ ಉಳಿತಾಯ ಶಕ್ತಿಯನ್ನು ಅದರಿಂದ ನಿರ್ಧರಿಸಲ್ಪಡಬೇಕು. — ಇದರಿಂದಲೇ ಸಂಘಗಳು ಪತ್ತನ್ನು ಮಿತವ್ಯಯದಿಂದಲೇ ಸಾಧಿಸುತ್ತವೆ ಎಂದು ಹೇಳುವ ಕಾರಣವಾಗುತ್ತದೆ. ದುರಾದೃಷ್ಟ ವಶಾತ್ ಈ ತತ್ವವನ್ನು ಮೂಲಗೊತ್ತಿ, ಮೆಂಬರರ ಮರುಪಾವತಿಯ ತ್ರಾಣಕ್ಕಿಂತಲೂ ಮಿಕ್ಕಿ ಹೇರಳವಾಗಿ ಸಾಲವನ್ನು ಕೊಡುವ ವಿಷಯ ಹೆಚ್ಚಿನ ಸಂಘಗಳ ದೋಷವಾಗಿದ್ದವೆ. ಹೀಗೆ ಮಾಡುವದರಿಂದ ಸಹಕಾರಿ ತತ್ವಗಳಲ್ಲಿ ಮುಖ್ಯವಾದ ಒಂದು ತತ್ವವನ್ನು ಬದಿಗೊತ್ತಿದಂತಾಗುವುದು ಮಾತ್ರವಲ್ಲದೆ ಈ ವಿಧದ ಧನಸಹಾಯದಿಂದ ಚಳವಳಿಯ ಉದ್ದೇಶವನ್ನೇ ಕೆಡಿಸುವುದಲ್ಲದೆ, ಮೆಂಬರರನ್ನು ದುರ್ಬಲರನ್ನಾಗಿಯೂ, ಬಡವರನ್ನಾಗಿಯೂ ಮಾಡಿದಂತಾಗುವುದು. [ಸಶೇಷ]

ನಮ್ಮ ಶಾಲೆಗಳು.

೪. ಮಕ್ಕಳ ಉತ್ಪಾದಕ ಶಕ್ತಿ.

ಲೇಖಕರು — ಶ್ರೀಯುತ ಶಿವರಾಮ ಕಾರಂತ

ಕಳೆದ ಸಂಚಿಕೆಯಿಂದ ಮುಂದುವರಿದುದು.

ಈಗ ಈ ಲೇಖನವನ್ನು, ನಾನು ಕಂಡ ಶಾಲೆಗಳ ವಿಚಾರವಾಗಿ ಬರೆದು ಮುಗಿಸುವೆನು. ಸಂದರ್ಶಿಸಿದ ಶಾಲೆಗಳ ಸಂಖ್ಯೆಯು ಅಧಿಕವಾಗಿದ್ದರೂ ಚಿತ್ರ ಲೇಖನದ ಕಡೆಗೆ ಗಮನವಿತ್ತ ಶಾಲೆಗಳು ತೀರ ವಿರಳ. ಕಲ್ಯಾಣಪುರ (ಹಿಂದೂ ಹಾಯರ್) ಮತ್ತು ಕೋಟೇಶ್ವರ ಶಾಲಾ ಬಾಲಕರ ಕರಿಮಸಿಯ ಚಿತ್ರಗಳು ನೋಡುವಂಥವರಿದ್ದವು. ಆದರೆ, ಚಿಲ್ಲ ಮಾದರಿಯೊಂದನ್ನು ತೋರಿಸಿ ಅನುಕರಿಸಲು ಬೋಧಿಸುವುದು ರೂಢಿಯಾಗಿತ್ತು. ಇದರಿಂದ ಸ್ವಂತ ಕಲ್ಪನೆಯು ಕುಗ್ಗುವುದು.

ಇನ್ನು ಮಂಗಳೂರು ತಾಲೂಕಿನ ಒಂದು ಶಾಲೆಯು ಗೋಡೆ ತುಂಬಾ ರೇಖಾ ಚಿತ್ರಗಳಿದ್ದುವು. ಕೆಲವು ಚೆನ್ನಾಗಿಯೂ ಇದ್ದುವು. ಆದರೆ, ಅಧಿಕಾಂಶ ಚಿತ್ರಗಳನ್ನು, ಮೇಲಾಧಿಕಾರಿಗಳ ಸಂತೋಷಕ್ಕಾಗಿಯೇ ಮಾಡುಗರನ್ನು, ಅದೂ ಕೇವಲ ಬರೆದ ಮಾದರಿ, ಬಿತ್ತಾಯ ಪಡಿ ... ಕಾಣುವವು. ಚಿತ್ರಗಳ ರೇಖೆಗಳೇ ಚಿತ್ರಕಾರರು ಹೇಳುವುದಕ್ಕೆ ವ್ಯಕ್ತಿಯಾಗಿ ದುಡಿದ ರಂದು ಹೇಳಿಸುವುದು. ಕ್ರಿಯಾ ಶಕ್ತಿಯು ಕೊರೆದ ಯೋಚನೆಯಿಂದ ಬರಲೊಲ್ಲದು. ಹಾಡುಗಾರಿಕೆಯ ಹೆಸರನ್ನೆತ್ತುವುದೇ ಆವಶ್ಯವಿಲ್ಲ. ಸಾಮಾನ್ಯವಾದ ಪದ್ಯಗಳನ್ನು ಓದುವಾಗಲೂ ಸಹ ಕೇವಲ ನೀರಸವಾದ ಪರಿಣೆಯೇ ಕಾಣುವುದು. ವಿಷಯ ಚಿತ್ರವನ್ನು ಕಣ್ಮುಂದೆ ತಂದು ಅದರ ಆವಿರ್ಭಾವವನ್ನು ತೋರುವ ಶಕ್ತಿ ಮಕ್ಕಳಲ್ಲಿ ಕಾಣುವುದಿಲ್ಲ. ನಮ್ಮ ಶಾಲೆಗಳಲ್ಲಿನ ಪದ್ಯ ವಾಚನ ಕ್ರಮವನ್ನು ತಿದ್ದಿ ತೊಡಗುವುದವಶ್ಯವೆಂದು ಅನಿಸುವುದು.

ನಾಟಕಗಳ ವಾರ್ಷಿಕ ವರ್ಣಂತಿಯು. ನೆಪದಿಂದಾಗಲೀ ಹಣಕೊಡಿಸುವ ಆಸೆಯಿಂದಲಾಗಲೀ ಎಲ್ಲೆಲ್ಲಿ ನಾಟಕಗಳೇನೂ ಆಗುತ್ತಿವೆ. ಆದರೆ, ವ್ಯಾಪಾರೀ ರಂಗಭೂಮಿಯ ನಕಲಿನಂತೆಯಾಗಿಯೋ ಶಾಲಾ ನಾಟಕಗಳಿವೆ. ಸಂಗೀತದ ಪ್ರಯೋಗಾದಿಗಳೆಲ್ಲವನ್ನೂ ಮರೆಯುವರು. ಆಡಿಸುವ ನಾಟಕಗಳ ಮಕ್ಕಳ ಕೈಗೆಟುಕದ ಚಂದ್ರಸೇನ, ರಾಮದಾಸ, ಹರಿಶ್ಚಂದ್ರ ಮೊದಲಾದ ನಾಟಕಗಳು. ಪಾತ್ರಗಳ ಕಲ್ಪನೆಯು ಮಕ್ಕಳಿಗೆ ಸುಲಭವಾಗಬಾರದ ... ಎಷ್ಟು ಹಿಂದಲೂ ನಾಟಕಕಾರರ ಗಮ್ಯವ ತೋರಿಸುವ ಭಾವಕಲ್ಪನೆ, ಅವರ ಕಲ್ಪನೆಗೂ ಸಂಬಂಧವನ್ನು ಕಲ್ಪಿಸುವ ಚಮತ್ಕೃತಿಯು ಸಾಧ್ಯವಿಲ್ಲ. ಅದರಿಂದ ಮಕ್ಕಳ ಮನಸ್ಸಿಗೆ ಮೆಚ್ಚುವ, ಮಕ್ಕಳ ಕಲ್ಪನೆಗಳಿಗೆ ಎಟುಕುವ ಕಥಾಭಾಗಗಳನ್ನು ಆರಿಸಿದಲ್ಲಿ, ಅದರಿಂದ ನಿಜಪ್ರಯೋಜನವು ಬಂದೀತು. ಆಗ ಬಾಲಕರ ಕಲ್ಪನೆಯು ಪ್ರಕಾಶಗೊಂಡೀತು.

ಪುತ್ತೂರು ತಾಲೂಕಿನ ಕೆಲವೊಂದು ಶಾಲೆಗಳಲ್ಲಿ ಬಾಲಕರು ಕವಿತೆಯ ಹಾದಿಯಲ್ಲಿ ಸಾಗಲಿಚ್ಛಿಸುತ್ತಿರುವರು. ಇದೇ ಪ್ರಾರಂಭವಾದುದರಿಂದ ಫಲ ನಿರೀಕ್ಷಣೆಗೆ ದೂರವಿದೆ. ಆದರೂ ಮಕ್ಕಳಿಗೆ, ಅವರ ಕಲ್ಪನೆಗೆ ಸಿಗುವ ವಿಷಯಗಳನ್ನು ಆರಿಸುವಂತೆ ಪ್ರೋತ್ಸಾಹಿಸುವುದು ಒಳಿತು. ಇಲ್ಲವಾದರೆ, ಪ್ರಾರಂಭದ ದ್ವಾರದ ಜೋಳಿಗರ ಕೈಹಾಕಿ ಎಲ್ಲವನ್ನೂ ಕೆಡಿಸಬಹುದು.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉಚ್ಛಾಟವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ. ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದು. **HEDAJURIN** FOR DYSENTERY CHOLERA CURE ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟದು.

ಔನ್ಸಿನ ಕ್ರಯ ಆಣೆ 0—15—0. 2 ಔನ್ಸಿನ ಬಾಟಲಿಗೆ ರೂ 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ದಿ ಕೆಣ್ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ. ಕನ್ನಡಾ

"If every Wife knew what every Widow knows every Husband would be Insured"

PLACE YOUR LIFE ASSURANCE WITH

THE SOUTH INDIAN.

Securing for your clients –

1. Low rates of Premium
2. Liberal Policy Conditions.

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —

H R K IYENGAR
Chief Agent

The S. I. G. A. Co. Ltd.,
Sanyasiguddy MANGALORE

Managing Agents –

K C PANDALAI & CO.
7 8 Mclean Street, G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಸೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳವೆ!

ಪ್ರೀಮಿಯಂ ದರಗಳು ಕಡಿಮೆ!

ಶರ್ತಗಳ ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ಸೈತ್ತುಂಬಾ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್ ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೈ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ. ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವು ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ ಶೀತ ನೆಗಡಿ ಕೆಮ್ಮು ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಶಮನಗೊಳಿಸಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅವ್ಯರ್ಥವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂಧಿಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟಿಪ್ಪಣಿ ಮಾತ್ರ.

ಕನ್ನಡ ಸದ್ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದೋಳ್ಳೇ ಸುಸಂಧಿ! ಅಲಭ್ಯ ಲಾಭ!! ಕೊಳ್ಳೆ ಸಮಯ!!!

ಶ್ರೀ ಶೇಷಾಚಲ ಗ್ರಂಥಮಾಲೆಯ

೨೫	ಐತಿಹಾಸಿಕ ಕಾದಂಬರಿಗಳು ಇವುಗಳ ಬೆಲೆ ಸರಾಸರಿ	ರೂ	೨
೨೨	ಸಾಮಾಜಿಕ–ಪೌರಾಣಿಕ	ರೂ	೧೨
೧೧	ಪತ್ತೇದಾರಿ	ರೂ	೭
೩೦	ಚರಿತ್ರೆಗಳು	ರೂ.	೨೦
೧೦	ಗದ್ಯ–ಪದ್ಯ ನಾಟಕಗಳು	ರೂ	೩
೨೫	ಪ್ರೌಢ ನವ ಸಂದರ್ಭೋಚಿತ	ರೂ	೨೫
೨೦	ಧಾರ್ಮಿಕ, ವೈದಿಕ ಹಾಗೂ ಇತರ	ರೂ	೧೪
೧೪೪	ಅಂತು ಪುಸ್ತಕಗಳು ಇವುಗಳ ಒಟ್ಟು ಬೆಲೆ	ರೂ	೧೦೫

ಇವುಗಳಲ್ಲಿಯ ಎಷ್ಟೋ ಪುಸ್ತಕಗಳು ೩ನೇ ೪ನೇ ಆವೃತ್ತಿಗಳನ್ನು ಕೂಡ ಹೊಂದಿ ಕನ್ನಡಿಗರ ಪ್ರೇಮಕ್ಕೆ ಪಾತ್ರವಾಗಿರುತ್ತವೆ

ಇಂಥ ಈ ಉತ್ಕೃಷ್ಟವು (೧೪೪ ಬಗೆಯ) ಪುಸ್ತಕಗಳಲ್ಲಿ ಬೇಕಾದ ಮೂರು ರೂಪಾಯಿ ಬೆಲೆಯ ಪುಸ್ತಕಗಳಿಗೆ ಬರೆದರೆ, ಟಪಾಲು ಖರ್ಚಿನ ೬ ಆಣೆ ನಾವೇ ವಹಿಸಿ ಬರೇ ಮೂರು ರೂಪಾಯಿಗೆ ವ್ಹಿ. ಪಿ. ಮೂಲಕ ರವಾನಿಸುತ್ತೇವೆ. ಇದಕ್ಕೂ ಹೆಚ್ಚು ಬೆಲೆಯ ಪುಸ್ತಕಗಳಿಗೆ ಬರೆದರೆ ಟ. ಖ. ನಾವು ವಹಿಸುವದಲ್ಲದೆ, ಮೇಲೆ ಯೋಗ್ಯ ಕಮಿಶನ್ ಸಹ ಕೊಡುತ್ತೇವೆ ವ್ಹಿ. ಪಿ. ಯೊಡನೆ ಅಂಗೀರಸ ಸಂವತ್ಸರದ ಶುದ್ಧ ಪಂಚಾಂಗವು ಪುಕ್ಕಟೆಯಾಗಿ ಕಳುಹಿಸಲ್ಪಡುವದು ಈ ರಿಯಾಯಿತಿಯು ಇಂದಿನಿಂದ ಒಂದೇ ತಿಂಗಳು ಕಾರಣ ಎಲ್ಲರೂ ಈ ಸುಸಂಧಿಯ ಲಾಭ ಹೊಂದಬೇಕು ನಮ್ಮ ಕ್ಯಾಟಲಾಗು ನೋಡಿ ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಭಿ ಪ ಕಾಳೆ
ಪ್ರೊಪ್ರೈಟರ್ ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥ ಮಾಲಿಕೆ
ಪೋ|| ಅನಂತಪುರ, ಜಿ ಧಾರವಾಡ

INSURE WITH

The Popular Insurance Co. Ltd.

Head Office MANGALORE S India

First of its kind in the West Cost

CHAIRMAN

Dewan Bahadur N Subba Rao

STRIKING FEATURES

Policy Conditions Liberal

Claims Settlement Prompt

MANAGMENT PURELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS LIBERAL TERM TO COMPETENT MEN

For further particulars apply to the Head Office

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಡ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ಈ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಫೋಸ್ಪರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ ಶಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V S KAMATH AT M. T A. SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0 | Registered No. M. 489. | ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ ಗರವ ಮಥಿಸಲು ಸುರರಿಗದರಿಂ ತಣಿವವಾಯಿತೆ? ಮತ್ತೆ ವಿಷವ ಸುಡುತ ಲುರುತಿರುವ ।
ಗರಲಕವರಂಜಿದರೆ? ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಲಿಲ್ಲವೆ? ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೧೨ನೇ ಶುಕ್ರವಾರ ಫೆಬ್ರುವರಿ ೧೯೩೨ (12—2—32.) ಸಂಚಿಕೆ ೭

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI. **Branches:—COONDAPOOR & Mangalore**

ಹೆಡ್ ಆಫೀಸು.—ಉಡುಪಿ ಶಾಖೆ — ಕುಂದಾಪುರ ಮತ್ತು ಮಂಗಳೂರು

Authorised Capital Rs 3 50 000· Subscribed & Called up Rs 2,25,000

ನಿಯಮಿತ ಮೂಲಧನ ರೂ 3,50 000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ಒಪ್ಪಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF JANUARY 193[illegible]

	Capital and Liabilities	Rs		Property and Assets	Rs
1	Paid up Capital	2 2 [illegible] -0-0	1	Premises Building Furniture etc	[illegible]
2	Reserve and other funds	[illegible]	2	Government Securities & Treasury Bill	[illegible]
3	Deposits	[illegible]	3	Other [illegible] Investments	[illegible]
4	Due to Bankers	[illegible]	4	Bill [illegible]	[illegible]
5	Sundries	[illegible]	5	Sundries	
6	Bills for collection per contra	[illegible]	6	Cash in hand & with bankers	
	Total	[illegible]		Total	[illegible]

Office of the Corporation, UDIPI [illegible] 2—3[illegible]

N. ANANDA RAO
Secretary & Manager

ಅಮೃತಾಂಜನ.

ತಲೆ ನೋವು, ಶೀತ, ನೆಗಡಿ, ವಾತ, ಸುಟ್ಟಗಾಯ [illegible] ಮತ್ತು ಮೈ ಕೈ ನೋವು [illegible] ಅಮೃತಾಂಜನವು [illegible]

ಗಜಕರ್ಣ ಮುಲಾಮು — (ರಾಜಾ ಮತ್ತು ರಾಣಿ ಮಾರ್ಕ್) [illegible] ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಮುಂಬಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ವನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು.—ದಿ ಗುಲಬ್ ಮಾರ್ಟ್, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ

ತ್ವರೆಮಾಡಿರಿ ತ್ವರೆಮಾಡಿರಿ

೧೯೩೨ನೇ ವರ್ಷದ ಪಾಕೆಟ್ ಡೈರಿಗಳು

ದೊಡ್ಡ ಸೈಜ್	1—10—0
ದೊಡ್ಡ ಸೈಜ್ ಮತ್ತು ಕವ್ವರ್	0—12—0
ಸಣ್ಣ ಸೈಜ್	0— 1 —0
, ಮತ್ತು ಕವ್ವರ್	1— 8—0
ಸಣ್ಣ ಸೈಜ್ ಕ್ಲಿಪ್ ಸ್ಟಾಂಡ್	— 5—0

ವ್ಯಾಪಾರಸ್ಥರಿಗೂ ರಿಂದ ಹೆಚ್ಚು ಕೊಳ್ಳುವವರಿಗೂ ಯೋಗ್ಯ ಕಮಿಶನು ಕೊಡಲಾಗುವುದು

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಮೆನೇಜರ
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉಚ್ಛಾಟವಾದರೂ ಓಡುವದು.

ಏ ತ ರಿಂ ದ ?

ಹಿಂದೀ ಔಷಧಿ ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದ್ದು, HEDAURIN DYSENTERY CHOLERA CURE ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟದು

ಬಿಲ್ಲಿನ ಕ್ರಯ ಆಣೆ 0—15—0. 2 ಬಿಲ್ಲಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ ಕನ್ನಡಾ

"If every Wife knew what every Widow knows every Husband would be Insured

PLACE YOUR LIFE ASSURANCE WITH
THE SOUTH INDIAN
Securing for your clients —
1 Low rates of Premium
2. Liberal Policy Conditions
AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE
For terms of Agency please apply to —
H R K IYENGAR
Chief Agent
The S I G A Co. Ltd.,
Sanyasiguddy MANGALORE
Managing Agents —
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಕರಾರುಗಳು ತೀರಾ ಸುಲಭ!!
ಕನ್ನಡ ಜಿಲ್ಲೆ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್ ಆರ್ ಕೆ ಅಯ್ಯಂಗಾರ್
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವು ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ ನೀರು ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡು ತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ ಶೀತ ನೆಗಡಿ ಕೆಮ್ಮು ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

800 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ

(ಕಾಲರಾ ಜಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗ ವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀ ವಿಲಾಸರಸ

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಿಶ್ಶೇಷವಾಗಿ ಗುಣಪಡಿಸಿ ರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ 1—0—0

ಶ್ರೀನಿವಾಸ ತೈಲ

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ ಸೀಸೆ 1ಕ್ಕೆ ರೂ 0—8—0

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ ಮಂಗಳೂರು ಬಿಜೈ ಮಾತ್ರ.

ಕನ್ನಡ ಸದ್ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದೊಳ್ಳೇ
ಸುಸಂಧಿ! ಅಲಭ್ಯ ಲಾಭ!! ಶಕ್ಯ ಸಮಯ!!!

ಶ್ರೀ ಶೇಷಾಚಲ ಗ್ರಂಥಮಾಲೆಯ

೨೫	ಐತಿಹಾಸಿಕ ಕಾದಂಬರಿಗಳು ಇವುಗಳ ಬೆಲೆ ಸಂಬಸರಿ	ರೂ	೨
೨೨	ಸಾಮಾಜಿಕ—ಪೌರಾಣಿಕ	ರೂ	೧೨
೧೧	ಪತ್ತೇದಾರಿ	ರೂ	೬
೪	ಚರಿತ್ರಗಳು	ರೂ	೨೦
೧೦	ಗದ್ಯ—ಪದ್ಯ ನಾಟಕಗಳು	ರೂ	೩
೨೫	ಪೌರಾಣಿಕ ಪಾರಮಾರ್ಥಿಕ	ರೂ	೨೫
೨೦	ಧಾರ್ಮಿಕ, ವೈದಿಕ ಹಾಗೂ ಇತರ	ರೂ	೧೪
೧೪೪	ಅಂತೂ ಪುಸ್ತಕಗಳು ಇವುಗಳ ಒಟ್ಟು ಬೆಲೆ	ರೂ	೧೦೫

ಇವುಗಳಲ್ಲಿಯ ಎಷ್ಟೋ ಪುಸ್ತಕಗಳು ೩ನೇ ೪ನೇ ಆವೃತ್ತಿಗಳನ್ನು ಕೂಡ ಹೊಂದಿ ಕನ್ನಡಿಗರ ಪ್ರೇಮಕ್ಕೆ ಪಾತ್ರವಾಗಿರುತ್ತವೆ

ಇಂಥ ಈ ಅತ್ಯುತ್ತಮ (೧೪೪ ಬಗೆಯ) ಪುಸ್ತಕಗಳಲ್ಲಿ ಬೇಕಾದ ಮೂರು ರೂಪಾಯಿ ಬೆಲೆಯ ಪುಸ್ತಕಗಳಿಗೆ ಬರೆದರೆ ಟಪ್ಪಾಲು ಖರ್ಚಿನ ೬ ಆಣೆ ನಾವೇ ವಹಿಸಿ ಬರೇ ಮೂರು ರೂಪಾಯಿಗೆ ವ್ಹಿ ಪಿ ಮೂಲಕ ರವಾನಿಸುತ್ತೇವೆ ಇದಕ್ಕೂ ಹೆಚ್ಚು ಬೆಲೆಯ ಪುಸ್ತಕಗಳಿಗೆ ಬರೆದರೆ ಟ ಖ ನಾವು ವಹಿಸುವದಲ್ಲದೆ ಮೇಲೆ ಯೋಗ್ಯ ಕಮಿಶನ್ ಸಹ ಕೊಡುತ್ತೇವೆ ವ್ಹಿ ಪಿ ಯೊಡನೆ ಅಂಗೀ ಕಾರ ಸಂದರ ಪುಷ್ಟ ಪಂ ೩ ೧ಗವು ಪುಕ್ಕಟೆಯಾಗಿ ಕಳುಹಿಸಲ್ಪಡುವದು ಈ ರಿಯಾಯತಿಯು ಇಂದಿನಿಂದ ಒಂದೇ ತಿಂಗಳ ಕಾರಣ ಎಲ್ಲರೂ ಈ ಸುಸಂಧಿಯ ಲಾಭ ಹೊಂದಬೇಕು ನಮ್ಮ ಕ್ಯಾಟಲಾಗು ನೋಡಿ ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಧಿ ಪ ಕಾಳೆ
ಪ್ರೊಪ್ರೈಟರ್ ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ,
ಪೋ ಬಿಸನಾಳ ಜಿ ಧಾರವಾಡ

INSURE WITH
The Popular Insurance Co. Ltd.
Head Office MANGALORE S India
First of its kind in the West Cost
CHAIRMAN
Dewan Bahadur N Subba Rao
STRIKING FEATURES
Policy Conditions Liberal
Claims Settlement Prompt
MANAGEMENT PURELY INDIAN
Ensure the Absolute Safety Comfort and Happiness of your Dear Ones
WANTED INFLUENTIAL AGENTS
LIBERAL TERMS TO COMPETENT MEN
For further particular apply to the Head Office

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಜ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿ ದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಆಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ ಪಾ ಕಂಪೆನಿ
ರಥಬೀದಿ ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲಂಟರರಿಗೂ ತೋಟದವರಿಗೂ
ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

EDITED, PRINTED & PUBLISHED BY V S KAMATH AT M. T A. SHARADA PRESS, MANGALORE

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ! ಮತ್ತೆ ವಿಷವ ಸುಡುತ ಉರುತಿರುವ ।
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೧೨ನೇ ಶುಕ್ರವಾರ ಫೆಬ್ರುವರಿ ೧೯೩೨ (12—2—'32.) ಸಂಚಿಕೆ ೭

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI. Branches —COONDAPOOR & Mangalore
ಹೆಡ್ ಆಫೀಸು.—ಉಡುಪಿ ಶಾಖೆ —ಕುಂದಾಪುರ ಮತ್ತು ಮಂಗಳೂರು

Authorised Capital Rs 3,50,000 Subscribed & Called up Rs 2,25,000
ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪ್ಪಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF JANUARY 1932

CAPITAL AND LIABILITIES	Rs	PROPERTY AND ASSETS	Rs
1 Paid up Capital	2,2[illegible]00-0-0	1 Premises Building Furniture etc	[illegible]
2 Reserve and other funds	204[illegible] 2	2 Government securities & Treasury Bills	[illegible] 3 [illegible] 0
3 Deposits	[illegible] 4 2	3 Authorised Investments	[illegible]
4 Due to Bankers	[illegible] 1 0	4 Bills for collection	[illegible]
5 Sundries	[illegible]	5 Sundries	[illegible]
6 Bill to collect [illegible]	[illegible]44	6 Cash in hand & with bankers	[illegible]
Total	7[illegible]	Total	[illegible]

Office of the Corporation UDIPI [illegible] 2—'32

N. ANANDA RAO
Secretary & Manager

ಅಮೃತಾಂಜನ.

ಶೀತ ಕೆಮ್ಮು ತಲೆನೋವು ವಾತ ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ಬಂಗ್ತುಕೊಡುವ ಉಪದ್ರವ ಕೊಡುವ ಇನ್ನಿತರ ಎಲ್ಲ [illegible] ಬೆದೆಯೊಡ್ಡಿ ಅವುಗಳನು ಓಡಿಸುತ್ತದೆ ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ ಎರಿ ಅಮೃತಾಂಜನವಿದೆಯೇ ಅಲ್ಲಿ ಈ ಬೇನೆಗಳ ಸುದ್ದಿಯೇ [illegible] ಕ್ರಯ ಅಂದವಾದ ಬಣ್ಣದ ಒಂದು ಬಾಟ್ಲಿಗೆ 8 ಆಣೆಗಳು ಎಲ್ಲಾ ಕಡೆಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು—(ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು [illegible] ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ ಟಿನ್ನಿಗೆ 0—4 ಡಜನ್ನಿಗೆ [illegible] 0

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬ್ಯಾ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ವನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಬೊಂಬಾಯಿ.

ಏಜೆಂಟರು:—ದಿ ಗ್ಲೋಬ್ ಮಾರ್ಟ್, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ.

ತ್ವರೆಮಾಡಿರಿ ತ್ವರೆಮಾಡಿರಿ

೧೯೩೨ನೇ ವರ್ಷದ ಪಾಕೆಟ್ ಡೈರಿಗಳು

ದೊಡ್ಡ ಸೈಜ್	1—10—0
ದೊಡ್ಡ ಸೈಜ್ ಮಾರ್ಬಲ್ ಕವರ್	0—1[illegible]—0
ಸಣ್ಣ ಸೈಜ್	0—[illegible]—0
„ ಮಾರ್ಬಲ್ ಕವರ್	1—8—0
ಸಣ್ಣ ಸೈಜ್ ಕ್ಲಿಫ್ ಬ್ರಾಂಡ್	—5—0

ವ್ಯಾಪಾರಸ್ಥರಿಗೂ ಒಂದು ಸಾವಿರಕ್ಕೆ ಮೇಲ್ಪಟ್ಟು ಕೊಳ್ಳುವವರಿಗೂ ಧಾರಾಳ ಕಮಿಶನು ಕೊಡಲಾಗುವುದು

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಮೆನೇಜರ
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಆಯಾಸಗೊಂಡರೆ ನಿಮ್ಮ ನರಗಳು ವಿಶ್ರಾಂತಿಯನ್ನೂ ನಿದ್ರೆಯನ್ನೂ ಕೊಡುವುದಿಲ್ಲ

ದಿನಂಪ್ರತಿಯ ಸುಖಜೀವನಕ್ಕೆ ಅಗತ್ಯವಿರುವ ದೈಹಿಕ ಸಮಾಧಾನವೂ ಮಾನಸಿಕ ವಿಶ್ರಾಂತಿಯೂ ರಾತ್ರಿ ಶಾಂತತೆಯೂ ಸುಖನಿದ್ರೆಯೂ ನಿಮ್ಮ ನರಗಳು ಸುಸ್ಥಿರವಾಗಿದ್ದರೆ ಮಾತ್ರ ಲಭಿಸುವವು

ಅಶಾಂತತೆಯನ್ನುಂಟುಮಾಡುವ ನರಗಳೂ ಅಸುಖವನ್ನುಂಟು ಮಾಡುವ ನರಗಳೂ ನಿದ್ರೆಯನ್ನು ಅಸಾಧ್ಯವಾಗಿ ಮಾಡುವ ನರಗಳೂ ಸರಿಯಾದ ಪೋಷಣೆಯಿಲ್ಲದವುಗಳು ಕೆಲಸ ಬೇಸರ ಆವೇಶಗಳಿಂದ ಉದ್ವಿಗ್ನಗೊಂಡ ನರಗಳ ಅಣುಗಳನ್ನು ಪೋಷಿಸಬೇಕು ನರಗಳನ್ನು ಸಾಕುವುದರಿಂದಾಗಿ ಮಾತ್ರ ಇದು ಸಾಧ್ಯವಾಗುತ್ತದೆ

'ಓವಲ್‌ಟಿನ್' ನನ್ನು ನೀವು ಸೇವಿಸುವುದರಿಂದ ನಿಮ್ಮ ನರಗಳಿಗೆ ಎಲ್ಲಾ ಬಗೆಯ ಪೋಷಣೆಯೂ ಸಿಕ್ಕಿ ನಿಮ್ಮ ನರಗಳು ದೃಢವಾಗುವುವು ಈ ಅಮೂಲ್ಯ ಟೋನಿಕ್ಕು, ನಿಸರ್ಗದ ಅತ್ಯುತ್ತಮ ಪಾನೀಯ ಇದರ ಸಂಪೂರ್ಣ ಶುದ್ಧತೆಯ ವಿಷಯ ಗ್ಯಾರಂಟಿಯಿದೆ ಇದು ನರಗಳನ್ನು ಸಲಹುತ್ತದೆ, ಅವುಗಳನ್ನು ಶಾಂತಗೊಳಿಸಿ ಬಲಪಡಿಸುತ್ತವೆ ನಿಮಗೆ ಶಾಂತಿಯನ್ನೂ ಸಮಾಧಾನವನ್ನೂ, ಸುಖನಿದ್ರೆಯನ್ನೂ ಕೊಡುತ್ತದೆ, ಆರೋಗ್ಯವೂ ಶಕ್ತಿಯೂ ಓವಲ್‌ಟಿನ್"ನನ್ನು ಉಪಯೋಗಿಸುವುದರಿಂದ ಲಭಿಸುತ್ತದೆ

ಅತ್ಯುತ್ತಮವಾದ 'ಓವಲ್‌ಟಿನ್' ಗಿಂತ ಬೇರೊಂದು ವಸ್ತುವಿಲ್ಲ ಎಲ್ಲಾ ಬಗೆಯ ಅನುಕರಣೀಯ ಪಾನೀಯಗಳನ್ನು ತಿರಸ್ಕರಿಸಿರಿ, ಅವುಗಳು ಶಾಸ್ತ್ರೀಯ ರೀತ್ಯಾ ತಯಾರಿಸಲ್ಪಟ್ಟವುಗಳಲ್ಲ

ಅತೀ ಶುದ್ಧ ಮತ್ತು ಅತ್ಯುತ್ತಮ.—
ಕೈ ಸೋಂಕದಿರುವಂತಹದ್ದು

OVALTINE
TONIC FOOD BEVERAGE

ಏಜಂಟರು ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.
ಜೇಮ್ಸ್ ರೈಟ್, ೩೦ಎ ರಿಪನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಾಯಿ ಮದ್ರಾಸು ಮತ್ತು ರಂಗೂನಿನಲ್ಲಿ

ಓವಲ್‌ಟಿನ್" ಸೇವಿಸುವಾಗ ಅದರೊಡನೆ ಓವಲ್‌ಟಿನ್ ರಸ್ಕ್‌ಗಳನ್ನೂ ಸೇವಿಸಿರಿ ಅವುಗಳು ನರಗಳನ್ನು ಶಕ್ತಿಯುತವಾಗಿ ಮಾಡುತ್ತವೆ ಬಹಳ ಫಲಕಾರಿ ಶುದ್ಧ ಮತ್ತು ಅತ್ಯುತ್ತಮ ಸುವಾಸನೆಯುಳ್ಳದ್ದು ಬೆಣ್ಣೆ ಅಥವಾ ಹಣ್ಣುಗಳೊಡನೆ ತೆಗೆದುಕೊಳ್ಳಬಹುದು ಬಿಸ್ಕೀಟುಗಳಿಗಿಂತ ಅತ್ಯಂತ ಉತ್ತಮವಿರುತ್ತದೆ

OV/83

ಗೋರಕ್ಷಣೆ.

ಹಿಂದೂಸಮಾಜದಲ್ಲಿನ ಕುಂದುಕೊರತೆಗಳಿಗೇನೂ ಕಡಿಮೆಯಿಲ್ಲ ಆದರ ಸಾಮಾಜಿಕ ಧಾರ್ಮಿಕ ನೈತಿಕ ವಿಚಾರಗಳು ಲೋಕಪ್ರಶಂಸನೀಯವಾಗಿರುವುವಾದರೂ ಕೆಲವು ವಿಷಯಗಳು ತೀರ ಖಂಡನೀಯವಾಗಿವೆ

\+ + + +

ಹಿಂದೂಗಳು ಹಿಂಸೆಗೆ ಹೆದರುವರಾದರೂ ಭೂತದಯೆಯು ಅವರಲ್ಲಿ ತಂದಿತುಳುಕುತ್ತಿದೆಯಾದರೂ ಅವರಲ್ಲಿನ ಸ್ವಾರ್ಥದೃಷ್ಟಿಯು ಕಡಿಮೆಯಾಗಿಲ್ಲ

\+ + + +

ದೇಶದ ಲಕ್ಷೋಪಲಕ್ಷ ಹಿಂದೂಗಳು ದನಕರುಗಳನ್ನು ಸಾಕುತ್ತಾರೆ ಅವುಗಳನ್ನು ಪ್ರೀತಿಯಿಂದಲೇ ಸಲಹುತ್ತಾರೆ 'ತುರುಕರು ಕರೆದರೆ ಉಣಬಹುದಣ್ಣ' ಎಂಬ ಮಾತನ್ನು ಪರಿಪಾಲಿಸುತ್ತಿದ್ದಾರೆ

\+ + + +

ಎಷ್ಟರ ತನಕ ತಮಗೆ ದನಗಳು ಹಾಲು ಕೊಡುತ್ತವೆಯೋ ಅಷ್ಟರ ತನಕ ಅವುಗಳನ್ನವರು ಸಾಕುತ್ತಾರೆ ಸ್ವಲ್ಪ ಬಡವಾಗಿ ಅವುಗಳು ಹಾಲುಕೊಡುವುದನ್ನು ನಿಲ್ಲಿಸಿದುವೆಂದರೆ ಮತ್ತೆ ಅವುಗಳನ್ನು "ಕಸಾಯಿ"ಗಳ ಕೈಗೆ ಕೊಡುವುದಕ್ಕೇನೂ ಅವರು ಅಂಜುವುದಿಲ್ಲ

\+ + + +

ದನಗಳು ತಾವಾಗಿ ಸಾಯುವುದಕ್ಕಿಂತ ಅವುಗಳನ್ನು ಅನ್ಯರು ಕೊಂದರೆ ತಮಗೆ ಅವುಗಳ ಮರಣದಿಂದಾಗಿ ಲಾಭ ದೊರೆತರೆ ಸರಿ ಅವರಿಗೆ ಸಂತೋಷವಾಯಿತು!

\+ + + +

ದನಗಳನ್ನು ಮಕ್ಕಳಂತೆ ಸಾಕಿ ಅವುಗಳಿಂದ ತಮ್ಮ ಕುಟುಂಬವನ್ನು ಸಲಹಿ ಆ ಮೇಲೆ ಅವುಗಳನ್ನು ಕಸಾಯಿಯವರಿಗೆ ಕೊಡುವ ಇಂತಹ ಸ್ವಾರ್ಥವೊಂದು ಹಿಂದೂಗಳಲ್ಲಿ ಎಂದು ತಪ್ಪೀತೋ?

\+ + + +

ಗೋರಕ್ಷಣಾ ಸಮಿತಿಗಳು ತಮ್ಮಿಂದಾದಷ್ಟು ಯತ್ನವನ್ನು ಮಾಡುತ್ತವೆಯಾದರೂ ಅವುಗಳ ಕಾರ್ಯಗಳ ಪರಿಣಾಮವು ಇಡೀ ದೇಶಕ್ಕೆ ಹಬ್ಬಿರುವುದಿಲ್ಲ ಅದು ಇಡೀ ದೇಶದಲ್ಲಿ ಹಬ್ಬುತ್ತಿದ್ದರೆ ಇಂದು ಕಸಾಯಿಗಳು ತಮ್ಮ ವೃತ್ತಿಯಲ್ಲಿರುತ್ತಿದ್ದಿಲ್ಲ ಗೋಭಕ್ಷಕರು ಇರುತ್ತಿದ್ದಿಲ್ಲ

\+ + + +

ಭೂತದಯಾಪರನಾದ ವೇದಶಾಸ್ತ್ರ ಪುರಾಣಗಳನ್ನು ಪ್ರತಿಪಾದಿಸುವ ಯಾವನೊಬ್ಬ ಹಿಂದುವೂ ದನಗಳನ್ನು ಕಸಾಯಿಗಾರರಿಗೆ ಕೊಡಕೂಡದು ತಮ್ಮ ಕ್ಷಣಿಕ ಸ್ವಾರ್ಥವನ್ನು ಕಣ್ಣೆದುರಿಟ್ಟುಕೊಳ್ಳಬಾರದು.

\+ + + +

ಪತ್ರವ್ಯವಹಾರ.

[ಪತ್ರದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ಮಂಗಳೂರಿನ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಗಳು

ಅಯ್ಯಾ,

ಸನ್ ೧೯೨೭ನೇ ಇಸ್ವಿ ಅಗೋಸ್ತು ತಿಂಗಳಲ್ಲಿ ಮೇಲೆ ಕಾಣಿಸಿದ ಆಸ್ಪತ್ರೆಗಳ ಪೈಕಿ ಒಂದನ್ನು ಪ್ರಜೆಗಳಿಗೆ ಔಷದೋಪಚಾರದ ಅವಶ್ಯಕತೆಯಿರುವ ಬೋಳೂರು ಬೊಕ್ಕಪಟ್ಣದಲ್ಲಿ ಮುನಿಸಿಪಾಲಿಟಿಯವರು ತೆರೆದಿರುತ್ತಾರೆ ಬೋಳೂರು ಆಸ್ಪತ್ರೆಯು ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಬರುವುದನ್ನು ನೋಡಿ ೧೯೨೯ನೇ ಇಸವಿ ಸಪ್ಟಂಬರದಲ್ಲಿ ಜಪ್ಪಿನಲ್ಲಿ ಮತ್ತೊಂದು ಆಸ್ಪತ್ರೆಯನ್ನು ತೆರೆದಿರುತ್ತಾರೆ ಈ ಕಷ್ಟಕಾಲದಲ್ಲಿ ಬಡಜನರಿಗೆ ಧರ್ಮಾರ್ಥವಾಗಿ ಔಷಧಿ ದೊರೆಯುವಂತೆ ಮಾಡಿದ್ದಕ್ಕೆ ನಾವು ಅವರಲ್ಲಿಯೂ ಕೊಡಿಯಾಲಬೈಲ್ ಪೂರ್ವ ಮತ್ತು ಪಶ್ಚಿಮ ವಾರ್ಡಿನಲ್ಲಿರುವವರು ಈ ವಿಷಯದಲ್ಲಿ ಮುನಿಸಿಪಾಲಿಟಿಗೆ ತುಂಬಾ ಕೃತಜ್ಞರಾಗಿದ್ದೇವೆ ಈ ಆಸ್ಪತ್ರೆಯು ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಬರುತ್ತದೆಂದು ಆಗಿಂದಾಗ್ಗೆ ಸ್ಥಳೀಕ ವಾರಪತ್ರಿಕೆಗಳಲ್ಲಿ ಪ್ರಕಟವಾಗುವ ರೋಗಿಗಳ ಪಟ್ಟಿಗಳನ್ನು ನೋಡುವುದರಿಂದ ತಿಳಿದುಬರುತ್ತದೆ ವಿವರಿಸಿದಲ್ಲಿ ಕಳೆದ ಮೊದಲನೇ, ಎರಡನೇ, ಮೂರನೇ ನಾಲ್ಕನೇ ವರ್ಗಗಳಲ್ಲಿ ಬೋಳೂರು ಆಸ್ಪತ್ರೆಯಲ್ಲಿ ಚಿಕಿತ್ಸಿಸಲ್ಪಟ್ಟ ರೋಗಿಗಳ ತಪಸೀಲು ಈ ರೀತಿ ಅನುಕ್ರಮವಾಗಿರುವುದು ೩೧೨೮, ೩೫೧೧, ೭೧೬೭ ೯೫೪೪ ಇದರಿಂದ ನಾವು ಆಸ್ಪತ್ರೆಯು ಸಂಪೂರ್ಣ ಅಭಿವೃದ್ಧಿ ಹೊಂದುತ್ತದೆಂದು ತಿಳಿಯಬಹುದು ನಮ್ಮ ಪಟ್ಟಣದಲ್ಲಿರುವ ಸರಕಾರಿ ಧರ್ಮಾಸ್ಪತ್ರೆಯಲ್ಲಿ ಕೂಡಾ ಬಹಳ ಹಣ ವೆಚ್ಚಮಾಡಿ ನಡೆಸಿಕೊಂಡು ಬಂದರೂ ೧೯೩೦ನೇ ಇಸವಿಯಲ್ಲಿ ದಿನವಹಿ ಹಾಜರು ೨೦೦ಕ್ಕಿಂತ ಮೇಲಿಲ್ಲ ಆದರೆ ಅದೇ ವರ್ಷ ಮುನಿಸಿಪಾಲಿಟಿಯ ಆಸ್ಪತ್ರೆಗಳಲ್ಲಿ ೨೫೦ ದಿನವಹಿ ಸರಾಸರಿ ಹಾಜರಿತ್ತು ಆಯುರ್ವೇದ ಚಿಕಿತ್ಸೋಪಚಾರವು ಇಂಗ್ಲಿಷ್ ಚಿಕಿತ್ಸೋಪಚಾರಕ್ಕಿಂತ ಬಹಳ ಖರ್ಚು ಕಡಿಮೆಯಲ್ಲಿ ಆಗುವುದು ದೃಷ್ಟಾಂತವಾಗಿ ೧೯೩೦ ೩೧ರಲ್ಲಿ ದಿನ ಒಂದಕ್ಕೆ ಪ್ರತಿಯೊಬ್ಬ ರೋಗಿಗೆ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಸುಮಾರು ೬ ಪೈಗಿಂತ ಕಡಿಮೆಯೇ ಸರಾಸರಿ ಖರ್ಚಾಗಿರುತ್ತದೆಂದು ಕೇಳುತ್ತೇವೆ ಇದರಿಂದ ವಾಚಕಮಹಾಶಯರುಗಳೇ ಎಷ್ಟರಮಟ್ಟಿಗೆ ಕಡಿಮೆ ಖರ್ಚಿಯಿಂದ ಆಯುರ್ವೇದ ಚಿಕಿತ್ಸೋಪಚಾರ ಹೊಂದಬಹುದೆಂದು ತಿಳಿದುಕೊಳ್ಳಬಹುದು, ಓದಿರುತ್ತಾ ಮೊನ್ನೆ ತಾನೇ ಜರಗಿದ ಮುನಿಸಿಪಲ್ ಪಂಚಾಯತಿಯಲ್ಲಿ ಮಾನ್ಯ ಕೌನ್ಸಿಲರುಗಳ ಪೈಕಿ ಒಬ್ಬರು ಬಡ ಜನಪ್ರಯೋಜನಕಾರಿಗಳಾದ ಮತ್ತು ಮುನಿಸಿಪಾಲಿಟಿಯವರೇ ನಡೆಸಿಕೊಂಡು ಬರುವ ಧರ್ಮಾಸ್ಪತ್ರೆಗಳನ್ನು ತೆಗೆದು ಹಾಕುವ ಆಲೋಚನೆಯನ್ನು ತಂದದ್ದು ತುಂಬಾ ಶೋಚನೀಯವಾದ ಸಂಗತಿಯೇ ಸರಿ ಆದರೆ ಇಂಥಾ ಆಲೋಚನೆಗೆ ಯಾರೂ ಮೈ ಕೊಡದಿದ್ದುದ್ದು ತುಂಬಾ ಸಂತೋಷವೆ ಆದುದರಿಂದ ಆ ಆಲೋಚನೆಯು ಅಲ್ಲಿಯೇ ಮುರಿಯಿತು ಅದೂ ಅಲ್ಲದೆ ಸುಮಾರು ೩ ತಿಂಗಳ ಹಿಂದೆ ಕೊಡಿಯಾಲಬೈಲು ಪೂರ್ವ ಮತ್ತು ಪಶ್ಚಿಮದ ವಾರ್ಡುಗಳ ಸುಮಾರು ೨೨೦ ಓಟುದಾರರು ದಸ್ಕತು ಮಾಡಿ ಮಾನ್ಯ ಚೆಯರ್‌ಮೇನ್‌ಗಳವರಿಗೆ ಹೊಸ ಕೌನ್ಸಿಲ್ ಚುನಾವಣೆ ನಡದ ಸಂದರ್ಭದಲ್ಲಿ ಒಂದು ಸಾರ್ವಜನಿಕ ಮನವಿ ಮಾಡಿಕೊಂಡದ್ದರಲ್ಲಿ ಕೂಡಾ ಇಂಥಾ ಧರ್ಮಾಸ್ಪತ್ರೆಗಳನ್ನಿಟ್ಟದ್ದು ಮುನಿಸಿಪಾಲಿಟಿಯವರ ಚಿರಸ್ಮರಣೀಯವಾದ ಉಪಕಾರ ಮಾತ್ರವಲ್ಲದೆ ಬೋಳೂರು ಬೊಕ್ಕಪಟ್ಣ ಆಸ್ಪತ್ರೆಯನ್ನು ಒಂದು ಸ್ವಂತ ಕಟ್ಟಡದಲ್ಲಿ ನಡಿಸುವಂತೆಯೂ ಅದಕ್ಕೆ ಯಾವ ತರದ ಸಹಾಯ ಬೇಕಿದ್ದರೂ ಒದಗಿಸಿಕೊಡಬೇಕಾಗಿಯೂ ಅರಿಕೆ ಮಾಡಿಕೊಂಡಿರುತ್ತದೆ ಆ ಮನವಿಯ ಯಥಾ ನಕಲನ್ನು ಕಳೆದ ಜೂನ್ ತಿಂಗಳಲ್ಲಿ ಸ್ಥಳೀಕ ವಾರಪತ್ರಿಕೆಗಳಲ್ಲಿ ಪ್ರಕಟಿಸಿರುತ್ತದೆಂದು ತಿಳಿಯುತ್ತೇನೆ ಆದರೆ ಈ ಸಂಗತಿಯು ಮಾನ್ಯ ಕೌನ್ಸಿಲರುಗಳವರ ದೃಷ್ಟಿಪಥಕ್ಕೆ ಬೀಳದಿರುವದನ್ನು ನೋಡಿ ನಮಗೆ ತುಂಬಾ ಆಶ್ಚರ್ಯವಾಗುತ್ತದೆ ಆದುದರಿಂದ ನಾನು ಮಾನ್ಯ ಚೆಯರ್‌ಮೇನರ ಮತ್ತು ಕೌನ್ಸಿಲರುಗಳವರ ಅವಗಾಹನೆಗೆ ತರುವುದೇನಂದರೆ—ಧರ್ಮಾರ್ಥವಾಗಿಟ್ಟ ಆಸ್ಪತ್ರೆಗಳನ್ನು ಅದರಲ್ಲಿ ಜನರಿಗೆ ದೊರಕಬಹುದಾದ ಪ್ರಯೋಜನಗಳನ್ನು ನೋಡುವಾಗ್ಗ ಧರ್ಮಾಸ್ಪತ್ರೆಗಳನ್ನು ಎಷ್ಟು ಮಾತ್ರಕ್ಕೂ ಮುಚ್ಚುವ ಆಲೋಚನೆ ಮಾಡಬಾರದೆಂದೂ ಮಾತ್ರ ಅರಿಕೆ ಮಾಡಿಕೊಳ್ಳುವುದಲ್ಲದೆ ಪ್ರಕೃತದ ಮುನಿಸಿಪಾಲಿಟಿಯ ಆರ್ಥಿಕ ಸ್ಥಿತಿಯು ಒಳ್ಳೆರೀತಿ ಸುಧಾರಿಸಿ ಬಂದ ನಂತರ ಬೋಳೂರು ಬೊಕ್ಕಪಟ್ಣ ಆಸ್ಪತ್ರೆಯನ್ನು ಒಂದು ಯೋಗ್ಯವಾದ ಸ್ಥಳದಲ್ಲಿ ಸ್ವಂತ ಕಟ್ಟಡದಲ್ಲೇ ನಡೆಸುವ ಏರ್ಪಾಡು ಮಾಡುವಂತೆಯೂ ಕೋರುತ್ತೇನೆ ಅದಲ್ಲದೆ ಬಡ ಜನರಿಗೆ ಉಪಕಾರ ದೊರೆಯುವ ಆಸ್ಪತ್ರೆಗಳನ್ನು ಮುಚ್ಚಿ ಬಡಜನರ ಗೋಳನ್ನು ಕೇಳುವ ಬದಲು ಹಣದ ಅಡಚಣೆ ಇದ್ದರೆ ಮುನಿಸಿಪಾಲಿಟಿಯಲ್ಲಿ ಅನಾವಶ್ಯಕವೆಂದು ಕಂಡುಬರುವ ಇತರ ಎಷ್ಟೋ ಬೇರೆ ಸಂಸ್ಥೆಗಳಲ್ಲಿ ಕೊರತೆ ಪ್ರಯೋಗಿಸಬಹುದು ಆದರೆ ಅಂಥಾ ಕತ್ತರಿಯು ಪಟ್ಣದ ಬಡ ಜನರ ಕತ್ತಿಗೆಗೆ ಬಾರದೆ ಹೋಗಲೆಂದು ಬಯಸುತ್ತೇನೆ

ಓಟುದಾರರಲ್ಲೊಬ್ಬ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಂಕುಶ ತೈಲ.—ಇದು ಪೂರ್ವದಲ್ಲಿ ಅತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಹೃದಿನಪ್ರಾಶ —ಹೃದನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗ... ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾ... ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ ದಶಮೂಲ ಸುಖಪ್ರಸವೌಷಧಿ!

ಬಾಣಂತಿಯರ ನವಜೀವನಕೆ ನಂದನವನವೆಂತಿರುವುದು

ಇದರ ಶೋಧನ ರಸಾಯನ ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶ ... ನಂಜನ್ನು ಹೊರಗೆ ಹಾಕಿ ಪ್ರಸವದಿಂ ... ಗರ್ಭಕೋಶವನ್ನು ಒಂದೆರಡು ವಾರಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂ ... —ಗರ್ಭ ಬೆಳವಣಿಗೆ ... ಯನ್ನು ಕೊಡಲೇ ಪುನರ್ ಜೀವನ ...

ಸುಖಸೇವನ ಗುಣದಿ ... ಅಗ್ನಿ ಮಾಂದ್ಯ ನಿದ್ರಾನಾಶ ಮೊದಲಾದವುಗಳ ... ರೋಗ ಕಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಮ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂ... ಹೋಗಲಾಡಿಸುವದು.

ತಿಂಗಳು 1ಕ್ಕೆ 1 ... ಬೇಕಾಗುವ ... ಕ್ಷಯ ಬಾಟ್ಲಿ 1ಕ್ಕೆ 2—0—0 ... ಬೇರೆ

...

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಧಾಮ...

...

ಅಪೇಕ್ಷಿಸುವ ಬಹುಮಾನಗಳು

... 6 ವರ್ಷ ... ವರ್ಷ 25 ವರೆಗೆ ... ಗಳು, ರವಕೆ ... ಇತ್ಯಾದಿ ಉತ್ಕೃಷ್ಟ ಶಾಲು, ... ಧಾವಳಿ, ... ಕೇಸರಿ, ಪಚ್ಚಕರ್ಪೂರ ... ಪೂಜಾ ಸಾಮಗ್ರಿಗಳು ... ಸುಗಂಧ ... ದರದಿಂದ ... ಸುವವರು ...

ವಿಳಾಸ—

ಶಾನು ವಿಶ್ವನಾಥರಾವ್ ಎಂಡ್ ಬ್ರದರ್ಸ್

...

The Canara Bank Limited, Mangalore.

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು

Established July 1906 | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

BRANCHES -Karkal Kasargod Cochin Udipi Gangolli Coondapur Bombay Puttur Calicut & Alleppey

ಬ್ರಾಂಚುಗಳು—ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು, ಕಲ್ಲಿಕೋಟೆ ಮತ್ತು ...

Authorised and fully paid up Capital Rs 300 000—0—0

Reserve and other sinking Funds Rs 489 500—0—0

Amount invested on G P Notes Rs 817 097—2—0

Rate of interest on fixed deposits at Head Office and Branch 6¼% for 2 Years ... 6% ... Year

Season deposit of Rs 1000/- & above terminable by the end of June are received at 6½ p a ...

Current Account Deposits received and interest allowed ... and above ... multiple of R ... from 1st January to 30th June and ... 1st July to 31st December. No interest will be allowed ... Rs ... during a period ... months ending either 30th June or 31st December ...

Except by special arrangement no interest is allowed ... exceeding ... in the case of Head Office and ... Branch ... exceeding ... in the case of ... Branch

... deposit requiring one week ... interest ... per annum. Interest on ... deposits will cease on notice ...

For further particulars please apply

Canara Bank Ltd | K. Venkat Rao

Mangalore ... 1931 | Secretary

The Pangal Nayak Bank, Ltd.

Head Office Udipi | Established 1920 | Branch Office Mangalore

Authorised Capital Rs 2 00,000	Paid up Capital Rs 1 75 000
Issued Capital Rs 1 75 000	Reserve and other Funds Rs 1 (4 000

1 Receives Fixed Deposits at the following favourable rates

For 3 months ... | For 12 ...
6 or 9 months at 5½ | 24 ...

Interest ... payable every ...

ಠೇವಣಿ ರೇವಣಾತಿಗಳು ಪ್ರತಿ 3 ತಿಂಗಳಿಗೆ ಬಡ್ಡಿಕೊಡುವ ಕರಾರು ...

2 Current Accounts ... Cumulative Savings Bank and Short Notice Deposits ... able rates of interest

3 The bank transacts every description of banking business.

For full particulars and for copies of the printed Rules of Business please apply to the Secretary at the Head Office or to the Agent Mangalore Branch

Office of the Bank) Udipi ...) | P Laxman ... Secretary

The Udipi Mutual Benefit Fund UDIPI

ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ನಡೆಸಲ್ಪಡುವ ಎಲ್ಲಾ ತರದ ವಹಿವಾಟುಗಳೂ ... ನಡೆಯಲ್ಪಡುತ್ತವೆ ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ ಮುಖ್ಯಪ್ರಾಣಭಟ್ಟ ಪ್ರೊಪ್ರೈಟರ್

ಇಪ್ಪತ್ತು	...	...
ಮೂವತ್ತು	...	...
ನಲವತ್ತು	...	ನರ...
ಐವತ್ತು	...	...
ಅರುವತ್ತು	...	ಅರ...
ಎಪ್ಪತ್ತು	...	...ರೋಗ

ಈ ಸ್ಥಿತಿಗಳಲ್ಲಿ ...

ಮದನಮಂಜರಿ ಟಾನಿಕ್

ಉಪಯೋಗಿಸಿ ... ಕ್ಕೆ ...

ಹೆಚ್ಚಿನ ವಿಷಯ ತಿಳಿಯಬೇಕೆನ್ನಿಸುವವರು ಕ್ರಯ ಮತ್ತು ಅಂಚೆ ...

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿರಿ | ಮದನಮಂಜರಿ ಫಾರ್ಮಸಿ, ...

ಯಮನ ದವಡೆಯೊಳಗೆ

ಸಿಲುಕಿಕೊಂಡಂತೆಯೆ ಎರವಾಡಾ ಜೈಲಿನೊಳಗೆ ಬಂಧನ. ಕೋಲೆಪಾತಕಿಯಲ್ಲದಿದ್ದರೂ ರಾಜಕೀಯವಾದ ಅಪ್ಪಣೆಗಳಿಗೆ ಒಳಗಾದ ಪೂಣೆಯ ಸುಪ್ರಸಿದ್ಧ ವಕೀಲರಾದ ಶ್ರೀ| ಭೋಪಟಕರರು ಈ ಜೈಲಿನಲ್ಲಿ ಬಂಧಿತರಾಗಿರುವರು. ಮೊನ್ನೆ ಒಂದು ದಿನ ಸಾಯಂಕಾಲ ೬-೩೦ಕ್ಕೆ ತಮ್ಮ ಜೈಲು ಕೋಣೆಯಲ್ಲಿದ್ದಾಗ, ಅಲ್ಲಿ ಒಂದು ನಾಗರಹಾವು ಬುಸುಗುಟ್ಟಿ ಕೂತಿದೆ! ಇತ್ತ ಬಾಗಿಲು ಭದ್ರ. ಹೊರಕ್ಕೆ ಬರಲಾರದು, ಕೂಗಬಾರದು, ಅಲ್ಲಾಡಿದರೆ ಕಚ್ಚುವುದು; ಕೆಲವೇ ಅಡಿ ದೂರ! ೨೦ ನಿಮಿಷ ಈ ಜೀವನ್ಮೃತಾವಸ್ಥೆಯಲ್ಲಿರಬೇಕಾಯಿತು. ಕೊನೆಗೆ 'ವಾರ್ಡ'ರನು ಹೇಗೋ ಭಾಗ್ಯದಿಂದ ಒಳಗೆ ಇಣಿಕಿದನು ಬಾಗಿಲು ತೆರೆದರು; ಹಾವನ್ನು ಕೊಂದರು ಭೋಪಟಕರರು ಅಂದಿಗೆ ಬದುಕಿದರು. ಆದರೆ, ಹಾವು ಕಡಿದಿದ್ದರೆ ಯಮನನ್ನಲ್ಲದೆ ಮತ್ತಾರನ್ನು ದೂರಬೇಕಾಗಿತ್ತು? ನರಗಳು ಆಘಾತಹೊಂದಿ ಅವರೀಗ ನರಳುತ್ತಿದ್ದರೆ ಯಾರು ಹೊಣೆ? ಇರಲಿ, ಅವರ ಬಂಧುಗಳನ್ನು ಸಹ ಮರುದಿನ ಅವರ ಸಂದರ್ಶನೆಗೆ ಬಿಡಲಿಲ್ಲ ಜೈಲುಕೋಡಿನ ಶರ್ತವೇ ಹಾಗೆ!

'ನಾನು ಯೋದ್ಧನು!'

"ರಾಜರುಗಳೂ, ಪ್ರಜೆಗಳೂ, ಹಿಂದೂಗಳೂ, ಮುಸ್ಲಿಮರೂ ಒಂದಾದರೆ, ಬ್ರಿಟಿಷರು ನಮ್ಮ ಕೇಳಿಕೆಗಳನ್ನು ಕೂಡಲೆ ಪೂರಯಿಸುವರು. ಆದರೆ ರಕ್ತದ ಹೊಳೆಗಳೇ ಹರಿಯುವುವು! ಅದಕ್ಕೆ ಮೊದಲೇ ಬ್ರಿಟಿಷರಿಗೆ ಶಾಂತಿಯಿಂದ ವರ್ತಿಸಲು ನಾವಿನ್ನು ಎಡೆಕೊಡುವ. ಅವರು ತಮ್ಮ ವಾಗ್ದಾನ ಮುರಿದರೆ ನಾನೂ ಈ ಚಳವಳದಲ್ಲಿ ಭಾಗಿಯಾಗಿ, ಕೂಡಲೆ ಉಪ ತಯಾರಿಸುವೆನು. ಆದರೆ, ಆಗ, ನಾನೂ ಕೈಗೊಳ್ಳಬಹುದಾದ ಯುದ್ಧವು ಹಿಂದೀ ಇತಿಹಾಸದಲ್ಲಿ ಕೊನೆಯದಾಗುವುದು" ಎಂದು ಮೌಲಾನಾ ಶೌಕತ್ ಅಲಿಯವರು ಮಲಬಾರ ಹಿಲ್ ಎಂಬಲ್ಲಿ ಜರುಗಿದ ಒಂದು ಸಭೆಯಲ್ಲಿ ಎಂದರು. ಕೊಂಗ್ರೆಸ್ ಸಭೆಯೊಂದು ಕಡೆ, ಬ್ರಿಟಿಷರು ಮತ್ತೊಂದು ಕಡೆ ಹೀಗೆ ಪ್ರಯತ್ನಿಸಿದರೂ ನನ್ನನ್ನು ಮುರಿಯಲಾಗಲಿಲ್ಲ ನಿರ್ಭೀತಿಯಿಂದ ವಂಚನೆಯಿಲ್ಲದೆ ಹೋರಾಡುವ ದೇವರಮನುಷ್ಯನಾದ ನನ್ನನ್ನು ಕೇಳಿರಿ! ವೈಸ್ರಾಯರನ್ನು ಕಂಡು ನಾನು ಶಾಂತಿಸ್ಥಾಪನೆಗೆ ಪ್ರಯತ್ನಿಸುವೆನು ಎಂದೇ ಇವರ ಕೊನೆಯ ಮಾತು.

ರೈಲುಗಳಲ್ಲೂ ನಷ್ಟವೇ.

೧೯೩೯ನೇ ಇಸವಿ ಮಾರ್ಚಿಗೆ ಅಂತ್ಯವಾದ ವರ್ಷದಲ್ಲಿ, ಈ ದೇಶದ ವ್ಯಾಪಾರವು ಕುಗ್ಗಿದ್ದು, ಬಸ್ಸುಗಳೇ ಮೊದಲಾದುವುಗಳ ಸ್ಪರ್ಧೆಯು ವಿಶೇಷವಾದ ಕಾರಣವೂ, ಶಾಸನಭಂಗ ಚಳವಳವು ಹಬ್ಬಿದ ಕಾರಣವೂ ಹಿಂದಿನ ವರ್ಷಕ್ಕಿಂತಲೂ ೭½ ಕೋಟಿ ರೂಪಾಯಿ ಏನು ಹುಟ್ಟು ಕಡಿಮೆಯಾಗಿದೆ. ಇದರ ಪರಿಣಾಮವಾಗಿ, ಹಿಂದಣ ವರ್ಷ ೪ ಕೋಟಿ ರೂಪಾಯಿ ಆದಾಯವಿದ್ದಿತಾದರೂ, ಈ ವರ್ಷ ೫ ಕೋಟಿ ೧೯ ಲಕ್ಷ ರೂಪಾಯಿ ನಷ್ಟವಾಗಿದೆ. ಇದೂ ಅಲ್ಲದೆ, ಸಂಯೋಜಿತ ರೈಲುಗಳಿಂದ ಹುಟ್ಟಬೇಕಾದುದರಲ್ಲೂ ೩೦ ಲಕ್ಷ ರೂಪಾಯಿ ಆದಾಯವು ಕಡಿಮೆಯಾಗಿದೆ. ಪ್ರಯಾಣಿಕರಿಂದ ಸೇಕಡಾ ೧೧ ಕಡಿಮೆ ದೊರತಿದೆ. ಸಾಮಾನು ಒಯ್ಯೋಣದಿಂದ ೪½ ಕೋಟಿ ರೂಪಾಯಿ ಕಡಿಮೆ. ಹೀಗಾಗಿ, ರಿಜರ್ವ ಫಂಡಿನಲ್ಲಿಟ್ಟಿದ್ದ ಹಣದಿಂದ ಹನ್ನೆರಡು ಕೋಟಿ ರೂಪಾಯಿ ತೆಗೆದು ಸದ್ಯದ ಖರ್ಚು ಸಂಭಾಳಿಸಬೇಕಾಯಿತೆಂದು ರಿಪೋರ್ಟು.

ಪಿಕೆಟು ಮಾಡುವ ಒರ್ಡಿನೆನ್ಸಿನ ತಿದ್ದುಪಡಿ

ಎಂದರೆ, 'ಅದರ ಅರ್ಥವು ಇನ್ನಷ್ಟು ವ್ಯಾಪ್ತವಾಗಿ ವಿದೇಶೀ ವಸ್ತು ಮಾರುವವರ ಅಂಗಡಿಗಳ ಒಳಗೆ ಹೋಗುವುದೇ ತಪ್ಪಿತವಾಗುವ ಸಂಭವವುಂಟಾಗಿದೆ. ಇಂತಹ ವಿದೇಶೀ ಬಟ್ಟೆ ವ್ಯಾಪಾರಿಗಳು ಈ ತಿದ್ದುಪಡಿಗಾಗಿ ಸರಕಾರವನ್ನು ಅಭಿನಂದಿಸುವರೋ ತಿಳಿಯಬೇಕಾಗಿದೆ' ಎಂದು ಕಾನೂನು ಬಲ್ಲ ವಿದ್ವಾಂಸರೇ ಸಂದೇಹಗೊಂಡು ಬೇರೆ ಪತ್ರಿಕೆಗಳಲ್ಲಿ ದೂರಿಟ್ಟಿರುವರು. ಹೀಗಿನ ತಿದ್ದುಪಡಿಯಾಗುವ ಅಗತ್ಯವಿದ್ದಾಗ, ಕಡಿಮೆ ತಿದ್ದುಪಡಿ ಮಾಡುವುದರಿಂದ, ತಿದ್ದುಪಡಿಯಾಗದೇ ಇದ್ದಿದ್ದರೆ ಉಂಟಾಗುತ್ತಿದ್ದ ಸಂಕಟಕ್ಕಿಂತಲೂ ಈಗ ತಿದ್ದುಪಡಿಯ ಸಂಕಟ ಹೆಚ್ಚಾಗಿದೆ. ಇಂತಹ ಅನವಶ್ಯಕ ಒರ್ಡಿನೆನ್ಸುಗಳನ್ನು ತಿದ್ದುವುದರಿಂದ ಲಾಭವಿಲ್ಲ. ಅವನ್ನು ರದ್ದುಗೊಳಿಸುವುದೇ ಅಗತ್ಯ ಕರ್ತವ್ಯ ಎಂದೇ ಪತ್ರಿಕೆಗಳಲ್ಲೆಲ್ಲ ಟೀಕೆ ತುಂಬಿದೆ.

ಇತ್ತೀಚೆಯ ದಂಡನೆಗಳು,

ಎಂತಹ ಕಾನೂನಿಗೂ ಹೊರಗಾಗಿವೆಯೆಂದು ಮಾಜೀ ಮಂತ್ರಿ ಮುಖ್ಯರಾದ ಡಾ| ಸುಬ್ಬರಾಯನ್‌ರವರು ಎಸ್ಸೆಂಬ್ಲಿ ಕೌನ್ಸಿಲಿನಲ್ಲಿ ಗಂಭೀರ ಭಾಷಣಮಾಡಿದಂದು, ಪ್ರಜೆಗಳು ಚಕಿತರಾಗಿದ್ದಂತೆ, ಸರಕಾರವೂ ಎಚ್ಚರ ತೆಗೆದುಕೊಳ್ಳಬಹುದಾಗಿದ್ದಿತು. ಈ ಬಳಿಕವೇ ಕೊಂಗ್ರೆಸ್ ವೊಲಂಟೀಯರರಿಗೆ ಚಡಿ ಹೊಡೆಸಲು ಅಪ್ಪಣೆ, ದೇಶ ಸೇವಿಕೆಯರನ್ನು ಎತ್ತಲೋ ಕೊಂಡೊಯ್ದು ನಡು ದಾರಿಯಲ್ಲಿ ದಿಕ್ಕಿಲ್ಲದವರಂತೆ ಬಿಟ್ಟುಬಿಡೋಣ, ಕೊಂಗ್ರೆಸ್ ಕೆಲಸಗಾರರನ್ನು ಜೈಲಿಗೆ ಕಳುಹುವ ಬದಲಾಗಿ ಅವರ ಮುಖಕ್ಕೆ ಮಸಿ ಬಳಿದು, ಲಾಠೀ ಧಾರಿಗಳಾದ ಪೋಲೀಸರ ಜತೆಯಲ್ಲಿ ಅವರನ್ನು ಊರಲ್ಲೆಲ್ಲಾ ಮೆರೆಯಿಸೋಣ ಮೊದಲಾದ ಹೊಸ ರೀತಿಗಳೂ ಅಲ್ಲಲ್ಲಿನ ಅಧಿಕಾರಿಗಳ ಅನುಗ್ರಹದಿಂದ ಜ್ಯಾರಿಗೆ ಬಂದಿವೆ ಎಂದು ಪತ್ರಿಕೆಗಳಿಂದ ತೋರಿ ಬರುತ್ತಿದೆ. ಸುಬ್ಬರಾಯನರವರು—'ಕಾನೂನುಗಳನ್ನು ಉಲ್ಲಂಘಿಸಿ ನಡೆವುದು ಚಳವಳಗಾರರ ಹಿಂದೋ, ಸರಕಾರದ ಕೆಳ ಅಧಿಕಾರಿಗಳ ತಂಡವೋ ಎಂದು ಕೇಳಿರುವುದಕ್ಕೆ, ಸರಕಾರವು ಇಂತಹ ರೀತಿಗಳನ್ನು ತಿದ್ದುವಂತೆ ಅಧಿಕಾರಿಗಳಿಗೆ ತಿಳಿಸಿದಂತಾಗದೆ?

ಯುದ್ಧ ಸನ್ನಾಹ ನಿವಾರಣೆಯ ಪರಿಷತ್ತು.

ಯುದ್ಧ ನಿವಾರಣೆಯು ಸಾಧ್ಯವೊ ಎಂದರೆ ಇಲ್ಲವೆಂದೇ ತೋರಿ, ಈಗ ಸನ್ನಾಹ ನಿವಾರಣೆಗೆ ಸಾಧಿಸುವರು. ಜಿನೀವದಲ್ಲಿ ಸುಮಾರು ೬೦ ರಾಷ್ಟ್ರಗಳ ಪ್ರತಿನಿಧಿಗಳು ಯುದ್ಧವಾಗದಂತೆ ಏನು ಮಾಡಲಿ ಎಂದು ಚಿಂತಿಸುವಾಗ, ಚೀನಾ ಜಪಾನುಗಳೊಳಗೆ ಭಯಂಕರ ಯುದ್ಧವು ಸಾಗುತ್ತಲೇ ಇರುವುದು. ಗ್ಯಾಸು (ವಿಷವಾತ) ಇತರ ಸಿಡಿಗುಂಡು, ರಸಾಯನಿಕ ಒಗೆಗಳ ಪ್ರಯೋಗ, ಜಲಾಂತರ್ಗಾಮಿನಾವೆಗಳು, ಒತ್ತಾಯದಿಂದ ಯೋದ್ಧರನ್ನು ಸಂಗ್ರಹಿಸುವ ಕ್ರಮ ಮೊದಲಾದುವು ಇನ್ನು ಬೇಡವೆಂದು ಇಂಗ್ಲಿಷರ ಪ್ರತಿನಿಧಿ ಸರ್ ಜೋನ್ ಸ್ಯಾಮನರ ಹೇಳಿಕೆ. ಕಳೆದ ಯುದ್ಧದಲ್ಲಿ ೧೦ ಮಿಲ್ಲಿಯ ಜನರು ಬಲಿಯಾದರು, ೮೦೦೦ ಮಿಲ್ಲಿಯ ಪವನ್ ಸೊತ್ತು ಧ್ವಂಸವಾಯಿತು, ೮೮೦ ಮಿಲ್ಲಿಯ ಪವನು ಸೈನ್ಯಗಳ ಬಗ್ಗೆ ವ್ಯಯವಾಯಿತು!

'ಗಢಿನಾಡಿನ ದಿನ'

ಕಳೆದ ಶುಕ್ರವಾರ ಈ ದಿನಾಚರಣೆಯು ದೇಶದ ಹಲವೆಡೆಗಳಲ್ಲಿ ಆಚರಿಸಲ್ಪಟ್ಟಿದೆ. ಗಡಿನಾಡಿನಲ್ಲಿ ನಡೆದ 'ಅತ್ಯಾಚಾರ'ಗಳನ್ನು ಖಂಡಿಸಿ, ಢಿಲ್ಲಿಯಲ್ಲೇ ಜರುಗಿದ ಮುಸ್ಲಿಮರ ಸಭೆಯಲ್ಲಿ "ವಾಯವ್ಯ ನಾಡಿನ ನಿವಾಸಿಕರ ಮೇಲೆ ಹೃದಯ ವಿದಾರಕವಾದಂತಹ ಅತ್ಯಾಚಾರಗಳನ್ನು ನಡೆಸಿರುವುದಕ್ಕೆ ಈ ಸಭೆಯು ದುಃಖ ಸಂತಾಪಗಳ ಭಾವನೆಗಳನ್ನೇ ಸರಕಾರಕ್ಕೆ ನಿವೇದಿಸಿಕೊಂಡಿದೆ ಎಂಬ ಠರಾವು ಮಂಜೂರಾಯಿತಲ್ಲದೆ ಕಾನ್ಪುರದಲ್ಲಾದ ಸಭೆಯು, "ಡಾ. ಗೌರರು ಎಸಂಬ್ಲಿಯಲ್ಲಿ ತಂದ ಠರಾವನ್ನು ಅನುಮೋದಿಸಿ ವೋಟು ಕೊಡದೆ ಹಿಂದಗೆದ ಮುಸ್ಲಿಮ ಮೆಂಬರರ ವರ್ತನೆಗೆ ಆಕ್ಷೇಪ ತೆಗೆದಿದೆ". ಗಡಿನಾಡಿನಲ್ಲೇನು, ಬೇರೆ ಕಡೆಗಳಲ್ಲೇನು?—ಪ್ರತಿಯೊಂದು ಪ್ರಾಂತ್ಯದಲ್ಲೂ ನಡೆದ ವಿಪರೀತ ಘಟನೆಗಳನ್ನು ಕಂಡು ಮುಸ್ಲಿಮರು ತಮ್ಮ ಬಾಂಧವರಿಗಾಗಿ ಸಹಾನುಭೂತಿ ತೋರಿಸದೆ ಇರಲಿಲ್ಲ. ಒಡೆದಾಟಕ್ಕೋಸ್ಕರವಾಗಿ ನರಳುವವರಲ್ಲದೆ, ಇದುವರೆಗೆ ೭೦೦೦ ಜನರೇ ಕೈದಿಗೊಳಪಟ್ಟಿರುವರೆಂದು ಸೆಕ್ರೆಟರಿಯವರ ಅಂಕಿಸಾಕ್ಷಿ. ೩,೩೦೦ ಜನರು ಇನ್ನೂ ವಿಚಾರಣೆಗೆ ಒಳಪಡದೆ ಇರುವರು. ರೆಗ್ಯುಲೇಶನುಗಳಂತೆ ಅಂತರೀನರಾದವರು ಬೇರೆ. ಪೆಟ್ಯಾಗಿ ಸತ್ತವರು ಎಷ್ಟು? ಪತ್ರಿಕೆಗಳು ಅನುದಿನ ಪ್ರಕಟಿಸುವ ಲೆಕ್ಕಗಳನ್ನು ಓದಿದರೆ, ಬಹಳವಾದ ತಾರತಮ್ಯವು ತೋರುತ್ತಿದೆ. ಜರ್ಮನ್ ಯುದ್ಧದ ಕಾಲದಲ್ಲಿ ಹತಾಹತರ ಸಂಖ್ಯೆಗಳು ಮಿತ್ರಪಕ್ಷದಲ್ಲಿ ಅತಿ ಕಡಿಮೆಯಾಗಿಯೂ ಶತ್ರು ಪಕ್ಷದಲ್ಲಿ ಅತಿ ಹೆಚ್ಚಾಗಿಯೂ ಬರುತ್ತಿದ್ದಂತೆ, ಥಕ್ಕನೆ ಈ ಅಂಕೆಗಳಲ್ಲಿ ವಿಶ್ವಾಸವನ್ನಿಡಲಾಗುವುದಿಲ್ಲ. ಆದರೆ, ಕರಣೀಕರ ಮಾತನ್ನು ನಂಬದಿರಲಾಗುವುದೆ?

ಮೌಲ್ವಿ ಸರ್ ಮಹಮ್ಮದ ಯಾಕೂಬರು

ಮುಸ್ಲಿಮರು ಈಗ ಏನು ಮಾಡುವುದಕ್ಕೂ ವಿಶ್ವ ತೋಚದೆ ಹಿಂದುಳಿಯಬೇಕಾಗಿ ಬಂದಿದೆ. ಮುಸ್ಲಿಮರ ಹಕ್ಕು ಪ್ರಾತಿನಿಧ್ಯ ಮೊದಲಾದುವನ್ನು ಸರಕಾರವು ಈಗ ತಾನಾಗಿ ನಿಶ್ಚಯಿಸಲಾರದಾದರೆ, ರಾಜ್ಯ ಸೂತ್ರಗಳ ನವರಚನೆಯಲ್ಲಿ ಪ್ರಾಮುಖ್ಯರಾದ ಕಲವರು ಕೈಹಾಕಲಾರರು. ಇನ್ನು ವಿಳಂಬಿಸಿದರೆ ಕಾರ್ಯವು ಕಡುವುದು. ಬ್ರಿಟಿಷ ಸರಕಾರವು ಇದು ಕಾರಣ ಕೂಡಲೆ ಮುಸ್ಲಿಮರ ಹಕ್ಕುಗಳನ್ನು ಕುರಿತು ಬೇಗನೆ ಒಂದು ಹೇಳಿಕೆಯನ್ನು ಪ್ರಕಟಿಸುವ ಹಾಗೆ ಮುಖ್ಯ ಮಂತ್ರಿಗಳಿಗೆ ತಿಳಿಸುವುದು ಅಗತ್ಯವಾಗಿದೆ ಎಂದು ಲೋರ್ಡ ಲೋಥಿಯನರಿಗೆ ಅರಿಕೆಮಾಡಿಕೊಂಡರು. ಈ ವಿಷಯವನ್ನು ಖಾಸಗಿಯಾಗಿ ಮಂತ್ರಿಗಳಿಗೆ ತಿಳಿಸಲಾಗುವುದೆಂದು ಲೋರ್ಡರು ತಿಳಿಸಿದರಾದರೂ ತಾವು ಕೈಕೊಂಡಿರುವ ಕಾರ್ಯಕ್ರಮಕ್ಕೆ ಇದೇನು ಸಂಬಂಧಪಟ್ಟುದಾಗಿಲ್ಲವೆಂದೂ ಸೂಚಿಸಿರುವರು.

ನೋಟಗಳು

NOTE....S

ಭಾರತವರ್ಷದಲ್ಲಿ ಹೋರಾಶಾಸ್ತ್ರವೆಂಬುದಿದೆ. ಇದು ಕೇವಲ ಅನುಮಾನದ ಭವಿಷ್ಯ ಹೇಳುವ ಶಾಸ್ತ್ರವೆಂದು ವಿಲಾಯಿತಿಯಲ್ಲಿ ಇದನ್ನು ನಂಬುವವರಿಲ್ಲ. ಈಗ ಭಾರತ ಮಂತ್ರಿಗಳಾಗಿರುವ ಸರ್ ಸ್ಯಾಮುವೇಲ ಹೋರರು ಪಾರ್ಲಿಮೆಂಟಿನ ಪ್ರಶ್ನೋತ್ತರಗಳಲ್ಲಿ ತಮ್ಮ ಶಾಸ್ತ್ರವನ್ನು ಆರಂಭಿಸಿರುವರು. ಇದೂ ಹೋರಾಶಾಸ್ತ್ರವಾಗುವುದೇ ಎಂದು ಸಂದೇಹ

* * * *

ಅಗತ್ಯವಿಲ್ಲವೆಂದು ಕಂಡಾಗಲೆ ಒರ್ಡಿನೆನ್ಸುಗಳನ್ನು ಕೂಡಲೆ ಹಿಂತೆಗೆಯುತ್ತೇವೆ ಎಂದು ಹೋರರು ಹೇಳಿದರು. ಅಗತ್ಯವೆಂದು ಕಂಡ ದೃಷ್ಟಿಗೆ ಅಗತ್ಯವಲ್ಲವೆಂದು ಕಾಣುವುದಾದರೂ ಯಾವ ಸಂದರ್ಭ ಸಂಭವಗಳಲ್ಲಿ? ಯಾವತ್ತು ಪಕ್ಷದವರೂ ಇವೀಗ ಬೇಡ ಎಂದು ಅರಿಕೆ ಮಾಡಿಕೊಂಡರೂ, ಇನ್ನೂ ಹೊಸ ತಿದ್ದುಪಡಿಯಿಂದ ಒರ್ಡಿನೆನ್ಸು ಭಾರವಾಗಿ ವಿಸ್ತಾರವಾಗಿ ಸೂಕ್ಷ್ಮವಾಗಿ ಹರಿಯ ತೊಡಗಿದೆ. ಇದನ್ನು ಹಿಂತೆಗೆಯುವ 'ಕೂಡಲೆ' ಯಾವಾಗ 'ಕೂಡು'ವುದು?

* * * *

ಶ್ರೀಮತಿ ಪ್ರಭುಗಳು ತಾಳಿಯನ್ನು ಮತ್ತೆ ಮೆಜಿಸ್ಟ್ರೇಟರು ಹಿಂದಕ್ಕೆ ಕೊಟ್ಟರೂ ಅದನ್ನು ತೆಗೆದುಕೊಳ್ಳಲಿಲ್ಲವಂತೆ. ಸರಕಾರವು ಹಿಂದೆ ಕೊಟ್ಟು ಬಿಡಿರಿ ಎಂದು ಹೇಳುವ ಮೊದಲೇ ಅದನ್ನು ಇವರು ಅಂಗೀಕರಿಸಿದ್ದರೆ, 'ಮೆಜಿಸ್ಟ್ರೇಟರು ಅದನ್ನು ಕೂಡಲೆ ಹಿಂದೆ ಕೊಟ್ಟು, ಬಳಿಕ ಇನ್ನೇಕೆ ವಿಚಾರ' ಎಂದು ಸರಕಾರವು ಹೇಳುತ್ತಿತ್ತು. ಈಗ 'ನಾವು ಹೇಳುವ ಮೊದಲೇ ಕೊಟ್ಟರೂ ತೆಗೆದುಕೊಳ್ಳಲಿಲ್ಲ' ಎಂದು ಸರಕಾರವು ಹೇಳಬಹುದು. ಎಷ್ಟೆಂದರೂ ಅದು ತಾಳಿ. ಮೆಜಿಸ್ಟ್ರೇಟರು ಎತ್ತಿಕೊಳ್ಳುವಾಗ 'ತಾಳಿ' ಎಂದರು ವಕೀಲರು. ಈಗ ಹಿಂದೆ ಕೊಡುವಾಗ ತಾಳಿ! ಎಂದರು ಶ್ರೀಮತಿ.

* * * *

ಇದು ಪರಮಾನ್ನದ ಸುದ್ದಿ. ಎಸೆಂಬ್ಲಿಯಲ್ಲಿ ಚರ್ಚೆಯಾಯಿತು, ಪರಮಾನ್ನ ವೋಟುಗಳ ದಾರಿ ತಪ್ಪಿದುವು. ಡಾ| ಅಂಬೇಡ್ಕರರು ಮಂತ್ರಿಗಳಲ್ಲಿ ಸೇರಿ ಪರಮಾನ್ನ ಉಂಡರು, ಕೊಪ್ಪರನ್ನಿನಲ್ಲಿ ಗಾಂಧಿಜಿಗೆ ವಿರುದ್ಧ ಭಾಷಣ. ಊಟದ ದೆಸೆಯಿಂದ ಎಷ್ಟೋ ಜನರಿಗೆ ಮಾಟವಾದಂತಾಗುತ್ತದೆ

ಸ್ವದೇಶೀ ಸರಕನ್ನು

ತಯಾರಿಸಲೂ ಮಾರಲೂ ಯಥಾರ್ಥವಾಗಿ ಪ್ರಯತ್ನಿಸುವವರ ಮೇಲೆ ಸರಕಾರವು ಕೈಯೆತ್ತಲು ಬಯಸಿಲ್ಲ ಎಂದು ಬೊಂಬಾಯಿ ಸರಕಾರವು ಪ್ರಕಟಿಸುವುದು. ಕೈಗಾರಿಕೆಗಳ ಒಗ್ಗೆ ವಿಶೇಷ ತೇರ್ಗಡೆಯನ್ನು ಸಂಪಾದಿಸಿಕೊಂಡಿರುವ ಈ ದೇಶವು ಈಗ ಈ ಸ್ಥಿತಿಗೆ ಬಂದಿಳಿದಿದೆ. ಈಗ ತನ್ನ ಜನರ ಅನ್ನ, ಇತರರ ಕಣ್ಣು ಸರಕು ಇಷ್ಟು ಇಲ್ಲಿ ಬೆಳೆಸುವಂತಾಗಿದೆ. ಇತರ ಜನಾಂಗಗಳ ಮೇಲೆ ನಾವು ಇಷ್ಟು ಅವಲಂಬಿಸಿ ಇರುವಂತಾದ ನಾಚಿಗೆಯನ್ನು ಇನ್ನೆಷ್ಟು ಸಹಿಸಬೇಕಾಗುವುದೋ ತಿಳಿಯದು. ಅಂತಹುದು ಜನಾಂಗಗಳ ರೀತಿಯನ್ನು ನಾವು ಕಲಿತುಕೊಂಡ ಬಳಿಕ ಅನುಸರಿಸಬಾರದೇ? ಊರ ಸರಕು ಎಷ್ಟೋ ಮೇಲು, ಅದು ನಾಗಿಲ್ಲ, ನಾಜೂಕಾಗಿಲ್ಲ. ಫಸನಿಗೆ ಸರಿಯಲ್ಲ ಎಂತಾದರೂ ಅದನ್ನು ಆಯಾ ಊರಿನವರು ಕೊಂಡು ಉಪಯೋಗಿಸುವ ಕ್ರಮವು ಪರರಾಷ್ಟ್ರಗಳಲ್ಲಿದೆ. ಭಾರತವಾಸಿಯರೂ ಹಾಗೆಯೇ ಮಾಡಿದರೆ, ತಲೆಯೆತ್ತಿ ನಿಲ್ಲಬಹುದು, ನಾಚಿಗೆ ಮಾಯವಾಗುವುದು. ಸ್ವಾಭಾವಿಕ ಉತ್ಪನ್ನಗಳಿಗೆ ಬೆಲೆ ಏರುವುದು, ಜನಾಂಗದ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವೂ ದೊರೆವುದು. ಹೀಗಿರುವ ಕಾರಣ, ಸರಕಾರವು ಸ್ವದೇಶಿಗೆ—ಅಚ್ಚ ಸ್ವದೇಶಿಗೆ ವಿರುದ್ಧವಾಗಿಲ್ಲದೆ ಇದೆ ಎಂದು ತಿಳಿಸಿರುವುದೂ ಎಷ್ಟೊ ಸಂದೇಹಗಳನ್ನು ನಿವಾರಿಸಲು ಅನುಕೂಲವಾಗಿದೆ

ವಿಧವಾ ವಿವಾಹ.

ವಿಧವಾ ವಿವಾಹಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಮಹನೀಯರುಗಳು ತಮ್ಮ ಒಪ್ಪಿಗೆಯನ್ನು ಕೊಟ್ಟಿರುತ್ತಾರಾಗಿ ಶ್ರೀ ಗಣಪತಿ ನಾರಾಯಣ ಅಕ್ಕಾದಾಸರು ಪ್ರಕಟಿಸಿದ ಪುಸ್ತಕದಿಂದ ತಿಳಿಯಬರುತ್ತದೆ. ಇವರೆಲ್ಲರೂ ಧನ್ಯರೇ ಸರಿ!

ಹೆಚ್ಚಿನ ಬ್ರಾಹ್ಮಣರೂ, ಕ್ಷತ್ರಿಯರೂ, ಮುಖಂಡರೂ ಇದಕ್ಕೆ ತಮ್ಮ ಸಹಾನುಭೂತಿಯನ್ನೂ ಸಮ್ಮತವನ್ನೂ ಸರ್ವ ಬಗೆಯ ಸಹಕಾರವನ್ನೂ ಕೊಟ್ಟುದು ನಿಜವಾಗಿಯೂ ಶ್ಲಾಘನೀಯವೇ! ಮುಂದಕ್ಕೆ ನಡೆಯಲಿರುವ ಬಾಲವಿತಂತು, ವಿಧವೆಯರ ವಿವಾಹಕ್ಕೆಲ್ಲ ಇವರ ಉದಾರಹಸ್ತಾಶೀರ್ವಾದವು ದೊರೆಯುವುದಲ್ಲವೇ?'

ಅಕ್ಕಾದಾಸರು ಒತ್ತಾಯಪಡಿಸದೆಯೇ, ತಮ್ಮ ಆತ್ಮಸಂತೋಷದಿಂದಲೇ, ತಮ್ಮ ಸಹಿಗಳನ್ನು ಇವರೆಲ್ಲರೂ ಕೊಟ್ಟಿರಬಹುದು ಹಾಗಾದರೆ ನಿಜವಾಗಿಯೂ ದೇಶೋದ್ಧಾರವಾಗುವುದರಲ್ಲಿ ಸಂದೇಹವಿಲ್ಲ.

ತಮ್ಮ ಸಮ್ಮತಗಳನ್ನು ಕೊಟ್ಟು ಸುಮ್ಮಗೆ ಕುಳಿತರೆ ಸಾರ್ಥಕ್ಯವಿಲ್ಲ. ಈ ಮಹನೀಯರುಗಳೆಲ್ಲರೂ ತಮ್ಮ ಗೊತ್ತಿನಲ್ಲಿರುವ ತಮ್ಮ ಗೋತ್ರಿನಲ್ಲಿರುವ ಬಾಲವಿತಂತುಗಳಿಗೆ ಪುನರ್ವಿವಾಹವಾಗುವಂತೆ ತಕ್ಕ ಏರ್ಪಾಡು ಮಾಡಬೇಕು ಏನಿಲ್ಲದಿದ್ದರೂ, ವಿಧವೆಯ ಸಂಬಂಧಿಕರು ಅವಳಿಗೆ ಪುನರ್ವಿವಾಹವನ್ನು ಮಾಡಲೇಬೇಕೆಂದು ಬೋಧನೆಯನ್ನಾದರೂ ಕೊಡಬೇಕು ಕಿಂಚಿತ್ ಯತ್ನವನ್ನಾದರೂ ಮಾಡಬೇಕು

ವಿಧವೆಯರ, ಬಾಲವಿತಂತುಗಳ ಸಂಖ್ಯೆಯು ಎಷ್ಟು ಸಾವಿರ (?) ವಿರುತ್ತದೆಂದು ತಿಳಿದರೆ ಎಂತಹ ಮನುಷ್ಯನೂ ನಾಚಿಕೆಯಿಂದ ತಲೆತಗ್ಗಿಸಬೇಕು

ಕಾಲಚಕ್ರವು ತಿರುಗುತ್ತಿರುವಂತೆ ಬಾಲವಿತಂತುಗಳ ವಿಧವೆಗಳ ಪರಿಸ್ಥಿತಿಯು ಉತ್ತಮವಾಗುತ್ತದೇನೋ ನಿಂದಿತ, ಆದರೂ ನೈಸರ್ಗಿಕ ಪ್ರಗತಿ ಮಾರ್ಗಕ್ಕೆ ಜನರ ಪ್ರೋತ್ಸಾಹವು ಸಿಗಬೇಕು

ವಿಧವೆಯರ ಕಷ್ಟಪರಂಪರೆಗಳು ಮಾಯವಾಗಿ, ಅವರ, ಕುಟುಂಬದ, ಸಮಾಜದ ದೇಶದ ಏಳಿಗೆಯಾಗಬೇಕೆಂದೇ ಈ ತುಂಡು ತುಂಡು ವಿಷಯಗಳನ್ನಿಷ್ಟು ಬರೆದಿರುತ್ತದೆ ಅದರ ನಿವಾರಣೆಗಾಗಿ ಹೆಣಗಾಡುವ ಮಹನೀಯರುಗಳಿಗೆ ಸ್ಪತ್ಸಾಹರ್ವಾದ ಬೆಂಬಲವು ದೊರೆಯಬೇಕೆಂಬುದೇ ದೊಡ್ಡ ಆಶೆ

ಪುರಾಣಮತವಾದಿಗಳೇ! ಬಾಲವಿವಾಹ ವಿರೋಧಿಗಳೇ! ನೀವೂ ಕೂಡಾ ನಿಮ್ಮ ಸಂಕುಚಿತ ಮನೋಭಾವನೆಯನ್ನು ಈ ಕಾಲಕ್ಕೆ ಕಟ್ಟಿಟ್ಟು ಈ ಸಮಾಜ ಕಷ್ಟವನ್ನು ಬಗೆಹರಿಸಲು ಒತ್ತಾಸೆಯನ್ನು ಮಾಡಲೇಬೇಕು ನೀವು ನಿಮ್ಮ ಮನೋಪರಿವರ್ತನೆಯನ್ನಲ್ಲ ವಾಕ್ಪರಿವರ್ತನೆಯನ್ನಲ್ಲ ಆತ್ಮಪರಿವರ್ತನೆ ಮತ್ತು ಹೃದಯಪರಿವರ್ತನೆಯನ್ನೇ ಈ ಯುಗದಲ್ಲಿ ಮಾಡಲೇಬೇಕಾಗಿದೆ

ಪ್ರಾಣಿ ಸಮಾನವಾದ ನೈಸರ್ಗಿಕ ಚಿಂತನೆಯಿಂದ ಪಂಡಿತರು ದೂರವಾಗಿಲ್ಲ ಕಠೋರ ಹೃದಯಿಯಾದ ಪುರುಷನು ಹಿಂದಾಗಿಲ್ಲ ಎಂದ ಮೇಲೆ ಮೃದು ಹೃದಯದವಳಾದ ಸ್ತ್ರೀಯು ಹೇಗೆ ತಾನೆ ಹಿಂದಿದ್ದಾಳು?

ಹಿಂದೂ ಸಮಾಜದಲ್ಲಿ ಪುರುಷನಿಗೆ ಸರ್ವ ಅಧಿಕಾರವಿದೆ. ಅವನು ಒಂದಕ್ಕಿಂತ ಹೆಚ್ಚು ವಿವಾಹಗಳನ್ನಾಗಬಹುದು ಅವನು ವ್ಯಭಿಚಾರಕ್ಕಿಳಿದರೆ ಅದಕ್ಕೆ ಬಹಿಷ್ಕಾರವಿಲ್ಲ ಅವನು ಆ ವಿಷಯದಲ್ಲಿ ಧರ್ಮ ತಪ್ಪಿ ನಡೆದರೆ ಅವನಿಗೆ ದಂಡನೆಯಿಲ್ಲ ಆದರೆ ಸ್ತ್ರೀಗಾದರೋ ಇಬ್ಬಟ್ಟು ಅದನ್ನು ಹೇಳತೀರದು!

ಪುರುಷನು ಅನ್ಯಾಯ ಮಾಡಿದ ಕುರುಹುಗಳು ಕಂಡು ಬಂದರೂ ಅವನಿಗೆ ಕ್ಷಮೆಯಿದೆ. ಆದರೆ ಸ್ತ್ರೀಯು ಅನ್ಯಾಯದ ಕುರುಹು ಇಲ್ಲದಿದ್ದರೂ ಕೂಡಾ ಅದನ್ನು ಕಲ್ಪಿಸಿ ಅವಳ ಮೇಲೆ ಅನ್ಯಾಯದ ಹೊರೆಯನ್ನು ಹೊರಿಸುವವರಿದ್ದಾರೆ

ಒಬ್ಬ ಪುರುಷನು ದಾರಿಯ ಮೇಲೆ ನಿಂತು ಒಬ್ಬ ಸ್ತ್ರೀಯೊಡನೆ ಮಾತನಾಡಬಹುದು ಆ ಪುರುಷನಿಗೆ ಸಮಾಜದ ದೂರು ಇಲ್ಲ ಆದರೆ ಆ ಸ್ತ್ರೀಯು ಸಮಾಜದ ನಿಂದೆಗೆ ಕಾರಣಳಾಗುತ್ತಾಳೆ

*ಇದರ ಕಾರಣವೇನೆಂದು ಕೇಳಿದರೆ ಸ್ತ್ರೀಗೆ ಅಷ್ಟು ಸ್ವಾತಂತ್ರ್ಯ*ವನ್ನು ಕೊಟ್ಟರೆ ಲೋಕವೇ ಹಾಳಾದೀತು ಎಂಬ ಉತ್ತರವು ನಮಗೆ ಲಭಿಸುತ್ತದೆ

ಮನುಷ್ಯವರ್ಗಕ್ಕೆ ಸೇರಿದ ಸ್ತ್ರೀ ಪುರುಷರು ಲೋಕವ್ಯವಹಾರಕ್ಕೆ ಸರಿಸಮಾನತೆಯಿಂದ ಉಪಯೋಗಕ್ಕೆ ಬೀಳುತ್ತಾರಾದರೆ ಸಮಾಜವು ಆ ಸ್ತ್ರೀಯರನ್ನು ಏಕೆ ಕಟ್ಟಳೆಗಳ ನಿರ್ಬಂಧದಲ್ಲಿಟ್ಟಿತು?

"ದಾಸು"

ಗಾಂಧಿಯ ಬಂಧನಕ್ಕೆ ನಾನು ಅಪ್ಪಣೆ ಕೊಟ್ಟಿರುತ್ತೇನೆ.

ಪಾರ್ಲಿಮೆಂಟಿನಲ್ಲಿ ಈ ಕೆಳಗಣ ೩೩ ಪ್ರಶ್ನೋತ್ತರಗಳು ನಡೆದುವು. ಕೆಳಗಿನವು ಸ್ಟೇಟ್ ಸೆಕ್ರೆಟರಿಗಳಾದ ಸರ್ ಸಾಮುವೇಲ್ ಹೋರರ ಉತ್ತರ

ಪ್ರಶ್ನೆ – ಇಷ್ಟರ ತನಕ ಹಿಂದೂದೇಶದಲ್ಲಿ ನಡೆದ ಕೈದುಗಳೆಷ್ಟಿರಬಹುದು?

ಉ – ಎಷ್ಟು ಮಂದಿಗಳು ಕೈದು ಮಾಡಲ್ಪಟ್ಟರೆಂದು ಈಗ ಹೇಳಲು ಅಸಾಧ್ಯ ಆದರೆ ಓರ್ಡಿನೆನ್ಸ್ ಮತ್ತು ಸಾಮಾನ್ಯ ಶಾಸನಗಳ ಮೂಲಕ ಎಷ್ಟು ಮಂದಿಗಳಿಗೆ ಶಿಕ್ಷೆಯಾಯಿತೆಂದು ಪಟ್ಟಿಯು ಬಂದ ಮೇಲೆ ಹೇಳುತ್ತೇನೆ ಸ್ಥಳೀಕ ಸರಕಾರಗಳು ಹೆಚ್ಚಿನ ಕೈದಿಗಳನ್ನಿಡುವುದಕ್ಕಾಗಿ ಸ್ಥಳವನ್ನು ಮಾಡುತ್ತಿರುವರು ಈ ಸ್ಥಳಗಳು ಸಾಕಾಗದಿರಬೆಂದು ಹೇಳಲು ಸಾಧ್ಯವಿಲ್ಲ ಹಿಂದೀಯ ಮತ್ತು ಬ್ರಿಟಿಷ ಸರಕಾರಗಳು ಅಧಿಕಾರಿಗಳಿಗೆ ಕೊಡಲ್ಪಟ್ಟ ವಿಶೇಷ ಅಧಿಕಾರವನ್ನು ಸಮಯಾನುಸಾರ ಹಿಂತೆಗೆಯಲಿರುತ್ತದೆ

ಪ್ರಶ್ನೆ – ಓರ್ಡಿನೆನ್ಸುಗಳ ಕುರಿತು ಗಾಂಧಿಯವರೊಡನೆ ಚರ್ಚಿಸಲು ತಿರಸ್ಕರಿಸಿದ ಮೊದಲು ವೈಸರಾಯರು ನಿಮ್ಮೊಡನೆ ಕೇಳಿಕೊಂಡಿರುವರೋ ಮತ್ತು ಗಾಂಧಿಯವರನ್ನು ಬಂಧಿಸುವ ಮೊದಲು ಸಾರ್ವಭೌಮ ಸರಕಾರದವರೊಡನೆ ಕೇಳಿಕೊಂಡಿರುವರೋ?

ಉ – ಹೌದು ಎರಡು ವಿಷಯಗಳಲ್ಲೂ ಮೊದಲೇ ನನ್ನೊಡನೆ ವಿಚಾರಿಸಿದವರು

ಪ್ರಶ್ನೆ ಗಾಂಧಿಯವರ ಬಂಧನದಿಂದಾಗಿ ಏನೆಲ್ಲ ಘಟನೆಗಳಾದುವು ಹೇಳಬಲ್ಲಿರಾ

ಉ ಈ ವಿಷಯಕವಾಗಿ ಇಂಡಿಯಾ ಸರಕಾರವು ಪ್ರಕಟಿಸಿದ ಪ್ರಕಟಣೆಯಲ್ಲಿ ಎಲ್ಲವೂ ಇವೆ ಇವುಗಳನ್ನು ಪಾರ್ಲಿಮೆಂಟಿನಲ್ಲಿ ಹಂಚಲಾಗುವುದು

ಪ್ರಶ್ನೆ ನೀವು ಲಂಡನಿನಲ್ಲಿ ಗಾಂಧಿಯವರೊಡನೆ ಓರ್ಡಿನೆನ್ಸುಗಳ ಕುರಿತು ಮಾತನಾಡಿರುವಿರಾ?

ಉ – ಹೌದು ನಾನು ಓರ್ಡಿನೆನ್ಸುಗಳ ಕುರಿತು ಅವರೊಡನೆ ಮಾತನಾಡಿರುವೆನಾದರೂ ಕ್ರಾಂತಿಕಾರರ ಮೇಲಿನ ಬಂಗಾಳ ಓರ್ಡಿನೆನ್ಸಿನ ಕುರಿತು ಮಾತನಾಡಿರುವೆನಲ್ಲದೆ ಗಾಂಧಿಯವರು ಇಂಗ್ಲಾಂಡಿನಿಂದ ಹೋದ ಮೇಲೆ ಕಾಂಗ್ರೆಸ್ಸಿನ ಮೇಲೆ ಜಾರಿ ಮಾಡಲ್ಪಟ್ಟ ಸಾಮಾನ್ಯ ಓರ್ಡಿನೆನ್ಸುಗಳ ಕುರಿತು ಮಾತನಾಡಲಿಲ್ಲ ನನಗೆ ನೆನಪಿರುವಷ್ಟರ ಮಟ್ಟಿಗೆ ಹೇಳುವುದಾದರೆ ಗಾಂಧಿಯವರು ತಾನು ಬಂಗಾಳಕ್ಕೆ ಹೋಗಬೇಕೆಂಬ ವಿಷಯಗಳನ್ನು ನನ್ನೊಡನೆ ಹೇಳಲೇ ಇಲ್ಲ ಹಿಂದೂದೇಶದಲ್ಲಿ ಮುಂದಕ್ಕೆ ಗಾಂಧಿ ವೈಸರಾಯರೊಳಗೆ ನಡೆಯಲಿದ್ದ ಯಾವ ಬಗೆಯ ಪ್ರಶ್ನೆಗಳಲ್ಲೂ ನಾನು ಭಾಗವಹಿಸಲಿಲ್ಲ. ಕ್ರಾಂತಿಕಾರರ ಚಳವಳಿವು ಇರುವಷ್ಟರ ಸಮಯದ ವರೆಗೆ ಬಂಗಾಳ ಓರ್ಡಿನೆನ್ಸನ್ನು ಹಿಂತೆಗೆಯಲಾಗುವುದಿಲ್ಲವೆಂದು ನಾನು ಗಾಂಧಿಯವರಿಗೆ ಸ್ಪಷ್ಟವಾಗಿ ಹೇಳಿರುತ್ತೇನೆ

ಪ್ರ – ಮುಂಬಾಯಿಯಲ್ಲಿ ವಿದೇಶಿ ವಸ್ತ್ರದಂಗಡಿಗಳ ಪಿಕೆಟಿಂಗ್ ನಿಂತಿದೆಯೋ?

ಉ – ಅದನ್ನು ಹೇಳಲು ಸಮಯವು ಪರಿಪಕ್ವವಾಗಿಲ್ಲ

ಪ್ರ – ವಿದೇಶಿ ವಸ್ತ್ರದ ಬಹಿಷ್ಕಾರದ ಪರಿಣಾಮವೆಷ್ಟಾಗಿರುತ್ತದೆಂದು ನಿಮಗೆ ಹೇಳಲು ಸಾಧ್ಯವೋ.

ಉ – ಅದನ್ನು ಹೇಳಲು ಈಗ ಸಾಧ್ಯವಿಲ್ಲ ಸಮಯವು ಪಕ್ವವಾಗಿಲ್ಲ

ಪ್ರ ಯಾವ ಸಂಸ್ಥೆಗಳನ್ನೆಲ್ಲ ಶಾಸನವಿರೋಧವಾಗಿ ಮಾಡಿರುವಿರಿ? ಟ್ರೇಡ್ ಯೂನಿಯನ್ ಸಂಸ್ಥೆಯನ್ನು ಕಾಯಿದೆ ವಿರೋಧವೆಂದು ಮಾಡಲ್ಪಟ್ಟಿದೆಯೋ?

ಉ – ಕಾಯಿದೆ ವಿರೋಧವಾಗಿ ಎಷ್ಟು ಸಂಸ್ಥೆಗಳನ್ನು ಮಾಡಿದೆ ಎಂದೂ ಅವುಗಳ ತರಗತಿಯ ಕ್ರಮವು ಹೇಗೆಂದೂ ಹೇಳುವುದಕ್ಕೆ ನನಗೆ ಸರಿಯಾದ ವರ್ತಮಾನವು ಬಂದಿಲ್ಲ ಆದರೆ ಟ್ರೇಡ್ ಯೂನಿಯನ್ ಸಂಸ್ಥೆಯನ್ನು ನಾಶಗೊಳಿಸುವ ಯತ್ನವು ನಡೆದಿದೆಯೆಂಬುದು ಸರಿಯಲ್ಲ

ಪ್ರ ಮೀರತ್ ಪಿತೂರಿ ಅಪಾದನೆಯ. ಇಷ್ಟರ ತನಕವೂ ಇತ್ಯರ್ಥಿಸಲ್ಪಡಲಿಲ್ಲವೇಕೆ?

ಉ – ಮೀರತ್ ಪಿತೂರಿಯ ಮೇಲಿನ ನ್ಯಾಯವಿಚಾರಣೆಯೂ ಇದೇ ಋತುವಿನಲ್ಲಿ ಹೊರಬೀಳಲಿದೆ ಬಹಳವಾದ ಸಾಕ್ಷಿಯಿದ್ದುದರಿಂದಲೂ ಪ್ರತಿನಿಧಿಗಳ ವಿಚಾರಣೆಯು ಮುಗಿಯದಿರುವುದರಿಂದಲೂ ಅದನ್ನು ಇತ್ಯರ್ಥಿಸುವುದಕ್ಕೆ ಇಷ್ಟು ತಡವಾಯಿತು

ಪ್ರಶ್ನೆ – ಮೀರತ್ ಕೈದಿಗಳನ್ನು ಮೂರು ವರ್ಷದ ದಂಡನೆಗೆ ಗುರಿಪಡಿಸಿದುದರಿಂದ ಅವರನ್ನು ಬಿಡಲಾಗುವುದೇ?

ಉ ಇಲ್ಲ ಈ ವಿಚಾರಣೆಯು ಬೇಗನೇ ಮುಗಿಯುವಂತೆ ಏರ್ಪಾಡಾಗುವುದು

ಪ್ರಶ್ನೆ—ಹಿಂದೂದೇಶದಿಂದ ಚೀಣಾಕ್ಕೆ ಸೈನ್ಯಗಳು ಹೋಗಿವೆಯೊ?

ಉ—ಇಲ್ಲ ಹಿಂದೂದೇಶದಿಂದ ಸೈನಗಳನ್ನು ಚೈನಕ್ಕೆ ಕಳುಹಿಸಿರುವುದಿಲ್ಲ ಆದರೆ ಒಂದು ಬ್ರಿಟಿಷ್ ಯುದ್ಧ ನಾವೆಯನ್ನು ಅಲ್ಲಿಗೆ ಕಳುಹಲಾಗುವುದು

ಮಾರಿಯಮ್ಮಳಿಗೆ ಪ್ರಾಣಿಗಳನ್ನರ್ಪಿಸಬೇಡಿರಿ.

ಮಾರಿಯಮ್ಮನ ಹೆಸರಿನಿಂದ ಪ್ರತಿದೇಶಗಳಲ್ಲೂ ಸಾಯುವ ಕುರಿ ಕೋಳಿ, ಹಂದಿ, ಕೋಣಗಳಿಗೆ ಲೆಕ್ಕವಿಲ್ಲ ಆಹಾ! ಹಿಂದೂ ಸಮಾಜದ ಪಾಷಾಣ ಹೃದಯವೇ!

ಯಾವುದೋ ಒಂದು ಪುರಾಣ ಕಥೆಯ ಆಧಾರಕ್ಕಾಗಿ ಮಾರಿಯನ್ನುಂಟುಮಾಡುವ ಮಾರಿಯಮ್ಮಳಿಗೆ ವರುಷಗಟ್ಟಳೆ ಲಕ್ಷೋಪಲಕ್ಷ ಪ್ರಾಣಿಗಳನ್ನು ಕೊಲ್ಲುವ ಅದೊಂದು ಹಬ್ಬವು ಮಂಗಳೂರಿನ ಉರ್ವದಲ್ಲಿ ಬೇಗನೇ ಜರಗಲಿದೆ. ಭೂತದಯೆಗಾಗಿ ಹೆಸರುವಾಸಿಗಳಾದ ಹಿಂದೂಗಳು ಇಂತಹ ಕ್ರೂರಕೃತ್ಯವನ್ನು ದೇವರ ಹೆಸರಿನಲ್ಲಿ ಮಾಡುತ್ತಿರುವುದು ನಿಜವಾಗಿಯೂ ಖಂಡನೀಯವು ಮಾರಿಯಮ್ಮಳಿಗೆ ಕೋಳಿ, ಕೋಣಗಳನ್ನು ಅರ್ಪಿಸುವ ಜನರು ಸಾವಿರಾರು ಕರ್ಮವನ್ನು ಮಾಡಿ ದುರಾಚಾರವನ್ನೆಸಗಿ, ಕಷ್ಟಪರಂಪರೆಗಳನ್ನು ಬಗೆಹರಿಸುವ ಅದೊಂದು ದುಷ್ಟ ಮತ್ತು ಮೂಢ ಆಶೆಯಿಂದ, ದೇವರಿಂದಲೇ ಸೃಷ್ಟಿಸಲ್ಪಟ್ಟ ಪ್ರಾಣಿಗಳನ್ನು ನಾಶಮಾಡುವುದೆಂದರೆ ಈ ದಿನದಲ್ಲಿ ಎಂತಹ ಮೌಢ್ಯವು ಮೂರ್ತೀಕರಿಸಿರಬೇಕೆಂದು ತಿಳಿಯಬೇಕು ಈ ಜನರು ಮಾಡಿದ ತಪ್ಪಿಗಾಗಿ ಇವರ ಮಕ್ಕಳುಮರಿಗಳನ್ನು ಶಿಕ್ಷಿಸಿದರೆ ಇವರಿಗೆ ಎಂತಹ ನೋವಾದೀತು? ಇವರು ಒಪ್ಪು ಆಳಲಿಕ್ಕಿಲ್ಲ? ಆದರೆ ಇವರ ಮಕ್ಕಳುಮರಿಗಳೂ ಇವರೂ ಮಾಡಿದ ತಪ್ಪಿಗಾಗಿ ಕುರಿ ಕೋಳಿ ಹಂದಿ, ಕೋಣಗಳ ಪ್ರಾಣಗಳನ್ನು ತೆಗೆಯುವುದೆಂದರೆ ಇದೆಂತಹ ಮೌಢ್ಯ! ಮಾರಿಯಮ್ಮಳಿಗೆ ಕುರಿ, ಕೋಳಿ ಹಂದಿ ಕೋಣಗಳನ್ನರ್ಪಿಸುವ ದೇಶಿಗರೇ! ಹಳ್ಳಿಗರೇ! ಪಟ್ಟಣಿಗರೇ! ದೋಷವು ನಿಮ್ಮ ಹಿಂಸಾಮಯ ಕೆಲಸಗಳಿಂದಾಗಿ ದಿನೇ ದಿನೇ ಅಧೋಗತಿಗಿಳಿಸುತ್ತಲಿರುವುದೆಯಾಗಿ ಭಾವಿಸಿರಿ. ನೀವು ಪ್ರಾಣಿಗಳಿಗೆ ಎಷ್ಟು ಕಷ್ಟ ಕೊಡುತ್ತೀರೋ ಅಷ್ಟೇ ಕಷ್ಟವು ನಿಮ್ಮ ಬಂಧುಬಳಗ, ವಂಶಪಾರಂಪರ್ಯದವರಿಗೆ ತಪ್ಪದಿರುವುದಿಲ್ಲ ನಿಮ್ಮ ಹಿಂಸೆಗೆ ತಕ್ಕ ಶಿಕ್ಷೆಯು ಈಗಲೇ ದೊರೆಯುವುದಿಲ್ಲವಾದರೂ ನಿಮ್ಮ ಮುಂದಿನ ಮಾರ್ಗವಲ್ಲಿ ಅದು ಕೊಡಕನ್ನು ತಂದೊಡ್ಡದಿರುವುದಿಲ್ಲ ನಿಮ್ಮ ಕಾಲದ ನಂತರ ನೀವು ಎಂತಹ ಘೋರ ಯಾತನೆಯನ್ನನುಭವಿಸಲಿರುವಿರೆಂದು ಒಮ್ಮೆ ಮನಸ್ಸಿಗೆ ತಂದುಕೊಳ್ಳಿರಿ. ಕುತ್ತಿಗೆ ಬಗ್ಗಿಸಿ ನಿಮ್ಮ ಕತ್ತಿಯ ಎದುರು ನಿಲ್ಲುವ ಕೋಣಗಳ ಕತ್ತಿನ ಮೇಲೆ ನಿಮ್ಮ ಕತ್ತಿಯು ಸರ್ರನೆ ಓಡುವಾಗ ಆ ಮಾರಿಗೂ ಕೂಡ ರೋಮಾಂಚನ ಕೋಪವಾದಿರಲಿಕ್ಕಿಲ್ಲ ಮೇಲಿಂದ ನಿಮ್ಮ ದುರ್ವರ್ತನೆಯನ್ನು ನೋಡುತ್ತಿರುವ ದೇವನೊಬ್ಬನು ನಿಮ್ಮನ್ನು ಯಾವ ರೀತಿಯಲ್ಲಿ ಶಿಕ್ಷಿಸುವನೆಂದು ತಿಳಿದುಕೊಳ್ಳಿರಿ ಇಷ್ಟರ ತನಕ ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪಪಟ್ಟು ಈ ಸಲವಾದರೂ ಆ ಮಾರಿಗಳಿಗೆ ನಿಮ್ಮ ಕೋಳಿ ಕುರಿ ಕೋಣಗಳನ್ನು ಬಲಿಕೊಡಬೇಡಿರಿ ದೇವರ ಹೆಸರಿನಿಂದ ಎಂದಿಗೂ ಮಾಂಸಭಕ್ಷಕರಾಗಿ ಹೋಗಬೇಡಿರಿ! ಹಾಗೂ ಹೀಗೂ ಇನ್ನು ಮುಂದಿನ ಮಾರಿಬಲಿದಾನಗಳನ್ನು ನಿಲ್ಲಿಸಿರಿ ಪ್ರಾಣಿಗಳನ್ನು ಅವಳಿಗಾಗಿ ಅರ್ಪಿಸದಿರಿ

ಪ್ರ – ಗಾಂಧೀ ವೈಸರಾಯರೊಳಗಣ ಪತ್ರವ್ಯವಹಾರವು ಏನಾಗಿದೆ?

ಉ – ಅದನ್ನು ಸದ್ಯ ಪಾರ್ಲಿಮೆಂಟಿನಲ್ಲಿ ಪ್ರಕಟಿಸಲಾಗುವುದು

ಪ್ರ – ಹಿಂದೂದೇಶದಲ್ಲಿ ಮಿಲಿಟರಿ ಕಾಲೇಜನ್ನು ತೆರೆಯುವ ಏರ್ಪಾಡೇನಾಯಿತು?

ಉ ಮಿಲಿಟರಿ ಕಾಲೇಜ್ ಒಂದನ್ನು ಹಿಂದೂದೇಶದಲ್ಲಿ ತೆರೆಯುವ ಆಲೋಚನೆಯಿದೆ ಇದರಲ್ಲಿ ಹಿಂದೀಯ ಕಮಿಶನ್ ಆಫೀಸರರನ್ನು ತರಬೇತುಗೊಳಿಸಲಾಗುವುದು. ಇದರ ಪ್ರಥಮ ಪ್ರವೇಶ ಪರೀಕ್ಷೆಯು ಜುಲಾಯಿಯಲ್ಲಿ ಜರಗುವುದು ೧೯೩೩ನೆ ಮಾರ್ಚ ತಿಂಗಳಲ್ಲಿ ಇಂಡಿಯನ್ ಸ್ಯಾಂಡ್‍ಹರ್ಸ್ಟಿನ ಪ್ರಥಮ ಪ್ರವೇಶೋತ್ಸವವು ಜರಗುವುದು

ಪ್ರಶ್ನೆ ರೌಂಡ್‍ಟೇಬಲಿಗೆ ಎಷ್ಟು ವೆಚ್ಚವಾಗುವದು?

ಉ – ಎರಡು ರೌಂಡ್‍ಟೇಬಲ್ ಪರಿಷತ್ತಿಗೂ ಬ್ರಿಟಿಷರಿಂದ ೫೪,೦೦೦ ಪೌಂಡುಗಳು ವೆಚ್ಚವಾಗಬಹುದು ಪ್ರಥಮ ಪರಿಷತ್ತಿಗೆ ಇಂಡಿಯನ್ ರೆವಿನ್ಯೂವಿನಿಂದ ೫೫,೩೩೮ ಪೌಂಡುಗಳು ತಗಲಬಹುದು ಎರಡನೆಯ ಪರಿಷತ್ತಿಗೆ ೪೯ ೦೦೦ ಪೌಂಡುಗಳು ತಗಲಬಹುದು ಈಗ ಹಿಂದೂದೇಶದಲ್ಲಿರುವ ಮೂರು ರೌಂಡ್ ಟೇಬಲ್ ಪರಿಷತ್ತಿನ ಬ್ರಿಟಿಷ್ ಪ್ರತಿನಿಧಿಗಳ ವೆಚ್ಚವನ್ನು ಬ್ರಿಟಿಷ್ ಎಕ್ಸ್‌ಚೇಕರ್ ಕೊಡುವುದು

ಪ್ರ – ಈ ಕಮಿಟಿಗಳ ಕಾರ್ಯಕ್ರಮ ಕಾರ್ಯಪರಿಣಾಮಗಳನ್ನು ವಿಪುಲವಾಗಿ ಪ್ರಕಟಿಸುವ ಏರ್ಪಾಡು ಇದೆಯೇ?

ಉ – ರೌಂಡ್‍ಟೇಬಲ್ ಕಮಿಟಿಗಳ ಪ್ರೊಸೀಡಿಂಗ್ಸ್‌ಗಳನ್ನು ವಿಪುಲವಾಗಿ ಪ್ರಕಟಿಸಬೇಕು ನಾನೂ ಇಂಡಿಯಾ ಸರಕಾರವೂ ಏರ್ಪಾಡು ಮಾಡುವೆವು ಪತ್ರಿಕೆಗಳಿಗೆ ಈ ಕುರಿತು ಕೂಲಂಕಷವಾಗಿ ತಿಳಿಯಬೇಕಾಗಿ ಅವುಗಳಿಗೆ ವಾರ್ತೆಗಳನ್ನು ಕೊಡುತ್ತಾ ಇದ್ದೇವೆ ಆದರೆ ಎಲ್ಲ ಅಧಿಕಾರಿಗಳಿಗೂ ಮತ್ತು ಇನ್ನಿತರರಿಗೂ ಈ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿಯನ್ನು ಹಂಚಬೇಕೆಂಬುದು ಅಸಾಧ್ಯ ವಿಷಯ

ಅನುಕ್ರಮಣಿಕೆ.

ಅಗ್ರಲೇಖ.
೧ ಲಿಬರಲ್ ಪಕ್ಷದವರ ಧೋರಣವೇನು? . ೬
ಸ್ಫುಟವಿಚಾರಗಳು ೪
ಸ್ಫೋಟಗಳು ೫
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೬
ಒಳದೇಶ ವರ್ತಮಾನ . . . ೬-೭
ದಕ್ಷಿಣಕನ್ನಡ—ಮಂಗಳೂರು, ಉಡುಪಿ, ಪುತ್ತೂರು, ಬಂಟ್ವಾಳ, ಪರಂಗಿಪೇಟೆ ೭
ವಿವಿಧ ಸಮಾಚಾರಗಳು . . . ೧೧
ನಮ್ಮ ಶಾಲೆಗಳು . . ೧೪
ಸಹಕಾರಿಗಳ ಮುಂದಣ ಕರ್ತವ್ಯ . . ,,
ವಿಧವಾ ವಿವಾಹ . . ೫
ಗಾಂಧಿಯ ಬಂಧನಕ್ಕೆ ನಾನು ಅಪ್ಪಣೆ ಕೊಟ್ಟಿದ್ದೇನೆ ,,
ಮಾರಿಯಮ್ಮನಿಗೆ ಪ್ರಾಣಿಗಳನ್ನರ್ಪಿಸದಿರಿ . ,,
ಹಿಂದೂದೇಶದಲ್ಲಿ ದಮನನೀತಿ . ೯
ದೇಶದಲ್ಲೆಲ್ಲಾ ಗಾಂಧೀ ಟೋಪಿವಾಲರ ದಿನಾಚರಣೆಗಳು ೧೦
ಪತ್ರವ್ಯವಹಾರ ೨

ಸ್ವದೇಶಾಭಿಮಾನಿ.

ತಾ. ೧೨ನೇ ಶುಕ್ರವಾರ ಫೆಬ್ರವರಿ ೧೯೩೨

ಲಿಬರಲ್ ಪಕ್ಷದವರ ಧೋರಣವೇನು?

ದೇಶದಲ್ಲೆಲ್ಲಾ ಉಗ್ರ ಶಾಸನವು ಜ್ಯಾರಿಯಲ್ಲಿರುತ್ತದೆ ಸಾವಿರಗಟ್ಟಳೆಯಲ್ಲಿ ಜನರು ಜೈಲನ್ನು ತುಂಬಿದ್ದಾರೆ ಕಾನೂನಿನ ಮಟ್ಟಿಗೆ ಕಾಂಗ್ರೆಸ್ಸೆಂಬುದು ಇಲ್ಲವೇ ಇಲ್ಲ ಹಾಗಾದರೆ ಸರಕಾರದೊಡನೆ ಸಹಕಾರದಿಂದ ದೇಶಾಭ್ಯುದಯವಾಗಬೇಕೆಂದು ಕೋರುವ ಈ ಉದಾರ ಪಕ್ಷದ ಮುಖಂಡರ ಧೋರಣವೇನು? ಕಾಂಗ್ರೆಸ್ ಸರಕಾರ ಮಧ್ಯಸ್ತಿಕೆ ಮಾಡಿ ಹೆಸರು ಹೊಂದಿದ ಸಪ್ರೂ ಜಯಕರರ ಪ್ರಕೃತದ ಅಭಿಪ್ರಾಯವೇನು? ಅವರು ದೇಶದ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವ ತರದ ನಿರ್ಧಾರಕ್ಕೆ ಬಂದಿರುವರು? ಎಂಬ ಪ್ರಶ್ನೆಯು ಆಗಾಗ ಕಂಡೇ ಬರುವುದು

ಸಪ್ರೂಗಳೆಂದರೆ ಸ್ಯಾಮನ್ ಕಮಿಶನ್ನಿನ ಬಹಿಷ್ಕಾರದ ವೀರರು, ಅವರನ್ನು ಜಯಕರರೂ ಹಿಂಬಾಲಿಸಿದರು ಸ್ಯಾಮನ್ ಕಮಿಶನ್ನಿನ ರಚನೆಯ ಮೇಲೆ ದಂಗೆಯೆದ್ದವರು ಈಗಿನ ರೌಂಡ್‌ಟೇಬಲ್ ಪರಿಷತ್ತಿನಲ್ಲಿ, ಅದರಲ್ಲಿ ನಡೆದ ಕಾರ್ಯಕಲಾಪಗಳಲ್ಲಿ ಅರ್ಥಾತ್ ಆ ಮೇಲಿನ ಕಮಿಟಿಗಳಲ್ಲಿ ಅಷ್ಟು ತೃಪ್ತಿಕರವಾದದ್ದೇನು ಕಂಡಿರುವರು? ಸತ್ಯಾಗ್ರಹ ಚಳವಳವು ಅಸಾಧುವೇನೂ ಇರಬಹುದು, ಆದರೆ ಆ ಕಮಿಟಿಗಳಲ್ಲಿ ಎಷ್ಟು ಪರಿಣಾಮಕಾರಿಯಾದ ಕೆಲಸವು ಸಾಧ್ಯವಿದೆಯೆಂಬುದನ್ನು ಇವರು ಎದೆ ತಟ್ಟಿ ಹೇಳಬಲ್ಲರೆ?

ಎಸೆಂಬ್ಲಿಯಲ್ಲಿ ಈಗಿರುವವರು ಸರಕಾರದ ಸಹಾಯಕರೇ ಆಗಿರುವರು ಆದರೂ ಅವರ ಸಾಮಾನ್ಯ ವಿರೋಧಿಗಳಿಗ ಮಾನ್ಯತೆಯಿರುವುದಿಲ್ಲ ಓರ್ಡಿನೆನ್ಸು ಜ್ಯಾರಿ ತರುವ ಸಮಯದಲ್ಲಿ ಈ ಲಿಬರಲ್ ಪಕ್ಷದವರನ್ನಾದರೂ ತಮ್ಮ ವಿಶ್ವಾಸದೊಳಗೆ ತೆಗೆದುಕೊಂಡರೇ? ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಅವರಿಗೆ ನ್ಯಾಯವೆಂದು ತೋರಿದುದಾದರೂ ಸಾಧ್ಯವಾಯಿತೇ? ಮಾತ್ರವಲ್ಲ, ಹಿಂದೂ-ಮುಸಲ್ಮಾನ ಭೇದಗಳನ್ನು ಕಡಿಮೆ ಮಾಡಲಿಕ್ಕೆ ಸರಕಾರವು ಪ್ರಯತ್ನಿಸಿದೆಯೇ? ಬದಲಿಗೆ ಮುಸಲ್ಮಾನರ ಬೇಡಿಕೆಗಳ ಮತ್ತು ಹಠಸಾಧನೆಯ ಹಿಂದೆ ಅಡಗಿದ ಕೈಯೊಂದು ಕಾಣುವುದಿಲ್ಲವೇ?

ಇಂಗ್ಲೆಂಡಿನಿಂದ ಸರ್ ಸಾಮುವೇಲ್ ಹೋರರು ಪಾರ್ಲಿಮೆಂಟಿನಲ್ಲಿ ಕೊಡುವ ಪ್ರತ್ಯುತ್ತರಗಳು ಈಗಿನ ಪರಿಸ್ಥಿತಿಗೆ ಹೆಚ್ಚಿನ ಸಹಾಯಕವಾಗಿರುವುದಿಲ್ಲ ಆ ಜವಾಬ್ದಾರಿ ತಪ್ಪಿಸಿ ಆಡುವ ಮಾತುಗಳ ಹಿಂದೆ ನಿಕ್ಕಿನ ಶಾಸನದ ಕಾಠಿಣ್ಯವು ತೋರಿ ಬಾರದೆ ಇರುವುದಿಲ್ಲ ಸತ್ಯಾಗ್ರಹ ಚಳವಳವು ಸರಕಾರದ ದೃಷ್ಟ್ಯಾ ಅಥವಾ ಸರ್ವಸಾಮಾನ್ಯ ದೃಷ್ಟಿಯಲ್ಲಿ ಹಿತಕರವಾಗಿರದೆ ಇರಬಹುದು ಆದರೆ ಸಾವಿರಗಟ್ಟಳೆ ವಿದ್ವಾಂಸರೂ, ಧ್ಯೇಯವಾದಿಗಳೂ ಆದವರನ್ನು ಜೈಲಿನಲ್ಲಿ ಮುಚ್ಚಿಡುವುದರಿಂದ ಸರಕಾರಕ್ಕೆ ಮುಹೂರ್ತಮಾತ್ರದ ಲಾಭವಾಗಬಹುದೆಂದೆಣಿಸಿದರೂ ಅದರ ಅಖೈರಿ ಪರಿಣಾಮವು ಸರಕಾರಕ್ಕೆ ಹಿತಕರವಾಗಿರಲಾರದು.

ಲಿಬರಲ್ ಪಕ್ಷದವರು ಈ ಅಭಿಪ್ರಾಯವನ್ನೇ ಸರಕಾರಕ್ಕೆ ಸೂಚಿಸಿರುವರು. ಲಿಬರಲ್ ಪಕ್ಷದ ಮೀಟಿಂಗಿನಲ್ಲಿಯೂ ಇದೇ ರೀತಿಯಲ್ಲಿ ಸರಕಾರಕ್ಕೆ ಮನವರಿಕೆ ಮಾಡಲ್ಪಟ್ಟಿದೆ. ಆದರೆ ಈ ಮನವರಿಕೆಗಳಿಗೆ ಬೆಲೆಯೆಷ್ಟು? ಲಿಬರಲ್ ಪಕ್ಷದ ದಬ್ಬಾಳಿಕೆ ನಿಷೇಧದ ಭಾಷಣಗಳ ಹಿಂದೆ, ಕಾಂಗ್ರೆಸ್ ಪಕ್ಷದ ಅಂತರ್ಧಾನದ ವಿಷಯದಲ್ಲಿ ಮನೋತೃಪ್ತಿ ಇದೆಯೇ? ಎಂಬ ಒಂದು ಸಂದೇಹವೂ ಇದೆ ಏಕೆಂದರೆ ರೌಂಡ್‌ಟೇಬಲ್ ಪರಿಷತ್ತಿನಲ್ಲಿ ಮಹಾತ್ಮಾಜೀಯವರು ಹಿಂದೂಸ್ಥಾನದಲ್ಲಿ ಕಾಂಗ್ರೆಸ್ಸು ಹೊರತು ಬೇರೆ ಯಾವ ಪಕ್ಷವೂ ಜನತೆಯನ್ನು ಪ್ರತಿನಿಧಿಸುವುದಿಲ್ಲವೆಂದು ಹೇಳಿ ಲಿಬರಲ್ ಪಕ್ಷವನ್ನು ಕತ್ತಲೆಗೊಯ್ದರು.

ಮಹಾತ್ಮಾಜೀಯವರಿಗೆ ಸರ್ ತೇಜಬಹದ್ದೂರ್ ಸಪ್ರೂಗಳವರ ಮೇಲೆ ವಿಶೇಷ ಅಭಿಮಾನವಿದ್ದಂತೆ ತೋರುತ್ತಿದೆ ಆದುದರಿಂದ ಆಖೈರಿಯಲ್ಲಿಯೂ ಅವರು ತೇಜಬಹದ್ದೂರ ಸಪ್ರೂಗಳವರಿಗೆ ಚಳವಳವನ್ನು ಹೂಡಲು ಒದಗಿದ ಕಾರಣಗಳನ್ನು ಬರೆದರು ಈ ವಿಶ್ವಾಸಕ್ಕೆ ಪ್ರತಿಯಾಗಿ ಸಪ್ರೂರವರು ಅಂದದ್ದೇನು? "ಸರಕಾರವು ಮಾಡಿದ್ದು ತಪ್ಪು, ಆದರೆ ಕಾಂಗ್ರೆಸ್ಸು ಅಷ್ಟು ದುಡುಕಬಾರದಾಗಿತ್ತು" ಎಂದು ಇತ್ತೀಚೆಗೆ ಅವರು, ಮಹಾತ್ಮಾಜೀಯವರನ್ನು ಜೈಲಿಗೊಯ್ದದ್ದೇ ಒಳ್ಳೆ ದಾಯಿತೆಂಬ ಭಾವನೆಯನ್ನುಳ್ಳವರಾಗಿದ್ದಾರೆಂದೂ, ರೌಂಡ್‌ಟೇಬಲ್‌ನ ಕೆಲಸ ಮುಗಿಯುವ ವರೆಗೆ ಕಾಂಗ್ರೆಸ್ ಪಕ್ಷವು ಮುಚ್ಚಿಡಲ್ಪಡುವುದೇ ಆಗತ್ಯವೆಂದಿರುವರೆಂದೂ ವರ್ತಮಾನವಿದೆ ಇದು ನಿಜವಾದರೆ ಲಿಬರಲ್ ಪಕ್ಷದ ಮಾನಸಿಕತೆಯ ವಿಷಯದಲ್ಲಿ ನಿರಾಶೆಪಡಬೇಕಾಗುವುದು

ಕಾಂಗ್ರೆಸ್ಸಿನಂತೆ ಲಿಬರಲ್ ಪಕ್ಷವೂ ಸತ್ಯಾಗ್ರಹಕ್ಕೆ ಇಳಿಯಬೇಕೆಂದು ಯಾರೂ ಹೇಳಲಾರರು ಆದರೆ ದೇಶದೊಳಗೆ ಶಾಂತತೆಯನ್ನು ತಂದು, ಜನಾಂಗದ ಬೇಡಿಕೆಗಳನ್ನು ಘಟ್ಟಿ ಪಡಿಸಲಿಕ್ಕೆ ಲಿಬರಲ್ ಪಕ್ಷವು ಹಿಂಜರಿದರೆ ಅದರ ಸದುದ್ದೇಶಗಳ ಸತ್ಯದಲ್ಲಿ ಅನುಮಾನಪಡಬೇಕಾಗುವುದು ರೌಂಡ್‌ಟೇಬಲ್ ಪರಿಷತ್ತು ಕಾಂಗ್ರೆಸ್ಸು ಇಲ್ಲದೆಯಾದರೂ ವಿಜಯಯಾಗಬಲ್ಲದೆಂಬುದು ತೀರಾ ಸ್ವಪ್ನಪ್ರಾಯವಾದುದು ಕಾಂಗ್ರೆಸ್ಸಾದರೂ ಹಿಂದೂ-ಮುಸಲ್ಮಾನ ಏಕಪಕ್ಷದ ರೂಪವನ್ನು ತೋರಿಸಿದೆ ಜಯಕರ—ಮುಂಜೆ—ಅಂಬೇಡಕರ—ಶೌಕತಲ್ಲಿ—ಇತ್ಯಾದಿಗಳಿಂದ ಕೂಡಿದ ಪರಿಷತ್ತಿನಲ್ಲಿ ವಾದವಿವಾದಗಳಲ್ಲಿಯೇ ದಿನಗಳೆವುವಲ್ಲದೆ ಬೇರೆ ಕೆಲಸವಾಗಲಾರದು ಈ ವಿಷಯವೂ ಈ ಲಿಬರಲ್ ಮುಖಂಡರಿಗೆ ಗೊತ್ತಿರದೆ ಇಲ್ಲ ಆದರೂ ಅವರ ಈಗಿನ ಪಕ್ಷದ ಧೋರಣವನ್ನು ನೋಡಿದರೆ ಆಶ್ಚರ್ಯವಾಗುತ್ತಿದೆ

ವಿದೇಶ ವರ್ತಮಾನ.

—ಅಂದು ಮುಳುಗಿ ಹೋದ M 2 ಸಬ್‌ಮೆರಿನಿನಿಂದ ಸಮುದ್ರದ ಮೇಲಕ್ಕೆ ಎಣ್ಣೆಯು ಬರುತ್ತಿರುವುದನ್ನು ಕಂಡು ಅದು ಮುಳುಗಿದ ಸ್ಥಳವನ್ನು ಕಂಡು ಹಿಡಿದಿರುವರು ಮುಳುಗಿ ನೋಡಲು, ಸಬ್‌ಮೆರಿನು ಎರಡು ಕಡೆಗಳಲ್ಲಿ ಒಡೆದುಹೋಗಿರುತ್ತದೆಂದೂ ಅದರಲ್ಲಿದ್ದ ಎಲ್ಲಾ ಜನರೂ ಮಡಿದಿರುವರೆಂದೂ ತಿಳಿದುಬಂತು ದೊಡ್ಡ ಅಧಿಕಾರಿಗಳೂ ಮೃತರ ಕುಟುಂಬಿಕರೂ ಸಮುದ್ರಕ್ಕೆ ಹೋಗಿ ಸಬ್‌ಮೆರಿನು ಮುಳುಗಿದ್ದಲ್ಲಿ ನೀರಿನ ಮೇಲೆ ಪುಷ್ಪವೃಷ್ಟಿಯನ್ನು ಮಾಡಿ ಹಿಂದೆ ಬಂದರು

—ಕೆನಡಾದೇಶಕ್ಕೆ ಹಿಂದೀಯರ ಕುರಿತು ಭಾಷಣ ಮಾಡ ಹೋದ ಚರ್ಚಿಲ್ಲರಿಗೆ ಪ್ರಾಣಾಪಾಯವನ್ನು ತಂದೊಡ್ಡುವ ಬೆದರಿಕೆಯ ಪತ್ರಗಳು ಅಲ್ಲಿಯ ಕೆಲ ಹಿಂದೀಯರಿಂದ ತಲುಪಿದುದಕ್ಕಾಗಿ ಅವರು ಅಂಗರಕ್ಷಕರ ಬಳಿಯಲ್ಲಿಯೇ ಸಂಚಾರವಮಾಡುತ್ತಿರುವರು

—ಒಂದು ರಾಷ್ಟ್ರವು ಇನ್ನೊಂದನ್ನು ಸಂಬದಿರುವುದರಿಂದ ಯುದ್ಧವು ಹೆಚ್ಚಾಗುತ್ತದೆಂದೂ, ಅಂತಹ ಯುದ್ಧಕ್ಕಾಗಿ ಶಸ್ತ್ರಗಳು ಸಿದ್ಧಪಡಿಸಲ್ಪಟ್ಟು ಅಪರಿಮಿತ ಹಣವು ಲೋಕದಲ್ಲಿ ನಷ್ಟವಾಗುತ್ತಿದೆಯೆಂದೂ ಆದುದರಿಂದ ಇದರ ಬೇರನ್ನೇ ಕಡಿದುಬಿಟ್ಟು, ಸಕಲ ರಾಷ್ಟ್ರಗಳೂ ತಾವು ಶಸ್ತ್ರವನ್ನೇ ಹಿಡಿಯುವುದಿಲ್ಲವೆಂಬ ಒಪ್ಪಂದಕ್ಕೆ ಒಪ್ಪಬೇಕೆಂದೂ ನಿರ್ಬಂಧಿಸಿ "ಶಸ್ತ್ರ ಸನ್ಯಾಸ" ಪರಿಷತ್ತನ್ನು ೫೦ ರಾಷ್ಟ್ರಗಳ ಪ್ರಾತಿನಿಧ್ಯಗಳ ನೇತೃತ್ವದಲ್ಲಿ ತಾ ೨ನೇ ದಿನ ಜಿನೇವಾದಲ್ಲಿ ಕೂಡಿಸಿದರು ಇದಕ್ಕೆ ಎಲ್ಲಾ ರಾಷ್ಟ್ರಾಧಿಪತಿಗಳೂ ಒಪ್ಪಿದ್ದಲ್ಲಿ ಭೂಮಂಡಳಕ್ಕೆ ಭೂಲೋಕದಲ್ಲಿ ಯುದ್ಧವಿಲ್ಲದೆ ಶಾಂತಿಯು ಉಂಟಾಗುವುದು ಈ ಶಸ್ತ್ರಸನ್ಯಾಸ ಮಹಾಸಭೆಯಲ್ಲಿ ಕ್ರೈಸ್ತ ಜನಾಂಗವು ಸಹಕರಿಸಬೇಕೆಂದು ಆರ್ಚ ಬಿಷಪ್ ಒಫ್ ಕೆಂಟರ್‌ಬುರಿಯವರು ಹೇಳಿದ್ದಾರೆ

—ಟೋಕಿಯೋದಲ್ಲಿನ ವಾಕಾಟ್ಸುಕಿ ಕೆಬಿನೆಟಿನ ಮಾಜೀ ಫೈನಾನ್ಸ ಮಂತ್ರಿಪರ್ಯರಾದ ಜುನೋನ್ನಸುಕು ಇನೂ ಎಂಬವರು ಅಲ್ಲಿ ನಡೆಯಲಿದ್ದ ರಾಜಕೀಯ ಮಹಾಸಭೆ ಕರೆಯುತ್ತಿರುವಾಗ ಅವರ ಮೇಲೆ ಮೂರು ಗುಂಡುಗಳು ಹಾರಿಸಲ್ಪಟ್ಟವು ಅವುಗಳು ಮಂತ್ರಿಯವರ ಎದೆಯೊಳಗೆ ಹೊಕ್ಕು, ಅವರು ಬಿದ್ದು ಬಿಡಲು ಆಸ್ಪತ್ರೆಗೊಯ್ಯಲಾಯಿತು. ಅಲ್ಲಿ ಅವರು ತೀರಿಕೊಂಡರು. ಅಪಾದಿತನನ್ನು ಬಂದೂಕು ಸಮೇತ ಸೆರೆ ಹಿಡಿದಿದ್ದಾರೆ ಕೊಲೆಯ ಕಾರಣವು ಇನ್ನೂ ತನಕವೂ ತಿಳಿದುಬಂದಿರುವುದಿಲ್ಲ, ಇವರ ಮರಣದಿಂದಾಗಿ ಅಲ್ಲಿಯ ಸರಕಾರದಲ್ಲಿನ ಸ್ವಲ್ಪ ಶಕ್ತಿಯು ಕುಂದಿತು

—ಪ್ರಧಾನ ಮಂತ್ರಿಯವರಾದ ಮೆಕ್‌ಡೊನಾಲ್ಡರ ಎಡಗಣ್ಣಿನಲ್ಲೊಂದು ನೋವಾದುದರಿಂದ ಅದನ್ನು ಒಪರೇಶನ್ ಮಾಡಿದರು. ಅವರ ಆರೋಗ್ಯದ ಕುರಿತು ದಿನಾಲೂ ಬುಲೆಟಿನ್‌ಗಳು ಹೊರಬೀಳುತ್ತಿವೆ ಗುಣಮುಖರಾಗುತ್ತಿರುವರಾದರೂ ಇನ್ನೂ ಒಂದು ವಾರದ ವರೆಗೆ ಚಿಕಿತ್ಸಾಲಯದಲ್ಲಿರುವರು

ಒಳದೇಶ ವರ್ತಮಾನ.

ಊರ್ಗಾಮಿನ ಭಂಗಾರದ ಗನಿಯಲ್ಲಿ ಒಂದು ಅಪಘಾತವಾಗಿ ೨೦ ಮಂದಿಗಳಿಗೆ ಜಖಂ ಆಗಿದೆ ಒಬ್ಬನು ಮಡಿದನು

—ಅಹ್ಮದಾಬಾದಿನಲ್ಲಿ ಡಾ ಸುಮಂತ್ ಮೇಥರೆಂಬವರು ಕಾಂಗ್ರೆಸ್ಸಿನ ಕೆಲಸ ಮಾಡಿದರೆಂಬ ಆರೋಪಣೆಯ ಮೇಲೆ ಕೈದು ಮಾಡಲ್ಪಟ್ಟರು.

—ಮದ್ರಾಸಿನಲ್ಲಿ ಕನ್ನಮ್ಮಾಳ್ ಎಂಬ ಸ್ತ್ರೀಯೊಬ್ಬಳು ತನ್ನ ಇಬ್ಬರು ಮಕ್ಕಳನ್ನು ಕೂಡಿಕೊಂಡು ಅಲ್ಲಿಯ ತಿರುವತ್ತೀಸ್ವರಂಪೇಟ್ ಎಂಬಲ್ಲಿನ ಒಂದು ಕೆರೆಗೆ ಹಾರಿದಳು ದೊಡ್ಡ ಮಗುವು ಕಡಿಮೆ ನೀರಿದ್ದ ಸ್ಥಳದಲ್ಲಿ ಬಿದ್ದಿತು ಸಣ್ಣ ಮಗುವೂ ತಾಯಿಯೂ ಮಡಿದರು ದೊಡ್ಡ ಮಗುವು ನರಳುತ್ತಿರುವಾಗ ಕೃಷ್ಣನ್ ಎಂಬೊಬ್ಬನು ಅದನ್ನು ರಕ್ಷಿಸಿದನು ಬಡತನದ ಗೋಳಾಟವಿದೆಂದು ತಿಳಿದು ಬಂದಿದೆ

—ಅಹ್ಮದಾಬಾದಿನ ಮಹಮ್ಮದಾಬಾದ್ ತಾಲೂಕಿನಲ್ಲಿ ಹಳ್ಳಿಯ ಆಫೀಸರರಿಗೆ ಹಾಲನ್ನು ಒದಗಿಸಿಕೊಡದಿದ್ದ ಇಬ್ಬರು ಹಳ್ಳಿಯವರು ಕೈದು ಮಾಡಲ್ಪಟ್ಟು ಐದೆದು ರೂಪಾಯಿ ಜುಲುಮಾನೆಗೊಳಗಾದರು

—ಬರ್ಮಾ ದಂಗೆಯು ಇನ್ನೂ ಕೊನೆಗೊಂಡಿರುವುದಿಲ್ಲ ಪ್ರತಿ ದಿನವೂ ಗಲಾಟೆಗಳೂ ಕೊಲೆಗಳೂ ಆಗುತ್ತಲಿವೆ ಒಟ್ಟು ೪೨೬ ಮಂದಿಗಳು ಇನ್ನೂ ಸರಕಾರದ ಕೈಯಲ್ಲಿರುವರು ಅನೇಕ ಮಂದಿ ಮುಂದಾಳುಗಳನ್ನು ಹಿಡಿದಿರುವರು

—ರೌಂಡ್‌ಟೇಬಲ್ ಕಮಿಟಿಗಳ ಎಲ್ಲಾ ಇತ್ಯರ್ಥಪರ ಸಭೆಗಳು ವೈಸರಾಯರ ಮನೆಯಲ್ಲೇ ಜರಗುವುವು

—ಬೆನಾರಿಸ್‌ನಲ್ಲಿಯ ಆಶ್ರಫ್‌ಖರ್ ಗಾಂಧಿ ಆಶ್ರಮದಲ್ಲಿದ್ದ ೧೦೦೦೦ ರೂಪಾಯಿಯ ಖಾದಿಯನ್ನು ಪೋಲೀಸರು ವಶಪಡಿಸಿಕೊಂಡರು ಸಂಯುಕ್ತ ಪ್ರಾಂತ್ಯದಲ್ಲಿ ಕೇಂದ್ರ ಖಾದಿಭಂಡಾರವು ಇದೇ ಆಗಿತ್ತು ಇದಕ್ಕೆ ಸಂಬಂಧ ಪಟ್ಟ ಒಬ್ಬರನ್ನು ಕೈದು ಮಾಡಿರುವರು

—ಬಿಹಾರಿನ ಅಂಕೂಬಲ್ ಮುದ್ರಣಾಲಯದಿಂದ ೧೫೦೦ ರೂಪಾಯಿಯ ಭದ್ರತೆಯನ್ನು ಕೇಳಿರುವರು

—ಮುಂಬಯಿಯಲ್ಲಿನ ಒಬ್ಬ ಜೈನ ಸನ್ಯಾಸಿಯು ೫ ವರುಷಗಳ ಮೊದಲು ದೀಕ್ಷೆ ಪಡೆದವನು ಅವನ ಸತಿ ಲೀಲಾವತಿಯನ್ನು ಬಿಟ್ಟು ಅವನು ಹೋಗಿದ್ದನು ತನ್ನ ಅಶನಾರ್ಥವಾಗಿ ಲೀಲಾವತಿಯು ದಾವೆ ಹೂಡಿದಳು ಸನ್ಯಾಸಿಯು ಲೀಲಾವತಿಗೆ ತಿಂಗಳಿಗೆ ೨೫ ರೂಪಾಯಿ ಕೊಡಬೇಕೆಂದು ಆಜ್ಞೆಯಾಗಿದೆ ಸನ್ಯಾಸಿಯ ಅಪೀಲು ನಡೆಯುತ್ತಿದೆ

—ಅಹ್ಮದಾಬಾದಿನಲ್ಲಿಯ ರಾಜಕೀಯ ಕೈದಿಗಳಿಗೆ ಕಳುಹಿಸಲ್ಪಡುತ್ತಿದ್ದ ಹಣ್ಣಿನ ಬುಟ್ಟಿಯಲ್ಲಿ ಒಂದು ಕಾಗದವಿದ್ದುದನ್ನು ಪೋಲೀಸರು ಕಂಡು ಹಿಡಿದು ಆ ಕಾಗದಾಧಾರದಿಂದ ಕೆಲವು ಮಂದಿಗಳನ್ನು ಕೈದು ಮಾಡಿರುವರು ಗುಜರಾಥ ಕಾಂಗ್ರೆಸಿನ ಕಾರ್ಯಕ್ರಮವೂ ನಡೆಸಲ್ಪಡುವವರ ಹೆಸರೂ ಅದರಲ್ಲಿ ಬರೆಯಲ್ಪಟ್ಟಿದ್ದಿತು

—ಕ್ವೆಟ್ಟಾದಲ್ಲಿ ಮುಗಲ್ದೀನ್ ಎಂಬವನು ಸಿಡಿ ಮದ್ದುಗಳ ಪೆಟ್ಟಿಗೆಗಳ ಕೆಲಸ ಮಾಡುತ್ತಿದ್ದಾಗ ಒಂದು ಬೋಂಬು ಹಾರಿ ಒಡೆದು ಅವನ ಬೆರಳುಗಳನ್ನು ಕತ್ತರಿಸಿತು

—ಜನರ ಸಾಮಾನ್ಯಭಾವ ಸ್ವದೇಶಿ ಪ್ರೇಮವನ್ನು ಮುರಿಯುವ ಆಶೆಯು ತಮಗಿಲ್ಲವೆಂದೂ ಹಾಗೆ ಸ್ವದೇಶಿಯನ್ನುಪಯೋಗಿಸುವವರ ಮೇಲೆ ಸರಕಾರವು ಶಾಸನವನ್ನುಪಯೋಗಿಸುವುದಿಲ್ಲವೆಂದೂ ಮುಂಬಾಯಿ ಸರಕಾರದ ಪ್ರಕಟನೆ

—ಮುಂಬಾಯಿಯ ಸ್ವದೇಶಿ ಲೀಗ್ ಎಂಬ ಸಂಘವು ಜನರು ಸ್ವದೇಶಿಯನ್ನುಪಯೋಗಿಸಬೇಕೆಂದೂ, ಹಿಂದೂದೇಶದ ಉನ್ನತಿಗೆ ಅದೇ ಒಂದು ಮಾರ್ಗವಾಗಿರುವುದೆಂದೂ ಪ್ರಕಟಿಸಿಯದೆ

— ಸೂರತ್ ಜಿಲ್ಲೆಯು ಒಟ್ಟು ೧೧ ಲಕ್ಷ ರೂಪಾಯಿ ಕಂದಾಯ ತಿಂದ ಸಾಧಾರಣ ೩ ಲಕ್ಷ ರೂಪಾಯಿಗಳು ದೊರೆತಿವೆ. ಜಲಾಲ್‌ಪುರ್ ಬೊರ್ಸೆಡ್, ಬಾರ್ಡೋಲಿ ತಾಲೂಕುಗಳಲ್ಲಿನ ೬ ಲಕ್ಷ ರೂಪಾಯಿಯ ಕಂದಾಯದಿಂದ ೧೧,೦೦೦ ರೂಪಾಯಿ ದೊರೆತಿದೆ.

— ಗಾಂಧೀಜೀಯವರು ಲಂಡನಿನಿಂದ ಮುಂಬಾಯಿಗೆ ತಲುಪಿದಾಗ ತೆಗೆಯಲ್ಪಟ್ಟಿದ್ದ ಚಲಚಿತ್ರವನ್ನು ಇದೀ ಪಂಜಾಬಿನಲ್ಲಿ ತೋರಿಸಬಾರದಾಗಿ ಆಜ್ಞೆಯಾಗಿದೆ.

— ಕಾಶ್ಮೀರದಲ್ಲಿನ ಕ್ಷೋಭೆಯು ಇನ್ನೂ ಅಂತ್ಯವಾಗಿರುವುದಿಲ್ಲ. ಮುಸ್ಲಿಮ ಪಂಗಡಗಳ ಹಾವಳಿಯು ದಿನೇ ದಿನೇ ಹೆಚ್ಚುತ್ತಿದೆ. ಕಳೆದ ಶುಕ್ರವಾರ ಶ್ರೀನಗರದ ಉರಿಯೆಂಬಲ್ಲಿ ೩೦೦೦ ಜನರು ಸೇರಿ ಬಂದು ಗಲಾಟೆಯನ್ನೆಬ್ಬಿಸಿದರು. ತಹಶೀಲ್ದಾರರು ಅವರನ್ನು ಚದರ ಹೇಳಿದರೂ, ಅವರು ಕೇಳದೆ ತಹಶೀಲ್ದಾರರ ಮೇಲೂ ಪೋಲೀಸರ ಮೇಲೂ ಕಲ್ಲುಗಳ ಸುರಿಮಳೆಯನ್ನು ಕರೆದರು. ಕೂಡಲೇ ಕುಬಾಕಿ ಹಾರಿಸಲ್ಪಡಬೇಕಾಯಿತು. ಮೂರು ಮಂದಿಗಳು ಮಡಿದು ಬಿದ್ದರು. ಅದೇ ದಿನ ಮುಸ್ಲಿಮರ ಇನ್ನೊಂದು ತಂಡವು ಖಡ್ಗ, ಕತ್ತಿ ದೊಣ್ಣೆಗಳ ಸಮೇತ ಸೇರಿಬಂತು. ಅಲ್ಲಿಯೂ ಮೇಲೆ ಹೇಳಿದ ರೀತಿಯೇ ನಡೆಯಲು ಕುಬಾಕಿ ಹಾರಿಸಲಾಯಿತು. ೪ ಮಂದಿಗಳು ಮಡಿದರು. ಪೇಟೆಯ ಕೆಲವು ಅಂಗಡಿಗಳು ನಿರ್ಮೂಲವಾಗಿವೆ. ಒಟ್ಟು ೨೦೦೦೦ ರೂಪಾಯಿಗಳ ನಷ್ಟವಾಗಿದೆ. ಒಂದು ಮಹಾಕಾಳಿ ಬಂಗಲೆಯನ್ನು ಸುಟ್ಟರು.

— ಅಲ್ಲಹಾಬಾದಿನಲ್ಲಿ ತಾ ೮ನೇ ದಿನ ಒಂದು ಬೊಂಬು ಒಡೆಯಿತು. ಹತ್ತಿರವಿದ್ದ ಮೂರು ಮಂದಿ ಪೋಲೀಸರೂ ಇನ್ನಿತರ ೫ ಮಂದಿ ಸರಕಾರಿ ನೌಕರರೂ ಘಾಯಗೊಂಡಿರುವರು. ಕೆಲವು ಪುಂಡರ ಕೆಲಸವಿದೆಂದು ತಿಳಿದುಬಂದಿದೆ. ಇಷ್ಟರ ತನಕ ಕೈದುಗಳಾಗಿರುವುದಿಲ್ಲ.

— ಮುಂಬಾಯಿ ಕ್ರೋನಿಕಲ್ ಪತ್ರಿಕೆಯು ಶಾಸನಭಂಗ ಚಳವಳಿ ಪ್ರೇರೇಪಣೆಯನ್ನೊಳಗೊಂಡ ವಿಷಯಗಳನ್ನು ಪ್ರಕಟಿಸಿದುದಾಗಿ ಅದರ ಸದ್ಯದ ಸಂಪಾದಕರಾಗಿರುವ ಶ್ರೀ ಲಕ್ಷ್ಮಣ ಟಿ ಖರೆ ಎಂಬವರ ಮೇಲೆ ನೋಟೀಸು ಜ್ಯಾರಿಯಾಗಿದೆ.

— ಮುಂಬಾಯಿಯ ಫ್ರೀ ಪ್ರೆಸ್ ಜರ್ನಲಿನ ಸಂಪಾದಕರು ೩೦೦೦ ರೂಪಾಯಿ ಭದ್ರತೆಯನ್ನು ಕೊಡಬೇಕೆಂದು ಕೇಳಿದ್ದಾರೆ.

— ಅಹ್ಮದಾಬಾದಿನಲ್ಲಿ ನೇಶನಲ್ ಕಾಲೇಜಿನ ಪ್ರಿನ್ಸಿಪಾಲರೂ ಗುಜರಾಥ್ ವಿದ್ಯಾಪೀಠದ ವೈಸ್ ಚೇನ್ಸಲರೂ ಆದ ಶ್ರೀ ಕಾಕಾ ಕಾಲೇಲಕರರನ್ನು ಪುನಃ ಕೈದುಮಾಡಿರುವರಾಗಿ ತಿಳಿದುಬಂದಿದೆ. ಮೂರು ಮಂದಿ ಕೊಂಗ್ರೆಸ್‌ವಾಲರು ಪೋಲೀಸರಿಗೆ ದಿನಾಲೂ ತಾಪಗೊಳಿಸಿದುದಕ್ಕಾಗಿ ಕೈದುಮಾಡಲ್ಪಟ್ಟು ಒಂದೊಂದು ವರ್ಷದ ಕಠಿಣ ಸಜೆಗೂ ೨೦೦ ರೂಪಾಯಿ ಜುಲ್ಮಾನೆಗೂ ಒಳಗಾದರು.

— ರಾಷ್ಟ್ರಧ್ವಜವನ್ನೆತ್ತಿ ಹಿಡಿದುಕೊಂಡು ಇಬ್ಬರು ಮಹಿಳೆಯರೊಡನೆ ಮೆರವಣಿಗೆಯನ್ನು ಮಾಡಿ ಭಾಷಣ ಮಾಡಿದುದಕ್ಕೆ ಶ್ರೀಮತಿ ಗಂಗಾಬೆನ್ನರನ್ನು ಕೈದುಮಾಡಿದರು.

— ಪುನೆಯಲ್ಲಿ ೧೧ನೇ ಡಿಕ್ಟೇಟರರಾಗಿರುವ ಶ್ರೀ ಭಗವಂತ ರಾಮಚಂದ್ರ ಆಪ್ಟೆ ಎಂಬವರೂ ಒಬ್ಬ ಹುಡುಗನೂ ಎರಡು ವರ್ಷಗಳ ಸಜೆಗೊಳಗಾದರೆಂದು ತಿಳಿದುಬರುತ್ತದೆ. ಪ್ರಭಾತಫೇರಿಯನ್ನು ನಡೆಸಿದ ೪ ಮಂದಿ ಹುಡುಗರಿಗೆ ಆರಾರು ತಿಂಗಳ ಸಜೆಯು ವಿಧಿಸಲ್ಪಟ್ಟಿತು. ಒಬ್ಬ ಹುಡುಗನು ಭಾಷಣ ಮಾಡಿದನು. ಅವನನ್ನು ಕೈದುಮಾಡಿದರು. ಒಡನೆ ಇನ್ನೊಬ್ಬನು ಮುಂದೆ ಬಂದು ಅವನ ಸ್ಥಾನವನ್ನು ವಹಿಸಿ ಭಾಷಣ ಮಾಡಿದನು. ಅವನೂ ಪೋಲೀಸರ ಕೈಗೆ ಸಿಕ್ಕಿದನು.

ತನಗೆ ಸಲ್ಲಬೇಕಾಗಿದ್ದ ಜೀವ ಮಹಾತ್ಮಾ ಗಾಂಧಿಯವರ ಸಬರ್ಮತಿ ಆಶ್ರಮದಿಂದ ಟ್ರಾಕ್ಟರ್ ಯಂತ್ರ ಒಂದು ಗಾಡಿಯೂ ಹರಳ ಮೊದಲಾದ ಸಾಧಾರಣ ೪೦೦ ರೂಪಾಯಿ ಬೆಲೆಯ ಸಾಮಾನುಗಳನ್ನು ಸರಕಾರವು ವಶೀಕರಿಸಿಕೊಂಡಿತು.

"ಎಸೆಂಬ್ಲಿಯಿಂದ ಪ್ರಯೋಜನವಿಲ್ಲ. ನಿಷ್ಪ್ರಯೋಜಕ ಅದನ್ನು ಸದ್ಯಕ್ಕೆ ನಿವೃತ್ತಿಗೊಳಿಸುವುದುತ್ತಮವೆ"ಂಬ ಠರಾವನ್ನು ಶ್ರೀ ಹುಸೇನ್ ಎಂಬವರು ಎಸೆಂಬ್ಲಿಯಲ್ಲಿ ತರಬೇಕೆಂದಿದ್ದಾರೆ.

— ಮುಂಬಾಯಿಯಲ್ಲಿ ಸ್ಟೇಟ್ ಬ್ಯಾಂಕಿನ ನೋಟುಗಳಿಗೆ ಕ್ರಯವನ್ನು ಹೆಚ್ಚಿಸಲಾಗುವುದೆಂದೂ ಅದರಿಂದಾಗಿ ಸರಕಾರದ ಆರ್ಥಿಕ ಸ್ಥಿತಿಯನ್ನು ಸರಿಪಡಿಸಲಾಗುವುದೆಂದೂ ತಿಳಿದುಬಂದಿದೆ.

— ಪಶ್ಚಿಮೋತ್ತರ ಗಡಿಪ್ರಾಂತ್ಯದಲ್ಲಿ ಇಷ್ಟರ ತನಕ ೧೧೦೦೦ ಮಂದಿಗಳು ಸೆರೆಮನೆ ಪಾಲಾದರು. ಇನ್ನೂ ಕೈದಿಗಳಾಗುತ್ತಿವೆ.

— ಗಾಂಧಿಯವರ ಕನಿಷ್ಠ ಪುತ್ರರಾದ ಶ್ರೀ ದೇವದಾಸ್ ಗಾಂಧಿಯವರನ್ನು ಮೊನ್ನೆ ಕೈದುಮಾಡುತ್ತಿದ್ದರಷ್ಟೆ. ಗಾಂಧೀಜಿಯವರು ಸೆರೆಮನೆಗೆ ಹೋಗುವ ಮೊದಲು ದೇವದಾಸ್ ಗಾಂಧಿಯವರಿಗೂ ಶ್ರೀ ರಾಜಗೋಪಾಲಾಚಾರ್ಯರ ಪುತ್ರಿ ೧೯ ವರ್ಷ ವಯಸ್ಸಿನ ಕುಮಾರಿ ಲಕ್ಷ್ಮಿ ಎಂಬವಳಿಗೂ ವಿವಾಹವನ್ನು ಮಾಡಲು ನಿಶ್ಚಯಿಸಿದ್ದರಾಗಿ ತಿಳಿದುಬಂದಿದೆ. ಲಕ್ಷ್ಮಿಯು ಈಗ ದಕ್ಷಿಣ ಹಿಂದುಸ್ಥಾನದ ತಿರುಚೆಂಗೋಡ್ ಗಾಂಧೀ ಆಶ್ರಮದಲ್ಲಿದ್ದಾಳೆ. ದೇವದಾಸ ಲಕ್ಷ್ಮಿಯರ ವಿವಾಹವು ದೇಶದಲ್ಲಿ ಸದ್ವಾತಾವರಣವು ಉಂಟಾದ ಮೇಲೆ ಜರಗಲಿದೆ.

— ಮುಂಬಾಯಿಯಲ್ಲಿ ರಮಜಾನಿನ ದಿನ ಎರಡು ಮುಸ್ಲೀಮ ಪಂಗಡಗಳೊಳಗೆ ಹೊಡೆದಾಟವಾಗಿ ೪ ಮಂದಿಗಳು ಜಖಂಗೊಂಡರು. ಇಬ್ಬರು ಕೈದುಮಾಡಲ್ಪಟ್ಟರು.

ಮದ್ರಾಸಿನಲ್ಲಿ ಇಬ್ಬರು ಪಂಜಾಬಿಗಳು ಒಬ್ಬ ಸ್ತ್ರೀಗೆ ಚಿತ್ರದಿಂದ ಸರಿಯಾಗಿ ಹೊಡೆದರು. ಅವಳು ಬೊಬ್ಬಿಟ್ಟಳು. ಕೂಡಲೇ ಪಂಜಾಬಿಗಳನ್ನು ಸೆರೆಮನೆಗಟ್ಟಲಾಯಿತು.

— ಲೈಸನ್ಸು ಇಲ್ಲದ ರಿವಾಲ್ವರುಗಳನ್ನು ಹಿಡಿದುಕೊಂಡುದಕ್ಕಾಗಿ ಕಲ್ಕತ್ತದಲ್ಲಿ ಸತ್ಯೇಂದ್ರಕುಮಾರ ಬೋಸ್ ಮನೋರಂಜನ ಗುಹ ಎಂಬಿಬ್ಬರು ಐದೈದು ವರುಷಗಳ ಕಠಿಣ ಸಜೆಗೆ ಸಿಕ್ಕಿದರು.

ದಕ್ಷಿಣ ಕನ್ನಡ

ಸ್ವೀಕಾರ

ಆರೋಗ್ಯಚಂದ್ರಿಕೆಯ ವಿಶೇಷ ಸಂಚಿಕೆಯು ನಮ್ಮ ಕೈಸೇರಿದೆ. ಎತ್ತರ ಪುಸ್ತಕಗಳ ೧೩ ಹೆಚ್ಚು ಲೇಖನಗಳ ಚಿತ್ರಸಹಿತ ಲೇಖನಗಳು ಇವೆ. ಈ ವಿಶೇಷ ಸಂಚಿಕೆಗೆ ನಾಲ್ಕಾಣೆ. ತನ್ನ ಹತ್ತನೇ ವಯಸ್ಸನ್ನು ಕಳೆದ ಈ ಕರ್ನಾಟಕಾಭಿಮಾನಿಗೂ ಆರೋಗ್ಯಬೋಧಿನಿಗೂ ಶ್ರೇಯಸ್ಸುಂಟಾಗಲೆಂದು ನಮ್ಮ ಹಾರೈಕೆ.

ಮಂಗಳೂರು: ಇಲ್ಲಿಯ ಸೈಂಟ್ ಎಲೋಶಿಯಸ್ ಕಾಲೇಜಿನ ಸಂಸ್ಕೃತ ಸಂಘದ ವಾರ್ಷಿಕೋತ್ಸವವು ಇದೇ ತಿಂಗಳ ತಾ ೩ರಲ್ಲಿ ಶ್ರೀ ಎನ್ ಪಿ ಶಾಸ್ತ್ರಿ ಆಯುರ್ವೇದ ಭೂಷಣ ಇವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭದಲ್ಲಿ ಮಾನ್ಯ ಶಾಸ್ತ್ರಿಗಳು ತನ್ನ ಹೆಸರಿನ ಗಾಂಧೀ ಪದಕದ ಬಗ್ಗೆ ವರ್ಷಂಪ್ರತಿ ರೂಪಾಯಿ ೫ನ್ನು ಸಂಘಕ್ಕೆ ಕೊಡುವುದಾಗಿ ವಾಗ್ದಾನ ಮಾಡಿದರೆಂದು ತಿಳಿದುಬರುತ್ತದೆ.

ಇಲ್ಲಿಯ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವ ಶ್ರೀ ಶಿವರಾತ್ರಿ ಮಹೋತ್ಸವವು ಇದೇ ತಿಂಗಳ ೨ನೇ ಸೋಮವಾರ ಧ್ವಜಾರೋಹಣದೊಡನೆ ಪ್ರಾರಂಭವಾಗಿ ಮಾರ್ಚ ೬ನೇ ಆದಿತ್ಯವಾರ ದಿನ ಕೊನೆಗೊಳ್ಳಲಿದೆ.

ತಾ ೮ನೇ ದಿನ ಸೋಮವಾರ ನಾವು ಮೆರವಣಿಗೆ ಮಾಡಲಿರುವೆವು. ಎಲ್ಲಾ ಶಾಲೆಗಳಿಗೆ ರಜೆಕೊಡಬೇಕು ಎಂಬ ಕರಪತ್ರಗಳು ಶಾಲೆಗಳಿಗೆ ಯಾರಿಂದಲೋ ಗಂಟಲ್ಪಟ್ಟುವಂತೆ.

ವಿದ್ಯಾರ್ಥಿಗಳು ಶಾಲೆಯಿಂದ ಸ್ಟ್ರೈಕ್ ಹಾಕಬಾರದೆಂದು ವಿಧಿಸಲಾಗುವುದೆಂಬ ಕರಪತ್ರಗಳನ್ನು ಇಲ್ಲಿಯ ಶಾಲೆಗಳಿಗೆ ಯಾರೋ ಕಳುಹಿಸಿರುವರೆಂದೂ ಅವುಗಳು ವಿಶ್ವಾಸಾರ್ಹವಲ್ಲವೆಂದೂ ತಿಳಿದುಬಂದಿದೆ.

ಇಲ್ಲಿ ಕೊಂಗ್ರೆಸ್ಸಿನವರ ಕಟ್ಟಿಟ್ಟ ಕರಪತ್ರಗಳು ಎರಡು ಮೂರು ದಿನಗಳಿಗೊಮ್ಮೆ ತೋರಿಬರುತ್ತಿವೆ. ಎಲ್ಲಿ ಅಚ್ಚಾಗುತ್ತಿವೆ ಎಂಬ ವಿವರವೆಂದು ತಿಳಿದುಬಂದಿಲ್ಲ.

ರಾಷ್ಟ್ರಧ್ವಜವನ್ನು ಆಫೀಸು ಕಟ್ಟೋಣದಲ್ಲಿ ಇಡಬಾರದಾಗಿ ಮಂಗಳೂರು ಮುನಿಸಿಪಾಲಿಟಿಗೆ ಒಂದು ಹುಕುಂ ಹೋಗಿದೆಯಾಗಿ ತಿಳಿದುಬಂದಿದೆ.

ಸೋಮವಾರ ದಿನ ಬೆಳಗ್ಗೆ ೬ ಮಂದಿಗಳು ಕೂಡಿಕೊಂಡು ಪ್ರಭಾತಫೇರಿಯನ್ನು ನಡೆಸಿದರೆಂದೂ ಸಂಜೆಯಷ್ಟು ರಥಬೀದಿಯಲ್ಲಿ ಜಯಘೋಷವನ್ನೆತ್ತಿ ಹೋದರೆಂದೂ ಪೋಲೀಸರ ಬಂದೋಬಸ್ತು ಇಲ್ಲದೆ ಸಾಗಿಯೆಂದೂ ತಿಳಿದುಬಂದಿದೆ.

ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಬುಧವಾರ ದಿನ ಪ್ರಾರಂಭವಾಯಿತು. ಆದಿತ್ಯವಾರದವರೆಗಿನ ಮುಗಿಯುವುದು. ಮುಂಚಿನಂತೆ ಈ ಸಲ ವಿದೇಶಿ ಸಾಮಾನುಗಳ ದೂರಾಟದ ಗೌಜ ಇರುವುದಿಲ್ಲ.

ಕಳೆದ ಆದಿತವಾರ ದಿನ ಇಲ್ಲಿಯ ಕಾಂಜಿ ಒಪ್ಪಿದ ಅಂಗಡಿಯನ್ನು ಶ್ರೀಮತಿ ರಮಾಬಾಯಿ ಮತ್ತು ಶ್ರೀಮತಿ ಸುನಂದಾಬಾಯಿ ಎಂಬಿಬ್ಬರು ಮಹಿಳೆಯರು ಪಿಕೆಟಿಂಗ್ ಮಾಡಿದರು. ಅವರನ್ನು ಪೋಲೀಸರು ಕೈದು ಮಾಡಿ ಬಂದಿನ ದಿನ ಅವರನ್ನು ಸ್ಪೆಷಲ್‌ನಲ್ಲಿ ಮರುದಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಲ್ಲಿ ಹಾಜರು ಪಡಿಸಿದರು. ಕೈದಿಗಳಿಬ್ಬರಿಗೂ ಐದೈದು ತಿಂಗಳ ಕಠಿಣ ಸಜೆಯಾಗಿದೆ.

ಇಲ್ಲಿಗೆ ಗುಬ್ಬಿ ಥಿಯೆಟ್ರಿಕಲ್ ನಾಟಕ ಕಂಪೆನಿಯು ಬಂದಿದೆ. ನಿನ್ನೆ ಪ್ರಮೀಳಾರ್ಜುನೀಯವೆಂಬ ನಾಟಕವನ್ನು ಆಡಿದರು.

ಇಲ್ಲಿಯ ಶ್ರೀ ಕೃಷ್ಣ ಸಿನೆಮಕ್ಕೆ 'ಟಾಕೀ' (ಮಾತಾಡುವ ಚಲಚಿತ್ರ) ಬಂದಿದೆ. ದರಗಳು ಏರಿವೆಯಂತೆ.

ಇದೇ ತಿಂಗಳ ತಾ ೧೪ನೇ ಆದಿತ್ಯವಾರ ಬೆಳಗ್ಗೆ ೭ ಘಂಟೆಗೆ ಡೊಂಗರಕೇರಿಯಲ್ಲಿರುವ ಬ್ರಹ್ಮಮಂದಿರದಲ್ಲಿ ದಿವಂಗತ ದಿವಾನ್ ಬಹದ್ದೂರ್ ಎಸ್ ಮುಂಡಪ್ಪ ಬಂಗೇರರವರ ಮರಣ ದಿನಾಚರಣೆಗಾಗಿ ಮ ರಾ| ರಾ| ಕೆ ಲಕ್ಷ್ಮಣ ಬಿ ಎ ಇವರ ದೇವಾರಾಧನೆ ಮತ್ತು ಉಪನ್ಯಾಸವಿರುವದು. ಎಲ್ಲರಿಗೂ ಸುಸ್ವಾಗತವಿದೆ.

ಇಲ್ಲಿಯ ಗವರ್ನಮೆಂಟು ಕೋಲೇಜಿನ ಹೋಸ್ಟೆಲ್ ಮೈದಾನಿನಲ್ಲಿ ಕಳೆದ ಸೋಮವಾರದ ಕೊಡಗು ಶಾಂತಿಯ ೧೭ ವರ್ಷದ ಶ್ರೀಯುತ [illegible] ಎಂಬ ವಿದ್ಯಾರ್ಥಿಯ ಕೆನ್ನೆಗೊಂದು ಚೆಂಡು ಬಿದ್ದು ಘಾಯವಾಯಿತು. ಇವರು ಅಂದೇ ಆಸ್ಪತ್ರೆಗೆ ಹೋಗಿ ಔಷಧಿಯನ್ನು ತಗೊಂಡು ಮನೆಗೆ ಹೋದರು. ಅಲ್ಲಿ ರಾತ್ರಿ ಬಹಳ ವೇದನೆಗೊಳಗಾಗಿ ಬೆಳಗಿನ ೫ ಗಂಟೆಗೆ ತೀರಿಕೊಂಡರು. ಇವರು ಸೀನಿಯರ್ ಇಂಟರ್ ಮೀಡಿಯೇಟ್ ಕ್ಲಾಸಿನ ತರುಣರೂ ಅತ್ಯಂತ ಗುಣಾಢ್ಯರೂ ಆಗಿದ್ದರೆಂದು ತಿಳಿದುಬಂದಿದೆ. ಇವರ ಆತ್ಮಕ್ಕೆ ಶಾಂತಿಯಿರಲಿ.

ಬೋಳಾರದ ಉರ್ವ ಶ್ರೀ ಮಾರಿಯಮ್ಮನ ಸನ್ನಿಧಿಯಲ್ಲಿ ಕಾಲಾವಧಿ ಆಗತಕ್ಕ ಮಹಾಮಾರಿ ಪೂಜೆಯು ಇದೇ ಪ್ರಜೋತ್ಪತ್ತಿ ನಾಮ ಸಂವತ್ಸರದ ಮಾಘ ಬ ೧೫ ತಾ ೬-೩-೧೯೩೨ನೇ ಮಂಗಳವಾರಕ್ಕೆ ಸರಿಯಾಗಿ [illegible] ಪೂಜೆ ಎಂದೂ ನಿಶ್ಚಯಿಸಲ್ಪಟ್ಟಿದೆ.

ಮೊನ್ನೆ ಬುಧವಾರ ದಿನ ಸಂಜೆ ೪ ಘಂಟೆಗೆ ಇಲ್ಲಿಯ [illegible] ವಸಂತರ ಜನಾಳುಂಗಡಿಯಲ್ಲಿ ಶ್ರೀ ಪದ್ಮಯ್ಯ ಶೆಟ್ಟಿ ಶ್ರೀ [illegible] ಶೆಟ್ಟಿ ಮತ್ತು ಬೆಳ್ಳಿಂಗರಾಯ ಇವರೊಬ್ಬ ಒಂದು [illegible] ನಡೆಸಿದರು. [illegible] ಪೋಲೀಸರು [illegible] ಒಂದು [illegible] ಅವರಲ್ಲಿಬ್ಬರು [illegible] [illegible]

ತಾ [illegible] ಹಂತ್ಯವಾಗುವ ವಾರದಲ್ಲಿ [illegible] ಒಟ್ಟು ೩೦ ಜನಗಳು [illegible] ಮರಣ [illegible]

ಉಡುಪಿ: — [illegible]

[illegible]

[illegible]

[illegible]

[illegible]

ಪುತ್ತೂರು — [illegible] ಶ್ರೀ ವಿದ್ಯಾವರ್ಧಕ ಸಂಘ [illegible] ಅಧ್ಯಕ್ಷತೆಯಲ್ಲಿ [illegible]

ಫರಂಗಿಪೇಟೆ — [illegible] ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

+ — + +

ಶಾಲಿವಾಹನಶಕ ೧೮೫೩ನೆಯ ಪ್ರಜೋತ್ಪತ್ತಿ ಸಂವತ್ಸರದ ಮಾಘ ಶು॥ ೬ ಶನಿವಾರದಿಂದ ಪ್ರಜೊ. ಸಂ॥ರದ ಮಾಘ ಶು॥ ೧೨ ಶುಕ್ರವಾರದ ವರೆಗಿನ ಪಂಚಾಂಗ

(ಗ್ರೀನ್‌ವಿಚ್‌ನೆಯ ಮಕರ—ಕುಂಭ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾಸ	ಸೂರ್ಯ ಉ	ಸೂರ್ಯ ಅಸ್ತ
13	ಶನಿ	೬	೧ ೦೪	ಅಶ್ವಿನೀ	೬ ೦	೧	6 56	6 34
14	ರ	೭	೯	ಭರಣೀ	೧೨ ೨	೨	6 56	6 35
15	ಸೋ	೮	೧೦ ೧೪	ಕೃತ್ತಿಕಾ	೧೭ ೦೬	೩	6 56	6 35
16	ಮಂ	೯	೧೩ ೨	ರೋಹಿಣಿ	೨೦ ೩೦	೪	6 55	6 35
17	ಬುಧ	೧೦	೧೫ ೧	ಮೃಗಶಿರಾ	೨೪ ೩೨	೫	6 55	6 36
18	ಗುರು	೧೧	೧೫ ೩೦	ಆರ್ದ್ರಾ	೨೬ ೧೪	೬	6 55	6 36
19	ಶುಕ್ರ	೧೨	೧೪ ೪೬	ಪುನರ್ವಸು	೨೬ ೩೬	೭	6 54	6 36

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ (ಕಾವು) Maximum ಅತ್ಯಧಿಕ	Minimum ಅತ್ಯಲ್ಪ	Rainfall ಮಳೆ ದಿನದ ಮಳೆ	ಒಟ್ಟು ಮಳೆ.
5	84— 6	67— 7	—	—
6	84— 3	67— 9	—	—
7	84— 0	69— 5	—	—
8	84— 0	68— 3	—	—
9	84— 7	68— 7	—	—
10	85— 7	70 1	—	—
11	85— 6	73— 8	—	149-96

ಮಂಗಳೂರಿನ ಪೇಟೆ ಧಾರಣೆ.

ದೇವಸು	ಇಂದ ರೂ ಆ	ವರೆಗೆ ರೂ ಆ
ಹೊಸ ರಾಶಿ ಅಕ್ಕಿ	3— 0	3 2
ಹಳೆಮುಸ್ಕು	5— 0	5— 8
ಹಳೆ ಗುಡ್ಡ	4— 0	4 4
ಹಳೆ ಸುಗ್ಗಿ	3— 8	4—
ಊರ ಅನ್ಸೆಲ್ ಚೆಲ್ಲಿ	4 - 8	5— 0
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	6— 12	— 8
ಎಲ್ಲ ರುಬೆಳ್ತಿಗೆ ಮುಡಿ ೧ಕ್ಕೆ	4— 4	—
ಗೋಧಿ ಗೋಣಿ ೧ಕ್ಕೆ	9— 8	14— 8
ಹೆಸರು ಗೋಣಿ ೧ಕ್ಕೆ	13— 0	6—
ಹುರುಳಿಗೋಣಿ ೧ಕ್ಕೆ	6 8	— 0
ಕಡಲೆ ಗೋಣಿ ೧ಕ್ಕೆ	8— 8	12— 8
ತೊಗರಿಬೇಳೆ ಗೋಣಿ ೧ಕ್ಕೆ	13— 8	1— 0
ಉದ್ದು ಗೋಣಿ ೧ಕ್ಕೆ	11— 8	13— (
ಹೆಸರ ಗೋಣಿ ೧ಕ್ಕೆ	10— 4	11—
ಊರಾ ಬೆಲ್ಲ ಖಂಡಿ ೧ಕ್ಕೆ	36— 0	3 8
ಉಪ್ಪು ಗೋಣಿ ೧ಕ್ಕೆ	4— 12	4— 14
ಬೂದಿ ಖಂಡಿ ೧ಕ್ಕೆ	60—	62—
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	38— 0	—
ಎಳ್ಳಿಂಡಿ ಖಂಡಿ ೧ಕ್ಕೆ	26— 4	27— 8
ಕೊಬ್ಬರಿ ಎಣ್ಣೆ ಮಣ ೧ಕ್ಕೆ	6— 12	8— 14
ಎಳ್ಳೆಣ್ಣೆ ಮಣ ೧ಕ್ಕೆ	6— 12	— 0
ಬಡಿಣೆ ಎಣ್ಣೆ ಪೆಟ್ಟಿಗೆ ೧ಕ್ಕೆ	4— 7	8 14
ಸ್ವದೇಶ ಸಕ್ಕರೆ ಮಣ ೧ಕ್ಕೆ	4— 0	4— 3
ಹೊಸ ಮೆಣಸು	4— 0	5— 0
ಸಾಸಿವೆ ಮುಡಿ ೧ಕ್ಕೆ	5— 8	6— 0
ಪೇಟೆಂಟ್ ಕಾಫಿ ಖಂಡಿ ೧ಕ್ಕೆ	217— 8	225—
ಕಾಳುಮೆಣಸು ಖಂಡಿ ೧ಕ್ಕೆ	170— 0	180—
ಮೇಲಕ್ಕಿ ಮಣ ೧ಕ್ಕೆ	27— 0	28—
ಗೇರುಬೀಜ ಮುಡಿ ೧ಕ್ಕೆ	4— 6	4— 12
ಚಕ್ಕೆಯ ಖಂಡಿ ೧ಕ್ಕೆ	35— 0	37— 8
ತಾಂಬ್ರ ತಗಡು ಮಣ ೧ಕ್ಕೆ	3— 0	13— 8
ತಾಂಬ್ರ ಪಾತ್ರೆಗಳ ಮಣ ೧ಕ್ಕೆ	16— 0	16— 0
ಸೀಮೆ ಸುಣ್ಣ ಸೇರು ೧ಕ್ಕೆ	10— 12	16— 0
ಹಿತ್ತಾಳೆ ತಗಡು ಮಣ ೧ಕ್ಕೆ	12— 0	12— 8
ಜವನು ೧ಕ್ಕೆ	18— 4	18— 8
ಹುಣಸೆ ಹುಳಿ ಖಂಡಿ ೧ಕ್ಕೆ	29—	—
ಶುಂಠಿ ರಾಶಿ ಖಂಡಿ ೧ಕ್ಕೆ	375—	400—
ಹಳೆ ಅಡಿಕೆ ...	180—	205—
ಹೊಸ ಅಡಿಕೆ —	140—	145—

Chikmagalur Public Conveyance Motor Service.

C H I K M A G A L U R .

ಚಿಕ್ಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

—ಚಿಕ್ಕಮಗಳೂರು—

ಟೆಲಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

.(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4 30 ಘಂಟೆ ಒಳಗ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ್ ಸ್ಟೇಶನ್ ಬದಿ ಧರ್ಮಸ್ಥಳ ರೋಡಿಗೆ ದಿ॥ 1 ತಾಸಿಗೂ, ಬೆಳ್ತಂಗಡಿಗೆ 1-4 ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ಟ್ರೈನಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕನ್ನನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪ ಗಂಟೆ ಒಳಗ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗ ಹುಬ್ಬಳ್ಳಿಗೂ ಗದಗ್, ಪಂಢರಪೂರ ಗೋವಾ ಲೋಂಡ, ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳಿ ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಪ್ಯಾರಜಾನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

Authorised and fully paid up Capital Rs 300 000 – 0 – 0	ಅಧಿಕಾರ ಕೊಡಲ್ಪಟ್ಟ ಪೂರ್ತಿಯಾಗಿ ತೆತ್ತ ಮೂಲಧನವು ರೂ 300,000 0 – 0
Reserve and other sinking Funds Rs 489,500 – 0 0	ರಿಸರ್ವ ನಿಧಿ ಮತ್ತು ಇತರ ಫಂಡುಗಳು ರೂ 489,500 – 0 – 0
Amount invested on G P Notes Rs 817 097 – 2 0	ಗವರ್ನಮೆಂಟ್ ಪ್ರೊ[illegible] ನೋಟುಗಳಲ್ಲಿ [illegible] ರೂ 817,097 – 2 – 0
Rates of interest on fixed deposits at Head Office and Branch 6¼ for 2 Years 6% [illegible] Year	[illegible] ದರ [illegible] ಬಡ್ಡಿ [illegible] ವರುಷಕ್ಕೆ [illegible] ನೂರಕ್ಕೆ 6
Season deposits of Rs 1000/- & above terminable by the end of June are received at 6¼ p [illegible]	[illegible] ರೂ 1000/- [illegible] ಬಡ್ಡಿ [illegible] ನೂರಕ್ಕೆ 6¼

C[illegible]t Account Deposits received and interest allowed [illegible] daily balance of Rs 50 and above that or multiple of R[illegible] 10 @ 3% from 1st January to 30th June and @ 2% from 1st J[illegible] to 31st December. No interest will be allowed unless the deposit stored [illegible] not less than Rs [illegible] during a period of [illegible] month ending either 30th June or 31st December in any year

Except by special arrangement no interest [illegible] allowed [illegible] sum exceeding Rs [illegible] in the case of Head Office and Cochin Branch and [illegible] sum [illegible] exceeding [illegible] in the case of Bomb[illegible] Branch

Short notice deposits requiring one week [illegible] notice [illegible] withdraw[illegible] at any time after one month from the date of deposit are received and interest allowed at [illegible] per annum. Interest on such deposit [illegible] notice

For further particulars please apply to

Canara Bank Ltd, — **K. Venkat Rao**
Mangalore 1—2—931 — *Secretary*

The Pangal Nayak Bank, Ltd.

Head Office Udipi — *Established 1921* — **Branch Office Mangalore**

Authorised Capital Rs 2 00,000	Paid up Capital Rs 1 75 000-
Issued Capital Rs 1,75,000-	Reserve and other Funds Rs 1,60 000

1 **Receives Fixed Deposits at the following favourable rates**

For 3 months at 5	For 12 [illegible] 18 [illegible] 21 months at 6
6 or 9 months at 5½	24 months at 6

Interest being payable every 3 months

ಕಾಯಂ ಠೇವಣಾತಿ ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಕರಾರದ ಮೇಲೆ ಅಂಗೀಕರಿಸಲ್ಪಡುವವು

[illegible] ತಿಂಗಳಿಗೆ ನೂರಕ್ಕೆ [illegible]	12 [illegible] 18 [illegible] 21 ತಿಂಗಳಿಗೆ ನೂರಕ್ಕೆ [illegible]
6 ಯಾ 9 ತಿಂಗಳಿಗೆ ನೂರಕ್ಕೆ 5½	24 ತಿಂಗಳಿಗೆ ನೂರಕ್ಕೆ [illegible]

2 **Current Accounts** opened free of charge and interest allowed **Cumulative Savings Bank and Short Notice Deposits** received at favourable rates of interest

3 The Bank transacts every description of Banking business

4 For full particulars and for copies of the amended **Rules of Business** please apply to the **Secretary** at the Head Office at Udipi or to the **Agent** Mangalore Branch.

Office of the Bank, Udipi [illegible] 32 — **P Laxman Nayak,** Secretary

ಇಪ್ಪತ್ತು	ವಯಸ್ಸಿನಲ್ಲಿ	ಹುಡುಗ
ಮೂವತ್ತು	[illegible]	ಮುಗ್ಧ
ನಲವತ್ತು	[illegible]	ನರಳುವನು
ಐವತ್ತು	[illegible]	ಆಲಸ್ಯ
ಅರುವತ್ತು	[illegible]	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವರೋ!

ಈ ಸ್ಥಿತಿಗಳಲ್ಲಿ [illegible] ಇತ್ಯಾದಿ ಅಥವಾ ಈ ಸ್ಥಿತಿ[illegible] ನಿಮಗೆ ಸಂಭವಿಸ [illegible] ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಸ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ [illegible] 1—[illegible]—0

ಹೆಚ್ಚಿನ ವಿಷಯ ತಿಳಿಯಬಯಸುವವರು ಕ್ರಯ ಮುಕ್ತ ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1 [illegible] ಟೆನ್. ಬಜಾರ್ ಮದ್ರಾಸ್

[illegible]

ಬಟ್ಟೆಯ ಪೂರೆಯಿಕೆ.

ಅನ್ನ, ಆಶ್ರಯ, ಬಟ್ಟೆ ಇವೇ ಮೂರು ಮನುಷ್ಯನಿಗೆ ಬೇಕಾದುವು. ಅನ್ನಕ್ಕೆ ಕಡಿಮೆಯಿರದಂತೆ ಜಮೀನು ಒದಗಿಸಿ ಕೊಡುತ್ತದೆ, ಆಶ್ರಯವನ್ನು ಕಟ್ಟಿಕೊಳ್ಳುವರೆ ಬೇಕಾದ ಸಾಮುಗ್ರಿ ಸ್ಥಳಾದಿಗಳು ಸಾಕಷ್ಟಿವೆ. ಆದರೆ ಬಟ್ಟೆಯ ವಿಚಾರದಲ್ಲಿ ಮಾತ್ರ ಕಳೆದ ಶತಮಾನದಲ್ಲಿ, ನಾವು ಪರತಂತ್ರರಾಗಿ ಬಂದಿರುವೆವು. ೧೯೨೮—೨೯ರಲ್ಲಿ ೬೩ ಕೋಟಿ ರೂಪಾಯಿ ಹತ್ತೀ ಬಟ್ಟೆ ನೂಲು, ೫ ಕೋಟಿ ರೂಪಾಯಿ ರೇಶ್ಮೆ ಬಟ್ಟೆ, ೪ ಕೋಟಿ ರೂಪಾಯಿ ಕೃತಕ ರೇಶ್ಮೆಯ ವಸ್ತ್ರ, ೫ ಕೋಟಿ ರೂಪಾಯಿ ಉಣ್ಣೆ ಬಟ್ಟೆಯನ್ನೂ ನಾವು ಪರದೇಶಗಳಿಂದ ತರಿಸಿಕೊಂಡಿರುವೆವು. ೧೯೨೯—೩೦ರಲ್ಲಿ ಈ ಮೊಬಲಗುಗಳು ಕ್ರಮವಾಗಿ, ೫೯, ೪½, ೪, ೪½ ಕೋಟಿಯಷ್ಟೂ, ೧೯೩೦—೩೧ರಲ್ಲಿ ೨೫½, ೩¾, ೩, ೨¼ ಕೋಟಿಯಷ್ಟು ಆದುವು. ಎಂದರೆ, ೧೯೨೮—೨೯ರಲ್ಲಿ ಒಟ್ಟು ೭೮ ಕೋಟಿಯಷ್ಟು ಇದ್ದ ಬಟ್ಟೇ ಪೂರಯಿಕೆಯ ಪರದೇಶೀ ವ್ಯಾಪಾರವು ೧೯೩೦—೩೧ರಲ್ಲಿ ೩೩¾ಗೆ ಇಳಿಯಿತು. ಅಂತೂ ಅರ್ಧಕ್ಕರ್ಧ ಇಳಿದರೂ, ಜನಸಂಖ್ಯೆಯಲ್ಲಿ ಪ್ರತಿಯೊಬ್ಬ ಗಂಡಸೂ ಹೆಂಗಸೂ ಮಗುವೂ ವಾರ್ಷಿಕವಾಗಿ ತಲೆಗೆ ಒಂದು ರೂಪಾಯಿಯಂತೆ ಪರದೇಶಗಳಿಗೆ ಬಟ್ಟೆಗಾಗಿ ತೆತ್ತ ಕಾಣಿಕೆಯಾಗಿದೆ! ಆದರೂ ಎರಡು ವರ್ಷಗಳಲ್ಲಿ ದೇಶದೊಳಗೇ ಬೇಕಾದ ಅರ್ಧಕ್ಕರ್ಧ ಬಟ್ಟೆಯನ್ನು ಒದಗಿಸಲಾಗಿದೆ ಎಂದು ತಿಳಿದ ಬಳಿಕ, ಅಂತೆಯೆ ಇನ್ನೆರಡು ವರ್ಷಗಳ ತನಕ ದೇಶೀಯ ಕೈಗಾರಿಕೆಗೆ ಪ್ರೋತ್ಸಾಹಿಸಿದರೆ ಪರದೇಶಗಳಿಗೆ ಒಪ್ಪಿಸುವ ಕಾಣಿಕೆ ಉಳಿಯದೆ?

ಸಾಮಾಜಿಕ ಪ್ರಾತಿನಿಧ್ಯದ ದಾಮಾಶಾಯವನ್ನು

ಇನ್ನು ಸರಕಾರವೇ ನಿರ್ಧರಿಸದೆ ಉಪಾಯ ತೋಚದೆಂದು ಮೌಲ್ವಿ ಸರ್ ಮಹಮ್ಮದ ಯಾಕೂಬರು ಫ್ರಾಂಚಾಯಿಸ್ ಕಮ್ಮಿಟಿಗೆ ಅರಿಕೆಮಾಡಿಕೊಂಡುದು ಕಳೆದ ವಾರದ ವಿಶೇಷ ವಾರ್ತೆ. ಈ ಸಮಸ್ಯೆಯು ಮುಗಿಯದೆ ಹೋದರೆ, ಈ ಕಮ್ಮಿಟಿಯು ಮಾಡುವ ವಿಮರ್ಶೆಗೆ ಗೊತ್ತು ಗುರಿಯಿಲ್ಲದೆ ಹೋಗುವುದೆಂದೂ ಸಹ ಕಮ್ಮಿಟಿ ಮೆಂಬರರೊಳಗೇ ಕೆಲವರು ನಿರ್ಣಯಿಸಿರುವರೆಂದೂ ವಾರ್ತೆ ತಲಪಿದೆ. ಮುಸ್ಲಿಮರ ಅಂಬೋಣದಂತೆ ಸರಕಾರವು ಇದೇ ತಾ ೩ರಲ್ಲಿ ತನ್ನ ಅಭಿಪ್ರಾಯವನ್ನು ಸೂಚಿಸುವುದೆಂದು ಈಗ ಹೊಸ ಸುದ್ದಿ. ಭಕ್ತಿಯಿಂದ ಸಹಕರಿಸಿದವರಿಗೆ ಭಗವಂತ ಕಮಿಟಿಯು ವರಪ್ರದಾನವನ್ನು ಮಾಡುವುದು ಸಂಗತವೇ ಸರಿ, ಇನ್ನೂ ಈ ಪ್ರಸಾದವು ದೊರೆಯದಿರುವಲ್ಲಿ ತಮ್ಮ ಭಕ್ತಿಗೆ ಬೆಲೆಯಿಲ್ಲವೆಂದು ಮುಸ್ಲಿಮರು ನೊಂದುಕೊಳ್ಳಬಹುದಾದುದೂ ಸರಿಯೆ. ಆದರೆ, ಹಿಂದೂ ಮುಸ್ಲಿಮರೊಳಗ ಮುಖಂಡರಷ್ಟೋ ಮಂದಿ ಜೈಲಿನಲ್ಲಿರುವಾಗ ಸರಕಾರವು ಹಿಂದೂ ಮುಸ್ಲಿಮ ಸಮಸ್ಯೆಯನ್ನು ಈಗಲೆ ತೀರಿಸತೊಡಗಿದರೆ ನ್ಯಾಯವಾಗದೆಂದು ಸರಕಾರಕ್ಕೆ ತಿಳಿಯದಿರಲಾರದು ಎಂದು ನಂಬುತ್ತೇವೆ.

ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯದ ಅನ್ಯಾಯವನು

ಬಂಗಾಳ ಕೌನ್ಸಿಲಿನಲ್ಲಿ ಮೌಲ್ವಿ ಅಬ್ದುಸ್ ಸಮಾದರವರು ಟೀಕಿಸಿ ಹೇಳಿದ ಮಾತುಗಳನ್ನು ಸರಕಾರವೂ ಹಿಂದೂ ಮುಸ್ಲಿಮರೂ ಮನ್ನಿಸಬೇಕಾಗಿದೆ ಎಂದೇ ನಮಗೆ ತೋರುತ್ತಿದೆ. ಸಮಾಜಾಂತರ ದಂಗ ಗಲಭೆ ಮೊದಲಾದುವನ್ನು ನಿವಾರಿಸಲು ಕಾನೂನನ್ನು ಮಾಡಿಕೊಡಬೇಕಾಗಿ ಮಂಡಿಸಿದ ಒಂದು ಸೂಚನೆಯನ್ನು ಕುರಿತಾಗಿ ಇವರು ಭಾಷಣಮಾಡುತ್ತಾ,— ಈ ದಂಗೆಗಳ ಕಾರಣಗಳನ್ನು ಶೋಧಿಸಿ ಅಂತಹ ಕಾರಣಗಳನ್ನು ನಿವಾರಿಸಿರಿ. ಈ ಕಾರಣಗಳು ಉಳಿದಿರುವಷ್ಟು ಕಾಲ ಕಾನೂನಿನಿಂದೇನು? ಯಾವ ದಿನ ಸಾಮಾಜಿಕ ಪ್ರಾತಿನಿಧ್ಯವೆಂಬೀ ವಿಷವನ್ನು ನಮ್ಮ ದೇಶದಲ್ಲಿ ಬೀಸಿದರೋ ಅಂದಿನಿಂದಲೇ ಈ ದಂಗೆಗಳು ಉಂಟಾದುವು. ಶತಮಾನಗಳಿಂದಲೂ ಸೋದರ ವಾತ್ಸಲ್ಯದಿಂದ ಬಾಳುತ್ತಲಿದ್ದು, ಜಗಳಗಳಾದರೂ ಕೆಲಕ್ಷಣಗಳಲ್ಲಿಯೆ ಪುನಃ ಮೈತ್ರಿಯಿಂದ ಇರುತ್ತಿದ್ದ ಈ ಸಮಾಜಗಳ ಹೊಸ ಸುಧಾರಣೆಗಳು ಪ್ರಾರಂಭವಾದ ಬಳಿಕವೇ ದಂಗೆಗಳಿಗೆ ತೊಡಗಿವೆ. ಮುಖಂಡರು ಪ್ರಯತ್ನಿಸಿದರೂ ಶಾಂತಿಯುಂಟಾಗುವುದಿಲ್ಲ! ದಂಗೆಗೆಳಸುವವರ ಮುಂದೆ ಮುಖಂಡರು ಖಂಡಿತ ನುಡಿದರೆ, ಅವರನ್ನು ಮುಂದೆ ಚುನಾಯಿಸುವವರಿಲ್ಲವೆಂಬ ಬೆದರಿಕೆ ಇದೆ; ಹೀಗಾಗಿ ಮುಖಂಡರು ಕೆಲವೇಳೆ ದಂಗೆಗಳಿಗೆ ಪ್ರೋತ್ಸಾಹಕೊಡುತ್ತಿದ್ದುದೂ ಇದೆ. ಅದುಕಾರಣ ಸಾಮಾಜಿಕ ಪ್ರಾತಿನಿಧ್ಯವು ಶಾಶ್ವತವಾಗಿ ಉಳಿದರೆ ಮುಂದೆ ದೇಶವು ಎಷ್ಟು ಹಾಳಾಗುವುದೆಂದು ಚಿಂತಿಸಲೂ ಕೂಡ ನಾನು ನಡುಗುತ್ತೇನೆ ಎಂದೇ ವಿವರಿಸಿದರು.

ವ್ಯಾಪಾರ ನಷ್ಟ.

'ಕಳೆದ ವರ್ಷ ಇಂಡಿಯಕ್ಕೆ ಬ್ರಿಟಿಷ ಬಂದರುಗಳಿಂದ ಸರಕು ಕಳುಹುವವರ ನಷ್ಟವು ಇನ್ನೆಷ್ಟು ವರ್ಷಗಳಲ್ಲಿ ತುಂಬುವುದೋ ಹೇಳಬರುವಂತಿಲ್ಲ' ಎಂದು ವ್ಯಾಪಾರದ ಕಮಿಶನರರು ರಿಪೋರ್ಟಿನಲ್ಲಿ ಬರೆದಿರುವರು. ಇಲ್ಲಿಯ ದೈತರ ದುಸ್ಥಿತಿ, ಪೈದಾಸ್ತು ಆದ ಸರಕಿನ ಮೌಲ್ಯ ಇಳಿದ ಸ್ಥಿತಿ, ಸರಾಸರಿ ಬಡತನದ ಹೆಚ್ಚಳ,—ಇವುಗಳಿಂದ ಇನ್ನು ಬಹಳ ವರ್ಷಗಳ ತನಕ ಹಿಂದಣ ತರಗತಿಯಲ್ಲಿ ವ್ಯಾಪಾರವು ಏರಿಬರುವಂತಿಲ್ಲವೆಂದು ಅವರ ಟೀಕೆ. ೧೯೨೯,—೩೦,—೩೧ರಲ್ಲಿ ಕ್ರಮವಾಗಿ ಬ್ರಿಟಿಷರು ೧೩೩೧; ೧೦೪೪, ೭೮೩ ಮಿಲ್ಲಿಯ ಪವನಿನ ಸರಕನ್ನು ಕೊಂಡುಕೊಂಡರೆಂದೂ, ೮೩೯, ೬೫೪, ೪೫೬ ಮಿಲ್ಲಿಯ ಪವನಿನ ಸರಕನ್ನು ಪರದೇಶಗಳಿಗೆ ಕಳುಹಿದರೆಂದೂ ಪ್ರಕಟವಾಗಿದೆ. ಇದರಲ್ಲಿ ಹತ್ತೀ ಬಟ್ಟೆಯು ೩೬೭ ಮಿಲ್ಲಿಯ ಯಾರ್ಡಿನಿಂದ ೧೨೧೭ ಮಿಲ್ಲಿಯ ಯಾರ್ಡಿಗೂ ಇಳಿದ ಅಂಕೆಗಳಿವೆ. ೧೯೩೧ರಲ್ಲಿ ಬ್ರಿಟಿಷ ಹಡಗುಗಳು ಸಾಮಾನು ವೈದ ಮಜೂರಿಯಾಗಿ ೮೦ ಮಿಲ್ಲಿಯ ಪವನು ಗಳಿಸಿದುವು, ಈ ಮಜೂರಿಯು ೧೯೩೦ರಲ್ಲಿ ೧೦೫ ಮಿಲ್ಲಿಯ ಪವನು ಆಗಿದ್ದಿತು. ಕಮಿಶನರರ ಕೊನೆಯ ತೀರ್ಮಾನ—'ಬ್ರಿಟಿಷ ಸರಕುಗಳಿಗೆ ಅತ್ಯುತ್ತಮ ಮಾರ್ಕೆಟು ಇಂಡಿಯ, ಅದರ ಮೈತ್ರಿಯನ್ನು ಬೇಗನೆ ಸಾಧಿಸದೆ ನಷ್ಟ ಭರ್ತಿಯಾಗುವ ಉಪಾಯವಿಲ್ಲ.' ಬೇಕು ಮೈತ್ರಿ, ನಷ್ಟ ಭರ್ತಿಗಾಗಿ ಮಾತ್ರ.

ಕಾಶ್ಮೀರದಲ್ಲಿ ರಾಜರಿಗೆ ವಿರುದ್ಧ ದಂಗೆ

ಎಷ್ಟಿಸಲು ಚಟುವಟಿಕೆ ತೋರಿಸಿದ್ದ ಮಹನೀಯರ ದೆಸೆಯಿಂದ, ಮುಸ್ಲಿಮ ರಾಜ್ಯಗಳಲ್ಲೂ ಹಿಂದುಗಳು ಮೆಲ್ಲನೆ ತಮ್ಮ ಹಕ್ಕುಗಳಿಗಾಗಿ ಕೇಳಲು ಮುಂದರಿಸುವ ಸುಯೋಗವು ಮೂಡುವಂತಾಗಿದೆ. ಹೈದರಾಬಾದಿನಂತಹ ಮೊದಲನೆ ತರಗತಿಯ ರಾಷ್ಟ್ರವು ಇಂಡಿಯದಲ್ಲಿ ಬೇರೊಂದಿಲ್ಲ. ಈ ರಾಷ್ಟ್ರದಲ್ಲಿ ಹಿಂದುಗಳ ಸಂಖ್ಯೆ ೮೦ರಂತೆ, ಮುಸ್ಲಿಮರು ಸೇಕಡಾ ೫. ಆದರೆ, ಸರಕಾರದ ನೋಕರರಲ್ಲಿ ಮುಸ್ಲಿಮರು ವಿಪರೀತರು. ಎಲ್ಲ ಸಮಾಜಗಳ ಅಧಿಕಾರಗಳೂ ಸಾಕಷ್ಟಿದ್ದರೆ ಸಾಮಾಜಿಕ ದ್ವೇಷಗಳು ಬೆಳವುದಿಲ್ಲ. ಎಲ್ಲ ಮತಧರ್ಮಗಳನ್ನು ಒಂದೇ ಸಮನಾಗಿ ಕಾಣಬೇಕೆಂದು ಫರ್ಮಾನು ಇದೆಯಾದರೂ, ಇದೇ ವರ್ಷದ ಬಜೇಟಿನಲ್ಲಿ ೫೦೦೦೦ ರೂಪಾಯಿ ಮುಸ್ಲಿಮ ಸಂಘಗಳಿಗೆಂದೂ ರೂ ೧೭೫೦೦ ಮುಸ್ಲಿಮ ಸಾಹಿತ್ಯಕ್ಕೆಂದೂ ಪ್ರತ್ಯೇಕಿಸಲಾಗಿದೆ. ಜಾದಾ ಧಾರ್ಮಿಕ ಎಲೌವೆನ್ಸ್‌ಗಳಲ್ಲಿ ರೂ ೩೦೦೬೪೩ ಮುಸ್ಲಿಮರಿಗೂ ರೂ ೧೩೪೪ ಮಾತ್ರ ಹಿಂದೂಗಳಿಗೂ ಕೊಡಲಾಗಿದೆ. ಹಳೇ ದೇವಾಲಯಗಳನ್ನು ತಾವೇ ದುರುಸ್ತಿ ಮಾಡಿಸುತ್ತೇವೆಂದರೂ ಹಿಂದುಗಳಿಗೆ ಅಪ್ಪಣೆ ಸಿಗುವುದು ಅಪರೂಪ, ಆದರೆ, ಸರಕಾರವು ತಾನಾಗಿ ಮಸೀದುಗಳನ್ನು ಕಟ್ಟಿಸಿಕೊಡುತ್ತದೆ, ಇತ್ಯಾದಿ ದೂರುಗಳನ್ನು ಹವಿನೈದು ಮಂದಿ ಚುನಾಯಿತ ಪ್ರತಿನಿಧಿಗಳೇ ಮುಖ್ಯ ಮಂತ್ರಿಗಳಿಗೆ ಅರಿಕೆ ಮಾಡಿಕೊಂಡು ನಿಜಾಮ ಬಹದ್ದೂರರಿಗೆ ಒಪ್ಪಿಸಿರುವರು.

ಪಂಡಿತ ಮದನಮೋಹನ ಮಾಲವೀಯರವರು

೭೦ನೇ ಜನ್ಮ ದಿನೋತ್ಸವವನ್ನು ಮೊನ್ನೆ ಆಚರಿಸಿರುವರು. ಈ ಸಂದರ್ಭದಲ್ಲಿ ಇಡೀ ದೇಶದಿಂದ ಅವರಿಗೆ ಅಭಿವಂದನೆಗಳನ್ನು ಒಪ್ಪಿಸಲಾಗಿದೆಯಲ್ಲದೆ, ಅವರ ಜೀವನ ಕಾರ್ಯದಲ್ಲಿ ಭಕ್ತಿಯುಳ್ಳ ಮಹನೀಯರ ಎಲ್ಲರೂ ಲೇಖಗಳನ್ನು ಬರೆದ ಅದೊಂದು ಪುಸ್ತಕವನ್ನು ಅವರ ಈ ಜನ್ಮ ದಿನೋತ್ಸವದ ಕಾಣಿಕೆಯೆಂದು ಪ್ರಕಟಿಸಿರುವರು. ಏಕಾಗ್ರತೆಯಿಂದ ಏಕೋದ್ದೇಶದಿಂದ ಕಾರ್ಯಸಾಧನೆ ಮಾಡುವ ಮಹನೀಯರೊಳಗೆ ಇವರು ಒಬ್ಬರಾಗಿದ್ದು, ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಕೂಡಿಸಿ ಕಾಶೀ ಯುನಿವರ್ಸಿಟಿಯ ಬಗ್ಗೆ ಅಖಂಡವಾದ ಮೂಲಧನವನ್ನು ಮಾಡಿಕೊಟ್ಟಿರುವರು. ಶಾಸ್ತ್ರಕ್ಕನುಸಾರವಾಗಿ ನಡೆದ ಹಿಂದೂ ಮಹನೀಯರಲ್ಲಿ ಇವರು ಮೊದಲನೆಯವರಾದರೂ, ದೇಶದ ಹಿತಸಾಧಕರಾಗಿ ಮೊನ್ನೆ ಕೊನ್ಫರನ್ಸಿಗೆ ಲಂಡನಿಗೇ ತೆರಳಿದರು. ದೇಶದ ಅಭ್ಯುದಯಕ್ಕಾಗಿ ಉಂಟಾದ ಪ್ರತಿಯೊಂದು ಚಳವಳದಲ್ಲೂ ಇವರು ಸೇವೆ ನಡೆಸಿರುವರು. ರಾಷ್ಟ್ರೀಯ ಜಾಗ್ರತಿಯಲ್ಲಿ ಇವರ ಭಾಗವು ವಿಶೇಷವಾಗಿಯೆ ಇದೆ. ದೀನ ದರಿದ್ರರಿಗಾಗಿ ಎಷ್ಟು ಸಾಧಿಸಬಹುದೋ ಅಷ್ಟನ್ನು ಸಾಧಿಸಿಯೆ ಇರುವರು. ಕೇವಲ ಬಾಲ ಸಹಜವಾದ ಮೃದು ಹೃದಯವೂ, ದೃಢ ಬುದ್ಧಿಯೂ ಇವರ ಸಲ್ಲಕ್ಷಣಗಳಾಗಿ ದೇಶನಾಯಕರಾಗುವವರಿಗೆ ಆದರ್ಶವಾಗಿವೆ. ಇವರ ಸತ್ಪ್ರಯತ್ನಗಳ ಪರಿಣಾಮ ಫಲಗಳು ಉಂಟಾಗದಿರುವ ಈ ಕಾಲದಲ್ಲಿ ಬಹು ವರ್ಷಗಳ ತನಕವೂ ಇವರು ಶಾಂತಿಯಿಂದ ಬಾಳುತ್ತ, ದೇಶಹಿತವನ್ನು ಇನ್ನೂ ಸಾಧಿಸುತ್ತಿರಲಿ.

ನೋಟಗಳು

NOTE....S

ನಮ್ಮ ಪ್ರತಿನಿಧಿಗಳು ಕೌನ್ಸಿಲುಗಳಲ್ಲಿ ಮಾಡಬಹುದಾದ ಭಾಷಣಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದರೆ, ಅಯುಕ್ತವಾದುವೆಂದು ಅವು ಸರಕಾರಕ್ಕೆ ತಿಳಿದುಬಂದರೆ, ಪತ್ರಿಕೆಗಳಿಗೆ ಶಿಕ್ಷೆ ಕೊಡಬಹುದಾಗಿ ಕ್ರೇರಾರರು ಎಸೆಂಬ್ಲಿಯಲ್ಲಿ ನುಡಿದರು. ಆಧಾರಕ್ಕೆ ಪಾರ್ಲಿಮೆಂಟು ಸೂತ್ರಾಚಾರ್ಯರ ಹೆಸರೂ ಎತ್ತಲಾಯಿತು. ಆರ್ಡಿನೆನ್ಸುಗಳು ಇವನ್ನು ತಟ್ಟವೆಂದು ಕಾನೂನು ಮೆಂಬರರೇ ತಿಳಿಸಿದರು. ಅಲ್ಲಿಗೆ ಸೂತ್ರಾಚಾರ್ಯರಿಗೆ ಶಾಂತಿ. ಆದರೆ ಕ್ರೇರಾರರಂತಹ ಬುದ್ಧಿವಂತರ ಕೈಯಲ್ಲಿ ಕಾನೂನಿನ ಚುಕ್ಕಾಣಿಯು ಇನ್ನೂ ಎಪ್ರಿಲ್ ತನಕ ಇರುವುದಲ್ಲ ಎಂದೇ ಮೆಂಬರರ ಚಕಿತಾಶ್ಚರ್ಯ!

• • • •

ಉದ್ದ ಭಾಷಣ, ಚುರುಕು ಬರವಣಿಗೆ, ಅಧಿಕಾರಿಗಳೊಡನೆ ಸಂದರ್ಶನೆ ಇವುಗಳಿಂದೇನೂ ರಾಜ್ಯವನ್ನು ಘಟಿಸಿ ತರಲಾಗುವುದಿಲ್ಲ ಎಂದು ಶೌಕತ್ ಅಲಿಯವರ ಮಾತು. ಅಲಿಯವರ ಭಾಷಣಗಳು ಬರೇ ಚಿಕ್ಕವೆಂಬುದಕ್ಕೆ ಈ ಭಾಷಣವೇ ೨೦ ಮಿನಿಟು ಇತ್ತು, ಚುರುಕು ಬರವಣಿಗೆಗೆ ಖಿಲಾಫತ್ ಪತ್ರಿಕೆಯಲ್ಲಿ ಇವರ ಲೇಖನಗಳನ್ನೇ ಓದಿದರೆ ಸಾಕು. ಸಂದರ್ಶನೆಗೊ ಈಗ ವೈಸ್ರಾಯರನ್ನು ಕಾಣುವೆವೆಂದು ಹೇಳುತ್ತಾರೆ. ಹಾಗಾದರೆ, ಇವರು ಯಾವ ರಾಜ್ಯವನ್ನು ಘಟಿಸುವರೋ ತಿಳಿದಿಲ್ಲ. ಇವರಿಗಾದರೂ ಗೊತ್ತೇ?

• • • •

ಯುದ್ಧದ ಸಾಲಗಳನ್ನೆಲ್ಲ ರದ್ದುಮಾಡುವುದೇ ಈಗಣ ಆರ್ಥಿಕ ದುರವಸ್ಥೆಯನ್ನು ನಿರ್ಮೂಲಿಸುವ ಉಪಾಯವೆಂದು ಬ್ರಿಟಿಷರೇ ಮೊದಲಾಗಿ ಸಮಸ್ತರೂ ಹೇಳುತ್ತಿರುವರು. ಹಾಯೇ ಮಾಡುವುದುತ್ತಮ. ಇಂಡಿಯವೂ 'ಸಹಾಯ'ವಾಗಿ ಕೊಟ್ಟ ೧೦೦ ಮಿಲಿಯ ಪವನು ಇದೆಯಷ್ಟೆ, ಅದರಲ್ಲಿ ಇನ್ನೂ ೮೪ ಮಿಲ್ಲಿಯವು ತೆರಲು ಬಾಕಿಯಿದೆ. ಆ ಸಾಲವನ್ನು ರದ್ದು ಮಾಡುವಾಗ, ಈ ೮೪ ಮಿಲ್ಲಿಯ ಸಹಾಯ ಧನವನ್ನು ಹಿಂದಕ್ಕೆ ಕೆತ್ತರೆ ಇಂಡಿಯಕ್ಕುಂಟಾದ ಉಸಿರು ತಡೆಯು ನಿವಾರಣೆಯಾದೀತು.

• • • •

ಪವನಿಗ ೨೬½ ಶಿಲಿಂಗುಗಳಂತೆ ಲಂಡನಿನಲ್ಲಿ ಮಾರುತ್ತಾರಂತೆ. ಇದರಲ್ಲಿ ವಿಶೇಷವೇನು? ಮೊದಲೇ ಆದರೂ ಪವನಿನ ಮೌಲ್ಯ ೨೦ ಶಿಲಿಂಗ ಎಂದಿದ್ದರೂ ಅದರಲ್ಲಿ ೨೦ ಶಿಲಿಂಗಿನ ಬೆಲೆಯ ಚಿನ್ನವು ಎಂದೂ ಇರಲಿಲ್ಲ! ಈಗ ಕೊಂಡುಕೊಳ್ಳುವವರ ಸಂಖ್ಯೆ ನೋಡಿ ಆಶ್ಚರ್ಯವಲ್ಲ, ಮಾರುವವರ ದರ್ಪ ನೋಡಿ ಚಕಿತರಾಗಬೇಕಾಗಿದೆ.

• • • •

ಸರಕಾರೀ ತರಬೇತಿನಲ್ಲಿ ಲಾಠಿಯ ಜಾತಿಯೇ ಬಲಶಾಲಿಯಾಗಿ ಬೆಳದಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಅವು ಕಾಲನ್ನು ಮುರಿದಾವು, ತಲೆಗಳನ್ನೊಡೆದಾವು.

• • • •

ಆದರೆ ಅವು ಹುಲಿಯನ್ನು ಕೊಲ್ಲಬಲ್ಲವು ಎಂಬುದು ಒರೇ ಇತ್ತೀಚೆಗಿನ ಅನುಭವ—ಕಾಬೂಲ್ ಗಂಜನಲ್ಲಿ ೯ ಮೊಳ ಉದ್ದದ ಹುಲಿಯನ್ನು ಹಳ್ಳಿಗರು ಕೊಂದರು. ಹುಲಿಯ ಶರೀರವನ್ನು ಪ್ರದರ್ಶನಕ್ಕೆ ಇಟ್ಟಿದೆ.

• • • •

ಇಲ್ಲವೇ ಅಹಿಂಸಾತತ್ವವು ಹುಲಿಜಾತಿಯವರೆಗೂ ಪ್ರಸರಿಸಿತೇ?

• • • •

ಅಂತೂ ಲಾಠಿಯ ವೀರತ್ವದ ಕುರುಹುಗಳನೆಲ್ಲಾ ಪ್ರದರ್ಶಿಸುವುದು ಅತ್ಯಂತ ಅವಶ್ಯಕ. ಆಗದರ ಮಹತ್ವವು ಕಂಡುಬರುವುದು.

• • •

"ಸೇಫ್ಟಿ ಗ್ಲಾಸ್ ಇಂಪರೇಟಿವ್!"

ಭದ್ರತೆಯ ಕನ್ನಡಿಯು ಅತ್ಯಗತ್ಯ!

1932ನೇ ಇಸವಿ ಜನವರಿ ತಾ. 1ರಲ್ಲಿ ಈ ಕೆಳಗಿನ ರೆಗ್ಯುಲೇಶನ್ ಬ್ರಿಟಿಷ ದ್ವೀಪಗಳಲ್ಲಿ ಜ್ಯಾರಿಗೆ ಬಂತು—

"ಡಬ್ಬಲ್ ಡೆಕ್ಡ್ ಮೋಟರಿನ ಮೇಲಿನ ಡೆಕ್‌ಗಳಿಗೆ ತಗಲಿಸಲ್ಪಟ್ಟ ಕನ್ನಡಿಗಳಲ್ಲದ, ಮಿಕ್ಕ ಎಲ್ಲಾ ಮೋಟರ ವಾಹನಗಳ ಎದುರು, ಹೊರಗಡೆ ಇರುವ ಎಲ್ಲಾ ವಿಂಡ್ ಸ್ಕ್ರೀನುಗಳಿಗೂ, ಆದವಾ ಕಿಟಿಕಿಗಳಿಗೂ ತಗಲಿಸಲ್ಪಟ್ಟ ಕನ್ನಡಿಗಳು ("ಸೇಫ್ಟಿ ಗ್ಲಾಸ್") ಭದ್ರತೆಯ ಕನ್ನಡಿಯಾಗಿರಬೇಕು"

1928ರ ಮೊದಲುಗೊಂಡು ಫೋರ್ಡ್ ಕಾರುಗಳಿಗೆ ಶೆಟ್ಟರ್‌ಲೆಸ್ ಗ್ಲಾಸ್ ವಿಂಡ್ ಸ್ಕ್ರೀನುಗಳನ್ನಿಡಲ್ಪಟ್ಟಿದೆ



ಫೋರ್ಡ್ ಮೋಟರ್ ಕಂಪೆನಿ ಆಫ್ ಇಂಡಿಯಾ ಲಿಮಿಟೆಡ್

ಎಸೆಂಬ್ಲಿ ಬ್ರಾಂಚುಗಳು:
ಮುಂಬಾಯಿ, ಕಲ್ಕತ್ತಾ, ಮದ್ರಾಸ್, ಮುಲ್ತಾನ್, ಕೊಲೊಂಬೊ

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ.

ಶ್ರೀ ಮದನಮಸ್ತ ಪಾಕು. ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ಎಲ್ಲಿದ್ದರೆ ಪಣವನ್ನು ತಿರು[illegible]ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಸಂಪರ್ಕದಿಂದಲೂ [illegible] ನಪುಂಸಕತ್ವ ಧಾತುಕ್ಷೀಣತೆ ಅಶಕ್ತತೆ ಕಾಮೋಚ್ಚೆಯಾದ ಕೂಡಲೇ ವೀರ್ಯಪತನವಾಗೋಣ ಗರ್ಭಿಯ ಪರಿಣಾಮ [illegible] ಪರಮ ಸ್ವಪ್ನದೋಷ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ ಮತ್ತು ತೇಜ ಹೆಚ್ಚುತ್ತವೆ [illegible] ದಿವಸ ನಡೆಯುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ [illegible] ಬಳೆ ರೋಗದ ಸಲುವಾಗಿ [illegible] ಡಬ್ಬಿಗೆ [illegible] ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ [illegible] ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ [illegible], ಎಲ್ ಎಮ್ ಎಂಡ್ ಎಸ್, ಜೆ [illegible], ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು [illegible] ಪರಮಾ ಇತ್ಯಾದಿಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು	ಡಾಕ್ಟರ [illegible] ಎನ್ [illegible] ಎಮ್ ಬಿ ಪ್ರಿನ್ಸಿಪಾಲ [illegible] ನ್ಸ್ ಎಂಡ್ ಸರ್ಜನ್ಸ್ ಕಾಲೇಜ [illegible] — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು [illegible] ೧೦

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ೧೧೦೦ ಬಹುಮಾನ ಕೊಡುವೆವು

ಪತ್ತೆ.—ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S. M. C.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ [illegible] ತನದಲ್ಲಿ ವಿಧವೆ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಒಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರ ಸುಖ ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನುಮಾಡಿದರೂ ಸುರುವಾಗುವುದಿಲ್ಲ. ಮೊದಲ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ವೈದ್ಯ ಡಾಕ್ಟರ [illegible] ವೈದ್ಯ, ಎಲ್ ಸಿ ಪಿ ಎಸ್ ಕೊಲ್ಹಾಪುರ, ಲಾಹೋರ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ ಪಿ ಖರ್ಚು ೦||೦

ವಿಳಾಸ—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಮಾರಿಯಮ್ಮಳಿಗಾಗಿ ಜೀವಿಗಳನ್ನು ಕೊಲ್ಲಬೇಕೇ?

ಹಿಂದೂ ಸಮಾಜದೊಳಗೆ ಕಾಲಿಟ್ಟ ಅತೀ ದುಷ್ಟ ಪದ್ಧತಿಯೆಂದರೆ ದೇವರ ಹೆಸರಿನಲ್ಲಿ ಸಾಧು ಪ್ರಾಣಿಗಳನ್ನು ಕೊಲ್ಲುವಂತಹದ್ದು! ಈ ಪದ್ಧತಿಯು ಅನೇಕ ವರುಷಗಳಿಂದಲೂ ನಡೆಯುತ್ತ ಬಂದಿದೆ. ಆದರೂ ಇದರ ಮೂಲೋತ್ಪಾಟನದ ಬಗ್ಗೆ ಪ್ರಚಂಡ ಚಳವಳಿಗಳು ತಲೆಯೆತ್ತಿ ಕೆಲಸ ಮಾಡಿದುವಾದರೂ, ಮಾರಿಯಮ್ಮಳಿಗರ್ಪಿಸಲ್ಪಡುವ ಪ್ರಾಣಿಬಲಿಗಳ ಸಂಖ್ಯೆಯು ಕಡಿಮೆಯಾಗಲಿಲ್ಲ. ಪ್ರಾಣಿಗಳನ್ನು ಕಠೋರಹೃದಯಿಗಳಾಗಿ ಮನಃಪೂರ್ವಕ ಕೊಲ್ಲುವ ವರ್ತನೆಯು ತೀರ ತಪ್ಪೆಂದು ಅವುಗಳನ್ನು ಕೊಲ್ಲುವವರಿಗೂ, ಕೊಲ್ಲಿಸುವವರಿಗೂ ತಿಳಿದೇ ಇದೆಯಾದರೂ ಅವರು ಸಮಾಜದ ಅಂಧಶ್ರದ್ಧೆಯನ್ನು ಮೂಲೆಗೊತ್ತುವಷ್ಟು ಸಾಮರ್ಥ್ಯವಂತರಾಗಿರುವುದಿಲ್ಲ. ತಮಗೆ ಸನ್ನಿಹಿತವಾದ ಎಲ್ಲಾ ಕಷ್ಟಪರಂಪರೆಗಳೂ ಮಹಮ್ಮಾಯಿಯಿಂದೆಂದೂ ಮಹಾಮಾರಿಯಮ್ಮಳಿಂದೆಂದೂ ಈ ಮೂಢ ಜನರ ಭಾವನೆ.

ತಮಗೆ ಬಂದ ಕಷ್ಟಗಳಿಗಾಗಿ, ಮಾರಿಯಮ್ಮಳಿಗೆ ಕೋಳಿ ಕುರಿ ಕೋಣ ಹಂದಿ, ಮೊದಲಾದ ಸಾಧುಪ್ರಾಣಿಗಳನ್ನು ಬಲಿಗೊಟ್ಟರೆ ತಮ್ಮ ಕಷ್ಟಪರಂಪರೆಗಳು ದೂರವಾಗುತ್ತವೆಂಬುವ ನ್ಯಾಯವು ಯಾವ ಶಾಸ್ತ್ರದಲ್ಲಿದೆಯೋ ತಿಳಿಯದು. ಅಂತಹ ಮಾರಿಪೂಜಕರಿಗೆ ಉಚ್ಚ ಜಾತಿಯ ಶಾಸ್ತ್ರ ತಿಳಿದವರ ಸಹಾಯವೂ ದೊರೆಯುತ್ತದೆಂದ ಮೇಲೆ ಅಂತಹ ಶಾಸ್ತ್ರಗಳನ್ನು ಕಲಿತವರು ತಮ್ಮ ಶಾಸ್ತ್ರೋಕ್ತಿಗಳನ್ನು ಮುಂದಿಡಲಾರದೇ? ಅಥವಾ ಅಂತಹ ಶಾಸ್ತ್ರವು ಇಲ್ಲವೆಂದಾದರೆ ಈ ರೀತಿಯ ನೀಚ ಪದ್ಧತಿಗೆ [illegible] ಯುಕ್ತಿಸಿ [illegible] ಮಾರಿಯಮ್ಮಳಿಗೆಂದು ಅರ್ಪಿಸಲ್ಪಡುವ ಜೀವ ಜಂತುಗಳನ್ನು ಸ್ವೀಕರಿಸದಿದ್ದರೆ ಅವುಗಳನ್ನು ತರುವ ಜನರು [illegible] ಎಂದು ಮಾರಿಯಮ್ಮಳು ಪ್ರಾಣಿಬಲಿಯನ್ನು ತಿರಸ್ಕರಿಸ ಬಹುದೋ ಅಂದು ಮಾರಿಗುಡಿಗಳ ಪೂಜಾರಿಗಳ ಪ್ರಾಬಲ್ಯವೇ [illegible] ನಡೆಯಬಾರದೆಂದು ಅಪ್ಪಣೆ ಕೊಡುವರೋ ಅಂದೇ ಆ ದಿನವೇ ಈ ಮಾರಿಬಲಿಯ ಪದ್ಧತಿಯು ನಿರ್ಮೂಲವಾಗುವುದರಲ್ಲಿ ಸಂದೇಹವಿಲ್ಲ. ಏಂದರೆ ಈ ಮಾರಿಬಲಿಯು ಈ ಮೂಢ ಪಾತಕದಿಂದ ಜನರನ್ನು ಪಾರುಮಾಡಿಯು ಅಡಳಿತವಾದರೇ ತಪ್ಪಿಸಬೇಕೆಂದು [illegible] ಗುಡಿಗಳ ಮಾರಿಯಮ್ಮಳಿಗೆ ಪ್ರಾಣಿಗಳ ನೆತ್ತರನ್ನು ಅರ್ಪಿಸುವಾಗ ಅವುಗಳನ್ನು ತಂದವರ [illegible] ಒಂದು ತಟಿಕ ನೆತ್ತರನ್ನೂ ಅರ್ಪಿಸಬೇಕೆಂದು ಯಾವನಾದರೊಬ್ಬ ಪುಣ್ಯಾತ್ಮ ಅಡಳಿತದಾರನು ಜನರಿಗಾಜ್ಞಾಪಿಸಿದರೆ ಪ್ರಾಣಿಗಳ ನೆತ್ತರವನ್ನೇ ಅರ್ಪಿಸಲು ಸಿದ್ಧವಿದ್ದ ಜನರು ತಮ್ಮ ಶರೀರದ ನೆತ್ತರನ್ನು ಕೊಡಲು ತಿರಸ್ಕರಿಸಿ ಎಷ್ಟು ದೂರ ಓಡಿ ಹೋದಾರೆಂದು ಹೇಳಲು ಸಾಧ್ಯವಿಲ್ಲ. ಈ ಪದ್ಧತಿಯನ್ನು ತೆಗೆದು ಬಿಡಬೇಕೆಂದು ಅನೇಕ ವರುಷಗಳಿಂದಲೂ ಆರ್ಯ ಸಮಾಜ ಮೊದಲಾದ ಸಮಾಜಗಳು ಕೂಗಿಕೊಂಡು ಯತ್ನಿಸುತ್ತಿದ್ದಾರೆ. ಆದರೂ [illegible] ರೋಗವು ಬಂದೇ ಬಂದಂತೆ ಜನರ ಕೆಲಸವು ಬಂದೇ ಆಯಿತು. ಅವರು ಇಂದಿನ ತನಕವೂ ಈ ಕೆಲಸವನ್ನು ಮಾಡುತ್ತಾ ಬರುತ್ತಾರೆ.

ಮಹಾತ್ಮಾಜೀಯವರೆನ್ನುವಂತೆ ಇಂತಹುದೇ ಮುಖ್ಯವಿಷಯಗಳ ಕುರಿತು ಜನರಿಗೆ ತಿಳಿಸಬೇಕು. ಈ ವಿಷಯದಲ್ಲಿ ಮಾರಿಗುಡಿಗಳ ಬುಡಗಳನ್ನೇ ಕಡಿಯಬೇಕು. ಜೀವಜಂತುಗಳ ಬಲಿದಾನವನ್ನೇ ಅವುಗಳು ಪ್ರೇರೇಪಿಸುವುದರಿಂದ [illegible] ಅಂತಹ ಪ್ರಯೋಜನಗಳೂ ಆದರೂ ಆಗದಂತೆಯೇ? ನಾನು.

೨ನೇ ಪುಟದಿಂದ ಮುಂದುವರಿಸಿದ್ದು

ಸ್ವಲ್ಪ ದಿನಗಳಲ್ಲಿ [illegible] ಹೆಚ್ಚು ವ್ಯಾಪಾರವಾಗ ತೊಡಕನ್ನು ಇವರಿಗೆ ಕಡಿಮೆ ಮಾಡುವುದಕ್ಕಾಗಿ [illegible]

ಇದು ತಪ್ಪಿದರೆ [illegible] ಸೇವಕರ ಕೂಡಲೆ [illegible] ಬರುತ್ತದೆ. [illegible] ಗೆದ್ದ ವರ್ತಕರು [illegible] ನಡೆಸುವುದಕ್ಕೆ ಅವನ ಖರಿತ [illegible] ಸ್ಪಷ್ಟವಾದ [illegible] ಅವುಗಳಿಂದಾಗಿಯೇ ಅವನು [illegible] ಅಲ್ಲದೆ ಮತ್ತೆ ಬೇರೆಯಿಲ್ಲ.

ವರ್ತಕರ ಮುತ್ಸದ್ದಿಗಳ [illegible] ಮಾತು [illegible] ಬಹುದಾದ ಮಾತು [illegible] ಗಳು ಎಂದೂ [illegible] ಭೂಲೋಕವನ್ನು [illegible] ಒಬ್ಬನು [illegible] ಮಾತನ್ನು ಹೇಳಿ [illegible] ಕಳಂಕಗೊಳಿಸುವನು. ಇದು ಬಲ್ಲವರ ಮತ.

[illegible] ವ್ಯಾಪಾರಿ [illegible] ಕಲಿಯುವ [illegible] ತಮ್ಮ ವ್ಯಾಪಾರವನ್ನು ಅದನ್ನು ಮುಂದೊತ್ತುವ ಯತ್ನವುಳ್ಳವ [illegible] ಮಾಂದ್ಯದ ಈ ಪರಿಸ್ಥಿತಿಯ ದಿನಗಳಲ್ಲಿ ಇಂತಹ [illegible] ಕೊಟ್ಟುಕೊಂಡ [illegible] ಉತ್ತಮವಾದ [illegible] ವುದೇ ಸರಿ.

[illegible] ವ್ಯಾಪಾರಿಯಾಗಲೀ ದೊಡ್ಡ ವ್ಯಾಪಾರಿಯಾಗಲೀ ಒಂದೂ ದೇಶದಲ್ಲಿ [illegible] ಕೊಡುವುದು [illegible] ಕಡಿಮೆಯಿಂದ ಹೇಳಬಹುದು [illegible] ಹಣ ತಿನ್ನುವ ಉಪಾಯಗಳೆಂದು ಕೆಲವು ವರ್ತಕರ ಅಭಿಪ್ರಾಯ. ಅದು ಬರೀ ತಪ್ಪು.

+ + + +

ಅನುಕ್ರಮಣಿಕೆ.

ಅಗ್ರಲೇಖ.

ನಮ್ಮ ಪಲ್ಲವಿ ೨
ಸ್ಫುಟವಿಚಾರಗಳು ೪
ಸೋಟಿಗಳು ೫

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೨
ಒಳದೇಶ ವರ್ತಮಾನ ೨-೮
ದಕ್ಷಿಣಕನ್ನಡ — ಮಂಗಳೂರು, ಉಡುಪಿ, ಕಾರ್ಕಳ, . ೮
ವಿವಿಧ ಸಮಾಚಾರಗಳು ೧೧
ನಮ್ಮ ಶಾಲೆಗಳು ೧೩
ಸಹಕಾರಿಗಳ ಮುಂದಣ ಕರ್ತವ್ಯ . ೫
ಮಾರಿಯಮ್ಮನಿಗಾಗಿ ಕೋಣಗಳನ್ನು ಕೊಲ್ಲಬೇಕೆ? ೪
ನಾಯಿ ಬೊಗಳಿದರೂ ಪ್ರಯಾಣವು ಸಾಗುತ್ತಿದೆ ೯
ಮೀರಾಬಾಯಿಯವರು ಮುಂಬಯಿಯನ್ನು ಬಿಡಲು ಆಜ್ಞೆ ೧೦
ವ್ಯಾಪಾರದ ಗುಟ್ಟು ೩

ಸ್ವದೇಶಾಭಿಮಾನಿ.

ತಾ. ೧೯ನೇ ಶುಕ್ರವಾರ ಫೆಬ್ರುವರಿ ೧೯೩೨

ನಮ್ಮ ಪಲ್ಲವಿ.

ಸರಕಾರವು ಹಲವು ಒರ್ಡಿನೆನ್ಸುಗಳನ್ನು ಜ್ಯಾರಿಗೆ ತಂದು ಆಳುವಿಕೆಯನ್ನು ಒಲಪಡಿಸುತ್ತಿರುವ ಈ ಸಮಯದಲ್ಲಿ ವ್ಯಕ್ತಿಗಳು ಖಾಸಗಿಯಾಗಲಿ ರಾಜಕೀಯವಾಗಲಿ ಯಾವ ರೀತಿಯಲ್ಲಿ ವರ್ತಿಸಬಹುದು ಎಂದು ನಿರ್ಧರಿಸುವುದು ಕಷ್ಟವಾಗಿದೆ ಸಿಕ್ಕವರಿಗೆ ಕಾಫಿ ಕೊಟ್ಟು ತನ್ನ ಚಿಕ್ಕ ಜೀವನವನ್ನು ನಡೆಸಲೆಳಸುವ ಚಿಕ್ಕ ಹೊಟೇಲಿನವನಿಂದ, ಮನೆಬಾಡಿಗೆ ಕೊಟ್ಟು ದುಡ್ಡಿನ ಬಡ್ಡಿ ಲೆಕ್ಕಹಾಕುವ ಜಮೀನುದಾರರವರೆಗ ಯಾರು ಯಾವ ಕೆಲಸವನ್ನು ಮಾಡಬಹುದು, ಬಾರದು ಎಂಬ ಹೆದರಿಕೆಯು ಎಲ್ಲೆಲ್ಲಿಯೂ ಇದೆ ಒಂದು ಕಡೆಯಲ್ಲಿ ಹೊಟೇಲನ್ನವನ್ನು ಬಡಿಸುವವನಿಗೂ ಧಕ್ಕೆ ಒಂದು ಊರಲ್ಲಿ ಅಂಗಡಿ ಮುಚ್ಚುವವನಿಗೆ, ಇನ್ನೊಂದು ಕಡೆಯಲ್ಲಿ ಹಲವು ವರ್ಷಗಳಿಂದ ತೂಗ ಹಾಕಿದ ಯಾರೋ ಜೈಲು ಸೇರಿದ ಮಹಾತ್ಮರ ಚಿತ್ರಕ್ಕಾಗಿ, ಇನ್ನೊಂದು ಕಡೆಯಲ್ಲಿ ಒಬ್ಬನಿಗೆ ಮನೆಬಾಡಿಗ ಕೊಟ್ಟದ್ದಕ್ಕ ಇತ್ಯಾದಿ, ಇತ್ಯಾದಿ.

ಖಾಸಗಿ ಜನರ ವ್ಯವಹಾರವೇ ಇಷ್ಟರ ಮಟ್ಟಿಗೆ ಬಂದಿದೆ ಇನ್ನು ಅದೃಷ್ಟ ವಶದಿಂದಲೂ ದುರಾದೃಷ್ಟದಿಂದಲೂ ಸತ್ಯಾಗ್ರಹಿಗಳ ಯಾವುದೊಂದು ಸಂಬಂಧವಿದ್ದವರ ಗತಿಯೇನು? ತಿರುಚನಾಪಳ್ಳಿಯಲ್ಲಿ ತಮ್ಮ ಸ್ನೇಹಿತರ ವಿಷಯ ಕೇಳಲಿಕ್ಕೆ ಹೋದಾಗ ಅವರನ್ನು ಪೋಲೀಸ್ ಸ್ಟೇಷನಿನ ಒಳಗೆ ಕರೆದು ಹೊಡೆದರೆಂದು ಇಬ್ಬರ ಮರ್ಯಾದಸ್ಥರ ಆರೋಪವಿದೆ ಈಗ ಸರಕಾರವು ಅದೆಲ್ಲಾ ಸುಳ್ಳಾಗಿದೆ, ರಿಕಾರ್ಡಿನ ಆಧಾರವಿಲ್ಲವೆಂದು ಹೇಳುತ್ತಿದೆ ಆದರೆ ರಿಕಾರ್ಡಿನ ಆಧಾರವಿರಲಿಕ್ಕೆ ಪೆಟ್ಟು ಕೊಟ್ಟದ್ದನ್ನು ರಿಕಾರ್ಡು ಮಾಡುವುದು ಹೇಗೆ? ಪೋಲೀಸರು ಯಾವ ರೀತಿಯಲ್ಲಿ ವಿಚಾರಣ ಮಾಡಿದರು, ಇದೆಲ್ಲಾ ಸರಕಾರದ ಪ್ರಕಟಣೆಯಲ್ಲಿ ಕಾಣುವುದಿಲ್ಲ ಅಂತೂ ಈ ಎಲ್ಲಾ ಆರೋಪಗಳು ನಿಜವೋ ಸುಳ್ಳೋ, ಸರಕಾರವು ಈ ಬಗ್ಗೆ ಪ್ರಜೆಗಳನ್ನು ತನ್ನ ವಿಶ್ವಾಸದೊಳಗೆ ತೆಗದುಕೊಳ್ಳದೆ ಆಫೀಸರರ ಮೂಲಕವೇ ತೀರ್ಮಾನಕ್ಕೆ ಬರುವುದರಿಂದ ಜನರಿಗೆ ಹೆಚ್ಚಿನ ಸಂದೇಹ ಹೆದರಿಕೆಗಳುಂಟಾಗಿವೆ

ಹಾಗೆಂದ ಪತ್ರಿಕಾ ವ್ಯವಸಾಯಿಗಳಾದ ನಮ್ಮ ಪರಿಸ್ಥಿತಿಯು ಬಹಳ ಕಷ್ಟದ್ದಾಗಿದೆ ಮುಂಬಾಯಿಯಲ್ಲಿ ಕೈದು ಹೊಂದಿದವರ ಹೆಸರು ಭಾವಚಿತ್ರಗಳನ್ನು ಹಾಕಬಾರದಾಗಿ ವಿಧಿಸಿ, ಕಡೆಗೆ ನಂಬಿಂದರ ಹೆಸರು ಮಾತ್ರ ಹಾಕಬಹುದು, ಅಲ್ಲದೆ ಇತರರ ಹೆಸರಾಗಲಿ ಯಾರೊಬ್ಬರ ಚಿತ್ರವನ್ನಾಗಲಿ ಹಾಕಬಾರದೆಂದು ವಿಧಿಸಿರುವರು. ಮದ್ರಾಸಿಗೂ ಎಲ್ಲಾ ಪತ್ರಿಕಾಕಾರರಿಗೆ ಯಾರೊಬ್ಬ ಸತ್ಯಾಗ್ರಹ ಚಳವಳ ಸಂಬಂಧವ ಭಾವಚಿತ್ರ ಹಾಕಬಾರದಾಗಿ ವಿಧಿಸುತ್ತಾರೆ ನಾವು ಒಕಿದುದರಲ್ಲಿ ಯಾವುದು ಒರ್ಡಿನೆನ್ಸಿನೊಳಗೆ ಬರುತ್ತದೆ, ಯಾವುದು ಬರುವುದಿಲ್ಲವೆಂದು ನಮ್ಮಿಂದಲೇ ನಿರ್ಧರಿಸುವುದು ಕಷ್ಟವಾಗಿದೆ

ಇಂತಹ ಪರಿಸ್ಥಿತಿಯಲ್ಲಿ ರಾಜಕಾರಣ ವಿಷಯವಾಗಿ ಏನೊಂದನ್ನೂ ಬರೆಯುವುದು ಉಪಯೋಗಕರವಾಗಿದೆಯೆಂದು ನಾವು ನೆನಸುವುದಿಲ್ಲ. ಜನರು ಪತ್ರಿಕೆಗಳಿಂದಾಗಲಿ ಭಾಷಣದಿಂದಾಗಲಿ ರಾಜಕಾರಣ ಜ್ಞಾನವನ್ನು ನಿರೀಕ್ಷಿಸದೆ ಸ್ವತಹ ಆಲೋಚಿಸಿ ತಿಳಕೊಳ್ಳಬೇಕಾಗಿ ಬಂದಿದೆ

ಆದರೆ ಇದೆಲ್ಲ ಪರಿಸ್ಥಿತಿಯಲ್ಲಿ ಒಂದು ಸುಖದ ವಿಷಯವೆಂದರೆ ಸ್ವದೇಶಿ ಪ್ರೋತ್ಸಾಹದ ವಿಷಯದಲ್ಲಿ ಸರಕಾರದ ಕಡೆಯಿಂದ ಯಾರಿಂದಲೂ ವಿರೋಧವಿಲ್ಲದಿರುವುದು ಸೆಕ್ರೆಟರಿ ಒಫ್ ಸ್ಟೇಟರಾದ ಸರ್ ಸಾಮುವೇಲ್ ಹೋರರೇ ನ್ಯಾಯವಾದ ಸ್ವದೇಶಿಗೆ ತನ್ನ ವಿರೋಧವಿಲ್ಲವೆಂದು ಹೇಳಿರುವರು, ಮುಂಬಯಿ ಸರಕಾರವೂ ಇದನ್ನೇ ಹೇಳಿಯದೆ ಆದುದರಿಂದ ರಾಜಕೀಯ ವಿಷಯಗಳನ್ನೆಲ್ಲ ಬಿಟ್ಟು ಸ್ವದೇಶಿಯನ್ನು ಪ್ರೋತ್ಸಾಹಿಸಬೇಕೆಂದು ಹೇಳಲಿಕ್ಕೆ ನಮಗ ಅತ್ಯಾನಂದವಾಗುತ್ತಿದೆ

ದೇಶದ, ಯಾಕೆ, ಇಡೀ ಲೋಕದ ಆರ್ಥಿಕಸ್ಥಿತಿಯು ಕೆಟ್ಟಿಯದೆ, ಅದರ ಫಲವಾಗಿ ಜನತೆಯ ಸಾಮಾನು ಕೊಳ್ಳುವ ಶಕ್ತಿಯು ಕುಂದಿದೆ ಆದುದರಿಂದ ಪ್ರತಿ ಹಿಂದೀಯನೂ ಶ್ರೀಮಂತನಾಗಲಿ ಬಡವನಾಗಲಿ, ಖರ್ಚನ್ನು ತಗ್ಗಿಸಬೇಕು, ಅಗತ್ಯವಿದ್ದುದನ್ನು ಕೊಂಡುಕೊಳ್ಳದೇ ಕೊಂಡುಕೊಳ್ಳುವಾಗ ಹಿಂದೂಸ್ಥಾನದಲ್ಲಿ ತಯಾರಾದದ್ದನ್ನೇ ಕೊಳ್ಳಬೇಕು ಈಗ ಮದುವೆ ಉಪನಯನಗಳ ಸಮಯ, ದುಬಾರಿ, ಇಲ್ಲದಿರಲಿ ಕಡಿಮೆಕ್ರಯವಿಷ್ಟು ಸಿಕ್ಕಿದ ನಮೂನೆಯ ಸಾಮಾನುಗಳನ್ನು ಕೊಳ್ಳಬೇಕೆಂದು ಪತ್ರಾಯ ಆದರ ನಿರ್ಬಂಧವಾಗ ಖರ್ಚನ್ನು ತಗ್ಗಿಸಿ, ದೇಶೀಯ ಮಾಲುಗಳನ್ನು ಮಾತ್ರವೇ ಪಡೆದರ ದೇಶದ ಹಿತವೂ ಆ ಮೂಲಕ ವ್ಯಕ್ತಿಯ ಹಿತವೂ ಉಂಟಾಗುವುದು ತಡೆದು ಒರುವ ಸತ್ಯಾಗ್ರಹ ಚಳವಳದಲ್ಲಿ ಶಕ್ತಿಯನ್ನು ವ್ಯಯಿಸುವುದಕ್ಕಿಂತ ಈ ಸಣ್ಣ ಸಾಧನೆಯನ್ನು ದೇಶವು ನಡೆಸಿದರ ಹಿತವುಂಟು ಆದುದರಿಂದಲೇ ನಾವು "ಸ್ವದೇಶಿ" ಎಂಬುದನ್ನು ನಮ್ಮ ಪಲ್ಲವಿಯಾಗಿ ತೆಗೆದುಕೊಂಡಿದ್ದೇವೆ ಶ್ರೀಮಂತ ಇಂಗ್ಲೆಂಡು ಕೂಡ ಈಗ ಈ ಪಲ್ಲವಿಯನ್ನೇ ಹಾಡುತ್ತಿದೆ,' ಒಡ ಹಿಂದೂಸ್ಥಾನಕ್ಕೆ ಇದರ ಆವಶ್ಯಕತೆ ಬೇರೆ ಸೂಚಿಸಬೇಕೆ?

ವಿದೇಶ ವರ್ತಮಾನ.

— ಚೀನಾ ಜಪಾನುಗಳೊಳಗಿನ ಯುದ್ಧವು ಸರಾಗವಾಗಿ ನಡೆಯುತ್ತಾ ಇದೆ ಅನೇಕರು ಮಧ್ಯಸ್ಥಿಕೆಯನ್ನು ವಹಿಸಿ ರಾಜಿ ಮಾಡಬೇಕೆಂದು ಬಗೆಯುತ್ತಿರುವರಾದರೂ, ಸಮುರಕ್ಕೆ ಈದ ಚೀನಾ ಜಪಾನುಗಳು ಯುದ್ಧವನ್ನು ಮುಂದೊತ್ತುತ್ತಲೇ ಇರುವವು ತಾ. ೧೦ನೇ ದಿನ ಚೆಪೆಯಲ್ಲಿ ಚೀನಿಯರು ಬಹು ಸಾಹಸದಿಂದ ಜಪಾನರ ಮೇಲೆ ಬಿದ್ದು ಅವರನ್ನು ಹಿಂದಕ್ಕಟ್ಟಿದ್ದರು ಈಗೀಗ ಜಪಾನರ ಪಕ್ಷದಲ್ಲಿ ಮರಣಗಳು ಹೆಚ್ಚಾಗುತ್ತಿವೆ ಚೀನಾ ದೇಶದಲ್ಲಿ ಇಷ್ಟರ ತನಕ ನಡೆಯದಿದ್ದ ಬಹಿಷ್ಕಾರವು ಪ್ರಾರಂಭವಾಗಿದೆ ಚೀನಾದಲ್ಲಿರುವ ಮಿಲಿಯಗಟ್ಟಳೆ ಬೆಲೆಬಾಳುವ ಜಪಾನೀ ಸಾಮಾನುಗಳು ಮೂಲೆಗೆ ಬಿದ್ದಿವೆ. ಚೀನಿಯರು ಹೂಡಿದ ಪ್ರಚಂಡ ಬಹಿಷ್ಕಾರವು ಜಪಾನರ ಅಡಿಗಲ್ಲಿಗೇನೆ ಬಡಿದಿದೆ ಚಿಪೇಯಿಯಲ್ಲಿನ ಯುದ್ಧದಿಂದಾಗಿ ಆ ಪ್ರಾಂತ್ಯದ ಇನ್ನಿತರ ಪ್ರಜೆಗಳಿಗೆ ಹಾನಿ ತಟ್ಟುತ್ತದೆಂದೂ ಅದನ್ನು ದೂರ ಕರೆದುಕೊಂಡು ಹೋಗಬೇಕೆಂದೂ ಬಗೆದು ಇಕ್ಸ್ನೋಟ್ "ಎಂಬ ಪಾದ್ರಿಯೊಬ್ಬರು ೪ ಘಂಟೆಯ ಶಾಂತಿಯನ್ನು ಉಭಯಪಕ್ಷಗಳೂ ಮಾಡಿಕೊಳ್ಳಬೇಕೆಂದರಿಕೆ ಮಾಡಿದರು ಅದೇ ಮೇರೆಗೆ ಯುದ್ಧವು ಅಷ್ಟರ ತನಕ ನಿಲ್ಲಿಸಲ್ಪಟ್ಟಿತು ಸಾವಿರಾರು ಕುಟುಂಬಗಳು ಹೊರ ಹೋಗಿವೆ. ಒಂದು ಜಪಾನೀ ಬೋಂಬು ಅಮೇರಿಕನರ ವಸಾಹತಿಗೆ ಬಿದ್ದಿದೆಯೆಂದೂ ಈ ವರ್ತನೆಯನ್ನು ಅಮೇರಿಕದ ಕನ್ಸಲ್ ಜನರಲನು ನಿಷೇಧಿಸುವನೆಂದೂ ತಿಳಿದುಬಂದಿದೆ ಆಸ್ಟ್ರೇಲಿಯದ ವೈಮಾನಿಕರಾದ ಕಿಂಗ್ಸ್ ಫೋರ್ಡ್ ಸ್ಮಿತ್ ಎಂಬವರು ಚೀನೀಯರ ವೈಮಾನಿಕ ಸೈನ್ಯಕ್ಕೆ ಸೇರಿರುವರಂತೆ ಆಸ್ಟ್ರೇಲಿಯದ ವೈಮಾನಿಕ ಸೈನ್ಯವನ್ನೆಲ್ಲ ಚೀನವು ಬರಮಾಡಿಕೊಳ್ಳುವುದೆಂದೂ ಸುದ್ದಿಯಿದೆ ಕೆಂಘ್ಯೆಯಲ್ಲಿ ಈಗ ೩೦ ಸಾವಿರ ಜಪಾನ ಸೈನ್ಯವಿದೆ ೩೦೦ ಮಂದಿ ಜಪಾನರು ವೂಸಂಗ್ ಎಂಬಲ್ಲಿ ಧಾಳಿ ನಡೆಸಿದರು ಚೀನೀಯರ ಭಯಂಕರ ತೋಪು ಹಾರಿಸುವಿಕೆಯಿಂದಾಗಿ ೧೩೦೦ ಜಪಾನರಷ್ಟಾದರೂ ಮಡಿದರೆಂದು ಚೀನಿಯರ ಹೇಳಿಕೆ

— ಕಾನ್‌ಸ್ಟಾಂಟಿನೋಪಲಿನಲ್ಲಿ ಒಂದು ಪ್ರಚಂಡ ಗಾಳಿಯು ಬೀಸಿ ಅನೇಕ ಮನೆಮಾರುಗಳನ್ನೂ, ಮರಮಟ್ಟುಗಳನ್ನೂ ಕೆಡವಿಸಿತು ಒಂದು ಮನೆಯೂ ಒಂದು ಹೊಟೇಲೂ ಗಾಳಿಯೊಡನೆಯೇ ಎದ್ದುಹೋಗಿರುವುದೆಂದು ತಿಳಿದುಬಂದಿದೆ ಅನೇಕರು ಮಡಿದಿರುವರು

— ಸುಪ್ರಸಿದ್ಧ ಗ್ರಂಥಕರ್ತರಾದ ಜೋರ್ಜ್ ಬರ್ನಾರ್ಡ್ ಶೋರವರು ದಕ್ಷಿಣಾಫ್ರಿಕದ ಕೇಪ್‌ಟೌನಿಗೆ ಹೋದರು ಸಾವಿರಗಟ್ಟಳೆ ಜನರು ಅವರನ್ನು ಸ್ವೀಕರಿಸಿದರು ಅವರ ಪತ್ನಿಯವರೂ ಅವರೊಡನಿರುವರು. ತನ್ನ ಕುರಿತು ಏನನ್ನೂ ಪ್ರಕಟಿಸಬಾರದೆಂದೇ ಅವರ ಪತ್ನಿಯವರ ಅಂಬೋಣ. "ಭೇಟಿಗಳಿಗೆ ನಾನಿಲ್ಲ. ಮುಂಚೆಯೂ ನಾನು ಭೇಟಿಗಳನ್ನು ಕೊಟ್ಟಿಲ್ಲ. ಇನ್ನೂ ಕೊಡುವುದಿಲ್ಲ" ಎಂದಿದ್ದಾರೆ.

ಒಳದೇಶ ವರ್ತಮಾನ.

— ಬೆಳ್ಳಾರಿಯ "ಕರ್ನಾಟಕ ಕೇಸರಿ" ಪತ್ರಿಕೆಯು ಮೊನ್ನೆ ತಾನೇ ಜನಿಸಿತಷ್ಟೆ! ಅದು "ಬೆಂಗಳೂರು ನಗರದ ತಾಯ್ನಾಡು ಪತ್ರಿಕೆಯು ಪ್ರಕಟಿಸಿದ ಶ್ರೀ ಕಾರ್ನಾಡು ಸದಾಶಿವರಾಯರ ಸಂದೇಶದ ಭಾಗವನ್ನು" ಪುನಹ ಪ್ರಕಟಿಸಿದಕ್ಕಾಗಿ ಒಟ್ಟು ಒಂದು ಸಾವಿರ ರೂಪಾಯಿಯ ಭದ್ರತೆಯು ಕೊಡಬೇಕೆಂದು ಸರಕಾರದ ಅಪ್ಪಣೆಯಾಗಿದೆ ಸರಕಾರವು ತನ್ನ ಕೇಳಿಕೆಯನ್ನು ಪುನರಾಲೋಚಿಸಿ ಹಿಂತೆಗೆಯಲು ಮನಸ್ಸು ಮಾಡದಿದ್ದರೆ ಈ ಪತ್ರಿಕೆಯು ಸದ್ಯಕ್ಕೆ ನಿವೃತ್ತಿ ಹೊಂದುವುದೆಂದು ತಿಳಿದುಬಂದಿದೆ

— ಪಂಡಿತ ಕೃಷ್ಣಕಾಂತ ಮಾಲವೀಯರು ತನ್ನ ಅಭ್ಯುದಯ ಪತ್ರಿಕೆಯಲ್ಲಿ ಪ್ರಕಟಿಸಿದ ಒಂದು ನಿಷಿದ್ಧ ಪದ್ಯಕ್ಕಾಗಿ ಒಂದು ವರುಷದ ಕಠಿಣ ಸಜೆಗೆ ಗುರಿಯಾದರು.

— ಯುರೋಪಿಯನ್ ಎಸೋಸಿಯೇಶನಿನ ಮುಂಬಾಯಿ ಶಾಖೆಯವರು ತಾ ೧೬ನೇ ದಿನ ಮಿ. ಟಿ ಆರ್ ಆಬೆರ್‌ಕ್ರೊಂಬೀ ಎಂಬವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿಸಿ ಕಾಯಿದೆಭಂಗ ಚಳವಳವನ್ನು ಬಗ್ಗುಬಡೆಯಲು ಸರಕಾರವು ಕೈಕೊಂಡ ಕಾರ್ಯವು ಅತ್ಯುತ್ತಮವಿದೆ ಎಂದು ಠರಾವು ಜ್ಯಾರಿಮಾಡಿಕೊಂಡರು.

— ಕಾನ್‌ಪುರದಲ್ಲಿ ಎಂಟು ದಿನಗಳ ಹರತಾಳವಾಚರಿಸಲ್ಪಟ್ಟದ್ದು ಆಂಗ್ಲ ಮತ್ತು ಹಿಂದೀಯ ವ್ಯಾಪಾರಿಗಳಿಗೆ ಹೇರಳ ನಷ್ಟವಾಗಿದೆ ಅಲ್ಲಿ ಒಟ್ಟು ೪೫೭ ಜನರು ಸೆರೆಮನೆಗೆ ಹೋದರು

— ಕಾನೂನು ಮುರಿಯುವವರೊಡನೆ ರಾಜಿಪಂಚಾಯಿತಿಕೆಯೇ ಇಲ್ಲ ಕಾಯಿದೆಭಂಗ ಮಾಡುವವರು ತಮ್ಮ ಅತ್ಯಾಚಾರ ವರ್ತನೆಗಾಗಿ ಸಂಪೂರ್ಣ ಶಿಕ್ಷೆಯನ್ನನುಭವಿಸಲೇ ಬೇಕು" ಎಂದು ಮುಂಬಾಯಿ ಗವರ್ನರರಾದ ಸರ್. ಫ್ರೆಡರಿಕ್ ಸೈಕ್ಸ್ ದೊರೆಗಳು ಅಲ್ಲಿಯ ಕೌನ್ಸಿಲಿನಲ್ಲಿ ಹೇಳಿದರು

— ಅಹ್ಮದಾಬಾದಿನಲ್ಲಿ ಮಹಾತ್ಮಾ ಗಾಂಧಿಯವರ ಆಶ್ರಮದ ೩೦೦ ರೂಪಾಯಿ ತೆರ್ವೆಯ ಬಗ್ಗೆ ಎರಡು ಕಪಾಟು ಎಂದು ಟ್ಯಪ್ ರೈಟರ್ ಗಡಿಯಾರ, ಮೇಜು ಇತ್ಯಾದಿಗಳನ್ನು ಏಲಂ ಮಾಡಲಾಯಿತು ಪ್ರಾರಂಭದಲ್ಲಿ ಏಲಮಿಗೆ ಯಾರೂ ಸಲ್ಲಲಿಲ್ಲ ಕಡೆಗೆ ೧೩ ಮಂದಿಗಳು ಮುಂದೆ ಬಂದು ಅವುಗಳೆಲ್ಲ ೩೦೧—೮—೦ಗೆ ಏಲಂ ಮಾಡಲ್ಪಟ್ಟವು ಒಬ್ಬ ಮನುಷ್ಯನು ಹಿಮಾತ್‌ನಗರ ಎಂಬಲ್ಲಿಂದ ಆ ಏಲಂ ಸಂಬಂಧವಾಗಿಯೇ ಬಂದಿದ್ದನು.

— ಪಾಟ್ನಾದ ಬಿಕ್ರಮ್‌ಗಂಜ್ (?) ಎಂಬಲ್ಲಿ ರೋಷೋನ್ಮತ್ತ ಜನತಂಡಗಳು ಪೋಲೀಸ್ ಸ್ಟೇಶನನ್ನು ಲೂಟಿ ಮಾಡಲು ಪ್ರಾರಂಭಿಸಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಪೋಲೀಸ್ ಸುಪರಿಂಟೆಂಡೆಂಟ್ ಮತ್ತು ಇನ್ನಿತರ ಕೆಲವರನ್ನು ಜಖಂಗೊಳಿಸಿದುವು ಪೋಲೀಸರು ಗುಂಡು ಹಾರಿಸಲಾಗಿ ೮ ಮಂದಿಗಳು ಮಡಿದು ಬಿದ್ದರು ೪ ಮಂದಿಗಳು ಆಸ್ಪತ್ರೆಯಲ್ಲಿರುವರು ಮಡಿದವರಲ್ಲಿ ಇಬ್ಬರು ಅಲ್ಲಿಯ ಕೊಂಗ್ರೆಸ್ ಮುಂದಾಳುಗಳೆಂದು ಅಲ್ಲಿಯ ಡಿ ಮೆಜಿಸ್ಟ್ರೇಟರ ರಿಪೋರ್ಟು

— ರಾಯಪುರದಲ್ಲಿ ೪೦ ವರ್ಷದ ವರನೊಬ್ಬನು ೬ ವರುಷದ ವಧುವೊಬ್ಬಳನ್ನು ವಿವಾಹವಾಗಲಿದ್ದುದನ್ನು ತಿಳಿದುಕೊಂಡ ಅಲ್ಲಿಯ ಗುಜರಾಥಿ ಸೋಶಿಯಲ್ ರಿಫೋರ್ಮ್ ಎಸೋಸಿಯೇಶನಿನವರು ಅವನ ಮನೆಯಲ್ಲಿ ಪಿಕೆಟಿಂಗ್ ಮಾಡಿದರು ವಿವಾಹದ ಪ್ರಸ್ತಾಪವು ಅದಿಗೆ ಬಿಕ್ಕವರೆಗೆ ಅಶಾಂತಿ ... ಇಷ್ಟರ ತನಕ ಶಾರದಾ ಶಾಸ್ತ್ರವು ೧೩ ಕಡೆಗಳಲ್ಲಿ ಭಂಗಿಸಲ್ಪಟ್ಟದೆಯೆಂದೂ ಭಂಗಿಸಿದವರ ಮೇಲೆ ದಾವೆಯಾಗುವಂತಿದೆ ಎಂದೂ ತಿಳಿದುಬಂದಿದೆ

— ಸುಭಾಷ್ಚಂದ್ರಭೋಸರ ಬಂಧನದ ನಿಮಿತ್ತವಾಗಿ ನಾಗಪುರದ ಮೋಡೆಲ್ ಮಿಲ್ಲಿನ ಜನರು ಒಂದು ದಿನ ಕೆಲಸವನ್ನು ರದ್ದುಪಡಿಸಿಕೊಂಡರು ಅದರ ಮೆನೇಜರರು ಆದಿನದ ಕೂಲಿಯನ್ನು ಜನರಿಗೆ ಕೊಡಬೊಪ್ಪಲಿಲ್ಲ ಪ್ರಚಂಡ ಮೆರವಣಿಗೆ ಸಭೆಗಳಾಗಿ ಕೊನೆಗೆ ಆ ದಿನದ ಕೂಲಿಯನ್ನು ಕೊಡಲು ಮೆನೆಜರರು ಒಪ್ಪಿದರು

— ಲಾಹೋರಿನಲ್ಲಿ ದಿ ಹಿಂದಿ ಮಿಲಪ್, ದಿ ಡೈಲಿ ಮಿಲಪ್ ದಿ ಪ್ರತಾಪ್ ಪತ್ರಿಕೆಗಳ ಸಂಪಾದಕರೂ ಪ್ರೆಸ್ ಒಫ್ ಇಂಡಿಯಾ ಇವರ ಚಾಲಕರೊಬ್ಬರೂ ಹೀಗೆ ನಾಲ್ಕು ಮಂದಿಗಳು ಕೈದುಮಾಡಲ್ಪಟ್ಟಿರುವರು ಅಬ್ದುಲ್ ಘಫರ್ ಖಾನರ ಮನೆಯನ್ನು ಸರಕಾರವು ನೆಲಸಮಮಾಡಿತು ಎಂಬ ಅಬದ್ಧವಾದ ವಾರ್ತೆಯನ್ನು ಪ್ರಕಟಿಸಿದುದೇ ಇವರ ಮೇಲಿರುವ ಆರೋಪಣೆ ಇವರೆಲ್ಲರನ್ನೂ ರಿಮಾಂಡಿನಲ್ಲಿಟ್ಟಿರುವರು,

— ಶ್ರೀನಗರದಲ್ಲಿನ ಗಲಾಟೆಯು ಆರಿರುವುದಿಲ್ಲ ಒಟ್ಟು ೬೦೦ ಮಂದಿಗಳನ್ನು ಕೈದುಮಾಡಿರುತ್ತಾರೆ ಮಿ ಅಬ್ದುಲ್ಲಾ ಎಂಬ ಮುಂದಾಳುವನ್ನೂ ಕೈದುಮಾಡಿರುತ್ತಾರೆ

ಕಲ್ಕತ್ತ ಕೊರ್ಪೊರೇಷನಿನವರು ಸುಭಾಷ್ಚಂದ್ರಭೋಸರ ಸಹೋದರರಾದ ಶರತ್‌ಚ್ಚಂದ್ರಭೋಸರ ಬಂಧನದ ಪ್ರತಿಭಟನಾರ್ಥವಾಗಿ ಕಾರ್ಯಕ್ರಮವನ್ನು ಹಿಂದಕ್ಕೆ ಸರಿಸಿದರು

ಕರಾಚಿಯಲ್ಲಿ ಸ್ಥಾಪಿತವಾದ "ಟ್ರೈ ಇಂಡಿಯನ್" ಸಂಸ್ಥೆಯು ದಿನೇ ದಿನೇ ಬಲಗೊಳ್ಳುತ್ತಿದೆ ಅದು ಸ್ಥಾಪಿಸಲ್ಪಟ್ಟ ೧೪ ದಿನಗಳಲ್ಲೇ ೩೦೦೦ ಮೆಂಬರುಗಳು ಅದಕ್ಕೆ ಸೇರಿರುವರು ಸಾವಿರಗಟ್ಟಳೆ ಜನರು ಕೂಡಿ ಸ್ವದೇಶಿ ಪ್ರದರ್ಶನವನ್ನು ಆಗಾಗ ಅಲ್ಲಿ ಮಾಡುತ್ತಿರುವರು

— ಲಾಹೋರಿನಲ್ಲಿ ಜನರಿಂದ ತುಂಬಿದ್ದ ಒಂದು ಲೋರಿಯು ರೈಲ್ವೇ ಎಂಜಿನಿಗೆ ಢಿಕ್ಕೆ ಬಡೆಯಿತು ೧೩ ಮಂದಿಗಳಿಗೆ ಅಪಾಯ! ಒಬ್ಬನ ಮರಣ.

— ಬರ್ಮಾ ದಂಗೆಯಲ್ಲಿ ಸಿಕ್ಕಿಬಿದ್ದ ಕೆಲವು ಕೈದಿಗಳು ಬಹಳ ಸಾಹಸಪಟ್ಟು ಜೈಲಿನಿಂದ ಪರಾರಿಯಾಗಿರುತ್ತಾರೆಂದು ತಿಳಿದುಬಂದಿದೆ

— ಗವರ್ನರರ ಪ್ರಾಣವು ಹೋಗದೆ ಗವರ್ನರರ ಹತ್ಯೆ ಪ್ರಯತ್ನಕ್ಕೆ ದುಃಖವಾಗದೆ, ನಾನು ನನ್ನ ಉದ್ದಿಷ್ಟವನ್ನು ಸಾಧಿಸಲಿಕ್ಕಾಗದುದು ನನಗೆ ಬಹಳ ಆನಂದಕರ ಸಂಗತಿ ಎಂದು ಬಂಗಾಳ ಗವರ್ನರರಿಗೆ ಗುಂಡು ಬಿಟ್ಟ ವೀಣಾದಾಸಳ ಮಾತು

— ರಷ್ಯಾ ದೇಶದಿಂದ ಕರಾಚಿಗೆ ಕರ್ಬೂಜ ಹಣ್ಣಿನ ರಾಶಿಯೊಳಗೆ ಅಡಗಿಸಿ ತರಲ್ಪಟ್ಟ ೧೩,೦೦೦ ರಷ್ಯಾ ನಾಣ್ಯಗಳನ್ನು ಕರಾಚಿಯ ಸಿ.ಐ.ಡಿ. ಪೋಲೀಸರು ಪತ್ತೆ ಮಾಡಿ ಹಿಡಿದರು. ಒಂದೊಂದು ನಾಣ್ಯದಲ್ಲಿ ೫ ರೂಪಾಯಿಯ ಶುದ್ಧ ಬೆಳ್ಳಿಯಿದೆ ಈ ಅಪರಾಧದ ಸಂಬಂಧವಾಗಿ ನಾಲ್ಕು ಮಂದಿ ಅರಬೀಯರು ಕೈದುಮಾಡಲ್ಪಟ್ಟಿರುವರು ಇಂತಹ ಕಳವು ಹಿಂದೆಯಾಗದಿರಲಿಕ್ಕಿಲ್ಲವೆಂದು ತಿಳಿದು ಬಂದಿದೆ

— ಮುಂಬಾಯಿಯ ವೋರ್ಲಿಟಾಪಿಲ್ ಎಂಬಲ್ಲಿ ರಾಜಕೀಯ ಕೈದಿಗಳಿಗಾಗಿ ಸಮುದ್ರ ಪಕ್ಕಕ್ಕೆ ಒಂದು ಜೈಲನ್ನು ತೆರೆದಿದ್ದು, ಅದಕ್ಕೆ "ವೋರ್ಲಿ ಟೆಂಪೊರರಿ ಸಿವಿಲ್ ಜೈಲ್" ಎಂದು ಹೆಸರು ಕೊಟ್ಟಿರುವರು ಕಳೆದ ಸತ್ಯಾಗ್ರಹದ ಕಾಲದಲ್ಲೂ ಇದನ್ನು ತೆರೆದಿದ್ದರು.

— ರೌಂಡ್‌ಟೇಬಲ್ ಕಮಿಟಿಗಳು ಡಿಲ್ಲಿಗೆ ಪ್ರಯಾಣ ಮಾಡುವಾಗ ರೈಲು ಕಂಬಿಯಲ್ಲಿ ಸಿಡಿಮದ್ದು ಒಡೆಯಿತಂತೆ ಯಾರಿಗೂ ಅಪಾಯ ಆಗಲಿಲ್ಲವಾಗಿ ವಾರ್ತೆ

— ರೂಪಾಯಿ ೧೪೫,೦೦ ೦೦೦ರಷ್ಟು ಹಣವು ನಮಗೆ ಸರಕಾರ ಮತ್ತು ರಾಜರುಗಳಿಂದ ದೊರೆತಿದೆ ನಾಲ್ಕು ಕೋಟಿ ರೂಪಾಯಿ ಬೆನಾರಿಸ್ ಯುನಿವರ್ಸಿಟಿಯ ಸಂಸ್ಥಾಪನೆಗಾಗಿ ಅಗತ್ಯವಿದೆ ಎಂದು ಪಂಡಿತ ಮಾಲವೀಯರು ಬೆನಾರಿಸ್ ಯುನಿವರ್ಸಿಟಿಯಲ್ಲಿ ಹೇಳಿದರು ಸರ್ ಸಿ ವಿ ರಾಮನ್‌ರವರಿಗೆ (Doctor of Science) ಎಂಬ ಮಾನ ಬಿರುದು ಈ ಯುನಿವರ್ಸಿಟಿಯಲ್ಲಿ ಕೊಡಲ್ಪಟ್ಟಿತು.

— ಅಮೃತಸರದಲ್ಲಿನ 'ವೇಷಾವರದ ಮಂತ್ರಾಲೋಕದ ರಾಜ' ನೆಂಬ ಮಹಾ ಪೋಕರಿಯಾದ ಜಾನ್ ಎಂಬವನು ರಾವಲ್‌ಪಿಂಡಿಯಲ್ಲಿನ ತನ್ನಂತಹ ಪೌರುಷದ ವೈರಿಯೊಬ್ಬನಿಗೆ ಒಂದು ಅಂದವಾದ ಪಾರ್ಸೆಲ್ ಮೂಲಕ ದಸಷ್ಟವಾಗಿ ಒಂದು ಉಗ್ರವಾದ ಬೊಂಬನ್ನು ಕಳುಹಿಸಿಕೊಟ್ಟನು ಜಾನನ ಜಾಣತನಕ್ಕಾಗಿ ಪೋಲೀಸರು ಅವನನ್ನು ಠಾಣ್ಯಕ್ಕೆ ಕರೆದುಕೊಂಡು ಹೋಗಿರುತ್ತಾರೆ

ಶ್ರೀ ಈ ಸಿ ಗಾಂಧಿಯೆಂಬವರು ತನ್ನ ಅಣ್ಣನಾದ ಮಹಾತ್ಮಾ ಗಾಂಧಿಯವರನ್ನು ಸೆರೆಮನೆಯಲ್ಲಿ ಭೇಟಿಯಾದರು ಅವರೊಡನೆ ಶ್ರೀ ಎಸ್ ಡಿ ಕಲೇಲ್ಕರರೂ ಇದ್ದರು ಭೇಟಿಯು ಸುಮಾರು ೧ ಘಂಟೆಯೊಳಗೆ ಮುಗಿಯಿತು

— ಈಗ ಗಾಂಧಿಜಿಯವರು ತೂಕದಲ್ಲಿ ೧೦೭ ಪೌಂಡಿದ್ದಾರೆಂದೂ, ಅತ್ಯುತ್ತಮವಾದ ಆರೋಗ್ಯದಿಂದಿರುತ್ತಾರೆಂದೂ ಮತ್ತು ಹಾಲು ಸೇವಿಸುವುದನ್ನು ನಿಲ್ಲಿಸಿರುವರೆಂದೂ ತಿಳಿದುಬಂದಿದೆ

— ಕಾಶ್ಮೀರದಲ್ಲಿನ ಗಲಾಟೆಯು ವಿಪರೀತವಾಗಿಯೊ ದು ಬಂದಿದೆ ಕೈದುಗಳೂ ಶಿಕ್ಷೆಯೂ ನಡೆಯುತ್ತಿವೆ ಹರಿದ್ವಾರದಲ್ಲಿ ಕೆಲವು ದಂಗೆಕೋರರು ತಮ್ಮ ಸ್ವಂತ ಗವರ್ನರರನ್ನೂ ಜಡ್ಜರನ್ನೂ ನೇಮಿಸಿಕೊಂಡಿದ್ದಾರೆಂದು ಅಲ್ಲಿಯ ಸರಕಾರದ ಪ್ರಕಟಣೆ

— ಬೆನಾರಿಸ್‌ನಲ್ಲಿ ಅನೀಕ್ವಿರ್‌ಫ್ ಎಂಬ ಪುಸ್ತಕವನ್ನು ಸರಕಾರವು ನಿಷೇಧಿಸಿದ್ದಿತು ಅದು ಗಾಂಧಿಜೀಯವರ ಪುಸ್ತಕದ ಪರಿವರ್ತನೆಯೆಂದು ತಿಳಿದುಬಂದಿದೆ ಈಗ ಈ ಪುಸ್ತಕದ ಮೇಲಿನ ನಿಷೇಧ ಶಾಸನವನ್ನು ತೆಗೆದಿರುವರು

ವಿಜಗಪಟಾಮಿನ ಮುನ್ಸಿಪಲ್ ಪ್ರಾಕಾರದೊಳಗೆ ನಡೆಯುತ್ತಿರುವ ಅಮಾಯಕರ ವ್ಯಾಪಾರಗಳಿಗೆ ಲೈಸನ್ಸು ಹಾಕಬೇಕೆಂದು ವಿಚಾರವಾಗಿದೆ, ಕ್ಷೌರ ವೃತ್ತಿಗೆ ಮಾತ್ರ ಲೈಸೆನ್ಸ್ ಬೇಡವೆಂದಾಗಿದೆ

— ಭಾರತಹಿತೈಷಿಗಳಾದ ಪಂಡಿತ ಮದನ ಮೋಹನ ಮಾಲವೀಯರ ೭೦ನೇ ಜನ್ಮದಿನಾಚರಣೆಯು ಸಕಲ ಕೋವಿದರ ಪ್ರಶಂಸೆ ಶುಭಸೂಚನೆಗಳಿಂದ ಕಳೆದ ವಾರದಲ್ಲಿ ದೇಶದಲ್ಲೆಲ್ಲಾ ಜರಗಿತು

— ಫ್ರಿಂಟೈಸ್ ಕಮಿಟಿಯ ಚೆಯರ್‌ಮೆನರು ಪಾರ್ಕ್ಸಿಡ ಮಾರ್ಗವಾಗಿ ಕೈಲಿನಲ್ಲಿ ಹೋದರು ಮೂವತ್ತು ಮಂದಿಗಳು ಕಪ್ಪು ಪತಾಕೆಗಳನ್ನು ತೋರಿಸಿದರು ಅವರನ್ನು ಪೋಲೀಸರು ಹಿಡಿಸಿದರು

— ಕಡಲೂರಿನಲ್ಲಿ ಒಬ್ಬ ಕುಡಿಕ' ಶುದ್ಧ ಕುಡಿದಾದ ಮೇಲೆ ಮದ್ಯದಂಗಡಿಯವನಿಗೆ 'ಗರಂ' ಮಾಡಿದ, ಅಂಗಡಿಯವನು ಅದನನ್ನು ತೆಗೆದೂಡಿಬಿಟ್ಟ ಕ್ರುದ್ಧನಾದ, ಕೋಡಿನಲ್ಲಿ, ಆಸ್ಪತ್ರೆಯಲ್ಲಿ ಕುಡಿದ ಅಂಗಡಿಯವನು ಸೆರೆಮನೆಯಲ್ಲಿದ್ದಾನೆ

— ಬಂಗಾಳ ಗವರ್ನರರ ಪ್ರಾಣಾಪಹರಣಕ್ಕಾಗಿ ಯತ್ನಿಸಿದ ವೀಣಾದಾಸಳೊಡನೆ ಬಿ ಎ. ಕ್ಲಾಸಿನ ಪ್ರಮೀಳ ಗುಪ್ತ ಸುಶೀಲ ಗುಪ್ತ ರೆಂಬಿಬ್ಬ ತರುಣಿಯರನ್ನು ಕೈದು ಮಾಡಿರುತ್ತಾರೆ

— ಕೃತಕ ನಾಣ್ಯಗಳನ್ನು ಮಾಡಿ ಕೋರ್ಟಿನಲ್ಲಿ ಕೈಗಟ್ಟಿ ಸಿಲ್ಲಬೇಕಾದ ಅಬ್ದುಲ್ಲನೆಂಬವನಿಗೆ ಕಲ್ಕತ್ತದ ಮೆಜಿಸ್ಟ್ರೇಟರು ಎರಡು ವರುಷಗಳ ಕಠಿಣ ಶಿಕ್ಷೆಯನ್ನು ಕೊಟ್ಟರು. ಅವರು ಶಿಕ್ಷೆಯನ್ನು ವಿಧಿಸಿ ಹೇಳಿ ಮುಗಿಸುವುದರೊಳಗೆ ಅಬ್ದುಲ್ಲನು ೩ ಪಾದರಕ್ಷೆಗಳನ್ನು ತೆಗೆದು ಮೆಜಿಸ್ಟ್ರೇಟರ ಮೈಮೇಲಕ್ಕೆಸೆದನು ಅದು ಮೆಜಿಸ್ಟ್ರೇಟರಿಗೆ ಸ್ವಲ್ಪ ತಾಗಿದೆ ಅಷ್ಟೇ ಸಾಕಾಗದೆ ಅಬ್ದುಲ್ಲನು ಕೋಪಾಟೋಪದಿಂದ ಕಿಡಿಕಿಡಿಯಾದನು ಪೋಲೀಸರು ಅವನನ್ನು ಸಮಾಧಾನಪಡಿಸಿದರು

— ಲಾಹೋರಿನ ಪರಪ್ರಕಾಶನೆಂಬವನು ಲೈಸನ್ಸು ಇಲ್ಲದ ರಿವೋಲ್ವರ್ ಮತ್ತು ಸಿಡಿಮದ್ದುಗಳನಿಟ್ಟುಕೊಂಡಿದ್ದುದಕ್ಕಾಗಿ ಎರಡು ವರುಷಗಳ ಕಠಿಣ ಶಿಕ್ಷೆಗೆ ಸಿಕ್ಕಿದನು. ಅವನು ಮೊನ್ನೆ ಅಪೀಲುಮಾಡಿದನು ಅದು ತಳ್ಳಿಹಾಕಲ್ಪಟ್ಟಿದೆ

— ಪೇಶಾವರದಲ್ಲಿ ಫತ್ ಬಹದ್ದೂರ್ ಎಂಬವನು ಅಲ್ಲಿಯ ನವಾಬರ ಮನೆಯರ ಸೇವಕ, ಅವನಿಗೊಂದು ರಿವೋಲ್ವರ್ ಮೊನ್ನೆ ಅವನು ಪಾಸಿಗೆಯ ಮೇಲೆ ರಿವೋಲ್ವರನಿಟ್ಟು ಹೊರಗೆ ಹೋಗಿ ಒಳಗೆ ಬರುವಾಗ ಅದು ಕಾಣೆ ಹುಡುಕಿದರೂ ಸಿಗಲಿಲ್ಲ ಫತ್ ಬಹದ್ದೂರನು ಕಳೆದ ಸಪ್ಟಂಬರದಲ್ಲಿ ೨೪೦೦೦ ರೂಪಾಯಿ ಪೋಸ್ಟಲ್ ಹಣವನ್ನು ಲೂಟಿಮಾಡಿ ಕೊಂಡೊಯ್ದು ಇಬ್ಬರು ತುಂಟರನ್ನು ಸಾಹಸದಿಂದ ಹಿಡಿದವನಂತೆ

ದಕ್ಷಿಣ ಕನ್ನಡ

ಮಂಗಳೂರು: — ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಥೀಸ್ಸ್‌ಟ್ರ್ಯಾಪ್ ದಿನಾಚರಣೆಯು ತಾ. ೧೫ನೇ ದಿನ ದಿವಾನ ಬಹದ್ದೂರ ಎನ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು

ಮಾರ್ಚು ೧೯ ೨೦—೩೨ನೇಗೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಹುಟ್ಟು ೩೭ ಜನನಗಳೂ ೩೬ ಮರಣಗಳೂ ಆದುವು

೨೦ ನೇ ಸ್ವದೇಶಾಭಿಮಾನಿಯಲ್ಲಿ ಹಂಗಾರಕಟ್ಟೆಯಲ್ಲಿ ಶ್ರೀ ಎ ವಿಠ್ಠಲ ನಾಯ್ಕರು ಕಟ್ಟಿಸಿರುವ ರಾಮ ಮಂದಿರದ ಸದುಪಯೋಗವಾಗಿ ತಾ ೩—೨—೩೨ ಲ್ಲಿ ಒಬ್ಬ ಥಿಯೋಸೊಫಿಕಲ್ ಕಂಪೆನಿಯವರು ಸಿರುವಮಾ ನಾಟಕವನ್ನು ಆಡಿರುವರು" ಎಂದಿರುವುದಷ್ಟೆ ಸದರಿ ರಾಮಮಂದಿರ ಸಂಸ್ಥೆಯನ್ನು ಸ್ಥಾಪಿಸಿದುದು ತಾನೊಬ್ಬನಲ್ಲವೆಂದೂ ತಾನು ಮಂದಿರದ ಆಡಳಿತ ಕಮಿಟಿಯಲ್ಲಿ ಒಬ್ಬ ಸೆಕ್ರೆಟರಿಯಾಗಿರುತ್ತೇನೆಂದೂ ಮತ್ತು ಆ ಮಂದಿರವು ಗೌಡಸಾರಸ್ವತ ಬ್ರಾಹ್ಮಣ ವೃಂದದ ಹಕ್ಕು ಸವಸ್ತುವೆಂದೂ ಶ್ರೀ ರಾ ಸಂಗಾಳ ವಿಠ್ಠಲ ನಾಯ್ಕರು ನಮಗೆ ಬರೆದಿರುತ್ತಾರೆ

ಇಲ್ಲಿಯ ಬೆಂಚ್ ಮೆಜಿಸ್ಟ್ರೇಟರಾಗಿ ೧೧ ವರುಷಗಳ ಕಾಲ ನಗರಸೇವೆ ಮಾಡುತ್ತಿದ್ದ ಶ್ರೀ ಅಮ್ಮೆಂಬಳ ರಾಮರಾಯರು ಅವಧಿಯು ತೀರ್ವದ ಮೇರೆಗೆ ತನ್ನ ಸ್ಥಾನದಿಂದ ವಿಮುಕ್ತರಾಗಿರುವರು

ಇಲ್ಲಿಯ ಅತ್ತಾವರದ ಬಾಬುಗುಡ್ಡೆಯ ಬಳಿ ಒಂದು ಮನೆಯಲ್ಲಿ ಜಾರಮ್ಮಾ ಮೂಸೆರಿದೆಗೆ ತೀರ ವಿರೋಧವಾಗಿ ಬರುವ ಆದಿತ್ಯವಾರ ದಿನ ೧ ವರ್ಷದ ಬಿಲ್ಲವ ಹುಡುಗಿಯೊಬ್ಬಳಿಗೆ ಯುವಕನೊಡನೆ ವಿವಾಹವಾಗಲಿದೆಯೆಂದೂ ಈ ವಿವಾಹದ ಪ್ರಥಮ ಕೂಟವು ತಾ ೨೧ನೇ ಆದಿತ್ಯವಾರ ಜರಗಲಿದೆಯೆಂದೂ ತಿಳಿದುಬಂದಿದೆ ಕಾರಣ ವಾಹಿನಿಯನ್ನು ಮಂಗಳೂರಿನವರು ಮರೆಯುತ್ತಾ ಬಲವಾಗ ಸಂಬಂಧಪಟ್ಟವರು ಎಚ್ಚರವೀಯುವರೆಂಬ ಭರವಸೆಯಿದೆ

ಗವರ್ನಮೆಂಟ್ ಕೊಲೇಜಿನ ವಿದ್ಯಾರ್ಥಿಯಾದ ಶ್ರೀ ಅಪ್ಪಯ್ಯರೆಂಬವರು ತೀರಿಹೋದ ದುಃಖಸೂಚನಾರ್ಥವಾಗಿ ಆ ಕೊಲೇಜಿಗೆ ಮರುದಿನ ರಜೆ ಕೊಡಲ್ಪಟ್ಟಿತ್ತು

ಸ್ಥಳೀಯ ಶ್ರೀ ಕೃಷ್ಣ ಸಿನೇಮಾ ಮಂದಿರದಲ್ಲಿ ತಾ ೨೦ರಿಂದ ಚಿಂತಾಮಣಿ ಎಂಬ ಮಾತಾಡುವ ಚಲ್ಲಚಿತ್ರವನ್ನೂ ನಂತರ ಭಕ್ತ ಪ್ರಹ್ಲಾದ ಹೀರರಂಜ ರೇಸಿಗೆಟ್ಸ್ ಎಂಬ ಅತ್ಯುತ್ತಮವಾದ ಇಂಗ್ಲೀಷ್ ಮಾತಾಡುವ ಚಲಚಿತ್ರವನ್ನೂ, ಅಬ್ರಹಾಮ್ ಲಿಂಕನ್ ಮೊದಲಾದ ಚಿತ್ರಗಳನ್ನೂ ಪ್ರದರ್ಶಿಸಲಿಕ್ಕಿರುವರು.

ಮಾಜೀ ಮುನಿಸಿಪಲ್ ಚೇಯರ್‌ಮೇನರಾಗಿದ್ದ ಮ ರಾ, ನೆಲ್ಲಿಕ್ಕಾ ವೆಂಕಟರಾಯರ ಪತ್ನಿಯವರು ಇಲ್ಲಿಯ ಬೆಂಚ್ ಮೆಜಿಸ್ಟ್ರೇಟರಾಗಿಯೂ, ರಾವ್ ಸಾಹೇಬ್ ಎ ಜೆ ಲೋಬೋರವರ ಪತ್ನಿಯವರು ಮದ್ರಾಸಿನಲ್ಲಿ ಬೆಂಚ್ ಮೇಜಿಸ್ಟ್ರೇಟರಾಗಿ ನೇಮಕ ಹೊಂದಿರುವರು

ಸೈಂಟ್ ಎಲೋಸಿಯಸ್ ಕಾಲೇಜಿನ ಬಾಲಸಾಹಿತ್ಯ ಮಂಡಳಿಯಲ್ಲಿನ ಕಳವು ಗಳ ಸಂಬಂಧವಾಗಿ ಬೋರ್ಸ್ಟಲ್ ಶಾಲೆಯ ಶಿಕ್ಷೆಗೊಳಗಾದ ೩ ಮಂದಿ ವಿದ್ಯಾರ್ಥಿಗಳ ಪರವಾಗಿ ಇಲ್ಲಿಯ ಶ್ರೀ ಜೆ ಸೋಮಶೇಖರ ರಾವ್ ಬಿ ಜೆ ಎ ಸಾಲ್ಡಾನ ಬಿ ಎಂ ಅಲ್ವರಿಸ್ ಮತ್ತು ಮದ್ರಾಸಿನ ಬಿ ಎಂ ಟಿ ಕ್ರೈಲೆ ಎಂಬವರು ವಕಾಲತು ನಡೆಸಿದರು ಅಪಾದಿತರ ಅಪೀಲು ಸೆಶನ್ ಜಡ್ಜರಲ್ಲಿ ತನಿಖೆ ನಡೆಯಿತು ಸೋಮವಾರ ದಿನ ಆರು ಮಂದಿಗಳೂ ಬಿಡುಗಡೆಹೊಂದಿರುತ್ತಾರೆ

ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಕಳೆದ ಆದಿತ್ಯವಾರ ದಿನ ಬಹು ವಿಜೃಂಭಣೆಯಿಂದ ಜರಗಿತು ಉತ್ಸವದ ಸಮಯದಲ್ಲಿ ರಾಜಕೀಯ ವ್ಯವಸ್ಥೆ ಯಾರಾದರೂ ಗಲಾಟೆಯನ್ನೆಬ್ಬಿಸದ ಹಾಗೆ ದೇವಸ್ಥಾನದವರು ೪೦೦೦ ರೂಪಾಯಿಗಳ ಹೊಣೆಯನ್ನು ಕೊಡಬೇಕೆಂದು ಸರಕಾರದ ಆಜ್ಞೆಯಿತ್ತೆಂದು ವಾರ್ತೆಯಿತ್ತು ರಥೋತ್ಸವದ ಸಮಯದಲ್ಲಿ ಸಶಸ್ತ್ರ ಪೋಲೀಸರ ಪಹರೆಯಿತ್ತು ಅಂತೂ ಇಂತೂ ರಥೋತ್ಸವವು ಏನೊಂದು ಗಲಾಟೆಯಿಲ್ಲದೇ ಸುಕ್ರಮವಾಗಿ ಜರಗಿತು

ದಕ್ಷಿಣ ಕನ್ನಡ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ ಒಂದು ಸಭೆಯು ತಾ ೨೦ನೇ ದಿನ ೫ ೪೦ಕ್ಕೆ ವೆನ್‌ಲಾಕ್ ಆಸ್ಪತ್ರೆಯಲ್ಲಿ ಜರಗುವುದು ಮಿ ಎ ಎಫ್ ಕೊಹಿಲೊ ಎಂ ಡಿ ಬಿ ಎಸ್ ರವರು ಭಾಷಣ ಮಾಡುವರು

ಶಾಸನಭಂಗ ಚಳವಳಿಕ್ಕೆ ಸೇರಿದವರ ಭಾವಚಿತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದರಿಂದ ಆ ಚಳವಳಿಕ್ಕೆ ಪ್ರೋತ್ಸಾಹದಿತ್ತಂತೆಯೂ ದರ್ಶನಗುತ್ತದೆಂದೂ ಇನ್ನು ಮೇಲೆ ಹಾಗೆ ಅವರ ಚಿತ್ರಗಳನ್ನು ಪ್ರಕಟಿಸುವ ಪತ್ರಿಕೆಗಳಿಂದ ಸೆಕ್ಯೂರಿಟಿ ಕೇಳಲಾದೀತೆಂದೂ ಜಿಲ್ಲಾ ಕಲೆಕ್ಟರರು ಎಲ್ಲಾ ಪತ್ರಿಕೆಗಳಿಗೂ ಮುದ್ರಾಲಯಗಳಿಗೂ ಆಜ್ಞಾಪಿಸಿರುತ್ತಾರೆ

ಇಲ್ಲಿಯ ಪಿಕೆಟಿಂಗಿನವರಾಗಿ ಕಳೆದ ಬುಧವಾರ ಪಿಕೆಟಿಂಗಿನ ಸಂಬಂಧ ಛಾರ್ಜಿ ಹೆಟ್ಟು ಶ್ರೀ ಸಪ್ಪಯ್ಯ ಆಳ್ವರನ್ನು ಶ್ರೀಕೃಷ್ಣ ರಸ್ಸೋರೆಂಟಿನ ಬಳಿ ಕೈದು ಮಾಡಿ ನ್ಯಾಯ ವಿಚಾರಣೆಯಾಗಿ ಒಂದು ವರುಷದ ಕಠಿಣ ಸಜೆಯನ್ನು ವಿಧಿಸಿದರು

ಇಲ್ಲಿ ಕಳೆದ ಅನೇಕ ದಿನಗಳಿಂದ ಬಹಳ ಆಶ್ಚರ್ಯಕರವಾದ ಪ್ರತಿವಾರ ಪ್ರದರ್ಶನವು ನಡೆಯುತ್ತಿದೆಯಷ್ಟೆ ಮಂಗಳೂರಲ್ಲಿ ತಮ್ಮ ಕಲೆಗೆ ಹೆಚ್ಚಿನ ಪ್ರೋತ್ಸಾಹವು ಸಿಕ್ಕಿದೆ ಎಂದು ಅವರ ವ್ಯಾಪಾರದ ಹೇಳಿಕೆ ಅವರು ಇನ್ನು ಬೇಗನೇ ಪರಊರುಗಳಿಗೆ ಹೋಗಲಿರುವರು

ಇಲ್ಲಿಯ ಡಿಪ್ರೆಸ್ಡ್ ಕ್ಲಾಸಸ್ ಮಿಶನಿನ ಹೆಸರಿನಲ್ಲಿ ಅಧಿಕಾರವಿಲ್ಲದೆ ಕೆಲವರು ಹಣ ಸಂಪಾದನೆ ಮಾಡುತ್ತಾರಂತೆ ಒಬ್ಬರಲ್ಲರು ಅಥವಾ ಇನ್ನಿತರ ಸ್ಥಳಕ್ಕೆ ಅಧಿಕೃತ ಪತ್ರವಿದ್ದವರ ಮಾತ್ರ ಅವರ ಹಣ ಸಂಚಯಕ್ಕೆ ಭಾಗಿಗಳೆಂದೂ ಮಿಶನಿನ ಕಾರ್ಯದರ್ಶಿಗಳು ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ

ಉಡುಪಿ: — ಶ್ರೀ ಸಾಂತ್ಯಾರು ಅನಂತ ಪದ್ಮನಾಭ ಭಟ್ಟರ ಪರಿಶ್ರಮದಿಂದ ೧೯೨೫ರಲ್ಲಿ ಸ್ಥಾಪಿತವಾದ ಪೆರ್ಡೂರಿನ ರಾಷ್ಟ್ರೀಯ ಶಾಲೆಯು ರಾಜದ್ರೋಹಕ್ಕೆ ಸಹಕಾರಿಯಾಗಿರುವದೆಂದು ಜಿಲ್ಲಾ ಕಲೆಕ್ಟರರ ಹುಕುಮಿನ ಮೇರೆಗೆ ಮುಚ್ಚಲಾಗಿದೆ ಇದು ಪೆರ್ಡೂರಿನ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಕಟ್ಟೋಣದಲ್ಲಿ ನಡೆಸಲ್ಪಡುತ್ತಿತ್ತು ಸದ್ರಿ ದೇವಸ್ಥಾನದ ಆಡಳಿತದಾರರಿಗೆ ಸದರಿ ಶಾಲೆಗೆ ದೇವಸ್ಥಾನದ ಕಟ್ಟಡವನ್ನು ಉಪಯೋಗಿಸಲು ಕೊಡಬಾರದಾಗಿ ಕೊಟ್ಟ ಹುಕುಮಿನಂತೆ ಮುಚ್ಚಲ್ಪಟ್ಟಿತು.

ಈ ತಿಂಗಳ ಪ್ರಥಮವಾರದಲ್ಲಿ ಪರಾಜಗದ ಬಾಕಿ ಉಳಿದಿದ್ದ ಕೆಲವು ತಾಲೂಕು ರಂಗಬೀದಿ ಅಂಗಡಿಗಳು ತಾ ೧೯ಕ್ಕೆ ಹರಾಜು ಹಾಕಲ್ಪಟ್ಟವು, ೬ ಮದ್ಯದ ಅಂಗಡಿ ಮಾತ್ರ ಯೋಗ್ಯ ಬೇಡಿಕೆಯಿಲ್ಲದ ಕಾರಣ ಅವರ ಹರಾಜನ್ನು ಇದೇ ೨೫ ೨೬ಕ್ಕೆ ಮುಂದೂಡಲಾಗಿದೆ ಎಷ್ಟು ಹರಾಜಾದ ಅಂಗಡಿಗಳ ಮಟ್ಟಿಗೆ ಆದಾಯವು ಸೇಕಡಾ ೨೫ರಷ್ಟು ಕಡಿಮೆಯಾಗಿದೆ ಎಂದು ತಿಳಿದುಬರುತ್ತದೆ

ಕಾರ್ಕಳ: — ಅಖಿಲ ಭಾರತ ಕಾಂಗ್ರೆಸ್ ಚಳವಳಿಕ್ಕೆ ಸಹಾನುಭೂತಿಯನ್ನು ತೋರಿಸಿ ಕಾರ್ಕಳದ ಸಾಹುಕಾರರು ಹರತಾಳ ಮಾಡಿರುವರು

ಸತ್ಯಾಗ್ರಹಿಗಳೆಂಬವರಿಲ್ಲದ ಸಮಯದಲ್ಲಿ ಕಾರ್ಕಳದಲ್ಲಿಯೂ ಹಸ್ತಲಿಖಿತ ಕಾಂಗ್ರೆಸ್ ಕರಪತ್ರ ಒಂದು ಹಂಚಲ್ಪಟ್ಟಿದೆ

ಹಳೆಯಂಗಡಿಯ ಗೋರಕ್ಷಾ ಸಂಸ್ಥೆಯ ಸಹಾಯಕ್ಕಾಗಿ ಆ ಸಂಸ್ಥೆಯ ಪ್ರಚಾರಕರಾದ ಶ್ರೀ ಪತ್ತಾಕ್ರಿಯ ರಘುನಾಥ ಮಟಳೆಯವರು ಕೆಲವು ಹರಿಕೀರ್ತನೆಗಳ ಮೂಲಕ ಧನ ಸಂಗ್ರಹ ಮಾಡಿದರು

ಶಾಲಿವಾಹನಶಕ ೧೮೫೩ನೆಯ ಪ್ರಜೋತ್ಪತ್ತಿ ಸಂವತ್ಸರದ ಮಾಘ ಶು|| ೧೪ ಶನಿವಾರದಿಂದ ಪ್ರಜೋ. ಸಂ||ರದ ಮಾಘ ಬ|| ೫ ಶುಕ್ರವಾರದ ವರೆಗಿನ ಪಂಚಾಂಗ

([illegible] ಮಕರ—[illegible]).

ತಾರೀಖು	ವಾರ	ತಿ.	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
20	ಶನಿ	೧೪	[illegible]	ಅಶ್ವಿನೀ	[illegible]	೦	6 54	6 37
21	ರವಿ	೧೫	[illegible]	ಭರಣೀ	[illegible]	[illegible]	6 54	6 37
22	ಸೋಮ	○	[illegible]	ಕೃತ್ತಿಕಾ	[illegible]	೧ ೧೦	6 53	6 37
23	ಮಂಗ	೧	೦ ೧೮	ರೋಹಿಣೀ	[illegible]	೧೧	6 53	6.38
24	ಬುಧ	[illegible]	[illegible]	ಮೃಗಶಿರಾ	[illegible]	೧೨	6.52	6 38
25	ಗುರು	೪	[illegible]	ಆರ್ದ್ರಾ	[illegible]	೧೪	6 52	6 38
26	ಶುಕ್ರ	೫	[illegible]	ಪುನರ್ವಸು	[illegible]	೧೪	6 51	6.38

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಕಾವು) Max ಗರಿಷ್ಠ	Min ಕನಿಷ್ಠ	Rainfall ಮಳೆ ದಿನದ ಮಳೆ	ಜುಮುಲಾ ಮಳೆ.
12	86— 6	73— 8	—	—
13	86— 7	73— 0	—	—
14	87— 6	73— 2	—	—
15	86— 3	72— 2	—	—
16	86— 8	72— 9	—	—
17	86— 7	72 5	—	—
18	86— 7	73— 4	—	149 96

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ	ಆ	ವರೆಗೆ ರೂ	ಆ
ಬೊಸ ರಾಶಿ ಅಕ್ಕಿ	3	6	1	2
ಹಳೆಮುಸ್ಕಿ	1		1	5
ಹಳೆ ಗುಡ್ಡೆ	4		4	4
ಹಳೆ ಸುಗ್ಗಿ	3	8	4	
ಊರ ಅಕ್ಕಿಲ್ ಬೆಲ್ತಿಗೆ	4	8	5	
ರಂಗೂನು ಬೆಲ್ತಿಗೆ ಗೋಣಿ ಗಳ್ಳೆ	[illegible]	8	[illegible]	12
ಎಣ್ಣೆ ರುಬೆಲ್ತಿಗೆ ಮುಡಿ ಗಳ್ಳೆ	4	4	—	
ಗೋಧಿ ಗೋಣಿ ಗಳ್ಳೆ	[illegible]	9	1	8
ತೊಗರಿ ಗೋಣಿ ಗಳ್ಳೆ	12	0	12	8
ಹುರುಳಿಗೋಣಿ ಗಳ್ಳೆ	6	8	[illegible]	0
ಕಡಲೆ ಗೋಣಿ ಗಳ್ಳೆ	8	8	12	8
ಶೇಂಗಾಬೀಜ ಗೋಣಿ ಗಳ್ಳೆ	13	8	[illegible]1	0
ಉದ್ದು ಗೋಣಿ ಗಳ್ಳೆ	11	9	[illegible]	[illegible]
ಹೆಸರು ಗೋಣಿ ಗಳ್ಳೆ	10	4	1	
ಊರು ಬೆಲ್ಲ ಖಂಡಿ ಗಳ್ಳೆ	36		37	8
ಉಪ್ಪು ಗೋಣಿ ಗಳ್ಳೆ	4	12	4	14
ಮೆಣಸು ಖಂಡಿ ಗಳ್ಳೆ	60		6[illegible]	
ದೊಡ್ಡ ಹಿಂಡಿ ಖಂಡಿ ಗಳ್ಳೆ	31	0	—	
ಎಳ್ಳಿಂಡಿ ಖಂಡಿ ಗಳ್ಳೆ	26	4	2[illegible]	8
ದೊಡ್ಡ ಎಣ್ಣೆ ಮಣ ಗಳ್ಳೆ	5	12	6	1[illegible]
ಎಳ್ಳೆಣ್ಣೆ ಮಣ ಗಳ್ಳೆ	6	12	[illegible]	0
ತರುಕಎಣ್ಣೆ ಪೆಟ್ಟಿಗೆ ಗಳ್ಳೆ	4	7	5	12
ಕೊಬ್ಬರಿ ಸಕ್ಕರೆ ಮಣ ಗಳ್ಳೆ	4	0	4	3
ಜೋನಿ ಮಣಸು	4	0	5	1
ಸಾಸಿವೆ ಮುಡಿ ಗಳ್ಳೆ	7	8	8	0
ನೇಟಿವ್ ಕಾಫಿ ಖಂಡಿ ಗಳ್ಳೆ	[illegible]1[illegible]	8	22[illegible]	
ಕಾಳುಮೆಣಸು ಖಂಡಿ ಗಳ್ಳೆ	170	0	180	
ಯೇಲಕ್ಕಿ ಮಣ ಗಳ್ಳೆ	27	0	28	
ಗೇರುಬೀಜ ಮುಡಿ ಗಳ್ಳೆ	4	6	4	12
ಕಬ್ಬಿಣ ಖಂಡಿ ಗಳ್ಳೆ	35	0	3[illegible]	8
ತಾಂಬ್ರ ತಗಡು ಮಣ ಗಳ್ಳೆ	13	0	3	8
ತಾಂಬ್ರ ಪಾತ್ರಗಳ ಮಣ ಗಳ್ಳೆ	16		16	0
ಸೀಸದಕಲ್ಲು ಸೇರು ಗಳ್ಳೆ	15	12	16	
ಹಿತ್ತಾಳೆ ತಗಡು ಮಣ ಗಳ್ಳೆ	12	0	12	8
ಸತುವು ಗಳ್ಳೆ	18	4	18	8
ಸುಣ್ಣದ ಹುಳಿ ಖಂಡಿ ಗಳ್ಳೆ	20		—	
ಶಿಪೇರಿ ಕಾಫಿ ಖಂಡಿ ಗಳ್ಳೆ	375		400	
ಹಳೆ ಅಡಿಕೆ	180		205	
ಹೊಸಅಡಿಕೆ	140		145	

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ. ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರು ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ಪಿ. 1 30ಕ್ಕೂ ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ ಟ್ರೈನಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ೪ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಾಂತಿಕೊಳ್ಳಲು ಅವಕಾಶವಿದ್ದಲ್ಲದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ, ಪಂಡರಾಪುರ ಗೋವಾ ಬೆಳಗಾಂವ ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳಿ, ಪೂನಾ, ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಲೋರಡೂನ್ ಸೂರಾಚ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನು ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಶಿರಾವಳ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೆಲವು ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲ್ಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು, ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಬಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು ಈಶಾನ್ಯ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಶ್ರೀರಂಗಪಟ್ಟಣಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary

The Canara Public Conveyance Company Ltd, Mangalore

ವಿವಿಧ ಸಮಾಚಾರಗಳು.

ವೀಣಾದಾಸಳ ವಿಚಾರಣೆ

ತಾ. ೬ನೇ ದಿನ ಬಂಗಾಳ ಗವರ್ನರರಾದ ಸರ್ ಸ್ಟೇನ್ಲಿ ಜೇಕ್ಸನರ ಮೇಲೆ ಗುಂಡು ಹಾರಿಸಿದ ವೀಣಾದಾಸಳ ನ್ಯಾಯವಿಚಾರಣೆಯು ತಾ ೧೫ನೇ ದಿನ ಕಲ್ಕತ್ತದಲ್ಲಿ ನಡೆಯಿತು ವಿಚಾರಣೆಯ ಸಮಯದಲ್ಲಿ ವೀಣಾದಾಸಳು ಸಮಾಧಾನದಲ್ಲಿಯೇ ಇದ್ದಳು ಗವರ್ನರರ ಪ್ರಾಣಾಪಹರಣಕ್ಕಾಗಿ ತಾನು ಯತ್ನಿಸಿದುದು ನಿಜವೆಂದೂ, ತಾನು ತಪ್ಪಿತಸ್ಥಳೆಂದೂ ಹೇಳಿದಳು ಜನರಿಂದ ತುಂಬಿದ ಕೋರ್ಟಿನಲ್ಲಿ ಅವಳು ತನ್ನ ಈ ರೀತಿಯ ಲೇಖನವೊಂದನ್ನು ಓದಿದಳು "ದೇಶದ ದಬ್ಬಾಳಿಕೆಗೊಳಗಾದ ನನ್ನ ದೇಶವಾತ್ಸಲ್ಯದ ಸ್ಫೂರ್ತಿಯಿಂದ ಉದ್ರೇಕಗೊಂಡು ನಾನು ಗವರ್ನರರಿಗೆ ಗುಂಡುಹೊಡೆದೆನು. ದೇಶದ ಪಥದಲ್ಲಿ ನನಗೆ ಮರಣವೇ ಲೇಸೆಂದು ನಾನು ಬಗೆದೆನು ನನ್ನ ಕಷ್ಟಪರಂಪರೆಗಳನ್ನು ಬಗೆಹರಿಸಲು ಇದೊಂದೇ ಸದುಪಾಯವೆಂದೇ ನೆನೆದೆನು ಸರಕಾರದ ಶಸ್ತ್ರಗಳಿಂದಾಗಿ ನಿರ್ಮಾಣಹೊಂದಿದ ಪರಿಸ್ಥಿತಿಯ ಕಡೆ ಎಲ್ಲರೂ ಲಕ್ಷ್ಯವನ್ನಿರಿಸಬೇಕಾಗಿ ಬೇಡುತ್ತೇನೆ ಈ ಶಾಸನಗಳು ಉತ್ಕೃಷ್ಟವಾದ ಹಿಂದೀಯ ಸಂಪ್ರದಾಯಕ್ಕನುಸಾರವಾಗಿ ಸಲಹಲ್ಪಟ್ಟು ಬರುವ ನನ್ನಂತಹ ಅಬಲೆಯರ ಸ್ತ್ರೀತ್ವವನ್ನು ದಬ್ಬಾಳಿಸುತ್ತವೆ. ಮನುಷ್ಯಮಾತ್ರರಾದ ಸರ್ ಸ್ಟೇನ್ಲಿ ಜೇಕ್ಸನರ ಮೇಲೆ ನನಗೆ ಯಾವ ತರದ ದ್ವೇಷವಿಲ್ಲವೆಂದು ನಾನು ಸಕಲರಿಗೆ ದೃಢಗೊಳಿಸುತ್ತೇನೆ ನನ್ನ ತಂದೆಯವರಂತೆ ನನಗವರು ಪ್ರಿಯರು. ಲೇಡಿ ಜೇಕ್ಸನರು ನನ್ನ ತಾಯಿಯಂತೆ ನನಗೆ ಪ್ರಿಯರು ಆದರೆ ಬಂಗಾಳ ಗವರ್ನರರೆಂಬವರು ನನ್ನ ದೇಶದ ೩೦೦ ಮಿಲಿಯ ಸ್ತ್ರೀ ಪುರುಷರನ್ನು ದಾಸತ್ವಗೊಳಗುಮಾಡಿದ ಪದ್ಧತಿಯನ್ನು ಪ್ರತಿನಿಧಿಸುವವರಾಗಿದ್ದಾರೆ ವೀಣಾದಾಸಳಿಗೆ ೯ ವರ್ಷಗಳ ಕಠಿಣ ಸಜೆಯು ವಿಧಿಸಲಾಯಿತು

* * *

ಹಿಂದೀಯ ಸಾಧುಗಳು ಇಂಗ್ಲಾಂಡಿನಲ್ಲಿ

ಅನೇಕ ವರ್ಷಗಳ ತನಕ ಹಿಮಾಲಯಪರ್ವತದಲ್ಲಿ ತಪಶ್ಚರ್ಯವನ್ನು ಮಾಡಿದ ಶ್ರೀ ಪುರೋಹಿತ ಸ್ವಾಮಿ ಎಂಬ ಸಾಧುಗಳು ಇಂಗ್ಲಾಂಡಿಗೆ ತಲಪಿದರು. ಭಾರತ ವರ್ಷದ ಪ್ರಾಚೀನ ನೈತಿಕ ಸಂದೇಶ ಎಂಬ ಕುರಿತು ಹಲವೆಡೆಗಳಲ್ಲಿ ಭಾಷಣ ಮಾಡಿದನ್ನು ನೈತಿಕ ಗುಣವು ವಿನಾಶಯೋಗ್ಯವಾಗಿರುವ ಕೆಲವು ಮಂದಿಗಳಿಗೆ ಅದನ್ನು ಪುನರಪಿ ಒದಗಿಸಿಕೊಡಲು ತಾನು ಸಮರ್ಥನಿರುವೆನೆಂದು ಅವರು ಹೇಳಿರುವರು ಡೈಲಿ ಹೆರಾಲ್ಡ್ ಪತ್ರಿಕೆಯ ವರ್ತಮಾನ ಸಂಗ್ರಹಕಾರರೊಬ್ಬರಿಗೆ ಅವರು "ನಾನು ಲೋಕದಲ್ಲಿ ಎಲ್ಲವನ್ನೂ ತ್ಯಜಿಸಿರುವೆನು ಹಿಮಾಲಯ ಪರ್ವತದಲ್ಲಿ ಕ್ರೂರ ಮೃಗಗಳ ಮಧ್ಯೆ ನಾನು ಹಣ್ಣುಹಂಪಲುಗಳನ್ನು ತಿಂದು ಜೀವಿಸುತ್ತಿದ್ದೆನು ತಪಸ್ಸನ್ನು ಮಾಡಿದ್ದೆನು ನಿಮ್ಮ ಜನರೊಳಗೂ ನನಗೆ ಸೂರ್ಯಕಿರಣಗಳನ್ನು ತುಂಬಬೇಕೆಂಬ ಅಪೇಕ್ಷೆಯಿದೆ" ಎಂದರು ಈ ಸ್ವಾಮಿಗಳು ಒಬ್ಬ ಮಿಲಿಯಾಧಿಪತಿಯ ಮೊಮ್ಮಗನಂತೆ ಇವರು ತನ್ನ ಎಲ್ಲವನ್ನೂ ಅಂದರೆ ಹೆಸರನ್ನೂ ಕೂಡಾ ತ್ಯಜಿಸಿ ದೇಶಾಂತರಕ್ಕೆ ತೆರಳಿದರು ಒಂದು ದಿನ ಈ ಸ್ವಾಮಿಯವರು ನ್ಯೂಡಿಲ್ಲಿಯಲ್ಲಿ ಎಂದು ಸರೋವರದ ಬಳಿ ತಪಸ್ಸನ್ನು ಮಾಡುತ್ತಿರುವಾಗ ಅಲ್ಲಿಗೊಬ್ಬ ಆಂಗ್ಲಸ್ತ್ರೀಯು ಬಂದಳು ಇವರನ್ನು ಅವಳು ಕಂಡು ಆನಂದಪಟ್ಟು ಸಂಭಾಷಣೆ ಮಾಡಿದಳು ಕೆಲವು ಸಮಯದ ನಂತರ ಅವಳು ಇವರ ಶಿಷ್ಯಳಾದಳು ಇವಳೇ ಇಂಡಿಯನ್ ಆರ್ಮಿ ಜನರಲ್ ರೊಬ್ಬರ ಪುತ್ರಿ ಮಿಸ್ ಗಿವ ನೆತ್ ಫೋಡನ್ ಎಂಬವಳು ಈ ಸಾಧುಗಳು ಒಕ್ಸ್‌ಫರ್ಡ್ ಯುನಿವರ್ಸಿಟಿಯ ಗ್ರೇಜುವೇಟರಾಗಿದ್ದರೆಂದೂ ಈಗ ತಿಳಿದುಬಂದಿದೆ

* * *

ಪೋಪ್ ಪೀಯುಸ್ XIರ ಪಟ್ಟಾಭಿಷೇಕ!

ಹುಚ್ಚನ ಗಲಾಟೆ!

ರೋಮ್ ದೇಶದಲ್ಲಿ ಕಳೆದ ಗುರುವಾರ ದಿನ ಪೋಪ್ ಪಿಯುಸ್ XIರ ಪಟ್ಟಾಭಿಷೇಕದ ಹತ್ತನೇಯ ವಾರ್ಷಿಕಮಹೋತ್ಸವವು ಬಹಳ ವಿಜೃಂಭಣೆಯಿಂದ ಜರಗಿತು 'ಕಾರ್ಡಿನಲ್ಸ್' ಗುರುಗಳು ಆರ್ಚ್ ಬಿಷಪರು, ಬಿಷಪರು, 'ಚೇಂಬರ್‌ಲೇನ್'ಗಳು, ಮಿಲಿಟರಿ, ದೊಡ್ಡ ದೊಡ್ಡ ಕ್ರೈಸ್ತ ಗುರುಗಳು, ಮುಖಂಡರುಗಳೆಲ್ಲಾ ಸೈಂಟ್ ಪೀಟರ್ ದೇವಾಲಯದಲ್ಲಿ ನೆರೆದಿದ್ದರು ನೇರಳೆ ಕೆಂಪು, ಬಿಳಿ ಬಣ್ಣಗಳ ಉಡುಪುಗಳನ್ನು ತೊಟ್ಟ ಸಾವಿರಾರು ಧರ್ಮಗುರುಗಳು ನೆರೆದುಬಂದ ಆ ದೇವಾಲಯವು ವಿರಾಜಮಾನವಾಗಿತ್ತು ಪೋಪ್ ಸಾಹೇಬರ ದಿವ್ಯ ಆಗಮನವಾಗುತ್ತಲೇ, ಸಾವಿರಾರು ಮಂದಿಗಳು ಕಿಟಕಿ ಬಾಗಿಲುಗಳಲ್ಲಿ ತುಂಬಿ ಅವರ ಸಂದರ್ಶನವನ್ನು ಮಾಡಿದರು ಪ್ರಾರ್ಥನೆಯಾಯಿತು ಅವರ ಪ್ರಾರ್ಥನೆಯು ಪ್ರಪಂಚದ ಎಲ್ಲಾ ಭಾಗಗಳಿಗೂ ಆಕಾಶವಾಣಿಯ ಮೂಲಕ ಕಳುಹಲಾಯಿತು ಪ್ರಾಮುಖ್ಯವಾಗಿ ಪೋಪ್ ಸಾಹೇಬರು ಲೋಕ ನೆಮ್ಮದಿಗಾಗಿ ದೇವರನ್ನು ಪ್ರಾರ್ಥಿಸಿದರು ಎಲ್ಲ ಲಕ್ಷ್ಯವು ಹರಿಯುತ್ತಿರುವಾಗ, ಪೋಪ್ ಸಾಹೇಬರ ಬಳಿಗೊಬ್ಬನು ಬಂದು ಒಂದು ಪತ್ರವನ್ನು ಅವರ ಚರಣಗಳಡಿಯಲ್ಲಿ ಹಾಕಿ, ಅಡ್ಡಬಿದ್ದು, ತನ್ನನ್ನು ರಕ್ಷಿಸಬೇಕೆಂದನು. ಅವನ ಹಾವಭಾವಗಳನ್ನು ನೋಡಿ ಅವನನ್ನು ಕೈದುಮಾಡಲಾಯಿತು, ಕೊನೆಗೆ ಅವನು ಹುಚ್ಚನೆಂದು ತಿಳಿದುಬಂದು ಅವನನ್ನು ಬಿಡುಗಡೆ ಮಾಡಿದ್ದಾರೆ

* * *

"ನಾವು ಶಾಂತಗೊಳಿಸಲೇಬೇಕು"

ಲಾಹೋರಿನ ವೈ ಎಂ ಸಿ ಎ ಎಸೋಶಿಯೇಶನಿನ ೫೬ನೇ ವಾರ್ಷಿಕ ಮಹಾಸಭೆಯೊಂದು ಕಳೆದ ಶುಕ್ರವಾರ ಜರಗಿತು. ಗಾಂಧೀ ಸರಕಾರಗಳ ಮಧ್ಯಸ್ಥಿಕೆಯನ್ನು ವಹಿಸಿ ಲಂಡನಿನಲ್ಲಿ ಕೆಲಸ ಮಾಡಿದ ಎಡ್ವರ್ಡ್ ತೋಮ್ಸನ್‌ನವರು ತನ್ನ ಭಾಷಣದಲ್ಲಿ ಹೇಳಿದ್ದೆನಂದರೆ 'ಆಂಗ್ಲೇಯ ಮತ್ತು ಹಿಂದೀಯ ಸಮಸ್ಯೆಗಳನ್ನು ಇತ್ಯರ್ಥಿಸಬೇಕಾದರೆ ನಾವು ಸಮರಕುಶಲ ಮತಿಗಳಾದ ಪಂಜಾಬದ ಜನಾಂಗವನ್ನು ಅಗತ್ಯವಾಗಿ ಸಮಾಧಾನಗೊಳಿಸಬೇಕು ಪೂರ್ವ ಪಶ್ಚಿಮಗಳೊಳಗೆ ಶಾಂತಿಯು ನೆಲೆದೋರುವುದಾದರೆ ಅದು ಪಂಜಾಬದ ಹಿಂದೀಯ ಭೂಮಿಯಲ್ಲೇ ಆಗಬೇಕು ಯುದ್ಧದ ನಂತರ ಆಂಗ್ಲೇಯ ಮತ್ತು ಹಿಂದೀಯ ಜನಾಂಗಗಳೊಳಗೆ ತಲೆದೋರಿದ ಭಾವವು ಸಂಕ್ಷಿಪ್ತಕರವಾಗಿದೆ ಒಂದು ಕುಟುಂಬದಂತೆ ಎರಡು ಜನಾಂಗಗಳು ಹೋರಾಡುತ್ತವೆ ಆದುದರಿಂದ ಹೋರಾಟವು ಬಲವಾಗಿದೆ ಈ ಹೋರಾಟವನ್ನು ನಿಲ್ಲಿಸಲೇಬೇಕು ನಾವು ಶಾಂತಿಯನ್ನುಂಟುಮಾಡಲೇಬೇಕು ಇಂಗ್ಲಾಂಡಿನ ವಿಪರೀತವಾದಿಗಳನ್ನು ನಾವು ನೋಡಿಕೊಳ್ಳುವೆವು ಹಿಂದೂಸ್ಥಾನದವರು ಇಲ್ಲಿಯ ವಿಪರೀತವಾದಿಗಳನ್ನು ನೋಡಿಕೊಳ್ಳಬೇಕು' ಎಂದರು.

* * *

ಬಹಳ ಉಪಕಾರ "ಸರ್"

ಇಬ್ಬರು ರಶ್ಯಾ ವೈಮಾನಿಕರು ಕಳೆದ ಶುಕ್ರವಾರ ಪೇಶಾವರದಲ್ಲಿ ಪಾಸ್‌ಪೋರ್ಟ್ ಇಲ್ಲದೆ ಖೈಬರ್ ಕಣಿವೆಯ ಮೂಲಕ ಹಿಂದೂ ದೇಶಕ್ಕೆ ಬಂದುದಕ್ಕಾಗಿ ಕೈದು ಮಾಡಲ್ಪಟ್ಟರು ಅವರ ವಿಚಾರಣೆಯು ನಡೆದು ಒಬ್ಬೊಬ್ಬರಿಗೆ ಮೂರು ಮೂರು ತಿಂಗಳ ಸಾದಾ ಸಜೆಯು ವಿಧಿಸಲಾಗಿ ಅವರನ್ನು ಖರೋಷ್ಟರ ಕೊತ್ತಡಿಗೊಯ್ದರು ಬರೇ ಕಾಲ್ನಡೆಯಿಂದ ಅವರು ಬ್ರಿಟಿಷ ರಾಜ್ಯಕ್ಕೆ ಬಂದುದನ್ನು ನೋಡಿ ಎಲ್ಲರೂ ಆಶ್ಚರ್ಯಗೊಂಡಿರುವರು ಕೈದಿಗಳು ನಮಗೆ ಸಿಗರೇಟು ಬೂಟ್ಸುಗಳೂ ಬೇಕೆಂದು ಅಧಿಕಾರಿಗಳೊಡನೆ ಕೇಳಿದರು ಅವರಿಗೆ ಅವುಗಳನ್ನು ಕೊಡುವಾಗ ಅವರು "ಬಹಳ ಉಪಕಾರವಾಯಿತು ಸರ್" ಎಂದು ಅಧಿಕಾರಿಗಳಿಗೆ ಹೇಳಿದರು

* * *

ಸಿನೆಮಾಕ್ಕೆ ಅಳಿಗಾಲವೇ?

ಸಿನೆಮಾಚಿತ್ರಗಳಲ್ಲಿ ಸ್ತ್ರೀ ಪುರುಷರ ಪರಸ್ಪರ ಪ್ರೇಮಭಾವಗಳನ್ನು ಹೊರಗೆಡಹುವ ಪ್ರದರ್ಶನಗಳಿರುವುವಷ್ಟೆ. ರಂಗಗಳಲ್ಲಿ ಇಂತಹ ಲಂಪಟತನವನ್ನು ತೋರಿಸುವ ಅನೇಕ ಚಲಚಿತ್ರಗಳು ಹೊರಬಿದ್ದಿವೆಯೆಂದೂ, ಅವುಗಳು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರದರ್ಶನಬಾಹಿರವೆಂದೂ ಅವುಗಳಿಂದಾಗಿ ಭಾವೀ ಯುವಕ ಯುವತೀ ಸಾಮ್ರಾಜ್ಯದ ಮೇಲೆ ಅನಿರ್ವಚನೀಯವಾದ ದುಷ್ಪರಿಣಾಮಗಳಾಗುವುವೆಂದೂ ಬ್ರಿಟಿಷ್ ಬೋರ್ಡ್ ಒಫ್ ಫಿಲ್ಮ್ ಸೆನ್ಸರ್ಸ್ ಎಂಬ ಸಂಸ್ಥೆಯು ಕಳೆದ ವರುಷದ ವರದಿಯಲ್ಲಿ ಹೇಳಿದೆ ಇನ್ನು ಮೇಲೆ ಹೊರಬೀಳುವ ಚಲಚಿತ್ರಗಳಲ್ಲಿ ಮದ್ಯಪಾನ ಕೂಟ, ಶಯನಗೃಹ ಮೋಹ ಸ್ನಾನ ನೋಟ, ಮೊದಲಾದ ಕಾಮೋತ್ತೇಜಕ ಸಂಗತಿಗಳನ್ನು ಸೇರಿಸಬಾರದಾಗಿ ಆ ಬೋರ್ಡಿನವರ ನಿರ್ಧಾರವಿದೆ ಚಲಚಿತ್ರಗಳಲ್ಲಿ ಈ ಮೇಲಿನ ದುಷ್ಟ ಲಜ್ಜಾಸ್ಪದನೀಯವಾದ ವಿಚಾರಗಳಿದ್ದರೇನೇ ಅವುಗಳಿಗೆ ಬೆಲೆಯುಂಟು ಮತ್ತು ವ್ಯಾಪಾರವಿದೆ ಎಂಬ ಈ ಕಾಲದಲ್ಲಿ ಅವುಗಳು ಹೋದರೆ ಚಲಚಿತ್ರಗಳ ಬೆಲೆಯು ಬಿದ್ದು, ಅದರ ವ್ಯಾಪಾರವು ಕಡಿಮೆಯಾಗಿ ಸಿನೆಮಾ ಪ್ರೇಕ್ಷಕರು ಕಡಿಮೆಯಾಗುವರೆಂದು ಕೆಲವು ಪತ್ರಿಕೆಗಳನ್ನುತ್ತವೆ

* * *

ಸ್ವೀಡನ್ ರಾಜಕುಮಾರನ ಪ್ರೇಮಪಾಶ

ಸ್ವೀಡನ್ ರಾಜಕುಮಾರ ಪ್ರಿನ್ಸ್ ಸಿಗ್ವಾರ್ಟ್ ಒಫ್ ಸ್ವೀಡನ್ ಎಂಬವನು ಅಲ್ಲಿಯ ಒಬ್ಬ ಸಣ್ಣ ವರ್ತಕರೊಬ್ಬರ ಚಂದದ ಮಗಳ ಮೇಲೆ ಕಣ್ಣಿಟ್ಟು ಬಹಳ ವಿಪನ್ನಾವಸ್ಥೆಗೊಳಗಾಗಿರುವನು ತರುಣಿಯ ಹೆಸರು ಮಿಸ್ ಕರಿನ್ ನಿಸ್ಸೂಬನಟಿ ಎಂದು ಸ್ವೀಡನಿನಲ್ಲಿಯೂ ಲಂಡನಿನಲ್ಲಿಯೂ ವಿಂದುವೆಯ ವಾರ್ತೆಯು ಹರಡಿದೆ ಈ ತರುಣತರುಣಿಯರಿಬ್ಬರೂ ಲಂಡನಿಗೆ ಹೋಗಿ ಅಲ್ಲಿಯ ರಿಜಿಸ್ಟ್ರ ಆಫೀಸಿನಲ್ಲಿ ತಮ್ಮ ವಿವಾಹವನ್ನು ದಾಖಲು ಮಾಡಿಕೊಳ್ಳುವರೆಂದು ತಿಳಿದುಬಂದಿದೆ ರಾಜಕುಮಾರನು ಸಣ್ಣ ವರ್ತಕನ ಮಗಳನ್ನು ವಿವಾಹವಾಗುವುದರಲ್ಲಿ ಅವನ ಅಜ್ಜನಾದ ಕಿಂಗ್ ಗುಸ್ತಾವ್ ಎಂಬ ಅರಸನಿಗೆ ಏನೂ ಮನಸ್ಸಿಲ್ಲವಂತೆ ವ್ಯಸನಕ್ಕೆ ಕಾರಣವೇನೆಂದರೆ — ರಾಜಕುಮಾರನು ಈ ತರುಣಿಯನ್ನು ವಿವಾಹವಾದರೆ ಅವನ ವಂಶಪಾರಂಪರ್ಯಗತವಾದ ಆಸ್ತಿಪಾಸ್ತಿಗಳೂ, ರಾಜ್ಯಗಳೂ ಸಿಗದೆ, ರಾಜಕುಮಾರನೆಂಬ ಬಿರುದು ಹೋಗಿ ಅವನಿಗೆ ಮಿಸ್ಟರ್ ಎಂಬ ಹೆಸರು ಬಂದು ಬಿಡುವುದು ಈ ವಿವಾಹವಾಗದಂತೆ ಕೆಲವು ಯತ್ನಗಳು ತರುಣನ ಕಡೆಯಿಂದ ನಡೆಯುತ್ತಿವೆಯೆಂದೂ ಅವುಗಳನ್ನೆಲ್ಲ ಅವನು ನುಂಗುತ್ತಿರುವನೆಂದೂ ತಿಳಿದುಬಂದಿದೆ

ನೆಶನಲ್ ಲಿಬರಲ್ ಫೆಡರೇಶನ್

ಎಂದೀ ಉದಾರ ಪಕ್ಷದ ಮುಖಂಡರು ಅಲ್ಲಹಾಬಾದಿನಲ್ಲಿ ಸೇರಿ, ಲೇಬರ್ ಸರಕಾರವು ಎಂಬುದನ್ನು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪುನಃ ದೃಢೀಕರಿಸಲಾಗಿದೆಯಾದರೂ, ಪ್ರಗತಿಗೆ ಸಹಾಯಕವಾಗದ ರೀತಿಯಲ್ಲಿ ಸರಕಾರವು ತನ್ನ ಧೋರಣೆಯನ್ನು ಬದಲಾಯಿಸಿರುವ ಕಾರಣ, ರಕ್ಷಣೆಯ ನಿರ್ಬಂಧಗಳನ್ನು ಕುರಿತಾಗಿ ಯಾವ ಸೂಚನೆಗಳನ್ನು ಇತ್ಯರ್ಥಿಸಲಾಗದೆ ಇರಬೇಕಾಗಿ ಬಂದಿದೆ, ಈಗ ಹೊರ ಹೊರಟಿರುವ ಕಮಿಟಿಗಳಲ್ಲಿ ಪ್ರಜಾಪಕ್ಷದ ಪ್ರಗತಿಪರ ಸೂಚನೆ ಕೊಡತಕ್ಕ ಪ್ರತಿನಿಧಿಗಳೇನೂ ಇಲ್ಲ ಕೊಸ್ತರೆನ್ನಿನವರೇ ಚುನಾಯಿಸಿದ ಪ್ರತಿನಿಧಿಗಳೂ ಇಲ್ಲ, ಅತಿ ಅಗತ್ಯವೆಂದಿರುವಷ್ಟೆ ಉಪಯೋಗಕ್ಕಾಗಿ ಮಾತ್ರ ಸಾಕಾಗುವಷ್ಟು ಬಗೆಯ ಒರ್ಡಿನೆನ್ಸುಗಳು ಇದ್ದರೆ ಸಾಕು ಹೊರತು ಈ ಹಣವನ್ನೆಲ್ಲ ತಿದ್ದಿ ಅಥವಾ ರದ್ದುಗೊಳಿಸಿದರೆ ಉತ್ತಮ ಈಗ ಜ್ಯಾರಿಯಲ್ಲಿರುವ ಆಕ್ಟಿನನುಗುಣವಾಗಿ ಸಾಕಷ್ಟು ತಿದ್ದುಪಾಟುಗಳನ್ನು ಕೂಡಲೆ ಮಾಡತಕ್ಕದ್ದು, ಇಷ್ಟೆಲ್ಲವನ್ನು ಮಾಡದಿದ್ದರೆ ಯಾವ ರಾಜಕೀಯ ಪಕ್ಷವೂ ಸರಕಾರದೊಡನೆ ಸಹಕರಿಸಲು ಆತಂಕಗಳು ಹೆಚ್ಚು ಹೆಚ್ಚಾಗುತ್ತ ಬರುತ್ತಿವೆ ಎಂಬುದನ್ನು ಸರಕಾರವು ತಿಳಿದಿರಲಿ ಎಂದು ಹಲವು ಸೂಚನೆಗಳನ್ನು ಮಾಡಿರುವರು

* * *

ವರ್ಧಮಾನಾಧಿಪತಿಗಳ ಸುದ್ದಿಯೇ ಇದ್ದಿಲ್ಲ;

ಈಗ ಇವರು ಚರ್ಚಿಲ್ಲರಂತೆ ಅಮೇರಿಕದಲ್ಲಿ ಸಂಚರಿಸುತ್ತ ಭಾರತೀಯರ ಸ್ವಾತಂತ್ರ್ಯ ಚಳವಳವನ್ನು ವಿರೋಧಿಸಿ ಭಾಷಣ ಮಾಡುತ್ತಿರುವರಾಗಿ ತಿಳಿದುಬರುತ್ತಿದೆ ಗಾಂಧಿಜೀಯವರನ್ನು ಸಿಕ್ಕಲ್ಲಿ ನಿಂದಿಸುವುದೇ ಇವರ ಸದ್ಯದ ಉದ್ಯೋಗ ಚಿಕಾಗೋ ನಗರದಲ್ಲಿ ಭಾರತ ವರ್ಷದ ಧಾರ್ಮಿಕ ಮಹತ್ವವನ್ನು ವಿವೇಕಾನಂದರು ಬೋಧಿಸಿ ಜಗತ್ತು ಈ ದೇಶದ ಕಡೆಗೆ ಕಣ್ಣು ಹೊರಳುವಂತೆ ಮಾಡಿದರಾದರೂ ಅದೇ ಚಿಕಾಗೋವಿನಿಂದಲೆ ಇವರು ಭಾರತವಾಸಿಯರಷ್ಟು ರಾಜಕೀಯ ಪ್ರಗತಿಗೆ ಅಯೋಗ್ಯರಿಲ್ಲವೆಂದು ಸಾರಿರುವರು. ರಾಜ್ಯದಲ್ಲಿ ಐದರಿಂದನೆ ಅಂಶವನ್ನು ವಸೂಲು ಮಾಡುವ ನಾಯಕ ಜಮೀನು ಮಾಲೀಕ ರಾಜರುಗಳೇ ಆಳುತ್ತಿದ್ದು ಅವರು ಬ್ರಿಟಿಷ ಸರಕಾರಕ್ಕೆ ಮಾತ್ರ ಹೊಣೆಗಾರರೂ ಮಿತ್ರರೂ ಆಗಿರುವರು ಸೇರುವ ಕಾರಣ ಹಿಂದೀಯರು ಈಗ ಸ್ವತಂತ್ರರಾಗಬೇಕೆನ್ನುವವರು ತೀರ ಮೂರ್ಖರು, ೩೦೦ ಮಿಲ್ಲಿಯ ಜನರು ಹಿಡುಬರಹವಿಲ್ಲದೆ ಪ್ರೀತಿನ ಬೆಲೆ ತಿಳಿಯದಿರುವವರು, ಇತ್ಯಾದಿಯಾಗಿ ಬೋಧಿಸಿದರು.

ವರ್ಧಮಾನರ ವರೂ ಗೌರವದಿಂದ ಲೋಕಕಂಟಕರಾಗದೆ ಬಾಳಲಾಗುವುದಿಲ್ಲವೇ? ಪ್ರಜೆಗಳಿಂದಲಾದರೂ ಇಂತಹ ಮಹಾರಾಜಾಧಿರಾಜರು ಕಲಿತುಕೊಳ್ಳಬೇಕಾದ ಸಂಗತಿಗಳೆಷ್ಟೋ ಇವೆ

* * *

ಸಂಬಳದ ಅರ್ಥವೇನು?

ವಾಲ್ಟರ್ ಲ್ಯಾಂಗರಲ್ಲಿ ಲಾಟ್ವಿಯಾ ಎಂಬುದೊಂದು ಇಲ್ಲಿನ ಪ್ರಜೆಗಳ ಮೂವರಲ್ಲಿ ಇಬ್ಬರು ಬೇಸಾಯಗಾರರು. ಆದುದರಿಂದ ಇಲ್ಲಿನ ಪಾರ್ಲಿಮೆಂಟಿನಲ್ಲಿ ಬಜೆಟು ಅಂದಾಜು ಚರ್ಚಿಸುವಾಗ ಅಂಕೆ ಸಂಖ್ಯೆಗಳ ಸಾಲನ್ನು ಮುಂದಿರಿಸಿ ಗಡಿಬಿಡಿಯನ್ನುಂಟು ಮಾಡಿ ಅದರಿಂದ ಮೆಂಬರರ ತಲೆಯಲ್ಲಿ ಗಲಿಬಿಲಿ ಹುಟ್ಟಿಸಿ ಮಂತ್ರಿಗಳ ತಮ್ಮ ನೆಲವನ್ನು ಗಿಂಕ್ಸನು ಮಾಡಿಸಲು ಸಾಧ್ಯವಾಗುವಂತಿಲ್ಲ ಬೇಸಾಯ ಮೆಂಬರರಿಗೆ ಮಂತ್ರಿಗಳೇ ಮೊದಲಾದವರ ಸಂಬಳದ ಅಂಕೆಗಳೆಂದರೆ ಯಾವುದೊಂದು ನಕ್ಷತ್ರ ಪುಂಜದ ಲೆಕ್ಕ ಮಾಡಿದ-ಹಾಗೆ ಪುಂ. 'ನಮ್ಮ ಪ್ರತಿನಿಧಿಯನ್ನು ಲಂಡನಿನಲ್ಲಿಡಲು ಖರ್ಚು' ನಮಗೆ ಹಣ ಕಾಸು ಅಂಕೆ ಬಿಟ್ಟು ಬೇರೆ ರೀತಿಯ ಪ ತಿಳಿಸಿರಿ ಎಂದರು ಮೆಂಬರರೊಬ್ಬರು 'ವಾರ್ಷಿಕ ವೆಚ್ಚವು ೩೬೦೦ ಪಸ ಎಂದರೆ ದಿನಕ್ಕೆ ೧೦ ದನ ಜಪ್ಪು ಖರ್ಚು' ಎಂದರು ಮಂತ್ರಿಗಳು ಓಹೋ ನಮ್ಮ ದನಗಳಿಂದ ಇದಕ್ಕಿಂತಲೂ ಹೆಚ್ಚಿನ ಪ್ರಯೋಜನವು ನಮಗೆ ಸಿಗುವದಾಗಿದೆಯೋ ಇಲ್ಲವೆ ಎಂಬುದನ್ನು ಮೊದಲು ಆಲೋಚಿಸಿರಿ ಎಂದು ಮೆಂಬರರೆಂದರು ನಮ್ಮ ಹುದ್ದೆದಾರರಲ್ಲಿರು ಅನುಗ್ರಹವೂ ಇವರಿಂದ ಜನಾಂಗಕ್ಕೆ ಸಲ್ಲಬಹುದಾದಷ್ಟು ಸೇವೆಯು ಸಂದಿದೆಯೆ ಇಲ್ಲವೇ ಎಂದು ಬಡ ಒಕ್ಕಲಿಗರ ಭಾಷೆಯಲ್ಲಿ ವಿಚಾರಿಸಿಕೊಂಡರೆ ದೇಶಕ್ಕೆ ಹಿತವುಂಟು

* * *

ಪಾದರಕ್ಷೆಗಳ ಫೇಕ್ಟರಿ

ಇಂಗ್ಲಾಂಡಿನ ಒಬ್ಬ ಮೋಚಿಗಾರನ ಮಗನಾದ ಮಿ. ಥೋಮಸ್ ಬಾಟಾ ಎಂಬವನು ಕಲ್ಕತ್ತದಲ್ಲೊಂದು ಮೆಟ್ಟು ಕಾರ್ಖಾನೆಯನ್ನು ತೆರೆಯಬೇಕೆಂದೂ ಈ ವ್ಯಾಪಾರವನ್ನು ಹಿಂದೂದೇಶದಲ್ಲೂ ಇಂಗ್ಲೆಂಡಿನಲ್ಲೂ ವಿಶೇಷವಾಗಿ ನಡೆಸಿ, ಇಷ್ಟ ತನಕ ಮೆಟ್ಟುಗಳ ಒಂದು ದೊಡ್ಡ ಕಾರ್ಖಾನೆಯಿಲ್ಲದಿರುವ ಕೊರತೆಯನ್ನು ಹೋಗಲಾಡಿಸಬೇಕೆಂದಿರುವನು ಕಲ್ಕತ್ತದ ಮೆಸರ್ಸ್ ಎಂಡರ್‌ಸನ್ ರೈಟ್ ಎಂಡ್ ಕೊ ಎಂಬ ಕಂಪೆನಿಯ ಒಂದು ಭೂಮಿಯನ್ನು ಪಡೆದುಕೊಳ್ಳಲು ಹವಣಿಸಿದ್ದಾನೆಂದೂ ಅದು ಸಾಧ್ಯವಾಗಿ ಸಿಕ್ಕಿದರೆ ಲೋಕದ ಮೆಟ್ಟು ತಯಾರಿಗೆ ಕೇಂದ್ರಸ್ಥಾನವಾಗಿ ಹಿಂದೂದೇಶದಲ್ಲೂ ಇಂಗ್ಲಾಂಡಿನಲ್ಲೂ ದೊಡ್ಡ ದೊಡ್ಡ ಕಾರ್ಖಾನೆಗಳಾಗುವುವೆಂದೂ ತಿಳಿದುಬಂದಿದೆ ನಿರ್ಮಾಣವಾಗಲಿರುವ ಈ ಕಾರ್ಖಾನೆಗಳ ಕೆಲಸಗಾರರಿಗೆ ತನ್ನ ವಠಾರದಲ್ಲೇ ಮನೆಮಾಡಿಕೊಟ್ಟು ಅವರ ಆಹಾರ, ವಿಹಾರಗಳಿಗೂ ಬೇಕಾದ ನರ್ತನ ಮಂಡಳಿ ನಾಟಕ ಮಂಡಳಿ ಸಿನೆಮಾ ಮಂದಿರಗಳನ್ನು ಕಟ್ಟಿಕೊಡುವೆನೆಂದು ಇವನ ಹೇಳಿಕೆಯಿರುತ್ತದೆ.

ಪರೀಕ್ಷಿಸಿರಿ! ಖಾತ್ರಿಯಾಗುವದು!!

ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತ್ರಿ ಶ್ರೀ ವೈದ್ಯ ರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ [illegible]

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

[illegible] ಅಥವಾ ರಕ್ತಸ್ರಾವದ ಅತ್ಯಂತ ಹಳೆಯ [illegible] ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ [illegible] ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ [illegible] ಪ್ರಶಂಸೆ ಸ್ವರ್ಣ ಗುಣಬರದಿದ್ದರೆ [illegible] ಕೊಡುವೆವು. ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು [illegible] ಭಯಂಕರ ನೋವು, ಮತ್ತು ಕಿವುಡುತನ [illegible] ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅಮೃತ [illegible] ಕಿವುಡರು [illegible] ಫಾಯದೆಯಾಗದಿದ್ದರೆ ಹಣ [illegible] ಬೆಲೆ ರೂ ೩

ವಿಳಾಸ — ಶಕ್ತಿ ಸುಧಾ ಕಾರ್ಯಾಲಯ

೭ ಕಾಂಬಾರವಾಡ ೪ನೇ ಗಲ್ಲಿ

ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳ, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.

ಇಂಡಿನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.

ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.

Kadell Road P O. Dadar Bombay

ತಂತಿ ವಿಳಾಸ — SIRINDHU N' Bombay

ಶಪೂರ್ಜಿ ಎಚ್. ಎಲ್ ಬಾಟ್ಲಿವಾಲಾ ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.

The Zandu Pharmaceutical Works, Ltd., Bombay, 14

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹ್ಯವು'

ಅಮೋಘ ಟಾನಿಕ್ಕು' ಅಮೋಘ ಟಾನಿಕ್ಕು'

[illegible]

5 ಪೌ ಜಾಡಿ ರೂ 10/– ಕ್ರಯ 1 ಪೌನು ಡಬ್ಬಿ ರೂ 2/8 ½ ಪೌ ರೂ 1/5 ¼ ಪೌ. ರೂ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು

ಸಿರ್ಸಿ ಏಜಂಟರು — ಎಸ್ ಎಲ್ ಧಾರವಾಡ ಎಂಡ್ ಬ್ರದರ್ಸ್

ಸಬ್ ಏಜಂಟರು — ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ, ಸಯ್ಯಾಜಿರಾವ್ ರೋಡ್,

ಬೆಂಗಳೂರು ಏಜಂಟರು — ಬಿ ಪ್ರೊಹಟ್ ಲಾಲ್ ಕಂಪೆನಿ ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ನಾಯಿ ಬೊಗಳಿದರೂ ಪ್ರಯಾಣವು ಸಾಗುತ್ತಿದೆ!

ಸ್ಟೇಟ್ ಸೆಕ್ರೆಟರಿಗಳಾದ ಸರ್ ಸಾಮುವೇಲ್ ಹೋರರು ಬ್ರಾಡ್‌ಕಾಸ್ಟ್ ಮೂಲಕ ಹೊರದೇಶಗಳಿಗೆ ಮಾಡಿದ ಒಂದು ಭಾಷಣವು ಈ ರೀತಿಯಿದೆ:—

“ರೌಂಡ್‌ಟೇಬಲ್ ಕೊನ್ಫರೆನ್ಸು ಮುಗಿದು ಕೆಲವು ವಾರಗಳು ದಾಟಿದುವು. ಹಿಂದೂಸ್ಥಾನದಲ್ಲಿನ ಈಗಿನ ಪರಿಸ್ಥಿತಿಯನ್ನು ವಿವೇಚಿಸುವ ಸಮಯವು ಈಗ ಬಂದಿರುತ್ತದೆ. ಇದನ್ನು ಒಂದೇ ಒಂದು ವಾಕ್ಯದಲ್ಲಿ ಸಂಕ್ಷಿಪ್ತವಾಗಿ ಹೇಳಬಹುದೆಂದು ನನ್ನ ಆಲೋಚನೆ.

ಕೊನ್ಫರೆನ್ಸಿನ ಕೆಲಸಗಳನ್ನು ನಾವು ಆದಷ್ಟು ತ್ವರೆಯಿಂದ ಮುಂದೊತ್ತುತ್ತಿದ್ದೇವೆ. ಅಂದರೆ ನಾವು ಕಳೆದ ಸಲ ಇತ್ಯರ್ಥಗೊಳಿಸಿದ ಕೆಲವು ಪ್ರಾಮುಖ್ಯ ವಿಷಯಗಳನ್ನು ಬಗೆಹರಿಸುವ ಬಗ್ಗೆ ನಾವು ಹಿಂದೂದೇಶಕ್ಕೆ ಮೂರು ಕಮಿಟಿಗಳನ್ನು ಕಳುಹಿಸಿರುತ್ತೇವೆ. ಅದೇ ಸಮಯದಲ್ಲಿ ಕೊನ್ಫರೆನ್ಸಿನ ಕೆಲಸಗಳನ್ನು ಪ್ರತಿಬಂಧನಗೊಳಿಸುವ ಮತ್ತು ಸರಕಾರದ ಯಂತ್ರವನ್ನು ನಿಲಿಸಮಾಡುವ ಯತ್ನದಲ್ಲಿರುವ ಒಂದು ತಂಡ ಜನಸಮುದಾಯವನ್ನು ಬಗ್ಗು ಬಡೆಯಲು ನಾವು ಕಠಿಣ ಶಾಸನಗಳನ್ನು ಹೂಡಿರುತ್ತೇವೆ.

ಸರಕಾರಕ್ಕೆ ಒಂದೊದಗಿರುವ ಈ ಎರಡು ತರದ ಕೆಲಸಗಳನ್ನು ಕೆಲವು ದಿನಗಳ ಹಿಂದೆ ಈಗಿನ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನರೂ, ಮಾಜಿ ವೈಸರಾಯರಾದ ಲೋರ್ಡ್ ಇರ್ವಿನರೂ ಟೀಕಿಸಿದ್ದಾರೆ. ಈ ಉಭಯರೊಳಗೂ ಅಭಿಪ್ರಾಯಭೇದವು ಇಲ್ಲದಿರುವುದನ್ನು ನೋಡುವಾಗ ನಮಗೆ ಬಹಳ ಸಂತೋಷವಾಗಿರುತ್ತದೆ. ಪ್ರತಿಯೊಬ್ಬನೂ ಸರಕಾರವು ಕೊನ್ಫರೆನ್ಸಿನ ಕೆಲಸಗಳನ್ನು ಮುಂದೊತ್ತುವುದು ಅತ್ಯಗತ್ಯವೆಂದೂ, ಸರಕಾರವು 'ಕಾನೂನು ಮತ್ತು ಕ್ರಮ'ವನ್ನು ನೆಲೆಗೊಳಿಸುವುದು ಅಗತ್ಯವೆಂದೂ ಪ್ರತಿಯೊಬ್ಬನೂ ಹೇಳಿರುವರು.

ಪ್ರಪಂಚದ ವಿದೇಶ ವಿಶಾರದರಾದ ಸ್ತ್ರೀ ಪುರುಷ ಮುಂದಾಳುಗಳೆಲ್ಲರೂ ಲೋರ್ಡ್ ಇರ್ವಿನರನ್ನು ಗೌರವಿಸುತ್ತಾರೆ. ಲೋರ್ಡ್ ಇರ್ವಿನರ ಆಲೋಚನೆಯು ಲೋರ್ಡ್ ವಿಲ್ಲಿಂಗ್ಡನ ಮತ್ತು ಸ್ಟೇಟ್ ಸೆಕ್ರೆಟರಿಯಾದ ನನ್ನ ಆಲೋಚನೆಯಂತೆಯೇ ಇರುತ್ತವೆ. ಅವರ ಸಹಾನುಭೂತಿಯು ಮತ್ತು ನಿಷ್ಪಕ್ಷಪಾತ ದೃಷ್ಟಿಯನ್ನು ನೋಡಿ ನನಗೆ ಅತ್ಯಂತ ಆನಂದವಾಗಿದೆ. ಪ್ರಜಾಧಿಪತ್ಯವು ಪೋಲ್ಬುವಂತೆಯೂ, ರಾಜ್ಯಾಂಗರಚನೆಯು ಮುಂದೊತ್ತುವಂತೆಯೂ ನಾವು ಹೂಡಿದ ಶಾಸನಗಳ ಅಗತ್ಯವಿರುತ್ತದೆಂದು ನಮ್ಮ ಮೂವರ ಅಭಿಪ್ರಾಯವೂ ಒಂದೇ ಇದೆ.

ಹಿಂದೂದೇಶದಲ್ಲಿ ದಿನದಿಂದ ದಿನ ಯಾವ ಘಟನೆಗಳಾಗುತ್ತಿವೆ ಮತ್ತು ಅವುಗಳಿಗೇನ ಮಾಡಬೇಕೆಂದು ಹೊರಗಿನವರೇ ಆಲೋಚಿಸಿಕೊಳ್ಳಬಹುದು. ಜವಾಬ್ದಾರೀ ಸಂಸ್ಥೆಗಳು ವಿದೇಶ ವರ್ತಮಾನಗಳ ಮೇಲೆ ನಿಷಿದ್ಧಶಸ್ತ್ರ(ಸೆನ್ಸರ್‌ಷಿಪ್)ವನ್ನು ಉಪಯೋಗಿಸಲೇ ಇಲ್ಲ. ಬ್ರಿಟಿಷ ಪತ್ರಿಕೆಗಳು ತಮ್ಮ ಇಚ್ಛೆಗೆ ತೋರಿದವುಗಳನ್ನು ಪ್ರಕಟಿಸಲು ನಾವು ಅಡ್ಡಮಾಡುವುದಿಲ್ಲ. ವಾರ್ತೆಗಳನ್ನು ಮುಚ್ಚಿಡುವುದಕ್ಕೂ, ಅಸಮಾಧಾನಕರವಾದ ಸತ್ಯಸಂಗತಿಗಳನ್ನು ಅಡಗಿಸಲಿಕ್ಕೂ ಯತ್ನವಾಗಲಿಲ್ಲ.

ಪಶ್ಚಿಮೋತ್ತರ ಗಡಿಪ್ರಾಂತ್ಯಗಳ 'ಕೆಂಪಂಗಿ' ಚಳವಳದ ಕುರಿತೂ, ಸಂಯುಕ್ತ ಪ್ರಾಂತ್ಯದಲ್ಲಿನ ಕಂದಾಯ ನಿರಾಕರಣ ಚಳವಳದ ಕುರಿತೂ, ಮುಂಬಾಯಿಯಲ್ಲಿನ ಪಿಕೆಟಿಂಗಿನ ಕುರಿತೂ, ಬಂಗಾಳದಲ್ಲಿನ ವಿಪ್ಲವಗಳ ಕುರಿತೂ ಎಲ್ಲರೂ ತಿಳಿದಿರುವರು. ಸುಸಂಸ್ಕೃತವಾದ ಸರಕಾರವನ್ನು ಬೆದರಿಸುವ ಇವುಗಳನ್ನು ಮುರಿಯಲು ನಾವು ನಿರುಪಾಯರಾಗಿ ಮುಂದಿಟ್ಟ ಕಠಿಣ ಶಾಸನಗಳನ್ನು ಒಳ್ಳೆ ದೂರದೃಷ್ಟಿಯಿಂದಲೂ ಹದ ಮೀರದೆಯೂ, ಮತ್ತು ನಿಷ್ಪಕ್ಷಪಾತವಾಗಿಯೂ ನಾವು ಕೈಕೊಳ್ಳುತ್ತ ಬಂದಿರುತ್ತೇವೆಂದು ಹೇಳಿದರೆ ಅದಕ್ಕೆ ಎಲ್ಲರೂ ಒಪ್ಪುವರೆಂದು ಭಾವಿಸುತ್ತೇನೆ.

ಶಾಂತಪರ ಪಟ್ಟಣಿಗರ ನಿತ್ಯ ಜೀವನಕ್ಕೆ ಆದಷ್ಟು ಅಡಚಣೆ ಕಿರುಕುಳವು ಕೂಡದ ತಕ್ಕುದಂತ ಸರ್ವ ಯತ್ನಗಳು ನಡೆಯುತ್ತಿವೆ. ಕಾನೂನುಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದಲೇ ಪ್ರಯೋಗಿಸಲಾಗುತ್ತದೆ. ಶಾಸನಗಳನ್ನು ಯುರೋಪಿಯನರಾಗಲೀ, ಹಿಂದೀಯನರಾಗಲೀ ಪರಿಪಾಲಿಸುವಂತೆ ಯತ್ನಗಳು ನಡೆಯುತ್ತಿವೆ. ನಾವು ಮಹಾಯುದ್ಧದ ಸಮಯದಲ್ಲಿ ಕಾನೂನು ಕಟ್ಟಳೆಗಳೆಲ್ಲ ಬಗ್ಗಿ ನಡೆದಂತೆ ಶಾಸನಪಾಲಕರಾದ ಹೆಚ್ಚಿನ ಜನಾಂಗದವರು ನಮ್ಮ ಶಾಸನಗಳನ್ನು ಮಾನಿಸುತ್ತಾರೆಂದೂ ಈ ಶಾಸನಗಳು ತಮ್ಮ ಹಿತದೃಷ್ಟಿಯಿಂದಲೇ ಇವೆಯೆಂದು ಆ ಜನರು ಭಾವಿಸುತ್ತಾರೆಂದೂ ನನಗೆ ಬಂದ ವಾರ್ತೆಗಳಿಂದ ತಿಳಿದುಬರುತ್ತದೆ.

ಇದರ ಸತ್ಯಾಂಶವೇನೆಂದರೆ ಹಿಂದೂದೇಶದ ಬಹುಪಕ್ಷ ಸ್ತ್ರೀಪುರುಷರು ರಾಜಕೀಯ ಆಂದೋಲನದಿಂದಾಗಿ ಸೋತುಹೋಗಿರುವರು. ಕ್ರಾಂತಿಯು ಅವರಿಗೆ ಬೇಡವಾಗಿದೆ. ಅಲ್ಲದೆ ರಾಜಕೀಯ ಕ್ಷೋಭೆಯೂ ಅವರಿಗೆ ಬೇಡವಾಗಿ ಹೋಗಿದೆ. ಯಾರ ನಿರ್ಬಂಧವೂ ಇಲ್ಲದೆ, ತಮ್ಮ ತಮ್ಮ ಕಸಬುಗಳನ್ನು ಹಿಡಿದು ತಮ್ಮ ತಮ್ಮ ಇಚ್ಛಾನುಸಾರವಾಗಿ ನಡೆದರೆ ಸಾಕೆಂದು ಅವರಿಗನ್ನಿಸುತ್ತಿದೆ. ಕಳೆದ ಕೆಲವು ವರ್ಷಗಳಿಂದ ಸಾಮಾನ್ಯ ಜೀವನವನ್ನು ಹಾಳುಗೈದ ಆ ರಾಜಕೀಯ ಆಂದೋಲನಗಳನ್ನು ಸರಕಾರವು ಬಗ್ಗು ಬಡಿಯುತ್ತಿರುವುದನ್ನು ಕಂಡ ಈ ಜನರು ಸಂತೋಷಗೊಂಡಿರುತ್ತಾರೆ.

ಡಿಲ್ಲಿಯ ಕೇಂದ್ರ ಸರಕಾರದಿಂದಲೇ ನನಗೆ ದಿನಂಪ್ರತಿ ವಾರ್ತೆಗಳು ಬರುತ್ತಿರುವುದಲ್ಲ, ಸ್ಥಳೀಯ ಸರಕಾರಗಳಿಂದಲೂ ಕಾರ್ಯವರದಿ ತಲುಪುತ್ತಿದೆ. ಇತ್ತೀಚಿಗಾಗ ಬಂದ ವಾರ್ತೆಗಳು ಅದೇ ಸಂಗತಿಗಳನ್ನು ದೃಢೀಕರಿಸುತ್ತಿವೆ. ವಿಪಕ್ಷವಾದಿಗಳ ಚಟುವಟಿಕೆಯು ಈಗ ನೀವು ಯೋಚಿಸುವುದಕ್ಕಿಂತ ಕಡಿಮೆಯೇ ಸರಿ. ಸಾಮಾನ್ಯ ಪ್ರಾಂತ್ಯಗಳಲ್ಲಿ ಯಾವ ಬಗೆಯ ಉಪಟಳವೂ ಇಲ್ಲ. ಪಶ್ಚಿಮೋತ್ತರ ಗಡಿಪ್ರಾಂತ್ಯಗಳಲ್ಲಿ ಸ್ವಲ್ಪ ಆಂದೋಲನವಿದೆಯಾದರೂ, 'ಕೆಂಪಂಗಿ'ಯವರ ಚಳವಳವು ಸಂಪೂರ್ಣ ಕೆಡವಿ ಬಿದ್ದಂತೆ ಕಂಡು ಬಂದಿದೆ.

ಪಿಕೆಟಿಂಗಿನ ಕೇಂದ್ರಸ್ಥಳಗಳಾಗಿರುವ ಮುಂಬಾಯಿ, ಅಹಮ್ಮದಾಬಾದ್ ನಗರಗಳಲ್ಲಿ ಪಿಕೆಟಿಂಗಿಗೆ ದೊರೆಯುತ್ತಿದ್ದ ಬೆಂಬಲವು ಇಳಿಯುತ್ತಾ ಬಂದಂತೆ ಕಾಣುತ್ತದೆ.

ಕಂದಾಯ ನಿರಾಕರಣೆ ಚಳವಳದ ಕೇಂದ್ರಸ್ಥಾನವಾಗಿರುವ ಸಂಯುಕ್ತ ಪ್ರಾಂತ್ಯದಲ್ಲಿನ ಸ್ಥಿತಿಯು ತಗ್ಗುತ್ತಾ ಬಂದಿದೆ. ತೀರ್ವೆ ಮತ್ತು ಭೂಮಿಯ ಬಾಡಿಗೆಗಳು ಸರಿಯಾಗಿ ಸಿಗುತ್ತಿದೆ. ಪಟ್ಟಣವಾಸವು ಸುಸ್ಥಿತಿಗೆ ಬಂದು ನಿಂತಿದೆ. ಪ್ರಸ್ತುತದ ಸ್ಥಿತಿಗಳು ಹೀಗಿವೆ. ನನಗೆ ಬಂದ ವಾರ್ತೆಗಳಂತೆಯೇ ನನ್ನೀ ಮಾತುಗಳಿವೆ.

ಇಷ್ಟರ ತನಕದ ಪರಿಸ್ಥಿತಿಯು ಸಂತೃಪ್ತಿಕರವಾಗಿದ್ದರೂ, ನಮ್ಮ ವರ್ತನೆಗಳನ್ನು ಕೆಲವರು ಟೀಕಿಸುವುದು ಆಶ್ಚರ್ಯಕರವಾದ ಸಂಗತಿಯಲ್ಲ.

ಟೀಕೆಯನ್ನು ನಮ್ಮಲ್ಲಾರೂ ಪ್ರೀತಿಸುವುದಿಲ್ಲ. ಎಲ್ಲ ಕಾಲಗಳಲ್ಲಿಯೂ ನಾವು, ಬ್ರಿಟಿಷರು ಪ್ರಜಾವರ್ಗದ ಸ್ವಾತಂತ್ರ್ಯದ ಕಡೆಗೆ ಹೆಚ್ಚಿನ ಗಮನ ಕೊಟ್ಟವರಿದ್ದೇವೆ. ಈ ವಿಷಯದಲ್ಲಿ ನಾವು ಯಾವಾಗಲೂ ಸಂಶಯದೃಷ್ಟಿಯನ್ನೇ ಇಟ್ಟವರಿದ್ದೇವೆ.

ನಮ್ಮ ವರ್ತನೆಯ ಕುರಿತು ಟೀಕೆಗಳಿರುವುದೆಂದರೆ ಅವು ಎರಡು ವಿಷಯಗಳಲ್ಲಿ—ಮೊದಲನೆಯದಾಗಿ ಗಾಂಧಿಯವರನ್ನು ರೌಂಡ್‌ಟೇಬಲಿಗೆ ಬರಮಾಡಿ, ಅವರು ಸ್ವದೇಶಕ್ಕೆ ಹಿಂತಿರುಗಿದೊಡನೆ ಅವರನ್ನು ಕೈದು ಮಾಡಿ ವಿಶ್ವಾಸಭಂಗವನ್ನುಂಟುಮಾಡಿದೆವೆಂದೂ ಹೀಗಾಗಿ ಭಾವೀ ಸಹಕಾರ ಸನ್ನಾಹವನ್ನು ದುರ್ಘಟವಾಗಿ ಮಾಡಿದೆವೆಂದೂ ನಮ್ಮ ಮೇಲೆ ಟೀಕೆಯಿದೆ.

ಎರಡನೆಯದಾಗಿ ಲೋರ್ಡ್ ಇರ್ವಿನರು ಅಂದು ಅತಿ ಜಾಗ್ರತೆಯಿಂದ ಸಾಕಿಟ್ಟ ಅನ್ಯೋನ್ಯಭಾವದ ಒಪ್ಪಂದವನ್ನು ನಾಶಗೊಳಿಸಿದೆವೆಂದೂ, ನಮ್ಮ ಸೂತ್ರಗಳನ್ನು ಅನಾವಶ್ಯಕವಾಗಿ ಮಾರ್ಪಾಟುಗೊಳಿಸಿ ಹಿಂದೂದೇಶದ ಪ್ರಗತಿಯ ಗಡಿಯಾರವನ್ನು ಅನೇಕ ವರುಷಗಳಷ್ಟು ಹಿಂದಕ್ಕಿರಿಸಿದೆವೆಂದೂ ನಮ್ಮ ಮೇಲೆ ಟೀಕೆಯಿದೆ.

ನಾನು ಹೇಳುವುದಾದರೆ, ಈ ರೀತಿಯ ಟೀಕೆಯು ಎಷ್ಟು ಮಾತ್ರಕ್ಕೂ ಸರಿಯಲ್ಲ.

ಬ್ರಿಟಿಷ ಸರಕಾರವು ವಿಶ್ವಾಸಭಂಗವನ್ನುಂಟುಮಾಡಲೇ ಇಲ್ಲ. ಇಂತಹ ಆಪಾದನೆಯನ್ನು ನಮ್ಮ ಮೇಲೆ ಗಾಂಧಿಯವರು ಕೂಡಾ ಹೊರಿಸಲಿಕ್ಕಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ. ಕಳೆದ ಸುಗ್ಗಿಯ ಸಮಯದಲ್ಲಿ ನಾನು ಗಾಂಧಿಯವರನ್ನು ಕಂಡು ಅನೇಕ ಸಲ ಮಾತನಾಡಿದ್ದೇನೆ. ನಾವು ನಮ್ಮ ನಮ್ಮ ಸ್ಥಿತಿಗತಿಗಳನ್ನು ಆದಷ್ಟು ವಿಶಾಲಹೃದಯಿಗಳಾಗಿಯೂ, ಮರೆಮಾಚದೆಯೂ ಆಲೋಚಿಸಿಕೊಂಡಿದ್ದೆವು. ರಾಜ್ಯಾಂಗರಚನಾ ಕ್ರಮದ ಕುರಿತು ಏನೆಲ್ಲ ಸಾಧ್ಯವಿದೆ, ಏನೆಲ್ಲ ಸಾಧ್ಯವಿಲ್ಲವೆಂಬುದಾಗಿ ನಾನು ಗಾಂಧಿಯವರಿಗೆ ಸ್ಪಷ್ಟವಾಗಿ ಹೇಳಿರುತ್ತೇನೆ. ಪಾರ್ಲಿಮೆಂಟಿನಲ್ಲಿ ನಡೆದ ಇತ್ಯರ್ಥಗಳಾನುಸಾರವಾಗಿ ನಡೆದ ಕಾರ್ಯಕಲಾಪಗಳಲ್ಲಿ ನಮ್ಮೊಡನೆ ಗಾಂಧಿಯವರೂ ಅವರ ಅನುಯಾಯಿಗಳೂ ಸಹಕರಿಸುವುದೂ, ಸಹಕರಿಸದಿರುವುದೂ ಗಾಂಧಿಯವರ ಕೈಯಲ್ಲೇ ಇದೆಯೆಂದು ನಾನು ಹೇಳಿದ್ದೆನು. ಅದಕ್ಕೆ ಗಾಂಧಿಯವರು ಎಲ್ಲಾ ಸ್ಥಿತಿಗತಿಗಳೂ ತನಗೆ ಸಂಪೂರ್ಣ ತಿಳಿದಿರುತ್ತವೆಂದೂ, ಈ ವಿಷಯಕವಾಗಿ ತನ್ನ ಅಭಿಪ್ರಾಯವೇನಿರಬಹುದೆಂದು ಜಾಗ್ರತೆಯಾಗಿ ಆಲೋಚಿಸಿ ನೋಡುತ್ತೇನೆಂದೂ ಹೇಳಿದ್ದರು.

ನಾನು ಗಾಂಧಿಯವರಿಗೆ ಇನ್ನಿತರ ವಿಷಯಗಳ ಕುರಿತ ಭಾಷೆಯನ್ನಿತ್ತಿದ್ದೇನೆಂದೂ, ಅವರಿಗೆ ನಾನೊಂದು ಪತ್ರವನ್ನು ಬರೆದಿದೇನೆಂದೂ ಒಂದು ಕಥೆಯಿದೆ. ಇದು ಸರಿಯಲ್ಲ. ನಾನು ಅವರಿಗೆ ಪತ್ರವನ್ನು ಬರೆಯಲೇ ಇಲ್ಲ. ಈ ವಾರ್ತೆಗಳಿಗೆ ಆಧಾರವಿಲ್ಲ. ಅವರಿಗೆ ನಾನು ಯಾವ ವಾಗ್ದತ್ತವನ್ನೂ ಮಾಡಿಲ್ಲ. ಅವರು ಇಂಗ್ಲಾಂಡಿನಿಂದ ಹೋದ ಮೇಲೆ, ಇಂಡಿಯಾ ಕಮಿಟಿ ಮತ್ತು ಕನ್ಸಲ್ಟೇಟಿವ್ ಕಮಿಟಿಗಳ ಕೆಲಸದ ಕುರಿತ ಒಂದು ಪತ್ರ ಬರೆದು ಜವಾಬು ಕೊಡಬೇಕೆಂದು ಕೇಳಿಕೊಂಡಿದ್ದರು. ಅದರ ಮೇರೆಗೆ ನಾನು ಸಂತೋಷದಿಂದ ಅವರಿಗೊಂದು ಪತ್ರವನ್ನು ಬರೆದಿದ್ದೆ. ಅದು ಅವರಿಗೆ ಸಿಕ್ಕಿರಬೇಕು.

ಸರಕಾರದ ಠರಾವಿನನುಸಾರವಾಗಿಯೂ ಪಾರ್ಲಿಮೆಂಟಿನ ಇತ್ಯರ್ಥಗಳನುಸಾರವಾಗಿಯೂ ಬ್ರಿಟಿಷ ಸರಕಾರವು ತನ್ನ ಸಹಕಾರವನ್ನು ತೋರಿಸಲು ಸಿದ್ಧವಿದೆ. ಹಿಂದೀಯರ ಒಂದು ಪಕ್ಷದ ವರ್ತನೆಯಿಂದ ನಮ್ಮ ಸಹಕಾರವು ಮುರಿದು ಹೋಗಿರುವುದಾದರೆ ಅದು ನಮ್ಮ ವಿಶ್ವಾಸಭಂಗದ ತಪ್ಪಿನಿಂದಾಗಿ ಉಂಟಾದುದಲ್ಲ, ಕೊಂಗ್ರೆಸ್ ಯಂತ್ರವನ್ನು ಕಡುವಿರೋಧಿಗಳಾದವರು ಹಸ್ತಗತಮಾಡಿಕೊಂಡ ತಪ್ಪಿನಿಂದುಂಟಾಯಿತು.

ಇದೇ ರೀತಿ ಸರಕಾರ ಸೂತ್ರಗಳಲ್ಲಿಯೂ ನಡೆಯಿತು. ಸರಕಾರವು ತನ್ನ ಸೂತ್ರಗಳನ್ನು ಥಟ್ಟನೆ ಬದಲಾಯಿಸಲಿಲ್ಲ. ಲೋರ್ಡ್ ಇರ್ವಿನರು ಮಾಡಿದ ಭಾಷಣದಿಂದಾಗಿ ಈ ಆರೋಪವು ಸಂಪೂರ್ಣವಾಗಿ ಹೋಗಿದೆ. ನಾನು ಒಂದು ವೇಳೆ ವೈಸರಾಯನಾಗಿ ಹಿಂದೂದೇಶದಲ್ಲಿರುತ್ತಿದ್ದರೆ ಲೋರ್ಡ್ ವಿಲ್ಲಿಂಗ್ಡನರು ಮಾಡಿದಂತೆಯೇ ಮಾಡುತ್ತಿದ್ದೆನೆಂದು ಲೋರ್ಡ್ ಇರ್ವಿನರು ಹೇಳಿದರು.

ಈ ಆರೋಪವು ನಮಗೆ ಬರಲು ಕಾರಣಗಳಿವೆ. ಪ್ರಥಮದಲ್ಲಾಗಿ ಅಂದು ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಗಳನುಸಾರವಾಗಿ ಬ್ರಿಟಿಷ ಮುತ್ಸದ್ದಿಗಳು ಕೆಲವರು ಬೇಗನೇ ಕೆಲಸ ನಡೆಸಿ ಪ್ರಾಮುಖ್ಯವಾದ ರಾಜ್ಯಾಂಗರಚನಾ ಸಮಸ್ಯೆಗಳನ್ನು ಇತ್ಯರ್ಥಿಸುವರು. ಹಿಂದೀಯರ ಪ್ರತಿನಿಧಿಗಳಾಗಿ ಸಾರ್ವಜನಿಕ ವ್ಯಕ್ತಿಗಳು ನಿಲ್ಲುವರು.

ಕೊಂಗ್ರೆಸ್ಸಿನೊಡನೆ ಒಂದು ನಡೆದಿದ್ದ 'ರಾಜಿ'ಯು ಅಕಸ್ಮಾತ್ತಾದುದು. ಏಕೆ! ಇದು ನಮ್ಮ ತಪ್ಪಲ್ಲ—ಸಹನೆಯ ಎಲ್ಲಾ ಮಿತಿಯವರೆಗೆ ನಾವು ನೋಡಿದೆವು. ಶಾಂತಿಗಾಗಿಯೂ ಸಹಕಾರಕ್ಕಾಗಿಯೂ ನಾವು ಮಿತಿಮೀರಿ ಪ್ರಯತ್ನಿಸಿದೆವು.

ಸಂಧಿಯು ಮುರಿಯಲ್ಪಟ್ಟುದ ಕಾರಣ ಕೊಂಗ್ರೆಸಿನದೇ ಎಂದೇ? ಕೊಂಗ್ರೆಸ್ಸಿನಿಂದಾಗಿಯೇ! ಆದಿಯಲ್ಲೇ ಕೆಲವು ಕೊಂಗ್ರೆಸ್ ಮುಖಂಡರು ಸಂಧಿಯು ಶಾಂತಿಗಾಗಿ ಒಪ್ಪಂದವೆಂದೆಣಿಸಲಿಲ್ಲ. ದ್ವಿತೀಯ ಸಮರ ಸನ್ನಾಹಕ್ಕಾಗಿ ಕಾಲಾವಕಾಶ ಪಡೆದೆವೆಂದು ನೆನಸಿದರು.

ಗಾಂಧಿಯವರು ಇಂಗ್ಲಾಂಡಿನಲ್ಲಿರುವಾಗಲೇ ಈ ಜನರು ಸಮರವನ್ನು ಹೂಡಿದ್ದರು. ಕುತ್ತಿಗೆ ಮುರಿಯುವ ವೇಗದಿಂದ ಈ ಜನರು ಕಾನೂನು ಕ್ರಮಗಳ ಪಂಜರದ ವೇಳೆಯೇ ನಿಷ್ಠುರರಾಗಿ ನಿಂತಿದ್ದರು. ಆತ್ಮಗೌರವವುಳ್ಳ ಯಾವ ಸರಕಾರವೂ ಈ ರೀತಿಯ ಪ್ರತಿಭಟನೆಗೆ ಎದುರಾಗಿ ನಿಲ್ಲಲು ಹಿಂಜರಿಯುತ್ತಿದ್ದಿಲ್ಲ. ಅದು ಕೇವಲ ಹಿಂದೀಯ ಜನಾಂಗಗಳ ಏಕಮಾತ್ರ ಪಕ್ಷವು ಎದ್ದು ನಿಂತುದನ್ನು ಯಾರೂ ಸಹಿಸುತ್ತಿದ್ದಿಲ್ಲ.

(೧೦ನೇ ಪುಟಕ್ಕೆ ಮುಂದರಿಸಿಯದೆ)

ಮೀರಾಬಾಯಿಯವರು ಮುಂಬಾಯಿಯನ್ನು ಬಿಡಲು ಆಜ್ಞೆ.

ತಾರೀಕು ೧೨ರಲ್ಲಿ

ಗುಂಟೂರಿನಲ್ಲಿ ಮದ್ರಾಸು ಸರಕಾರದ ಲೋ ಮೆಂಬರರಾದ ಸರ್. ಎಮ್. ಕೃಷ್ಣನ್‌ರವರು ಗುಂಟೂರು ಪವರ್ ಎಂಡ್ ಲೈಟ್ ಸಂಸ್ಥೆಯ ಪ್ರವೇಶೋತ್ಸವದ ಬಗ್ಗೆ ಅಲ್ಲಿಗೆ ಹೋಗಿದ್ದು, ಶ್ರೀ ಕೌಶ್ಯಸ್ವಾಮಿ ಚೌಧುರಿಯವರ ಮನೆಯಲ್ಲಿಳಿದರು. ಇದನ್ನು ತಿಳಿದುಕೊಂಡ ೬ ಮಂದಿ ಸ್ವಯಂಸೇವಿಕೆಯರು ಕಪ್ಪು ಪತಾಕೆಗಳ ಸಹಿತ ಚೌಧುರಿಯವರ ಮನೆ ಬಾಗಿಲಲ್ಲಿ ನಿಂತು ಲೋ ಮೆಂಬರರಿಗೆ ವಿರೋಧ ಪ್ರದರ್ಶನವನ್ನು ಮಾಡಿದರು. ಇವರೆಲ್ಲರನ್ನೂ ಕೈದು ಮಾಡಲಾಗಿದೆ.

ಅಹ್ಮದಾಬಾದಿನಲ್ಲಿ ಮಣಿಬೆನ್ ಜಾವೇರಿಯವರು ಕೈದು ಮಾಡಲ್ಪಟ್ಟರು. ಪ್ರಚಾರಕಾರ್ಯವನ್ನು ಕೈಕೊಳ್ಳುವ ಉದ್ದಿಶ್ಯ ಬಾರ್ಡೋಲಿ ತಾಲೂಕಿಗೆ ಹೋದ ಕೆಲವು ಸ್ತ್ರೀಯರನ್ನೂ ಕೈದುಮಾಡಿ ವಿವಿಧ ಶಿಕ್ಷೆ ವಿಧಿಸಿದರು.

ಅಲ್ಲಿಯ ಕಾಲೇಜಿನ ಕಾಲೇಜರು ತಾನು ಸೆರೆಮನೆಗೆ ತೆರಳುವಾಗ ಗುಜರಾಥ ವಿದ್ಯಾಪೀಠದ ಪಾರಮಟ್ಟುಗಳನ್ನೂ ಎತ್ತುಗಳನ್ನೂ ಸರಕಾರವು ನೋಡಿಕೊಳ್ಳಬೇಕಾಗಿ ಅರ್ಜಿಮಾಡಿಕೊಂಡಿರುವರು. ಸಿಟಿ ಕಾಂಗ್ರೆಸ್ ಕಮಿಟಿಯ ಸೆಕ್ರಿಟರಿಯವರಾದ ಶ್ರೀ ಅರ್ಜುನಲಾಲ್ ಲಾಲಾ ಎಂಬವರು ದಿನಾಲೂ ಪೋಲೀಸರಿಗೆ ಕಾಣಿಸಿಕೊಳ್ಳಬೇಕೆಂಬ ಶರ್ತದ ಮೇಲೆ ಬಿಡುಗಡೆ ಮಾಡಲ್ಪಟ್ಟಿರುವರು. ಅಲ್ಲಿಯ ಶ್ರೀಮತಿ ಚಂಪಾ ಬೆನ್ನರೂ ಪೋಲೀಸರಿಗೆ ಕಾಣಿಸಿಕೊಳ್ಳಬೇಕೆಂಬ ಶರ್ತದ ಮೇಲೆ ಬಿಡುಗಡೆ ಹೊಂದಿರುವರು.

ಲಾಹೋರಿನ ಬಾಲ ಭಾರತ ಸಂಘ, ಆಜಾದ್ ಸಭಾ ಸಿಟಿ ಕಾಂಗ್ರೆಸ್ ಕಮಿಟಿ, ಸಮರಸಂಘ, ಸತ್ಯಾಗ್ರಹ ಕೂಟಗಳನ್ನೆಲ್ಲಾ ಬೇಕಾಯಿದೆಶೀರವೆಂದು ಪ್ರಕಟಿಸಿದ್ದಾರೆ.

ಬೆಂಗಳೂರಿನ ಪ್ರಸಿದ್ಧ ತಾಯಿನಾಡು ಪತ್ರಿಕೆಯ ವಾರ್ತಾ ಸಂಗ್ರಾಹಕರಾದ ಶ್ರೀ ಜಿ ಆರ್ ಸ್ವಾಮಿ ಎಂಬವರು ಅನಾಮಧೇಯ ಕರಪತ್ರಗಳನ್ನು ಹಂಚಿದುದಕ್ಕಾಗಿ ಇನ್ನಿತರೊಡನೆ ಕೈದು ಮಾಡಲ್ಪಟ್ಟಿರುವರು. ಅಲ್ಲಿ ಪಿಕೆಟಿಂಗೂ, ಮದ್ಯಪಾನ ನಿಷೇಧದ ಪಹರೆಯೂ ಪ್ರಥಮದ್ವಾಗಿ ಪ್ರಾರಂಭವಾಗಿದೆ.

ಸಬರ್ಮತಿ ಸೆರೆಮನೆಯಲ್ಲಿರುವ ಶ್ರೀ ಮಣಿಲಾಲ್ ಕೊಠಾರಿಯವರು ಅಸ್ವಸ್ಥರಾಗಿರುವರೆಂದು ತಿಳಿದುಬಂದಿದೆ. ಅಹ್ಮದಾಬಾದಿನ ಮೆಸರ್ಸ್ ಸಿ ಡೊಕ್ಟರ್ ಎಂಡ್ ಕೊ ಇದರ ಮೆನೆಜರರಾದ ಶ್ರೀ ಮಥೂಭಾಯಿ ಪಟೇಲರು ಪೋಲೀಸರಿಗೆ ಕಾಣಿಸಿಕೊಳ್ಳಬೇಕೆಂಬ ಶರ್ತದ ಮೇಲೆ ಬಿಡುಗಡೆಮಾಡಲ್ಪಟ್ಟಿರುತ್ತಾರೆ.

ಮುಂಬಾಯಿಯ ಕಾಲ್ಬಾದೇವಿಯಲ್ಲಿರುವ ಸ್ವದೇಶಿ ಮಾರ್ಕೆಟಿನಲ್ಲಿ ಪೋಲೀಸರು ಜಪ್ತಿ ನಡೆಸಿದರು. ಅದರ ಸೆಕ್ರಿಟರಿ ಮತ್ತು ಅಸಿಸ್ಟೆಂಟ ಸೆಕ್ರಿಟರಿಗಳನ್ನೂ ಇನ್ನಿತರ ಮೂವರನ್ನೂ ಕೈದು ಮಾಡಿದರು. ಕೆಲವು ಪತ್ರಗಳನ್ನೂ ಕೊಂಡೊಯ್ದಿರುವರು. ಶಾಸನಭಂಗ ಚಳವಳಿಕ್ಕೆ ಈ ಮಾರ್ಕೆಟು ಪ್ರೋತ್ಸಾಹವನ್ನೀಯುತ್ತದೆಂಬ ಸಂಶಯ ತೋರಿದುದರಿಂದ ಹೀಗಾಯಿತೆಂದು ತಿಳಿದು ಬಂದಿದೆ. ಮಾಂಡ್ವಿಯಲ್ಲಿ ಕಾಂಗ್ರೆಸ್‌ವಾಲರು ಒಂದು ಸಭೆಯನ್ನು ಜರಗಿಸಿದರು. ಪೋಲೀಸರು ಬಂದು ಡಿಕ್ಟೇಟರರನ್ನೂ ಇನ್ನಿತರ ನಾಲ್ಕು ಮಂದಿಗಳನ್ನೂ ಹಿಡಿದುಕೊಂಡು ಹೋದರು. ಶ್ರೀ ಗಳಾದ ಜಿ ಸಿ ಮಿತ್ರ, ಮ್ಯುನಿಸಿಪಲ್ ಕೌನ್ಸಿಲರಾದ ಎಸ್ ಕೆ ಪುರಾಲ್ ಮತ್ತು ಆರ್ ಬಿ ಧೆರುಕ್ಕಾರ್ ಎಂಬವರನ್ನೂ ಕೈದು ಮಾಡಿದರು. ಸೈಯದ್ ನೂರ್ ಅಲಿ ಎಂಬವರು ೨೪ ಘಂಟೆಗಳೊಳಗೆ ಪಟ್ಟಣದಿಂದ ಹೊರಗೆ ಹೋಗಬೇಕೆಂದು ಆಜ್ಞೆಯಾಗಿದೆ. ೧೪ ಮಂದಿಗಳು ಪೋಲೀಸರಿಗೆ ನಿತ್ಯವೂ ಕಾಣಿಸಿಕೊಳ್ಳಬೇಕೆಂದಪ್ಪಣೆ.

ತಾರೀಕು ೧೩ರಲ್ಲಿ

ಲಾಹೋರಿನ ೧೭ನೇ ಡಿಕ್ಟೇಟರರಾದ ಶ್ರೀಮತಿ ಧರಮ್ ಕಾವೂರ್ ಎಂಬವರನ್ನೂ ಇನ್ನಿತರರನ್ನೂ ಕೈದುಮಾಡಿರುವರು. ೩೦ ಮಂದಿ ಸ್ತ್ರೀಯರು ಒಟ್ಟುಗೂಡಿ ಒಂದು ಸ್ವದೇಶಿ ಮೆರವಣಿಗೆಯನ್ನು ಮಾಡಿದರು. ಪೋಲೀಸರು ಅಡ್ಡ ಬರಲಿಲ್ಲ. ವಿದೇಶಿ ಅಂಗಡಿಗಳನ್ನು ಪಿಕೆಟಿಂಗ್ ಮಾಡಿದುದಕ್ಕಾಗಿ ೬ ಮಂದಿ ಕಾಂಗ್ರೆಸ್‌ವಾಲರನ್ನು ದಸ್ತಗಿರಿ ಮಾಡಿರುವರು.

ರಾಜದ್ರೋಹಕರ ಸಂಗತಿಗಳನ್ನು ಎಬ್ಬಿಸುತ್ತಿರುವುದಕ್ಕಾಗಿ ಶ್ರೀಮತಿ ಸುದೇಶ ಕುಮಾರಿ ಎಂಬವರು ಎರಡು ಅಪಾದನೆಗೊಳಗಾಗಿ ಒಂದೊಂದು ಅಪಾದನೆಗೆ ಎರಡು ಸಾವಿರದಂತೆ ಸೆಕ್ಯುರಿಟಿ ಕೊಡಬೇಕೆಂದೂ ಅಥವಾ ಆರು ತಿಂಗಳ ಸಾದಾ ಸಜೆಯನ್ನನುಭವಿಸಬೇಕೆಂದೂ ಆಜ್ಞೆಯಾಯಿತು. ಅಪಾದಿತರು ಸೆರೆಮನೆಗೇ ಹೋದರು.

ಅಲ್ಲಾಹಾಬಾದಿನಲ್ಲಿ ಕಂದಾಯ ನಿರಾಕರಣೆ ಚಳವಳಿಯನ್ನು ಪ್ರೋತ್ಸಾಹಿಸಿ ಮುಂದೊತ್ತುತ್ತಿರುವ ೩೩ ಮಂದಿ ಹಳ್ಳಿಗರನ್ನು ಕೈದು ಮಾಡಿ ಶಿಕ್ಷೆಯನ್ನು ವಿಧಿಸಿದರು. ಅಪಾದಿತರು ಭದ್ರತೆಯನ್ನು ಕೊಡಲು ಒಪ್ಪಲಿಲ್ಲ.

ಕಾಯಿದೆಭಂಗವನ್ನು ಮಾಡಿದುದಕ್ಕಾಗಿ ಪಂಡಿತ ಮೋಹನ್‌ಲಾಲ್ ಗೌತಮರನ್ನು ಮೊದಲೇ ಎರಡು ವರುಷಗಳ ಕಠಿಣ ಸಜೆಗೊಳಗು ಮಾಡಿದ್ದರು. ಅವರು ಕಳೆದ ತಿಂಗಳಲ್ಲಿ ಕಂದಾಯ ನಿರಾಕರಣೆಯನ್ನು ಪ್ರೋತ್ಸಾಹಿಸಿದುದಕ್ಕಾಗಿ ಅವರನ್ನು ಪುನಃ ವಿಚಾರಣೆಗೆ ತಂದಿರುತ್ತಾರೆ.

ಈಸ್ಟ್ ಆಫ್ರಿಕನ್ ಇಂಡಿಯನ್ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಿ ಕೆಲಸ ನಡೆಸಿ ಹಿಂತಿರುಗಿದ ಶ್ರೀ ಅಮೃತಲಾಲ್ ಸೆಠ್ ಎಂಬವರು ಹಿಂದೂದೇಶಕ್ಕೆ ಕೆನಿಯಾ ಜಹಜಿನಲ್ಲಿ ಹಿಂದಿರುಗುತ್ತಲೇ ಎಮರ್ಜೆನ್ಸಿ ಪವರ್ಸ್ ಆರ್ಡಿನೆನ್ಸಿನ ಮೂಲಕ ಕೈದು ಮಾಡಲ್ಪಟ್ಟರು. ಜಹಜು ದಕ್ಕೆಗೆ ತಗಲುತ್ತಲೇ ಪೋಲೀಸರು ವಾರಾಂಟನ್ನೊಪ್ಪಿಸಿದರು.

ಮದ್ರಾಸು, ಲಕ್ನೋ ಫಿರೋಜಪುರ್, ಬೆನಾರಸ್, ರಾಜಶಾಹಿ, ಡಿಲ್ಲಿ, ಬೆಂಗಳೂರು, ಸೋಲಾಪುರ, ಕೊಡಗು, ತಿನ್ನವೆಲ್ಲಿ ಮೊದಲಾದ ಕಡೆಗಳಲ್ಲಿ ಕೈದುಗಳೂ ಶಿಕ್ಷೆಗಳೂ ನಡೆಯುತ್ತಿವೆ.

ತಾರೀಕು ೧೪ರಲ್ಲಿ

ಮುಂಬಾಯಿಯ ಕರ್ನಾಟಕ ಪ್ರಿಂಟಿಂಗ್ ಪ್ರೆಸ್ಸಿನಿಂದ 'ಪ್ರಕೃತಿ' ಎಂಬ ಮಹಾರಾಷ್ಟ್ರ ಪತ್ರಿಕೆಯೊಂದು ಹೊರಬೀಳುತ್ತಿದೆಯಷ್ಟೆ. ಪತ್ರಿಕೆಯ ಮುದ್ರಣಕರ್ತರೂ, ಪ್ರಕಾಶಕರೂ ೬೦೦೦ ರೂಪಾಯಿಗಳ ಭದ್ರತೆಯನ್ನು ಕೊಡಬೇಕಾಗಿ ಆಜ್ಞೆಯಾಗಿದೆ.

ಮುಂಬಾಯಿಯ ಅನೇಕ ವಾರ್ತಾಪತ್ರಿಕೆಗಳ ಸಂಪಾದಕರಿಗೆ ಮಿತ್ರಭಾವದ ನೋಟೀಸುಗಳು ಸರಕಾರದಿಂದ ಹೋಗಿರುತ್ತವೆ. ಪ್ರೋಹಿಬಿಟರ ಸಂಗತಿಗಳನ್ನು ಪ್ರಕಟಿಸಬಾರದೆಂದೇ ಅವುಗಳ ತಿರುಳು.

ರೋಹಿತ್ ಮಿಲ್ಲಿನ ಏಜಂಟರಾದ ವಾಡಿಲಾಲ್ ಲಲ್ಲೂಭಾಯಿ ಎಂಬವರು ದಸ್ತಗಿರಿ ಮಾಡಲ್ಪಟ್ಟು ಎಚ್ಚರ ಕೊಡಲ್ಪಟ್ಟ ಮೇಲೆ ಬಿಡುಗಡೆ ಹೊಂದಿದರು. ಅವರು ದಿನಾಲೂ ಪೋಲೀಸರಿಗೆ ಕಾಣಬೇಕೆಂದು ಆಜ್ಞೆಯಾಯಿತು. ಅದನ್ನು ಪಾಲಿಸದಿದ್ದುದಕ್ಕಾಗಿ ಅವರಿಗೆ ೩೫೦೦ ರೂಪಾಯಿಗಳ ಜುಲುಮಾನ ಅಥವಾ ಆರು ತಿಂಗಳ ಕಠಿಣ ಸಜೆಯು ವಿಧಿಸಲಾಯಿತು.

ಸಿ ಡೊಕ್ಟರ್ ಮತ್ತು ಕಂಪೆನಿಯ ಮೆನೇಜರರಾದ ಮಥೂಭಾಯಿ ಪಟೇಲರೆಂಬವರು ಪೋಲೀಸರಿಗೆ ದಿನಾಲೂ ಕಾಣಿಸಿಕೊಳ್ಳಲು ತಪ್ಪಿದುದಕ್ಕಾಗಿ ೮೦೦ ರೂಪಾಯಿ ಅಥವಾ ಆರು ತಿಂಗಳ ಕಠಿಣ ಸಜೆಗೆ ಗುರಿಯಾದರು.

ಮುರಾಕ್ ಲೇನಿನ ಶ್ರೀ ಜಯಂತಿ ದಲಾಲ್ ಎಂಬವರು ಪೋಲೀಸರಿಗೆ ದಿನಾಲೂ ಕಾಣಿಸಿಕೊಳ್ಳಲು ತಪ್ಪಿದುದಕ್ಕಾಗಿ ಅವರನ್ನು ಹುಡುಕೋಣವಾಯಿತು. ಮರುದಿನ ಅಪಾದಿತರು ಸ್ವತಃ ಪೋಲೀಸರ ಒಳಗೆ ಹೋಗಿ ಬಂಧನಕ್ಕೊಪ್ಪಿದರು.

ಲಾಹೋರಿನಲ್ಲಿ ವಿದೇಶಿ ವಸ್ತ್ರದ ಅಂಗಡಿಗಳಲ್ಲಿ ಪಹರೆ ನಡೆಸಿದುದಕ್ಕಾಗಿ ೮ ಮಂದಿ ಸ್ತ್ರೀಯರುಗಳು ದಸ್ತಗಿರಿ ಮಾಡಲ್ಪಟ್ಟರು.

ಪುನೆಯಲ್ಲಿನ ಮ್ಯುನಿಸಿಪಾಲಿಟಿಯವರು ಮಹಾತ್ಮಾ ಗಾಂಧಿಯವರ ೬೩ನೇ ಜನನ ದಿನಾಚರಣೆ ಸಂಬಂಧ ಅವರಿಗೊಂದು ಮಂಗಳವಾರ್ತೆಯನ್ನು ಕಳುಹಿಸಿದ್ದರು. ಅದನ್ನು ತಿಳಿದ ಕಲೆಕ್ಟರರು ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಆ ದಿನವನ್ನೂ ವಾರ್ತೆಯನ್ನೂ, ಹಿಂತೆಗೆಯಬೇಕೆಂದು ಅಪ್ಪಣೆಯಿತ್ತರು. ಮ್ಯುನಿಸಿಪಾಲಿಟಿಯಲ್ಲಿ ಸಭೆ ಜರಗಿ "ಕಲೆಕ್ಟರು ಮ್ಯುನಿಸಿಪಾಲಿಟಿಯ ಯಾವ ಆಕ್ಟಿನ ಮೇಲೆ ಹೀಗೆ ಕೇಳಿದರು" ಎಂದು ಕೇಳಲಿರುವರು.

ತಾರೀಕು ೧೫ರಲ್ಲಿ

ಶ್ರೀಮತಿ ಮೀರಾಬಾಯಿ(ಮಿಸ್. ಸ್ಲೇಡ್)ವರು ಮುಂಬಾಯಿಯಲ್ಲಿರುವುದರಿಂದ ಕಾಯಿದೆಭಂಗ ಚಳವಳಿಕ್ಕೆ ಪ್ರೋತ್ಸಾಹವಿದೆಯಾಗಿ ತಿಳಿದು ಬಂದುದರಿಂದ ಅವರು ಮುಂಬಾಯಿಯಿಂದ ಹೊರಟು ಹೋಗಬೇಕೆಂದು ಅಲ್ಲಿಯ ಪೋಲೀಸ್ ಕಮಿಶನರರ ಅಪ್ಪಣೆಯಾಗಿದೆ. ಮೀರಾಬಾಯಿಯವರು ಗಾಂಧೀಜೀಯವರನ್ನು ಸೆರೆಮನೆಯಲ್ಲಿ ಈ ವಾರ ಸಂದರ್ಶಿಸಲಿರುವರು.

ಅಹ್ಮದಾಬಾದಿನಲ್ಲಿ ಬಹಿಷ್ಕಾರ ದಿನಾಚರಣೆಯ ಸಂಬಂಧವಾಗಿ ಸ್ತ್ರೀಯರ ಮೆರವಣಿಗೆಯು ನಡೆಯಿತು. ಇಬ್ಬರು ಸ್ತ್ರೀಯರು ಶ್ರೀ ತ್ರಿಕಂಲಾಲ್ ಷಹಾ ಎಂಬವರ ಮುಂದಾಳುತನದಿಂದ ಹೋಗುತ್ತಿರುವಾಗ ಪೋಲೀಸರಿಂದ ತಡೆಯಲ್ಪಟ್ಟರು. ೨೫ ಮಂದಿ ಸ್ತ್ರೀಯರ ಇನ್ನೊಂದು ತಂಡವು ಮತ್ತೊಂದು ಕಡೆಯಿಂದ ಹೊರಟಿತು. ಅದನ್ನೂ ಪೋಲೀಸರು ನಿಲ್ಲಿಸಿದರು. ಮತ್ತೊಂದು ಕಡೆಯಿಂದ ೧೦ ಮಂದಿ ಸ್ತ್ರೀಯರುಗಳು ಕೂಡಿ ನಡೆದರು. ಅವರನ್ನೂ ತಡೆದು ಕೈದುಮಾಡಿದರು, ಮತ್ತೆ ೭ನೇ ಕಡೆಯಿಂದ ಎಂಟು ಮಂದಿಗಳು ಕೂಡಿ ಮೆರವಣಿಗೆಮಾಡಿ ಮುಂದೆ ಬಂದರು. ಅವರೂ ಪೋಲೀಸರ ಕೈಗೆ ದೊರೆತರು. ಒಟ್ಟು ೪೪ ಮಂದಿ ಸ್ತ್ರೀಯರೂ ೧೯ ಮಂದಿ ಪುರುಷರೂ ಬಂಧಿಸಲ್ಪಟ್ಟರು. ರಾತ್ರಿಯಾದ ಮೇಲೆ ಡಿಕ್ಟೇಟರರಾದ ತ್ರಿಕಂಲಾಲರನ್ನು ಎಚ್ಚರಕೊಟ್ಟೂ ಇನ್ನಿತರರನ್ನೂ ಹಾಗೆಯೇ ಬಿಟ್ಟುಬಿಟ್ಟರು.

(೯ನೇ ಪುಟದಿಂದ ಮುಂದರಿಸಿದ್ದು)

ಅಖಿಲ ಭಾರತವನ್ನೇ ನಾವು ಪ್ರತಿನಿಧಿಸುತ್ತೇವೆಂದು ಕಾಂಗ್ರೆಸ್ಸಿನವರು ಒರ್ವ ಬಿಂಕತನವನ್ನು ಒಹು ಸಮಯದಿಂದಲೂ ತೋರಿಸಿದರು. ರೌಂಡ್ ಟೇಬಲ್ ಪರಿಷತ್ತಿನಲ್ಲಿ ಈ ರೀತಿಯ ಹಕ್ಕನ್ನು ಗಾಂಧಿಯವರು ಮಂಡಿಸ್ಸೊಡನೆ ಮಹಾ ಮುಸ್ಲಿಮ್ ಪಕ್ಷೀಯರಾಗಿ ಮಾತನಾಡಿದ ಆಗಾಖಾನರೂ, ಅಸ್ಪೃಶ್ಯರ ಪಟ್ಟಗಳಾದ ಡಾ. ಅಂಬೇಡ್ಕರರೂ ಅದನ್ನು ಹುಡಿಹುಡಿಮಾಡಿ ಬಿಟ್ಟರು. ಗಾಂಧಿಯವರು ಹಿಂದೂದೇಶಕ್ಕೆ ತಲುಪುತ್ತಲೇ ಅವರನ್ನು ಅಸ್ಪೃಶ್ಯರ ಜನತಂಡಗಳು ಸ್ವಾಗತೀಕರಿಸಿದುವು. ಈ ಅಸ್ಪೃಶ್ಯರು ಬ್ರಿಟಿಷರಾಜ್ಯದ ವಿರೋಧಿಗಳಾಗಿ ಅವರನ್ನು ಸ್ವಾಗತೀಕರಿಸಿದುವಲ್ಲ, ಕಾಂಗ್ರೆಸ್ಸಿನ ವಿರೋಧಿಗಳಾಗಿ. ಇದರ ಸತ್ಯತೆಗಾಗಿ, ಹಿಂದೂದೇಶದ ಮಿಲಿಯಾದಿ ಜನಗಳು ತಮ್ಮನ್ನು ಪ್ರತಿನಿಧಿಸುತ್ತದೆನ್ನುವ ಕಾಂಗ್ರೆಸ್ಸಿನ ಸ್ವಯಂ ಹಕ್ಕನ್ನು ತಿರಸ್ಕರಿಸುತ್ತಿರುವುದನ್ನು ನೋಡಿದರೆ ಸಾಕು.

ಆದುದರಿಂದ ಸರಕಾರವು ಪಾರ್ಟಿ ಸಂಸ್ಥೆಗಳ ಕ್ರೋಧೆಯನ್ನು ಗಣಿಸದೆ ತನ್ನ ಕೆಲಸವನ್ನು ತಾನು ಮಾಡುತ್ತಾ ಹೋಗುವುದು ಆವಶ್ಯವಿದೆ. ಇಷ್ಟರಲ್ಲೇ ಹಾಕಲ್ಪಟ್ಟ ಸೂತ್ರಗಳ ಮೇರೆಗೆ ನಮ್ಮೊಡನೆ ಸಹಕರಿಸಲು ಬರುವ ಎಲ್ಲರೊಡನೆಯೂ, ಒಟ್ಟುಗೂಡನೆಯೂ ನಾವು ಸಹಕರಿಸಿಕೊಳ್ಳಲು ಸಿದ್ಧರಿದ್ದೇವೆ. ಈ ಸೂತ್ರಗಳ ಮೇರೆಗೆ ನಾವು ನೆಟ್ಟಗೆ ಹೋಗುವೆವು. ಒತ್ತಾಟಗಳಿಗೂ ಅಥವಾ ಹಾನಿಕಾರಕ ಭಯಸೂಚನೆಗಳಿಗೂ ಹೆದರದೆ ನಾವು ಮುಂದೊತ್ತುವೆವು.

ನಮ್ಮ ಸೂತ್ರವು ನಿರ್ಭಯವಾದುದು —ನೇರವಾದುದು ಮತ್ತು ಸಹಾನುಭೂತಿಯುತವಾದುದು. ಅದು ಪ್ರಗತಿಯನ್ನುಂಟು ಮಾಡುವಂತಹುದು. ಅಲ್ಲದೆ ಅಚಲವಾದುದು. ತಾಳ್ಮೆಯಿಂದ ಪರಸ್ಪರಾನುಕೂಲ್ಯದಿಂದ ಏನೂ ಹಿಂಜರಿಯದೆ ನಾವು ನಮ್ಮ ಸೂತ್ರಗಳನ್ನು ಮುಂದೊತ್ತಿ ಪಾಲಿಸುವೆವು. ನಾವು ಸ್ನೇಹಿತರಿಗೆ ಬೆಂಬಲವನ್ನೀಯುವವರಲ್ಲವೆನ್ನುವ ಮತ್ತು ನಾವು ಬೆದರಿಕೆಗೆ ಮಾತ್ರ ಬಗ್ಗುವವರೆನ್ನುವ ಹಿಂದೂದೇಶದವರಿಗೆ ನಾವು ಒಂದು ಸತ್ಯಾಂಶ ಸಂಗತಿಯನ್ನು ತಿಳಿಸುವೆವು.

ಇಷ್ಟು ವರುಷಗಳ ಪರೀಕ್ಷೆಯಿಂದಾಗಿ ನಮಗೆ ಅನೇಕ ಮಿತ್ರರು ದೊರಕಿರುವರು. ಹಿಂದೂದೇಶವನ್ನು ಬ್ರಿಟಿಷ ಸಾಮ್ರಾಜ್ಯಾಂತರ್ಗತದಲ್ಲೇ ಇಟ್ಟುಕೊಳ್ಳಲಾಶಿಸುವ ಹಿಂದೀಯರಾಗಲೀ, ಅಥವಾ ವಿಲ್ಲಿಂಗ್ಡನರ ಮೇಲ್ತಾಯಿಗೆ ಎದೆಗೊಟ್ಟು ಕಷ್ಟತರದ ಕರ್ತವ್ಯವನ್ನೆಸಗುತ್ತಿರುವ ಪ್ರತಾಪಿಗಳಾದ ಬ್ರಿಟಿಷ ಅಧಿಕಾರಿಗಳಾಗಲೀ ಯಾರೇ ಆಗಲಿ, ಅವರೊಡನೆ ಸಹಕರಿಸುವೆವು. ಮತ್ತು ಬೆದರಿಕೆಗೆ ಉತ್ತರವಾಗಿ ನಾನು ಪೂರ್ವ ದೇಶದ ಒಂದು ಗಾದೆಯನ್ನು ಹೇಳುತ್ತೇನೆ—

"ನಾಯಿ ಬೊಗಳುತ್ತಿರಲು ಕ್ರಮೇಲಕವು ಸಾಗುತ್ತಿದೆ"

ನಮ್ಮ ಶಾಲೆಗಳು.

೫. ನಿಸರ್ಗದೊಡನೆ ಸಂಬಂಧ.

ಲೇಖಕರು: - ಶ್ರೀಯುತ ಶಿವರಾಮ ಕಾರಂತ.

ನಮ್ಮ ಪ್ರವಾಸದಲ್ಲಿ ಕಂಡ ಪ್ರಥಮ ಶಾಲೆಯೆಂದರೆ ಕಿನ್ನಿ ಕಂಬಳದ ಶಾಲೆ. ಶಾಲೆಯ ಸುತ್ತ ಗಿಡಮರಗಳ ಸಮೃದ್ಧಿ ತುಂಬಾ ಇತ್ತು. ಮಕ್ಕಳು ಅಲ್ಲಿ ಕುಳಿತು ಮಧ್ಯಾಹ್ನದ ಭೋಜನವನ್ನು ಮಾಡುವುದನ್ನು ಕಂಡರೆ ತುಂಬಾ ಆನಂದ ವಾಗುತಿತ್ತು. ಆ ಬಳಿಕ ಸಂದರ್ಶಿದ ಶಾಲೆಯು ಅರ್ಲದ ಶಾಲೆ. ಅಲ್ಲೇ ೧೦೦ ಗಜದಲ್ಲಿ ನದಿಯೊಂದು ಮಂದ ಮಂದ ವಾಗಿ ಹರಿಯುತ್ತದೆ. ಶಾಲೆಗೆ ವಿಶೇಷವಾದ ಗಿಡಮರ ತೋಟ ಗಳ ಅನುಕೂಲತೆಯಿಲ್ಲದಿದ್ದರೂ, ಎದುರಿಗೆ ಕಾಡು ಮರಗಳು ತಂಪನ್ನು ನೋಟಕ್ಕೆ ಚೆಲುವನ್ನೂ ಕೊಡುತ್ತಿದ್ದುವು ಆದರೆ ಅಲ್ಲಿಂದೆದ್ದು ಮುಂದೆ ಕಂಡ ಬೈಲೂರು, ಹಿರಿಯಡ್ಕ ಮೊದ ಲಾದ ಯಾವತ್ತೂ ಶಾಲೆಗಳು ಈ ರೀತಿಯ ಮಾನಸಿಕ ಹಬ್ಬ ವನ್ನು ಕೊಡುವಂತಿರಲಿಲ್ಲ ಕೆಲವೊಂದಕ್ಕೆ ವಿಶಾಲವಾದ ಬಯಲುಗಾವಲಾದರೂ ಸುತ್ತ ಇದ್ದಿತ್ತು. ಆದರೆ, ಇನ್ನೂ ಹುಲ್ಲುಕಡ್ಡಿ—ಅದೂ ಇಲ್ಲ. ಮಕ್ಕಳಿಗೆ ನಿಸರ್ಗದ ಮೇಲೆ ಮಮತೆ ಹುಟ್ಟಲು, ಅವರಿಗೆ ಸೃಷ್ಟಿಯ ಚೆಲುವಿನ ಅನುಭವ ವಾಗಲು, ಮೈಗೆ ತಂಪನ್ನೂ, ಕಣ್ಣಿಗೆ ಸೊಂಪನ್ನೂ ಕೊಡುವ ಗಿಡಮರಗಳೇ ಕಾರಣ ಕಡಬದ ಈಗಿನ ಶಾಲೆಯು ಅದರ ಉಪಯುಕ್ತತೆಯನ್ನು ಸೂಚಿಸುತ್ತದೆ. ಶಾಲೆಯ ಸುತ್ತೆಲ್ಲಾ ಎಲ್ಲೆಲ್ಲೂ ಚಿಕ್ಕ ಪುಟ್ಟ ಪೊದೆಗಳು ಶಾಲೆಯ ವೇಳೆ ಬಿಟ್ಟು ಉಳಿದ ಗಳಿಗೆಗಳಲ್ಲೆಲ್ಲ ನೀವು ಚಿಕ್ಕ ಪುಟ್ಟ ಮಕ್ಕಳು ಆ ಪೊದೆಯನ್ನು ಸೇರಿ ಹಾಡುವುದನ್ನೂ, ಆಡುವುದನ್ನೂ, ಓದು ವುದನ್ನೂ ತುಂಬಾ ಕಾಣಬಹುದು ಪೊದೆ ಮನೆಗಳನ್ನು ಮಾಡಿ, ಅಲ್ಲೇ ಬೇರಿನಿಂದ ಬೆಂಚು, ಕುರ್ಚಿ, ಮಂಚಗಳನ್ನಾಗಿ ಮಾಡಿ ಕುಳಿತಿರುವುದನ್ನೂ ಕಾಣಬಹುದು ಆ ಪೊದೆಗಳ ಎಡೆಯಲ್ಲೇ ಚೆಂಡು ಆಡುವ ಮನೆಗಳೂ ಇವೆ ಇಲ್ಲಿನ ಮಕ್ಕಳು ಈ ಪೊದೆಗಳನ್ನು ತಮ್ಮ ಮನೆಯಷ್ಟೇ ಅಕ್ಕರೆಯಿಂದ ಕಾಣುವರೆಂದು ನನ್ನ ತಿಳಿವು ಈಗೀಗ ಮಕ್ಕಳಿಗೆ, ಶಾಲೆಯ ಹೊರಕ್ಕೆ ಬಂದು, ನೆಲದ ಮೇಲೆ ಕುಳಿತಿರಲು ಸಂಕೋಚ ವಾಗುವುದು ಬೆಂಚನ್ನು ಬಿಟ್ಟು ಕುಳಿತಿರಲು ಬಾರದು. ಹಸುರು ಹಚ್ಚಗಿನ ಹುಲ್ಲು ಕಂಡರೂ ಬೆಂಚನ್ನು ತಂದು ಕುಳಿ ತಿರುವರು. ಇದರ ಮೂಲ ಕೊರತೆಯೇ ನಿಸರ್ಗದಲ್ಲಿನ ಪ್ರೇಮದ ಅಭಾವ ದೇವರ ದಯೆಯಿಂದ ನಮ್ಮ ಜಿಲ್ಲೆಯು ಸೃಷ್ಟಿ ಸೌಂದರ್ಯದ ತವರು ಮನೆ ಆದರೆ, ಗಿಡಮರ ಗಳನ್ನೂ, ಹಳ್ಳ ತಿಟ್ಟುಗಳನ್ನೂ ಕಂಡು ಹಿಗ್ಗುವ ಮಕ್ಕಳ ಮತ್ತು ಉಪಾಧ್ಯಾಯರ ಸಂಖ್ಯೆಯು ಕಿರಿದು ನಿಜಕ್ಕೂ ಅವರಿಗೆ ಅದ ರಲ್ಲಿ ಅಭಿರುಚಿಯುಂಟಾಗಲು ಉಪಾಧ್ಯಾಯರು ಆಗಾಗ ಮರದ ನೆರಳಿನಲ್ಲಿ ಪಾಠಗಳನ್ನು ಮಾಡುತ್ತಿರಬೇಕು, ಆಗಾಗ ಮಕ್ಕಳನ್ನು ಚೆಲುವಿನ ದೃಶ್ಯಗಳಿರುವಲ್ಲಿಗೆ ಒಯ್ಯಬೇಕು. ಅಲ್ಲಿ ಮಕ್ಕಳನ್ನು ಅಲೆದಾಡಲು ಬಿಡಬೇಕು.

ಸ್ಕೌಟು ದಳವಿರುವ ಕಟ್ಪಾಡಿ, ಅರ್ಲ ಶಾಲೆಗಳೂ ಸಹ ಈ ಕೆಲಸವನ್ನು ಮಾಡದಂತಿದಲ್ಲಿ ಇತರ ಶಾಲೆಗಳಲ್ಲಿ ಆ ಪರಿ ಶ್ರಮ ವಹಿಸಿದುದನ್ನು ಕಾಣೆ ಕಟ್ಪಾಡಿಯ ಬಾಲಚಂದರು— ಅವರನ್ನು ಅಲ್ಲೇ ನಾಲ್ಕಾರು ಮೈಲು ದೂರದ ಒಂದು ಕೋಟೆಗ ಒಯ್ದಿದ್ದರೆಂದು ಅದನ್ನು ಕೇಳಿ ನನಗೆ ಅವರ ಅನುಭವ ವನ್ನು ತಿಳಿಯುವ ಆಶೆಯಾಯಿತು. ಆದರೆ—ಅನುಭವವು ಕೋಟೆಯ ಕಲ್ಲುಗಳನ್ನು ಎಣಿಸಿದ್ದೊಂದೇ ಎಂದು ಕಾಣು ವುದು. ಕಾರಣ—ಅವರ ಸಂದರ್ಶನವು ತೀರ ಟೆಲಿಗ್ರಾಫಿಕ್— (ತ್ವರ್ಯ) ಆಗಿತ್ತು! ಅಂಥ ಪಯಣಗಳಿಂದ ಉಪಯೋಗವಿಲ್ಲ ಬೈಲೂರು ಶಾಲೆಯು, ಕಾರ್ಕಳದಿಂದ ಎರಡು ಹರದಾರಿ ದೂರ ವಿದೆ. ಗೋಮಟೇಶ್ವರನ ನೆಪದಿಂದಲಾದರೂ, ಅಲ್ಲಿನ ಬಾಲಕ ರನ್ನು ಕಾರ್ಕಳಕ್ಕೆ ಒಯ್ದದ್ದರೆ ಭೂಗೋಳದಲ್ಲಿ ಬಾಯಿಪಾಠ ಕಲಿಯುವ ರಾಮ ಸಮುದ್ರದ—ಸೊಗಸಿನ ಚಿತ್ರವು ಅವರ ನೆನಪಿಂದ ಹೋಗುತ್ತಿರಲಿಲ್ಲ ಕರಾವಳಿಗೆ ತೀರ ಸಮೀಪ ವಾಗಿದ್ದು ಸಮುದ್ರವನ್ನು ಕಾಣದ ಹುಡುಗರು ನಮ್ಮ ಶಾಲೆ ಗಳಲ್ಲಿ ಅಪೂರ್ವವಲ್ಲೆಂದು ನನ್ನ ತಿಳಿವು

ಊರಲ್ಲಿ ಕಣ್ಣನ್ನು ಕುಕ್ಕುವ ಸೊಗಸಿನ ದೃಶ್ಯಗಳನ್ನು ಕಾಣುವ ಮಕ್ಕಳು—ನಿಸರ್ಗದ ಪಶುಪ್ರಾಣಿಗಳೊಡನೆ ಏನು ಬೆರೆಯಬಲ್ಲರು. ಯಾವಾಗ ಪಶುಪ್ರಾಣಿಗಳಲ್ಲಿ ಮಕ್ಕಳಿಗೆ ಮಮತೆಯು ಉಂಟಾಗುವುದಿಲ್ಲವೋ ಆಗ ಅವರ ಸುಖಸಾಧ ನೆಯ ಅರ್ಧಮರ್ಧವೇ ಕಡಿಮೆಯಾಯಿತೆಂದು ಲೆಕ್ಕ. ನಮ್ಮಲ್ಲಿ ನ್ಯಾಯಿ, ಬೆಕ್ಕು, ಮೊಲ, ಮಂಗ ಮೊದಲಾದ ಪ್ರಾಣಿಗಳನ್ನು ಮಮತೆಯಿಂದ ಸಾಕುವ ಶಾಲೆಗಳು ಎಷ್ಟಿವೆ! ಹುಡುಗರು ಎಷ್ಟಿರುವರು? ಅದಕ್ಕಾಗಿಯೇ—ಇಂದು ಮಕ್ಕಳ ಸಂತೋಷ ನಾಯಿ ಮೊದಲಾದ ಪಶುಪ್ರಾಣಿಗಳನ್ನು ಹಿಂಸಿಸಿ ಉಂಟಾಗ ಬೇಕು ನಿಜವಾದ ನಿಸರ್ಗದ ಪ್ರೇಮವು ನಮ್ಮ ಮಕ್ಕಳಲ್ಲಿರು ವುದಾದರೆ—ಅವರು, ಒಂದು ಅಳಿಲಿನ ಆಟ ಕಾಣಲು, ಮಿಂಚು ಳ್ಳಿಯ ಹಾರಾಟ ಕಾಣಲು—ಎಷ್ಟು ಆಸೆಯನ್ನು ವಹಿಸುತ್ತಿರ ಲಿಲ್ಲ! ಅವುಗಳ ಸ್ವರದ ಅನುಕರಣೆಯನ್ನು ಮಾಡುತ್ತಿರಲಿಲ್ಲ. ಬದಲು ನಾವು ಕಂಡ ಹಲವು ಶಾಲೆಗಳಲ್ಲಿ—ದನ ಕೂಗುವುದು ಹೇಗೆಂದರೆ ಅಂಬೇ—ಎಂದು ಪುಸ್ತಕದ ಅಕ್ಷರವನ್ನು ಓದಿ ಹೇಳುವ ಬಾಲಕರಿರುವರು ನಿಜಕ್ಕೂ ಪ್ರವಾಸದಲ್ಲಿ ಸಂಧಿ ಸಿದ ಮಕ್ಕಳಲ್ಲಿ ನೇಕಡಾ—೯೯ ಬಾಲಕರಿಗೆ ಅದು ತಿಳಿಯದು ಹೆಚ್ಚೇನು—ಮೂಡುಪ್ರಾಂತ್ಯವಾದ ಅರ್ಲದಲ್ಲಿ—ಮೂರನೆ (?) ಕ್ಲಾಸಿನ ಹುಡುಗರೊಬ್ಬರು ಮಂಗ ಮತ್ತು ಗಿಳಿಯನ್ನು ಕಾಣದವರಿರುವರು! ಸುದೈವದಿಂದ ಅವರ ಪಠ್ಯ ಪುಸ್ತಕಗಳಲ್ಲಿ ಇವರ ಚಿತ್ರವಿದ್ದಿರಬಹುದು. ನಮ್ಮ ಶಾಲೆಗಳ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಪಾಠಗಳು ಬಹುಮಟ್ಟಿಗೆ ಕಾಗದದ ಮೇಲಿಂದಲೇ ನಡೆದು, ಅದರ ಮೇಲೆಯೇ ಉಪಾಧ್ಯಾಯರಿಗೆ ಪರೀಕ್ಷಾ ಕಾಲದಲ್ಲಿ ಒಪ್ಪಿಸಲ್ಪಟ್ಟು, ಕೂಡಲೆ ಮಾಯವಾಗುತ್ತದೆ! ಈ ರೀತಿಯ ಶಿಕ್ಷಣದ ಪರ್ಯವಸಾನವಾಗಿ—ಆನೆಗೆ ಗೊರಸಿದೆ, ಡಿಂಬಿದೆ (?)—ಎಂದಿತ್ಯಾದಿ ಆಬದ್ಧಗಳು ಮಕ್ಕಳಲ್ಲಿ ಕಾಣು ತ್ತದೆ ಕೊನೆಯ ಅಭಿಪ್ರಾಯವು—ಹಿರಿಯಡ್ಕ ಶಾಲೆಯ ಮೇಲಿನ ಕ್ಲಾಸಿನ ವಿದ್ಯಾರ್ಥಿಯೊಬ್ಬನ ಪ್ರಬಂಧ ಪುಸ್ತಕವು ತೋರಿಸಿ ಕೊಟ್ಟ ವಿಚಿತ್ರ! ಇಂಥ ಶಾಲೆಗಳ ಸಂಖ್ಯೆಯು ನಮ್ಮಲ್ಲಿ ಏನೇನೂ ವಿರಳವಲ್ಲ

ಬೆಲ್ಲದಕಟ್ಟೆ ಶಾಲೆಯಲ್ಲಿ, ಬೋರ್ಡಿನ ಮೇಲೆ ನಾನೊಂದು ಪ್ರಾಣಿಯ ಚಿತ್ರವನ್ನು ಬಿಡಿಸಿದೆ ಪ್ರಾಣಿಯು ಚತುಷ್ಪಾದ ಜಂತುವಿನಂತಿದ್ದು, ಅದರ ಒಂದೊಂದು ಭಾಗವು ಒಂಟೆ, ದನ ಕುದುರೆ, ನಾಯಿ ಮೊದಲಾದ ಬೇರೆ ಬೇರೆ ವರ್ಗದ ಪ್ರಾಣಿ ಗಳದ್ದಾಗಿತ್ತು ಇಂಥ ಪ್ರಾಣಿಯಾವುದು? ಎಂದು ಕೇಳಿದರೆ ಹುಡುಗರಿಗೆ ಉತ್ತರಿಸುವ ಧೈರ್ಯವಿಲ್ಲ ಕಾಣಬರುವ ಕಾಡು ಯಿರಬಹುದೆಂದು ಸಂಶಯ ಬಂದಿತೋ ಏನೋ? ಕಣ್ಣೆದುರಿಗೆ ಅತಿ ಕಡಿಮೆ ಪ್ರಯಾಸದಿಂದ ಕಾಣಸಿಗುವ ಪ್ರಾಣಿಗಳ ವಿಚಾರ ವಾಗಿಯೂ, ಕೇವಲ ಪುಸ್ತಕದಿಂದಲೇ ಅನುಭವ ಪಡೆಯುವು ದಾದರೆ, ಮಕ್ಕಳಿಗೆ ಪ್ರಾಣಿಶಾಸ್ತ್ರದ ಮೇಲೆ ಯಾವ ರೀತಿಯ ಮಮತೆಯುಂಟಾದೀತು.

ಮಕ್ಕಳಿಗೆ ನಿಸರ್ಗದ ಪಶುಪ್ರಾಣಿಗಳಲ್ಲೂ, ವೃಕ್ಷಾವಳಿ ಗಳಲ್ಲೂ ಪ್ರೇಮವನ್ನುಂಟುಮಾಡಲು ಜರ್ಮನಿ ಮೊದಲಾದ ದೇಶಗಳು ಮಾಡುತ್ತಿರುವ ಪ್ರಯತ್ನವನ್ನು ಕಂಡು ನಾವು ನೋಡಬೇಕಾಗಿದೆ. ನಮ್ಮ ದೇಶವಂತು ಸೃಷ್ಟಿಯ ಸೊಗಸಿಗೆ ಕೊರತೆಯಿಲ್ಲದ ರಾಜ್ಯ ಮಕ್ಕಳಿಗೆ ಪ್ರಪಂಚದ ಕಲ್ಪನೆಯೇ ರೇಖೆ, ರೂಪುಲಾವಣ್ಯಗಳಿಂದಾಗಬೇಕು ಎಂದರಿತು ನಾವು, ಈ ಬಗೆಯ ಪ್ರೇಮವನ್ನು ಅವರಲ್ಲಿ ಎಂದು ಉಂಟುಮಾಡುವುದು?

ವಿದ್ಯೆ ಮುಗಿದ ಬಳಿಕ, ತಂತಮ್ಮ ಹಳ್ಳಿಯಲ್ಲಿ ಅರೆ ಹೊಟ್ಟೆಯೋ, ಉಪವಾಸವೋ ಇರಬೇಕಾದ ನಮ್ಮ ಮಕ್ಕಳು— ಜೀವನದಲ್ಲಿ ಇನ್ನಾವ ಸುಖವನ್ನು ಕಾಣಬೇಕು? ಕಣ್ಣೆದುರಿನ ನೆಲವು ಅವರನ್ನು ಮಾತನಾಡಿಸುವುದಿಲ್ಲ, ಗಿಡವು ಮಾತ ನಾಡಿಸುವುದಿಲ್ಲ, ನೀಲಾಕಾಶವು ಮಾತನಾಡಿಸುವುದಿಲ್ಲ, ವೇಗ ದಿಂದ ಹರಿಯುವ ಹಳ್ಳವು ಮಾತನಾಡಿಸುವುದಿಲ್ಲ, ಹಿಗ್ಗಿನಿಂದ ಜಿಗಿಯುವ ಹಸುವಿನ ಕರುವು ಅವರನ್ನು ಮಾತನಾಡಿಸುವುದಿಲ್ಲ ವಾಯಿತು! ಇನ್ನಾರು ಅವರನ್ನು ಮಾತನಾಡಿಸಬೇಕು! ಯಾವು ದನ್ನು ಕಂಡು, ಯಾವುದನ್ನು ಕೇಳಿ, ಅವರು ಆನಂದಿತರಾಗ ಬೇಕು? ನಿಜಕ್ಕೂ, ಮಕ್ಕಳಿಗೆ ಅವರ ಚಿಕ್ಕ ವಯಸ್ಸಿನಲ್ಲೇ ನಾವು ಸೃಷ್ಟಿಯೊಡನೆ ಈ ಬಗೆಯ ಸೌಂದರ್ಯೋಪಾಸನೆ, ಪಶು ಪ್ರಾಣಿ ಪ್ರೇಮದ ಸಂಬಂಧವನ್ನು ಕಲ್ಪಿಸಿಕೊಟ್ಟರೆ ಅದಕ್ಕೂ ಮಿಗಿಲಾದ ಉಪಕಾರವಿಲ್ಲೆಂದೇ ತಿಳಿಯಬೇಕು, ಶಾಲೆಯಲ್ಲಿ ಹೇಳಿದ ಅ—ಆ ಬರಹವು ಖಂಡಿತವಾಗಿಯೂ ಅವರಿಗೆ ಊಟ ವನ್ನು ಕೊಡುವಂತಿಲ್ಲ ಕೊನೆಗೆ ಈ ಮಾನಸಿಕ ಊಟ ಕ್ಕಾದರೂ ನಾವು ಅವರನ್ನು ತಿದ್ದಬಾರದೇ?

ಸಹಕಾರಿಗಳ ಮುಂದಣ ಕರ್ತವ್ಯ.

[ಉಡುಪಿಯ ಸಹಕಾರಿಗಳ ಮಹಾಸಭೆಯಲ್ಲಿ, ಡಿಸ್ಟ್ರಿಕ್ಟ ರಿಜಿಸ್ಟ್ರಾರರಾಗಿರುವ ಶ್ರೀ. ಬಿ. ಮಾಧವ ರಾವ್, ಬಿ. ಎ. ಎಮ್. ಎಲ್, ಇವರ ಭಾಷಣದಿಂದ]

[ಕಳೆದ ಸಂಚಿಕೆಯಿಂದ ಮುಂದುವರಿಸಿದುದು.]

ಮರುಪಾವತಿಯ ಶಕ್ತಿಗೆ ಮಿಕ್ಕಿಕೊಟ್ಟ ಸಾಲಗಳು ಕ್ರಮೇಣ ವಸೂಲಾಗದಿದ್ದರೆ ಅವುಗಳ ಹೊರೆಯು ಅಮಿತ ಜವಾಬ್ದಾರಿಯ ರೂಪದಿಂದ, ಪಂಚ್ಯಾತರೂ ಇತರ ಧನಿಕ ಮೆಂಬ ರರೂ ತೆರಬೇಕಾದ ಹಲವು ಸಂದರ್ಭಗಳು ಬರುತ್ತವೆ ಇದನ್ನು ಆಲೋಚಿಸುವಾಗ ಪಂಚಾಯಿತರ ಕರ್ತವ್ಯದ ಕೆಲಸದ ಕಡೆಗೆ ಸ್ವಲ್ಪ ದೃಷ್ಟಿಕೊಡಬೇಕಾಗುತ್ತದೆ. ಸಂಘದಲ್ಲಿ ಹೆಚ್ಚು ಮೆಂಬ ರರಿದ್ದು, ಇವರೆಲ್ಲರೂ ಆಗಾಗ್ಯೆ ಒಟ್ಟುಕೂಡಿ ಸಂಘದ ಕೆಲಸಗ ಳನ್ನು ಜಾಗರೂಕರಾಗಿ ನಿರ್ವಹಿಸುವುದಕ್ಕೆ ಸಾಧ್ಯವಿಲ್ಲವೆಂಬ ಸಂಗತಿಯನ್ನು ಎಲ್ಲರೂ ಒಪ್ಪತಕ್ಕದ್ದಾಗಿದೆ ಆ ಪ್ರಯುಕ್ತ ಎಲ್ಲಾ ಮೆಂಬರರು ತಮ್ಮೊಳಗಿಂದ ಒಂದು ಚಿಕ್ಕ ಮಂಡಳಿಯನ್ನು ಆರಿಸಿ, ಈ ಮಂಡಳಿಯು ಎಲ್ಲ ಕೆಲಸಗಳನ್ನು ನಿರ್ವಹಿಸು ವಂತೆ ಮೆಂಬರರು ತಮ್ಮ ಅಧಿಕಾರವನ್ನು ಅವರಿಗೆ ಕೊಡ ತಾರೆ ಎಲ್ಲಾ ಮೆಂಬರರ ಹಿತಾರ್ಥವಾಗಿ ನಿಸ್ವಾರ್ಥ ಪರತೆಯಿಂದ ಕೆಲಸ ಮಾಡತಕ್ಕವರೂ ಸಹಕಾರದ ತತ್ವಗಳನ್ನು ಅರಿತವರೂ ಆದ ಯೋಗ್ಯ ಮೆಂಬರರನ್ನೇ ಪಂಚ್ಯಾತರನ್ನಾಗಿ ಆರಿಸುವ ವಿಷಯ ಮಹಾ ಸಭೆಯವರು ಜಾಗ್ರತೆವಹಿಸಿಕೊಳ್ಳಬೇಕು. ತಮ್ಮ ವ್ಯಕ್ತಿಶಃ ಸ್ವಾರ್ಥಪರ ದೃಷ್ಟಿಯಿಂದ ಯಾರು ಪಂಚ್ಯಾ ತರಾಗಲು ಇಚ್ಛಿಸುತ್ತಾರೋ ಅಂತಹರಿಗೆ ಸಂಘದಲ್ಲಿ ಸ್ಥಳವಿಲ್ಲ

ಸಹಕಾರಿ ಸಂಘಗಳ ಬೆಳವಣಿಗೆಯನ್ನು ವಹಿವಾಟಿನ ಪರಿಮಾಣದಿಂದ ಅಳೆಯುವ ಬದಲಾಗಿ ಮೆಂಬರರ ಸದ್ಗುಣಗಳ ಮಾನದಿಂದ ಅಳೆಯುವುದು ಅಗತ್ಯ ಹೀಗಾಗಿ, ತಮ್ಮ ನಡತೆ, ವಿದ್ಯೆ ನಿಸ್ವಾರ್ಥಪರತೆ ಮುಂತಾದ ಸದ್ಗುಣಗಳಿಂದ ಸಂಘಗಳನ್ನು ನಡೆಸುವಷ್ಟು ಚೈತನ್ಯವುಳ್ಳ ಮೆಂಬರರನ್ನೇ ಪಂಚ್ಯಾ ತರನ್ನಾಗಿ ಆರಿಸಬೇಕು. ಪಂಚ್ಯಾತರೂ ಕೂಡ ತಾವು ಸಂಘದ ಮಹಾ ಸಭೆಯ ಪ್ರತಿನಿಧಿಗಳೆಂದೂ, ಅಂಥಾ ಪ್ರತಿನಿಧಿಗಳಾಗಿ ಸಂಘಕ್ಕೆ ಒಂದು ವಿಶೇಷ ಜವಾಬ್ದಾರಿಯನ್ನು ವಹಿಸಿಕೊಂಡವ ರೆಂದೂ ತಿಳಿದುಕೊಂಡವರಾಗಬೇಕು. ಸಂಘವು ಒಳ್ಳೇದಾಗಿ ನಡೆಯುವುದಾಗಲೀ ಯಾ ಹಾಳು ಬೀಳುವುದಾಗಲೀ ಪಂಚ್ಯಾ ತರನ್ನೇ ಅವಲಂಬಿಸಿಕೊಂಡಿದೆ — ಪಂಚ್ಯಾತರು ಒಟ್ಟುಗೂಡಿ ಸರ್ವ ಕೆಲಸಗಳನ್ನು ನಿರ್ವಹಿಸಬೇಕಲ್ಲದೆ, ತಮ್ಮ ಜವಾಬ್ದಾರಿಯ ಕೆಲಸಗಳನ್ನು ಅಧ್ಯಕ್ಷರಾಗಲೀ, ಕಾರ್ಯದರ್ಶಿಯಾಗಲೀ— ಒಬ್ಬೊಬ್ಬರಿಗೆ ಬಿಟ್ಟುಕೊಡಬಾರದು ಹಲವು ಸಂಘಗಳಲ್ಲಿ ಎಲ್ಲಾ ಕೆಲಸಗಳನ್ನು ಪಂಚ್ಯಾತರು ಒಬ್ಬೊಬ್ಬರ ಕೈಗ ಬಿಟ್ಟು ಕೊಟ್ಟು ತಮ್ಮ ಜವಾಬ್ದಾರಿಯಿಂದ ಬಾಹಿರರಾಗಿ ಇರುವುದ ರಿಂದ ಒಬ್ಬ ವ್ಯಕ್ತಿಗೆ ಸಂಘದ ಹಣಗಳನ್ನು ದುರುಪಯೋಗ ಮಾಡುವ ಯಾ ಸಂಘಕ್ಕೆ ಹಾನಿಕರವಾದ ಕೆಲಸಗಳನ್ನು ಮಾಡುವ ಸಂದರ್ಭಗಳನ್ನು ಕೊಟ್ಟಂತಾಗುತ್ತದೆ ಆದುದ ರಿಂದಲೇ ಪಂಚ್ಯಾತರು ತಮ್ಮ ಜವಾಬ್ದಾರಿಗಳ ವಿಷಯ ಬಹು ಜಾಗರೂಕರಾಗಿರಬೇಕು — ಪಂಚ್ಯಾತರು ಆಗಿಂದಾಗ್ಗೆ ಸೇರಿ ಮ್ಯಾದೆ ದಾಟಿದ ಹೊರಗೆ ಬಾಕಿ ಇರುವ ಎಲ್ಲಾ ಸಾಲಗಳ ಕುರಿತು ನಡೆಸತಕ್ಕ ಪ್ರಯತ್ನಗಳ ವಿಷಯ ಚರ್ಚಿಸಬೇಕು— ಇದಲ್ಲದೆ ಹೊರಗೆ ಬಾಕಿ ಇರುವ ಎಲ್ಲಾ ಸಾಲಗಳು ಕಾಲ ಕ್ಲಪ್ತತೆಯಿಂದ ವಸೂಲಾಗುವಂತೆ ತಾವೇ ಜವಾಬ್ದಾರರೆಂಬು ದನ್ನು ತಿಳಿದುಕೊಳ್ಳಬೇಕು —ಆಗಾಗ್ಗೆ ಪಂಚ್ಯಾತರು ಪ್ರಮು ಖ್ಯಕಾರರಾಗಿ ಸೇರಲೇ ಬೇಕು ಮೆಂಬರರ ಹಿತಾರ್ಥವಾಗಿ ಯಾರೊಬ್ಬರ ದಯದಾಕ್ಷಿಣ್ಯವಿಲ್ಲದೆ ಯಾ ಹೆದರಿಕೆ ಇಲ್ಲದೆ ಯಾವತ್ತೂ ಕೆಲಸಗಳನ್ನು ನಿರ್ವಹಿಸಲಿಕ್ಕೆ ಪಂಚ್ಯಾತರು ಸಿದ್ಧ ರಿರಬೇಕು

ಈ ವಿಷಯವನ್ನೆತ್ತುವಾಗ ಅಮಿತ ಜವಾಬ್ದಾರಿಯ ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗಿದೆ ಅಮಿತ ಜವಾಬ್ದಾರಿಯೇನೆಂಬುದನ್ನು ಹೆಚ್ಚಿನ ಮೆಂಬರರ ಇನ್ನೂ ತಿಳಿದುಕೊಳ್ಳಲಿಲ್ಲವೆಂದೇ ನನ್ನ ಅಭಿಪ್ರಾಯ — ಸಂಘದ ವಹಿವಾಟುಗಳನ್ನು ಇಷ್ಟ ಬಂದಂತೆ ನಡೆಸಲು ಬಿಡುವುದರಿಂದಲೇ ಅಮಿತ ಜವಾಬ್ದಾರಿಯ ದುಷ್ಪರಿಣಾಮಗಳನ್ನು ಅನುಭವಿಸ ಬೇಕಾಗಿ ಬರುತ್ತದೆ ಹೀಗೆ ಸ್ವೇಚ್ಛೆಯಿಂದ ಸಂಘಗಳನ್ನು ನಡೆಸಲು ಬಿಡುವುದರಿಂದ ಒಬ್ಬಿಬ್ಬರಿಗೆ ಪ್ರಯೋಜನ ಕಂಡು ಬಂದರೂ ಒಟ್ಟಾರೆ ಮೇಲೆ ಎಲ್ಲಾ ಮೆಂಬರರಿಗೆ ಅದೊಂದು ದೊಡ್ಡ ಹಾನಿಯೇ ಆಗಿದೆ ಮೆಂಬರರಲ್ಲಿ ಪ್ರತಿ ಒಬ್ಬರೂ ಸಂಘವು ಪಡಕೊಂಡ ಸಾಲಗಳಿಗೆ ಒಟ್ಟಾಗಿಯೂ ಪ್ರತ್ಯ ಪ್ರತ್ಯೇಕ ವಾಗಿಯೂ ಜವಾಬ್ದಾರರಾಗಿದ್ದಾರೆ ಆ ಪ್ರಯುಕ್ತ ಸಂಘ ವನ್ನು ಇಷ್ಟ ಬಂದಂತೆ ನಡೆಸದೆ ಜಾಗರೂಕರಾಗಿರುವುದು ಪ್ರತಿ ಯೊಬ್ಬನ ಕರ್ತವ್ಯವಾಗಿರುತ್ತದೆ —ಎಲ್ಲಾ ಮೆಂಬರರು ಸಂಘದ ಹಿತದೃಷ್ಟಿಯಲ್ಲಿ ಆತುರರಾಗಿದ್ದರೆ ಮಾತ್ರ ಇದು ಸಾಧ್ಯವಾಗ ಬಲ್ಲದು

ಸಂಘಗಳಲ್ಲಿ ಸರ್ವ ಸಮಾನ್ಯವಾಗಿ ಇರುವಹುದಾದ ಕೊರತೆಗಳನ್ನು ನಿವಾರಿಸುವುದರಿಂದಲೂ, ಅವುಗಳು ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾಡುವುದರಿಂದಲೂ, ಅಮಿತ ಜವಾಬ್ದಾರಿಯ ಪೆಟ್ಟು ತಗಲದಂತೆ ಮಾಡಲು ಸಾಧ್ಯವಿದೆ —

[ಸಶೇಷ]

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉಪದ್ರವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ. ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದು

HEDAURIN FOR DYSENTERY CHOLERA CURE

ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟದು.

ಬಿಲ್ಲೆನ ಕ್ರಯ ಆಣೆ 0—15—0. ೨ ಬಿಲ್ಲೆನ ಬಾಟಲಿಗೆ ರೂ 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ ಕನ್ನಡಾ

"If every Wife knew what every Widow knows every Husband would be Insured"

PLACE YOUR LIFE ASSURANCE WITH

THE SOUTH INDIAN.

Securing for your clients –

1. **Low rates of Premium**
2. **Liberal Policy Conditions.**

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —

H R. K IYENGAR
Chief Agent

The S. I. G A Co, Ltd,
Sanyasiguddy, MANGALORE

Managing Agents –

K. C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಸೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರಿಮಿಯಂ ದರಗಳು ಕಡಿಮೆ!

ಕರಾರುಗಳ ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನನ್ನೂ ಕೈತುಂಬಾ ಸಂಬಳವೂ ದೊರಕುವದು.

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಅಯ್ಯಂಗಾರ್.

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಪ ಕ್ಕಳ ನೊದಲು ಎಲಾ ವಯಸ್ಕನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಬೇದಿಗೆ ಸಿದ್ಧೌಷಧ)

ಪ ಕಾ ವ ಕಚ್ಚುವುದಾಗಲಿ ಹೊಟ್ಟೆಯ ತ್ಸುರಿಸುವುದಾಗಲಿ ಉಂಟಾಗದೆ ಕೊಟ್ಟ, ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ. 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಕೊಟ್ಟರೆ ವರ್ಷಗಳಿಂದ ಪತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಪಂಯುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಸ್ರತಿಸಂದುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ ಮಂಗಳೂರು ಟಿವಾಗಿ ವಸತ್ತು.

ಕನ್ನಡ ಸದ್ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದೊಳ್ಳೇ ಸುಸಂಧಿ! ಅಲಭ್ಯ ಲಾಭ!! ತಕ್ಕ ಸಮಯ!!!

ಶ್ರೀ ಶೇಷಾಚಲ ಗ್ರಂಥಮಾಲೆಯ

೨೫ ಐತಿಹಾಸಿಕ ಕಾದಂಬರಿಗಳು ಇವುಗಳ ಬೆಲೆ ಸರಾಸರಿ	ರೂ.	೨
೨೩ ಸಾಮಾಜಿಕ-ಪೌರಾಣಿಕ	ರೂ.	೧೨
೧೧ ಪತ್ತೇದಾರಿ	ರೂ.	೭
೪೦ ಚರಿತ್ರಗಳು	ರೂ.	೨೦
೧೦ ಗದ್ಯ-ಪದ್ಯನಾಟಕಗಳು	ರೂ	೬
೨೫ ಪೌರಾಣಿಕ-ಪಾರಮಾರ್ಥಿಕ	ರೂ	೨೫
೨೦ ಧಾರ್ಮಿಕ, ವೈದಿಕ ಹಾಗೂ ಇತರ	ರೂ.	೧೪
೧೫೪ ಅಂತು ಪುಸ್ತಕಗಳು ಇವುಗಳ ಒಟ್ಟು ಬೆಲೆ	ರೂ	೧೦೫

ಇವುಗಳಲ್ಲಿಯ ಎಷ್ಟೋ ಪುಸ್ತಕಗಳು ೩ನೇ ೪ನೇ ಆವೃತ್ತಿಗಳನ್ನು ಕೂಡ ಹೊಂದಿ ಕನ್ನಡಿಗರ ಪ್ರೇಮಕ್ಕೆ ಪಾತ್ರವಾಗಿರುತ್ತವೆ

ಇಂಥ ಈ ಉತ್ಕೃಷ್ಟವು (೧೫೪ ಬಗೆಯು) ಪುಸ್ತಕಗಳಲ್ಲಿ ಬೇಕಾದ ಮೂರು ರೂಪಾಯಿ ಬೆಲೆಯ ಪುಸ್ತಕಗಳಿಗೆ ಬರೆದರೆ ಟಪ್ಪಾಲು ಖರ್ಚಿನ ೮ ಆಣೆ ನಾವೇ ವಹಿಸಿ ಬರೀ ಮೂರು ರೂಪಾಯಿಗೆ ವ್ಹಿ ಪಿ ಮೂಲಕ ರವಾನಿಸುತ್ತೇವೆ. ಇದಕ್ಕೂ ಹೆಚ್ಚು ಬೆಲೆಯ ಪುಸ್ತಕಗಳಿಗೆ ಬರೆದರೆ ಟ ಖ ನಾವು ವಹಿಸುವದಲ್ಲದೆ, ಮೇಲೆ ಯೋಗ್ಯ ಕಮೀಶನ್ ಸಹ ಕೊಡುತ್ತೇವೆ ವ್ಹಿ ಪಿ ಯೊಡನೆ ಅಂಗೀ ರಸ ಸಂಗರದ ಶುದ್ಧ ಪಂಚಾಂಗವು ಪ್ರತ್ಯೇಕವಾಗಿ ಕಳುಹಿಸಲ್ಪಡುವದು ಈ ರಿಯಾಯತಿಯು ಇಂದಿನಿಂದ ಒಂದೇ ತಿಂಗಳು. ಕಾರಣ ಎಲ್ಲರೂ ಈ ಸುಸಂಧಿಯ ಲಾಭ ಹೊಂದಬೇಕು ನಮ್ಮ ಕ್ಯಾಟಲಾಗು ನೋಡಿ, ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಭಿ ಪ ಕಾಳೆ.

ಪ್ರೊಪ್ರೈಟರ್, ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲಾ,
ಪೋ॥ ಆನಂದವನ, ಜಿ. ಧಾರವಾಡ.

INSURE WITH

The Popular Insurance Co. Ltd.

Head Office MANGALORE S India

First of its kind in the West Cost

CHAIRMAN

Dewan Bahadur N Subba Rao

STRIKING FEATURES

Policy Conditions Liberal

Claims Settlement Prompt

MANAGEMENT PURELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS

LIBERAL TERM TO COMPETENT MEN

For further particulars apply to the Head Office

ಡಾಕ್ಟರ ವಾಮನ ಗೋಪಾಳರವರ

ಐಡಿಡಾಯಿಡ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ೬೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಆಂಡ್ ಸನ್ಸ್,

ಫಾರ್ಮಸಿಸ್ಟ್ಸ್, ಮುಂಬಾಯಿ ೨ ಸ್ಟೋಕಿಸ್ಟ್ ಪಾ ಕಂಪೆನಿ, ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ ತೋಟದವರಿಗೂ

ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು, ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V S. KAMATH AT M. T A. SHARADA PRESS, MANGALORE.

ಚಂದಾ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. *Registered No. M. 489.* ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಒರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೨೬ನೇ ಶುಕ್ರವಾರ ಫೆಬ್ರುವರಿ ೧೯೩೨ (26—2—'32.) ಸಂಚಿಕೆ ೯

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**

ಹೆಡ್ ಆಫೀಸು:—ಉಡುಪಿ ಶಾಖೆ ಕುಂದಾಪುರ ಮತ್ತು ಮಂಗಳೂರು

Authorised Capital Rs. 3,50,000 Subscribed & Called up Rs. 2,25,000

ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ. 2,25,000-

STATEMENT OF ASSETS & LIABILITIES AS ON 31ST DAY OF JANUARY, 1932

	CAPITAL AND LIABILITIES.			PROPERTY AND ASSETS	
1	Paid up Capital	Rs 2,25,000-0-0	1	Premises Building, Furniture etc	Rs [illegible]
2	Reserve and other funds	,, 2,04,636 2 [illegible]	2	Government securities & Treasury Bills	,, 30,786 4 0
3	Deposits	,, 1,92,558-4 2	3	Authorised Investments	,, 20 56 [illegible]-12 6
4	Due to Bankers	,, 15[illegible] 4 13-0	4	Bills for collection	11 442 4 0
5	Sundries	,, [illegible] 2 10	5	Sundries	,, 29 04
6	Bills for collection per contra	11,442-4 0	6	Cash in hand & with bankers	43 83 11 [illegible]
	Total	5 57 369 10 5		Total	[illegible] 57 36[illegible] 10 [illegible]

Office of the Corporation, UDIPI S K 2-2-'32

N. ANANDA RAO,
Secretary & Manager

ಅಮೃತಾಂಜನ.

ಶೀತ, ಕೆಮ್ಮು, ತಲೆನೋವು ವಾತ ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ದಂಗುಕೊಡುವ, ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ ಇದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತದೆ. ಈ ಬೇನೆಗಳನ್ನು ಅಮೃತಾಂಜನವು ಅಲ್ಪಸ್ವಲ್ಪ ಸಮಯದಲ್ಲೇ ಗುಣಪಡಿಸುತ್ತದೆ ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯೂ [illegible] ಕ್ರಯ ಅಂದವಾದ ಬಣ್ಣದ ಒಂದು ಬಾಟ್ಲಿಗೆ 8 ಆಣೆಗಳು ಎಲ್ಲಾ ಅಂಗಡಿಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು—(ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಫೋಡಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು, ಎರಡೇ ಸಲದ ತಗಲಿಸುವಿಕೆಯಿಂದ ಗುಣವಾಗುತ್ತದೆ ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ ಟಿನ್ನಿಗೆ 0—4—0 ಡಜನಿಗೆ [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ವನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ.
ಗಿರಗಾಂವ, ಮುಂಬಾಯಿ.

(ಏಜಂಟರು,—ದಿ ಯೂಲಕ್ ಮಾರ್ಟ್, ಮಂಗಳೂರು.

ಮಾರಾಟಕ್ಕೆ ಸಿದ್ಧವಾಗಿದೆ.

ತ್ವರೆಮಾಡಿರಿ ತ್ವರೆಮಾಡಿರಿ

೧೯೩೨ನೇ ವರ್ಷದ ಪಾಕೆಟ್ ಡೈರಿಗಳು

ದೊಡ್ಡ ಸೈಜ್	0—10—0
ದೊಡ್ಡ ಸೈಜ್ ಮುಚ್ಚಳ ಇದ್ದದ್ದು	0—12—0
ಸಣ್ಣ ಸೈಜ್	0— 6—0
ಮುಚ್ಚಳ ಇದ್ದದ್ದು	0— 8—0
ಸಣ್ಣ ಸೈಜ್ ಸ್ಲಿಪ್ ಬ್ಯಾಂಡ್	0— 5—0

ವ್ಯಾಪಾರಸ್ಥರಿಗೂ ರಖಂ ತೆಗೆದುಕೊಳ್ಳುವವರಿಗೂ ಧಾರಾಳ ಕಮಿಶನು ಕೊಡಲಾಗುವುದು

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಮನೇಜರ,
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ನಿಮ್ಮ ಮಕ್ಕಳನ್ನು ಸುಖದಿಂದಲೂ ಆರೋಗ್ಯದಿಂದಲೂ ಇಡುವುದಕ್ಕೆ ಮಾರ್ಗ.

ಆರೋಗ್ಯವು ಸಿಗಬೇಕಾದರೆ ಸರಿಯಾದ ಪರಿಪೋಷಣೆಯು ಅತ್ಯಗತ್ಯ. ಅದು ಕೂಡಾ ಮಕ್ಕಳ ಬೆಳವಣಿಗೆಯ ಸಮಯದಲ್ಲಿ ಇದು ಅಗತ್ಯದ ಸಂಗತಿ.

ನಗುತ್ತಾ ತಮಾಷೆಯೊಡನೆ ಆನಂದಿಸುವ ಆರೋಗ್ಯವಂತ ಶಿಶುವು ಪ್ರತಿ ಹೆತ್ತವರಿಗೂ ಆನಂದವನ್ನುಂಟುಮಾಡುವಂತಹುದ. ಮಕ್ಕಳ ಸುಖಸಂತೋಷವು ಭವಿಷತ್ತೂ ಯಾವುದರ ಮೇಲೆ ಹೊಂದಿಕೊಂಡಿರುವುದೋ ಅಂತಹ ಆರೋಗ್ಯಕರ ಪೋಷಣಾ ವಿಷಯದಲ್ಲಿ ಅವರಿಗೆ ಸಾಕಷ್ಟು ಮತ್ತು ಸರಿಯಾದ ಪೋಷಣೆಯು ದೊರೆಯುವಂತೆ ಜಾಗರೂಕರಾಗಿರಬೇಕು.

ನಿಮ್ಮ ಮಕ್ಕಳ ದೈನಿಕ ಪಾನೀಯವನ್ನಾಗಿ ಓವಲ್‌ಟಿನ್ನನ್ನು ಮಾಡಿರಿ. ನಿಸರ್ಗದ ಅತ್ಯಮೂಲ್ಯವಾದ ಟೋನಿಕ್ ಆಹಾರಗಳಿಂದಲೇ ಇದನ್ನು ತಯಾರಿಸಲಾಗಿದೆ. ಮೆದುಳು ಮತ್ತು ದೇಹವನ್ನು ಬೆಳೆಸುವುದಕ್ಕಾಗಿ ಎಲ್ಲಾ ಬಗೆಯ ಪೋಷಣೆಯನ್ನೂ ಒದಗಿಸಿಕೊಡುವಂತಹದ್ದಿದೆ. ಇದರಿಂದ ಚೈತನ್ಯವೂ ಶಕ್ತಿಯೂ ಉತ್ಪನ್ನವಾಗುತ್ತದೆ. ರುಚಿಕರವಾದ ಓವಲ್‌ಟಿನ್ನನ್ನು ಮಕ್ಕಳು ಪ್ರೀತಿಸುತ್ತಾರೆ. ಅವರಲ್ಲಿ ಕ್ರಮವಾಗಿ ಉಂಟಾಗುವ ಬೆಳವಣಿಗೆಯನ್ನು ಪರೀಕ್ಷಿಸಿರಿ. ರೋಗರುಜಿನೆಗಳಿಂದ ಅವರು ಎಷ್ಟು ವಿಮುಕ್ತರಾಗುತ್ತಾರೆಂದು ನೋಡಿರಿ. ಓವಲ್‌ಟಿನ್ ಎಂಬುದು ಅಸಮಾನ ಆತ್ಯುತ್ತಮ ಅತ್ಯಂತ ಶುದ್ಧ ಮತ್ತು ಬಹಳ ಸುಲಭದರದ ಪಾನೀಯವಾಗಿರುತ್ತದೆ.

ಮಕ್ಕಳ ಆರೋಗ್ಯ ಶಕ್ತಿ ಮತ್ತು ಚೈತನ್ಯಗಳಿಗಾಗಿ ದಿನನಿತ್ಯದ ಪಾನೀಯ

ಅತ್ಯುತ್ತಮವಾದ ಓವಲ್‌ಟಿನ್ನಿಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಅನುಕರಣೀಯವಾದ ಬರೀ ಮಿಶ್ರಣವಾದ ಮತ್ತು ಅಪ್ರಮಾಣ ತೂಕದಿಂದಿರುವ ಎಲ್ಲ ಆಹಾರಗಳನ್ನು ತಿರಸ್ಕರಿಸಿರಿ.

OVALTINE
TONIC FOOD BEVERAGE

ಅತೀ ಶುದ್ಧ, ಅತ್ಯುತ್ತಮ— ಕರಸ್ಪರ್ಶವು ಇದಕ್ಕಾಗಿರುವುದಿಲ್ಲ

ಏಜಂಟ: ಎಲ್ಲಾ ಕೆಮಿಸ್ಟ ರಲ್ಲೂ ಸ್ಟೋರ ಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್ ರೈಟ್ ಲಿಮಿಟೆಡ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಾಯಿ ಮದ್ರಾಸು ರಂಗೂನುಗಳಲ್ಲಿ

ನೀವು ಓವಲ್‌ಟಿನ್ನನ್ನು ಕೇಳಿದಾಗ ಮಾತ್ರ ಓವಲ್‌ಟಿನ್ ಪೊಟ್ಟಣಗಳನ್ನೇ ಪರೀಕ್ಷಿಸಬೇಕು. ಇವು ಬಹಳ ಒಳ್ಳೆಯದಿವೆ ಮತ್ತು ಆರೋಗ್ಯಕರ ಪೋಷಣೆಯನ್ನೀಯುವ ಸಂಶೋಧನೆಯಿಂದ ಸಮಾನವಿಲ್ಲದವು. ಇವು ಅತ್ಯುತ್ತಮ ... ಮತ್ತು ಜೀರ್ಣಶಕ್ತಿಯ ಸುಸ್ಥಿತಿಗಾಗಿ ಇವುಗಳು ತಕ್ಕುವು.

OV 99

Attur Vaikunta Prabhu Bank
Dongerkerry, Mangalore

ಅತ್ತೂರು ವೈಕುಂಠ ಪ್ರಭು ಬ್ಯಾಂಕ್,
ಮಂಗಳೂರು.

NOTICE

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲಗಳನ್ನೂ ಬಡ್ಡಿಯನ್ನೂ ಗಡುವಿಗೆ ಕೊಡದೆ ಇರುವುದರಿಂದಲೂ ಅವರಿಗೆ ಬೇರೆ ರಿಜಿಸ್ಟ್ರೀ ನೋಟೀಸುಗಳು ಜಾರಿ ಆಗದೆ ಹಿಂತಿರುಗಿರುವುದರಿಂದಲೂ ಸದರಿ ಸಾಲಗಾರರು ಬೇಂಕಿಗೆ ಸಲ್ಲತಕ್ಕ ಅಸಲು ಬಡ್ಡಿ ನೋಟೀಸ ಖರ್ಚು ಇತ್ಯಾದಿ ಐವೇಜುಗಳನ್ನು ಇದೇ ೧೯೩೨ನೇ ಇಸವಿ ಮಾರ್ಚ ತಾರೀಖು ೧೯ನೇ ಶನಿವಾರದೊಳಗೆ ಪಾವತಿ ಮಾಡಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದರೆ ಇದೇ ೧೯೩೨ನೇ ಇಸವಿ ಮಾರ್ಚ್ ತಾ ೨೬ನೇ ಶನಿವಾರ ದಿವಸ ಮಧ್ಯಾಹ್ನ ೨ ಘಂಟೆಗೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾರಾಟ ಆಗುವುದು.

ಲೋನ್ ನಂಬ್ರ ೩೬/೩೧, ಸಾಲಗಾರನ ಹೆಸರು ಡಿ ಬಿ ಜಯವಂತ, ಬೊನೇಜಿಂಗ್ ಏಜಂಟ್ ದಿ ಚೆರಿಟೆಬ್ಲ್ ಬೇಂಕ ಒಫ್ ಇಂಡಿಯಾ, ಮಂಗಳೂರು. ಅಸ್ಲು ರೂ ೧೩

ಲೋನ್ ನಂಬ್ರ ೧೬೩/೩೧ ಸಾಲಗಾರನ ಹೆಸರು ಫ್ರಾನ್ಸಿಸ್ ಡೇಸ ಬಾಪ್ಟಿಸ್ಟ ಡೇಸರ ಮಗ ಪಾಣಂಬೂರು ಗ್ರಾಮ ಪಣಂಬೂರು ಪೋಸ್ಟ್ ಅಸ್ಲು ರೂ ೧೦

ಲೋನ್ ನಂಬ್ರ ೭೩೧ ಸಾಲಗಾರನ ಹೆಸರು ಎಂ ವಾಸು ಕಂಪೋಸಿಟರ್ ಸಿಟಿಪ್ರೆಸ್ ಮಂಗಳೂರು ಅಸ್ಲು ರೂ ೮

ಲೋನ್ ನಂಬ್ರ ೯೯ ೩೧ ಸಾಲಗಾರನ ಹೆಸರು ಉಡುಪಿ ತಾಲೂಕು ಪಡುಬಿದ್ರಿ ಗ್ರಾಮದ ಹಾಲಿ ಮಂಗಳೂರು ಶಹರು ಹಂಪನಕಟ್ಟೆಯಲ್ಲಿರುವ ಸೋಮ ಶೆಟ್ಟಿ ಮಗ ಚನ್ನಯ್ಯ ಶೆಟ್ಟಿ ಅಸ್ಲು ರೂ ೩೫

ಲೋನ್ ನಂಬ್ರ ೧೩೩/೩೧ ಸಾಲಗಾರನ ಹೆಸರು ಮಂಗಳೂರು ತಾಲೂಕು ಬಂಗ್ರ ಕೂಳೂರು ಗ್ರಾಮದಲ್ಲಿರುವ ಕುದ್ರೋಳಿ ಕಾಂತಪ್ಪ ರೈಗಳ ಅಳಿಯ ರಾಮಯ್ಯ ಭಂಡಾರಿ ಅಸ್ಲು ರೂ ೧೩

ಲೋನ್ ನಂಬ್ರ ೩೪ ೩೧ ಸಾಲಗಾರನ ಹೆಸರು ಮಂಗಳೂರು ಶಹರು ಕದ್ರಿ ಕಂಬ ತಿಷ್ಷಲೆ ಹಿತ್ತಿಲಿನಲ್ಲಿರುವ ಕಪ್ಪ ಶೆಟ್ಟಿ ಮಗ ವಿಠು ಶೆಟ್ಟಿ ಅಸ್ಲು ರೂ ೮

ಲೋನ್ ನಂಬ್ರ ೩೪೨/೩೧ ಸಾಲಗಾರನ ಹೆಸರು ಮಂಗಳೂರ ತಾಲೂಕು ಕಣ್ಣೂರು ಗ್ರಾಮದ ಬದಿಲಗುತ್ತು ದೂಮ ರೈಗಳ ಅಳಿಯ ಬಿ ಅಣ್ಣಪ್ಪ ನ್ಯಾಕ ಶಂಕರನಾಡಿ ಪೋಸ್ಟ್ ಅಸ್ಲು ರೂ ೩೦

ಲೋನ್ ನಂಬ್ರ ೧೯೯/೩೧ ಸಾಲಗಾರನ ಹೆಸರು ವಾಸುದೇವ ಉಪಾಧ್ಯಾಯ ಶಂಕರ ವಿಠಲ ಮೋಟರ್ ಕಂಪೆನಿ ಏಜಂಟ್ ಬಸವನ ಗುಡಿ ಮಂಗಳೂರು ಅಸ್ಲು ರೂ ೧೨

Mangalore } K Ganapathi Navada
25 2-1932 } *Secretary*

ಶಾರದಾ ಮಸೂದೆ.

ಹರವಿಲಾಸಶಾರದರು ಎಸೆಂಬ್ಲಿಯಲ್ಲಿ ಹೋರಾಡಿ, ಜಾರಿಗೆ ತಂದ ವಿವಾಹಕಾನೂನು ದೇಶದ ಚಳುವಳಿಕಾರ್ಯಗಳಲ್ಲಿಯೂ ಸಂತೋಷದಿಂದ ಸ್ವೀಕರಿಸಲ್ಪಟ್ಟಿತು.

\+ + + +

ಅದು ಹೊರಬಿದ್ದೊಡನೆ ಹಿಂದೂ ಸಮಾಜ ರಂಗಕ್ಕೊಂದು ಬಲವಾದ ಬೋಂಬು ಬಿತ್ತೆಂದು ಕೆಲವರು ನೆನೆದರು. ಗಲಿಬಿಲಿ ಮತ್ತು ಗಡಿಬಿಡಿಯನ್ನೆಬ್ಬಿಸಿದರು.

\+ + + +

ಈಗ ಎಲ್ಲೆಲ್ಲಿಯೂ ಶಾರದಾ ಮಸೂದೆಯು ವಿರೋಧವಾಗಿ ನಡೆದು ಬರುವ ಅನೇಕಾನೇಕ ವಿವಾಹಗಳು ಸಂಬಂಧ ಪಟ್ಟವರಿಗೆ ಕಂಡು ಬರುವುದಿಲ್ಲವೆಂದೇ ಹೇಳಬೇಕು.

\+ + + +

ಈ ಹರವಿಲಾಸರ ಕಾಯಿದೆಯನ್ನು ಅನೇಕ ಕಡೆಗಳಲ್ಲೂ ಜರಗ ಮಾಡುತ್ತಿರುವರಾದರೂ ಅಂದು ಆರಂಭಶೂರತೆಯಿಂದ ಹೋರಾಡಿದ ಆರಂಭಶೂರರಾದ ಮುಂದಾಳುಗಳಿಗೆ ಈಗೇನೂ ಕಾಣುವುದಿಲ್ಲ.

\+ + + +

ಒಂದು ಕಡೆಯಲ್ಲಿ ಬಾಲವಿವಾಹವು ಜರಗುತ್ತದೆಂದು ತಿಳಿದುಬಂದರೆ ಅದನ್ನು ತಿಳಿದುಕೊಂಡವರು ಸರಕಾರಕ್ಕೆ ದೂರಿತ್ತರೆ ಕಟ್ಟ ಲೇಸುಕರ್ತರ ಮೇಲೆ ವ್ಯಾಜ್ಯವನ್ನು ಹೂಡಬೇಕಂತೆ. ಇದರಿಂದ ಬಾಲವಿವಾಹವು ಕೂಡದೆಂದು ಬಗೆಯುವವರೂ ಕೂಡಾ ನಿರುಪಾಯರಾಗಿ ಹೋಗಿರುವರು. ಇಂತಹ ಒಂದು ಊನ ಕಾನೂನು ಇದ್ದುದರಿಂದ ಶಾರದಾ ಮಸೂದೆಯು ಜಾರಿಗೆ ಬಂದೂ ಬರದಿರುವಂತೆಯೇ ಸರಿ.

\+ + + +

ಸರಕಾರದ ಈ ವಿವಾಹ ಶಾಸನಕ್ಕೆ ಗೌರವವು ದೊರೆಯಬೇಕಾದರೆ ಎಲ್ಲಿ ಬಾಲವಿವಾಹವು ನಡೆಯಲಿಯುತ್ತದೆಂದು ತಿಳಿದುಬರುವುದೋ ಅಲ್ಲಿಗೆ ಸರಕಾರವೇ ಹೋಗಿ ತನಿಖೆ ನಡೆಸಬೇಕು. ಹಾಗಾದರೆ ಮಾತ್ರ ಬಾಲವಿವಾಹವಾಗದಂತಾಗುವುದು.

\+ + + +

ದಕ್ಷಿಣ ಕನ್ನಡದಲ್ಲೂ ಈ ಬಾಲವಿವಾಹ ಪದ್ಧತಿಯು ಪುನಃ ಭರದಿಂದ ಸಾಗುತ್ತಿದೆ. ಅನೇಕ ವಿವಾಹಗಳು ಆಗುತ್ತಿವೆ. ಮತ್ತು ಬಹಳ ಸಂತೆಯೇ ಆಗುತ್ತಿದೆ. ಈ ವಿವಾಹಗಳಿಗೆ ಶಾರದಾ ಆಕ್ಟಿನ ಅಡ್ಡಿಯಿಲ್ಲವೇ?

\+ + + +

ಕೇವಲ ಅಜ್ಞಾನಿಗಳಾದ ಜನರು ಇನ್ನೂ ಕೂಡಾ ಬಾಲವಿವಾಹದಲ್ಲೇ ಕೈ ಇಕ್ಕುತ್ತಾ ಹೋಗುತ್ತಿರುವುದು ಎಂತಹ ನಾಚಿಕೆಯ ವಿಷಯ! ಎಂತಹ ದುಷ್ಕೃತ್ಯ!

\+ + + +

ಗುಜರಾಥ ಮೊದಲಾದ ದೇಶಗಳಲ್ಲಿ ಸಮಾಜ ಸುಧಾರಣಾ ಸಮಿತಿಗಳಿದ್ದು ಅವುಗಳು ಸಮಾಜದಲ್ಲಿ ನಡೆಯುವ ಅಸಂಬದ್ಧ ಕೆಲಸಗಳನ್ನು ಸುಲಭವಾಗಿ ತಡೆಯುತ್ತವೆ. ಆದರೆ ನಮ್ಮಲ್ಲಿ ಅಂತಹ ಸಮಿತಿ ಕಮಿಟಿಗಳಿಲ್ಲದಿರುವುದೇ ಒಂದು ದೊಡ್ಡ ನ್ಯೂನತೆ.

\+ + + +

ನಮ್ಮಲ್ಲೂ ಇಂತಹ ಸುಧಾರಣ ಕಮಿಟಿಗಳನ್ನೇರ್ಪಡಿಸಿ ಅಲ್ಲಲ್ಲಿ ನಡೆಯುವ ಬಾಲವಿವಾಹಗಳನ್ನು ನಿಲ್ಲಿಸುವಂತಾಗಬೇಕು. ಅಂತಹ ವಿವಾಹಕರ್ತರ ಮೇಲೆ ಸಮಿತಿಯ ಅಧ್ಯಕ್ಷರೇ ದಾವೆ ಹೂಡಬೇಕು. ಅದಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸಗಳನ್ನೂ ಅಧ್ಯಕ್ಷರು ಮಾಡಬೇಕು.

\+ + + +

ಹೀಗಾದರೆ ದಕ್ಷಿಣ ಕನ್ನಡದಲ್ಲಿ ನಡೆಯುತ್ತಿರುವ ಬಾಲವಿವಾಹ ಪದ್ಧತಿಯು ನಿಲ್ಲುವುದು. ಈಗೀಗ ಗೌಡ ಸಮಾಜದವರಲ್ಲಿ ಇಂತಹ ವಿವಾಹಗಳು ಜರಗಿ ಹೋದ ದೃಷ್ಟಾಂತಗಳು ಅನೇಕವಿವೆ. ಇವನ್ನು ಸರಕಾರವು "ನೋಡುವುದಿಲ್ಲವೇ" ಇವುಗಳನ್ನು ನಿಲ್ಲಿಸುವುದಿಲ್ಲವೇ?

\+ + + +

ಶಾರದಾ ಕಾನೂನು ಜಾರಿಗೆ ಬಂದಿಲ್ಲ. ದಾರಿಯಲ್ಲಿದೆ ಎಂದೇ ಇನ್ನೂ ಅನೇಕ ನಿರಕ್ಷರಕುಕ್ಷಿಗಳ ಅಭಿಪ್ರಾಯ. ಇದಕ್ಕೇನು ಕಾರಣ?

\+ + + +

ಶಾರದಾ ಕಾನೂನು ಜಾರಿಗೆ ಬಂದಿರುತ್ತದೆಂಬ ಸಂಗತಿಯು ಸಾಮಾನ್ಯ ಮನುಷ್ಯರಿಗೂ ತಿಳಿದುಬರುವಂತೆ ಸರಕಾರವು ಹೆಚ್ಚಿನ ಪ್ರಸಾರ ಕಾರ್ಯವನ್ನೆಸಗಿಲ್ಲವೇ? ಪತ್ರಿಕೆಗಳಲ್ಲೂ ಕೋರ್ಟುಗಳಲ್ಲಿಯೂ ನೋಟಿಸುಗಳನ್ನು ಹಚ್ಚಿಸಿದೆಯಾದರೂ ಅವುಗಳನ್ನು ಸಾಮಾನ್ಯ ಮನುಷ್ಯನು ಇಷ್ಟರ ತನಕ ಮನಸ್ಸಿಗೆ ಹಚ್ಚಿಕೊಂಡಿರುವುದಿಲ್ಲ.

\+ + + +

ಕಾನೂನು ಕ್ರಮಗಳಿಗಾಗಿ ನಿಶ್ಚಲವಾಗಿ ನಿಂತಿರುವ ನಮ್ಮ ಸರಕಾರವು ಶಾರದಾ ಕಾನೂನು ಮುರಿಯಲ್ಪಡುತ್ತಿರುವ ಸಂಗತಿಗಳನ್ನೇಕೆ ವಿಚಾರಿಸಲಾರದು?

\+ + + +

ಈ ಕಾಲದಲ್ಲಿ, ಶಾರದಾ ಮಸೂದೆಯನ್ನು ಸಮರ್ಥಿಸದೆ ಬೇರೆ ಉಪಾಯವಿಲ್ಲ. ರಾಷ್ಟ್ರದೇಳಿಗೆಯಾಗಬೇಕಾದರೆ ರಾಜಕೀಯ ಸ್ವರಾಜ್ಯ ಒಂದೇ ಮುಖ್ಯವಲ್ಲ. ಸ್ವರಾಜ್ಯ ಬರುವ ಮೊದಲು ನಾವು ನಮ್ಮ ಅಂತರ್ನಾಡಿಗಳನ್ನು ಸಜ್ಜುಗೊಳಿಸಬೇಕು. ನಾನು

\+ + + +

ಶಾಸ್ತ್ರೀಯ
ಅಮೂಲ್ಯ ಔಷಧಗಳು

ಅಮೃತಾಶೂಂಠ್ಯಾದಿ ತೈಲ —ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅದ್ಭುತಗಳಿಗೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ —ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಕ್ಷಯ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರಸವೌಷಧಿ!

ಬಾಣಂತಿಯರ ನವಜೀವನಕ್ಕೆ ಸಂಜೀವನದಂತಿರುವುದು

ಇದರ ಶೋಧನ, ರಸಾಯನ ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು

ರಸಾಯನ ಗುಣದಿಂದ ಬಾಣಂತಿಯು—ಗರ್ಭಧಾರಣೆಯ ಬಗ್ಗೆ ಮತ್ತು ಪ್ರಸವದ ಎಳ್ಳೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಗ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ ಆಯುರ್ವೇದ ಗ್ರಂಥಮಾಲಾ ... ಬರೆಯಿರಿ

ಯಮ್. ವಿ ಶಾಸ್ತ್ರೀ,
ಆಯುರ್ವೇದ ಭಿಷಗ್ವರ್ಯ,
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು

ಹೆಗಲಿಗೆ ಹಾಕುವ ಬಿಳಿ ಒಣ್ಣದ ಶಾಲೀ ಸಿಲ್ಕುಗಳು 6 ಮೊಳ ಉದ್ದ 21 ಮೊಳ ಅಗಲ ರೂ 5 ರಿಂದಾರಂಭಿಸಿ ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಕೆ ಖಣಗಳು, ಮಡಿಗಳು, ಎಲವಸ್ತ್ರ ಉತ್ತಮ ಕಾಶಿ ಜರಿ ಪೇಟ ಇತ್ಯಾದಿ ಉಡ್ವೆಯ ಶಾಲು, ಬಿದ್ದೆ ವ ಸ, ಧಾವಳಿ, ಕಸ್ತೂರಿ, ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು ಜರಿ ಒಪ್ಪ ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ —

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಣಿಕರ್ಣಿಕಾ ಘಾಟ್ ಕಾಶೀ ಬನಾರಸ್ ಸಿಟಿ

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಚುಟಿಫಂಡುಗಳೂ ನಡೆಯಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರಾಯಿಟರರಿಗೆ ಬರೆಯಬಹುದು.

ಎಂ. ಮುತ್ತುಸ್ವಾಮಿ ಭಟ್ಟ, ಪ್ರೊಪ್ರಾಯಿಟರ್

Canara Bank Limited.
ಕೆನರಾ ಬ್ಯಾಂಕ್ ಲಿಮಿಟಡ್.

Head Office — MANGALORE

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal Kasargod Cochin Udipi Gangolli Coondapur, Bombay Puttur Calicut & Alleppey

ಬ್ರಾಂಚುಗಳು:-
ಕಾರ್ಕಳ, ಕಾಸರಗೋಡು ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲಪೆ

Authorised and fully paid up Capital Rs 300 000 - 0 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟ ಮೂಲಧನವು ರೂ 300,000 0 — 0
Reserve and other sinking Funds Rs 489,500 - 0 0	ಕ್ಷೇಮನಿಧಿ ಮತ್ತು ಇತರ ಫಂಡುಗಳು ರೂ 489,5(0 — 0
Amount invested on G P Notes Rs 817 097 - 2 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 817,097 — 2 —
Rates of interest on fixed deposits at Head Office and Branches are 6¼% for 2 Year 6% 1 Year	ಠಾಯಿ ಡಿಪಾಜಿಟಿನ ಮೇಲೆ ಹೆಡ್ಡಾಫೀಸಿನಲ್ಲಿ ಬ್ರಾಂಚುಗಳಲ್ಲಿ ವರುಷಕ್ಕೆ ಸೇಕಡಾ 6¼, 1 ವರುಷಕ್ಕೆ ಸೇಕಡಾ 6

Current Account Deposits received and interest allowed on daily balance of Rs 50 and not at a multiple of Rs 10 @ 2% from 1st January to 30th June and @ 2% from 1st July to 31st December No interest will be allowed unless the depositor earn not less than Rs . during a period of month ending either 30th June or 31st December in any year

Except by special arrangement no interest is allowed on sums exceeding Rs . in the case of Head Office and Cochin Branch and on sums not exceeding Rs . in the case of Bombay Branch and on sums exceeding Rs . 000 in the case of other Branches

For further particulars please apply to —

Canara Bank Ltd,
Mangalore —2—1932

K. Venkat Rao,
Secretary & Treasurer

The Pangal Nayak Bank, Ltd.

Head Office Udipi — *Established 1920* — **Branch Office Mangalore**

Authorised Capital Rs 2 00,000	Paid up Capital Rs. 1 75 000-
Issued Capital Rs 1 75 000-	Reserve and other Funds Rs 1,80 000

1 Receives Fixed Deposits at the following favourable rates

For 3 months at 5	For 12 15 18 or 21 months at 6
6 or 9 months at 5½	„ 24 months at 6½

Interest being payable every 3 months

ಠಾಯಿ ಡಿಪಾಜಿಟುಗಳು ಪ್ರತಿ 3 ತಿಂಗಳಿಗೆ ಬಡ್ಡಿಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ಸಾ ಕೆ 5	12 15, 18 ಯಾ 21 ತಿಂಗಳಿಗೆ ಸಾ ಕೆ 6
6 ಯಾ 9 ತಿಂಗಳಿಗೆ ಸಾ ಕೆ 5½	24 ತಿಂಗಳಿಗೆ ಸಾ ಕೆ 6½

2 Current Accounts opened free of charge and interest allowed Cumulative Savings Bank and Short Notice Deposits received at favourable rates of interest

3 The Bank transacts every description of Banking business

4 For full particulars and for copies of the amended Rules of Business please apply to the **Secretary** at the Head Office at Udipi or to the **Agent** Mangalore Branch.

Office of the Bank,
Udipi 1 - - 3

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಮುದುಕು
ಮೂವತ್ತು	ಕೈ	ಮುಚ್ಚಟೆ
ನಲವತ್ತು	ಕಾಲು	ನರಳುವಮ
ಐವತ್ತು	ಆದರೆ	ಆಲಸ್ಯ
ಅರುವತ್ತು	ತೋರಿದಾಗ	ಆರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ!

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಅವೆಲ್ಲವನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಕು

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1/94 ಚೈನಾ ಬಜಾರ್ ಮದ್ರಾಸ್

ಪ್ರಾಥಮಿಕ ಶಿಕ್ಷಣದ ಸ್ಥಿತಿ

೧೯೩೦—೩೧ರಲ್ಲಿ 'ಮದ್ರಾಸು ವಿದ್ಯಾ ಇಲಾಖೆಯು ನಡೆಸಿದ ಕಾರ್ಯ ವೃತ್ತಾಂತವು ಪ್ರಕಟವಾಗಿದೆ. ಇನ್ನು ಶಾಲೆಗಳನ್ನು ಹೆಚ್ಚಿಸುವ ಬದಲಾಗಿ ಶಿಕ್ಷಣವು ಉತ್ತಮವಾಗುತ್ತ ಬರಲೆಂದೇ ಇಲಾಖೆಯು ಈಗ ಸೂತ್ರಮಾಡಿಕೊಂಡಿದೆ. ಇತ್ತೀಚೆಗೆ ಪ್ರಾಥಮಿಕ ಶಾಲೆಗಳು ಸಂಖ್ಯೆಯಲ್ಲಿ ಹೆಚ್ಚುತ್ತ ಬರುತ್ತಲಿವೆ ಎಂಬುದು ನಿಜವಾದರೂ, ಬಾಲಕದರ್ಜೆಯಲ್ಲಿ ಓದುವ ಐವರೊಳಗೆ ಒಬ್ಬನು ೪ನೇ ದರ್ಜೆಗೂ, ಹದಿನಾಲ್ಕರಲ್ಲೊಬ್ಬನು ಐದನೆಯ ದರ್ಜೆಗೂ ಹೇಗೂ ಮುಟ್ಟುವನೆಂದು ಸರಾಸರಿ ಲೆಕ್ಕವು ತಿಳಿದುಬಂದಿದೆ ಇದರ ಫಲವೇನು? ೪—೫ ದರ್ಜೆಗಳೊಳಗೆ ಹಿಂತೆಗೆದ ಮಕ್ಕಳು ಓದನ್ನೂ ಬರಹವನ್ನೂ ಮರೆತೇ ಹೋಗುವ ಸಂಭವ ಶಾಲೆಗಳು ಗ್ರಾಮಸ್ಥರೊಳಗೆ ನಿರಕ್ಷರತೆಯನ್ನು ಕುಂದಿಸಲು ಮಾಡುವ ಪ್ರಯತ್ನ ನೋಡಿಯೆ ಗ್ರ್ಯಾಂಟನ್ನು ನಿರ್ಧರಿಸಬೇಕೆಂದೂ, ಹೆತ್ತವರ ಸಂಘಗಳನ್ನು ಸ್ಥಾಪಿಸಿ ಶಿಕ್ಷಕರು ಹೆತ್ತವರೊಡನೆ ಕಲೆತು ಶಾಲೆ ನಡೆಯಿಸಬೇಕೆಂದೂ, ಮಕ್ಕಳ ಜೀವನಕ್ರಮವನ್ನು ತಿಳಿದೇ ಶಾಲಾ ಸಮಯಗಳನ್ನೂ ರಜೆಗಳನ್ನೂ ನಿರ್ಧರಿಸಬೇಕೆಂದೂ ಈಗ ಗೊತ್ತಾಗಿದೆ ಎಲಿಮೆಂಟರಿ ಶಾಲೆಗಳನ್ನು ಕೇಂದ್ರೀಕರಿಸಬೇಕಾಗಿಯೂ ಸರಕಾರವು ಸೂಚಿಸಿಯೇ ಇದೆ ಹೆಣ್ಮಕ್ಕಳ ವಿದ್ಯಾಭ್ಯಾಸವು ತುಂಬ ಪಸರಿಸುತ್ತಿದೆ ಮಾತ್ರವಲ್ಲದೆ, ಕಳೆದ ವರ್ಷ ೨೪೪ ಹೆಣ್ಮಕ್ಕಳ ಹೊಸ ಶಾಲೆಗಳೂ ಉಂಟಾಗಿ, ಇಂತಹ ಎಲ್ಲ ಶಾಲೆಗಳಲ್ಲಿ ಉಪಾಧ್ಯಾಯಿನಿಯರ ಸಂಖ್ಯೆಯು ಈಗ ೧೦೦೦ವನ್ನು ಮೀರಿದೆ. ರಾತ್ರಿ ಶಾಲೆಗಳು ಬರೇ ಕೆಲವೇ ಮಾತ್ರ ನಿಜವಾದ ಶಾಲೆಗಳಾಗಿವೆ, ವಯಸ್ಕರ ಶಿಕ್ಷಣಕ್ಕಾಗಿ ಏನು ಮಾಡಬಹುದೆಂದೇ ಇಲಾಖೆಯು ವ್ಯಸ್ತವಾಗಿದೆ ಈಗಣ ರಾಜಕೀಯ ಚಳವಳದ ದೆಸೆಯಿಂದ ಅತ್ಯಲ್ಪವಾಗಿ ಮಾತ್ರ ಶಾಲೆಗಳ ಕೆಲಸಕ್ಕೆ ಅಡಚಣೆ ಉಂಟಾಗಿದೆ ವ್ಯಾಯಾಮದ ಆಟಗಳು ಬಳಕೆಯಲ್ಲಿ ಚೆನ್ನಾಗಿ ಬರುತ್ತಲಿವೆ, ಆದರೆ ಬಯಲುಗಳು ದೊರೆವುದು ಕಷ್ಟವಾಗಿದೆ —ಎಂದು ಸರಕಾರವು ಈ ವರದಿಯನ್ನು ವಿಮರ್ಶಿಸಿಯದೆ

ಟಪ್ಪಾಲು ಇಲಾಖೆಯ ಕೆಲವು ಅಂಕೆಸಂಖ್ಯೆಗಳು

೧೯೩೦—೩೧ನೇ ವರ್ಷದ ಬಗ್ಗೆ ಟಪ್ಪಾಲು ಆಫೀಸುಗಳ ವಹಿವಾಟುಗಳನ್ನು ಕುರಿತಾದ ಸರಕಾರೀ ವರದಿಯಲ್ಲಿ ಮೊದಲಾಗಿ, ವಾಯು ವಿಮಾನಗಳ ಮೂಲಕ ಟಪ್ಪಾಲು ಉಪ್ಯೋಗದ ವಿಷಯವಿದ್ದು, ಈ ವರ್ಷ ೫೦ ವಿಮಾನಗಳು ೪೭೦೭ ರಾತ್ಲ ಟಪ್ಪಾಲನ್ನು ಇತ್ತ ತಂದುವೆಂದೂ, ೫೨ ವಿಮಾನಗಳು ೬೯೩೯೭ ರಾತ್ಲ ಟಪ್ಪಾಲನ್ನು ವಿಲಾಯತಿಗೆ ಒಯ್ದುವೆಂದೂ ಹೊರಕ್ಕೆ ತೆರಳಿದ ವಿಮಾನಗಳು ೧,೦೦೬,೨೦೦ ಲಕೋಟೆ ಪಾರ್ಸೆಲು ವಗೈರೆ ಕೊಂಡೊಯ್ದುವೆಂದೂ ತಿಳಿದುಬರುತ್ತಿದೆ ೧೬೩ ಸಲ ಕೈಲ್ವೆ ಬಂಡಿಗಳ ಪ್ರಯಾಣಕ್ಕೆ ವಿಘ್ನಗಳು ಉಂಟಾಗಿವೆ ಇಂಡಿಯದಲ್ಲಿ ಒಟ್ಟಿಗೆ ೨೪೧೨೫ ಟಪ್ಪಾಲಾಫೀಸುಗಳೂ ೬೩೬೦೩ ಕಾಗದ ಪೆಟ್ಟಿಗೆಗಳೂ ಇವೆ ಶಾಲಾ ಉಪಾಧ್ಯಾಯರೇ ಮೊದಲಾದ ೧೩೫೧೧ ಬೇರೆ ಜನರು ಟಪ್ಪಾಲು ಮಾಸ್ತರರ ಕೆಲಸವನ್ನು ಕೈಗೊಂಡಿರುವರು ೫೩೯೩ ಜನರು ತಮ್ಮ ವಿಳಾಸಗಳನ್ನು ರಿಜಿಸ್ಟರು ಮಾಡಿ ಕಾಗದ ಕೊಂಡೊಯ್ಯುವ ಮೂಲಕ ೬೫೧೦೭ ರೂಪಾಯಿಗಳನ್ನು ಈ ಬಗ್ಗೆ ಫೀಸಾಗಿ ತೆತ್ತರು ಮೋಟರು ಬಸ್ಸುಗಳು ನಡೆವಲ್ಲಿ, ಕಳೆದ ವರ್ಷಕ್ಕಿಂತ ೫೫ ಹೆಚ್ಚಿಗೆ ಲೈನುಗಳಲ್ಲಿ ಟಪ್ಪಾಲು ಈಗ ಮೋಟರು ಮೂಲಕ ಸಾಗುತ್ತಿದೆ ೧೩೩೦೦ ಮಿಲ್ಲಿಯ ಕಾರ್ಡು ಲಕೋಟೆ ಮೊದಲಾದುವೂ ಈ ವರ್ಷ ಸಾಗಿವರೂ, ಇದು ಕಳೆದ ವರ್ಷಕ್ಕಿಂತ ೯೫ ಮಿಲ್ಲಿಯ ಸಂಖ್ಯೆಯಲ್ಲಿ ಕಡಿಮೆಯಾಗಿದೆ 'ಹೆಸರು ವಿಳಾಸ ತಪ್ಪಿದ ಒಂಭತ್ತು ಮಿಲ್ಲಿಯ ಪತ್ರಗಳಿದ್ದುವು, ಇವುಗಳೊಳಗೆ ಆರೂವರೆ ಲಕ್ಷ ರೂಪಾಯಿ ಮೌಲ್ಯದ ನೋಟು ಮೊದಲಾದುವು ದೊರೆತಿವೆ, ಇವುಗಳಲ್ಲಿ ಹೆಚ್ಚಿನವನ್ನು ಸರಿ ವಿಳಾಸಗಳಿಗೆ ತಲ್ಪಿಸಲಾಗಿದೆ ೯೬ ಮಿಲ್ಲಿಯ ಲಕೋಟೆಗಳೂ ೬॥ ಮಿಲ್ಲಿಯ ಸ್ಟ್ಯಾಂಪು ಪುಸ್ತಕಗಳೂ ಮಾರಲು ಕೊಟ್ಟರೂ ಸೇಕಡಾ ೩೦ ಕಡಿಮೆಯಾಗ ಮಾರಾಟವಾಗಿವೆ ೧೩೮॥ ಕೋಟಿ ರೂಪಾಯಿ ಮೌಲ್ಯದ ಇನ್ಸುರೆನ್ಸ ವಹಿವಾಟು ನಡೆದರೂ ಇದು ಸುಮಾರು ೧೦ರಷ್ಟು ಕಡಿಮೆಯೇ ೩೯ ಮಿಲ್ಲಿಯ ಮನಿಯಾರ್ಡರುಗಳು (ಬೆಲೆ ೮೬॥ ಕೋಟಿ ರೂಪಾಯಿ) ತಲಪಿಸಲಾಗಿವೆ, ಕ್ಷಣದ ವರ್ಷಕ್ಕಿಂತ ಈ ಭಾಗದಲ್ಲಿ ೮ ಕೋಟಿ ಕಡಿಮೆ.

ಮೀರಾಬಾಯಿ (ಮಿಸ್ ಸ್ಲೇಡ್)

ಇವರು ಗಾಂಧಿಜೀಯವರ ಯುರೋಪಿಯ ಶಿಷ್ಯೆ. ಮುಂಬಾಯಿಯನ್ನು ಬಿಟ್ಟು ೩೪ ತಾಸುಗಳಲ್ಲಿ ಹೊರಡಬೇಕೆಂದು ಇವರಿಗೆ ಸರಕಾರದ ಆಜ್ಞೆ. ಇವರು ಹೋಗಿಲ್ಲ. ಮೆಜಿಸ್ಟ್ರೇಟರ ಮುಂದೆ ಮೊಕದ್ದಮೆಯಾಗಿ ಮೂರು ತಿಂಗಳ ಸಾದಾಸಜೆ ವಿಧಿಸಲಾಯಿತು ಅವರಿಗೂ ಆಶ್ಚರ್ಯ, ಭಾರತೀಯರೆಲ್ಲರಿಗೂ ಆಶ್ಚರ್ಯ. ಇಂಗ್ಲಿಷ ಮಹಿಳೆಯೆಂದು ಇಷ್ಟು ಕಡಿಮೆ ದಂಡನೆಯೆ? ಹಾಗೆಂದರೆ, ಅವರು ಅಂತಹ ತಪ್ಪೇನನ್ನೂ ಮಾಡಿದವರೇ ಅಲ್ಲದಿದ್ದು ಯಾವ ದಂಡನೆಗೂ ಒಳಪಡಲಾಗದವರೆಂದೇ ಕಾನೂನು ಬಲ್ಲವರ ಮಾತು. ಗಾಂಧಿಜೀಯವರ ಆಶ್ರಮದಲ್ಲಿದ್ದು ಅವರೊಡನೆಯೆ ಶಿಷ್ಯವೃತ್ತಿಯಿಂದ ಇದ್ದವರೆಂದು ಈ ದಂಡನೆಯಾಯಿತಲ್ಲದೆ, ಗಾಂಧಿಜೀಯವರಿಗೆ ಕಾರಾವಾಸವಾಗಿಲ್ಲದಿದ್ದಲ್ಲಿ ಇವರ ಗೊಡವೆಗೂ ಸರಕಾರವು ಬರುತ್ತಿರಲಿಲ್ಲ ಇದೇ ಬಗೆಯಾಗಿ ಪೋಲೀಸ ಆಜ್ಞೆಯನ್ನು ಮೀರಿದ ಹಿಂದೀಯರನ್ನು ಒಂದೋ ಎರಡೋ ವರ್ಷಗಳ ಕಠಿಣ ಸಜೆಗೆ ಇವರೇ ಮೆಜಿಸ್ಟ್ರೇಟರು ಇಷ್ಟೇ ತಪ್ಪಿತಕ್ಕಾಗಿ ಕಳುಹಿಸಿರುವರು ಕಾನೂನು ಅವರಿಗೊಂದು ಇವರಿಗೊಂದು ಎಂದಾಗಿದೆಯೆ? ಶಾಸನ ಪ್ರಕಾರವಾದ ದಂಡನೆಯ ಪರಮ ಮಿತಿಯನ್ನು ಹಿಂದೀಯರಿಗೂ ಕನಿಷ್ಠ ಮಿತಿಯನ್ನು ಇವರಿಗೂ ಒಪ್ಪುಮಾನಿಸುವುದರಲ್ಲಿ ಅರ್ಥವೇನಿರಬಹುದು? ಇಂತಹ ತಪ್ಪಿತಗಳಿಗೆ ಹಿಂದೆ ೮ ತಿಂಗಳ ಸಶ್ರಮ ಸಜೆಗಿಂತ ಕಡಿಮೆ ವಿಧಿಸಿದ್ದಿಲ್ಲ ಅದೂ ಒಂದು ಅಲ್ಪ ವಯಸ್ಸಿನ ಹಿಂದೀ ಬಾಲಕಗೆ ಇರಲಿ, ಮೀರಾಬಾಯಿಯವರಿಗೆ ವಿಧಿಸಿದ ಶಿಕ್ಷೆಯು ಸರಕಾರಕ್ಕೆ ತೃಪ್ತಿಕರವೆಂದು ತೋರುತ್ತಿರುವ ಕಾರಣ, ಇಂತಹ ತಪ್ಪಿತ ಮಾಡಿದುದಕ್ಕೆಂದು ಅಧಿಕ ದಂಡನೆಗ ತಲೆ ಕೊಟ್ಟಿರುವವರ ದಂಡನೆಯನ್ನು ಸರಕಾರವು ವಿಮರ್ಶಿಸಿ, ಇಳಿಸಿದರೆ ಉಪಕಾರವಾಗದೆ?

ಮುಂಬಾಯಿ ಬಂದರಿನ ಉದ್ಧಾರ

ಲೋರ್ಡ ಲೊಯ್ಡ ಮಹೋದಯರ ಚಾತುರ್ಯದಿಂದಾಯ್ತು ಅವರ ಹೆಸರಿಂದಲೇ ಸರ್ ಜೋರ್ಜ ಲೊಯ್ಡ ಎಂಬ ಕೆಸರತ್ತವ ದೋಣಿಯನ್ನು ೬,೩೮೪,೮೨೭ ರೂಪಾಯಿ ಬೆಲೆಗೆ ಸರಕಾರವು ಕೊಂಡುಕೊಂಡು, ಕೂನೆಗ ೪। ಲಕ್ಷ ರೂಪಾಯಿಗಳಿಗೆ ಅದನ್ನು ಮಾರಿತು ಈ ಒಗೆಯ ಕೊಳ್ಳುವ ಮತ್ತು ಮಾರುವ ವರ್ಷಗಳೊಳಗೆ ಮೂಲ ಮೌಲ್ಯದ ಬಡ್ಡಿಯೇ ೧೮ ಲಕ್ಷ ರೂಪಾಯಿ! ಕೆಸರೆತ್ತುವ ಪರಾಕ್ರಮವೆಂದರೆ, ೫೩॥ ಲಕ್ಷ ಪಾಸಗಜದಷ್ಟು ಹೊಯಿಗೆ ಅಂತೂ ಉದ್ಧಾರಕ್ಕಾಗಿ ಹೊರಟು ಇಷ್ಟು ಲಕ್ಷ ರೂಪಾಯಿಯ ಧನವನ್ನೆಲ್ಲ ಸಮುದ್ರದಲ್ಲಿ ಕೆಡವಿದರು ಆದರೂ ಒಂದು ಸಂತೋಷ ವಾರ್ತೆಯಿದೆ, ಈ ದೋಣಿಯನ್ನು ಕಟ್ಟಿಸುವ ಕ್ರಯಕ್ಕೆ ಮಾರಿದ್ದರೆ ಒಲೆ ೨೫,೦೦೦ ರೂಪಾಯಿ ದೊರೆಯುತಿತ್ತಂತೆ! ಹೀಗಾದ ಮೇಲೆ ೪ ಲಕ್ಷ ರೂಪಾಯಿ ಲಾಭವೇ ಆಯಿತೆಂದು ಮುಂಬಾಯಿಯವರು ಹಿಗ್ಗಬೇಕಲ್ಲದೆ, ಸಮುದ್ರವೂ ಉಕ್ಕಿ ಉಕ್ಕಿ, ಈ ಸಮುದ್ರ ಮಥನದ ಫಲವಾಗಿ ನವರತ್ನಗಳಲ್ಲವೂ ಪಟ್ಟಣಿಗರಿಗೆ ದೊರೆವ ಆಸೆಯಿದೆ ಆದರೆ, ಅಮೃತದೊಡನೆ ವಿಷವೂ ಒಂದಂತೆ, ಈ ವರ್ಷವೇ, ೧೧೧ ಲಕ್ಷ ರೂಪಾಯಿ ವ್ಯಯಕ್ಕೆ ಹಣ ದೊರೆಯದೆ, ವಿದ್ಯುಚ್ಛಕ್ತಿಯ ಮೇಲೂ ತೆರಿಗೆ ಹೊರಿಸದೆ, ಮುಂಬಾಯಿ ಸರಕಾರಕ್ಕೆ ಉಪಾಯವಿಲ್ಲವಾಗಿದೆ, ಒಂದರವರಿಗೂ ೭೫ ಲಕ್ಷ ನಷ್ಟವೇ

ಇಂಡಿಯಾ ಕರಣೀಕರ

ಇತ್ತೀಚಿಯ ಧಾನಹಾದಿಗಳನ್ನು ಓದಿದರೆ, ಬ್ರಿಟಿಷ ಸರಕಾರವು ಹಿಂದೆ ಹೇಳಿದ ಮಾತುಗಳ ಧೋರಣೆಯು ಒಡೆಲಾಗಿದೆ ಎಂದು ಮಿ। ಬೆನ್ನರು ಹೇಳುವುದರಲ್ಲಿ ತಪ್ಪಿಲ್ಲವೆಂದೇ ತೋರುವುದು. ಲೋರ್ಡ ಇರ್ವಿನರಾದರೂ ಇಂತಹ ವಿದ್ಯಮಾನಗಳಲ್ಲಿ ತಾವೂ ಹಾಗೆಯೆ ವರ್ತಿಸುತ್ತಿದ್ದೆವೆಂದು ಹೇಳುವರಾದರೂ, ಬಿಜಲ್ ಹಾಗೂ ಮೊಡರೇಟ್ ಹಿಂದೀಯರನ್ನು ದೂರವಿರಿಸದೆ ಕಾರ್ಯ ಸಾಧನೆ ಮಾಡುತ್ತಿದ್ದರೆಂದೇ ಹೇಳಬಹುದು. ಸರ್ವಸಾಮಾನ್ಯವಾಗಿ ದಬ್ಬಾಳಿಕೆಯಿಂದ ಯಾವ ತರದ ಸತ್ಪರಿಣಾಮವು ಇತಿಹಾಸದಲ್ಲಿ ಎಲ್ಲಿಯೂ ಉಂಟಾದುದರ ಗೋಚರವಿಲ್ಲವಾಗಿದೆ ರಾಜಕಾರಣ ಪುರುಷರಂಬವರೆ ಬ್ರಿಟನ್ನಲ್ಲಿ ಬಹುಮಂದಿಯೂ ಅರ್ಧ ಶತಮಾನದ ಹಿಂದೆಯೇ ಕಂಗಾಲಾಗಿ ಉಳಿದಿರುವರೆಂದು ಅಂದು ಎಡ್ಮಂಡ್ ಬರ್ಕನು ನುಡಿದುದು ಇಂದಿಗೂ ಸರಿಯಾಗಿದೆ ಅವರು ಜ್ಞಾನಿಗಳು, ಆದರೆ ಪರಾಮರ್ಶಿಸುವುದಿಲ್ಲ, ವಿವೇಕಿಗಳಾದರೂ ತ್ಯಾಗಶೀಲರಲ್ಲ ಮುಖ್ಯ ಪ್ರಧಾನರಾದ ಮೆಕ್‌ಡೊನಾಲ್ಡರಲ್ಲೂ ಮಿ। ಬಾಲ್ಡ್ವಿನರಲ್ಲೂ ವಿಶ್ವಾಸವನ್ನಿಟ್ಟಿರುವ ಪಾರ್ಲಿಮೆಂಟಿನ ಸದಸ್ಯರೆಷ್ಟೋ ಮಂದಿ. ಇನ್ನಾದರೂ ಭಾರತವರ್ಷದ ವಿಷಯವಾಗಿ ನ್ಯಾಯವನ್ನು ಇವರಿಬ್ಬರು ಮಾಡುವರೆಂದು ಭರವಸೆಯನ್ನಿಟ್ಟಿರುವರು ಇವರು ನಿರಾಶರಾದಾರೇ? ಎಂದು ಮೆಂಚೆಸ್ಟರ್ ಗಾರ್ಡಿಯನ್ ಪತ್ರದಲ್ಲಿ ಲೇಖಕರೊಬ್ಬರು ಕೇಳುವರು.

ನೋಟಗಳು

NOTE....S

ಮಂಗಳೂರಲ್ಲಿ ಗುಬ್ಬಿ ನಾಟಕ ಬಂತು; ಹಲವು ದಿನಗಳಾದುವು; ನಾಟಕಗಳೂ ಹಲವಾದವು; ಆದರೂ ಪಾಸು ಬರಲಿಲ್ಲವೇನು? ಎನ್ನುತ್ತ ನಮ್ಮ ಸಂಪಾದಕರು ಲೆಕ್ಕಣಿಕೆಯ ಕೈಯನ್ನು ಮೇಲೆತ್ತಿ ತಲೆತುರಿಸಿಕೊಳ್ಳುತ್ತಿದ್ದರು. ಗುಟ್ಟು ನಾನು ಮೊನ್ನೆ ಕೇಳಿದೆ.

• • • •

ಉಡುಪಿಯಲ್ಲಿ ಅವರು ನಾಟಕವಾಡುತ್ತಿದ್ದರಲ್ಲವೇ? ಆಗ ರಾಷ್ಟ್ರಬಂಧುವಿನಲ್ಲಿ ಅದೇನೂ ಅವರ ವಿಷಯವಾಗಿ ಬರೆದಿತ್ತಂತೆ: ಹೊಗಳಲಿಲ್ಲ, ಇದ್ದಂತೆಯೇ. ಮತ್ತೀಕೆ ಪತ್ರಿಕೆಗೆ ಪಾಸುಕೊಟ್ಟು ಹೇಳಿಸಿಕೊಳ್ಳಬೇಕು?

• • • •

ಅಯ್ಯಾ, ಗುಬ್ಬಿ ಮೆನೇಜರರೇ! ನಮ್ಮ ಸ್ವದೇಶಾಭಿಮಾನಿಯ ಹಿಂದಿನ ಸಂಚಿಕೆಗಳ ಇಡೀ ಫೈಲನ್ನೇ ನಿಮ್ಮಲ್ಲಿ ಕಳುಹಿಸುತ್ತೇವೆ ಅವರಲ್ಲಿ ನಿಮ್ಮನ್ನು ಒಂದು ಮಾತಿನಲ್ಲಿ ಯಾದರೂ ದೂರಲಿಲ್ಲ ನೋಡಿ, ಇನ್ನಾದರೂ ಒಂದು ಪಾಸನ್ನ ಕಳುಹಿಸುತ್ತೀರಾ? ನಿಮ್ಮ ನಾಟಕವು ಹೇಗೆ ಇರಲಿ, ನಿಮ್ಮನ್ನು ಬಹಳ ಹೊಗಳುತ್ತೇವೆ ಒಂದು ಪಾಸನ್ನು ಕಳುಹಿಸುವಿರಾ? ರಾಷ್ಟ್ರಬಂಧುವಿಗೆ ಬೇಕಾದರ ಕಳುಹಿಸಬೇಡ ನಮ್ಮ ಸಂಪಾದಕರು ನಿಮ್ಮ ಪಾಸನ್ನೂ ಥಿಯೇಟರಿನ ಎದುರಿನ ಸೋಫಾ ಸೀಟನ್ನೂ ದಿನದಿನವೂ ಹಂಬಲಿಸುತ್ತಾರೆ ಕಳುಹಿಸಿ.

• • • •

ನಿನ್ನ ಸಾಲಕ್ಕೆ ನನ್ನ ಹಲಸು' ಎಂಬಿದಾಗ ನಮ್ಮಲ್ಲಿದೆಯಷ್ಟೆ ಇಲ್ಲಿ ಇದನ್ನು ವಿಲಾಯತಿಯಲ್ಲಿ ಬಳಸುವ ರೀತಿಯಿದೆ —ಲಂಕೆಶಹರಿನವರ ಬಟ್ಟೆಗ ಗಿರಾಕಿಗಳಲ್ಲದೆ ಅಲ್ಲಿ ಅನ್ನಕ್ಕೆ ಕಡಿಮೆಯಾಗಿದೆ, ಹಂಗೇರಿ ರಾಜ್ಯದಲ್ಲಿ ಬಟ್ಟೆ ಇಲ್ಲದೆ ವ್ಯಾಪಾರ ಸಾಗಿಲ್ಲ ಈಗ, ಹಂಗೇರಿಯಿಂದ ಮಿಲ್ಲಿಯನ್‌ಗಟ್ಟಲೆ ಹಂದಿಗಳನ್ನು ಲಂಕೆಶಹರಿಗೆ ಕಳುಹಿ, ಅವರಿಂದ ಮಿಲ್ಲಿಯನ್ ಯಾರ್ಡು ಬಟ್ಟೆ ತರಿಸಲು ಕಂಟ್ರಾಕ್ಟಾಗಿದೆ ನಿಮ್ಮ ಬಟ್ಟೆಗೆ ನಮ್ಮ ಹಂದಿ' ಎಂಬದೇ ಈ ಹೊಸ ಗಾದೆ

• • • •

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಶ್ರೀ। ವಿದ್ವಾನ್ ತಿಮ್ಮಪ್ಪಯ್ಯನವರು ರವಿವಾರ ಬೆಳಿಗ್ಗೆ ನಮ್ಮೂರ ಮಿತ್ರ ಮಂಡಳಿಯ ಅರ್ಧಂತ್ಯುತ್ಸವಕ್ಕೂ ಅಧ್ಯಕ್ಷರಾದರು. ಪರಮ ಸಂತೋಷ ಪಿವ್ವಾಂಸರ ವಿದ್ವನ್ ಮಂಡಲಿಯೂ ಯುವರ ಮಿತ್ರ ಮಂಡಲಿಯೂ ಒಂದಾದರ ಸಾಹಿತ್ಯಕ್ಕೆ ಪಿರುಗು ಬರುವುದಲ್ಲವೆ? ವರ್ಧಂತಿಯು ವರ್ಧಮಾನವಾಗಿ, ಅಲರು ಅರಳಲಿ!

• • • •

ಮಂಗಳೂರು ಹೂವಿನಮಾರ್ಕೆಟು ಮಂಗಳೂರಿನ ಕಣ್ಣಿಗೆ ತಂದು ಹೂ ಬಿದ್ದಂತಾಗಿದೆ. ಅದನ್ನು ಅಲ್ಲಿಂದ ವರ್ಗಾಯಿಸಿದರಷ್ಟು ಸುಖ ಆದರೆ ಮ್ಯುನಿಸಿಪಾಲಿಟಿಯು ಕೊಂಡುಕೊಂಡ ಜಾಡುಹಿತ್ತಿಲಿಗೆ ಅದನ್ನು ವರ್ಗಾಯಿಸಿದರೆ ಸರಿಯಾಗುವುದಾದರೂ, ಅಲ್ಲೇ ತೆರೆಯಬೇಕಾಗಿದ್ದ ಬಾಲಿಕಾ ಪಾಠಶಾಲೆಗೆ ಹೇಗಾದೀತು? ಸರಿಯಾದೀತು,—ಬಾಲಿಕೆಯರಿಗೆ ಬೇಕಾದ ಹೂವೆಲ್ಲ ಹತ್ತಿರದ ಮಾರ್ಕೆಟಿನಲ್ಲೇ ದೊರೆಯುವುದು.

• • • •

ಹೂಮಾರ್ಕೆಟಿನ ಬಳಿ ಈಗ ಮಾರ್ಗ ಇಕ್ಕಟ್ಟು ಬದಲಾಗಿ ಬಸ್ಸುಗಳು ರಾಣ್ಯವಾಡಿ ಮುಹೂರ್ತ ಮೀರಿ ನಿಲ್ಲುವುವು ಮಾರ್ಕೆಟಿಗೆ ಹೋಗುವವರು ಕೆಲವೇಳೆ ಬಸ್ಸುಗಳ ಮೇಲೆ ಕಾಲಿಟ್ಟು ಏಳಹೋಗಬೇಕು, ಅಥವಾ ಬಸ್ಸುಗಳೂ ಇವರ ಮೇಲೆ ಟಾಯರಿಟ್ಟು ಮುಂದರಿಸಬೇಕು ಎಂಬಂತಾಗಿದೆ. ಇದಕ್ಕೇನು ಗತಿ?

• • • •

ಮಾರ್ಕೆಟಿಗೆ ವರ್ಗವಾದರೆ ಅಲ್ಲೇ ಜಟ್ಕಾ ರಾಣ್ಯವಾಗುವುದಂತೆ ಮಂಗಳೂರು ಮಲ್ಲಿಗಗ ಅಲ್ಲಿಂದ ವರ್ಗವಾದ ಕಾರಣ ಕುದುರೆಗಳ ಮಲಮೂತ್ರಕ್ಕೆ ರಾಣ್ಯ ಮಾಡಿಕೊಟ್ಟಂತಾಗುವುದಿಲ್ಲವೆ? ಸಂಟ್ರಲ್ ವಾರ್ಡು ಮಾರ್ಕೆಟು ವಾರ್ಡುಗಳೆಂದರೆ ಊರ ಆರೋಗ್ಯಕ್ಕೆಂದು ಸಂಕಟವಾಗಿವೆ ಊರ ಹವೆ ನಿರ್ಮಲಗೊಳಿಸಲು ಮಲಮೂತ್ರಗಳೇ ಪರಮೌಷಧವೆ?

• • • •

ಅಥವಾ ಈ ಜಟ್ಕಾ ರಾಣ್ಯವು ಹೊಸ ಹೂಮಾರ್ಕೆಟಿನ ಸ್ಥಳಕ್ಕೆ ವರ್ಗವಾಗುವುದೆ? ಹಾಗಾದರೆ, ಬಾಲಿಕಾ ಪಾಠಶಾಲೆಗೆಂದು ಕೊಂಡ ಸ್ಥಳದಲ್ಲಿ ಕುದುರೆ ಶಾಲೆಯಾಗುವುದಲ್ಲ!

ನಮ್ಮ ಶಾಲೆಗಳು.

೭. ಗುರುಶಿಷ್ಯ ಸಂಬಂಧ.

ಲೇಖಕರು.—ಶ್ರೀಯುತ ಶಿವರಾಮ ಕಾರಂತ

ಈ ವಿಚಾರವು ಸ್ವಲ್ಪ ಕಠಿಣವಾದುದೇ ಸರಿ. ಇನ್ನೂ ಎಷ್ಟೋ ಉಪಾಧ್ಯಾಯರಿಗೆ ತಾವು ಹೇಗೆ ಇರಬೇಕು—ಎಂಬ ಸಿದ್ಧಾಂತದ ವಿಚಾರವಾಗಿಯೇ ಮನಸ್ಸು ನಿರ್ಧಾರಗೊಂಡಿಲ್ಲ. ಹಳೇ ಮಾದರಿಯ ಯಾವತ್ತು ಶಾಲೆಗಳಲ್ಲಿ, ಉಪಾಧ್ಯಾಯರಿಗೂ ಮಕ್ಕಳಿಗೂ ಎರಡೇ ಮಾರು ದೂರವಿದ್ದರೂ ಅವರ ಮನಸ್ಸಿಗೂ, ಇವರ ಮನಸ್ಸಿಗೂ ಗಾವುದ ದೂರವಿರುವುದು. ನಾವು ಉದ್ಯಾವರದಲ್ಲಿ ಎರಡು ಖಾಸಗಿ ಶಾಲೆಗಳನ್ನು ಕಂಡೆವು. ಆ ಎರಡು ಶಾಲೆಗಳು ಎರಡು ಪದ್ಧತಿಯವು ಎನಿಸಿತು. ಕೆಥೊಲಿಕ ಶಾಲೆಯಲ್ಲಿ ಗುರುಶಿಷ್ಯರ ಸಂಬಂಧವು ಸ್ಕೂಲು ಗಂಟೆಯೊಳಗಾಗಿ ಕಡಿದೇ ಹೋಗುವುದು. ಹಿಂದು ಹುಡುಗರಿಗೂ ಉಪಾಧ್ಯಾಯರಿಗೂ ಯಾವ ರೀತಿಯ ಸಂಬಂಧವೂ ಅಲ್ಲಿರುವಂತೆ ಅನಿಸಲಿಲ್ಲ. ಅಂತು ಕ್ರಿಸ್ತ ಹುಡುಗರಿಗೂ ಶಾಲಾ ಪಾಲಕರಿಗೂ ಸಂಬಂಧವಿತ್ತು. ಅದು ಅವರನ್ನು ಪುನೀತ ಕ್ರಿಸ್ತರನ್ನಾಗಿ ಮಾಡುವ ವಿಚಾರದಲ್ಲಿ ಮಾತ್ರ. ಈ ಸಂಬಂಧವು ಅವರ ಶಿಕ್ಷಣ, ಬಾಲಕ ಜೀವನ ಇವಕ್ಕೆ ಸಂಬಂಧಿಸಿದಂತೆ ಕಾಣಲಿಲ್ಲ. ಇನ್ನು ಮಿಶನ್ ಶಾಲೆಯ ಕ್ರಮವನ್ನು ಇನ್ನಿತರ ಶಾಲೆಗಳಲ್ಲಿ ನಾವು ಕಾಣಲಾರದ ಸಂಗತಿಯಲ್ಲ. ಅಲ್ಲಿ ವಿದ್ಯಾರ್ಥಿಯ ಜಾತಿ ಬೇರೆ, ಉಪಾಧ್ಯಾಯರ ಜಾತಿ ಬೇರೆ. ಬ್ರಾಹ್ಮಣರು ಶೂದ್ರರಿದ್ದಂತೆ. ಹುಡುಗರು ಇಂತಿಷ್ಟೇ ದೂರದಲ್ಲಿ ಉಪಾಧ್ಯಾಯರಿಂದಿರಬೇಕು ಎಂಬ ಭಾವವು ಅವರಲ್ಲಿ ಮೂಡಿಸಲ್ಪಟ್ಟಂತೆ ಕಾಣುವುದು. ವಿದ್ಯಾರ್ಥಿಗಳು ಕೀಳು, ಉಪಾಧ್ಯಾಯರು ಮೇಲು—ಆ ಜಾತಿ ಈ ಜಾತಿ ಬೆರಸಲಾರದ, ಬೆರಸಬಾರದ ಎರಡು ಜಾತಿಗಳು! ಇಂಥವರು ವಿದ್ಯೆಯನ್ನು ಕೊಳ್ಳುವ ಕೊಡುವ ವ್ಯಾಪಾರಿಗಳು! ಅಂಥ ಉಪಾಧ್ಯಾಯರಿಂದ ಹುಡುಗರ ಒಡಲುಗಳಿಗೆ ಯಾವ ಸಂಸ್ಕೃತಿಯೂ ಆಗುವುದಿಲ್ಲ. ತೋರಿಕೆಯ ಮಟ್ಟಿಗೆ ಅಂಥ ಶಿಕ್ಷಣವಿರುವಲ್ಲಿ ನಮ್ರತೆ, ವಿಧೇಯತೆಗಳು ಕಾಣುವುವು. ಆದರೆ ಅದನ್ನು ಕೆರೆದು ನೋಡಿದರೆ, ಅದು ಬಾಲಕರ ವ್ಯಕ್ತಿತ್ವದ ಕಳಕ್ಕಿರುವುದಿಲ್ಲ.

ನಾವು ಹಿರಿಯಡ್ಕ ಶಾಲೆಯನ್ನು ಸೇರಿದಾಗ ಸಹಜವಾಗಿ, ಹೊರಗಿಂದ ಬಂದವರನ್ನು ಮಕ್ಕಳಿಗೆ ಕಾಣುವ ಕುತೂಹಲವಾಯಿತು. ಅವರು ಮುಂದೊತ್ತಿ ಬಾರದಂತೆ ವಿಧಿನಿಯಮಗಳಾಗಿದ್ದುವು. ಈ ರೀತಿ ಉತ್ಸಾಹ ತೋರಿದ ಬಾಲಕರನ್ನು ಶಟಿಪ್ಪಾಡಿ, ಅರ್ಲ ಮೊದಲಾದ ಶಾಲೆಗಳಲ್ಲಿ ಪ್ರತಿಬಂಧಿಸಿದ ಚಿಹ್ನೆಯು ಕಾಣುತ್ತಿತ್ತು.

ಬಜಪೆ, ಕಾಳಿಪ್ಪಾಡಿ ಶಾಲೆಗಳಲ್ಲದನ್ನು ಕಂಡರೆ ಬಾಲಕರಲ್ಲಿ ಯಾವ ರೀತಿಯ ಚೈತನ್ಯವೇ ಕಾಣಿಸಲಿಲ್ಲ. ಉಪಾಧ್ಯಾಯ ಮೃಗದಿಂದ ಆ ಶಿಷ್ಯ ಜೀವಿಯು ಬಲು ದೂರವಿದ್ದು, ಅವನ ಕಡೆಗೆ ತೀರ ಹೆಚ್ಚಿನ ಭಯಭಕ್ತಿಯಿಂದಿರುವಂತೆ ಕಂಡಿತು.

ಇಂಥ ಯಾವತ್ತು ಶಾಲೆಗಳು ಹುಡುಗರ ತಲೆಯೊಳಗೆ ವಿಚಾರಗಳನ್ನು ತುಂಬಿಸಬಹುದು. ಒಡಲೊಳಗೆ ನಡತೆಯನ್ನು ತುಂಬಿಸಲಾರವು. ಉಪಾಧ್ಯಾಯ ಮೃಗವೊಂದು ಹುಲಿಯೆಂದು ತಿಳಿದ ಶಾಲೆಗಳಲ್ಲಿ ಮಕ್ಕಳು ಹುಲಿಗಳಾಗುವುದು ಸಹಜ! ಅಂಜಿಕೆ—ಅಂಜಿಕೆ—ಅಂಜಿಕೆ. ಹೊರಗಿನವನೊಬ್ಬನೊಡನೆ ಮಾತನಾಡಲು ಸಂಕೋಚ. ಮನುಷ್ಯನನ್ನು ಕಂಡು ಮನುಷ್ಯನು ಅಂಜುವದಾಯಿತು. ಕಿನ್ನಿಕಂಬಳ ಶಾಲೆಯಲ್ಲಿ ಮಕ್ಕಳಿಂದ ಒಂದೊಂದು ಪ್ರಶ್ನೆಗೆ ಉತ್ತರ ತರಿಸಲು ಎಷ್ಟೋ ಸಮಯವು ಹಿಡಿಯಿತು. ಕಾರಣವಿಷ್ಟೆ—ಹುಡುಗರಿಗೆ ಉತ್ತರ ಗೊತ್ತಿಲ್ಲವೆಂದಲ್ಲ, ಹೊಸ ಮೋರೆಗಳಲ್ಲ ಹುಲಿಗಳು—ಎಂಬ ಭೀತಿಯಿಂದ ಅವರ ಮುಂದೆ ತಾವು ನಾಲಿಗೆ ಸಡಲಿಸಿ ಮಾತನಾಡಲಿಕ್ಕೂ ಸಂಕೋಚ.

ಕೆಲವೇ ದಿನಗಳ ಹಿಂದೆ ನಾವು ಕೆಲವರು ಕೊಕ್ಕಡ ಶಾಲೆಗೆ ಹೋಗಿದ್ದೆವು. ನಮ್ಮ ಮುಂದೆ ಎರಡು ತಾಸಿನ ತನಕ ಮಕ್ಕಳು ಕುಳಿತವರು ಪಿಸ್ಸೆಂದು ಮಾತನಾಡಲಿಲ್ಲ! ಕಾಣುವವರಿಗೆ ಈ ಶಿಸ್ತನ್ನು ಕಂಡು ಆಶ್ಚರ್ಯವಾಗಬೇಕು. ಆದರೆ ಮಕ್ಕಳ ಅಂತರಂಗವನ್ನರಿತವರಿಗೆ—ಅಯ್ಯೊ ಇವೆಷ್ಟೆಂದು ಹಾರಾಡುವ ಹಕ್ಕಿಗಳ ರೆಕ್ಕೆ ಮುರಿದು ಕುಳಿಸಿದರಲ್ಲಾ—ಎಂದು ಕಾಣಿಸದೆ ಇರದು.

ಹಾರದ ಕಾಲದಲ್ಲಿ ಶಿಕ್ಷಣಕ್ಕೆ ತೊಂದರೆಯಾಗದಂತೆ, ನಾವು ಮಕ್ಕಳಲ್ಲಿ ಶಿಸ್ತನ್ನು ಅಪೇಕ್ಷಿಸುವುದು ನಿಜ. ಆದರೆ ಅವರು ಯಾವಜ್ಜೀವ ಕಲ್ಲುಗೊಂಬೆಗಳಾದರೆ ಮುಂದೆ ಅಂಥ ಮಕ್ಕಳಿಂದೇನು ಕೆಲಸವಾದೀತು? ಅವರಲ್ಲಿ ಸರಳತೆಯು ಹೇಗೆ ಉಳಿಯಬಹುದು? ಉಪಾಧ್ಯಾಯನ ಭೀತಿ ಅಧಿಕವಾದರೆ—ಕದ್ದವನಿಗೆ ತಾನು ಕದ್ದೆನೆನ್ನುವ ಸಾಹಸ ಬಂದೀತೆ? ಕಳ್ಳತನದ ಜಾತಿಯಲ್ಲಿ ನಮ್ಮ ರೀತಿ ಗಾಂಭೀರ್ಯಗಳಿಂದ ಅವನಿಗೆ ಸುಳ್ಳಿನ ಶಿಕ್ಷಣವೂ ಅಪರೋಕ್ಷವಾಗಿ ಆಗುವುದು.

ಆದರೆ, ಇಂಥ ಬ್ರಾಹ್ಮಣೀ ಶಿಕ್ಷಣವು ನಮ್ಮ ವಿದ್ಯಾಲಯಗಳಲ್ಲಿ ಮೆಲ್ಲಗೆ ನಾಶವಾಗುತ್ತ ಬರುತ್ತಿದೆ. ಅದರ ಬರವಣಿಗೆಯ ಸೆಳತವು ಸಾಕಷ್ಟು ಬಲವಾಗಿಲ್ಲ. ಕಾರಣ—ಮಕ್ಕಳ ಈಗಿನ ತರುಣ ಉಪಾಧ್ಯಾಯರೂ ಸಹ ಈ ಪೌರಾಣಿಕ ಶಾಲೆಗಳಲ್ಲಿ ಬೆಳೆದವರು. ಮುಂದೆ ಟ್ರೈನಿಂಗಿಗೆ ಹೋದರೆ, ಅಲ್ಲೂ ಕಲವೊಂದು ಹುಲಿಗಳೇ ಅವರಿಗೆ ಶಿಕ್ಷಣವನ್ನು ಕೊಡುವರು.

ಇನ್ನು ಕೆಲವು ಶಾಲೆಗಳಲ್ಲಿ ತೀರ ವಿಚಿತ್ರ ಪರಿಸ್ಥಿತಿಯು ನಿಂತಿದೆ. ಉಪಾಧ್ಯಾಯ ವರ್ಗದವರಲ್ಲಿ ಒಬ್ಬೊಬ್ಬರು ಒಂದೊಂದು ವರ್ಗದವರು. ಕೆಲವರು ಮಕ್ಕಳು ಜೀವವಿರುವ ಮಕ್ಕಳೆಂದು ತಿಳಿಯುವರು. ಇನ್ನು ಕೆಲವರ ಪಾಲಿಗೆ ಅವು ಮಾಗುವ ದಾರಿಯಿಂದೆಳೆಯಲ್ಪಡಬೇಕಾದ [illegible]ಗಳೆಂದಿದೆ. ಕೆಲವರ ಪಾಲಿಗೆ—ಇವು ಹರಗಟ್ಟಿ ನಾಯಿಗಳೆಂದಿದೆ. ನೊಸಲು ನೆಕ್ಕೆಯಾವು ಎಂಬ ಭೀತಿ. ಇಂಥ ಮೂರು ವರ್ಗದ ಉಪಾಧ್ಯಾಯರು ಒಂದೇ ಶಾಲೆಯಲ್ಲಿ ಸೇರಿದರೆ ಬಲು ಸ್ವಾರಸ್ಯವೆಂದು ಕಾಣುವುದು. ಈ ವಿಷಯದಲ್ಲಿ ಪ್ರತ್ಯಕ್ಷ ತಾಲೂಕಿನ ಶಾಲೆಗಳೇ ನನಗೆ ಅದಿಕ ಪರಿಚಯವುಳ್ಳವು. ಪಿಟ್ಟೆ ಶಾಲೆಯ ಮೇಲಿನ ವಿವಿಧ ಸುಳಿಗಾಳಿಗೆ ಸಿಕ್ಕಿದ ಒಂದು ಶಾಲೆಯೆಂದು ನನ್ನ ಅನುಭವ. ಬಾಲಕರ ಕಡೆಗೆ ಒಬ್ಬರ ಪ್ರೇಮದ ಅತಿಗಾಮಿಗಳು, ಇನ್ನೊಬ್ಬರು ಉದಾಸೀನಗಾಮಿಗಳು, ಮತ್ತೊಬ್ಬರು ಮಂದಗಾಮಿಗಳು, ನಾಲ್ಕನೆಯವರು ಉಗ್ರಗಾಮಿಗಳು! ಒಬ್ಬ ಉಪಾಧ್ಯಾಯರ ಪಾಠದಲ್ಲಿ ಹುಡುಗನು ನಡಿಲ ನಾಲಿಗೆಯಿಂದ ಮಾತನಾಡಿದರೆ ಉಗ್ರಗಾಮಿಗಳು ಒಬ್ಬರು ಅವನ ಶುದ್ಧ ಹಣವಾಗಬೇಕು, ಇಲ್ಲವಾದರೆ ಅವನು ಶುದ್ಧ ಪೋಕರಿ ಎನಿಸುವನು!

ಅಂತು ನಮ್ಮ ಶಾಲೆಗಳಲ್ಲಿ ಮಕ್ಕಳ ಶಿಕ್ಷಣಕ್ಕಲ್ಲದಿದ್ದರೂ ಕೊಲೆಗೆ ಸಾಕಷ್ಟು ಶಕ್ತಿಗಳಿವೆ. ಅವರಲ್ಲಿ ಈ ಉಗ್ರಗಾಮಿಗಳೂ ಕೆಲವರು. ಮಂದಗಾಮಿಗಳೂ, ಉದಾಸೀನರೂ ಸಮಾಹರು. ಹುಡುಗರ ಮನಸ್ಸಿನ ಒಡೆತನಗಳಿಸದೆ ಯಾವ ಶಿಕ್ಷಣವು ಸಾರ್ಥಕವಾದೀತು? ಅದಿಲ್ಲದೆ, ನಡೆಸುವ ಶಿಸ್ತಿನ ನಿಜವಾದ ಪ್ರಯೋಜನವಾಗುವ ಬದಲು, ಬಾಲಕರಲ್ಲಿ ವಂಚನೆಯೇ ಬೇರೂರುವುದು. ಮಕ್ಕಳ ಒಡಲಿನ ಅರಸುತನ ಬಂದಿತೆಂದರೆ ಆ ಶಾಲೆಯೆಂಬುದು ವೃಂದಾವನವಾಯಿತು. ಅಲ್ಲಿ ಉದಾಸೀನವಾಯಿತೆಂದರೆ ಅದು ದೊಡ್ಡಿಯಾಯಿತು. ಉಗ್ರವಾಯಿತೆಂದರೆ ಸರ್ಕಸಿನ ಪಂಜರವಾಯಿತು.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O P No. 9/1932.

ಕೆ ಮಾಧವ ಶ್ಯಾನುಭಾಗ—ಅರ್ಜಿದಾರ

ಅಕ್ಕೀಜಮ್ಮ ಬೀಬೀ ಕೂಡಾ—ರಸ್ಪೊಂಡೆಂಟರು

ದಿ ಕೆನರಾ ಬೇಂಕಿಂಗ ಕೋರ್ಪೊರೇಶನ್ ಉಡುಪಿ ಲಿಮಿಟೆಡ್ ಉಡುಪಿ ಈ ಬೇಂಕಿನ F D ನಂಬ್ರ 362/13-9-1928ನೇ ರಶೀದಿ ಪ್ರಕಾರ ಫಿಕ್ಸೆಡ್ ಡಿಪೋಜಿಟಿನಲ್ಲಿರುವ ರೂಪಾಯಿ ೧೫೦೦—೦—೦ ವ ಇದರ ಮೇಲಣ ಬಡ್ಡಿಯಲ್ಲಿ ಸಹಾ ಉಡುಪಿ ತಾಲೂಕು ಮೂಡಬೆಟ್ಟು ಗ್ರಾಮದ ಕುಸ್ಕುಂಜ ಮೈಲಾರ ಬ್ಯಾರಿ ಮಗ ಮೃತ ಶ್ಯಾಬು ಬ್ಯಾರಿಗೆ ಇರುತ್ತಿದ್ದ ಹಕ್ಕು ಕೋರ್ಟು ಏಲಮಿನಲ್ಲಿ ಪಡೆದ ಅರ್ಜಿದಾರನು ಸದರಿ ಶ್ಯಾಬು ಬ್ಯಾರಿಯ ಹಕ್ಕಿನ ಏವೇಜು ರೂಪಾಯಿ 89೨—1—8ನ್ನು ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರನು ಮಾಡಿದ ಸದ್ರೀ ಅರ್ಜಿಯು ತಾ 1೨—3—1932ಕ್ಕೆ ಉಡುಪಿ ಡಿಸ್ಟ್ರಿಕ್ಟ ಮುನ್ಸಿಪ್ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುವುದಾಗಿಯೂ ಈ ಕುರಿತು ಆಕ್ಷೇಪ ಹೇಳತಕ್ಕವರು ಸದರೀ ತನಿಖೇ ದಿವಸ ಸದರೀ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪ ಹೇಳಬಹುದಾಗಿಯೂ ಈ ಮೂಲಕ ಸರ್ವರಿಗೂ ತಿಳಿಯಪಡಿಸುವದಾಗುತ್ತದೆ.

ಉಡುಪಿ
೨೨—೨—೩೨

P. Panduranga Nayak
Advocate for Petitioner

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಶ್ರೀ ಮದನಮಸ್ತ ಪಾಕು. ತ್ರಿ ರಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ಪ್ರಾರದಿಂದಲೂ ಧಾತು ಹೋಗುವದು ಎಲ್ಲಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ ಎಂಥವಾದರೂ ಪರಮ ಮೈಸೂಸೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಸುತ್ತದೆ. ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೬೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ ೩ ರೂ ೧. ಹಳೇ ರೋಗದ ಸಲುವಾಗಿ ೭ ಡಬ್ಬಿಗೆ ಖರ್ಚ ಸಹಿತ ರೂ ೧೧. ಮೂರ ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜಮಾನ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್ ಆಯ್ ಖಟಖಟೆ, ಎಲ್ ಎಮ್ ಎಂಡ್ ಎಸ್, ಜೆ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗುಪ್ತ ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು	ಡಾಕ್ಟರ ಪಿ ಎನ್ ದತ್ತ ಎಮ್ ಬಿ ಪ್ರಿನ್ಸಿಪಾಲ ಫಿಜಿಶಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು.

ಪತ್ತೆ.—ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರೆ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಒಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರ ಸುಖ ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ಸಂತತಿ ಬೇಕಾದರೂ ಸುರುವಾಗುವುದಿಲ್ಲ. ಮೊದಲೆ ಪೂರ್ಣ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಪಿ ಎ ವೈದ್ಯ ಎಲ್ ಸಿ ಪಿ ಎಸ್ ಕೊಲ್ಹಾಪುರ, ರಾಣೇ.— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ ಖರ್ಚು ೦||೦

ವಿಳಾಸ—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S M C

ಅನುಕ್ರಮಣಿಕೆ.

ಅಗ್ರಲೇಖ.

ನ್ಯಾಯಾಧಿಕ್ಯದ ಮಾಲೆ . . . ೬

ಸ್ಫುಟವಿಚಾರಗಳು . . ೪

ನೋಟಗಳು ೫

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ . . . ೬

ಒಳದೇಶ ವರ್ತಮಾನ . . ೬-೭

ದಕ್ಷಿಣಕನ್ನಡ— ಮಂಗಳೂರು, . ೭

ವಿವಿಧ ಸಮಾಚಾರಗಳು . . . ೯

"ಮುಂಬಾಯಿಯಲ್ಲಿ ಲಾಠಿಪ್ರಹರ! ೬೫ ಮಂದಿಗಳಿಗೆ ಜಖಂ ೧೧

ನಮ್ಮ ಶಾಲೆಗಳು . ೫

ಶಾರದಾ ಮಸೂದೆ . . ೨

ಸ್ವದೇಶಾಭಿಮಾನಿ.

ತಾ ೨೬ನೇ ಶುಕ್ರವಾರ ಫೆಬ್ರುವರಿ ೧೯೩೨

ನ್ಯಾಯಾಧಿಕ್ಯದ ಮಾಲೆ.

ಹಿಂದೂಸ್ಥಾನದ ಪ್ರಾಂತ್ಯಗಳ ಮತ್ತು ಕೇಂದ್ರ ಸರಕಾರದ ಬಜೆಟ್ಟಿನ ದಿನಗಳಿವು. ಸರಕಾರದ ಆಯವ್ಯಯಗಳು ಕಳೆದ ವರ್ಷದಲ್ಲಿ ಹೇಗೆ ಸಾಗಿದುವು, ಬರುವ ವರ್ಷದಲ್ಲಿ ಹೇಗೆ ಸಾಗುವುವು? ಎಂಬುದನ್ನು ತಿಳಿಸುವ ದಿನಗಳಿವು. ಪ್ರಾಂತ್ಯಗಳು ಒಂದೊಂದಾಗಿ ತಮ್ಮ ಆಯವ್ಯಯಗಳ ಅಂದಾಜು ಪಟ್ಟಿಯನ್ನು ಹೊರಗೆ ಹಾಕಿದುವು. ಆದರ ಅವುಗಳ ಅವಸ್ಥೆಯೇನು? ಎಂದೇ ಎಲ್ಲರೂ ದಿಗಿಲುಬಿದ್ದು ನೋಡುತ್ತಿರುವರು.

ಎಲ್ಲೆಲ್ಲಿಯೂ ರಿಟ್ರೆಂಚ್‌ಮೆಂಟ್, ಖರ್ಚು ಕಡಿಮೆ ಮಾಡುವ ಸಾಧನೋಪಾಯಗಳ ಪ್ರಯತ್ನ ಸರಕಾರದಲ್ಲಿ ಮಾತ್ರವಲ್ಲ, ಖಾಸಗಿ ಜನರೊಳಗೂ, ಹಾಗಾದರು ಸರಕಾರದ ಆಯವ್ಯಯಗಳು ಸಮತೂಗದಿದ್ದರೆ ಸರಕಾರದ ವ್ಯಯಾಧಿಕ್ಯದ ಖರ್ಚನ್ನು ಸಹಿಸುವುದು ಯಾರು? ಮತ್ತು ಹೇಗೆ?

ದೇಶದಲ್ಲಿ ಪ್ರತಿ ಸಾಮಾನುಗಳ ದರ ತಗ್ಗುತ್ತಾ ಇದೆ. ಪ್ರತಿ ಒಬ್ಬರ ಉತ್ಪನ್ನವೂ ಕಡಿಮೆಯಾಗುತ್ತಾ ಬರುತ್ತಿದೆ. ನಿಜವಾಗಿ ನೋಡಿದರೆ, ಎಲ್ಲಾ ಕಡೆಯಲ್ಲಿಯೂ ಸಮೃದ್ಧಿಯು ಪ್ರಸರಿಸಿದ್ದ ಹಿಂದಿನ ವರ್ಷಗಳಲ್ಲಿ ನಿರ್ಣಯಿಸಿದ್ದ ಕರಗಳು ಜನತೆಯ ಈಗಿನ ಪರಿಸ್ಥಿತಿಗೆ ಬಹಳ ಹೆಚ್ಚಿನದಾಗಿದ್ದು, ಅವುಗಳನ್ನು ತಗ್ಗಿಸಬೇಕು. ಅಂತಹ ಸ್ಥಿತಿಯು ಇಂದಿರುವಾಗ, ಕರಗಳು ತಗ್ಗುವ ಬದಲಿಗೆ, ಇದ್ದಷ್ಟೆ ಇದ್ದರೂ ಚಿಂತೆಯಿರಲಿಲ್ಲ, ಆದರೆ, ಸರಕಾರವು ರಿಟ್ರೆಂಚ್‌ಮೆಂಟ್ ಎಂಬ ಹೆಸರಿಗೆ ತಕ್ಕ ಕೆಲವು ಖರ್ಚನ್ನು ಕಡಿಮೆ ಮಾಡಿ, ನಿಜವಾಗಿ ಕಡಿಮೆಮಾಡಬೇಕಾಗುವ ಖರ್ಚುಗಳನ್ನು ಕಡಿಮೆ ಮಾಡದೆ, ಖರ್ಚನ್ನೇ ಹೆಚ್ಚಿಗೆ ಗಿಸಿ ಹೊಸ ಕರಗಳನ್ನೆತ್ತುವ ಆಲೋಚನೆಯನ್ನು ಮಾಡುವುದು ಅತ್ಯಂತ ವಿಷಾದಾಸ್ಪದವಾಗಿದೆ.

ವರ್ತಮಾನ ಪ್ರಚಾರದ ಮೂಲಕ ಉಂಟಾಗ ತ್ತಿದ್ದ ಮದ್ರಾಸು ಸರಕಾರದ ಆಯವು ಬಹುಮಟ್ಟಿಗೆ ಕಡಿಮೆಯಾಗಿದೆಯೆಂದು ಸರಕಾರವು ಒಪ್ಪುತ್ತಿದೆ. ಹೀಗೆ ಕಡಿಮೆಯಾದುದು ಗಾಂಧಿ ಇರ್ವಿನ್ ಸಂಧಾನ ಸವ ಯದಲ್ಲಿಯಾದ ದರಿಂದ, ಇದಕ್ಕೆ ಕಾಂಗ್ರೆಸ್ ಚಳವಳಿ ಕಾರಣವಲ್ಲವೆಂದೂ, ಜನತೆಯ ಉತ್ಪನ್ನವೇ ಕಡಿಮೆಯಾಗಿ ಮದ್ಯ ಕುಡಿಯಲು ದುಡ್ಡು ಸಿಗದೆ ಹೀಗಾಯಿತೆಂದೂ ವ ದ್ರಾಸಿನ ಫೈನಾನ್ಸ್ ಮೆಂಬರರು ಅನ್ನುತ್ತಾರೆ. ಕುಡುಕರು ಊಟವನ್ನಾದರೂ ಬಿಟ್ಟಾರು ಕುಡಿಯುವುದನ್ನು ನಿಲ್ಲಿಸಲಾರರು ಎಂಬುದು ಎಲ್ಲರಿಗೂ ತಿಳಿದಿದ್ದದ್ದೇ. ಕೈಯಲ್ಲಿ ಕಾಸಿಲ್ಲದೆ ಕುಡಿಯುವುದನ್ನೇ ಜನರು ನಿಲ್ಲಿಸಬೇಕಾದರ, ಅವರಿಗೆ ಊಟಕ್ಕೇನಿದ್ದೀತೆಂಬುದನ್ನು ನಾವೇ ಊಹಿಸಿಕೊಳ್ಳಬಹುದು. ಆದರೂ ಜನರ ಬಡತನದ ತೀವ್ರತೆಗ ಸರಕಾರದ ಬಜೆಟ್ಟಿನಲ್ಲಿ ಮಾನ್ಯತೆಯೇ ಸಿಕ್ಕುವುದಿಲ್ಲವೆಂಬುದು ಅತ್ಯಂತ ಪಶ್ಚಾತ್ತಾಪದ ವಿಷಯವಾಗಿದೆ.

ರಿಟ್ರೆಂಚ್‌ಮೆಂಟಿನಲ್ಲಿ ಹೆಚ್ಚು ಸಂಬಳದವರಿಗೂ ಕಡಿಮೆ ಸಂಬಳದವರಿಗೂ ಒಂದೇ ತರ. ಅದರಲ್ಲಿಯೂ ಹೆಚ್ಚು ಸಂಬಳದವರಿಗೆ ಇನ್‌ಕಮ್‌ಟ್ಯಾಕ್ಸ್ ಮೂಲಕ ಸ್ವಲ್ಪ ಸಮಾಧಾನ. ಪೋಲೀಸಿನವರಲ್ಲಿ ರೂಪಾಯಿ ೨೦ಕ್ಕಿಂತ ಕಡಿಮೆಯಾದವರಿಗೆ ರಿಟ್ರೆಂಚ್‌ಮೆಂಟ್ ಇಲ್ಲ. ಏಕೆ? ಹಲವು ಕಡಿಮೆ ಸಂಬಳದವರನ್ನು ತೆಗೆದುಹಾಕುವುದಕ್ಕಿಂತ ಒಬ್ಬಿಬ್ಬರು ಹೆಚ್ಚು ಸಂಬಳದವರನ್ನು ತೆಗೆದರೆ ಹೆಚ್ಚು ಸಹಾಯವಾಗುವುದಿಲ್ಲವೇ? ಬದಲಿಗೆ ಜನೋಪಯೋಗದ ಕೆಲಸಗಳಲ್ಲಿ, ವಿದ್ಯಾಖ್ಯಾತೆಯಲ್ಲಿ, ಬೇಕಾದಷ್ಟು ರಿಟ್ರೆಂಚ್‌ಮೆಂಟ್ ಆಗುತ್ತಾ ಬರುತ್ತಿದೆ.

ಕೇಂದ್ರ ಸರಕಾರದಲ್ಲಿ ಅದಿವಾಸಿ ಆಯ ಸೈನ್ಯಖಾತೆಯ ಬಕಾಸುರ ಹೊಟ್ಟೆ ತುಂಬಲಿಕ್ಕೇನೇ ಹೋಗುತ್ತದೆ. ಎಷ್ಟೋ ಸರ್ತಿ ಇದನ್ನು ಕಡಿಮೆ ಮಾಡಿ ಎಂದು ಹೇಳಿಕೊಂಡರೂ ಕೇಳುವವರಿಲ್ಲ. ಬದಲಿಗೆ ಹೊಸಕರಗಳ ರಚನೆಯೇ ಕಂಡು ಬರುತ್ತದೆ. ಬಡತನದ ಭಾರತವು ಎಷ್ಟರ ವರಗೆ ಇದನ್ನು ಸಹಿಸಿಕೊಳ್ಳುವುದೆಂಬುವುದು ತಿಳಿದುಬರುವುದಿಲ್ಲ.

ಬಡವರು ಬಡವರಾಗುವುದು ಮಾತ್ರವಲ್ಲ, ದೊಡ್ಡವರಾದರೂ ಈ ದಿನಗಳಲ್ಲಿ ಸುಖವಾಗಿದ್ದಾರೆಂದು ಹೇಳಲಾಗುವುದಿಲ್ಲ. ನಷ್ಟಗಳ, ಕಷ್ಟಗಳ ಸಂಭವಗಳೇ ಹೆಚ್ಚು. ಎಷ್ಟೋ ದೊಡ್ಡವರು ಬಡವರಾಗಿ ಹೋಗಿರುವರು. ಜಮೀನುದಾರರಿಗೆ ಭೂಮಿಯ ಉತ್ಪತ್ತಿಗೆ ಬೆಲೆ ಬಾರದೆ ಅವರ ಸರಕಾರದ ತೀರ್ವೆಯನ್ನೇ ಕೊಡುವುದು ಕಷ್ಟವಾಗಿ ಬಂದಿದೆ.

ಇತ್ತ ಸರಕಾರದವರು ಹೊಸ ಕರಗಳಿಂದ ಬಹಳ ಲಾಭವನ್ನು ಪಡೆಯುವುದಾಗಿ ಹೇಳಲಾಗುವುದಿಲ್ಲ. ಕರಗಳನ್ನು ಹೆಚ್ಚಿಸುತ್ತಿದ್ದಂತೆ ವ್ಯವಹಾರಗಳು ಕಡಿಮೆಯಾಗಿ ಕರಗಳ ಉತ್ಪನ್ನವೂ ಕಡಿಮೆಯಾಗುತ್ತಿದೆ. ಈ ಮೂಲಕ ದೇಶದ ಆರ್ಥಿಕ ಅಡಿಗಟ್ಟೇ ಸಡಲಿಸಿ ಬರುತ್ತಿದೆ.

ಸರಕಾರವು ದೇಶದಲ್ಲಿ ಉಂಟಾಗುತ್ತಿರುವ ಈ ಆರ್ಥಿಕ ಕ್ರಾಂತಿಗೆ ಹೆಚ್ಚು ಲಕ್ಷ್ಯವನ್ನು ಕೊಡುವುದು ಅಗತ್ಯವಿದೆ. ಒಂದೇ ಕರಗಳನ್ನು ಹೆಚ್ಚಿಸಿದರೆ ಬಜೆಟ್ಟುಗಳ ಆಯವ್ಯಯವು ಸರಿ ತೂಗಿ ಬರಲಾರವು. ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸದೆ ಕರಗಳನ್ನು ಹೇರಿಸಿದರೆ ದೇಶವು ಮತ್ತಷ್ಟು ಬಡತನಕ್ಕೆ ಬಿದ್ದು ಸರಕಾರದ ಸಾಂಪತ್ತಿಕ ಭದ್ರತೆಯ ನೆಲೆಯೂ ತಪ್ಪಿಹೋಗುವುದು. ನಿಜವಾಗಿ ನೋಡಿದರೆ ಈಗಿನ ರಾಜಕೀಯ ಕ್ರಾಂತಿಗಿಂತಲೂ ಈ ಪ್ರಚಲಿತವಿರುವ ಸಾಂಪತ್ತಿಕ ಕ್ರಾಂತಿಯ ಆಘಾತವು ಸರಕಾರಕ್ಕೆ ಹೆಚ್ಚು ಹಾನಿಕರವಾಗಿ ಪರಿಣಮಿಸದೆ ಇರಲಾರದು.

ವಿದೇಶ ವರ್ತಮಾನ.

ಪೆರಿಸ್ ನಗರದಲ್ಲಿ ೧೯೨೬ರಲ್ಲಿ ಟ್ರೆಫೋರ್ಡ್ ಎಂಬವನಿಗೆ ಮಿಸ್ ಸಿ. ವರ್ ಕ್ಟ್ರೀನ್ ಎಂಬವಳು ಕೈಲಿನಲ್ಲಿ ಗುಂಡಿಕ್ಕಿದಳೆಂಬ ಆಪಾದನೆಯ ಮೇಲೆ ೬ ತಿಂಗಳ ಶಿಕ್ಷೆಗೆ ಗುರಿಯಾಗಿದ್ದಳು. ಇದೇ ೧೯೩೨ರಲ್ಲಿ ಟ್ರೆಫೋರ್ಡನು ಕ್ಟ್ರೀನಳೂ ರಾಜಿಯಾದರು, ಅವರ ವಿವಾಹವೂ ತಾ ೨೨ನೇ ದಿನ ನಡೆಯಿತು.

— ಆಮ್ಸ್ಟರ್ಡಾಮಿನಿಂದ ಸಿಂಗಾಪುರಕ್ಕೆ ವಿಮಾನದ ಮೂಲಕ ಹೊರಟ ಸ್ಮಿತ್ ಎಂಬವನು ವಿಮಾನ ಸಮೇತ ಒಂದು ಕಾಡಿನ ಮೇಲೆ ಬಿದ್ದನು. ಕೆಲವು ದಿನಗಳ ಮೇಲೆ ಅವನು ಬಿದ್ದ ಆ ಸ್ಥಳವು ಪತ್ತೆ ಮಾಡಲ್ಪಟ್ಟು ಅವನ ಶವವು ದೊರೆಯಿತು.

ರೋಮ್ ನಗರದಿಂದ ಏಡೆನ್ನಿಗೆ ಹೊರಟ ರೇಮಂಡ್ ಮತ್ತು ಕೌರ್ಟಲೆಂಡ್ ಎಂಬಿಬ್ಬರು ವೈಮಾನಿಕರು ಕೆಲವು ದಿನಗಳಿಂದ ಆಕಾಶದಲ್ಲಿ ಕಾಣೆಯಾಗಿರುವರು. ಇವರು ಸುರಕ್ಷಿತರಾಗಿರಲಿಕ್ಕಿಲ್ಲವೆಂದು ತಿಳಿದುಬಂದಿದೆ.

— ಪ್ರಪಂಚದಲ್ಲಿ ದೊಡ್ಡದೆನಿಸಿದ ಎಕ್ರೋನ್ ಎಂಬ ವಿಮಾನವು ಅಮೇರಿಕದಲ್ಲಿ ಹಾರ್ಯಾಡುತ್ತಿದ್ದಾಗ ದುರದೃಷ್ಟವಶಾತ್ ಅದರ ಯಂತ್ರವು ಕ್ರಮತಪ್ಪಿ ಹೋಗಿ ಅದು ನೆಲಕ್ಕೆ ಬಿದ್ದು ಹುಡಿಯಾಯಿತು.

"ರಾಷ್ಟ್ರಧ್ವಜವು ಸತ್ತಿದ್ದವೇ?" ಎಂದು ಭಾರತ ಮಂತ್ರಿಗಳಾದ ಸಾಮುವೇಲ್ ಹೋರರೊಡನೆ ಡೇವಿಡ್ ಗ್ರೆನ್‌ಫೆಲ್ ಎಂಬವರು ಕೇಳಿದಾಗ "ಹೌದು ಅದು ಈಗ ಸತ್ತಿದ್ದವೇ ಸರಿ" ಎಂದರು.

ಜರ್ಮನಿಯಲ್ಲಿ ಹದಿನಾಲ್ಕು ದಿನಗಳಲ್ಲಿ ೮೫೦೦೦ ನಿರುದ್ಯೋಗಿಗಳು ಹೆಚ್ಚಿದರು. ಒಟ್ಟು ಸಂಖ್ಯೆಯು ಈಗ ೬೧೨೬೦೦೦ಕ್ಕೆ ಹೋಗಿ ನಿಂತಿದೆ.

ರೋಮ್ ದೇಶದ ಒಬ್ಬ ಮುದ್ರಣಕರ್ತನಾದ ಅಂತೋನಿಯೊ ಎಂಬಾತನು ತನ್ನ ಕನಸಿನಲ್ಲಿ ತನಗೆ ಒಬ್ಬ ಗುರುವು ಸ್ಟೇಟ್ ಲೋಟ್ಟರಿಗೆ ಹಣ ಹಾಕಬೇಕೆಂದು ಹೇಳಿದಂತೆಯೂ ಅದಕ್ಕೆ ಬೇಕಾದ ೪ ಅಂಕೆಗಳನ್ನು ಹೇಳಿದಂತೆಯೂ ಕಂಡನು. ಮರುದಿನ ಆ ಅಂಕೆಗಳ ಪ್ರಕಾರ ಲೋಟ್ಟರಿ ತೆಗೆಯಲು ಸುಮಾರು ಪೌಂಡುಗಳು ಆತನಿಗೆ ದೊರೆತವು ಎಂದು ಸಿಲೋನ್ ಒಬ್ಸರ್ವರ್ ಪತ್ರಿಕೆಯಲ್ಲೊಂದು ವಾರ್ತೆ.

— ರಾಮ್ಸೆ ಮೆಕ್‌ಡೊನಾಲ್ಡರು ನೇತ್ರರೋಗದಿಂದ ವಿಮುಕ್ತರಾಗಿರುವರು. ಅವರು ನಿತ್ಯದಂತೆ ತನ್ನ ಕೆಲಸವನ್ನು ಮಾಡುತ್ತಿದ್ದಾರೆ. ಮೊನ್ನೆ ಚಕ್ರವರ್ತಿಯವರನ್ನು ಕಂಡು ಮಾತನಾಡಿದರು.

— ಇಜಿಪ್ಟಿನಲ್ಲಿ ಪ್ರೊಫೆಸರ್ ಸಲೀಮ್ ಹಸನ್ ಎಂಬವರು ೩೦೦೦ ವರ್ಷಗಳ ಹಿಂದೆ ಮಳಲಿನ ರಾಶಿಯಲ್ಲಿ ಭೂಮಿಯಡಿ ಹೂತು ಹೋಗಿರುವ ಪಿರಮಿಡ್ ಒಂದನ್ನು ಕಂಡು ಹಿಡಿದಿದ್ದಾರೆ. ೪೪೦೦೦ ಚಚೌಕ ಗಜಗಳಷ್ಟು ಅಗಲದಲ್ಲಿ ಸುಮಾರು ೩೦೦ ಅಡಿಗಳ ಎತ್ತರವಿರುವ ಈ ಪಿರಮಿಡು ಇಜಿಪ್ಟಿನ ಪ್ರಥಮ ರಾಣಿದ್ದಾಗಿರಬಹುದೆಂದೂ ಅವಳ ದೇಹವು ಅದರೊಳಗಿರಬಹುದೆಂದೂ ಅದರ ಬಾಗಿಲಲ್ಲಿ ಬರೆಯಲ್ಪಟ್ಟಿರುವ ಕೆತ್ತನೆಯ ಕೆಲಸದಿಂದ ತಿಳಿದುಬಂದಿದೆ.

ಲಂಡನಿನ ಒಂದು ಬಂಗಲೆಯಲ್ಲಿ ೬೦ ಮಂದಿಗಳು ನರ್ತಿಸುತ್ತಿದ್ದರು. ಪೋಲೀಸರು ಬಂದು ಬಾಗಿಲು ಒಡೆದು ಒಳಗಿದ್ದವರ ಹೆಸರುಗಳನ್ನು ಬರೆದುಕೊಂಡು ಹೋದರು. ಇಂತಹ ನರ್ತನಗಳಿಂದ ಹೆಚ್ಚಿನ ಹಾನಿಯುಂಟೆಂದು ತಿಳಿದುಬಂದುದರಿಂದ ಇವನ್ನು ನಿಲ್ಲಿಸುತ್ತಾ ಬರುತ್ತಿರುವರು.

— ಚೈನಾ ಜಪಾನುಗಳೊಳಗಿನ ಯುದ್ಧವು ಶೀಘ್ರನೆ ಕೊನೆಗೊಳ್ಳುವಂತಹ ಚಿಹ್ನೆಯು ಕಂಡುಬರುವುದಿಲ್ಲ. ಚೈನಿಯರು ಬಹು ವರುಷದ ಯುದ್ಧಕ್ಕೆ ಬೇಕಾದ ಉಪಕರಣ ಮದ್ದು ಗುಂಡುಗಳನ್ನು ಸಿದ್ಧಪಡಿಸಿಟ್ಟಿರುವರು. ಅದರಲ್ಲಿ ಜಪಾನಿಯರೂ ಹಿಂದೆಬಿದ್ದಿಲ್ಲ. ರಾತ್ರಿ ಹಗಲೆನ್ನದೆ ಜಪಾನೀ ವಿಮಾನಗಳು ಬೊಂಬನ್ನೆಸೆಯುತ್ತಿವೆ. ನಮಗೆ ಬೇಕಾದುದು ಚೈನೀಯರ ಶಾನೇ ಸಂಬರು ಸೈನ್ಯದ ನಾಶವು ಚೈನೀಯರನ್ನು ಬಿಡಲಿಕ್ಕಿಲ್ಲವೆಂದು ಬರೆಯಲ್ಪಟ್ಟಿರುವ ಕಾಗದಗಳನ್ನು ಜಪಾನರು ವಿಮಾನದಿಂದ ಚೈನೀಯರ ಪ್ರಾಂತ್ಯಗಳಿಗೆ ಹಾಕುತ್ತಿರುವರು.

ಒಳದೇಶ ವರ್ತಮಾನ

ಶ್ರೀಮತಿ ಮಿಂಠಾಬಾಯಿ (ಮಿಸ್ ಸ್ಲೇಡರು) ತಾ ೧೨ರೊಳಗೆ ಮುಂಬಯಿ ನಗರವನ್ನು ಬಿಟ್ಟುಬಿಡಬೇಕೆಂದು ಪೋಲೀಸ್ ಕಮಿಶನರ ಆಜ್ಞೆಯಾಗಿತ್ತಷ್ಟೆ. ಆ ಆಜ್ಞೆಯಂತೆ ಶ್ರೀಮತಿಯವರು ಆಚರಿಸಲ್ಪಡದ್ದನ್ನು ಕೆರೆ ಹಿಡಿದು ೩ ತಿಂಗಳ ಸಾದಾ ಸಜೆ ವಿಧಿಸಿದರು. ಶ್ರೀಮತಿಯವರು ನ್ಯಾಯವಿಚಾರಣೆಯಲ್ಲಿ ಭಾಗವಹಿಸಲಿಲ್ಲ. "ನಿಮ್ಮದು ಏನಾದರೂ ಹೇಳಿಕೆ ಇದೆಯೇ?" ಎಂದು ಮೆಜಿಸ್ಟ್ರೇಟರು ಕೇಳಿದ್ದಕ್ಕೆ ಶ್ರೀಮತಿಯವರು No Thanks (ಇಲ್ಲ ಉಪಕಾರ) ಎಂದರು.

ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಸರ್ದಾರ ಸರ್ದೂಲ ಸಿಂಗರನ್ನು ಲಾಹೋರಿನಲ್ಲಿ ಕೈದು ಮಾಡಿದರು. ಅವರು ವಕೀಲ ಸಾ. ಅಬ್ದುಲ್ ಕಲಂ ಆಜಾದರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆರಿಸಿರುವರು. ಅಬ್ದುಲ್ ಕಲಮರು ಕಾಂಗ್ರೆಸಿನ ಕಾರ್ಯದಲ್ಲಿ ಭಾಗವಹಿಸಿದರು. ಸೆರೆಯಾಗಿ ಹೋಗಿದೆ.

ಮಧ್ಯಪ್ರಾಂತ್ಯದ ಭೋಪಾಲ್ ಹೋಟೆಲಿನಲ್ಲಿ ಅಲ್ಲಿಯ ನಾಜಿ ಗವರ್ನರಿಂದ ಸರ್ ರಜಿನಾಲ್ಡ್ ಕ್ರೆಡೊಕ್ ಎಂಬವರು ಭಾವಚಿತ್ರವೊಂದಿತ್ತು. ಇವರು ಇಂಗ್ಲೆಂಡಿನಲ್ಲಿ ಕಾಂಗ್ರೆಸು ಮತ್ತು ಹಿಂದೀಯರನ್ನು ದ್ವೇಷಿಸುತ್ತಿರುವುದಕ್ಕಾಗಿ ಆ ಭಾವಚಿತ್ರವನ್ನು ಮಂದಿರದಿಂದ ಸದಸ್ಯರು ತೆಗೆದುಬಿಟ್ಟರೆಂದು ತಿಳಿದುಬರುತ್ತದೆ.

— ಕ್ರಾಂತಿಕಾರರ ಹುಟ್ಟಿದ ಹುವುದಕ್ಕಾಗಿ ಸರಕಾರವು ಗಾಂಧಿ ಜೀಯವರ ಸಹಕಾರವನ್ನು ಪಡೆಯಬೇಕೆಂಬುದು. ಕಲ್ಕತ್ತ ಕಾರ್ಪೊರೇಶನಿನವರು ಠರಾವು ಮಾಡಿಕೊಂಡರು.

— ಕರಾಚಿಯ ಸ್ವದೇಶೀ ಪ್ರಚಾರ ಸಮಿತಿಯು ಭರದಿಂದ ಕೆಲಸ ಮಾಡುತ್ತಿದೆ. ಒಂದು ಗಾಡಿ ಮೋಟಾರ್ ವಾಹನಗಳ ಮೇಲೆ ಸ್ವದೇಶೀ ವಸ್ತುಗಳನ್ನು ಹೇರಿಕೊಂಡು ಸುಮಾರು ಮಂದಿಗಳು ಒಟ್ಟುಗೂಡಿ ನಗರದಲ್ಲೆಲ್ಲಾ ಮೆರವಣಿಗೆ ಮಾಡಿದರು. ಇವರು ಮುಂದಾಳುತನವನ್ನು ಅಲ್ಲಿಯ ಬಯರು ಮ್ಯಾನರೇ ವಹಿಸಿದ್ದರು.

— ಕರಾಚಿಯಲ್ಲಿನ ಗಾಂಧಿಜೀಯವರ "ದಿಸಲನ್ನು ಸುಟ್ಟರು. ಅವರು ಯಾರೆಂದೂ ಬೆಂಕಿಯ ಕಾರಣವೇನೆಂದೂ ತಿಳಿದುಬಂದಿಲ್ಲ.

— ತಾ ೧೭ರಲ್ಲಿ ಮ್ಯಾಡಿಲ್ಲಿಯ ಎಸೆಂಬ್ಲಿ ಅಧಿವೇಶನವು ಜರಗಿತು. ತಮ್ಮ ಕರ್ತವ್ಯಗಳನ್ನು ನೆರವೇರಿಸಲು ೧೫ ಮಂದಿ ಪೋಲೀಸರಿಗೆ ಆಜ್ಞೆಯಾಯಿತು. ಆದರ ಆ ೧೫ ಮಂದಿಗಳು ತಮ್ಮ ಕೆಲಸವನ್ನು ಮಾಡಲು ತಿರಸ್ಕರಿಸಿದರು. ಕಾರಣವೇನೆಂದು ವಿಚಾರಿಸಿದಲ್ಲಿ ಪೋಲೀಸ್ ಸುಪರಿಂಟೆಂಡೆಂಟರಿಗೆ ತಾವು ದಿನ ಎಂಟು ಘಂಟೆ ಕೆಲಸ ಮಾಡಿದ್ದೇವೆಂದೂ ಹೆಚ್ಚಿನ ಕೆಲಸವನ್ನು ಮಾಡಲು ತಮಗೆ ಅಸಾಧ್ಯವೆಂದೂ ಪೋಲೀಸರ ಉತ್ತರವಾಯಿತು. ಇವರ ವಿಚಾರಣೆಯಾಗಲಿದೆ.

— ಸಿಮ್ಲಾದಲ್ಲಿ ಸರ್ಜಂಟರಾದ ಕಾಂಬ್ಸ್ ಎಂಬವರು ಮೋಟಾರ್ ಸೈಕಲಿನಲ್ಲಿ ಭರದಿಂದ ಹೋಗುತ್ತಿರುವಾಗ ಒಬ್ಬ ಮಿಲಿಟರಿ ಆಫೀಸರರೂ ಒಂದು ಕಾರಿನಲ್ಲಿ ಓಡಿ ಬಂದರು. ಚಟಾಪಟಿಯಾಯಿತು, ಸಾರ್ಜಂಟರಿಗೆ ವಿಶೇಷ ಜಖಂ ಆಗಿದೆ.

ಪೂನೆಯ ಹದಾಪ್ಸರ್ ಕೊಪರೇಟಿವ್ ಸೊಸೈಟಿಯ ಹಣವನ್ನು 'ದುರ್ವಿನಿಯೋಗ' ಮಾಡಿದ ಸಂಬಂಧ ಪೋಲೀಸ್ ಪಟೇಲ, ರಾವ್ 'ಸಾಹೇಬ' ಧೊಂಡಿ ದಾತಾಜೀ ಎಂಬವರಿಗೆ ೧೦೦೦ ಜುಲ್ಮಾನೆ ಅಥವಾ ೯ ತಿಂಗಳ ಕಠಿಣ ಸಜೆಯು ವಿಧಿಸಲಾಗಿದೆ

— ಬೆಂಗಳೂರಿನ ಕುಂಬಾರ್‌ಗುಂಡಿಯಲ್ಲಿ ಅಬ್ದುಲ್ ಸಖೂರ್ ಎಂಬವರ ಸಿಡಿಮದ್ದು ತಯಾರಿಯ ಕೊಟಡಿಯಲ್ಲಿ ಒಂದು ಬೆಂಕಿಯು ಆಕಸ್ಮಾತ್ ಎದ್ದುಕೊಂಡು, ಅದೇ ಮನೆಯೇ ಸ್ಫೋಟನವಾಗಿ ಏಳು ಮಂದಿಗಳು ಮಡಿದರು, ಕೋಣೆಯೊಳಗಿದ್ದ ಮಗುವನ್ನು ಮಡಿಲಲ್ಲಿಟ್ಟುಕೊಂಡು ಕೂತಿದ್ದ ಸ್ತ್ರೀಯೊಬ್ಬಳು ಮಗು ಸಮೇತ ಮಡಿದಳು

— ಕಲ್ಕತ್ತದ ಕುಲಿಪಟ್ ಹಳ್ಳಿಯಲ್ಲಿ ಡಕಾಯಿತಿಯು ನಡೆಯಲಿದೆಯೆಂದು ಪೋಲೀಸರಿಗೆ ತಿಳಿಯಿತು. ತಾ ೧೯ನೇ ದಿನ ಪೋಲೀಸ ಫೌಜು ಆ ಹಳ್ಳಿಗೆ ಹೋಗಿ ಅಡಗಿ ಕೂತಿತು ಡಕಾಯಿತರು ತಮ್ಮ ಕೆಲಸವನ್ನು ಜಾರಿ ಮಾಡುತ್ತಿರುವಾಗ — ಪ್ರಾರಂಭವಾಯಿತು — ದ್ವಂದ್ವ ಯುದ್ಧ! ಕೆಲವು ಡಕಾಯಿತರೂ ಪೋಲೀಸರೂ ಜಖಂಗೊಂಡಿರುವರು

ಢಕ್ಕಾದಲ್ಲಿ ಧಮರೈ ಎಂಬಲ್ಲಿರುವ ಕುದ್ರತ್ ಬೆಪಾರಿ ಎಂಬವರ ಮನೆಯಲ್ಲಿ ರಾತ್ರಿ ಸಮಯ ಹದಿನೈದು ಮಂದಿ ಪೋಲೀಸ್ ವೇಷಧಾರಿಗಳು ಬಂದು, ಯಜಮಾನರನ್ನು ಕರೆದರು ಬೆಪಾರಿಯವರು ಬಾಗಿಲು ತೆರೆದು ಆಗಂತುಕರಿಗೇನು ಬೇಕೆಂದರು 'ನಾವು ಪೋಲೀಸರು ಪತ್ತೆ ನಡೆಸಲಿದೆ' ಎಂಬ ಉತ್ತರ ಸಿಕ್ಕಿತು. ಒಳ ಹೊಕ್ಕರು ಖಜಾನೆಯು ಖಾಲಿಯಾಗಿ ೫೦೦೦ ರೂಪಾಯಿಗಳನ್ನು ಹಿಡಿದುಕೊಂಡು ಓಡಿದರು. ಅವರು ಪೋಲೀಸರಲ್ಲವೆಂದೂ ಪೋಲೀಸ್ ವೇಷಧಾರಿಗಳಾದ ಡಕಾಯಿತರೆಂದೂ ಆ ಮೇಲೆ ತಿಳಿದುಬಂತು

— ಟ್ಯುಟಿಕೊರಿನ ಮಶೀದಿಯಲ್ಲಿ ಮೊತಿಯಾಂ ಎಂಬವರು ಪ್ರಾರ್ಥನೆ ಮಾಡುತ್ತಿದ್ದಾಗ ಅವರನ್ನು ಪೀರ್ ಮಹಮ್ಮದನೆಂಬ ಅವರ ಸೇವಕನೊಬ್ಬನು ಹಿಂದಿನಿಂದ ತಿವಿದನು. ಅಪರಾಧಿತನನ್ನು ಹಿಡಿಯಬಂದ ಇನ್ನೊಬ್ಬನಿಗೂ ಕತ್ತಿಯನ್ನಿಟ್ಟನು. ಅವನನ್ನು ಪೋಲೀಸರು ಸೆರೆ ಹಿಡಿದರು

— ಅಹ್ಮದಾಬಾದಿನ ಸಬರ್ಮತಿ ಸೆರೆಮನೆಯಿಂದ ಒಟ್ಟು ೧೫೦ ಮಂದಿ ರಾಜಕೀಯ ಕೈದಿಗಳನ್ನು ಬೇರೆ ಕಡೆಗೊಯ್ದರು ಶ್ರೀ ಮಹದೇವ ದೇಸಾಯಿಯವರು ಇವರಲ್ಲೊಬ್ಬರು

— ಹಿಂದೂದೇಶದಿಂದ ಭಂಗಾರವು ಇನ್ನೂ ಇನ್ನೂ ವಿದೇಶಗಳಿಗೆ ಹೋಗುತ್ತಿದೆ ಮುಂಬಾಯಿಯಿಂದ ಲಂಡನಿಗೆ ತಾ ೧೩ರೊಳಗೆ ಚಿತ್ರಾಲ್ ಎಂಬ ಹಡಗಿನ ಮೂಲಕ ೧೯ ಲಕ್ಷ ೨೫ ರೂಪಾಯಿ ಬೆಲೆಯ ಭಂಗಾರವು ಹೋಯಿತು ತಾ ೧೦ನೇ ದಿನ ಹೊರಟ ಬ್ರಿಟಾನಿಕಾ ಹಡಗಿನಲ್ಲಿ ೮೮ ಲಕ್ಷ ೧೯ ಸಾವಿರ ರೂಪಾಯಿ ಬೆಲೆಯ ಭಂಗಾರವು ಹೋಯಿತು.

— ಭಂಗಾರವನ್ನು ವಿದೇಶಗಳಿಗೆ ಕಳುಹಿಸುತ್ತಿರುವುದರಿಂದ ಹಿಂದೂದೇಶದಲ್ಲಿ ಬಡತನವು ವಿಪರೀತವಾಗಲಿದೆ ದೇಶದ ಸಂಪತ್ತಾಗಿರುವ ಈ ಭಂಗಾರದ ಕೊರತುಗಳನ್ನು ವರ್ತಕರು ಹೆಚ್ಚಿನ ನೋಟು ತುಂಡುಗಳ ಆಶೆಗೆ ಹೋಗಿ ಮಾರಬಾರದಾಗಿ ತಡೆಯಬೇಕೆಂದು ಅಹ್ಮದಾಬಾದಿನಲ್ಲಿ ಮಿಲ್ಲು ಮಾಲೀಕರು ಅಲೋಚಿ ಸಾಮ್ರಾಜ್ಯ ಸರಕಾರದ ಆರ್ಥಿಕ ಮಂತ್ರಿಗಳೊಡನೆ ಕೇಳಿಕೊಂಡಿರುವರು

— ವಿಡ್ಯಾಪುರದ ಸೆರೆಮನೆಯಲ್ಲಿದ್ದ ಕೆಲವು ಅರಾಜಕರ ಕೈದಿಗಳು ಕಬ್ಬಿಣದ ದೀವಿಗೆಗಳಿಗೆ ಹಳೆವಸ್ತ್ರದ ಹಗ್ಗ ಮಾಡಿ ಕಟ್ಟಿ ಮಾಡಿನ ಹಂಚು ತೆಗೆದು ಗೋಡೆ ಹಾರಿ ರೈಲುಬಂಡಿಯನ್ನು ಹತ್ತಿ ಪಲಾಯನ ಮಾಡಿದರು ಈ ಸಂಬಂಧವಾಗಿ ಕೆಲವು ಪಹರೆಯವರು ಮನೆಗೆ ಹೋಗಬಹುದೆಂದು ನೋಟೀಸು ಸಿಕ್ಕಿದೆ

— ರತ್ನಗಿರಿಯಲ್ಲಿ ಇಬ್ರಾಹಿಮ್ ಎಂಬ ಮುಸಲ್ಮಾನನೊಬ್ಬನು ಹಿಂದೂಸಭೆಯವರ ಸ್ವೀಕಾರದಿಂದಾಗಿ ಹಿಂದೂಮತಕ್ಕೆ ಸೇರಿದನು. ಅವನಿಗೆ ಈಗ ಈಶ್ವರದಾಸನೆಂದು ನಾಮಕರಣವಾಗಿದೆ

— ಮದ್ರಾಸಿನ ನಾರಾಯಣಸಿಂಗ್ ಸ್ವಾಮಿಯವರು ಎಂತಹ ವಿಷವನ್ನಾದರೂ ತಿನ್ನುವವರು ಗಾಜಿನ ತುಂಡು ಕಲ್ಲು ಮುಳ್ಳು, ಕಸಕಡ್ಡಿ ಮೊದಲಾದ ಎಲ್ಲಾ ವಸ್ತುಗಳನ್ನೂ ತಿನ್ನುವರು ಇವರು ಮೊನ್ನೆ ಕಲ್ಕತ್ತದಲ್ಲಿ ದೊಡ್ಡ ದೊಡ್ಡ ಮಹನೀಯರುಗಳೆದುರು ತನ್ನ ಪ್ರದರ್ಶನವನ್ನು ಮಾಡಿದರು ಇವರ ಪ್ರದರ್ಶನವನ್ನು ನೋಡಿ ಆವೇಶಗೊಂಡ ೧೨ ಮತ್ತು ೧೩ ವರ್ಷ ಪ್ರಾಯದ ಇಬ್ಬರು ಆಂಗ್ಲೋ ಇಂಡಿಯನ್ ಹುಡುಗರು ತಾವೂ ಗಾಜನ್ನು ತಿಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು

— ಕಲ್ಕತ್ತದ ಬೆತೂನ್ ಕಾಲೇಜಿನಲ್ಲಿ ಕೆಲವು ವಿದ್ಯಾರ್ಥಿನಿಯರು ಪೇಶಾವರ ದಿನಾಚರಣೆಯ ನಿಮಿತ್ತ ಜನವರಿ ೨೬ನೇ ದಿವಸ ಹರತಾಳವನ್ನಾಚರಿಸಿದರು ಅವರನ್ನು ಹೊರನಿಲ್ಲಿಸಲಾಯಿತು ಈ ಸಂಬಂಧವಾಗಿ ಮತ್ತೂ ಕೆಲವರು ಗೈರಾಜರಾದರು ಅವರನ್ನೂ ಹೊರಗಿಡಲಾಯಿತು ಈಗ ಒಟ್ಟು ೪೦ ಮಂದಿ ವಿದ್ಯಾರ್ಥಿನಿಯರನ್ನು ಅವರ ಅಶಿಷ್ಟಸಂಪ್ರದಾಯಕ್ಕಾಗಿ ಪ್ರಿನ್ಸಿಪಾಲರು ಹೊರಗೆ ಹಾಕಿರುವರು

ನಾಗಪುರದ ಮಿಲ್‌ಮಜ್ಜೂರರು ಸುಮಾರು ೩೦೦೦ ಮಂದಿಗಳು ಕೆಲವು ಶರ್ತಗಳನ್ನು ತಮ್ಮ ಮಾಲಿಕರೆದುರಿಗಿಟ್ಟು, ಅವುಗಳು ಪೂರ್ತಿ ಸಲ್ಪಡದಿದ್ದರೆ ತಾವು ಕೆಲಸವನ್ನೇ ಮಾಡುವುದಿಲ್ಲವೆಂದು ಮುಷ್ಕರ ಹಿಡಿದು ಗೆದ್ದರು

ಮೌಲಾನ ಶೌಕತಾಲಿಯವರು ಪಶ್ಚಿಮೋತ್ತರ ಗಡಿಪ್ರಾಂತ್ಯಗಳನ್ನು ಸಂದರ್ಶಿಸಬಹುದಾಗಿ ಸರಕಾರದ ಅಪ್ಪಣೆಯಾಗಿದೆ

— ಮದ್ರಾಸು ಗವರ್ನರರ ಪುತ್ರಿ ಮಿಸ್ ಸ್ಟ್ಯಾನ್ಲಿ ಎಂಬವರಿಗೆ ಸರ್ ಚಾರ್ಲ್ಸ್ ಬುಕಾನನ್ ಎಂಬವರೊಡನೆ ತಾ ೨೩ನೇ ದಿನ ವಿವಾಹವಾಯಿತು.

— ಷಹಜಹಾನ್‌ಪುರದ ಸಬ್‌ಇನ್ಸ್‌ಪೆಕ್ಟರರಾದ ಶ್ರೀ. ನವಲ್ ಕಿಶೋರ್ ಎಂಬವರು ಕಳೆದ ವರುಷದ ಮೇ ತಿಂಗಳಲ್ಲಿ ಕೊಲೆಗೈಯಲ್ಪಟ್ಟಿದ್ದರು ಅವರ ಸ್ಮಾರಕವೊಂದನ್ನು ಇನ್ಸ್‌ಪೆಕ್ಟರ್ ಜನರಲ್‌ರು ಲಕ್ನೋವಿನಲ್ಲಿ ಅನಾವರಣ ಮಾಡಿದರು

— ಅಹ್ಮದಾಬಾದಿನ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿನವರು ಗಾಂಧೀಜೀಯವರ ಜನನ ದಿನ ಸ್ಮರಣಾರ್ಥವಾಗಿ ಒಂದು ದಿನ ರಜೆ ಮಾಡಿಕೊಂಡರು

ಒಂದು ಲೈಫ್ ಇನ್ಶ್ಯೂರೆನ್ಸ್ ಕಂಪೆನಿಯ ಏಜಂಟರಾದ ಶ್ರೀ ಬೆನೋಯೇಂದ್ರ ನಸ್ ಎಂಬವರು ಬಂಗಾಳ ಓರ್ಡಿನೆನ್ಸ್ ಮೇರೆಗೆ ಕೈದು ಮಾಡಲ್ಪಟ್ಟರು

ಮುಂಬಾಯಿಯ ಫ್ರೀ ಪ್ರೆಸ್ ಜರ್ನಲ್ ಕರ್ತೃಗಳು ಶ್ರೀ ಕೆ ಶ್ರೀನಿವಾಸನ್ ಮತ್ತು ಶ್ರೀಮತಿ ಸದಾನಂದರು ದ್ವರಸ್ತೆ ಅವರು ರಾಜಿನಾಮೆ ಕೊಟ್ಟಿರುವುದರಿಂದ ಅದರ ಕರ್ತೃಗಳಾಗಿ ಶ್ರೀ ಬಿ ಎಸ್ ನಾಡಕರ್ಣಿ ಎಂಬವರು ನಿಂತಿರುವರು

ಅಹ್ಮದಾಬಾದಿನಲ್ಲಿ ಗುಜರಾತ್ ಸ್ಟೈಲ್ ಎಂಬ ಅಂಕಿತದಿಂದ ಕೆಲವು ನೋಟೀಸುಗಳು ಗೋಡೆಗಳಿಗೆ ಹಚ್ಚಲ್ಪಟ್ಟಿವೆ ನೋಟೀಸಿನ ಮೇಲೆ ಒಂದು [illegible] ಚಿತ್ರ ತಾವು ಅಲ್ಲಿಯ ಪೋಲೀಸ್ ಇನ್ಸ್‌ಪೆಕ್ಟರರಾದ ಓ. ಗ್ರೀಸ್ ಎಂಬವರನ್ನೂ ಇನ್ನಿತರ ಸರಕಾರೀ ಉದ್ಯೋಗಿಗಳನ್ನೂ ವಧಿಸುವೆವೆಂದು ಬರೆದಿರುತ್ತದೆ "ಯಾರು ಅತ್ಯಾಚಾರವನ್ನು ನಡೆಸುತ್ತಾರೋ ಅವರನ್ನು ಕೊಲ್ಲುವುದೇ ಗುಜರಾತ್ ಸ್ಟೈಲಿನ ಧ್ಯೇಯ. ಅದಕ್ಕೆ ಕೊಲೇಜುಗಳ ಗ್ರೇಜುವೇಟರೇ ಸಹಾಯಕರು" ಎಂದೂ ಅದರಲ್ಲಿದೆ ಕೆಲವು ಪತ್ರಿಕಾ ಸಂಪಾದಕರಿಗೂ ಭಯಸೂಚಕ ನೋಟೀಸುಗಳು ಹೋಗಿವೆ

ಹೈದರಾಬಾದಿನ ನಿಜಾಮರು ನ್ಯೂದಿಲ್ಲಿಯಲ್ಲಿ ವೈಸರಾಯರನ್ನೂ ಅವರ ಪತ್ನಿಯವರನ್ನೂ ಸ್ವಾಗತಿಸಿ ಒಂದು ಊಟ ಕೊಟ್ಟರು ಇನ್ನಿತರ ಎಂಭತ್ತು ಮಂದಿಗಳೂ ಅದರಲ್ಲಿ ಭಾಗವಹಿಸಿದ್ದರು

— ನ್ಯೂ ಡಿಲ್ಲಿಯ ಎಸೆಂಬ್ಲಿಯಲ್ಲಿ ಚರ್ಚೆ ನಡೆಯಿತು ಶ್ರೀ ಭಗತ್ ಸಿಂಗರು ಸ್ವದೇಶೀ ಪ್ರಚಾರವು ದೋಷಕರ ಸಂಗತಿಯೇ ಎಂದು ಪ್ರಶ್ನಿಸಿದರು ಸರ್ ಜೇಮ್ಸ್ ಕ್ರೆರರ್ ಇವರು ಬರೇ ಸ್ವದೇಶೀ ಪುರಸ್ಕಾರವು ಓರ್ಡಿನೆನ್ಸ್ ಮೇರೆಗೆ ಶಿಕ್ಷಿಸಲ್ಪಡುವ ದೋಷವಲ್ಲ ಈ ವಿಷಯ ಸ್ಥಳೀಕ ಸರಕಾರಗಳು ಚೆನ್ನಾಗಿ ತಿಳಿದಿವೆ ಇದನ್ನು ವಿವರಿಸಿ ಬರೆಯುವ ಅಗತ್ಯವಿಲ್ಲ ಎಂದರು

— ನವಜೀವನ ಮತ್ತು ಯಂಗ್ ಇಂಡಿಯಾದ ಮೆನೇಜರರಾದ ಶ್ರೀ ಮೋಹನ್‌ಲಾಲ್ ಭಟ್ಟರು ಅಹ್ಮದಾಬಾದಿನಲ್ಲಿ ಸೆರೆಯಾಳಾಗಿರುವರಷ್ಟೆ ಅವರು ತಮ್ಮ ಮುದ್ರಣಾಲಯಕ್ಕಾಗಿ ೨೫೦೦ ರೂಪಾಯಿ ಭದ್ರತೆಯನ್ನೂ ನವಜೀವನ ಪ್ರಕಾಶಕರಾಗಿರುವುದಕ್ಕೆ ಇನ್ನೊಂದು ೨೫೦೦ ರೂಪಾಯಿಯನ್ನೂ ಭದ್ರತೆಯಾಗಿ ಇಡಬೇಕೆಂದು ಮುಂಬಾಯಿ ಸರಕಾರವು ಒಂದು ನೋಟೀಸನ್ನು ಕಳುಹಿಸಿದೆ

ಪೇಶಾವರದಲ್ಲಿ ೧೪೪ನೇ ಸೆಕ್ಷನ ಇನ್ನೂ ಎರಡು ತಿಂಗಳ ೧೪ ತನಕ ಮುಂದರಿಸಲ್ಪಟ್ಟಿದೆ

— ಕಲ್ಲಿಕೋಟೆಯ ಮ್ಯುನ್ಸಿಪಾಲಿಟಿಯವರು ಸಾರ್ವಭೌಮರ ಚಿತ್ರವನ್ನಲ್ಲದೆ ಇನ್ನಿತರರ ಭಾವ ಚಿತ್ರವನ್ನು ಕೌನ್ಸಿಲಿನಲ್ಲಿ ತೂಗಾಡಿಸಲು ಹಣವೆಚ್ಚ ಮಾಡಬಾರದಾಗಿ ಸರಕಾರದ ಆಜ್ಞೆಯಾಗಿತ್ತು ಇದನ್ನು ಕುರಿತು ಖೇದಸೂಚನಾ ಠರಾವನ್ನು ಕೌನ್ಸಿಲಿನವರು ಮಾಡಿಕೊಂಡರು

— ಲಕ್ನೋವಿನ ತೂಫಾನ್ ಎಂಬ ಪತ್ರಿಕೆಯ ಪ್ರಕಾಶಕರು ೧೫೦೦ ರೂಪಾಯಿ ಭದ್ರತೆಯನ್ನು ಕೊಡಬೇಕಾಗಿ ಕೇಳಿದ್ದಾರೆ

೧೪ ಮತ್ತು ೫ ವರ್ಷ ಪ್ರಾಯದ ಬಾಲಕರನ್ನು ಭಿಕ್ಷಾಟನಕ್ಕಾಗಿ ಕಳುಹಿದ ಭಾರಿಗೋಸ್ವಾಮಿ ಎಂಬವನಿಗೆ ಚಿಲ್ಡ್ರನ್ ಎಕ್ಟ್ ಪ್ರಕಾರ ೯ ವರುಷಗಳ ಕಠಿಣ ಸಜೆಯನ್ನು ಕಲ್ಕತ್ತದಲ್ಲಿ ವಿಧಿಸಿದ್ದಾರೆ

— ಕರಾಚಿಯಲ್ಲಿ ಪಿಕೆಟಿಂಗನ್ನೂ ಮತ್ತು ಬುಲೆಟಿನ್ ಮಾರಾಟವನ್ನೂ ಮಾಡಿದ ೩೩ ಮಂದಿಗಳಿಗೆ ಶಿಕ್ಷೆಯಾಯಿತು ಇಬ್ಬರು ಹುಡುಗರಿಗೆ ಒಂಭತ್ತರಂತೆ ಛಡಿಗಳು ಬಿದ್ದುವು

ದಕ್ಷಿಣ ಕನ್ನಡ.

ಮಂಗಳೂರು: — ಇಲ್ಲಿಯ ಮ್ಯುನಿಸಿಪಾಲಿಟಿಯ ೧೯೩೨-೩೩ನೇ ವರ್ಷದ ಆಯವ್ಯಯದ ಅಂದಾಜುಪಟ್ಟಿಯನ್ನು ಚರ್ಚಿಸಲು ತಾ ೧೬ನೇ ದಿನ ಒಂದು ಸಭೆಯು ಜರಗಿದ್ದಿತು ಅನೇಕ ಸುಧಾರಣೆಗಳು ಮಂಜೂರಾಗಿವೆ

ಸೋಮವಾರ ಸಂಜೆ ಇಲ್ಲಿಂದ ೧೦ ಮಂದಿ ಪೋಲೀಸರು ಒಂದು ಬಸ್ಸಿನಲ್ಲಿ ಕುಂದಾಪುರಕ್ಕೆ ತೆರಳಿದರು ಅಲ್ಲಿಯ ಸ್ಥಿತಿಯು ಅಶಾಂತಿಕರವಾಗಿರುವುದಂತೆ

ನಮ್ಮ ಜಿಲ್ಲೆಯವರೇ ಆಗಿರುವ ಶ್ರೀ ವಿ ಎಸ್ ಹೆಜ್ಮಾಡಿ ಐ ಸಿ ಎಸ್ ಇವರು ಕರ್ನೂಲಿನ ಕಲೆಕ್ಟರಾಗಿ ನೇಮಕ ಹೊಂದಿರುವರು ಇವರು ಸಾರಸ್ವತರು

ಇಲ್ಲಿಯ ಉರ್ವದ ಮಾರಿಗುಡಿಯಲ್ಲಿ ಮಂಗಳವಾರ ದಿನ ಮಾರಿಪೂಜೆಯು ನಡೆಯಿತು ಮಾರಿಯಮ್ಮನಿಗಾಹುತಿಯಾಗಿ ಬಂದ ಕೋಳಿಗಳ ಸಂಖ್ಯೆಯು ಕಡಿಮೆಯೇ ಸರಿ ಕುರಿಗಳು ಇಷ್ಟು ವರುಷಗಳಿಗಿಂತ ಎಷ್ಟೋ ಕಡಿಮೆ ಮೊದಲು ನೂರುಗಟ್ಟಳೆ ಕುರಿಗಳು ವಧಿಸಲ್ಪಡುತ್ತಿದ್ದುವು

ತಾ ೧೯ನೇ ದಿನ ಸಂಜೆ ಮಂಗಳೂರು ಮೈದಾನದಲ್ಲಿ ಇಲ್ಲಿಯ ಕೊಲೇಜುಗಳೆರಡರೊಳಗೆ ಕಾಲ್ಚೆಂಡಾಟವು (ಫೂಟ್ ಬೋಲ್ ಮೇಚ್) ನಡೆಯಿತು ಗವರ್ನಮೆಂಟ್ ಕೊಲೇಜಿನವರು ೫ ಗೋಲುಗಳನ್ನು ಸ್ವೀಕರಿಸಬೇಕಾಯಿತು.

ಡಿಪ್ರೆಸ್ಡ್ ಕ್ಲಾಸಸ್ ಮಿಶನಿನಲ್ಲಿ ಹಣದಭಾವವು ಬಹಳವಾಗಿದ್ದು ಅನೇಕ ತೊಂದರೆಗಳು ಬಂದೊದಗಿರುವುದರಿಂದ ಹಿಂದೂಗಳ ಕರ್ತವ್ಯಗಳಿಗೆ ಒಂದಾದ ಅಂತ್ಯಜನೋದ್ಧಾರಕ್ಕೆ ಎಲ್ಲರೂ ತಮ್ಮ ತಮ್ಮ ಶಕ್ತಿ ಪೂರ್ವಕ ಸಹಾಯ ಮಾಡಿ ಮಿಶನಿನ ಕಾರ್ಯವನ್ನು ಪ್ರೋತ್ಸಾಹಿಸಬೇಕಾಗಿ ಜತೆಕಾರ್ಯದರ್ಶಿಗಳಾದ ಶ್ರೀಗಳಾದ ಆರ್ ಸೂರ್ಯನಾರಾಯಣರಾವ್ ಮತ್ತು ಎ ಬಿ ಶೆಟ್ಟಿ ಇವರು ಪ್ರಾರ್ಥಿಸುತ್ತಾರೆ

ಬ್ರಾಹ್ಮಣ ಮತ್ತು ಇಂಡಿಯನ್ ಕ್ರಿಶ್ಚನ್ ಜಾತಿಯ ವಿದ್ಯಾರ್ಥಿಗಳಿಗೆ ಎರಡು ವಿಕ್ಟೋರಿಯಾ ಜುಬಿಲಿ ವಿದ್ಯಾವೇತನವನ್ನು ಕೊಡುವುದಕ್ಕಾಗಿ ಒಂದು ಸ್ಪರ್ಧಾಯ ಪರೀಕ್ಷೆಯು ಗವರ್ನಮೆಂಟ್ ಕಾಲೇಜಿನಲ್ಲಿ ತಾ. ೨೭ನೇ ದಿನ ಜರಗಲಿರುವುದು

ಮೊನ್ನೆ ಸಂಜೆ ೪ ಘಂಟೆಗೆ ರಥಬೀದಿಯಲ್ಲಿ ಶ್ರೀಗಳಾದ ಅನಂತಪೈ ಕೋಟೆಕಾರು ಫಂಡರಿ ಬಿ ಎ ನಾಗಪ್ಪ ಪಕ್ಕಳ ಮತ್ತು ತಿಮ್ಮಪ್ಪ ಶೆಟ್ಟಿಗರನ್ನು ಒಂದು ಫೌಜು ಪೋಲೀಸರು ಮುತ್ತಿ ಸ್ಟೇಶನಿಗೆ ಕೊಂಡೊಯ್ದರು. ಇನ್ನು ಕೆಲವರ ಪತ್ತೆಯಾಗುತ್ತಲಿದೆ

ತಾ ೨೦ — ೧ — ೩೨ಕ್ಕೆ ಅಂತ್ಯವಾಗುವ ವಾರದ ಮಂಗಳೂರು ಮುನಿಸಿಪಾಲಿಟಿಯ ಹೆಲ್ತ್ ರಿಪೋರ್ಟಿನಿಂದ ತಿಳಿದುಬರುವಂತೆ ಒಟ್ಟು ೨೩ ಮರಣಗಳೂ ೩೫ ಜನನಗಳೂ ಆಗಿವೆ

ಕುಂದಾಪುರದ ಶ್ರೀಮತಿ ಆನಂದೀಬಾಯಿಯವರು ಇತ್ತೀಚೆಗೆ ಇಲ್ಲಿನ ಸ್ಥಾನಿಕ ಮಂದಿರದಲ್ಲಿ ಗಾಯನ ಕಚೇರಿಯನ್ನು ನಡೆಸಿದ್ದರಷ್ಟೆ ಇವರಲ್ಲಿ ಹೆಚ್ಚಿನ ಸಂಗೀತ ಕಲಾಕೌಶಲ್ಯವಿರುವುದರಿಂದ ಇವರಿಗೆ ಅನೇಕ ಕಡೆಗಳಿಂದ ಹೆಚ್ಚಿನ ಪ್ರೋತ್ಸಾಹವು ದೊರೆತಿದ್ದು ಇವರ ನಮ್ಮೂರಲ್ಲಿ ಹೆಣ್ಣು ಮಕ್ಕಳಿಗಾಗಿ ಒಂದು ಸಂಗೀತ ಶಾಲೆಯನ್ನು ತೆರೆಯುವರೆಂದು ತಿಳಿದುಬರುತ್ತದೆ

ಇಲ್ಲಿನ ಆರ್ ಬಿ ವಸಂತರ ಜವಳಿ ಅಂಗಡಿ ಎದುರು ಬುಧವಾರ ಪೂರ್ವಾಹ್ನ ಶ್ರೀಗಳಾದ ದುರ್ಗಪ್ಪ ಸುವರ್ಣ [illegible] ಮತ್ತು ಬಾಬು ದೇವಾಡಿಗ ಎಂಬ ಮೂವರು ಸ್ವಯಂಸೇವಕರು ಪಿಕೆಟ್ ಮಾಡಿದರು ಎಂದಿನಂತೆ ಪೋಲೀಸ ಫೌಜು ಲಾರಿಯಲ್ಲಿ ಬಂದು ಮೂವರನ್ನೂ ಹೊಡೆದು ಅವರು ಕೆಳಬಿದ್ದ ಮೇಲೆ ಲಾರಿಯಲ್ಲಿ ಎತ್ತಿ ಹಾಕಿ ಆಸ್ಪತ್ರೆಗೊಯ್ದರು ಮೂವರೂ ಬಹಳ ಜಖಂಗೊಂಡಿರುವರು ಕಾಲುಗಂಟು ತೊಡೆ, ಕೈ ನಡು ಮೊದಲಾದ ಅಂಗಾಂಗಗಳಿಗೆ ಪೆಟ್ಟುಗಳು ಬಿದ್ದಿವೆ

ಈ ಮೇಲೆ ಹೇಳಿದ ಆರ್ ಬಿ ವಸಂತರ ಅಂಗಡಿ ಎದುರು ನಿನ್ನೆ ಪೂರ್ವಾಹ್ನ ಶ್ರೀಮತಿ ಸಂಪರಿಬಾಯಿ ಮತ್ತು ಶ್ರೀಮತಿ ಸಂಜೀವಿಬಾಯಿ ಎಂಬವರು ಪಿಕೆಟಿಂಗ್ ನಡೆಸಿದರು ಸ್ವಲ್ಪ ಸಮಯ ಕಳೆಯುತ್ತಲೇ ಪೋಲೀಸರ ತಂಡವು ಬಂದು ಅವರೀರ್ವರನ್ನು ದಸ್ತಗಿರಿ ಮಾಡಿ ಸ್ಟೇಶನಿಗೆ ಕೊಂಡೊಯ್ದರು

ಕೊಂಗ್ರೆಸ್ಸು ವಾರ್ತಾ ಪ್ರಕಟಣೆಯಂತೆ ಈ ದಿನ ಇಲ್ಲಿಯ ರಥಬೀದಿ ಬಂದರು ಹಂಪನಕಟ್ಟೆ ಕೊಡಿಯಾಲಬೈಲ್ ಮಾರ್ಕೆಟು ವಾರ್ಡ್ ಮೊದಲಾದ ಕಡೆಗಳಲ್ಲಿ ಹೆಚ್ಚಿನ ಅಂಗಡಿಗಳು ಬಂದಾಗಿ ಮುಚ್ಚಲ್ಪಟ್ಟಿರುವುವು ಹರತಾಳವಾಗದಂತೆ ಅಧಿಕಾರವರ್ಗದವರ ಎಚ್ಚರವಿತ್ತು ಪೋಲೀಸರು ಬಸ್ಸುಗಳಲ್ಲಿ ತಿರುಗಾಡುತ್ತಿರುವರು ಇಲ್ಲಿಯ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಇಂದು ಬಹಳ ಕಡಿಮೆಯಿದೆಯಾಗಿ ತಿಳಿದುಬರುತ್ತದೆ

ಶಾಲಾ ಕೋಲೇಜುಗಳೆದುರು ಪಿಕೆಟಿಂಗ ನಡೆದಿತ್ತು ಪಿಕೆಟ್ ಮಾಡುತ್ತಿದ್ದವರನ್ನು ಪೋಲೀಸರು ಸ್ಟೇಶನಿಗೆ ಕೊಂಡು ಹೋಗಿ ಬಳಿಕ ಬಿಟ್ಟಿರುವರಾಗಿ ತಿಳಿದುಬರುತ್ತದೆ ಕೆಲ ಸ್ವಯಂಸೇವಕರು ಈ ದಿವಸ ಹರತಾಳವಾಚರಿಸದ ಅಂಗಡಿಗಳೆದುರು ಪಿಕೆಟಿಂಗ್ ನಡೆಸಲಾಗಿ ಅವರೂ ತಮ್ಮ ಅಂಗಡಿಗಳನ್ನು ಮುಚ್ಚಿದರು. ಡಿಸ್ಟ್ರಿಕ್ಟ್ ಕೋರ್ಟಿನ ಸಮೀಪವು ಪಿಕೆಟಿಂಗ್ ನಡೆದಿತ್ತು ಇಲ್ಲಿ ಪಿಕೆಟ್ ಮಾಡುತ್ತಿದ್ದವರನ್ನು ಬಸ್ಸಿನಲ್ಲಿ ದೂರ ಕೊಂಡುಹೋಗಿ ಬೆತ್ತಗಳಿಂದ ಹೊಡೆದಿರುವರಾಗಿ ತಿಳಿದುಬರುತ್ತದೆ ಈ ದಿವಸ ಹರತಾಳ ಆಚರಿಸದವರಿಗೆ ಪೋಲೀಸರು ಬೆದರಿಸಿರುವರಾಗಿ ವಾರ್ತೆಯೂ ಇದೆ.

ಶಾಲಿವಾಹನಶಕ ೧೮೫೩ನೇ ಪ್ರಜೋತ್ಪತ್ತಿ ಸಂವತ್ಸರದ ಮಾಘ ಬ/೬ ಶನಿವಾರದಿಂದ ಫ್ರವರಿ. ಸಂವತ್ಸರದ ಮಾಘ ಬ/೧೨ ಶುಕ್ರವಾರದ ವರೆಗಿನ ಪಂಚಾಂಗ (ಶಾಲಿವಾಹನಶಕ, ಮಕರ—ಕುಂಭ).

ತಾರೀಕು	ವಾರ	ತಿ.	ಘಳಿಗೆ.	ನಕ್ಷತ್ರ.	ಘಳಿಗೆ.	ಸೂರ್ಯೋದಯಕ್ಕೆ	ಸೂರ್ಯ. ಉ	ಅಸ್ತ
27	ಶನಿ	೬	೩೨.೩೨	ಸ್ವಾತಿ	೨೫	೧೫	6.51	6 38
28	ಆದಿ	೭	೨೭.೧೬	ಅನುರಾಧಾ	೫೬	೨ ೦೬	6 50	6 38
29	ಸೋಮ	೮	೨೨.೪೪	ಜ್ಯೇಷ್ಠಾ	೫೪	೫೦ ೦೬	6 50	6 38
1	ಮಂಗ	೯	೧೯. ೨	ಮೂಲಾ	೫೨	೧ ೧೦	6 49	6.38
2	ಬುಧ	೧೦	೧೬	ಪೂ. ಷಾ.	೫೧.೧೬	೧೯	6.48	6 39
3	ಗುರು	೧೧	೧೪.೧೬	ಉ. ಷಾ.	೫೧ ೪೬	೨೦	6.48	6 39
4	ಶುಕ್ರ	೧೨	೧೪ ೩೨	ಶ್ರವಣಾ	೫೪ ೩೨	೨೦	6 47	6.39

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಹೆಚ್ಚೆಂದರೆ	Minimum ಕಡಿಮೆಂದರೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
19	86— 6	72 — 5	—	—
20	87— 3	73 — 8	—	—
21	86— 5	72 — 3	—	—
22	85— 6	70 5	—	—
23	85 — 5	69 — 9	—	—
24	85— 5	70- 3	—	—
25	86— 7	73— 4	—	149-96

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ	ಆ	ವರೆಗೆ ರೂ	ಆ
ಹೊಸ ರಾಶಿ ಅಕ್ಕಿ	3	6	3	2
ಹೊಸ ಮಸ್ಕತಿ	4	0	4	8
ಹೊಸ ಗುಡ್ಡು	3	14	4	
ಹೊಸ ಸುಗ್ಗಿ	3	8	4	[illegible]
ಊರ ಅವ್ವಲ್ ಬೆಲ್ಲ	4	8	5	[illegible]
ರಂಗೂನು ಬೆಲ್ಲಗೆ ಗೋಣಿ ಗಳ್ಳೆ	[illegible]	8	[illegible]	2
ಎಲ್ಲೂರುಬೆಲ್ಲಗೆ ಮುಡಿ ಗಳ್ಳೆ	4	4	—	
ಗೋಧಿ ಗೋಣಿ ಗಳ್ಳೆ	[illegible]	8	[illegible]	8
ಹೆಸರು ಗೋಣಿ ಗಳ್ಳೆ	12	0	[illegible]	8
ಹುರುಳಿಗೋಣಿ ಗಳ್ಳೆ	6	8	[illegible]	0
ಕಡಲೆ ಗೋಣಿ ಗಳ್ಳೆ	8	8	12	8
ತೊಗರಿಬೇಳೆ ಗೋಣಿ ಗಳ್ಳೆ	13	8	21	0
ಉದ್ದು ಗೋಣಿ ಗಳ್ಳೆ	11	8	13	0
ಹೆಸರು ಗೋಣಿ ಗಳ್ಳೆ	10	4	11	
ಊರು ಒಣ ಖಂಡಿ ಗಳ್ಳೆ	36	0	3[illegible]	8
ಉಪ್ಪು ಗೋಣಿ ಗಳ್ಳೆ	4	12	4	14
ಹೊಗೆ ಖಂಡಿ ಗಳ್ಳೆ	80		6[illegible]	
ಕೊಪ್ಪ ಒಂದಿ ಖಂಡಿ ಗಳ್ಳೆ	31	0	—	
ಎಳ್ಳೆಂಡಿ ಖಂಡಿ ಗಳ್ಳೆ	2[illegible]	8	28	12
ಕೊಬ್ಬರಿ ಎಣ್ಣೆ ಮುಡಿ ಗಳ್ಳೆ	6	10	[illegible]	0
ಎಳ್ಳೆಣ್ಣೆ ಮುಡಿ ಗಳ್ಳೆ	6	12	[illegible]	0
ಹರಳೆಣ್ಣೆ ಶಿಶ್ಶೆಗೆ ಗಳ್ಳೆ	4	7	8	12
ಮೋರಿಶ ಸಕ್ಕರೆ ಮುಡಿ ಗಳ್ಳೆ	4	2	4	3
ಜೋನ ಮುಡಿ	4	0	5	0
ಸಾಸಿವೆ ಮುಡಿ ಗಳ್ಳೆ	5	8	6	0
ನೆಕ್ಕಿಪ್ ಕಾಫಿ ಖಂಡಿ ಗಳ್ಳೆ	217	8	226	
ಕಾಳುಮೆಣಸು ಖಂಡಿ ಗಳ್ಳೆ	7[illegible]	0	180	
ಯೇಲಕ್ಕಿ ಮುಡಿ ಗಳ್ಳೆ	27	0	28	
ಗೇರುಬೀಜ ಮುಡಿ ಗಳ್ಳೆ	4	6	4	12
ಕಪ್ಪುಬ ಖಂಡಿ ಗಳ್ಳೆ	30	0	33	8
ತಾಂಬ್ರ ತಗಡು ಮುಡಿ ಗಳ್ಳೆ	3	[illegible]	13	8
ತಾಂಬ್ರ ಪಾತ್ರೆಗಳು ಮುಡಿ ಗಳ್ಳೆ	15	[illegible]	16	0
ಆಜಿಪತ್ತು ಸೀರು ಗಳ್ಳೆ	10	12	16	0
ಹಿತ್ತಾಳೆ ತಗಡು ಮುಡಿ ಗಳ್ಳೆ	12	0	12	8
ಹವನು ಗಳ್ಳೆ	18	4	1[illegible]	8
ಹುಣಸೆ ಹುಳಿ ಖಂಡಿ ಗಳ್ಳೆ	4[illegible]		—	
ಕಿರೀಟಿ ಕಾಫಿ ಖಂಡಿ ಗಳ್ಳೆ	375		40[illegible]	
ಹಳೆ ಅಡಿಕೆ	150		205	
ಹೊಸಅಡಿಕೆ	140		145	

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ ಕನ್ವೆಯನ್ಸ್, Tel. Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವರ್ಗ್ಗರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟ್ರಾಮುಗಳ ವಿವರ

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ್ ಸ್ಟೇಶನ್ ಬದ ಧರ್ಮಸ್ಥಳ ಬೀದಿಗೆ ದಿವ 1 30ಕ್ಕೂ, ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ರಾಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ [illegible] ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗರೆಗೂ 4 ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗ್ಗೆರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದ್ದಪ್ಪಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗ್ಗೆರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್, ಪಂಡರಪುರ ಗೋವಾ, ಲೋಂಡಾ, ಪೂನಾ ಮತ್ತು ಮುಂಬಾಯಿ, ವಗ್ಗೆರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗ್ಗೆರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ, ವಗ್ಗೆರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎಸ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇಂದವು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 57 ಫೀಟು ಉದ್ದವಾಗಿ ಎತ್ತರವಾದ ಶ್ರೀ ಗೋಮಟೇಶ್ವರನ ಮೇಲೆ ನಲಸಿಂವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

ಸುಬ್ರಹ್ಮಣ್ಯಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ,

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರ ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಅಲ್ಲದೆ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅಲ್ಲಿಂದ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ 1½ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Company Ltd., Mangalore

ವಿವಿಧ ಸಮಾಚಾರಗಳು.

ಶೌಕತಾಲೀ—ಅನ್ಸಾರೀ ಭೇಟಿ!

ಡಾ. ಅನ್ಸಾರಿಯವರು ಸೆರೆಮನೆಯಲ್ಲಿರುವರಷ್ಟೆ. ಅವರನ್ನು ಸೆರೆಮನೆಯೊಳಗೆ ಭೇಟಿಯಾಗಬೇಕೆಂದು ಶೌಕತಾಲಿಯವರು ಬಗೆದು ತನ್ನ ಅಭಿಪ್ರಾಯವನ್ನು ಡಾ. ಅನ್ಸಾರಿಯವರಿಗೆ ಬರೆದರು. ಅದನ್ನು ಕಂಡ ಅನ್ಸಾರಿಯವರು ತಾನೂ ಶೌಕತಾಲಿಯವರೂ ರಾಜಕೀಯ ದೃಷ್ಟಿ ಬಹಳವಾದ ಅಭಿಪ್ರಾಯಭೇದವುಳ್ಳವರು, ತನ್ನ ಭೇಟಿಯಿಂದಾಗಿ ಶೌಕತಾಲಿಯವರಿಗೆ ಪ್ರಯೋಜನವಿರದೆಂದು ಜೇಲ ಭೇಟಿ ಮಾಡಲು ತಿರಸ್ಕರಿಸಿದರು. ಅಲ್ಲದೆ ಹಾಗೆ ಶೌಕತಾಲಿಯವರ ಸಂದರ್ಶನವನ್ನು ಅನ್ಸಾರಿಯವರು ತಿರಸ್ಕರಿಸಲು ಮತ್ತೊಂದು ಕಾರಣವನ್ನು ಮುಂದಿಟ್ಟಿದ್ದಾರೆ. ನನ್ನ ಮತ್ತು ಶೌಕತಾಲಿಯವರ ಭೇಟಿಯು ಪುನಃ ಕೆಲವು ಅಸಂಬದ್ಧ ವಿಚಾರಗಳಿಗೂ, ತಪ್ಪಭಿಪ್ರಾಯಕ್ಕೂ ಎಡೆಗೊಡುತ್ತವೆ. ಅಲ್ಲದೆ ನಾನು ಏನನ್ನಾದರೂ ಹೇಳಿದರೆ ಅದಕ್ಕೆ ಉತ್ತರವಾಗಿ ಶೌಕತಾಲಿಯವರು ಪತ್ರಿಕೆಗಳಲ್ಲಿ ಬರೆದು ಬಿಟ್ಟರೆ, ನಾನು ಕೈದಿಯಾಗಿರುವುದರಿಂದ ಅವರಿಗೆ ಉತ್ತರವನ್ನೀಯಲು ಅಸಮರ್ಥನಿದ್ದೇನೆ" ಎಂದರು.

* * *

ಮರಣವನ್ನು ಎದುರುನೋಡುತ್ತಿರುವ ಐರೋಪ್ಯರೊಬ್ಬರು!

ಮಿ. ಟೈಲರ್ ಎಂಬವರು ೨೫ ವರುಷಗಳ ಹಿಂದೆ ಮುಂಬಾಯಿಯಲ್ಲಿದ್ದವರು. ಇವರು ಈಗ ಲಂಡನಿನಲ್ಲಿರುವರು. ೨೫ ವರುಷಗಳ ಹಿಂದೆ ಇವರು ಮುಂಬಾಯಿಯಲ್ಲಿ ಬಹಳ ಕಾಯಿಲೆಯಲ್ಲಿ ಬಿದ್ದರು. ಪ್ಲೇಗು ಮೊದಲಾದ ರೋಗಗಳಿಂದಲೂ ಬಾಧಿಸಲ್ಪಟ್ಟರು. ಅಸ್ವಸ್ಥದಿಂದೆದ್ದ ಮೇಲೆ ದೊರೆಗಳಿಗೆ ಬಹಳ ದೌರ್ಭಾಗ್ಯವು ಪ್ರಾರಂಭವಾಯಿತು. ಅಷ್ಟರಲ್ಲಿ ಇವರಿಗೆ ಒಬ್ಬ ಗುಜರಾತಿಯ ಸ್ನೇಹವಾಯಿತು. ಆ ಗುಜರಾತಿಯು ಇವರ ಸೇವೆಯನ್ನು ಮಾಡಿ ತನ್ನ ಮಂತ್ರಶಕ್ತಿಯಿಂದ ಇವರನ್ನು ಸಂಪೂರ್ಣ ಗುಣಪಡಿಸಿದನು. ಆ ಗುಜರಾತಿಯು ಟೈಲರ್ ದೊರೆಗಳ ವಿವಾಹ, ಮಕ್ಕಳು ಉದ್ಯೋಗ ಪ್ರಯಾಣ ಮೊದಲಾದ ಕುರಿತು ಉತ್ತಮ ಭವಿಷ್ಯತ್ತನ್ನು ಹೇಳಿದ್ದನು. "ಗುಜರಾತಿಯು ಹೇಳಿದಂತೆಯೇ ಎಲ್ಲವೂ ನಡೆದಿವೆ. ಅವನ ಮಾತಿನಲ್ಲಿ ಏನೊಂದೂ ಸುಳ್ಳಾಗಲಿಲ್ಲ'ವೆಂದು ಈಗ ಟೈಲರ್ ದೊರೆಗಳ ಹೇಳಿಕೆ. 'ಡೈಲಿ ಮಿರರ್' ಪತ್ರಿಕೆಯವರೊಬ್ಬರೊಡನೆ ದೊರೆಗಳು ಹೀಗೆಂದರು—"ಗುಜರಾತಿಯು ನನಗೆ ಈ ವರ್ಷ ಮರಣ ಸಂಭವಿಸುವುದೆಂದಿದ್ದಾನೆ. ನನ್ನ ಭಾವೀ ವಿಚಾರವು ಹೇಗೂ ಆಗಲಿ. ನನಗೆ ಚಿಂತಿಲ್ಲ. ನನ್ನ ಉದ್ದೇಶಗಳು ಈಡೇರಿವೆ." ಇವರು ಈ ವರುಷ ಮರಣ ಹೊಂದಿದರೆ ಗುಜರಾತಿಯ ಎಲ್ಲಾ ಮಾತುಗಳು ಸತ್ಯವೆಂದಾಗುತ್ತದೆ ಎಂದು ದೊರೆಯವರ ಹೇಳಿಕೆ.

* * *

೧೨೦೦೦ ಮಂದಿಗಳು ಸೆರೆಮನೆಗೆ ಹೋದರು!

ಕಾಯಿದೆಭಂಗ ಚಳವಳವು ಜನವರಿ ತಾ ೪ರ ನಂತರ ಪ್ರಾರಂಭವಾಯಿತು. ಜನವರಿ ಅಂತ್ಯದೊಳಗೆ ಇಡೀ ಹಿಂದೂದೇಶದಲ್ಲಿ ೧೨೦೦೦ ಮಂದಿಗಳು ಸೆರೆಮನೆಯ ಪಾಲಾದರೆಂದು ಅಧಿಕಾರ ವರ್ಗದ ಅಂದಾಜು. ಪ್ರಾಂತಿಕ ಸರಕಾರಗಳ ಅಂದಾಜು ಪಟ್ಟಿಯು ಇನ್ನೂ ಆಗಿಲ್ಲ. ಇಷ್ಟು ಜನರು ಕಾರಾಗೃಹವಾಸಕ್ಕೆ ಹೋದುದಲ್ಲದೆ ಎಮರ್ಜೆನ್ಸಿ ಪವರ್ಸ್ ಓರ್ಡಿನೆನ್ಸ್ ಮೇರೆಗೆ ಕೈದುಮಾಡಲ್ಪಟ್ಟ ೩೦೦೦ ಮಂದಿಗಳು ಇರುವರು. ಇವರಲ್ಲಿ ಕೆಲವರು ಮಾಫಿ ಬೇಡಿ ಬಿಡುಗಡೆ ಹೊಂದಲ್ಪಟ್ಟಿದ್ದಾರೆ. ಫೆಬ್ರವರಿ ತಿಂಗಳಿನ ಅಂದಾಜು ಪಟ್ಟಿಯು ಹೊರಬಿದ್ದಿಲ್ಲ. ಸಂಯುಕ್ತ ಪ್ರಾಂತ್ಯದಲ್ಲೊಂದರಲ್ಲೇ ಸಾಧಾರಣ ೪೫೦೦ ಮಂದಿಗಳು ಸೆರೆಮನೆಗೆ ಹೋದರು. ಓರ್ಡಿನೆನ್ಸುಗಳ ಫಲಿತಾಂಶವು ಯಾವ ರೀತಿಯಲ್ಲಿ ನಿಲ್ಲುವುವೆಂದು ಸರಕಾರವು ಬರುವ ಮೇ ತಿಂಗಳ ವರೆಗೆ ನೋಡುವುದು. ಅದಾದ ನಂತರ ಓರ್ಡಿನೆನ್ಸುಗಳ ಬದಲಾವಣೆಯೋ ಪರಿಸ್ಥಿತಿಗೊಪ್ಪುವಂತಹ ಮಾರ್ಪಾಟೊ ಆಗುವುದು.

* * *

ಕಾಂಗ್ರೆಸು ಬುಲ್ಲೆಟಿನುಗಳು ಟಪ್ಪಾಲಿನಲ್ಲಿ!

ಕೆಲವು ದಿನಗಳ ಹಿಂದೆ ನ್ಯೂಡಿಲ್ಲಿಯ ಏಸೆಂಬ್ಲಿ ಹೋಲಿನಲ್ಲಿ ಕಾಂಗ್ರೆಸ್ ಬುಲ್ಲೆಟಿನುಗಳು ಹಾಕಲ್ಪಟ್ಟಿದ್ದುವು. ಅಲ್ಲದೆ ಆ ಬುಲ್ಲೆಟಿನಿನ ಪ್ರತಿಗಳು ಮೆಂಬರರಿಗೆ ಟಪ್ಪಾಲು ದ್ವಾರಾ ರವಾನಿಸಲ್ಪಟ್ಟಿದ್ದುವು. ಈ ವಿಷಯವನ್ನು ಸರಕಾರದ ಅವಗಾಹನೆಗೆ ತರುವಂತೆ ಮೆಂಬರರ ಆಲೋಚನೆಯಾಯಿತು. ಅದೇ ಮೇರೆಗೆ ಅವರು ಪೋಸ್ಟಲ್ ಅಧಿಕಾರಿಗಳನ್ನು ಕಂಡು, ಈ ರೀತಿಯ ಬುಲ್ಲೆಟಿನುಗಳು ಎಸೆಂಬ್ಲಿ ಮೆಂಬರರಿಗೆ ಟಪ್ಪಾಲು ದ್ವಾರಾ ಮುಟ್ಟುವಂತೆ ಅವಕಾಶಕೊಟ್ಟಿದೇಕೆ ಎಂದು ಪ್ರಶ್ನೆ ಮಾಡಿದರು. ಅದಕ್ಕೆ ಸ್ವಲ್ಪ ಹಾಸ್ಯಶೀಲರಾದ ಅಧಿಕಾರಿಗಳು 'ಟಪ್ಪಾಲು ದರವನ್ನು ಕೊಟ್ಟು ಎಲ್ಲಾ ಕಾಗದಪತ್ರಗಳನ್ನು ವಿಳಾಸದಾರರಿಗೆ ಕಳುಹಿಸುವುದು ಅಂಚೆಯವರ ಧರ್ಮವಿರುತ್ತದೆ. ಅಲ್ಲದೆ ಈ ವಿಷಯದಲ್ಲಿ ನಾವು ಅವುಗಳನ್ನು ಅಗತ್ಯವಾಗಿ ವಿಳಾಸದಾರರಿಗೆ ಕಳುಹಬೇಕು. ಬುಲ್ಲೆಟಿನುಗಳು ಬುಕ್‌ಪೋಸ್ಟು ಮೂಲಕ ಕಳುಹಿಸಲ್ಪಟ್ಟಿರುವುದರಿಂದ ಅವುಗಳಿಗೆ ಸಾಕಷ್ಟು ಅಂಚೆದರವನ್ನು ಕಳುಹಿಸಿದವರು ಕೊಟ್ಟಂತಾಗಿರುವುದಿಲ್ಲ. ಆದರ ಹೆಚ್ಚಿನ ಹಣವನ್ನು ನಾವು ವಿಳಾಸದಾರರಿಂದ ಪಡೆಯಬೇಕೆಂದೇ ಅವುಗಳು ಅವರಿಗೆ ಕಳುಹಲ್ಪಟ್ಟವು" ಎಂದರು.

* * *

ವಿದ್ಯಾರ್ಥಿನಿಯ ಪ್ರಾಣತ್ಯಾಗ!

ಮದ್ರಾಸಿನ ಲಂಡನ್ ಮಿಶನ್ 'ಗರ್ಲ್ಸ್' ಸ್ಕೂಲಿನಲ್ಲಿ ತಾರೀಕು ೨೦ನೇ ದಿನ ಒಂದು ಪ್ರಾಣತ್ಯಾಗವು ನಡೆಯಿತು. ಆ ಶಾಲೆಯ ೧೪ ವರುಷ ಪ್ರಾಯದ ನಟಾಚಾರ್ಯಮ್ಮ ಎಂಬ ತರುಣಿಯು ಮಧ್ಯಾಹ್ನ ೧೨ ಘಂಟೆಯ ತನಕ ಕ್ಲಾಸಿನಲ್ಲಿದ್ದಳು. ಮಧ್ಯಾಹ್ನ ಶಾಲೆ ಬಿಟ್ಟೊಡನೆಯೇ ಮನೆಗೆ ಹೋಗಿ ತನ್ನ ನಿವಾಸದ ಯಜಮಾನನಿಗೆ ಒಂದು ಪತ್ರವನ್ನು ಬರೆದಳು. ಅದರಲ್ಲಿ ತನಗೆ ಅನೇಕ ಕಷ್ಟಗಳು ಸಂಭವಿಸಿವೆಯೆಂದೂ, ತನ್ನ ಗೃಹಛಿದ್ರವು ಅತಿಯಾಗಿರುತ್ತದೆಂದೂ ಅದನ್ನು ತಾನು ಸಹಿಸಲು ಅಸಮರ್ಥಳಿರುವೆನೆಂದೂ ಮತ್ತು ಈ ನಿಮಿತ್ತ ತಾನು ಪ್ರಾಣತ್ಯಾಗವನ್ನು ಮಾಡುವೆನೆಂದೂ ಬರೆದಳು. ಆ ಕಾಗದವನ್ನು ಒಬ್ಬ ಸಣ್ಣ ಹುಡುಗನ ಕೈಯಲ್ಲಿ ಕೊಟ್ಟು ಕಳುಹಿದಳು. ಶಾಲೆಯು ಪ್ರಾರಂಭವಾಯಿತು. ನಟಾಚಾರ್ಯಮ್ಮಳು ಕ್ಲಾಸಿಗೆ ಬರುವ ಬದಲು ಪೋಲೀಸರು ಬಂದರು. ಹುಡುಗಿಯನ್ನು ಎಲ್ಲೆಲ್ಲಾ ಹುಡುಕಿದರು. ಕೊನೆಗೆ ಯಾರೋ ಒಬ್ಬಳು ಬಾವಿಯಲ್ಲಾದ ಶಬ್ದವನ್ನು ಕೇಳಿದೆನೆಂದು ಹೇಳಿದಳು. ೧೬ ಅಡಿ ಆಳವಿದ್ದ ಬಾವಿಯಲ್ಲಿ ಪೋಲೀಸರ ಪರಿಶೋಧನೆಯಾಗಿ ನಟಾಚಾರ್ಯಮ್ಮಳ ಶವವು ಅದರಲ್ಲಿ ದೊರೆಯಿತು. ಇಷ್ಟು ಸಣ್ಣ ಪ್ರಾಯದ ಹುಡುಗಿಗೂ ಸಂಸಾರಭಾರವು ಉಂಟೇ? ಮತ್ತು ಇಂತಹ ಹುಡುಗಿಯರು ದೇಶದ ಎಷ್ಟು ಮೂಲೆಗಳಲ್ಲಿ ಇರಲಿಕ್ಕಿಲ್ಲವೆಂದು ಕೆಲವರ ಅಭಿಪ್ರಾಯ.

* * *

ಮದುಮಗನ ಬದಲಿಗೆ ಇನ್ನೊಬ್ಬ ಕೈಗೊಟ್ಟ!

ದಿ ಸಿಲೋನ್ ಒಬ್ಸರ್ವರ್' ಎಂಬ ಪತ್ರಿಕೆಯು ಒಂದು ಕಥೆಯನ್ನು ಪ್ರಕಟಿಸಿದೆ. ಗ್ಲಾಸ್ಟರ್ ಪಯರ್ ಪಾದ್ರಿಯವರು ಒಂದು ವಿವಾಹವನ್ನು ನಡೆಸಲಿದ್ದರು. ಶ್ರೀ ದೇವರ ಅನುಗ್ರಹವಾದರೆ ಆಗಲಿಕ್ಕಿದ್ದ ವಿವಾಹ ಕಾರ್ಯಕ್ಕೆ ಇಗರ್ಜಿಯಲ್ಲಿ ಎಲ್ಲರೂ ನೆರೆದು ಬಂದಿದ್ದರು. ಪಾದ್ರಿಗಳ ಸರ್ವಿಸ್ ಆಯಿತು. ಗುರುಗಳ ಆಶೀರ್ವಾದವೂ ಆಯಿತು. ಅವರು ವಧೂವರರಿಬ್ಬರನ್ನೂ ಹರಸಿದರು. ವಿವಾಹವು ರಜಿಸ್ಟ್ರಿ ಮಾಡಲ್ಪಡುವುದಕ್ಕೆ ವಧೂವರರನ್ನು ಗುರುಗಳು ಕರೆದರು. ವಧುವೂ ಇನ್ನೊಬ್ಬನೂ ಗುರುಗಳ ಬಳಿಗೆ ಹೋದರು. "ವರನೆಂದು ಬಂದ ಮನುಷ್ಯನನ್ನು ನೋಡಿ ಗುರುಗಳಿಗೆ ಆಶ್ಚರ್ಯವಾಯಿತು. ಆಶೀರ್ವಾದವನ್ನು ಪಡೆದವನು ನೀನಲ್ಲ, ಬೇರೊಬ್ಬನು" ಎಂದರು. "ಅಲ್ಲ ನಿಮ್ಮ ಆಶೀರ್ವಾದ ಮತ್ತು ಮಂತ್ರೋಚ್ಚಾರಕ್ಕೆ ನಿಂತವನು ನಾನಲ್ಲ. ಆದರೆ ನಿಜವಾದ ಮದುಮಗ ನಾನು" ಎಂದ ಮನುಷ್ಯ! "ಇಲ್ಲ ಸರ್ವಿಸ್ ಮಾಡುವಾಗ ನೀನು ಉತ್ತರವಿತ್ತವನಲ್ಲ" ಎಂದರು ಗುರುಗಳು. "ಅಲ್ಲ ಸ್ವಾಮಿ, ನನಗಿಂತ ಬುದ್ಧಿವಂತನೊಬ್ಬನು ಶಾಸ್ತ್ರ ಹೇಳಲೆಂದು ನೇಮಿಸಿದ್ದನಷ್ಟೆ. ಹುಡುಗಿ ನನಗೆಯೇ" ಎಂದ ಮದುವಣಿಗ. ಕೊನೆಗೆ ಕುಟುಂಬಿಕರು ಮಧ್ಯೆ ಬಂದರು, ನಿಜವಾದ ಮದುವಣಿಗನು ವಿವಾಹನೆಯವನೇ ಎಂದಾಯಿತು.

* * *

ಬಿಕಾನಿರ್ ರಾಜಕುಮಾರನ ಮರಣ

ತಾ ೧೩ರಲ್ಲಿ ಬಿಕಾನಿರ್ ರಾಜಕುಮಾರರೊಬ್ಬರು ತನ್ನ ಹೊಸ ಪಿಸ್ತೂಲನ್ನು ಪರೀಕ್ಷಿಸುತ್ತಿರುವಾಗ ಆಕಸ್ಮಾತಾಗಿ ಅದರೊಳಗಿನ ಒಂದು ಗುಂಡು ಎದೆಗೆ ಹಾರಿ ಅದು ಹೃದಯಕ್ಕೆ ನಾಟಿ, ಅವರು ಮೃತಿಯನ್ನೈದಿದರು. ಐದನೇ ಜೋರ್ಜ್ ಮಹಾರಾಜರೂ ಪ್ರಿನ್ಸ್ ಒಫ್ ವೇಲ್ಸರೂ ವೈಸರಾಯರೂ ಇನ್ನಿತರರೂ ಸಹಾನುಭೂತಿಕರ ತಂತಿಯನ್ನು ಬಿಟ್ಟರು. ಪಾಟಿಯಾಲಾ ಮಹಾರಾಜರೂ ಇನ್ನಿತರ ಅರಸುಕುಮಾರರೂ ಬಿಕಾನಿರಿಗೆ ಹೋಗಿ ತಮ್ಮ ಸಹಾನುಭೂತಿಯನ್ನು ತೋರಿಸಿದರು. ಬಿಕಾನಿರ್ ಅರಮನೆಯು ದುಃಖಮಯವಾಗಿದೆ. ಸಾವಿರಾರು ಪ್ರಜೆಗಳು ರಾಜರನ್ನು ಸಂದರ್ಶಿಸುತ್ತಿರುವರು. ರಾಜಕುಮಾರರು ಅತೀ ಎಳೆಯ ಪ್ರಾಯದವರೆಂದೂ ಗುಣಾಢ್ಯರೆಂದೂ ತಿಳಿದುಬಂದಿದೆ. ಅವರ ಆತ್ಮಕ್ಕೆ ಶಾಂತಿಯಿರಲಿ.

* * *

ಒಂದು ಸಿನೆಮಾ?

ಆಫ್ರಿಕದ ಈಸ್ಟ್ ಲಂಡನಿನಲ್ಲೊಂದು ಸಣ್ಣ ಗುಡಿಸಲು. ಅದರಲ್ಲಿ ಜನರು ಕಡಿಮೆ ಇಬ್ಬರುಮೂವರಿದ್ದರು. ಆ ಮನೆಯ ೧೪ ವರುಷ ಪ್ರಾಯದ ತರುಣಿಯು ಅವಳ ಸಹೋದರಿಯೊಡನೆ ಕಳೆದ ವಾರದ ಒಂದು ದಿನದಲ್ಲಿ ಸಿನೆಮಕ್ಕೆ ಹೋಗಿದ್ದಳು. ಹಿಂದೆ ಬರುವಾಗ ಸ್ವಲ್ಪ ಕತ್ತಲಾಗಿದ್ದಿತು. ಮನೆಯಲ್ಲಾರೂ ಇದ್ದಂತೆ ಕಾಣಲಿಲ್ಲ. ಹುಡುಗಿಯರು ತಮ್ಮ ಕೋಣೆಯ ಬಳಿ ನಿಂತರು. ಸಣ್ಣವಳು ಹೇಳಿದಳು. "ನೀನು ಮುಂಚೆ ಒಳಹೋಗು. ನನಗೆ ಹೆದರಿಕೆಯಾಗುತ್ತದೆ" "ಅದು ಸರಿಯಲ್ಲ. ನಾನೂ ನೀನೂ ಇಬ್ಬರೂ ಕೈಕ್ಕೈ ಹಿಡಿದು ಒಳಹೋಗುವ" ಎಂದು ಇನ್ನೊಬ್ಬಳು ಹೇಳಿದಳು. ಅದೇ ಮೇರೆಗೆ ಇಬ್ಬರೂ ಒಳಗೆ ಹೋದರು. ಬೆಳಕು ಹತ್ತಿಸಿ ಮಂಚದ ಮೇಲೆ ಕುಳಿತರು. ನೋಡಿದ ಸಿನೆಮವು ನೆನಪಿಗೆ ಬಂತು. ಅದರ ವರ್ಣನೆಯಾಯಿತು. ಸಿನೆಮದ ಕೊಲೆಪಾತಕನೊಬ್ಬನ ಸಾಹಸದ ವಿವರವನ್ನು ದೊಡ್ಡವಳು ಪ್ರಾರಂಭಿಸಿದಳು. ಅರ್ಧ ವರ್ಣನೆಯು ಆಗಲಿಲ್ಲ. ಅಷ್ಟರಲ್ಲಿ ಮಂಚದಡಿಯಿಂದೊಬ್ಬ ದುಷ್ಟನು ಥಕ್ಕನೆ ಎದ್ದು, ತನ್ನ ಕೈಯಲ್ಲಿದ್ದ ಗೋಣಿಚೀಲದಲ್ಲಿ ಅವರನ್ನು ತುರುಕಿ, ಕತ್ತಲೆಯಲ್ಲಿ ಮಾಯವಾದನು. ಲೋಕದಲ್ಲಿ ನಡೆವ ಸಿನೆಮಗಳಲ್ಲಿದೊಂದು.

* * *

ಇನ್ನೊಂದು ಸಿನೆಮಾ

ಅಹ್ಮದನಗರದ ಕಾರಾಗೃಹವಾಸದಲ್ಲಿದ್ದ ಜೇಕ್ ಕೆಲ್ಲಿ ಎಂಬವನು ಮುಂಬಾಯಿಯಲ್ಲಿ ಬಹಳ ಗಲಾಟೆಯನ್ನೆಬ್ಬಿಸಿ ಬಿಟ್ಟ. ಇವನು ಅಹ್ಮದನಗರದ ಜೈಲಿನಿಂದ ತಪ್ಪಿಸಿಕೊಂಡು ಮುಂಬಾಯಿಯಲ್ಲಿದ್ದ. ಇವನನ್ನು ಹುಡುಕಲಾಯಿತು. ತನ್ನನ್ನು ಹಿಡಿಯುವರೆಂಬ ಸುದ್ದಿಯು ಇವನಿಗೆ ಹೇಗೋ ತಿಳಿಯಿತು. ತಾ ೧೯ನೇ ದಿನ ಮಧ್ಯಾಹ್ನ ಎರಡು ಗಂಟೆಯ ಸಮಯದಲ್ಲಿ ಹೊರ್ನಬಿ ರೋಡಿನ ಒಂದು ಮೋಟಾರು ಕಾರಿನೊಳಗೆ ಹಾರಿದ. ತನ್ನನ್ನು ಕೊಲಬಾ ರಿಕ್ಲಮೇಶನ್ ಸ್ಥಳಕ್ಕೆ ಒಯ್ಯಬೇಕೆಂದು ಡ್ರೈವರನಿಗೆ ಹೇಳಿದ. ಮೋಟಾರು ಓಡಿತು. ಸಂಕಲ್ಪಿತ ಸ್ಥಳದಲ್ಲಿ ನಿಂತಿತು. ಒಡನೆ ಕೆಳಗೆ ಹಾರಿದ. ತನ್ನ ಇಜಾರಿನ ಕಿಸೆಯಿಂದ ಒಂದು ರಿವಾಲ್ವರನ್ನು ತೆಗೆದು— ಇದನ್ನೀಗಲೇ ನಿನ್ನೆದೆಗೆ ಹಾರಿಸುವೆನು— ಕೊಲ್ಲುವೆನು— ಸಾಯುವಿಯೋ— ನಿನ್ನ ಅಂಗಿಯನ್ನು ನನಗೆ ಕೊಡುವಿಯೋ?" ಎಂದು ಪ್ರಶ್ನಿಸಿದ. ಪಾಪ! ಡ್ರೈವರನು ಪ್ರಾಣವನ್ನುಳಿಸುವೆನೆಂದು ತನ್ನ ಅಂಗಿವಸ್ತ್ರವನ್ನು ಬಿಚ್ಚಿ ಅವನಿಗೆ ಕೊಟ್ಟ. ಕೆಲ್ಲಿಯ ವೇಷಬದಲಾವಣೆಯಾಯಿತು. ಡ್ರೈವರನು ಮರಕ್ಕೆ ಬಿಗಿಯಲ್ಪಟ್ಟ. ಆ ಮೇಲೆ ಕೆಲ್ಲಿಯು ತಿರುಗಿ ತನ್ನ ಮೋಟಾರನ್ನು ಓಡಿಸಿದ— ಜನರಿಗೆ ಸಂಶಯ ತೋರಿತು. 'ಜೇಕ್ ಮಾಫ— ಇಂಡಿಯನ ಉಡುಪು ಏನೋ ಮೋಸವಿರಬೇಕು' ಎಂದರು. ಟೆಲಿಫೋನು ಹಾರಿತು. ಪೋಲೀಸರು ಬಂದೇ ಬಿಟ್ಟರು— ಕೆಲ್ಲಿಗೂ ಪೋಲೀಸರಿಗೂ ಬಂದೂಕು ಯುದ್ಧ. ಕೆಲ್ಲಿಯನ್ನು ಹಿಡಿದರು. ಮದ್ದುಗುಂಡುಗಳು ಅವನಲ್ಲಿದ್ದುವು.

* * *

ಮಹಾತ್ಮರ ಗುಡಿಸಲು ಸುಟ್ಟುಹೋಯಿತು

ಮಹಾತ್ಮಾ ಗಾಂಧಿಯವರು ಕಳೆದ ವರುಷ ಕಾಯಿದೆಭಂಗ ಚಳವಳಿಕ್ಕೆ ಅಂದರೆ ಉಪ್ಪಿನ ಕರೋಲ್ಲಂಘನೆಗೆ ಹೊರಡಿದ್ದುದು ಕರಾಡಿಯಿಂದಷ್ಟೆ! ಕರಾಡಿಯೆಂಬುದು ಪ್ರಕೃತಿ ಸೌಂದರ್ಯದ ಪ್ರದೇಶ. ಅದರ ಒಂದು ಉಚ್ಚ ಸ್ಥಳದಲ್ಲಿ ಗಾಂಧೀಜೀಯವರು ತನ್ನ ಗುಡಿಸಲನ್ನು ಮಾಡಿಕೊಂಡಿದ್ದರು. ಗುಡಿಸಲಿಗೆ ಗೋಡೆಯಿಲ್ಲ. ಮಡಲಿನ ತಟ್ಟಿ ಬಾಗಿಲುಗಳು ಗೋಡೆಯೂ ಮಾಡು. ಕೂಡಾ ನೋಡಲಿಕ್ಕೇ ಅಂತಹ ನೋಟದ ಗುಡಿಸಲಿಗೆ ಹೋಗಿ ಸಾವಿರಾರು ಮಹತ್ಪುರುಷರು ಗಾಂಧೀಜೀಯವರ ಭೇಟಿಯನ್ನು ಮಾಡಿದ್ದರು. ಗಾಂಧೀಜೀಯವರು ಅಂದು ಉಪ್ಪಿನ ಕರೋಲ್ಲಂಘನೆಗೆ ನಡೆದ ಸಮಯದಲ್ಲಿ ಈ ಗುಡಿಸಲು ಲೋಕವಿಖ್ಯಾತವಾಯಿತು. ಇದೇ ತಾ ೧೯ನೇ ದಿನ ಯಾರೋ ಆ ಗುಡಿಸಲನ್ನು ಸುಟ್ಟು ಹಾಕಿದರೆಂದು ತಿಳಿದುಬಂದಿದೆ. ಗುಡಿಸಲು ಸಂಪೂರ್ಣ ಅಗ್ನಿಗಾಹುತಿಯಾಗಿದೆ. ಬೆಂಕಿಯ ಕಾರಣವು ತಿಳಿದುಬಂದಿಲ್ಲ. ಗಾಂಧೀಜೀಯವರೂ ಅವರ ಅನುಯಾಯಿಗಳೂ ಸೆರೆಮನೆಗೆ ಹೋಗಿರುವುದರಿಂದ ಅದು ನೊಸ್ಸೆಯ ತನಕ ಖಾಲಿ ಇತ್ತು.

* * *

ಶ್ರೀಮತಿ ಪ್ರಭುಗಳ ತಾಲಿ

ನೊಸ್ಸೆ ಕಲಿತೇರಿಯಲ್ಲಿನ ಸಬ್ ಡಿವಿಜನ್ ಮೇಜಿಸ್ಟ್ರೇಟರು ಶ್ರೀಮತಿ ಪ್ರಭುಗಳವರ ಜುಲ್ಮಾನೆಯ ಸಂಬಂಧವಾಗಿ ಅವರ ತಾಲಿಯನ್ನು ತೆಗೆದಿದ್ದರಷ್ಟೆ! ಈಗ ಸಬ್ ಡಿವಿಜನ್ ಮೇಜಿಸ್ಟ್ರೇಟರು ಆ ವಿಷಯ ಬೇಸರಗೊಂಡಿರುವರೆಂದೂ ತಾನು ಮಾಡಿದುದು ಅವಿಚಾರದಿಂದೆಂದು ಮರುಗುವರೆಂದೂ ಸರಕಾರವು ಪ್ರಕಟಿಸಿದೆ. ಸರಕಾರವು ಏನ್ನುವುದೇನೆಂದರೆ ಕೈದಿಯಾದ ವ್ಯಕ್ತಿಯ ಎಲ್ಲಾ ಸಾಮಾನುಗಳನ್ನು ತೆಗೆಸಬೇಕೆಂದು ಸಬ್ ಡಿವಿಜನ್ ಮೇಜಿಸ್ಟ್ರೇಟರು ತಪ್ಪಭಿಪ್ರಾಯ ಮಾಡಿಕೊಂಡು ಶ್ರೀಮತಿ ಪ್ರಭುಗಳ ತಾಲಿಯನ್ನು ತೆಗಿಸಿದರು. ತಾಲಿಯನ್ನು ತೆಗೆಯಬಾರದೆಂದು ಪ್ರತ್ಯೇಕಿಸಿ ಒಂದು ನ್ಯಾಯವು ಕ್ರಿಮಿನಲ್ ಪ್ರೊಸೀಜರ್ ಕ್ರಮದಲ್ಲಿ ಇಲ್ಲವಾದರೂ ಸಬ್ ಡಿವಿಜನ್ ಮೇಜಿಸ್ಟ್ರೇಟರು ಮಾಡಿದುದು ವಿಪರೀತವಾದ ಅವಿಚಾರದ ಸಂಗತಿ (Serious error of Judgement) ಎಂಬುದು ನಿಜ. ಈ ಕುರಿತು ಅವರೇ ವ್ಯಸನಗೊಂಡಿರುವರು. ತಾಳಿಯು ತೆಗೆಸಲ್ಪಡಬಾರದೆಂದು ಅವರಿಗೆ ತಿಳಿದುಬಂದೊಡನೆ ಅವರು ಅದನ್ನು ಹಿಂದಕ್ಕೆ ಕೊಡಲು ಅಪ್ಪಣೆ ಕೊಟ್ಟರು. ಇನ್ನು ಇಂತಹ ತಪ್ಪುಗಳಾಗದಂತೆ ಸರಿಯಾದ ಕ್ರಮಗಳನ್ನು ಸರಕಾರವು ಮಾಡಿಸುವರೇ ವ್ಯವಸ್ಥೆಯನ್ನು ಮಾಡಲಿರುತ್ತದೆ.

\+ + + +

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ ಎಂಬ ಬಿರುದು ಪಡೆದು ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯ ರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಲ್ಲು ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿಸಲ್ಪಡುವವು. ಬರಲು ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ಹಿಡಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಇದಲ್ಲದೆ ಪಥ್ಯ ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಕಡೆಗಳು ಸಹ ಎಲ್ಲಾ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಮದ್ದು ಬಂದು ಸಂದರ್ಭ ಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ ... ಕೊಡಲಾಗುವದಲ್ಲದೆ ಅನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮತ್ತು ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ ಹೆಚ್ಚು ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು

ಪ್ರತಿ ದಿನ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ ಕ

ಮೂಲವ್ಯಾಧಿ

ರಕ್ತ ಅಥವಾ ರಕ್ತಸ್ರಾವವಾದ ಅತ್ಯಂತ ಹಳೆಯ ದುಷ್ಟ ಮೂಲವ್ಯಾಧಿಯಾದರೂ ಕೂಡ ನಮ್ಮ ಸೇವನೆಮಾಡುವುದರಿಂದ ಜಾದೂವಿನಂತೇ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇರು ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ. ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ಕಿಂಡಿಯಿಡುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿ ಸಂಬಂಧವಾದ ಎಲ್ಲಾ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ಧೀಪನ ತೇಲ ಅಮೋಘ ಅಸ್ತ್ರವಿದೆ. ಸಾವಿರಾರು ಕಿವುಡರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
2 ಕಾಂಬಾರವಾಡ ೪ನೇ ಗಲ್ಲಿ
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಬಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ವಿಜ್ಞಾಪ್ತಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dadar Bombay 14

ತಂತಿ ವಿಳಾಸ — SIRINDHU Bombay

ಶಪೂರ್ಜಿ ಎಚ್. ಎಲ್ ಬಾಟ್ಲಿವಾಲಾ — ಮುಖ್ಯ ಮೆನೆಜಿಂಗ್ ಡೈರೆಕ್ಟರ್.

ಕೇಸರಿಯವರ ಮೂರು ರತ್ನಗಳು

ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಔಷಧಿಯು ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಆರ್ಕ — ಇದು ಎಲ್ಲಾ ತರದ ಜ್ವರಗಳನ್ನು ನಿರ್ಮೂಲ ಪಡಿಸಿ ಇಡೀ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ — ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

ಕೇಸರಿ ಕುಟೀರ
ಮದ್ರಾಸು, ಎಗ್ಮೋರ್
ಕೇಸರಿ ಕುಟೀರದ ಔಷಧಗಳು ಎಲ್ಲಾ ಕಡೆಗಳಲ್ಲಿಯೂ ದೊರೆಯುವವು

The Zandu Pharmaceutical Works, Ltd , Bombay,14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆವಳೆ ಅಲ್ಲದೆ ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ, ನಾನಾ ವಿಧವಾದ ದುರ್ಬಲತ್ವ ಕೆಮ್ಮು ಎದೆ ನೆಗಡಿ ಪ್ರಾರಂಭಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ವೀರ್ಯಕ್ಷೀಣತೆ ಪುಷ್ಟಿಹೀನತೆ ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/- ಕ್ರಯ 1 ಪಾನು ಸೀಸೆ ರೂ 2/8 ½ ಪಾ ರೂ 1/5 ¼ ಪಾ. ೦ 13

ಮದ್ರಾಸು ರಾಜಧಾನಿಗ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಪಿಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರ — ಟಿ ಸಿ ನಟರಾಜ್ ಅಂಡ್ ಕೊ, ಸಯ್ಯಾಜಿರಾವ್ ರೋಡ್
ಬೆಂಗಳೂರು ಏಜಂಟರು — ಬಿ ಪ್ರೊಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ
ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ಮುಂಬಾಯಿಯಲ್ಲಿ ಲಾಠಿಪ್ರಹರ! ಆರ್ವತ್ತೈದು ಮಂದಿಗಳಿಗೆ ಜಖಂ!

ತಾರೀಕು ೧೮.

ಮುಂಬಾಯಿಯಿಂದ ಶ್ರೀ| ಕೆ. ಎಫ್. ನರಿಮಾನ್, ಶ್ರೀ| ಕೆ. ಎಂ. ಮುನ್ಶಿ ಮತ್ತು ಶ್ರೀಮತಿ ಪೆರಿನ್ ಕೆಪ್ಟನ್ ಎಂಬ ಮೂವರು ರಾಜಕೀಯ ಕೈದಿಗಳನ್ನು ವಿಜಾಪುರ ಸೆರೆಮನೆಗೆ ಕೊಂಡೊಯ್ದರು. ೬ ಮಂದಿಗಳನ್ನು ಪೋಲೀಸರಿಗೆ ಕಾಣಿಸಿ ಕೊಳ್ಳುವ ಶರ್ತದ ಮೇಲೆ ಬಿಟ್ಟಿರುವರು.

ಅಹ್ಮದಾಬಾದಿನಲ್ಲಿ ಪಿಕೆಟ್ ಮಾಡಿದ ೬ ಮಂದಿ ಸ್ತ್ರೀಯರನ್ನು ವಿಚಾರಿಸಿ, ಒಬ್ಬೊಬ್ಬಳಿಗೆ ೫೦ರಿಂದ ೧೦೦ ರೂಪಾಯಿ ಜುಲುಮಾನೆ ತಪ್ಪಿದರೆ ಒಂದೊಂದು ತಿಂಗಳ ಕಠಿಣ ಸಜೆಯು ವಿಧಿಸಲಾಯಿತು. ಗುಜರಾಥಿ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರಾದ ಶ್ರೀ| ಮೊರಾರ್ಜಿ ದೇಸಾಯಿ ಎಂಬುವರನ್ನು ಪೋಲೀಸರಿಗೆ ಕಾಣಿಸಿಕೊಳ್ಳುವ ಶರ್ತದ ಮೇಲೆ ಬಿಟ್ಟಿರುವರು. ಕಾಂಗ್ರೆಸ್ಸಿನ ೨೫,೦೦೦ ರೂಪಾಯಿಯನ್ನು ಬೇಂಕಿನಿಂದ ತೆಗೆದು ಅದನ್ನು ರಹಸ್ಯವಾಗಿ ಇನ್ನೊಂದು ಸ್ಥಳಕ್ಕೆ ಕಳುಹಿಸಿಕೊಟ್ಟು ಕಾನೂನುಭಂಗ ಚಳವಳಿಗೆ ಸಹಾಯವನ್ನಿತ್ತುದಕ್ಕಾಗಿ ಶ್ರೀ| ಮೋಹನಲಾಲ್ ಜೋಶಿ ಎಂಬುವರ ನ್ಯಾಯವಿಚಾರಣೆಯು ನಡೆಯುತ್ತಿದೆ.

ಲಾಹೋರಿನಲ್ಲಿ ವಿದೇಶಿ ಜವಳಿ ಅಂಗಡಿಗಳನ್ನು ಪಿಕೆಟಿಂಗ್ ಮಾಡುತ್ತಿದ್ದ ೫ ಮಂದಿ ಹೆಂಗಸರನ್ನೂ ಇನ್ನಿಬ್ಬರು ಸ್ವಯಂಸೇವಕರನ್ನೂ ಕೈದುಮಾಡಿರುತ್ತಾರೆ. ಅಲ್ಲಿಯ ಗಾಂಧೀ ಆಶ್ರಮವನ್ನು ಪೋಲೀಸರು ಪರಿಶೋಧಿಸಿದರು. ಕಾಂಗ್ರೆಸ್ ಧ್ವಜವೂ ಇನ್ನಿತರ ಕೆಲವು ಸಾಮಾನುಗಳೂ ಒಯ್ಯಲ್ಪಟ್ಟವು. ಹಿಂದೀ ಮಿಲಾಪ್, ಉರ್ದು ಮಿಲಾಪ್, ವಂದೇ ಮಾತರಂ, ದಿ ಫ್ರೀ ಪ್ರೆಸ್ ಎಂಬ ಪತ್ರಿಕೆಗಳ ಸಂಪಾದಕರುಗಳನ್ನು ಕೈದು ಮಾಡಿರುವರು.

ತಾರೀಕು ೧೯

ಲಕ್ನೋವಿನಲ್ಲಿ ಶ್ರೀಮತಿ ಗೋದಾವರಿ ಭಾರ್ಗವ ಮತ್ತು ಜಯ ಗೋಪಾಲತಂದನ್ ಎಂಬಿಬ್ಬರಿಗೆ ೬ರಾರು ತಿಂಗಳ ಕಠಿಣ ಸಜೆ ಅಲ್ಲದೆ ೧೦೦ ರೂಪಾಯಿ ಜುಲುಮಾನೆ. ಕಾಂಗ್ರೆಸ್ ಕಮಿಟಿಯ ಮಾಜೀ ಸೆಕ್ರೆಟರಿಯವರಾದ ಶ್ರೀ| ಕೈಲಾಸಪತಿ ವರ್ಮ ಎಂಬವರಿಗೆ ೧ ವರುಷದ ಕಠಿಣ ಸಜೆ. ಅದರ ಮೇಲೆ ೨೦೦ ರೂಪಾಯಿ ಜುಲುಮಾನೆ ತಪ್ಪಿದರೆ ಎರಡು ತಿಂಗಳ ಕಠಿಣ ಸಜೆ. ೪೫ ಮಂದಿಗಳಿಗೆ ವಿವಿಧ ಶಿಕ್ಷೆಯಾಯಿತು. ಇಬ್ಬರು ಮಾಫಿ ಬೇಡಿದುದಕ್ಕೆ ಬಿಡುಗಡೆ ಮಾಡಲ್ಪಟ್ಟರು. ಒಬ್ಬ ಎಳೆ ಪ್ರಾಯದ ಹುಡುಗನು ಕೋರ್ಟಿನ ಏಳುವ ತನಕ ತಡೆಯಲ್ಪಟ್ಟಿದ್ದನು.

ನಾಗಪುರದಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನಿನ ಅಧ್ಯಕ್ಷರಾದ ಶ್ರೀ| ಆರ್. ಎಸ್. ರುಯಿಕರ್ ಎಂಬವರು ಫೆಬ್ರವರಿ ನಾಲ್ಕನೇ ತಾರೀಕಿನ ದಿನ ರಾಜದ್ರೋಹಕರ ಭಾಷಣವಿತ್ತುದಕ್ಕಾಗಿ ಡೆಪ್ಯುಟಿ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಇವರಿಂದ ಕೈದುಮಾಡಲ್ಪಟ್ಟರು. ಅವರನ್ನು ಸೆಂಟ್ರಲ್ ಜೈಲಿಗೆ ಒಡನೆ ಕೊಂಡೊಯ್ದರು.

ಅಲ್ಲಹಾಬಾದಿನಲ್ಲಿ ೬೫ ಮಂದಿ ಹಳ್ಳಿಗರು ಕಾನೂನುಭಂಗ ಚಳವಳಿಗೆ ಪ್ರೋತ್ಸಾಹವನ್ನಿತ್ತುದಕ್ಕಾಗಿ ಕೈದುಮಾಡಲ್ಪಟ್ಟರು. ಅವರ ನ್ಯಾಯವಿಚಾರಣೆಯಾಗುತ್ತಲಿದೆ. ಲಕ್ನೋವಿನಲ್ಲಿ ಕೇಂಪ್ ಜೈಲು ಸಿದ್ಧವಾಗಿದೆ. ಅನೇಕ ಕಡೆಗಳಿಂದ ರಾಜಕೀಯ ಕೈದಿಗಳನ್ನು ಅಲ್ಲಿಗೆ ತಂದಿರುವರು.

ಅಹ್ಮದಾಬಾದಿನಲ್ಲಿಯು ಮಾಜಿ ಡೆಪ್ಯುಟಿ ಕಲೆಕ್ಟರರೂ, ಗುಜರಾಥ್ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಯವರೂ ಆದ ಶ್ರೀ| ಮೊರಾರ್ಜಿ ದೇಸಾಯಿಯವರು ಪೋಲೀಸರಿಗೆ ಶರ್ತ ಪ್ರಕಾರ ಕಾಣಿಸಿಕೊಳ್ಳದಿದ್ದುದಕ್ಕಾಗಿ ಪುನಃ ಕೈದುಮಾಡಲ್ಪಟ್ಟರು.

ಬೆಂಗಳೂರಿನಲ್ಲಿ ಹನ್ನೊಂದು ಮಂದಿಗಳು ಮದ್ಯದಂಗಡಿಗಳನ್ನು ಪಿಕೆಟಿಂಗ್ ಮಾಡಿದರು. ಒಬ್ಬೊಬ್ಬರಿಗೆ ಎರಡೆರಡು ವರುಷಗಳ ಕಠಿಣ ಸಜೆ ದೊರಕಿದೆ.

ಅಹ್ಮದಾಬಾದಿನಲ್ಲಿ ಗುಜರಾಥ್ ವಿದ್ಯಾಪೀಠದ ಮೇನೇಜರರಾದ ಶ್ರೀ| ನರಹರಿ ಪರೇಖರು ಸಬರ್ಮತಿ ಜೈಲಿನಲ್ಲಿರುವರು. ಅವರ ೧೮೮ ರೂಪಾಯಿ ತೀರ್ವೆಯನ್ನು ಕೊಡಬೇಕಾಗಿ ಮಾಮ್ಲತದಾರನ ನೋಟೀಸು. ಗಾಂಧೀಜೀಯವರ ನವಜೀವನ ಪ್ರೆಸ್ ಇರುವ ಸ್ಥಳದ ಬಾಡಿಗೆಗಾಗಿಯೂ ನೋಟೀಸು ಹೋಗಿದೆ.

ಕಾನ್‌ಪುರದಲ್ಲಿನ ಇಬ್ಬರು ಮುಂದಾಳು ವರ್ತಕರನ್ನು ಕೈದುಮಾಡಿದರು. ಈ ಸಂಬಂಧವಾಗಿ ಅಲ್ಲಿಯ ಮಾರ್ಕೆಟ್‌ಗಳು ಮುಚ್ಚಲ್ಪಟ್ಟವು. ಒಂದು ಸಣ್ಣ ಮೆರವಣಿಗೆಯೂ ಆಯಿತು. ಪೋಲೀಸರು ಬರುವ ಮೊದಲೇ ಚದರಿದ್ದರು.

ತ್ರಿಚೂರಿನಲ್ಲಿ ೧೪ ಮಂದಿಗಳು ಕೈದುಮಾಡಲ್ಪಟ್ಟರು. ಶ್ರೀ| ಇಕ್ಕಂಡ ವಾರಿಯರ್ ಬಿ. ಎ. ಬಿ. ಎಲ್., ಎಂ. ಎಲ್. ಸಿ. ಇವರು ಸ್ವದೇಶಿ ಪ್ರಚಾರಕ್ಕಾಗಿ ಹಣವನ್ನೆತ್ತಬಾರದಾಗಿ ನೋಟೀಸು ದೊರಕಿದೆ.

ಮುಂಬಾಯಿಯಲ್ಲಿ ಕಳೆದ ಶುಕ್ರವಾರ ವಿದ್ಯಾರ್ಥಿಗಳು ಒಟ್ಟುಗೂಡಿ 'ವಿದ್ಯಾರ್ಥಿ ದಿನ'ವನ್ನಾಚರಿಸಿದರು. ಆರ್ಡಿನೆನ್ಸು ಗಳ ಕುರಿತು ತಮ್ಮ ಖೇದಸೂಚನೆಯನ್ನು ಮಾಡಿದರು. ಗುಂಪುಗುಂಪಾಗಿ ಹೋಗಿ ಖಾದಿ ಮಾರಿದರು. ಎಲ್ಲೆಲ್ಲಿಯೂ ತ್ರಿವರ್ಣ ಧ್ವಜವನ್ನೇರಿಸಿದರು. ಮೆರವಣಿಗೆ ಮಾಡಿ 'ವಂದೇ ಮಾತರಂ' 'ಗಾಂಧಿಕೀ ಜೈ' ಎಂದು ಜಯಘೋಷವನ್ನೆತ್ತಿದರು. ಒಬ್ಬ ಹುಡುಗನು ಯುನಿವರ್ಸಿಟಿ ಕ್ಲೋಕ್ ಟವರಿಗೆ ಹತ್ತಿ ರಾಷ್ಟ್ರ ಧ್ವಜವನ್ನೇರಿಸಿದನು. ಬೊಂಬೇ ಯುನಿವರ್ಸಿಟಿ ಎದುರಿಂದ ಎಡರು ಬಂದ ತಂಡ ವಿದ್ಯಾರ್ಥಿಗಳನ್ನು ಪೋಲೀಸರು ಚದರಿಸಿದರು. ಕ್ಲೋಕ್ ಟವರಿನ ಮೇಲೆ ರಾಷ್ಟ್ರ ಧ್ವಜವನ್ನೇರಿಸಿದ ಹುಡುಗನನ್ನು ಕೈದುಮಾಡಿದರು.

"ಮುಂಬಾಯಿ ಕ್ರೋನಿಕಲ್" "ಇಂಡಿಯನ್ ಡೈಲಿ ಮೈಲ್" ಎಂಬ ಪತ್ರಿಕೆಗಳು ಶಿಕ್ಷೆ ಹೊಂದಿದವರ ಹೆಸರುಗಳನ್ನು ಪ್ರಕಟಿಸಬಾರದಾಗಿ ಶಾಸನವನ್ನು ಇತ್ತು. ಮೊನ್ನೆ ಅದನ್ನು ಬದಲಾಯಿಸಿದರು.

ತಾರೀಕು ೨೦

ಮುಂಬಾಯಿಯಲ್ಲಿ ಅಚ್ಚಾಗುತ್ತಿದ್ದ ಬುಲೆಟಿನ್ನುಗಳು ಎಲ್ಲಿಂದ ಬರುತ್ತಿದ್ದವೆಂದು ತಿಳಿದುಬರುತ್ತಿದ್ದಿಲ್ಲ. ಮೊನ್ನೆ ಮಾತ್ರ ಪೋಲೀಸರು ಪತ್ತೆ ನಡೆಸಿ ಸಾಂತಾಕ್ರೂಜ್‌ನಲ್ಲೊಂದು ಬಂಗಲೆಯಲ್ಲಿ ಜಪ್ತಿ ನಡೆಸಿದರು. ಸೈಕ್ಲೋಸ್ಟೈಲ್ ಯಂತ್ರವೂ ಅದಕ್ಕೆ ಬೇಕಾದ ಸಾಹಿತ್ಯವೂ ಮುದ್ರಿಸಲ್ಪಟ್ಟಿದ್ದ ನೋಟೀಸುಗಳೂ ಸಿಕ್ಕಿದುವು. ಅದೇ ಹತ್ತಿರದಲ್ಲಿರುವ ಶ್ರೀಮತಿ ಊರ್ಮಿಳಾ ಮೆಹ್ತಾ ಎಂಬವರ ಮನೆಯನ್ನು ಜಪ್ತಿ ನಡಸಿದರು. ಏನೂ ದೊರೆಯಲಿಲ್ಲ. ಸೈಕ್ಲೋಸ್ಟೈಲ್ ಯಂತ್ರವು ಮುಂಬಾಯಿ ಪ್ರಾವಿನ್ಶಿಯಲ್ ಕಮಿಟಿಯದೆಂದು ತಿಳಿದುಬಂದಿದೆ.

ವಿದೇಶಿ ವಸ್ತ್ರದಹನವನ್ನು ಮಾಡಿದ ಐದು ಮಂದಿಗಳನ್ನು ಮಾಂಡ್ವಿಯಲ್ಲಿ ಕೈದುಮಾಡಿರುವರು.

ಕೌಶಾಸ್ಜೀ ಜಹಾಂಗೀರ್ ಹೋಲಿನ ಬಳಿ ಮದ್ಯದಂಗಡಿಗಳ ಹರಾಜನ್ನು ಪಿಕೆಟ್ ಮಾಡಿದ ೨೬ ಮಂದಿಗಳನ್ನು ಕೈದು ಮಾಡಿದರು.

ಮದ್ರಾಸಿನಲ್ಲಿ ವಿದೇಶಿ ವಸ್ತ್ರದಂಗಡಿಗಳನ್ನು ಪಿಕೆಟ್ ಮಾಡುತ್ತಲಿದ್ದ ೭ ಮಂದಿ ಸ್ವಯಂಸೇವಕರನ್ನು ಬೆತ್ತದಿಂದ ಚದರಿಸಿದರು.

ಕರಾಚಿಯಲ್ಲಿ ನಡೆದ ಮದ್ಯದಂಗಡಿ ಹರಾಜಿನ ದಿನ ಪಿಕೆಟಿಂಗ್ ನಡೆಸಿದ ೨೨ ಮಂದಿಗಳನ್ನು ಕೈದುಮಾಡಿದರು.

ತಾರೀಕು ೨೧

ಸಂಯುಕ್ತಪ್ರಾಂತ್ಯದ ಅಲ್ಲಹಾಬಾದ್, ಅಲಿಗರ್, ಗೊಂಡ ಒಂಡ ಮತ್ತು ಕಾನ್‌ಪುರಗಳಲ್ಲಿ ಕೈದುಗಳೂ, ಶಿಕ್ಷೆಗಳೂ ಆಗುತ್ತಿವೆ. ಇಲ್ಲಿ ಒಟ್ಟು ೬೩೦೬ ಮಂದಿಗಳು ಸೆರೆಮನೆಪಾಲದರು.

ನಾಗಪುರದಲ್ಲಿ ಅನೇಕರ ಕೈದುಗಳಾಗಿವೆ. ಶ್ರೀ ಘಟವಾಯಿ ಎಂಬವರು ೩ ವರುಷಗಳ ಕಠಿಣ ಸಜೆಗೂ ಒಂದು ತಿಂಗಳ ಏಕಾಂತವಾಸಕ್ಕೂ ಗುರಿಯಾದರು. ಸಿ. ಪಿ. ಮರಾಟಿ ಜಿಲ್ಲೆಗಳಲ್ಲಿ ಒಟ್ಟು ೭೫೦ ಕೈದುಗಳಾಗಿವೆ. ಇವರಲ್ಲಿ ೮೧ ಮಂದಿ ಸ್ತ್ರೀಯರು.

ಅಹ್ಮದಾಬಾದಿನಲ್ಲಿ "ಧರ್ಷನ ದಿನಾಚರಣೆ"ಯು ನಡೆಯುವ ಯತ್ನವಾಯಿತು. ಅಲ್ಲಿಯ ಹತ್ತನೇ ಸರ್ವಾಧಿಕಾರಿಯಾದ ಶ್ರೀ. 'ಸೋಮಬಾವ್' ಪರೇಲರೂ ಆರೇಳು ಮಂದಿ ಸ್ತ್ರೀಯರೂ, ಮತ್ತು ಆರೇಳು ಮಂದಿ ಪುರುಷರೊಡನೆ ಕೂಡಿಕೊಂಡು ಬಂದು ಮೆರವಣಿಗೆ ಮಾಡಿದರು. ಪೋಲೀಸರು ಅವರನ್ನು ಚದರಿಸಿದರು. ಸ್ತ್ರೀಯರನ್ನು ಕೈದುಮಾಡಿ ಸ್ಟೇಶನಿಗೊಯ್ದರು, ಅಲ್ಲಿ ಕೆಲವು ಮನೆಗಳ ಜಪ್ತಿಯು ನಡೆಯಿತು.

ತಾರೀಕು ೨೨.

ಕೈರಾ ಜಿಲ್ಲೆಯಲ್ಲಿ ಕೆಲವು ಮನೆಗಳನ್ನು ಪರಿಶೋಧಿಸಿದರು. ಕಾಂಗ್ರೆಸ್ ಕರಪತ್ರಗಳ ಹಳೇ ಪ್ರತಿಗಳು ಸಿಕ್ಕಿವೆ. ಒಬ್ಬ ಸ್ವಯಂಸೇವಕನನ್ನು ಹಿಡಿದಿರುವರು.

ಪೂನೆಯಲ್ಲಿ 'ಕಾಂಗ್ರೆಸ್ ದಿನಾಚರಣೆ'ಯ ಸಂಬಂಧವಾಗಿ ೧೧ ಮಂದಿಗಳನ್ನು ಕೈದುಮಾಡಿರುತ್ತಾರೆ. ಶ್ರೀ. ಕೆ. ಜಿ. ಶಿವಶಂಕರ್ ಎಂಬವರೂ ಕೈದುಮಾಡಲ್ಪಟ್ಟಿರುವರು.

ಮದುರೆ, ತಂಜಾವೂರು, ಕೊಯಂಬುತ್ತೂರು, ಸೇಲಂ, ಕೇರಳಾ, ಬಳ್ಳಾರಿ, ಗಂಜಾಂ, ವಿಜಗಪಟಾಂ, ಮೊದಲಾದ ಕಡೆಗಳಲ್ಲಿ ಕೈದುಗಳೂ, ಶಿಕ್ಷೆಗಳೂ, ಜಪ್ತಿಗಳೂ ನಡೆಯುತ್ತಿವೆ.

ಪೂನೆಯಲ್ಲಿನ ಇಂಗ್ಲಿಷ್ ಪತ್ರಿಕೆ 'ದಿ ಮಹರಾಟ' ಎಂಬುದರ ಮುದ್ರಣಕರ್ತರಿಂದ ಒಂದು ಸಾವಿರ ರೂಪಾಯಿ ಭದ್ರತೆಯನ್ನು ಕೇಳಿರುತ್ತಾರೆ.

ಕಳೆದ ಚಳವಳಿಯ ಸಮಯದಲ್ಲಿ ಬಾಬುಗೇನುವು ವಿದೇಶಿ ವಸ್ತ್ರದ ಗಾಡಿಯಡಿಯಲ್ಲಿ ಬಿದ್ದು ಮೃತಪಟ್ಟ ಕಲ್ಬಾದೇವಿಯ ಸ್ಥಳದಿಂದ ಒಂದು ಮೆರವಣಿಗೆಯು ಕಾಂಗ್ರೆಸ್ ದಿನಾಚರಣೆಯ ಸಂಬಂಧವಾಗಿ ಹನ್ನೆರಡು ಮಂದಿ ಸ್ತ್ರೀಯರ ಯತ್ನದಿಂದ ನಡೆಯಿತು. ಪೋಲೀಸರು ಒಂದು ಮುಂದಾಳುಗಳನ್ನು ಕೈದುಮಾಡಿದರು. ಮಿಕ್ಕುಳಿದವರು ಒಡನೆ ಮಾರ್ಗದ ಮೇಲೆ ಕುಳಿತರು. ಕೂಡಲೇ ಲಾಠೀ ಚಾರ್ಜು ನಡೆಯಿತು. ಕೆಲವು ಕಡೆಗಳಲ್ಲಿ ಮೆರವಣಿಗೆಗಳು ನಡೆದುವು. ಪೋಲೀಸರ ಅಭ್ಯಂತರವಿದ್ದಿತು. ಅದಾದ ಮೇಲೆ ಆಜಾದ್ ಮೈದಾನಿನಲ್ಲಿ ರಾತ್ರಿ ೮ ಘಂಟೆಗೆ ಒಂದು ಸಭೆಯು ಜರಗಲಿರುವುದಾಗಿ ಸಾರಲಾಯಿತು. ಸಂಜೆ ಏಳು ಘಂಟೆಯಾಗುವುದರೊಳಗೆ ಪೋಲೀಸರು ಮೈದಾನನ್ನು ಮುತ್ತಿದ್ದರು. ಸಭೆ ಜರಗಿಸಲು ಯತ್ನವು ನಡೆಯಿತು. ಪೋಲೀಸರು ಲಾಠೀ ಚಾರ್ಜು ನಡೆಸಿದರು. ಒಟ್ಟು ೬೫ ಮಂದಿಗಳು ಜಖಂಗೊಂಡಿರುವರು. ೪೦ ಮಂದಿಗಳು ಆಸ್ಪತ್ರೆಯಲ್ಲಿರುವರು. ೨೨ ಮಂದಿಗಳು ಕೈದುಮಾಡಲ್ಪಟ್ಟಿರುವರು.

ರಾತ್ರಿಯಲ್ಲಿ ವಿದೇಶ ವಸ್ತ್ರದಹನವು ನಡೆಯಿತು. ಪೋಲೀಸರು ಟ್ರೇಮ್‌ಗಳನ್ನೂ ಮೋಟರುಗಳನ್ನೂ ನಿಲ್ಲಿಸಿ ತೊಂದರೆಯನ್ನೆಬ್ಬಿಸಿದರು. ರಾತ್ರಿ ೧೨ ಗಂಟೆಯ ತನಕ ಪಟ್ಟಣದಲ್ಲಿ ಗಡಿಬಿಡಿಯಿದ್ದಿತು.

ತಾರೀಕು ೨೩

ಮುಂಬಾಯಿಯಲ್ಲಿ ೧೦ ಮಂದಿಗಳನ್ನು ಕೈದುಮಾಡಿ ವಿವಿಧ ಶಿಕ್ಷೆ ಕೊಟ್ಟರು. ಸರ್ವಾಧಿಕಾರಿಣಿಯಾಗಿದ್ದ ಸ್ತ್ರೀಯೊಬ್ಬಳಿಗೆ ೩ ತಿಂಗಳ ಕಠಿಣ ಸಜೆಯೂ ೬೫ ರೂಪಾಯಿಗಳ ಜುಲುಮಾನೆಯೂ ವಿಧಿಸಲ್ಪಟ್ಟಿತು.

ನಿಷಿದ್ಧ ಉಪ್ಪನ್ನು ತಯಾರಿಸುವುದಕ್ಕಾಗಿ ಬುಲೇಕ್ಷರ್ ವಾರ್ಡಿನ ಡಿಕ್ಟೇಟರರನ್ನೂ ಇನ್ನಿತರ ನಾಲ್ಕು ಮಂದಿಗಳನ್ನೂ ಕೈದುಮಾಡಿರುವರು.

ಜಮ್ನಾದಾಸ್ ದ್ವಾರಕದಾಸರು ಮೊನ್ನೆ ಕೈದುಮಾಡಲ್ಪಟ್ಟು ಪೋಲೀಸರಿಗೆ ಕಾಣಿಸಿಕೊಳ್ಳುವ ಶರ್ತದ ಮೇಲೆ ಬಿಡುಗಡೆ ಹೊಂದಿದರು. ಕಳೆದ ಮಂಗಳವಾರ ಅವರು ಒಂದು ಭಾಷಣ ಕೊಟ್ಟು, ಆ ಮೇಲೆ ಅವರು ಪೋಲೀಸರ ಬಳಿಗೆ ಹೋದರು.

ಮುಂಬಾಯಿಯ ಜವಾರಿ ಬಜಾರಿನಲ್ಲಿಯ ರೈಚಂದ್ ದೀಪಚಂದ್ ಕಂಪೆನಿಯ ಶ್ರೀ| ರಣಛೋಡದಾಸ್ ಎಂಬವರು ಕಾಂಗ್ರೆಸ್ ಕೆಲಸವು ಈಗ ಮವಾಲಿಗಳಿಂದ ನಡೆಯುತ್ತದೆಂದು ಹೇಳಿದರೆಂಬ ಆರೋಪಣೆಯಿದ್ದಿತು. ಅದನ್ನು ಕೇಳಿದ ಸುಮಾರು ೩೦೦ ಮಂದಿಗಳು ಒಟ್ಟುಗೂಡಿ ಈ ಕಂಪೆನಿಯ ಎದುರು ನಿಂತು ವಿರೋಧಪ್ರದರ್ಶನವನ್ನು ಮಾಡಿದರು. ತೊಂದರೆಗಳನ್ನು ತಪ್ಪಿಸುವುದಕ್ಕಾಗಿ ಕಂಪೆನಿಯವರು ಬಾಗಿಲು ಮುಚ್ಚಿದರು. ಆದಾಗ್ಯೂ ಜನರು ಹಿಂತಿರುಗದೆ ಕಂಪೆನಿಯ ಜಾಹೀರು ಬೋರ್ಡನ್ನು ತೆಗೆದು ತುಂಡುಮಾಡಿ ಎಸೆದರು. ಬಾಗಿಲು ಒಡೆಯುವ ಯತ್ನ ಮಾಡಿದರು. ಕೊನೆಗೆ ಹರಂಬಳ್ಳಿಗಳಿಗೆ ಬೆಂಕಿ ಕೊಟ್ಟು ಕೊಳ್ಳೆಹೊಡೆಯುವುದರಲ್ಲಿದ್ದರು. ಇಬ್ಬರು ಕಾಂಗ್ರೆಸ್‌ವಾಲರು ಈ ಅತ್ಯಾಚಾರಿಗಳನ್ನು ತಡೆದರೂ ಅವರು ಇವರ ಮಾತನ್ನು ಕಿವಿ ಮೇಲೆ ಹಾಕಿಕೊಳ್ಳಲಿಲ್ಲ. ಕೊನೆಗೆ ಪೋಲೀಸರ ಆಗಮನವಾಗಿ ಎಲ್ಲರೂ ಚದರಿದರು. ಮೇಲಿನ ಕಂಪೆನಿಯವರು ಪರದೇಶಕ್ಕೆ ಹೆಚ್ಚಿನ ಭಂಗಾರವನ್ನು ಕಳುಹಿಸುವವರೆಂದು ತಿಳಿದುಬಂದಿದೆ.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉಚ್ಚಾಟವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ. ಹಿಂದೀಯರಿಗಾಗಿ HEDAURIN FOR DYSENTERY CHOLERA CURE ಹಿಂದೀಯರಿಂದಲೇ ವ್ಯಾಪಾರಕ್ಕೆ

ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟುದು ತರಲ್ಪಟ್ಟುದು

ಬಿಲ್ಲಿನ ಕ್ರಯ ಅಣೆ 0—15—0. 2 ಬಿಲ್ಲಿನ ಬಾಟಲಿಗೆ ರೂ 1—12—0

(2) ಕಡೂರಿನಿಂ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ ಮೈಸೂರ ಗಡಿಗೆ 11 4?ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅಪ್ಪುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಪೋಸ್ಟಾಫೀಸ್ ಸ್ಟೇಶನ್ ಬಳಿ ಧರ್ಮಸ್ಥಳ ... 1 ... ಬೆಳ್ತಂಗಡಿಗೆ 1 4? ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲುಪಿ, ... ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ... ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ... 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ... ಹೊರಟು, ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ, ... ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರುತ್ತದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ... ಬೆಳಗಾವಿ, ... ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ... ಮದ್ರಾಸ್ ವಗೈರೆ ಕಡೆಗಳಿಗೂ ... 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ, ವಗೈರೆ ಪ್ರಾಂತಗಳಿಗೆ ... ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರಿಗೂ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ... ರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗಿ ಬಪ್ಪ ... ಮೈಸೂರು ... ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಾಪುವಿನ ಮಾರ್ಗವಾಗಿಯೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ಶಿಲೆಕಲ್ಲಿನಿಂ

ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ

ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅಲ್ಲಿಂದ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

The Canara Public Conveyance Company Ltd., Mangalore

ಮಹಾತ್ಮಾಜೀಯವರೂ ಬಡತನವೂ.

"ಭಾಗ್ಯವೇ ಭಾಗ್ಯ ವೈರಾಗ್ಯವಯ್ಯಾ?"

ಮಹಾತ್ಮಾ ಗಾಂಧಿಯವರು ಕಳೆದ ಸಲ ಲಂಡನಿನಲ್ಲಿದ್ದಾಗ ಅಲ್ಲಿಯ ಗಿಲ್ಡ್ ಹೌಸ್ ಎಂಬಲ್ಲಿ ಮಾಡಿದ ಒಂದು ಭಾಷಣದ ಅನುವಾದ. ಸ್ವಯಂ ಬಡತನದ ದೀಕ್ಷೆಯನ್ನು ಸ್ವೀಕರಿಸಿರುವ ಮಹಾತ್ಮರು ಬಡತನವೆಂಬುದನ್ನು ಕಷ್ಟಮಯ ಸಂಗತಿಯನ್ನಾಗಿ ಭಾವಿಸುವುದಿಲ್ಲ. ಅದು "ಅವರ್ಣನೀಯವಾದ ಆನಂದ, ಸುಖ ಮತ್ತು ಶಕ್ತಿಯನ್ನು ಪ್ರವರ್ಧಿಸುವುದೆಂ"ದೆನ್ನುವರು.

"ರಾಜಕೀಯ ಸಮಸ್ಯೆಯ ಪರಿಭ್ರಮಣದಲ್ಲಿ ನಾನು ಸಿಲುಕಿಕೊಂಡುದ್ದನ್ನು ನೋಡಿ ನನ್ನ ಮನಸ್ಸಿನೊಳಗೆಯೇ ಯೋಚಿಸತೊಡಗಿದೆನು ಅನೀತಿ, ಅಸತ್ಯ ಮತ್ತು "ರಾಜಕೀಯ ಲಾಭ"ವೆಂದೆಣಿಸಲ್ಪಡುವ ವಿಷಯಗಳ ಏನೊಂದಿಷ್ಟು ಸ್ಪರ್ಶವಿಲ್ಲದೆ ನಾನು ಜೀವಿಸಲಿಕ್ಕೆ ಏನಗತ್ಯವಿದೆಯೆಂದು —

ನಾನೇನು ಮಾಡಿದೆ, ನನ್ನ ಕಲಸವೇನಾಯಿತೆಂಬುದನ್ನು ವಿವರಿಸಿ ನಿಮ್ಮ ಸಮಯವನ್ನು ಹಾಳುಗೆಡವಲಾರೆ. ಅವೆಲ್ಲ ನನಗೆ ಬಹಳ ಲಾಭಕರ ಮತ್ತು ಪವಿತ್ರ ಸಂಗತಿಗಳಾಗಿ ಕಂಡು ಬಂದರೂ ಅವುಗಳ ವಿಷಯ ಈಗ ಇಲ್ಲಿ ಉಪದೇಶಿಸುವುದಿಲ್ಲ— ಆದರೆ ನಾನು ಕಂಡುಕೊಂಡ ವಿಷಯವು ಬಹಳ ಸ್ಪಷ್ಟತರವಾದುದು—ಆದಿಯಲ್ಲಿ ಅದೊಂದು ಹೋರಾಟವಾಯಿತು— ನನಗೆ ನನ್ನ ಪತ್ನಿಯೊಡನೆಯೂ ನೆನಪಿರುವಷ್ಟು ಮಟ್ಟಿಗೆ ಹೋರಾಡಬೇಕಾಗಿದ್ದುದಾದರೂ, ಮಕ್ಕಳೊಡನೆಯೂ ಸೆಣಸು ಮಾಡಬೇಕಾಯಿತು—ಹಾಗಿದ್ದರೂ ಅದು ನನ್ನ ಮನಸ್ಸಿನಲ್ಲೊಂದು ನಿರ್ಧಾರವಾಯಿತು—ನನ್ನ ಜೀವನವನ್ನೇ ಜನಸಮುದಾಯದ ಪುಷ್ಟಿಗೆ ಹಾಕಿ ನಾನು ಕಲಸಮಾಡಬೇಕೆಂದಾದರೆ, ನಾನು ದಿನಂಪ್ರತಿ ಕಾಣುವ ಬಡವರ ಗೋಳಾಟದಲ್ಲಿ ಭಾಗವಹಿಸಬೇಕಾದರೆ, ನಾನು ನನ್ನ ಸಕಲ ದ್ರವ್ಯವನ್ನೂ, ಸ್ವಾಧೀನತೆಯನ್ನೂ ತ್ಯಜಿಸಿಬಿಡಬೇಕೆಂದು.

ಈ ನಿರ್ಧಾರವು ನನ್ನಲ್ಲಿ ಯಾವಾಗಾಯಿತೆಂದು ನಿಜವಾಗಿ ನಾನು ಹೇಳಲಾರೆ. ತತ್‌ಕ್ಷಣವೇ ನಾನು ಎಲ್ಲವನ್ನು ತ್ಯಜಿಸಿಬಿಟ್ಟೆನು. ಪ್ರಥಮದಲ್ಲಿ ನನ್ನ ಆಗಿನ ಜೀವನವು ಪ್ರಗತಿಪರವಾಗಲಿಲ್ಲ. ಅಂದಿನ ದಿನಗಳನ್ನು ಕುರಿತು ನಿವೇದಿಸುವದಾದರೆ ನಾನು ನನ್ನ ಸ್ಮರಣೆಗೆ ತಂದುಕೊಳ್ಳುವಾಗ ಅಂದಿನ ದಿನಗಳು ಬಹಳ ಹೋರಾಟದಿದ್ದುವೆಂದು ನನಗೆ ಭಾಸವಾಗುತ್ತದೆ. ಅಲ್ಲದೆ ಆನಂದಕರವಾಗಿದ್ದುವೆಂದೂ ಕಂಡುಬರುತ್ತದೆ. ದಿನಗಳು ಕಳೆದಷ್ಟಕ್ಕೆ ನಾನು ನನಗೆ ಬೇಕಾಗಿದ್ದ ಹೆಚ್ಚಿನಂಶ ಎಲ್ಲವುಗಳನ್ನೂ ತೊರೆಯಲೇ ಬೇಕಾಗುತ್ತ ಬಂತು. ನನ್ನದು ಎಂದು ನಾನು ನೆನಸುತ್ತಿದ್ದ ಅನೇಕ ಸಂಗತಿಗಳನ್ನು ಬಿಡಬೇಕಾಯಿತು. ಎಲ್ಲವನ್ನೂ ಬಿಡುತ್ತಾ ಹೋದ ಕೂಡಲೆ ಒಂದು ಸಮಯದ ಸಮಾಗಮವನನುಭವಿಸಿದೆನು. ಆಗ ನನ್ನ ಸ್ವಾಧೀನತೆಗಳನ್ನು ತೊರೆದುದರಿಂದ ನನಗೆ ಅನಿರ್ವಚನೀಯವಾದ ಮತ್ತು ಅವರ್ಣನೀಯವಾದ ಆನಂದವಾದಂತೆ ತೋರಿತು. ಹೀಗೆಯೇ, ನನ್ನದೆಂದಿದ್ದ ಒಂದೊಂದೇ ವಸ್ತುವನ್ನು ಪರಿತ್ಯಾಗ ಮಾಡುತ್ತ ಹೋದ ನನ್ನ ತ್ಯಾಗದ ವಿಷಯವು ದಿನದಿಂದ ದಿನಕ್ಕೆ ಸಮಾನತೆಯಿಂದಲೇ ಜಾರುತ್ತ ಹೋಯಿತು. ಹಾಗೂ ಈಗ ನನಗೆ ಹೆಗಲಿನಿಂದ ದೊಡ್ಡ ಹೊರೆಯನ್ನೇ ಕಳಗಿಳಿಸಿದಂತಾಗಿದೆ. ಈಗ ನಾನು ಸುಲಭವಾಗಿ ನಡೆಯುತ್ತಿದ್ದೇನೆ. ಈಗ ನಾನು ನನ್ನ ದೇಶಬಾಂಧವರ ಸೇವೆಯನ್ನು ಹೆಚ್ಚಿನ ನೆಮ್ಮದಿಯಿಂದಲೂ, ಹೆಚ್ಚಿನ ಸಂತೋಷದಿಂದಲೂ ಮಾಡುತ್ತೇನೆ. ಈಗ ನನಗೆ ಏನನ್ನಾದರೂ ಸ್ವಾಧೀನಪಡಿಸಿಕೊಳ್ಳುವುದೆಂದರೆ ಅದು ದೊಡ್ಡ ಹೊರೆಯಂತೆಯೇ ಭಾಸವಾಗುತ್ತದೆ.

ಸುಖಾನಂದಗಳ ಮೂಲ ಹೇತುವಾವುದಿರಬಹುದೆಂದು ನಾನು ಶೋಧಿಸಿದೆ. ನಾನು ಒಂದು ವಸ್ತುವನ್ನು ನನ್ನದೆಂದು ಭಾವಿಸಿದ್ದೇನೆನ್ನುವ, ಆಗ ನಾನು ಅದನ್ನು ಪ್ರಪಂಚದ ಕೈಯಿಂದ ದೂರವಿರಿಸಿ ಭದ್ರೀಕರಿಸಬೇಕೆಂದು ತಿಳಿದುಕೊಳ್ಳುತ್ತೇನೆ. ಇದೇ ಸುಖದ ಹೇತು. ಮತ್ತೊಂದು ಹೇತುವಾವುದೆಂದರೆ ಅನೇಕರು ಒಂದು ವಸ್ತುವನ್ನು ತಮಗೆ ಬೇಕೆಂದು ಆಶಿಸಿದರೂ ಅದು ಅವರಿಗೆ ದೊರೆಯುವುದಿಲ್ಲ. ಒಂದು ವಸ್ತುವು ನನಗೆ ಬೇಕಾಗಿದೆ ಎಂದು ಭಾವಿಸುವ. ಅದನ್ನು ಆದರ ಅಗತ್ಯವಿರುವ ಕಲವು ಜನರು ವಶೀಕರಿಸಬೇಕೆಂದು ಆಶಿಸಿದರೆ, ಅವರನ್ನು ಹಿಡಿಸಲು ನಾನು ಪೋಲೀಸರ ಸಹಾಯವನ್ನು ಹುಡುಕಬೇಕು. ನನಗಿಂತ ಅವರಿಗೆ ಹೆಚ್ಚಿನ ಅಗತ್ಯವಿರುವುದರಿಂದ "ವರದನ್ನು ಆಶಿಸಿದರಿಂದಲೇ ಹಾಗಾಯಿತು!

ಆದುದರಿಂದ ನನ್ನ ಮನಸ್ಸಿನಲ್ಲಾಯಿತು—ಯಾವುದಾದರೊಂದರ ಸ್ವಾಧೀನತೆಯು ಒಂದು ಅನ್ಯಾಯವೇ ಸರಿ. ಒಂದು ವಸ್ತುವನ್ನು ಉಳಿದವರು ಆಶಿಸಿ ಅದು ಅವರಿಗೆ ದೊರೆಯುವುದಾದರೆ, ಅಂತಹ ವಸ್ತುವನ್ನು ನಾನು ಸ್ವಾಧೀನವಿರಿಸಿಕೊಳ್ಳಬಹುದು. ಆದರೆ ಇಲ್ಲಿ ಕೂಡಿದ ಪ್ರತಿಯೊಬ್ಬನೂ ಸ್ವಾನುಭವದಿಂದಲೇ ತಿಳಿದುಕೊಳ್ಳಬಹುದು—ಇದು ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲವೆಂದು. ಆದುದರಿಂದ ಎಲ್ಲರೂ ಯಾವುದನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದರೆ—ಅಸ್ವಾಧೀನತೆಯನ್ನು—ಯಾವುದನ್ನೂ ನಮ್ಮದೆಂದು ಭಾವಿಸಲೇ ಬಾರದು—ಅಂದರೆ ಸ್ವೇಚ್ಛಾ ಪರಿತ್ಯಾಗಮಾಡಬೇಕು.

ಈಗ ನೀವು ನನ್ನನ್ನು ಪ್ರಶ್ನಿಸಬಹುದು—ಸ್ವೇಚ್ಛೆಯಿಂದ ಬಡತನವನ್ನು ಸ್ವೀಕರಿಸಬೇಕೆಂದು ಈಗ ನೀವು ಹೇಳುತ್ತಿರುವಾಗಲೇ ನಿಮ್ಮಲ್ಲಿ ಅನೇಕ ವಸ್ತುಗಳು ನಿಮ್ಮದೆಂದಿರುವುವಲ್ಲವೆ? ಎಂದು. ಆದರೆ ನಾನು ಈಗ ಹೇಳುವ ಮಾತಿಗನುಸಾರವಾಗಿ ನೀವು ನನ್ನ ಮಾತಿನ ಭಾವವನ್ನರಿತು ನಿಮ್ಮ ಪ್ರಶ್ನೆಯು ಸರಿ. ಆದರೆ ನಾನು ಮಾತನಾಡುವುದು ನನ್ನ ಮಾತಿನ ಭಾವದಿಂದಲ್ಲ. ಅದರ ಹಿಂಗಡೆ ಇರುವ ತತ್ವದಿಂದ. ಎಷ್ಟರ ತನಕ ನಮಗೆ ದೇಹವೆಂಬುದೊಂದಿದೆಯೋ ಅಷ್ಟರ ತನಕ ನನ್ನ ಮಟ್ಟಿಗಾದರೂ ಸ್ವಲ್ಪ ವಸ್ತುವು ಬೇಕು, ಏಕೆಂದರೆ ನಮ್ಮ ದೇಹಕ್ಕೆ ನಾವು ಎಷ್ಟು ದಿನವಿಲ್ಲ ತಗಲು ಕೊಂಡು ಹಾಕಬೇಕೆಂದಲ್ಲ—ಎಷ್ಟು ಅತ್ಯಗತ್ಯವಿದೆಯೋ, ಎಷ್ಟರಲ್ಲಿ ಮಾತ್ರ ಸಂಭಾಳಿಸಿಕೊಳ್ಳಬಹುದೋ ಅಷ್ಟನ್ನು ತೆಗೆದುಕೊಳ್ಳಬೇಕು. ನಿಮ್ಮ ಮನೆಗೆ ತುಂಬಿರ ಕೋಣೆ ಕೊಠಡಿಗಳನ್ನು ನೀವು ಮಾಡಿ ಹಾಕುವುದಿಲ್ಲ. ಆಹಾರ ಮೊದಲಾದವುಗಳಲ್ಲಿಯೂ ಹೀಗೆಯೇ ವರ್ತಿಸಬೇಕು.

ಆದರೆ ಈಗ ನಡೆಯುತ್ತಿರುವ ನವನಾಗರಿಕತನವನ್ನು, ನಾನೆನ್ನುವ ಪ್ರಸಾದಯುಕ್ತವಾದ ಬಡತನವನ್ನು ಅಜಗಜಾಂತರವಿದ್ದು, ಅವುಗಳ ಪರಸ್ಪರ ವಿಭಜನೆಗಳಿರುವುದು ನಮಗೆ ಕಂಡುಬಂದೀತು. ನಮಗೆ ಬೇಕಾದ ಎಡವೆ ವಸ್ತುಗಳನ್ನು ಹೆಚ್ಚಿಸುತ್ತಾ ಹೋಗುತ್ತಿರುವುದು ಈಗಿನ ನವಸಂಸ್ಕೃತಿಯ ಅಡಿಗಲ್ಲೆಂದು ನಾನು ಭಾವಿಸುತ್ತೇನೆ. ನಿಮಗೆ ಒಂದು ಕೋಣೆ ಇದ್ದರೆ ಅದಕ್ಕೆ ಇನ್ನೊಂದನ್ನು ಕೂಡಿಸುತ್ತೀರಿ—ಬೇಕಾದರ ಮೂರು ಕೋಣೆ ಮಾಡಿಕೊಳ್ಳುತ್ತೀರಿ. ಅಂತೂ ಇಂತೂ ಹೆಚ್ಚಾದಷ್ಟಕ್ಕೆ ಸುಖಿಗಳಾಗುತ್ತೀರಿ. ಅದೇ ರೀತಿ ಮನೆಯ ಉಪಕರಣಗಳಲ್ಲಿ—ಮನೆಯನ್ನು ಬೇಕಾದುದಕ್ಕಿಂತಲೂ ಹೆಚ್ಚಿನ ಸಾಮಾನುಗಳಿಂದ ತುಂಬಿಸುತ್ತೀರಿ.

ಎಷ್ಟು ನಮ್ಮ ಬಳಿಗೆ ಕೊನೆ ಇರುವುದಿಲ್ಲ. ಎಷ್ಟೆಷ್ಟು ಸ್ವಾಧೀನತೆಯು ನಮಗೆ ಹೆಚ್ಚುತ್ತದೋ ಅಷ್ಟಷ್ಟು ಕುಶಲತೆಯು ನಮ್ಮಲ್ಲಿ ಹೆಚ್ಚುತ್ತದೆ ನಾವು ಭಾವಿಸುತ್ತೇವೆ—ಇವನ್ನೆಲ್ಲಾ ನಾನು ನಿಮ್ಮ ನವನಾಗರಿಕರ ದೃಷ್ಟಿಯಿಂದ ಹೇಳುವುದಲ್ಲ—ಅವರು ಹೇಳದಂತೆ ಹೇಳುವುದಲ್ಲ—ನನಗೆ ಕಂಡಂತೆ ನಾನು ಹೇಳುವುದು.

ಆದ್ದರಿಂದಾಗ ನೀವು ಎಷ್ಟು ಕಡಿಮೆ ಸ್ವಾಧೀನತೆಯನ್ನು ಮಾಡಿಕೊಳ್ಳುತ್ತೀರೋ ಅಷ್ಟು ಸ್ವಾಧೀನತೆಯು ಕಡಿಮೆಯಾಗಿ ನಿಮಗೆ ಸುಖವೂ ಉಂಟಾಗುತ್ತದೆ—ಸುಖವು ಏತಕ್ಕಾಗಿ—ಈ ಜೀವನದಲ್ಲಿ ಆನಂದಗೊಳ್ಳುವುದಕ್ಕಾಗಿ ಸುಖವಲ್ಲ—ನಮ್ಮ ಬಾಂಧವರ ಸೇವೆಗಾಗಿ, ಸರ್ವವನ್ನೂ ಸಮರ್ಪಣೆ ಮಾಡುವ ಸೇವೆಗಾಗಿ—ದೇಹ, ಆತ್ಮ, ಮನಸ್ಸುಗಳನ್ನರ್ಪಿಸುವ ಸೇವೆಗಾಗಿ. ನಮ್ಮ ಸ್ವಂತಹ ದೇಹವು ಕೂಡ ನಮ್ಮದಲ್ಲ.

ಈ ದೇಹವನ್ನು ಶಾಶ್ವತವಾಗಿ ನಾವಿಟ್ಟುಕೊಳ್ಳಲು ಸಾಧ್ಯವಿಲ್ಲ—ಇದನ್ನು ಯಾರು ನಮಗೆ ಕೊಟ್ಟಿರುವನೋ ಅವನು ಹಿಂತಿರುಗಿ ಆಶಿಸಿದರೆ ಇದು ಹೋಗಲೇ ಬೇಕು.

ಇಂತಹ ನಿರ್ಧಾರವು ನನ್ನಲ್ಲಿದ್ದು ದೈವೇಚ್ಛೆ ಪ್ರಕಾರ ನನ್ನ ದೇಹವು ಹೋಗುವ ಮೊದಲು ಸಚೇತನದ ಈ ಕಾಲದಲ್ಲಿ ಸ್ವೇಚ್ಛಾವರ್ತನೆ, ಸ್ವೇಚ್ಛೆಗಳಿಗಲ್ಲದೆ ಈ ದೇಹವನ್ನು ಬರೇ ಸೇವೆಯಲ್ಲಿ ವ್ಯಯಗೊಳಿಸಬೇಕೆಂದಿರುವೆನು. ದೇಹವೇ ನಮ್ಮದಲ್ಲವೆಂದಿರುವಾಗ ನಾವು ಉಪಯೋಗಿಸುವ ಇನ್ನಿತರ ವಿಷಯಗಳಲ್ಲಾದರೂ ನಾವು ಹೇಗಿರಬೇಕೆಂದು ನೀವೇ ಯೋಚಿಸಿರಿ.

ಸ್ವಯಂ ದಾರಿದ್ರ್ಯವನ್ನು ಸಂಪೂರ್ಣವಾಗಿ (ಆದರ ನಿಜವಾದ ಸಂಪೂರ್ಣತೆಯಿಂದ ಇದನ್ನು ಆಚರಿಸಲು ಸಾಧ್ಯವಿಲ್ಲ ಆದರೆ ವ್ಯಕ್ತಿಯ ಶಕ್ತಿಯನುಸಾರವಾಗಿ) ಆಚರಿಸಿರುತ್ತಾರೋ ಅವರು ಆ ಸ್ವಾಧೀನತೆಯಲ್ಲಿ ಲೋಕದ ಅಮೋಘವಾದ ಐಶ್ವರ್ಯವೇ ಇರುವುದೆಂದು ಸಾರಿರುವರು. ಅಂದರೆ ಯಾವುದು ನಮಗಗತ್ಯವಿದೆಯೋ ಅದು ನಮ್ಮ ಬಳಿಯೇ ಬರುವುದು—ನಮಗೆ ಆಹಾರವು ಅಗತ್ಯವೆಂದಿದ್ದರೆ ಅದು ಕೂಡ ನಮ್ಮ ಬಳಿಗೆ ಬರುವುದು.

ನಿಮ್ಮಲ್ಲಿ ಅನೇಕ ಸ್ತ್ರೀಪುರುಷರು ಪ್ರಾರ್ಥನೆ ಮಾಡುವವರಿರುವಿರಿ. ಅನೇಕ ಕ್ರೈಸ್ತರು ತಮ್ಮ ಪ್ರಾರ್ಥನೆಯ ಫಲವಾಗಿ ತಮಗೆ ಬೇಕಾದುದು ದೊರೆತಿದೆಯೆಂದು ಹೇಳಿರುವುದನ್ನು ನಾನು ಕೇಳಿರುವೆನು. ನಾನು ಆ ಮಾತನ್ನು ನಂಬುತ್ತೇನೆ ಮತ್ತೊಂದು ವಿಶೇಷವೇನೆಂದರೆ ಸ್ವೇಚ್ಛಾಪರ ದಾರಿದ್ರ್ಯವನ್ನು ಸ್ವೀಕರಿಸಿದವರು—ತಮ್ಮ ಸಕಲವನ್ನು ತ್ಯಜಿಸಿದವರು—ಯಾವುದೊಂದರ ಅಗತ್ಯವುಳ್ಳವರೂ ಆಗುವುದಿಲ್ಲ.

'ಅಗತ್ಯ'ವೆಂಬುದರ ಅರ್ಥವನ್ನು ತಪ್ಪಾಗಿ ಹಾಗೆ ತೆಗೆದುಕೊಳ್ಳುವುದಲ್ಲ. ಭಗವಂತನು ಸರ್ವ ವ್ಯಾಪಿಯಾದ ರಕ್ಷಕನೆಂದು ನನ್ನ ಮತ. ಅವನು ನಮ್ಮನ್ನು ಆಗಾಗ್ಗೆ ಪರೀಕ್ಷಿಸುತ್ತಾನೆ. ನಿಮ್ಮ ವಿಶ್ವಾಸವು ನಿಮ್ಮ ಕೈಬಿಟ್ಟರೆ, ಅಥವಾ ನಿಮ್ಮ ದೇಹವು ನಿಮ್ಮನ್ನು ಬಿಡುವುದಾದರೆ, ನೀವು ಮುಳುಗುತ್ತಿರುವೆವೆಂದಾದರೆ, ಅವನು ಹೇಗಾದರೂ ನಿಮ್ಮ ರಕ್ಷಣೆಗೆ ಬಂದು ನೀವು ನಿಮ್ಮ ನಂಬಿಕೆಯನ್ನು ಬಿಡಬಾರದೆಂದೂ, ಅವನು ನಿಮ್ಮ ಬೆಂಬಲವಾಗಿ ಯಾವಾಗಲೂ ಇರುವನೆಂದೂ ಹೇಳುವನು.

ಅವನು ತನ್ನ ಕರ್ತವ್ಯದ ವೇಳೆ ನಮ್ಮ ಬಳಿಗೆ ಬರುವನು. ನಮ್ಮ ಕರ್ತವ್ಯದ ವೇಳೆ ಅವನ ನಮ್ಮ ರಕ್ಷಣೆಗೆ ಬರುವುದಿಲ್ಲ. ಹೀಗೆಯೇ ಅದನ್ನು ನಾನು ಕಂಡಿರುವೆನು. ನನ್ನ ಐವತ್ತೈದು ವರ್ಷದ ಸಮಯದಲ್ಲಿ ಅವನು ನನ್ನ ಕೈಬಿಟ್ಟಂತಹ ಒಂದು ಉದಾಹರಣೆಯೂ ನನಗೆ ತೋಚದು—ಒಂದು ಕಾಲದಲ್ಲಿ ನಾನು ಒಂದು ಕೋಟಿ ರೂಪಾಯಿಗಳನ್ನು ಶೇಖರಿಸಿದೆನು. ಅಷ್ಟು ಹೇರಳವಾದ ಹಣವನ್ನು ಶೇಖರಿಸಲು ನನಗೆ ಕಷ್ಟವಾಗಲಿಲ್ಲ. ಸೇವೆಗಾಗಿ ಎಂತಹುದೆಲ್ಲ ಅಗತ್ಯವಿದೆಯೋ ಅಂತಹುದು ನನಗೆ ಸಿಕ್ಕಿಯೇ ಸಿಕ್ಕಿವೆ. ಆವಶ್ಯಕತೆಯ ಕಾಲದಲ್ಲಿ ಅದು ದೊರಕಿಯೇ ದೊರಕಿರುತ್ತದೆ.

ಹೇಳಿದ ಉಪವಾಸ ವಿದ್ದು ಸ್ವೇಚ್ಛಾಪರ ಬಡತನವನ್ನು ಸ್ವೀಕರಿಸಬೇಕೆಂದು ನಾನು ಅಭಿಪ್ರಾಯ ಪಡೆನು. ಬಡವರೂ ಕೂಡ ತಮಗೆ ನಿರುಪಾಯವಾಗಿ ಬಂದ ಬಡತನವನ್ನು ಸ್ವಸಂತೋಷದಿಂದ ಸ್ವೀಕರಿಸಿದರೆ, ಅವರು ಎಷ್ಟೊಂದು ಆನಂದಗೊಂಡಾರೆಂದು ಹೇಳಲಸಾಧ್ಯ — ಹಾಗೆ ಮಾಡಿದರೆ ಆದರ ಮಹೇಂದ್ರಜಾಲವು ಎಷ್ಟಿರುತ್ತದೆಂದು ತಿಳಿದು ಬಂದೀತು. ಅದರೇನು ಪ್ರಯೋಜನ? ಜನರು ಸ್ವಯಂ ದಾರಿದ್ರ್ಯವನ್ನು ಸ್ವೀಕರಿಸುವ ಮೊದಲು ತಮ್ಮ ತಮ್ಮ ಉಪಸಾಧನೆಗಳನ್ನು ಹೆಚ್ಚಿಸುತ್ತಾ ಹೋಗುತ್ತಾರೆ.

ನಾನು ಒಂದು ವೇಳೆ ಬಡವರ ಪಕ್ಷ ವಹಿಸಿದರೆ ಏನಾಗುವುದು? ನನ್ನಂತಹನು ಅವರ ವೃದ್ಧಿ ಬಯಸಿದರೆ ಅವರ ಜೀವದ ಜೀವನಾಡಿಯಲ್ಲಿ ಒಂದು ಬಗೆಯ ಪ್ರಕಾಶವು ಉಂಟಾಗಬಹುದು. ಅವರ ಕಷ್ಟ ನಿವಾರಣೆಗಳಿಗೋಸ್ಕರ ನಾನು ಅರಿಸುವ ಉಪಾಯವನ್ನೇ ಅವರು ಅನುಮೋದಿಸಲೂ ಬಹುದು—ನಾನು ಅವರ ಕಷ್ಟ ಪರಂಪರೆಗಳನ್ನು ಬಿಡುಗಡೆಗೊಳಿಸದಿದ್ದರೂ ಕೂಡ ನನ್ನನ್ನು ಇಟ್ಟುಕೊಳ್ಳುವವರು. ಅವರಿಗೆ ನಾನೊಬ್ಬ ಸದ್ಭಾವನೆಯವನೆಂದಾದರೂ ಕಂಡು ಬಂದೀತು. ಕೂಡಲೆ ಅವರು ನನ್ನನ್ನು ಕುರಿತು ಅವನಲ್ಲಿ ಏನೂ ಇಲ್ಲದಿದ್ದರೂ ಅವನು ಸಂತೋಷಚಿತ್ತನಿರುವನಲ್ಲ ಅದಕ್ಕೇನು ಕಾರಣ? ಎನ್ನಬಹುದು. ಈ ಪ್ರಶ್ನೆಯ ಕುರಿತು ನಾನು ಅವರೊಡನೆ ವಿವಾದಿಸಬೇಕೆಂದಿಲ್ಲ. ಅವರೇ ಅವರೊಳಗೆ ಚರ್ಚಿಸುವರು.

ನನಗೆ ಲಭಿಸುವ ಸ್ವಾನುಭವಾಮೃತವನ್ನು ನಾನು ಅನ್ಯರಿಗೆ ಹೇಗೆ ಉಣಿಸಲಿ?—ನನ್ನಿಂದ ಸಾಧ್ಯವಿಲ್ಲ. ಆದರೆ ಇಂದು ನಾನು ಸ್ವೇಚ್ಛಾಪರ ಬಡತನದ ಕುರಿತು ಇಲ್ಲಿ ಭಾಷಣ ಕೊಟ್ಟು, ಅಂತಹ ಅನುಭವಾಮೃತವನ್ನು ನಿಮಗುಣಿಸಿದೆನೆಂದು ನಂಬುತ್ತೇನೆ. ನನ್ನೀ "ಅಮೃತವು ಕೆಲವು ನೂರು ಜನರಿಗೆ ತಿಳಿಯಬಹುದಲ್ಲ. ಮಿಲಿಯಾಂತರ ಜನರಿಗೆ ತಿಳಿದು ಬರಲಿ. ಸ್ವಯಂ ಪ್ರೇರಿತ ಬಡತನದಿಂದ ಎಷ್ಟೊಂದು ಆನಂದ, ಮೋಕ್ಷ, ಶಕ್ತಿಯು ಲಭಿಸುವುದೆಂಬ ಸಂಗತಿಯು ಅವರ್ಣನೀಯವಿರುತ್ತದೆ. ನಾನು ಮಾತ್ರ ನಿಮಗೆ "ನೀವೇ ಯತ್ನಿಸಿರಿ—ಪರಿಶೀಲಿಸಿರಿ—ಹೊಂದಿರಿ" ಎಂದು ಹೇಳುವೆನು.

ಜಪ್ತಿ, ಕೈದು, ಶಿಕ್ಷೆ-ಶ್ರೀಮತಿ ಗಾಂಧಿಯವರ ಬಿಡುಗಡೆ.

ತಾರೀಖು ೨೩ರಲ್ಲಿ

ಅಹ್ಮದಾಬಾದಿನಲ್ಲಿ ಮಿಲ್ ಏಜೆಂಟರಾದ ಶ್ರೀ. ಸೇಠ್ ರಣಛೋಡ್‌ಲಾಲ್ ಎಂಬವರು ಕಾಯಿದೆಭಂಗ ಚಳವಳದಲ್ಲಿ ಭಾಗವಹಿಸಬಾರದಾಗಿಯೂ ಅದಕ್ಕೆ ಸಹಾನುಭೂತಿಯನ್ನು ತೋರಿಸಬಾರದಾಗಿಯೂ 'ಗವರ್ನರ್ ಜನರಲ್ ಇನ್ ಕೌನ್ಸಿಲ್' ರಿಂದ ನೋಟೀಸು ಹೋಗಿದೆ.

ಅಂಚೆಕರ ಸಾಹಿತ್ಯವೇನಾದರೂ ದೊರೆದೀತೋ ಎಂದು ಸಬರ್ಮತಿ ರೈಲ್ವೇ ಸ್ಟೇಷನಿನಲ್ಲಿ ರೈಲು ನಿಂತೊಡನೆ ಪೋಲೀಸರು ಕೆಲವರನ್ನು ಜಪ್ತಿಮಾಡಿದರು. ಏನೂ ಸಿಗಲಿಲ್ಲವಂತೆ.

ಅಲ್ಲಿಯ ಶ್ರೀಮತಿ ವಸುಮತಿ ರಾಮಪ್ರಸಾದರೆಂಬವರು ಸೆರೆಮನೆಗೆ ಹೋಗಿದ್ದರು. ಅವರ ಜುಲುಮಾನೆ ರೂಪಾಯಿ ೩೦೦ಕ್ಕಾಗಿ ಅವರ ಚರಸೊತ್ತುಗಳನ್ನೂ ಶೀರೆಗಳನ್ನೂ ಪೋಲೀಸರು ಒಯ್ದರು. ಸೀರೆಗಳಲ್ಲದೆ ಮಿಕ್ಕ ಎಲ್ಲವೂ ತನ್ನದೆಂದು ಗಂಡನ ಅರ್ಜಿಯಾಯಿತು. ಸೀರೆಗಳನ್ನು ಮಾರಿ ೩೦೦ ರೂಪಾಯಿಗಳನ್ನು ಪಡೆಯಬೇಕೆಂದೂ ಉಳಿದ ಸೊತ್ತುಗಳನ್ನು ಗಂಡನಿಗೆ ಹಿಂದೆ ಕೊಡಬೇಕೆಂದೂ ಮೆಜಿಸ್ಟ್ರೇಟರ ಅಪ್ಪಣೆಯಾಯಿತು.

ಬಾರ್ಡೋಲಿಯ ಕಾಂಗ್ರೆಸ್ ಕಮಿಟಿಯ ಪಬ್ಲಿಸಿಟಿ ಆಫೀಸರರಾದ ಶ್ರೀ ಜಗಜೀವನ್‌ರಾಮ್ ದಾವೆ ಎಂಬವರನ್ನು ಕಥಿಯಾವಾರದ ಲಕ್ತರ್ ಎಂಬಲ್ಲಿಂದ ಗಡಿಪಾರು ಮಾಡಲಾಗುವುದೆಂದು ಈಗಾಗಲೇ ಸಬರ್ಮತಿ ಸೆರೆಯಲ್ಲಿರುವ ಅವರಿಗೆ ನೋಟೀಸು ಹೋಗಿದೆ.

ಲಾಹೋರಿನಲ್ಲಿ ೩ನೇ ಸರ್ವಾಧಿಕಾರಿಣಿಯಾದ ಶ್ರೀಮತಿ ಶಾಂತಿದೇವಿ ಎಂಬವರಿಗೆ ೬ ತಿಂಗಳ ಕಠಿಣ ಸಜೆ ಮತ್ತು ೫೦ ರೂಪಾಯಿ ಜುಲುಮಾನೆ. ಅದಕ್ಕೆ ತಪ್ಪಿದರೆ ಮತ್ತೆರಡು ತಿಂಗಳ ಕಠಿಣ ಸಜೆ. ಇವರು ಅಲ್ಲಿಯ ಕಾಲೇಜ್ ಪ್ರೊಫೆಸರರೊಬ್ಬರ ಪತ್ನಿ.

ಸಿಕ್ಖರ ಧರ್ಮ ಗುರುಗಳಾದ ಶಾಂತಸಿಂಗ್ ಸಿಂಗ್ ಎಂಬವರ ೨೦೦೦ ರೂಪಾಯಿಗಳ ಭದ್ರತೆ ಕೊಡಬೇಕು, ಅಥವಾ ಒಂದು ವರುಷದ ವರೆಗೆ ಸಿಮ್ಲ ಸೆರೆಮನೆಯಲ್ಲಿರಬೇಕೆಂದು ಆಜ್ಞೆಯಾಯಿತು. ಗುರುಗಳು ಭದ್ರತೆ ಕೊಡದೇ ಸೆರೆವಾಸಕ್ಕೆ ನಡೆದು [illegible] ನೇ ಕ್ಲಾಸಿನಲ್ಲಿರಿಸಲ್ಪಟ್ಟರು.

ಬೆನಾರಿಸ್‌ನಲ್ಲಿ ಕಾಂಗ್ರೆಸ್ಸಿನ ಸೆಕ್ರೆಟರಿ ಯಾದ ಶ್ರೀ ತ್ರಿಭುವನ ನಾರಾಯಣಸಿಂಗರೆಂಬವರು ಒಂದು ವರುಷದ ಕಠಿಣ ಸಜೆಗೂ ೨೦೦ ರೂಪಾಯಿಯ ಜುಲುಮಾನೆಗೂ ಒಳಗಾದರು. ಇವರ ಮೇಲೆ ಇನ್ನೊಂದು ಆರೋಪಣೆಯಾಗಿ ಅದರ ಮೇರೆಗೆ ಇವರಿಗೆ ಪುನಃ ೬ ತಿಂಗಳ ಕಠಿಣ ಶಿಕ್ಷೆ ಕೊಡಲ್ಪಟ್ಟಿತು. ಅಲ್ಲಿಯ ದಿವಾನ್ ರಾಮಚಂದ್ರ ಕಪೂರ್ ಎಂಬ ಮ್ಯುನಿಸಿಪಲ್ ಕಮಿಶನರಿಗೂ ಒಂದು ವರುಷದ ಕಠಿಣ ಸಜೆ ಮತ್ತು ೩೦೦ ರೂಪಾಯಿ ಜುಲುಮಾನೆ ವಿಧಿಸಲಾಗಿದೆ.

ಮಧುರೆ, ಕೊಯಮುತ್ತೂರು, ತಂಜಾವೂರು, ತಿರುಪ್ಪೂರು, ತಿನ್ನವೆಲ್ಲಿ, ತಲಚೇರಿ, ಆರ್ಕಾಟ್, ಗುಂಟೂರು, ಬೆಳ್ಳಾರಿ ಮೊದಲಾದ ಪ್ರಾಂತ್ಯಗಳಲ್ಲೂ ಶಿಕ್ಷೆಗಳಾಗುತ್ತಿವೆ.

ಮೆರವಣಿಗೆ, ಪಿಕೆಟಿಂಗ್ ಮೊದಲಾದ ನಿಷಿದ್ಧ ಕಾರ್ಯಗಳನ್ನೆಸಗಿದುದಕ್ಕಾಗಿ ೧೨ ಮಂದಿ ಕಾಂಗ್ರೆಸುವಾಲರಿಗೆ ವಿವಿಧ ಶಿಕ್ಷೆಯಾಯಿತು. ಬಾಲಾಪರಾಧಿಗೆ ವಸ್ತ್ರ ಪಡೆಯಲು ಹೋದ ಡಾಕ್ಟರ್ ಚಾರುಚಂದ್ರ ಬೆನರ್ಜಿ ಎಂಬವರನ್ನೂ ಕೈದುಮಾಡಿದ್ದರು. ತಾನು ವಸ್ತ್ರ ಪಡೆಯಲು ಹೋಗಿದ್ದೆ, ಅಲ್ಲದೆ ಹರತಾಳ ಬೋಧನೆಗಲ್ಲ ಎಂಬ ಅವರ ಹೇಳಿಕೆಯ ಮೇಲೆ ಅವರನ್ನು ಬಿಟ್ಟರು.

ಹೌರಾದಲ್ಲಿ ಒಟ್ಟು ೩೭ ಮಂದಿಗಳು ಕಾಯಿದೆಭಂಗದಿಂದ ಸೆರೆಮನೆಗೆ ಹೋದರು. ಇವರಲ್ಲಿ ೧೦ ಮಂದಿ ಸ್ತ್ರೀಯರು. ಇನ್ನೂ ಕೆಲವು ಕೈದುಗಳೂ ಶಿಕ್ಷೆಗಳೂ ಆಗಿವೆ.

ಕಲ್ಲಿಕೋಟೆಯಲ್ಲಿ ಮೆರವಣಿಗೆಯನ್ನು ಮಾಡಿದ ಮೂರು ಮಂದಿ ಸ್ತ್ರೀಯರಿಗೆ ಎರಡೆರಡು ವರ್ಷಗಳ ಕಠಿಣ ಸಜೆ.

ಮುಂಬಾಯಿಯಲ್ಲಿ ಇಂಪೀರಿಯಲ್ ಬ್ಯಾಂಕನ್ನು ಪಿಕೆಟ್ ಮಾಡಿದ ಮೂವತ್ತು ಮಂದಿಗಳನ್ನು ಕೈದುಮಾಡಿರುವರು. ಇನ್ನಿತರ ವಿದೇಶೀ ಬ್ಯಾಂಕುಗಳನ್ನು ಪಿಕೆಟ್ ಮಾಡುತ್ತಾರೆ.

ತಾರೀಖು ೨೭ರಲ್ಲಿ

ಕಾನ್‌ಪುರದ ಪ್ರತಾಪ ಮುದ್ರಣಾಲಯದವರು ೨೦೦೦ ರೂಪಾಯಿ ಸರಕಾರದೊಡನೆ ಸೆಕ್ಯೂರಿಟಿ ಇಡಬೇಕೆಂದೂ, ನಿಷಿದ್ಧ ವಿಷಯಗಳನ್ನು ಪ್ರಕಟಿಸಬಾರದೆಂದೂ ಆಜ್ಞೆಯಾಗಿದೆ.

ಲಾಹೋರಿನ "ಅಹರಾರ್" ಎಂಬ ಪತ್ರಿಕೆಯು ಸುಳ್ಳೆಂದು ಆರೋಪಿಸಲ್ಪಟ್ಟ ವಾರ್ತೆಯನ್ನು ಪ್ರಕಟಿಸಿದುದಕ್ಕಾಗಿ ಅದು ಈ ಮೊದಲೇ ಕೊಟ್ಟ ೫೦೦ ರೂಪಾಯಿಯ ಭದ್ರತೆಯು ಸರಕಾರಕ್ಕೆ ಹೋಗಿದೆ. ಪಿಕೆಟ್ ಮಾಡುತ್ತೇವೆಂದು ಸಾರಿ, ಮೆರವಣಿಗೆಯನ್ನು ಮಾಡಿದ ಕೆಲವು ಮಂದಿ ಸ್ತ್ರೀಪುರುಷರನ್ನು ಕೈದುಮಾಡಿದರು. ಕೆಲವರು ಚದರಲಿಲ್ಲವಾದುದರಿಂದ ಲಾಠಿ ಪ್ರಹರವು ನಡೆಯಿತು. ಕೆಲವರು ಜಖಂಗೊಂಡರು.

ಮುಂಬಾಯಿಯಲ್ಲಿ ಬ್ಯಾಂಕ್ ಪಿಕೆಟ್ ಮಾಡಿದ ೩೦ ಮಂದಿಗಳಿಗೆ ವಿವಿಧ ಅವಧಿಯ ಶಿಕ್ಷೆಯಾಯಿತು. ಅಲ್ಲಿಯ ಮೂಲ್‌ರಾಜ್ ಕರ್ಸಾನ್‌ದಾಸ್ ಎಂಬವರು ಎರಡು ವರ್ಷಗಳ ಕಠಿಣ ಸಜೆಗೂ ಒಟ್ಟು ೫೦೦೦ ರೂಪಾಯಿ ಜುಲುಮಾನೆಗೂ ಗುರಿಯಾದರು.

ಅಹಮ್ಮದಾಬಾದಿನಲ್ಲಿ ಮ್ಯುನಿಸಿಪಾಲಿಟಿಯ ಅಧ್ಯಕ್ಷ ಶ್ರೀ ಜೆ ವಿ ಪಟವರ್ಧನ್ ಎಂಬವರ ಮನೆಯಲ್ಲಿ ಪೋಲೀಸರು ಮೂರು ಘಂಟೆಗಳ ತನಕ ಜಪ್ತಿ ನಡೆಸಿದರು. ಅವರ ಸ್ವಾಧೀನ ಕಾಂಗ್ರೆಸ್ ನಿಧಿಯಿದೆ ಎಂಬುದಾಗಿ ತಿಳಿದುಬಂದುದರಿಂದ ಈ ಶೋಧನೆಗೆ ಕಾರಣವಾಯಿತು. ಆದರೆ ಹಣ ಸಿಗಲಿಲ್ಲ. ಎರಡು ದಿನಗಳ ತನಕ ಅಖಿಲ ಭಾರತ ಚರಕ ಸಂಘದಲ್ಲಿಯೂ ಹುಡುಕಿದರು.

ಅಹಮ್ಮದಾಬಾದಿನ ಶ್ರೀ ಅಮೃತಲಾಲ್ ಸೇಠರು ಮುಂಬಾಯಿಗೆ ಹೋಗಿದ್ದರು. ಅವರನ್ನು ಕೈದುಮಾಡಿದ್ದಾರೆ.

ಅಹಮ್ಮದಾಬಾದಿನ ಮ್ಯುನಿಸಿಪಲ್ ಗರ್ಲ್ಸ್ ಸ್ಕೂಲಿನ ಪ್ರಿನ್ಸಿಪಾಲರಾದ ಮಿಸ್ ವಿನೋದಿನಿ ನೀಲಕಾಂತ ಎಂಬವರೂ ಇನ್ನೂ ಮೂರು ಮಂದಿ ಸ್ತ್ರೀಯರೊಡನೆ ಪಿಕೆಟ್ ಮಾಡಿದುದಕ್ಕಾಗಿ ಶಿಕ್ಷೆಗೆ ಗುರಿಯಾದರು.

ಗಾಂಧೀಜಿಯವರ ನವಜೀವನ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಪೋಪಟ್ ಲಾಲ್ ಪಟ್ವಾರಿ ಎಂಬವರನ್ನು ಕೈದುಮಾಡಿದರು. ಕಲಕತ್ತೆಯಿಂದ ಹೊರಡುತ್ತಿರುವ ನವಜೀವನದ ಸಂಪಾದಕರಾದ ಶ್ರೀ ಬೆಚಾರ್‌ದಾಸ್ ಜೋಶಿ ಎಂಬವರನ್ನೂ ಕೈದುಮಾಡಿದರು.

ಮುಂಬಾಯಿಯಲ್ಲಿ ಶ್ರೀ ಮುಕುಂದ ದೇಸಾಯಿ ಎಂಬವರನ್ನು ಕೈದುಮಾಡಿದರು. ಎಲ್ಲಾ ಕೆಮಿಸ್ಟರುಗಳೂ ಡ್ರಗ್ಗಿಸ್ಟರುಗಳೂ ವಿದೇಶಿ ವಸ್ತುಗಳನ್ನು ಮಾರುತ್ತಿರುವುದರಿಂದ ಅವರ ಶೋಪುಗಳನ್ನು ಪಿಕೆಟ್ ಮಾಡಬೇಕಾಗಿ ಆಲೋಚನೆಯಾಗಿದೆ. ಪೋಲೀಸರು ಜಾಗ್ರತೆಯಿಂದಿರುವರು. ಅಲ್ಲಿಯ ಸಮರ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಜೀನಾ ಚಿಟ್ಕಾ ಜೋಶಿ ಎಂಬವರಿಗೆ ಒಂದು ವರುಷದ ಕಠಿಣ ಸಜೆಯು ವಿಧಿಸಲ್ಪಟ್ಟಿತು.

ಲಾಹೋರಿನಲ್ಲಿ ಪಿಕೆಟಿಂಗಿನ ಸಂಬಂಧವಾಗಿ ೨೧ ಮಂದಿಗಳನ್ನು ಕೈದುಮಾಡಿದರು. ಮೆರವಣಿಗೆ ಮಾಡಿದವರನ್ನು ಲಾಠಿಗಳಿಂದ ಚದರಿಸಿದರು.

ಲಕ್ನೋವಿನಲ್ಲಿ ವಿದ್ಯಾ ಭಂಡಾರ ಎಂಬ ಮುದ್ರಣಾಲಯವನ್ನು ಜಪ್ತಿ ನಡೆಸಿದರು. ಕೆಲವು ಕಾಗದಪತ್ರಗಳು ಕೊಂಡೊಯ್ಯಲ್ಪಟ್ಟಿರುತ್ತವೆ. ಮ್ಯಾನೇಜರನ್ನು ಸೆರೆಹಿಡಿದಿದ್ದಾರೆ.

ಕಾನ್‌ಪುರದಲ್ಲಿ ಇನ್‌ಸೋಫ್ ಎಂಬ ಮುಸ್ಲಿಂ ಪತ್ರಿಕೆಯೊಂದರಿಂದ ಭದ್ರತೆ ಕೇಳಲ್ಪಟ್ಟಿದೆ.

ಮುಂಬಾಯಿಯ ಸಿ ಐ ಡಿಗಳು ಪ್ರಿನ್ಸೆಸ್ ಸ್ಟ್ರೀಟಿನ ಒಂದು ಆಫೀಸಿನಲ್ಲಿ ಜಪ್ತಿ ನಡೆಸಿದರು. ಆಫೀಸು ಎಮರ್ಜನ್ಸಿ ಕೌನ್ಸಿಲಿನವರದಂತೆ. ಅನೇಕ ಕಾಗದ ಪತ್ರಗಳು ಕೊಂಡೊಯ್ಯಲ್ಪಟ್ಟಿವೆ. ಕೆಲವು ಮುಂದಾಳುಗಳನ್ನು ಸೆರೆ ಹಿಡಿದಿರುವರು. ಒಂದು ಮೋಟಾರು ಕಾರು ವಶೀಕರಿಸಲ್ಪಟ್ಟಿದೆ.

ನಾಗಪುರದಲ್ಲಿ "ಜವಾಹರ ದಿನ"ದ ಆಚರಣೆಯನ್ನು ಮಾಡಬೇಕೆಂದು ಬರೆಯಲ್ಪಟ್ಟ ಕಾಂಗ್ರೆಸ್ ಕರಪತ್ರಗಳನ್ನು ಕಂಡುಹಿಡಿಯುವುದಕ್ಕಾಗಿ ಕೆಲವು ಮುಖಂಡರ ಮನೆಗಳು ಜಪ್ತಿ ನಡೆಸಿದರು.

ಕಲ್ಕತ್ತದಲ್ಲಿ ಯುನಿವರ್ಸಿಟಿಯ ಪಟಾರದಲ್ಲಿ ಸಭೆ ಜರಗಿಸಿದ ಮಿಸ್ ಶಾಂತಿನಿಲ್ಕ್ಯೊ ಎಂಬ ಬಿ ಎ. ಕ್ಲಾಸಿನ ತರುಣಿಯನ್ನೂ ಇನ್ನಿತರ ಹತ್ತು ಮಂದಿ ಮಹಿಳೆಯರನ್ನೂ ಆರಾರು ತಿಂಗಳ ಕಠಿಣ ಸಜೆಗೆ ಗುರಿಪಡಿಸಿದರು. ಸಂಜೆ ಪುನಃ ಹತ್ತು ಮಂದಿ ಸ್ತ್ರೀಯರು ಕೈದುಮಾಡಲ್ಪಟ್ಟರು.

ತಾರೀಖು ೨೮ರಲ್ಲಿ

ಅಹಮ್ಮದಾಬಾದಿನಲ್ಲಿ ಅಖಿಲ ಭಾರತ ಸ್ಪಿನರ್ಸ್ ಎಸೋಸಿಯೇಶನಿನ ಜನರಲ್ ಸೆಕ್ರೆಟರಿಯರಾದ ಶ್ರೀ ಶಂಕರ್‌ಲಾಲ್ ಬ್ಯಾಂಕರ್ ಎಂಬ ಧುರೀಣರೊಬ್ಬರ ಮನೆಯಲ್ಲಿ ಪೋಲೀಸರು ಜಪ್ತಿ ನಡೆಸಿದರು.

ಮುಂಬಾಯಿಯಲ್ಲಿ ಶ್ರೀ ಗುಣವಂತ ವಿ ಕುಲಾಡಿ ಎಂಬ ಸೊಲಿಸಿಟರರನ್ನು ಕೈದುಮಾಡಿ ಒಂದು ವರ್ಷದ ಕಠಿಣ ಸಜೆಯನ್ನೂ ೫೦೦ ರೂಪಾಯಿಯ ಜುಲುಮಾನೆಯನ್ನೂ ವಿಧಿಸಿದರು. ಅಲ್ಲಿಯ ಶ್ರೀ ವೀರ್ ಎಂಬ ಯಂಗ್ ಮೆನ್ಸ್ ಕೆಥೋಲಿಕ್ಸ್ ಪತ್ರಿಕೆಯಿಂದ ೨೦೦೦ ರೂಪಾಯಿ ಭದ್ರತೆ ಕೇಳಿದ್ದಕ್ಕೆ ಅದರ ನಿವೃತ್ತಿ ಪಡಿಸಲ್ಪಟ್ಟಿದೆ.

ಅಲ್ಲಿಯ ಪುರುಷೋತ್ತಮದಾಸ್ ತ್ರಿಕಂದಾಸರನ್ನೂ ಕೈದುಮಾಡಿ ಪೋಲೀಸರಿಗೆ ಕಾಣಸಿಕೊಳ್ಳದಿದ್ದುದಕ್ಕಾಗಿ ಒಂದು ವರ್ಷ ಕಠಿಣ ಸಜೆಗೂ ೫೦೦ ರೂಪಾಯಿಯ ಜುಲುಮಾನೆಗೂ ಗುರಿಪಡಿಸಿದರು.

ಶ್ರೀಮತಿ ಲೀಲಾವತಿ ಮುನ್ಷಿ, ಶ್ರೀಮತಿ ಲೀಲಾವತಿ ಹನ್ಸತಿ ಮತ್ತು ಶ್ರೀಮತಿ ಅಮೃತ ಕೌರ್ ಎಂಬವರನ್ನೂ ಬಿಡುಗಡೆಮಾಡಿ, ಪೋಲೀಸರಿಗೆ ನಿತ್ಯ ಕಾಣಸಿಕೊಳ್ಳಬೇಕಾಗಿ ನೋಟೀಸು ಕೊಟ್ಟಿದ್ದಾರೆ.

ತಾರೀಖು ೨೯ರಲ್ಲಿ

ಸಜೆಯ ಅವಧಿಯು ಮುಗಿದುದರಿಂದ ಶ್ರೀಮತಿ ಕಸ್ತೂರಿಬಾಯಿಯವರನ್ನು ಸಬರ್ಮತಿ ಸೆರೆಮನೆಯಿಂದ ಬಿಟ್ಟಿರುವರು.

ಶ್ರೀಯುತ ವಿ ಜೆ ಪಟೇಲರನ್ನು ನಾಸಿಕದ ಸೆರೆಯಿಂದ ಸಬರ್ಮತಿ ಜೈಲಿಗೆ ಕಳುಹಿಸಿದ್ದರು. ಅವರ ಆರೋಗ್ಯವು ಸಮಾಧಾನಕರವಾಗಿಲ್ಲ. ಇನ್ನೊಂದು ಒಪರೇಶನು ಮಾಡಲಿರುವರು. ಅವರು ತನ್ನ ಗಡ್ಡವನ್ನು ಕತ್ತರಿಸಿ ತೆಗೆದಿರುವರು.

ಮುಂಬಾಯಿಯ ಪರೇಲ್ ನ ಗಣೇಶ ಮೈದಾನಿನಲ್ಲಿ ರಾಷ್ಟ್ರಧ್ವಜಾರೋಹಣವು ನಡೆಯಲು ಯತ್ನವಾಯಿತು. ಶ್ರೀಮತಿ ಬಿಷಿಸ್ ಎಂಬವರನ್ನೂ ಇನ್ನಿತರ ೩೪ ಮಂದಿಗಳನ್ನೂ ದಸ್ತಗಿರಿ ಮಾಡಿದರು. ಅದೇ ದಿನ ಸಂಜೆ ಮತ್ತೂ [illegible] ಮಂದಿಗಳನ್ನು ಕೈದು ಮಾಡಿದರು. ನವಜೀವನ ಮತ್ತು ಯಂಗ್ ಇಂಡಿಯಾದ ಮುಂಬಾಯಿ ಶಾಖಾ ಮೆನೇಜರರನ್ನೂ ಕೈದುಮಾಡಿದರು. ಚೌಪಾತಿಯಲ್ಲಿ ಸಭೆ ನಡೆಯಲು ಯತ್ನವಾಯಿತು. ಎರಡು ಕಡೆಗಳಲ್ಲಿ ಲಾಠಿ ಚಾರ್ಜು ನಡೆಯಿತು. ೩ ಮಂದಿಗಳು ಜಖಂಗೊಂಡ ಎಮರ್ಜನ್ಸಿ ಚಿಕಿತ್ಸಾಲಯಕ್ಕೆ ಕೊಂಡೊಯ್ಯಲ್ಪಟ್ಟರು.

ಅಹಮ್ಮದಾಬಾದಿನಲ್ಲಿ ಶ್ರೀಮತಿ ಗಂಗಾಬೆನ್ ಜವೇರಿಯವರನ್ನೂ ಇನ್ನಿತರ ೬ ಮಂದಿ ಸ್ತ್ರೀಯರನ್ನೂ ಮತ್ತೊಬ್ಬ ೫ ವರ್ಷ ಪ್ರಾಯದ ಬಾಲಕನನ್ನೂ ಕೈದುಮಾಡಿದರು. ಪಿಕೆಟ್ ಮಾಡಿದುದಕ್ಕಾಗಿ ೧೦ ಮಂದಿಗಳೂ ಸೆರೆಹಿಡಿಯಲ್ಪಟ್ಟರು.

ಪುನೆಯಲ್ಲಿ ಮ್ಯುನಿಸಿಪಲ್ ಚುನಾವಣೆಯ ಪರಿಣಾಮವನ್ನು ನೋಡಲು ಜನರು ಕುತೂಹಲರಾಗಿ ನಿಂತಿದ್ದರು. ಅಷ್ಟರಲ್ಲಿ ಶ್ರೀ ವಿ ಕೆ ಸಠೆ ಎಂಬವರು ವೇದಿಕೆಯ ಮೇಲೇರಿ ಒಂದು ರಾಷ್ಟ್ರಧ್ವಜವನ್ನೇರಿಸಿ ಹಾರಿಸಿದರು ಮತ್ತು ಒಂದು ಭಾಷಣ ಕೊಟ್ಟರು. ಇವರನ್ನೂ ಇನ್ನಿತರ ೧೭ ಮಂದಿಗಳನ್ನೂ ಕೈದುಮಾಡಲಾಗಿದೆ.

ತಾರೀಖು ೧ರಲ್ಲಿ

ಲಾಹೋರಿನ ಸರ್ದಾರ್ ಸರ್ದೂಲ್ ಸಿಂಗರು ೧೮ ತಿಂಗಳ ಶಿಕ್ಷೆಗೆ ಗುರಿಯಾದರು. ೧೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು.

ಪಂಜಾಬ ಕಾಂಗ್ರೆಸ್ ಕಮಿಟಿಯ ಡಾ। ಮಹಮ್ಮದ್ ಆಲಮರಿಗೆ ೩ ವರ್ಷಗಳ ಕಠಿಣ ಸಜೆ ಮತ್ತು ೧೦೦ ರೂಪಾಯಿ ಜುಲುಮಾನೆ ವಿಧಿಸಿ, ೩೮ ಮಂದಿಗಳಿಗೆ ವಿವಿಧ ಶಿಕ್ಷೆಯನ್ನಿತ್ತರು. ನ್ಯೂಡಿಲ್ಲಿಯಲ್ಲಿ ಮಿ ಆಸಾಫ್ ಆಲಿಯವರನ್ನೂ ಕೈದುಮಾಡಿರುವರು.

ವಿವಿಧ ಸಮಾಚಾರಗಳು.

ಶ್ರೀಮತಿ ಗಾಂಧಿಯವರನ್ನು ಬಿಟ್ಟರು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಕಾರಾವಾಸ ಅವಧಿಯು ಮುಗಿದುದರಿಂದ ಅವರನ್ನು ಅಹ್ಮದಾಬಾದಿನ ಸಬರ್ಮತಿ ಸೆರೆಮನೆಯಿಂದ ತಾ ೨೧ನೇ ದಿನ ಬಿಡುಗಡೆಮಾಡಿರುವರು. ಬಿಡುಗಡೆ ಮಾಡಲ್ಪಟ್ಟೊಡನೆ ಕಸ್ತೂರಿಬಾಯಿಯವರು ಹೊರಬಂದು ಒಬ್ಬ ಬಾಲಿಕೆಯೊಡನೆ ಆಶ್ರಮದ ಸ್ಥಿತಿಗತಿ, ಅಲ್ಲಿಯ ಶಿಷ್ಯರ ಪತ್ರ ಮತ್ತು ಯೋಗಕ್ಷೇಮದ ಕುರಿತು ವಿಚಾರಿಸಿದರು. ಎಸೋಸಿಯೇಟೆಡ್ ಪ್ರೆಸ್ಸಿನ ಪ್ರತಿನಿಧಿಗಳು ಅವರನ್ನು ಕಂಡು, ಸೆರೆಮನೆಯಲ್ಲಿ ನೀವು ಹೇಗಿದ್ದಿರೆಂದು ಕೇಳಿದ್ದಕ್ಕೆ ಶ್ರೀಮತಿಯವರು ಸಬರ್ಮತಿ ಜೈಲಿನಲ್ಲಿ ತಾನು ಸುಖದಿಂದಿದ್ದೆನೆಂದೂ, ತನಗೆ 'ಎ' ಕ್ಲಾಸಿನವರ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದರೆಂದೂ 'ಬಾಂಬೇ ಕ್ರಾನಿಕಲ್' ಎಂಬ ವಾರ್ತಾ ಪತ್ರಿಕೆಯನ್ನು ತನಗೆ ಓದಲು ಕೊಟ್ಟಿದ್ದರೆಂದೂ ಹೇಳಿದರು. ಇವರು ಮಹಾತ್ಮಾ ಗಾಂಧಿಯವರನ್ನು ಎರವಾಡಾ ಜೈಲಿನಲ್ಲಿ ಬೇಟಿ ಕಾಣಲಿರುವರು.

* * *

ದೊಡ್ಡಬಳ್ಳಾಪುರ ಶೌಕತಾಲಿಯವರು

ಲಂಡನ್ನಿನಿಂದ ಹಿಂತಿರುಗಿದ ಮೇಲೆ ಪ್ರಕೃತ ವಾತಾವರಣವನ್ನು ಪರ್ಯಾಲೋಚಿಸಿ, ತಾನು ಪಶ್ಚಿಮೋತ್ತರ ಗಡಿನಾಡಿನ ಸಂಚಾರವನ್ನು ಮಾಡಬೇಕೆಂದು ಬಯಸಿ, ತನ್ನಿಚ್ಛಾವನ್ನು ವೈಸರಾಯರಿಗೆ ತಿಳಿಸಿ ಅವರ ಅಪ್ಪಣೆಯನ್ನು ಪಡೆದು ಗಡಿನಾಡಿಗೆ ಮೊನ್ನೆ ಹೋದರು. ಪೇಶಾವರಕ್ಕೆ ಮೌಲಾನಾ ಶೌಕತಾಲಿಯವರು ಅವರು ಅನುಚರರಿಂದ ಸ್ವಾಗತೀಕರಿಸಲ್ಪಟ್ಟರು. ಅವರು ಒಬ್ಬ ಪ್ರತಿನಿಧಿಗೆ ೧೮ ವರುಷಗಳಾದ ಮೇಲೆ ನಾನು ಪುನಃ ನಿಮ್ಮಂದಿನ ಗಡಿನಾಡಿಗೆ ಬಂದೆನು. ನಾನು ಇಲ್ಲಿಗೆ ನನ್ನ ಕಣ್ಣನ್ನೂ ಕಿವಿಯನ್ನೂ ತೆರೆದುಕೊಂಡೇ ಬಂದಿರುತ್ತೇನೆ. ಸಂಗತಿಯನ್ನು ಕೇಳಲು, ಸ್ಥಿತಿಯನ್ನು ನೋಡಲು ನಾನು ಬಂದಿರುತ್ತೇನೆ. ಗಡಿನಾಡಿನ ಅವಸ್ಥೆಯನ್ನರಿಯಲು ಬಂದಿರುತ್ತೇನೆ. ನನ್ನಂತಹ ಹಳೆ ಸೋಲ್ಜರನತ್ತಕಡೆ ನೀವು ದಯಾಭಾವದೃಷ್ಟಿಯನ್ನು ಬೀರುವಿರೆಂದು ನಂಬುತ್ತೇನೆ" ಎಂದರು.

* * *

"ಬೈ ಇಂಡಿಯನ್"

ಅಲಹಾಬಾದಿನಲ್ಲಿ ಸ್ಥಾಪನೆಯಾದ ಬೈ ಇಂಡಿಯನ್ (ಸ್ವದೇಶಿಯನ್ನೇ ಕೊಳ್ಳಿರಿ) ಎಂಬ ಪ್ರಚಾರ ಸಮಿತಿಯಂತಹ ಒಂದು ಸಮಿತಿಯು ಮದ್ರಾಸಿನಲ್ಲೂ ಸ್ಥಾಪಿತವಾಗಿದೆ. ಇದರಲ್ಲಿ ಸುಮಾರು ೨೦೦ ಮಂದಿ ಪ್ರಮುಖರು ಸದಸ್ಯರಾಗಿರುವರು. ನ್ಯಾಯ ವಿಧಾಯಕ ಸಭೆಯ ಕೌನ್ಸಿಲರುಗಳೂ ಇನ್ನಿತರ ಧನವಂತರೂ ಇದಕ್ಕೆ ಸೇರಿರುವರು. ಇದು ಅರಾಜಕೀಯವಲ್ಲ. ಇದರ ಅಭೀಷ್ಟಗಳಿಗೆ ಒಪ್ಪುವ ಎಲ್ಲರೂ ಮೆಂಬರರಾಗಬಹುದು. ಇದಕ್ಕೆ ಎಂತಿಗೆಯನ್ನಿತ್ತವು ದಿಲ್ಲ. ನಿಧಿಗಳನ್ನು ಕೊಟ್ಟರೆ ಸ್ವೀಕೃತವಾಗುತ್ತವೆ. ಸ್ವದೇಶಿ ಪ್ರಚಾರವೇ ಇದರ ಉದ್ದೇಶ. ಇದಕ್ಕೆ ಸಹಾಯಕರು — ಶ್ರೀಗಳಾದ ಜಮಾಲ್ ಮಹಮ್ಮದ್, ಏನ್ ಮಾಗಂ ಚೆಟ್ಟಿಯಾರ್, ಟಿ ಆರ್ ವೆಂಕಟರಾಮ ಶಾಸ್ತ್ರಿ, ಡಾ ಎಸ್ ಆರೋಗ್ಯಸ್ವಾಮಿ ಮುದಲಿಯಾರ್, ಟಿ ರಂಗಾಚಾರಿ, ಅಬ್ದುಲ್ ಹಮೀದಖಾನ್, ಬಶೀರ್ ಅಹ್ಮದ್ ಸೈಯದ್, ಬಿ ಪೋಕರ್, ಯು ಕೆ ಯು ಭಟ್, (ಮಂಗಳೂರಿನವರು) ಎ ಬಿ ಶೆಟ್ಟಿ (ನವಯುಗದ ಸಂಪಾದಕರು), ಸರ್ ಸಿ ಪಿ ರಾಮಸ್ವಾಮಿ ಅಯ್ಯರ್, ಶ್ರೀಮತಿ ಬಿ ಜಿನರಾಜದಾಸ್, ಶ್ರೀಮತಿ ಎಂ ಎಸ್ ಕೃಷ್ಣ (ಮಂಗಳೂರಿನವರು) ಇದರ ಮುಂದಾಳು ಸದಸ್ಯರಾದ ಶ್ರೀಯುತ ಜಿ ಶಿವರಾಯರು ಬರೆಯುವುದೇನೆಂದರೆ— 'ಅನೇಕ ಪತ್ರಗಳು ಬಂದಿವೆ. ನಾವೇನು ಮಾಡಬೇಕು?' ಎಂಬುದೇ ಎಲ್ಲರೂ ಬರೆಯುವ ಪ್ರಶ್ನೆ. ನೀವೇನೂ ಮಾಡುವುದು ಬೇಡ. ಕೂಡಲೇ ನಿಮ್ಮ ಹಳ್ಳಿಹಳ್ಳಿಗಳಲ್ಲಿ ಸ್ವದೇಶಿ ಪ್ರಚಾರ ಸಮಿತಿಗಳನ್ನು ಏರ್ಪಡಿಸಿರಿ. ನಿಮ್ಮ ನಾಮಗಳನ್ನು ನಮ್ಮ ಲೀಗಿಗೆ ಸೇರಿಸಿರಿ. ಎಲ್ಲರೂ ಸೇರುವಂತೆ ಪ್ರೇರೇಪಿಸಿರಿ.

* * *

ಆನೆಯ ಮ್ಹಾಲಿಕನಿಗೊಂದು ನೋಟೀಸು.

ಎಲ್ಲೂರಿನಲ್ಲಿ ನೋಥೇಗಂಗರಾಜು ಎಂಬವನ ಸ್ವಾಧೀನ ಒಂದು ಆನೆಯಿದೆ. ಅದು ಸ್ವಲ್ಪ ಪೋಕರಿ ಸ್ವಭಾವದ್ದಂತೆ. ಮೆರವಣಿಗೆ, ಮದುವೆ, ಮೊದಲಾದ ಸಮಾರಂಭಗಳಿಗೆ ಅದನ್ನು ಜನರು ಕೊಂಡು ಹೋಗುತ್ತಿದ್ದರು. ಒಂದೆರಡು ಸಲ ಅದು ಏನೋ ಸ್ವಲ್ಪ ಗಡಿಬಿಡಿಯನ್ನೆಬ್ಬಿಸಿತು. ಈ ಸಂಗತಿಯು ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ತಿಳಿಯಿತು. ಅವರು ಕೂಡಲೇ ಮ್ಹಾಲಿಕನಿಗೊಂದು ನೋಟೀಸು ಕೊಟ್ಟರು. "ಸಾರ್ವಜನಿಕರಿಗೆ ನಿನ್ನ ಆನೆಯಿಂದ ಭಯವಿದೆ, ಈ ಆದುದರಿಂದ ನಿನ್ನ ಆನೆಯನ್ನು ನೀನು ಹದಿನೈದು ದಿನಗಳ ತನಕ ಹೊರಬಿಡದೆ ಬಂದೋಬಸ್ತಿನಲ್ಲಿಡಬೇಕು" ಎಂದು ಅವರ ನೋಟೀಸಿನ ಹೇಳಿಕೆ.

ಮಂಗಳೂರಲ್ಲಿ ಲಾಠಿ! ಕೌನ್ಸಿಲಿನಲ್ಲಿ ಗುಲ್ಲು!

ಇವು ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ ಹೋಮ್ ಮೆಂಬರರಾದ ಸರ್ ಮಹಮ್ಮದ್ ಉಸ್ಮಾನ್ ಮತ್ತು ಶ್ರೀಯುತ ಸುಬ್ರಹ್ಮಣ್ಯ ಭಟ್ ಇವರಿಗೂ ನಡೆದ ಪ್ರಶ್ನೋತ್ತರಗಳು.

(ಶ್ರೀಯುತ ಭಟ್ಟರು)— ಪ್ರಶ್ನೆ – (ಅ) ಮಂಗಳೂರಿನಲ್ಲಿ ಕಳೆದ ಜನವರಿ ತಾ ೨೧ನೇ ದಿನ ಇಬ್ಬರು ಸ್ವಯಂಸೇವಕರು ಕಾಂಜಿಯವರ ಅಂಗಡಿಯನ್ನು ಪಿಕೆಟ್ ಮಾಡಿರುವರೇ? (ಆ) ಪೋಲೀಸರು ಅವರಿಗೆ ಲಾಠಿಗಳಿಂದ ಹೊಡೆದಿರುವರೇ? (ಇ) ಹಾಗೆ ಅವರು ಯಾವ ಕಾನೂನಿನ ಮೇರೆಗೆ ಹೊಡೆದರು? (ಈ) ಆ ಸ್ವಯಂಸೇವಕರ ತಲೆ, ಮುಖ, ಕುತ್ತಿಗೆಗಳಿಗೆ ಬಹಳವಾಗಿ ಹೊಡೆದಿರುವುದು ನಿಜವೇ? ಅದು ನಿಜವಾದರೆ ಹಾಗೆ ಹೊಡೆಯಲು ಅವರಿಗೆ ಅಪ್ಪಣೆಯನ್ನು ಕೊಡಲಾಗಿದೆಯೇ? (ಉ) ಪಿಕೆಟ್ ಮಾಡಿದ ಇಬ್ಬರಿಗೂ ಹೊಡೆದಾದ ಮೇಲೆ ಪೋಲೀಸರು ಅಲ್ಲಿಯೇ ಇದ್ದ "ಜುಪಿಟರ್ ಜುವೆಲ್ಲರಿ ಮಾರ್ಟ್" ಎಂಬ ಒಂದು ಸರಾಫರ ಅಂಗಡಿಗೆ ಹೊಕ್ಕು ಅಲ್ಲಿಯೇ ತಮ್ಮ ಕೆಲಸದಲ್ಲಿ ಇದ್ದ ಅದರ ಪ್ರೊಪ್ರೈಟರಾದ ಶ್ರೀ ಎನ್ ಎಲ್ ಪಾಲರ ಮಕ್ಕಳಿಬ್ಬರಿಗೆ ಲಾಠಿಗಳಿಂದ ಹೊಡೆದುದೂ ಮತ್ತು ಬೀದಿಯಲ್ಲಿ ಹೋಗುತ್ತಿದ್ದ ನಿರಪರಾಧಿಗಳಿಗೆ ಆ ದಿನ ಹೊಡೆದುದೂ ನಿಜವೇ? (ಊ) ಕಾಯಿದೆಭಂಗ ಚಳವಳದಲ್ಲಿ ಭಾಗವಹಿಸದ ನಿರಪರಾಧಿಗಳ ಮೇಲೆ ಪೋಲೀಸರು ಕೈಮಾಡದಂತೆ ಸರಕಾರವು ಏನು ಉಪಾಯವನ್ನು ಮಾಡಿದೆ?

ಅ ನಿಂದ ಉ ವರೆಗಿನ ಪ್ರಶ್ನೆಗಳಿಗೆ ಉತ್ತರ 'ಈ ಸಂಗತಿಗಳು ಸರಕಾರಕ್ಕೆ ತಿಳಿದುಬಂದಿರುವುದಿಲ್ಲ. ನಿರಪರಾಧಿಗಳಿಗೆ ಲಾಠಿಯು ಪೆಟ್ಟು ಬಿದ್ದ ಕುರಿತ ಸರಕಾರಕ್ಕೆ ಸುದ್ದಿ ಇಲ್ಲ ಮತ್ತು ಬಿದ್ದಿದೆಯೆಂದು ಭಾವಿಸಲೂ ಸರಕಾರಕ್ಕೆ ಕಾರಣವಿಲ್ಲ.

(ಊ) ಪ್ರಶ್ನೆಗೆ ಉತ್ತರ — ಕಾಯಿದೆಭಂಗ ಚಳವಳದಲ್ಲಿ ಭಾಗವಹಿಸದ ನಿರಪರಾಧಿಗಳ ಮೇಲೆ ಪೋಲೀಸರು ಕೈಮಾಡಿರುವುದು ಹೌದೆಂದು ಸಂತೃಪ್ತಿಕರವಾಗಿ ಕಂಡರೆ ಸರಕಾರವು ಅದಕ್ಕೆ ಆಗತ್ಯವಿರುವುದನ್ನು ಮಾಡುವುದು.

ಪ್ರಶ್ನೆ — ಇಂತಹ ಘಟನೆಗಳ ವಿಷಯ ಸರಕಾರವು ವರ್ತಮಾನವನ್ನೇಕೆ ತರಿಸಿಕೊಳ್ಳುವುದಿಲ್ಲ?

ಉತ್ತರ — ಏಕೆಂದರೆ ಸರಕಾರಕ್ಕೆ ಇದು ಅಗತ್ಯವೆಂದು ಕಾಣಲಿಲ್ಲ. ಅಲ್ಲದೆ ಕಾಯಿದೆಭಂಗ ಚಳವಳವನ್ನು ಮುರಿಯುವುದಕ್ಕಾಗಿ ನಮ್ಮ ಪೋಲೀಸರೂ ಡಿಸ್ಟ್ರಿಕ್ಟ್ ಆಫೀಸರರೂ ಮಿತಿಮೀರಿ ಕೆಲಸಮಾಡುತ್ತಾರೆ. ಹೀಗಿರುವಾಗ ನಾವು ಏನಾದರೂ ವರ್ತಮಾನಕ್ಕಾಗಿ ಅವರೊಡನೆ ಬರೆದರೆ ಆ ವರ್ತಮಾನವು ಅವರಲ್ಲಿರದಿರಲೂ ಬಹುದು. ಸರಕಾರಕ್ಕೆ ಕಳುಹಲ್ಪಟ್ಟಿರುವ ರಿಪೋರ್ಟಿನಿಂದಾಗಿ, ನಿರಪರಾಧಿಗಳಿಗೆ ಪೆಟ್ಟು ಬಿದ್ದಿದೆಯೆಂದು ತಿಳಿಯಲು ಸರಕಾರಕ್ಕೆ ಎಡೆಯಿಲ್ಲ. ಅದರೆ ಕಾಂಗ್ರೆಸ್ಸೂ ಸರಿಯಾದ ವರ್ತಮಾನವೂ ಕೊಡಲ್ಪಟ್ಟರೆ ಇದನ್ನು ಇತ್ಯರ್ಥಿಸಿ ಸುದ್ದಿಯನ್ನು ನಿಮಗೆ ಕೊಡಲು ಸರಕಾರಕ್ಕೆ ಸಾಧ್ಯವಾದೀತು.

ಪ್ರಶ್ನೆ — ನನ್ನಲ್ಲಿರುವ ಸಂಪೂರ್ಣ ವಾರ್ತೆಯನ್ನೆಲ್ಲ ಕೊಟ್ಟರು ನೀನು ಪೋಲೀಸರೂ ಡಿಸ್ಟ್ರಿಕ್ಟ್ ಆಫೀಸರರೂ ಮಿತಿಮೀರಿ ಕೆಲಸ ಮಾಡುತ್ತಾರೆಂದು ನಿರಪರಾಧಿಗಳು ಪೆಟ್ಟು ತಿಂದು ಕಷ್ಟಪಡಬೇಕೆಂದು ಭಾವಿಸಬೇಕೇ, ಹೇಗೆ?

ಉತ್ತರ — ನನಗೆ ತಿಳಿದಿರುವ ಮಟ್ಟಿಗೆ, ಯಾವ ನಿರಪರಾಧಿಯೂ ಕಷ್ಟಪಡಲಿಲ್ಲ. ಕಷ್ಟಪಡುವುದಿಲ್ಲ.

ಪ್ರಶ್ನೆ — ತಾ ೮ನೇ ಜನವರಿ ಮೊದಲ್ಗೊಂಡು ಮಂಗಳೂರಲ್ಲಿ ಗಾಂಧಿ ಟೊಪ್ಪಿ ಧರಿಸಿದವರ ತಲೆಯಿಂದ ಪೋಲೀಸರು ಅದನ್ನು ತೆಗೆದುದು ನಿಜವೇ? ಇದಕ್ಕೆ ಕಾರಣವೇನು?

ಉತ್ತರ — ಸರಕಾರಕ್ಕೆ ಈ ವಾರ್ತೆ ಬಂದಿರುವುದಿಲ್ಲ.

ತನ್ಮಧ್ಯೆ ಶ್ರೀ ಆರೋಗ್ಯಸ್ವಾಮಿ ಮುದಲಿಯಾರರು ಕಾಂಗ್ರೆಸ್ ವಾಲಂಟಿಯರರ ತಲೆಯಿಂದ ಗಾಂಧಿ ಟೊಪ್ಪಿಗಳು ತೆಗೆಯಲ್ಪಟ್ಟವೆಯೆಂದು ಆರೋಪವೊಂದು ಇರುವಾಗ ಸರಕಾರವು ಏಕೆ ವಿಚಾರಿಸಿ ತಿಳಿದುಕೊಳ್ಳಲಿಲ್ಲ?

ಉತ್ತರ — ಈ ಪ್ರಶ್ನೆಗೆ ನನ್ನ ಉತ್ತರವು ಈ ಮೊದಲೇ ಆಗಿದೆ.

ಪ್ರಶ್ನೆ — ಗಾಂಧಿ ಟೊಪ್ಪಿಗಳನ್ನು ಧರಿಸಬಾರದಾಗಿ ಸರಕಾರವು ನಿಷಿದ್ಧ ಶಾಸನವನ್ನು ಜಾರಿಮಾಡಿದೆಯೋ?

ಉತ್ತರ — ಇಲ್ಲ.

* * *

೧೦೦,೦೦೦ ಪೌಂಡುಗಳ ಭಂಗಾರವು ಸಮುದ್ರಕ್ಕೆ!

ಮೊನ್ನೆ ಚೆರ್‌ಬೊರ್ಗ ಎಂಬಲ್ಲಿಂದ ಬೆರೆಂಗೆರಿಯಾ ಎಂಬ ಹಡಗಿನಿಂದ ಭಂಗಾರವನ್ನು ತೆಗೆಯುವಾಗ ಸಂಕೋಲೆಯು ತುಂಡಾಗಿ ೧೦೦,೦೦೦ ಪೌಂಡುಗಳ ಭಂಗಾರವು ಸಮುದ್ರಕ್ಕೆ ಬಿತ್ತು. ನೀರಡಿಗೆ ಮುಳುಗುವವರಿಂದ ಇದನ್ನು ತೆಗೆಸಲಾಗುವುದಂತೆ. ಬಿದ್ದ ಭಂಗಾರವು ೬ ಬೆರೆಳ್ ಆಗಿತ್ತು. ಇಂತಹ ೪೨೬ ಬೆರೆಳ್ ಭಂಗಾರವು ಆ ಸ್ಟೀಮರಿನಲ್ಲಿ ಹೋಗಿತ್ತು.

ಇಂಗ್ಲೆಂಡಿನಲ್ಲಿ ೩೦ ಮಂದಿಗಳಿಗೆ ಜಖಂ.

ಇಂಗ್ಲೆಂಡಿನಲ್ಲಿ ದಿನೇ ದಿನೇ ಹೆಚ್ಚುತ್ತಿರುವ ನಿರುದ್ಯೋಗಿಗಳು ಕಳೆದ ವಾರ ಒಂದು ಸಭೆಗೂಡಿದರು. ಸುಮಾರು ೧೦,೦೦೦ ಮಂದಿಗಳಾದರು. ಮೆರವಣಿಗೆ, ಬೇಂಡ್, ವಾದ್ಯಗಳಿಂದ ಪಾರ್ಲಿಮೆಂಟ್ ಮಂದಿರದ ಬಳಿ ಹೋಗಿ ಗುಲ್ಲನ್ನೆಬ್ಬಿಸಿ, ತಮ್ಮ ಕಷ್ಟನಷ್ಟಗಳನ್ನು ಹೇಳಿಕೊಳ್ಳಬೇಕೆಂಬ ನಿರ್ಧಾರವಾಯಿತು. ಅದೇ ಮೇರೆಗೆ ಸುಮಾರು ಸಾವಿರ ಮಂದಿಗಳು ಬೇಂಡ್ ಸಮೇತ ಮಹಾ ಕೋಲಾಹಲದಿಂದ ಪಾರ್ಲಿಮೆಂಟ್ ಮಂದಿರದ ಬಳಿನಿಂತರು. ಇವರನ್ನು ಓಡಿಸಲು ಪೋಲೀಸರು ಬಂದರು. ಆದರೂ ಇವರು ಚದರಲಿಲ್ಲ. ಕುದುರೆ ಸವಾರರು ಬಂದು ಜನಸಂದಣಿಯ ಮಧ್ಯೆ ಓಡಿದರು. ಅನೇಕ ಕುದುರೆಗಳು ಬಿದ್ದುವು. ಅನೇಕರಿಗೆ ಜಖಂ ಆಯಿತು. ಕಲ್ಲು, ಮುಳ್ಳು, ಇಟ್ಟಿಗೆ ಕಬ್ಬಿಣ ಸರಳು, ಸೋಡಾ ಬಾಟ್ಲಿಗಳು ಪೋಲೀಸರ ಮೇಲೆ ಎಸೆಯಲ್ಪಟ್ಟುವು. ಅನೇಕರು ಜಖಂಗೊಂಡರು. ಅಲ್ಲಿಯವರ ರಿಪೋರ್ಟಿನಂತೆ ಬರೇ ೩೦ ಮಂದಿಗಳಿಗೆ ಜಖಂ ಆಗಿದೆ ಎಂದು ಸುದ್ದಿ. ಕ್ರಾಂತಿಕಾರರ ಬಲಾತ್ಕಾರವು ಹೆಚ್ಚಿದುದರಿಂದ ಅವರ ಮೇಲೆ ಬೆಟನ್ ಚಾರ್ಜ್ ಮಾಡಲಾಯಿತು.

* * *

ಬೆಂಗಳೂರಲ್ಲಿ ೨೦೦ ಮಂದಿಗಳು ಬಿದ್ದರು

ಕಳೆದ ವಾರ ಬೆಂಗಳೂರಿನ ಮಲ್ಲೇಶ್ವರದ ಸಮೀಪ ಒಂದು ವಿವಾಹವು ನಡೆಯಿತು. ಅಲ್ಲಿಯು ಅಂತರೋಜನ್ ಎಂಬ ವರ್ಜಿಯೊಬ್ಬರು ಇನ್ನೂರು ಮಂದಿಗಳಿಗೆ ಒಂದು ಭೋಜನ ಕೊಡುವ ಏರ್ಪಾಡು ಮಾಡಿದರು. ಭೋಜನಕ್ಕೆ ಪ್ರಾರಂಭವಾಯಿತು. ಭುಂಡಿಯು ಬಳಸಲ್ಪಟ್ಟಿತು. ಇನ್ನೂರು ಮಂದಿಗಳೂ ಎಲೆ ಬರಿದುಮಾಡಬೇಕೆ ತೃಪ್ತಿಪಡಿಸಿದರು. ಊಟವಾಯಿತು. ವಿಳಂಬವಾಗ ಅನೇಕರು ತಲೆತಿರುಗಿ ಬಿದ್ದರು. ಕೆಲವರು ಕಾರಿದರು, ಕೆಲವರು ಸ್ಮೃತಿ ತಪ್ಪಿ ಬಿದ್ದರು. ಗಡಿಬಿಡಿಯಾಯಿತು. ಕಾರಣವೇನೆಂದು ತಿಳಿಯಬರಲಿಲ್ಲ. ಮಡುವೆ ಚಪ್ಪರದಲ್ಲಿ ತುಂಬ ಕ್ಷೋಭೆಯಿದ್ದಿತು. ಅಷ್ಟರಲ್ಲಿ ಅಲ್ಲಿಯ ಡಾಕ್ಟರಿಯವರು ಬಂದು ಶುಶ್ರೂಷೆ ನಡೆಸಿದರು. ಆ ಮೇಲೆ ಅಲ್ಲಿಯ ಹೆಲ್ತ್ ಆಫೀಸರರಾದ ಶ್ರೀ ರಾಮಚಂದ್ರರು ಬಂದು ಪರೀಕ್ಷೆ ನಡೆಸಿದರು. ಪಾಯಸವು ಇಡಲ್ಪಟ್ಟ ದೊಡ್ಡ ಪಾತ್ರೆಯಲ್ಲಿ ಭೋಜನದ ವಿಷವು ಉಂಟಾಗಿ ಅದು ಪಾಯಸದೊಡನೆ ಸೇರಿ ತಿಂದವರ ಹೊಟ್ಟೆಯಲ್ಲಿ ಕಿತಾಪತಿ ನಡೆಸಿತೆಂದು ತಿಳಿದುಬಂತು.

* * *

ಹುಡುಗಿಯನ್ನು ಮಾರಿದುದು

ಮದುರೆಯ ಪೋಲೀಸರು ಪಿಳ್ಳೆಯಾರ್ ಗೋವಿಂದ ಅಯ್ಯರ್ ಎಂಬವನೊಬ್ಬನನ್ನು ಪತ್ತೆ ಮಾಡಿರುವರು. ಅವನ ಮೇಲಿನ ತಪ್ಪು ನಿಸ್ಸಿಮ ರಾಜ ಅಮ್ಮಾಳ್ ಎಂಬ ಒಬ್ಬ ಹುಡುಗಿಯನ್ನು ವೇಶ್ಯಾ ಕಸಬಿನ ಬಗ್ಗೆ ಹುಡುಗಿಯ ಅಕ್ಕ ಮತ್ತು ಅಕ್ಕನ ಗಂಡನಿಂದ ಕ್ರಯಕ್ಕೆ ಪಡೆದುಕೊಂಡಿರುವುದೇ. ಹುಡುಗಿಯನ್ನು ಮಾರಿದ ಅವಳ ಅಕ್ಕ ಮತ್ತು ಅಕ್ಕನ ಗಂಡನಿಗೆ ಸ್ವೇಟನ್ನು ಒದಗಿಸಿರುವರು. ಇವರ ತನಿಖೆ ನಡೆದು ಅಪಾದನೆಯು ಸ್ಥಾಪಿತವಾಗಿದೆ. ಇಷ್ಟ ಬಳಿಗವನ್ನು ಮಾಡಿದ ಪಗ್ಯಾತ್ಮರಿವರು. ತಮ್ಮ ಮನೆಯಲ್ಲಿನ ಒಲೆಯನ್ನೂ ಸಾಮಾನುಗಳನ್ನೂ ಇಟ್ಟುಕೊಂಡಿರುವರೋ ಇಲ್ಲವೋ ಎಂದು ಒಬ್ಬರ ಅಭಿಪ್ರಾಯ.

* * *

ಒಬ್ಬ ತರುಣಿಯ ಮೇಲೆ ಇಬ್ಬರಿಗೆ ಆಶೆ

ಲಾಹೋರಿನ ಕೋರ್ಟಿನಲ್ಲೊಂದು ವಿಚಾರಣೆ. ವಿಶ್ವನಾಥಸಿಂಗ ನೆಂಬೊಬ್ಬ ಯುವಕ, ನಾಗೇಂದ್ರಸಿಂಗನೆಂಬ ಇನ್ನೊಬ್ಬ ತರುಣ ಗ್ಯಾನ್‌ಕುಮಾರ್ ಎಂಬವಳೊಬ್ಬ ತರುಣಿ. ಈ ಇಬ್ಬರು ತರುಣರಿಗೂ ಈ ತರುಣಿಯ ಮೇಲೆ ಕಣ್ಣು. ವಿಶ್ವನಾಥಸಿಂಗನು ಅವಳನ್ನು ವಿವಾಹವಾಗಬಹುದೆಂದು ಪತ್ರದ ತೀರ್ಮಾನಿಸಿತು. ಆದರೆ ಅದನ್ನು ತಿಳಿದ ಹುಡುಗಿಯ ರಕ್ಷಕನೊಬ್ಬನು ನಾಗೇಂದ್ರಸಿಂಗನ ಪರವಾಗಿ ಒಂದು ಅರ್ಜಿ ಮಾಡಿದನು. ಹುಡುಗಿಯನ್ನು ನಾಗೇಂದ್ರಸಿಂಗನಿಗೆ ಕೊಡಬೇಕೆಂದು ಪ್ರಾರ್ಥಿಸಿದನು. ಜಡ್ಜರಿಗೆ ಕಷ್ಟವೆನಿಸಿತು. ಕೊನೆಗೆ ಅವರು ಇಬ್ಬರೂ ವರರನ್ನೂ ಕೋರ್ಟಿಗೆ ಬರಮಾಡಿಸಿದರು. ಜಡ್ಜರಿಗೆ ವಿಶ್ವನಾಥನ ರೂಪ ಗುಣ ವಿದ್ಯೆಗಳನ್ನು ನೋಡಿ ಸಂತೋಷವಾಯಿತು. ಆದರೇನು ಮಾಡುವುದು? ಮರುಕ್ಷಣವೇ ಅವರಿಗೆ ವ್ಯಸನವೂ ಆಯಿತು. ಕಾರಣ ತರುಣಿಗೆ ಕಣ್ಣು ಸರಿಯಾಗಿ ಕಾಣುತ್ತಿದ್ದಿಲ್ಲ. ಒಂದು ಪುಸ್ತಕವನ್ನು ಆವನ ಕೈಯಲ್ಲಿ ಕೊಟ್ಟು ಓದು ಎಂದರು. ವಿಶ್ವನಾಥನಿಗೆ ದೃಷ್ಟಿಮಾಂದ್ಯದಿಂದ ಹೆಚ್ಚಿಗೆ ಓದಲಾಗಲಿಲ್ಲ. ತರುಣಿಯನ್ನು ಕಣ್ಣುಕಾಣದವನಿಗೆ ಕೊಡಲಾರೆನೆಂದು ಜಡ್ಜರು ಹೇಳಿದರು. ನಾಗೇಂದ್ರನನ್ನು ಜಡ್ಜರು ನೋಡಿದರು. ಅವರಿಗೆ ಅಷ್ಟು ಸಂತೋಷವಾಗಲಿಲ್ಲ. ಕಾರಣ — ಅವನಲ್ಲಿ ರೂಪವಿದ್ದಿಲ್ಲ ವಿದ್ಯೆಯೂ ಇದ್ದಿಲ್ಲ. ಕೊನೆಗೆ ನಾಗೇಂದ್ರನಿಗೆ ಹುಡುಗಿಯನ್ನು ಕೊಡುವುದೂ ಕೊಡದಿರುವುದೂ ಹುಡುಗಿಯ ರಕ್ಷಕನ ಇಚ್ಛೆಯೆಂದೂ ವಿಶ್ವನಾಥಸಿಂಗನು ತಾನಲ್ಲದೆ ಬೇರೊಬ್ಬನನ್ನು ತನ್ನ ಬದಲಿಗೆ ಮುಂದಿಡಬಹುದೆಂದೂ ಕೋರ್ಟಿನ ಅಭಿಪ್ರಾಯವಾಯಿತು.

+ + + +

ವಿವಿಧ ಸಮಾಚಾರಗಳು.

ಶ್ರೀಮತಿ ಗಾಂಧಿಯವರನ್ನು ಬಿಟ್ಟರು.

ಶ್ರೀಮತಿ ಕಸ್ತೂರಿಬಾಯಿ ಗಾಂಧಿಯವರ ಕಾರಾವಾಸ ಅವಧಿಯು ಮುಗಿದುದರಿಂದ ಅವರನ್ನು ಅಹ್ಮದಾಬಾದಿನ ಸಬರ್ಮತಿ ಸೆರೆಮನೆಯಿಂದ ತಾ ೨೯ನೇ ದಿನ ಬಿಡುಗಡೆಮಾಡಿರುವರು. ಬಿಡುಗಡೆ ಮಾಡಲ್ಪಟ್ಟೊಡನೆ ಕಸ್ತೂರಿಬಾಯಿಯವರು ಹೊರಬಂದು ಒಬ್ಬ ಬಾಲಿಕೆಯೊಡನೆ ಆಶ್ರಮದ ಸ್ಥಿತಿಗತಿ, ಅಲ್ಲಿಯ ಶಿಷ್ಯರ ಪತ್ತೆ ಮತ್ತು ಯೋಗಕ್ಷೇಮದ ಕುರಿತು ವಿಚಾರಿಸಿದರು. ಎಸೋಸಿಯೇಟೆಡ್ ಪ್ರೆಸ್ಸಿನ ಪ್ರತಿನಿಧಿಗಳು ಅವರನ್ನು ಕಂಡು, ಸೆರೆಮನೆಯಲ್ಲಿ ನೀವು ಹೇಗಿದ್ದಿರೆಂದು ಕೇಳಿದ್ದಕ್ಕೆ ಶ್ರೀಮತಿಯವರು ಸಬರ್ಮತಿ ಜೈಲಿನಲ್ಲಿ ತಾನು ಸುಖದಿಂದಿದ್ದೆನೆಂದೂ, ತನಗೆ 'ಎ' ಕ್ಲಾಸಿನವರ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದರೆಂದೂ ಬಾಂಬೇ ಕ್ರಾನಿಕಲ್ ಎಂಬ ವಾರ್ತಾ ಪತ್ರಿಕೆಯನ್ನು ತನಗೆ ಓದಲು ಕೊಟ್ಟಿದ್ದರೆಂದೂ ಹೇಳಿದರು. ಇವರು ಮಹಾತ್ಮಾ ಗಾಂಧಿಯವರನ್ನು ಎರವಾಡಾ ಜೈಲಿನಲ್ಲಿ ಬೇಗನೇ ಕಾಣಲಿರುವರು.

• • •

ದೊಡ್ಡಬಳ್ಳಾಪುರ ಶೌಕತಾಲಿಯವರು

ಲಂಡನಿನಿಂದ ಹಿಂತಿರುಗಿದ ಬಳಿಕ ಪ್ರಕೃತ ವಾತಾವರಣವನ್ನು ಪರ್ಯಾಲೋಚಿಸಿ ತಾನು ಪಶ್ಚಿಮೋತ್ತರ ಗಡಿನಾಡಿನ ಸಂಚಾರವನ್ನು ಮಾಡಬೇಕೆಂದು ಬಯಸಿ, ತನ್ನ ಸಂಚಾರವನ್ನು ಸರಕಾರಕ್ಕೆ ತಿಳಿಸಿ ಅವರ ಅಪ್ಪಣೆಯನ್ನು ಪಡೆದು ಗಡಿನಾಡಿಗೆ ಹೊರಟ ಬಳಿಕ ಪೇಶಾವರಕ್ಕೆ ತಲುಪುತ್ತಲೇ ಶೌಕತಾಲಿಯವರು ಅವರು ಅನುಚರರಿಂದ ಸ್ವಾಗತಿಸಲ್ಪಟ್ಟರು. ಅವರು ಒಬ್ಬ ಪ್ರತಿನಿಧಿಗೆ ೧೮ ವರುಷಗಳಾದ ಮೇಲೆ ನಾನು ಪುನಃ ಸಿಮ್ಲಾದಿಂದ ಗಡಿನಾಡಿಗೆ ಬಂದೆನು. ನಾನು ಇಲ್ಲಿಗೆ ನನ್ನ ಕಣ್ಣನ್ನೂ ಕಿವಿಯನ್ನೂ ತೆರೆದುಕೊಂಡೇ ಬಂದಿರುತ್ತೇನೆ. ಸಂಗತಿಯನ್ನು ಕೇಳಲು, ಸ್ಥಿತಿಯನ್ನು ನೋಡಲು ನಾನು ಬಂದಿರುತ್ತೇನೆ. ಗಡಿನಾಡಿನ ಅವಸ್ಥೆಯನ್ನರಿಯಲು ಬಂದಿರುತ್ತೇನೆ. ನನ್ನಂತಹ ಹಳೇ ಸೋಲ್ಜರನತ್ತಕಡೆ ನೀವು ದಯಾದೃಷ್ಟಿಯನ್ನು ಬೀರುವಿರೆಂದು ನಂಬುತ್ತೇನೆ ಎಂದರು.

• • •

"ಟೈ ಇಂಡಿಯನ್"

ಕರಾಚಿಯಲ್ಲಿ ಸ್ಥಾಪನೆಯಾದ ಟೈ ಇಂಡಿಯನ ಸ್ವದೇಶಿಯನ್ನೇ ಪಡಕೊಳ್ಳಿ ಎಂಬ ಪ್ರಚಾರ ಸಮಿತಿಯೆಂಬ ಒಂದು ಸಮಿತಿಯು ಮದ್ರಾಸಿನಲ್ಲೂ ಸ್ಥಾಪಿತವಾಗಿದೆ. ಇದರಲ್ಲಿ ಸುಮಾರು ೨೦೦ ಮಂದಿ ಸದ್ಗೃಹಸ್ಥರು ಸದಸ್ಯರಾಗಿರುವರು. ನ್ಯಾಯ ವಿಧಾಯಕ ಸಭೆಯ ಕೌನ್ಸಿಲರುಗಳೂ ಇದ್ದಾರೆ. ಕಾಂಗ್ರೆಸ್ಸಿನವರೂ ಇದಕ್ಕೆ ಸೇರಿರುವರು. ಇದು ಅರಾಜಕೀಯವಲ್ಲ. ಇದರ ಅಭಿಪ್ರಾಯಗಳಿಗೆ ಒಪ್ಪುವ ಎಲ್ಲರೂ ಮೆಂಬರರಾಗಬಹುದು. ಇದಕ್ಕಾಗಿ ಚಂದಾಗಿಯೆನ್ನುವುದಿಲ್ಲ. ನಿಧಿಗಳನ್ನು ಕೊಟ್ಟರೆ ಸ್ವೀಕೃತವಾಗುತ್ತವೆ. ಸ್ವದೇಶಿ ಪ್ರಚಾರವೇ ಇದರ ಉದ್ದೇಶ. ಇದಕ್ಕೆ ಸಭಾಪತಿಗಳು — ಶ್ರೀಗಳಾದ ಜನಾಬ್ ಮಹಮ್ಮದ್, ಷಣ್ಮುಗಂ ಚೆಟ್ಟಿಯಾರ್ ಟಿ ಆರ್ ವೆಂಕಟರಮಣ ಶಾಸ್ತ್ರಿ ಆರ್ ಎಸ್ ಆರೋಗ್ಯಸ್ವಾಮಿ ಮುದಲಿಯಾರ್, ಟಿ ರಂಗಾಚಾರಿ ಅಬ್ದುಲ್ ಹಮೀದಖಾನ್, ಬಶೀರ್ ಅಹ್ಮದ್ ಸೈಯದ್ ಬಿ ಪೋಕರ್, ಯು ಸಿ ಯಸ್ ಭಟ್, (ಮಂಗಳೂರಿನವರು) ಎ ಬಿ ಶೆಟ್ಟಿ (ನವಯುಗದ ಸಂಪಾದಕರು), ಸರ್ ಸಿ ಪಿ ರಾಮಸ್ವಾಮಿ ಐಯ್ಯರ್ ಶ್ರೀಮತಿ ಡಿ ಜಿನರಾಜದಾಸ್, ಶ್ರೀಮತಿ ಎಂ ಸಿ ಕೃಷ್ಣ (ಮಂಗಳೂರಿನವರು) ಇವರ ಮುಂದಾಳು ಸದಸ್ಯರಾದ ಶ್ರೀಯುತ ಬಿ ಶಿವರಾಯರು ಬರೆಯುವುದೇನೆಂದರೆ— 'ಅನೇಕ ಪತ್ರಗಳು ಬಂದಿವೆ. ನಾವೇನು ಮಾಡಬೇಕು? ಎಂಬುದೇ ಎಲ್ಲರೂ ಬರೆಯುವ ಪ್ರಶ್ನೆ.' ನೀವೇನೂ ಮಾಡುವುದು ಬೇಡ. ಕೂಡಲೇ ನಿಮ್ಮ ಹಳ್ಳಿಹಳ್ಳಿಗಳಲ್ಲಿ ಸ್ವದೇಶಿ ಪ್ರಚಾರ ಸಮಿತಿಗಳನ್ನು ಏರ್ಪಡಿಸಿ, ನಿಮ್ಮ ಹಾಡುಗಳನ್ನು ನಮ್ಮ ಲೀಗಿಗೆ ಸೇರಿಸಿ, ಎಲ್ಲರೂ ಸೇರುವಂತೆ ಪ್ರೇರೇಪಿಸಿರಿ'

• • •

ಆನೆಯ ಮಾಲೀಕನಿಗೊಂದು ನೋಟೀಸು

ಪಿಲಿಬ್ಬಿತ್‌ನಲ್ಲಿ ನೋಥೇಗಂಗರಾಜು ಎಂಬವನ ಸ್ವಾಧೀನ ಒಂದು ಆನೆಯಿದೆ. ಅದು ಸ್ವಲ್ಪ ಪೋಕರಿ ಸ್ವಭಾವವುಳ್ಳಂತೆ. ಮೆರವಣಿಗೆ ಮದುವೆ ಮೊದಲಾದ ಸಮಾರಂಭಗಳಿಗೆ ಅದನ್ನು ಜನರು ಕೊಂಡುಹೋಗುತ್ತಿದ್ದರು. ಒಂದೆರಡು ಸಲ ಅದು ಏನೋ ಸ್ವಲ್ಪ ಗಡಿಬಿಡಿ ಮಾಡಿತು. ಈ ಸಂಗತಿಯು ಅಲ್ಲಿಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ತಿಳಿಯಿತು. ಅವರು ಕೂಡಲೇ ಮಾಲೀಕನಿಗೊಂದು ನೋಟೀಸು ಕೊಟ್ಟರು. "ಸಾರ್ವಜನಿಕರಿಗೆ ನಿನ್ನ ಆನೆಯಿಂದ ಭಯವಿದೆ. ಈ ಆದುದರಿಂದ ನಿನ್ನ ಆನೆಯನ್ನು ನೀನು ಹದಿನೈದು ದಿನಗಳ ತನಕ ಹೊರಬಿಡದೆ ಬಂದೋಬಸ್ತಿನಲ್ಲಿ ಇಡಬೇಕು" ಎಂದು ಆ ನೋಟೀಸಿನ ಹೇಳಿಕೆ.

ಮಂಗಳೂರಲ್ಲಿ ಲಾಠಿ! ಕೌನ್ಸಿಲಿನಲ್ಲಿ ಗುಲ್ಲು!

ಇವು ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ ಹೋಮ್ ಮೆಂಬರರಾದ ಸರ್ ಮಹಮ್ಮದ್ ಉಸ್ಮಾನ್ ಮತ್ತು ಶ್ರೀಯುತ ಸುಬ್ರಹ್ಮಣ್ಯ ಭಟ್ ಇವರಿಗೂ ನಡೆದ ಪ್ರಶ್ನೋತ್ತರಗಳು

(ಶ್ರೀಯುತ ಭಟ್ಟರು) — ಪ್ರಶ್ನೆ — (ಅ) ಮಂಗಳೂರಿನಲ್ಲಿ ಕಳೆದ ಜನವರಿ ತಾ. ೨೧ನೇ ದಿನ ಇಬ್ಬರು ಸ್ವಯಂಸೇವಕರು ಕಾಂಜಿಯವರ ಅಂಗಡಿಯನ್ನು ಪಿಕೆಟ್ ಮಾಡಿರುವರೇ? (ಆ) ಪೋಲೀಸರು ಅವರಿಗೆ ಲಾಠಿಗಳಿಂದ ಹೊಡೆದಿರುವರೇ? (ಇ) ಹಾಗೆ ಅವರು ಯಾವ ಕಾನೂನಿನ ಮೇರೆಗೆ ಹೊಡೆದರು? (ಈ) ಆ ಸ್ವಯಂಸೇವಕರ ತಲೆ, ಮುಖ, ಕುತ್ತಿಗೆಗಳಿಗೆ ಬಹಳವಾಗಿ ಹೊಡೆದಿರುವುದು ನಿಜವೇ? ಅದು ನಿಜವೆಂದರೆ ಹಾಗೆ ಹೊಡೆಯಲು ಅವರಿಗೆ ಅಪ್ಪಣೆಯನ್ನು ಕೊಡಲಾಗಿದೆಯೇ? (ಉ) ಪಿಕೆಟ್ ಮಾಡಿದ ಇಬ್ಬರಿಗೂ ಹೊಡೆದಾದ ಮೇಲೆ ಪೋಲೀಸರು ಅಲ್ಲಿಯೇ ಇದ್ದ "ಜುಪಿಟರ್ ಜುವೆಲ್ಲರಿ ಮಾರ್ಟ್" ಎಂಬ ಒಂದು ಸರಾಫರ ಅಂಗಡಿಗೆ ಹೊಕ್ಕು ಅಲ್ಲಿಯೇ ತಮ್ಮ ಕೆಲಸದಲ್ಲಿ ಇದ್ದ ಅದರ ಪ್ರೊಪ್ರೈಟರರಾದ ಶ್ರೀ ಎನ್ ಎಲ್ ಪಾಲರ ಮಕ್ಕಳಿಬ್ಬರಿಗೆ ಲಾಠಿಗಳಿಂದ ಹೊಡೆದುದೂ ಮತ್ತು ಬೀದಿಯಲ್ಲಿ ಹೋಗುತ್ತಿದ್ದ ನಿರಪರಾಧಿಗಳಿಗೆ ಆ ದಿನ ಹೊಡೆದುದೂ ನಿಜವೇ? (ಊ) ಕಾಯಿದೆಭಂಗ ಚಳವಳದಲ್ಲಿ ಭಾಗವಹಿಸದ ನಿರಪರಾಧಿಗಳ ಮೇಲೆ ಪೋಲೀಸರು ಕೈಮಾಡದಂತೆ ಸರಕಾರವು ಏನು ಉಪಾಯವನ್ನು ಮಾಡಲಿದೆ?

ಅ'ನಿಂದ ಈ ವರೆಗಿನ ಪ್ರಶ್ನೆಗಳಿಗೆ ಉತ್ತರ: ಈ ಸಂಗತಿಗಳು ಸರಕಾರಕ್ಕೆ ತಿಳಿದುಬಂದಿರುವುದಿಲ್ಲ. ನಿರಪರಾಧಿಗಳಿಗೆ ಲಾಠಿಯ ಪೆಟ್ಟು ಬಿದ್ದ ಕುರಿತ ಸರಕಾರಕ್ಕೆ ಸುದ್ದಿ ಇಲ್ಲ ಮತ್ತು ಬಿದ್ದಿದೆಯೆಂದು ಭಾವಿಸಲೂ ಸರಕಾರಕ್ಕೆ ಕಾರಣವಿಲ್ಲ.

(ಊ) ಪ್ರಶ್ನೆಗೆ ಉತ್ತರ: ಕಾಯಿದೆಭಂಗ ಚಳವಳದಲ್ಲಿ ಭಾಗವಹಿಸದ ನಿರಪರಾಧಿಗಳ ಮೇಲೆ ಪೋಲೀಸರು ಕೈಮಾಡಿದುದು ಹೌದೆಂದು ಸಂತೃಪ್ತಿಕರವಾಗಿ ಕಂಡರೆ ಸರಕಾರವು ಅದಕ್ಕೆ ಅಗತ್ಯವಾದುದನ್ನು ಮಾಡುವುದು.

ಪ್ರಶ್ನೆ — ಇಂತಹ ಘಟನೆಗಳ ವಿಷಯ ಸರಕಾರವು ವರ್ತಮಾನವನ್ನೇಕೆ ತರಿಸಿಕೊಳ್ಳುವುದಿಲ್ಲ?

ಉತ್ತರ — ಏಕೆಂದರೆ ಸರಕಾರಕ್ಕೆ ಇದು ಅಗತ್ಯವೆಂದು ಕಾಣಲಿಲ್ಲ. ಅಲ್ಲದೆ ಕಾಯಿದೆಭಂಗ ಚಳವಳವನ್ನು ಮುರಿಯುವುದಕ್ಕಾಗಿ ನಮ್ಮ ಪೋಲೀಸರೂ ಡಿಸ್ಟ್ರಿಕ್ಟ್ ಅಧಿಕಾರಿಗಳೂ ಮಿತಿಮೀರಿ ಕೆಲಸಮಾಡುತ್ತಾರೆ. ಹೀಗಿರುವಾಗ ನಾವು ನಿನ್ನಾದರೂ ವರ್ತಮಾನಕ್ಕಾಗಿ ಅವರೊಡನೆ ಬರೆದರೆ ಆ ವರ್ತಮಾನವು ಅವರಲ್ಲರದಿರಲೂ ಬಹುದು. ಸರಕಾರಕ್ಕೆ ಕಳುಹಲ್ಪಟ್ಟಿರುವ ರಿಪೋರ್ಟಿನಿಂದಾಗಿ, ನಿರಪರಾಧಿಗಳಿಗೆ ಪೆಟ್ಟು ಬಿದ್ದಿದೆಯೆಂದು ತಿಳಿಯಲು ಸರಕಾರಕ್ಕೆ ಎಡೆಯಿಲ್ಲ. ಅದಕ್ಕೆ ಕಲ್ಪಿಂಕರವೂ ಸರಿಯಾದ ವರ್ತಮಾನವೂ ಕೊಡಲ್ಪಟ್ಟರೆ ಇದನ್ನು ಇತ್ಯರ್ಥಿಸಿ ಸುದ್ದಿಯನ್ನು ನಿಮಗೆ ಕೊಡಲು ಸರಕಾರಕ್ಕೆ ಸಾಧ್ಯವಾದೀತು.

ಪ್ರಶ್ನೆ: ನನ್ನಲ್ಲಿರುವ ಸಂಪೂರ್ಣ ವಾರ್ತೆಯನ್ನೆಲ್ಲ ಕೊಟ್ಟರು ನೀನು ಪೋಲೀಸರೂ ಡಿಸ್ಟ್ರಿಕ್ಟ್ ಅಧಿಕಾರಿಗಳೂ ಮಿತಿಮೀರಿ ಕೆಲಸ ಮಾಡುತ್ತಾರೆಂದು ನಿರಪರಾಧಿಗಳು ಪೆಟ್ಟು ತಿಂದು ಕಷ್ಟಪಡಬೇಕೆಂದು ಭಾವಿಸಬೇಕೇ ಹೇಗೆ?

ಉತ್ತರ — ನನಗೆ ತಿಳಿದಿರುವ ಮಟ್ಟಿಗೆ, ಯಾವ ನಿರಪರಾಧಿಯೂ ಕಷ್ಟಪಡಲಿಲ್ಲ, ಕಷ್ಟಪಡುವುದಿಲ್ಲ.

ಪ್ರಶ್ನೆ — ತಾ ೫ನೇ ಜನವರಿ ಮೊದಲ್ಗೊಂಡು ಮಂಗಳೂರಲ್ಲಿ ಗಾಂಧಿ ಟೋಪಿ ಧರಿಸಿದವರ ತಲೆಯಿಂದ ಪೋಲೀಸರು ಅದನ್ನು ತೆಗೆದುದು ನಿಜವೇ? ಇದಕ್ಕೆ ಕಾರಣವೇನು?

ಉತ್ತರ — ಸರಕಾರಕ್ಕೆ ಈ ವಾರ್ತೆ ಬಂದಿರುವುದಿಲ್ಲ.

ತನ್ಮಧ್ಯೆ ಶ್ರೀ ಆರೋಗ್ಯಸ್ವಾಮಿ ಮುದಲಿಯಾರರು, ಕಾಂಗ್ರೆಸ್ ವಾಲಂಟಿಯರರ ತಲೆಯಿಂದ ಗಾಂಧಿ ಟೋಪಿಗಳು ತೆಗೆಯಲ್ಪಟ್ಟವೆಯೆಂದು ಆರೋಪವೊಂದು ಇರುವಾಗ ಸರಕಾರವು ಏಕೆ ವಿಚಾರಿಸಿ ತಿಳಿದುಕೊಳ್ಳಲಿಲ್ಲ?

ಉತ್ತರ: ಈ ಪ್ರಶ್ನೆಗೆ ನನ್ನ ಉತ್ತರವು ಈ ಮೊದಲೇ ಆಗಿದೆ.

ಪ್ರಶ್ನೆ: ಗಾಂಧಿ ಟೋಪಿಗಳನ್ನು ಧರಿಸಬಾರದೆಂಬ ಸಂಬಂಧವು ನಿಷೇಧ ಶಾಸನವನ್ನು ಜಾರಿಮಾಡಿದೆಯೋ?

ಉತ್ತರ — ಇಲ್ಲ.

• • •

೧೧೦,೦೦೦ ಪೌಂಡುಗಳ ಭಂಗಾರವು ಸಮುದ್ರಕ್ಕೆ!

ಮೊನ್ನೆ ಚೆರ್‌ಬೋರ್ಗ ಎಂಬಲ್ಲಿಂದ ಬೆರೆಂಗೇರಿಯಾ ಎಂಬ ಹಡಗಿನಿಂದ ಭಂಗಾರವನ್ನು ತೆಗೆಯುವಾಗ ಸಂಕೋಲೆಯು ತುಂಡಾಗಿ ೧೧೦,೦೦೦ ಪೌಂಡುಗಳ ಭಂಗಾರವು ಸಮುದ್ರಕ್ಕೆ ಬಿತ್ತು. ನೀರಡಿಗೆ ಮುಳುಗುವವರಿಂದ ಇದನ್ನು ತೆಗೆಯಲಾಗುವುದಂತೆ. ಬಿದ್ದ ಭಂಗಾರವು ೬ ಪೆಟಿಲ್ ಆಗಿತ್ತು. ಇಂತಹ ೧೨೩ ಪೆಟಿಲ್ ಭಂಗಾರವು ಆ ಸ್ಟೀಮರಿನಲ್ಲಿ ಹೋಗಿತ್ತು.

ಇಂಗ್ಲೆಂಡಿನಲ್ಲಿ ೩೦ ಮಂದಿಗಳಿಗೆ ಜಖಂ.

ಇಂಗ್ಲೆಂಡಿನಲ್ಲಿ ದಿನೇ ದಿನೇ ಹೆಚ್ಚುತ್ತಿರುವ ನಿರುದ್ಯೋಗಿಗಳು ಕಳೆದ ವಾರ ಒಂದು ಸಭೆಗೂಡಿದರು. ಸುಮಾರು ೧೦,೦೦೦ ಮಂದಿಗಳಾದರು. ಮೆರವಣಿಗೆ, ಬೇಂಡ್, ವಾದ್ಯಗಳಿಂದ ಪಾರ್ಲಿಮೆಂಟ್ ಮಂದಿರದ ಬಳಿ ಹೋಗಿ ಗುಲ್ಲೆಬ್ಬಿಸಿ, ತಮ್ಮ ಕಷ್ಟನಷ್ಟಗಳನ್ನು ಹೇಳಿಕೊಳ್ಳಬೇಕೆಂಬ ನಿರ್ಧಾರವಾಯಿತು. ಅದೇ ಮೇರೆಗೆ ಸುಮಾರು ಸಾವಿರ ಮಂದಿಗಳು ಬೇಂಡ್ ಸಮೇತ ಮಹಾ ಕೋಲಾಹಲದಿಂದ ಪಾರ್ಲಿಮೆಂಟ್ ಮಂದಿರದ ಬಳಿಸಂತರು. ಇವರನ್ನು ಓಡಿಸಲು ಪೋಲೀಸರು ಬಂದರು. ಆದರೂ ಇವರು ಚದರಲಿಲ್ಲ. ಕುದುರೆ ಸವಾರರು ಬಂದು ಜನಸಂದಣಿಯ ಮಧ್ಯೆ ಓಡಿದರು. ಅನೇಕ ಕಾದುಕೆಗಳು ಬಿದ್ದುವು. ಅನೇಕರಿಗೆ ಜಖಂ ಆಯಿತು. ಕಲ್ಲು ಮುಳ್ಳು ಇಟ್ಟಿಗೆ ಕಬ್ಬಿಣ ಸರಳು, ಸೋಡಾ ಬಾಟ್ಲಿಗಳು ಪೋಲೀಸರ ಮೇಲೆ ಎಸೆಯಲ್ಪಟ್ಟುವು. ಅನೇಕರು ಜಖಂಗೊಂಡರು. ಅಲ್ಲಿಯವರ ರಿಪೋರ್ಟಿನಂತೆ ಬರೇ ೩೦ ಮಂದಿಗಳಿಗೆ ಜಖಂ ಆಗಿದೆ ಎಂದು ಸುದ್ದಿ. ಕ್ರಾಂತಿಕಾರರ ಬಲಾತ್ಕಾರವು ಹೆಚ್ಚಿದುದರಿಂದ ಅವರ ಮೇಲೆ ಬೇಟನ್‌ಚಾರ್ಜ್ ಮಾಡಲಾಯಿತು.

• • •

ಬೆಂಗಳೂರಲ್ಲಿ ೨೦೦ ಮಂದಿಗಳು ಬಿದ್ದರು

ಕಳೆದ ವಾರ ಬೆಂಗಳೂರಿನ ಪಬ್ಲಿಕ್ ಆಫೀಸ್ ಸಮೀಪ ಒಂದು ವಿವಾಹವು ನಡೆಯಿತು. ಅಲ್ಲಿಯ ಅಂತಿಯೋಜನೆ ಎಂಬ ವರ್ತಕ ಯೆಟ್ಟರು ಇನ್ನೂರು ಮಂದಿಗಳಿಗೆ ಒಂದು ಭೋಜನ ಕೊಡುವ ಏರ್ಪಾಡು ಮಾಡಿದರು. ಭೋಜನಕ್ಕೆ ಪ್ರಾರಂಭವಾಯಿತು. ಭಂಡಿಯು ಬಳಸಲ್ಪಟ್ಟಿತು. ಇನ್ನೂರು ಮಂದಿಗಳೂ ಎಲೆ ಬಂದುಮಾಡಲು ಪ್ರಾರಂಭಿಸಿದರು. ಊಟವಾಯಿತು. ಎಲ್ಲರಿಗೂ ಅನೇಕರು ತಲೆತಿರುಗಿ ಬಿದ್ದರು. ಕೆಲವರು ವಾಂತಿ ಮಾಡಿದರು. ಕೆಲವರು ಸ್ಮೃತಿ ತಪ್ಪಿ ಬಿದ್ದರು. ಗಾಬರಿಯಾಯಿತು. ಕಾರಣವೇನೆಂದು ತಿಳಿದುಬರಲಿಲ್ಲ. ಮನೆಯ ಚಪ್ಪರದಲ್ಲಿ ತುಂಬ ಕೋಲಾಹಲವಿದ್ದಿತು. ಅಷ್ಟರಲ್ಲಿ ಅಲ್ಲಿಯ ಇನ್ಸ್‌ಪೆಕ್ಟರು ಬಂದು ಪರೀಕ್ಷೆ ನಡೆಸಿದರು. ಆ ಮೇಲೆ ಅಲ್ಲಿಯ ಪಲ್ಯ ಅಡುಗೆ ಮಾಡಿದ ಶ್ರೀ ರಾಮಚಂದ್ರರು ಬಂದು ಪರೀಕ್ಷೆ ಮಾಡಿದರು. ಪಾಯಸವು ಇಡಲ್ಪಟ್ಟ ಪಾತ್ರೆಯಲ್ಲಿ ಲೋಹದ ವಿಷವು ಉಂಟಾಗಿ ಅದು ಪಾಯಸದೊಡನೆ ಸೇರಿ ತಿಂದವರ ಹೊಟ್ಟೆಯಲ್ಲಿ ಕೆಡುಕನ್ನು ನಡೆಸಿತೆಂದು ತಿಳಿಯಲಾಯಿತು.

• • •

ಹುಡುಗಿಯನ್ನು ಮಾರಿದುದು

ಮದುರೆಯ ಪೋಲೀಸರು ಪಳನಿಯಪ್ಪ ಗೋವಿಂದ ಐಯ್ಯರ್ ಎಂಬವನೊಬ್ಬನನ್ನು ಪತ್ತೆ ಮಾಡಿರುವರು. ಅವನ ಮೇಲಿನ ತಪ್ಪು ನಿಲ್ಲಿ ರಾಜು ಅಮ್ಮಾಳ್ ಎಂಬ ಒಬ್ಬ ಹುಡುಗಿಯನ್ನು ಪೇಶ್ವಾ ಕಸಬಿನ ಬಗ್ಗೆ ಹಸಿವಿನ ಅಕ್ಕ ಮತ್ತು ಅಕ್ಕನ ಗಂಡನಿಂದ ಕ್ರಯಕ್ಕೆ ಪಡೆದುಕೊಂಡಿರುವುದೇ. ಹುಡುಗಿಯನ್ನು ಮಾರಿದ ಅವಳ ಅಕ್ಕ ಮತ್ತು ಅಕ್ಕನ ಗಂಡನಿಗೆ ಕ್ಷೇತ್ರನನ್ನು ಒಪ್ಪಿಸಿದರು. ಇವರ ತನಿಖೆ ನಡೆದ ಅವಧಿಯ ಸಂಪೂರ್ಣವಾದ ಇದ್ದ ಬಳಿಕ ವನ್ನು ಮಾರಿದ ಪುನರುತ್ಥಿತರು. ತಮ್ಮ ಮನೆಯಲ್ಲೇ ಬೆಳೆಯನ್ನೂ ಸಾಮಾನುಗಳನ್ನೂ ಇಟ್ಟುಕೊಂಡಿದ್ದಾನೆಂದು ಪೋಲೀಸರ ಒಂದು ಬಗೆಯ ಅಭಿಪ್ರಾಯ.

• • •

ಒಬ್ಬ ತರುಣಿಯ ಮೇಲೆ ಇಬ್ಬರಿಗೆ ಆಶೆ

ಲಾಹೋರಿನ ಸೆಶನ್ಸ್ ಕೋರ್ಟಿನಲ್ಲಿಂದು ವಿಚಾರಣೆ ವಿಶ್ವನಾಥಸಿಂಗ ನೆಂಬೊಬ್ಬ ಯುವಕ ನಾಗೇಂದ್ರಸಿಂಗನೆಂಬ ಇನ್ನೊಬ್ಬ ತರುಣ ಗ್ರಾಜ್ಯುಯೇಟ್ ಎಂಬವರೊಬ್ಬ ತರುಣಿ. ಈ ಇಬ್ಬರು ತರುಣರಿಗೂ ಈ ತರುಣಿಯ ಮೇಲೆ ಕಣ್ಣು. ವಿಶ್ವನಾಥಸಿಂಗನು ಅವಳನ್ನು ವಿವಾಹವಾಗಬೇಕೆಂದು ಇಚ್ಛೆ ಕಾಣಿಸಿತು. ಅದರ ಅದನ್ನು ತಿಳಿದ ಹುಡುಗಿಯ ರಕ್ಷಕನೊಬ್ಬನು ನಾಗೇಂದ್ರಸಿಂಗನ ಪರವಾಗಿ ಒಂದು ಅರ್ಜಿ ಹಾಕಿದನು. ಹುಡುಗಿಯನ್ನು ನಾಗೇಂದ್ರಸಿಂಗನಿಗೆ ಕೊಡಬೇಕೆಂದು ಪ್ರಾರ್ಥಿಸಿದನು. ಜಡ್ಜರಿಗೆ ಕಷ್ಟವೆನಿಸಿತು. ಕೊನೆಗೆ ಅವರು ಇಬ್ಬರೂ ವರರನ್ನೂ ಕೋರ್ಟಿಗೆ ಬರಮಾಡಿಸಿದರು. ಜಡ್ಜರಿಗೆ ವಿಶ್ವನಾಥನ ರೂಪ ಗುಣ ವಿದ್ಯೆಗಳನ್ನು ನೋಡಿ ಸಂತೋಷವಾಯಿತು. ಆದರೇನು, ಮಾಡುವುದು? ಹುಡುಗಿಯಾದರೆ ಅವನಿಗೆ ವ್ಯಸನವೂ ಆಯಿತು. ಆ ಚೀಲ ತರುಣನಿಗೆ ಕಣ್ಣು ಸರಿಯಾಗಿ ಕಾಣುತ್ತಿದ್ದಿಲ್ಲ ಎಂದು ಪುಸ್ತಕವನ್ನು ಅವನ ಕೈಯಲ್ಲಿ ಕೊಟ್ಟು ಓದು ಎಂದರು. ವಿಶ್ವನಾಥನಿಗೆ ದೃಷ್ಟಿಮಾಂದ್ಯದಿಂದ ಹೆಚ್ಚಿಗೆ ಓದಲಾಗಲಿಲ್ಲ. ತರುಣಿಯನ್ನು ಕಣ್ಣುಕಾಣುವವನಿಗೆ ಕೊಡಲಾರೆನೆಂದು ಜಡ್ಜರು ಹೇಳಿದರು. ನಾಗೇಂದ್ರನನ್ನು ಜಡ್ಜರು ನೋಡಿದರು. ಅವನಿಗೆ ಅಷ್ಟು ಸಂತೋಷವಾಗಲಿಲ್ಲ. ಕಾರಣ ಅವನಲ್ಲಿ ರೂಪವಿದ್ದಿಲ್ಲ. ವಿದ್ಯೆಯೂ ಇದ್ದಿಲ್ಲ. ಕೊನೆಗೆ ನಾಗೇಂದ್ರನಿಗೆ ಹುಡುಗಿಯನ್ನು ಕೊಡುವುದೂ ಕೊಡದಿರುವುದೂ ಹುಡುಗಿಯ ರಕ್ಷಕನ ಇಚ್ಛೆಯೆಂದೂ ವಿಶ್ವನಾಥಸಿಂಗನು ತಾನಲ್ಲದೆ ಬೇರೊಬ್ಬನನ್ನು ತನ್ನ ಬದಲಿಗೆ ಮುಂದಿಡಬಹುದೆಂದೂ ಕೋರ್ಟಿನ ಅಭಿಪ್ರಾಯವಾಯಿತು.

+ + + +

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರದವಾದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಷನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕಣ್ಣ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ವಸ್ತ್ರ, ಅರಿಷ್ಟಾಸವಗಳು ಅತ್ಯಾತಿ ಸಿದ್ಧ ಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಕ್ಕುತ್ತವೆ. ತಯಾರ ಇರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ಹಿಡಿದಿದ್ದ ಕಾಲ, ಪ್ರಾಯ, ಪಿತ್ಥ ಆಹಾರದ ಕ್ರಮ, ವೃತ್ತಿ ಹಿಗರಟು ಪಡೆದಿದ್ದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಪತ್ತೆಯು ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಮುಖ್ಯ ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ ಸಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿಗೆ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವದೆ ಕೂಡ ವಿಚಾರಣೆಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ಶಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ಶಸ್ತ್ರವೈದ್ಯರಿಂದ ಫಲ ಸಿಗದ್ದು ಸೇವನೆಮಾಡುವುದರಿಂದ ಜಾದೂವಿನಂತೇ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಕಂಗ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ১—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಒಸರುವುದು ತಿಂದಿಯುವುದು, ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ಧೀಪನ ತೇಲ ಅಮೋಘ ಅಸ್ತ್ರವಿದೆ. ಸಾವಿರಾರು ಕಿವುಡರು ನೆಟ್ಟಗಾಗಿರ ವರ. ವಾಸಿಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೩

ವಿಳಾಸ — ಶಕ್ತಿಸುಧಾ ಕಾರ್ಯಾಲಯ
23 ಕಾಂಟಾರವಾಡಿ 4ನೇ ಗಲ್ಲಿ
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ವಿಕ್ರಯಿಸಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತಿ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ.

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್.
ಕೇಡಲ್ ರೋಡ್ ಪೋ. ಆ. ದಾದರ್ ಮುಂಬಾಯಿ 14.

Dr H L. Batliwalla, Sons & Co., Ltd.
Kadell Road, P O Dadar Bombay, 14.

ತಂತಿ ವಿಳಾಸ:— 'SIRINDHUN' Bombay

ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ— ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್.



The Zandu Pharmaceutical Works, Ltd, Bombay, 14.

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆವಳೆ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿದ್ದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ ನಾನಾ ವಿಧವಾದ ದುರ್ಬಲತ್ವ, ಕೆಮ್ಮು, ಎದೆ ನೆಗಡಿ, ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವು ಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವದು. ಮತ್ತು ನರಗಳ ನಿಶ್ಶಕ್ತಿ, ವೀರ್ಯಕ್ಷೀಣತೆ ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ಪುನರ್ಯೌವನನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾಗಿದೆ. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ ಜಾಡಿ ರೂ 10/- ಕ್ರಯ 1 ಪೌನು ಸೀಸೆ ರೂ. 2/8 ½ ಪಾ ರೂ. 1/5 ¼ ಪಾ. ಅ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು.— ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು.— ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು.— ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು — ಟಿ ಸಿ. ನಟರಾಜ್ ಅಂಡ್ ಕೊ., ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು.— ಬಿ ರೂಪಚಂದ್‌ಲಾಲ್ ಕಂಪೆನಿ, ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಬಾಲವಿವಾಹ ನಿರ್ಬಂಧ.

ದೇಶವು ನವಚೇತನದಿಂದೆಚ್ಚತ್ತು, ಎದ್ದು ಸೊಂಟಕಟ್ಟಿ ಹೋರಾಡುವುದಾದರೂ, ಹಿಂದೂಗಳಲ್ಲಿ ಅನೇಕರು ಇನ್ನೂ ಕಣ್ತೆರೆಯದಿರುವುದು ನಿಜವಾಗಿಯೂ ಶೋಚನೀಯವು. ಇವರು ಕಾಲಚಕ್ರವನ್ನು ತಮ್ಮ ತಮ್ಮ ಇಚ್ಛಾನುಸಾರವಾಗಿ ನಡೆಸಲು ಬಹಳ ಶಕ್ತರಿರುವರೋ ಎಂಬಂತೆ ತಮ್ಮ ಆಚಾರವಿಚಾರಗಳಲ್ಲಿ ಇನ್ನೂ ನಿಶ್ಚಲರಾಗಿ ನಿಂತಿರುವರು.

ನಮ್ಮಲ್ಲಿ ನಡೆಯುವ ವಿವಾಹಪದ್ಧತಿಗಳನ್ನು ಸರಿಯಾಗಿ ಪರಿಶೀಲಿಸಿದರೆ ನಾವು ನಿಜವಾಗಿಯೂ ನಾಚಿಕೆಯಿಂದ ತಲೆ ತಗ್ಗಿಸಿಕೊಳ್ಳಬೇಕು, ಅಂತಹ ಕ್ರೂರವಾದ, ಅಸಂಬದ್ಧವಾದ ಕೃತ್ಯಗಳನ್ನು ನಾವು ಮಾಡುತ್ತಿದ್ದೇವೆ.

ತಮ್ಮ ತಮ್ಮ ಕ್ಷಣಿಕ ಆಶಾಪಾಶಗಳಿಗಾಗಿ ಜನರು ಇನ್ನೂ ಇನ್ನೂ ಬಾಲವಿವಾಹವನ್ನು ಮಾಡಲು ಮನಸ್ಸು ಮಾಡುತ್ತಿರುವುದು ನಮಗೆ ಕಂಡುಬರುತ್ತಲೇ ಇದೆ. ತಾವು ಸಾಯುವ ಮೊದಲು ತಮ್ಮ ಏಳೆಂಟು ವರ್ಷ ಪ್ರಾಯದ ಬಾಲಬಾಲಿಕೆಯರಿಗೆ ವಿವಾಹವನ್ನು ಮಾಡಿಯೇ ಬಿಡಬೇಕೆಂಬ ಆಶಾತುರವು ನಮ್ಮ ಜನರಲ್ಲಿ ಇನ್ನೂ ಕಡಿಮೆಯಾಗಿಲ್ಲ. ಎಷ್ಟೋ ಜನರು ತಮ್ಮ ಎಳೆ ಪ್ರಾಯದ ಹಸುಗೂಸುಗಳಿಗೆ ವಿವಾಹವನ್ನು ಮಾಡಲು ದಿನೇ ದಿನೇ ಹವಣಿಸುತ್ತಿರುವರು—ಹಂಬಲಿಸುತ್ತಿರುವರು. ಇವರಿಗಿಲ್ಲ ಜ್ಞಾನೋದಯವಾಗುವುದಾದರೂ ಎಂದು?

ಬಾಲವಿವಾಹವನ್ನು ಮಾಡಬಾರದೆಂದು ದೇಶದ ತುತ್ತೂರಿಯು ಕೂಗಿ ಕೂಗಿ ಹೇಳುತ್ತಿದೆಯಾದರೂ ನಮ್ಮ ಜನರ ದುರಭ್ಯಾಸವು ಒಂದೇ ಸ್ಥಿತಿಗೆ ಬಂದು ನಿಂತಿದೆ. ದಕ್ಷಿಣ ಕನ್ನಡದಲ್ಲಿ, ಅದರಲ್ಲೂ ಮಂಗಳೂರಲ್ಲಿ ಇಂತಹ ಬಾಲವಿವಾಹಗಳಿಗಾಗಿ ಯತ್ನವು ನಡೆಯುತ್ತಲಿರುವುದು ನಿಜವಾಗಿಯೂ ಶೋಚನೀಯವು.

ವಿವಾಹವೆಂದರೆ ಅವಧಿಯನ್ನೊಳಗೊಂಡ ಒಂದು ಕರಾರವಲ್ಲ. ಅದು ಮಾನವನ ನೈತಿಕ ಬಲೋತ್ಕೃಷ್ಟತೆಗಾಗಿ ಒಂದು ಧರ್ಮ. ಮನುಷ್ಯರ ಮಧ್ಯೆ ಅನಿವಾರ್ಯವಾಗಿ ಬಂದು ನಿಂತ ಧರ್ಮದೇವತೆ. ಅಂತಹ ವಿವಾಹವನ್ನು ನಾವು ಅಪವಿತ್ರಗೊಳಿಸುವುದೆಂದರೆ ನಾವು ಘೋರ ಪಾತಕಕ್ಕೆ ಕಾರಣರಾಗುವುದೇ ಸರಿ.

ಬಾಲವಿವಾಹವನ್ನು ಮಾಡುವುದರಿಂದ ಬಾಲಕ ಬಾಲಕಿಯರೊಳಗಣ ಜೀವನ ಶ್ರೇಷ್ಠತ್ವವನ್ನು ವಿಸ್ತೀರ್ಣಗೊಳಿಸಿದಂತಾಗುತ್ತದೆ. ವಂಶಪಾರಂಪರ್ಯ ನಿರ್ಬಲವಾಗುತ್ತದೆ. ಮುಂದೆ ಮರಿ ಕುಟುಂಬಗಳು ನಿರ್ವೀರ್ಯವುಳ್ಳವುಗಳಾಗುತ್ತವೆ. ಮದ್ಯ ಸೇವನೆಯಿಂದ ಕ್ಷಣಕಾಲಕ್ಕೆ ಮಾತ್ರ ಸಂತೋಷವು ಸಿಕ್ಕಿ, ಅದರ ಮತ್ತಿನ ಪರಿಣಾಮಗಳು ಎಷ್ಟು ಹಾನಿಕರವಾಗಿಯೋ ಅಷ್ಟೇ ಹಾನಿಯು ಬಾಲವಿವಾಹದಿಂದಾಗುತ್ತದೆ.

ನಮ್ಮ ಪೂರ್ವಜರು ಹಾಕಿದ ಹಗ್ಗವೆಂದು ನಾವು ನೇತಾಡಿದರೆ ಆ ಹಗ್ಗವನ್ನು ಹಾಕಿದ ಪೂರ್ವಿಕರ ಪ್ರಾಣವು ಹೋಗುವುದಿಲ್ಲ. ನೇತಾಡಿದ ನಮ್ಮ ಪ್ರಾಣವು ಹಾರುತ್ತದೆ. ಪೂರ್ವಿಕರು ಮಾಡಿಟ್ಟ ಬಾಲವಿವಾಹ ಪ್ರಿಯದ ಹಗ್ಗಕ್ಕೆ ಕತ್ತನ್ನು ಕೊಟ್ಟು ನಾವು ನೇತಾಡಿದರೆ ನಮ್ಮ ಪ್ರಾಣವೇ ಹೋಗುತ್ತದೆ ಹೊರತು ಸ್ವರ್ಗಕ್ಕೇರಿದ ಪೂರ್ವಿಕರಿಗೇನೂ ಆಗುವುದಿಲ್ಲ.

ಮುಂಚಿನ ಕಾಲದಲ್ಲಿ ಮನುಷ್ಯರಿಗೆ ಎಲ್ಲೆಲ್ಲೂ ಭಯ. ಹೆಣ್ಣು, ಹೊನ್ನು, ಮಣ್ಣುಗಳು ಎಲ್ಲಿಯೂ ಭದ್ರತೆಯಿಂದಿರಲು ಸಾಧ್ಯವಿದ್ದಿರಲಿಲ್ಲ. ಕಾರಣ ಆ ಕಾಲದಲ್ಲಿ ನಾಗರಿಕತನದ ಬೆಳಕು ದೇಶದಲ್ಲಿ ಹರಡಿಕೊಂಡಿರಲಿಲ್ಲ. ಆದದರಿಂದಾಗಿ ಆಗಿನ ಜನರು ತಮ್ಮ ಹೆಣ್ಣು ಮಕ್ಕಳ ಜಾಗ್ರತೆಯನ್ನು ನೋಡಿಕೊಳ್ಳುತ್ತಿದ್ದರು.

ಹೆಣ್ಣಿನ ಜಾಗ್ರತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಅವರು ಮೊದಲು ಹೆಣ್ಣು ಮಕ್ಕಳನ್ನು ಇತರ ಪುರುಷರಿಗೆ ಆದಷ್ಟು ಬೇಗ ಕೊಟ್ಟು ತಮ್ಮ ಹೆಗಲ ಮೇಲಿನ ಜವಾಬ್ದಾರಿಕೆಯನ್ನೂ ಹೃದಯದ ಭಯವನ್ನೂ ನಿವಾರಿಸಿಕೊಳ್ಳುತ್ತಿದ್ದರು. ಹುಡುಗಿಯರು ಹೆಂಗಸರಾಗುವ ಮೊದಲೇ ವಿವಾಹವನ್ನು ಮಾಡಿ ಬಿಡುವ ದುಷ್ಟ ಪದ್ಧತಿಯು ಆಗ ಜನ್ಮಕ್ಕೆ ಬಂತು. ಆಗಿನ ಕಾಲಕ್ಕೆ ಆ ಪದ್ಧತಿಯು ದುಷ್ಟವಾಗಿರಲಿಲ್ಲ. ಆಗಿನ ಕಾಲಕ್ಕೆ ಅಂತಹ ಕ್ರಮವು ಅಗತ್ಯವಿತ್ತು.

ಇನ್ನು ಮಣ್ಣಿನ ಜಾಗ್ರತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಅಲ್ಪಸ್ವಲ್ಪ ಭೂಮಿಗಳಿದ್ದವರು ತಮ್ಮ ಭೂಮಿಗಳನ್ನು ದೊಡ್ಡ ದೊಡ್ಡ ಮನೆತನದವರಿಗೂ, ಬುದ್ಧಿವಂತರಿಗೂ "ಈಡು" ಹಾಕಿದರು. ಬದಲಿಗೆ ಹಣವನ್ನು ತೆಗೆದುಕೊಂಡರು.

ಮತ್ತು ಹೊನ್ನಿನ ಭದ್ರತೆಯ ಬಗ್ಗೆ ಅವರು ತಮ್ಮಲ್ಲಿದ್ದ ನಗನಾಣ್ಯಗಳನ್ನು ದೊಡ್ಡ ದೊಡ್ಡ "ಕೊಪ್ಪರಿಗೆ"ಗಳಲ್ಲಿ ಹಾಕಿ ಭೂಮಿಯಲ್ಲಿ ಹೂತಿಟ್ಟರು. ಇವೆಲ್ಲಾ ಮೊದಲಿನ ಭಯಭೀತಿಕರ ದುರ್ದಿನಗಳಲ್ಲಿ ನಡೆದು ಬಂದ ಕ್ರಮನಿಯಮಗಳು. ಇಂತಹ ಕ್ರಮನಿಯಮಗಳು ಈ ಕಾಲದಲ್ಲೂ ಸುಸೂತ್ರವಾಗಿ ಜರಗುವುದು ಅಗತ್ಯವಿಲ್ಲ.

ಕಾರಣ—ನಮಗೆ ಅನ್ಯ ವೈರಿಗಳ ಭಯವಿಲ್ಲ. ಅನ್ಯ ಮತಸ್ಥರು ಹೆಮ್ಮಕ್ಕಳನ್ನು ಹೊತ್ತುಕೊಂಡು ಹೋಗುವ, ಅಥವಾ ಅವರನ್ನು ತಮಗೆ ಕೊಡಬೇಕೆಂದು ಬಲಾತ್ಕರಿಸುವ ದುಷ್ಟರು ಈಗಿಲ್ಲ. ಕಾರಣ, ನವನಾಗರಿಕತನದ ದೀಪವು ನಮ್ಮ ಒಳಗಿದೆ. ದುಷ್ಟ ನಿಗ್ರಹಕ್ಕೆ ಪೋಲೀಸು ಇದೆ. ನಮ್ಮಲ್ಲಿ ಅಸ್ತ್ರಶಸ್ತ್ರಗಳಿವೆ.

ನಮ್ಮಲ್ಲಿರುವ ಭೂಮಿ ಮುಂತಾದವುಗಳ ಭದ್ರತೆಗಾಗಿಯೂ ನಾವು ಚಿಂತಿಸಬೇಕೆಂದಿಲ್ಲ—ನಮ್ಮ ಬೆಂಬಲಕ್ಕೆ ಸರಕಾರವಿದೆ. ಕಾನೂನುಗಳಿವೆ. ಮದ್ದುಗುಂಡುಗಳಿವೆ. ನಮ್ಮ ಹಣವನ್ನು ನಾವು ಭೂಮಿಯಲ್ಲಿ ಹೂತಿಡಬೇಕೆಂಬ ಅಗತ್ಯವಿಲ್ಲ. ಭದ್ರವಾದ ಬೇಂಕುಗಳಿವೆ.

ಹೀಗೆ ಎಲ್ಲವೂ [illegible]ಗೊಂಡಿವೆ ಎಂದಾಗ ಬಾಲವಿವಾಹ ಮೊದಲಾದ ದುಷ್ಕೃತ್ಯಗಳನ್ನು ನಾವೇಕೆ ಅನುಸರಿಸಬೇಕು. ಇದಕ್ಕೆ ತಡೆಯಾಗಿ ಬಂದ ಬಾಲವಿವಾಹ ನಿರ್ಬಂಧವನ್ನು ನಾವು ಹರಸಬೇಡವೇ? ಇದನ್ನು ಕಂಡು ಸಂತೋಷಿಸಬೇಡವೇ? ಕಾಲವೂ ಬದಲಾವಣೆ ಹೊಂದಿದ ದಿನಗಳಲ್ಲಿ ಬಾಲವಿವಾಹ ನಿರ್ಬಂಧವನ್ನು ಕಂಡು ಆನಂದಿಸಬೇಡವೇ?

ಸಹಾಯದಿಂದ ಧರಾಯಿಸಲ್ಪಡುವ—ಮುಖ್ಯವಾಗಿ ಆ ರೀತಿಯ ಆಧಾರದಿಂದ, ಮೆಂಬರರ ಸಾಂಪತ್ತಿಕ ಸ್ಥಿತಿಯು ಎಷ್ಟು ಮಟ್ಟಿಗೆ ಅಭಿವೃದ್ಧಿ ಸ್ಥಿತಿಗೆ ಬಂದಿದೆ ಎಂಬುದನ್ನು ಕೂಲಂಕಷವಾಗಿ ತಿಳಿದುಕೊಳ್ಳಬಹುದು.

ಪ್ರತಿಯೊಬ್ಬ ಮೆಂಬರನಿಗೂ ಪಾಸು ಬೂಕನ್ನು ಒದಗಿಸಿ ಕೊಡುವ ಅವಶ್ಯಕತೆಯ ಕುರಿತು ಏನು ಹೇಳಬೇಕಾಗಿಲ್ಲ. ಇಂತಹ ಪಾಸುಬೂಕುಗಳನ್ನು ಒದಗಿಸಿಕೊಟ್ಟ ಮಾತ್ರದಿಂದ ರಶೀದಿಗಳನ್ನು ಮರೆಯಬಾರದು. ರಶೀದಿಗಳನ್ನು ಒದಗಿಸಿಕೊಡುವುದು ಅತೀ ಅಗತ್ಯವಾಗಿದೆ. ಯಾಕೆಂದರೆ ಇಂತಹ ರಶೀದಿಗಳಿಲ್ಲದ ಹಲವು ಸಂದರ್ಭಗಳಲ್ಲಿ, ಸಂಘದ ಪಾಲಕರು ದುರುಪಯೋಗ ಪಡಿಸಿದ ಹಣಗಳನ್ನು ವಸೂಲು ಮಾಡುವುದೇ ಕಷ್ಟವಾಗಿದೆ—ಹೀಗೆ ಮೆಂಬರರ ಕಷ್ಟ ನಷ್ಟಗಳನ್ನು ತಪ್ಪಿಸಿಕೊಳ್ಳಬೇಕಾಗಿದ್ದರೆ ಕ್ರಮವಾದ ರಶೀದಿಗಳನ್ನು ಕೊಡುವುದು ಅಗತ್ಯ.

ಇನ್ನು ಕೊನೆಯ ಮಾತು—ಮೆಂಬರರ ಸಾಂಪತ್ತಿಕ ಸ್ಥಿತಿಯನ್ನು ವೃದ್ಧಿಗೊಳಿಸುವುದಕ್ಕೆ ಫಲಪ್ರದವಾದ ಉದ್ದೇಶಗಳಿಗೆ ಮಾತ್ರ ಸಾಲಗಳನ್ನು ಕೊಟ್ಟರೆ ಸಾಲದು. ಮೆಂಬರರಿಗೆ ಬೇಕಾದ ಎಲ್ಲಾ ಸಾಮಾನುಗಳನ್ನು ಜಂಟಿಯಾಗಿ ಖರೀದಿ ಮಾಡುವುದರಿಂದ, ಸಾಮಾನುಗಳು ಸ್ವಲ್ಪ ಕ್ರಯಕ್ಕೆ ಸಿಕ್ಕಿ ಮಧ್ಯಸ್ಥಿಕೆಯಲ್ಲಿ ವ್ಯಾಪಾರ ನಡೆಸುವವರ ಲಾಭವು ಮೆಂಬರರಿಗೆ ಸಿಕ್ಕುವಂತೇ ಆಗುತ್ತದೆ. ಹೀಗಾಗಿ ಅವರ ಉತ್ಪತ್ತಿಯ ಮೊತ್ತವನ್ನು ವೃದ್ಧಿಗೊಳಿಸಿದಂತೆ ಆಗುತ್ತದೆ—ಇದಲ್ಲದೆ ನಮ್ಮ ಜಿಲ್ಲೆಯಲ್ಲಿ ಪ್ರಾಮುಖ್ಯವಾದ ವ್ಯವಸಾಯಿಕ ಉತ್ಪತ್ತಿಯಾದ ಭತ್ತವು ತಯಾರಾಗುವ ಸಮಯಕ್ಕೆ ಸರ್ವಸಾಧಾರಣವಾಗಿ ಬೆಲೆಯು ಕಡಿಮೆ ಇರುತ್ತದೆ. ಈ ಕಾಲದಲ್ಲಿ ಮೆಂಬರರಿಗೆ ಕೊಟ್ಟ ಸಾಲಗಳನ್ನು ಮರುಪಾವತಿ ಮಾಡುವ ಒತ್ತಾಯ ಪಡಿಸಿದ್ದಲ್ಲಿ, ಮೆಂಬರರು ಬಹು ನಷ್ಟಗಳಿಗೆ ಗುರಿಯಾಗಬೇಕಾಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ಆ ಸಮಯಗಳಲ್ಲಿ ಅವರ ಉತ್ಪತ್ತಿಯ ಈಡಿನ ಮೇಲೆ ಸಾಲಗಳನ್ನು ಕೊಟ್ಟು ಒಳ್ಳೇ ಧಾರಣೆ ಏರುವ ವರೆಗೆ ಉತ್ಪತ್ತಿಯನ್ನು ಕಾದಿಡುವಂತೆ ಮೆಂಬರರಿಗೆ ಸಹಾಯ ಮಾಡಬಹುದು—ಇಂತಹ ಪರಸ್ಪರ ಸಹಾಯದಿಂದ ಇತರರಿಗೆ ಸಿಗುವ ಹೆಚ್ಚಿನ ಲಾಭವನ್ನು ಕಡಿಮೆ ಮಾಡಿ ಮೆಂಬರರ ಉತ್ಪತ್ತಿಯನ್ನು ಜಾಸ್ತಿ ಮಾಡಬಹುದು.

— ಸಂಪೂರ್ಣ —

ಸಹಕಾರಿಗಳ ಮುಂದಣ ಕರ್ತವ್ಯ.

[ಉಡುಪಿಯ ಸಹಕಾರಿಗಳ ಮಹಾಸಭೆಯಲ್ಲಿ, ಡಿಪ್ಯುಟಿ ರಿಜಿಸ್ಟ್ರಾರರಾಗಿರುವ ಶ್ರೀ ಬಿ ಮಾಧವ ರಾವ್, ಬಿ. ಎ. ಎಮ್. ಎಲ್., ಇವರ ಭಾಷಣದಿಂದ]

[೬ನೇ ಸಂಚಿಕೆಯಿಂದ ಮುಂದುವರಿಸಿದುದು

ಕೆಲವು ಸಂಘಗಳ ಮೇಲೆ ಅಮಿತ ಜವಾಬ್ದಾರಿಯನ್ನು ಹೇರಿಸಬೇಕಾದ ದೆಸೆಯು ಬಂದೊದಗಿದುದರಿಂದ ಹೆಚ್ಚಿನವರಲ್ಲಿ ಸಂಘಗಳ ವಿಷಯ ಭೀತಿಯು ಉತ್ಪನ್ನವಾಗಿರುವುದು ಸಹಜ. ಆದರೆ ಅಮಿತ ಜವಾಬ್ದಾರಿಯು ತಾಗಲದಂತೆ ಮಾಡಬಹುದಾದ ಸಾಧನೆಗಳನ್ನು ಅವರು ಅರಿತಿದ್ದರೆ ಈ ಕುರಿತು ಯಾವ ಭೀತಿಯೂ, ತೊಂದರೆಯೂ ಉತ್ಪನ್ನವಾಗಲು ಕಾರಣವಿಲ್ಲ— ಅಮಿತ ಜವಾಬ್ದಾರಿಯ ಪೆಟ್ಟನ್ನು ತಪ್ಪಿಸಿಕೊಳ್ಳಬೇಕಾದರೆ, ಅದಕ್ಕೆ ಸಂಬಂಧಿಸಿದ ತತ್ವಗಳನ್ನು [illegible] ತಿಳಿದರೆ ಮಾತ್ರ ಸಾಧ್ಯವಾಗಬಹುದು. ಸಂಘಗಳನ್ನು ಬಹು ಜಾಗ್ರತೆಯಿಂದ ನಡೆಸಿದರೆ, ಮತ್ತು ಮೆಂಬರರಿಗೆ ಸಹಕಾರಿ ತತ್ವಗಳಲ್ಲಿ ನಿಜವಾದ [illegible] ಹಚ್ಚಿದರೆ, ಫಲಪ್ರದವಾದ ಉದ್ದೇಶಗಳಿಗೇನೆ ಸಾಲ ಕೊಟ್ಟರೆ ಮತ್ತು ಹಾಗೆ ಕೊಡಲ್ಪಡುವ ಸಾಲಗಳನ್ನು ಮರುಪಾವತಿಯ [illegible] ಯಿಂದ [illegible] ಇಲ್ಲದ [illegible] ಸಂಘಗಳಲ್ಲಿ [illegible] ಸಂದೇಹವಿಲ್ಲ. [illegible] ಸಂಘವು [illegible] ಸಂಘದ [illegible] ತಮ್ಮ [illegible] ಮಾಡುವುದರಿಂದಲೂ, [illegible] ಸಾಲಗಳನ್ನು ಮಾಡುವುದರಿಂದಲೂ ತಮ್ಮ [illegible] ಫಲಪ್ರದವಲ್ಲದ ಉದ್ದೇಶಗಳಿಗಾಗಿ ಸಾಲಗಳನ್ನು [illegible] ಹಲವು [illegible] ಸಂಘಗಳಲ್ಲಿ [illegible] ಹಲವು [illegible] ಇದೆ. ಇನ್ನು ಹಲವು ಸಂದರ್ಭಗಳಲ್ಲಿ [illegible] ತಮ್ಮ ಸಾಲಗಳನ್ನು ಕೊಡದೆ [illegible] ಕಾರಣಗಳಿಂದ ಅಮಿತ ಜವಾಬ್ದಾರಿಯ ಪೆಟ್ಟನ್ನು ತಿನ್ನುವ [illegible] ಮೆಂಬರರ [illegible] ಸಂಘದ [illegible] ನೋಡಿ [illegible] ಕೊರತೆಗಳನ್ನು [illegible] ಅಗತ್ಯವಾಗಿದೆ. [illegible] ಪ್ರತಿಯೊಂದು ಸಂಘದ ಮೆಂಬರರ [illegible] ಸಂಘಗಳಲ್ಲಿರುವ ಕೊರತೆಗಳನ್ನು ನಿವಾರಿಸಬೇಕು.—[illegible] ಪ್ರತಿ [illegible] ಮೆಂಬರನ [illegible] ವರ್ಷಗಳ [illegible] ಸಾಲದ ಮಿತಿಯನ್ನು ನಿರ್ಧರಿಸಬೇಕು —[illegible] ಸಾಲಗಳನ್ನು ಕೊಡಬೇಕು— ಹೀಗೆ [illegible] ಮಹಾಸಭೆಯವರು ನಿರ್ಧರಿಸಿದರೂ, [illegible] ಸಂಘದವರ ಮಾತ್ರ [illegible] ಸ್ವಲ್ಪ [illegible] ಸಹಿತ [illegible] ಪ್ರತಿಯೊಬ್ಬ ಮೆಂಬರನ [illegible], ಮರುಪಾವತಿಯ [illegible] ಸಾಲದ [illegible] ಮಿತಿಯನ್ನು ನಿರ್ಧರಿಸಬೇಕು.

ಇನ್ನೊಂದು ವಿಷಯವು ಯಾವುದೆಂದರೆ, ಸಾಲಮೂಲಗಳ ರಿಜಿಸ್ಟ್ರಿಯನ್ನು ಬರೆಯುವ ಅವಶ್ಯಕತೆ. ಸಂಘದ [illegible] ಸಾಲದ ಮಿತಿಯನ್ನು ನಿರ್ಧರಿಸುವಾಗ ಈ ರಿಜಿಸ್ಟ್ರಿಯನ್ನು ಉಪಯೋಗಿಸದಿದ್ದರೆ ಸಾಧ್ಯವಾಗಲಾರದು. [illegible] ವರದಿಯ [illegible]ನೇ ಅಂಶಕ್ಕೆ ಹೊಂದಿಕೊಂಡು [illegible] ಮಾತ್ರ [illegible] ನಿರ್ಣಯಿಸಲ್ಪಡಬೇಕು— ಇದಲ್ಲದೆ [illegible] ಕೇಂದ್ರ ಸ್ಥಾನದಲ್ಲಿ ಸೆಂಟ್ರಲ್ ಬೇಂಕಿನವರೂ ಸಂಘಗಳಲ್ಲಿ ಮೆಂಬರರ ಸ್ಥಿತಿಗತಿಗಳನ್ನು ಇಂಥಾ ಸಾಲಮೂಲಗಳ ರಿಜಿಸ್ಟ್ರಿಯಿಂದ ಗೊತ್ತುಹಚ್ಚಬಲ್ಲರು. ಮೆಂಬರರ ಪತ್ತನ್ನು ನಿರ್ಧರಿಸುವ ಬಗ್ಗೆ ಸಹಾ ಇದು ಸಹಕಾರಿಯಾಗಿದೆ. ಇದು ಪ್ರಾಮುಖ್ಯವಾದ ರಿಜಿಸ್ಟ್ರಿಯಾದುದರಿಂದ ಇದನ್ನು ಭರ್ತಿ ಮಾಡಿ ಕೊಡಲು ಒಪ್ಪದೆ ಇದ್ದ ಮೆಂಬರರಿಗೇ ಸಾಲಗಳನ್ನು ನಿರಾಕರಿಸುವುದು ಅಗತ್ಯವಿದೆ. ಇಂಥಾ ರಿಜಿಸ್ಟ್ರಗಳನ್ನು ಪ್ರತಿ ವರ್ಷವೂ ಗ್ರಾಮ ಉದ್ಯೋಗಸ್ಥರ

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಇಚ್ಛಾಟವಾದರೂ ಓಡುವದು.

ಏ ತ ರಿ ಂ ದ ?

ಹಿಂದೀ ಔಷಧಿ ಹಿಂದೀಯರಿಗಾಗಿ — HEDJURIN FOR DYSENTERY CHOLERA CURE — ಹಿಂದೀಯರಿಂದಲೇ ವ್ಯಾಪಾರಕ್ಕೆ

ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟದ್ದು — ತರಲ್ಪಟ್ಟದ್ದು

ಔನ್ಸಿನ ಕ್ರಯ ಆಣೆ 0—15—0   2 ಔನ್ಸಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ದಿ ಕಿಂಗ್ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದಕ್ಷಿಣ ಕನ್ನಡ

"If every Wife knew what every Widow knows every Husband would be Insured"

PLACE YOUR LIFE ASSURANCE WITH
THE SOUTH INDIAN

Securing for your clients –
1 **Low rates of Premium**
2. **Liberal Policy Conditions**

AND FOR YOURSELF
An Agency with attractive Terms of Commission and Salary in
The South Indian General Assurance Co, Ltd.

Any where in CANARA DISTRICTS & HYDERABAD STATE

For terms of Agency please apply to –
H R K IYENGAR
Chief Agent
The S I G A Co. Ltd,
Sanyasiguddy MANGALORE
Managing Agents –
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್
ಕಂಪೆನಿ ಲಿಮಿಟೆಡ್ಡನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳ ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್ ಆರ್ ಕೆ ಆಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ,
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್ ಜಿ. ಟಿ. ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ಕಾಂಬೂಲದೊಡನೆಯಾಗಲಿ ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ ನೀರುಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ ಶೀತ ನೆಗಡಿ ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ
(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ವಾಂತಿಭೇದಿಯ ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾದರೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ   ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ
(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ.   ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ ಸೋಡಾ ಫ್ಯಾಕ್ಟರಿ ಮಂಗಳೂರು ಬಿಜೈಗೆ ಹತ್ತಿ.

ಕನ್ನಡ ಸದ್ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದೊಳ್ಳೇ ಸುಸಂಧಿ! ಅಲಭ್ಯ ಲಾಭ!! ತಕ್ಕ ಸಮಯ!!

ಶ್ರೀ ಶೇಷಾಚಲ ಗ್ರಂಥಮಾಲೆಯ

೨೫ ಐತಿಹಾಸಿಕ ಕಾದಂಬರಿಗಳು ಅವುಗಳ ಬೆಲೆ ಸರಾಸರಿ	ರೂ	೨
೨೨ ಸಾಮಾಜಿಕ-ಪೌರಾಣಿಕ	ರೂ	೧೨
೧೧ ಪತ್ತೇದಾರಿ	ರೂ	೭
೩೧ ಚರಿತ್ರೆಗಳು	ರೂ	೨೦
೧೦ ಗದ್ಯ-ಪದ್ಯನಾಟಕಗಳು	ರೂ	೬
೨೫ ಪೌರಾಣಿಕ ಪಾರಮಾರ್ಥಿಕ	ರೂ	೨೫
೨೦ ಧಾರ್ಮಿಕ, ವೈದಿಕ ಹಾಗೂ ಇತರ	ರೂ	೧೪
೧೪೪ ಅಂತು ಪುಸ್ತಕಗಳು ಅವುಗಳ ಒಟ್ಟು ಬೆಲೆ	ರೂ.	೧೦೫

ಇವುಗಳಲ್ಲಿಯು ಎಷ್ಟೋ ಪುಸ್ತಕಗಳು ೩ನೇ ೪ನೇ ಆವೃತ್ತಿಗಳನ್ನು ಕೂಡ ಹೊಂದಿ ಕನ್ನಡಿಗರ ಪ್ರೀತಿಗೆ ಪಾತ್ರವಾಗಿರುತ್ತವೆ.

ಇಂಥ ಈ ಅತ್ಯುತ್ತಮ (೧೪೪ ಬಗೆಯ) ಪುಸ್ತಕಗಳಲ್ಲಿ ಬೇಕಾದ ಮೂರು ರೂಪಾಯಿ ಬೆಲೆಯ ಪುಸ್ತಕಗಳಿಗೆ ಬರೆದರೆ ಟಪ್ಪಾಲು ಖರ್ಚಿನ ೮ ಆಣೆ ನಾವೇ ವಹಿಸಿ ಎರಡೇ ರೂಪಾಯಿಗೆ ವ್ಹಿ ಪಿ ಮೂಲಕ ರವಾನಿಸುತ್ತೇವೆ. ಇದಕ್ಕೂ ಹೆಚ್ಚು ಬೆಲೆಯ ಪುಸ್ತಕಗಳಿಗೆ ಬರೆದರೆ ಟ ಖ ನಾವು ವಹಿಸುವದಲ್ಲದೆ, ಮೇಲೆ ಯೋಗ್ಯ ಕಮಿಶನ್ ಸಹ ಕೊಡುತ್ತೇವೆ ವ್ಹಿ ಪಿ ಯೊಡನೆ ಅಂಗೀರಸ ಸಂವತ್ಸರದ ಶುದ್ಧ ಪಂಚಾಂಗವು ಪುಕ್ಕಟೆಯಾಗಿ ಕಳುಹಿಸಲ್ಪಡುವದು. ಈ ರಿಯಾಯಿತಿಯು ಇಂದಿನಿಂದ ಒಂದೇ ತಿಂಗಳು ಕಾರಣ ಎಲ್ಲರೂ ಈ ಸುಸಂಧಿಯ ಲಾಭ ಹೊಂದಬೇಕು ನಮ್ಮ ಕ್ಯಾಟಲಾಗು ನೋಡಿ, ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಭಿ ಪ. ಕಾಳೆ
ಪ್ರೊಪ್ರೈಟರ್, ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ,
ಪೋ॥ ಆನಂದವನ, ಜಿ ಧಾರವಾಡ

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಚ್ಚುಕಟ್ಟ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಐಟಿಡಾಯಿಡ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨   ಸ್ಟೋಕಿಸ್ಟ್ ಶಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ   ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ
ಚರ್‌ರೋಲ್‌ಗಳು
ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು,

EDITED, PRINTED & PUBLISHED BY V S. KAMATH AT M. T A. SHARADA PRESS, MANGALORE.

ಮುಂಧನ ಕ್ರಯ:—ವರ್ಷ ಒಂದಕ್ಕೆ ರೂಪಾಯಿ 2—0 0 | Registered No. M. 489. | ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ ಗರದ ಮಥನಲು ಸುರರಿಗದಂ ಕುಮನವಾಯಿತೆ ಮತ್ತೆ ವಿಷವ ಸುಡುತ ಒದಗಿರುವ ॥
ಗರಲಕವರಂಜಿದರೆ ಸುಧೆಯನು ಮರೆತ ತ್ಯಜಿಸಿ ತೆರದಿ ಕುಂತರೆ ತೆರ ಬಲದಿ ತೊರೆದ ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. | ಮಂಗಳೂರು ತಾ ೧೧ನೇ ಶುಕ್ರವಾರ ಮಾರ್ಚ ೧೯೩೨ | (11 – 3 – '32.) | ಸಂಚಿಕೆ ೧೧

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. | **Branches:—COONDAPOOR & Mangalore**
ಹೆಡ್ ಆಫೀಸು: ಉಡುಪಿ | ಶಾಖೆ ಕುಂದಾಪುರ. ಮತ್ತು ಮಂಗಳೂರು

Authorised Capital Rs 3,50,000 Subscribed & Called up Rs 2,25,000
ನಿಯಮಿತ ಮೂಲಧನ ರೂ 3,50,000 ಎಂದು ತೀರ್ಮಾನಿಸಲ್ಪಟ್ಟ ಮತ್ತು ವಸೂಲಾದ ರೂ 2,25,000

STATEMENT OF ASSETS AND LIABILITIES AS ON 29TH DAY OF FEBRUARY, 1932

	CAPITAL AND LIABILITIES			PROPERTY AND ASSETS	
1	Paid up Capital	Rs [illegible]	1	Premises Building Furniture etc	Rs [illegible]
2	Reserve and other fund	[illegible]	2	Government Securities & Treasury Bills	„ [illegible]
3	Deposits	[illegible]	3	Approved Investments	„ [illegible]
4	Due to Bankers	[illegible]	4	[illegible]	[illegible]
5	Sundries	[illegible]	5	Sundries	„ [illegible]
6	Sundry persons to B C per [illegible]	[illegible]	6	Cash in hand & with bankers	[illegible]
	Total	[illegible]		Total	25[illegible]

Office of the Corporation, UDIPI [illegible] '32

N. ANANDA RAO
Secretary & Manager

(Regd)

ಅಮೃತಾಂಜನ.

ಗಜಕರ್ಣ ಮುಲಾಮು

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ

ಸಣ್ಣ ಹುಡುಗರ ಸಲುವಾಗಿ,

ದೋಂಗರೆ
ಇವರ
ಬಾಲಾಮೃತ.

ಇವನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು,

ಕೇ. ಟಿ. ದೋಂಗರೇ ಕಂಪೆನಿ.
ಗಿರಗಾಂವ, ಮುಂಬಯಿ.

ಏಜಂಟರು— ಸಾ ಕಂಪೆನಿ, ಮಂಗಳೂರು

INSURE WITH
The Popular Insurance Co. Ltd.
Head Office—MANGALORE S. India
First of its kind in the West Cost

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute, Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office

ನಿದ್ರಿಸಹೋಗುವಾಗ 'ಓವಲ್‌ಟಿನ್ನ'ನ್ನು ಕುಡಿಯಿರಿ — ಅದು ಸ್ನಾಯುವನ್ನು ಶಾಂತಗೊಳಿಸಿ, ಶಾಂತಿಕರವಾದ ನಿದ್ರೆಯನ್ನೀಯುತ್ತದೆ

ಹವಾಗುಣದಿಂದಲೂ ನಮ್ಮ ಕೆಲಸಕಸಬುಗಳಿಂದಲೂ ನಮ್ಮ ಸ್ನಾಯುಗಳು ಶಾಂತಿರಹಿತವಾಗುತ್ತವೆ. ಇದರಿಂದ ನಿದ್ರೆಯು ಸಿಗುವುದಿಲ್ಲ. ನಿಮಗೆ ನಿದ್ರೆಯು ಹತ್ತದಿದ್ದರೆ ಸ್ನಾಯುಗಳು ಸರಿಯಾದ ಪೋಷಣೆಯಲ್ಲಿಲ್ಲವೆಂದು ಭಾವಿಸಿರಿ. ಅವುಗಳು ಬಳಲುತ್ತಿವೆಯೆಂದು ತಿಳಿಯಿರಿ. ಸ್ನಾಯುಗಳನ್ನು ಬಲಗೊಳಿಸಲು ನಿಮ್ಮ ಆಹಾರವು ಪರಿಪುಷ್ಟಿಯುಳ್ಳದ್ದಲ್ಲವೆಂದು ತಿಳಿಯಿರಿ.

ನಿಮ್ಮ ಸ್ನಾಯುಗಳನ್ನು ಚೈತನ್ಯಯುಕ್ತವಾಗಿ 'ಓವಲ್‌ಟಿನ್' ಮಾಡುತ್ತದೆ. ಇದನ್ನು ನಿಸರ್ಗಸಿದ್ಧವಾಗಿ ತಯಾರಿಸಲಾಗಿದೆ. ದೇಹ ಮೆದುಳುಗಳನ್ನು ದೃಢೀಕರಿಸುವ ಇದರ ಪ್ರತಿಯೊಂದು ಅಣುವೂ ಅಮೂಲ್ಯವಾದುದು.

ನಿಮ್ಮ ನರಗಳನ್ನು ಈ ಪಾನೀಯದಿಂದ ಪೋಷಿಸಿರಿ. ನಿದ್ರಿಸ ಹೋಗುವ ಸಮಯದಲ್ಲಿ ಒಂದು ಕಪ್ 'ಓವಲ್‌ಟಿನ್'ನ್ನು ಕುಡಿಯಿರಿ. ಶಾಂತಿಕರ ಮತ್ತು ಸುಖನಿದ್ರೆಯು ಸಿಗುತ್ತದೆ.

ಆರೋಗ್ಯ ಬಲ, ಧಾತುಪುಷ್ಟಿಗೆ ಓವಲ್ಟಿನಿನ ಹಾಗೆ ಇನ್ನೊಂದಿಲ್ಲ.

ಅತ್ಯುತ್ತಮವಾದ 'ಓವಲ್‌ಟಿನ್'ಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಅನುಕರಣೀಯವಾದ, ಬರೀ ಮಿಶ್ರಣವಾದ ಮತ್ತು ಸಪ್ರಮಾಣ ತೂಕದಿಂದಿರದ ಎಲ್ಲಾ ಆಹಾರಗಳನ್ನೂ ತಿರಸ್ಕರಿಸಿರಿ.

ನಿಸರ್ಗಸಿದ್ಧವಾದ ನಿದ್ರೆಯನ್ನು ಕೊಡುತ್ತದೆ

OVALTINE
TONIC FOOD BEVERAGE

ಅತೀ ಶುದ್ಧ ಮತ್ತು ಅತ್ಯುತ್ತಮ ಕರಸ್ಪರ್ಶವಾಗಿಲ್ಲ

ವಿತರಕರು [illegible] ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್ ರೈಟ್ 8 [illegible] ಸ್ಟ್ರೀಟ್, ಕಲ್ಕತ್ತಾ ಮತ್ತು ಬೊಂಬಾಯಿ, ಮದ್ರಾಸ್ ರಂಗೂನುಗಳಲ್ಲಿ

ಓವಲ್‌ಟಿನ್ ರೊಟ್ಟಿಗಳು ಬಹಳ ಪೋಷಕ ಶಕ್ತಿಯುಳ್ಳವುಗಳು. ಅವುಗಳನ್ನು ಒಂದು ಕಪ್ 'ಓವಲ್‌ಟಿನ್' ಅಥವಾ ಕಾಫಿ ಟೀ ಬೆಣ್ಣೆ, ಹಣ್ಣುಗಳೊಡನೆ ಸ್ವೀಕರಿಸಿರಿ. ಅವು ಬಿಸ್ಕುಟುಗಳಿಗಿಂತ ಅತ್ಯುತ್ತಮ, ರುಚಿಕರ, ಮತ್ತು ಜೀರ್ಣಕರ

OV 106

ಸಾಮುವೇಲ್ ಹೋರರ ಘೋಷಣೆ.

ಮೊನ್ನೆ ಪಾರ್ಲಿಮೆಂಟಿನಲ್ಲಿ ಹಿಂದೂಸ್ಥಾನದ ಪ್ರಸ್ತುತ ಪರಿಸ್ಥಿತಿಯ ಕುರಿತು ನಮ್ಮ ಭಾರತ ಸಚಿವರಾದ ಸರ್. ಸಾಮುವೇಲ್ ಹೋರ್ ಧೊರೆಗಳವರು ಒಂದು ಭಾಷಣ ಮಾಡಿದರು. ನಮ್ಮನ್ನಾಳುವ ಎಲ್ಲಾ ಆಂಗ್ಲ ಪ್ರಭೃತಿಗಳೂ ಮಂದಹಾಸದಿಂದ ತಮ್ಮ ತಮ್ಮ ಆಸನಾರೂಢರಾಗಿದ್ದರು.

ಹೇಗೂ ಇರಲಿ ಇಷ್ಟು ಮೋದಂಡಾವಸ್ಥೆಯನ್ನು ಹಿಂದೂ ದೇಶಕ್ಕೆ ತಂದೊಡ್ಡಲು ಕಾರಣೀಭೂತರು ಕಾಂಗ್ರೆಸ್ಸಿನ ಉತ್ಸಾಹಪರ, ಅಂಕೆಗೆ ಸಿಗದ, ಹತೋಟಿಯನ್ನು ತಪ್ಪಿದ ಸದಸ್ಯರೇ ಎಂದು ಸಚಿವರ ಹೇಳಿಕೆ.

ಬ್ರಿಟಿಷ ಸರಕಾರವೂ ಹಿಂದೀಯ ಸರಕಾರವೂ ಕಾಂಗ್ರೆಸ್ಸಿನವರೊಡನೆ ಏಕೀಭಾವದಿಂದ ಕೆಲಸ ನಡೆಸಿ, ಸಹಕರಿಸಬೇಕೆಂದು ಮೊದಲೇ ಬಗೆದಿದ್ದಿತೆಂದು ಸಚಿವರ ಅಂಬೋಣ.

ಹಿಂದೂಸ್ಥಾನದಲ್ಲಿನ ಕೆಲವು ಪತ್ರಿಕೆಗಳು ವರ್ತಮಾನಗಳಿಗೆ ಉತ್ಪ್ರೇಕ್ಷಾಲಂಕಾರದ ಬಣ್ಣ ಹಚ್ಚುತ್ತವೆ. ಅವುಗಳು ಬರೆಯುವುದು ಸುಳ್ಳು ಎಂದು ಹೋರರ ಒಂದು ಭಾವವಿದೆ.

ಹಿಂದೂದೇಶದಲ್ಲಿ ನಡೆಯಿತೆಂದು ಆರೋಪಿಸಲ್ಪಟ್ಟ ಪೋಲೀಸರ ಕೆಲವು ಅತ್ಯಾಚಾರಗಳ ಕುರಿತು ಹೋರರು ತನಿಖೆ ನಡೆಸಿದರಂತೆ. ತನಿಖೆಯಲ್ಲಿ ಅವರಿಗೆ ತಿಳಿದುಬಂದುದೇನು? ಅಂತಹ ಅತ್ಯಾಚಾರಗಳು [illegible] ನಡೆಯಲೇ ಇಲ್ಲವೆಂದು.

ಹಿಂದೂದೇಶದಿಂದ ಹೋಗುವ ಪತ್ರಿಕೆಗಳ ಮೇಲೆ ಇಂಗ್ಲಾಂಡಿನವರು ತಮ್ಮ ವಿಶ್ವಾಸದ ಒಂದು ಎಳ್ಳನ್ನೂ ಕೂಡ ಇಡುವುದಿಲ್ಲ. ಕಾರಣ — ಅವುಗಳು ಬರೆಯುವುದು ಹಿಂದೀಯರಿಗೆ ಅನುಕೂಲಿಸುವಂತೆ ಅವರಿಗೆ ತಕ್ಕುದಾಗಿ. ಈ ಸಂಗತಿ ಸಚಿವರಿಗೆ ತಿಳಿದಿದೆ.

ಈಗ ಹಿಂದೂದೇಶದಲ್ಲಿ ನಡೆಯುವ ದಬ್ಬಾಳಿಕೆಯ ರೂಪವನ್ನು ಧರಿಸಿದ ದಮನನೀತಿಯು ಕಾಲಕ್ಕೆ ತಕ್ಕಂತೆ ಉಪಯೋಗಿಸಲ್ಪಡುತ್ತಿದೆ. ಇಂತಹ ನೀತಿಯು ಅರಾಜಕರ ಕ್ರಾಂತಿಕಾರರ ಪಂಗಡಗಳು ಹೆಚ್ಚದಂತೆ ಅಗತ್ಯವಿದೆಯೆಂದು ಅವರ ಅಭಿಮತ.

[illegible] ಆರ್ಡಿನೆನ್ಸು ಇನ್ನಿತರ ಎಮರ್ಜೆನ್ಸಿ ಶಕ್ತಿಗಳೂ ಬಹಳ ಫಲಕಾರಿಯಾಗಿವೆ. ಅವುಗಳ ಬಲದಿಂದಾಗಿ ಈಗ ಎಲ್ಲೆಲ್ಲೂ ಶಾಂತಿಯೇ ನೆಲೆಗೊಂಡಿದೆಯೆಂದು ಸಚಿವರ ಹೇಳಿಕೆ.

ಹಿಂದೂದೇಶದ ಕೆಲವು ಪ್ರಾಂತ್ಯಗಳಲ್ಲಿ ಭರದಿಂದ ಸಾಗುತ್ತಿದ್ದ ಕಂದಾಯ ನಿರಾಕರಣ ಚಳವಳವು ಕೊನೆಗೊಂಡಿದೆಯೆಂದೂ ದಮನ ನೀತಿಗೆ ಪ್ರತಿಭಟನೆಯಿಂದಾಗಿ [illegible]ಗಾಯಿತೆಂದೂ ಹೋರರು ಹೇಳಿದರು.

[illegible] ಸರಕಾರವು ಡಿಸೆಂಬರಿನಲ್ಲಿ ಕೊಡುತ್ತೇನೆಂದುದನ್ನು ಕೊಡುತ್ತದೆ. ಅದನ್ನು ಸ್ವೀಕರಿಸಿ ಹಿಂದೀಯರು ಸಂತೃಪ್ತರಾಗಬೇಕೆಂದು ಸರ್ ಸಾಮುವೇಲ್ ಹೋರರು ಹೇಳಿದರು.

"ಬೈ ಇಂಡಿಯನ್"

[illegible] ರಾಷ್ಟ್ರವಾಗಲೀ ಅಥವಾ ಸ್ವದೇಶೀ ಚಳವಳವನ್ನು ನಡೆಸದ [illegible] ಅದರಿಂದ ಅತ್ಯಧಿಕ ಪ್ರಯೋಜನವಿದೆ. ಸ್ವದೇಶಿ ಚಳವಳವೆಂದರೆ [illegible] ರಾಷ್ಟ್ರಾಭ್ಯುದಯವಾಗಬೇಕಾದರೆ ಇದಕ್ಕಿಂತ ಉತ್ತಮೋಪಾಯವು ಬೇರೊಂದಿಲ್ಲ.

ಹಿಂದೂದೇಶದಲ್ಲಿ ಈಗ 'ಬೈ ಇಂಡಿಯನ್' ಚಳವಳವೊಂದು ಜನಿಸುತ್ತಿದೆ. [illegible] ಚಳವಳದ ಜನನದಿಂದಾಗಿ ಪ್ರಪಂಚವೇ [illegible]ವನ್ನು ಕಾಣಲಿದೆ. ಬ್ರಿಟಿಷರು 'ಬೈ ಬ್ರಿಟಿಷ್' ಎಂಬ ಚಳವಳವನ್ನು ಮಾಡಿದುದರಿಂದ ಹಿಂದೀಯರು 'ಬೈ ಇಂಡಿಯನ್' ಎಂಬುದನ್ನು ಮಾಡಿದರು. ಈ ಚಳವಳವು ಮೊದಲು ಕರಾಚಿಯಲ್ಲಿ ಪ್ರಾರಂಭವಾಯಿತು. ಈ ವೇಳೆ ಇನ್ನಿತರ ದೇಶಗಳಿಗೆ ವ್ಯಾಪಿಸಿಕೊಂಡಿತು. ಎಲ್ಲಾ ದೇಶಗಳ [illegible] ಇದಕ್ಕೆ ಸಹಾನುಭೂತಿಯನ್ನು ತೋರ್ಪಡಿಸುತ್ತಿರುವರು.

ಇದರ ಕಾರ್ಯಕ್ರಮವು ಸ್ವದೇಶಿ ಪ್ರಚಾರ. ಜನರು ಸ್ವದೇಶದ ವಸ್ತುಗಳನ್ನೇ ಪಡೆಯಬೇಕೆಂಬ ಬೋಧನೆ. ಪ್ರದರ್ಶನಗಳಿಂದಲೂ ಸಾರುವಿಕೆಯಿಂದಲೂ ಜನರು ಸ್ವದೇಶಿಯನ್ನೇ ಪಡಕೊಳ್ಳಬೇಕೆಂಬ ಆಗ್ರಹವು ಇದರಿಂದಾಗಿ ಸಾರಲ್ಪಡುತ್ತಿದೆ.

ಈ ಚಳವಳವು ಹಳ್ಳಿಗಳಲ್ಲಿ, ಪೇಟೆ ಪಟ್ಟಣಗಳಲ್ಲಿ, ಎಲ್ಲಾ ಸಂದುಗೊಂದುಗಳಲ್ಲಿಯೂ ನಡೆಯಬೇಕು. ಅನ್ಯದೇಶೀಯ ವ್ಯಾಪಾರಿಗಳ [illegible] ಜನರು ತಮ್ಮ ಹಣವನ್ನು ವ್ಯಯಿಸದಂತೆ ನೋಡಿಕೊಳ್ಳಬೇಕು. ವಿದೇಶಿಯನ್ನು ಬಹಿಷ್ಕರಿಸಿರಿ ಎನ್ನುವ ಆವಶ್ಯಕವಿಲ್ಲ. ಅದರ ಬದಲಿಗೆ ಸ್ವದೇಶಿಯನ್ನು ಪ್ರೋತ್ಸಾಹಿಸಿರಿ ಎಂಬ ಮಹಾಮಂತ್ರವನ್ನು ಹೇಳಿದರಾಯಿತು. ಬಡವರೂ ಐಶ್ವರ್ಯವಂತರೂ ಸ್ವದೇಶಿಯನ್ನೇ ಪಡೆದುಕೊಳ್ಳುವಂತಾಗಬೇಕು. ಆಬಾಲವೃದ್ಧರಿಗೆಲ್ಲ ಸ್ವದೇಶಿಯೆಂದರೇನು? ಅದರ ಪ್ರಯೋಜನವೇನು ಎಂದು ತಿಳಿಸಬೇಕು. ಎಲ್ಲರೂ ದೇಶೀಯ ಸಾಮಾನುಗಳನ್ನೇ ಪಡೆದುಕೊಳ್ಳಬೇಕು. ಇದೇ "ಬೈ ಇಂಡಿಯನ್" ಶೀಗಿನ ಚಟುವಟಿಕೆ. ಕೌನ್ಸಿಲ್ ಮೆಂಬರರೂ ಈ ಚಳವಳಕ್ಕೆ ಸಹಾನುಭೂತಿಯನ್ನಿತ್ತಿರುವರು. ಇದರಲ್ಲಿ ಸದಸ್ಯತನವನ್ನು ವಹಿಸಿರುವರು ಎಂದ ಮೇಲೆ ಇದು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಆಕಸ್ಮಿಕ ಘಟನೆಗಳಿಗೊಳಗಾದ ಮಂದಿಗಳಲ್ಲಿ ಅರ್ಧ ಸಂಖ್ಯೆಯು ಕನ್ನಡಿಯ ಒಡೆತದಿಂದ ಜಖಂಗೊಂಡವರೆಂದು ತಿಳಿದುಬಂದಿದೆ

ಸ್ವತಃಚಲಿಸುವ ಯಂತ್ರಗಳು ಆಕಸ್ಮಿಕ ಘಟನೆಗಳಿಗೊಳಗಾಗಿ ಘಾಯಗೊಂಡವರಲ್ಲಿ ಎಷ್ಟು ಮಂದಿಗಳು ಕನ್ನಡಿ (ಗ್ಲಾಸ್)ಗಳಿಂದಾಗಿ ಘಾಯಗೊಂಡರೆಂಬ ಕುರಿತು ಒಂದು ಸರಿಯಾದ ಪಟ್ಟಿಯನ್ನು ನ್ಯೂಯೋರ್ಕಿನ ಒಟೊಮೊಬೈಲ್ 'ಎಕ್ಸಿಡೆಂಟ್ ಪ್ರಿವೆನ್ಶನ್ ಬ್ಯೂರೋ' ಎಂಬುದರ ವ್ಯಾಲಿಕರು ಮಾಡಿರುವರು.

ಅಮೇರಿಕಾದಲ್ಲಿ ಈ ಪಟ್ಟಿಯು ಪ್ರಥಮದ್ದಾಗಿ ತಯಾರಾಯಿತು. ಪರಿಸ್‌ನಲ್ಲಿ ಜಖಂಗೊಳ್ಳುವ ಮಂದಿಗಳಲ್ಲಿ ಶೇಕಡಾ [illegible] ಮಂದಿಗಳು ಕನ್ನಡಿಯಿಂದಾಗಿ ಘಾಯಗೊಂಡವರೆಂದು ಪೋಲೀಸರಿಂದ ತಿಳಿದುಬಂದಿದೆ. ಆದರೆ ನಮ್ಮ ದೇಶದಲ್ಲಿ ಈ ಪಟ್ಟಿಯು ಇಷ್ಟರ ತನಕ ಆಗಲಿಲ್ಲ.

ಇದರಿಂದ ಸೇಫ್ಟಿ ಗ್ಲಾಸಿನ ಅಗತ್ಯವು ಜನರಿಗೆ ತಮ್ಮ ಯಂತ್ರಗಳಲ್ಲಿ ಬೇಕಾಯಿತು. ಅಲ್ಲದೆ ಎಲ್ಲರೂ ಇದಕ್ಕೆ ಬೇಕಾದ ಹೆಚ್ಚಿನ ಬೆಲೆಯನ್ನು ಕೊಡಲು ಸಿದ್ಧರಾಗಿ ನಿಂತರು. ಪ್ರದರ್ಶನಗಳಲ್ಲಿ ಮೋಟಾರುಗಳು ಕಡಿಮೆಯಾದುವು. ಎಲ್ಲರೂ ತಮಗೆ ಭದ್ರತೆಯ ಕನ್ನಡಿಗಳು ಬೇಕೆಂದರು. ಯುನೈಟೆಡ್ ಸ್ಟೇಟ್ ನಲ್ಲಿರುವ ೩೨ ಕಾರು ತಯಾರಿ ಸಂಸ್ಥೆಗಳಲ್ಲಿ ೧೦ ಸಂಸ್ಥೆಗಳು ತಮ್ಮ ಕಾರುಗಳಲ್ಲಿ ಸೇಫ್ಟಿ ಗ್ಲಾಸನ್ನುಪಯೋಗಿಸುತ್ತದೆ.

೧೯೩೨ರಿಂದ ಮೊದಲುಗೊಂಡು ಕಾರುಗಳನ್ನು ಅಗ್ಗವಾಗಿಯೂ ಶಟ್ಟರ್ ಲೆಸ್ ಗ್ಲಾಸ್ ವಿಂಡ್ ಸ್ಕ್ರೀನುಗಳ ಸಮೇತವಾಗಿಯೂ ಸಿಗಲು ಫೋರ್ಡ್ ಕಾರುಗಳು ಪ್ರಥಮದ್ದಾಗಿ ನಿಂತಿವೆ.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R. L. P. 1270 [illegible]

ನಾಗಪ್ಪ ಬೆಳಿಯಾ—ವಾದಿ—ಅರ್ಜಿದಾರ

ಸುಬ್ಬಣ್ಣ ಬೆಳಿಯಾ ಕೂಡಾ—ಪ್ರತಿವಾದಿರು—ಎದ್ರಿರು

ಈ ಅಮಲಜಾರಿಯಲ್ಲಿ ಪ್ರತಿವಾದಿರ ಬಾಬ್ತು ಮೂಲಗೇಣಿ ಹಕ್ಕಿನ ಸ್ಥಿರಆಸ್ತಿಯ ವಿಕ್ರಯದ ಬಗ್ಗೆ ಇಸ್ತಿಹಾರ ಶರ್ತುಗಳನ್ನು ನಿರ್ಣಯಿಸಲಿಕ್ಕೆ ತಾ 24-3-32ಕ್ಕೆ ಇಡೋಣಾಗಿದೆ ಎಂತ ಈ ಮೂಲಕ ತಿಳಿಸೋಣಾಗುತ್ತದೆ

ಕುಂದಾಪುರ ೧—೩—'೩೨ **G. Sanjiva Rau,** B.A.-L.L.B.
Vakil for Petitioner

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕ್ಷ... ತೈಲ — ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಜನಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನು ಕೊಡತಕ್ಕದ್ದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ — ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷಯ, ಕಾಸ, ಶ್ವಾಸ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಿತ
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ ರಸಾಯನ ಸುಖಸೇವನ ಎಂಬ ಮೂರು ಗುಣಗಳು ಚಿರಸ್ಮರಣೀಯವಾಗಿ.

ಶೋಧನ ಗುಣದಿಂ ಗರ್ಭಕೋಶ [illegible] ನಂಜನ್ನು ಹೊರಗೆ ಹಾಕಿ ಪ್ರಸವದಿಂ [illegible] ಗರ್ಭಕೋಶವನು ಒಂದೆರಡು ದಿವಸಗಳಲ್ಲಿ ಅರ [illegible] ವರು.

ರಸಾಯನ ಗುಣದಿಂದ ಬಾಣಂತಿಯ — ಗರ್ಭ [illegible] ಯನ್ನು ಕೂಡಲೇ ಪುನಃ ಜೀವಿಸ [illegible]

ಸುಖಸೇವನ ಗುಣದಿಂ [illegible] ಅಗ್ನಿಮಾಂದ್ಯ ನಿದ್ರಾನಾಶ ಮೊದಲಾದವುಗಳು [illegible] ಬಾಣಂತಿಯ ಪ್ರಸವದ ನಂತರ [illegible] ಕೋಶದ ವ್ಯಥಾ (ಬೇನೆ)ಯ ಸಹ [illegible] ತುವದು.

ಡಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ 2—0—0 ಪೋಸ್ಟೇಜ ವಗೈರೆ ಬೇರೆ.

[illegible]

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
[illegible]

ಅಪೇಕ್ಷಿಸುವ ಬಹುಮಾನಗಳು

[illegible] 6 [illegible] ರೂ 2) ವರೆಗೆ [illegible] ಗಳು ರವಕೆ [illegible], ಎಲಿವೆಗಳು, [illegible] ಇತ್ಯಾದಿ [illegible], ಚಿನ್ನದ [illegible], [illegible] ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು, ವಿಭೂತಿ, ಸುಗಂಧ ದ್ರವ್ಯಗಳ ಸಹಾ [illegible] ದರದಿಂದ [illegible] ವವು [illegible] ಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು.

ವಿಳಾಸ —

ರಾಘು [illegible]ನಾಥರಾವ್ ಎಂಡ್ ಬ್ರದರ್ಸ್
[illegible]

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ನಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರು

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — MANGALORE

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತ

BRANCHES -Karkal Kasargod Cochin Udipi Gangolli Coondapur Bombay Puttur, Calicut & Alleppey

ಬ್ರಾಂಚುಗಳು:—

ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು, ಕಲ್ಲಿಕೋಟೆ ಮತ್ತು ಆಲ್ಲೆಪ್ಪಿ

Authorised and fully paid up Capital Rs 300 000 0 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟಿ [illegible]
Reserve and other sinking Fund Rs 5[illegible] 000 0 0	ರಿಸರ್ವ ಮತ್ತು [illegible]
Amount invested on G P Notes Rs 816,092—12 0	ಗವರ್ನಮೆಂಟ್ [illegible]
Rate of interest on fixed deposits at Head Office and Branches are 6¼% for a year [illegible]	[illegible]

Current Account Deposits received and interest allowed [illegible] and above [illegible] 1st J[illegible] to [illegible] December [illegible] Rs [illegible] month ending either [illegible] December [illegible]

Except [illegible] special arrangement [illegible] interest [illegible] allowed [illegible] exceed[illegible] 10 000 in the case of Head Office and [illegible] 000 in the case of [illegible] Branch [illegible] other Branches

For further particulars please apply to

Canara Bank Ltd, Mangalore [illegible] — 93 — K. Venkat Rao, Secretary [illegible]

The Pangal Nayak Bank, Ltd.

Head Office Udipi — Established [illegible] — Branch Office Mangalore

Authorised Capital Rs 2 00,000	Paid up Capital Rs 1 75 000-
Issued Capital Rs 1 75,000-	Reserve and other Funds Rs 1,80 000

1 Receives Fixed Deposits at the following favourable rates

For 3 months [illegible] — For 2 [illegible]

6 or 9 months 5½ — 2½ [illegible]

Interest [illegible]

ಕಾಯಂ ಠೇವಣಾತಿಗಳ ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಕರಾರ ಮೇಲೆ [illegible]

[illegible]

2 Current Accounts opened free of charge and [illegible] Cumulative Savings Bank and Short Notice Deposits [illegible] able rates of interest

3 The Bank transacts every description of Banking [illegible]

4 For full particulars and for copies of the [illegible] Rules of Business please apply to the Secretary at the Head Office [illegible] Udipi [illegible] Agent Mangalore Branch

Office of the Bank Udipi [illegible] — P Laxman Nayak, Secretary

ಇಪ್ಪತ್ತು	ಪಯಸ್ಸಿನ	ಮಹತ್ವ
ಮೂವತ್ತು	[illegible]	[illegible]
ನಲವತ್ತು	[illegible]	ನರಳುವ
ಐವತ್ತು	[illegible]	ಆಲಸ್ಯ
ಅರುವತ್ತು	ಶೋಧನ	ಆರಳ ಮರಳು
ಎಪ್ಪತ್ತು	ವಯಸ್ಸಿಗೆ	ಪುನಾಗುವಿರೋ

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ [illegible] ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1/64 ಚೀನಾ ಬಜಾರ್, ಮದ್ರಾಸ್

೪೦,೦೦೦ ಕೈದಿಗಳು.

ಸರ್ ಸಾಮುವೇಲ್ ಹೋರರು ಆರ್ಡಿನೆನ್ಸುಗಳನ್ನು ಆಗವಷ್ಟು ತ್ವರೆಯಾಗಿ ಮುಕ್ತಾಯಗೊಳಿಸಬೇಕೆಂದು ತವಕಗೊಳ್ಳುತ್ತಿರುವಂತೆ ತೋರಿಸಿಕೊಳ್ಳುತ್ತಾರೆ. ಬಂಗಾಳ ಸರಕಾರವು ಆರ್ಡಿನೆನ್ಸುಗಳನ್ನು ಕಾನೂನುಗಳನ್ನಾಗಿ ಮಾರ್ಪಡಿಸಿಕೊಳ್ಳುತ್ತಲಿದೆ. ಈಗ ಜೈಲಿನಲ್ಲಿರುವ ೪೦,೦೦೦ ಚಳವಳಗಾರರು ಹೊರಬಿದ್ದ ಬಳಿಕ ಈಗ ಇರುವುದಕ್ಕಿಂತಲೂ ಉತ್ತಮವಾದ ವಿದ್ಯಮಾನಗಳು ಮುಂದೆ ತೋರುವುವೆ ಎಂಬ ಪ್ರಶ್ನೆಯನ್ನು ಅವರು ಆಲೋಚಿಸಿಕೊಳ್ಳಬೇಕಾಗಿದೆ. ಆರ್ಡಿನೆನ್ಸುಗಳು ಇಲ್ಲದಿದ್ದಲ್ಲಿ, ಇದ್ದ ಕಾನೂನಿನಿಂದಲೇ ಚಳವಳವನ್ನು ಎದುರಿಸುವುದು ಅವರ ಅಭ್ಯಾಸವಾಗುತ್ತಿತ್ತು. ಈಗ ಆರ್ಡಿನೆನ್ಸುಗಳ ಅಭ್ಯಾಸವುಂಟಾದ ಬಳಿಕ ಚಿರಕಾಲಕ್ಕೂ ಅವೇ ಬೇಕಾಗುವುವೋ ಎಂದು ತೋರುತ್ತದೆ! ಸ್ಥಳೀಯ ರಾಜ್ಯಗಳಲ್ಲಿನ ರಾಜ್ಯಭಾರದ ವ್ಯಯಕ್ಕಿಂತ ಹೆಚ್ಚಿಗೆ ವ್ಯಯವಾದರೂ ಬ್ರಿಟಿಷ ಇಂಡಿಯದ ರಾಜ್ಯಭಾರವು ಉತ್ತಮವಾಗಿದ್ದರೆ, ಬ್ರಿಟಿಷ ಸರಕಾರವು ಅವಶ್ಯವಾಗಿಯೂ ಒಳ್ಳೇದಾಗುವುದೆಂದೇ ಹಿಂದಣ ವೈಸ್ರಾಯರುಗಳು ವಿವೇಕಿಗಳಾಗಿ ಬರೆದಿರುವರು. ಈಗ ಬ್ರಿಟಿಷ ರಾಜ್ಯಭಾರವು ದೇಶೀಯ ಸರಕಾರಗಳಿಗೆ ಮಾದರಿಯಾಗಿರುವಂತೇನೂ ತೋರುವುದಿಲ್ಲ — ಎಂದು ಇಂಡಿಯನ್ ಡೈಲಿ ಮೈಲ್ ಪತ್ರಿಕೆ ಬರೆದಿದೆ.

ಚೀನೀಯರ ಒಂದು ಕಥೆ.

ಒಂದು ಹಳ್ಳಿಯಲ್ಲಿ ಮನೆಗಳಿಗೆಲ್ಲ ಬೆಂಕಿ ಹತ್ತಿತು. ಒಬ್ಬ ಚೀನಿಯನು [illegible] ತನ್ನ ಗುಡಿಸಲನ್ನು ಉಳಿಸಲೆತ್ನಿಸುವಾಗ, ಮಾತು ಕೇಳುತ್ತ ಕಳಕ್ಕ ಬಿತ್ತು. ಅದರೊಳಗಿಂದ ಹಂದಿಯೊಂದನ್ನು ಹೊರಕ್ಕೆಳೆಯಲು ಯತ್ನಿಸುವಾಗ, ಹಂದಿ ಸುಟ್ಟು ಹೋಗಿದ್ದಿತು. ಆತನು ತನ್ನ ಸುಟ್ಟ ಕೈ ಬೆರಳನ್ನು ಸ್ವಾದಿಷ್ಟವಾಗಿ [illegible] ಕೈಬೆರಳುಗಳನ್ನು ಬಾಯಿಯಲ್ಲಿಟ್ಟುಕೊಂಡನು. ರುಚಿತೋರಿತು. ಸುಟ್ಟ ಹಂದಿಯ ಮಾಂಸ ರುಚಿಕರವೆಂದು ಊರಿನಲ್ಲೆಲ್ಲ ವಾರ್ತೆ ಹರಡಿತು. ಈ ರುಚಿಯ ಆಸ್ವಾದನೆಗಾಗಿ, ಎಷ್ಟೋ ಜನರು ಹಂದಿ ಮಾಂಸ ಸುಟ್ಟು ತಿನ್ನಬೇಕಾದರೆ, ಅದನ್ನು ಒಂದು ಗುಡಿಸಲ ಸಹಿತ ಸುಟ್ಟರೆ ತಯಾರಾಗಿ ತಿಂದರೆ ರುಚಿ ಎಂದು ಬಹು ಕಾಲ ನಂಬಿದ್ದರಂತೆ. ಅದರಂತೆ ಕೊಂಗ್ರೆಸ್ ಧ್ವಂಸ [illegible] ಪಾರ್ಲಿಮೆಂಟಿನಲ್ಲಿ [illegible] ಇದೇ ಇಂಡಿಯದೊಳಗೆಲ್ಲ [illegible] ಆರ್ಡಿನೆನ್ಸುಗಳನ್ನು [illegible] ಕಾಂಗ್ರೆಸ ಧ್ವಂಸ [illegible] ದೇಶದಲ್ಲಿದ್ದಾರೆಂದೇ [illegible] ವುದಲ್ಲವೆ? [illegible] ಒಂದು ಸಲ ಆರ್ಡಿನೆನ್ಸಿನಿಂ [illegible] ಶಾಶ್ವತವಾಗಿಯೂ ಆರ್ಡಿನೆನ್ಸು [illegible] ಕಾನೂನಾಗಬೇಕೆನ್ನುವವರ [illegible] ಹಂದೀಮಾಂಸ ತಿನ್ನುವವ [illegible]?

ಇಂಗ್ಲಿಷ ಮುಸ್ಲಿಮರೊಳಗಣ ಒಪ್ಪಂದ

ರೌಂಡ್ ಟೇಬಲ್ ಕಾನ್ಫರೆನ್ಸಿಗೆ ತೆರಳಿದ ಮುಸ್ಲಿಮರು [illegible] ಗಾಂಧಿಯವರ ಒಂದೂ [illegible] ಬ್ರಿಟಿಷ ಸರಕಾರದಿಂದ [illegible] ಬ್ರಿಟಿಷ [illegible] ಒಂದಾಗಿದ್ದ [illegible] ಇದರಿಂದಾಗಿ [illegible] ಬ್ರಿಟಿಷ ವ್ಯಾಪಾರ [illegible] ಹೆಚ್ಚು ಹೆಚ್ಚಾಗಿ [illegible] ಇಂಗ್ಲಿಷ ವ್ಯಾಪಾರಿ [illegible] ಪೂರಯಿಸಬೇಕಾಗಿದೆ [illegible] ಇಂಗ್ಲಿಷರಿಗೆ ಇಲ್ಲ [illegible] ಕೌನ್ಸಿಲನ್ನು [illegible] ಹಿಂದೀಯರ [illegible] ದಕ್ಷಿಣೆ [illegible] ಇಟ್ಟುಕೊಳ್ಳುವುದು, ಇನ್ನು [illegible] ವರ್ಷಗಳೊಳಗ ಪುನಃ ಲೇಬರ್ ಸರಕಾರವೇ ಇಂಗ್ಲಂಡಿನಲ್ಲಿ ಅಧಿಕಾರ ಹೊಂದಬಹುದು. ಹೀಗಿರುವ ಕಾರಣ ಈಗ ಕನ್ಸರ್ವೇಟಿವರ ಅಧಿಕಾರದಲ್ಲಿರುವಾಗ, ಇಲ್ಲಿನ ಮುಂದಣ ರಾಜಕೀಯ ತಿದ್ದುಪಾಟುಗಳನ್ನು ಮಾಡಿಯೇ ಮುಗಿಸಬೇಕು. ಮುಸ್ಲಿಮರು ಈಗ ಕೈಕೊಡ್ಡುವಾಗಲೇ ನಾವೂ ಮುಂದರಿಸೋಣ, ಆಗ ಮಧ್ಯಗಾಮಿಗಳಾದ ಹಿಂದೂಗಳು ನಮ್ಮಂತಹ ಸಾಮ್ರಾಜ್ಯ ಭಕ್ತರೊಡನೆ ಸೇರುವರು — ಎಂದು ಯುರೋಪೀಯ ಪ್ರತಿನಿಧಿಗಳಾದ ಬೆಂಥೊಲ್ ಸಾಹೇಬರು ಪ್ರಕಟಿಸಿದ ಗುಪ್ತ ಪತ್ರಕವೊಂದು ಹೇಗೊ ಕಲ್ಕತ್ತದ ಪತ್ರಿಕೆಗಳಲ್ಲಿ ಪ್ರಕಟವಾಗಿ ಗುಟ್ಟು ಹೊರಬಿದ್ದಿದೆ.

ಹೋರಾ ಶಾಸ್ತ್ರದ ದ್ವಿತೀಯಧ್ಯಾಯವು

ಪಾರ್ಲಿಮೆಂಟಿನಲ್ಲಿ ಪಾರಾಯಣೆಯಾಗುವಾಗ, ಕೇಳಲು ಉಳಿದವರು ಆರ್ಥರ್ ಮೆಂಬರರು ಈ ಭಾಷಣವನ್ನು ಕೇಳಿದ ಬಳಿಕ, ಇನ್ನು ಯಾವ ಬಗೆಯಲ್ಲಿ ಇಲ್ಲಿನ ವಿದ್ಯಮಾನಗಳು ಇರಬಹುದಾದರೂ, ಪಾರ್ಲಿಮೆಂಟಿಗೆ ತಿಳಿಸುವ ಮಟ್ಟಿಗೆ ಇವುಗಳಿಗೆ ಒಂದು ಬಣ್ಣ ಕೊಟ್ಟು ತಿದ್ದಿ ಹೇಳಿ, 'ನಮ್ಮ ಮಗು ಚಂದವೇ ಚೆಂದವು' ಎಂದು [illegible] ಖಂಡಿತ ನುಡಿಯುವರೆಂದೇ ನಾವು ಭಾವಿಸಬೇಕಾಗಿದೆ. [illegible] ಪಿಗಳಿಗೆ ಬಣ್ಣ ಬಳಿದು ಸುರೂಪಿಗಳನ್ನಾಗಿ ಮಾಡುವುದಕ್ಕೆ ತಾಯಿ ತಂದೆಯರು ತೊಡಗಿದರೆ ತೊಡಗಲಿ, ಆದರೆ ಹವಗೆಟ್ಟು ಬಣ್ಣ ಬಳಿದು ನಾಯಿಯನ್ನು [illegible] ಪ್ರದರ್ಶನ ತೊಡಗಿ [illegible] ಸರಕಾರವು ಕೈಗೊಂಡ [illegible] ಸರಿಯಾದ ರೀತಿಯಲ್ಲವೆಂದು [illegible] ಪೆನ್ಸಿಲ್ [illegible] ಡಾಯ್‌ಹಾರ್ಡರ ಇಂಡಿಯ [illegible] ಇಂಡಿಯವು ಯಾ ಸ್ವದೇಶವೋ ಅವರು ಮಾತ್ರ, ಈ ಬಗೆ [illegible] ಬ್ರಿಟಿಷ ವ್ಯಾಪಾರವಾಗಲಿ ಇಂಗ್ಲಂಡು ಇಂಡಿಯ [illegible] ಸಂಬಂಧವಾಗಲಿ ಉತ್ತಮವಾಗಬಹುದೆಂ [illegible] ಹಿಂತೆಗೆಯುವರು.

ಪ್ರಜೋತ್ಪತ್ತಿ ಸಂವತ್ಸರದ ಫಲ

[illegible] ಸಂವತ್ಸರ [illegible] ಹತ್ತು ಕೋಟಿ [illegible] ವ್ಯಾಧಿ [illegible] ತೋರಿ [illegible] ಹೊಸದಾಗಿ ಹೊರ [illegible] ಹೇಗಿಲ್ಲವೆಂದಾದ [illegible] ವರ್ಷದಲ್ಲಿ [illegible] ಕೋಟಿ [illegible] ಅಂದಾಜು [illegible] ಕೊಡದ [illegible] ಸರಕಾರದ [illegible] ತಿಂಗಳಿಗೂ [illegible] ದೇಶದೊಳಗಣ [illegible] ಪ್ರಾಂತ್ಯ [illegible] ಕೋಟಿ [illegible] ನಾಲ್ಕು [illegible] ಪ್ರಾಯಿತು [illegible]

ಯುದ್ಧೋಪಕರಣ ಸಾಮಗ್ರಿಗಳ ರಫ್ತು

[illegible] ಬ್ರಿಟನ್ [illegible] ಪೋಲೆಂಡ್ [illegible] ಚೀನಾ-ಜಪಾನ [illegible] ಹೆಚ್ಚು [illegible] ಈ ಸಾಲ [illegible] ವಂತಿಲ್ಲವಷ್ಟೆ [illegible] ಬಿಲಿಯ [illegible] ಚೀನಾ-ಜಪಾನುಗಳ [illegible] ಸಾಗುತ್ತಲಿವೆ. ಇವುಗಳ ಮೌಲ್ಯವು ಪ್ರತಿ ತಿಂಗಳಿಗೂ ಎಷ್ಟೋ ಲಕ್ಷ ಪವನಾಗುತ್ತಿದೆ. [illegible] ತಿಂಗಳಿಂದಲೂ ನಡೆಯುತ್ತಿರುವ ಈ ವ್ಯಾಪಾರದಿಂ [illegible] ದ ಮದ್ದು (೩೦೩೭೮೫ ಪವನು) ವಿಮಾನಗಳು (೫೬೭೭೦ ಪವನು) ತಲಪಿವೆ. ಇವೇ ಚೀನಕ್ಕೆ [illegible] ಪವನು ಬೆಲೆಯ ಯುದ್ಧ ಸನ್ನಾಹ ವ್ಯಾಪಾರವು ತಲಪಿದಾಗ, ಆದರಲ್ಲಿ ಸುಮಾರು ಆರ್ಧದಷ್ಟು ಇದೊಂದೇ ಬಂದರಿಗೆ!

ನೋಟಗಳು

NOTE S

'ಕಾರ್ಕಳದಲ್ಲಿ ಗೋಮಟೇಶ್ವರ ಸ್ವಾಮಿ ವಿಗ್ರಹಕ್ಕೂ ಗಾಂಧಿ ತೊಪ್ಪಿ—ಖಾದೀ ಕೌಪೀನು—ಕೊಂಗ್ರೆಸ್ ಧ್ವಜ! ಊರ ಹೆಮ್ಮರಗಳ ತುತ್ತತುದಿಯಲ್ಲಿ ರಾಷ್ಟ್ರೀಯ ಬಾವುಟಗಳು, ಇದೂ ಗೊಂಬೆಗಳಿಂದ ಕಟ್ಟಲ್ಪಡುವ ದೇಖಾವೆ'— ಇದು ತೀರ ಕಿರುಕುಳವಲ್ಲವೆ?

• • • •

ಕಾನೂನು ಮೀರಿ ದಂಡನೆ ಕೊಟ್ಟನೆಂದು ಒಬ್ಬ ಬೋಜಿಸ್ಟ್ರೇಟನಿಗೆ ಒಂದು ವರ್ಷ [illegible] ಶಿಕ್ಷೆ, ಸರಕಾರದ ಅಪ್ಪಣೆಯಂತೆ ವಿಧೇಯನಾಗಿ ದಂಡನೆ ವಿಧಿಸಿದ್ದೆಂದರೂ ಬಿಡ್ಡರು. [illegible] ಕೊಡಿಸಲ್ಲವೆಂದೆನ್ನುವ [illegible] ದೇಶದ ವರ್ತಮಾನ [illegible]

• • • •

ಪ್ರದರ್ಶನವಾಗ [illegible] ಚಿತ್ರಗಳು [illegible] ಸಂಬಂಧವಿಲ್ಲವೆಂದು [illegible] ಸಂಬಂಧ [illegible] ಚಿತ್ರ ನೋಡಲು ಹೋಗುತ್ತಾರೆಯೆ? ಹೋಗ [illegible] ಪ್ರದರ್ಶನಕ್ಕೆ [illegible] ಪ್ರವೇಶ [illegible]!

• • • •

ಹಿಂದೀ ವಸ್ತ್ರಗಳನ್ನು [illegible] ಮದ್ರಾಸ್ [illegible] ಕೊಟ್ಟಿದೆ [illegible] ಸಂತೃಪ್ತಿ [illegible]

• • • •

[illegible] ತನ್ನ [illegible] ವರ್ಷಗಳ ಹಿಂದೆ ಗಾಡಿ [illegible] ಕೊಟ್ಟು [illegible] ಈಗ [illegible] ನೋಟಿನಲ್ಲಿ [illegible] ಬಿಟ್ಟರೇ— [illegible] ಹಿಂದೆ [illegible] ವೇಕೆ? [illegible] ಸಲ ಇಂಗ್ಲಂಡಿಗೆ [illegible] ಈ ಪ್ರಶ್ನೆ [illegible] ಕಾರಣ.

• • • •

ಹಿಂದ [illegible] ದೊಡ್ಡದನ್ನ [illegible] ಕೊಡಲಿಲ್ಲ. ಈಗ [illegible] ಶ್ರೀಮತಿ [illegible] ಬೆನ್ ಅಥವಾ [illegible] ಅಥವಾ ದೇವೀದಾಸ ಗಾಂಧಿಯವರು ಅತ್ತ [illegible] ಸರಕಾರವು [illegible] ಯಾತ್ರೆ [illegible] ವೇಕೆ? ಅವೇ [illegible] ಯಾತ್ರೆ [illegible]

• • • •

[illegible] ಸ್ವಾತಂತ್ರ್ಯವು [illegible] ಹೋಗುವುದಿಲ್ಲ [illegible] ಇಂಗ್ಲಂಡಿನಲ್ಲಿ ದೇಹವನ್ನಿಟ್ಟರೆ, [illegible] ಇಂಗ್ಲಂಡ [illegible] ಸ್ವರಾಜ್ಯವು ಈಗ [illegible] ಸಮಾಧಾನ ಹೇಳುವುದು ಯಾಕೆ? ಅದೇ [illegible] ಫಲ

• • • •

[illegible] ವಿಮೋಚನೆಗೆ [illegible] ಹಾಗೆ [illegible] ಇದೇಕೆ? ವಿಚಾರಣೆ ಇಲ್ಲದೆ [illegible] ಇಳಿಸಲಾಗುವುದು, ಇತ್ತ [illegible] ಜೈಲಿನಲ್ಲಿ ಇಟ್ಟಂತೆಯೂ ಆಗುವುದು ಉಭಯತ [illegible] ನೋಟ್ಯವು ನೆರವೇರುವುದಲ್ಲವೇ?

• • • •

ಆದಿ ಹಿಂದ [illegible] ಹಿಂದುಗಳೊಡನೆಯೇ ಸೇರಿ ಒಂದೇ ಸಮುದಾಯವಾಗಿ ಕೌನ್ಸಿಲ ಚುನಾವಣೆಗೆ ನಿಲ್ಲುವರೆ ಒಪ್ಪಂದವಾಯಿತು. ಹಿಂದೂ ಮಹಾಸಭೆಯೂ ಸಿಕ್ಕರೂ ಇದನ್ನೊಪ್ಪಿಕೊಂಡರು. ಬ್ರಿಟಿಷ ಮುಖ್ಯಪ್ರಧಾನರಿಗೂ ಈ ಒಪ್ಪಂದದ [illegible] ಡಾಯ್‌ಹಾರ್ಡರಿಗೆ ಸಿಡುಕು, ಅಂಬೇಡಕಾರರಿಗೆ [illegible] ಕೊಟ್ಟವರು ಈಗ ಖರ್ಚಿನ ಬಿಲ್ಲು ಎಷ್ಟಾಯಿತೆಂದು ನೋಡುವಂತಿದೆ.

ಬ್ರಿಟಿಷರಿಂದ ನಾವು ಕಲಿಯಬೇಕಾದುದೇನು?

ಬ್ರಿಟಿಷರಿಂದ ನಾವು ಕಲಿಯಬೇಕಾದುದು ಹೆಚ್ಚಾಗಿದೆ. ಕೆಲವು ಮಿಲಿಯ ಜನರು ಧರಣೀಮಂಡಲದಲ್ಲಿ ಅಪ್ರತಿಹತ ಶಕ್ತಿಯಿಂದ ಮೆರೆಯಲು ಕಾರಣವೇನೆಂದು ನಾವು ಆಲೋಚಿಸಬೇಕು.

ಕಾಂಗ್ರೆಸು ಜೀವಗೊಂಡ ದಿನದ ಮೊದಲ್ಗೊಂಡು ಹಿಂದೀಯರು ಬ್ರಿಟಿಷರನ್ನು ವಕ್ರದೃಷ್ಟಿಯಿಂದ ನೋಡಲುಪಕ್ರಮಿಸಿದರೇನೋ ಸಹಜ. ಆದರೆ ಅಂತಹ ವಕ್ರದೃಷ್ಟಿಯೊಡನೆ ಬ್ರಿಟಿಷರಲ್ಲಿರುವ ಅನೇಕ ಪ್ರಶಂಸನೀಯ ಗುಣಗಳನ್ನು ತಿರಸ್ಕರಿಸಬಾರದು.

ಬ್ರಿಟಿಷರ ಧೈರ್ಯ, ಸಾಹಸ, ಕಾರ್ಯದಕ್ಷತೆ, ದೇಶಪ್ರೇಮ, ಒಗ್ಗಟ್ಟು, ಸ್ತ್ರೀ ಪೋಷಣೆ ಮೊದಲಾದುವುಗಳು ನಿಜವಾಗಿಯೂ ಪ್ರಶಂಸನೀಯ ಸಂಗತಿಗಳೇ! ಇವುಗಳನ್ನು ಹಿಂದೀಯರೂ ಕಲಿಯಬೇಕಾಗಿದೆ.

ಎಂತಹ ವಿಪತ್ತು ಸನ್ನಿಹಿತವಾಗಲಿ ಬ್ರಿಟಿಷನು ಧೈರ್ಯ ಗೆಡದೆ ಬಂದ ಕಷ್ಟವನ್ನು ಪರಿಹರಿಸಲೆತ್ನಿಸುವನೇ ಹೊರತು ಅವನು ತಲೆ ಕೆಳಬಗ್ಗಿಸಿ ವ್ಯಥೆಗೊಳ್ಳನು. ಒಂದು ವೇಳೆ ಚಿಂತಿಸಿ ಚಿಂತಾಕುಲನಾದರೂ, ಅವನು ಚಿಂತೆಯನ್ನು ಕಲಿಗೆ ತೆಗೆದುಕೊಳ್ಳನು. ಅದರ ಬದಲಿಗೆ ಉಪಾಯವನ್ನು ಆಲೋಚಿಸುವನು.

ಅವನ ಸಾಹಸವು ಭೂಲೋಕವನ್ನೇ ಬೆಚ್ಚಿಸುವಂತಹದು. ಅಸಾಧ್ಯವೆಂಬ ಸಂಗತಿಯು ಬ್ರಿಟಿಷನಲ್ಲಿಲ್ಲ. ಎಷ್ಟು ದೊಡ್ಡ ಕೆಲಸವೇ ಆಗಲಿ, ಅವನಿಗದು ಬರೇ ತೃಣ! ಇಲ್ಲದಿದ್ದರೆ ಇಂದಿನ ದಿನದಲ್ಲಿ ಅವನು ಈ ಕಷ್ಟದಲ್ಲೂ ಇಂತಹ ದಮನನೀತಿಯನ್ನು ತೋರಿಸುತ್ತಿದ್ದಿಲ್ಲ.

ಪ್ರತಿಯೊಬ್ಬ ಯುರೋಪೀಯ ಧುರೀಣನೂ ಈಗಿನ ದೇಶಸ್ಥಿತಿಯನ್ನು ಕಂಡು ಆಶಾವಾದಿಯಾಗಿರುವನೇ ಹೊರತು ನಿರಾಶಾವಾದಿಯಾಗಿಲ್ಲ! "ಚಿಂತಿಲ್ಲ, ಕಷ್ಟವು ಬಂದಿದೆ ನಾಳೆ ಹೋಗುತ್ತದೆ" ಎನ್ನುತ್ತಾನೆ. "The present crisis must go" ಎಂದು ಆಶೆಯನ್ನು ಹೊರತೋರಿಸುತ್ತಿರುವನೇ ಹೊರತು ಕಂಗಾಲಾಗುವುದಿಲ್ಲ.

ಕಳೆದ ವರುಷ ಸಪ್ಟಂಬರದಲ್ಲಿ ಬ್ರಿಟಿಷ ಸರಕಾರಕ್ಕೊದಗಿದ ಮಹಾವಿಪತ್ತಿನಲ್ಲಿ ಬ್ರಿಟಿಷರ ಸಾಹಸ ಧೈರ್ಯಗಳಿಲ್ಲದಿದ್ದರೆ ಏನೇನು ಆಗುತ್ತಿದ್ದಿತೆಂದು ಹೇಳಲು ಸಾಧ್ಯವಿದ್ದಿಲ್ಲ.

ತನ್ನ ಕಾರ್ಯವು ನೆರವೇರಬೇಕೆಂದಾದರೆ ಬ್ರಿಟಿಷನ ತನ್ನ ಸಕಲವನ್ನೂ ತ್ಯಜಿಸಿ ಪರರ ನಿಂದೆಯನ್ನೂ ದೂಷಣೆಯನ್ನೂ ಕೇಳಲು ಸಿದ್ಧನಾಗುತ್ತಾನೆ. ಅಂತೂ ಇಂತೂ ಅವನಿಗೆ ಅವನ ಕೆಲಸವಾದ ರಾಯಿತು.

ಈಗ ನಡೆಯುತ್ತಿರುವ ತೀವ್ರ ಶಾಸನವಾದಕೆರಿಗಾಗಿ ಲೋರ್ಡ್ ವಿಲ್ಲಿಂಗ್ಡನ್ನರನ್ನು ಅನೇಕರು ನಿಂದಿಸುತ್ತಿರುವರು. ಇದರಂತೆ ಲೋರ್ಡ್ ಅರ್ವಿನರನ್ನೂ ದೂಷಿಸಿದ್ದರು.

ಆದರೆ ಅಲ್ಪ ಸಂಖ್ಯಾಕರ ದೂಷಣೆಯನ್ನು ಲೆಕ್ಕಕ್ಕೆ ತಂದು ಅವರು ತಮ್ಮ (Policy) ಸೂತ್ರವನ್ನು ಬದಲಾಯಿಸಲಿಲ್ಲ. ಈ ಹೂಡಿರುವ ಓರ್ಡಿನೆನ್ಸುಗಳಿಂದ ದೇಶಕ್ಕೆ ಎಷ್ಟು ಪ್ರಯೋಜನವಿದೆಯೆಂದು ಬರೇ ಆರು ತಿಂಗಳುಗಳಿಗೆ ಗೊತ್ತಾದೀತು. ಈಗ ಮಾತ್ರ ತನ್ನ ವರ್ತನೆಯನ್ನು ಯಾರೂ ಟೀಕಿಸಲಾರರು ಎಂದು ಮೊನ್ನೆ ಲೋರ್ಡ್ ವಿಲ್ಲಿಂಗ್ಡನ್ನರು ಹೇಳಿದುದನ್ನು ಕೇಳಿದರೆ ಬ್ರಿಟಿಷರ ಧೈರ್ಯವೆಷ್ಟೆಂದು ತಿಳಿಯಬರದಿದು.

ಇದೇ ರೀತಿ ಅವರ ಎಲ್ಲಾ ಕೆಲಸಗಳಲ್ಲಿ ತಮ್ಮ ಸಿದ್ಧಾಂತಕ್ಕೆ ತಡೆಯು ಬಂದರೆ ಅದನ್ನು ಲಕ್ಷಿಸುವುದೇ ಇಲ್ಲ. ಇದು ಬ್ರಿಟಿಷರ ಗುಣ. ಇದರಿಂದಾಗಿಯೇ ಅವರು ಇಂದು ತಮ್ಮ ರಾಜ್ಯದಲ್ಲಿ ಸೂರ್ಯನನ್ನು ಮುಳುಗದಂತೆ ಮಾಡಿರುವರು.

ಬ್ರಿಟಿಷರ ಕಾರ್ಯದಕ್ಷತೆಯೂ ಹೊಗಳಲರ್ಹವಾಗಿರುವಂತಹ ಒಂದು ಗುಣ. ಕಾರ್ಯದ ಬೆಲೆ, ಕಾರ್ಯದ ವೇಳೆಗಳನ್ನು ಅರಿತುಕೊಳ್ಳುವುದರಲ್ಲಿ ಅವರು ಅಗ್ರಗಣ್ಯರು. ಒಂದು ಕೆಲಸದಲ್ಲಿ ತೊಡಗಿದರೆ ಅದನ್ನು ಅರ್ಧದಲ್ಲಿ ಅವರು ಬಿಡಲಾರರು.

ಬ್ರಿಟಿಷರ ದೇಶಪ್ರೇಮವನ್ನು ನಾವು ಹೊಗಳಬೇಕೆಂದಿಲ್ಲ. ಬರೇ ಬೈ ಬ್ರಿಟಿಷ್ ಎಂಬ ಲೀಗ್ ಒಂದನ್ನು ಮಾಡಿ, ತಮ್ಮ ಜನರು ಬ್ರಿಟಿಷ ವಸ್ತುವನ್ನೇ ಕೊಂಡುಕೊಳ್ಳಬೇಕೆಂಬ ಬಗ್ಗೆ ಅವರು ಪಡುವ ಸಾಹಸ ಒಂದರಲ್ಲೇ ಅವರ ದೇಶಪ್ರೇಮದ ಪ್ರಕಾಶವು ಹೊರಗಾಣುತ್ತದೆ.

ಬರೇ ಬಾಲಕನಿಂದ ಬಿಟ್ಟು ವೃದ್ಧನ ವರೆಗಿನವನೂ ಬರೇ ಬಡವನಿಂದ ಧನವಾದ ಅರಸನ ವರೆಗಿನವನೂ ದೇಶಪ್ರೇಮದಿಂದ ತುಂಬಿ ತುಳುಕಾಡುತ್ತಿದ್ದಾನೆ. ಮೊನ್ನೆ ಕ್ರಿಸ್‌ಮಸ್ ದಿನ ನಮ್ಮ ರಾಣಿಯವರು ಕೆಲವು ಬಹುಮಾನಗಳನ್ನು ತರಿಸಿಕೊಂಡರಂತೆ. ಅವುಗಳನ್ನು ಪರೀಕ್ಷಿಸಿದರಂತೆ. ಅವುಗಳಲ್ಲಿ ಒಂದೆರಡು ವಿದೇಶೀಯ ಸಾಮಾನುಗಳಿದ್ದುದನ್ನು ನೋಡಿ ಅವರು ಅವುಗಳನ್ನು ಒಡನೆ ಹಿಂದಕ್ಕೆ ರವಾನಿಸಿದರಂತೆ. ನೋಡಿ! ರಾಣಿಯವರೇ ದೇಶಪ್ರೇಮದ ಆದರ್ಶವನ್ನೂ, ಉದಾಹರಣೆಯನ್ನೂ ದೇಶದ ಜನರಿಗೆ ತೋರಿಸುತ್ತಿರುವಾಗ ಜನರಾದರೂ ಹೇಗಿದ್ದಾರು?

೧೧೦೦ ರೂ ಬಕ್ಷೀಸು.

೩೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಸ್ಪೆಷಲ್ ಮದನಮಸ್ತ ಪಾಕು. ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ, ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತಿ, ಕಾಮೋದ್ರೇಕವಾದ ಕೂಡಲೇ ವೀರ್ಯಪತನವಾಗೋಣ, ಗರ್ಭಾಯ ಪರಿಣಾಮ, ಎಂಥವಾದರೂ ಪರಮ, ಸ್ವಪ್ನದೋಷ, ಇತ್ಯಾದಿ ರೋಗಗಳು, ನಾಶವಾಗಿ ಶರೀರಕ್ಕೆ ಸಾಹಾಯವಾಗುತ್ತದೆ. ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ. ೩೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ ಖ ರೂ ೧. ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೪ ಮಾತ್ರ. ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್ ಆಯ್ ಖಟಖಟೆ, ಎಲ್ ಎಮ್ ಎಂಡ್ ಎಸ್, ಜಿ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ರೋಗಿ, ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು	ಡಾಕ್ಟರ ಪಿ ಎನ್. ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತಿ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡುವವರಿಗೂ ರೂ ೧೧೦೦ ಬಹುಮಾನ ಕೊಡುವೆವು

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು. ಪೋ. ಮಿರಜ S M C

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನ ಬ್ಲ್ಯಾ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ... ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವದು. ಶರೀರಕ್ಕೆ ಏನೂ ಅಪಾಯ ವಾಗದೆ ಸಂಸಾರ ಸುಖ ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣೆ ಬಂದಾಗುವದು. ಈ ಸಂತತಿ ಬಂದ ಮಾಡುವ ಸುಲಭವಾದ ವುದಿಲ್ಲ. ಮೊದಲ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ... ಎಲ್ ಸಿ ... ಎಸ್ ಕೊಲ್ಹಾಪುರ, ರಿಮಾರ್ಕ:— ಈ ಚೂರ್ಣದಿಂದ ... ಗರ್ಭಧಾರಣಾವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ರೂ. ೪ ರೂ ವಿ ಪಿ ಖರ್ಚು ೦ ೦

ವಿಳಾಸ — ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S M C

ಒಗ್ಗಟ್ಟಿನ ವಿಷಯಕವಾಗಿ ಬೇರೆ ಹೇಳುವುದನಾವಶ್ಯಕ. ಒಬ್ಬನು ಒಂದು ವರ್ತನೆಯನ್ನು ಮೊದಲಿನವನು ಸರಿ ಎಂದು ಸಮರ್ಥಿಸಿದರೆ ಸಾಕು, ಎಲ್ಲರೂ ಸರಿಯೇ ಎಂಬ ಮಂತ್ರ ಗುಣುಗುಟ್ಟುವರು. ಮೊದಲಿನವನು ತಪ್ಪು ಎಂದರೆ ಸಾಕು, ಎಲ್ಲರೂ ತಪ್ಪು ಎಂದು ಅರ್ಭಟಿಸುವರು. ಆ ಕುರಿತು ಬೇರೆ ಚರ್ಚೆ ಇಲ್ಲ. ಲೋಕದ ಕಣ್ಣುಕಟ್ಟಿಗೆ ಒಂದು ವೇಳೆ ಚರ್ಚೆ ನಡೆಸಿದರೂ ಅದರಿಂದ ತಮ್ಮ ಸಿದ್ಧಾಂತಕ್ಕೆ ಕೆಡಕನ್ನು ತಂದುಕೊಳ್ಳುವುದಿಲ್ಲ. ರಾಜ್ಯಾಡಳಿತದಲ್ಲಿನ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಇಂತಹ ಕಾಲದಲ್ಲಿ ಗಾಂಧಿಯವರನ್ನು ಬಂಧಿಸಿದುದನ್ನು ನೋಡಿ ಲೋಕವೇ ಬೆರಗಾಗಿದೆ. ಒಬ್ಬ ಬ್ರಿಟಿಷನೇ ಬೆರಗಾಗಿರುವರು. ಆದರೆ ಅವರಲ್ಲಿ ಲೋರ್ಡ್ ವಿಲ್ಲಿಂಗ್ಡನ್ನರ ವರ್ತನೆಯನ್ನು ಟೀಕಿಸುವವನಿನ್ನು ಮುಂದೆ ಬೇಕಾಗಿದೆಯಷ್ಟೆ! ಎಲ್ಲರೂ ವಿಲ್ಲಿಂಗ್ಡನ್ನರು ಮಾಡಿದುದು ಸರಿ ಎಂದರು. ಇದು ಅವರ ಸೂತ್ರ.

ಒಂದು ಮನೆಯನ್ನು ಕಟ್ಟುತ್ತಿರುವಾಗ ಕಂಟ್ರ್ಯಾಕ್ಟರನಿಗೂ ಬೇಕೆಂದಾದರೆ ಅವನ ಕೂಲಿಯಾಳುಗಳಿಗೂ ಒಕ್ಕಟ್ಟಿನ ಪ್ರೀತಿಯು ಹಿಂದೀಯರ ಗುಣ. ಆದರೆ ಯುರೋಪಿಯನನು ಹಾಗೆ ವರ್ತಿಸಲಾರನು. ಕೂಲಿಯವನನ್ನೂ ಕಂಟ್ರ್ಯಾಕ್ಟರನನ್ನೂ ಪ್ರೋತ್ಸಾಹಿಸಿ ಕೆಲಸ ನಡೆಸುವನು. ಹೀಗೆ ಪ್ರೋತ್ಸಾಹಿಸುವುದರಿಂದ ತನ್ನ ಮನೆಯ ಕೆಲಸವು ಅನುಮೋದಿಸಿಂದಲೂ ಸಾಹಸವಾಗಿಯೂ ಆಗುವುದೆಂದು ಅವನಿಗೆ ಗೊತ್ತು.

ಇದೇ ರೀತಿ ಅವರ ರಾಜನೀತಿಯಲ್ಲಿಯೂ ಬ್ರಿಟಿಷರು ತಮ್ಮ ಸೇವಕರಿಂದ ಮಂತ್ರಿಯ ವರೆಗಿನವರ ಆಚರಣೆಯನ್ನು ಕುಶಲಚಿತ್ತದಿಂದ ಸಮರ್ಥಿಸುವರು.

ಲೋರ್ಡ್ ವಿಲ್ಲಿಂಗ್ಡನ್ನರು ಮಾಡಿದುದು ತಪ್ಪೆಂದು ಬ್ರಿಟಿಷರೆಲ್ಲರೂ ಹೇಳುತ್ತಿದ್ದರೆ ಏನಾಗುತ್ತಿತ್ತು? ಅಪಮಾನದ ಕಾರ್ಯಗಳು ದೇಶವನ್ನು ಕವಿದುಕೊಳ್ಳುತ್ತಿತ್ತು. ಹಿಂದೀಯರು ತನ್ನ ಚಳವಳವನ್ನು ಪ್ರಬಲೀಕರಿಸುತ್ತಿದ್ದರು. ಇದರಿಂದಾಗಿ ಬ್ರಿಟಿಷ ರಾಜ್ಯದಲ್ಲಿ ಶಾಂತಿಯು ತಪ್ಪುತ್ತಿತ್ತು. ಇದಕ್ಕಾಗಿಯೇ ಲೋರ್ಡ್ ವಿಲ್ಲಿಂಗ್ಡನ್ನರನ್ನು ಯಾರೂ ಟೀಕಿಸಲಿಲ್ಲ.

++++

ನೋಟೀಸು

ಉಡುಪಿ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ

O P No 10/31 & I A No 71 32

1 ... ಮಿನೇಜಸ್—ಇಗ್ನೇಶಿಯಸ್ ಮಿನೇಜರು ವಿಧವೆ 2 ... ಮಿನೇಜಸ್, 3 ... ಮಿನೇಜಸ್ ಯಾನೆ ... 4 ... ಮಿನೇಜಸ್ ... ಮಿನೇಜಸ್ ... ಮಿನೇಜಸ್, ಪ್ರಸ್ತುತ ... ಮಿನೇಜಸ್ ... ನೇಯವರು ವ್ಯಾನರರ ಗಾರ್ಡಿಯನ್ 1ನೇ ಅರ್ಜಿದಾರರು ಸದ್ರಿ ಇಗ್ನೇಶಿಯಸ್ ಮಿನೇಜಸರ ... ಅರ್ಜಿದಾರರ

ಗುರುತು ... ಗ್ರಾಮದ ... ವಾಸವಾಗಿರುವರು.

ನ ಕ

ಎಸ್ ... ಮಿನೇಜಸ್—ಇಗ್ನೇಶಿಯಸ್ ಮಿನೇಜರ ಮಗ, Residing in Havina Hoklu Coffee Estate Balehonnur Post Kadur Dt —ಇವರಿಗೆ

ಮೇಲ್ಕಂಡ R ... NO 71/32ನೇ ಅರ್ಜಿ ವ್ಯವಹಾರದ 1ನೇ ಅರ್ಜಿದಾರಳ ಗಂಡ, 2ರಿಂದ 7ನೇ ಅರ್ಜಿದಾರರ ತಂದೆ ಹಾಗೂ ವ್ಯಾಕಪಟ್ಟ ಇಗ್ನೇಶಿಯಸ್ ಮಿನೇಜಸ್ ... ಬಾಕಿ ... ಪಾವತಿ ... ಪಡೆವದು 1ನೇ ಅರ್ಜಿದಾರಳಿಗೆ Extension of the Succession certificate ಕಡಬೇಕೆಂದು ಕೊಟ್ಟ ಸದ್ರಿ ಅರ್ಜಿಯು ತಾರೀಖು 17—3—32ಕ್ಕೆ ವಿಚಾರಣೆಗೆ ಇಟ್ಟಿರುವುದರಿಂದ ಆ ಬಗ್ಗೆ ಆಕ್ಷೇಪ ಹೇಳುವವರು ಸದ್ರಿ ತಾರೀಕಿನಲ್ಲಿ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಪಡಿಸಿ ಕೊಳ್ಳತಕ್ಕದ್ದು.

Udipi
5-3-1932

G C REGO,
Pleader for Petitioners

++++

ಅನುಕ್ರಮಣಿಕೆ.

ಅಗ್ರಲೇಖ

ಮಂಗಳೂರಿನ ಸ್ವದೇಶಿ ಲೀಗ್ ೬

ಸ್ಫುಟವಿಚಾರಗಳು . . . ೪

ಟಿಪ್ಪಣಿಗಳು ೨

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೬

ಒಳದೇಶ ವರ್ತಮಾನ ೬-೭

ದಕ್ಷಿಣ ಕನ್ನಡ — ಮಂಗಳೂರು, ಮೂಡಬಿದ್ರಿ, ಪುತ್ತೂರು, ಕಾಸರಗೋಡು, ಬಂಟ್ವಾಳ . . ೮

ವಿವಿಧ ಸಮಾಚಾರಗಳು . . . ೧೧

ನಮ್ಮ ಶಾಲೆಗಳು . . ೧೩

ಪ್ರಾಣ ಹೋಗುವ ತನಕ ಹೋರಾಡಬೇಕು ೯

ಶ್ರೀ. ಪಟೇಲ್ ತಯಾರಿಗಳ ಬಿಡುಗಡೆ . ೧೦

ಬ್ರಿಟಿಷರಿಂದ ನಾವು ಕಲಿಯಬೇಕಾದುದೇನು? . ೫

ಸಾಮುವೇಲ್ ಹೋರ್‌ರ ಥೋರಣ್ . ೩

"ಬೈ ಇಂಡಿಯನ್" . "

ಸ್ವದೇಶಾಭಿಮಾನಿ.

ತಾ. ೧೧ನೇ ಶುಕ್ರವಾರ ಮಾರ್ಚಿ ೧೯೩೨

ಮಂಗಳೂರಿನ ಸ್ವದೇಶಿ ಲೀಗ್.

ಹಿಂದೊಂದು ಸಭೆಯು ಒಂದು ಬಾರಿ ಮಂಗಳೂರಿನಲ್ಲಿ ಏರ್ಪಟ್ಟು ಆ ವೇಳೆ ಕಾಂಗ್ರೆಸ್ಸಿನ ಕಾರ್ಯಭರದ ಮಧ್ಯದಲ್ಲಿ ಮರೆಯನ್ನು ಸೇರಿತ್ತು. ಇದನ್ನು ಪುನಹ ಪುನರುಜ್ಜೀವಿಸುವ ರೆಂಬುದನ್ನು ಕೇಳಿ ನಮಗೆ ಸಂತೋಷವಾಗುತ್ತದೆ. ಇದರ ರಲ್ಲಿಯೂ, ಅತ್ತಾವರ ಬಾಲಕೃಷ್ಣಶೆಟ್ಟಿ, ದಿವಾನ್ ಬಹದ್ದೂರ್ ಎನ್. ಸುಬ್ಬರಾಯರು, ಮುಂತಾದ ಊರ ಪ್ರಮುಖರೇ ಇದರ ಸೂತ್ರವನ್ನು ಕೈಯಲ್ಲಿ ಹಿಡಿದಿತ್ತುವರೆಂಬುದು ಬಹಳ ಸಮಾಧಾನದ ವಿಷಯವಾಗಿದೆ.

ಈಗಿನ ಕಠಿಣವಾದ ರಾಜಕೀಯ ಪರಿಸ್ಥಿತಿಯಲ್ಲಿ, ಹಿಂದೀಯರಾದ ನಮಗೆ ಸ್ವದೇಶಿಯೇ ನಮ್ಮ ನಿತ್ಯದ ಪಲ್ಲವಿಯಾಗಿದೆ. ಅದು ಬಿಟ್ಟರೆ ನಮಗೆ ಬೇರೆ ಆಧಾರವಿಲ್ಲವೆಂಬ ವಿಷಯವನ್ನು ನಾವು ಈ ಮೊದಲೇ ವ್ಯಕ್ತಪಡಿಸಿದ್ದೇವೆ. ಸ್ವದೇಶಿ ಮಂತ್ರದ ಜಪದಿಂದ ಕಾರ್ಯಸಾಧನೆಯಾಗುವಷ್ಟು ಬಹಿಷ್ಕಾರ ಚಳವಳಿಯಿಂದ ಆಗಲಾರದು. ಆದುದರಿಂದ ಕಾಂಗ್ರೆಸ್ಸಿನ ಮೇಲೆ ಅಭಿಮಾನವಿದ್ದವರು ಕೂಡ ಈ ಚಳವಳಿಗೆ ಪ್ರೋತ್ಸಾಹ ಕೊಟ್ಟು ಬಹಿಷ್ಕಾರ ಚಳವಳಿಯನ್ನು ಬದಿಗೊತ್ತಲು ಅನುಕೂಲವಿದೆ.

ಸಾಮಾನುಗಳನ್ನು ಉಪಯೋಗಿಸುವವರ ದೃಷ್ಟಿಯಲ್ಲಿ ಸ್ವದೇಶಿ ಸಾಮಾನುಗಳಿಗೆ ಬೆಲೆ ಹೆಚ್ಚೆಂದಾಗಲಿ, ಗುಣ ಕಡಿಮೆಯೆಂದಾಗಲಿ ಕಂಡುಬರಬಹುದು. ಆದರೂ ಸ್ವದೇಶೀ ವಸ್ತುಗಳ ಉಪಯೋಗಕ್ಕೆ ಈ ಕಾರಣಗಳು ಸಾಕಾಗಲಾರವು. ಏಕೆಂದರೆ ಪ್ರೋತ್ಸಾಹದ ಮೂಲಕವೇ ಯಾವುದೊಂದು ವಸ್ತುವಿನ ಬೆಲೆಯು ಇಳಿಯುವುದೂ, ಗುಣವು ಬೆಳೆಯುವುದೂ ಆಗಿದೆ. ಪಾಶ್ಚಾತ್ಯರಲ್ಲಿಯೂ ಮೊಟ್ಟ ಮೊದಲು ತಯಾರಿಸಿದ ಸಾಮಾನುಗಳು ಉತ್ತಮವಾಗಿದ್ದುವು ಎಂದು ಹೇಳಬರುವುದಿಲ್ಲ. ಆದರೆ ಹೆಚ್ಚಿನ ಪ್ರೋತ್ಸಾಹದೊಡನೆಯೂ, ಇತರ ದೇಶಗಳ ಅಜ್ಞಾನದ ಕಾರಣದಿಂದಲೂ ಅವರು ಮುಂದುವರಿದು ಬಿಟ್ಟರು. ಹಾಗೆಯೇ ನಮ್ಮದೇ ದೇಶದ ಸಾಮಾನುಗಳಿಗೆ ನಾವು ಪ್ರೋತ್ಸಾಹ ಕೊಡುವುದರಿಂದ ಅವುಗಳ ವೃದ್ಧಿಗೊಳ್ಳಲು ಅನುಕೂಲವಿರುತ್ತದೆ, ಅಲ್ಲದೆ ಆ ಮೂಲಕ ದೇಶದ ಧನವು ದೇಶದೊಳಗೇನೇ ಚಲಿಸಿ ನಿರುದ್ಯೋಗಿಗಳಿಗೆ ಉದ್ಯೋಗವೂ ಉಪವಾಸಿಗಳಿಗೆ ಆಹಾರವೂ ದೊರೆಯುವುದು. ಈ ರೀತಿಯಲ್ಲಿ ಸ್ವದೇಶಿಯು ಐಹಿಕ ದೃಷ್ಟ್ಯಾ ಸಮೃದ್ಧಿಗೆ ಕಾರಣವೂ, ಪಾರಮಾರ್ಥಿಕ ದೃಷ್ಟ್ಯಾ ಪುಣ್ಯಸಂಚಯಕಾರಿಯೂ ಆಗುವುದು. ಮಾತ್ರವಲ್ಲದೆ ದೇಶದ ವ್ಯಾಪಾರವು ದೇಶದೊಳಗೇನೇ ತಿರುಗಿದರ ಅನ್ಯದೇಶೀಯರಿಗೆ ನಮ್ಮ ದೇಶದ ಮೇಲಿನ ಸ್ವಾರ್ಥದ ಅಭಿಲಾಷೆಯು ಅವರನ್ನು ತೊಲಗುವುದು.

ಆದುದರಿಂದ ಮಂಗಳೂರಿನಲ್ಲಿ ಪುನಃ ಏರ್ಪಾಡಾಗುವ ಈ ಸ್ವದೇಶಿ ಲೀಗಿನ ಆಗಮನವನ್ನು ನಾವು ಅತ್ಯಂತ ಆನಂದದಿಂದ ಬರಮಾಡಿಕೊಳ್ಳುತ್ತೇವೆ. ಆದರೆ ಇದು ಬರೇ ಹೆಸರಿನ ಗೊಂಬೆಯಾಗಿರದೆ, ಚೇತನಾತ್ಮಕವಾದ ಸಂಸ್ಥೆಯಾಗಿರಬೇಕೆಂದು ನಾವು ಈಗಲೇ ಎಚ್ಚರಿಸದೇ ಇರಲಾರೆವು. ಹತ್ತು ಜನರು ಒಟ್ಟುಗೂಡಿ ಉದ್ದ ಭಾಷಣಗಳನ್ನು ಮಾಡಿದರೆ ಸಾಕಾಗದು. ಸ್ವದೇಶಿಯನ್ನು ಒಳ್ಳೇ ಪರಿಣಾಮಕಾರಿಯಾಗಿ ಮಾಡುವ ಕಾರ್ಯಕ್ರಮವನ್ನು ರಚಿಸಬೇಕು. ಮುಖ್ಯವಾಗಿ ನಮ್ಮ ಜಿಲ್ಲೆಯ ಎಲ್ಲಾ ವಿಶೇಷಗಳನ್ನು ಪರಿಶೀಲಿಸಿ ಅವುಗಳಿಗೆ ಅನುಕೂಲವಾದ ಕಾರ್ಯಕ್ರಮವನ್ನು ರಚಿಸಬೇಕು. ಜಿಲ್ಲೆಯೊಳಗೆ ಪರದೇಶಿ ವಸ್ತುಗಳು ಯಾವುವು ಎಷ್ಟೆಷ್ಟು ಆಮದಾಗುತ್ತವೆ? ಯಾರು ಅವುಗಳನ್ನು ತರಿಸುತ್ತಾರೆ? ಅವುಗಳ ಬದಲಿಗೆ ದೇಶೀಯ ಯಾವ ವಸ್ತುಗಳು ಎಲ್ಲಿ ಸಿಕ್ಕುತ್ತವೆ? ಅವುಗಳ ಬೆಲೆ, ಗುಣಗಳ ವ್ಯತ್ಯಾಸವೇನು? ಎಂಬ ಎಲ್ಲಾ ವಿಚಾರಗಳನ್ನು ಶೋಧಿಸಿ ನೋಡಬೇಕು. ಸ್ವದೇಶಿ ಸಾಮಾನುಗಳ, ಅವುಗಳ ವಿಕ್ರಯಕಾರರ, ಅವುಗಳ ಕಾರಖಾನೆಗಳ ಸಂಪೂರ್ಣ ವಿವರವನ್ನು ಸಂಗ್ರಹಿಸಬೇಕು. ಪರದೇಶದಿಂದ ಬರುವ ಸಾಮಾನುಗಳಂತಹುದೇ ಸ್ವದೇಶದಲ್ಲಿ ತಯಾರಾಗದಿದ್ದರೆ, ಬದಲಿಯಾಗಿ ದೇಶೀಯವಾದ ಯಾವ ಸಾಮಾನುಗಳನ್ನು ಉಪಯೋಗಿಸಬಹುದು? ಇತ್ಯಾದಿ ವಿಷಯಗಳನ್ನು ಕಂಡು ಹಿಡಿದು ಜನರಿಗೆ ಬೋಧೆ ಕೊಡಲಿಕ್ಕೆ Information Bureau ಒಂದನ್ನು ಏರ್ಪಡಿಸಬೇಕು.

ಇಂಗ್ಲೆಂಡಿನಲ್ಲಿ ಕೂಡ Buy British ಚಳವಳಿದೆ. ಅಂತಹ ದೊಡ್ಡ ಕೈಗಾರಿಕೆ ದೇಶದಲ್ಲಿಯೇ ಈ ತರದ ಚಳವಳಿದ ಅವಶ್ಯಕತೆಯಾದರೆ, ನಮ್ಮ ದೇಶಕ್ಕೆ ಇದು ಮತ್ತಷ್ಟು ಪ್ರಾಮುಖ್ಯವಿದೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿರದು. ಪ್ರಮುಖರೂ, ಸಾಹುಕಾರರೂ, ಜನತೆಯೂ ಸಹಕರಿಸಿದರ ಈ ಮೂಲಕ ವಿಶೇಷರೂ ದೇಶವು ಅಭಿವೃದ್ಧಿಹೊಂದುವುದೆಂದು ಖಂಡಿತವಾಗಿ ಹೇಳಬಹುದು.

ವಿದೇಶ ವರ್ತಮಾನ.

— ಜಪಾನಿನ ಸೈನ್ಯಗಳೂ ಯುದ್ಧ ಸಾಮಗ್ರಿಗಳೂ ಶಾಂಘೈಗೆ ಬರುತ್ತಾ ಸಾಗಿಸಲ್ಪಡುತ್ತಿವೆ. ಒಂದು ಕಡೆಯಿಂದ ರಾಜಿ ಪಂಚಾಯಿತಿಯು ನಡೆಯುತ್ತಿದೆ.

— ಕಾವ್ನ ಪಿಐಜಿಯಾದೆಷ್ಟೋ ಕೆಲವು ನೂರು ಬ್ರೀಯರು ಕೋಲಾಹಲವನ್ನೆಬ್ಬಿಸುತ್ತಿದ್ದಾಗ ಪೋಲೀಸರು ತನ್ನಲ್ಲಿ ಹೋಗಿ ಸಮಾಧಾನಗೊಳಿಸಲೆತ್ನಿಸಿದರು. ಪೋಲೀಸರಿಗೂ ಅವರ ಸ್ನೇಹಿತರಿಗೂ ಕಲ್ಲುಗಳ ಸುರಿಮಳೆಯು ಬಿತ್ತು. ಅನೇಕರಿಗೆ ಪೆಟ್ಟಾಗಿ ೫೦ ಮಂದಿಗಳನ್ನು ಕೊಂಡೊಯ್ದರು.

— ಲಂಡನಿನಲ್ಲಿಯ ಒಂದು ಸಭೆಯಲ್ಲಿ ಭಾಷಣ ಮಾಡುತ್ತಾ ರೆವೆರೆಂಡ್ ಆರ್ಥರ್ ಸ್ಪ್ರಿಂಗ್ಸ್ ಎಂಬವರು 'ಆಂಗ್ಲೇಯರಿಗೆ ಹಿಂದೀಯರ ಸ್ಥಿತಿಗತಿಗಳು ಇನ್ನೂ ತಿಳಿದಿಲ್ಲ. ಕೆಲವರು ತಿಳಿದೂ ಕಣ್ಣು ಮುಚ್ಚಿರುವರು. ಆಂಗ್ಲ ಪತ್ರಿಕೆಗಳು ಹಿಂದೀಯ ಚಳವಳಿಯನ್ನಡಗಿಸಲು ಯತ್ನಿಸುತ್ತಿವೆ. ಇದೇ ರೀತಿ ಮುಂದಕ್ಕೂ ನಡೆದರೆ ಮಹಾ ಅಪಾಯವಿದೆ' ಎಂದರು.

— ೨೧ ಸಲ ಪ್ರಿಮಿಯರ್ ಪದವಿಗೂ ೨೫ ಸಲ ಮಂತ್ರಿಪದವಿಗೂ ಚುನಾಯಿಸಲ್ಪಟ್ಟಿದ್ದ ಫ್ರೆಂಚ್ ರಾಜನೀತಿಜ್ಞ ಕಲಾಕೋವಿದರಾದ ಎಂ. ಬ್ರಿಯಾಂಡ್ ಎಂಬವರು ತಾ. ೭ನೇ ದಿನ ೧-೩೦ಕ್ಕೆ ಮಧ್ಯಾಹ್ನ ಪ್ಯಾರಿಸ ನಗರದಲ್ಲಿ ತೀರಿಕೊಂಡರು. ಇದೀ ರಾಷ್ಟ್ರವೇ ಅವರ ಮರಣಕ್ಕೆ ಶೋಕಿಸಿದೆ.

— ಚಿಟ್ಟಗಾಂಗಿನಲ್ಲಿ ನಡೆದ ಅತ್ಯಾಚಾರದ ಕುರಿತು ಬರೆಯಲ್ಪಟ್ಟ ವರದಿಯನ್ನು ಪ್ರಕಟಿಸಲಾಗುವುದಿಲ್ಲವೆಂದು ಸಾಮುವೇಲ್ ಹೋರರು ಕಾಮನ್ಸ್ ಸಭೆಯಲ್ಲಿ ಹೇಳಿದರು.

ಟೋಕಿಯೋದಲ್ಲಿ ಬರೆನ್ ಟಕುಮಾ ಎಂಬ ದೇಶ ಧುರೀಣರೊಬ್ಬರನ್ನು ಒಬ್ಬನು ಕೊಂದನು.

— ಬರ್ಲಿನ್‌ನಲ್ಲಿ ಬೀರ್ ಟೀಕ್ಸ ಜ್ಯಾರಿಯಾದುದಕ್ಕಾಗಿ ಈಗ ಅಲ್ಲಿ ಬೀರ್ ಬಹಿಷ್ಕಾರ ಚಳವಳಿವು ತಲೆದೋರಿದೆ. ಬೀರ್ ಮಾಡುವ ಅಂಗಡಿಗಳು ಬಾಗಿಲು ತೆರೆಯುವುದಿಲ್ಲ — ಗಿರಾಕಿಗಳಿಲ್ಲ — ಕೆಲಸಗಾರರು ಮನೆಗೆ ಹೋಗಿರುವರು.

ಹಿಂದೂದೇಶದಲ್ಲಿನ ದಮನನೀತಿಯನ್ನು ಪುಷ್ಟೀಕರಿಸಿ ಭಾರತ ಸಚಿವರಾದ ಸಾಮುವೇಲರು ಒಂದು ಉದ್ದವಾದ ಭಾಷಣವನ್ನು ಕೊಟ್ಟರು — ಕೈ ತಪ್ಪಾಳೆಗಳಿದ್ದುವು.

ಒಳದೇಶ ವರ್ತಮಾನ.

— ಮದರಾಸು ಪ್ರಸಿಡೆನ್ಸಿ ಕಾಲೇಜಿನ ಕನ್ನಡ ಪಂಡಿತರಾದ ಶ್ರೀ ಆಳಸಿಂಗರಾಚಾರ್ಯರು ಉದ್ಯೋಗದಿಂದ ನಿವೃತ್ತಿ ಹೊಂದುವ ರಾದ್ದರಿಂದ ಆ ಕಾಲೇಜಿನ ಕನ್ನಡ ಸಂಘದ ವಿದ್ಯಾರ್ಥಿಗಳು ಸಂಸ್ಕೃತ ಪ್ರೊಫೆಸರ್ ಕುಪ್ಪುಸ್ವಾಮಿ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸೇರಿ, ಅವರಿಗೆ ಒಂದು ಟೀ ಪಾರ್ಟಿಯನ್ನು ಕೊಟ್ಟರು. ಈಗಿನ ಕನ್ನಡ ಕವಿಗಳಲ್ಲಿ ಅಗ್ರಸ್ಥಾನವನ್ನು ಪಡೆದು, ಸಂಸ್ಕೃತ, ತೆಲುಗು, ತಮಿಳು, ಇಂಗ್ಲಿಷು ಭಾಷೆಗಳಲ್ಲಿಯೂ ಪ್ರವೀಣರಾಗಿದ್ದು ಉದ್ಯೋಗದಲ್ಲಿ ನಿಪುಣತೆಯನ್ನು ತೋರಿಸಿ ಶ್ರೀ ಆಳಸಿಂಗರಾಚಾರ್ಯರು ತಮ್ಮೆಲ್ಲರ ಪ್ರೀತಿಗೆ ಪಾತ್ರರಾಗಿರುವರೆಂದು ಅಧ್ಯಕ್ಷರು ಭಾಷಣದಲ್ಲಿ ವ್ಯಕ್ತಪಡಿಸಿದರು. ವೆಂಕೋಬ ಶೆಟ್ಟಿಯವರು ಅವರ ಜನ್ಮಚರಿತ್ರೆಯನ್ನು ಸಂಕ್ಷಿಪ್ತವಾಗಿ ತಿಳಿಸಿ ನಲವತ್ತು ವರ್ಷಗಳಿಂದ ಬೋಧಕವೃತ್ತಿಯಲ್ಲಿಯೇ ಇದ್ದು ಉದ್ಯೋಗದಿಂದ ನಿವೃತ್ತಿಹೊಂದುವುದು ವಿದ್ಯಾರ್ಥಿಗಳ ದೌರ್ಭಾಗ್ಯವೇ ಸರಿಯೆಂದರು. ಆಳಸಿಂಗರಾಚಾರ್ಯರ ಖ್ಯಾತಿ, ಪಾಂಡಿತ್ಯ, ವಿದ್ಯಾರ್ಥಿಗಳಲ್ಲಿ ಅವರ ಪ್ರೇಮ, ಕನ್ನಡಾಭಿವೃದ್ಧಿಯಲ್ಲಿ ಅವರ ಉತ್ಸಾಹ ಮೊದಲಾದವುಗಳ ಕುರಿತು ಮಾಚಯ್ಯನವರೂ ರಾಮಣ್ಣ ಹೆಗ್ಗಡೆಯವರೂ ವಿವರಿಸಿ ಹೇಳಿದರು. ಕಾಲೇಜಿನ ವಿದ್ಯೆ ಮುಗಿದ ನಂತರ ಕನ್ನಡ ಭಾಷಾಭಿವೃದ್ಧಿಯಲ್ಲಿಯೂ, ಕರ್ನಾಟಕ ಏಕೀಕರಣದಲ್ಲಿಯೂ ವಿದ್ಯಾರ್ಥಿಗಳು ಸಂಪೂರ್ಣ ಆತುರವನ್ನು ಬೇಕೆಂದು ಆಳಸಿಂಗರಾಚಾರ್ಯರು ಬೋಧಿಸಿದರು. ತನ್ನಲ್ಲಿ ಕನ್ನಡ ವಿದ್ಯಾರ್ಥಿಗಳ ವಿಧೇಯತೆಯು ಶ್ಲಾಘನೀಯವಾದುದೆಯೆಂದರು. ದೇವರ ಕೃಪೆಯಿಂದ ತಾನು ಈಗ ಕೈಕೊಂಡ ಮಹಾಭಾರತವನ್ನು ಸಂಪೂರ್ಣಗೊಳಿಸುವೆನೆಂದೂ ಕರ್ನಾಟಕೀಯರ ಅಭ್ಯುದಯವೇ ತನ್ನ ಅಭ್ಯುದಯವೆಂದೂ ತಿಳಿಸಿದರು. ಮಂಗಳ ಪ್ರಾರ್ಥನೆಯಿಂದ ಕಾರ್ಯವು ಕೊನೆಗೊಂಡಿತೆಂದು ಕನ್ನಡ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

— ಮುಂಬಾಯಿಯಲ್ಲಿ ಇಂಡಿಯನ್ ಮರ್ಚಂಟ್ಸ್ ಚೇಂಬರ್ ಸಂಸ್ಥೆಯ ಸುಮಾರು ೩೦ ವರ್ತಕಸಂಘಗಳ ಅಪೇಕ್ಷೆ ಮೇರೆಗೆ ಸುಮಾರು ೧೦ರಿಂದ ೧೫ ಸಾವಿರ ಸದಸ್ಯರ ಒಂದು ಸಭೆಯನ್ನು ಕರೆದು ಈಗಿನ ಸರಕಾರಿ ಶಾಸನಗಳ ಕುರಿತು ಖೇದಸೂಚನೆಯನ್ನು ಮಾಡಬೇಕೆಂದಿದ್ದರು. ಈ ವಿಷಯವು ಸರಕಾರದ ಅವಗಾಹನೆಗೆ ಹೋಗಿ ಅಂತಹ ಸಭೆಯನ್ನು ಜರಗಿಸದಂತಾಗಿ ಸಂಬಂಧಪಟ್ಟ ಮುಖಂಡರಿಗೆ ನೋಟೀಸು ಹೋಗಿದೆ.

— ಪೇಶಾವರದಲ್ಲಿನ ಹಾಜೀ ತುರಾಂಗಜೀ ಎಂಬ ಫಕೀರ ವರ್ಗದ ಮುಂದಾಳು ಒಬ್ಬನ ಮಕ್ಕಳು ಜನರನ್ನು ಕ್ರಾಂತಿಯಿಂದ ಪ್ರೇರೇಪಿಸುತ್ತಿರುವರೆಂದು ತಿಳಿದುಬಂದು, ಅವರು ಹಾಗೆ ಮಾಡಿದರೆ ಎಚ್ಚರಿಕೆ ಕೊಟ್ಟು ಮೇಲೆ ಹಾಜಿಯ ಹಳ್ಳಿಯನ್ನೇ ಬಾಂಬಿನಿಂದ ನಿರ್ಮೂಲಿಸಲಾದೀತೆಂದು ಸರಕಾರದ ಎಚ್ಚರವು ಹೋಗಿದೆ. ವಿಮಾನಗಳು ತಿರುಗಾಡುತ್ತಾ ಇದ್ದು ಅಲ್ಲಿ ಆಗುತ್ತಿರುವ ಘಟನೆಗಳನ್ನು ಪರಿಶೀಲಿಸುತ್ತಿವೆ.

— ಮುಂಬಯಿಯಲ್ಲಿ ಮೂರನೇ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಾದ ಶ್ರೀ ಕಂದಾಲವಾಲಾ ಎಂಬವರು ಕೋರ್ಟಿನಲ್ಲಿ ನ್ಯಾಯ ವಿಚಾರಣೆ ಮಾಡುತ್ತಿದ್ದರು. ಅಪರಾಧಿಯನ್ನು ಒಳ ಕರೆತರಲು ಪೋಲೀಸರಿಗೆ ಹೇಳಿದರು. ಆದರೆ ಅಪರಾಧಿ ಅಲ್ಲಿರಲಿಲ್ಲ. ಇದನ್ನು ಕಂಡು ಮೆಜಿಸ್ಟ್ರೇಟರು ಪೋಲೀಸ ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟಿರುವರು.

— ಮುಂಬಾಯಿಯಲ್ಲಿ ಕಾವೇಲೂ ಎಂಬ ಎಂಜಿನಿಯರರು ತನ್ನ ಮೋಟಾರಿನಲ್ಲಿ ಹೋಗುತ್ತಿರುವಾಗ ನಾಲ್ವರು ಬಂದು ಅವರ ಕಾರನ್ನು ನಿಲ್ಲಿಸಿದರು. ಕಾವೇಲೂರನ್ನು ಎತ್ತಿಕೊಂಡು ಎಲ್ಲಿಗೋ ಒಯ್ದರು. ಅವರ ಹೇಟನ್ನು ಬರಿದು ಮಾಡಿಬಿಟ್ಟರು. ಅಪರಾಧಿಗಳು ಜೈಲಿನಲ್ಲಿದ್ದಾರೆ.

— ಲಾಹೋರಿನ ಜಮಿಂದಾರ್ ಪತ್ರಿಕೆಯು ಒಂದು ಸಾವಿರ ರೂಪಾಯಿ ಭದ್ರತೆ ಕೊಟ್ಟಿದ್ದಿತು. ಅದನ್ನು ಸರಕಾರವು ವಶೀಕರಿಸಿಕೊಂಡಿತು.

— ಕಲ್ಕತ್ತದ ಅಸ್ಪತ್ರೆಗಳ ವೆಚ್ಚವು ಈ ವರುಷ ಬಹಳ ಹೆಚ್ಚುತ್ತಾ ಹೋಗಿದೆ. ಕಳೆದ ೧೦ ವರುಷಗಳಿಂದ ಅದರ ವೆಚ್ಚವು ೧೫೬೩೯೫ ರೂಪಾಯಿ. ಈ ವರುಷದ ಲೆಕ್ಕದಲ್ಲಿ ಅದು ೫೯೧,೦೦೦ ರೂಪಾಯಿಯಲ್ಲಿ ನಿಂತಿದೆ. ಇದನ್ನಿಳಿಸುವುದು ಯಾವ ಬಗೆಯಿಂದ ಎಂಬುದು ಅದಕ್ಕೆ ಸಂಬಂಧಪಟ್ಟವರ ವಿವೇಚನೆ.

— ನ್ಯೂಡಿಲ್ಲಿಯ ಚಾಂದಿಚೌಕಿನೊಳಗೆ ಯಾರೋ ಕೆಲವು ಪುಂಡರು ನುಗ್ಗುವ ಯತ್ನವನ್ನು ಮಾಡಿದರು. ಆದರೆ ಚೌಕೀದಾರನು ಅವರನ್ನು ಪ್ರತಿಭಟಿಸಿದನು. ಪುಂಡರು ಚೌಕೀದಾರನಿಗೆ ಗುಂಡಿನಿಂದ ಹೊಡೆದು ನೆಲಕ್ಕುರುಳಿಸಿದರು. ಪತ್ತೆಯು ನಡೆಯುತ್ತಿದೆ. ಚೌಕೀದಾರನನ್ನು ಆಸ್ಪತ್ರೆಗೆ ಕೊಂಡೊಯ್ದಿರುವರು.

— ಅಹ್ಮದಾಬಾದಿನಲ್ಲಿ ಸಾರ್ಜಂಟ್ ಕೋನ್‌ಫರ್ಡ್ ಎಂಬವರು ಶ್ರೀಮತಿ ವಿದ್ಯಾಬಾಯಿ ಗದ್ರೆ ಎಂಬವರ ಮೇಲೆ ಒಂದು ಆರೋಪವನ್ನು ಹೂಡಿರುತ್ತಾರೆ. ತನ್ನ ಕಣ್ಣಿಗೆ ಆವಳು ವಿಷಭರಿತ ಮದ್ದನ್ನು ಎಸೆದಳೆಂಬುದೇ ಅವರ ಹೇಳಿಕೆ. ಅವರು ಈಗ ಚಿಕಿತ್ಸೆಹೊಂದುತ್ತಿರುವರು. ಅವಳು ಅದನ್ನು ಏಕೆ ಎಸೆದಳೆಂಬ ಸುದ್ದಿ ಇಲ್ಲ.

— ಸಂಯುಕ್ತಪ್ರಾಂತ್ಯದಲ್ಲಿ ೩ ಷ್ಯ ಟ ಕಲೆಕ್ಟರರನ್ನು ಸ್ಪೆಶ್ಯಲ್ ಮೆಜಿಸ್ಟ್ರೇಟರಾಗಿ ನೇಮಕಮಾಡಿ ಖರ್ಚು ಕಡಿಮೆಮಾಡುವ ಉಪಾಯವನ್ನು ಮಾಡಲಿರುವರು. ಹೀಗೆ ಮೆಜಿಸ್ಟ್ರೇಟರಾಗಿ ನೇಮಕ ಹೊಂದಲ್ಪಟ್ಟವರಿಗೆ ೧೦೦ ರೂಪಾಯಿ ಸಂಬಳವು ಹೆಚ್ಚು ಸಿಗುವುದು.

— ಅಲ್ಲಹಾಬಾದಿನಲ್ಲಿ ಪಿಲ್ಲಿಟ್ ಎಂಬವರನ್ನು ಕೊಲ್ಲಲೆತ್ನಿಸಿದ ಯುಶಪಾಲನಿಗೆ ೭ ವರುಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು.

— ದೈ ಇಂಡಿಯನ್ ಲೀಗ್ ಎಂಬುದು ಶುದ್ಧ ಸ್ವದೇಶಪ್ರಚಾರ ಕಾರ್ಯದಲ್ಲಿ ನಿರತವಾಗುವುದಾದರೆ ಅದಕ್ಕೆ ಸರಕಾರದ ಸಹಾನುಭೂತಿಯುದೆಯೆಂದು ಮೊನ್ನೆ ಸರಕಾರದ ಒಂದು ಪ್ರಕಟಣೆಯಿಂದ ತಿಳಿದುಬರುತ್ತದೆ.

— ಸೇಲಮಿನಲ್ಲಿ ತಾ ೬ನೇ ದಿನ ಒಂದು ಮೋಟರು ಒಂದು ಮರಕ್ಕೆ ಡಿಕ್ಕಿ ಬಡೆಯಿತು. ೩ ಮಂದಿಗಳು ಬಸ್ಸಿನೊಳಗೆಯೇ ಸಾಯಿದರು. ೭ ಮಂದಿಗಳಿಗೆ ವಿಶೇಷ ಜಖಂ ಆಗಿದೆ. ಬಸ್ಸು ಸುಡಲ್ಪಟ್ಟು ಸುಟ್ಟುಹೋಗಿದೆ. ಡ್ರೈವರನು ಬದುಕಿರುವನೋ ಸತ್ತಿರುವನೋ ತಿಳಿದಿಲ್ಲ.

ದಕ್ಷಿಣ ಕನ್ನಡ

ಮಂಗಳೂರು. — ಇದೇ ತಾ ೧೩ನೇ ಶನಿವಾರ ಶ್ರೀ ರಾಮಕೃಷ್ಣ ಪರಮಹಂಸರ ೯೭ನೇ ಜನನ ದಿನ ಸ್ಮರಣಾರ್ಥವಾಗಿ ಕೆನರಾ ಹೈಸ್ಕೂಲಿನ ಹೊಸ ಕಟ್ಟೋಣದಲ್ಲಿ ೬ ಗಂಟೆಗೆ ಬಡವರಿಗೆ ಅನ್ನದಾನ ಹಂಚಲಾಗುವುದು. ಮರುದಿನ ಅಂದರೆ ಆದಿತ್ಯವಾರ ೫ ಗಂಟೆಗೆ ಇದೇ ಸ್ಥಳದಲ್ಲಿ ಒಂದು ಸಾರ್ವಜನಿಕ ಸಭೆಯು ಸೇರುವುದು. ಶ್ರೀಗಳಾದ ಎಂ ಎಸ್ ಮಾಧವರಾವ್, ಎಂ ಎಸ್ ಕಾಮತ್, ಎಸ್. ಮುಕುಂದರಾವ್, ಎಂ ಎ ಎಲ್ ಟಿ ಇವರು ಭಾಷಣ ಮಾಡಲಿರುವರು. ಎಲ್ಲರಿಗೂ ಸುಸ್ವಾಗತ.

ಕೆಲವು ಪ್ರಾಮುಖ್ಯ ವಿಷಯಗಳನ್ನು ಪರ್ಯಾಲೋಚಿಸಿ ನಿರ್ಧರಿಸುವುದಕ್ಕಾಗಿ ಅದ್ವೈತ ಸಮಿತಿ ಮಂಗಳೂರು ಇದರ ಈ ವರ್ಷದ ಕಾರ್ಯನಿರ್ವಾಹಕ ಮಂಡಲಿಯ ಪ್ರಥಮಾಧಿವೇಶನವು ಇದೇ ತಾರೀಖು ೧೩ನೇ ಆದಿತ್ಯವಾರ ಸಾಯಂಕಾಲ ಘಂಟೆ ೫ಕ್ಕೆ ರಾಮಕ್ಷತ್ರಿಯ ಬಾಲಿಕಾ ಪಾಠ ಶಾಲೆಯ ವಸಂತ ಮಂದಿರದಲ್ಲಿ ಜರಗುವುದು.

ಸ್ಥಳೀಯ ಶ್ರೀ ಕೃಷ್ಣಾ ಸಿನೇಮಾ ಮಂದಿರದಲ್ಲಿ ನಾಳೆಯಿಂದ ಭಕ್ತ ಪ್ರಹ್ಲಾದ ಎಂಬ ಅತ್ಯುತ್ತಮವಾದ ಮಾತಾಡುವ ಚಲಚಿತ್ರವನ್ನು ಪ್ರದರ್ಶಿಸಲಿಕ್ಕಿರುವರು. ಟಿಕೇಟಿನ ದರ ಎಂದಿನಂತೆಯೇ.

ಭರಂಗಿಪೇಟೆಯ ಶ್ರೀ ರಾಮಾ ಶಾಯರ್ ಎಲಿಮೆಂಟರಿ ಶಾಲೆಯ ಸ್ಟೀರಿಯೊ ಆಲ್ಬಂ ಮತ್ತು "ಸಂಮುದೇ." "ಶೀರಬಾಲ" ಎಂಬ ಎರಡು ನಾಟಕಗಳ ಹಸ್ತ ಪ್ರತಿಗಳು ಇಲ್ಲಿಂದ ನಾವು ಹಿಂದೆ ಕಳುಹಿಸಿದ ಶಿಕ್ಷಣ ವಸ್ತು ಪ್ರದರ್ಶನದ ಸಾಮಾನುಗಳಲ್ಲಿ ಸೇರಿವೆಯಾದರೆ ದಯಮಾಡಿ ನಮಗೆ ತಿಳಿಸಿರಿ. ಅದನ್ನು ಇಲ್ಲಿಂದ ನಮ್ಮ ಖರ್ಚಿನಿಂದ ನಾವು ತರಿಸಿಕೊಳ್ಳುವೆವು ಎಂದು ದಕ್ಷಿಣ ಕನ್ನಡ ಶಿಕ್ಷಣ ಪ್ರದರ್ಶನ ಕಮಿಟಿಯ ಸೆಕ್ರೆಟರಿಗಳಾದ ಟ್ರೈನಿಂಗ ಮಂಗೇಶರಾವ್ ಇವರು ತಿಳಿಸುತ್ತಾರೆ.

'ಸ್ವದೇಶಿ ಸಂಘ' ವೊಂದು ಮಂಗಳೂರಲ್ಲಿ ಸ್ಥಾಪಿತವಾಗಿದೆ. ಹಿಂದೀಯ ಸಾಮಾನುಗಳನ್ನೇ ಜನರು ಕೊಳ್ಳಬೇಕೆಂದು ಬೋಧಿಸುವುದು ಇದರ ಉದ್ದೇಶ. ಇದಕ್ಕೆ ಶ್ರೀಯುತರ "ಸ ದ ಎಸ ಸುಬ್ಬರಾವ್ ಗೊಲ್ಲರಕೇರಿ ಕೃಷ್ಣರಾವ್, ಎ ವರದರಾವ್ ಕಾರ್ಕಳ ಸದಾಶಿವರಾವ್ ಎಂ ಮಾಧವ ರಾವ್ ಎ ಬಿ ಶೆಟ್ಟಿ ಯು ಸಿ ಎಸ್ ಭಟ್ ಕೆ ವೆಂಕಟ್ರಾವ್ ಕೆ ಜನರಾಜ ಹೆಗ್ಡೆ ಕೆ ಆರ್ ಆಚಾರ್ ಮತ್ತು ಇನ್ನೂ ಅನೇಕರು ಸೇರಿರುವರು. ಇದಕ್ಕೆ ಸಹಾಯವನ್ನೀಯ ಬೇಕಾಗಿ ಅಪೇಕ್ಷೆಯಿದೆ.

೪ನೇ ತಾರೀಕಿನ ದಿನ ಇಲ್ಲಿಯ ಇಬ್ರಾಹಿಮರ ಅಂಗಡಿಯು ಪಿಕೆಟ್ ಮಾಡಲ್ಪಟ್ಟಿತು. ಎರಡು ಘಂಟೆಗಳ ತನಕ ಪಿಕೆಟಿಂಗು ನಡೆಯಿತು. ನಿತ್ಯದಂತೆ ಪೋಲೀಸರ ಆಗಮನವಾಗಲಿಲ್ಲ. ಪಿಕೆಟರು ಮನೆಗೆ ತೆರಳಿದರು. ಅವರು ಹೋದ ಸ್ವಲ್ಪ ಹೊತ್ತಿನಲ್ಲಿಯೇ ಪೋಲೀಸರು ಬಂದರು.

ಇಲ್ಲಿಯ ಕೆಲವು ಅಶ್ವತ್ಥ ಮರದ ತುದಿಯಲ್ಲಿ ಕೊಂಗ್ರೆಸ್ ಬಾವುಟಗಳಿದ್ದುವಷ್ಟೆ! ಅವುಗಳು ಮೊನ್ನೆ ಮಂಗಳವಾರ ಮಧ್ಯಾಹ್ನದ ತನಕ ಅಲ್ಲಿಯೇ ಇದ್ದುವು. ಸಾಧಾರಣ ೩ ಗಂಟೆಯ ಸಮಯಕ್ಕೆ ಇಬ್ಬರು ಪೋಲೀಸರು ಜೈಲಿನ ಒಬ್ಬ ಕೈದಿಯನ್ನು ತಂದು ಎಲ್ಲಾ ಮರಗಳಿಗೆ ಅವನನ್ನು ಹತ್ತಿಸಿ ಧ್ವಜಗಳನ್ನು ತೆಗೆಸಿದರು. ಆದರೆ ಮರುದಿನ ಬೆಳಗ್ಗೆ ನೋಡುವುದೇನು? ಕಾಳಮ್ಮ ದೇವಸ್ಥಾನದ ಎದುರಿನಲ್ಲಿರುವ ಅಶ್ವತ್ಥ ಮರದ ತುದಿಯಲ್ಲಿ ಬಾವುಟೆಯು ಮುಂಚಿನಂತೆಯೇ ಹಾರಿತು. ಇದನ್ನು ಪುನಃ ತೆಗೆಸಲಾಯಿತು.

ಸೋಮವಾರ ದಿನ ಇಲ್ಲಿಯ ಡೊಂಗರಕೇರಿಯ ಮಾರ್ಗದ ಎದುರಿನ ಒಂದು ಅಶ್ವತ್ಥ ಮರದ ಮೇಲೆ ಖಾದಿ ಬಟ್ಟೆಯ ದೇಹದ ಪುರುಷನಾಕೃತಿಯ ಬೊಂಬೆಯನ್ನು ಮಾಡಿ ಯಾರೋ ಕುಳ್ಳಿರಿಸಿದ್ದರು. ಅದರ ಕೈಯಲ್ಲಿ ಧ್ವಜವೂ ಇದ್ದಿತು. ಮರುದಿನ ಪೋಲೀಸರು ಬಂದು ಅದನ್ನು ತೆಗೆಯಿಸಿ, ಬೊಂಬೆಯನ್ನು ಗಾಡಿಯಲ್ಲಿ ಹಾಕಿ ಸ್ಟೇಶನಿಗೆ ಕೊಂಡೊಯ್ದರೆಂದು ತಿಳಿದುಬರುತ್ತದೆ.

ಶಿವರಾತ್ರಿಯ ದಿನ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ತುಂಬಾ ಬುಲ್ಲೆಟಿನುಗಳು ಹಂಚಲ್ಪಟ್ಟಿದ್ದುವೆಂದು ತಿಳಿದುಬರುತ್ತದೆ. ಪೋಲೀಸರಿದ್ದರಾದರೂ ಅವರು ಇದರಲ್ಲಿ ಮನಸ್ಸುಕೊಟ್ಟಿದ್ದಿಲ್ಲ.

ಶ್ರೀ ಎ ನಾರಾಯಣ ರೈಯವರು ಪ್ರೊಬೆಶನರಿ ಅಸಿಸ್ಟಾಂಟ್ ಪೋಲೀಸ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರು.

ಬೋಳಾರದ ಸೋಶಿಯಲ್ ಸರ್ವಿಸ್ ಲೀಜಿನ ೩೨ನೇ ವಾರ್ಷಿಕೋತ್ಸವವು ಕಳೆದ ಆದಿತ್ಯವಾರ ಶ್ರೀ ಬಿ ಕೊರಗಪ್ಪ ಬಿ ಎ ಬಿ ಎಲ್ (ಮುನ್ಸಿಪಲ್ ಕೌನ್ಸಿಲರ್) ಇವರ ಅಧ್ಯಕ್ಷತೆಯಲ್ಲಿ ಜರಗಿತು. ಬಹು ಮಂದಿ ಸದ್ಗೃಹಸ್ಥರು ನೆರೆದಿದ್ದರು.

ಕಳೆದ ಶನಿವಾರ ಪೂರ್ವಾಹ್ನದಿಂದ ೧೧ರ ತನಕ ಇಲ್ಲಿಯ ಕಾನ್ಸಿಯವರ ಅಂಗಡಿಯನ್ನು ಶ್ರೀ ಸಂಕಪ್ಪ ರೈ ಮತ್ತು ಬಿ ನಾರಾಯಣ ರೈ (ಡಿಕ್ಟೇಟರ್) ಇವರು ಪಿಕೆಟ್ ಮಾಡಿದರು. ಪೋಲೀಸರು ಬಂದು ಇಬ್ಬರನ್ನೂ ದಸ್ತಗಿರಿ ಮಾಡಿ ಕೊಂಡೊಯ್ದರು. ಮರುದಿನ ಸಂಕಪ್ಪ ರೈಯವರು ಬಿಡುಗಡೆ ಹೊಂದಿದರು. ಶ್ರೀ ನಾರಾಯಣ ರೈಯವರ ವಿಚಾರಣೆಯಾಗಿ ಅವರಿಗೆ ೧ ವರ್ಷದ ಸಖ್ತ ಸಜೆಯು ಸೋಮವಾರ ಲಭಿಸಿತು.

ಇಲ್ಲಿ ಸೆಕ್ಷನ್ ೪೪ ತಾ ೪ರಿಂದ ಎರಡು ತಿಂಗಳ ತನಕ ಪುನಃ ಮುಂದರಿಸಲ್ಪಟ್ಟಿದೆ ಎಂದು ತಿಳಿದುಬರುತ್ತದೆ.

ಇದೇ ಬುಧವಾರ ದಿನ ಶ್ರೀ ಗಣಪದ ಬಾಬು ಮತ್ತು ಬಸಪ್ಪ ರೆಂಬವರು ಕಾನ್ಸಿಯವರ ಅಂಗಡಿಯನ್ನು ಪಿಕೆಟ ಮಾಡಿದರು. ಪೋಲೀಸರು ಬಂದು ಅವರಿಬ್ಬರಿಗೂ ಪೆಟ್ಟುಕೊಟ್ಟು ಲೋರಿಯಲ್ಲಿ ಹಾಕಿ ಸ್ಟೇಶನಿಗೆ ಕೊಂಡೊಯ್ದರು.

ಕಳೆದ ಆದಿತ್ಯವಾರ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಶಿವರಾತ್ರಿ ಮಹೋತ್ಸವದ ದಿನ ಮುಂಬಾಯಿಯ ಶ್ರೀ ಸದಾನಂದ (ದಾಸ್) ಎಂಬವರು ಬ್ರಹ್ಮ ಶ್ರೀ ನಾರಾಯಣ ಸ್ವಾಮಿಯ ಜೀವನ ಚರಿತೆಯ ಕುರಿತು ಉತ್ತಮವಾದ ಹರಿಕಥೆಯನ್ನು ಮಾಡಿದರು. ಬರುವ ಆದಿತ್ಯವಾರ ಅಲ್ಲಿಯೆ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ಗೋಪಿಚಂದ ಚರಿತ್ರೆ ಎಂಬ ಕುರಿತು ಹರಿಕಥೆ ನಡೆಸಲಿರುವರು. ಸರ್ವರಿಗೂ ಸುಸ್ವಾಗತ.

ಇಲ್ಲಿಯ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಶಿವರಾತ್ರಿ ಸಮಯಕ್ಕೆ ಪ್ರತಿ ವರ್ಷವೂ ನಡೆಯುತ್ತಿದ್ದ ಕೋಳಿ ಕಟ್ಟ ಪದ್ಧತಿಯು ಈ ವರ್ಷ ಪೋಲೀಸರಿಂದ ನಿಲ್ಲಿಸಲ್ಪಟ್ಟಿದೆ. ಇಂತಹ ಕಟ್ಟಗಳು ಅನೇಕ ಕಡೆಗಳಲ್ಲಿ ನಡೆಯುತ್ತಿವೆ. ಸಾರ್ವಜನಿಕ ದೃಷ್ಟಿಯಿಂದ ಅಪಾಯಕರವಾಗಿರುವ ಈ ಪದ್ಧತಿಯು ನಿರ್ಮೂಲಿಸಲ್ಪಡುತ್ತಿರುವುದು ಸ್ತುತ್ಯ.

೨೯ನೇ ದಿನ ಬೆಳಗ್ಗೆ ಸುಮಾರು ೧೦ ಘಂಟೆಗೆ ಗಣಪತಿ ಶಾಲೆಯ ಶ್ರೀ ಎಚ್ ರಾಮ ಪ್ರಸನ್ನ ವಿದ್ಯಾರ್ಥಿಯನ್ನು ಕೈದುಮಾಡಿದರು. ಇವರು ಕಳೆದ ವರ್ಷದಲ್ಲಿ ಕೋರ್ಟು ಮುಂದೆ ಪಿಕೆಟು ಮಾಡಿ ಪೆಟ್ಟುತಿಂದವರು. ಮೊನ್ನೆ ಈ ವಿದ್ಯಾರ್ಥಿಯ ಕೈಯಲ್ಲಿ ಕೊಂಗ್ರೆಸ ಕರಪತ್ರವು ಇದ್ದುದನ್ನು ನೋಡಿ ಪೋಲೀಸರು ಅವುಗಳಲ್ಲಿಂದ ಬಂತೆಂಬ ಕುರಿತು ಈ ಸತ್ಯಾಗ್ರಹಿಯನ್ನು ಗದರಿಸಿ ಕೇಳಿದರು. ಶ್ರೀ ರಾಮಪ್ಪನವರ ಮನೆಯು ಜಪ್ತಿ ಮಾಡಲ್ಪಟ್ಟಿದೆ ಎಂಬ ಇವರನ್ನು ಒಪ್ಪಿದವರು.

'ಪ್ರಭಾತ'ವೆಂಬ ಕಾಂಗ್ರೆಸ್ ಕರಪತ್ರಗಳು ಪಟ್ಟಣದಲ್ಲಿ ಹಂಚಲ್ಪಡುತ್ತಿವೆಯೆಂದೂ ಇದರಲ್ಲಿ ಕಾಂಗ್ರೆಸ್ ಕೆಲಸದ ವರದಿಯೇ ಇದೆಯೆಂದೂ ತಿಳಿದುಬಂದಿದೆ.

ಉಡುಪಿ: — ಶ್ರೀ ಸಾಂತ್ಯಾರು ಅನಂತ ಪದ್ಮನಾಭ ಭಟ್ಟರ ಒಂದು ತಿಂಗಳ ಹಿಂದೆ ಹೊರಿಸಲಾದ ಜುಲುಮಾನೆಯನ್ನು ಸದ್ರಿಯವರು ಕೊಡದಿದ್ದ ಕಾರಣ ಕಳೆದ ತಾ. ೨೬ಕ್ಕೆ ಅವರು ಇಲ್ಲಿನ ಡಿವಿಜನಲ್ ಆಫೀಸರರ ಎದುರು ಹಾಜರಾಗಬೇಕಾಗಿ ತಿಳಿಸಿದಂತೆ ಸದ್ರಿಯವರು ಹಾಜರಾದರು. ಆಗಲೂ ಅವರು ಜುಲುಮಾನೆಯನ್ನು ತೆರಲು ಸಮ್ಮತಿಸದ ಕಾರಣ ಮರುದಿನ ೧೧ ಗಂಟೆಗೆ ಸದ್ರಿಯವರು ಡಿವಿಜನಲ್ ಆಫೀಸರರೆದುರು ಮಂಗಳೂರಲ್ಲಿ ಹಾಜರಾಗಬೇಕೆಂದಾಯಿತು. ಮರು ದಿನ ಶ್ರೀ ಭಟ್ಟರು ಮಂಗಳೂರಲ್ಲಿ ಹಾಜರಾದಾಗ್ಗೆ ಮಂಗಳೂರಿನ ಡಿ ಮೆಜಿಸ್ಟ್ರೇಟರು ೬ ವಾರಗಳ ಕಠಿಣ ಸಜೆಯನ್ನು ವಿಧಿಸಿರುತ್ತಾರೆ.

ಕಳೆದ ತಿಂಗಳ ತಾ ೨೬ಕ್ಕೆ ಜಿಲ್ಲಾ ಮುಖ್ಯಾಧಿಕಾರಿಯವರ ಅಪೇಕ್ಷೆ ಮೇರೆಗೆಂದು ದಕ್ಷಿಣ ಕನ್ನಡದಲ್ಲಿ ರಾಜಕೀಯ ಸತ್ಯಾಗ್ರಹಿಗಳ ಬಗ್ಗೆ ಸಹತಾಪವನ್ನು ಸೂಚಿಸುವುದಕ್ಕೆಂದು ಹರತಾಳವು ಶಾಂತಮಯವಾಗಿ ಆಚರಿಸಲ್ಪಟ್ಟಿತು. ಬೇರಾವ ಗಲಭೆಯೂ ಇದ್ದಿಲ್ಲ.

ಈಚೆಗೆ ಒಂದೆರಡು ಸಲ ಇಲ್ಲಿ ಬಹಿಷ್ಕಾರ ಪತ್ರಿಕೆಗಳು ಹಂಚಲಾಗಿವೆ.

ತಾ ೯ — ೩ — ೩೨ನೆಗೆ ಇಲ್ಲಿನ ಪ್ರಮುಖ ಜವುಳಿ ಸಾಹುಕಾರರಾದ ಶ್ರೀ ವೇಲ್ಲಿ ಕಲ್ಯಾಣಜಿ ಸೇಟರ ಅಂಗಡಿಯನ್ನು ಶ್ರೀಗಳಾದ ಯು ನಾಗೇಶ ಶೆಟ್ಟಿ ಮತ್ತು ಬಿ ದೇಜಪ್ಪ ಶೆಟ್ಟಿಯವರು ಮಧ್ಯಾಹ್ನ ಘಂಟೆ ೧ರಿಂದ ೪॥ ಘಂಟೆಯ ತನಕ ಶಾಂತಮಯವಾದ ಪಹರೆ ಮಾಡಿರುವರು.

ಶ್ರೀ ಮದನಂತೇಶ್ವರ ದೇವಸ್ಥಾನದ ರಥೋತ್ಸವವು ಶಿವರಾತ್ರಿ ಕಾಲದಲ್ಲಿ ಯಥಾಸಾಂಗವಾಗಿ ನೆರವೇರಿಸಲ್ಪಟ್ಟಿತು. ತಾ ೭ರಲ್ಲಿ ಕಟ್ಟೆಪೂಜೆಯ ವೇಳೆ ಸೋದೆ ಮಠದ ಬಳಿ ದೇವರ ಚಿಕ್ಕ ರಥದ ಅಡಿಯಲ್ಲಿ ಸೊನೆಗಾರ ಶೆಟ್ಟಿಯ ಹುಡುಗನೊಬ್ಬನು ಬಿದ್ದು ಜಖಂ ಆಗಿರುತ್ತದೆ. ಕಾಲಿನ ಎಲುಬು ತುಂಡಾಗಿರುತ್ತದೆಂದು ಕೇಳುತ್ತೇವೆ. ಬಾಲಕನನ್ನು ಕೂಡಲೇ ಡಾಕ್ಟರರ ಬಳಿ ಒಯ್ಯಲಾಯಿತು. ಚಿಕಿತ್ಸೆ ನಡೆಯುತ್ತಿದೆ.

ಸ್ಥಳೀಕ ಜಯಲಕ್ಷ್ಮಿ ಸಿನೇಮಾದವರೂ ಉತ್ಸವ ಕಾಲದಲ್ಲಿ ಬಂದು ನೆಲಸಿರುವ ದುರ್ಗಾ ಸಿನೇಮಾದವರೂ ಟಿಕೇಟಿನ ದರಗಳನ್ನು ತಗ್ಗಿಸಿ ಪ್ರದರ್ಶನಗಳನ್ನು ಮಾಡುತ್ತಿರುವರು. ಕಂಪೆನಿಯ ಪರಮೇಲಾಟದಿಂದ ಪ್ರೇಕ್ಷಕವರ್ಗಕ್ಕೆ ಸ್ವಲ್ಪ ಅನುಕೂಲವಾಯಿತು.

ಪಡುಬಿದ್ರಿ — ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ಆಗುವ ಉತ್ಸವ ಸಂಬಂಧವಾದ ಧ್ವಜಾರೋಹಣವು ಇದೇ ಪ್ರಜೋತ್ಪತ್ತಿ ಸಂವತ್ಸರದ ವಿಷಾನ ಸಂಕ್ರಮಣ ತಾರೀಖು ೨೩—೩ ೩೨ನೇ ರವಿವಾರವೂ ಅಯನೋತ್ಸವವು ಮತ್ತು ತೆಂಕುದಿಟ್ಟು ಬಡಗುದಿಟ್ಟು ಯಕ್ಷಗಾನ ತಾಳಮದ್ದಳೆ ಕೂಡ ೩ — ೧೪ನೇ ಸೋಮವಾರ ರಾತ್ರಿಗೂ ರಥಾರೋಹಣೋತ್ಸವವು ತಾ ೩೦ನೇ ರವಿವಾರ ದಿವಸ ರಾತ್ರಿಗೂ ನಾಗಬಲು ತೆರೆಯುವುದು ಮತ್ತು ತೆಂಡಾಟ ಉತ್ಸವವು ತಾ ೩೧ನೇ ಚಂದ್ರವಾರ ದಿವಸವೂ ಜರಗುವುದು.

ಪುತ್ತೂರು— ಈ ತಾಲೂಕಿನ ಪ್ರೊಸೆಸಂಡ ಕಮಿಟಿಯವರು ಇದೇ ಕಳೆದ ೨೬ನೇ ಸೋಮವಾರ ಸಾಯಂಕಾಲ ಇಲ್ಲಿನ "ಬೋರ್ಡ ಹೈಯರ ಎಲಿಮೆಂಟರಿ ಶಾಲೆಯಲ್ಲಿ 'ಆ ದು ಇಂದು' 'ಪರ ಬರಹ' ಮತ್ತು 'ತಲೆಸರಿಯಲ್ಲ' ಎಂಬ ಮೂರು ಚಿಕ್ಕ ಚಿಕ್ಕ ನಾಟಕಗಳನ್ನು ಮನೋರಂಜಕವಾಗುವಂತೆ ಅಭಿನಯಿಸಿದರು. 'ತಲೆಸರಿಯಲ್ಲ'ದ ನಾಟಕದ ಬುದ್ಧಿವಂತ ತಲೆ ಸರಿಯಲ್ಲದ ಪಾತ್ರದಿಂದಲೇ ತುಂಬಾ ಸರಸವಾಗಿತ್ತು. Paradise Lost (ಸ್ವರ್ಗವು ಹೋಯಿತು) ಎನ್ನುವುದನ್ನು ಬರೆದ ಮಿಲ್ಟನ್ ಕವಿಯೇ Paradise Found (ಸ್ವರ್ಗವು ಸಿಕ್ಕಿತು) ಎಂಬ ಮತ್ತೊಂದು ಕಾವ್ಯವನ್ನು ಬರೆದನೆಂದು ಸದರಿ ಕಮಿಟಿಯವರು ತಲೆ ಸರಿ ಇಲ್ಲದವನು ಎಂಬ ಕಥಾನಕವನ್ನು ಅಭಿನಯಕ್ಕೆ ತಂದರೆ ಚೆನ್ನಾಗಿತ್ತಲ್ಲವೇ.

ಕಾಸರಗೋಡು. ತಾ ೫ — ೩ — ೩೨ರಲ್ಲಿ ಎಲಿಕೋಡಿ ಮುದ್ದನಂಗಡಿ ಪಿಕೆಟಿಂಗನ್ನು ಶ್ರೀ ಕೆ ರಾಮನ ಮತ್ತು ಸ್ವಾಮಿ ಅಮರಗಿರಿ ಎಂಬವರು ನಡೆಸಿದರು. ಕಾಂಞಂಗಾಡಿನ ಸಬ್ ಇನ್ಸಪೆಕ್ಟರರು ೬ ಮಂದಿ ಪೋಲೀಸರೊಡನೆ ಬಂದು ಸ್ವಯಂಸೇವಕರಿಗೆ ಬೆತ್ತದಿಂದ ಹೊಡೆದರು. ಅವರಿಗೆ ಕೈಯಿಕ್ಕಿ ಸ್ವಲ್ಪ ದೂರಕ್ಕೆ ನೂಕಿ ಕೊಂಡೊಯ್ದು ಹೋದರು ಎಂದು ತಿಳಿಯುತ್ತೇವೆ.

ಬಂಟ್ವಾಳ — ಈ ತಾಲೂಕಿನ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯು ಇದೇ ಮಾರ್ಚ ತಿಂಗಳ ತಾ ೧೯ನೇ ಶನಿವಾರ ದಿನ ಎಂಟ್ರಾನ್ಸ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಜರಗುವುದು.

ಕಾಸರಗೋಡು ತಾಲೂಕ ಎಣ್ಮಕಜೆ ಗ್ರಾಮದ ತಲೆಯಂಗಳ ನಿರ್ವಹಿಕೆ ಕಂಟ್ರಿ ವಿದವೆ ಲಕ್ಷ್ಮಿ ಅಮ್ಮನಾದ ನನ್ನ ಗಂಡನ ಕೃಷ್ಣನ ಒಗ್ಗ ಗಾರ್ಡಿಯನಾಗಿ ಕೊಡುವ

ನೋಟೀಸು

ನಮ್ಮ ಕುಟುಂಬದ ಸಮಷ್ಟಿ ಹಕ್ಕಿನ ಸ್ಥಿರಾಸ್ತಿಗಳ ಮೇಲೆ ೧೮,೦೦೦/- ಹತ್ತು ಸಾವಿರ ರೂಪಾಯಿಗಳ ಹೊರಗಿನಿಂದ ಒಂದು ತೃಪ್ತಿ ಉಂಟು. ಇವುಗಳ ಆಡಳಿತವು ಕುಟುಂಬದ ಯಜಮಾನರಾದ ನನ್ನ ಮಾವ ಕೃಷ್ಣಭಟ್ಟರು ನಡೆಸಿಬರುತ್ತಾರೆ. ಪ್ರಸ್ತುತ ಸದ್ರಿ ಕೃಷ್ಣಭಟ್ಟರಿಗೆ ಸುಮಾರು ೭೦ ವರ್ಷ ಪ್ರಾಯವಾಗಿ ಬುದ್ಧಿ ಸುಸ್ಥಿತ ಸರಿಯಿಲ್ಲದೆ ಇರುವುದರಿಂದ ನಮ್ಮ ದ್ವೇಷಿಕರು ಅಪ್ರಮಾಣ್ಯ ಪಡಿಸುವ ಇರಾದೆಯಿಂದ ಅವರಿಂದ ಯಾವದಾದರೂ ಪತ್ರಾದಿಗಳನ್ನು ಬರಸಿಕೊಳ್ಳುವ ಇರಾದೆಯಲ್ಲಿದ್ದಾರೆ. ಹಾಗೆ ಅವರು ಮಾಡಿಕೊಡುವ ಯಾವ ಸ್ವಾಧೀನ ದಸ್ತಾವೇಜುಗಳು, ನಮ್ಮ ಸಮಷ್ಟಿ ಹಕ್ಕಿಗೆ ಬಾಧಿಸತಕ್ಕದ್ದಲ್ಲ, ವ ಅಂಥಾ ದಸ್ತೈವಜುಗಳು ಅಸಿಂಧು ಆಗಿರತಕ್ಕದ್ದೆಂತ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸಲಾಗುತ್ತದೆ.

ತಾ ೪—೩—೩೨ ಲಕ್ಷ್ಮೀ ಅಮ್ಮನ ರುಜು.

ಶಾಲಿವಾಹನಶಕೆ ೧೮೫೩ನೆಯ ಪ್ರಜೋತ್ಪತ್ತಿ ಸಂವತ್ಸರದ ಫಾಲ್ಗುಣ ಶು ೫ ಶನಿವಾರದಿಂದ ಪ್ರಜೊ. ಸಂ॥ದ ಫಾಲ್ಗುಣ ಶು ೧೧ ಶುಕ್ರವಾರದ ವರೆಗಿನ ಪಂಚಾಂಗ

(೧೯೩೨ನೆಯ ಮೀನ– ಸುಗ್ಗಿ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ	ಅಸ್ತ
12	ಶನಿ	೫	೪೩ ೩೦	ಭರಣೀ	೩೦ ೩೦	೨೯	6 42	6 39
13	ರವಿ	೬	೪೭ ೩೦	ಕೃತ್ತಿಕಾ	೩೩ ೨	೩೦	6 41	6 40
14	ಸೋಮ	೭	೫೦ ೨	ರೋಹಿಣಿ	೪೦ ೧೩	೧	6.40	6 40
15	ಮಂಗಳ	೮	೫೧ ೧೪	ಮೃಗಶಿರಾ	೪೩ ೪೪	೨	6 40	6.40
16	ಬುಧ	೯	೫೨ ೨	ಆದ್ರಾ	೪೫.೪೪	೩	6.39	6 40
17	ಗುರು	೧೦	೫೧.೧೬	ಪುನರ್ವಸು	೪೬ ೩೬	೪	6.39	6 40
18	ಶುಕ್ರ	೧೧	೪೯.೧೬	ಪುಷ್ಯಾ	೪೬ ೧೬	೫	6 38	6.40

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಕಾವು)		Rainfall ಮಳೆ	
	ಗರಿಷ್ಠ	ಕನಿಷ್ಠ	ದಿನದ ಮಳೆ	ಒಟ್ಟು ಮಳೆ
4	94— 1	70— 0	—	—
5	94— 7	71— 2	—	—
6	91— 8	72— 2	—	—
7	87— 3	72— 8	—	—
8	88— 1	73 8	—	—
9	86— 1	74 5	—	—
10	86— 8	71— 4	—	149–96

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ ಆ	ವರೆಗೆ ರೂ ಆ
ಹೊಸ ರಾಶಿ ಅಕ್ಕಿ	3 – 1)	4 –
ಹೊಸ ಮುಸ್ಕು	4 – (	4
ಹೊಸ ಗುಡ್ಡ	3 14	4 – 4
ಹೊಸ ಸುಗ್ಗಿ	3 1(	3 – 14
ಊರ ಅಮ್ಲರ್ ಬೆಳ್ತಿಗೆ	4 8	5 – 1
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	– 14	
ಎಲ್ಲಾರುಬೆಳ್ತಿಗೆ ಮುಡಿ ಗಳ್ಳೆ	4 –	4 – 1
ಗ್ಯಾಡಿ ಗೋಣಿ ಗಳ್ಳೆ	– 8	1 –
ಸಿಂಗಾ ಗೋಣಿ ಗಳ್ಳೆ	12 – 0	
ಕುರುಳಿಗೋಣಿ ಗಳ್ಳೆ	6 – 8	–
ಕಡಲೆ ಗೋಣಿ ಗಳ್ಳೆ	8 – 8	12 – 8
ಕೋಗಿಂಬೀಜ ಗೋಣಿ ಗಳ್ಳೆ	1 – 8	1 0
ಉದ್ದು ಗೋಣಿ ಗಳ್ಳೆ	11 – 8	1 0
ಹೆಸರು ಗೋಣಿ ಗಳ್ಳೆ	1(– 4	1
ಊರು ಬೆಲ್ಲ ಖಂಡಿ ಗಳ್ಳೆ	30 –	31 – 4
ಉಪ್ಪು ಗೋಣಿ ಗಳ್ಳೆ	4 – 12	4 – 14
ಕೊಡಿ ಖಂಡಿ ಗಳ್ಳೆ	60 –	6 –
ಕೊಬ್ರಿ ಹಿಂಡಿ ಖಂಡಿ ಗಳ್ಳೆ	2 – 8	25 –
ಎಳ್ಳಿಂಡಿ ಖಂಡಿ ಗಳ್ಳೆ	2 – 8	2 – 4
ಕೊಬ್ರಿ ಎಣ್ಣೆ ಮಣ ಗಳ್ಳೆ	– 14	– 14
ಎಳ್ಳೆಣ್ಣೆ ಮಣ ಗಳ್ಳೆ	6 – 12	–
ಇಲುಪೆಎಣ್ಣೆ ಪಟ್ಟಿಗೆ ಗಳ್ಳೆ	4 – 7	5 2
[illegible] ಗಳ್ಳೆ	4 – 2	4 – 3
[illegible]	4 – 0	5 –
[illegible] ಮುಡಿ ಗಳ್ಳೆ	– 8	6 – 0
ನೇಟಿವ್ ಕಾಫಿ ಖಂಡಿ ಗಳ್ಳೆ	21 – 8	226 –
ಕಾಳುಮೆಣಸು ಖಂಡಿ ಗಳ್ಳೆ	7 (	180 –
ಯಾಲಕ್ಕಿ ಮಣ ಗಳ್ಳೆ	7 – 0	48 –
ಗೇರುಬೀಜ ಮುಡಿ ಗಳ್ಳೆ	4 – 6	4 – 12
ಅಕ್ಕಿಮ ಖಂಡಿ ಗಳ್ಳೆ	3 0	37 – 8
ತಾಂಬ್ರ ತಗಡು ಮಣ ಗಳ್ಳೆ	3	13 8
ತಾಂಬ್ರ ಪಾತ್ರಗಳು ಮಣ ಗಳ್ಳೆ	16	16 – 0
ಹಿತ್ತಾಳೆ ಸೇರು ಗಳ್ಳೆ		10 – 0
ಹಿತ್ತಾಳೆ ತಗಡು ಮಣ ಗಳ್ಳೆ	12 0	12 –
ಜವನು ಗಳ್ಳೆ	18 – 4	18 – 8
ಹುಣಸೆ ಹುಳಿ ಖಂಡಿ ಗಳ್ಳೆ	2	–
ಪಿಟೀರಿ ಕಾಫಿ ಖಂಡಿ ಗಳ್ಳೆ	378 –	400 –
ಹಳೆ ಅಡಿಕೆ	180 –	205 –
ಹೊಸಅಡಿಕೆ	40 –	145 –

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್ Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ [illegible] ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರುತ್ತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಅಲ್ಲಿಂದ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವರ್ಗ್ಯರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ [illegible] ಮಾರ್ಗವಾಗಿ ಸಾಯಂಕಾಲ 4 30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು [illegible] ಘಂಟೆಗೆ ಚಿಕ್ಕಮಗಳೂರು ಸೇರಿ ಪ್ರಯಾಣಿಕರು ವಿಶ್ರಾಂತಿಗೆ [illegible] ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ [illegible] ಬಸ್ಸನಿ 1 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಪ್ಪಿ ಮೋಟಾರ ಸ್ಟೇಶನ್ [illegible] ಸಾಯಂಕಾಲ 4 30ಕ್ಕೆ ಮಂಗಳೂರಿಗೆ ತಲಪಿ, [illegible] ಕನ್ನಡನಾಡಿನ ಪ್ರಾಂತಗಳಿಗೂ [illegible] ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ [illegible] ಕಂಪೆನಿ ಲಿಮಿಟೆಡ್ [illegible] ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ [illegible] ಉಪ್ಪಿ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು [illegible] ಗಂಟೆಗೆ ಮೂಡಿಗೆರೆಗೂ, [illegible] ಗಂಟೆ ಒಳಗೆ ಚಿಕ್ಕಮಗಳೂರಿಗೂ [illegible] ಚಿಕ್ಕಮಗಳೂರಲ್ಲಿ [illegible] ಟಿಫಿನ್ ಆಹಾರ ವರ್ಗ್ಯರೆ ತೆಗೆದುಕೊಂಡು [illegible] ಅವಕಾಶವಿರುತ್ತದೆ [illegible] ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವರ್ಗ್ಯರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರು [illegible] ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ [illegible] ಮುಂಬಾಯಿ ವರ್ಗ್ಯರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳು [illegible] ಘಂಟೆಗೆ ಕಡೂರಿಗೆ ಸೇರಿ [illegible] ಕಡೆಯಿಂದ 12 ಘಂಟೆಗೆ [illegible] ಮೈಲ್ ಟ್ರೈನಿನಲ್ಲಿ [illegible] ಮದ್ರಾಸ್ ವರ್ಗ್ಯರೆ ಕಡೆಗಳಿಗೂ [illegible] 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವರ್ಗ್ಯರೆ ಪ್ರಾಂತಗಳಿಗೆ ಹೋಗತಕ್ಕ [illegible] ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಪ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO, LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

[illegible] ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು [illegible] ಕೊಡಗು ಮತ್ತು [illegible]
ಸ್ಥಾನಗಳಿಗೆ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವುದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆಂದಾದರೆ ಪ್ರತಿದಿನವೂ ನಾಲ್ಕು ಸಾರಿ [illegible] ಮಾರ್ಗವಾಗಿಯೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ
ಹೊರಡುವ ಕಂಪೆನಿಯ ಬಸ್ಸುಗಳಲ್ಲಿ [illegible] ಉಡುಪಿಗೆ ತಲಪಿರಿ ಒಂದೇ ಶಿಲೆಯಲ್ಲಿನಿಂ
ರಚಿತವಾಗಿ 37 ಫೀಟು ಉದ್ದವಾಗಿ ಎತ್ತರವಾದ ಶಿಲಾಶರ್ವರನ ಮೂರ್ತಿ ನೆಲಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿದಿನ [illegible] ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ
ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ [illegible] ಮಾರ್ಗವಾಗಿ ತಲ್ಪಬಹುದು
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.
ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ
ಮೈಸೂರಿನ [illegible] ಕನೆಕ್ಷನ್ ಇರುತ್ತದೆ
ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯ [illegible]
ಕನೆಕ್ಷನ್ ಇರುತ್ತದೆ
ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು ನೋಡಬೇಕೆಂದವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿ
ನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ,
ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗೆಕ್ಕೆ 12 ಗಂಟೆಗಳೊಳಗೂ ತಲುಪಬಹುದು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

ಈ ಮೇಲಿನ ವೀರವಾಕ್ಯಗಳು ಚೀನೀಸೇನಾಧ್ಯಕ್ಷರಾದ ಮಾರ್ಷಲ್ ಚ್ಯಾಂಗ್ ಕೈ ಶೆಕ್ ಎಂಬವರು ತಮ್ಮ ನೀಶಿಗರಿಗೆ ಕೊಟ್ಟ ಒಂದು ಆವೇಶಪೂರ್ವ ಸಂದೇಶ. 'ಯುದ್ಧರಂಗದಲ್ಲಿ ಹೋರಾಡಿ ಮಡಿಯಲು ಬುದ್ಧಿ ನಾನೇ ಬರುವೆನು ಸಿದ್ಧನಿರುವೆನು' ಎಂಬುದು ಇವರ ಉದ್ರೇಕಪೂರ್ವ ಉದ್ಗಾರ.

"ಪ್ರಾಣ ಹೋಗುವ ತನಕ ಹೋರಾಡಬೇಕು!"

ಚೀನಾ–ಜಾಪಾನರ ಸಮರ.

ತರುಣಿಯರ ಶೌರ್ಯ.

ಯೋಧರ ಆತ್ಮತ್ಯಾಗ.

ಜಾಪಾನರ ಸಿದ್ಧತೆ.

ಅಂದು ೧೯೧೪ನೇ ಇಸವಿಯಲ್ಲಿ ಪ್ರಾರಂಭವಾದ ಆಂಗ್ಲ ಜರ್ಮನರೊಳಗಣ ಯುದ್ಧ ಸಮಾಚಾರವನ್ನು ಕೇಳಿ ತಿಳಿದುಕೊಳ್ಳುವ ಕುತೂಹಲಾಧಿಕ್ಯವು ಜನತೆಯಲ್ಲಿದ್ದಂತೆ ಇಂದು ಚೀನಾ-ಜಾಪಾನರ ಯುದ್ಧವಾರ್ತೆಯನ್ನು ತಿಳಿಯಲು ಜನತೆಯು ಆತಾತುರದಿಂದಿರುತ್ತದೆ ಇಂದು ಈ ರಾಷ್ಟ್ರಗಳೊಳಗೆ ನಡೆಯುತ್ತಿರುವ ಯುದ್ಧವು ಕಡಿಮೆ ತರದ ಪ್ರಾಮುಖ್ಯತೆಯನ್ನು ಹೊಂದಿರುವುದಿಲ್ಲ ಈಗಾಗಲೇ ಹತ್ತಲ್ಪಟ್ಟಿರುವ ಈ ಚೀನಾ ಜಾಪಾನ ಯುದ್ಧದ ಸಣ್ಣ ಕಿಡಿಯು ಬೇಗನೇ ಜ್ವಾಲಾಮುಖಿಯು ಹೊರಉಗುಳುವ ಅಗ್ನಿಯಂತೆ ಪ್ರಪಂಚವನ್ನು ವ್ಯಾಪಿಸಿಕೊಳ್ಳದೆ ಇರದೆಂದು ಬಹು ಮಂದಿ ಪ್ರಪಂಚ ಪ್ರಭೃತಿಗಳ ಅಭಿಮತವಿದೆ

ಜಪಾನಿನ ಆಶೆ.

ಪ್ರಪಂಚದ ದೃಷ್ಟಿಯನ್ನೇ ತನ್ನ ಕಡೆಗೆ ಆಕರ್ಷಿಸಿಕೊಂಡಿರುವ ಈ ಯುದ್ಧದ ಕಾರಣವೇನೆಂಬುದನ್ನು ನಾವು ತಿಳಿಯುವುದವಶ್ಯ. ಜಾಪಾನು ಚೀನವನ್ನು ವಕ್ರದೃಷ್ಟಿಯಿಂದ ನೋಡುತ್ತಿರುವ ಸಂಗತಿಯು ಚೀನಕ್ಕೆ ತಿಳಿಯದಿರಲಿಲ್ಲ ಒಂದಲ್ಲ ಒಂದು ದಿನ ಜಾಪಾನು ತನ್ನ ಮೇಲೆ ಬೀಳದಿರದೆಂದು ಚೀನದ ಮನಸ್ಸಿನಲ್ಲಿತ್ತು ಆದರೂ ಇಷ್ಟು ಥಟ್ಟನೆ ಅದು ತನ್ನ ಮೇಲೆ ಹಾರುತ್ತದೆಂದು ನೆನಸಿರಲಿಲ್ಲ ಚೀನವು ಜಾಪಾನಿನ ಹತ್ತು ಪಟ್ಟುಗಳಿಗಿಂತಲೂ ದೊಡ್ಡ ದೇಶ ಆದರೆ ಅದಕ್ಕೆ ಅನ್ಯ ರಾಷ್ಟ್ರದ ಬೆಂಬಲವಿಲ್ಲ ಚೀನದಲ್ಲಿ ಶಾಂಘಾಯಿ, ಚಪೀ ಮೊದಲಾದ ಬಹು ಪ್ರಾಮುಖ್ಯವಾದ ವ್ಯಾಪಾರ ವಾಣಿಜ್ಯ ಪಟ್ಟಣಗಳಿರುವುದರಿಂದ ಅವುಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಎಲ್ಲ ರಾಷ್ಟ್ರಗಳ ಸ್ವಾರ್ಥ ಹಿಂದೂದೇಶದ ಅತುಲೈಶ್ವರ್ಯವು ಪರರಾಷ್ಟ್ರಗಳನ್ನು ಇತ್ತ ಸೆಳೆದಂತೆ ಚೀನಾ ದೇಶದ ವಾಣಿಜ್ಯ ಸ್ಥಳಗಳು ಅನ್ಯ ರಾಷ್ಟ್ರಗಳ ಮನಸ್ಸನ್ನಾಕರ್ಷಿಸಿದುವು ಈ ಸಂಗತಿಯು ಚೀನಕ್ಕೆ ಸಂಪೂರ್ಣ ವಿದಿತವಿತ್ತು ಇನ್ನು ಇದೇ ರೀತಿ ಇದ್ದರೆ, ಅನ್ಯ ರಾಷ್ಟ್ರಗಳು ತಮ್ಮ ದೇಶದಲ್ಲಿ ವ್ಯಾಪಾರವನ್ನು ಮುಂದೊತ್ತಿ ಎಂದು ಸ್ವದೇಶವನ್ನು ನಿರ್ಮೂಲಿಸಿಯಾವು, ತಮಗೆ ಹಾನಿಯುಂಟೆಂದು ತಿಳಿದು ಚೀನೀಯ ರಾಷ್ಟ್ರವು ಒಂದು ಸದುಪಾಯವನ್ನು ಯೋಚಿಸಿತು. ಸಮಾಧಾನದಿಂದ, ರಹಸ್ಯದಿಂದ ಸ್ವದೇಶಿ ಚಳವಳಿದ ಪರಿಪೋಷಣೆಯನ್ನು ಚಳವಳವನ್ನು ಹೂಡಿತು ವಿದೇಶದಿಂದ ಬರುವ ಸರಕುಗಳನ್ನು ಬಹಿಷ್ಕರಿಸಿತು ವಿದೇಶಗಳ ಹಾವಳಿಯು ಎಷ್ಟು ಪ್ರಬಲವಾಯಿತೋ ಅಷ್ಟು ದೃಢವಾಗಿ ಅದು ಈ ಚಳವಳವನ್ನು ನಡೆಸತೊಡಗಿತು. ಇದರಿಂದ ಚೀನದಲ್ಲಿ ಜಾಪಾನು ಸರಕುಗಳೂ ಇನ್ನಿತರ ವಿದೇಶೀಯ ಮ್ಯಾಲುಗಳೂ ಮೂಲೆಪಾಲಾದುವು ಒಬ್ಬ ಮನುಷ್ಯನ ತನ್ನ ವೈರಿಯನ್ನು ಸ್ವಾಭಾವಿಕವಾಗಿ ದ್ವೇಷಿಸ ಹಿಡಿದಂತೆ, ಜಾಪಾನು ಚೀನವನ್ನು ಮರೆಯಲೇ ಇಲ್ಲ ಅದರ ಬದಲಿಗೆ ಚೀನದ ಮೇಲೆ ತನಗಿದ್ದ ದ್ವೇಷದ ಬೆಂಕಿಯನ್ನು ಕಾರಬೇಕೆಂದು ಹವಣಿಸುತ್ತಿತ್ತು ಇಂತಹ ಅತಿಶಯ ಕಾಲಕ್ಕೆ ಸಿಕ್ಕಿದ ರಾಜಮಾರ್ಗವೋ ಎಂಬಂತೆ ಕೆಲವು ಚೀನೀಯ ದರೋಡೆಗಾರರು (ಇವರು ಚೀನೀಯ ಕ್ರಾಂತಿಕಾರರ ಸಂಘದವರು) ಹಾರ್ಬಿನ ಎಂಬಲ್ಲಿ ಕೆಲವು ಮಂದಿ ಜಾಪಾನೀ ನೌಕರರನ್ನೂ, ಒಬ್ಬ ಜಾಪಾನೀ ಅಧಿಕಾರಿಯನ್ನೂ ವಧಿಸಿದರು ಜಾಪಾನಿನ ಒಂದು ವಿಮಾನವನ್ನು ಗುಂಡಿನಿಂದ ಹೊಡೆದು ನೆಲಕ್ಕುರುಳಿಸಿದರು, ಅಷ್ಟೇ ಸಾಲದೆ ಚೀನಕ್ಕೆ ಬಂದಿದ್ದ ೫ ಮಂದಿ ಪಾದ್ರಿಗಳನ್ನೂ ಕೊಂದರು. ಉರಿಯುವ ಬೆಂಕಿಗೆ ಎಣ್ಣೆ ಹೊಯ್ದಂತಾಯಿತು. ಮೊದಲೇ ಯುದ್ಧ ಸನ್ನಾಹದಿಂದಿದ್ದ ಜಾಪಾನು ಬೇಗ ಬೇಗನೇ ತನ್ನ ಉಪಕರಣಗಳನ್ನು ಸಿದ್ಧಗೊಳಿಸಿ ಹಾರ್ಬಿನಿಗೆ ಸೈನ್ಯವನ್ನು ಕೊಂಡೊಯ್ದಿತು. ಅಷ್ಟಾಗುವಾಗ ಚೀನದಲ್ಲಿ ಸ್ವದೇಶೀ ಚಳವಳಿ ಬಿರುಸಿನಿಂದ ಸಾಗಿತು. ಜಾಪಾನೀ ಮ್ಯಾಲನ್ನು ಮಾರುವ ಜನರಿಗೆ ವಿಶೇಷ ಗಟ್ಟಿಲೆ ದ್ರವ್ಯವು ನಷ್ಟವಾಯಿತು ಜಾಪಾನೀ ಸರಕುಗಳು ಎಲ್ಲೆಡೆಗಳಲ್ಲೂ ಮೂಲೆಪಾಲು ಬಿದ್ದುವು ಬಂದರಿನಲ್ಲಿದ್ದ ಸರಕುಗಳು ಬಂದರಿನಲ್ಲೇ ಉಳಿದುವು–ರೈಲ್ವೇ ಸ್ಟೇಷನುಗಳಲ್ಲಿದ್ದ ಜಾಪಾನೀ ಮ್ಯಾಲುಗಳು ಸ್ಟೇಷನಿನಲ್ಲೇ ಬಿದ್ದುವು ಯಾವ ಚೈನೀಯನೂ ಅದನ್ನು ಪಡೆದುಕೊಳ್ಳಲಿಲ್ಲ. ಚೀನೀಯ ವರ್ತಕರು ಈ ಚಳವಳಿಕ್ಕೆ ಬೆಂಬಲವು ಅಪ್ರತಿಹತವಾಯಿತು. ಚೀನದಲ್ಲಿನ ಶಾಂಘಾಯಿಯಲ್ಲಿದ್ದ ಜಾಪಾನೀ ರಾಯಭಾರಿ ನಿವಾಸಕ್ಕೆ ಚೀನಿಯರು ಬೆಂಕಿಯನ್ನಿಟ್ಟರು. ಅಂತೂ ಇಂತೂ ಪರಸ್ಪರ ಮೈತ್ರಿಯಲ್ಲಿ ನಡೆಯುತ್ತಿದ್ದ ವ್ಯಾಪಾರ ವಾಣಿಜ್ಯವು ಮುರಿದುಹೋಗಿ ದೇಶಘಾತಕವಾಗುವ ಯುದ್ಧವು ಪ್ರಾರಂಭವಾಯಿತು

ಚೀನದ ಅತ್ಯುತ್ತಮ ವಾಣಿಜ್ಯ ಕೇಂದ್ರವಾದ ಶಾಂಘಾ ಪ್ರಾಂತ್ಯವನ್ನು ವಶಪಡಿಸಿಕೊಳ್ಳಬೇಕೆಂದು ಜಾಪಾನಿನ ಮನಸ್ಸಿನಲ್ಲಿ ಎಷ್ಟೋ ಕಾಲದಿಂದಿತ್ತು ಅಲ್ಲದೆ ಜಾಪಾನಿಗೆ ಚೈನಾ ದೇಶದ ಇನ್ನೊಂದು ವ್ಯಾಪಾರಸ್ಥಾನವಾದ ಮಂಚೂರಿಯದ ಮೇಲೂ ಕಣ್ಣಿತ್ತು ಶಾಂಘಾ ಮತ್ತು ಮಂಚೂರಿಯಗಳು ಜಾಪಾನಿನ ಮ್ಯಾಲುಗಳ ಅವಿರುದ್ಧ ವಿಕ್ರಯದ ಕೇಂದ್ರಸ್ಥಳವಾಗಿವೆ ಅವುಗಳನ್ನೇ ಆಕ್ರಮಿಸಿಕೊಳ್ಳಬೇಕೆಂದು ಜಪಾನಿನ ಆಶೆ

ಶಾಂಘಾಯಿಯಲ್ಲಿನ ವಾಂಗ್ ಪೂ ಎಂಬ ನದಿಯ ದಡದ ೧೨ ಚದರ ಮೈಲಿ ವಿಸ್ತೀರ್ಣ ಪ್ರದೇಶದಲ್ಲಿ ಬ್ರಿಟಿಷ್, ಫ್ರೆಂಚ್, ಅಮೇರಿಕನ್ ಮೊದಲಾದ ಅನ್ಯ ರಾಷ್ಟ್ರಗಳವರ ವಾಣಿಜ್ಯ ಕೇಂದ್ರಗಳಿರುತ್ತವೆ ಚಾಪೇಯ ಪ್ರಾಂತ್ಯವು ಚೈನದ ಒಂದು ರೈಲ್ವೇ ಸ್ಟೇಷನು ಇರುತ್ತದೆ ಜಾಪಾನರಿಗೆ ಈ ಪ್ರಾಂತ್ಯದಲ್ಲಿ ಹೆಚ್ಚು ಬಾಧ್ಯತೆಗಳನ್ನು ಕೊಡಲು ಚೀನಿಯರು ಒಪ್ಪುವುದಿಲ್ಲ

ಜಾಪಾನಿಗೆ ಗೂಢ ಸಹಾಯ.

ಚೀನದಕ್ಷಿಣ ಅಂತರ್ರಾಷ್ಟ್ರೀಯ ಪ್ರದೇಶಗಳಲ್ಲಿ ಬ್ರಿಟಿಷ ಮತ್ತು ಅಮೇರಿಕನ್ ಜನಸಂಖ್ಯೆಯು ಹೆಚ್ಚಿರುತ್ತದೆ ಇವರೆಲ್ಲರೂ ವ್ಯಾಪಾರದ ಬಗ್ಗೆ ಈ ದೇಶದಲ್ಲಿ ನೆಲಸಿರುವರು ಜಾಪಾನರ ಗುಂಡಿನ ಸುರಿಮಳೆ ಅವುಗಳಿಂದ ತಮ್ಮ ತಮ್ಮ ಜನರಿಗೆ ಅಪಾಯವಾಗಬಾರದೆಂದು ಬ್ರಿಟಿಷ ಮತ್ತು ಅಮೇರಿಕನ್ ಸರಕಾರಗಳು ಬಹು ಎಚ್ಚರದಿಂದಿವೆ ಎಲ್ಲಿ ತಮ್ಮ ಜನರ ವ್ಯಾಪಾರಕ್ಕೂ ದೇಹಕ್ಕೂ ಹಾನಿಯೊದಗುತ್ತದೋ ಎಂದು ಇಂಗ್ಲಂಡು ಬಹಳ ಹೆದರುತ್ತದೆ ಅಮೇರಿಕವೂ ಅಂತೆಯೇ ಈ ಅಂತರ್ರಾಷ್ಟ್ರೀಯ ಸ್ಥಳಗಳಲ್ಲಿರುವ ಪರರಾಷ್ಟ್ರ ಅಂದರೆ ಬ್ರಿಟಿಷ ಮತ್ತು ಅಮೇರಿಕನ್ ಜನಸಂಖ್ಯೆಯಲ್ಲಿ ಕಲವರು ಮಡಿದು ಹೋದರೆ, ಮುಂದಕ್ಕೆ ಉಗ್ರತರದ ಯುದ್ಧವು ನಡೆಯಬಹುದು ಈ ಎಲ್ಲಾ ರಾಷ್ಟ್ರಗಳಿಗೂ ಜಾಪಾನರ ಮೇಲೆಯೇ ವಕ್ರದೃಷ್ಟಿ ಇದೆ ಜಾಪಾನರು ಯುದ್ಧಕ್ಕಾರಂಭಿಸಿರುವುದರಿಂದ ಬಹಳ ಹಾನಿಯಿದೆ ಅದು ಯುದ್ಧವನ್ನು ನಿಲ್ಲಿಸಬೇಕೆಂದು ಇಂಗ್ಲಂಡು ಅಮೇರಿಕಗಳು ಎಷ್ಟು ಕೇಳಿಕೊಂಡರೂ, ಅದು ಮಾತ್ರ ನಿರ್ಧಾರಪೂರ್ವಕವಾಗಿ ಯುದ್ಧವನ್ನೇ ಮುಂದೊತ್ತುತ್ತಿದೆ ಒಂದೇ ಸಣ್ಣ ರಾಷ್ಟ್ರವಾದ ಜಾಪಾನಿಗೆ ಇಷ್ಟು ಸಾಹಸವೂ ಧೈರ್ಯವೂ ಎಲ್ಲಿಂದ ಮತ್ತು ಹೇಗೆ ಬಂದಿರುತ್ತದೆಂದು ಈಗೀಗ ಆಲೋಚಿಸಲು ಎಲ್ಲರೂ ತೊಡಗಿರುವರು ಜಿನೀವಾದಲ್ಲಿ ನಡೆಯುವ ಲೀಗ್ ಒಫ್ ನೇಶನ್ಸ್ ಸಭೆಯವರೂ ಕೂಡ ಜಾಪಾನಿನ ಎದೆಯ ದರ್ಪಕ್ಕೇನು ಕಾರಣವಿರಬಹುದೆಂದು ಆಲೋಚಿಸುತ್ತಿರುವರು ಜಾಪಾನಿಗೆ ಇನ್ನೊಂದು ಪ್ರಬಲ ರಾಷ್ಟ್ರದ ರಹಸ್ಯವಾದ ಬೆಂಬಲವು ದೊರೆಯದ ಹೊರತು ಇಂತಹ ಘೋರ ಯುದ್ಧಾಭಿಮುಖವಾಗಿ ಹೋಗುತ್ತಿರಲಿಲ್ಲವೆಂಬುದೇ ಎಲ್ಲರ ಹೇಳಿಕೆ ಈಗೀಗ ಜಾಪಾನಿಗೆ ಫ್ರೆಂಚರ ಸಹಾಯವು ಇದೆಯೆಂದೂ, ಫ್ರೆಂಚರು ಜಾಪಾನಿಗೆ ಬೇಕಾದ ಯುದ್ಧಸಾಮಗ್ರಿಗಳನ್ನೊದಗಿಸಿ ಕೊಡುತ್ತಿರುವರೆಂದೂ ಸುದ್ದಿ ಹುಟ್ಟಿದೆ ಫ್ರೆಂಚರ ಸಹಾಯವು ಜಾಪಾನಿಗೆ ಬಹು ರಹಸ್ಯದಿಂದಲೇ ಸಿಗುತ್ತಿದೆಯೆಂದು ಕೆಲವರು ಹೇಳುತ್ತಿದ್ದಾರೆ

ಚೀನೀಯರ ದೇಶ ಪ್ರೇಮ.

ಪ್ರಾರಂಭದಲ್ಲಿ ಚೀನವು ಜಾಪಾನಿಗೆ ಎದೆಗೊಟ್ಟು ನಿಲ್ಲಲಿಲ್ಲ ಇಂದಲ್ಲ ನಾಳೆ ಜಾಪಾನು ಹೋರಾಡಿ ಹಿಂದೆ ಹೋಗದಿರದೆಂದು ಅದು ನೆನಸಿದ್ದಿತು. ಆದರೆ ಈಗೀಗ ಚೀನೀಯ ಪುರುಷರೂ ಅಲ್ಲದೆ ಸ್ತ್ರೀಯರೂ ಕೂಡಾ ಜಾಪಾನಿನ ವಿರೋಧವಾಗಿ ನಿಂತು. ತಮ್ಮ ಪುರುಷರು ವೈರಿಯನ್ನಟ್ಟಿಯೇ ಬಿಡಬೇಕೆಂದು ವೀರವಾಣಿಗಳನ್ನು ಪಸರಿಸುತ್ತಿರುವರು ಮೊದಲು ಬರೇ ಕುರಿಗಳಂತಿದ್ದ ಚೀನೀಯ ಸ್ತ್ರೀಯರು ಈಗ ಸಿಂಹಗಳಂತೆ ಚಟುವಟಿಕೆಯುಳ್ಳವರಾಗಿರುವರು. ತಮ್ಮ ಪುರುಷರು ದೇಶಕ್ಕಾಗಿ ತಮ್ಮನ್ನು ಬಿಟ್ಟು ಮರಣಹೊಂದಿದರೂ ಚಿಂತಿಲ್ಲವೆಂದು ಹೇಳುತ್ತಿರುವರು ಸಾವಿರಾರು ಯುವತಿಯರು ಯುದ್ಧದಲ್ಲಿ ಗಾಯಗೊಳ್ಳುವ ಯೋಧರ ಶುಶ್ರೂಷಾರ್ಥವಾಗಿ ದಾದಿಗಳಾಗಿ ಮುಂದೆ ಬಂದಿರುವರು. ಒಬ್ಬ ತರುಣಿಯು ತನ್ನ ಪ್ರಾಣವಲ್ಲಭನಿಗೆ ಹೀಗೆ ಬರೆದಳು "ನೀನು ಯುದ್ಧಕ್ಕೆ ಹೋಗು ಅದರಲ್ಲಿ ಪ್ರಾಣವುಳಿಸಿಕೊಂಡು ಬರುವಿಯೆಂದು ನಾನು ನಂಬುತ್ತೇನೆ ನೀನು ಬದುಕಿದರೆ ನಾನು ಧನ್ಯೆ ನೀನು ಮಡಿದರೆ ನಾನು ನಿರ್ಭಾಗ್ಯೆ ಆದರೂ ನೀನು ಯುದ್ಧಕ್ಕೆ ಹೋಗು ನೀನು ಮಡಿದರೆ ನಿನ್ನ ಆತ್ಮದೊಡನೆ ನಾನೂ ಇರುವೆನೆಂದು ತಿಳಿದುಕೊ"

ಜಾಪಾನು ಈಗ ಶಾಂಘಾ ಚಪೀಯ ಮಂಚೂರಿಯಗಳಲ್ಲಿ ಬೆಂಕಿಸುರಿಸುತ್ತಾ ಇದೆ ಅದಕ್ಕೆ ತಕ್ಕ ಉತ್ತರವನ್ನು ಚೀನವು ಕೊಡುತ್ತಲೇ ಇದೆ ಚೀನೀಯರ ಅನೇಕ ವಿಮಾನಗಳು ವೈಮಾನಿಕರ ಸಮೇತ ನಾಶಗೊಂಡವು ಜಪಾನರ ಆಮೇರಿಕನ್ ವಿಮಾನಗಳು ಚೀನಿಯರಿಗೆ ಇಂಗ್ಲೆಂಡಿಗೆ ಅಪಾಯಕಾರಿಯಾಗಿ ನೀಡಿರುವುದರಿಂದ ಚೀನವು ತನ್ನ ನಗರವನ್ನು ಸ್ವರಕ್ಷಣೆಗೆ ಬಿಟ್ಟುಕೊಡಬೇಕೆಂದು ಜಾಪಾನಿಯರು ಹೇಳುತ್ತಿದ್ದಾರೆ ಆದರೆ ಚೀನವು ಆ ಕೆಲಸ ಮಾಡುವುದಿಲ್ಲ ಸಾವಿರಾರು ಹಾಕಿದ ತಲೆಗಳನ್ನು ಒಡೆಯುವ ಎಂಥ ಸಾಹಸದಲ್ಲಿ ಮಡಿದರೂ ಚೀನೀಯ ಯೋಧರು ತಮ್ಮ ಸೈನ್ಯವನ್ನು ಬಿಡದೆ ಬೆಂಕಿಯನ್ನಿಟ್ಟುಕೊಂಡು ತಡೆಗಟ್ಟುವರು ಬಳಿ ಸಾರಿ ಎನ್ನುವರು. ತಾವೂ ಆತ್ಮಸಂತೋಷದಿಂದಲೇ ಪ್ರಾಣವನ್ನು ತ್ಯಜಿಸುವರು ಈ ಸಂಗತಿಯನ್ನು ಕೇಳಿ ಚೀನೀಯ ಸರಕಾರವು ಆ ವೀರರಿಗೆ ಬಹು ಶ್ರೇಯವಾಗಿ ಕೊಡುತ್ತಿದೆ

ಜಿನೀವಾ ಸಭೆಯಲ್ಲಿ ನಡೆಯುವ ಸನ್ನಿವೇಶದ ಮೂಲಕ ಸಭೆಯು ಈ ಯುದ್ಧವನ್ನು ಇಷ್ಟರಲ್ಲೇ ನಿಲ್ಲಿಸಬೇಕಾಗಿ ಯತ್ನಿಸುತ್ತಿದೆ ಚೀನಾ ಮತ್ತು ಜಾಪಾನಿನ ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿರುತ್ತಿರುವರು ಇಷ್ಟರ ಹೊರತು ಈ ಬಗ್ಗೆ ಬೇರೆ ಯಾವ ಬಗೆಯ ಶಾಂತಿಯ ಕಾರ್ಯವೂ ಉಂಟಾಗುವುದಿಲ್ಲ

ಸುಳ್ಳು ವಾರ್ತೆ.

ಮೊನ್ನೆ ಜಾಪಾನಿನ ೧೫೦೦೦ ಯೋಧರೂ ಚಪೀಯ ಜನರಲ್ ಶಿರ ಕಾವಾ ಎಂಬವರೂ ಚೀನೀಯರೊಡನೆ ಹೋರಾಡಿ ಅದಕ್ಕೆ ಬಲಿಯಾದರೆಂದೂ, ಚೀನೀಯ ಯೋಧರು ವಿಜಯಶಾಲಿಗಳಾದರೆಂದೂ ಒಂದು ಅಸತ್ಯ ವಾರ್ತೆಯು ಚೀನಾದಲ್ಲಿ ಹರಡಿತು. ಈ ಸಂತೋಷವಾರ್ತೆಯನ್ನು ಕೇಳಿದ ಚೀನೀಯರು ಅಲ್ಲಲ್ಲಿ ಗಟ್ಟಿಯಾಗಿ ಕೂಡಿ ಕೋಲಾಹಲವೆಬ್ಬಿಸಿದರು. ಈ ವಾರ್ತೆಯು ಜಾಪಾನೀ ರಾಯಭಾರಿ ಕಚೇರಿಯಿಂದಲೂ ಬ್ರಿಟಿಷ್ ರಾಯಭಾರಿಯಿಂದಲೂ ಹಾರಿದೆ ಪತ್ರಿಕೆಗಳಿಗೂ ಸಹಾ ಹರಡಿವೆ

ರಾಜಿ — ಕೋಪ

ಜಿನೀವಾದಲ್ಲಿ ನಡೆಯುತ್ತಿರುವ ಲೀಗ್ ಒಫ್ ನೇಶನ್ಸ್ ಸಭೆಯ ಒಂದು ಸಮಿತಿಯನ್ನೇರ್ಪಡಿಸಿ ಆ ಸಮಿತಿಯ ಮೂಲಕ ಯುದ್ಧ ನಿಲ್ಲಿಸಬಾರದೆಂದು ಹಠ ತೊಟ್ಟಿದೆ ಚೈನೀಯರ ಪ್ರತಿನಿಧಿಯಾದ ಡಾ ಯೆನ್ ಎಂಬವರೂ ಜಾಪಾನಿನ ಪ್ರತಿನಿಧಿಯಾದ ಮಿ ಸಟೋ ಎಂಬವರೂ ಪರಸ್ಪರ ವಿವಾದ ನಡೆಸಿದ ಸಂಗತಿಗಳನ್ನು ವಿಮರ್ಶಿಸುತ್ತಿರುವರು

ಶಾಂಘಾಯಿಯಲ್ಲಿ ಜಾಪಾನರು ಚೀನಿಯರನ್ನು ಬಹಳ ಹಿಂದಕ್ಕೆ ಅಟ್ಟಿರುವರು ಈಗ ಅಲ್ಲಿ ಚೀನಾ ಜಾಪಾನರೊಳಗೆ ರಾಜಿಯೂ ಇಲ್ಲ, ಯುದ್ಧವೂ ಇಲ್ಲವೆಂಬ ಸ್ಥಿತಿಯು ಬಂದು ನಿಂತಿದೆ ಪಾರ್ಲಿಮೆಂಟಿನ ಲಾನ್ಸ್‌ಬರಿ ಮೊದಲಾದವರು ರಾಜಿ ಪಂಚಾಯ್ತಿಕೆಗಾಗಿ ಹೆಣಗಾಡುತ್ತಿರುವರು ಜಾಪಾನರ ಉಗ್ರ ಯುದ್ಧವಾರ್ತೆಯ ಮಧ್ಯೆ ಇವರ ಈ ಸಮಾಧಾನ ಯುಕ್ತವು ಪ್ರಯೋಜನಕಾರಿಯಾದೀತೆಂದು ಹೇಳಲಾಗುವುದಿಲ್ಲವಂತೆ. ಒಂದು ಕಡೆಯಿಂದ ಸ್ವಲ್ಪ ಸಮಾಧಾನವಾದ ಚಿಹ್ನೆಯು ತೋರುತ್ತಿದೆಯಾದರೂ, ಇನ್ನೊಂದು ಕಡೆಯಲ್ಲಿ ಎಲ್ಲಾ ರಾಷ್ಟ್ರಗಳು ತಮ್ಮ ತಮ್ಮ ವಸಾಹತುಗಳ ರಕ್ಷಣೆಯನ್ನು ಮಾಡುವುದಕ್ಕೋಸ್ಕರ ತಮ್ಮ ತಮ್ಮ ಯುದ್ಧನಾವೆಗಳನ್ನೂ, ಸೈನ್ಯಗಳನ್ನೂ ಕಳುಹಿಸುತ್ತಿವೆ ಇಷ್ಟರ ತನಕ ನಾಲ್ಕೈದು ಯುರೋಪಿಯನರು ಮಡಿದಿರುವರೆಂಬ ವಾರ್ತೆ ಇದೆ ಸೆಂಟ್ಲ್‌ಮೆಂಟುಗಳಲ್ಲಿರುವ ಜನರು ಸಮೀಪದ ಊರುಗಳಿಗೆ ಓಡುವುದು ಇನ್ನೂ ಕಡಿಮೆಯಾಗಿರುವುದಿಲ್ಲ

ಶ್ರೀ. ಪಟೇಲ್ ತಯಾಬ್ಜಿಗಳ ಬಿಡುಗಡೆ!

ದಸ್ತಗಿರಿ—ಶಿಕ್ಷೆ—ಬೆಂಗಳೂರಲ್ಲಿ ಛಡಿ!!!

ಲೋಧಿಯನ್ ಕಮಿಟಿಗೆ ಮುಂಬಾಯಿಯಲ್ಲಿ ಬಹಿಷ್ಕಾರ.

ತಾ. ೩—ಮುಂಬಾಯಿಯ

ಚೌಪಾಟಿಯಲ್ಲಿ ಸಭೆಸೇರಲು ಯತ್ನಿಸಿದ ೫ ಮಂದಿಗಳನ್ನು ಸೆರೆ ಹಿಡಿದರು. ಸಭೆ ಸೇರಲು ಬಂದಿದ್ದವರನ್ನು ಪೋಲೀಸರು ಚದರಿಸಿದರು. 'ಫ್ರಿ ಪ್ರೆಸ್' ಪತ್ರಿಕೆಯ ಸಂಪಾದಕರಾದ ಶ್ರೀ. ಎ. ಸದಾನಂದರನ್ನು ಒಮ್ಮೆ ಕೈದುಮಾಡಿ ಬಿಟ್ಟರು. ಅವರು ಚಳವಳದಲ್ಲಿ ಭಾಗ ವಹಿಸಬಾರದಾಗಿಯೂ ಮೀರತ್ ಪಿತೂರಿಯ ಒಂದು ಸಾಕ್ಷಿಗಾಗಿ ಅಲ್ಲದೆ ಬೇರಾವ ಕೆಲಸಕ್ಕೂ ಮುಂಬಾಯಿಯನ್ನು ಬಿಡಬಾರದಾಗಿಯೂ ಆಜ್ಞೆ. ಸೋಮವಾರ ದಿನ ಅವರು ಮೀರತಿಗೆ ಹೋದರು. ಮುಂಬಾಯಿಯ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಮಾಜಿ ಸೆಕ್ರೆಟರಿಯಾಗಿದ್ದ ಶ್ರೀ. ಗಣಪತಿ ಶಂಕರ್ ದೇಸಾಯಿ ಎಂಬವರನ್ನೂ ೧ ಘಂಟೆ ಮಧ್ಯಾಹ್ನಕ್ಕೆ ಬಿಟ್ಟರು. ೧—೩೦ಕ್ಕೆ ಅವರು ಪೋಲೀಸರಿಗೆ ಕಾಣಿಸಿಕೊಳ್ಳಬೇಕೆಂಬ ಆಜ್ಞೆ! ಅದಕ್ಕೆ ಶ್ರೀಯುತರು ತಪ್ಪಿದರು. ಒಡನೆ ಅವರನ್ನು ಕೈದುಮಾಡಿ ಒಂದು ವರುಷದ ಕಠಿಣ ಸಜೆಗೆ ಗುರಿಪಡಿಸಿದರು. ೧೫೦೦ ರೂಪಾಯಿ ಜುಲುಮಾನೆ, ತಪ್ಪಿದರೆ ೩ ತಿಂಗಳ ಹೆಚ್ಚಿನ ಸಜೆಯೂ ವಿಧಿಸಲ್ಪಟ್ಟಿದೆ. ಮಾಟುಂಗದಲ್ಲಿ ಕೈದುಮಾಡಲ್ಪಟ್ಟ ೧೫ ಮಂದಿಗಳನ್ನು ೨೦ ದಿನಗಳ ತನಕ ರಿಮಾಂಡಿನಲ್ಲಿರಿಸಿರುವರು. ಮುಂಬಾಯಿಗೆ ಲೋಧಿಯನ್ ಕಮಿಟಿಯು ತಲಪಲಿರುವುದೆಂದು ೧೦ ದಿನಗಳ ಯಶಸ್ವಿಯಾದ ಹರತಾಳವನ್ನು ಆಚರಿಸಬೇಕೆಂದಾಲೋಚನೆಯಾಗಿದೆ. ಮಾರ್ಕೆಟುಗಳು ಒಂದು ವಾರದಲ್ಲಿ ಮೂರು ದಿನ ತೆರೆಯಲ್ಪಡುತ್ತಿವೆ. ಹರತಾಳವನ್ನಾಚರಿಸಿದಂತೆ ಪೋಲೀಸ ಕಮೀಶನರರು ಎಲ್ಲಾ ಡ್ರಗ್ಗಿಸ್ಟರಿಗೂ ಕೆಮಿಸ್ಟರಿಗೂ ಹೇಳಿ, ಅವರ ಸಭೆ ಸೇರಿಸಿ ಬೋಧಿಸಿದರು. ಪೋಲೀಸರ ಸಹಾಯವೂ ನಷ್ಟವಾಗದಂತೆ ಸಂರಕ್ಷಣೆಯೂ ದೊರೆಯುವುದಾದರೆ ತಾವು ಅಡಿಗಡಿಗೆ ಬಾಗಿಲು ಹಾಕುವುದಿಲ್ಲವೆಂದು ಕಮಿಷನರರಿಗೆ ಉತ್ತರ ದೊರೆತಿದೆ. ದಾದಾ ಭಾಯಿ ನೌರೋಜಿಯವರ ಮೊಮ್ಮಗನಾದ ಶ್ರೀ ಖುರ್ಶೆಡ್ ನೌರೋಜಿ ಎಂಬವರನ್ನೂ ಕೈದುಮಾಡಿರುವರು. ಇವರು ಟಾಟಾ ಕಂಪೆನಿಯ ಮಿಲ್ ಡಿಪಾರ್ಟಮೆಂಟಿನ ಮೆನೇಜರರಾಗಿದ್ದಾರೆ.

ಅಹಮ್ಮದಾಬಾದಿನಲ್ಲಿ

ಗಾಂಧಿಜೀಯವರ ನವಜೀವನ ಮುದ್ರಣಾಲಯವು ಪೋಲೀಸರ ವಶವಿದ್ದಿತಷ್ಟೆ. ಈಗ ಅದನ್ನು ಹಿಂದೆ ಕೊಡಬೇಕಾಗಿ ಮುಂಬಾಯಿ ಸರಕಾರದ ಅಪ್ಪಣೆ ಸಿಕ್ಕಿದೆ. ಶ್ರೀ ಕಾಂತಿಲಾಲ್ ಚಿಮಾನ್‌ಲಾಲ್ ಎಂಬವರನ್ನು ಕೈದುಮಾಡಿರುವರು. ಅವರ ಕೈಯಲ್ಲಿ ಕೆಲವು ಬುಲ್ಲೆಟಿನುಗಳಿದ್ದುವು. ಗಾಂಧಿಜೀಯವರ ಮೊಮ್ಮಗನಾದ ಶ್ರೀ. ಕಾಂತಿ ಗಾಂಧಿಯೆಂಬವರನ್ನು ಕೈದು ಮಾಡಿ ನಂತರ ಬಿಟ್ಟರು.

ಬೆಳಗಾಂವಿನಲ್ಲಿ

ಪೋಲೀಸ ಸಂದರ್ಶನಕ್ಕೆ ತಪ್ಪಿದ್ದರಿಂದ ಶ್ರೀ ಹನುಮಂತರಾವ್ ಕೌಜಲಗಿಯವರಿಗೆ ಒಂದು ವರುಷದ ಸಶ್ರಮ ಸಜೆ ಮತ್ತು ೧೦೦ ರೂಪಾಯಿ ಜುಲುಮಾನೆ. ಶ್ರೀಯುತ ಗಂಗಾಧರರಾವ್ ದೇಶಪಾಂಡೆಯವರು ಕಾಯಿದೆಭಂಗಕ್ಕೆ ಸೇರಬಾರದಾಗಿಯೂ ಬೆಳಗಾಂವಿಯ ಹೊರಗೆ ಹೋಗಬಾರದಾಗಿಯೂ ಹುಕುಂ.

ಪುನೆಯಲ್ಲಿ

ಶ್ರೀ ಎ. ವಿ. ತುಳ್‌ಪುಲೆ ಎನ್ ಗಡಿಲ್, ಎಲ್ ಪಿ. ಭೋಪಟ್ಕಾರ್, ಜಿ ಎನ್ ಕಾನೇಟ್ಕಾರ್ ಎಂಬವರನ್ನೂ ಬಿಡುಗಡೆ ಮಾಡಿ ಅವರು ಕಾಯಿದೆಭಂಗ ಚಳವಳಕ್ಕೆ ಸೇರಬಾರದಾಗಿ ಆಜ್ಞೆ ಕೊಟ್ಟರು. ಕೆಂಟೋನ್‌ಮೆಂಟಿನಲ್ಲಿ ಶ್ರೀ ಮಗನ್ ಭಾಯಿ ಪಟೇಲರನ್ನೂ ಅವರ ಪತಿ ಶಾಂತಾಬೆನ್ನರನ್ನೂ ಕೈದುಮಾಡಿದರು. ಅವರ ನಿವಾಸವು ಝಡ್ತಿಗೊಳಗಾಯಿತು.

ಲಾಹೋರಿನಲ್ಲಿ

ಜನರಲ್ ಕುಮಾರಿ ಜುಸ್ಸಿ ಎಂಬವರೂ ಇನ್ನಿತರ ೩೦ ಮಂದಿಗಳೂ ಕೈದುಮಾಡಲ್ಪಟ್ಟರು. ಪಿಕೆಟಿಂಗಿಗೆ ಸಿದ್ಧರಾದ ಇಬ್ಬರು ಸಿಖ್ಖರನ್ನು ಸೆರೆಹಿಡಿದರು. ಆದರೂ ಅಹ್‌ರಾರ್ ಸ್ವಯಂಸೇವಕರ ಒಂದು ಮೆರವಣಿಗೆ ಆಯಿತು. ಅದರಲ್ಲಿ ಮುಸ್ಲಿಮ ತಂಡಗಳೂ ಸೇರಿದ್ದುವು. ಪೋಲೀಸರು ಅದನ್ನು ತಡೆದು ಮುಂದಾಳುಗಳಾಗಿದ್ದ ನಾಲ್ಕು ಮಂದಿಗಳನ್ನು ಕೈದು ಮಾಡಿದರು. ಅವರು ಲಾರಿಯನ್ನು ಹತ್ತಲು ಸಮ್ಮತಿಸಲಿಲ್ಲ. ನಾಲ್ವರೂ ಒಬ್ಬನು ಇನ್ನೊಬ್ಬನ ಕೈಯನ್ನು ಹಿಡಿದುಕೊಂಡು ಪೋಲೀಸರಿಗೆ ಪ್ರಯಾಸವನ್ನಿತ್ತರು. ಕೋಲಾಟವು ಜಬರವಾಗಿತ್ತು. ಗುಂಪಿನ ಜನರಲ್ಲಿ ಕೆಲವರು ಚದರಿಸಲ್ಪಟ್ಟರು. ೨೦ ಮಂದಿಗಳು ಕೊಂಡೊಯ್ಯಲ್ಪಟ್ಟರು.

ಅಲ್ಲಹಾಬಾದಿನಲ್ಲಿ

೬೦ ಮಂದಿಗಳ ಒಂದು ಸಭೆಯು ಜರಗಿತು. ಅದರ ಮುಂದಾಳುತನದಲ್ಲಿದ್ದ ಶ್ರೀ. ರಾಮಕುಮಾರ ಶಾಸ್ತ್ರಿ ಎಂಬವರನ್ನು ಕೈದುಮಾಡಿದರು. ಸಭೆಯು ಚದರಿಸಲ್ಪಟ್ಟಿತು. ಮಹಿಳಾ ಸಭಾ ಭಾರತ್ ಮಹಿಳಾ ಕಾಂಗ್ರೆಸ್ ಕಮಿಟಿಗಳು ಬೇಕಾಯದೆಶೀರವೆಂದು ಆಜ್ಞಾಪಿಸಲಾಗಿದೆ.

ಗಾಂಧೀ ದಿನ

ಗಾಂಧಿಜೀಯವರು ಸೆರೆಯನ್ನು ಸೇರಿ ತಾ. ೪ಕ್ಕೆ ಎರಡು ತಿಂಗಳುಗಳಾದುವು. ಈ ಪ್ರಯುಕ್ತ ಎಲ್ಲಾ ಪ್ರಾಂತ್ಯಗಳಲ್ಲಿ ಗಾಂಧಿ ದಿನವನ್ನಾಚರಿಸಲು ಯತ್ನವಾಯಿತು. ಅನೇಕ ಕೈದುಗಳಾದವು. ಮದರಾಸು, ಮಧುರಾ ಮೊದಲಾದ ಕಡೆಗಳಲ್ಲಿ ಸ್ತ್ರೀಯರು ಕೈದುಮಾಡಲ್ಪಟ್ಟಿರುವರು.

ತಾರೀಕು ೬—ಕಾನ್‌ಪುರದಲ್ಲಿ

ಗಾಂಧಿ ದಿನಾಚರಣೆಯ ಸಂಬಂಧವಾಗಿ ಹಿಂದೂಗಳು ಅಂಗಡಿಗಳನ್ನು ಮುಚ್ಚಿದರು. ವಾನರ ಸೇನೆಯ ಒಂದು ಸಣ್ಣ ಮೆರವಣಿಗೆಯಾಯಿತು. ಪೋಲೀಸರ ಭಾವನೆಗಿಂತ ವುದಕ್ಕಿಂತ ಮೊದಲು ಅದು ಚದರಿತ್ತು. ರಾತ್ರಿಯಲ್ಲಿ ಹಕೀಮ್ ಸಯ್ಯದ್ ಮಕ್‌ಬೂಲ್ ಹುಸೇನ್ ಎಂಬ ಕಾಂಗ್ರೆಸ್ ವಾಲಂಟಿಯರು ರಾಷ್ಟ್ರಗೀತವನ್ನು ಹಾಡಿಕೊಂಡು ಕೆಲವರೊಡನೆ ಒಂದು ಮೆರವಣಿಗೆಯನ್ನು ಮಾಡಿದರು. ಅವರನ್ನು ಕೈದು ಮಾಡಲಾಯಿತು. ಹರತಾಳದ ಸಂಬಂಧವಾಗಿ ಮುಚ್ಚಲ್ಪಟ್ಟಿದ್ದ ಒಂದು ಹೊಗೆಸೊಪ್ಪಿನ ಅಂಗಡಿಯಲ್ಲಿ ಮೊದಲು ಹೊಗೆ ಎದ್ದಿತು. ಆ ಮೇಲೆ ಅದು ಸುಟ್ಟುಹೋಯಿತು. ಸುಟ್ಟದ್ದು ಯಾರಿಂದ ತಿಳಿದುಬಂದಿರುವುದಿಲ್ಲ. ವಿದೇಶಿ ವಸ್ತ್ರ ದಹನವು ನಡೆಯಿತು.

ಶ್ರೀಯುತ ವಿ. ಜೆ. ಪಟೇಲರನ್ನು

ಎರವಾಡ ಸೆರೆಮನೆಯಿಂದ ಕರೆದುಕೊಂಡು ಹೋಗಿ ಮುಂಬಾಯಿಯಲ್ಲಿ ಬಿಟ್ಟರು. ಅವರು ಆರೋಗ್ಯ ಲಾಭಕ್ಕಾಗಿ ವಿಯೆನ್ನಕ್ಕೆ ಹೋದರು.

ಅಬ್ಬಾಸ್ ತಯಾಬ್ಜಿಯವರನ್ನು

ಅಹ್ಮದಾಬಾದಿನ ಸಬರ್ಮತಿ ಸೆರೆಮನೆಯಿಂದ ಬಿಟ್ಟರು. ಇವರು ಬರೋಡ ಸಂಸ್ಥಾನದ ಮಾಜಿ ಚೀಫ್ ಜಸ್ಟಿಸರು. ಇವರು ಕೈರಾ ಜಿಲ್ಲೆಯನ್ನು ಪ್ರವೇಶಿಸಬಾರದಾಗಿ ಒಂದು ಆಜ್ಞೆಯಿದೆ. ಇವರು ಬರೋಡಕ್ಕೆ ತೆರಳಿರುವರು. ಪೆರೋಲ್ (ಪೋಲೀಸ್ ಸಂದರ್ಶನದ ಶರ್ತ)ದ ಮೇಲೆ ಇನ್ನೂ ಕೆಲವರನ್ನು ಬಿಟ್ಟಿರುವರು.

ತಾರೀಕು ೭—ಲಾಹೋರಿನಲ್ಲಿ

ಅನಾರ್ಕಲಿ ಎಂಬಲ್ಲಿ ಪಿಕೆಟಿಂಗಿಗಾಗಿ ಹೊರಡುತ್ತಿರುವ ೧೦ ಮಂದಿ ಸ್ವಯಂಸೇವಕರನ್ನು ದಸ್ತಗಿರಿ ಮಾಡಿದರು. ಕೆಲವು ಮಂದಿ ಸ್ತ್ರೀಯರೂ ಕೆಲವು ಮಂದಿ ಪುರುಷರೂ ಇನ್ನೊಂದು ಗುಂಪಾಗಿ ಮೆರವಣಿಗೆಯಲ್ಲಿ ಹೊರಟರು. ಅವರನ್ನೂ ಪೋಲೀಸರು ತಡೆದರು. ಅಹ್‌ರಾರ್‌ಗಳು ಕೆಲವರು ಮತ್ತೊಂದು ಗುಂಪಾಗಿ ಇನ್ನೊಂದು ಮಾರ್ಗವಾಗಿ ಹೋದರು. ಅವರನ್ನೂ ನಿಲ್ಲಿಸಲಾಯಿತು. ಆರೇಳು ಮಂದಿಗಳನ್ನು ಸೆರೆಮನೆಗೆ ಕೊಂಡೊಯ್ದಿರುವರು.

ಸೇಲಮಿನಲ್ಲಿ

ಕಳೆದ ಜನವರಿಯಲ್ಲಿ ಸೆರೆಮನೆಗೊಳಗಾದ ಪಿ. ಮಹಮ್ಮದ್ ಉಸ್ಮಾನ್ ಎಂಬವರು ಈಗ ಬಹಳ ಕಠಿಣ ಕಾಯಿಲೆಯಲ್ಲಿರುವರಾಗಿ ತಿಳಿದುಬಂದಿದೆ. ಇವರು ತನ್ನ ಅನಾರೋಗ್ಯದ ಸಂಬಂಧವಾಗಿ ಕ್ಷಮೆ ಬೇಡಿದರೂ ಇವರನ್ನು ಇಷ್ಟರ ತನಕ ಬಿಟ್ಟಿರುವುದಿಲ್ಲವಾಗಿ ತಿಳಿದು ಬಂದಿದೆ. ಇವರ ಮೇಲೆ ಹೊರಿಸಲ್ಪಟ್ಟ ಜುಲುಮಾನೆಯೂ ಕೊಡಲ್ಪಟ್ಟಿದೆ. ಜೈಲಧಿಕಾರಿಗಳಿಗೆ ಕೆಲವು ಮನವಿಗಳು ಹೋಗಿವೆ.

"ಲೋಧಿಯನ್ ಹಿಂದೆ ನಡೆ"

ರೌಂಡ್ ಟೇಬಲ್ ಸಭೆಯು ಲೋರ್ಡ್ ಲೋಧಿಯನ್‌ರವರ ಮುಂದಾಳುತನದಿಂದ ಒಂದು ಸಮಿತಿಯನ್ನು ಹಿಂದೂಸ್ಥಾನಕ್ಕೆ ಕಳುಹಿಸಿದೆಯಷ್ಟೆ. ಈ ಸಮಿತಿಯು ಹಿಂದೂದೇಶದ ಸ್ಥಿತಿಗಳನ್ನು ಅರಿತುಕೊಳ್ಳುತ್ತಿದೆ. ಇದು ಮದ್ರಾಸಿಗೆ ಹೋಗಿತ್ತು. ಇದಕ್ಕೆ ಕಪ್ಪು ಪತಾಕೆಗಳು ತೋರಿಸಿದರು. "ಲೋಧಿಯನ್ ಗೊ ಬೇಕ್" ಎಂಬ ಅರ್ಥಟನ್ನು ಕೆಲಜನರು ಮಾಡಿದ್ದರು. ಈ ಸಮಿತಿಯು ಮೊನ್ನೆ ಮುಂಬಾಯಿಗೆ ತೆರಳಿತು. ತಾ. ೭ನೇ ದಿನ ೭—೩೦ಕ್ಕೆ ಲೋರ್ಡ್ ಲೋಧಿಯನರು ಮುಂಬಾಯಿಗೆ ತಲುಪಿದರು. ರೈಲ್ವೇ ಸ್ಟೇಷನಿನೊಳಗೆ ಯಾರಿಗೂ ಪ್ರವೇಶವಿದ್ದಿಲ್ಲ. ಆದರೂ ನೂರು ಮಂದಿ ಸ್ವಯಂಸೇವಕರು ಒಳನುಗ್ಗಿದರು. ರೈಲು ಬಂದ ಕೂಡಲೇ 'ಲೋಧಿಯನ್ ಗೊ ಬೇಕ್' ಎಂಬ ಅರ್ಭಟವಾಯಿತು. ೨೦ ಮಂದಿಗಳನ್ನು ಪೋಲೀಸರು ಒಯ್ದರು. ಲಾಠಿ ಪ್ರಹಾರವು ನಡೆಯಿತು. ೬ ಮಂದಿಗಳಿಗೆ ಜಖಂ ಆಗಿದೆ. ಮುಂಬಾಯಿ ಪಟ್ಟಣದಲ್ಲೆಲ್ಲ "ಲೋಧಿಯನ್ ಹಿಂತಿರುಗು" ಎಂದು ಬರೆಯಲ್ಪಟ್ಟ ನೋಟೀಸುಗಳು ಹಂಚಲ್ಪಟ್ಟವು. ಅಂಗಡಿಗಳು ಮುಚ್ಚಲ್ಪಟ್ಟವು. ಲೋಧಿಯನ್ ಕಮಿಟಿಯು ಮುಂಬಾಯಿಗೆ ತಲುಪಿದ ದಿನ ಕಾಲೇಜುಗಳಲ್ಲಿ ಹರತಾಳವಾಗಿತ್ತು.

ತಾ. ೭—ಶ್ರೀ ಜಯರಾಮ್‌ದಾಸ್ ದೌಲತ್‌ರಾಂ

ಇವರು ಸೆರೆಮನೆಯಲ್ಲಿ ತನ್ನ ಸೆರೆಯವಧಿಯಾದ ಮೇಲೆ ಬಿಡುಗಡೆ ಮಾಡಲ್ಪಟ್ಟರು. ಅವರು ಅವರ ೨೪ ಘಂಟೆಗಳೊಳಗಾಗಿ ಕರಾಚಿಯನ್ನು ಬಿಟ್ಟು ಹೋಗಬೇಕೆಂದು ಅಪ್ಪಣೆಯಾಗಿತ್ತು. ಅವರು ಆ ಆಜ್ಞಾನುಸಾರವಾಗಿ ನಡೆಯಲಿಲ್ಲ. ಅದರ ಬದಲು ಒಂದು ಸಭೆ ಜರಗಿಸಿ ಭಾಷಣ ಮಾಡಿದರು. ಭಾಷಣವು ಅಂತ್ಯವಾಗುತ್ತಲೇ ಅವರು ಪೋಲೀಸರ ಕೈಗೊಳಗಾದರು.

ನಾಗಪುರದ

ಸದರ್ ಬಜಾರಿನಲ್ಲಿ ಗಾಂಧಿ ದಿನಾಚರಣೆಯ ಸಭೆ ನಡೆಯಿತು. ಲಾಠಿ ಪ್ರಹಾರವಾಯಿತು. ನೂರು ಮಂದಿಗಳು ವಿದೇಶ ವಸ್ತ್ರಗಳನ್ನು ದಹಿಸಿದರು. ಕೆಲವರಿಗೆ ಸಣ್ಣ ಘಾಯ ಗಳಾಗಿವೆಯೆಂದು ತಿಳಿದಿದೆ. ೧೧ ಮಂದಿಗಳನ್ನು ಕೈದು ಮಾಡಿರುವರು. ಈ ಘಟನೆಯು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಚರ್ಚೆಗೊಂದು ವಿಷಯವಾಗಬಹುದು.

ತಾ. ೮—ಅಹ್ಮದಾಬಾದ್

ಇಲ್ಲಿಯ ಶ್ರೀ ಮಹಾದೇವ್ ಗೋಪಾಲ್‌ದಾಸ್ ದೇಸಾಯಿ ಎಂಬವರು ಪೋಲೀಸ್ ಶರ್ತಕ್ಕೆ ತಪ್ಪಿದ್ದಕ್ಕಾಗಿ ವಿಚಾರಿಸಲ್ಪಟ್ಟು ೩ ತಿಂಗಳ ಕಠಿಣ ಸಜೆ ಮತ್ತು ಜುಲುಮಾನೆಗೂ ಗುರಿಯಾದರು. ಜುಲುಮಾನೆ ಕೊಡದಿದ್ದರೆ ೬ ತಿಂಗಳ ಶಿಕ್ಷೆ ಹೆಚ್ಚು.

ಸಬರ್ಮತಿ ಸೆರೆಮನೆಯು ಕೈದಿಗಳಿಂದ ತುಂಬಿದೆ. ೧೫೦ ಮಂದಿ ಕೈದಿಗಳನ್ನು ಎರವಾಡಾ ಸೆರೆಮನೆಗೆ ಕೊಂಡೊಯ್ದರು. ಇದರಲ್ಲಿರುವ ೧೬ ಮಂದಿ ಸ್ತ್ರೀಯರನ್ನು ಎರವಾಡದಲ್ಲಿರಿಸಿ ಪುರುಷ ಕೈದಿಗಳನ್ನು ನಾಸಿಕ ಮೊದಲಾದ ಸೆರೆಮನೆಗಳಿಗೆ ಕಳುಹಿಸಿದರು. ಮುನಿಸಿಪಲ್ ಹುಡುಗಿಯರ ಶಾಲೆಯ ೮೦ ಮಂದಿ ವಿದ್ಯಾರ್ಥಿನಿಯರು ಒಟ್ಟು ಸೇರಿ ವಿದ್ಯಾರ್ಥಿ ದಿನದ ಬಗ್ಗೆ ಒಂದು ಮೆರವಣಿಗೆಯನ್ನು ಮಾಡಿದರು. ಇವರ ಕೈಯಲ್ಲಿ ರಾಷ್ಟ್ರಧ್ವಜವಿತ್ತು. ಇವರೆಲ್ಲರನ್ನೂ ಕೈದುಮಾಡಿದರು. ಚಳವಳಕ್ಕೆ ಸೇರುವುದಿಲ್ಲವಾಗಿ ಭಾಷೆ ಕೊಟ್ಟ ಮೇಲೆ ಇವರಲ್ಲಿ ೮೧ ಮಂದಿಗಳನ್ನು ಬಿಟ್ಟರು. ಉಳಿದ ನಾಲ್ಕು ಮಂದಿಗಳ ಮೇಲೆ ಆರೋಪವಿದ್ದು ಅವರ ನ್ಯಾಯವಿಚಾರಣೆಯಾಗಲಿದೆ. ಅಹ್ಮದಾಬಾದಿನ ಸ್ಪೆಶಲ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಒಂದು ನ್ಯಾಯವಿಚಾರಣೆಯು ನಡೆಯುತ್ತಿತ್ತು. ಆಗ ಶ್ರೀ ಶಂಕರ್ ಚಂದ್ ವೀರ್‌ಚಂದ್ ಎಂಬ ತರುಣನೋರ್ವನು ಕೋರ್ಟಿನೊಳಗೆ ಹೋಗಿ ಒಂದು ಬುಲ್ಲೆಟಿನನ್ನು ಮೆಜಿಸ್ಟ್ರೇಟರಿಗೆ ಕೊಟ್ಟನು. ಮೆಜಿಸ್ಟ್ರೇಟರು ಅವನನ್ನು ಕೈದುಮಾಡೆಂದರು. ಹಾಗೆಯೇ ಮಾಡಲಾಯಿತು.

ಮುಂಬಾಯಿಯಲ್ಲಿ

ಲೋಧಿಯನ್ ಕಮಿಟಿಯ ಸಂಬಂಧವಾಗಿ ನಡೆಸಿದ ವಿರುದ್ಧ ಪ್ರದರ್ಶನಗಳಿಗಾಗಿ ೩೦ ಮಂದಿಗಳನ್ನು ಬಂಧಿಸಿದರು. ಎಮರ್ಜೆನ್ಸಿ ಕೌನ್ಸಿಲಿನ ೬ ಮಂದಿಗಳಿಗೆ ವಿವಿಧ ಶಿಕ್ಷೆಯು ವಿಧಿಸಲ್ಪಟ್ಟಿತು.

ಕಲ್ಕತ್ತದಲ್ಲಿ

೧೪ ಮಂದಿಗಳನ್ನು ಕೈದು ಮಾಡಿ ಒಬ್ಬೊಬ್ಬನಿಗೆ ಆರಾರು ತಿಂಗಳ ಕಠಿಣ ಸಜೆ ಕೊಟ್ಟರು. ಸಭೆ ಜರಗಿಸಿದುದೇ ಇವರ ಮೇಲೆ ಆರೋಪ. ಮತ್ತೊಂದು ಕಡೆಯಲ್ಲಿ ಜರಗಲಿದ್ದ ಒಂದು ಮೆರವಣಿಗೆಯಲ್ಲಿ ಮುಂದಾಳುಗಳಾಗಿದ್ದ ಶ್ರೀಮತಿ ಮನೋರಮಾ ಬೋಸ್ ಎಂಬವರನ್ನು ಕೈದುಮಾಡಿದರು. ಗವರ್ನರರ ಮೇಲೆ ಕೈಮಾಡಿದ ವೀಣಾದಾಸಳ ಸ್ಟೇಟ್‌ಮೆಂಟಿನ ನಕಲನ್ನು ಹಂಚಿದುದಕ್ಕಾಗಿ ಕೆಲವರನ್ನು ಕೈದುಮಾಡಿದರು.

ವಿವಿಧ ಸಮಾಚಾರಗಳು.

'ಬಿಗ್ ಬ್ರದರ್' ಶೌಕತಾಲಿಯವರು

ಇವರು ಹಿಂದೂದೇಶಕ್ಕೆ ಹೊಸಬರಲ್ಲ. ೧೯೨೦ರಲ್ಲಿ ನಡೆದ ಚಳವಳದಲ್ಲಿ ಕಾಂಗ್ರೆಸ್ಸಿನೊಟ್ಟಿಗೆನೇ ಇದ್ದರು. ಗಾಂಧಿಯೆಂದರೆ ಪ್ರತ್ಯಕ್ಷ ದೇವರೆನ್ನುತ್ತಿದ್ದರು. ಆದರೆ ಕಾಲಕ್ರಮೇಣ ಇವರು ಪರತ್ವಾಗಿ ಮುಸ್ಲಿಮ ಪ್ರತಿನಿಧಿಗಳಾದರು. ಹಿಂದೂಮುಸ್ಲಿಮರ ಒಗ್ಗಟ್ಟಾಗಬೇಕಾದರೆ ಮುಸ್ಲಿಮರ ಕೇಳಿಕೆಗಳನ್ನು ಹಿಂದೂಗಳು ಕೊಡಬೇಕೆಂದರು. "ಗಾಂಧಿಯನ್ನು ನಂಬಿ ಮೋಸಹೋಗಬೇಡಿ. ಮುಸ್ಲಿಮರು ಒಬ್ಬರಿನೊಬ್ಬರ ಕುತ್ತಿಗೆ ಹಿಸುಕಿದರೆ ಗಾಂಧಿಗೆ ಸಂತೋಷವಾದೀತು" ಎಂದರು. ಮೊನ್ನೆ ಪೇಶಾವರದ ಗಡಿನಾಡಿಗೆ ಹೋದರು. ಹಿಂತಿರುಗುವಾಗ ಹೀಗೆಂದರು— "ನಾನು ಗಡಿನಾಡಿಗೆ ಹೋದೆ. ನನಗೆ ಸತ್ಕಾರವಲ್ಲದೆ ಬೇರೇನೂ ದೊರೆಯಲಿಲ್ಲ. ಕಾಂಗ್ರೆಸ್‌ವಾಲಿಗಳು ಪೇಶಾವರದಲ್ಲಿನ ನನ್ನ ಆಗಮನದ ವಿಷಯಕವಾಗಿ ಏನೇನೋ ಪ್ರಕಟಿಸುತ್ತಿರುವರಾಗಿ ನನಗೆ ತಿಳಿದುಬಂದಿದೆ. ಆದರೆ ಇದರಿಂದ ನನಗೆ ಸಂತೋಷವೇ! ನನ್ನ ಕೆಲಸಕ್ಕೇನೂ ಅಡ್ಡಿಯಾಗಲಿಕ್ಕಿಲ್ಲ. ಬಹುಮಂದಿ ಮುಸ್ಲಿಮರೇ ಇರುವ ಈ ನಾಡಿನಲ್ಲಿಯ ಸ್ಥಿತಿಗತಿಗಳ ವಿಷಯದ ಸುದ್ದಿಯು ನನಗೆ ದೊರೆತಿದೆ. ನಾನು ಗಡಿನಾಡಿನ ಗವರ್ನರರನ್ನು ಕಂಡೆ. ಅವರು ಗಡಿನಾಡಿನ ಜನ ಮತ್ತು ಸರಕಾರಗಳೊಳಗೆ ಶಾಂತಿಯನ್ನುಂಟುಮಾಡುವರೆಂದು ನನ್ನ ಭಾವನೆ. ಗಡಿನಾಡಿಗೆ ಸಂಪೂರ್ಣ ಸುಧಾರಣೆಯು ಸಿಗಬೇಕೆಂದು ಮುಸ್ಲಿಮರೆಲ್ಲರ ಯತ್ನವಿದೆ. ಹಿಂದೂದೇಶಕ್ಕೆ ಕೊಡುವ ಸುಧಾರಣೆಯನ್ನು ಗಡಿನಾಡಿಗೂ ಕೊಡುವೆನೆಂದು ಪ್ರಧಾನ ಮಂತ್ರಿಯವರೂ ಹೇಳಿರುತ್ತಾರೆ. ಗಡಿನಾಡಿನ ಮುಸ್ಲಿಮರನ್ನು ಹಿಂದೂದೇಶದ ಮಿಕ್ಕಿದ ಮುಸ್ಲಿಮರು ಗಣ್ಯಕ್ಕೆ ತರುವುದಿಲ್ಲವೆಂಬ ಕುರಿತು ಕೆಲವು ಕಂಟಿಗರು ಸುದ್ದಿಯನ್ನೆಬ್ಬಿಸುತ್ತಿರುವರು. ಇದು ಬರೀ ಅಸಂಬಂಧ. ಉದಾಹರಣೆಗಾಗಿ ನನ್ನ ತಮ್ಮನಾದ ಮಹಮ್ಮದಾಲಿಯು ಅಂದು ಪ್ರಧಾನ ಮಂತ್ರಿಯವರಿಗೆ ಮುಸ್ಲಿಮರ ಕೇಳಿಕೆಯನ್ನು ಬರೆಯುವ ಆಯಾಸದಿಂದಲೇ ಮಡಿದನು. ಅದರಲ್ಲಿ ಆತನು ಗಡಿನಾಡಿನವರ ಕೇಳಿಕೆಗಳನ್ನು ಬಹಳ ದಿಟ್ಟವಾಗಿ ಕೇಳಿರುವನು. ಹೀಗಿರುವಾಗ ಗಾಂಧಿ ಮತ್ತು ಕಾಂಗ್ರೆಸ್ಸಿನ ಮುಂದಾಳುತನವನ್ನು ಪಠಾಣರು ಅನುಸರಿಸುವಂತೆ ಮಾಡಲು ಯಾರಿಗೂ ಶಕ್ಯವಿಲ್ಲ. ಮುಂದಿನ ತಂಟೆಗಳಿಗೆ ಎಡೆಗೊಡದಂತೆ ನಾನೂ ನನ್ನ ಖಿಲಾಫತ್ತಿನವರೂ ಯತ್ನಿಸುವೆವು."

* * *

ಮಗಳು ಮಾಡಿದ ತಪ್ಪಿಗೆ ತಂದೆಗೂ ಶಿಕ್ಷೆ!

ಕೊಮಿಲ್ಲದಲ್ಲಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮಿ. ಸ್ಟೀವನ್ಸ್ ದೊರೆಯವರನ್ನು ಸುನೀತಿ ಚೌಧುರಿ ಮತ್ತು ಶಾಂತಿಘೋಷ ಎಂಬ ತರುಣಿಯರು ಗುಂಡಿನಿಂದ ಕೊಂದದ್ದಷ್ಟೆ. ಸುನೀತಿ ಚೌಧುರಿಯ ತಂದೆಯವರು ಬಂಗಾಳ ಸರಕಾರದಿಂದ ೪೦ ರೂಪಾಯಿ ಪೆನ್ಶನನ್ನು ಹೊಂದುತ್ತಿದ್ದವರು. ಮೊನ್ನೆ ಅಲ್ಲಿಯ ಸರಕಾರವು ಆ ೪೦ ರೂಪಾಯಿ ಪೆನ್ಶನನ್ನು ರದ್ದು ಪಡಿಸಿತು. ಸುನೀತಿ ಚೌಧುರಿಯು ಮೆಟ್ರಿಕಿಗೆ ಕಲಿದ ವರುಷ ಕಾಂಗ್ರೆಸ್ ಚಳವಳದಲ್ಲಿ ಭಾಗವಹಿಸಿದರೂ ಕೂಡ ಅವಳ ತಂದೆಯು ಅವಳನ್ನು ತಡೆಯದಿದ್ದುದರಿಂದಾಗಿಯೂ ಅಲ್ಲದೆ ಸುನೀತಿಯು ಮೆಜಿಸ್ಟ್ರೇಟರನ್ನು ಕೊಂದ ಮೇಲೆ ಅವಳ ತಂದೆಯು ಪೋಲೀಸರಿಗೆ ಸಹಾಯವನ್ನೀಯಲು ತಿರಸ್ಕರಿಸಿದುದರಿಂದಾಗಿಯೂ ಹೀಗೆ ಮಾಡಲಾಯಿತಂತೆ! ಮಗಳು ಜೀವಾಂತ್ಯದ ವರೆಗಿನ ಗಡೀಪಾರಿಗೆ ಗುರಿಯಾದಳು. ಅದರೊಡನೆ ತಂದೆಯ ಪೆನ್ಶನೂ ಹೋಯಿತು.

* * *

ದ್ರವ್ಯಕ್ಕಾಗಿ ಶಿಶುವನ್ನು ಜಾರಿಸಿದರು

ನ್ಯೂಯೋರ್ಕಿನ ಕರ್ನಲ್ ಲಿಂಡ್‌ಬರ್ಗ್ ಎಂಬವರೊಬ್ಬರು ಬಹಳ ಸುಪ್ರಸಿದ್ಧ ವ್ಯೋಮಯಾನಿಕರು. ಅವರಿಗೆ ಒಂದು ಗಂಡು ಮಗುವು ಹುಟ್ಟಿ ಬರೀ ೧೯ ತಿಂಗಳುಗಳಾಗಿದ್ದವು. ೨ ೧ನೇ ದಿನ ಮಗುವನ್ನು ಮಾಳಿಗೆಯ ತೊಟ್ಟಿಲಲ್ಲಿ ಮಲಗಿಸಿ, ದಾದಿಯವರೂ ಇನ್ನಿತರರೂ ಕೆಳಗಿನ ಕೋಣೆಯಲ್ಲಿ ಭೋಜನಕ್ಕೆ ಕುಳಿತಿದ್ದರು. ಅಷ್ಟರಲ್ಲಿ ಯಾರೋ ಕೆಲವು ದರೋಡೆಯವರು ಒಂದು ಕಾರನ್ನು ಸಮೀಪದ ಕಾಡಿನಲ್ಲಿ ಅಡಗಿಸಿಟ್ಟು ಕರ್ನಲರ ಮನೆಗೆ ಹೋಗಿ ಕಳ್ಳಹೆಜ್ಜೆಯಿಂದ ಒಳನುಗ್ಗಿ, ಕಿಟಕಿಯೊಳಗಿಂದ ಮಗುವಿದ್ದ ಕೋಣೆಗೆ ಹೊಕ್ಕು ಒಂದು ಕಪ್ಪಟದಿಂದ ಮಗುವನ್ನು ಸುತ್ತಿ ಅದನ್ನು ಒಯ್ದರು. ಸ್ವಲ್ಪ ಹೊತ್ತಿನ ಮೇಲೆ ತೊಟ್ಟಿಲಲ್ಲಿ ಮಗುವಿಲ್ಲದ ವಾರ್ತೆಯು ಹಠಾತ್ತಾಗಿ ಹೊರಬಿತ್ತು. ಇಡೀ ಪೇಟೆಗಳಿಗೆ ಟೆಲಿಫೋನು ವಾರ್ತೆಯು ಹೋಯಿತು. ಎಲ್ಲ ಮೋಟರ್ ಕಾರುಗಳನ್ನು ಜಪ್ತಿ ಮಾಡಿ ನೋಡಬೇಕೆಂದಪ್ಪಣೆಯಾಯಿತು. ಪೋಲೀಸರು ಹುಡುಕುವುದರಲ್ಲಿ ತೊಡಗಿದರು. ಕೆನಡಾದ ಗಡಿಪ್ರಾಂತ್ಯದಲ್ಲಿಯೂ ಕಾವಲಿರಿಸಲ್ಪಟ್ಟಿತು. ಅತ್ಯಾಚಾರದ ವರ್ತಮಾನವು ಹರಡಿದ ಕೆಲವು ನಿಮಿಷಗಳಲ್ಲೇ ೩೦೦ ಮೋಟರ್ ಕಾರುಗಳು ಹುಡುಕಲ್ಪಟ್ಟುವು. ಕಳ್ಳರು ಮೇಜಿನ ಮೇಲೊಂದು ಕಾಗದವನ್ನಿಟ್ಟಿರುವರು. ಅದರಲ್ಲಿ ತಮಗೆ ೫೦,೦೦೦ ಡಾಲ್ಲರುಗಳನ್ನು ಕೊಡಬೇಕಾಗಿಯೂ ಇಲ್ಲದಿದ್ದರೆ ಮಗುವನ್ನು ಕೊಲ್ಲುವೆವಾಗಿಯೂ ಬರೆದಿರುವರು.

ಡಾ। ಅಂಬೇಡಕರರು.

ಇವರು ಅಂತ್ಯಜರ ಪ್ರತಿನಿಧಿಗಳಾಗಿ ಲಂಡನಿನಲ್ಲಿ ಜರಗಿದ ರೌಂಡ್‌ಟೇಬಲ್ ಸಭೆಗಳಿಗೆ ಹೋಗಿದ್ದರು. ಅಂತ್ಯಜರಿಗೆ ಪ್ರತ್ಯೇಕ ಪ್ರಾತಿನಿಧ್ಯವೇ ಬೇಕೆಂದು ಇವರ ಹೇಳಿಕೆ. ಕಾಂಗ್ರೆಸ್ಸೂ ಇನ್ನಿತರ ರಾಜನೀತಿಜ್ಞರೂ ಹೇಳುವುದು ತಮಗೆ ಜತೆ ಪ್ರಾತಿನಿಧ್ಯವೇ ಬೇಕೆಂದು. ಡಾ। ಅಂಬೇಡಕರರು ಮಾತ್ರ "ಅದು ಬೇಡ ನಮಗೆ ಅದರಿಂದ ಮೋಸವಿದೆ" ಎಂದು. ಇವರು ಗಾಂಧಿಯವರ ಮತ್ತು ಕಾಂಗ್ರೆಸ್ಸಿನ ಕುರಿತು ಹೇಳುವಾಗ, ಹಿಂದೀಯರ ಪ್ರತಿನಿಧಿಯಾಗಿ ಲಂಡನಿಗೆ ಗಾಂಧಿಯವರನ್ನಲ್ಲದೆ ಬೇರಾರನ್ನಾದರೂ ಕಳುಹಿಸುತ್ತಿದ್ದರೆ ಒಳ್ಳೆಯದಿತ್ತು. ಗಾಂಧಿಯವರು ಲಂಡನಿನಲ್ಲಿ ಬರೀ ಗುಲ್ಲನ್ನೆಬ್ಬಿಸಿದರು ಎಂದರು. ಈಗ ಜತೆ ಪ್ರಾತಿನಿಧ್ಯವು ಬೇಕೆನ್ನುವ ಎಂ. ಸಿ. ರಾಜರೆಂಬವರಿಗೂ ಡಾ। ಅಂಬೇಡಕರರಿಗೂ ಪತ್ರವ್ಯವಹಾರ ಜಟಾಪಟಿಗಳು ನಡೆಯುತ್ತಿವೆ.

* * *

ಶ್ರೀಯುತ ವಿ. ಜೆ. ಪಟೇಲರು ವಿಯೆನ್ನಾಕ್ಕೆ ಹಿಂತಿರುಗಿದರು

ಶ್ರೀಯುತ ವಿ. ಜೆ. ಪಟೇಲ್ (ಎಸೆಂಬ್ಲಿಯ ಮಾಜೀ ಅಧ್ಯಕ್ಷರು) ಇವರನ್ನು ೨ ೭ನೇ ದಿನ ಎರವಾಡಾ ಸೆರೆಮನೆಯಿಂದ ಬಿಡುಗಡೆ ಮಾಡಿ ಮುಂಬಯಿಗೆ ಕೊಂಡೊಯ್ದು ಬಿಟ್ಟುಬಿಟ್ಟರು. ವೈದ್ಯರ ಅಭಿಪ್ರಾಯದ ಮೇರೆಗೆ ಅವರು ೨ ೫ನೇ ದಿನ ಮೊದಲೊಮ್ಮೆ ಹೋಗಿದ್ದ ವಿಯೆನ್ನಾ ದೇಶಕ್ಕೆ ರಂಚಿ ಎಂಬ ಜಹಜಿನಲ್ಲಿ ಹೋದರು. ಜೈಲುವಾಸದಿಂದಲೂ, ಅನಾರೋಗ್ಯದಿಂದಲೂ ವೃದ್ಧಾಪ್ಯದಿಂದಲೂ ಅವರ ಮೋರೆಯು ಕ್ಷೀಣವಾಗಿತ್ತು. ಅವರು ಗಡ್ಡವನ್ನು ಸಂಪೂರ್ಣವಾಗಿ ತೆಗೆದಿರುವುದಿಲ್ಲ. ಅದನ್ನು ಸಣ್ಣದು ಮಾಡಿರುವರಷ್ಟೆ. ಅವರು ಈಗಿನ ಸ್ಥಿತಿಯ ಕುರಿತು ಹೇಳುತ್ತಾ— "ಜನರಲ್ ಇಲೆಕ್ಷನಿನ ವಿಜಯದ ಭರದಿಂದ ಇಂಗ್ಲಿಷ ಜನರು ಮಾತ್ರವಾಗಿ ವಿವೇಕವನ್ನೇ ಕಳೆದುಕೊಂಡಿರುವರು. ಮಹಾತ್ಮಾಗಾಂಧಿಯವರಂತಹ ಸತ್ಪುರುಷರೊಡನೆ ರಾಜಿಗೆ ಬರುವ ಆತ್ಮಸೋಭವಾದ ಸುಸಂದರ್ಭವನ್ನು ಅವರು ಕಳೆದುಕೊಳ್ಳುತ್ತಿರುವರು. ಲೋರ್ಡ್ ವಿಲ್ಲಿಂಗ್ಡನ್‌ರೂ ಅವರ ಮಾತಹತರಾದ ಮೇಲಧಿಕಾರಿಗಳೂ ಹಿಂದೂದೇಶವನ್ನು ಆರ್ಡಿನೆನ್ಸುಗಳ ಮೂಲಕ ಆಳಿ ಬ್ರಿಟಿಷ ವಾಣಿಜ್ಯದ ಆಶೆಯನ್ನು ಪರಿಪೂರ್ಣ ಮಾಡಬಹುದೆಂದೆಣಿಸಿದರೆ ಅವರು ಖಂಡಿತವಾಗಿ ತಪ್ಪಿದ್ದ ಹಾಗೆಯೇ ಸರಿ. ಅವರ ಈಗಿನ ಧೋರಣೆಯು ಅವರ ವ್ಯಾಪಾರವನ್ನು ನಿರ್ಮೂಲಿಸುತ್ತಿರುವುದಲ್ಲದೆ ಅದರೊಡನೆ ಹಿಂದೀಯ ಮತ್ತು ಆಂಗ್ಲ ಸಂಬಂಧವನ್ನು ಕಡಿಯುತ್ತಿರುವರು. ರಾಜಿಯೂ ಶಾಂತಿಯೂ ಒಟ್ಟಿಗೆ ನಡೆಯಬಾರದು. ಹಿಂದೂದೇಶದಲ್ಲಿ ತಮಗಿರುವ ಸರ್ವ ಹಕ್ಕುಬಾಧ್ಯತೆಗಳನ್ನು ಬ್ರಿಟಿಷರು ಸಂಪೂರ್ಣ ಬಿಡಲು ಸಿದ್ಧರಾಗದ ತನಕ ಹಿಂದೂದೇಶದಲ್ಲಿ ರಾಜಿಯಿಲ್ಲ. ಬ್ರಿಟಿಷರು ದೂರವಾದ ಮೇಲೆ ಸ್ವತಂತ್ರ ಭಾರತವು ಬ್ರಿಟನ್ನಿನ ಸಂಬಂಧವನ್ನು ತನ್ನೊಡನೆ ಎಷ್ಟರಮಟ್ಟಿಗೆ ಇಟ್ಟುಕೊಳ್ಳಬೇಕೆಂದು ಆಲೋಚಿಸಬೇಕಷ್ಟೆ. ನನ್ನ ಅಭಿಮತದ ಮೇರೆಗೆ ಸ್ವಾತಂತ್ರ್ಯವೂ, ಬಾಂಧವ್ಯವೂ ಉಳ್ಳ ಭಾರತದಿಂದ ಎರಡು ರಾಷ್ಟ್ರಗಳಿಗೂ ಸುಖವುಂಟು. ಈ ಅಭಿಮತಕ್ಕೆ ಬಹುಮಂದಿ ಎಲ್ಲ ಜನರೂ ಒಪ್ಪುವರೆಂದು ನಾನು ನೆನೆಸುತ್ತೇನೆ. ಆದರೆ ಬ್ರಿಟಿಷ ಸರಕಾರವು ಇತ್ತೀಚಿಗೆ ಹೊರಗೆಡಹಿದ ತನ್ನ ಧೋರಣೆಯಿಂದ ಬ್ರಿಟನು ಅಂದಿನ ಜನರಲ್ ಇಲೆಕ್ಷನಿನಿಂದಾಗಿ ಮತ್ತರಾಗಿ ಹೋಗಿದೆ. ಅದರ ರಾಜನೀತಿಜ್ಞರು ವಿವೇಕವನ್ನು ಮರೆತಿರುವರು. ಹಿಂದೂದೇಶವು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದುವ ತನಕ ಹಿಂದೂದೇಶದಲ್ಲಿ ಹೋರಾಟವು ನಡೆದೀತೆಂದು ನಿಸ್ಸಂದೇಹವಾಗಿ ಹೇಳುತ್ತೇನೆ. ಸತ್ಯಾಂಶಕ್ಕೆ ತಕ್ಕುದಾಗಿ ಆದಷ್ಟು ತ್ವರೆಯಿಂದ ವರ್ತಿಸಿದರೆ ಸಂಬಂಧವು ಎಲ್ಲರಿಗೂ ಹಿತವುಂಟು" ಎಂದರು. ಶ್ರೀ ಭೂಲಾಭಾಯಿಯವರನ್ನು ಅವರ ಮಿತ್ರರು ಬೀಳ್ಕೊಟ್ಟರು.

* * *

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸ್ವಯಂಸೇವಕರಿಗೆ ಛಡಿ

ಕಾಂಗ್ರೆಸ್ಸಿಗೆ ಸಂಬಂಧಪಟ್ಟ ಕರಪತ್ರಗಳನ್ನು ಹಂಚಿದರೆಂಬ ಅಪಾದನೆಯ ಮೇಲೆ ಮೂರು ತಿಂಗಳ ಸಖ್ತ ಶಿಕ್ಷೆಯನ್ನು ಹೊಂದಿದ ಶ್ರೀಯುತರುಗಳಾದ ರಾಮಚಂದ್ರನ್, ಜಾನಕಿರಾಂ ಮತ್ತು ಶಲ್ಯರಾಜ್ ಎಂಬವರು ಸೆರೆಮನೆಯಲ್ಲಿ ರಾಗಿಯನ್ನು ಬೀಸಲು ಮುಷ್ಕರ ಹಿಡಿದುದಕ್ಕಾಗಿ ಫೆಬ್ರವರಿ ೨೭ರಲ್ಲಿ ಒಬ್ಬೊಬ್ಬನಿಗೆ ೩೦ ಛಡಿ ಏಟುಗಳನ್ನು ಕೊಡುವಂತೆ ಜೈಲ ಅಧಿಕಾರಿಯಾದ ಅಜೀಜ್‌ಖಾನ್ ಸಾಹೇಬ ಎಂಬವರು ಅಪ್ಪಣೆಕೊಟ್ಟರು. ಈ ಕೆಲಸವನ್ನು ಒಬ್ಬ ಮುಸಲ್ಮಾನ ಬಲ್ಲ ಪೋಲೀಸನಿಗೆ ವಹಿಸಿಕೊಟ್ಟರು. ಅಲ್ಲದೆ ಒಂದೊಂದು ಪೆಟ್ಟಿಗೆ ಒಂದೊಂದು ಮುಕ್ಕಾಲು ಕೊಡುವಂತೆಯೂ ಅಪ್ಪಣೆಯಿತ್ತರು. ಮೊದಲನೆಯದಾಗಿ ಶ್ರೀ ರಾಮಚಂದ್ರಯ್ಯನವರ ಸರ್ತಿಯು ಬಂದಿತು. ಅವರು ತನ್ನ ಪಾಲಿನ ೩೦ ಛಡಿಗಳನ್ನು ತಿಂದರು. ಪ್ರತಿ ಒಂದು ಛಡಿಯು ಬೀಳುವಾಗಲೂ ಮಹಾತ್ಮಾಗಾಂಧಿಕೀ ಜೈ ಎಂಬ ಮಂತ್ರವನ್ನವರು ಉಚ್ಚರಿಸಿದರು. ಎರಡನೇಯದಾಗಿ ಜಾನಕಿರಾಮರನ್ನು ಮಂಚಕ್ಕೆ ಬಿಗಿಯಲಾಯಿತು. ೨೫ ಛಡಿಗಳು ಬೀಳುವುದರೊಳಗಾಗಿ ಇವರಿಗೆ ಮೂರ್ಛೆ ತಪ್ಪಿತು. ಅಷ್ಟರಲ್ಲಿಯೇ ಅಲ್ಲಿದ್ದ ಡಾಕ್ಟರರವರು ಅವರನ್ನು ಬಿಡಿಸಿದರು. ಕೊನೆಯದಾಗಿ ಶಲ್ಯರಾಜರು ಬಂದರು. ೧೨ ಛಡಿಗಳನ್ನು ಸಹಿಸುವುದೇ ಇವರಿಗೆ ದುಃಸ್ಸಾಧ್ಯವಾಯಿತು. ಈ ಸುದ್ದಿಯು ಜೈಲಿನ ಎಲ್ಲಾ ರಾಜಕೀಯ ಕೈದಿಗಳಿಗೆ ತಿಳಿದುಬಂತು. ಇದಾದ ೧೨ ದಿನಗಳ ಮೇಲೆ ಅಂದರೆ ೨ ೧೯ರಲ್ಲು ಇನ್ನಿತರ ೧೧ ಮಂದಿಗಳು ೪೦ ಸೇರು ರಾಗಿಯನ್ನು ೬ ಘಂಟೆಯೊಳಗಾಗಿ ಬೀಸಲು ತಪ್ಪಿಂದಾಗದೆಂದುದಕ್ಕೆ ಅವರಿಗೂ ೨೦ರಂತೆ ಛಡಿಗಳನ್ನು ಕೊಡಬೇಕೆಂದು ತೀರ್ಮಾನವಾಯಿತು. ಗೋವಿಂದಾನಂದನ್ ಎಂಬವರು ೨೦ ಛಡಿಗಳನ್ನು ತಿಂದು ಬಳಲಿದರು. ಅಷ್ಟರಲ್ಲಿ ಶ್ರೀ ಜಿ. ಟಿ. ಎಂ. ಅಯ್ಯ ಎಂಬವರು ಜೈಲ್ ಸುಪರಿಂಟೆಂಡೆಂಟರವರ ಬಳಿಗೆ ಹೋಗಿ ಈ ಕೃತ್ಯವನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿದರು. ಆದರೂ ಎಲ್ಲರಿಗೆ ೧೦ರಿಂದ ೧೫ ಪೆಟ್ಟುಗಳು ಬಿದ್ದುವು. ಈ ಕೃತ್ಯವನ್ನು ಕಂಡು ಕೆಲ ಬಾಲಕ ಕೈದಿಗಳು "ಮಹಾತ್ಮಾಗಾಂಧಿಕೀ ಜೈ" ಎಂದು ಆರ್ಭಟಿಸಿದರು. ಅವರಿಗೂ ಬೆತ್ತದಿಂದ ಆರಾರು ಪೆಟ್ಟುಗಳನ್ನು ಕೈ ಮೇಲೆ ಕೊಡಲಾಯಿತು. ಶ್ರೀ ಸುಬ್ಬಕೃಷ್ಣ ಎಂಬವರು ಬೆತ್ತದ ಪೆಟ್ಟಿನ ಗಾಯದಲ್ಲಿ ಕೀವು ತುಂಬಿ ಅವರು ಜೈಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಈ ಕುರಿತು ಬೆಂಗಳೂರು ಮೈಸೂರುಗಳಲ್ಲಿ ಖಂಡನಾ ಸಭೆಗಳು ಜರಗಿದವು. ಈ ಘಟನೆಯನ್ನು ವಿಚಾರಿಸಲು ಕಮಿಟಿಯು ಏರ್ಪಡಿಸಲ್ಪಟ್ಟಿದೆ.

The Canara Bank, Ltd Mangalore
ದಿ ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

NOTICE

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಆಭರಣಗಳ ಆಧಾರದ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಕೊಡದೆ ಇದ್ದುದರಿಂದ ನಮ್ಮಿಂದ ಬರೆಯಲ್ಪಟ್ಟ ರಿಜಿಸ್ಟ್ರ್ ನೋಟೀಸು ವಾಪಾಸು ಬಂದಿರುವುದರಿಂದಲೂ ನಮ್ಮಿಂದ [illegible] ಅಡವಿಟ್ಟ ನಗಗಳನ್ನು ಇದೇ ಮಾರ್ಚ ತಿಂಗಳ ತಾರೀಕು [illegible]ನೇ [illegible] ದಿವಸ ಗಂಟೆ 12ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಬರಿಯ ಮಹಮ್ಮದ್ [illegible] ಬ್ಯಾರಿ [illegible] ಕಲ್ಯಾಣ್ ಪೋಸ್ಟ್ ಅಡವಿಟ್ಟ ೩-[illegible]-೬ [illegible] ಕಾಲದ [illegible] ರೂ ೪೦೦ [illegible] ತಾರೀಕಿನ ವರೆಗಿನ ಬಡ್ಡಿ ರೂ [illegible]

[illegible] ಪೋಸ್ಟ್ ಅಡವಿಟ್ಟ ೩೦ ೬-೧೧-೩೦ ಕಾಲದ [illegible] ರೂ ೩೦ [illegible] ತಾರೀಕಿನ ವರೆಗಿನ ಬಡ್ಡಿ [illegible]

ರಿಜಿಸ್ಟ್ರ ನೋಟೀಸು ಮತ್ತು ಈ ನೋಟೀಸು ಖರ್ಚು ಬೇರೆ

Canara Bank Ltd
Mangalore
[illegible]—1932

M. Mukund Kini,
for Secretary

The Canara Banking Corporation Udipi Ltd, Udipi

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಉಡುಪಿ ಲಿಮಿಟೆಡ್, ಉಡುಪಿ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ನಗಗಳ ಆಧಾರದ ಮೇಲೆ ಪಡೆದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದ, ಅವರ ಮೇಲೆ ಪಟ್ಟ ರಿಜಿಸ್ಟ್ರ್ ನೋಟೀಸು ಜಾರಿಯಾಗಿಲ್ಲವೆಂದು ಕಂಡುಬಂದುದರಿಂದ ಈ ಮೂಲಕ ತಿಳಿಯಪಡಿಸುವುದೇನೆಂದರೆ ನೆರೆಯವರು ಬೇಂಕಿಗೆ [illegible] ಅಸಲು ಬಡ್ಡಿಯು ಒಟ್ಟು ಮೊಬಲಗು ಕೊಟ್ಟು ನಗಗಳನ್ನು ಇದೇ ೧೯೩೨ನೇ ಇಸವಿ ಎಪ್ರಿಲ್ [illegible]ನೇ ಶನಿವಾರದೊಳಗೆ ಬಿಡಿಸದೆ ಹೋದರೆ, ಆ ನಗಗಳನ್ನು ಇದೇ ೧೯೩೨ನೇ ಇಸ್ವಿ ಎಪ್ರಿಲ್ [illegible]ನೇ ಸೋಮವಾರ ಮಧ್ಯಾಹ್ನ ೧ ಗಂಟೆಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು.

೧೫೧ ೩೯	ಪ್ರತಪ್ಪು ರಾಮಕೃಷ್ಣಾಚಾರ್ಯ	ರೂ ೩೦
೫೭೪ ೩೯	ಬೊಕ್ಕ ನಕ್ರಮರಕಾಲ	ರೂ ೨೫
೩೮೭ ೩೯		ರೂ ೨೫
೬೩೯ ೩೦	ಹರುತೋಟ್ಟಿ ನಾಸೆರ್ ಅಂದಾದ್ಯೆ	ರೂ ೩೦
೨೪೭ ೩೧	ಇರಕೊಡ್ಡು ಪದ್ಮರಾಜ ಬಳ್ಳಾಳ	ರೂ ೨೫

Office of the Corporation
Udipi 18 3 32

M. Shrinivas Prabhu,
Agent

ಹರಿಶ್ಚಂದ್ರ! ಸಾಕ್ಷಿಯಾಗುವದು!!

ಕೈಮುಟ್ಟಿ ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಞಂಗಾಡ (S.I.R)

ಆಯುರ್ವೇದಿಕ್ ವೈದ್ಯ ಶಾಲೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ ಎಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ [illegible] ಆಚಾರ್ಯ ವೈದ್ಯರಿಂದ ನಡೆಯಲ್ಪಡುವ ಈ ಸ್ಥಾಪನೆ [illegible]

ಕಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲೇ ಕಾಣಬಹುದು

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಞಂಗಾಡ (ದ. ಕ.)

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಔಷಧಿ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಬಿಡುವಿಲ್ಲ. ಕಡಿತ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂದಿಯಿಡುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೇಶ್ವರ ತೈಲ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೨

ವಿಳಾಸ — ಶಕ್ತಿ ಸುಧಾ ಕಾರ್ಯಾಲಯ

23 ಕಾಂದಾವಾಡಿ 4ನೇ ಗಲ್ಲಿ

ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ಕೊ-ಓಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ರಥಬೀದಿ, ಮಂಗಳೂರು

ನಿಕ್ಕೃಷ್ಟವಾದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂಮಿಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ

ಎಲ್ಲಾ ನಮೂನೆಯ ಜ್ವರಗಳಿಗೂ ಶ್ರೇಯದು

ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ

ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿ ಈ ವಿಳಾಸಕ್ಕೂ ಬರೆಯಿರಿ

ಡಾ ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್

ಕೇಡಲ್ ರೋಡ್ ಪೋ ಆ ದಾದರ್ ಮುಂಬಯಿ 14

Dr H L Batliwalla, Sons & Co , Ltd.
Kadell Road P O Dadar Bombay 14

ತಂತಿ ವಿಳಾಸ – SIRINDHUN' Bombay

ಶಪೂರ್ಜಿ ಎಚ್. ಎಲ್ ಬಾಟ್ಲಿವಾಲಾ – ಮುಖ್ಯ ಮೆನೆಜಿಂಗ್ ಡೈರೆಕ್ಟರ್



The Zandu Pharmaceutical Works, Ltd Bombay, 14

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

[illegible] ವಸ್ತುಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. [illegible] ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ ಉಬ್ಬಸ ನಾನಾ ವಿಧವಾದ [illegible] ಕೆಮ್ಮು ಎದೆ ನೆಗಡಿ ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ ಪುಷ್ಟಿಹೀನತೆ [illegible] ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/– ಕ್ರಯ 1 ಪಾನು ಸೀಸೆ ರೂ 2/8 ½ ಪಾ ರೂ 1/5 ¼ ಪಾ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು.

ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ

ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು

ಸಿರ್ಸಿ ಏಜಂಟರು — ಎಸ್. ಎಲ್ ಧಾಕಪ್ಪಾ ಎಂಡ್ ಬ್ರದರ್ಸ್

ಸಬ್ ಏಜಂಟರು — ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ., ಸಯ್ಯಾಜಿರಾವ್ ರೋಡ್

ಬೆಂಗಳೂರು ಏಜಂಟರು — ದಿ ಪೋಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ

☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ನಮ್ಮ ಶಾಲೆಗಳು.

೮. ಪಠ್ಯ ವಿಷಯಗಳೂ, ಗ್ರಂಥಗಳೂ.

ಲೇಖಕರು: - ಶ್ರೀಯುತ ಶಿವರಾಮ ಕಾರಂತ.

ಇನ್ನು ನಾವು ಪಠ್ಯ ವಿಷಯಗಳ ವಿಮರ್ಶೆಯನ್ನು ಮಾಡುವುದು ತೀರ ಅವಶ್ಯ. ಸಾಮಾನ್ಯವಾಗಿರುವುದು ಪ್ರಾಥಮಿಕ ಶಾಲೆಗಳೂ, ಉಚ್ಚ ಪ್ರಾಥಮಿಕ ಶಾಲೆಗಳೂ ಅವುಗಳ ಉಪಯೋಗವಿರುವುದು ಅಧಿಕಾಂಶವಾಗಿ ಹಳ್ಳಿಯ ಬಾಲಕರಿಗೆ. ಇವರೇ ನೇಕಡಾ ೯೦ರಷ್ಟು ಪ್ರಾಥಮಿಕ ಶಿಕ್ಷಣಕ್ಕೆ ಒದುವ ವಿದ್ಯಾರ್ಥಿಗಳು ಪೇಟೆಯ ಹುಡುಗರಿಗೂ ಈ ಶಿಕ್ಷಣವು ದೊರೆಯುವುದೇನೋ ಸಹಜ ಆದರೆ ಹಳ್ಳಿಯ ಬಾಲಕರಿಗೆ ಕೊಡುವ ಯಾವತ್ತು ಶಿಕ್ಷಣವು ಅವರ ಗ್ರಾಮಜೀವನಕ್ಕೆ ಸಹಕಾರಿಯಾಗುವಂಥದಿರಬೇಕು. ಅವರಲ್ಲಿ ಶಿಕ್ಷಣವನ್ನು ಮುಂದರಿಸಿ ಹೈಸ್ಕೂಲುಗಳನ್ನು ಪ್ರವೇಶಿಸುವವರ ಸಂಖ್ಯೆ ನೇಕಡಾ ೫ರಷ್ಟು ಇಲ್ಲವೆಂದೆನ್ನಬಹುದು ಹೀಗಿರಲು, ಅವರ ಶಿಕ್ಷಣವು ಮುಂದಿನ ಹೈಸ್ಕೂಲು ಶಿಕ್ಷಣಕ್ಕೊಂದು ಅಡಿಗಲ್ಲು ಮಾತ್ರವಾಗಿರಬಾರದು ಹಾಯರ್ ಎಲಿಮೆಂಟರಿ ಶಿಕ್ಷಣದೊಳಗೆ ಬಾಲಕರ ಜೀವನಕ್ಕೊಂದು ರೂಪು ದೊರೆಯಲೇ ಬೇಕು. ಅವರಲ್ಲಿ ಹಲವರು ಮುಂದರಿಸಿ ಕಲಿಯುವಷ್ಟು ಶ್ರೀಮಂತರಲ್ಲ ಕಲಿತ ಈ ವಿದ್ಯೆಯಿಂದ ಕೆಲವೊಂದು ಜನರಿಗೆ ಉಪಾಧ್ಯಾಯರಾಗಲು ಸಾಧ್ಯವಿದೆ ಆದರೆ ಎಲ್ಲರೂ ಈ ದೃಷ್ಟಿಯಿಂದ ಕಲಿಯಲು ಬರುವುದಿಲ್ಲ.

ಈಗಿನ ಹಾಯರ್ ಎಲಿಮೆಂಟರಿ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಯ ಭವಿಷ್ಯವೇನು? ಅವನು ಕಲಿತಿರುವ ಎಷ್ಟು ವಿಷಯಗಳು ಅವನ ಜೀವನದಲ್ಲಿ ಪ್ರತ್ಯಕ್ಷ ಇಲ್ಲವೆ ಪರೋಕ್ಷ ಸಹಾಯವನ್ನುಂಟುಮಾಡುತ್ತಿದೆ? ಅವನ ಪಾಠದ ಪಟ್ಟಿಯನ್ನು ನೋಡಿದರೆ ತಲೆ ತಿರುಗುವಷ್ಟು ವಿಷಯಗಳು ತುಂಬಿವೆ ಅವುಗಳಲ್ಲಿ ಎಷ್ಟೋ ವಿಷಯಗಳು ಅವನ ಜೀವನಕ್ಕೆ ಸಂಬಂಧಪಟ್ಟುದೇ ಅಲ್ಲ ಅವನಿಗೆ ಕನ್ನಡ ಪುಸ್ತಕಗಳು, ಉಪಪಠ್ಯ ಪುಸ್ತಕಗಳು, ಭೂಗೋಲ, ಚರಿತ್ರೆ, ಪ್ರಜಾಧರ್ಮ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ ಶರೀರಶಾಸ್ತ್ರ. ಇನ್ನೆಷ್ಟೆಷ್ಟೋ ಇವೆ ಸಿಲೆಬಸ್ಸನ್ನು ಕಂಡರೆ ತಲೆಯೆತ್ತುವಂತಿಲ್ಲ. ಆಹ್ಲಾದ ಪಾಠದ ಪುಸ್ತಕಗಳಲ್ಲಿ ಏನೆಲ್ಲಾ ಇದೆ; ಯಾವುದು, ಆಯಾಯ ಬಾಲಕರಿಗೆ ಉಪಯುಕ್ತವು. ಯಾವುದು ಅನುಪಯುಕ್ತವು, ಯಾವುದು ಪಠ್ಯ, ಸಾಧ್ಯವು, ಯಾವುದು ಅಸಾಧ್ಯವು—ಎಂಬ ವಿಚಾರವನ್ನು ಮಾಡುವವರಿಲ್ಲ ತಮಗೆ ರುಚಿ ಕಂಡ ವಿಷಯಗಳನ್ನು, ಪುಸ್ತಕಗಳಲ್ಲಿ ತುಂಬಿದರೆ ಅವು ಬಾಲಕರಿಗೆ ಒಗ್ಗುವುವು—ಎಂಬುದು ಈ ಪಠ್ಯ ಪುಸ್ತಕ ಮಾಡುವವರ ಮನಸ್ಸೆಂದು ಕಾಣುವುದು ನಾವು ವಿಷಯವನ್ನೀಗ ಒಂದೊಂದಾಗಿ ವಿಚಾರಿಸುವ. ಕೆಳಗಿನ ಕ್ಲಾಸುಗಳಲ್ಲಿ ಮಕ್ಕಳಿಗೆ ಭಾಷಾಜ್ಞಾನದ ಸಲುವಾಗಿ ಇರಿಸುವ ಕನ್ನಡ ಪುಸ್ತಕಗಳಲ್ಲದೆ ಉಪಪಠ್ಯ ಪುಸ್ತಕಗಳು ಅವಶ್ಯವೇ? ಉಪಪಠ್ಯ ಪುಸ್ತಕದಲ್ಲಿರುವ ಚಿಕ್ಕ ಪುಟ್ಟ ಕಥೆಗಳನ್ನು ಈ ಪಠ್ಯ ಪುಸ್ತಕಗಳೇ ಏಕೆ ಕೂಡಿರಬಾರದು? ಅವಿಲ್ಲದ ಪಠ್ಯ ಪುಸ್ತಕಗಳನ್ನೇ ಏತಕ್ಕೆ ಆರಿಸಬೇಕು?

ಇಂಗ್ಲಿಷ ಪಠ್ಯ ಪುಸ್ತಕಗಳನ್ನು ಕಾಣದವರಾರು? ಅವುಗಳಲ್ಲಿ ಎಂಥೆಂಥ ವಿಷಯಗಳಿವೆ. ಅಲ್ಲಿನ ಪ್ರತಿಯೊಂದು ರೀಡರನ್ನು ತೆಗೆದುಕೊಂಡರೂ ಬರುವ—ವಿಷಯಗಳೆಂದರೆ—ಕಥೆಗಳು, ರಸವತ್ತಾದ ಪ್ರಶ್ನೋತ್ತರಗಳು, ಆಕರ್ಷಣದಾಯಕವಾದ ವಿಷಯಗಳ ವರ್ಣನೆಗಳು ಈ ವಿಷಯಗಳ ಮೇಲಿನ ಪ್ರೇಮವೇ ಓದನ್ನು ಪ್ರೇರಿಸುವ ಗ್ರಂಥಗಳಿಗೆ ಪಠ್ಯ ಪುಸ್ತಕವೆನ್ನಬೇಕು ಅವರ ಬೇರೆ ಬೇರೆ ಪಠ್ಯ ಪುಸ್ತಕಗಳು ಆಯಾಯ ತರಗತಿಗೆ ಸರಿಯಾದ ಭಾಷಾಶೈಲಿಯೂ ಇದೆ ಆದರೆ ನಮ್ಮ ಜಿಲ್ಲೆಯ ಶಾಲೆಗಳಲ್ಲಿ ಉಪಯೋಗಿಸುವ ಪುಸ್ತಕಗಳಲ್ಲಿ ಈ ಆದರ್ಶವು ಕಾಣುವುದೇ? ಇಲ್ಲ—ನನ್ನ ಕಣ್ಣಿಗೆ ಒಡೆದು ತೋರಿದ ಒಂದು ಉದಾಹರಣೆಯನ್ನು ತೋರಿಸುವೆನು—ಇವಂಥ ಉದಾಹರಣೆಗಳೆಷ್ಟನ್ನೂ ಕೊಡಬಹುದು ಮೆಕ್ಮಿಲನರ ಕನ್ನಡ ಆರನೆಯ ಪುಸ್ತಕವಿದೆ ಇದನ್ಯಾರ ಸಲುವಾಗಿ ಬರೆದರೆಂದು ನಮಗೆ ತಿಳಿಯದು, ಇದರ ಹಿಂದಿನ ಸಂಸ್ಕರಣಗಳ—ಅಂದರೆ ನಾನು ಓದಿದುದು ೧೯೧೭—ಸಮಯ ನಿಜವಾಗಿಯೂ ಭಾಷೆಯ ದೃಷ್ಟಿಯಿಂದ ಲಲಿತವೂ, ತರಗತಿಗೆ ತಕ್ಕಂತೆಯೂ ಇತ್ತು. ಆದರೆ ಈಗೀಗ ಸುಧಾರಣೆಯಾಗುತ್ತ ಬಂದು ಈ ಪುಸ್ತಕವು ತನ್ನ ಶೈಲಿಯ ಬಿಗುವಿನಿಂದ ಬಿ. ಎ.ಗೆ ಯೋಗ್ಯವಾಗಿದೆ. ಗದ್ಯಭಾಗದಲ್ಲಿ ಪದ್ಯದಲ್ಲಿ ಬರುವುದಕ್ಕಿಂತಲೂ ಕಷ್ಟದ ಶಬ್ದಗಳು ತುಂಬಿವೆ. ವಾಸುದೇವಾಚಾರ್ಯರಿಂದಲೋ, ಇನ್ನೊಬ್ಬರಿಂದಲೋ ಉದ್ಧರಿಸಲ್ಪಟ್ಟ ಇವುಗಳ ಲೇಖನಗಳು ಪ್ರೌಢರಿಗೆ ಚೆನ್ನಾಗಿ ತೋರಬಹುದು. ಆದರೆ ೭ನೇ ತರಗತಿಯ ಮಕ್ಕಳಿಗೆ ತಲೆ ತಿರುಗಿಸುವಂಥದೇ ಸರಿ. ಉಪಾಧ್ಯಾಯನಿಗೂ ತಿಳಿಯದ ಶಬ್ದಗಳು ತುಂಬ. ಎಲ್ಲಿ ನೋಡಿದರೂ ಸಂಸ್ಕೃತದ ಜರಿವುಳಿ! ಹೆಜ್ಜೆ ಹೆಜ್ಜೆಗೂ ಉಕ್ಕಿನ ಕಡಲೆಗಳನ್ನು ಅಗಿಯುತ್ತಿದ್ದರೆ—ಪಾಠದ ಸ್ವಾರಸ್ಯವು ಹೇಗೆ ಉಳಿದೀತು! ಹಿಂದೆ ಇದೇ ೭ನೇ ಪುಸ್ತಕದಲ್ಲಿ ಈ ಬಗೆಯ ತೊಡಕುಗಳಿರಲಿಲ್ಲ.

ಇನ್ನು ವಿಷಯಗಳಾದರೂ ಅದೇ ರೀತಿಯಿಂದಿವೆ. ಭಗವದ್ಗೀತೆಯ ಅಧ್ಯಾಯವೊಂದು ಇದರಲ್ಲಿದೆ. ಇದು ಬರೆದವರಿಗೆ ಒಳ್ಳೇ ರಸವತ್ತಾಗಿ ಕಂಡಿರಬಹುದು—ಆದರೆ ಗೀತೆಯ ತತ್ವಜ್ಞಾನವು ೭ನೇ ಈಯತ್ತೆಯ ಹುಡುಗರಿಗೆ ಹೇಳಿಸಿದುದೇನು? ಹಿಂದೆ ಇದೇ ಪುಸ್ತಕಗಳಲ್ಲಿ ಬುದ್ಧನ ಜೀವನ ಚರಿತ್ರೆಯಿತ್ತು ಅದರಲ್ಲಿನ ಸರಳತೆ, ಧಾರ್ಮಿಕ ವಿಷಯವಾದರೂ ಬಾಲಕರ ಮರ್ಮವನ್ನು ಪ್ರವೇಶಿಸುವ ಮಾರ್ದವಗಳು ಈ ವಜ್ರಕಾಯದಲ್ಲಿಲ್ಲ. ಹೆಚ್ಚೇನು, ಉಪಾಧ್ಯಾಯನೇ ಇಂಥ ವಿಷಯಗಳನ್ನು ವರ್ಣಿಸಲಾರನು! ಇಂಥ ಎಷ್ಟೋ ಆಕ್ಷೇಪಗಳನ್ನು ಈ ಗ್ರಂಥದ ವಿಷಯವಾಗಿ ಕೊಡಬಹುದು. ೭ನೇಯ ಪುಸ್ತಕವು ೬ನೇಯದಕ್ಕಿಂತ ಲಘುವಾಗಿದೆ

ಇನ್ನು ವಿಷಯ ವಿವೇಚನೆಯನ್ನು ಮಾಡುವುದಾದರೆ—ಈ ಯಾವತ್ತು ಪಠ್ಯ ಪುಸ್ತಕಗಳು ವಿಜ್ಞಾನದಿಂದ ತುಂಬಿವೆ ಪಠ್ಯ ಪುಸ್ತಕಗಳಲ್ಲಿ ಸಾಹಿತ್ಯ ಪ್ರಧಾನ—ವಿಜ್ಞಾನವಲ್ಲ. ಇದನ್ನು ಇವರು ಮರೆತಂತೆ ಕಾಣುವುದು ಲಕ್ಷ್ಮಣರಾಯರ ಕನ್ನಡ ಪಠ್ಯ ಪುಸ್ತಕ ಮಾಲೆಗಳಲ್ಲಿ—ನಿಮ್ಮ ಪಾಲಿಗೆ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರಗಳೇ ತುಂಬಿವೆ ಅವರಿಗೆ ಈ ವಿಷಯದಲ್ಲಿ ಬೇರೆ ಪಾಠಗಳೇ ಬೇಡವಾಗಿದೆ ಬಾಷಾ ಪಠ್ಯ ಪುಸ್ತಕಗಳನ್ನು ಓದುವಾಗ ಅವರು ಭಾಷೆಯ ಕಡೆಗೆ ಲಕ್ಷ್ಯ ಕೊಡುವ ಬದಲು, ಈ ವೈಜ್ಞಾನಿಕ ಸದ ವಿಷಯಗಳನ್ನೇ ಮೇಯುವುದಾಯಿತು ಇಂಥ ಭಾಷಾ ಪಠ್ಯಪುಸ್ತಕಗಳು ಇಂಗ್ಲಿಷಿನಲ್ಲಿವೆಯೇ? ಆಕರ್ಷಣದಾಯಕ ಕಥೆ ವಿಷಯಗಳನ್ನು ನಾವು ಎಂದಿಗೆ ಆರಿಸುವೆವು? ಅವುಗಳಿದ್ದರೆ ಒಡಮಕ್ಕಳಿಗೆ ಉಪಪಠ್ಯಪುಸ್ತಕಗಳ ಹೊರೆಯನ್ನು ಖಂಡಿತವಾಗಿಯೂ ಇಳಿಸಬಹುದು.

ಈಗ ಇತರ ವಿಷಯಗಳನ್ನು ಕುರಿತು. ಭೂಗೋಲ ಮದ್ರಾಸು ಸಂಸ್ಥಾನದ ಭೂಗೋಲವು ೫ನೇ ತರಗತಿಗೆ ಶಿಕ್ಷಣ ವಿಷಯ ಈಗಿರುವ ಗ್ರಂಥವು ಮೆಕ್ಮಿಲನರದು ಇದನ್ನು ತಿರುವಿ ಹಾಕಿದ ಪುಟದಲ್ಲಿ ದೊರೆಯುವುದು. ಬರೇ ಹೆಸರುಗಳೂ ಸಂಖ್ಯೆಗಳೂ! ಅಮೇರಿಕದ ಮತ್ತು ಯುರೋಪಿನ ಎಷ್ಟೋ ಭೂಗೋಲದ ಪುಸ್ತಕಗಳನ್ನು ಬರೇ ಕಥೆಯೆಂದು ಓದುವ ಬಗೆಯಾದರೆ, ಈ ಗ್ರಂಥಗಳು ತಮ್ಮ ಸಂಖ್ಯೆ ಪ್ರಮಾಣಗಳಿಂದ ವಿಗ್ನವನ್ನುಂಟುಮಾಡುತ್ತವೆ ಒಂದೇ ಒಂದು ಅಧ್ಯಾಯವಾದರೂ ತನ್ನ ವರ್ಣನಾ ಬಲದಿಂದ ಮನಸ್ಸನ್ನು ಆಕರ್ಷಿಸುವುದಿಲ್ಲ ಬರೇ ಬಿಣ್ಣ ಕಟ್ಟಿಗೆಯನ್ನು ತಿನ್ನಿಸಿದಂತೆ ಇದನ್ನು ತಿನ್ನಿಸಿದರೆ ಮಕ್ಕಳಿಗೆ ಭೂಗೋಲದಲ್ಲಿ ಸವಿಯುಂಟಾಗಬಹುದೇ? ಇಲ್ಲವೇ, ಉಪಯೋಗವಾಗಬಹುದೇ? ಭೂಗೋಲವು ಅತಿ ರಸವತ್ತಾದ ವಿಷಯ ಆದರೆ ನಮ್ಮ ಗ್ರಂಥಕಾರರ ಕರಕ್ಕೆ ಸಿಲುಕಿ ಅದು ಕಟುಕವಾಯವಾಗಿದೆ ಇನ್ನು ಏಳನೇ ಎಂಟನೇ ತರಗತಿಗಳಿಗೆ ಆರಿಸಿದ ಭೂಗೋಳದ ವಿಷಯವೇನೆಂದು ಬಲ್ಲಿರಾ? ಆಫ್ರಿಕ, ಯುರೋಪು, ಅಮೇರಿಕ, ಏಸ್ಟ್ರೇಲಿಯ ಮೊದಲಾದ ಭಾರತೇತರ ದೇಶಗಳ ಚಿತ್ರ' ಇವುಗಳಲ್ಲಿಯೇ ಹಿಂದೂಸ್ಥಾನದ ಚಿತ್ರಕಲ್ಪನೆಯು ಅವರಿಗೆ ಆಗಿರಬೇಕೆಂದು ಊಹೆ! ಆದರೆ ಒಂದೊಂದು ವರುಷ ಮಕ್ಕಳಮುಂದಿಗೆ ನಿಂತ ಅಂಕೆ, ಹೆಸರುಗಳೇ ಅವರಲ್ಲಿ ಭೂಗೋಲದ ಪ್ರೇಮವನ್ನು ಕೆಡಿಸಿದೆಯೆಂದು ಅವರಿಗೆ ತಿಳಿದಿಲ್ಲ ಭೂಗೋಲಕ್ಕೂ ಜೀವನಕ್ಕೂ ಸಂಬಂಧವಿದೆಯೆಂಬ ಪ್ರೇಮವೂ ಅವರಿಗೆ ಆಗಿಲ್ಲ! ಅಲ್ಲದೆ—ಈ ಅನ್ಯದೇಶೀಯ ಭೂಗೋಲವು ಹಳ್ಳಿಯ ಮಕ್ಕಳಿಗೆ ಏನು ಉಪಯೋಗವಾದೀತು? ಈಗಾಗಲೇ ಕಲಿತವರಲ್ಲಿ ನೇಕಡಾ ಒಬ್ಬನಿಗಾದರೂ ಅದರ ನೆನಪಿದೆಯೋ? ಅದರ ಉಪಯುಕ್ತತೆಯು ಕಂಡಿದೆಯೋ? ಪ್ರಾಥಮಿಕ ಶಾಲೆಗಳಲ್ಲಿ ಬರೇ ಭರತಖಂಡದ ಸ್ಪಷ್ಟ ಚಿತ್ರವು ಅವರಿಗೆ ಉಂಟಾದರೆ ಸಾಲದೇನು?

ಚರಿತ್ರೆಯು ಇನ್ನೊಂದು ಪ್ರಾಮುಖ್ಯ ವಿಷಯವು ಆಯಾಯ ದೇಶದ ಚರಿತ್ರೆಯ ಆಯಾಯ ಜನರ ಜೀವನದ ಅಂಗವಾಗಿರುವುದೂ, ಆಗಿರಬೇಕಾದುದೂ ಅವಶ್ಯ. ಆದರೆ ನಮ್ಮ ಚರಿತ್ರೆಯ ಶಿಕ್ಷಣವೆಂದರೆ ದೊಡ್ಡವರ ಸಾವು ಹುಟ್ಟುಗಳ ಸಂಧಿ ವಿಗ್ರಹಗಳ ಪಟ್ಟಿಯಲ್ಲದೆ ಬೇರೆಯಿಲ್ಲ. ನಮ್ಮ ಸಂಸ್ಕೃತಿ ಇಂಥದೆಂದು ಇದೀ ಚರಿತ್ರೆಯನ್ನು ತಿರುವಿ ಹಾಕಿದರೆ ಸಿಗುವಂತಿಲ್ಲ! ಅದರಲ್ಲಿರುವುದು ಹೆಸರು—ಅಂಕೆ—ಹೆಸರು—ಅಂಕೆ. ಒಂದು ದಿನ ವಿರಾಮವಿದ್ದಾಗ ಮೆಕ್ಮಿಲನರ ಹಿಂದೂಸ್ಥಾನ ಚರಿತ್ರೆ (ಮಾರ್ಸ್ಡನ್ ಕೃತ)ಯನ್ನು ತೆಗೆದು ನೋಡಿದೆನು.! ಬರೇ ಒಂದು ಅಧ್ಯಾಯದಲ್ಲಿ ಹೆಸರು ಅಂಕೆಗಳೆಂದು ೩೦ಕ್ಕೆ ಮಿಕ್ಕಿದ್ದುವು. ಇದೂ ಎರಡು ಪುಟದಲ್ಲಿ. ಇದನ್ನು ಬಾಲಕರು ನೆನಪಿರಿಸಿಕೊಳ್ಳಬೇಕು. ಕಾರಣ—ಇದಕ್ಕಾ ಮಿಕ್ಕಿ ನೆನಪಿರಿಸಿಕೊಳ್ಳಲು ಅವಶ್ಯವೆನಿಸಿದ ಭಾಗ ಅದರಲ್ಲಿರುವಂತೆ ಕಾಣಲಿಲ್ಲ! "ಇ ಬಿ. ಹಾವೆಲರ" ಆರ್ಯನ್ ರೂಲ್ ಇನ್ ಇಂಡಿಯಾ" ಓದಿದವರಿಗೆ ಚರಿತ್ರೆಯು ಜೀವನಕ್ಕೆ ಎಷ್ಟು ಅವಶ್ಯವೆಂದು ಕಾಣದಿರದು. ಒಂದು ಹಾಳೆಯನ್ನೋದಿದರೆ ಅದರಿಂದಲೇ, ನಮ್ಮ ಪೂರ್ವಜರ ಜೀವನದ ಪರಿಚಯವಾಗುತಿತ್ತು. ಆದರೆ ಈಗ ಬೇಕಾದುದು ಸಾವು ಹುಟ್ಟುಗಳ ಪಟ್ಟಿ ಮಾತ್ರ. ಇಂಗ್ಲಿಷಿನಲ್ಲಿನ High Foods of English History ಮಾದರಿಯಲ್ಲಿ ರಸಾತ್ಮಕವಾಗಿ ಏಕೆ, ನಮ್ಮ ಚರಿತ್ರೆಗಳು ರೂಪಿಸಲ್ಪಡಬಾರದು! ಬಾಲಕರಿಗೆ ಅಂಕೆ ಹೆಸರುಗಳಿಂದ ಎಷ್ಟು ದಿನಗಳ ವರೆಗೆ ನಾವು ಬೆದರಿಸುತ್ತಿರಬೇಕು?

ಇನ್ನು ಭರತಖಂಡದ ಚರಿತ್ರೆಯನ್ನು ಓದುವ ಹುಡುಗರಿಗೆ, ಈಗಿನ ಪಠ್ಯ ಪುಸ್ತಕಗಳು, ದೇಶಪ್ರೇಮವನ್ನು ಪ್ರೇರಿಸುವುದಂತೂ ಇಲ್ಲವೇ ಇಲ್ಲ ಒದಲಿಗ ನಮ್ಮನ್ನು ಆಳುತ್ತಿರುವ ಪಾಶ್ಚಾತ್ಯ ಶಾಸಕರುಗಳೆಂದೇ ತೋರಿಸುವುದು ಬ್ರಿಟಿಷರ ಕಾಲಕ್ಕೆ ಬರಲು, ಒಂದೇ ಸವನೆ ಸುಳ್ಳಿನ ಸುಳಿಗಾಳಿಯ ಬೀಸುವುದು ಈ ರೀತಿಯಲ್ಲಿ ನಮ್ಮ ಚರಿತ್ರೆಯ ವಿಷಯ ಸರಿ ನಮ್ಮನ್ನು ವಂಚಿಸುತ್ತಿರುವ ಗ್ರಂಥಗಳೇ ನಮ್ಮ ಪಠ್ಯ ಪುಸ್ತಕಗಳಾಗಿರಬೇಕೇ? ಶಿವಾಜಿ—ಕಳ್ಳ, ಟಿಪ್ಪು—ಹಾ..., ಹೇಡಿ—ಕ್ರೂರಿ, ಆದರೆ ಕ್ಲೈವ—ಸಂಭಾವಿತ, ವಾರನ ಹೇಸ್ಟಿಂಗ್ಸ—ಪರಮ ಸಂಭಾವಿತ, ವೆಲ್ಲಸ್ಲಿ—ಸಂಭಾವಿತ ಶಿರೋಮಣಿ—ಎಂಬ ಪಾಠಗಳು ನಮ್ಮ ಮಕ್ಕಳಿಗೆ ಬೇಡ ಅವರು ನಿಜಾಂಶವನ್ನು ತಿಳಿಯಲು ಬಯಸುವರು ... ಇಂಗ್ಲೀಷರು ... ಪ್ರಶಾಸ್ತ್ಯಸೂಚಕ ...—ಹಾಗೆಯೇ ಇತರ.

ಚರಿತ್ರೆಯನ್ನು ಓದಿ ಮುಗಿಸಿದ ಬಳಿಕ—ನಮ್ಮ ಜನರು ... ಮನುಷ್ಯರು ... ತಿಸ್ಕರಿಸ್ಕರು ... ಬ್ರಿಟಿಷರು ನಮ್ಮನ್ನು ... ಅವರ ... ಸರ್ವಶ್ರೇಷ್ಠ—ಎಂದೆನ್ನುವ ವಂಚನೆಯು ... ಬೇಡ ಇಂಥ ಚರಿತ್ರೆಗಳನ್ನು ಇಂಗ್ಲೆಂಡು ... ಅಲ್ಲಿನಷ್ಟು ಮನ್ನಣೆಯು ದೊರೆತೀತು? ... ಚರಿತ್ರೆಗಳು ... ಚರಿತ್ರೆಯ ಅಧಾಪವೇ ...

ಹೀಗೆ ಪ್ರತಿಯೊಂದು ವಿಷಯದ ಮೇಲೆ ಟೀಕಿಸಬಹುದು. ಆದಲ್ಲ ಈ ಲೇಖನದಲ್ಲಿ ಮಾಡುವುದು ನನ್ನ ಉದ್ದೇಶವಲ್ಲ ಅಂತು ನಮ್ಮ ಪಠ್ಯ ವಿಷಯಗಳೂ, ಪಠ್ಯ ಪುಸ್ತಕಗಳೂ ಪುನಃ ಪರಿಶೋಧಿಸಲ್ಪಡಬೇಕು ... ಇಲ್ಲದಿದ್ದರೆ ಹೊಸತಾಗಿ ಬರೆಯುವ ಯತ್ನವು ನಡೆಯಬೇಕು ಶಿಕ್ಷಣವು ಸಂಪೂರ್ಣವಾಗುವುದಿಲ್ಲ ... ಸಿಲೆಬಸ್ಸು—... ರಚನೆ ... ಆದರೂ ಈ ವಿಷಯ ... ನಾನು ಬೇಡುತ್ತೇನೆ ... ನಮ್ಮ ಸೂಚನೆಯನ್ನು ಕೊಡುವರಲ್ಲವೆ ಈಗಿನ ಸಿಲೆಬಸ್ ಕರ್ತರಾಗಿರುವವರಲ್ಲಿ ಹಲವರು—ಲೇಖಕರೂ, ಪ್ರಕಾಶಕ ಸಂಸ್ಥೆಗೆ ಸಂಬಂಧಪಟ್ಟವರೂ ಇರುವರು ಅವರು ಮಕ್ಕಳ ಮೇಲಿನ ಪ್ರೇಮದಿಂದ—ತಂತಮ್ಮ ವ್ಯಕ್ತಿತ್ವಕ್ಕೂ, ಸಂಸ್ಥೆಗಳಿಗೂ; ಈ ಪಠ್ಯ ಪಟ್ಟಿಯ...—ಬಂ... ... ನಾನು ಬೇಡುತ್ತೇನೆ ... ಪಠ್ಯ ಪುಸ್ತಕವು ಈ ದೋಷವನ್ನು ... ಈಗ ಹಲವು ಹೊಸ ಗ್ರಂಥಗಳಾಗುತ್ತಿವೆ ಅಲ್ಲದೆ ಮೈಸೂರು ಸಂಸ್ಥಾನದಲ್ಲೂ ಮುಂಬಯಿ ಸಂಸ್ಥಾನದಲ್ಲೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಉಪಯೋಗಿಸುವ ಪುಸ್ತಕಗಳಲ್ಲಿ ಎಷ್ಟೋ ಉಪಯುಕ್ತವಾದುವಿವೆ. ಅವುಗಳ ಹೆಸರು ತಮ್ಮ ಈ ಜಾರಿಯಾದರೂ ಸಿಲೆಬಸ್ಸಿನವರ ಕಣ್ಣಿಗೆ ಬಿದ್ದವೆಂದು ತಿಳಿಯುತ್ತೇನೆ

ಅಂತು ವ್ಯಕ್ತಿಶ್ರೇಯ ಇಲ್ಲವೆ ತಮಗೆ ಪ್ರೀತಿದಾಯಕ ವಿಷಯವೇ ಈ ...ನೆಗಳ ಮೇಲೆ ಪಠ್ಯ ಪಟ್ಟಿಯ ರಚನೆಯಾಗದೆ, ಕೇವಲ ಬಾಲಕರ ಬುದ್ಧಿ ಶಕ್ತಿ, ಕಲ್ಪನೆ ಲಾಲಸೆಗಳಿಗೆ ಸರಿಯಾಗಿ ಸಿಗುವ ಜೀವನಕ್ಕೆ ಸಹಕಾರಿಯಾಗುವ ತೆರದಲ್ಲಿ ಅವರು ಕೆಲಸಮಾಡುವದಾದರೆ, ನಮ್ಮ ಜಿಲ್ಲೆಯ ಶಿಕ್ಷಣಕ್ಕೆ ಮಹದುಪಕಾರವಾದೀತೆಂದು ನಂಬುವೆನು.

ಭಾಷಾಶಿಕ್ಷಣದ ಗ್ರಂಥಗಳನ್ನು ಆರಿಸುವಾಗ ಹಲವು ಆಂಗ್ಲ ರೀಡರುಗಳ ಆದರ್ಶವನ್ನೂ ವಿಷಯ ಶಿಕ್ಷಣದ ಕಾಲದಲ್ಲಿ ಅಮೇರಿಕದ ಬೇರೆ ಬೇರೆ ವಿಷಯದ ರೀಡರುಗಳ ಮಾದರಿಯನ್ನೂ ಅವರು ಅವಶ್ಯವಾಗಿ ಪರಿಶೀಲಿಸಬೇಕೆಂದು ಸೂಚಿಸಿ ಇಲ್ಲಿಗೆ ನಿಲ್ಲಿಸುತ್ತೇನೆ.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉಚ್ಚಾಟವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ. ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟುದು

HEDAKRIN THE DYSENTERY CHOLERA CURE

ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟುದು.

ಬಾಟ್ಲಿನ ಕ್ರಯ ಆಣೆ 0—15—0. 2 ಬಾಟ್ಲಿನ ಬಾಟಲಿಗೆ ರೂ 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆಫೀಸು, ಡೊಂಗರಕೇರಿ ರಸ್ತೆ, ಮಂಗಳೂರು.

ದಿ ಕಿಂಗ್ ಡಿಸ್ಪೆನ್ಸರಿ, ಕೊಡಿಯಾಲಬೈಲ್ ಪೋಸ್ಟು, ದ. ಕನ್ನಡಾ

"If every Wife knew what every Widow knows every Husband would be Insured"

PLACE YOUR LIFE ASSURANCE WITH
THE SOUTH INDIAN.

Securing for your clients –
1. Low rates of Premium
2. Liberal Policy Conditions

AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE

For terms of Agency please apply to —
H. R. K. IYENGAR
Chief Agent
The S. I. G. A Co, Ltd,
Sanyasiguddy, MANGALORE
Managing Agents –
K. C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ
ನಿಮಗೂ, ನಿಮ್ಮ ಗಿರಾಕಿಗಳಿಗೂ ತಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರೀಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸವಮಾಡುವವರಿಗೆ
ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ. ಅಯ್ಯಂಗಾರ್.
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್. ಐ. ಜಿ. ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ, ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕ್ಲೀನ್ ಸ್ಟ್ರೀಟ್ ಜಿ. ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ಕಾಲಾನುಕಾಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡು ತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

100 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ. ನನ್ನ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮಹಾಕ್ರಾಪು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗಿ ವನ್ನು ಸ್ವಾಧೀನಕ್ಕೆ ತರುತ್ತದೆ. ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಕ್ಷಯಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಕ್ಷಯರೋಗಿಗಳ ರೋಗವನ್ನು ನಂಬುಗೆಯಾಗಿ ಗುಣಪಡಿಸಿ ರುತ್ತದೆ ಕ್ಷಯಗಿಗೆ ಮಾತ್ರವಲ್ಲದೆ ಸಾಧಾರಣ ...ಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ
ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸ ತೈಲ.

ಸ್ತ್ರೀಗು ರೋಗಿಯು ಪ್ರತಿಸಂಧುಗಳಿಗೂ, ಗಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ. 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜಂಟರು.—
ಬ್ರಾಂಚ್ ಆಫೀಸ್, ಬಳ್ಳಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಬಂದರ ಹತ್ತಿರ.

ಕನ್ನಡ ಸದ್ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದೊಳ್ಳೇ ಸಂಧಿ ಅಲಭ್ಯ ಲಾಭ!! ಶೀಘ್ರ ಸಮಯ!!

ಶ್ರೀ ಶೇಷಾಚಲ ಗ್ರಂಥಮಾಲೆಯ

೨೫ ಐತಿಹಾಸಿಕ ಕಾದಂಬರಿಗಳು ಇವುಗಳ ಬೆಲೆ ಸರಾಸರಿ	ರೂ.	೨
೨೨ ಸಾಮಾಜಿಕ-ಪೌರಾಣಿಕ	ರೂ	೧೨
೧೧ ಪತ್ತೇದಾರಿ	ರೂ	೬
೩೦ ಚರಿತ್ರೆಗಳು	ರೂ	೨೦
೧೦ ಗದ್ಯ-ಪದ್ಯನಾಟಕ ಉ.	ರೂ	೬
೨೫ ಪೌರಾಣಿಕ ಪಾರಮಾರ್ಥಿಕ	ರೂ	೨೫
೨೦ ಧಾರ್ಮಿಕ, ವೈದಿಕ ಹಾಗೂ ಇತರ	ರೂ	೧೪
೧೪೪ ಅಂತು ಪುಸ್ತಕಗಳು ಇವುಗಳ ಒಟ್ಟು ಬೆಲೆ	ರೂ	೧೦೫

ಇವುಗಳಲ್ಲಿಯ ಎಷ್ಟೋ ಪುಸ್ತಕಗಳು ಇನ್ನೇ ಅನೇಕ ಆವೃತ್ತಿಗಳನ್ನು ಕೂಡ ಹೊಂದಿ ಕನ್ನಡಿಗರ ಪ್ರೇಮಕ್ಕೆ ಪಾತ್ರವಾಗಿರುತ್ತವೆ

ಇಂಥ ಈ ಅತ್ಯುತ್ತಮ (೧೪೪ ಬಗೆಯ) ಪುಸ್ತಕಗಳಲ್ಲಿ ಬೇಕಾದ ಮೂರು ರೂಪಾಯ ಬೆಲೆಯ ಪುಸ್ತಕಗಳಿಗೆ ಬರೆದರೆ ... ಅದಕ್ಕೂ ಹೆಚ್ಚು ಬೆಲೆಯ ಪುಸ್ತಕಗಳಿಗೆ ಬರೆದರೆ, ... ಈ ರಿಯಾಯತಿಯು ಇಂದಿನಿಂದ ಒಂದೇ ತಿಂಗಳು. ಕಾರಣ ಎಲ್ಲರೂ ಈ ಸುಸಂಧಿಯ ಲಾಭ ಹೊಂದಬೇಕು. ನಮ್ಮ ಕ್ಯಾಟಲಾಗು ನೋಡಿ, ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಭಿ ಪ ಕಾಳೆ
ಪ್ರೊಪ್ರೈಟರ್, ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥ ಮಾಲೆ,
ಪೋ. ಆನಂದವನ, ಜಿ ಧಾರವಾಡ.

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

... ತಯಾರಿಸಿದ ಹೊಸ ಪಾಠಪುಸ್ತಕಗಳು—

...ದನೇ ವರ್ಗ..., ನಾಲ್ಕನೇ ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

...ದನೇ, ಮೂರನೇ, ನಾಲ್ಕನೇ ...ದರ್ಜೆಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

ಆರನೇ, ... ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

...ದನೇ, ... ನಾಲ್ಕನೇ ... ಚರಿತ್ರೆ ಮತ್ತು ... ಹೊಸಕನ್ನಡ ... ಪುಸ್ತಕ ...

ಪುಸ್ತ... ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಡಾಕ್ಟರ ವಾಮನ ಗೋಪಾಳರವರ
ಐಓಡಾಯಿಜ್ಡ ಸಾರ್ಸಪರಿಲಾ



ಕೆಟ್ಟ ರಕ್ತಕ್ಕೆ ಈ ಔಷಧ ಅನೇಕ ವರ್ಷದ ಅನುಭವ ಉಪಯೋಗಿಸಿ ದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೋಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ... ಏಜಂಟರು
[...] ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಸಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE

ಕಂದಾ ನಿರ್ಣಯ:— ವರ್ಷ ಒಂದಕ್ಕೆ ರೂಪಾಯಿ 2—0—0 | Registered No. M. 489. | ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

[illegible] ಧೀರಾ ॥ ೧ ॥
[illegible] ಬರುತಿರುವ ॥
[illegible] ಧೀರರು [illegible] ॥ ೧ ॥

ಪುಸ್ತಕ ೨೬. ಮಂಗಳೂರು ತಾ ೧೮ನೇ ಶುಕ್ರವಾರ ಮಾರ್ಚಿ ೧೯೩೨ (18-3-32.) ಸಂಚಿಕೆ [illegible]

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ, ಉಡುಪಿ, ಲಿಮಿಟೆಡ್

Head office:—UDIPI. Branches:—COONDAPOOR & Mangalore

ಹೆಡ್ ಆಫೀಸ ಉಡುಪಿ ಶಾಖೆ ಕುಂದಾಪುರ ಮತ್ತು ಮಂಗಳೂರ

Authorised Capital Rs 3,50,000 Subscribed & Called up Rs [illegible] 25,000

[illegible] ರೂ 3,50,000 [illegible] 2,25

STATEMENT OF ASSETS & LIABILITIES AS ON 2[illegible] DAY OF FEBRUARY 1932

	Capital and Liabilities	Rs		Property and Assets	Rs
1	Paid up Capital	2,2[illegible]-0-0	1	Premises Building, Furniture etc	[illegible]
2	Reserve and other funds	2,[illegible] 0	2	[illegible]	3 [illegible]
3	Deposits	[illegible]	3	[illegible] Investments	[illegible]
4	[illegible]	[illegible]	4	Bills [illegible]	[illegible]
5	Sundries	[illegible]	5	Sundries	[illegible]
	[illegible]	[illegible]		Cash in hand & with bankers	[illegible]
	Total	[illegible]		Total	[illegible]

Office of the Corporation Udipi [illegible]

N. ANANDA RAO
Secretary & Manager

(Regd



ಅಮೃತಾಂಜನ.

[illegible] ಅಮೃತಾಂಜನವು [illegible] ದೊರಕುತ್ತದೆ

ಗಜಕರ್ಣ ಮುಲಾಮು — [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬ್ಬಾ.

ಸಣ್ಣ ಹುಡುಗರ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪನಿ,
ಗಿರಗಾಂವ, ಮುಂಬಾಯಿ.

ಏಜೆಂಟರು:— [illegible] ಕಂಪೆನಿ, [illegible]

INSURE WITH

The Popular Insurance Co. Ltd.

Head Office MANGALORE S. Ind.

First of its kind in the West Coast

CHAIRMAN

Dewan Bahadur N. Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS LIBERAL TERMS TO COMPETENT MEN

For further particulars apply to the Head Office



ಮಾತೃಗಳೇ,
ನಿಮ್ಮ ಮಗುವನ್ನು ಪ್ರಾಕೃತಿಕವಾಗಿ ಪೋಷಿಸಿರಿ.

ತನ್ನ ಮಗುವನ್ನು ಪೋಷಿಸಬೇಕೆಂಬುದು ಪ್ರತಿಯೊಬ್ಬ ತಾಯಿಯಲ್ಲಿ ಪ್ರಕೃತಿಸಿದ್ಧವಾಗಿ ಇರುವ ಆಶೆ. ಆದರೆ ಪ್ರಾಮುಖ್ಯವಾದ ಈ ಸೇವೆಯನ್ನು ಮಾಡಲು ಹೆಚ್ಚಿನವರು ಶಕ್ತಿ ಮತ್ತು ಸಾಮರ್ಥ್ಯವುಳ್ಳವರಾಗಿರುವುದಿಲ್ಲ. ಎದೆ ಹಾಲನ್ನು ಕೊಡಲಾಗದಿದ್ದರೆ ಅದರಿಂದ ತಾಯಿಗೆ ವ್ಯಸನವೇ. ಮಗುವಿಗೂ ಕಷ್ಟವೇ. ಏಕೆಂದರೆ ಮಗುವಿಗೆ ಎದೆ ಹಾಲು ನಿಸರ್ಗಸಿದ್ಧವಾದ ಒಂದು ಆಹಾರವಾಗಿರುತ್ತದೆ. ಅದಕ್ಕೆ ಸರಿಯಾದ ಬೇರಾವ ಉತ್ತಮ ಆಹಾರವೂ ಸಿಗದು.

"ಓವಲ್‌ಟಿನ್"ನ ಸಹಾಯದಿಂದ ಪ್ರತಿಯೊಬ್ಬ ತಾಯಿಯೂ ಅವಳ ಮಗುವನ್ನು ಸಂರಕ್ಷಿಸಬಹುದು. ಮಗುವು ಹುಟ್ಟುವ ಕೆಲವು ತಿಂಗಳುಗಳ ಮೊದಲು ಅದನ್ನು ತೆಗೆದುಕೊಂಡರೆ ಎದೆಯಲ್ಲಿ ಬೇಕಾದಷ್ಟು ಹಾಲು ಉತ್ಪನ್ನವಾಗುತ್ತದೆ. ಅಲ್ಲದೆ ಮಗು ಹೆತ್ತಾದ ಮೇಲೆ ನಿಶ್ಶಕ್ತತೆಯನ್ನು ಹೋಗಲಾಡಿಸಿ ಶಕ್ತಿವಂತಳಾಗಬಹುದು.

ಓವಲ್‌ಟಿನ್‌ನ್ನು ಪ್ರಕೃತಿ ಸಂಬಂಧವಾದ ಅತ್ಯುತ್ತಮ ಟೋನಿಕ್ ಆಹಾರಗಳಿಂದಲೇ ಸಿದ್ಧಪಡಿಸಲಾಗಿದೆ. ಅದು ಇಡೀ ದೇಹವನ್ನು ಬಂಡಿತವಾಗಿಯೂ ತ್ವರೆಯಾಗಿಯೂ ರಕ್ಷಿಸಬಹುದು. ಅದು ಎಲ್ಲಾ ತಾಯಂದಿರಿಗೂ ಅಮೋಘವಾದ ಆಹಾರವು. ಅದರ ರುಚಿಕರ ಪರಿಮಳವು ಮನಾಹ್ಲಾದವನ್ನುಂಟುಮಾಡುವಂತಹದ್ದಿದೆ.

ಉತ್ತಮವಾದ 'ಓವಲ್ಟಿನ್'ಗೆ ಸರಿಸಮಾನವಾದ ಇನ್ನೊಂದು ಪಾನೀಯವಿಲ್ಲ. ಸಪ್ರಮಾಣದಿಂದ ತಯಾರಿಸಲ್ಪಡದ ಎಲ್ಲಾ ಮಿಶ್ರಣಗಳನ್ನು ತಿರಸ್ಕರಿಸಿರಿ.

ಉತ್ಕೃಷ್ಟವು — ಆತ್ಮಪೋಷಣೆ — ಸಂರಕ್ಷಿತವಾಗಿದ್ದು

OVALTINE
TONIC FOOD BEVERAGE

ತಾಯಂದಿರು ಶಿಶುಗಳನ್ನು ಎದೆ ಹಾಲಿನಿಂದಲೇ ಸಲಹಲು ಸಹಕಾರಿಯಾಗುತ್ತದೆ

ಎಲ್ಲಾ ಕೆಮಿಷ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜಂಟರು— ಜೇಮ್ಸ್ ರೈಟ್ ರಿ. ರಿಪನ್ ಸ್ಟ್ರೀಟ್, ಕಲ್ಕತ್ತಾ ಮತ್ತು ಮುಂಬಾಯಿ ಮದ್ರಾಸು, ರಂಗೂನುಗಳಲ್ಲಿ

ಮ್ಯ ಓವಲ್‌ಟಿನ್"ನೊಡನೆ "ಓವಲ್ಟಿನ್ ರೊಟ್ಟಿಗಳನ್ನು ತಿನ್ನಿರಿ. ಇವುಗಳು ಬಿಸ್ಕುಟುಗಳಿಗಿಂತಲೂ ಉತ್ತಮ. ಇವುಗಳಲ್ಲಿ ಒಳ್ಳೇ ಸುಲಭ ಜೀರ್ಣಕರ ಆಹಾರವು ಇದೆ. ಮಕ್ಕಳಿಗೆ ಹಲ್ಲು ಮೂಡುವಾಗ ಅವುಗಳನ್ನು ಬಲಪಡಿಸಲಿಕ್ಕೆ ಇವುಗಳನ್ನು ಕೊಡಬಹುದು. ಇವುಗಳು ಶಿಶುವನ್ನು ಸಂತೋಷದಿಂದಿರಿಸುತ್ತವೆ.

OV/119

ಪತ್ರವ್ಯವಹಾರ.

[ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ]

ಸೇಂದಿ ಪ್ರಚಾರದ ನವೀನ ಧೋರಣೆ.

ಸರಕಾರವು ಮದ್ಯಪಾನ ನಿಷೇಧದ ಬಗ್ಗೆ ಒಂದು ಪ್ರಚಾರಕ ಮಂಡಲವನ್ನು ಸ್ಥಾಪಿಸಿ, ಈಗ ತಾನೆ, ಹಣದ ಕೊರತೆಯಿಂದ ಅದನ್ನು ನಿಲ್ಲಿಸಿರುತ್ತದೆ. ಈಗ ಮದ್ಯಪಾನದ ಪ್ರಚಾರದ ಹೊಸ ಧೋರಣೆಯು ತೊಡಗಿದಂತೆ ಕಾಣುವುದು. ಜನರಲ್ಲಿ ದುಡ್ಡಿನ ಕೊರತೆಯು ಈ ಕಾಲದಲ್ಲಿ ಹೆಂಡವನ್ನು ಅದಷ್ಟು ವಿಕ್ರಯಿಸಿ ಸರಕಾರದ ಮಾನಾಳಿಗೆ ಕೊರತೆ ಬಾರದಂತೆ ಯತ್ನಿಸುವುದು ಸರಕಾರದ ಧೋರಣೆಯಾಗಿದೆ. ರೆವಿನ್ಯೂ ಖಾತೆಯು ಅಬಕಾರಿಗಳಿಗೆ ಉಪಕಾರ ಮಾಡುತ್ತಿದೆ. ಅದರ ಒಂದು ಚಿಕ್ಕ ಉದಾಹರಣೆ ಇಲ್ಲಿದೆ. ಪುತ್ತೂರು ತಾಲೂಕಿನ ಇರ್ದೆ ಗ್ರಾಮ (ಬೆಟ್ಟಂಪಾಡಿ)ದಲ್ಲಿ, ಕೊಡರ ಕುಮ್ಕಿ ಹಕ್ಕಿನ ಜಾಗದಲ್ಲಿ ಹೆಂಡದಂಗಡಿಯೊಂದನ್ನು ತೆರೆಯಲು ವ್ಯವಸ್ಥೆಯಾಯಿತು. ಸುತ್ತಮುತ್ತ ಶೀರ ಸಮೀಪದಲ್ಲಿ ಬೇರೆ ವರ್ಗದಾರರ ಮನೆಗಳಿವೆ. ಅವರಿಗೆ ಸಹನವಾಗಲಿಲ್ಲ. ಆದರೆ ಸರಕಾರಕ್ಕೆ ಅಲ್ಲೇ ಅಂಗಡಿಯನ್ನು ಸ್ಥಾಪಿಸುವ ಧೋರಣೆ. ಆದರೆ ಆ ಸ್ಥಳಕ್ಕೂ ವರ್ಗ ಭೂಮಿಗೂ ನಡುವೆ ಒಂದು ಆಳವಾದ ಕಣಿವೆಯಿದೆ. ಅದಕ್ಕೆ ಸಂಕ ಹಾಕಿದರು. ಒಂದು ಕಡೆ ಕುಮ್ಕಿ — ಇನ್ನೊಂದು ಕಡೆ ಖಾಸಗಿ ವರ್ಗಸ್ಥಳದ ಸಂಬಂಧಪಟ್ಟ ವರ್ಗದಾರರು ಸಂಕಕ್ಕೆ ತಮ್ಮ ಜಾಗದ ಮೇಲೆ ಹೋಗದಂತೆ ಮಾಡಿದರು. ತಹಶಿಲ್ದಾರರವರಿಗೆ ಅದು ಸಾರ್ವಜನಿಕ ಹಾದಿಯೆಂದು ಸ್ಥಾಪಿಸುವ ಇಚ್ಛೆಯಾಯಿತು. ಆದರೆ ಆ ಹಾದಿ ಹೋಗುವುದು ಎಲ್ಲಿಗೆ ಎಂದು ಅವರು ತಿಳಿಸಬೇಕು. ಮುಂದಿರುವುದು ಮೈಲು ದೂರದ ಬೋಳುಗುಡ್ಡೆ ಪ್ರಾಯಶಃ ಅದು ಹೆಂಡದಂಗಡಿಗೆ ಮಾತ್ರವೂ ಆಗಬೇಕಾದ ಹಾದಿಯೆಂದೋ ಏನೋ. ಜನರು ತಮ್ಮ ವಿರೋಧವನ್ನು ತೋರಿಸಿದರು. ಈಗ ಅವರಿಂದ ಹೊಸದೊಂದು ನೋಟೀಸು ಹೊರಟಿದೆ. ಈ ದಾರಿಯನ್ನು ಕಡೆದಲ್ಲಿ ಕೋವಿ ಲೈಸೆನ್ಸು ರದ್ದು ಮಾಡುವುದಾಗಿಯೂ, ಕುಮ್ಕಿ ಹಕ್ಕನ್ನು ರದ್ದುಮಾಡುವುದಾಗಿಯೂ ಶಿಫಾರಸು ಮಾಡಲಾದೀತೆಂದು. ಕೋವಿ ಲೈಸೆನ್ಸಿನ ಮಾತಿರಲಿ ಮರ್ಜಿ. ಆದರೆ ಕುಮ್ಕಿ ಹಕ್ಕನ್ನು ಯಾವ ಸಿದ್ಧಾಂತದ ಮೇಲೆ ತಹಶಿಲ್ದಾರರು ರದ್ದು ಮಾಡಿಸುತ್ತಾರೆ. ವರ್ಗದಾರರು ಕಂದಾಯ ಸಲಿಸುವುದಿಲ್ಲವೇನು. ಹೆಂಡದಂಗಡಿ ಹಾದಿವಿವಾದಕ್ಕೂ ಕುಮ್ಕಿ ಹಕ್ಕಿಗೂ ಏನು ಸಂಬಂಧವಿದೆ. ಅವರೇ ಹೇಳುವರೇನು?

ಇನ್ನೇನು ಅದೇ ಗ್ರಾಮದಲ್ಲಿ ಪುತ್ತೂರಿಂದ ಬರುವ ಕಾಲುಹಾದಿಯ ಮೇಲೆ ಶಿತ್ಯ ಹೆಂಡ ವಿಕ್ರಯವಾಗುತ್ತಿದೆ. ಖಾಸಗಿ ಜಾಗ ಅಂಗಡಿಯಲ್ಲಿ ಬೋರ್ಡಿಲ್ಲ. ಮದ್ಯಪಾನ ನಿರೋಧಕ ನಿಯಮಗಳನ್ನು ಅತಿಕ್ರಮಿಸಲು ಯೋಗ್ಯ ವ್ಯವಸ್ಥೆಯಿದು. ಇದೂ ಸರಕಾರಕ್ಕೆ ಸಮ್ಮತವೇನು?

ಸಾಲದುದಕ್ಕೆ ಹಲವು ಗ್ರಾಮಗಳಲ್ಲಿ ಮನೆಯಲ್ಲೇ ಹೆಂಡ ಮಾರುವ ಪದ್ಧತಿ ಸರಾಗವಾಗಿ ನಡೆಯುತ್ತಿದೆಯಂತೆ. ಇದು ಅಬಕಾರಿ ಇಲಾಖೆಗೆ ತಿಳಿದಿಲ್ಲವೇ? ತಿಳಿದಾಗ ಏನು ಮಾಡಿರುವರು? ಎಷ್ಟು ಕೇಸುಗಳಾದುವು. ಅಥವಾ ಉಭಯತೋಷ ಸಮ್ಮತಿಯಿಂದ ಇದೂ ನಡೆಯಬಹುದೆಂದು ಸರಕಾರದ ಧೋರಣೆಯಿದೆಯೋ?

ಹಳೆಯಲ್ಲೇ ಹಗಲಲ್ಲಿ ದುಡಿದರೆ ಎರಡು ಸೇರು ಅಕ್ಕಿ ಸಿಗುವುದಿಲ್ಲ. ಆದರಲ್ಲಿಯೂ ಅವರು ಹೆಂಡಕ್ಕಾಗಿ ಅಕ್ಕಿ ಕೊಟ್ಟರೆ ಅವರ ಕುಟುಂಬವು ಅರ್ಧ ಉಪವಾಸ ಬಿಡಲು ದುಷ್ಕಾಳ ಸಾಲದುದಕ್ಕೆ ಮನೆಯಿಂದ ಕೈಬಾಚಿದ ಸರ್ಕಾರದ ನೀತಿಯೇ. ಪಾಪದ ಪ್ರಚಾರ ಸಮಿತಿಯನ್ನು ತೆಗೆದುದು ಎಷ್ಟೋ ಅನುಕೂಲವಾಯಿತು.

ಇದನ್ನು ವಿಚಾರಿಸುವ ತಾಳ್ಮೆಯನ್ನು ಸಂಬಂಧಪಟ್ಟ ಅಧಿಕಾರಿಗಳು ತೋರಿಸಿಯಾರೆಂದು ನಂಬುತ್ತೇನೆ.

ಮೊಕ್ಕಾಂ ಮಂಕುಡೆ, ೧೪—೩—೧೯೩೨ } ಇತಿ ಶಿವರಾಮ ಕಾರಂತ

ಪುತ್ತೂರು ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟನಲ್ಲಿ

ಐ ಪಿ 6/1932

ಶ್ರೀಕರರಾಮ ಭಟ್ಟ—ಸುಬ್ರಾಯ ಭಟ್ಟರ ಮಗ—ಪುತ್ತೂರು ತಾಲೂಕು ಮುಂಡೂರು ಗ್ರಾಮದಲ್ಲಿರುವವ—ಅರ್ಜಿದಾರ (ದೇಣೆದಾರ)

ಗೋಪಾಳ ಪೈ ಸಹಾ ೧೪ ಜನರು—ಎದ್ರಿರು(ಲೇಣೆದಾರರು)

ಪ್ರೊವಿನ್ಸಿಯಲ್ ಇನ್ಸಾಲ್ವೆನ್ಸಿ ಆಕ್ಟಿನ 19 (2) ನೇ ಕಲಂ ಪ್ರಕಾರ ಈ ಮೂಲಕ ನೋಟೀಸು ಕೊಡುವುದೇನೆಂದರೆ— ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಈ ಕೋರ್ಟು ಐ ಪಿ 6/'32ನೇಗೆ ಅರ್ಜಿ ಕೊಟ್ಟಿರುತ್ತಾನೆ. ಮತ್ತು ಎದುರಾಡಲು ಅಪೇಕ್ಷಿಸುವ ಲೇಣೆದಾರರು ಸ್ವತಃ ಆಗಲೀ, ವಕೀಲರ ಮುಖಾಂತರವಾಗಲೀ ಈ ಇಸವಿ ಎಪ್ರಿಲ್ ತಾ 5ನೇ ಪೂರ್ವಾಹ್ನ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗತಕ್ಕದ್ದು.

ಪುತ್ತೂರು, ೧೫—೩—೩೨. } C. Kunhi Rama Menon, M.A.B.L. ಡಿಸ್ಟ್ರಿಕ್ಟ ಮುನ್ಸೀಫ

+ + + +

ಕಾಸರಗೋಡು ತಾಲೂಕು ಬಾಯಾರು ಗ್ರಾಮದ ಕಲಂಗಳ ನೀರಮೂಲೆ ಶಂಭಟ್ರ ವಿಧವೆ ಲಕ್ಷ್ಮಿ ತನ್ನ ಮಗ ಮ್ಯಾನರ ಕ್ರಿಷ್ಣನ ಬಗ್ಗೆ ಗಾರ್ಡಿಯನಳಾಗಿ ಕೊಡುವ

ನೋಟೀಸು

ನಮ್ಮ ಕುಟುಂಬದ ಸಮಷ್ಟಿ ಹಕ್ಕಿನಸ್ಥಿರಾಸ್ತಿಗಳು ಮತ್ತು ೧೦,೦೦೦/- ಹತ್ತು ಸಾವಿರ ರೂಪಾಯಿಗಳು ಹೊರಗಿನಿಂದ ಬರತಕ್ಕದ್ದು ಉಂಟು. ಇವುಗಳ ಆಡಳ್ತೆಯು ಕುಟುಂಬದ ಯಜಮಾನರಾದ ನನ್ನ ಮಾವ ಕ್ರಿಷ್ಣಭಟ್ರು ನಡಿಸಿಬರುತ್ತಾರೆ. ಪ್ರಸ್ತುತ ಸದ್ರಿ ಕೃಷ್ಣಭಟ್ರಿಗೆ ಸುಮಾರು ೭೦ ವರ್ಷ ಪ್ರಾಯವಾಗಿ ಬುದ್ಧಿ ಸ್ವಾಸ್ಥ್ಯತ ಸರಿಯಿಲ್ಲದೆ ಇರುವುದರಿಂದ ನಮ್ಮ ದ್ವೇಷಿಗಳು ಅಕ್ರಮಲಭ್ಯ ಪಡಿಯುವ ಇರಾದೆಯಿಂದ ಅವರಿಂದ ಯಾವದಾದರೂ ಪರಾಧೀನಮಾಡಿಸಿಕೊಳ್ಳುವ ಇರಾದೆಯಲ್ಲಿದ್ದಾರೆ. ಹಾಗೆ ಅವರು ಮಾಡಿಕೊಡುವ ಯಾವ ಪರಾಧೀನ ದಸ್ತಾವೇಜುಗಳು ನಮ್ಮ ಸಮಷ್ಟಿ ಹಕ್ಕಿಗೆ ಬಾಧಿತಕ್ಕದ್ದಲ್ಲ, ವ ಅಂಥಾ ದಸ್ತೈವಜುಗಳು ಅಸಿಂಧು ಆಗಿರತಕ್ಕದುಯೆಂತ ಈ ಮೂಲಕ ಸಮಸ್ತರಿಗೂ ತಿಳಿಯಪಡಿಸೋಣಾಗುತ್ತದೆ.

ತಾ. ೭—೩—೩೨ ಲಕ್ಷ್ಮೀ ಅಮ್ಮನ ರುಜು.

+ + + +

'ಕೊಂಗ್ರೆಸ್ಸನ್ನು ಮುರಿಯುವುದೇ ಸರಿ.'

ಧರ್ಭಂಗದ ಮಹಾರಾಜಾಧಿರಾಜ ಕಾಮೇಶ್ವರಸಿಂಗರವರು ಬಿಹಾರ ಮತ್ತು ಒರಿಸ್ಸಾದ ಗವರ್ನರರಿಗೊಂದು ಸತ್ಕಾರಕೂಟವನ್ನಿತ್ತರು. ಆದರಲ್ಲಿ ಗವರ್ನರರವರು ಮಾತನಾಡುತ್ತಾ, ಈಗೀಗ ಸರಕಾರವು ಕೊಂಗ್ರೆಸ್ಸಿನೊಡನೆ ಒಂದು ರಾಜಕೀಯ ಯುದ್ಧಮಾಡುತ್ತಿದೆಯೆಂದು ಕೆಲವು ಜನರು ಭಾವಿಸುತ್ತಿರುವರು. ಅದರಲ್ಲಿ ತಮಗೇನೂ ಭಾಗವಿಲ್ಲವೆಂದು ನೆನಸುವರು. ಇದು ತೀರಾ ತಪ್ಪು. ಕೊಂಗ್ರೆಸ್ಸೆಂಬುದು ಕಳೆದ ಎರಡು ವರುಷಗಳಿಂದಲೂ ಪ್ರಜಾಧಿಪತ್ಯವನ್ನು ಎಲ್ಲೆಡೆಗಳಲ್ಲಿಯೂ ವಿಸ್ತರಿಸಿ ತನ್ನದೇ ನಿರಂಕುಶ ಪ್ರಭುತ್ವಕ್ಕೆ ಮನಸ್ಸು ಮಾಡಿತು. ಸರಕಾರವನ್ನು ಅಲಕ್ಷಿಸಿತು. ಅಂತಹ ಸಂಸ್ಥೆಯೊಡನೆ ನಾವು ಹೋರಾಡುವೆವು — ಜಗಳಾಡುವೆವು — ಈಗಲೂ ಮುರಿಯುವೆವು — ಮುಂದೆಯೂ ಮುರಿಯುವೆವು. ಎಷ್ಟರತನಕ ಅದು ಅದರ ಬೆದರಿಕೆಯ ಮಾತುಗಳನ್ನು ನಿಲ್ಲಿಸುವುದಿಲ್ಲವೋ ಅಷ್ಟರತನಕ ಅದರೊಡನೆ ಜಗಳಾಡುವೆವು. ನಮ್ಮ ವಿಜಯದ ಕುರಿತು ನನಗೆ ಸಂಶಯವಿರುವುದಿಲ್ಲ. ಆದರೂ ಜನತೆಯು ನಮ್ಮೊಡನೆ ಸಹಕರಿಸಬೇಕು" ಎಂದರು.

+ + + +

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾರ್ಕುಂಕುಮ ತೈಲ.—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಧ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡತಕ್ಕದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದ 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0 ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ —ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ ಕ್ಷಯ ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0 ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಿತ

ದಶಮೂಲ ಸುಖಪ್ರದಔಷಧಿ

ಬಾಣಂತಿಯರ ಸಹಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ ರಸಾಯನ ಸುಖಜೀವನ ಎಂದಿ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶ ... ನಂಜನ್ನು ಹೊರಗೆ ಹಾಕಿ ಪ್ರಸವದಿಂ ... ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಕುಂಚಿತಮಾಡುವದು

ರಸಾಯನ ಗುಣದಿಂದ ಬಾಣಂತಿಯು—ಗರ್ಭಧಾರಣೆಯಿಂದ ... ಬಗ್ಗೆ ... ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ ಅಗ್ನಿಮಾಂದ್ಯ ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಮ ಕೋಶದ ವ್ಯಥಾ (ಬೇನೆ)ಯ ... ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗ ... ಕ್ರಯ ಬಾಟ್ಲಿ 1ಕ್ಕೆ 2 0—0 ಪೋಸ್ಟೇಜ ವಗೈರೆ ಬೇ...

...

ಮಿಸ್ಟರ್ ವಿ ಶಾಸ್ತ್ರೀ,

ಆಯುರ್ವೇದ ಭೂಷಣ

ಮಂಗಳೂರು ... ಕನ್ನಡ

ಅಪೇಕ್ಷಿಸುವ ಬಹುಮಾನಗಳು

... 6 ನೊಳ ... ರೂ 25 ವರೆಗೆ ... ಬೆಳ್ಳಿ ... ಇತ್ಯಾದಿ ... ಕೇಸರಿ ... ಸಾಮಗ್ರಿಗಳ ... ದರದಿಂದ ... ಸುವವರು ... ಮೂಲಕ ತಿಳಿದುಕೊಳ್ಳಬಹುದು

ವಿಳಾಸ—

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್

... ಬಜಾರ ...

The Udipi Mutual Benefit Fund UDIPI

ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್ ಉಡುಪಿ

(Regd 1918)

ಈ ಬ್ಯಾಂಕಿನಲ್ಲಿ ಇತರ ಬ್ಯಾಂಕುಗಳಲ್ಲಿ ನಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು

ಎಂ ಮುತ್ತಪ್ಪ ... ಪ್ರೊಪ್ರೈಟರ್

Canara Bank Limited.

ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES -Karkal Kasargod Cochin Udipi Gangolli Coondapur Bombay Puttur Calicut & Alleppey

ಬ್ರ್ಯಾಂಚುಗಳು –

ಕಾರ್ಕಳ, ಕಾಸರಗೋಡು ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised and fully paid up Capital Rs 300 000 0 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟಲ್ಪಟ್ಟ ಮೂಲಧನವು ರೂ 300 00
Reserve and other sinking Funds Rs 526 000 0 0	ರಿಜರ್ವ ಮತ್ತು ಇತರ ಫಂಡುಗಳು ರೂ 526 0 0—0—
Amount invested on G P Notes Rs 818 092 2 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 81 92 12—
Rate of interest on fixed deposits at Head Office and Branches are 6¼% for 4 Year ... 6¼ 1 Year	...

Current Account Deposits received and interest allowed on daily balance of Rs 50 and above that on multiple of Rs ... from 1st January to 30th June and 1st July to 31st December No interest will be allowed unless the deposit is for not less than Rs ... during a period of 6 months ending either 30th June or 31st December in any year.

Except by special arrangement no interest is allowed on sums exceeding Rs 10 000 in the case of Head Office and ... Branch and on sums exceeding Rs ... 000 in the case of ... Branches ...

For further particulars please apply to

Canara Bank Ltd — **K. Venkat Rao**

Mangalore ... —2— 93? — *Secretary & Treasurer*

The Pangal Nayak Bank, Ltd.

Head Office Udipi	*Established 1920*	Branch Office Mangalore

Authorised Capital Rs 2 00 000	Paid up Capital Rs 1 75 000
Issued Capital Rs 1 75 000	Reserve and other Funds Rs 1,80 000

Receives Fixed Deposits at the following favourable rates

For 3 months at 5	For 12 15 18 or 21 months at 6
6 or 9 months at 5½	24 months at 6

Interest being payable every 3 months

ಕಾಯಂ ಠೇವಣಾತಿ ಳು ಪ್ರತಿ 3 ತಿಂಗಳಿಗೆ ಬಡ್ಡಿಕೊಡುವ ಕರಾರಿನ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ನೂ 5	12 15 18 ಯಾ 21 ತಿಂಗಳಿಗೆ ನೂ 6
6 ಯಾ 9 ತಿಂಗಳಿಗೆ ನೂ 5½	24 ತಿಂಗಳಿಗೆ ನೂ 6

2 **Current Accounts** opened free of charge and interest allowed

Cumulative Savings Bank and Short Notice Deposits received at favourable rates of interest

3 The Bank transacts every description of banking business

4 For full particulars and for copies of the ... Rules of Business please apply to the **Secretary** at the Head Office at Udipi or to the **Agent** Mangalore Branch

Office of the Bank Udipi 3-3 — P Laxman Nayak, Secretary

ಇಪ್ಪತ್ತು	ವಯಸ್ಸಿನಲ್ಲಿ	ಮುದುಕ
ಮೂವತ್ತು		ಮುಚ್ಚಟ
ನಲವತ್ತು		ನರಳುವನು
ಐವತ್ತು	ಆದರೆ	ಆಲಸ್ಯ
ಅರುವತ್ತು	ಕೋಲಿನಿಂದ	ಆರಳು ಮರಳು
ಎಪ್ಪತ್ತು	ನಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿ ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವಂಥದು ನಿಜವಾಗಿ ನಾಡುವ

ಮದನಮಂಜರಿ ಟಾನಿಕ್ಕು

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ — ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್ ಮದ್ರಾಸ್

"ಕೊಂಗ್ರೆಸ್ಸಿನ ಅಧ್ಯಕ್ಷಳಾಗಲು ನಾನು ಬಂದಿರುತ್ತೇನೆ"

ಸರೋಜಿನಿ ನಾಯ್ಡು.

ಶ್ರೀಮತಿ ಸರೋಜಿನಿ ನಾಯಿಡುರವರು ಇಂಗ್ಲಾಂಡಿಗೆ ಹೋಗಿದ್ದರಷ್ಟೆ ಅವರು ತಾ ೧೪ಕ್ಕೆ ಮುಂಬಾಯಿಗೆ ತಲಪಿದರು. ಮುಂದಿನ ಕಾರ್ಯಕ್ರಮದ ಕುರಿತು ಅವರನ್ನು ವಿಚಾರಿಸಿದ್ದಲ್ಲಿ ಅವರು "ಕೈದುಮಾಡಲ್ಪಟ್ಟ ಮೌಲಾನಾ ಅಬ್ದುಲ್ ಕಲಂ ಅಜದರ ಹೇಳಿಕೆಯ ಮೇರೆಗೆ ನಾನು ಅಖಿಳ ಭಾರತ ಕೊಂಗ್ರೆಸ್ಸಿನ ಅಧ್ಯಕ್ಷಳಾಗಲು ಮುಂಬಾಯಿಗೆ ಬಂದಿರುತ್ತೇನೆ" ಎಂದರು

ತಾರೀಖು ೧೦—೩ ಮಂದಿ ಬಾಲಕರಿಗೆ ಶಿಕ್ಷೆ.

ಮುಂಬಾಯಿಯ ಎಲ್ಫಿನ್‌ಸ್ಟನ್ ಸ್ಕೂಲಿನ ಮೂರು ಮಂದಿ ವಿದ್ಯಾರ್ಥಿಗಳು ಲೋಥಿಯನ್ ಕಮಿಟಿಯ ಆಗಮನ ಸಂಬಂಧವಾಗಿ ಶಾಲೆಯಲ್ಲಿ ವಿರುದ್ಧ ಪ್ರದರ್ಶನದ ಗಲಾಟೆಯನ್ನೆಬ್ಬಿಸಿದುದಕ್ಕಾಗಿ ಕೈದುಮಾಡಲ್ಪಟ್ಟು, ಸುಶಿಕ್ಷಣ ಕಾರಾಗೃಹಕ್ಕೆ ಮೂರು ಮೂರು ವರ್ಷಗಳ ಶಿಕ್ಷೆಯ ಮೇಲೆ ಕಳುಹಿಸಲ್ಪಟ್ಟರು ಪೋಲೀಸ್ ಭೇಟಿಗೆ ತಪ್ಪಿದ ಇಬ್ಬರು ಕೊಂಗ್ರೆಸ್‌ವಾಲರಿಗೆ ಒಂದೊಂದು ವರುಷದ ಕಠಿಣ ಸಜೆ ಮತ್ತು ೧೫೦ ರೂಪಾಯಿ ಜುಲುಮಾನೆ ತಪ್ಪಿದರೆ ಮೂರು ತಿಂಗಳ ಹೆಚ್ಚಿನ ಶಿಕ್ಷೆ.

ವಕೀಲರ ಸನ್ನದ್ದು ಹೋಗುವುದಂತೆ.

ನಾಗಪುರದಲ್ಲಿ ಇಷ್ಟರ ತನಕ ಇಬ್ಬರು ವಕೀಲರನ್ನು ಕೈದುಮಾಡಿರುವರು. ಒಬ್ಬರು ಶ್ರೀಯುತ ಎಮ್ ವಿ ಅಭ್ಯಂಕರರು ಇನ್ನೊಬ್ಬರು ಶ್ರೀಯುತ ಲೋಕರಸ ಎಂಬವರು ಮೊದಲಿನವರು ಬೆರಿಸ್ಟರು ಎರಡನೆಯವರು ವಕೀಲರು ಇವರ ಸನ್ನದ್ದನ್ನು ಹಿಂತೆಗೆಯಬಾರದೇಕೆ? ಎಂಬ ನೋಟೀಸು ಇವರಿಗೆ ಹೋಗಿದೆ ಈ ವಿಚಾರಣೆಯು ಬರುವ ತಿಂಗಳ ನಾಲ್ಕರಲ್ಲಿ ನಡೆಯುವುದು.

೨೩ನೇ ಸರ್ವಾಧಿಕಾರಿ.

ಲಾಹೋರಿನಲ್ಲಿಯ ಕೊಂಗ್ರೆಸ್ಸಿನ ೨೩ನೇ ಡಿಕ್ಟೇಟರರಾಗಿರುವ ಶ್ರೀಯುತ ಕೆ ಎಲ್ ಮೆಹ್ತಾ ಎಂಬವರು ಸಭೆಗೂಡಿಸಿ ಉಪನ್ಯಾಸಕೊಟ್ಟುದಕ್ಕಾಗಿ ಕೈದುಮಾಡಲ್ಪಟ್ಟಿರುವರು ವಿದೇಶಿ ವಸ್ತ್ರದ ಅಂಗಡಿಗಳನ್ನು ಪಿಕೆಟ್ ಮಾಡಿದ ಇಬ್ಬರಿಗೆ ನಾಲ್ಕು ನಾಲ್ಕು ತಿಂಗಳ ಶಿಕ್ಷೆಯಾಯಿತು

ಕೋರ್ಟಿನೊಳಗೆ ಕೊಂಗ್ರೆಸ್ ರಾಗ.

ಕಲ್ಕತ್ತದಲ್ಲಿ ನಾಲ್ಕು ಮಂದಿ ಯುವಕರು ಒಂದಾಗಿ ರಾಷ್ಟ್ರಧ್ವಜವನ್ನೆತ್ತಿ ಹಿಡಿದು ಸರಕಾರಿ, ವಿರುದ್ಧ ಗೀತೆಗಳನ್ನು ಹಾಡುತ್ತಾ ಹೈಕೋರ್ಟು ಮಂದಿರವನ್ನು ಹೊಕ್ಕರು ಅವರನ್ನು ಕೂಡಲೇ ಕೈದುಮಾಡಲಾಯಿತು ಒಬ್ಬನು ಬಹು ಎಳೆವಯಸ್ಸಿನವನಾಗಿದ್ದುದರಿಂದ ಅವನನ್ನು ಬಿಟ್ಟುಬಿಡಲಾಯಿತು ರಾಜದ್ರೋಹಕರ ಸಂಗತಿಗಳನ್ನು ಪ್ರಕಟಿಸಿದ ಬಗ್ಗೆ 'ಬಾಸೀಮಜೂರ್' ಪತ್ರಿಕೆಯ ಸಂಪಾದಕರಾದ ಶ್ರೀಯುತ ವೈದ್ಯನಾಥ ಮುಖರ್ಜಿಯೆಂಬವರಿಗೆ ಒಂಭತ್ತು ತಿಂಗಳ ಕಠಿಣ ಕಾರಾವಾಸ

೧೪೪ಕ್ಕಾಗಿ.

ಕಲ್ಕತ್ತದ ಹೌರಾದಲ್ಲಿ ೧೪೪ನೇ ಸೆಕ್ಷನನ್ನುಲ್ಲಂಘಿಸಿ ಪ್ರವರ್ತಿಸಿದ್ದಕ್ಕೆ ಆರು ಮಂದಿ ತರುಣರಿಗೆ ವಿವಿಧ ಶಿಕ್ಷೆ ಮತ್ತು ಜುಲುಮಾನೆಯಾಯಿತು ಶ್ರೀರಾಮಪುರದ ಜಿಲ್ಲಾ ಕೊಂಗ್ರೆಸ್ ಕಮಿಟಿಯ ಸಕ್ರೆಟರಿಯೊಬ್ಬರಿಗೆ ಆರು ತಿಂಗಳ ಕಠಿಣ ಸಜೆ ಮತ್ತು ೩೦೦ ರೂಪಾಯಿ ಜುಲುಮಾನೆ

ತಾಯಿ, ಮಗ, ಸೊಸೆಗಳಿಗೆ ಸೆರೆಮನೆ.

ಕಲ್ಕತ್ತದ ಟಿಪ್ಪೆರಾದಲ್ಲಿ ಇಬ್ಬರು ಸ್ತ್ರೀಯರನ್ನು ಕೈದುಮಾಡಿದರು ಒಬ್ಬ ಕೊಂಗ್ರೆಸ್‌ವಾಲರನ್ನು ಅವರ ಪತ್ನಿ ಸಮೇತ ಸೆರೆಗೊಯ್ದರು ಆ ಮೇಲೆ ಆ ಕೊಂಗ್ರೆಸ್‌ವಾಲರ ತಾಯಿಯವರೂ ಸೆರೆಗೆ ಹೋಗಬೇಕಾಯಿತು ಅಸಾಂಯುಕ್ ಲೀಗಿನ ಸೆಕ್ರೆಟರಿಯವರನ್ನೂ ಆರು ತಿಂಗಳ ಕಠಿಣ ಸಜೆಗೆ ಗುರಿಪಡಿಸಿದರು

ತಾ. ೧೧—ಸಿರಿವಂತರ ಮೇಲೊಂದು ನೋಟೀಸು.

ಅಹ್ಮದಾಬಾದಿನಲ್ಲಿ ಅಖಿಲ ಭಾರತ ಚರಕ ಸಂಘ ಮತ್ತು ಕೊಂಗ್ರೆಸ್ ಟೆಕ್ಸ್‌ಟೈಲ್ ಮಿಲ್ಸ್ ಎಕ್ಸ್‌ಟೆನ್‌ಶನ್ ಕಮಿಟಿಯ ಸೆಕ್ರೆಟರಿಗಳಾದ ಶ್ರೀಯುತ ಶಂಕರ್‌ಲಾಲ್ ಬೇಂಕರರ ಮೇಲೊಂದು ನೋಟೀಸು ಬಿದ್ದಿದೆ. ಅವರು ಪ್ರತಿ ಶುಕ್ರವಾರ ಪೋಲೀಸರಿಗೆ ಭೇಟಿ ಕೊಡಬೇಕಾಗಿಯೂ, ಚಳವಳಿಕ್ಕೆ ಯಾವ ವಿಧದಿಂದಲೂ ಸಹಾನುಭೂತಿಯನ್ನೀಯಬಾರದಾಗಿಯೂ ಆಜ್ಞೆ; ಅಲ್ಲಿಯ ಪ್ರಖ್ಯಾತವಾದ ಗುಜರಾಥ ವಿದ್ಯಾಪೀಠವು ಬೇಕಾಯಿದೆ ಶೀರವಾಗಿ ಪೋಲೀಸರ ಜಪ್ತಿಗೊಳಗಾಯಿತು. ಕೆಲವು ದಿನಗಳ ತನಕ ಅಲ್ಲಿ ಶೋಧನ ನಡೆಯಲಿರುವುದು ಅದು ಈಗ ಪೋಲೀಸರ ವಶವಿದೆ. (ಶಂಕರ್‌ಲಾಲರ ಪೋಲೀಸ್ ಭೇಟಿಯ ಶರ್ತವು ಹಿಂತೆಗೆಯಲ್ಪಟ್ಟಿತೆಂದು ಈಗ ಬಂದ ವಾರ್ತೆ)

ಸ್ವದೇಶಿ ಸಭೆಗೆ ಮುದ್ರೆ ಬಿತ್ತು.

ಅಹ್ಮದಾಬಾದಿನ 'ಸ್ವದೇಶಿ ಸಭಾ' ಎಂಬ ಸಂಸ್ಥೆಯನ್ನು ಕಾಯಿದೆ ವಿರೋಧ ಮಾಡಿರುವರು ಇನ್ನೂ ಸಬ್ ಇನ್‌ಸ್ಪೆಕ್ಟರುಗಳು ಅಲ್ಲಿಗೆ ಹೋಗಿ ಅದಕ್ಕೆ ಬೀಗ ಮುದ್ರೆಯನ್ನೊತ್ತಿ, ಕೆಲವು ಮಂದಿ ಪೋಲೀಸರನ್ನು ಪಹರೆಗೆ ನಿಲ್ಲಿಸಿದರು ಈ ಸಭೆಯು ಜಪ್ತಿಗೊಳಗಾಯಿತು

ನಗರದ ಹೊರಗೆ ಹೋಗಲು ನೋಟೀಸು.

ಗಾಂಧಿಜೀಯವರ 'ನವಜೀವನ' ಮುದ್ರಣಾಲಯದಲ್ಲಿ ಕೆಲಸ ನಡೆಸುತ್ತಿದ್ದ ಶ್ರೀಯುತ ಮೋಹನ್‌ಲಾಲ್ ಪಟ್ಟಾರಿಯವರನ್ನು ಪ್ರಥಮದಲ್ಲಿ ಕೈದುಮಾಡಿದ್ದು ಮೊನ್ನೆ ಬಿಟ್ಟರು ಬಿಟ್ಟೊಡನೆ ಅವರು ಮ್ಯುನಿಸಿಪಲ್ ಗಡಿಯೊಳಗಿರದೆ ಹೊರಗೆ ಹೋಗಬೇಕೆಂದೂ, ಚಳವಳಿಕ್ಕೆ ಸಹಾಯವನ್ನೀಯಬಾರದೆಂದೂ ಒಂದು ನೋಟೀಸು ಹೋಯಿತು.

ವರ್ತಕರಿಗೆ ನೋಟೀಸು.

ಮುಂಬಾಯಿಯಲ್ಲಿನ ಕೆಲವು ವರ್ತಕರಿಗೆ ಅಲ್ಲಿಯ ಪೋಲೀಸ್ ಕಮಿಶನರರು ಒಂದು ನೋಟೀಸು ಕೊಟ್ಟಿದ್ದಾರೆ ವರ್ತಕರು ಚಳವಳಿದ ಪ್ರೋತ್ಸಾಹದ ಬಗ್ಗೆ ಅಂಗಡಿಗಳನ್ನು ಮುಚ್ಚಬಾರದಾಗಿಯೂ, ನಿತ್ಯದಂತೆ ಆಗುವ ವ್ಯಾಪಾರ ವಹಿವಾಟಿಕ್ಕೆ ತೊಡಕನ್ನುಂಟುಮಾಡಬಾರದಾಗಿಯೂ ಅದರ ತಕ್ಸ

ಪೋಲೀಸ್ ಸ್ಟೇಷನಿನ ಮೇಲೆ ಧ್ವಜ

ಬೆನಾರಸ್‌ನಲ್ಲಿ ಸಿಟಿ ಪೋಲೀಸ್ ಸ್ಟೇಷನಿನ ಮೇಲೆ ರಾಷ್ಟ್ರಧ್ವಜವನ್ನೇರಿಸಿದ ನಾಲ್ಕು ಮಂದಿ ಕೊಂಗ್ರೆಸ್‌ವಾಲರಿಗೆ ಆರಾರು ತಿಂಗಳ ಕಠಿಣ ಸಜೆ ಪೋಲೀಸ್ ಸ್ಟೇಷನಿನ ಗೋಡೆಗೆ ಕೊಂಗ್ರೆಸ್ ಕರಪತ್ರವನ್ನಂಟಿಸಿದ ಒಬ್ಬನಿಗೂ ಆರು ತಿಂಗಳ ಕಠಿಣ ಶಿಕ್ಷೆ! ಮತ್ತೆ ಕೆಲವರಿಗೆ ವಿವಿಧ ಶಿಕ್ಷೆ

ಮಾಜೀ ಎಮ್. ಎಲ್. ಸಿ. ಗೆ ದಂಡ.

ಅಲ್ಲಹಾಬಾದಿನಲ್ಲಿ ಕಾಯಿದೆಭಂಗ ಮಾಡಿ ಒಂದು ಮೆರವಣಿಗೆಯ ಮುಂದಾಳುತನವನ್ನು ವಹಿಸಿದ ಮಾಜೀ ಎಮ್ ಎಲ್ ಸಿ ಗಳಾದ ಶ್ರೀ ಪ್ರಸಾದ ನಾರಾಯಣ ಆನಂದರೆಂಬವರಿಗೆ ೧೦೦ ರೂಪಾಯಿ ದಂಡನೆಯು ವಿಧಿಸಲಾಯಿತು ೬೪ ಮಂದಿಗಳಿಗೆ ವಿವಿಧ ಅವಧಿಯ ಕಠಿಣ ಶಿಕ್ಷೆಯಾಯಿತು.

೬೪೭೧

ಸಂಯುಕ್ತ ಪ್ರಾಂತ್ಯ ಸರಕಾರದವರ ಹೇಳಿಕೆಯಂತೆ ಇಷ್ಟರ ತನಕ ಕಾಯಿದೆಭಂಗಗಳಿಗಾಗಿ ೬೪೭೧ ಜನರಿಗೆ ಶಿಕ್ಷೆಯಾಯಿತು ೧೧೫೦ ಮಂದಿಗಳ ಬಿಡುಗಡೆಯಾಗಿದೆ

೧೩೦೮.

ಕಳೆದ ಜನವರಿ ತಿಂಗಳಿಂದ ಮೊದಲುಗೊಂಡು ಮದ್ರಾಸ್ ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟು ೧೩೦೮ ಮಂದಿಗಳಿಗೆ ಶಿಕ್ಷೆಯಾಯಿತೆಂದು ಸರಕಾರದ ಹೇಳಿಕೆ

೧೫೪೯.

ಮಹಾರಾಷ್ಟ್ರ ದೇಶದಲ್ಲಿ ಇದುವರೆಗೆ ಒಟ್ಟು ೧೫೪೯ ಕೈದುಗಳಾದುವು ಅವರಲ್ಲಿ ೧೩೩೯ ಜನರಿಗೆ ಶಿಕ್ಷೆಯಾಯಿತು ಉಳಿದವರು ಬಿಡುಗಡೆ ಹೊಂದಿರುವುದಿಲ್ಲ ಜನವರಿ ತಿಂಗಳಲ್ಲಿ ೬೨೬ ಮಂದಿಗಳಿಗೆ ಬಂಧನ ಫೆಬ್ರವರಿಯಲ್ಲಿ ೬೨೩ ಮಂದಿಗಳಿಗೆ ಶಿಕ್ಷೆಯಾಯಿತು

೧೩೪೧.

ಜನವರಿ, ಫೆಬ್ರವರಿಯಲ್ಲಿ ಮುಂಬಾಯಿಯ ಚಳವಳದ ಸಂಬಂಧವಾಗಿ ೧೩೪೧ ಕೈದುಗಳಾದುವು ಅವರಲ್ಲಿ ೧೨೨೮ ಜನರಿಗೆ ಶಿಕ್ಷೆಯಾಯಿತು ಎಂಬ ವಾರ್ತೆ.

೧೦೮೦೦ ರೂಪಾಯಿ.

ಸೂರತ್ತಿನ ಡಾ. ಮನೂಭಾಯಿ ಚಂಗನ್‌ಲಾಲ್ ಮಥೂರ್ಟಿಯಾ ಎಂಬವರ ಹೆಸರಿನಲ್ಲಿದ್ದ ೬೮,೫೪೦ ರೂಪಾಯಿಯಲ್ಲಿ ೧೦,೮೦೦ ರೂಪಾಯಿಯು ಕೊಂಗ್ರೆಸ್ಸಿನ ಹಣವೆಂಬುದನ್ನು ಪೋಲೀಸರು ಕಂಡು ಹಿಡಿದು ಜಪ್ತಿ ನಡೆಸಲಾಯಿತು ಈಗ ಆ ೧೦,೮೦೦ ರೂಪಾಯಿಯನ್ನು ಸರಕಾರವು ವಶೀಕರಿಸಿರುತ್ತದೆಂದು ಮುಂಬಾಯಿ ಸರಕಾರದ ನೋಟೀಸು ಪ್ರಕಟವಾಗಿದೆ

ತಾ. ೧೨—ಲಾಠೀ ಪ್ರಹಾರ—ಜಖಂ.

ಡಿಲ್ಲಿಯಲ್ಲಿ ಮುನ್ಷಿ ಶಿರಾಮತುಲ್ಲ ಎಂಬವರ ಮುಂದಾಳುತನದಿಂದ ಸುಮಾರು ೩೦೦ ಜನರು ಕೂಡಿ ಒಂದು ಮೆರವಣಿಗೆ ಮಾಡಿದರು ಚಾಂದಿ ಚೌಕಿನ ಮೆರವಣಿಗೆ ಕಲಪುತ್ತಲೆ ಪೋಲೀಸ್ ಫೌಜಿನ ಆಗುವ ಸವಾರ ಚದರಬೇಕೆಂದಪ್ಪಣೆಯಾಯಿತು ಯಾರೂ ಚದರಲಿಲ್ಲ—ಲಾಠೀ ಪ್ರಹಾರವಾಯಿತು ಒಬ್ಬನಿಗೆ ವಿಶೇಷ ಜಖಂ ಆಗಿದೆ ಅನೇಕರು ಘಾಯಗೊಂಡರು ಇದರ ಸಂಬಂಧವಾಗಿ ಮರುದಿನ ಹರತಾಳದ ಹವಣಿಕೆಯಾಯಿತು ಮಾರ್ಕೆಟುಗಳಲ್ಲಿ ಗಲಿಬಿಲಿಯುಂಟಾಯಿತು ಜಖಂಗೊಂಡವನು ಗುಣಮುಖವಾಗುತ್ತಿದ್ದಾನೆ

"ಎಂ ಎ." ಸ್ತ್ರೀಯರಿಗೆ ಸೆರೆ.

ಲಾಹೋರಿನಲ್ಲಿ ಎಂ ಎ ಪದವೀಧರರಾಗಿರುವ ಮಿಸ್ ಶಿವರಾಮಣಿ ಮತ್ತು ಮಿಸ್ ಜಾನಕಿ ಕುಮಾರಿ ಜುಟ್ಶಿ ಎಂಬಿಬ್ಬರು ಮಹಿಳೆಯರು ಎಮರ್ಜೆನ್ಸಿ ಕಾನೂನನ್ನುಲ್ಲಂಘಿಸಿ ಮೆರವಣಿಗೆಯಲ್ಲಿ ಭಾಗವಹಿಸಿದುದಕ್ಕಾಗಿ ಒಂದೊಂದು ವರುಷದ ಸಜೆಗೂ ರೂಪಾಯಿ ೫೦೦ರಂತೆ ಜುಲುಮಾನೆಗೂ ಗುರಿಯಾದರು

ಹರತಾಳ ವರ್ತಕರ ಬಂಧನ"

ಮುಂಬಾಯಿಯಲ್ಲಿ ಸ್ವಾಮಿಬಾಗ್ ಮಾರ್ಕೆಟಿನವರು ಹರತಾಳವನ್ನಾಚರಿಸಿದ ಬೇರೆ ಮಾರ್ಕೆಟು ಎಲ್ಲಾ ಬಾಗಿಲು ತೆರೆದ ಫಲ ಮುಚ್ಚಿಕೊಂಡಿತ್ತ ದ್ರಗ್ಗಿಸ್ಟರೂ ಕೆಮಿಸ್ಟರೂ ಬಾಗಿಲು ಮುಚ್ಚಬಾರದಾಗಿ ಸರಕಾರದ ನೋಟೀಸು ಇತ್ತು ಆದರೂ ಕೂಡ ಅವರು ಬಾಗಿಲು ತೆರೆಯಲಿಲ್ಲ ಇಬ್ಬರು ವರ್ತಕರು ಬಾಗಿಲು ತೆರೆದರು ಒಡನೆ ವಿರುದ್ಧ ಪ್ರದರ್ಶನಗಾರರು ಪಿಕೆಟಿಂಗ್ ಮಾಡಿದರು ತಮ್ಮ ಮೇಲಿನ ಆಜ್ಞೆಯನ್ನು ಸ್ವೀಕರಿಸಲು ಪೋಲೀಸ ಸ್ಟೇಷನಿಗೆ ಹೋಗಲು ಅಸಮ್ಮತಿಸಿದ ಇಬ್ಬರು ವರ್ತಕರನ್ನು ಕೈದುಮಾಡಿದ್ದಾರೆ ತಮ್ಮ ಅಂಗಡಿಗಳನ್ನು ಮುಚ್ಚಿರುವ ೬೦ ಮಂದಿ ವರ್ತಕರ ಮೇಲೆ ನೋಟೀಸು ಹೋಗಲಿದೆ

ಕುರಾನು ಹಿಡಿದ ಸೆರೆಯಾಳು.

ಮುಂಬಾಯಿಯಲ್ಲಿ ಸವಿನಯಭಂಗಕ್ಕಾಗಿಯೊಂದೆಡೆಸಿದ ಒಬ್ಬ ಬೋಹರಾ ಜಾತಿಯವನೊಬ್ಬನು ಕೈದುಮಾಡಲ್ಪಟ್ಟಿದ್ದನು. ತನ್ನ ವಿಚಾರಣೆಯ ಸಮಯದಲ್ಲಿ ಒಂದು ಕೈಯಲ್ಲಿ ಕುರಾನಿನ ಪ್ರತಿಯನ್ನು ಹಿಡಿದುಕೊಂಡು ನಿಂತನು ಸಂಪೂರ್ಣ ಖಾದಿ ಉಡುಪನ್ನು ಧರಿಸಿದ್ದನು ಅವನಿಗೆ ಆರು ತಿಂಗಳು ಕಠಿಣ ಸಜೆ

ಮುದ್ರಣಾಲಯ ಮಾರಿ ಜುಲುಮಾನೆ ವಸೂಲಿ.

ಸೂರತ್ತಿನಲ್ಲಿಯ 'ಹಿಂದೂ' ಎಂಬ ವಾರಪತ್ರಿಕೆಯ ಸಂಪಾದಕರು ೧ ವರುಷದ ಕಠಿಣ ಸಜೆಗೂ ೧೦೦೦ ರೂಪಾಯಿ ಜುಲುಮಾನೆಗೂ ಗುರಿಯಾದರು ಜುಲುಮಾನೆಯ ವಸೂಲಿ ಬಗ್ಗೆ ಅವರ ಮುದ್ರಣಾಲಯವನ್ನು ಮಾರಬಹುದೆಂದು ಸರಕಾರದ ಆಜ್ಞೆ

ಸೊತ್ತುಗಳು ವಶೀಕರಿಸಲ್ಪಟ್ಟುವು.

ಕಲ್ಕತ್ತದಲ್ಲಿ ೨೬ ಮಂದಿಗಳಿಗೆ ವಿವಿಧ ಶಿಕ್ಷೆಯಾಯಿತು. ಶ್ರೀಮತಿ ಲಥಿನ್ಲಾ ಪ್ರಥಾದರ್ ಎಂಬವರ ನೂರು ರೂಪಾಯಿ ಜುಲುಮಾನೆ ವಸೂಲಿ ಬಗ್ಗೆ ಅವರ ಸೊತ್ತುಗಳು ವಶೀಕರಿಸಲ್ಪಟ್ಟುವು

1. Good Riding Quality.
2. Gripping Tread
3 Economical wear.
4. Maximum Resistance to shock

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality



TRIED & PROVED.

USE A Seiberling Tube

IN

A Seiberling Tire.

You cannot find a better combination.

ಮುಂಬಾಯಿ ವಿದ್ಯಾ ಇಲಾಖೆಯ ವರದಿ

"ಕಾಲೇಜುಗಳಲ್ಲೋದುವವರ ಮೇಲೆ,—ಸಂಖ್ಯೆ ಮತ್ತು ಪರೀಕ್ಷಾ ಫಲ—ಶಾಸನೋಲ್ಲಂಘನೆಯ ಚಳವಳಿದ ಪರಿಣಾಮಗಳು ಪ್ರತ್ಯಕ್ಷ ಕಂಡು ಬಂದಿವೆ. ಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕ್ಲಾಸಿಗೆ ಹೋಗದಿದ್ದರೂ, ಇಡೀ ಸಂಸ್ಥಾನದ ಮೇಲೆ ಅತಿ ಹೆಚ್ಚಿನ ಪರಿಶ್ರಮವು ಇಷ್ಟನ್ನಾದರೂ ಸಾಧಿಸುವುದಕ್ಕಾಗಿ ಬಿತ್ತೀ ಬಿತ್ತಿನ್ನಬೇಕು. ವಿದ್ಯಾರ್ಥಿಗಳಲ್ಲಿನ ರಾಜಭಕ್ತಿಯನ್ನು ನಿರ್ಮೂಲಿಸಲು ನಡೆಸಿದ ಪ್ರಯತ್ನಗಳು, ಫರ್ಗುಸನ್ ಕಾಲೇಜಿನಲ್ಲಿ ಅಕ್ಟಿಂಗ್ ಗವರ್ನರರ ಮೇಲೆ ವಿದ್ಯಾರ್ಥಿಯೊಬ್ಬನು ಪಿಸ್ತೂಲು ಹಾರಿಸುವಂತೆ ಸಹ ಮಾಡಿಲ್ಲವೆ? ಇದಕ್ಕೆಲ್ಲ ಕಾರಣರು ವಿದ್ಯಾರ್ಥಿಯರ ತಂದೆ ತಾಯಿಗಳು, ಅವರಲ್ಲಿ ಸರಿಯಾಗಿ ಮಕ್ಕಳನ್ನು ಅಂಕೆಯಲ್ಲಿಟ್ಟುಕೊಳ್ಳಲು ಶಕ್ತಿಯಿಲ್ಲ, ಇದಕ್ಕಾಗಿ ಯೋಗ್ಯ ವಿದ್ಯಾಭ್ಯಾಸವೂ ಅವರಿಗಾಗಿಲ್ಲದಿರಬಹುದು. ಆದರೆ, ಸರಕಾರವು ಖಂಡಿತವಾಗಿಯೂ ಶಿಕ್ಷಕರ ಮೇಲೆ ಈ ವಿಷಯಕ್ಕೆ ನಿಂತರವಾಗಿ ಜವಾಬುದಾರಿಯನ್ನು ಹೊರಿಸಿ ಆಧರಿಸಿರಬಹುದಲ್ಲವೆ? ಈ ವಿಷಯವಾಗಿ ಶಿಕ್ಷಕರು ತಮ್ಮ ಜವಾಬ್ದಾರಿ ಮರೆತರೆ ಸರಕಾರವೇ ಅವರನ್ನು ಎಚ್ಚರಿಸಿ ಅವರನ್ನು ಸರಿಗೊಳಿಸಲು ಅಗತ್ಯ ಸಾಧನಗಳನ್ನು ಮಾಡಬೇಕಾಗುತ್ತದೆ. ಸರಕಾರದ ಅಥವಾ ಸರಕಾರದ ಸಹಾಯ ಹೊಂದುವ ಯಾವನೊಬ್ಬ ಶಿಕ್ಷಕನೂ ಈ ಚಳವಳದಲ್ಲಿ ಸೇರಬಾರದಾಗಿ ತಿಳಿಸಲಾಗಿದೆ. ಹಾಗೆಂದು ಅಷ್ಟರಲ್ಲೆ ಶಿಕ್ಷಕರು ಸುಮ್ಮನಾದರೂ, ಸರಕಾರಕ್ಕೆ ಅವರು ಮಾಡಬೇಕಾಗಿರುವಷ್ಟು ಕರ್ತವ್ಯ ಮಾಡಿದಂತಾಗಿಲ್ಲ. ಸರಕಾರಕ್ಕಾಗಿ ಅವರು ಪ್ರಕಟವಾಗಿ ಕೆಲಸಮಾಡಬೇಕು" ಎಂದೇ ಟೀಕೆ.

ಶೌಕತರ ಸಮಾಧಾನ

'ಅವಕಾಶವೇ ಇಲ್ಲವಾದರೂ ಕೆಲದಿನಗಳ ವರೆಗೆ ಗಡಿನಾಡಿಗೆ ಬಂದೆ, ತಿರುಗಿದೆ, ಆಶ್ಚರ್ಯ! ಎಲ್ಲೆಲ್ಲಿಯೂ ಆಮಂತ್ರಣ! ಕಾಂಗ್ರೆಸಿನವರು ಮುಸ್ಲಿಮ ಪತ್ರಿಕೆಗಳಲ್ಲಿ ನನ್ನ ದಿಗ್ವಿಜಯ ವೃತ್ತಾಂತವನ್ನು ತಿರುಚಿ ಏನೇನೋ ಬರೆಯುತ್ತಾರಂತೆ. ಬರೆಯಲಿ. ನಾವೇನು ಹಿಂದೆಗೆವವರೇ? ಹಲವು ಊರುಗಳನ್ನು ನೋಡಿದೆನು, ಹಲವು ಜನರನ್ನು ಕಂಡೆನು. ಎಲ್ಲರೂ ನನ್ನಲ್ಲಿ ವಿಶ್ವಾಸವನ್ನೆ ಇಟ್ಟಿರುವರು. ಇನ್ನು ಖಿಲಾಫತ್ ಕಮಿಟಿಯವರು ಹೇಳಿದುದನ್ನಲ್ಲದೆ ಇನ್ನೇನನ್ನೂ ಅವರು ಕೇಳುವುದಿಲ್ಲವಂತೆ. ಧರಿಸಿಕೊಟ್ಟಿದ್ದಾರೆ. ಮುಂದೆ ಗವರ್ನರರಾಗಲಿರುವ ಗ್ರಿಫಿತ್ ಸಾಹೇಬರನ್ನು ಕಂಡೆನು, ಇವರು ಪ್ರಜೆಗಳೂ ಸರಕಾರಕ್ಕೂ ಸರಿಹೋಗುವಂತೆ ಹವಣಿಸುವರೆಂದು ನಂಬುವೆನು. ಇಂಡಿಯದಲ್ಲಿನ ಮುಸ್ಲಿಮರು, ಈ ಪ್ರಾಂತ್ಯದೊಂದ ಪ್ರತ್ಯೇಕವೂ ಪೂರ್ಣ ಸರಕಾರವುಳ್ಳದ್ದೂ ಆಗುವಂತೆ ಇಷ್ಟು ವರ್ಷ ಮಾಡಿದ ಹೋರಾಟಗಳು ಈಗ ಸಫಲವಾದುವು. ಇವರೂ ಇತರ ಮುಸ್ಲಿಮರಿಗೂ ಧೀರ ಬಲದಿಂದ ಸಾಧನೆ ಮಾಡುವವರಿದ್ದಾರೆ. ಮುಸ್ಲಿಮರ ಹೇಳಿಕೆಗಳು ಮತ್ತು ಪ್ರಥಾಸರಿಗೆ ಬರೆದ ಕಾಳ್ಗಿನ ವಿಶೇಷ ಪ್ರಯಾಸದಿಂದಲೇ ಅಣ್ಣ ಮಹಮ್ಮದೀಯರು ನಿಧನ ಹೊಂದಿದರು. ಈಗ, ಹೀಗಲ್ಲ ಸುಳ್ಳು ಹೇಳಿ, ಪಠಾನ ಧೀರರನ್ನು ಕಾಂಗ್ರೆಸಿನ ಮತ್ತು ಮಹಾತ್ಮಾ ಗಾಂಧಿಯವರ ಅನುಯಾಯಿಗಳನ್ನಾಗಿ ಮಾಡುವುದೇ? ಇನ್ನು ಎಷ್ಟೋ ಆಮಂತ್ರಣಗಳು ಬಂದಿವೆ. ಏಪ್ರಿಲ ನಲ್ಲಿ ಅಫಘಾನಿಸ್ಥಾನಕ್ಕೆ ಹೋಗುವಾಗ ಇಲ್ಲಿ ಕೆಲದಿನವಿದ್ದು, ಧೀರ ಪಠಾನರ ಪರಿಚಯ ಮಾಡಿಕೊಳ್ಳುವೆನು. ಈ ಖಿಲಾಫತ್ತಿನ ವ್ಯಾಲಂಟಿಯರು ಈ ಜನರಲ್ಲಿದ್ದು ಕೆಲಸ ನಡಿಸುವರು" ಎಂಬುದು ಇವರ ವರದಿ, ದುಃಖವೆಂದರೆ, ಇವರು ಅತ್ತ ಹೋದ ಮೊದಲನೆ ದಿನವೇ ೬೦ ಜನರಿಗೆ ಶಿಕ್ಷೆಯಾಯಿತು!

ಚಿಕ್ಕ ಕಟ್ಟು ಕಥೆ

ಸಿಂಹ, ಹದ್ದು, ಹುಲಿ, ಎತ್ತು ಕರಡಿ ಇವಿಷ್ಟು ಸೇರಿ ಕಾಡಿನಲ್ಲಿ ಹಿಂಸೆಯಾಗದಂತೆ ಏನು ಮಾಡಬೇಕೆಂದು ಆಲೋಚಿಸಿದುವು. ಸಿಂಹವು ಹದ್ದನ್ನು ನೋಡಿ, ರೆಕ್ಕೆಗಳೇ ಇಲ್ಲದಿರುವಲ್ಲಿ ಹಿಂಸೆಗೆ ಅನುಕೂಲ್ಯವು ಇರದು ಎಂದಿತು. ಹದ್ದು ಎತ್ತನ್ನು ನೋಡಿ, ಕೊಂಬುಗಳು ನಾಶವಾದರೆ ಇನ್ನು ಹಿಂಸೆಯಿಲ್ಲ ಎಂದಿತು. ಎತ್ತು ಹುಲಿಗೆ ಹೆದರಿ, ಉಗುರುಗಳಿಲ್ಲವಾದರೆ ಜಗತ್ತೆಲ್ಲಾ ಅಹಿಂಸಾಮಯವಾಗುವುದೆಂದಿತು. ಕರಡಿಗೆ ಇದೆಲ್ಲವೂ ಸರಿಹೋಯಿತು. ಆಗ ಎಲ್ಲರನ್ನೂ ಪ್ರೇಮದಿಂದ ಗಾಢಾಲಿಂಗನ ಕೊಡಲು ಅನುಕೂಲವಲ್ಲವೆ? ಹಾಗೆಯೇ ಈಗಣ ಯುದ್ಧ ಸನ್ನಾಹ ನಿವಾರಣೆಯ ಪರಿಷತ್ತು ಎಂದು ಸ್ಪೆಯಿನ್ ಪ್ರತಿನಿಧಿಯ ಕಥೆ. ಒಂದು ರಾಷ್ಟ್ರಕ್ಕೂ ಮತ್ತೊಂದಕ್ಕೂ ದ್ವೇಷವಿದೆ; ಅದರ ಬಲ ಪ್ರಕಾರವನ್ನು ಕತ್ತರಿಸೋಣ ಎಂದೇ ಇದೆನ್ನುವುದು. ನೆರ್ವರೂ ಎಲ್ಲ ಸನ್ನಾಹವನ್ನು ಧ್ವಂಸ ಮಾಡೋಣವೆಂದೆನ್ನುವುದಿಲ್ಲ. ಹಾಗಾದರೆ ಯುದ್ಧನಾಶವಾಗುವುದೆಂತು?

ಮುಂದಣ ಸರಕಾರೀ ಹುದ್ದೇದಾರರ

ಸಂಬಳ-ಭತ್ತೆ-ಬಡ್ತಿಗಳನ್ನು ಕುರಿತಾಗಿ ಕಡಿಮೆ ಸ್ಕೇಲುಗಳನ್ನೇ ನಿರ್ಧರಿಸಿ, ಕೆಲವು ಹುದ್ದೆಗಳನ್ನೀಗಲೆ ಆ ರೀತಿಯಾಗಿ ಕೊಡಲಾಗಿದೆ ಎಂದು ಸಂಯುಕ್ತ ಪ್ರಾಂತ್ಯಗಳ ಕೌನ್ಸಿಲಿನಲ್ಲಿ ಫೈನೆನ್ಸ ಮೆಂಬರರು ತಿಳಿಸಿದರು. ಇದರಿಂದಾಗಿ, ಪಯೊನಿಯರ್ ಪತ್ರಿಕೆಯು ಈ ಪ್ರಾಂತಿಕ ಸರಕಾರವು ಹೀಗೆ ತಿದ್ದುಪಡಿ ಮಾಡಬೇಕಾದರೆ, ಮಹಿಷ್ಟ ಸರಕಾರವನ್ನು ಕೇಳಿ ಸಮ್ಮತಿ ಪಡೆದಿದೆ ಎಂದು ನಂಬಲಾಗಿದೆ ಎಂದೂ ಟೀಕಿಸಿರುವ ಕಾರಣ, ಹಾಗೆ ಮಾಡಬೇಕೆಂದೇ ನಾವೂ ನಂಬಲಾಸ್ಪದವಿದೆಯಾದರೂ ಇತರ ಯಾವ ಪ್ರಾಂತಿಕ ಕೌನ್ಸಿಲಿನಲ್ಲಿಯಾದರೂ ಈ ವಿಚಾರಗಳು ಹೊರಬಿದ್ದಿಲ್ಲವೆಂದು ತಿಳಿದು ಕೊಂಚ ಕುತೂಹಲವುಂಟಾಗಿದೆ. ಕೌನ್ಸಿಲು ಮೆಂಬರರು ಈ ಪ್ರಶ್ನೆಯನ್ನು ಸರಕಾರಕ್ಕೆ ಕೇಳಿ ಉತ್ತರ ಪಡೆದರೆ ಕುತೂಹಲಕ್ಕೆ ಸಮಾಧಾನವಾಗುವುದು. ಏಕೆಂದರೆ ಈ ತಿದ್ದುಪಡಿಗೆ ಜ್ಯಾರಿಗೆ ಬಂದರೆ ಪ್ರಜೆಗಳ ಮೇಲೆ ಹೇರಿರುವ ಎಷ್ಟೋ ತೆರಿಗೆಗಳ ಭಾರವು ಕಡಿಮೆಯಾಗುವುದೆಂಬ ನಿರೀಕ್ಷಣೆ ಇದೆ.

ಸಪ್ತ ಋಷಿಗಳ ಕೂಟ

ಮುಂಬಾಯಿ ಸರಕಾರದ ಸರಿಯಾದ ಆಡಳಿತಕ್ಕೆ ಏಳು ಮಂದಿ ಎಕ್ಸಿಕ್ಯೂಟಿವ್ ಕೌನ್ಸಿಲರುಗಳು ಈಗ ಬೇಡವೆಂದೇ ತೋರುತ್ತಿದೆ. ಇದು ಚಳವಳದ ಕಾಲ, ರಾಜ್ಯಾಡಳಿತದ ವ್ಯವಸ್ಥೆ, ಚಿಂತೆ ಯೋಜನೆ ಇತ್ಯಾದಿಗಳು ಬಲು ಸಮರ್ಪಕವಾದ ಕಾರ್ಯಧುರಂಧರರನ್ನು ಕೌನ್ಸಿಲರುಗಳಿಂದ ಅಹೋರಾತ್ರಿಯೂ ನಿರೀಕ್ಷಿಸಬೇಕಾಗಿರುವ ಕಾಲವಲ್ಲವೇ? ಆದರೂ ಹಣದ ಅಡಚಣೆಯ ಬಾಬಿನ ಕಡೆಯಿಂದ ಏಳು ಮಂದಿ ೮೦೦೦ ರೂಪಾಯಿ ಸಂಬಳದವರ ಬದಲಾಗಿ ನಾಲ್ಕು ಮಂದಿ ಇದ್ದರೆ ಸಾಕೆಂದೂ ಈಗ ನಿರ್ಧಾರವಾಗುತ್ತಿದೆ. ನಾಲ್ವರಿಂದಲೂ ಇಷ್ಟೇ (ನಾಲ್ಕೇ) ಮಂದಿ ಇದ್ದರೆ ವರ್ಷಕ್ಕೆ ಅರ್ಧ ಕೋಟಿ ರೂಪಾಯಿ ಯನ್ನಾದರೂ ಕಷ್ಟದಲ್ಲಿ ಉಳಿಸಬಹುದಾಗಿದ್ದರೆ ಪ್ರಜೆಗಳ ಮೇಲೆ ಬಲ ಉರಿಯುವುದುಂಟು. ಅದನ್ನು ತಿಳಿದಾದರೂ ಮದ್ರಾಸು ಸರಕಾರವೂ ತನ್ನ ಕೌನ್ಸಿಲರುಗಳ ಸಂಖ್ಯೆಯನ್ನು ಇಳಿಸಿ, ಉಳಿಯುವ ಹಣವನ್ನು ಪ್ರಜಾಭ್ಯುದಯ ಕಾರ್ಯಗಳ ಬಗ್ಗೆ ವಿನಿಯೋಗಿಸಿದರೆ ಕಾಂಗ್ರೆಸ್ ಚಳವಳದ ಬೆನ್ನೇ ಮುರಿಯದೆ? ಏಳೇಳು ಎಂಬತ್ತು ವರ್ಷದ ಅವಧಿ ದಾಟಿದ ವೃದ್ಧರನ್ನು ಕಟ್ಟಿಕೊಂಡು, ಅವಹೇಳನಕ್ಕೆ ಕಾರಣವಾದ ಪ್ರತಿಷ್ಠೇಚ್ಛುಗಳಿಗೆ ಅವಕಾಶ ಕೊಡಿಸುವ ಬದಲಾಗಿ ಇಲ್ಲಿನ ಸಪ್ತ ಋಷಿಗಳಲ್ಲಿ ಕೆಲವರನ್ನು ವಾನಪ್ರಸ್ಥಕ್ಕೆ ಕಳುಹಿದಂತಾಗದೆ?

ನಿರಪರಾಧಿಗಳ ಅಪರಾಧ

ಅವುದು! ಯಾವನೋ ಹಣದಾಸೆಯಿಂದಲೋ ಸ್ವಾರ್ಥಸಾಧನೆಯಿಂದಲೋ ಪೋಲೀಸರಿಗೆ ಕೆಲವು ರಿಪೋರ್ಟುಗಳನ್ನು ಮಾಡಿ ಹಲವರನ್ನು ಕೈದುಮಾಡಿ, ಅವರು ಮೂರು ಲಕ್ಷ ರೂಪಾಯಿಗಳ ಜಾಮೀನು ಬಾಂಡುಗಳನ್ನು ಬರೆಯುವಂತೆ ಮಾಡಿದನು! ನ್ಯಾಯಸ್ಥಾನದಲ್ಲಿ ವಿಚಾರಣೆ ನಡೆವಾಗಲೇ ಎಲ್ಲವೂ ಸುಳ್ಳೆಂದು ವಿದಿತವಾಯಿತು. ಸಾಧುಗಳು ಪುಣ್ಯಕ್ಕೆ ಉಳಿದುಕೊಂಡರು. ಇನ್ನು ಬರೀ ಎತ್ತರದ ಸೂಚಿಸಿಕೊಟ್ಟವನನ್ನು (ಮಾಫಿ ಸಾಕ್ಷಿಯನ್ನು) ಇನ್ನು ಮೊಕದ್ದಮೆಗೆ ಒಳಪಡಿಸುವರಂತೆಯಿತೆ? ಪೋಲೀಸರ ಒಳಯಲ್ಲಿ ಕಾಸು ಬೆಲೆಯುಳ್ಳವನಾತು ಇಲ್ಲದೆ ಮುಲ್ತಾನಿನ ಈ ಗೃಹಸ್ಥರನ್ನು ಇಷ್ಟು ಕಾಲ ಸ್ವಧಾಕಷ್ಟಕ್ಕೂ ಹಿಂಸೆಗೂ ಒಳಪಡಿಸಿದುದಕ್ಕೆ ಏನು ಪರಿಹಾರವಂತೆ? ಪೋಲೀಸರು ಕಾಲು ಭದ್ರವಾಗಿಡಲಾರದೆ ಸಿಕ್ಕವರನ್ನು ಕಟ್ಟಿಕೊಂಡು ಎಲ್ಲರೂ ಜುಳಿಯಲ್ಲಿ ಬಿದ್ದರಲ್ಲ! ಹಾಗೆ ಬಿದ್ದವರಿಗೆ ಏನು ಪರಿಹಾರವಿದೆ? ಸುಳ್ಳನ್ನು ನಂಬಿ ಮೊಕದ್ದಮೆ ಹೂಡಿದ ಪೋಲೀಸರ ಮೇಲೆ ಯಾವ ಅಪರಾಧವನ್ನೂ ಹೊರಿಸಬೇಡವೆ? ಗೃಹಸ್ಥರ ಮನೆ ಝಡ್ತಿ ಮಾಡಿದರೂ ತಕ್ಕ ಸಾಕ್ಷೀ ಸಾಧಿಸಲು ಏನೂ ರುಜುವಾತು ದೊರೆಯಲಿಲ್ಲ. ನಿರಪರಾಧಿಗಳನ್ನು ಪೋಲೀಸರು ಸುಲಭವಾಗಿ ಪೀಡಿಸಲು ಸಾಧ್ಯವೆಂಬುದಕ್ಕೆ ಇದೊಂದು ಉದಾಹರಣೆ ಎಂದು ಪತ್ರಿಕೆಗಳ ಟೀಕೆ.

ನೋಟಗಳು

NOTE.. S

'ಶಾಂತಿ! ಶಾಂತಿ!' ಎಂದು ಜಿನೀವದಲ್ಲಿ ಸಭೆಗೂಡಿ, 'ಗೋವಿಂದಾ' ಎಂದು ಕೂಗುತ್ತಿರುವಾಗಲೇ 'ಮದ್ದು ಗುಂಡು ಬೇಕೋ, ಹತ್ಯಾರು?' ಎಂದೂ ಕೂಗುತ್ತಿರುವುದೂ ಒಂದು ಬಗೆಯ ಯುದ್ಧ ನಿವಾರಣೆಯ ಕ್ರಮ.

• • • •

ವೇದವಿಷ್ಟು, ಶಾಂತಿ!' ಮತ್ತು 'ಶಾಂತಿ?' ಎಂಬಿವುಗಳೊಳಗೆ ಇರುವ ಚಿಹ್ನೆಗಳಲ್ಲಿ.

• • • •

ನೀವು ಕೇಳಲಿಲ್ಲವೆ? ಬಂಗಾಳದಲ್ಲಿ ಹುಡುಗಿಯರಿಂದ ಕಾಂಗ್ರೆಸ್ ಪಕ್ಷದವರು ಹಿಂಸಾತ್ಮಕ ಕೃತ್ಯಗಳನ್ನು ಮಾಡಿಸುತ್ತಾರಂತೆ, ಆದರೆ, ಅಂತಹ ಹುಡುಗಿಯರಿಗೆ ಮರಣ ಶಿಕ್ಷೆ ವಿಧಿಸಲಾಗದಂತೆ ಅವರು ಗರ್ಭಿಣಿಯರಾದಾಗಲೆ ಹಿಂಸೆಗೆ ತೊಡಗಬೇಕೆಂದೂ ಏರ್ಪಡಿಸಿರುವರಂತೆ!—ಇದು ದೇಶೀಯ ಪತ್ರಿಕೆಗಳಲ್ಲಿ ಪ್ರಕಟವಾಗುವ ಗಾಥೆಯ ಸುಳ್ಳಲ್ಲ,—ಲಂಡನಿನಲ್ಲಿ ಪ್ರಕಟವಾಗುವ ಡೈಲಿ ಟೆಲಿಗ್ರಾಫ್ ಪತ್ರಿಕೆಯ ಸುಳ್ಳಿನ ರೂಢಿ. ಆದಷ್ಟೇ ಸಮುದ್ರದ ಆಚೆಗೇ ಸತ್ಯವಾದಿಗಳು ಅವತರಿಸುತ್ತಿರುವರೆಂದು ಇನ್ನೂ ಕೇಳಲಿಲ್ಲವೆ?

• • • •

ಮುಂಬಾಯಿ ಕೌನ್ಸಿಲಿನಲ್ಲಿ, ಪ್ರಶ್ನೆ—ಶ್ರೀಮಂತರ ಕೈದಿಗಳಿಗೂ, ಸುಶಿಕ್ಷಿತರುಗಳಿಗೂ C ಕ್ಲಾಸು ಶಿಕ್ಷೆ ಕೊಡುತ್ತಾರೆಂದು ತಿಳಿದಿರುವುದೆ? ಉತ್ತರ—ಇಲ್ಲ' ಪ್ರಶ್ನೆ—'ಮಾಜಿ ಕೌನ್ಸಿಲು ಮೆಂಬರುಗಳಿಗೂ C ಕ್ಲಾಸು ಶಿಕ್ಷೆ ಕೊಟ್ಟುದು ಗೊತ್ತಿದೆಯೆ?'—ಹೌದು. ಹಾಗಿದ್ದರೆ, ಆ ಮಾಜಿ ಮೆಂಬರರು ಯಾವ ಸಮಾಜಿಕ ಸ್ಥಿತಿಯವರೆಂದು ಸರಕಾರವು ತಿಳಿಯುವುದೋ ಯಾರಿಗೂ ಹೇಳಬೇಕಾಗಿದೆಯೆ!

• • • •

ಗುಜರಾತಿ ಸ್ತ್ರೀಯರು ಕಾಂಗ್ರೆಸ್ ಪಕ್ಷವಾಗಿ ಇನ್ನೂ ಕೆಲಸಮಾಡುವರಂತೆ. ಆ ಹೆಂಗಸರ ಗಂಡಂದಿರ ಪರವಾ ಇಲ್ಲದೆ ಹೀಗೆಲ್ಲ ಆಡದಿರಲು ಅವರನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಕಷ್ಟವಾದೀತು. ಗುಜರಾತಿಗಳು ಸ್ವಾಭಾವಿಕವಾಗಿ ಪುಕ್ಕಗಳು. ದೇಶದ ಕೋಮಲತೆ ಕಾಪಾಡಲು ಯಾವಾಗಲೂ ಸಿದ್ಧರು ಎಂದು ಮುಂಬಾಯಿ ಟೈಮ್ಸ್ ಪತ್ರಿಕೆಯಲ್ಲಿ ಹೆಸರಿಲ್ಲದ ಬಾತ್ಮಿ. ಈ ಗೌರವಾನ್ವಿತ ಮನುಷ್ಯನು ಧೀರನ, ವೀರನು ಶೂರನು, ದೇಶದ ಕೋಮಲತೆಯ ಪರವಾ ಇಲ್ಲದವನು ಎಂಬುದಕ್ಕೆ ಇವನ ಅನಾಮಿಕನಾಗಿ ಬರುವುದೇ ಸಾಕ್ಷಿ. ಹೆಸರು ಕೊಟ್ಟು ಎದುರಲ್ಲಿ ಗುಜರಾತಿ ಸ್ತ್ರೀಯರು ಸಹ ಇವನ ಪರವಾ ತೆಗೆದು ಕಾಣುತಾರೆಂದು ಹೆದರಿದ್ದನೆ?

• • • •

ಅಂತಹ ಸ್ತ್ರೀಯರಿಗೂ ಅಂತಹ ಪುರುಷರಿಗೂ ಭಯ ಹುಟ್ಟಿಸುವ ಎಷ್ಟೆಯಾದರೂ ಎಂದೇ ಇವನ ಸಿದ್ಧಾಂತ. ಇಂತಹ ಪುರುಷರಿಗೆ ಏಕೆ ಹೊಡೆಯಬಾರದು ಎನ್ನುವುದೇನು? ಎಂದೂ ಸಿದ್ಧಾಂತ.

• • • •

ಅಸ್ಪೃಶ್ಯರನ್ನು ಹಿಂದೂಗಳೊಡನೆಯೇ ವೋಟಿಗೆ ನಿಲ್ಲುವಂತೆ ಮಾಡಬೇಕೆಂದೂ ಹಾಗಿಲ್ಲದೆ ಪ್ರತ್ಯೇಕಿಸುವುದು ಅಸ್ಪೃಶ್ಯರ ನಾಶವೆಂದೂ ನಾಶವಾಗುವುದೆಂದೂ ಕಮಿಟಿಯ ಮುಂದೆ ಸಾಕ್ಷಿ ನುಡಿದ ಶ್ರೀ. ವಿ. ಎಲ್. ಶಾಸ್ತ್ರಿ...ರನ್ನು ಕೆಲವರು ವಂಚಿಸಿ ಮೋಟಾರಿನಲ್ಲಿ ಆಮಂತ್ರಿಸಿ, ಕೊಲ್ಲುವುದಾಗಿ ಹೆದರಿಸಿದರಂತೆ. ಅವರೇ ದೂರು ... ಕೃತ್ಯಗಳಿಂದ ಅಸ್ಪೃಶ್ಯರನ್ನು ಪ್ರತ್ಯೇಕಿಸ ತೊಡಗಿರುವವರ ... ಮೋಸಗಳಿಂದ ವಂಚಿಸಲೂ ಹಿಂತೆಗೆಯುವುದು ಅವರ ಸ್ವಭಾವಕ್ಕೆ ವಿರುದ್ಧವಲ್ಲವೆ!

• • • •

ಉತ್ತರ ಹಿಂದೂಸ್ಥಾನದ ಕ್ರೈಸ್ತರು ತಮ್ಮನ್ನು ಪ್ರತ್ಯೇಕಿಸದೆ ಹಿಂದೂಗಳೊಡನೆಯೇ ಸೇರಿಸಿ ಕ್ರೈಸ್ತಧರ್ಮ ಪ್ರಕಾರವಾಗಿ ಜನಾಂಗವನ್ನು ಬಿಟ್ಟಿರುವ ಎನ್ನುವರು. ಹೀಗಾದರೆ ಪ್ರತ್ಯೇಕ ವೋಟು ಚುನಾವಣೆಯೇ ಬೇಕೆನ್ನುವ ಯುರೋಪಿಯರು ಕ್ರೈಸ್ತ ಧರ್ಮಕ್ಕೆ ಒಳಗಾದವರಲ್ಲವೆಂದು ಉತ್ತರದೇಶದ ಕ್ರೈಸ್ತರ ಅಭಿಪ್ರಾಯವೆ?

• • • •

ಇಲ್ಲಿ Buy Indian ದೇಶೀಯ ವಸ್ತು ಕೊಳ್ಳಿರಿ' ಎಂಬ ಸಾರುವ ಲೀಗ್ ಪ್ರತಿಷ್ಠವಾಯಿತು. ಸರಕಾರವು ಅದಕ್ಕೆ ಪ್ರೋತ್ಸಾಹ ಕೊಟ್ಟಿತು. ನಂಸಾಪುರದಲ್ಲಿ ಈ ಲೀಗಿನ ಶಾಖೆಯವರು ಮೂರು ದಿನ ಕರಪತ್ರ ಹಂಚಿದರು. ಲಾಠೀ ಪೂಜೆಯಾಯಿತು ಎಂದು ಮೂರು ದಿನವೂ ವರ್ತಮಾನ. ಕೌನ್ಸಿಲಿನಲ್ಲಿ ಪ್ರಶ್ನೆ ಬಹುಶಃ ಇದೂ ಸರಕಾರದ ತಿಳುವಳಿಕೆಗೆ ಬಂದಿಲ್ಲವೇನೋ?

ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು ಮಂಗಳೂರು, ದಕ್ಷಿಣ ಇಂಡಿಯಾ.

ಇಂಡಸ್ಟ್ರಿಯಲ್ ವಿಮೆ.

(ವೈದ್ಯಕೀಯ ಪರೀಕ್ಷೆ ರಹಿತ)

ಸ್ತ್ರೀ-ಪುರುಷರಿಗೆಲ್ಲ ಅನ್ವಯಿಸುವುದು.

ಸುಲಭವಾದ ಸರ್ವರಿಗೂ ಅನುಕೂಲವಾದ

ಅತ್ಯುದಾರವಾದ ಶರ್ತಗಳು

ಮಾಸಿಕ ಪ್ರಿಮಿಯಮ್

ಒಂದು ರೂಪಾಯಿ ಮಾತ್ರ.

ಹೆಚ್ಚಿನ ಅನುಭವಕ್ಕೆ ಹೆಡ್ ಆಫೀಸಿಗೆ ಬರೆಕೊಳ್ಳುವುದು.

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ನಾದಂಥ ಅನಮೋಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಶ್ರೀ ಮದನಮಸ್ತ ಪಾಕು ... ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯ ... ವ್ಯಾಧಿಯಿಂದ ಧಾತು ಹೋಗುವದು ... ಇದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಸಂಸರ್ಗದಿಂದಲೂ ... ನಪುಂಸಕತ್ವ ಧಾತುಕ್ಷೀಣತೆ ಅಶಕ್ತತೆ ಕಾಮೋಟ್ಟಿಯಾದ ಕೂಡಲೇ ವೀರ್ಯಪತನವಾಗೋಣ ಗರ್ಭಿಯ ... ಪ್ರಮೇಹ ಸ್ವಪ್ನದೋಷ ಇತ್ಯಾದಿ ರೋಗಗಳು ನಾಶವಾಗಿ ಶರೀರಕ್ಕೆ ... ರಕ್ತ ಮತ್ತು ತೇಜ ಹೆಚ್ಚುತ್ತವೆ ೨೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತು ರೂ ... ರೂ ೧ ... ರೋಗದ ಸಲುವಾಗಿ ೬ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೪ ಮಾತ್ರ ಪಥ್ಯವಿಲ್ಲ ಅನುಭವವು ತಪ್ಪಿಯೊಡನೆ ... ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ ಖಿಟೂಜ ಎಲ್ ಎಮ್ ಎಂಡ್ ಎಸ್, ಜೆ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ... ಪರಮ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು	ಡಾಕ್ಟರ ... ಎಸ್ ದತ್ತ ಎಮ್ ಬಿ ಪ್ರಿನ್ಸಿಪಾಲ ... ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು.

ಪತ್ತೆ.—ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತರನಂತರ ಏನುಮಾಡಿದರೂ ಸುರುವಾಗುವುದಿಲ್ಲ ಮೊದಲ ಪೂರ್ಣ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ವಿ ಎ ವೈದ್ಯ, ಎಲ್ ಸಿ ಪಿ ಎಸ್ ಕೊಳವಾಮಾಹಿಮ, ರಾಜೇ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ ಪಿ. ಖರ್ಚು ॥೦

ವಿಳಾಸ— ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ALLIANZ Und STUTTGARTER
Life Insurance Bank Ltd

ಅಲಿಆನ್ಸ ಉಂಡ ಸ್ಟುಟಗಾರ್ಟರ

ಲೈಫ್ ಇನ್ಶೂರೆನ್ಸ ಬ್ಯಾಂಕ ಲಿಮಿಟೆಡ್

(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟಿದು)

ಒಟ್ಟು ವಿಮಾ ಹಣವು ೩೫೦ ಕೋಟಿ ರೂ ಗಳಿಗಿಂತ ಹೆಚ್ಚಾಗಿರುವದು ವಾರ್ಷಿಕ ವಿಮಾ ಪತ್ರಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಾಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿರುವುದು

ವಿಮಾಪತ್ರಗಳ ಮೇಲಿನ ಕಾಯ್ದಿಟ್ಟ ಠೇವುಗಳು ಹಿಂದೀ ತಾರಣಗಳಲ್ಲಿಯೇ ತೊಡಗಿಸಲ್ಪಡುವುವು.

ಬೇಕಾಗಿದೆ

ಧಾರವಾಡ, ವಿಜಾಪುರ ಬೆಳಗಾಂವ, ಕಾರವಾರ, ಕೊಲ್ಹಾಪುರ ... ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ... ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ... ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೆ. ರಮಾನಜಿ ಆ್ಯಂಡ ಸನ್ಸ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲೈಫ್ ಇನ್ಶೂರೆನ್ಸ ಬ್ಯಾಂಕಿನ ... ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸ್ಕರ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು.

ದಕ್ಷಿಣ ಕನ್ನಡದ ಮಹಾಜನರಲ್ಲಿ ಭಿನ್ನಹ

ರಾಷ್ಟ್ರೋದ್ಧಾರವಾಗಬೇಕೆ? ರಾಷ್ಟ್ರದ ಜನರೂ ಒಗ್ಗಟ್ಟಾಗಬೇಕು ರಾಷ್ಟ್ರದ ಜನರು ಒಗ್ಗಟ್ಟಾಗಬೇಕೆ? ಅವರಿಗೊಂದು ಏಕ ಭಾಷೆಯು ಬೇಕು ! ಈ ಕಾಲದಲ್ಲಿ ಹಿಂದೀಯರು ಕಲಿಯಬೇಕಾದುದು ಭಾರತದ ಅಧಿಗಲ್ಲಿನಂತಿರುವ ಹಿಂದೀ ಭಾಷೆಯನ್ನು ಮಹಾತ್ಮಾಜಿಯವರೂ ಕೂಡಾ ಇದನ್ನೇ ಹೇಳುತ್ತಿರುವರು ಹಿಂದೀಯ ದೇಶವು ಹಿಂದೀಮಯವಾಗಬೇಕು ಅದಕ್ಕಾಗಿ "ಹಿಂದೀ ಕನ್ನಡ ಸ್ವಾಯಂಬೋಧಿನೀ" ಎಂಬ ಅತ್ಯುತ್ತಮ ಪುಸ್ತಕವು ಪ್ರಕಟಿಸಲ್ಪಟ್ಟಿದೆ. ಹಿಂದೀಯನ್ನು ಕಲಿಯುವವರಿಂದ ಎಲ್ಲರಿಗೂ ಅನುಕೂಲವಿದೆ ಇದರ ಬೆಲೆ ೧ ರೂಪಾಯಿ ಮಾತ್ರ ಕೂಡಲೇ ಈ ವಿಳಾಸಕ್ಕೆ ಬರೆಯಿರಿ ವಿ ಎಸ್ ಶಿಬರೂರ್ಕಾರ್, ನೇಶನಲ್ ನ್ಯೂಸ್ ಏಜನ್ಸಿ, ಸರ್ ಫಿರೋಜ ಮೆಹತಾ ರೋಡ್, ಮುಂಬಾಯಿ ।

ಅನುಕ್ರಮಣಿಕೆ.

ಅಗ್ರಲೇಖ.

- ಮುಂದೇನು? . . . ೮
- ಟಿಪ್ಪಣಿಗಳು . . . ೬
- ಕೋಟೆಗಳು . . . .

ವರ್ತಮಾನ ಸಂಗ್ರಹಗಳು

- ವಿದೇಶ ವರ್ತಮಾನ . . ೮
- ಒಳದೇಶ ವರ್ತಮಾನ . . . ೮
- ದಕ್ಷಿಣ ಕನ್ನಡ— ಮಂಗಳೂರು, ಮುಲ್ಕಿ, ಪುತ್ತೂರು, ಕಾಸರಗೋಡು, ಕೆರೊಡಾಡಿ, ಹೊಸಂಗಡಿ ೯
- ವಿವಿಧ ಸಮಾಚಾರಗಳು . . . ೧೧
- ನಮ್ಮ ಶಾಲೆಗಳು ೧೪
- ದ್ವೇಷದಿಂದ ಜಗಳವಾಗುತ್ತದೆ ೧೧
- ಪತ್ರವ್ಯವಹಾರ ೧ ೨
- ಸ್ವದೇಶಿ . ೧೬
- ಕೊಂಗ್ರೆಸ್ಸಿನ ಅಧ್ಯಕ್ಷರ್ಣ್ಯಾಲು ನಾನು ಬಂದಿರುತ್ತೇನೆ ೪

ಸ್ವದೇಶಾಭಿಮಾನಿ.

ತಾ. ೧೮ನೇ ಶುಕ್ರವಾರ ಮಾರ್ಚಿ ೧೯೩೨

ಮುಂದೇನು?

ರೌಂಡ್‌ಟೇಬಲ್ ಪರಿಷತ್ತಿನ ಮುಕ್ತಾಯವಾದ ನಂತರ, ಸತ್ಯಾಗ್ರಹ ಚಳವಳವು ಪುನಃ ಪ್ರಾರಂಭವಾಯಿತು, ಬದಲಿಗೆ ಸರಕಾರದ ಪ್ರಬಲವಾದ ಪ್ರತೀಕಾರ ಪರವಾದ ದಬ್ಬಾಳಿಕೆಯೂ ಪ್ರಾರಂಭವಾಯಿತು. ಸಾವಿರಗಟ್ಟಲೆಯಲ್ಲಿ ದೇಶದ ಬಾಲ ವೃದ್ಧ ವನಿತೆಯರು ಜೈಲನ್ನು ಸೇರಿದರು. ಸರಕಾರದ ಮಟ್ಟಿಗೆ ಕಾಂಗ್ರೆಸ್ ಪಕ್ಷವು ಇಲ್ಲವೇ ಇಲ್ಲ. ಅದು ಕಾನೂನಿಗೆ ವಿರೋಧವೆಂದು ಮಾಡಿ, ಅದನ್ನು ಅವರು ನಿರ್ನಾಮ ಪಡಿಸಲು ಯತ್ನಿಸಿದ್ದಾರೆ. ಹೀಗೆ ದಬ್ಬಾಳಿಕೆಯು ಆರಂಭವಾಗಿ ಮೂರು ತಿಂಗಳು ಸಮೀಪಿಸುತ್ತಾ ಬಂತು. ಇಷ್ಟರವರೆಗೂ ಹಿಂದಿನ ಘಟನೆಗಳನ್ನು ನೋಡಿ ಮುಂದಿನ ಪರಿಸ್ಥಿತಿಯೇನು? ಎಂದು ಪ್ರಶ್ನಿಸುವ ಕಾಲವು ಈಗ ಒದಗಿದೆಂದು ಹೇಳಬಹುದು.

ಇರ್ವಿನರು ವೈಸರಾಯರಾಗಿದ್ದಾಗ ದಬ್ಬಾಳಿಕೆಯನ್ನು ಕಡಿಮೆ ತೋರಿಸಿದರೆಂದು ಹೇಳಬರುವಂತಿಲ್ಲ, ಆದರೆ ಆಗ 'ಇರ್ವಿನ್ ಮಾನಸಿಕತೆ' ಯೊಂದು ಇದ್ದಿತು. ಈಗ ಸರಕಾರದಲ್ಲಿ ಆ ಮಾನಸಿಕತೆಯು ತೋರುವುದಿಲ್ಲ. ಬದಲಿಗೆ ಸರ್ ಸಾಮುವೇಲ್ ಹೋರರಿಂದ ಪ್ರೋತ್ಸಾಹಿಸಲ್ಪಡುತ್ತಿರುವ 'ವಿಲ್ಲಿಂಗ್ಡನ್ ಮಾನಸಿಕತೆ'ಯು ಕಂಡು ಬರುವುದು. Strong Government ಬಲಿಷ್ಠವಾದ ಆಡಳಿತದ ರುಚಿಯು ಇಂದಿಗೆ ಹಿಂದೂಸ್ಥಾನಕ್ಕೆ ಸರಿಯಾಗಿ ಸಿಕ್ಕಿತು, ಆ ರುಚಿಯನ್ನುಂಟು ಮಾಡುವುದೇ ಇಂಗ್ಲೆಂಡಿನ ಉದ್ದೇಶವಾಗಿದ್ದಿತ್ತು.

ಈ ಬಾರಿ ಸರಕಾರವು ಬಲಸ್ಯವನ್ನು ತೋರಿಸಿತು, ದುರ್ಬಲತೆಯನ್ನು ತೋರಿತು. ನಿಂಕರೆಯ ಮಾನಸಿಕತೆಯನ್ನು ತೋರಿತು, ಎಂಬ ಅಪವಾದವನ್ನು ಇಂಗ್ಲೆಂಡಿನ Die Hards ಅಂದರೆ ಕಡು ನಿಷ್ಠುರಿಗಳು ಹೇಳಬರುವಂತಿಲ್ಲ. ಬದಲಿಗೆ ಸರಕಾರದ ಬೆನ್ನು ತಟ್ಟುವಷ್ಟು ಯೋಗ್ಯತೆಯನ್ನು ಸರ್ ಹೋರರೂ ಹಿಂದೀ ಸರಕಾರದ ಪ್ರಮುಖರೂ ತೋರಿಸಿರುವರು. ಆ ಮಟ್ಟಿಗೆ ಇಂಗ್ಲೆಂಡಿನ ಜನತೆಯು ತೃಪ್ತಿಯನ್ನು ಹೊಂದಿರುತ್ತದೆಂದು ಧಾರಾಳವಾಗಿ ಹೇಳಬಹುದು. ಇಂಗ್ಲೆಂಡಿನ ಜನತೆಯು ಸ್ವಾತಂತ್ರ್ಯ ಪ್ರಿಯವಾದುದು, ಇತರರು ಸ್ವಾತಂತ್ರ್ಯ ಪ್ರಿಯರಾದರೆ ಅವರನ್ನೂ ಗೌರವಿಸುವಂತಹುದು ಎಂಬ ಗುಣ ಕಥನವು ಕೆಲವರು ಆಶಾವಾದಿಗಳಲ್ಲಿ ಇನ್ನೂ ಇದೆ. ಆದರೆ ಕಳೆದ ಬಾರಿ ಇಂಗ್ಲೆಂಡಿನಲ್ಲಿ ನ್ಯಾಶನಲ್ ಗವರ್ನಮೆಂಟ್ ಎಂಬ ಹೆಸರಿನಲ್ಲಿ ನಡೆದ ಚುನಾವಣೆಗಳ ಒಳಗುಟ್ಟನ್ನು ನೋಡಿದರೆ, ಕೂಲಿಯವನಾಗಲಿ, ಧನಿಕನಾಗಲಿ, ಹೆಂಗಸರಾಗಲಿ, ಗಂಡಸರಾಗಲಿ, ಎಲ್ಲರ ಮಾನಸಿಕತೆಯೂ ಒಂದೇ—ಅಂದರೆ ಸಾಮ್ರಾಜ್ಯವಾದ—ಇಂದಿಗೆ ಬ್ರಿಟಿಷನು ಆ ದರ್ಪವೊಂದನ್ನು ಬಿಟ್ಟರೆ ಬೇರೆ ಅವನಿಗೆ ಅಸ್ತಿತ್ವವೇ ಇಲ್ಲ.

ಆದುದರಿಂದ ಹಿಂದೀ ಸರಕಾರಕ್ಕೆ ಈಗ ಇರುವಷ್ಟು ಬ್ರಿಟಿಷ ಪ್ರೋತ್ಸಾಹವು ಇರ್ವಿನ್ ಸರಕಾರಕ್ಕೂ ಇರಲಿಲ್ಲ. ಆದರೆ ಹಿಂದೂಸ್ಥಾನದಲ್ಲಿ ಬರೇ ಬ್ರಿಟಿಷ್ ಪ್ರೋತ್ಸಾಹದಿಂದಲೇ ಸರಕಾರವು ಎಷ್ಟರ ವರೆಗೆ ನಡೆಯಬಲ್ಲುದು ಎಂದು ಈಗಲಾದರೂ ಆಲೋಚಿಸ ಬೇಡವೇ? ಸರಕಾರವು ಕೆಲಮಟ್ಟಿಗೆ ಹಿಂದೂ-ಮುಸಲ್ಮಾನರೊಳಗಿನ ಭಿನ್ನತೆಯ ಪ್ರಯೋಜನವನ್ನು ಹೊಂದಿದೆ ನಿಜ, ಹಾಗೆಯೇ ಕೆಲವು ಹಿಂದೂಗಳ ಸಹಾಯವನ್ನಾದರೂ ಅದು ಪಡಕೊಳ್ಳದೆ ಇಲ್ಲ. ಆದರೆ ಈ ಕೆಲ, ಬರೇ ಸ್ವಾರ್ಥ ಸಾಧಕರ ಸಹಾಯವು ಇಡೀ ದೇಶದೊಳಗೆ ವ್ಯಾಪ್ತವಾದ ಚಳವಳವನ್ನು ನಿರ್ನಾಮ ಪಡಿಸಲು ಸಾಧ್ಯವಾದೀತೇ?

ಸತ್ಯಾಗ್ರಹ ಮುಖಂಡರೆಲ್ಲರೂ ಜೈಲನ್ನು ಸೇರಿದರು ಹಿಂದಿನ ಹಾಗೆ ಕೆಲತಿಂಗಳಿಗಾಗಿಯಲ್ಲ, ನೋಡಸಿಕ್ಕ ಸಿಕ್ಕುವ ತಪ್ಪಿಗಾಗಿಯೂ ಅಲ್ಲ. ಬರೇ Parole ಎಂದರೆ ಪ್ರತಿ ದಿನ ಪೋಲೀಸ ದರ್ಶನ ಮಾಡದಿದ್ದುದಕ್ಕೆ ವರ್ಷಗಟ್ಟಲೆ ಜೈಲು. ಆದರೂ ಚಳವಳವು ನಿಂತು ಹೋಗಿಲ್ಲ. Ordinance ಆರ್ಡಿನೆನ್ಸುಗಳ ಅವಧಿ ಇನ್ನು ಮೂರುವರೆ ತಿಂಗಳಲ್ಲಿ ಮುಗಿಯುವುದು. ಅಷ್ಟರೊಳಗೆ ಚಳವಳದ ಮುಕ್ತಾಯವಾದೀತೇ? ಅದೂ ಆರ್ಡಿನೆನ್ಸು ತೆಗೆಯಲ್ಪಟ್ಟ ಕೂಡಲೇ ಪುನಃ ಪ್ರಾರಂಭಿಸಕೂಡದೇ? ಹಾಗೆ ಪ್ರಾರಂಭವಾದೀತೆಂದು ಆರ್ಡಿನೆನ್ಸುಗಳನ್ನು ಪುನರುಜ್ಜೀವಿಸಲ್ಪಡಬೇಕಾದೀತೇ? ಹಾಗೆ ಆರ್ಡಿನೆನ್ಸುಗಳನ್ನು ಪುನರುಜ್ಜೀವಿಸಿದ ಬಳಿಕ ಅದು ಅಂತ್ಯಹೊಂದುವಾಗ ಜೈಲಿನೊಳಗಿನ ಮುಖಂಡರು ಕೆಲವರಾದರೂ ಹೊರಗೆ ಬಂದು ಪುನಃ ಗದ್ದಲವೇಳದೇ? ಈ ರೀತಿಯಾಗದಂತೆ ಆರ್ಡಿನೆನ್ಸುಗಳೇ ಖಾಯಂಮಾಡಲ್ಪಡುವುವೇ?

ಲೋತಿಯನ್ ಕಮಿಟಿ, ಕನ್ಸಲ್ಟೇಟಿವ್ ಕಮಿಟಿ ಮೊದಲಾದ ಹಲಕೆಲವು ರೌಂಡ್ ಟೇಬಲ್ ಕಮಿಟಿಯು ದೇಶದ ದುಡ್ಡನ್ನು ವ್ಯಯಿಸುತ್ತಾ ದೇಶಾಟನ ಮಾಡುತ್ತಿವೆ. ಈ ಪರ್ವತ ಪ್ರಸವದಿಂದ ಬರಲಿರುವ ಇಲಿಯೇ ದೇಶದಲ್ಲಿ ಇನ್ನೊಂದು ತರದ ಕೋಲಾಹಲವನ್ನುಂಟು ಮಾಡಲೂ ಬಹುದು. ಅಂತೂ ಬ್ರಿಟಿಷ ರಾಜ ತಂತ್ರಜ್ಞರು ಒಂದಿಷ್ಟು ತಡಮಾಡಿ ಆಲೋಚಿಸುವುದು ಅಗತ್ಯವಾಗಿದೆ. ಏಕೆಂದರೆ ಸತ್ಯಾಗ್ರಹವು ಮುರಿಯಲ್ಪಡಬಹುದು, ಕೊಂಗ್ರೆಸ್ಸು ನಾಮಾವಶೇಷವಾಗಬಹುದು. ಆದರೆ ಎಚ್ಚತ್ತ ಜನಾಂಗವು ಪುನಃ ನಿಶ್ಚೇತನವಾದಂತಹ ನಿದರ್ಶನಗಳು ಇತಿಹಾಸದಲ್ಲಿ ಕಂಡುಬರುವುದಿಲ್ಲ.

ವಿದೇಶ ವರ್ತಮಾನ.

— ಲಂಡನಿನಲ್ಲಿ ರೆವೆರೆಂಡ್ ವಿಲ್ಲಿಯಮ್ ಪೇಟನ್ ಎಂಬವರು ಭಾಷಣ ಮಾಡುತ್ತಾ ಸರಕಾರವು ಪ್ರಜಾಪ್ರಭುತ್ವದ ಹವಣಿಕೆಯನ್ನು ಬಗ್ಗುಬಡೆಯಲೇ ಬೇಕು. ಆದರೆ ರಾಜದ್ರೋಹದ ಇರಬೇಕೆಂದರು.

— ಸ್ವೀಡನಿನ ಬೆಂಕಿಪೆಟ್ಟಿಗೆ ತಯಾರಿಯಲ್ಲಿ ಅಧಿಕ ಸಂಬಳ ಪಡೆದಿದ್ದ ಕ್ರೆವುಗೇರ್ ಎಂಬವರು ತಳಮಳಗೊಂಡ ಮನಸ್ಸಿನಿಂದ ಆಕಸ್ಮಾತ್ತಾಗಿ ಆತ್ಮಹತ್ಯ ಮಾಡಿಕೊಂಡರು. ಇವರ ಆಸ್ತಿಪಾಸ್ತಿಗಳು ಇಡೀ ದೇಶಕ್ಕೆ ಆಧಾರವಾಗಿದ್ದು ಇವರು ಮರಣಪಟ್ಟೊಡನೆ ಯೂರೋಪು ಖಂಡದ ವ್ಯಾಪಾರದಲ್ಲೆಲ್ಲ ಹಾಹಾಕಾರವೆದ್ದಿತು. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಹರಡಿಕೊಂಡಿರುವ ಇವರ ಕಂಪೆನಿಗಳಲ್ಲಿ ಶೇರ್ ತೆಗೆದುಕೊಂಡಿದ್ದ ಸಾವಿರಾರು ಮಂದಿಗಳು ತಲ್ಲಣಗೊಂಡಿದ್ದಾರೆ.

— ನ್ಯೂಯೋರ್ಕಿನಲ್ಲಿ ಪುಂಡರು ಕದ್ದೊಯ್ದ ಲಿಂಡ್‌ಬರ್ಗ್ ದೊರೆಗಳ ಮಗುವು ಇನ್ನೂ ಸಿಕ್ಕಿರುವುದಿಲ್ಲ. ಅದು ವಧಿಸಲ್ಪಟ್ಟಿರಬಹುದೆಂದು ಊಹೆ.

— ಮುಂಬಾಯಿಯ ಮಿಸ್ ಮೇರಿ ಸೆಲ್ವಂ ಜ್ಞಾನಮುತ್ತು ಎಂಬ ೩೬ ವರ್ಷ ಪ್ರಾಯದ ಸ್ತ್ರೀಯೊಬ್ಬಳು ಲಂಡನಿನಲ್ಲಿ ವೈದ್ಯವನ್ನು ಕಲಿಯುತ್ತಿದ್ದಳು. ತಾ. ೧೧ರಲ್ಲಿ ಅವಳು ಬೆಂಕಿಯ ಬಳಿ ಕೂತಿದ್ದಾಗ ಅವಳ ತೆಳುವಾದ ಸಾಂಗೆ ಬೆಂಕಿ ತಗಲಿ ಅದು ಸುಟ್ಟು ಅವಳು ಸೀಯ ತಾಪದಿಂದಾಗಿ ಮಡಿದಳು.

— ಚೀನಾ ಜಪಾನರ ಯುದ್ಧವು ಪ್ರಕೃತಕ್ಕೆ ಸ್ವಲ್ಪ ಶಮನವಾಗಿದ್ದು ರಾಜಿಪಂಚಾಯಿತಿಯು ನಡೆಯುತ್ತಿದೆ.

ಒಳದೇಶ ವರ್ತಮಾನ

ಪತ್ರಿಕವರ್ಗದವರಿಗೆ ಜಾತಿ ಪ್ರಾತಿನಿಧ್ಯವು ಬೇಕೆಂದು ಹಟಹಿಡಿದ ಶ್ರೀ ಬಿ. ಜೆ. ದೆರೂರ್‌ಕಾರ್ ಎಂಬವರನ್ನು ಮಧ್ಯರಾತ್ರಿಯಲ್ಲಿ ಕೆಲವು ತರುಣರು ಬಂದು ಅತ್ಯಗತ್ಯ ಪರಿಷತ್ತಿಗೆಂದು ಒಂದು ಮೋಟಾರಿನಲ್ಲಿ ಕುಳ್ಳಿರಿಸಿ, ಒಂದು ನಿರ್ಜನ ಪ್ರದೇಶಕ್ಕೆ ಕೊಂಡುಹೋಗಿ ಅವರು ಪ್ರತ್ಯೇಕ ಪ್ರಾತಿನಿಧ್ಯಕ್ಕೊಪ್ಪುವಂತೆ ಬೆದರಿಸಿ ಒಂದು ಪತ್ರಕ್ಕೆ ಸಹಿಹಾಕಿಸಲು ಹವಣಿಸಿದರು. ಆದರೆ ಶ್ರೀಯುತರು ಒಪ್ಪದಿರಲು ಅವರನ್ನು ಥಂಗಿಸಿದರು. ಈ ವಿಷಯ ಶ್ರೀಯುತ ದೆರೂರ್‌ಕಾರರು ಪೋಲೀಸರಿಗೆ ತಿಳುಹಿಸಿರುತ್ತಾರೆ.

ಲಾಹೋರಿನಲ್ಲಿ ಕಳ್ಳಾಟಿಕೆಯ ರೂಪಾಯಿಯನ್ನು ಮಾಡಲು ಯತ್ನಿಸಿದ ಒಬ್ಬ ಮುಸಲ್ಮಾನ್ ಸ್ತ್ರೀಯನ್ನೂ ಮೂವರು ಪುರುಷರನ್ನೂ ಕೈದುಮಾಡಿರುತ್ತಾರೆ.

— ಕಲ್ಕತ್ತದ ಬಂಕುರದಲ್ಲಿ ಗೋವಿಂದ ದಳಪತಿ ಎಂಬವನು ತನ್ನ ವೈರಿಯಾದ ಜಮೀನ್‌ದಾರ್ ಮಾಧವ ಬೆಟರ್ಜಿ ಎಂಬವನನ್ನೂ ಒಬ್ಬ ವಿಧವೆಯನ್ನೂ ಕೊಂದು, ಸ್ಟೇಶನಿಗೆ ಸ್ವತಃ ಹೋಗಿ, ವಧಿಸಲ್ಪಟ್ಟವರು ವ್ಯಭಿಚಾರಿಯಲ್ಲಿದ್ದುದರಿಂದ ತಾನು ಹಾಗೆ ಮಾಡಿದೆನೆಂದನು. ಪೂರ್ವದ್ವೇಷವೊಂದು ಇದಕ್ಕೆ ಕಾರಣ.

— ಉದಯಪುರದ ಮಹಾರಾಜರ ಮುಂಬಾಯಿಯ ಮಲಬಾರ್ ಹಿಲ್ಲಿನಲ್ಲಿರುವ ಅರಮನೆಯಲ್ಲಿ ತಾ. ೧೦ನೇ ದಿನ ರಾತ್ರಿ ಯಾರೋ ಕಳ್ಳರು ಒಳನುಗ್ಗಿ ಸುಮಾರು ೧೬೦೦ ರೂಪಾಯಿಗಳನ್ನೂ, ೫೦,೦೦೦ ರೂಪಾಯಿ ಬೆಲೆಬಾಳುವ ವಜ್ರದ ಮಾಲೆ ಆಭರಣಗಳನ್ನೂ ಕೊಂಡೊಯ್ದರು. ಇಷ್ಟರ ತನಕ ಕಳ್ಳರು ಸಿಕ್ಕಿಬಿದ್ದಿರುವುದಿಲ್ಲ.

ಸೇಠ್ ಜಮ್ನಾಲಾಲ್ ಬಜಾಜರನ್ನು ಬೈಕುಲ್ಲಾ ಸೆರೆಮನೆಯಲ್ಲಿ ಕಾಣಬೇಕೆಂದು ಹೋದ ಅವರ ಸೆಕ್ರೆಟರಿಗಳವರಿಗೆ ಪ್ರವೇಶವು ದೊರೆಯಲಿಲ್ಲವೆಂದು ತಿಳಿದುಬರುತ್ತದೆ.

— ಸಾಟ್ನಾದ ಸಿಪಾಯಿ ಎಂಬಲ್ಲಿ ಕ್ಷೌರಿಕ ಜಾತಿಯ ಒಬ್ಬ ಸ್ತ್ರೀಯು ತಾ. ೧೧ನೇ ಒಂದು ಹೆಣ್ಣು ಮಗುವನ್ನು ಹೆತ್ತಳು. ಅದಕ್ಕೆ ಎರಡು ಪ್ರತ್ಯಪ್ರತ್ಯೇಕ ತಲೆಗಳಿದ್ದವು. ಮುಖಗಳೆರಡು ಗೂಬೆಯ ಮುಖದಂತೆಯೇ ಇದ್ದುವು. ಅಲ್ಲದೆ ಅದರ ಮೂಗು ಕೂಡಾ ಗೂಬೆ ಮೂಗಿನಂತೆಯೇ ಇತ್ತು. ಹುಟ್ಟಿನಿಂದ ಆಶ್ಚರ್ಯಕಾರಕವಾಗಿ ತಂಡ ತಂಡವಾಗಿ ಹೋಗಿ ನೋಡಿದರು. ಮಗುವಿನ ಕುತ್ತಿಗೆಯ ಎಲುಬೂ ಮೆದುಳೂ ಕೆಲವು ಅಂಗಗಳೂ ಸರಿಯಾಗಿ ಬೆಳೆಯದಿದ್ದುದರಿಂದ ಅದರ ಮುಖಗಳು ಆ ಆಕಾರದಲ್ಲಿ ಬಂತೆಂದೂ ಅದುದರಿಂದಲೇ ಅದು ಗೂಬೆಯಂತೆ ಕಾಣುತ್ತದೆಂದೂ ವೈದ್ಯರ ಅಭಿಪ್ರಾಯ. ಸೌಂಡ್‌ಬೋರ್ಡಿನಲ್ಲಿ ಏನೋ ತೊಂದರೆಯಾಗಿದೆಯೆಂದು ಅವರ ಹೇಳಿಕೆ.

ಕಾನ್‌ಪುರದಲ್ಲಿ ಮೈತುಂಬಾ ಭಂಗಾರವನ್ನು ಧರಿಸಿ ಅಂಗಳದಲ್ಲಿ ಆಡುತ್ತಿದ್ದ ನಾಲ್ಕು ವರ್ಷ ಪ್ರಾಯದ ಒಂದು ಮಗುವು ತಾ. ೮ನೇ ದಿನ ಕಾಣೆಯಾಯಿತು. ಎಲ್ಲೆಲ್ಲೂ ಹುಡುಕಲಾಯಿತು. ಕೊನೆಗೆ ಐಬ್ಬಾರ್ ಎಂಬವನೊಬ್ಬನ ಮನೆಯಲ್ಲಿ ಒಂದು ಮೂಲೆಯಲ್ಲಿ ಮಗುವಿನ ಅಂಗಿಯೂ ಆಭರಣಗಳೂ ಪೋಲೀಸರ ಪತ್ತೆಗೆ ಸಿಕ್ಕಿದುವು. ಕೆಲವು ಮಂದಿಗಳನ್ನು ಸೆರೆಹಿಡಿದಿರುತ್ತಾರೆ. ಮಗುವಿನ ಕುತ್ತಿಗೆ ಹಿಸುಕಿ ಅದರ ಶವವನ್ನು ಅದೇ ಮನೆಯೊಳಗೆ ಭಯಂಕರ ರೀತಿಯಿಂದ ಹೂಳಲ್ಪಟ್ಟಿರುತ್ತದಾಗಿ ತಿಳಿದುಬಂದಿದೆ.

— ಗಾಂಧೀಜಿಯವರ ದಂಡಿಯಾತ್ರಾ ದಿನದ ಸಂಬಂಧವಾಗಿ ಅಹ್ಮದಾಬಾದಿನಲ್ಲಿಯ ಇಂಪೀರಿಯಲ್ ಬ್ಯಾಂಕನ್ನು ಪಿಕೆಟ್ ಮಾಡಿದ ಶ್ರೀ ಕಾಂತಿ ಗಾಂಧಿಯವರನ್ನು ದಸ್ತಗಿರಿಮಾಡಿದರು.

ಒಕ್ಕೋಟಿನ ಹರದೋಯಿ ಜಿಲ್ಲೆಯಲ್ಲಿ ಅಬ್ದುಲ್ ಹಲೀಮ್ ಖಾನ್ ಎಂಬವರೊಬ್ಬರು ಯಾವುದೋ ಕೆಲವು ಸಂಬಂಧದಿಂದಾಗಿ ಇವರು ಅಲ್ಲಿಯ ಪ್ರಸಿದ್ಧ ನಾನಾಪರಾ ಎಂಬ ಆಸ್ತಿಯ ಹಕ್ಕುದಾರರಾಗುತ್ತಾರಂತೆ. ಮತ್ತು ಅದಕ್ಕೆ ಸಂಬಂಧ ಪಟ್ಟ ರಾಜಾ ಎಂಬ ಉಪನಾಮಕ್ಕೂ ಇವರು ಅರ್ಹರಾಗುತ್ತಾರಂತೆ. ಆ ಆಸ್ತಿಯ ಪ್ರಕೃತದ ಯಜಮಾನರಾದ ರಾಜಾ ಸಾದತ್ ಅಲಿಯವರ ಮೇಲೆ ದಾವೆ ಹೂಡಿದರು. ಅದು ತೆಗೆದು ಹಾಕಲ್ಪಟ್ಟಿತು. ಇವರು ಲಂಡನಿನ ಪ್ರಿವಿ ಕೌನ್ಸಿಲಿಗೆ ಬರೆದುಕೊಂಡರು ಅವರೂ ಕೂಡಾ ಇವರಿಗೆ ರಾಜಾ ಪದವಿಯನ್ನು ಕೊಡದೆ ಅಪೀಲನ್ನು ನೂಕಿಬಿಟ್ಟರು.

ನರ್ಸಾಪುರದಲ್ಲಿ ಜೈ ಇಂಡಿಯನ್ ಲೀಗಿನವರು ಮೆರವಣಿಗೆ ಮಾಡುತ್ತಿರುವಾಗ ಪೋಲೀಸ್ ಫೌಜು ಹೋಗಿ ಅವರ ಮೇಲೆ ಬಿದ್ದು ಹೊಡೆದು ಪ್ರಹಾರಮಾಡಿತು. ಮೂರು ದಿನಗಳಲ್ಲಿ ಮಾಡಿದ ಮೂರು ಜೈ ಇಂಡಿಯನ್ ಮೆರವಣಿಗೆಗೂ ಲಾಠಿ ಪೂಜೆಯಾಗಿದೆ. ಈ ಕುರಿತು ಲೀಗಿನ ಮುಂದಾಳುಗಳು ದವರೆಲ್ಲ ಇಂಗ್ಲಾಂಡಿಗೂ ಇಂಡಿಯಾ ಸರಕಾರದಧಿಪತಿಗಳಿಗೂ ಬರೆದುಕೊಂಡಿದ್ದಾರೆ. ಇದು ರಾಜಕೀಯ ವಿಚಾರಕ್ಕೆ ಸಂಬಂಧಪಟ್ಟ ಸಂಸ್ಥೆಯಲ್ಲವಾದರೂ ಇದಕ್ಕೆ ಅಲ್ಲಿಯ ಅಧಿಕಾರಿಗಳು ಹೇಗೆ ದೌಷ್ಟ್ಯವನ್ನು ತೋರಿಸಿದರೋ ತಿಳಿಯದೆಂದು ಎಲ್ಲಾ ಪತ್ರಿಕೆಗಳೂ ಹೇಳುತ್ತಿವೆ.

ದಿ ಸೌತ್ ಕೆನರಾ ಸ್ಪೋರ್ಟಿಂಗ್ ಎಸೋಸಿಯೇಶನ್ ಮುಂಬೈ ಈ ಸಂಸ್ಥೆಯ ಕಡೆಯ (ಫೈನಲ್) ಫುಟ್ ಬೋಲ್ ಕಪ್ ಪಂದ್ಯಾಟವು ತಾ. ೩–೩–೩೨ನೇ ಆದಿತ್ಯವಾರ ಕ್ರಾಸ್‌ಮೈದಾನಿನಲ್ಲಿ ವಿದ್ಯಾದಾಯಿನೀ ಸ್ಪೋರ್ಟ್ಸ್ ಕ್ಲಬ್ಬು ಮತ್ತು ಕೆನರಾ ಬ್ರದರ್ಸ್ ಯೂನಿಯನ್ ಪಂಗಡದವರಿಂದ ಆಡಲ್ಪಟ್ಟು ಆಟದ ಅಂತ್ಯದಲ್ಲಿ ಕೆನರಾ ಬ್ರದರ್ಸಿನವರು ಒಂದು ಗೋಲಿಗೆ ಗೆದ್ದಿರುತ್ತಾರೆ. ಗೆದ್ದ ಪಂಗಡದವರಿಗೆ ಒಂದು ಬೆಳ್ಳಿಯ ಕಪ್ಪನ್ನೂ, ಮತ್ತು ಆಟದಲ್ಲಿ ೨ನೇಯದಾಗಿ ಬಂದ ವಿದ್ಯಾದಾಯಿನೀಯವರಿಗೆ ಒಂದು ಬೆಳ್ಳಿಯ ಪದಕವನ್ನೂ ಸಧ್ಯದಲ್ಲಿ ಜರಗಲಿರುವ ಎಸೋಸಿಯೇಶನಿನ ವರ್ಷಾವಧಿ ಮಹಾಸಭೆಯಲ್ಲಿ ಕೊಡೋಣಾಗುವುದು.

ದಕ್ಷಿಣ ಕನ್ನಡ.

ಮಂಗಳೂರು:— ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಆಫೀಸರ್ (೬ನೇ ಸರ್ಕಲ್) ರಾಗಿರುವ ಶ್ರೀ ಎಂ ಮಂಗೇಶರಾವ್ ಇವರು ೩ ತಿಂಗಳ ರಜೆಯ ನಿಮಿತ್ತ ಕೆಲಸದಿಂದ ನಿವೃತ್ತಿಯಾಗಲಿರುವರು

ಶ್ರೀಯುತ ಬ್ರಹ್ಮಶ್ರೀ ಶುಕ್ಲ ಸುಬ್ರಹ್ಮಣ್ಯ ಶಾಸ್ತ್ರಿ ಶೃಂಗೇರಿ, ಇವರು ಕೆನರಾ ಹೈಸ್ಕೂಲಿನ ಭುವನೇಂದ್ರ ಹೋಲಿನಲ್ಲಿ ಇದೇ ತಾ ೨೦ನೇ ಆದಿತ್ಯವಾರ ಘಂಟೆ ೫ ೩೦ಕ್ಕೆ 'ಭಕ್ತಿ ಮಾರ್ಗ' ವಿಷಯವಾಗಿ ಶ್ರೀ ಅನ್ನೆಂಬಳ ಶ್ರೀನಿವಾಸ ಪೈ ವಕೀಲ್ ಇವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಲಿರುವರು ಸರ್ವರಿಗೂ ಸುಸ್ವಾಗತವಿದೆ

ತಾ. ೧೩-೩ ೩೨ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರ ಮುನಿಸಿಪಾಲಿಟಿಯೊಳಗೆ ಒಟ್ಟು ೨೩ ಮರಣಗಳೂ ೩೯ ಜನನಗಳೂ ಆಗಿವೆ

ತಾ ೨೬ನೇ ದಿನ ೨ ೩೦ಕ್ಕೆ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲಿ ಒಂದು ಸಭೆಯು ಸೇರುವುದು ಲೋಕಲ್ ಬೋರ್ಡುಗಳ ೧೯೩೧—೧೯೩೨—೧೯೩೩ರ ಬಜೆಟ್ ಅಂದಾಜು ಪಟ್ಟಿಯನ್ನು ಡಿಸ್ಟ್ರಿಕ್ಟ್ ಎಂಜಿನೀಯರ್ ಎಡ್ಯುಕೇಶನಲ್ ಬೋರ್ಡಿಗೆ ಒಬ್ಬ ಮೆಂಬರನ ಚುನಾವಣೆಯನ್ನೂ ಆ ದಿನ ಮಾಡಲಿರುವರು

ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರರಾದ ಮಿ. ಡಬ್ಲ್ಯು ಇ ಹಾಲ್ಡವೆಲ್ಲರಿಗೂ ಒಂದು ತಿಂಗಳ ರಜೆ ದೊರಕಿದೆ ಇವರೂ ಕೆಲಸದಿಂದ ನಿವೃತ್ತಿಗೊಳ್ಳಲಿರುವರು

ಮಂಗಳೂರು ಸಬ್ ಮೆಜಿಸ್ಟ್ರೇಟರಾಗಿರುವ ಮಿ ಜೆ ಎಫ್ ರೇಗೋರವರಿಗೆ "ಎವರೇಜ್' ಸಂಬಳದ ಮೇಲೆ ೩ ತಿಂಗಳ ರಜೆ

ಕುಂದಾಪುರದಲ್ಲಿನ ಸ್ಪೇಶಲ್ ಸಬ್ ಮೆಜಿಸ್ಟ್ರೇಟರಾಗಿರುವ ಶ್ರೀ ಎ ಕೆ ಸುಂದರಶಾಸ್ತ್ರಿಯವರು ಸಬ್ ಮೆಜಿಸ್ಟ್ರೇಟರಾಗಿ ಮಂಗಳೂರಿಗೆ ವರ್ಗಾಯಿಸಲ್ಪಟ್ಟಿರುವರು

ನಮ್ಮ ಜಿಲ್ಲೆಯವರಾದ ಶ್ರೀ ಬೆನಗಲ್ ರಾಮರಾವ್ ಸಿ ಐ ಇ ಐ ಸಿ ಎಸ್ ಇವರು ಕ್ಯಾಬಿನೆಟ್ ಕಮಿಟಿಯ ಸೆಕ್ರಟರಿಗಳಾಗಿ ನೇಮಕಹೊಂದಿರುತ್ತಾರೆ

ದಕ್ಷಿಣ ಕನ್ನಡ ಜಿಲ್ಲಾ ವೈದ್ಯಕೀಯ ಸಂಘದ ಒಂದು ಸಭೆಯು ನಾಳೆ ತಾರೀಕು ೧೯ನೇ ದಿನ ವೆನ್ ಲೋಕ್ ಆಸ್ಪತ್ರೆಯಲ್ಲಿ ಸಂಜೆ ಗಂಟೆ ೫ ೩೦ಕ್ಕೆ ಜರಗುವುದು ಶ್ರೀಯುತ ಡಾ| ಯು ಪಿ ಮಲ್ಯರು ಭಾಷಣ ಮಾಡಲಿರುವರು ಡಾ| ಕೆ ಎಂ ಶೆಣೈಯವರು ಅತಿಥಿಗಳನ್ನು ಸತ್ಕರಿಸುವರು

ಮುಂಬಯಿಯ ಒರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಇದರ ಹೊಸ ಜೀವವಿಮೆ ವ್ಯಾಪಾರದಲ್ಲಿ ಕಳೆದ ವರುಷ ೫ ೩೪,೬೦ ೯೫ ರೂಪಾಯಿಗಳ ೨೩,೪೮೩ ಪೋಲಿಸಿಗಳಾದವು ಎಂದು ತಿಳಿಸಲಾಗುತ್ತದೆ

ಮಂಗಳೂರು ಮುನಿಸಿಪಾಲಿಟಿಯೊಳಗಣ ಬಳ್ಳಾಲ್‌ಬಾಗಿಲು ಎಂಬ ಸ್ಥಳದ ನಗರ ರಚನಾಸ್ಕೀಮನ್ನು ತಯಾರಿಸುವ ಬಗ್ಗೆ ಅದಕ್ಕೆ ಸಂಬಂಧಪಟ್ಟ ಮ್ಯಾಲೀಕರ ಒಂದು ಸಭೆಯು ಇದೇ ಮಾರ್ಚ ೨೦ನೇ ಶನಿವಾರ ಪೂರ್ವಾಹ್ನ ೯ ೩೦ಕ್ಕೆ ಹಂಪನಕಟ್ಟೆಯಲ್ಲಿರುವ ಕೊಸ್ಮೋಪೊಲಿಟನ ಕ್ಲಬ್ಬಿನಲ್ಲಿ ಜರಗುವುದು

ಈಗ ೪ ಮತ್ತು ೫ನೇಯ ಮರಾಠಾ ಲೈಟ್ ಇನ್‌ಫೆಂಟರಿಯ ಬೆಟೆಲಿಯನ್ (ಪಲಟಾಣು) ಕಣ್ಣಾನೂರಿನಲ್ಲಿದೆ ಈ ಪಂಡು ನಮ್ಮ ಜಿಲ್ಲೆಯಲ್ಲಿ ೧೮೦೦ರಲ್ಲಿ ಸ್ಥಾಪನೆಯಾಯಿತು ಆ ಸಮಯದಲ್ಲಿ ಇದಕ್ಕೆ ಅನೇಕ ಜನರು ಸೇರಿದ್ದರು ಈ ಸೈನ್ಯವು ಬೇಗನೇ ಬಹುದೂರ ದೇಶಕ್ಕೆ ಹೋಗಲಿರುವುದರಿಂದಲೂ, ಪಡಲ್ಲಿನ ಕೆಲವರು ಈ ಜಿಲ್ಲೆಯನ್ನು ನೋಡಿಕೊಂಡು ಹೋಗಬೇಕೆಂದಿರುವುದರಿಂದಲೂ ಇದೇ ದಿನ ೨೦ ೩೦ರ ರೈಲಿಗೆ ಅವರೆಲ್ಲರೂ ಬರುವರು ಇದು ಖಾಸಗಿ ಸಂದರ್ಶನ ಈ ರಾತ್ರಿ ಒಂದು ನರ್ತನವಿರುವುದು ತಾ ೨೦ನೇ ದಿನ ಅವರು ಹಿಂದಿರುಗುವರು

ಕಳೆದ ಆದಿತ್ಯವಾರ ದಿನ ಸಂಜೆ ೪-೩೦ಕ್ಕೆ ಇಲ್ಲಿಯ ಕೇರೂಬೀದಿಯಲ್ಲಿನ ಮೂಲ್ಕಿ ವೆಂಕಟ್ರಾಯ ಶ್ರೀನಿವಾಸ ಪ್ರಭುಗಳ ಮತ್ತು ಚಿಟ್ಟಿಯಾರರ ಅಂಗಡಿಗಳನ್ನು ಶ್ರೀಗಳಾದ ಚಂದ್ರಶೇಖರ ಮತ್ತು ನಾರಾಯಣರೆಂಬ ಸ್ವಯಂಸೇವಕರು ಪಿಕೆಟ್ ಮಾಡಿದರು. ಅದನ್ನು ಕಂಡು ಅವರು ಬಾಗಿಲು ಮುಚ್ಚಿದರು ಕೊನೆಗೆ ಶ್ರೀ ಗಣೇಶ ಪೈಗಳವರ ಅಂಗಡಿಯೆದುರು ಪಹರೆ ನಡೆಸಿದರು. ಅಷ್ಟಾಗುವಾಗಲೂ ಪೋಲೀಸರು ಬರಲೇ ಇಲ್ಲ.

ಮರುದಿನ ಅಂದರೆ ಸೋಮವಾರವೂ ಪಿಕೆಟಿಂಗು ಇತ್ತು, ಶ್ರೀಗಳಾದ ಮಹಾಬಲ ಆಳ್ವ, ಕೆ. ಶೀಲಯ ಮತ್ತು ಕೆ. ಚಂದಪ್ಪ, ಜಿ ಸುವರ್ಣರೆಂಬವರು ಮಾರ್ಕೆಟ್ ಮಾರ್ಗವಾಗಿ ಜಯಘೋಷವನ್ನೆತ್ತುತ್ತಾ, ಕೊಂಗ್ರೆಸ್ ಕರಪತ್ರಗಳನ್ನು ಹಂಚುತ್ತಾ, ಹಂಪನಕಟ್ಟೆಯ ಶ್ಯಾಮರಾಯರ ಅಂಗಡಿಯೆದುರು ಪಹರೆ ನಡೆಸಿದರು ಸ್ವಲ್ಪ ಸಮಯದ ನಂತರ ಒಬ್ಬ ಸಬ್ ಇನ್ಸಪೆಕ್ಟರರು ಬಂದು ಅವರನ್ನು ಸ್ಟೇಶನಿಗೆ ಕರೆದೊಯ್ದರು ಎರಡನೇ ತಂಡವಾಗಿ ಶ್ರೀಗಳಾದ ಕೆ ವೆಂಕಟರಮಣ ಹೆಗ್ಡೆ ಮತ್ತು ಎಂ. ಜನಾರ್ಧನ ನಾಯ್ಕರೆಂಬವರು ಪಹರೆ ನಡೆಸಿದರು. ಸ್ವಲ್ಪ ಹೊತ್ತಿನಲ್ಲಿ ಅವರೂ ಕೈದುಮಾಡಲ್ಪಟ್ಟರು ಮೊದಲನೇ ತಂಡದವರ ವಿಚಾರಣೆಯು ಮರುದಿನವಾಗಿ, ಶ್ರೀ ಮಹಾಬಲ ಆಳ್ವರಿಗೆ ಎರಡು ಆಕ್ಷೇಪಗಳ ಮೇಲೆ ೧ ವರ್ಷ ೬ ತಿಂಗಳ ಕಠಿಣ ಸಜೆಯು ದೊರೆಯಿತು

ಬುಧವಾರ ಸಂಜೆ ಶ್ರೀಯುತ ಬಿ ವೆಂಕಪ್ಪ ರೈಗಳು ಕೈದು ಮಾಡಲ್ಪಟ್ಟರು ನಿನ್ನೆ ಅವರ ವಿಚಾರಣೆಯು ನಡೆದು ಶಿಕ್ಷಿಸಲ್ಪಟ್ಟರು.

ತಮ್ಮ ಮುಂದಿನ ಕಾರ್ಯಕ್ರಮಗಳನ್ನು ಆಲೋಚಿಸುವ ಕುರಿತು ಇಲ್ಲಿಯ ಬ್ರೈ ಇಂಡಿಯನ್ ಲೀಗಿನ ಒಂದು ಸಭೆಯು ತಾ ೧೯ ೩—೩೨ನೇ ಆದಿತ್ಯವಾರ ೫ ೩೦ಕ್ಕೆ ಕೊಡಿಯಾಲಬೈಲಿನ ಥಿಯೊಸೊಫಿಕಲ್ ಲೋಜಿನಲ್ಲಿ ಜರಗುವುದು ಇದಕ್ಕೆ ಈಗ ಈ ಕೆಳಗಿನವರು ಸದಸ್ಯರಾಗಿರುವರು ಶ್ರೀಗಳಾದ ದಿವಾನ್ ಬಹದೂರ್ ಎಸ್ ಸುಬ್ಬರಾವ್ ಗೊಲ್ಲರಕೇರಿ ಕೃಷ್ಣರಾವ್, ಯು ಸಿ ಸುಬ್ರಮಣ್ಯ ಭಟ್ (ಎಂ ಎಲ್ ಸಿ) ಎ ಬಿ ಶೆಟ್ಟಿ, (ಎಂ ಎಲ್ ಸಿ), ಎ ಶ್ರೀನಿವಾಸ ಪೈ ಕೆ ಜಿನರಾಜ ಹೆಗ್ಡೆ ಜೆ ಎ ಸಲ್ಡಾನಾ ಕೆ ಆರ್ ಆಚಾರ್ ಎಂ ಎಸ್ ಮಾಧವರಾವ್ ಎಂ ರಾಮಕೃಷ್ಣ ಪೂಂಜ ಎಲ್ ದಾಸಣ್ಣ ಆಳ್ವ ಕೆ ವೆಂಕಟ್ರಾವ್ ಎಸ್ ಬಿ ಭಿಡೆ ಜಿ ಸೋಮಶೇಖರರಾವ್

ಮುಂಬಯಿಯ ಶ್ರೀ ಸದಾರಾಂ (ದಾಸ್) ಇವರು ಕಳೆದ ಆದಿತ್ಯವಾರ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ಸುರಸವೂ ಸುಶ್ರಾವ್ಯವೂ ಆಗಿದ್ದ ಗೋಪಿಚಂದ ಚರಿತ್ರೆಯೆಂಬ ಹರಿಕೀರ್ತನೆಯನ್ನು ತುಳುಭಾಷೆಯಲ್ಲಿ ಮಾಡಿದರು ಪ್ರಥಮದಲ್ಲಿ ರಾವ್ ಬಹದೂರ್ ಎಸ್ ಎಲ್ ಸುವರ್ಣರೂ ಸಂಘದ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀಯುತ ಎ ಚಾಂದಪ್ಪನವರೂ ಅವರಿಗೆ ಪುಷ್ಪಹಾರವನ್ನು ಹಾಕಿದರು ಕರ್ಣಾನಂದಕರವಾದ ಮತ್ತು ಭಾವಭರಿತವಾದ ಕೀರ್ತನೆಯಾದ ಮೇಲೆ ಧನ್ಯವಾದಗಳಿಂದ ಸಭಾ ವಿಸರ್ಜನವಾಯಿತು ಇವರು ಬೇಗನೇ ಮುಂಬಾಯಿಗೆ ಹಿಂತಿರುಗಲಿರುವರೆಂದು ತಿಳಿದುಬರುತ್ತದೆ

ಮೂಲ್ಕಿ:— ಸ್ಥಳೀಕ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ಎಂದಿನಂತೆ ಈ ವರ್ಷವೂ ಶ್ರೀ ಮಹಾಶಿವರಾತ್ರಿ ದಿನ ರಾತ್ರಿ ಘಂಟೆ ೭ರಿಂದ ೬ ೩೦ರ ವರೆಗೆ ಉಪನ್ಯಾಸ ಭಜನೆ ಇತ್ಯಾದಿಗಳು ನಡೆದುವು

ಸ್ಥಳೀಕ ಲೋಕಲ್ ಕೋ ಒಪರೇಟಿವ್ ಯೂನಿಯನ್ನು ಮತ್ತೆ ಪಡಿಸಿದ್ದಾರಾಗಿ ತಿಳಿದುಬರುತ್ತದೆ

ಇಲ್ಲಿಯ ಶ್ರೀ ಬಪ್ಪನಾಡು ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ನೆರವೇರತಕ್ಕ ಕಾಲಾವಧಿ ಉತ್ಸವವು ತಾ ೨೧ರಿಂದ ಮೊದಲ್ಗೊಂಡು ತಾ. ೨೮ಕ್ಕೆ ಅಂತ್ಯವಾಗಲಿರುವುದು

ಹಳೆಅಂಗಡಿ ಟೈಲರ್ ಯಂ ಮಂಜಪ್ಪ ಮತ್ತು ಇವರ ಹೆಂಡತಿ ಮಕ್ಕಳು ಕೂಡಾ ಈ ಹಿಂದೆ ಮಂಗಳೂರು ಜುಮ್ಮಾ ಮಸೀದಿಯಲ್ಲಿ ಮುಸಲ್ಮಾನರಾಗಿದ್ದರಷ್ಟೆ ಇವರಿಗೆ ಅಬ್ದುಲ್ ಸಮದ್ ಎಂಬ ನಾಮಕವನ್ನು ಕೊಡಲಾಯಿತು, ಹೆಂಡತಿ ಮಕ್ಕಳಿಗೂ ಕೂಡ ಮುಸಲ್ಮಾನ್ ಪದ್ಧತಿ ಪ್ರಕಾರದ ಹೆಸರನ್ನು ಕೊಡಲಾಯಿತು ಸದರಿ ಅಬ್ದುಲ್ ಸಮದರನ್ನು ಕಳೆದ ತಾ ೪ ೩—೩೨ನೇ ಶುಕ್ರವಾರ ಮೂಲ್ಕಿಯ ಮಹನೀಯರಾದ ಶಾಫಿ ಜಮಾತರು ಮತ್ತು ಅನಫಿ ಜಮಾತರು ಕೂಡಿಕೊಂಡು ಚರಂದಿರೆಟ್ಟಿ ಕೈಕಂಬದಿಂದ ಸುಮಾರು ೧೧ ಗಂಟೆಗೆ ಬ್ಯಾಂಡು ವಾದ್ಯ ಮೆರವಣಿಗೆಯೊಡನೆ ಶಾಫಿ ಜುಮಾಮಸೀದಿಗೆ ಹೋಗಿ ಅಲ್ಲಿ ಜುಮಾ ತೀರಿಸಿಕೊಂಡು ಮೆರವಣಿಗೆ ಹೋದರು ಸಂತೆಮಾಳಿಗೆ ಬರುವಾಗ್ಗೆ ಯಂ ಇಸ್ಮಾಲಿ ಮುಕ್ರಿಯವರಿಂದಲೂ ಇನ್ನಿತರರಿಂದಲೂ ಹೂ ಮಾಲೆ ಶಾಲು ಮೊದಲಾದುವುಗಳು ಅರ್ಪಿಸಲ್ಪಟ್ಟವು ಅನಫಿ ಜುಮಾ ಮಸೀದಿಗೆ ಹೋಗಿ ದೇವರ ಪ್ರಾರ್ಥನೆ ಮಾಡಿ ಮೆರವಣಿಗೆಯೊಡನೆ ಕೋಟೆಕೇರಿಯ ಹ್ಯಾ ರೋಡಿನಲ್ಲಿ ಹೋಗುವಾಗ್ಗೆ ಕೋಟೆಕೇರಿಯ ಬೀಡಿ ಅಂಗಡಿಯಲ್ಲಿ ಹಾಲು ಹೂಮಾಲೆ ಪನ್ನೀರುಗಳಿಂದ ಸತ್ಕಾರವಾಯಿತಲ್ಲದೆ ಒಂದು ಶಾಲನ್ನೂ ಇನಾಮು ಮಾಡಿದರು ಅಲ್ಲಿಂದ ಮೆರವಣಿಗೆಯು ಹಿಂದುಸ್ಥಾನಿ ಶಾಲೆಗೆ ಹೋಗಿ ಸೇರಿತು ಅಲ್ಲಿ ಮ| ರಾ| ರಾ| ತೋಕೂರು ಖಾಜಿ ಮಹಮೂದ ಅಸದಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು ಎರಡು ಶಾಫಿ ಜಮಾತರೂ, ಅನಫಿ ಜಮಾತರೂ ಕೂಡ ನೂರು ರೂಪಾಯಿ ಇನಾಮಾಗಿ ಕೊಟ್ಟರು ಸದರಿ ದಿವಸ ಮುಸಲ್ಮಾನರು ಸಂಪೂರ್ಣವಾದ ಹರತಾಳವನ್ನು ಆಚರಿಸಿದ್ದರು

ಪುತ್ತೂರು— ಇರ್ದೆ ಗ್ರಾಮದ ಬೀಡಿನ ಬಳಿಯಲ್ಲಿ ಕಳೆದ ತಾ. ೧೦ನೇ ಗುರುವಾರ ದೊಡ್ಡ ಕಂಬಳವಾಯಿತು ಬಹಳ ಜನ ಸಮೂಹವಿದ್ದಿತು ಕೋಣಗಳೂ ಬಹಳವಿದ್ದುವು ಪುತ್ತೂರು ತಾಲೂಕಿನ ಶ್ರೀ ಮಲತಡ್ಕ ವೆಂಕಟ್ರಮಣ ಶಾಸ್ತ್ರಿಗಳ ಮತ್ತು ಮಡಾಲು ಕೊರಗ ಸೆಟ್ಟರ ಕೋಣಗಳೂ ಕಾಸರಗೋಡು ತಾಲೂಕಿನ ಶ್ರೀ ಬೆಳ್ಳೂರ್ ಪಟೇಲ್ ಮಾಲೆಂಕಿ ಶಂಕರ ಕಡಂಬಳಿತ್ತಾಯರ ಕೋಣಗಳೂ ಮನೋಹರವಾಗಿದ್ದುವು ಮ| ರಾ| ಎಡ್ಕತ್ತೋಡಿ ಬೀರಣ್ಣ ಭಂಡಾರಿಗಳ ಹಾಗೂ ಬೆಳ್ಳಿಪ್ಪಾಡಿ ಕೊರಗಪ್ಪ ರೈಗಳ ನೇತೃತ್ವದಲ್ಲಿ ಈ ಕೂಟದ ಆರಂಭವಾಯಿತು ಮಾಲೆಂಕಿಯವರ ಕೋಣಗಳು ಗೆದ್ದವು ರಾ| ಬಹುಮಾನ ಬ್ಯಾಂಕುಗಳು ಏರ್ಪಡಿಸಿದ್ದ ಚಿನ್ನದ ಪದಕವನ್ನು ಅಧ್ಯಕ್ಷರಾದ ರಾ| ಬೀರಣ್ಣ ಭಂಡಾರಿಗಳು ಹಂಚಿದರು

ಕಾಸರಗೋಡು— ಸ್ವದೇಶೀ ಪ್ರಚಾರ ಸಂಘದ ಪರವಾಗಿ ಇದೇ ಕಳೆದ ಸೋಮವಾರ ಸಾರ್ವಜನಿಕ ಸಭೆಯಾಯಿತು ಶ್ರೀಗಳಾದ ವಕೀಲ್ ಸುಂದರರಾಮ ಶೆಟ್ಟಿರೂ, ದೇವದಾಸ ಶೆಣೈಯವರೂ, ಲಕ್ಷ್ಮೀನಾರಾಯಣ ಪುಣಿಂಚತ್ತಾಯರೂ ಕ್ರಮಪ್ರಕಾರ ಭಾಷಣ ಕೊಟ್ಟರು ಎರಡು ಜನ ಪೋಲೀಸ್ ಸಬ್ ಇನ್ಸ್‌ಪೆಕ್ಟರವರು ಉಪನ್ಯಾಸವನ್ನು ಬರೆದುಕೊಂಡು ಹೋಗಿರುತ್ತಾರೆ ಎಂದು ತಿಳಿಯುತ್ತೇವೆ

ಕರೋಪಾಡಿ— ಪುತ್ತೂರು ತಾಲೂಕಿನ ಗ್ರಾಮಾಭಿವೃದ್ಧಿಯ ಕಮಿಟಿಯವರು ಇಲ್ಲಿಗೆ ತಾ ೮—೩—೩೨ನೇ ಮಂಗಳವಾರ ಬಂದು ತಾ ೯—೩—೩೨ನೇ ಬುಧವಾರದಿಂದ ತಮ್ಮ ಮೂರು ದಿನಗಳ ಕಾರ್ಯಕ್ರಮವನ್ನು ಸಾಂಗಗೊಳಿಸುವುದರ ಮೂಲಕ ಕೃಷಿ ಕೈಗಾರಿಕೆ, ಆರೋಗ್ಯ ಮುಂತಾದ ವಿಚಾರಗಳಲ್ಲಿ ಜನರಲ್ಲಿರುವ ಅಲಕ್ಷ್ಯತೆಯನ್ನೂ ಅವರು ಅದರಿಂದ ಪಡುತ್ತಿರುವ ಕಷ್ಟಗಳನ್ನೂ ಅವರ ಮುಂದಿಟ್ಟು, ಗ್ರಾಮಸ್ಥರಲ್ಲಿ ಜಾಗ್ರತಿಯನ್ನುಂಟುಮಾಡಿದರು

ಕಮಿಟಿಯ ಕಾರ್ಯಕ್ರಮದ ಎರಡನೇ ದಿನ ಡಿಸ್ಟ್ರಿಕ್ಟ್ ಬೋರ್ಡ್ ಎಲಿಮೆಂಟರಿ ಶಾಲಾ ಕಟ್ಟಡದ ಪ್ರವೇಶೋತ್ಸವವು ವಿಜೃಂಭಣೆಯಿಂದ ಸದರಿ ಶಾಲಾ ಕಮಿಟಿಯ ಅಧ್ಯಕ್ಷರಾದ ಮ| ರಾ| ರಾ| ಮುಗೇರ್ ರಾಮಕೃಷ್ಣ ಭಟ್ಟರವರ ಅಧ್ಯಕ್ಷತೆಯಿಂದ ಪುತ್ತೂರು ತಾಲೂಕು ಬೋರ್ಡ್ ಪ್ರಸಿಡೆಂಟ್ ಮ ರಾ ರಾ ಎ ಶಿವರಾವ್ ಅವರ್ಗಳವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು

ಹೊಸಂಗಡಿ— ಎಷ್ಟೋ ವರ್ಷಗಳಿಂದ ಪ್ರಯತ್ನಿಸುತ್ತಿದ್ದ ನಮ್ಮ ವಿದ್ಯಾರ್ಥಿಗಳಿಗೆ ಈ ವರ್ಷ ಹಲವಿನ ಕಟ್ಟೋಣವು ತಯಾರಾಗುತ್ತಿದೆ ಹಳೇ ಪೋಲೀಸ್ ಸ್ಟೇಶನ್ ಕಟ್ಟೋಣದ [illegible] ದಿಂದ ಸಾಗುತ್ತಿದೆ ಸದ್ರಿ ಕಟ್ಟೋಣದ ಎದುರು ಸ್ಥಳವು ಶಾಲಾ ತೋಟಕ್ಕೆ ತುಂಬಾ ಅನುಕೂಲವಿದೆ ಸದ್ರಿ ಸ್ಥಳವನ್ನು ಸ್ವಲ್ಪ ಮಟ್ಟು ಮಾಡಿ ಎರಿಸುವಂತೆ ಮಾಡಿ ಉಪಾಧ್ಯಾಯರು ಒಂದು ತೋಟವನ್ನು ತಯಾರಿಸುವ ಯೋಜನೆಯನ್ನು ಮಾಡಿಸಬಹುದು ಸದ್ರಿ ಸ್ಥಳಕ್ಕೆ ಕಂಪೌಂಡೂ ಆಗತ್ಯ ಅವರೆ [illegible] ಮಾತ್ರ ಸ್ವಲ್ಪ ದೂರದಲ್ಲಿದೆ ಎನ್ನುವುದೇ ಎಡಾದಕರ ಹೇಗೂ ಪ್ರಕೃತ ಮಕ್ಕಳಿಗೊಂದು ತುಂಬ ವಿಶಾಲ ಕಟ್ಟೋಣವಾಗುತ್ತದೆಂಬುದೇ ಅಭಿಮಾನಾಸ್ಪದ [illegible] ಪ್ರಯಾಣಿಕರ ಬಂಗ್ಲೆಯ ಉಪಯೋಗಕ್ಕಾಗಿ ಕಟ್ಟಿಸಿದ ಬಾವಿಯು ಮರುಮ್ಮತ್ತಿಯು ಇದೇ ಸಮಯದಲ್ಲಿ ಆಗುವುದು ಆಗತ್ಯ ಬಂಗ್ಲೆಯ ಪಕಡಿ ಪಾಳಾಗುವದು— ಬೋರ್ಡಿನವರು ಇದ ರಿಪೇರ್ ಮಾಡಿ ಕೊಡದ ಬಾವಿ ಇದ್ದರೂ ಆಗತ್ಯವಿರುವ ನೀರನ್ನು ಕೊಡುಕೊಳ್ಳುವುದಕ್ಕೆ ಬೇಕು ಈ ಬೇಸಿಗೆ ಕಾಲದ ಕರೆ ಎರೆಂದರೆ ಎಷ್ಟೊಂದು ಕಷ್ಟವೆಂಬುದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ ಆದುದರಿಂದ ಬೋರ್ಡಿನ ಮಹಾಶಯರು ಮಲೆನಾಡಿನ ಈ ಪ್ರದೇಶದ ಹಾಗೂ ಅಲ್ಲದೆ ಬರುವ ಜನಸಾಮಾನ್ಯರ ಕ್ಷೇಮವನ್ನು ಚಿಂತಿಸಿ ಸದ್ರಿ ಬಂಗ್ಲೆ ಬಾವಿಯನ್ನೂ ಪೂರ್ವಕಾಲದ ಮರದ ಅನೆಬಾವಿಯನ್ನೂ ಸ್ವಲ್ಪ ಖರ್ಚಿನಿಂದ ದುರುಸ್ತಿಪಡಿಸಿದರೆ ಬಹಳ ಉಪಕಾರವಾಗುತ್ತಿತ್ತು

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P No [illegible]

[illegible] ತಾಲೂಕು [illegible] ಗ್ರಾಮದಲ್ಲಿ [illegible] ಕೊರಗ ಶೆಟ್ಟಿ ಸೂಕ ಸಂಕ್ರ [illegible]—ಅರ್ಜಿದಾರರ

ಸದ್ರಿ ಅರ್ಜಿದಾರರು ಸದ್ರಿ O P No 69/31ನೇಗೆ ತಾ [illegible]ರಲ್ಲು ವ್ಯತಪಟ್ಟ ಅರ್ಜಿದಾರರ [illegible] [illegible] ಬಾಬು [illegible] ಸೂಕ್ತ [illegible] ಮಕ್ಕಳು ವಾರಿಸ್ದಾರರಾಗಲೂ ಮತ್ತು ಆತ The Bombay Life Assurance Company Ltd ಇದರ Policy No 26236ನೇಗ ಸಿಕ್ಕತಕ್ಕ ಹಣವು ಅರ್ಜಿದಾರರು ಪಡೆಯುವಂತೆ ಸಕ್ಸಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ [illegible] ಸದ್ರಿ O P No 69/31ನೇ ಅರ್ಜಿಯು ತಾ 28—3—'32ಕ್ಕೆ ಈ ಕೋರ್ಟಿನಲ್ಲಿ ತನಿಕೆ ಬಗ್ಗೆ ಇಟ್ಟಿರುವುದರಿಂದ ಆ [illegible] ಆಕ್ಷೇಪ ಉಳ್ಳವರು ಸದ್ರಿ ತಾರೀಕಿಗೆ ಈ ಕೊರ್ಟಿನ ಮುಂದೆ ಹಾಜರಾಗಿ ಆಕ್ಷೇಪಿಸತಕ್ಕದ್ದು

K. Sadashiva Shetty,
Pleader for Petitioner

ಮೋಟರುಗಳಿಗೆ ನಕಲಿ ಭಾಗಗಳು ಅಪಾಯಕರವಿವೆ.

ನಕಲಿ ಭಾಗಗಳಿಗಿಂತ ನಿಜವಾದ ಫೋರ್ಡ್ ಭಾಗಗಳು ಶೇಕಡಾ 100ರಷ್ಟು ಶಕ್ತಿಯುಳ್ಳವುಗಳಾಗಿವೆ. ಫೋರ್ಡಿನ ಭಾಗಗಳು ತಯಾರು ಮಾಡುವಾಗ ತೋರಿಸಲ್ಪಡುವ ಕಠಿಣವಾದ ನಾಜೂಕಿನಷ್ಟು ನಕಲಿ ಭಾಗಗಳಲ್ಲಿ ಇರುವುದಿಲ್ಲ. ಅವು ಬೇಗನೆ ಸವೆದು ಹೋಗುತ್ತವೆ. ಮತ್ತು ಹಲವು ಬಾರಿ ಪ್ರಾಣಾಪಾಯಕ್ಕೆ ಕಾರಣವಾಗುತ್ತವೆ.

ನಿಜವಾದ ಫೋರ್ಡ್ ಭಾಗಗಳ ತಯಾರಿಯಲ್ಲಿ ನಾಲ್ವತ್ತು ಪ್ರತ್ಯೇಕ ಜಾತಿಯ ಉಕ್ಕುಗಳು ಉಪಯೋಗಿಸಲ್ಪಡುತ್ತವೆ.

ನಿಮ್ಮ ಮೋಟರು ಸರಿಯಾಗಿ ಚಲಾವಣೆಯಾಗಬೇಕೆಂಬ ಚಿಂತನೆಯು ನಮಗಿದೆ. ನಕಲಿ ಭಾಗಗಳನ್ನು ಮಾರಾಟ ಮಾಡುವವನಿಗೆ ಅವನ ಲಾಭದ ಚಿಂತನೆಯೇ ಅವನಿಗಿದೆ.



ನಿಜವಾದ ಫೋರ್ಡ್ ಭಾಗಗಳನ್ನೇ ಕೊಂಡುಕೊಳ್ಳಿರಿ. ಮತ್ತು ನಿಶ್ಚಿಂತವಾಗಿ ಮೋಟರ ಪ್ರಯಾಣವನ್ನು ಬೆಳೆಸಿರಿ

ನಮ್ಮ ಮೋಟಾರಿನೊಳಗಿನ ಉಕ್ಕಿನ ಭಾಗಗಳಲ್ಲಿ ಶೇಕಡಾ 90ರಷ್ಟು ಭಾಗಗಳು ಕಾಯಿಸಿ ಬಡಿದು ರೂಪಿಸಲ್ಪಟ್ಟವು. ಎರಕದವುಗಳಲ್ಲ



ಫೋರ್ಡ್ ಮೋಟರ್ ಕಂಪೆನಿ ಓಫ್ ಇಂಡಿಯಾ ಲಿಮಿಟೆಡ್ ಎಸೆಂಬ್ಲಿ ಪ್ಲೇಂಟ್— ಮೌಂಟ್‌ರೋಡ್, ಮದರಾಸ್

ಐದು ಮಂದಿಗಳಿಗಿಂತ ಕಡಿಮೆಯಿರುವ ಪಿಕೆಟರರಿಗೆ ಲಾಠೀ ಪ್ರಹರವಾಗಬಹುದೇ?

ಕೌನ್ಸಿಲಿನಲ್ಲಿ ಪ್ರಶ್ನೆ! ಸತ್ಯಾಂಶ ಹೊರಗೆ!

ಕೆಳಗಿನವುಗಳು ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಹೋಮ್ ಮೆಂಬರ್ ಮತ್ತು ಕೌನ್ಸಿಲ್ ಸದಸ್ಯ ಮಹನೀಯರೊಳಗೆ ಆದ ಪ್ರಶ್ನೋತ್ತರಗಳು.

ಪ್ರಶ್ನೆ—(ಶ್ರೀಯುತ ಯು. ಓ. ಸುಬ್ರಹ್ಮಣ್ಯ ಭಟ್ಟರು), (ಅ) ಐದು ಮಂದಿಗಳಿಗಿಂತ ಕಡಿಮೆಯಿದ್ದ ಪಿಕೆಟರರ ಮೇಲೆ ಲಾಠೀಪ್ರಹರವಾಗುವ ಔಚಿತ್ಯದ ಕುರಿತೂ ಸ್ವಯಂಸೇವಕರು ತಪ್ಪಿಬಿದ್ದವರಿಗೂ ಹೊಡೆಯುವ ಕುರಿತೂ ಮದ್ರಾಸಿನ ಪ್ರಮುಖ ವಕೀಲರುಗಳ ಸ್ಟೇಟ್‌ಮೆಂಟನ್ನು ಸರಕಾರವು ಓದಿದೆಯೋ (ಆ) ಕಾನೂನು ಮೀರಿಗೆ ಪ್ರತಿಯೊಬ್ಬ ಪಿಕೆಟರರನ್ನು ಕೈದುಮಾಡಿ ಶಿಕ್ಷೆಕೊಡುವ ಬದಲು ಅವರಿಗೆ ಹೊಡೆಯಲು ಸರಕಾರವಾಗಲೀ ಅಥವಾ ಪೋಲೀಸ್ ಇನ್ಸ್‌ಪೆಕ್ಟರ್ ಜನರಲರಾಗಲೀ ಅಪ್ಪಣೆ ಕೊಟ್ಟಿರುವರೋ? (ಇ) ಪ್ರತ್ಯಪ್ರತ್ಯೇಕವಾದ ಪಿಕೆಟರರಿಗೆ ಅಥವಾ ಅವರ ಐದು ಮಂದಿಗಳಿಗಿಂತ ಕಡಿಮೆಯಿದ್ದ ಗುಂಪಿಗೆ ಹೊಡೆಯುವ ಕುರಿತು ಸರಕಾರವು ಅಭಿಪ್ರಾಯಗಳನ್ನು ಬರಮಾಡಿಕೊಂಡಿದೆಯೋ? (ಈ) ಈ ವಿಷಯದಲ್ಲಿ ಸರಕಾರವು ಯಾವ ಉಪಾಯವನ್ನು ಹೂಡಿರುತ್ತದೆ ಎಂಬ ಪ್ರಶ್ನೆಗಳಿಗೆ ಮಾನ್ಯ ಹೋಮ್ ಮೆಂಬರು ಉತ್ತರವನ್ನೀಯುವರೇ?

ಉತ್ತರ (ಅ ಪ್ರಶ್ನೆಗೆ) ಪೋಲೀಸರು ಮಾಡುವ ಶಕ್ತಿಪ್ರದರ್ಶನದ ಕುರಿತು ಮದ್ರಾಸಿನ ಕೆಲವು ವಕೀಲರುಗಳು ಮಾಡಿದ ಸ್ಟೇಟ್‌ಮೆಂಟನ್ನು ಸರಕಾರವು ಓದಿರುತ್ತದೆ (ಆ ಪ್ರಶ್ನೆಗೆ ಉತ್ತರ)—ಇಲ್ಲ (ಇ ಪ್ರಶ್ನೆಗೆ ಉತ್ತರ) ಈ ಕ್ರಮವು ಅಗತ್ಯವೆಂದು ಸರಕಾರಕ್ಕನ್ನಿಸುವುದಿಲ್ಲ (ಈ ಪ್ರಶ್ನೆಗೆ ಉತ್ತರ) ಏನಿಲ್ಲ

ಪ್ರಶ್ನೆ—ಸರಕಾರದ ೩೧ ೧೨–೧–೧೯೩೨ರ ಪ್ರೆಸ್ ಕೊಮ್ಯೂನಿಕ್‌ನಲ್ಲಿ ಅದು ಪೋಲೀಸರ ಆಚಾರವನ್ನು ಸಮರ್ಥಿಸಲಿಲ್ಲವೇ?

ಉತ್ತರ—ಮಾನ್ಯ ಪ್ರಶ್ನೆಕರ್ತರು ಯಾವ ಭಾಗವನ್ನು ಕುರಿತು ಅರ್ಥಮಾಡಿದರೆಂದು ನನಗೆ ತಿಳಿಯುವುದಿಲ್ಲವಲ್ಲಾ

ಪ್ರಶ್ನೆ ಎಲ್ಲರನ್ನೂ ಸೆರೆಮನೆಗೆ ಕಳುಹಿಸುವುದು ಹಿತಕರವಲ್ಲವಾದುದರಿಂದ ಮೊದಲು ಪಿಕೆಟರರಿಗೆ ಹೊಡೆಯಬೇಕೆಂದು ಆ ಪ್ರೆಸ್ ಕೊಮ್ಯೂನಿಕ್ ಹೇಳುತ್ತದೆ ಇದನ್ನು ಮುಂಚಿನ ಸಲ ಸಮರ್ಥಿಸಿದ್ದರು. ಈ ವಿಷಯವಾಗಿ ನಾನು ಕೇಳುವುದು

ಉತ್ತರ—ಮದ್ರಾಸಿನ ವಕೀಲರ ಸ್ಟೇಟ್‌ಮೆಂಟು ಪ್ರಕಟವಾಗುವ ಮೊದಲು ಅಂದರೆ ತಾ ೧೫ ಜನವರಿಯಲ್ಲಿ ಕಾಯಿದೆ ವಿರೋಧವಾದ ಸಂಗತಿಗಾಗಿ ಕೂಡಿಬಂದ ಐದು ಅಥವಾ ಹೆಚ್ಚು ಮಂದಿಗಳನ್ನು ಅಕ್ರಮಕೂಟವಾಗಿ ಎಣಿಸಬಹುದೆಂದೂ, ಅಗತ್ಯವಿದ್ದ ಪಕ್ಷದಲ್ಲಿ ಅವರನ್ನು ಬಲಾತ್ಕಾರದಿಂದ ಚದರಿಸಬಹುದೆಂದೂ ನಾವು ಪ್ರಕಟಿಸಿದ್ದೆವು. ಆದರೆ ಪ್ರತ್ಯಪ್ರತ್ಯೇಕವಾಗಿ ನಿಲ್ಲುವ ಪಿಕೆಟರರು ಒಂದು ಅಕ್ರಮಕೂಟವಾಗಲಾರರು ಆದುದರಿಂದ ಅವರಿಗೆ ಲಾಠೀ ಪ್ರಯೋಗಿಸಲಾಗದು. ಅಂತಹ ಸಂದರ್ಭದಲ್ಲಿ ಪಿಕೆಟ್ ಮಾಡುವುದು ಗೋಚರವಾದರೆ ಅವರನ್ನು ಕೈದುಮಾಡಿ ಶಿಕ್ಷಿಸಬಹುದು ಕಾನೂನಿನ ಒಳಗಿರುವ ನಿಬಂಧನೆಗಳಿಗನುಸಾರವಾಗಿ ಅಲ್ಲದೆ ಸಮಯಾನುಸಾರವಾಗಿ ಸರಿಯಾಗಿ ವರ್ತಿಸಲು ಎಲ್ಲಾ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರುಗಳಿಗೆ ತಿಳುಹಿಸಲ್ಪಟ್ಟಿದೆ

ಪ್ರಶ್ನೆ ಪ್ರತ್ಯಪ್ರತ್ಯೇಕವಾಗಿದ್ದ ಅನೇಕ ಪಿಕೆಟರರಿಗೆ ಹೊಡೆದುದೂ ಅದು ಸರಕಾರದ ಅವಗಾಹನೆಗೆ ಬಂದುದೂ ಸರಿಯಷ್ಟೆ

ಉತ್ತರ: ಈ ಎಲ್ಲಾ ಪ್ರಶ್ನೆಗಳ ಕುರಿತು ತನಿಖೆ ನಡೆಸಲ್ಪಡುತ್ತಿದೆ ಅಧಿಕಾರಿಗಳಿಗಿತ್ತ ಸಲಹೆಗಳಿಗೆ ವಿರುದ್ಧವಾಗಿ ಅವರು ವರ್ತಿಸಿರುವರೆಂದಾದರೆ, ಅಂತಹ ಅಧಿಕಾರಿಗಳನ್ನು ಸದ್ವರ್ತನೆಯ ದಾರಿಗೆ ಹಚ್ಚಲು ನಾನು ಸಂಪೂರ್ಣ ಸಿದ್ಧನಿರುತ್ತೇನೆ

ತನ್ಮಧ್ಯೆ ಶ್ರೀಯುತ ಆರೋಗ್ಯ ಸ್ವಾಮಿ ಮುದಲಿಯಾರು—ನೀವು ಯಾವ ತಾರೀಕಿನಲ್ಲಿ ಸಲಹೆ ಕೊಟ್ಟಿದ್ದು?

ಉತ್ತರ—ಜನವರಿ ತಾ ೧೫ರಲ್ಲಿ

ಪ್ರಶ್ನೆ ಜನವರಿ ತಾ ೨೪ರಲ್ಲಿನ ಪ್ರಕಟನೆಯಲ್ಲಿ ಕೈದಿನ ಬದಲು ಬಲಾತ್ಕಾರವನ್ನುಪಯೋಗಿಸಬಹುದೆಂದು ಸರಕಾರವು ಶಿಫಾರಸು ಮಾಡಿರುವುದು. ಸರ್ ವಿವಿತಮ್ ಬರೆಯಲ್ಪಟ್ಟಿರುವಾಗ ಈ ಮೇಲಿನ ಸಲಹೆಗಳನ್ನು ಅದಕ್ಕೆ ಹೇಗೆ ಗಂಟುಹಾಕುವಿರಿ?

ಉತ್ತರ ಆ ಪ್ರಕಟಣೆಯು ವಿಷದವಾಗಿ ಏನನ್ನುತ್ತದೆಂದು ನನಗೆ ಗೊತ್ತಿಲ್ಲ

ಶ್ರೀಯುತ ಆರೋಗ್ಯಸ್ವಾಮಿ ಮುದಲಿಯಾರರು ಎಡ್ವರ್ಟೈಸ್‌ಮೆಂಟ್ ದರಖಾಸಿನಿಂದ ಈ ವಿಷಯವನ್ನು ನಾವು ಚರ್ಚಿಸಿದ್ದೇವಾದರೂ, ಹೋಮ್ ಮೆಂಬರರು ತನಗೆ ಈ ಕುರಿತು ಏನೂ ಗೊತ್ತಿಲ್ಲವೆನ್ನುವುದು ಆಶ್ಚರ್ಯಕರ ಸಂಗತಿಯೇ ಸರಿ"

ಶ್ರೀಯುತ ಯಾಕೂಬ್ ಹುಸೇನರು—'ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಕುರಿತು ಸರಕಾರಕ್ಕೆ ವರ್ತಮಾನಗಳು ಕಳುಹಿಸಲ್ಪಡುವುದಿಲ್ಲವೇ? ಹಾಗಿದ್ದರೆ ಪ್ರಮುಖ ವಕೀಲರು ಮಾಡಿದ ಪ್ರಕಟಣೆಯನ್ನು ತಾನು ಓದಲಿಲ್ಲವೆಂದು ಸರಕಾರವು ಉತ್ತರವೀಯುವುದು ಯಾವ ಕಾರಣದಿಂದ?"

ಉತ್ತರ ಶಕ್ತಿಪ್ರದರ್ಶನದ ಕುರಿತು ಮದ್ರಾಸಿನ ಕೆಲವು ವಕೀಲರುಗಳು ಮಾಡಿದ ಪ್ರಕಟಣೆಯನ್ನು ಸರಕಾರವು ಓದಿದೆಯೆಂದು ನಾನು ಈಗಾಗಲೇ ಹೇಳಿದೆನಲ್ಲ

ಶ್ರೀಯುತ ವಿ ಎಂ ರಾಮಸ್ವಾಮಿ ಮುದಲಿಯಾರ್—ಹಾಗಾದರೆ ಪ್ರತ್ಯಪ್ರತ್ಯೇಕವಾಗಿ ನಿಂತ ಅಥವಾ ಅಕ್ರಮಕೂಟವಲ್ಲದ ಪಿಕೆಟರರ ಮೇಲೆ ಬಲಾತ್ಕಾರ ಅಥವಾ ಲಾಠೀ ಪ್ರಯೋಗ ಮಾಡುವುದು ತಪ್ಪೆಂದು ಭಾವಿಸಬಹುದೇ?

ಉತ್ತರ—ಸರಕಾರವು ಕೊಟ್ಟ ಸಲಹೆಗಳನ್ನು ನಾನು ಈ ಮೊದಲೇ ಓದಿರುವೆನು ಈ ಸಲಹೆಗಳ ವಿರುದ್ಧವಾಗಿ ಆಚರಿಸಿದ ಸಂಗತಿಗಳನ್ನು ನನ್ನ ಮಿತ್ರರಾದ ನೀವು ನನಗೆ ತಿಳುಹಿಸಿದರೆ ಅವುಗಳ ಕುರಿತು ತನಿಖೆ ನಡೆಸಲು ಸಿದ್ಧನಿರುತ್ತೇನೆ,

ಉಡುಪಿಯ ಸ್ವಯಂಸೇವಕರ ವಿಚಾರಣೆ

ಶ್ರೀಯುತ ಸುಬ್ರಹ್ಮಣ್ಯ ಭಟ್ಟರು—(ಅ) ತಾ ೭ನೇ ಏಪ್ರಿಲ್ ಉಡುಪಿಯಲ್ಲಿ ಒಂಭತ್ತು ಮಂದಿ ಸ್ವಯಂಸೇವಕರನ್ನು ಕೈದುಮಾಡಿ ಶಿಕ್ಷೆ ವಿಧಿಸಿದುದು ಯಾವಾಗ (ಆ) ಅವರನ್ನು ಯಾವ ತಪ್ಪಿಗೆ ಶಿಕ್ಷಿಸಿದುದು?

ಉತ್ತರ (ಅ ಮತ್ತು ಆ ಪ್ರಶ್ನೆಗಳಿಗೆ) ಆ ಒಂಭತ್ತು ಮಂದಿಗಳನ್ನು ಕೈದುಮಾಡಿದುದು ೫ನೇ ಜನವರಿಯಲ್ಲಿ ಅವರನ್ನು ಸೆಕ್ಷನ್ ೧೪೩ ಮತ್ತು ೧೮೮ ಇಂಡಿಯನ್ ಪಿನಲ್ ಕೋಡ್ ಇವುಗಳಿಗನುಸಾರವಾಗಿ ಶಿಕ್ಷಿಸಲಾಯಿತು.

ಇವರನ್ನು ಕೈದುಮಾಡಿದಾಗ ಆ ಸೆಕ್ಷನ್ ೧೪೪ ಸಿ. ಪಿ. ಸಿ. ಅಲ್ಲಿ ಜಾರಿಯಾಗಿತ್ತೇ ಎಂದು ಶ್ರೀಯುತ ಭಟ್ಟರು ಪ್ರಶ್ನಿಸಿದಾಗ ಹೋಮ್ ಮೆಂಬರರು ತನಗೆ ವಾರ್ತೆಯಿಲ್ಲವೆಂದೂ ವಿಚಾರಿಸುತ್ತೇನೆಂದೂ ಹೇಳಿದರು

ಲಾಠಿಗಳ ಅವಿವೇಕಪರ ಉಪಯೋಗ

ಶ್ರೀಯುತ ... ಡಿ ಶಟ್ (ಅ) ಕಾಯಿದೆಭಂಗ ಮಾಡುವವರ ಮೇಲೆ ಪೋಲೀಸರು ಲಾಠಿಗಳನ್ನು ಅವಿವೇಕಪರವಾಗಿ ಪ್ರಯೋಗಿಸುವ ಕುರಿತು ಸರಕಾರಕ್ಕೆ ಮನವಿಗಳು ಬಂದಿವೆಯೋ (ಆ) ತಾ ೧೮ ಜನವರಿ ವಿನ ಕೆಲವು ಮುಖ್ಯರು ಒಂದು ಮನವಿಯನ್ನರ್ಪಿಸಿದಾಗ ಅಂದಿನಿಂದ ಅಲ್ಪಾವಧಿ ಬಲಾತ್ಕಾರವನ್ನು ತೋರಿಸಲಾಗುವುದೆಂದು ಸರಕಾರವು ಭರವಸೆಯಿತ್ತಿರುವುದೇ? (ಇ) ತಲೆಗೆ ಹೊಡೆಯದಂತೆಯೂ ಲಾಠಿಯ ಬದಲು ಬೆತ್ತಗಳನ್ನುಪಯೋಗಿಸುವಂತೆಯೂ ಸರಕಾರವು ಸಲಹೆಗಳನ್ನಿತ್ತಿದೆಯೆಂಬುದು ಸತ್ಯವೋ?

(ಅ) ಪ್ರಶ್ನೆಗೆ ಉತ್ತರ ಹೌದು (ಆ) ಪ್ರಶ್ನೆಗೆ ಉತ್ತರ—'ಹೌದು (ಇ) ಪ್ರಶ್ನೆಗೆ ಉತ್ತರ—ಕಾಯಿದೆಭಂಗ ಚಳವಳದಲ್ಲಿ ಭಾಗವಹಿಸುವ ಜನರ ಮೇಲೆ ಸಮಯೋಚಿತವಾಗಿರುವುದಕ್ಕಿಂತ ಹೆಚ್ಚು ಬಲಾತ್ಕಾರವನ್ನು ತೋರಿಸಬಾರದಾಗಿ ಸರ್ವಸಾಮಾನ್ಯ ಸಲಹೆಯು ಕೊಡಲ್ಪಟ್ಟಿದೆ ಸಾಧ್ಯವಿರುವಷ್ಟು ಮಟ್ಟಿಗೆ ಲಾಠಿಯ ಬದಲು ಬೆತ್ತವನ್ನುಪಯೋಗಿಸಲಾಗುತ್ತದೆ ಸ್ಥಿತಿಗಗತ್ಯವಿರುವುದಕ್ಕಿಂತ ಹೆಚ್ಚಿನ ಬಲವನ್ನುಪಯೋಗಿಸಬಾರದೆಂದು ಲಾಠಿಗಳನ್ನುಪಯೋಗಿಸಲಾಗುತ್ತದೆ

ಶ್ರೀಮತಿ ಎಂ ರತ್ನಾಬಾಯಿಯವರ ಸೆರೆಮನೆಯ ದರ್ಜೆ

ಶ್ರೀಯುತ ಯು ಓ ಸುಬ್ರಹ್ಮಣ್ಯ ಭಟ್ಟರು—(ಅ) ಭಟ್ಕಳದಲ್ಲಿ ಶ್ರೀಮತಿ ಮುರ್ಡೇಶ್ವರ ರತ್ನಾಬಾಯಿಯವರು ಪಿಕೆಟ್ ಮಾಡಿದುದಕ್ಕಾಗಿ ಅವರಿಗೆ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಸಿ ಕ್ಲಾಸನ್ನು ಕೊಟ್ಟಿದ್ದು ಹೌದೋ? (ಆ) ಈ ಕ್ಲಾಸನ್ನು ಕೊಟ್ಟ ಕುರಿತು ಸರಕಾರವು ಸಂತುಷ್ಟವಾಗಿದೆಯೋ ಹಾಗಿಲ್ಲದಿದ್ದರೆ ಈ ಕುರಿತು ಸರಕಾರವು ಯಾವ ಉಪಾಯವನ್ನು ಯೋಚಿಸಲಿರುತ್ತದೆ

ಉತ್ತರ (ಎರಡಕ್ಕೂ) ಸರಕಾರಕ್ಕೆ ಸುದ್ದಿಯಿಲ್ಲ. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಂದ ಒಂದು ರಿಪೋರ್ಟನ್ನು ತರಿಸಿಕೊಳ್ಳಲಾದೀತು.

+—+—+—+

ವಿ ವಿ ಧ ಸ ಮಾ ಚಾ ರ ಗ ಳು.

ಕ್ರಾಂತಿಕಾರನಿಗೆ ಜಯ..

ಅನೇಕ ವರ್ಷಗಳಿಂದಲೂ ಇಂಗ್ಲೆಂಡಿನ ಕೈಯೊಳಗಿದ್ದ ಐರ್ಲೆಂಡ್ ದೇಶವು ಸ್ವಾತಂತ್ರ್ಯಕ್ಕಾಗಿ ಹೋರಾಡಿತು. ಇಂದು ಹಿಂದೀಯರು ಸಂಪೂರ್ಣ ಸ್ವಾತಂತ್ರ್ಯವು ಬೇಕೆಂದು ಚಳವಳಿಸುವಂತೆ ಅಂದು ಅವರು ಸ್ವಾತಂತ್ರ್ಯಕ್ಕಾಗಿ ಚಳವಳಿಸಿದರು. ಐರ್ಲೆಂಡಿನಲ್ಲಿ ಡಿವೆಲೆರಾ ಎಂಬೊಬ್ಬ ಕ್ರಾಂತಿಕಾರನು ಉಗ್ರ ಹೋರಾಟವನ್ನು ನಡೆಸಿದನು. ಪ್ರಜಾಧಿಪತ್ಯವನ್ನೇ ಸ್ಥಾಪಿಸಬೇಕೆಂದು ಅವನ ಹಠವಾಯಿತು. ಬ್ರಿಟಿಷರಿಂದ ಐರ್ಲೆಂಡು ದೂರವಾಗಬೇಕೆಂದು ಅವನು ಟೊಂಕಕಟ್ಟಿದನು. ತನ್ನ ಸರಕಾರದೊಡನೆಯೇ ಹೋರಾಡಿ ಅಲ್ಲ ಮಹಾಪ್ರಳಯವನ್ನೆಬ್ಬಿಸಿದನು. ಕೊನೆಗೆ ಸ್ವತಂತ್ರ ಐರ್ಲೆಂಡ್ [illegible] ವರ್ಗಟ್ಟಿತು. ಕೊಸ್‌ಗ್ರೇವ್ [illegible] ಆದರೂ ಡಿವೆಲೆರನು ಸಂತೃಪ್ತಿಯಾಗಲಿಲ್ಲ. ಐರ್ಲೆಂಡಿನ ಸಂಪೂರ್ಣ ಸ್ವಾತಂತ್ರ್ಯವೇ ಅವನ ಮಂತ್ರವಾಯಿತು. [illegible] ನಡೆದ ಸರಕಾರ (ಕೊಸ್‌ಗ್ರೇವ್) [illegible] ಸರಕಾರಕ್ಕೆ [illegible] ಸಂಖ್ಯೆಯೂ ಡಿವೆಲೆರನಿಗೆ [illegible] ಡಿವೆಲೆರನು [illegible] ಕೊಸ್‌ಗ್ರೇವ್ ಸರಕಾರವು [illegible] ಪ್ರಜಾಧಿಪತ್ಯವಾಗಿದೆ [illegible] ಇಂಗ್ಲೆಂಡಿನ [illegible] ಐರ್ಲೆಂಡಿನೊ [illegible] ಇರುವ ಸಂಪರ್ಕವನ್ನು ಡಿವೆಲೆರನು [illegible] ಪದರಿಕೆಯು ಎಲ್ಲೆಲ್ಲಿಯೂ ಇದೆ. ಕ್ರಾಂತಿಕಾರನಾದ ಡಿವೆಲೆರನು ವೀರನು ತನ್ನ ಸರಕಾರದ [illegible] ಐರ್ಲೆಂಡ್ ದೇಶದಲ್ಲಿ [illegible]

ಮೆಕ್‌ಡೋನಾಲ್ಡರು ಬಾಯಿ ಮುಚ್ಚುವಂತೆ ಯತ್ನ

[illegible]

ಆಂಗ್ಲೇಯರೊಬ್ಬರ ವಿವೇಕ

ತಾ ೧೦ನೇ ದಿನ ಕಲಕತ್ತೆಯಲ್ಲಿ ಯೂರೋಪಿಯನ್ ಸಂಘದವರ ಒಂದು ಸಭೆಯು ಜರಗಿತು. ಅದರಲ್ಲಿ [illegible] ಎಂಬವರು ಮಾತನಾಡುತ್ತಾ, ರಾಜಕೀಯ ಸುಧಾರಣೆಯಿಂದಾಗಿ ನಮ್ಮ ಆಂದರೆ ಆಂಗ್ಲೇಯರ ಪೆಟ್ಟಿಗೆ ತೊಂದರೆಯು ತಪ್ಪಲಾರದು. ಹಿಂದೂದೇಶದಲ್ಲಿ ಆಂಗ್ಲೇಯರಿಗೆ ಹೆಚ್ಚಿನ ಪ್ರತ್ಯೇಕ ಬಾಧ್ಯತೆಗಳು ದೊರೆಯಬೇಕೆಂದು ಎಲ್ಲರಭಿಮತವಿದೆ. ನಾನು ಹೇಳುವುದೇನೆಂದರೆ ಆಂಗ್ಲೇಯರು ಕಮ್ಮಿಟಿ ಪ್ರಕಾರ ಹಿಂದೂಸ್ಥಾನದಲ್ಲಿ ದುಡಿದು ವಿಸ್ತಾರ ಮಾಡಲು ಬಂದಿರುವವರು. ಹಾಗಿರುವಾಗ ಆವರೆಲ್ಲರೂ ತಾವೂ ಕೂಡಾ ಹಿಂದೀಯರೇ ಎಂದು ಭಾವಿಸಿಕೊಂಡು ಹಿಂದೀಯರಷ್ಟೇ ಹಕ್ಕು ಭಾಗ್ಯದಿಂದಿರಲು ಯತ್ನಿಸಬೇಕು. ಹಿಂದೂದೇಶದಲ್ಲಿರುವವರಿಗಿಂತ ಹೆಚ್ಚಿನ ಹಕ್ಕುಗಳನ್ನು ಆಂಗ್ಲೇಯರು ಹೊಂದಬಾರದು. ಆದುದರಿಂದ ನಾನು ಹೇಳುವುದೇನೆಂದರೆ ಆಂಗ್ಲೇಯರಿಗೆ ವಿಶೇಷವಾದ ರಕ್ಷಣೆಯೇನೂ ಅಗತ್ಯವಿಲ್ಲ. ಅನೇಕರು ಇದಕ್ಕೊಪ್ಪಲಾರದವರೂ, ಇದು ನನ್ನ ಅಭಿಪ್ರಾಯ. ಹಿಂದೂದೇಶದ ಎಲ್ಲಾ ಭಾಗಗಳೂ ನವಸುಧಾರಣೆಯನ್ನು ಹೊಂದಿರುವುದಿಲ್ಲವಾದರೂ, ಅದರ ಬಹುಭಾಗವು ಸುಧಾರಿತವಾಗಿದೆ. ಅಂತಹ ಸಾಂಸ್ಕೃತಿಕ ದೇಶದಲ್ಲಿ ಯುರೋಪಿಯನರು ಎಷ್ಟು ಮಾತ್ರಕ್ಕೂ ವಿಶೇಷ ಹಕ್ಕುಗಳನ್ನು ಕೇಳಬಾರದು. ಆದರೆ ಈ ದೇಶವನ್ನು ಪ್ರತ್ಯೇಕ ಸ್ಥಿತಿಗೆ ತರಲು ನಮ್ಮ ಹಿರಿಯರು ಹೆಣಗಾಡಿದ್ದಾರೆ. ಹಾಗೆ ನಮ್ಮಿಂದಲೇ ಭದ್ರೀಕರಿಸಲ್ಪಟ್ಟ ಈ ದೇಶದಲ್ಲಿ ನಮಗೆ ಅಧೋಗತಿಯು ಕೂಡಾ ಇರಬಾರದು. ಹಾಗೆ ಯಾವ ಹಿಂದೀಯನೂ ನೆನಸಲಾರನು. ಒಂದು ವಿಶೇಷವೇನೆಂದರೆ, ಹಿಂದೂಸ್ಥಾನಕ್ಕೆ ಬರುವ ಪ್ರತಿಯೊಬ್ಬ ಆಂಗ್ಲೇಯನೂ ತನ್ನೊಡನೆ ದುಂದುಗಾರಿಕೆಯ ಜೀವನಕ್ರಮವನ್ನು ಹಿಡಿದುಕೊಂಡು ಬರುತ್ತಾನೆ. ಇದು ಬಹಳ ಹಾನಿಕರ. ಇದನ್ನು ಹೋಗಲಾಡಿಸಬೇಕಾದರೆ ನಾವುಗಳೆಲ್ಲ ಸಂಬಳದಿಂದಲೂ ವಿಶ್ವಾಸದಿಂದಲೂ ಇಲ್ಲಿ ಕೆಲಸ ಮಾಡಬೇಕು. ನಾವು ಎಷ್ಟನ್ನು ಇಲ್ಲಿಂದ ಪಡೆಯುತ್ತೇವೋ ಅಷ್ಟನ್ನು ಇಲ್ಲಿಯವರಿಗೆ ಹಿಂದೆಕೊಡಬೇಕು' ಎಂದರು. ಇವರ ಮಾತನ್ನು ಕೇಳಿದ ಯುರೋಪಿಯನ್ ಸಂಘದ ಅಧ್ಯಕ್ಷರಾಗಿ ಕಲ್ಕತ್ತದಲ್ಲಿ ಮಂಡಿಸಿರುವ ವಿಲ್ಲಿಯರ್ಸ್ ದೊರೆಗಳು ಕೋಪಿಸಿಕೊಳ್ಳದಿರಲಿಕ್ಕಿಲ್ಲವೆಂದು ಕೆಲವು ಪತ್ರಿಕೆಗಳನ್ನುತ್ತವೆ.

೧೧೦೦ ಕಬ್ಬಗಳ ತಂತಿ ನಿಲ್ಲಿಸಲ್ಪಟ್ಟಿತು

[illegible] ೧೧೦೦ ಕಬ್ಬಗಳ [illegible] ಇಂಡಿಯನ್ [illegible] ಇಂಡಿಯನ್ [illegible] ೨೦೦೦ [illegible] ೧೧೦೦ [illegible] ಇದೇ ತಾ ೧೦ನೇ ದಿನ [illegible]

ಮಂಚೂರಿಯದಲ್ಲಿ ಪ್ರಚಂಡ ದಂಗೆ!

ಚೀನ, ಜಪಾನರು ಯುದ್ಧ ತಯಾರಿಯನ್ನು ನಿಲ್ಲಿಸುವುದಿಲ್ಲ. ಶೆಂಪ್ಸ ಪ್ರದೇಶದ ಹೆಚ್ಚಿನ ಭಾಗವು ಜಪಾನರ ಕೈಯೊಳಗಾಯಿತು. ಅದಕ್ಕೆ ಮುಂಚೆ [illegible] ಅಧಿಕಾರಿಯಾಗಿ [illegible] ಮಂಚೂರಿಯದಲ್ಲಿ ಹೊಸ ಸರಕಾರವು ಸ್ಥಾಪಿತವಾಯಿತು. [illegible] ಜನಸಮೂಹಗಳು [illegible] ವಿರುದ್ಧ ಪ್ರದರ್ಶನವನ್ನು ಮಾಡಿದರು. [illegible] ಜನ ಕೊಲ್ಲಲ್ಪಟ್ಟರು — ದಂಗೆಖೋರರು ಸರಕಾರದ ಸೈನ್ಯವನ್ನೆಲ್ಲಾ ಮುತ್ತಿ ಅನೇಕರನ್ನು ಕೊಂದರು — ಗಾಯಗೊಳಿಸಿದರು. ಅಧಿಕಾರವರ್ಗದ [illegible] ಕೊಂದಿಕ್ಕಿದರು. [illegible] ಗಳು ಜಪಾನೀಯ ಕ್ವಾರ್ಟರನ್ನೂ, [illegible] ವಧಿಸಿದರು. ಇದೀ ಪಟ್ಟಣವು ದಂಗೆಖೋರರ ಕೈಯೊಳಗಾಗಿ ದರೋಡೆಗಳು ನಡೆದುವು. ಸೋವಿಯಟ್ ಸ್ಟೇಟ್ ಟ್ರೇಡಿಂಗ್ ಕೊರ್ಪೊರೇಶನಿನ ಕಟ್ಟೋಣಗಳು ಧ್ವಂಸವಾದುವು.

ನಾಲ್ಕು ಚೈನೀಯ ಬೇಂಕುಗಳು ಸುಟಲ್ಪಟ್ಟುವು. ಬಂದೀಖಾನೆಗಳು ಒಡೆಯಲ್ಪಟ್ಟುವು. ಕಷ್ಟಂ ಹೌಸಿನ ಬ್ರಿಟಿಷ್ ಮೆನೆಜರರಾದ ಕ್ರೊಸ್‌ಮೇನ್ ಎಂಬವರನ್ನು ಭಂಗಿಸಿದರು. ಇವರು ತನ್ನ ಕುಟುಂಬ ಸಮೇತರಾಗಿ ಅಮುರ್ ಸಮುದ್ರ ಮಾರ್ಗವಾಗಿ ರಕ್ಷಣೆಗೆ ಓಡಿರುವರು. ಜಪಾನೀಯ ಕನ್ಸಲ್ ಮತ್ತು ಚೈನೀಸ್ ಸ್ಟೇಟ್ ಬೇಂಕಿನ ಡೈರೆಕ್ಟರರೂ ಬೇರೆ ಪ್ರಾಂತ್ಯಗಳಿಗೆ ಪಲಾಯನ ಮಾಡಿರುವರು. ಎಲ್ಲಾ ಮುಖ್ಯಾಧಿಕಾರಿಗಳೂ ಊರುಬಿಟ್ಟು ತೆರಳಿರುವರು. ಮಂಚೂರಿಯವು ಯುದ್ಧರಂಗವಾಗಿದೆ

ಮುಷ್ಕರಗಳ ವರದಿ

೧೯೩೧ನೇ ವರ್ಷಾರಂಭವಾಗುವುದರೊಳಗೆ ಹಿಂದೂದೇಶದಲ್ಲಿ ಒಟ್ಟು ೧೬೬ ಮುಷ್ಕರಗಳು ನಡೆದುವು. ಅದರಲ್ಲಿ ಭಾಗವಹಿಸಿದ ಜನಸಂಖ್ಯೆ ೨,೦೩,೦೦೮. ೧೯೩೦ರಲ್ಲಿ ೧೪೮ ಮುಷ್ಕರಗಳಾದುವು. ಒಟ್ಟು [illegible] ಜನರು ಭಾಗವಹಿಸಿದ್ದರು. [illegible] ದಿನಗಳು ನಷ್ಟವಾದುವು. [illegible] ದಿನಗಳು [illegible] ದಿನಗಳು ನಷ್ಟವಾದುವು. [illegible] ಗಳು ದೇಶದ ಬೆಳವಣಿಗೆಗೆ ಹಾನಿಕರವಾಗಿವೆ

ದಿ. ಕೆನರಾ ಬೇಂಕಿಂಗ್ ಕೋಪ್ರೇರೇಶನ್
ಉಡುಪಿ ಲಿಮಿಟೆಡ್, ಮಂಗಳೂರು.
ನೋಟೀಸು

[illegible]

[illegible]

[illegible]

[illegible]

[illegible]

Office of the Corporation Mangalore 1—3—32

K. Vittal Bhandary. Agent

ಶಾಲಿವಾಹನಶಕ ೧೮೫೩ನೆಯ ಪ್ರಜೋತ್ಪತ್ತಿ ಸಂವತ್ಸರದ ಫಾಲ್ಗುಣ ಶು ೧೩ ಶನಿವಾರದಿಂದ ಪ್ರಜೋ॰ ಸಂವತ್ಸರದ ಫಾಲ್ಗುಣ ಬ ೪ ಶುಕ್ರವಾರದ ವರೆಗಿನ ಪಂಚಾಂಗ

(ಗ್ರೀನ್‌ವಿಚಿನ ವೇಳೆ–ಸುಗ್ಗಿ).

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗಾಂಶ	ಸೂರ್ಯ F. ಉ	ಅಸ್ತ
19	ಶನಿ	೧೩	೪೬ ೪೩	ಆಶ್ಲೇಷಾ	೪೪ ೪೬	೬	6.38	6 40
20	ರವಿ	೧೪	೪೧ ೪೪	ಮಘಾ	೪೩ ೩೧	೭	6 37	6 40
21	ಸೋಮ	೧೫	೩೭ ೩	ಪುಬ್ಬ	೩೯ ೧೪	೮	6 37	6 41
22	ಮಂಗ	○	೩೧ ೩೩	ಉತ್ತರಾ	೩೪ ೪೬	೯	6 36	6.41
23	ಬುಧ	೧	೨೬, ೩	ಹಸ್ತಾ	೩೨, ೨	೧೦	6.35	6.41
24	ಗುರು	೨	೨೦, ೧	ಚಿತ್ರಾ	೨೭ ೪೬	೧೧	6.35	6.41
2	ಶುಕ್ರ	೩	೧೪,೧೬	ಸ್ವಾತೀ	೨೩ ೪೪	೧೨	6 34	6.41

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಶಾಖ) Maximum ಅಧಿಕವಾದ		Minimum ಅಲ್ಪವಾದ		Rainfall ಮಳೆ ದಿನದ ಮಳೆ	ಜುಮುಲಾ ಮಳೆ.
11	89—	1	74—	9	—	—
12	87—	6	74—	8	—	—
13	87—	6	75—	1	—	—
14	87—	7	74—	8	—	—
15	87—	8	76—	5	—	—
16	87	9	76	9	—	—
17	88—	4	74—	9	—	149–96

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ.	ವರೆಗೆ ರೂ. ಆ.
ಹೊಸ ರಾಶಿ ಅಕ್ಕಿ	3 – 10	4 – 0
ಹೊಸ ಮುಡಿ	4 – 0	4 – 8
ಹೊಸ ಗುಲ್ಲು	3 – 14	4 – 4
ಹೊಸ ಸುಗ್ಗಿ	3 – 10	3 – 14
ಊರ ಅಮ್ಲರ್ ಬೆಲ್ಲ	4 – 8	6 – [illegible]
ರಂಗೂನು ಬೆಲ್ಲ ಗೋಣಿ ಒಕ್ಕೆ	7 – 14	8 – [illegible]
ಎಳ್ಳು ಬೆಲ್ಲ ಮುಡಿ ಒಕ್ಕೆ	4 – 8	4 – 10
ಗೋಧಿ ಗೋಣಿ ಒಕ್ಕೆ	9 – 8	14 – 8
ಹುರಿ ಗೋಣಿ ಒಕ್ಕೆ	12 – 0	12 – 8
ಹುರುಳಿ ಗೋಣಿ ಒಕ್ಕೆ	… 6 – 8	7 – 0
ಕಡಲೆ ಗೋಣಿ ಒಕ್ಕೆ	8 – 8	12 – 8
ತೊಗರಿಬೇಳೆ ಗೋಣಿ ಒಕ್ಕೆ	.. 13 – 8	41 – 0
ಉದ್ದು ಗೋಣಿ ಒಕ್ಕೆ	11 – 8	13 – 0
ಹೆಸರು ಗೋಣಿ ಒಕ್ಕೆ	10 – 4	11 –
ಊರು ಬಿಲ್ಲ ಖಂಡಿ ಒಕ್ಕೆ	2[illegible] – 8	30 – 0
ಉಪ್ಪು ಗೋಣಿ ಒಕ್ಕೆ	4 – 12	4 – 14
ಮೆಣಸು ಖಂಡಿ ಒಕ್ಕೆ	.. 60 –	62 –
ಕೊಬ್ಬರಿ ಖಂಡಿ ಒಕ್ಕೆ	… 27 – 8	28 – 0
ಎಳ್ಳಿಂದ ಖಂಡಿ ಒಕ್ಕೆ	2[illegible] – 8	28 – 12
ಕೊಬ್ಬರಿ ಎಣ್ಣೆ ಮಣ ಒಕ್ಕೆ	. 5 – 14	6 – 14
ಎಳ್ಳೆಣ್ಣೆ ಮಣ ಒಕ್ಕೆ	6 – 12	7 – 0
ಜಾವಾ ಸಕ್ಕರೆ ಚೀಲಕ್ಕೆ ಒಕ್ಕೆ	. 4 – 7	8 – 14
ತ್ರಾವಣ ಸಕ್ಕರೆ ಮುಡಿ ಒಕ್ಕೆ	.. 4 – 2	4 – 3
ಹೊಸ ಗೇರು	. 4 – 0	5 – [illegible]
ಬಾಳೆ ಮುಡಿ ಒಕ್ಕೆ	5 – 8	6 – 0
ಕೇಟೆಡ್ ಶಾಫಿ ಖಂಡಿ ಒಕ್ಕೆ	217 – 8	225 –
ಶಾಳುಮೆಣಸು ಖಂಡಿ ಒಕ್ಕೆ	170 – 0	180 –
ಮೆಂತ್ಯ ಮಣ ಒಕ್ಕೆ	27 – 0	28 –
ಗಿರುಜೀಗ ಮುಡಿ ಒಕ್ಕೆ	4 – 6	4 – 12
ಅಕ್ಕಿ ಖಂಡಿ ಒಕ್ಕೆ	35 – 0	36 – 0
ಒಂದ್ಯ ಶಗಡು ಮಣ ಒಕ್ಕೆ	14 – 0	12 – 4
ಒಂದ್ಯ ಶಾಸ್ತ್ರಗಳು ಮಣ ಒಕ್ಕೆ	15 – 0	16 – 0
ಜಿಂಜಿಲಿ ಶೀರು ಒಕ್ಕೆ	.. 14 – 8	14 – 12
ಒಣ್ಣೆ ಶಗಡು ಮಣ ಒಕ್ಕೆ	14 – 0	12 – 8
ಪವಮ ಒಕ್ಕೆ	… 17 – 13	17 – 14
ಕಪ್ಪ ಸುಳಿ ಖಂಡಿ ಒಕ್ಕೆ	.. 20 –	—
ಚಿಟ್ಟಿ ರಾಶಿ ಖಂಡಿ ಒಕ್ಕೆ	375 –	400 –
ಹೊಸ ಅಡಿಕೆ	.. 180 –	205 –
ಪುರಾಣದ	140 –	145 –

Chikmagalur Public Conveyance Motor Service.

C H I K M A G A L U R .

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗ, ಕೊಟ್ಟಿಗೆಹರಕ್ಕೆ 10-30ಕ್ಕೆ, ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಅಥ ಧರ್ಮಸ್ಥಳ ರೋಡಿಗೆ ದಿನ 1 30ಕ್ಕೂ, ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ, ಅಲ್ಲಿಂದ [illegible] ಸುಮಾರು 2 ಗಂಟೆಗೆ ಮೂಡಗೆರೆಗೂ [illegible] ಗಂಟೆಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರ ತೀರ್ಥ ಕೊಂಡು [illegible] ಚಿಕ್ಕಮಗಳೂರಿನಿಂದ ಸಾಯಂಕಾಲ 6 ಎ0ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗೆ ಹೋಗುವ ಪ್ರಯಾಣಿಕರು [illegible] ಎಕ್ಸ್‌ಪ್ರೆಸ್ ರೈಲಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ [illegible] ಹುಬ್ಬಳ್ಳಿಗೂ [illegible], ಪಂಡರಪುರ [illegible] ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 ಎ0ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳ ಕಡೆಗೆ [illegible] ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ ಎಸ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ ಕೆತ್ತಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿನ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು ನೋಡಬಿಚ್ಛಿಸುವವರು ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Company Ltd., Mangalore

ಸ್ವದೇಶಿ.

'Buy Indian'

ಇದು ಇಂದಿನ ದಿನಗಳ ಮಹಾ ಮಂತ್ರ! ಎಲ್ಲರೂ ಸ್ವದೇಶಿಯನ್ನೇ ಪಡೆಯಬೇಕೆಂಬ ಉಪದೇಶವು ಭಾರತವರ್ಷದಲ್ಲಿ ಘಂಟಾಘೋಷವಾಗಿ ಕೇಳಿಸುತ್ತಿದೆ. ಮುಂಚಿನ ಕಾಲದಲ್ಲಿ ಸ್ವದೇಶಿ ಎಂಬುವರ ಭಾವಾರ್ಥವೇನೆಂದು ತಿಳಿಯದಿದ್ದ ಬಾಲರು ಕೂಡಾ ಈ ಕಾಲದಲ್ಲಿ 'ಸ್ವದೇಶಿ'ಯ ನಿಜವಾದ ಅರ್ಥವನ್ನೂ ಅಪ್ರತಿಮವಾದ ಮಹತ್ವವನ್ನೂ ಅರಿತಿರುವರು

ಈಗ ಪ್ರತಿಯೊಂದು ರಾಷ್ಟ್ರವು ತಲೆಯೆತ್ತಿ ದೂರಕ್ಕೆ ನೋಡುವುದಿಲ್ಲ. ತಲೆತಗ್ಗಿಸಿ ತನ್ನ ಅಡಿಗಳನ್ನು ನೋಡುತ್ತಿದೆ ಇಂದಿನ ದಿನದಲ್ಲಿ ಸನ್ನಿಹಿತವಾದ ಕಷ್ಟಗಳನ್ನು ಜಾಗ್ರತೆಯಿಂದ ದೂರೀಕರಿಸಿಕೊಳ್ಳಬೇಕೆಂದು ಬಗೆದಿದೆ. ತನ್ನ ಸುತ್ತಮುತ್ತ ಇರುವ ಭದ್ರತೆಯ ಕುರಿತು ಎಚ್ಚರದಿಂದಲೇ ಆಲೋಚಿಸುತ್ತದೆ ನೆರೆಯ ಅಂಗಳದ ತನಕ ಬಂದಿದೆಯೆಂದು ಅದಕ್ಕೀಗ ತಿಳಿದು ಬಂದಿದೆ. ಸ್ವರಕ್ಷಣಾರ್ಥವಾಗಿ ಪ್ರತಿ ರಾಷ್ಟ್ರವೂ ಜಾಣಗಾಡುತ್ತಿದೆ. ತನ್ನ ಆರ್ಥಿಕ ಸ್ಥಿತಿಯನ್ನು ಮೊದಲು ಸಜ್ಜುಗೊಳಿಸುವ ಹವಣಿಕೆಯಲ್ಲಿ ನಿರತವಾಗಿದೆ ಸಂಪತ್ತೇ ರಾಷ್ಟ್ರವು, ರಾಷ್ಟ್ರವೇ ಸಂಪತ್ತು ಎಂಬ ಸಂಗತಿಯನ್ನು ತಾನರಿತು ತನ್ನ ಜನಸಮುದಾಯಕ್ಕೆ ಬೋಧಿಸುತ್ತಿದೆ ಅಂತಹ ರಾಷ್ಟ್ರಗಳಲ್ಲಿ ಹಿಂದೂದೇಶವು ಒಂದಾಗಿರುತ್ತದೆ

ಪೂರ್ವಕಾಲದಲ್ಲಿ ಹಿಂದೂದೇಶವು ಅತ್ಯುಚ್ಚ ತರದ ರಾಷ್ಟ್ರವಾಗಿತ್ತು ಇದರಲ್ಲಿದ್ದ ಅತುಲೈಶ್ವರ್ಯಕ್ಕೆ ಅದ್ಯಂತ್ಯವಿರಲಿಲ್ಲ ಈಗೀಗ ಅಲ್ಲಲ್ಲಿ ದೊರೆಯುವ ನಿಧಿಯಿಂದಲೇ ಹಿಂದೂದೇಶದ ಅತುಲೈಶ್ವರ್ಯದ ಕಲ್ಪನೆಯನ್ನು ಹಾಕಬಹುದು ಪ್ರಪಂಚದ ಎಲ್ಲಾ ರಾಷ್ಟ್ರಗಳೂ ಹಿಂದೂದೇಶದೊಡನೆ ವ್ಯಾಪಾರ ವಾಣಿಜ್ಯವನ್ನು ನಡೆಸಿ ಉನ್ನತಿಯ ಶಿಖರಕ್ಕೆ ಮುಟ್ಟಿದುವೆಂದರೆ ಅತಿಶಯೋಕ್ತಿಯಲ್ಲ ಪ್ರೊ॥ ರಾಧಾ ಕುಮುದ ಮುಖರ್ಜಿಯವರು ಹೇಳುವುದೇನೆಂದರೆ,—"೩೦ ಶತಮಾನಗಳ ವರೆಗ ಅಖಂಡವಾಗಿ ಹಿಂದೂಸ್ಥಾನವು ಇಡೀ ಜಗತ್ತಿಗೆ ವ್ಯಾಪಾರ ಕೇಂದ್ರವಾಗಿದ್ದಿತು, ವ್ಯಾಪಾರದ ದೆಸೆಯಿಂದ ಹಿಂದೂ ಜನರು ದಕ್ಷಿಣ ಚೀನ, ಮಲೆಯಾ, ಅರೇಬಿಯಾ ಅಲ್ಲದೆ, ಆಫ್ರಿಕದ ಪೂರ್ವ ದಂಡೆಯಲ್ಲಿ ವಾಸವಾಗಿದ್ದರು, ರೋಮ್ ದೇಶದವರ ಕೂಡ ಹಿಂದೂಗಳ ವ್ಯಾಪಾರ ನಡೆಯುತ್ತಿತ್ತು"

ಹೀಗೆ ಹಿಂದೂದೇಶವು ಸಕಲ ರಾಷ್ಟ್ರಗಳೊಡನೆಯೂ ವ್ಯಾಪಾರ ವಾಣಿಜ್ಯವನ್ನು ಕೈಕೊಂಡು ಅನ್ಯ ರಾಷ್ಟ್ರಗಳನ್ನು ಉದ್ಧರಿಸಿತು ವಿದೇಶೀಯ ಮಾಲುಗಳನ್ನು ಇಲ್ಲಿಗ ತಂದು ಹಾಕಿತು ಆಗ ವ್ಯಾಪಾರ ವಾಣಿಜ್ಯದಲ್ಲಿ ಪರಸ್ಪರ ಸೌಹಾರ್ದವೂ ಐಕ್ಯವೂ ಇದ್ದಿತು ಆದರ ಈ ಪರಿಸ್ಥಿತಿಯು ಮಾರ್ಪಾಟು ಹೊಂದಿದೆ ಪ್ರತಿಯೊಂದು ರಾಷ್ಟ್ರವು ತನ್ನ ದ್ರವ್ಯವನ್ನು ತನ್ನ ದೇಶದಲ್ಲೇ ಇರಿಸಲು ಪ್ರಯತ್ನವನ್ನು ಮಾಡುತ್ತಿದೆ. ತನ್ನ ಜನರು ಸ್ವದೇಶದ ಸಾಮಾನುಗಳನ್ನೇ ಉಪಯೋಗಿಸಬೇಕೆಂದೂ, ಅದನ್ನು ಪುರಸ್ಕರಿಸಿ ಸ್ವದೇಶಿಯ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕೆಂದೂ ಅನ್ನುತ್ತದೆ ಇತ್ತೀಚಿನ ಒಂದು ಚಾಟೋಕ್ತಿ ಎನ್ನುವಂತೆ 'What shall it profit a Nation to gain Swarajya and loose all her Industries' ಅಂದರೆ 'ದೇಶೀಯ ಕೈಗಾರಿಕೆಗಳನ್ನೇ ಕಳೆದುಕೊಂಡು ಸ್ವರಾಜ್ಯವನ್ನು ಸಂಪಾದಿಸಿದರೆ ಅದರಿಂದ ಆ ರಾಷ್ಟ್ರಕ್ಕೆ ಹಿತವೇನು?' ಈ ಮಂತ್ರವೇ ಈಗ ದೇಶ ದೇಶಗಳ ಹೃದಯಕ್ಕೆ ಹೊಕ್ಕಿದೆ ಕೈಗಾರಿಕ, ಕೃಷಿ, ವಾಣಿಜ್ಯಗಳಿದ್ದರೇನೇ ಸ್ವರಾಜ್ಯ—ಅವೇ ಸ್ವರಾಜ್ಯ' ಅವುಗಳು ಇಲ್ಲದಿದ್ದರೆ ಸ್ವರಾಜ್ಯವಿಲ್ಲವೆಂದು ಎಲ್ಲಾ ರಾಷ್ಟ್ರಗಳಿಗೂ ತಿಳಿದಿದೆ ಈ ಸಂಗತಿಯ ಅರಿವು ಎಲ್ಲರಿಗೂ ಒಂದಿದ್ದರೂ, ಅದನ್ನು ಕಾರ್ಯರೂಪಕ್ಕೆ ಹಚ್ಚಿದವರು ಹಿಂದೀಯರೆಂದೇ ಹೇಳಬಹುದು ೧೯೦೫ನೇ ಇಸವಿಯಿಂದ ಮೊದಲುಗೊಂಡು 'ಸ್ವದೇಶಿ' ಎಂಬ ಭಾಸ್ಕರನ ಪ್ರಕಾಶವು ಇಡೀ ರಾಷ್ಟ್ರವನ್ನು ಆವರಿಸಿದ್ದಿತು ಆದರೆ ಜನರ ಜಾಡ್ಯವೆಂಬ ಕಾರ್ಮುಗಿಲಿನಿಂದಾಗಿ ಆ ಪ್ರಕಾಶವು ಹೊಳೆಯಲಿಲ್ಲ. ಜನರಿಗ ಅದರ ಮಹತ್ವವು ತಿಳಿಯಲಿಲ್ಲ ಆದರೆ ಒಬ್ಬ ಮನುಷ್ಯನು ಇಂದು ಇದ್ದಂತೆ ನಾಳೆ ಇರುವುದಿಲ್ಲವಷ್ಟೆ? ಹಾಗೆಯೇ ಒಂದು ರಾಷ್ಟ್ರವು ಕೂಡಾ ಇಂದು ಇದ್ದ ಸ್ಥಿತಿಯಲ್ಲಿ ನಾಳೆ ಇರುವುದಿಲ್ಲ—ಹಿಂದೂದೇಶದಲ್ಲಿ "Awake and arise and stop not till the goal is reached" ಎಂಬ ದಿವಂಗತ ಸ್ವಾಮಿ ವಿವೇಕಾನಂದರ ಬೋಧನೆಯ ತುತ್ತೂರಿಯು ಪ್ರತಿಧ್ವನಿಸಿತು. ಹಿಂದೂದೇಶವು ನಿದ್ರೆಯಿಂದ ಮೆಲ್ಲನೆ ಎಚ್ಚೆತ್ತು ಕಣ್ಣು ಬಿಟ್ಟಿತು, ಸ್ವದೇಶಿ ಸೂರ್ಯನ ಪ್ರಜ್ವಲಿತ ಕಿರಣವನ್ನು ನೋಡಿತು. ಅಂದೇ ಹಿಂದೂದೇಶದ ಉನ್ನತಿಯ ಕಾಲವು ಸನ್ನಿಹಿತವಾಯಿತು.

ಜನರಲ್ಲಿ ಸ್ವದೇಶೀಯ ಮಂತ್ರವು ಪ್ರಬಲತೆಯನ್ನು ಹೊಂದುತ್ತಾ ಬಂದ ಹಾಗೆ ದೇಶೀಯ ಸಾಮಗ್ರಿಗಳಿಗೆ ಪ್ರೋತ್ಸಾಹವು ದೊರೆಯಿತು ತಮ್ಮ ರಾಷ್ಟ್ರ, ತಮ್ಮ ಜನರು, ತಮ್ಮ ಜನರ ಕಲಸ, ತಮ್ಮ ಜನರ ನಿಧಿಯೆಂಬ ಅನ್ಯೋನ್ಯ ಭಾವವು ಅವರಲ್ಲಿ ಮೂಡಿತು "Encourage Indian Industries" ಎಂದು ಸರಕಾರವೇ ಸಹಕರಿಸಿ ಬೋಧಿಸಿತು ಜನರಲ್ಲಿ ಸ್ವದೇಶಿ ಪ್ರೇಮವು ನೆಲಗೊಂಡಿತು.

ಇಷ್ಟಾಗುವಾಗ ಹಿಂದೂದೇಶದ ಆರ್ಥಿಕಸ್ಥಿತಿಯು ಉತ್ತಮತೆಯನ್ನು ಹೊಂದುತ್ತಾ ಬಂತು ಸ್ವದೇಶಿಯನ್ನು ಪುರಸ್ಕರಿಸಿದಷ್ಟು ನಮ್ಮ ಹಳ್ಳಿಗರೂ ಬಡವರೂ ಹಣವಂತರಾದರು ನಿರುದ್ಯೋಗಿಗಳಿಗ ಉದ್ಯೋಗವು ಲಭಿಸಿತು ಆಲಸ್ಯದ ಪಿಶಾಚಿಯು ಹಿಂದೂದೇಶದಿಂ ಹೊರಗ ಹೋಯಿತು ನಿರಾಲಸ್ಯವನ್ನು ಬಿಟ್ಟು ನಮ್ಮ ಜನರು ಚೈತನ್ಯದಿಂದ ಸ್ವದೇಶೀಯ ಕೈಗಾರಿಕೆಗಳಲ್ಲಿ ಮನಸ್ಸಿಟ್ಟರು

ಅಂತಹ ಕೈಗಾರಿಕಗಳಲ್ಲಿ ಹಿಂದೂದೇಶದಲ್ಲಿ ಪ್ರಥಮದಲ್ಲಾಗಿ ಹೊರಬಿದ್ದ ಗಾಂಧೀ ಬೋಧನೆಯ ಫಲವಾದ ಚರಕದ ಕೈಗಾರಿಕ ರಾಷ್ಟ್ರವು ಅದರ ಮಹತ್ವವನ್ನರಿಯಿತು ಚರಕದಲ್ಲಿ ಕೆಲಸಮಾಡಲು "ಪರದೇಶಗಳ ಯಂತ್ರಕಲಾ ನೈಪುಣ್ಯ ಸಹಾಯವಾಗಲೀ ಅಪಾರ ಬಂಡವಾಳವಾಗಲೀ ಬೇಕಿಲ್ಲವೆಂಬುದನ್ನೂ ಪ್ರತಿಯೊಬ್ಬನೂ ತನ್ನ ಮನೆ ಅಥವಾ ಗುಡಿಸಲಿನಲ್ಲಿ ಇದನ್ನು ತಿರುಗಿಸಬಹುದೆಂಬುದನ್ನೂ ಬೇರೆ ಕೆಲಸವಿಲ್ಲದಾಗ ಇದಕ್ಕೆ ಕೈಹಾಕಬಹುದೆಂಬುದನ್ನೂ, ಗಂಡಸಾಗಲೀ ಹೆಂಗಸಾಗಲೀ, ಮಗುವಾಗಲೀ, ಮುದುಕನಾಗಲೀ ಇದನ್ನು ತಿರುಗಿಸಬಹುದೆಂಬುದನ್ನೂ, ಕ್ಷಾಮ, ಡಾಮರ ಮೊದಲಾದವುಗಳು ಬಂದಾಗ ಇದು ಅನ್ನದಾತವಾಗಿರುವುದೆಂಬುದನ್ನೂ ಹಳ್ಳಿನಾಡಿನ ಬಡಗಿ ಕೂಡಾ ಇದನ್ನು ಮಾಡಬಲ್ಲ, ಮತ್ತು ಇದಕ್ಕೆ ಬೇಕಾದ ಸಾಮಾನುಗಳೆಲ್ಲ ಎಲ್ಲಾ ಹಳ್ಳಿಗಳಲ್ಲೂ ಸಿಗುತ್ತವೆಂಬುದನ್ನೂ ನಮ್ಮ ಜನರು ಅರಿತರು. ಅಲ್ಲದೆ ಅದರ ಪ್ರಾಶಸ್ತ್ಯವಾದ ಈ ತತ್ವಗಳನ್ನು ಅವರು ಅರಿತರು (೧) ಹಿಂಜುವುದೂ, ನೂಲುವುದೂ, ಮನೆತನಕ್ಕೆ ಬಂದ ವೃತ್ತಿ, ಸುಲಭವಾಗಿ ಕಲಿಯಬಹುದು (೨) ಇದಕ್ಕೆ ವಿಶೇಷ ಖರ್ಚು ವೆಚ್ಚಮಾಡಬೇಕಿಲ್ಲ (೩) ಇದರಲ್ಲಿ ದಪ್ಪದಾರವನ್ನಾಗಲೀ ನಯವಾದ ದಾರವನ್ನಾಗಲೀ ತೆಗೆಯಬಹುದು (೪) ಪರದೇಶಿ ಹತ್ತಿ ಬೇಕಾಗಿಲ್ಲ (೫) ಕೋಟ್ಯಾವಧಿ ನಿರುದ್ಯೋಗಿಗಳಿರುವಾಗ ಇದೊಂದೇ ಎಲ್ಲರಿಗೂ ಉದ್ಯೋಗ ಕೊಡತಕ್ಕದ್ದು (೬) ನಗರಗಳಿಗೋಡಿ ಗಿರಣಿಗಳಲ್ಲಿ ದುಡಿಯಬೇಕಾದ ಕೂಲಿಗಳಿಗೆ ಹಳ್ಳಿಗಳಲ್ಲೇ ಚರಕದಿಂದ ಉದ್ಯೋಗವನ್ನು ಕಲ್ಪಿಸಬಹುದು ನಗರ ಜೀವನದ ಅನೀತಿಯಿಂದ ಅವರು ಕೀಳುವ ಸಂಭವವಿಲ್ಲ (೭) ಭರತ ಖಂಡದ ಎಲ್ಲಾ ಕೋಮುಗಳಿಗೂ ಸಮಾನವಾಗಿ ವೃತ್ತಿ ಭಿಕ್ಷೆ ಇರುತ್ತದೆ. (೮) ಕೈಮಗ್ಗದ ಕೈಗಾರಿಕೆಯನ್ನು ಉದ್ಧಾರ ಮಾಡುತ್ತದೆ (೯) ರಾಜನೀತಿಗೂ ಇದಕ್ಕೂ ಸಂಬಂಧವಿಲ್ಲ (೧೦) ಇದರಿಂದ ಸಂಪತ್ತಿನ ಮಯವು (ಹಣ ಸಂಚಾರ) ಸಮಾನವಾಗಿ ಆಗುತ್ತದೆ (೧೧) ಅಸಮರ್ಥ ನಿರುದ್ಯೋಗಿಗಳಿಗೆ ಸಹ ಇದು ಉದ್ಯೋಗಶೀಲ ಸಂಭಾವನೆ ಮಾಡಿಕೊಡುತ್ತದೆ (೧೨) ಇದರಿಂದ ಭಾರತೀಯ ಸೃಷ್ಟಿಶಕ್ತಿಗೆ ಹೊಸ ಚೈತನ್ಯವು ಬರುತ್ತದೆ' ಎಂಬೀ ಪ್ರಾಮುಖ್ಯ ವಿಷಯಗಳನ್ನು ಜನರರಿತರು ಒಡನೆ ನಮ್ಮ ಒಪ್ಪಿಯ ವ್ಯಾಪಾರದಲ್ಲಿ ಹೊಸ ಚೈತನ್ಯವು ಉಂಟಾಯಿತು ಜನರು ಸ್ವದೇಶೀ ಪ್ರೇಮದಿಂದ ತೆಳ್ಳಗಿನ ಮಕ್‌ಮಲ್ಲಿನ ಚೀನಾ ಶಿಲ್ಕಿನ ಆಶೆಯನ್ನು ಮರತರು ದಪ್ಪವಾದರೂ ಚಿಂತಿಲ್ಲ, ಸ್ವದೇಶಿ ಎಂಬ ಭಾವನೆಯಿಂದ ಸ್ವದೇಶೀ ವಸ್ತ್ರವನ್ನುಟ್ಟರು ಹೀಗೆ ಹಿಂದೂದೇಶದಲ್ಲಿ ಸ್ವದೇಶೀ ಮಂತ್ರೋಚ್ಚಾರವು ಎಲ್ಲೆಲ್ಲೂ ಆಯಿತು

ಈ ಸುದ್ದಿ ಇಂಗ್ಲಾಂಡಿಗ ಮುಟ್ಟಿತು ಅವರಿಗೂ ಸ್ವದೇಶೀಯ ಅರ್ಥವು ತಿಳಿಯಿತು ತಾವು ಕೂಡಾ ತಮ್ಮ ಜಾಗ್ರತೆಯನ್ನೂ ಭದ್ರತೆಯನ್ನೂ ನೋಡಿಕೊಳ್ಳುವುದಕ್ಕಾಗಿ ಕಳೆದ ಕೆಲವು ತಿಂಗಳುಗಳ ಹಿಂದೆ ನಮ್ಮ ಪ್ರಿನ್ಸ್ ಒಫ್ ವೇಲ್ಸರ ಮುಂದಾಳುತನದಿಂದ "Buy British" ಎಂಬ ಚಳವಳವನ್ನು ಹೂಡಿದರು ನಾವೇನೋ ಸ್ವದೇಶೀ ಪ್ರಚಾರಕ್ಕಾಗಿ ಇಷ್ಟು ಕಾಲದಿಂದಲೂ ಹಣ ವೆಚ್ಚಮಾಡದೆ ಬರೇ ಬಾಯಿ ಮಾತಿನ ಕೆಲಸವನ್ನು ಮಾಡುತ್ತಿದ್ದೆವಾದರೂ, (ಆದರೆ ಈಗ ಹಣ ವ್ಯಯವಾಗಲಿದೆ) ಬ್ರಿಟಿಷರು ಮಾತ್ರ ಅನೇಕ ಸಾವಿರ ಸ್ಟರ್ಲಿಂಗುಗಳನ್ನು ಈ ಕೆಲಸಕ್ಕೆ ಈಗಾಗಲೇ ವೆಚ್ಚಮಾಡಿದರು. ಇಂಗ್ಲೆಂಡಿನಲ್ಲಿ ಇಂದಿನ ದಿನದಲ್ಲಿ ನೋಡಿದರೆ ಯಾವ ಗೋಡೆಯಲ್ಲೂ ಬೈ ಬ್ರಿಟಿಷ್ ಎಂಬ ನೋಟೀಸು ಅಂಗಡಿ, ಮನೆ, ಮರ, ಮೋಟರ್‌ಗಾಡಿ ಮೊದಲಾದ ಎಲ್ಲಾ ಕಡೆಗಳಲ್ಲಿಯೂ "ಬ್ರಿಟಿಷು ಸಾಮಾನುಗಳನ್ನೇ ಕೊಂಡುಕೊಳ್ಳಿ" ಎಂಬ ನೋಟೀಸು ಕಾಣಸಿಗುತ್ತದೆ. ಅದೇ ಮೇರೆಗೆ ಅಲ್ಲಿಯ ಜನರು ಆಚರಿಸುತ್ತಲೂ ಇರುವರು.

ನಮ್ಮ ಸ್ವದೇಶಿ ಪ್ರಚಾರ ಸಮಿತಿಯು ಕಳೆದ ಎರಡು ತಿಂಗಳ ಹಿಂದೆ ಕರಾಚಿ ನಗರದಲ್ಲಿ ಸ್ಥಾಪಿತವಾಯಿತು. ಕೆಲವು ಮಿಲಿಯಾಧೀಶರು ಅದನ್ನು ಮುಂದೊತ್ತಿದುದರಿಂದ ಅದಕ್ಕೆ ಹರ್ಷದ ಚೈತನ್ಯಾತ್ಮಕ ಬೆಂಬಲವು ದೊರೆಯಿತು ಸಾವಿರಾರು ಘನ ವರ್ತಕರೂ ಧುರೀಣರೂ ಅದಕ್ಕೆ ಸಹಾಯವನ್ನಿತ್ತರು ಈಗ ಕರಾಚಿಯಲ್ಲಿ ಎಲ್ಲೆಲ್ಲೂ ಸ್ವದೇಶೀ ಪ್ರದರ್ಶನವು ಜರಗುತ್ತಲಿದೆ ಆನೆ, ಒಂಟೆ, ಕುದುರೆ, ಬಂಡಿ ಇವುಗಳು ಒಟ್ಟುಗೂಡಿ ಸಾಮಾನುಗಳನ್ನು ಹೊತ್ತುಕೊಂಡು ನಗರಗಳಲ್ಲಿ ಸಂಚರಿಸಿ, "Buy Indian ಬೈ ಇಂಡಿಯನ್" ಎನ್ನುತ್ತವೆ

ಇದರ ಗಾಳಿಯು ಇಡೀ ಹಿಂದೂಸ್ಥಾನಕ್ಕೆ ಬೀಸಿತು ಮದ್ರಾಸ್ ಅಧಿಪತ್ಯಕ್ಕೂ ಕಳೆದ ತಿಂಗಳಲ್ಲಿ ಬೀಸಿತು ದೇಶ ಧುರೀಣರಾದ ಶ್ರೀ ಪಿ ಶಿವರಾಯರು ಇದರ ಮುಂದಾಳುತನವನ್ನು ವಹಿಸಿರುತ್ತಾರೆ ದೇಶದ ಸರ್ವ ಮೂಲೆಗಳಲ್ಲೂ, ಸ್ವದೇಶಿ ಸಂಘಗಳನ್ನು ಸ್ಥಾಪಿಸಿ ತದ್ವಿಷಯವನ್ನು ... ಆ ಸಂಘಗಳನ್ನು ತಮ್ಮ ಸಂಘಕ್ಕೆ ಲಗ್ತೀಕರಿಸಿರಿ ಎನ್ನುತ್ತಿದ್ದಾರೆ ಅವರು ಪ್ರಕಟಿಸುವುದೇನೆಂದರ 'ಖಾದಿ ಧರಿಸುವುದು ರಾಜದ್ರೋಹವೇ ಎಂಬ ಸಂಶಯವು ದೇಶೀಯರಲ್ಲಿ ಬಹಳವಾಗಿದೆ ಅದು ರಾಜದ್ರೋಹವಲ್ಲ ಸ್ವದೇಶೀ ಪ್ರಚಾರ ಕಾರ್ಯಕ್ಕೆ ತನ್ನ ಅಡ್ಡಿಯಿಲ್ಲವೆಂದು ಸರಕಾರವು ಖಂಡಿತವಾಗಿರುತ್ತದೆ ಮದ್ರಾಸು ಸರಕಾರವು ೨೪ನೇ ಫೆಬ್ರವರಿಯಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ಗಾಂಧಿ ಟೊಪ್ಪಿ ಧಾರಣ ಮಾಡಿದವರಿಗ ಉಪಟಳವನ್ನೀಯಬಾರದೆಂದಿದೆ ಇಂಡಿಯಾ ಸರಕಾರವು ... ಸ್ವದೇಶೀ ಪ್ರಚಾರವು ತಪ್ಪಲ್ಲವೆಂದಿದೆ ತಾ ೧೦ನೇ ಫೆಬ್ರವರಿಯಲ್ಲಿ ಭಾರತ ಸಚಿವರು ಕೂಡಾ ಅನ್ಯರಿಗ ಬಾಧ ಮಾಡದ ಸ್ವದೇಶೀ ಪ್ರಚಾರಕ್ಕೆ ಅಡ್ಡಿಯಿಲ್ಲವೆಂದರು ಮುಂಬಾಯಿ ಸರಕಾರವು ತಾ ೧೯ನೇ ಫೆಬ್ರವರಿಯಲ್ಲಿ ಇದೇ ಅಭಿಪ್ರಾಯವನ್ನು ಕೊಟ್ಟಿದೆ ಆದುದರಿಂದ ಜನಾಂಗವು ಇನ್ನಾದರೂ ಸ್ವದೇಶೀಯ ಸಾಮಗ್ರಿಗಳನ್ನೇ ಉಪಯೋಗಿಸಿ ಸ್ವದೇಶದ ಹಣವನ್ನು ಸ್ವದೇಶದಲ್ಲೇ ಉಳಿಸಿ, ಸ್ವದೇಶವನ್ನು ರಕ್ಷಿಸಿದ ಪುಣ್ಯವನ್ನು ಪಡೆಯಬೇಕೆಂದು ಆಶಿಸಬಹುದೇ?

ಈ ರೀತಿಯ ಪ್ರಚಾರ ಕಾರ್ಯದಲ್ಲಿ 'ಭಾರತ ಭೂಷಣ' ಪಂಡಿತ ಮದನ ಮೋಹನ ಮಾಲವೀಯರೂ ಭಾಗವಹಿಸಿದ್ದಾರೆ ಅವರು ಇದೇ ಮಾರ್ಚ ತಾ, ೧೬ನೇ ದಿನ ಬೆನಾರಸ್‌ನಲ್ಲಿ ಒಂದು ಸ್ವದೇಶೀ ಚಳವಳವನ್ನು ಪ್ರಾರಂಭಿಸಿದರು ಅವರು ಟೌನ್ ಹೋಲಿನಲ್ಲಿ ಭಾಷಣ ಮಾಡುತ್ತಾ — ದೇಶದ ಸಾಂಪತ್ತಿಕ ಸ್ಥಿತಿಯ ಉದ್ಧಾರಾರ್ಥಕವಾಗಿ ಪ್ರಾರಂಭವಾಗುವ ಸ್ವದೇಶೀ ಪ್ರಚಾರ ಕಾರ್ಯದಲ್ಲಿ ಎಲ್ಲರೂ ಭಾಗವಹಿಸಬೇಕು ಇದಕ್ಕೆ ರಾಜಕೀಯ ವಿಚಾರವು ಸಂಬಂಧಿಸುವುದಿಲ್ಲ ಬೆನಾರಸ್‌ನಲ್ಲಿ ನಾನು ಅಖಿಲ ಭಾರತ ಸ್ವದೇಶಿ ಸಂಘ ಒಂದನ್ನು ತೆರೆಯುತ್ತೇನೆ ಇದಕ್ಕೂ ... ಪಟ್ಟಣ ಹಳ್ಳಿ ... ದೇಶ ಬಾಂಧವರು ಸೇರಬೇಕು ವಿಶೇಷವಾಗಿ ದೇಶೋದ್ಧಾರ ಕಾರ್ಯಕ್ಕೆ ಇನ್ನೆಷ್ಟೋ ಪೂರ್ವದಿಂದಲೂ ಕೈಹಚ್ಚಿದ ಸ್ತ್ರೀಸ್ವರೂಪವರ್ಗದವರು ಇದಕ್ಕೆ ಸೇರಬೇಕು ತಾವೂ ಸೇರಿ ತಮ್ಮ ಮಿತ್ರರನ್ನೂ ಸೇರಿಸಿ ಪ್ರತಿಯೊಬ್ಬನೂ ಸ್ವದೇಶಿ ಸಾಮಾನುಗಳನ್ನೇ ಉಪಯೋಗಿಸುವೆನೆಂದು ಪ್ರತಿಜ್ಞಾಪತ್ರಕ್ಕೆ ಸಹಿ ಹಾಕಬೇಕು.

ಸಭೆ ಮೆರವಣಿಗೆ ಪ್ರಕಟಣ ಮೊದಲಾದವುಗಳನ್ನು ಮಾಡಿ ಹಲವು ವಿಧಗಳಿಂದಲೂ ದೇಶಿಗರಿಗ ಈ ಚಳವಳದ ಪ್ರಾಶಸ್ತ್ಯ ಮತ್ತು ಪ್ರಾಮುಖ್ಯತೆಗಳನ್ನು ತಿಳಿಯಪಡಿಸಬೇಕು ಈ ಸಂಘವು ತನ್ನ ಉಪಶಾಖೆಗಳಿಗ ಬೇಕಾದ ಎಲ್ಲಾ ... ಪ್ರಚಾರ ಸಾಹಿತ್ಯಗಳನ್ನೊದಗಿಸಿ ಕೊಡುವುದು ಹಿಂದೀಯ ಕೈಗಾರಿಕೆಯನ್ನು ಉದ್ಧರಿಸುವುದು ಪ್ರತಿ ಹಿಂದೀಯನ ಕರ್ತವ್ಯವಿದೆಯೆಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯ ವಿರಲಾರದು ಇಂಗ್ಲೆಂಡಿನಲ್ಲಿ ಸರಕಾರವೂ, ಜನತೆಯೂ ಒಡತನವೂ ಇಂತಹ ಚಳವಳವನ್ನು ಹೂಡಿ ಪ್ರತಿಯೊಬ್ಬ ಬ್ರಿಟಿಷನು ಬ್ರಿಟಿಷ ವಸ್ತುವನ್ನೇ ಕೊಂಡುಕೊಳ್ಳಬೇಕೆಂದು ಉಪದೇಶಿಸುತ್ತಿವೆ ಇಂತಹ ಚಳವಳವು ನಮ್ಮ ದೇಶದಲ್ಲಿ ಬಹಳ ಪ್ರಾಮುಖ್ಯತೆ ಮತ್ತು ತ್ವರೆಯಿಂದಾಗಬೇಕಾಗಿದ್ದೆ ' ಎಂದರು

ಸ್ವದೇಶಿಗೆ ಜಯವಾಗಲಿ!

ಜಾಗ್ರತೆ! ಶ್ರುತಿಯಾಗುವದು!!
ಕಿವ್ಯ ಆಗ ಫಲಸಿದ್ಧಿಕರ

ಹೊಸದುರ್ಗ ಅಮೃತೇಶ್ವರ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಶಾಸ್ತ್ರಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯ ರತ್ನ ಪರಮೇಶ್ವರ ಮೂಸಾದ್' ಅವರಿಂದ ... ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ... ವೈದ್ಯರಿಂದ ... ಸರ್ವ ... ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ... ಗಳು, ... ಚೂರ್ಣ, ವಟಿಕೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿಸಲ್ಪಡುವವು. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು ... ಕಾಲ, ಪ್ರಾಯ, ... ಕ್ರಮ, ವೃತ್ತಿ ... ಮೊದಲಾದ ... ಪದಾರ್ಥಗಳ ಅಭ್ಯಾಸ ... ಈ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ... ಬರೆದು ... ಎಂಬ ... ಸಂಗತಿಗಳಲ್ಲಿ ಎಷ್ಟು ... ವಿವರಗಳು ... ಅಂಥಾ ರೋಗಗಳ ಚಿಕಿತ್ಸೆ ನಡಿಸುವರೆಯೂ ... ಸಂಗತಿಗಳಲ್ಲಿ ... ವ್ಯವಹಾರ ನಡಿಸಿದಲ್ಲಿ ... ಆಗತ್ಯದ ಮಟ್ಟಿನ ಮಾಹಿತಿಗಳನ್ನು ... ವಿವರಿಸಿ ಅದನ್ನು ಸೇವಿಸುವ ... ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಆಗತ್ಯಪಡುವವರಿಗೆ ಮದ್ದುಗಳನ್ನು ... ಹೆಚ್ಚಿನ ವಿವರಕ್ಕೆ ... ವ್ಯವಹಾರ ನಡಿಸಬಹುದು.

... ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

ರಕ್ತ ಅಥವಾ ಕಜ್ಜಿ ... ಅತ್ಯಂತ ಹಳೆಯದು ... ಶಕ್ತಿ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ. ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು. ಬೆಲೆ ರೂ. ೨-೦-೦

ಕಿವುಡುತನ

ಕಿವಿಯೊಳಗಿಂದ ಕೀವು ಒರುವುದು ಶಿಂಡಿಯಿರುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋಳ್ಲಿ... ಅಮೋಘ ಅಸ್ತ್ರವಿದೆ. ಸಾವಿರಾರು ಕಿವುಡರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರೂ. ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
23 ಕಾಂದಾವಾಡಿ 4ನೇ ಗಲ್ಲಿ
ಮುಂಬಯಿ.

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗ ಳಿಗೆಗಿನ ವಿಳಾಸಕ್ಕೆ ಬರೆಯಿರಿ
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರ್‌ಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ಎಜನ್ಸಿಗೂ ಬರೆಯಿರಿ.
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ. ಆ. ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P. O. Dadar Bombay 14

ತಂತಿ ವಿಳಾಸ:— SIRINDHUN' Bombay
ಶಪೂರ್ಜಿ ಎಚ್. ಎಲ್ ಬಾಟ್ಲಿವಾಲಾ— ಮುಖ್ಯ ಮೆನೆಜಿಂಗ್ ಡೈರೆಕ್ಟರ್



The Zandu Pharmaceutical Works Ltd, Bombay, 14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.'

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆಮಲಕ ಇನ್ನು ಇತರ ಮೂಲಿಕೆಗಳನ್ನು ... ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿ ಯನ್ನುಂಟುಮಾಡುತ್ತದೆ. ಕ್ಷಯರೋಗ ಉದ್ಭವಿಸ ... ರಕ್ತ ... ಎದೆ ನೋವು ... ವೃದ್ಧಾಪ್ಯದ ಅಶಕ್ತತೆ ಇವು ಗಳನ್ನು ಹೋಗಲಾಡಿಸಿ ... ಉಂಟುಮಾಡುತ್ತದೆ. ಮತ್ತು ... ರಕ್ತಶುದ್ಧಿ ... ಇತ್ಯಾದಿ ... ಯೌವನವನ್ನು ಕೊಟ್ಟು ... ಮಾಡಲಿಕ್ಕೆ ಈ ಲೇಹವು ಪ್ರಸಿದ್ಧವಾದುದು. ಎಲ್ಲಾ ಅಶಕ್ತ ಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ ಜಾಡಿ ರೂ 10/- ಕ್ರಯ 1 ಪಾನು ಟೀನ್ ರೂ 2/8 ½ ಪಾ ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಶಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ., ಸಯ್ಯಾಜಿರಾವ್ ರೋಡ್.
ಬೆಂಗಳೂರು ಏಜಂಟರು — ಬಿ ಪೋಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ
☞ ಕೆಲವುಗಳ ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ನಮ್ಮ ಶಾಲೆಗಳು.

ಜೀವನೋಪಾಯದ ಹಾದಿ.

ಲೇಖಕರು.— ಶ್ರೀಯುತ ಶಿವರಾಮ ಕಾರಂತ.

ಶಿಕ್ಷಣದಲ್ಲಿ ಇನ್ನೊಂದು ಪ್ರಾಮುಖ್ಯವಾದ ಸಂಗತಿಯಿದೆ. ಕೇವಲ ಅಕ್ಷರ ಜ್ಞಾನವು ನಮ್ಮ ಗುರಿಯಾಗಿರಬಾರದು ಬರೇ ಪ್ರಾಥಮಿಕ ಶಾಲೆಗಳಲ್ಲಿ ಇದಕ್ಕೂ ಹೆಚ್ಚಿನದೇನನ್ನೂ ಕಲಿಸಲು ಸಾಧ್ಯವಿಲ್ಲೆಂಬ ವಿಷಯ ನಮಗೆ ತಿಳಿದಿದೆ ಆದರೆ ಹಾಯರ್ ಎಲಿಮೆಂಟರಿ ಶಿಕ್ಷಣದ ಗುರಿಯೂ ಇದೇ ಆಗಿರಬೇಕೇನು? ಎಂಟನೇ ಕ್ಲಾಸಿನ ಅಂತ್ಯಕ್ಕೆ ಕೊಡುವ ಸರ್ಟಿಫಿಕೇಟಿನ ಮೇಲಿಂದ ಇಲ್ಲಿನ ವಿದ್ಯೆಗೊಂದು ಪೂರ್ಣತೆಯುಂಟೆಂದು ಸ್ಪಷ್ಟವಾಗುವುದು. ಆದರೆ ನಿಜವಾಗಿ ಅದು ಅಪೂರ್ಣವೇ ಕಾರಣ, ಇಲ್ಲೂ ಅವರ ಜೀವನಕ್ಕೆ ಆಸ್ತಿವಾರವಾಗುವ ಹೆಚ್ಚಿನ ವಿಷಯಗಳಿಲ್ಲ. ಎಷ್ಟೋ ಬಡವರನ್ನು—ನಿಮ್ಮ ಹುಡುಗರನ್ನು ಶಾಲೆಗ ಕಳುಹಿಸುವುದಿಲ್ಲವೇಕೆ ಎಂದು ಕೇಳಿದಾಗ—ಕಲಿತೇನು ಮಾಡುವುದು?—ಎಂದರು ಹಗಲಿರುಳು ಹೊಪಿನೊಡನೆ ಸೆಣಸಾಡುವುದು ಹಳ್ಳಿಯವರ ಭಾಗ್ಯವಾಗಿದೆ ಅವರ ಮಕ್ಕಳಿಗ ದೊರೆವ ಶಿಕ್ಷಣದಲ್ಲಿ ಈ ಸಮಯಕ್ಕೆ ಸಹಾಯಕವಾದುದು ಯಾವುದೂ ಸಿಗದಿದ್ದರೆ ಏನು ಉಪಯೋಗವಾಯಿತು? ಬರೇ ಪ್ರಾಥಮಿಕ ಶಿಕ್ಷಣದಿಂದಲೇ ನಾವು ತೃಪ್ತಿಗೊಳ್ಳಬಾರದೇ? ಹಾಯರ್ ಎಲಿಮೆಂಟರಿಯ ಹೊಸ ಬೆಡಗೇಕೆ?

ಹಾಯರ್ ಎಲಿಮೆಂಟರಿಯಲ್ಲಿ ಇಂಗ್ಲಿಷು ಶಿಕ್ಷಣಕ್ಕೆ ತೊಡಗಿದ್ದಾರ ಇದಾವುದರ ಸಲುವಾಗಿ ಮುಂದೆ ಇಂಗ್ಲಿಷು ವಿದ್ಯಾಭ್ಯಾಸವನ್ನು ಎಷ್ಟು ಜನರು ಮುಂದರಿಸುವರು? ಇವರ ಸಂಖ್ಯೆ ನೇಕಡಾ ೫—೧೦ರೊಳಗಿರಬಹುದು ಉಳಿದವರು ಇವನಿಗಾಗಿ ಒದ್ದಾಡಬೇಕಲ್ಲೇಕೆ? ಹಾಯರ್ ಎಲಿಮೆಂಟರಿಯಲ್ಲಿ ದೊರೆಯುವ ಇಂಗ್ಲಿಷ ಶಿಕ್ಷಣವು ಎಷ್ಟರದು ಎಂದೂ ತಿಳಿದಿದೆ ಅದು ಒಂದು ವರುಷದಲ್ಲಿ ಮರೆತು ಬಿಡುವುದಕ್ಕೂ ಸಾಕಷ್ಟು ಇರುವುದಿಲ್ಲ ಅದರ ಬದಲು ನಿಜವಾಗಿಯೂ ಅವರ ಜೀವನಕ್ಕೆ ಸಹಾಯಕವೆನಿಸ ಬಂದರೆ ವೃತ್ತಿಗಳನ್ನು ಏಕೆ ಹೇಳಬಾರದು? ನಮ್ಮ ಪಠ್ಯ ಪಟ್ಟಿಯಲ್ಲೂ ವೃತ್ತಿ ಪಾಠಗಳ ಸೂಚನೆಯಿದೆ ಅದು ಕಾರ್ಯರೂಪವನ್ನು ತಾಳುವ ರೀತಿಯೂ ನಮಗೆ ನವೀನವಲ್ಲ ವೃತ್ತಿ ಪಾಠವು—ಜೀವನಕ್ಕೆ ಸಹಾಯಕವಾಗಬೇಕು ಅದು ಬರೇ ಮನಃಪಕ್ಕೊಂದೆಡೆವೃತ್ತಿಯ ಆಟವಲ್ಲ ಆವೆ ಮಣ್ಣನ್ನು ತಿರುಗಿಸಿದರ, ಕಾಗದ ಕತ್ತರಿಸಿದರ ಅದು ವೃತ್ತಿಯಲ್ಲ ಅದು ಆಟವಾಯಿತು ಅದೂ ಬೇಕು ಆದರ ವೃತ್ತಿಯೆನಿಸಲು—ಅದು ಕಾಸನ್ನು ಗಳಿಸಲ ಹಾದಿ ತೋರಿಸಬೇಕು

ಮಕ್ಕಳಿಗ ಆಗತ್ಯ ವಿದ್ಯಾಭ್ಯಾಸದಿಂದ ಅವರ ಸತ್ಯ ಜೀವನದಲ್ಲಿ ಉದರಪೋಷಣೆಗೆ ಸಹಾಯಕವಾಗುವುದಾದರ ಆಗ, ಜನರಲ್ಲಿ ಸ್ವತೇವ ವಿದ್ಯಾಭ್ಯಾಸದ ಲವಲವಿಕೆಯು ಉತ್ಪನ್ನವಾಗುವುದು ಈಗ ಹಳ್ಳಿಯ ಜನರು ಮಕ್ಕಳನ್ನು ಕಳುಹಿಸದಿರುವುದಾದರೂ ಏತಕ್ಕೆ? ಅವರ ಅಜ್ಞಾನವು ಒಂದು ಕಾರಣವಾಗಿರಬಹುದು—ಆದರ ಅದರ ಜತೆಯಲ್ಲಿ ಇನ್ನೆರಡು ಪ್ರಬಲವಾದ ಕಾರಣಗಳಿವೆ ತೀರ ಬಡವರಿಗೆ ಮನೆಯಲ್ಲಿನ ಒಂದೊಂದು ಕೈಯು ದುಡಿಯದಿದ್ದರೆ ಈ ಚಿಕ್ಕ ಮಕ್ಕಳಿಂದ ಎಷ್ಟೋ ಮನೆಗೆಲಸವಾಗಬೇಕಾಗುವುದು ಹಿರಿಯರು ಹೊಲಕ್ಕೆ ಹೋದಾಗ, ಮನೆಯಲ್ಲಿ ಮಕ್ಕಳನ್ನಾಡಿಸುವುದು, ಅಡುಗೆ ಮಾಡುವುದು, ಜಾನುವಾರುಗಳನ್ನು ಮೇಯಿಸುವುದು—ಇಷ್ಟೆಲ್ಲ ಮಕ್ಕಳಿಂದ ಆಗಲೇಬೇಕು ಇನ್ನು ಉಳುವ ಹೊರುವ ಮಕ್ಕಳ ಸಂಖ್ಯೆಯೂ ಕಡಿಮೆಯಾಗಿಲ್ಲ, ಈ ವೃತ್ತಿಯನ್ನು ಅವರು ಬಿಟ್ಟು ದುಡಿತದ ಒಂದು ಕೈಯನ್ನು ಕಡಿಮೆಮಾಡಿ ಶಾಲೆಗೆ ತಮ್ಮ ಬಾಲಕ ಬಾಲಕಿಯರನ್ನು ಕಳುಹಿಸಲೂ, ಇವರ ಕಣ್ಣೆದುರಿಗ ಯಾವ ಗಂಟನ್ನು ನಮ್ಮ ವಿದ್ಯೆಯು ತೋರಿಸುತ್ತಿದೆ? ವಿದ್ಯೆ ಕಲಿತು ಏನು ಮಾಡಬೇಕು—ಎಂಬ ಪ್ರಶ್ನೆಗೆ ನಮ್ಮ ಉತ್ತರವಿದೆ? ಓದು ಬರಹವೇನೊ ಬರುವುದು ಅದರಿಂದಾಚೆಗೇನಿದೆ? ಹೊಟ್ಟೆ ತುಂಬಿಸುವ ಯಾವ ಸಾಧನವಿದೆ ನಮ್ಮ ಜಿಲ್ಲೆಯಲ್ಲಿ ಒಬ್ಬನ ಸರಾಸರಿ ವಾರ್ಷಿಕ ಆಯವು ರೂಪಾಯಿ ೩೦ಕ್ಕೆ ಮಿಕ್ಕಿಲ್ಲ ಇಷ್ಟನ್ನೇ ದುಡಿಯುವ ಕೈಯಲ್ಲಿ ಒಂದು ತಪ್ಪಿದರೆ ದರಿದ್ರ ಕುಟುಂಬವೊಂದರ ಅವಸ್ಥೆಯೇನು? ಅವರಿಗೆ ವಿದ್ಯೆಯು ಅವಶ್ಯವೆಂದು ನಾವು ತಿಳಿದಿರುವೆವು. ಅವರಿಗದರ ಕಲ್ಪನೆಯುಂಟಾದೀತೆ? ನಿನ್ನ ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಬದಲು ಶಾಲೆಗೆ ಕಳುಹಿಸು ಅನ್ನಲು ನಮಗೆ ಯಾವ ಧೈರ್ಯ. ಅವನ ಅನ್ನದ ಪೂರೈಕೆಯು ನಮ್ಮಿಂದಾದೀತೆ? ಈ ಕಡಿಮೆ ಬೀಳುವ ಕೈಯ ಕೆಲಸ ಮಾಡುವವರಾರು?

ಈ ಕಾರಣಗಳಿಂದ ನಮ್ಮ ಪ್ರಾಥಮಿಕ ಮತ್ತು ಉಚ್ಚ ಪ್ರಾಥಮಿಕ ಶಿಕ್ಷಣಗಳಿಗೆ ನಾವು ನಮ್ಮ ದಾರಿದ್ರ್ಯಕ್ಕೆ ಸರಿಯಾದ ರೂಪವನ್ನು ಕೊಡುವುದು ಆವಶ್ಯವು ಒಂದನೇಯದು—ಕಾಲದ ವಿಷಯದಲ್ಲಿ—ಎರಡನೆಯದು—ಶಿಕ್ಷಣ ವಿಷಯದಲ್ಲಿ.

ಕಾಲದ ವಿಷಯವೆಂದರೆ, ಈಗಿನ ಹಳ್ಳಿ ಶಾಲೆಗಳು ಬೆಳಗ್ಗೆ ಎರಡೂವರೆ ತಾಸು, ಮಧ್ಯಾಹ್ನ ಎರಡೂವರೆ ತಾಸು ಕೆಲಸ ಮಾಡುತ್ತವೆ. ಈ ಶಾಲೆಗೆ ಬರಲು ೨—೩ ಮೈಲುಗಳ ತನಕ ದೂರವಿದೆ ಹಳ್ಳಿಯಲ್ಲಿ ಸರಾಸರಿ ಎರಡು ಮೈಲೆನ್ನಬಹುದು. ನಾಲ್ಕು ಬಾರಿ ಬರುವುದರಲ್ಲಿ ಎಂಟು ಮೈಲಾಯಿತು. ಮಕ್ಕಳ ಕಾಲುಗಳಿಗೆ ಮೂರು ನಾಲ್ಕು ತಾಸುಗಳ ನಡಿಗೆಯಾಯಿತು. ಈ ಆಯಾಸದ ಸಮಯವೊಂದು ಶಾಲೆಯ ಸಮಯಕ್ಕಾಯಿತು ಈ ಎರಡು ಸಮಯಗಳ, ಮಧ್ಯೆ ನಷ್ಟವಾಗುವ ಇತರ ಸಮಯವು ಸೇರಿದರೆ ಹಗಲೆಲ್ಲ ವ್ಯಯವಾಯಿತು ಇದರಿಂದ ಅವನ ಬೆಂಬಲವು ಬಡ ಕುಟುಂಬಕ್ಕೆ ಶೂನ್ಯವಾಯಿತು ಇದನ್ನು ತಪ್ಪಿಸುವ ಬಗೆ ಇಲ್ಲವೇನು? ಬಡ ಮಕ್ಕಳಿಗೆ ಅನುಕೂಲಿಸುವಂತೆ ಶಾಲಾ ಸಮಯವನ್ನು ತಗ್ಗಿಸಲೇ ಬೇಕು ಅದು ಮೂರು ತಾಸಿಗಿಂತ ಮಿಕ್ಕಿರಬಾರದು ಊರಿನ ಪರಿಸ್ಥಿತಿಗ ಸರಿಯಾಗಿ ಶಾಲೆಯು ಒಂದು ಹೊತ್ತು ಮಾತ್ರ ಆಗಬೇಕಾಗುವುದು ಪ್ರಾಯಶಃ ಬೆಳಗಿನ ಕೆಲಸವೇ ಹಳ್ಳಿಯಲ್ಲಿ ಮುಖ್ಯವೆನಿಸುವುದರಿಂದ, ಮಧ್ಯಾಹ್ನ ೨ರಿಂದ ೫ ಘಂಟೆಯ ವರೆಗೆ ಶಾಲೆ ನಡೆಸಿದರ ಸಾಕು ಈ ಮೂರು ತಾಸಿನಲ್ಲಿ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸವು ನಡೆಯಬೇಕು ಈ ಮಕ್ಕಳು ಮನೆಯಲ್ಲಿ ಕೋಪಿ, ಲೆಕ್ಕಮಾಡಬೇಕೆಂಬ ಮೂರ್ಖ ಕಲ್ಪನೆಗಳನ್ನು ಉಪಾಧ್ಯಾಯರು ಹಿಡಿಯಬಾರದು ಅದನ್ನವರು ಸಾಮಾನ್ಯವಾಗಿ ಮಾಡುವುದೂ ಇಲ್ಲ ಅಲ್ಲದೆ ಬಡವರ ಮನೆಮಕ್ಕಳಿಗ ಆ ಮಟ್ಟಿನ ಅವಕಾಶವೂ ದೊರೆಯಲಾರದ

ಆದುದರಿಂದ ಶಿಕ್ಷಣದಲ್ಲಿನ ಅನಾವಶ್ಯಕ ವಿಷಯಗಳಿದ್ದರ ಅವುಗಳನ್ನು ತೆಗೆಯಬೇಕು ಮಕ್ಕಳಿಗ ವಿಷಯಗಳ ಮೇಲ ಅಭಿರುಚಿಯನ್ನು ಹೆಚ್ಚಿಸಬೇಕು ಒಂದೊಡನೆಯೇ [illegible] ಬಿ[illegible]ಂದ ಬದಲಿಸಬಾರದ ಈಗಿನ ಪಠ್ಯಪಟ್ಟಿಯಲ್ಲಿ—ನೇ ತಿಂಗಳಿಗ ಬರಹದ ಆರಂಭವಾಗಬೇಕೆಂದಿದೆ ಇದು ಶ[illegible] ತಪ್ಪು ತಿಳಿವಿಲ್ಲದ ಮಕ್ಕಳಿಗ [illegible] ರುಚಿ ಹಿಡಿ[illegible] ಆ [illegible] ಓದು ವುದನ್ನು ಕಲಿಸಬೇಕು ಅವರಲ್ಲಿ ಸುಧಾರಿಸಿ ಈ ಓದು ಬರಹವು ಬೇಕು ಆದಷ್ಟು [illegible] ಗಬೇಕ ಪ್ರಾಜೆಕ್ಟ ಮೆಥಡ್—ಇದಕ್ಕೆ ಅನುಕೂಲವು. ಆರು ತಿಂಗಳಲ್ಲಿ [illegible] ಬರಹದ ರೂಢಿಯಾಗುವುದೆನ್ನುವರು ಉಡಿಯಾಪಾರದ ಮಿಶನ್ ಶಾಲೆಯವರು ಈ ಯತ್ನ ಮಾಡಿ ನೋಡಿದ್ದರು ಫಲಕಾರಿ ಎಂಬ ಅನುಭವವೂ ಒಂದಿತ್ತಂತೆ ಆದರ [illegible] ಗಾಳಿಯು ಅನುಕೂಲವಾಗಿ ಬೀಸದುದರಿಂದಲೋ ಏನೋ ಅದು ಸತ್ತುಹೋಯಿತು ಇನ್ನು—ಚರಿತ್ರೆ, ಭೂಗೋಲ, ಮೊದಲಾದ ವಿಷಯಗಳಲ್ಲಿ ಓದುವುದು ಕಡಿಮೆಯಾಗಬೇಕು ಚಿತ್ರಗಳೂ, ಮಾಯಾಲಾಂತ್ರ ಮೊದಲಾದುವುಗಳೂ ಆ ಕಲಸವನ್ನು ಮಾಡಬೇಕು ಇದರಿಂದ ಶಾಲೆಗೆ ಬರಲು ಆಕರ್ಷಣವೂ ಹೆಚ್ಚಾಗುವುದಲ್ಲದೆ, ಅನಾವಶ್ಯಕವಾಗಿ ಬಾಲ ಮಿದುಳುಗಳನ್ನು ಹೀನೆಸದ ವಿಷಯಗಳ ಜ್ಞಾನವೂ ಪ್ರೇಮವೂ ಉತ್ಪನ್ನವಾಗುವುದ

ಈಗ ಪ್ರಾಮುಖ್ಯವಾದ ಉದರ ಪೋಷಣೆಯ ಹಾದಿ ಮಕ್ಕಳು ಮುಂದೆ ಜೀವನ ಮಾಡುವ ಬಗ ಹೇಗೆ? ಓದಿದರ ಹೊಟ್ಟೆ ತುಂಬೀತೆ? ಇಲ್ಲ ಸಾಮಾನ್ಯರಿಗೆ ಅಷ್ಟು ಅಲ್ಲ ನೇಕಡಾ ೯೦ರಷ್ಟು ಜನರಿಗೆ ಇದು ಉದರ ನಿರ್ವಾಹಕ್ಕೆ ಅನುಕೂಲವಾಗಿಲ್ಲ ವ್ಯವಹಾರಕ್ಕೆ ಸಹಾಯಕವಾಗಿರಬಹುದು. ಆದರ ಇದೊಂದೇ ಕಾರಣವು ವಿದ್ಯಾಪ್ರಚಾರಕ್ಕೆ ನೆರವಾಗಲಾರದು ನಿಜವಾದ ವಿದ್ಯೆಯು, ಹಸಿವಿನೊಡನೆ ಕಾದಾಡಬಲ್ಲ ವೀರರನ್ನು ತಯಾರಿಸಲೇ ಬೇಕು ಅದು ಹಾಯರ್ ಎಲಿಮೆಂಟರಿ ಶಿಕ್ಷಣದಿಂದ ಆಗುವುದು ಅವಶ್ಯ ಬೇಕಾದರ ಶಿಕ್ಷಣದ ಅವಧಿಯನ್ನು ಇನ್ನೊಂದು ವರುಷ ಹೆಚ್ಚಿಸಬಹುದು

ಸದ್ಯ ಶಾಲೆಯಲ್ಲಿ ವಿಷಯ ಬೋಧನೆಗಳು ನಡೆದರೆ ಮಕ್ಕಳಿಗ ಬೆಳಗಿನ ಸಮಯ, ಕೃಷಿ ಕೈಗಾರಿಕೆಗಳನ್ನು ಹೇಳಬೇಕು ಹಳ್ಳಿಯಲ್ಲಿ ಸಾಧ್ಯವಾಗುವ ಎಷ್ಟೋ ಜೀವನೋಪಾಯದ ಕೈಗಾರಿಕೆಗಳಿವೆ ಶಾಲೆಯಿಂದ ಹೊರಗೆ ಎರವಾಗ ಒಬ್ಬೊಬ್ಬನಿಗ ಅಂಥದೊಂದೊಂದು ಶಿಕ್ಷಣವು ದೊರೆಯಲೇ ಬೇಕು. ಇಲ್ಲವೆ—ಹಳ್ಳಿಯಲ್ಲಿ ಮುಂದೆ ಅವರು ಕೃಷಿಕ ಜೀವನಕ್ಕೆ ಕೈಹಾಕುವುದರಿಂದ ಅದರಲ್ಲಿ ಸುಧಾರಿಸಿದ ಮಾರ್ಗವನ್ನು ಬೋಧಿಸಬೇಕು ಬೆಳಗ್ಗೆ—೨ ತಾಸಿನ ತನಕ ಅವರಿಂದ ಈ ಕೆಲಸ ಮಾಡಬಹುದು ಕಲ್ಲವಾದರೆ ಕೊನೆಯ ಒಂದು ವರುಷದಲ್ಲಿ ಅವರಿಗೆ ಬರೇ ಕೃಷಿಯ ವಿಷಯವಾದ ಜ್ಞಾನವನ್ನು ಕೊಡಬಹುದು ಇಲ್ಲದೆ ಮಕ್ಕಳು ದುಡಿದು

ದ್ವೇಷದಿಂದ್ವ ಜಗಳವಾಗುತ್ತದೆ.

ಪ್ರೇಮದಿಂದ ಪಾಪವು ನಾಶವಾಗುತ್ತದೆ.

ಪ್ರಪಂಚದ ನವಚೇತನದ ಈ ಕಾಲದಲ್ಲಿ ಒಂದು ಕಡೆಯಿಂದ ಸಮರ ಸಾಧನೆಯೂ ಒಂದು ಕಡೆಯಿಂದ ಶಾಂತಿ ಸಾಧನೆಯೂ ಆಗುತ್ತಿರುವುದು ನಮಗ ಕಂಡುಬರುತ್ತಿದೆ ಭೂಲೋಕದ ಎಲ್ಲಾ ರಾಷ್ಟ್ರಗಳೂ ಈಗ ನೋತ ಬದ್ದಿವೆ ಯುದ್ಧವನ್ನು ಯುದ್ಧದಿಂದ ಪ್ರತಿಭಟಿಸುವ ಅವಿಚಾರಪರ ವರ್ತನೆಯಿಂದ ಸಮಷ್ಟಿ ಹಿತವು ಎಷ್ಟರ ಮಟ್ಟಿಗ ನಾಶವಾಗಿ ಕೊಂಡು ಬರುತ್ತಿದೆಯೆಂದ ಈಗ ಎಲ್ಲಾ ಜನಾಂಗಗಳೂ ಅರಿತಿವೆ ಕಳೆದ [illegible]ಗಳಲ್ಲಿ ನಡೆದ ಘೋರಯುದ್ಧದ ನಂತರ ಇನ್ನು ಯುದ್ಧವೆಂಬುದೇ ಬೇಡವೆಂಬ ಎಲ್ಲರ ಮನಸ್ಸಿನಲ್ಲಿತ್ತು ಅದರಿಂದಾಗಿ ತಲೆದೋರಿದ, ಕ್ಷಾಮ, ಡಾಮರ, ಕ್ರಾಂತಿ, ಕ್ಷೋಭ, ಮರಣ ವಿಪ್ಲವಗಳಷ್ಟೆಂದು ಆಯಾಯ ರಾಷ್ಟ್ರಕ್ಕೇನೆ ಗೊತ್ತು ಅಂತಹ ಯುದ್ಧಭಾವವನ್ನೇ ಜನಾಂಗದವರ ಮನಸ್ಸಿನಿಂದ ಕಿತ್ತು ತೆಗೆಯಬೇಕೆಂಬ [illegible] ಈಗ ಜಿನಿವಾದಲ್ಲಿ ಶಸ್ತ್ರಸನ್ಯಾಸ (ಶಸ್ತ್ರ ತೊರೆಯಬೇಕೆಂಬ [illegible]) ಮಹಾಸಭೆಯು [illegible]

ಜನಾಂಗ ಸೂತ್ರದಾರರೆಲ್ಲ [illegible] ವರ್ತನೆಯನ್ನೇ [illegible] ಮಾಡಿದರ [illegible] ವರ್ತನೆಯನ್ನೇ ಮಾಡಬೇಕಾಗುತ್ತದೆ [illegible] ಸಮ [illegible] ಪ್ರಪಂಚದಿಂ[illegible] ಕಣ್ಮರೆಯಾದೀತು

ರಾಷ್ಟ್ರಗಳ [illegible] ಅವುಗಳೊಳಗ [illegible] ರಾಷ್ಟ್ರವು ಇನ್ನೊಂದು ರಾಷ್ಟ್ರದ [illegible] ವೈರ ದೇಶವು ತನ್ನ [illegible] ರಾಷ್ಟ್ರಗಳ [illegible] ಬೇಗ [illegible] (Se[illegible]) [illegible] ದ್ವೇಷದ [illegible] ದಿಂದ [illegible] ಈ ರಾಷ್ಟ್ರಗಳ [illegible] ನಾಶವಾಗುತ್ತದೆ

[illegible] ಕಳುಹಿಸು [illegible] ರೀತಿಯಿಂದ ಕೃಷಿ ಕ್ಷೇತ್ರವೊಂ[illegible] ಶಾಲೆಗೂ [illegible] ದೂರ[illegible] [illegible] ಈ ವಾಶಿರ್ಗ[illegible] [illegible] ಆಯವು ಈ [illegible] ರಾ[illegible] ಜನರ [illegible] ಇವತ್ತು ಕೃಷಿ ಶಿಕ್ಷಣವು [illegible] ಅದನ್ನು [illegible] ಕೊಯಂಬತ್ತೂರಿಗ ಹೋಗಬೇ[illegible]

ಇಂದ [illegible] ಈಗ [illegible] ಅದಕ್ಕೆ [illegible] ಹಾಯರ್ ಎಲಿಮೆಂಟರಿ [illegible] ಈ ಕೆಲಸ ಮಾಡುವುದರ[illegible] ಶಾಲಾ [illegible] ದೇಶವು ಉನ್ನತಿ ಹೊಂದುವುದಿಲ್ಲ ಶಿಕ್ಷಣದ ಸ್ವರೂಪವು [illegible] ಬೇಕು [illegible] ಪರಿವರ್ತ[illegible] ವುದನ್ನು [illegible] ಕೃಷಿ [illegible] ಉದ್ಯೋಗ ಶಿಕ್ಷಣಕ್ಕೆ ತರಬೇತ ಮಾಡಬೇಕು

ಈಗಿನ [illegible] ನಮ್ಮ ದೇಶದ [illegible] ವುದಿಲ್ಲ

ವಿ ಸೂಚನೆ—ಇಲ್ಲಿಗೆ ಈ ಲೇಖನಮಾಲೆಯನ್ನು ನಿಲ್ಲಿಸಲು ಬಯಸುತ್ತೇನೆ ಇದನ್ನು ಪ್ರಕಟಿಸಿದ ಈ ಪತ್ರಕರ್ತರಿಗೆ ನನ್ನ ವಂದನೆಗಳು

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉಚ್ಛಾಟವಾದರೂ ಓಡುವದು.

ಏತರಿಂದ?

HEDAURIN — THE DYSENTERY CHOLERA CURE

ಹಿಂದೀ ಔಷಧಿ ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟುದು ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟುದು.

ಬಿಸ್ಸಿನ ಕ್ರಯ ಆಣೆ 0—15—0. 2 ಬಿಸ್ಸಿನ ಬಾಟಲಿಗೆ ರೂ 1—12—0

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು, ಡೊಂಗರಕೇರಿ ರಸ್ತೆ, ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ, ಕೊಡಿಯಾಲಬೈಲ್ ಪೋಸ್ಟು, ದಕ್ಷಿಣ ಕನ್ನಡ

"If every Wife knew what every Widow knows every Husband would be Insured"

PLACE YOUR LIFE ASSURANCE WITH

THE SOUTH INDIAN

Securing for your clients –

1. Low rates of Premium
2. Liberal Policy Conditions.

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —

H R K IYENGAR
Chief Agent

The S I G A Co, Ltd,
Sanyasiguddy MANGALORE

Managing Agents –

K C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಸೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳವೆ!

ಪ್ರಿಮಿಯಂ ದರಗಳು ಕಡಿಮೆ!

ಕರಾರುಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ ಅಯ್ಯಂಗಾರ್,

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್, ಜಿ. ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

800 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಶೀಘ್ರವಾಗಿ ಗುಣಪಡಿಸುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅವ್ಯರ್ಥವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಬಿಷಕ್‌ರತ್ನ" ವಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಬಿಕ್ಕರ್ನಕಟ್ಟೆ ಮಂಗಳೂರು ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ ಮಂಗಳೂರು ಟವುನ್ ಹಾಲಿನ ಹತ್ತಿರ.

ಕನ್ನಡ ಸದ್ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದೊಳ್ಳೇ ಸುಸಂಧಿ! ಅಲಭ್ಯ ಲಾಭ!! ತಕ್ಕ ಸಮಯ!!!

ಶ್ರೀ ಶೇಷಾಚಲ ಗ್ರಂಥಮಾಲೆಯ

೨೫	ಐತಿಹಾಸಿಕ ಕಾದಂಬರಿಗಳು ಇವುಗಳ ಬೆಲೆ ಸರಾಸರಿ	ರೂ	೨
೨೨	ಸಾಮಾಜಿಕ–ಪೌರಾಣಿಕ	ರೂ	೧೨
೧೧	ಪತ್ತೇದಾರಿ	ರೂ	೭
೩೧	ಚರಿತ್ರಗಳು	ರೂ	೨೦
೧೦	ಗದ್ಯ–ಪದ್ಯನಾಟಕಗಳು	ರೂ	೬
೨೫	ಪೌರಾಣಿಕ–ಪಾರಮಾರ್ಥಿಕ	ರೂ	೨೫
೨೦	ಧಾರ್ಮಿಕ ವೈದಿಕ ಹಾಗೂ ಇತರ	ರೂ	೧೪
೧೪೪	ಅಂತು ಪುಸ್ತಕಗಳು ಇವುಗಳ ಒಟ್ಟು ಬೆಲೆ	ರೂ	೧೦೫

ಇವುಗಳಲ್ಲಿಯ ಎಷ್ಟೋ ಪುಸ್ತಕಗಳು ೩ನೇ ೪ನೇ ಆವೃತ್ತಿಗಳನ್ನು ಕೂಡ ಹೊಂದಿ ಕನ್ನಡಿಗರ ಪ್ರೇಮಕ್ಕೆ ಪಾತ್ರವಾಗಿರುತ್ತವೆ

ಇಂಥ ಈ ಅತ್ಯುತ್ತಮ (೧೪೪ ಬಗೆಯ) ಪುಸ್ತಕಗಳಲ್ಲಿ ಬೇಕಾದ ಮೂರು ರೂಪಾಯಿ ಬೆಲೆಯ ಪುಸ್ತಕಗಳಿಗೆ ಬರೆದರೆ, ಟಪ್ಪಾಲು ಖರ್ಚಿನ ೮ ಆಣೆ ಸಹ ವಹಿಸಿ ಬರೇ ಮೂರು ರೂಪಾಯಿಗೆ ವ್ಹಿ. ಪಿ. ಮೂಲಕ ರವಾನಿಸುತ್ತೇವೆ. ಅದಕ್ಕೂ ಹೆಚ್ಚು ಬೆಲೆಯ ಪುಸ್ತಕಗಳಿಗೆ ಬರೆದರೆ ಟ. ಖ. ನಾವು ವಹಿಸುವದಲ್ಲದೆ ಮೇಲೆ ಯೋಗ್ಯ ಕಮಿಶನ್ ಸಹ ಕೊಡುತ್ತೇವೆ. ವ್ಹಿ. ಪಿ. ಯೊಡನೆ ಅಂಗೀರಸ ಸಂವತ್ಸರದ ಶುದ್ಧ ಪಂಚಾಂಗವು ಪುಕ್ಕಟೆಯಾಗಿ ಕಳುಹಿಸಲ್ಪಡುವದು ಈ ರಿಯಾಯತಿಯು ಇಂದಿನಿಂದ ಒಂದೇ ತಿಂಗಳು. ಕಾರಣ ಎಲ್ಲರೂ ಈ ಸುಸಂಧಿಯ ಲಾಭ ಹೊಂದಬೇಕು. ನಮ್ಮ ಕ್ಯಾಟಲಾಗು ನೋಡಿ ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಭಿ. ಪ. ಕಾಳೆ
ಪ್ರೊಪ್ರೈಟರ್ ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ,
ಪೋ। ಲಿಸಂದವನ, ಜಿ ಧಾರವಾಡ

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ ಮಿ॥ ಗಣಪತಿರಾವ್ ಐಗಳರಿಂದ ರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ, ಮೂರನೇ, ನಾಲ್ಕನೇ, ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಚ್ಚುಕಥಾ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ. ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ೫೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಫೋಸ್ಫರಸ್ ಗುಳಿಗೆಗಳು

ಅಶಕ್ತತನ...

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಗಿರಗಾಂವ, ಮುಂಬಯಿ ೪ ಸ್ಟೋಕಿಸ್ಟ ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು.

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಊರಿನ ಚಂದಾ:—ವರ್ಷ ಒಂದಕ್ಕೆ ರೂಪಾಯಿ 2—0—0   ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಪಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬.   ಮಂಗಳೂರು ತಾ ೨೫ನೇ ಶುಕ್ರವಾರ ಮಾರ್ಚಿ ೧೯೩೨   (25—3—'32.)   ಸಂಚಿಕೆ ೧೩

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.   **Branches:—COONDAPOOR & Mangalore**

ಹೆಡ್ ಆಫೀಸು:—ಉಡುಪಿ   ಶಾಖೆ – ಕುಂದಾಪುರ. ಮತ್ತು ಮಂಗಳೂರು

Authorised Capital Rs. 3,50,000. Subscribed & Called up Rs. 2,25,000.

ನಿಯಮಿತ ಮೂಲಧನ ರೂ 3,50,000. ಚಂದಾ ಹಾಕಲಿಕ್ಕೆ ಆರ್ಪಿಸಿದ ವ ಎತ್ತಿದ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 29TH DAY OF FEBRUARY 1932

	Capital and Liabilities.			Property and Assets	
1	Paid up Capital	Rs. 2,25,000-0-0	1	Premises Building, Furniture etc	Rs [illegible]
2	Reserve and other funds	" 2,22,705-0-0	2	Government securities & Treasury Bills	" 30,78[illegible] 4-0
3	Deposits	" 20,4[illegible],502 [illegible] 1	3	Authorised Investments	" [illegible],103 0 [illegible]
4	Due to Bankers	" 22,074 4 0	4	Bills for collection per contra	[illegible] 1 0
5	Sundries	" 40,495-5	5	Sundries	[illegible] 4 [illegible]
6	Sundry persons for B C per contra	11,953 1 0	6	Cash in hand & with bankers	" 47,04[illegible]
	Total	25,6[illegible],530-3 4		Total	25,6[illegible],530 [illegible]

Office of the Corporation, UDIPI, S K 3-3-'32

N. ANANDA RAO,
Secretary & Manager.

(Regd)

ಅಮೃತಾಂಜನ.

ಶೀತ, ಕೆಮ್ಮು, ತಲೆನೋವು, ವಾತ, ಸುಟ್ಟುಹೋಗುವಿಕೆ, ಮತ್ತು ಮನುಷ್ಯರಿಗೆ ಭಂಗ್ರ್ರಕಮಾಡುವ, ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ, ಇದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತವೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ. ಎಲ್ಲಾ ಕಡೆಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು — (ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಥೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು. ಎರಡೇ ಸಲದ ತಗಲಿಸುವಿಕೆಯಿಂದ ಗುಣವಾಗುತ್ತದೆ. ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ಕೆಡಿಸಿಬಿಡುತ್ತದೆ   ಟಿನ್ನಿಗೆ 0—[illegible]—0 ಡಜನಿಗೆ 3—8—0

ಅಮೃತಾಂಜನ ಡಿಪೋ.

ಮದರಾಸು   ಮತ್ತು   ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜಂಟರು:— ಷಾ ಕಂಪೆನಿ, ಮುಂಗಳೂರು.

INSURE WITH

The Popular Insurance Co. Ltd.

Head Office - MANGALORE, S India.

First of its kind in the West Coast

CHAIRMAN

Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN.

Ensure the Absolute Safety, Comfort and Happiness of your Dear Ones.

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office.

ಅಸ್ವಸ್ಥದ ನಂತರ—

"ಓವಲ್ಟಿನ್ನು" ಬಹು ತ್ವರೆಯಿಂದ ಸಂಪೂರ್ಣ ಚೈತನ್ಯವನ್ನೀಯುತ್ತದೆ.

ಅಸ್ವಸ್ಥದಲ್ಲಿ ಬಿದ್ದಾದ ಮೇಲೆ ಮೈಕೈಗಳು ಸ್ವಲ್ಪ ಬಲಗೊಂಡು ಕುಳಿತುಕೊಳ್ಳಲು ಚೈತನ್ಯವುಂಟಾದರೂ ಕೂಡಲೇ ಸಾಮಾನ್ಯವಾದ ಆಹಾರವನ್ನು ಜೀರ್ಣಿಸುವಷ್ಟು ಶಕ್ತಿಯು ಬರುವುದಿಲ್ಲ. ಸಾಮಾನ್ಯ ಆಹಾರಗಳು ಸರಿಯಾದ ಮತ್ತು ಸಮತೂಕದ ಆಹಾರವನ್ನೊದಗಿಸಿಕೊಡುವುದಿಲ್ಲವಾದುದರಿಂದ ಅದನ್ನು ಸ್ವೀಕರಿಸುವುದೂ ಸರಿಯಲ್ಲ.

ಓವಲ್ಟಿನ್ನಲ್ಲಿರುವ ಉತ್ತಮವಾದ ಆಹಾರ ಭಾಗವು ಅದರ ರುಚಿಯಿಂದ ಶಿಶುಗಳಿಗೂ, ಅಶಕ್ತವಂತರಿಗೂ ಅತ್ಯುತ್ಕೃಷ್ಟ ಮತ್ತು ಆಶ್ಚರ್ಯಕರ ಆಹಾರವನ್ನಾಗಿ ಮಾಡುತ್ತದೆ.

'ಓವಲ್ಟಿನ್ನು' ಬಹು ಕ್ಷೀಣವಾದ ದೇಹವನ್ನು ಶಕ್ತಿ ತುಂಬಿ ಬಲವಾಗುವ ತನಕ ಪೋಷಿಸುತ್ತದೆ. ಇದು ಸರಿಯಾದ ಮತ್ತು ಪ್ರಕೃತಿ ಸಂಬಂಧವಾದ ಉತ್ಕೃಷ್ಟ ಪೋಷಕ ಆಹಾರ ... ಜೀರ್ಣಿಸುತ್ತದೆ. ಅಸ್ವಸ್ಥದಿಂದೆದ್ದು ಪತ್ಥ್ಯವನ್ನನುಭವಿಸುವವರ ಜೀರ್ಣಶಕ್ತಿಯನ್ನು ವೃದ್ಧಿಪಡಿಸುವಂತೆ ಸಹಾಯಿಯಾದ ಬಹು ಶಕ್ತಿಯನ್ನು ಹೊಂದಿದ ವ್ಯಕ್ತಿಯೂ ಓವಲ್ಟಿನ್ನನ್ನು ಕುಡಿಯುವುದರಿಂದ ಶಕ್ತಿವಂತನಾಗುತ್ತಾನೆ.

OVALTINE

TONIC FOOD BEVERAGE



ಆರೋಗ್ಯಕ್ಕೆ, ಶಕ್ತಿಗೆ, ಧಾತುಪುಷ್ಟಿಗೆ

ಅತೀ ಶುದ್ಧ ಮತ್ತು ಅತ್ಯುತ್ತಮ — ಸರಿಸ್ಪರ್ಶಿತವಾದುದಲ್ಲ

ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ಏಜಂಟರು — ಜೇಮ್ಸ್ ರ್ಯಾಟ್ ಅಂಡ್ ರಿಪನ್ ಸ್ಟ್ರೀಟ್ ಕಲ್ಕತ್ತಾ, ಮತ್ತು ಮುಂಬಯಿ, ಮದ್ರಾಸ್ ರಂಗೂನುಗಳಲ್ಲಿ

ರುಚಿಕರ ಹಾಗೂ ಅತ್ಯುತ್ತಮವಾದ 'ಓವಲ್ಟಿನ್'ಗೆ ಸರಿಯಾದ ಪಾನೀಯವು ಬೇರೊಂದಿಲ್ಲ. ಮಿಶ್ರಣವೂ ಸಪ್ರಮಾಣರಹಿತವೂ ಆಗಿರುವ ಎಲ್ಲಾ ನಕಲಿ ಮಾಲುಗಳನ್ನು ತಿರಸ್ಕರಿಸಿರಿ.

ನಿಶ್ಶಕ್ತಿಯ ಸಮಯದಲ್ಲಿ ಓವಲ್ಟಿನ್ ಬಿಸ್ಕತ್ತುಗಳನ್ನು ತಿನ್ನಿರಿ. ಅದರ ಪೋಷಣೆಯಿಂದ ಜೀರ್ಣಶಕ್ತಿಯು ಸುಲಭದಿಂದಾಗುತ್ತದೆ. ಅದರ ಪರಿಮಳಭರಿತ ರುಚಿಯು ಮನಸ್ಸಿನ ಉಲ್ಲಾಸವನ್ನುಂಟುಮಾಡುತ್ತದೆ. ಬಿಸ್ಕತ್ತುಗಳಿಗಿಂತ ಇವುಗಳು ಉತ್ಕೃಷ್ಟವು. ಓವಲ್ಟಿನ್ನಂತೆ ಅವುಗಳು ಪುಷ್ಟಿಕೊಡುತ್ತವೆ.

OV/122

ಪತ್ರವ್ಯವಹಾರ

ಬರಹಗಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.

'ನಮ್ಮ ಶಾಲೆಗಳು' ಈ ವಿಮರ್ಶೆಯ ಮೇಲಿನ ಟೀಕೆಗೆ ಉತ್ತರ.

ಈ ಪತ್ರಿಕೆಯಲ್ಲಿ ಪ್ರಕಟಿಸಿದ ಮೇಲಿನ ಹೆಸರಿನ ಲೇಖನಮಾಲೆಯನ್ನು ಆದ್ಯಂತವಾಗಿ ಓದಿದ್ದರೆ, ನಾನಾದರೂ ಪಿಕೆ ಶಾಲೆಗಳನ್ನು ಬೊಟ್ಟುಮಾಡಿ ತೋರಿಸಿದೆನೆಂದು ಈ ಲೇಖನದ ಟೀಕಾಕಾರರಿಗೆ ತೋರದಿದ್ದರು. ಪ್ರಕೃತದ ಲೇಖನಮಾಲೆಯಲ್ಲಿನ 'ಗುರುಶಿಷ್ಯ ಸಂಬಂಧ' ಎಂಬ ಲೇಖನದ ಮೇಲೆ "ರಾಷ್ಟ್ರಬಂಧು" 'ನವಯುಗ' ಎರಡು ಪತ್ರಿಕೆಗಳಲ್ಲಿ ಇಬ್ಬರ ಉದ್ಗಾರವು ಹೊರಟಿದೆ. ಇದನ್ನು ಪ್ರಕಾಶದಲ್ಲಿರುವ ಕಾರಣ 'ನವಯುಗ'ವನ್ನು ಇನ್ನೂ ಕಾಣಲು ಅವಕಾಶವಾಗಲಿಲ್ಲ. ಆದುದರಿಂದ ರಾಷ್ಟ್ರಬಂಧುವಿನಲ್ಲಿ ಬಂದ ಗಾಮಿಗಳ ಟೀಕೆಯನ್ನು ಮಾತ್ರ ವಿಮರ್ಶಿಸುವೆನು. ಈ ಟೀಕಾಕಾರರು ತಮಗೆ ಸತ್ಯವೆಂದು ಕಂಡುದನ್ನು ಬರೆಯಲು ಹೆಸರನ್ನು ಹಾಕಲು ಏಕೆ ಅಂಜಬೇಕೋ ತಿಳಿಯದು. ಆದರೂ ಅವರು ಪಿಟ್ಟಿಶಾಲೆಯ ಮುಖ್ಯ ಅಧ್ಯಾಪಕರೆಂದು ನನಗೆ ತಿಳಿದುಬಂದುದರಿಂದ ಇನ್ನು ಮುಂದಾದರೂ ಈ ಸಂಕೋಚ ಯಾತಕ್ಕೆ ಬೇಕೆಂದು ಸೂಚಿಸದಿರಲಾರೆ.

ಶ್ರೀಯುತರ ಲೇಖನದಲ್ಲಿ ನನಗೆ ಕಂಡುಬರುವ ಆಕ್ಷೇಪಗಳನ್ನು ವರ್ಗೀಕರಿಸಿ ಉತ್ತರಿಸಲೆತ್ನಿಸುವೆ. ಆದರೆ ವ್ಯಕ್ತಿಯೊಡನೆ ವಿಷಯವನ್ನೂ, ವಿಷಯದೊಡನೆ ವ್ಯಕ್ತಿಯನ್ನೂ ಕಲ್ಪಿಸದಿಲ್ಲದೆ ಬೆರಸಿ ನಂಜನ್ನು ಕಾರುವ ಪದ್ಧತಿಯನ್ನು ನಮ್ಮ ಜನರು ಮೊದಲಿಗೆ ಬಿಡಬೇಕು. ವಿಷಯದ ಟೀಕೆಯೆಂದರೆ ಅದು ನಾಶಕಾರಿಯಾಗಲೇ ಬೇಕೆಂದು ನಾನು ತಿಳಿಯುವುದಿಲ್ಲ. ನನ್ನನ್ನಾದರೂ ಟೀಕಿಸುವ ಸ್ವಾತಂತ್ರ್ಯವು ಇತರರಿಗಿದೆ. ಅಂತೆಯೇ ನಾನೂ ಈ ಸ್ವಾತಂತ್ರ್ಯ ವಹಿಸುತ್ತೇನೆ. ನಮ್ಮ ಶಾಲೆಗಳು—ಯಾರೊಬ್ಬರ ಖಾಸಗಿ ಮನೆಗಳಲ್ಲ. ಸಾರ್ವಜನಿಕ ಸಂಸ್ಥೆಗಳು ಜನರ ದುಡ್ಡಿನ ಮೇಲೆ ಬೆಳೆದುವು. ಜನಹಿತಕ್ಕಾಗಿ ಉಪಯುಕ್ತವಾಗಬೇಕಾದುವು. ಅವುಗಳ ಗುಣದೋಷವನ್ನು ವಿಮರ್ಶಿಸಮಾಡುವ ಸ್ವಾತಂತ್ರ್ಯ ಪ್ರತಿ ಪ್ರಜೆಗೂ ಇದೆ. ಸಾರ್ವಜನಿಕ ಸಂಸ್ಥೆಗಳಲ್ಲಿ ಸಾರ್ವಜನಿಕ ವರ್ತಮಾನ ಪತ್ರಗಳು ಅನುಚಿತ ಸಾಧನವೆಂದು ನನಗೆ ತೋರುವುದಿಲ್ಲ.

ಗುರುಶಿಷ್ಯ ಸಂಬಂಧವಾದ ವಿಷಯದಲ್ಲಿ ಯಾವ ಟೀಕೆಯೂ ನನಗೆ ಬರಲಿಲ್ಲ. ಶಿಕ್ಷಣದ ಮೂಲಾಕ್ಷರವನ್ನು ಬಲ್ಲವನು ಅದು ಪ್ರೇಮಮಯವಾಗಿರಬೇಕೆಂದೇ ಬರೆಯುವನು. ಹಾಗಾದರೆ ಈ ಟೀಕೆಯು ಬಂದಿರುವುದಾದರೆ ಪಿಟ್ಟಿ ಶಾಲೆಯನ್ನೂ ತೋರಿಸಿ ಅದರಲ್ಲಿ ಬೇರೆ ಬೇರೆ ಶಿಕ್ಷಕರು ಮಕ್ಕಳೊಡನೆ ಬೆಳೆಸುವ ಸಂಬಂಧವನ್ನು ಕುರಿತು ಆಡಿದ ಮಾತಿನ ಮೇಲಿರುತ್ತದೆ. ಉಪಾಧ್ಯಾಯರು ಬೇರೆ ಬೇರೆ ಸ್ವಭಾವದವರೆಂದೂ ಒಂದೇ ಎರಕದವರಲ್ಲವೆಂದೂ ಅವರು ಅನ್ನುತ್ತಾರೆ. ಅದನ್ನು ನಾನೂ ಬಲ್ಲೆ. ಆದರೆ ಅವರ ಬುದ್ಧಿಶಕ್ತಿ ಸ್ವಭಾವಗಳು ಹೇಗಿದ್ದರೂ ಮಕ್ಕಳೊಡನೆ ಬೆರಸುವಾಗ ಪ್ರೇಮದಿಂದಿರಬೇಕೆಂದೂ ಹುಲಿಯಾಗಿರಬಾರದೆಂದೂ ಅವರು ತಿಳಿದಿರಬೇಕು. ಇಷ್ಟನ್ನು ತಿಳಿಯಲು ಅವರಿಂದಾಗದಿದ್ದರೆ ಇಷ್ಟೊಂದು ಟ್ರೈನಿಂಗ್ ಶಿಕ್ಷಣವು ವ್ಯರ್ಥವೆಂದೇ ನನ್ನ ತಿಳಿವು. ಗುರುಶಿಷ್ಯ ಸಂಬಂಧದ ವಿಚಾರದಲ್ಲಿ—ಟ್ರೈನಿಂಗ ಶಾಲೆಯು ಯಾವ ಬೋಧನೆಯನ್ನು ಕೊಡುವುದೆಂದು ಅವರು ಹೇಳುವರೇ?

ಇನ್ನು ನಾನು ಪಿಟ್ಟಿ ಶಾಲೆಯ ಉಪಾಧ್ಯಾಯರೊಡನೆ ಸರಿಯಾದ ೫ ನಿಮಿಷಗಳನ್ನು ಕಳೆಯದೆ ಹೀಗೆ ಬರೆದೆನೆಂಬ ಅಪಾದನೆಯ ವಿಚಾರ. ಈ ಶಾಲೆಯವರಲ್ಲಿ ಈ ಲೇಖಕರು ನನಗೆ ನವೀನರಲ್ಲ. ಅವರಂಗಾದರೂ ಇದೇ ವಿಷಯದಲ್ಲಿ ನಾವು ಇತರ ಉಪಾಧ್ಯಾಯರೊಡನೆ ಕುಳಿತು ಊಟಮಾಡಿಯಲ್ಲೊಂದು ದಿನ ಮಾಡಿದ ತರ್ಕವು ನೆನಪಿರಬಹುದು. ಇನ್ನೊಬ್ಬ ಆಕ್ಷೇಪಕಾರರ ಸ್ನೇಹಲಾಭವು ಒಂದು ತಿಂಗಳ ಕಾಲ ನನಗೆ ಗುರುವಾಯನಕೆರೆಯಲ್ಲಾಗಿತ್ತು. ಇನ್ನೊಬ್ಬಿಬ್ಬರು ಒಂದೊಂದು ವಾರ ನನ್ನೊಡನೆ ಕಳೆದಿರುವರು. ಇವರು ಕಲಿಸಿದ ಮಕ್ಕಳೊಡನೆ ಮೂರು ನಾಲ್ಕು ದಿನಗಳನ್ನಾದರೂ ಬೆರಸಿ ಕಳೆದಿರುವೆ. ಇಷ್ಟು ಕಾಲವು ಇವರ ಗುರುಶಿಷ್ಯ ಸಂಬಂಧವನ್ನು ತಿಳಿಯಲು ಸಾಕೆಂದು ನನ್ನ ಮತ.

ಇನ್ನು **ಹುಡುಗರನ್ನು ಅವರಷ್ಟಕ್ಕೆ ಬಿಡಬೇಕೆಂಬ ವಾದ.** ಇದರ ಅರ್ಥವು ಅವರು ಕಾಡು ಪ್ರಾಣಿಗಳಾಗಿ ಬೆಳೆಯಬೇಕೆಂದಲ್ಲ. ಆ ವಾದವನ್ನು ನಾನೂ ಮಾಡಿಲ್ಲ. ಮಕ್ಕಳ ಸ್ವಭಾವ ಶಕ್ತಿಗಳನ್ನು ಬೆಳೆಯಿಸಲು ಅವಕಾಶ ಕೊಡಬೇಕಲ್ಲದೆ, ಉಪಾಧ್ಯಾಯನು ತನ್ನ ಬುದ್ಧಿವಂತಿಕೆಯನ್ನು ಅವರಲ್ಲಿ ತುಂಬಬಾರದೆಂಬುದು ನನ್ನ ವಾದ. ಮಾಂಟೆಸೂರಿ ಕಿಂಡರ್‌ಗಾರ್ಟನ್ ಪ್ರೊಜೆಕ್ಟ ಮೆಥಡ್ ಮೊದಲಾದುವು—ನನಗೂ ಮುಂಚಿನವು. ಟ್ರೈನಿಂಗ್ ಶಾಲೆಯನ್ನು ದಾಟಿ ಬಂದವರು ಈ ವಾದದ ಕರ್ತೃತ್ವವನ್ನು ನನಗೆ ಒಪ್ಪಿಸುವುದು ಬೇಡ. ಇಷ್ಟೆಲ್ಲ ಶಿಕ್ಷಣವಾದ ಇವರೂ ಅದೇ ರಾಜ್ಯದಲ್ಲಿರುವ ಉಪಾಧ್ಯಾಯರು ಈ ವಾದವನ್ನು ಕೇಳಿಯೇ ಬೆದರಿ ಬೀಳುವುದನ್ನು ಕಂಡೆ. ಇವರು ಹೊಸ ಸಿದ್ಧಾಂತಗಳನ್ನು ಕಂಡು ತಳ್ಳಿಬಿಡುವರು ಎಂಬುದು ವಿಶದವಾಗುವುದು.

ಇನ್ನು **ವ್ಯಕ್ತಿಯ ಮೇಲಣ ಟೀಕೆಯ ವಿಚಾರ—** ಈ ಲೇಖನಮಾಲೆಯನ್ನು 'ಸ್ವದೇಶಾಭಿಮಾನಿ' ಪತ್ರಿಕೆಯ ಉಪಯೋಗಕ್ಕಾಗಿ ಬರೆದುದಲ್ಲದೆ ಪುಸ್ತಕ ಮಾಡುವುದಕ್ಕಲ್ಲ. ಶ್ರೀಯುತರು ಈ ಪುಸ್ತಕದ ಪ್ರಕಟಣೆಗೆ ಅಂಜುತ್ತಿರುವರೇ?

ಇನ್ನು ಶಾರೀರಿಕ ಶಿಕ್ಷಣದ ವಿಷಯ. ಬರೆದರೆ ಇವರ ಟೀಕೆಯಲ್ಲಿ ಚಲಚಿತ್ರ ಕಸರತ್ತು ಮೊದಲಾದ ಭೂಮಿಕೆಗಳು ನಂದು ಅವಶ್ಯವಿಲ್ಲ. ನಟನಾದವನು ಮನುಷ್ಯಜೀವಿ. ನಟನೆಯ ಮಾತ್ರಕ್ಕೆ ಅವನು ಜೀವನ ಪರೀಕ್ಷೆಗೆ ಅರ್ಹನಾಗುವುದಿಲ್ಲ. ನಟಜೀವನವು ಅದಕ್ಕೆ ಸಹಾಯಕವೇ ಆದೀತು.

ನಾನು **ಶಾಲಾ ಹುಡುಗರಿಗೆ ನಟನೆಯೊಂದನ್ನೇ ಹೇಳಿಕೊಟ್ಟೆ—**ಎಂಬ ಮತ್ತೊಂದು ಅಪವಾದ. ನಾನು ಪಿಟ್ಟಿ ಶಾಲೆಗೆ ಬಂದುದು ಮಕ್ಕಳ ಪರಿಷತ್ತಿನ ಮಾತುಕತೆ ಕೊಡಲು. ಅಲ್ಲಿ ನಾಟಕವು ತುಂಬಿರಲಿಲ್ಲ. ಒಂದು ಅಂಗವಾಗಿತ್ತು. ನಾನು ಕೊಟ್ಟ ಮಾತುಕತೆಯು ನಮ್ಮ ನಾಡಿಯ ಮಕ್ಕಳನ್ನು ಕೇವಲ ನಟರನ್ನು ಮಾಡುತ್ತೋ ಅಥವಾ ಬೇರೇನು ಲಾಭವು ಅದರಿಂದ ದೊರೆಯಿತೋ—ಎಂದು ತಿಳಿಯಲು ನೀವು ಮಕ್ಕಳ ಕೂಟಕ್ಕೆ ಬರಬೇಕಿತ್ತು. ಬಂದು ನಿಮ್ಮ ನಾಡಿಯ ಉಪಾಧ್ಯಾಯರನ್ನು ಕೇಳಬೇಕಿತ್ತು. ಪರಿಷತ್ತಿಗೆ ಬೇರೆ ಊರಿಂದ ಬಂದ ಶ್ರೀ ಮಂಗೇಶರಾಯರಂಥ ವಿದ್ಯಾಪ್ರೇಮಿಗಳನ್ನು ಕೇಳಬೇಕಿತ್ತು. ಅಷ್ಟು ತಾಳ್ಮೆ ನಿಮಗಿಲ್ಲ. ಮುಂದೆ ಇದೆಲ್ಲ ಬೇಕಿಲ್ಲ.

ನಾನು ನಾಟಕಕ್ಕಾಗಿ ಟೀಕೆ ಮಾಡಿರುವೆನೇ? ಹೊರತು ಸೂಚನೆ ಕೊಡುವ ಗೋಜಿಗೆ ಹೋಗಿಲ್ಲೆಂದು ಅವರ ಆರೋಪ. ಇದು ಲೇಖನಮಾಲೆಯನ್ನು ಕಣ್ಣುತೆರೆದು ನೋಡಿದರೆ ತಿಳಿದೀತು.

ಇನ್ನು ಇದೇ ಪ್ರಸಂಗದಲ್ಲಿ ಈ ವಿಷಯವನ್ನು ಕುರಿತಾಗಿ ಪಿಟ್ಟಿ ಕೆಂಪಿನ ಸಭೆಯಲ್ಲಿ ಮಾತನಾಡಿದ್ದೆ. ಆ ರಾಯರೂ ಇದ್ದರು. ಹಲವು ಉಪಾಧ್ಯಾಯರೂ ಇದ್ದರು. ನನ್ನ ಅಭಿಪ್ರಾಯವು ವರ್ತಮಾನ ಪತ್ರಿಕೆಗಳಿಗೆ ಮಾತ್ರ ಕೊಟ್ಟದ್ದಲ್ಲ.

ಇನ್ನು ಟ್ರೈನಿಂಗ್ ಶಾಲೆಯೊಂದನ್ನು ಏಕೆ ತೆರೆಯಬೇಕೆಂಬುದು ರಾಯರ ಸೂಚನೆ. ಶಾಲೆಗಳನ್ನು ಟೀಕಿಸುವವರು ಹೀಗೆ ಮಾಡಬೇಕೆಂದೇನು ಅಭಿಪ್ರಾಯ? ಅದೇಕೆ? ಟೀಕೆ ಸಹನೆಯಾಗುವುದಿಲ್ಲವೆಂದೇ? ಕಾಫಿ ಹೋಟೆಲಿಗೆ ಹೋಗಿ ತಿಂದಿ ರುಚಿಸಲಿಲ್ಲೆಂದು ಟೀಕೆ ಮಾಡಿದರೆ "ಹೊಸ ಕಾಫಿ ಹೋಟೆಲು ತೆರೆ ಅನ್ನುವವರೇ ನೀವು" ಮನೆಯ ಅಡುಗೆಯ ವಿಷಯದಲ್ಲಿ ನಿಮ್ಮ ಅಭಿಪ್ರಾಯ ಹೀಗೆಯೋ?

ಮತ್ತು ವಿಷಯವೊಂದರ ಟೀಕೆ ಮಾಡುವಾಗ ಪಿಟ್ಟಿ ಶಾಲೆಯ ಉದಾಹರಣೆ ಕೊಡುವಂತಾಯಿತು. ಈ ಶಾಲೆಯ ಮೇಲೆ ನನಗೆ ದ್ವೇಷವಿಲ್ಲ. ಇತರ ಶಾಲೆಗಳು ಇದಕ್ಕಿಂತ ಒಳ್ಳೆಯವು ಎಂದು ನಾನೂ ತಿಳಿದಿಲ್ಲ. ಟೀಕೆಯಿಂದ ಪ್ರಯೋಜನವಿದೆಯೆಂದು ನನ್ನ ತಿಳುವಳಿಕೆ. ಅದು ನಿಮ್ಮೆಲ್ಲರ ಕೋಪಕ್ಕೆ ಮಾತ್ರ ಕಾರಣವಾದದ್ದಾದರೆ ನನ್ನಿಂದ ಅಪರಾಧವೇ ಸರಿ. ದಯವಿಟ್ಟು ಕ್ಷಮಿಸಿರಿ.

ಎರಡನೇ ಬಾತಮಿಯನ್ನು ಈಗಾಗಲೇ ಕಂಡಿರುವೆ

ಅದಕ್ಕೆ ಜವಾಬು ಅವಶ್ಯವಿದ್ದಂತೆ ಕಾಣುವುದಿಲ್ಲ. ಅದರ ಲೇಖಕರಾದ ಶ್ರೀ ವಿ. ಬಂಟುಶೆಟ್ಟರಲ್ಲಿ ನನ್ನ ವಿನಂತಿ ಇಷ್ಟೆ. ಇನ್ನು ಮುಂದೆ ನಾನು ಉಪಾಧ್ಯಾಯರ ವಿಮರ್ಶೆ ಮಾಡುವುದನ್ನು ಬಿಟ್ಟು ಅವನ್ನು ಹೊಗಳಲು ಯತ್ನಿಸಬೇಕಾಗಿದೆ. ನೀವು ನನ್ನ ಜೀವನ ಚರಿತ್ರೆಯನ್ನು ಈ ಲೇಖನದಲ್ಲಿ ಬರೆಯಲು ಯತ್ನಿಸಿದ್ದೀರಿ. ತಮ್ಮ ಈ ಸತ್ಕಾರ್ಯಕ್ಕಾಗಿ ಇನ್ನೂ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಿಕೊಡುತ್ತೇನೆ. ಇನ್ನು ವಿವಾದಾಸ್ಪದ ವಿಷಯವಾಗಿ ಈಗಲೇ ಉತ್ತರ ಕೊಡಲಾರೆ. ಮಾಂಟೆಸೂರಿ ಮೊದಲಾದವರ ಮಾದರಿಯಲ್ಲಿ ಶಾಲೆ ತೆರೆದವರು ನನ್ನಂತೆ, ಕುಟುಂಬರಹಿತರೋ ಎಂದು ತಿಳಿದು ಬರೆಯುವೆನು. ಇತಿ,

ಮೊಕ್ಕಾಂ ಕನ್ನಾಣ — **ಶಿವರಾಮ ಕಾರಂತ.**

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ —ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ —ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ ಕ್ಷಯ ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0 ಅಂಚೆ ವೆಚ್ಚ ಬೇರೆ

ಕಸ್ತೂರಿಮಿತ್ರಣಾ
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ ರಸಾಯನ ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಂದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು —ಗರ್ಭ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಚಿಕ್ಕ ಕಟಾಲಾಗ ಉಚಿತ ಕಳುಹಿಸಲ್ಪಡುವದು

ಯಮ್. ವಿ ಶಾಸ್ತ್ರೀ,
ಆಯುರ್ವೇದ ಭೂಷಣ
ಮಂಗಳೂರು ದಕ್ಷಿಣ ಕನ್ನಡ

ಅಪೇಕ್ಷಿಸುವ ಬಹುಮಾನಗಳು

ಜಗದ್ವಿಖ್ಯಾತ ... ಕಾಶೀ ಸಿಲ್ಕುಗಳು ... ವರೆಗೆ ಇದ್ದ ... ರೂ 2... ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು ರವಕೆ ಖಣಗಳು ವಸ್ತ್ರಗಳು ... ಉಣ್ಣೆಯ ಶಾಲು, ಮಣಿ, ಧೋತರ ... ಕೇಸರಿ ಪಚ್ಚಕರ್ಪೂರ ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು ಜರಿ... ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ

ರಾವ್ ವಿಶ್ವನಾಥರಾವ್ ಎಂಡ್ ಬ್ರದರ್ಸ್
...ಘಾಟ್ ಕಾಶೀ ಬನಾರಸ್ ಸಿಟಿ

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ ಮುದ್ದುಕೃಷ್ಣಭಟ್ಟ ಪ್ರೊಪ್ರೈಟರ್

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — MANGALORE

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

BRANCHES -Karkal Kasargod Cochin Udipi Gangolli Coondapur Bombay Puttur Calicut & Alleppey

ಬ್ರಾಂಚುಗಳು:—

ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲೆಪೆ

Authorised and fully paid up Capital Rs 300 000 0 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೆಟ್ಟ ಮೂಲಧನವು ರೂ 3...
Reserve and other sinking Funds Rs 26 000 0 0	ರಿಸರ್ವು ಮತ್ತು ಇತರ ಫಂಡುಗಳು ರೂ 2...
Amount invested on G P Notes Rs 81... 092 2 0	ಸರಕಾರದ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ ...2 12
Rate of interest on fixed deposits at Head Office and Branches are 6½% for 2 Year 6% 1 Year	ಠೇವು ... ಬ್ರಾಂಚುಗಳಲ್ಲಿ ... ವರ್ಷ ... ವರ್ಷಕ್ಕೆ ... ಬಡ್ಡಿ

Current Account Deposits received and interest allowed on daily balance of Rs 50 and above that on multiple of Rs 10 @ ...% from 1st January to 30th June and @ ...% from 1st July to 31st December No interest will be allowed unless the deposit to earn it ... than R... during a period of 6 months ending either 30th June or 31st December in any year.

Except by special arrangement no interest will be allowed on sums exceeding Rs 10 000 in the case of Head Office and Cochin Branch and ... sum exceeding R... ... 000 in the case of Bombay Branch ... the Branches

For further particulars please apply to

Canara Bank Ltd, Mangalore — —193...

K. Venkat Rao.
Secretary & Treasurer

The Pangal Nayak Bank, Ltd.

Head Office Udipi	*Established 1920*	Branch Office Mangalore

Authorised Capital Rs 2 00,000	Paid up Capital Rs 1 75 000-
Issued Capital Rs 1 75,000	Reserve and other Funds Rs 1,80 000

1 **Receives Fixed Deposits at the following favourable rates**

For 3 months at 3... For 12 months at ...% on ...
6 or 9 months at 5... 24 ...
Interest being payable every 3 months

ಠೇವುಗಳಿಗೆ ಕೆಳಗಿನ ದರಗಳು ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುತ್ತವೆ

3 ತಿಂಗಳಿಗೆ ಸಾ 3 ... 12 ... ರೂ 21 ...
6 ಯಾ 9 ತಿಂಗಳಿಗೆ ಸಾ 5 ... 24 ತಿಂಗಳಿಗೆ ಸಾ ...

2 **Current Accounts** opened free of charge and interest is allowed at favourable rates of interest. **Cumulative Savings Bank and Short Notice Deposits** received at favourable rates of interest

3 The Bank transacts every description of Banking Business

4 For full particulars and for copies of the ... please apply to the **Secretary** at the Head Office or the **Agent** Mangalore Branch

Office of the Bank
Udipi — 3

Udil Nayak,
Secretary

ಇಪ್ಪತ್ತು — ಮುದುಕ
ಮೂವತ್ತು — ಮುಟ್ಟ
ನಲವತ್ತು — ನರಳುವ
ಐವತ್ತು — ಆಲ್ಸ್ಯ
ಅರವತ್ತು — ಅರಳು ಮರಳು
ತೋರಿಕೆ ವಯಸ್ಸಿಗೆ — ಏನಾಗುವಿರೋ?

... ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಡಬ್ಬಿ 1ಕ್ಕೆ ಕ್ರಯ ರೂ 1—0—0

... ನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ...ದ್ಯ ಎಂಬ ಪುಸ್ತಕವನ್ನು ಓದಿರಿ

ಮದನಮಂಜರಿ ಫಾರ್ಮಸಿ, 1/84 ಚೀನಾ ಬಜಾರ್ ಮದ್ರಾಸ್

ಮದನಮಂಜರಿ ಮಾತ್ರೆಗಳ ಏಜಂಟರು — ವಿ ಜಿ ಚಂದರಾನಾ ಮಿಶನ್ ಬೀದಿ ಮಂಗಳೂರು

ಅಸ್ವಸ್ಥದ ನಂತರ–

"ಓವಲ್ಟಿನ್ನು" ಬಹು ತ್ವರೆಯಿಂದ ಸಂಪೂರ್ಣ ಚೈತನ್ಯವನ್ನೀಯುತ್ತದೆ.

ಅಸ್ವಸ್ಥದಲ್ಲಿ ಬಿದ್ದಾದ ಮೇಲೆ ವ್ಯಕ್ತಿಗಳು ಸ್ವಲ್ಪ ಬಲಗೊಂಡು ಕುಳಿತುಕೊಳ್ಳಲು ಚೈತನ್ಯಯುಕ್ತರಾದ ಕೂಡಲೇ ಸಾಧಾರಣವಾದ ಆಹಾರವನ್ನು ಜೀರ್ಣಿಸುವಷ್ಟು ಶಕ್ತಿಯು ಬರುವುದಿಲ್ಲ. ಸಾಮಾನ್ಯ ಆಹಾರಗಳು ಸರಿಯಾದ ಮತ್ತು ಸಮತೂಕದ ಆಹಾರವನ್ನೊದಗಿಸಿಕೊಡುವುದಿಲ್ಲವಾದುದರಿಂದ ಅದನ್ನು ಸ್ವೀಕರಿಸುವುದೂ ಸರಿಯಲ್ಲ.

ಓವಲ್ಟಿನ್ನ್ನಲ್ಲಿರುವ ಉತ್ತಮವಾದ ಆಹಾರ ಭಾಗವು ಅದರ ರುಚಿಯಿಂದ ಶಿಶುಗಳಿಗೂ ಅಶಕ್ತವಂತರಿಗೂ ಅತ್ಯುತ್ಕೃಷ್ಟ ಮತ್ತು ಆಶ್ಚರ್ಯಕರ ಆಹಾರವನ್ನಾಗಿ ಮಾಡುತ್ತದೆ.

ಓವಲ್ಟಿನ್ನು ಬಹು ಕ್ಷೀಣವಾದ ದೇಹವನ್ನು ಶಕ್ತಿ ತುಂಬಿ ಬಲವಾಗುವ ತನಕ ಪೋಷಿಸುತ್ತದೆ. ಇದು ಸರಿಯಾದ ಮತ್ತು ಪ್ರಕೃತಿ ಸಂಬಂಧವಾದ ಉತ್ಕೃಷ್ಟ ಟಾನಿಕ್ ಆಹಾರ. ಬೇಗನೇ ಶರೀರ ಜೀರ್ಣಿಸುತ್ತದೆ. ಅಸ್ವಸ್ಥದಿಂದೆದ್ದು "ಶಕ್ತಿ"ಯನ್ನನುಭವಿಸುವವರ ಜೀರ್ಣಶಕ್ತಿಯನ್ನು ವೃದ್ಧಿಪಡಿಸುವಂತೆ ಸಹಕಾರಿಯಾಗಿದೆ. ಬಹು ಬಲಶಕ್ತಿಯನ್ನು ಹೊಂದಿದ ವ್ಯಕ್ತಿಯೂ ಓವಲ್ಟಿನ್ನನ್ನು ಕುಡಿಯುವುದರಿಂದ ಶಕ್ತಿವಂತನಾಗುತ್ತಾನೆ.

OVALTINE
TONIC FOOD BEVERAGE

ಆರೋಗ್ಯಕ್ಕೆ, ಶಕ್ತಿಗೆ, ಧಾತುಪುಷ್ಟಿಗೆ

ರುಚಿಕರ ಹಾಗೂ ಅತ್ಯುತ್ತಮವಾದ 'ಓವಲ್ಟಿನ್'ಗೆ ಸರಿಯಾದ ಪಾನೀಯವು ಬೇರೊಂದಿಲ್ಲ. ಮಿಶ್ರಣವೂ ಸಹ್ರಮಾಣದಿಂದ ತವೂ ಆಗಿರುವ ಎಲ್ಲಾ ನಕಲಿ ಮಾಲುಗಳನ್ನು ತಿರಸ್ಕರಿಸಿರಿ.

ಅತೀ ಶುದ್ಧ ಮತ್ತು ಅತ್ಯುತ್ತಮ. ಸರಿಸ್ಪರ್ಧಿತವಾದ ದಿಲ್ಲ.

ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ಏಜಂಟರು – ಜೇಮ್ಸ್ ವ್ಯಾಟ್ ಎಂಡ್ ರಿಪನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಯಿ, ಮದ್ರಾಸ್, ರಂಗೂನುಗಳಲ್ಲಿ.

ನಿದ್ರೆಯ ಸಮಯದಲ್ಲಿ ಓವಲ್ಟಿನ್ ಬೊಟ್ಟುಗಳನ್ನು ಕುಡಿ. ಅದರ ಪೋಷಣೆಯಿಂದ ಜೀರ್ಣಶಕ್ತಿಯು ಸುಲಭವಿಂದಾಗುತ್ತದೆ. ಅದರ ಪರಿಮಳಭರಿತ ರುಚಿಯು ಮನಸ್ಸಾಹ್ಲಾದವನ್ನುಂಟುಮಾಡುತ್ತದೆ. ಬಿಸ್ಕತ್ತುಗಳಿಗಿಂತ ಇವುಗಳು ಅತ್ಯುತ್ತಮ. ಓವಲ್ಟಿನ್ನಿನಂತೆ ಅವುಗಳು ಪುಷ್ಟಿಕೊಡುತ್ತವೆ.

Ov 122

ಪತ್ರವ್ಯವಹಾರ

ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.

'ನಮ್ಮ ಶಾಲೆಗಳು' ಈ ವಿಮರ್ಶೆಯ ಮೇಲಿನ ಟೀಕೆಗೆ ಉತ್ತರ.

ಈ ಪತ್ರಿಕೆಯಲ್ಲಿ ಪ್ರಕಟಿಸಿದ ಮೇಲಿನ ಹೆಸರಿನ ಲೇಖನಮಾಲೆಯನ್ನು ಆದ್ಯಂತವಾಗಿ ಓದಿದ್ದರೆ ನಾನ್ಯಾವರೂ ಎಲ್ಲ ಶಾಲೆಗಳನ್ನು ಬೊಟ್ಟಿಟ್ಟು ತೋರಿಸಿದೆನೆಂದು ಈ ಲೇಖನದ ಟೀಕಾಕಾರರಿಗೆ ತೋರಬಹುದು. ಪ್ರಕೃತದ ಲೇಖನಮಾಲೆಯಲ್ಲಿನ 'ಗುರುಶಿಷ್ಯ ಸಂಬಂಧ' ಎಂಬ ಲೇಖನದ ಮೇಲೆ ರಾಷ್ಟ್ರಬಂಧು, ನವಯುಗ ಎರಡು ಪತ್ರಿಕೆಗಳಲ್ಲಿ ಇಬ್ಬರ ಉದ್ಗಾರವು ಹೊರಟಿದೆ. ನಾನು ಪ್ರವಾಸದಲ್ಲಿರುವ ಕಾರಣ 'ನವಯುಗ'ವನ್ನು ಇನ್ನೂ ಕಾಣಲು ಅವಕಾಶವಾಗಲಿಲ್ಲ. ಆದುದರಿಂದ ರಾಷ್ಟ್ರಬಂಧುವಿನಲ್ಲಿ ಬಂದ 'ನಾಸಿ'ಗಳ ಟೀಕೆಯನ್ನು ಮಾತ್ರ ವಿಮರ್ಶಿಸುವೆನು. ಈ ಟೀಕಾಕಾರರು ತಮಗೆ ಸತ್ಯವೆಂದು ಕಂಡುದನ್ನು ಬರೆಯಲು ಹೆಸರನ್ನು ಹಾಕಲು ಏಕೆ ಅಂಜಬೇಕೋ ತಿಳಿಯದು. ಆದರೂ ಅವರು ಎಲ್ಲ ಶಾಲೆಯ ಮುಖ್ಯ ಅಧ್ಯಾಪಕರೆಂದು ನನಗೆ ತಿಳಿದುಬಂದುದರಿಂದ ಇನ್ನು ಮುಂದಾದರೂ ಈ ಪೋಷಪ ಯಾತ್ರೆ ಬೇಡವೆಂದು ಸೂಚಿಸದಿರಲಾರೆ.

ಶ್ರೀಯುತರ ಲೇಖನದಲ್ಲಿ ನನಗೆ ಕಂಡುಬರುವ ಆಕ್ಷೇಪಗಳನ್ನು ವರ್ಗೀಕರಿಸಿ ಉತ್ತರಿಸಲೆತ್ನಿಸುವೆ. ಅದರ ವ್ಯಕ್ತಿಯೊಡನೆ ವಿಷಯವನ್ನೂ, ವಿಷಯದೊಡನೆ ವ್ಯಕ್ತಿಯನ್ನೂ ಕಲಬೆರಿಕೆಯಾಗಿ ಬೆರಸಿ ಬಂಜಸ್ಸು ಕಾಣುವ ಪದ್ಧತಿಯನ್ನು ನಮ್ಮ ಜನರು ನೋಡಲಿಗೆ ಬಿಡಬೇಕು. ವಿಷಯದ ಟೀಕೆಯೆಂದರೆ ಅದು ದ್ವೇಷಕಾರಿಯಾಗಲೇಬೇಕೆಂದು ನಾನು ತಿಳಿಯುವುದಿಲ್ಲ. ನನ್ನನ್ನಾದರೂ ಟೀಕಿಸುವ ಸ್ವಾತಂತ್ರ್ಯವು ಇತರರಿಗಿದೆ. ಅಂತೆಯೇ ನಾನೂ ಈ ಸ್ವಾತಂತ್ರ್ಯ ವಹಿಸುತ್ತೇನೆ. ನಮ್ಮ ಶಾಲೆಗಳು – ಯಾರೊಬ್ಬರ ಖಾಸಗಿ ಮನೆಗಳಲ್ಲ. ಸಾರ್ವಜನಿಕ ಸಂಸ್ಥೆಗಳು, ಜನರ ದುಡ್ಡಿನ ಮೇಲೆ ಬೆಳೆದುವು. ಜನಹಿತಕ್ಕಾಗಿ ಒದಗಬೇಕಾದುವುವು. ಅವುಗಳ ಗುಣದೋಷವನ್ನು ವಿಮರ್ಶಿಸಮಾಡುವ ಸ್ವಾತಂತ್ರ್ಯ ಪ್ರತಿ ಪ್ರಜೆಗೂ ಇದೆ. ಸಾರ್ವಜನಿಕ ಸಂಸ್ಥೆಗಳಿಗೆ ಸಾರ್ವಜನಿಕ ವರ್ತಮಾನ ಪತ್ರಗಳು ಅನುಚಿತ ಸಾಧನವೆಂದು ನನಗೆ ಅನಿಸುವುದಿಲ್ಲ.

'ಗುರುಶಿಷ್ಯ ಸಂಬಂಧ'ವಾದ ವಿಷಯದಲ್ಲಿ ಯಾವ ಟೀಕೆಯೂ ನನಗೆ ದೊರಕಲಿಲ್ಲ. ಶಿಕ್ಷಣದ ಮೂಲತತ್ವವನ್ನು ಬಲ್ಲವನು ಅದು ಪ್ರೇಮದ ಮಯವಾಗಿರಬೇಕೆಂದೇ ಬರೆಯುವನು. ಹಾಗಾದರೆ ಈ ಟೀಕೆಯು ಒಂದಿರುವುದಾದರೆ ಎಲ್ಲ ಶಾಲೆಯನ್ನೂ ತೋರಿಸಿ ಅದರಲ್ಲಿನ ಬೇರೆ ಬೇರೆ ಶಿಕ್ಷಕರು ಮಕ್ಕಳೊಡನೆ ಬೆಳೆಸುವ ಸಂಬಂಧವನ್ನು ಕುರಿತು ಆಡಿದ ಮಾತಿನ ಮೇಲಿರುತ್ತದೆ. ಉಪಾಧ್ಯಾಯರು ಬೇರೆ ಬೇರೆ ಸ್ವಭಾವದವರೆಂದೂ ಒಂದೇ ಎರಕದವರಲ್ಲವೆಂದೂ ಅವರು ಅನ್ನುತ್ತಾರೆ. ಅದನ್ನು ನಾನೂ ಬಲ್ಲೆ, ಆದರೆ ಅವರ ಬುದ್ಧಿಶಕ್ತಿ ಸ್ವಭಾವಗಳು ಹೇಗಿದ್ದರೂ ಮಕ್ಕಳೊಡನೆ ಬೆರಸುವಾಗ ಪ್ರೇಮದಿಂದಿರಬೇಕೆಂದೂ ಹುಲಿಯಾಗಿರಬಾರದೆಂದೂ ಅವರು ತಿಳಿದಿರಬೇಕು. ಇಷ್ಟನ್ನು ತಿಳಿಯಲು ಅವರಿಂದಾಗದಿದ್ದರೆ ಇಷ್ಟೊಂದು ಟ್ರೈನಿಂಗ್ ಶಿಕ್ಷಣವು ವ್ಯರ್ಥವೆಂದೇ ನನ್ನ ತಿಳಿವು.... ಗುರುಶಿಷ್ಯ ಸಂಬಂಧದ ವಿಚಾರದಲ್ಲಿ – ಟ್ರೈನಿಂಗ ಶಾಲೆಯು ಯಾವ ಬೋಧನೆಯನ್ನು ಕೊಡುವುದೆಂದು ಅವರು ಹೇಳುವರೇ?

ಇನ್ನು, ನಾನು ಎಲ್ಲ ಶಾಲೆಯ ಉಪಾಧ್ಯಾಯರೊಡನೆ ಸರಿಯಾದ ೩ ನಿಮಿಷಗಳನ್ನು ಕಳೆಯದೆ ಹೀಗೆ ಬರೆದೆನೆಂಬ ಅಪಾದನೆಯ ವಿಚಾರ. ..ಈ ಶಾಲೆಯವರಲ್ಲಿ ಈ ಲೇಖಕರು ನನಗೆ ನವೀನರಲ್ಲ. ಅವರೆಗಾದರೂ ಇದೇ ವಿಷಯದಲ್ಲಿ ನಾವು ಇತರ ಉಪಾಧ್ಯಾಯರೊಡನೆ ಕುಳಿತು ಉಡುಪಿಯಲ್ಲೊಂದು ದಿನ ಮಾಡಿದ ತರ್ಕವು ನೆನಪಿರಬಹುದು. ಇನ್ನೊಬ್ಬ ಆಕ್ಷೇಪಕಾರರ ಸ್ನೇಹಲಾಭವು ಒಂದು ತಿಂಗಳ ಕಾಲ ನನಗೆ ಗುರುವಾಯನಕೆರೆಯಲ್ಲಾಗಿತ್ತು. ಇನ್ನೊಬ್ಬಿಬ್ಬರು ಒಂದೊಂದು ವಾರ ನನ್ನೊಡನೆ ಕಳೆದಿರುವರು. ಇವರು ಕಲಿಸಿದ ಮಕ್ಕಳೊಡನೆ ಮೂರು ನಾಲ್ಕು ದಿನಗಳನ್ನಾದರೂ ಬೆರಸಿ ಕಳೆದಿರುವೆ. ಇಷ್ಟು ಕಾಲವು ಇವರ ಗುರುಶಿಷ್ಯ ಸಂಬಂಧವನ್ನು ತಿಳಿಯಲು ಸಾಕೆಂದು ನನ್ನ ಮತ.

ಇನ್ನು **ಹುಡುಗರನ್ನು ಅವರಷ್ಟಕ್ಕೆ ಬಿಡಬೇಕೆಂಬ ವಾದ.** ಇದರ ಅರ್ಥವು ಅವರು ಕಾಡು ಪ್ರಾಣಿಗಳಾಗಿ ಬೆಳೆಯಬೇಕೆಂದಲ್ಲ. ಆ ವಾದವನ್ನು ನಾನೂ ಮಾಡಿಲ್ಲ. ಮಕ್ಕಳ ಸ್ವಭಾವ ಶಕ್ತಿಗಳನ್ನು ಬೆಳೆಯಿಸಲು ಅವಕಾಶ ಕೊಡಬೇಕಲ್ಲದೆ, ಉಪಾಧ್ಯಾಯನು ತನ್ನ ಬುದ್ಧಿವಂತಿಕೆಯನ್ನು ಅವರಲ್ಲಿ ತುಂಬಬಾರದೆಂಬುದೇ ನನ್ನ ವಾದ. ಮಾಂಟೆಗೂರಿ ಕಿಂಡರ್‌ಗಾರ್ಟನ್ ಪ್ರೊಜೆಕ್ಟ ಮೆಥಡ್ ಮೊದಲಾದುವು – ನನಗೂ ಮುಂಚಿನವು. ಟ್ರೈನಿಂಗ್ ಶಾಲೆಯನು ದಾಟಿ ಬಂದವರು ಈ ವಾದದ ತಥ್ಯಾತಥ್ಯವನ್ನು ನನಗೆ ಒಪ್ಪಿಸುವುದು ಬೇಡ. ಇಷ್ಟೆಲ್ಲ ಶಿಕ್ಷಣವಾ! ಇನ್ನೂ ಅದೇ ರಾಜ್ಯದಲ್ಲಿರುವ ಉಪಾಧ್ಯಾಯರು ಈ ವಾದವನ್ನು ಕೇಳಿಯೇ ಬೆದರಿ ಬೀಳುವುದನ್ನು ಕಂಡಿ ಇವರು ಹೊಸ ಸಿದ್ಧಾಂತಗಳನ್ನು ಕಂಡು ತಾಳ್ಮೆಗೆಡುವರು ಎಂಬುದು ವಿಶದವಾಗುವುದು.

ಇನ್ನು **ವ್ಯಕ್ತಿಯ ಮೇಲಿನ ಟೀಕೆಯ ವಿಚಾರ** – ಈ ಲೇಖನಮಾಲೆಯನ್ನು ಸ್ವದೇಶಾಭಿಮಾನಿ ಪತ್ರಿಕೆಯ ಆಗ್ರಹಕ್ಕಾಗಿ ಬರೆದುದಲ್ಲದೆ ಪುಸ್ತಕ ಮಾಡುವುದಕ್ಕಲ್ಲ. ಶ್ರೀಯುತರು ಈ ಪುಸ್ತಕದ ಜನ್ಮಕ್ಕಾಗಿ ಅಂಜುತ್ತಿರುವರೇ?

ಇನ್ನು ಆರಂಭದ ಶಿಕ್ಷಣದ ವಿಷಯ. ಒರೆದರೆ ಅದರ ಟೀಕೆಯಲ್ಲಿ ಚಲಚಿತ್ರ, ಕರ್ಣ ಮೊದಲಾದ ಭೂಮಿಕೆಗಳ ನಂಬು ಅದಕ್ಕಿಲ್ಲ. ನಟನೆಯವನು ಮನುಷ್ಯನೇ. ನಟನೆಯ ಪಾತ್ರಕ್ಕೆ ಅವನು ಜೀವನ ಪರಿಶೀಲನೆಗೆ ಅಂಧನಾಗುವುದಿಲ್ಲ. ನಟಜೀವನವು ಅದಕ್ಕೆ ಸಹಾಯಕವೇ ಆದೀತು.

ಇನ್ನು **ಶಾಲಾ ಹುಡುಗರಿಗೆ ನಟನೆಯೊಂದನ್ನೇ ಹೇಳಿಕೊಟ್ಟೆ** – ಎಂಬುದು ಎರಡನೆಯ ಅಪವಾದ. ನಾನು ಎಲ್ಲ ಶಾಲೆಗೆ ಬಂದುದು ಮಕ್ಕಳ ಗರಿಸತ್ತಿನ ಮಾತು ಕೊಡಲು. ಅಲ್ಲಿ ನಾಟಕವು ತುಂಬಿರಲಿಲ್ಲ. ಒಂದು ಅಂಗವು ಹೌದು. ನಾನು ಕೊಟ್ಟ ಮುಖ್ಯತೆಯು ಎಷ್ಟು? ಶಾಲೆಯ ಮಕ್ಕಳನ್ನು ಕೇವಲ ನಟರನ್ನು ಮಾಡುವುದೋ ಅಥವಾ ಬರಿಯ ಲಾಭವು ಅದರಿಂದ ದೊರೆಯುವುದೋ – ಎಂದು ತಿಳಿಯಲು ಎಷ್ಟು ಮಕ್ಕಳ ಕೂಟಕ್ಕೆ ಬರಬೇಕಿತ್ತು. ಒಂದು ಎಷ್ಟು ಶಾಲೆಯ ಉಪಾಧ್ಯಾಯರನ್ನು ಕೇಳಬೇಕಿತ್ತು. ಸಂಪತ್ತಿಗೆ ಬೇರೆ ಎರಡು ಬಂಧ ಶ್ರೀ ಮಂಗೇಶರಾಯರಂಥ ಎದ್ಯಾಪ್ರೇಮಿಗಳನ್ನು ಕೇಳಬೇಕಿತ್ತು. ಅಷ್ಟು ತಾಳ್ಮೆ ಎಮಗಿಲ್ಲ. ಮಾಡಬೇಕಿಲ್ಲ.

...ಪಾತ್ರದ ಟೀಕೆ ಮಾಡಿದವನೇ ಹೊರತು ನಾಟಕ ಕಲಿಸುವ ಗುರುವಿನ ಹೊಣೆಗೇಡಿಲ್ಲೆಂದು. ಅವರ ಆರೋಪ. ಇದು ಲೇಖನಮಾಲೆಯನ್ನು ಕಣ್ಣುತೆರೆದು ನೋಡಿದರೆ ತಿಳಿದೀತು.

ಇನ್ನು ಇದೇ ಪ್ರಸಂಗದಲ್ಲಿ ಈ ವಿಷಯವನ್ನು ಕುರಿತಾಗಿ ಎಲ್ಲ ಸೆಂಟ್ರಲ್ ಸಭೆಯಲ್ಲಿ ಮಾತನಾಡಿದ್ದ. ಆಗ ರಾಯರೂ ಇದ್ದರು. ಹಲವು ಉಪಾಧ್ಯಾಯರೂ ಇದ್ದರು. ನನ್ನ ಅಭಿಪ್ರಾಯವು ವರ್ತಮಾನ ಪತ್ರಿಕೆಗಳಿಗೆ ಮಾತ್ರ ಕೊಟ್ಟಿದ್ದಲ್ಲ.

ಇನ್ನು ಟ್ರೈನಿಂಗ್ ಶಾಲೆಯೊಂದನ್ನು ನಾನು ತೆರೆಯಬೇಕೆಂಬುದು ರಾಯರ ಸೂಚನೆ. ಶಾಲೆಗಳನ್ನು ಟೀಕಿಸುವವರು ಹಾಗೆ ಮಾಡಬೇಕೆಂದೇನು ಅಭಿಪ್ರಾಯ? ಅದೇಕೆ? ಟೀಕೆ ಸಹನೆಯಾಗುವುದಿಲ್ಲವೆಂದೇ? ಕಾಫಿ ಹೋಟೆಲಿಗೆ ಹೋಗಿ ತಿಂಡಿ ರುಚಿಸಲಿಲ್ಲೆಂದು ಟೀಕೆ ಮಾಡಿದರೆ ಹೊಸ ಕಾಫಿ ಹೋಟೆಲು ತೆರೆ ಅನ್ನುವವರೇ ನೀವು? ಮನೆಯ ಅಡಿಗೆಯ ವಿಷಯದಲ್ಲಿ ಏನು ಅಭಿಪ್ರಾಯ? ಹೀಗೆಯೋ!

ಮುಖ್ಯ ವಿಷಯವೊಂದು. ಟೀಕೆ ಮಾಡುವಾಗ ಎಲ್ಲ ಶಾಲೆಯ ಉದಾಹರಣೆ ಕೊಡುವಂತಾಯಿತು. ಈ ಶಾಲೆಯ ಮೇಲೆ ನನಗೆ ದ್ವೇಷವಿಲ್ಲ. ಇತರ ಶಾಲೆಗಳು ಇದಕ್ಕೂ ಒಳ್ಳೆಯವು ಎಂದು ನಾನೂ ತಿಳಿದಿಲ್ಲ. ಟೀಕೆಯಿಂದ ಪ್ರಯೋಜನವಿದೆಯೆಂದು ನನ್ನ ತಿಳುವಳಿಕೆ. ಅದು ಎಷ್ಟೆಲ್ಲರ ಕೋಪಕ್ಕೆ ಮಾತ್ರ ಕಾರಣವಾದದ್ದಾದರೆ ನನ್ನಿಂದ ಅಪರಾಧವೇ ಸರಿ. ದಯವಿಟ್ಟು ಕ್ಷಮಿಸಿರಿ.

ಎರಡನೇ ಬಾತಮಿಯನ್ನು ಈಗಾಗಲೇ ಕಂಡಿರುವೆ

ಅದಕ್ಕೆ ಜವಾಬು ಅವಶ್ಯವಿದ್ದಂತೆ ಕಾಣುವುದಿಲ್ಲ. ಅದರ ಲೇಖಕರಾದ ಶ್ರೀ ಪಿ. ಬಾಬುಶೆಟ್ಟಿಯರಲ್ಲಿ ನನ್ನ ವಿನಂತಿ ಇಷ್ಟೆ: ಇನ್ನು ಮುಂದೆ ನೀವು ಉಪಾಧ್ಯಾಯರ ವಿಮರ್ಶೆ ಮಾಡುವುದನ್ನು ಬಿಟ್ಟು ಅದನ್ನು ಹೊಗಳಲು ಯತ್ನಿಸಬೇಕಾಗಿದೆ. ನೀವು ನನ್ನ ಜೀವನ ಚರಿತ್ರೆಯನ್ನು ಈ ಲೇಖದಲ್ಲಿ ಬರೆಯಲು ಯತ್ನಿಸಿದ್ದೀರಿ. ತಮ್ಮ ಈ ಸುಕೃತಕಾರ್ಯಕ್ಕಾಗಿ ಇನ್ನೂ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಿ ಕೊಡುತ್ತೇನೆ. ಇನ್ನು ವಿವಾದಾಸ್ಪದ ವಿಷಯವಾಗಿ ಈಗಲೇ ಉತ್ತರ ಕೊಡಲಾರೆ. ಮಾಂಟೆಗೂರಿ ಮೊದಲಾದವರ ಮಾದರಿಯಲ್ಲಿ ಶಾಲೆ ತೆರೆದವರು ನನ್ನಂತೆ ಕುಟುಂಬರಹಿತರೋ ಎಂದು ತಿಳಿದು ಬರೆಯುವೆನು. ಇತಿ,

ಪೊಳಲಿ ಕಲ್ಯಾಣ ಶಿವರಾಮ ಕಾರಂತ.

+ + + +

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ.—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಶಿಥಿಲವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆರ್ಯವೈದ್ಯರತ್ನ" ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು. ದ. ಕನ್ನಡ

ಅಪೇಕ್ಷಿಸುವ ಬಹುಮಾನಗಳು.

ಹೆಗಲಿಗೆ ಹಾಕುವ ಬಿಳಿ ಬಣ್ಣದ ಕಾಶೀ ಶಾಲುಗಳು 6 ಮೊಳ ಉದ್ದ 2 ಮೊಳ ಅಗಲ ರೂ ... ಲಾಗಾಯತು ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಿಕೆ ಖಣಗಳು, ಮುಂಡಾಸು, ಜರಿವಸ್ತ್ರ, ದುಪ್ಪಟ್ಟಿ, ಪೇಟ, ಇತ್ಯಾದಿ ಉತ್ತಮ ಶಾಲು, ಖದ್ದರ್ ಮುಂತಾದವು, ಧಾವಳಿ, ಕಸ್ತೂರಿ, ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು, ಜರಿಟೋಪ್ಪಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು.

ವಿಳಾಸ —

ರಾವ್ ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಣಿಕರ್ಣಿಕಾ ಘಾಟ್, ಕಾಶೀ, ಬನಾರಸ್ ಸಿಟಿ

The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರಿಗೆ ಬರೆಯಬಹುದು.

ಎಂ. ಮುಕುಂದಪ್ರಾಣಭಟ್ಟ. ಪ್ರೊಪ್ರೈಟರ.

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906. | 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

BRANCHES -Karkal, Kasargod, Cochin, Udipi Gangolli, Coondapur, Bombay Puttur, Calicut & Alleppey

ಬ್ರಾಂಚುಗಳು:-
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲೆಪೆ

Authorised and fully paid up Capital Rs 300 000 0 - 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟಿದ ಮೂಲಧನವು ರೂ 300,000 0 — 0
Reserve and other sinking Funds Rs 526,000 - 0 - 0	ರಿಜರ್ವ್ ನಿಧಿ ಮತ್ತು ಇತರ ಫಂಡುಗಳು ರೂ 526,000 — 0 — 0
Amount invested on G P Notes Rs 818,092 — 12 - 0	ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ 818,092 — 12 —
Rates of interest on fixed deposits at Head Office and Branches are 6% for 2 Year 6% ,, 1 Year	ಠಾಯಂ ಠೇವಣಿಗಳ ಮೇಲೆ ಕೊಡಲಾಗುವ ಬಡ್ಡಿದರ — ಎರಡು ವರುಷಕ್ಕೆ ಶೇಕಡಾ 6% ಒಂದು ವರ್ಷಕ್ಕೆ ಶೇಕಡಾ 6%

Current Account Deposits received and interest allowed on daily balance of Rs 50 and above that on multiples of Rs 10 @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5 during a period of 6 months ending either 30th June or 31st December in any year.

Except by special arrangement no interest is allowed on sums exceeding Rs 10 000 in the case of Head Office and Cochin Branch and on sums not exceeding Rs 5,000 in the case of Bombay Branch and on sums exceeding ... 000 in the case of other Branches.

For further particulars please apply to —

Canara Bank Ltd, | **K. Venkat Rao,**
Mangalore 8—2—1932 | *Secretary & Treasurer*

The Pangal Nayak Bank, Ltd.

Head Office Udipi. | *Established 1920* | **Branch Office Mangalore**

Authorised Capital. Rs. 2,00,000-	Paid up Capital Rs. 1 75 000-
Issued Capital Rs. 1,75,000-	Reserve and other Funds Rs 1,80,000-

1 **Receives Fixed Deposits at the following favourable rates -**

For 3 months at 5 % | For 12 15 18 or 21 months at 6 %
6 or 9 months at 5½ % | 24 months at 6½ %

Interest being payable every 3 months

ಠಾಯಂ ಠೇವಣಾತಿಗಳು ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ಸಾ. ಶೆ 5 , | 12 15 18, ಯಾ 21 ತಿಂಗಳಿಗೆ ಸಾ ಶೆ 6 ,
6 ಯಾ 9 ತಿಂಗಳಿಗೆ ಸಾ ಶೆ 5½ , | 24 ತಿಂಗಳಿಗೆ ಸಾ ಶೆ 6½ .

2 **Current Accounts** opened free of charge and interest allowed.

Cumulative, Savings Bank and Short Notice Deposits received at favourable rates of interest

3 The Bank transacts every description of Banking business

4 For full particulars and for copies of the amended **Rules of Business** please apply to the **Secretary** at the Head Office at Udipi or to the **Agent** Mangalore Branch.

Office of the Bank, Udipi, 1—3—'32 | **P. Laxman Nayak,** Secretary

ಇಪ್ಪತ್ತು	ವಯಸ್ಸಿನಲ್ಲಿ	ಮುದುಕ
ಮೂವತ್ತು	,,	ಮುಚ್ಚಟೆ
ನಲವತ್ತು	ಬಾಗ	ನರಳುವದು
ಐವತ್ತು	ಆದರೆ	ಆಲಸ್ಯ
ಅರುವತ್ತು	ತೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ. | ಡಬ್ಬಿ 1ಕ್ಕೆ ಕ್ರಯ ರೂ. 1—0—0.

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ವೈದ್ಯವಿದ್ಯೆ ಎಂಬ ಪುಸ್ತಕವನ್ನು ಓದಿರಿ | ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್.

ಮದನಮಂಜರಿ ಮಾತ್ರೆಗಳ ಏಜಂಟರು — ವಿ ಜಿ. ಚಂದರಾನಾ, ಮಿಶನ್ ಬೀದಿ, ಮಂಗಳೂರು.

ಕ್ವಿನೈನು ಮಾರಾಟ

ರೂಪಾಯಿಗೂ ಪವನಿಗೂ ಗಂಟಿಕ್ಕಿರುವ ಕಾರಣ, ಸರ್ವರಿಗೂ ಮಲೇರಿಯಕ್ಕೆ ಅತ್ಯುತ್ತಮವಾದ ಔಷಧಿಯಾದುದೆಂದು ಸರಕಾರವೇ ಸಾರುವ ಕ್ವಿನೈನಿನ ಬೆಲೆಯು ಸೇಕಡಾ ೫೦ರಷ್ಟು ಹೆಚ್ಚಾಗಿದೆ. ಎಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಈಗ ಮಲೇರಿಯವು ದೇಶದಲ್ಲೆಲ್ಲ ಜನರನ್ನು ಬಾಧಿಸುತ್ತಿರುವಾಗ ಈ ಬೆಲೆಯ ಏರುಗೆಯಿಂದ ಮರಣಗಳ ಸಂಖ್ಯೆಯು ಬಹಳವಾಗಿ ಹೆಚ್ಚುವ ಹಾಗಾಗಿದೆ ಎಂಬುದು ಖಂಡಿತ. ಮುಂದೆ ಮಲೇರಿಯವು ದೇಶದಲ್ಲೆಲ್ಲ ಒಂದೇ ಸವನೆ ಅತ್ಯಧಿಕವಾಗಿ ಹರಡಿದಾಗ ಕೂಡಲೆ ಉಪಯೋಗಕ್ಕೆ ಬರಲೆಂದು ಸರಕಾರವು ಅರುವತ್ತು ಲಕ್ಷ ರೂಪಾಯಿ ಬೆಲೆಯ ಕ್ವಿನೈನನ್ನು ದಾಸ್ತಾನುಮಾಡಿಟ್ಟುಕೊಂಡಿರುವುದೆಂದು ತಿಳಿದುಬರುತ್ತಿದೆ. ಹೀಗೆ ದಾಸ್ತಾನು ಇಟ್ಟಿರುವುದನ್ನು ಕೊಂಚ ಬೆಲೆ ತಗ್ಗಿಸಿ ಮಾರುವುದರಿಂದ, ಈಗಲೆ ನರಳುವ ಜ್ವರರೋಗಿಗಳ ಹಿತಸಾಧನೆ ಮಾಡಿದಂತಾಗದೆ? ಪ್ರತಿ ವರ್ಷವೂ ನೂರು ಮಿಲ್ಲಿಯ ಜನರು ಮಲೇರಿಯಾ ಪೀಡಿತರಾಗಿಯೇ ಇರುವಾಗ, ಪುನಃ ಇದನ್ನು ಸಾಂಕ್ರಾಮಿಕ ರೋಗವಾಗುವುದಾಗಿ ಎಂದಿಗೆ ಭಾವಿಸಬಹುದಾಗಿದೆಯೋ ಸರಕಾರವೇ ಬಲ್ಲುದು. ನಾಳೆ ಹಲವರು ಉಪವಾಸ ಬೀಳಬೇಕಾಗುವುದೆಂದು ಭಾವಿಸಿಯೆ, ಇಂದು ಕೆಲವರನ್ನು ಉಪವಾಸವಿರಿಸಿ ಅಕ್ಕಿ ಉಳಿಸುವ ವಿವೇಕವಿದು. ಕ್ವಿನೈನಿಗೆ ಬೆಲೆ ಇಳಿಸದೆ ದೇಶದ ಆರೋಗ್ಯವು ನೆಟ್ಟಗಾಗುವಂತಿಲ್ಲ.

ಭಾರತೀಯರದೇ ಸೈನ್ಯವಾಗುವುದೆಂದಿಗೆ?

ಏಳೆಂಟು ವರ್ಷಗಳ ಹಿಂದಣಿಂದಲೂ ಪದೇ ಪದೇ ಸೈನ್ಯಾಂಗಗಳೆಲ್ಲವೂ ಭಾರತೀಯರದಾಗಬೇಕೆಂದೇ ಎಸೆಂಬ್ಲಿಯಲ್ಲಿ ನಿರ್ಣಯಗಳಾಗುತ್ತಲೇ ಇವೆಯಾದರೂ, ಈ ಕುರಿತಾಗಿ ಉಂಟಾದ ಕಮಿಟಿ ರಿಪೋರ್ಟು ಯಾವುದೋ ಒಂದು ಮೂಲೆಯಲ್ಲಿ ಅಡಗಿದೆಯಾದರೂ, ಪುನಃ ಮೊನ್ನೆ ಎಸೆಂಬ್ಲಿಯಲ್ಲಿ ಭಾರತೀಯರನ್ನೆ ಅಧಿಕಾಧಿಕವಾಗಿ ಸೈನ್ಯಗಳಲ್ಲಿ ಸೇರಿಸಿಕೊಳ್ಳಬೇಕೆಂಬ ಠರಾವು ೬೬ ಅನುಕೂಲ ಮತ್ತು ೩೯ ಪ್ರತಿಕೂಲ ವೋಟುಗಳಿಂದ ಮಂಜೂರಾಯಿತು. ಪ್ರತಿವರ್ಷವೂ ಈ ವಿಷಯವು ಮುಂದೆ ಬರುತ್ತಲೇ ಸರಕಾರವು ತಮ್ಮ ಔದಾರ್ಯ ಪ್ರಕಟಿಸಿ ಹೇಗೂ ಮಾಡಿ ಗೆಲ್ಲುತ್ತಿದ್ದರು. ಈಗ ಶಿಫಾರಸು ಮಾಡಿದಂತೆ ಇನ್ನೂ ಮೂವತ್ತಿರು ವರ್ಷಗಳಲ್ಲೇನೂ ಸೈನ್ಯದ ಆಫೀಸರುಗಳೆಲ್ಲರು ಹಿಂದೀಯರಾಗಬಹುದಾಗದೆ ವರ್ಷಕ್ಕೆ ೭೦ ಮಂದಿಗಳಂತೆ ಆಫೀಸರರನ್ನು ತರಬೇತು ಮಾಡುವ ಶಾಲೆಯು ಈ ವರ್ಷ ಒಕ್ಟೋಬರದಲ್ಲಿ ತೆರೆಯಲಾಗುವಂತಿದೆ. ಇಷ್ಟಲ್ಲದೇ,—ಕೆಲವು ಜಾತಿಗಳನ್ನು ಮಾತ್ರ ಸೈನ್ಯಕ್ಕೆ ಯೋಗ್ಯವೆಂದು ಮಾಡುವ ಆ ಭೇದ ಬುದ್ಧಿಯನ್ನು ಸರಕಾರವು ಇನ್ನೂ ಬಿಟ್ಟಿಲ್ಲ. ವ್ಯಕ್ತಿತ್ವ ಮಾತ್ರವೇ ಅಲ್ಲದೆ, ಪಂಗಡವೂ ಸೈನಿಕರಿಗೆ ಬೇಕಾಗಿದೆ ಎಂಬುದನ್ನು ಸರಕಾರವು ಇನ್ನೂ ಒಪ್ಪುವುದಿಲ್ಲ. ಮುಖ್ಯವಾಗಿ, ಪ್ರತಿಯೊಂದೂ ಭಾಗದಲ್ಲಿ ಜನಾಂಗವನ್ನು ವಿಭಜನಗೊಳಿಸಿ, ಪಕ್ಷಗಳನ್ನುಂಟು ಮಾಡದೆ ಸರಕಾರಕ್ಕೆ ತೃಪ್ತಿಯಾಗುವುದೇ ಇಲ್ಲವೇಕೆ? ಭಾರತೀಯರು ಒಂದಾಗುವರು—ಎಂದೇ? ಯಾವಾಗ?

ಒಂದು ಕೈಯಲ್ಲಿ ಲಾಠಿ, ಇನ್ನೊಂದರಲ್ಲಿ ವೋಟು

ಇದೇ ಇಂದಿನ ರಾಜಕೀಯ ಪ್ರಗತಿಪರ ಧೋರಣೆ ಎಂದು ಸರ್ವ ಪಕ್ಷೀಯರೂ ಗುಣುಗುಟ್ಟುವರು. ಮಿ. ಜಿನ್ನಾರವರು ಇದು ವರೆಗೆ ಲಂಡನಿನಲ್ಲೇ ಇದ್ದು, ಒಳ ಅಂತರಂಗವನ್ನೆಲ್ಲ ತಿಳಿದುಕೊಂಡು, ಈಗ, ಲಂಡನ್ನಿನ ರೌಂಡ್ ಟೇಬಲ್ ಕೊನ್ಫರೆನ್ಸುಗಳೆಂಬ ಫಾರ್ಸುಗಳು ಮುಗಿದುವೆಂದೂ, ಇವುಗಳಿಂದೇನೂ ಫಲಪ್ರಯೋಜನಗಳಾಗಿಲ್ಲವೆಂದೂ, ಅಲ್ಲಿಂದ ತಿಳಿಸಿರುವರು. ನಮ್ಮೊಳಗಿನ ಸಾಮಾಜಿಕ ಸಮಸ್ಯೆಯನ್ನು ಬಿಡಿಸದೆ ರಾಜಕೀಯ ತಿದ್ದುಪಾಟುಗಳನ್ನು ಕಾಣುವುದಿಲ್ಲವೆನ್ನುವ ಬ್ರಿಟಿಷರೇ ತಮ್ಮೊಳಗಣ ಸಮಸ್ಯೆ ಬಿಡಿಸಿರುವರೇ? ಇಂಗ್ಲೆಂಡಿನಲ್ಲಿ ಸುಂಕ ಹೊರಿಸುವ ವ್ಯವಸ್ಥೆ ಮಾಡಿರುವರಷ್ಟೆ. ಇದಕ್ಕಾಗಿ, ಅಲ್ಲಿನ ವೋಟರರು ಒಮ್ಮತವಾಗಿರುವರೇ? ಹೆಚ್ಚೇಕೆ? ಕೆಬಿನೆಟ್ಟಿನೊಳಗಣ ಮಂತ್ರಿಗಳೇ ಇನ್ನೂ ಒಮ್ಮತವಾಗಿಲ್ಲ. ಹೀಗೆ ಮಂತ್ರಿಮಂಡಲವೇ ಒಮ್ಮತವಾಗಿಲ್ಲದಿರುವಾಗ, ಬ್ರಿಟಿಷರಿಗೆ ಸ್ವರಾಜ್ಯವೇಕೆ? ಅವರು ಸ್ವರಾಜ್ಯಕ್ಕೆ ಅರ್ಹರಾಗಿಲ್ಲವೆಂದು ಯಾರೂ ಹೇಳುತ್ತಾರೆಯೇ? ಎಂದರೆ, ವೋಟರರು ಒಮ್ಮತರಾಗಿರಲಿ, ಇಲ್ಲದಿರಲಿ, ರಾಜ್ಯಭಾರವನ್ನು ಅಧಿಕಾರಾರೂಢರಾಗಿರುವ ಮಂತ್ರಿಗಳೇ ನಿರ್ವಹಿಸುವುದು ಈಗಣ ಪ್ರಜಾಸತ್ತೆಯ ಸರಕಾರಗಳ ರೀತಿ. ಈ ರೀತಿಯಲ್ಲಿ ಭಾರತ ವರ್ಷವೂ ಮುಂದೆ ನಡೆವುದು. ಹಾಗಿರುತ್ತಾ ಇತ್ತ 'ಕ್ರಮ'ದ ಹೆಸರಲ್ಲಿ ದಬ್ಬಾಳಿಕೆ, ಅತ್ತ 'ಸುಧಾರಣೆ'ಗಳೆಂದು ಕಮಿಟಿ ಸಂಚಾರವಂತೆ! ಈ ಬಗೆಯ ಧೋರಣೆಯಿಂದ ಅಪಾರವಾದ ಕೇಡುಕುಂಟಾಗುವುದೆಂದೇ ಜಿನ್ನರು ಬುದ್ಧಿ ಹೇಳುವರು.

ಮಂಗಳೂರು ಇಲೆಕ್ಟ್ರಿಸಿಟಿ

ಮಂಗಳೂರಿಗೆ ವಿದ್ಯುದ್ದೀಪದ ಯೋಜನೆಯು ಸಾಗುತ್ತಾ ಬರುತ್ತಿದೆ. ಇನ್ನು ಕೆಲವೇ ಸಮಯದಲ್ಲಿ ಇಂಜಿನು ಮೆಶಿನುಗಳು ಬರುವುವು. ಆದರೆ ಮನೆ ಉಪಯೋಗಕ್ಕೆ ಎಷ್ಟು ಪರಿಮಾಣದ ಇಲೆಕ್ಟ್ರಿಸಿಟಿ ಕೊಡಲ್ಪಡುವುದೆಂಬುದನ್ನು ಮ್ಯುನಿಸಿಪಲ್ ಚೆಯರ್‌ಮೆನರು ಮೊದಲಾಗಿ ತಿಳಿದುಕೊಳ್ಳುವುದು ಒಳ್ಳೇದು. ಯಾಕೆಂದರೆ ಹೆಚ್ಚಾಗಿ ೨೨೦ Volt A C ಇಲೆಕ್ಟ್ರಿಸಿಟಿ ಕೊಡುತ್ತಾರೆ. ಆದರೆ ಇದು ಜೀವಕ್ಕೆ ಅಪಾಯಕರವಿದೆ. ಹೆಂಗಸರು ಮಕ್ಕಳು ಅಜಾಗ್ರತೆಯಿಂದ ನಡೆಕೊಳ್ಳಬಹುದಾದ ಕಡೆಗಳಲ್ಲಿ ಈ ಇಲೆಕ್ಟ್ರಿಸಿಟಿ ಕೈಗೆ ಆಕಸ್ಮಿಕವಾಗಿ ತಾಗಿದರೆ ಪ್ರಾಣಾಪಾಯ ಉಂಟಾಗುತ್ತದೆ. ೨೨೦ Volt A C ಎಂದರೆ ೨೪೦ D C.ಗಿಂತಲೂ ಬಲವಾಗಿರುತ್ತದೆ. ಆದುದರಿಂದ ಈ ವಿಷಯ ಜನರೂ, ಮ್ಯುನಿಸಿಪಾಲಿಟಿಯವರೂ ಸಪ್ಲೈ ಕಂಪೆನಿಯೊಡನೆ ವಿಚಾರಿಸಿ ೧೧೦ Volt A C ಯ ಇಲೆಕ್ಟ್ರಿಸಿಟಿ ದೊರೆಯುವಂತೆ ಮಾಡುವುದು ಅವಶ್ಯ.

ಬಂಗಾಳದ ಮುಸ್ಲಿಮರ ಹೇಳಿಕೆ

ಬಂಗಾಳ ಸಂಸ್ಥಾನದ ಮುಸ್ಲಿಮ್ ಲೀಗ್ ಎಂಬ ಸಂಘದವರು ಫ್ರಾಂಚಾಯಿಸ್ ಕಮಿಟಿಗೆ ಒಪ್ಪಿಸಿದ ಹೇಳಿಕೆಯಲ್ಲಿ ಬಂಗಾಳ ನ್ಯಾಯವಿಧಾಯಕ ಸಭೆಗೆ ಪ್ರಾಯಸ್ಥರೆಲ್ಲರೂ ವೋಟು ಕೊಡುವಂತಾಗಬೇಕೆಂದೂ ಮುಸ್ಲಿಮರು ಇತರರೊಡನೆ ಸೇರಿಯೆ ವೋಟರರಾಗಬೇಕಲ್ಲದೆ, ಮುಸ್ಲಿಮರಿಗಾಗಿ ಪ್ರತ್ಯೇಕ ಪ್ರಾತಿನಿಧ್ಯ ಬೇಡವೆಂದೂ ತಿಳಿಸಲಾಗಿದೆ. ಫ್ರಾಂಚಾಯಿಸ್ ಕಮಿಟಿಯು ಇದನ್ನು ಗಣನೆಗೆ ತಾರದೆ ಇರಬಹುದಾದರೂ, ದೇಶವು ಇದನ್ನು ಮರೆಯಲಾರದು. 'ಮೈನೊರಿಟಿಗಳಿಗಾಗಿಡುವ ಕೆಲಸ್ಥಳಗಳನ್ನು ಕಾದಿಡುವ ಕ್ರಮವು ಬಂಗಾಳದ ಮುಸ್ಲಿಮರಿಗೆ ಸಮ್ಮತವಾಗಿಲ್ಲ' ಎಂದೂ ನಿರ್ಣಯವಾಗಿದೆ. ಹಾಗೆಂದು, ಮುಸ್ಲಿಮರಿಗೆ ಬಹುಮತ ದೊರೆವ ಹಾಗೆ ಸ್ಥಳಗಳನ್ನು ರಿಜರ್ವ ಮಾಡಿದರೆ ಲೀಗಿಗೆ ಸಮ್ಮತಿಯಿರಬಹುದೆಂದೂ ಅಭಿಪ್ರಾಯವಾಗುವುದು. ಆದರೆ, ಲೀಗಿನವರು ಹೀಗೆ ರಿಜರ್ವ ಮಾಡಿಯೇ ಕೆಲಸ್ಥಳಗಳನ್ನು ಇಡಬೇಕೆಂದೇನೂ ಆಗ್ರಹ ಮಾಡಿಲ್ಲವೆಂಬುದು ತೃಪ್ತಿಕರವಾಗಿದೆ. ಪ್ರಾಯಸ್ಥರಿಗೆಲ್ಲ ವೋಟಿನ ಅಧಿಕಾರವಿರುವಾಗ, ಬಹುಸಂಖ್ಯಾತರಿಗೆ ಪುನಃ 'ರಿಜರ್ವ ಸೀಟು'ಗಳೇತಕ್ಕೆ ಬೇಕು? ಹಾಗೆ ಬೇಕೆಂದಾದಲ್ಲಿ, ಅವರಿಗೆ ತಮ್ಮವರಲ್ಲೇ ನಂಬಿಕೆ ಇಲ್ಲವೆಂದೂ ಅರ್ಥವಾಗದೆ?

'ಸಿ ಸೇಮೋ ಬಾಗಿಲು ತೆರೆ!' ಎಂದನು ಆಲಿಬಾಬನು

ಮುಂಬಾಯಿಯ ಮೂಲ್ಜಿ ಜಿಥಾ ಮಾರ್ಕೆಟನ್ನು ತೆರೆಯುವುದೂ ಕಷ್ಟ, ತೆರೆದರೆ ತೆರೆದಿಡುವುದೂ ಕಷ್ಟ. ಇದೇಕೆ ಕಷ್ಟವಾಗಿದೆ? ನಮಗಂತೂ ಇದು ತೀರ ಸುಲಭವಾಗಿಯೇ ಕಾಣುತ್ತಿದೆ. ಗಿರಣಿದಾರರಿಗೂ ಇತರ ಪ್ರಜೆಗಳಿಗೂ ಧನವನ್ನುಂಟುಮಾಡಬೇಕಾದರೆ, ಇದು 'ಕಷ್ಟ—ಕಷ್ಟ'ವೆಂದೇ ಎನ್ನಬೇಕಾಗುತ್ತದೆ. ಮುಂಬಾಯಿಯೇ ಹರತಾಳಗಳಿಗೆ ತವರೂರಾಗಿದೆ ಎಂದೇ ಅಲ್ಲಿನ ಎಂಗ್ಲೊ ಇಂಡಿಯನರ ಅಭಿಪ್ರಾಯ. ದೇಶದಲ್ಲೆಲ್ಲ ಹರತಾಳಗಳಿವೆ, ಪಿಕೆಟಿಂಗ್ ಇದೆ. ಆ ಸುದ್ದಿಯೇ ಬಲು ಸಂಕೋಚವಾಗಿ ಇಂತಹ ಪತ್ರಿಕೆಗಳಲ್ಲಿದೆ, ಮುಂಬಾಯಿಯಲ್ಲಾದರೆ ಕಲವು ತುಂಬ. ಅಹ್ಮದಾಬಾದಿನಲ್ಲಿ ಇಂತಹ ಹರತಾಳಗಳಿಲ್ಲವೆ? ಇವೆಯೋ ಇಲ್ಲವೋ ಪತ್ರಿಕೆಗಳಲ್ಲಿಲ್ಲ. ಆದರೆ ಮುಂಬಾಯಿಯಲ್ಲಿ ಹರತಾಳಗಳನ್ನುಂಟು ಮಾಡಿ ಅಹ್ಮದಾಬಾದಿನವರು ಹಣಗಳಿಸುವರಾಗಿ ಟೀಕೆ ಮಾತ್ರ ಇದೆ. ಪರವೂರಿನವರು ಹಣಗಳಿಸುವರಾದರೆ ಗಿರಣಿಗಳಿರುವ ಎಲ್ಲ ಕಡೆಗಳೂ ಹಣ ಕೂಡಿಸುವವಲ್ಲವೆ? ಅಹ್ಮದಾಬಾದು ಮಾತ್ರವೆ? ಮುಂಬಾಯಿಯ ಹತ್ತಿ ವ್ಯಾಪಾರವೆಲ್ಲ ಇಂದೋರಿಗೆ ವರ್ಗವಾಯಿತೆಂದೂ ದೂರು ಬರೆವ ಈ ಪತ್ರಿಕೆಗಳು, ಇಂದೋರು ಈ ಹರತಾಳಗಳನ್ನು ಪ್ರೇರೇಪಿಸುವುದಾಗಿ ಏಕೆ ತಿಳಿಸುವುದಿಲ್ಲ? ಶೇರ್ ವ್ಯಾಪಾರವೆಲ್ಲ ಕಲ್ಕತ್ತವನ್ನು ಸೇರಿದೆಯಂತೆ! ಹಾಗಾದರೆ, ಶೇರು ಮಾರ್ಕೆಟನ್ನು ಮುಂಬಾಯಿಯಲ್ಲಿ ಮುಚ್ಚಿರುವವರು ಕಲ್ಕತ್ತದವರೆ? ಅಂತೂ ಮುಂಬಾಯಿಯು ಅಪಾರ ನಷ್ಟ ಹೊಂದಬೇಕಾಗಿದೆ ಎಂದೂ, ಕೊಂಗ್ರೆಸು ಬಲವಿರುವ ಅಹ್ಮದಾಬಾದು ಮೊದಲಾದುವು ಲಾಭ ಪಡೆಯುತ್ತಿವೆ ಎಂದೂ ತಿಳಿಸಿದ್ದಲ್ಲಿ, ಕೊಂಗ್ರೆಸ್ಸಿನ ಬಲವು ಹೆಚ್ಚಿದೆ ಎಂದೇ ಅರ್ಥವಾಗದೆ?

ನೋಟಗಳು.

NOTE . S

ಮನೆಮಾರು ಹೊಲಗದ್ದೆ ಮಾರಿ ಅಥವಾ ಅಡವಿಟ್ಟು, ಗ್ರೆಜ್ಯುವೇಟ್ ಅಥವಾ ಬಿ. ಎ. ಎಮ್. ಎ. ಇತ್ಯಾದಿ ಪದವಿ ಹೊಂದುತ್ತಲೇ ಶಿಕ್ಷಿತನೆಂಬಾತನಿಗೆ ದೊರೆವ ಉಪದೇಶ—ಕೃಷಿ ಅಥವಾ ಕೈಗಾರಿಕೆಯಿಂದಲೇ ಜೀವನ ನಡೆಸ ಕಲಿಯುವುದು ಶ್ರೇಯ; ಈ ಶಿಕ್ಷಣವೆಲ್ಲ ಶೋಕಪರ್ಯವಸಾಯಿ!

• • • •

ಕೊನೆಗೆ ಗ್ರೆಜ್ಯುವೇಟರು ಕೆಲಸವಿಲ್ಲೆಂದು ಅಳುವುದಕ್ಕಾದರೂ ಕುಳಿತುಕೊಳ್ಳಬಹುದಾದ ತಮ್ಮದೇ ಎಂಬ ಜಾಗವಿಲ್ಲ! ಅದು, ಕೊನೆಗೆ ಶೋಕಗೊಳ್ಳುವ ನಿರುದ್ಯೋಗ ಸಹಾಯಕವಾದ ಶಿಕ್ಷಣಹೊಂದುವುದಕ್ಕೇ ಮಾರಲಾಗಿದೆ!

• • • •

ಬಾಲಕ ದರ್ಜೆಗೆ ಬಾಲಕನು ಸೇರುವಾಗಲೆ ಅವನ ಹೆತ್ತವರಿಗೆ ಇಂತಹ ಉಪದೇಶವನ್ನು 'ಸರ್' ಪದವೀಧರರ್ಯಾರೂ ಕೊಡುವ ಹಾಗೆ ಸರಕಾರವು ನಿರ್ಧರಿಸುವುದಿಲ್ಲ. ಕೆಟ್ಟು ಹೋದ ಬಳಿಕ ಬುದ್ಧಿ ಹೇಳುವುದೇ ಈಗಣ ಶಿಕ್ಷಕರ ಕ್ರಮ.

• • • •

ಹದಿನೈದು ವರ್ಷಗಳೊಳಗೆ ಎಷ್ಟೆಲ್ಲ ಬದಲಾವಣೆಯಾಗುತ್ತಿದೆ! ಆ ಹೋಮ್‌ರೂಲ್ ಚಳವಳಿಯ ಶ್ರೀಯುತ ಸಿ. ಪಿ. ರಾಮಸ್ವಾಮಿಯ್ಯರವರು ಅಪ್ರಾಯಸ್ಥ ವಿದ್ಯಾರ್ಥಿಗಳು ರಾಜಕೀಯ ವಿಷಯಗಳಿಂದ ದೂರವಾಗಿರಬೇಕೆಂದರೆ ಅದು ಅಪಹಾಸ್ಯಕರ' ಎಂದು ಸಾರುತಿದ್ದರು.

• • • •

ಆ ರಾಮಸ್ವಾಮಿಯ್ಯರವರು ಈಗ ಸರ್ ಸಿ. ಪಿ. ಆಗಿದ್ದಾರೆ! ಗವರ್ನರರ ಹಾಗೂ ವೈಸ್ರಾಯರ ಎಕ್ಸಿಕ್ಯೂಟಿವ್ ಕೌನ್ಸಿಲು ಮೆಂಬರರೂ ಆಗಿ ಅನುಭವ ಹೊಂದಿದ್ದಾರೆ. ಈಗ ಯುನಿವರ್ಸಿಟಿಯ ಗ್ರೆಜ್ಯುವೇಟರಿಗೆ ಭಾಷಣಮಾಡುವಾಗ 'ಈಗಣ ರಾಜನೀತಿ ವಿಚಾರಗಳಿಂದ ನೀವು ದೂರವಾಗಿರಿ' ಎಂದೇ ಅವರ ಬೋಧಿಸುತ್ತಿದ್ದಾರೆ. ಕಾಲಮಹಿಮೆ!

• • • •

ಸಾಹಸಿಗಳಾಗಿ ಬಾಳಬೇಕಾದ, ರಾಜನೀತಿಯ ಸುದ್ದಿ ಬಿಡಿರಿ' ಎಂದು ಚಳವಳಿಯಲ್ಲಿ ಮೊದಲಾಗಿ ಭಾಗವಹಿಸಿದ ಇವರೇ ಹೇಳುವಾಗ, ಇವರು ಸಾಹಸಿಗಳಾಗಿ ಬಾಳುತ್ತಾ ಹೇಗೆ ಅಪಾರ ಧನ ಸಂಪಾದಿಸಿದರೆಂಬುದನ್ನು [illegible] ಗ್ರೆಜ್ಯುವೇಟರು ಅರಿತುಕೊಳ್ಳಲು ಮರೆಯದಿರಲಿ.

• • • •

'ಪರಲೋಕದಲ್ಲಿರುವ [illegible] ತಂದೆಯೇ' ಎಂದು ಯಾವತ್ತು ಕ್ರೈಸ್ತರೂ ಪ್ರಾರ್ಥನೆ ಮಾಡುತ್ತಿರುವಾಗ, ಪರಲೋಕವಾಸಿಗಳಾದ ಕೆಲವರನ್ನು ಈಗ ಬಸರಿ ಮೆಜಿಸ್ಟ್ರೇಟರಾಗುವಂತೆ ನೇಮಿಸಿರುವುದು, ಆ ವೈಸರಾಯ್ ಸರಕಾರಕ್ಕೆ ಅಸಂಗತವಾಗದು. ಅವರ ಆತ್ಮಗಳಿಗೆ ಮಾತ್ರ ಶಾಂತಿ ದೊರೆಯಬಹುದೇ!

• • • •

ಸರಕಾರಕ್ಕೆ ಬೇಕಾದುದನ್ನು ಅನುಸರಿಸಿಕೊಳ್ಳುವಂತೆ. ಗವರ್ನರರೇ ಮೊದಲಾದವರಿಗೆ ಸರ್ಟಿಫಿಕೇಟು ಕೊಡುವರೆ ಅಧಿಕಾರವಿದೆಯಷ್ಟೆ. ಲೊಥಿಯನ್ ಗವರ್ನರರು ಹೀಗೆ ಮಾಡಿದಂತೆ, ಅಲ್ಲಿನ ಕೌನ್ಸಿಲು ಒಂದು ಠರಾವು ತಂದು, ೩೬ ಅನುಕೂಲ ೪ ವಿರುದ್ಧ ವೋಟುಗಳಿಂದ ಮಂಜೂರುಮಾಡಿದರು.

• • • •

ಚುನಾವಣೆ ಹೊಂದಿ ಇಬ್ಬರೂ ಯುರೋಪಿಯನ್ ಮೆಂಬರರು, ಗವರ್ನರರ ಸರ್ಟಿಫಿಕೇಟು ಕೊಡುವ ಅಧಿಕಾರಕ್ಕೆ ವಿರುದ್ಧವಾಗಿಯೇ ವೋಟು ಕೊಟ್ಟರು.

• • • •

ಮದ್ರಾಸಿನಲ್ಲಾಗಲಿ, ಎಸೆಂಬ್ಲಿಯಲ್ಲಾಗಲಿ, ಇಂತಹ ಠರಾವನ್ನು ಮುಂತರುವವರೇ ಇಲ್ಲ. ತಂದರೂ ಹೀಗೆ ಅಭಿಮತ ದೊರೆವಂತಿಲ್ಲ. [illegible] ಚುನಾಯಿತ ಯುರೋಪಿಯರು ಭಾರತವರ್ಷದಲ್ಲೇ ಇಲ್ಲ!

• • • •

'ಗಾಂಧಿಯನ್ನು ಜಕ್ಕೆ ಬಿಡಿರಿ! ಅದರ ನಂತರ ಸುಧಾರಣೆಗಳ ಮಾತು' ಎಂದು ಚರ್ಚಿಲ್ಲರು ಅಮೇರಿಕದಿಂದ ಹಿಂತಿರುಗಿ ಊರಿಗೆ ಬರುತ್ತಲೇ ಮಾತಾಡಿ, ಪ್ರಾಣ ಉಳಿಸಿಕೊಂಡರು.

• • • •

ಇನ್ನು ಸರಕಾರವು ಯಾವ ಓರ್ಡಿನೆನ್ಸುಗಳನ್ನೂ ಕಾನೂನು ಮಾಡಲು ನ್ಯಾಯವಿಧಾಯಕ ಸಭೆಗಳ ಮುಂದೆ ಇಡುವ ಅಗತ್ಯವಿಲ್ಲೆಂದು ಇಂಡಿಯಾ ತರಣೇಕರ ಮಾತು. ಇಂತಹ ಅಘೋರ ಕಾನೂನುಗಳನ್ನು ಆಲೋಚಿಸುವರೆ ನ್ಯಾಯವಿಧಾಯಕ ಸಭೆಗಳಲ್ಲಿ ಯಾವಾಗ ತಲೆಗಳಿಗೆ ಬರಗಾಲವೋ ಆಗ ಈ ಸಭೆಗಳೇ ಯಾಕೆಂದು ತಿಳಿಯುವುದಿಲ್ಲ.

1. **Good Riding Quality.**
2. **Gripping Tread.**
3. **Economical wear.**
4. **Maximum Resistance to shock.**

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

I N

A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ.
ಸಮಾಜ ಸುಧಾರಣೆಗಳ ಆವಶ್ಯಕತೆ . . . ೬
ಸ್ಫುಟವಿಚಾರಗಳು . ೪
ನೋಟಗಳು ೫
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೬
ಒಳದೇಶ ವರ್ತಮಾನ ೬
ದಕ್ಷಿಣ ಕನ್ನಡ — ಮಂಗಳೂರು, ಕಾರ್ಕಳ, ಹಿರಿಯಡ್ಕ, ಪುತ್ತೂರು . . . ೭
ವಿವಿಧ ಸಮಾಚಾರಗಳು . . ೧೧
ವಿಧವೆಯರ ವಚನವು ಅನಾಚಾರ . ೧೩
ಪತ್ರವ್ಯವಹಾರ್ಯ ೧ ೩
'ವೈ ಇಂಡಿಯನ್' . ೯
ಸತ್ಯಾಗ್ರಹ ಸಮಾಚಾರ . ೧೦

ಸ್ವದೇಶಾಭಿಮಾನಿ.

ತಾ. ೨೫ನೇ ಶುಕ್ರವಾರ ಮಾರ್ಚ ೧೯೩೨

ಸಮಾಜ ಸುಧಾರಣೆಗಳ ಆವಶ್ಯಕತೆ.

ಸುಧಾರಣೆಯೆಂಬ ಮಾತು ಇಂದಿನದಲ್ಲ. ಹಿಂದಿನಿಂದಲೂ ಇದು ಬರುತ್ತಲೇ ಇದೆ. ಹೊಸಬರು ಅದನ್ನು ಹೊಗಳುತ್ತಲೂ, ಹಳಬರು ಅದನ್ನು ನಿಂದಿಸುತ್ತಲೂ, ಇರುವುದು ಇದರ ವಿಷಯದಲ್ಲಿನ ಅನಾದಿ ಕ್ರಮವಾಗಿದೆ. ಆದರೆ ಹಳಬರು ಒಪ್ಪಲಿ ಒಪ್ಪದಿರಲಿ, ಸಮಾಜದ ಇಂದಿನ ಅಸ್ತಿತ್ವವು ಆ ಸುಧಾರಣೆಗಳ ಮೇಲೆಯೇ ಹೊಂದಿದೆಯೆಂದು ಖಂಡಿತವಾಗಿ ಹೇಳಬಹುದು. ಸುಧಾರಣೆಯೆಂದರೆ ಚೇತನ, ಸಮಾಜವು ಹಳೆ ಸಂಪ್ರದಾಯಗಳಲ್ಲೇ ಹೊರಳುವುದಾದರೆ, ಅದರ ಚೇತನವು ನಾಶವಾಗಿ ಅದಕ್ಕೆ ಜಡತೆಯು ಬಂದೊದಗುವುದು. ಆ ಜಡತೆಯು ಸಮಾಜದಲ್ಲಿ ನೆಲಸಿತೆಂದರೆ ಸಮಾಜವು ನಾಶಹೊಂದಲಿಕ್ಕೆ ಬೇರೆ ಉಪಾಯವೇ ಬೇಕಾಗಿರುವುದಿಲ್ಲ.

ಹಿಂದೂಮತದಲ್ಲಿ ಸನಾತನಿಗಳ ಸಂಘವೊಂದಿದೆ. ಅವರು ಸುಧಾರಣೆಯನ್ನು ನಂಬುವುದಿಲ್ಲ. ಹಿಂದೂಮತವು ಸನಾತನವಾದದ್ದು, ಅದರ ಶಾಸ್ತ್ರಗಳು ಸನಾತನವಾದುವು, ಅದರ ಕ್ರಮಕಟ್ಟಳೆಗಳೂ ಸನಾತನವಾದುವು ಎಂದು ಅವರ ವಿಶ್ವಾಸ. ಆದರೆ ಅವರಾದರೂ ಸುಧಾರಣೆಯ ಚೇತನವನ್ನು ಪಡೆದಿಲ್ಲ. ಸನಾತನದ ಹೆಸರಿನಲ್ಲಿಯೇ, ಹಲವು ಬಾರಿ ಸನಾತನದ ಸೋಗನ್ನು ಹಾಕಿಯೇ ಎಷ್ಟೋ ಸುಧಾರಣೆಗಳು ಅವರಲ್ಲಿಯೂ ಆಗುವುದುಂಟು.

ಉತ್ತರ ಹಿಂದೂಸ್ಥಾನದಲ್ಲಿ ಸನಾತನಿಗಳು ಈ ರೀತಿಯಲ್ಲಿ ಸುಧಾರಣೆಗಳಿಗೆ ತಡೆಯನ್ನೊಡ್ಡುವಾಗ, ದಕ್ಷಿಣದಲ್ಲಿ ಶಂಕರ, ಮಧ್ವ, ರಾಮಾನುಜರ ಅನುಯಾಯಿಗಳು ತಮ್ಮ ಸಂಪ್ರದಾಯಗಳನ್ನು ಸ್ಥಿರೀಕರಿಸಲು ಪ್ರಯತ್ನಿಸುವರು. ಆದರೆ ಈ ಮೂವರು ಆಚಾರ್ಯರು ಯಾರು? ಇವರು ಆ ಕಾಲದ ಸುಧಾರಕರು ಅಲ್ಲವೇ? ಅಂದರೆ ಒಂದು ಸಮಯದ ಸುಧಾರಣೆಯು ಇಂದು ಸಮಯದ ಸಂಪ್ರದಾಯವಾಗುವುದು. ಏಕೆಂದರೆ ಪ್ರಪಂಚವೆಂದರೇನೇ ಒಂದು ನಿತ್ಯ ಪರಿವರ್ತನ. ಪರಿವರ್ತನ, ಅಥವಾ ಚಲನೆ ಇವುಗಳೇ ವಿಶ್ವದ ಸೂತ್ರ. ಆ ಸೂತ್ರವನ್ನು ಹರಿದು ಹಾಕಲಾಗುವುದಿಲ್ಲ. ಹೊಸದು ಹಳೆಯದಾಗಲೇ ಬೇಕು, ಹಳದರ ಬದಲಿಗೆ ಹೊಸದು ಬರಲೇಬೇಕು.

ಆದುದರಿಂದ ಸಮಾಜದೊಳಗೆ ಬೇಕಾಗುವ ಸುಧಾರಣೆಗಳಿಗಾಗಿ ಬಹಳವಾದ ಹಳೇ ಆಧಾರಗಳನ್ನು ಹುಡುಕುವ ಆವಶ್ಯಕತೆಯು ನಮಗೆ ತೋರುವುದಿಲ್ಲ. ಹೊಸ ಭಾವನೆಗಳಿಗೆ ಹಳೆ ಆಧಾರಗಳನ್ನು ಹುಡುಕುವುದೆಂದರೆ, ಸ್ವಭಾವತಃ ಹಳೆ ಭಾವನೆಗಳನ್ನು ಹೊಸದವುಗಳಿಗೆ ತಿರುಚಬೇಕಾಗುತ್ತದೆ. ಈ ಉದ್ದೇಶದಿಂದ ಎಷ್ಟೋ ಸುಧಾರಕರೂ, ಸುಧಾರಣಾ ವಿರೋಧಿಗಳೂ ತಮ್ಮ ತಮ್ಮ ಪಂಥವನ್ನು ಗೆಲ್ಲಲಿಕ್ಕೆ ಹಳೆ ಪುಸ್ತಕಗಳಲ್ಲಿನ ಶಬ್ದ ವಾಕ್ಯಗಳನ್ನೆತ್ತಿ ಎಂತೆಂತಹ "ಕಸರತ್ತು"ಗಳನ್ನು ಮಾಡುತ್ತಾರೆ; ಇದು ನ್ಯಾಯವೆಂದು ಹೇಳಲಾಗುವುದಿಲ್ಲ. ಹಳೇ ಭಾವನೆಗಳು ಹಳೇ ಸಮಯದಲ್ಲಿ ಯೋಗ್ಯವಿದ್ದಿರಲೂ ಬಹುದು, ಯೋಗ್ಯವಿಲ್ಲದಿದ್ದಿರಲೂ ಬಹುದು. ಆದರೆ ಈ ಹೊಸ ದಿನಗಳಲ್ಲಿ ಭವಿಸಿ ಹಳೆಯವುಗಳ ಸಮರ್ಥ ಖಂಡನಗಳನ್ನು ನಾವು ಸರಿಯಾಗಿ ಮಾಡಬಲ್ಲೆವೆಂದು ಹೇಳಲಾಗುವುದಿಲ್ಲ.

ಆದರೆ ಸಮಾಜದೊಳಗಿನವರೆಲ್ಲರೂ ಬದಲಾವಣೆಗಳಿಗೆ ಅನುಕೂಲರಾಗಿಲ್ಲ. ಬಹುಸಂಖ್ಯಾಕರು ತಮ್ಮ ನಿತ್ಯದ ಅಭ್ಯಾಸಗಳಲ್ಲಿದ್ದು ಹಳೆದು ಸುಖಕರವಾಗಲಿ, ದುಃಖಕರವಾಗಲಿ, ಅನುಕೂಲವಾಗಲಿ, ಪ್ರತಿಕೂಲವಾಗಲಿ, ಅಭ್ಯಾಸದ ಕಾರಣದಿಂದ ಅವರಿಗೆ ಸುಲಭವಾಗಿ ಕಾಣುತ್ತದೆ. ಹೊಸದರಲ್ಲಿ ಪ್ರವೇಶಿಸಲು ಅವರಿಗೆ ಧೈರ್ಯವು ಸಾಲದು; ಆ ಬಗ್ಗೆ ಆಲೋಚಿಸಿ ಯತ್ನಿಸಲಿಕ್ಕೆ ಅವರಿಗೆ ಸಮಯವೂ ಸಾಲದು. ಆದುದರಿಂದ ಸಮಾಜವನ್ನು ಸುಧಾರಣೆಯ ಕಡೆಗೆ ಎಳೆಯಲಿಕ್ಕೆ ಬಹು ಬಾರಿ ಹಳೆದರ ಆಧಾರವನ್ನು ರಚಿಸಬೇಕಾಗುತ್ತದೆ. ಆದರೆ ಇದನ್ನು ನಾವು ಮೇಲೆ ಸೂಚಿಸಿದಂತೆ ಶಬ್ದ "ಕಸರತ್ತು"ಗಳಿಂದ ಮಾಡುವುದು ನ್ಯಾಯವೆನ್ನಲಾಗುವುದಿಲ್ಲ.

ಸಮಾಜ ಸುಧಾರಣೆಗಳು ಆವಶ್ಯಕ, ಹಿಂದಿನ ಅನುಭವವೇ ಮುಂದಿನ ತಿದ್ದುಪಡಿಗಳ ಮುಖ್ಯ ಸಹಾಯವಾಗಿದೆ. ಈ ಅನುಭವವನ್ನು ಮುಂದೊತ್ತಿ ಮೆಲ್ಲನಾದರೂ ಆ ಸುಧಾರಣೆಗಳನ್ನು ಜ್ಯಾರಿಗೆ ತರಬೇಕು. ಹಿಂದು ಸಮಾಜದಲ್ಲಿ ಈಗ ಯಾವ ತೊಡಕುಗಳಿಲ್ಲ? ಆ ತೊಡಕುಗಳೇ ನಮ್ಮ ಮತದ ಮೂರ್ತಿಮಂತ ಚಿತ್ರವೆಂದು ನಂಬಿ ಅವುಗಳನ್ನೆ ಆರಾಧಿಸಿ ಅವುಗಳ ಬಗ್ಗೆ ದೇವರನ್ನಾದರೂ ಮರೆಯುವಂತಹ ಮತಭಕ್ತರು ಅದೆಷ್ಟು ಮಂದಿ ಇದ್ದಾರೆ. ಮತಗಳ [ನಾಶಕ್ಕೆ ಇದರಷ್ಟು ಅನುಕೂಲವಾದ ಪರಿಸ್ಥಿತಿಯು ಬೇರೊಂದಿಲ್ಲ. ಈ ಪರಿಸ್ಥಿತಿಯನ್ನು ಕಡಿದು ಹಾಕಬೇಕು. ಆಗ ಮಾತ್ರವೇ ಹಿಂದೂಮತದ ಪುನರುಜ್ಜೀವನವಾಗುವುದು.

ವಿದೇಶ ವರ್ತಮಾನ.

ಚರ್ಚಿಲ್ ದೊರೆಗೊಂದು ಮೋಟಾರು.

ವಿಖ್ಯಾತರಾದ ಚರ್ಚಿಲ್ ದೊರೆಯವರು ಹಿಂದೂದೇಶದ ಕುರಿತು ಉಪನ್ಯಾಸ ಕೊಡುವುದಕ್ಕಾಗಿ ನ್ಯೂಯೋರ್ಕಿಗೆ ಹೋಗಿದ್ದರು. ಅಲ್ಲಿ ದಾರಿ ಮೇಲೆ ಹೋಗುತ್ತಿದ್ದಾಗ ಒಂದು ಮೋಟಾರುಕಾರಿನ ಅಡಿಯಲ್ಲಿ ಬಿದ್ದು ಆಸ್ಪತ್ರೆ ಪಾಲಾದರು. ಪುಣ್ಯವಶಾತ್ ಬೇಗನೆ ಗುಣಹೊಂದಿ ಹೊರಗೆ ಬಂದರು. ದುರ್ದೈವವಶಾತ್ ಅವರಿಗೆ ಎಚ್ಚರ ವಸ್ತೀಯುವ ಕೆಲವು ಪತ್ರಗಳು ಬಂದು ಪ್ರಾಣಾಪಾಯವನ್ನು ಸೂಚಿಸಿದುವು. ಪೋಲೀಸರನ್ನು ಎಡಬಲಗಳಲ್ಲಿಟ್ಟುಕೊಂಡು ಹೇಗೂ ನ್ಯೂಯೋರ್ಕಿನಲ್ಲಿ ಭಯದಿಂದಲೇ ದಿನಹರಣಮಾಡಿ ಹಿಂದೀಯರ ಕುರಿತು ಉಪನ್ಯಾಸವನ್ನು ಕೊಟ್ಟು ಕೊಟ್ಟು ಕೆಲವು ಸಾವಿರ ಡೊಲ್ಲರುಗಳನ್ನು ಸಂಪಾದಿಸಿದರು. ಮೊನ್ನೆ ಇಂಗ್ಲಾಂಡಿಗೆ ಹಿಂತಿರುಗಿದರು. ಹಡಗದಿಂದ ಕೆಳಗಿಳಿಯುವಾಗಲೇ ಅವರ ಮಿತ್ರರು ಅವರಿಗೊಂದು ಮೋಟಾರನ್ನು ಇನಾಮು ಕೊಟ್ಟರು. ಅದರ ಕ್ರಯ ೨೦೦೦ ಪೌಂಡುಗಳು.

— ಅಮೇರಿಕಾದಿಂದ ಇಂಗ್ಲಾಂಡಿಗೆ ಕಾಲಿಟ್ಟೊಡನೆ ಚರ್ಚಿಲ್ಲರು "ಗಾಂಧೀ ಗಲಾಟೆಯನ್ನು ಮೊದಲು ಸಂಪೂರ್ಣ ಮುರಿಯಬೇಕು. ಆ ಮೇಲೆ ನವೀನ ರಾಜ್ಯಾಂಗರಚನಾ ಕ್ರಮಕ್ಕೆ ತೊಡಗಬೇಕೆಂದರು.

— ಚೈನಾ ಜಪಾನುಗಳೊಳಗಿನ್ನ ಯುದ್ಧವು ಶಾಂತವಾಯಿತು. ಶಾಂಘಾಯಿಂದ ಜಪಾನೀ ಸೈನ್ಯಗಳು ಹೋಗಬೇಕೆಂದೂ ಇತ್ತರ ತನಕ ವಶಮಾಡಿಕೊಂಡ ಸ್ಥಳಗಳನ್ನು ಅಯ್ಯಾಯ ಸಂಘಗಳಿಗೆ ಬಿಟ್ಟುಕೊಡಬೇಕೆಂದಾಗಿದೆ. ಎರಡು ರಾಷ್ಟ್ರಗಳ ಪ್ರತಿನಿಧಿಗಳು ಇನ್ನೂ ತರ್ಕಿಸುತ್ತಲಿರುವರು.

— ಮಿ. ಬೆನ್ನ್ ಸಾಹೇಬರು ಲಂಡನಿನಲ್ಲಿರುವರಷ್ಟೆ. ಅವರು ಮೊನ್ನೆ ದಿನ ಕಿಂಗ್ಸ್ ಕೊಲೇಜಿನಲ್ಲಿ ಭಾಷಣ ಮಾಡುತ್ತಾ ಸರಕಾರದ ಪ್ರಕೃತ ಧೋರಣೆಯು ವಿಜಯಿಯಾಗಲಿಕ್ಕಿಲ್ಲವೆಂದೂ ಅದು ಅದಷ್ಟು ಬೇಗನೆ ಸ್ವಾತಂತ್ರ್ಯವನ್ನು ಹಿಂದೀಯರಿಗೆ ಕೊಡಬೇಕೆಂದೂ ಹೇಳಿದರು.

ಬ್ರಿಟಿಶರಿಗೂ ಐರಿಷರಿಗೂ ವ್ಯಾಪಾರ ವಾಣಿಜ್ಯ ಸಂಬಂಧವು ಬೇಕೋ ಬೇಡವೋ ಎಂಬ ಕುರಿತು ಐರಿಷ್ ಅಧ್ಯಕ್ಷರಾದ್ದ ಡಿವೇಲರ ವರು ಹೇಳುತ್ತಾ ನಾವು ನಮ್ಮ ಜನದ ಸಂರಕ್ಷಣೆಯನ್ನು ಮಾಡಿಯೇ ಮಾಡುವೆವು. ಆದರೆ ನಮಗೆ ಬ್ರಿಟಿಷರೊಡನೆ ದ್ವೇಷವಗತ್ಯವಿಲ್ಲವೆಂದರು.

— ಲಂಡನಿನಲ್ಲಿ ಜರಗಿದ ಆಂಗ್ಲೋ ಇಂಡಿಯನ್ ಟೆಂಪರೆನ್ಸ್ ಸಂಘದಲ್ಲಿ ರೆವೆರೆಂಡ್ ಎಂಡರ್ಸನ್‌ರವರು ಮಾತನಾಡುತ್ತಾ ಸ್ವಾತಂತ್ರ್ಯವಿಲ್ಲದೆ ಹಿಂದೂದೇಶದಲ್ಲಿನ ಕುಡಿತದ ಹಾನಿಯು ಹೋಗದೆಂದರು.

ಒಳದೇಶ ವರ್ತಮಾನ.

— ಹಿಂದೂದೇಶದ ಸ್ಥಿತಿಗತಿಗಳ ಕುರಿತು ಇಂಗ್ಲಾಂಡಿನಲ್ಲಿಯ ಅಧಿಕಾರವರ್ಗದವರಿಗೆ ಹೇಳಿಕೊಳ್ಳುವುದಕ್ಕಾಗಿ ಮಾನ್ಯ ವೈಸರಾಯಿ ರಾದ ಲೋರ್ಡ ವಿಲ್ಲಿಂಗ್ಡನರು ಇದೇ ಜೂನ್ ತಿಂಗಳಲ್ಲಿಯಾಗಲೀ ಅದರ ಮೊದಲಾಗಲೀ ವಿಮಾನದ ಮೂಲಕ ಇಂಗ್ಲಾಂಡಿಗೆ ಹೋಗಲಿರುವರೆಂದು ಡಿಲ್ಲಿಯಲ್ಲಿ ಗುಜು ಗುಜು ವಾರ್ತೆ. ಆಗಾಖಾನರು ಕೂಡಿಸಿದ್ದ ಅಖಿಲಭಾರತ ಮುಸ್ಲಿಮ್ ಕೊನ್ಫರೆನ್ಸಿನ ಚೆಯರ್‌ಮೆನ್ನರಾಗಿದ್ದ ಹಕೀಂ ಜಾಮಿಲ್‌ಖಾನರೆಂಬವರೂ ಅಸಹಕಾರಕ್ಕೆ ಸೇರಿರುವುದರಿಂದಲೂ ಮುಸ್ಲಿಮರು ತಮ್ಮ ಬೇಡಿಕೆಗಳಲ್ಲಿ ಜಯಶೀಲರಾಗದೆ ಅಶಾಂತಿಯಿಂದಿರುವುದರಿಂದಲೂ ವೈಸರಾಯರು ಲಂಡನಿಗೆ ಹೋಗುವುದು ಬಹುಪಕ್ಷ ನಿಜವೆಂದು ತಿಳಿಯಬಂದಿದೆ.

ಡಿಲ್ಲಿಯಲ್ಲಿ ಮುಸ್ಲಿಮರ ಒಂದು ಕಂಡವು ಜುಮ್ಮಾ ಮಸೀದಿಗೆ ಹೋಗಿ ಪ್ರಾರ್ಥನೆಮಾಡಿತು. ಹೊರಹೊರಟಿತು. ಮದ್ಯಪಾನ ನಿಷೇಧವನ್ನು ಮಾಡಲುದ್ಯುಕ್ತವಾಯಿತು. ಪಿಕೆಟಿಂಗ್ ಬಲವಾಗಲು ಪೋಲೀಸರ ಆಗಮನವಾಗಿ ಬಲಾತ್ಕಾರವು ನಡೆಯಿತು. ಜನಸಂದಣಿಕ್ಕೆ ಕೋಪ ಬಂದು ಒಂದು ಮದ್ಯದಂಗಡಿಗೆ ಕೆಲವರು ನುಗ್ಗಿ ಅಲ್ಲಿಯ ವ್ಯಾಪಾರವನ್ನು ನಿರ್ಮೂಲಿಸ ಕೆಲಸ ಪ್ರಯತ್ನಿಸಿದರು. ಪೋಲೀಸರ ದೊಡ್ಡ ಸಮೂಹವು ಹೋಗಿ ಶಾಂತಿಯನ್ನುಂಟುಮಾಡಿತು.

೨೦ನೇ ದಿನ ರಾತ್ರಿ ಡಿಲ್ಲಿಯಲ್ಲಿ ಜರಗಿದ ಅಖಿಲಭಾರತ ಮುಸ್ಲಿಂ ಪರಿಷತ್ತಿನ ಚೆಯರ್‌ಮೆನರಾದ ಹಕೀಂ ಮಹಮ್ಮದ್ ಜಮೀಲ್ ಖಾನರು ಒಂದು ಠರಾವನ್ನು ಮಾಡಿದರು. ಸಾಮ್ರಾಜ್ಯ ಸರಕಾರವು ಮುಸ್ಲಿಮರ ಬೇಡಿಕೆಗಳಿಗೆ ಕಿವಿಗೊಡುವುದಿಲ್ಲ. ಅಲ್ಲಗಳೆಯುತ್ತಿದೆ. ಆದುದರಿಂದ ಈ ಪರಿಷತ್ತು ರೌಂಡ್‌ಟೇಬಲ್ ಪರಿಷತ್ತಿನ ಎಲ್ಲಾ ಸಮಿತಿಗಳನ್ನು ಸಂಪೂರ್ಣ ಬಹಿಷ್ಕರಿಸಬೇಕೆಂದಿನ್ನುತ್ತದೆ.

— ಅಹ್ಮದಾಬಾದಿನಲ್ಲಿ ಭಾನುಮತಿ ಎಂಬ ವಿಧವೆಗೆ ಪುನರ್ವಿವಾಹವಾಯಿತು. ವಧುವನ್ನು ಆಶೀರ್ವದಿಸಿ ಗಾಂಧೀಜೀಯವರು ಎರವಾಡ ಸೆರೆಯಿಂದ ಒಂದು ಪತ್ರ ಬರೆದಿದ್ದಾರೆ.

— ಕಳೆದ ವಾರದಲ್ಲಿ ಮುಂಬಾಯಿ ಬಂದರಿನಿಂದ ೧೮೩ ಲಕ್ಷ ರೂಪಾಯಿಗಳ ಭಂಗಾರವು ನಾಲ್ಕು ಮತ್ತು ಐದನೇ ಎಂಬ ಸ್ಟೀಮರಿನಲ್ಲಿ ಇಂಗ್ಲಾಂಡಿಗೆ ಹೋಯಿತು.

— ಸಂಯುಕ್ತಪ್ರಾಂತ್ಯದಲ್ಲಿ ಕಾಯಿದೆಭಂಗ ಚಳವಳಿಕ್ಕಾಗಿ ಜನವರಿ ೪ರಿಂದ ಇಂದಿನ ತನಕ ೭೨೭೪ ಮಂದಿಗಳು ಶಿಕ್ಷಿಸಲ್ಪಟ್ಟಿರಾಗಿ ಸರಕಾರದ ಪ್ರಕಟಣೆಯಿಂದ ತಿಳಿದುಬರುತ್ತದೆ.

— ಮುಂಬಯಿನಲ್ಲಿ ರಾತ್ರಿ ಮಕ್ಕಳನ್ನು ಹಾರಿಸುವ ಕುಶಾಲೆಯ ಕ್ರಮವನ್ನು ಕಾಂಗ್ರೆಸ್ ಸಂಬಂಧವಿಲ್ಲದವರೆಂದೂ ಆ ಪ್ರಯುಕ್ತ ಅವರು ಕಡುಗೆ ಭಂಗ ತಿಳಿಯಲು ಕಷ್ಟವಾಗಿದೆಯೆಂದು ಬರೆದಿರುವರೆಂದೂ ತಿಳಿದುಬರುತ್ತದೆ.

— ಮದರಾಸುಪುರದಲ್ಲಿ ವೈ ಇಂಡಿಯನ್ ಓದಿದವರಿಗೆ ಪೋಲೀಸರು ಲಾಠೀ ಪ್ರಹಾರಕೊಟ್ಟ ಸಂಬಂಧವಾಗಿ ಕೌನ್ಸಿಲ್‌ನಲ್ಲಿ ಸಲ್ಲಿದ್ದಿಕೆ ಓದಿದವರು ವೈ ಇಂಡಿಯನ್ ಚಳವಳಿದ ಮುಖಕ'ನ್ನು ಹಾಕಿಕೊಂಡು ಕಾಂಗ್ರೆಸ್ ಚಳವಳಿಯನ್ನು ಮುಂದೊತ್ತುತ್ತಾರೆಂದು ತಿಳಿದು ಬಂದುದರಿಂದ ಅವರಿಗೆ ಲಾಠೀ ಪ್ರಹಾರವಾಯಿತೆಂದು ಅಲ್ಲಿಯ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಹೇಳಿಕೆ.

— ಗಾಂಧೀಜೀಯವರು ರೋಮಿನಲ್ಲಿರುವಾಗ ದಿ ಇಟಾಲಿಯನ್ ರಿವ್ಯೂ ಎಂಬ ಪತ್ರಿಕೆಯ ಬಳ್ಳಿಗೆ ಭೇಟಿಕೊಟ್ಟು ತಾನು ಹಿಂದೂಸ್ಥಾನಕ್ಕೆ ಹೋಗಿ ಚಳವಳವನ್ನು ಬಹಿಷ್ಕಾರವನ್ನು ಹೂಡುವೆನೆಂದು ಅವರು ಹೇಳಿದ್ದರೆಂದು ಆರೋಪಿಸಲಾಗುತ್ತಿತ್ತು. ಅದು ಬರೀ ಸುಳ್ಳೆಂದೂ, ಅದರಿಂದಾಗಿ ಲೋಕವೇ ಕ್ಷಾಭೆಯಾಯಿತೆಂದೂ ಗಾಂಧೀಜೀಯವರ ಅತಿಥಿಯಾಗಿದ್ದ ಮಿಸ್ ಲೆಸ್ಟರ್ ಕನ್ಯೆಯು ಪ್ರಕಟಿಸಿದ್ದಾಳೆ.

— ಮದುರೆಯಲ್ಲಿ ನಾಗಮ್ಮಾಳ್ ಎಂಬವಳೊಬ್ಬಳು ತನ್ನ ಅಳಿಯ ತುಳಸಿ ಅಯ್ಯರ್ ಎಂಬವನ ಸಹಾಯದಿಂದ ತನ್ನ ೧೫ ವರುಷದ ಮಗಳನ್ನು ೬೦ ವರುಷದ ಬೆಲೆಗೆ ಒಳ್ಯಿಯರ ಗೋವಿಂದ ಅಯ್ಯರ್ ಎಂಬವನಿಗೆ ಮಾರಿದುದಕ್ಕಾಗಿ ಅಪರಾಧಿಗಳಿಗೆ ಒಂಭತ್ತು ತಿಂಗಳ ಕಠಿಣ ಸಜೆಯನ್ನು ವಿಧಿಸಲಾಯಿತು.

— ಧಾರವಾಡದ ಕರ್ಮವೀರ ಪತ್ರಿಕೆಯ ಸಂಪಾದಕರಾದ ಶ್ರೀ ರಂಗನಾಥ ರಾಮಚಂದ್ರ ದಿವಾಕರರು ರಾಜದ್ರೋಹಕರ ಲೇಖನವನ್ನು ಕಳೆದ ಡಿಸೆಂಬರದಲ್ಲಿ ತನ್ನ ಪತ್ರಿಕೆಯಲ್ಲಿ ಬರೆದರೆಂಬ ಅಪಾದನೆಯ ಮೇಲೆ ಮೂರು ವರ್ಷಗಳ ಕಠಿಣ ಸಜೆಗೊಳಗಾಗಿರುವರು.

— ತಿರುಚಿನಾಪಳ್ಳಿಯಲ್ಲಿ ೨೩ ಮಂದಿ ಹಿಂದೂಗಳಿಗೂ ೫ ಮಂದಿ ಹಿಂದೀಯ ಕ್ರೈಸ್ತರಿಗೂ ಮುಸಲ್ಮಾನರು ಹೊಡೆದರೆಂಬ ವಾರ್ತೆ ಬಂದಿದೆ. ಕಾರಣವೇನೆಂದು ಪೆಟ್ಟು ತಿಂದವರಿಗೇನೆ ಗೊತ್ತಿಲ್ಲವಂತೆ. ಪೋಲೀಸರು ತನಿಖೆ ನಡೆಸುತ್ತಲಿರುವರು.

ದಕ್ಷಿಣ ಕನ್ನಡ.

ಸ್ವೀಕಾರ.

ಮಂಗಳೂರಿನ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿಯ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ

ಮಂಗಳೂರು:— ಕಳೆದ ತಾ. ೧೯ನೇ ಶನಿವಾರ ದಿನ ಸಂಜೆ ಥಿಯೋಸೊಫಿಕಲ್ ಲೋಜಿನಲ್ಲಿ ಶ್ರೀ. ಎ. ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ 'ದಿ ಬೈ ಇಂಡಿಯನ್' ಲೀಗಿನ ನಿರ್ಮಾಣ ಕಾರ್ಯವು ಎಲ್ಲಾ ಮತಸ್ಥರ ಪ್ರಾತಿನಿಧ್ಯದಿಂದಲೂ ವಕೀಲರ, ವರ್ತಕರ ಜಮೀನು ದಾರರ, ವಿದ್ಯಾರ್ಥಿಗಳ ಕೂಡುವಿಕೆಯಿಂದಲೂ ಜರಗಿತು. ರಾಜಕೀಯಕ್ಕೆ ಸಂಬಂಧಿಸದ ಈ ಸಂಘವು ಸಂಪೂರ್ಣ ಸ್ವದೇಶಿಯನ್ನೇ ಪ್ರೋತ್ಸಾಹಿಸುವುದು. ಇದಕ್ಕೆ ಸೇರಲಿರುವ ಸದಸ್ಯರು ತಲೆಗೆ ನಾಲ್ಕಾಣೆಯಂತೆ ಕೊಡಬೇಕು. ಸ್ವಯಂದಾನ ರೂಪದಲ್ಲಿ ನಿಧಿಯನ್ನು ಕೊಟ್ಟರೂ ಸ್ವೀಕರಿಸಲ್ಪಡುತ್ತದೆ. ಸ್ವದೇಶಿ ಒಡವೆ ವಿಕ್ರಯಿತರು ವೆಚ್ಚಿನ ಮಾಹಿತಿ ಬಗ್ಗೆ ಶ್ರೀ ಆರ್. ಕೆ. ಪ್ರಭುಗಳೊಡನೆಯಾಗಲೀ ಶ್ರೀ ಎಂ. ಎಸ್. ಮಾಧವರಾಯರೊಡನೆಯಾಗಲೀ ಪತ್ರವ್ಯವಹಾರ ನಡೆಸಬಹುದು. ತಾ. ೩೧ರಲ್ಲಿ ಜರಗಲಿರುವ ಬಪ್ಪನಾಡು ಜಾತ್ರೆಯ ದಿನ ಮುಲ್ಕಿಯಲ್ಲಿ ಶ್ರೀ. ಎಂ. ರಾಮಕೃಷ್ಣ ಪೂಂಜರ ಮೇಲ್ವಿಚಾರಣೆಯಲ್ಲಿ ಅಲ್ಲಿ ಒಂದು ಸ್ವದೇಶಿ ವಸ್ತು ಪ್ರದರ್ಶನವಾಗುವುದು. ಅಲ್ಲಿ ತಮ್ಮ ತಮ್ಮ ಸ್ವದೇಶಿ ಸ್ಟಾಲುಗಳನ್ನು ಪ್ರದರ್ಶಿಸಬೇಕೆಂದಿರುವವರು ಅವರಿಗೆ ಬರೆದುಕೊಳ್ಳಬಹುದು.

ತಾ. ೨೯ನೇ ದಿನ ಸಂಜೆ ಥಿಯೋಸೊಫಿಕಲ್ ಲೋಜಿನಲ್ಲಿ ಒಂದು ಸಭೆಯು ಜರಗುವುದು. ಈ ಸಭೆಯಲ್ಲಿ ಲೀಗಿನ ಕಾರ್ಯಕಾರಿ ಮಂಡಳಿಯ ಸದಸ್ಯರನ್ನು ಚುನಾಯಿಸಲಾಗುವುದು. ಆ ಬಗ್ಗೆ ಈ ಲೀಗಿನ ಸದಸ್ಯರೂ ಮಹಾಜನರೂ ಬರಬೇಕಾಗಿ ನಿವ್ರಿ ಲೀಗಿನವರ ವಿನಂತಿ

ತಾ. ೧೯–೩–೩೨ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೧೮ ಮರಣಗಳೂ ೩೦ ಜನನಗಳೂ ಆಗಿವೆ

ಅಧ್ಯಕ್ಷ ಸಮಿತಿ, ಮಂಗಳೂರು, ದಕ್ಷಿಣ ಕನ್ನಡ ಇದರ ಚಾಲ್ತಿ ವರ್ಷದ ಅಧಿವೇಶನವು ಕಳೆದ ತಾ. ೧೩–೩–೩೨ನೇ ಆದಿತ್ಯ ಸಾಯಂಕಾಲ ಘಂಟೆ ೫ಕ್ಕೆ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ವಸಂತ ಮಂಟಪದಲ್ಲಿ ಸಮಿತಿಯ ಅಧ್ಯಕ್ಷರು ಉಪಸ್ಥಿತರಿಲ್ಲದುದರಿಂದ ಶ್ರೀಯುತ ಎಚ್. ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು.

ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ ಒಂದು ಸಭೆಯು ತಾ. ೨೬ನೇ ದಿನ ಸಂ. ೩ಕ್ಕೆ ವೆನ್‍ಲೋಕ್ ಆಸ್ಪತ್ರೆಯಲ್ಲಿ ಜರಗಲಿರುವುದು. ಶ್ರೀಯುತ ಯು. ಪಿ. ಮಲ್ಯ ಎಲ್. ಎಂ. ಎಂಡ್ ಎಸ್. ಇವರು ಭಾಷಣ ಮಾಡಲಿರುವರು

ತಾ. ೧೩ರಲ್ಲಿ ಸಾಯಂಕಾಲ ಬಿ. ವೆಂಕಪ್ಪ ಪೈಗಳನ್ನೂ ಕೈಸೇಲು ತಿಮ್ಮಪ್ಪ ಶೆಟ್ಟರನ್ನೂ ಕೈದುಮಾಡಿದರಷ್ಟೆ. ಮರುದಿನ ವಿಚಾರಣೆ ನಡೆದು ಸ್ವಂತ ಜವಾಬ್ದಾರಿಯ ಮೇಲೆ ತಾ. ೧೮ಕ್ಕೆ ೧೧ ಘಂಟೆಗೆ ಹಾಜರಾಗಬೇಕೆಂದು ಬಿಟ್ಟಿರುವರು. ವಿಚಾರಣೆಯು ಪುನಃ ಮರುದಿನಕ್ಕೆ ಮುಂದರಿಸಲ್ಪಟ್ಟಿತು. ಶ್ರೀ ವೆಂಕಪ್ಪ ಪೈಗಳು ತಮ್ಮ ಮೇಲಿನ ಆರೋಪಣೆಯು ಸುಳ್ಳೆಂದು ವ್ಯವಹರಿಸುವರೆಂದೂ ಕಳೆದ ಸಲ ಪ್ರಕಟವಾದಂತೆ ಅವರಿಗೆ ಶಿಕ್ಷೆಯಾಗಲಿಲ್ಲವೆಂದೂ ತಿಳಿದುಬಂದಿದೆ

ತಾ. ೧೬ರಲ್ಲಿ ಬೆಳಗ್ಗೆ ೯ ೩೦ಕ್ಕೆ ಕೆ. ಶೀನಪ್ಪ ಮತ್ತು ಕೆ. ರಾಮಪ್ಪ ಎಂಬ ಸ್ವಯಂಸೇವಕರು ಶಾಸ್ತ್ರಿಯವರ ಅಂಗಡಿಯನ್ನು ಪಿಕೆಟಿಂಗ್ ಮಾಡಿದರು. ಅವರು ಕೈದುಮಾಡಲ್ಪಟ್ಟ ತರುವಾಯ ಬಿ. ಸಂಕಪ್ಪ ಶೆಟ್ಟಿ ಮತ್ತು ಬಿ. ಉಗ್ಗಪ್ಪ ಪೈಯ್ಯಡೆಯವರು ಪಹರೆಗೆ ನಿಂತರು. ಅವರೂ ಸ್ವಲ್ಪ ಸಮಯದ ನಂತರ ಕೈದುಮಾಡಲ್ಪಟ್ಟರು

ಅದೇ ದಿನ ಸಾಯಂಕಾಲ ೪ ಘಂಟೆಗೆ ಬಿ. ತಿಮ್ಮಪ್ಪ ಶೆಟ್ಟಿ ಮತ್ತು ಬಟ್ ಶಾಂತಪ್ಪ ಮೆಂಡನ್ ಎಂಬ ಸ್ವಯಂಸೇವಕರು ಶಾಸ್ತ್ರಿಯವರ ಅಂಗಡಿಯನ್ನು ಪಹರೆ ಮಾಡಿದರು. ಸ್ವಲ್ಪ ಸಮಯದಲ್ಲೇ ಅವರನ್ನು ಪೋಲೀಸರು ಕೈದು ಮಾಡಿ ಕೊಂಡುಹೋದರು

ಮೊದಲೇ ಪ್ರಕಟಿಸಿದ್ದಂತೆ ಕಳೆದ ಶುಕ್ರವಾರ ೨೩೧೮ ಟ್ರೈನಿಗೆ ೫ನೇ ಮರಾಟಾ ಇನ್‌ಫೆಂಟ್ರಿ (ಪಟಾಲಮು) ಮಂಗಳೂರಿಗೆ ಬಂದಿತು. ಸುಮಾರು ೬೫ ಮಂದಿ ಪಟಾಲಮಿನವರು ಇದ್ದರು. ರೈಲ್ವೇ ಸ್ಟೇಷನಿನಲ್ಲಿ ಅವರನ್ನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಸ್ವಾಗತೀಕರಿಸಿದ ನಂತರ ಅವರೆಲ್ಲರನ್ನು ಜಪ್ಪಿನಲ್ಲಿರುವ ಬಿಷಪರ ಬಂಗ್ಲೆಗೆ ಕರೆದುಕೊಂಡು ಹೋದರು. ಸಂಜೆ ೫ ಗಂಟೆಯಿಂದ ೭ ಗಂಟೆಯ ವರೆಗೆ ಅವರ ಶಾಸ್ತ್ರಶಸ್ತ್ರಾದಿಗಳು ನೆಹರೂ ಮೈದಾನದಲ್ಲಿ ಜರಗಿತು. ಸುಮಾರು ಏಳೆಂಟು ಸಾವಿರ ಜನರು ನೆರೆದಿದ್ದರು. ಅಧಿಕಾರಿಗಳು ಸುತ್ತಲೂ ಕುರ್ಚಿಯಲ್ಲಿ ಕುಳಿತಿದ್ದರು. ಮರುದಿನ ಸಂಜೆ ಇಲ್ಲಿಯ ಎರಡು ಕಾಲೇಜಿನವರೊಟ್ಟಿಗೆ ಹಾಕಿ ಅವರೊಡನೆ ಹಾಕಿ ಆಡಿದರು. ಪುಣ್ಯವಶಾತ್ ಇವರ್ಗದೆಯವರೂ ಸೋಲಲಿಲ್ಲ. ಅಂದಿನ ರಾತ್ರೆ ಪಟಾಲಮಿನವರು ಎರಡು ಬಸ್ಸುಗಳಲ್ಲಿ ಕುಳಿತು ನಾಟಕ ನೋಡಲು ಹೋದರು. ಮರುದಿನ ಬೆಳಗ್ಗೆ ಅವರೆಲ್ಲರೂ ಇಲ್ಲಿಂದ ಹೊರಟುಹೋದರು

ನಮ್ಮ ಮಂಗಳೂರು ಪಟ್ಟಣದಲ್ಲಿ ಒಕ್ಸೆಪಿಯಸ್ ಕಂಪೆನಿಯವರ ಇಲೆಕ್ಟ್ರಿಕ್ ಕಂಭಗಳು ನೆಡಲ್ಪಟ್ಟು ಕೆಲವು ತಿಂಗಳುಗಳಾದುವಷ್ಟೆ. ಬರುವ ಒಕ್ಟೋಬರ್ ತಿಂಗಳ ಮೊದಲ್ಗೊಂಡು ಅವುಗಳಲ್ಲಿ ಬೆಳಕಿನ ಲಕ್ಷ್ಯ ಪ್ರಾರಂಭವಾಗಲಿರುವುದೆಂದು ತಿಳಿದುಬರುತ್ತದೆ.

ಕಳೆದ ಹನ್ನೊಂದು ವರ್ಷಗಳಿಂದಲೂ ಮಂಗಳೂರು ಮುನಿಸಿಪಾಲಿಟಿಯ ಚೆಯರ್‌ಮೇನರಾಗಿದ್ದ ರಾವ್‌ಸಾಹೇಬ್ ನೆಲ್ಲಿಕ್ಕಾ ವೆಂಕಟರಾಯರ ಒಂದು ತೈಲಚಿತ್ರವನ್ನು ಮೊದಲೇ ನಿರ್ಧರಿಸಿದ್ದಂತೆ ಮುನ್ಸಿಪಲ್ ಸಭಾ ಸದನದಲ್ಲಿ ಇದೇ ತಾ. ೨೯ನೇ ದಿನ ಜಿಲ್ಲಾ ಕಲೆಕ್ಟರವರು ಅನಾವರಣ ಮಾಡಲಿರುವರೆಂದು ತಿಳಿದುಬರುತ್ತದೆ.

''ಬಡವರ ಬಂಧು'' ಎಂಬ ಮಾಸ ಪತ್ರಿಕೆಯು ಮಂಗಳೂರಿನಿಂದ ಬೇಗನೇ ಹೊರಡಲಿರುವುದೆಂದೂ, ಇದರ ಚಂದಾಹಣವು (ಅಂಚೆ ವೆಚ್ಚ ನಾಲ್ಕಾಣೆ ಸಹಿತ) ಬರೇ ಒಂದು ರೂಪಾಯಿಯೆಂದೂ ತಿಳಿದುಬರುತ್ತದೆ. ಇದರ ಕಾರ್ಯಾಲಯವು ಹಂಪನಕಟ್ಟೆಯ ಡೈಮಂಡ್ ಬಿಲ್ಡಿಂಗಿನಲ್ಲಿ ತೆರೆಯಲ್ಪಟ್ಟಿದೆ

ಇಲ್ಲಿಯ ಹೊಗೆಯಲ್ಲಿ ಶ್ರೀ. ಮೋನಪ್ಪ ತಿಂಗಳಾಯರ ಮನೆಯ ಬಳಿ ಒಂದು ಬಾಲ್ಯವಿವಾಹವು ಬೇಗನೇ ನಡೆಯಲಿದೆಯೆಂಬ ವಾರ್ತೆ ಇದೆ. ಸಮಾಜ ಸುಧಾರಕರು ಇದನ್ನು ತಿಳಿದು ಕಣ್ಣು ಮುಚ್ಚುವರೇ?

ಇಲ್ಲಿಯ ಅಸಿಸ್ಟೆಂಟ್ ಇನ್‌ಕಮ್‌ಟೇಕ್ಸ್ ಆಫೀಸರರಾಗಿ ನೇಮಕ ಹೊಂದಿದ ಶ್ರೀಯುತ ಎಚ್. ನರ್ಸಪ್ಪ ಬಿ. ಎ. ಇವರು ಕೊಯಂಬತ್ತೂರಿನ ಹೆಡ್ ಆಫೀಸಿಗೆ ವರ್ಗಾಯಿಸಲ್ಪಟ್ಟಿರುವರೆಂದೂ, ಇನ್‌ಕಮ್‌ಟೇಕ್ಸ್ ಆಫೀಸು ಹೆಡ್‌ಕ್ಲಾರ್ಕರಾದ ನಾರಾಯಣ ತಂತ್ರಿಗಳು ಅಸಿಸ್ಟೆಂಟ್ ಇನ್‌ಕಮ್‌ಟೇಕ್ಸ್ ಆಫೀಸರರಾಗಿ ನೇಮಕಹೊಂದಿರುವರೆಂದೂ ತಿಳಿದುಬರುತ್ತದೆ

ಕಳೆದ ಸೋಮವಾರ ದಿನ ಕೈದುಮಾಡಲ್ಪಟ್ಟ ಶ್ರೀ ಕಲ್ಲಾಡಿ ಗುತ್ತು ಮಹಾಬಲ ಆಳ್ವರಿಗೆ ೧ ವರ್ಷದ ಕಠಿಣ ಸಜೆಯೂ ಶ್ರೀ ಕೆ. ನೀಲಯ್ಯ ಮತ್ತು ಎ. ಜೆ. ಸುವರ್ಣರೆಂಬವರಿಗೆ ನಾಲ್ಕು ನಾಲ್ಕು ತಿಂಗಳ ಸಜೆಯೂ ವಿಧಿಸಲಾಗಿದೆ.

ಇದೇ ಬುಧವಾರ ತಾ. ೨೩ನೇ ದಿನವು ಭಗತ್‌ಸಿಂಗ್ ಮತ್ತು ಒಡನಾಡಿಗಳನ್ನು ಗಲ್ಲಿಗೇರಿಸಿದ ದಿನವಾಗಿದ್ದುದರಿಂದ ಕೆಲವು ವಿದ್ಯಾರ್ಥಿಗಳೂ ಮತ್ತಿತರ ಅನೇಕರೂ ದುಃಖ ಸೂಚನೆಯ ಬಗ್ಗೆ ಕಪ್ಪು ವಸ್ತ್ರದ ಸಣ್ಣ ಪತಾಕೆಯನ್ನು ಎದೆಯ ಮೇಲೆ ಅಂಗಿಗೆ ಸಿಕ್ಕಿಸಿದ್ದರು. ಈ ದಿನ ಮಂಗಳೂರಿನ ವಿದೇಶಿ ವಸ್ತ್ರದಂಗಡಿಯ ಎದುರು ೧೬ರಿಂದ ೨೦ ಮಂದಿಗಳು ವರೆಗೆ ಸ್ವಯಂಸೇವಕರು ಪಹರೆ ನಡೆಸಿ, ಕೈದುಮಾಡಲ್ಪಟ್ಟು ಸ್ಟೇಷನಿಗೊಯ್ಯಲ್ಪಟ್ಟರು. ಸಂಜೆಯಲ್ಲಿ ಅವರನ್ನು ಬಿಟ್ಟರು. ಶ್ರೀ ಪಲ್ಲನಾಡು ಸೂರಪ್ಪಯ್ಯನವರು ಜಾಮೀನಿನ ಮೇಲೆ ಬಿಡುಗಡೆಹೊಂದಿರುವರು

ತಾ. ಎನ್. ವಿ. ಸುವರ್ಣರ ಅರ್ಧ ಚಿಕಿತ್ಸಾಭವನದ ಸಹಾಯಾರ್ಥವಾಗಿ ಇದೇ ತಾ. ೨೭ನೇ ಆದಿತ್ಯವಾರ ರಾಮಾಂಜನೇಯ ಎಂಬ ನಾಟಕವನ್ನು ಗುಜ್ಜರ ಟಿಯೇಟ್ರಿಕಲ್ ಕಂಪೆನಿಯವರು ಆಡಲಿರುವರು. ಅವರ ಅರಿಕೆಯಂತೆ ಶ್ರೀ ಮಂಜುನಾಥ ರಾಜಿನಾಮನರು ನಾರದನ ಭೂಮಿಕೆಯನ್ನು ವಹಿಸಲಿರುವರೆಂದು ತಿಳಿದುಬಂದಿದೆ

ಶ್ರೀಗಳಾದ ಎಚ್. ಆರ್. ಶೆಟ್ಟಿ, ಜಿ. ವೇಣುಗೋಪಾಲರಾವ್, ವಿಲ್ಕಿ ಕೃಷ್ಣರಾವ್ ಇವರ ಮೇಲೆ ಆದ ಕ್ರಿಮಿನಲ್ ಮೊಕದ್ದಮೆಯ ಸಿನ್ನೆ ತೀರ್ಮಾನವಾಗಿ, ಆಪಾದಿತರ ಮೇಲೆ ತಪ್ಪು ಸ್ಥಾಪನೆಯಾಗಿ ಮೊದಲನೇಯವರಿಗೆ ೨ ವರ್ಷಗಳ ಸಜೆಯೂ ೫೦೦ ರೂಪಾಯಿಗಳ ಜುಲ್ಮಾನೆಯೂ, ೨ನೇಯವರಿಗೆ ೧ ವರ್ಷದ ಸಜೆ, ೨೦೦ ರೂಪಾಯಿ ಜುಲ್ಮಾನೆಯೂ ೩ನೇಯವರಿಗೆ ೬ ತಿಂಗಳ ಶಿಕ್ಷೆಯೂ ೧೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿರುವುದೆಂದು ತಿಳಿದುಬಂದಿದೆ

ಮಂಗಳೂರು ಮುನಿಸಿಪಾಲಿಟಿಯೊಳಗಿನ ಕೊಡಿಯಾಲಬೈಲು ಈಸ್ಟ್ ವಾರ್ಡಿಗೆ ತಯಾರಿಸಿದ ನಗರ ರಚನಾ ಸ್ಕೀಮನ್ನು ಆಲೋಚಿಸುವರೆ ಅದಕ್ಕೆ ಸಂಬಂಧಪಟ್ಟ ಮಾಲೀಕರ ಒಂದು ಸಭೆಯು ಇದೇ ಎಪ್ರಿಲ್ ತಾ. ೩ನೇ ಆದಿತ್ಯವಾರ ಅಪರಾಹ್ನ ೪ ಘಂಟೆಗೆ ಕೆನರಾ ಹೈಸ್ಕೂಲಿನ ಮ್ಯೂಸಿಯಮ್ ಕಂಪೌಂಡಿನಲ್ಲಿ ಜರಗುವುದು

ಉಡುಪಿ:— ಎರಡನೆಯ ಸಲ ತಾ. ೧೪ಕ್ಕೆ ಶ್ರೀ ಬಿ. ದೇಜಪ್ಪ ಶೆಟ್ಟಿ ಮತ್ತು ಪಾಂಡುರಂಗ ಭಟ್ಟರು ಇಲ್ಲಿನ ಪ್ರಮುಖ ಜವಳಿ ಸಾಹುಕಾರರಾದ ಶ್ರೀ ವೇಲ್ಜಿ ಕಲ್ಯಾಣಜಿ ಸೇಟರ ಅಂಗಡಿಯ ಎದುರು ಪೂರ್ವಾಹ್ನ ೧೧ ಘಂಟೆಗೆ ಪಹರೆ ಪ್ರಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿ ಪೋಲೀಸರು ಬಂದು ಸ್ವಯಂಸೇವಕರ ಕೈಯಿಂದ ರಾಷ್ಟ್ರಧ್ವಜವನ್ನು ಕಿತ್ತುಕೊಂಡು ಶ್ರೀ ಪಾಂಡುರಂಗ ಭಟ್ಟರನ್ನು ಬೀದಿಗೆ ಎಳೆದುಹಾಕಿ ನಂತರ ಕೈದುಮಾಡಿ ಸ್ಟೇಶನಿಗೆ ಕೊಂಡೊಯ್ದರು. ಆದಾಗ್ಯೂ ಶ್ರೀ. ಬಿ. ದೇಜಪ್ಪಶೆಟ್ಟರು ಪಹರೆ ಮಾಡುತ್ತಿರಲು ಅವರನ್ನೂ ಕೈದುಮಾಡಿದರು. ಸದ್ರಿಯವರಿಬ್ಬರನ್ನೂ ತಾ. ೧೬ಕ್ಕೆ ಕುಂದಾಪುರಕ್ಕೆ ಕೊಂಡುಹೋಗಿ ಡಿವಿಜನಲ್ ಆಫೀಸರೆದುರು ಹಾಜರುಮಾಡಿದ್ದಲ್ಲಿ ಸದ್ರಿಯವರ ಪಟ್ಟಿಯನ್ನು ತಾ. ೨೧ಕ್ಕೆ ಮುಂದರಿಸಲಾಯಿತು. ಇವರನ್ನು ತಾ. ೨೧ಕ್ಕೆ ವಿಚಾರಣೆ ಮಾಡಿ ರಾಜ ದ್ರೋಹದ ಸಂಬಂಧ ಕಲಮು ಆಗಿದ್ದ ಶ್ರೀ ಬಿ. ದೇಜಪ್ಪಶೆಟ್ಟರಿಗೆ ೬ ತಿಂಗಳ ಮತ್ತು ಶ್ರೀ ಪಾಂಡುರಂಗ ಭಟ್ಟರಿಗೆ ೪ ತಿಂಗಳ ಕಠಿಣ ಸಜೆಯೂ ವಿಧಿಸಲಾಯಿತು. ಇವರಿಬ್ಬರನ್ನು ತಾ. ೨೩ನೇಗೆ ಉಡುಪಿ ಮಾರ್ಗವಾಗಿ ಮಂಗಳೂರಿಗೆ ಕೊಂಡ್ಯೊಯ್ಯಲಾಯಿತು.

ತಾ. ೧೭ನೇ ದಿನ ಪ್ರಾತಃಕಾಲ ನೋಡುವಾಗ ಪಟ್ಟಣದ ಎಲ್ಲಾ ಕಡೆಗಳಲ್ಲಿಯೂ ರಾಷ್ಟ್ರಧ್ವಜಗಳೂ ಬಹಿಷ್ಕಾರ ಪ್ರಕಟಣೆಗಳೂ ಹಚ್ಚಲಾಗಿದ್ದವು. ರಥಬೀದಿಯಲ್ಲಿನ ಕಲ್ಲು ಕಂಭದ ತುದಿಗೆ ಏರಿಸಲಾಗಿದ್ದ ಭಾವುಟೆಯನ್ನು ತಾ. ೨೦ಕ್ಕೆ ಹೇಗೂ ಪೋಲೀಸರು ಶ್ರಮದಿಂದ ತೆಗೆಸಿದರು.

ಕಾರ್ಕಳ:— ಕಳೆದ ೧೪–೩–೩೨ರ ದಿನ ಶ್ರೀಯುತ ವಕೀಲ್ ಎಸ್. ನರಜಪ್ಪ ಶೆಟ್ಟರು ಅಧ್ಯಕ್ಷರಾಗಿ, ವಿವಿಧ ಜಾತಿ ಮತ ವೃತ್ತಿಗಳನ್ನನುಸರಿಸುವವರ ಪ್ರಾತಿನಿಧ್ಯವುಳ್ಳ ಒಂದು ಸ್ಥಾಯೀ ಕಮಿಟಿಯಿಂದೊಡಗೂಡಿದ ಸ್ವದೇಶೀ ಪ್ರಚಾರಕ ಸಂಘ (Buy Indian League) ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿರುವುದು. ಸದ್ಯದಲ್ಲಿಯೇ ಪ್ರಚಾರ ಕಾರ್ಯವು ಆರಂಭವಾಗುವುದು

ಕೆನರಾ ಹೈಸ್ಕೂಲಿನ ಅಧ್ಯಾಪಕರಲ್ಲೊಬ್ಬರಾದ ಶ್ರೀ. ಅಚ್ಯುತ ಬಾಳಿಗರವರು ಇಲ್ಲಿಯ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ತಾ. ೧೫–೩–೩೨ರಿಂದ ಮೂರು ದಿನಗಳವರೇಗೆ ಪ್ರತಿದಿನ ಸಾಯಂಕಾಲ ಶ್ರೀಮದ್ಭಗವದ್ಗೀತೆಯ ಕುರಿತು ವ್ಯಾಖ್ಯಾನಗಳನ್ನು ಕೊಟ್ಟರು

ತಾ. ೧೯–೩–೩೨ರಿಂದ ಇಲ್ಲಿಯೂ ಪರದೇಶೀ ವಸ್ತ್ರ ಬಹಿಷ್ಕಾರ ಮತ್ತು ಪಹರೆಯ ಕೆಲಸವು ನಡೆಯುತ್ತಿರುವುದು. ತಾ. ೧೯ರ ದಿನ ಬೆಳಗ್ಗೆ ಇಲ್ಲಿಯ ಕಾಂಗ್ರೆಸ್ ಸರ್ವಾಧಿಕಾರಿಗಳಾದ ಶ್ರೀ ರಮಾನಾಥ ಕಿಣಿಯವರು ಪಹರೆಯನ್ನು ಪ್ರಾರಂಭಿಸಿದರು. ಇಲ್ಲಿ ೧೪೪ನೇ ಸೆಕ್ಶನು ಜಾರಿಯಲ್ಲಿ ಇಲ್ಲದಿದ್ದರೂ, ಪಹರೆ ಮಾಡುವವರು ಒಬ್ಬರೇ ಆಗಿದ್ದು ಅವರ ಸುತ್ತು ಮುತ್ತು ಯಾವ ತರದ ಜನಸಂದಣೆಯು ಕೂಡಿರದಿದ್ದರೂ ಶಾಂತತಾ ಭಂಗವಾಗಲಿಕ್ಕೆ ಯಾವದೇ ತರದ ಕಾರಣಗಳು ಇಲ್ಲದೆ ಇದ್ದಿದ್ದರೂ ಕೂಡ ಪೋಲೀಸ್ ಸಬ್ ಇನ್ಸಪೆಕ್ಟರರು ಒಬ್ಬ ಪೋಲೀಸ್ ಜವಾನನೊಂದಿಗೆ ಬಂದು ಪಹರೆ ನಡಿಸುತಿದ್ದ ಶ್ರೀಯುತ ಕಿಣಿಯವರಿಗೆ ಬೆತ್ತದಿಂದ ಏಟಾದು ಬಲವಾದ ಪೆಟ್ಟುಗಳನ್ನು ಹೊಡೆದು ಅಶ್ಲೀಲ ಹಾಗೂ ಅಸಭ್ಯ ಮಾತುಗಳಿಂದ ಬೈದು ಭಂಗಿಸಿದುದಲ್ಲದೆ ಅವರನ್ನು ಸುಮಾರು ಒಂದು ಮೈಲು ದೂರವಿರುವ ಪೋಲೀಸ್ ಸ್ಟೇಶನಿಗೆ ಕೊಂಡುಹೋಗುವಾಗಲೂ ದಾರಿಯಲ್ಲಿ ಹೊಡೆದಿರುವರೆಂದು ತಿಳಿದುಬರುತ್ತದೆ. ಆ ಮೇಲೆ ಪರದೇಶಿ ವಸ್ತ್ರದಂಗಡಿಯೊಂದನ್ನು ಶ್ರೀಗಳಾದ ಕೆ. ಕೇಶವ ಪ್ರಭು ಸೀತಾರಾಮಭಟ್ಟ, ಹಾಗೂ ರಾಮರಾಯ ಪ್ರಭುನೆಕ ಎಂಬ ಸ್ವಯಂಸೇವಕರು ಸರತಿಯ ಮೇರೆಗೆ ಪಹರೆಯನ್ನು ಮಾಡುತ್ತಿರುವರಾದರೂ, ಅವರಿಗೆ ಪೆಟ್ಟುಗಳು ಬಿದ್ದುದೂ ಇಲ್ಲ ಕೈದುಮಾಡಿದುದೂ ಇಲ್ಲ. ಪೋಲೀಸರು ಮಾತ್ರ ಆಗಾಗ ಬಂದು ಪಹರೆ ಕಾರ್ಯವನ್ನು ನೋಡಿ ಹೋಗುತ್ತಿದ್ದರು.

ಫರಂಗಿಪೇಟೆ. ಈ ಸೆಂಟರಿನ ಉಪಾಧ್ಯಾಯ ಸಂಘದ ಮಾಸಿಕ ಸಭೆಯು ಅರ್ಕುಳ ಬೈಲು ಶಾಲೆಯಲ್ಲಿ ತಾ. ೧೯–೩–೩೨ನೇ ದಿನ ಸದ್ರಿ ಗ್ರಾಮದ ಪಟೇಲ ಶ್ರೀನಿವಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು

ಪುತ್ತೂರು— ಇದೇ ತಾ. ೨೭ನೇ ಆದಿತ್ಯವಾರ ೩ ಘಂಟೆ ಗಳಿಕ್ಕೆ ಪುತ್ತೂರು ತಾಲೂಕು ಬಿಸಮಾರು ಗ್ರಾಮದ ಶ್ರೀ ಮುದ್ದಿಲ ಬೈಲಿನ ಪ್ರಾಥಮಿಕ ಪಾಠಶಾಲೆಯಲ್ಲಿ ದಕ್ಷಿಣ ಕನ್ನಡ ಗಳ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯನ್ನು ಜರಗಿಸುವದೆಂದು ನಿಶ್ಚಯಿಸಿರುತ್ತದೆ. ಈ ಸಭೆಗೆ ಮೈಸೂರು ಸಂಸ್ಥಾನದ ಸಹಕಾರಿ ಸಂಘಗಳ ರಿಜಿಸ್ಟ್ರಾರರಾದ ಶ್ರೀ ಕೆ. ಎಚ್. ರಾಮಯ್ಯ ಅವರ್ಗಳ್ ಬಿ. ಎ. ಬಾರ್ ಎಟ್ ಲಾ ಇವರು ಸಭಾಧ್ಯಕ್ಷರಾಗುವರು. ಸಂಘದ ಎಲ್ಲಾ ಮೆಂಬರರೂ ಮತ್ತು ಸಮಾಜದ ಹಿತಚಿಂತಕರೂ ದಯಮಾಡಿ ಬಂದು ಸಭಾಕಾರ್ಯಗಳನ್ನು ಸಾಂಗವಾಗಿ ನೆರವೇರಿಸಿಕೊಡಬೇಕಾಗಿ ಪ್ರಾರ್ಥನೆ ಎಂದು ಸದ್ರಿ ಸಂಘದ ಅಧ್ಯಕ್ಷರೂ ಕಾರ್ಯದರ್ಶಿಗಳೂ ತಿಳಿಸುತ್ತಾರೆ

The Canara Bank, Ltd. Mangalore.

ದಿ ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

NOTICE

ಇದೇ ೧೯೩೨ ತಾ. ೧೧–೩–೧೯೩೨ನೇ ಶುಕ್ರವಾರದ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿದ ಪ್ರಕಾರ ಈ ಕೆಳಗೆ ಹೆಸರು ಕಾಣಿಸಿದವರು ಬಾಬ್ತು ನನಗೆ ತಾ. ೩೧–೩–೧೯೩೨ನೇ ಗುರುವಾರ ಬ್ಯಾಂಕಿನ ಆಫೀಸಿನಲ್ಲಿ ಹಿರಂಗವಾಗಿ ಹರಾಜು ಮಾಡುವುದೆಂದು ರೂಪಾಯಿ ೧೧೧/೬ಲ್ಲು ಬ್ಯಾಂಕಿಗೆ ಬರಬೇಕಾದ ಅಸಲು ಮತ್ತು ವಡ್ಡಿ ರೂಪಾಯಿ ೬೭–೦–೩ ಪಾವತಿ ಉಳಿದ ರೂಪಾಯಿ ೬೬–೧೩–೧೦ ಅವರ ಲೆಕ್ಕಕ್ಕೆ ಅಮಾನತ್ತು ಇಟ್ಟಿದ್ದು ಸ್ವಕಾರ್ಯದಲ್ಲಿ ಕೊಂಡುಹೋಗಬೇಕಾಗಿಯೂ, ಅದಕ್ಕೆ ಮತ್ತೆ ನಿಶ್ಚಯಿಸಲ್ಪಟ್ಟಿದೆಯಾಗಿಯೂ ಈ ಮೂಲಕ ತಿಳಿಸಲಾಗುತ್ತದೆ

ನಿವೇದನೆ ಕೊಂಡುಹೋಗುವಾಗ ಈ ನೋಟೀಸಿನ ಬಿತ್ತರ ಕೊಡತಕ್ಕದ್ದು

ಲೋನು ನಂಬ್ರ ೬೩೨/೩೦, ಪಿ. ನ್ಯಾಸರಾಯರ ಮಗ ಪಿ. ಭೋಜರಾವು ಪಡವು ಗ್ರಾಮ ಕುಲ್ಶೇಕರ ಪೋಸ್ಟ್ ದ. ಕ.

Canara Bank, Ltd.
Mangalore
23—3—1932

M. Mukund Kini,
for Secretary

+ + + +

ಶಾಲಿವಾಹನಶಕೆ ೧೮೫೨ನೆಯ ಪ್ರಜೋತ್ಪತ್ತಿ ಸಂವತ್ಸರದ ಫಾಲ್ಗುಣ ಬ ೪ ಶನಿವಾರದಿಂದ ಪ್ರಜೋ. ಸಂ॥ರದ ಫಾಲ್ಗುಣ ಬ ೧೧ ಶುಕ್ರವಾರದ ವರೆಗಿನ ಪಂಚಾಂಗ

(೧೯೩೧ನೆಯ ಮೀನ – ಸುಗ್ಗಿ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯಾಸ್ತ	ಸೂರ್ಯ ಉ	ಅಸ್ತ
26	ಶನಿ	೪	೪ ೩೩	ವಿಶಾಖಾ	೨೦	೩ ೧೩	6 33	6 41
27	ರವಿ	೫	೩ ೨	ಅನುರಾಧಾ	೧೩	೩೧ ೧೪	6 33	6 41
28	ಸೋಮ	೬	೫೪ ೩೧	ಜ್ಯೇಷ್ಠಾ	೧೪	೧ ೧೫	6.32	6 41
29	ಮಂಗಳ	೮	೫೧ ೨೯	ಮೂಲಾ	೧೨	೨ ೧೩	6 3	6.41
30	ಬುಧ	೯	೪೯ ೪೪	ಪೂ ಷಾ	೧೧	೧ ೧೭	6,31	6 41
31	ಗುರು	೧೦	೪೯ ೨	ಉ ಷಾ	೧೧	೧೩ ೧೪	6 30	6 41
1	ಶುಕ್ರ	೧೧	೪೯ ೩೨	ಶ್ರವಣಾ	೧೨	೪೩ ೧೯	6 29	6.4

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ (ಶಾಖ) Maximum ಹೆಚ್ಚಿನದು		Rainfall ಮಳೆ ಒಂದು ದಿನದ ಮಳೆ	ಜುಮಲಾ ಮಳೆ
	Maximum ಹೆಚ್ಚಿನದು	Minimum ಕಡಿಮೆ		
11	89— 1	74— 9	—	—
12	87— 6	74— 8	—	—
13	87— 6	75— 1	—	—
14	87— 7	74— 8	—	—
15	87— 8	76— 5	—	—
16	87 9	6 9	—	—
17	88— 4	74— 9	—	149-96

ಮಂಗಳೂರಿನ ಪೇಟೆ ಧಾರಣೆ

ಜಿನಸು	ಇಂದ ರೂ	ಆ	ವರೆಗೆ ರೂ	ಆ
ಹೊಸ ರಾಶಿ ಅಕ್ಕಿ	3	1	4—	
ಹೊಸ ಮುಸ್ಕಿ	4—		4—	
ಹೊಸ ಗುಡ್ಡ	3	14	4	1
ಹೊಸ ಸುಗ್ಗಿ	3	0	3—14	
ಊರ ಅನ್ನಲ್ ಬೆಲ್ತಿಗೆ	4 — 8		5—	
ರಂಗೂನು ಬೆಲ್ತಿಗೆ ಗೋಣಿ ೧ಕ್ಕೆ		14	8—	
ಎಳ್ಳು ರುಬೆಲ್ತಿಗೆ ಮುಡಿ ೧ಕ್ಕೆ	4—		4—1	
ಗೋಧಿ ಗೋಣಿ ೧ಕ್ಕೆ	9— 8		12— 8	
ಸಿಂಗಲ್ ಗೋಣಿ ೧ಕ್ಕೆ	12— 0		12	8
ಹುರುಳಿ ಗೋಣಿ ೧ಕ್ಕೆ	6— 8		— 0	
ಕಡಲೆ ಗೋಣಿ ೧ಕ್ಕೆ	8— 8		14— 8	
ತೊಗರಿಬೇಳೆ ಗೋಣಿ ೧ಕ್ಕೆ	13— 8		11— 0	
ಉದ್ದು ಗೋಣಿ ೧ಕ್ಕೆ	11	8	13—	
ಹೆಸರು ಗೋಣಿ ೧ಕ್ಕೆ	10— 4		11—	
ಊರು ಬೆಲ್ಲ ಖಂಡಿ ೧ಕ್ಕೆ	27— 8		3	
ಉಪ್ಪು ಗೋಣಿ ೧ಕ್ಕೆ	4—14		4—14	
ಬೂದು ಖಂಡಿ ೧ಕ್ಕೆ	60—		6—	
ದೊಡ್ಡ ಹಿಂಡಿ ಖಂಡಿ ೧ಕ್ಕೆ	27— 8		28— 0	
ಎಳ್ಳಿಂಡಿ ಖಂಡಿ ೧ಕ್ಕೆ	2 — 8		6— 4	
ದೊಡ್ಡ ಎಣ್ಣೆ ಮುಡಿ ೧ಕ್ಕೆ	5 — 14		6— 4	
ಎಳ್ಳೆಣ್ಣೆ ಮುಡಿ ೧ಕ್ಕೆ	6 —12		—	
ತೆಂಗಿನೆಣ್ಣೆ ಬಟ್ಟಿಗೆ ೧ಕ್ಕೆ	4— 7		8—14	
ಹೊಂಬಳ ಕಸ್ತೂರಿ ಮುಡಿ ೧ಕ್ಕೆ	4—		4— 3	
ಹೊಸ ತೆಂಗು	4— 0		5—	
ಸಾಸಿವೆ ಮುಡಿ ೧ಕ್ಕೆ	— 8		6— 0	
ಮೆಣಸು ರಾಶಿ ಖಂಡಿ ೧ಕ್ಕೆ	21— 8		2—	
ಕಾಳುಮೆಣಸು ಖಂಡಿ ೧ಕ್ಕೆ	170— 0		18 —	
ಮೆಂತ್ಯೆ ಮುಡಿ ೧ಕ್ಕೆ	27— 0		28—	
ಜೀರಿಗೆ ಮುಡಿ ೧ಕ್ಕೆ	4— 6		4—12	
ಕಲ್ಲು ಖಂಡಿ ೧ಕ್ಕೆ	3—0		36— 0	
ಕಾಯಿ ಹಗಡು ಮುಡಿ ೧ಕ್ಕೆ	12— 0		2— 4	
ಕಾಯಿ ಹುತ್ತರೆಗೆಳು ಮುಡಿ ೧ಕ್ಕೆ	18— 0		16—0	
ಹುರಿಬಕ್ಕೆ ಸೇರು ೧ಕ್ಕೆ	14— 8		14—1	
ಹುಚ್ಚೆಳ್ಳು ಹಗಡು ಮುಡಿ ೧ಕ್ಕೆ	1— 0		12— 8	
ಎಣ್ಣೆ ೧ಕ್ಕೆ	17—13		17—14	
ಹುಣಸೆ ಹುಳಿ ಖಂಡಿ ೧ಕ್ಕೆ	30—		—	
ಕಪ್ಪು ರಾಶಿ ಖಂಡಿ ೧ಕ್ಕೆ	875—		400 —	
ಹಳೆ ಅಡಿಕೆ	180—		2)5—	
ಹೊಸ ಅಡಿಕೆ	140—		145—	

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್. Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡಿಗೆರೆ, ಚಾರ್ಮಾಡಿಘಾಟ್ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವರೆಗೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ ಬಂಟವಾಳ ಮಾರ್ಗವಾಗಿ ಸಾಯಂಕಾಲ 4 30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿದ್ದು

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗಡಿ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಧರ್ಮಸ್ಥಳ ... 1 30ಕ್ಕೂ, ಬೆಳ್ತಂಗಡಿ 1 45 ಸಾಯಂಕಾಲ 4 30ಕ್ಕೆ ಮಂಗಳೂರಿಗೆ ತಲುಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು, ಮಲಬಾರು ಕಣ್ಣನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ... ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ ... 12ಕ್ಕೆ ಮೈಸೂರು ಗಡಿಗೂ ... ಸುಮಾರು 2 ಗಂಟೆಗೆ ಮೂಡಿಗೆರೆಗೂ ... ಗಂಟೆಗೆ ಚಿಕ್ಕಮಗಳೂರಿಗೂ ... ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ... ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ... ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ... ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 6 ಘಂಟೆ ... ಬೆಂಗಳೂರು, ... ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲವಾಗಿ[illegible]

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 1 ಘಂಟೆಗೆ ಕಡೂರಿಗೆ ಸೇರಿ ... ಕಡೆಯಿಂದ 12 ಘಂಟೆಗೆ ... ಮೈಲ್ ಟ್ರೈನಿನಲ್ಲಿ ... ವಗೈರೆ ಕಡೆಗಳಿಗೂ ... ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ... ಅನುಕೂಲವಾಗಿದೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೆ ಮೆನೇಜಿಂಗ್ ಪ್ರೊಪ್ರೈಟರರಿಗೆ ಬರೆದುಕೊಳ್ಳಬಹುದು.

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ... ಉಡುಪಿಗೆ ತಲುಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲ್ಲಿಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾಪಿತವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲುಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗೆಕ್ಕೆ 12 ಗಂಟೆಗಳೊಳಗೂ ತಲುಪಬಹುದು **ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.**

Secretary

The Canara Public Conveyance Company Ltd., Mangalore

"ಬೈ ಇಂಡಿಯನ್"

Buy Indian.

"ಬೈ ಇಂಡಿಯನ್" "ಹಿಂದೀಯ ಮಾಲುಗಳನ್ನೇ ಪಡೆದುಕೊಳ್ಳಿ" ಎಂದು ಈಗ ದೇಶದೇಶಗಳ ಸ್ವದೇಶಾಭಿಮಾನಿಗಳು ಪ್ರಚಾರಕಾರ್ಯಗಳ ಮೂಲಕವೋ, ಭಾಷಣ ಬೋಧನೆಗಳ ಮೂಲಕವೋ ಹೇಳುತ್ತಲಿದ್ದಾರೆ. ಕಲ್ಕತ್ತೆಯಲ್ಲಿ ಈ ಬೈ ಇಂಡಿಯನ್ ಲೀಗ್ ಎಂಬುದು ಸ್ಥಾಪಿತವಾದ ಮೂರು ವಾರಗಳೊಳಗೆ ೨೦೦೦ ಮಂದಿ ಸದ್ಗೃಹಸ್ಥರು ಅದಕ್ಕೆ ಸೇರಿದರು. ನೂರುಗಟ್ಟಳೆ ವಕೀಲರೂ ವರ್ತಕರೂ ಅಲ್ಲಿಯ ಹಿಂದೀಯ ಮಾಲು ಪ್ರಚಾರಕ ಸಂಘಕ್ಕೆ ಸ್ತಂಭಗಳಂತಾದರು.

"ಬೈ ಇಂಡಿಯನ್" ಎಂದು ನಾವು ಬಾಯಿಯಲ್ಲಿ ಹೇಳಿ ಕುಳಿತರಾಗಲಿಲ್ಲ. ಪಂಡಿತ ಮದನಮೋಹನ ಮಾಲವೀಯರೆನ್ನುವಂತೆ ನಾವೂ ನಮ್ಮ ಸುತ್ತುಮುತ್ತಲಿನವರೂ ಸ್ವದೇಶಿ ಸಾಮಾನುಗಳನ್ನು ಪಡೆಯುವಂತಾಗಬೇಕು. ನಮಗೊಂದು ಕಷ್ಟವು ಬಂದು ಬಿಟ್ಟರೆ ನಾವು ಅದರ ಪರಿಹಾರಾರ್ಥವಾಗಿ ಹೇಗೆ ಅನುದಿನವೂ ಯತ್ನಿಸುವೆವೋ, ಹೇಗೆ ಆ ವಿಷಯವು ನಮ್ಮ ಸ್ಮರಣೆಯಲ್ಲಿ ಅನವರತವೂ ಅಂದರೆ ನಿಮಿಷನಿಮಿಷಕ್ಕೂ ತಳ್ಳರದ ಗಾಳಿಯನ್ನೆಬ್ಬಿಸುತ್ತದೆಯೋ, ಹಾಗೆ 'ಬೈ ಇಂಡಿಯನ್' ಮಂತ್ರವು ನಮ್ಮ ಸ್ಮರಣೆಯಲ್ಲಿ ನಿಮಿಷ ನಿಮಿಷಕ್ಕೂ ಪ್ರತಿಬಿಂಬಿಸುತ್ತಾ ಇರಬೇಕು. ಸ್ವದೇಶಿ ಪ್ರಚಾರಕ ಸಂಘದವರು ಈ ಕಾರ್ಯವನ್ನು ನಡೆಸುತ್ತಿರುವರಾದುದರಿಂದ ಅವರೇ ದುಡಿಯಲಿ, ತಾನು ನಿಂತು ಅವರ ಕಾರ್ಯದಲ್ಲಿ ಭಾಗವಹಿಸುವುದನಗತ್ಯವೆಂದು ತಿಳಿಯಕೂಡದು. "ಹನಿ ಕೂಡಿ ಹಳ್ಳ, ತೆನೆ ಕೂಡಿ ಬತ್ತ"ವೆಂಬಂತೆ ತಿಲಸಮಾನರಾಗಿರುವ ಪ್ರತಿಯೊಬ್ಬನೂ ತನ್ನಿಂದಾದಷ್ಟು ಒತ್ತಾಸೆಯನ್ನು ಮಾಡಿದರೆ, ಅಂತಹ ಕಣಮಾತ್ರ ಒತ್ತಾಸೆಗಳು ಒಟ್ಟುಗೂಡಿ ಮಹಮೇರು ಪರ್ವತದಂತಾಗಿ, ಒಂದು ವರುಷದಲ್ಲಿ ಕೈಗೂಡಿ ಬರುವ ಹಿಂದೀಯರ ಸೇವೆಯು ಆರು ತಿಂಗಳಲ್ಲಿ ಕೈಗೂಡದಿರದು. ಆದುದರಿಂದ ಈ ವಿಷಯದಲ್ಲಿ ಭಾರತವರ್ಷದ ಯಾವ ವ್ಯಕ್ತಿಯೂ ಅಸಡ್ಡೆಯನ್ನು ತೋರಿಸಲಡೆಯಿಲ್ಲ. 'ದೇಶವು ತನ್ನದು, ತಾನು ದೇಶ' ಎಂಬ ಭಾವನೆಯು ನಮ್ಮಲ್ಲಿನ ಪ್ರತಿಯೊಬ್ಬನಲ್ಲಿ ಹುಟ್ಟಿಗೊಂಡು ಹಿಂದೀಯ ಮಾಲುಗಳನ್ನೇ ಹಿಂದೀಯರು ಪಡೆದುಕೊಳ್ಳುವಂತೆ ಯತ್ನವಾಗಬೇಕು.

ಸಂಸಾರಿಗಳು. ಸಂಸಾರಿಗಳಾದ ಜನರೆಲ್ಲರೂ ತಮ್ಮ ಗೃಹವೆಚ್ಚಕ್ಕೆ ಬೇಕಾದ ಸಾಮಾನುಗಳೆಲ್ಲವನ್ನು ತರುವಾಗ ಅವುಗಳು ಸ್ವದೇಶಿ ಸಾಮಾನುಗಳೇ ಎಂದು ಜಾಗರೂಕತೆಯಿಂದ ನೋಡಬೇಕು. ತನ್ನ ಮನೆಯೊಳಗೆ ಬರುವ ಎಲ್ಲಾ ವಸ್ತುಗಳೂ ಸ್ವದೇಶೀಯರಿಂದಲೇ ತಯಾರಿಸಲ್ಪಟ್ಟವುಗಳಾಗಬೇಕೆಂಬ ಹಠವನ್ನು ತೊಡಬೇಕು. ಮನೆಯವರಿಗೆ ವಸ್ತ್ರವಸನಗಳನ್ನು ಪಡೆಯುವಾಗ ಅವುಗಳು ಸ್ವದೇಶಿಯೋ ಎಂದು ಮೊದಲು ವಿಚಾರಿಸಿಕೊಳ್ಳಬೇಕು. ಮಕ್ಕಳು ಮರಿಗಳಿಗೆ ಬೇಕಾಗುವ ಅಂಗಿ ಕುಪ್ಪಸಗಳನ್ನು ಕೊಂಡುಕೊಳ್ಳುವಾಗ ಅವುಗಳು ಸಂಪೂರ್ಣ ಸ್ವದೇಶಿಯೋ ಎಂದು ಪರಿಶೀಲಿಸಬೇಕು. ಮನೆಗೆ ತರುವ ಪೌಡರ್, ಸಾಬೂನು, ಸುಗಂಧದ್ರವ್ಯ, ಚೂರಿ ಕತ್ತರಿ, ಕಾಗದ, ಪುಸ್ತಕ ಮೊದಲಾದುವುಗಳೆಲ್ಲಾ ಸ್ವದೇಶಿಯೋ ಎಂದು ನೋಡಿಕೊಳ್ಳಬೇಕು.

ವರ್ತಕರು ತಾವು ಮಾರುವ ಸಾಮಾನುಗಳು ಸ್ವದೇಶಿಯೋ ಎಂದು ನೋಡಿಕೊಳ್ಳಬೇಕು. ದೇಶದಲ್ಲೆಲ್ಲಾ ಸ್ವದೇಶಿಯ ತುತ್ತೂರಿಯ ನಾದವು ಜನರ ಕಿವಿಯೊಳಗೆ ಹೊಕ್ಕು ಅವರನ್ನು ಕರ್ತವ್ಯದ ಸದ್ದಾರಿಗೆಳೆಯುತ್ತಿರುವಾಗ, ಜನರು ಸ್ವದೇಶಿಯ ಒಡವೆಗಳಿಗೆ ಹೆಚ್ಚಿನ ಗಮನವನ್ನು ಕೊಡುತ್ತಾರೆಂಬ ಸಂಗತಿಯು ವರ್ತಕರಿಗೆ ವಿದಿತವಿರಬೇಕು. "ದೇಶೋದ್ಧಾರ ಕಾರ್ಯಭಾರವು ದೇಶದ ವರ್ತಕರ ಮೇಲೆ ಹೊಂದಿಕೊಂಡಿರುತ್ತದೆ"ಯೆಂದು ಮಹಾತ್ಮಾ ಗಾಂಧಿಯವರು ಹೇಳುತ್ತಾರೆ. ವರ್ತಕರ ಬೆಂಬಲವು ದೇಶಕ್ಕೆ ಲಭಿಸಿತೆಂದರೆ, ಮತ್ತೆ ಆ ದೇಶಕ್ಕೆ ಅಳಿಗಾಲವಿಲ್ಲವೆಂದು ಪ್ರತಿಯೊಬ್ಬ ದೇಶದುರೀಣರ ಖಚಿತಾಭಿಪ್ರಾಯವಿರುತ್ತದೆ. ಆದುದರಿಂದ ಸ್ವದೇಶಿ ಪ್ರಚಾರ ಕಾರ್ಯದಲ್ಲಿ ವರ್ತಕರು ಮನಧನಗಳನ್ನರ್ಪಿಸುವಂತಾಗಬೇಕು.

ವಿದ್ಯಾರ್ಥಿಗಳು ತಮ್ಮ ಉಡಿಗೆ ತೊಡಿಗೆಯಲ್ಲೂ, ನವ ಸಂಪ್ರದಾಯಾನುಸರಣೆಯಲ್ಲೂ ಸ್ವದೇಶಿಯನ್ನು ಮರೆಯದಿರಬೇಕು. ನಾವು ಪಡೆಯುವ ಲೇಖನಿ, ಮಸಿ, ಪೆನ್ಸಿಲು, ಕೊಡೆ ಮೊದಲಾದ ಎಲ್ಲ ಒಡವೆಗಳು ಸ್ವದೇಶಿಯವುಗಳೇ ಆಗಬೇಕೆಂಬ ಸ್ವಾವಲಂಬನವಾದ ಹಠತೊಟ್ಟುಕೊಳ್ಳಬೇಕು. ವಿದ್ಯಾರ್ಥಿಗಳು ರಾಜಕೀಯಾಂದೋಲನದ ಮಧ್ಯೆ ಹಾರುವುದು ವಿವೇಕಪರ ವರ್ತನೆಯಲ್ಲವೆಂದು ಬಹುಮಂದಿಗಳ ಅಭಿಪ್ರಾಯವಿದೆ. ಆದರೆ ಸ್ವದೇಶಿಯನ್ನು ಪ್ರೋತ್ಸಾಹಿಸದಿರಬಾರದೆಂದು ಆಜ್ಞೆಯು ಯಾರಿಂದಲಾಗಲಿಲ್ಲ. ಇಂಗ್ಲೆಂಡು ಅಮೇರಿಕಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು "ಸ್ವದೇಶಿ ಹಠ"ವನ್ನು ತೊಟ್ಟುಕೊಂಡು ಅದರ ಪ್ರಚಾರಾರ್ಥವಾಗಿ ಮಾಡುತ್ತಿರುವ ಕಾರ್ಯಕಲಾಪಗಳ ಭರವನ್ನು ನೋಡಿದರೆ ನಮ್ಮ ವಿದ್ಯಾರ್ಥಿಗಳು ತಲೆತಗ್ಗಿಸಬೇಕಾಗಿದೆ. ಒಂದು ಕ್ಲಾಸಿನಲ್ಲಿ ಒಬ್ಬ ವಿದ್ಯಾರ್ಥಿಯು ಸ್ವದೇಶಿ ಹಠದವನಾದರೆ ಸಾಕು, ಅವನ ನಿಶ್ಚಲವಾದ ಹಠವು ಇಡೀ ಕ್ಲಾಸಿನಲ್ಲಿ ಪರಿಣಾಮವನ್ನುಂಟುಮಾಡದಿರಲಿಕ್ಕಿಲ್ಲ.

ಸ್ತ್ರೀಯರು ತಾವು ವೆಚ್ಚಮಾಡುವ ಹೇರಳ ಹಣವನ್ನು ಸ್ವದೇಶಿಗಾಗಿಯೇ ವ್ಯಯಮಾಡಬೇಕೆಂಬ ದೃಢಮನಸ್ಕರಾಗಬೇಕು. ತಮ್ಮ 'ಹೇರ್‌ಪಿನ್' ಮೊದಲು ವಸ್ತ್ರಾಭರಣಗಳೆಲ್ಲ ಸ್ವದೇಶಿಯೇ ಆಗಬೇಕೆಂದು ಅವರು ತಮ್ಮ ಮೇಲ್ವಿಚಾರಕರಿಗೆ ಹೇಳುತ್ತಿರಬೇಕು. ಸ್ವದೇಶಿ ಸೀರೆ ಕುಪ್ಪಸಗಳು ನೋಟಕ್ಕೆ ಅಸಹ್ಯಕರವಾಗಿದ್ದರೂ ಅವುಗಳಿಗೆ ಈಗಿನ ಕಾಲದಲ್ಲಿ ಮಹಾ ಗೌರವವು ಬಂದೊದಗಿರುವುದರಿಂದ ಅವುಗಳನ್ನುಡುವುದು ಒಂದು ಅಭಿಮಾನಾಸ್ಪದ ಸಂಗತಿಯೆಂಬುದನ್ನು ಪ್ರತಿ ಮಹಿಳೆಯೂ ಭಾವಿಸಬೇಕು. ಪುರುಷರು ವೆಚ್ಚಮಾಡುವುದಕ್ಕಿಂತ ಹೆಚ್ಚಿನ ಹಣವನ್ನು ಸ್ತ್ರೀಯರು ತಮ್ಮ ಉಪಸಾಹಿತ್ಯಗಳಿಗಾಗಿ ವೆಚ್ಚಮಾಡುತ್ತಾರಾದುದರಿಂದ ಸ್ವದೇಶಿ ಪ್ರಚಾರಕಾರ್ಯದಲ್ಲಿ ಅವರು ಮನಸ್ಸಿಟ್ಟರೆ ಹಿಂದೂದೇಶವು ತ್ವರಿತದಲ್ಲೇ ಉನ್ನತಾವಸ್ಥೆಗೆ ಬರುವುದರಲ್ಲಿ ಸಂದೇಹವಿಲ್ಲ. ಮನೆಗೆಲಸಗಳು ತೀರಿದನಂತರ ತಮ್ಮ ತಮ್ಮೊಳಗಾಗುವ ಮಾತುಕತೆಗಳಲ್ಲಿ ಸ್ವದೇಶಿ ಪ್ರಚಾರದ ವಿಷಯಗಳನ್ನು ಸೇರಿಸಿಕೊಂಡರೆ ಅದರಿಂದ ತಂತಮ್ಮೊಳಗೆ ಎಂತು ಚಿಕ್ಕ ಪ್ರಚಾರವಾದಂತಾಗುತ್ತದೆ.

ಹೊಸತಾಗಿ ವ್ಯಾಪಾರಕ್ಕಿಳಿಯುವವರು ತಮ್ಮ ಅಂಗಡಿಗಳಲ್ಲಿ ಸ್ವದೇಶಿ ಸಾಮಾನುಗಳನ್ನೇ ವಿಕ್ರಯಿಸಬೇಕು. ಕೆಲವರಿಗೆ ಸ್ವದೇಶಿ ಸಾಮಾನುಗಳು ಮಾರಲ್ಪಡುವ ಕಾರ್ಖಾನೆಗಳ ವಿಳಾಸಗಳು ಗೊತ್ತಿಲ್ಲದಿರುವುದರಿಂದ ಬಹಳ ತೊಡಕುಂಟಾಗುತ್ತದೇನೋ ಖರೆ. ಅಂತಹ ವಿಘ್ನವನ್ನು ಹೋಗಲಾಡಿಸುವ ಬಗ್ಗೆ ಅವರು ತಮ್ಮ ಪಟ್ಟಣದಲ್ಲಿ ಸ್ಥಾಪಿತವಾಗುವ 'ಬೈ ಇಂಡಿಯನ್ ಲೀಗಿ'ನ ಅಧಿಕಾರಿಗಳಾಗಿರುವವರೊಡನೆ ವಿಚಾರಿಸಿದಲ್ಲಿ ಸ್ವದೇಶಿ ಮಾಲುಗಳ ಕುರಿತು ಬೇಕಾಗುವ ಎಲ್ಲಾ ಮಾಹಿತಿಗಳು ಸಿಗುತ್ತವೆ. ಸ್ವದೇಶಿಯು ಜನನಗೊಂಡು ಇನ್ನೂ ಕೆಲವೇ ದಿನಗಳಲ್ಲಿಯೇ ರಕ್ಕಸನ ಶಿಶುವಿನಂತೆ ಬೆಳೆಯುತ್ತಿದೆ ಎಂದಾಗ ಇಂತಹ ಸುಸಂದರ್ಭವನ್ನು ಹಣಗಾರರೂ, ವಾಣಿಜ್ಯಕಲಾಕುಶಲರೂ ಕಳಕೊಳ್ಳದೆ ತಮ್ಮ ಹಣವನ್ನೂ ಕೌಶಲ್ಯವನ್ನೂ ಕೇಂದ್ರೀಕರಿಸಿ ಸ್ವದೇಶಿ ಸಾಮಾನುಗಳ ವಿಕ್ರಯಸ್ಥಾನಗಳನ್ನೇರ್ಪಡಿಸಿದರೆ ಬಹಳ ಶ್ರೇಯಸ್ಕರ. ಸ್ವದೇಶಿ ವಿಕ್ರಯಿತರು ನೋಟೀಸುಗಳ ಮೂಲಕವೋ ಪ್ರಕಟಣೆಯ ಮೂಲಕವೋ ಜಾಹೀರಾತು ಮಾಡಬೇಕು. ತಮ್ಮಲ್ಲಿರುವ ಸಾಮಾನುಗಳ ಪಟ್ಟಿಯನ್ನೂ ಅವುಗಳ ಬೆಲೆ ಮುಂತಾದ ಮಾಹಿತಿಗಳನ್ನೂ ಸಾರ್ವಜನಿಕರಿಗೆ ಸಾವತ್ರಿಕವಾಗಿ ತಿಳಿಯಪಡಿಸಿದರೆ ಅದರಿಂದ ತಮ್ಮ ವ್ಯಾಪಾರಕ್ಕೇನೆ ಬಹು ಪ್ರಯೋಜನವಿದೆಯೆಂದು ತಿಳಿಯಬೇಕು. ಆಯಾಯಾ ಪಟ್ಟಣದ ಬೈ ಇಂಡಿಯನ್ ಸಮಿತಿಯವರು ಸ್ವದೇಶಿ ಮಾಲು ಮಾರುವವರ ಪಟ್ಟಿಯ ಒಂದು ಕೋಶವನ್ನು ತಯಾರಿಸುತ್ತಲಿರುವರು. ಅದನ್ನನುಸರಿಸಿದರೆ ವರ್ತಕರಿಗೂ ಬಹಳ ಪ್ರಯೋಜನವಿದೆ. ಅಂತೂ ತಮ್ಮ ದೇಶಿಗರುಪಯೋಗಿಸುವ ಸಣ್ಣ ಸೂಜಿಯು ಕೂಡಾ ಸ್ವದೇಶೀಯವಾಗಿರಬೇಕೆಂಬ ಜತನವು ನಮ್ಮ ಜನರಲ್ಲುತ್ಪನ್ನವಾಗಬೇಕು.

ಸ್ವದೇಶಿ ಪ್ರಚಾರಕಾರ್ಯದ ಬಹುಭಾಗವು ಐಶ್ವರ್ಯವಂತರ ಕೈಯಲ್ಲೂ ಇರುತ್ತದೆ. ಸಿರಿವಂತರು ತಮ್ಮ ವಸ್ತ್ರವಸನಗಳ ಬೆಡಗಿಗೆ ಸೋತು ಹಣವ್ಯಯಮಾಡುವಾಗ ಸ್ವದೇಶಿಯ ನೆನಪನ್ನು ಮಾಡುತ್ತಿರಬೇಕು. ಮೋಟರಿನಿಂದಿಳಿದು ಮಳಿಗೆಯನ್ನು ಹೊಕ್ಕುವ ಮೊದಲು ತಾವು ಹಿಂದೆ ಬರುವಾಗ ಸ್ವದೇಶಿ ಸಾಮಾನುಗಳನ್ನೇ ತರುವೆವೆಂದು ದೃಢೀಕರಿಸಿಕೊಂಡು ಒಳ ಹೋಗಬೇಕು. ಕೆಲವು ಸಾಮಾನುಗಳು ಅಪರಿಹಾರ್ಯವಾಗಿ ಸ್ವದೇಶಿಯಾಗದಿದ್ದರೆ, ಅವುಗಳನ್ನು ಪಡೆದುಕೊಂಡಾದ ಮೇಲಾದರೂ ಅಂತಹ ಸ್ವದೇಶೀಯ ಸಾಮಾನುಗಳು ಬೇರೆಲ್ಲಾದರೂ ಸಿಕ್ಕಲಾರವೋ ಎಂದು ವಿಚಾರಿಸಿ ನೋಡಬೇಕು.

ಸ್ವದೇಶಿಯ ಸಾಮಾನುಗಳು ಉತ್ತಮತರದ್ದಲ್ಲ, ಅವುಗಳ ಉಪಯೋಗದಿಂದ ಹಾನಿಯಿದೆ ಎಂದು ಕೆಲವು ಅಜ್ಞಾನಿಗಳು ಹೇಳುತ್ತಿರುವುದಿದೆ. ಇಂತಹ ನೆವವು ದೇಶಮಾತೆಯ ಮೇಲಿನ ಅಸಡ್ಡೆಯಿಂದಲೇ ಹೊರಬರುತ್ತಿರುವುದೆಂದು ಹೇಳಲು ಸಂದೇಹವಿಲ್ಲ. ಅಸ್ವಸ್ಥದಲ್ಲಿ ಬಿದ್ದು ಪ್ರಾಣಾಪಾಯಕ್ಕೊಳಗಾದ ರೋಗಿಯು ತನ್ನ ಪ್ರಾಣರಕ್ಷಣೆಗಾಗಿ ವೈದ್ಯನು ಬಲವಂತಪಡಿಸಿ ಕೊಡುವ ಎಷ್ಟು ಕಹಿ ಪದಾರ್ಥವನ್ನಾದರೂ ಗುಳಕ್ಕನೆ ನುಂಗಿಬಿಡುವಂತೆ ಸ್ವದೇಶಿಯನ್ನು ಪಡೆದುಕೊಳ್ಳುವಾಗ ಪ್ರತಿ ಭಾರತೀಯನೂ ಹಿಂದುಮುಂದಾಲೋಚಿಸಬಾರದು. ಸ್ವದೇಶಿಯನ್ನೇ ಪಡೆದುಕೊಳ್ಳಬೇಕು ಎಂದರೆ ಸ್ವದೇಶಿ ವರ್ತಕನು ಹೇಳಿದ ಬೆಲೆ ಕೊಟ್ಟು, ಅವನಿತ್ತುದನ್ನು ಹೊತ್ತುಕೊಂಡು ಬರಬೇಕೆಂಬ ಅರ್ಥವಲ್ಲ. ಒಬ್ಬ ಸ್ವದೇಶಿ ವ್ಯಾಪಾರಿಯ ಬೆಲೆಯು ತನಗೆ ಪೂರೈಸುವುದಿಲ್ಲವೆಂದು ಇನ್ನೊಬ್ಬ ಸ್ವದೇಶಿ ವ್ಯಾಪಾರಿಯ ಬಳಿಗೆ ಹೋಗದೆ, ಸ್ವದೇಶಿಯ ಬೆಲೆಯು ಎಲ್ಲಾ ಕಡೆಗಳಲ್ಲಿಯೂ ಒಂದೇ "ಎಲ್ಲರ ಮನೆ ಬೆಲ್ಲದ ಪರಮಾನ್ನ"ವೆಂದು ಭಾವಿಸಿ ಆಶೆ ಬಿಡಕೂಡದು. ತೊಟ್ಟ ಸ್ವದೇಶಿವ್ರತವನ್ನು ಭಂಗಗೊಳಿಸಬಾರದು.

ಸ್ವದೇಶಿ ವ್ರತವು ಪವಿತ್ರವಾದುದು. ಪೂರ್ವಕಾಲದಲ್ಲಿ ಅನೇಕ ನಮೂನೆಯ ಆಚಾರ ವಿಚಾರಗಳೂ, ವ್ರತೋಪಾಸನೆಗಳೂ ಹಿಂದೀಯರಲ್ಲಿದ್ದುವು. ಆದರೆ ಅವುಗಳು ತೀರಿಕೊಂಡು ಬರುತ್ತಿರುವ ಈ ಕಾಲದಲ್ಲಿ ನಮಗೆ ಸ್ವದೇಶಿ ವ್ರತ ಒಂದೇ ಮೋಕ್ಷ ಸಾಧನವು. ಈ ವ್ರತದಿಂದ ನಮಗೆ ಲಭಿಸುವುದೇನು?

(೧) ನಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಕಡಿಮೆಯಾಗುತ್ತದೆ

(೨) ನಮ್ಮ ಜನರಲ್ಲಿ ಕೈಗಾರಿಕೆಯು ಕಲೆಯು ಅಭಿವೃದ್ಧಿಗೊಳ್ಳುತ್ತದೆ

(೩) ನಮ್ಮ ಜನರಲ್ಲಿನ ದಾರಿದ್ರ್ಯವು ನಾಶವಾಗುತ್ತದೆ

(೪) ಕೋಟಿಗಟ್ಟಲೆಯಲ್ಲಿರುವ ಹಣಗಳು ಉದ್ಧರಿಸಲ್ಪಡುತ್ತವೆ

(೫) ಮಹಾತ್ಮಾ ಗಾಂಧಿಯ ಮಾರ್ಗದ ಸ್ವರಾಜ್ಯವು ಲಭಿಸುತ್ತದೆ

ಬಹುತರದಿಂ ಬಳಲುತ್ತಿರುವ ಜನವರನ್ನು ಬದುಕಿಸುವುದೇ ತನ್ನ ಜೀವನ ಕರ್ತವ್ಯ, ಬಡವರು ಹೊಂದ ತಿಂದುಳ್ಳ ಸುಖದಿಂದಿರುತ್ತಾರೋ, ಅಲ್ಲಿಯೇ ಸ್ವರಾಜ್ಯ ಸ್ಥಾಪನೆಯಾಯಿತೆಂದು ಮಹಾತ್ಮಾ ಗಾಂಧಿಯವರು ದಾರಿದ್ರ್ಯ ನಾಶಕ್ಕಾಗಿಯೇ ತಮ್ಮ 'ದರಿದ್ರನಾರಾಯಣ ಸೇವಾ' ವ್ರತವನ್ನು ಧರಿಸಿದ್ದಾರೆ. ಅಲ್ಲದೆ ಲಂಗೋಟಿಯನ್ನುಟ್ಟು ಲೋಕಕ್ಕೆ ದೇಶದ ನೆಮ್ಮದಿಯನ್ನು ತಪ್ಪಿಸಬೇಕೆಂಬ ಆದರ್ಶವು ಅವರಿಗಿಲ್ಲ. ಅವರಾದರ್ಶವಾದ ಸ್ವರಾಜ್ಯವು ಲಭಿಸಬೇಕಾದರೆ ಅವಶ್ಯ ನಮ್ಮಲ್ಲಿನ ದಾರಿದ್ರ್ಯವು ನಾಶಹೊಂದಬೇಕಾದರೆ ಭಾರತೀಯರು ಸ್ವದೇಶಿವ್ರತಧಾರಿಗಳಾಗುವುದೇ ಪರಮೋಪಾಯವು.

ತಂಬಾಕು ಸೇವನೆಯ ಅಭ್ಯಾಸವುಳ್ಳವರೂ ಡಾಕ್ಟರರನ್ನು ಪದೇ ಪದೇ ಆಶಿಸುವವರೂ, ತಮ್ಮ ಹಾಸ್ಯ ಮಾಡಲು ಸ್ವಲ್ಪ ಜಾಗ್ರತೆಯನ್ನಿಟ್ಟರೆ ಸಿಗರೇಟುಗಳಿಗಾಗಿ ವೆಚ್ಚವಾಗುವ ಕೋಟಿಗಟ್ಟಳೆ ರೂಪಾಯಿಯೂ, ಡಾಕ್ಟರರ ಮದ್ದಿಗೆ ವ್ಯಯವಾಗುವ ಮಿಲಿಯಗಟ್ಟಳೆ ಹಣವೂ ಹಿಂದೂದೇಶದಲ್ಲಿ ಉಳಿಯಲಾಯಿದೆ. 'ಬೈ ಇಂಡಿಯನ್' ಮಂತ್ರವನ್ನು ಕೇಳದೆ ಹಿಂದೀಯರೆಲ್ಲರೂ ಪ್ರಥಮದಲ್ಲಿ ಎಲ್ಲಕ್ಕೆ ಸಾಮಾನಿಗಾಗಿ ಅಂದರೆ ಸಾಬೂನು, ಸಿಗರೇಟ್, ಬಿಸ್ಕಿಟ್‌ಗಳಿಗೆ ವ್ಯಯವಾಗುವ ಹಣವನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಒಂದೇ ಸಾಬೂನಿಗಾಗಿ ಹಿಂದೂಸ್ಥಾನವು ವರ್ಷಕ್ಕೆ ೧,೬೬,೬೮,೪೦೦ ರೂಪಾಯಿಗಳನ್ನು ಹಿಂದೂದೇಶದಿಂದ ಹೊರದೂಡುತ್ತದೆಂದರೆ ಎಂತಹನಿಗೂ ಆಶ್ಚರ್ಯವಾಗದಿರದು. ಈಗೀಗ ಬೆಂಗಳೂರು ಗವರ್ನಮೆಂಟು ಸೋಪ್ ಫ್ಯಾಕ್ಟರಿಯಲ್ಲೂ, ಕಲ್ಲಿಕೋಟೆ ಕೇರಳ ಸೋಪ್ ಇನ್ಸ್‌ಟಿಟ್ಯೂಟಿನಲ್ಲೂ ಅತ್ಯುತ್ತಮ ಸಾಬೂನುಗಳು ತಯಾರಾಗುತ್ತಿವೆ. ಹೀಗೆ ನಮಗೆ ಬೇಕಾದ ಎಲ್ಲಾ ಸಾಹಿತ್ಯಗಳೂ ನಮ್ಮ ದೇಶದಲ್ಲಿವೆ. ಹೊರಗೆ ನೋಡಬೇಕಾಗಿಲ್ಲ. ಮುಖ್ಯ ಬೇಕಾದುದು ದೇಶಾಭಿಮಾನ. ಅದಿಲ್ಲದಿದ್ದರೆ ಎಂತಹ ಮುಷ್ಟಿಗೆಯಲ್ಲೂ ಕಲ್ಲೇ ಸರಿ. ಆದುದರಿಂದ ಕರ್ನಾಟಕ ಬಂಧುಗಳೇ ಸ್ವದೇಶಿ ಮಾಲುಗಳನ್ನು ಕೊಂಡುಕೊಳ್ಳಿರಿ. ಸ್ವದೇಶಿಯು ರಾಜದ್ರೋಹವಲ್ಲ. ದೇಶದ ಭಂಡಾರವು.

— **ಸ್ವದೇಶಿಯ ಪ್ರಚಾರವು ಯಶಸ್ವಿಯಾಗಲಿ!**

ತಾ. ೧೬—ಎಮ್. ಎಲ್. ಸಿ.ಗೆ ಶಿಕ್ಷೆ.

ಮುಜಾಫರ್‌ಪುರದಲ್ಲಿ ಮಾಜಿ ಎಮ್. ಎಲ್. ಸಿಯರಾದ ಠಾಕೂರ್ ರಮಾನಂದ ಸಿಂಘರೆಂಬುವರು ಕಾಯಿದೆಭಂಗ ಪ್ರೋತ್ಸಾಹಕರಾಗಿದ್ದುದರಿಂದ ಸೆರೆಹಿಡಿಯಲ್ಪಟ್ಟರು. ಅಲ್ಲಿಯ "ಲೋಕ ಸಂಗ್ರಹ" ಎಂಬ ವಾರ್ತಾ ಪತ್ರಿಕೆಯ ಸಂಪಾದಕರಾದ ಪಂಡಿತ ಯಮುನ ಕರ್ಜಿ ಎಂಬವರು ನಾಲ್ಕು ತಿಂಗಳ ಶಿಕ್ಷೆಗೊಳಗಾದರು. ಇಪ್ಪತ್ತಕ್ಕೆ ಮಿಕ್ಕಿ ಕೈದುಗಳಾಗಿವೆ.

ಡಾ. ಹರ್ಡೀಕರರನ್ನು ಬಿಟ್ಟರು.

ಹಿಂದೂಸ್ಥಾನೀ ಸೇವಾದಲದ ಸಂಸ್ಥಾಪನಾ ಕಾರ್ಯದರ್ಶಿಗಳಾದ ಡಾ. ಹರ್ಡೀಕರರನ್ನು ಸೆರೆಯಲ್ಲಿಟ್ಟಿದ್ದರಷ್ಟೆ. ಅವರನ್ನು ಪೋಲೀಸ್ ಠಾಣೆಯ ಶರ್ತದ ಮೇಲೆ ಬಿಟ್ಟಿರುವರು.

ಶ್ರೀಮತಿ ಗಾಂಧಿಯವರಿಗೆ ಪುನಃ 'ಎ' ಕ್ಲಾಸ್.

ಶ್ರೀಮತಿ ಗಾಂಧಿಯವರನ್ನು ಬಾಡೋರ್ಲಿಯಲ್ಲಿ ಪುನಃ ಕೈದುಮಾಡಿ 'ಸಿ' ಕ್ಲಾಸು ಕೊಟ್ಟಿದ್ದರಷ್ಟೆ. ಅವರನ್ನು ಸಬರ್ಮತಿ ಸೆರೆಗೆ ಕೊಂಡೊಯ್ದರು. ಅಧಿಕಾರಿಗಳು ಯಾವುದೋ ಕಾರಣಾಂತರದಿಂದ ಅವರಿಗೆ ಒಮ್ಮೆ ಕೊಟ್ಟ ಸಿ ಕ್ಲಾಸನ್ನು ರದ್ದುಪಡಿಸಿ 'ಎ' ಕ್ಲಾಸನ್ನು ಕೊಟ್ಟರು. ಇವರನ್ನು ಏಕೆ ಬಂಧಿಸಿದುದೆಂಬ ವಾರ್ತೆ ಈಗ ಬಂದಿದೆ. ಕಂದಾಯ ನಿರಾಕರಣೆಯನ್ನು ಬೋಧಿಸುವುದಕ್ಕೂ, ಬಹಿಷ್ಕಾರ ಚಳವಳವನ್ನು ಮುಂದಾಗಿಸುವುದಕ್ಕೂ, ಇವರ ಮುಂದಾಳುತನದಿಂದ ಅಹ್ಮದಾಬಾದಿನಲ್ಲಿ ಒಂದು ಮೆರವಣಿಗೆ ಜರಗಿತಂತೆ. ಪೋಲೀಸರು ಚದರ ಹೇಳಿದರೂ ಅದಕ್ಕೊಪ್ಪದೆ ಹೋದುದರಿಂದ ಬಂಧಿಸಲಾಯಿತು.

೨೪ನೇ ಸರ್ವಾಧಿಕಾರಿ.

ಲಾಹೋರಿನಲ್ಲಿ ಬಂಧನಗಳೂ ಶಿಕ್ಷೆಗಳೂ ಜಪ್ತಿಗಳೂ ಆಗುತ್ತಲಿವೆ. ಕಳೆದ ವಾರ ಅಲ್ಲಿಯ ೨೪ನೇ ಡಿಕ್ಟೇಟರರನ್ನೂ ಇನ್ನಿತರ ಕೆಲಮಂದಿಗಳನ್ನೂ ಕೈದುಮಾಡಿದರು.

ರಾಷ್ಟ್ರಧ್ವಜದ ಚಿತ್ರಕ್ಕಾಗಿ ಸೆರೆ.

ಮಧುರೆಯಲ್ಲಿನ ತಿರುಮಲನಾಯ್ಕರ ಅರಮನೆಗಳಲ್ಲಿ ತಿರುಮಂಗಲದವರಾದ ನಟರಾಜ ಕೋನ್ ಎಂಬವರು ರಾಷ್ಟ್ರಧ್ವಜದ ಚಿತ್ರವನ್ನು ಪೆನ್ಸಿಲಿನಿಂದ ಬಿಡಿಸಿದುದಕ್ಕಾಗಿ ಕೈದುಮಾಡಲ್ಪಟ್ಟರು.

ತಾ. ೧೯—ಪಿಕೆಟರರಿಗೆ ಅನ್ನ ಹಾಕಿದ್ದಕ್ಕೆ ಶಿಕ್ಷೆ.

ಅಹ್ಮದಾಬಾದಿನಲ್ಲಿ ಮಾಯಾ ಭಾಯಿ ಪ್ರೇಮ್‌ಚಂದ್ ಎಂಬವರು ಪಿಕೆಟರರಿಗೆ ಅನ್ನ ಹಾಕಿದುದಕ್ಕಾಗಿಯೂ, ಪಿಕೆಟಿಂಗ್ ಮಂಡಲದ ಮೇಲ್ವಿಚಾರವನ್ನು ನೋಡಿದುದಕ್ಕಾಗಿಯೂ ೬ ತಿಂಗಳ ಕಠಿಣ ಸಜೆಗೂ ೩೦೦ ರೂಪಾಯಿ ಜುಲುಮಾನೆ ಅಥವಾ ೬ ವಾರಗಳ ಹೆಚ್ಚಿನ ಶಿಕ್ಷೆಗೂ ಗುರಿಯಾದರು. [illegible] ಗಾರರಿಗೆ ತಾನು ಭೋಜನವಿತ್ತುದು ಹೌದೆಂದು ಒಪ್ಪಿಕೊಂಡರು. ಈ ಬಗ್ಗೆ ಇನ್ನಿಬ್ಬರು ಕೊಂಗ್ರೆಸ್‌ವಾಲರಿಗೂ ಶಿಕ್ಷೆಯಾಗಿದೆ.

ವಿದ್ಯಾರ್ಥಿಗೆ ಶಿಕ್ಷೆ.

ಅಹ್ಮದಾಬಾದಿನ ಒಂದು ಮಿಲ್ಲಿನ ಪಿಜಂಟರೊಬ್ಬರ ಪುತ್ರ ಗುಜರಾತ್ ಕೋಲೇಜಿನ ವಿದ್ಯಾರ್ಥಿ ಶ್ರೀ ಗೋವಿಂದಲಾಲ್ ಶಾ ಎಂಬವರು ಪೋಲೀಸ್ ಠಾಣೆಗೆ ತಪ್ಪಿದುದಕ್ಕಾಗಿ ೩೦೦ ರೂಪಾಯಿ ಜುಲುಮಾನೆಗೂ ಅಥವಾ ೪ ತಿಂಗಳ ಕಠಿಣ ಸಜೆಗೂ ಒಳಗಾದರು.

ನಗರಾಧ್ಯಕ್ಷರಿಗೆ ವಿಮೋಚನೆ.

ಅಹ್ಮದಾಬಾದಿನ ಮುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಬಿ. ವಿ. ಮಾಲ್ವನ್‌ಕರ್ ಎಂಬವರು ಪ್ರತಿ ಶುಕ್ರವಾರ ಪೋಲೀಸ್ ಠಾಣೆ ಮಾಡಬೇಕೆಂದೂ, ಚಳವಳವನ್ನು ಪ್ರೋತ್ಸಾಹಿಸಬಾರದೆಂದೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಆಜ್ಞೆಯಿತ್ತು. ಮೊನ್ನೆ ಮೊದಲನೆ ಆಜ್ಞೆಯನ್ನು ರದ್ದುಪಡಿಸಿದರು. ಚಳವಳಕ್ಕೆ ಸೇರಬಾರದೆಂದಿದೆ.

ಕೈದು—ಶಿಕ್ಷೆ.

ಕಲ್ಕತ್ತದಲ್ಲಿ ೪ ಮಂದಿ ಪುರುಷರೂ ಇಬ್ಬರು ಸ್ತ್ರೀಯರೂ ಶಿಕ್ಷಿಸಲ್ಪಟ್ಟರು. ಧ್ವಜಾರೋಹಣಕ್ಕಾಗಿ ೯ ಮಂದಿಗಳನ್ನು ಸೆರೆಹಿಡಿದರು. "ಇಂಡಿಯನ್ ಟುಮಾರೋ" ಎಂಬ ಪತ್ರಿಕೆಯ ಸಂಪಾದಕರಾದ ಶ್ರೀ ಅಶ್ವಿನಿ ಕುಮಾರ್ ಗುಪ್ತರೆಂಬವರು ದ್ರೋಹಕರ ಸಂಗತಿಗಳನ್ನು ಪ್ರಕಟಿಸಿದುದಕ್ಕೆ ಕೈದುಮಾಡಲ್ಪಟ್ಟರು.

ಮದ್ದು ಗುಂಡು ಸಿಕ್ಕಿತು.

ಕಲ್ಕತ್ತದಲ್ಲಿನ ವಿದ್ಯಾಸಾಗರ ಕೋಲೇಜಿನ ಕೆಲವು ವಿದ್ಯಾರ್ಥಿಗಳಿಂದ ಆರು ಬಾಂಬುಗಳೂ ಒಂದು ರಿವಾಲ್ವರನ್ನು

ಸತ್ಯಾಗ್ರಹ ಸಮಾಚಾರ.

ಪೋಲೀಸರು ಹುಡುಕಿ ತೆಗೆದರು. ಜೋಗೇಂದ್ರನಾಥ ಗುಹರೆಂಬವರನ್ನೂ ಇನ್ನಿತರ ಕೆಲ ವಿದ್ಯಾರ್ಥಿಗಳನ್ನೂ ಕೈದುಮಾಡಿ ವಿಚಾರಿಸುತ್ತಲಿರುವರು.

ಮುದ್ರಣಾಲಯ ಕರ್ತರಿಗೆ ಜೈಲು.

ಕಲ್ಕತ್ತದ ಆರ್ಯ ಪ್ರಿಂಟಿಂಗ್ ವರ್ಕ್ಸಿನ ಪ್ರೊಪ್ರೈಟರರಾದ ಶ್ರೀ. ವಿಶ್ವನಾಥ ಹಲ್ದಾರ್ ಎಂಬವರನ್ನೂ ಇನ್ನಿಬ್ಬರು ಕಂಪೋಜಿಟರರನ್ನೂ ರಾಜದ್ರೋಹಕರ ಸಂಗತಿಯುಳ್ಳ ಕರಪತ್ರಗಳನ್ನು ಅಚ್ಚುಮಾಡಿದುದಕ್ಕಾಗಿ ಶಿಕ್ಷಿಸಲ್ಪಟ್ಟರು.

ತಾ. ೨೦—ಸಾರ್ಜಂಟನಿಗೆ ಹೊಡೆದುದು.

ಕಲ್ಕತ್ತದಲ್ಲಿ ಒಬ್ಬ ಸಾರ್ಜಂಟರು ಜನರನ್ನು ಚದರಿಸುತ್ತಿರುವಾಗ ರಾಮೃತಸಿಂಘ ಎಂಬವರು ಅವರಿಗೆ ಹೊಡೆದರೆಂಬ ಅಪಾದನೆಗೆ ಸಿಕ್ಕಿ ಆರು ವಾರಗಳ ಕಠಿಣ ಸಜೆಗೂ ೨೦ ರೂಪಾಯಿ ಜುಲುಮಾನೆಗೂ ಒಳಗಾದರು.

ಶಾಂತಿ ಸುನೀತಿಗಳ ಪಟ—ಜಪ್ತಿ.

ಕಲ್ಕತ್ತದಲ್ಲಿನ ಜಯಂತ ಪ್ರಕಾಶ್ ಎಂಬ ಮಾಸಿಕ ಪತ್ರಿಕೆಯಲ್ಲಿ ಸ್ಟೀವನ್ ದೊರೆಗಳನ್ನು ಗುಂಡು ಹೊಡೆದು ಕೊಂದ ಶಾಂತಿಘೋಸ್ ಮತ್ತು ಸುನೀತಿ ಚೌಧರಿ ಎಂಬ ಕೋಲಬಾಲಕಿಗಳ ಭಾವಚಿತ್ರಗಳನ್ನು ಪ್ರಕಟಿಸಿದುದಕ್ಕಾಗಿ ಪೋಲೀಸರು ಅದರ ಆಫೀಸನ್ನು ಜಪ್ತಿ ಮಾಡಿದರು. ಬ್ಲೋಕುಗಳನ್ನು ಕೊಂಡೊಯ್ದರು.

ಸ್ತ್ರೀ ಬಂಧನ.

ಆಕೋಲಾದಲ್ಲಿ ವಿದೇಶಿ ಸಕ್ಕರೆಯಂಗಡಿಗಳನ್ನೂ ವಸ್ತ್ರದಂಗಡಿಗಳನ್ನೂ ಸ್ತ್ರೀ ಸ್ವಯಂಸೇವಕರು ಪಿಕೆಟ್ ಮಾಡಿದರು. ಆರು ಮಂದಿ ಸ್ತ್ರೀಯರು ಬಂಧಿಸಲ್ಪಟ್ಟರು.

ಜಮೈತ್ ಉಲ್—ಉಲೆಮಾದ ಅಧ್ಯಕ್ಷರಾದ

ಮುಪ್ತಿ ಕಿಫಾಯತುಲ್ಲಾರವರು ಕಾಯಿದೆಭಂಗ ಮಾಡಿದುದಕ್ಕಾಗಿ ೧½ ವರುಷದ ಶಿಕ್ಷೆಗೊಳಗಾದರು. ಅವರನ್ನು 'ಎ' ಕ್ಲಾಸಿನಲ್ಲಿಟ್ಟರು. ಇವರ ನ್ಯಾಯವಿಚಾರಣೆಯ ಕುರಿತು ಪತ್ರಿಕೆಗಳು ಪ್ರಕಟಿಸಬಾರದಾಗಿ ಕೆಲವು ಮುಸ್ಲಿಮ್ ತಂಡಗಳು ರಂಪ ಮಾಡಿವೆ.

ಚಳವಳಸ್ಥಾನ.

ಮುಂಬಾಯಿ, ಬೆನಾರೆಸ್, ಮಥುರಾ, ಕೇರಳ, ಗೋದಾವರಿ, ತಿನ್ನವೆಲ್ಲಿ, ಕೃಷ್ಣ, ಮಸಲೀಪಟ್ಟಂ, ಲಾಹೋರ್, ಅಲ್ಲಹಾಬಾದ್, ಮೊದಲಾದ ಕಡೆಗಳಲ್ಲಿ ಚಳವಳವಿದೆ.

ತಾ. ೨೧—೨೬ನೇ ಡಿಕ್ಟೇಟರ್

ಮಧುರೆಯಲ್ಲಿ ೨೫ನೇ ಡಿಕ್ಟೇಟರನನ್ನು ಕೈದುಮಾಡಿದರು. ೨೬ನೇ ಡಿಕ್ಟೇಟರನು ಮುಂದು ಒಂದು ಚಳವಳನನ್ನು ಹೂಡಿದನು. ಅವನನ್ನೂ ಕೈದುಮಾಡಲಾಯಿತು.

ಎಂ. ಎಲ್. ಸಿಯ ಮನೆ ಜಪ್ತಿ.

ನಾಗಪುರದಲ್ಲಿ ಶ್ರೀ ಸೇಠ್ ಶಿವೋಲಾಲ್ ಎಂ. ಎಲ್. ಸಿಯವರ ಮನೆಯಲ್ಲಿ ಕೊಂಗ್ರೆಸ್ ಕೂಟವು ನಡೆಯುತ್ತದೆಂದು ತಿಳಿದು ಜಪ್ತಿ ನಡೆಸಲಾಯಿತು. ಡಿಕ್ಟೇಟರರನ್ನೂ ಇನ್ನಿತರ ಹದಿನೆಂಟು ಮಂದಿಗಳನ್ನೂ ದಸ್ತಗಿರಿ ಮಾಡಿದರು.

ಮದ್ರಾಸಿನಲ್ಲಿ ಗಡಿಬಿಡಿ.

ತಾ ೨೦ನೇ ದಿನ ಮದ್ರಾಸಿನ ಮೈಲಾಪುರದಲ್ಲಿ "ಅಗ್ರಹಾರ ವಶಿಮೂಣಂ" ಹತ್ತಿ ಸುಮಾರು ಸಾವಿರ ಜನರು ಸೇರಿದ್ದರು. ಜಾತ್ರೆಯು ಪ್ರಾರಂಭವಾಗುತ್ತದೆನ್ನುವಾಗ ಇಪ್ಪತ್ತೈದು ಮಂದಿ ಸ್ವಯಂಸೇವಕರು ರಾಷ್ಟ್ರಧ್ವಜ ಸಹಿತರಾಗಿ "ವಂದೇಮಾತರಂ ಗಾಂಧಿಕೀ ಜೈ" ಎಂದು ಜಯಘೋಷವನ್ನೆತ್ತುತ್ತಾ ಜನಸಂದಣಿಯ ಮಧ್ಯೆ ನುಗ್ಗಿದರು. ಕೊಂಗ್ರೆಸ್‌ವಾಲರು ತಮ್ಮೊಡನೆ ಸೇರಿಕೊಂಡದ್ದನ್ನು ಕಂಡ ಜನರು ಕಕ್ಕಾಬಿಕ್ಕಿಯಾದರು. ಕೊಂಗ್ರೆಸ್‌ವಾಲರ ಹಿಂದೆ ಪೋಲೀಸರು ಬಂದು ಲಾಠಿ ಪ್ರಹಾರಕ್ಕೊಳಗಾಗಬೇಕಾದೀತೆಂದು ಊಹಿಸಿ ಜನರು ಸಿಕ್ಕ ಸಿಕ್ಕ ಓಣಿಮೂಲೆಗಳಿಗೆ ಓಡಿದರು. ಸ್ವಲ್ಪ ಹೊತ್ತು ಕಳೆಯುತ್ತಲೇ ಜನರ ಊಹನಾನುಸಾರವಾಗಿ ಪೋಲೀಸರ ಫೌಜು ಜಾತ್ರೆಯ ಜನ ಮಧ್ಯೆ ಹೊಕ್ಕಿತು. ದಸ್ತಗಿರಿಗೆ ಪ್ರಾರಂಭವಾಯಿತು. ಅಷ್ಟರಲ್ಲಿ ಕಲ್ಲು, ಸೋಡ, ತೆಂಗಿನಕಾಯಿ, ಬಾಳೆಹಣ್ಣು ಮೊದಲಾದ ಸಾಮಾನುಗಳು ಪೋಲೀಸರ ಮೇಲೆ ಹಾರಲು ಪ್ರಾರಂಭ! ಇಬ್ಬರು ಪೋಲೀಸರಿಗೆ ಜಖಂ ಆಯಿತು. ಅನೇಕ ಮಂದಿಗಳಿಗೆ ಚಿಕ್ಕ ಚಿಕ್ಕ ಘಾಯಗಳಾದುವು. ಜಾತ್ರೆಯ ನೆನಪು ಹೋಯಿತು. ಗಡಿಬಿಡಿಯ ಸುದ್ದಿಯು ಹರಡಿತು. ಪೋಲೀಸ್ ಕಮಿಶನರು ಶಾಂತಗೊಳಿಸಿದರು. ಸ್ವಯಂಸೇವಕರನ್ನು ರಿಮಾಂಡಿನಲ್ಲಿಟ್ಟಿರುವರು.

ತಾ ೨೨—ಕೈದು.

ಅಹ್ಮದಾಬಾದಿನಲ್ಲಿ ಹನ್ನೊಂದನೇ ಡಿಕ್ಟೇಟರರಾದ ಶ್ರೀ ಮೋತಿಲಾಲ್ ಶರ್ಮರೆಂಬವರಿಗೆ ಆರು ತಿಂಗಳ ಕಠಿಣ ಸಜೆ ಐವತ್ತು ರೂಪಾಯಿ ಜುಲುಮಾನೆ.

ಪೋಲೀಸ ಪಹರೆ.

ಬಾಡೋರ್ಲಿ ತಾಲೂಕಿನಲ್ಲಿ ಕಂದಾಯ ನಿರಾಕರಿಸಿದ ಕೆಲವು ಹಳ್ಳಿಗಳಲ್ಲಿ ಪೋಲೀಸರು ಗಸ್ತು ಕಾವಲು ಮಾಡುತ್ತಿರುವರು. ಕಂದಾಯ ಕೊಡದೆ ಕೊಯ್ಲಿಗೆ ಬಂದ ಪೈರನ್ನು ಕೊಯ್ಯಬಾರದಂತೆ.

ಗಡಿಪಾರು

ಅಹ್ಮದಾಬಾದಿನ ಶ್ರೀಯುತ [illegible] ಎಂಬವರು ಪೋಲೀಸ್ ಠಾಣೆಯ ಮೇಲೆ ಒಂದು [illegible] ಒಂದು ತಿಂಗಳಿಂದಲೂ ಆ ಶರ್ತಕ್ಕೆ ತಪ್ಪದೆ ನಡೆಯುತ್ತಿದ್ದರು. ಅವರನ್ನು ಮೊನ್ನೆ [illegible] ಉದಯಪುರಕ್ಕೆ [illegible] ಬ್ರಿಟಿಷ್ ಅಧಿಪತ್ಯಕ್ಕೆ ಬರಬಾರದೆಂದು ಆಜ್ಞಾಪಿಸಲಾಗಿದೆ.

ತಮ್ಮನ ತಪ್ಪಿಗೆ ಅಣ್ಣನಿಗೆ ದಂಡ

ಅಹ್ಮದಾಬಾದಿನಲ್ಲಿ ಶ್ರೀಯುತ ಶಾಂತಿಲಾಲ್ ಬಾಹು ಎಂಬವರ [illegible] ಅವರು ದಂಡ ಕೊಡದೆ ಸೆರೆಗೆ ಹೋದರು. [illegible] ದಂಡವನ್ನು ವಸೂಲಿಮಾಡುವುದಕ್ಕಾಗಿ ಅವರ ಸಹೋದರ ಶಾಂತಿಲಾಲ್ ಬಾಹು ಇವರ ಮನೆಯಲ್ಲಿ ಜಪ್ತಿಮಾಡಲ್ಪಟ್ಟ [illegible] ಶಾಂತಿಲಾಲರು ಪೋಲೀಸರ ಮೇಲೆ ದಾವೆ ಹೂಡುವರೆಂದು ತಿಳಿಯಬಂದಿದೆ.

ಸ್ತ್ರೀಯರ ಉಪವಾಸ ವರ್ತಕರ ಕರುಣೆ

[illegible] ಇಬ್ಬರು ಸ್ತ್ರೀಯರು ವಿದೇಶಿ ವಸ್ತ್ರ ಮಾರುವವರ [illegible] ಹೋಗಿ ಕುಳಿತು, ವಿದೇಶಿ ವಸ್ತ್ರ ಮಾರುವುದಿಲ್ಲವೆಂದು [illegible] ಕೊಡುವ ತನಕ ತಾವು ಉಪವಾಸ ಬೀಳುವೆವೆಂದರು. ವರ್ತಕರಿಗೆ ಕರುಣೆ ತೋರಿ ಸ್ತ್ರೀಯರ [illegible] ಇದೇ ರೀತಿ ಅಹ್ಮದಾಬಾದಿನಲ್ಲಿಯೂ ಆಗಿದೆ.

೨೩ ಮಂದಿಗಳ ವಿಮೋಚನೆ.

[illegible] ೨೩ ಮಂದಿ [illegible] ರಾಜಕೀಯ ಕೈದಿಗಳನ್ನು ಬಿಟ್ಟಿರುವರು. ಇವರ ಶಿಕ್ಷಾವಧಿಯು ಮುಗಿಯಲೇ ಇಲ್ಲ.

ಬೇಂಕ್ ಜಪ್ತಿ.

[illegible] ಕೊಂಗ್ರೆಸ್ ಫಂಡುಗಳನ್ನು ಹುಡುಕುವುದಕ್ಕಾಗಿ ಪೋಲೀಸರು ಜಪ್ತಿ ನಡೆಸಿದರು. ಕೆಲವು ಮನೆಗಳನ್ನು ಜಪ್ತಿ ಮಾಡಿದರು.

ಮೆರವಣಿಗೆಯನ್ನು ನಿಲ್ಲಿಸಿದರು

[illegible] ಕೆಲವು ಮುಂದಾಳುಗಳು ಒಟ್ಟುಕೂಡಿ ಒಂದು ಮೆರವಣಿಗೆಯನ್ನು ಮಾಡಿದರು. ಅರ್ಧ ಮೆರವಣಿಗೆಯಾಗುವಾಗ ಪೋಲೀಸರು ಬಂದು ಚದರ ಹೇಳಿದರು. ಅವರು ಅದಕ್ಕೊಪ್ಪದಿರಲು ಮುಂದಾಳುಗಳನ್ನು ಕೈದುಮಾಡಿದರು.

ಸ್ತ್ರೀಯರ ಉಪವಾಸ—ಹಠ.

ಎಲಿಚ್ಪುರಿನಲ್ಲಿ ನಾಲ್ಕು ಮಂದಿ ಸ್ತ್ರೀಯರು ಕೈದುಮಾಡಲ್ಪಟ್ಟು ರಿಮಾಂಡಿನಲ್ಲಿದ್ದರು. ಅವರಿಗೆ ಹೊರಗಿನಿಂದ ಅನ್ನಾಹಾರವನ್ನು ತರಕೂಡದೆಂದು ಅಧಿಕಾರಿಗಳ ಆಜ್ಞೆಯಾಯಿತು. ಇಬ್ಬರು ಸ್ತ್ರೀಯರು ತಮಗೆ ಹಣ್ಣುಹಂಪಲುಗಳಲ್ಲದೆ ಬೇರೇನು ಬೇಡವೆಂದರು. ಇಬ್ಬರು ನಾವು ಜೈಲಿನೊಳಗೆ ಅಡಿಗೆಮಾಡುವುದಿಲ್ಲವೆಂದರು. ಅದರ ಬದಲಿಗೆ ನಿರಶನ ವ್ರತವನ್ನು ಮಾಡುವೆವೆಂದರು. ಡೆಪ್ಯುಟಿ ಕಲೆಕ್ಟರರು ಆ ಸ್ತ್ರೀಯರನ್ನು ಕಂಡು ಅವರಿಗೆ ಬೇಕಾದುದನ್ನು ಕೊಡಲು ಅಪ್ಪಣೆ ಇತ್ತರು.

ವಿವಿಧ ಸಮಾಚಾರಗಳು.

ಕಂದಾಯ ತೆರದವರಿಗೆ ನೋಟೀಸು

ಇಷ್ಟರತನಕ ಗುಜರಾಥದಲ್ಲೆಲ್ಲ ಕಂದಾಯ ವಸೂಲಿಯು ಸುಲಭದಿಂದಾಗಿದೆಯೆಂದು ಸರಕಾರದ ಹೇಳಿಕೆಯಿದೆ. ಆದರೆ ಒಂದೆರಡು ಕಡೆಗಳಲ್ಲಿ ಕಂದಾಯ ನಿರಾಕರಣೆಯ ಭಾವನೆಯು ಜನರಲ್ಲಿದೆ. ಕಂದಾಯ ಕೊಡದಿದ್ದವರ ಆಸ್ತಿಪಾಸ್ತಿ ಭೂಮಿಬದುಕುಗಳನ್ನು ಏಲಂ ಹಾಕೋಣಾಗಿ ಕಂದಾಯ ವಸೂಲಿಮಾಡಲಾಗುವದೆಂದು ಸರಕಾರವು ನೋಟೀಸು ಕೊಟ್ಟಿದೆ. ಬ್ರೋಚ್ ಜಿಲ್ಲೆಯಲ್ಲಿ ಕೆಲವು ರೈತರು ಕಳೆದ ಚಳವಳದಿಂದ ಮೊದಲುಗೊಂಡು ಇಂದಿನ ತನಕವೂ ಕಂದಾಯವನ್ನು ಕಟ್ಟಿರುವುದಿಲ್ಲ. ಇವರ ಮೇಲೆ ಕಠಿಣ ಶಾಸನವನ್ನು ಹೂಡಿ ಉಳಿದವರಿಗೆ ಪಾಠ ದೊರೆಯುವಂತೆ ಮಾಡಲಿದ್ದಾರೆ. ಸೂರತ್ತಿನಲ್ಲಿ ಗೇಣಿ ಭೂಮಿ ಮಾಡಿಕೊಂಡವರು ಅನೇಕರಿದ್ದಾರೆ. ಆದರೆ ಅವರು ತಪ್ಪಿಸುತ್ತಿರುವುದರಿಂದಲೇ ಅದು ಉಳಿದಿದೆ ಹೊರತು ಅದನ್ನು ಕೊಡಬಾರದೆಂಬ ಇರಾಧೆಯು ಜನರಿಗಿಲ್ಲವೆಂದು ಅಲ್ಲಿಯ ಅಧಿಕಾರಿಗಳು ಪ್ರಕಟಿಸಿದ್ದಾರೆ.

. . .

ಮುಂಬಾಯಿಯಲ್ಲಿ ನಷ್ಟ! ಅಧಿಕಾರಿಗಳಿಗೆ ಕಷ್ಟ

ಮುಂಬಾಯಿಗೆ ಲೋಥಿಯನ್ ಕಮಿಟಿಯು ಬಂದು ಇಳಿದ ದಿನ ಮೊದಲುಗೊಂಡು ಅಲ್ಲಿ ಹರತಾಳವಾಚರಿಸಲ್ಪಟ್ಟಿತು. ಎಲ್ಲಾ ಅಂಗಡಿಗಳು ಎಂಟು ದಿನಗಳ ಹರತಾಳವನ್ನಾಚರಿಸಬೇಕೆಂದು ಕೊಂಗ್ರೆಸ್‌ವಾಲರು ಕೇಳಿಕೊಂಡ ಮೇಲೆ ವರ್ತಕರು ಅಂಗಡಿ ತೆರೆಯಲಿಲ್ಲ. ವ್ಯಾಪಾರವು ನಿಂತು ಅಲ್ಲಿ ಹೇರಳ ನಷ್ಟವು ಬಂದುನಿಂತಿತು. ಇದನ್ನು ಕಂಡು ಅಲ್ಲಿಯ ಫೈನಾನ್ಸ್ ಸೆಕ್ರೆಟರಿಯವರು ವರ್ತಕರೆಲ್ಲರು ಅಂಗಡಿಗಳನ್ನು ತೆರೆದು ಚಳವಳವನ್ನು ನಿರ್ಮೂಲಿಸುವಂತೆ ಸರಕಾರಕ್ಕೆ ಸಹಾಯವನ್ನೀಯಬೇಕೆಂದು ಬರೆದರು. ಅಲ್ಲಿಯ ಹತ್ತಿಯ ವ್ಯಾಪಾರವು ಮುಚ್ಚಲ್ಪಟ್ಟಿತು. ಕೆಲವು ಸಾಹುಕಾರರು ಒಮ್ಮೆ ಅಂಗಡಿಗಳು ತೆರೆದಂತಾದರೂ ಏಕೋ ಪುನ ಮುಚ್ಚಿದರು. ಹತ್ತಿಯ ವ್ಯಾಪಾರವನ್ನು ಸುಸ್ಥಿತಿಗೆ ತಂದಿರಿಸಬೇಕೆಂಬ ಧ್ಯೇಯದಿಂದ ಸರಕಾರವು ಅನೇಕ ಹತ್ತಿ ವ್ಯಾಪಾರಿಗಳಿಗೆ ತನ್ನ ತರಿಕೆಯನ್ನು ಮಾಡಿತು. ಈಸ್ಟ್ ಇಂಡಿಯಾ ಕಾಟನ್ ಎಸೋಸಿಯೇಶನ್ ಎಂಬ ಹತ್ತಿಯ ಪ್ರಮುಖ ವ್ಯಾಪಾರಿಗಳು ಹೇಗೂ ಮಾಡಿ ಪ್ರಚಂಡ ಸ್ಥಿತಿಯನ್ನು ನಿಲ್ಲಿಸಬೇಕೆಂದು ಪತ್ರವ್ಯವಹಾರ ನಡೆಸಿತು. ಈ ಕಾಗದದ ಕುರಿತು ಆ ಸಂಸ್ಥೆಯವರು ಆಲೋಚಿಸಿ ಈಗಿನ ರಾಜಕೀಯ ವಿಚಾರದಲ್ಲಿ ತಲೆಯಿಡಲು ಯಾವ ಪ್ರಕಾರವೂ ಸಾಧ್ಯವಿಲ್ಲವೆಂದೂ ತಮ್ಮ ಸಂಸ್ಥೆಯು ಹತ್ತಿವ್ಯಾಪಾರದ ಸ್ಥಿತಿಯನ್ನು ಕಾಯುವುದಕ್ಕಾಗಿ ನಿರ್ಮಿಸಲ್ಪಟ್ಟಿತೆಂದೂ ಉತ್ತರವಿತ್ತರು. ಅಧ್ಯಕ್ಷರಾದ ಶ್ರೀ ಪುರುಷೋತ್ತಮದಾಸ್ ಠಾಕೂರ್‌ದಾಸರ ಈ ಆಲೋಚನೆಯು ಸರಿಯಾದುದೆಂದು ಇಬ್ಬರು ಆಂಗ್ಲೇಯರು ಕೂಡ ಒಪ್ಪಿದರು. ಈ ಸಂಸ್ಥೆಯ ಕೊನೆಯ ಉತ್ತರವೇನೆಂದರೆ ಕೊಂಗ್ರೆಸ್ಸು ಪ್ರಕಟಿಸುತ್ತಿರುವ ಬುಲ್ಲೆಟಿನುಗಳನ್ನು ನಿಲ್ಲಿಸಲು ಸರಕಾರವು ಶಕ್ತಿವಂತವಾಗಲಿಲ್ಲ. ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಕಣ್ಣೆದುರೆ ಬುಲ್ಲೆಟಿನುಗಳು ಹಂಚಲ್ಪಡುತ್ತಿವೆ. ಅವನ್ನು ನಿಲ್ಲಿಸದೆ ಸರಕಾರವು ನಮ್ಮ ಸಂಸ್ಥೆಯ ಹರತಾಳವನ್ನು ತಡೆಯಲು ಕೇಳುವುದೆಂತು?" ಇನ್ನು ಮುಂದೆ ಮುಂಬಯಿ ಮಾರ್ಕೆಟಿನಲ್ಲಿ ಎಲ್ಲ ಆಗಲಿದೆಯೆಂದು ನಿರೀಕ್ಷಿಸಲಾಗಿದೆ.

. . .

'ನನ್ನಂತೆ ಸೂರುಗಟ್ಟಲೆ ಶೌಕತಾಲಿಯವರಿರುವರು'

ಮೌಲಾನಾ ಶೌಕತಾಲಿಯವರು ಮುಸ್ಲಿಮರಿಗೊಬ್ಬ ಮುಂದಾಳಾಗಿ ಮುಂದೆ ಬಂದು ನಿಂತವರೆಂದು ತಿಳಿದ ಸಂಗತಿಯಷ್ಟೆ. ಮುಂಬಾಯಿಯಲ್ಲಿ ತಾ ೧೬ನೇ ದಿನ ಲೋಥಿಯನ್ ಕಮಿಟಿಯು ಅವರನ್ನು ಬರಮಾಡಿ ಮುಸ್ಲಿಮರ ಹಕ್ಕುಬಾಧ್ಯತೆಗಳ ಕುರಿತು ವಿಚಾರಿಸಿತು. ಮುಸ್ಲಿಮರಿಗೆ ಪ್ರತ್ಯೇಕ ಮತದಾನದ ಹಕ್ಕು ಎಂದಿಗಾಗಿಯೂ ಆಗತಕ್ಕದೆಂದು ಮೌಲಾನರ ಎಂದಿನ ಉದ್ಗಾರ. ಆಂಗ್ಲೋ ಇಂಡಿಯನರಿಗೂ ಕ್ರೈಸ್ತರಿಗೂ ಯುರೋಪಿಯನರಿಗೂ ಪ್ರತ್ಯೇಕ ಪ್ರಾತಿನಿಧ್ಯವೇ ಬೇಕೆಂದು ಶೌಕತಾಲಿಯವರು ಹೇಳಿದರು. ಇವರ ಮಾತಿನ ಸಾರಾಂಶದ ಭಾವವನ್ನರಿತ ಮೇಲೆ ಕಮಿಟಿಯು ಪ್ರಾಂತಿಕ ಸಭೆಯವರನ್ನು ಕೊಂಗ್ರೆಸ್ಸು ಮುತ್ತಿಕೊಂಡು, ವಿಶೇಷ ಶಕ್ತಿಯಿಲ್ಲದ ಗವರ್ನರರನ್ನು ಸೋಲಿಸಿದರೆ ನೀನೇನು ಮಾಡುವಿರಿ ಎಂದಿತು. ಶೌಕತಾಲಿಯವರು ಕೊಂಗ್ರೆಸ್ಸು ಹಾಗೆ ಮಾಡಲು ಶಕ್ತಿಯುಳ್ಳುದಲ್ಲವೆಂದು ನನ್ನ ಅನುಭವ. ಕೊಂಗ್ರೆಸ್ಸಿನ ವಿರೋಧನಾಗಿ ನಾನು ನಿಂತಿರುವೆನು. ನನ್ನನ್ನು ದಬ್ಬಾಳಿಸಬೇಕೆಂದು ಕೊಂಗ್ರೆಸ್ಸು ಯತ್ನಿಸಿತು. ಆದರೆ ಅದಕ್ಕಾಗಲಿಲ್ಲ. ಕೌನ್ಸಿಲು 'ಎಲ್ಲ ಸಭೆಗಳನ್ನೂ ಅಂಕಿತದಲ್ಲಿಟ್ಟುಕೊಳ್ಳಲು ಒಬ್ಬ ಶೌಕತಾಲಿಯು ಸಾಕೆಂದು ನಿಮ್ಮ ಭಾವನೆಯೋ?'' ಶೌಕತಾಲಿಯವರು ''ಅಲ್ಲ, ನನ್ನಂತೆ ನೂರುಗಟ್ಟಲೆ ಶೌಕತಾಲಿಗಳಿರುವರು. ನಾನು ಮಾತ್ರ ಒಬ್ಬ ಬುದ್ಧಿವಂತನಲ್ಲ.'' ಕೊನೆಗೆ ಲೋಥಿಯನ್ ದೊರೆಯವರು ಶೌಕತಾಲಿಯವರಿಗೆ ನಮಸ್ಕಾರವನ್ನಿತ್ತು ''ನಮಗೆ ಸಿಕ್ಕಿದ ಎಲ್ಲಾ ಸಾಕ್ಷಿಗಾರರಿಗಿಂತಲೂ ನೀವು ಬಹಳ ಚತುರರು'' ಎಂದು ಬಿಟ್ಟರು.

ಪೋಲೀಸನ ದೂರು ಸುಳ್ಳಾಯಿತು

ಕಳೆದ ತಿಂಗಳಲ್ಲಿ ಕಲಿಪಾದೋ ದಾಸ್ ಎಂಬ ಪೋಲೀಸನು ಕರ್ತವ್ಯವನ್ನು ನೆರವೇರಿಸುತ್ತಿದ್ದಾಗ ಶ್ರೀ ಸುಧೀರ ಕುಮಾರ್‌ದತ್ತ್ ಎಂಬವರು ಆತನಿಗೆ ಹೊಡೆದರೆಂಬ ಅಪಾದನೆಯು ಕೋರ್ಟಿಗೆ ಹೋಯಿತು. ಅಪಾದಿತರು ಮಾತ್ರ ತಾನು ಹಾಗೆ ಮಾಡಿದುದಿಲ್ಲವೆಂದೂ ತಾನು ಕಲ್ಕತ್ತಾ ಕೋರ್ಪರೇಶನಿನ ಡ್ರಿಲ್‌ಮಾಸ್ಟರನಾಗಿದ್ದು ಹುಡುಗರು ರಾಷ್ಟ್ರಧ್ವಜಗಳನ್ನು ಹಿಡಿದು ಗಲಾಟೆಯನ್ನೆಬ್ಬಿಸುತ್ತಿದ್ದಾಗ ಸಮಾಧಾನಪಡಿಸಿದೆನೆಂದೂ ಹೇಳಿದರು. ''ಈ ಅಪಾದನೆಯು ಎಷ್ಟು ಮಾತ್ರಕ್ಕೂ ಸತ್ಯವಲ್ಲ — ನಂಬತಕ್ಕದ್ದಲ್ಲ. ಇದು ಅಸಾಧ್ಯವಾದ ಸಂಗತಿ'' ಎಂದು ಪೋಲೀಸನ ದೂರನ್ನು ಮೆಜಿಸ್ಟ್ರೇಟರು ತಳ್ಳಿಹಾಕಿದರು.

. . .

ಪಿಶಾಚಿಯೊಡನೆ ಪ್ರಾಣವೂ ಹೋಯಿತು

ರಂಗೂನಿನಲ್ಲಿಯ ಕ್ವೆಟೋ ಎಂಬಲ್ಲಿ ಸಾನ್‌ಬಿಂಟ್ ಎಂಬವನೊಬ್ಬನು. ಪಾಪ, ಆತನ ಹೆಂಡತಿ ಮಾಸಿಗೆ ಪಿಶಾಚ ಹಿಡಿದಿತ್ತು. ಅದನ್ನು ಓಡಿಸಲು ಬಹು ಪ್ರಯಾಸಪಟ್ಟರು. ಸಾಧ್ಯವಾಗಲಿಲ್ಲ. ಕೊನೆಗೆ ಅವರ ಹಳ್ಳಿಯ ಸಮೀಪದ ಒಂದು ಕಡೆಯಲ್ಲಿದ್ದ ಉಪಜಿನ್ ಎಂಬ ಸನ್ಯಾಸಿಯೊಬ್ಬನ ಖ್ಯಾತಿಯನ್ನು ಕೇಳಿ ಪಿಶಾಚಬಾಧಿತಳಾದ ಸತಿಯನ್ನು ಆತನ ಬಳಿ ಕೊಂಡೊಯ್ದರು. ಸ್ತ್ರೀಯನ್ನು ಸನ್ಯಾಸಿಯು ಪರೀಕ್ಷಿಸಿದನು. ಪಿಶಾಚಿಯು ಉಪದ್ರವಕಾರಿಣಿ ಖಂಡಿತ'ವೆಂದನು. ಒಡನೆ ಒಂದು ಬೆತ್ತವನ್ನು ತಾನೂ ಕಸ್ಕೊಂಬ ಶಿಷ್ಯನೂ ಕೆಗೆದುಕೊಂಡನು. ಆ ಸ್ತ್ರೀಗೆ ಅವುಗಳಿಂದ ಇಬ್ಬರೂ ಸರಿಯಾಗಿ ಹೊಡೆದರು. ಗಂಡ ಮಹಾರಾಯನು ನೋಡುತ್ತ ನಿಂತನು. ಹೆಂಡತಿ ಆರ್ಭಟಿಸಿದಳು. ಪಿಶಾಚಿಯು ನೋವಿನಿಂದ ಮಾಸಿಯ ಬೆನ್ನಿನಲ್ಲಿ ರಕ್ತ ಸುರಿಯಿತು. ಪಿಶಾಚಿಯು ತಂಟೆಯಿಂದ ಪಾರಾಯಿತೆಂದು ಗಂಡನ ಭಾವನೆಯಾಯಿತು. ಮಾಸಿಯನ್ನು ಮನೆಗೆ ಕರೆದುಕೊಂಡು ಹೋಗಲಾಯಿತು. ಸನ್ಯಾಸಿಯು ತನ್ನ ಗೌರವಕ್ಕೆ ಕೂತನು. ಎರಡು ಮೂರು ದಿನಗಳು ಕಳೆದುವು. ಪೆಟ್ಟಿನ ನೋವಿನಿಂದ ಮಾಸಿಯು ಸ್ವರ್ಗವನ್ನು ಸೇರಿದಳು. ಈ ಸುದ್ದಿ ಪೋಲೀಸರಿಗೆ ತಿಳಿಯಿತು. ಗಂಡನನ್ನೂ ತಪಸ್ಸಿಗೆ ಕೂತ ಸನ್ಯಾಸಿಯನ್ನೂ ಎಬ್ಬಿಸಿ ಅವನನ್ನೂ ಅವನ ನಮ್ಮ ಶಿಷ್ಯನನ್ನೂ ಕೈದುಮಾಡಿದರು. ಪಿಶಾಚಿಯು ಪೋಲೀಸರಿಗೆ ಸಿಗಲಿಲ್ಲ. ಮಾಸಿಯೊಡನೆ ಪರಲೋಕದಲ್ಲಿ ಮಾಯವಾಯಿತು.

. . .

ಅತ್ತೆಗೆ 'ನಾಮಹಾಕಿದ ಅಳಿಯ'

ಮುಂಬಾಯಿಯದೊಂದು ಸುದ್ದಿ. ಮಿಸ್ಟರ್ ನ್ಯೂಕ್ ಲೋಡ್ ಎಂಬ ತರುಣರೊಬ್ಬರು. ಇವರು ಒಬ್ಬ ಪ್ರಸಿದ್ಧ ವಕೀಲರ ಮಗನಂತೆ. ಕಳೆದ ಒಕ್ಟೋಬರದಿಂದ ಈ ರಾಯರು ಊರಿನಲ್ಲಿದ್ದ ಎಲ್ಲಿಯೋ ಹೊರಟುಹೋಗಿದ್ದರು. ಮನೆಗೆ ಹೋಗುತ್ತಲೇ ಇದ್ದಿಲ್ಲ. ಇದಕ್ಕೊಂದು ಕಾರಣವಿದೆ. ಇವರಿಗೊಂದು ಅತ್ತೆ. ಆ ಅತ್ತೆಯ ಗಂಡ ಸ್ವರ್ಗಸ್ಥರಾಗಿದ್ದರು. ಅತ್ತೆಯ ಆಸ್ತಿಪಾಸ್ತಿಗಳ ಮೇಲ್ವಿಚಾರವನ್ನು ಲೋಡರು ನೋಡಿಕೊಳ್ಳುತ್ತಿದ್ದರು. ಆ ಅತ್ತೆಯ ಕೈಯಲ್ಲಿ ಸರಕಾರದ ೩೬೦೦೦ ರೂಪಾಯಿಯ ಪ್ರೊಮಿಸರಿ ನೋಟು ಇತ್ತು. ಇದರ ಮೇಲೆ ಮಿಸ್ಟರ್ ಲೋಡರಿಗೆ ಕಣ್ಣಾಯಿತು! ಇದನ್ನು ಹೇಗೂ ಮಾಡಿ ಅಪಹರಿಸಿಬಿಟ್ಟರು. ಅಪಹರಿಸಿದ ಸೊತ್ತು ಹೊರಬೀಳಬಾರದೆಂಬ ಆಲೋಚನೆಯಿಂದ ೩೬೦೦೦ ಎಂಬ ಅಂಕೆಗಳನ್ನು ೨೬೦೦೦ ರೂಪಕ್ಕೆ ತಂದಿಟ್ಟರು. ಅಂದಿನಿಂದ ಮೊದಲುಗೊಂಡು ಲೋಡ್ ಮಹಾಶಯರ ಪತ್ತೆಯಿಲ್ಲ. ಅತ್ತೆಗೆ ನಾಮವಿಕ್ಕಿದ ಸುದ್ದಿ ಅಳಿಯನ ಮುದ್ರಣೆಯಿಂದ ಹೇಗೋ ಹೊರಗೆ ಬಿತ್ತು. ಅಳಿಯನನ್ನು ಮುಂಬೈ ಪೋಲೀಸರು ಹುಡುಕಿಕೊಟ್ಟರು. ಹೈದರಾಬಾದಿನಲ್ಲಿ ಲೋಡರನ್ನು ಹಿಡಿದರು. ತನ್ನ ಮೇಲಿನ ಆರೋಪದ ಕುರಿತು ಲೋಡರು ಏನು ಹೇಳುತ್ತಾರೆಂದು ಕೇಳಿಬಂದಿಲ್ಲ.

. . .

ವಿದ್ಯಾರ್ಥಿಗಳಲ್ಲಿ ವಿನಂತಿ — ಹಿಂದೀ ಕಲಿಯಿರಿ

ಪ್ರಿಯರೇ,

ಇನ್ನು ಸ್ವಲ್ಪ ದಿನಗಳಲ್ಲಿಯೇ ಎಲ್ಲ ಶಾಲೆ ಕಾಲೇಜುಗಳ ಪರೀಕ್ಷೆಗಳು ಮುಗಿದು ನಿಮಗೆ ದೀರ್ಘ ರಜೆಯು ಸಿಕ್ಕುವುದು. ಈ ರಜಾ ಕಾಲವನ್ನು ನೀವು ಹೇಗೆ ಕಳೆಯಬೇಕೆಂದು ಎಣಿಸಿರುವಿರಿ? ನಿಮ್ಮಲ್ಲಿ ಹಲವರು ತಮ್ಮ ತಮ್ಮ ಸ್ವಗ್ರಾಮಗಳಿಗೆ ಹೊರಟು ಹೋಗುವಿರಿ. ಕೆಲವರು ಭ್ರಮಣಾರ್ಥ ಪರವೂರುಗಳಿಗೆ ಹೋಗುವಿರಿ. ಇನ್ನು ಕೆಲವರು ಇಲ್ಲಿಯೇ ಉಳಿಯುವಿರಿ. ಈ ರೀತಿ ಮೂರು ತರಹದ ವಿದ್ಯಾರ್ಥಿಗಳಲ್ಲಿ ನನ್ನದೊಂದು ನಮ್ರ ಸೂಚನೆಯಿರುವುದು.

ಪ್ರಕೃತದ ದೇಶದ ಆಂದೋಲನಗಳಲ್ಲಿ ಹಿಂದೀ ಪ್ರಚಾರವು ಎಷ್ಟೊಂದು ಪ್ರಬಲವಾಗಿರುವುದೆಂಬುದನ್ನೂ ಅದು ಯಾವ ರೀತಿಯಲ್ಲಿ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಲಿರುವುದೆಂಬುದನ್ನೂ ನೀವು ಚೆನ್ನಾಗಿ ಬಲ್ಲಿರಿ. ಮದ್ರಾಸಿನ ಹಿಂದೀ ಪ್ರಚಾರ ಸಭೆಯವರಿಂದ ನಡೆಸಲ್ಪಟ್ಟ ಕಳೆದ ಫೆಬ್ರವರಿಯ ಹಿಂದೀ ಪರೀಕ್ಷೆಗಳಲ್ಲಿ ದಕ್ಷಿಣ ಭಾರತದಿಂದ ೪೩೫೦ ಮಂದಿ ಪರೀಕ್ಷಾರ್ಥಿಗಳು ಕುಳಿತಿರುವರೆಂಬುದರಿಂದ ಮೇಲಿನ ಮಾತಿನ ಸತ್ಯಾಂಶವು ನಿಮಗೆ ವಿಶದವಾಗುವುದು. ಇದರ ಹೊರತಾಗಿ ಹಿಂದೀಯು ಭಾರತದ ರಾಷ್ಟ್ರಭಾಷೆಯಾಗಿ ಸರ್ವತೋಮುಖವಾಗಿ ಮಾನ್ಯವಾಗಿರುವುದರಿಂದ ಪ್ರತಿಯೊಬ್ಬ ಭಾರತೀಯನು ಅದರ ಜ್ಞಾನವನ್ನು ಸಂಪಾದಿಸುವುದು ಎಷ್ಟೊಂದು ಆವಶ್ಯಕ ಹಾಗು ಉಪಯುಕ್ತವಾಗಿರುವುದೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ನಮ್ಮ ದುರ್ಭಾಗ್ಯದಿಂದ ಇಂದಿನ ಶಿಕ್ಷಣಾಲಯಗಳಲ್ಲಿ ಹಿಂದೀಗೆ ಉಚಿತವಾದ ಸ್ಥಾನವು ದೊರೆಯದ ಕಾರಣ ನಾವು ನಿಮ್ಮ ವಿರಾಮ ಸಮಯವನ್ನು ಹಿಂದೀಯ ಅಭ್ಯಾಸಕ್ಕೆ ವಿನಿಯೋಗಿಸಲು ಕೇಳಿಕೊಳ್ಳಬೇಕಾಗುತ್ತದೆ. ಎಷ್ಟರ ತನಕ ಸಂಘಟಿತ ಶಕ್ತಿ ಅಂದರೆ ಸರಕಾರವು ಇದಕ್ಕೆ ತಕ್ಕ ಪ್ರೋತ್ಸಾಹವನ್ನೀಯುವುದಿಲ್ಲವೋ ಅಷ್ಟರ ತನಕ ಇದು ಸಫಲತಾಪೂರ್ವಕವಾಗಿ ಸಾಗಲಾರದು. ಆದರೂ ನಾವು ಸರಕಾರವು ಈ ಭಾಗದಲ್ಲಿ ಶೀಘ್ರವೇ ಯೋಗ್ಯ ಗಮನವನ್ನು ಕೊಡುವ ಹಾಗೆ ಹೋಗಿನ ವಾತಾವರಣವನ್ನು ಕಲ್ಪಿಸಬೇಕಾಗುವುದು. ಆದ್ದರಿಂದ ಪರವೂರುಗಳಿಗೆ ಹೋಗುವ ವಿದ್ಯಾರ್ಥಿಗಳಲ್ಲಿ ನನ್ನ ವಿನಂತಿಯೆಂದರೆ ಅವರು ಮದ್ರಾಸು ಹಿಂದೀ ಪ್ರಚಾರ ಸಭೆಯಲ್ಲಿ ರೂ ೧—೧೪ ಕ್ಕೆ ದೊರೆಯುವ ಹಿಂದೀ ಪುಸ್ತಕಗಳ ಸೆಟ್ ಒಂದನ್ನು ಕೊಂಡುಕೊಂಡು ಹಿಂದೀಯ ಅಭ್ಯಾಸವನ್ನು ಅವಶ್ಯವಾಗಿ ಪ್ರಾರಂಭಿಸಬೇಕು. ಸ್ಥಳೀಕ ವಿದ್ಯಾರ್ಥಿಗಳ ಸಲುವಾಗಿ ಪುರುಷರಿಗೆ ಆರ್ಯಸಮಾಜದಲ್ಲೂ ಸ್ತ್ರೀಯರಿಗೆ ಮಹಿಳಾ ಸಭೆಯಲ್ಲೂ ವರ್ಗಗಳು ಬೇಗನೇ ತೆರೆಯಲಾಗುವುವು. ಹಿಂದೀ ಪ್ರೇಮಿಗಳೆಲ್ಲರೂ ಪೂರ್ವಾಹ್ನ ೧೦ ಘಂಟೆಗೆ ಆರ್ಯಸಮಾಜದಲ್ಲಾಗಲೀ ಅಪರಾಹ್ನ ೪ ಘಂಟೆಗೆ ಮಹಿಳಾ ಸಭೆಯಲ್ಲಾಗಲೀ ಬಂದು ತಮ್ಮ ಹೆಸರನ್ನು ಕೊಡುವರೆಂದು ನಂಬುತ್ತೇನೆ. ಈ ರೀತಿಯಾಗಿ ವಿದ್ಯಾರ್ಥಿಗಳು ರಜೆಯ ಸದುಪಯೋಗವನ್ನು ಮಾಡಿ ತಮ್ಮ ಹಾಗೂ ದೇಶದ ಕಲ್ಯಾಣವನ್ನು ಮಾಡುವರು. ಅತಿನಮ್ರ ತಮ್ಮ ಸೇವಕ

ಕ ರಂಘುನಾಥಾಚಾರ್ ಹಿಂದೀ ಪ್ರಚಾರಕ

[illegible]

ನೋಟೀಸು

ಕಾಸರಗೋಡು ಡಿ ಮುನ್ಸಿಫ್ ಕೋರ್ಟಿನಲ್ಲಿ

[illegible] 12 [illegible] R [illegible]

[illegible]

[illegible]

ಆದಕಾರಣ

[illegible] ೩೦೦೦ಕ್ಕೆ [illegible]

ಕಾಸರಗೋಡು
P. Ananda Rao
Vakil for Plaintiff

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ವಾದಿ — [illegible] ಹೆಗ್ಡೆ

ಪ್ರತಿವಾದಿ — [illegible] 11 [illegible]

2ನೇ ಪ್ರತಿವಾದಿ [illegible]

[illegible] ನೇ ಪ್ರತಿವಾದಿ [illegible]

[illegible] ಮೆನೆಜಸ್ ಡಿಸೋಜ [illegible]

[illegible] ಕೆಪ್ಟನ್, ಫ್ರೋಟೆಸ್ಟ್ ಟ್ರಸ್ಟ್ ಬೊಂಬಾಯಿ

೪ನೇ ಪ್ರತಿವಾದಿ [illegible] ರಾವ, ೫ನೇ ಪ್ರತಿವಾದಿ [illegible]

[illegible] 1,00 [illegible] ಕೋರ್ಟು [illegible] ವ್ಯಾಜ್ಯವು ತಾರೀಕು ೪—4—32ಕ್ಕೆ ತನಿಖೆಗೆ ಇಡಲ್ಪಟ್ಟಿದೆ. 2, ೩, ೪, ೫ನೇ ಪ್ರತಿವಾದಿಗಳು ಆ ದಿವಸ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದಲ್ಲಿ ಸದರಿ ವ್ಯಾಜ್ಯವನ್ನು ಅವರ ಗೈರುಹಾಜರಿಯಲ್ಲಿ ತೀರ್ಪು ಮಾಡಲಾಗುವದೆಂತ ಈ ಮೂಲಕ ತಿಳಿಸಲಾಗುತ್ತದೆ.

ಕುಂದಾಪುರ
೧೮—೨—೩೨
B Mahabala Holla,
Advocate for Plaintiff

ಪರೀಕ್ಷಿಸಿರಿ!   ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ   ಗುಣ ಶ್ರೇಷ್ಠ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R)

ಆಯುರ್ವೇದಿಕ್ ವೈದ್ಯ ಶಾಖೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರಿಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಗುತ್ತವೆ. ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, [illegible] ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಇವುಗಳು ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ [illegible] ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬ ವಿವರಗಳು [illegible] ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ [illegible] ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿಗೆ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಕೊಡುವರೆಯೂ [illegible] ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು [illegible] ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

[illegible] ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

[illegible] ಅಥವಾ ಕಜ್ಜನ್ನವಾದ ರಕ್ತಮಂತ ಹಳೆಯದು ವ ತ್ತು ತ್ರಾಸದಾಯಕವಿದ್ದರೂ ಫಕ್ತ [illegible] ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ಪಥ್ಯ ಜರೂರಿ ಇಲ್ಲ. ಅಧಿಕ ಪ್ರಶಂಸೆ ವ್ಯರ್ಥ. ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು. ಬೆಲೆ ರೂ ೨–೦–೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ಸಿಂಡಿಯಿಡುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಒಹಿರೋದ್ದೀಪನ ತೇಜ ಅಮೋಘ ಅಸ್ತ್ರವಿದೆ. ಸಾವಿರಾರು ಕಿವುಡರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ. ಬೆಲೆ ರ೨ ೨

ವಿಳಾಸ — ಶಕ್ತಿಸುಧಾ ಕಾರ್ಯಾಲಯ
21 ಕಾಂಬಾರವಾಡ 4ನೇ ಗಳ್ಳಿ,
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು'

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ವಿಕ್ರಯಕ್ಕಿಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತಿ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ   ಕ್ರಯ ಸೂಚಿಗೂ ಎಜನ್ಸಿಗೂ ಬರೆಯಿರಿ

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dada Bombay 14

ತಂತಿ ವಿಳಾಸ — 'SIRINDHUN Bombay

ಶಪೂರ್ಜಿ ಎಚ್. ಎಲ್ ಬಾಟ್ಲಿವಾಲಾ — ಮುಖ್ಯ ಮೆನಜಿಂಗ್ ಡೈರೆಕ್ಟರ್

The Zandu Pharmaceutical Works, Ltd., Bombay, 14

ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು' ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು!   ಅಮೋಘ ಟಾನಿಕ್ಕು!!

[illegible] ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ ಹುಟ್ಟಿಸುವ ನಾನಾ ವಿಧವಾದ [illegible] ಎದೆ ನೆಗಡಿ ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು [illegible] ವೀರ್ಯಕ್ಷೀಣತೆ [illegible] ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜಾಡಿ ರೂ 10/- ಕ್ರಯ 1 ಪಾನು ಸೀಸೆ ರೂ 2/8 ½ ಪಾ ರೂ 1/5 ¼ ಪಾ. ಆ 13

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ಧ್ಯಾಮೋದರ್ ಅಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್ ಎಲ್. ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು — ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್
ಬೆಂಗಳೂರು ಏಜಂಟರು — ಬಿ. ಕ್ರೊಪಚಿಟ್‌ಲಾಲ್ ಕಂಪೆನಿ, ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ವಿಧವೆಯರ ವಪನವು ಅನಾಚಾರ.

ಲೇಖಕರು — ಶ್ರೀ. ರಾಮರಾವ್, ಹೊಸಬೆಟ್ಟು, ಎಮ್ ಎ ಎಲ್ ಟಿ.

೧೯೩೦ರಲ್ಲಿ ಪ್ರಕಟಿಸಲ್ಪಟ್ಟ "ವಿಧವೆಗಳ ಮುಂಡನ ಅನಾಚಾರವು" ಎಂಬ ಪುಸ್ತಕದಲ್ಲಿ, ಧಾರವಾಡಾ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ವೆಂಕಟರಂಗೋ ಕಟ್ಟಿ, ಇವರು ವಿಧವೆಯರ ವಪನವು ಶಾಸ್ತ್ರೀಯವಾದದ್ದಲ್ಲ ಎಂದು ವಿವರಿಸಿದ್ದಾರೆ. ಈ ಪುಸ್ತಕವು ಧಾರವಾಡ ಜಿಲ್ಲೆಯ ಜ್ಞಾನವರ್ಧಕ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು. ವೆಂಕಟರಂಗನವರು ವೇದಗಳನ್ನೂ, ಅನೇಕ ಧರ್ಮಶಾಸ್ತ್ರಗಳನ್ನೂ, ಪುರಾಣಗಳನ್ನೂ, ವಿಮರ್ಶಿಸಿ ನೋಡಿ, ಇತ್ಯರ್ಥವಾಗಿ ಬರೆದಿದ್ದಾರೆ. ಸಮಾಜ ಹಿತೈಷಿಗಳು ಈ ಪುಸ್ತಕವನ್ನು ತರಿಸಿ ನೋಡಿ, ಅನುಭವವನ್ನು ಪಡೆದುಕೊಳ್ಳಬಹುದು. ಇದರಲ್ಲಿ ಕಾಣುವ ಕೆಲವು ವಿಷಯಗಳನ್ನು ಮಾತ್ರ ಹೆಕ್ಕಿ ಇಲ್ಲಿ ತಿಳಿಸುವೆವು.

(೧) ಸತ್ತವರ ಕ್ರಿಯೆಯನ್ನು ಮಾಡುವಾಗ ಗಂಡಸರು ಕ್ಷೌರಮಾಡಿಕೊಳ್ಳಬೇಕೆಂಬುದೇ ಇತ್ತೀಚಿನ ಒಂದು ಆಚಾರವೆಂದು ಅವರ ಪುಸ್ತಕದಲ್ಲಿ ಮೊದಲು ವಿಷದಪಡಿಸಿದ್ದಾರೆ. ಮನು, ಪರಾಶರ, ಯಾಜ್ಞವಲ್ಕ್ಯ ಮೊದಲಾದ ಉತ್ತಮ ಧರ್ಮಶಾಸ್ತ್ರಕಾರರು, ಸತ್ತವರ ಉತ್ತರಕ್ರಿಯೆಯ ಸಮಯದಲ್ಲಿ ಗಂಡಸರು ಕ್ಷೌರಮಾಡಿಸಿಕೊಳ್ಳಬೇಕೆಂದೂ ಹೇಳಿರುವುದು ಇಲ್ಲ. ಇನ್ನು ಇತಿಹಾಸವನ್ನು ನೋಡಿರಿ—ರಾಮಾಯಣದಲ್ಲಿ ದಶರಥನ ಉತ್ತರಕ್ರಿಯೆಯನ್ನೂ, ಮಹಾಭಾರತದಲ್ಲಿ ಭೀಷ್ಮ, ಧೃತರಾಷ್ಟ್ರ ಮತ್ತು ಕುಂತಿ ಇವರ ಉತ್ತರಕ್ರಿಯೆಗಳನ್ನೂ ಬಹಳವಾಗಿ ವಿಸ್ತರಿಸಿ ಬರೆದಿದ್ದಾರೆ. ಈ ಸಂದರ್ಭಗಳಲ್ಲಿ ಸತ್ತವರ ಬಂಧುಗಳಾಗಲೀ, ಇನ್ನು ಇತರರು ಯಾರೇ ಆಗಲೀ, ಕ್ಷೌರಮಾಡಿಸಿಕೊಂಡಿದ್ದಾರೆಂಬ ಸೂಚನೆಯೇ ಇಲ್ಲ. ಗಂಡಸರ ಕ್ಷೌರದ ಆಚಾರವೇ ಸುಮಾರು ೩೦೦೦ ವರುಷಗಳಿಂದೀಚೆಗೆ ಬಂದಿತೆಂದು, ಆ ಮೇಲೆ ವೆಂಕಟರಂಗನವರು ತಮ್ಮ ಪುಸ್ತಕದಲ್ಲಿ ವಿಶದಪಡಿಸಿದ್ದಾರೆ. ಹೀಗಿರಲು ೩೦೦೦ ವರುಷಗಳಿಗಿಂತ ಮೊದಲು ಜೀವಿಸಿದ್ದ ಮನು, ವಾಲ್ಮೀಕಿ, ಪರಾಶರ ವೇದವ್ಯಾಸ, ಯಾಜ್ಞವಲ್ಕ್ಯ ಮೊದಲಾದವರ ಗ್ರಂಥಗಳಲ್ಲಿ ಈ ವಿಧಿಯು ಕಂಡುಬರುವುದಿಲ್ಲ.

(೨) ಬೌದ್ಧಮತವು ಹುಟ್ಟಿದ ಮೇಲೆ ಬರೆದಿದ್ದ ಕೆಲವು ಗ್ರಂಥಗಳಲ್ಲಿ ಬೌದ್ಧರನ್ನು ಅನುಸರಿಸಿ, ಗಂಡಸರು ಪವಿತ್ರರಾಗುವುದಕ್ಕೆ ಕ್ಷೌರಮಾಡಿಸಿಕೊಳ್ಳಬೇಕೆಂದು ಕೆಲವರು ಹೇಳತೊಡಗಿದರು. ಆದರೆ ಮೇಲೆ ಹೇಳಿದ ಮುಖ್ಯ ಧರ್ಮಶಾಸ್ತ್ರಕಾರರು ಆ ವಿಧಿಯನ್ನು ಹೇಳಲಿಲ್ಲ.

ಮನು ಪರಾಶರ ಮತ್ತು ಯಾಜ್ಞವಲ್ಕ್ಯ ಈ ಮುಖ್ಯ ಧರ್ಮಶಾಸ್ತ್ರಕಾರರು ಗಂಡಸರೇ ಕ್ಷೌರಮಾಡಿಸಿಕೊಳ್ಳಬೇಕೆಂದು ಹೇಳದಿರುವಾಗ, ಹೆಂಗಸರ ಕ್ಷೌರದ ವಿಧಿಯನ್ನು ಅವರ ಶಾಸ್ತ್ರಗಳು ಏನೂ ಹೇಳುವುದಿಲ್ಲವೆಂದಾಯಿತು.

(೩) ಆ ಮುಖ್ಯ ಧರ್ಮಶಾಸ್ತ್ರಗಳಲ್ಲಿ ವಿಧವೆಯರಿಗೆ ಮೂರು ಸ್ಥಿತಿಗಳನ್ನು ಹೇಳಿದ್ದಾರೆ. (a) ಮುಂಚಿನ ಕಾಲದ ವಿಧವೆಯರಿಗೆ ಪುನಃ ಮದುವೆಮಾಡಿಕೊಳ್ಳಬಹುದೆಂದಿತ್ತು. ಇದಕ್ಕೆ ಸರಿಯಾದ ಆಧಾರಗಳು ಋಗ್ವೇದ, ಮಹಾಭಾರತ, ಮನುಸ್ಮೃತಿ ಇವುಗಳಲ್ಲಿವೆ. (ಶ್ರೀ ಗಣಪತಿ ನಾರಾಯಣ ಭಟ್, ಅಕದಾಸ್, ಶಿರ್ಸಿ ಇವರು ಬರೆದ ಪುಸ್ತಕವನ್ನು ತರಿಸಿ ನೋಡಿರಿ.) (b) ಮನುವು, ವಿಧವಾ ಪುನರ್ವಿವಾಹಕ್ಕೆ ಒಪ್ಪಿಗೆ ಕೊಟ್ಟರೂ, ಬ್ರಹ್ಮಚಾರಿಣಿಯಾಗಿರುವುದು ಅದಕ್ಕಿಂತ ಉತ್ತಮವೆನ್ನುತ್ತಾನೆ. ಅವನು ಸಹಗಮನವನ್ನಾಗಲೀ ತಲೆಯ ವಪನವನ್ನಾಗಲೀ ಹೇಳುವುದೇ ಇಲ್ಲ. (c) ಯಾಜ್ಞವಲ್ಕ್ಯನು ಮನುವಿನಂತೆಯೇ ಹೇಳುತ್ತಾನೆ. (d) ಆದರೆ ಪರಾಶರನು ಬ್ರಹ್ಮಚರ್ಯದ ಸಂಗಡ ಸಹಗಮನವನ್ನು ಸೇರಿಸಿ ವಿಧಿಸಿದ್ದಾನೆ. ಹೀಗಾಗಿ ಸಹಗಮನವೆಂಬುದು ಪ್ರಾಚೀನ ಪದ್ಧತಿಯಲ್ಲ. ಅನಂತರ ಕೆಲವು ಸಂದರ್ಭಗಳಲ್ಲಿ ಬೆಂಕಿಯಲ್ಲಿ ಆತ್ಮಹತ್ಯ ಮಾಡುತ್ತಿದ್ದವನ್ನು ಕಂಡು ವಿಧವೆಯರೂ ದುಃಖವನ್ನು ತಡೆಯಲಾರದೆ ಸಹಗಮನವೆಂಬ ಪದ್ಧತಿಯನ್ನು ಪ್ರಾರಂಭಿಸಿದರು.

(೪) ಮೇಲೆ ಹೇಳಿದ ಮುಖ್ಯ ಧರ್ಮಶಾಸ್ತ್ರಕಾರರಲ್ಲದೆ, ಕೆಲವು ಬಿಮುಖ್ಯರು—ವಿಷ್ಣು, ದಕ್ಷ, ಶಂಖ ಮೊದಲಾದವರು ವಿಧವೆಯರಿಗೆ ಸಹಗಮನವನ್ನು ಮಾತ್ರ ವಿಧಿಸಿದ್ದಾರೆ. ವೆಂಕಟರಂಗನವರು ಹೀಗೆಯೇ ಇಂಥ ಅನೇಕ ಸ್ಮೃತಿಗಳನ್ನು ಹುಡುಕಿ ನೋಡಿದ್ದಾರೆ. ಅದರ ಯಾವುದೂ ನಿಜವಾದ ಧರ್ಮಶಾಸ್ತ್ರಕಾರರು ಸಹ ವಿಧವೆಯರ ವಪನವನ್ನು ಸೂಚಿಸುವುದೇ ಇಲ್ಲ.

ಇದಲ್ಲದೆ ಪರಾಶರ ಮೊದಲಾದವರು "ಹೆಂಗಸಿನ ತಲೆಯನ್ನು ಯಾವ ಸಂದರ್ಭದಲ್ಲಿ ಕೂಡಾ, ಎಂತಹ ತಪ್ಪಿಗಾದರೂ ವಪನಮಾಡಕೂಡದು" ಎಂದು ನಿರ್ಧಾರಪೂರ್ವಕವಾಗಿ ಹೇಳಿದ್ದಾರೆ. ಕೆಲವು ಘೋರ ತಪ್ಪಿಗಾಗಿ ಗಂಡಸರ ತಲೆಯನ್ನು ಬೋಳಿಸಬೇಕೆಂದು ವಿಧಿಸಿದ ಸಂದರ್ಭಗಳಲ್ಲಿ, ಹೆಂಗಸರಿಗೆ ಕ್ಷೌರಮಾಡಿಸಕೂಡದು ಎಂದು ಒತ್ತಿ ಹೇಳಿ,—ಆ ತಪ್ಪಿಗಾಗಿ ಅಗತ್ಯ ಕಂಡಲ್ಲಿ ಅಂತಹ ಸ್ತ್ರೀಯ ಜುಟ್ಟನ್ನು ಎತ್ತಿ ಮೇಲಕ್ಕೆ ಹಿಡಿದು, ಕೂದಲಿನ ತುದಿಯ ಒಂದೆರಡು ಬೆರಳಷ್ಟು ಕೊಯ್ಯಬಹುದೆಂದಿದ್ದಾರೆ.

ಪರಾಶರ ಸ್ಮೃತಿ ಅಧ್ಯಾಯ ೯

ಶ್ಲೋಕ —

ವಪನಂ ನೈವ ನಾರೀಣಾಂ ನಾನು ವ್ರಜ್ಯಾತಪಾದಿಕಂ ।
ನ ಗೋಷ್ಠೇಶಯನಂ ತಾಸಾಂ ನವಸೀರನ್ ಗವಾಜಿನಂ ॥ ೫೫ ॥
ಸರ್ವಾನ್ ಕೇಶಾನ್ ಸಮುದ್ಧೃತ್ಯ ಛೇದಯೇದಂಗುಲದ್ವಯಂ
ಸರ್ವತ್ರೈವಂ ಹಿ ನಾರೀಣಾಂ ಶಿರಸೋ ಮುಂಡನಂ ಸ್ಮೃತಂ ॥ ೫೬

ಅರ್ಥ —ಸ್ತ್ರೀಯರಿಗೆ ವಪನವು ಸರ್ವಥಾ ಮಾಡಕೂಡದು, ಜಪಾದಿಗಳಿಲ್ಲ, ಹಟ್ಟಿಯಲ್ಲಿ ಮಲಗ ಬೇಕಾಗಿಲ್ಲ, ದನದ ತೊಗಲನ್ನು ಹೊದ್ದುಕೊಳ್ಳಬೇಕಾಗಿಲ್ಲ. ಕಠಿಣ ಶಿಕ್ಷೆ ಕೊಡಬೇಕೆಂದಿದ್ದಾಗ, ತಲೆಯ ಕೂದಲನ್ನು ಎತ್ತಿ ಮೇಲಕ್ಕೆ ಹಿಡಿದು, ಎರಡು ಬೆರಳಿನಷ್ಟು ಉದ್ದ ಮಾತ್ರ ಕತ್ತರಿಸಬೇಕು. ಸ್ತ್ರೀಯರ ಮುಂಡನವೆಂದರೆ ಇಷ್ಟೇ ಎಂದು ಎಲ್ಲಾ ಸ್ಥಳಗಳಲ್ಲಿ ತಿಳಿಯತಕ್ಕದ್ದು. ಈ ಉದಾಹರಣೆಯಿಂದ ಸಹ ಸ್ತ್ರೀಯರಿಗೆ ವಪನವನ್ನು ಯಾವ ಸಂದರ್ಭದಲ್ಲಿಯೂ ಮಾಡಕೂಡದೆಂದಾಯಿತು.

(೫) ವೃದ್ಧ ಹಾರೀತ ಸ್ಮೃತಿಯಲ್ಲಿ ವಿಧವೆಗೆ ಸಹಗಮನ ವಿಧಿಯನ್ನು ಹೇಳಿ, ಅವಳು ಗರ್ಭಿಣಿಯಾಗಿದ್ದಲ್ಲಿ ಸಹಗಮನ ಮಾಡಕೂಡದೆಂದೂ, ಬ್ರಹ್ಮಚಾರಿಣಿಯಾಗಿರಬೇಕೆಂದೂ ಹೇಳಿದ್ದಾನೆ. ಪೂರ್ಣ ವೈರಾಗ್ಯವನ್ನು ಹೊಂದಿ, ತಲೆಕೂದಲನ್ನು ಬಾಚಿಕೊಳ್ಳದೆ, ಬಣ್ಣದ ಬಟ್ಟೆಯನ್ನುಡದೆ, ಸದಾ ಬಿಳಿ ಸೀರೆಯನ್ನೇ ಉಟ್ಟುಕೊಂಡು ಇರಬೇಕು, ಇತ್ಯಾದಿ ಎಂದಿದ್ದಾನೆ. ಇದೇ ರೀತಿಯ ಬ್ರಹ್ಮಚರ್ಯವ್ರತವನ್ನು ಮನುವು ಹೇಳಿದ್ದಾನೆ. ಇದರಿಂದ ವಿಧವೆಯರಿಗೂ ತಲೆಕೂದಲು ಇರಲೇಬೇಕೆಂದಾಯಿತು.

ವೃದ್ಧಹಾರೀತ ಸ್ಮೃತಿಯು ಬರೆಯಲ್ಪಟ್ಟ ಕಾಲವು ಶಾಲಿವಾಹನ ಶಕ ಪ್ರಾರಂಭವಾದನಂತರ ಅಲ್ಲವೆಂದು ಇದು ಗ್ರಂಥದಿಂದ ಸ್ಪಷ್ಟವಾಗಿದೆ. ಆವನ ಕಾಲದಲ್ಲಿ ವಿಧವೆಯರಿಗೆ ತಲೆಕೂದಲು ಇತ್ತು ಎಂದು ಮೇಲೆ ಹೇಳಿದಂತೆ ನಿರ್ಧಾರವಾಗುತ್ತದೆ.

(ಬರುವ ಸಂಚಿಕೆಯಲ್ಲಿ ಕೊನೆಗೊಳ್ಳುವುದು)

೧೧೦೦ ರೂ ಬಕ್ಷೀಸು.

೩೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಧರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ವಾದಂಥ ಅಮೂಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಶ್ರೀ ಮದನಮಸ್ತಪಾಕು ಶ್ರೀ ರಿಜಿಸ್ಟರ್ಡ

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಸಂಪರ್ಕದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ ಕಾಮೋಟ್ಟಿಯಾದ ಕೂಡಲೇ ವೀರ್ಯಪತನವಾಗೋಣ, ವೀರ್ಯ ಪರಿಣಾಮ ಎಂಥವಾದರೂ ಸರಪು ನ್ಯೂನತೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ. ಹೊಸ ರಕ್ತ ಮತ್ತು ತೂಕ ಹೆಚ್ಚುತ್ತವೆ. ೨೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟಪಾಲ ರೂ ೧. ಹಳೇ ರೋಗದ ಸಲುವಾಗಿ ೨ ಡಬ್ಬಿಗೆ ಖರ್ಚ ಸಹಿತ ರೂ ೧೧. ಮೂರ ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪಡವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್ ಆರ್ ಎಲ್ ಸಿ ಎಲ್ ಎಮ್ ಎಂಡ್ ಎಸ್ ಜೆ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು	ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತಾ— ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿರೋಗಿಗಳು ತೆಗೆದುಕೊಂಡು ರೋಗದಿಂದ ಬಿಡುಗಡೆಯಾದರು

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ.—ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ ೯ [illegible]

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರೆ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತರುವಾಯ ಏನುಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ವೈದ್ಯ ಡಾಕ್ಟರ ಪಿ ಎ ವೈದ್ಯ, ಎಲ್ ಸಿ ಪಿ ಎಸ್ ಕೋಳವಾವಾಹಿಮು, ರಾಣೆಬೆ— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ೦॥೦

ವಿಳಾಸ—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ALLIANZ Und STUTTGARTER
Life Insurance Bank, Ltd

ಅಲಿಆನ್ಸ ಉಂಡ ಸ್ಟುಟಗಾರ್ಟರ

ಲೈಫ್ ಇನ್ಸೂರೆನ್ಸ ಬ್ಯಾಂಕ ಲಿಮಿಟೆಡ

(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟಿದೆ)

ಒಟ್ಟು ವಿಮಾ ಹಣವು ೨೦೯ ಕೋಟಿ ರೂ ಗಳಿಗಿಂತ ಹೆಚ್ಚಾಗಿರುವದು. ವಾರ್ಷಿಕ ವಿಮಾ ಪತ್ರಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಾಗಿರುವುದು. ಒಟ್ಟು ಪ್ರಾಪ್ತಿ ೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿರುವುದು.

ವಿಮಾಪತ್ರಕಗಳ ಮೇಲಿನ ಕಾಯ್ದೆಟ್ಟ ರೇವುಗಳು ಹಿಂದೀ ತಾರಣಗಳಲ್ಲಿಯೇ ತೊಡಗಿಸಲ್ಪಡುವುವು.

ಬೇಕಾಗಿದೆ

ಧಾರವಾಡ, ವಿಜಾಪುರ ಬೆಳಗಾಂವ, ಕಾರವಾರ, ಕೊಲ್ಹಾಪುರ, ಮೈಸೂರು ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು. ಹೆಚ್ಚಿನ ಮಾಹಿತಿಗಾಗಿ ಮೊರವಾನಜಿ ಆ್ಯಂಡ್ ಸನ್ಸ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲೈಫ್ ಇನ್ಸೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉಪದ್ರವಾದರೂ ಓಡುವದು.

ಏ ತ ರಿಂ ದ ?

ಹಿಂದೀ ಔಷಧಿ. ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟಿದು HEDAURIN DYSENTERY CHOLERA CURE ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟಿದು.

ಬಿನ್ನಿನ ಕ್ರಯ ಆಣೆ 0—15—0. 2 ಬಿನ್ನಿನ ಬಾಟಲಿಗೆ ರೂ. 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು, ಡೊಂಗರಕೇರಿ ರಸ್ತೆ, ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ, ಕೊಡಿಯಾಲಬೈಲ್ ಪೋಸ್ಟು, ದ ಕನ್ನಡ

"If every Wife knew what every Widow knows every Husband would be Insured"

PLACE YOUR LIFE ASSURANCE WITH

THE SOUTH INDIAN

Securing for your clients –

1. Low rates of Premium
2. Liberal Policy Conditions.

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —

H R. K IYENGAR
Chief Agent

The S I G A Co. Ltd.,
Sanyasiguddy, MANGALORE

Managing Agents –

K. C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ.

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರೀಮಿಯಂ ದರಗಳು ಕಡಿಮೆ!

ಶರ್ತಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೆಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡು ತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತ ಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮುಂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗ ವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಶಮನಗೆಯಾಗಿ ಗುಣಪಡಿಸಿ ರುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅವ್ಯರ್ಥವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂಧುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ. ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಮೌಷಧ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ಆಫೀಸ್, ಸೀತಾರಾಮೌಷಧ ವೈದ್ಯಶಾಲಾ, ಮೈಸೂರು.

ಏಜಂಟರು
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಬಂದರಿಗೆ ಹತ್ತಿರ.

ಕನ್ನಡ ಸದ್ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದೊಳ್ಳೇ

ಸುಸಂಧಿ! ಅಲಭ್ಯ ಲಾಭ!! ತಕ್ಕ ಸಮಯ!!!

ಶ್ರೀ ಶೇಷಾಚಲ ಗ್ರಂಥಮಾಲೆಯ

೨೫ ಐತಿಹಾಸಿಕ ಕಾದಂಬರಿಗಳು ಇವುಗಳ ಬೆಲೆ ಸರಾಸರಿ	ರೂ.	[illegible]
೨೨ ಸಾಮಾಜಿಕ—ಪೌರಾಣಿಕ	ರೂ.	೧೨
೧೧ ಪತ್ತೇದಾರಿ	ರೂ.	೬
೩೧ ಚರಿತ್ರಗಳು	ರೂ.	೨೮
೧೦ ಗದ್ಯ—ಪದ್ಯನಾಟಕಗಳು	ರೂ.	[illegible]
೨೮ ಪೌರಾಣಿಕ ಪಾರಮಾರ್ಥಿಕ	ರೂ.	೨೨
೨೦ ಧಾರ್ಮಿಕ, ವೈದಿಕ ಹಾಗೂ ಇತರ	ರೂ.	೧[illegible]
೧೪೪ ಅಂತು ಪುಸ್ತಕಗಳು ಇವುಗಳ ಒಟ್ಟು ಬೆಲೆ	ರೂ.	೧೦[illegible]

ಇವುಗಳಲ್ಲಿಯ ಎಷ್ಟೋ ಪುಸ್ತಕಗಳು ೩ನೇ ೪ನೇ ಆವೃತ್ತಿಗಳನ್ನು ಕೂಡ ಹೊಂದಿ ಕನ್ನಡಿಗರ ಪ್ರೇಮಕ್ಕೆ ಪಾತ್ರವಾಗಿರುತ್ತವೆ.

ಇಂಥ ಈ ಅತ್ಯುತ್ತಮ (೧೪೪ ಬಗೆಯ) ಪುಸ್ತಕಗಳಲ್ಲಿ ಬೇಕಾದ ಮೂರು ರೂಪಾಯಿ ಬೆಲೆಯ ಪುಸ್ತಕಗಳಿಗೆ ಬರೆದರೆ ಟಪಾಲು ಖರ್ಚಿನ ೫ ಆಣೆ ನಾವೇ ವಹಿಸಿ ಬರೀ ಮೂರು ರೂಪಾಯಿಗೆ ವಿ. ಪಿ ಮೂಲಕ ರವಾನಿಸುತ್ತೇವೆ ಇದಕ್ಕೂ ಹೆಚ್ಚು ಬೆಲೆಯ ಪುಸ್ತಕಗಳಿಗೆ ಬರೆದರೆ ಟ. ಖ ನಾವು ವಹಿಸುವದಲ್ಲದೆ, ಮೇಲೆ ಯೋಗ್ಯ ಕಮಿಶನ್ ಸಹ ಕೊಡುತ್ತೇವೆ ವಿ. ಪಿ ಯೊಡನೆ ಆಂಗೀರಸ ಸಂವತ್ಸರದ ಶುದ್ಧ ಪಂಚಾಂಗವು ಪುಕ್ಕಟೆಯಾಗಿ ಕಳುಹಿಸಲ್ಪಡುವದು ಈ ರಿಯಾಯತಿಯು ಇಂದಿನಿಂದ ಒಂದೇ ತಿಂಗಳು. ಕಾರಣ ಎಲ್ಲರೂ ಈ ಸುಸಂಧಿಯ ಲಾಭ ಹೊಂದಬೇಕು. ನಮ್ಮ ಕ್ಯಾಟಲಾಗು ನೋಡಿ, ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಭಿ ಪ ಕಾಳೆ
ಪ್ರೊಪ್ರೈಟರ್, ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥ ಮಾಲ,
ಪೋ ಶಿವನಂದವನ, ಜಿ ಧಾರವಾಡ.

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ ಎಂ ಗಣಪತಿರಾವ್ ಐಗಳ ರಿಂದ ಬರೆಯಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ ಮೂರನೇ, ನಾಲ್ಕನೇ ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ ಮೂರನೇ ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

ಎರಡನೇ ಮೂರನೇ, ನಾಲ್ಕನೇ ದರ್ಜೆಗೆ ಚರಿತ್ರೆ ಮತ್ತು [illegible], ಹೊಸ [illegible] (೧ನೇ, ೨ನೇ ಭಾಗ)— ಅಚ್ಚಿನ [illegible] ಪುಸ್ತಕಗಳು ಸಮ್ಮತಿ ದೊರೆಯುತ್ತವೆ ಪುಸ್ತಕ ವ್ಯಾಪಾರಿ [illegible] ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಜ್ಡ ಸಾರ್ಸಪರಿಲಾ



ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿ ದವರೇ ಹೇಳ್ತಾರೆ

ಡಾಕ್ಟರ್ ಗೌತಮರಾವ್ ಕೇಶವರವರ ಫೋಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಘಾಕುರದ್ವಾರ ಮುಂಬಯಿ ೨ ಸ್ಟೋಕಿಸ್ಟ್ ಪೈ ಕಂಪೆನಿ,
ವೆಂಕಟ್ರಮಣ ದೇವಸ್ಥಾನದ ಹತ್ತಿರ ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್ ರೋಲ್‌ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೇನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE.

ಚಂದಾ ನಿರ್ಣಯ: — ವರ್ಷಕ್ಕೊಂದಕ್ಕೆ ರೂಪಾಯಿ 2—0—0.   ರಿಜಿಸ್ಟರ್ಡ್ ನಂ. ಎಮ್. ೪೦೨.   ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷ್ಯೈರ್ಮಹಾರ್ಘೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥

ಗರಲಕವರಂಜಿದರೆ ಸುಧೆಯನು । ಪಡೆಯೆ ಕೃತ್ಯದ ತೆರದಿ ತುಳಿತರೆ । ತೆರಕೆ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬.   ಮಂಗಳೂರು ತಾ ೧ನೇ ಶುಕ್ರವಾರ ಎಪ್ರಿಲ್ ೧೯೩೨   (1—4—'32.)   ಸಂಚಿಕೆ ೧೪

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.   **Branches:—COONDAPOOR & Mangalore**

ಹೆಡ್ ಆಫೀಸು.—ಉಡುಪಿ   ಶಾಖೆ ಕುಂದಾಪುರ ಮತ್ತು ಮಂಗಳೂರು

Authorised Capital Rs 3,50,000   Subscribed & Called up Rs 2,25,000

ನಿಯಮಿತ ಮೂಲಧನ ರೂ 3,50,000   ಚಂದಾ ಹಾಕಲಿಕ್ಕೆ ಅಪ್ಪಿಸಿ ವಸೂಲಾದ ಮೂಲಧನ ರೂ 2,25,000

STATEMENT OF ASSETS & LIABILITIES AS ON 29TH DAY OF FEBRUARY 1932

Capital and Liabilities		Rs	Property and Assets		Rs
1	Paid up Capital	2,25,000-0-0	1	Premises Building, Furniture etc	[illegible]
2	Reserve and other funds	[illegible]	2	Government securities & Treasury Bills	[illegible]
3	Deposits	[illegible]	3	Authorised Investments	[illegible]
4	Due to Bankers	[illegible]	4	Bills for collection per contra	[illegible]
5	Sundries	[illegible]	5	Sundries	[illegible]
6	[illegible]	[illegible]	6	Cash in hand & with banks	[illegible]
	Total	[illegible]		Total	[illegible]

Office of the Corporation Udipi [illegible] -'32

N. ANANDA RAO
Secretary & Manager

(Regd)

ಅಮೃತಾಂಜನ.

ಶೀತ ಕೆಮ್ಮು ಕಲೆನೋವು ವಾತ ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ಥಂಡಿ ಮಾಡುವ ಉಪದ್ರವ ಕೊಡುವ [illegible] ಎಲ್ಲಾ [illegible] ಎದೆಯೊಡ್ಡಿ ಅವುಗಳನ್ನು ಓಡಿಸುತ್ತದೆ ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ [illegible] ಗುಣಪಡಿಸುತ್ತದೆ ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ ಎಲ್ಲಾ ಕಡೆಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು — (ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಥೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು [illegible] ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ [illegible]

ಅಮೃತಾಂಜನ ಡಿಪೋ,

ಮದರಾಸು   ಮತ್ತು   ಬೊಂಬಾ

ಸಣ್ಣ ಹುಡುಗರ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ್, ಮುಂಬಾಯಿ.

ಏಜಂಟರು— ಶಾ ಕಂಪೆನಿ, ಮಂಗಳೂರು.

INSURE WITH

The Popular Insurance Co. Ltd.

Head Office MANGALORE S. India

First of its kind in the West Coast

CHAIRMAN

Dewan Bahadur N. Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office

ವಿಧವೆಯರ ವಪನವು ಅನಾಚಾರ.

ಲೇಖಕರು—ಶ್ರೀ. ರಾಮರಾವ್, ಹೊಸಬೆಟ್ಟು, ಎಮ್. ಎ ಎಲ್. ಟಿ.

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

(೭) ನಮ್ಮ ಪುರಾತನ ಇತಿಹಾಸದಲ್ಲಿ ಯಾವ ಸಂದರ್ಭದಲ್ಲಿಯಾದರೂ ವಿಧವೆಯು ವಪನಮಾಡಿಸಿಕೊಂಡಿದ್ದಾಳೆಂದು ತೋರುವುದಿಲ್ಲ ಇದಕ್ಕೆ ವಿರೋಧವಾಗಿ ಇತಿಹಾಸಗಳಲ್ಲಿ ವಿಧವೆಯರಿಗೆ ವಪನಮಾಡದೆ ಇದ್ದ ದೃಷ್ಟಾಂತಗಳೇ ಸಿಕ್ಕುತ್ತವೆ. ಮಹಾಭಾರತದಲ್ಲಿ ಕುಂತಿಯೂ, ಧೃತರಾಷ್ಟ್ರನ ಮಕ್ಕಳ ವಿಧವೆಯರೂ, ತಮ್ಮ ತಲೆಕೂದಲನ್ನು ಇಟ್ಟುಕೊಂಡೇ ಇದ್ದರು ಎಂದು ಹೇಳಲ್ಪಟ್ಟಿದೆ.

(a) ಮಹಾಭಾರತ ಆಶ್ರಮವಾಸಿ ಪರ್ವ ಅ ೨೨ ಧೃತರಾಷ್ಟ್ರ, ಗಾಂಧಾರಿ ಮತ್ತು ಕುಂತಿ ಈ ಮೂವರು ಅರಣ್ಯಕ್ಕೆ ಹೋಗಿ, ಅಲ್ಲಿ ಇರುವಾಗ್ಗೆ ಅವರನ್ನು ನೋಡಬೇಕೆಂದು ಧರ್ಮರಾಯನು ಹೊರಟಾಗ, ಸಹದೇವನು ಹೇಳುವ ಮಾತುಗಳಲ್ಲಿ .

ದಿಷ್ಟ್ಯಾಯಾ ದಕ್ಷ್ಯಾಮಿತಾಂ ಕುಂತೀಂ
ವರ್ತಯಂತೀ ತಪಸ್ವಿನೀಂ ॥
ಜಟಿಲಾಂ ತಾಪಸೀಂ ವೃದ್ಧಾಂ
ಕುಶ ಕಾಶ ಪರಿಚ್ಛದಾಂ

ಅರ್ಥ—ತಲೆಯ ಕೂದಲನ್ನು ಜಟೆಯಂತೆ ಬೆಳಯಿಸಿಕೊಂಡು ದರ್ಬೆ ಮೊದಲಾದ ತೃಣಗಳಿಂದಾವರಿಸಲ್ಪಟ್ಟು, ತಪಸ್ಸುಮಾಡುವ ವೃದ್ಧಳಾದ ಕುಂತಿಯನ್ನು ನೋಡುವ ಕುತೂಹಲವು ನನಗೆ ತುಂಬಾ ಇದೆ ಎಂದು ಸಹದೇವನು ಹೇಳುತ್ತಾನೆ ಇದರಿಂದಲೂ ವಿಧವೆಯಾಗಿದ್ದರೂ ಕೂಡಾ ಕುಂತಿಯು ಸಕೇಶಿಯೆಂದು ಸ್ಪಷ್ಟವಾಗಿ ಹೇಳಿದಂತಾಯಿತು

(b) ಮಹಾಭಾರತ ಆಶ್ರಮವಾಸಿ ಪರ್ವ ಅ ೨೫ ಧರ್ಮರಾಯನು ಧೃತರಾಷ್ಟ್ರನ ದರ್ಶನಕ್ಕೆ ಹೋದಾಗ, ಕೌರವರ ವಿಧವಾ ಸ್ತ್ರೀಯರನ್ನೂ ಇತರ ಪರಿವಾರದೊಡನೆ ಕರೆದುಕೊಂಡು ಹೋಗಿದ್ದನು. ಸಂಜಯನು ಆ ವಿಧವಾ ಸ್ತ್ರೀಯರನ್ನು ವರ್ಣಿಸುವ ಸಂದರ್ಭದಲ್ಲಿ ಹೀಗೆ ವಿವರಿಸಿದ್ದಾನೆ.

ಏತಾಸ್ತು ಸೀಮಂತ ಶಿರೋರುಹಾ ಯಾಃ ।
ಶುಕ್ಲೋತ್ತರೀಯಾ ನರರಾಜ ಪತ್ನ್ಯಃ ॥
ರಾಜ್ಞೋಸ್ಯ ವೃದ್ಧಸ್ಯ ಪರಂಶತಾಖ್ಯಾಃ ।
ಸ್ನುಷಾನ್ಯವೀರಾ ಹತಪುತ್ರನಾಥಃ ।

ಅರ್ಥ—ತಲೆಕೂದಲಿನಲ್ಲಿ ಬೈತಲೆಯು ಮಾತ್ರ ಕಾಣಿಸುತ್ತದೆ. (ಹಾಗೆಂದರೆ ಅಲಂಕಾರಗಳಿಲ್ಲವೆಂದರ್ಥ) ಶುಭ್ರ ಉತ್ತರೀಯವನ್ನುಟ್ಟಿದ್ದರು, ಇವರ ಪತಿಗಳೂ, ಪುತ್ರರೂ, ಯುದ್ಧದಲ್ಲಿ ವೀರರಿಂದ ಕೊಲ್ಲಲ್ಪಟ್ಟಿದ್ದಾರೆ, ಅಂಥಾ ನೂರು ಮಂದಿ ಸ್ತ್ರೀಯರು ಆ ವೃದ್ಧನಾದ ಧೃತರಾಷ್ಟ್ರರಾಜನ ಸೊಸೆಯಂದಿರು (ಇಲ್ಲಿಯೂ ಆ ವಿಧವೆಯರಿಗೂ ತಲೆಕೂದಲಿತ್ತೆಂದಾಯಿತು)

(೮) ಮೇಲೆ ವಿವರಿಸಿದಂತೆ ನಮ್ಮ ಮುಖ್ಯ ಧರ್ಮಶಾಸ್ತ್ರಗಳು ವಿಧವೆಯು ಸಹಗಮನವನ್ನೂ ಅಥವಾ ಬ್ರಹ್ಮಚಾರಿ ವ್ರತವನ್ನು ಅನುಸರಿಸಬೇಕೆಂತ ಹೇಳುತ್ತವೆ, ಸಾಧವಿಲ್ಲದಿದ್ದಲ್ಲಿ ಪುನರ್ವಿವಾಹವನ್ನು ಸೂಚಿಸುತ್ತವೆ. ಅಂತೂ ತಲೆಯನ್ನು ವಪನಮಾಡಬೇಕೆಂದು ಸೂಚಿಸುವುದೇ ಇಲ್ಲವೆಂದು ವಿಷದವಾಯಿತು

(೯) ಶಾಲಿವಾಹನ ಶಕದ ||ನೇ ೧೩ನೇ ಶತಮಾನಗಳಲ್ಲಿದ್ದ ವಿಜ್ಞೇಶ್ವರ ಮಾಧವಾಚಾರ್ಯರೂ, ಇದನ್ನೊಪ್ಪುತ್ತಾರೆ ಆಪಸ್ತಂಭನ ಸೂತ್ರವೊಂದು ಹೀಗಿದೆ ಸತ್ತವರ ಕಿರಿಯರು ವಪನಮಾಡಿಸಿಕೊಳ್ಳಬೇಕು ಎಂಬುದಕ್ಕೆ ಅರ್ಥಮಾಡುವಾಗ್ಗೆ ಹೆಂಗಸರಿಗೆ ಈ ವಿಧಿಯು ಸಂಬಂಧಿಸಿದ್ದೆಂದು ಅವರು ಕನಸಿನಲ್ಲೂ ಎಣಿಸಿದಂತೆ ಕಾಣುವುದಿಲ್ಲ

(೧೦) ಮೇಲೆ ಹೇಳಿದ ವಿಷಯಗಳನ್ನೆಲ್ಲಾ ಆಯಾ ಗ್ರಂಥಗಳಿಂದ ಎತ್ತಿ ತೆಗೆದು ಶ್ಲೋಕಗಳನ್ನು, ಉದಹರಿಸಿ, ವೆಂಕಟರಂಗನವರು ಅವರ ಪುಸ್ತಕದಲ್ಲಿ ವಿವರಿಸಿದ್ದಾರೆ, ಆ ಮೇಲೆ ಕಳೆದ ಶತಮಾನದ ಉದಾಹರಣೆಯನ್ನು ಕೊಟ್ಟಿದ್ದಾರೆ—ಮಹಾರಾಷ್ಟ್ರ ಬ್ರಾಹ್ಮಣರಾದ ಪೇಶ್ವೆಯವರ ಕುಟುಂಬದಲ್ಲಿ ವಿಧವೆಯರು ವಪನ ಮಾಡಿಸಿಕೊಳ್ಳಲಿಲ್ಲವೆಂದು ಚರಿತ್ರಕಾರರು ತಿಳಿಸುತ್ತಾರೆ—ಸದಾಶಿವರಾವ್ (ಪೇಶ್ವೆ) ಇವರ ಹೆಂಡತಿ ಪಾರ್ವತೀ ಬಾಯಿಯು ಗಂಡ ಸತ್ತ ನಂತರ ತಾನು ಸಾಯುವ ತನಕವೂ ಸಕೇಶಿಯೇ ಆಗಿದ್ದಳು ಸವೋರಸಿಂಗನ ಕೈಯಿಂದ ಮರಣಹೊಂದಿದ ನಾರಾಯಣರಾವ್ ಸಾಹೇಬ ಪೇಶ್ವೆ ಎಂಬವರ ಹೆಂಡತಿಯು ಸಕೇಶಿಯೇ ಆಗಿದ್ದಳು ಇಂಥ ಉತ್ತಮ ಕುಲ ಬ್ರಾಹ್ಮಣರಲ್ಲಿ ಕೂಡಾ ಕಳೆದ ಶತಮಾನದಲ್ಲೇ ವಿಧವೆಯರು ಸಕೇಶಿಯರಾಗಿಯೇ ಆಗಿದ್ದರು ಎಂದು ಕೇಳಿದ ಮೇಲೆ ಇನ್ನು ಬೇರೆ ಮಾತು ಬೇಕೇ?

ಇನ್ನು ವಿಶೇಷವಾದ ವಿಸ್ತರಣೆಯನ್ನು ವೆಂಕಟರಂಗನವರ ಆ ಪುಸ್ತಕದಲ್ಲೇ ವಿದ್ವಾಂಸರು ಓದಿ ತಿಳಿದುಕೊಳ್ಳಬಹುದು, ಅಲ್ಲದೆ ಆ ಗ್ರಂಥಕರ್ತರಂತೆಯೇ ನಮ್ಮ ಶಾಸ್ತ್ರಗ್ರಂಥಗಳನ್ನು ತಾವಾಗಿಯೇ ನೋಡಿ ಅನುಭವ ಪಡೆಯಬಹುದು. ಹೀಗೆ ವಿದ್ವಾಂಸರು ನೋಡಿ ಇತರರಿಗೆ ಬೋಧಿಸಿದರೆ ಈ ಅನಾಚಾರವು ಕೂಡಲೇ ಕೊನೆಗಾಣುವುದು

ಆ ಪುಸ್ತಕದ ಹೆಸರು—ವಿಧವೆಗಳ ಮುಂಡನ ಅನಾಚಾರ ಕ್ರಿಯ ೧೨ ಆಣೆ ಬರೆದವರು—ಧಾರವಾಡ ಟ್ರೈಯಿನಿಂಗ್ ಕೊಲೇಜಿನ ಪ್ರಿನ್ಸಿಪಾಲ್, ವೆಂಕಟರಂಗೋ ಕಟ್ಟಿ ಇವರು. ಧಾರವಾಡದ ಜ್ಞಾನವರ್ಧಕ ಮುದ್ರಾ ಯಂತ್ರದಲ್ಲಿ ಮುದ್ರಿಸಲ್ಪಟ್ಟಿತು

"ನಮ್ಮ ಕರ್ತವ್ಯ!"

Our Duty.

ಅತುಲೈಶ್ವರ್ಯ ಗರ್ಭೆಯಾದ ಭಾರತಾಂಬೆಯು ಇಂದಿನ ಅಸಾಧಾರಣವಾದ ದ್ರವ್ಯದ ವಿಪ್ಲವಕಾರಕ ಸಮಯದಲ್ಲಿ ತನ್ನ ಮುವತ್ತಾರು ಕೋಟಿ ಮಾನವ ಸಮಾಜವನ್ನು ಯಾವರೀತಿಯಲ್ಲಿ ಸಂರಕ್ಷಿಸಬೇಕೆಂಬ ಘನವಾದ ಸಮಸ್ಯೆಯನ್ನು ಬಿಡಿಸಿ, ಪೂರೈಸುವುದೇ ನಮ್ಮ ಕರ್ತವ್ಯ ಮೊದಲೇ ಹೊಟ್ಟೆತುಂಬ ಊಟವಿಲ್ಲದೆ ನರಳುತ್ತಿರುವ ಲಕ್ಷೋಪಲಕ್ಷ ದೌರ್ಭಾಗ್ಯ ಸಂಸಾರಗಳು ತುಂಬಿರುವಾಗ, ಈಗಿನ ಕಾಲದಲ್ಲಂತೂ ಅವು ಕೋಟಿಕಟ್ಟಳೆ ಸಂಖ್ಯೆಗೆ ಸಮೀಪವಾಗಿರಬೇಕೆಂಬುದರಲ್ಲಿ ಭಿನ್ನಾಭಿಪ್ರಾಯಗಳಿರಲಾರವು ಆದುದರಿಂದ ಆ ಸಂಸಾರಗಳನ್ನು ರಕ್ಷಣೋಪಾಯಗಳ ಹೆದ್ದಾರಿಯಲ್ಲಿ ನಡೆಸಿ, ಹಾಗೆ ಉದ್ಧರಿಸಬಹುದೆಂಬುದೀಗ ಪ್ರಶ್ನೆ ಅಂಥಾ ಮಾನವ ಕುಟುಂಬಗಳಿಗೆ ಉದ್ಯೋಗವನ್ನು ಒದಗಿಸಿಕೊಡುವುದಲ್ಲದೆ, ಆ ಉದ್ಯೋಗಗಳಲ್ಲಿ ಅವರಿಗೆ ಹೆಚ್ಚಿನ ಅಭಿರುಚಿಯು ಉಂಟಾಗುವಂತೆ ಸಹಕರಿಸಿ ಪ್ರೋತ್ಸಾಹಿಸಬೇಕೆಂಬುದೇ ಈ ಪ್ರಶ್ನೆಗೆ ಸಾಧಾರಣವಾದ ಮತ್ತು ಯೋಗ್ಯವಾದ ಪ್ರತ್ಯುತ್ತರವಾಗಿರುತ್ತದೆ

ಇಂಗ್ಲಂಡಿನಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಪ್ರವರ್ಧಮಾನವಾಗಿ ಬೆಳದು, ವ್ಯಾಪಾರವಾಣಿಜ್ಯಗಳ ಸ್ಥಿತಿಯು ಅಧೋಗತಿಗಿಳಿದು ಬಡವರನ್ನವ ಸಂಸಾರಗಳ ಹಾಹಾಕಾರವೆಬ್ಬಿಸಿದ ಕೂಡಲೇ ಪ್ರಿಟಿಷರು ಕೈಕೊಂಡ ಉಪಾಯವಾದರೂ ಏನು? ಮುಖ್ಯ ಮಂತ್ರಿ ಮಹಾರಾಣಿಯವರಿಂದಾರಂಭವಾಗಿ ಎಲ್ಲರೂ ಆ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿಕೊಡುವ ಸದುಪಾಯವನ್ನು ಕಂಡು ಬೈ ಬ್ರಿಟಿಷ್ ಎಂಬ ಚಳವಳವನ್ನು ಹೂಡಿ ಆ ಮೂಲಕ ಕರಪತ್ರ ನಾನಾ ವಿಧದ ಉಪಕರಣಗಳಿಂದಲೂ ಜಾಹೀರಾತುಗಳಿಂದಲೂ, ಭಾಷಣಕಥೆಗಳಿಂದಲೂ ಸರ್ವತ್ರ ಸ್ವದೇಶಿ ಪ್ರಚಾರದ ಮಹತ್ತರ ಕಾರ್ಯವನ್ನು ಭರದಿಂದ ಸಾಗಿಸಿ, ತಮ್ಮ ಧ್ಯೇಯದ ಫಲಪೂರ್ಣತೆಗೆ ಅಖಂಡವಾಗಿ ಪ್ರಯತ್ನಿಸುತ್ತಿರುವರು

ದ್ರವ್ಯಬಲ, ಸೇನಾಬಲ ಮಂತ್ರಬಲ ಮಗ್ಗರೆ ಸರ್ವಬಲ ಸಮೃದ್ಧವಾಗಿಯೂ ಲೋಕದ ಸುಸಂಸ್ಕೃತ ರಾಷ್ಟ್ರಖಂಡಗಳಲ್ಲಿ ಪ್ರಥಮಸ್ಥಾನವನ್ನು ಪಡೆದು ಸರ್ವವಿಧದಿಂದಲೂ ದೇದೀಪ್ಯಮಾನವಾಗಿ ಲ-ಲ-ನೆ ವಿರಾಜಿಸುತ್ತಿರುವ ಈ ಇಂಗ್ಲಂಡೇ ತನ್ನ ಬಡಕುಟುಂಬಗಳ ಉದರ ಪೋಷಣೆಗೆ ಈ ರೀತಿಯಿಂದ ಕೆಲಸಮಾಡಬೇಕೆಂದು ಬಂದಿರುವಾಗ, ಪ್ರಕೃತ ದಾರಿದ್ರ್ಯಲಕ್ಷ್ಮಿಯ ಧಾಳಿಗೆ ಒಳಗಾದ ಹಿಂದೀಯರು ತಮ್ಮ ಕರ್ತವ್ಯವನ್ನರಿತು, ಕೆಲಸಮಾಡುವ ಮಹಾತ್ಮಾಕಾಂಕ್ಷೆಯಿಂದ ಮುಂದೆ ಒಂದು "ಬೈ ಇಂಡಿಯನ್" ಚಳವಳದ ತಳಹದಿಗ ತಮ್ಮ ಸಹಕಾರ ಪುರಸ್ಕಾರಗಳಿಂದ ಸಹಾಯ ಮಾಡುವರ ಪ್ರಕೃತ ದೇಶದಲ್ಲಿ ನಡೆಯುತ್ತಿರುವ ಪ್ರಬಲ ಆಂದೋಲನದ ಅವಶ್ಯಕತೆಯನ್ನು ನೀಗಾಡಬಹುದಾಗಿದೆ ಸ್ವದೇಶಿಯೇ ಸ್ವರಾಜ್ಯ!

ಹಿಂದೀ ಪ್ರೇಮಿ!

೧೧೦೦ ರೂ ಬಕ್ಷೀಸು.

೨೦ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಮದನಮಸ್ತ ಪಾಕು. ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಪತನವಾಗೋಣ, ಗರ್ಮಿಯ ಪರಿಣಾಮ, ಎಂಥದಾದ್ದರೂ ಪರಮ, ಮೈನೂಸೋಣ, ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ, ಮತ್ತು ತೂಕ ಹೆಚ್ಚುತ್ತವೆ ೨೦ ದಿವಸ ಸಾಲುವ ೮೮ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ ಖ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫ ಮಾತ್ರ ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ ಖಟಖಟೆ, ಎಲ್ ಎಮ್ ಎಂಡ್ ಎಸ್, ಜೆ ಪಿ, ಮುಂಬಯಿ—ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ, ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು	ಡಾಕ್ಟರ ಪಿ ಎನ್ ದತ್ತ, ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ—ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ—ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ, S M C

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಒಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನುಮಾಡಿದರೂ ಸುರುವಾಗುವುದಿಲ್ಲ ಮೊದಲೆ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ವೈದ್ಯ ಡಾಕ್ಟರ ಬಿ ಎ ವೈದ್ಯ, ಎಲ್ ಸಿ ಪಿ ಎಸ್ ಕೆಳವಾಮಾಹಿಮ, ರಾಣೀ—ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ೦||೦

ವಿಳಾಸ—ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಂಕುಶವು ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ.—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ!
ದಶಮೂಲ ಸುಪ್ರಿಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆರ್ಯಾರೋಗ್ಯರಕ್ಷ" ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ

ಅಪೇಕ್ಷಿಸುವ ಬಹುಮಾನಗಳು.

ಹಗಲಿಗೆ ಹಾಕುವ ಬಿಳಿ ಒಪ್ಪವ ಕಾಶೀ ಸಿಲ್ಕುಗಳು 6 ಮೊಳ ಉದ್ದ 2½ ಮೊಳ ಅಗಲ ರೂ. 7 ಲಾಗಾಯಿತು ರೂ 25 ವರೆಗೆ. ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಕೆ ಖಣಗಳು, ಮಡಿಗಳು, ಎಲವಸ್ತ್ರ, ಪಚ್ಚನಿ, ಪೇಟ, ಇತ್ಯಾದಿ ಉಣ್ಣೆಯ ಶಾಲು, ಖದ್ದರ್ ಮಡಿ, ಧಾವಳಿ, ಕಸ್ತೂರಿ, ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು, ಜರಿಟೊಪ್ಪಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು. ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರಮೂಲಕ ಕೇಳಿಕೊಳ್ಳಬಹುದು

ವಿಳಾಸ—

ರಾವು ವಿಶ್ವನಾಥರಾವ್ ಎಂಡ್ ಬ್ರದರ್ಸ್
ದುರ್ಗಾಘಾಟ್, ಕಾಶೀ, ಬನಾರಸ್ ಸಿಟಿ

"The Udipi Mutual Benefit Fund, UDIPI."
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಪ್ರೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಡ್ಡುಪ್ರಾಣಭಟ್ಟ. ಪ್ರೊಪ್ರೈಟರ್.

Canara Bank Limited.
ಕೆನರಾ ಬ್ಯಾಂಕ್ ಲಿಮಿಟಡ್.

Head Office.— **MANGALORE.**

Established July 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal, Kasargod, Cochin, Udipi, Gangolli, Coondapur, Bombay, Puttur, Calicut & Alleppey**

ಬ್ರಾಂಚುಗಳು:—
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised and fully paid up Capital Rs. 300,000 - 0 - 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ 300,000 0—0
Reserve and other sinking Funds Rs 526,000 - 0 - 0	ರಿಸರ್ವ ನಿಧಿ ಮತ್ತು ಇತರ ಫಂಡುಗಳು ರೂ. 526,000—0—0
Amount invested on G P Notes Rs 818,092 - 12 - 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ 818,092—12—0
Rates of interest on fixed deposits at Head Office and Branches are 6½% for 2 Years 6% ,, 1 Year	ಖಾಯಂ ಠೇವಣಾತಿಗಳ ಮೇಲೆ ಕೊಡಲಾಗುವ ಬಡ್ಡಿ ದರ—ಎರಡು ವರುಷಗಳಿಗೆ ಸೇಕಡಾ 6½% 1 ವರುಷಕ್ಕೆ ಸೇಕಡಾ 6

Current Account Deposits received and interest allowed on daily balance of Rs 50 and above that on multiples of Rs 10/-@ 3% from 1st Janauary to 30th June and @ 2% from 1st July to 31st December. No interest will be allowed unless the depositor earns not less than Rs 5/ during a period of 6 months ending either 30th June or 31st December in any year.

Except by special arrangement no interest is allowed on sums exceeding Rs 10,000/ in the case of Head Office and Cochin Branch and on sums not exceeding Rs 15,000 in the case of Bombay Branch and on sum exceeding Rs [illegible],000 in the case of other Branches

For further particulars please apply to —

Canara Bank Ltd.,
Mangalore [illegible]—2—1932

K. Venkat Rao,
Secretary & Treasurer

The Pangal Nayak Bank, Ltd.

Head Office. Udipi — *Established 1920* — **Branch Office Mangalore**

Authorised Capital Rs. 2,00,000-	Paid up Capital Rs- 1,75,000-
Issued Capital Rs- 1,75,000-	Reserve and other Funds Rs 1,80,000

1 **Receives Fixed Deposits at the following favourable rates**

For 3 months at 5% — For 12 15 18 or 21 months at 6%
,, 6 or 9 months at 5½% — ,, 24 months at 6½%

Interest being payable every 3 months

ಖಾಯಂ ಠೇವಣಾತಿಗಳು ಪ್ರತಿ 3 ತಿಂಗಳಿಗೆ ಬಡ್ಡಿಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ಸಾ. ಶೆ 5%, — 12, 15, 18, ಯಾ 21 ತಿಂಗಳಿಗೆ ಸಾ ಶೆ. 6
6 ಯಾ 9 ತಿಂಗಳಿಗೆ ಸಾ ಶೆ 5½%, — 24 ತಿಂಗಳಿಗೆ ಸಾ ಶೆ. 6½.

2 **Current Accounts** opened free of charge and interest allowed **Cumulative Savings Bank and Short Notice Deposits** received at favourable rates of interest

3 The Bank transacts every description of Banking business

4 For full particulars and for copies of the amended **Rules of Business,** please apply to the **Secretary** at the Head Office at Udipi or to the **Agent** Mangalore Branch.

Office of the Bank,
Udipi, 1—3—'32

P Laxman Nayak,
Secretary

ಇಪ್ಪತ್ತು	ವಯಸ್ಸಿನಲ್ಲಿ	ಮಡುಕು
ಮೂವತ್ತು	ರಲ್ಲಿ	ಮುಚ್ಚಟ
ನಲವತ್ತು	ಬಾಗ	ನರಳುವದು
ಐವತ್ತು	ಆದರೆ	ಆಲಸ್ಯ
ಅರುವತ್ತು	ಕೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್ಕು

ಉಪಯೋಗಿಸಿ. ಡಬ್ಬಿ 1ಕ್ಕೆ ಕ್ರಯ ರೂ. 1—0—0.

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯೆ** ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್.

ಮದನಮಂಜರಿ ಔಷಧಿಗಳ ಏಜಂಟರು:— ವಿ. ಜಿ. ಚಂದರಾನಾ, ಮಿಶನ್ ಬೀದಿ, ಮಂಗಳೂರು.

ಯುದ್ಧ ನಿವಾರಣೆಯ ಪ್ರೋತ್ಸಾಹಕರು

ಯಾರೆಂದು ತಿಳಿಯುವ ಮಾರ್ಗವೇ ಇಲ್ಲ. ಇಂಗ್ಲೆಂಡು ಇಂತಹ ಪ್ರೋತ್ಸಾಹಕರಲ್ಲಿ ಮೊದಲನೆಯದೆಂದು ಜಗತ್ತಿಗೆ ಸಾರಿಕೊಂಡಿದೆ. ಆದರೆ, ಇಂಗ್ಲಿಷರದೊಂದು ಕಮಿಟಿಯ ವಿಚಾರದಲ್ಲಿ, ಇಂಗ್ಲೆಂಡಿನ ಮಂತ್ರಿಮಂಡಲದವರೂ ಧರ್ಮ ಗುರುಗಳೂ ಸಹ ಯುದ್ಧದ ಹತ್ಯಾರುಗಳನ್ನು ತಯಾರಿಸು ತ್ತಿರುವ ವಿಕರ್ಸ ಕಂಪೆನಿಯಲ್ಲಿ ಪಾಲುಗಳನ್ನು ಕೊಂಡು ಕೊಂಡಿರುವಂತೆಯೂ ತಿಳಿದುಬಂದಿದೆ. ಮೊನ್ನೆ ನಡೆದ ಪರಿ ಷತ್ತಿನಲ್ಲಾದರೂ ಸನ್ನಾಹಗಳ ಮಿತಿಯನ್ನು ನಿರ್ಧರಿಸಬೇಕೆಂದ ಲ್ಲದೆ, ಅದನ್ನು ಕಡಿಮೆಮಾಡುವುದಕ್ಕಾಗಿ ಬ್ರಿಟಿಷ ಪ್ರತಿನಿಧಿ ಸೈಮನರು ಮಾತೆತ್ತಲಿಲ್ಲ. ವಿಷವಾಯು ಮತ್ತು ಪ್ಲೇಗ್ ರೋಗದ ಸೋಂಕು ತಗಲಿಸುವ ಅಣುಗಳನ್ನು ತಯಾರಿಸುವದ ರಿನಕ್ಕೆ ೨೦೦೦ ಪವನುಗಳನ್ನು ಬ್ರಿಟಿಷರು ವ್ಯಯಿಸುತ್ತಾರೆ. ಕಳೆದ ಮಹಾಯುದ್ಧದ ಖರ್ಚು ಒಟ್ಟು ೭೦೦೦೦ ಮಿಲಿಯ ಪವನು ಆಗಿದ್ದು, ಅದರಲ್ಲಿ ಅರನೇ ಒಂದಂಶವು ಬ್ರಿಟಿಷ ಸರ ಕಾರದ ಮೇಲೆ ಬಿದ್ದಿದೆ. ಹೀಗಾಗಿ, ಬ್ರಿಟನ್ನಿನ ವಾರ್ಷಿಕ ವ್ಯಯ ವಾದ ೮೦೦ ಮಿಲ್ಲಿಯ ಪವನಿನಲ್ಲಿ ೫೦೦ ಮಿಲಿಯ ಪವ ನನ್ನು ಹಿಂದಣ ಸಾಲಕ್ಕೂ ಮುಂದಣ ಸಿದ್ಧತೆಗೂ ವ್ಯಯಿಸ ಬೇಕಾಗಿದೆ.

ಮುಸ್ಲಿಮರ ಕೊನೆಯ ಮಾತು

ಜೂನ್ ತಿಂಗಳ ಅಂತ್ಯದೊಳಗಾಗಿ ಬ್ರಿಟಿಷ ಸರಕಾರವು ಮುಸ್ಲಿಮರ ಹಕ್ಕು ಪ್ರಾತಿನಿಧ್ಯಗಳ ವಿಷಯವಾಗಿ ನಿರ್ಧರಿಸ ಲಾರದಿದ್ದಲ್ಲಿ ಜುಲೈ ೩ನೇ ತಾರೀಕಿಗೆ ಮುಸ್ಲಿಮರು ಸೇರಿ ಯಾವ ಉಪಾಯಗಳಿಂದ ಸರಕಾರಕ್ಕೆ ಬುದ್ಧಿಗಲಿಸಬೇಕಾಗು ವುದೂ ಎಂದು ನಿರ್ಣಯಿಸುವರೆಂಬಾಗಿ ಮುಸ್ಲಿಮ ಮಂತ್ರಿಗಳಿಗೂ ತಿಳಿಸಿರುವರು. ಇದರಲ್ಲಿ ವಿಚಿತ್ರವೆಂದರೆ, ಇಲ್ಲಿನ ಎಂಗ್ಲೊ ಇಂಡಿಯನ್ ಪತ್ರಿಕೆಗಳೂ ಬ್ರಿಟಿಷ ಪತ್ರಿಕೆಗಳೂ ಈ ಪ್ರಸ್ತಾ ಪವನ್ನು ಪ್ರಕಟಿಸಿಲ್ಲ, ಅಥವಾ ಪ್ರಕಟಿಸಿದರೂ ಟೀಕಿಸಿಲ್ಲ. ಕಾಂಗ್ರೆಸ್ಸಿನವರು ಮಾತ್ರ, ತಮ್ಮ ಪಕ್ಷದ ಹೇಳಿಕೆಯನ್ನು ಸರಕಾರವು ಮನ್ನಿಸಿ ತೃಪ್ತಿಕರ ಸಮಾಧಾನ ಮಾಡದಿದ್ದರೆ ಅಸಹಕಾರ ಮಾಡುವೆವೆಂದೊಡನೆಯೇ, ಬುಲೆಟಿನ್ನುಗಳು ಹೊರಟವು, ಮುಖಂಡರನ್ನು ದಸ್ತಗಿರಿ ಮಾಡಿ, ಇತ್ಯಾದಿ ಕಠಿಣ ಕಾನೂನುಗಳು ಜಾರಿಗೆ ಬರುವಂತಾಯಿತು. ಬಹುಶಃ ಮುಸ್ಲಿಮರ ಈ ಶರ್ತಕ್ಕೆ ಬೆದರುವವರಿಲ್ಲವೋ, ಅಥವಾ ಈ ಶರ್ತಕ್ಕೇನೂ ಅಷ್ಟು ಬೆಲೆ ಕಟ್ಟಿಲ್ಲವೋ ತಿಳಿದಿಲ್ಲ. ಈ ಮುಸ್ಲಿಮ ನಿರ್ಣಯವು ಮಂಜೂರಾಗುವಾಗಲಾದರೂ, ಯಾವ ಭಾಷಣ ಗಳೂ ಆಗಿಲ್ಲ, ಸರ್ ಫಜಲಿ ಹುಸೇನರ ಊರಾದ ಲಾಹೋರಿ ನಲ್ಲೇ ಈ ಸಭೆ ನಡೆದು ಹೀಗೆ ನಿರ್ಣಯ ಮಾಡುವಾಗಲೂ ಮುಂದಿರದ ಹೊರಗ ಮುಸ್ಲಿಮ ರಾಷ್ಟ್ರೀಯ ಪಕ್ಷದವರ ನುಗ್ಗಾಟವಿತ್ತು. ಮುಸ್ಲಿಮರ ಈ ಪಕ್ಷವು ಸಾಮಾನ್ಯವಾಗ ಬೆಂಬಲ ಗಳಿಸಿಕೊಳ್ಳುತ್ತಲಿದೆ ಎಂದೇ ಈ ಒಗೆಯ ಶರ್ತ ಸೂಚನೆಯನ್ನು ತ್ವರೆಯಲ್ಲಿ ಮಂಜೂರುಮಾಡಿ ಸಭೆ ಹರಿಯ ತೆನ್ನಬೇಕು.

ಮುಂಬಾಯಿಯಲ್ಲಿ ಹೊಸ ಮಾರ್ಕೇಟು

ಶುದ್ಧ ಸ್ವದೇಶೀ ಬಟ್ಟೆಗಳನ್ನು ಮಾರುವುದಕ್ಕಾಗಿಯೇ ಹೊಸದೊಂದು ಮಾರ್ಕೇಟು ಮೊನ್ನೆ ಪ್ರತಿಷ್ಠೆಹೊಂದಿತು. ಕೇವಲ ಹರತಾಳಗಳಿಂದ, ಅಲ್ಲವಾಗಿ ವಿದೇಶೀ ಬಟ್ಟೆ ಅಂಗಡಿ ಗಳುಳ್ಳ ಮಂಗಳದಾಸ್ ಅಥವಾ ಬೇರೆ ದೊಡ್ಡ ಮಾರ್ಕೇಟು ಗಳನ್ನು ತೆರೆಯಲು ಇದುವರೆಗೆ ಅವಕಾಶವೇ ಇಲ್ಲವಾಗಿದ್ದಿತು. ಈಗ ಈ ಹೊಸ ಮಾರ್ಕೇಟನ್ನು ತೆರೆದ ಕಾರಣ, ದೇಶಿಯ ಬಟ್ಟೆ ಮಾರಾಟಕ್ಕೆ ಅತಂಕವೇನೂ ಉಂಟಾಗಲಾರದು. ಸರ ಕಾರದ ಇಷ್ಟೆಯೆಂದರೆ, ಎಲ್ಲಾ ಮಾರ್ಕೇಟುಗಳನ್ನು ಇನ್ನು ಮುಚ್ಚದೆ ತೆರೆಯಬೇಕೆಂದಾಗಿದೆ. ಹತ್ತಿ ಮಾರ್ಕೇಟನ್ನು ಇಷ್ಟುಕಾಲ ಮುಚ್ಚಿದ್ದರು, ಇನ್ನು ಅದನ್ನು ವ್ಯಾಪಾರಿಗಳೇ ಪರ್ಯಾಲೋಚಿಸಿ, ತೆರೆವರೆ ಅನುಕೂಲ ನೋಡುವಂತೆ ಸರಕಾರವು ತಿಯಾಮಿತಿಗೊಪ್ಪಿಕೊಂಡಿದೆ. ಆದರೆ, ಹಿಂದಣ ವರ್ಷದ ಬೆಳೆಯ ಸೇಕಡಾ ೭೦ರಷ್ಟು ಬೆಳೆಯು ಈ ವರ್ಷ ಉತ್ಪನ್ನವಾ ಗಿರುವ ಕಾರಣ, ಹತ್ತೀ ಮಾರ್ಕೇಟನ್ನು ತೆರೆದರೂ ವ್ಯಾಪಾ ರವು ಹೆಚ್ಚಾಗುವಂತಿಲ್ಲ.

ಅಸ್ಸಾಮು ಗವರ್ನರರ ಬುದ್ಧಿವಾದ

ಸರ್ ಲೊಸ್ಲಿ ಹೆಮ್ಮೊಂಡ ಸಾಹೇಬರು, ಅಸ್ಸಾಮಿನ ಲೆಜಿ ಸ್ಲೆಟಿವ್ ಕೌನ್ಸಿಲಿನ ಸಭೆಯ ಕೊನೆಯ ದಿನ, ಭಾಷಣಮಾ ಡುತ್ತಾ—"ಜಾತಿಸಮಸ್ಯೆಯನ್ನು ಮುಗಿಸದ ವಿನಹ ಯಾವ ಪ್ರಜಾಸತ್ತಾತ್ಮಕವಾದ ಸರಕಾರವಾದರೂ ಜಯಶೀಲವಾಗಲಾ ರದು. ಆದಕ್ಕಾಗಿ ಯಾವನೊಬ್ಬ ವೋಟರನು ಅವನಿಗೆ ಒಪ್ಪುವ ಎಂತಹ ಪ್ರಾತಿನಿಧ್ಯವನ್ನಾದರೂ ಒಪ್ಪಿಕೊಂಡು ವೋಟು ಕೊಡು ವಂತಾಗಬೇಕೆಂದೇ ಅಸ್ಸಾಂ ಸರಕಾರದ ಅಭಿಪ್ರಾಯವಾಗಿದೆ" ಎಂದರು. ಯಾವ ಬಗೆಯ ತಿದ್ದುಪಾಟುಗಳು ಉಂಟಾದರೂ, ರಾಜನೀತಿಯಲ್ಲಿ ಮತಸಂಬಂಧವಾದ ಬಿಕ್ಕಟ್ಟುಗಳ ಶರ್ತ ಗಳನ್ನು ಹಾಕುವಂತಹ ತಿದ್ದುಪಾಟುಗಳಾಗ ಬಾರದೆಂದೂ, ಅವರು ನುಡಿದರು. ಲೋರ್ಡ್ ಲೋಥಿಯನ್‌ರವರೂ, ಅವರ ಫ್ರ್ಯಾಂಚಾಯಿಸ್ ಕಮಿಟಿಯೂ ಈ ವಿವೇಕಪೂರ್ಣವಾದ ಸಲಹೆ ಯನ್ನು ಗಮನಕ್ಕೆ ತಂದುಕೊಂಡು, ಈ ಸಲಹೆಯು ಕಾಂಗ್ರೆ ಸ್ಸಿಗೆ ಸಂಬಂಧವೇನೂ ಇಲ್ಲದ ಮುಖದಧಿಕಾರಿಯೊಬ್ಬರದೆಂಬ ಅಭಿಮಾನದಿಂದಲಾದರೂ ವರ್ತಿಸಿದರೆ ಕ್ಷೇಮವಾದೀತು.

ಹೋರರ ಹೋರಾಟವೇ ಬೇರೆ

ಕಳೆದ ಗುರುವಾರ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡು ವಾಗ ಕರ್ನೇಲ ಹೋರರು ತಮ್ಮ ಮನಸ್ಸಿನಲ್ಲಿ ಸ್ವಲ್ಪ ಮಾಪಾರ್ಟು ಉಂಟಾದಂತೆ ತೋರಿಸಿಕೊಂಡರು. ಮೂರು ತಿಂಗಳು ತನಕ ಈಗ ಬುಲೆಟಿನ್ನುಗಳು ಜಾರಿಯಲ್ಲಿ ಇರುವು ದಾದರೂ, ಈ ಬುಲೆಟಿನ್ನುಗಳು ಸಮೂಲ ರೋಧವನ್ನು ಮಾಡಿ ಉತ್ಪಾತಗಳನ್ನು ಅಡಗಿಸುವ ಹಾಗೂ ಹಿಂದೀಯರ ಅನು ದಿನದ ಜೀವನದ ಮೇಲೂ ಕಠಿಣ ಪರಿಣಾಮವುಳ್ಳವೆಂದು ಹೋರರೇ ಹೇಳಿದರೂ, ಬುಲೆಟಿನ್ನುಗಳಿಂದಲೇ ಚಿರಕಾಲಕ್ಕೂ ರಾಜ್ಯವಾಳು ವುದು ಸಂಗತವಲ್ಲವೆಂದೂ ಅವರು ಅಪ್ಪಣೆ ಕೊಟ್ಟರೂ,— ಇನ್ನು ಅವುಗಳನ್ನು ರದ್ದುಮಾಡಲು ಮುಹೂರ್ತವು ಒದಗಿಲ್ಲ ವೆಂದೂ ಹೇಳಿರುವರು. ಡಿಸೆಂಬರಿಗಿಂತ ಈಗ ವಸ್ತುಸ್ಥಿತಿಯು ಉತ್ತಮವಾಗಿದೆ ಎಂದು ಅವರು ಹೇಳುವರಾದರೂ ಆ ಸಲ ಅಂಕೆ ಸಂಖ್ಯೆಗಳ ದಾಖಲೆಗಳಿಲ್ಲ. ಭಾರತದ ಸ್ಥಿತಿಯು, ಜನ ಗಳ ಜೀವನವನ್ನು ಸಹ ಅತಂಕಿಸಿ ಬೆದರಿಕೆಗೊಳಿಪಡುವಷ್ಟು ಬಲವಾದ ಬುಲೆಟಿನ್ನುಗಳಿದ್ದರೂ, ಇನ್ನೂ ಕ್ಷೇಮವಾಗ ಬುಲೆ ಟಿನ್ನುಗಳು ರದ್ದಾಗಲು ಅವಕಾಶವು ಇನ್ನೂ ತೋರುವುದಿಲ್ಲ ವೆಂದು ಕರ್ನೇಲರು ಹೇಳುವುದಾದರೆ,—ಪಟ್ಟಾಳೆಯಿಂದ ವರ್ತ ಮಾನ ಸ್ಥಿತಿಯನ್ನು ತಿದ್ದಿ ಶಾಂತಗೊಳಿಸುವುದಕ್ಕಾಗಿಲ್ಲವೆಂದೇ ಅರ್ಥವಾಗುವುದಿಲ್ಲವೆ?

ಇತ್ತಂಡಗಳ ಪರಾಮರ್ಶೆ ಒಪ್ಪಿಗೆಗಳಿಲ್ಲದೆ

ಎಂದೂ ಸಂಧಾನವಾಗುವುದೆ? ಅತಿ ಪ್ರಬಲವೆಂದು ಯಾವ ಕಾಂಗ್ರೆಸ್ ಸಭೆಯನ್ನು ನೈಸರ್ಗಿಯರೇ ಸ್ವತಃ ಕರ ದರೋ, ಅದರ ಹಸರತ್ತುವ, ಅದರ ಕೆಲಸಮಾಡುವ, ಅದರ ಕಾರ್ಯದಕ್ಷತೆ ವಹಿಸುವ ಸಮಸ್ತರು ಕಾರಾಗ್ರಹದಲ್ಲಿರುವಾಗ, ಅವರೇ ಒಪ್ಪಂದವಾಗಲು ಅಧಿಕಾರವುಳ್ಳ ಜನರಾಗಿರುವಾಗ, ಇಡೀ ಜನಾಂಗಕ್ಕೆ ಸಮ್ಮತವಾಗುವಂತಹ ಯಾವ ತಿದ್ದು ಪಾಟುಗಳನ್ನು ಹೇಗೆ ಮಾಡಬಹುದೋ ತಿಳಿಯದಾಗಿದೆ. ಇತ್ತಂಡಗಳ ಒಪ್ಪಿಗೆ ಎಂಬೀ ವಿಚಾರವನ್ನು ಇಂಡಿಯಾ ಸರ ಕಾರದ ಮಾತನಾಡುವುದು ಅಷ್ಟು ಅರ್ಥಸೂಚಕವಾಗಿಲ್ಲ. ಮುಖ್ಯ ತಿದ್ದುಪಾಟುಗಳಾವುವೆಂದು ಹೋರರೇ ಸೂಚಿಸಿರು ವರು, ಸಾಮಾಜಿಕ ಪ್ರಾತಿನಿಧ್ಯವನ್ನು ಕುರಿತು ಮುಖ್ಯ ಪ್ರಧಾ ನರು ಸೂಚಿಸಿರುವರು, ಉಳಿದುದೆಲ್ಲವನ್ನು ಮಂತ್ರಿ ಮಂಡಲವು ನಿರ್ಧರಿಸುವುದು. ಇತ್ತ ಮುಸ್ಲಿಮರು ತಮ್ಮ ಖಂಡಿತ ನಿರ್ಣಯ ವನ್ನು ಮಂಜೂರು ಮಾಡಲಿ, ಮೊದಲೇ ಟರು ಮುಖ ನಿಂತು ಮೌನ ಧರಿಸಲಿ, ಒಂದು ಕಡೆ ಮೈಲು, ಒಂದು ಕಡೆ ವೋಟು ಎಂಬಂತಹ ಸುಧಾರಣೆ ಕೊಡಲು ಕಮಿಟಿಗಳು ದೇಶ ಸಂಚಾರ ಮಾಡಲಿ,—ಹೀಗಾದರೆ, ಬ್ರಿಟಿಷ ಸಾಮ್ರಾಜ್ಯದಲ್ಲಿ ಎಂದಂಗ ವಾಗ ಭಾರತವರ್ಷವು ಉಳಿಯುವ ಹಾಗೆ ಬ್ರಿಟನ್ನು ಯಾವ ರೀತಿಯಲ್ಲಿ ಯಾರೊಡನೆ ಎಂತಹ ಒಪ್ಪಂದವನ್ನು ಯಾವಾಗ ಹೇಗೆ ಮಾಡಬಹುದೋ, ಎಂದು ಸರ್ ಸಾಮುವೇಲ ಹೋರರೇ ತಿಳಿಯಲಾರರು.

ದೃಷ್ಟಿ ಉಂಟಾಗುವುದು' ಎಂದು ಪಂಜಾಬು ಸರಕಾರದ ದೂರು. ಇದರಂತೆಯೇ ಜಾತಿವಾರು ಮೆಂಬರಿಕೆ, ಜಾತಿವಾರು ನೌಕರಿ ಇವುಗಳಿಂದಲೂ ಬಾಂಧವ್ಯಕ್ಕೂ ಸಮಾಜಕ್ಕೂ ಹಾನಿಯಾಗು ವುದೆಂದು ಸರಕಾರವೇಕೆ ದೂರುವ ನ್ಯಾಯಕೃತ್ಯವನ್ನು ಮಾಡು ವುದಿಲ್ಲ?

ನೋಟಗಳು

NOTE....S

ಹಣಕಾಸುಗಳು ಕಾಸಿನ ರೂಪದಲ್ಲಿ ಇದ್ದರಾದರೂ ಸೌಕರ್ಯವೇ ಸೌಕರ್ಯವೆಂದು ನೋಟುಗಳನ್ನೇ ಜಮೆಮಾಡಿ ಟ್ಟರೆ, ಇದುವರೆಗೆ ಗೆದ್ದಲು, ಕಳ್ಳರು, ಬೆಂಕಿ ಮೊದಲಾದುವು ಅವು ಗಳನ್ನು ನಾಶಮಾಡುವುದಾಗಿ ಗಾದೆ ಇತ್ತು. ಈಗ ವಿಾನರಿ ರಾಜ್ಯ ದಲ್ಲೂ ಆರ್ಥಿಕ ದುರವಸ್ಥೆ; ಒಜೀಟು ಸರಿಹೋಗದೆ ನಿಡಾ ಮಂಡಾ ರೈಲ್ವೆಸ್ಟೇಶನಿನಿಂದ ಟಿಕೇಟುಮಾರಿ ಕೂಡಿಸಿಟ್ಟ ೨೦೦ ರೂಪಾಯಿ ನೋಟುಗಳನ್ನೆ ಮಂಗಗಳು ಲೂಟಾಯಿಸಿದುವು. ರೈಲ್ವೆ ಪೋಲೀಸರು ಅವರಿಗೆ ಚಾರ್ಜು ಮಾಡಲು ಅವಕಾಶ ಸಿಗಲಿಲ್ಲ!

• • • •

ಇಂಗ್ಲೆಂಡಿನಲ್ಲಿ ೩, ಜರ್ಮನಿಯಲ್ಲಿ ೬, ಅಮೇರಿಕದಲ್ಲಿ ೯ ಮಿಲಿಯ ಜನರು ನಿರುದ್ಯೋಗಿಗಳಾಗಿರುವ ಕಾರಣ, ಅಲ್ಲಿ ಸ್ವದೇಶಿ ವ್ರತವೇ ಧಾರಾಳವಾಗಿ ಪ್ರಚಾರಕ್ಕೆ ಬರುತ್ತಿದೆ. ನಮ್ಮಲ್ಲಿನ ನೂರು ಮಿಲಿಯ ನಿರುದ್ಯೋಗಿಗಳಿಗೆ ಜೀವನೋ ಪಾಯವಾಗುವ ಹಾಗೆ ಇಲ್ಲಿ ಸ್ವದೇಶಿಯನ್ನೇ ಪ್ರಬಲಿಸಬೇಕಾ ಗಿದೆ. ಇಂಗ್ಲೆಂಡಿನಲ್ಲಿ ರಾಜಕುಟುಂಬವೇ ಸ್ವದೇಶಿ ಪ್ರೋತ್ಸಾ ಹಕ್ಕೆ ಮುಂದುವರಿದಿರುವಾಗ, ನಮ್ಮಲ್ಲಿ ಸರಕಾರವು ಸ್ವದೇಶಿಗೆ ಅಡ್ಡಿಮಾಡದಿರುವುದು ಸಂತೋಷವೇ!

• • • •

ಕೌನ್ಸಿಲುಗಳಲ್ಲಿ, ಸರಕಾರವನ್ನು ಚೆನ್ನಾಗಿ ಜರೆಯುತ್ತುಂಬಾ ಟೀಕಿಸುವ ಸೂಚನೆಗಳನ್ನು ತಂದು, ಮನಸ್ಸುಸ್ಥಿಯಾಗುವಷ್ಟು ಭಂಗಿಸಿ, ಓದುವ ವೋಟರರಲ್ಲಿ ತಮ್ಮ ಪ್ರತಿನಿಧಿಯನ್ನು ಕುಂಟು ಮಾಡಿ ಪಾಲ ಹಾಕಿ ಕೊಂಡಾಡುವ ಉತ್ತಮಫಲವನ್ನು ಒಪ್ಪಿಸುವ ಮೆಂಬರರ ಕೊನೆಗೆ ಸೂಚನೆಯನ್ನು ವೋಟಿಗೆ ಹಾಕದೆ ಹಿಂತೆಗ ವುದು ಬಂದು ಬೆಳೆದು ಬರುವ ರೂಢಿಯಾಗಿದೆ. ಇಂತಹರು ಭಾಷಣ ಮಾಡುವ ಮೊದಲೇ, ಸೂಚನ ವೋಟಿಗೆ ಹಾಕದಿರುವಲ್ಲಿ ಇಂತಿಷ್ಟು ರೂಪಾಯಿಗಳನ್ನು ವೋಟರರಿಗೆ ತೆರಬೇಕೆಂದು ಕಟ್ಟು ಇದ್ದಲ್ಲಿ, ನಾಲಿಗೆಯ ತುರಿಕೆಯು ಶಹಬಾಸ್ ಗಿರಿಯು ಕುಸಿದು ಬೀಳುವುದಿಲ್ಲವೇ?

• • • •

ಅರಸುಗಳೂ ಭಾರತ ಸ್ವರಾಜ್ಯದಲ್ಲಿ ಸೇರುವ ಇಷ್ಟೆ ಮುಳ್ಳವರು. ಪ್ರತಿನಿಧಿಗಳೊಳಗೆ ಮೂರರಲ್ಲೊಂದು ಪಾಲು ಅವರಾಗಬೇಕೆಂಬ ಛಲವಿದೆ. ಮೂರರಲ್ಲಿ ಇನ್ನೊಂದು ಪಾಲು ಮುಸ್ಲಿಮರಿಗಾಗಬೇಕು, ಉಳಿದ ಪಾಲು, ನೂರರಲ್ಲಿ ೩೦ ಮಂದಿ ಬಹುಸಂಖ್ಯಾಕರು ಮತ್ತು ಇತರ ಅಲ್ಪಸಂಖ್ಯಾಕರು ಇತ್ಯಾದಿ ಅಲ್ಪಸಂಖ್ಯಾಕರೆಂದರೆ, ಯುರೋಪಿಯರು, ಕ್ರಿಸ್ತರು, ಸ್ತ್ರೀಯರು ಇವರ ಅರ್ಥವಾಗ ವರು. ಹೀಗಾದರೆ, ಬಹುಸಂಖ್ಯಾಕರಾದವರಿಗೆ ನೂರರಲ್ಲಿ ಹತ್ತು ಮಂದಿಯನ್ನು ಮಾತ್ರ ಮೆಂಬರರನ್ನಾಗಿ ಆರಿಸಲು ಅವಕಾಶವು ಖಂಡಿತ ವಾಗಿ ದೊರೆಯುವುದೆಂದು ಬಗೆ, ಈ ಅರಸುಗಳ ಸೂಚನೆಗೆ ಸರ್ವಸಮ್ಮತವಾಗಲೆಂದೇ ಹಾರೈಸದೆ ಬೇರೆ ಉಪಾಯವಿಲ್ಲ.

• • • •

Minimum force ಎಂಬ ಶಬ್ದಗಳ ಅರ್ಥವು 'Positive cruelty' ಎಂಬದಾಗಿ ತಿಳಿಕೊಳ್ಳಬೇಕೆಂದು ಎಂದು ಪತ್ರಿಕೆಯ ಸೂಚನೆ. ಅದು ಎಂದರ ಕೊನೆಲು' ಎಂದು ಕನ್ನಡ ಶಬ್ದಕೋಶದ (ಗಾಢತನೆಯ ಆವೃತ್ತಿ) ಅರ್ಥ.

• • • •

ಕಾನೂನುಗಳಲ್ಲಿ ಪ್ರೆಸ್ ಕಾನೂನಿನಷ್ಟು ದಯಾಳು ಬುದ್ಧಿರ ಕಾನೂನ ಬೇರೊಂದಿಲ್ಲ. ಕೌನ್ಸಿಲಿನಲ್ಲಿ ಮಾತಾಡಿ ದುದನ್ನು ಪ್ರಕಟಿಸದೆ ಮಾತ್ರ ನೋಡಬಾರದೆಂದಿಲ್ಲ.

• • • •

ಕಾಂಗ್ರೆಸ್ ಸ್ವಯಂಸೇವಕನೊಬ್ಬನು ಸ್ತ್ರೀ ವೇಷವನ್ನು ಧರಿಸಿಯೇ ತನ್ನ ಚಳವಳ ನಡೆಸುತ್ತಿದ್ದನು. ಪೋಲೀಸರು ಸ್ತ್ರೀಯರನ್ನು ಬಹು ಗೌರವದಿಂದ ನಡೆಸುತ್ತಾರಾಗಿ ಬುದ್ಧಿ ವಾತೂ ಹೇಳಿದನು. ಪಾಪ! ಆರು ತಿಂಗಳ ಕಠಿಣ ಸಜೆ ವಿಧಿಸಲಾಯಿತು. ವೇಷ ಧರಿಸಿದ್ದು ತಪ್ಪೊ, ಪೋಲೀಸರು ಗೌರವ ತೋರಿಸಿದ್ದಾರೆಂದು ಹೇಳಿದ ತಪ್ಪೊ? ಎಂದು ಪತ್ರಿಕೆ ಯಲ್ಲಿಲ್ಲ.

• • • •

೩೫ ವರ್ಷದಿಂದ ೨೬ ಶಸ್ತ್ರ ಚಿಕಿತ್ಸೆಗಳನ್ನು ಮಾಡಿಸಿಕೊಂಡ ಹುಡುಗನೊಬ್ಬನು ಈಗ ಆ ಚಿಕಿತ್ಸೆಗಳಿಂದ ಪ್ರಯೋಜನ ದೊರೆಯದೆ ನಷ್ಟಪರಿಹಾರಕ್ಕಾಗಿ ವ್ಯಾಜ್ಯಮಾಡಿರುವನು. ೨೬ ಒಪರೇಶನುಗಳಾದ ಬಳಿಕ ಇವನು ಉಳಿದುದೇ ಜೀವನಷ್ಟ ಪರಿಹಾರವಾದುದರ ಲಕ್ಷಣ ವೆನಿಸದೆ? ಎಂತಹ ಕೃತಘ್ನನು!

• • • •

'ಅಯಾ ಜಾತಿಯವರಿಗೆಂದು ಬೇರೆ ಬೇರೆ ಶಾಲೆಗಳನ್ನಿ ಡುವ ಚಾಳಿಯು ಇನ್ನೂ ಮಾಯವಾಗಿಲ್ಲ. ಇದರಿಂದ ಬಾಂಧ ವ್ಯವು ಬೆಳೆಯದು; ಜಾತಿಯನ್ನೆ ಮಾತ್ರ ನೋಡುವ ಸಂಕೋಚ

1. Good Riding Quality.
2. Gripping Tread.
3. Economical wear.
4. Maximum Resistance to shock

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ.
- ಸಹಕಾರಿ ಸಂಘಗಳ ಅವಸ್ಥೆಯೇನು? ೬
- ಸ್ಫುಟವಿಚಾರಗಳು ೪
- ನೋಟಗಳು ೧೧

ವರ್ತಮಾನ ಸಂಗ್ರಹಗಳು
- ವಿದೇಶ ವರ್ತಮಾನ ೬
- ಒಳದೇಶ ವರ್ತಮಾನ ೬
- ದಕ್ಷಿಣ ಕನ್ನಡ — ಮಂಗಳೂರು, ಕಾರ್ಕಳ, ಉಡುಪಿ, ಪುತ್ತೂರು, ಕಾಸರಗೋಡು, ಬಳ್ಳಾರಿ ೭
- ವಿವಿಧ ಸಮಾಚಾರಗಳು ೯
- ವಿಧವೆಯರ ವಪನವು ಅನಾಚಾರ ೩
- ನಮ್ಮ ಕರ್ತವ್ಯ ೧೧
- ಅರವಿಂದ ಘೋಷ್ ೧೩
- ಸತ್ಯಾಗ್ರಹ ಸಮಾಚಾರ ೧೧

ಸ್ವದೇಶಾಭಿಮಾನಿ.

ತಾ ೧ನೇ ಶುಕ್ರವಾರ ಎಪ್ರಿಲ್ ೧೯೩೨

ಸಹಕಾರಿ ಸಂಘಗಳ ಅವಸ್ಥೆಯೇನು?

ಬಡ ರೈತರನ್ನು ಉದ್ಧರಿಸಿ ದೇಶದ ಸಾಂಪತ್ತಿಕ ಜೀವನದಲ್ಲಿ ನೂತನ ಶಕ್ತಿಯನ್ನುಂಟುಮಾಡುವುದಕ್ಕಾಗಿ ರಚಿಸಲ್ಪಟ್ಟ ಈ ಸಹಕಾರಿ ಸಂಘಗಳ, ಬೇಂಕುಗಳ ಅವಸ್ಥೆಯೇನು? ಒಂದು ಕಡೆಯಿಂದ ಸರಕಾರದ ಮೇಲ್ವಿಚಾರ ಮತ್ತು ಅಧಿಕಾರ, ಇನ್ನೊಂದು ಕಡೆಯಲ್ಲಿ ಸಾರ್ವಜನಿಕ ಪ್ರಾತಿನಿಧ್ಯದ ಆಡಳಿತ. ಇಷ್ಟಾದರೂ ಇವುಗಳ ಸಂಸರ್ಗ ಬಂದವರು ಹಲವು ಕಡೆಗಳಲ್ಲಿ ವಂಚಕರಾಗಿ ಪರಿಣಮಿಸುವುದೇಕೆ? ದೇಶದಲ್ಲಿ ಹಲವು ಸಾರ್ವಜನಿಕ ಬೇಂಕುಗಳಿವೆ. ಅವುಗಳಿಗೆ ವರ್ಷಾವಧಿಯ ಆಡಿಟ್ ವಿನಹ ಬೇರೆ ಯಾವ—ಸರಕಾರ ಸಂಬಂಧವನ್ನುಳ್ಳದಾದ ಮೇಲ್ವಿಚಾರಗಳಿಲ್ಲ. ಆದರೆ ಅಲ್ಲಿಗೆ ಬಂದು ತಪ್ಪುಗಳನ್ನು ಶೋಧಿಸುವವರೂ ಸುಧಾರಣೆಗಳನ್ನು ಕಲ್ಪಿಸುವವರೂ ಆಗಿರುವ ಸಿಬ್ಬಂದಿಯೇ ದೊಡ್ಡದಾಗಿ ಇದ್ದರೂ ಸಹಕಾರಿ ಸಂಘಗಳು ಒಂದರ ಹಿಂದೆ ಒಂದಾಗಿ ಉರುಳಿ ಹೋಗುತ್ತಿವೆಯೇನು? ಸಹಕಾರಿ ಸಂಘಗಳಂತಿರಲಿ, ಹೆಚ್ಚು ಶಿಕ್ಷಿತರಿಂದ ನಡೆಯಿಸಲ್ಪಡುವ ಸೆಂಟ್ರಲ್ ಬೇಂಕುಗಳಲ್ಲಿಯೂ ಅರ್ಬನ್ ಬೇಂಕುಗಳಲ್ಲಿಯೂ ಈ ವಂಚಕತನದ ದೆವ್ವದ ಬಾಧೆಯೇ ಹೆಚ್ಚಾಗಿ ಕಂಡುಬರಲಾರಂಭವಾಗಿ ಯದೆನ್ನುವಾಗ, ಈ ಸಹಕಾರಿ ರಚನೆಯಲ್ಲಿ ಯಾವುದೊ ಒಂದು ದೋಷವಿದೆಯೆಂದು ಊಹಿಸಬೇಕಾಗುವುದಲ್ಲವೇ?

ಮಂಗಳೂರು ಸೆಂಟ್ರಲ್ ಬೇಂಕಿನ ಕ್ರಿಮಿನಲ್ ವ್ಯವಹರಣೆಯು ಮುಗಿದು ಅಪರಾಧಿತರು ಶಿಕ್ಷಿಸಲ್ಪಟ್ಟ ವರ್ತಮಾನವು ಕಿವಿಗೆ ಮುಟ್ಟುವ ಮೊದಲೇ ಕಲ್ಲಿಕೋಟೆಯಲ್ಲಿಯೂ ಅಂತಹ ವಂಚಕತನದ ವ್ಯವಹರಣೆ! ೩೪,೦೦೦ ರೂಪಾಯಿ ನಾಶ! ಸೆಕ್ರೆಟರಿಯವರೂ ಸಹ! ಅದರೊಟ್ಟಿಗೇನೇ ಗುಂಟೂರು ಅರ್ಬನ್ ಬೇಂಕಿನ ವಂಚಕತನದ ವ್ಯವಹರಣೆ. ರೂಪಾಯಿ ೫೦,೦೦೦ ನಾಶ! ಈ ವಂಚನೆಯು ಕಂಡುಹಿಡಿಯಲ್ಪಡುವ ಸಮಯದಲ್ಲಿಯೇ ಲೆಕ್ಕಪತ್ರಗಳ ಅಪಹರಣ! ಎಲ್ಲಿಯೊ ಒಂದು ಬಾವಿಯಿಂದ ಅವುಗಳನ್ನು ಎತ್ತಿ ತರಬೇಕಾಯಿತು!

ಹಳ್ಳಿಗಳ, ಶಹರಗಳೊಳಗಿನ ಸಹಕಾರಿ ಸಂಘಗಳೊಳಗಿನ ವಂಚನೆಗಳು ನಮಗೆ ನಿತ್ಯದವುಗಳಾಗಿದ್ದುವು, ಎಷ್ಟು ಬಡವರಿಗೆ ಈ ಸಹಕಾರಿ ಸಂಘಗಳು ಮದ್ಯದ ಗಡಂಗುಗಳಿಗಿಂತಲೂ ಹೆಚ್ಚು ಭಯಂಕರವಾಗಿ ದುರ್ವ್ಯಸನಕಾರಿಯಾಗಿ ಪರಿಣಮಿಸಿವೆ. ಸಹಕಾರಿ ಸಂಘಗಳ ಬಾಗಿಲಲ್ಲಿ ಅನ್ಯಾಯವಾಗಿ ಮನೆಮಾರು ಕಳಕೊಂಡವರ ಸಂಖ್ಯೆಯು, ಯಾರ ಕೈಯಿಂದ ಈ ಬಡವರನ್ನು ಉದ್ಧರಿಸಲು ಈ ಸಂಘಗಳು ನಿರ್ಮಿಸಲ್ಪಟ್ಟವೊ ಆ, ಸಾಹುಕಾರರ ಗಳ, ಅವರ ಬಡ್ಡಿಯ ಸಾಲಗಾರರ ಬಾಗಿಲಲ್ಲಿ ಕಳಕೊಳ್ಳಲಿಲ್ಲವೆಂದು ಖಂಡಿತ ಹೇಳಬಹುದು. ಆ ಹಳೆಯ ಕಾಬೂಲಿ ಸಾಲಗಾರನು ನಿರಪರಾಧಿಗಳನ್ನು ಸೆಳೆಯುತ್ತಿರಲಿಲ್ಲ, ದುಡ್ಡನ್ನು ಕೊಡುವಾಗ ಪುನಃ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಕೊಡುತ್ತಿದ್ದನು, ರೈತನ ಸ್ಥಿತಿಯು ಬಹಳ ಕೆಟ್ಟದಿದ್ದರೆ ಸ್ವಲ್ಪ ಮಟ್ಟಿಗೆ ಹಣವನ್ನು ಬಿಟ್ಟುಕೊಡಲಿಕ್ಕೂ ಅವನಿಗೆ ಸಾಧ್ಯವಿದ್ದಿತು. ಈಗ? ೧೧ರ ಸಲ ಬಡ್ಡಿ; ಜಾಮೀನುದಾರನ ದಾಕ್ಷಿಣ್ಯ; ಸಂಘದ ಕ್ಲಾರ್ಕರ ಕಾಫಿ ತಿಂಡಿ ಖರ್ಚು; ಸೆಕ್ರೆಟರಿಯವರಿಗೆ ಲಂಚ; ಅನ್ನುವಾಗ ಆ ಹಳೆಯ ೧೮—೨೪ರ ಸಲೆಗಿಂತ ಬಡ್ಡಿ ಕಡಿಮೆ ಬೀಳುವುದಿಲ್ಲ. ಮತ್ತೆ ಕೊಡಲಿಕ್ಕಾಗದಿದ್ದರೆ, ಸಂಘಗಳಿಗೆ ಉಚಿತ ಬಿಡಲಿಕ್ಕಾಗುವುದೇ, ಕೊಟ್ಟ ಹಣ ಕಡೆಯ ಪೈ ಕೂಡಾ ಪೂರಾ ವಸೂಲಾಗಬೇಕು. ಕೊಂಡವನಲ್ಲವಿದ್ದರೆ ಜಾಮೀನಿನವರಿದ್ದಾರೆ. ಅಂತೂ ರೈತನ ಉದ್ಧಾರ ಹೀಗಾಯಿತು!

ಮತ್ತು ಪಂಚಾಯಿತರು, ಸಾಲವೆಂದರೆ ಮೂಗಿನ ಸೊಳ್ಳೆಗಳ ವರೆಗಿದ್ದವರೇ! ಅವರ ದುಡ್ಡಿನ ಅಡಚಣೆಯೇ ಹೆಚ್ಚು. ಮತ್ತು ಇತರರನ್ನು ಸುಧಾರಿಸಿಕೊಂಡು ಹೋಗುವುದು ಹೇಗೆ? ಅವರನ್ನು ಚುನಾಯಿಸುವವರು ಯಾರು? ದುಡ್ಡಿನ ಜವಾಬ್ದಾರಿಯುಳ್ಳವರೇ? ಮೆಂಬರರು, ಮೆಂಬರರಾಗುವುದೇ ಸಾಲ ಪಡಕೊಳ್ಳಲಿಕ್ಕೆ, ಸಾಲ ಯಾರು ಹೆಚ್ಚು ಕೊಟ್ಟಾರೋ ಅವರನ್ನೇ ಈ ಮೆಂಬರರು ಚುನಾಯಿಸಬಲ್ಲರು. ಹೀಗಾಗಿ ಪಂಚಾಯಿತರಿಗೆ ಸ್ವಂತ ಸಾಲಪಡಕೊಳ್ಳುವ ಯೋಚನೆಯೊಂದು, ಆ ಬಗ್ಗೆ ಆಗಾಗ್ಗೆ ಚುನಾಯಿಸಲ್ಪಡಬೇಕೆಂಬ ಎಚ್ಚರಿಕೆಯೊಂದು. ಈ ಚಿಂತೆಯಲ್ಲಿ ಅವರು ಯಾವ ತರದ ಹಿತವನ್ನು ಮಾಡಬಲ್ಲರು? ಯಾವ ರೀತಿಯಲ್ಲಿ ಸಹಕಾರ ಸೂತ್ರಗಳನ್ನು ಪಾಲಿಸಬಲ್ಲರು. ಬೇಕಾದಷ್ಟು ಸಾಲ ತೆಗೆದುಕೊಳ್ಳಿರಿ, ಕೇಳಿದಷ್ಟು ಕೊಡಿರಿ, ಇದೇ ಈಗಿನ ಸಂಘಗಳ ಆಡಳಿತದ ಸೂತ್ರ.

ಹೀಗಾಗಿ ಪಂಚಾಯತರೂ ಅಡಚಣೆವುಳ್ಳವರು, ಕಾರ್ಯದರ್ಶಿಗಳೂ ಅಡಚಣೆಯವರು. ಸಾಧ್ಯವಿದ್ದಷ್ಟು ಪಡಕೊಂಡ ಮೇಲೆ ಇನ್ನೂ ಬೇಕಾದರೆ? ತಮ್ಮ ಕೈಯಲ್ಲಿಯೇ ದುಡ್ಡಿರುವಾಗ ಬಿಡುವುದು ಹೇಗೆ. ಆಗಬೇಕಾಗುವುದು ವಂಚನೆ.

ಹೀಗಾಗಿ ದುಡ್ಡಿದ್ದವರು, ಸಾಲ ಬೇಡವಾದವರು ಈ ಸಂಘಗಳ ಹತ್ತಿರ ಒರಲಿಕ್ಕಾಗುವುದಿಲ್ಲ, ಇರುವುದು ಅಚಾತುರ್ಯದ ಕೆಲಸ, ತಮ್ಮ ದುಡ್ಡನ್ನೂ ಕಳಕೊಳ್ಳುವ ಪ್ರಸಂಗ, Unlimited Liability ಎಂಬ ಸಂಘಗಳು ನಷ್ಟಪಟ್ಟರೆ ಮೆಂಬರರಲ್ಲಿ ಯಾರೊಬ್ಬನೂ, ಮುಖ್ಯವಾಗಿ ದುಡ್ಡಿದ್ದವನು ಈ ನಷ್ಟವನ್ನೆಲ್ಲಾ ಭರ್ತಿಮಾಡಿ ಕೊಡಬೇಕು.

ಈ ವರೆಗೆ ಸಂಘಗಳು ಮಾತ್ರವೇ ಈ ಅವಸ್ಥೆಗೆ ಬಂದಿಯಾದುವೇ ಎಂದು ನಾವು ಭಾವಿಸಿದ್ದೆವು. ಆದರೆ ಸೆಂಟ್ರಲ್ ಬೇಂಕುಗಳಲ್ಲಿಯೂ, ಒಂದಲ್ಲ, ಎರಡಲ್ಲ, ಹಲವು ಬೇಂಕುಗಳಲ್ಲಿ ಈ ವಂಚಕತನವು ತಲೆದೋರಿದ್ದನ್ನು ನೋಡಿದರೆ ಸರಕಾರದ ಮೇಲ್ವಿಚಾರವು ಸಾಕಾಗುವುದಿಲ್ಲವೆನ್ನಬೇಕಾಗುತ್ತದೆ. ಹಲವು ಸಾರ್ವಜನಿಕ ನಿಧಿಗಳು ಈ ಬೇಂಕುಗಳಲ್ಲಿವೆ. ಆದುದರಿಂದ ಇವುಗಳ ತಿದ್ದುಪಾಟುಗಳನ್ನು ಕೂಡಲೇ ಮಾಡುವುದು ಉತ್ತಮ. ಇಲ್ಲವಾದರೆ ಈ ಸಹಕಾರಿ ಚಳವಳವನ್ನೇ ಮುಚ್ಚಿಬಿಡುವ ಆಲೋಚನೆಯನ್ನಾದರೂ ಮಾಡುವುದು ಒಳ್ಳೆಯದು.

ವಿದೇಶ ವರ್ತಮಾನ.

—ನ್ಯೂಯಾರ್ಕಿನಿಂದೊಂದು ವಿಚಿತ್ರ ವಾರ್ತೆ. ಜೋನ್ ಕೆರಿಗನ್ ಎಂಬ ೧೬ ವರ್ಷ ಪ್ರಾಯದ ತರುಣನೊಬ್ಬನು ರಾತ್ರಿ ಮಲಗಿದ್ದನು. ಮನೆಯವರೂ ತಂದೆತಾಯಿಗಳೂ ನಿದ್ರಿಸುತ್ತಿದ್ದರು. ಒಡನೆ ಜೋನನು ಹಾಸಿಗೆಯಿಂದೆದ್ದು ತಂದೆಯನ್ನೂ ತಾಯಿಯನ್ನೂ ಗುಂಡಿಕ್ಕಿ ಕೊಂದನು. ತನ್ನ ಕೃತ್ಯವನ್ನು ಅಲ್ಲೇ ಮಲಗಿದ್ದ ಸಹೋದರ ಸಹೋದರಿಯರನ್ನೆಬ್ಬಿಸಿ ಅವರಿಗೆ ಹೇಳಿದನು. ಜೋನನನ್ನು ಸೆರೆಹಿಡಿದಿದ್ದಾರೆ. ತಾಯಿತಂದೆಗಳ ಮೇಲಿನ ಸಿಟ್ಟಿನಿಂದ ಹೀಗೆ ಮಾಡಿದ್ದಲ್ಲವೆಂದು ತಿಳಿದುಬರುತ್ತದೆ.

— ಭಾರತ ಸಚಿವರಾದ ಸರ್ ಸಾಮುವೇಲ್ ಹೋರರು ಪಾರ್ಲಿಮೆಂಟಿನ ಮೆಂಬರರಾದ ಸರ್ ಜೇಮ್ಸ್ ಡಂಕನ್ ಮಿಲ್ಲರ್ ಎಂಬವರೊಡನೆ ಪತ್ರವ್ಯವಹಾರ ನಡೆಸುತ್ತಾ, ಪತ್ರದ ಒಂದು ಕಡೆಯಲ್ಲಿ ಪ್ರತ್ಯೇಕವಾಗಿ ಸಿಂತ ಪಿಕೆಟರನ್ನು ಬಲಾತ್ಕಾರದಿಂದ ಚದರಿಸಬಾರದೆಂದೂ ಅವರು ಕಾನೂನು ವಿರೋಧ ಕೂಟದವರಾಗುವುದಿಲ್ಲವೆಂದೂ ಬರೆದರು. ಪೋಲೀಸರು ಅತಿರೇಕಕ್ಕೆ ಹೋಗಬಾರದೆಂದೂ ಅವರು ಅಂತಹ ಅತಿರೇಕವನ್ನು ಮಾಡಿದರೆ ಶಿಕ್ಷೆ ಹೊಂದುವರು ಮಾಡಲಾದೀತೆಂದೂ ಹೇಳಿದರು.

— ಐಯರ್ಲೆಂಡಿನ ಪ್ರಜಾಸತ್ತಾತ್ಮಕ ಸರಕಾರದ ಅಧ್ಯಕ್ಷರಾಗಿ ಡಿವೇಲರವರು ಚುನಾಯಿಸಲ್ಪಟ್ಟಿದ್ದರಷ್ಟೆ! ಇವರು ಬ್ರಿಟಿಷರ ವಿರೋಧಿಗಳು. ಐಯರ್ಲೇಂಡಿಗೆ ಸ್ವಾತಂತ್ರ್ಯವನ್ನಿತ್ತಿದ್ದ ಸಮಯದಲ್ಲಿ ಬ್ರಿಟಿಷರು ಅವರೊಡನೆ ಹೊಗದಿಯ ಕುರಿತೂ ಮಾನಮರ್ಯಾದೆಯ ಕುರಿತೂ ಕೆಲವು ಶರ್ತಗಳನ್ನು ಮಾಡಿಕೊಂಡಿದ್ದರು. ಆ ಶರ್ತಗಳೆಲ್ಲ ಐಯರ್ಲೇಂಡು ಬಗ್ಗ ಬಾರದೆಂದು ಡಿವೇಲರು ದೇಶವಿದೇಶಕ್ಕೆ ಸಾರಿದ್ದಾರೆ. ಇದರಿಂದಾಗಿ ಐಯರ್ಲೇಂಡ್ ಇಂಗ್ಲೇಂಡುಗಳೊಳಗೆ ಪರಸ್ಪರ ವೈಮನಸ್ಯ ಹುಟ್ಟದಿರದೆಂದು ಕೆಲವು ಪತ್ರಿಕೆಗಳ ಅಂಬೋಣವಿದೆ.

ಒಳದೇಶ ವರ್ತಮಾನ

ಮದ್ರಾಸಿನಿಂದೊಂದು ವಾರ್ತೆ ಬಂದಿದೆ. ಶ್ರೀ ಮಿ ಪಾರ್ಥಸಾರಥಿ ಮುದಲಿಯಾರರೆಂಬ ಪ್ರಸಿದ್ಧ ಸರಕಾರಿ ನೌಕರರೊಬ್ಬರು ಎಕೌಂಟೆಂಟ್ ಜನರಲ್ ಆಫೀಸಿನಲ್ಲಿ ಕೆಲಸ ನಡೆಸಿ ಆದ ಮೇಲೆ ತನ್ನ ಮಿತ್ರ ಮಾರ್ಟಿನ್ ಎಂಬವರೊಡನೆ ಮಾತನಾಡುತ್ತಾ ರಾಜಾ ಸರ್ ರಾಮಸ್ವಾಮಿ ಮುದಲಿಯಾರರ ಮಂದಿರದ ಹೊರಜಗುಲಿಯ ಮೇಲೆ ನಿಂತಿದ್ದರು. ಅಷ್ಟರಲ್ಲಿ ತನ್ನ ಎದುರಿನಲ್ಲಿ ಓಡುತ್ತಿದ್ದ ಮೋಟಾರನ್ನು ಹಿಂದೆ ಹಾಕಬೇಕೆಂಬ ಆವೇಶದಿಂದ ಒಂದು ಮೋಟಾರು ಓಡಿಬಂತು. ಬಂದ ಹಾಗೆ ತಟ್ಟನೆ ಅಡ್ಡತಿರುಗಿ ಈ ಅಫೀಸರರು ನಿಂತಿದ್ದಲ್ಲಿಗೆ ರುಮ್ಮನೆ ಬಂದು ಅವರನ್ನು ಕೆಡವಿತು. ಅವರ ಬಳಿಯಲ್ಲಿದ್ದ ಸಣ್ಣ ಹುಡುಗಿಯೊಬ್ಬಳಿಗೂ ಪೆಟ್ಟಾಯಿತು. ಪಾರ್ಥಸಾರಥಿಯವರಿಗೆ ೩೦ ವರ್ಷ ಪ್ರಾಯ. ೨೨ ವರ್ಷದ ಪತ್ನಿಯೂ ಕೇವಲ ೫ ತಿಂಗಳ ಒಂದು ಕೂಸೂ ದೊಡ್ಡ ಕುಟುಂಬವೂ ಅವರಿಗಿದೆ. ಅವರನ್ನು ಆಸ್ಪತ್ರೆಗೆ ಕೊಂಡೊಯ್ಯುತ್ತಿರುವಾಗಲೇ ಮರಣಹೊಂದಿದರು.

— ರಾಜಕೀಯ ವಿವಾದ ಸಂಬಂಧವಾಗಿ ಪಂಡಿತ ಮದನಮೋಹನ ಮಾಲವೀಯರು ತಾ ೨೬ನೇ ದಿ. ಬನಾರಸ್‌ನಿಂದ ಡಿಲ್ಲಿಗೆ ಬಹು ಅವಸರದಿಂದ ಹೋದರು. ಕೊಂಗ್ರೆಸ್ ಸಭೆಯ ಅಧಿವೇಶನವು ಜರಗಿಸಲ್ಪಡಬಹುದೋ ಎಂಬ ಸುದ್ದಿಯಿದೆ.

— ಬಂಗಾಳಕ್ಕೆ ಸರ್ ಜೋನ್ ಎಂಡರ್‌ಸನ್ ಎಂಬ ಹೊಸ ಗವರ್ನರರು ಬಂದರು. ಅವರು ಅಧಿಕಾರವನ್ನು ಸ್ವೀಕರಿಸುವಾಗ ಜಯಸೂಚನಾರ್ಥವಾಗಿ ಗುಂಡುಗಳು ಹಾರಿಸಲ್ಪಟ್ಟವು.

— ಡಿಲ್ಲಿಯ ಕೌನ್ಸಿಲ್ ಒಫ್ ಸ್ಟೇಟಿನ ಮೆಂಬರರಾದ ಒನರೇಬಲ್ ಮಿ ಕೆ ವಿ ಅಯ್ಯಂಗಾರರೆಂಬವರು ಒರೇ ೪೬ನೇ ವಯಸ್ಸಿನಲ್ಲಿ ತಾ ೨೬ನೇ ದಿನ ಕಾಲವಾದರು.

— ಅಲ್ಲಹಾಬಾದಿನ ಗ್ರೇಂಡ್ ಟ್ರಂಕ್ ರೋಡಿನ ಬಳಿ ಒಬ್ಬ ಪೋಲೀಸನ ಕಾವಲಿದೆ. ತಾ ೨೬ನೇ ದಿ. ಅವನು ತನ್ನ ಸ್ಥಳದಲ್ಲಿ ಯಥಾಪ್ರಕಾರ ನಿಂತಿದ್ದ. ಢುಂ ಎಂಬ ಶಬ್ದ — ಬೊಂಬು ಅವನ ಮೈಕೈಗಳಿಗೆ ಗಾಯ ಮಾಡಿತ. ಶೋಧೆಯಾಗುತ್ತಿದೆ.

— ಮುಂಬಯಿಯ ಮಹಾಪ್ ಭಾಗದಲ್ಲಿ ಎರಡು ಗೋರಿಗಳು ಕಾಣುತ್ತಿವೆ. ಮುಸ್ಲಿಮರು ಹೇಳುವುದು ಅದು ತಮ್ಮ ಧರ್ಮಸ್ವಾಮಿಗಳೊಬ್ಬರದೆಂದು. ಹಿಂದೂಗಳು ಹೇಳುವುದು ಅದು ತಮ್ಮ ಮಾರುತಿ ದೇವನ ಮೂರುತಿಯೆಂದು. ಹೀಗೆ ಮಾತಿನಲ್ಲಿ ಕಲ್ಲಾಟವಾಗುತ್ತಲಿದೆ.

— ಬಿಜಾಪುರ್‌ನಲ್ಲಿ ಹೋಳಿ ದಿನಾಚರಣೆಯ ಸಂಬಂಧವಾದ ಮೆರವಣಿಗೆಯು ಭಜನೆಯೊಂದೊಡಗೂಡಿ ಹೋಗುತ್ತಿತ್ತು. ಮಸೀದಿಯೆದುರು ಮುಸ್ಲಿಮರಿಗೂ ಹಿಂದೂಗಳಿಗೂ ಭಯಂಕರ ಜಗಳವಾಯಿತು. ಸೈನ್ಯವೇ ಹೋಗಿ ನಿಲ್ಲಿಸಬೇಕಾಯಿತು.

ಸಂ ಪಿ ಪಿ ದೇಯವರು ನಾಗಪುರಕ್ಕೆ ಹೋಗಿದ್ದರು. ನಾಲ್ಕೈದು ಸಾವಿರ ಜನರು ಅವರನ್ನು ಸ್ವಾಗತೀಕರಿಸಿದರು. ದೇಯವರು ಭಾಷಣ ಮಾಡುತ್ತಾ, ನಾಗಪುರದವರು ತಮ್ಮ ಸ್ವಾಗತದಿಂದ ನನ್ನನ್ನು ಕೆಲ ಬಲು ಪಿತೂರಿ ನಡೆಸುವಂತೆ ಕಾಣುತ್ತದೆ ಎಂದರು.

— ಮದ್ರಾಸಿನಲ್ಲಿ ವೀರಣ್ಣನೆಂಬವನು ದೀಪವನ್ನು ಹತ್ತಿರವಿಟ್ಟುಕೊಂಡು ವಿದ್ಯಾಭ್ಯಾಸಕ್ಕೆ ಹೋಗಿದ್ದನು. ರಾತ್ರಿ ದೀಪವು ದೊಡ್ಡದಾಗಿ ಉರಿದು ಬೆಂಕಿಯು ಹೇಗೊ ಅವನ ವಸ್ತ್ರಕ್ಕೆ ಹಿಡಿಯಿತು. ಮೈಯು ಸಂಪೂರ್ಣ ಬೆಂದುಹೋಗಿ ವಿಪರೀತ ಸ್ಥಿತಿಯಲ್ಲಿದ್ದಾನೆ.

— ಅಖಿಲ ಭಾರತ ಕೊಂಗ್ರೆಸ್ ಸಭೆಯ ಅಧಿವೇಶನವನ್ನು ಡಿಲ್ಲಿಯಲ್ಲಿ ಜರಗಿಸುವ ವಿಚಾರವನ್ನು ಸರೋಜಿನಿ ಮಾಲವೀಯರು ಮಾಡುತ್ತಲಿದ್ದಾರೆಂದೂ. ಕಾಯಿದೆಭಂಗ ಚಳವಳವನ್ನು ಪ್ರೋತ್ಸಾಹಿಸುವುದಿಲ್ಲವಾದರೆ ಈ ಸಭೆಯು ಜರಗಲು ಸರಕಾರದ ಸಮ್ಮತಿಯಿದೆಯೆಂದೂ ತಿಳಿದುಬರುತ್ತದೆ. ಸರೋಜಿನಿ ದೇವಿಯವರು ಸರಕಾರದೊಡನೆ ಇತ್ಯರ್ಥಿಸಿಕೊಳ್ಳಲಿರುವರು. ಬಹುವಂಶ ಪಂಡಿತ ಮಾಲವೀಯರೇ ಅದರ ಅಧ್ಯಕ್ಷರಾಗುವರು.

— ಮುಂಬಾಯಿಯ ಪಠಾಣರಿಗೂ ಮುಷ್ಕರಗಾರರಿಗೂ ಮಾರಾಮಾರಿಯಾಗಿ ನಡುವೆ ಬಂದ ಪೋಲೀಸರಿಗೂ ಜನರಿಗೂ ಪೆಟ್ಟುಬಿತ್ತು.

— ಭಂಗಾರವು ಊರುಬಿಟ್ಟು ಹೋಗದಂತೆ ವರ್ತಕರ ಒಂದು ಸಮಾಲೋಚನಾ ಸಮಿತಿಯು ಸಾಗುತ್ತಲಿದೆ.

ದಕ್ಷಿಣ ಕನ್ನಡ.

ಮಂಗಳೂರು: — ಮುನ್ನೂರು ಗ್ರಾಮದ ಏಕ್ಕಿಂಗ್ ಪಟೇಲರಾಗಿದ್ದ ಶ್ರೀ ರಾಮಣ್ಣ ಶೆಟ್ಟರ ಕೊಲೆಯ ಆರೋಪವು ಮಾಗಣ್ಣ ಶ್ರೀ ಶೆಟ್ಟಿ ಮೇಲಂಟರೇ ಮೊದಲಾದವರ ಮೇಲಿತ್ತಷ್ಟೆ ಆರೋಪಿತರ ಕಡೆಯಿಂದ ಮದ್ರಾಸಿನ ಸುಪ್ರಸಿದ್ಧ ಕ್ರಿಮಿನಲ್ ವಕೀಲರಾದ ಮಿ। ನ್ಯಾಪೆಂಟ್ ಗ್ರೇಂಟರು ವ್ಯವಹರಿಸಿದರು ಜಡ್ಜರು ನಿನ್ನೆ ತೀರ್ಮಾನ ವಿತ್ತು ಆರೋಪಿತರೆಲ್ಲರನ್ನೂ ನಿರಪರಾಧಿಗಳೆಂದು ಬಿಟ್ಟುಬಿಟ್ಟಿರುವರು

ನಿನ್ನೆ ಸಂಜೆ ೫ ಘಂಟೆಗೆ "ಜಂಕರ್ಸ್ ಡಿ ೧೯೩೫ ಎಂಬ ಸೀಪ್ಲೇನು (ಜಲವಿಮಾನವು) ಮಂಗಳೂರಿಗೆ ಬಂದಿದ್ದು ನದಿಯಲ್ಲಿ ಇಳಿಯಿತು ಇದರಲ್ಲಿ ೩ ಮಂದಿ ವೈಮಾನಿಕರಿದ್ದರು ಇದನ್ನು ನೋಡುವುದಕ್ಕೆ ಬಂದರದಲ್ಲಿ ಅನೇಕ ಸಾವಿರ ಜನರು ನೆರೆದಿದ್ದರು

ಮಂಗಳೂರು ಮುನಿಸಿಪಾಲಿಟಿ ಕೌನ್ಸಿಲಿನ ಒಂದು ಸಭೆಯು ನಿನ್ನೆ ತಾ ೩೧ನೇ ಗುರುವಾರ ೫-೩೦ಕ್ಕೆ ಜರಗಿತು

ಬುಧವಾರ ದಿನ ನಗರ ಸಭೆಯಲ್ಲಿ ರಾವ್ ಸಾಹೇಬ ನೆಲ್ಲಿಕ್ಕಾ ವೆಂಕಟ್ರಾಯರ ತೈಲಚಿತ್ರಾವರಣ ಸಮಾರಂಭವು ಮಾನ್ಯ ಕಲೆಕ್ಟರವರಿಂದ ಜರಗಿತು

ಇದೇ ಏಪ್ರಿಲ್ ತಾ ೩ನೇ ದಿನ ಸಂಜೆ ೬ ಗಂಟೆಗೆ ಗವರ್ನಮೆಂಟ್ ಕಾಲೇಜಿನಲ್ಲಿ ಡಿಸ್ಟ್ರಿಕ್ಟ್ ಮತ್ತು ಸೆಷನ್ ಜಡ್ಜರಾದ ಶ್ರೀ ಎನ್ ಚಂದ್ರಶೇಖರ್ ಅಯ್ಯರರ ಪೋಷಕತ್ವದಿಂದಲೂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಖಾನ್ ಬಹದೂರ್ ಜಾವದ್ ಹುಸೇನ್ ಖಾನ್ ಎಂ ಎ ಇವರ ಅಧ್ಯಕ್ಷತೆಯಿಂದಲೂ The Knavery of Caithan' ಎಂಬ ಸಾಮಾಜಿಕ ನಾಟಕವೊಂದು ಜರಗುವುದು ಟಿಕೇಟಿನ ದರ ರೂ ೨, ೧, ಆ ೮ ಸ್ತ್ರೀಯರಿಗೆ ಪ್ರತ್ಯೇಕ ಸ್ಥಳವು ಏರ್ಪಡಿಸಲ್ಪಟ್ಟಿದೆ

ಮಂಗಳೂರು ಮುನಿಸಿಪಾಲಿಟಿಯೊಳಗಣ ಕೊಡಿಯಾಲಬೈಲು ಈಸ್ಟ್ ವಾರ್ಡಿಗೆ ತಯಾರಿಸಿದ ನಗರ ರಚನಾ ಸ್ಕೀಮನ್ನು ಆಲೋಚಿಸುವರೆ ಅದಕ್ಕೆ ಸಂಬಂಧಪಟ್ಟ ಮ್ಹಾಲಿಕರ ಒಂದು ಸಭೆಯು ಇದೇ ತಾ ೩ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಕೆನರಾ ಹ್ಯಾಸ್ಕೂಲಿನ ಮ್ಯೂಸಿಯಮ್ ಹಾಲಿನಲ್ಲಿ ಜರಗಲಿರುವುದು

ನಮ್ಮ ಜಿಲ್ಲೆಯವರು ಹಿಂದೀ ಕಲಿಯುವುದರಲ್ಲಿ ಎಷ್ಟು ಮುಂದರಿದಿರುವರೆಂದು ಫೆಬ್ರವರಿ ತಾ ೧೪ನೇ ದಿನ ದಕ್ಷಿಣ ಭಾರತ ಹಿಂದೀ ಪ್ರಚಾರಕ (ರಾಷ್ಟ್ರಭಾಷೆ) ಸಭೆಯವರಿಂದ ನಡೆಸಲ್ಪಟ್ಟ ಕೆಳಗಿನ ಪರೀಕ್ಷಾಫಲಗಳನ್ನು ಕಂಡರೆ ತಿಳಿದುಬರುವುದು ಶ್ರೀಮತಿ ಶಾಂತಾದೇವಿ ಮುದೇರ್ಕರ — ಮಂಗಳೂರು ಇವರು ೧ನೇ ತರಗತಿಯಲ್ಲಿ ಪಾಸಾಗಿದ್ದಾರೆ ಶ್ರೀ ಬಿ ಡಿ ಮಾಧವ ಬಾಳಿಗ ಮಂಗಳೂರು — (ಎರಡನೇ ತರಗತಿ) ಮಧ್ಯಮದಲ್ಲಿ ಶ್ರೀಮತಿ ಲಲಿತಾಬಾಯಿ ಕಾಮತ್ ಮಂಗಳೂರು (೧ನೇ ತರಗತಿ) ಶ್ರೀಮತಿ ಸೀತಾರತ್ನದೇವಿ ಪುತ್ತೂರು (೨ನೆ ತರಗತಿ)

ಕಾಯಿದೆಭಂಗ ಚಳವಳಿಗೆ ಸೇರಿದವರೆಂಬ ಆರೋಪದ ಮೇಲೆ ಶ್ರೀ ಬಿ ವೆಂಕಪ್ಪಯ್ಯನವರು ಶಿಕ್ಷೆಗೊಳಗಾಗಿದ್ದರು ಇವರ ಪರವಾಗಿ ಕಾಸರಗೋಡಿನ ಎಂ ಉಮೇಶರಾಯರು ವ್ಯವಹರಿಸಿದರು ಶ್ರೀ ... ರವರನ್ನು ಬಿಟ್ಟರು

ರವಿವಾರ ದಿನ ಆರ್ಯಚಿಕಿತ್ಸಾ ಭವನದ ಬಗ್ಗೆ ಗುಬ್ಬಿ ಕಂಪೆನಿಯವರೊಂದು ನಾಟಕವನ್ನಭಿನಯಿಸಿದರಷ್ಟೆ ಅದರಿಂದ ಒದಗಿದ ಹಣದಲ್ಲಿ ರೂ ೪೦ರನ್ನು ಮೇಲಿನ ಸಂಸ್ಥೆಯ ಡಾ ಎನ್ ಡಿ ಸುವರ್ಣರಿಗೆ ಕಂಪೆನಿಯವರು ಕೊಟ್ಟರು ನಾಟಕದಲ್ಲಿ ನಾರದನ ಭೂಮಿಕೆಯನ್ನು ವಹಿಸಿದ್ದ ಶ್ರೀ ಮಂಜುನಾಥ ಶಾಲಿವಾಹನರಿಗೆ ಶ್ರೀ ಕೃಷ್ಣಾ ಸಿನಿಮಾ ಕಂಪೆನಿಯ ಪ್ರೊಪ್ರೈಟರ್ ಶ್ರೀ ಎ ಕೃಷ್ಣಾಜಿರಾವ್ ಇವರು ಬೆಳ್ಳಿಯ ಪದಕವೊಂದನ್ನು ಬಹುಮಾನಿಸಿದರು

ಆರ್ಯ ಚಿಕಿತ್ಸಾಭವನದ ೧೪ನೇ ವಾರ್ಷಿಕೋತ್ಸವವು ಇದೇ ತಾ ೭ನೇ ಗುರುವಾರ ಸಂಜೆ ೫ ಘಂಟೆಗೆ ನಗರಾಧ್ಯಕ್ಷರಾದ ಡಾ ವಿಟ್ಠಲ ಶೆಟ್ಟರವರ ಅಧ್ಯಕ್ಷತೆಯಲ್ಲಿ ಜರಗುವುದು

ಪ್ರೊಹಿಬಿಷನ್ ಸೆಂಟ್ರಲ್ ಕೊ ಒಪರೇಟಿವ ಬೇಂಕಿನ ಹಣ ದುರ್ವಿನಿಯೋಗದ ಬಗ್ಗೆ ಶಿಕ್ಷಿಸಲ್ಪಟ್ಟ ಶ್ರೀಗಳಾದ ಎಚ್ ರಾಮಣ್ಣ ಶೆಟ್ಟಿ, ಜಿ ವೇಣುಗೋಪಾಲ ರಾವ್ ಮತ್ತು ಬಿ ಕೃಷ್ಣರಾವ್ ಇವರ ಅಪೀಲು ದಾಖಲಾಗಿ, ಸದ್ಯಯವರು ಜಾಮೀನಿನ ಮೇಲೆ ಬಿಡಲ್ಪಟ್ಟಿರುವರು

ತಾ ೨೭ನೇ ದಿನ ಶ್ರೀಗಳಾದ ಬಾಬುಶೆಟ್ಟಿ ಮತ್ತು ಸುಬ್ಬಯ್ಯ ಶೆಟ್ಟಿಯೆಂಬಿಬ್ಬರು ಸ್ವಯಂಸೇವಕರು ಗಣೇಶ ಶ್ರೀನಿವಾಸ ಪೈಗಳ ಅಂಗಡಿಯನ್ನು ಪಿಕೆಟ್ ಮಾಡಿದರು ಪೋಲೀಸರು ಬಂದು ಚದರಲಪ್ಪಣೆ ಕೊಟ್ಟರು — ಅಸಮ್ಮತ — ಬಲಾತ್ಕಾರದಿಂದೆಳೆದು ಬಸ್ಸಿನಲ್ಲಿ ಕಾಳ್ಯರಿಸಿ ಸ್ಟೇಶನಿಗೆ ಕೊಂಡೊಯ್ದರು ಸಂಜೆಯಲ್ಲೂ ಶ್ರೀಗಳಾದ ವೈಕುಂಠ ಸಿರಿಯಣ್ಣರೂ ಸುಬ್ಬಯ್ಯಶೆಟ್ಟರೂ ಕಾಂಚಿಯವರಂಗಡಿಯನ್ನು ಪಿಕೆಟ್ ಮಾಡಿದರು ಅವರೂ ಬಲಾತ್ಕಾರದಿಂದ ಕೊಂಡೊಯ್ಯಲ್ಪಟ್ಟರು

ಕಾಂಗ್ರೆಸ್‌ವಾಲರಾಗಿದ್ದ ಶ್ರೀ ಬಾಬುದಾಸ್ ಎಂಬವರನ್ನು ವಾರಂಟಿನ ಮೇಲೆ ತಾ. ೨೭ನೇ ದಿನ ಹಿಡಿದರು. ಅಂದು ಮುಂಜಾನೆ ಒಂದು ಪ್ರಭಾತಫೇರಿಯು ನಡೆಯಿತೆಂದು ತಿಳಿದುಬಂದಿದೆ.

ತಾ. ೨೯ನೇ ದಿನ ಥಿಯೋಸೊಫಿಕಲ್ ಲೋಜಿನಲ್ಲಿ ಸ್ವದೇಶಿ ಲೀಗಿನ ಒಂದು ಸಭೆಯು ಜರಗಿ ಕಾರ್ಯಕಾರಿ ಮಂಡಳಿಗೆ ಈ ಕೆಳಗಿನವರನ್ನು ಚುನಾಯಿಸಲಾಯಿತು ದಿವಾನ್ ಬಹದೂರ್ ಎಸ್. ಸುಬ್ಬರಾಯರು (ಅಧ್ಯಕ್ಷ) ಶ್ರೀಗಳಾದ ಯು ಸಿ ಯಸ್. ಭಟ್, ಎಂ. ಎಲ್ ಸಿ ಮತ್ತು ಎ ಬಿ ಶೆಟ್ಟಿ, ಎಂ ಎಲ್ ಸಿ — (ಉಪಾಧ್ಯಕ್ಷರು) ಬಿ ವೈಕುಂಠ ಬಾಳಿಗ (ಖಜಾಂಚಿ), ಎಂ ಎಸ್ ಮಾಧವರಾವ್, ಮತ್ತು ಆರ್ ಕೆ ಪ್ರಭು ಜತೆ ಕಾರ್ಯದರ್ಶಿಗಳು, ಮತ್ತು ಶ್ರೀಗಳಾದ ವಿ ಎಸ್ ಕಾಮತ್, ಸ್ವೀಸಿ ರೆಬೆಲ್ಲೋ, ಅಸಾದಿ ಸಾಹೇಬ್, ಕೆ ಆರ್ ಕಾರಂತ ಎ ಶ್ರೀನಿವಾಸ ಪೈ, ಡಾ। ಎಚ್ ವಿ ಆಡಿಗರು ಇನ್ನು ೩ ಮಂದಿ ಸದಸ್ಯರನ್ನು ಸ್ವದೇಶಿ ವರ್ತಕರ ಸಮೂಹದಿಂದ ಚುನ್ನಾಯಿಸಲಿದೆ ಮೆಂಬರರಾಗಲಿರುವವರು ೪ ಆಣೆ ಹಾಸಲು ಕೊಡಲಿದೆ ನಾಳೆ ೫ ೩೦ಕ್ಕೆ ಥಿಯೋಸೊಫಿಕಲ್ ಲೋಜಿನಲ್ಲಿ ಕಾರ್ಯಕಾರಿ ಮಂಡಳಿಯು ಸೇರುವುದು

ಬೈ ಇಂಡಿಯನ್ ಲೀಗಿನ ನೇತೃತ್ವದಲ್ಲಿ ಸ್ವದೇಶಿ ಪ್ರಚಾರಾರ್ಥವಾಗಿ ಬಪ್ಪನಾಡಿನ ರಥೋತ್ಸವದ ದಿನ ಒಂದು ಸ್ವದೇಶಿ ಸ್ಟೋಲನ್ನು ಶ್ರೀ ಎಂ ರಾಮಕೃಷ್ಣ ಪೂಂಜರ ಮೇಲ್ವಿಚಾರದಲ್ಲಿ ತೆರೆಯಲಾಯಿತು ಶ್ರೀಮತಿ ಲಕ್ಷ್ಮೀಬಾಯಿ ವೆಂಕಪ್ಪ ಪೈ ಇವರೂ ಇನ್ನಿಬ್ಬರು ಸ್ತ್ರೀಯರೂ ಕೂಡಿ ಸ್ವದೇಶಿ ಮಾಲುಗಳನ್ನು ಆ ದಿನ ಮನೆ ಮನೆಗೆ ಒಯ್ದು ಪ್ರಚಾರ ಕಾರ್ಯವನ್ನೆಸಗಿದರು

ಉಡುಪಿ: — (ತಾ ೨೭) ವಿಶೇಷ ಜನಸ್ತೋಮದಿಂದ ಧ್ವಜವಂದನೆಗೈದು ಮೆರವಣಿಗೆಯಿಂದ ಸ್ವಯಂಸೇವಕರ ತಂಡವೊಂದು ಶ್ರೀ ಕೇಶವ ಪೈಗಳ ಅಂಗಡಿಗೆ ಪಹರೆಗೆ ತೆರಳಲು ಅವರು ವಿದೇಶಿ ವಸ್ತ್ರವನ್ನು ಕಟ್ಟಿಟ್ಟರು ಅನಂತರ ಶ್ರೀ ವೇಲ್ಲಿಯವರ ಅಂಗಡಿಯೆದುರು ಶ್ರೀಮತಿ ಗಿರಿಜಾಬಾಯಿ (ಈಗಿನ ಡಿಕ್ಟೇಟರ್) ಮತ್ತೊಬ್ಬ ಹುಡುಗನು ಪಿಕೆಟ್ ಮಾಡತೊಡಗಿದರು ಅಷ್ಟರಲ್ಲಿ ಅಲ್ಲಿಗೆ ವ್ಯಾಪಾರಕ್ಕಾಗಿ ಬಂದಿದ್ದ ಶ್ರೀಮತಿ ಅಂಬು ಎಂಬ ಹುಡುಗಿಯು ಆವೇಶಗೊಂಡು ಹುಡುಗನ ಕೈಯಿಂದ ಧ್ವಜವನ್ನು ತೆಗೆದುಕೊಂಡು ಅವನ ಸ್ಥಾನದಲ್ಲಿ ತಾನು ನಿಂತು ಪಹರೆ ಮಾಡಿದಳು ಪೋಲೀಸರು ಬಂದು ಇಬ್ಬರನ್ನೂ ಕೈದು ಮಾಡಿದರು ಅನಂತರ ಇನ್ನಿಬ್ಬರು ಪಹರೆಗೆ ನಿಂತ ನಾಲ್ವರನ್ನು ಕೈದುಮಾಡಿ ಕೊಂಡೊಯ್ದರು ಹೆಂಗಸರಿಬ್ಬರನ್ನೂ ಅವರ ಸಹಿ ತೆಗೆದುಕೊಂಡು ರಾತ್ರಿ ೧೦ ಘಂಟೆಗೆ ಬಿಟ್ಟುಬಿಟ್ಟಿರುವರು ಉಳಿದ ೪ ಜನರನ್ನು ಮರುದಿನ ಮಧ್ಯಾಹ್ನ ಗಂಟೆಗೆ ಬಿಡುಗಡೆ ಮಾಡಿದರು. ಬಂಧವಿಮೋಚನೆ ಹೊಂದಿದ ಸ್ವಯಂಸೇವಕರು ಅಲ್ಲಲ್ಲಿ ಬೋಯ್ಕಾಟ್ ಬ್ರಿಟಿಷ್ ಗುಡ್ಸ್' ಎಂದು ಹೇಳುತ್ತಾ ಹೋದರು ಈ ದಿವಸ ಸಂಜೆ ರಿಸರ್ವ್ ಪೋಲೀಸಿನವರು ಬಂದಿರುವರು

ಬ್ರಹ್ಮಾವರದಕ್ಕಡೆಯ ಬ್ರಾಹ್ಮಣ ವಿಧವೆಯೊಬ್ಬಳು ಜಾರಳಾಗಿ ಒಂದು ಶಿಶುವನ್ನು ಹೆತ್ತು ಗುಪ್ತವಾಗಿ ಅದರ ಕತ್ತು ಹಿಸುಕುವುದರಲ್ಲಿದ್ದಾಗ ಯಾರೋ ಆ ಪೈಶಾಚಿಕ ಕೃತ್ಯದಿಂದ ಮಗುವನ್ನು ತಪ್ಪಿಸಿ ಉಡುಪಿ ಆಸ್ಪತ್ರೆಗೆ ತಂದಿರುವರಂತೆ

ರಥಬೀದಿಯಲ್ಲಿ ಶ್ರೀ ಸುಬ್ರಾಯ ಶರ್ಮರೆಂಬವರ ಚಾತುರ್ವರ್ಣ ವಿಭಾಗದ ಆವಶ್ಯಕತೆ ಮತ್ತು ವರ್ಣಾಶ್ರಮಧರ್ಮಗಳ ಕುರಿತಾದ ಕೆಲವು ಭಾಷಣಗಳು ನಡೆದುವು ಇವರು ಯಥಾರ್ಥವನ್ನೆ ಹೇಳುವುದು ಕೆಲವರಿಗೆ ಸುಳ್ಳು ಕಿವುಚಿಟ್ಟಂತಾಗಿರುತ್ತದೆ ಪ್ರತೀಕಾರವೋ ಎಂಬಂತೆ ಇವರ ಭಾಷಣವನ್ನು ಖಂಡಿಸಲು ಸನಾತನ ಧರ್ಮ ಪರಿಪಾಲನೆ ಎಂಬ ವಿಷಯದ ಕೆಳಗೆ ಮಂದರ ಕಡೆಯಿಂದ ಕೆಲವು ಪಂಡಿತರ ಭಾಷಣಗಳಾದುವು ಇತ್ತಂಡದವರೂ ಹೇಳುವುದೂ ಶಾಸ್ತ್ರ ಇದರಲ್ಲಿ ಯಾರದನ್ನು ನಂಬಬೇಕೋ ಯಾರದನ್ನು ಬಿಡಬೇಕೋ ತಿಳಿಯದು ಹೇಗೂ ಇರಲಿ ಹೇಳುವುದು ಶಾಸ್ತ್ರ, ಇಕ್ಕುವುದು ಗಾಳ್" ಎಂಬಂತಾಗದಿದ್ದರೆ ಸರಿ

ರಾಯಲ್ ಸಿನೇಮಾದಲ್ಲಿ ಬೊಂಬಾಯಿಯ ಇಂಪೀರಿಯಲ್ ಫಿಲ್ಮ್ ಕಂಪೆನಿಯ ಪ್ರಸಿದ್ಧ ನಟಿಯಾದ ಮಿಸ್ ಮಮತಾಜ್ ಬೇ ಮ್ ಇವರ ಗಾನ ನರ್ತನಗಳು ತಾ ೩೧ರಿಂದ ಕೆಲದಿನಗಳ ವರೆಗ ನಡೆವುವು ಇವರ ಗಾನ ನರ್ತನಗಳಲ್ಲಿ ಯಾವ ಮಾಧುರ್ಯವೋ

ಪುತ್ತೂರು — ಇದೇ ಬರುವ ಎಪ್ರಿಲ್ ೧೯ನೇ ಮಂಗಳವಾರ ಅಪರಾಹ್ನ ೩ ಘಂಟೆಗೆ ಬೆಳ್ತಂಗಡಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಬೆಳ್ತಂಗಡಿ ಡಿವಿಜನಿನ ಗ್ರಾಮಾಧಿಕಾರಿಗಳ ಸಭೆ ಕೂಡಬೇಕೆಂತ ನಿರ್ಣಯಿಸಿಯದೆ ಆದುದರಿಂದ ಈ ಪರಿಷತ್ತಿಗೆ ಪ್ರತಿ ಪಂಚಾಯತದಿಂದ ಅದರ ಕಾರ್ಯನಿರ್ವಹದ ಪೂರ್ಣ ಮಾಹಿತಿಯುಳ್ಳ ಒಬ್ಬೊಬ್ಬನಾದರೂ ಬರಬೇಕಾಗಿ ಅಪೇಕ್ಷಿಸುತ್ತೇನೆ ಪರಿಷತ್ತಿನಲ್ಲಿ ಪ್ರತ್ಯೇಕವಾಗಿ ಇಂತಹ ವಿಷಯಗಳೇ ಚರ್ಚೆಮಾಡಬೇಕೆಂತ ನಿರ್ಧರಿಸಲಾಗುವದಿಲ್ಲ ಪಂಚಾಯತುಗಳು ತಮ್ಮ ಕರ್ತವ್ಯ ಕಾರ್ಯಗಳ ನಿರ್ವಹದಲ್ಲಿ ಯಾವ್ಯಾವ ಕಷ್ಟಗಳನ್ನು ಅನುಭವಿಸಬೇಕಾಯಿತು — ಅದ್ಯಾವ ಕಾರಣಗಳಿಂದ ಎಂಬುದನ್ನು ಪ್ರತೀ ಒಬ್ಬರು ಮುಂದಾಗಿ ಗ್ರಹಿಸಿ ಅದಕ್ಕೆ ಆಧಾರವಾದ ರಿಕಾರ್ಡು ಇದ್ದರೆ ಆ ರಿಕಾರ್ಡು ಸಹಿತ ಬಂದು ಅಂತಹ ವಿಷಯಗಳನ್ನು ಒಂದೊಂದಾಗಿ ಪರಿಷತ್ತಿನ ಮುಂದೆ ಇರಿಸಿದ್ದಲ್ಲಿ ಆ ಕುರಿತು ಮುಂದಿನ ನಡುವಳಿಕೆ ಬಗ್ಗೆ ಯೋಗ್ಯ ತೀರ್ಮಾನ ಮಾಡಲಾಗುವುದು, ಪರಿಷತ್ತಿನ ಕಾರ್ಯಭಾಗದಿಷ್ಟ ಎಲ್ಲರೂ ಪ್ರೀತಿ ಇಟ್ಟು ಬರಬೇಕಾಗಿ ಪುತ್ತೂರು ತಾಲೂಕು ಬೋರ್ಡ್ ಪ್ರೆಸಿಡೆಂಟರು ತಿಳಿಸಿರುತ್ತಾರೆ

ಕಾರ್ಕಳ: — ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಹಿಂದೀ ಪರೀಕ್ಷೆಗೆ ಈ ಕೇಂದ್ರದಲ್ಲಿ ಮಧ್ಯಮ ಪರೀಕ್ಷೆಗೆ ಕೂತುಕೊಂಡ ೫ ಮಂದಿಗಳಲ್ಲಿ ಕಲಿಶಾಡಿ ಶ್ರೀನಿವಾಸಶೆಣೈಯವರು ಪ್ರಥಮ ಶ್ರೇಣಿಯಲ್ಲಿಯೂ, ಆರ್ ವಿಟ್ಠಪ್ಪ ಶೆಣೈ ಮತ್ತು ಜನಾರ್ಧನ ವೈಕುಂಠ ಶೆಣೈಯವರು ದ್ವಿತೀಯ ಶ್ರೇಣಿಯಲ್ಲಿಯೂ, ಪ್ರಾಥಮಿಕ ಪರೀಕ್ಷೆಗೆ ಕೂತುಕೊಂಡ ೮ ಮಂದಿಯಲ್ಲಿ ತಿಮ್ಮಪ್ಪ ಶೆಣೈ, ಮಹಾದೇವ ಭಟ್ಟ, ರಮಾನಾಥ ಪೈ, ಅಂಗರಶೆಟ್ಟಿ, ನಾರಾಯಣ ಕಾಮತ್ ಮತ್ತು ಶ್ರೀಮತಿ ತಾರಾದೇವಿ ಗೋಳಿಕೆರೆಯವರು ಪ್ರಥಮ ಶ್ರೇಣಿಯಲ್ಲಿಯೂ, ರಾಮಕೃಷ್ಣ ನಾಯಕ ಮತ್ತು ನಾರಾಯಣಶೆಣೈಯವರು ದ್ವಿತೀಯ ಶ್ರೇಣಿಯಲ್ಲಿಯೂ ತೇರ್ಗಡೆಯಾಗಿರುವರೆಂದು ತಿಳಿಸಲು ಸಂತೋಷವಾಗುತ್ತದೆ

ಇಲ್ಲಿ ಪರದೇಶಿ ವಸ್ತ್ರದಂಗಡಿಯೊಂದನ್ನು ಪಹರೆ ಮಾಡಿದರೆಂದು ಬೋಳ್ಕೋಟ್ ಮತ್ತು ಮೋಲೆಸ್ಟೇಶನ್ ಆಡಿನೆನ್ಸ ಮತ್ತು ಇಂಡಿಯನ್ ಪಿನಲ್ ಕೋಡಿನ ೧೧೭ ಸೆಕ್ಷನ್ ಪ್ರಕಾರ ಕುಂದಾಪುರ ಡಿವಿಜನಲ್ ಮೇಜಿಸ್ಟ್ರೇಟರು ತನಿಕೆ ನಡೆಸಿ ಶ್ರೀ ರಮಾನಾಥ ಕಿಣಿಯವರಿಗೆ ಆರು ತಿಂಗಳ ಕಠಿಣ ಸಜೆಯನ್ನು ವಿಧಿಸಿರುವರು ಇವರನ್ನು ಸಿ ತರಗತಿಯಲ್ಲಿಡಲಾಗುವುದು

ಆಗಾಗ ಮರಗಳ ತುದಿಯಲ್ಲಿ ಟೆಲಿಫೋನು ಕಂಬಗಳ ಮೇಲೆ ಅಲ್ಲಿ ಇಲ್ಲಿ ಎಂಬಂತೆ ರಾಷ್ಟ್ರಧ್ವಜಗಳು ತಲೆಯೆತ್ತುತ್ತಿರುವುವು ಅವುಗಳನ್ನು ಪೋಲೀಸರು ಒಂದು ಕಿತ್ತುಕೊಂಡು ಹೋಗುತ್ತಿರುವರು

ಸ್ವಯಂಸೇವಕರು ಖಾದಿ ವಸ್ತ್ರವನ್ನು ಮನೆಮನೆಗೆ ಕೊಂಡು ಹೋಗಿ ಪ್ರಚಾರ ಮಾಡುತ್ತಿರುವರು

ಕಾಸರಗೋಡು — ತಾ. ೨೬ನೇ ದಿನ ಬಿಳಿಕೋಡಿನಲ್ಲಿ ಮಂದಿ ಪಿಕೆಟಿಂಗು ಎರಡು ಪ್ರತ್ಯಪ್ರತ್ಯೇಕ ಪಂಗಡಗಳಾಗಿ ಪಿಕೆಟ್ ಮಾಡಿದರು ಪೋಲೀಸರು ಬಂದು ಅವರನ್ನು ಚದರಿಸಿದರು

ಕಾಸರಗೋಡಿನಲ್ಲಿ ತಾ ೨೭ನೇ ದಿನ ಶ್ರೀಗಳಾದ ರಾಮಚಂದ್ರ ಮನೋಳಿತ್ತಾಯ ಮತ್ತು ಗೋಪಾಲ ನಾಯರೆಂಬವರು ವಿದೇಶಿ ವಸ್ತ್ರದಂಗಡಿಯೊಂದಕ್ಕೆ ಪಹರೆ ನಿಂತರು ಪೋಲೀಸರು ಬಂದು ಅವರನ್ನು ಚದರಹೇಳಿದರು ಅದಕ್ಕೆ ಸಮ್ಮತಿಯನ್ನು ಸೂಚಿಸಲು ಬೆತ್ತದಿಂದ ಹೊಡೆದರು ಅವರನ್ನು ಸ್ವಲ್ಪ ದೂರದ ವರೆಗೆ ದೂಡಿಕೊಂಡು ಹೋದರು ಒಬ್ಬನು ಅರ್ಧ ದಾರಿಯಲ್ಲಿ ಬಿದ್ದುಬಿಟ್ಟನು ಅವನನ್ನು ಒಂದು ಎತ್ತಿನ ಗಾಡಿಯಲಿ ಹಾಕಿ ಆಸ್ಪತ್ರೆಗೊಯ್ದರು ಇನ್ನೊಬ್ಬನನ್ನು ಬಿಟ್ಟುಬಿಟ್ಟರು

ತಾ ೨೯ನೇ ದಿನ ಶ್ರೀಗಳಾದ ತಿರ್ಮಲ ಕಾಮತ್ ಮತ್ತು ಗೋಪಾಲ ನಾಯರೆಂಬವರು ಪಿಕೆಟ್ ನಡೆಸಿದರು ಅವರು ಪೋಲೀಸರಿಂದ ಹೊಡೆಯಲ್ಪಟ್ಟು ಆಸ್ಪತ್ರೆಗೊಯ್ಯಲ್ಪಟ್ಟಿರುವರು

ಬೆಳ್ಳಾರೆ — ಏಪ್ರಿಲು ೨೪ನೇ ಆದಿತ್ಯವಾರದಿಂದ ಮೇ ೨೨ರ ತನಕ ಬೆಳ್ಳಾರೆ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶಾಂತಿಶಿಬಿರವಿದೆ (ಬೆಳ್ಳಾರೆಯು ಮಡಿಕೇರಿ ಮಂಗಳೂರು ರಸ್ತೆಯ ಪುತ್ತೂರು ಪಟ್ಟಣದಿಂದ ೧೭ ಮೈಲು ದೂರದಲ್ಲಿದೆ ಬಸ್ಸುಗಳ ಅನುಕೂಲತೆಯಿದೆ) ಗ್ರಾಮಜೀವನದಲ್ಲಿ ಕೃಷಿ ಆರೋಗ್ಯ ಸಂಸ್ಕೃತಿ ಮೊದಲಾದ ವಿಷಯಗಳಲ್ಲಿ ಸುಧಾರಣೆಯನ್ನುಂಟುಮಾಡುವ ಸೇವಕರನ್ನು ತಯಾರಿಸುವುದಕ್ಕಾಗಿ ಶಿಬಿರದಲ್ಲಿ ೧೦ ಜನರನ್ನು ತೆಗೆದುಕೊಳ್ಳಲಾಗುವುದು ಇವುಗಳಲ್ಲಿ ೫ ಸ್ಥಳಗಳನ್ನು ವಿದ್ಯಾರ್ಥಿಗಳಿಗೂ ೬ ಸ್ಥಳಗಳು ಪರವೂರಿನವರಿಗೂ ಉಳಿದವುಗಳನ್ನು ಪುತ್ತೂರು ತಾಲೂಕಿನ ೬ ಪಾಧ್ಯಾಯರ ಸಲುವಾಗಿಯೂ ಪ್ರತ್ಯೇಕಿಸಿರುವೆವು ಶಿಬಿರವಾಸಿಗಳಾಗುವವರು ಇಲ್ಲಿ ಊಟ ಮೊದಲಾದ ವ್ಯವಸ್ಥೆಗಳ ಬಗ್ಗೆ ರೂಪಾಯಿ ೧೦ರ ತನಕ ತೆರಲು ಸಿದ್ಧರಿರಬೇಕು ಇಷ್ಟು ವರ್ಷಗಳಂತೆ ಈ ವರ್ಷ ಇದಕ್ಕೆ ಕಡಿಮೆಯು ಖರ್ಚಿನಿಂದ ನಡೆಸುವ ಯತ್ನವು ಮಾಡಲ್ಪಡುವುದು ಬರುವಂಥ ಕಂಡವರಿಗೆ ರಿಯಾಯಿತಿ ಕೊಡಲಾಗುವುದು ನಿಯಮಗಳು (೧) ಶಿಬಿರಕ್ಕೆ ಬರುವವರು ತಂತಮ್ಮ ಊಟದ ಬಟ್ಟಲು ಊಟದ ಸಾಮಗ್ರಿಗಳನ್ನು ತರಬೇಕು (೨) ಶಿಬಿರದಲ್ಲಿ ಸಂಪೂರ್ಣ ಸಾತ್ವಿಕ ಆಹಾರದ ವ್ಯವಸ್ಥೆಯಿದೆ (೩) ಹೊಗೆಸೊಪ್ಪು ಕಾಫಿ ಮೊದಲಾದ ದುಶ್ಚಟಗಳಿಗೆ ಅವಕಾಶವಿಲ್ಲ ದಿನಚರಿ ಕಾರ್ಯಕ್ರಮ — ಬೆಳಗಿನ ೪ ಘಂಟೆಗೆ ಏಳುವುದು ೫ ರಿಂದ ೬ ರ ತನಕ ಪ್ರಾರ್ಥನೆ ೬ ವ್ಯಾಯಾಮ ೭ ೩೦ ೯ ಫಲಾಹಾರ ೯ ೧೦ ೩ ಶಾರೀರಿಕ ಶ್ರಮ ಇಲ್ಲವೆ ವ್ಯಾಯಾಮ ಮಧ್ಯಾಹ್ನ ೧ಕ್ಕೆ ಊಟ ೩ — ೪ ಉಪನ್ಯಾಸ ೪ ೩೦ಕ್ಕೆ ೬ ಸಹ ೯ ೫ — ೬ ವ್ಯಾಯಾಮ ಇಲ್ಲವೆ ಶಾರೀರಿಕ ಶ್ರಮ ೬ ೧೫ರಿಂದ ೭ ೭ ಪ್ರಾರ್ಥನೆ ೭ ಊಟ ೭ ೩೦ರಿಂದ ೯ ೩೦ ಊರ ಜನರಿಗೆ ಉಪನ್ಯಾಸ ಇತ್ಯಾದಿ ವಿಶೇಷ ವ್ಯವಸ್ಥೆಗಳು ಶಿಬಿರವಾಸಿಗಳಿಗೆ ರಾಜಕೀಯ ಸಾಮಾಜಿಕ ಸಂಸ್ಕೃತಿಕ ವಿಷಯಗಳ ಮೇಲೂ ಉಪನ್ಯಾಸಗಳು ಕೊಡಿಸಲ್ಪಡುವುವು ಅದಕ್ಕಾಗಿ ಪರವೂರಿನಿಂದ ಉಪನ್ಯಾಸಕರೂ ಶಿಕ್ಷಕರೂ ಬರುವರು ಓದಲು ಗ್ರಂಥಗಳು ಮತ್ತು ಪತ್ರಿಕೆಗಳ ಸಲಕರಣೆಯು ಮಾಡಲ್ಪಡುವುದು ಶಿಬಿರದ ಅವಧಿಯಲ್ಲಿ ಕುಮಾರ ಪರ್ವತ ಹಳೇಬೀಡು, ಬೇಲೂರುಗಳ ಸಂದರ್ಶನವಿದೆ ಚಿತ್ರಲೇಖನ ಶಿಕ್ಷಣವಿದೆ ಎಂದು ಶಿಬಿರದ ವ್ಯವಸ್ಥಾಪಕರು ಬರೆಯುತ್ತಾರೆ

+ + + +

ಕಾಲವಾಚಕರಿಗೆ ಉಪಯೋಗ. ಪ್ರಜೋತ್ಪತ್ತಿ ಸಂವತ್ಸರದ ಫಾಲ್ಗುಣ ಬ॥ ೧೩ ಶನಿವಾರದಿಂದ ಪ್ರಜೋ. ಸಂವತ್ಸರದ ಚೈತ್ರ ಶು॥ ೩ ಶುಕ್ರವಾರದ ವರೆಗಿನ ಪಂಚಾಂಗ

(೧೯೩೨ನೆಯ ಏಪ್ರಿಲ್—ಸುಗ್ಗಿ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಇಂಗ್ಲೀಷು ಘಂಟೆ	ಸೂರ್ಯ ಉ	ಸೂರ್ಯ ಅಸ್ತ
2	ಶನಿ	೧೩	೫೧ ೩೦	ವಿಶಾಖಾ	೧೫ ೩೨	೨೦	6 29	6 41
3	ರವಿ	೧೪	೫೪ ೩೦	ಅನುರಾಧಾ	೧೯ ೩೧	೨೧	6 28	6 41
4	ಸೋಮ	೧೪	೫೭ ೪೪	ಜ್ಯೇಷ್ಠಾ	೨೪ ೨೯	೨೨	6.27	6 41
5	ಕುಜ	೩೦	೬೦ ೦	ಮೂಲಾ	೩೦ ೧೬	೨೪	6 27	6.41
6	ಬುಧ	●	೩ ೨೮	ಪೂ ಷಾ	೩೬ ೨೯	೨೪	6.26	6.42
7	ಗುರು	೧	೮ ೪೩	ಉ ಷಾ.	೪೨ ೫೮	೨೫	6.25	6 42
8	ಶುಕ್ರ	೨	೧೩ ೪೪	ಶ್ರವಣಾ	೪೯ ೨	೨೬	6 25	6.42

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ (ಕಾವು) Max	Min	Rainfall ಮಳೆ ನಿನ್ನೆ ಮಳೆ	ಒಟ್ಟು ಮಳೆ
25	89— 0	76— 7	—	—
26	89— 7	76— 7	—	—
27	89— 1	76— 6	—	—
28	89— 6	76— 7	—	—
29	89— 0	75— 9	—	—
30	89 — 9	78 9	—	—
31	90— 6	79— 0	—	149—96

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ ಆ	ವರೆಗೆ ರೂ ಆ
ಹೊಸ ರಾಶಿ ಅಕ್ಕಿ	3 — 11	4 — [illegible]
ಹೊಸ ಮುಸ್ಕತಿ	4 — [illegible]	4 — [illegible]
ಹೊಸ ಗುಡ್ಡ	3 — 14	4 — 4
ಹೊಸ ಸುಗ್ಗಿ	3 — 10	3 — 14
ಊರ ಅವ್ವರ್ ಬೆಲ್ತಿಗೆ	4 — 8	5 — 0
ರಂಗೂನು ಬೆಲ್ತಿಗೆ ಗೋಣಿ ೧ಕ್ಕೆ	[illegible] — 14	8 — [illegible]
ಎಲ್ಲು ರುಬೆಲ್ತಿಗೆ ಮುಡಿ ೧ಕ್ಕೆ	4 — 8	4 — 10
ಗೋಧಿ ಗೋಣಿ ೧ಕ್ಕೆ	9 — 8	14 — 8
ಸಿಗರು ಗೋಣಿ ೧ಕ್ಕೆ	12 — 0	12 — 8
ಹುರುಳಿಗೋಣಿ ೧ಕ್ಕೆ ...	6 — 8	[illegible] — 0
ಕಡಲೆ ಗೋಣಿ ೧ಕ್ಕೆ	8 — 8	12 — 8
ತೊಗರಿಬೇಳೆ ಗೋಣಿ ೧ಕ್ಕೆ	13 — 8	21 — 0
ಉದ್ದು ಗೋಣಿ ೧ಕ್ಕೆ	11 — 8	13 — 0
ಹೆಸರು ಗೋಣಿ ೧ಕ್ಕೆ	10 — 4	11 —
ಊರು ಬೆಲ್ಲ ಖಂಡಿ ೧ಕ್ಕೆ	[illegible] — 8	30 — 0
ಉಪ್ಪು ಗೋಣಿ ೧ಕ್ಕೆ	4 — 12	4 — 14
ಜೋಡಿ ಖಂಡಿ ೧ಕ್ಕೆ	60 —	62 —
ಕೊಬ್ಬರಿ ಹಿಂಡಿ ಖಂಡಿ ೧ಕ್ಕೆ	23 — 8	24 — 0
ಎಳ್ಳಿಂಡಿ ಖಂಡಿ ೧ಕ್ಕೆ	2[illegible] — 8	28 — 12
ಕೊಬ್ಬರಿ ಎಣ್ಣೆ ಮಣ ೧ಕ್ಕೆ	6 — 12	8 — 12
ಎಳ್ಳೆಣ್ಣೆ ಮಣ ೧ಕ್ಕೆ	6 — 12	7 — 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ	4 — 7	8 — 14
ಮಾರಿಶಸ ಸಕ್ಕರೆ ಮಣ ೧ಕ್ಕೆ	4 — 2	4 — 3
ಹೊಸ ಮೆಣಸು	4 — 0	5 — 0
ಸಾಸವೆ ಮುಡಿ ೧ಕ್ಕೆ	5 — 8	6 — 0
ಕೇಟಿವ್ ಕಾಫಿ ಖಂಡಿ ೧ಕ್ಕೆ	217 — 8	226 —
ಕಾಳುಮೆಣಸು ಖಂಡಿ ೧ಕ್ಕೆ	170 — 0	180 —
ಮೆಂತ್ಯೆ ಮಣ ೧ಕ್ಕೆ	27 — 0	28 —
ಗೇರುಬೀಜ ಮುಡಿ ೧ಕ್ಕೆ	4 — 8	4 — 8
ಕೊಪ್ಪರ ಖಂಡಿ ೧ಕ್ಕೆ	35 — 0	36 — 0
ಕಾಂಮ್ರ ತಗಡು ಮಣ ೧ಕ್ಕೆ	12 — 0	12 — 4
ಕಾಂಮ್ರ ಪಾತ್ರಗಳು ಮಣ ೧ಕ್ಕೆ	16 — 0	16 — 0
ಜೀನಿಪಟ್ಟೆ ಸೇರು ೧ಕ್ಕೆ	14 — 8	14 — 12
ಹಿತ್ತಾಳೆ ತಗಡು ಮಣ ೧ಕ್ಕೆ	12 — 0	12 — 8
ದವಸು ೧ಕ್ಕೆ ...	17 — 13	17 — 14
ಶುಂಠಿ ಹುಳಿ ಖಂಡಿ ೧ಕ್ಕೆ	20 —	—
ಫಿಡೇಲ ಕಾಫಿ ಖಂಡಿ ೧ಕ್ಕೆ	375 —	400 —
ಹಳೆ ಅಡಿಕೆ ...	180 —	205 —
ಹೊಸಅಡಿಕೆ	140 —	145 —

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್. Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ ಬಂಟ್ವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಪ್ಪಿ ಮೋಟಾರ ಸ್ಟೇಶನ್ [illegible] ಧರ್ಮಸ್ಥಳ [illegible] 1 30ಕ್ಕೂ ಬೆಳ್ತಂಗಡಿಗೆ 1 [illegible] ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ಯಾಮಿನಲ್ಲಿ ಸಿದ್ಧವಾಗಿರುವ [illegible] ಕಾಸರಗೋಡು ಮಲಬಾರು ಕಣ್ಣನ್ನೂರು ಪ್ರಾಂತಗಳಿಗೂ ಅಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ [illegible] ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ [illegible] ಉಪ್ಪಿ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ [illegible] ಸುಮಾರು 2 ಗಂಟೆಗೆ ಮೂಡಗೆರೆಗೂ [illegible] ಚಿಕ್ಕಮಗಳೂರಿಗೆ [illegible] ಟಿಫಿನ್ ಆಹಾರ ವಗೈರೆ ತೆಗೆದುಕೊಂಡು [illegible] ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು [illegible] ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ [illegible] ಪೂನಾ ಮತ್ತು ಬೊಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ [illegible] ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ [illegible] ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆ [illegible] ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ [illegible] ಪೂನಾ ವಗೈರೆ [illegible] ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ. ಎನ್ ಹನುಮಂತಪ್ಪ, ಫ್ಲೋರಡೂನ್ ಸೋರಾಬ, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇಂದವು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ **ಶೃಂಗೇರಿಯನ್ನು** ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ದೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲುಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Company Ltd., Mangalore

ಶಿಕ್ಷೆ, ಜಪ್ತಿ, ಕೈದು.

ಮಾಲವೀಯ ಸರೋಜಿನೀ ದೇವಿಯವರ ಮಾತುಕತೆ.

ಲೋಥಿಯನ್ ಕಮಿಟಿಯು ದೇಶದಲ್ಲಿ ಸುತ್ತಾಡುತ್ತಾ ಪರಿಸ್ಥಿತಿಯನ್ನು ವಿಚಾರಿಸುತ್ತಿದೆಯಷ್ಟೆ. ಅದರ ವಿಚಾರಣಾ ಸಮಿತಿಗೆ ಪಂಡಿತ ಮಾಲವೀಯರು ತಮ್ಮ ಅಭಿಪ್ರಾಯವನ್ನು ಸೂಚಿಸಬೇಕೆಂದು ಲೋಥಿಯನ್ ದೊರೆಯವರು ಮಾಲವೀಯರಿಗೆ ಪತ್ರ ಮುಖೇನ ಬರೆದರು. ಆ ಪತ್ರಕ್ಕುತ್ತರವಾಗಿ ಮಾಲವೀಯರು ಸರಕಾರವು ಶಾಸನಗಳನ್ನು ಹಿಂತೆಗೆಯಬೇಕೆಂದೂ ರಾಜಕೀಯ ಕೈದಿಗಳನ್ನು ಬಿಡಬೇಕೆಂದೂ, ದಬ್ಬಾಳಿಕೆಯ ಧೋರಣವನ್ನು ಬಿಡಬೇಕೆಂದೂ, ಹಾಗಾದರೆ ಮಾತ್ರ ತಾನು ಎಲ್ಲಾ ಸಮಿತಿಗಳೊಡನೆ ಸಹಕರಿಸುವೆನೆಂದೂ ಬರೆದರು.

ತಾ. ೨೫ — ಕರಪತ್ರಗಳಿಗಾಗಿ ಶಿಕ್ಷೆ.

ಕಲ್ಕತ್ತದ ವಿದ್ಯಾಸಾಗರ ಕಾಲೇಜಿನ ಶ್ರೀ ದಿನೇಶ ಚಂದ್ರ ಬೆನರ್ಜಿ ಮತ್ತು ಅಧೀರ್ ಕುಮಾರ ಚಕ್ರವರ್ತಿ ಎಂಬಿಬ್ಬರು ವಿದ್ಯಾರ್ಥಿಗಳು ತಮ್ಮ ಹಾಸ್ಟೆಲ್ ಗೋಡೆಯ ಮೇಲಿನಿಂದಾಗಿ ಕೆಲವು ಕಾಂಗ್ರೆಸ್ ಕರಪತ್ರಗಳನ್ನು ಇನ್ನಿತರ ಕೋಣೆಗಳೊಳಗೆ ಎಸೆದರೆಂಬ ಆಪಾದನೆಯ ಮೇಲೆ ವಿಚಾರಿಸಲ್ಪಡುತ್ತಿರುವರು.

೨೬ ಮಂದಿಗಳಿಗೆ ಶಿಕ್ಷೆ.

ಶಾಸನಭಂಗ ಚಳವಳವನ್ನು ಪ್ರೋತ್ಸಾಹಿಸಿದುದಕ್ಕಾಗಿ ೨೬ ಮಂದಿ ಸ್ವಯಂಸೇವಕರಿಗೆ ಕಲ್ಕತ್ತದಲ್ಲಿ ವಿವಿಧ ಶಿಕ್ಷೆಯು ಲಭಿಸಿತು.

೯ ಮಂದಿ ಸ್ತ್ರೀಯರಿಗೆ ಶಿಕ್ಷೆ.

ಕರಾಚಿಯಲ್ಲಿ ವಿದೇಶಿ ವಸ್ತ್ರ ಪಿಕೆಟಿಂಗಿಗಾಗಿ ೮ ಮಂದಿ ಸ್ತ್ರೀಯರಿಗೆ ಶಿಕ್ಷೆಯಾಯಿತು. ಅಲ್ಲಿಯ ೯ನೇ ಡಿಕ್ಟೇಟರರನ್ನೂ ಬಂಧಿಸಿದರು.

ಅಂಗಿಯಲ್ಲಿ ಕಾಂಗ್ರೆಸ್ ಕಾರ್ಯಕ್ರಮ.

ಕಾನ್‌ಪುರದಲ್ಲಿ ಒಬ್ಬ ಸ್ವಯಂಸೇವಕನ ಅಂಗಿಯ ಮೇಲೆ ಕಾಂಗ್ರೆಸ್ ಕಾರ್ಯಕ್ರಮವು ಮುದ್ರಿಸಲ್ಪಟ್ಟಿದ್ದು ಅವನು ಎಲ್ಲಾ ಕಡೆಗಳಿಗೂ ಹೋಗಿ ಜಾಹೀರು ಮಾಡುತ್ತಿದ್ದನು. ಅವನನ್ನು ಕೈದು ಮಾಡಿದರು.

ತಾ. ೨೬ — ಜಪ್ತಿ.

ಅಖಿಲಭಾರತ ಬಂಗಾಳ ಯುವಕ ಸಂಘದ ಸೆಕ್ರೆಟರಿಗಳಾದ ಶ್ರೀ ಸೈಲೇಂದ್ರನಾಥ ರಾಯ್‌ಯವರ ಮನೆಯಲ್ಲಿ ಜಪ್ತಿಯು ನಡೆಯಿತು. ಮೂವರು ಸ್ವಯಂಸೇವಕರು ಕೈದು ಮಾಡಲ್ಪಟ್ಟರು.

ರಾಷ್ಟ್ರೀಯ ಮಹಿಳಾ ಸಭೆ ಕಾಯಿದೆ ವಿರೋಧ.

ಅಲ್ಲಹಾಬಾದಿನ ರಾಷ್ಟ್ರೀಯ ಮಹಿಳಾ ಸಭೆಯು ಕಾಯಿದೆ ವಿರೋಧವೆಂದು ನೋಟೀಸ ಕೊಡಲಾಗಿದೆ. ತಂತಿ ಕಂಭ ವಿದ್ಯುತ್ ದೀಪ ಕಂಭಗಳ ಮೇಲೆ ರಾಷ್ಟ್ರಧ್ವಜಗಳನ್ನು ಚಿತ್ರಿಸಿದ್ದರು. ಗೋಡೆಗಳಲ್ಲಿ ಕಾಂಗ್ರೆಸ್ ಕಾರ್ಯಕ್ರಮವನ್ನು ಬರೆದಿದ್ದರು.

ಸ್ತ್ರೀಯರಿಗೆ ಶಿಕ್ಷೆ.

ಅಕೋಲದ ಏಳನೇ ಸರ್ವಾಧಿಕಾರಿಣಿಯಾಗಿದ್ದ ಶ್ರೀಮತಿ ಕಮಲಾಬಾಯಿ ಭಗವತ್ ಎಂಬವರನ್ನೂ ಮತ್ತಿಬ್ಬರು ಸ್ತ್ರೀಯರನ್ನೂ ಪಿಕೆಟಿಂಗ್ ಸಂಬಂಧ ಕೈದು ಮಾಡಿದರು.

ರಥದ ಮೇಲಿನ ಧ್ವಜಗಳನ್ನು ತೆಗೆದರು.

ಸೇಲಮಿನ ನಾಮಕಲ್ ಎಂಬಲ್ಲಿ ರಥೋತ್ಸವ ಮೂರ್ತಿಯನ್ನು ರಥದಲ್ಲಿ ಕುಳ್ಳಿರಿಸಿ ಎಳೆಯಲು ಸಿದ್ಧಮಾಡಿದ್ದರು. ಅಷ್ಟರಲ್ಲಿ ರಥದ ತುದಿಯಲ್ಲಿ ಹಾರಾಡುತ್ತಿದ್ದ ರಾಷ್ಟ್ರಧ್ವಜಗಳು ರಡು ಪೋಲೀಸರ ಕಣ್ಣಿಗೆ ಬಿದ್ದುವು. ಒಡನೆ ಅದನ್ನು ತೆಗೆಯಬೇಕೆಂದು ಆಡಳಿತೆದಾರರಿಗೆ ಅಪ್ಪಣೆಯಾಯಿತು. ಚರ್ಚೆ ನಡೆಯಿತು. ಅಷ್ಟರಲ್ಲಿ ಯಾರೋ ಒಬ್ಬನು ಮೂರ್ತಿಯನ್ನು ಪ್ರತಿಷ್ಠಿಸಿ ಆದ ಮೇಲೆಂದು ನೋಡದೆ ರಥಕ್ಕೆ ಹತ್ತಿ ರಾಷ್ಟ್ರಧ್ವಜಗಳನ್ನು ತೆಗೆದನು.

ತಾ. ೨೭ — ೭೦ ಕೈದಿಗಳು.

ಮುಂಬಾಯಿಯ ಚೌಪಾತಿಯಲ್ಲಿ ಮಾಸಿಕ ರಾಷ್ಟ್ರಧ್ವಜದ ವಂದನೆಗಾಗಿ ಯತ್ನವಾಯಿತು. ೭೦ ಮಂದಿಗಳನ್ನು ಒಂದು ಪೋಲೀಸರ ಫೌಜು ಬಂದು ದಸ್ತಗಿರಿ ಮಾಡಿತು.

ರೈಲು ಪಾರ್ಸೆಲು ಜಪ್ತಿ.

ಬರೋಡದಿಂದ ಮೆಸರ್ಸ್ ಮೆಹ್ತಾ ಬ್ರದರ್ಸ್ ಎಂಬವರು ಅಹ್ಮದಾಬಾದಿಗೆ ಒಂದು ಪಾರ್ಸೆಲನ್ನು ರೈಲು ಮೂಲಕ ಕಳುಹಿಸಿದರು. ಅದನ್ನು ಪೋಲೀಸರು ಬಿಚ್ಚಿ ಪರಿಶೋಧಿಸಿದರು. ಮುದ್ರಿತವಾದ ಹೇರಳ ಕರಪತ್ರಗಳು ಅದರಲ್ಲಿದ್ದುದು ಕಂಡು ಬಂತು. ಒಬ್ಬ ಹುಡುಗನ ಕೈಯಲ್ಲಿ ೫೦೦ ಬುಲ್ಲೆಟಿನುಗಳನ್ನು ಕಂಡು ಹಿಡಿದರು.

ತಾ. ೨೮ — ಒಂದು ದಿನದಲ್ಲಿ ೧೦೨ ಕೈದಿಗಳು.

ಮಾಸಾಂತ್ಯದ ಆದಿತ್ಯವಾರದುದರಿಂದ ಮುಂಬಾಯಿಯಲ್ಲಿ ಧ್ವಜವಂದನೆಯು ನಡೆಯಿತು. ೧೦೨ ಕೈದುಗಳಾದುವು. (ಇದರ ವಿವರವು ಬಂದಿಲ್ಲ)

ಒಂದು ದಿನದಲ್ಲಿ ೨೦ ಕೈದುಗಳು.

ಅಲ್ಲಹಾಬಾದಿನಲ್ಲೂ ರಾಷ್ಟ್ರಧ್ವಜ ವಂದನೆ. ಶ್ರೀ ಸರೂಪ ದೇವಿ ಎಂಬವರೂ, ಅವರ ಗಂಡ ಶ್ರೀಯುತ ಮೋಹನ್‌ಲಾಲ್ ಎಂಬವರೂ, ಇನ್ನಿತರ ೧೮ ಮಂದಿಗಳೂ ಕೈದು ಮಾಡಲ್ಪಟ್ಟರು.

ಕೈದಿಯನ್ನು ಹಿಂಬಾಲಿಸಿದರು.

ಕಾನ್‌ಪುರದಲ್ಲಿ ಶ್ರೀ ರಘುವೀರ ದಯಾಲ್ ಭಟ್ ಎಂಬವರು ಹಿಂದೂ ಸಭೆಯ ಕಾರ್ಯದರ್ಶಿಗಳು ಮತ್ತು ಮ್ಯುನಿಸಿಪಲ್ ಕಮಿಶನರರು. ಇವರು ಕಾನ್‌ಪುರದಿಂದ ಕೂಡಲೇ ಹೊರಗೆ ಹೋಗಬೇಕೆಂದು ಅಜ್ಞೆ. ಇವರು ಅದನ್ನು ಮನ್ನಿಸಲಿಲ್ಲ. ಕೈದು ಮಾಡಲ್ಪಟ್ಟರು. ಇವರನ್ನು ಸ್ಟೇಶನಿಗೆ ಕೊಂಡೊಯ್ಯುವಾಗ ವಾನರ ಸೇನೆಯು ಹುಡುಗರು ಹಿಂಬಾಲಿಸಿಕೊಂಡು ಹೋದರು. ಜಯಕಾರವನ್ನೆಬ್ಬಿಸಿದರು. ಮೂವರು ಹುಡುಗರನ್ನು ಬಂಧಿಸಿದರು. ಕಾಂಗ್ರೆಸ್ ಕಾರ್ಯವನ್ನು ಬೊಬ್ಬಿಟ್ಟು ಹೇಳುತ್ತಾ ತಿರುಗುತ್ತಿದ್ದ ಯುವಕನೊಬ್ಬನನ್ನು ಹಿಡಿದರು.

ಕಾಂಗ್ರೆಸ್ ಕರಪತ್ರಗಳು ಅಚ್ಚಾಗುವುದೆಲ್ಲಿ?

ಬರೋಡ ಸಂಸ್ಥಾನದಿಂದ ಅಹ್ಮದಾಬಾದಿಗೆ ರೈಲು ಮೂಲಕ ಪಾರ್ಸೆಲು ಕಟ್ಟುಗಳು ಬಂದುವು. ಈ ಸಂಗತಿಯನ್ನು ಪೋಲೀಸರು ತಿಳಿದು ಪಾರ್ಸೆಲಿನ ಮೇಲೆ ಬರೆದ ಹೆಸರಿನವರನ್ನು ಹಿಡಿಯಬೇಕೆಂದು ಬರೋಡಕ್ಕೆ ಹೋದರು. ಬಹಳವಾಗಿ ಹುಡುಕಿದರು. ಅದರ ಪಾರ್ಸೆಲಿನಲ್ಲಿ ಬರೆಯಲ್ಪಟ್ಟಿದ್ದ ವಿಳಾಸದಾರರು ಅಲ್ಲಿ ಯಾರೂ ಇರಲಿಲ್ಲ. ಕೊನೆಗೆ ಪೋಲೀಸರು ಹಿಂತೆರಳಿದರು. ಕಾಂಗ್ರೆಸ್ ಪತ್ರಗಳು ಬರೋಡದ ಯಾವುದೋ ಒಂದು ಕಡೆಯ ಯಾವುದೋ ಒಂದು ಮುದ್ರಣಾಲಯದಲ್ಲಿ ಅಚ್ಚಾಗಬೇಕೆಂದು ಊಹೆಯಾಗಿದೆ.

ಮುದ್ರಣಕಾರರಿಗೆ ನೋಟೀಸು.

ಕಾಂಗ್ರೆಸ್ ಕರಪತ್ರಗಳನ್ನು ಮುದ್ರಿಸಿದುದಕ್ಕಾಗಿ ಕಲ್ಲಿಕೋಟೆಯ ಎಮ್. ಸಿ. ಪ್ರೆಸ್ಸಿನ ಮೆನೇಜರರಾದ ಶ್ರೀ ಕ. ದಾಮೋದರನ್ ಎಂಬವರ ಮೇಲೊಂದು ನೋಟೀಸು ಹೋಗಿದೆ. ನ್ಯಾಯ ವಿಚಾರಣೆಯಾಗುತ್ತಾ ಇದ್ದಿರುವರು. ಅದರ ಪ್ರಕಾಶಕರಲ್ಲವೆಂದೂ ಪ್ರಿಂಟರರೆಂದೂ ತಿಳಿದು ಬಂತು.

ತಾ. ೨೯ — ಹುಡುಕಿದರು.

ಕಾಂಗ್ರೆಸ್ ಬುಲೆಟಿನುಗಳನ್ನು ಹುಡುಕಿ ತೆಗೆಯಲು ಪೋಲೀಸರು ಅಹ್ಮದಾಬಾದಿನಲ್ಲಿ ಬಹಳವಾಗಿ ಯತ್ನಿಸಿದರು. ಏನೂ ಸಿಗಲಿಲ್ಲ. ಇಲ್ಲಿಯ ಬಂದರಿನ ಸಿಪಾಯಿಗಳ ದೆಸೆಯಿಂದಾಗಿ ಕೆಲವು ಆಸ್ತಿಗಳು ಏಲಂ ಹಾಕಲ್ಪಡಲು ಸಿದ್ಧವಾಗಿವೆ.

ಪಿ. ಸಿ. ರೇಯವರಿಗೆ ಸತ್ಕಾರ.

ದೇಶಪ್ರಭೃತಿಗಳಾದ ಸರ್ ಪಿ. ಸಿ. ರೇಯವರು ನಾಗಪುರದಲ್ಲಿಳಿದರು. ಸಾವಿರಗಟ್ಟಳೆ ಜನರು ಅವರನ್ನು ಸ್ವಾಗತೀಕರಿಸಿದರು. ಒಂದು ಸಭೆ ಜರಗಿತು. ಸಭೆಯಲ್ಲಿ ಕಾಂಗ್ರೆಸ್ ಕರಪತ್ರಗಳು ಹಂಚಲ್ಪಟ್ಟುವು. ಹಂಚಿದವರನ್ನು ಪೋಲೀಸರು ಬಂಧಿಸಿದರು. ಒಬ್ಬ ಹುಡುಗನು ರಾಷ್ಟ್ರಧ್ವಜವನ್ನು ಎತ್ತಿ ಹಿಡಿದನು. ಅವನನ್ನೂ ಹಿಡಿದರು.

ಪೋಸ್ಟ್ ಆಫೀಸ್ ಪಿಕೆಟಿಂಗ್.

ಹೊಸಿಯಾರ್ ಪುರದಲ್ಲಿ ಪೋಸ್ಟ್ ಆಫೀಸನ್ನು ಪಿಕೆಟ್ ಮಾಡುತ್ತಲಿರುವರು ಕೈದುಗಳಾಗುತ್ತಿವೆ.

ರಾಷ್ಟ್ರಧ್ವಜ ಸಂದೋಹ.

ಟ್ಯುಟಿಕೋರಿನ್‌ನಲ್ಲಿ ವಿದೇಶಿ ವಸ್ತ್ರದಂಗಡಿಗಳು ಪಿಕೆಟ್ ಮಾಡಲ್ಪಟ್ಟವು. ಪಹರೆಗಾರರನ್ನು ಪೋಲೀಸರು ಬಲತ್ಕಾರದಿಂದೆಳೆದು ಅವರವರ ಮನೆಗಳಿಗೆ ತಲಪಿಸಿದರು. ಕೆಲವು ಅಂಗಡಿಗಳಲ್ಲಿ ರಾಷ್ಟ್ರಧ್ವಜಗಳನ್ನೇರಿಸಿದ್ದರು. ಅವುಗಳನ್ನು ಪೋಲೀಸರು ಕಿತ್ತೊಗೆದರು. ಪುನಃ ಮಧ್ಯಾಹ್ನದಲ್ಲಿ ನೋಡುವಾಗ ಇಡೀ ಪೇಟೆಯ ಕಟ್ಟೋಣಗಳು ರಾಷ್ಟ್ರಧ್ವಜಮಯವಾಗಿದ್ದುವು.

ಎಚ್ಚರಿಕೆ ಕೊಟ್ಟು ಬಿಟ್ಟರು.

ಕಲ್ಲಿಕೋಟೆಯಲ್ಲಿ ಹತ್ತು ಹನ್ನೆರಡು ಮಂದಿಗಳು ಪ್ರತಿ ಅಂಗಡಿಯೆದುರು ಹೋಗಿ ಪಿಕೆಟ್ ಮಾಡಿದರು. ಅವರೆಲ್ಲರನ್ನೂ ಕೈದುಮಾಡಿ ಎಚ್ಚರಿಕೆ ಕೊಟ್ಟು ರಾತ್ರಿ ಬಿಟ್ಟರು.

೩ ದಿನಗಳ ಹರತಾಳ.

ತಿನ್ನವೆಲ್ಲಿಯಲ್ಲಿ ಸ್ವಯಂಸೇವಕರಿಗೆ ಪೋಲೀಸರು ಹೊಡೆಯುವ ಕ್ರಮವನ್ನು ನೋಡಿ ವರ್ತಕರು ಮರುಗಿ ತಾ. ೨೯ರಿಂದ ಮೊದಲುಗೊಂಡು ಮೂರು ದಿನಗಳ ಹರತಾಳವನ್ನಾಚರಿಸಬೇಕೆಂದು ನಿರ್ಧರಿಸಿರುವರು. ಮೊದಲನೇ ದಿನದ ಹರತಾಳವು ಸಂಪೂರ್ಣ ಯಶಸ್ವಿಯಾಯಿತು. ಅಲ್ಪಸ್ವಲ್ಪ ಅಂಗಡಿಗಳು ತೆರೆಯಲ್ಪಟ್ಟಿದ್ದುವು.

ಚದರಿಸಿದರು.

ತಿನ್ನವೆಲ್ಲಿಯಲ್ಲಿ ತಾ. ೨೯ನೇ ಸಂಜೆ ಒಬ್ಬ ಜನಸಮೂಹ ಗೂಡಿ ಬಂದು ಮೆರವಣಿಗೆಯ ಬಗೆಗೆ ರಾಷ್ಟ್ರಧ್ವಜಗಳನ್ನು ಹಿಡಿದುಕೊಂಡು ಬೀದಿಬೀದಿಗಳಲ್ಲಿ ಸಂಚಾರ ಮಾಡುತ್ತಿದ್ದಿತು. ಅಷ್ಟರಲ್ಲಿ ಪೋಲೀಸರು ಬಂದು ಮೆರವಣಿಗೆಯವರನ್ನು ಚದರಿಸಿದರು. ಕೆಲವರು ಸ್ವಲ್ಪ ಸ್ವಲ್ಪ ಪೆಟ್ಟುಗೊಂಡಿರುವರು.

ಪೋಲೀಸರು ನೋಡುತ್ತಿದ್ದರು.

ವಿದ್ಯಾಲಯಗಳಲ್ಲಿ ಪಿಕೆಟಿಂಗ್ ನಡೆಯಿತು. ಪೋಲೀಸರು ಸ್ಥಿತಿಗತಿಗಳನ್ನು ನೋಡುತ್ತಾ ನಿಂತರು — ಹೋದರು.

ಅಖಿಲಭಾರತ ಕಾಂಗ್ರೆಸ್ ಸಭೆಯು ಜರಗುವುದೇ?

ಪಂಡಿತ ಮದನಮೋಹನ ಮಾಲವೀಯರೂ, ಶ್ರೀಮತಿ ಸರೋಜಿನಿ ದೇವಿಯವರೂ ಈ ದೇಶದ ಮತ್ತು ಕಾಂಗ್ರೆಸ್ಸಿನ ಸ್ಥಿತಿಯನ್ನು ಶೋಧಿಸುವುದರಲ್ಲಿ ನಿರತರಾಗಿರುವರು. ಅಖಿಲ ಭಾರತ ಕಾಂಗ್ರೆಸ್ ಸಭೆಯನ್ನು ಜರಗಿಸುವ ಕುರಿತು ಮಾಲವೀಯ ಸರೋಜಿನೀಯವರ ಮಾತುಕತೆಗಳು ನಡೆಯುತ್ತಿವೆ.

"ಶಾಂತಿಯಾಗಲು, ಸರಕಾರಕ್ಕೆ ಮನಸ್ಸಿಲ್ಲ"

ಸರೋಜಿನಿದೇವಿಯವರು ಡಿಲ್ಲಿಗೆ ಹೋಗಿ ಹಿಂದಿರುಗಿದರು. ಅವರು ಡಿಲ್ಲಿಗೆ ಹೋದುದು ಸರಕಾರ ಕಾಂಗ್ರೆಸ್ಸಿಗಳೊಡನೆ ರಾಜಿಮಾಡಲಿಕ್ಕೆಂದು ಕೆಲವು ಪತ್ರಿಕೆಗಳು ಸುಳ್ಳು ವಾರ್ತೆಯನ್ನು ಹರಡಿದುವು. ತಾ. ೨೮ನೇ ದಿನ ದೇವಿಯವರು ಮುಂಬಾಯಿಗೆ ಬಂದರು. ಅವರು ಹೇಳಿದ್ದೇನೆಂದರೆ "ನಾನು ಡಿಲ್ಲಿಗೆ ಹೋದುದು ದಕ್ಷಿಣ ಆಫ್ರಿಕದ ಸಮಸ್ಯೆಯೊಂದರ ಕುರಿತಾಗಿ ಮಾತ್ರ. ಕೆಲವು ಕಾಂಗ್ರೆಸ್‌ವಾಲರನ್ನು ನೋಡಿ ನಾನು ಮಾತನಾಡಿದೆನು. ಬೆನಾರಸಿಗೆ ಹೋಗಿ ಪಂಡಿತ ಮಾಲವೀಯರೊಡನೆ ಆಲೋಚಿಸಿದೆನು. ರಾಜಿ ಸಂಧಾನದ ಕುರಿತು ಸರಕಾರಕ್ಕೆ ಎಳ್ಳಷ್ಟು ಮನಸ್ಸಿಲ್ಲವೆಂದು ನನಗೆ ತೋರಿ ಬರುತ್ತಿದೆ. ಬಹಳ ದೀರ್ಘವಾದ ಹೋರಾಟವೇ ನಡೆಯಲಿದಾತ್ತದೆಂದು ಸುತ್ತಮುತ್ತಲಿನ ವಾತಾವರಣ ಪರಿಶೀಲನೆಯಿಂದ ಭಾಸವಾಗುತ್ತದೆ. ಅಂತೂ ಇಂತೂ ಕಾಂಗ್ರೆಸ್ ರಾಜಿಯ ಮಾತನ್ನು ಎತ್ತಲಾರದು. ಯಾವ ಘೋಷಣೆಯನ್ನಾಗಲೀ ಯಾವ ರಾಜಿ ಮಾತನ್ನಾಗಲೀ ತಿರಸ್ಕಾರ ಪುರಸ್ಕಾರ ಮಾಡಲಿಕ್ಕೆ ಗಾಂಧಿಯವರೊಬ್ಬರೇ ಸಾಮರ್ಥ್ಯವುಳ್ಳವರು—ಯೋಗ್ಯರು. ದಕ್ಷಿಣ ಆಫ್ರಿಕದ ಸ್ಥಿತಿಯು ಬಹಳ ಮೋದಂಡಾವಸ್ಥೆಯಲ್ಲಿದೆ. ಏನಾದರೊಂದು ಪರಿಹಾರವನ್ನು ಹುಡುಕಲೇ ಬೇಕು." ಕಾಂಗ್ರೆಸ್ಸಿನವರಾಗಿದ್ದರೂ ಸರೋಜಿನೀಯವರನ್ನು ಏಕೆ ಕೈದುಮಾಡಲಿಲ್ಲವೆಂಬ ಪ್ರಶ್ನೆಯು ಎಸೆಂಬ್ಲಿಯಲ್ಲಿ ಬಂದಾಗ ಅಖಿಳ ಭಾರತ ಕಾಂಗ್ರೆಸ್ ಸಭೆಯನ್ನೇ ಕಾಯಿದೆ ವಿರೋಧವಾಗಿ ಎಣಿಸಲಿಲ್ಲವೆಂದು ಸರಕಾರದವರು ಹೇಳಿದರು.

ನಿಮ್ಮ ಬಂಧುಬಳಗದ

ಆರೋಗ್ಯಲಾಭಕ್ಕಾಗಿ.

ಕಂದಿಗೆ ಅವನ ಶ್ರಮಯುಕ್ತ ಕೆಲಸಗಳಿಗಾಗಿ ಅಗತ್ಯವಿರುವ ಆರೋಗ್ಯ ಶಕ್ತಿಗಳಂತೆಯೇ ತಾಯಿಗೂ ಶ್ರಮವಿಲ್ಲದೆ ಮನೆಗೆಲಸಗಳನ್ನು ಮಾಡಲು ಅಂತಹ ಆರೋಗ್ಯ ಮತ್ತು ಶಕ್ತಿಗಳು ಬೇಕಾಗಿವೆ ಮಕ್ಕಳು ಕೂಡಾ ಆಟಪಾಠಗಳಲ್ಲಿ ತಮ್ಮ ಚೈತನ್ಯವನ್ನು ಬೇಗನೇ ಕಳೆದು ಕೊಳ್ಳುತ್ತಾರೆ ಅದನ್ನು ಪುನಃ ತುಂಬಿಸಬೇಕು. ಆರೋಗ್ಯವನ್ನೂ ಶಕ್ತಿಯನ್ನೂ ವೃದ್ಧಿಸ ಲಿಕ್ಕೆ ಸರಿಯಾದ ಮತ್ತು ಸಮತೂಕದ ಪೋಷಣೆಯು ಒಂದೇ ದಾರಿ

ನಿಮ್ಮ ಕುಟುಂಬದ ಆರೋಗ್ಯ ಪಾಲನೆಯನ್ನು ರುಚಿಕರವಾದ "ಓವಲ್ಟಿನ್" ಗೆ ಬಿಟ್ಟು ಕೊಡಿರಿ ಎಲ್ಲಿ ಆರೋಗ್ಯವಿದೆಯೋ ಅಲ್ಲಿ ಥಾಂಖಳವಾದ ಸಂತೋಷವಿದೆ ಎಲ್ಲಿ ಓವಲ್ಟಿನ್ ಪಾನೀಯವಿದೆಯೋ ಅಲ್ಲಿ ಆರೋಗ್ಯವಿದೆ

ಅತೀ ಶುದ್ಧ, ಅತ್ಯುತ್ತಮ — ಕರಸ್ಪರ್ಶಿತವಾದುದಲ್ಲ

ರುಚಿಕರವಾದ ಓವಲ್ಟಿನ್ಗೆ ಸರಿಸಮಾನವಾದ ಬೇರೆ ಪಾನೀಯವಿಲ್ಲ ಮಿಶ್ರವೂ ಸಪ್ಪೆಯೂ ಆಗಿ ರುವ ಎಲ್ಲಾ ತರಾರಿ ವಸ್ತುಗಳನ್ನು ತಿರಸ್ಕರಿಸಿರಿ

OVALTINE
TONIC FOOD BEVERAGE

ಟೋನಿಕ್ ಆಹಾರ ಮತ್ತು ಪಾನೀಯ

ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜಂಟರು — ಜೇಮ್ಸ್ ರ್‍ಯಾಟ್ ೨೨ಎ ರಿಪನ್ ಸ್ಟ್ರೀಟ್, ಕಲ್ಕತ್ತಾ ಮತ್ತು ಮುಂಬಾಯಿ, ಮದರಾಸ್ ರಂಗೂನುಗಳಲ್ಲಿ

'ಓವಲ್ಟಿನ್' ರೊಟ್ಟಿಗಳನ್ನು ಎಲ್ಲಾ ಕುಟುಂಬಗಳು ಸೇವಿಸುತ್ತವೆ ಇದನ್ನು 'ಓವಲ್ಟಿನ್' ನೊಡನೆಯಾಗಲೀ, ಚಹ ಕಾಫಿ, ಬೆಣ್ಣೆ, ಹಣ್ಣಿನೊಡನೆಯಾಗಲೀ ತೆಗೆದುಕೊಳ್ಳಿರಿ ಬಹಳ ರುಚಿಕರ ಇದರಲ್ಲಿ ಬೇಗನೇ ಜೀರ್ಣವಾಗುವ ಮತ್ತು ಶಕ್ತಿವರ್ಧಕ ಗುಣಗಳಿವೆ, ಹಲುಗಳನ್ನು ಬಲಗೊಳಿಸುತ್ತದೆ.

OV/52

ALLIANZ Und STUTTGARTER
Life Insurance, Bank, Ltd.

ಅಲಿಆನ್ಸ ಉಂಡ ಸ್ಟುಟಗಾರ್ಟರ
ಲೈಫ್ ಇನ್ಶೂರೆನ್ಸ ಬ್ಯಾಂಕ ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೮೧ರಲ್ಲಿ ಸ್ಥಾಪಿಸಲ್ಪಟ್ಟಿದು)

ಒಟ್ಟು ವಿಮಾ ಹಣವು ೩೮೯ ಕೋಟಿ ರೂ ಗಳಿಗಿಂತ ಹೆಚ್ಚಾಗಿರುವದು, ವಾರ್ಷಿಕ ವಿಮಾ ಹಪ್ತೆಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾಪತ್ರಕಗಳ ಮೇಲಿನ ಕಾಯ್ದಿಟ್ಟ ಠೇವುಗಳು ಹಿಂದೀ ಕಾರಣಗಳಲ್ಲಿಯೇ ತೊಡಗಿಸಲ್ಪಡುವುವು.

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ವಿಮಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ **ಸಬ್ ಏಜಂಟರು ಬೇಕು.** ಹೆಚ್ಚಿನ ಮಾಹಿತಿಗಾಗಿ ಮೊರವಾನಜಿ ಆ್ಯಂಡ್ ಸನ್ಸ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲೈಫ್ ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸ್ಕರ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು.

ಬಾಲಿಕೆಯರಿಗೂ ಬಾಲಕರಿಗೂ ಮನೋರಂಜಕವಾದ

ಪದ್ಯ ಪುಸ್ತಕ!

ಕನ್ನಡ ಪದ್ಯರತ್ನಾವಳಿ (ಪ್ರಥಮ ಭಾಗ)

(ಶ್ರೀ ಜಿ ಎಸ್ ಲಕ್ಷ್ಮಣ ಪೈ ವಿರಚಿತ)

ಕ್ರಯ ೦—೪—೬

ಮಕ್ಕಳ ಮೆಚ್ಚಿನ ಕಥೆಗಳನ್ನು ನೀತಿಪಾಠಗಳನ್ನು ಲಲಿತವಾದ ಭಾಷೆಯಲ್ಲಿ ಸುಲಭವಾದ ಶೈಲಿಯಲ್ಲಿ ಬಳಗೊಂಡ ಪದ್ಯಗ್ರಂಥ!

ಮಂಗಳೂರು ಮ್ಯುನಿಸಿಪಲ್ ಸ್ಕೂಲುಗಳವರು ಇದನ್ನು ಪಠ್ಯಪುಸ್ತಕವಾಗಿ ಮಂಜೂರು ಮಾಡಿದ್ದಾರೆ

ಹೆಚ್ಚು ಪ್ರತಿಗಳನ್ನು ತೆಗೆದುಕೊಳ್ಳುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ—

ಹರಿಹರ ಭಾಷಪಾಸ್, ಪುತ್ತೂರು. (ದ. ಕ)

ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಟೀಚಿಂಗ್ ಗ್ರಾಂಟು.

ಈ ಜಿಲ್ಲೆಯಲ್ಲಿ ೧೯೩೧—೩೨ನೇ ಇಸವಿಗೆ ಎಲಿಮೆಂಟರಿ ಎಜುಕೇಶನ್ ಕಾಲೇಜ್ ಗ್ರಾಂಟು ಸಲುವಾಗಿ ಹಗಲು ಶಾಲೆ ಮತ್ತು ರಾತ್ರಿ ಶಾಲೆಗಳು ಇರುತ್ತವೆ [illegible] ಹಗಲು ಶಾಲೆಗಳಿಗೆ ರೂಪಾಯಿ [illegible] ರಾತ್ರಿ ಶಾಲೆಗಳಿಗೆ ರೂ [illegible] ಗ್ರಾಂಟು ಕೊಡಬೇಕೆಂದು ಶಿಫಾರಸು ಮಾಡಿದ್ದರು. ಆದರೆ ಸರಕಾರದವರು [illegible] ತಾ ೨೩—೩—೩೨ನೇ ಹುಕುಮಿನಲ್ಲಿ ನಮ್ಮ ಜಿಲ್ಲೆಯ ಹಗಲು ಶಾಲೆಗಳಿಗೆ ಗ್ರಾಂಟು ರೂಪಾಯಿ [illegible] ರಾತ್ರಿ ಶಾಲೆಗಳಿಗೆ ರೂ [illegible] ಮಾತ್ರ ಸೆಂಕ್ಷನ್ ಮಾಡಿದ್ದರಿಂದ ಹಗಲು ಶಾಲೆಗಳಿಗೆ ರೂಪಾಯಿ [illegible] ರಾತ್ರಿ ಶಾಲೆಗಳಿಗೆ ರೂಪಾಯಿ [illegible] ಕಡಿಮೆಯಾಯಿತು. ಇದಕ್ಕಾಗಿ ತಾ ೧೯—೩—೩೨ರಲ್ಲಿ ಸೇರಿದ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಸಭೆಯಲ್ಲಿ ಹಗಲು ಶಾಲೆಗಳಿಗೆ ಬೇಕಾದ [illegible] ರಾತ್ರಿ ಶಾಲೆಗಳಿಗೆ ಸರಕಾರದಿಂದ [illegible] ಸೆಂಕ್ಷನ್ ಮಾಡಬೇಕಾದುದಾಗಿ [illegible] ಶಿಫಾರಸು ಮಾಡಿದ ಗ್ರಾಂಟಿನ ತಪಶೀಲನ್ನು ಈ ಕೆಳಗೆ ಕೊಟ್ಟಿರುತ್ತದೆ

ತಾಲೂಕು	ಶಾಲೆಗಳ ಸಂಖ್ಯೆ	ಎಸ್ಟಿಮೇಟ್	ಎಸ್ಟಿಮೇಟ್
ಮಂಗಳೂರು (ಹ. ಶಾ)	[illegible]	[illegible]	[illegible]
ಉಡುಪಿ („)	[illegible]	[illegible]	[illegible]
ಕಾಸರಗೋಡು („)	[illegible]	[illegible]	[illegible]
ಕಾರ್ಕಳ („)	[illegible]	[illegible]	[illegible]
ಪುತ್ತೂರು („)	[illegible]	[illegible]	[illegible]
ಕುಂದಾಪುರ („)	[illegible]	[illegible]	[illegible]
ಜಿಲ್ಲೆಯಲ್ಲಿರುವ ಒಟ್ಟು ರಾತ್ರಿ ಶಾಲೆಗಳು	[illegible]	[illegible]	[illegible]
ಜುಮ್ಲಾ	[illegible]	[illegible]	[illegible]

ಸರಕಾರದವರು ಟೀಚಿಂಗ್ ಗ್ರಾಂಟಿನಲ್ಲಿ ಈ ರೀತಿ ಅಪಾರವಾದ ಕಡಿತವನ್ನು ಮಾಡಿದ್ದು ವಿಷಾದಕರವಾಗಿದೆ. ಈ ವಿಷಯವನ್ನು ಡಿ. ಇ. ಕೌನ್ಸಿಲ್ ಪ್ರೆಸಿಡೆಂಟರು ಸರಕಾರಕ್ಕೆ ಬರೆಯಬೇಕಾಗಿ ನಿರ್ಣಯಮಾಡಿದ್ದಲ್ಲದೆ, ಟೀಚರ್ ಮೆನೇಜರರ ಸಂಘದ ಪರವಾಗಿ ಆಕ್ಷೇಪಿಸಿ ಸರಕಾರಕ್ಕೆ ಬರಕೊಂಡಿರುತ್ತೇನೆ ಅದರ ಸಾರಾಂಶವನ್ನು ಬರುವ ಸಂಚಿಕೆಯಲ್ಲಿ ಪ್ರಕಟಿಸಲಾಗುವುದೆಂದು ಶ್ರೀ ಕುದ್ಮುಲ್ ರಂಗರಾಯರು ತಿಳಿಸುತ್ತಾರೆ.

ಈಗ ತಾನೇ ಅಚ್ಚಾಗಿ ಬಿಕರಿಗೆ ಸಿದ್ಧವಾಗಿದೆ

ಕಾಮದ ಗುಟ್ಟು

ಸುಂದರ ಚಿತ್ರಗಳ ಸಹಿತ

ಲೇಖಕರು — ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ — ಪಂಡಿತ ತಾರಾನಾಥರವರ ಮುನ್ನುಡಿಯೊಡನೆ.

ದಾಂಪತ್ಯದ ಸರ್ವಾಂಗ ಸುಖಗಳನ್ನೂ ಭೋಗಿಸಬೇಕಾದರೆ ಇದನ್ನು ಓದಲೇ ಬೇಕು. ವಿವಾಹಿತರಿಗೂ ಅವಿವಾಹಿತರಿಗೂ, ಗಂಡಸರಿಗೂ, ಹೆಂಗಸರಿಗೂ ಅವಶ್ಯಕವಾಗಿ ಬೇಕಾಗಿರುವ ಪ್ರಶ್ನೆಗಳ ಮತ್ತು ಉತ್ತರಗಳ ಪುಸ್ತಕ ಬ್ರಹ್ಮಚಾರಿಗಳಿಗೂ ಉತ್ತಮ ಕೈ ದೀವಿಗೆ ಅಂತರಂಗದಲ್ಲಿ ಕೊರಗಿಸುತ್ತಿರುವ ಗುಪ್ತವ್ಯಾಧಿಗಳಿಗೆ ಪಾಶ್ಚಿಮಾತ್ಯ ಹೈಂದವ ದೃಷ್ಟಿಗಳಿಂದ ಚಿಕಿತ್ಸೆ ಮಾಡುವ ಸುಲಭ ವೈದ್ಯ ಇಂಥಾ ಪುಸ್ತಕವನ್ನು ಇದು ವರೆಗೂ ಯಾರೂ ಬರೆದೇ ಇಲ್ಲ

ಫಲವಿಲ್ಲದ್ದರೇನೋ ಬಹುಜನರಿಗೆ ಪ್ರಯೋಜನವಾಗಲೆಂದು ಬೆಲೆಯೋ ನೋಡಿ ೧॥ ರೂ ಮಾತ್ರವೆ

ಅಂಚೆವೆಚ್ಚ ಪ್ರತ್ಯೇಕ

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಶನು ದೊರೆಯುತ್ತದೆ

ಬೇಗನೇ ಬರೆದು ತರಿಸಿಕೊಳ್ಳಿರಿ!

ಎ ಜಿ. ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ವಿವಿಧ ಸಮಾಚಾರಗಳು.

ತಪ್ಪು ಮಾಲವೀಯರದೇ ಆಯಿತ

ಪಂಡಿತ ಮದನಮೋಹನ ಮಾಲವೀಯರು ಇಂಡಿಯಾ ರಿವ್ಯೂ 'ದಿ ಡೈಲಿ ಹೆರಾಲ್ಡ್' ಮತ್ತು ಸ್ಟೇಟ್ಸ್‌ಮನ್ ಪತ್ರಿಕೆಗಳಿಗೆ ತಾರೀಖು ೫ೞ—೩—೩೨ರಲ್ಲು ರವಾನಿಸಿದ್ದ [illegible] ಶಬ್ದಗಳನ್ನೊಳಗೊಂಡ ತಂತಿಯ ವಿಚಾರವಾಗಿ ಪಾರ್ಲಿಮೆಂಟು ಸಭೆಯಲ್ಲಿ ಪ್ರಶ್ನೆಯಾಯಿತು. ಆ ತಂತಿಯು ತಡೆಯಲ್ಪಟ್ಟುದುದೇಕೆಂದು ಬಟ್ಲರು ಕೇಳಿದ್ದು ಅದಕ್ಕೆ ಸಾಮುವೇಲ್ ಹೋರರು ಮಾಲವೀಯರು ರಿಜಿಸ್ಟರ್ಡ್ ವರ್ತಮಾನ ಸಂಗ್ರಹಕಾರರಲ್ಲದಿರುವುದರಿಂದಲೂ ಅಲ್ಲದೆ ಆ ತಂತಿಯು ವೆಚ್ಚವು ಹೆಚ್ಚಾಯಿತೆಂದ ಅದನ್ನವರು ಕೊಡಲೊಪ್ಪದಿದ್ದುದರಿಂದಲೂ ತಂತಿಯು ನಿಲ್ಲಿಸಲ್ಪಟ್ಟಿತೆಂದರು. ಈ ಕುರಿತು ಒಂದು ಪ್ರಶ್ನೆಯು ದಿಲ್ಲಿಯ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ [illegible] ರವರಿಂದ ಬಂತು. ಅದಕ್ಕೆ ಅಧಿಕಾರಿ [illegible] ಶ್ರೀ [illegible] ಎಂಬವರು ಮಾಲವೀಯರ ತಂತಿಯ ಸಂಬಂಧವಾಗಿ [illegible] ನೋಡಿದೆವು. ಮಾಲವೀಯರು ರಿಜಿಸ್ಟರ್ಡ್ [illegible] ಸಂಗ್ರಹಕಾರರು ಅಲ್ಲ. ಒಮ್ಮೆಗೆ ಅವರ ತಂತಿಯು [illegible] ಸ್ವೀಕರಿಸಲ್ಪ[illegible]. ಆದರೆ ರಿಜಿಸ್ಟರ್ಡ್ ಆಗದ ವ್ಯಕ್ತಿಯು ರಿಜಿಸ್ಟರ್ಡ್ ಆಗದ ಪತ್ರಿಕೆಗಳಿಗೆ ವಾರ್ತೆಗಳನ್ನು [illegible] ಸಂಗತಿಯು ಮುಂಬ್ಯಾಯಲ್ಲಿ ತಿಳಿದುಬಂತು. ಆದರೂ [illegible] ವನ್ನು ಕೊಟ್ಟರೆ ತಂತಿಯನ್ನು [illegible] ದೆಂದ [illegible] ಹೇಳಿದರು ಎಂದರು. [illegible] ೩೦೦೦ ([illegible])ವನ್ನು ಮಾಲವೀಯರು ಕೊಡದಿದ್ದುದು ಇದಕ್ಕೆ ಕಾರಣವೆಂದಾಯಿತು.

• • •

ಚಳವಳಿಕ್ಕೆ ಆಹುತಿಯಾದವರೆಷ್ಟು ಮಂದಿ?

ಚಳವಳಿವು ಪ್ರಾರಂಭವಾದಂದಿನಿಂದ [illegible] ಹುತಿಗಳಾದವು ಎಷ್ಟು ಮಂದಿ [illegible] ನ್ಯೂಡಿಲ್ಲಿಯ ಅಸೆಂಬ್ಲಿ ಸಭೆಯ [illegible] ಶ್ರೀ [illegible] ಬಂತು. [illegible] ನಲ್ಲಿ ಇಟ್ಟರು [illegible] ಯಲ್ಲಿ ೧೫ ಮಂದಿ ಪೋಲೀಸರಿಗೆ [illegible] ಜನರು ಮಡಿದರು [illegible] ಪ್ರಾಂತ್ಯದಲ್ಲಿ [illegible] ಪೋಲೀಸರಿಗೆ [illegible] ಜನರಲ್ಲಿ [illegible] ಮಂದಿ [illegible] ಬಿಹಾರ್ ಒರಿಸ್ಸಾದಲ್ಲಿ ಒಬ್ಬ ಪೋಲೀಸ ಮಡಿದ. ಇಬ್ಬರು ಸಾರ್ವಜನಿಕರು ಸತ್ತರು. ವಾಯುವ್ಯ ಸರಹದ್ದು ಪ್ರಾಂತ್ಯದಲ್ಲಿ [illegible] ಮಂದಿ ಪೋಲೀಸರು [illegible] ಸಾರ್ವಜನಿಕರಲ್ಲಿ ೧೫ ಮಂದಿಗಳು ಮಡಿದರು. [illegible] ಮಂದಿಗಳಿಗೆ [illegible] ದಿಲ್ಲಿಯಲ್ಲಿ [illegible] ಮಂದಿ ಪೋಲೀಸರು [illegible]

• • •

ಕೋರ್ಟಿನೊಳಗೆ ರಾಷ್ಟ್ರಧ್ವಜದ ಹಾವಳಿ!

ಮದರಾಸಿನಲ್ಲಿ ಕೋರ್ಟು ಸತ್ಯಾಗ್ರಹಿಗಳ [illegible] ಹುಡುಗರು ರಾಷ್ಟ್ರಧ್ವಜವನ್ನು ಹಿಡಿದುಕೊಂಡ [illegible] ನ್ಯಾಯಾಧೀಶರ ಕೋರ್ಟಿಗೆ ಹೊಕ್ಕು [illegible] ಅವರ ಮೇಜಿನ ಮೇಲಿಟ್ಟು ವಂದೇ ಮಾತರಂ [illegible] ಅವರನ್ನು [illegible] ಪೋಲೀಸ [illegible] ಅವರನ್ನು [illegible] ಹುಡುಗರು ಅದೇ ರೀತಿ [illegible] ರಾಷ್ಟ್ರಧ್ವಜಗಳನ್ನು [illegible] ರಿಗೆ ಕೊಟ್ಟರು. ಪೋಲೀಸರು ಅವರನ್ನೂ ಬಂಧಿಸಿದರು. ಇದರಿಂದ ಕೋರ್ಟಿನಲ್ಲಿ ಜನಸಂದಣಿಯು [illegible] ಪೋಲೀಸರು [illegible] ಅವರು ಚದರಿಸಲ್ಪಟ್ಟರು. [illegible] ವಿದ್ಯಾರ್ಥಿಗಳ [illegible] ಜಯಕಾರ [illegible] ಉಪಾಧ್ಯಾಯರು [illegible] ಕೈದುಮಾಡಲ್ಪಟ್ಟವರಲ್ಲಿ ಇಬ್ಬರು ಹುಡುಗರಿಗೆ ಆರಾರು ತಿಂಗಳ ಕಠಿಣ ಸಜೆಯು ದೊರಕಿತು.

• • •

ವಿಷ ತಿನ್ನುವ ಯೋಗಿವರ್ಯರು ಸ್ವರ್ಗಸ್ಥರಾದರು

ಕಲ್ಕತ್ತಾ ಮೊದಲಾದ ಕಡೆಗಳಲ್ಲಿ ಪ್ರೊಫೆಸರ್ ಸಿ. ವಿ. ರಾಮನ್ ಮೊದಲಾದ ದೇಶಧುರೀಣರೆದುರು ವಿಷತಿನ್ನುವ ಪ್ರದರ್ಶನವನ್ನು ಜರಗಿಸುತ್ತಿದ್ದ ಹಠಯೋಗಿ ನರಸಿಂಗಸ್ವಾಮಿಯವರ ಕುರಿತು ನಾವು ಹಿಮ್ಮೆ ಸಂಚಿಕೆಗಳಲ್ಲಿ ಬರೆಯುತ್ತಿದ್ದೆವಷ್ಟೆ. ಆ ಯೋಗಿವರ್ಯರು ವಿಷ ತಿನ್ನುವ ಈ ಚಮತ್ಕಾರದಿಂದ ಇಡೀ ಲೋಕವನ್ನೇ ಬೆರಗುಗೊಳಿಸುತ್ತಿದ್ದರು. ಅವರು ಗಾಜಿನ ಹುಡಿ ಮೊದಲಾದುವುಗಳನ್ನೂ ಸಂಕಪಾಷಾಣ ಮೊದಲಾದ ಮಹದ್ವಿಷಗಳನ್ನು ಸಭಿಕರೆದುರು ನುಂಗಿ ಸುಖದಲ್ಲಿಯೇ ಇದ್ದು ತನ್ನ ಯೋಗದ ಬಲುಮೆಯನ್ನು ಬಯಲಿಗೆ ಹಾಕುತ್ತಿದ್ದರು. ವಿಷವನ್ನು ಆಹಾರವಾಗಿ ಮಾರ್ಪಡಿಸಬಹುದೆಂಬುದು ಅವರ ಅಂಬೋಣವಿತ್ತು. ಅವರು ಮೊನ್ನೆ ರಂಗೂನಿಗೆ ಹೋಗಿದ್ದರು. ಅಲ್ಲಿಯ ಜನರು ಅವರ ಹೆಸರನ್ನು ಮೊದಲೇ ಕೇಳಿ ತಿಳಿದಿದ್ದರಾದುದರಿಂದ ಅವರನ್ನು ಅತ್ಯಂತ ಸಂಭ್ರಮದಿಂದ ಸ್ವಾಗತೀಕರಿಸಿದರು. [illegible] ಸಂತೆ ೩೦ [illegible] ರಲ್ಲು ವಿಷಭುಂಜಿಸುವ ಪ್ರದರ್ಶನಕ್ಕಾರಂಭ. ಮೊದಲು ಗಾಜಿನ ಹುಡಿ ಭಯಂಕರ ವಿಷ ಮೊದಲಾದುವುಗಳನ್ನು ನುಂಗಿದರು. ಸ್ಟ್ರಿಕ್‌ನೈನ್ ಎಂಬ [illegible] ವಿಷವನ್ನೂ ಕುಡಿದರು. ಇವರು ಸಾಯುತ್ತಾರೋ ಎಂದು ಸಭಿಕರು ನಿರೀಕ್ಷಿಸಿದರು. ಜನರ ಆಶೆಯಲ್ಲವೇ? ಅದನ್ನೇಕೆ ಮುರಿಯಬೇಕೆಂಬ ಇರಾದೆಯಿಂದಲೋ [illegible] ಯಮರಾಯನು ಕೂಡಲೇ ಯೋಗಿಯ ಮೇಲ್ಬಿದ್ದನು. ಹೊಟ್ಟೆಯುರಿಯಿಂದಲೂ ಮೂರ್ಛೆಯಿಂದಲೂ ಯೋಗಿವರ್ಯರು ನೆಲಹಿಡಿದವರು ಮತ್ತೆ [illegible] ಇಲ್ಲ. ವಿಷದಿಂದ ಕೂಡಲೇ ಇವರು ಕೆಲವು ಪ್ರಯೋಗಗಳನ್ನು ಮಾಡಿ ವಿಷದ ಪರಿಣಾಮವು ದೇಹದಲ್ಲಾಗದಂತೆ ಮಾಡುತ್ತಿದ್ದರಂತೆ. ಮೊನ್ನೆ ಮಾತ್ರ ಅವುಗಳನ್ನು ಮಾಡಲು ತಡವಾದುದರಿಂದ ಅವರಿಗೆ ಪ್ರಾಣಾಪಾಯವು ಬಂದೊದಗಿತೆಂದು ತಿಳಿದುಬಂದಿದೆ. ಅಂತೂ ಅದ್ಭುತಯೋಗಿವರ್ಯರು [illegible] ಯೋ ಲೀನರಾದರು.

• • •

ಇಲಿಯ ಪಂಜರವು ಮನುಷ್ಯನನ್ನೇ ಹಿಡಿಯಿತು

ಕಲ್ಕತ್ತದ ಟೊಲ್ಲಿಗಂಜ್‌ನಲ್ಲಿಯ ಒಂದು ಮನೆಯಲ್ಲಿ ಇಲಿ[illegible] [illegible] ಮನೆಯ [illegible] ಬರ [illegible] ನ್ನು [illegible] ಒಂದ [illegible] ಇಲಿಗ [illegible] ಅವುಗಳನ್ನು [illegible] ಕೊಂಡು [illegible] ಇಲಿಗಳನ್ನು [illegible] ಬೇಕೆಂದು [illegible] [illegible] ಕಳ್ಳನು [illegible] ಇಲಿಯು [illegible] ಕೊಂಡಿತೆಂದು [illegible] ಕೊಂಡು [illegible] ಆವನ ಕೈ [illegible] ಒಂದು ದೊಡ್ಡ [illegible] ಕೈಯಲ್ಲಿ ರಕ್ತವು [illegible] ವಿಷವೇರಿ [illegible]

• • •

ಶ್ರೀ ಜವಾಹರಲಾಲರ ಪ್ರಕೃತಿ ಸ್ಥಿತಿ

ಪಂಡಿತ ಜವಾಹರಲಾಲರು [illegible] ಆದ [illegible] ಪಂಡಿತರು ಅವರನ್ನು [illegible] ಜವಾಹರಲಾಲರ ಪತ್ನಿ [illegible] ಕೆಗೆ ನೋಡಿದೆಯೆಂದು [illegible] ಪ್ರಕೃತಿ [illegible] ಉತ್ತಮವೆಂದೂ ತಿಳಿದುಬಂದಿದೆ [illegible] ಕಡಿಮೆ [illegible] ಆರೋಗ್ಯಸ್ಥಿತಿಯನ್ನರಿಯ ಬೇಕು [illegible] [illegible] ಪಂಡಿತರನ್ನು [illegible] ಪ್ರವೇಶ [illegible] ಶ್ರೀಮತಿ [illegible] [illegible] ಸ್ಥಿತಿಯು [illegible] ಅವರ [illegible] ಅವರಿಗೆ [illegible] ಇದೆ ಯೆಂದೂ ಹೇಳಿದ

• • •

ವಿದ್ಯಾರ್ಥಿನಿಯರು ಸತ್ಯಾಗ್ರಹಿಗಳೇ?

ಕಳೆದ [illegible] ವಿದ್ಯಾರ್ಥಿ [illegible] ವಿದ್ಯಾರ್ಥಿನಿಯ [illegible] ಬೇಡವೇಕೆಂದು [illegible] ಅವರಿಗೆ [illegible] ಮೊಂಯುವುದೆಂದೂ ಅಂತಹ ವಿದ್ಯಾರ್ಥಿನಿಯರು [illegible] ದೆಂದೂ ನೋಟೀಸ ಕೊಟ್ಟರು. ಕೆಲವು ದಿನಗಳ ಮೇಲೆ ಶಾಲೆ ಬಿಡ [illegible] ನ್ನು ಹಿಂತೆಗೆದರು [illegible] ಕೇಳಬೇಕೆಂದರು. ಆದರೆ ವಿದ್ಯಾರ್ಥಿನಿಯರು [illegible] ವಿದ್ಯಾರ್ಥಿನಿಯರಲ್ಲಿ ೩೮ ಮಂದಿಗಳೂ [illegible] ನಲ್ಲಿದ್ದ ೭೦ ಮಂದಿಗಳಲ್ಲಿ ೪೦ ಮಂದಿಗಳೂ ತಮ್ಮ ಸರ್ಟಿಫಿಕೇಟುಗಳನ್ನು ಪಡೆದುಕೊಂಡು ಶಾಲೆಯನ್ನು ಬಿಟ್ಟರು. ಅವರೆಲ್ಲರನ್ನೂ ಅಲ್ಲಿಯ ವಿದ್ಯಾಸಾಗರ ಕಾಲೇಜಿಗೂ, ಬೇರೆ ಶಾಲೆಗಳಿಗೂ ಸೇರಿಸಿಕೊಳ್ಳಲಾಯಿತು.

ಜನವರಿಯಲ್ಲಿ ಒಟ್ಟು ಎಷ್ಟು ಕೈದಿಗಳಾದುವು?

ನ್ಯೂಡಿಲ್ಲಿಯ ಅಸೆಂಬ್ಲಿ ಅಧಿವೇಶನದಲಿ ರಾ. ಬಹದ್ದೂರ್ ಸುಖರಾಜ್ ರಾ ಎಂಬವರು ಹೋಮ್ ಮೆಂಬರರೊಡನೆ ೧೯೩೨ ರಾಜಕೀಯ ಚಳವಳಿಕ್ಕಾಗಿ ಒಟ್ಟನೆಷ್ಟು ಪ್ರಕಾರ ಶಿಕ್ಷಿಸಲ್ಪಟ್ಟ ಜನ [illegible] ಕೇಳಿದರು. ಹೋಮ್ ಮೆಂಬರರು ಸಭೆಯ ಮುಂದಿಟ್ಟ [illegible] ಮದ್ರಾಸು [illegible] ಮುಂಬಯಿ [illegible] ಬಂಗಾಳ [illegible] ಸಂಯುಕ್ತ ಪ್ರಾಂತ್ಯ [illegible] ಪಂಜಾಬ [illegible] ದಲ್ಲಿ [illegible] ಬಿಹಾರ ಒರಿಸ್ಸಾದಲ್ಲಿ [illegible] ಮಧ್ಯಪ್ರಾಂತ್ಯ [illegible] ಅಸ್ಸಾಂ [illegible] ಪಶ್ಚಿಮೋತ್ತರ ಸರಹದ್ದು ಪ್ರಾಂತ್ಯ [illegible] ದಿಲ್ಲಿ [illegible] ಕೊಡಗ [illegible] ಅಜ್ಮೀರ್ ಮಾರ್ವಾಡ [illegible] ಒಟ್ಟು [illegible] ಶಿಕ್ಷೆಗಳು ಜನವರಿ ತಿಂಗಳಲ್ಲಾದವು. ಫೆಬ್ರವರಿ [illegible] ತಿಂಗಳಲ್ಲಿ [illegible] ಶಿಕ್ಷೆಗಳೆಷ್ಟೆಂದು ತಿಳಿದುಬಂದಿಲ್ಲ.

• • •

ಕಾನೂನು ಭಂಗದ ಅಧಿಕಾರಿಯ ವರದಿ

[illegible]

• • •

[illegible]

[illegible]

• • •

[illegible]

[illegible]

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ [illegible] ಕೋರ್ಟಿನಲ್ಲಿ [illegible] 38 1-32

[illegible]

[illegible] 1—32ನೇ [illegible] ದಿನ 11 ಘಂಟೆ [illegible] ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳ ಬಹುದಾಗಿ ಸರ್ವರಿಗೂ ಈ ಮೂಲಕ ತಿಳಿಸೋಣಾಗಿಯದೆ.

ಮಂಗಳೂರು
೨೦—೩—೩೨

K. R. Karanth,
Vakil for Petitioner

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಗುಣ ಶ್ರೇಷ್ಠ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಕಲ್ಯಾಣ ಕೃಷ್ಣ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧ ಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕಿಸಲ್ಪಡುವವು. ತಯಾರಿರುವವು. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ಹಿಂದಕ್ಕೆ ಮೊದಲಾದ ಅಮಲು ಪದಾರ್ಥಗಳ ಅಭ್ಯಾಸವಿದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯೂ ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೊ ಎಂಬ ಪಥ್ಯ ... ಯಿರುವ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದಿದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಮತ್ತು ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗಿರಾಕಿಗಳಿಗೆ ಅವರ ಅಗತ್ಯದ ಮದ್ದಿನ ಸಾಮಾನುಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ತಕ್ಕ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮ್ಯಾನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

ರಕ್ತ ಅಥವಾ ಶುಷ್ಕವಾದ ಅತ್ಯಂತ ಹಳೆಯದು ಮತ್ತು ಶಸ್ತ್ರಚಿಕಿತ್ಸೆಯಿಂದಲೂ ಗುಣವಾಗದಿದ್ದರೂ ಪಕ್ಷ ಒಮ್ಮೆ ಸೇವನೆಮಾಡುವುದರಿಂದ ಜಾದೂವಿನಂತೇ ಪರಿಣಾಮವಾಗುವುದು. ಮೂರು ದಿನಗಳಲ್ಲಿ ಬೇರಿನ ಸಹಿತ ನಾಶವಾಗುವುದು. ಪಥ್ಯೆ ಜರೂರಿ ಇಲ್ಲ. ಅಧಿಕ ಪ್ರಕಂಪೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆ. ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ಶಿಂದಿಯಿಡುವುದು ಭಯಂಕರ ನೋವು ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೈಲ ಅಮೋಘ ಅಸ್ತ್ರವಿದೆ. ಸಾವಿರಾರು ಕಿವುಡರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೨

ವಿಳಾಸ — ಶಕ್ತಿ ಸುಧಾ ಕಾರ್ಯಾಲಯ
21 ಕಾಂಬಾರವಾಡಿ 4ನೇ ಗಲ್ಲಿ
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧವಲ್ಲಿ ಪ್ರಾಶಸ್ತಿ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರದ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ.

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪನಿ ಲಿಮಿಟೆಡ್
ಕೇಡೆಲ್ ರೋಡ್ ಪೊ. ಆ. ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dadar Bombay, 14.

ತಂತಿ ವಿಳಾಸ — "CAVASPUR" Bombay
ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ — ಮುಖ್ಯ ಮೆನೇಜಿಂಗ್ ಡ್ಯಾರೆಕ್ಟರ್.

ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ ದಿವ್ಯ ಔಷಧಿಯು. ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ಇದು ಗುಣಪಡಿಸಿ ಅವರಿಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ

ಅರಿಷ್ಟ — ಇದು ಎಲ್ಲಾ ತರದ ಜ್ವರಗಳನ್ನು ನಿವಾರಿಸಿ ದೇಹವನ್ನು ಶುದ್ಧಿಗೊಳಿಸುತ್ತದೆ

ಅಮೃತ — ರಕ್ತ ಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works, Ltd., Bombay, 14.
ದಿ ಝಾಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಾಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆವಳೆ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು. ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ, ಉಬ್ಬಸ ನಾನಾವಿಧವಾದ ದುರ್ಬಲತ್ವ ಕೆಮ್ಮು, ಎದೆ ನೆಗಡಿ ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು. ಮತ್ತು ಜನಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ, ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ದೃಢಗಾತ್ರರನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ ಜಾಡಿ ರೂ 10/- ಕ್ರಯ 1 ಪಾನು ಸೀಸೆ ರೂ. 2/8. ½ ಪಾ. ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಆಂಡ್ ಕಂಪೆನಿ, 78 ಛೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು.— ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು.— ಎಸ್. ಎಲ್. ಧಾರೇಶ್ವಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು.— ಟಿ. ಸಿ. ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು:— ಮಿ. ಶೋಭಟ್‌ಲಾಲ್ ಕಂಪೆನಿ, ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಅರವಿಂದ ಘೋಷ್.

ಬಾಬು ಅರವಿಂದ ಘೋಷರ ಹೆಸರು ಭಾರತವರ್ಷದಲ್ಲಿ ಆಬಾಲವೃದ್ಧರ ನಾಲಿಗ ತುದಿಯಲ್ಲಿದೆ. ಹೆಚ್ಚಿನವರಿಗೆ ಅವರ ಹೆಸರು ಮಾತ್ರ ತಿಳಿದಿದೆ. ಅವರ ಇರುವಿಕೆ ಎಲ್ಲಿ? ಅವರ ಜೀವನಕ್ರಮವು ಹೇಗೆ ಎಂಬುದರ ಕುರಿತು ಹೆಚ್ಚಿಗೆ ತಿಳಿಯದು. ಇಂದಿನ ದಿನದಲ್ಲಿ ಬಂಗಾಳದಲ್ಲಿ ನವಚೇತನವು ಎಚ್ಚತ್ತಿದೆಯಾದರೆ, ಇಂದಿನ ದಿನದಲ್ಲಿ ಸ್ವಾತಂತ್ರ್ಯ ಸಾಧನಗೆ ಬಂಗಾಳವು ಮುಂದೆದ್ದು ನಿಂತಿರುವುದಾದರೆ, ಅದು ಬಾಬು ಅರವಿಂದ ಘೋಷರ ಚೇತನಾತ್ಮಕ ಸದ್ಬೋಧನೆಯ ಫಲವೆಂದೇ ಹೇಳಬೇಕು. ಶ್ರೀ. ಸ್ವಾಮಿ ವಿವೇಕಾನಂದ, ಚೈತನ್ಯ, ಸುರೇಂದ್ರನಾಥ ಬೆನರ್ಜಿ, ರವೀಂದ್ರನಾಥ ಠಾಗೂರ್ ಮೊದಲಾದ ದೇಶಧುರೀಣರ ಒಡಲ ಬೆಳಕಿನ ಪ್ರಕಾಶವೆಂದೇ ಎನ್ನಬೇಕು.

ಶ್ರೀ. ಅರವಿಂದ ಘೋಷರು ಸತ್ಕುಲೋತ್ಪನ್ನರು. ಅವರ ಹಿರಿಯರು ಒಳ್ಳೆ ದೇಶಭಕ್ತರೆಂದು ಹೆಸರುಗೊಂಡಿದ್ದರು ಘೋಷರಿಗೆ ಚಿಕ್ಕಂದಿನಿಂದಲೇ ಇಂಗ್ಲಾಂಡಿನ ಗಾಳಿಯು ತಾಗಿತು ವಿದ್ಯೆಯು ಇಂಗ್ಲಾಂಡಿನಲ್ಲೇ ದೊರೆಯಿತು ಅವರಿಗೆ ಮಾತೃಭೂಮಿಯ ಒಂದು ಭಾಷೆಯೂ ಬರುತಿದ್ದಿಲ್ಲ ಸಂಪೂರ್ಣ ಆಂಗ್ಲರೀತ್ಯಾ ಬೆಳೆದು ಬಂದರು ಐ ಸಿ ಎಸ್ ಪರೀಕ್ಷೆಗೆ ಕುಳಿತರು. ಆದರೆ ವಿಧಿನಿಯಮದಿಂದ ಅವರು ಕುದರೆ ಸವಾರಿಯಲ್ಲಿ ಸೋತುಹೋಗಿ, ಐ ಸಿ ಎಸ್ ಪದವಿಯನ್ನು ಕಳೆದುಕೊಂಡರು. ಒಂದುವೇಳೆ ಅವರು ಐ. ಸಿ ಎಸ್‌ನಲ್ಲಿ ವಿಜಯಿಯಾಗಿ ಬರುತ್ತಿದ್ದರೆ, ಅವರ ಪವಿತ್ರನಾಮವು ದೇಶದಲ್ಲೆಲ್ಲಾ ಹರಡಿಕೊಳ್ಳಲಿಡೆಯುತ್ತಿದ್ದಿಲ್ಲ ೧೮೯೨ರಲ್ಲಿ ಅವರು ತನ್ನ ವಿದ್ಯಾರ್ಜನೆಯನ್ನು ಮುಗಿಸಿ ಹಿಂದಿರುಗಿದರು.

ಸ್ವದೇಶಕ್ಕೆ ಬರುವದರೊಡನೆ ಅವರಿಗೆ ಬರೋಡಸಂಸ್ಥಾನದ ಗಾಯಕವಾಡರ ಸ್ನೇಹವಾಯಿತು. ಉದ್ಯೋಗವೂ ಲಭಿಸಿತು ವರ್ಷಂಪ್ರತಿ ಅವರು ಉದ್ಯೋಗದಲ್ಲಿ ಉತ್ತೀರ್ಣತೆಯನ್ನು ಹೊಂದಿ ಕೊನೆಗೆ ಬರೋಡಾ ಕೋಲೇಜಿನ ಪ್ರಿನ್ಸಿಪಾಲರಾಗಿ ತಿಂಗಳಿಗೆ ರೂಪಾಯಿ ೭೫೦ನ್ನು ಪಡೆಯುತ್ತಿದ್ದರು

ಈ ಸಮಯದಲ್ಲಿ ಬಂಗಾಳವು ಚೇತರಿಸಿಕೊಂಡಿದ್ದಿತು. ಲೋರ್ಡ್ ಕರ್ಜನರ ಅಧಿಕಾರದಲ್ಲಿ ಬಂಗಾಳವಿಭಜನೆಯ ಯೋಜನೆಯು ಹೊರಬಿದ್ದಿತ್ತು ಬಂಗಾಳದ ಹಿಂದೂಮುಸ್ಲಿಮರೊಳಗೆ ಭೇದಾಭಿಪ್ರಾಯದ ಬೀಜವು ಬಿತ್ತಲ್ಪಟ್ಟಿತ್ತು ಇಂತಹ ಧೋರಣೆಗೆ ಸಾರ್ವಜನಿಕ ಅಸಮ್ಮತಿಯು ದೊರೆಯಿತು, ಆದರೂ, ಲೋರ್ಡ್ ಕರ್ಜನರು ತನ್ನ ನಿರ್ಧಾರವನ್ನು ಕಾರ್ಯಕ್ಕೆಳೆಯತೊಡಗಿದರು, ಕೊನೆಗೆ ಬಂಗಾಳದಲ್ಲಿ ಮಹಾ ಆಂದೋಲನವು ಪ್ರಾರಂಭವಾಯಿತು.

ಅರವಿಂದರು ದೇಶದ ಇನ್ನೊಂದು ಮೂಲೆಯಲ್ಲಿ ಇದ್ದರಾದರೂ ತನ್ನೂರಾದ ಬಂಗಾಳದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಮನವಿಟ್ಟು ಪರಿಶೀಲಿಸುತ್ತಿದ್ದರು ಎಲ್ಲಿ ಜನರು ತಪ್ಪಿಬಿದ್ದರು, ಎಲ್ಲಿ ಅಖಿಲಭಾರತ ಕೊಂಗ್ರೆಸ್ಸು ತಪ್ಪಿತ್ತು ಎಲ್ಲಿ ಸರಕಾರವು ಮೋರೆಹೋಯಿತು ಎಂಬುದಾಗಿ ಅವರು ನೋಡುತ್ತಾ ಇದ್ದರು ಕೊನೆಗೆ ಅರವಿಂದರ ಚೈತನ್ಯವು ಸಹನಾತೀತವಾಯಿತು. ೧೯೦೬ರಲ್ಲಿ ಅಕಸ್ಮಾತ್ ಬಂಗಾಳದಲ್ಲಿ ಳಿದರು ಮರು ವರ್ಷ ಬರಿಸಲ್ ಪರಿಷತ್ತು ಸೇರಿತು. ಆದರೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಪೋಲೀಸರ ಮೂಲಕ ಅದನ್ನು ಬಲಾತ್ಕಾರದಿಂದ ಚದರಿಸಿದರು ಸರಕಾರದ ದೂಷಣೆಯ ಬಗ್ಗೆ ಬಂಗಾಳದ "ಕಿರೀಟರಹಿತ ರಾಜ"ರಾದ ಬಾಬು ಸುರೇಂದ್ರನಾಥ ಬೆನರ್ಜಿಯೆಂಬ ಪ್ರಭೃತಿಗಳು ೨೦೦ ರೂಪಾಯಿಯ ದಂಡನೆಗೊಳಗಾದರು

ಇದನ್ನೆಲ್ಲ ಕಂಡು ಅರವಿಂದರ ಹೃದಯವು ಕರಗಿ ನೀರಾಯಿತು. "ದೇಶಸೇವೆಯೇ ಈಶಸೇವೆ" ಎಂದು ನಿರ್ಧರಿಸಿ ತನ್ನ ಸ್ವಸುಖ ಸಂಪತ್ತುಗಳಿಗೆ ತಿಲಾಂಜಲಿಯನಿತ್ತು ಜನಸೇವೆಗಿಳಿದರು ಅವರಿಗೆ ಯುವಕರ ಮೇಲೆ ಬಹು ಮಮತೆ—ವಿಶ್ವಾಸ ಒಂದು ದೇಶದ ಆಸ್ತಿವಾರವು ಅದರ ಯುವಕಸಮುದಾಯವೇ ಎಂದು ಅವರು ಪದೇ ಪದೇ ಹೇಳುತ್ತಿದ್ದರು ಯುವಕರನ್ನು ಆಂಗ್ಲ ಸಂಸ್ಕೃತಿಯ ಬಲೆಯಿಂದ ತಪ್ಪಿಸಬೇಕೆಂದು ಬಗೆದರು. ಪ್ರಥಮದಲ್ಲಿ ಯುವಕರು ಇಂಗ್ಲಿಷು ಕ್ರಮವನ್ನನುಸರಿಸುವುದನ್ನು ಕಂಡು ವ್ಯಥೆಗೊಂಡು ದೇಶದ ಯುವಕರನ್ನು ದೇಶೀಯ ಪಾಠಗಳಲ್ಲಿ ತರಬೇತುಗೊಳಿಸುವುದಕ್ಕಾಗಿ ಕೆಲವು ಒಡನಾಡಿಗಳ ಬೆಂಬಲದಿಂದ ನೇಶನಲ್ ಕೌನ್ಸಿಲ್ ಒಫ್ ಎಡ್ಯುಕೇಶನ್ ಎಂಬುದನ್ನು ಸ್ಥಾಪಿಸಿದರು. ಕೆಲವು ಸಮಯದ ತನಕ ಇದು ಅತ್ಯಂತ ಸುಸ್ಥಿತಿಯಲ್ಲಿ ನಡೆಯುತ್ತಾ ಬಂತು ಆದರೆ ಜನರು ಆಳರಸರಿಗೆ ಹೆದರುತ್ತಿದ್ದುದರಿಂದ ಈ ಸಂಸ್ಥೆಗೆ ಸಿಗುತ್ತಿದ್ದ ಬೆಂಬಲವು ಅಲುಗಾಡಲು ಪ್ರಾರಂಭವಾಯಿತು.

ದೇಶೀಯ ವಿದ್ಯಾಶಾಲೆಗಳ ಪ್ರಯೋಜನ, ಸ್ವದೇಶೀ ವ್ರತದ ಲಾಭ ಮೊದಲಾದ ರಾಷ್ಟ್ರೀಯವಿಚಾರ ಸಮಸ್ಯೆಗಳ ಕುರಿತು ದೇಶಿಗರಿಗೆ ಬೋಧಿಸುವುದಕ್ಕಾಗಿ ಅರವಿಂದರು "ವಂದೇ ಮಾತರಂ" ಎಂಬ ದೈನಿಕ ಪತ್ರಿಕೆಯನ್ನು ಮರೆಹೊಕ್ಕರು. ಅದು ಹೊರಡಿಸಲ್ಪಟ್ಟ ಕೇವಲ ಒಂದು ತಿಂಗಳಲ್ಲೇ 'ಉಜ್ವಲ, ರಾಷ್ಟ್ರೀಯ" ದೈನಿಕ ಪತ್ರಿಕೆಯೆಂದು ಹೆಸರುವಾಸಿಯಾಯಿತು. ರಾಷ್ಟ್ರೀಯಸಂಬಂಧವಾದ ಎಲ್ಲಾ ವಿಷಯಗಳ ಕುರಿತು ಶ್ರೀ. ಅರವಿಂದರು 'ವಂದೇಮಾತರಂ' ಪತ್ರಿಕೆಯಲ್ಲಿ ಬರೆಯುತ್ತಾ ಹೋದರು. ಅದಕ್ಕೆ ಅಗ್ರಲೇಖನವನ್ನು ಬರೆಯುವ ಚೈತನ್ಯವೂ ಅವರಲ್ಲಿ ಮೂಡಿತು ಅಂದಿನ ದಿನದಲ್ಲಿ "ವಂದೇಮಾತರಂ' ಪತ್ರಿಕೆಯೆಂದರೆ ಜನರ ಆಶೆಯ ಗಂಟಾಗಿದ್ದಿತು ದೇಶ ವಿದೇಶಗಳಲ್ಲಿ ವಾಸಿಸುತ್ತಿದ್ದ ಸಾವಿರಾರು ಹಿಂದೀಯರೂ ಆಂಗ್ಲೇಯರೂ ಅದರ ಪ್ರತಿಗಳ "ಫೈಲನ್ನು" ಮಾಡಿಟ್ಟರು. 'ವಂದೇಮಾತರಂ' ಪತ್ರಿಕೆಯು ಎಷ್ಟು ಪ್ರಬಲವಾಯಿತೆಂದರೆ ಅದರ ಹಳ ಪ್ರತಿಗಳು ಎಲ್ಲಿದ್ದುವೋ ಅಲ್ಲಿಂದ ಅವುಗಳನ್ನು ಪೋಲೀಸರು ಕೊಂಡೊಯ್ದರು

ಶ್ರೀ ಅರವಿಂದಘೋಷರು ಜನತೆಯೊಡನೆ ಬೇಡುತ್ತಿದ್ದುದು ಸ್ವದೇಶಿ ವ್ರತವೊಂದನ್ನೇ ಸ್ವದೇಶಿಯಲ್ಲದೆ ಸ್ವದೇಶಿಗರಿಗೆ ಮೋಕ್ಷವಿಲ್ಲವೆಂಬ ಸಂಗತಿಯನ್ನು ಅವರು ನಿರ್ಧಾರಪೂರ್ವಕವಾಗಿ ಹೇಳಿದರು. ಸ್ವದೇಶಿ ವ್ರತವನ್ನು ಕೈಕೊಳ್ಳದೆ ಯಾವ ಹಿಂದೀಯನೂ ದೈವಸನ್ನಿಧಿಯನ್ನು ಸೇರಲೇ ಸಾಧ್ಯವಿಲ್ಲವೆಂದರು. ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ತಾನು ಸದ್ವಾರಿಯಲ್ಲಿ ಸುಧಾರಿಸಿಕೊಳ್ಳದ ವಿನಹಾ ರಾಷ್ಟ್ರೋದ್ಧಾರವು ಅಸಾಧ್ಯವೆಂದರು. ಪ್ರಾರಂಭದಲ್ಲಿ ಸ್ವದೇಶಿ ಮಂತ್ರವು ದೇಶಿಗರಿಗೆ ಹೊಸತಾಗಿ ಕಂಡು ಬಂತು ಅದಕ್ಕೆ ಜನರ ಪ್ರೋತ್ಸಾಹವು ಹೆಚ್ಚಿಗೆ ಸಿಗಲಿಲ್ಲ. ಕೆಲವು ರಾಷ್ಟ್ರ ಪುಂಗವರೇ ಅದಕ್ಕೆ ವಿರೋಧಿಗಳಾಗಿ ನಿಂತರು ಆದರೆ ತನ್ಮಧ್ಯೆ ಮಹಾತ್ಮಾಗಾಂಧಿಯವರ ಕೈಯೊಂದು ಮುಂದೆ ಬಂತು ಸ್ವದೇಶಿಪ್ರೇಮವು ಉಡಮಾಡುತ್ತಾ ಹೋಯಿತು.

ಹಿಂದೂದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಬೇಕೆಂದು ಹಠ ಹಿಡಿದವರು ಅರವಿಂದ ಘೋಷರೇ ಕೊಂಗ್ರೆಸ್ಸಿನ ಇನ್ನಿತರ ಪ್ರಮುಖರಾದರೋ ಹೋಮ್‌ರೂಲ್ ಅಥವಾ ಡೊಮಿನಿಯನ್ ಸ್ಟೇಟಸ್ಸಿನಲ್ಲಿ ಮಾತ್ರ ತೃಪ್ತಿಗೊಂಡಿದ್ದರು "ಸ್ವಾತಂತ್ರ್ಯವು ನನ್ನ ಜೀವನೋದ್ದಿಷ್ಟ ಅದಿಲ್ಲದೆ ನನಗೆ ಸುಖವಿಲ್ಲ ನೀವು ನನ್ನನ್ನು ಬಂಧಿಸಿ ಸೆರೆಯಲ್ಲಿಡಿರಿ ಆದರೆ ಸ್ವಾತಂತ್ರ್ಯಕಾಂಕ್ಷೆಯು ಮುರಿದು ಬೀಳದು" ಎಂಬುದೇ ಅವರ ಹೇಳಿಕೆ

ಅರವಿಂದ ಘೋಷರ ಆದರ್ಶವನ್ನು ಕಂಡು ಅಗಲೇ ಕೀರ್ತಿಶೇಷರಾಗುತ್ತ ಬಂದಿದ್ದ ಲೋಕಮಾನ್ಯ ತಿಲಕರು ಇವರಿಗೆ ಬೆಂಬಲವನ್ನಿತ್ತರು ೧೯೦೭ರಲ್ಲಿ ಸೂರತ್ತಿನಲ್ಲಿ ಜರಗಿದ ಕೊಂಗ್ರೆಸ್ ಮಹಾಸಭೆಯಲ್ಲಿ ಅರವಿಂದರೂ ಲೋಕಮಾನ್ಯ ತಿಲಕರೂ ನಡೆಸಿದ ಕಾರ್ಯಕಲಾಪಗಳನ್ನು ನೋಡಿ ಇಡೀ ಸಭೆಯು ಬೆರಗುಗೊಂಡಿತು.

ಇಷ್ಟಾಗುತ್ತಿದ್ದಾಗ ಒಂದು ಬೊಂಬು ಪಿತೂರಿಯ ವಾರ್ತೆಯು ದೇಶದಲ್ಲೆಲ್ಲ ಹರಡಿತು ಅರವಿಂದರ ಸಹೋದರರೊಬ್ಬರು ಆ ಪಿತೂರಿಯವರಲ್ಲೊಬ್ಬರೆಂಬ ಅಪಾದನೆಯ ಮೇಲೆ ಬಂಧಿಸಲ್ಪಟ್ಟರು ೧೯೦೮ನೇ ಇಸವಿ ಮೇ ೨ನೇ ತಾರೀಕಿನ ಮುಂಜಾನೆ ಅರವಿಂದ ಘೋಷರ ಮನೆಯೂ ಜಪ್ತಿಯಾಗಿ ಗಾಯಿತು ಅರವಿಂದರನ್ನು ಸಂಕೋಲೆ ಹಾಕಿ ಸೆರೆಗೊಯ್ದರು

ವಿಚಾರಣೆಯು ಒಕ್ಟೋಬರ ೨೩ನೇ ದಿನ ಪ್ರಾರಂಭವಾಯಿತು ದಿವಂಗತ ಸಿ ಆರ್ ದಾಸರು ಅರವಿಂದರ 'ಡಿಫೆನ್ಸ್' ವಕೀಲರಾಗಿ ವ್ಯವಹರಿಸಿದರು ಸರಕಾರವು ಖ್ಯಾತಿ ಹೊಂದಿದ ನೋರ್ಟನ್ ಎಂಬವರನ್ನು ನೇಮಿಸಿತು. ಸರಕಾರದ ವಕೀಲರು ೧೬ ದಿನಗಳ ವರೆಗೆ ಮಾತನಾಡಿದರು ಆದರೆ 'ಡಿಫೆನ್ಸ್' ಒಬ್ಬೇ ಎಂಟು ದಿನಗಳ ತನಕ ವಾದಿಸಿತು. ಒಂದು ವರುಷ ಕಳೆದ ನಂತರ ಮೇ ೬ನೇ ದಿನ ಅರವಿಂದ ಘೋಷರೊಡನೆ ಐ. ಸಿ ಎಸ್‌ನಲ್ಲಿ ಸಹಪಾಠಿಯಾಗಿದ್ದ ಮಿ. ಬೀಚ್ ಕ್ರೋಫ್ಟ್ ದೊರೆಗಳು ಅರವಿಂದ ಘೋಷರನ್ನು ಅಪಾದಿತರಲ್ಲವೆಂದು ಮಾಡಿದರು.

ನ್ಯಾಯ ವಿಚಾರಣೆಯಾಗುತ್ತಿದ್ದ ಸಮಯದಲ್ಲಿ ಕೋರ್ಟಿನೊಳಗೊಂದು ಅದ್ಭುತ ಸಂಗತಿಯು ನಡೆಯಿತು. ಅರವಿಂದ ಘೋಷರು ಪಂಜರದೊಳಗೆ ನಿಂತಿದ್ದರು. ಜಡ್ಜರೂ, ವಕೀಲರೂ ವ್ಯವಹರಿಸುತ್ತಿದ್ದರು. ಆದರೆ ಅರವಿಂದರಿಗೆ ಎದುರಿದ್ದ ಯಾರೂ ಕಂಡು ಬರಲಿಲ್ಲ. ಅವರೆದುರಿಗೆ ಶ್ರೀ ಕೃಷ್ಣನ ನಿಜಸ್ವರೂಪವು ಒಂದು ನಿಂತಿತು. ಅರವಿಂದರು ಧ್ಯಾನಾರೂಢರಾಗಿ ಹೋಗಿದ್ದರು. ತನ್ನ ಈ ಅನುಭವವನ್ನು ಅವರು ಒಮ್ಮೆ ಒಂದು ಸಭೆಯಲ್ಲಿಂದಾಗ ಎಲ್ಲರೂ ನಕ್ಕರು. ಆದರೆ ಅದರ ಸತ್ಯಾಂಶವು ಜನರಿಗೆ ಮತ್ತೆ ತಿಳಿಯಿತು

ಬಿಡುಗಡೆ ಹೊಂದಿದ ನಂತರ ಶ್ರೀ ಅರವಿಂದ ಘೋಷರು "ಕರ್ಮಯೋಗಿನ್" ಎಂಬ ಪತ್ರಿಕೆಯನ್ನು ಹೊರಡಿಸಿದರು ಕೆಲವು ತಿಂಗಳ ತನಕ ಈ ಪತ್ರಿಕೆಯು ಅತ್ಯುಜ್ವಲವಾಗಿ ಬೆಳಗಿತು. ಆದರೆ ಆಕಸ್ಮಾತ್ ವಿದ್ಯಮಾನವು ಅದನ್ನು ನಂದಿಸಿಬಿಟ್ಟಿತು ಸರಕಾರವು ಅವರ ಪತ್ರಿಕೆಯ ಮೇಲೊಂದು ವಾರಂಟನ್ನು ಹಾಕಿತು ಅಂದಿನಿಂದ ಅರವಿಂದರ ಕೈಗಟ್ಟಿದಂತಾಯಿತು.—ಇದಾದ ಕೆಲವು ದಿನಗಳಲ್ಲೇ ಅರವಿಂದರು ಕಾಣಲಾರದಾದರು ಅವರ ಪತ್ತೆಯೇ ಸಿಗಲಿಲ್ಲ ಅವರು ಕಾಣದಿರುವುದನ್ನು ನೋಡಿ ಕೆಲವರು ಅವರು ಹಿಮಾಲಯಕ್ಕೆ ಹೋದರೆಂದರು ಕೆಲವರು ಅವರನ್ನು ಸರಕಾರವು ಎಲ್ಲಿಗೋ ಒಯ್ದಿತೆಂದರು ಕೊನೆಗೆ ಪೋಂಡಿಚೇರಿಯಿಂದ ಅರವಿಂದರು ಪತ್ರಿಕೆಗಳಿಗ ಬರೆದ ಒಂದು ಪತ್ರದಿಂದಾಗಿ ಅವರು ಪೋಂಡಿಚೇರಿಯಲ್ಲಿದ್ದಾರೆಂದು ತಿಳಿದು ಬಂತು.

ಪೋಂಡಿಚೇರಿಯಲ್ಲಿ ವಾಸಿಸಿ ಶ್ರೀ. ಅರವಿಂದರು ತಪಸ್ಸಿಗಾರಂಭಿಸಿದರು ಆಧ್ಯಾತ್ಮಿಕ ವಿಚಾರಗಳನ್ನು ಬಯಲಿಗೆಳೆಯುವುದಕ್ಕಾಗಿ ೧೯೧೪ರಲ್ಲಿ "ಆರ್ಯ"ವೆಂಬ ಒಂದು ಮಾಸಿಕ ಪತ್ರಿಕೆಯನ್ನು ಹೊರಡಿಸಿದರು. ಈ ಮಾಸಿಕವು ೧೯೨೦ರ ವರೆಗೆ ನಡೆಯಿತು ದೇಶವಿದೇಶಗಳಲ್ಲಿ ಜನರು ಅದನ್ನು ಶ್ಲಾಘಿಸಿದರು ೧೯೨೦ ಮೇಲೆ ಅರವಿಂದರು ಸಂಪೂರ್ಣ ತಪಸ್ಸನ್ನು ಕೈಕೊಂಡರು

೧೯೨೧ರಲ್ಲಿ ಅವರ ತಪಸ್ಸಿನ ಶಕ್ತಿಯು ದೇಶದಲ್ಲೆಲ್ಲಾ ವ್ಯಾಪಿಸಿತು ಅವರ ಆಧ್ಯಾತ್ಮಿಕಜ್ಞಾನವು ಪ್ರಜ್ವಲವಾದ ಬೆಳಕನ್ನು ರಾಷ್ಟ್ರಪುರುಷರ ಹೃದಯದಲ್ಲುಂಟುಮಾಡಿತು ಅದೇ ವರುಷ ಗುಜರಾಥದಿಂದ ಅರವಿಂದರ ಆಶ್ರಮಕ್ಕೆ ಒಂದು ತಂಡ ಶಿಷ್ಯರು ಬಂದರು ಇಂದಿನ ದಿನದಲ್ಲಿ ಶ್ರೀ ಅರವಿಂದರ ಆಶ್ರಮದಲ್ಲಿ ೧೦೦ ಮಂದಿ ಶಿಷ್ಯರಿಗಿಂತಲೂ ಹೆಚ್ಚಿಗಿದ್ದಾರೆ

೧೯೨೬ರಿಂದ ಅರವಿಂದ ಘೋಷರು ಬಾಹ್ಯ ಪ್ರಪಂಚವನ್ನು ಮರೆತರು ಆಶ್ರಮದ ಶಿಷ್ಯರಿಗೂ ಕೂಡಾ ಅವರು ವರ್ಷದಲ್ಲಿ ೩ ದಿನ ಕಾಣಸಿಗುವ ಅವಸ್ಥೆಯೊದಗಿತು ಅವರ ಜನನ ತಿಥಿಯಾದ ೧೫ನೇ ಆಗೋಸ್ಟ್ ತಿಂಗಳ ಕೆಲವು ದಿನಗಳಲ್ಲೂ ಇನ್ನಿತರ ಕೆಲವು ಪ್ರಾಮುಖ್ಯ ದಿನಗಳಲ್ಲೂ ಅವರ ದರ್ಶನ ಲಾಭವಾಗುವುದು ಮಿಕ್ಕ ದಿನಗಳಲ್ಲಿ ಅವರು ಧ್ಯಾನಾರೂಢರಾಗಿಯೇ ಇರುವರು.

ಅವರ ಆಶ್ರಮವು ಒಬ್ಬ ಫ್ರೆಂಚ್ ಮಹಿಳೆಯ ಮೇಲ್ವಿಚಾರದಲ್ಲಿ ನಡೆಯುತ್ತಿದೆ ಆಕೆಯು ಅರವಿಂದ ಘೋಷರನ್ನು ೧೯೧೪ರಲ್ಲಿ ಹಿಂಬಾಲಿಸಿದಳು ಅರವಿಂದರ ಹೇಳಿಕೆಯ ಮೇಲೆ ಎಲ್ಲಾ ಆಡಳಿತೆಯನ್ನು ತಾನೇ ನೋಡುತ್ತಿರುವಳು

ಅರವಿಂದ ಘೋಷರು ಪ್ರಪಂಚವನ್ನು ತ್ಯಜಿಸಿಬಿಟ್ಟವರೆನ್ನಲಿಕ್ಕಾಗುವುದಿಲ್ಲ ದೇಶವಿದೇಶಗಳಲ್ಲಿ ನಡೆಯುವ ಎಲ್ಲಾ ವಿದ್ಯಮಾನಗಳನ್ನು ಅವರು ಪತ್ರಿಕೆಗಳ ಮೂಲಕ ತಿಳಿಯುತ್ತಾ ಇದ್ದಾರೆ. ಭಾರತಭೂಮಿಯ ಸ್ವಾತಂತ್ರ್ಯ ದಿನವು ಸನ್ನಿಹಿತವಾಗಿದೆ ಆದರ ಸಮಯವು ಪರಿಪಕ್ವವಾಗದೆ ತಾನು ಹೊರಬೀಳುವುದುಚಿತವಲ್ಲವೆಂದು ತಟಸ್ಥರಾಗಿದ್ದಾರೆ ತನ್ನ ಯೋಗಶಕ್ತಿಯ ಮಹಿಮೆಯಿಂದ ಭಾರತಭೂಮಿಯನ್ನು ಒಲಗೊಳಿಸುತ್ತಿದ್ದಾರೆ ಯೋಗದಿಂದ ಪ್ರಪಂಚವನ್ನೇ ತಳಮಳಿಸಬಹುದೆಂದು ಅರವಿಂದರ ಹೇಳಿಕೆಯಿರುತ್ತದೆ. "A quiet and concentrated tapasya can liberate and bring down a mighty power which works to build the world anew" ಎಂದು ಅರವಿಂದರ ಅಭಿಮತ.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉತ್ಕಟವಾದರೂ ಓಡುವದು.

ಏತರಿಂದ?

ಹಿಂದೀ ಔಷಧಿ ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟುದು — HEDAURIN THE DYSENTERY CHOLERA CURE — ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟುದು.

ಬಿಲ್ಡಿನ ಕ್ರಯ ಆಣೆ 0—15—0   2 ಬಿಲ್ಡಿನ ಬಾಟಲಿಗೆ ರೂ 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ದಿ ಕಿಣಿ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದ ಕನ್ನಡಾ

"If every Wife knew what every Widow knows every Husband would be Insured"

PLACE YOUR LIFE ASSURANCE WITH
THE SOUTH INDIAN
Securing for your clients –
1 **Low rates of Premium**
2. **Liberal Policy Conditions.**
AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE
For terms of Agency please apply to —
H R. K IYENGAR
Chief Agent
The S I G A Co, Ltd,
Sanyasiguddy MANGALORE
Managing Agents –
K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ.
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳು ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)
ಚೀಫ್ ಏಜಂಟರು—
ಎಚ್. ಆರ್. ಕೆ. ಅಯ್ಯಂಗಾರ್
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳ,
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ. ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲಾ ವಯಸ್ಸಿನವರಿಗೂ ಶೀತ, ನೆಗಡಿ ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

800 ಮಾತ್ರೆಗಳಿರುವ ಸೀಸೆ 1ಕ್ಕೆ 6 ಆಣೆ.

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನು ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನು ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ   ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ಪಂಬುಗೆಯಾಗಿ ಗುಣಪಡಿಸುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಸ್ತಿಸಂಧುಗಳಿಗೂ, ಗೆಡ್ಡೆಗೂ ತಿಕ್ಕುವ ಔಷಧ.   ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಬಿವರಿಗೆ ಮಾತ್ರ.

ಕನ್ನಡ ಸದ್ಗ್ರಂಥಗಳನ್ನು ಸಂಗ್ರಹಿಸುವವರಿಗೆ ಇದ್ದೊಳ್ಳೇ ಸುಸಂಧಿ! ಅಲಭ್ಯ ಲಾಭ!! ಸ್ವಲ್ಪ ಸಮಯ!!!

ಶ್ರೀ ಶೇಷಾಚಲ ಗ್ರಂಥಮಾಲೆಯ

೨೫ ಐತಿಹಾಸಿಕ ಕಾದಂಬರಿಗಳು ಇವುಗಳ ಬೆಲೆ ಸರಾಸರಿ	ರೂ	೨
೨೨ ಸಾಮಾಜಿಕ—ಪೌರಾಣಿಕ	ರೂ.	೧೨
೧೧ ಪತ್ತೇದಾರಿ	ರೂ	೭
೩೧ ಚರಿತ್ರೆಗಳು	ರೂ,	೨೦
೧೦ ಗದ್ಯ—ಪದ್ಯನಾಟಕಗಳು	ರೂ.	೬
೨೫ ಪೌರಾಣಿಕ-ಪಾರಮಾರ್ಥಿಕ	ರೂ	೨೫
೨೦ ಧಾರ್ಮಿಕ, ವೈದಿಕ ಹಾಗೂ ಇತರ	ರೂ	೧೪
೧೪೪ ಅಂಕು ಪುಸ್ತಕಗಳು ಇವುಗಳ ಒಟ್ಟೆ ಬೆಲೆ	ರೂ	೧೦೫

ಇವುಗಳಲ್ಲಿಯ ಎಷ್ಟೋ ಪುಸ್ತಕಗಳು ೩ನೇ ೪ನೇ ಆವೃತ್ತಿಗಳನ್ನು ಕೂಡ ಹೊಂದಿ ಕನ್ನಡಿಗರ ಪ್ರೇಮಕ್ಕೆ ಪಾತ್ರವಾಗಿರುತ್ತವೆ

ಇಂಥ ಈ ಅತ್ಯುತ್ತಮ (೧೪೪ ಬಗೆಯ) ಪುಸ್ತಕಗಳಲ್ಲಿ ಬೇಕಾದ ಮೂರು ರೂಪಾಯಿ ಬೆಲೆಯ ಪುಸ್ತಕಗಳಿಗೆ ಬರೆದರೆ ಟಪಾಲು ಖರ್ಚನ್ನು ಆಣೆ ನಾವೇ ವಹಿಸಿ ಬರೇ ಮೂರು ರೂಪಾಯಿಗೆ ವ್ಹಿ ಪಿ ಮೂಲಕ ರವಾನಿಸುತ್ತೇವೆ ಇದಕ್ಕೂ ಹೆಚ್ಚು ಬೆಲೆಯ ಪುಸ್ತಕಗಳಿಗೆ ಬರೆದರೆ ಟ. ಖ. ನಾವು ವಹಿಸುವದಲ್ಲದೆ ಮೇಲೆ ಯೋಗ್ಯ ಕಮಿಶನ್ ಸಹ ಕೊಡುತ್ತೇವೆ ವ್ಹಿ ಪಿ ಜೊತೆಸೆ ಆಂಗೀರಸ ಸಂವತ್ಸರದ ಶುದ್ಧ ಪಂಚಾಂಗವು ಪುಕ್ಕಟೆಯಾಗಿ ಕಳುಹಿಸಲ್ಪಡುವದು ಈ ರಿಯಾಯತಿಯು ಇಂದಿನಿಂದ ಒಂದೇ ತಿಂಗಳು. ಕಾರಣ ಎಲ್ಲರೂ ಈ ಸುಸಂಧಿಯ ಲಾಭ ಹೊಂದಬೇಕು ನಮ್ಮ ಕ್ಯಾಟಲಾಗು ನೋಡಿ ಪುಸ್ತಕಗಳಿಗೆ ಬರೆಯಿರಿ

ವಿಳಾಸ— ಭಿ ಪ ಕಾಳೆ
ಪ್ರೊಪ್ರೈಟರ್ ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥ ಮಾಲಾ,
ಪೋ ವಿನಂದವನ, ಜಿ ಧಾರವಾಡ

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ ಮಿಂ ಗಣಪತಿರಾವ್ ಐಗಳವರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪದ್ಯಪುಸ್ತಕಗಳು—

ಎರಡನೇ ಮೂರನೇ, ನಾಲ್ಕನೇ ಐದನೇ ದರ್ಜೆಯ ಸಿವಿಕ್ಸ್ ಮತ್ತು ನೀತಿಬೋಧೆ

ಎರಡನೇ ಮೂರನೇ ನಾಲ್ಕನೇ ದರ್ಜೆಗಳ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

ಎರಡನೇ ಮೂರನೇ ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಭೂಗೋಳವಿದ್ಯೆ ಹೊಸಗನ್ನಡ (೧ನೇ ೨ನೇ ಭಾಗ)— ಇತ್ಯಾದಿ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಜ್ಡ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಪರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ ಪಾ ಕಂಪೆನಿ,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ   ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ
ಕ್ರಯವನ್ನೂ ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Edited, Printed & Published by V. S. Kamath at M. T. A. Sharada Press, Mangalore.

ಮುಂಗಡ ನಿರ್ಣಯ—ವರ್ಷ ಒಂದಕ್ಕೆ ರೂಪಾಯಿ 2-0-0. Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲು [illegible] ರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ? ಮತ್ತೆ ವಿಷವ ಸುಡುಕ ಒರುತಿರುವ ॥
ಗರಲಕವರಂಜಿದರೆ? ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು । ೧ ॥

ಪುಸ್ತಕ ೨೬. ಮಂಗಳೂರು ತಾ ೮ನೇ ಶುಕ್ರವಾರ ಏಪ್ರಿಲ್ ೧೯೩೨ (8 – 4 – '32.) ಸಂಚಿಕೆ ೧೫

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**

ಹೆಡ್ ಆಫೀಸು:—ಉಡುಪಿ ಶಾಖೆ – ಕುಂದಾಪುರ ಮತ್ತು ಮಂಗಳೂರು.

Authorised Capital Rs 3,50,000. Subscribed & Called up Rs. 2 25 000

ನಿಯಮಿತ ಮೂಲಧನ ರೂ 3,50,000. ಚಂದಾ ಹಾಕಲಿಕ್ಕೆ ಆಪೇಕ್ಷಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF MARCH, 1932

	Capital and Liabilities			Property and Assets	
1	Paid up Capital	Rs 2,25,000-0-0	1	Premises Building, Furniture etc	Rs [illegible]
2	Reserve and other funds	2,22,705 0 0	2	Government securities & Treasury Bills	[illegible]
3	Deposits	[illegible]	3	Authorised Investments	[illegible]
4	Due to Bankers	[illegible]	4	Bills for collection	[illegible]
5	Sundries	[illegible]	5	Sundries	[illegible]
6	Bills for collection per contra	[illegible]	6	Cash in hand & with bankers	[illegible]
	Total	[illegible]		Total	[illegible]

Office of the Corporation, UDIPI S K 4-4 '32

N. ANANDA RAO,
Secretary & Manager

(Regd)



ಅಮೃತಾಂಜನ.

ಶೀತ ಕೆಮ್ಮು ತಲೆನೋವು ವಾತ ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ದಂಗ್ಯಕೊಡುವ ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳನ್ನೂ ಇದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತದೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ. ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ. ಎಲ್ಲಾ ಅಂಗಡಿಗಳಲ್ಲೂ ದೊರೆಯುತ್ತದೆ.

ಗಜಕರ್ಣ ಮುಲಾಮು – (ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಥೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು. ಎರಡೇ ಸಲದ ಹಚ್ಚುವಿಕೆಯಿಂದ ಗುಣವಾಗುತ್ತದೆ. ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ. ಟಿನ್ನಿಗೆ 0 – –0 ಆಣೆ

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

[illegible] ಕಂಪೆನಿ, ಮಂಗಳೂರು.

INSURE WITH
The Popular Insurance Co. Ltd.
Head Office MANGALORE S India
First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety, Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to [illegible]

ಮುಂಗಡ ವರ್ಷ ಒಂದಕ್ಕೆ ರೂಪಾಯಿ 2—0—0 Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷದ ಸುದುಕ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೮ನೇ ಶುಕ್ರವಾರ ಎಪ್ರಿಲ್ ೧೯೩೨ (8—4—'32.) ಸಂಚಿಕೆ ೧೫

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—COONDAPOOR & Mangalore**

ಹೆಡ್ ಆಫೀಸು:—ಉಡುಪಿ ಶಾಖೆ—ಕುಂದಾಪುರ, ಮತ್ತು ಮಂಗಳೂರು.

Authorised Capital Rs. 3,50,000. Subscribed & Called up Rs. 2,25,000.

ನಿಯಾಮಿತ ಮೂಲಧನ ರೂ. 3,50,000. ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ವಸೂಲಿ ಮೂಲಧನ ರೂ. 2,25,000.

STATEMENT OF ASSETS & LIABILITIES AS ON 31ST DAY OF MARCH, 1932.

Capital and Liabilities.			Property and Assets		
1	Paid up Capital	Rs. 2,25,000-0-0	1	Premises, Building, Furniture etc.	Rs. 64,417-8-0
2	Reserve and other funds	„ 2,22,705-0-0	2	Government securities & Treasury Bills	„ 3,30,788-4-0
3	Deposits	„ 19,63,879-5-1	3	Authorised Investments	„ 20,61,591-5-7
4	Due to Bankers	„ 89,507-3-7	4	Bills for collection	8,727-8-0
5	Sundries	„ 60,954-8-7	5	Sundries	„ 50,247-1-11
6	Bills for collection per contra	8,727-8-0	6	Cash in hand & with bankers.	„ 55,010-[illegible]
	Total	25,70,773-9-3		Total	25,70,783-[illegible]-3

Office of the Corporation, UDIPI, S. K. 4—4—'32

N. ANANDA RAO,
Secretary & Manager

(Regd.)

ಅಮೃತಾಂಜನ.

ಶೀತ, ಕೆಮ್ಮು, ಕಲೆನೋವು, ವಾತ, ಸುಟ್ಟುಹೋಗುವಿಕೆ, ಮತ್ತು ಮನುಷ್ಯರಿಗೆ ದಿಂಗ್ಟು ಕೊಡುವ, ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ, ಇದು ಮಾಯೊಲ್ಲಿ ಅವುಗಳನ್ನು ಓಡಿಸುತ್ತದೆ. ಈ ಬೇನೆಗಳನ್ನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸುತ್ತದೆ. ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ. ಎಲ್ಲಾ ಅಂಗಡಿಗಳಲ್ಲೂ ದೊರಕುತ್ತದೆ.

ಗಜಕರ್ಣ ಮುಲಾಮು—(ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಧೋಬಿಸ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು. ಎರಡೇ ಸಲದ ಹಚ್ಚುವಿಕೆಯಿಂದ ಗುಣವಾಗುತ್ತದೆ. ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ. ಡಬ್ಬಿಗೆ 0—[illegible]—0. ಡಜನಿಗೆ [illegible]—8—0

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

[illegible] ಕಂಪೆನಿ, ಮಂಗಳೂರು.

INSURE WITH
The Popular Insurance Co. Ltd.
Head Office:—MANGALORE, S. India.
First of its kind in the West Coast

CHAIRMAN
Dewan Bahadur N. Subba Rao.

STRIKING FEATURES

Policy Conditions Liberal:
Claims Settlement Prompt:

MANAGEMENT PURELY INDIAN

Ensure the Absolute Safety, Comfort and Happiness of your Dear Ones.

WANTED INFLUENTIAL AGENTS.
LIBERAL TERMS TO COMPETENT MEN

For further particulars apply to the Head Office

ಟೀಚಿಂಗ್ ಗ್ರಾಂಟಿನ ಅಪಾರವಾದ ಕಡಿತದ ಬಗ್ಗೆ ಸರಕಾರಕ್ಕೆ ಬರೆಕೊಂಡ ಮನವಿಯ

— ಸಾರಾಂಶ —

ತಾರೀಕು ೧೯—೩—೩೭ನೇ, 'ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ಮಾನ್ಯ ಇಲಾಖಾ ಮಂತ್ರಿವರ್ಯರ ಭಾಷಣವನ್ನು ನೋಡುವಾಗ್ಯೆ ಮದರಾಸು ಸಂಸ್ಥಾನದ ೨೬ ಜಿಲ್ಲೆಗಳ ಎಯಿಡೆಡ್ ಶಾಲೆಗಳಿಗೆ ಟೀಚಿಂಗ್ ಗ್ರಾಂಟಿನಲ್ಲಿ ೫,೦೦,೦೦೦ ಮಾತ್ರ ಕಡಿಮೆಮಾಡಿಯದೆ ಎಂಬದಾಗಿ ತಿಳಿದುಬರುತ್ತದೆ ಆದರೆ ಗ್ರಾಂಟು ಸೆಕ್ಷನ್ ಮಾಡಿದ ಜಿ ಒ. ನಂಬ್ರ ೩೦೪/೨೯—೨ ೩೭ರಲ್ಲು ಕೊಟ್ಟ ಸಂಖ್ಯೆಗಳನ್ನು ಪರಿಶೀಲಿಸುವಾಗ್ಯ ನಮ್ಮ ಜಿಲ್ಲೆಯ ಹಗಲು ಶಾಲೆಗಳ ಪರವಾಗಿ ಬೇಕಾಗಿದ್ದ ಎಸ್ಸಾಯಿಂಡ್ ಗ್ರೇಂಟ್ ರೂಪಾಯಿ ೨,೩೭,೩೪೧ನ್ನು ಕೇಳಿರುತ್ತದೆಂತಲೂ, ಸರಕಾರವು ಅದರ 23½ರಷ್ಟು ಎಂದರೆ ರೂಪಾಯಿ ೫೫,೩೮೦ನ್ನು ಕಡಿಮೆ ಮಾಡಿ ರೂಪಾಯಿ ೧,೮೧,೯೬೧ನ್ನು ಮಾತ್ರ ಸೆಂಕ್ಷನ್ ಮಾಡಿರುತ್ತವೆಂತಲೂ, ವಿಶದವಾಗುವುದು ಈ ಸಂಖ್ಯೆಯು ನಮ್ಮ ಜಿಲ್ಲೆಗೆ ಬರೇ ಎಸೆಸ್ಡ್ ಗ್ರಾಂಟಾಗಿ ಬೇಕಾಗಿದ್ದ ರೂ ೧,೯೯,೧೬೨ಕ್ಕಿಂತಲೂ ರೂಪಾಯಿ ೧೭,೨೦೧ ಎಂದರೆ ಸುಮಾರು ಶೇಕಡಾ ೯ರಷ್ಟು ಕಡಿಮೆಯಾಗಿರುವುದು

ಮಾನ್ಯ ಮಂತ್ರಿವರ್ಯರು ಕಳೆದ ಜನವರಿಯಲ್ಲಿ ಈ ಜಿಲ್ಲೆಗೆ ಸಂದರ್ಶಿಸಿದಾಗ್ಯೆ ಟೀಚರ್ ಮೆನೇಜರರ ಸಂಘದ ಪ್ರತಿನಿಧಿಗಳು ಭೇಟಿ ಕೊಟ್ಟು, ಪತ್ರಿಕೆಗಳಲ್ಲಿ ಪ್ರಕಟವಾದಂತೆ ಟೀಚಿಂಗ್ ಗ್ರಾಂಟಿನಲ್ಲಿ ಸೇಕಡಾ ೫ರಂತೆ ಕಡಿಮೆ ಮಾಡಬಾರದಾಗಿ ಮನವಿ ಮಾಡಿಕೊಂಡಲ್ಲಿ ಮಾನ್ಯ ಮಂತ್ರಿವರ್ಯರು ಆ ರೀತಿಯ ಕಡಿತವನ್ನು ಮಾಡಲಿಲ್ಲವೆಂತಲೂ, ಹೆಚ್ಚೆಂದರೆ ಸೇಕಡಾ ೩॥ರಂತೆ ಮಾತ್ರ ಕಡಿಮೆ ಮಾಡಬೇಕಾದೀತೆಂತಲೂ ದೃಢಪಡಿಸಿರುತ್ತಾ, ಈಗ ಸೇಕಡಾ 23½ರಂತೆ ಎಂದರೆ ಸ್ಕೇಲು ಗ್ರಾಂಟಿನಲ್ಲಿಯೂ ಸೇಕಡಾ ೯ರಂತೆ ಕಡಿಮೆ ಮಾಡಿದುದಲ್ಲದೆ ಮುಂದಕ್ಕೆ ಕಡಿಮೆಯಾದ ಮೊಬಲಗಿನ ಬಗ್ಗೆ ಯಾವ ತರದ ಮನವಿಯನ್ನೂ ಕೇಳಲಾಗುವುದಿಲ್ಲವೆಂದು ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲಿಗೆ ತಿಳಿಸಿರುವುದಾಗಿ ಕಂಡುಬರುತ್ತದೆ.

ರಿಟ್ರೆಂಚ್‌ಮೆಂಟಿನ ನೆವನದಿಂದ ಇಲಾಖಾ ಅಧಿಕಾರಿಗಳು ಈ ಮೊದಲೇ ಅನೇಕ ಶಾಲೆಗಳ ವಿಷಯದಲ್ಲಿ ಸೇಕಡಾ ೫ರಿಂದ ೨೦ರ ವರೆಗೆ ಕಡಿತಮಾಡಿ ಆಗಿಯದೆಂಬುದನ್ನು ನಾನಿಲ್ಲಿ ನಿವೇದಿಸಿಕೊಳ್ಳಬೇಕಾಗಿಯದೆ ಪುನಹಾ ಸರಕಾರದಿಂದ ಇದರ ಮೇಲೆ ಸೇಕಡಾ ೯ರ ಕಡಿತವೆಂದರೆ ಬಡ ಟೀಚರ್ ಮೆನೇಜರರಿಗೆ ಸಹಿಸಲಸಾಧ್ಯವಾದ ಪೆಟ್ಟು ಕೊಟ್ಟಂತಾಗಿಯದೆ ಕಳೆದ ವರುಷವೂ ನಮ್ಮ ಜಿಲ್ಲೆಯ ಕೌನ್ಸಿಲಿಗೆ ಕೊಟ್ಟ ಹಣವು ಕಡಿಮೆಯಾದ್ದರಿಂದ ಎಲ್ಲಾ ಶಾಲೆಗಳಿಗೂ ಸೇಕಡಾ ೧೦ರಂತೆ ಕಡಿಮೆ ಮಾಡಬೇಕಾಯಿತು ಆದರೆ ಇತರ ಅನೇಕ ಜಿಲ್ಲಾ ಕೌನ್ಸಿಲು ಕಳೆದ ವರುಷ ರೂಪಾಯಿ ೧೩,೦೦೦ ವರೇಗಿನ ಮೊಬಲಗನ್ನು ಅನಾವಶ್ಯಕವಾಗಿ ಉಳಿಸುವ ಸಂಗತಿಯನ್ನು ನೋಡುವಾಗ್ಯೆ, ಸರಕಾರವು ಗ್ರಾಂಟನ್ನು ಸೆಂಕ್ಷನ್ ಮಾಡುವಾಗ ಏನೋ ಅನ್ಯಾಯವು ನಡಿಯುತ್ತಿದೆಂದು ವಿಶದವಾಗುವುದು ಈ ರೀತಿ ನಮ್ಮ ಜಿಲ್ಲೆಗೆ ಹಣವು ಕಡಿಮೆಯಾಗುವಾಗ್ಯೆ ಅನೇಕ ಜಿಲ್ಲಾ ಕೌನ್ಸಿಲುಗಳು ಅಪಾರವಾದ ಹಣವನ್ನು ಉಳಿಸುತ್ತಿವೆಯಾದರೆ, ಇದು ಸಹಜವಾಗಿಯೂ ವಿಷಾದಾಸ್ಪದವಾದ ಸಂಗತಿಯಾಗಿದೆ

ನಮ್ಮ ಜಿಲ್ಲೆಯ ರಾತ್ರಿ ಶಾಲೆಗಳಿಗೆ ಗ್ರಾಂಟು ಕೊಡಲಿಕ್ಕೆ ೩೬೩೧ ರೂಪಾಯಿ ಬೇಕಾಗುವಾಗ್ಗೆ ಸರಕಾರವು ಬರೇ ೫೨೫ ರೂಪಾಯಿ ಮಾತ್ರ ಕೊಟ್ಟಿದೆ ಪರಂತು ರಾತ್ರಿ ಶಾಲೆಗಳ ಬಗ್ಗೆ ರೂಪಾಯಿ ೩೪೧ನ್ನು ಪಡೆದ ನಮ್ಮ ಜಿಲ್ಲೆಗಿಂತಲೂ ಅತಿ ಸಣ್ಣದಾದ ನೀಲಗಿರಿ ಜಿಲ್ಲೆಯು ಹೊರತು ಇತರ ೨೪ ಜಿಲ್ಲೆಗಳಿಗೂ ಸಾವಿರಗಟ್ಟಲೆ ಗ್ರಾಂಟು ಸೆಂಕ್ಷನ್ ಮಾಡಿರುವ ಧೋರಣವನ್ನು ಹೋಲಿಸಿ ನೋಡುವಾಗ್ಗೆ ನಮ್ಮ ಜಿಲ್ಲೆಯ ವಿಚಾರವು ವ್ಯಸನಾಸ್ಪದವಾಗಿದೆ

ಪ್ರತಿ ೫೦೦ ಜನಸಂಖ್ಯೆ ಇರುವಲ್ಲಿಗೊಂದು ಶಾಲೆಯನ್ನು ಸ್ಥಾಪಿಸಬೇಕೆಂಬ ಸರಕಾರದ ಪ್ರೋತ್ಸಾಹದ ಮೇರೆಗೆ ಅನೇಕ ಹೊಸ ಶಾಲೆಗಳು ತೆರೆಯಲ್ಪಟ್ಟವು ಆಗತ್ಯವಿದ್ದಲ್ಲಿ ಹೆಚ್ಚಿಗೆ ಉಪಾಧ್ಯಾಯರ ನಿಬಂಧಿಯನ್ನಿಟ್ಟು ಕಟ್ಟೋಣ ಮತ್ತು ಸಾಹಿತ್ಯ ಸಾಮಾಗ್ರಿಗಳ ಬಗ್ಗೆ ತುಂಬಾ ಖರ್ಚುಮಾಡಿ ವರುಷಾರಿಕ್ಷದ ವರೆಗೆ ಶಾಲೆ ನಡಿಸುವುದಕ್ಕೆ ಅನುಮತಿಯನ್ನು ಕೊಟ್ಟು ಈಗ ಅಕಸ್ಮಾತ್ತಾಗಿ ಸೇಕಡಾ 23½ರಂತೆ ಗ್ರಾಂಟನ್ನು ಕಡಿಮೆಮಾಡುವುದೆಂದರೆ ವಿವರಣಾತೀತವಾದ ಕಷ್ಟವೂ ಅನ್ಯಾಯವೂ ಪ್ರಾಪ್ತವಾಗಿದೆ ಇದು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದರ ಬದಲಾಗಿ ಸರಿಯಾಗಿ ಉಪಾಧ್ಯಾಯರಿಗೆ ಕ್ರಮ ಪ್ರಕಾರ ಸಂಬಳಕೊಟ್ಟು ನಡಿಸಲ್ಪಡುವ ಯೋಗ್ಯತರಗತಿಯ ಶಾಲೆಗಳನ್ನು ಮುಚ್ಚಬೇಕಾದ ಸಂದರ್ಭಕ್ಕೆ ಎಡೆಕೊಟ್ಟಂತಾಯಿತು

ಆದ್ದರಿಂದ ಟೀಚರ್ ಮೆನೇಜರರ ಸಂಘದ ಪರವಾಗಿ ನಾನು ಸನ್ನಿಧಾನದ ಮುಂದಿಟ್ಟ ವಿಷಯಗಳನ್ನು ಮನಸ್ಸಿಗೆ ತಂದುಕೊಂಡ ಈ ವಿಷಯದಲ್ಲಿ ಪುನರಾಲೋಚನೆ ಮಾಡಿ, ಎಯಿಡೆಡ್ ಶಾಲೆಗಳ ಬಡ ಉಪಾಧ್ಯಾಯರಿಗೆ ತಮ್ಮ ಉದರ ಪೋಷಣೆಗೆ ತಕ್ಕ ಸಂಬಳವು ದೊರೆಯುವಂತೆ ಕಡಿಮೆಯಾದ ಗ್ರಾಂಟನ್ನು ಕೊಡಿಸಿ, ನಡಿಸಬೇಕಾಗಿ ಅತಿ ಧೈನ್ಯದಿಂದ ಪ್ರಾರ್ಥಿಸುತ್ತೇನೆ

ಇತಿ ಅತ್ಯಂತ ವಿಧೇಯ

ಮಂಗಳೂರು, ೨೭—೩—೩೭ ಕುರುಕಾಲು ಗಣಪಯ್ಯ ಶೆಟ್ಟಿ (ಮೆಂಬರ್ ಡಿ ಇ ಸಿ)

ಪ್ರೆಸಿಡೆಂಟ್, ದ. ಕ. ಜಿಲ್ಲಾ ಟೀಚರ್ ಮೆನೇಜರರ ಸಂಘ

(ಪಿ ಸಿ.—ಈ ಮನವಿಯ ಪ್ರತಿಗಳನ್ನು ಮಾನ್ಯ ಮಂತ್ರಿವರ್ಯರಿಗೂ, ಮೇ ಡೈರೆಕ್ಟರ ಮೊದಲಾದವರಿಗೂ ಸ್ಥಳೀಯ ಎಂ ಎಲ್ ಸಿ ಗಳಿಗೂ ಮದ್ರಾಸ್ ಪ್ರಾಂತಿಕ ಟೀಚರ್ ಮೆನೇಜರರ ಸಂಘದ ಸೆಕ್ರೆಟರಿಯವರಿಗೂ ಕಳುಹಿಸುತ್ತೇನೆ ಈ ವಿಷಯದಲ್ಲಿ ಇತರ ಸಂಘಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆನು)

\+ + + +

ಸಂಘದ ಪ್ರಯೋಜನಗಳು.

ಪರಮಾತ್ಮನಿಂದ ನಿರ್ಮಿಸಲ್ಪಟ್ಟ ಸಕಲ ವಸ್ತುಗಳೂ ಸಣ್ಣ ಸಣ್ಣ ಕಣಗಳಿಂದಲೇ ಉಂಟಾಗಿವೆ ಎಂದು ವಿಜ್ಞಾನ ಶಾಸ್ತ್ರಜ್ಞರು ಕಂಡುಕೊಂಡಿರುವರು. ಅಂದರೆ ಭೂಮಿ, ನೀರು, ಬಂಡೆಕಲ್ಲು ಮರ ಇವೇ ಮುಂತಾದುವುಗಳು. ಯಾವ ವಸ್ತುವಿನಲ್ಲಿ ಕಣಗಳು ಒತ್ತಾಗಿರುವುವೋ ಆ ವಸ್ತು ಘಟ್ಟಿ ಎಂದು ಎಣಿಸಲ್ಪಟ್ಟಿದೆ ಭೂಮಿಯ ಕಣಗಳು ಬಂಡೆಕಲ್ಲಿನ ಕಣಗಳಷ್ಟು ಒತ್ತಾಗಿಲ್ಲದಿರುವುದರಿಂದ ಬಂಡೆಕಲ್ಲಿಗಿಂತ ಭೂಮಿಯು ಮೆದುವೆಂದೂ ಎಣಿಸಲಾಗಿದೆ. ಈ ಕಾರಣಗಳಿಂದ ವಸ್ತುಗಳೂ ಸಣ್ಣ ಕಣಗಳ ಒತ್ತಾಟದಿಂದ ಘಟ್ಟಿ ಮತ್ತು ಮೆದು ಎಂದು ಹೇಳಬಹುದು ಆದ ಕಾರಣ ಅನೇಕ ಕಣಗಳಿಂದಲೇ ನಿರ್ಮಿಸಲ್ಪಟ್ಟ ಒಂದು ವಸ್ತುವು ಹೇಗೆ ಘಟ್ಟಿಯಾಗುವುದೋ ಹಾಗೆಯೇ ಅನೇಕ ವಸ್ತುಗಳ ಕೂಡುವಿಕೆಯಿಂದ ಇನ್ನೊಂದು ವಸ್ತುವಾಗಿ ಅದಕ್ಕೆ ಹೆಚ್ಚು ಬಲಬರುವುದು ದೃಷ್ಟಾಂತವಾಗಿ ಒಂದು ಕಸಪೊರಕೆಯನ್ನು ತೆಗೆದುಕೊಳ್ಳೋಣ ಅಬಲವಾದ ಹಲವು ಚಿಕ್ಕ ಚಿಕ್ಕ ಕಡ್ಡಿಗಳಿಂದ ಒಂದು ಕಸಪೊರಕೆಯನ್ನು ರಚಿಸಿದ್ದಲ್ಲಿ, ಅದರಿಂದ ಮನೆಯಲ್ಲಿರುವ ಕಸಗಳನ್ನು ಬಲದಿಂದ ಗುಡಿಸಿ ಹೊರಗೆ ತಳ್ಳಲಾಗುತ್ತದೆ ಹಾಗೆಂದು ಒಂದೇ ಕಡ್ಡಿಯಿಂದ ಯಾವ ಕೆಲಸವನ್ನು ಮಾಡಲು ಸಾಧ್ಯವಿಲ್ಲ ಈ ಕಾರಣದಿಂದ ಹಲವು ಒಟ್ಟುಕೂಡಿದ್ದಲ್ಲಿ ಬಲವು ಹೆಚ್ಚುವುದು ಎಂದು ಸಿದ್ಧಾಂತಗೊಳಿಸಿದಂತಾಯಿತು

ಈ ಸಿದ್ಧಾಂತವನ್ನು ಪ್ರಾಣಿಗಳಿಗೂ ಹೋಲಿಸಿದ್ದಲ್ಲಿ ಇನ್ನಷ್ಟು ಮಂದಟ್ಟಾಗುವುದು ಉದಾಹರಣೆಯಾಗಿ ಇರುವೆ ಇರುವೆಗಳು ಎಂದರೆ ಒಂದು ಚಿಕ್ಕ ಜಂತುಗಳು ಆದರೂ ಅವುಗಳು ಸಂಘಶಕ್ತಿಯನ್ನರಿತುಕೊಂಡಿರುವುದರಿಂದ ಒಂದು ದೊಡ್ಡ ಅಕ್ಕಳೆ, ಹಾವ ಮೊದಲಾದ ತಮಗಿಂತ ದೊಡ್ಡ ಪ್ರಾಣಿಗಳು ಸತ್ತುಬಿದ್ದರೆ ಅವನ್ನು ಕಂಡ ಇರುವೆಗಳು ಗೂಡಿಗೆ ಒಡನೆ ತೆರಳಿ, ತಮ್ಮ ಪಡೆಗಳ ತಂದು ಒಟ್ಟಾಗಿ ಆ ದೊಡ್ಡ ಪ್ರಾಣಿಯನ್ನು ಹೊರುವುದನ್ನು ನಾವು ಯಾವಾಗಲೂ ನೋಡುತ್ತಿರುವೆವು ಪ್ರಾಣಿಗಳು ಕೂಡಾ ಈ ಸಂಘಶಕ್ತಿಯ ಮಹಿಮೆಯನ್ನು ಅರಿತುಕೊಂಡಿವೆ ಎಂದು ತಿಳಿದು ಬರುವುದು. ಹೀಗಿರುತ್ತಾ, ಮನುಷ್ಯನು ಈ ಸಂಘಶಕ್ತಿಯ ಮಹಿಮೆಯನ್ನು ಕಂಡುಕೊಂಡುದರಲ್ಲಿ ಆಶ್ಚರ್ಯಪಡಲು ಕಾರಣವಿಲ್ಲ ಯಾವ ದೇಶದ ಜನರು ಈ ಸಂಘಶಕ್ತಿಯ ಅನುಭವವನ್ನು ಹೆಚ್ಚು ಕಂಡುಕೊಂಡಿರುವರೋ ಆ ದೇಶದ ಜನರು ನಾಗರಿಕರೆಂದು ಅನ್ನಿಸಿಕೊಳ್ಳುವರು

ನಾಗರೀಕ ಜನಾಂಗದವರು ವೃತ್ತಿ ಕೈಗಾರಿಕೆ, ವ್ಯಾಪಾರ, ಕೃಷಿ ಮುಂತಾದ ಸಕಲ ಸಾಧನಗಳನ್ನು ಸಂಘಗಳ ಮೂಲಕವೇ ನಡಿಸಿ ಹೆಚ್ಚಿನ ಪ್ರಯೋಜನವನ್ನು ಹೊಂದುತ್ತಿರುವುದನ್ನು ನಾವು ನಿತ್ಯವೂ ಪತ್ರಿಕೆಗಳ ಮೂಲಕ ತಿಳಿಯುತ್ತಿರುವೆವು ಈ ಎಲ್ಲಾ ಕಾರಣಗಳಿಂದ ನಮ್ಮ ದೇಶದಲ್ಲೂ ಸಂಘಶಕ್ತಿಯ ಪ್ರಬಲವು ಬಹಳ ಭರಾಟೆಯಿಂದ ಮುಂದರಿಯುತ್ತಾ ಬರುತ್ತಿದೆ ಈಗ ಎಲ್ಲಿ ನೋಡಿದರೂ ಸಂಘದ ಧ್ವನಿಯೇ ಕೇಳಬರುತ್ತಿದೆ ಕೂಲಿಗಳ ಸಂಘ ರೈತರ ಸಂಘ ವರ್ತಕರ ಸಂಘ ವ್ಯಾಪಾರಸ್ಥರ ಸಂಘ ವಿದ್ಯಾರ್ಥಿಗಳ ಸಂಘ, ಉಪಾಧ್ಯಾಯರ ಸಂಘ, ಯಕ್ಷಗಾನೋಜೀವಿಗಳ ಸಂಘ ಇವೇ ಮುಂತಾಗ ಹಲವು ಸಂಘಗಳು ಏರ್ಪಟ್ಟಿವೆ ಹಾಗೆಯೇ ಉಪಾಧ್ಯಾಯರಾದ ನಾವುಗಳು ಕೂಡ ಉಪಾಧ್ಯಾಯರ ಸಂಘವೆಂಬ ನಾಮದಿಂದ ಸಂಘಗಳನ್ನು ಏರ್ಪಡಿಸಿಕೊಂಡಿರುವೆವು ಈ ಸಂಘದಿಂದ ನಾವು ಯಾವ ಪ್ರಯೋಜನವನ್ನು ಹೊಂದಿದೆವು ಮತ್ತು ಹೊಂದುವೆವು ಎಂದು ತಿಳಿಯಬೇಕಾದುದು ನಮ್ಮ ಅದ್ಯ ಕರ್ತವ್ಯ

ಸಕಲ ವೃತ್ತಿಗಳಿಗಿಂತಲೂ ಉಪಾಧ್ಯಾಯ ವೃತ್ತಿಯು ಬಹು ಮಹತ್ವದ್ದು ಗೌರವಯುಕ್ತವಾದದ್ದು ಆಗಿರುವುದು ಯಾಕೆಂದರೆ ಏನೂ ಅರಿಯದ ಬಾಲಕರಿಗೆ ಸಕಲ ವಿಷಯದಲ್ಲೂ ಅರಿವನ್ನುಂಟು ಮಾಡುವುದು ಉಪಾಧ್ಯಾಯನಿಗೆ ಹೊಂದಿರುವುದರಿಂದ ಅದಕ್ಕೆ ಬೇಕಾದ ದಾರಿಯನ್ನು ಯಾವಾಗಲೂ ಹುಡುಕುತ್ತಾ ಬರುವುದು ಉಪಾಧ್ಯಾಯನ ಕಾರ್ಯವಾಗಿದೆ ಏನೋ ಸ್ವಲ್ಪ ಓದುಬರಹ ಕಲಿತಿದ್ದೇನೆ ಒಂದು ಉಪಾಧ್ಯಾಯ ಕೆಲಸ ದೊರೆತಿದೆ ನನ್ನ ಕಲಿಯುವಿಕೆಯು ಅಂತ್ಯವಾಯಿತು ಎಂದು ಸಂತೋಷಿಸಿಡುವ ಉಪಾಧ್ಯಾಯನು ಅವನಿಗೆ ದೊರೆ

೯ನೇ ಪುಟಕ್ಕೆ ಮುಂದುವರಿಯಿದೆ

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ನಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಶ್ರೀ ಮದನಮಸ್ತ ಪಾಕು ಟ್ರೇಡ್ ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು ಹಸ್ತಕ್ರಿಯೆಯಿಂದಲೂ ಅತಿ ಸ್ತ್ರೀಸಂಗಚಿತ್ತದಿಂದಲೂ ಒದಗಿದ ನಪುಂಸಕತ್ವ ಧಾತುಕ್ಷೀಣತೆ ಅಶಕ್ತತೆ ಕಾಮೇಚ್ಛೆಯಾದ ಕೂಡಲೇ ವೀರ್ಯಸ್ಖಲನವಾಗೋಣ ಗರ್ಭದಯ ಪರಿಣಾಮ, ಎಂಥದಾದರೂ ಪರಮ ಸ್ವಪ್ನದೋಷ ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ ೨೧ ದಿವಸ ಸಾಲುವ ೮೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟಿ ಪಿ ರೂ ೧ ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧ ಮೂರ ಡಬ್ಬಿಗೆ ರೂ ೧೫॥ ಮಾತ್ರ ಪಥ್ಯವಿಲ್ಲ ಅನುಪಾನವು ಡಬ್ಬಿಯೊಡನೆ ಸಾವಿರಾರು ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಸ್ ಆಯ್ ಮುಟ್ಟೀವಲ್ ಎಲ್ ಎಮ್ ಎಂಡ್ ಎಸ್ ಜೆ ಪಿ, ಮುಂಬಯಿ — ಈ ಪಾಕು ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರಮಿ ಪರಮಾ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹಳ ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಡಿ ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ

ಮೇಲಿನ ಸರ್ಟಿಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮು ಕೊಡುವೆವು

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ ೯ M. C

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಹಲವಾರು ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಒಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಒಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನುಮಾಡಿದರೂ ಸುರುವಾಗುವುದಿಲ್ಲ ಮೊದಲೆ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ವೈದ್ಯ ಡಾಕ್ಟರ ಬಿ ಎ. ವೈದ್ಯ, ಎಲ್ ಸಿ. ಪಿ. ಎಸ್. ಕೆಳವಾಡಿ, ರಾಣೇ— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ ವಿ. ಪಿ ಖರ್ಚು ೦|೦

ವಿಳಾಸ— ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. O.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡತಕ್ಕದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2—0—0 ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆಯುರ್ವೇದ ಪ್ರಕಾಶ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ.

ಅಪೇಕ್ಷಿಸುವ ಬಹುಮಾನಗಳು.

ಹೆಗಲಿಗೆ ಹಾಕುವ ಜರಿ ಒಲ್ಲಿ ಕಾಶೀ ಸಿಲ್ಕುಗಳು 6 ಮೊಳ ಉದ್ದ 21 ಮೊಳ ಅಗಲ ರೂ. 5 ಆರಂಭವಾಯಿತು ರೂ 25 ವರೆಗೆ. ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಕೆ ಖಣಗಳು, ಮುಂಡಾಸು, ಎಲವಸ್ತ್ರ, ಜಮಖಾನೆ, ಪೇಟ, ಇತ್ಯಾದಿ ಉಣ್ಣೆಯ ಶಾಲು, ಖಿಸ್ತ್ರಿ ಮಂಡಿ, ಧಾವಳಿ, ಕಸ್ತೂರಿ, ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು, ಜರಿಟೊಪ್ಪಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು.

ವಿಳಾಸ -

ರಾವು ವಿಶ್ವನಾಥರಾವ್ ಎಂಡ್ ಬ್ರದರ್ಸ್
ದಗಾರ್ ಘಾಟ್, ಕಾಶೀ, ಬನಾರಸ್ ಸಿಟಿ

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ, ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುದ್ದುಪ್ರಾಣಭಟ್ಟ. ಪ್ರೊಪ್ರೈಟರ್.

Canara Bank Limited.
ಕೆನರಾ ಬ್ಯಾಂಕ್ ಲಿಮಿಟಡ್.

Head Office — **MANGALORE**

Established July 1906. 1906 ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟತು

BRANCHES **-Karkal, Kasargod, Cochin, Udipi, Gangolli Coondapur, Bombay, Puttur, Calicut & Alleppey**

ಬ್ರಾಂಚುಗಳು:–

ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ, ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲಪೆ

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟಲ್ಪಟ್ಟ ಬಂಡವಾಳ ರೂ [illegible]
Reserve and other sinking Funds Rs. 526,000—0—0	ರಿಜರ್ವ ಮತ್ತು ಇತರ ಫಂಡುಗಳು ರೂ 526,[illegible]
Amount invested on G. P. Notes Rs. 81[illegible],092—12—0	ಗವರ್ನಮೆಂಟ್ ಪ್ರಾಮಿಸರಿ ನೋಟು ಗಳಲ್ಲಿ ಹಾಕಿದ ರೂ. [illegible],092—12—
Rates of interest on fixed deposits at Head Office and Branches are [illegible] for a Year [illegible] Year	[illegible]

Current Account Deposits received and interest allowed on dai[ly b]alance of Rs 50 and above that on multiples of Rs 10 @ [illegible]% from 1st January to 30th June and @ [illegible]% from 1st July to 31st December. No interest will be allowed unless the deposit [illegible] than Rs 5[illegible] during a period of [illegible] months ending either 30th June or 31st December in any year.

Except by special arrangement, no interest i[s] allowed o[n] [s]ums exceeding Rs 10,000 in the case of Head Office and Cochin Branch and on sum[s] exceeding Rs 15,000 in the case of Bombay Branch and on [illegible] exceeding [illegible] other Branches.

For further particulars please apply to—

Canara Bank Ltd, — **K. Venkat Rao.**
Mangalore [illegible]—2—1932 — *Secretary & Treasurer*

The Pangal Nayak Bank, Ltd.

Head Office Udipi — *Established 1920* — **Branch Office** Mangalore

Authorised Capital Rs. 2,00,000-	Paid up Capital. Rs. 1,75,000-
Issued Capital Rs. 1,75,000-	Reserve and other Funds Rs 1,80,000-

1 **Receives Fixed Deposits at the following favourable rates**

For 3 months at 5 — For 12 15 18 or 21 months at 6[illegible]
„ 6 or 9 months at 5½ — „ 24 months at 6[illegible]

Interest being payable every 3 months

ಕಾಯಂ ಠೇವಣಾತಿಗಳು ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಕರಾರಿನ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ಸಾ. ಕೆ 5[illegible], — 12 15, 18 ಯಾ 21 ತಿಂಗಳಿಗೆ ಸಾ. ಕೆ. 6[illegible]
6 ಯಾ 9 ತಿಂಗಳಿಗೆ ಸಾ. ಕೆ 5½, — 24 ತಿಂಗಳಿಗೆ ಸಾ ಕೆ. 6[illegible].

2. **Current Accounts** opened free of charge and interest allowed.
Cumulative, Savings Bank and Short Notice Deposits received at favourable rates of interest.

3 The bank transacts every description of banking business.

4 For full particulars and for copies of the amended **Rules of Business** please apply to the **Secretary** at the Head Office at Udipi or to the **Agent** Mangalore Branch.

Office of the Bank, Udipi, [illegible]—2—32 — **P. Laxman Nayak,** Secretary

---

ಇಪ್ಪತ್ತು	ವಯಸ್ಸಿನಲ್ಲಿ	ಮದುವೆ
ಮೂವತ್ತು	[illegible]	ಮುಚ್ಚಟೆ
ನಲವತ್ತು	[illegible]	ನರಳುವದು
ಐವತ್ತು	[illegible]	ಆಲಸ್ಯ
ಅರುವತ್ತು	[illegible]	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ. ಡಬ್ಬಿ 1ಕ್ಕೆ ಕ್ರಯ ರೂ 1—0—0.

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯ** ಎಂಬ ಪುಸ್ತಕವನ್ನು ಓದಿರಿ. ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್

ಮದನಮಂಜರಿ ಮಾತ್ರೆಗಳ ಏಜಂಟರು—ವಿ ಜಿ. ಚಂದರಾನಾ, ಮಿಶನ್ ಬೀದಿ, ಮಂಗಳೂರು.



ಮತ್ತೊಂದು ಮಹಾ ಯುದ್ಧಕ್ಕೆ ಸಿದ್ಧತೆಯೆ?

ಮೊಸ್ಕೋ (ರಶ್ಯಾ) ಸಿದ್ಧವಾಗಿದೆ; ಪೂರ್ವದ ಎಲ್ಲೆ ಕಟ್ಟಿನಲ್ಲೇ ಮಂಚೂರಿಯ ರಾಜ್ಯದಲ್ಲಿ ಜಪಾನಿನಂತಹ ಪ್ರಮುಖ ರಾಷ್ಟ್ರವು ಪ್ರತಿಷ್ಠೆ ಹೊಂದಿದೆ ಅಲ್ಪ ರೀತಿಯ ಧುಡುಕುಂಟಾದರೂ ಸರಿ, ಮುಂದೆ ಯುರೋಪು ಯುದ್ಧದಲ್ಲಿ ಸೇರದೆ ಇರಲಾರದು ವಿಪತ್ತಿನಿಂದ ತಪ್ಪಿಸಿಕೊಳ್ಳುವ ಮೋರೆ ಮುಸುಕುಗಳು ಎಲ್ಲೆಲ್ಲಿಯೂ ಕ್ರಿಯಕ್ಕೆ ದೊರೆಯುತ್ತಿವೆ. ಪ್ರತಿಯೊಂದಕ್ಕೂ ಕ್ರಿಯ ಏರುತ್ತಲೇ ಇದೆ. ಎಲ್ಲಿ ಹೋದರೂ ಮಾತು ಯುದ್ಧದ್ದೇ. ಎಲ್ಲರೂ ಜೀನಸುಗಳನ್ನು ಸಂಗ್ರಹಿಸಿಡುತ್ತಿದ್ದಾರೆ,—ಎಂದು ಇಂಗ್ಲಿಷ್ ಪತ್ರಿಕಾ ಲೇಖಕನು 'ನ್ಯೂ ಲೀಡರ್' ಪತ್ರಿಕೆಗೆ ಬರೆದೇ ಇದ್ದಾನೆ ಇತ್ತ ಯುದ್ಧ ನಿವಾರಣೆಗಾಗಿ ಪ್ರಧಾನ ರಾಷ್ಟ್ರಗಳ ಚರ್ಚೆ, ಅತ್ತ ಯುದ್ಧಕ್ಕಾಗಿಯೇ ಸನ್ನಾಹ ಹಿಂದೆಯಾದರೆ, ಯುದ್ಧಭೀತಿಯನ್ನು ಬಿಡದು, ಯುದ್ಧ ಬಾರಿ, ಯುದ್ಧವಾಗುತ್ತಿತ್ತು, ಈಗ ಇನ್ನು ಯುದ್ಧವಾದ ಬಳಿಕವೇ ತಿಳಿಯುವಂತಿದೆ.

ಇಂಗ್ಲೆಂಡಿನಲ್ಲಿ ಯುದ್ಧ ಸನ್ನಾಹಗಳ ತಯಾರಿ

ಗಾರಿಗ ನಿರುದ್ಯೋಗಿಗಳನ್ನು ಉಪಯೋಗಿಸುವುದೊಂದೇ ಉಪಾಯ ಉಳಿದಿದೆ ಹಿಂದಣ ಮಹಾಯುದ್ಧ ನಂತರ ಪ್ರತಿಯೊಂದು ವರ್ಷವೂ ನೂರು ಮಿಲ್ಲಿಯ ಪವನುಗಳಂತೆ ಈ ಒಗ್ಗ ವ್ಯಯಿಸಲಾಗಿದೆ ನಿರುದ್ಯೋಗಿಗಳಿಗೆ ಆಹಾರ ದೂರೆಯಲೆಂದು ಈ ವಿಧಿ. ನೂತನ ಧ್ವಂಸಕಾರಿ ಯಂತ್ರಗಳ ನಿರ್ಮಾಣ ನಡೆಯುತ್ತಲೇ ಇದ್ದಿತು ಒದುವ ವರ್ಷ ಯಾಂತ್ರಿಕ ಕೋವಿಗಳು ಸಿದ್ಧವಾಗುವುವು ಇವು ಪ್ರತಿ ೧೩ ನಿಮಿಷಗಳಲ್ಲಿ ೬೦ ಗುಂಡು ಹಾರಿಸುವುವು ಮಾತ್ರವಲ್ಲದೆ, ಪುನಃ ಕೈ ಮುಟ್ಟದೆ ೫ ನಿಮಿಷಗಳಲ್ಲಿ ೩೦ ಗುಂಡು ಹಾರಿಸುವುವು, ಒಂದೇ ಸಲ ಒಂದು ಸಾವಿರ ಗುಂಡುಗಳನ್ನು ಇವುಗಳಲ್ಲಿ ಹಾರಿಸಲು ಅಣಿ ಮಾಡಿಡಲೂ ಬರುತ್ತಿದೆ ೧೩ ಟನ್ ಭಾರದ ಟ್ಯಾಂಕ್ ಎಂಬ ಮೋಟರು ವಾಹನಗಳು ಸಿದ್ಧವಾಗಿವೆ ವಿಮಾನಗಳು ಈ ವರ್ಷಕ್ಕಿಂತ ತಾಸಿಗೆ ೫೦ ಮೈಲು ಹೆಚ್ಚಿಗೆ ವೇಗವಾಗಿ ಓಡುವ ವರ್ಷ ಹಾರಾಡುವುವು ೬೦ ಕುದುರೆ ಶಕ್ತಿಯ ಯಂತ್ರಗಳು ಈ ವಿಮಾನಗಳನ್ನು ೯॥ ನಿಮಿಷಗಳಲ್ಲಿ ೨೦೦೦೦ ಸಾವಿರ ಫೀಟ್ ಎತ್ತರ ಹಾರಿಸುವುವು, ತಾಸಿಗೆ ೨೧೪ ಮೈಲ ವೇಗವಾಗಿ ಹಾರುವುವು ೯ ಟನ್ ಭಾರದ ಸಿಡಿಮದ್ದನ್ನು ಹಾರಿಸುವ ಯಂತ್ರಗಳೂ ಸಿದ್ಧವಾಗಿವೆ ಯುದ್ಧ ನಿಲ್ಲಿಸುವ ಯೋಜನೆಯೊಂದು ತ್ಯಜಿಸಿದ [illegible] ಬೇರೊಂದು ಇನ್ನಷ್ಟು ಭಯಂಕರವೂ ಪ್ರಬಲವೂ ಆದ ಹಡಗು (ಸಬ್‌ಮೆರಿನ್) ಸಿದ್ಧವೇ ಇದೆ ಯುದ್ಧ ಬೇಡ, ಆದರೆ ಬರಗಿದರೆ ಎಲ್ಲರೂ ಸಿದ್ಧರೇ

ತುರ್ಕ್ಯದಲ್ಲಿ ಸ್ವದೇಶಿ ಪ್ರಚಾರ ಕ್ರಮ.

ತುರ್ಕ್ಯದ ರಾಷ್ಟ್ರೀಯ ಸಾಂಪತ್ತಿಕ ಸಂಘದ ಕರೆಗಳ ಇಸ್ತಿಹಾರನ್ನು ಓದಿದರೆ, ಜನಾಂಗಗಳೆಲ್ಲವೂ ಹೇಗೆ ತಮ್ಮ ಸಾಂಪತ್ತಿಕ ಸ್ವತಂತ್ರತೆಗಾಗಿ ಸ್ವದೇಶಿ ವ್ರತಿಗಳಾಗಿವೆ ಎಂದು ತಿಳಿಯದೆ? ಕೆಲವು ಜನಾಂಗಗಳ ಹಾಗೂ ದೇಶಗಳ ಹಣದ ಬೆಲೆಯಿಳಿದು, ನಾವು ನಮ್ಮ ಹಣವನ್ನು ಪಡ್ರಮಿಸಬೇಕು ೩೦ ವರ್ಷಗಳ ಕಷ್ಟದಿಂದಲಾದರೂ, ವೃದ್ಧಾಪ್ಯಕ್ಕಾಗಿ ಸಂಪಾದಿಸಿಟ್ಟ ಹಣವು ಈಗ ೬ ರಲ್ಲಿ ಒಂದು ಪಾಲಿಗೂ ಸಾಲದಾಗಿದೆ ಆದಕ್ಕಾಗಿ ಸರಕಾರವು ಹೀಗೆ ಪ್ರಯತ್ನಿಸಲು ನಿರ್ಧರಿಸಿಯದೆ:—ವಸ್ತ್ರಗಳು ಸರಕಾರದ ಸಹಾಯದಿಂದ ಆಮದು ಸರಕುಗಳ ಬೆಲೆಗೆ ಸರಿಹೋಗುವಂತೆ ಉಪಾಯಮಾಡಲಾಗಿದೆ ಇದರಿಂದ ಈಗ ನಮ್ಮ ಹಣಕ್ಕೆ ಸೋಲ್ಪ ನವಿಯಾಗಿಲ್ಲ ಇಂಗ್ಲೆಂಡಿನ ಹಣಕ್ಕಿಂತ ಬೆಲೆ ಬಂದಿದೆ. ಈ ಸಂದರ್ಭದಲ್ಲಿ ಪ್ರತಿ ನಾಗರಿಕ ತುರ್ಕನು ತುರ್ಕ್ಯದಲ್ಲಾಗುವ ಜೀನಸುಗಳನ್ನೇ ಮಾತ್ರ ಕೊಂಡುಕೊಂಡು ಉಪಯೋಗಿಸಬೇಕಾದುದು ಅವನ ಕರ್ತವ್ಯ ಕರ್ಮ ಆದುದರಿಂದ ವ್ಯಾಪಾರಿಗಳು ಸರಕುಗಳ ಬೆಲೆ ಏರಿಸಬೇಕಿದೆ ನಾವೆಲ್ಲರೂ ಸಹಕರಿಸೋಣ ಪ್ರತಿ ತುರ್ಕ್ಯ ಕುಟುಂಬವು ಆಗುವಷ್ಟು ಕಡಿಮೆ ಖರ್ಚಿನಲ್ಲಿ ಜೀವನ ಸಾಗಿಸಿ ಒಂಷ್ಟಿಷ್ಟು ಹಣ ಉಳಿಸಿಕೊಂಡು, ಮುಂದೆ ಅಗತ್ಯ ಬಿದ್ದಾಗ ದುರ್ದಿನಕ್ಕೆ ಅದು ಸಹಾಯವಾಗುವಂತಾಗಲಿ ಅದನ್ನು ನಮ್ಮ ಬ್ಯಾಂಕಿನಲ್ಲೇ ಭದ್ರವಾಗಿಟ್ಟುಕೊಳ್ಳಿರಿ' ಇಷ್ಟೇ ಜೀವನ ನೀತಿಯು ತುರ್ಕ್ಯವನ್ನು ಅಭ್ಯುದಯಕ್ಕೆ ತಾರದೆ? ದರಿದ್ರ ಜನಾಂಗಗಳು ಅನುಸರಿಸಲು ಇದೊಂದೇ ಮಾರ್ಗವೆಂದು ಅವರು ಬಲ್ಲರು.

ಲಾಠೀ ಮಹಾತ್ಮೆ.

ಶ್ರೀ. ನಟೇಶನ್‌ರವರು ಕೌನ್ಸಿಲ್ ಒಫ್ ಸ್ಟೇಟ್‌ನಲ್ಲಿ, ಭಾಷಣ ಮಾಡುವಾಗ, ಒರ್ಡಿನೆನ್ಸುಗಳ ಚರ್ಚೆ ನಡೆಯಲು ಹೀಗೆಂದರು:—'ವಿಮಾಂಡಿನಲ್ಲಿರುವ ಬಂದಿವಾನನನ್ನು ಒಬ್ಬ ಪೋಲೀಸನು ಲಾಠಿಯಿಂದ ಬಡೆದರೆ ಅದು ತಕ್ಷೀರು; ಬಹಿರಂಗವಾಗಿ ಬಡೆದರೆ ಹೇಗೆ ಎಂದು ನೀವೆಲ್ಲರೂ ಆಲೋಚಿಸಿರಿ ಇದರಿಂದ ಸರಕಾರದ ಉದ್ದೇಶವು ಕಿಂಚಿತ್ತಾದರೂ ನೆರವೇರುವುದೆ? ನ್ಯಾಯ—ಕ್ರಮಗಳ ಪುನಃ ಪ್ರತಿಷ್ಠಾಪನಕ್ಕೆ ಇದರಿಂದ ಜನಗಳಲ್ಲಿ ವಿಶ್ವಾಸ ಉಂಟಾಗುವುದೆ? ಸರಕಾರದೊಡನೆ ಪೂರ್ಣ ಸಹಾನುಭೂತಿಯಿಂದ ಇರುವವರಲ್ಲಿಯೂ ಸಹ ಈ ಲಾಠೀ ಹೊಡೆತಗಳು ಕದಡಿದ ಮನಸ್ಸುಗಳನ್ನು ಉಂಟುಮಾಡುವುವು. ಎಳೇ ಬಾಲಕರು ಬೀಳುವ ವರೆಗೂ, ಬಿದ್ದ ಮೇಲೂ ಲಾಠಿಗಳಿಂದ ಬಡೆಯುವುದನ್ನು ಹಿಂದೆ ಎಡ್ವಕೇಟ್ ಜನರಲ್ ಅಥವಾ ಎಕ್ಸಿಕ್ಯುಟಿವ್ ಕೌನ್ಸಿಲರಾಗಿದ್ದವರೂ ಕಣ್ಣಾರೆ ನೋಡಿರುವರು ಮದ್ರಾಸಿನ ವಕೀಲ ಮುಖಂಡರು ಸರಕಾರಕ್ಕೆ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯ ತಿಳಿಸಿದರು ಡಾ। ಪೇಟನರನ್ನು ಒಡೆದ ವಿಚಾರವಾಗಿ ಇಲ್ಲಿ ಎಮರ್ಸನ್‌ರವರು ಎಷ್ಟು ಸಾವಧಾನವಾಗಿ ತೂಕವಾದ ಮಾತುಗಳನ್ನಾಡಿದರು! ಸ್ವಾವಂತ ಸರಕಾರಗಳಿಗ ಪರಸ್ಪರ ಸರಕಾರವು ಈ ವಿಷಯ ಕೊಟ್ಟ ಎಚ್ಚರಿಕೆಗಳನ್ನೂ ತಿಳಿಸಿದರು ಆದರೆ, ಸಾಮಾನ್ಯ ಕಾನೂನು ಒಂದು ಕಡೆ, ಒರ್ಡಿನೆನ್ಸು ಕಾನೂನು ಒಂದು ಕಡೆ ಇರುವಾಗ ಮನುಷ್ಯ ಮಾತ್ರರಾದವರು ಒರ್ಡಿನೆನ್ಸು ಜಾರಿಮಾಡಿ ಕೈಯಿಕ್ಕಲಾರದೆ ಇರುವುದುಂಟೆ? ಚೆನ್ನಾಗಿ ಯೋಚಿಸಿರಿ ಸಾವಧಾನ'

ನಮ್ಮ ಶ್ರೀಮಾನ್ ವ್ಯಾಸರಾಯ ಸಾಹೇಬರವರು

ಮದ್ರಾಸಿನಲ್ಲಿ ಸ್ವಯಂಸೇವಕರು ಪಿಕೆಟಿಂಗ್ ಮಾಡುವಾಗ ಪಶುಗಳಂತೆ ಲಾಠಿ ಪೆಟ್ಟುಗಳನ್ನು ತಿಂದರೆಂದೇ ಮೊದಲಾಗಿ, ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯ ತಂತೀ ವಾರ್ತೆ ಕಳುಹಿಸಿದ ಮೇ ಫ್ರೀಮನ್ ಎಂಬ ಅವರ ಮಿತ್ರರು, ಶ್ರೀಮಾನ್ ವೈಸ್ರಾಯರ ಸಂದರ್ಶನಕ್ಕೆ ತೆರಳಿ ಅಲ್ಲಿಯೂ ಈ ವಿಷಯವನ್ನೆತ್ತಿ ಪ್ರಸ್ತಾಪವೆತ್ತಲು,—ವೈಸ್ರಾಯ ಸಾಹೇಬರು 'ಇಂಡಿಯಕ್ಕೆ ಈಗ ಬೇಕಾದುದೇನೆಂದರೆ, ಅದರ ತಲೆಗೆ ಒಂದು ಬಲವಾದ ಪೆಟ್ಟು, ಅದನ್ನು ಅವರಿಗೆ (ಹಿಂದೀಯರಿಗೆ) ಕೊಡುವುದಷ್ಟೆ ನಮ್ಮ ಜವಾಬ್ದಾರಿಯಾಗಿದೆ' ಎಂದರಂತೆ ಹೀಗೆಂದು ಫ್ರೀಮನರು (ಇವರು ಪಾರ್ಲಿಮೆಂಟಿನ ಮಾಜೀ ಮೆಂಬರರು) ಒಂದು ಸಾರ್ವಜನಿಕ ಭಾಷಣದಲ್ಲಿ ನುಡಿದರಾಗಿ ಪ್ರಕಟವಾಗಿದೆ ರಾಜನೀತಿಯೋ ನೋ ಹೀಗಿದೆ ನಿಜ ಆದರೆ ಈ ವೃತ್ತಾಂತವನ್ನು ಸರಕಾರವು ಒಪ್ಪಿದುದಿಲ್ಲ, ಹಾಗೆಂದು ನಿಜವೆನ್ನಲೂ ಆಸ್ಪದವಿಲ್ಲ ಫ್ರೀಮನರು ಸುಳ್ಳಾಡುವವರೂ ಅಲ್ಲ ಇವರು ಇಂಗ್ಲೆಂಡಿಗೆ ತಮ್ಮ ಜತೆಯಲ್ಲಿ ಒಂದು ರಾಷ್ಟ್ರೀಯ ಧ್ವಜವನ್ನೂ ಒಂದು ಲಾಠಿಯನ್ನೂ ಕೊಂಡೊಯ್ದು ಅಲ್ಲಿ ಸಭೆಯಲ್ಲಿ ಪ್ರದರ್ಶಿಸಿದರಂತೆ' ಸಾಮಾನ್ಯ ವಸ್ತುಪ್ರದರ್ಶನಾಲಯದಲ್ಲಿ ಇದನ್ನು ಮಡಗುವರೆ? ಇವುಗಳಿಂದೇನು ಸಾಮ್ರಾಜ್ಯದ ಮಹತ್ವವು ಸೂಚಿತವಾದೀತೆ'

ಶ್ರೀ. ಧೀರೇಶಚಂದ್ರ ಚಕ್ರವರ್ತಿಯರು

'ನ್ಯೂ ಇರಾ' (ನವಯುಗ) ಎಂಬ ಪತ್ರಿಕೆಯ ಸಂಪಾದಕರು ಇವರು ಮೇಲೊಂದು ಮೊಕದ್ದಮೆ ಇವರನ್ನು ಕೈಗ ಕೋರ್ಟಿಗೆ ಸಿಕ್ಕಿಸಿಯೇ ತಂದರು ಏನೋ ಕಾರಣದಿಂದ ಇವರ ಮೇಲೆ ಕೋಪಗೊಂಡು, ಯುರೋಪಿಯ ಅಫೀಸರೊಬ್ಬರು ಇವರ ಮೋರೆಗೆ ಬಲವಾಗಿ ಒಡೆದರು ಕನ್ನಡಕ ಒಡೆದು ಹೋಯಿತು ಕೈದಿ ಬಿದ್ದರು ಬಂಗಾಳ ಕೌನ್ಸಿಲಿನಲ್ಲಿ ಪ್ರಶ್ನೆಯಾದಾಗ, ಹೋಮ ಮೆಂಬರರು ಹಾಗೆ ಕನ್ನೆಗೆ ಬಡೆದವರ ಹೆಸರನ್ನು ತಿಳಿಸದೆ, ಕೈದಿಗೆ ಸ್ಮೃತಿ ತಪ್ಪಿರಲಿಲ್ಲವೆಂದೂ, ಇಂತಹ ಅತ್ಯಾಚಾರವು ಸರಕಾರಕ್ಕೆ ಒಪ್ಪುವುದಿಲ್ಲವೆಂದೂ ತಿಳಿಸಿದರು ಸ್ಮೃತಿ ತಪ್ಪದೆ ಪೆಟ್ಟು ತಿಂದರೆ, ಅದೊಂದು ತಪ್ಪೇ? ಆಫೀಸರರಿಗೇನೋ ಶಿಕ್ಷೆ ಕೊಟ್ಟಿರುವರಂತೆ, ಒಮ್ಮೆ ರಜೆಯ ಮೇಲೆ ಇಂಗ್ಲೆಂಡಿಗೆ ಗಮನವೆ? ತಿಳಿದಿಲ್ಲ

ಫ್ರೀಮನರ ಅಭಿಪ್ರಾಯ ಹಾಗಿರಲಿ;

ಡಾ। ಪ್ರಿವೆಟ್ ಎಂಬವರು ಇತ್ತೀಚೆಗೆ ಇಲ್ಲಿಗೆ ಬಂದು ಎರಡು ತಿಂಗಳು ದೇಶಸಂಚಾರ ಮಾಡಿದವರು, ಇವರೂ ವೈಸ್ರಾಯರನ್ನು ಕಂಡಿದ್ದರಂತೆ 'ಶಸ್ತ್ರಧಾರಿಗಳಲ್ಲದ ಪೋಲಂಕಿಯರ ಮೇಲೆ ಪೋಲೀಸರು ಲಾಠಿಗಳನ್ನು ಪ್ರಯೋಗಿಸುತ್ತಿದ್ದರೆಂದು ವೈಸ್ರಾಯರಿಗೆ ತಿಳಿದಿರಲಿಲ್ಲ' ಎಂಬುದೇ ಇವರಲ್ಲಿ ಆಶ್ಚರ್ಯವನ್ನುಂಟು ಮಾಡಿರುವುದು 'ಇಂತಹ ಅಜ್ಞಾನವು ಶೋಚನೀಯವಲ್ಲವೆ?' ಎಂದು ಪ್ರಿವೆಟರು ಎನ್ನುತ್ತಾ, 'ಜನವರಿ

ನೋಟಗಳು

NOTE ...S

ಕಾಶಿಯಲ್ಲಿ ದೇಶಸೇವಿಕೆಯರನ್ನು ಬಂಧಿಸಿದ ಪೋಲೀಸರು ಅತ್ಯಾಚಾರ ಮಾಡಿದರೆಂಬ ಆರೋಪವು ಸರಕಾರಕ್ಕೆ ತಿಳಿದು ವಿಚಾರವಾಯಿತು, ಒಬ್ಬ ಹೆಡ್ ಕೊನ್ಸಟೇಬಲನೂ, ನಾಲ್ಕಾರು ಜವಾನರೂ ತಪ್ಪಿತಸ್ಥರೆಂದು ಇಲಾಖಾ ತೀರ್ಮಾನವಾಗಿ, ಈಗ ಇವರ ತಪ್ಪಿತದ ವಿಷಯ ಸಾಕ್ಷ್ಯ ಹೇಳಲು ಬಲ್ಲವರು ಬನ್ನಿರೆಂದು ಜಿಲ್ಲಾ ಕಲೆಕ್ಟರರ ಆಮಂತ್ರಣ ಕಾಶಿಯು ಈ ಶತಮಾನದಲ್ಲಾದರೂ ಪುಣ್ಯ ಪವಿತ್ರವಾದ ಭೂಮಿ, ಮದ್ರಾಸು ಹೆಸರಿಗೆ ಮಾತ್ರ ಚೆನ್ನ ಪಟ್ಟಣ!

• • • •

'ಬಾಯ್ ಇಂಡಿಯನ್ ಲೀಗ್' ಎಂದು ಸ್ವದೇಶಿ ಸಂಘಗಳಿಗೆ ಹೆಸರಿಡುವ ಬದಲಾಗಿ ಇಂಡಿಯನ್ ಬಾಯ್ ಲೀಗ ಎಂದು ಹೆಸರಿಡುವುದುತ್ತಮವೆಂದು ಮುಂಬಾಯಿ ಪೋಲೀಸ್ ಕಮಿಶನರರ ಹೊಸ ಇಸ್ತಿಹಾರದ ತಾತ್ಪರ್ಯಾಭಿಪ್ರಾಯಾನುಭವ ಕೌತುಕ!

• • • •

ಕೊಂಗ್ರೆಸ್ ಸಭೆಯ ೪೭ನೇ ಅಧಿವೇಶನವು ಪುರಿಯಲ್ಲಿ ಸೇರಬೇಕಾಗಿತ್ತು, ಸೇರದೆ ಇನ್ನು ಡೆಲ್ಲಿಯಲ್ಲೇ ಸೇರುವುದು ಪಂಡಿತ ಮಾಲವೀಯರೇ ಅಧ್ಯಕ್ಷರಾಗುವರು ೪೭ನೇ ಸಭೆ ಡೆಲ್ಲಿಯಲ್ಲಿ ಸೇರುವಾಗ ಅಲ್ಲ್ ಜಾಗಕ್ಕೆ ಬಂದರೂ—ಕೊಂಡರೆ ಪಾಪ್ರ ಜಾಗ್ರತೆ ಅವರು ಕೇಂದ್ರದಿಂದ ದೂರವಾಗಿರಲಿ

• • • •

ಯುರೋಪಿಯನ್ ಸಂಘದ ಮಿಸ್ಟರ್ ಸಾಹೇಬರಿಗೆ ದಾಕ್ಷರ ಬೋಧ 'ನಡೆಯುವ ಪಲಾಯಿತಿಗೆ ಇಲ್ಲಿ ಸರಕಾರದ ಬಲಗೈಯಲ್ಲಿ ಲಾಠಿ ಕೊಟ್ಟುಕೊಳ್ಳಲು ಕಲಿಸಿಕೊಟ್ಟ ಇವರು ಪ್ರಾರಂಭದಿಂದ ವಿಮಾನ ಸಂಚಾರಿಗಳಾಗಿಯೇ ಇರಲು ಇನ್ನು ಮುಂದಾಲದ ಸಂಬಂಧಗಳೇ ಏನು ತೊಡಗುವಾಗ, ಇಂಗ್ಲೆಂಡಿನ ನಿರ್ಮಲ ವಾತಾವರಣದಲ್ಲಿ ಹಿಂದೀಯರ ವಿಷಯ ವಿಷವಾತವನ್ನಿಷ್ಟು ಬೀಸದೇನೆ ಇವರನ್ನುತ್ತಾರೆ, 'ವ್ಯಾಪಾರಕ್ಕಾಗಿ ಅಲ್ಲ' ಇರುವೆನು ಪತ್ರಿಕೆಗಳಲ್ಲದೆ ರಾಜಕೀಯ ವಿಚಾರಗಳಿಗೆ ಅಲ್ಲಿರುವರು—ಅದರೂ ಪಾರ್ಲಿಮೆಂಟಿಗೆ ಸೇರಬೇಕೆಂದರೆ, ಮೊದಲು ತಂದಾಗದೆ ಎಂದು ಡಾಕ್ಟರರ ಸರ್ಟಿಫಿಕೇಟು ಬೇಕೆ?

• • • •

ಲೋಧಿಯನ್ ಸಾಹೇಬರ ಹಿಂದಿಗೆ' ಎಂದು ಕೊಂಗ್ರೆಸ್ ಪಕ್ಷದವರ ಕೂಗು 'ಅಂತರ್ಗಾಮಾರ್ಗೇ ಹಿಂದಿರುಗಿ' ಎಂದು ಸಾರ್ವಜನಿಕ ಕೂಗು ತಾವೇ ತಪ್ಪು ಮನೆಯಲ್ಲಿ ಜರಗುವ ಓಟಾಧಿಕಾರ ಲೋಧಿಯನ್ ಪದ್ಧತಿಗಳೇ ಸೇರಿದಾಗ, ಚಿಂತಾವ ಪರ್ಯಾಯ ಪ್ರವೇಶ ದೊರೆಯುವಂತಿರಾಯಿತು ಮರುದಿನ, ಈ ಕ್ರಮಾಂಕ್ಕೆ ಸರಕಾರದ ಸಿದ್ಧತೆಯವರೇ ಮಾಡಿ ಸೂಚಿಸಿದರು ಅಂತರಾಮ್ಯದವರು, ಲೋಧಿಯನ್ ಕಮಿಟಿ ಮೆಂಬರರಾಗಿ, ಉದಾರ ಪಕ್ಷದವರಾಗಿ, ಓಟಿನಾಧಿಕಾರ ಹೋಗಲಾರದುದಕ್ಕಾಗಿ ಮರು ಸೂಚಿಸಿದರು

• • • •

ಪಂಜಾಬಿನ ಗವರ್ನರರು, ಸಮಾಚಾರಸ್ವಾಯ ಪ್ರಾತಿನಿಧ್ಯ! ಎಂಬ ವಿಷಯವನ್ನು ಬಲ ದೂರ ಎಗೆ ಎಳೆಯದಿರಿ! ಎಂದು ಲೋಧಿಯನ್‌ರವರ ಉಪದೇಶ ಲೋಧಿಯನರು ಬೆನ್ನು ತಟ್ಟದ ಕೌಂಸಿಲನ್ನು ಕರೆದು, ಅವರ ಅಭಿಪ್ರಾಯ ಉತ್ತಮವಿದೆ

• • • •

ಕೌಕತರು ಮುಸ್ಲಿಮ ಬಲಂಟಿಯರನ್ನು ತಂಬೇತಿಗೆ ಹುಟ್ಟಿರುವರು, ಕೊಂಗ್ರೆಸ್ಸಿನವರು ವಿದೇಶಿವಸ್ತ್ರ ಬಹಿಷ್ಕಾರಕ್ಕೆ ತೊಡಗಿದರು ಈ ಬಲಂಟಿಯರು ಎಂದು ಪಿಕೆಟ್ ಮಾಡುವರು' ಲಾಹೋರಿನ ಪೋಲೀಸರು ಒಬ್ಬ ಕೊಡಬಹುದಾಗಿ ಕಮಿಶನರು ಆಲೋಚಿಸುತ್ತಿರಬೇಕು ಸರೋಜಿನಿ ದೇವಿಯವರಿಗೆ ಕೌಕತರ ನೋಟೀಸು, ಕೌಕತರು ಈ ಬಗೆಯ ಗಲಭೆ ಸೆಕ್ಷನು ಜಾರಿ ಮಾಡುವರು, ಇನ್ನು ಒರ್ಡಿನೆನ್ಸು ಹೊರಡಿಸುವರು. ಆದರೂ ಒಮ್ಮೆ ಶಾಂತ ಪ್ರಿಯರು, ಶಾಂತಿಗಾಗಿ ಜೀವಕೊಡಲೂ ಸಿದ್ಧರು!

ಅಂತ್ಯದೊಳಗೆ ಈ ಪರಿಸ್ಥಿತಿಯು ಕೊನೆಗಾಣುವುದಾಗಿ ಸರಕಾರವು ಎಷ್ಟು ಎಚ್ಚರಿಕೆಗೆ ಆರಂಭಿಸಿತು ಆ ಎಚ್ಚರಿಕೆ ತಪ್ಪುವುದಾಗಿ ಅವರು ಭಾವಿಸಿರಲಿಲ್ಲ ಹಿಂದೀಯರು ಇಂಗ್ಲಿಷರನ್ನು ದ್ವೇಷಿಸುವುದಿಲ್ಲ ಇದೇ ರೀತಿ ದಬ್ಬಾಳಿಕೆ ನಡೆದರೆ ಹಾಗೇನೂ ಆಗಬಹುದು ಇಂಗ್ಲೆಂಡಿನಲ್ಲಿರುವವರಲ್ಲಿ ತೀರ ಕಡಿಮೆ ಜನರು ಮಾತ್ರ ಇಲ್ಲಿನ ಯಥಾರ್ಥ ಸ್ಥಿತಿ ತಿಳಿದಿರುವರು, ಆದರೆ ಈಗಣ ರೀತಿಯನ್ನು ನೋಡಿದ್ದಲ್ಲಿ ಪ್ರತಿ ಬ್ರಿಟಿಷನೂ ನಾಚಿಕೆಗೊಳ್ಳುವ ಸಂದರ್ಭ" ಎಂದೂ ಕೂಡಿಸಿ ಹೇಳಿರುವರು

1. Good Riding Quality.
2. Gripping Tread
3. Economical wear.
4. Maximum Resistance to shock

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

I N

A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ;
ಸ್ತ್ರೀ ಸಮಾಜದ ಉದ್ಧಾರ ೬
ಸ್ಫುಟವಿಚಾರಗಳು . . . ೭
ನೋಟಗಳು . . . . ,,
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೮
ಒಳದೇಶ ವರ್ತಮಾನ ೮
ದಕ್ಷಿಣ ಕನ್ನಡ— ಮಂಗಳೂರು, ಮುಲ್ಕಿ, ಉಳ್ಳಾಲ, ಪೊಗ್ಗ
ಉಡ್ಪಿ, ಪುತ್ತೂರು, ಫರಂಗಿಪೇಟೆ, ಕಾಪು, ಕಟಪಾಡಿ ೯
ವಿವಿಧ ಸಮಾಚಾರಗಳು . . ೧೦
ಟೀಚಿಂಗ್ ಗ್ರಾಂಟಿನ ಅಪಾರವಾದ ಕಡಿತದ ಬಗ್ಗೆ ಸರಕಾರಕ್ಕೆ
ಬರಕೊಂಡ ಮನವಿಯ ಸಾರಾಂಶ . ೧೨
ಸಂಘದ ಪ್ರಯೋಜನಗಳು ,,
ಗಾಂಧಿಜಿಯವರನ್ನು ಅಮೇರಿಕದವನೊಬ್ಬನು ಭೇಟಿಯಾದಾಗ ೧೩
ಸತ್ಯಾಗ್ರಹ ಸಮಾಚಾರ . ೧೮

ಸ್ವದೇಶಾಭಿಮಾನಿ.

ತಾ. ೮ನೇ ಶುಕ್ರವಾರ ಎಪ್ರಿಲ್ ೧೯೩೨

ಸ್ತ್ರೀ ಸಮಾಜದ ಉದ್ಧಾರ.

ಲೇಖಾಂಕ ೧

ಕಳೆದ ಆದಿತ್ಯವಾರದ ಸಾಯಂಕಾಲ ಗವರ್ನಮೆಂಟ್ ಕೊಲೇಜಿನಲ್ಲಿ ಒಂದು ಇಂಗ್ಲೀಷು ನಾಟಕವು ಅಭಿನಯಿಸಲ್ಪಟ್ಟಿತು. ಮಂಗಳೂರು ಶಹರಿನಲ್ಲಿ ಆಗಾಗ್ಯೆ ಹಲವು ನಾಟಕಗಳು ಅಭಿನಯಿಸಲ್ಪಟ್ಟಿರುವುವು. ಆದರೆ ಈ ನಾಟಕವು ಅಂತಹವುಗಳಂತಲ್ಲ. ಈ ನಾಟಕಕ್ಕೆ ಆಧಾರವು The Mangalore Dramatic Society ಎಂಬುದು. ಈ ಸಂಘವು ನೂತನವಾಗಿ ರಚಿಸಲ್ಪಟ್ಟಿದ್ದು. ಇದರ ಪೋಷಕರು ನಮ್ಮ ಜನಪ್ರೀತ ಜಿಲ್ಲಾ ಕಲೆಕ್ಟರ ದೊರೆಗಳು. ಇದರ ಅಧ್ಯಕ್ಷರು ನಮ್ಮ ಜಿಲ್ಲೆಯ ಮಾನ್ಯ ಜಡ್ಜರು. ಇದರ ಸದಸ್ಯರು ಸರಕಾರೀ ಕಡೆಯಿಂದಲೂ ಜನತೆಯ ಕಡೆಯಿಂದಲೂ ಶ್ರೇಷ್ಠರಾಗಿ ಪರಿಗಣಿಸಲ್ಪಡುವವರು. ಅಭಿನಯಿಗಳು ವಕೀಲರೂ, ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಗಳೂ ಇರುವರು. ಇದರಲ್ಲಿ ಸಹಭಾಗಿಗಳಾಗಿರುವವರು ಉತ್ತಮಮನೆತನದ ಆದರ್ಶ ಸ್ವಭಾವದ ಮಹಿಳೆಯರು. ಆದುದರಿಂದಲೇ ಈ ನಾಟಕದ ವಿಚಾರವನ್ನು ನಾವಿಲ್ಲಿ ಎತ್ತಿದೆವು.

ಮಂಗಳೂರಿನಲ್ಲಿ ಸ್ತ್ರೀಯರ ಸುಧಾರಣೆಯ ಬಗ್ಗೆ ಸರ್ವ ತರದ ಸೌಕರ್ಯಗಳಿವೆ. ಬಾಲಿಕೆಯರ ವಿದ್ಯಾಭ್ಯಾಸಕ್ಕೆ ಸಾಮಾನ್ಯ ಶಾಲೆಗಳಿವೆ, ಹೈ ಸ್ಕೂಲು ವಿದ್ಯಾಭ್ಯಾಸಕ್ಕೆ ಹೈ ಸ್ಕೂಲೊಂದು ಇದೆ. ಪ್ರೌಢ ವಿದ್ಯಾಭ್ಯಾಸಕ್ಕೆ ಬಿ. ಎ. ವರೆಗೆ ಶಿಕ್ಷಣ ಕೊಡುವ ಕೊಲೇಜೊಂದಿದೆ. ಮಾತ್ರವಲ್ಲ ಹಲವು ಕ್ಲಬ್ಬುಗಳೂ ಸಭೆಗಳೂ ಇವೆ. ಅಲ್ಲದೆ ಸ್ತ್ರೀ ಸಮಾಜಕ್ಕೆ ಅವಿಶ್ರಾಂತ ಮುಂದಾಳುತನವನ್ನು ತೋರಿಸಬಲ್ಲ ಉತ್ಸಾಹೀ ಮಹಿಳೆಯರೂ ಹಲವರಿರುತ್ತಾರೆ. ಆದುದರಿಂದ ಸ್ತ್ರೀ ಸಮಾಜದ ಸುಧಾರಣೆಯಾಗಲಿ, ಉದ್ಧರಣೆಯಾಗಲಿ ಇಲ್ಲಿ ಆಗಲು ತುಂಬಾ ಅವಕಾಶವಿದೆ.

ಈ ವರೆಗಿನ ಇಂತಹ ಉದ್ಧರಣೆಯ ಕಾರ್ಯಗಳು ಬರೇ ಸ್ತ್ರೀ ಸಮಾಜದ ಆವರಣದೊಳಗೇನೇ ಇದ್ದುವು. ಮುದ್ದಿನ ಆವಶ್ಯಕತೆಯಿದ್ದಾಗ ಮಾತ್ರ, ಅಂತಹ ಸಹಾಯವನ್ನು ಹೊಂದಲಿಕ್ಕೆ ಈ ಆವರಣವು ಹೊರಗೆ ಕಂಡುಬರುತ್ತಿತ್ತು. ಆದರೆ ಇತ್ತೀಚೆಗೆ ಸ್ತ್ರೀಯರೂ ಪುರುಷರೂ ಸಮವಾಗಿ ಕಲೆತು ಸ್ತ್ರೀಯು ತನ್ನ ಸಮಾನತೆಯನ್ನು ಸಾರಬೇಕೆಂಬ ಉತ್ಸುಕತೆಯು ಬೆಳೆಯುತ್ತಾ ಬರುತ್ತಿದೆ. ಮುನ್ಸಿಪಲ್ ಕೌನ್ಸಿಲಿಗೆ ಮೆಂಬರರು, ಹೊನರರಿ ಬೆಂಚ್‌ಮೆಜಿಸ್ಟ್ರೇಟರು, ಎಮ್. ಎಲ್. ಸಿ. ಚುನಾವಣೆಗೆ ಉಮೇದ್ವಾರರು, ಇತ್ಯಾದಿ ರೂಪದಲ್ಲಿ ಈ ಉತ್ಸುಕತೆಯ ಲಕ್ಷಣಗಳು ಕಂಡುಬರುತ್ತಿದ್ದು ಈಗ ಈ ಉತ್ಸುಕತೆಯು ಪೂರ್ಣಪಕ್ಷವನ್ನು ಹೊಂದುತ್ತಿದೆ. ಮಿಶ್ರಸಂಘಗಳು, ಮಿಶ್ರ ನಾಟಕಗಳು, ಮಿಶ್ರ ಟೆನ್ನಿಸ್ ಪಂದ್ಯಾಟಗಳು, ಇವು ಇತ್ತೀಚೆಗೆ ಬಹಳವಾಗಿ ಜನಜನಿತವಾಗುತ್ತಿವೆ.

ಕಾಲಮಾನದಿಂದ ಕಟ್ಟಿಬಂದು ಹಳೆಯ ಕಟ್ಟಳೆಗಳನ್ನು ಕಡಿದು ಹಿಂದೀ ಸ್ತ್ರೀ ಶಕ್ತಿಯು ಉನ್ಮುಕ್ತತೆಯನ್ನು ಹೊಂದುವುದು ಸಂತೋಷಕರವೇ ಸರಿ. ಆದರೆ ಈ ಕಟ್ಟಳೆಗಳನ್ನೊಡೆಯಲಿಕ್ಕೆ ಪಾಶ್ಚಾತ್ಯರೇ ನಮಗೆ ಆದರ್ಶವಾಗಿರಬೇಕೇ ಎಂದೊಂದು ಪ್ರಶ್ನೆ. ಆದರೆ ಪ್ರಶ್ನೆಗಳಿಂದ ಫಲವಿಲ್ಲ. ಸುಧಾರಣೆಯ ರಥವನ್ನು ನಾವು ತಡೆಯಲಾರೆವು. ತಡೆಯುವುದೂ ನಮ್ಮ ಉದ್ದೇಶವಲ್ಲ. ಆದರೆ, ಈ ಸುಧಾರಣೆಯ ಮೆಟ್ಟನ್ನು ಹತ್ತಿ ನಾವು ಆಗಾಗ ಹತ್ತಿದ ಮೆಟ್ಟುಗಳ ಮತ್ತು ಹತ್ತಲಿರುವ ಮೆಟ್ಟುಗಳ ವಿಮರ್ಶೆಯನ್ನು ಮಾಡಲಿಕ್ಕೆ ಒಂದಿಷ್ಟು ತಡೆದು ನಿಲ್ಲುವ ಎಂದೆನ್ನಿಸುತ್ತದೆ.

ಸ್ತ್ರೀಯರು ಪುರುಷರೊಡನೆ ಏಕೆ ಕಲೆತು ಕೆಲಸ ಮಾಡಬಾರದು? ಮಾಡಬಾರದೆಂದರೆ ಪರಿಹಾಸಕ್ಕೆ ಬೀಳುವ ದಿನಗಳವು. ಪಾಶ್ಚಾತ್ಯರಲ್ಲಿ ಎಷ್ಟು ಸುಧಾರಣೆಯಾಗಲ್ಲ! ನಿತ್ಯದ ಜೀವನ ಕ್ರಮದಲ್ಲಿ ಸ್ತ್ರೀಯರಿಗೂ ಪುರುಷರಿಗೂ ಭೇದವೇ ಇಲ್ಲ. ಅನ್ಯವಾಗ ನಾವು ಅನಾಗರಿಕ ಬರ್ಬರಾಗಿಯೇ ಇರಬೇಕೇ? ಅವರಲ್ಲಿ ನಗ್ನತೆಯ ತತ್ವಗಳೂ ಜಾರಿಗೆ ಬಂದು ಅಲ್ಲಿ ಕೂಡ ಮಿಶ್ರ ಸಂಸರ್ಗವು ಸಹಜವೆನಿಸಲ್ಪಡುತ್ತಿದೆ. ಜರ್ಮನಿ, ಫ್ರಾನ್ಸ್ ಅಮೇರಿಕಾ ಮೊದಲಾದ ದೇಶಗಳಲ್ಲಿಯ Sun Ray Club ಗಳ ಇತಿಹಾಸವನ್ನು ಓದಿರಿ.

ಹಿಂದೀ ಪ್ರಾಚೀನತೆಯು ಸ್ತ್ರೀಯರಿಗೆ ವಿಧಿಸಲ್ಪಟ್ಟ ಸಂಪೂರ್ಣ ಪಾರತಂತ್ರ್ಯದಿಂದ Sun Ray Club ಮತ್ತು Free loveನ ಸಂಪೂರ್ಣ ಸ್ವಾತಂತ್ರ್ಯದ ವರೆಗೆ ಹಲವು ಮೆಟ್ಟುಗಳಿವೆ. ಒಂದು ಮೆಟ್ಟಿನಿಂದ ಇನ್ನೊಂದು ಮೆಟ್ಟಿಗೆ ಇರುವ ಅಂತರವು ಒಂದೇ, ಒಂದೇ ತರ್ಕ ಸರಣಿ. ಪಾರತಂತ್ರ್ಯವು ಹೇಗೂ ಹಾನಿಕರವೆಂದು ಸರ್ವಸಮ್ಮತವಾಗಿದೆ. Free love, Sun Ray Club ಈ ಚಳವಳಗಳು ಹಾನಿಕರವೆಂತಾದರೆ, ತರ್ಕದಿಂದಲೇ ಸ್ತ್ರೀಪುರುಷ ಸಮಾಜಗಳ ಸಂಬಂಧಗಳನ್ನು ನಿರ್ಣಯಿಸಲಾಗುವುದಿಲ್ಲವೆಂದು ಒಪ್ಪಬೇಕಾಗುತ್ತದೆ. ಹಾಗೆ ಒಪ್ಪಿದರೆ, ಯಾವುದೋ ಒಂದು ಸುಧಾರಣೆಯ ಮೆಟ್ಟನ್ನು ಆ ಸುಧಾರಣೆಯ ಅಖೈರಿಯಾಗಿ ನಿರ್ಣಯಿಸಬೇಕಾಗುತ್ತದೆ. ಆ ಮೆಟ್ಟು ಯಾವುದು?

ವಿದೇಶ ವರ್ತಮಾನ.

— ಕೊಡಕ್ ಫೋಟೊ ಕೆಮರದ ಸಂಶೋಧಕನಾದ ಮಿಸ್ಟರ್ ಜೋರ್ಜ್ ಈಸ್ಟ್‌ಮೇನ್ ಎಂಬ ಮಿಲಿಯಾಧಿಪತಿಯೂ, ಸ್ವೀಡನ್ ಬೆಂಕಿಪೆಟ್ಟಿಗೆಯ ಧನಸ್ವಾಮಿಯಾದ ಇವಾರ್ ಕ್ರ್ಯುಗರ್ ಎಂಬ ಮಿಲಿಯಾಧೀಶನೂ ಕಳೆದ ತಿಂಗಳಲ್ಲಿ ಅವರವರ ಊರಿನಲ್ಲಿ ಗುಂಡು ಹಾಕಿಕೊಂಡು ಮರಣವನ್ನೈದಿದರಷ್ಟೆ. ಪ್ರಪಂಚದಲ್ಲಿ ಮಹಾಧನಿಕರೆಂದೆಣಿಸಲ್ಪಟ್ಟಿದ್ದ ಇವರಿಬ್ಬರೂ ಅವಿವಾಹಿತರಾಗಿದ್ದುದರಿಂದಲೇ ಇವರ ಕಷ್ಟದಿನಗಳಲ್ಲಿ ಸಹಾನುಭೂತಿಯನ್ನು ತೋರುವವರು ಯಾರೂ ಇಲ್ಲದಿದ್ದುದರಿಂದಲೂ ಇವರು ಇಂತಹ ಮರಣದ ದಾಯಿಗೆ ತುತ್ತಾದರೆಂದು ಟ್ರೆವರ್ ಎಲ್ಲಿನ್ ಎಂಬವರೊಬ್ಬರು ಒಂದು ಲೇಖನದಲ್ಲಿ ಬರೆದಿರುತ್ತಾರೆ.

— ಲಂಡನಲ್ಲಿಯ ಸಲ್‌ಫೋರ್ಡ್ ಎಂಬಲ್ಲಿ ಎಲ್ಲಿನ್ ಎಡ್‌ಮಂಡ್‌ಸನ್ ಎಂಬೊಬ್ಬ ವರ್ತಕ ಮಹಿಳೆ. ಇವಳು ಒಮ್ಮೆ ಐರ್ಲ್ಯಾಂಡಿನ ಹೊಸ್ಪಿಟಲ್ ಸ್ವೀಪ್‌ಸ್ಟೇಕ್ ಟಿಕೇಟ್ ಪಡೆದಳು. ದೈವವಶಾತ್ ಅವಳಿಗೆ ೬೦೦ ಪೌಂಡುಗಳು ದೊರೆತುವು. ಸಿಕ್ಕಿದ ಹಣವನ್ನು ಯಾರಾದರೂ ಅಪಹರಿಸುವರೆಂದು ಭಾವಿಸಿ ಅವಳು ಹೆದರಿ, ತನ್ನ ಮನೆಯ ಭದ್ರವಾದ ಕೋಣೆಯೊಂದರಲ್ಲಿ ಇದ್ದಳು. ಕಳೆದ ವಾರ ಅವಳ ಬೇಕರಿಯ ಬಾಗಿಲು ಕೋಣೆಯ ಬಾಗಿಲೂ ಒಳಗೂ ಹಾಕಿರುವುದನ್ನು ನೋಡಿ ಕೆಲವರಿಗೆ ಆಶ್ಚರ್ಯವಾಯಿತು. ನಾಲ್ಕು ಕಡೆ ಗಳಲ್ಲಿಯೂ ಕೋಣೆಗೆ ಬಾಗಿಲು ಹಾಕಿತ್ತು. ಅವುಗಳನ್ನು ಒಡೆದು ಒಳಹೊಕ್ಕು ನೋಡುವುದೇನು? ಎಲ್ಲಿನಳು ಹಣದ ರಾಶಿಯಲ್ಲಿ ಸತ್ತು ಕೊಳೆಯುತ್ತಿದ್ದಳು.

— ಇರಾಕ್ ಮರುಭೂಮಿಯಲ್ಲಿ ಸಾರ್ಜೆಂಟ್ ಹರ್ಬರ್ಟ್ ಹಿಟ್ಸನ್ ಎಂಬ ಬ್ರಿಟಿಷ ವೈಮಾನಿಕನೂ ಅವನ ಸಂಗಾತಿಯೂ ವಿಮಾನದಲ್ಲಿ ಹಾರಿಕೊಂಡು ಬರುತ್ತಿದ್ದರು. ಕೆಲವು ಅರಬೀಯ ಪುಂಡರು ವಿಮಾನಕ್ಕೆ ಗುಂಡು ಹಾರಿಸಿ ಅದನ್ನು ನೆಲಕ್ಕುರುಳಿಸಿದರು. ಹರ್ಬರ್ಟನು ಮಡಿದನು. ಸಂಗಾತಿಯು ಗಾಯಗೊಂಡನು.

+ + + +

ಒಳದೇಶ ವರ್ತಮಾನ

— ಮಧುರೆಯ ಅರತ್ಯಪತ್ತಿ ಹಳ್ಳಿಯಲ್ಲಿ ೧೮ ವರ್ಷದ ತರುಣಿಯನ್ನು ಒಬ್ಬ ಯುವಕನು ಪ್ರೀತಿಸಿದನು. ಆದರೆ ಮನೆಯವರು ಅವಳನ್ನು ಪ್ರೀತಿಸಿದವನಿಗೆ ಕೊಡದೆ ಇನ್ನೊಬ್ಬನಿಗೆ ಕೊಟ್ಟು ಮದುವೆ ಮಾಡಿದರು. ಮದುವೆಯು ಜರಗಿಹೋದ ಮೂರು ದಿನದಲ್ಲಿ ಯುವಕನು ಒಂದು ಕತ್ತಿಯಿಂದ ಯುವತಿಯನ್ನು ಇರಿದು ಕೊಂದನು. ಪ್ರಣಯಭಂಗದ ಮಹತ್ವವದಂತೆ.

— ಕಲ್ಕತ್ತದ ಡಂ ಡಂ ಸೆರೆಯಿಂದ ಸ್ಪೆಶಲ್ ಜೈಲಿಗೆ ಇಬ್ಬರು ರಾಜಕೀಯ ಕೈದಿಗಳಿಗೆ ಬೇಡಿ ಹಾಕಿ ಕೊಂಡೊಯ್ಯುತ್ತಿದರು. ರೈಲ್ವೆ ಸ್ಟೇಶನಿನಲ್ಲಿ ಗಾಡಿಯನ್ನು ಹತ್ತುತ್ತಿರುವಾಗ ಇವರಿಬ್ಬರೂ ಕೆಳಗೆ ಬಿದ್ದು ಬಿಟ್ಟು ಒಬ್ಬನಿಗೆ ವಿಶೇಷ ಜಖಂ ಆಯಿತು. ಇಬ್ಬರಿಗೂ ಚಿಕಿತ್ಸೆ ನಡೆಯುತ್ತಿದೆ.

— ಪಂಡಿತ ಜವಾಹರಲಾಲರು ಆನಂದ ಭವನದ ತನ್ನ ಆಸ್ತಿಯ ಮೇಲೆ ೩೦ ರೂಪಾಯಿ 'ವಿಮುಕ್ತ ಬಾಡಿಗೆ'ಯನ್ನು ಕೊಡಬೇಕೆಂದು ನೋಟೀಸು ಇತ್ತು. ಜವಾಹರಲಾಲರು ಆ ಹಣವನ್ನು ಕೊಡಲು ತಿರಸ್ಕರಿಸಿದರು. ಅವರು ಹಾಗೆ ತಿರಸ್ಕರಿಸಿದ ಮರುದಿನ ತಹಶೀಲ್ದಾರರಿಗೆ ಯಾರೋ ಅನಾಮಧೇಯರು ಆ ೩೦ ರೂಪಾಯಿಗಳನ್ನು ಟಪ್ಪಾಲು ಮೂಲಕ ರವಾನಿಸಿದರೆಂದು ತಿಳಿದುಬರುತ್ತದೆ.

— ರಾಜಶಾಹಿಯ ಡಾ। ಸುಧೀರ್‌ನಾಥ ಸರ್ಕಾರ್ ಇವರ ಪತ್ನಿಯು ಕಳೆದ ವಾರ ಅಡಿಗೆಕೋಣೆಯಲ್ಲಿ ಹಾಲು ಕಾಯಿಸುತ್ತಿದ್ದಾಗ ವಸ್ತ್ರಕ್ಕೆ ಬೆಂಕಿ ತಗಲಿ ಆಸ್ಪತ್ರೆಯಲ್ಲಿ ಮಡಿದಳು. ಇದರಿಂದ ವ್ಯಥೆಗೊಂಡ ಮೇಲಿನ ಡಾಕ್ಟರರು ಮರುದಿನ ವಿಷ ಕುಡಿದು ಪ್ರಾಣತ್ಯಾಗ ಮಾಡಿದರು.

— ಪಂಡಿತ ಮದನಮೋಹನ ಮಾಲವೀಯರು ದಿಲ್ಲಿಗೆ ಹೋದುದು ರಾಜಿಯ ಪ್ರಸ್ತಾಪಕ್ಕಾಗಿ ಎಂಬ ವಾರ್ತೆ ಇತ್ತು. ಆದರೆ ಮಾಲವೀಯರು ಆ ಹೇಳಿಕೆಯನ್ನು ತಿರಸ್ಕರಿಸಿ, ಅಂತಹ ರಾಜಿಯಾಗುವ ಚಿಹ್ನೆಯೇ ಕಂಡುಬರುವುದಿಲ್ಲ. ನಾನು ಹಿಂದೂ ಮಹಾಸಭೆಯ ಸಂಬಂಧವಾಗಿ ಅಲ್ಲಿ ಹೋದೆನೇ ಹೊರತು ಬೇರೆ ಇಲ್ಲ ಎಂದರು.

— ಅಲ್ಲಗಡ್ಡವೆಂಬಲ್ಲಿ ಪಂಚಮ ಸ್ತ್ರೀಯೊಬ್ಬಳು ಮೂರು ಮಕ್ಕಳನ್ನು ಹಡೆದಿರುವಳು. ತಾಯಿಯೂ ಮಕ್ಕಳೂ ಸುಖವಾಗಿಯೇ ಇರುವರು.

— ಪೋರ್ ಬಂದರಿನ ಮಹಾರಾಜರ ಮುಂದಾಳುತನದಿಂದ ಹಿಂದೀಯ ಕ್ರಿಕೆಟ್ ಪಂಗಡವೊಂದು ಇಂಗ್ಲೆಂಡಿನಲ್ಲಿ ಪಂದ್ಯಾಟ ನಡೆಸಲು ಹೋಗಲಿದೆ. ದೇಶದ ಪ್ರಸ್ತುತದ ಸ್ಥಿತಿಯ ಬಗ್ಗೆ ಮುಂಬಾಯಿಯ ಇಬ್ಬರು ಸುಪ್ರಸಿದ್ಧ ಆಟಗಾರರು ಆ ಪಂಗಡದೊಡನೆ ಹೋಗರಲ್ಲ.

— ಕೊಂಗ್ರೆಸ್ಸಿನವರು ಕಾಯಿದೆಭಂಗ ಚಳವಳವನ್ನು ಪ್ರೋತ್ಸಾಹಿಸ ಪ್ರಚಾರ ಮಾಡುವುದಿಲ್ಲವೆಂದು ಮಾತುಕೊಟ್ಟರೆ ಸರಕಾರವು ಈ ಸಾರಿಯ ೪೭ನೇ ಅಧಿವೇಶನವು ಜರಗಲು ಸಮ್ಮತಿಸುವುದೆಂದು ಸುದ್ದಿ.

— ಜೇಕಬ್ ಕೆಲ್ಲಿ ಎಂಬ ಸೈನಿಕನೊಬ್ಬನು ಕಳೆದ ೩ ತಿಂಗಳ ಹಿಂದೆ ಒಂದು ಮೋಟಾರ್ ಕಾರನ್ನು ಓಡಿಸಿ ಅದರ ಡ್ರೈವರನ ಅಂಗಿ ಮುಂತಾದುವನ್ನು ಬಿಚ್ಚಿ ತೆಗೆದುಕೊಂಡು, ವೇಷವಲ್ಲಟಿಸಿ ಪಲಾಯನ ಮಾಡಿ ಸಿಕ್ಕಿದ್ದನಷ್ಟೆ. ಅವನಿಗೆ ಮೊನ್ನೆ ೭ ವರ್ಷಗಳ ಸಜೆಯು ವಿಧಿಸಲ್ಪಟ್ಟಿತು.

— ಡಾಕ್ಟರ್ ಅಂಬೆಡಕರರ ಪ್ರತ್ಯೇಕ ಮತದಾನ ವಾದವು ಮುರಿದುಬಿದ್ದು ಶ್ರೀ ಮುಂಜೆ ಮತ್ತು ಶ್ರೀ ರಾಜಾ ಎಂಬವರ ಸಮರ್ಥನದ ಮೇರೆಗೆ ಎಲ್ಲಾ ಪತಿವರ್ಗದವರು ಜತೆ ಮತದಾನವನ್ನು ಸ್ವೀಕರಿಸಿರುವರು. ಡಾಕ್ಟರ್ ಅಂಬೆಡಕಾರರು ಈಗ ಒಬ್ಬಂಟಿಗರಾಗಿದ್ದಾರೆ.

— ನ್ಯೂಡಿಲ್ಲಿಯ ನ್ಯಾಯವಿಧಾಯಕ ಸಭೆಯ ಹೋಮ್ ಮೆಂಬರರಾಗಿದ್ದ ಸರ ಜೇಮ್ಸ್ ಕ್ರೆರರ್ ದೊರೆಗಳ ಬದಲಿಗೆ ಮಿ. ಹೈಗ್ ಎಂಬವರು ಆ ಆಸನವನ್ನು ಸ್ವೀಕರಿಸಿದರು.

— ಕಲ್ಕತ್ತದ ಸುಪರಿಂಟೆಂಡೆಂಟರಾದ ಜೆ. ಆರ್. ಪಿಲ್ಲಿಪ್ಸರವರು ಗುಂಡು ಹೊಡೆದುಕೊಂಡು ಪ್ರಾಣಬಿಟ್ಟರಷ್ಟೆ. ಅವರ ಕೈಯಲ್ಲಿ ಬಂದೂಕೂ ಹೆಂಡತಿಗೊಂದು ಕಾಗದವೂ ಇದ್ದಿತು.

ಮುಂಬಾಯಿಯ ಸಾಹುಕಾರನೊಬ್ಬನ ಗುಮಾಸ್ತನಾದ ಶ್ರೀ ಚ್ಯೂನಿಲಾಲ್ ಗಾಂಧಿ ಎಂಬವನು ಬೆಂಕ್ ಒಫ್ ಇಂಡಿಯಾದಲ್ಲಿ ಹಣ ಕಟ್ಟಲು ಕೈಯಲ್ಲಿ ೧೦,೨೦೦ ರೂಪಾಯಿಯ ಗಂಟನ್ನು ಹಿಡಿದು ನಿಂತಿದ್ದನು. ಅಷ್ಟರಲ್ಲಿ ಅವನ ಮೂಗಿನ ಬಳಿ ಒಂದು ಕರವಸ್ತ್ರವು ಸಿಲುಕಿತು. ಒಡನೆ ಅವನು ಮೂರ್ಛೆ ತಪ್ಪಿಬಿದ್ದನು. ೧೦,೦೦೦ ರೂಪಾಯಿಯು ಕಾಣೆಯಾಯಿತು.

— ಮುಂಬಾಯಿಯಲ್ಲಿ ದಿವಂಗತ ದಾದಾಭಾಯಿ ನವುರೋಜಿಯವರ ಮೊಮ್ಮಗರಾದ ಶ್ರೀ ಜಾಲ್ ನೌರೋಜಿಯವರು ಮೋಟರ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಅವರ ಮೋಟಾರು ಒಂದು ಎತ್ತಿನ ಗಾಡಿಗೆ ತಗಲಿ ಕವಚಬಿದ್ದು ಜಖಂಗೊಂಡಿರುವರು.

— ತಂಜಾವೂರಿನಲ್ಲಿ "ಬೀಟ್" ಮಾಡುತ್ತಿದ್ದ ರಂಗಸ್ವಾಮಿ ನಾಯ್ಡು ಎಂಬವ ಪೋಲೀಸನು ಕೂಡಲೆಯೇ ಮಡಿದಿದ್ದನು. ಹೃದ್ರೋಗವು ಕಾರಣ.

— ಕಡಲೂರಿನಿಂದ ಬಂದು ವಾರ್ತೆ. ಕಲ್ಲಕ್ಕುರಿಚಿ ಎಂಬಲ್ಲಿಯ ಕಾಂಗ್ರೆಸ್ ಕೆಲಸಗಾರನಾದ ರಾಮಚಂದ್ರನೆಂಬ ಹದಿನೈದು ವರ್ಷ ಪ್ರಾಯದ ಹುಡುಗನೊಬ್ಬನು ಹಸ್ತಪತ್ರಿಕೆಗಳನ್ನು ಹಂಚುವಾಗ ಕೆಲ ಸಮಯದ ಹಿಂದೆ ಪೋಲೀಸರಿಂದ ಹೊಡೆಯಲ್ಪಟ್ಟಿದ್ದನು ಇವನು ಕಡಲೂರಿನ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದನು. ೩ ವಾರಗಳಿಂದಲೂ ಚಿಕಿತ್ಸೆ ನಡೆಯಿತು. ತಾ ೩ನೇ ದಿನ ೧ ಗಂಟೆಗೆ ಮರಣಹೊಂದಿದನು

— ಕಲ್ಕತ್ತದ ಬಳಿ ಮಿಡ್ನಾಪುರವೆಂಬಲ್ಲಿಯ ಟಮ್ಲೂಕ್ ಎಂಬಲ್ಲಿ ಹಳ್ಳಿಯವರು ಕೆಲವರು ಕೂಡಿ ನಿಷಿದ್ಧ ಉಪ್ಪನ್ನು ತಯಾರಿಸುವುದರಲ್ಲಿದ್ದರು ಪೋಲೀಸರು ಲಾಠಿ ಚಾರ್ಜು ನಡೆಸಿದರೂ ಜನರು ಚದರಲಿಲ್ಲ ಗುಂಡು ಹಾರಿಸಲಾಯಿತು. ಒಬ್ಬನಿಗೆ ಗಾಯವಾಗಿದೆಯೆಂದು ತಿಳಿದುಬಂದಿದೆ

— ಡೆಕ್ಕಾನ ವಿಕ್ರಮಪುರದಲ್ಲಿ ಒಬ್ಬ ಪೋಸ್ಟ್‌ಮೇನನು ಕಾಗದ ಬಟವಾಡೆಮಾಡುತ್ತಿದ್ದನು ಅಷ್ಟರಲ್ಲಿ ನಾಲ್ವರು ಸಶಸ್ತ್ರ ಹಸ್ತರಾಗಿದ್ದವರು ಬಂದು ಅವನ ಕಣ್ಣಿಗೆ ಧೂಳೆಸೆದು ಅವನ ಚೀಲದಲ್ಲಿದ್ದ [illegible] ರೂಪಾಯಿಗಳನ್ನು ಲೂಟಿಮಾಡಿ ಒಯ್ದರು. ಪೋರರ ಪತ್ತೆಯಾಗಿರುವುದಿಲ್ಲ

ದಕ್ಷಿಣ ಕನ್ನಡ.

ಮಂಗಳೂರು:— ತಾ ೩ನೇ ದಿನ ಶ್ರೀಯುತ ಟಿ ಪಿ ಕೊಂಬ್ರಬೈಲ್ ಎಂ ಮಹಾಲಿಂಗ ಶೆಟ್ಟಿ [illegible] ಎಂಬವರು ವಸಂತರ ಅಂಗಡಿಯನ್ನು ಪಿಕೆಟ್ ಮಾಡಿದರು. ಪೋಲೀಸರು ಬಂದು ಚದರಲಿಕ್ಕೆ ಹೇಳಿದರು ತಿರಸ್ಕರಿಸುತ್ತಲೆ ಬೆತ್ತದ ಪೆಟ್ಟು ಬಿತ್ತು ಒಬ್ಬೊಬ್ಬನಿಗೆ ಒಬ್ಬೊಬ್ಬ ಪೋಲೀಸನಂತೆ ಹೊಡೆದರು ಇವರೆಲ್ಲರನ್ನು ಸ್ಟೇಷನಿಗೊಯ್ದು ಆ ಮೇಲೆ ಆಸ್ಪತ್ರೆಗೊಯ್ದರು ಶ್ರೀ ಕೊಂಬ್ರಬೈಲರು ಗವರ್ನಮೆಂಟ್ ಕಾಲೇಜಿನಲ್ಲಿ ೩ನೇ ಫೋರ್ಮಿನ ವಿದ್ಯಾರ್ಥಿಯೆಂದು ತಿಳಿದುಬಂದಿದೆ

ಒಮ್ಮೆ ಕೈದು ಮಾಡಲ್ಪಟ್ಟ ಶ್ರೀ ಕೆ ತಿಮ್ಮಪ್ಪ ಶೆಟ್ಟಿ [illegible] ಹೆಯು ಹಿಂದಕ್ಕೆಳೆಸಲ್ಪಟ್ಟು ಬೇಕಾದಾಗ ಕರೆಯುವೆವು' ಎಂದು ಹೇಳಿಬಿಟ್ಟಿರುವರು

ಆದಿತ್ಯವಾರ ಬುಧವಾರ ದಿನಗಳಲ್ಲಿ ಇಲ್ಲಿಯ [illegible] ಯವರ ಅಂಗಡಿಯಲ್ಲಿ ಪಿಕೆಟಿಂಗ್ ನಡೆಯಿತು. ಬೆತ್ತದ ಪೆಟ್ಟು ಬಿದ್ದಿತು

ಇಲ್ಲಿಯ ಉರ್ವದಲ್ಲಿಯೂ ಮಾರ್ಕೆಟಿನ ಮೈದಾನಿನ ಬಳಿ ಸಂಜೆ ಸಾಧಾರಣ ೪ ಘಂಟೆಯಿಂದ ರಾತ್ರೆ ೮—೧೦ ಘಂಟೆಯ ವರೆಗೆ ಹತ್ತಿಪ್ಪತ್ತು ಜನರು ಒಟ್ಟುಕೂಡಿ ದಿನಾಲೂ ಇಸ್ಪೇಟ್ ಆಟ ನಡಿಯುತ್ತದಂತೆ ಇದು ಬರೇ ಇಸ್ಪೇಟು ಆಟವಲ್ಲ ಹಣವಿಟ್ಟು ಆಡುವ ಜುಗಾರಾಟವೂ ಆಗಿದೆ ಬಯಲು ಸ್ಥಳದಲ್ಲಿ ಆಡುತ್ತಿರುವುದರಿಂದ ಅದು ಜುಗಾರಾಟವಾಗಿರಲಿಕ್ಕಿಲ್ಲವೆಂದು ಭಾವಿಸುವ ಅಧಿಕಾರಿಗಳು ನೋಡ ಹೋಗದ ಇಂತಹ ಪದ್ಧತಿಯನ್ನು ಕೂಡಲೇ ಕೊನೆಗಾಣಿಸುವುದುತ್ತಮ.

ಅತ್ತಾವರದಲ್ಲಿಯ ವೃದ್ಧ ನೊಬ್ಬನು ಬಳಿ ೪ ವರ್ಷದ ಮಗುವೊಂದನ್ನು ತೊಡೆಯ ಮೇಲೆ ಕುಳ್ಳಿರಿಸಿ ೧೫ ದಿವಸಗಳ ಹಿಂದೆ ವಿವಾಹ ಮಾಡಿದರೆಂದೂ ಇಲ್ಲಿಯ ಹ್ಯಾಗೆ ಬಜಾರಿನಲ್ಲಿಯ ಪಿ ಓ ಆಲ್ಬುಕರ್ಕರ ಬಂಗಲೆಯ ಹತ್ತಿರ ಚಪ್ಪಗಾರರ ಒಂದು ಮನೆಯಲ್ಲೂ ಅಲ್ಲೇ ಹತ್ತಿರ ಬಿಲ್ಲವರ ಒಂದು ಮನೆಯಲ್ಲೂ ಕಳೆದ ವಾರ ಬಾಲ್ಯವಿವಾಹಗಳು ಜರಗಿದುವೆಂದೂ ತಿಳಿದುಬರುತ್ತದೆ ಶಾರದಾ ಕಾನೂನು ಮಾನ್ಯವಾಗಬೇಕೆಂದಾದರೆ ಈ ಕುರಿತು ಉಪಾಯವಿಲ್ಲವೇ?

ಇಲ್ಲಿಯ ಕೆನರಾ ಹೈಸ್ಕೂಲಿನ ವಿದ್ಯಾರ್ಥಿಯಾದ ೧೪ ವರುಷ ಪ್ರಾಯದ ಶ್ರೀಯುತ ಪಾಂಡುರಂಗ ಪೈ ಎಂಬ ಬಾಲಕನು ಸ್ನೇಹಿತರೊಡಗೂಡಿ ಸಮುದ್ರ ಸ್ನಾನಕ್ಕೆ ಹೋಗಿ ತೆರೆಯ ಸೆಳೆತಕ್ಕೆ ಸಿಲುಕಿ ಮುಳುಗಿಹೋದನು ಶವವು ಮರುದಿವಸ ಪಣಂಬೂರಿನ ಹೊಯಿಗೆಯಲ್ಲಿ ಸಿಕ್ಕಿತು ಇವನು ಪಿರಂಗಿಪೇಟೆ ಸಬ್ ಇನ್ಸ್‌ಪೆಕ್ಟರ್ ಬಿ ವೆಂಕಟೇಶ ಪೈಗಳ ಪುತ್ರ

ಅದ್ವೈತ ಸಮಿತಿ, ದ ಕ. ಮಂಗಳೂರು

ಈ ಸಂಸ್ಥೆಯಿಂದ ಸ್ಥಾಪಿಸಲ್ಪಟ್ಟ ಉಳ್ಳಾಲ ಅದ್ವೈತಾಶ್ರಮದಲ್ಲಿ ಇದೇ ಬರುವ ಮೇ ತಿಂಗಳ ೧೦ಕ್ಕೆ ಸರಿಯಾದ ವೈಶಾಖ ಶುದ್ಧ ಪಂಚಮೀ ದಿವಸ ಜರಗಲಿಕ್ಕಿರುವ ಶ್ರೀ ಆದಿ ಶಂಕರಾಚಾರ್ಯರ ಜಯಂತ್ಯುತ್ಸವದ ಸುಮುಹೂರ್ತದಲ್ಲಿ ಒಂದು ಸಂಸ್ಕೃತ ಪಾಠಶಾಲೆಯು ಪ್ರಾರಂಭಿಸಲ್ಪಡುವುದು ಈ ಸಂಸ್ಕೃತ ಪಾಠಶಾಲೆಯಲ್ಲಿ ಕ್ರಮೇಣ ಅದ್ವೈತ ವೇದಾಂತ ಶಾಸ್ತ್ರಕ್ಕೆ ಸೇರುವರೇ ಅರ್ಹತೆಯನ್ನು ಹೊಂದುವ ಬಗ್ಗೆ ೮ ಜನ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ಅಶನವಸನ ಕೊಟ್ಟು ವಿದ್ಯಾ ವ್ಯಾಸಂಗ ಕೊಡಿಸುವ ಏರ್ಪಾಡನ್ನು ಅದ್ವೈತ ಸಮಿತಿಯ ಕಡೆಯಿಂದ ಮಾಡಿಯದೆ ಆದಕಾರಣ ಸದ್ರಿ ಪಾಠಶಾಲೆಯಲ್ಲಿ ಅಧ್ಯಯನ ಮಾಡಲಿಚ್ಛಿಸುವ ಅದ್ವೈತ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿಗಳು ಇದೇ ಎಪ್ರಿಲ್ ತಿಂಗಳ ತಾರೀಕು ೧೫ರ ಒಳಗೆ ಬಿ ಕೆ ಪಿ. ಶರ್ಮಾ, ಅದ್ವೈತ ಸಮಿತಿಯ ಗೌರವ ಕಾರ್ಯದರ್ಶಿ ಬೋಳೂರು, ಈ ವಿಳಾಸಕ್ಕೆ ನಿವೇದನ ಪತ್ರಿಕೆಗಳನ್ನು ಕಳುಹಿಸಿಕೊಡಬಹುದು.

ಮಂಗಳೂರು ಮುನಿಸಿಪಾಲಿಟಿಯೊಳಗಣ ಕೊಡಿಯಾಲಬೈಲು ವೆಸ್ಟ್ ವಾರ್ಡಿನ ನಗರ ರಚನಾಸ್ಕೀಮಿಗೆ ಸಂಬಂಧಪಟ್ಟ ಮ್ಹಾಲಿಕರ ಒಂದು ಸಭೆಯು ಇದೇ ಎಪ್ರಿಲ್ ತಾ ೧೦ನೇ ಆದಿತ್ಯವಾರ ಅಪರಾಹ್ನ ೩ ಘಂಟೆಗೆ ಸೆಂಟ್ ಲಿಂಡ್‌ಸೇಟೊ ಹುಡುಗಿಯರ ಶಾಲೆಯ ಹೊಸ ಕಟ್ಟೋಣದಲ್ಲಿ ಜರಗುವುದು

ಹಿಂದೀ ವಾತಾವರಣವನ್ನು ಕಲ್ಪಿಸುವುದಕ್ಕೆ ಹಿಂದಿಯಲ್ಲಿ ಮಾತನಾಡುತ್ತ ಅಭ್ಯಾಸವನ್ನು ಬೆಳೆಸುವುದು ಅತ್ಯಾವಶ್ಯಕವಾಗಿದೆ ಈ ಉದ್ದೇಶ ಪೂರ್ತಿಗಾಗಿ ಹಿಂದೀ ವಿದ್ಯಾರ್ಥಿನೀ ಸಭೆಯೆಂಬ ತಾರ್ಕಿಕ ಸಭೆಯೊಂದನ್ನು ಏರ್ಪಡಿಸಿರುವರು ಇದರ ಪ್ರಥಮ ಅಧಿವೇಶನವು ತಾ ೩ ೪—೩೦ಕ್ಕೆ ಮಹಿಳಾ ಸಭೆಯಲ್ಲಿ ಲಲಿತಾ ಬಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಕಾರ್ಯದರ್ಶಿಯವರೂ ಸ್ಥಳೀಕ ಹಿಂದೀ ಪ್ರಚಾರಕರೂ ಆದ ಶ್ರೀ ಕೆ ರಾಘವಾಚಾರ್ಯರೂ ಹಿಂದೀ ವ್ಯವಹಾರ ಜ್ಞಾನದಲ್ಲಿ ಸಂಭಾಷಣೆಯ ಶಕ್ತಿಯನ್ನು ಸಂಪಾದಿಸುವುದು ಪ್ರಾಮುಖ್ಯವೆಂದೂ ಹಿಂದೀ ಪ್ರಚಾರದ ಪ್ರಧಾನ ಅಂಗವಾದ ಮಾರ್ಗದರ್ಶನೆಯು [illegible] ಅದರ ಆವಶ್ಯಕತೆಯು [illegible] ಅನುಭವಕ್ಕೆ ಬರುತ್ತಿರುವುದೆಂದೂ ಮಂಗಳೂರು ಮಹಿಳೆಯರು ಪರೀಕ್ಷೆಗಳ ಕಡೆಗೆ ತೋರಿದಂತೆ, ಈ ಭಾಗದಲ್ಲೂ [illegible] ತೋರಬೇಕೆಂದೂ ಹಿಂದೀಯಲ್ಲಿ ಮಾತನಾಡುವುದು ಇಂಗ್ಲೀಷಿಗಿಂತ ಅಭಿಮಾನಾಸ್ಪದವಾದುದೆಂದು ತಿಳಿಯಬೇಕೆಂದೂ ಮೊದಲಾಗಿ ಹೇಳಿದರು. [illegible] ಭಾರತದ ಉನ್ನತಿಯಾಗಿರುವುದು [illegible] ವಿವಾದವಾಯಿತು. ಶ್ರೀಮತಿ [illegible] [illegible]

[illegible]

ತಾರೀಕು ೯ ೪ ೩೦ನೇ [illegible] ಮಂಗಳೂರು ಮುನಿಸಿಪಾಲಿಟಿಯೊಳಗೆ [illegible]

ಮುಲ್ಕಿ:— ಈ ಸೆಂಟರ್ [illegible] ಸಂಘದ ಸಾಮಾನ್ಯ ಸಭೆಯೊಂದು ಇದೇ ಕಳೆದ [illegible] ನೇ ದಿನ [illegible] ಸ್ಥಳೀಕ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡಿಬಂತು [illegible] ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರಾದ [illegible] ಸಭಾಧ್ಯಕ್ಷರಾಗಿದ್ದರು

ಇಲ್ಲಿ ಶ್ರೀ ವೆಂಕಟರಮಣ ದೇವರ ರಥೋತ್ಸವವು ಇದೇ ತಾ. [illegible]ನೇ ಶುಕ್ರವಾರ ಜರಗಲಿರುವುದು

[illegible] ಇಂಟರ್‌ಸ್ಕೂಲ್ [illegible] ತಿಳಿದುಬರುತ್ತದೆ

[illegible] ಎಲಿಮೆಂಟರಿ ಶಾಲೆಯ ವರ್ಷ ವರ್ಧಂತ್ಯುತ್ಸವವು ಇದೇ ತಾ. [illegible]ಕ್ಕೆ ಜರಗಿಸಲ್ಪಡುವುದೆಂದು ಕೇಳುತ್ತೇವೆ

ಉಳ್ಳಾಲ— ಇದೇ ಕಳೆದ ತಾ [illegible]ನೇ ದಿವಸ ಉಳ್ಳಾಲ ಶ್ರೀ ಗೋಕರ್ಣನಾಥ ಸಂಘದ ಪ್ರಥಮ ವಾರ್ಷಿಕೋತ್ಸವವು ಉಳ್ಳಾಲ ದೊಡ್ಡ ಮನೆ ಶ್ರೀ ಭವಾನಿಶಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿತು

ವೊಗ್ಗ— ಬಂಟ್ವಾಳದಿಂದ ಪೂರ್ವಕ್ಕೆ ೩ ಮೈಲು ದೂರವಿರುವ ವೊಗ್ಗ ಎಂಬಲ್ಲಿ ಇದೇ ಎಪ್ರಿಲ್ ತಾ ೧೩ರಿಂದ ೨೨ರ ವರೆಗೆ ಅಶ್ವಮೇಧ ದಶಾವತಾರ ಆಟ ಆಡಿಸುವುದೆಂತ ನಿಶ್ಚಯಿಸಿರುವುದರಿಂದ ಎಲ್ಲರೂ ದಯಮಾಡಬೇಕೆಂದು ಅಧ್ಯಕ್ಷ ಕೆ ಪಿ ವೈದ್ಯರು ವಾ ಕೆ ಎಸ್ ಶೆಟ್ರವರು ತಿಳಿಸಿರುತ್ತಾರೆ (ತಾ ೧೫, ೧೮, ೨೦ನೇ ದಿನಗಳಲ್ಲಿ ಮಾತ್ರ ವಿಶ್ರಾಂತಿ).

ಪುತ್ತೂರು— ದಕ್ಷಿಣ ಕನ್ನಡ ಗೌಡ ವಿದ್ಯಾಸಂಘದ ವರ್ಷಾವಧಿ ಮಹಾಸಭೆಯು ಐವರ್ನಾಡು ಗ್ರಾಮದ ಶ್ರೀಮಾನ್ ಮದ್ದಿಲ ಬೆಳ್ಯಪ್ಪ ಗೌಡರ ಪಾಲೆಪ್ಪಾಡಿ ಮನೆಯಲ್ಲಿ ತಾ ೨೮ ೩—೩೦ನೇ ಕೊಡಗು ಕೌನ್ಸಿಲ್ ಮಾಜಿ ಮೆಂಬರರಾದ ಶ್ರೀ ಕೊಟೇರ ಚಿನ್ನಪ್ಪನವರ ಸಭಾಧ್ಯಕ್ಷತೆಯಲ್ಲಿ ಜರಗಿತು

ಫರಂಗಿಪೇಟೆ. ಇಲ್ಲಿನ ವಿದ್ಯಾವರ್ಧಕ ಸಂಘದ ವಾರ್ಷಿಕೋತ್ಸವ ಮತ್ತು ಹಾಯರ್ ಎಲಿಮೆಂಟರಿ ಶಾಲೆಯ ೧೫ನೇ ವರ್ಧಂತಿ ದಿನಾಚರಣೆಯು ಇದೇ ತಾ ೧೧ನೇ ಶುಕ್ರವಾರ (ಶ್ರೀ ರಾಮ ನವಮಿ ದಿನ) ಶ್ರೀ ಕೋಡಿಕಲ್ ಮಂಗೇಶರಾವ್ ಬಿ ಎ ಎಲ್ ಟಿ ಹೆಡ್ ಮಾಸ್ಟರ್ ಶ್ರೀ ವೆಂಕಟ್ರಮಣ ಸ್ವಾಮಿ ಟೆಂಪಲ್ ಹೈಸ್ಕೂಲ್ ಬಂಟ್ವಾಳ ಇವರ ಅಧ್ಯಕ್ಷತೆಯಲ್ಲಿ ಜರಗುವುದು

ಉಡುಪಿ:— ತಾ ೯ ೪—೩೦ನೇ ದಿನ ಶನಿವಾರ (ನಾಳೆ) [illegible] ಕೂಡಿ ಮಾಡಿಸುವ [illegible] [illegible]ಯಲ್ಲಿ ನಡೆಯಲಿರುವುದಂತೆ

ಶ್ರೀ [illegible] ಅನಂತ ಪದ್ಮನಾಭ [illegible] [illegible]

[illegible] ತಿಳಿಯುತ್ತೇವೆ

[illegible] ತಿಳಿಯುತ್ತೇವೆ

[illegible]

[illegible]

[illegible] ಪೋಲೀಸರು [illegible] ಕೊಡುವುದು [illegible]

[illegible]

ಕಾಪು— [illegible] ಮತ್ತು [illegible] ಪೋಲೀಸರ [illegible] ತಾಗಿದರು

ಕಟಪಾಡಿ— ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯು ಇದೇ ತಾ. [illegible] [illegible] ಮೊದಲಿನ ದಿನ ಸಂಜೆ [illegible] [illegible] ತಿಳಿಯುತ್ತದೆ [illegible] ಗಾರ್ಡನ್ ತಯಾರಿ [illegible] ಹಸ್ತಕೃತಿ ಪತ್ರಿಕಾ [illegible] [illegible] ಶಾಲೆಯ ಹೆಸರು [illegible] ಸಂತೋಷದ ಸಂಗತಿ ಶಾಲೆಗೆ ಜಿಲ್ಲಾ ವಿದ್ಯಾ ವಸ್ತು ಪ್ರದರ್ಶನದಲ್ಲಿ ೪ [illegible] ಸರ್ಟಿಫಿಕೇಟುಗಳೂ ದೊರಕಿವೆಯೆಂದು ಕೇಳುತ್ತೇವೆ [illegible] ಶಾಲೆಯು ಇನ್ನಷ್ಟು ಉತ್ಕೃಷ್ಟ [illegible] ಸ್ಥಿತಿಯನ್ನು ಹೊಂದಿ ಊರಿಗೆ ಕೀರ್ತಿ ಬರುವಂತಾಗಲಿ

+ + + +

ಶಾಲಿವಾಹನಶಕ ೧೮೫೪ನೆಯ ಅಂಗೀರಸ ಸಂವತ್ಸರದ ಚೈತ್ರ ಶು॥ ೩ ಶನಿವಾರದಿಂದ ಅಂಗೀರಸ ಸಂ॥ರದ ಚೈತ್ರ ಶು॥ ೯ ಶುಕ್ರವಾರದ ವರೆಗಿನ ಪಂಚಾಂಗ

(೧೯೩೨ನೆಯ ಮೀನ—ಸುಗ್ಗಿ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ಸೂರ್ಯ ಉ	ಅಸ್ತ
9	ಶನಿ	೩	೧೮ ೧೬	ಕೃತ್ತಿಕಾ	೫೪ ೩೧	೨೭	6 24	6 42
10	ರವಿ	೪	೨೨ ೨	ರೋಹಿಣಿ	೫೯ ೩೨	೨೮	6 24	6 42
11	ಸೋಮ	೫	೨೪ ೪೦	ಮೃಗಶಿರಾ	೬೦ ೦	೨೯	6.23	6 42
12	ಕುಜ	೬	೨೬ ೩೨	ಮೃಗಶಿರಾ	೩ ೦	೩೦	6 22	6.42
13	ಬುಧ	೭	೨೬ ೪೬	ಆರ್ದ್ರಾ	೫ ೧೪	೧	6.22	6 42
14	ಗುರು	೮	೨೫ ೩೨	ಪುನರ್ವಸು	೬ ೩೦	೨	6 21	6 42
16	ಶುಕ್ರ	೯	೨೩ ೩೩	ಪುಷ್ಯಾ	೬ ೧೪	೩	6 20	6.42

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature ಉಷ್ಣ/ಶಾಖ Maximum ಹೆಚ್ಚಾದದ್ದು	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
25	89— 0	76— 7	—	—
26	89— 7	76— 7	—	—
27	89— 1	76— 6	—	—
28	89— 6	76— 7	—	—
29	89— 0	75— 9	—	—
30	89— 9	78 9	—	—
31	90— 6	79— 0	—	149-96

ಮಂಗಳೂರಿನ ಪೇಟೆ ಧಾರಣೆ

ಜೀನಸು	ಇಂದ ರೂ ಆ	ವರೆಗೆ ರೂ ಆ
ಹೊಸ ರಾಶಿ ಅಕ್ಕಿ	3 11	4 —
ಹೊಸ ಮುಸ್ತಿ	4 —	4 —
ಹೊಸ ಗುಡ್ಡ	3 14	4 — 4
ಹೊಸ ಸುಗ್ಗಿ	3 13	3 — 14
ಊರ ಅಪ್ಪಲ್ ಬೆಳ್ತಿಗೆ	4 — 8	5 —
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	7 — 14	8 —
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4 — 8	4 — 10
ಗೋದಿ ಗೋಣಿ ೧ಕ್ಕೆ	9 — 8	10 — 8
ತೊಗರಿ ಗೋಣಿ ೧ಕ್ಕೆ	12 — 0	12 — 8
ಹುರುಳಿ ಗೋಣಿ ೧ಕ್ಕೆ	6 — 8	7 — 0
ಕಡಲೆ ಗೋಣಿ ೧ಕ್ಕೆ	8 — 8	12 — 8
ತೊಗರಿಬೇಳೆ ಗೋಣಿ ೧ಕ್ಕೆ	13 — 8	11 — 0
ಉದ್ದು ಗೋಣಿ ೧ಕ್ಕೆ	11 — 8	13 — 0
ಹೆಸರು ಗೋಣಿ ೧ಕ್ಕೆ	10 — 4	1 —
ಊರು ಬೆಲ್ಲ ಖಂಡಿ ೧ಕ್ಕೆ	27 — 8	30 — 0
ಉಪ್ಪು ಗೋಣಿ ೧ಕ್ಕೆ	4 — 12	4 — 14
ಬೂದಿ ಖಂಡಿ ೧ಕ್ಕೆ	60 —	62 —
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	23 — 8	24 — 0
ಎಳ್ಳಿಂಡಿ ಖಂಡಿ ೧ಕ್ಕೆ	27 — 8	28 — 12
ಕೊಬ್ರಿ ಎಣ್ಣೆ ಮಣ ೧ಕ್ಕೆ	5 — 12	6 — 12
ಎಳ್ಳೆಣ್ಣೆ ಮಣ ೧ಕ್ಕೆ	6 — 12	7 — 0
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	4 — 7	8 — 12
ಊರಿನ ಸಕ್ಕರೆ ಮಣ ೧ಕ್ಕೆ	4 — 2	4 — 3
ಜೋಡಿ ಮೆಣಸು	4 — 0	5 — 0
ಸಾಸಿವೆ ಮುಡಿ ೧ಕ್ಕೆ	5 — 8	6 — 0
ಪೇಟೆ ಶಾಖ ಖಂಡಿ ೧ಕ್ಕೆ	217 — 8	225 —
ಕಾಳುಮೆಣಸು ಖಂಡಿ ೧ಕ್ಕೆ	170 — 0	180 —
ಮೆಂತ್ಯ ಮಣ ೧ಕ್ಕೆ	27 — 0	28 —
ಜೀರುಜೀಜ ಮುಡಿ ೧ಕ್ಕೆ	4 — 6	4 — 8
ಕಬ್ಬಿಣ ಖಂಡಿ ೧ಕ್ಕೆ	35 — 0	36 — 0
ತಾಂಮ್ರ ತಗಡು ಮಣ ೧ಕ್ಕೆ	12 — 0	12 — 4
ತಾಂಮ್ರ ಪಾತ್ರಗಳು ಮಣ ೧ಕ್ಕೆ	15 — 0	16 — 0
ತೀಣಿಕೆಯ ಸೀರು ೧ಕ್ಕೆ	14 — 8	14 — 12
ಹಿತ್ತಾಳೆ ತಗಡು ಮಣ ೧ಕ್ಕೆ	12 — 0	12 — 8
ಬಂಗಾರ ೧ಕ್ಕೆ	17 — 13	17 — 14
ಸುಣ್ಣ ಹುಳಿ ಖಂಡಿ ೧ಕ್ಕೆ	20 —	—
ಬಿಟೀರಿ ಸಾರಿ ಖಂಡಿ ೧ಕ್ಕೆ	375 —	400 —
ಹಳೆ ಅಡಿಕೆ	180 —	205 —
ಹೊಸ ಅಡಿಕೆ	140 —	145 —

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್, Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ ಬಂಟವಾಳ ಮಾರ್ಗವಾಗಿ ಸಾಯಂಕಾಲ 4 30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10 30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿ॥ 1 30ಕ್ಕೂ ಬೆಳ್ತಂಗಡಿಗೆ 1 45। ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ ಕಾಸರಗೋಡು ಮಲಬಾರು ಕನ್ನನ್ನೂರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10½ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಷನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು ಕೊಟ್ಟಿಗೆಹಾರಕ್ಕೂ ಸುಮಾರು 2 ಗಂಟೆಗೆ ಮೂಡಗೆರೆಗೂ ೪ ಗಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಿನಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗೆ ಹೋಗುವ ಪ್ರಯಾಣಿಕರು ಕಡೂರಿನ ಎಕ್ಸ್‌ಪ್ರೆಸ್ ಟ್ರೈನ್ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್ ಪಂಡರಪುರ ಗಳಿಗೂ ಅಲ್ಲಿಂದ ಪೂನಾ ಮತ್ತು ಬೊಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3 30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ **ಗೋಕರ್ಣಕ್ಕೆ** ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು **ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.**

Secretary,

The Canara Public Conveyance Company Ltd., Mangalore

ವಿವಿಧ ಸಮಾಚಾರಗಳು.

ಬ್ರಿಟಿಷ ದಬ್ಬಾಳಿಕೆಯಿಂದ ಕೊಂಗ್ರೆಸ್ಸಿಗೆ ಉಪಕಾರ

ಆರೋಗ್ಯ ಲಾಭಕ್ಕಾಗಿ ವಿಯೆನ್ನಾಕ್ಕೆ ಪುನಃ ಹೋದ ಶ್ರೀ ವಿ. ಜೆ. ಪಟೇಲರನ್ನು ಒಬ್ಬರು ಸಂದರ್ಶಿಸಿದಾಗ ಅವರೆಂದದ್ದೇನೆಂದರೆ— "ರೌಂಡ್‌ಟೇಬಲಿನೊಡನೆ ಸಹಕರಿಸುವ ವಿಷಯದಲ್ಲಿ ಕೊಂಗ್ರೆಸ್ಸಿಗೆ ಒಪ್ಪಿಗೆಯಿರಲಿಲ್ಲ. ಆದರೆ ಮಹಾತ್ಮಾ ಗಾಂಧಿಯವರನ್ನು ಲೋರ್ಡ್ ಅರ್ವಿನರು ತಂತ್ರದಿಂದ ಹಸ್ತಮಾಡಿಕೊಂಡು ರೌಂಡ್‌ಟೇಬಲಿನಿಂದಾಗಿ ಹಿಂದೀಯರಿಗೆ ಬೇಕಾದುದು ದೊರೆಯಬಹುದೆಂದರು. ವಿಚಕ್ಷಣರಾದ ಕೊಂಗ್ರೆಸ್ಸಿನ ಸದಸ್ಯರನ್ನು ಮಹಾತ್ಮಾಗಾಂಧಿಯವರ ಪ್ರತಿಭೆಯು ಸೋಲಿಸಿತು. ಆದರು ತನ್ನ ಭಾಷೆಯ ಪರಿಪೂರ್ಣತೆಗಾಗಿ ಲಂಡನಿಗೆ ಹೋದರು. ಮಹಾತ್ಮಾಜೀಯವರು ಈಗ ತನ್ನ ಮನೋಭಾವವನ್ನು ಪರಿವರ್ತಿಸಿರಬಹುದು. ಬ್ರಿಟಿಷ ದಬ್ಬಾಳಿಕೆಯಿಂದ ಕೊಂಗ್ರೆಸ್ಸಿನ ಐಕ್ಯಕ್ಕೆ ಬಹಳ ಉಪಕಾರವಿದೆ." ವಿ. ಜೆ. ಪಟೇಲರು ಗುಣವಾದೊಡನೆ ಅಮೇರಿಕಕ್ಕೆ ಹೋಗಲಿರುವರೆಂದು ತಿಳಿದುಬಂದಿದೆ.

* * *

ಗಾಂಧಿ—ಸಾಮುವೇಲ್ ಪತ್ರವ್ಯವಹಾರ

ಗಾಂಧಿಜೀಯವರು ಎರವಾಡದ ಸೆರೆಮನೆಯಲ್ಲಿರುವಂದರೂ ಅವರು ಭಾರತ ಸಚಿವರಾದ ಸರ್ ಸಾಮುವೇಲ್ ಹೋರರೊಡನೆ ಪತ್ರವ್ಯವಹಾರ ನಡೆಸುತ್ತಲಿರುವರೆಂದು ತಿಳಿಯಲಾಗಿದೆ. ಇತ್ತಲಾಗಿನ ಒಂದು ಪತ್ರದಲ್ಲಿ ಗಾಂಧಿಜೀಯವರು ಕಾಯಿದೆಭಂಗ ಚಳವಳದಲ್ಲಿ ತನಗೆ ವಿಶ್ವಾಸವಿದೆಯೆಂದೂ, ಅದು ತನ್ನೊಡನೆ ಮಾತ್ರ ಸಾಯುವುದೆಂದೂ ಮತ್ತು ತಾನು ಯಾವಾಗಲೂ ನಿಷ್ಕಳಂಕತನದಿಂದಲೇ ವರ್ತಿಸುವೆನೆಂದೂ ಬರೆದಿದ್ದಾರೆಂಬಾಗಿ ತಿಳಿದುಬಂದಿದೆ.

* * *

ಇವನು ಯಾರ ಗಂಡ?

ಲಂಡನಿನ ರಾತ್ರಿನರ್ತನ ಸಭೆಯಲ್ಲಿ ಒಬ್ಬ ಅತ್ಯಂತ ಸುಂದರಿ ಅವಳ ಹೆಸರು ಮಿಸ್ ನೆಸ್ಸಿ ನ್ಯೆರಿಕ್ ಎಂದು. ಇವಳಿಗೆ ಒಬ್ಬ ಯುವಕ ತಾಗಿದ. ಚಲ್ಲರೆ ಮನುಷ್ಯನಲ್ಲ, ಲೋರ್ಡ್ ಸೌತ್‌ಅಂಪ್ಟನ್ ಎಂಬವರ ಮಗ ಒನರೆಬಲ್ ಚಾರ್ಲ್ಸ್ ಫಿಟ್ಸ್‌ರೊಯ್ ಎಂಬವ. ಪತ್ರಿಕೆಗಳಲ್ಲೆಲ್ಲಾ ಈ ತರುಣ ತರುಣಿಯರಿಬ್ಬರಿಗೂ ಮದುವೆ ನಿಶ್ಚಯವಾಗಿದೆಯೆಂಬ ವರ್ತಮಾನವು ಹರಡಿತು. ಇದನ್ನು ಕೇಳಿ ತರುಣಿಗೆ ಆಶ್ಚರ್ಯವಾಯಿತು. "ವಿವಾಹ ನಿರ್ಧಾರವು ನನಗೂ ಅವನಿಗೂ ಆಗಲೇ ಇಲ್ಲ" ವೆಂದಳು. ಅವಳ ಸಹೋದರರೊಡನೆ ಕೇಳಲಾಯಿತು. 'ಹೌದು ಇವಳ ಗಂಡ ಅವನೇ' ಎಂದರವರು. ತರುಣಿಯು ಅಲ್ಲವೆನ್ನುತ್ತಿದ್ದಾಳೆ. ಅವಳಣ್ಣನವರು ಹೌದೆನ್ನುತ್ತಿದ್ದಾರೆ. ನಮ್ಮ ಒನರೆಬಲ್ ದೊರೆಯು ಯಾರ ಗಂಡನೆಂದೇ ತಿಳಿದುಬಂದಿಲ್ಲ.

* * *

ಮುಸ್ಲಿಮರ ಮೆರವಣಿಗೆಯು ಚದರಿಸಲ್ಪಟ್ಟಿತು

ನ್ಯೂಡೆಲ್ಲಿಯ ಜುಮ್ಮಾ ಮಸೀದಿಯಲ್ಲಿ ಮುಸ್ಲಿಮರ ಒಂದು ಪ್ರಚಂಡ ಸಭೆಯು ಜರಗಿತು. ಜುಮ್ಮಾ ಪ್ರಾರ್ಥನೆಯಾದ ಮೇಲೆ ಮಸೀದಿಯ ದಿನಾಚರಣೆಗೆಯುವುದಕ್ಕಾಗಿ ೫೦೦ ಮಿಕ್ಕಿ ಇದ್ದ ಜನ ತಂಡದ ಮೆರವಣಿಗೆಯು ಡಿಕ್ಟೇಟರರಾದ ಮೌಲ್ವಿ ಬಶೀರುದ್ದೀನ್ ಮುಜಫ್ಫರ್‌ರವರ ಮುಂದಾಳುತನದಲ್ಲಿ ಹೊರಟಿತು. ಕೂಚೇ ರಾಯಮಾನ್ ಮಸೀದಿಯಲ್ಲಿ ಪೋಲೀಸರು ವಿಪರೀತವಾಗಿ ವರ್ತಿಸಿದ ಕುರಿತು ತನಿಖೆ ನಡೆಯುವಂತಾಗಬೇಕೆಂದು ಮೊದಲೇ ಠರಾವಾಗಿದ್ದು ಕೆಲವರು ಆ ಸಂಗತಿಯ ಕುರಿತು ಆರ್ಭಟಿಸಿದರು. ಚೌರೀ ಬಜಾರಿಗೆ ಬರುತ್ತಾ ಜನಸ್ತೋಮವು ವಿಶೇಷವಾಯಿತು. ಅಷ್ಟರಲ್ಲಿ ಕುದುರೆ ಸವಾರರಾದ ಪೋಲೀಸ ದವಾನರು ಬಂದರು. ಸಿಟಿಮೇಜಿಸ್ಟ್ರೇಟರೇ ಮೊದಲಾದವರೂ ಪೋಲೀಸ ಅಧಿಕಾರಿಗಳೂ ಇದ್ದರು. '೫ ಮಿನಿಟು ಗಳೊಳಗೆ ಚದರಿರಿ' ಎಂದಪ್ಪಣೆಯಾಯಿತು. ಪ್ರಥಮದಲ್ಲಿ ಯಾರೂ ಅಲುಗಾಡಲಿಲ್ಲ. ಮೆರವಣಿಗೆಯು ಕಾನೂನು ವಿರೋಧವಾಯಿತು. ಒಡನೆ ೯ ಮಂದಿ ಮುಂದಾಳುಗಳನ್ನು ಸೆರೆಹಿಡಿದರು. ಮೆರವಣಿಗೆಗಾರರು ಕೊನೆಗೆ ಮೆಲ್ಲಮೆಲ್ಲನೆ ಚದರಿದರು.

* * *

"ಗಾಂಧಿಜೀಯವರನ್ನು ಬಿಡಿರಿ"

ತಾ. ೧ನೇ ದಿನ ಕೇಂದ್ರ ನ್ಯಾಯವಿಧಾಯಕ ಸಭೆಯ ಹಿಂದೂ ಸದಸ್ಯರ ಒಂದು ಸಭೆಯು ಜರಗಿತು. ಅದರಲ್ಲಿ 'ಸರಕಾರವು ಪರ್ಯಾಲೋಚಿಸದೆ ಮುಸ್ಲಿಮರ ಕೇಳಿಕೆಗಳನ್ನು ಕೊಟ್ಟರೆ ದೇಶಕ್ಕೆ ಹಾನಿ ಇದೆಯೆಂದೂ ರೌಂಡ್‌ಟೇಬಲ್ ಸಮಿತಿಗಳೊಡನೆ ಸಹಕರಿಸುವುದಕ್ಕಾಗಿ ಗಾಂಧಿಜೀಯವರನ್ನು ಬಿಡಬೇಕೆಂದೂ, ಸರಕಾರವು ಸಂಯುಕ್ತ ಪ್ರಾತಿನಿಧ್ಯವನ್ನು ಪುರಸ್ಕರಿಸಬೇಕೆಂದೂ ಠರಾವಾಯಿತು.

ಅಸ್ಪೃಶ್ಯರ ಮೇಲೆ ಬಾಣ.

ಬರೋಡಾ ಸಂಸ್ಥಾನದಲ್ಲಿ ಅಸ್ಪೃಶ್ಯರಿಗೆ ಸಿಗುವಷ್ಟು ಆಧ್ಯಾತ್ಮಿಕ ಸಾಂಸ್ಕೃತಿಕವಾದ ಇನ್ನೊಂದು ರಾಜ್ಯದಲ್ಲಿ ದೊರೆಯುವುದಿಲ್ಲವೆಂದು ಹೇಳಬೇಕಾಗುತ್ತದೆ. ಅಲ್ಲಿಯ ಬ್ರಾಹ್ಮಣ ವರ್ಗದಾರರಿಗೆ ಅಸ್ಪೃಶ್ಯರೆಂದರೆ ಹೊಸ ಮಡಿಕೆಯಂತೆ! ಅಲ್ಲಿಯ ನವಗಾಂ ಎಂಬಲ್ಲಿ ಅಸ್ಪೃಶ್ಯರ ಹುಡುಗರಿಗೆ ಇಷ್ಟು ಕಾಲದಿಂದಲೂ ಪ್ರತ್ಯೇಕ ಶಾಲೆಯಿದ್ದಿತು. ಮೊನ್ನೆ ಕೆಲವು ಸಮಾಜ ಸುಧಾರಕರು ಒಟ್ಟಾಗಿ ಆ ಶಾಲೆಯನ್ನು ನಿಲ್ಲಿಸಿ ಹಳ್ಳಿಯ ಶಾಲೆಗಳಲ್ಲಿ ಅಸ್ಪೃಶ್ಯರ ಮಕ್ಕಳೂ ಸೇರಿಕೊಳ್ಳಬಹುದೆಂದು ನಿರ್ಣಯಿಸಿದರು. ಇದಾದ ಮರುದಿನವೇ ಅಲ್ಲಿ ಹಾಹಾಕಾರಕ್ಕೆ ಪ್ರಾರಂಭವಾಯಿತು. ಸ್ಪೃಶ್ಯರು ಅಸ್ಪೃಶ್ಯರನ್ನು ಕಂಡಕಂಡಲ್ಲಿ ಹೊಡೆದರು. ಒಬ್ಬ ರೈತನ ೩೦೦೦ ಕಟ್ಟು ಬೈಹುಲ್ಲಿಗೆ ಸ್ಪೃಶ್ಯರು ಬೆಂಕಿ ಕೊಟ್ಟರು. ಕೆಲವು ಪತಿತರ ಮೇಲೆ ಚಿಮಿಣಿ ಎಣ್ಣೆ ಹೊಯ್ದರು. ಕೆಲವು ಮನೆಗಳಿಗೆ ಬೆಂಕಿ ಕೊಡಲು ಯತ್ನಿಸಿದರು. ಒಬ್ಬ ಅಸ್ಪೃಶ್ಯರ ವಿದ್ಯಾರ್ಥಿಗೆ ಸರಿಯಾಗಿ ಹೊಡೆದಿರುವರು. ಅಸ್ಪೃಶ್ಯರಿಗೆ ಅನ್ನ ನೀರು ಕೊಡಬಾರದಾಗಿ ಸಮಾಜ ಬಹಿಷ್ಕಾರವನ್ನು ಹಾಕಿರುವರು. ಇವರಲ್ಲಿ ಬಹಳ ಪಾಪಕಿಯನ್ನೆಸಗಿದ ಒಂಭತ್ತು ಮಂದಿ ಸ್ಪೃಶ್ಯರನ್ನು ಪೋಲೀಸರು ಕೈದುಮಾಡಿ ೧೦೦೦ ರೂಪಾಯಿ ಮುಚ್ಚಳಿಕೆಯ ಮೇಲೆ ಬಿಟ್ಟಿರುವರು.

* * *

ತನ್ನ ಚಮತ್ಕಾರದಿಂದ ಕೊಂದೇಬಿಟ್ಟಳು!

ಜೋರ್‌ಹಾಟ್ ಎಂಬಲ್ಲಿನ ಒಂದು ಕಾಫಿ ತೋಟದಲ್ಲಿ ಒಬ್ಬ ಗುಮಾಸ್ತರು. ಇವರು ಕಳೆದ ವಾರದ ಒಂದು ದಿನದಲ್ಲಿ ಎಲ್ಲಿಗೋ ಹೊರಗೆ ಹೋಗಿದ್ದರು. ಹೊರಟುಹೋಗುತ್ತಿದ್ದ ಮೂವರು ಪಂಜಾಬಿಗಳು ಈ ಸಮಯದ ಸದುಪಯೋಗ ಮಾಡಬೇಕೆಂದು ಒಯಿಸಿ ರಾತ್ರಿಯ ಸಮಯದಲ್ಲಿ ಗುಮಾಸ್ತರ ಮನೆಹೊಕ್ಕು ಅವರ ಹೆಂಡತಿಯನ್ನೂ ಇಬ್ಬರು ಸೇವಕರನ್ನೂ ಬಲಾತ್ಕಾರದಿಂದ ಹಿಡಿದು ಕಟ್ಟಿ ಹಾಕಿದರು. ಅಷ್ಟರಲ್ಲಿ ಆ ಹೆಂಗಸಿನ ಮಗು ಒಂದು ಕೋಣೆಯಲ್ಲಿ ಅತ್ತಿತು. ಆ ಸ್ತ್ರೀಯು ತಾನು ಅದಕ್ಕೆ ಮೊಲೆಯುಣ್ಣಿಸುತ್ತೇನೆ. ಆ ಮೇಲೆ ತನ್ನನ್ನು ಕಟ್ಟಿ ಎಲ್ಲಾ ನಗನಾಣ್ಯಗಳನ್ನೊಯ್ಯಬಹುದೆಂದಳು. ದರೋಡೆಗಾರರು ಅವಳನ್ನು ಬಿಟ್ಟರು. ಬಿಡಲ್ಪಟ್ಟ ಕೂಡಲೇ ಆ ಸ್ತ್ರೀಯು ಆ ಕೋಣೆಗೆ ಹೋಗಿ ಮಗುವಿಗೆ ಮೊಲೆಕೊಡುವಂತೆ ನಟಿಸಿ ಬಳಿಯಲ್ಲಿದ್ದ ಕೋವಿಯನ್ನು ತೆಗೆದು ಮೂರ್ದು ಸಲ ಎರಡು ಸಲ ಹಾರಿಸಿದಳು. ಒಬ್ಬನು ಮಡಿದನು. ಇನ್ನೊಬ್ಬನಿಗೆ ಗಾಯವಾಯಿತು. ಕಾಫಿ ತೋಟದ ಮುಂದೋಟಿಯವನ ಯಜಮಾನನು ಅಘಾತವಾಯಿತೆಂದು ಓಡಿಕೊಂಡು ಬಂದನು. ಎಲ್ಲರೂ ಸಿಕ್ಕಿಬಿದ್ದರು. ಪೋಲೀಸರು ತನಿಖೆ ನಡೆಸುತ್ತಾರೆ.

* * *

ಪೋಲೀಸರ ಧೈರ್ಯ

ಕೇಂದ್ರ ಸಿಖ್ಖ ಚುನಾವಣಾ ಸಮಿತಿಯವರಿಗೆ ಲಾಹೋರಿನಲ್ಲಿ ರಾಜಾ ನರೇಂದ್ರನಾಥರೆಂಬವರು ಒಂದು ಗಾರ್ಡನ್ ಪಾರ್ಟಿ ಕೊಟ್ಟರು. ಆ ಸಮಿತಿಯ ಸದಸ್ಯರಲ್ಲೊಬ್ಬರಾದ ಎ. ವೈ. ಚಿಂತಾಮಣಿಯವರು ತನ್ನ ಮೋಟಾರ್ ಕಾರಿನಲ್ಲಿ ಕುಳಿತು ಗಾರ್ಡನ್ ಪಾರ್ಟಿಗೆ ಹೋಗುತ್ತಿದ್ದರು. ಅಷ್ಟರಲ್ಲಿ ಗೇಟಿನಲ್ಲಿದ್ದ ಪೋಲೀಸರು ಅವರನ್ನು ತಡೆದು ಒಳಗೆ ಬಿಡಲಾಗುವುದಿಲ್ಲವೆಂದು ಧೈರ್ಯದಿಂದ ಹೇಳಿಬಿಟ್ಟರು. ಅಷ್ಟರಲ್ಲಿ ಒಬ್ಬ ಯುರೋಪಿಯನನ ಕಾರು ಒಳಗೆ ಹೋಯಿತು. ಅದನ್ನೇಕೆ ತಡೆಯಲಿಲ್ಲವೆಂದು ಚಿಂತಾಮಣಿಯವರು ಕೇಳಲು ಆ ಕಾರು ಚಲಿಸುತ್ತಿದೆಯಷ್ಟೆ! ಎಂಬ ಉತ್ತರವು ಸಿಕ್ಕಿತು. ಪೋಲೀಸನು ಅವರನ್ನು ಕಾರಿನಿಂದ ಕೆಳಗಿಳಿಸಿದನು. ಕೊನೆಗೆ ಚಿಂತಾಮಣಿಯವರು ತಾನು ಫ್ರೆಂಚೈಸ್ ಕಮಿಟಿಯ ಸದಸ್ಯನೆಂದರು. ಒಡನೆ ಅವರನ್ನು ಒಳಬಿಡಲಾಯಿತು. ಈ ಕುರಿತು ಚಿಂತಾಮಣಿಯವರು ಪಂಜಾಬು ಸರಕಾರಕ್ಕೆ ತಿಳಿಸಲು ಅವರು ಚಿಂತಾಮಣಿಯವರೊಡನೆ ಕ್ಷಮಾಪಣೆ ಕೇಳಬೇಕಾಯಿತು.

* * *

ವೈ ಇಂಡಿಯನ್ ಮೆರವಣಿಗೆಯು ತಡೆಯಲ್ಪಟ್ಟಿತು.

ಕಳೆದ ಆದಿತ್ಯವಾರ ಮುಂಬಾಯಿಯಲ್ಲಿ ಜರಗಲಿದ್ದ ವೈ ಇಂಡಿಯನ್ ಲೀಗ ಮೆರವಣಿಗೆಯನ್ನು ಅಲ್ಲಿಯ ಪೋಲೀಸ್ ಕಮಿಶನರು ಶಾಂತತಾರಕ್ಷಣೆಗಾಗಿ ನಿಲ್ಲಿಸಿದರು. ಸಂಬಂಧಪಟ್ಟವರಿಗೆ ನೋಟೀಸು ಕೊಟ್ಟರು. ಕೊಂಗ್ರೆಸ್ಸಿನವರು ವೈ ಇಂಡಿಯನ್ ನೆವದಿಂದ ತಮ್ಮ ಚಳವಳವನ್ನು ನಡೆಯಿಸುತ್ತಾರೆಂದು ಸರಕಾರದಧಿಕಾರಿಗಳು ತಿಳಿದುದರಿಂದ ಹೀಗಾಯಿತೆಂದೂ ತಿಳಿಯಲಾಗುತ್ತದೆ.

* * *

ವಿಲ್ಲಿಯರ್ಸರು ಹೋಗುವರು

ಕಲ್ಕತ್ತದ ಯೂರೋಪಿಯನ್ ಎಸೋಸಿಯೇಶನಿನ ವಿಲ್ಲಿಯರ್ಸ್ ದೊರೆಗಳೆಂದರೆ ಚರ್ಚಿಲ್ಲರನ್ನು ಬಿಟ್ಟವರಲ್ಲ. ಇವರು ಆರೋಗ್ಯಲಾಭಕ್ಕಾಗಿ ಇದೇ ತಾ. ೩೦ನೇ ದಿನ ಇಂಗ್ಲೆಂಡಿಗೆ ಹೋಗಲಿರುವರು. ಪತ್ರಿಕೆಗಳೆಲ್ಲಾ ಇವರು ತಮ್ಮ ಪ್ರಾಣರಕ್ಷಣಾರ್ಥವಾಗಿ ಊರಿಗೆ ಹೋಗುವರೆಂದು ಹೇಳುತ್ತಿವೆ. ಊರಿನಲ್ಲೂ ರಾಜಕೀಯ ವಿಚಾರದಲ್ಲೇ ಮಗ್ನರಾಗಲಿರುವರು.

—+—+—

(೨ನೇ ಪುಟದಿಂದ ಮುಂದುವರಿಸಿದುದು)

ಯುವ ಗೌರವವು ಅಷ್ಟಸ್ಟೆ! ಮಕ್ಕಳಿಗೆ ಸಿಗುವ ಪ್ರಯೋಜನವು ಬಹು ಸ್ವಲ್ಪವೇ! ಉಪಾಧ್ಯಾಯನು ಯಾವಾಗಲೂ ಕೃಷಿಕನಂತಿರಬೇಕು. ಉತ್ತಮ ಕೃಷಿಕನು ತನ್ನ ಹೊಲದಲ್ಲಿ ಹೊಸ ಹೊಸ ಪೈರು ಬೆಳೆಸಬೇಕು. ಅದಕ್ಕೆ ಬೇಕಾದ ಹೊಸಗೊಬ್ಬರವನ್ನು ಕಂಡುಕೊಳ್ಳಬೇಕು. ಅದಕ್ಕೆ ಬರುವ ಅಪಾಯವನ್ನು ತಪ್ಪಿಸುವ ದಾರಿಯನ್ನು ಗೊತ್ತುಹಚ್ಚಬೇಕು. ಅಂತಹ ಕೃಷಿಕನಿಗೆ ತನ್ನ ವೃತ್ತಿಯಲ್ಲಿ ಹೆಚ್ಚಿನ ಪ್ರಯೋಜನವು ದೊರೆಯುವುದು ಹೇಗೋ ಹಾಗೆಯೇ ಉಪಾಧ್ಯಾಯನು ಕೂಡ ಮಕ್ಕಳಲ್ಲಿ ವಿದ್ಯಾಭಿರುಚಿ ಹುಟ್ಟುವಂತೆ ಹೇಗೆ ವರ್ತಿಸಬೇಕು? ತನ್ನ ಕಲಿಸುವಿಕೆಯಲ್ಲಿ ಬರುವ ತೊಂದರೆಗಳೇನು? ಅವುಗಳನ್ನು ಪರಿಹರಿಸುವ ವಿಧಾನ ಹೇಗೆ? ಮಕ್ಕಳ ಎಳೆ ಮನಸ್ಸಿಗೆ ಯಾವ ಯಾವ ವಿಷಯಗಳು ಬೇಗನೇ ಅಂಟಿಕೊಳ್ಳುತ್ತವೆ? ಯಾವ ಯಾವ ಪಾಠಗಳನ್ನು ಯಾವ ಯಾವ ಉಪಕರಣಗಳಿಂದ ಹೇಗೆ ಕಲಿಸಿದರೆ ಕಲಿಸುವವರಿಗೂ ಕಲಿಯುವವರಿಗೂ ಸುಲಭವಾಗಿ ತಿಳಿಯುವುದು ಎಂಬೀ ವಿಷಯಗಳನ್ನು ಪ್ರತಿಯೊಬ್ಬನೂ ಚಿಂತಿಸಿ, ತನಗೆ ತಿಳಿದು ಬಂದ ಹೊಸ ವಿಷಯವನ್ನು ಈ ಉಪಾಧ್ಯಾಯರ ಸಂಘದಲ್ಲಿ ತೋರಿಸಿಕೊಟ್ಟು ಆ ವಿಷಯದಲ್ಲಿ ತನ್ನ ಅನುಭವ ಮತ್ತು ಇತರರ ಅನುಭವವನ್ನು ಜತೆಗೊಳಿಸಿ ಅದನ್ನು ದೃಢೀಕರಿಸುವುದು ಈ ಉಪಾಧ್ಯಾಯರ ಸಂಘದಿಂದಲೇ ಅಲ್ಲದೆ ಬೇರೆ ದಾರಿಯಿಲ್ಲ. ಆದರೆ ಈಗಿನ ಉಪಾಧ್ಯಾಯರ ಹಲವು ಸಂಘಗಳಲ್ಲಿ ತಮ್ಮ ಮನಸ್ಸಿನ ಅನುಭವವನ್ನು ಇತರರಿಗೆ ಹೇಳಬಲ್ಲ ಉಪಾಧ್ಯಾಯರೇ ವಿರಳ. ಕಾರಣವೇನೆಂದರೆ ಅವರನ್ನು ಸಭೆಯ ಮುಂದೆ ಒಂದ ಮಾತಾಡಲು ಸಭಾಕಂಪನವು ಅವರನ್ನು ತಡೆಯುತ್ತದೆ. ಇದು ಸರಿಯಲ್ಲ. ಒಂದೆರಡು ಸಲ ಧೈರ್ಯಪಟ್ಟು ಮುಂದೆ ಒಂದಲ್ಲ ನಂತರ ಸುಲಭವಾಗಿ ಮಾತಾಡಲು ಧೈರ್ಯಬರುವುದು. ಇನ್ನು ಕೆಲವರಿಗೆ ಯಾವ ವಿಷಯದಲ್ಲಿ ಕಲಿಸಲು ಕಷ್ಟವಾಗುವುದೋ ಆ ವಿಷಯವನ್ನು ಈ ಸಭೆಯಲ್ಲಿ ಸೂಚಿಸಿದ್ದಲ್ಲಿ ಅನುಭವವುಳ್ಳವರು ಆ ವಿಷಯವನ್ನು ತಿಳಿಯಪಡಿಸಿ ಆ ಮೂಲಕ ಅನುಭವವನ್ನು ವೃದ್ಧಿಗೊಳಿಸಲು ತುಂಬಾ ಸಹಾಯವಾಗುವುದು. ಒಬ್ಬ ಉಪಾಧ್ಯಾಯನು ಗಣಿತದಲ್ಲಿ ಕುಶಲನಿರಬಹುದು. ಇನ್ನೊಬ್ಬನು ಕವಿತ್ವದಲ್ಲಿ ನಿಪುಣನಿರಬಹುದು. ಮತ್ತೊಬ್ಬನು ಚಿತ್ರಕಲೆಯಲ್ಲಿ ಪ್ರವೀಣನಿರಬಹುದು. ಇನ್ನೊಬ್ಬನು ಕಥಾರಚನೆಯಲ್ಲಿ ಪಾಂಡಿತ್ಯವುಳ್ಳವನಿರಬಹುದು. ಯಾರಿಗೆ ಯಾವ ವಿಷಯದಲ್ಲಿ ಹೆಚ್ಚಿನ ಪರಿಚಯ ದೆಯೋ ಆ ವಿಷಯವನ್ನು ಪರಿಚಯವುಂಟಾಗುವಂತೆ ಮಾಡುವುದೇ ಈ ಸಭೆಯ ಮುಖ್ಯೋದ್ದೇಶ. ಮತ್ತು ಸರಕಾರದವರಿಂದ ನಮಗೆ ಏನಾದರೂ ಆಗಬೇಕಾದರೆ ಒಬ್ಬೊಬ್ಬನು ಹೇಳಿಕೊಂಡರೆ ಆಗುವುದಕ್ಕಿಂತ ಹೆಚ್ಚಿನ ಪ್ರಯೋಜನವು ಈ ಸಂಘಗಳ ಮೂಲಕ ಅರಿಕೆಮಾಡಿಕೊಂಡರೆ ಲಭಿಸುವುದು. ಆದುದರಿಂದ ಈ ಸಂಘಗಳ ಮೂಲಕ ನಮ್ಮ ಜ್ಞಾನವನ್ನೂ ನಮ್ಮ ಅನುಕೂಲತೆಗಳನ್ನೂ ಹೆಚ್ಚಿಸಿಕೊಂಡು ಇದರ ಮೂಲಕ ನಮ್ಮ ನಿತ್ಯ ಕರ್ತವ್ಯಗಳನ್ನು ಸುಸೂತ್ರವಾಗಿ ಸಾಧಿಸಲು ಕಲ್ಪತರುವಂತಿರುವ ಈ ಸಂಘಗಳಿಗೆ ಯಾವುದೊಂದು ಎಡರು ಬಾರದಿರಲೆಂದು ಮತ್ತು ಇವುಗಳ ಇದರ ಫಲವನ್ನು ಸಕಲರೂ ಅನುಭವಿಸಲೆಂದು ಬೇಡಿ ನನ್ನ ಅಲ್ಪಮತಿಗೆ ತೋರಿದ ಈ ಲೇಖನವನ್ನು ಇಲ್ಲಿಗೆ ಮುಗಿಸುವೆನು.

ಕೆ. ಸುಬ್ಬರಾವ್

—+—+—

The Canara Bank Ltd, Mangalore.

ದಿ ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಿಂದ ಅವರುಗಳ ಆಸ್ತಿ ಮೇಲೆ ಪಡೆದ ಸಾಲದ ಬಡ್ಡಿಯನ್ನು ನ್ಯಾಯವಾಗಿ ಕೊಡದೆ ಇದ್ದುದರಿಂದಲೂ ನಮ್ಮ ವರೆಗೆ ಎಷ್ಟೋ ನೋಟೀಸ ನಾವು ಕಳುಹುವುದರಿಂದಲೂ ನಮ್ಮಲ್ಲಿಯವರ ಅಡವಿಟ್ಟ ನಗಗಳನ್ನು ಇದೇ ಬರುವ ಏಪ್ರಿಲ್ ತಿಂಗಳ ತಾ 7ನೇ ಗುರುವಾರ ಮಧ್ಯಾಹ್ನ ಗಂಟೆ 12ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಲಿಲಾಂ ಮಾಡಲಾಗುವುದು.

ನ್ಯೂಡಿಸಿ ಬ್ಯಾರಿ ಪಾ ಹಮ್ಮಬ್ಬ ಬ್ಯಾರಿ, ಕೋನಾಜೆ ಗ್ರಾಮ, ಸಾಮನಗ, ಮಂಜೇಶ್ವರ ಪೋಸ್ಟು ಲೋನು ನಂಬ್ರ 736/31 ಅಡವಿಟ್ಟ ತಾರೀಕು 18—9—31 ಸಾಲದ ಮೊಬಲಗು ರೂ 140/-

Canara Bank Ltd
Mangalore
6—4—1932

M. Mukund Kini,
for Secretary

+ + + +

ಪರೀಕ್ಷಿಸಿರಿ! ಶಾಶ್ವತವಾಗುವದು
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಞಂಗಾಡ (S.I.R)

೯೦ ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ ಎಂಬ ಬಿರುದು ಪಡೆದು ಪ್ರಸಿದ್ಧಪಟ್ಟ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ್' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಾಸ್ತ್ರೀಯ ಶಲ್ಯ ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂತಹ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಗುತಿನಲ್ಲಿ ತಯಾರಿರುತ್ತವೆ. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯಾಹಾರದ ಕ್ರಮ, ವ್ಯಕ್ತಿ ಹೊರತು ಬೇರೆಯಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಕಲಶಿಯು ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂತಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಮುಖ್ಯ ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಸಿಗಿ ಕೊಡಲಾಗುವದಲ್ಲದೆ ಅನಾಸಕ್ತಾಲಸ್ಯರಾದ ಸರೀಟರಿಗೆ ಅವರ ಅಗತ್ಯದ ಮುಟ್ಟಿನ ವಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಞಂಗಾಡ (ದ ಕ

ಮೂಲವ್ಯಾಧಿ

ರಕ್ತ ಅಥವಾ ತಜ್ಜನ್ಯವಾದ ಅತ್ಯಂತ ಹಳೆಯದು ಮತ್ತು ತ್ರಾಸದಾಯಕವಿದ್ದರೂ ಫಕ್ತ ಒಮ್ಮೆ ಸೇವನೆಮಾಡುವುದರಿಂದ ಜಾದುವಿನಂತೇ ಪರಿಣಾಮವಾಗುವುದು ಮೂರು ದಿನಗಳಲ್ಲಿ ಬೇನ ಸಹಿತ ನಾಶವಾಗುವುದು ಪಥ್ಯ ಜರೂರಿ ಇಲ್ಲ ಅಧಿಕ ಪ್ರಶಂಸೆ ವ್ಯರ್ಥ ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂದಿಯುಡುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ಬಹಿರೋದ್ದೀಪನ ತೇಜ ಅಮೋಘ ಅಸ್ತ್ರವಿದೆ ಸಾವಿರಾರು ಕಿವುಡರು ನೆಟ್ಟಗಾಗಿರುವರು ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ೩

ವಿಳಾಸ — ಶಕ್ತಿಸುಧಾ ಕಾರ್ಯಾಲಯ
21 ಖಾಂದಾರವಾಡ 4ನೇ ಗಲ್ಲಿ
ಮುಂಬಯಿ.

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೋ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತಿ ಪಡೆದವರು. 52 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ವಿಚಾರಿಸಲೂ ಬರೆಯಿರಿ
ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dadar Bombay, 14.

ತಂತಿ ವಿಳಾಸ — "CAVASPUR Bombay
ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ — ಮುಖ್ಯ ಮೆನೇಜಿಂಗ್ ಡ್ಯಾರೆಕ್ಟರ್



The Zandu Pharmaceutical Works, Ltd , Bombay,14
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ, ಲಿಮಿಟೆಡ್, ಬೊಂಬಾಯಿ, 14

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

ಹಸಿ ಆವಳೆ ಇನ್ನು ಇತರ ಮೂಲಿಕೆಗಳನ್ನು ಸೇರಿಸಿ ತಯಾರು ಮಾಡಲ್ಪಟ್ಟಿರುವುದು ಇದು ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ ಕ್ಷಯರೋಗ ಉಬ್ಬಸ, ನಾನಾ ವಿಧವಾದ ದುರ್ಬಲತ್ವ ಕೆಮ್ಮು ಎದೆ ನೆಗಡಿ ಸ್ವರಭಂಗ ವೃದ್ಧಾಪ್ಯದ ಅಶಕ್ತತೆ ಇವುಗಳನ್ನು ಹೋಗಲಾಡಿಸಿ ಪುಷ್ಟಿಯನ್ನುಂಟುಮಾಡುವುದು ಮತ್ತು ನರಗಳ ನಿಶ್ಶಕ್ತಿ, ರಕ್ತಕ್ಷೀಣತೆ, ಪುಷ್ಟಿಹೀನತೆ ಪ್ರಾಣಶಕ್ತಿ ಕಡಿಮೆಯಾಗೋಣ ಇವುಗಳಲ್ಲಿ ಪುಷ್ಟಿಯನ್ನುಟುಮಾಡಿ ಯೌವನವನ್ನು ಕೊಟ್ಟು ಧೃಡಗಾತ್ರವನ್ನಾಗಿ ಮಾಡಲಿಕ್ಕೆ ಈ ಲೇಹವು ಸುಪ್ರಸಿದ್ಧವಾದುದು ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು

5 ಪಾ ಜೋಡಿ ರೂ 10/- ಕ್ರಯ 1 ಪಾನು ಸೀಸೆ ರೂ 2/8. ½ ಪಾ ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು. — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು. — ಎಸ್ ಎಲ್ ಧಾರವಾಡ ಎಂಡ್ ಬ್ರದರ್ಸ್
ಸಬ್ ಏಜಂಟರು — ಮೈಸೂರು ಏಜಂಟರು — ಟಿ. ಸಿ ನಟರಾಜ್ ಅಂಡ್ ಕೊ, ಸಯ್ಯಾಜಿರಾವ್ ರೋಡ್.
ಬೆಂಗಳೂರು ಏಜಂಟರು — ಬಿ ಶೋಭನ್‌ಲಾಲ್ ಕಂಪೆನಿ ಚಿಕ್ಕಪೇಟೆ
☞ ಕಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಅಖಿಳ ಭಾರತ ಕೊಂಗ್ರೆಸ್ ಮಹಾ ಸಭೆಯ ೪೭ನೇ ಅಧಿವೇಶನವು ಪಂಡಿತ ಮಾಲವೀಯರ ಅಧ್ಯಕ್ಷತೆಯಲ್ಲಿ ತಾರೀಕು ೨೪ನೇ ದಿನ ಡಿಲ್ಲಿಯಲ್ಲಿ ಜರಗುವುದು

ಕಾಯಿದೆಭಂಗ ಚಳವಳವು ನಡೆಯುತ್ತಿದ್ದರೂ, ಸರಕಾರವು ಬೇಕಾಯಿದೇಶೀರವಾಗಿ ಮಾಡಿದ ಅಖಿಳ ಭಾರತ ಕೊಂಗ್ರೆಸ್ ಮಹಾ ಸಭೆಯ ೪೭ನೇ ಅಧಿವೇಶನವು ಇದೇ ತಾರೀಕು ೨೪ರಲ್ಲಿ ಪಂಡಿತ ಮದನಮೋಹನ ಮಾಲವೀಯರ ಅಧ್ಯಕ್ಷತೆಯಲ್ಲಿ ಡಿಲ್ಲಿಯಲ್ಲಿ ಜರಗುವುದಾಗಿ ತಿಳಿದು ಬಂದಿದೆ. ರೈಲ್ವೇ ಸ್ಟೇಷನುಗಳಲ್ಲಿಯೂ, ನಿಯಮಿತ ಸ್ಥಾನಗಳಲ್ಲಿಯೂ ತಕ್ಕ ಏರ್ಪಾಡುಗಳನ್ನು ಸೆರೆಮನೆಯ ಹೊರಗಿರುವ ದೇಶಧುರೀಣರು ಭರದಿಂದ ಮಾಡುತ್ತಿರುವರು. ಸ್ವಾಗತಮಂಡಳಿಯ ಚೆಯರ್ಮೇನರಾಗಿ, ಮೀರತ್ತಿನ ವಕೀಲರಾದ ಪಂಡಿತ ಪ್ಯಾರಿಲಾಲ್ ಎಂಬವರು ಚುನಾಯಿಸಲ್ಪಟ್ಟಿರುವರು. ಜತೆಕಾರ್ಯದರ್ಶಿಗಳಾಗಿ ಮೊದಲು ಹಿಂದೂಸ್ಥಾನ ಟೈಮ್ಸ್ ಎಂಬ ವಾರ್ತಾ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಜೆ. ಎನ್ ಸಹ್ನಿ ಎಂಬವರೂ, ಶ್ರೀ. ಲಾಲಾ ಶಂಕರ್ ಲಾಲ್ ಎಂಬವರೂ ಚುನಾಯಿಸಲ್ಪಟ್ಟರು. ಈ ಸಲದ ಅಧ್ಯಕ್ಷತೆಯು ಬಾಬು ರಾಜೇಂದ್ರ ಪ್ರಸಾದರ ಪಾಲಿಗೆ ಬಿದ್ದಿತ್ತಾದರೂ ಅವರು ತುರಂಗವಾಸವನ್ನನುಭವಿಸುತ್ತಿರುವುದರಿಂದ ಅವರ ಸ್ಥಾನಕ್ಕೆ ಮಾಲವೀಯವರನ್ನು ಆರಿಸಲಾಯಿತು.

ವಸ್ತ್ರದಹನ, ಕೈದು.

ಕಲ್ಕತ್ತದಲ್ಲಿ ವಿದೇಶಿ ವಸ್ತ್ರದಹನವನ್ನು ಮಾಡುವ ಹವಣಿಕೆಯು ಹಲವೆಡೆಗಳಲ್ಲಿ ನಡೆಯಿತು ಬಂಡ್ರಾ ಬಜಾರಿನಲ್ಲಿ ಮೆರವಣಿಗೆ ಇತ್ತು. ಅದಕ್ಕಾಗಿ ೧೨ ಮಂದಿಗಳನ್ನು ಕೈದು ಮಾಡಿದರು. ಸಭೆ ಜರಗಿಸಲು ಯತ್ನಿಸಿದ ೫ ಮಂದಿಗಳನ್ನು ಕೈದುಮಾಡಿದರು.

೨೨ ಮಂದಿ ಸ್ತ್ರೀಯರಿಗೆ ಶಿಕ್ಷೆ.

ಬೆನಾರೆಸ್‌ನಲ್ಲಿ ಪಿಕೆಟಿಂಗ್ ಮಾಡಿದ ಸಂಬಂಧವಾಗಿ ೨೨ ಮಂದಿ ಸ್ತ್ರೀಯರು ಆರಾರು ತಿಂಗಳ ಕಠಿಣ ಸಜೆಗೊಳಗಾದರು. ಅವರಲ್ಲಿ ಒಬ್ಬ ಹೆಣ್ಣು ಮುದುಕಿಯಿದ್ದಳು ಅವಳಿಗ ಕಠಿಣ ಶಿಕ್ಷೆಯಾಗಲಿಲ್ಲ ಶಿಕ್ಷಿಸಲ್ಪಟ್ಟ ಒಬ್ಬ ಸ್ತ್ರೀಯು ಕುಡಿಯುವ ನೀರಿನ ಕುರಿತು ದೂರನ್ನು ಮಾಡಿದಳು ಒಬ್ಬಳು ತನಗೆ ಕಂಕುಮವು ಅಗತ್ಯವೆಂದಳು

ರಾಷ್ಟ್ರಧ್ವಜಾರೋಹಣ.

ಅಲ್ಲಾಹಾಬಾದಿನಲ್ಲಿಯ ಎತ್ತರವಾದ ಗಡಿಯಾರ ಸ್ತಂಭದ ಮೇಲೆ ರಾಷ್ಟ್ರಧ್ವಜವನ್ನೇರಿಸುವ ಯತ್ನವನ್ನು ೬ ಜನ ಮಂದಿಗಳು ಕೂಡಿ ಮಾಡಿದರು. ಜನಸಂದಣಿಯಿಂದ ವಾಹನಗಳೂ ತಡೆಯಲ್ಪಟ್ಟವು ಪೋಲೀಸರು ಸಭೆಯನ್ನು ಚದರಿಸಿದರು.

ವಿದೇಶಿ ವಸ್ತ್ರಮಾರುವವರ ಕಾಲುಹಿಡಿದರು!

ಕಾನ್‌ಪುರದಲ್ಲಿ ಎರಡು ದಿನಗಳ ಹರ್ತಾಳ ಕಳೆದ ಮರುದಿನ ಬಾಗಿಲು ತೆರೆಯುತ್ತಲೇ ಒಬ್ಬನು ಸಿಕ್ಕಾಪಟ್ಟೆ ಸ್ವಯಂಸೇವಕರನ್ನು ಕರೆದನು ಒಡನೆ ಕೆಲವು ಮಂದಿ ಕೊಂಗ್ರೆಸ್‌ವಾಲರು ನೆಟ್ಟಗೆ ವಿದೇಶಿ ವಸ್ತ್ರ ವ್ಯಾಪಾರಿಗಳ ಬಳಿ ಹೋಗಿ ಅವರ ಕಾಲು ಹಿಡಿದು ವಿದೇಶಿ ವಸ್ತ್ರ ಮಾರಬಾರದಾಗಿಯೂ ಅವುಗಳನ್ನು ಗಂಟು ಕಟ್ಟಬೇಕಾಗಿಯೂ ಅಂಗಲಾಚಿ ಬೇಡಿಕೊಂಡರು. ಒಂಭತ್ತು ಜನರು ಕೈದುಮಾಡಲ್ಪಟ್ಟರು

೫೫ ಮಂದಿ ಸ್ತ್ರೀಯರನ್ನು ಕೈದುಮಾಡಿ ಬಿಟ್ಟರು.

ಮೆರವಣಿಗೆಯನ್ನು ಮಾಡುವ ಯೋಜನೆಯನ್ನು ಮಾಡುತ್ತಲಿದ್ದ ೫೫ ಮಂದಿ ಸ್ತ್ರೀಯರನ್ನು ಕೊಂಟೈ ಎಂಬಲ್ಲಿ ಕೈದುಮಾಡಿ ಬಿಟ್ಟರು.

ಸ್ವದೇಶಿ ಲೀಗಿನ ಜಪ್ತಿ.

ನ್ಯೂ ಡಿಲ್ಲಿಯಲ್ಲಿ ಕೊಂಗ್ರೆಸ್ ಹಸ್ತಪತ್ರಿಕೆಗಳ ಶೋಧನಾರ್ಥವಾಗಿ ಅಲ್ಲಿಯ ಸ್ವದೇಶಿ ಲೀಗ್ ಮೊದಲಾದ ಸಂಸ್ಥೆಗಳು ಜಪ್ತಿಗೊಳಗಾದುವು.

೨೦೦ ರೂಪಾಯಿ ಇನಾಮು.

ಅಲ್ಲಿಯ ಕೊಂಗ್ರೆಸ್ ಮುದ್ರಣಾಲಯವನ್ನು ಯಾರು ಕಂಡುಹಿಡಿದು ಸರಕಾರಕ್ಕೆ ತಿಳಿಸುತ್ತಾರೋ ಅವರಿಗೆ ಸರಕಾರವು ೨೦೦ ರೂಪಾಯಿ ಇನಾಮು ಕೊಡುತ್ತದೆಂದು ಪ್ರಕಟಿಸಲಾಗಿದೆ

ಕೋರ್ಟಿನ ಮೇಲೆ ಧ್ವಜ.

ಕಾನ್‌ಪುರದ ಕ್ರಿಮಿನಲ್ ಕೋರ್ಟಿನಲ್ಲಿ ನ್ಯಾಯವಿಚಾರಣೆಯಾಗುತ್ತಿರುವಾಗಲೇ ಒಬ್ಬ ಸ್ವಯಂಸೇವಕನು ಕೋರ್ಟಿನ ಕಟ್ಟೋಣಕ್ಕೆ ಹತ್ತಿ ರಾಷ್ಟ್ರಧ್ವಜವನ್ನೇರಿಸಿದನು ಅವನನ್ನು ಕೈಸೆರೆ ಹಿಡಿದರು. ಗಾಂಧಿ ದಿನಾರ್ಥವಾಗಿ ಹಿಂದೂಗಳು ಹರ್ತಾಳವನ್ನಾಚರಿಸಿದರು.

ಗಾಳಿಪಟವೋ ಧ್ವಜವೋ?

ಅಲ್ಲಹಾಬಾದಿನಲ್ಲಿ ತ್ರಿವರ್ಣದ ರಾಷ್ಟ್ರಧ್ವಜವೊಂದರ ಗಾಳಿಪಟವನ್ನು ಮಾಡಿ ಅಲ್ಲಿಯ ಕ್ಲಾಕ್ ಟವರಿನ ಮೇಲೆ ಹಾರಬಿಟ್ಟರು, ಅದರ ನೂಲನ್ನು ಕಡಿದುಬಿಟ್ಟು ಯಾರಿಗೂ ಎಟಕದಂತೆ ಮಾಡಿರುವರು.

ಮುಂಬಾಯಿಯಲ್ಲಿ ಸೆರೆ.

ಗಾಂಧೀ ದಿನಾರ್ಥವಾಗಿ ಮುಂಬಾಯಿಯಲ್ಲಿ ಮೆರವಣಿಗೆ ಸಭೆ ಮುಂತಾದುವುಗಳಾಗುವ ಹವಣಿಕೆಯಾಯಿತು ೫೦ ಕ್ಕಿಂತಲೂ ಹೆಚ್ಚಿನ ಕೈದುಗಳಾದುವು

ಮೂಕ.

ಮುಂಬಾಯಿಯಲ್ಲಿ ಗಾಂಧಿ ದಿನಾಚರಣೆಗಾಗಿ ಒಬ್ಬ ಹುಡುಗನು ಕೊಂಗ್ರೆಸ್ ಬಾವುಟೆಗಳನ್ನು ಹಿಡಿದುಕೊಂಡು ಬಹಳ ಚಟುವಟಿಕೆಯಿಂದ ಕೆಲಸಮಾಡುತ್ತಿದ್ದಂತೆ ತೋರುತ್ತಿತ್ತು ಅವನನ್ನು ಸೆರೆಹಿಡಿದರು. ಅವನು ಮಾತನಾಡಲೇ ಇಲ್ಲ ಕೊಂಗ್ರೆಸ್ ಪದವನ್ನು ಹೇಳಲೂ ಇಲ್ಲ ಕಡೆಗ ಅವನು ಮೂಕನೆಂದು ತಿಳಿದುಬಂತು ಕೆಲವು ಕೈದುಗಳಾಗಿವೆ

ಸಂಶಯದ ಮೇಲೆ ಹಿಡಿದರು.

ಅಹ್ಮದಾಬಾದಿಗೆ ಮುಂಬಾಯಿಂದ ೧೦ ಮಂದಿಗಳು ಕೊಂಡೊಯ್ಯಲ್ಪಟ್ಟರು ಪಿಕೆಟಿಂಗಿಗಾಗಿ ಅವರನ್ನು ತಂದರೆಂದು ವಾರ್ತೆ ಹರಡಿತು. ಅವರನ್ನು ಕೈದುಮಾಡಿದರು. ಕೊನೆಗೆ ನೋಡುವಾಗ ಅವರು ಪಿಕೆಟಿಂಗಿಗಾಗಿ ಬಂದವರಲ್ಲವೆಂದೂ ಮಿಲ್ಲಿನ ಒಂದು ಕೆಲಸಕ್ಕೆ ಕೊಂಡೊಯ್ಯಲ್ಪಟ್ಟವರೆಂದೂ ತಿಳಿದು ಬಂತು.

೫ ಮತ್ತು ೧೮.

ಕಲ್ಕತ್ತದಲ್ಲಿ ೫ ಮಂದಿಗಳನ್ನು ಕೈದುಮಾಡಿದರು. ೧೮ ಮಂದಿಗಳನ್ನು ಶಿಕ್ಷೆಯೊಡನೆ ಸರೆಮನೆಗೊಯ್ದರು.

ಸಭೆಗೂಡಿದರು—ಚದರಿದರು.

ತಿನ್ನವೆಲ್ಲಿಯಲ್ಲಿ ಸುಮಾರು ೩೦೦ ಜನರು ಸೇರಿ ಒಂದು ಸಭೆಗೂಡಿದರು. "ವಂದೇ ಮಾತರಂ" ಗಾಂಧಿಕೀ ಜೈ' ಅರ್ಭಟಿಸಿದರು ಅದನ್ನು ಕೇಳಿ ಪೋಲೀಸರ ಫೌಜು ಬಂದಿತು. ಪೋಲೀಸರು ತಲಪುವಷ್ಟರಲ್ಲಿ ಸಭೆಯು ಚದರಿದ್ದಿತು. ಕೊಂಗ್ರೆಸ್ ಬಾವುಟಗಳು ಅಲ್ಲಲ್ಲಿ ಏರಿಸಲ್ಪಟ್ಟವು

ದೂರ ಒಯ್ದರು' ರೈಲು ಹತ್ತಿ ಪುನಃ ಬಂದರು.

ಅಹ್ಮದಾಬಾದಿನ ವಾರ್ತೆ ಅಲ್ಲಿಯ ಭಾವಾನಗರದ ಬಳಿ ಕಥಿಯಾವಾರಿನ ಪ್ರಮುಖ ಮುಂದಾಳುಗಳಾದ ಶ್ರೀ ಫುಲ್ ಚಂದ್ ಷಹಾ ಮತ್ತು ಸ್ವಾಮಿ ಶಿವಾನಂದರೆಂಬವರು ಪಿಕೆಟಿಂಗನ್ನು ಏರ್ಪಡಿಸುವುದರಲ್ಲಿದ್ದರಂತೆ ಅದನ್ನು ತಿಳಿದು ಅವರು ಬ್ರಿಟಿಷ ಸೀಮೆಯ ಹೊರಗೆ ೨೪ ತಾಸುಗಳೊಳಗ ಹೋಗಬೇಕೆಂದಪ್ಪಣೆ ಸಿಕ್ಕಿತು. ಅವರು ಆ ಅಪ್ಪಣೆಯನ್ನು ಕಿವಿಗ ಹಾಕಿಕೊಳ್ಳಲಿಲ್ಲ ಅದಕ್ಕಾಗಿ ಅವರನ್ನು ಕೈದುಮಾಡಲಾಯಿತು ಬ್ರಿಟಿಷ ಸಂಸ್ಥಾನದ ಹೊರಕ್ಕೆ ಅವರನ್ನು ಕಾರಿನಲ್ಲಿ ಕೊಂಡು ಹೋಗಿ ಬಿಟ್ಟರು. ಆವರೆ ಅಪಾದಿತರು ಸಂಜೆಯಾಗುತ್ತಲೇ ರೈಲು ಹತ್ತಿ ಊರಿಗೆ ಬಂದು ಬಿಟ್ಟರು.

ದೇವಸ್ಥಾನ ಜಪ್ತಿ!

ಅಹ್ಮದಾಬಾದಿನ ಬ್ರೋಚ್ ಜಿಲ್ಲೆಯಲ್ಲಿ ಕೆಲವು ಕೊಂಗ್ರೆಸ್ ಕೆಲಸಗಾರರಾದ ಸ್ತ್ರೀಯರು ಒಂದು ದೇವಸ್ಥಾನದಲ್ಲಿ ವಾಸವಾಗಿದ್ದರು ಅವರನ್ನು ಅಲ್ಲಿಂದ ಹೊರಗೆ ಹೋಗಬೇಕೆಂದು ಹೇಳಲು ಅದಳಿತೆದಾರರಿಗೆ ಸರಕಾರವು ಹೇಳಿತು ಆದರೆ ಅಡಳಿತೆದಾರರು ಅದಕ್ಕೆ ತಪ್ಪಿದರು. ಒಡನೆ ದೇವಸ್ಥಾನ ಜಪ್ತಿ ನಡೆಯಿತು ಸಾಮಾನುಗಳು ವಶೀಕರಿಸಲ್ಪಟ್ಟುವೆಂದು ವಾರ್ತೆ

ಗಾಂಧಿಜೀಯ ದತ್ತ ಪುತ್ರಿಗೆ ಶಿಕ್ಷೆ.

ಸೂರತ್ತಿನಲ್ಲಿ ಗಾಂಧಿಜೀಯವರ ಪುತ್ರಿಯಾದ ಲಕ್ಷ್ಮಿ ಎಂಬ ಅಸ್ಪೃಶ್ಯರ ಹುಡುಗಿಯೊಬ್ಬಳನ್ನು ಕೈದುಮಾಡಿದರು ಅವಳೊಡನೆ ಶ್ರೀಮತಿ ಲೀಲಾವತಿ ಅಸರ್ ಲಕ್ಷ್ಮೀದೇವಿ ಎಂಬವರೂ ಕೈದುಮಾಡಲ್ಪಟ್ಟರು.

೨೩ನೇ ಡಿಕ್ಟೇಟರನಿಗೆ ಶಿಕ್ಷೆ.

ಲಾಹೋರಿನಲ್ಲಿ ಎಂಟು ಮಂದಿ ಕೊಂಗ್ರೆಸ್‌ವಾಲರಿಗೆ ಶಿಕ್ಷೆಯಾಯಿತು ಅಲ್ಲಿಯ ಕೊಂಗ್ರೆಸ್ಸಿನ ೨೩ನೇ ಸರ್ವಾಧಿಕಾರಿಗೂ ೯ ತಿಂಗಳು ಶಿಕ್ಷೆ ಮತ್ತು ೨೫೦ ರೂಪಾಯಿ ಜುಲುಮಾನೆ

೧೪ ವರುಷದ ಪೋರರು.

ಕಲ್ಕತ್ತದಲ್ಲಿ ೧೪ ವರುಷದ ಕೆಲಹುಡುಗರು ಕೂಡಿ ಒಂದು ಮೆರವಣಿಗೆ ಮಾಡಿದರು ೫ ಮಂದಿಗಳ ತಂದೆತಾಯಿಗಳು ತಮ್ಮ ಮಕ್ಕಳ ಪೋಲೀಸ ಜುಲುಮಾನೆಯನ್ನು ಏಕೆ ತರುವಂತೆ ಮಾಡಬಾರದು? ಎಂದು ನೋಟೀಸು ಹೋಗಿದೆ

೮೦೦೦ ರೂ.!

ರಂಗೂನಿನಲ್ಲಿ ಒಂದು ಅಂಗಡಿಯಲ್ಲಿ ಸ್ವದೇಶಿ ಭಂಡಾರದ ೮೦೦೦ ರೂಪಾಯಿಯ ಠೇವಣಾತಿ ಇತ್ತು ಅದನ್ನು ಹೊರಗೆ ಉಪಯೋಗಿಸಬಾರದಾಗಿ ಅಪ್ಪಣೆ' ಇದು ಕೊಂಗ್ರೆಸ್ ಸಮಿತಿಯ ಹಣವಂತೆ

ಕೋರ್ಟಿನೊಳಗೆ ಧಾಳಿ'

ತಂಜಾವೂರಿನಲ್ಲಿ ಶ್ರೀ ಎಮ್ ಎ. ನಟರಾಜ ಉದಯರ್ ಎಂಬವರೊಬ್ಬರು ಹಸ್ತ ಪತ್ರಿಕೆಗಳನ್ನು ಹಿಡಿದುಕೊಂಡು ಡಿಸ್ಟ್ರಿಕ್ಟ್ ಕೋರ್ಟು ಮೊದಲಾದ ಅಫೀಸು ಅಧಿಕಾರಿಗಳ ಬಳಿ ಹೋಗಿ ಅವುಗಳನ್ನು ಅವರ ಮೇಜಿನ ಮೇಲಿಟ್ಟು ಹಂಚುತ್ತಾ ಹೋದರು. ಪರದೇಶಿ ವಸ್ತ್ರಗಳನ್ನು ಬಹಿಷ್ಕರಿಸಬೇಕೆಂದು ಅದರ ಬೋಧನೆ. ಕೂಡಲೇ ಪೋಲೀಸರಿಗೆ ವರ್ತಮಾನ ತಲಪಿಸಲ್ಪಟ್ಟಿತು. ನಟರಾಜರನ್ನು ಕೈದುಮಾಡಿದರು

ಮೂಗಿಗೆ ಪೆಟ್ಟು ಬಿದ್ದ ಮೇಲೆ—

ತಿನ್ನವೆಲ್ಲಿಯಲ್ಲಿ ಶ್ರೀ ವಿ ಶಂಕರನ್ ಎಂಬವರು ಪಿಕೆಟ್ ಮಾಡಿದರು ಸಬ್ ಇನ್ಸ್‌ಪೆಕ್ಟರ್ ಸುಬ್ರಹ್ಮಣ್ಯ ಚೆಟ್ಟಿಯಾರ್ ಮತ್ತಿಬ್ಬರು ಪೋಲೀಸರು ಅವರಿಗೆ ಹೊಡೆದರು ತನ್ನ ಮೂಗಿಗೆ ಪೆಟ್ಟು ಬಿತ್ತೆಂದೂ ಅದು ಕಾಯಿದೆಗೆ ವಿರೋಧವೆಂದೂ ಶಂಕರನ್‌ರು ಈಗ ಸಬ್ ಇನ್ಸ್‌ಪೆಕ್ಟರ್ ಮತ್ತು ಪೋಲೀಸರ ಮೇಲೆ ವ್ಯಾಜ್ಯ ಹೂಡಿರುವರು ಮೂಗಿಗೆ ಪೆಟ್ಟು ಕೊಡುವುದು ಕಾನೂನು ಕ್ರಮಕ್ಕೆ ವಿರೋಧವಲ್ಲವೋ ಎಂಬ ಕೇಳಿಕೆಯು ಹೋಮ್ ಮೆಂಬರಿಗೂ ಮೆಜಿಸ್ಟ್ರೇಟರಿಗೂ ಹೋಗಲಿದೆ ತಿನ್ನವೆಲ್ಲಿ ಪಟ್ಟಣದಲ್ಲಿ ೬ ದಿನಗಳ ಹರ್ತಾಳವು ನಡೆಯಿತು

ಕೋರ್ಟಿನೊಳಗೆ ಹೊಕ್ಕಿದ

ಮಧುರೆಯ ಕೋರ್ಟಿನೊಳಗೆ ಸ್ವಯಂಸೇವಕರ ನ್ಯಾಯವಿಚಾರಣೆಯಾಗುತ್ತಿದ್ದಿತು ಆಗ ಶ್ರೀ ಅರ್ಮುಗ ಕೋನೆ ಎಂಬ ಸ್ವಯಂಸೇವಕನೊಬ್ಬನು ತಟ್ಟನೆ ಕೋರ್ಟಿನೊಳಗೆ ಹೋಗಿ ಮೆಜಿಸ್ಟ್ರೇಟರ ಎದುರು ನಿಂತು ತನ್ನ ಜೇಬಿನಿಂದೊಂದು ತ್ರಿವರ್ಣ ಧ್ವಜವನ್ನು ಹೊರತೆಗೆದು ಮೂರು ಸಲ ಘೋಷಿಸಿ, ವಕೀಲರೆಲ್ಲರೂ ವಕಾಲತನ್ನು ಬಿಡಬೇಕೆಂದನು ಮೆಜಿಸ್ಟ್ರೇಟರಿಗೂ ಅಲ್ಲಿದ್ದವರಿಗೂ ಆಶ್ಚರ್ಯವಾಯಿತು ಅವರು ದಿಗಿಲುಗೊಂಡ ಹಾಗೆಯೇ, ಸಬ್ ಇನ್ಸ್‌ಪೆಕ್ಟರು ಬಂದು ಆಪಾದಿತನನ್ನು ಹಿಡಿದರು

ಮಧುರೆಯಲ್ಲಿ ಕೈ ಕೈ ಆಯಿತು.

ಮಧುರೆಯ ವತ್ರಾಪ್ ಎಂಬಲ್ಲಿಯ ಹಳ್ಳಿಯೊಂದರಲ್ಲಿ ಪಿಕೆಟಿಂಗ್ ನಡೆಯಿತು ಪೋಲೀಸರು ಪಿಕೇಟರರನ್ನು ಚದರ ಹೇಳಿದರು ತಿರಸ್ಕಾರ—ಕೂಡಲೇ ಕೈದುಗಳಿಗಾರಂಭವಾಯಿತು ಅದನ್ನು ಕಂಡು ಕೆಲವು ಪುಂಡರು ಪೋಲೀಸರಿಗೆ ಕಲ್ಲೆಸೆದರು. ಒಬ್ಬ ಪೋಲೀಸನಿಗೆ ಸರಿಯಾಗಿ ಹೊಡೆದರು: ಸರ್ಕಲ್ ಇನ್ಸ್‌ಪೆಕ್ಟರರಿಗೂ ಪೆಟ್ಟಾಯಿತು. ಅಂಗಡಿಗಳು ಮುಚ್ಚಲ್ಪಟ್ಟುವು. ರಿಜರ್ವ್ ಪೋಲೀಸ್ ಫೌಜು ಬಂತು. ೧೨ ಮಂದಿಗಳನ್ನು ಕೈದುಮಾಡಿದರು.

ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಬಾಳುವುದು.

ಬೆಳೆಯುವ ಮಕ್ಕಳು ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಬೆಳೆಯಬೇಕಾದರೆ ಅವರಿಗೆ ಸಾಮಾನ್ಯ ಆಹಾರಕ್ಕಿಂತ ಒಳ್ಳೆಯ ಆಹಾರವು ಬೇಕಾಗುತ್ತದೆ. ದೇಹದಲ್ಲಿ ಚೈತನ್ಯವೂ ಮೆದುಳಿನ ಶಕ್ತಿಯೂ ವೃದ್ಧಿಯಾಗುವುದಕ್ಕೆ ಆಹಾರವೇ ಕಾರಣವು. ಆದುದರಿಂದಲೇ ಓವಲ್ಟಿನ್ ನಿಮ್ಮ ಮಕ್ಕಳ ನಿತ್ಯದ ಪಾನೀಯವಾಗಿದೆ.

ಓವಲ್ಟಿನ್ ಬಹಳ ರುಚಿಕರವಾದ ಪಾನೀಯವು. ಅದು ಆರೋಗ್ಯಲಾಭಕ್ಕೆ ಬೇಕಾಗುವ ಪೋಷಣೆಯ ಸುಲಭ ಜೀರ್ಣವಾಗುವ ವಸ್ತುಗಳನ್ನು ಸಮತೂಕದಿಂದ ಒದಗಿಸಿಕೊಡುತ್ತದೆ. ಅದು ನಿಸರ್ಗದ ಅತ್ಯುತ್ತಮ ಆಹಾರಗಳಿಂದಲೇ ತಯಾರಿಸಲ್ಪಟ್ಟಿದೆ. ಅದರ ಸುಪರಿಮಳದಿಂದ ಮಕ್ಕಳು ಆಹ್ಲಾದಗೊಳ್ಳುತ್ತವೆ. ಅವುಗಳು ಓವಲ್ಟಿನ್ ಕುಡಿಯುವುದರಿಂದ ಅಸಮಾನರೀತಿಯಿಂದ ಘಟ್ಟಿಯಾಗಿಯೂ ಆರೋಗ್ಯವಾಗಿಯೂ ಸಂತೋಷವಾಗಿಯೂ ಬೆಳೆಯುತ್ತವೆ.

ನಿಮ್ಮ ಮಕ್ಕಳಿಗೆ ಚಾ ಕಾಫಿ ಇತ್ಯಾದಿಗಳ ಬದಲಿಗೆ ಶುದ್ಧ ಮತ್ತು ಸಂಪೂರ್ಣವಾದ ಓವಲ್ಟಿನ್ನನ್ನು ಕೊಡಿರಿ. ಅದು ಅವರಿಗೆ ಎಲ್ಲಾ ವಿಧದಿಂದಲೂ ಒಳ್ಳೆಯದು.

ಅತೀ ಶುದ್ಧ—ಅತ್ಯುತ್ತಮ ಕರಸ್ಪರ್ಶಿತವಾಗಿರುವುದಿಲ್ಲ

ರುಚಿಕರವಾದ ಓವಲ್ಟಿನ್ನಿಗೆ ಸರಿಸಮಾನವಾದ ಬೇರೊಂದು ಪಾನೀಯವಿಲ್ಲ. ಸಪ್ರಮಾಣದಿಂದ ತಯಾರಿಸಲ್ಪಡದ ನಕಾರಿ ಮಾಲುಗಳನ್ನು ತಿರಸ್ಕರಿಸಿರಿ.

OVALTINE
TONIC FOOD BEVERAGE

ಏಜಂಟರು—ಜೇಮ್ಸ್ ... ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಜೇಮ್ಸ್‌ರೈಟ್, ೫೨ ರಿಪನ್ ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬೈ ಮದ್ರಾಸ್ ರಂಗೂನುಗಳಲ್ಲಿ

ಮಕ್ಕಳು ಓವಲ್ಟಿನ್ ರೊಟ್ಟಿಗಳನ್ನು ತಿನ್ನಲು ಸಂತೋಷಗೊಳ್ಳುತ್ತವೆ. ಈ ರೊಟ್ಟಿಗಳು ಬಹಳ ಪರಿಮಳವಿದ್ದು ಆರೋಗ್ಯಕರ ವಸ್ತುವಿನಿಂದ ಕೂಡಿದೆ. ಇವುಗಳನ್ನು ಓವಲ್ಟಿನ್ ಜೊತೆಯಾಗಲೀ ಚಾ ಕಾಫಿಯೊಡನೆಯಾಗಲೀ ಸೇವಿಸಿ. ಇವುಗಳು ಹಲ್ಲುಗಳಿಗೂ ಒಳ್ಳೇದು ಮತ್ತು ಬಿಸ್ಕುಟುಗಳಿಗಿಂತಲೂ ಉತ್ತಮ.

OV/58

ಈಗ ತಾನೇ ಅಚ್ಚಾಗಿ ಬಿಕರಿಗೆ ಸಿದ್ಧವಾಗಿದೆ

ಕಾಮದ ಗುಟ್ಟು

ಸುಂದರ ಚಿತ್ರಗಳ ಸಹಿತ

ಲೇಖಕರು—ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ—ಪಂಡಿತ ತಾರಾನಾಥರವರ ಮುನ್ನುಡಿಯೊಡನೆ.

ದಾಂಪತ್ಯದ ಸಿವಾಗಿಂಗ ಸುಖಗಳನ್ನು ಭೋಗಿಸಬೇಕಾದವರು ಇದನ್ನು ಓದಲೇಬೇಕು. ವಿವಾಹಿತರಿಗೂ, ಅವಿವಾಹಿತರಿಗೂ, ಗಂಡಸರಿಗೂ, ಹೆಂಗಸರಿಗೂ ಅವಶ್ಯಕವಾಗಿ ಬೇಕಾಗಿರುವ ಪ್ರಶ್ನೆಗಳ ಮತ್ತು ಉತ್ತರಗಳ ಪುಸ್ತಕ. ಬ್ರಹ್ಮಚಾರಿಗಳಿಗೂ ಉತ್ತಮ ಕೈದೀವಿಗೆ. ಅಂತರಂಗದಲ್ಲಿ ಕೊರಗಿಸುತ್ತಿರುವ ಗುಪ್ತವ್ಯಾಧಿಗಳಿಗೆ ಪಾಶ್ಚಿಮಾತ್ಯ ಹೈಂದವ ದೃಷ್ಟಿಗಳಿಂದ ಚಿಕಿತ್ಸೆ ಮಾಡುವ ಸುಲಭ ವೈದ್ಯ. ಇಂಥಾ ಪುಸ್ತಕವನ್ನು ಇದುವರೆಗೂ ಯಾರೂ ಬರೆದೇ ಇಲ್ಲ.

ಫಲವಿಲ್ಲದ್ದರೂ ಬಹುಜನರಿಗೆ ಪ್ರಯೋಜನವಾಗಲೆಂದು ಬೆಲೆ ಯೋಗ್ಯ ಬೆಲೆ ಮಾತ್ರವೆ

ಅಂಚೆವೆಚ್ಚ ಪ್ರತ್ಯೇಕ

ವ್ಯಾಪಾರಸ್ಥರಿಗೆ ಧಾರಾಳವಾಗಿ ಕಮಿಶನು ದೊರೆಯುತ್ತದೆ

ಬೇಗನೇ ಬರೆದು ತರಿಸಿಕೊಳ್ಳಿರಿ!

ವಿ. ಶೆಟ್ಟಿ, ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ALLIANZ Und STUTTGARTER
Life Insurance Bank, Ltd

ಅಲಿಆನ್ಸ ಉಂಡ ಸ್ಟುಟಗಾರ್ಟರ

ಲೈಫ್ ಇನ್ಸೂರೆನ್ಸ ಬ್ಯಾಂಕ ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೫೪ರಲ್ಲಿ ಸ್ಥಾಪಿಸಲ್ಪಟ್ಟಿದು)

ಒಟ್ಟು ವಿಮಾ ಹಣವು ೩೦೯ ಕೋಟಿ ರೂಗಳಿಗಿಂತ ಹೆಚ್ಚಾಗಿರುವದು. ವಾರ್ಷಿಕ ವಿಮಾ ಹಪ್ತಗಳ ಹಣವು ೯೯ ಕೋಟಿ ರೂಗಳಿಂತ ಹೆಚ್ಚಿಗಿರುವುದು. ಒಟ್ಟು ಪ್ರಾಪ್ತಿ ೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು.

ವಿಮಾಪತ್ರಕಗಳ ಮೇಲಿನ ಕಾಯ್ದಿಟ್ಟ ಕೇವುಗಳ ಹಿಂದೀ ಕಾರಣಗಳಲ್ಲಿಯೇ ತೊಡಗಿಸಲ್ಪಡುವುವು.

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ, ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು. ಹೆಚ್ಚಿನ ಮಾಹಿತಿಗಾಗಿ ಮೆ॥ ರವಾನಜಿ ಆ್ಯಂಡ್ ಸನ್ಸ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲೈಫ್ ಇನ್ಸೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸುಗ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು.

ಹುಡುಗರಿಗೂ ಹುಡುಗಿಯರಿಗೂ ಮನೋರಂಜಕವಾದ

ಪದ್ಯಪುಸ್ತಕ!

ಕನ್ನಡ ಪದ್ಯರತ್ನಾವಳಿ (ಪ್ರಥಮ ಭಾಗ)

(ಶ್ರೀ ಜಿ ಎನ್ ಲಕ್ಷ್ಮಣ ಪೈ ವಿರಚಿತ)

ಕ್ರಯ ೦—೩—೬

ಮಕ್ಕಳ ಮೆಚ್ಚಿನ ಕಥೆಗಳನ್ನು, ನೀತಿಸಾರಗಳನ್ನು ಲಲಿತವಾದ ಭಾಷೆಯಲ್ಲಿ ಸರಳವಾದ ಶೈಲಿಯಲ್ಲಿ ಒಳಗೊಂಡ ಕವಿತಾಗ್ರಂಥ!

ಮದರಾಸು ಮುಂಬಯಿ ಸರಕಾರದವರು ಇದನ್ನು ಪದ್ಯಪುಸ್ತಕವಾಗಿ ಮಂಜೂರು ಮಾಡಿದ್ದಾರೆ.

ಹೆಚ್ಚಿನ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ—

ಹರಿಹರ ಛಾಪಖಾನೆ, ಪುತ್ತೂರು. (ದ. ಕ)

ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು.

The Canara Bank, Ltd Puttur

ದಿ ಕೆನರಾ ಬೇಂಕ್ ಲಿಮಿಟೆಡ್, ಪುತ್ತೂರು.

NOTICE.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲಗಳನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದೆ ಇರುವುದರಿಂದಲೂ ಸದರಿಯವರು ಮೃತಪಟ್ಟದರಿಂದ ವಾರಿಸ್ದಾರರಿಗೆ ನೋಟೀಸು ಕೊಟ್ಟರೂ ಸಾಲಗಳನ್ನು ಕೊಡದೆ ಇರುವುದರಿಂದಲೂ, ಸದರಿ ನಗಗಳನ್ನು ಇದೇ 1932ನೇ ಇಸವಿ ಎಪ್ರಿಲ್ ತಾರೀಕು 23ನೇ ಶನಿವಾರ ದಿವಸ ಮಧ್ಯಾಹ್ನ ಗಂಟೆ 12ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಜಂಗಮ ನಂಬ್ರ ೧ ಲೋನ್ ೬೧/೩೦ ಹೆಸರು—Pernemogru Shrinivasa Pai Adopted son of Malappa Pai Merchant Puttur ಅಸಲು ರೂಪಾಯಿ ೧೬೫ ತಾ ೧೬ ೭ ೩೧ರಿಂದ ತಾ ೨೩—೪ ೩೨ರ ವರೆಗಿನ ಬಡ್ಡಿ

ಜಂಗಮ ನಂಬ್ರ ೨ ಲೋನ್ ನಂಬ್ರ ೧೬೫/೩೦ Pernemogru Shrinivasa Pai Adopted son of Malappa Pai Merchant Puttur ಅಸಲು ರೂಪಾಯಿ ೬೫ ತಾ ೧—೯ ೩೧ರಿಂದ ತಾ ೨೩—೪ ೩೨ರ ವರೆಗಿನ ಬಡ್ಡಿ

ಈ ನೋಟೀಸಿನ ಖರ್ಚು ಬೇರೆ

Canara Bank Ltd
Puttur 5—4—1932

U. Hari Shenoy,
Agent

ಗಾಂಧಿಜೀಯವರನ್ನು ಅಮೆರಿಕದವನೊಬ್ಬನು ಭೇಟಿಯಾದಾಗ...

ಗಾಂಧಿಜೀಯವರು ತಾರೀಕು ೨೯-೮-೧೯೩೧ರಲ್ಲಿ ಲಂಡನಿಗೆ ತೆರಳಿದ್ದರಷ್ಟೆ. ಅವರೊಡನೆ ಇಂಗ್ಲೆಂಡಿನ ವರೆಗೆ ಹೋಗಿದ್ದ ಒಬ್ಬ ಅಮೆರಿಕನು ಬರೆದ ಲೇಖನವಿದು.

ಅಮೆರಿಕದಲ್ಲಿ ಅನೇಕ ಗಾಂಧಿ ಭಕ್ತರಿರುವರು. ಗಾಂಧಿಗೀತೆಯೇ ಇವರ ನಿತ್ಯ ಪಠಣ. ಗಾಂಧಿಜೀಯವರನ್ನು ಇದ್ದಕ್ಕಿದ್ದ ಹಾಗೆ ವರ್ಣಿಸುವುದರಲ್ಲಿ ಇವರು ಎಲ್ಲಾ ಜನಾಂಗದವರಿಗಿಂತಲೂ ಉದಾರಿಗಳು.

"ಗಾಂಧಿಯವರು ದಯಾಳುವು ನಮ್ರರು— ವಿನೀತರು— ವಿನಯ ಸಂಪನ್ನರು. ಅವರನ್ನು ಬೇರಾವ ರೀತಿಯಲ್ಲಿ ವರ್ಣಿಸಲು ಶಬ್ದಗಳಿಲ್ಲ" ಎಂದು ಲೇಖಕರೆನ್ನುತ್ತಾರೆ

ಮುಂಬಾಯಿಯಲ್ಲಿ ಕೋಲಾಹಲ.

"ಗಾಂಧಿಯವರು ಮುಂಬಾಯಿಯಲ್ಲಿ ಜಹಜನ್ನು ಹತ್ತುತ್ತಾರೆ" ಎಂಬ ಈ ವಾರ್ತೆಯು "ರಜಪುತಾನ"ದ ಪ್ರಯಾಣಿಕರನ್ನು ವಿದ್ಯುಚ್ಛಕ್ತಿಯಿಂದೆಂಬಂತೆ ಆವೇಶಕ್ಕೀಡುಮಾಡಿತು. ಸ್ಟೀಮರಿನಲ್ಲಿ ಶಾಂಘೈ, ಹೊಂಗ್‍ಕೊಂಗ್, ಸಿಂಗಾಪುರ್, ಪಿನಾಂಗ್, ಕೊಲಂಬೊ ಮತ್ತು ಮಾರ್ಸೇಲ್ಸ್‌ಗಳಿಗೆ ಹೋಗುವವರಿದ್ದರು.

ಮರುದಿನ ಮಧ್ಯಾಹ್ನಕ್ಕೆ ನಾವು ಹೊರಡುವುದೆಂದು ತಿಳಿಯಬಂತು. ಅಂದಿನ ದಿನ ಬೆಳಿಗ್ಗೆ ಹತ್ತು ಘಂಟೆಯೊಳಗೆ ಮುಂಬಾಯಿಯು ಬೊಬ್ಬಿಡುವ ಜನಜಲಧಿಯಂತಾಯಿತು. ಎಲ್ಲೆಲ್ಲಿಯೂ ಜನಸ್ತೋಮ! ಸುಮಾರು ನೂರು ಸಾವಿರದಿಂದ ಮೂರು ಲಕ್ಷದ ಜನಭರಿತವಾಗಿ ಇಡೀ ಮುಂಬಾಯಿಯು ಪ್ರಾಕಾರಾಂತವಾಗಿ ಶೋಭಿಸುತ್ತಿದ್ದಿತು. ಇಷ್ಟು ಜನರೂ ಬಲ್ಲಾರ್ಡ್ ಪಿಯರ್ ಬಳಿ ಸೇರಿ ತಮ್ಮ ಪವಿತ್ರ ಮೂರ್ತಿಗೆ ಶುಭಾಶೀರ್ವಚನಗಳನ್ನೀಯಲು ಸಿದ್ಧರಾಗಿದ್ದರು. ಪಾಶ್ಚಾತ್ಯ ಲೋಕವು ಇಂತಹ ಉಜ್ವಲ ನೋಟವನ್ನು ಇಲ್ಲಿಯ ತನಕ ನೋಡಿಲ್ಲವೆಂದು ಹೇಳಬಹುದು. ಜನಸಂದಣಿಯು ಹಾಹಾಕಾರವನ್ನೂ ಭ್ರಮೆಯನ್ನೂ ಅದರೊಡನೆ ಆಶ್ಚರ್ಯಾನ್ವಿತವನ್ನೂ ಹೊಡೆದೆಬ್ಬಿಸುತ್ತಿದ್ದಿತು. ಘಂಟೆ ಹನ್ನೆರಡಾಗುತ್ತಿರುವಾಗ ಸ್ಟೀಮರಿನಲ್ಲಿ, ಬಂದರದಲ್ಲೂ ಆಗುತ್ತಿದ್ದ ನೂಗ್ಗಾಟ ತಿಕ್ಕಾಟಗಳು ಅಸಹನೀಯವಾದುವು. ಗಾಂಧಿಯವರು ಸ್ಟೀಮರನ್ನು ಹತ್ತುತ್ತಿದ್ದಾಗ ಬಾಗಿಲಲ್ಲಿ ಯುವತಿಯರು ಒಪ್ಪ ಅಂದವಾದ ಜಂಡಾಗಳನ್ನು ಎತ್ತಿ ಹಿಡಿದುಕೊಂಡು ಕಮಾನು ಕಟ್ಟಿದರು — ಹಾ! ಸಂತರು ಹೊರಡಿದರು!!—ಅವರು ಸ್ಟೀಮರಿನ ಬಾಗಿಲ ಕಡೆ ನಡೆಯುತ್ತಿದ್ದಾಗ ಜನಜಲಧಿಯು ಆವೇಶದ ಜಯಘೋಷವು ಘಂಟಾಘೋಷವಾಗಿ ಆಕಾಶದಲ್ಲಿ ಮಾರ್ದನಿಯನ್ನಿತ್ತಿತು. ನಿಮಿಷ ನಿಮಿಷಕ್ಕೆ ಜಯಘೋಷ! ನಿಮಿಷ ನಿಮಿಷಕ್ಕೆ ಆನಂದಘೋಷ! ಗಾಂಧಿಯ ಸಂದರ್ಶನಾರ್ಥವಾಗಿ ಇಡೀ ಜನಸಾಮ್ರಾಜ್ಯವು ಕುತೂಹಲಾಧಿಕ್ಯದಿಂದ ತಳಮಳಿಸಿತು—ತಲ್ಲಣಿಸಿತು. ಏಕೆ, ಗಾಂಧಿಯವರು ತನ್ನ ಸ್ವತಃ ಅನುಯಾಯಿಗಳಿಂದಲೇ ಜಜ್ಜಲ್ಪಟ್ಟೆಂತಾದರು. ಅವರೆಲ್ಲರೂ ಗಾಂಧಿಯವರ ಪಾದಸ್ಪರ್ಶವನ್ನು ಮಾಡಲು ಹೋರಾಡಿ ಮುಂದೆ ಬಂದರು. ಏನಿಲ್ಲದಿದ್ದರೂ ಅವರನ್ನು ನೋಡಿಬಿಡಬೇಕೆಂದಾದರೂ ಒಯ್ಸಿ ದೇಹದ ಹಂಗು ತೊರೆದು ಹೋರಾಡಿದರು.

"ನನ್ನ ಅದೃಷ್ಟ"

ಗಾಂಧಿಯವರು ಜಹಜನ್ನು ಹತ್ತಿದೊಡನೆಯೇ ಅದರ ಆಫೀಸರರು ಅವರನ್ನು ಅವರ ಮಂದಿರಕ್ಕೆ ಕರೆದೊಯ್ದರು! ಸ್ವಾಮಾ ಏನೆನ್ನಲಿ! ಗಾಂಧಿಯವರ ನನ್ನ ಕೋಣೆಯ ಬಳಿಯೇ ಒಂದು ಮಂದಿರವನ್ನು ಹೊಕ್ಕರು. ನನ್ನ ಅದೃಷ್ಟವು ಚೆನ್ನಾಗಿ ನಿಂತಿತು. ಪ್ರಪಂಚ ಪ್ರಖ್ಯಾತನಾದ ಮತ್ತು ಆಧುನಿಕ ಕಾಲದ ವಿಭೂತಿಮೂರ್ತಿಯಾದ ಗಾಂಧಿಯ ಮಂದಿರದಿಂದ ಹತ್ತು ಹನ್ನೆರಡು ಅಡಿಗಳ ದೂರದಲ್ಲಿ ನಾನಿದ್ದೆ.

ತನ್ನ ವಸತಿಯನ್ನು ಆರಿಸುವುದರಲ್ಲಿ ಗಾಂಧಿಯವರು ಒಂದು ಅಭಿಪ್ರಾಯಪಟ್ಟಿದ್ದರು. ಅದೇನೆಂದರೆ — ಆದಷ್ಟು ಮಟ್ಟಿಗೆ ತಾನು ಅಮೆರಿಕನರ ಬಳಿಯೇ ಇರಬೇಕೆಂಬುದು. ಇಂತಹ ಅಭಿಪ್ರಾಯವನ್ನು ಬ್ರಿಟಿಷರ ಮೇಲಿನ ದ್ವೇಷಭಾವದಿಂದಾಗಿ ಅವರು ಮಾಡಿಟ್ಟಿದ್ದಲ್ಲ, ತನ್ನ ಭಾವನೆಗೆ ವಿರೋಧಿಗಳಾಗಿರುವವರಿಂದ ದೂರವಿದ್ದು, ಅನಾವಶ್ಯಕವಾದ ಚರ್ಚೆಗಳನ್ನು ದೂರೀಕರಿಸಲಿಕ್ಕೆಂದೇ ಅವರು ಹೀಗೆ ಮಾಡಿದರು. ದೈವವಶಾತ್ ಆ ಸ್ಟೀಮರಿನಲ್ಲಿ ನಮ್ಮದೊಂದೇ ಅಮೆರಿಕನ್ ಗುಂಪು ಇತ್ತು. ನಾವು ಭಾಗ್ಯಶಾಲಿಗಳೇ ಸರಿ.

ಅನೇಕ ವಾರ್ತೆಗಳು, ಗಾಂಧಿಯವರು ರಜಪುತಾನಕ್ಕೆ ತನ್ನ ಅನೇಕ ಆಡುಗಳನ್ನು ಕೊಂಡೊಯ್ದರು ಎಂದು ಹರಡಿದ್ದುವು. ಅವು ಬರೇ ಸುಳ್ಳು. ಅವರು ತನ್ನ ಬೇರೆ ಆಡುಗಳನ್ನು ಎಲ್ಲಿ ಅಡಗಿಸಿಟ್ಟಿದ್ದರೂ ನಾವು ಖಂಡಿತವಾಗಿಯೂ ಕಂಡುಹಿಡಿಯುತ್ತಿದ್ದೆವು.

ಅವರು ಆಡಿನ ಹಾಲನ್ನೂ, ಬೆಣ್ಣೆಯನ್ನೂ, ಖರ್ಜೂರವನ್ನೂ ಭುಂಜಿಸುತ್ತಿದ್ದರು.

ಮಹಾತ್ಮಾ ಕೆ ಗಾಂಧಿಯವರೊಡನೆ ಪ್ರಯಾಣ ಬೆಳೆಸಿದ ನಾನು ಅವರನ್ನು ಹೇಗೆ ವರ್ಣಿಸಲಿ? ಅವರು ದಯಾಳುವು. ನಮ್ರರು ವಿನೀತರು, ವಿನಯಸಂಪನ್ನರು. ಅವರನ್ನು ಬೇರಾವ ರೀತಿಯಲ್ಲೂ ವರ್ಣಿಸಲು ಶಬ್ದಗಳಿಲ್ಲ.

"ಅಮೆರಿಕಕ್ಕೆ ಬರುವುದಿಲ್ಲ"

ಮಾತಿಗೆ ಮಾತಾಗುವಾಗ ನಾವು ಕೇಳಿದೆವು—"ನೀವು ಅಮೆರಿಕಕ್ಕೆ ಯಾವಾಗ ಬರಲಿರುವಿರಿ?" ಎಂದು. ಒಂದು ನಿಮಿಷದ ತಡವರಿಕೆಯಿಲ್ಲದೆ ತನ್ನ ವಿಚಕ್ಷಣತೆಯನ್ನು ತೋರಿಸಿದ ಗಾಂಧಿಯವರು "ಅಮೆರಿಕವು ನನ್ನ ಆದೇಶ ಸಂದೇಶಗಳನ್ನು ಸ್ವೀಕರಿಸಲು ಇನ್ನೂ ಸಿದ್ಧವಾಗಿಲ್ಲ. ಅಮೆರಿಕವು ಸ್ವಾವಲಂಬಿಯಾಗಿ ಸಂತುಷ್ಟಿಯಿಂದಿದೆ; ಪ್ರವರ್ಧಿಸುತ್ತಿದೆ. ಆದುದರಿಂದ ನಾನು ಅಲ್ಲಿಗೆ ಹೋಗುವ ಆಗತ್ಯವು ನನಗಿಲ್ಲ. ನಾನು ಅಮೆರಿಕಕ್ಕೆ ಹೋದರೆ ಕೆಲವು ಜನರು ನನ್ನ ಮೇಲೆ ಉದ್ರೇಕಗೊಂಡಾರೆಂದೂ ನನಗೆ ನಷ್ಟ ಮಾಡುವರೆಂದೂ ನನ್ನ ಕೆಲವು ಮಿತ್ರರು ಹೇಳುತ್ತಾರೆ. ಆದುದರಿಂದ ನಾನು ಅಲ್ಲಿಗೆ ಈಗ ಬರಲಾರೆ—ಆದರೂ ನಿಮ್ಮ ದೇಶವನ್ನು ನೋಡಬೇಕೆಂದು ನನಗೆ ಮನಸ್ಸಿದೆ."

ಗಾಂಧೀ ಸ್ತೋತ್ರ.

ಗಾಂಧಿಯವರು ದಯಾಳುವು, ನಮ್ರರು, ವಿನೀತರು, ವಿನಯಸಂಪನ್ನರೆಂದು ಹೇಳಿದೆನಷ್ಟೆ. ಅದಕ್ಕೆ ಇಲ್ಲಿ ಸಕಾರಣಗಳಿವೆ.

ಅವರ ಭಾವಚಿತ್ರವನ್ನು ತೆಗೆಯುವುದಕ್ಕೆ ಮಾಡಿದ ಒಂದು ಅತಿಕ್ರಮವನ್ನಾದರೂ ಅವರು ತಡೆಯಲಿಲ್ಲ. ಅವರೊಡನೆ ಮಾತನಾಡಬೇಕೆಂದಾಶಿಸಿದ ಒಬ್ಬನನ್ನಾದರೂ ಅವರು ಹಿಂದೆ ಕಳುಹಲಿಲ್ಲ. ತನ್ನ ಎದುರೆದುರು ತಮಾಷೆ ಮಾಡಿದ ವ್ಯಕ್ತಿಯೊಬ್ಬನಿಗೆ ಅವರು ಒಂದು ಕಠಿಣ ಮಾತನ್ನೂ ಹೇಳಲಿಲ್ಲ. ಪ್ರತಿಯೊಂದಕ್ಕೆ ೧೫೦೦೦ ಚಂದಾದಾರರಿರುವ ತನ್ನ ಎರಡು ವಾರ್ತಾಪತ್ರಿಕೆಗಳ ಲೇಖನಗಳನ್ನು ಬರೆಯುವುದರಲ್ಲಿ ಅವರು ಅನವರತವೂ ಅವಸರದಿಂದಿದ್ದರಾದರೂ ಅವರ ಮಾತನ್ನು ಕೇಳಬೇಕೆಂದಿದ್ದವರಿಗೆ ಉಪದೇಶಗಳನ್ನು ಕೊಡುವುದರಲ್ಲಿ ಅವರು ಹಿಂದಾಗಲಿಲ್ಲ. ನಿಜವಾಗಿಯೂ ಹೇಳುವುದಾದರೆ ಗಾಂಧಿಯವರು ಜಹಜಿನಲ್ಲಿ ಕೊಟ್ಟ ಉಪದೇಶಗಳ ಸಮಯದಲ್ಲಿ ಅವರ ಸಂಪೂರ್ಣ ಜೀವಚೇತನವು ಕಂಡು ಬಂತು. ಅವರ ದಪ್ಪ ಕನ್ನಡಿಯ ಹಿಂಬದಿಯಿಂದ ಅವರ ತೀಕ್ಷ್ಣ ಕಣ್ಣುಗಳು ಹೊಳೆಯುವುವು, ಅವರ ಕೈಗಳು ಎದುರಿನಲ್ಲಿ ಕುತೂಹಲಾನ್ವಿತರಾಗಿ, ಕುಳಿತು, ಅವರ ಉದ್ದೇಶಾಮೃತವನ್ನುಣ್ಣುವ ಜನರಿಗೆ ವರ್ಣನೆಯ ಸಂಜ್ಞೆಗಳನ್ನು ಮಾಡುವುವು.

ಗಟ್ಟಿಮುಟ್ಟಿನ ಮನುಷ್ಯರಿಗೆ ಸಹನಾತೀತವಾಗುವ ಜೀವನಕ್ರಮದಿಂದ ಗಾಂಧಿಯವರು ಕಳೆದ ೧೦ ವರ್ಷಗಳಿಂದಲೂ ದಿನ ಹರಣಮಾಡುತ್ತಿರುವರು. ಹಾಲು, ಬೆಣ್ಣೆ, ಖರ್ಜೂರ, ಇವೇ ಅವರ ಆಹಾರ. ಕೆಲಸ, ಜನಸಂದರ್ಶನ, ಬರೆಯುವುದು, ಉಪನ್ಯಾಸ ಕೊಡುವುದು ಇವೇ ಅವರ ದಿನನಿತ್ಯದ ಕಾರ್ಯಕ್ರಮ.

"ಹಿಂದಿಯಲ್ಲೂ ಇಂಗ್ಲಿಷಿನಲ್ಲೂ ಪ್ರಕಟವಾಗುವ, ತನ್ನ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಬರೆದು ಗಾಂಧಿಯವರ ಬಲಗೈಯು ಬಡವಾಗಿದೆಯೆಂದು ಎಷ್ಟು ಜನರಿಗೆ ತಿಳಿದಿದೆ? ಇದು ಸತ್ಯ. ಇತ್ತೀಚಿನಲ್ಲಿ ಅವರು ತನ್ನ ಎಡಗೈಯಲ್ಲೂ ಬರೆಯಲಭ್ಯಸಿಸುವ ಸಂದರ್ಭವು ಒದಗಿದೆ. ನಿಜವಾಗಿಯೂ ಬಹಳ ಕಷ್ಟ ಕೆಲಸ! ತನ್ನ ಪ್ರಕೃತದ ಕೆಲಸವನ್ನು ಕೈಕೊಳ್ಳುವ ಮೊದಲು ಗಾಂಧಿಯವರು ವರ್ಷಕ್ಕೆ ೩೦,೦೦೦ ಡಾಲರುಗಳನ್ನು ವಕಾಲತ್ತಿನಲ್ಲಿ ಸಂಪಾದಿಸುತ್ತಿದ್ದರೆಂದು ಎಷ್ಟು ಮಂದಿಗೆ ಗೊತ್ತಿದೆ? ಹಾಗಿದ್ದರೂ ಅವರು ಈಗ ಅತ್ಯಂತ ಬಡತನದಿಂದಲೇ ಜೀವಿಸುತ್ತಿರುವರು. ಉತ್ಕೃಷ್ಟವಾದ ಬ್ರಾಹ್ಮಣ ಮಹಾವರ್ಗದಲ್ಲಿ ಗಾಂಧಿಯವರು ಜನ್ಮವೆತ್ತಿದರು—ಆದರೆ ಅವರು ಈಗ ನಿಕೃಷ್ಟವಾದ ಜಾತಿಬಾಹಿರ ಅಸ್ಪೃಶ್ಯವರ್ಗದವರನ್ನುದ್ಧರಿಸಲು ಹೊರಟಿರುವರು. ಅವರು ಸತ್ಯಶೀಲರೆಂದು ತಿಳಿಯುವ ತನಕ ಅವರ ಭಾವಗಳು ಸುಲಭಗ್ರಾಹ್ಯವಲ್ಲ. ಯುವಕವರ್ಗದವರು ನೆನೆಸಲಸದಳವಾದ ವಿದ್ಯಮಾನಗಳನ್ನು ಗಾಂಧಿಯವರು ತನ್ನ ಈ ೬೩ನೇ ವರ್ಷ ಪ್ರಾಯದಲ್ಲಿ ಮಾಡುತ್ತಿರುವರು. ಕೆಲವರು ಗಾಂಧಿಯು ಮಹಾಪ್ರದರ್ಶನಶಾಲಿ, ಡಾಂಭಿಕ, ಮೋಸಗಾರನೆನ್ನುತ್ತಿರುವರು. ಅವರು ಅಂತಹ ಗುಣದವರೆಂದಾದರೆ, ಊಹನಾತೀತವಾದ ಫಲಗಳನ್ನು ಅವರು ತಿನ್ನುತ್ತಿರುವರು.

ಗಾಂಧಿಯು ಕರ್ಮವೀರ.

ಗಾಂಧಿಯು ಮಾನುಷಿ ವ್ಯಕ್ತಿ—ಸ್ವಲ್ಪ ಅತ್ಯಲ್ಪ ಮಾತ್ರದಲ್ಲೂ ಅವರ ಸಂತೋಷಿಸುವರು. ಅವರ ಹೊಣೆಗಾರಿಕೆ ಸತ್ಯಾಂಶವನ್ನರಿಯಲು ನಮ್ಮ ಅವರ ವಿಚಕ್ಷಣತೆಗಳು—ಇದರ ತನಗೆ ಸ್ವಾಭಾವಿಕತೆ ಸಿಗುವುದರಲ್ಲಿ ಗಾಂಧಿಯವರು ಆನಂದಗೊಳ್ಳುತ್ತಾರೆ. ಅದರ ಅವರಿಗೆ ಸ್ವಾಭಾವಿಕತೆಯನ್ನು ಕೊಡುವುದರಲ್ಲಿ ನಾವು ಮಾತ್ರ ನಿರ್ವಂಚನೆಯಾಗಿ ಬೇಕು ನಿರ್ಮಲ ಹೃದಯಿಗಳಾಗಿರಬೇಕು.

ಗಾಂಧಿಯವರು ತನ್ನ ಸುತ್ತುಮುತ್ತಿನಲ್ಲಿ ನಡೆವ ವಿದ್ಯಮಾನಗಳಲ್ಲೇ ನಿರತರಾಗಿರುವರು. ಯುನೈಟೆಡ್ ಸ್ಟೇಟ್ಸ್ ಒಫ್ ಅಮೆರಿಕದಲ್ಲಿನ ಘಟನೆಗಳ ಪರಿಜ್ಞಾನವು ಅವರಿಗಿದೆ ಎಂದು ಭಾಸವಾಗುತ್ತದೆ.

ಸಾರಾಂಶವೇನೆಂದರೆ— ಮಹಾತ್ಮಾ ಗಾಂಧಿಯವರು ತಾನು ಸರಿಯೆಂದು ನಂಬಿದವುಗಳನ್ನು ಸದಾ ಕೃತಿಸುವ ಮಹಾವ್ಯಕ್ತಿ. ಅಪರಿಹಾರ್ಯವಾದ ಕಷ್ಟಪರಂಪರೆಗಳದುರಿನಲ್ಲೂ ತನ್ನ ಮನೋನಿರ್ಧಾರವನ್ನು ಮುಂದೊಡ್ಡುವ ಆದರ್ಶಮೂರ್ತಿ. ನಮ್ಮ ಹಿರಿಯರು ಸ್ವಾತಂತ್ರ್ಯ ಸಮರಕ್ಕಾಗಿ ಏನು ಮಾಡಿದರೋ ಅದನ್ನೇ ಗಾಂಧಿಯವರು ಇಂದಿನ ದಿನ ಹಿಂದೂಸ್ಥಾನಕ್ಕಾಗಿ ಮಾಡುತ್ತಿರುವರು.

ಗಾಂಧಿಯವರು ದಿನನಿತ್ಯದ ಕಾರ್ಯಕ್ರಮಗಳನ್ನು ಅವರ ಸೆಕ್ರೆಟರಿಯವರಾದ ಶ್ರೀ ದೇಸಾಯಿಯವರು ನನಗೆ ಹೇಳಿದರು.

ಶಿಕ್ಷೆ ಕೊಟ್ಟರು.

ಮುಂಬಾಯಿಯಲ್ಲಿ ಕಳೆದ ವಾರ ಕೈದುಮಾಡಿದ ೧೮ ಮಂದಿಗಳಲ್ಲಿ ೪ ಮಂದಿಗಳಿಗೆ ೬ ತಿಂಗಳ ಕಠಿಣ ಶಿಕ್ಷೆಯೂ ೩ ಮಂದಿಗಳಿಗೆ ೪ ತಿಂಗಳ ಸಕ್ತ ಶಿಕ್ಷೆಯೂ ೧೧ ಮಂದಿಗಳಿಗೆ ರೂಪಾಯಿ ನೂರರಂತೆ ಜಾಮೀನೂ ವಿಧಿಸಲಾಯಿತು. ೩ ಮಂದಿಗಳನ್ನು ಬಿಟ್ಟರು.

ಅಕ್ರಮ ನಡತೆಗಾಗಿ ಶಿಕ್ಷೆ

ಮುಂಬಾಯಿಯ ಗವರ್ನರರಿಗೊಂದು ಸತ್ಯಾಗ್ರಹವನ್ನು ಅಲ್ಲಿಯ ಮೇಯರರು ಕೊಟ್ಟರು. ಶ್ರೀ ಮರ್ಚೆಂಟ್ ಎಂಬವರು ಬಂದಿದ್ದರು. ಅವರ ಅಕ್ರಮ ನಡತೆಗಾಗಿ ಪೋಲೀಸ್ ಆಫೀಸರರು ಅವರನ್ನು ಹಿಂಬಾಗಿಲಿನಿಂದಾಗಿ ಹೊರಗೆಳೆದುಕೊಂಡು ಹೋಗಲು ಅಪ್ಪಣೆ ಇತ್ತರು. ಆದರೆ ಆರೋಪಿತರು ಒಪ್ಪಿಕೊಂಡಿಲ್ಲ. ಇವರ ವಿಚಾರಣೆಯಾಗಿ ಬಿಡುಗಡೆ ಹೊಂದಿದರು.

೩೪ ಮಂದಿಗಳಿಗೆ ಶಿಕ್ಷೆ.

ಕರಾಚಿಯಲ್ಲಿ ೩೪ ಮಂದಿಗಳಿಗೆ ಶಿಕ್ಷೆ ಕೊಟ್ಟರು. ಇವರಲ್ಲಿ ೯ ಮಂದಿ ಸ್ತ್ರೀಯರು. ೩೪ ಮಂದಿಗಳು ಪಿಕೆಟಿಂಗ್ ಆರ್ಡಿನೆನ್ಸಿನ ಮೇರೆಗೆ ಶಿಕ್ಷಿಸಲ್ಪಟ್ಟರು.

ಆಶ್ಚರ್ಯಕರ ಔಷಧಿ

ರಕ್ತಾತಿಸಾರ, ಅತಿಸಾರ, ಅಜೀರ್ಣದಿಂದಾದ ಎಂತಹ ಉಚ್ಚಾಟವಾದರೂ ಓಡುವದು.

ಏತರಿಂದ?

HEDAURIN
DYSENTERY
CHOLERA CURE

ಹಿಂದೀ ಔಷಧಿ. ಹಿಂದೀಯರಿಗಾಗಿ ಹಿಂದೀಯರಿಂದಲೇ ಕಂಡುಹಿಡಿಯಲ್ಪಟ್ಟುದು ಹಿಂದೀಯರಿಂದಲೇ ವ್ಯಾಪಾರಕ್ಕೆ ತರಲ್ಪಟ್ಟುದು.

ಬಾಟ್ಲಿನ ಕ್ರಯ ಆಣೆ 0—15—0. 2 ಬಾಟ್ಲಿನ ಪಾಕೆಟಿಗೆ ರೂ 1—12—0.

ಪರೀಕ್ಷಿಸಿ ತೃಪ್ತರಾಗಿರಿ!

ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆಫೀಸು,
ಡೊಂಗರಕೇರಿ ರಸ್ತೆ,
ಮಂಗಳೂರು.

ದಿ ಕಿಂಗ್ ಡಿಸ್ಪೆನ್ಸರಿ,
ಕೊಡಿಯಾಲಬೈಲ್ ಪೋಸ್ಟು,
ದಕ್ಷಿಣ ಕನ್ನಡ

'If every Wife knew what every Widow knows every Husband would be Insured'

PLACE YOUR LIFE ASSURANCE WITH

THE SOUTH INDIAN

Securing for your clients –

1. **Low rates of Premium**
2. **Liberal Policy Conditions.**

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.

Any where in CANARA DISTRICTS & HYDERABAD STATE

For terms of Agency please apply to –

H R K IYENGAR
Chief Agent

The S I G A Co. Ltd,
Sanyasiguddy, MANGALORE

Managing Agents –

K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಸ್ಯೂರೆನ್ಸ್, ಕಂಪೆನಿ ಲಿಮಿಟೆಡ್ಡಿನಲ್ಲಿ ವಿಮೆಮಾಡಿರಿ.

ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರಿಮಿಯಂ ದರಗಳು ಕಡಿಮೆ!

ಶರ್ತಗಳು ತೀರಾ ಸುಲಭ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿರಿ)

ಚೀಫ್ ಏಜಂಟರು—

ಎಚ್ ಆರ್. ಕೆ ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ,
ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು.

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ, ಹಾಗೇಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ ಶೀತ, ನೆಗಡಿ, ಕೆಮ್ಮು, ಅಜೀರ್ಣ, ಶೀತವಾತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ ವಾಂತಿಭೇದಿಗೆ ಸಿದ್ಧೌಷಧ)

ಮೂತ್ರವು ಕಟ್ಟುವುದಾಗಲಿ, ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಪ್ಲೇಗಿಗೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಪ್ಲೇಗು ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ ಪ್ಲೇಗಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿವಾತಜ್ವರಗಳಿಗೂ ಅವ್ಯಕವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ ಸೀಸೆ 1ಕ್ಕೆ ರೂ 0—8—0

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟಿವಿಗೆ ಮಾತ್ರ.

ಮೈಸೂರು ಸರಕಾರದ ವಿದ್ಯಾ ಇಲಾಖೆ ಮತ್ತು ಕೋ. ಆ. ಸೊಸೈಟಿಗಳಿಂದ ಶಿಫಾರಸು ಹೊಂದಿದ,

ವೈದಿಕ ಧರ್ಮಾಭಿಮಾನಿಗಳೂ, ಕನ್ನಡ ಭಾಷಾಭಿಮಾನಿಗಳೂ ಅವಶ್ಯವಾಗಿ ಓದತಕ್ಕ

ಯುಗಾದಿಯಿಂದ] ಶ್ರೀ ಶೇಷಾಚಲ - [ವರ್ಷಾರಂಭ

ಸದ್ಬೋಧ ಚಂದ್ರಿಕೆ.

೧೯೦೮ರಿಂದ ಪ್ರಕಟವಾಗುತ್ತಿರುವ ಉಚ್ಚತರಗತಿಯ ತಿಳಿಗನ್ನಡ ಮಾಸ ಪತ್ರಿಕೆಯು.

ವಾ. ಚಂದಾ ರೂ. ೩] [ಡೆಮ್ಮಿ ಪುಟ೬೪

ಅಗಡಿ ಆನಂದವನದಲ್ಲಿ ಈಗ ೩೫ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ "ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠ ಶಾಲೆ"ಗೇ ಇದರ ಆದಾಯವೆಲ್ಲ ವಿನಿಯೋಗಿಸಲ್ಪಡುತ್ತಿರುವುದು ಅಲ್ಲದೆ ಅನೇಕ ಸದ್ಬೋಧ ಪೂರ್ಣವಾದ ಲೇಖಗಳಿಂದಲೂ, ಮನೋರಂಜಕ, ಸಾಮಾಜಿಕ, ಧಾರ್ಮಿಕ, ಐತಿಹಾಸಿಕ ಕಥೆ ಕಾದಂಬರಿಗಳಿಂದಲೂ ಕರ್ನಾಟಕದ ಸಮಾಜ ಭಾಷಾ ಸೇವೆಯನ್ನೂ ಮಾಡುತ್ತಿರುವದು ನಮ್ಮಲ್ಲಿ ಶ್ರೀ ಶೇ ಗ್ರಂಥ ಮಾಲೆಯ ಪುಸ್ತಕಗಳೂ ದೊರೆಯುತ್ತವೆ

ಮ್ಯಾ ಸ ಚ ಆಫೀಸು,
ಪೋ|| ಆನಂದವನ, ಜಿ ಧಾರವಾಡ

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ, ಯಂ ಗಣಪತಿರಾವ್ ಐಗಳವರಿಂದ ವಿರಚಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

ಎರಡನೇ ಮೂರನೇ, ನಾಲ್ಕನೇ ಐದನೇ ದರ್ಜೆಯ ರೀಡರ್ಸ್ ಮತ್ತು ನೀತಿಭೋದೆ

ಎರಡನೇ ಮೂರನೇ, ನಾಲ್ಕನೇ ದರ್ಜೆಗಳಿಗೆ ಪ್ರಕೃತಿ ಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ

೪ನೇ, ೫ನೇ ದರ್ಜೆಯ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

ಎರಡನೇ, ಮೂರನೇ, ನಾಲ್ಕನೇ ದರ್ಜೆಗಳ ಚರಿತ್ರೆ ಮತ್ತು ಕಥೆಗಳಲ್ಲದೆ, ಹೊಸಕನ್ನಡ (೧ನೇ, ೨ನೇ ಭಾಗ)— ಅಜ್ಜಿ ಕಥೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತುಂಬಾ ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ೫೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
ಠಾಕುರದ್ವಾರ, ಮುಂಬಾಯಿ ೨ ಸ್ಟೋಕಿಸ್ಟ ಪಾ ಕಂಪೆನಿ
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V S KAMATH AT M. T. A. SHARADA PRESS, MANGALORE.

ಮುಂಗಡ ನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2—0—0. [illegible] ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾಗರವ ಮಥಿಸಲು ಸುರಾಸುರರಿಂ । ಹರುಷವಾಯಿತೆ ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಎಲ್ಲರೆ ತೊರೆಯಲು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೧೫ನೇ ಶುಕ್ರವಾರ ಎಪ್ರಿಲ್ ೧೯೩೨ (15—4—'32.) ಸಂಚಿಕೆ ೧೬.

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI. **Branches:—COONDAPOOR & Mangalore**

ಹೆಡ್ ಆಫೀಸು ಉಡುಪಿ ಶಾಖೆ - ಕುಂದಾಪುರ ಮತ್ತು ಮಂಗಳೂರ

Authorised Capital Rs 3,50,000 Subscribed & Called up Rs 2,25,000

ನಿಯಮಿತ ಮೂಲಧನ ರೂ 3,50,000 ಚಂದಾ ಹಾಕಲಿಕ್ಕೆ ಅಪೇಕ್ಷಿಸಿದ ವ ವಸೂಲಾದ ಮೂಲಧನ ರೂ 2,25,000

STATEMENT OF ASSETS & LIABILITIES AS ON 31ST DAY OF MARCH 1932

	Capital and Liabilities			Property and Assets	
1	Paid up Capital	Rs 2,25,000 0 0	1	Premises Building Furniture etc	Rs [illegible] 0
2	Reserve and other funds	" 22,705 0 0	2	Government securities	[illegible] 3 [illegible] 4 0
3	Deposits	[illegible] 63,679 1	3	Authorised Investments	[illegible]
4	Due to Bankers	[illegible] 507	4	Bills for collection	[illegible] 0
5	Sundries	[illegible]	5	Sundries	[illegible] 247 [illegible] 1
6	Bills for collection per contra	[illegible]	6	Cash in hand & with bankers	[illegible] 011 9
		Total [illegible] 707 [illegible] 9 3			Total [illegible] 9 3

Office of the Corporation UDIPI, S K 4—4—'32

N. ANANDA RAO
Secretary & Manager

(Regd)



ಅಮೃತಾಂಜನ.

ಶೀತ ಆಮ್ಮು ತಲೆನೋವು ವಾತ ಸುಟ್ಟುಹೋಗುವಿಕೆ ಮತ್ತು ಮನುಷ್ಯರಿಗೆ ಭಂಗ್ಯಕೊಡತಕ್ಕ ಉಪದ್ರವ ಕೊಡುವ ಇನ್ನಿತರ ಎಲ್ಲಾ ತರದ ಬೇನೆಗಳಿಗೂ ಇದು ಎದೆಯೊಡ್ಡಿ ಅವುಗಳನ್ನು ಓಡಿಸುತ್ತದೆ ಈ ಬೇನೆಗಳನು ಅಮೃತಾಂಜನವು ಅತ್ಯಲ್ಪ ಸಮಯದಲ್ಲೇ ಗುಣಪಡಿಸತ್ತದೆ ಎಲ್ಲಿ ಅಮೃತಾಂಜನವಿದೆಯೋ ಅಲ್ಲಿ ಈ ಬೇನೆಗಳ ಸುದ್ದಿಯಿಲ್ಲ ಎಲ್ಲಾ ಕಡೆಗಳಲ್ಲೂ ದೊರಕುತ್ತದೆ

ಗಜಕರ್ಣ ಮುಲಾಮು—(ರಾಜಾ ಮತ್ತು ರಾಣಿ ಮಾರ್ಕ್) ಗಜಕರ್ಣ ಮತ್ತು ಥೋಬಿಇಚ್ ಇತ್ಯಾದಿಗಳಿಗೆ ಅತ್ಯುತ್ತಮ ಮದ್ದು. ಏರೆ ಸಲದ ಹಚ್ಚಿಕೆಯಿಂದ ಗುಣವಾಗುತ್ತದೆ ಹಳೇ ಮತ್ತು ಬಹಳ ಸಮಯದಿಂದಿರುವ ರಿಂಗ್‌ವರ್ಮನ್ನು ತೆಗೆದುಬಿಡುತ್ತದೆ ಚಿಕ್ಕದಕ್ಕೆ 0—6—0 ಡಜನಿಗೆ [illegible]

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬ್ಬಾ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ
ಗಿರಗಾಂವ, ಮುಂಬಯಿ ೪.

ಏಜೆಂಟರು— ಶಾ ಕಂಪೆನಿ, ಮಂಗಳೂರು

INSURE WITH
The Popular Insurance Co. Ltd.
Head Office MANGALORE S India
"First of its kind in the West Coast

CHAIRMAN
Dewan Bahadur N Subba Rao

STRIKING FEATURES

Policy Conditions Liberal
Claims Settlement Prompt

MANAGEMENT PURELY INDIAN

Ensure the Absolute Safety, Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply to the Head Office

ಸ್ವಧರ್ಮೇ ನಿಧನಂ ಶ್ರೇಯಃ

(ಲೇಖಕರು:— ಶ್ರೀ ಕೃಷ್ಣಾನಂದಜಿಯವರು)

ಅನುವಾದಕ — ಬಿ ಲಕ್ಷ್ಮೀಧರ ವಿದ್ಯಾರ್ಥಿ, ಆ ಸ ಮಂಗಳೂರು

ವೈದಿಕ ಧರ್ಮದಲ್ಲಿ ಜ್ಞಾನಕರ್ಮ ಮತ್ತು ಈಶ್ವರೋಪಾಸನೆ ಇವು ಸಮಾನವಾಗಿ ಅವಶ್ಯಕವಾಗಿರುವುದೂ, ಇತರ ಧರ್ಮಗಳಲ್ಲಿ ಹೀಗಿಲ್ಲದಿರುವುದೂ, ಅವುಗಳಿಂದ ವೈದಿಕ ಧರ್ಮದಲ್ಲಿರುವ ಒಂದು ವಿಶೇಷತೆಯಾಗಿದೆ ಕೆಲವು ಧರ್ಮಗಳು ಜ್ಞಾನ ಮತ್ತು ಭಕ್ತಿ ಪ್ರಧಾನಗಳಾಗಿಯೂ, ಇನ್ನು ಕೆಲವು ವಿಶ್ವಾಸಪ್ರಧಾನಗಳಾಗಿಯೂ ಇರುತ್ತವೆ; ಆದ್ದರಿಂದ ಕೆಲವು ಧರ್ಮಗಳು ಜ್ಞಾನವನ್ನು ಮುಖ್ಯವೆಂದು ತಿಳಿಯುತ್ತವೆ, ಕರ್ಮ ಮತ್ತು ಭಕ್ತಿಯನ್ನು ಗೌಣವೆಂದು ಎಣಿಸುತ್ತವೆ ಕೆಲವು ಧರ್ಮಗಳು ಜ್ಞಾನ ಮತ್ತು ಕರ್ಮಗಳನ್ನು ತುಚ್ಛವೆಂದೆಣಿಸಿ ಭಕ್ತಿಯೇ ಮುಕ್ತಿಯ ಮುಖ್ಯ ಸಾಧನವೆಂದು ತಿಳಿಯುತ್ತವೆ ಮತ್ತೆ ಕೆಲವು ವ್ಯಕ್ತಿಯ ಮಹತ್ತಿಕೆಯ ಮೇಲೆ ವಿಶ್ವಾಸವಿಡುವುದರಿಂದಲೇ ಮುಕ್ತಿಯ ಸಾಧನವೆಂದು ಎಣಿಸುತ್ತವೆ ಆದರೆ ವೈದಿಕ ಧರ್ಮವು ಮುಕ್ತಿ ಪ್ರಾಪ್ತಿಯ ಸಂಬಂಧವಾಗಿ ಯಾವನೊಬ್ಬ ವ್ಯಕ್ತಿಯ ಮಹತ್ವದ ಮೇಲೆಯೇ ಸರ್ವಭಾರವನ್ನು ಹೊರಿಸಲಿಕ್ಕೆ ಹೇಳದೆ ಜ್ಞಾನಾಭಿವೃದ್ಧಿ ಕರ್ತವ್ಯ ಕರ್ಮ, ಮತ್ತು ಈಶ್ವರೋಪಾಸನೆ ಇವು ಮೂರಕ್ಕೂ ಪ್ರಾಮುಖ್ಯತೆಯನ್ನು ಕೊಟ್ಟಿರುವುದು ವೈದಿಕ ಧರ್ಮದಲ್ಲಿರುವ ಒಂದು ವಿಶೇಷ ಸಂಗತಿಯಾಗಿದೆ ಯಾವ ಮತವು ಭಕ್ತಿಯನ್ನೇ ಮುಖ್ಯವೆಂದು ತಿಳಿದು ಜ್ಞಾನಾಭಿವೃದ್ಧಿ ಮತ್ತು ಕರ್ತವ್ಯ ಮಾಡುವುದರಲ್ಲಿ ವಿಶೇಷ ಲಕ್ಷ್ಯ ಕೊಡದೆ ಇರುವುದೋ ಮತ್ತು ಯಾವ ಮತವು ವಿಶ್ವಾಸವನ್ನೇ ಮುಕ್ತಿಪ್ರದವೆಂದು ತಿಳಿಯುವುದೋ ಅವುಗಳೆರಡೂ ಸ್ವಾಭಾವಿಕವಾಗಿ ಜ್ಞಾನಕರ್ಮಗಳೆರಡನ್ನೂ ಉಪೇಕ್ಷಿಸುವವೆಂಬ ಹೆದರಿಕೆಯು ಇದ್ದೇ ಇರುತ್ತದೆ ಆದರೆ ವೈದಿಕ ಧರ್ಮದಲ್ಲಿ ಇಂಥ ಹೆದರಿಕೆಯು ಇರುವುದಿಲ್ಲ ಅದು ಮೂರನ್ನೂ ಒಂದೇ ರೀತಿಯಿಂದ ಪ್ರಾಮುಖ್ಯವೆಂದು ತಿಳಿಯುವುದರಿಂದಲೇ ಅನ್ಯ ಧರ್ಮಗಳು ಕುಂದುಳ್ಳವುಗಳೆಂದೂ ವೈದಿಕ ಧರ್ಮವು ಸರ್ವಾಂಗಪರಿಪೂರ್ಣವೆಂದೂ ತಿಳಿಯಬೇಕಾಗುತ್ತದೆ ವಿಚಾರಪೂರ್ವಕವಾಗಿ ನೋಡಿದ್ದಾದರೆ ಗೀತೆ ಮಾದರೂ ಕೂಡ ಜ್ಞಾನ ಕರ್ಮ ಭಕ್ತಿ (ಉಪಾಸನೆ) ಇವು ಮೂರನ್ನೂ ಸಮಾನವಾಗಿ ಅವಶ್ಯಕವೆಂದು ತಿಳಿಯುತ್ತದೆ

ವರ್ತಮಾನ ಕಾಲದಲ್ಲಿ ನಮ್ಮ ಎಲ್ಲಾ ಬಾಂಧವರೂ ಗೀತೆಯ

ಶ್ರೇಯಾನ್ಸ್ವಧರ್ಮೋ ವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥

ಎಂಬ ಶ್ಲೋಕದ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಕೆಲವರು ಈ ಶ್ಲೋಕವನ್ನು ನೋಡಿ ಹೇಳತೊಡಗಿರುವರೇನೆಂದರೆ — ಯಾವ ಮನುಷ್ಯನು ಯಾವ ಜಾತಿಯಲ್ಲಿ ಉತ್ಪನ್ನ ಹೊಂದಿರುವನೋ ಅವನು ತನ್ನ ತಂದೆಯ ಸಾಂಪ್ರದಾಯ ಮತ್ತು ವ್ಯವಸಾಯ ವನ್ನು ಮಾಡುತ್ತಿರಬೇಕು ಆ ಜನರು ಸ್ವಧರ್ಮದ ಅರ್ಥವನ್ನು ತಮ್ಮ ಪಿತ [illegible] ಮಹರ ಸಂಪ್ರದಾಯ ಮತ ಮತ್ತು ವ್ಯವಸಾಯ ಎಂದು ತಿಳಿಯುತ್ತಾರೆ ಇವರು ಧರ್ಮ ಶಬ್ದದ ಯಥಾರ್ಥವಾದ ಅರ್ಥವನ್ನು ತಿಳಿದಿದ್ದರೆ ಇನ್ನು ಮುಂದೆ ಈ ಭ್ರಮೆಯಲ್ಲಿ ಪ್ರಸಕ್ತರಾಗಲಾರರೆಂದು ತಿಳಿಯಬೇಕು ಮತ್ತು ಇಂತಹ ಗಡಿಬಿಡಿಯನ್ನು ಎಂದೂ ಮಾಡಲಿಕ್ಕಿಲ್ಲ

ಗೀತೆಯಲ್ಲಿ ಅನೇಕ ಕಡೆಗಳಲ್ಲಿ ಬಂದಿರುವಂತಹ ಧರ್ಮ ಶಬ್ದವು ಯಾವ ಅರ್ಥದಿಂದ ಬರೆಯಲ್ಪಟ್ಟಿದೆ ಎಂಬ ವಿಚಾರವನ್ನು ಮಾಡಿದ ಬಳಿಕವೇ ಸ್ವಧರ್ಮ ಮತ್ತು ಪರಧರ್ಮಗಳ ನಿರ್ಣಯವನ್ನು ಮಾಡಲಿಕ್ಕೆ ಸುಲಭವಾಗುವುದು

ಸಂಸ್ಕೃತ ಗ್ರಂಥಗಳ ಅನೇಕ ಕಡೆಗಳಲ್ಲಿ ಧರ್ಮ ಶಬ್ದವು ಕರ್ತವ್ಯಕರ್ಮ ಎಂಬ ಅರ್ಥದಲ್ಲಿಯೂ ಬಂದಿರುತ್ತದೆ ಎಂಬಲ್ಲಿನ ವರೆಗೆ ನಾನು ವಿಚಾರಮಾಡಿರುವೆನು ಗೀತೆಯಲ್ಲಿಯೂ ಧರ್ಮ ಎಂಬ ಶಬ್ದವು ಹೆಚ್ಚಾಗಿ ಕರ್ತವ್ಯಕರ್ಮ ಎಂಬರ್ಥದಲ್ಲಿಯೇ ಉಪಯೋಗಿಸಲ್ಪಟ್ಟಿದೆ ಗೀತೆಯ ೪ನೇ ಅಧ್ಯಾಯ ೭ ೮ನೇ ಶ್ಲೋಕಗಳಲ್ಲಿ — ಯಾವಾಗ ಧರ್ಮದ ಗ್ಲಾನಿಯಾಗುವುದೋ ಮತ್ತು ಜನರು ಕರ್ತವ್ಯಕರ್ಮಗಳನ್ನು ಬಿಟ್ಟುಬಿಟ್ಟು ಅಕರ್ತವ್ಯ (ಅನ್ಯಾಯ ಮತ್ತು ಅತ್ಯಾಚಾರ)ಗಳಲ್ಲಿ ತೊಡಗುವರೋ ಆಗ ಕೆಲವು ಮಹಾಪುರುಷರು ಹುಟ್ಟಿ ಸಾಧುಗಳನ್ನು (ಕರ್ತವ್ಯನಿಷ್ಠ ಸಜ್ಜನರನ್ನು) ರಕ್ಷಿಸುವರು ಮತ್ತು ದುಷ್ಟ ಅತ್ಯಾಚಾರಿಗಳ ನಾಶಮಾಡಿ ಧರ್ಮ(ಕರ್ತವ್ಯ ಕರ್ಮ)ದ ಮರ್ಯಾದೆಯನ್ನು ಸ್ಥಾಪಿಸುತ್ತಾರೆ ಎಂದು ಹೇಳಿಯದೆ ಹಾಗೆಯೇ ಗೀತೆಯ ೨—೩೦ ೭—೧೧ ಮೊದಲಾದ ಶ್ಲೋಕಗಳನ್ನು ಓದಿ ವಿಚಾರ ಮಾಡಿದಾಗ ತಿಳಿದುಬರುವುದೇನೆಂದರೆ — ಈ ಎಲ್ಲ ಶ್ಲೋಕಗಳಲ್ಲಿ ಧರ್ಮ ಶಬ್ದವು ಕರ್ತವ್ಯ ಕರ್ಮ ಎಂಬರ್ಥದಲ್ಲಿ ಬಂದಿರುತ್ತದೆ ಇಲ್ಲಿ ಬೇರೆ ವಿಧದಿಂದ ಅರ್ಥಮಾಡಲಿಕ್ಕೆ ಆಗುವುದಿಲ್ಲ ಯಾವಾಗ ಹೀಗೆ ಗೀತೆಯಲ್ಲಿ ಬಂದ ಧರ್ಮ ಶಬ್ದವನ್ನು ಕರ್ತವ್ಯ ಕರ್ಮ ಎಂಬ ಅರ್ಥದಲ್ಲಿ ಉಪಯೋಗಿಸಬೇಕೆಂದು ನಿಶ್ಚಯವಾಗುವುದೋ ಆಗ — ಶ್ರೇಯಾನ್ಸ್ವಧರ್ಮೋ ……… ಭಯಾವಹ (೩ ೩೫) ಈ ಶ್ಲೋಕದಲ್ಲಿಯೂ ಧರ್ಮ ಶಬ್ದದ ಅರ್ಥವನ್ನು ಕರ್ತವ್ಯ ಕರ್ಮವೆಂದೇ ಮಾಡಬೇಕಾಗುತ್ತದೆ ಆಗ ಮೇಲಿನ ಶ್ಲೋಕದ ಅರ್ಥವು ಹೀಗಾಗುವುದು — "ಬೇರೆಯವರ ಧರ್ಮ (ಕರ್ತವ್ಯ ಕರ್ಮ) ವನ್ನು ಒಳ್ಳೇ ರೀತಿಯಿಂದ ಮಾಡಲಿಕ್ಕಾದರೂ, ಅದಕ್ಕಿಂತಲೂ ತನ್ನ ಗುಣ ಹೀನ ಧರ್ಮ (ಕರ್ತವ್ಯ ಕರ್ಮ)ವೇ ಶ್ರೇಷ್ಠವಾಗಿರುತ್ತದೆ. ತನ್ನ ಕರ್ತವ್ಯ ಕರ್ಮ ಮಾಡುತ್ತಿರುವಾಗ ಪ್ರಾಣಬಿಟ್ಟರೂ ಉತ್ತಮ, ಪರಂತು ಅನ್ಯರ ಕರ್ತವ್ಯಗಳನ್ನು ಮಾಡುವುದು ಭಯಾನಕ(ಹಾನಿಕಾರಕ)ವಾಗಿರುತ್ತದೆ

ತನ್ನ ಗುಣ ಹೀನ ಕರ್ತವ್ಯಕರ್ಮವು ಒಳ್ಳೆಯದಿರುತ್ತದೆ ಮತ್ತು ಬೇರೆಯವರ ಕರ್ತವ್ಯ ಕರ್ಮಗಳು ಯಾಕೆ ಉತ್ತಮವಾಗಿರುವುದಿಲ್ಲ? ಅಂದರೆ ಯಥಾರ್ಥ ಶಾಂತಿಯೂ ಆತ್ಮೋನ್ನತಿಯೂ ತನ್ನ ಕರ್ತವ್ಯ ಕರ್ಮ ಮಾಡುವುದರಿಂದಲೇ ಆಗುತ್ತದೆ ಅಲ್ಲದೆ ಅನ್ಯರ ಕರ್ತವ್ಯಗಳಿಂದಲ್ಲ ಪರಧರ್ಮಾಚರಣೆ ಮಾಡುವಂತಹವರು (ಅಕರ್ತವ್ಯ ಮಾಡುವಂತಹವರು) ಅಥವಾ ಅಧಿಕಾರವಿಲ್ಲದೆ ಕೆಲಸ ಮಾಡುವಂತಹವರು ಇವರ ಮೂಲಕ ಬಹಳ ದೊಡ್ಡ ಹಾನಿ ಸಂಭವಿಸುವುದು ಈ ಪ್ರಶ್ನೆಯ ಉತ್ತರವನ್ನು ತತ್ವಜ್ಞಾನಿ ಶ್ರೀ ಕೃಷ್ಣಸ್ವಾಮಿಯೇ ಹೀಗೆಂದು ಮಾಡುವನು —

ಗೀತೆಯ ೧೮ನೇ ಅಧ್ಯಾಯದ ೪೭ನೇ ಶ್ಲೋಕವನ್ನು ನೋಡಿರಿ 'ಅನ್ಯಧರ್ಮಾಧರ್ಮ (ಕರ್ತವ್ಯ ಕರ್ಮ)ದಿಂದ ಒಬ್ಬನ ಅನುಷ್ಠಾನವು ಒಳ್ಳೆಯ ರೀತಿಯಿಂದ ನಡೆದರೂ ಅದಕ್ಕಿಂತ ತನ್ನ ಗುಣ ಹೀನ ಕರ್ತವ್ಯ ಕರ್ಮವೇ ಒಳ್ಳೆಯದಿರುತ್ತದೆ ಯಾಕೆಂದರೆ ಸ್ವಾಭಾವಿಕವಾದ ನಿಯತ ಕರ್ಮಗಳನ್ನು ಮಾಡುವುದರಿಂದ ಯಾವ ದೋಷವೂ ತಟ್ಟುವುದಿಲ್ಲ ಅವನು ಗೀತೆಯ ೧೮ ೪೮ರ ಶ್ಲೋಕದ ಮೂಲಕವೂ ಹೇಳಿರುವುದೇನೆಂದರೆ — ಸ್ವಾಭಾವಿಕ ಕರ್ತವ್ಯ ಕರ್ಮಗಳು ದೋಷಯುಕ್ತವಾಗಿದ್ದರೂ ಅವುಗಳನ್ನು ಬಿಡಕೂಡದು ಉದಾಹರಣಾರ್ಥವಾಗಿ ಹೆಚ್ಚಿನ ಸಾಧುಗಳನ್ನು ನೋಡಿರಿ ಅವರು ಸ್ವಾಭಾವಿಕ ಪ್ರವೃತ್ತಿಯು ಗೃಹಸ್ಥದಲ್ಲಿರುವುದ [illegible] ಅವರು ಇಚ್ಛೆಯನ್ನು ಮೀರಿ ಗೃಹಸ್ಥ ಧರ್ಮವನ್ನು ಬಿಟ್ಟು ಸಾಧುಗಳ ವೇಷವನ್ನು ಧರಿಸುವರು ಇದರ ಪರಿಣಾಮವೇನಾಗುವುದೆಂದರೆ ಇವರಿಗೆ ಯೋಗ ಸಾಧನೆ ಮಾಡಲಾಗುವುದಿಲ್ಲ, ಈಶ್ವರ ಸಾಕ್ಷಾತ್ಕಾರವನ್ನೂ ಮಾಡಲಾಗುವುದಿಲ್ಲ ಗೃಹಸ್ಥಾಶ್ರಮದ ಸುಖವನ್ನೂ ಅನುಭವಿಸುವುದಿಲ್ಲ, ಅತ್ತ ನಾಡೂ ಅಲ್ಲ ಇತ್ತ ಕಾಡೂ ಅಲ್ಲ ಎಂಬಂತೆ ಇವರ ಸ್ಥಿತಿಯಾಗುವುದು ಇದರಿಂದ ಇವರ ಮಾನಸಿಕ ಆತ್ಮೋನ್ನತಿಗಳೂ ಆಗುವುದಿಲ್ಲ ಪರಿಣಾಮವಾಗಿ ಅವರು ದುರಾಚಾರ ದುರ್ವ್ಯಸನಗಳಲ್ಲಿ ಲೀನರಾಗಿ ಹೋಗುವರು

ಗೀತೆಯ ಸಹಜ ಕರ್ಮ ಮತ್ತು ಸ್ವಾಭಾವಿಕ ನಿಯತಕರ್ಮ — ಎಂಬ ಶಬ್ದಗಳ ಕಡೆಗೆ ಲಕ್ಷ್ಯ ಕೊಡಿರಿ ಈ [illegible] ಶಬ್ದಗಳ ಅರ್ಥವೂ ಸ್ವಾಭಾವಿಕ ಕರ್ತವ್ಯಕರ್ಮ ಎಂದಾಗುತ್ತದೆ ಸ್ವಾಭಾವಿಕ ಕರ್ತವ್ಯ ಕರ್ಮಗಳು ಎಂತಹವುಗಳಿರುತ್ತವೆಂದು ನೀವು ಕೇಳಬಹುದು ಇದರ ಉತ್ತರವು ಏನಿರುವುದೆಂದರೆ ಶ್ರೀ ಕೃಷ್ಣ ಸ್ವಾಮಿಯು ೧೮— ೪೧ರಿಂದ ೪೭ರ ವರೆಗಿನ ಗೀತೆಯ ಶ್ಲೋಕಗಳಲ್ಲಿ ಮನುಷ್ಯರ ಸ್ವಭಾವಿಕ ಕರ್ಮಗಳ ಸಂಕ್ಷೇಪ ವರ್ಣನೆಯನ್ನು ಮಾರ್ಮಿಕ ರೀತಿಯಿಂದ ಮಾಡಿರುವನು.

ತತ್ವಜ್ಞಾನಿ ಶ್ರೀ ಕೃಷ್ಣನು ಮಾನವ ಪ್ರವೃತ್ತಿಯನ್ನು ವೇದಗಳಲ್ಲಿ ಹೇಳಿರುವ ಪ್ರಕಾರ ೪ ವಿಭಾಗಗಳಾಗಿ ಮಾಡಿರುವನು ಅಂದರೆ ಅವರವರ ಗುಣಕರ್ಮಗಳ ವಿಚಾರ ಮಾಡಿ ಮನುಷ್ಯರನ್ನು ಈ ರೀತಿಯಿಂದ ವಿಂಗಡಿಸಿರುವನು ಇವನ ಹೇಳುವಿಕೆಯು ಸ್ಪಷ್ಟವಾಗಿರುತ್ತದೆ ಅದೇನೆಂದರೆ — ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಈ ೪ ವರ್ಗಗಳೂ ಕರ್ಮಾನುಸಾರವಾಗಿರುತ್ತವೆ ತಾತ್ಪರ್ಯವೇನೆಂದರೆ— ಸ್ವಭಾವಗುಣ ಕರ್ಮಗಳ ವಿಚಾರ ಮಾಡಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಈ ಪದವಿಗಳನ್ನು ನಿಯಮಿಸಿರುವನು ದಯಮಾಡಿ ೧೮ನೇ ಅಧ್ಯಾಯದ ೪೨ ೪೩ ೪೪ನೇ ಶ್ಲೋಕಗಳಲ್ಲಿ ಬಂದಿರುವ ಸ್ವಭಾವ ಜಮ್ ಶಬ್ದದ ವಿಷಯ ಚೆನ್ನಾಗಿ ಆಲೋಚಿಸಬೇಕು.

ತತ್ವಜ್ಞಾನಿ ಶ್ರೀ ಕೃಷ್ಣನು ಹೇಳುತ್ತಿರುವುದೇನೆಂದರೆ ಯಾವ ಮನುಷ್ಯನಲ್ಲಿ ಸ್ವಭಾವದಿಂದ ಶಮ ದಮ ತಪ ಶೌಚ ಶಾಂತಿ ಸರಳಸ್ವಭಾವ ಜ್ಞಾನ ವಿಜ್ಞಾನ ಮತ್ತು ಆಸ್ತಿಕತೆ ಇರುತ್ತದೆಯೋ ಅವನು ಬ್ರಾಹ್ಮಣನಾಗಿರುತ್ತಾನೆ (೧೮—೪೨)

ಯಾವ ಮನುಷ್ಯನಲ್ಲಿ ಸ್ವಭಾವದಿಂದ ಶೌರ್ಯ ತೇಜಸ್, ಧೈರ್ಯ ದಕ್ಷತೆ (ನೀತಿ ನಿಪುಣತೆ) ಯುದ್ಧದಲ್ಲಿ ನಿರ್ಭಯತೆ ದಕ್ಷತೆ ಮತ್ತು ಈಶ್ವರ ಭಾವ (ನೀತಿ ನಿಬಂಧನೆಗಳನ್ನು ಅನುಸರಿಸಿ ಆಳುವ ಯೋಗ್ಯತೆ) ಗಳು ಇರುತ್ತವೋ ಅವನು ಕ್ಷತ್ರಿಯನಾಗಿರುತ್ತಾನೆ (೧೮ ೪೩)

ಯಾವ ಮನುಷ್ಯನು ಸ್ವಭಾವದಿಂದ ಕೃಷಿ ಪಶುಪಾಲನ ವಾಣಿಜ್ಯ [illegible] ಕರ್ಮಗಳಲ್ಲಿ ಪ್ರವೃತ್ತಿಯುಳ್ಳವನೋ ಅವನು ವೈಶ್ಯನೆನಿಸುತ್ತಾನೆ ಯಾವ ಮನುಷ್ಯನು ಸ್ವಭಾವತಃ ಸೇವಾಕರ್ಮಗಳಲ್ಲಿ ಪ್ರವೃತ್ತಿಯುಳ್ಳವನೋ ಅವನು ಶೂದ್ರನಾಗಿರುತ್ತಾನೆ [illegible] ವರ್ಗದಲ್ಲಿ [illegible] ಶೂದ್ರ ಶಬ್ದವು ಅಪಮಾನಕಾರಕವಾಗಿಲ್ಲದೆ ಪಂತ ಶೂದ್ರ ಶಬ್ದವು ಅಪಮಾನ ಜನಕವಾಗಿರುವುದಿಲ್ಲ (೧೮ ೪೪)

(ಮುಂದಿನ ಸಂಚಿಕೆಯಲ್ಲಿ ಕೊನೆಗಾಣುವುದು)

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕ ವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟಿದೆ

ಸ್ಪೆಶಲ್ ಮದನಮಸ್ತ ಪಾಕ ನಂ ೧ ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದ ಎಲ್ಲಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಸಂಪರ್ಕದಿಂದಲೂ ಬಂದ ನಪುಂಸಕತ್ವ ಧಾತುಕ್ಷೀಣತೆ ಅಶಕ್ತತೆ ಕಾಮೇಚ್ಛೆ ಯಾದ ಕೂಡಲೇ ವೀರ್ಯಪತನವಾಗೋಣ ಗರ್ಮಿಯ ಪರಿಣಾಮ ಎಂಥದಾದರೂ ಪರಮ ಪ್ರಮೇಹ ಇತ್ಯಾದಿ ರೋಗಗಳು ನಾಶವಾಗಿ ಶೌಚಕ್ಕೆ ಸಾಫಾಗುತ್ತದೆ ಹಸಿವೆ ಶಕ್ತಿ ಮತ್ತು ತೂಕ ಹೆಚ್ಚುತ್ತವೆ ೨೧ ದಿವಸ ಸಾಲುವ ೬೪ ತೊಲೆಯ ಪೂರ್ಣ ಗುಣದಾಯಕ ಡಬ್ಬಿಯ ಕಿಮ್ಮತ್ತು ರೂ [illegible] ಒಮ್ಮೆಗೆ ಮೂರು ಡಬ್ಬಿಗೆ ಸಹಿತ ರೂ ೧೧ ಮೂರು ಡಬ್ಬಿಗೆ ರೂ ೧೫ ಮಾತ್ರ [illegible] ಅನುಪಾನವು ಡಬ್ಬಿಯೊಡನೆ [illegible] ಜನರು ಈ ಪಾಕದ ಸ್ತುತಿಯನ್ನು ಅತಿಶಯವಾಗಿ ಮಾಡಿದ್ದಾರೆ ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ ರಾಜವೈದ್ಯ ಹಾಗೂ ಹೊಸ ಸರ್ಟಿಫಿಕೇಟುಗಳನ್ನು ನೋಡಿರಿ

ಡಾಕ್ಟರ ಎಮ್ ಆಯ್ ಎಟಿಯಸ, ಎಲ್ ಎಮ್ ಎಂಡ್ ಎಸ್, ಜೆ ಪಿ ಮುಂಬಯಿ — ಈ ಪಾಕ ಧಾತುಪೌಷ್ಟಿಕ ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು ಗರ್ಮಿ ಪರಮ ಇವುಗಳನ್ನು ನಾಶ ಮಾಡುವದು ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು

ಡಾಕ್ಟರ ಪಿ ಎನ್ ದತ್ತ ಎಮ್ ಬಿ ಪ್ರಿನ್ಸಿಪಾಲ ಫಿಸಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ ಸ್ವಪ್ನಾವಸ್ಥೆ ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಕೃತಿಯೊಳ್ಳರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿ

ಪೇರ್ಮ ಸರ್ಟಿಫಿಕೇಟ್ ಗಳ ಅಪಕ್ಷೆವೆಂದು ಸಿದ್ಧಮಾಡಿದವರಿಗೂ ರೂ ೧೧೦೦ ಇನಾಮ ಕೊಡುವೆವು

ಪತ್ತೆ — ವೈದ್ಯ ಮೋಹನಲಾಲ ಎಸ್ ಔಷಧಾಲಯ, ಮು ಪೋ ಮಿರಜ S M C

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಅಧಿಕ ಸಾರೆ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು ತದನಂತರ ಏನುಮಾಡಿದರೂ ಸುರುವಾಗುವುದಿಲ್ಲ ಮೊದಲೆ ಪೂರಾ ವಿಚಾರಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟ ವೈದ್ಯ ಡಾಕ್ಟರ ಪಿ ಎ ವೈದ್ಯ ಎಲ್ ಸಿ ಪಿ ಎಸ್ ಕಳವಾಮಾಹಿಮ, ರಾಣೀ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ ವಿ ಪಿ ಖರ್ಚು ೦॥೦

ವಿಳಾಸ— ಸಂಜೀವಿನೀ ಔಷಧಾಲಯ, ಮು. ಪೋ. ಮಿರಜ, S. M. C.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಶುಂಠ್ಯಾದಿ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0. ಅಂಚೆ ವೆಚ್ಚ ಬೇರೆ

ಕಸ್ತೂರಿ ಪುತ್ರಾ!
ವಶಮೂಲ ಸುಖಪ್ರದಔಷಧಿ!

ದಾಂಪತಿಯರ ನವಜೀವನಕ್ಕೆ ನಂದನವನದಂತಿರುವುದು

ಇವರ ಶೋಧನ ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಂದ ನ್ಯೂನತೆಯನ್ನು ಹೊರಗೆ ಹಾಕಿ ಪ್ರಸವದಿಂ ಪುಷ್ಟವಾದ ಗರ್ಭಕೋಶವನು ಒಂದೆರಡು ದಿವಸಗಳಲ್ಲೇ ಆರೋಗ್ಯಮಾಡುವದು

ರಸಾಯನ ಗುಣದಿಂದ ಬಾಲಾಂತಿಯು—ಗರ್ಭ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರ್ಜೀವಿಸುವುದು

ಸುಖಜೀವನ ಗುಣದಿಂದ ಬಾಲಾಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧಗ: ಶೋಕದ ವ್ಯಥಾ (ಬೇನೆ)ಯನ್ನು ಶೀಘ್ರದಿಂ ಹೋಗಲಾಡಿಸುವದು

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜ ವಗೈರೆ ಬೇರೆ

ಹೆಚ್ಚಿನ ದುಡಿಮೆಗೆ "ಆರ್ಯವೈದ್ಯರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ

ಅಪೇಕ್ಷಿಸುವ ಬಹುಮಾನಗಳು.

ಹೆಗಲಿಗೆ ಹಾಕುವ ಶಾಲು ಜರಿ ಕಾಶೀ ಸಿಲ್ಕುಗಳು, 6 ಮೊಳ ಉದ್ದ 2½ ಮೊಳ ಅಗಲ ರೂ ... ಆರಂಭಿಸಿ ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಕೆ ಖಣಗಳು, ಧೋತಿಗಳು, ಎಲವಸ್ತ್ರ, ಪಂಚೆ, ಪೇಟ, ಇತ್ಯಾದಿ ಉತ್ತಮ ಶಾಲು, ಖಡ್ಡರ್ ಧೋತಿ, ಧಾವಳಿ, ಕಸ್ತೂರಿ ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು ಜರಿಬೊಪ್ಪಿ, ಸುಗಂಧ ದ್ರವ್ಯಗಳು ಸಹಾ ಪೋಸ್ಟಿನ ದರದಿಂದ ಕಳುಹಿಸಲ್ಪಡುವವು ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ—

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ದಶಾಶ್ವಮೇಧಘಾಟ್, ಕಾಶೀ, ಬನಾರಸ್ ಸಿಟಿ

"The Udipi Mutual Benefit Fund, UDIPI
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1916)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್.

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — MANGALORE

Established July 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

BRANCHES -Karkal Kasargod, Cochin, Udipi Gangolli Coondapur, Bombay Puttur, Calicut & Alleppey

ಬ್ರಾಂಚುಗಳು:—
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಆಲ್ಲೆಪಿ

Authorised and fully paid up Capital Rs. 300 000 0 0	ಅಧಿಕಾರಕೊಡಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ ...
Reserve and other sinking Funds Rs 526,000 0-0	ರಿಸರ್ವ ಮತ್ತು ಇತರ ಫಂಡುಗಳು ರೂ ... -0-
Amount invested on G P Notes Rs 810,092-12-0	ಸರಕಾರದ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ ... 12-
Rates of interest on fixed deposits at Head Office and Branches are 6¼ for 2 Years ... 1 Year	...

Current Account Deposits received and interest allowed on daily balance of Rs 50 and above that on multiples of Rs 10 ... from 1st January to 30th June and ... from 1st July to 31st December No interest will be allowed unless the deposit stood at not less than Rs 5... during a period of ... months ending either 30th June or 31st December in any year.

Except by special arrangement no interest is allowed on sums exceeding Rs 10 000 in the case of Head Office and Cochin Branch and on sums exceeding Rs ...000 in the case of Bombay Branch and on sums exceeding ... in the case of other Branches

For further particulars please apply to

Canara Bank Ltd, *Mangalore* ...-3—932 | **K. Venkat Rao** *Secretary & Treasurer*

The Pangal Nayak Bank, Ltd.

Head Office Udipi | *Established 1920* | **Branch Office Mangalore**

Authorised Capital. Rs 2,00,000-	Paid up Capital. Rs. 1 75 000-
Issued Capital Rs 1,75,000-	Reserve and other Funds Rs 1,80 000

1 **Receives Fixed Deposits at the following favourable rates**

For 3 months at 5 ... For 12 15 18 or 21 months at 6 ...
6 or 9 months at 5½% ... 24 months at 6¼

Interest being payable every ... or ...

ಕಾಯಂ ಠೇವಣಾತಿಗಳು ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ಸಾ ೕ 5 ... 12 15 18 ಯಾ 21 ತಿಂಗಳಿಗೆ ಸಾ ೕ 6
6 ಯಾ 9 ತಿಂಗಳಿಗೆ ಸಾ ೕ 5½ ... 24 ತಿಂಗಳಿಗೆ ಸಾ ೕ 6¼

2 **Current Accounts** opened free of charge and interest allowed.
Cumulative Savings Bank and Short Notice Deposits received at favourable rates of interest

3 The Bank transacts every description of Banking business

4 For full particulars and for copies of the ... **Rules of Business** please apply to the **Secretary** at the Head Office at Udipi or to the **Agent** Mangalore Branch.

Office of the Bank, Udipi 1-2-32 | **P Laxman Nayak,** Secretary

ಇಪ್ಪತ್ತು	ವಯಸ್ಸಿನಲ್ಲಿ	ಮುದುಕ
ಮೂವತ್ತು	...	ಮುಟ್ಟಟಿ
ನಲವತ್ತು	...	ನರಳುವಿಕೆ
ಐವತ್ತು	ಆದರೆ	ಆಲಸ್ಯ
ಅರುವತ್ತು	ತೋರಿದಾಗ	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವವಾದರೆ ಕೂಡಲೇ ಅವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0.

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್.

ಮದನಮಂಜರಿ ಪದಾರ್ಥಗಳ ಏಜಂಟರು:—ವಿ. ಜಿ. ಚಂದರಾನಾ, ಸುರಸ್ ಬೀದಿ, ಮಂಗಳೂರು

ಸದ್ಯಸ್ಥಿತಿಯ ವಿಚಾರದಲ್ಲಿ

ರಿಪನಿನ ಬಿಷಪರು "ಭಾರತವರ್ಷದಲ್ಲಿನ ಕ್ರೈಸ್ತ ದೇವಾಲಯಗಳ ಮಹತ್ವತ್ತಿ ಭಾಷಣಮಾಡುತ್ತಾ, ಈ ದೇಶದ ಸದ್ಯಸ್ಥಿತಿಯನ್ನು ಕುರಿತು ನಾಲ್ಕುಮಾತು ಚೆನ್ನಾಗಿದೆ ಎಂದರು 'ಈಗಣ ವೈಸ್ರಾಯರ ಕಾರ್ಯಕ್ರಮವನ್ನು ಹಿಂದಣವರೊಡನೆ ತೂಗಿ ನೋಡಿ—ರಾಜಿಪ್ರಸ್ತಾಪದಲ್ಲೇ ಮಗ್ನರಾಗಿ ಲೋರ್ಡ್ ಐರ್ವಿನರು, ಭಾರತವರ್ಷದ ತೀರ್ಮಾನಮಾಡಲು ಏಕಂಬವನ್ನೊಡ್ಡಿದರೆಂದೂ, ಅವರು ವಜ್ರಮುಷ್ಟಿಯಿಂದ ಆಳಬೇಕಾಗಿದ್ದಿತೆಂದೂ ಎನ್ನುವವರಿದ್ದಾರೆ. ವಜ್ರಮುಷ್ಟಿಯೇನೋ ಅಗತ್ಯವಿದ್ದಿರಬಹುದು, ಆದರೆ ಸಂಧಾನಮೂಲಕ ಸಹಕಾರವನ್ನು ಸಾಧಿಸಿಕೊಳ್ಳುವ ಅಗತ್ಯವೂ ಇಲ್ಲವೆ? ಹಿಂಸೆಯನ್ನಡಗಿಸುವ ಕಾರ್ಯಕ್ರಮವು ಒಂದಂಗುಲ ಮೀರಿ ಪ್ರತೀಕಾರವನ್ನು ಸೂಚಿಸುವುದಾದರೆ ಅಥವಾ ಆಡಿದ ಮಾತನ್ನು ನಾವು ಹಿಂತೆಗೆಯುವಂತಾದರೆ ಹಿಂದೀಯರಲ್ಲಿ ಕ್ರಿಶ್ಚಿಯನ್ ವೈಸ್ರಾಯರೆಂದು ಯಾರನ್ನು ಕರೆವರೋ ಅವರ ಕೈಯಿಂದಾದ ಮಹತ್ವದ ಕಾರ್ಯಗಳೆಲ್ಲ ಅಳಿದು ಹೋಗುವುವು ಮಾತ್ರವಲ್ಲದೆ, ಇಂಡಿಯವನ್ನು ಕ್ರೈಸ್ತಧರ್ಮಮಯವನ್ನಾಗಿ ಮಾಡುವುದಿರಲಿ, ಇಂಡಿಯವನ್ನೇ ನಾವು ಕಳದುಕೊಳ್ಳಬೇಕಾಗುವುದು. ಅಷ್ಟೆ ಕ್ರೈಸ್ತರಂತೆ ನಾವು ಜೀವಿಸಲಾರೆವಾದರೆ, ನಮ್ಮಿಂದ ಇಂಡಿಯಕ್ಕೆ ಯಾವ ಸಾಧಕವೂ ಉಂಟಾಗಲಾರದು. ಇಂಡಿಯದಲ್ಲಿ ಅಥವಾ ಇಂಗ್ಲೆಂಡಿನಲ್ಲಿ ಈ ಸಿದ್ಧಾಂತವು ತಿಳಿಯಬಾರದಾಗಿ ಯಾವ ಒರ್ಡಿನೆನ್ಸು ಕಾನೂನುಗಳ ಇಲ್ಲವಷ್ಟೆ!

ಇಂಡಿಯಾ ಬಿಟ್ಟರೆ ತಿಂಡಿಗೇನು?

ಮತ್ತೊಬ್ಬ ಕ್ರೈಸ್ತ ಗುರುಗಳು ರೆವೆರೆಂಡ್ ಆ [illegible] ರೋಬರ್ಟ್ಸ್, ಹಿಂದೆ ಮದ್ರಾಸು ವಿಶ್ವವಿದ್ಯಾಲಯದ ಅಧ್ಯಕ್ಷರು. ಇವರು ಒಂದು ಲೇಖವನ್ನು ಬರೆದಿರುವರು. ಕ್ರೈಸ್ತರು ಸುಳ್ಳಾಡರು, ಅವರ ದೇಶದ ಅಂತರಂಗ ಶೋಧಿಸಿ ಬರೆದಿರುವರು. "ಕಾಂಗ್ರೆಸ್ಸಿಗೆ ನಾವು ಒಮ್ಮೆ ಇಂಡಿಯವನ್ನು ಒಪ್ಪಿಸಿದರೆ, ಕೂಡಲೆ ಅಲ್ಲಿ ಅಂತಃಕಲಹಗಳಿಂದ ಮಹಾ ಯುದ್ಧವಾಗುವುದು. ಅದರ ಬೆನ್ನಿಗೆ ಕಷ್ಟ! ಇಂಡಿಯದ ಹಿತಾರ್ಥವಾಗಿ ನಾವು ವಿನಿಯೋಗಕ್ಕೊಪ್ಪಿಸಿರುವ ಬಂಡವಾಳವಾದ ಸುಮಾರು ಒಂದು ಸಾವಿರ ಮಿಲ್ಲಿಯ ಪವನುಗಳ ಒಟ್ಟಿ ಮಾಯವಾಗುವುದು. ಇಂಡಿಯಾದೊಡನೆ ನಾವು ನಡೆಸುವ ವ್ಯಾಪಾರವೆಲ್ಲವೂ ಅಡಗುವುದು. ಹೀಗಾದರೆ ನಮ್ಮ ತಿಂಡಿಗೆ ಕಾಸೂ ಇಲ್ಲವಾಗುವುದು. ಎಂದರೆ, ನಮ್ಮ ಜನಗಳ ಪ್ರಚಂಡ ಸಮೂಹವು ಖಚಿತ ಉಪವಾಸವನ್ನೇ ಅನುಭವಿಸಬೇಕಾಗುವುದು. ಈಗಲೇ, ಧಾನ್ಯವಿಲ್ಲದೆ [illegible] ನಿಂತು ಉಣ್ಣಬೇಕಾಗಿದೆ, ಇನ್ನು ಬಂಡವಾಳವೂ ಬಿದ್ದಿಯೂ ನಿರ್ನಾಮವಾದರೆ ಒದಗುವುದೇನು? ಚಿಕ್ಕ ಮಕ್ಕಳಿಗೂ ಇದು ತಿಳಿಯದೆ?—ಇಂಡಿಯವನ್ನು ದೃಢವಾಗಿ ಶಾಶ್ವತವಾಗಿಟ್ಟುಕೊಳ್ಳದಿದ್ದರೆ ನಮಗೆ ಉಪವಾಸ"

ಪ್ರತ್ಯೇಕ ಪ್ರಾತಿನಿಧ್ಯ ಇನ್ನು ಬೇಡ!

ಪಂಜಾಬ ಸರಕಾರದ ಕೃಷಿ ಇಲಾಖಾ ಮಂತ್ರಿಯರಾಗಿರುವ ಸರ್ದಾರ ಸರ್ ಜೋಗೇಂದ್ರ ಸಿಂಗರವರ, ತಮ್ಮ ಅನುಭವಪೂರ್ವಕವಾದ [illegible] ಈ ಸದಭಿಪ್ರಾಯವನ್ನು ಪ್ರಾಂಚಾಯಿಸ್ ಕಮಿಟಿಗೆ ತಿಳಿಸಿರುವರು. 'ಪ್ರತ್ಯೇಕ ಪ್ರಾತಿನಿಧ್ಯದ ಹಾವಳಿಯು ಈಗ ನಮಗೆ ಪಟ್ಟಣಗಳಲ್ಲೇ ತೋರಿರುವುದು. ಇನ್ನು ವೋಟರರ ಸಂಖ್ಯೆ ಹೆಚ್ಚಾಗುತ್ತ ಬರಬೇಕಾದ ಹೊಸ [illegible] ಪ್ರಕಾರ ಹಳ್ಳಿಗಳಿಗೂ ಈ ಪ್ರತ್ಯೇಕತೆಯ ವಿಷವು ಹರಡಿದರೆ, ಈಗ ಹಳ್ಳಿಗಳಲ್ಲಿ ಸಾಗುತ್ತಿರುವ ಸುಖಜೀವನವೂ ಹಾಳಾಗಿ ಕಲಹಮಯವಾಗುವುದರಲ್ಲಿ ಸಂದೇಹವಿಲ್ಲ. ಹೊಸ ಸುಧಾರಣೆಗಳ ಪರಿಣಾಮ ಎಂಬುದೇ, ಹಳ್ಳಿಗಳಲ್ಲಿ ಜನಗಳೊಳಗೆ ಸಮಾಜಾಂತರ ಕ್ರೋಧ—ಕಲಹ—ಭೇದಗಳಿಗೆಲ್ಲ ಕಾರಣವಾಗುವುದು.' ಇದಕ್ಕಿಂತ ಸದಭಿಪ್ರಾಯವನ್ನು ಬೇರೆ ಅಧಿಕಾರಿಗಳಾರೂ ಹೇಳಿರುವುದುಂಟೆ? ಸಮಾಜಾನ್ವಯವಾಗಿಯೆ ಪ್ರಾತಿನಿಧ್ಯವಾಗಲೆನ್ನುವ ಸರಕಾರವು ಇಷ್ಟನ್ನು ತನ್ನ ಮಂತ್ರಿಗಳ ಮೂಲಕವಾಗಿಯ ತಿಳಿದುಕೊಳ್ಳಲಾರದೆಂದಿದೆಯೆ? ಇದರಲ್ಲಿ,—ನಮ್ಮವರೇ ಕೆಲವರು, ಸಮಾಜಕ್ಕೊಬ್ಬ ಪ್ರತಿನಿಧಿ ದೊರೆತನೆಂದರೆ, ಅಂಗೈಯಲ್ಲೇ ಸ್ವರ್ಗಲಾಭವೆಂದು ಹಿಗ್ಗಿ, ಆತ್ಮನಾಶವನ್ನು ಮಾಡಿಕೊಳ್ಳುತ್ತಿದ್ದಾರೆಂಬುದೇ ವಿಚಿತ್ರವಲ್ಲವೆ?

ಲಂಕೇಶಾಯರಿನ ದುಸ್ಥಿತಿ

ಲಂಕೇಶಾಯರಿನ ಹತ್ತೀ ಬಟ್ಟೆಗಳ ವ್ಯಾಪಾರವನ್ನು ಕುರಿತಾಗಿ, ಈಗಲೇ ತಲಪಿರುವ ವಿಮರ್ಶೆಯಲ್ಲಿ,—"ಬಟ್ಟೆಗೆ ಗಿರಾಕಿಗಳು ಕಡಿಮೆಯಾಗುತ್ತ ಬಂದಿರುವರು, ಇಂಡಿಯದಿಂದಂತೂ ಕೇಳಿಕೆಗಳು ಸಹ ಏನೇನು ಇಲ್ಲವಾಗಿದೆ." ಎಂದು ಮುದ್ರಿಸಲಾಗಿದೆ. ೧೯೩೦ರಲ್ಲಿ ಲಂಕೇಶಾಯರಿನಿಂದ ಈ ದೇಶಕ್ಕೆ ಬಂದ ಜವುಳಿಯು ೧೯೧೩ (ಜರ್ಮನ್ ಯುದ್ಧದ ಮೊದಲು) ರಲ್ಲಿ ಬಂದುದರ ಕಾಲಂಶವಾಗಿದೆ, ಮಾತ್ರವಲ್ಲ! ೧೮೭೦ರಿಂದ ಈ ವರೆಗೆ ಆಮದಾದ ಜವುಳಿಯಲ್ಲಿ ೧೯೩೦ರಲ್ಲೇ ಅತೀ ಕಡಿಮೆ! ಬ್ರಿಟಿಷ ಸರಕುಗಳಿಗೆ, ಈಗಣ ಚಿನ್ನದ ಬೆಲೆ ಅಥವಾ ಮುಂದಣ ರಾಜಕೀಯ ಪರಿಸ್ಥಿತಿಯಿಂದ ಗಿರಾಕಿಗಳು ಹೆಚ್ಚಾಗಬಹುದಾದರೂ, ಲಂಕೇಶಾಯರಿನ ವ್ಯಾಪಾರವು ಇಲ್ಲಿಲ್ಲಿಗೇ ಸ್ಥಿರವಾಗಿ ಕೊನೆಗಾಣುವುದೆಂಬಂತಿದೆ. ಇಂಡಿಯವೇ ತನಗೆ ಬೇಕಾಗಿರುವ ಎಲ್ಲ ಬಟ್ಟೆಬರೆಗಳನ್ನು ಮಾತ್ರ ಎಷ್ಟು ಬೇಗನೆ ಸಿದ್ಧಪಡಿಸಿಕೊಳ್ಳಬೇಕೆಂಬುದನ್ನು ಯಾರೂ ಗುಣಿಸಿ ಹೇಳುವುದಿಲ್ಲ

ರಾಜಕೀಯ ವಿನೋದ ವಿಶಾರದರು

ನ್ಯೂ ಫೌಂಡಲಂಡಿನ ಸರಕಾರದವರು, ಗವರ್ನರರ, ಮಂತ್ರಿಗಳು, ಪ್ರಜೆಗಳು ಎಲ್ಲರೂ ಸಂಪೂರ್ಣ ಸ್ವರಾಜ್ಯವನ್ನು ಅನುಭವಿಸಿ, ಯೋಗ್ಯತೆ ಸ್ಪಷ್ಟಪಡಿಸಿರುವರು. ಮಂತ್ರಿಗಳಲ್ಲಿ ಸರ್ ಸ್ಕ್ವೈರ್ಸ್ ರೆಂಬವರು ಹಣ ಗಳಿಸುವುದರಲ್ಲಿ ಅಸ್ತ್ರರೆಂದು ಪ್ರಜೆಗಳ ಊರು. ಪ್ರಜೆಗಳು ಪ್ರಚಂಡ ಹಿಂಡಾಗಿ ಸರಕಾರದ ಆಫೀಸುಗಳನ್ನು ನುಗ್ಗಿ ಅಲ್ಲಿದ್ದ ಸಾಮಗ್ರಿಗಳನ್ನೆಲ್ಲ ನುಚ್ಚುನೂರಾಗಿ ಮಾಡಿ ಮಂತ್ರಿಯನ್ನು ಹುಡುಕುತ್ತಿರುವರು. ಮಂತ್ರಿ ಕಾಣೆ! 'ಅವನನ್ನು ಸಮುದ್ರದಲ್ಲಿ ಬಿಗದು ಬಿಡಿರಿ!' ಎಂದ ಪ್ರಜೆಗಳ ಸಿಫಾರಸು. ಅವನಿಲ್ಲ. ಸ್ವಲ್ಪ ಶಾಂತವಾದ ಬಳಿಕ, ಉದಯ ಹೊಂದಬಹುದ ಪ್ರಜಾ ಪ್ರತಿನಿಧಿಗಳು ಗವರ್ನರರನ್ನು ಕಾಣ ಬರಲು, ಈಗ ಹಡಗ [illegible] ನಿಮ್ಮನ್ನು ನರಕಕ್ಕೆ ಕಳುಹುತ್ತೇನೆ ಎಂದಿರುವರು. ಮತ್ತೆ, ಕ್ಷಮೆ ಬೇಡಿದರು. ಯುದ್ಧನಾವೆಯೊಂದು ಅತ್ತ ಸಾಗಿದಿದೆ ಪುಣ್ಯಕ್ಕೆ ಇದೇನೂ ಹಿಂದೂದೇಶವಲ್ಲವಷ್ಟೆ, ಬ್ರಿಟಿಷ ಸಾಮ್ರಾಜ್ಯಾಂತರ್ಗತ ಡೊಮಿನಿಯನ್! ಸ್ವಾತಂತ್ರ್ಯವುಳ್ಳ ರಾಜ್ಯ, ಬ್ರಿಟಿಷ ಗವರ್ನರರು ಬ್ರಿಟಿಷ ಮಂತ್ರಿಗಳು. ಈ ದೇಶದಲ್ಲಿಯೂ ಇಂತಹ ವರ್ತನೆಯ ಗಾಳಿಯು ಸೋಕಿದ್ದರೆ, ಆಂಗ್ಲೋ ಇಂಡಿಯನ್ ಪತ್ರಿಕೆಗಳು ಈ ಗಾಳಿಯನ್ನು ಬಲವಾಗಿ ಬೀಸುವಂತೆ ಮಾಡಿ, ಅದರಿಂದ ಹಿಂದೀಯರ ಅಚಾತುರ್ಯ, ಅವಿವೇಕ, ಅಯೋಗ್ಯತೆಗಳನ್ನು ಅಖಂಡವಾಗಿ ಅಂಟಿದ ಪ್ರಕಟಿಸಿ ಎಂತಹ ಗಾನಮಾಡುತ್ತ, ಜಗತ್ತಿನಲ್ಲೆಲ್ಲ ಹಿಂದೀಯರ ಅಯೋಗ್ಯತೆಯ ಪ್ರದರ್ಶನ ಮಾಡುತ್ತಿದ್ದರು. ಈಗ ಮೌನ ಇಲ್ಲಿ ಸೇರಲವಲ್ಲವೆ?

'ಸ್ವದೇಶಿ'ಯ ಸಂದೇಶ

'ವಿವೇಕದಿಂದಲೂ, ಧೈರ್ಯದಿಂದಲೂ ಖರ್ಚು ಮಾಡಲು ಕಲಿಯಿರಿ. ಹಣದ ಸದ್ವಿನಿಯೋಗವೆಂದರೆ, ಕಡಿಮೆ ವ್ಯಯಿಸುವುದೆಂದಲ್ಲ, ಅನಾವಶ್ಯಕವಾದ ವ್ಯಯವನ್ನು ಕತ್ತರಿಸುವುದೇ ಕೈಲಾಗದ ವ್ಯಯಕ್ಕೆ ಕೈಹಚ್ಚದಿರುವುದೇ ಸದ್ವಿನಿಯೋಗ. ಏಕೆಂದರೆ ಶಿಕ್ಷ್ಯ ಇರುವವರು ಖರ್ಚು ಮಾಡಲೇ ಬೇಕು. ನ್ಯಾಯವಲ್ಲದ ಜೀನತನದಿಂದ ಹಣವನ್ನೆಲ್ಲ ಕೂಡಿಸಿಟ್ಟು ಅಥವಾ ಅನಾವಶ್ಯಕವಾದವುಗಳ ಬಗ್ಗೆ ವ್ಯಯಿಸಿದರೆ ನಾವು ತಪ್ಪು ಭ್ರಷ್ಟರಾಗುತ್ತೇವೆ. ನಮ್ಮ ಹಣವು ಕೂಲಿಗಾರರ ಜೀವನಕ್ಕೆ ದೊರೆವ ಹಾಗೆ ಮಾಡಿ, ಕೂಲಿಯವರ ವ್ಯಕ್ತಿತ್ವವು ಘಟಿತಕ್ಕೆ ಬಲವಂತ ಮಾಡುವುದೇ ನಮ್ಮ ಹಣದ ಸದ್ವಿನಿಯೋಗವಾಗಬೇಕು. ಸಮಾಜದ ಹಿತಕ್ಕಾಗಿ, ಇಡೀ ಸಮಾಜವು ಲಾಭ ಹೊಂದುವ ಹಾಗೆ ಹಣ ವ್ಯಯಿಸಲು ಎಲ್ಲರೂ ಕಲಿತುಕೊಳ್ಳುವ.' ಎಂದು ಮುಖ್ಯ ಮಂತ್ರಿಗಳಾಗಿರುವ ಮೆಕ್ಡೊನಾಲ್ಡರ ಭಾಷಣ, ಲಂಡನಿನವರಿಗೆ. ಇದೇ ನಮ್ಮ ಸ್ವದೇಶಿ ಚಳವಳಿದ ಮೂಲತತ್ವ. ಇದನ್ನೇ ಮುಖ್ಯಮಂತ್ರಿಗಳ ಸಿಫಾರಸಿನ ವ್ಯಾಖ್ಯಾನಗಳು ಒದಗಿರುವ ಬಳಿಕ, ಇನ್ನೇಕ ಅನಾತ್ಮ [illegible], ಇತರರಿಗೆ ಹಣ ದೊರೆವಂತೆ ಸ್ವದೇಶಿಯರು ಹಣ ವ್ಯಯಿಸಬೇಕು.

+ + + +

ಹಾರಾಡಿಸಿ, ದಂಡನೀತಿಗೆ ವಿರುದ್ಧ ಭಾಷಣ ಮಾಡಿದ ವರ್ತಮಾನ ನಮಗೇಕೆ ತಿಳಿಸಬೇಕು? ಐರ್ಲೆಂಡನ್ನು ಹಿಂದೆ ಆಣಗಿಸಿ ಹೋದ ಮಿಲಿಟರಿ ಉದ್ಯೋಗಸ್ಥರೊಬ್ಬರು ನಮ್ಮ ಸರಕಾರದ ಧೋರಣೆ ಖಂಡಿಸಿ ನುಡಿಯುವುದೆಂದರೆ ನಮಗೆ ಸರಿ ಕಾಣುವುದಿಲ್ಲ

ನೋಟಗಳು

NOTE. S

ಸ್ಕೌಟ ಮಹಾ ಸೈನ್ಯದಲ್ಲಿ ಒಳ ಜಗಳಕ್ಕೆ ಕಾರಣವಾಗಬಹುದೇನೋ ಎಂಬ ಅಂಜಿಕೆಗೆ ಕಾರಣ,—ಬೇಡನ್‌ಪವೆಲ್ಲರ ತರುವಾಯ ಅಗ್ರ ತಾಂಬೂಲ ಯಾರಿಗೆ ಎಂಬ ಪ್ರಶ್ನೆಯೊಂದು; ಹೆಡ್ ಆಫೀಸಿನ ಖರ್ಚು ವರ್ಷಕ್ಕೆ ೫೭೦೦೦ ಪವನು ಎಂಬುದು ಇನ್ನೊಂದು

• • • • •

ಜಗತ್ತಿನ ಶಾಂತಿಗಾಗಿ ಉಂಟಾದ ಸ್ಕೌಟ ದಳವು ಶಾಂತಿ ಭಂಗವುಂಟುಮಾಡದು. 'ಸೆಕ್ರಿಟ್ಯಾರಿ'ಯ ಸಕ್ಕರೆ ಪಾಯಸದಿಂದ ಒಂದು [illegible] ಮಾಡಿದರೆ ಎಲ್ಲರೂ ಧರ್ಮಾರ್ಥ ಕೆಲಸವನ್ನು ಹೆಡ್ ಆಫೀಸಿನಲ್ಲಿ ನಡೆಸಬಹುದು.

• • • •

ಅದಲ್ಲದೆ, ಬಂಗಾಳದಲ್ಲಿ ಹಿಂಸಾತುರರು ಇರುವ ಜಿಲ್ಲೆಗಳಿಗೆ ಸೈನಿಕ ಉದ್ಯೋಗಸ್ಥರನ್ನೆ [illegible] ಇಂಡಿಯಾ ಸರಕಾರ [illegible], ಬೇಡನ್‌ಪವೆಲ್ಲರನ್ನು ಬಂಗಾಳಕ್ಕೆ ಕಳುಹಿದರೆ, — ಹಿಂಸಾತುರರನ್ನು ಸ್ಕೌಟರನ್ನಾಗಿ ಮಾಡಿ, ಲಾರ್ಡ್ ಬೇಡನ್‌ರ [illegible] ಬಂಗಾಳವನ್ನು ಶಾಂತಿಗೆ [illegible]

• • • •

ಬಂಗಾಳದ [illegible] ಹಿಲ್, ಕೊಕ್ರೋಡ್ [illegible] ಉತ್ತರಾಧಿಕಾರಿಯನ್ನಾಗಿ ನೇಮಿಸುವುದ ಉತ್ತಮ. [illegible] ಒಳಗಿನ [illegible] ನಡೆಸುವ ಅಗತ್ಯವಿರದ

• • • •

[illegible] ಸಂತೋಷ [illegible]

• • • •

'[illegible] ೧೦೦೦೦ [illegible] (೫೦೦೦ ಪವನ) [illegible] ೫೦೦೦ [illegible] ತೆರಿಗೆ [illegible] ಕೊಡಲ್ಲ ತಪ್ಪಿದರು. ಬ್ರಿಟಿಷ [illegible]

• • • •

[illegible] ಕೆಂದ [illegible] ಹಿಂದುಗಳು [illegible] ಬಿಜಾಪುರ [illegible] ಆನಂತರ—ಸಂಖ್ಯೆ [illegible] ದೊರೆವುದಿಲ್ಲ. [illegible] ಬೇಕು. ಅದರೂ [illegible]?

• • • •

ಕಾಂಗ್ರೆಸ್ ಸಭೆಯ [illegible] ಸರಕಾರವು [illegible] ಅಧಿವೇಶನವಾಗುವ ದೆಂದೂ [illegible] ಪ್ರಕಟವಾಯಿತು. ಇಲ್ಲಿ ಸರಕಾರವು ಮಾತ್ರ [illegible] ಸಭೆ ಕಾನೂನ ವಿರುದ್ಧವಲ್ಲವೆಂಬುದೂ ನಿಜ. ಯಾವ [illegible] ಇತ್ತಂಡಗಳ [illegible] ನಡೆಯುತ್ತಿದೆ. ಸರಕಾರ [illegible] ಕಾಂಗ್ರೆಸ್ ತಯಾರಾಗುತ್ತಿದೆ, [illegible] ಕಾಂಗ್ರೆಸ್ಸಿಗೆ ಸೇರಬಹುದೆ? ಎಂಬ ಪ್ರಶ್ನೆ

• • • •

ಧಾರವಾಡ ಪೋಲೀಸರ [illegible] ವಿವೇಕಗಳೆಂದು ಹೊಗಳಬೇಕು. ಅನ್ಯಾಯವಾಗಿ ಪೆಟ್ಟಿ ಮಾಡಿ ಜನರನ್ನು ಪೀಡಿಸುವವರು ಇವರಲ್ಲ. [illegible] ೧೦ ಮಂದಿಯನ್ನು ಕೈದುಮಾಡಿದರು. ೩ ತಿಂಗಳ ತನಕ ಅವರು ಜೈಲಿನಲ್ಲೇ ಇದ್ದರೂ, ಒಹಳ ಸೂಕ್ಷ್ಮವಾಗಿ ಆಲೋಚಿಸಿ ಅವರ ಮೇಲೆ ಮೊಕದ್ದಮೆ ಮಾಡಲಿಲ್ಲ. [illegible] ಮೆಜಿಸ್ಟ್ರೇಟರು ಅವರನ್ನು ಖುಲಾಸು ಪಡಿಸಿದರು. ೩ ವರ್ಷ ಸಜಯಾಗುತ್ತಿತ್ತೇನೊ? ಅದನ್ನು ಪೋಲೀಸರ ನಿವಾರಿಸಿದರು.

• • • •

[illegible]ಂಡಾಬಟ್ಟೆ ವರ್ತಮಾನಗಳನ್ನು ಅವು ಸತ್ಯವಾದರೂ ಇಲ್ಲಿ ಪ್ರಕಟವಾಗದಂತೆ ಸರಕಾರವು ಜಾಗ್ರತೆಯಿಡಬೇಕೆಂದು ನಮ್ಮ ವಿನಂತಿ. ಲಂಡನಿನ ಪ್ರಾಮುಖ್ಯ ಕೇಂದ್ರವಾದ ಟ್ರಿಫಲ್‌ಗರ್ ಸ್ಕ್ವೇಯರ್‌ದಲ್ಲಿ ಇಂಡಿಯದ ಕಾಂಗ್ರೆಸಿನ ಧ್ವಜವನ್ನು

1. Good Riding Quality.
2. Gripping Tread
3. Economical wear.
4. Maximum Resistance to shock

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ
ಸ್ತ್ರೀ ಸಮಾಜದ ಉದ್ಧಾರ ೬
ಸ್ಫುಟವಿಚಾರಗಳು . . . ೮
ನೋಟಗಳು ೫
ವರ್ತಮಾನ ಸಂಗ್ರಹಗಳು
ವಿದೇಶ ವರ್ತಮಾನ ೬
ಒಳದೇಶ ವರ್ತಮಾನ ೬
ದಕ್ಷಿಣ ಕನ್ನಡ — ಮಂಗಳೂರು, ಉಡುಪಿ, ಕುಂದಾಪುರ, ಸಾಸ್ತಾನ . . ೭
ವಿವಿಧ ಸಮಾಚಾರಗಳು . . . ೯
ಸ್ವಧರ್ಮೇ ನಿಧನಂ ಶ್ರೇಯಃ . . . ೩
ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಬಂಧನ ೧೧
ಪತ್ರವ್ಯವಹಾರ ೧೩
ಸರೋಜಿನಿಯವರಿಗೆ ಶೌಕತರ ಪತ್ರ! ಅದಕ್ಕೆ ಬರುತಿನ ಉತ್ತರ . . . ೧೪

ಸ್ವದೇಶಾಭಿಮಾನಿ.

ತಾ ೧೬ನೇ ಶುಕ್ರವಾರ ಎಪ್ರಿಲ್ ೧೯೩೭

ಸ್ತ್ರೀ ಸಮಾಜದ ಉದ್ಧಾರ.

ಲೇಖಾಂಕ ೩

ಸ್ತ್ರೀಯರನ್ನೂ ಪುರುಷರನ್ನೂ ಪ್ರತ್ಯೇಕ ಸಮಾಜಗಳಾಗಿ ಬೇರ್ಪಡಿಸುವುದೇಕೆ? ಈ ಎರಡು ಸಮಾಜಗಳ ಮಧ್ಯದಲ್ಲಿ ಕಠಿಣವಾದ ಗೋಡೆಗಳನ್ನು ಕಟ್ಟಲೇಕೆ? ಎಂಬುದೇ ಸುಧಾರಕರ ಪ್ರಶ್ನೆಯು. ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ನಾವು ಕೊಡಬಲ್ಲೆವೆಂದು ಹೇಳಲಾರೆವು. ಆದರೆ ಮನುಷ್ಯನ ನಿಸರ್ಗದಲ್ಲಿ ಕೆಲವು ಬಂಧನಗಳು ಅವಶ್ಯಕವೆಂದು ಕಂಡು ಬಂದುವೆಂಬುದನ್ನು ಯಾರೂ ಅಲ್ಲಗಳೆಯಲಾರರು. ನಿಜವಾಗಿ ನೋಡಿದರೆ, ಸಮಾಜವೆಂಬುದರ ಅಸ್ತಿತ್ವವೇ ಈ ಬಂಧನಗಳಿಂದುಂಟಾಗಿದೆ.

ಸಮಾಜದ ಬಂಧನಗಳು ಚಿರಕಾಲಕ್ಕಾಗಿ ರಚಿಸಲ್ಪಟ್ಟುವು ಎಂಬುದನ್ನು ನಾವೂ ಒಪ್ಪುವುದಿಲ್ಲ. ಆದರೆ ಆ ಬಂಧನಗಳನ್ನೊಡೆಯುವಾಗ ವಿಚಾರವನ್ನು ಬದಿಗೊತ್ತಬಾರದೆಂದು ಹೇಳಬೇಕಾಗಿರುವುದು. ಹಾಗೆಯೇ ಆಚಾರ ಸಾಂಪ್ರದಾಯಗಳ ಮೂಲಕವೂ ಪುರಾಣಕತೆಗಳ ಮೂಲಕವೂ ಹಿಂದೂ ಸಮಾಜದಲ್ಲಿ ಸ್ತ್ರೀಯರ ಬಗ್ಗೆ ರಚಿಸಲ್ಪಟ್ಟ ಹಲವು ಬಂಧನಗಳನ್ನು ಒಡೆಯುವುದು ಜಗತ್ತವೇ? ಎಂತಾದರೂ ಸ್ತ್ರೀ ಸಮಾಜದ ಸ್ವಾತಂತ್ರ್ಯದ ಮೇರೆಯೊಂದಿರಬೇಕಲ್ಲವೇ? ಸ್ತ್ರೀಯರಿಗೇನೇ ಏಕೆ? ಪುರುಷರಿಗೂ ಸ್ವಾತಂತ್ರ್ಯದ ಮೇರೆಯುದೆಯಲ್ಲ.

ಸಮಾಜ ಸುಧಾರಣೆಗಳು ಹಲವು ವಿಧದಲ್ಲಿ ಆಗಬೇಕು, ವಿದ್ಯಾಭ್ಯಾಸ ಪ್ರಚಾರವಾಗಬೇಕು, ಸಾಮಾಜಿಕ ಚಳವಳಿಗಳು ಅಭಿವೃದ್ಧಿಗೊಳ್ಳಬೇಕು, ಸಮಸ್ತ ತರದ ಕಲೆಗಳ ವಿಜ್ಞಾನವು ಮೂಡಬೇಕು, ಇತ್ಯಾದಿ, ಇತ್ಯಾದಿ. ಆದರೆ ಈ ನಾಟಕಗಳು, ಟೆನ್ನಿಸ್ ಬಂದ್ಯಾಟಗಳು, ಇತ್ಯಾದಿ ಈ ಸಮಾಜ ಸುಧಾರಣೆಯ ಕಡೆಗೆ ಯಾವ ಗತಿಯನ್ನು ತೋರಿಸಬಲ್ಲವು?

ಸ್ತ್ರೀಯರು ತಾವಾಗಿ ತಮ್ಮ ಬಗ್ಗೆ ಯಾವ ಚಳವಳಿಯನ್ನುಂಟು ಮಾಡಿದರೂ ಅದರಲ್ಲಿ ಅಡ್ಡಿ ಹೇಳ ಬರುವಂತಿಲ್ಲ. ಆದರೆ ಈ ಮಿಶ್ರ ಚಳವಳಿಗಳ ವಿಷಯದಲ್ಲಿ ಒಂದಿಷ್ಟು ಜಾಗರೂಕತೆಯನ್ನು ಹೇಳದೆ ಇರಲಾಗುವುದಿಲ್ಲ. ಮಿಶ್ರ ವಿದ್ಯಾಭ್ಯಾಸ, ಮಿಶ್ರ ಚಳವಳಿಗಳು ಇತ್ಯಾದಿ ಗಂಡಸರು ಹೆಂಗಸರು ಕಲೆತು ನಡಿಸಬೇಕಾದ ವ್ಯವಹಾರಗಳು, ಧಾರ್ಮಿಕ ದೃಷ್ಟ್ಯಾ (ಅಂದರೆ ಸ್ತ್ರೀ ಪುರುಷರ ಸಂಬಂಧದ ವಿಷಯದಲ್ಲಿ) ಹಲವು ಕಡೆಗಳಲ್ಲಿ ಹಲವು ರೀತಿಗಳಲ್ಲಿ ದುಷ್ಪರಿಣಾಮವನ್ನು ಹೊಂದಿರುತ್ತವೆ. ಈ ವಿಷಯದಲ್ಲಿ ನಾವು ಆದರ್ಶವಾಗಿ ತೆಗೆದುಕೊಂಡ ಪಾಶ್ಚಾತ್ಯರೊಳಗಿನ ಅವಸ್ಥೆಯನ್ನು ಕಂಡರೆ ಈ ತರದ ಮಿಶ್ರ ಚಳವಳಿವು ಯಾವ ದೇಶಕ್ಕೂ ಯಾವ ಕಾಲಕ್ಕೂ ಹಿತಕರವಲ್ಲವೆಂದು ಸ್ಪಷ್ಟವಾಗಿ ಕಾಣುವುದು.

ಅದರಲ್ಲಿಯೂ ಈ ಮಿಶ್ರ ನಾಟಕಗಳ ಪರಿಣಾಮವೆಂತಹದಿರಬೇಕು? ಮಿಶ್ರ ನಾಟಕಗಳ ಪರಿಣಾಮಕ್ಕೆ ಅಮೇರಿಕದ ಹಾಲಿವುಡ್ (Hollv wood) ಎಂಬ ಸಿನೆಮಾ ನಟನೆಯ ಕೇಂದ್ರ ಪ್ರದೇಶವನ್ನು ನೋಡಿದರೆ ತಿಳಿಯುವುದು. ಅಮೇರಿಕದ ವೇಳೆ, ಸಿನೆಮಾ ನಟ ನಟಿಯರು ಯಾರನ್ನು ನೋಡಿದರೂ ಇದರೊಳಗಿನ ಹಾನಿಯು ಕಂಡುಬರುವುದು. ಪ್ರಕೃತ ಮನುಷ್ಯ ಜೀವನದ ರಚನೆಯು ಎರಡು ವಿಭಾಗದ್ದಿರುವುದು; ಒಂದು ಸಂಸಾರಿಕ; ಇನ್ನೊಂದು ವ್ಯಾವಹಾರಿಕ. ವ್ಯಾವಹಾರಿಕ ಜೀವನವು ಹೇಗೂ ನಡೆಯಬಹುದು. ಆದರೆ ಸಾಂಸಾರಿಕ ಜೀವನಕ್ಕೆ ಪತಿ—ಪತ್ನಿ ಸಂಬಂಧವೇ ಏಕ ಮಾತ್ರ ಆಧಾರ. ಈ ಪತಿ—ಪತ್ನಿ ಸಂಬಂಧದ ಪಾವಿತ್ರ್ಯವೇ ಈ ಸಂಸಾರದ ಮೂಲ ಸೂತ್ರ, ವ್ಯಭಿಚಾರವನ್ನು ಅಧರ್ಮವಾಗಿ ತಿಳಿಯುವುದೇ ಈ ಪಾವಿತ್ರ್ಯದ ಏಕಮಾತ್ರ ಲಕ್ಷಣ. ಆದುದರಿಂದ ಮನುಷ್ಯ ಸಮಾಜದ ಪ್ರಮುಖ ವಿಭಾಗವಾದ ಸಾಂಸಾರಿಕ ಜೀವನದ ಸುಖವು ಬೆಳೆಯಬೇಕೆಂದರೆ ಗಂಡಸಾಗಲಿ—ಹೆಂಗಸಾಗಲಿ ವ್ಯಭಿಚಾರವನ್ನು ತ್ಯಜಿಸಬೇಕು, ಅರ್ಥಾತ್ ಧಾರ್ಮಿಕವಾಗಿ ವರ್ತಿಸಬೇಕು.

ಮಿಶ್ರ ನಾಟಕಗಳು ಈ ಧಾರ್ಮಿಕ ಅಡಿಗಲ್ಲನ್ನು ಸಡಲಿಸವೆ? ಊರಲ್ಲಿ ಹಲವು ನಾಟಕ ಕಂಪೆನಿಗಳಿವೆ, ಅವುಗಳೂ ಮಿಶ್ರ ರೀತಿಯವು, ಅವುಗಳಲ್ಲಿ ದೋಷಗಳಿವೆ, ಅದಕ್ಕೇನು ಮಾಡುವೆ? ಅವುಗಳನ್ನು ಕುಲೀನರು ಸೇರದುದೇ ಈ ದೋಷಗಳಿಗೆ ಕಾರಣವೆನ್ನುವವರು ಸುಧಾರಕರು ಕೆಲವಿರುವರು. ಕುಲೀನರು ಸೇರಿದರ ಪರಿಸ್ಥಿತಿ ಬದಲಾದೀತೆ? ಕೇವಲ ಪ್ರೇಮಮಯವಾದ ನಾಟಕಗಳನ್ನು ಆಯ್ದು ಪ್ರಣಯವನ್ನೇ ಆರಂಭದಿಂದ ಕಡೆಯವರೆಗೆ ಅಭಿನಯಿಸಿ, ನಾಟಕಕ್ಕೆ ಅನುಕೂಲವಾದ ಯಾರೂ ಒಬ್ಬನನ್ನು ಸಂಬೋಧಿಸಿ ಪ್ರೀತಿಯ, ಪ್ರೇಮದ, ಪ್ರಣಯದ ಸಂಬೋಧನೆಗಳನ್ನು ಉಚ್ಚರಿಸುವಾಗ, ಗಂಡಸಾಗಲಿ, ಹೆಂಗಸಾಗಲಿ, ತಮ್ಮ ವ್ಯಕ್ತಿಯನ್ನು ಸಂಪೂರ್ಣವಾಗಿ ಮರೆಯಬಲ್ಲರೇ? ಒಂದಿಷ್ಟಾದರೂ, ಕಿಂಚಿತ್ತಾದರೂ ತಮ್ಮ ವ್ಯಕ್ತಿತ್ವದ ನೆನವು ಉಂಟಾಗದೆ? ಅಭಿನಯವನ್ನು ನೋಡಿ ಪ್ರೇಕ್ಷಕರು ಮರುಳಾಗುವಾಗ ಅಭಿನಯಿಗಳೇ ಮರುಳಾಗುವುದು ಕಷ್ಟಸಾಧ್ಯವೇ?

ಏಕೆ? ಮೊನ್ನೆಯ ನಾಟಕವನ್ನೆ ನೋಡಿದರೆ ಇದು ತಿಳಿಯುವುದು. ನಾಯಕನು 'ಪ್ರಿಯೆ' ಎಂದು ಕೈ ಅಗಲಮಾಡಿ ಬರುವನು, ನಾಯಿಕೆಯು 'ಪ್ರಿಯಾ' ಎಂದು ಬರುವಳು. ಪ್ರೇಕ್ಷಕವರ್ಗವು ನಾಯಕ ನಾಯಿಕೆಯ ಆಲಿಂಗನವನ್ನು ನಿರೀಕ್ಷಿಸುವರು. ಆದರೆ, ಇಬ್ಬರೂ ಹತ್ತಿರವಾದ ಕೂಡಲೇ ಅಗಲ ಹೋದ ಕೈಗಳು ಒದಿಯಲ್ಲಿ ಬೀಳುವವು. ಏಕೆ? ನಾಯಕನು ಇನ್ನೂ 'ತರಬೇತಿಯಾಗಲಿರುವ ಕುಲೀನ ಹುಡುಗ, ನಾಯಿಕೆಯು ಇನ್ನೂ ನಿಶ್ಚಿತ ಪತಿಯನ್ನು ನಿರೀಕ್ಷಿಸುವ ಕುಲೀನ ಹುಡುಗಿ. ಹೀಗಿರುವಾಗ ಏನೊಂದೂ ಸಂಬಂಧವಿಲ್ಲದವರು ಒಬ್ಬರನ್ನೊಬ್ಬರು ಆಲಿಂಗಿಸುವುದು, ಆ ಕುಲೀನ ಬಾಪದ ಆದರ್ಶ ಪ್ರೇಮದ ಆ ಶಯವಿರುವ ವರೆಗೆ ಅಸಾಧ್ಯ. ಆದರೆ ನಮ್ಮ Dramatic Society ಯು Histrionic Talentನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಈ Histrionic Artಗೆ ವಿರೋಧವಿದ್ದುದನ್ನು ಅವನ್ನು ಮಾನಿಸುವುದು ಹೇಗೆ? ಆ Histrionic Artನ ಬಗ್ಗೆ ನಾಯಕನು ನಾಯಿಕೆಯನ್ನೂ ನಾಯಿಕೆಯೂ ನಾಯಕನನ್ನೂ ಆಲಿಂಗಿಸಲೇ ಬೇಕು, ಚುಂಬಿಸಲೂ ಬೇಕು, ಏಕೆ ಕೂಡದು? ಅಂತೂ ಪ್ರಥಮದ ಲಜ್ಜೆಯ ನಂತರ ಇದೂ ಸಿದ್ಧವಾಗುವುದು. ಆದರೆ, ಈ ನಾಯಕರನ್ನು ನಾಯಿಕೆಯರನ್ನು Histrionic Artನಲ್ಲಿ ಪೂರ್ಣ ತರಬೇತು ಪಡಿಸುವಾಗ, ಪ್ರೇಮದ Art ಯಾವ ತರಗತಿಯನ್ನು ಮುಟ್ಟುವುದು? Histrionic Artನ ತತ್ವಾಭಿಮಾನಿಗಳಿಗೆ ಈ ಪ್ರಶ್ನೆಯು ಬಾಧೆ ಕೊಡಲಾರದು. ಹುಡುಗಿಯರ ಕುಲೀನತೆಯನ್ನೂ ಹುಡುಗರ ಕುಲೀನತೆಯನ್ನೂ ರಕ್ಷಿಸಲಿಚ್ಛಿಸುವ ಅವರ ಹಿರಿಯರು ಈ ವಿಷಯ ಆಲೋಚಿಸುವುದೊಳ್ಳೆಯದು—ಹಿರಿಯರಿದ್ದರೆ.

ವಿದೇಶ ವರ್ತಮಾನ.

— ಲಂಡನಿನ ಫ್ರೆಂಡ್ ಒಫ್ ಇಂಡಿಯಾ ಸೊಸೈಟಿಯವರು ಸಾಧ್ವ ಧ್ವಜವನ್ನೇರಿಸಿ ಒಂದು ಸಭೆ ಜರುಗಿಸಿ ಲೋರ್ಡ್ ವಿಲ್ಲಿಂಗ್ಡನರ ಧೋರಣೆಗಾಗಿ ಮನಃಸ್ತಾಪ ಸೂಚಿಸಿದರು.

— ಚಿಲಿ ದೇಶದಲ್ಲಿ ಭೂಕಂಪವು ಪ್ರಾರಂಭವಾಗಿದೆ. ಕೆಲವು ಜ್ವಾಲಾಮುಖಿಗಳೊಡೆದು ಬೆಂಕಿ, ಬೂದಿ, ಲಾವಾಗಳನ್ನು ಹೊರಕಾರುತ್ತಿವೆ. ಆಕಾಶವು ಕರೀ ಹೊಗೆಯಿಂದ ಆಚ್ಛಾದಿತವಾಗಿದೆ. ಅನೇಕ ಪ್ರಾಣಹಾನಿಗಳಾದುವು. ವಿಮಾನಗಳ ಪಡೆಗಳು ಆ ದೇಶಕ್ಕೆ ಹೋಗಿ ನಿರಾಶ್ರಿತರಿಗೆ ಸಹಾಯವನ್ನೀಯುತ್ತಿವೆ.

ಒಳದೇಶ ವರ್ತಮಾನ

ಕಲ್ಕತ್ತದಲ್ಲಿ ಕಶಿಲ್ದಾರ್ ಪಬ್ಬಲ್ ಎಂಬ ಪೋಸ್ಟ್ ಪೇದೆಯು ಒಂದು ಚೀಲವನ್ನು ಹೊತ್ತುಕೊಂಡು ಹೋಗುತ್ತಿರುವಾಗ ಒಂದು ಮೋಟಾರಿನಲ್ಲಿ ಕೆಲವರು ಬಂದು ಅವನಿಗೆ ಗುಂಡು ಹೊಡೆದು ಚೀಲವನ್ನು ಕಾರಿನಲ್ಲಿ ಹಾಕಿಕೊಂಡು ಹೊರಟು ಹೋದರು. ಆ ಚೀಲದಲ್ಲಿ ಪೈಸಾ ಇರಲಿಲ್ಲ. ಬರೇ ಇಂಟಿಮೇಶನ್‌ಗಳೂ ಸಾಮಾನ್ಯದ ಕಾಗದಗಳೂ ಇದ್ದುವು. ಗಾಯಗೊಂಡವನು ಆಸ್ಪತ್ರೆಯಲ್ಲಿದ್ದಾನೆ.

ಲಾಹೋರಿನಲ್ಲಿ ಮಿಸ್ಟರ್ ಎ, ಮಿಸ್ಟರ್ ಬಿ, ಮಿಸ್ಟರ್ ಜಿ ಎಂಬ ಮೂವರು ಆಂಗ್ಲೋ ಇಂಡಿಯನ್ ಯುವಕರು ಒಂದು ಅಂಗಡಿಯಲ್ಲಿದ್ದ ಹಣದ ಖಜಾನೆಯನ್ನೂ ಒಂದು ಕಡೆಯಲ್ಲಿ ಮೋಟಾರ್ ಕಾರನ್ನೂ ಕದ್ದರೆಂಬ ಅಪಾದನೆಯ ಮೇಲೆ ಕೋರ್ಟುಗಳೆಯಲ್ಪಟ್ಟಿರುವರು. ಇವರು ಅಜ್ಞಾತನ್ಯಂದಿರೆಂದು ತಿಳಿದುಬಂದಿದೆ.

— ಮುಂಬಾಯಿಯಲ್ಲಿ ನಾಲ್ಕು ಮಂದಿ ಪಠಾಣರು ಒಂದು ಹೋಟೇಲಿಗೆ ಹೋಗಿ ಹೊಟ್ಟೆ ತುಂಬಾ ಸರಿಯಾಗಿ ಉಂಡು, ಹೋಟೇಲಿನವರಿಗೆ ಹಣಕೊಡದೆ ಹೊರಹೊರಡಲುದ್ಯುಕ್ತರಾದರು. ಹೋಟೇಲಿನವನು ಓಡಿಬಂದು ಹಣ ಕೇಳಿದಾಗ ಅವರು ಅವನನ್ನು ತಿವಿದುಬಿಟ್ಟರು. ನಾಲ್ಕು ಮಂದಿಗಳೂ ಹಿಡಿಯಲ್ಪಟ್ಟಿರುವರು.

— ಡಾ। ರವೀಂದ್ರನಾಥ ಠಾಕೂರರು ತನ್ನ ಸೊಸೆಯೊಡನೆ ವಿಮಾನದ ಮೂಲಕ ಪರ್ಶಿಯಕ್ಕೆ ಹೋದರು. ಅಲ್ಲಿಯ ಷಹಾನ ಆಮಂತ್ರಿಸಿದುದಕ್ಕಾಗಿ ಹೋದುದಂತೆ. ಇದೀ ಪರ್ಶ ದೇಶವೇ ಅವರನ್ನು ಸ್ವಾಗತೀಕರಿಸಲಿಕ್ಕಿದೆ.

ಲಕ್ನೋವಿನ ಹಜ್ರತ್ ಗಂಜ್ ಎಂಬಲ್ಲಿ ಒಂದು ಬೊಂಬು ಧರೆ ಎರಗಿತು. ಅದರ ಬಳಿ ಹೋಗುತ್ತಿದ್ದ ಹೆವೆಸ್ ಎಂಬ ಆಂಗ್ಲ ಸ್ತ್ರೀಗೆ ಬಹಳ ಬಹಳ ಘಾಯವಾಯಿತು.

ಮುಂಬಾಯಿಯ ಕೋರ್ಟಿನಲ್ಲಿ ಜಡ್ಜರು ಕರೆಯುವಾಗ ಕಕ್ಷಿಗಾರರನ್ನು ವಕೀಲರುಗಳು ತಂದು ಎಲ್ಲಿಸಲಿಲ್ಲವೆಂದು ಜಡ್ಜರು ಬೇಸರಗೊಂಡು ಕೋರ್ಟಿನಲ್ಲಿ ನಿಲ್ಲದೆ ಹೊರಗೆ ಹೋದರು.

ಕರ್ನಾಟಕ: — ಧಾರವಾಡ ಭಾರತೀಯ ತರುಣರ ಸಂಘದ ಸೆಕ್ರೆಟರಿಗಳೂ, ಧಾರವಾಡ ಜಿಲ್ಲೆಯಲ್ಲಿ ಪ್ರಸಿದ್ಧ ಕಾಂಗ್ರೆಸ್ ಪ್ರಚಾರಕರೂ ಆದ ಶ್ರೀಮಾನ್ ಎನ್. ಮುದ್ದಣ್ಣರವರನ್ನು ಪೋಲೀಸರು ೩ ತಿಂಗಳಿಂದ ವಾರಂಟು ಹಿಡಕೊಂಡು ಹುಡುಕುತ್ತಿರುವರು. ಶ್ರೀ ಮುದ್ದಣ್ಣರವರು ಮತ್ತು ಕರ್ನಾಟಕ ಕಾಂಗ್ರೆಸ್ ಕಮಿಟಿಯ ಡಿಕ್ಟೇಟರರಾದ ಶ್ರೀ ಹಳ್ಳಿಕೇರಿಯವರೂ ಕೂಡಿಯೇ ಕರ್ನಾಟಕದ ಬಹುಭಾಗದಲ್ಲಿ ತಿರುಗಾಡಿ ಸ್ವದೇಶಿ ಪ್ರಚಾರದ ಬಗ್ಗೆ ತೀರ ಎಲ್ಲಾ ಪರಿಸ್ಥಿತಿಯನ್ನು ತಿಳಕೊಂಡು ಬಂದಿರುವರು. ಮೊನ್ನೆ ಶಿವಮೊಗ್ಗಾದಲ್ಲಿ ಧಾರವಾಡ ರೀಮಿಯು ಒಬ್ಬ ಪೋಲೀಸನ ಅಲ್ಲಿಯ ಕಾಂಗ್ರೆಸ್ ಕೆಲಸಗಾರರ ಬಳಿಗೆ ವೇಷ ಬದಲಾಯಿಸಿಕೊಂಡು ಹೋಗಿ ತಾವು ಮುದ್ದಣ್ಣರವರ ಅಣ್ಣರು. ಅವರು ಪೋಲೀಸರಿಗೆ ಸಿಗದಿದ್ದುದರಿಂದ ಅವರು ಬಂದು ನಮಗೆ ಬಹಳ ಉಪದ್ರ ಕೊಡುತ್ತಾರೆ. ನಮ್ಮನ್ನೇ ಹಿಡಕೊಂಡು ಹೋಗುತ್ತೇವೆಂದು ಹೇಳುತ್ತಾರೆ. ದಯಮಾಡಿ ಅವರ ಭೇಟಿಮಾಡಿಸಿರೆಂದು ಅತ್ತು ಕಾಡಿದ್ದನಂತೆ. ಶ್ರೀ ಮುದ್ದಣ್ಣರವರು ಕೆಲವು ದಿನಗಳ ಹಿಂದೆ ಇಲ್ಲಿಂದು ಜಾಹೀರಸಭಾ ಮಾಡಿದ್ದೇ ಇದಕ್ಕೆ ಕಾರಣ. ಶಿವಮೊಗ್ಗದ ಕೆಲಸಗಾರರು ಇದಕ್ಕೆ ಮೋಸ ಹೋಗದೆ ತಮಗೆ ಗೊತ್ತಿಲ್ಲೆಂದು ಹೇಳಿದರು.

ಧಾರವಾಡ ಭಾರತೀಯ ತರುಣರ ಸಂಘದ ಅಜೀವ ಸಭಾಸದರೂ ಹೊಸಭಾವಿಯ ಇಂಗ್ಲಿಷ ಶಾಲೆಯ ಹೆಡ್‌ಮಾಸ್ತರೂ ಆದ ಶ್ರೀ ಕೆ ಎಫ್ ಪಾಟೀಲರಿಗೆ ಆದರಲ್ಲ ಹಳ್ಳಿಕೇರಿಯವರ ಪತ್ರ ಸಿಕ್ಕಿದ್ದಕ್ಕಾಗಿ ಮತ್ತು ಅವರು ಭಾರತೀಯ ತರುಣ ಸಂಘದ ಅಜೀವ ಸಭಾಸದರಿದ್ದುದರಿಂದ ೬ ತಿಂಗಳ ಕಠಿಣ ಶಿಕ್ಷೆ ಮತ್ತು ೧೦೦ ರೂಪಾಯಿ ಜುಲುಮಾನೆ ವಿಧಿಸಿದರು.

ಹಾವೇರಿಯ ಪ್ರಸಿದ್ಧ ವಕೀಲರಾದ ಶ್ರೀ ಹೊಸಮನೆ ಸಿದ್ಧಪ್ಪನವರ ೫೦೦ ರೂಪಾಯಿ ದಂಡಕ್ಕಾಗಿ ಕರ್ಜಗಿಯಲ್ಲಿ ಅವರ ಮನೆಯೊಳಗೆ ದನಕರು ಮನೆಸಾಮಾನುಗಳನ್ನು ಸರಕಾರದವರು ಜಪ್ತಿಮಾಡಿದರು.

ಬೆಂಗಳೂರು: — ಮೈಸೂರು ಮತ್ತು ಕೊಡಗುದೇಶಗಳ ಎರಡನೇ ಕುರುಹಿನ ಶೆಟ್ಟಿ ಮಹಾಸಭೆಯು ಇದೇ ಎಪ್ರಿಲ್ ೩೪ ಮತ್ತು ೨೫ನೇ ತಾ। (ಶನಿವಾರ ಭಾನುವಾರ)ಗಳಲ್ಲಿ ಮೈಸೂರು ಡಿಸ್ಟ್ರಿಕ್ಟ್ ಕೃಷ್ಣರಾಜಪೇಟೆ ತಾಲ್ಲೂಕು ಹೊಸ ಹೊಳಲಿನಲ್ಲಿ ಮು। ಸಾಹುಕಾರ್ ಬಿ ವೆಂಕಟಶೆಟ್ಟರ ಉದಾರಾಶ್ರಯದಲ್ಲಿ ನಡೆಯಲಿರುತ್ತದೆ.

ಈ ಮಹಾಸಭೆಯನ್ನು ಮೈಸೂರು ಸಂಸ್ಥಾನದ ಎರಡನೇ ಕೌನ್ಸಿಲರ್ ಸಾಹೇಬರವರಾದ ರಾಜಮಂತ್ರ ಪ್ರವೀಣ ಮ॥ ಕೆ. ಮ್ಯಾಥನ್, ಬಿ. ಎ, ಯವರು, ಇದೇ ತಿಂಗಳು ೨೪ನೇ ತಾರೀಕು ಶನಿವಾರ ಮಧ್ಯಾಹ್ನ ೧೩ ಘಂಟೆಗೆ ಪ್ರಾರಂಭಿಸಲು ದಯಮಾಡಿ ಒಪ್ಪಿರುತ್ತಾರೆಯೂ ಮತ್ತು ಈ ಮಹಾಸಭೆಯ ಕಾರ್ಯಕಲಾಪಗಳು ಹೊಳೇ ನರಸೀಪುರದ ಸಾಹುಕಾರ್ ಮ॥ ರಾ॥ ಬಿ. ಪಿ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆಸಲ್ಪಡುತ್ತದೆಯಾಗಿಯೂ ತಿಳಿಸಲು ಬಹಳ ಸಂತೋಷ ಪಡುತ್ತೇನೆ.

— — — —

ದಕ್ಷಿಣ ಕನ್ನಡ.

ಮಂಗಳೂರು:—ಇಲ್ಲಿಯ ಅತ್ತಾವರ ಅರಸು ಮುಂಡ ತ್ತಾಯ ದೈವಸ್ಥಾನದ ಕಾಲಾವಧಿ ಉತ್ಸವವು ಇದೇ ತಾ ೭ರಿಂದ ಪ್ರಾರಂಭವಾಗಿ ತಾ. ೧೨ನೇ ದಿನ ಬಹು ವಿಜೃಂಭಣೆಯಿಂದ ನಡೆಯಿತು, ಇದ್ದ ದಿನಗಳಲ್ಲಿ ಸ್ಥಾನಕ್ಕೆ ನಗರ ಸಭೆಯ ಅನೇಕ ಕೌನ್ಸಿಲರುಗಳೂ ಸರಕಾರೀ ಅಧಿಕಾರಿಗಳೂ ಚಿತ್ತೈಸಿದ್ದರು

ಗುಬ್ಬಿ ಶ್ರೀ ಚೆನ್ನಬಸವೇಶ್ವರ ನಾಟಕ ಕಂಪೆನಿಯವರು ಇದೇ ಕಳೆದ ಶನಿವಾರ ದಿನ ರಾಜ ಭಕ್ತಿ ಎಂಬ ನಾಟಕವನ್ನಾಡಿ ಚಿಕ್ಕಮಗ ಳೂರಿಗೆ ಹೊರಟು ಹೋದರು. ಇವರ ಕಂಪೆನಿಯಲ್ಲಿ ಪಾತ್ರವಹಿಸಿದ್ದ ಶ್ರೀ ಮಂಜುನಾಥ ಶಾಲಿವಾಹನರಿಗೆ ಶ್ರೀ ವೀರಣ್ಣನವರು ಒಂದು ಬಂಗಾರದ ಪದಕವನ್ನೂ ಕಲೆಕ್ಟರರ ಆಫೀಸಿನ ಉದ್ಯೋಗಸ್ಥರು ಕೂಡ ಒಂದು ರಜತ "ಕಪ್" ಒಂದನ್ನೂ ಕೊಟ್ಟರು ನಗರ ಸಭೆಯ ಚೆಯರ್ಮೇನರಾದ ಡಾ. ವಿಟ್ಠಲ್ ಶೆಟ್ಟರೂ, ಸ್ಥಳೀಕ ಪಿವಾಸಿಕರೂ ಎರಡು ಪದಕಗಳನ್ನು ಶ್ರೀ ವೀರಣ್ಣನವರಿಗೆ ಕೊಟ್ಟರು ಶ್ರೀಮತಿ ಸುಂದರಮ್ಮನವರಿಗೆ ಶ್ರೀ ಕೃಷ್ಣಾ ಸಿನೆಮದ ಪ್ರೊಪ್ರೈಟರರಾದ ಶ್ರೀ ಕೃಷ್ಣಾಜಿರಾಯರು ಒಂದು ಸುವರ್ಣ ಪದಕವನ್ನೂ ಕೊಟ್ಟರೆಂದು ತಿಳಿದುಬರುತ್ತದೆ

ಬುಧವಾರ ದಿನ ಮಂಗಳೂರಿನಲ್ಲಿ ಕೊಂಗ್ರೆಸ್ಸಿನ ಧ್ವಜ ಒಂದು ಬೀಸನಕಟ್ಟೆಯ ಮಾರ್ಗವಾಗಿ ಒಬ್ಬ ಹುಚ್ಚನು ಇಂಗ್ಲಿಷ ಮಾತಾ ಡುತ್ತಾ ಮೈದಾನಿನ ವರೆಗೆ ಹೋದನು ಅವನ ಹಿಂದೆ ಸಣ್ಣ ಹುಡು ಗರು ಓಡುತ್ತಾ ಅವನ ಹುಚ್ಚುತನದಲ್ಲಿ ಭಾಗವಹಿಸಿದ್ದರು ಆ ಹುಚ್ಚನು ಮೈದಾನಿನ ಮಧ್ಯೆ ಬರುತ್ತಲೇ ಪೋಲೀಸರ ಆಗಮನವಾಗಿ ಅವನಿಗೆ ಬೆತ್ತದ ಪೆಟ್ಟುಗಳು ಬಿದ್ದುವು.

ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್ ಇದರ ವರ್ಷಾ ವಧಿ ಮಹಾಸಭೆಯು ಕಳೆದ ಆದಿತ್ಯವಾರ ಹೆಡ್ ಆಫೀಸಲ್ಲಿ ಜರಗಿತು

ಡಾ| ಎನ್ ಡಿ ಸುವರ್ಣರ ಆರ್ತಚಿಕಿತ್ಸಾಭವನದ ವಾರ್ಷಿ ಕೋತ್ಸವವೂ ಹೊಸ ಕಟ್ಟೋಣದ ಪ್ರವೇಶೋತ್ಸವವೂ ತಾ ೭ನೇ ದಿನ ನಗರ ಸಭೆಯ ಚೆಯರ್ಮೆನರಾದ ಡಾ| ವಿಟ್ಠಳ ಶೆಟ್ಟರ ಅಧ್ಯಕ್ಷತೆ ಯಲ್ಲಿ ಜರಗಿತು

ಕಳೆದ ತಾ ೭ನೇ ದಿನ ಎಚ್ ಎಮ್ ಎಸ್ ಎಂಟರ್‌ಪ್ರೈಸ್ ಎಂಬ ಅತಿ ದೊಡ್ಡ ಯುದ್ಧನಾವೆಯು ಸಮುದ್ರದಲ್ಲಿ ಲಂಗರು ಹಾಕಿತು ಅದರಲ್ಲಿ ಸುಮಾರು ೫೦೦ ಮಂದಿ ಸೈನಿಕರಿದ್ದರು ಇವರಲ್ಲನೇಕರು ಮಂಗಳೂರಿನ ಮೈದಾನಿನಲ್ಲಿ ಆಟಗಳನ್ನು ಆಡಿ ಹಿಂತಿರುಗಿದರು ಅನೇಕರು ಈ ನಾವೆಯನ್ನು ನೋಡಲು ಹೋಗಿ ದ್ದರು ಒಬ್ಬಿಬ್ಬರು ಹುಡುಗರು ಸಮುದ್ರಕ್ಕೆ ಬಿದ್ದವರಾಗಿಯೂ ಅವ ರನ್ನು ನಾವಿಕರು ರಕ್ಷಿಸಿದರಾಗಿಯೂ ತಿಳಿದುಬಂದಿದೆ

ಬುಧವಾರ ದಿನ ಮಧ್ಯಾಹ್ನ ಒಂದೂವರೆ ಘಂಟೆ ಸಮಯಕ್ಕೆ ಇಲ್ಲಿಯ ಬಂದರದಲ್ಲಿನ ವ್ಯಾಪಾರ ಕಸಬಿನವನೊಬ್ಬನು, ಗ ಈಡಿನ ಮೇಲೆ ಹಣಬೇಕೆಂಬ ನೆವನದಿಂದ, ಡೋಂಗರಕೇರಿಯಲ್ಲಿರುವ ಅತ್ತೂರು ವೈಕುಂಠ ಪ್ರಭು ಬ್ಯಾಂಕಿಗೆ ಹೋಗಿ ಸದರಿಯವರು ಬ್ಯಾಂಕಿನ ನೋಟೀಸ್ ಬೋರ್ಡ್ ನೋಡಿ, ಬ್ಯಾಂಕಿನಲ್ಲಿ ಇದೇ ತಾ ೨೪–೪–೩೨ನೇ ದಿನ ಏಲಂ ಹಾಕಲಿರುವ ನಗಗಳಲ್ಲಿ ಒಂದು ನಗವನ್ನು ತಾನು ಕ್ರಯಕ್ಕೆ ಪಡಕೊಳ್ಳುವೆನೆಂತಲೂ ಅದನ್ನು ತನ್ನ ಕೈಯಲ್ಲಿ ಕೊಡಬೇಕೆಂತಲೂ ಕೇಳಿದರು ಅದೇ ಪ್ರಕಾರ ಬ್ಯಾಂಕಿನ ಏಜಂಟರು ನಗವನ್ನು ಸದರಿಯವರ ಕೈಯ್ಯಲ್ಲಿ ಕೊಡಲು ಇವರು ಅದನ್ನು ತನ್ನ ಕಿಸೆಯಲ್ಲಿ ಹಾಕಿಕೊಂಡು ಹೊರ ಓಡಿದರು ಇದನ್ನು ಕಂಡು ಏಜಂಟರು ಗಾಬರಿಯಾಗಿ ಕೂಡಲೇ ಅವರನ್ನು ಕರ್ನಾಟಕ ಬೇಂಕಿನ ವರೆಗೆ ಹಿಂಬಾಲಿಸಿದರು ಆಗ ಕಿಸೆಯಲ್ಲಿ ನಗವನ್ನು ಹಾಕಿಕೊಂಡ ಆಸಾಮಿಯು ಮಾರ್ಗದಲ್ಲಿ ಬಹಳ ತರದ ಗಲಭೆಯನ್ನು ಮಾಡಿ ಬ್ಯಾಂಕಿನ ಏಜಂಟರಿಗೆ ಬಹಳವಾಗಿ ಪೈಮ ಕಲ್ಪಿಸಿದರು. ಮಾರ್ಗ ದಲ್ಲಿ ಸೇರಿದ ಜನರ ಸಹಾಯದಿಂದ ಹೇಗಾದರೂ ನಗವು ಸಿಕ್ಕಿತು.

ಹೊಗೆಬಜಾರದಲ್ಲಿರುವ ಶ್ರೀ ಜ್ಞಾನೋದಯ ಸಮಾಜದ ಇಪ್ಪ ತ್ತೆರಡನೆಯ ವಾರ್ಷಿಕೋತ್ಸವವೂ, ಶ್ರೀ ಜ್ಞಾನೋದಯ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವೂ ಇದೆ ಏಪ್ರಿಲ್ ತಾ. ೧೬ನೇ ಬುಧ ವಾರ ದಿವಸ ಮಂಗಳೂರು ಪೌರಸಮಿತಿಯ ಉಪಾಧ್ಯಕ್ಷರಾದ ಶ್ರೀಮಾನ್ ಯಂ. ಮಾಧವ ರಾವ್ ಅವರ್ಗಳ್ ಬಿ ಎ, ಬಿ ಎಲ್ ರವರ ಅಧ್ಯಕ್ಷತೆಯಲ್ಲಿ ನೆರವೇರಿತು ಪ್ರಾರ್ಥನೆ, ಸಂಗೀತ, ನಾಟಕ ಮೊದಲಾದ ಕಾರ್ಯಕ್ರಮಗಳು ನಡೆದುವು

ಮಂಗಳೂರು ಮುನಿಸಿಪಾಲಿಟಿಯು ಕಳೆದ ವಾರದ ರಿಪೋರ್ಟಿ ನಿಂದ ತಿಳಿದುಬರುವಂತೆ ೧೨ ಮರಣಗಳೂ ೩೪ ಜನನಗಳೂ ಆಗಿವೆ.

ಗೋಳಿಕಟ್ಟೆ ಕೆರೆಯಲ್ಲಿ ನೀರು ಕಡಿಮೆಯಾಗಿರುವುದರಿಂದ ಇನ್ನು ಮುಂದೆ ಕೆಲವು ದಿನಗಳ ತನಕ ಮಂಗಳೂರು ಪಟ್ಟಣದ ಪ್ರಾಮುಖ್ಯ ಮಾರ್ಗಗಳಿಗೆ ಮಾತ್ರ ನೀರು ಹಾಕಲ್ಪಡಲಾಗುವುದೆಂದು ಮಾನ್ಯ ಚೆಯರ್ಮೆನರು ತಿಳಿಸುತ್ತಾರೆ

ಇಲ್ಲಿಯ ಟೈ ಇಂಡಿಯನ್ ಲೀಗಿನವರು ಸ್ವದೇಶಿ ವಸ್ತ್ರವ್ಯಾಪಾರಿ ಗಳಿಗೆ ಶಿಫಾರಸು ಪತ್ರಗಳನ್ನು ಕೊಡಬೇಕೆಂಬ ಯೋಜನೆಯನ್ನು ಮಾಡಬೇಕೆಂದಿರುವರು. ಸ್ವದೇಶಿ ಸರ್ಟಿಫಿಕೇಟು ಬೇಕೆಂದಿಚ್ಛಿಸುವ ವರ್ತಕರು ಲೀಗಿಗೆ ಈ ಕೆಳಗಿನ ವಿವರಗಳನು ಕೊಡಬೇಕು.

೧. ಅಂಗಡಿಯ ಹೆಸರು ಮತ್ತು ವಿಳಾಸ. ೨ ಅದರ ಪ್ರೊಪ್ರೈ ಟರರ ಹೆಸರು ಮತ್ತು ವಿಳಾಸ. ೩ ಯಾವ ಯಾವ ಸರಕುಗಳು ಎಷ್ಟೆಷ್ಟಿವೆ; ಅವುಗಳ ಪಟ್ಟಿ ಮತ್ತು ಅವುಗಳನ್ನು ತಯಾರಿಸಿದವರ ಹೆಸರು ವಿಳಾಸ, ೪ ಮುಂದಕ್ಕೆ ಸ್ವದೇಶಿ ಸರಕುಗಳನ್ನೇ ಮಾರುವೆ ನೆಂಬ ಶರ್ತಕ್ಕೂ, ಲೀಗಿನ ಸರ್ಟಿಫೈಯಿಂಗ್ ಬೋರ್ಡಿನ ಕಾಲ ಕಾಲದ ಸಂಶೋಧನೆಗೆ ಒಪ್ಪುವನೆಂಬ ಶರ್ತಕ್ಕೂ ಒಳಗಾಗಬೇಕು

ಮೇಲಿನ ಶರ್ತಗಳಿಗೊಪ್ಪಿ ಮಾಡಿದ ಅರ್ಜಿದಾರರ ಅರ್ಜಿಗಳನ್ನು ಲೀಗಿನ ಸರ್ಟಿಫೈಯಿಂಗ್ ಬೋರ್ಡು ತನ್ನ ಅವಗಾಹನೆಗೆ ತೆಗೆದುಕೊಂಡು ತವಗೆ ಸಂತೃಪ್ತಿಯಾದರೆ ಸರ್ಟಿಫಿಕೇಟನ್ನು ಕೊಡುವುದು ಮತ್ತು ಸಾರ್ವಜನಿಕರಿಗೆ ಅಂತಹ ಸ್ವದೇಶಿ ಅಂಗಡಿಗಳ ವಿವರವನ್ನು ತಿಳಿಸಿ ಜಾಹೀರಾತು ಮಾಡುವುದು ಸ್ವದೇಶಿ ಎಂಬ ಹೆಸರು ಮಾತ್ರ ಇರುವ ಸರಕುಗಳನ್ನು ಸಾರ್ವಜನಿಕರು ಮೋಸ ಹೋಗಿ ತೆಗೆದುಕೊಳ್ಳ ದಂತೆಯೂ ಸ್ವದೇಶಿಯನ್ನು ಪ್ರಚಾರಕ್ಕೆ ತರುವಂತೆಯೂ ಮಾಡುವ ಈ ಹವಣಿಕೆಯಲ್ಲಿ ಜಿಲ್ಲೆಯ ಮತ್ತು ಇನ್ನಿತರ ಸ್ಥಳಗಳ ವರ್ತಕರೂ ಸರಕು ತಯಾರಿಗಳೂ ಸಹಕರಿಸಿ ನಡೆಯಬೇಕು. ಮೇಲಿನ ಅರ್ಜಿ ಕಾಗದಗಳು ಸೆಕ್ರೆಟರಿ, ಟೈ ಇಂಡಿಯನ್ ಲೀಗ್ ಮಂಗಳೂರು ಇವ ರಲ್ಲಿ ಸಿಗುವುವು ಸ್ವದೇಶಿ ಸರ್ಟಿಫೈಯಿಂಗ್ ಬೋರ್ಡಿನ ಸದಸ್ಯರ ಹೆಸರು—ಶ್ರೀಮತಿ ಎಸ್ ಲಲಿತ ಬ್ಯಾ ಸುಬ್ಬರಾವ್ ಶ್ರೀ ಕೆ ಆರ್ ಕಾರಂತ, ಬಿ ಎ ಬಿ ಎಲ್, ಶ್ರೀ ಎಸ್ ಬಿ ಒಡ್ಡೆ ಬಿ ಎ, ಬಿ ಎಲ್, ಶ್ರೀ ಕೆ ಅಪ್ಪಾಜಿರಾವ್ ಶ್ರೀ ಪಿ ವೆಂಕಪ್ಪ ಪೈ ಮತ್ತು ಆರ್. ಕೆ ಪ್ರಭು (ಸೆಕ್ರೆಟರಿ)

ಪಿಕೆಟಿಂಗು — ಪೆಟ್ಟು

ಮಂಗಳೂರಲ್ಲಿ ತಾ ೬ನೇ ದಿನ ಮೊದಲುಗೊಂಡು ಕೊಂಗ್ರೆಸ್ಸಿ ನವರ ಗಡಿಬಿಡಿ ತಾ ೯ನೇ ದಿನ ಬೆಳಿಗ್ಗೆ ಶ್ರೀ ಕೆ ಉಪೇಂದ್ರ ಶೆಣೈ ಮತ್ತು ಸದಾಶಿವಯ್ಯರೆಂಬವರು ವೆಂಕಟಕೃಷ್ಣ ಶ್ರೀನಿವಾಸ ಪ್ರಭುಗಳ ಅಂಗಡಿಯೆದುರು ಪಿಕೆಟ್ ಮಾಡಿ ಪೋಲೀಸರ ಬೆತ್ತಗಳಿಂದ ಪೆಟ್ಟು ತಿಂದು ಕೊಂಡೊಯ್ಯಲ್ಪಟ್ಟರು ಸಂಜೆ ಶ್ರೀ ಓ ವಾಸುದೇವ ಪೈ ಶ್ರೀ ರಾಮಚಂದ್ರ ಶೆಣೈ ಮತ್ತು ಶಿವರಾಮ ರಾವ್ ಎಂಬವರು ವಸಂತರ ಅಂಗಡಿಯೆದುರು ಪಿಕೆಟ್ ಮಾಡಿ ಪೋಲೀಸರಿಂದ ಪೆಟ್ಟು ತಿಂದರು

ತಾ ೧೦ನೇ ದಿನ ಕೇಶವ ಮತ್ತು ಸಂಕಪ್ಪ ಶೆಟ್ಟಿ ಎಂಬವರು ಕಾಂಜಿಯವರ ಅಂಗಡಿಯೆದುರು ಪಿಕೆಟ್ ಮಾಡಿ ವಿದೇಶಿ ವಸ್ತ್ರ ದಹನ ಮಾಡಿದರು. ಕ್ರಮದಂತೆ ಪೋಲೀಸರಿಂದ ಪೆಟ್ಟು ಬಿದ್ದು ಸ್ಟೇಶನಿಗೆ ಕೊಂಡೊಯ್ಯಲ್ಪಟ್ಟರು

ರಾಮರಾಯರ ಪಿಕೆಟಿಂಗ್—ಶ್ರೀ ಸುಬ್ರಹ್ಮಣ್ಯ ಭಟ್, ಕಾರಂತ, ಎನ್ ಎಸ್ ಸುವರ್ಣರು ನೋಡುತ್ತಿದ್ದರು

೩ ೧೧ನೇ ದಿನ ಸಂಜೆ ಕಾಂಜಿ ಅಂಗಡಿಯೆದುರು ಚಳವಳದ ಸಲುವಾಗಿ ಸೈಂಟ್ ಎಲೋಶಿಯಸ್ ಕೊಲೇಜಿನ ಪ್ರೊಫೆಸರ್ ಪ್ರವೃತ್ತಿ ರಾಜಿಕೊಟ್ಟ ಶ್ರೀ ಎಂ ರಾಮರಾವ್ ಎಂ ಎ, ಇವರೂ ಶ್ರೀ ಜಯರಾಮ ಶೆಟ್ಟರೂ ಪಿಕೆಟಿಂಗ್ ನಡೆಸಿದರು. ಶ್ರೀ ಯು ಎ ಸುಬ್ರಹ್ಮಣ್ಯ ಭಟ್ ಎಂ ಎಲ್ ಸಿ, ಕೆ ಆರ್ ಕಾರಂತ ಮತ್ತು ರಾವ್‌ಬಹದ್ದೂರ್ ಎನ್ ಎಸ್ ಸುವರ್ಣ ಮೊದಲಾದ ಗಣ್ಯರು ನಿಂತು ನೋಡುತ್ತಿದ್ದರು ಪೋಲೀಸರ ಹೊಡೆತವಾರಂಭವಾಗಿ ರಾಮ ರಾಯರ ಕಾಲು ಘಾಯಗೊಂಡಿತು. ಅವರನ್ನು ಸ್ಟೇಶನಿಗೊಯ್ದರು ಅನಂತ ಕೂಡಲೇ ಶ್ರೀ ಮಹಾಲಿಂಗ ಶೆಟ್ಟಿ ಮತ್ತು ಶ್ರೀ ಮಂಜುನಾಥ ರೆಂಬವರು ಪಿಕೆಟಿಂಗ್ ನಡೆಸಿ ಪೆಟ್ಟು ತಿಂದರು

ಕ್ರೈಸ್ತ ವಿದ್ಯಾರ್ಥಿಗಳ ಪಿಕೆಟಿಂಗ್

• ತಾ ೧೨ನೇ ದಿನ ಅಲೆಕ್ಸಾಂಡರ್ ಪಿಂಟೊ ಮತ್ತು ಎಗ್ಬರ್ಟ ವಿಲಿಯಮ್ ಫೆರ್ನಾಂಡಿಸ್ ಎಂಬಿಬ್ಬರು (ವಿದ್ಯಾರ್ಥಿಗಳು) ಸ್ವಯಂ ಸೇವಕರು ಪಿಕೆಟಿಂಗ್ ನಡೆಸಿ ಎಲ್ಲರಂತೆ ಪೆಟ್ಟುತಿಂದರು. ರಾತ್ರೆ ಬಿಡಲ್ಪಟ್ಟರು.

೧೦೦ ಮಿಕ್ಕಿ ಪೋಲೀಸರು—

೩೫ ಮಿಕ್ಕಿ ಸ್ವಯಂಸೇವಕರು

ತಾ ೧೩ನೇ ದಿನ ಸೌರಮಾನ ಯುಗಾದಿಯಾದುದರಿಂದ ಜ ನವರು ರಜೆಯಲ್ಲಿದ್ದರು ಕೊಂಗ್ರೆಸ್ಸು ಮೆರವಣಿಗೆ ಇದೆಯೆಂದು ಮೊದಲೇ ಪ್ರಚಾರಮಾಡಿದ್ದರು ಹಂಪನಕಟ್ಟೆ, ರಥಬೀದಿ, ಮೈದಾನು ಗಳಲ್ಲಿ ಜನಸಂದಣಿ ಬಹಳ ಸಂಜೆ ೪ ಘಂಟೆಗೆ ಸಿಟಿ ಪೋಸ್ಟಾಫೀಸಿನ ಬಳಿಯಿಂದ ಕೊಂಗ್ರೆಸ್ಸಿನವರ ಮೆರವಣಿಗೆಯು ಹೊರಟಿತು ಶ್ರೀ ಬೆಳ್ಳಿಪಾಡಿ ವೆಂಕಪ್ಪ ರೈಗಳ ಪತ್ನಿ ಶ್ರೀಮತಿ ಲಕ್ಷ್ಮೀ ಬಾಯಿಯವರೂ ಕೈದೇಲು ತಿಮ್ಮಪ್ಪ ಶೆಟ್ಟರೂ, ಶ್ರೀಮತಿಗಳಾದ ಗುಲ್ವಾಡಿ ಶಾಂತಾಬಾಯಿ, ಶಾಂಭವಿ ಸಂಜೀವಿಬಾಯಿ, ಸುಶೀಲಾಬಾಯಿ ಮೊದಲಾದ ೩೨ ಮಂದಿ ಗಳು ಮೆರವಣಿಗೆಯಲ್ಲಿ ಹೋಗುತ್ತಿದ್ದರು ಅವರ ಹಿಂದೆ ಸಾವಿರ ಗಟ್ಟಳೆ ಜನರು ನಡೆಯುತ್ತಿದ್ದರು ಕೆಲವು ಕಡೆಗಳಲ್ಲಿ ಶ್ರೀ ಶೆಟ್ಟರಿಗೂ ಶ್ರೀಮತಿ ಲಕ್ಷ್ಮೀಬಾಯಿಯವರಿಗೂ ಪುಷ್ಪ ಮಾಲಿಕೆಗಳು ಹಾಕಲ್ಪ ಟ್ಟುವು ಆರ್. ಬಿ ವಸಂತ ಅಂಗಡಿ ಎದುರು ಬರುವಾಗ ಮೊದಲೇ ಸಿದ್ಧರಾಗಿದ್ದ ಸುಮಾರು ೧೫೦ ಪೋಲೀಸರು ಸ್ತ್ರೀಯರನ್ನು ಪ್ರತ್ಯೇಕ ಮಾಡಿ ಪುರುಷ ಸ್ವಯಂಸೇವಕರ ಮೇಲೆ ಬೆತ್ತವನ್ನುಪಯೋಗಿಸಿದರು ಶ್ರೀ ಶೆಟ್ಟರ ಕೈಯಲ್ಲಿದ್ದ ಬಾವುಟೆಯನ್ನು ಹೊಡೆದು ತೆಗೆದುಕೊಂಡರು ಎಲ್ಲಾ ಸ್ವಯಂಸೇವಕರು ನೆಲದ ಮೇಲೆ ಕುಳಿತರು ಬೆತ್ತದಿಂದ ಎಲ್ಲರಿಗೂ ಸರಿಯಾದ ಪೆಟ್ಟು ಬಿತ್ತು ಜಯಘೋಷವು ನಿಮಿಷ ಕೊಮ್ಮೆ ಆಯಿತು; ರಾತ್ರೆ ಶ್ರೀ ತಿಮ್ಮಪ್ಪ ಶೆಟ್ಟಿ, ಶ್ರೀಮತಿ ಲಕ್ಷ್ಮೀ ಬಾಯಿ ಮತ್ತು ಶ್ರೀಮತಿ ಗುಲ್ವಾಡಿ ಶಾಂತಬಾಯಿಯವರನ್ನುಳಿದು ಎಲ್ಲರನ್ನೂ ಬಿಟ್ಟರು.

ಪಿಕೆಟರರಿಗೆ ಪೋಲೀಸರು ಹೊಡೆಯುವ ಕುರಿತು ಬೆಸಗೊಂಡು ಶ್ರೀಯುತರುಗಳಾದ ಕೆ. ಆರ್ ಕಾರಂತ್, ಜೆ ಬಿ ಮಚ್ಚಾಡೊ, ಯು. ಪಿ ಸುಬ್ರಹ್ಮಣ್ಯ ಭಟ್, ವಕೀಲ್ ಅನಂತ ಶೆಣೈ, ಬಿ ಕೊರಗಪ್ಪ, ಸರ್ವೋತ್ತಮ ಶೆಣೈ, ಮುಂತಾದವರು ತಾ. ೧೧ನೇ ದಿನ ಮಾನ್ಯ ಕಲೆಕ್ಟರರಿಗೆ ಒಂದು ಮನವಿಯನ್ನರ್ಪಿಸಿದರು ಪಿಕೆಟರರನ್ನು ಚದರಿ ಸುವಾಗ ಇನ್ನು ಮುಂದೆ ಕಡಿಮೆ ಬಲವನ್ನುಪಯೋಗಿಸಲಾಗುವುದೆಂದು ಭರವಸೆ ದೊರಕಿದೆಯಂತೆ

ಮಂಡೋದರಿ ನಾಟಕ ಪ್ರದರ್ಶನದ ಕುರಿತು ಒಂದು ವಿಮರ್ಶಾ ಲೇಖನವು ನಮಗೆ ಬಂದಿದೆ ಸ್ಥಳಾಭಾವದಿಂದ ಅದನ್ನು ಈ ಸಂಚಿಕೆ ಯಲ್ಲಿ ಪ್ರಕಟಿಸಲಾಗಲಿಲ್ಲ ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು (ಸಂ ಸ್ವ)

ಉಡುಪಿ:—ತಾ ೭ರಲ್ಲು ಇಬ್ಬರು ಶ್ರೀ ಪೇಜಾವರ ಅಂಗಡಿಯೆದುರು ಪಹರೆ ಪ್ರಾರಂಭಿಸಿದರು, ಸ್ವಲ್ಪ ಸಮಯದಲ್ಲಿ ಪೋಲೀಸರು ಬಂದು ಬೆತ್ತದಿಂದ ಅವರನ್ನು ಚೆನ್ನಾ ಹೊಡೆದು ಚದ ರಿಸಿದರು ಮರುದಿನವೂ ಅವರಲ್ಲಿಗೆ ಪಹರೆಗೆ ಹೋಗಲು ಸೇಟರು ತಾನು ವಿಲಾಯಿತಿ ವಸ್ತ್ರವನ್ನು ಬಹಿಷ್ಕರಿಸುವೆನೆಂದರು ಅಂತ ತಾ [illegible] ಕ್ಕೆ ಶ್ರೀ ಪಾಂಗಾಳ ಮಂಜುನಾಥ ನಾಯಕರ ಧರ್ಮಪತ್ನಿಯವರು (ಸಭ್ಯದ ಮುಖ್ಯಾಧಿಕಾರಿ) ಶ್ರೀ [illegible] ಅಂಗಡಿಯೊಳ ಗಿನ ವಿಲಾಯತಿ ಬಟ್ಟೆಗಳ [illegible] ಬಂದರು, ಕೆಲ [illegible] ಅನಂತರಲ್ಲೂ ವಿಲಾ ಯತಿ ಬಟ್ಟೆಗಳನ್ನು ಬಹಿಷ್ಕರಿಸಿ [illegible] ಅಂತೂ ಆ ಮೇಲೆ ವಸ್ತ್ರದಂಗಡಿಗಳ ಪಹರೆ ಇಲ್ಲ

[illegible] ಬೀದಿಗಳಲ್ಲಿ [illegible] ಗಳನ್ನೂ [illegible]

[illegible] ಶಿಕ್ಷೆಯನ್ನು ಅನುಭವಿ [illegible] ಇವರ [illegible] ಶ್ರೀ [illegible] ಪೋಲೀಸರಿಂದ [illegible] ರಾತ್ರಿ [illegible] ವಸ್ತ್ರದಿಂದ [illegible] ಯಲ್ಲಿ ಅವನ್ನು [illegible]

[illegible] (ಶ್ರೀ [illegible]) [illegible] ಪೋಲೀಸರು [illegible] ಮೇಲೆಗೆ [illegible] ಪೋಲೀಸ್ [illegible] ಆಸ್ಪತ್ರೆಗೆ [illegible] ಚಿಕಿತ್ಸೆ ಮಾಡಿ [illegible] ಇದೇ [illegible] ಪೋಲೀಸರು [illegible] ಧ್ವಜವಂದನೆಯನ್ನು ಕೂಡ ಮಾಡಿದರು.

ವಕೀಲರ [illegible] ಈ ವರ್ಷ [illegible] ರಾತ್ರೆ [illegible] ಉತ್ಸವ [illegible] ರಾತ್ರಿ ಜೋಡು [illegible] ಗುಮಾಸ್ತರು [illegible] ವಕೀಲ್ [illegible] ಜನರಿಂದ [illegible]

ಕುಂದಾಪುರ:—ಇದೇ ತಿಂಗಳು ತಾ [illegible]ನೇ ದಿವಸ ಶ್ರೀ [illegible] ಅಂಗಡಿಯನ್ನು ಇಬ್ಬರು ಸ್ವಯಂ ಸೇವಕರು ಪಹರೆ ನಡೆಸಿದರು. ಕೂಡಲೇ ಪೋಲೀಸರು ಅವರನ್ನು ವಸ್ತುವಿನ ಮಾಡಿ ಸಾಯಂಕಾಲ ಬಿಟ್ಟರು.

ಇದೇ ದಿನ ಸ್ಥಳೀಕ [illegible] ಹೈಸ್ಕೂಲ್ ಜೂನಿಯರ್ [illegible] ಇನ್ಸ್‌ಪೆಕ್ಟರರಾಗಿರುವ ಶ್ರೀ [illegible] ಕೃಷ್ಣರಾಯರ ಅಧ್ಯಕ್ಷತೆಯಲ್ಲಿ [illegible] ಬೋರ್ಡ ಶಾಲೆಗಳ ಉಪಾಧ್ಯಾಯರ ಸಭೆಯು ಜರಗಿತು

ತಾ [illegible]ನೇ ಶುಕ್ರವಾರ ಸ್ಥಳೀಕ ವೆಂಕಟರಮಣ ದೇವಸ್ಥಾನದ ರಥೋತ್ಸವವು ಜರಗುವುದು

ಸಿದ್ದಾಪುರ:—ತಾ. [illegible]ನೇ ಬುಧವಾರ ದಿವಸ ಸಂತೆಯಲ್ಲಿ ಬ್ರಾಹ್ಮಣರಿಗೂ ಬಂಟರಿಗೂ ನಡೆದ ಹೊಂಚು ಹೋರ ದನಿಯಲ್ಲಿ ಕುಂದಾಪುರ ಫ್ರೆಂಟ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಬ್ರಾಹ್ಮಣ ಪಕ್ಷದವರು ಜಯಶೀಲರಾದರೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ತಾರೀಕು ೧೬ನೇ ಶನಿವಾರದಿಂದ ಅಂಗೀರಸ ಸಂವತ್ಸರದ ಚೈತ್ರ ಶು ೧೦ ಶನಿವಾರದಿಂದ ಅಂಗೀರಸ ಸಂವತ್ಸರದ ಚೈತ್ರ ಶು ೧೫ ಶುಕ್ರವಾರದ ವರೆಗಿನ ಪಂಚಾಂಗ

(೧೯೩೨ನೆಯ ವಿಷನ — ಸುಗ್ಗಿ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಲಗ್ನ	ಸೂರ್ಯ ಉ	ಅಸ್ತ
16	ಶನಿ	೧೦	೨೦ ೦	ಆಶ್ಲೇಷಾ	೫ ೨	೪	6.20	6 42
17	ರವಿ	೧೧	೧೬ ೧	ಮಘಾ	೬ ೧	೫	6 19	6 43
18	ಸೋಮ	೧೨	೧೧ ೧೪	ಹುಬ್ಬ	೦ ೧೬	೬	6.18	6 43
19	ಕುಜ	೧೩	೫ ೪೫	ಹಸ್ತಾ	೫೨ ೪೪	೭	6 18	6.43
20	ಬುಧ	○	೫೭ ೪೬	ಚಿತ್ರಾ	೪೮.೪೦	೮	6.17	6 43
21	ಗುರು	೧	೪೭ ೪೪	ಸ್ವಾತಿ	೪೪ ೬೧	೯	5. 6	6 43
22	ಶುಕ್ರ	೨	೪೨. ೨	ವಿಶಾಖಾ	೪೦ ೪೬	೧೦	6 16	6.43

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮ್ಮೆ	Rainfall ಮಳೆ ಎರಡ ಮಳೆ	ಜುಮುಲಾ ಮಳೆ.
8	89— 7	88 8	—	—
9	89— 8	77— 7	—	—
10	89 — 7	77— 5	—	—
11	89— 9	81— 4	—	—
12	90 — 1	82— 5	—	—
13	89 — 8	83 1	—	—
14	90 — 7	79— 9	—	0-33

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ ಅ	ವರೆಗೆ ರೂ. ಅ
ಹೊಸ ರಾಶಿ ಅಕ್ಕಿ	3 – 12	4 — 2
ಹೊಸ ಮುಸ್ಕು	4 — 0	4 – 1
ಹೊಸ ಗುಡ	4 [illegible]	4 4
ಹೊಸ ಸುಗ್ಗಿ	3 — 2	4 — [illegible]
ಊರ ಅವ್ವಲ್ ಬೆಳ್ತಿಗೆ	4 – 8	5 — 0
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	7 – 14	8 — [illegible]
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4 — 8	4 — 10
ಗೋದಿ ಗೋಣಿ ೧ಕ್ಕೆ	9 — 8	12 — 8
ತೊಗರಿ ಗೋಣಿ ೧ಕ್ಕೆ	12 — 0	12 – 8
ಹುರುಳಿ ಗೋಣಿ ೧ಕ್ಕೆ	6 — 8	7 — 0
ಕಡಲೆ ಗೋಣಿ ೧ಕ್ಕೆ	8 — 8	12 — 8
ತೊಗರಿಬೇಳೆ ಗೋಣಿ ೧ಕ್ಕೆ	13 — 8	41 — 0
ಉದ್ದು ಗೋಣಿ ೧ಕ್ಕೆ	11 — 8	13 —
ಹೆಸರು ಗೋಣಿ ೧ಕ್ಕೆ	10 — 4	1[illegible] —
ಊರ ಬೆಲ್ಲ ಖಂಡಿ ೧ಕ್ಕೆ	27 — 8	30 — [illegible]
ಉಪ್ಪು ಗೋಣಿ ೧ಕ್ಕೆ	5 — [illegible]	5 — 4
[illegible] ಖಂಡಿ ೧ಕ್ಕೆ	60 —	6—
ಹತ್ತಿ ಹಿಂಡಿ ಖಂಡಿ ೧ಕ್ಕೆ	21 — 8	—
ಎಳ್ಳಿಂಡಿ ಖಂಡಿ ೧ಕ್ಕೆ	27 — 8	28 — 12
ಹುಚ್ಚು ಎಳ್ಳು ಮುಡಿ ೧ಕ್ಕೆ	5 12	6 — 12
ಎಳ್ಳಿನ ಮುಡಿ ೧ಕ್ಕೆ	6 — 12	7 — 0
[illegible] ಕಟ್ಟಿಗೆ ೧ಕ್ಕೆ	4 — 7	5 — 12
ತೆಂಗಿನ ಸಕ್ಕರೆ ಮುಡಿ ೧ಕ್ಕೆ	4 — 2	4 — 3
[illegible]	4 — 0	5 — 0
ಸಾಸಿವೆ ಮುಡಿ ೧ಕ್ಕೆ	5 — 8	6 — 0
[illegible] ಕಾಫಿ ಖಂಡಿ ೧ಕ್ಕೆ	217 — 8	2[illegible]5 —
ಕರಿಮೆಣಸು ಖಂಡಿ ೧ಕ್ಕೆ	170 — 0	180 —
ಮೆಂತ್ಯ ಮುಡಿ ೧ಕ್ಕೆ	27 — [illegible]	28 —
ಗೇರುಬೀಜ ಮುಡಿ ೧ಕ್ಕೆ	3 — 2	
[illegible] ಖಂಡಿ ೧ಕ್ಕೆ	35 — 0	35 8
[illegible] ತಗಡು ಮುಡಿ ೧ಕ್ಕೆ	12 — 0	12 4
[illegible] ಮುಡಿ ೧ಕ್ಕೆ	16 — 0	16 — 0
[illegible] ೧ಕ್ಕೆ	14 — 8	14 — 12
[illegible] ತಗಡು ಮುಡಿ ೧ಕ್ಕೆ	12 — 0	14 — 8
[illegible] ೧ಕ್ಕೆ	17 — 13	17 — 14
[illegible] ಖಂಡಿ ೧ಕ್ಕೆ	20 —	—
[illegible] ಖಂಡಿ ೧ಕ್ಕೆ	375 —	400 —
ಹಳೆ ಅಡಿಕೆ	160 —	205 —
ಹೊಸ ಅಡಿಕೆ	140 —	145 —

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವೀಸ್

ಚಿಕ್ಕಮಗಳೂರು

ತಂತಿ ವಿಳಾಸ ಕನ್ವೆಯನ್ಸ್. Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M S M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು ಮೂಡುಗೆರೆ, ಚಾರ್ಮಾಡಿಘಾಟ್ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ, ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1¼ ಘಂಟೆ ಅವಕಾಶಕೊಟ್ಟು 7¼ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ [illegible] 1 30ಕ್ಕೂ, ಬೆಳ್ತಂಗಡಿಗೆ 1 45ಕ್ಕೆ, ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟೈಮಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ [illegible] ಮಲಬಾರು ಕನ್ನನೂರು ಪ್ರಾಂತಗಳಿಗೆ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ 10¼ ಗಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ [illegible] 12ಕ್ಕೆ ಮೈಸೂರು ಗಡಿಗೂ ಸೇರಿ [illegible] ಸುಮಾರು 2 ಗಂಟೆಗೆ [illegible] ಗಂಟೆ ಒಳಗೆ ಚಿಕ್ಕಮಗಳೂರಿಗೆ [illegible] ಟಿಫಿನ್ ಆಹಾರ ವಗೈರೆ [illegible] ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7 [illegible] ಹೊರಟು [illegible] ಎಕ್ಸ್‌ಪ್ರೆಸ್ ರೈಲು ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ [illegible] ಘಂಟೆ ಒಳಗೆ [illegible], ಬೆಂಗಳೂರು [illegible] ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 30ಕ್ಕೆ ಹೊರಡುವ ಬಸ್ಸುಗಳಲ್ಲಿ [illegible] ಬೊಂಬಾಯಿ ಕಡೆಯಿಂದ 12 ಘಂಟೆ [illegible] ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ [illegible] ಪೂನಾ ವಗೈರೆ ಪ್ರಾಂತ [illegible] ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿ ಮೇಲಿನ ವಿಳಾಸಕ್ಕೆ ಮ್ಯಾನೇಜಿಂಗ್ ಪ್ರೊಪ್ರೈಟರರಿಗೆ ಬರೆದುಕೊಳ್ಳಬಹುದು

ಬಿ ಎನ್ ಹನುಮಂತಪ್ಪ, ಷ್ಯಾರಡೂನ್ ಸೋರಾಬ್, ಕೆ ಸೂರಪ್ಪ ಶೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇದೆ.

ಮಧ್ವಾಚಾರ್ಯರ ಜನ್ಮಸ್ಥಾನವನ್ನು ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಯಲ್ಲಿ ನಿರ್ಮಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲ್ಲಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ.

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವವರ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆಂಟು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧½ ದಿವಸದೊಳಗೂ ಶಿಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

The Canara Public Conveyance Company Ltd., Mangalore

ವಿವಿಧ ಸಮಾಚಾರಗಳು.

ಟ್ವ ಇಂಡಿಯನ್.

ಮುಂಬಾಯಿಯ ಮುಲ್ಜಿ ಜೆಠಾ ಮಾರ್ಕೇಟು ಗಾಂಧಿಜೀಯವರ ಬಂಧನದಿಂದ ಮೊದಲುಗೊಂಡು ಮುಚ್ಚಲ್ಪಟ್ಟಿತ್ತು. ಇದನ್ನು ತೆರೆಯಲು ಸರಕಾರವೂ ಕೆಲವು ವರ್ತಕರೂ ಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ಮೊನ್ನೆ ವರ್ತಕರೂ ಇನ್ನು ಕೆಲವು ಮುಖಂಡರೂ ಒಟ್ಟುಕೂಡಿ ಒಂದು ಒಡಂಬಡಿಕೆಗೆ ಬಂದು ಆ ಮಾರ್ಕೇಟನ್ನು ತೆರೆದರು. ಅದರ ತೆರೆಯುವ ಸಮಾರಂಭವು ಶ್ರೀಮತಿ ಸರೋಜಿನಿ ನಾಯಡುರವರ ಕೈಯಲ್ಲೇ ನಡೆಯಿತು. ಭಾಷಣ ಮಾಡುತ್ತಾ ದೇವಿಯವರು – "ಮುಂಬಾಯಿಯ ವರ್ತಕರು ಒಟ್ಟುಗೂಡಿ ಇಂತಹ ಸಂದಿಗ್ಧ ಕಾಲದಲ್ಲಿ ಒಂದು ಒಪ್ಪಂದವನ್ನು ಮಾಡಿ ತಾವು ಇನ್ನು ಮುಂದೆ ಸ್ವದೇಶಿಯನ್ನೇ ವಿಕ್ರಯಿಸುವೆವೆಂದು ನಿರ್ಧರಿಸಿದುದು ನಿಜವಾಗಿಯೂ ಸಂತೋಷಜನಕ ಸಂಗತಿ. ವಿದೇಶಿ ಸರಕುಗಳಿಂದ ತಮಗೆ ದೊರೆವ ಹೇರಳ ಲಾಭವನ್ನೂ ಕೂಡಾ ಅವರು ಈ ಕಾಲದಲ್ಲಿ ಮರೆತರು" ಎಂದರು. ಮತ್ತು ಅವರು ತನ್ನ ಲಂಡನ್ ಪ್ರವಾಸದಲ್ಲಿ ತಾನು ಅಲ್ಲಿ ಕಂಡಿರುವ ಬ್ರಿಟಿಷರ ಸ್ವದೇಶಿ ಪ್ರಚಾರಕ್ರಮವನ್ನೂ ರಾಜ ಮನೆತನದವರೂ ಸ್ವದೇಶಿ ಚಳವಳಿಕ್ಕೆ ತೋರಿಸುವ ಸಹಾನುಭೂತಿಯ ಪರಿಸ್ಥಿತಿಯನ್ನೂ ವಿವರಿಸಿದರು. ಹೀಗೆ ನಮ್ಮ ಹಿಂದೀಯರು ಅವರ ಮಾದರಿಯನ್ನು ಕಲಿತುಕೊಳ್ಳಲೇ ಬೇಕು ಎಂದರು. ಮತ್ತು ಅವರು ಪ್ರಕೃತದ ರಾಜಕೀಯ ಸ್ಥಿತಿಯನ್ನು ವಿವರಿಸುತ್ತಾ ಸರಕಾರವು ಶಾಂತಿಗಾಗಿ ಆಶಿಸದೆ ಶಾಂತಿಯು ಲಭ್ಯವಿರಲಾರದು. ಶಾಂತಿಯ ಪ್ರಸ್ತಾಪವನ್ನು ಚರ್ಚಿಸಲು ಗಾಂಧೀಜೀಯವರೇ ಯೋಗ್ಯ ಪುರುಷರು. ಗಣ್ಯರಾದ ದೇಶಿಗರನ್ನು ಬಂಧನದಿಂದ ಬಿಡುಗಡೆ ಮಾಡುವ ತನಕ ಶಾಂತಿಯ ಸೊಲ್ಲು ಇಲ್ಲ. ಹೇಗೂ ಇರಲಿ, ವರ್ತಕರೆಲ್ಲ ತಮ್ಮ ಸ್ವದೇಶಿ ಪ್ರತಿಜ್ಞೆಯನ್ನು ಮುರಿಯದೆ ನೆರವೇರಿಸಬೇಕು ಎಂದರು.

⁂ ⁂ ⁂

ಸೀಕೆಂಪು ಕುಡಿದು ಪ್ರಾಣಹೋಯಿತು

ಲಂಡನಿನ ಲಿವರ್‌ಪೂಲಿನಲ್ಲಿಯ ಜೂನಿಯರ್ ಟೆಕ್ನಿಕಲ್ ಸ್ಕೂಲಿನ ರಸಾಯನದ ಉಪಾಧ್ಯಾಯರಾದ ಜೇಮ್ಸ್ ಫ಼ೂಟ್ ಎಂಬವರು ಪಾಠ ಕಲಿಸುತ್ತಿದ್ದರು. ಸ್ವಲ್ಪ ಹೊತ್ತು ಪಾಠ ಕಲಿಸುತ್ತಾ ದಣುವಾಗಲು ಬಳಿಯಲ್ಲೇ ಇದ್ದ ಒಂದು ಗ್ಲಾಸಿನ ಭರಣಿಯಲ್ಲಿ ನೀರೆಂತಿದ್ದ ಒಂದು ವಿಷಕಾರಕ ದ್ರವವನ್ನು ಕುಡಿದೇ ಬಿಟ್ಟರು. ಕುಡಿದೊಡನೆ ಅವರು ನೆಲದ ಮೇಲೆ ಬಿದ್ದು ಹೊರಳಾಡಿ ಕೆಲವು ನಿಮಿಷದಲ್ಲೇ ಪ್ರಾಣ ಬಿಟ್ಟರು. ನೀರೆಂತಿರುವ ಇಂತಹ ಎಸಿಡ್‌ಗಳನ್ನು ಕುಡಿದು ಪ್ರಾಣಹಾನಿಗಳಾಗುತ್ತಿರುವುದು ವಿದ್ಯಾಲಯಗಳ ವಿಶೇಷ ಸಂಗತಿಗಳೇ.

⁂ ⁂ ⁂

ಮಕ್ಕಳ ತಂಟೆಯಿಂದ ಊರು ಸುಡುತ್ತಿತ್ತು

ಕೊಯಂಬತ್ತೂರಿನಲ್ಲಿ ತಾ ೮ನೇ ದಿನ ಹಿಂದೂ ಮುಸ್ಲಿಮರ ಇಬ್ಬರು ಸಣ್ಣ ಸಣ್ಣ ಮಕ್ಕಳು ವಿಕೋಪ ಜಗಳವಾಡಿಕೊಂಡರು. ಅಷ್ಟರಲ್ಲಿ ಅವುಗಳ ಸಂಬಂಧಿಕರ ಆಗಮನವಾಯಿತು. ತಮ್ಮ ತಮ್ಮ ಮಕ್ಕಳ ಸಮರ್ಥನೆಯ ಫಲವಾಗಿ ಸಂಬಂಧಿಕರು ಬೈದಾಡಿದರು. ಹಿಂದೂ ಮುಸ್ಲಿಮರು ಒಟ್ಟುಕೂಡಿದರು – ಕೈ ಕೈ ಆಯಿತು. ಕತ್ತಿ ಕೈದು, ದೊಣ್ಣೆ, ಕಲ್ಲುಗಳು ಉಪಯೋಗಿಸಲ್ಪಟ್ಟವು – ಮುಸ್ಲಿಮರು ಹಿಂದೂಗಳಿಗೂ ಹಿಂದೂಗಳು ಮುಸ್ಲಿಮರಿಗೂ ಹೊಡೆದರು. ಪಟ್ಟಣದಲ್ಲೆಲ್ಲಾ ಗಲಾಟೆ. ಕೆಲವು ಮನೆಗಳ ಹಂಚುಗಳು ಹಾರಿದುವು. ಮತ್ತು ಮಂದಿಗಳಿಗೆ ಸಣ್ಣ ದೊಡ್ಡ ಗಾಯಗಳಾದುವು. ಕೋಮು ಅಗ್ನಿಯು ಅರ್ಧ ಊರಿಗೆ ಹರಡುತ್ತಿರುವಷ್ಟರಲ್ಲಿ ಪೋಲೀಸರ ಫೌಜು ಬಂತು. ಕೊನೆಗೆ ಶಾಂತವಾಯಿತು. ಕೆಲವರು ಕೈಸೆರೆಗೊಳಗಾಗಿರುವರು. ಪೋಲೀಸ ತನಿಖೆಯು ನಡೆಯುತ್ತಿದೆ.

⁂ ⁂ ⁂

ಗಾಂಧಿಜೀಯವರನ್ನು 'ಬಿಡುತ್ತಾರಂತೆ!'

ಗಾಂಧಿಜೀಯವರಿಗೂ ಇಂಡಿಯಾ ಸೆಕ್ರೆಟರಿಗಳಾದ ಸರ್ ಸ್ಯಾಮುವೇಲ್ ಹೋರರಿಗೂ ಪತ್ರವ್ಯವಹಾರವು ನಡೆಯುತ್ತಿದೆಯೆಂದೂ ಹೋರರು ತನ್ನ ಒಂದು ಪತ್ರದಲ್ಲಿ ಗಾಂಧಿಜೀಯವರು ಕಾಯಿದೆಭಂಗ ಚಳವಳವನ್ನು ಹಿಂತೆಗೆದರೆ ಮತ್ತು ಅದನ್ನು ಮುಂದೊತ್ತುವುದಿಲ್ಲವೆಂದು ಭಾಷೆಯಿತ್ತರೆ ಅವರನ್ನು ಬಿಡುಗಡೆ ಮಾಡುವಂತೆ ತಾನು ವ್ಯವಸ್ಥೆಮಾಡುವೆನೆಂದೂ ಬರೆದಿರುವರಾಗಿ ತಿಳಿದುಬಂದಿದೆ. ಗಾಂಧಿಜೀಯವರು ಹೋರರ ಆ ಪತ್ರಕ್ಕುತ್ತರವಾಗಿ ಬರೆಯುತ್ತಾ ಕೊಂಗ್ರೆಸ್ ವರ್ಕಿಂಗ್ ಕಮಿಟಿಯ ಶರ್ತಗಳಿಗೆ ಸರಕಾರವು ಒಪ್ಪದೆ ತಾನು ಕಾಯಿದೆಭಂಗ ಚಳವಳವನ್ನು ಹಿಂಗೆಯುವುದಿಲ್ಲವೆಂದಿರುವರಾಗಿಯೂ ಒಂದು ವಾರ್ತೆ. ಇದರ ಸತ್ಯತೆಯ ಕುರಿತು ಸ್ಥಳೀಯ ಸರಕಾರಗಳನ್ನು ವಿಚಾರಿಸಲಾಗಿ, ಈ ಪತ್ರವ್ಯವಹಾರದ ಕುರಿತು ತಮಗೇನೂ ಗೊತ್ತಿರುವುದಿಲ್ಲವೆಂದಿರುವರು. ಈ ವಾರ್ತೆಯು ಮುಂಬಾಯಿಯ [illegible] ಜನರ ಕೋಲಾಹಲಕ್ಕುಪಕ್ರಮವಾಯಿತು.

ಅಖಿಳ ಭಾರತ ಕೊಂಗ್ರೆಸ್ ಮಹಾಸಭೆಯು ಜರಗದಂತೆ ಅಪ್ಪಣೆಯಾಗಿದೆ. ಆದರೆ ಅದು ಜರಗಲೇ ಬೇಕೆಂದು ಮಾಲವೀಯರು ಹೇಳುತ್ತಿರುವರು.

ನಮ್ಮ ಕಳೆದ ಸಂಚಿಕೆಯಲ್ಲಿ ಅಖಿಳ ಭಾರತ ಕೊಂಗ್ರೆಸ್ ಮಹಾಸಭೆಯು ಇದೇ ತಾ ೨೪ರಲ್ಲಿ ಡಿಲ್ಲಿಯಲ್ಲಿ ಜರಗುವುದಾಗಿ ಪ್ರಕಟೀಕೃತವಾಗಿತ್ತಷ್ಟೆ. ಆದರೆ ಡಿಲ್ಲಿಯಲ್ಲಿನ ಪೋಲೀಸ್ ಕಮಿಶನರರು ಕೊಂಗ್ರೆಸ್ ಸಭೆಯು ಜರಗಬಾರದಾಗಿ ಆಜ್ಞಾಪಿಸಿರುವರು. ಈ ಕುರಿತು ಸರೋಜಿನಿ ನಾಯಡುರವರೊಡನೆ ಕೇಳಿದ್ದಕ್ಕೆ "ನನಗೆ ಸರಕಾರದ ಘೋಷಣೆಯ ಕುರಿತು ಏನನ್ನೂ ಹೇಳಲಿಕ್ಕೆ ಸಾಧ್ಯವಿಲ್ಲ. ಈ ಕುರಿತು ಮಾಲವೀಯರ ಅಭಿಮತವು ಹೇಗಿದೆಯೋ ತಿಳಿಯದು" ಎಂದರು. "ಇಂತಹ ಬಾಧೆಯು ಬಂದೀತೆಂದು ನೀವು ಎಣಿಸಿದ್ದಿರಾ?" ಎಂದು ಅವರನ್ನು ಕೇಳಿದೊಡನೆ ಸರೋಜಿನಿಯವರು "ಸರಕಾರದ ಕಡೆಯಿಂದ ಇಂತಹ ಅಡ್ಡಿಯು ಬಾರದೆಂದು ತಿಳಿಯದಿರಲು ನಾನು ಬರೇ ಮುಟ್ಠಾಳಿಯಾಗಿರಬೇಕು" ಎಂದರು. ಇನ್ನು ಕೊಂಗ್ರೆಸ್ ಅಧಿವೇಶನವು ಬೇರೆ ಕಡೆಯಲ್ಲಿ ಜರಗುವುದೇ ಎಂಬುದಾಗಿ ಕೇಳಿದ್ದಕ್ಕೆ ಸರೋಜಿನಿಯವರು "ಕೊಂಗ್ರೆಸ್ ಅಧಿವೇಶನವನ್ನು ಜರಗಿಸಬೇಕೆಂದು ಮನಸ್ಸಿದ್ದರೆ ಅದನ್ನು ಒಂದು ವಿಮಾನದಲ್ಲಾದರೂ ಜರಗಿಸುವೆನು. ಆದರೆ ಕೊಂಗ್ರೆಸ್ ಅಧಿವೇಶನವನ್ನು ಏಕೆ ನಡೆಸಲಿ? ನನಗೇನೂ ಬೇಸರವಾಗಿರುವುದಿಲ್ಲ. ನಾನು ನಿರಾಶಳಾಗಿಲ್ಲ" ಎಂದರು.

ಇದರ ಕುರಿತು ಪಂಡಿತ ಮಾಲವೀಯರು ಈ ರೀತಿಯ ಪ್ರಕಟಣೆಯನ್ನು ಮಾಡಿರುವರು.

"ಘಳಿಗೆ ಘಳಿಗೆಗೆ ಬದಲಾವಣೆಯಾಗುತ್ತಿರುವ ಇಂಡಿಯಾ ಸರಕಾರದ ಚಿತ್ತ [illegible] ಬಹು ಕಷ್ಟ. ಕೆಲವು ದಿನಗಳ ಹಿಂದೆ ಹೋಮ್ ಮೆಂಬರರು ಕೊಂಗ್ರೆಸ್ಸು ಕಾಯಿದೆ ವಿರೋಧವಲ್ಲವೆಂದು ಹೇಳಿದರು. ಆದರೆ ಈಗ ಕೊಂಗ್ರೆಸ್ ಕಾಯಿದೆಭಂಗ ಚಳವಳವನ್ನು ನಡೆಸುತ್ತಿರುವುದರಿಂದ ಅದರ ಅಧಿವೇಶನವನ್ನು ಜರಗಿಸಲು ಅಧಿಕಾರಿಗಳು ಬಿಡಲು ಸಾಧ್ಯವಿಲ್ಲವೆಂದಿದ್ದಾರೆ. ಕೊಂಗ್ರೆಸ್ಸಿನ ಈ ಮಾರ್ಗ ಬದಲಾಗಲಿಲ್ಲ. ಆದರೆ ಕೊಂಗ್ರೆಸ್ ಅಧಿವೇಶನವನ್ನು ಜರಗಿಸಬೇಕೆಂಬ ನಿರ್ಧಾರವು ಸರಕಾರದ ಈ ಪ್ರಕಟಣೆಯ ಮೊದಲೇ ಆಗಿರುತ್ತದೆ. ಈ ವಿಷಯದಲ್ಲಿ ಸರಕಾರದ ಮನಸ್ಸು ಬದಲಾಗುವುದೊ ಯಾರೂ ಹೇಳಲಾರರು. ಆದರೆ ಕೊಂಗ್ರೆಸ್ ಅಧಿವೇಶನದ ಸಿದ್ಧತೆಯಂತೂ ಜರಗುತ್ತಿರಬೇಕು. ನಿಶ್ಚಯಿಸಿದ ದಿನದಲ್ಲಿ ಕೊಂಗ್ರೆಸ್ ಅಧಿವೇಶನವು ಜರಗುವುದೆಂದು ನನ್ನ ಎಣಿಕೆ."

ಶ್ರೀಮತಿ ಸರೋಜಿನಿಯವರೂ ಮಾಲವೀಯರೂ ಇನ್ನಿತರ ಗಣ್ಯರೂ ಕೊಂಗ್ರೆಸ್ಸಿನ ಅಧಿವೇಶನಕ್ಕೆ ಸಂಬಂಧಪಟ್ಟ ಕಾರ್ಯಕಲಾಪಗಳನ್ನು ಮುಂದೊತ್ತುತ್ತಾ ಇದ್ದಾರೆ. ಸರಕಾರವೇನೋ ತಡೆಗಟ್ಟಬೇಕೆಂದಿದೆ. ಮುಂದಿನ ವಾರ್ತೆಗಳು ನಿರೀಕ್ಷಿಸಲ್ಪಟ್ಟಿವೆ.

⁂ ⁂ ⁂

ಸರೋಜಿನಿ ದೇವಿಯವರನ್ನು ಕೈದುಮಾಡುವರೇ?

ಅಖಿಳಭಾರತ ಕೊಂಗ್ರೆಸ್ ಸಭೆಯ ಪ್ರಕೃತದ ಅಧ್ಯಕ್ಷರಾಗಿರುವ ಶ್ರೀಮತಿ ಸರೋಜಿನಿ ದೇವಿಯವರು ಮುಂಬಾಯಿಯ ಮುಲ್ಜಿ ಜೇಠಾ ಮಾರ್ಕೇಟನ್ನು ಸ್ವದೇಶಿ ಮಾರ್ಕೇಟನ್ನಾಗಿ ಮಾಡಿದರು. ಅದರ ಒಂದು ಭಾಗವು ಕಳೆದ ವಾರದಲ್ಲಿ ಸ್ವದೇಶಿಯಾಯಿತು. ಇನ್ನೊಂದು ಭಾಗವು ತಾ ೧೧ಕ್ಕೆ ತೆರೆಯಲ್ಪಟ್ಟಿತು. ಎಂದು ಭಾಗಗಳಲ್ಲೂ ವಿದೇಶಿ ವಸ್ತು ಮಾರಾಟವಾಗಬಾರದೆಂದಾಗಿದೆ. ವರ್ತಕರು ಸ್ವದೇಶಿ ಪ್ರಚಾರಕ್ಕೆ ಕೈ ಕೊಟ್ಟುದನ್ನು ನೋಡಿ ಸರೋಜಿನಿಯವರು ಅವರನ್ನು ಶ್ಲಾಘಿಸಿ ಉಪನ್ಯಾಸ ಮಾಡಿದರು. ಸಾವಿರಾರು ಜನರು ಖಾದಿಯನ್ನು ಪಡೆಯಲು ಗುಂಪು ಕಟ್ಟಿ ಬಂದರು. ಶ್ರೀಮತಿಯವರು ಭಾಷಣ ಮಾಡುತ್ತಾ "ನನ್ನನ್ನು ಕೈದುಮಾಡುವರೆಂಬ ವಾರ್ತೆಯು ಮುಂಬಾಯಿಯಲ್ಲಿದೆ. ನಾನು ಸೆರೆಮನೆಯ ಹೊರಗಿದ್ದರೂ ಒಳಗಿದ್ದರೂ ಚಿಂತಿಲ್ಲ. ನಿಮ್ಮ ಸ್ವದೇಶಿ ಪ್ರಚಾರಕಾರ್ಯವು ಮಾತ್ರ ಸರ್ವತ್ರ ವ್ಯಾಪಿಸಲಿ" ಎಂದರು. ಶ್ರೀಮತಿಯವರ ದಸ್ತಗಿರಿಯ ವಾರ್ತೆಯು ಮುಂಬಾಯಿಯಲ್ಲಿದೆ.

⁂ ⁂ ⁂

ಶೌಕತಾಲಿಯವರ ವಿವಾಹ

ಶೌಕತಾಲಿಯವರೊಡನೆ ಲಂಡನಿನಿಂದ ಆಯೆಶಾ ಎಂಬ ಮುಸ್ಲಿಮ್ ಹೆಸರಿನ ಇಂಗ್ಲಿಷ್ ಸ್ತ್ರೀಯು ಅವರ ಸೆಕ್ರೆಟರಿಯಾಗಿ ಬಂದಿರುವಳು. ಇವಳನ್ನು ಶೌಕತರು ವಿವಾಹವಾಗಲಿರುವರೆಂಬ ವಾರ್ತೆ. ಈ ರಮಣಿಯು ಲಂಡನಿನಲ್ಲಿ ಮೊದಲು ಒಬ್ಬ ಅರಬೀಯವನನ್ನು ವಿವಾಹವಾದಳು. ಅವನು ಸತ್ತ ಮೇಲೆ ದಿವಂಗತ ಮೌಲಾನಾ ಮಹಮ್ಮದಾಲಿಗಳ ಆಶ್ರಯವನ್ನು ಸೇರಿದಳು. ಮಹಮ್ಮದಾಲಿಯವರು ತೀರಿಕೊಂಡ ಮೇಲೆ ಇವಳು ಶೌಕತರಿಗೆ ತಾಗಿದಳು. ಇವರೊಡನೆ ಶೌಕತಾಲಿಯವರು ಮದುವೆಯಾಗಲಿರುವರಂತೆ. "ನನ್ನ ಮುದಿಪ್ರಾಯದಲ್ಲಿ ನನ್ನನ್ನು ನೋಡಿಕೊಳ್ಳಲಿಕ್ಕೊಬ್ಬ ಹೆಂಡತಿ ಬೇಕಾಗಿದೆ. ನಾನು ಅವಳನ್ನು ಮದುವೆಯಾಗುತ್ತೇನೆ"ಂದು ಶೌಕತರ ಮಾತು.

ಶ್ರೀಮತಿ ಮೋತಿಲಾಲರಿಗೆ ಮಾಲವೀಯರ ಪತ್ರ.

ನಮ್ಮ ಸತ್ಯಾಗ್ರಹ ವಾರ್ತೆಯ ಪುಟದಲ್ಲಿ ಕೊಟ್ಟ ವಿವರದಂತೆ ಶ್ರೀಮತಿ ಮೋತಿಲಾಲರು ಅಲ್ಲಾಹಾಬಾದಿನಲ್ಲಿ ಜರಗಿದ ಒಂದು ಸಭೆಯಲ್ಲಿ ಜಖಂಗೊಂಡರಷ್ಟೆ. ಶ್ರೀಮತಿಯವರು ಜಖಂಗೊಂಡುದು ಜನರ ತಳ್ಳಾಟದಿಂದಾಗಿ ಎಂದು ಮೆಜಿಸ್ಟ್ರೇಟರ ಹೇಳಿಕೆ. ಮೆಜಿಸ್ಟ್ರೇಟರ ಈ ಹೇಳಿಕೆಯನ್ನು ಕೇಳಿದ ಶ್ರೀಮತಿ ಮೋತಿಲಾಲರು ತಿರಸ್ಕರಿಸಿ, ಹೇಳುತ್ತಾ "ನನಗೆ ಕಲ್ಲುಗಳ ಪೆಟ್ಟು ಬಿದ್ದಿಲ್ಲ. ನನಗೆ ಕೊನೆಯ ಪೆಟ್ಟೊಂದು ಬಿದ್ದುದು ಯಾರೋ ಆಫೀಸರನ ಕೈಯಿಂದಲೇ. ನಾನು ಪೆಟ್ಟಿನಿಂದ ಕುರ್ಚಿಯ ಕೆಳ ಬಿದ್ದ ಮೇಲೆ ನನ್ನ ಪ್ರೈವೆಟ್ ಸೆಕ್ರೆಟರಿಯವರಾದ ಶ್ರೀ ಎಸ್ ಟಿ ಉಪಾಧ್ಯಾಯರು ನನ್ನನ್ನು ಎಬ್ಬಿಸಿ ಕುಳ್ಳಿರಿಸಿದರು. ನನ್ನ ತಲೆಯಿಂದ ರಕ್ತ ಸುರಿಯುತ್ತಿದ್ದಿತು. ಆದರೆ ಪ್ರಜ್ಞೆ ತಪ್ಪಲಿಲ್ಲ" ಎಂದರು. ಶ್ರೀಮತಿಯವರ ಬಳಲುವಿಕೆಯ ಕುರಿತು ಪಂಡಿತ ಮದನ ಮೋಹನ ಮಾಲವೀಯರು ಶ್ರೀಮತಿಯರಿಗೊಂದು ಪತ್ರವನ್ನು ಬರೆದಿರುವರು. ಅದರಲ್ಲಿ

ಪ್ರಿಯ ಬಾಭಿಜೀ,

ನಿಮಗೆ ಮಾಡಿದ ಕ್ರೂರ ವೇದನೆಯನ್ನು ಕೇಳಿ ನಾನು ಸ್ವಾಭಾವಿಕವಾಗಿ ಬಹಳ ವೇದನೆಗೊಂಡಿರುವೆನು. ಆದರೂ ಮಾತೃಭೂಮಿಯ ಸಲುವಾಗಿ ನೀವು ನಿಮ್ಮ ಈ ಮುದಿ ಪ್ರಾಯ ಮತ್ತು ಅಸ್ವಸ್ಥ ಆರೋಗ್ಯದ ಸಮಯದಲ್ಲಿ ಧೈರ್ಯಗೊಂಡು ಬಯಲಲ್ಲಿ ನಿಂತಿರುವುದಕ್ಕಾಗಿ ನಿಮಗೆ ನನ್ನ ಅಭಿನಂದನೆಗಳು. ಇದರಿಂದಾಗಿ ಅಸಂಖ್ಯಾತ ಜನರಿಗೆ ನಿಮ್ಮ ಮೇಲಿರುವ ವಿಶ್ವಾಸ ಪ್ರೇಮಗಳು ಹೆಚ್ಚಿವೆ. ಭಾರತಭೂಮಿಯ ರಾಷ್ಟ್ರಪುತ್ರರು ಬಿಡುಗಡೆಯಾಗುವುದನ್ನು ಅವರ ಇಚ್ಛಿಸಿದ್ದ ಹರ್ಷದ ಸ್ವರಾಜ್ಯವನ್ನನುಭವಿಸುವುದನ್ನೂ ನೋಡುವ ಭಾಗ್ಯವು ನಿಮಗೆ ಲಭಿಸಲೆಂದು ಪ್ರಾರ್ಥಿಸುತ್ತೇನೆ. ನಿಮ್ಮ ನಮ್ರ ಎಂ ಎಂ ಮಾಲವೀಯ ವಂದಿಸ್ತು

ಶ್ರೀಮತಿಯವರು ಗುಣಮುಖರಾಗುತ್ತಿದ್ದಾರೆ.

⁂ ⁂ ⁂

ತಿರುಕನ ಮರುಕ!

ಮುಂಬಾಯಿಯಲ್ಲಿ ಒಬ್ಬ ಮುಸಲ್ಮಾನ ಭಿಕ್ಷುಕನು ಭಿಕ್ಷೆ ಬೇಡಿ ಸಾಧಾರಣ [illegible] ರೂಪಾಯಿಯ ಗಂಟು ಮಾಡಿಕೊಂಡು ಅದನ್ನು ತನ್ನ [illegible] ಬೇಡುತ್ತಿದ್ದನು. ಬ್ಬ ಮುಂದಿ ಮುಸಲ್ಮಾನರು ಬಂದು ಅವನೊಡನೆ ಮಾತನಾಡಿ ಹಿಂತಿರುಗಿದರು. ಅವರು ಹೋದ [illegible] ಭಿಕ್ಷುಕನು ಗಂಟನ್ನು ನೋಡಲಾಗಿ ಅದನ್ನು ಕತ್ತರಿಸಿ ಅವರೊಳಗಿದ್ದ ರೂಪಾಯಿಗಳು ಎತ್ತಲ್ಪಟ್ಟಿದ್ದ ಸಂಗತಿಯು ಅವನಿಗೆ ತಿಳಿದು ಬಂತು. ಅವನು ಕಳ್ಳತನವನ್ನು ಪೋಲೀಸರಿಗೆ ತಿಳಿಸಲು [illegible] ಮುಸ್ಲಿಮ್ ಚೋರರನ್ನು ಕೈದುಮಾಡಿದರು. ತಿರುಕನ ಮರುಕವನ್ನು ನೋಡಲು ಜನಸಂದಣಿಯು ಬಹಳವಾಗಿ ಸೇರಿತ್ತು.

⁂ ⁂ ⁂

ಜವಾಹರಲಾಲರ ಸ್ಥಿತಿ

ಪಂಡಿತ ಜವಾಹರಲಾಲರನ್ನು [illegible] ಮತ್ತು [illegible] ಸೆರೆಮನೆಯಲ್ಲಿ ಸಂದರ್ಶಿಸಿದರು. ಜವಾಹರಲಾಲರಿಗೆ ಕೆಲಸವಿಲ್ಲದೆ [illegible] ಬರುತ್ತಿದೆಯೆಂದೂ [illegible] ನೋವಾಗುತ್ತಿದೆಯೆಂದೂ ತಿಳಿದುಬರುತ್ತದೆ. ಜವಾಹರಲಾಲರನ್ನು ಡಾ॥ ಬಿಧಾನಚಂದ್ರ ರಾಯ್ ಎಂಬವರು ಪರೀಕ್ಷಿಸುವರೆಂದೂ ವಾರ್ತೆಯಿದೆ.

The Canara Banking Corporation Udipi, Ltd

NOTICE

The rate of interest allowed on the undermentioned deposits will be as follows with effect from 15-4-1932

Fixed deposits 3 months 4 6 and 9 months 5 1 year and above 5½ and 2 years 6 p. c.

Short term deposits 4 p. c.

(By order)

Udipi 15-4-32 } N. ANANDA RAO, Secretary and Manager

The Canara Bank, Ltd. Mangalore.

ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

NOTICE.

Is hereby given that on & from 15-4-1932 the rates of interest on fixed deposits will be as follows –

For 24 months 6

For 12 months ... 5½

(By order)

Canara Bank, Ltd Mangalore 15-4-1932 } K. VENKAT RAO, Secretary and Treasurer.

ಬಲಕೃತ್ಸಾರ! ಖಾತ್ರಿಯಾಗುವದು
ಕಿಮ್ಮತ್ತು ಅಗ್ಗ ಫಲಕೃತ್ಯಕರ

...ಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S I.R)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ... ವೈದ್ಯರಿಂದ ನಡೆಯುವ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನೂ ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ... ಗಳು, ... ಗಳು, ... ಗಳು ... ಆರಿಷ್ಟ ... ಗಳು ... ಸಿದ್ಧಔಷಧಿಗಳು ನಮ್ಮಲ್ಲಿ ಯಾವಾಗಲೂ ಸಿಕ್ಕುತ್ತವೆ. ... ರೋಗಿಗಳು ... ರೋಗದ ವಿವರವಾದ ಲಕ್ಷಣಗಳು, ... ವಯಸ್ಸು, ... ಕ್ರಮ, ... ಪದಾರ್ಥಗಳ ಅಭ್ಯಾಸ ... ಮುಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ... ನಡಿಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ... ವಿವರಗಳು ... ಸಂಗತಿಗಳಲ್ಲಿ ... ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ... ಸಂದರ್ಭ ಬೇಕಾದ ಸಂಗತಿಗಳಲ್ಲಿ ... ವ್ಯವಹಾರ ನಡಿಸಿದಲ್ಲಿ ... ಅವರ ಅಗತ್ಯದ ಮದ್ದಿನ ... ರೋಗಕ್ಕೆ ಬೇಕಾದ ಮದ್ದು ... ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ... ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ... ಕೊಡುವರೆ ... ವಿವರಕ್ಕೆ ... ಮುಖಾಂತರ ವ್ಯವಹಾರ ನಡಿಸಬಹುದು.

... ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮ್ಯಾನೇಜರ್,

ಅಮೃತೇಶ್ವರಿ ವೈದ್ಯಶಾಲಾ ಹೊಸ...
ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

ರಕ್ತ ಅಥವಾ ಕಜ್ಜಿಯಾದ ಅತ್ಯಂತ ಹಳೆಯದು ... ಔಷಧಿಯ ಒಮ್ಮೆ ಸೇವನೆಮಾಡುವುದರಿಂದ ... ಜಾದುವಿನಂತೇ ಪರಿಣಾಮವಾಗುವುದು ... ಮೂರು ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು. ... ಪ್ರಶಂಸೆ ... ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು. ಬೆಲೆ ರೂ ೨-೦-೦

ಕಿವುಡುತನ

ಕಿವಿಯೊಳಗಿಂದ ಕೀವು ಬರುವುದು ತಿಂದಿಯಿಡ ... ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಗೆ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ... ಬಹಿರೋದ್ದೀಪನ ತೈಲ ಅಮೋಘ ಅಸ್ತ್ರವಿದೆ ... ದರು ನೆಟ್ಟಗಾಗಿರುವರು. ಫಾಯದೆಯಾಗದಿದ್ದರೆ ಹಣ ತಿರುಗಿ ... ಬೆಲೆ ೧ ... ೩

ವಿಳಾಸ — ಶಕ್ತಿಸುಧಾ ಕಾರ್ಯಾಲಯ
23 ಕಾಂದಾರವಾಡ 4ನೇ ಗಲ್ಲಿ,
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳ ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಕುಳಿದ ಎಲ್ಲವನ್ನು ಬಹಿಷ್ಕರಿಸಿ, ಬ್ಯಾಟ್ಲಿವಾಲರ ಅತ್ಯುತ್ತಮವನ್ನೇ ಪಡೆಯಿರಿ.

ಬ್ಯಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತಿ ಪಡೆದವರು. ೬೭ ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ. ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ
ಡಾ. ಎಚ್. ಎಲ್. ಬ್ಯಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ. ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road P O Dada Bombay 14.

ತಂತಿ ವಿಳಾಸ — 'CAVASPUR' Bombay
ಶಪೂರ್ಜಿ ಎಚ್. ಎಲ್. ಬ್ಯಾಟ್ಲಿವಾಲಾ - ಮುಖ್ಯ ಮೆನಜಿಂಗ್ ಡೈರೆಕ್ಟರ್

ಝಂಡುವಿನ ಮೂರು ರತ್ನಗಳು

ಲೋಧ್ರ — ಇದು ಸ್ತ್ರೀಯರ ಗರ್ಭದೋಷಗಳಿಗೆ ... ಸ್ತ್ರೀಯರ ಎಲ್ಲಾ ತರದ ರೋಗಗಳನ್ನು ... ವರೆಗೆ ಆಯುರಾರೋಗ್ಯಾನಂದಗಳನ್ನು ಕೊಡುತ್ತದೆ
ಅರ್ಕ — ಇದು ಎಲ್ಲಾ ತರದ ಜ್ವರಗಳನ್ನು ... ದೇಹವನ್ನು ಶುದ್ಧಿಗೊಳಿಸುತ್ತದೆ
ಅಮೃತ — ರಕ್ತಶುದ್ಧಿಗೆ ಇದು ಈ ಕಾಲದಲ್ಲಿ ಅತ್ಯುತ್ತಮವಾದುದು

The Zandu Pharmaceutical Works, Ltd, Bombay, 14.
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು'

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

... ಮೂಲಿಕೆಗಳನ್ನು ... ತಯಾರು ಮಾಡಲ್ಪಟ್ಟಿರುವ ... ಅವಯವಗಳಿಗೆಲ್ಲಾ ಶಕ್ತಿಯನ್ನುಂಟುಮಾಡುತ್ತದೆ. ಕ್ಷಯರೋಗ ... ಎದೆ ನೋವು ... ವೃದ್ಧಾಪ್ಯದ ಅಶಕ್ತತೆ ... ಪುಷ್ಟಿಯನ್ನುಂಟುಮಾಡುವುದು ... ಪುಷ್ಟಿಹೀನತೆ ... ಕಡಿಮೆಯಾಗುವ ... ಪುಷ್ಟಿಯನ್ನುಂಟುಮಾಡಿ ಯೌವನವನ್ನು ಕೊಟ್ಟು ... ಈ ಲೇಹವು ಸುಪ್ರಸಿದ್ಧವಾದುದು. ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡುತ್ತದೆ. ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ ಡಬ್ಬಿ ರೂ 10/- ಕ್ರಯ 1 ಪಾನು ಸೀಸೆ ರೂ 2/8 ½ ಪಾ ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಜೈನಾ ಬಜಾರು ರಸ್ತೆ, ಮದ್ರಾಸು
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ, ಸಯ್ಯಾಜಿರಾವ್ ರೋಡ್.
ಬೆಂಗಳೂರು ಏಜಂಟರು — ಬಿ ಪ್ರೊಫೆಟ್‌ಲಾಲ್ ಕಂಪೆನಿ ಚಿಕ್ಕಪೇಟೆ
☞ ಕೆಟಲಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು.

ಶ್ರೀಮತೀ ಕಮಲಾ ದೇವಿ ಚಟ್ಟೋಪಾಧ್ಯಾಯರ ಬಂಧನ!

ಶಿಕ್ಷೆ! ಜಪ್ತಿ! ಕೈದು! ಏಲಂ!

ಕಂದಾಯ ನಿರಾಕರಣೆಯ ಫಲ.

ಅಹ್ಮದಾಬಾದಿನ ಬಾಡೋಲೀ ತಾಲೂಕಿನಲ್ಲಿ ಕಂದಾಯ ಕೊಡದ ೧೭ ಮಂದಿ ಬೇಸಾಯಗಾರರ ಭೂಮಿಯು ಸರಕಾರದ ವಶಕ್ಕೆ ಹೋದುವು.

ಮಹಾತ್ಮರ ಅಳಿಯನಿಗೆ ಶಿಕ್ಷೆ.

ಸೂರತ್ತಿನಲ್ಲಿ ಮಹಾತ್ಮಾ ಗಾಂಧಿಯವರ ಅಳಿಯ ಶ್ರೀ ನವೀನ ಗಾಂಧಿಯೆಂಬವರನ್ನು ಕೈದುಮಾಡಿ ೬ ತಿಂಗಳ ಕಠಿಣ ಶಿಕ್ಷೆಯನ್ನೂ, ಇನ್ನು ಮೂವರನ್ನು ಬಂಧಿಸಿ ಒಂದೊಂದು ತಿಂಗಳ ಕಠಿಣ ಸಜೆಯನ್ನೂ ಕೊಟ್ಟರು.

ಕಮಲಾ ದೇವಿಯರ ಬಂಧನ

ರಾಷ್ಟ್ರೀಯ ವಾರದ ದಿನಾಚರಣೆಯ ನಿಮಿತ್ತ ಕಳದ ವಾರ ಮುಂಬಾಯಿಯ ತಂಬಕಟ್ಟೆ ಎಂಬಲ್ಲಿ ಶ್ರೀಮತಿ ಕಮಲಾ ದೇವಿ ಚಟ್ಟೋಪಾಧ್ಯಾಯರ ಧುರೀಣತೆಯಿಂದ ಸ್ತ್ರೀಯರ ಒಂದು ಮೆರವಣಿಗೆಯು ನಡೆಯಿತು. ಜನಸಂದಣಿಯು ಸೇರಿತ್ತು. ಪೋಲೀಸ ಜವಾನರ ದಳವೂ ನಿಂತಿತ್ತು. ಒಂದು ಓಣಿಯ ಮಾರ್ಗವಾಗಿ ಮೆರವಣಿಗೆಯ ಜಯಘೋಷದೊಡನೆ ಬಂದಿತು. ಒಡನೆ ಪೋಲೀಸರು ಮೆರವಣಿಗೆಗಾರರನ್ನು ತಡೆದು ಮುಂದಾಳುಗಳನ್ನು ಸ್ಟೇಶನಿಗೆ ಕೊಂಡೊಯ್ದರು. ಈ ಸಂಬಂಧವಾಗಿ ಪಟ್ಟಣದ ವ್ಯಾಪಾರ ಸಂಸ್ಥೆಗಳೂ ಸಣ್ಣ ದೊಡ್ಡ ಅಂಗಡಿಗಳೂ ಹರತಾಳವನ್ನಾಚರಿಸಿದುವು.

ನರಿಮಾನರ ಸೊತ್ತು ಹೋಯಿತು

ಶ್ರೀ ಕೆ. ಎಫ್. ನರಿಮಾನರು ವಿಜಾಪುರ ಕೇಸಿನಲ್ಲಿ ರುವರಷ್ಟೆ. ಅವರ ಮೇಲಿನ ೫೦೦ ರೂಪಾಯಿ ಜುಲುಮಾನೆ ವಸೂಲಿಗಾಗಿ ಮುಂಬಾಯಿಯ ವರ್ಲಿಯಲ್ಲಿದ್ದ ಅವರ ಮನೆಯ ಚರಸೊತ್ತುಗಳು ವಶೀಕರಿಸಲ್ಪಟ್ಟುವು. ಇವುಗಳು ಎಂಟು ದಿನಗಳ ತನಕ ಹಾಗೆಯೇ ಇಟ್ಟು ಮತ್ತೂ ಜುಲುಮಾನೆ ಕೊಡಲ್ಪಡದಿದ್ದರೆ, ಅವುಗಳು ಏಲಂ ಹಾಕಲ್ಪಡುವುವು.

ಸಭೆಯು ಚದರಿಸಲ್ಪಟ್ಟಿತು.

ಕಳದ ಶುಕ್ರವಾರ ಅಹ್ಮದಾಬಾದಿನ ಮಾನೆಚಾಕ್ ಎಂಬಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು. ಪೋಲೀಸರು ಬಂದು ಅದನ್ನು ಚದರಿಸಿದರು. ಅಲ್ಲಿಯ ೧೬ನೇ ಡಿಕ್ಟೇಟರರಾದ ಪ್ರೊಫೆಸರ್ ವಾಲ್ಜಿ ದೇಸಾಯಿ ಎಂಬವರನ್ನು ಕೈದು ಮಾಡಿದರು.

ಲಾಥೀ "ಚಾರ್ಜ್"

ಖುಲ್ನದಲ್ಲಿ ಒಂದು ಮೆರವಣಿಗೆಯು ನಡೆಯಿತು. ಪೋಲೀಸರು ಲಾಥಿ ಚಾರ್ಜ್ ನಡೆಸಿದರು. ಕೆಲವರು ಜಖಂಗೊಂಡರು. ಬಾಬೂ ಶರತ್‌ಚಂದ್ರದಾಸರು ಕೈದುಮಾಡಲ್ಪಟ್ಟರು.

ಗಾಳಿಪಟವು ರಾಷ್ಟ್ರಧ್ವಜವಾಗಲಿಲ್ಲ.

ಅಲ್ಲಹಾಬಾದಿನಲ್ಲಿ ರಾಷ್ಟ್ರಧ್ವಜ ವಂದನೆಯು ಪೋಲೀಸರ ತಡೆಯಿಲ್ಲದೆ ಜರಗಿತು. ವಂದನೆಯು ನಡೆಯುತ್ತಿದ್ದ ಸ್ಥಳದ ಸಮೀಪವಿದ್ದ ಗೋಪುರದ ಮೇಲೆ ಪೋಲೀಸರ ಪಹರೆಯಿದ್ದಿತು. ಕೆಲವು ಕೊಂಗ್ರೆಸ್‌ವಾಲರು ರಾಷ್ಟ್ರಧ್ವಜ ವರ್ಣದ ಗಾಳಿಪಟವನ್ನು ಮಾಡಿ ಗೋಪುರದ ತುದಿಗೆ ಅದನ್ನು ಸಿಕ್ಕಿಸಿ ಬಿಡುವ ಯತ್ನ ಮಾಡಿದರು. ಗಾಳಿಪಟವೇನೋ ಗೋಪುರದ ತುದಿಯಲ್ಲಿ ಸರಿಯಾಗಿ ಕುಳಿತಿತ್ತು. ಆದರೆ ಸ್ವಲ್ಪ ಸಮಯದಲ್ಲೇ ಗಾಳಿಯ ಭರದಿಂದ ಅದರ ನೂಲು ತುಂಡಾಗಿ ಹಾರಿ ಹೋಯಿತು. ಇಂತಹ ಯತ್ನವು ಕೆಲವು ವೇಳೆ ನಡೆಯಿತು. ಪ್ರತಿ ಸಮಯದಲ್ಲೂ ಮೊದಲಿನಂತೆಯೇ ಆಯಿತು. ಇದೆನ್ನು ನೋಡಲು ಜನಸಂದಣಿಯು ಓಡುತ್ತಿತ್ತು. ಪೋಲೀಸರು ಮಧ್ಯೆ ಕೈಹಾಕಲಿಲ್ಲ.

ಬಿಟ್ಟರು.

ಕೊಲೊಂಬೊವಿನ ಧನಿಕ ಚಾ ವ್ಯಾಪಾರಿ ಒಬ್ಬರ ಪುತ್ರರಾದ ಶ್ರೀ. ಆಲು ವಿಹಾರಿ ಎಂಬವರು ಪಂಡಿತ ಜವಾಹರಲಾಲರೊಡನೆ ಕೆಲಸಮಾಡಿ ೬ ವಾರಗಳ ಸೆರೆಮನೆವಾಸಕ್ಕೆ ಒಳಗಾಗಿದ್ದರು. ಇವರನ್ನು ತಾ. ೧೧ನೇ ದಿನ ಬಿಟ್ಟರು.

ಬಹಿಷ್ಕರಿಸಿದರು.

ನಾಗಪುರದಲ್ಲಿ ಗಾಂಧಿಯವರ ಯಾವ ವಿಧದ ಚಲಚಿತ್ರಗಳನ್ನು ಸಾರ್ವಜನಿಕರಿಗೆ ತೋರಿಸಬಾರದಾಗಿ ಸಿನೆಮ ಕಂಪೆನಿಯವರಿಗೆ ಆರ್ಡರು.

ರೈಲು ಪಿಕೆಟಿಂಗು.

ರಾಷ್ಟ್ರೀಯ ವಾರದ ಆಚರಣಾರ್ಥವಾಗಿ ಮುಂಬಾಯಿಯಲ್ಲಿನ ಕೊಂಗ್ರೆಸ್‌ವಾಲರು ರೈಲು ಸ್ಟೇಷನುಗಳನ್ನು ಪಿಕೆಟ್ ಮಾಡಿದರು. ವಿಕ್ಟೋರಿಯಾ ಟರ್ಮಿನಸ್ ಮೊದಲಾದ ಸ್ಥಳಗಳಲ್ಲಿ ಪಿಕೆಟ್ ನಡೆದು ೬ ಮಂದಿಗಳು ಸೆರೆಮನೆಗೊಯ್ಯಲ್ಪಟ್ಟರು.

ಅಹ್ಮದಾಬಾದ್, ಲಾಹೋರ್, ಅಲ್ಲಹಾಬಾದ್, ಕಲ್ಕತ್ತಗಳಲ್ಲಿ ಅನೇಕ ಕೈದುಗಳೂ ಶಿಕ್ಷೆಗಳೂ ಆಗಿವೆ. ಕಲ್ಕತ್ತದಲ್ಲಿ ಬಂಗಾಳ ಆರ್ಡಿನೆನ್ಸಿನ ಮೇರೆಗೆ ಕೆಲವರು ಕೈದುಮಾಡಲ್ಪಟ್ಟರು.

ಶರಣಾಗತರಾದರು.

ಕಾನ್‌ಪುರದಲ್ಲಿನ ವಿದೇಶಿ ವಸ್ತ್ರ ಮಳಿಗೆಯ ಪ್ರೊಪ್ರೈಟರುಗಳು ಶರಣಾಗತರಾಗಿ ಇನ್ನು ಮೇಲೆ ವಿದೇಶಿ ವಸ್ತ್ರ ಮಾರಿ ಮಾಡಬಾರದೆಂದು ಸ್ವಯಂಸೇವಕರು ಬೇಡಿಕೊಂಡರು.

ಮಕ್ಕಳ ತಂಟೆ.

ಮಧುರೆಯಲ್ಲಿ ಕೆಲವು ಮಕ್ಕಳೂ ಹುಡುಗರೂ ಬಿಳ್ಪು ಗೂಡು ಬಾವುಟಗಳನ್ನು ಹಿಡಿದುಕೊಂಡು ಮೆರವಣಿಗೆ ಮಾಡಿ ಮ್ಯುನಿಸಿಪಾಲ್ ಗರ್ಲ್ಸ್ ಸ್ಕೂಲ್ ಮೊದಲಾದ ಸ್ಥಳಗಳಿಗೆ ಹೋಗಿ ಜಲಿಯಾನ್‌ವಾಲ್‌ಬಾಗ್‌ದಿನ ಸಂಬಂಧ ಎಲ್ಲರೂ ತಮ್ಮ ಮೆರವಣಿಗೆಯಲ್ಲಿ ಸೇರಿಕೊಳ್ಳಬೇಕೆಂದರು. ಪೋಲೀಸರು ಬಂದೊಡನೆ ಇವರು ಚದರಿದರು.

ತ್ರಿಚಿನೋಪಲಿ, ದಿಂಡಿಗಲ್, ತಿನ್ನವೆಲ್ಲಿ, ರಾಜಪಾಲಯಂ, ನೆಲ್ಲೂರ್, ಕೊಡಗು, ಗುಂಟೂರು, ವಿಜಾಪುರ ಮೊದಲಾದ ಕಡೆಗಳಲ್ಲಿ ಸ್ತ್ರೀಪುರುಷರ ಕೈದುಗಳಾಗಿವೆ.

೩೦೦ ಮಂದಿಗಳ ಬಂಧನ

ರಾಷ್ಟ್ರೀಯ ದಿನಾಚರಣೆಗಾಗಿ ಮುಂಬಾಯಿಯಲ್ಲಿ ೩೦೦ ಮಂದಿಗಳು ಬಂಧಿತರಾದರು. ೨೫ನೇ ಸಮರಸಂಸ್ಥೆಯ ಪತಿಯೂ ಸೆರೆಗೊಯ್ಯಲ್ಪಟ್ಟರು.

ಅಂಚೆ ಮತ್ತು ತಂತಿ ಆಫೀಸ್ ಪಿಕೆಟಿಂಗ್.

ಕಾನ್‌ಪುರದಲ್ಲಿ ಅಂಚೆ ಮತ್ತು ತಂತಿ ಆಫೀಸುಗಳನ್ನು ಪಿಕೆಟ್‌ಮಾಡಿದ ೪ ಮಂದಿಗಳನ್ನು ಕೈದುಮಾಡಿ ಶಿಕ್ಷೆ ವಿಧಿಸಿದರು.

ಭಾಷಣಕ್ಕಾಗಿ ಶಿಕ್ಷೆ.

ಕಲ್ಕತ್ತದಲ್ಲಿ ಫೆಬ್ರವರಿ ೩೦ ೧೧ನೇ ದಿನ ಮೋಡರ್ನ್ ರಿವ್ಯೂ ಪತ್ರಿಕೆಯ ಸಂಪಾದಕರಾದ ಶ್ರೀ ರಮಾನಂದ ಚಟರ್ಜಿಯವರ ಅಧ್ಯಕ್ಷತೆಯಲ್ಲಿ ಜರಗಿದ್ದ ಒಂದು ಸಭೆಯಲ್ಲಿ ರಾಜದ್ರೋಹಕರ ಭಾಷಣವಿತ್ತರೆಂಬ ಆಪಾದನೆಯ ಮೇಲೆ ಶ್ರೀ ಅಶ್ವಿನೀ ಕುಮಾರದಾಸ್ ಗುಪ್ತ ಎಂಬ ವಿದ್ಯಾರ್ಥಿಯೊಬ್ಬರು ೬ ತಿಂಗಳ ಕಠಿಣ ಶಿಕ್ಷೆಗೆ ಗುರಿಯಾದರು.

ಕ್ರಾಂತಿಕಾರರ ಪಡೆ ಸಿಕ್ಕಿತು.

ಕರಾಚಿಯಲ್ಲಿ ಹಿಂದೂಸ್ತಾನ್ ರಿಪಬ್ಲಿಕನ್ ಸೊಸೈಟಿಯವರ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಿದ್ದ ಕೆಲವರನ್ನೂ ಅವರ ಕಾಗದ ಪತ್ರಗಳನ್ನೂ ಪತ್ತೆಮಾಡಿರುವರು. ಇವರನ್ನು ಹಿಡಿದುದರಿಂದ ಹೆಚ್ಚಿನ ಸಮಾಧಾನಕ್ಕೆ ಕಾರಣವಿದೆಯಂತೆ.

ಕ್ರಾಂತಿಕಾರನ ಸೆರೆ.

ಅಹ್ಮದಾಬಾದಿನಲ್ಲಿ ಕ್ರಾಂತಿವಾದವನ್ನೆಬ್ಬಿಸಿ ಗಲ್ಲನ್ನೆಬ್ಬಿಸುತ್ತಿದ್ದ ರಮೇಶ ಮೇಧಾ ಎಂಬವನನ್ನು ಹಿಡಿದಿರುವರು. ಪತ್ರಿಕೆಗಳ ಕೆಲವು ಸಂಪಾದಕರನ್ನೂ ಸರಕಾರಿ ನೌಕರರನ್ನೂ ತಾನು ಕೊಲ್ಲುವೆನೆಂದು ಇವನು ಸಾರುತ್ತಿದ್ದನು. ಇವನನ್ನು ಬಂಧಿಸಿ ಸೆರೆಯಲ್ಲಿಟ್ಟಾಗ ಇವನು ಉಪಾಯದಿಂದ ತಪ್ಪಿಸಿ ಜೈಲಿನ ಗೋಡೆಯಿಂದ ಕೆಳಹಾರಿದನು. ಆದರೆ ಜಖಂಗೊಂಡು ಪೋಲೀಸರಿಗೆ ಪುನಃ ಸಿಕ್ಕಿದನು.

೬೮೭೬.

ತಾ. ೬ನೇ ದಿನ ಅಲ್ಲಹಾಬಾದಿನಲ್ಲೊಂದು ಸಭೆ ಸೇರಿತು. ಶ್ರೀಮತಿ ಮೋತಿಲಾಲರು ಸಭೆಯಲ್ಲಿ ಒಂದು ಕುರ್ಚಿಯ ಮೇಲೆ ಕುಳಿತಿದ್ದರು. ಪೋಲೀಸರ ಆಗಮನವಾಗಲು ಕಲ್ಲುಗಳ ಸುರಿಮಳೆಯು ಬಿತ್ತು. ಮಹತ್ತಾದ ಗಲಾಟೆಯಾಯಿತು. ಜನಸಮೂಹವು ಕಕ್ಕಾಬಿಕ್ಕಿಯಾಯಿತು. ಅಷ್ಟರಲ್ಲಿ ಶ್ರೀಮತಿ ಮೋತಿಲಾಲರ ತಲೆಗೆ ಒಂದು ಪೆಟ್ಟು ಬಿದ್ದು ರಕ್ತವು ಧಾರೆ ಹರಿಯಿತು. ಪೋಲೀಸ ಅಧಿಕಾರಿಯೊಬ್ಬನು ತನ್ನ ಕಾರಿನಲ್ಲಿ ಒಡನೆ ಶ್ರೀಮತಿಯವರನ್ನು ಮನೆಗೆ ಕರೆದುಕೊಂಡು ಹೋದನು. ಶ್ರೀಮತಿಯವರ ತಲೆಯಲ್ಲೂ ಹೆಗಲುಗಳಲ್ಲೂ ಮೊಣಕಾಲುಗಳಲ್ಲೂ ಗಾಯಗಳಾದುವು. ಪೋಲೀಸರ ಲಾಠಿಯಿಂದ ಅವರಿಗೆ ಪೆಟ್ಟು ಬೀಳಲಿಲ್ಲವೆಂದು ಮೆಜಿಸ್ಟ್ರೇಟರವರ ಹೇಳಿಕೆಯಾಗಿದೆ. ಕಲ್ಲಿನ ಪೆಟ್ಟು ಹೊಡೆದುದು ಯಾರೂ ಅರಿಯರು ನೋಡ್ಡಿಲ್ಲವೆಂದು. ಶ್ರೀಮತಿಯವರ ಉತ್ತರ ಅಲ್ಲಹಾಬಾದ್ ಸಂಯುಕ್ತ ಪ್ರಾಂತ್ಯದಲ್ಲಿ ಇಷ್ಟರ ತನಕ ೬೮೭೬ ಜನರಿಗೆ ಶಿಕ್ಷೆಯಾಯಿತು.

ವರ್ಗಾಯಿಸಿದರು.

ಅಖಿಲಭಾರತ ಕೊಂಗ್ರೆಸ್ ಸಮಿತಿಯ ಜನರಲ್ ಸಕ್ರೆಟರಿಯವರಾದ ಶ್ರೀ ಜಯರಾಂದಾಸ್ ದೌಲತ್‌ರಾಮರನ್ನು ಮುಂಬಾಯಿಯಿಂದ ನಾಸಿಕ್ ಜೈಲಿಗೆ ಕೊಂಡೊಯ್ದರು.

ಶಿಕ್ಷೆ.

ಕಲ್ಕತ್ತದಲ್ಲಿ ರಾಷ್ಟ್ರೀಯ ಧ್ವಜವಂದನಾರ್ಥವಾಗಿ ೬ ಮಂದಿ ಕೊಂಗ್ರೆಸ್‌ವಾಲರಿಗೆ ಆರಾರು ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು. ಶ್ರೀಮತಿ ವಿಶಾಲ ಮೋಹಿನಿ ದೇವಿಯೆಂಬವರು ಸೆರೆಯಿಂದ ಬಿಡಲ್ಪಟ್ಟ ಕೂಡಲೇ ಮೆರವಣಿಗೆ ಮಾಡಿದರು. ಇವರನ್ನು ಪುನಃ ಹಿಡಿದರು.

೧ ವರ್ಷ ಮತ್ತು ೫೦೦.

ನೊವಾಖಲಿಯಲ್ಲಿ ಬಾಬು ಮೋಹನರಂಜನ್ ಚೌಧುರಿ ಎಂಬ ವಕೀಲರು ಸೆರೆಮನೆಗೆ ಹೋದರು. ಅವರ ಪತ್ನಿಯವರಾದ ಶ್ರೀಮತಿ ಕರಾನ್ ಪ್ರೊಭಾ ಚೌಧುರಿ ಎಂಬವರು ಒಂದು ಮೆರವಣಿಗೆ ಮಾಡಿದರು. ಇವರನ್ನೂ ಕೈದು ಮಾಡಿ ೧ ವರ್ಷದ ಕಠಿಣ ಸಜೆಯನ್ನೂ ೫೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು.

ಸೈನ್ಯವು ನೇಮಿಸಲ್ಪಟ್ಟಿದೆ

ಅಲ್ಲಹಾಬಾದಿನಲ್ಲಿ ತಾ ೯ನೇ ದಿನದಿಂದ ಸೈನ್ಯವೂ ಪೋಲೀಸರೂ ಕಾವಲಿರುವರು. ಕೊಂಗ್ರೆಸ್ಸಿನವರ ಆಂದೋಲನವು ನಡೆಯದಂತೆ ಜಾಗ್ರತೆಯು ತೆಗೆದುಕೊಳ್ಳಲ್ಪಡುತ್ತಿದೆ.

ಕೈದಿಗಳಿಗೆ ಹೂಮಾಲೆ.

ಬೆಂಗಳೂರಿನಲ್ಲಿ ಸ್ವಾಮಿ ಗೋವಿಂದ ಮತ್ತು ೧೧ ಜನ ರಾಜಕೀಯ ಕೈದಿಗಳನ್ನು ಕಂಟೋನ್‌ಮೆಂಟ್ ಜೈಲಿನಿಂದ ಸೆಂಟ್ರಲ್ ಜೈಲಿಗೆ ಕೊಂಡೊಯ್ದರು. ಕೆಲವರು ಕೈದಿಗಳಿಗಾಗಿ ಹೂಮಾಲೆಗಳನ್ನು ಕೊಂಡುಹೋದರು. ಆದರೆ ಅವುಗಳನ್ನು ಒಪ್ಪಿಸಲು ಪೋಲೀಸರು ಬಿಡಲಿಲ್ಲ.

ಹೆಂಡತಿಯ ಶಿಕ್ಷೆಗೆ ಗಂಡನಿಗೆ ಬಾಧೆ

ಅಹ್ಮದಾಬಾದಿನ ಡಾಕ್ಟರ್ ಇಂದ್ರಪ್ರಸಾದ ದೇಸಾಯಿ ಎಂಬವರ ಪತ್ನಿ ಶ್ರೀಮತಿ ಮಹೇಂದ್ರ ಎಂಬವರು ಪಿಕೆಟಿಂಗ್ ಸಂಬಂಧವಾಗಿ ಶಿಕ್ಷಿಸಲ್ಪಟ್ಟರು. ಅವರಿಗೆ ೧೫೦ ರೂಪಾಯಿ ಜುಲುಮಾನೆಯೂ ಆಯಿತು. ಜುಲುಮಾನೆ ಹಣವನ್ನು ವಸೂಲು ಮಾಡುವುದಕ್ಕಾಗಿ ಪೋಲೀಸರು ಡಾಕ್ಟರರ ಸೊತ್ತುಗಳನ್ನು ವಶೀಕರಿಸಿರುವರು. ಡಾಕ್ಟರರು ವಾಜ್ಯ ಹೂಡಲಿರುವರು.

ಜಪ್ತಿ.

ಅಹ್ಮದಾಬಾದಿನ ಅಖಿಲ ಭಾರತ ಚರಕಾ ಸಂಘದ ಮೆನೇಜರರಾದ ಶ್ರೀ ಮಂಗಲ್ ಸಿಂಗ್ ಎಂಬವರನ್ನು ಕೈದು ಮಾಡಿದರು. ಅವರ ಮನೆಯಲ್ಲಿ ಜಪ್ತಿಯು ನಡೆಯಿತು.



ಅಸ್ವಸ್ಥದ ನಂತರ ಸೊಗಸಾದ ಓವಲ್‌ಟಿನ್
ಕುಡಿದು ನಿಮ್ಮ ಶಕ್ತಿಯನ್ನು ಪುನಃ ಸಂಪಾದಿಸಿರಿ.

ವಿಪರೀತವಾದ ಕಾಯಿಲೆಯು ದೇಹಪ್ರಕೃತಿಯನ್ನೆಲ್ಲ ಅಶಕ್ತಿಗೊಳಿಸುತ್ತದೆ. ಸರಿಯಾದ ಆರೋಗ್ಯ ಮತ್ತು ಶಕ್ತಿಗಳನ್ನು ಉತ್ಪನ್ನಗೊಳಿಸದಿದ್ದರೆ ಆ ಕಾಯಿಲೆಯು ಪುನಃ ತಿರುಗಿ ನಿಲ್ಲುವ ಅಪಾಯವಿದೆ.

ಅಶಕ್ತಿಯಿಂದಿರುವ ದೇಹವನ್ನು ಪುನಃ ಸಜ್ಜುಗೊಳಿಸಬೇಕು. ಹೊಸ ಚೈತನ್ಯವನ್ನೂ ವೀರ್ಯವನ್ನೂ ಉತ್ಪನ್ನಗೊಳಿಸಬೇಕು. ಈ ಸಮಯದಲ್ಲಿ ದೇಹವನ್ನು ಸರಿಯಾದ ಸ್ಥಿತಿಗೆ ತರಲು ಓವಲ್ಟಿನ್ ಅತ್ಯಮೋಘವಾದ ಪ್ರಯೋಜನವಾದ ವಸ್ತುವಾಗಿದೆ. ಓವಲ್ಟಿನ್ ಸಂಪೂರ್ಣವಾದ ಆಹಾರವಾಗಿರುತ್ತದೆ. ಜೀರ್ಣಕರವಾದ ಶಕ್ತಿಯುತ ಪೋಷಣೆಯನ್ನು ಕೊಡುತ್ತದೆ. ಅದರ ಪರಿಮಳವು ಹಸಿವಿಲ್ಲದವರಿಗೂ ಹಸಿವನ್ನುಂಟುಮಾಡುತ್ತದೆ.

ಇದನ್ನು ನಿಸರ್ಗದ ಅತ್ಯುತ್ತಮ ಆಹಾರಗಳಿಂದಲೇ — ಸಂಪೂರ್ಣ ಶುದ್ಧತೆಯಿಂದಲೇ ತಯಾರಿಸಲಾಗಿದೆ. ಅಪ್ರಾಯಸ್ಥರಿಗೂ ಅನಾರೋಗ್ಯದವರಿಗೂ ಓವಲ್ಟಿನ್ ಎಂಬುದು ಅಸಮಾನವಾದ ಪಾನೀಯವಾಗಿದೆ. ಅಸ್ವಸ್ಥದ ನಂತರ ದೇಹವನ್ನು ಪುನರ್ರಚಿಸುವುದರಲ್ಲಿ ಅತ್ಯಮೂಲ್ಯ ವಸ್ತುವೆಂದು ಓವಲ್ಟಿನ್ ಭೂಲೋಕದ ಎಲ್ಲ ಆಸ್ಪತ್ರೆಗಳಲ್ಲಿ ಗಣಿಸಲ್ಪಟ್ಟಿದೆ.

ಅತಿ ರುಚಿಕರವಾದ ಓವಲ್‌ಟಿನ್ನಿಗೆ ಸರಿಸಮಾನವಾದುದು ಇಲ್ಲ. ಎಲ್ಲಾ ನಕಲಿ ಪ್ಯಾಲುಗಳನ್ನು ತ್ಯಜಿಸಿಬಿಡಿರಿ. ಅವುಗಳು ಬರೀ ಮಿಶ್ರಣ. ಅವುಗಳು ಶಾಸ್ತ್ರೀಯ ರೀತ್ಯಾ ತಯಾರಿಸಲ್ಪಟ್ಟಿಲ್ಲ.

ಅತೀ ಶುದ್ಧ ಅತ್ಯುತ್ತಮ ಕರಸ್ಪರ್ಶಿತವಲ್ಲ

OVALTINE
TONIC FOOD BEVERAGE

ಏಜಂಟರು: ಜೇಮ್ಸ್ ರೈಟ್ ... ಕಲ್ಕತ್ತಾ, ಮತ್ತು ಬೊಂಬಾಯಿ ಮದ್ರಾಸ್ ರಂಗೂನುಗಳಲ್ಲಿ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಓವಲ್ಟಿನ್ ರಾಟೆಗಳನ್ನು ಆಶಕ್ತಿಯ ಸಮಯದಲ್ಲಿ ತಿನ್ನಬಹುದು. ರುಚಿಕರ ಉತ್ತಮ ಪರಿಮಳಯುಕ್ತ ಮತ್ತು ಸ್ವಾದವಾಗಿದೆ. ಬಿಸ್ಕತ್ತುಗಳಿಗಿಂತ ಇವುಗಳು ಬಹು ಉತ್ತಮ. ನಿಮ್ಮ ಓವಲ್ಟಿನ್ನನ್ನು ... ಬೆಣ್ಣೆ ಹಣ್ಣುಗಳೊಡನೆ ಸೇವಿಸಿ.

OV/65

ಈಗ ತಾನೇ ಅಚ್ಚಾಗಿ ಬಿಕರಿಗೆ ಸಿದ್ಧವಾಗಿದೆ

ಕಾಮದ ಗುಟ್ಟು

ಸುಂದರ ಚಿತ್ರಗಳ ಸಹಿತ

ಲೇಖಕರು — ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ — ಪಂಡಿತ ತಾರಾನಾಥರವರ ಮುನ್ನುಡಿಯೊಡನೆ.

ದಾಂಪತ್ಯದ ಸರ್ವಾಂಗ ಸುಖಗಳನ್ನು ಪಡೆಯಬೇಕಾದರೆ ಇದನ್ನು ಓದಲೇ ಬೇಕು. ವಿವಾಹಿತರಿಗೂ, ಅವಿವಾಹಿತರಿಗೂ, ಗಂಡಸರಿಗೂ, ಹೆಂಗಸರಿಗೂ ಅವಶ್ಯವಾಗಿ ಬೇಕಾಗಿರುವ ಪುಸ್ತಕ ಮತ್ತು ಉತ್ತಮ ಪುಸ್ತಕ. ಬ್ರಹ್ಮಚಾರಿಗಳಿಗೂ ಉತ್ತಮ ಕೈದೀವಿಗೆ. ಅಂಗಾಂಗದಲ್ಲಿ ಕಾಣಿಸುತ್ತಿರುವ ಗುಪ್ತವ್ಯಾಧಿಗಳಿಗೆ ಶಾಸ್ತ್ರೀಯ ಮತ್ತು ಹೃದಯದ ದೃಷ್ಟಿಗಳಿಂದ ಚಿಕಿತ್ಸೆ ಮಾಡುವ ಸುಲಭ ವೈದ್ಯ. ಇಂಥಾ ಪುಸ್ತಕವನ್ನು ಇದುವರೆಗೂ ಯಾರೂ ಬರೆದೇ ಇಲ್ಲ.

ಫಲವಿಸ್ತಿದ್ದರೂ ಬಹುಜನರಿಗೆ ಪ್ರಯೋಜನವಾಗಲೆಂದು ಬೆಲೆಯನ್ನು ೧-೦ ಆಣೆ ಮಾತ್ರವೇ

ಅಂಚೆವೆಚ್ಚ ಪ್ರತ್ಯೇಕ

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಶನ ದೊರೆಯುತ್ತದೆ

ಬೇಗನೇ ಬರೆದು ತರಿಸಿಕೊಳ್ಳಿರಿ!

ವಿ. ಜಿ. ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ಪತ್ರವ್ಯವಹಾರ.

[ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ನಗರ ಸಭೆಯವರೇ, ಏಕೆ ಈ ಧೋರಣೆ?

ಸ್ವದೇಶಾಭಿಮಾನಿ ಭಗಿನಿಯೇ,

ಮಂಗಳೂರು ಮುನಿಸಿಪಾಲಿಟಿಯೊಳಗೊಂದು ಆಲೋಚನಾ ಪಿಶಾಚಿಯು ಹೊಕ್ಕಿಬಿಟ್ಟಿದೆಯಂತೆ! ಅದೇನು ಬಲ್ಲಿಯಾ? ರಥಬೀದಿಯಲ್ಲಿ ಶಾಲಾ ಡಿಪ್ಯುಟಿ ಇನ್ಸಪೆಕ್ಟರ್ ಆಫೀಸಿನ ಬಳಿ, ಅಂದರೆ ಮಂಗಳೂರು ಸ್ವದೇಶಿ ಸ್ಟೋರ್ಸಿನ ಎದುರು ಒಂದು ಪೆಟ್ರೋಮೇಕ್ಸ್ ದೀಪವಿದೆಯಷ್ಟೆ! ಅದನ್ನು ಅಲ್ಲಿಂದ ತೆಗೆದು ಉರ್ವದ ಮೀನು ಮಾರ್ಕೆಟಿನ ಬಳಿ ಹಾಕುವ ಬಗ್ಗೆ ಆಲೋಚನೆಯಂತೆ! ಆಶ್ಚರ್ಯ! ಅಗತ್ಯವಿದ್ದ ಈ ಸ್ಥಳದಲ್ಲಿ ಈ ದೀಪವನ್ನಿಡದೆ ಎಲ್ಲೋ ಮೂಲೆಗೆ ಹಾಕುತ್ತಾರಂತೆ. ಇಷ್ಟು ದೊಡ್ಡ ವ್ಯಾಪಾರ ಕೇಂದ್ರದಲ್ಲಿ ಅಗತ್ಯವಾಗಿ ಬೇಕಾಗಿದ್ದ ಈ ದೀಪದ ಮೇಲೆ ನಗರ ಸಭೆಯವರ ಕಣ್ಣೇಕೆ ಹೋಯಿತೋ ತಿಳಿಯದು. ಈ ದೀಪದಿಂದ ಏನೂ ಪ್ರಯೋಜನವಿಲ್ಲವೆಂದು ಸಭಿಕರು ತಿಳಿದಿರಬಹುದೇ? ಹಾಗೆಂದಾದರೆ ನಮ್ಮ ಕೌನ್ಸಿಲರುಗಳೆಲ್ಲರೂ ಕೂಡಿಕೊಂಡು ರಥಬೀದಿಯಲ್ಲಿ ಒಂದು "ಅಮಾವಾಸ್ಯೆ"ಯ ದಿನ ಮೆರವಣಿಗೆ ಮಾಡಿದರೆ ಉತ್ತಮ. ಆಗ ಮಾತ್ರ ಇವರೆಲ್ಲರಿಗೂ ಈ ದೀಪದ ಪ್ರಯೋಜನವು ಖಂಡಿತವಾಗಿಯೂ ತಿಳಿಯಬಹುದು. ಈ ದೀಪವು ದಿವಂಗತ ಉಪೇಂದ್ರ ಪೈ ... ಸ್ಮಾರಕಾರ್ಥವಾಗಿ ದಾನವಾಗಿ ಕೊಟ್ಟುದೆಂದು ನನ್ನ ಅವಗಾಹನೆಗೆ ಬಂದಿದೆ. ಹಾಗಿದ್ದರೆ ಅಂತಹ ಸ್ಮಾರಕವನ್ನು ಸಾರ್ವಜನಿಕ ಸ್ಥಳದಲ್ಲಿ ಇರಗೊಡದೆ ಒಂದು ಮೂಲೆ ಸಂದಿನಲ್ಲಿ ಹಾಕುವರೇ? ನಗರ ಸಭೆಯವರೇ ಏಕೆ ಈ ಧೋರಣೆ? ಈಗೀಗ ಮುನಿಸಿಪಾಲಿಟಿಯು ಗ್ಯಾಸ್ ದೀಪಗಳೆಲ್ಲ ಉರಿಸುವವರ ಅವಸ ... ಮುನಿಸಿಪಾಲಿಟಿಯ ಆಜ್ಞೆಯಿಂದಲೋ ೧೦ ಘಂಟೆ ರಾತ್ರಿ ನೊಂದಿಸಲ್ಪಟ್ಟು ೧೧ ಘಂಟೆ ರಾತ್ರಿಯೊಳಗೆ ಎಲ್ಲೆಲ್ಲೂ ಕತ್ತಲೆಯಾವರಿಸುತ್ತದೆ. ಅಂತಹ ಅತ್ಯವಗಳನ್ನು ವ್ಯವಸ್ಥೆಗೊಳಿಸದೆ ರಥಬೀದಿಯ ಈ ದೀಪವನ್ನು ಅನಾವಶ್ಯಕವಾಗಿ ಬಯಲುಬಿಡುವ ಆಲೋಚನೆಯೇಕೆ? ಅದು ತೆಗೆಯಲ್ಪಡುವುದಾದರೆ ಜಂಕ್ಷನು ... ಪ್ರಾಮುಖ್ಯ ಸ್ಥಳಗಳಲ್ಲಿರುವ ದೀಪಗಳನ್ನು ತೆಗೆದು ಮುನಿಸಿಪಾಲಿಟಿಯ ಕೌನ್ಸಿಲು ಸದನದ ಸುತ್ತಲಿಡುವುದು ಒಳ್ಳೆ.

ಪೌರ

+ + + +

ಸ್ವದೇಶಾಭಿಮಾನಿ ಸಂಪಾದಕರಿಗೆ,

ನನ್ನ ವರ್ತಮಾನ ಕಾಲದಲ್ಲಿ ಬಾಲ್ಯವಿವಾಹಗಳು ನಡೆದ ಕುರಿತು ಆಗಾಗ ಪತ್ರಿಕೆಗಳು ಬರೆಯುತ್ತವೆ. ನನ್ನ ಕೇವೆಯೂ ಇದ ... ಸ್ಪಷ್ಟವಾದುದು. ಸರಕಾರದ ಕಾನೂನುಗಳನ್ನುಲ್ಲಂಘಿಸಿ ಆಗುತ್ತಿರುವ ಅಂತಹ ವಿವಾಹಗಳ ಕುರಿತು ನಾಗರದ ಮುಂದಾಳುಗಳು ಅಂತಹ ಕಾನೂನುಲ್ಲಂಘನೆಯ ವಿಷಯದಲ್ಲಿ ಮನಗೊಟ್ಟು ಕೇಸ ಮಾಡಿ ಕಾನೂನುರೀತ್ಯಾ ಶಿಕ್ಷೆಯನ್ನು ಒದಗಿಸಿದರೆ ಅಂತಹ ಕಾರ್ಯಕ್ಕೆ ಸರ್ವ ಸಹಕಾರ. ಸರಕಾರದ ಬೆಂಬಲವು ದೊರೆಯದಿದ್ದರೆ ಪರಿಸ್ಥಿತಿಯು ಫಲಪ್ರದವಾಗದಿರುವಂತಾಗುವ ಸಂಭವವಿದೆ. ಒಂದೂ ಸನ್ನಿವೇಶವನ್ನು ಆದರಣೆಗೆ ಒಳಪಡಿಸುವ ಈ ಬಾಲ್ಯವಿವಾಹ ಪದ್ಧತಿಯು ನಾಗರಿಕರಾದ ಸುಂಗಳೂರಿನವರ ಮಧ್ಯದಿಂದ ಇನ್ನೂ ಮಾಯವಾಗದಿರುವುದು ಆಶ್ಚರ್ಯ! ಆಶ್ಚರ್ಯ!

ಇಂತಿ

ಬಾಲ್ಯವಿವಾಹ ವಿರೋಧಿ

ಹರಿಯ ... ಮನೋರಂಜಕವಾದ

ಗದ್ಯ ಪುಸ್ತಕ!

ಕನ್ನಡ ಪದ್ಯ ರತ್ನಾವಳಿ (ಪ್ರಥಮ ಭಾಗ)

(ಶ್ರೀ ಜಿ ಎಸ್ ಲಕ್ಷ್ಮಣ ಪೈ ವಿರಚಿತ)

ಕ್ರಯ ೦—೩—೬

ಮಕ್ಕಳಿಗೆ ಮೆಚ್ಚುವ ಕತೆಗಳನ್ನೂ, ನೀತಿಪಾಠಗಳನ್ನೂ ಲಲಿತವಾದ ಭಾಷೆಯಲ್ಲಿ ಸರಳವಾದ ಶೈಲಿಯಲ್ಲಿ ಒಳಗೊಂಡ ಕವಿತಾಗ್ರಂಥ!

ಮದರಾಸು ಸರಕಾರದವರು ಇದನ್ನು ಪಠ್ಯ ಪುಸ್ತಕವಾಗಿ ಮಂಜೂರು ಮಾಡಿದ್ದಾರೆ.

ಹೆಚ್ಚಿನ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಧಾರಾಳ ಕಮೀಶನ್ ಕೊಡಲಾಗುವುದು.

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ—

ಹರಿಹರ ಛಾಪಖಾನೆ, ಪುತ್ತೂರು. (ದ. ಕ.)

ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು.

ಸರೋಜಿನಿಯವರಿಗೆ ಶೌಕತರ ಪತ್ರ! ಅದಕ್ಕೆ ಬಿರುಸಿನ ಉತ್ತರ!!

"ಮುಸ್ಲಿಮರ ಅಂಗಡಿಗಳನ್ನು ಪಿಕೆಟ್ ಮಾಡಬೇಡಿ! ನಾವು ಹಿಂದೂಗಳ ಅಂಗಡಿಗಳನ್ನು ಪಿಕೆಟ್ ಮಾಡುವೆವು."

ಶೌಕತಾಲಿ.

ಶೌಕತಾಲಿಯವರು ಮುಂಬಾಯಿಯಲ್ಲಿ ಸರೋಜಿನಿ ದೇವಿಯವರಿಗೊಂದು ಪತ್ರವನ್ನು ಬರೆದಿರುವರು. ಈ ಪತ್ರವು ಪ್ರಾಮುಖ್ಯವಾದದ್ದಂತೆ ಅದು ಹೀಗಿದೆ

"ಹೀಗೆನ್ನಲು ಅಧಿಕಾರವಿತ್ತವರಾರು?"

ಸರ್ದಾರ್ ಮಿಥಾ

ನನ್ನ ಪ್ರಿಯ ಸಹೋದರಿಯವರೇ,

ನಾನೀ ಪತ್ರವನ್ನು ಬಹಳ ಆವಸರದ ಒಂದು ವಿಷಯದ ಕುರಿತು ಬರೆಯುತ್ತೇನೆ ಈ ವಿಷಯವು ನನಗೆ ಬಹಳ ವೇದನೆಯನ್ನುಂಟುಮಾಡುತ್ತದೆ ನನ್ನ ವೇದನೆಯು ಮತ್ತೂ ವಿಪರೀತವಾಗುತ್ತದೆ, ಕಾರಣ ಪರಿಸ್ಥಿತಿಯನ್ನು ಹೀಗೆಯೇ ಅಲ್ಲಗಳೆದು ಬಿಟ್ಟುಬಿಟ್ಟರೆ ಅದರಿಂದಾಗಿ ಬಹಳ ಕ್ಷೋಭೆಯೂ ಉಪಟಳವೂ ಹಾನಿಯೂ ಉಂಟಾಗದಿರದೆಂದು ನನಗೆ ಭಯವಿದೆ. ಇದು ಇಡೀ ದೇಶವನ್ನೇ ಕಂಗಾಲುಗೊಳಿಸಿ ನಮ್ಮ ಭಾವೀ ಕೆಲಸಗಳ ಸಮಾಲೋಚನೆಗಳನ್ನು ಮಣ್ಣುಗೂಡಿಸಬಹುದು.

ಈ ಮುಂಬಾಯಿಯ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಅಥವಾ 'ಸರ್ವಾಧಿಕಾರಿ' ಅಥವಾ "ಸಮರಾಧಿಪತಿ"ಯು ಯಾರೆಂದು ನನಗೆ ತಿಳಿಯದಿರುವುದರಿಂದ ನಾನು ಈ ಕಾಗದವನ್ನು ನಿಮಗೆ ಬರೆಯಲು ಕಾರಣವಾಯಿತು. ನಾನೂ ನಿಮ್ಮೊಡನೆ ಖುದ್ದು ಮಾತನಾಡಿದ್ದೆನು. ಅನೇಕ ಮುಂದಾಳು ಮುಸ್ಲಿಮರಲ್ಲೂ ಅನೇಕರು, ನಿಮ್ಮೊಡನೆ ಮಾತನಾಡಿರಬಹುದೆಂದು ಭಾವಿಸುತ್ತೇನೆ ವ್ಯಾಪಾರ ವಾಣಿಜ್ಯ ಕೇಂದ್ರಸ್ಥಳವಾದ ಮುಂಬಾಯಿಯ ಭೂಮಿಯಲ್ಲಿ ಶಾಂತಿಪ್ರಸಾರಕರಾಗಿ ಹೆಸರುವಾಸಿಯಾಗಿರುವ ಸರ್ದಾರ್ ಸುಲೇಮಾನ್ ಖಾಸ್ಸಿಮ್ ಮಿಥಾ ಇವರ ಮಳಿಗೆಯನ್ನು ಕಾಂಗ್ರೆಸ್ಸಿನವರು ಪಿಕೆಟ್‌ಮಾಡುವ ಕುರಿತ ಮುಂದಿನ ಯೋಜನೆಗಳು ಹೇಗಿವೆಯೆಂದು ಎಲ್ಲರೂ ನಿಮ್ಮಿಂದ ಉತ್ತರವನ್ನು ಅಪೇಕ್ಷಿಸುತ್ತಿದ್ದಾರೆ

ಕಾಂಗ್ರೆಸ್ಸಿನ ಶಾಸನಭಂಗ ಚಳವಳಿಯ ಕಾರ್ಯಕ್ರಮವನ್ನು ನಾವು, ಮುಸ್ಲಿಮರು ಸ್ವೀಕರಿಸಿರುವುದಿಲ್ಲವೆಂಬ ಸಂಗತಿ ನಿಮಗೆ ವಿದಿತವಿರಬಹುದು. ನಮ್ಮ ಮನಸ್ತಾಪವನ್ನು ನಾವು ಸೂಚಿಸಿದ್ದರೂ ಈ ಚಳವಳಿವು ನಮ್ಮ ತಲೆಯ ಮೇಲೇರಿದೆ. ಕಾಯಿದೆಭಂಗದ ಕಾರ್ಯಕ್ರಮಕ್ಕೆ ನಾವು ಸೇರಲಾರೆವು ತಮ್ಮೊಡನೆ ಸೇರಿಕೊಂಡವರ, ತಮ್ಮ ಕಾರ್ಯಕ್ರಮಕ್ಕೆ ಒಪ್ಪಿಕೊಂಡವರ ವ್ಯಾಪಾರ ವಹಿವಾಟುಗಳನ್ನು ಕಾಂಗ್ರೆಸು ನಿಲ್ಲಿಸಬೇಕಾದರ ಧ್ವಂಸೀಕರಿಸಲಿ ಅದು ನಮಗೆ ಬಿದ್ದಿಲ್ಲ ಆದರೆ ತಮ್ಮೊಡನೆ ಸೇರಿಕೊಳ್ಳದಿರುವ, ತಮ್ಮ ಕಲಸಗಳಿಗೆ ಸಮ್ಮತಿಸದವರ ವಹಿವಾಟುಗಳೊಳಗೆ ಕಾಂಗ್ರೆಸ್ಸು ಕೈಯಿಟ್ಟು ನೋಡದು. ನಮ್ಮ, ಮುಸ್ಲಿಮರ, ಸ್ವಚ್ಛಂದವಾದ ಸ್ವಂತ ಕಾರ್ಯಕ್ರಮವಿದೆ ನಮ್ಮನ್ನು ನಮ್ಮಷ್ಟಕ್ಕೆ ಬಿಟ್ಟುಬಿಡುವುದೊಳ್ಳೆಯದು. ನಾವು ಹಿಂದೆ ಬಿದ್ದು ಕಳೆದುಕೊಂಡವುಗಳನ್ನು ಕೆಲವು ವರ್ಷಗಳಲ್ಲಿ ಸಾಧಿಸುವೆವು. ನಮ್ಮ ಈ ಸ್ಥಿತಿಯು ಮನಸ್ಸಿಗೆ ಸರಿಯಾಗಿ ಹಚ್ಚಿಕೊಳ್ಳಲ್ಪಡುವುದೆಂದು ನಾನು ಭಾವಿಸುತ್ತೇನೆ ಹೊಸ ಯೋಜನೆಗಳಿಗೆ ನಾವು ಒಪ್ಪುವಂತಿಲ್ಲ ಅವುಗಳು ಬಂದರೆ ನಮ್ಮ ಪ್ರತಿಘಟನೆಯು ಪ್ರಾರಂಭವಾಗುವುದು ದುಷ್ಪರಿಣಾಮಕಾರಕ ವಿದ್ಯಮಾನಗಳು ಘಟಿಸಿಬಿಡುವುವು.

ಮುಸ್ಲಿಮ್ ವರ್ತಕರ ಅಂಗಡಿಗಳಿಗೂ ಕಾಂಗ್ರೆಸ್ ಬಂಟಗಾರರು ಸಂತು ಪಿಕೆಟಿಂಗ್ ನಡೆಯಿಸುವುದಾದರೆ, ಇಂತಹ ದರ್ಪೋನ್ಮತ್ತತೆಗೆ ಸಹಾನುಭೂತಿಯನ್ನೀಯುವವರ ವಿರೋಧವಾಗಿ ಮುಸ್ಲಿಮರು ಕೂಡಾ ಏನಾದ ಮಾಡಬೇಕೆಂಬ ಭಾವವು ನಮ್ಮೊಳಗಿನ ಜನರಲ್ಲಿ ಮೂಡುತ್ತಿದೆಯೆಂದು ಭಯಪಟ್ಟು ಹೇಳಬೇಕಾಗುತ್ತದೆ. ಕಾಂಗ್ರೆಸ್ಸಿನ ಶರ್ತಗಳನ್ನು ಮುಸ್ಲಿಮರು ಸ್ವೀಕರಿಸುವುದಿಲ್ಲವೆಂದು ಮುಸ್ಲಿಮರ ಅಂಗಡಿಗಳನ್ನು ಬಹಿಷ್ಕರಿಸುವುದಾದರೆ, ಮುಸ್ಲಿಮರು ಕೂಡಾ ಹಿಂದೂ ವರ್ತಕರ ಅಂಗಡಿಗಳನ್ನು ಮುಂಬಾಯಿಯಲ್ಲೂ, ಏಕೆ, ಇಡೀ ಹಿಂದೂಸ್ಥಾನದಲ್ಲೂ ಬಹಿಷ್ಕರಿಸುವ ಅಪರಿಹಾರ್ಯ ಸಂದರ್ಭವು ಬಂದೇ ಬರುವುದು ನನ್ನ ದೇಶದ ಶಾಂತಿ ಮತ್ತು ಉದ್ಧಾರದ ಸಲುವಾಗಿಯೂ, ನನ್ನ ಜನರ ಪರವಾಗಿಯೂ, ನಾನು ಸ್ಪಷ್ಟವಾಗಿ ಮತ್ತು ಕಂಠೋಕ್ತವಾಗಿ ಮಾತನಾಡುವುದರಿಂದ ಜನರು ನನ್ನನ್ನು ಮನಃಪೂರ್ವಕವಾಗಿ ಬೈಯ್ಯಲೂಬಹುದೆಂದು ನನಗೆ ಗೊತ್ತಿದೆ. ದೃಢಪೂರ್ವಕವಾಗಿ ನುಡಿದು ಬಿಡುವ ಸಮಯವು ಸನ್ನಿಹಿತವಾಗಿದೆ. ಭಾವೀ ಕಷ್ಟಪರಂಪರೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಈಗ ಖಚಿತಪೂರ್ವಕವಾಗಿಯೇ ಮಾತನಾಡಬೇಕು. ಕಾಂಗ್ರೆಸ್ಸಿನಲ್ಲಿರುವ ನನ್ನ ಹಳೇ ಒಡನಾಡಿಗಳ ಮೇಲೆ ನನಗೆ ಸಹಾನುಭೂತಿ ಇದೆ ಈ ಸಂಗತಿ ನಿಮಗೆ ತಿಳಿದಿದೆ "ರಾಷ್ಟ್ರೀಯ"ವೆಂಬ ಪತ್ರಿಕೆಗಳ ಕೆಟ್ಟ ನುಡಿಗಳ ಎದುರಿನಲ್ಲೂ, ಅಸಂಬದ್ಧ ಆರೋಪಣೆಯ ಎದುರಿನಲ್ಲೂ, ಹಿಂದೂದೇಶದ ಎಲ್ಲಾ ಮತಗಳ ಮಧ್ಯದೊಳಗಿನ ಮರ್ಯಾದಪೂರ್ವಕ ಇತ್ಯರ್ಥಕ್ಕಾಗಿ ನಾನು ನಿಶ್ಚಲವಾಗಿ ನಿಂತಿದ್ದೇನೆ ಇಂತಹ ಇತ್ಯರ್ಥಕ್ಕಾಗಿ ಯಾವಾಗಲೂ ಸಿದ್ಧರಾಗಿರಬೇಕೆಂದು ನಾನು ನನ್ನ ಅನುಯಾಯಿಗಳಿಗೂ ಬೋಧಿಸುತ್ತಿದ್ದೇನೆ ಅರಿಕೆಯಿಂದಲೂ ಚರ್ಚೆಯಿಂದಲೂ ಈ ವಿಷಯವನ್ನು ನಾನು ಇಂಡಿಯ ಮತ್ತು ಇಂಗ್ಲ್ಯಾಂಡಿನಲ್ಲೂ, ಗಾಂಧಿಜಿಯವರೊಡನೆಯೂ, ಇತರ ಕಾಂಗ್ರೆಸ್ ಕೆಲಸಗಾರರೊಡನೆಯೂ ಇತ್ಯರ್ಥಪಡಿಸಿದ್ದೇನೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರನ್ನು ಸಂದರ್ಶಿಸಿ, ಸರಿಯಾದ ಇತ್ಯರ್ಥವೊಂದನ್ನು ಮಾಡಬೇಕೆಂದು ಭಗೀರಥ ಯತ್ನವನ್ನು ಮಾಡಿದ್ದೆನು. ಸರಿಯಾದ ಒಂದು ಒಡಂಬಡಿಕೆಯಾಗದೆ ನಾವು ಒಂದು ಅಂಗುಲದಷ್ಟೂ ಮುಂದೆ ಹೋಗಲಾರೆವು ಇಷ್ಟರ ತನಕ ನಾವು ಅದರಲ್ಲಿ ಸೋತುಹೋಗಿದ್ದೇವೆ ಆದರೂ ಕೂಡ, ಇನ್ನೂ ಆಶಾವಾದದಿಂದಿದ್ದೇವೆ ಆದರೆ ಮುಸ್ಲಿಮರ ಅಂಗಡಿಗಳನ್ನು ಪಿಕೆಟ್ ಮಾಡುವ, ಮತ್ತು ಬಹಿಷ್ಕರಿಸುವ ಈ ಧೋರಣೆಯು ಮುಂದುವರಿಯುವುದಾದರೆ ಶಾಂತಿಯು ಅಸಾಧ್ಯವೇ ಸರಿ ಇದರಿಂದಾಗಿ ನಾವು ಇಷ್ಟರ ತನಕ ಕಾಣದ, ಉಗ್ರ ಹೋರಾಟವು ನಡೆದೀತೆಂದು ಭಯಗೊಳ್ಳಬೇಕಾಗಿದೆ ಹೆಚ್ಚಿಗೆ ಹೇಳಲಾರೆ, ಕಾರಣ ನಿಮ್ಮ ಕಡೆಯಿಂದ ಸದಾಲೋಚನೆಗಳು ಬರುವುವೆಂದು ನೆನಸುತ್ತೇನೆ ಕ್ಷೋಭೆಯೂ ಹೋರಾಟವೂ ನಮ್ಮ ಭರತ ಭೂಮಿಯಲ್ಲಿ ಆಗದಿರಲಿ

ಈ ಬಹಿಷ್ಕಾರ ಧೋರಣೆಯು ಬ್ರಿಟಿಷ ಸರಕಾರದೊಡನೆ ವ್ಯವಹಾರ ನಡೆಸುವ ವರ್ತಕ ಮಂಡಲಗಳ ಮೇಲೆ ಮಾತ್ರ ಇರುವುದೆಂದೂ, ಮುಸ್ಲಿಮರ ಮೇಲೆ ಇಲ್ಲವೆಂದೂ ಒಂದು ಹೇಳಿಕೆಯಿದೆ ಇದು ಸರಿಯಲ್ಲ ಕಾರಣ ಕಾಂಗ್ರೆಸ್ಸು, ಇಂತಹ ವರ್ತನೆಯ ಪರಿಣಾಮಕ್ಕೆ ಹೆದರಿ ಇದನ್ನು ಇಷ್ಟರ ತನಕ ಕೈಕೊಂಡಿಲ್ಲ ಜನರು ತಮ್ಮ ಆಚರಣೆಗಳನ್ನು ಎಷ್ಟು ರಹಸ್ಯದಿಂದಿಡಲಿ, ಮತವಾದದಲ್ಲಿರುವ ನಾವು ಅಂತಹ ವರ್ತನೆಗಳ ನಿಜಾಂಶವನ್ನು ಕಂಡು ಕಣ್ಣು ಮುಚ್ಚಲಾಗುವುದಿಲ್ಲ ಒಂದು ವಿಷಯವೇನೆಂದರೆ, ಹಳ್ಳಿನ ಜನರು ನಿಜವಾದ ರಾಷ್ಟ್ರಭಕ್ತಿಯಿಂದ ಪ್ರೇರೇಪಿತರಾಗಿಲ್ಲ ಅನೇಕ ಮತಗಳು ಅನೇಕ ವೇಷಪಲ್ಲಟನೆಗಳಲ್ಲಿವೆ ನಮ್ಮ ಅಭಿಪ್ರಾಯದ ಮೇರೆಗೆ, ಕಾಂಗ್ರೆಸ್ಸು ರಾಷ್ಟ್ರೀಯ ಸಂಸ್ಥೆಯಲ್ಲ ಅದು ಹಿಂದೂ ಮಹಾಸಭೆಯವರ ಒಂದು ಪಕ್ಷ ಮಾತ್ರ! ಪಿಕೆಟಿಂಗೂ ಬಹಿಷ್ಕಾರ ಧೋರಣೆಯೂ ಬ್ರಿಟಿಷ ಸರಕಾರವನ್ನು ತಳಮಳಗೊಳಿಸಿದ್ದೆಯೆಂದೂ ಸುದ್ದಿಯಿದೆ ಇದು ಸತ್ಯವೆಂದಾದರೆ, ನಾವು ತಿರಸ್ಕರಿಸುವ ಕಾಂಗ್ರೆಸ್ ಧೋರಣೆಯ ದವಡೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ನಾವು ಸದುಪಾಯಗಳನ್ನು ಯೋಚಿಸುವುದು ಒಹುಮಂತ ಕರಾರಿನ ಸಂಗತಿಯಾಗಿದೆ ಗೌರವಪೂರ್ವಕವಾದ ಯಾವ ಒಡಂಬಡಿಕೆಗೂ ನಾವು ಸಿದ್ಧರಿದ್ದೇವೆ ದೇಶದ ಸಣ್ಣ ದೊಡ್ಡ ಜನಾಂಗಗಳಿಗೆ ಶಾಂತಿದಾಯಕವಾಗುವ ಯಾವ ಧೋರಣೆಗೂ ಸಮ್ಮತಿಯನ್ನೀಯುವವರಿದ್ದೇವೆ ಜನರು ನೆಮ್ಮದಿಯಿಂದಿರಬೇಕೆಂಬ ಕಳಕಳಿಯಿಂದ ಮಾಡಿರುವ ಈ ಅರಿಕೆಗೆ ನಿಮ್ಮ ಸೌಹಾರ್ದ್ರದೃಷ್ಟಿಯ ಉತ್ತರವು ಸಿಗುವುದೆಂದು ಕೋರುತ್ತೇನೆ ಈ ಕಾಗದವನ್ನು ಪ್ರಚುರಗೊಳಿಸಿರಿ. ನನ್ನ ನಮ್ರ ಪ್ರಾರ್ಥನೆಯು ದಶದಿಕ್ಕುಗಳಿಗೆ ಹರಡಿಕೊಳ್ಳುವುದಕ್ಕಾಗಿ ಇದನ್ನು ನಾನು ಪತ್ರಿಕೆಗಳಿಗೆ ರವಾನಿಸಿದ್ದೇನೆ

ನಿಮ್ಮ ಹಿತಕಾಂಕ್ಷಿ,

ಶೌಕತ್ ಆಲಿ

"ಶೌಕತಾಲಿಯವರ ಮಾತು ಹಾನಿಕಾರಕ"

ಸರ್ದಾರ್ ಮಿಥಾ

ಮೌಲಾನಾ ಶೌಕತಾಲಿಯವರ ಈ ಮೇಲಿನ ಪತ್ರವು ಪ್ರಕಟವಾದ ಮೂರು ದಿನಗಳೊಳಗೆ ಅವರ ಮತಸ್ಥರಾದವರೊಬ್ಬರು ಮೌಲಾನರಿಗೊಂದು ಉತ್ತರವನ್ನು ಕೊಟ್ಟೇಬಿಟ್ಟರು. ಉತ್ತರವಿತ್ತ ಮಹನೀಯರು ದೂರದವರಲ್ಲ, "ಸರ್ದಾರ್ ಸುಲೇಮಾನ್ ಕಾಸಿಮ್ ಮಿಥಾರವರ ಮಳಿಗೆಯನ್ನು ಹಿಂದೂಗಳು ಪಿಕೆಟ್‌ಮಾಡುತ್ತಾರೆ"ಎಂದು ಶೌಕತಾಲಿಯವರು ಮೇಲೆ ಆರೋಪಿಸಿದರಷ್ಟೆ ಅದೇ ಸರ್ದಾರ್ ಸುಲೇಮಾನರ ಹಿರೇ ಪುತ್ರನಾದ ಮಿ|ಅಬ್ದುಲ್‌ರಹಿಮ್ಮಾನ್ ಮಿಥಾ ಎಂಬವರು ಬರೆಯುವುದೇನೆಂದರೆ,

ಮೌಲಾನಾ ಶೌಕತಾಲಿಯವರು ಶ್ರೀಮತಿ ಸರೋಜಿನಿ ನಾಯಡುರವರಿಗೆ ಬರೆದ ಪತ್ರದಲ್ಲಿ ಸತ್ಯ ಸಂಗತಿಗಳಿಗೆ ಲೋಪ ಬಂದಿದೆ ಒಳ್ಳೆ ಖ್ಯಾತವಾದ ಅನೇಕ ಮುಸ್ಲಿಮ್ ವರ್ತಕ ಮಳಿಗೆಗಳಿವೆ ಉದಾಹರಣೆಗಾಗಿ -ರಹಿಂಭಾಯ್ ಮತ್ತು ಅಬ್ದುಲಕರೀಮ್ ಇವರ ಮಳಿಗೆಗಳನ್ನು ಒಹುದು ಇವುಗಳನ್ನು ಯಾರೂ ಬಹಿಷ್ಕರಿಸುತ್ತಿಲ್ಲ ಇವುಗಳು ನಿತ್ಯದಂತೆ ನಿರಾತಂಕವಾಗಿಯೇ ವ್ಯಾಪಾರ ವಹಿವಾಟುಗಳನ್ನು ನಡೆಸುತ್ತಿವೆ ನನ್ನ ತಂದೆಯವರಾದರೋ ಹತ್ತಿಯ ವ್ಯಾಪಾರವನ್ನು ಮಾಡುವುದೇ ಇಲ್ಲ ಅಲ್ಲದೆ ಹತ್ತಿಯ ಮಾರ್ಕೆಟಿನಲ್ಲಿ ಸರ್ದಾರ್ ಸುಲೇಮಾನ್ ಕಾಸಿಮ್ ಮಿಥಾರ ಯಾವ ಮಳಿಗೆಯೂ ಇಲ್ಲ ನನ್ನ ಇಬ್ಬರು ಸಹೋದರರಾದ ಮೆಸರ್ಸ್ ಮಹಮ್ಮದ್ ಸುಲೇಮಾನ್ ಮತ್ತು ಉಸ್ಮಾನ್ ಸುಲೇಮಾನ್ ಎಂಬವರು ಸ್ವತಂತ್ರರಾಗಿ ಹತ್ತಿವ್ಯಾಪಾರವನ್ನು ಮಾಡುತ್ತಿರುವರು. ಮೊದಲನೆಯವರ ಮಳಿಗೆಯನ್ನೇನೋ ಬಹಿಷ್ಕರಿಸುತ್ತಿರುವರು. ಎರಡನೆಯವರು ಎಷ್ಟರಂತೆ ಯಾವ ಬಾಧೆಯೂ ಇಲ್ಲದೆ ನಿರಾತಂಕವಾಗಿ ವ್ಯಾಪಾರ ಮಾಡುತ್ತಿರುವರು ಇಂದೇ ಒಂದು ಮುಸ್ಲಿಮ್ ವರ್ತಕ ಮಳಿಗೆಯನ್ನು ಬಹಿಷ್ಕಾರ ಮಾಡಿದರ ಆದರಿಂದಲಿ, ವಿಶೇಷ ಮುಸ್ಲಿಮರನ್ನೇ ಬಹಿಷ್ಕಾರ ಮಾಡುತ್ತಾರೆಂದು ನಿರ್ಧರಿಸಲು ಆಧಾರ ಸಾಕ್ಷ್ಯವು ದೊರಕುತ್ತಾವು ಇಲ್ಲ ಮಹಮ್ಮದ್ ಸುಲೇಮಾನ್ ಎಂಡ್ ಕಂಪೆನಿಯು ಒಂದಲ್ಲದ, ಮತ್ತೆ ಎಲ್ಲಾ ಕಂಪೆನಿಗಳು ವ್ಯಾಪಾರ ನಡೆಸುತ್ತಿವೆ ಅವುಗಳು ಬಹಿಷ್ಕರಿಸಲ್ಪಡಲಿಲ್ಲ ಕೆಲವು ಹಿಂದೂ ವರ್ತಕ ಮಳಿಗೆಗಳೂ ಬಹಿಷ್ಕರಿಸಲ್ಪಡುತ್ತಿವೆ ಮೇಲಿನ ಮಹಮ್ಮದ್ ಸುಲೇಮಾನ್ ಕಂಪನಿಯು ಹೆಸರಿಗೆ ಮಾತ್ರ ಮುಸ್ಲಿಮರದೆಂದಿದ ಆದರೆ ಅದು ಪಾಲುಗಾರರು ಹಿಂದೂಗಳಾಗಿರುವರು. ಬಹಿಷ್ಕಾರವು ಹಿಂದೂ ಪಾಲುಗಾರರ ಮೇಲೆಯೇ ಹೆಚ್ಚಾಗಿ ಪರಿಣಮಿಸೀತಲ್ಲದ, ನನ್ನ ಸಹೋದರರಿಗೆ ಅದರಿಂದ ಬಾಧೆಯಾಗಲಿಕ್ಕಿಲ್ಲ

ಬಹಿಷ್ಕಾರ ಅಸ್ತ್ರವನ್ನು ಮತದೃಷ್ಟಿಯಿಂದ ಉಪಯೋಗಿಸುವುದಿಲ್ಲವೆಂದು ನಿಷ್ಪಕ್ಷಪಾತವಾಗಿ ನಾನು ಹೇಳಬಲ್ಲೆನು ವೈಮನಸ್ಸಿನ ಮೆಸ್ಸಾಯಾ (Messiah of Discord) ರಾದ ಮೌಲಾನಾ ಸಾಹೇಬರು ಅರ್ಥಕ್ಕೆ ಅನರ್ಥವನ್ನು ತಂದೊಡ್ಡುವ ಪ್ರ... ನನ್ನ ತಂದೆಯವರ ಸ್ಥಾನಮಾನವನ್ನೂ ಸ್ಥಿತಿಯನ್ನೂ ಪ್ರತಿಷ್ಠೆಯನ್ನೂ ಉಪಯೋಗಿಸಿದ್ದು ತಪ್ಪು, ಅದು ಕೂಡಾ ನನ್ನ ತಂದೆಯವರು ಯಾತ್ರಾರ್ಥವಾಗಿ ಹಿಂದೂದೇಶ ಹೊರಗೆ ಹೋಗಿರುವ ಸಮಯದಲ್ಲಿ! ಹೀಗೆ ಮಾಡಲು ನನ್ನ ತಂದೆಯವರು ಶೌಕತಾಲಿಯವರಿಗೆ ಅಧಿಕಾರ ಕೊಟ್ಟಿರುವುದಿಲ್ಲ ಮೌಲಾನಾ ಶೌಕತಾಲಿಯವರ ಉದ್ಗಾರವು ಶುದ್ಧ ಹಾನಿಕಾರಕ ವ ಅದು ಸಂಪೂರ್ಣ ಅನಗತ್ಯ ಅದಿಕಪ್ರಸಂಗವಾಗಿರುತ್ತದೆ

ಗಡಿ ಬಿಡಬೇಡಿರಿ.

ಅಲ್ಲಹಾಬಾದಿನಲ್ಲಿ ಪಂಡಿತ ಜವಾಹರ ಲಾಲರ ಭಾವ ಶ್ರೀ, ಆರ್ ಎಸ್ ಪಂಡಿತರು ಮ್ಯುನಿಸಿಪಲ್ ಗಡಿ ಬಿಟ್ಟು ಒಂದು ತಿಂಗಳ ತನಕ ಹೊರ ಹೋಗಬಾರದಾಗಿಯೂ ಕಾಯಿದೆಭಂಗ ಚಳವಳಿಕ್ಕೆ ಸೇರಬಾರದಾಗಿಯೂ ನೋಟೀಸು ಹೋಗಿದೆ

ಕಾಂಗ್ರೆಸ್ ಆಸ್ಪತ್ರೆಯೆಂದು ಹೇಳಬೇಡಿ.

ಅಲ್ಲಹಾಬಾದಿನ ಪಂಡಿತ ಮೋಹನ್‌ಲಾಲ್ ನೆಹರುರವರು ಸ್ವರಾಜ್ಯ ಭವನದ ಬಳಿ ಒಂದು ಗುಡಿಸಲನ್ನು ಕಟ್ಟಿ ಅದನ್ನು ಕಾಂಗ್ರೆಸ್ ಆಸ್ಪತ್ರೆಯೆಂಬ ಹೆಸರಿನಿಂದ ವಿವರಿಸುತ್ತಿದ್ದರು. ಇನ್ನು ಮುಂದೆ ಅದನ್ನು ಅಂತಹ ಹೆಸರಿನಿಂದ ಕರೆಯುವುದು ಬೇಡವೆಂದು ಆಜ್ಞೆಯಾಗಿದೆ

ಹಿಡಿದರು.

ಪಂಡಿತ ಜವಾಹರಲಾಲರ ಇನ್ನೊಬ್ಬ ಭಾವ ಪಂಡಿತ ಕೈಲಾಸನಾಥ್ ಖೌಲ್ ಎಂಬವರನ್ನು ಲಕ್ನೋವಿನಲ್ಲಿ ಕೈದು ಮಾಡಿದ್ದಾರೆ ಇವರು ಲಕ್ನೋ ಕಿಸಾನ್ ಸಂಘದ ಸಂಸ್ಥಾಪಕರು.

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ್ ಸ್ಟುಟಗಾರ್ಟರ-ಲ್ಯಾಫ್ ಇನ್ಶೂರೆನ್ಸ್ ಬೇಂಕ್, ಲಿಮಿಟೆಡ್

(ಜರ್ಮನಿಯಲ್ಲಿ ಸನ್ ೧೮೬೯ರಲ್ಲಿ ಸ್ಥಾಪಿಸಲ್ಪಟ್ಟುದು.)

ಒಟ್ಟು ವಿಮಾ ಹಣವು ೩೨೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಪತ್ರಗಳ ಹಣವು ೯೯ ಕೋಟಿ ರೂ. ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೮೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಗಳ ಮೇಲಿನ ಕಾಯ್ದುಟ್ಟ ಕೇವುಗಳು ಹಿಂದೀ ಕಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ, ಬೆಳಗಾಂವ, ಕಾರವಾರ, ಸೊಲ್ಲಾಪುರ, ಬಳ್ಳಾರಿ ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ಮೊರವಾನಜಿ ಆ್ಯಂಡ್ ಸನ್ಸ, ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಜನರಲ್ ಸೀನಿಯರ ಏಜಂಟರು, ಇವರಿಗೆ ಬರೆಯಬೇಕು

"If every Wife knew what every Widow knows every Husband would be Insured'

PLACE YOUR LIFE ASSURANCE WITH
THE SOUTH INDIAN
Securing for your clients –
1 **Low rates of Premium**
2. **Liberal Policy Conditions.**
AND FOR YOURSELF
An Agency with attractive Terms of Commission and Salary in
The South Indian General Assurance Co, Ltd.,
Any where in CANARA DISTRICTS & HYDERABAD STATE
For terms of Agency please apply to —
H R K IYENGAR, Chief Agent
The S I G A Co. Ltd.,
Sanyasiguddy, MANGALORE
Managing Agents –
K C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು
ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ.
ನಿಮಗೂ, ನಿಮ್ಮ ಗಿರಾಕಿಗಳಿಗೂ ತುಂಬಾ ಪ್ರಯೋಜನ ಮತ್ತು ಸೌಕರ್ಯಗಳವೆ!
ಪ್ರಿಮಿಯಂ ದರಗಳು ಕಡಿಮೆ!
ಶರ್ತಗಳ ತೀರಾ ಸುಲಭ!!
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ
ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು
(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿ)
ಚೀಫ್ ಏಜಂಟರು—
ಎಚ್. ಆರ್. ಕೆ. ಅಯ್ಯಂಗಾರ್,
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.
ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು
ಮೇನೇಜಿಂಗ್ ಏಜಂಟರು —
ಕೆ ಸಿ ಪಾಂಡಲೆ ಎಂಡ್ ಕೋ.
7-8 ಮೆಕಲೀನ್ ಸ್ಟ್ರೀಟ್, ಜಿ ಟಿ. ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೇಯಾಗಲಿ ಉಪಯೋಗಿಸು ತ್ತಿದ್ದರೆ ಆಹಾರ, ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ.

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ ಶೀತ ನೆಗಡಿ ಕೆಮ್ಮು ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮುಂತ್ಯಲ್ಲಿ ಕಟ್ಟುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ತಟ್ಟನೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ

(ಜ್ವರಕ್ಕೆ)

ಹತ್ತಾರು ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಜನ ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸಿರುತ್ತದೆ ಜ್ವರಗಳಿಗೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ, ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0

ಶ್ರೀನಿವಾಸ ತೈಲ.

ಪ್ಲೇಗು ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಹಚ್ಚುವ ಔಷಧ. ಸೀಸೆ 1ಕ್ಕೆ ರೂ 0—8—0

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್, ಸೀತಾರಾಘವ ವೈದ್ಯ ಶಾಲಾ, ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಕೋರ್ಟು ಫಾರ್ಮಸಿ
ಮಂಗಳೂರು ಬವಡಿ ಮಾರ್ಗ.

ಮೈಸೂರು ಸರಕಾರದ ವಿದ್ಯಾ ಇಲಾಖೆ ಮತ್ತು ಕೊ. ಆ. ಸೊಸ್ಯಾಟಿಗಳಿಂದ ಶಿಫಾರಸು ಹೊಂದಿದೆ.

ವೈದಿಕ ಧರ್ಮಾಭಿಮಾನಿಗಳೂ ಕನ್ನಡ ಭಾಷಾಭಿಮಾನಿಗಳೂ ಅವಶ್ಯವಾಗಿ ಓದತಕ್ಕ

ಯುಗಾದಿಯಿಂದ] ಶ್ರೀ ಶೇಷಾಚಲ [ವರ್ಷಾರಂಭ

ಸದ್ಬೋಧ ಚಂದ್ರಿಕೆ.

೧೯೦೮ರಿಂದ ಪ್ರಕಟವಾಗುತ್ತಿರುವ ಉತ್ತರಕರ್ನಾಟಕದ ತಿಳಿಗನ್ನಡ **ಮಾಸ ಪತ್ರಿಕೆಯು.**

ವಾ. ಚಂದಾ ರೂ. ೩] [ಡೆಮ್ಮಿ ಫರಟಿಲ

ಆಗಡಿ ಆನಂದವನದಲ್ಲಿ ಈಗ ೨೫ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ "ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠ ಶಾಲೆ"ಗೆ ಇದರ ಆದಾಯವೆಲ್ಲ ವಿನಿಯೋಗಿಸಲ್ಪಡುತ್ತಿರುವುದು. ಅಲ್ಲದೆ, ಅನೇಕ ಸದ್ಬೋಧ ಪೂರ್ಣವಾದ ಲೇಖನಗಳಿಂದಲೂ, ಮನೋರಂಜಕ, ಸಾಮಾಜಿಕ, ಧಾರ್ಮಿಕ ಐತಿಹಾಸಿಕ [illegible] ಕಾದಂಬರಿಗಳಿಂದಲೂ ಕರ್ನಾಟಕ ಸಮಾಜ [illegible] ಸೇವೆಯನ್ನು ಮಾಡುತ್ತಿರುವದು ನಮ್ಮಲ್ಲಿ ಶ್ರೀ ಶೇ [illegible] ಗ್ರಂಥ ಮಾಲಿಕ [illegible] ದೊರೆಯುತ್ತವೆ

ಮ್ಯಾನೇಜರ ಆಫೀಸು,
ಪೋ। ಆನಂದವನ, ಜಿ ಧಾರವಾಡ

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಮ್ಯಾಟ್ರಿಕ್ಯುಲೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿ [illegible] ಅನುಸಾರವಾಗಿ [illegible] ವಿಂದ ಪ್ರಕಟಿಸಲ್ಪಟ್ಟ ಎಲಿಮೆಂಟರಿ ಶಾಲೆಯ ಪಠ್ಯಪುಸ್ತಕಗಳು—

[illegible]ನೇ ಮೂರನೇ, ನಾಲ್ಕನೇ ಐದನೇ ವರ್ಗದ [illegible] ಮತ್ತು [illegible]

[illegible]ನೇ ಮೂರನೇ ನಾಲ್ಕನೇ ವರ್ಗಗಳ ಪ್ರಕೃತಿ ಶಿಕ್ಷಣ ಮತ್ತು ಸಾಮಾನ್ಯ ತಿಳುವಳಿಕೆ

[illegible]ನೇ, [illegible] ವರ್ಗದ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

[illegible]ನೇ, ಮೂರನೇ ನಾಲ್ಕನೇ ವರ್ಗಗಳ ಚರಿತ್ರೆ ಮತ್ತು [illegible] ಹೊಸ [illegible] (೧ನೇ, ೨ನೇ ಭಾಗ)— ಅಚ್ಚಿನಲ್ಲಿ ಪುಸ್ತಕಗಳು [illegible] ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ [illegible] ಕಮಿಶನು ಕೊಡಲಾಗುವುದು

ಪುಸ್ತಕ ದೊರೆಯುವ ಸ್ಥಳ —

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್ಡ ಸಾರ್ಸಪರಿಲ್ಲಾ

ಕೆಟ್ಟ ರಕ್ತಕ್ಕೆ ಪರಮೌಷಧ ೫೦ ವರ್ಷದ ಅನುಭವ ಉಪಯೋಗಿಸಿ ನವರೇ ಹೇಳಿದ್ದಾರೆ



ಡಾಕ್ಟರ್ ಗೌತಮರಾವ್ ಕೇಶವರವರ

ಫೋಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,

ಠಾಕುರದ್ವಾರ, ಮುಂಬಯಿ ೨ ಸ್ಟೋಕಿಸ್ಟ ಪಾ ಕಂಪೆನಿ, [ಸತ್ಯವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ] ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S KAMATH AT M. T A. SHARADA PRESS, MANGALORE.

ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೬. ಮಂಗಳೂರು ತಾ ೨೨ನೇ ಶುಕ್ರವಾರ ಎಪ್ರಿಲ ೧೯೩೨ (22-4-32) ಸಂಚಿಕೆ ೧೭

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ, ಉಡುಪಿ, ಲಿಮಿಟೆಡ್

Head office:—UDIPI. Branches: COONDAPOOR & Mangalore

ಹೆಡ್ ಆಫೀಸು ಉಡುಪಿ ಶಾಖೆ ಕುಂದಾಪುರ ಮಂಗಳೂರು

Authorised Capital Rs. 3,50,000 Subscribed & Called up Rs. 25,000

NOTICE.

The rate of interest allowed on the undermentioned deposits will be as follows with effect from 15-4-1932.

Fixed deposits 3 months 4%, 6 and 9 months ... 1 year and ... 2 years 6 ...

Short term deposits 4 ...

UDIPI ...-4-32

N. ANANDA RAO
Secretary & Manager

(Regd

ಅಮೃತಾಂಜನ.

"ಗಜಕರ್ಣ ಮುಲಾಮು

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು,
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಬೊಂಬಾಯಿ.

ಏಜೆಂಟರು:— ... ಕಂಪೆನಿ, ಮಂಗಳೂರು

The Popular Insurance Co. Ltd.

First of its Kind in the West Coast

Dewan Bahadur N. Subba Rao

STRIKING FEATURES

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN

For further particulars apply ...

ಮೊಲೆಯುಣ್ಣಿಸುವ ತಾಯಂದಿಯರಿಗೆ ರುಚಿಕರವಾದ 'ಓವಲ್ಟಿನ್' ಬೇಕು

ಮಗು ಜನಿಸುವ ಮೊದಲೂ ಅನಂತರವೂ ತಾಯಿಗೆ ಆದ ಶಿದೆಹಾಲು ಹೆಚ್ಚಲಿಕ್ಕೂ ಆಯಾಸದ ಪಣಾವನ್ನು ಆರಿಸಲಿಕ್ಕೂ ಮತ್ತು ಆವಳ ಆರೋಗ್ಯವನ್ನು ವೃದ್ಧಿಸಲಿಕ್ಕೂ ಹೆಚ್ಚಿನ ಪೋಷಣೆಯು ಅಗತ್ಯವಿರುತ್ತದೆ

'ಓವಲ್ಟಿನ್' ಎಂಬುದು ಪ್ರಕೃತಿಗನುಗುಣವಾದ ಟೋನಿಕ್ ಆಹಾರವಾಗಿದೆ ಅದು ಮೊಲೆಯುಣ್ಣಿಸುವ ತಾಯಿಗೆ ಬೇಕಾದ ಎಲ್ಲಾ ವಿಧದ ಉತ್ತಮ ಪೋಷಣೆಯನ್ನು ಒದಗಿಸುತ್ತದೆ

ಹೆರುವ ಮೊದಲೂ ಹೆತ್ತ ಮೇಲೂ ಓವಲ್ಟಿನ್ ವನ್ನು ಸೇವಿಸಿದರೆ ಖಂಡಿತವಾಗಿಯೂ ಮಗುವಿನ ಆರೋಗ್ಯಕ್ಕೆ ಪ್ರಯೋಜನವಿದೆ ಕಾರಣ ಪ್ರಕೃತಿಸಿದ್ಧ ರೀತಿಯಿಂದ ಮಗುವನ್ನು ಪೋಷಿಸಿದರೆ ಮಗುವಿನ ಜೀವನಾರಂಭವು ಆರೋಗ್ಯಕರವಾಗುತ್ತದೆ

ರುಚಿಕರವಾದ ಓವಲ್ಟಿನ್‌ನ ಎದುರಿಗೆ ಯಾವ ಆಹಾರವೂ ಸರಿಸಮಾನತೆಯುಳ್ಳದ್ದಿಲ್ಲದು ಆರೋಗ್ಯ, ಶಕ್ತಿ ಧಾತುಪುಷ್ಟಿಗೆ ಯಾವಾಗಲೂ ಅತ್ಯುತ್ತಮ ಪಾನೀಯವು

ರುಚಿಕರವಾದ ಓವಲ್ಟಿನ್ ಗೆ ಸರಿಯಾದುದಿಲ್ಲ ಸಸ್ಯಮಾಣದಿಂದ ತಯಾರಿಸಲ್ಪಡದ ಎಲ್ಲಾ ನಕಲಿ ಪಾನಿಯಗಳನ್ನು ತ್ಯಜಿಸಿರಿ

'ಓವಲ್ಟಿನ್' ಟೋನಿಕ್ ಆಹಾರ ಪಾನೀಯವು

OVALTINE

TONIC FOOD BEVERAGE

ಎಲ್ಲಾ ಕೆಮಿಸ್ಟರುಗಳಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ಏಜಂಟರು: ಜೇಮ್ಸ್ ರೈಟ್, ೧ ೬ ರಿಪಾನ್ಸ್ಟ್ರೀಟ್ ಕಲ್ಕತ್ತಾ ಮತ್ತು ಮುಂಬಯಿ ಮದ್ರಾಸ್ ರಂಗೂನುಗಳಲ್ಲಿ

ನಿಮ್ಮ ಓವಲ್ಟಿನ ಸೇವನೆಯ ಸಮಯದಲ್ಲಿ ಸುಲಭವಾಗಿ ಜೀರ್ಣವಾಗುವ ಓವಲ್ಟಿನ್ ಬಿಸ್ಕೆಟುಗಳನ್ನೂ ತಿನ್ನಿರಿ ಹಲ್ಲು ಮೂಡುವಾಗ ಅವುಗಳನ್ನು ಮಕ್ಕಳಿಗೂ ಕೊಡಿರಿ ಅವುಗಳು ಮಕ್ಕಳನ್ನು ಸಂತೋಷಿಸಿ ಅವರ ಹಲ್ಲುಗಳನ್ನು ಶಕ್ತಿವಂತವಾಗಿ ಮಾಡುತ್ತದೆ ಓವಲ್ಟಿನ್ ಬಿಸ್ಕೆಟುಗಳು ರುಚಿಕರ ಶುದ್ಧ ಮತ್ತು ಅತ್ಯುತ್ತಮ

OV/75

ಈಗ ತಾನೇ ಅಚ್ಚಾಗಿ ಬಿಕರಿಗೆ ಸಿದ್ಧವಾಗಿದೆ

ಕಾಮದ ಗುಟ್ಟು

ಸುಂದರ ಚಿತ್ರಗಳ ಸಹಿತ

ಲೇಖಕರು — ಆಯುರ್ವೇದ ವಿದ್ವಾನ್ ಗೋಪಾಲಕೃಷ್ಣ — ಪಂಡಿತ ತಾರಾನಾಥರವರ ಮುನ್ನುಡಿಯೊಡನೆ.

ದಾಂಪತ್ಯದ ಸೌಖ್ಯವನ್ನು ಅನುಭವಿಸಬೇಕಾದರೆ ಇದನ್ನು ಓದಲೇ ಬೇಕು ವಿವಾಹಿತರಿಗೂ, ಅವಿವಾಹಿತರಿಗೂ, ಗಂಡಸರಿಗೂ ಹೆಂಗಸರಿಗೂ ಅವಶ್ಯಕವಾಗಿ ಬೇಕಾಗಿರುವ ಪ್ರಶ್ನೆ ಮತ್ತು ಉತ್ತರಗಳ ಪುಸ್ತಕ ಬ್ರಹ್ಮಚಾರಿಗಳಿಗೂ ಉತ್ತಮ ಕೈ ದೀವಿಗೆ ಅಂತರಂಗದಲ್ಲಿ ಕೊರಗುತ್ತಿರುವ ಗುಪ್ತವ್ಯಾಧಿಗಳಿಗೆ ಶಾಸ್ತ್ರೀಯ ದೃಷ್ಟಿಗಳಿಂದ ಚಿಕಿತ್ಸೆ ಮಾಡುವ ಸುಲಭ ವೈದ್ಯ ಇಂಥಾ ಪುಸ್ತಕವನ್ನು ಇದುವರೆಗೂ ಯಾರೂ ಬರೆದೇ ಇಲ್ಲ

ಫಲಪಿಸ್ಥಿದ್ದರೂ ಬಹುಜನರಿಗೆ ಪ್ರಯೋಜನವಾಗಲೆಂದು ಬೆಲೆಯೊಂದೇ ೧॥ ಆಣೆ ಮಾತ್ರವೆ

ಅಂಚೆವೆಚ್ಚ ಪ್ರತ್ಯೇಕ

ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಶನು ದೊರೆಯುತ್ತದೆ

ಬೇಗನೇ ಬರೆದು ತರಿಸಿಕೊಳ್ಳಿರಿ!

ವಿ. ಜಿ. ಟಿ. ಜನರಲ್ ಏಜನ್ಸಿ, ಬಳೇ ಪೇಟೆ, ಬೆಂಗಳೂರು ಸಿಟಿ.

ಪತ್ರವ್ಯವಹಾರ.

[ಪತ್ರವ್ಯವಹಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ.]

ನಗರ ಸಭೆಗೆ ನನ್ನ ಧನ್ಯವಾದ.

"ಸ್ವದೇಶಾಭಿಮಾನಿ" ಸಂಪಾದಕ ಮಹಾಶಯರೇ,

ರಥಬೀದಿ ಮಂಗಳೂರು ಸ್ವದೇಶಿ ಸ್ಟೋರ್ಸಿನ ಬಳಿಯಿದ್ದ ಪೆಟ್ರೋಮೇಕ್ಸನ್ನು ಮುನಿಸಿಪಾಲಿಟಿಯವರು ತೆಗೆಸಿಬಿಡುವ ವಿಷಯವಾಗಿ ನಿಮ್ಮ ಕಳೆದ ಸಂಚಿಕೆಯಲ್ಲಿ ನಾನು ಬರೆದಿದ್ದೆನಷ್ಟೆ! ಈಗೊಂದು ಶುಭ ವಾರ್ತೆ ಬಂದಿದೆ ನನಗಂತೂ ಇದರಿಂದ ಅತ್ಯಾನಂದವಾಗಿದೆ ರಥಬೀದಿಯಲ್ಲಿ ಹೋಗಿ ಬರುವ ಸಾವಿರಾರು ಜನರಿಗೂ ಇದೊಂದು ಸಂತೋಷಕರ ಸಂಗತಿ ಅದೇನು ತಿಳಿದಿರುವುದೇ? ಆರ್ಚಿತ ಪೆಟ್ರೋಮೇಕ್ಸನ್ನು ರಥಬೀದಿಯ ಆ ಸ್ಥಳದಿಂದ ಮೊದಲು ನಿರ್ಧರಿಸಿದಂತೆ ಮುನಿಸಿಪಾಲಿಟಿಯವರು ತೆಗೆಯುವುದಿಲ್ಲ ನಗರ ಸಭೆಯ ಮಾನ್ಯ ಮಹನೀಯರೇ, ವಾರ್ಡಿನ ಕೌನ್ಸಿಲರೇ, ಅದಕ್ಕಾಗಿ ಯತ್ನಿಸಿದ ಮಹಾಶಯರೇ, ನಿಮ್ಮ ಉದಾರತೆಗಾಗಿ ಸಾರ್ವಜನಿಕರ ಕಡೆಯಿಂದ ನಿಮಗೆ ನನ್ನ ಧನ್ಯವಾದ

ಇತಿ,

ವೋಟರ.

ಬಾಲ್ಯ ವಿವಾಹಗಳು ನಡೆಯುತ್ತಿವೆ

ಅಯ್ಯಾ ಸ್ವದೇಶಾಭಿಮಾನಿ ಪತ್ರಿಕಾಕರ್ತರೇ

ಕಳೆದ ಬುಧವಾರ ದಿನ ಅತ್ತಾವರದ ಮೇಗಿನ ಮೊಗರಿನಲ್ಲಿ ಎಂಟು ವರ್ಷ ಪ್ರಾಯದ ಬಿಲ್ಲವರ ಹುಡುಗಿಗೆ ವಿವಾಹವಾಯಿತು ಅತ್ತಾವರ ಬಾಬುಗುಡ್ಡೆಯಲ್ಲೂ ಬಿಲ್ಲವರ ಒಂದು ಮನೆಯಲ್ಲಿ ಇನ್ನೊಂದು ಹೆಣ್ಣು ಮಗುವಿಗೆ ವಿವಾಹವಾಗಲಿರುವುದು ಸುರತ್ಕಲ್‌ನಲ್ಲಿಯು ಜಾಣದ ದೇವಸ್ಥಾನದ ಬಳಿ ಬಿಲ್ಲವರ ಮೂರು ಮಂದಿ ಸಣ್ಣ ಸಣ್ಣ ಬಾಲಿಕೆಯರಿಗೆ ಬೇಗನೇ ವಿವಾಹವಾಗಲಿರುವುದು ಬಿಲ್ಲವ ಬಾಂಧವರೇ ಇದೆಂಥಹ ಮೌಢ್ಯ ಇದಿ ಬಂದಿದಾದೇಶವು ಬಾಲ್ಯ ವಿವಾಹ ಪಿಶಾಚಿಯನ್ನು ಹೊರಗಟ್ಟಲಿರುವಾಗ ನೀವು ಪತ್ತ ಅದನ್ನು ಇನ್ನೂ ಇನ್ನೂ ಆಮಂತ್ರಿಸುತ್ತಿರುವಿರಿ" ಕಳೆದ ಒಂದೆರಡು ತಿಂಗಳಲ್ಲಿ ನಮ್ಮ ಕೈಕೆ ಇಂತಹ ಬಾಲ್ಯ ವಿವಾಹಗಳು ಕೇಳಿಸುತ್ತವಲ್ಲ! ಶಾರದಾ ಕಾನೂನು ಮೂಲೆ ಸಾಲಿದರುತೇ"

ಇಂತಿ

ಬಾಲ್ಯ ವಿವಾಹ ವಿರೋಧಿ

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

I. P. No. 9 1932

ಗುರುಪುರ ಮಾಗಣೆಯ ಕೃಷ್ಣ, ಕೊಟ್ಟಾರಿ ಕೃಷ್ಣ ಮಗ, ಪುತ್ತೂರು ತಾಲೂಕು ಪಡಿಕಲ್ಲು ವಾಸ — ಅರ್ಜಿದಾರ (ದೇಣೆದಾರ)

ಹನುಮಂತ್ ವಿಟ್ಠಲ್ ಕಿಂಚಿಕಾರ್ ವಗೈರೆ ೫ ಜನರು— ಎದ್ರಿರ (ಲೇಣೆದಾರರು)

ಪ್ರೊವಿನ್ಶಿಯಲ್ ಇನ್ಸಾಲ್ವನ್ಸಿ ಆಕ್ಟಿನ 19(2)ನೇ ಕಲಂ ಪ್ರಕಾರ ಈ ಮೂಲಕ ನೋಟೀಸು ಕೊಡುವುದೇನೆಂದರೆ — ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಈ ಕೋರ್ಟಿನ ೯/೩೨ನೇ ಅರ್ಜಿ ಕೊಟ್ಟಿರುತ್ತಾನೆ ವಿಕ್ತ ಎದುರಾಳು ಆಕ್ಷೇಪಿಸುವ ಲೇಣೆದಾರರು ಸ್ವತಃ ಅಥವಾ ವಕೀಲರ ಮುಖಾಂತರವಾಗಲೀ ಈ ಜವಾಬು ತಾರೀಕು 11ನೇ ಫೆಬ್ರವರಿ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು

ಪುತ್ತೂರು, ತಾ. 1 3-32 } C. Kunhi Kanna Menon, M. A., B. L., ಡಿಸ್ಟ್ರಿಕ್ಟ್ ಮುನ್ಸಿಫ್

ಕಲಿಯು ವಿಕೆಗೂ ಹಿರಿಯರಿಗೂ ಮನೋರಂಜಕವಾದ

ಪದ್ಯ ಪುಸ್ತಕ!

ಕನ್ನಡ ಪದ್ಯರತ್ನಾವಳಿ (ಪ್ರಥಮ ಭಾಗ)

(ಶ್ರೀ ಜಿ. ಎಸ್. ಎಲ್ಲಪ್ಪ ರಚಿತ)

ಕ್ರಯ ೦—೩—೬

ಮಕ್ಕಳ ಮೆಚ್ಚುವ ಕಥೆಗಳನ್ನು ನೀತಿಪಾಠಗಳನ್ನು ಲಲಿತವಾದ ಭಾಷೆಯಲ್ಲಿ ಸರಳವಾದ ಶೈಲಿಯಲ್ಲಿ ಒಳಗೊಂಡ ಕವಿತಾಗ್ರಂಥ!

ಮದರಾಸು ಮುಂಬಾಯಿ ಸರಕಾರದವರು ಇದನ್ನು ಪಠ್ಯ ಪುಸ್ತಕವಾಗಿ ಮಂಜೂರು ಮಾಡಿದ್ದಾರೆ

ಹೆಚ್ಚಿನ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಧಾರಾಳ ಕಮಿಶನ್ ಕೊಡಲಾಗುವುದು.

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ—

ಹರಿಹರ ಛಾಪಖಾನೆ, ಪುತ್ತೂರು. (ದ. ಕ.)

ಶೆಣೈ ಬ್ರದರ್ಸ್ ಮತ್ತು ಕಂಪೆನಿ, ಮಂಗಳೂರು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶಾಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು, ಸರ್ವಾಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂದೀವ ಈರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದನಂಜನ್ನು ಹೊರಗೆ ಹಾಕಿ ಪ್ರಸವದಿಂದ ದುಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥೆ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2 0—0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆರೋಗ್ಯರಹಸ್ಯ" ಎಂಬ ಪುಸ್ತಕವನ್ನು ತರಿಸಿಕೊಳ್ಳಿ

ಯಮ್. ಪಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

ಅಪೇಕ್ಷಿಸುವ ಬಹುಮಾನಗಳು.

ಹೆಂಗಸರಿಗೆ ಹಾಕುವ ಬೆಳೆ ಒಣ್ಣದ ಕಾಶೀ ಸಿಲ್ಕುಗಳು 6 ಮೊಳ ಉದ್ದ 2½ ಮೊಳ ಅಗಲ ರೂ. 5 ಲಾಗಾಯಿತು ರೂ 25 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಕೆ ಖಣಗಳು, ಮಡಿಗಳು, ಎಲವಸ್ತ್ರ, ಜಮಖಾನೆ, ಪೇಟ, ಇತ್ಯಾದಿ ಉತ್ತಮ ಶಾಲು, ಖದ್ದರ್ ಮಡಿ, ಧೋವತಿ, ಕಸ್ತೂರಿ, ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು, ಜರಿಟೋಪ್ಪಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯದರದಿಂದ ಕಳುಹಿಸಲ್ಪಡುವವು. ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು

ವಿಳಾಸ —

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮಂಗಾರ ಘಾಟ್, ಕಾಶೀ, ಬನಾರಸ್ ಸಿಟಿ

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವ್ಯವಹಾರಗಳೂ ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್.

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

BRANCHES **-Karkal, Kasargod, Cochin, Udipi, Gangolli Coondapur, Bombay, Puttur, Calicut & Alleppey**

ಬ್ರಾಂಚುಗಳು:-

ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲಪೆ

Authorised and fully paid up Capital Rs. 300,000 - 0 - 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕಟ್ಟ ಮೂಲಧನವು ರೂ 300,000 0 — 0
Reserve and other sinking Funds Rs 526,000 - 0 - 0	ರಿಜರ್ವ್ ನಿಧಿ ಮತ್ತು ಇತರ ಫಂಡುಗಳು ರೂ 526,000 — 0 — 0
Amount invested on G P Notes Rs 818,092 - 12 - 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ [illegible] 12 — 0
Rates of interest on fixed deposits at Head Office and Branches are 6% for 2 Years 5½%, 1 Year	ಖಾಯಂ ಠೇವಣಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ—ಎರಡು ವರುಷಗಳಿಗೆ ನೂರಕ್ಕೆ 6 [illegible] ವರುಷಕ್ಕೆ ನೂರಕ್ಕೆ 5½.

Current Account Deposits received and interest allowed on daily balance of Rs 50 and above that on multiples of Rs 10/ @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/ during a period of 6 months ending either 30th June or 31st December in any year.

Except by special arrangement, no interest is allowed on sums exceeding Rs 10,000/ in the case of Head Office and Cochin Branch and on sums not exceeding Rs 15,000/ in the case of Bombay Branch and on sums exceeding Rs [illegible]000 in the case of other Branches.

For further particulars please apply to —

Office of the Bank,
Mangalore 1[illegible]—4—1932

K. Venkat Rao,
Secretary & Treasurer

The Pangal Nayak Bank, Ltd.

Head Office. Udipi, *Established 1920* **Branch Office Mangalore**

Authorised Capital Rs. 2 00,000-	Paid up Capital Rs. 1,75 000-
Issued Capital Rs 1,75,000-	Reserve and other Funds Rs 1,60,000

1 **Receives Fixed Deposits at the following favourable rates :-**

For 3 months at 5% — For 12 15, 18 or 21 months at 6%
„ 6 or 9 months at 5½%. — „ 24 months at 6%

Interest being payable every 3 months

ಖಾಯಂ ಠೇವಣಾತಿಗಳು ಪ್ರತಿ 3 ತಿಂಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು

3 ತಿಂಗಳಿಗೆ ನೂ ಕೆ 5%, — 12, 15, 18 ಯಾ 21 ತಿಂಗಳಿಗೆ ನೂ ಕೆ 6
6 ಯಾ 9 ತಿಂಗಳಿಗೆ ನೂ ಕೆ 5½%, — 24 ತಿಂಗಳಿಗೆ ನೂ ಕೆ 6½.

2. **Current Accounts** opened free of charge and interest allowed **Cumulative, Savings Bank and Short Notice Deposits** received at favourable rates of interest

3 The Bank transacts every description of Banking business

4 For full particulars and for copies of the amended **Rules of Business** please apply to the **Secretary** at the Head Office. at Udipi or to the **Agent** Mangalore Branch.

Office of the Bank,
Udipi, 1 - 2 - '32

P. Laxman Nayak,
Secretary

ಇಪ್ಪತ್ತು ವಯಸ್ಸಿನಲ್ಲಿ ದುಡುಕು
ಮೂವತ್ತ ರಲ್ಲಿ ಮುಚ್ಚಟೆ
ನಲವತ್ತಾ ರಾಗ ನರಳುವದು
ಐವತ್ತು ಆದರೆ ಆಲಸ್ಯ
ಅರುವತ್ತು ತೋರಿದಾಗ ಅರಳು ಮರಳು
ಎಪ್ಪತ್ತು ವಯಸ್ಸಿಗೆ ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ ವೈದ್ಯವಿದ್ಯ ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1/94 ಚೀನಾ ಬಜಾರ್, ಮದ್ರಾಸ್.

ಮದನಮಂಜರಿ ಮಾತ್ರೆಗಳ ಏಜಂಟರು.—ವಿ ಜಿ ಚಂದರನ್ನಾ, ಮಿಶನ್ ಬೀದಿ, ಮಂಗಳೂರು

ಸ್ವಧರ್ಮೇ ನಿಧನಂ ಶ್ರೇಯಃ

(ಲೇಖಕರು:_ ಶ್ರೀ ಕೃಷ್ಣಾನಂದಜಿಯವರು)
ಅನುವಾದಕ:_ಬಿ. ಲಕ್ಷ್ಮಣದೇವ ವಿದ್ಯಾರ್ಥಿ, ಅ. ಸ. ಮಂಗಳೂರು.
(ಕಳೆದ ಸಂಚಿಕೆಯಿಂದ ಮುಂದುವರಿದುದು)

ಸ್ವಭಾವಜಮ್ ಶಬ್ದವು ಬಹಳ ಮಹತ್ವದ್ದಾಗಿರುತ್ತದೆ. ಇದರಿಂದ ಶ್ರೀ. ಕೃಷ್ಣನು ಗುಣಕರ್ಮಗಳ ಮೂಲಕ ವರ್ಣವ್ಯವಸ್ಥೆಯನ್ನು ಮನ್ನಿಸಿರುವನಲ್ಲದೆ ಜಾತಿವ್ಯವಸ್ಥೆಯನ್ನು ಮನ್ನಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಎಲ್ಲಿಯಾದರೂ ಅವನು ಜನ್ಮ ಅಥವಾ ಜಾತಿಯಿಂದ ವರ್ಣವ್ಯವಸ್ಥೆಯನ್ನು (ಬ್ರಾಹ್ಮಣಕ್ಷತ್ರಿಯಾದಿ ಜಾತಿಗಳನ್ನು) ಮನ್ನಿಸಿದ್ದರೆ 'ಸ್ವಭಾವಜಮ್' ಎಂಬ ಶಬ್ದವನ್ನು ಎಂದೂ ಉಪಯೋಗಿಸುತ್ತಿರಲಿಲ್ಲ. ಹೀಗಿದ್ದರೂ ಹೆಚ್ಚಿನ ದುರಾಗ್ರಹಿ ಪಂಡಿತರು ಜನ್ಮ ಮತ್ತು ಜಾತಿಯಿಂದ ವರ್ಣವ್ಯವಸ್ಥೆಯನ್ನು ಮನ್ನಿಸುವ ದುಸ್ಸಾಹಸಮಾಡುತ್ತಿದ್ದಾರೆ.

ತನ್ನ ತನ್ನ ಕರ್ತವ್ಯ ಕರ್ಮಗಳನ್ನು ಮಾಡುವುದರಿಂದ ಮನುಷ್ಯನು ಸಿದ್ಧಿ (ಸುಖ ಮತ್ತು ಶಾಂತಿ) ಯನ್ನು ಅನುಭವಿಸುತ್ತಾನೆ. ಸ್ವಕರ್ಮ (ತನ್ನ ಕರ್ತವ್ಯ ಕರ್ಮ) ದಲ್ಲಿ ತೊಡಗುವುದರಿಂದ ಮನುಷ್ಯನು ಎಂತಹ ಸ್ಥಿತಿಯನ್ನು ಹೊಂದುತ್ತಾನೆಂಬುದನ್ನು ಶ್ರೀ ಕೃಷ್ಣನು ಹೇಳಿರುವನು. ಯಾವ ಈಶ್ವರನ ಮೂಲಕ ಈ ಎಲ್ಲಾ ಸೃಷ್ಟಿಯು ವಿಸ್ತಾರವಾಗಿರುತ್ತದೋ ಮತ್ತು ಯಾರ ಮೂಲಕ ಎಲ್ಲಾ (ಪ್ರಾಣಿಮಾತ್ರ) ವುಗಳಿಗೆ ಕರ್ಮಗಳಲ್ಲಿ ಪ್ರವೃತ್ತಿಯುಂಟಾಗುವುದೋ ಅವನನ್ನು ತನ್ನ ಕರ್ತವ್ಯ ಕರ್ಮಮಾಡುವುದರಿಂದ ಅವನ ಪೂಜೆಮಾಡಿ ಮನುಷ್ಯನು ಸ್ಥಿತಿ (ಶಾಂತಿ ಮತ್ತು ಆತ್ಮೋನ್ನತಿ) ಯನ್ನು ಮಾಡಿಕೊಳ್ಳುತ್ತಾನೆ (೧೮—೪೬)

೧೮ - ೪೬ನೇ ಶ್ಲೋಕದಲ್ಲಿ ಶ್ರೀಕೃಷ್ಣನು ಸ್ಪಷ್ಟವಾಗಿ ಹೇಳಿರುವನೇನಂದರೆ - ತನ್ನ ಕರ್ತವ್ಯ ಕರ್ಮಮಾಡುವುದೂ ಈಶ್ವರನ ಒಂದು ರೀತಿಯ ಪೂಜೆಯಾಗಿರುತ್ತದೆ. ಇನ್ನೊಂದು ರೀತಿಯಿಂದ ಹೇಳುವುದಾದರೆ ಯಾರು ತಮ್ಮ ಕರ್ತವ್ಯ ಕರ್ಮಗಳನ್ನು ಪೂರ್ಣವಾಗಿ ಮಾಡುವರೋ ಅವರು ಈಶ್ವರನ ಪೂಜೆಮಾಡುತ್ತಿರುತ್ತಾರೆ. ಪರಂತು ಲಕ್ಷ್ಯದಲ್ಲಿಡತಕ್ಕ ಸಂಗತಿ ಏನಿರುವುದೆಂದರೆ ಕರ್ತವ್ಯ ಕರ್ಮಗಳನ್ನು ಮಾಡುತ್ತಿರುವವನನ್ನು ಈಶ್ವರ ಪೂಜಕನೆಂದು ತಿಳಿಯಬೇಕೋ ಅಥವಾ ಆ ಕರ್ತವ್ಯ ಕರ್ಮಗಳನ್ನು ಮಾಡುವವನನ್ನೋ? ನಮ್ಮ ದೇಶದಲ್ಲಿ ತಮ್ಮ ಎಲ್ಲಾ ಕರ್ತವ್ಯಗಳನ್ನು ಮಾಡುವ ಎಷ್ಟು ಜನರು ಇರುವರೆಂಬುದನ್ನು ನಾವು ಸ್ವತಃ ವಿಚಾರಮಾಡಬೇಕು. ನಾವು ಭಾರತವಾಸಿಗಳು ಆಪತ್ತಿನಲ್ಲಿ ಸಿಲುಕಿದ್ದೇವೆ ಯಾಕೆ? ಯಾಕಂದರೆ ನೂರರಲ್ಲಿ ೯೯ ಮಂದಿ ಜನರು ತಮ್ಮ ತಮ್ಮ ಮುಖ್ಯ ಕರ್ತವ್ಯಗಳಿಂದ ವಿಮುಖರಾಗಿದ್ದಾರೆ.

ಈ ಸ್ವಧರ್ಮ ಮತ್ತು ಪರಧರ್ಮದ ನಿರ್ಣಯಮಾಡುವುದಕ್ಕೆ ಗೀತೆಯಲ್ಲಿ ಸ್ವಧರ್ಮ ಎಂಬುದರ ಅರ್ಥವನ್ನು ಸ್ಪಷ್ಟವಾಗಿ ಹೀಗೆ ಬರೆದಿದ್ದಾರೆ 'ಸ್ವಾಭಾವಿಕ ಕರ್ತವ್ಯ ಕರ್ಮ' ಅಂದರೆ ಪರಧರ್ಮದ ಅರ್ಥವು ಸ್ವಕರ್ತವ್ಯಗಳ ವಿರೋಧವಾಗಿರುವ ಕರ್ಮಗಳೆಂದು ಅರ್ಥವಾಗುತ್ತದೆ. ಯಾವುದು ತನ್ನ ಕರ್ತವ್ಯ ಕರ್ಮವಾಗಿರುವುದಿಲ್ಲವೋ ಅದು ಪರಧರ್ಮವಾಗಿರುತ್ತದೆ. 'ಗೀತೆಯು ಸ್ವಧರ್ಮದ ವ್ಯಾಖ್ಯೆಯನ್ನು ಮಾಡುವಾಗ ಅದು ಪ್ರಕೃತಿಯ ಮೇಲೆ ವಿಶೇಷ ಧ್ಯಾನವನ್ನಿಟ್ಟು ಕರ್ತವ್ಯ ಕರ್ಮಗಳನ್ನೇ ಮಾಡಬೇಕೆಂದು ಆದೇಶವನ್ನಿತ್ತಿರುವುದಲ್ಲದೆ ಅಕರ್ತವ್ಯ ಕರ್ಮಗಳನ್ನು ಮಾಡಬೇಕೆಂಬ ಅಭಿಪ್ರಾಯವು ಎಳ್ಳಷ್ಟೂ ಅದರಲ್ಲಿರುವುದಿಲ್ಲ. ಒಬ್ಬ ಮನುಷ್ಯನ ಸ್ವಾಭಾವಿಕ ಪ್ರವೃತ್ತಿಯು ಧನಾರ್ಜನೆಮಾಡುವುದರಲ್ಲಿದ್ದರೂ ಕಳ್ಳತನಮಾಡುವುದು ಕನ್ನಹಾಕುವುದು ಇತ್ಯಾದಿ ಅವನ (ಸ್ವಧರ್ಮ ಸ್ವಾಭಾವಿಕ ಕರ್ತವ್ಯ ಕರ್ಮ) ವಾಗಲಾರದು. ಉಚಿತ ಮಾರ್ಗಗಳಿಂದ ಅವನು ಧನಾರ್ಜನೆಮಾಡಬೇಕು. ಒಬ್ಬನೊಬ್ಬ ತರುಣನ ಸ್ವಭಾವಿಕ ಪ್ರವೃತ್ತಿಯು ಜಗಳ ಹೊಡೆದಾಟ ಮಾಡುವುದರಲ್ಲಿದ್ದರೆ, ಪೋಲೀಸ್ ಖಾತೆ, ಸೈನ್ಯಖಾತೆಯಲ್ಲಿ ಸೇರುವುದು ಅವನ ಧರ್ಮ (ಕರ್ತವ್ಯ) ವಾಗಿರುತ್ತದಲ್ಲದೆ ಬಡ ಜನರು ಸಾಧುಗಳು ಮೊದಲಾದವರನ್ನು ಪೀಡಿಸುತ್ತಿರುವುದಲ್ಲ.

ಎಲ್ಲಿಯ ವರೆಗೆ ನಾವು ಬಾಲ್ಯವಿವಾಹದ ದುಷ್ಪರಿಣಾಮಗಳನ್ನು ತಿಳಿದಿರಲಿಲ್ಲವೋ ಅಲ್ಲಿಯವರೆಗೆ ಬಾಲ್ಯವಿವಾಹವನ್ನು ಧರ್ಮವೆಂದು ತಿಳಿಯುವುದರಲ್ಲಿ ಅನುಚಿತತೆ ಇದ್ದಿರಲಿಲ್ಲ. ಆದರೆ ಯಾವಾಗ ನಾವು ಬಾಲ್ಯವಿವಾಹವನ್ನು ಮಾಡುವುದು ವೇದಶಾಸ್ತ್ರ ಮತ್ತು ಪ್ರಾಚೀನಧರ್ಮಗ್ರಂಥಗಳಿಗೆ ವಿರೋಧವಾಗಿರುವುದೆಂದು ತಿಳಿಯುತ್ತೇವೋ ಆ ಪದ್ಧತಿಯು ವ್ಯಕ್ತಿ ಹಾಗೂ ಸಮಾಜಕ್ಕೆ ಹಾನಿಯನ್ನುಂಟುಮಾಡುವುದೆಂದು ತಿಳಿಯುತ್ತೇವೋ ಆಗ ಬಾಲ್ಯವಿವಾಹದ ಸಮರ್ಥನೆ ಮಾಡುತ್ತಿರುವುದು ಅನುಚಿತವೂ ಅಧರ್ಮ (ಅಕರ್ತವ್ಯ)ವೂ ಆಗಿರುತ್ತದೆ. ಎಲ್ಲಿವರೆಗೆ ನಾವು ಸ್ವರಾಜ್ಯದ ತಿಳುವಳಿಕೆ ಇಲ್ಲದವರಾಗಿದ್ದೇವೋ ಅಲ್ಲಿಯವರೆಗೆ ನಾವು ಅದರ ಸಲುವಾಗಿ ಪ್ರಯತ್ನಮಾಡದಿರುವುದು ಅನುಚಿತವಾಗಿರಲಿಲ್ಲ. ಆದರೆ ಯಾವಾಗ ಸಾರ್ವಜನಿಕ ಸುಖದ ಮೂಲವು ಸ್ವರಾಜ್ಯದಲ್ಲಿರುವುದೆಂದು ಪೂರ್ಣವಾಗಿ ನಮಗೆ ಗೊತ್ತಾಗುವುದೋ ಮತ್ತು ಸ್ವರಾಜ್ಯವು ತಮ್ಮ ಜನ್ಮಸಿದ್ಧ ಹಕ್ಕೆಂದು ತಿಳಿಯುತ್ತೇವೆಯೋ ಆಗ ಸ್ವಧರ್ಮಾವಲಂಬಿಗಳಾದ ನಾವು ಏನು ಮಾಡಬೇಕು? ನಾವು ನಮ್ಮ ೬ ಕೋಟಿ ಬಾಂಧವರ (ಅಸ್ಪೃಶ್ಯರ) ವಿಷಯದಲ್ಲಿ ಯಾವ ನೀಚ ಮತ್ತು ಅನ್ಯಾಯಯುಕ್ತ ವ್ಯವಹಾರವನ್ನು ಇಡುತ್ತ ಬಂದಿರುವೆವೋ, ಜಾತೀಯ ಜೀವನದಲ್ಲಿ ಅಂತಹ ವ್ಯವಹಾರದ ಮೂಲಕ ಯಾವ ವಿಷಮಯ ಪರಿಣಾಮವುಂಟಾಗುತ್ತದೆ ಎಂಬುದನ್ನು ತಿಳಿದು ನಾವು ಒಟ್ಟಾಗಿ ಅಸ್ಪೃಶ್ಯೋದ್ಧಾರಕ್ಕಾಗಿ ಸಂಪೂರ್ಣ ರೀತಿಯಿಂದ ಕಂಕಣಬದ್ಧರಾಗಿ ಕೆಲಸಮಾಡುವುದು ನಮ್ಮ ಸ್ವಧರ್ಮವೆಂದು ತಿಳಿದಿರಬೇಕು.

ಒಬ್ಬ ಮನುಷ್ಯನ ಸ್ವಧರ್ಮದ (ಕರ್ತವ್ಯದ) ನಿರ್ಣಯಮಾಡುವಾಗ ಅವನ ಸ್ವಭಾವಿಕ ಪ್ರವೃತ್ತಿಯು ಎಂತಹದ್ದಿರುವುದೆಂದು ತಿಳಿಯುವುದಾವಶ್ಯಕ. ಇತ್ತೀಚೆಗೆ ಮಕ್ಕಳ ತಾಯಿತಂದೆಗಳು ಅವರ ಸ್ವಭಾವಿಕ ಪ್ರವೃತ್ತಿಯ ಕಡೆಗೆ ಎಳ್ಳಷ್ಟೂ ಲಕ್ಷ್ಯವನ್ನಿಡದೆ ಅವರನ್ನು ಯಾವುದೊಂದು ವ್ಯವಸಾಯ ಅಥವಾ ನೌಕರಿಯಲ್ಲಿ ಸೇರಿಸುವುದರ ಪರಿಣಾಮವು ಈಗ ಏನಾಗಿರುವುದೆಂದರೆ — ಅವರ ಉನ್ನತಿಯೂ ಆಗುವುದಿಲ್ಲ, ಸುಖವನ್ನೂ ಅನುಭವಿಸುವುದಿಲ್ಲ. ಆದರೆ ಯಾವ ತರುಣನು ತನ್ನ ಸ್ವಭಾವಿಕ ಪ್ರವೃತ್ತಿಗನುಸರಿಸಿ ನೌಕರಿ ಅಥವಾ ವ್ಯವಸಾಯ ಮಾಡುತ್ತಿರುತ್ತಾನೋ ಅವನು ಅದರಲ್ಲಿ ಉನ್ನತಿಯನ್ನು ಪಡೆದು ಪ್ರತಿಷ್ಠೆಯನ್ನು ಸಂಪಾದಿಸುತ್ತಾನೆ. ಯಾವಳೊಬ್ಬ ವಿಧವೆಗೆ ಪುನರ್ವಿವಾಹ ಮಾಡುವುದು ಅಥವಾ ಮಾಡದಿರುವುದು ಅವಳ ಸ್ವಧರ್ಮ (ಕರ್ತವ್ಯ) ವಿರುವುದೇ ಇಲ್ಲವೇ ಎಂದು ತಿಳಿಯುವುದರ ಮೊದಲು ಅವಳ ಸ್ವಭಾವಿಕ ಪ್ರವೃತ್ತಿಯ ಕಡೆಗೆ ವಿಶೇಷ ಲಕ್ಷ್ಯವನ್ನಿಡುವದಾವಶ್ಯಕವಾಗಿದೆ. ಯಾವ ವಿಧವೆಯು ತನ್ನ ಸತೀತ್ವಧರ್ಮವನ್ನು ಕಾಪಾಡಲಿಕ್ಕೆ ಅಸಮರ್ಥಳಾಗಿದ್ದಾಳೆಯೋ ಅವಳ ವಿವಾಹವನ್ನು ಮಾಡುವುದು ಉತ್ತಮವೂ ಶ್ರೇಯಸ್ಕರವೂ ಆಗಿರುತ್ತದೆ. ಆದರೆ ಯಾವ ವಿಧವೆಯು ಆಜನ್ಮ ಬ್ರಹ್ಮಚಾರಿಣಿಯಾಗಿರುತ್ತೇನೆಂದು ಪ್ರಬಲ ಇಚ್ಛೆಯುಳ್ಳವಳಾಗಿದ್ದಾಳೆಯೋ ಅವಳ ವಿವಾಹವನ್ನು ಮಾಡುವುದು ಎಂದಿಗೂ ಧರ್ಮ (ಕರ್ತವ್ಯ) ವಾಗಿರುವುದಿಲ್ಲ.

ಸಮಾಜಸುಧಾರಣೆ ಅಥವಾ ಜ್ಞಾನ ವಿಜ್ಞಾನಗಳ ಪ್ರಚಾರಮಾಡುವುದರಲ್ಲಿ ತನ್ನ ಎಲ್ಲಾ ಜೀವನವನ್ನು ಒಬ್ಬ ವಿದ್ವಾಂಸನು ಸಮರ್ಪಿಸುವನಾದರೆ ಅವನ ಮಗನು ಧನಾರ್ಜನೆ ಮಾಡುವುದನ್ನೇ ತನ್ನ ಧ್ಯೇಯವೆಂಬುದಾಗಿ ತಿಳಿಯುವುದನ್ನು ನಾವು ನೋಡುತ್ತಿರುತ್ತೇವೆ. ತಂದೆಯು ನೌಕರಿ ಮಾಡಿ ಜೀವಿಸುತ್ತಿರುವನಾದರೆ ಅವನ ಮಗನು ವಾಣಿಜ್ಯದಲ್ಲಿ ತೊಡಗಿರುವುದನ್ನೂ ತಂದೆಯು ವ್ಯಾಪಾರ ವ್ಯವಹಾರಗಳಲ್ಲಿರುವನಾದರೆ ಮಗನು ನೌಕರಿಯ ಕಡೆಗೆ ಓಡುತ್ತಿರುವುದನ್ನೂ 'ತಂದೆಯು ಸಂಯಮಿಯೂ ಶೂರನೂ ಆಗಿದ್ದರೆ ಪುತ್ರನು ವಿಷಯಲಂಪಟಿಯೂ ವಿಲಾಸಪ್ರಿಯನೂ ಆಗಿರುವುದನ್ನು ನೋಡಬಹುದು. ತಂದೆಯು ವಕೀಲನಾಗಿದ್ದರೆ ಮಗನು ಉಪಾಧ್ಯಾಯನಾಗುತ್ತಾನೆ. ಹೀಗೆ ಲಕ್ಷಾಂತರ ಕುಟುಂಬಗಳಲ್ಲಿ ಪುತ್ರನ ಗುಣಕರ್ಮಗಳು ಪಿತನ ಗುಣಕರ್ಮಗಳಿಂದ ಭಿನ್ನವಾಗಿರುತ್ತವೆ. ಯಾವಾಗ ಹೀಗೆ ಪಿತಾಪುತ್ರರ ಸ್ವಭಾವಿಕ ಪ್ರವೃತ್ತಿಗಳಲ್ಲಿ ಇಷ್ಟರಮಟ್ಟಿನ ಅಂತರವಿರುವುದಾದರೆ ದುರಾಗ್ರಹಿ ಪಂಡಿತರು ಈ ವಿಷಯದಲ್ಲಿ ಹೇಳುವಂತಹ ಮಾತು ಎಂದೆಂದಿಗೂ ನ್ಯಾಯಸಂಗತವಾಗಿರುವುದಿಲ್ಲ. ವಾಸ್ತವದಲ್ಲಿ ಪ್ರತಿಯೊಬ್ಬ ಯುವಕನೂ ತನಗೆ ಅನುಕೂಲ ತೋರಿದಂತಹ ಸಂಪ್ರದಾಯವನ್ನಿಟ್ಟುಕೊಳ್ಳಲು ಸ್ವತಂತ್ರನಾಗಿರುತ್ತಾನೆ. ಅವನ ಈ ಸ್ವಾತಂತ್ರ್ಯವನ್ನು ಯಾರಿಗೂ ಅಲ್ಲಗಳೆಯಲಾಗುವುದಿಲ್ಲ. ಯಾವಾಗ ಪಿತಾಪುತ್ರರ ಸ್ವಭಾವಿಕ ಪ್ರವೃತ್ತಿಯಲ್ಲಿ ಭಿನ್ನತೆಯುಂಟಾಗುವುದೋ ಆಗ ತಂದೆಯ ವರ್ಣದಲ್ಲಿಯೇ ಮಗನನ್ನು ಸೇರಿಸುವುದು ನ್ಯಾಯಸಮ್ಮತವಾಗುವುದಿಲ್ಲ, ಇಬ್ಬರನ್ನೂ ಒಂದೇ ಪದವಿಯಲ್ಲಿರಿಸುವುದು ಉಚಿತವಾಗಿರುವುದಿಲ್ಲ. ಉದಾಹರಣಾರ್ಥವಾಗಿ ತಂದೆಯು ವಕೀಲನೂ ಮಗನು ಅಧ್ಯಾಪಕನೂ ಆಗಿದ್ದರೆ ಗೀತೆಯ ೧೮ - ೪೩, ೪೪, ೪೫ನೇ ಶ್ಲೋಕಗಳ ಪ್ರಕಾರ ತಂದೆಯು ಕ್ಷತ್ರಿಯನೂ ಮಗನು ಬ್ರಾಹ್ಮಣನೂ ಆಗುತ್ತಾನೆ. ಎರಡನೆ ಉದಾಹರಣೆ ಯಾವುದೆಂದರೆ — ಒಬ್ಬ ತಂದೆಯು ಅಧ್ಯಾಪಕನಾಗಿದ್ದು ಅವನ ಮಗನು ವ್ಯಾಪಾರಿಯಾಗಿದ್ದರೆ ತಂದೆಯು ಬ್ರಾಹ್ಮಣನೂ ಮಗನು ವೈಶ್ಯನೂ ಆಗುತ್ತಾನೆ. ಒಬ್ಬನ ಗುಣ ಕರ್ಮಗಳನ್ನು ನೋಡಿ ಅವನ ವರ್ಣವನ್ನು ನಿಶ್ಚಯಿಸುವುದು ಉಚಿತವಾಗಿರುತ್ತದೆ. ಒಬ್ಬ ಡಾಕ್ಟರನ ಮಗನು ಡಾಕ್ಟರಿ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಆ ಮಗನನ್ನು ಡಾಕ್ಟರನೆಂದು ಕರೆಯುವುದು ಅನ್ಯಾಯವಾಗುತ್ತದೆ. ಹಾಗೆಯೇ ಯಾವ ಮನುಷ್ಯನಲ್ಲಿ ಬ್ರಾಹ್ಮಣ ಗುಣ ಕರ್ಮಗಳು ಇರುವುದಿಲ್ಲವೋ ಅವನನ್ನು ಬ್ರಾಹ್ಮಣನೆಂದು ಕರೆಯುವುದು ಅನುಚಿತವಾಗಿದೆ. ಯಾವಾಗ ಪುತ್ರನ ಗುಣಕರ್ಮಗಳು (ಸ್ವಭಾವವು) ತಂದೆಯ ಗುಣಕರ್ಮಗಳಿಂದ ಭಿನ್ನವಾಗಿರುತ್ತವೆಯೋ ಆಗ ಪುತ್ರನ ಕರ್ತವ್ಯಗಳೂ ಭಿನ್ನವಾಗುವುವು.

ಸ್ವಧರ್ಮೇ ನಿಧನಂ ಶ್ರೇಯಃ

ತನ್ನ ಕರ್ತವ್ಯಗಳಲ್ಲಿ ನಿರಂತರ ನಿರತನಾಗಿರುವುದು ಅಥವಾ ಅವುಗಳನ್ನು ಮಾಡುತ್ತಿರುವಾಗಲೇ ಪ್ರಾಣವನ್ನರ್ಪಿಸುವುದು ಉತ್ತಮವಾಗಿರುತ್ತದೆ. ಪರಂತು ತನ್ನ ಕರ್ತವ್ಯಗಳನ್ನು ಮಾಡದಿರುವುದರಿಂದ ಎಂದೆಂದಿಗೂ ಸುಖಶಾಂತಿಗಳು ಸಿಗುವುದಿಲ್ಲ. ಇಲ್ಲಿ ಕರ್ತವ್ಯಾಕರ್ತವ್ಯಗಳ ವಿಸ್ತೃತವ್ಯಾಖ್ಯೆ ಮಾಡುವ ಅಗತ್ಯವಿರುವುದಿಲ್ಲ. ತನ್ನ ಕರ್ತವ್ಯ (ಜ್ಞಾನಾರ್ಜನೆ, ಮಾತಾಪಿತೃರ ಸೇವೆ, ಕುಟುಂಬಪಾಲನೆ, ಧನಾರ್ಜನ ಸ್ವಾಸ್ಥ್ಯಗಳನ್ನು ರಕ್ಷಿಸುವುದು, ಪುತ್ರ ಪುತ್ರಿಯರಿಗೆ ಶಿಕ್ಷಣವನ್ನೀಯುವುದು, ಸಮಾಜಸುಧಾರಣೆ, ದೇಶಸೇವೆ, ದುಷ್ಟದಮನ ಇತ್ಯಾದಿ)ಗಳು ಯಾವುವು ನಿಶ್ಚಿತವಾಗಿರುವುವೋ (ಭಿನ್ನ ಭಿನ್ನಾವಸ್ಥೆಗಳಲ್ಲಿ ಭಿನ್ನ ಭಿನ್ನ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ದೇಶ ಕಾಲ ಪಾತ್ರಗಳ ಭೇದದಿಂದ ಅರ್ಥಾತ್ ಪರಿಸ್ಥಿತಿಯ ಅನುಕೂಲಾನನುಕೂಲತೆಗಳಿಗನುಸರಿಸಿ ವ್ಯಕ್ತಿ ಮತ್ತು ಸಮಾಜದ ಕರ್ತವ್ಯಗಳು ಬದಲಾಗುತ್ತವೆ. ಒಂದು ರೀತಿಯು ಒಂದು ಸಮಯದಲ್ಲಿ ಉತ್ತಮವೂ ಲಾಭದಾಯಕವೂ ಆಗಿದ್ದುದು ಕಾಲಚಕ್ರದ ಪರಿವರ್ತನದಿಂದ ಅನುಚಿತವೂ ಹಾನಿಕಾರಕವೂ ಆಗುತ್ತದೆ. ಸಮಯಾನುಸಾರ ರೀತಿಯಲ್ಲಿ ಪರಿವರ್ತನವನ್ನೂ ಸಂಶೋಧನೆಯನ್ನೂ ಮಾಡುವುದು ಕರ್ತವ್ಯವಾಗಿರುತ್ತದೆ.) ಅವುಗಳನ್ನು ಪರಿಪಾಲಿಸಿ ಅವುಗಳಲ್ಲಿ ನಿಶ್ಚಯ ಬುದ್ಧಿಯಿಂದ ತೊಡಗಿರುವುದು ಅಥವಾ ಅಂತಹ ಪ್ರಯತ್ನದಲ್ಲಿ ಯಾದರೂ ಸಾಯುವುದು ಶ್ರೇಯಸ್ಕರವಾಗಿರುತ್ತದೆ. ಆದರೆ ತನ್ನ ಕರ್ತವ್ಯಗಳನ್ನು ಮಾಡದಿರುವುದು ಎಂದೆಂದಿಗೂ ಹಿತಕರವಾಗಿರುವುದಿಲ್ಲ. ಒಮ್ಮೊಮ್ಮೆ ಸಣ್ಣ ಸಣ್ಣ ಕಾರ್ಯಗಳನ್ನು ಮಾಡದಿರುವುದರಿಂದಲೂ ದೊಡ್ಡ ಹಾನಿಯು ಸಂಭವಿಸುವುದು.

ನಮ್ಮ ಪ್ರಾಚೀನ ಪೂರ್ವಜರು ತಮ್ಮ ಎಲ್ಲಾ ಕರ್ತವ್ಯಗಳನ್ನು ದೃಢಬುದ್ಧಿಯಿಂದ ಪರಿಪಾಲಿಸುತ್ತಿದ್ದುದರಿಂದ ಪ್ರಾಚೀನ ಭಾರತವು ಅನ್ನಧನಗಳಿಂದ ಪರಿಪೂರ್ಣವಾಗಿಯೂ ಎಲ್ಲಾ ಪ್ರಕಾರದ ವಿದ್ಯೆ ಮತ್ತು ಕಲೆಗಳಿಗೆ ಮಾತೃಸ್ಥಾನವಾಗಿಯೂ ಇದ್ದು ಸ್ವರ್ಗೀಯ ಸುಖವನ್ನು ಅನುಭವಿಸಲಿಕ್ಕೆ ಸಮರ್ಥವಾಗಿತ್ತು. ಈಗಿನ ಭಾರತವು ದೀನ, ಮಲಿನ, ಅನ್ನಧನಗಳಿಲ್ಲದೆ ವಿದ್ಯೆ ಮತ್ತು ಕಲೆಗಳಿಂದ ಶೂನ್ಯವಾಗಿದ್ದು ಪಾರತಂತ್ರ್ಯದಿಂದ ಬಂಧಿತವಾಗಿರುತ್ತದೆ. ಏಕೆಂದರೆ ನಾವು ನಮ್ಮ ಕಠಿಣ ಸ್ವಕರ್ತವ್ಯ ಕರ್ಮಗಳನ್ನು ಮಾಡುತ್ತಿರುವುದಿಲ್ಲ.

ಈಗ ೫೦ ವರ್ಷಗಳಿಂದ ದೇಶದಲ್ಲಿ ಯಾವ ನವೀನ ಜಾಗೃತಿಯುಂಟಾಗಿದೆಯೋ ಯಾವ ಆಂದೋಲನವು ನಡೆಯುತ್ತಿದೆಯೋ ಅದು ನಮ್ಮ ಮಾನಸಿಕ ದಾಸತ್ವವನ್ನು ದೂರಮಾಡಲಿಕ್ಕೆ ಸ್ವಲ್ಪ ಮಟ್ಟಿಗೆ ಸಹಾಯಕವಾಗಿದೆ. ಹೀಗೆ ನಮ್ಮ ಜನರು ಶೀಘ್ರದಿಂದ ಕುಲಕರ್ಮಗಳನ್ನು ಬಿಟ್ಟು ಪಾರತಂತ್ರ್ಯದ ಬೇಡಿಗಳನ್ನು ಮುರಿದು ಉತ್ಸಾಹದಿಂದ ಕಾರ್ಯತತ್ಪರರಾಗಲಿ. ಕರ್ತವ್ಯ ಪಾಲನೆ ಮಾಡುವುದರ ಮೂಲಕ ಉಂಟಾಗುವ ಸುಖವನ್ನು ಅನುಭವಿಸುವವರೂ ಮಹಾ ಸಂಕಷ್ಟಗಳು ಬಂದೊದಗಿದಾಗ ಸ್ವಕರ್ತವ್ಯಗಳನ್ನು ಮಾಡುವುದರಲ್ಲಿ ವಿಚಲಿತರಾಗದಿದ್ದವರೂ ಸಾಯುವ ವರೆಗೂ ಸ್ವಕರ್ತವ್ಯ ಮಾಡುವುದರಲ್ಲಿ ನಿರತರಾಗಿರುವವರೂ ಆದಂತಹ ಧೀರವೀರ ತ್ಯಾಗಿ ಸಜ್ಜನರಾಗಲಿ. ಸಾರಾಂಶ: ತಮ್ಮ ಕರ್ತವ್ಯಗಳನ್ನು ವಿವೇಕದಿಂದ ತಿಳಿದು ಅಂತಹ ಕರ್ತವ್ಯಗಳನ್ನು ದೃಢಬುದ್ಧಿಯಿಂದ ಮಾಡುವುದರ ಸುಖವನ್ನೂ ಸಫಲತೆಯನ್ನೂ ಎಲ್ಲರೂ ಅನುಭವಿಸಲಿ.

++ ++

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No. 57/1932

ಕೆ. ವಿ. ರಾಮ ಶೆಣೈ ಎಂಬವರ ಕಡೆಯ ಜನರು— ಅರ್ಜಿದಾರರು.

ಮತ್ತು

ಪೆಲಿಯ ಕೃಷ್ಣ ಸಂಬಂಧ—ರೆಸ್ಪಾಂಡೆಂಟ್

ಕಾಸರಗೋಡು ಗ್ರಾಮದ ಕಲ್ಯಾಣಪುರ ಮನೆಯಲ್ಲಿ ತಾ. 27-1-1931ರಲ್ಲಿ ಮೃತಪಟ್ಟ ಅರ್ಜಿದಾರರ ತಂದೆ ರಾಮ ಚಂದ್ರ ಯಜಮಾನರಿಗೆ ಮೇಲ್ಕಂಡ ಅರ್ಜಿಯಲ್ಲಿ ವಿವರಿಸಿದಂತೆ 'ರಿಕ್ರಿಯೇಶನ್ ಸೊಸೈಟಿ' ಯಿಂದ ಬರತಕ್ಕ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಸದರಿ ಅರ್ಜಿಯು ತಾ. 28—4—1932ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಈ ಬಗ್ಗೆ ಆಕ್ಷೇಪಿಸುವವರು ಸದರಿ ತಾರೀಕಿನ ಒಳಗೆ, ಆ ದಿನ ಅರ್ಜಿಯು ಕೋರ್ಟಿನಿಂದ ಮುಂದರಿಸಲ್ಪಟ್ಟರೆ ಆ ದಿನದ ಒಳಗೆ ಅವರ ಆಕ್ಷೇಪಣೆಯನ್ನು ಸಲ್ಲಿಸಬಹುದೆಂಬ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ.

ಕಾಸರಗೋಡು, ತಾ. 14—4—32 | C. RAMA RAO, ಅರ್ಜಿದಾರರ ಕಡೆ ವಕೀಲ್

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No. 29/1932

ನರಸಿಂಹ ಚಡಗ ವಗೈರೆ—ಅರ್ಜಿದಾರರು.

ಅರ್ಜಿದಾರರ ತಂದೆ ಮೃತಪಟ್ಟ ಸುಬ್ಬಣ್ಣ ಚಡಗರಿಗೆ ಹೊರಗಿನಿಂದ ಬರತಕ್ಕ ಹಣಗಳನ್ನು ವಸೂಲು ಮಾಡಲಿಕ್ಕೆ ತಾವು ಹಕ್ಕುದಾರರೆಂತಲೂ ಆ ಕುರಿತು 1ನೇ ಅರ್ಜಿದಾರರಿಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕೆಂತಲೂ ಕೊಟ್ಟ, ಮೇಲೆ ಕಾಣಿಸಿದ ಅರ್ಜಿಯು ತಾ. 25—5—1932ಕ್ಕೆ ತನಿಖೆಗೆ ಇಟ್ಟಿದೆ ಎಂಬ ಸಂಗತಿಯನ್ನು ಈ ಮೂಲಕ ಸರ್ವ ಜನರಿಗೂ ತಿಳಿಸಿಯದೆ.

ಕುಂದಾಪುರ, ತಾ. 12-4-'32 | G. SANJIVA RAO, B.A., L.L.B., ಅರ್ಜಿದಾರರ ಕಡೆ ವಕೀಲು.

1. Good Riding Quality.
2. Gripping Tread.
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.

ಸುದ್ದಿ ವಿಚಾರಗಳು

ಇಂಗ್ಲೆಂಡಿನ ಸ್ವದೇಶೀ ಚಳವಳಿ.

ನಮ್ಮಲ್ಲಿ ಸ್ವದೇಶೀ ಪ್ರಚಾರಕ್ಕಾಗಿ ಇತ್ತೀಚೆಗೆ ಚಟುವಟಿಕೆಯು ತಲೆದೋರುತ್ತಿದೆಯಷ್ಟೆ. ಇಂಗ್ಲೆಂಡಿನಲ್ಲಿ ಈ ವಿಧದ ಚಟುವಟಿಕೆಯನ್ನು ಧಾರಾಳವಾಗಿ ಮಾಡುವ ಹಲವು ಸಂಘಗಳುಂಟು. ನಿರುದ್ಯೋಗಿಗಳಾಗಿರುವ ಇಂಗ್ಲಿಷರಿಗೆ ಉದ್ಯೋಗಗಳನ್ನು ಗೊತ್ತು ಹಚ್ಚುವ ಬಗ್ಗೆ ಕೆಲವೊಂದು ಸಂಘಗಳಿವೆ. ಇವುಗಳಲ್ಲಿ ಟ್ರೇಡ್ ಡಿಫೆನ್ಸ್ ಲೀಗ್ ಒಂದು. ಬ್ರಿಟಾನ್ಯದ ಉತ್ಪನ್ನವಾಗುವ ಸರಕನ್ನೇ ಹೆಚ್ಚು ಹೆಚ್ಚಾಗಿ ಇಂಗ್ಲಿಷರು ಬಳಕೆಗೆ ತರಬೇಕಾಗಿ ಪ್ರೇರೇಪಿಸುವ ಚಳವಳಿಯು ಈ ಸಂಘದಿಂದ ನಡೆಯುತ್ತಿದೆ. ಕಳೆದ ಆಗೋಸ್ತು ತಿಂಗಳಲ್ಲುಂಟಾದ ಈ ಈ ಸಂಘಕ್ಕೆ ಈಗಾಗಲೇ ಎರಡು ಲಕ್ಷ ಮೀರಿ ಸದಸ್ಯರಿರುವರು. ವರ್ಷಾಂತ್ಯದೊಳಗೆ ೧೦ ಲಕ್ಷ ಮೆಂಬರರಾಗುವರೆಂದು ಊಹಿಸುವಷ್ಟು ಸಂಖ್ಯೆಯಲ್ಲಿ ಮೆಂಬರಿಕೆಗ ಅರ್ಜಿಗಳು ಬರುತ್ತಿವೆ. ಮೆಂಬರರೊಳಗೆ ಸಾರ್ವಭೌಮರ ಮನೆತನದಿಂದಲೇ ಕೆಲವರಿರುವರು, ೧೦೭ ಶಾಸಕರಿವೆ, ಪಾರ್ಲಿಮೆಂಟಿನ ಮೆಂಬರರು ತುಂಬಾ ಸೇರಿದ್ದಾರೆ. ಪ್ರತಿ ಮೆಂಬರರ ಐದು ಮಂದಿ ಮೆಂಬರರನ್ನು ಕೂಡಿಸಿ ಕೊಡಬೇಕೆಂಬ ಶರ್ತವಿದೆ. ೪೦೦೦ ಕಾರ್ಖಾನೆಗಾರರೂ, ವ್ಯಾಪಾರಿಗಳೂ ಸಂಘಕ್ಕೆ ಪ್ರೋತ್ಸಾಹಕರಾಗಿದ್ದಾರೆ. ಮೆಂಬರರ ದಾಖಲಾತಿಗೆ ಆರಾಣೆ ಮಾತ್ರ. ಈ ಸಂಸ್ಥೆಯು ಇಂಗ್ಲೆಂಡಿನ ನಿರುದ್ಯೋಗಿಗಳ ಸಮಸ್ಯೆಯನ್ನು ಹೇಗೆ ಉತ್ತರಿಸುವುದೆಂಬುದು ಹೀಗ ಪ್ರಕಟವಾಗ ಸರ್ವರಿಗೂ ವಿಧಿತವಾಗುತ್ತಿದೆ. ನಮ್ಮ ಸ್ವದೇಶೀ ಪ್ರಚಾರ ಸಂಘಗಳೂ ಈ ಮಾದರಿಯನ್ನು ಅನುಸರಿಸಿ ನಡೆವಂತಿವೆ ಎಂದ ಬಳಿಕ, ಆಣ್ಣರೂ ಕೌನ್ಸಿಲು ಸದಸ್ಯರೂ ಮುಂದೆ ಬಂದು ಮೆಂಬರರಾಗಬಾರದೆ?

ಸ್ವದೇಶೀ ಪ್ರಚಾರವು

[illegible]ರಲ್ಲಿ ನಮ್ಮಲ್ಲಿ ತಲೆದೋರಿತು. ಅನಂತರ ರಾಜಕೀಯ ಪರಿಸ್ಥಿತಿಯನ್ನು ಅನುಸರಿಸಿ ೧೯೧೭—೨೧ರ ತನಕವೂ ೧೯೩೦ರಿಂದ ಇದುವರೆಗೂ ಆಗಾಗ ಪ್ರಬಲ ಚಳವಳಿರುವಂತೆ ತೋರುತ್ತ ಬರುವುದಾದರೂ ಕೇವಲ ಖಾದಿಯೊಂದನ್ನೆ ಅವಲಂಬಿಸಿರುವಂತೆ ಹೇಳಬಹುದು. ಕೈನೂಲಿನ ಕೈಮಗ್ಗದ ಬಟ್ಟೆಗಳ ಪ್ರೋತ್ಸಾಹವನ್ನಲ್ಲದೆ, ಇತರ ಉತ್ಪನ್ನಗಳ ಕಡೆಗೆ ಅಷ್ಟು ಗಮನಕೊಟ್ಟಂತೆಸೂ ತೋರುವುದಿಲ್ಲ. ಇದರಿಂದ ದೇಶೀಯ ಕೈಗಾರಿಕೆಗಳಲ್ಲವು ಬಂದೇ ಬಗೆಯಾಗಿ ಅಭ್ಯುದಯ ಪಡೆಯಲಾರದೆ ಉಳಿದಿವೆ. ಈಗ ರಾಷ್ಟ್ರೀಯ ಭಾವನೆಗಳು ಉದ್ರೇಕ ಹೊಂದಿರುವುದರಿಂದ ಸ್ವದೇಶ ಚಳವಳಿಯು ರಭಸದಿಂದ ಸಾಗಿ ಶಾಶ್ವತ ಪರಿಣಾಮ [illegible] ಉಂಟುಮಾಡಬಹುದೆಂದು ಎಣಿಸಲಾಸ್ಪದವಿದೆ. ದೇಶದ ಸಾಂಪತ್ತಿಕ ಸ್ಥಿತಿಯ ವಿಚಾರವನ್ನು ಪ್ರತಿಪಕ್ಷ ಸಿವಾಲಿ[illegible] ಸರಿಯಾಗಿ ಮೊದಲಾಗ ತಿಳಿದುಕೊಳ್ಳುವಂತಾದಲ್ಲಿ ಈ ಚಳವಳಿಯು [illegible] ಕಾಂಗ್ರೆಸ್ [illegible] ಹಾಗಿಲ್ಲ, ಮೊದಲು ವ ಇತರ [illegible] ಈ ಬಲದ ಚಳವಳಿಯಲ್ಲಿ ಭಾಗವಹಿಸಿರುವುದರಿಂದ, ದೇಶೀಯರೂ, ದೇಶದಲ್ಲಿ ನೆಲೆನಿಂತ ಇತರರೂ ಈಗ ನಿರಾತಂಕ ಪ್ರತಿಪಕ್ಷ ವಿಧದಲ್ಲಿ ಸಹಕರಿಸುವರೆ, ಬಂಡವಾಳವೂ ದೇಶೀಯ ಕೈಗಾರಿಕೆಗಳಿಗ ಪ್ರೋತ್ಸಾಹವೂ, ಉದ್ಯೋಗಿಗಳಿಗೆ ಸಾಕಷ್ಟು ಕೆಲಸವೂ ಉಪವಾಸಿಗಳಿಗೆ ಅನ್ನವಸ್ತ್ರಗಳೂ ಸಕಾಲಕ್ಕೆ ಸಾಗವೂ ದೊರೆವುದರಲ್ಲಿ ಸಂದೇಹವಿರದು.

ಬಂಗಾಳದ ಆ ಗವರ್ನರರು.

ಇಂಗ್ಲೆಂಡಿಗೆ ತಲುಪಿ ತಮ್ಮ ಅನುಭವಾಮೃತವನ್ನು ಮನೆಯ [illegible]ವರ ಮೇಲೆ ಸುರಿದರು. 'ಸದ್ಯದ ದಿಗಳಲ್ಲೊಂದು, ಇಂಡಿಯಾದಲ್ಲಿ ಎರಡನೆ ಕೆಚಾಗ್ಗಿ, ಅದರ ಬೆಂಬಳಿಯೆ ಭಯಕಾರಿಗಳ ಹಿಂದ ತಲೆದೋರಿದರು, ಆದರೆ ಪ್ರಸರುತ್ತಾನ ಮಾಡುವಾಗ, ಸರ್ಕಾರ್ [illegible] ಸಂಪೂರ್ಣವಾಗಿ ಇಂಡಿಯಾವು ತನ್ನ ಕಾಲುಗಳ ಮೇಲೆ ಎದ್ದು ನಿಲ್ಲುವುದು. ಕಳೆದ ಐದು ವರ್ಷಗಳಲ್ಲಿ ದೇಶಸ್ಥಿತಿ ಉತ್ತಮವಾಗಿ ಬಂದಿದೆಯೋ ತಿಳಿದಿಲ್ಲ, ಆದರೆ ಬಂಗಾಳದಲ್ಲಿ ಮೊದಲೇ ಸಿದ್ಧರಾಗಿದ್ದ ನಾವು ಶಾಸನೋಲ್ಲಂಘನೆಯ ಚಳವಳಿಯನ್ನು ಮುರಿದಿಕ್ಕಿರುವೆವು. ಪ್ರಜೆಗಳಲ್ಲಿ ಈಗ ಹಿಂಸಾಕಾರಿಗಳ ವಿರುದ್ಧವಾಗ ಅಭಿಪ್ರಾಯ ಹೊರಟಿದೆ. ಬಂಗಾಳದ ಪತ್ರಿಕೆಗಳು ವಂಶಪ್ರೇಮಗಳನ್ನು ಹೆಚ್ಚಿಸುವ ಲೇಖಗಳನ್ನೇ ಪ್ರಕಟಿಸುವುವಾಗಿವೆ, ಇದರಿಂದ ಹಿಂಸಾತುರರು ಉದ್ರೇಕಗೊಳ್ಳುತ್ತಿದ್ದಾರೆ. ನನ್ನ ಉತ್ತರಾಧಿಕಾರಿಗೆ ಅಷ್ಟು ಕಷ್ಟ ಬಾಧೆಗಳು ಇರಲಾರವು' ಎಂದು ಅಲ್ಲಿ ತಿಳಿಸಿರುವರು.

ಬಂಗಾಳದ ಈ ಗವರ್ನರರು

ಬಂಗಾಳಕ್ಕೆ ತಲುಪಿ, ತಮ್ಮ ಅನುಭವಾಮೃತವನ್ನು ಪ್ರಜಾಕೂಟದವರಿಗೆ ಕುಡಿಯಕೊಟ್ಟಿರುವರು. ಬಹುಕಾಲದಿಂದಲೂ ಸರಕಾರದ ಅಧಿಕಾರಿಗಳ ಬಾಯಿಯಿಂದ, 'ಗ್ರಾಮೋಫೋನ್ ರಿಕಾರ್ಡು' ನುಡಿವಂತೆಯೇ ಕೆಲವಂಶ ನುಡಿದು ಸೈಗರೆದು, 'ಈಗಣ ಚಳವಳಿ ಅಣಗಿಸಲು ಊರ್ಜಿತವಿರುವ ಕಾನೂನು ಸಾಲದಾದ ಕಾರಣವೇ ಒರ್ಡಿನೆನ್ಸುಗಳು ಅಗತ್ಯವಾಗಿಯೂ ಹೊರಡಬೇಕಾಯಿತು' ಎಂದರು. ಬಂಗಾಳದಲ್ಲಿ ದಬ್ಬಾಳಿಕೆಯು ಈಗಣ ಚಳವಳಿಕ್ಕಿಂತಲೂ ಪ್ರಾಚೀನವಾಗಿದೆ ಎಂಬ ಇತಿಹಾಸ ಪಾಠವನ್ನೋದಲು ಗವರ್ನರರಿಗೆ ಸಮಯ ಇನ್ನೂ ಸಾಲದು. ಈ ದಬ್ಬಾಳಿಕೆಯ ಮಾನಸಿಕತೆ ಬೇರೂರಿದರಿಂದಲೇ, ಬಂಗಾಳ ಒರ್ಡಿನೆನ್ಸನ್ನು ಮಹಾತ್ಮಾಜಿಯವರು ಚರ್ಚಿಸುವೆನೆಂದರೆ, ಸರಕಾರವು ಅವಕಾಶ ಕೊಟ್ಟಿಲ್ಲ. ಕಾನೂನೋಲ್ಲಂಘನೆಯೆಂಬುದು ಬಂದು ರಾತ್ರಿ ತಲೆಯೆತ್ತಿದ ಅಣಬೆಯಲ್ಲ, ಅವರ ಹುಟ್ಟಿನ ಮೂಲವೆಲ್ಲಿ ಎಂಬುದನ್ನು ಎಂಡರ್ಸನರು ಇನ್ನೂ ವಿಚಾರದಿಂದ ವಿವೇಕವಾಗಿ ತಿಳಿದುಕೊಳ್ಳಬೇಕು. ಬಂದರಿಂದ ಬಂದಕ್ಕಾಗಿ ಅತಿಕ್ರಮವನ್ನೆ ಕೈಗೊಂಡು ಬಂದ ಬಂಗಾಳ ಸರಕಾರವು ಈಗ ಕಾನೂನಿನ ಒಳೆಯಿಂದ ತಾನೇ ಹೊರಗೆ ಬರುವುದು ಹೇಗೆಂದು ತಿಳಿಯಲಾರದಾಗಿದೆ. ಐರ್ಲೆಂಡಿನಲ್ಲಿ ಎಂಡರ್ಸನರು ಕೈಗೊಂಡ ನೀತಿನೀತಿಗಳು ಬಂಗಾಳಕ್ಕೆ ಈಗ ಹತ್ತುವವೋ ಎಂಬುದರಲ್ಲಿ ಸಂದೇಹವಿಲ್ಲ. ಶಸ್ತ್ರ ಸನ್ಯಾಸಿಗಳಾದ ಬಂಗಾಳ ಸತ್ಯಾಗ್ರಹಿಗಳಿಗೂ, ಸಮಸಷ್ಟಿತರಾಗಿ ಕಾದಾಡಿದ ಐರಿಷರಿಗೂ ಭೇದವಿಲ್ಲವೆ? ಅದರೂ, ಅಲ್ಲಿ ವಿಜಯ ದೊರೆದ ದಬ್ಬಾಳಿಕೆಗೆ ಇಲ್ಲಿ ಜಯಸಿಗುವುದೆ? ಎಂದು ಅವರು ವಿಚಾರಿಸಿಕೊಳ್ಳಲಿ. ಅಂತೂ, ಸದ್ಯದ ಉದ್ಧಾರಕ್ಕಾಗಿ ಅವತರಿಸಿದ ದೈವೀ ಪುರುಷನೆಂದು ಇವರನ್ನು ಕರೆಯಲು ಇನ್ನಷ್ಟು ದಿವಸ ಕಾಯಬೇಕಾಗಿದೆ.

ಶ್ರೀ। ಪೆಥಿಕ್ ಲೋರೆನ್ಸ್

ಇವರು ಕಳೆದ ಮಂತ್ರಿ ಮಂಡಲದಲ್ಲಿದ್ದವರು. ಇಂಡಿಯದವರು ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಾರ ಸಾವಿರ ಬಲ ತ್ಯಾಗದಿಂದ ಆಳುತ್ತೀವೆ. ಈಗ ಅವರು ಅಣಗಿದಂತೆ ತೋರಿದರೂ, ಸ್ವಾತಂತ್ರ್ಯವನ್ನು ಮುಂದೆ ಸೆಳೆದುಕೊಳ್ಳದಿರರು. ನಮ್ಮಲ್ಲಿನ ಚುನಾವಣೆ ಮೊದಲಾದ ಪ್ರತಿಕ್ಷೇಪದಿಂದಾಗಿ ರೌಂಡ್‌ಟೇಬಲ್ ಕಾನ್ಫರೆನ್ಸು ಜಯಶೀಲವಾಗದಂತಾಯಿತು. ಆದರೂ, ಆ ಶಾಂತಿಯನ್ನು ಇಂಡಿಯದಲ್ಲಿ ಉಂಟುಮಾಡುವುದಕ್ಕಾಗಿ, ನೆರವು ವಿವೇಕದಿಂದ ಮುಂದರಿದರೆ ಸ್ನೇಹಾಚಾರದಿಂದ ವರ್ತಿಸಿದರೆ ನಮಗೆ ಜಯವೂ ಇದೆ, ಸುಖವೂ ಇದೆ ಎಂದು ಬರ್ಮಿಂಗ್‌ಹ್ಯಾಮಿನಲ್ಲಿ ಕ್ರೈಸ್ತ ಸಂಘದ ಅಧಿವೇಶನದಲ್ಲಿ ಭಾಷಣವಾಡಿದರು. ಡಾ। ಪ್ರಿವೇಟ್, ಪೇಟನ್ ಇತ್ಯಾದಿಯವರೆಷ್ಟೋ ಮಂದಿ ಅಧಿಕಾರವಾಣಿಯಿಂದ ತಮ್ಮ ಸ್ವಂತ ಅನುಭವಗಳನ್ನು ಸಾರುತ್ತಿರುವರು. ಹೋರ್‌ವಾಡಾ ಜೈಲಿನಿಂದ ಮೂವರು ಬ್ರಿಟಿಷ ಮಂತ್ರಿಗಳಿಗೆ ಗಾಂಧೀಜಿಯವರ ಪತ್ರವ್ಯವಹಾರ ನಡೆಯುತ್ತಿದ್ದಿತಂತೂ, ಇವುಗಳ ವಿಷಯವನ್ನು ಸರಕಾರವು ಬಲ್ಲಿಗರಿದರೂ ರಾಜಕೀಯ ವಿಚಾರಗಳ ವಿಮರ್ಶೆಯೇ ಇದರಲ್ಲಿದ್ದಿರಬೇಕೆಂದೂ, ತಿಳಿಯಬರುತ್ತದೆ. ಲಂಡನಿನಲ್ಲಿ ವಿವೇತರಗಳು ಇಲ್ಲಿನ ಪರಿಸ್ಥಿತಿಯನ್ನು ತಿಳಿದು ಬೆದರಿರುವರೆಂದೂ, ಮಂತ್ರಿಮಂಡಲವೂ ಆಲೋಚನಾಪರವಾಗಿದ್ದು, ಈ ಸಂಧಿಯನ್ನು ಮುಗಿಸೋಣವೆಂದರೂ ಗೌರವಪ್ರತಿಷ್ಠೆಗೆ ಹಾನಿಬರಬಾರದೆಂದೂ ಮೊದಲಾಗಿ ಚಿಂತಾಮಗ್ನರಾಗಿರುವರಂತೆ. ಹೋದರೂ ಈಗ ಆಶಾವಾದಗಳನ್ನ ಘೋಷಿಸುತ್ತಿಲ್ಲವೆಂಬುದೂ ಬಂದು ಸದ್ವಲಕ್ಷಣ.

ಜಂಟೀ ಪ್ರಾತಿನಿಧ್ಯ

ಆಗದಿನ್ನವರು, ಶ್ರೀ ಎಮ್ ಸಿ ರಾಜರೆಂಬ ಅಸ್ಪೃಶ್ಯ ಮುಖಂಡರನ್ನೇ ಹಿಂದುಗಳು ಜಿಲ್ಲಾ ಬೋರ್ಡಿಗೆ ಚುನಾಯಿಸಿದುದನ್ನು ಓದಿ ವಿಸ್ಮಯಗಿರಬೇಕು. ಈಗ ನಾಗಪುರ ಮ್ಯುನಿಸಿಪಾಲಿಟಿಯ ಅಧ್ಯಕ್ಷಸ್ಥಾನಕ್ಕೆ ಹಿಂದೂ ಮೆಂಬರರೇ ಬಹುಮತವುಳ್ಳವರಾದರೂ, ಶ್ರೀ ಪಾಂಡ್ಯ ಎಂಬ ಹಿಂದೂ ಮುಖಂಡರಿಗೆ ಬರೀ ೧೪ ವೋಟುಗಳೂ ಶ್ರೀ ಸಾಮಿ ಉಲ್ಲಾಖಾನರೆಂಬ ಮುಸ್ಲಿಮ್ ಮೆಂಬರರಿಗೆ ೩೪ ವೋಟುಗಳೂ ಸಿಗುವಂತಾಗಿ, ಮುಸ್ಲಿಮರೇ ಚೆಯರ್ಮೆನರಾಗಿ ಚುನಾವಣೆ ಹೊಂದಿದ ವರ್ತಮಾನ ಈಗಿನ ಮಧ್ಯಪ್ರಾಂತ್ಯದಲ್ಲಿ ಸಂತೋಷವನ್ನೂ ತೃಪ್ತಿಯನ್ನೂ ಉಂಟುಮಾಡಿಯದೆ. ಸಮಾಚಾರವನ್ನಯ ಮೆಂಬರಿಕೆಯ ಚುನಾವಣೆಯ ಸೂತ್ರದಿಂದ ಎಲ್ಲ ಜನರೊಳಗೆ ಅಂತಃಕಲಹವು ಉಂಟಾಗಿಲ್ಲವೊ, ಅಲ್ಲಿ ಇದೇ ರೀತಿ ಸರ್ವದಾ ಜಾತಿಯ

ನೋಟುಗಳು

NOTE....S

ಸರೋಜಿನಿ ದೇವಿಯನ್ನು ಕೈದುಮಾಡಿರೆನ್ನುವರು ವರಿಷ್ಠರು; ಬೇಡ ಎನ್ನುವರು ಕನಿಷ್ಠರು. ಸದ್ಯದಲ್ಲೇ ಸಮುದ್ರ ಮಥನವಾಗುವಂತಿದೆ, ಆಗ ಅಮೃತ ಹಂಚಲು ಯಾರೂ ಬೇಡವೇ? ಎಂದು ಮುಂಬಾಯಿ ಸರಕಾರಕ್ಕೆ ಮುಖಂಡರ ಪ್ರಶ್ನೆ.

• • • •

ಖಜಾನೆ ಬರಿದಾಗಿರುವ ಸರಕಾರಗಳು ಕೆಲ ಪಟ್ಟಿಗಳನ್ನು ಸಾಕುವುದುತ್ತಮ. ಹತ್ತು ಪ್ರಸಿದ್ಧ ಸ್ಥಳೀಯ ರಾಜರು ಪ್ರಿಮೊ ಕಾರ್ನೆರಾ ಎಂಬ ಪಟ್ಟಿಯನ್ನು ಸ್ಥಳೀಯ ಪಟ್ಟಿಗಳೊಡನೆ ಕಾದಾಡುವುದಕ್ಕೆ ಕರೆದಿರುವರು. ಅವನ ಫೀಸು ಬಂದು ಲಕ್ಷ ಪವನು. ಇಂತಹ ಪಟ್ಟಿಯನ್ನು ಸಂಬಳಕ್ಕಿಟ್ಟುಕೊಂಡು ಒಬಡಿಗೆ ಕೊಡುವುದರಿಂದ ಖಜಾನೆ ತುಂಬಬಹುದಲ್ಲವೆ?

• • • •

ಖಜಾನೆಯಲ್ಲಿ ಕಾಸೂ ಇಲ್ಲದೆ ಮುನ್ಸಿಪಾಲಿಟಿಯ ನಾಣ್ಯಗಳ ಸ[illegible] ಬೋರ್ಡುಗಳೇ ಮೊದಲಾದವುಗಳಿಂದ ಎಷ್ಟೋ ಸರಕಾರಗಳು [illegible] ಮುದ್ರಿಸಿದ ಕಾಗದಗಳ (ಬೆಂಕಿ [illegible]) ಕಂಪನಿಯ [illegible] ಬರುತ್ತಿವೆ.

• • • •

ಬೆಂಕಿ ಪೆಟ್ಟಿಗೆಯ ಮೇಲೂ Safety ಮ್ಯಾಚಸ್ 'ಭದ್ರ [illegible] ಎಂದಿತ್ತು [illegible] ಭದ್ರ, ಉರಿಯುವುದೇ ಇಲ್ಲ. [illegible] ಕ್ರಮ.

• • • •

ಪೇಶಾವರದಲ್ಲಿ ಹೊಸ ಗವರ್ನರು [illegible] ಮಂತ್ರಿ [illegible] ವೈಸರಾಯರೂ ಹಾಜರಿದ್ದರು. ಹೊಸ ಶಾಸನರಚನೆಯಾಗಿ ರಾಜಧಾನಿಯಲ್ಲಿ [illegible] ದಲ್ಲಿ ಇನ್ನೊಂದು ತಿಂಗಳು [illegible] ಸಭೆ [illegible] ಗಳಲ್ಲಿ [illegible] ನಾಲ್ಕು ಗ್ರಾಮಗಳಿಗೆ [illegible] ಈಗ ಶಾಂತಿ.

• • • •

ಸರಕಾರವು Dual ದ್ವಿವಿಧ ಧೋರಣವನ್ನು ನಡೆಸುತ್ತಿದೆಯಂತೆ. ಅಂದರೆ ಶಾ ಸನಿಗ ವಿರೋಧವಾದ ಕಾಂಗ್ರೆಸ್ ಚಳವಳಿಯನ್ನು [illegible]ವಾಗಿ ಎದುರಿಸುವುದು, ಅಂದರೆ ದಬ್ಬಾಳಿಕೆಯಿಂದ ಎಂದು. ಸರಕಾರದೊಡನೆ ಸಹಕರಿಸುವವರೊಡನೆ ಕೂಡಿ ಹಿಂದೂಸ್ಥಾನಕ್ಕೆ ಸುಧಾರಿತ ಸರಕಾರ ಅಂದರೆ ರೌಂಡ್ ಟೇಬಲ್ ಕಮಿಟಿಯ ಮೂಲಕ ಕೊಡುವುದು ಎರಡನೆಯದು.

• • • •

ಆದರೆ ಸರಕಾರದ ಈಗಿನ ಧೋರಣವು ದ್ವಿವಿಧ (Dual) ಅಲ್ಲ, ತ್ರಿವಿಧ (Triple) ಎಂದ ನಮಗೆ ಕಾಣುತ್ತದೆ. ಅಂದರೆ ಕೈಯಲ್ಲೊಂದು ಬಾಯಲ್ಲೊಂದು ಮನಸ್ಸಿನಲ್ಲಿ ಮತ್ತೊಂದು.

• • • •

ಮುಂಬಾಯಿ, ಸರಕಾರದ [illegible]ದಲ್ಲಿ ಅಬ್ಕಾರಿಬಾಬಿನಲ್ಲೇ [illegible] ಲಕ್ಷ ರೂಪಾಯಿ. ಇದು ಜನರ ಆರೋಗ್ಯಕ್ಕೂ ಸೇರಿದಂತೆ ಸಂಬಂಧವಿದೆ, ಇದರಲ್ಲಿ ಉತ್ತಮ ವಿಸ್ಕಿ ನ ಆರೋಗ್ಯದ ಪೇಯಗಳಿವೆ ಎಂದು ಪ್ರಕಟಿಸಿದರೂ, ಆರುವ ಸುಂಕ ಏರಿಲ್ಲ.

• • • •

ಇಂಡಿಯದ ಕಲೆಕ್ಟರಿಗಳ ಮಂತ್ರಿಮಂಡಲದಲ್ಲಿ ಉಳಿದೆನೆಂದ ಲಾರ್ಡ್ ಸೇಂಕಿರವರು, ಮಂಡಲದಲ್ಲಿ ಇನ್ನೂ ಇರುವರಾದರೂ ಕಂಠಿಯುದಿಸಲಾಗಿಲ್ಲವೆಂದು ಅವರ ಲೇಖದಿಂದ ಗೊತ್ತು.

• • • •

ಇಂತಹ ಕಠಿಣ ಕಾಲವಾದರೂ ಇಂಗ್ಲೆಂಡಿನಲ್ಲಿ ವಾರ್ಷಿಕವಾಗಿ ೧೦೦ ಮಿಲ್ಲಿಯ ಪವನು ವಿದ್ಯಾಇಲಾಖೆಗೆ ಖರ್ಚಾಗುತ್ತದೆ, ಮಹಾಯುದ್ಧದ ಮೊದಲು ಯಾವತ್ತು ಖರ್ಚು ಎಷ್ಟಿದ್ದಿತೋ, ಅದರ ಅರ್ಧಾಂಶವಿದು. ನಮ್ಮ ಸರಕಾರದ ಅರ್ಧಾಂಶ ಖರ್ಚು ಸೈನ್ಯಕ್ಕೆ ಮತ್ತು ಪೋಲೀಸ್ ಖಾತೆಗೆ! ಅಬ್ಕಾರಿ ಸುಂಕದಷ್ಟು ವಿದ್ಯಾ ಇಲಾಖೆಗೆ.

ಮಾತೇ ಇಲ್ಲದೆ, ಉತ್ತಮರೇ ಯೋಗ್ಯರೇ ಚುನಾವಣೆ ಹೊಂದುತ್ತ ಮೈತ್ರೀಭಾವವು ಬೆಳೆಯುತ್ತಲಿದೆ. ಹೀಗಿದ್ದರೂ ಇನ್ನೂ ಜಾತಿಮೌಢ್ಯಗಾಗ ಹಿಂದ ಕರೆವವರು ಇರುವರೆಂಬುದೂ ಇವರನ್ನು ಉದ್ದೇಶಪೂರ್ವಕವಾಗಿ ಪ್ರೋತ್ಸಾಹಿಸುವವರೂ ಇರುವರೆಂಬುದೂ ದುರ್ದೈವ.

"ಜೂನ್ ೨೮ರೊಳಗೆ ಗಾಂಧಿಯವರ ಬಿಡುಗಡೆ"

ಸರಕಾರದಧಿಪತಿಗಳ ಶಾಂತಿಸಾಧನೆ

"ಜೂನ್ ೨೮ರ ನಂತರ ಒಂದು ಮಹಾ ಯುದ್ಧ"

ಶ್ರೀಯುತ ... ಗಾಂಧಿಜ್ಯೋತಿಷ್ಯ ಸಲಯದ ಇದರ ಪ್ರೊಪ್ರೈಟರರು ಈ ಕೆಳಗಿನ ಸಂಗತಿಯನ್ನು ಸಾರ್ವತ್ರಿಕ ಪ್ರಕಟಿಸಿದ್ದಾರೆ. ಅದರಲ್ಲಿ ಹೀಗಿರುತ್ತದೆ—"೧೯ನೇ ತಾರೀಕಿನ ದಿನ ಮುಂಜಾನೆ ೮–೯ ಗಂಟೆಯ ಸಮಯದಲ್ಲಿ, ನಾನು ಉಪಾಸಿಸುವ ದೇವತೆಯು ನನಗೆ ಹೇಳಿದ ಈ ಕೆಳಗಿನ ವಾರ್ತೆಯನ್ನು ಪ್ರಕಟಿಸಲು ಆನಂದವಾಗುತ್ತದೆ. ಏಪ್ರಿಲ್ ತಾ ೨೯ರ ವರೆಗೆ ಮಹಾತ್ಮಾಜೀಯವರ ಸಕಲ ಕಾರ್ಯಗಳು ಆಪಜಯ ಹೊಂದುತ್ತಾ ಬರುವುವು. ಆವರ ಸಂಸ್ಥೆಗೆ ಪಂಟಲವು ಕಡಿಮೆಯಾದಂತೆ ಭಾಸವಾಗುವುದು. ಆದರೆ ಏಪ್ರಿಲ್ ತಾ. ೩೦ರ ಮೇಲೆ ಸೋಕದ ಅಭಿಪ್ರಾಯವು ಅವರಿಗೆ ಸಹಾಯಕವಾಗಿ ನಿಂತೀತು. ಕೊಂಗ್ರೆಸ್ಸಿಗೆ ಹಿಂದೂದೇಶದ ಗಣ್ಯರಿಂದ ಸಹಾಯವು ದೊರೆಯುವುದಲ್ಲದೆ ಪಾಶ್ಚಿಮಾತ್ಯ ದೇಶಗಳವರಿಂದಲೂ ಸಹಾಯವು ದೊರೆಯುವುದು. ಜೂನ್ ತಾ ೨೮ರೊಳಗೆ ಕೊಂಗ್ರೆಸ್ಸು ಮತ್ತು ಸರಕಾರಗಳೊಳಗೆ ಶಾಂತಿಸ್ಥಾಪನೆಯಾದೀತು. ಈ ಮೇಲಿನ ಅವಧಿಯೊಳಗೆ ಮಹಾತ್ಮಾಜೀಯವರನ್ನು ಯಾವ ಶರ್ತವಿಲ್ಲದೆಯೂ ಬಿಡುಗಡೆ ಮಾಡುವರು. ಬ್ರಿಟಿಷರೂ ಅವರಿಗೆ ಸಂಬಂಧಪಟ್ಟಿರುವ ಜನರೂ, ಶಾಂತಿಸ್ಥಾಪನೆಗಾಗಿ ಹಿಂದೀಯ ಪ್ರಮುಖರಿಗಿಂತ ಹೆಚ್ಚಿನ ಯತ್ನವನ್ನು ಮಾಡುವರು. ಮಹಾತ್ಮಾಜೀಯವರ ಜಾತಕವು ... ಕಾರಣವಾಗಿಯೂ ಇದನ್ನು ಗುಣಿಸಿ ನೋಡಿದ್ದಲ್ಲಿ ಸರಿ ಬರುತ್ತದೆ. ೨೮ನೇ ಜೂನ್ ತಿಂಗಳ ನಂತರ ಇನ್ನೊಂದು ಮಹಾ ಯುದ್ಧದ ಗುರುತು ಕಂಡುಬರುತ್ತದೆ. ಈ ಯುದ್ಧವು ಕೆಲವು ತಿಂಗಳುಗಳ ವರೆಗೆ ನಡೆದು ಕಟ್ಟಕಡೆಗೆ ಶಾಂತಿಯೇ ಸ್ಥಾಪಿತವಾಗುತ್ತದೆ."

ಜೈಲಿನೊಳಗೆ ನೋಟೀಸು

ಮಹಾತ್ಮಾಗಾಂಧಿಯವರ 'ನವಜೀವನ' ಮುದ್ರಣಾಲಯದ ಮೆನೇಜರರಾದ ಶ್ರೀಯುತ ಮೋಹನಲಾಲ್ ಭಟ್ ಎಂಬವರು ಸಾಬರಮತಿ ಜೈಲಿನಲ್ಲಿರುವರಷ್ಟೆ. ಸಬರ್ಮತಿ ಸ್ಟೇಶನಿನ ಬಳಿ ಇರುವ ಅವರ ಮುದ್ರಣಾಲಯದ ಭೂಮಿಯನ್ನು ಕೊಡಬೇಕೆಂದು ಮಾಮಲೇದಾರನು ನೋಟೀಸು ಕೊಟ್ಟಿರುವನು.

ಪೈರಿನ ಏಲಂ

ಅಹ್ಮದಾಬಾದಿನ ಪ್ರಖ್ಯಾತ ಗುಜರಾಥ್ ವಿದ್ಯಾಪೀಠವಿರುವ ಭೂಮಿಯ ತೆರಿಗೆಯನ್ನು ಕೊಡದಿದ್ದುದಕ್ಕಾಗಿ ಅದರ ಎರಡು ಎತ್ತುಗಳನ್ನೂ, ನೀರಿನ ಗಾಡಿಯನ್ನೂ ಏಲಂ ಹಾಕಿ ಹಣ ಪಡೆದರು. ಮತ್ತೂ ೧೭ ರೂಪಾಯಿ ಬಾಕಿ ಉಳಿಯಿತು. ಇದನ್ನು ವಸೂಲು ಮಾಡುವುದಕ್ಕಾಗಿ ವಿದ್ಯಾಪೀಠದ ಸೊತ್ತಾದ ಗದ್ದೆಯಲ್ಲಿನ ಪೈರುಗಳನ್ನು ಏಲಂ ಮಾಡಬೇಕಾಗಿ ಸರಕಾರವು ಅಪ್ಪಣೆ ಮಾಡಿದೆ.

ಹುಡುಗನಿಗೆ ಛಡಿ

ಕರಾಚಿಯಲ್ಲಿ ೬೦ ಮಂದಿಗಳಿಗೆ ವಿವಿಧ ಶಿಕ್ಷೆಯು ವಿಧಿಸಲ್ಪಟ್ಟಿತು. ಇವರಲ್ಲಿ ೬ ಮಂದಿಗಳು ಸ್ತ್ರೀಯರು. ೪ ಮಂದಿಗಳಿಗೆ ಆರಾರು ತಿಂಗಳ ಕಠಿಣ ಸಜೆಯನ್ನೂ ಇಬ್ಬರಿಗೆ ಮೂರು ಮೂರು ತಿಂಗಳ ಕಠಿಣ ಸಜೆಯನ್ನೂ ವಿಧಿಸಿದರು. ೬ ಮಂದಿಗಳು ತಾವಿನ್ನು ಕೊಂಗ್ರೆಸ್ ಕೆಲಸಕ್ಕೆ ಕೈಯಿಕ್ಕುವುದಿಲ್ಲವೆಂದುದಕ್ಕೆ ಒಂದು ವರ್ಷದ ಮುಚ್ಚಳಿಕೆ ಕೊಟ್ಟರು. ಒಬ್ಬ ಹುಡುಗನಿಗೆ ೯ ಛಡಿಗಳು ಕೊಡಲ್ಪಟ್ಟುವು.

೯೭ ಅಕಾಲಿಗಳ ಕೈದು.

ಅಮೃತಸರದಿಂದ ಪೆಶಾವರಕ್ಕೆ ೯೭ ಮಂದಿ ಅಕಾಲಿಗಳು ಶ್ರೀ ಉಜ್ಜಗರ್ ಸಿಂಗ್‌ರವರ ಮುಂದಾಳುತನದಿಂದ ಹೋದರು. ಅವರು ಸ್ಟೇಶನಿನಿಂದ ಇಳಿಯುತ್ತಿರುವಾಗ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಬಂದು ಮೆರವಣಿಗೆಯಿಂದ ಹೋಗಬಾರದೆಂದರು. ಅಕಾಲಿಗಳು ಹೋಗುವೆವೆಂದರು. ಅವರನ್ನು ಒಡನೆ ಲೋರಿಗಳಲ್ಲಿ ತುಂಬಿಸಿ ಡಿಸ್ಟ್ರಿಕ್ಟ್ ಜೈಲಿಗೆ ಕೊಂಡೊಯ್ದರು. ಇವರೆಲ್ಲರೂ ಕೊಂಗ್ರೆಸ್ಸಿನಲ್ಲಿ ಭಾಗವಹಿಸಲು ಬಂದಿರುವವರು.

ಸಾಧುವೇಷದ ಪಿಕೆಟರರು

ಕಾನ್‌ಪುರದಲ್ಲಿ ಕೆಲವು ಪಿಕೆಟರರು ಸಾಧುವೇಷದಿಂದ ಹೋಗಿ ವಿದೇಶಿ ವಸ್ತ್ರದಂಗಡಿಗಳೆದುರು ನಿಂತು ಪಿಕೆಟ್ ಮಾಡಿದರು. ಕೊಂಗ್ರೆಸ್ ಗೀತೆಯನ್ನು ಹಾಡಿದರು. ಅವರನ್ನು ಕೈದುಮಾಡಲಾಯಿತು.

ಶಿಕ್ಷೆ, ಕೈದು, ಬಿಡುಗಡೆ.

ಮುಂಬಾಯಿಯಲ್ಲಿ ೯ ಮಂದಿ ಸತ್ಯಾಗ್ರಹಿಗಳಿಗೆ ವಿವಿಧ ವಿಧಿಯ ಶಿಕ್ಷೆಯನ್ನು ಕೊಟ್ಟರು. ವಿದೇಶಿ ವಸ್ತ್ರದಂಗಡಿಗಳನ್ನು ಪಿಕೆಟ್ ಮಾಡಿದ ಕೆಲವರನ್ನು ಕೈದುಮಾಡಿದರು. ಶ್ರೀ ಜೆಥುಮಲ್ ನಾರಾಯಣ ದಾಸ್ ಎಂಬವರನ್ನೂ ಇನ್ನಿತರ ೬ ಮಂದಿಗಳನ್ನೂ ಬಿಡುಗಡೆ ಮಾಡಿದರು. ಕರಪತ್ರಗಳನ್ನು ಹಂಚಿದುದಕ್ಕಾಗಿ ಇಬ್ಬರು ಸತ್ಯಾಗ್ರಹಿಗಳನ್ನು ಕೈದುಮಾಡಿದರು.

"ನಾಟಕದ ಅಂತ್ಯ"

ಲಾಹೋರಿನಲ್ಲಿಯ ಪಂಜಾಬ್ ಕೇಸರಿ ಎಂಬ ಪತ್ರಿಕೆಯಲ್ಲಿ "ನಾಟಕದ ಅಂತ್ಯ" ಎಂಬ ರಾಜದ್ರೋಹಕರ ವಿಷಯವೊಂದನ್ನು ಪ್ರಕಟಿಸಿದುದಕ್ಕಾಗಿ ಅದರ ಸಂಪಾದಕರಾದ ಶ್ರೀ. ಪಂಡಿತ್ ಅಮರನಾಥರನ್ನೂ ಮುದ್ರಣಾಲಯದ ಮೆನೇಜರರನ್ನೂ ಕೈದುಮಾಡಿ ವಿಚಾರಿಸುತ್ತಿರುವರು.

ಲಾಠಿಯಿಂದ ಮೆರವಣಿಗೆಯನ್ನು ಚದರಿಸಿದರು

ರಾವಲಪಿಂಡಿಯಲ್ಲಿ ಸತ್ಯಾಗ್ರಹಿಗಳು ಮೆರವಣಿಗೆಯನ್ನು ಮಾಡಿದರು. ಪೋಲೀಸರು ಒಂದು ೫೦ ಮಂದಿಗಳನ್ನು ಕೈದುಮಾಡಿ ಉಳಿದವರನ್ನು ಲಾಠಿಯಿಂದ ಚದರಿಸಿದರು.

ಮುಂಬಾಯಿಯಿಂದ ೨೩೦೦ ಕೈದಿಗಳು

ಮುಂಬಾಯಿಯಲ್ಲಿ ಕಳೆದ ವಾರ ೫೩೦ ಜನರು ಕೈದಾಗಿದ್ದು ಚಳವಳಿ ಪ್ರಾರಂಭವಾದಂದಿನಿಂದ ಇಷ್ಟರ ತನಕ ಮುಂಬಾಯಿಯಲ್ಲಿ ಒಟ್ಟು ೨೩೦೦ ಜನರು ಕೈದುಮಾಡಲ್ಪಟ್ಟರು. ವರ್ಕಿಂಗ್ ಕಮಿಟಿಯ ಅಧ್ಯಕ್ಷರಾದ ಶ್ರೀ ಸರ್ದಾರ್ ಶಾರ್ದೂಲ್ ಸಿಂಗ್ ಎಂಬವರಿಗೆ ೧೮ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು. ಅಲ್ಲದೆ ೩೦೦ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟಿತು.

ಕರ್ಣಾಟಕ ಧುರೀಣರ ವರ್ಗ

ಬೆಳಗಾಂವಿನ ಹಿಂಡಲಗಾ ಜೈಲಿನಲ್ಲಿ ಬೀಜಾಪುರದ ರಾಜಕೀಯ ಕೈದಿಗಳಾದ ಶ್ರೀ ನಾರಾಯಣರಾವ್ ಜೋಶಿ, ಶ್ರೀ ಬಲವಂತರಾವ್ ದಾತಾರ್, ಶ್ರೀ ಹನುಮಂತರಾವ್ ಕೌಜಲಗಿ, ಶ್ರೀ ಜೀವನರಾವ್ ಯಳ್ಳೂರ ಮತ್ತು ಕೇಶವರಾವ್ ಗೋಖಲೆಯವರನ್ನು ನಾಸಿಕ ಜೈಲಿಗೆ ವರ್ಗಾಯಿಸಿದರೆಂದು ತಿಳಿದು ಬರುತ್ತದೆ.

ಕೊಂಗ್ರೆಸ್ ಗೀತೆಯನ್ನು ಹಾಡಿದ್ದಕ್ಕೆ ಕೈದು

ಬೆಂಗಳೂರಿನ ಕಮರ್ಶಿಯಲ್ ಮಾರ್ಗದಲ್ಲಿ ಶ್ರೀ ಸಿಂಗಪ್ಪ ಎಂಬವರು ಕೊಂಗ್ರೆಸ್ ಪದಗಳನ್ನು ಹಾಡಿ ವಿದೇಶಿ ವಸ್ತ್ರ ಬಹಿಷ್ಕಾರ, ಸ್ವದೇಶಿ ಪುರಸ್ಕಾರವನ್ನು ಮಾಡಬೇಕೆಂದು ಹೇಳಿದುದಕ್ಕೆ ಕೈದುಮಾಡಲ್ಪಟ್ಟರು.

ಮೋಟರ್‌ಕಾರ್ ಏಲಂ ಜಯಪ್ರದವಾಗಲಿಲ್ಲ.

ನಾಗಪುರದಲ್ಲಿ ಶ್ರೀ. ಎಮ್ ವಿ ಅಭ್ಯಂಕರರ ಮೋಟರ್ ಕಾರನ್ನು ಎರಡನೇ ಸಲದ್ದಾಗಿ ಏಲಂ ಮಾಡಿದರೂ ಅದಕ್ಕೆ ಸರಕಾರವು ನಿರೀಕ್ಷಿಸಿದಷ್ಟು ಬೆಲೆಯು ಬಾರದಿದ್ದುದರಿಂದ ಏಲಮನ್ನೇ ಹಿಂದಕ್ಕಿಟ್ಟರು. ಎರಡನೆಯ ಸಲದ ಏಲಮಿನಲ್ಲಿ ಒಬ್ಬ ಮಹನೀಯರು ೬೦೦ ರೂಪಾಯಿ ತನಕ ಗಟ್ಟಿ ನಿಂತರು.

ಪಿಕೆಟಿಂಗಿನ ಭರ

ಪೇಶಾವರದಲ್ಲಿ ಪೋಲೀಸರ ನಿಲ್ಲಬಾರದೆಂದು ಪಿಕೆಟ್ ಮಾಡುತ್ತಲಿರುವರು. ಅಬ್ದುಲ್ ಗಫರ್ ಖಾನ್ ಎಂಬ ಲೀಡರೊಬ್ಬರನ್ನು ಪಿಕೆಟರರು ಹಳ್ಳಿಯಲ್ಲೇ ಕೈಗಟ್ಟಿ ಬಿಟ್ಟು ಪೋಲೀಸ ಸ್ಥಳಕ್ಕೆ ಹೋಗದಂತೆ ಮಾಡಿದರು. ಅಲ್ಲಿ ಗುಂಡೆಸೆತವು ನಡೆದು ಇಬ್ಬರು ಮಡಿದರು.

ಶ್ರೀಮತಿ ಮೋತಿಲಾಲರಿಗೆ ಗಾಂಧಿಜೀಯವರ ತಂತಿ

ಶ್ರೀಮತಿ ಮೋತಿಲಾಲರಿಗೆ ಅಲ್ಲಹಾಬಾದಿನ ಸಭೆಯಲ್ಲಿ ವಿಘಾತವಾಯಿತೆಂದು ಪತ್ರಿಕೆಗಳಲ್ಲಿ ಗಾಂಧಿಜೀಯವರು ಓದಿ, ಬೆಸಗೊಂಡು, ಕೊರಗಿ, ಅವರ ಆರೋಗ್ಯ ಕುಶಲತೆಯನ್ನು ಕೇಳಿ ಒಂದು ತಂತಿ ವಿಟ್ಟರು. ಗಾಂಧಿಜೀಯವರ ತಂತಿಗೆ ಉತ್ತರವಾಗಿ ಶ್ರೀ ಆರ್ ಎಸ್ ಪಂಡಿತರು ಬಿಟ್ಟ ತಂತಿಯಲ್ಲಿ ಶ್ರೀಮತಿ ಮೋತಿಲಾಲರು ಗುಣಮುಖರಾಗುತ್ತಿರುವರೆಂದೂ ಅವರು ಸ್ವಸ್ಥಚಿತ್ತದಲ್ಲೇ ಇದ್ದಾರೆಂದೂ ಮತ್ತು ಅವರ ತಲೆಯಲ್ಲಿ ಒಂದು ಘಾಯವಿದೆಯೆಂದೂ ಮೈಯಲ್ಲಿ ೩ ಇಂಚು ಉದ್ದದ ೪ ಘಾಯಗಳಿವೆಯೆಂದೂ, ಅವುಗಳು ಗುಣವಾಗುತ್ತಿವೆಯೆಂದೂ ಬರೆದರು.

+ + + +

ಲಂಡನಿನಲ್ಲಿ ಏನೆಲ್ಲ ನಡೆಯುತ್ತಿದೆ?

ಹಿಂದೂದೇಶದಲ್ಲಿ ನಡೆಯುತ್ತಿರುವ ಕಾಯಿದೆಭಂಗ ಚಳವಳಿಯ ಕಡೆಗೆ ಲಂಡನಿನ ಮುಖ್ಯಾಧಿಕಾರಿಗಳೆಲ್ಲ ಈಗೀಗ ಕಣ್ಣುಬಿಟ್ಟು ಲಕ್ಷ್ಯಕೊಡುತ್ತಿದ್ದಾರೆ. ಸರ್ ಸಾಮುವೇಲ್ ಹೋರರಾದರೂ ತನ್ನ ದಬ್ಬಾಳಿಕೆಯ ದಮನನೀತಿಯು ಸಂಪೂರ್ಣ ಜಯಪ್ರದವಾಗಿರುವುದೆಂದೇ ತಿಳಿದಿರುವರು. ಅವರು ಹೇಳುವ ಮಾತಿನಿಂದ ಅವರಿಗೆ ಇಲ್ಲಿಯ ಸ್ಥಿತಿಯಲ್ಲಿ ನಿರಾಶೆ ಹುಟ್ಟಿದಂತೆ ಕಾಣುವುದಿಲ್ಲ. ಕೊಂಗ್ರೆಸ್ಸಿನವರನ್ನು ಸೆರೆಮನೆಗೆ ಕಳುಹಿದುದರಿಂದ ಹಿಂದೂದೇಶದಲ್ಲಿ ಶಾಂತಿಯು ನೆಲಗೊಳ್ಳುತ್ತಿದೆಯೆಂದೇ ಸಾಮುವೇಲ್ ಹೋರರ ಭಾವನೆ. ಕೆಲವು ಮಂದಿಗಳು ಮಾತ್ರ "ಸರಕಾರವು ತಮ್ಮ ದಬ್ಬಾಳಿಕೆಯ ಶಸ್ತ್ರದಿಂದಾಗಿ ಜಯವನ್ನು ಹೊಂದಿದೆ ಎಂದು ಹೇಳುತ್ತದೆಯಷ್ಟೆ! ಹಾಗಾದರೆ ಆ ಜಯವನ್ನು ಹೊಂದಿಯೂ ದಮನನೀತಿಯನ್ನು ಇನ್ನೂ ಏಕೆ ಹಿಂದಕ್ಕೆ ತೆಗೆಯಲಿಲ್ಲ? ಹಾಗೆ ಆ ನೀತಿಯನ್ನು ಹಿಂತೆಗೆದ ದಿನದಿಂದ ದಬ್ಬಾಳಿಕೆಯು ವಿಜಯಿಯಾಗಲಿಲ್ಲವೆಂದು ... ಲ್ಲವೇ?" ಎಂದು ಪ್ರಶ್ನಿಸುತ್ತಿರುವರು. ಭಾರತ ಸಚಿವರಾದ ಸಾಮುವೇಲ್ ಹೋರರೊಡನೆ 'ನಿಮ್ಮ ಆರ್ಡಿನೆನ್ಸುಗಳು ಎಷ್ಟರ ತನಕ ಜಾರಿಯಲ್ಲಿರುವುವು?' ಎಂದು ಪ್ರಶ್ನಿಸಲು ಅವರು "ಅವುಗಳ ಆಗತ್ಯವು ಎಷ್ಟರ ತನಕ ಇದೆಯೋ ಅಷ್ಟರ ತನಕ ಅವುಗಳಿರುವುವು" ಎಂದಿರುವರು.

ಈಗ ಲಂಡನಿನ ಮ[illegible] ... ಪ್ರಭೃತಿಗಳೂ ಹಿಂದೂದೇಶದಲ್ಲಿ [illegible] ... ಲಾರ್ಡ್ ಅರ್ವಿನ್‌ರವರು ... ಆಲೋಚನೆಯನ್ನು ಮಾಡಬೇಕೆಂಬ ಅಭಿಪ್ರಾಯದವರು. ಲಾರ್ಡ್ ಅರ್ವಿನರ ರಿಪೋರ್ಟಿನಿಂದಾಗಿ ಹಿಂದೂದೇಶಕ್ಕೆ ಹೊಸ ರಾಜ್ಯಾಂಗರಚನೆಯು ... ದೆಂದು ಕೆಲವರು ಖಂಡಿತವಾಗಿ ನಿರ್ಧರಿಸಿರುವರು. ಇದಕ್ಕಾಗಿ ಸಾಮುವೇಲ್ ಹೋರರು 'ಒಂದು ಹೊಸ ರಾಜ್ಯಾಂಗರಚನೆ ಮಾಡಲಾಗಿದೆ ನಿಜ, ಆದರೆ ಎಷ್ಟರ ತನಕ ಇಂಡಿಯಾ ಸರಕಾರದ ಪ್ರಸ್ತುತ ಧೋರಣೆಯ ಜಾರಿಯಲ್ಲಿರುತ್ತದೋ ಅಲ್ಲಿಯ ತನಕ ಹಿಂದೂಸ್ಥಾನದಲ್ಲಿ ಶಾಸನಸುಸ್ತ್ರಮಗಳ ವಿವರಣೆಗಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಶಾಸನಗಳೂ ಜಾರಿಯಲ್ಲಿರುವುವು" ಎಂದಿರುವರು. ಈಗೀಗ ಸರಕಾರದ ಕಾರ್ಯಗಳನ್ನು ಒಡ್ಡಿ ಕೊಂಗ್ರೆಸ್ಸಿಗೆ ಸಹಾನುಭೂತಿಯನ್ನು ತೋರಿಸಿದ ಲಂಡನ್ ಪ್ರಭೃತಿಗಳೂ ಕಂಡುಬರುತ್ತಿರುವರು. [illegible] ಪತ್ರಿಕೆಯು ಕೂಡಾ 'ಈ ಆರ್ಡಿನೆನ್ಸುಗಳು ... ವುವೋ ತಿಳಿಯದು' ಎಂಬುದಾಗಿ ಹೇಳಿದೆ. ಶಾಸನದ ... ಹಿಂದೂದೇಶದಲ್ಲಿ ಬೆಂಬಲವಿದೆಯೋ ಇಲ್ಲವೋ ಎಂಬ ಸಂಗತಿ ಇಂಗ್ಲೆಂಡಿನ ಜನರಿಗೆ ತಿಳಿಯುತ್ತಿಲ್ಲ. ಇದಕ್ಕೆ ... ವನ್ನು ಕಂಡು ಮೆಚ್ಚಿರುವ ಲಂಡನ್ ಪತ್ರಿಕೆಗಳೇ ... ಹಿಂದೂ ಪತ್ರಿಕೆಯ ಲಂಡನ್ ವಾರ್ತಾಸಂಗ್ರಾಹಕರು ಹೇಳುವಂತೆ ಲಾರ್ಡ್ ಅರ್ವಿನರು ಲಂಡನಿಗೆ ಹೋಗುವಾಗ ತನ್ನೊಡನೆ ಎರಡು ರಿಪೋರ್ಟುಗಳನ್ನು ಕೊಂಡೊಯ್ದರು. ಒಂದು—ಹಿಂದೀಯ ಸ್ಥಿತಿಗತಿಗಳ ... ರಿಪೋರ್ಟ್; ಇನ್ನೊಂದು ಪ್ರಧಾನ ಮಂತ್ರಿಯವರ ಅವಗಾಹನೆಗೆ ಎಂದು ರಹಸ್ಯವಾದ ವರದಿ. ಈಗೀಗ ಪ್ರ್ಯಾಂಚಾಯಿಸ್ ಕಮಿಟಿ ಲಂಡನಿಗೆ ಕಳುಹಿಸಿರುವ ಕಾರ್ಯ ಮಾದರಿ ... ಲಂಡನ್ ಧುರೀಣರ ಹೆಚ್ಚಿನ ಸಮಾಲೋಚನೆಯಲ್ಲಿಲ್ಲ. ... ಕಮಿಟಿಯು ಎಷ್ಟರ ತನಕ ಫಲಪ್ರದವಾಗಿರಬಹುದೋ ಎಂಬ ಚಿಂತೆ ಸಂಶಯದಲ್ಲಿ ಇರುವರು. ಆದರೂ ... 'ಲಾರ್ಡ್ ಅರ್ವಿನರ ವರದಿಯ ಬಳಿಕ ಏನು ...' ಎನ್ನುತ್ತಿರುವರು. ಸರಕಾರವೇನೋ ತನ್ನ ಪೂರ್ವ ನಿರ್ಧಾರದಲ್ಲೇ ನೆಲನಿಂತಿದೆ. ಅದು ಯಾವ ರೀತಿ ಸಮಾಧಾನಗಳನ್ನು ಮಾಡುವ ಯತ್ನವನ್ನೂ ನಡೆಸಿಯೂ ಕಂಡುಬರುವುದಿಲ್ಲ. ತಾನು ... ಇಂಡಿಯನ್ ನೇಶನಲ್ ಕೊಂಗ್ರೆಸ್ ಮಹಾಸಭೆಯನ್ನು ನಿಷೇಧಿಸಿದ ಬಳಿಕ ಅಂದೊಂದು ಸರ್ಕಾರವು ಸಮಾಧಾನ ಪ್ರಸ್ತಾಪಕ್ಕೆ ಸಿದ್ಧವಿರುವುದಿಲ್ಲವೆಂಬ ಸಂಗತಿಯನ್ನು ಬಹಿರಂಗ ಪ್ರಕಾಶಗೊಳಿಸುತ್ತದೆ. ಕೆಲವು ಲಂಡನ್ ನಿವಾಸಿಗಳು ಆಲೋಚಿಸುತ್ತಾ—"ಕೆಲವು ಗಣ್ಯ ಕೊಂಗ್ರೆಸ್ ಮುಖಂಡರನ್ನು ಹೊರಬಿಟ್ಟು ಅವರು ತಂತಮ್ಮೊಳಗೆ ಆಲೋಚಿಸುವಂತೆ ಏಕೆ ಪ್ರೇರೇಪಿಸಬಾರದು?" ಎನ್ನುತ್ತಿರುವರು. ಸಂಸ್ಥಾನಿಕರಲ್ಲಿ ಅನೇಕರು ಅಖಿಳ ಭಾರತ ಫೆಡರೇಶನಿಗೆ ಒಪ್ಪಿರುವರಾದರೂ ಅದರಿಂದ ಕೊಂಗ್ರೆಸ್ ಮಹಾಸಭೆಯವರಿಗೆ ಸಮಾಧಾನವಿಲ್ಲವೆಂಬ ಸಂಗತಿಯು ಲಂಡನಿನಲ್ಲಿ ಎಲ್ಲರೂ ತಿಳಿದಿರುವರು.

+ + + +

ಅನುಕ್ರಮಣಿಕೆ.

ಅಗ್ರಲೇಖ.

ಯಾರನ್ನು ನಂಬಬೇಕು? . . . .

ಸ್ಫುಟವಿಚಾರಗಳು ೬

ಸೋಟಿಗಳು ೧೧

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೫

ಒಳದೇಶ ವರ್ತಮಾನ . . . ೫ ೯

ದಕ್ಷಿಣ ಕನ್ನಡ – ಮಂಗಳೂರು, ಉಡುಪಿ, ಕಾಸರಗೋಡು,

ಪುರಂಗಿಪೇಟೆ, ಬಂಟವಾಳ . . ೧೧

ದಿ ವೆಲರಾ ಅಥವಾ ವಿಧಿವಿಲಾಸ ೧೪

ವಿವಿಧ ಸಮಾಚಾರಗಳು . . ೧೧

ಸ್ವಧರ್ಮೇ ನಿಧನಂ ಶ್ರೇಯಃ . ೪

ಮಂಡೋದರಿ ನಾಟಕ ಪ್ರದರ್ಶನ ನಮ್ಮ ನಾಟಕ ೧೫

ಪತ್ರವ್ಯವಹಾರ ೨

ಜೂನ್ ತಾ ೨೦ರೊಳಗೆ ಗಾಂಧಿಯವರ ಬಿಡುಗಡೆ . ೭

ಸ್ವದೇಶಾಭಿಮಾನಿ.

ತಾ. ೨೨ನೇ ಶುಕ್ರವಾರ ಎಪ್ರಿಲ್ ೧೯೩೨

ಯಾರನ್ನು ನಂಬಬೇಕು?

ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಹಲವು ಆಶ್ಚರ್ಯಕರ ಘಟನೆಗಳು ಕಂಡುಬರುತ್ತಿವೆ. ಒಂದು ಕಡೆ ಅಹಿಂಸಾ ವ್ರತಧಾರಿಗಳಾದ ಕಾಂಗ್ರೆಸ್ ಸೇವಕರು, ಇನ್ನೊಂದು ಕಡೆ Law &Order ನ್ನು ಪಾಲಿಸಲು ದೀಕ್ಷಾಬದ್ಧರಾದ ಸರಕಾರಿ ಸೇವಕರು. ಕಾಂಗ್ರೆಸ್ ಅನುಯಾಯಿಗಳು ಹೇಗೆ ತಮ್ಮ ಚಳವಳಿಗಳನ್ನು ನಡೆಸಬೇಕು? ಎಂಬುದರ ವಿಷಯದಲ್ಲಿ ಕಾಂಗ್ರೆಸ್ಸಿನ ನಿಬಂಧನೆಗಳೂ, ಸೂತ್ರಗಳೂ ಇವೆ, ಹಾಗೆಯೇ ಕಾನೂನು ವಿರುದ್ಧವಾದ ಚಳವಳಿಗಳನ್ನು ಹೇಗೆ ಪ್ರತಿರೋಧಿಸಬೇಕು ಎಂಬುದಕ್ಕೆ ಸರಕಾರದಿಂದಲೇ ರಚಿಸಲ್ಪಟ್ಟಿರುವ ಕಾನೂನುಗಳು, ಓರ್ಡಿನೆನ್ಸುಗಳೂ ಇವೆ. ಎರಡೂ ಪಕ್ಷಗಳು ತಮ್ಮ ತಮ್ಮ ನ್ಯಾಯವಾದ ಧೋರಣೆಯ ಆವರಣದೊಳಗೇನೇ ವರ್ತಿಸಿದರೆ ಯಾರನ್ನೂ ದೂರಲಿಕ್ಕೆ ಆಗುವುದಿಲ್ಲ. ಏಕೆಂದರೆ ಕಾಂಗ್ರೆಸ್ಸು ಒಂದು ಧ್ಯೇಯ ಹಿಡಿದು ಕೆಲಸಮಾಡುತ್ತದೆ, ಹಾಗೆಯೇ ಸರಕಾರವು ದೇಶದ ಆಡಳಿತದ ತನ್ನ ಕರ್ತವ್ಯವನ್ನು ಪೂರೈಸುತ್ತದೆ. ಇದರಲ್ಲಿ ಯಾರಿದೂ ತಪ್ಪಿರಲಾರದು.

ಈಗ ಈ ವರೆಗೆ ನಡೆದ ಚಳವಳಿವನ್ನು ಸರಿಯಾಗಿ ಅವಲೋಕಿಸಿ ನೋಡಿದ್ದಲ್ಲಿ ಕಾಂಗ್ರೆಸ್ಸು ತನ್ನ ಧ್ಯೇಯವನ್ನಾಗಲಿ ಸೂತ್ರಗಳನ್ನಾಗಲಿ ಬಿಟ್ಟು ನಡೆದದೆಯೆಂದು ಹೇಳಬರುವಂತಿಲ್ಲ! ಒಂದು ಪಕ್ಷಕ್ಕೆ ಯಾವುದೊಂದು ಕಡೆಯಲ್ಲಿ ಅದರ ಅನುಯಾಯಿಗಳು ವಿಪರೀತವಾಗಿ ವರ್ತಿಸಿರುವರೆಂದು ಆಪಾದಿಸುವುದಾದರೆ ಅಂತಹ ಅಪಾದಿಸಿದ ಸ್ಥಳಗಳಲ್ಲಿ ಸರಕಾರವು ನಿರ್ದಾಕ್ಷಿಣ್ಯವಾಗಿ ವರ್ತಿಸಿ ಶಿಕ್ಷಿಸಿದೆ, ಆದರೆ ಸರಕಾರದ ಅನುಯಾಯಿಗಳ ವಿಚಾರವೇನ!

ಒಂದು ತಪ್ಪಿಗೆ ಒಂದು ಶಿಕ್ಷೆಯೆಂದು ಮೊದಲೇ ನಿರ್ಣಯಿಸಲ್ಪಟ್ಟಿದೆ. ಸಾಲದುದಕ್ಕೆ ಓರ್ಡಿನೆನ್ಸುಗಳೂ ರಚಿಸಲ್ಪಟ್ಟಿವೆ. ಆದರೂ ಅಲ್ಲಲ್ಲಿ ಕಾನೂನು ಮೀರಿದ ರೀತಿಯಲ್ಲಿ ಇದಕ್ಕೆ ತಡೆಯಿಲ್ಲವೇ? ಎಂಬುದು ಈಗ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಅನುಮೋದಿಸುವವರಲ್ಲದವರದೂ ಒಂದು ಪ್ರಶ್ನೆ. ಈ ತರದ ಓರ್ಡಿನೆನ್ಸುಗಳನ್ನು ಹೊರಡಿಸಬೇಕಾಯಿತೆಂಬುದರ ಆತ್ಮಾಚಾರಗಳ ವಿಷಯ ಪಾರ್ಲಿಮೆಂಟಿನಲ್ಲಿಯೂ, ಲೆಜಿಸ್ಲೇಟಿವ್ ಕೌನ್ಸಿಲುಗಳಲ್ಲಿಯೂ ಪ್ರಶ್ನೋತ್ತರಗಳ ಮೂಲಕ ಮಥಿಸಲ್ಪಡುತ್ತಿವೆ. ಆದರೆ ಆಶ್ಚರ್ಯವೆಂದರೆ, ಪಾರ್ಲಿಮೆಂಟಿನೊಳಗಣ ಮತ್ತು ಕೌನ್ಸಿಲಿನೊಳಗಿನ ಸರಕಾರೀ ಉತ್ತರಗಳಿಗೂ, ಮತ್ತು ಆ ಉತ್ತರಗಳಲ್ಲಿ ಸರಕಾರವು ಸ್ಪಷ್ಟಪಡಿಸಿದ ತನ್ನ ಧೋರಣೆಗಳಿಗೂ, ಆ ಧೋರಣೆಯನ್ನು ಪಾಲಿಸುವ ಸರಕಾರೀ ನೌಕರರ ವರ್ತನೆಗೂ ಏನೊಂದೂ ಸಂಬಂಧವಿರದಿದ್ದುದು.

ಮೊನ್ನೆ ಮದ್ರಾಸ್ ಕೌನ್ಸಿಲಿನಲ್ಲಿ ಸರ್ ಉಸ್ಮಾನರು ಪೋಲೀಸ್ ವರ್ತನದ ವಿಷಯ ಹೊಗಳಿಕೆಯನ್ನು ಕೊಟ್ಟರು. ಇರಲಿ, ಈ ಕಠಿಣವಾದ ಪ್ರಸಂಗಗಳಲ್ಲಿ ಅವರು ಹೊಗಳಿಕೆಗೆ ತಕ್ಕವರೇ ಆಗಿರುವರು. ಆದರೆ ಅದೇ ಸಮಯದಲ್ಲಿ ಕೆಲವು ಅಭಯವಚನಗಳೂ ದೊರೆತುವು. ಏನು, ಜನರಿಲ್ಲದ ಕಾನೂನು ವಿರೋಧ ಮಂಡಳಿಯಾಗುವುದಲ್ಲವೆಂದೂ, ಕಾನೂನು ವಿರೋಧ ಮಂಡಳಿಗಲ್ಲದೆ ಇತರರನ್ನು ಹೊಡೆಯಲಾಗುವುದಿಲ್ಲವೆಂದೂ, ಪಿಕೆಟ್‌ಮಾಡುವ ಸ್ವಯಂಸೇವಕರ ಸಂಖ್ಯೆಯು ೫ಕ್ಕಿಂತ ಕಡಿಮೆಯಾಗಿದ್ದರೆ ಹೊಡೆಯಲಾಗುವುದಿಲ್ಲವೆಂದೂ ಕೌನ್ಸಿಲಿನಲ್ಲಿ ಸರಕಾರದ ಪರವಾಗಿ ಹೇಳಿದರು. ಅಲ್ಲದೆ ಪೋಲೀಸ್ ರಾಜ್ಯದಲ್ಲಿ ಬಂದಿಯಾಗಿರುವಾಗ ಹೊಡೆಯುವುದು ಕೇವಲ ಕಾನೂನು ವಿರೋಧವೆಂದೂ, ಅದನ್ನು ಯಾವ ಪೋಲೀಸನೂ ಮಾಡಲಾರನೆಂದೂ ಸಹ ಹೇಳಲ್ಪಟ್ಟಿತು. ಅತ್ತ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಸರ್ ಸಾಮುವೇಲ್ ಹೋರರು ಪೋಲೀಸ್ ವರ್ತನವು ಬಹಳ ಉತ್ತಮವಿದೆಯೆಂದೂ, ಕಂಡಾಬಟ್ಟೆ ಹೊಡೆಯುವುದು ನಿಷಿದ್ಧವಿದೆಯೆಂದೂ ಹೇಳಿದರು. ಆದರೆ, ಇತರ ಕಡೆಯ ಸ್ಥಿತಿ ಹಾಗಿರಲಿ, ನಮ್ಮ ಜಿಲ್ಲೆಯಲ್ಲಿಯೇ ನಡೆಯುವುದೇನು? ಪ್ರೊಫೆಸರ್ ರಾಮರಾಯರಿಗೆ ಹೊಡೆದ ವಿಷಯದಲ್ಲಿ ಏ. ಯು. ಸಿ ಎಸ್. ಛಟ್, ಎಮ್ ಎಲ್ ಸಿ ಮೊದಲಾದವರು, ಮಾನ್ಯ ಕಲೆಕ್ಟರರಿಗೆ ಬರೆದ ಪತ್ರದಿಂದ ವಿವರ ತಿಳಿಯುವುದು. ಅದರಲ್ಲಿ ತೋರಿಸಿದ ಆರೋಪಗಳು ನಿಜವಾದರೆ, ಅವು ಸರ್ ಸಾಮುವೇಲರು ಪಾರ್ಲಿಮೆಂಟಿನಲ್ಲಿಯೂ, ಸರ್ ಉಸ್ಮಾನರು ಮದ್ರಾಸ್ ಕೌನ್ಸಿಲಿನಲ್ಲಿಯೂ ಸ್ಪಷ್ಟಪಡಿಸಿದ ಧೋರಣೆಗೆ ಪೂರ್ಣ ವಿರೋಧವಾಗಿವೆ. ಇತ್ತ ಉಡುಪಿಯಲ್ಲಿ ಯಾರನ್ನೋ ಪೋಲೀಸರ ಠಾಣ್ಯಕ್ಕೆ ಒಯ್ದು ಹೊಡದಿರುವಂತಾಗಿ ಆರೋಪವಿದೆ.

ಪೋಲೀಸರು ಪೆಟ್ಟನ್ನು ಬಲಪಡಿಸುವುದರಿಂದ ಚಳವಳಿವು ಅಡಗೀತೇ ಅಥವಾ ಅಡಗಲಾರದೆ ಎಂದು ಚರ್ಚಿಸುವುದು ನಮ್ಮ ಉದ್ದೇಶವಲ್ಲ, ಅಥವಾ ನಾಳೆ ಹೊಡೆಯುವ ಓರ್ಡಿನೆನ್ಸು ಸರಕಾರವು ರಚಿಸಬಾರದೆಂದೂ ನಾವು ಹೇಳಲಾರೆವು. ಆದರೆ ಸರಕಾರವು ಸ್ಪಷ್ಟವಾಗಿ ಸ್ಪಷ್ಟಪಡಿಸಿದ ಧೋರಣೆವೇ ಈ ರೀತಿಯ ಒಡೆಯಲ್ಪಡುವುದಾದರೆ ಪ್ರಜಾಜನರು ಯಾರ ಮಾತನ್ನು ನಂಬಬೇಕು.

ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಕಾಂಗ್ರೆಸ್ ಸಂಸ್ಥೆಯು ಕಾನೂನು ವಿರೋಧವಾದ ಸಂಸ್ಥೆಯೇ ಎಂಬ ಪ್ರಶ್ನೆಯು ಬಂತು! ಅದರ ಕಮಿಟಿಗಳು ಮೊದಲಾದ ಅಂಗಗಳು ಕಾನೂನಿಗೆ ವಿರೋಧವಾಗಿ ಮಾಡಲ್ಪಟ್ಟಿರುವುದಾದರೂ, ಕಾಂಗ್ರೆಸ್ಸು ಕಾನೂನು ವಿರೋಧವಲ್ಲವೆಂದು ಸರಕಾರದ ಉತ್ತರವಾಯಿತು. ಆದರೆ ಈ ಉತ್ತರ ಸಿಕ್ಕಿ ಕೆಲವೇ ದಿನಗಳಲ್ಲಿ ಡಿಲ್ಲಿಯಲ್ಲಿ ಕಾಂಗ್ರೆಸ್ಸು ಸೇರಲು ತಯಾರಿ ನಡೆಯುವಾಗ ಅದನ್ನು ಸೇರಿಸ ಕೂಡದಾಗಿ ಅಲ್ಲಿನ ಅಧಿಕಾರಿಗಳ ಹುಕುಂವಾಯಿತು.

ವಾರ ವಾರದಿಂದ ಪತ್ರಾಂತಿಕ, ಕೇಂದ್ರ ಸರಕಾರಗಳ ವರದಿಯು ಚಳವಳದ ವಿಷಯ ಪ್ರಕಟವಾಗುತ್ತಿದೆ. ಪ್ರತಿ ವಾರದಿಯು ಪರಿಸ್ಥಿತಿಯು ಸುಧಾರಿಸುತ್ತಿದೆಯೆಂದೂ ಚಳವಳವು ನಿರ್ಬಲವಾಗುತ್ತ ಬರುತ್ತಿದೆಯೆಂದ ಪ್ರಕಟವಾಗುತ್ತಿದೆ. ಪ್ರತಿ ವರದಿಯು ಸಮಯದಲ್ಲಿ ಚಳವಳವು ಸ್ವಲ್ಪ ಸ್ವಲ್ಪ ನಿರ್ಬಲವಾಗುತ್ತಾ ಬಂದದ್ದು ನಿಜವಾದರೆ ಇಷ್ಟರೊಳಗೆ ಚಳವಳವು ನಿರ್ನಾಮವಾಗಿ ಅದರ ವಿರೋಧದ Loyalist ಚಳವಳವು ಕಾಂಗ್ರೆಸನ್ನು ಆಕ್ರಮಿಸಬೇಕಿತ್ತು. ಹಾಗೆ ಅದಂತೆ ತೋರುವುದಿಲ್ಲ.

ಇವೆಲ್ಲ ವಿಷಯಗಳನ್ನು ನೋಡಿದರೆ ಸರ್ ಸಾಮುವೇಲ್ ಹೋರರನ್ನು ನಂಬುವನೊ, ಅಥವಾ ನಮ್ಮ ಸರ್ ಉಸ್ಮಾನ್ ಸಾಹೇಬರನ್ನು ನಂಬುವನೊ, ಇಲ್ಲವೇ ನಮ್ಮ ಹತ್ತಿರದ ವಿಸರ್ಗ ಪೋಲೀಸರನ್ನೇ ನಂಬುವನೋ ಎಂಬುದು ನಮಗೆ ತಿಳಿಯದಾಗಿದೆ.

ವಿದೇಶ ವರ್ತಮಾನ.

— ಅಯರ್ಲೆಂಡು ಬ್ರಿಟಿಷ ಮುಷ್ಟಿಯಿಂದ ಸಂಪೂರ್ಣ ಸ್ವಾತಂತ್ರ್ಯದಿಂದಿರಬೇಕು. ಕಪ್ಪದ ಹೆಸರಿನಿಂದ ಕುರುಡು ಕಾಸು ಕೂಡಾ ಬ್ರಿಟಿಷರಿಗೆ ಐರಿಸರು ಸಲ್ಲಿಸಲು ಸಾಧ್ಯವಿಲ್ಲ. ಆದರೂ ಅಯರ್ಲೆಂಡಿಗೆ ಅಂಗ್ಲೇಯರ ಮೇಲೆ ವೈರತ್ವವಿಲ್ಲವೆಂದು ಅಯರ್ಲೆಂಡಿನ ಅಧ್ಯಕ್ಷರಾದ ಡಿ ವೆಲರಾವರು ಹೇಳಿರುವರು.

— ಚೀನಾ ಜಪಾನರ ಯುದ್ಧವು ಅಂತ್ಯವಾಗಿದೆ. ಆದರೂ ದ್ವಿಪಕ್ಷಗಳೂ ಶಸ್ತ್ರವನ್ನು ಕೆಳಗಿಟ್ಟು ತಮ್ಮ ತಮ್ಮ ಕಾರ್ಯಾಭಿಮುಖರಾಗಿ ಹೋಗಿರುವುದಿಲ್ಲ. ವಾದವಿವಾದವು ನಡೆಯುತ್ತಿದೆ.

— "ಮುಂಬಾಯಿಯಲ್ಲಿ ಸ್ವಲ್ಪ ಪಿಕೆಟಿಂಗ್ ಕಾರ್ಯವು ನಡೆಯುತ್ತಿದೆ. ಕಾನ್‌ಪುರದಲ್ಲಿ ಕೋಮು ಗಲಾಟೆಯಾಯಿತು. ಪೇಶಾವರದ ಸ್ಥಿತಿಯು ಒಳ್ಳೆಯದಿದೆ. ಕಾಂಗ್ರೆಸ್ಸು ಅದರ ಅಧಿವೇಶನವನ್ನು ಜರಗಿಸದಾರದಾಗಿ ಅಶಾ ಬಿಸಲಾಗಿದೆ. ಒಟ್ಟಿನಲ್ಲಿ ಶಾಂತಿಯು ನೆಲೆಗೊಂಡಿದ' ಎಂಬ ಅಭಿಪ್ರಾಯವನ್ನು ಸರ್ ಸಾಮುವೇಲ್ ಹೋರರು ಲಂಡನಿನಲ್ಲಿ ಹೌಸ್ ಒಫ್ ಕೊಮನ್ಸ್ ಸಭೆಯಲ್ಲಿ ಕೊಟ್ಟರು.

— ನ್ಯೂಯೋರ್ಕಿನಲ್ಲಿಯ ಕೆಪ್ಟನ್ ಲಿಂಡನ್ ಬರ್ಗ ಎಂಬವರ ಹಸುಗೂಸನ್ನು ಪುಂಡರು ಕದ್ದುಕೊಂಡು ಹೋಗಿ ತಮಗೆ ೧೦,೦೦೦ ಡೊಲ್ಲರುಗಳನ್ನು ಕೊಡದೆ ಮಗುವನ್ನು ಹಿಂದೆ ಕೊಡುವುದಿಲ್ಲವೆಂದು ರಹಸ್ಯವಾಗಿ ಪ್ರಕಟಿಸಿರುವರಷ್ಟೆ! ಈ ಮಗುವಿನ ಪತ್ತೆ ಮಾಡಬೇಕೆಂದು ಅಮೇರಿಕದ ಸರಕಾರವೇ ಯತ್ನಿಸುತ್ತಿದೆ. ಎಲ್ಲೆಲ್ಲಿಯೂ ನೋಟೀಸು ಜಾಹೀರಾಗಿದೆ. ಮಗುವನ್ನು ಕದ್ದವರ ಚಿಹ್ನೆಯು ಸಿಕ್ಕಿದೊಡನೆ ಸರಕಾರಕ್ಕೆ ತಿಳಿಯಲಿಕಬೇಕೆಂದು ಸಾರಲಾಗಿದೆ. ಪುಂಡರು ಈಗ ತಮಗೆ ೧೫೦,೦೦೦ ಡೊಲ್ಲರುಗಳು ಕೊಟ್ಟರೆ ತಾವು ಮಗುವನ್ನು ಕೊಡುವೆವೆಂದು ಕಳ್ಳತನದ ಪ್ರಕಟಣೆಯನ್ನು ಮಾಡಿರುವರು.

ಒಳದೇಶ ವರ್ತಮಾನ

— ಮುಂಬಾಯಿಯಲ್ಲಿ ಮಾತ್ರ ಬಕ್ರೀದ್ ಹಬ್ಬದ ದಿನ ಏಕೋಬಂದು ಗಲಾಟೆಯಾದ ವಾರ್ತೆ ಬಂದಿದೆ. ಕೆಲವು ಮುಸಲ್ಮಾನರು ಬಕ್ರೀದ್ ದಿನಾಚರಣೆಯನ್ನು ಜುಗರಾಡುತ್ತಾ ಕೈಕೊಂಡಿದ್ದರು. ಇದನ್ನು ಕಂಡು ಶೇಕ್‌ಮೊಹಿದಿನ ಎಂಬ ಮುಸಲ್ಮಾನ ಸಬ್ ಇನ್ಸ್‌ಪೆಕ್ಟರರು ಜುಗಾರಾಟದ ಸಾಮಾನುಗಳನ್ನು ಕೈವಶಮಾಡಿದರು. ಇದನ್ನು ಕಂಡು ಜಫರ್ ಮಹಮ್ಮ ಎಂಬ ಜಟ್ಟಿಗೆ ತನ್ನ ಒಡನಾಡಿಗಳನ್ನು ವಿಮುಕ್ತಗೊಳಿಸಬೇಕೆಂಬ ಆಶೆಯುಂಟಾಗಿ ಸಬ್ ಇನ್ಸ್‌ಪೆಕ್ಟರರಿಗೆ ಹೊಡೆದನು. ಸಬ್ ಇನ್ಸ್‌ಪೆಕ್ಟರನು ತನ್ನ ಗುಂಡು ಹಾರಿಸಲು ಅದು ಒಬ್ಬ ಹಿಂದೂವಿಗೆ ತಾಗಿ ಘಾಯವಾಯಿತು. ಕೆಲವು ಕೈದುಗಳಾಗಿವೆ.

— ಗಾಂಧೀ ಸಾಮುವೇಲ್ ಹೋರರೊಳಗೆ ಪತ್ರವ್ಯವಹಾರವು ನಡೆಯುವುದಿಲ್ಲವೆಂದು ಸರಕಾರಗಳೆಸ್ತುತ್ತಿವೆ. ಒಬ್ಬ ವಾರ್ತಾ ಸಂಗ್ರಹಕಾರರು ಅವರೊಳಗೆ ಪತ್ರವ್ಯವಹಾರ ನಡೆಯುತ್ತಿದೆಂಬುದು ಖಂಡಿತವಾಗಿರುವಾಗ ಗಾಂಧಿ, ಹೋರರೊಳಗೆ ಪ್ರಣಯ ಪತ್ರವ್ಯವಹಾರವು ನಡೆಯದೆ ಅವರು ರಾಜಕೀಯ ಸಂಗತಿಯ ಕುರಿತೇ ವ್ಯವಹರಿಸುತ್ತಿರಬೇಕು ಎಂದೆನ್ನುತ್ತಿರುವರು.

— ಮಧ್ಯಪ್ರಾಂತದಲ್ಲಿ ಕಳೆದ ವರ್ಷದಲ್ಲಿ ವ್ಯಾಘ್ರಗಳಿಂದಾಗಿ ಸತ್ತ ಜನಸಂಖ್ಯೆಯ ಪಟ್ಟಿಯನ್ನು ಮಾಡುವಾಗ ೧೦೪ ಮಂದಿಗಳು ಹುಲಿಗಳಿಂದಾಗಿಯೂ ೯೯ ಮಂದಿಗಳು ಇನ್ನಿತರ ಕಾಡುಮೃಗಗಳಿಂದಲೂ ಮಡಿದಂತೆ ತಿಳಿಯಿತು. ಅಲ್ಲದೆ ೧೯೩೦ರಲ್ಲಿ ವಿಷ ಜಂತುಗಳಿಂದ ೯೩೨ ಜನರು ಮಡಿದರು. ೧೯೩೧ರಲ್ಲಿ ಒಟ್ಟು ೧೫೫೯ ಜನರು ಮಡಿದಂತೆಯೂ ತಿಳಿದುಬಂತು.

ಕಲ್ಕತ್ತದ ಧಂ ಧಂ ಎಂಬಲ್ಲಿ ಎಂ ಅಮ್ಮದ್‌ಖಾನ್ ಎಂಬವನು ಶಿಲಂಟಿ ಮಂದಿಗಳೊಡಗೂಡಿ ತನ್ನ ಜೋಡುನಳಿಗೆಯ ಬಂದೂಕನ್ನು ಹಿಡಿದುಕೊಂಡು ಕಾಡಿನಲ್ಲಿ ಬೇಟೆಯಾಡಿ ವ್ಯಾಘ್ರಗಳ ಪ್ರಾಣಾಪಹರಣ ಮಾಡಲುದ್ಯುಕ್ತರಾಗಿದ್ದರು. ಒಂದು ಕಾಡಿನಲ್ಲಿ ತನ್ನ ಹೆಗಲ ಮೇಲೆ ಬಂದೂಕನ್ನು ಇರಿಸಿಕೊಂಡು ಹೋಗುತ್ತಿದ್ದಾಗ ಪ್ರಾಣಾಪಹಾರಿ ಬಂದೂಕು ಸಿಡಿದು ಹಾರಿತು. ಒಡನೆ ಸಾಹೇಬರನ್ನು ಹಿಂಬಾಲಿಸುತ್ತಿದ್ದ ನಾಲ್ಕು ಮಂದಿ ಜವಾನರಿಗೆ ಗುಂಡೇಟುಗಳು ಬಿದ್ದು ಒಬ್ಬನು ಅಲ್ಲೇ ಸ್ವರ್ಗಸ್ಥನಾದನು. ಇಬ್ಬರು ತಮ್ಮ ನೇತ್ರದಿಂದಲೂ, ಪ್ರಾಣಗಳ ನೇತ್ರದಿಂದಲೂ ಬದ್ದೆಯಾದರು. ಅಮ್ಮದ್ ಸಾಹೇಬರು ಕೂಡಲೆ ಧೈರ್ಯದಿಂದ ಹೋಗಿ ಪೋಲೀಸರಿಗೆ ಸಿಕ್ಕಿದರು.

ಕೆಟ್ಟಾದಲ್ಲಿ ಜವಸ್ವಾನ್ ಎಂಬವರ ಪತ್ನಿಯನ್ನು ಹಗಲಲ್ಲಿ ಕೊಂದು ಪಂಕರಿಯಾಗಿದ್ದ ಕನ್ಯಾರ್‌ಸಿಂಗ್ ಮತ್ತು ಮಹಮ್ಮದ ದಿನ್ ಎಂಬ ಮುಸ್ಸಿರ್ಲರ ತಮ್ಮ ಭಯಾಸ್ತತೆಯ ಪ್ರಥಮವಾಗಿ ಸ್ಪಷ್ಟ ಪೋಲೀಸರ ಸಂಶಯಕ್ಕೊಳಗಾಗಿ ಸಿಕ್ಕಿ ಜನ್ಮಟ್ಟಾಪ್ತಿಗೆ ಗುರಿಯಾದರು.

— ನಾಸಿಕದಲ್ಲಿ ಸ್ಪೃಶ್ಯಾಸ್ಪೃಶ್ಯರ ದೇವಸ್ಥಾನ ಪ್ರವೇಶ ಹೋರಾಟವು ನಡೆಯುತ್ತಿದ್ದು ಮೊನ್ನೆ ಅಸ್ಪೃಶ್ಯರು ಸ್ಪೃಶ್ಯರಿಗೆ ಕಲ್ಲೆಸೆದು ಪೋಲೀಸರ ಲಕ್ಷ್ಯವು ತಮ್ಮ ಮೇಲೆ ಬೀಳುವಂತೆ ಮಾಡಿ ಸುಮಾರು ೧೩ ಮಂದಿಗಳು ದೇವಸ್ಥಾನದ ದೇವರ ಹೆಸರಿನಲ್ಲಿ ಸರಕಾರದ ಸೆರೆಯನ್ನು ಹೊಕ್ಕರು.

— ಲಕ್ನೋವಿನಲ್ಲಿ ಒಂದು ಬಯಲು ಪ್ರದೇಶದಲ್ಲಿ ಕೆಲವರು ಮಲಗಿದ್ದರು. ಒಬ್ಬ ಪುಂಡನು ರಾತ್ರಿ ತನ್ನ ಕಾರನ್ನು ಮಲಗಿದ್ದವರ ಮೇಲೆ ಕೈತಪ್ಪಿ ಓಡಿಸಿದನು. ಇಬ್ಬರು ಮಡಿದರು. ಮೋಟರು ಸುರಕ್ಷಿತ!

೨೦,೦೦೦ ರೂಪಾಯಿ ಜುಲುಮಾನೆ.

ಮುಂಬಾಯಿಯ ಪ್ರಸಿದ್ಧ ವರ್ತಕರಾದ ಶ್ರೀ ವಾಲ್‌ಚಂದ್ ಹೀರಾಚಂದರ ಸಹೋದರರಾದ ಶ್ರೀ ಗೋಕುಲ್‌ಚಂದ್ ಹೀರಾಚಂದರು ಸೊಲ್ಲಾಪುರದಲ್ಲಿ ಪೋಲೀಸ್ ಭೇಟಿಯನ್ನುಲ್ಲಂಘಿಸಿದುದಕ್ಕಾಗಿ ೧೮ ತಿಂಗಳ ಕಠಿಣ ಸಜೆಗೂ ಅದರ ಮೇಲೆ ೨೦,೦೦೦ ರೂಪಾಯಿ ಜುಲುಮಾನೆಗೂ ಗುರಿಯಾದರು. ಇವರ ಐಶ್ವರ್ಯದ ಅಳತೆಯ ಮೇರೆಗೆ ಇಂತಹ ಜುಲುಮಾನೆಯಂತೆ.

—+—+—+—

ಬಂಗಾಳದಲ್ಲಿನ ಸ್ವಯಂಸೇವಕರಿಂದ ಕೆಲವರನ್ನು ತಿಸ್ಸಿಲ್ಲ್ ವಾಚ ಸ್ಕೀಟರ, ಪಡವಿಗೆ ವರ್ಗಾಯಿಸುವ ಆಲೋಚನೆಯಿದೆಯಂತೆ. ಇದರ ಕುರಿತು, ಸಾಮುವೇಲ್ ಹೋರರೊಡನೆ ಒಬ್ಬರು ಪ್ರಶ್ನಿಸಿದ್ದಕ್ಕೆ ಕ್ರಾಂತಿಕಾರರ ಕೈಯಲ್ಲಿ ನರಳಿದ ಕೆಲವರನ್ನು ಈ ಪದವಿಗೆ ತರಬೇಕೆಂಬ ಆಲೋಚನೆಯಿದೆ ಎಂಬುದಾಗಿ ಹೇಳಿದರು.

— ಮುಂಬಾಯಿಯ ದಾದರ್ ಎಂಬಲ್ಲಿ ಹಿಂದೂಗಳು ಹನುಮಾನ್ ಜಯಂತಿಯನ್ನು ಭಜನೆ ಸಮೇತ ಮಾಡಲಿದ್ದಾಗ, ಭಜನೆ ಮಂಡಳಿಯು ಬಳಿಯಿದ್ದ ಒಂದು ಹೊಸ ಮಸೀದಿಯ ಮುಸ್ಲಿಮರು ಗುಲ್ಲೆಬ್ಬಿಸಿ, ಆ ಗುಲ್ಲು ಮೌಲಾನಾ ಶೌಕತಾಲಿಯವರನ್ನೂ ಇನ್ನಿತರ ಮುಸ್ಲಿಮರನ್ನೂ ಅಲ್ಲಿ ಬರಮಾಡಿದ ಮೇಲೆ ಹಿಂದೂಗಳು ತಲೆ ಬಾಗಿಸದೆ ಭಜನೆ ಮಾಡಬಹುದೆಂಬ ಇತ್ಯರ್ಥವಾಯಿತು. ಆದರೂ ಹಿಂದೂಗಳು ಭಜನೆಯನ್ನು ಮಾಡಲೇ ಬಾರದೆಂಬ ಹಠದಿಂದ ತಲೆಗೆಟ್ಟ ಮುಸ್ಲಿಮರು ಎದ್ದೇ ನಿಂತರು. ಕಲ್ಲುಗಳ ಸುರಿಮಳೆಯು ಬಿದ್ದು ಅನೇಕರು ಜಖಂಗೊಂಡರು. ಪೋಲೀಸರು ಬಂದು ಲಾಠಿಯಾಟ ನಡೆಸಿದರೂ ಶಮನವಾಗದಿರಲು ಗುಂಡು ಹಾರಿಸಲಾಯಿತು. ಒಬ್ಬ ಮುಸ್ಲಿಮನಿಗೆ ಘಾಯವಾಗಿದೆ — ಅಷ್ಟೆ.

— ಅಖಿಳ ಭಾರತ ಕೊಂಗ್ರೆಸ್ ಮಹಾಸಭೆಯ ಸ್ವಾಗತ ಮಂಡಳಿಯ ಸದಸ್ಯರಾದ ಶ್ರೀಯುತ ಪ್ಯಾರಿಲಾಲ್ ಶರ್ಮ, ಲಾಲ್ ಶಂಕರ್ ಲಾಲ್, ಜೆ. ಎನ್. ಸಹಾನಿ, ಮೌಲಾನಾ ಅಬ್ದುಲ್ಲ, ಲಾಲಾ ಸರ್ದಾರ್ [illegible]ಲ್ ಸಿಂಗ್ ಮೊದಲಾದವರ ಮನೆಗಳು ಡಿಲ್ಲಿಯಲ್ಲಿ ಪೋಲೀಸರ ಜಪ್ತಿಗೊಳಗಾದುವು. ಸ್ವಾಗತ ಮಂಡಳಿಯ ಆಫೀಸಿಯನ್ನು ಜಪ್ತಿ ಮಾಡಿದರು.

— "ಅಖಿಳ ಭಾರತ ಕೊಂಗ್ರೆಸ್ಸು ಮಹಾಸಭೆಯು ನಿಷೇಧಿಸಲ್ಪಡಲಿಲ್ಲ. ಆದುದರಿಂದ ಕೊಂಗ್ರೆಸ್ ಅಧಿವೇಶನವು ಜರಗಲಿದೆ. ಪ್ರತಿನಿಧಿಗಳೆಲ್ಲರೂ ಬಂದೇ ಬರುವರೆಂದು ಆಶಿಸುತ್ತೇನೆ" ಎಂದು ಸರೋಜಿನಿ ನಾಯ್ಡುರವರು ಹೇಳಿರುವರು.

— ಜಯಪುರದ ಮಹಾರಾಜರಿಗೆ ಜೋಧಪುರ ಮನೆತನದ ಒಬ್ಬ ರಾಜಕುಮಾರಿಯನ್ನು ಕೊಟ್ಟು ತಾ. ೨೪ನೇ ದಿನ ವಿವಾಹವಾಗುವುದು.

— ಅಲ್ಲಹಾಬಾದಿನಲ್ಲಿ ದಿವಂಗತ ಪಂಡಿತ ಮೋತಿಲಾಲರ ಸೆಕ್ರೆಟರಿಯಾಗಿದ್ದ ಶ್ರೀ ಎಸ್. ಡಿ. ಉಪಾಧ್ಯಾಯರು ಮೆರವಣಿಗೆಯಲ್ಲಿ ಮುಂದಾಳತನವನ್ನು ವಹಿಸಿದರೆಂಬ ಅಪಾದನೆಯ ಮೇಲೆ ಕೈದುಮಾಡಲ್ಪಟ್ಟಿರುವರು.

— ನಾಗಪುರದ ಶ್ರೀ ಅಭ್ಯಂಕರರ ಮೇಲಿನ ಜುಲ್ಮಾನೆಗಾಗಿ ಅವರ ಕುರ್ಚಿ ಮೇಜುಗಳು ಒಬ್ಬ ಮಾರ್ವಾಡಿಯೊಬ್ಬನಿಗೆ ರೂ ೪೭ಕ್ಕೆ ಏಲಂ ಮಾಡಿಕೊಡಲಾಯಿತು.

— ಕೊಂಗ್ರೆಸ್ ಕೆಲಸಗಾರರಿಗೆ ಅನ್ನ ಕೊಟ್ಟುದಕ್ಕಾಗಿ ನಾಗಪುರದಲ್ಲಿನ ವರ್ತಕರಾದ ಶ್ರೀ ಶಾಂತಿಚರಣ ಶಾರಫ್ ಎಂಬವರಿಗೆ ಆರು ತಿಂಗಳ ಕಠಿಣ ಸಜೆ ಮತ್ತು ೧೦೦೦ ರೂಪಾಯಿ ಜುಲ್ಮಾನೆ.

— ಶೌಕತಾಲಿಯವರ ಮಸ್ಕತ್‌ಗೆ ಹೋಗಿ ಕರಾಚಿಯಿಂದ ವಿಮಾನ ಮೂಲಕ ಮುಂಬಾಯಿಗೆ ಹಾರಿರುವರು. ಮಸ್ಕತ್‌ನಲ್ಲಿ ತನ್ನ ಕೆಲಸವು ಜಯಪ್ರದವಾಯಿತೆಂದು ಶೌಕತಾಲಿಯವರು ಸಿಜವಾಗಿ ಹೇಳಿರುವರು.

ಯಕ್ಷಗಾನದ ಕಚೇರಿ — ನೇ ತಾ. ೧ನೇ ಆದಿತ್ಯವಾರ ರಾತ್ರಿ ೯ ಗಂಟೆಗೆ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಿಲ್ಲವರ ಪರೋಪಕಾರ ಸಮಿತಿ, ಕೊಳಂಬೆ ಕಂದಾವರ, ಇದರ ಸಹಾಯಾರ್ಥವಾಗಿ ನಡೆಯಲಿರುವುದು. ಪ್ರಸಂಗ ಸುಧನ್ವ ಕಾಳಗ. ಭಾಗವತರು — ಮಹಾಬಲ ಸೋಂದರು ಮತ್ತು ಮಾಂಬಾಡಿ ನಾರಾಯಣ ಭಾಗವತರು. ಮೃದಂಗ ವಾದನ — ಕದ್ರಿ ಕಿಟ್ಟಣ್ಣನವರು. ಶ್ರೀಗಳಾದ ಕೆ. ಪಿ. ವೆಂಕಪ್ಪ ಶೆಟ್ರು — ಅರ್ಜುನ. ಗುಂಡರಾವ್ — ಮುಂತ್ರಿ ಸುಬ್ರಾಯಾಚಾರಿಗಳು — ಹಂಸಧ್ವಜ. ವೆಂಕಪ್ಪ ಶೆಟ್ರು — ಸುಮತಿ. ನಾರಾಯಣ [illegible] — ಸುಧನ್ವ. ಜನಾರ್ಧನ ಶೆಟ್ರು — ಸುಭದ್ರೆ. ಒಡೆಯರ್ [illegible] H — ಕುವರಿ. ಭಲ್ಲಕ್ಕೊದಾಯರು — ಪ್ರಭಾವತಿ. ಬಾಬಣ್ಣಶ್ಯಾನುಭೋಗರು — ಶಂಖಲಿಖಿತರು. ಕೃಷ್ಣಮಲ್ಲಿಯರು — ವೃಷಕೇತು. ವಿಠಲಶೆಟ್ರು — ಪ್ರದ್ಯುಮ್ನ. ಪರಮೇಶ್ವರಯ್ಯ ಅನುಸಾಲ್ವ. ಶಂಕರನಾರಾಯಣ ಶಾಸ್ತ್ರಿಗಳು — ಕೃಷ್ಣ. ಇವರೇ ಮೊದಲಾದ ದಕ್ಷಿಣ ಕನ್ನಡದ ಸುಪ್ರಸಿದ್ಧ ಅರ್ಥಧಾರಿಗಳು ಇದರಲ್ಲಿ ಪಾತ್ರ ವಹಿಸಲಿರುವರು. ಟಿಕೇಟು ದರ — ಕುರ್ಚಿ ರೂ ೧, ಬೆಂಚು ಆಣೆ ೮ ಮತ್ತು ನೆಲ ೪ ಆಣೆ. ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಲಾಗುವುದು. ಬಿಲ್ಲವರೆಂದರೆ ಹಳ್ಳಿಗಳಲ್ಲಿರುವ ವ್ಯವಸಾಯ ವೃತ್ತಿಯಿಂದಲೇ ಜೀವನ ನಡಿಸುವ ಎಲ್ಲಾ ಸಮಾಜಕ್ಕೆ ಸೇರಿರುವ ಶ್ರಮಜೀವಿಗಳಾಗಿರುತ್ತಾರಲ್ಲದೆ ಯಾವುದಾದರೊಂದು ಸಮಾಜದವರಲ್ಲವೆಂದು ತಿಳಿದುಬರುತ್ತದಾದುದರಿಂದ ಬಡಹಳ್ಳಿಗರ ಉದ್ಧಾರಾರ್ಥವಾದ ಈ ಸಮಿತಿಯ ಸಹಾಯಕ್ಕಾಗಿ ನಡೆಸಲ್ಪಡುವ ಗಾಯನ ಕಚೇರಿಯು ಎಲ್ಲರಿಂದಲೂ ಪ್ರೋತ್ಸಾಹನೀಯವಿದೆ.

+ + + +

ದಕ್ಷಿಣ ಕನ್ನಡ.

ಮಂಗಳೂರು:— ಕಳೆದ ಶುಕ್ರವಾರ ದಿನ ಬೆಳಿಗ್ಗೆ ತಾಲೂಕು ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿದ್ದ ಶ್ರೀ ಆನಂತ ರೈಗಳ ಮನೆಯನ್ನು ಪೋಲೀಸರು ಜಪ್ತಿ ಮಾಡಿದರು. ಒಂದು ಟೈಪ್‌ರೈಟರ್ ಮತ್ತು ಕೆಲವು ಕಾಗದ ಪತ್ರಗಳನ್ನೂ ಕೊಂಡೊಯ್ದರು.

ನಾಳೆ ಇಲ್ಲಿಯ ಭುವನೇಂದ್ರ ತೀರ್ಥ ಸಂಗೀತ ನಾಟಕ ಸಭಾ ಇವರು ಹಿಂದೂಸ್ಥಾನ ಸಿನೆಮಾ ಥಿಯೇಟರಿನಲ್ಲಿ ಶ್ರೀಕೃಷ್ಣಮಾಯಾ ಎಂಬ ನಾಟಕವನ್ನು ಅಭಿನಯಿಸಲಿರುವರು.

ಕಳೆದ ವಾರ ಕೈದುಮಾಡಲ್ಪಟ್ಟ ಶ್ರೀ ಗುಲ್ವಾಡಿ ಶಾಂತಾಬಾಯಿ ಮತ್ತು ಸಂಜೀವಿಬಾಯಿ ಇವರ ವಿಚಾರಣೆ ನಡೆದು ಮೊದಲನೆಯವರಿಗೆ ೫ ತಿಂಗಳ ಸಜೆಯನ್ನೂ ಸಿ ತರಗತಿಯನ್ನೂ ಕೊಟ್ಟಿರುವರು. ಎರಡನೆಯವರನ್ನು ಬಿಟ್ಟುಬಿಟ್ಟಿರುವರು.

ಔಸ್ಕೊ ಪೋಲಿಟನ್ ಕ್ಲಬ್ಬಿನ ಪಂದ್ಯಾಟದಲ್ಲಿ ಶ್ರೀ ಮಾಧವ ಕಾಮತರು ಸಿಂಗಲ್ಸ್ ಕಪ್ಪನ್ನೂ ಶ್ರೀ ಉಗ್ಗಪ್ಪ ಶೆಟ್ಟಿ ಮತ್ತು ಶ್ರೀ ಜಿ. ನಾರಾಯಣರಾವ್ ಇವರು ಡಬ್ಬಲ್ಸ್ ಕಪ್ಪನ್ನೂ ಪಡೆದರು.

ತಾ. ೧೬ಕ್ಕೆ ಅಂತ್ಯವಾಗುವ ಮುನಿಸಿಪಾಲಿಟಿಯ ಹಿಂದಿನ ವಾರದ ರಿಪೋರ್ಟಿನಿಂದ ತಿಳಿದುಬರುವಂತೆ ೧೫ ಮರಣ ೩೭ ಜನನಗಳಾಗಿರುತ್ತವೆ.

ಮಡಿಕೇರಿಗುತ್ತೆಯಲ್ಲಿ ಒಬ್ಬ ಕ್ರೈಸ್ತನು ಚೆನ್ನಾಗಿ ಸಾರಾಯಿ ಕುಡಿದು ಚಪ್ಪರಾದರ ಸ್ತ್ರೀಯೊಬ್ಬಳ ಮೇಲೆ ಅತಿಕ್ರಮ ಪ್ರವೇಶ ಮಾಡಿದುದಕ್ಕೆ ೩ ತಿಂಗಳು ಅವನಿಗೆ ಕತ್ತಿನಿಂದ ತಿವಿದನು. ಅವನ ಮೇಲೆ ಖಟ್ಲೆ ನಡೆದಿದೆಯಾಗಿಯೂ ತಿಳಿದುಬಂದಿದೆ.

ತಾ. ೧೩ರಲ್ಲಿ ಕೈದುಮಾಡಲ್ಪಟ್ಟ ಶ್ರೀಮತಿ ಬೆಳ್ಳಾಡಿ ಲಕ್ಷ್ಮೀಬಾಯಿಯವರಿಗೆ ೪ ತಿಂಗಳ ಕಠಿಣ ಸಜೆಯೂ ಕೈದೀ ಶ್ರೀ ತಿಮ್ಮಪ್ಪ ಶೆಟ್ಟರಿಗೆ ೩ ತಿಂಗಳು ಕಠಿಣ ಸಜೆಯೂ ವಿಧಿಸಲ್ಪಟ್ಟಿತು. ಇಬ್ಬರಿಗೂ 'ಬಿ' ಕ್ಲಾಸ್ ಸಿಕ್ಕಿದೆ.

ನಾಳೆ ಸಂಜೆ ೫ ಘಂಟೆಗೆ ಇಲ್ಲಿಯ ಜಿಲ್ಲಾ ಮೆಡಿಕಲ್ ಅಸೋಸಿಯೇಶನಿನವರ ಒಂದು ಸಭೆಯು ಡಾ. ಗಣಪತಿ ಅಯ್ಯರ್ ಎಲ್. ಎಮ್. ಎಂಡ್ ಎಸ್. ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಕಳೆದ ಸೌರಮಾನ ಯುಗಾದಿಯ ದಿನ ಇಲ್ಲಿಯ ಶ್ರೀ ಜ್ಞಾನೋದಯ ಸಮಾಜದ ಇಪ್ಪತ್ತರಡನೆಯ ವಾರ್ಷಿಕೋತ್ಸವವು ಜರಗಿತಲ್ಲದೆ ಈ ಸಮಾಜದ ರಜತ ಜಯಂತಿಯೂ ೧೯೩೫ರಲ್ಲಿ ಜರಗಲಿದೆ. ಅದಕ್ಕಾಗಿ ಶ್ರೀ ಕೈಪುಂಜಾಲ್ ಚೆನ್ನಪ್ಪನವರು ೧೦೦ ರೂಪಾಯಿ. ಶ್ರೀ ಮೋಹನಪ್ಪ ತಿಂಗಳಾಯರು ತನ್ನ ಲೆಖ್ಖದಲ್ಲಿ ೨೦೦. ತನ್ನ ತಂದೆ ಸ್ವರ್ಗೀಯ ಬಸವ ಪೂಜಾರಿಯವರ ಹೆಸರಿಂದ ರೂ ೫೦. ತನ್ನ ಮಾವ ಸ್ವರ್ಗೀಯ ಮುಹಾಲಿಂಗ ತಿಂಗಳಾಯರ ಹೆಸರಿನಿಂದ ರೂ ೫೦. ಅಸ್ವಸ್ಥದಿಂದ ಮರಣಹೊಂದಿರುವ ತನ್ನ ತಮ್ಮ ಲಕ್ಷ್ಮಣ ತಿಂಗಳಾಯರ ಹೆಸರಿನ ರೂ ೧೦೦ ಕೊಡಲು ಸಾಸ್ವಾರು ರೂಪಾಯಿ. ಸಮಾಜದ ಅಧ್ಯಕ್ಷರಾದ ಶ್ರೀಮಾನ್ ಕುದ್ರೋಳಿ ಗುರುವಪ್ಪ ಕಲೇಕ್ಟರರು ರೂ ೧೦೦. ಶ್ರೀ ಎಚ್. ಸೋಮಯ್ಯ ಮಂಡಿಹಾಳಯರು ರೂ ೧೦೦. ಲಕ್ಷ್ಮಣ ತಿಂಗಳಾಯ ಮತ್ತು ಮೋಹನಪ್ಪ ಸುವರ್ಣರ ಪಾಲ್ಗೊಂಡವರು ರೂ ೧೦೦, ಕುದ್ರೋಳಿ ಪದದೇತಿ ಪುತ್ರಾಣ್ಣಯ್ಯ ರೂ ೫೦, ಜೊತೆಗೆ ಬಜಾರ ಸದ್ದಪ್ಪ ತಿಂಗಳಾಯರು ರೂ ೧೦೦. ಬೆಂಗರೆ ಕೂಸಯ್ಯ ಪುತ್ರಣ್ಣಾಯರು ರೂ ೧೦೦. ಬೈಕಂಪಾಡಿ ಮೋಹನಯ್ಯ ಕರುಣಾಕರರು ರೂ ೫೦. ಮುಲ್ಕಿ ಲಕ್ಷ್ಮಣ ಬಂಗೇರರು ರೂ ೧೦೦. ಪಣಂಬೂರು ಐತಪ್ಪ ಕಾಂಚನವರು ರೂ ೫೦. ಪ್ಯೊಗೆ ಬಜಾರ ಸೋಮಯ್ಯ ಸುವರ್ಣರು ರೂ ೧೦೦. ಪ್ಯೊಗೆ ಮಾಲ್ಪ ಸುವರ್ಣರು ರೂ ೧೦೦. ಸೋಮಭವನದ ಕೋಟಿ ಮಂಡಣ್ಣಯರು ರೂ ೫೦. ಕುದ್ರೋಳಿ ಗುರುವಪ್ಪ ಪುತ್ರಣ್ಣಯರು ರೂ ೫೦. ಉಗ್ಗಪ್ಪ ಬಂಗೇರರು ರೂ ೫೦. ಬೋಳಾರ ರಾಮಪ್ಪ ಪುತ್ರಣ್ಣಯರು ರೂ ೫೦. ಹೀಗೆ ೧೬೫೦ ರೂಪಾಯಿಗಳು ದಾನ ಮಾಡಲ್ಪಟ್ಟವು. ಸ್ವರ್ಗೀಯ ದೇವಪ್ಪ ಪೂಂಜರ ಧರ್ಮಸಭೆಯಿಂದ ರೂ ೫೦ರ ದಾನ ನಡೆಯಿತು. ೨ನೇ ಕಂತು ರೂ ೧೨ — ೮ — ೦ನ್ನು ಶ್ರೀ ಎ. ಬಿ. ಶೆಟ್ಟಿ, ಎಂ. ಎಲ್. ಸಿ. ಯವರಿಂದ ಸಭೆಯಲ್ಲಿ ನಗದಾಗಿ ಕೊಡಲಾಯಿತು.

ಉಡುಪಿ: — ತಾ. ೧೨ನೇ ರಾತ್ರೆ ಪೋಲೀಸರಿಂದ ಬಲವಾಗಿ ಪೆಟ್ಟು ಹೊಡೆಯಲ್ಪಟ್ಟು, ಮರುದಿನ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಇರಿಸಲ್ಪಟ್ಟಿದ್ದ ಶ್ರೀ ಕೊರಗ ಶೆಟ್ಟರು ಎರಡು ದಿನಗಳ ನಂತರ ಹೊರಗೆ ಬಂದಿರುವರು. ಉಳಿದಿಬ್ಬರ ಗಾಯಗಳೂ ಪೆಟ್ಟುಗಳ ನೋವೂ ಇನ್ನೂ ಗುಣವಾಗಿಲ್ಲ.

ತಾ. ೧೩ನೇಗೆ ಪೆರ್ಡೂರಿನಲ್ಲಿ ಮದ್ಯದಂಗಡಿಯ ಪಹರೆಗೆ ನಿಂತ ಶ್ರೀ ಎಲ್. ಎನ್. ಬಲ್ಲಾಳರಿಗೆ ಪೋಲೀಸರು ಪೆಟ್ಟುಗಳನ್ನು ಹೊಡೆದು ಬಸ್ಸಿನಲ್ಲಿ ತಂದು ಮರುದಿನ ಕಾರ್ಕಳದಲ್ಲಿ ಬಿಟ್ಟುಬಿಟ್ಟರು. ಇವರನ್ನು ಉಡುಪಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಇಟ್ಟಿರುವರು. ಕಾಲುಗಳೇನೋ ಬಹಳ ಬಾತುಹೋಗಿವೆ. ಇನ್ನೂ ಆಸ್ಪತ್ರೆಯಲ್ಲೇ ಇರುವರು.

ಶ್ರೀಮತಿ ಮನೋರಮಾಬಾಯಿಯವರು, (ಶ್ರೀ ಬಾಂಗಾಳ ಮಂಜುನಾಥ ನಾಯ್ಕರ ಧರ್ಮಪತ್ನಿ) ಪೆರ್ಡೂರಿಗೆ ಹೋಗಿ ವಸ್ತ್ರ ವ್ಯಾಪಾರಿಗಳನ್ನು ನೋಡಿ, ವಿಲಾಯಿತಿಯ ಬಟ್ಟೆಗಳನ್ನು ಬಹಿಷ್ಕರಿಸಿ, ಇನ್ನು ಮುಂದೆ ಅಂತಹದ್ದನ್ನು ಮಾರದಂತೆ ವ್ಯವಸ್ಥೆಮಾಡಿ ಬಂದಿರುವರು.

ವಾಡಿಕೆಯಂತೆ ಇಲ್ಲಿ ಶ್ರೀ ರಾಮನವಮಿ ಉತ್ಸವಗಳು ಸಾಂಗವಾಗಿ ಜರುಗಿದುವು. ಕಡೇ ದಿನ ರಥೋತ್ಸವವು ಊರ ಬೀದಿಗಳಲ್ಲಿ ಸಂಭ್ರಮದಿಂದ ಕೊಂಡುಹೋಗಲಾಯಿತು.

ಆಂಧ್ರದೇಶದ ಸುಬ್ರಾಯ ಶರ್ಮರ 'ಸನಾತನ ಧರ್ಮದ ಕುರಿತಾದ ಬೋಧಪರ ವ್ಯಾಖ್ಯಾನಗಳು ಪದೇ ಪದೇ ರಥಬೀದಿಯಲ್ಲಿ ಆಗುತ್ತಲಿರುವುವು. ಈಗಣ ಸಮಾಜಪದ್ಧತಿಯನ್ನು ಸುಧಾರಿಸಿ ಹಿಂದೂಧರ್ಮವನ್ನು ಕಾಪಾಡಬೇಕೆಂದೇ ಇವರ ತಾತ್ಪರ್ಯ. ಇಲ್ಲಿನ ಮಠಾಧಿಪತಿಗಳು ಜಾಗ್ರತರಾಗಿ ಧರ್ಮದ ಪುನರುದ್ಧಾರಕಾರ್ಯಕ್ಕೆ ತತ್ಪರರಾಗಬೇಕೆಂದು ಇವರ ಸವಿನಯ ಅರಿಕೆಯು. ಅವರಲ್ಲ ಒಬ್ಬರಿಗವಾಗಿ ಮಾಡಿಕೊಳ್ಳುವ[illegible]ದೆ.

ತಾ. ೧೨ನೇಗೆ ಪೆಟ್ಟುತಿಂದಿದ್ದವರಲ್ಲಿ [illegible] ಪೋಲೀಸರ ಮೇಲೆ ಫಿರ್ಯಾದನ್ನು [illegible] ಮ್ಯಾಜಿಸ್ಟ್ರೇಟರೊಡನೆ ಮಾಡಿರುತ್ತಾರಂತೆ.

ಅಂಗೀರಸ ನಾಮಸಂವತ್ಸರದ [illegible] ಮಹಾಸಭೆಯ ಅಧಿವೇಶನವು ಈ ತಿಂಗಳಲ್ಲಿ [illegible] ಪ್ರಕೃತ ರಾಜಕೀಯ ಮತ್ತು ಆರ್ಥಿಕ [illegible] ಸರಿಯಾಗಿಲ್ಲದಿದ್ದುದರಿಂದ ಈ ಸಲದ ಅಧಿವೇಶನವನ್ನು ಮುಂದುವರಿಸಲಾಗಿದೆ.

ಬಂಟ್ವಾಳ. — [illegible] ಸಂಘ ಸಭೆಯು ಇದೇ ತಿಂಗಳು [illegible] ೧೬ನೇ [illegible] ಬಂಟ್ವಾಳ [illegible] ಶಾಲೆಯಲ್ಲಿ ಜರಗಿತು. ಸಭಾ ಕಾರ್ಯಗಳು ಯಥಾವಿಧಿ ಪ್ರಕಾರ ನಡೆದುವು. [illegible]

ಕಾಸರಗೋಡು [illegible] ಬೀದಿ [illegible] ಸ್ವಯಂಸೇವಕರು [illegible] ವಸ್ತ್ರ ಮಾರುವ ಅಂಗಡಿಗಳನ್ನು ಪಿಕೆಟ್ ಮಾಡಿದರು. ಪೋಲೀಸರು ಬಂದು ಅವರಿಗೆ [illegible] ಪೆಟ್ಟು [illegible] ಆಸ್ಪತ್ರೆಗೆ ಕೊಂಡೊಯ್ದು [illegible] ಸ್ವಯಂಸೇವಕರನ್ನು ಆಸ್ಪತ್ರೆಗೆ ಕೊಂಡೊಯ್ಯಲು [illegible] ಪೋಲೀಸರು [illegible] ಕೋರ್ಟಿಗೆ ಕೊಂಡೊಯ್ಯಲಾಯಿತೆಂದು ತಿಳಿದುಬಂದಿದೆ.

ಫರಂಗಿಪೇಟೆ: ಇಲ್ಲಿಯ ಶ್ರೀ [illegible] ಶಾಲೆಯ ೧೩ನೇ ವರ್ಷೋತ್ಸವವು ೧೩ನೇ ದಿನ ಬಂಟ್ವಾಳ ಶ್ರೀ ವೆಂಕಟ್ರಮಣ ಸ್ವಾಮಿ ಟೆಂಪಲ್ ಹೈಸ್ಕೂಲ್ ಹೆಡ್‌ಮಾಸ್ಟರ್ ಶ್ರೀ ಕೆ. ಮಂಗೇಶರಾವ್ ಅವರ್ಗಳವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. [illegible] ಮಕ್ಕಳ [illegible] ವಿದ್ಯಾರ್ಥಿಗಳ ಇಂಗ್ಲಿಷ್ [illegible] ಭಾಷಣಗಳು, ಅಧ್ಯಕ್ಷರ ಭಾಷಣ ಇತ್ಯಾದಿ ನಡೆದು ಅಧ್ಯಕ್ಷರಿಗೂ ಮಾನ್ಯ [illegible] ದೊರೆಗಳಿಗೂ ನೆರೆದ ಅತಿಥಿಗಳಿಗೂ ಧನ್ಯವಾದಗಳನ್ನು ಕೊಟ್ಟು ಬಳಿಕ ಹೊರಗಿನವರು ಬಂದುದಕ್ಕೆ ಚಪ್ಪಾಳೆ. ಆ ಬಳಿಕ ಭಕ್ತಪ್ರಭಾವ ಎಂಬ ಎರಡು ಅಂಕಗಳ ಕನ್ನಡ ಸಂಗೀತ ನಾಟಕವನ್ನು ಆ ವಿದ್ಯಾರ್ಥಿಗಳು ನೆರೆದ ಸಭಿಕರನ್ನು ಸಂತೋಷಗೊಳಿಸಿದರು. ಶಾಲೆಗೆ ಉತ್ತರೋತ್ತರವನ್ನು ಬಯಸಿ, ರಾಜಗೀತದೊಂದಿಗೆ ದಿನಾಚರಣೆಯು ಮುಕ್ತಾಯಗೊಂಡಿತು.

+ + + +

In the Court of the District Judge of Coorg.

CIVIL ORIGINAL SUIT NO. 3 OF 1931.

Plaintiff P. B. AIYAMMA vs Defendant P. A. NANJAPPA.

NOTICE is hereby given that in the above said suit a preliminary decree has been passed by this court for the sale of the properties-movables and immovables of the partnership concern known as Sri Cauvery Bus Service which has been since dissolved as per order of the court.

The sale will be by public auction and the Properties will be put up for sale either in one lot or by separate lots in the Premises of the court of the subordinate Judge of Coorg on the 6th day of June 1932 at 12 noon.

At the sale, the public generally and either of the parties are invited to bid, either personally or by duly authorised agent.

Conditions of Sale.

1. The particulars specified in the schedule below have been stated to the best of the information of the court but the court will not be answerable for any error, misstatement or omission in the proclamation.

2. The amount by which the biddings to be increased shall be determined by the officer conducting the sale. In the event of any dispute, arising as to the amount bid or as to the bidder, the lot shall atonce be again put up to auction.

3 The highest bidder shall be declared to be the Purchaser of any lot, Provided always that he is legally qualified to bid and provided that it shall be in the discretion of the court or officer holding the sale to decline acceptance of the highest bid when the price offerered appears so clearly inadequate as to make it advisable to do so.

4. For reasons recorded, it shall be in the discretion of the officer conducting the sale to adjourn it subject always to the provisions of rule 69 of order XXI.

5 The person declared to be the purchaser shall pay immediately after such declaration a deposit of 25 per cent on the amount of his Purchase money to the officer conducting the sale and in default of such deposit the property shall forthwith be put up again and resold

6. The full amount of purchase money shall be paid by the purchaser before the court closes, on the 15th day after the sale of property, exclusive of such day, or if the 15th day be a Sunday or other holiday, then on the first office day after the 15th day.

7. In default of payment of the balance of purchase money within the period allowed, the property will be resold after the issue of a fresh notification of sale The deposit after defraying the expenses of the sale, may, if the court thinks fit, be forfeited to Government and the defaulting purchaser shall forfeit all claim to the property or to any part of the sum for which it may be subsequently sold

8. The Purchaser shall get the possession of all the properties sold as soon as the full purchase money is paid.

Given under my hand and the seal of the court, this 9th day of April, 1932

(*Sd*) **L. J. MacIver,**
District Judge.

SCHEDULE 1.
Immovable Property.

No of lot	Description of property to be sold	Muncipal block No & Survey No	Area	Assessment	Name of owner	Remarks
				Rs A P		
1	Tiled house	Block No 11 Mercara Municipality Sy No 22	0 07	11 ? 0	Director of Sri Cauvery Bus Service	The property is estimated at Rs 10,000-0-0
2	do	do Sy No 23	0 15	32 9 0		
3	Hithlu	do Sy No 23/1	1·20	0 0 0		
4	Site	do Sy No 24	0 01	0 10 0		

9—4—1932 (Sd) L. J. MacIver,
District Judge

SCHEDULE II.
Movable Property

No of lot	Description of property	Approximate value			Remarks
		R	A	P	
1	*Ten buses	11 000	0	0	*6 Chevrolet buses 2 Ford buses 2 Willeys Buses
2	One Chevrolet car	250	0	0	
3	Chevrolet parts etc.	645	0	0	
4	Dodge parts	264	0	0	
5	Ford parts	28	0	0	
6	Reo parts	94	0	0	
7	Furniture	54	0	0	
8	Shed tools	370	0	0	
9	Old Model Ford	10	0	0	
	Total,	12 740	0	0	

(Sd.) L. J. MacIver,
District Judge.

ವಿ ವಿ ಧ ಸ ಮಾ ಚಾ ರ ಗ ಳು.

ಪೋಲೀಸರ ಪೆಟ್ಟಿಗೆ ಗುರಿಯಾದ ಪ್ರೊಫೆಸರ್ ರಾಮರಾಯರ ಪ್ರಕಟಣೆ.

ತಾ. ೧೧ನೇ ದಿನ ಕಾಂಜಿಯವರ ವಿದೇಶಿ ವಸ್ತ್ರದಂಗಡಿಯನ್ನು ಪಹರೆ ಮಾಡಿದ, ಸೈಂಟ್ ಎಲೋಸಿಯಸ್ ಕೊಲೇಜಿನ ಪ್ರೊಫೆಸರ್ ರಾಮರಾವ್ ಎಂ ಎ ಇವರು ಪೋಲೀಸರ ಪೆಟ್ಟಿಗೊಳಗಾದರೆಷ್ಟೆ. ಈ ಕುರಿತು ಕೆಲವು ಗಣ್ಯರು ಒಟ್ಟುಗೂಡಿ ಕಲೆಕ್ಟರರಿಗೆ ಮಾಡಿದ ಮನವಿಯ ವಿಷಯಕವಾಗಿ ನಮ್ಮ ಸಂಚಿಕೆಯಲ್ಲಿ ಪ್ರಕಟಿಸಲಾಗಿತ್ತು. ಪ್ರೊಫೆಸರ್ ರಾಮರಾಯರು ಆಸ್ಪತ್ರೆಯಲ್ಲಿ ಒಂದು ಪ್ರಕಟಣೆಯನ್ನು ಮಾಡಿರುವರು ಅದು ಹೀಗಿದೆ :—

ತಾ ೧೧ನೇ ದಿನ ಸೋಮವಾರ ೪ ಘಂಟೆಗೆ ಶ್ರೀ ಕೆ ಜಯರಾಮ ಶೆಟ್ಟಿ ಮತ್ತು ನಾನು ಒಂದು ಜಟ್ಕದಿಂದ ಕೆಳಗಿಳಿದು ಕಾಂಜಿಯವರ ಅಂಗಡಿಯೆದುರು ಪಹರೆಮಾಡಲು ನಿಂತೆವು. ನಾವು ಒಂದು ಮಾತನ್ನೂ ಆಡಲಿಲ್ಲ ಯಾರೊಬ್ಬನಿಗೂ ಅಭ್ಯಂತರವನ್ನೀಯಲಿಲ್ಲ ಅಂಗಡಿಯೊಳಗೆ ಯಾರೂ ಬರುವುದರಲ್ಲಿರಲಿಲ್ಲ ಸಮೀಪದಲ್ಲಿಯೇ ಇಷ್ಟು ಪೋಲೀಸರು ಇದ್ದರು. ಇವರು ನಮ್ಮ ಆಗಮನವನ್ನು ನಿರೀಕ್ಷಿಸಿದ್ದಂತೆ ತೋರುತಿತ್ತು. ಇವರು ನಮ್ಮ ಬಳಿ ಬಂದು ನಿಂತರು. ಇವರಲ್ಲೊಬ್ಬನು ತನ್ನ ಬಿಗಿಲನ್ನು ಅನೇಕ ಸಲ ಊದಿದನು ಅದನ್ನು ಕೇಳಿ ಒಬ್ಬ ಸಾರ್ಜಂಟನು ಹೊರಡಿಸುದನ್ನು ನಾನು ನೋಡಿದ ಕೆಲವು ನಿಮಿಷಗಳ ತರುವಾಯ ಆ ಸಾರ್ಜಂಟನು ಹಿಂದೆ ಬಂದು ರಸ್ತೆಯ ಉದ್ದಕ್ಕೂ ಅತ್ತ ಇತ್ತ ತಿರುಗಾಡಿ ಮಾರ್ಗದ ಮೇಲೂ ಹತ್ತಿರದಲ್ಲಿಯೂ ಪ್ರೇಕ್ಷಕರು ಒಟ್ಟುಗೂಡಲು ಬಿಡಲಿಲ್ಲ. ನಾಲ್ಕು ಘಂಟೆಯಾಗಿ ಇಪ್ಪತ್ತು ಮಿನಿಟುಗಳು ಸತ್ತಲೇ ರಿಜರ್ವ್ ಪೋಲೀಸರ ಬಸ್ಸು ಬಂದು ತಲಪಿತು ಪಿಕೆಟರನ್ನು ಪಹರೆಮಾಡಲು ನಿಂತ ಮೊದಲಿನ ಇಬ್ಬರು ಪೋಲೀಸರು ಹಿಂತೆರಳಿದರು ರಿಜರ್ವ್ ಪೋಲೀಸರು ಕೆಳಗಿಳಿದು ನಮ್ಮ ಬಳಿ ಬಂದರು

ಈಗ ಕಾಂಜಿಯವರ ಅಂಗಡಿಯ ಎದುರು ಇಬ್ಬರು ಪಿಕೆಟರರು ಮಾತ್ರ, ಸಾಧಾರಣ ೧೨ ಮಂದಿ ರಿಜರ್ವ್ ಪೋಲೀಸರಿದ್ದರು ಇವರು ನಮಗಿಂತ ಸ್ವಲ್ಪ ದೂರದಲ್ಲಿ ಸಾಲಾಗಿ ನಿಂತಿದ್ದರು. ಮಿ ಚಾಮ್ನಾಡರು ನಮ್ಮ ಬಳಿ ಬಂದರು ಶ್ರೀ ಆನಂದರಾಯರು ನಮ್ಮ ಎದುರಿನ ಪ್ಲೇಟ್ ಫೋರ್ಮನ್ನು ಹತ್ತಿ ಅಲ್ಲಿ ನಿಂತರು ನನ್ನೆದುರಿನ ವಿಶಾಲವಾದ ರಸ್ತೆಯಲ್ಲಿ ಯಾವ ರಾಜಕ ಅಥವಾ ಅರಾಜಕ ಜನಕೂಟವಿರುವುದು ನನಗೆ ಕಾಣಬರಲಿಲ್ಲ ಪೋಲೀಸರೂ ನಾವಿಬ್ಬರು ಪಿಕೆಟರರೂ ಅಲ್ಲದೆ, ಮಾರ್ಗದ ಮೇಲೆ ಬೇರಾಗಿಯೂ ಯಾರೂ ಇರಲಿಲ್ಲ ಎದುರು ಒಂದು ಮಾಳಿಗೆಯ ಮೇಲೂ ನವಿಯಲ್ ಫೋಟೋ ಹೌಸಿನಲ್ಲೂ ಕೆಲವರು ಒಟ್ಟುಗೂಡಿದ್ದರು ಅದರ ಒಳಿಯ ಅಂಗಡಿಗಳಲ್ಲೂ ಕೆಲವರು ನೇರಿದ್ದರು ಆದರೆ ಮಾರ್ಗದ ಮೇಲೆ ಒಬ್ಬನೂ ಇರಲಿಲ್ಲ ಕಾಯಿದೆ ಭಂಗವಾದ ಪಿಕೆಟಿಂಗನ್ನು ಕೈಕೊಳ್ಳಲು ನಿರ್ಧರಿಸಿದ್ದ ನಾವಿಬ್ಬರು ಪಿಕೆಟರಲ್ಲದೆ ಮತ್ತಾರೂ ಇರಲಿಲ್ಲವೆಂದು ಧೈರ್ಯಪೂರ್ವಕವಾಗಿ ಹೇಳುವೆನು ಕಾಂಜಿಯ ಅಂಗಡಿಯೆದುರು ಮಾರ್ಗದ ಬದಿಯಲ್ಲಿ ನಾವು ಮೌನವಾಗಿ ನಿಂತಿದ್ದೆವು ಯಾರಿಗೂ ಬಾಧೆಯನ್ನೀಯಲಿಲ್ಲ

ಮಿ ಚಾಮ್ನಾಡರು ನಾನು ಹೋಗಬೇಕೆಂದರು ಮತ್ತು ಹಾಗೆ ನಾವು ಹೋಗದಿದ್ದರೆ ಹೊಡೆಯಲಾಗುವುದೆಂದು ಕನ್ನಡ ಭಾಷೆಯಲ್ಲಿ ಎಚ್ಚರಿಕೆಯನ್ನಿತ್ತರು. ನಾವು ದೃಢವಾಗಿ ನಿಂತೆವು. ಸಾಧಾರಣ ಮೂರು ಸಲ ಅವರು ಎಚ್ಚರಿಕೆಯನ್ನು ಪುನರುಚ್ಚರಿಸಿದ ಮೇಲೆ ಬೆತ್ತದ ಹೊಡೆತಕ್ಕೆ ಪ್ರಾರಂಭವಾಯಿತು

ಅವರು ನನ್ನ ಬಲಗಾಲಿನ ಸಂದಿಗೆ ಹೊಡೆಯಲಾರಂಭಿಸಿದರು. ಈ ಹೊಡೆತವನ್ನು ಸೋಡಲು ಸಹಿಸಲಾರದೆ ಕೆಲವು ನಿಮಿಷಗಳ ತನಕ ನಾನು ಕಣ್ಣುಮುಚ್ಚಿದೆನು. ಕೆಲವು ಪೆಟ್ಟುಗಳು ಬಿದ್ದಮೇಲೆ ನನಗೆ ಕಾಲಿನಲ್ಲಿ ನಿಲ್ಲಲಾಗಲಿಲ್ಲ ಆದುದರಿಂದ ನೆಲದ ಮೇಲೆ ಬಿದ್ದೆನು ನನ್ನನ್ನು ಎಬ್ಬಿಸಿ, ಹೊಡೆದರು — ಬೆತ್ತದ ಪೆಟ್ಟು ಬೀಳುತ್ತಾ ಇತ್ತು ಸ್ವಲ್ಪ ದೂರದವರೆಗೆ ನಾನು ಅವರ ಸಹಾಯದಿಂದ ಕುಂಟುತ್ತಾ ನಡೆದಂತೆ ನೆನಪಿದೆ. ಆದರೆ ಯಾವಕಡೆ ಹೋದೆನೆಂದು ಹೇಳಲಾರೆ ಅವರು ನನ್ನ ಕೈ ಬಿಟ್ಟಕೂಡಲೇ ನಾನು ಕೆಳಬಿದ್ದುಬಿಟ್ಟೆ. ಪುನಃ ಅವರು ನನ್ನನ್ನು ಎತ್ತಿ ದೂಡಿದರು. ಬೆತ್ತದಿಂದ ಹೊಡೆಯುತ್ತಾ ಇದ್ದರು ಪುನಃ ನನ್ನ ಕೈ ಬಿಟ್ಟರು. ನಾನು ಕೆಳಬಿದ್ದೆ. ಹೀಗೆ ಕಡಿಮೆಯೆಂದರೆ ಮೂರು ಸಲ ನಡೆದಿರಬೇಕು. ನಾನು ಮೆಲ್ಲನೆ ಉಸುರಿದೆ 'ನಾನು ನಡೆಯಲಾರೆ' ಎಂದು. ಅದಕ್ಕುತ್ತರವಾಗಿ ಮಿ ಚಾಮ್ನಾಡರು ಹಾಗಾದರೆ ಹೋಗಿ ಆ ಅಂಗಡಿಯಲ್ಲಿ ಕುಳಿತುಕೊಳ್ಳಿರಿ" ಎಂದರು. ಯಾವ ಅಂಗಡಿಯನ್ನು ಕುರಿತು ಹೇಳಿದರೆಂದು ನನಗೆ ಗೊತ್ತಿಲ್ಲ. ನಾನು ಸುಮ್ಮನಿದ್ದೆ ನನ್ನನ್ನು ಲೋರಿಗೆ ಹತ್ತಿಸುವ ಮೊದಲು ಪುನಃ ಕೆಲವು ಪೆಟ್ಟಿನ ಗುದ್ದುಗಳು ಬಿದ್ದುವು.

ಇಷ್ಟಾಗುವಾಗಲೂ ನಾನು ಸ್ಮೃತಿಯಲ್ಲೇ ಇದ್ದೆ ನನಗೆ ಕೊಟ್ಟ ಪೆಟ್ಟುಗಳ ಸಂಖ್ಯೆಯೆಷ್ಟೆಂದು ಹೇಳಿ ನನ್ನೀ ಸ್ಟೇಟ್‌ಮೆಂಟನ್ನು ಉತ್ಪ್ರೇಕ್ಷಿಸಬೇಕೆಂಬ ಮನಸ್ಸು ನನಗಿಲ್ಲ. ಆದರೂ ಒಂದು ಸಾಧಾರಣ ಅಂದಾಜನ್ನು ನಾನು ಹೇಳಬೇಕೆಂದು ಪೋಲೀಸರು ಪುನಃ ಪುನಃ ಕೇಳಿಕೊಂಡರು. ಆದಕ್ಕೆ ನಾನು ಪೆಟ್ಟುಗಳ ಸಂಖ್ಯೆಯು ಹತ್ತು ಹದಿನೈದರಿಗಿಂತ ಕಡಿಮೆಯಾಗಿಲ್ಲವೆಂದೆನು. ಇಂತಹ ಸ್ಥಿತಿಯಲ್ಲಿ ಪೆಟ್ಟು ಕೊಟ್ಟವರಿಗಿಂತಲೂ, ಅವುಗಳನ್ನವರು ಕೊಡುವಾಗ ನೋಡಿದವರು ಅದನ್ನು ವಿವರಿಸಲು ಸಮರ್ಥರೆಂದು ನಾನು ಭಾವಿಸುತ್ತೇನೆ. ಸತ್ಯಾಗ್ರಹಿಯಾದವನು ತಾನು ಅನುಭವಿಸಿದ ಕಷ್ಟವನ್ನು ದೂರಿಡುವುದರಲ್ಲಿ ಹಕ್ಕುದಾರನಾಗಿರುವುದಿಲ್ಲ ಅಥವಾ ಕಷ್ಟದ ತೀಕ್ಷ್ಣತೆಯನ್ನು ಯಾವ ಪ್ರಮಾಣದಿಂದಲೂ ಅಳೆಯಲೂ ಆಗುವುದಿಲ್ಲ. ಆದರೆ ಆ ಸಮಯದಲ್ಲಿ ಮಿ ಚಾಮ್ನಾಡರು ನನ್ನ ಕಡೆ ತೋರಿಸಿದ ಗಣ್ಯವಾದ ಲಕ್ಷ್ಯಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನರ್ಪಿಸಿದ್ದೇನೆ "ಪೆಟ್ಟು ಕೊಡುವುದನ್ನು ನಿಲ್ಲಿಸಲು ನಾನು ಅಪ್ಪಣೆಯನ್ನೀಯದಿರುತ್ತಿದ್ದರೆ ಅವರು ನಿಮ್ಮನ್ನು ಮತ್ತೂ ಹೊಡೆಯುತ್ತಿದ್ದರು" ಎಂದು ಮಿ. ಚಾಮ್ನಾಡರು ಹೇಳಿದರು ಅದಕ್ಕೆ ನಾನು "ಹೌದು, ಅವರನ್ನು ಎಷ್ಟರ ಮಟ್ಟಿಗೆ ಕುಶಲರನ್ನಾಗಿ ಮಾಡಲಾಗಿದೆಯೆಂದರೆ, ನೀವು ಕರೆಯದಿದ್ದರೆ ಅವರು ನಮ್ಮನ್ನು ಕೊಂದೇಬಿಡುತ್ತಿದ್ದರು" ಎಂದೆನು. ಇದರ ಮೊದಲಿನ ದಿನ ಪಹರೆ ಮಾಡಿದ ಇಬ್ಬರನ್ನು ಬೆತ್ತದಿಂದ ಹೊಡೆದುದನ್ನು ನಾನು ಪ್ರಥಮದ್ವಾಗಿ ನೋಡಿದ್ದೆ - ಪೋಲೀಸರು ನನ್ನ ಕಡೆಗೆ ಪೆಟ್ಟಿನ ದಯಾದ್ರ್ರರಾಗಿದ್ದರೆಂದು ನನ್ನ ಮನೋಭಾವನೆ. ಮೊದಲಿನ ದಿನ ಪೆಟ್ಟುತಿಂದ ಆ ಇಬ್ಬರು ಹುಡುಗರ ಧೈರ್ಯಸ್ಥೈರ್ಯದ ನೋಟವೇ ಮರುದಿನದ ಸಾಹಸಕ್ಕಾಗಿ ನನ್ನಲ್ಲಿ ಹುರಿದುಂಬಿಸಿ ಧೈರ್ಯವನ್ನುಕ್ಷನ್ನ ಮಾಡಿತು.

ಇದರಲ್ಲಿ ನಾನು ಅಂಜದೆ ಧೃಡೀಕರಿಸಿ ಹೇಳುವುದೇನೆಂದರೆ ರಿಜರ್ವ್ ಪೋಲೀಸರ ಲಕ್ಷ್ಯವು ನಮ್ಮ ಕಡೆಗೇನೆ ಹರಿದಿತ್ತು ದೂರದ ಅಂಗಡಿಗಳಲ್ಲಿ ನಿಂತಿದ್ದ ಯಾವನೊಬ್ಬ ಪ್ರೇಕ್ಷಕನೂ ಅವರ ದೃಷ್ಟಿಗೋಚರವಾಗದ ದೂರಕ್ಕೆ ಹೋಗಲು ಆಜ್ಞಾಪಿಸಲಿಲ್ಲ ಕಾಯಿದೆ ವಿರೋಧವಾಗಿ ನಿಂತುದು ನಾವಿಬ್ಬರೇ

ಈ ಸ್ಟೇಟ್‌ಮೆಂಟನ್ನು ಶ್ರೀ ಆನಂದರಾಯರ ಕೇಳಿಕೆಯ ಮೇಲೆ ಕೊಟ್ಟಿರುತ್ತೇನೆ ಇದು ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಇವರಿಗೆ ಬೇಕಂತೆ 'ವೆನ್‌ಲೋಕ್' ಆಸ್ಪತ್ರೆ — ಸಿ. ಎಂ ಎಂ ರಾಮರಾವ್

ಪ್ರೊಫೆಸರ್ ರಾಮರಾಯರು ಆಸ್ಪತ್ರೆಯಲ್ಲಿ ಗುಣಮುಖರಾಗುತ್ತಿರುವರು. ಅವರ ಬಲಗಾಲನ್ನು 'ಪ್ಲಾಸ್ಟರ್' ನಲ್ಲಿ ಕಟ್ಟಿರುವರು.

• • •

ಮದುಮಗನಿಗೆ 'ಸಿಡಿಲು' ಬಡೆಯಿತು

ತಾ ೧೩ನೇ ದಿನ ಕೊಯಂಬುತ್ತೂರಿನಲ್ಲಿ ವೆಂಕಟಸ್ವಾಮಿ ನಾಯುಡು ಎಂಬ ೨೫ ವರ್ಷ ಪ್ರಾಯದ ಯುವಕನು ತನ್ನ ನಿಶ್ಚಯಿಸಿದ ವಧುವಿನೊಡನೆ ಮೆರವಣಿಗೆ ಹೋಗುವಾಗ ಮರುದಿನ ಜರುಗಲಿದ್ದ ತನ್ನ ವಿವಾಹಕ್ಕಾಗಿ ಮನೆಯಿಂದ ಹೊರಡಲುದ್ಯುಕ್ತನಾದನು. ಅಷ್ಟರಲ್ಲಿ ಗುಡುಗು ಸಿಡಿಲು ಪ್ರಾರಂಭವಾಗಿ ಒಂದು ಬಳಸಿ ಹೋಯಿತು. ನೋಡುವಾಗ ವೆಂಕಟಸ್ವಾಮಿಯು ಅದರ ಆಘಾತದಿಂದ ಮರಣಪಟ್ಟಿದ್ದನು ಮದುಮಗನ ಪ್ರಾಣಕ್ಕಾಗಿ ಮರುಗದವರು ವಿರಳ

• • •

೩೩೧೦೦೦ ರೂಪಾಯಿಯು ವಶೀಕರಿಸಲ್ಪಟ್ಟಿತು!

ಅಹ್ಮದಾಬಾದಿನ 'ಗುಜರಾಥ್' ಸಭಾ ಎಂಬ ರಾಷ್ಟ್ರೀಯ ಸಂಸ್ಥೆಯು ಅಲ್ಲಿಯ ಬೇಂಕ್ ಒಫ್ ಇಂಡಿಯದಲ್ಲಿ ತೇವಣಿತಿಯಾಗಿಟ್ಟ ೩೩೧೦೦೦ ರೂಪಾಯಿಯನ್ನು ಮುಂಬಯಿ ಸರಕಾರದ ಆಜ್ಞಾನುಸಾರವಾಗಿ ಪೋಲೀಸರು ವಶೀಕರಿಸಿಕೊಂಡಿರುವರು. ಗುಜರಾಥ್ ಕೊಂಗ್ರೆಸ್ ಕಮಿಟಿಯ ಕಾರ್ಯಕ್ರಮಾನುಗುಣವಾಗಿ ಈ ಸಭೆಯು ಚಳವಳವನ್ನು ಮುಂಬಾಗಿಸುತ್ತದೆಂಬುದೇ ಈ ಸಂಸ್ಥೆಯ ಮೇಲಿನ ಆರೋಪ ಈ ಸಾರ್ವಜನಿಕ ಸಂಸ್ಥೆಯು ಅಹ್ಮದಾಬಾದಿನ ಎಲ್ಲಾ ಸಂಸ್ಥೆಗಳಿಗಿಂತಲೂ ಹಳೆಯದು. ಅಹ್ಮದಾಬಾದಿನಲ್ಲಿ ಸರ್ ಸುರೇಂದ್ರನಾಥ ಬೆನರ್ಜಿಯವರ ಅಧ್ಯಕ್ಷತೆಯಲ್ಲಿ ನಡೆದ ೧೮ನೇ ಅಖಿಲಭಾರತ ಕೊಂಗ್ರೆಸ್ ಮಹಾಸಭೆಯಲ್ಲಿ ಈ ಕಮಿಟಿಯು ಬಹಳ ಕೆಲಸವನ್ನು ಮಾಡಿತ್ತು. ಕೆಲವು ಸಮಯದಿಂದೀಚೆಗೆ ಇದರ ಎಲ್ಲಾ ಚಟುವಟಿಕೆಗಳು ನಿಂತವೆ ಪೋಲೀಸರು ಬಹು ಸಾಹಸಗೊಂಡು ಈ ಹಣದ ಇರುವಿಕೆಯನ್ನು ಕಂಡುಹಿಡಿದರು ಮೇಲಿನ ಹಣವನ್ನು ಯಾವುದಕ್ಕೂ ವಿನಿಯೋಗಿಸದೆ ಅದನ್ನು ಸರಕಾರ ಖಜಾನೆಗೆ ವರ್ಗಾಯಿಸಬೇಕೆಂದು ಸರಕಾರದ ಆಜ್ಞೆಯು ಬೇಂಕಿಗೆ ದೊರೆತಿದೆ

• • •

ಮಿಲಿಟರಿಯವರು ಮೆಜಿಸ್ಟ್ರೇಟರಾದರೇ?

ಬಂಗಾಳದಲ್ಲಿ ಕೆಲವು ಮಿಲಿಟರಿಯವರನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಪದವಿಗೇರಿಸುವ ಯೋಜನೆಯೊಂದಿದೆಯಂತೆ ಈ ವಿಚಾರವಾಗಿ ಎಲ್ಲಾ ಪತ್ರಿಕೆಗಳು ದುಃಖಸೂಚನೆಯನ್ನು ಮಾಡುತ್ತಿವೆ 'ಇವಿನಿಂಗ್ ನ್ಯೂಸ್' ಎಂಬ ಪತ್ರಿಕೆಯು 'ಬಂಗಾಳವು ತಮ್ಮ ಹಸ್ತಗತವಿದೆಯೆಂದು ಸರಕಾರವು ಒಂದು ಕಡೆಯಿಂದ ಅನ್ನುವುದೇಕೆ? ಮತ್ತು ಒಂದು ಕಡೆಯಿಂದ ಮಿಲಿಟರಿ ಆಫೀಸರರನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾಗಿ ನೇಮಿಸುವ ಯೋಜನೆಯನ್ನು ಮಾಡುವುದೇಕೆ? ಹಾಗೆ ಸ್ಥಿತಿಯು ಮಿಲಿಟರಿ ಆಫೀಸರರನ್ನು ಮೆಜಿಸ್ಟ್ರೇಟರ ಪದವಿಗೆ ತರುವಷ್ಟಿದ್ದರೆ ಮಾರ್ಷಲ್ ಲೋ ಯಾಕೆ ಜಾರಿಮಾಡಬಾರದು? ಇಂತಹ ಮಹೋತ್ಪಾತದಾಯಕ ಯೋಜನೆಯನ್ನು ಸರಕಾರವು ತ್ಯಜಿಸಲಿ' ಎನ್ನುತ್ತದೆ

ಅಸ್ಪೃಶ್ಯತೆಯನ್ನು ಮರೆತುಬಿಡಿರಿ!

ಹಿಂದೂ ಮಹಾಸಭೆಯ ಪ್ರಕೃತದ ಅಧ್ಯಕ್ಷರಾದ ಡಾ। ಬಿ ಎಸ್ ಮುಂಜೆಯವರು ಒಂದು ಪ್ರಕಟಣೆಯನ್ನು ಮಾಡಿದ್ದಾರೆ. ಅಸ್ಪೃಶ್ಯರನ್ನು ದೂರವಿಟ್ಟ ಸ್ಪೃಶ್ಯರೆಲ್ಲರೂ ತಮ್ಮ ಕಾರ್ಯಕ್ಕಾಗಿ ಪ್ರಕಟಿಸಿ ಇನ್ನು ಮೇಲೆ ಅಸ್ಪೃಶ್ಯರನ್ನು ದೂರವಿಡಬಾರದು, ಅಸ್ಪೃಶ್ಯತೆಯೆಂಬುದನು ಹೋಗಲಾಡಿಸಿ ಹಿಂದೂ ಜನರ ಸಂಘಟನಾ ಕಾರ್ಯದಲ್ಲಿ ಭಾಗವಹಿಸಬೇಕು ಹಿಂದೂಗಳ ಮುಂದಿನ ಉದ್ಧಾರವಾಗಬೇಕಾದರೆ ಸಕಲ ಸ್ಪೃಶ್ಯರೂ ಪತಿತವರ್ಗದವರನ್ನು ಬಾಂಧವರನ್ನಾಗಿ ಮಾಡಬೇಕು ಅವರನ್ನುದ್ಧರಿಸಿದರೇನೇ ಹಿಂದೂಗಳಿಗೆ ಶ್ರೇಯಸ್ಸುಂಟಾಗುವುದು ಎಂದು ಮೊದಲಾಗಿ ಬರೆದಿರುವರು.

• • •

ಸರೋಜಿನಿಯವರು ಕೈದುಮಾಡಲ್ಪಟ್ಟಾರೇ?

ಅಖಿಲ ಭಾರತ ಕೊಂಗ್ರೆಸ್ ಸಭೆಯನ್ನು ತಾ ೨೪ನೇ ದಿನ ಡಿಲ್ಲಿಯಲ್ಲಿ ಜರಗಿಸಬೇಕೆಂದು ನಿರ್ಧಾರವಾದುದಷ್ಟೆ. ಮೊನ್ನೆ ಆ ಸಭೆಯ ಸ್ವಾಗತ ಮಂಡಳಿಯನ್ನು ಬೇಕಾಯದೆಶೀರವಾಗ ಮಾಡಿದರು. ಶ್ರೀಮತಿ ಸರೋಜಿನಿ ನಾಯುಡುರವರು ಈ ದಿನ ಮುಂಬಯಿಯಿಂದ ಡಿಲ್ಲಿಗೆ ಹೊರಡಲಿದ್ದಾರೆ ಅವರನ್ನು ಕೈದುಮಾಡಬೇಕೆಂದು ಡಿಲ್ಲಿಯ ಅಧಿಕಾರಿಗಳು ಆದಿ ಮುಂಬಯಿಯ ಅಧಿಕಾರಿಗಳು ಅವರು ಮುಂದಿನ ರಾಜಿತಿಸಂಧಾನೆಯಲ್ಲಿ ಭಾಗವಹಿಸಲೆಂದು ಬಿಡಬಹುದು. ಕೈದುಮಾಡುವುದು ಬೇಡ ಎನ್ನುತ್ತಾರೆ. ಪೋಲೀಸರಿಗೆ ಸಹಾಯವನ್ನೀಯುವುದಕ್ಕಾಗಿ ೨೫೦ ಸ್ಪೆಶಲ್ ಪೋಲೀಸ್ ಅಧಿಕಾರಿಗಳನ್ನು ನೇಮಿಸಿದ್ದಾರೆ ಕೊಂಗ್ರೆಸ್ ಸಭೆಗೆಂದು ಬರುವವರನ್ನು ಹೊರದಾರಿಗಳೇ ಕೈದುಮಾಡಬೇಕೆಂದು ಆಜ್ಞೆಯಾಗಿದೆ ಎಲ್ಲಿಯಲ್ಲಿ ಕೈದುಮಾಡಲ್ಪಟ್ಟವರನ್ನು ಮಹಾಸಭೆಗೆ ಹೋಗುವುದಕ್ಕಾಗಿ ಹೆಚ್ಚಿನ ಮೆಜಿಸ್ಟ್ರೇಟರುಗಳನ್ನು ನೇಮಿಸಲಿರುವರು ಸ್ವಸರಾಯರು ಮುಂತಾದವರು ಇದಕ್ಕೆ ಆಕ್ಷೇಪಿಸುವರು.

• • •

ನೈಕದ ಗಣಿಯೊಳಗೆ ೧೭ ಮಂದಿಗಳು ಮಡಿದರು

ಪಾಟ್ನಾದ ಸಮೀಪದ ಪಲ್ಲಿಯ [illegible] ಗಣಿಯಲ್ಲಿ ೩೦ ಮಂದಿಗಳು ಕೆಲಸ ಮಾಡುತ್ತಿರುವಾಗ ಒಳಗೆ ಬೆಂಕಿಹೊತ್ತಿತು [illegible] ಅಧಿಕಾರಿಗಳು ಕೆಲಸಗಾರರೆಲ್ಲರೂ [illegible] ಹೊರಗೋಡಬೇಕೆಂದು ಆಜ್ಞಾಪಿಸಿದರು. ಹಾಗೆಯೇ ೧೩ ಮಂದಿಗಳು ಮೇಲೆ ಹತ್ತಿ ಓಡಿ ಪಾರಾದರು. ಉಳಿದ ೧೭ ಮಂದಿಗಳು [illegible] [illegible] ಮಂದಿಗಳು ಅದರ ಬಾಯಿಗೆ ಸಿಕ್ಕಿ [illegible] ಬಿದ್ದರು. ೧೪ ಮಂದಿ [illegible] ಮೊದಲಾದ [illegible] [illegible]

The Canara Banking Corporation Udipi, Ltd
MANGALORE

ನೋಟೀಸು.

[illegible] ನೋಟೀಸು [illegible]. [illegible] 19 ನೇ [illegible] 11 ನೇ [illegible] 1932ನೇ ಇಸವಿ ಮೇ ತಾ 11ನೇ ಬುಧವಾರ ಮಧ್ಯಾಹ್ನ ಘಂಟೆ 1ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು.

ಸಾಲದ ನಂಬ್ರ 4 1 29 ಅಡವಿಟ್ಟವನ ಹೆಸರು 5 [illegible] [illegible] 0 — 1

ಸಾಲದ ನಂಬ್ರ 30, 30 ಅಡವಿಟ್ಟವನ ಹೆಸರು [illegible] ರೂ. [illegible]

ಸಾಲದ ನಂಬ್ರ 714 29 ಅಡವಿಟ್ಟವನ ಹೆಸರು — [illegible] ಮೊಬಲಗು ರೂ [illegible]

ಸಾಲದ ನಂಬ್ರ 31 31 ಅಡವಿಟ್ಟವನ ಹೆಸರು — ಮಂಗಳೂರು ಬಸವನಗುಡಿ ಬಳಿಯಲ್ಲಿರುವ ಮಂಜುನಾಥ ಕಮ್ಮಾರ ಮಗ [illegible] ಮೊಬಲಗು ರೂ 20

Office of the Corporation Mangalore 20—4—32 — K VITTAL BHANDARY, Agent.

ಶಾಲಿವಾಹನಶಕ ೧೮೫೨ನೆಯ ಆಂಗೀರಸ ಸಂವತ್ಸರದ ಚೈತ್ರ ಶು॥ ೨೪ ಶನಿವಾರದಿಂದ ಆಂಗೀರಸ ಸಂವತ್ಸರದ ಚೈತ್ರ ಶು॥ ೧ ಶುಕ್ರವಾರದ ವರೆಗಿನ ಪಂಚಾಂಗ

(೧೯೩೦ನೆಯ ಏಪ್ರಿಲ—ಸುಗ್ಗಿ).

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸ್ಪಷ್ಟ	ಸೂರ್ಯ ಉ	ಅಸ್ತ
23	ಬುಧ	೪	೪೭ ೪೬	ಅನೂರಾಧಾ	೩೭ ೧೬	೧೧	6.16	6 43
24	ಗುರು	೪	೩೨ ೧	ಜ್ಯೇಷ್ಠಾ	೩೪ ೩೧	೧೨	6 15	6 43
25	ಶುಕ್ರ	೫	೨೪ ೨	ಮೂಲಾ	೩೨ ೧೬	೧೪	6.14	6 43
26	ಶನಿ	೬	೨೫ ೨	ಪೂ ಷಾ	೩೧ ೧೪	೧೪	6 14	6.43
27	ಬುಧ	೭	೨೩ ೧೪	ಉ ಷಾ	೩೧ ೦೪	೦೫	6.13	6.43
28	ಗುರು	೮	೨೨ ೩೧	ಶ್ರವಣಾ	೩೨ ೩೧	೦೬	6.13	6.43
29	ಶುಕ್ರ	೯	೨೩ ೨	ಧನಿಷ್ಠಾ	೪೩ ೪೪	೦೭	6 13	6.43

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature ಉಷ್ಣ (ಕಾವು) Maximum ಹೆಚ್ಚಾದ		Minimum ಕಡಿಮೆ		Rainfall ಮಳೆ ಎರಡ ಮಳೆ	ಜುಮಲಾ ಮಳೆ.
15	89—	3	80 —	0	—	—
16	89—	8	80 —	3	—	—
17	89 —	7	77—	8	—	—
18	89 —	3	75—	7	—	—
19	88 -	6	75—	7	—	—
20	89	7	75-	9	—	—
21	88 —	7	77—	3	—	0-34

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ	ವರೆಗೆ ರೂ. ಆ
ಹೊಸ ರಾಶಿ ಅಕ್ಕಿ	3 - 12	4 — 2
ಹೊಸ ಮಸ್ಸೂರಿ	4 — 1	4 1
ಹೊಸ ಗುಡ	4 6	4 4
ಹೊಸ ಸುಗ್ಗಿ	3 — 12	4 — 2
ಊರ ಅವ್ವಲ್ ಬೆಳ್ತಿಗೆ	4 — 8	5 —
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	7 — 14	8 —
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	4 —	4 — 10
ಗೋದಿ ಗೋಣಿ ೧ಕ್ಕೆ	9 — 8	12 — 8
ತೊಗರಿ ಗೋಣಿ ೧ಕ್ಕೆ	12 — 0	14 — 8
ಹುರುಳಿ ಗೋಣಿ ೧ಕ್ಕೆ	6 — 8	7 — 0
ಕಡಲೆ ಗೋಣಿ ೧ಕ್ಕೆ	8 — 8	14 — 8
ಕೊಗೆಂಬೇಳೆ ಗೋಣಿ ೧ಕ್ಕೆ	13 — 8	21 — 0
ಉದ್ದು ಗೋಣಿ ೧ಕ್ಕೆ	11 — 8	13 — 0
ಹೆಸರು ಗೋಣಿ ೧ಕ್ಕೆ	10 — 4	1 —
ಊರು ಬೆಲ್ಲ ಖಂಡಿ ೧ಕ್ಕೆ	27 — 3	30 — 0
ಉಪ್ಪು ಗೋಣಿ ೧ಕ್ಕೆ	5 — 0	5 — 4
ಬೆಣಿ ಖಂಡಿ ೧ಕ್ಕೆ	60 —	64 —
ಬೊಂಬಾಯಿ ಹಿಂಡಿ ಖಂಡಿ ೧ಕ್ಕೆ	24 — 0	—
ಎಳ್ಳಿಂಡಿ ಖಂಡಿ ೧ಕ್ಕೆ	27 — 8	28 — 12
ದೊಡ್ಡ ಎಣ್ಣೆ ಮುಡಿ ೧ಕ್ಕೆ	5 — 6	6 — 6
ಎಳ್ಳೆಣ್ಣೆ ಮುಡಿ ೧ಕ್ಕೆ	6 — 12	7 — 0
ಚಿಪ್ಪುಗೆಣಸು ಬೆಳ್ಳಗೆ ೧ಕ್ಕೆ	4 — 7	8 — 14
ತೆಂಗಿನಕಾಯಿ ಕೊಬ್ಬರಿ ಮುಡಿ ೧ಕ್ಕೆ	4 — 0	4 — 1
ಶೇಂಗಾ ಬೀಜ	4 — 0	5 — 0
ಸಾಸಿವೆ ಮುಡಿ ೧ಕ್ಕೆ	7 — 4	6 — 0
ತಾಳೆ ರಾಶಿ ಖಂಡಿ ೧ಕ್ಕೆ	217 — 8	226 —
ಗಂಟುಮೆಣಸು ಖಂಡಿ ೧ಕ್ಕೆ	170 — 0	180
ಮೆಂತ್ಯ ಮುಡಿ ೧ಕ್ಕೆ	27 — 0	28 —
ಗೆಣಸು ಮುಡಿ ೧ಕ್ಕೆ	3 —	—
ಕಾಫಿ ಖಂಡಿ ೧ಕ್ಕೆ	35 — 0	35 8
ಜೀರಿಗೆ ಕಡಲೆ ಮುಡಿ ೧ಕ್ಕೆ	12 — 8	13 — 0
ಜೀರಿಗೆ ಸಾಕ್ಕುಗಳು ಮುಡಿ ೧ಕ್ಕೆ	16 — 0	16 — 0
ಕರಿಮೆಣಸು ಕೇರು ೧ಕ್ಕೆ	14 — 8	14 — 12
ಕೊತ್ತಂಬರಿ ಕಡಲೆ ಮುಡಿ ೧ಕ್ಕೆ	14 — 0	14 — 8
ರವೆ ೧ಕ್ಕೆ	17 — 13	17 — 14
ಹುಣಿಸೆ ಹುಳಿ ಖಂಡಿ ೧ಕ್ಕೆ	20 —	—
ಪ್ರಥಮ ಕಾಫಿ ಖಂಡಿ ೧ಕ್ಕೆ	376 —	400 —
ಹಳೆ ಅಡಿಕೆ	180 —	205 —
ಹೊಸ ಅಡಿಕೆ	140 —	145 —

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel Conveyance

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಚಾರ್ಮಾಡಿ ಗಡಿಗೆ ಗಂಟೆ 12ರ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೇ ಹೊರಟು ಬೆಳ್ತಂಗಡಿ ಗುರುವಾಯನಕೆರೆ ಉಪ್ಪಿನಂಗಡಿ, ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4-30 ಘಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಗ್ಗೆ 4 ಘಂಟೆಗೆ ಹೊರಟು 6 ಘಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಘಂಟೆ ಅವಕಾಶಕೊಟ್ಟು 7½ ಘಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಘಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ, ಮೈಸೂರುಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12 30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಪ್ಪಿ ಮೋಟಾರ ಸ್ಟೇಶನ್ [illegible] 1 30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲಪಿ, ಆ ಟ್ರೈನಿನಲ್ಲಿ ಸಿದ್ಧವಾಗಿರುವ ರೈಲಿನಲ್ಲಿ [illegible] ಮಲಬಾರು ಕನ್ನಡ್ನಿರು ಪ್ರಾಂತಗಳಿಗೂ ಆಯಾ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟ್ವಾಳಕ್ಕೂ, 10ಕ್ಕೆ ಬೆಳ್ತಂಗಡಿಗೂ, 10½ ಗಂಟೆಗೆ ಚಾರ್ಮಾಡಿ [illegible] ಉಪ್ಪಿ ಸ್ಟೇಶನಿಗೆ 11 ಗಂಟೆಗೆ ಚಾರ್ಮಾಡಿಗೂ ಗಂಟೆ 12ಕ್ಕೆ ಮೈಸೂರು ಗಡಿಗೂ ಸೇರಿ [illegible] 2 ಗಂಟೆಗೆ ಮೂಡಿಗೆರೆಗೂ, [illegible] ಚಿಕ್ಕಮಗಳೂರಿಗೂ [illegible] ಟಿಫಿನ್ ಆಹಾರ ವಗೈರೆ [illegible] ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಬಸ್ಸುಗಳ ವಗೈರೆ ಕಡೆಗಳಿಗೆ ಹೋಗುವ [illegible] ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ [illegible] ಪೂನಾ ಮತ್ತು ಮುಂಬಾಯಿ, ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರಿ 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 11 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು [illegible], ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದು ಕೇಳಬಹುದು

ಬಿ ಎಸ್ ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ ಸೂರಪ್ಪ ಸೆಟ್ಟಿ

ಪ್ರೊಪ್ರೈಟರ್ಸ್

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವವು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕರಾವಳಿ ಮಾರ್ಗವಾಗಿಯೂ, ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಯಲ್ಲಿ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲ್ಲಿಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ನಾಲ್ಕು ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ, ತಲಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ ಹದಿನೆಂಡು ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆಗಳೊಳಗೂ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸ್ ಬರೆದರೆ ತಿಳಿಸಲಾಗುವದು.

Secretary.

The Canara Public Conveyance Company Ltd., Mangalore

ಡಿ. ವೆಲರಾ

ಅಥವಾ

ವಿಧಿವಿಲಾಸ

ಮಾನವನ ಇರುವಿಕೆಯು ಅನಿಶ್ಚಿತವಾದುದು; "ಮನುಷ್ಯನ ಜೀವನವು ನೀರ ಗುಳ್ಳೆಯಂತೆ!" ಎಂಬ ನಾಣ್ಣುಡಿಯು ಕೇಳ್ಪಟ್ಟಿದೆ. ಆದರೆ "ಮನುಷ್ಯನ ಜೀವನವು ಸಮುದ್ರದಂತೆ" ಎನ್ನಲೂ ಸಾಧ್ಯವಿದೆ. ಜೀವನವು ನೀರ ಗುಳ್ಳೆಯಂತೆ ಪಟ್ಟನೆ ಒಡೆದು ಹೋಗುವುದೂ ಇದೆ. ಎಂದ ಮಾತ್ರಕ್ಕೆ ಜೀವನವು ಸಮುದ್ರದಂತೆ ಅಲೆಕ್ಲೋಲ ಕಲ್ಲೋಲವಾಗಿ ಅದರಂತೆ ವಿಸ್ತಾರವೂ ಆಗುವುದಿಲ್ಲವೇ? ಜೀವನವು ವಿಸ್ತಾರಗೊಂಡು ಅದರ ವಿಶಾಲತೆಯು ಪ್ರಯೋಜನಕಾರಿಯಾಗಬೇಕಾದರೆ ಹಲವು ಬೇಕು— ಧೀರತ್ವ, ಧೈರ್ಯಸ್ಥೈರ್ಯಗಳು ಬೇಕು—ಎಂದರೆ ಮನುಷ್ಯ ಜೀವನವು ತಿರುಗಿಸಿದತ್ತ ತಿರುಗುವ, ಹೇಳಿದ ಹಾಗೆ ನಡೆಯುವ, ದೋಣಿಯಂತಾಗಬೇಕು. ಹಾಗೆ ಜೀವನವನ್ನು ತಮ್ಮ ಹಸ್ತಗತ ಮಾಡಿ, ತಾವು ಜೀವನದ ಕೈವಶವಾಗದಿರುವ ಲೋಕವಿಖ್ಯಾತ ವಿಭೂತಿಪುರುಷವರ್ಗದವರಲ್ಲಿ ಹಿಂದೂದೇಶದಲ್ಲಿ ಮಹಾತ್ಮಾ ಗಾಂಧಿಯವರೂ, ಇಂಗ್ಲಾಂಡಿನಲ್ಲಿ ರೇಮ್ಸೆ ಮೆಕ್ ಡೊನಾಲ್ಡರೂ, ಐರ್ಲೆಂಡಿನಲ್ಲಿ ಡಿ ವೆಲರಾ ಇವರೂ, ಇಟಲಿಯಲ್ಲಿ ಮುಸೊಲಿನ್ ಇವರೂ ಒಳಗಾಗಿದ್ದಾರೆ. ಇವರಲ್ಲಿ ಡಿ ವೆಲರಾ ಇವರ ಕುರಿತು ಉಲ್ಲೇಖಿಸೋಣ.

ವಿವಿಧ ಸನ್ನಿವೇಶಗಳ ಸಮಾಗಮದಿಂದ ಅಧಿಕಾರವರ್ಗಕ್ಕೆ ಬಂದವರು ಡಿ ವೆಲರಾರವರಲ್ಲ. ಜೀವನದ ಒಳಬಗೆಯ ಹೊಡೆತಗಳಿಗೆ ಎದೆಯೊಡ್ಡದೆ, ಬೆನ್ನು ತೋರಿಸಿ ಪಲಾಯನ ಹೊಡೆದವರು ಡಿ ವೆಲರಾರವರಲ್ಲ. ಮನೋದಾರ್ಢ್ಯತೆಯು ಎದುರು ನಿಂತ ವಿರುದ್ಧ ಘಟನೆಗಳಿಗೆ ಹೆದರಿ ಓಡಿದವರು ಡಿ ವೆಲರಾರವರಲ್ಲ. ಡಿ ವೆಲರಾರವರು ಪ್ರಾಣದ ಹಂಗನ್ನು ತೊರೆದು, ತನ್ನ ಇಚ್ಛಿತ ಧ್ಯೇಯ ಒಂದರ ಸಲುವಾಗಿಯೇ ಬದುಕಿಪ ಧೈರ್ಯವಂತ ಪ್ರತಿಭಾವಂತರು. "ಕಲಿಯುಗದ ಭೀಮ"ನೆಂದು ಇವರಿಗೆ ಒಂದು ಅಭಿನಾಮವನ್ನಿಟ್ಟರೂ ಒಪ್ಪುತ್ತದೆ! ಅಂತಹ ಪರಾಕ್ರಮಶಾಲಿ.

ಆದರೆ ಇವರ ಧ್ಯೇಯಸಾಧನೆಯಲ್ಲಿ ನೈತಿಕ ಬಲವು ಪ್ರಕಾಶವಾಗಿ ಕಂಡು ಬರುವುದಿಲ್ಲ. ಸನ್ಮಾರ್ಗಪ್ರವರ್ತಕನಾಗಿಯೇ ಒಂದು ಧ್ಯೇಯವನ್ನು ಜಯಿಸಿಕೊಳ್ಳುವುದು ಸಾಧ್ಯವೆಂಬವರು ಡಿ ವೆಲರಾರವರಲ್ಲ. ಧ್ಯೇಯಸಾಧನೆಗಾಗಿ ಕುಹಕೋಪಾಯಗಳನ್ನು ಹೂಡುವವರು. ಆದರೆ ಇವರು ಸ್ವಾರ್ಥಕ್ಕಾಗಿ ಕುಹಕೋಪಾಯಗಳನ್ನು ಹೂಡುವವರೆನ್ನುವುದು ತಪ್ಪಿಬಿದ್ದರೆಂದೇ ಹೇಳಬೇಕು. ಆಂಗ್ಲೇಯರು ಡಿ ವೆಲರಾರವರು ಸ್ವಾರ್ಥಕ್ಕಾಗಿ ಉಪವಾಸ ಬಿದ್ದು ಹೆಣಗಾಡಿದರೆಂದರೆ, ಅವರ ಮೆಕ್‌ಡೊನಾಲ್ಡರೂ ಸ್ವಾರ್ಥಕ್ಕಾಗಿ ಹೋರಾಡಿದರೆಂದಂತೆಯೇ ಸರಿ! ಡಿ ವೆಲರಾರವರು ಸ್ವಪ್ರಯೋಜನಾರ್ಥವಾಗಿ ಯತ್ನಿಸಿದರೆಂದು ಹಿಂದೀಯರೆಂದರೆ, ಕರ್ಮಯೋಗಿ ಮಹಾತ್ಮಾ ಗಾಂಧಿಯವರೂ ಸ್ವವಿಷಯಕ್ಕಾಗಿ ಬಳಲುತ್ತಿರುವರೆನ್ನಬಹುದು.

ಡಿ ವೆಲರಾ ಇವರು ೧೮೮೨ನೇ ಇಸವಿಯಲ್ಲಿ ಅಮೇರಿಕದ ನ್ಯೂಯೋರ್ಕ್ ಪಟ್ಟಣದಲ್ಲಿ ಜನಿಸಿದರು. ಇವರ ತಂದೆಯು ಸ್ಪೈನ್ ದೇಶದ ಒಬ್ಬ ಗೃಹಸ್ಥ. ತಾಯಿಯು ಐರ್ಲೆಂಡಿನವಳು. ಡಿ ವೆಲರಾರವರಿಗೆ ಎರಡು ವರ್ಷ ಪ್ರಾಯವು ತುಂಬುತ್ತಿರುವಾಗಲೇ ತಂದೆಯು ತೀರಿಕೊಂಡನು. ಡಿ ವೆಲರಾನ ಸರ್ವ ಭಾರವು ತಾಯಿಯ ಮಡಿಲಲ್ಲಿ ಬಿತ್ತು. ತಂದೆ ಇಲ್ಲದ ಶಿಶುವಾದ ಡಿ ವೆಲರಾನನ್ನು ತಾಯಿಯು ಸೆರಗಿನಲ್ಲಿಟ್ಟುಕೊಂಡು ತನ್ನೂರಾದ ಐರ್ಲೆಂಡಿಗೆ ಹೋದಳು. ಅಲ್ಲಿಯ ಬ್ರೂರಿಯಲ್ಲಿಯ ಒಂದು ಸಣ್ಣ ಶಾಲೆಗೆ ಮಗನನ್ನು ಕಳುಹಿಸಿದಳು.

ಡಿ ವೆಲರಾನು ಬಾಲ್ಯದಲ್ಲೇ ಒಬ್ಬ ವಿಚಕ್ಷಣಶಾಲಿ. ತನ್ನ ಬುದ್ಧಿವಂತಿಕೆಯಿಂದ ಚಿಕ್ಕ ಸಹಪಾಠಿಗಳನ್ನೂ ಸಮಯದಲ್ಲಿ ಉಪಾಧ್ಯಾಯರನ್ನೂ ಬೆರಗುಗೊಳಿಸುತ್ತಿದ್ದನು. ಅವನಿಗೆ ಪಾಠದಲ್ಲಿ ಎಷ್ಟು ಆಸಕ್ತಿಯೋ, ಅಷ್ಟೇ ಆಸಕ್ತಿಯು ಆಟದಲ್ಲಿಯೂ ಇತ್ತು. ಆಟಪಾಠವೇ ಅವನ ಬಾಲ್ಯದ ಕಾರ್ಯಕ್ರಮವಲ್ಲ. ಹೋರಾಡುವುದೂ, ತನಗೆ ವಿರೋಧವಿದ್ದವರೊಡನೆ ಜಗಳವಾಡುವುದೂ ಇದೆಲ್ಲಾ ಅವನ ಕೆಲಸಗಳಾಗಿದ್ದುವು. ಸಾಧಾರಣ ಹತ್ತು ಹನ್ನೆರಡು ವರ್ಷ ಪ್ರಾಯದಲ್ಲೇ ಡಿ ವೆಲರಾನು 'ತಂಟೆಯ ಹೇಂಟೆ' ಎಂಬ ಚಾಳಿ ಹೆಸರನ್ನು ಸಂಪಾದಿಸಿಕೊಂಡನು. ವೀರರ ಚರಿತ್ರೆಗಳನ್ನೂ, ಭಾವಗರ್ಭಿತವಾದ ಅತ್ಯುತ್ತಮಯ ಸಂಗತಿಗಳನ್ನೊಳಗೊಂಡ ಪುಸ್ತಕಗಳನ್ನೂ ಓದುವುದರಲ್ಲಿ ಅವನಿಗೆ ಬಹು ಇಷ್ಟ. ಪುಸ್ತಕವು ಎಷ್ಟೋ ದಪ್ಪವಿರಲಿ, ಸಹನಾಶಕ್ತಿಯಿಂದ, ಸಮಾಧಾನದಿಂದ, ಅವುಗಳನ್ನು ಓದಿ ಮುಗಿಸಿಬಿಡುವನು. ಹಿಡಿದ ಪುಸ್ತಕವನ್ನು ಅರ್ಧದಲ್ಲಿ ಮುಚ್ಚಿಡುವುದು ಅವನ ಅಭ್ಯಾಸವಲ್ಲ. ಇಂತಹ ಡಿ ವೆಲರಾನು ಐರ್ಲೆಂಡಿನ ಸ್ವಾತಂತ್ರ್ಯಕ್ಕಾಗಿ ಕೈಯಿಕ್ಕಿದ ಮೇಲೆ ಆ ಸಾಹಸವನ್ನು ಅರ್ಧದಲ್ಲಿ ಮುಚ್ಚಿಡುವನೇ?

೧೯೦೪ರಲ್ಲಿ, ಯುವಕನಾದ ಡಿ ವೆಲರಾನು ಡಬ್ಲಿನ್ ಎಂಬಲ್ಲಿರುವ ಬ್ಲೇಕ್ ರಾಕ್ ಎಂಬ ಕೋಲೇಜಿಗೆ ಸೇರಿ ತನ್ನ ಬಿ. ಎ ಯನ್ನು ಪೂರ್ತಿಗೊಳಿಸಿದನು. ಡಿ ವೆಲರಾನ ಐಚ್ಛಿಕ ಪಾಠವು ಗಣಿತ ಹಾಗೂ ವಸ್ತುಶಾಸ್ತ್ರವಾಗಿದ್ದರೂ, ಅವನ ನೆಪೋಲಿಯನ್ ಬೋನಪಾರ್ಟೆ ಮೊದಲಾದ ಚಾರಿತ್ರಿಕಪುರುಷರ ಜೀವನಚರಿತ್ರೆಗಳನ್ನೂ ದೇಶ ವಿದೇಶಗಳಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನೂ ಬಹಳ ಮನಸ್ಸುಕೊಟ್ಟು ನೋಡುತ್ತಿದ್ದನು. ಮುಂದಕ್ಕೆ ಅವನು ಎಮ್. ಎ ಗೆ ಹೋಗಲಿದ್ದಾಗ ಅಲ್ಲಿಯ ಕೋಲೇಜೊಂದರಲ್ಲಿ ಪ್ರೊಫೆಸರ್ ವೃತ್ತಿಯು ಲಭ್ಯವಾಯಿತು. ಹಣದ ಅಡಚಣೆಯು ಬಲತ್ಕಾರದಿಂದಲೂ ರಾಷ್ಟ್ರಪುರುಷನಾಗಬೇಕೆಂಬ ಆಶೆಯ ಆವೇಶದಿಂದಲೂ ಮುಂದಿನ ವಿದ್ಯಾಭ್ಯಾಸವನ್ನು ಅವನು ಮರೆತನು.

ಆ ಸಮಯದಲ್ಲಿ ಐರ್ಲೆಂಡಿನಲ್ಲಿ ಸ್ವಾತಂತ್ರ್ಯದ ಅಲೆಯು ಪಸರಿಸಿಕೊಂಡಿತ್ತು. ಫೆನಿಸಿ ಎಂಬ ಮಹಾನ್ ತೇಜಃಪುಂಜನಾದ ವೀರನು ಸರಕಾರದ ಸೆರೆಮನೆಯಲ್ಲಿ ನರಳುತ್ತಿದ್ದನು. ಅವನ ಅನುಯಾಯಿಗಳು ಸರಕಾರದ ದಬ್ಬಾಳಿಕೆಗೆ ಗುರಿಯಾಗಿದ್ದರು. ಯುವಕಸಾಮ್ರಾಜ್ಯವು ಸ್ವಾತಂತ್ರ್ಯಸಾಧನೆಯು ಅತ್ಯುಚ್ಚ ಧ್ಯೇಯವನ್ನೇ ತಮ್ಮ ಪ್ರಾಣಸಮಾನವಿಷಯವೆಂದೆಣಿಸಿದ್ದರು. ಸರಕಾರದೆದುರು ನಿಂತು ಹೋರಾಡುತ್ತಿದ್ದರು.

ಇಂತಹ ಸಮಯದಲ್ಲಿ ಡಿ ವೆಲರಾನು ಹಿಂದೆ ನಿಲ್ಲುವನೇ? ಸರಕಾರದ ವಿರುದ್ಧವಾಗಿ ನಡೆಯುತ್ತಿರುವ ಚಳವಳದ ಮುಂದಾಳಾಗಿ ತಾನು ನಿಂತನು. ತನ್ನ ಕುಶಲತನದ ಕುತಂತ್ರದಿಂದ ಈಸ್ಟರ್ ಎಂಬಲ್ಲಿ ಒಂದು ಒಳಸಂಚು ನಡೆಸಿ ಸರಕಾರದ ಹೆಬ್ಬಾಗಿಲನ್ನು ತಟ್ಟುವ ಆಲೋಚನೆಯಲ್ಲಿದ್ದನು. ವೀರಾವೇಶದ ಸಂದೇಶಗಳಿಂದ ತನ್ನ ಸಂಗಾತಿಗಳ ಎದೆಯುಬ್ಬುವಂತೆ ಮಾಡಿದನು.

ಡಿ ವೆಲರಾನ ವಾಗ್ವೈಖರಿ, ದೇಶಾಭಿಮಾನದ ಬಿರುಸು ನುಡಿ, ಧೈರ್ಯಸ್ಥೈರ್ಯಗಳನ್ನು ಸರಕಾರವು ಕಂಡು ಅವನಿಗೆ ತಕ್ಕ ಮದ್ದನ್ನರೆಯುತ್ತಿದ್ದಿತು. ಅಷ್ಟರಲ್ಲಿ ಡಿ ವೆಲರಾನ ಸಡಗರಿದ್ದ ಬಂಡಾಯದ ಸಂಚೊಂದು ಹೊರಬಿದ್ದು ಶಸ್ತ್ರಸಮೇತನಾಗಿ ಅವನು ಸೆರೆ ಹಿಡಿಯಲ್ಪಟ್ಟನು. ಪ್ರಾಣಾಪಹರಣಕ್ಕೆ ತೊಡಗಿದ ತಕ್ಸೀರು ಡಿ ವೆಲರಾನ ತಲೆಯ ಮೇಲೆ ಬಿತ್ತು! ಅವನನ್ನು ಏಕೋ, ಗಲ್ಲಿಗೇರಿಸದೆ ದೇಶಾಂತರ ೧೯೧೬ರಲ್ಲಿ ಶಿಕ್ಷೆ ಕೊಟ್ಟು ದೂರ ಕಳುಹಿಸಿದರು.

ಅದೇ ವರ್ಷದ ಒಕ್ಟೋಬರ ತಿಂಗಳಲ್ಲಿ ಐರ್ಲೆಂಡಿನಲ್ಲಿ ಸಹನಾತೀತವಾದ ಚಳವಳವು ಸಾಗಿತು. "ಜನರು ಸ್ವಾತಂತ್ರ್ಯ! ಸ್ವಾತಂತ್ರ್ಯ!' ಸಂಪೂರ್ಣ ಸ್ವಾತಂತ್ರ್ಯ!!!" ಎಂದು ಪ್ರತಿ ಬೀದಿಯಲ್ಲಿ ಆರ್ಭಟಿಸಿದರು! ಅಲ್ಲದೆ "ಡಿ ವೆಲರಾನನ್ನು ಬಿಡಿರಿ" ಎಂದು ಕಂಠೋಕ್ತವಾಗಿ ಹೇಳಿದರು.

ಜನರ ಈ ತರದ ಕ್ಷೋಭೆಯನ್ನಡಗಿಸುವುದಕ್ಕಾಗಿ ಆಗ ಮಂತ್ರಿ ಪದವಿಯಲ್ಲಿದ್ದ ಲಾಯ್ಡ್ ಜೋರ್ಜರು "ರೌಂಡ್ ಟೇಬಲ್ ಕೊನ್ಫರೆನ್ಸ್" ನಂತಹ ಒಂದು ಮಹಾ ಸಭೆಯನ್ನು ಜರಗಿಸಿದರು. ಅದಕ್ಕೆ ಡಿ ವೆಲರಾನನ್ನು ಆಮಂತ್ರಿಸಿ ಸೆರೆಯಿಂದ ಬಿಡುಗಡೆ ಮಾಡಿದರು. ಐರಿಷರಿಗೆ ಸಾಮ್ರಾಜ್ಯಾಂತರ್ಗತ ಸ್ವಾತಂತ್ರ್ಯವನ್ನೀಯುವೆವೆಂದು ಬ್ರಿಟಿಷರು ಹೇಳಿದರು. ಆದರೆ ಐರಿಷ್ ಜನಾಂಗದವರು ಸೀನ್‌ಫೀನ್ (Sinnhen) ಎಂಬ ಚಳವಳಕಾರರು ಬ್ರಿಟಿಷರ ಈ ಘೋಷಣೆಗೆ ಒಡಂಬಡಲಿಲ್ಲವಾದರು. "ಬ್ರಿಟಿಷರಿಂದ ನಮ್ಮನ್ನು ವಿಮುಕ್ತಗೊಳಿಸದೆ ನಿವಾರಣವಿಲ್ಲ" ಎಂದರು. ಡಿ ವೆಲರಾನನ್ನು ಸಭೆಗೆ ಹೋಗಗೊಡದೆ ಆ ಮಹಾಸಭೆಯನ್ನು ಬಹಿಷ್ಕರಿಸಿದರು, ಡಿ ವೆಲರಾನನ್ನು ತಮ್ಮ ಗಣ್ಯ ನಾಯಕನಾಗಿ ನೇಮಿಸಿದರು.

ಡಿ. ವೆಲರಾನಿಗೆ ದೇಶದ ಎಲ್ಲಾ ಕಡೆಗಳಲ್ಲೂ ದೊರೆಯುತ್ತಿದ್ದ ಮಾನ, ಗೌರವ, ಸ್ವಾಗತಾಶೀರ್ವಾದಗಳ ಬಲುಮೆಯನ್ನು ಕಂಡು ಬ್ರಿಟಿಷರು ದಿಗಿಲುಗೊಂಡರು. ಸಾಧಾರಣ ಎರಡು ಸಾವಿರವನ್ನು ಮೀರುವ 'ಸೀನ್‌ಫೀನ್' ತಂಡ! ಅದರ ಬೆಂಬಲವಾಗಿ ಮಿಡಿಯಾಡಿ ಜನರು!! ಅಂತಹ ಸಮಷ್ಟಿವರ್ಗದ ಒತ್ತಾಟ, ತಿಕ್ಕಾಟ, ಮುಕ್ಕಾಟಗಳಿಗಾರು ಎದುರು ನಿಲ್ಲುವರು?

ಡಿ ವೆಲರಾನ ಹಾವಳಿಯು ಪರಮಾವಧಿಯಲ್ಲಿ ಸಾಗುತ್ತಿತ್ತು. ಅವನ ಹೆಸರು ದೇಶದೇಶಗಳಿಗೆ ಹರಡಿತ್ತು. ಅವನು ಮಹಾ ಪ್ರಳಯಸ್ವರೂಪಿಯೆಂದು ಬಾವಿಸಲಾಯಿತು. ಅವನ ಕೀರ್ತಿಯೂ ಭಂಡಾಯವೂ ಸರ್ವತ್ರ ಹರಡಿಕೊಳ್ಳುವುದನ್ನು ನೋಡಿ ಪಾರ್ಲಿಮೆಂಟಿನಲ್ಲಿ "ಡಿ ವೆಲರಾನು ರಾಜದ್ರೋಹಿಯಾಗಿ ವರ್ತಿಸುತ್ತಿರುವಾಗ ಅವನನ್ನು ಬಂಧಿಸುವ ಏರ್ಪಾಡನ್ನು ಸರಕಾರವು ಏಕೆ ಮಾಡುವುದಿಲ್ಲ?" ಎಂಬ ಪ್ರಶ್ನೆಯುಂಟಾಯಿತು. ಯಾವ ಬಗೆಯಲ್ಲಿ ನೋಡಿದರೂ ಸರಕಾರವು ಅವನನ್ನು ಬಂಧಿಸುವಂತಹ ಆರೋಪವು ಅವನ ಮೇಲಿದ್ದಿಲ್ಲ. ಅಲ್ಲದೆ ಸರಕಾರಕ್ಕೆ ಐರಿಷ್ ಜನರ ಉದ್ರೇಕಸ್ವಭಾವದ ಸ್ಫೂರ್ತಿಯ ಮೇಲೂ ಸಂಶಯ ತೋರಿ ಡಿ ವೆಲರಾನನ್ನು ಹಾಗೆ ಅಕಾರಣವಾಗಿ ಸೆರೆಗೊಯ್ಯಲು ಸರಕಾರವು ಮನಸ್ಸುಮಾಡಲಿಲ್ಲ.

ಇಂತಹ ಸಂದಿಗ್ಧ ಸ್ಥಿತಿಯು ಒದಗಿದಾಗ ಯೂರೋಪು ಬಂಡವು, ಇಂಗ್ಲೆಂಡು ಜರ್ಮನಿಗಳೊಳಗಿನ ೧೯೧೪ರ ಮಹಾಯುದ್ಧದ ದವಡೆಯೊಳಗೆ ಸಿಲುಕಿತು. ಬ್ರಿಟಿಷ ಸರಕಾರಕ್ಕೆ ಜನ, ಧನ, ಸಹಾಯವು ಅಗತ್ಯವೆಂದು ಕಂಡು ಬಂತು. ಅದು ಐರ್ಲೆಂಡಿನಲ್ಲಿ ರಿಕ್ರೂಟ್ಸ್ (Recruits)ಗಳನ್ನು ಒಟ್ಟುಗೂಡಿಸಲು ಯತ್ನಿಸಿತು. ಸ್ವಲ್ಪವೂ ಚಳವಳವಿಲ್ಲದಿರುತ್ತಿದ್ದರೆ ಐರ್ಲೆಂಡಿನಿಂದ ಇಂಗ್ಲೆಂಡಿಗೆ ಸಾವಿರಗಟ್ಟಳೆ ಯೋಧರು ಸಿಗುತ್ತಿದ್ದರು. ಆದರೆ ಐರ್ಲೆಂಡಿನವರು ಇಂಗ್ಲೆಂಡಿಗೆ ಸಹಾಯವನ್ನೀಯಲಿಲ್ಲ. ಬರೇ ಜನಸ್ತೋಮವನ್ನು ಕಾಪಾಡಲು ಮಾತ್ರ ಇಂಗ್ಲೆಂಡಿಗೆ ದೊರಕಿದರು. ಹಾಗೆ ಇಂಗ್ಲೆಂಡಿಗೆ ಸಹಾಯವನ್ನಿತ್ತುದಕ್ಕಾಗಿಯೂ ಐರಿಷರಲ್ಲಿ ಅನೇಕರು ಜಿಗುಪ್ಸೆಗೊಂಡರು.

ಈಗ ಸರಕಾರವು ಡಿ ವೆಲರಾನನ್ನು ಹಿಡಿಯುವ ಯೋಚನೆ ಮಾಡಿತ್ತು. ಇಂಗ್ಲೆಂಡಿಗೆ ವಿರೋಧವಾಗಿ ಅವನು ವರ್ತಿಸುತ್ತಿದ್ದನೆಂಬ ಅಪಾದನೆಯ ಮೇಲೆ ಅವನನ್ನು ಒಂದು ದಿನ ಸೆರೆ ಹಿಡಿದರು. ಡಿ ವೆಲರಾನು ತನ್ನ ಕೈಸ್ವಾತಂತ್ರ್ಯಗಳನ್ನು ಕಳಕೊಂಡು ಸರಕಾರದ ದೀರ್ಘ ಜಾಯಿಗೆ ಸಿಲುಕಿದನು. ಜನರ ಬಂಡಾಯದ ಸಡಗರ ಮತ್ತೂ ಹೆಚ್ಚಿತು.

ಒಂದು ದಿನ ಎಲ್ಲರಿಗೂ ಆಶ್ಚರ್ಯ! ಪತ್ರಿಕೆಗಳಲ್ಲಿ "ಡಿ ವೆಲರಾನು ಬ್ರಿಟಿಷ ಜೈಲಿನಿಂದ ತಪ್ಪಿಸಿಕೊಂಡಿರುವನು" ಎಂಬ ಅದ್ಭುತವಾದ ವಾರ್ತೆಯು ಹಬ್ಬಿತು. ಇದನ್ನು ಕೇಳಿ ಸರಕಾರಕ್ಕೆ ಬಹು ವ್ಯಸನವಾಯಿತು. ತನ್ನ ಬಲವಾದ ಸೆರೆಮನೆಯಿಂದ ತಪ್ಪಿಸಿಕೊಂಡ ಡಿ ವೆಲರಾನ ಕೀರ್ತಿಯು ದಿಗ್ದಿಗಂತಗಳಿಗೆ ಹಬ್ಬುವಂತಾಯಿತಲ್ಲಾ ಎಂದು.

ಜೈಲಿನಿಂದ ಓಡಿದ ಡಿ ವೆಲರಾನು ರಹಸ್ಯವಾಗಿ ಅಮೇರಿಕಕ್ಕೆ ಹಾರಿದನು. ಅಮೇರಿಕಕ್ಕೆ ಅವನು ಡಿ ವೆಲರಾನೆಂದು ಕೆಲವು ದಿನಗಳ ಮೇಲೆ ತಿಳಿಯಿತು. ಅಲ್ಲಿಯೂ ಹೋದವರೂ ಅವನಿಗೆ ಸಹಾಯವು ಲಭಿಸಿತು. ಅಮೇರಿಕದವರು ಐರಿಷರ ಸ್ವಾತಂತ್ರ್ಯ ಸಾಧನೆಯನ್ನು ಕಂಡು ಬಹು ಸಂತೋಷಗೊಂಡಿದ್ದರು. ಐರಿಷರ ಕೆಲವು ಸ್ವಾತಂತ್ರ್ಯ ಸಂಘಗಳಿಗೆ ಧನಸಹಾಯವನ್ನಿತ್ತರು. ಡಿ ವೆಲರಾನು ಅಮೇರಿಕದಲ್ಲಿ ಐರ್ಲೆಂಡಿಗಾಗಿ ಹೆಚ್ಚಿನ ಹಣವನ್ನು ಸಂಪಾದಿಸಿ ತಂದನು.

ಬ್ರಿಟಿಷರಿಗೆ ಡಿ ವೆಲರಾನ ಇರುವಿಕೆಯನ್ನು ಕಂಡು ಹಿಡಿಯುವುದು ಅಸಾಧ್ಯವಾಯಿತು. ಅವನ ನಿವಾಸ ಸ್ಥಾನವನ್ನರಿಯಲಾರದಾದರು. ಹಾಗಿದ್ದರೂ ಡಿ ವೆಲರಾನು ಎಲ್ಲಿಂದಲೂ ಪತ್ರಿಕೆಗಳಿಗೆ ತನ್ನ ಬರಹದ ಕುರಿತು ಬರೆಯುತ್ತಿದ್ದನು. ಕೆಲವು ವರ್ಷಗಳ ನಂತರ ಡಿ ವೆಲರಾನು ಐರ್ಲೆಂಡಿಗೆ ಬಂದನು. ಅಲ್ಲಿಯ ಕೊಸ್‌ಗ್ರೇವನ ಸರಕಾರಕ್ಕೆ ದುರುಳನಾದನು. ಬ್ರಿಟಿಷರಿಂದ ಐರ್ಲೆಂಡು ಪ್ರತ್ಯೇಕವಾಗಬೇಕೆಂದನು. ಕಳೆದ ಎರಡು ತಿಂಗಳ ಹಿಂದೆ ನಡೆದಿದ್ದ ಚುನಾವಣೆಗೆ ಡಿ ವೆಲರಾನು ನಿಂತು ಬಹುಮತದಿಂದ ಐರ್ಲೆಂಡಿಗೆ ಅಧ್ಯಕ್ಷನಾದನು.

ಅವನು ಇದೇ ಏಪ್ರಿಲ್ ತಾ ೧೯ರಲ್ಲಿ ಹೇಳಿದ್ದೇನೆಂದರೆ—
Ireland is not a British Colony. She is one of the oldest nations in the world, with all the rights of nation-hood. British statesmen must abandon the insane ambition to dominate the Irish. The Irish nation in the past decade had been dishonoured by the profession of an allegiance that Irishmen do not and cannot feel. Not one pound of Annuities will leave the Free State till Britain has proved her title.

ಕೊಣನದುರ್ಗ ಅಮೃತೇಶ್ವರಿ ವೈದ್ಯಶಾಲಾ

(S.I.R.)

[illegible]

ಮೇನೇಜರ್,

ಅಮೃತೇಶ್ವರಿ ವೈದ್ಯಶಾಲಾ [illegible]

[illegible]

ಕನ್ನಡ ಶಾಲೆ [illegible]

[illegible]

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನು, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

[illegible]

ಶಾರದಾ ಛಾಪಖಾನೆ,

[illegible] ಮಂಗಳೂರು.

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ಮಿಕ್ಸರ್ ಎಲ್ಲವನ್ನು ಬಹಿಷ್ಕರಿಸಿ, ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಸ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತಿ ಪಡೆದವರು. 62 ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು.
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ [illegible]

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ. ಆ. ದಾದರ್ ಮುಂಬಯಿ 14

Dr H L Batliwalla, Sons & Co., Ltd.
Kadeli Road P. O. Dadar Bombay 14.

ತಂತಿ ವಿಳಾಸ "CATASTICK" Bombay

ಶಪೂರ್ಜಿ ಎಚ್. ಎಲ. ಬಾಟ್ಲಿವಾಲಾ – ಮುಖ್ಯ ಮನೇಜಿಂಗ್ ಡೈರೆಕ್ಟರ್



The Zandu Pharmaceutical Works Ltd Bombay,14
ದಿ ಝಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್ ಲಿಮಿಟೆಡ್, ಮುಂಬಾಯಿ, 14

ಲೋಕಪ್ರಸಿದ್ಧವಾದ

'ಝಾಂಡೂ ಚ್ಯವನಪ್ರಾಶ ಲೇಹವು.

ಆರೋಗ್ಯ ಟಾನಿಕ್ಕು ಆರೋಗ್ಯ ಟಾನಿಕ್ಕು ॥

[illegible] ಸ್ವಲ್ಪ ಕಾಲದಲ್ಲಿಯೇ [illegible]

[illegible] 1/- [illegible] 1/5 [illegible] 14.

[illegible] ಸ್ಟೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 [illegible], ಮದ್ರಾಸು.
[illegible] ಏಜಂಟರು — ಮೆಸರ್ಸ್ ಪಂಡಿತ ಮತ್ತು ಕಂಪೆನಿ
ಮಂಗಳೂರು ಏಜಂಟರು — [illegible] ಅಂಡ್ ಕಂಪೆನಿ [illegible]
[illegible] ಏಜಂಟರು — ಎಸ್ ಎಲ್ [illegible] ಎಂಡ್ ಬ್ರದರ್ಸ್
ಸಬ್ ಏಜಂಟರು [illegible] ಏಜಂಟರು — ಟಿ ಸಿ ನಟರಾಜ್ ಅಂಡ್ ಕೊ, [illegible].
ಬೆಂಗಳೂರು ಏಜಂಟರು — ಬಿ [illegible] ಕಂಪೆನಿ [illegible]
[illegible] ಕೆಟಲಾಗು ವಿವರ ಬೇಕಾದವರು ಸ್ಟೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ಮಂಡೋದರಿ ನಾಟಕ ಪ್ರದರ್ಶನ.

ಇದೀಗಂದು ಬಗೆಯ ಆರಂಭೋತ್ಸಾಹದಿಂದಲೋ, ವಿದ್ಯಾವಂತರ ಅನುಕೂಲತೆಯಿಂದಲೋ, ಜನ್ಮಕ್ಕೆ ಬಂದ ತುಸು ಕಾಲದಲ್ಲಿಯೇ ಅಂತ್ಯದುಸಿರು ಬಿಟ್ಟಿರುವ ನಾಟಕ ಕಂಪೆನಿಗಳು ಮಂಗಳೂರಲ್ಲಿ ಹಲವಾಗಿ ಹೋಗಿರುವವು. ಮಂಗಳೂರಿನವರು ಆರಂಭಶೂರರಿರುವಂತೆಯೇ ಅಂತ್ಯ ಕ್ರಿಯಾ ಚತುರರೂ ಇದ್ದಾರೆ. ಯಾವುದಾದರೊಂದು ಹೊಸ ಸಂಘ ಸಂಸ್ಥೆಯಾದರೂ ಮಂಗಳೂರಲ್ಲಿ ಎಷ್ಟೊಂದು ಅವಸರದಲ್ಲಿ ಆರಂಭಿಸಲ್ಪಡುವುದೋ ಅಷ್ಟೇ ಶೀಘ್ರತೆಯಿಂದ ನಾಮಾವಶೇಷವಾಗುವುದು. ಮಂಗಳೂರಲ್ಲಿಲ್ಲದ ಚಟುವಟಿಕೆಯಿಲ್ಲ, ಹಾಗೆಂದು ಸ್ಥಿರತನವಾಗಿ ಇರುವುದಕ್ಕೂ ಇಲ್ಲ. ಇದೊಂದು ಮಂಗಳೂರಿನ ವೈಶಿಷ್ಟ್ಯ. ಇಂತಹ ಪರಿಸ್ಥಿತಿಯಲ್ಲಿ ಹೊಸ ಹೊಸ ಜನ್ಮ ತಾಳುವ [illegible] ದ್ವಾದಶಿಯೆಂದು ಚಟುವಟಿಕೆಯ ಕುರಿತ [illegible] ಶೀಘ್ರತೆಯಿಂದ ಹಿಂದೆ ಮುಂದೆ ನೋಡಿಕೊಳ್ಳಬೇಕಾಗ[illegible] ಇತ್ತೀಚೆಗೆ ಮಂಗಳೂರಲ್ಲಿ ಎರಡು ನಾಟಕ ಕಂಪೆನಿಗಳು ಜನ್ಮಕ್ಕೆ ಬಂದುವು. ಪ್ರತಿಷ್ಠಿತರಾದ ವಿದ್ಯಾಧಿಕಾರಿಗಳ ಆಶ್ರಯ [illegible] ನಾಗರಿಕರು ನಾಟಕ ಸಂಘದವರ ತಮ್ಮ ಪ್ರಥಮ [illegible] ನಾಟಕವನ್ನು ಕಳೆದ ತಾ [illegible] ಆದು ಹೋಗಿದ್ದಿತೆಂಬ ಸುದ್ದಿಯು [illegible] ಪತ್ರಿಕೆಯಲ್ಲಿ [illegible] ಇಲ್ಲ. ಅಂತಹ ಜಾಹೀರಿನಲ್ಲಿ ಸ್ತ್ರೀಯರೂ ಪುರುಷರೂ [illegible] ಮತಸ್ಥರೂ, ಯಾವ ಭೇದವೂ ಇಲ್ಲದೆ [illegible] ಸಂತೋಷಕರ. ಮಂಗಳೂರಲ್ಲಿ ಹೊಸತಾಗಿ ಜನ್ಮ ತಾಳಿದ ಇಲ್ಲಿಯ ಬಿ. ಎಚ್. ಎಸ್. ನಾಟಕ ಸಂಘವೆಂಬ [illegible] ಸಂಘದವರು ಇದೇ ತಾ [illegible] ಇಲ್ಲಿಯ [illegible] ಸಿನಿಮಾ ಮಂದಿರದಲ್ಲಿ ತಮ್ಮ ಪ್ರಥಮ ನಾಟಕವಾದ 'ಮಂಡೋದರಿ'ಯನ್ನು ತಕ್ಕ ಮಟ್ಟಿಗೆ ಬಹು ಶೀಲವಾಗಿ [illegible] ಸರಿಯಾದ ಅಭ್ಯಾಸವಿಲ್ಲದೆ ಈ ನಾಟಕವನ್ನು [illegible] ಪ್ರದರ್ಶಿಸಿರುವಂತಿದೆ. ನಾಟಕ [illegible] ಕಾರರ ಮುಖ್ಯ ಓದ್ರಸ್ಟೀಟಿರಾದ [illegible] ರಾಮಯ್ಯ ಎಮ್. ಎ., ಎಲ್. ಟಿ. ಯವರು ತಮ್ಮ ಕಲ್ಪನಾಚಾತುರ್ಯದಿಂದ ಹುಡುಗರಿಗೆ ಪ್ರಾತಃಸ್ಮರಣೀಯರಾದ ಪಂಚಕನ್ಯೆಯವರಲ್ಲೊಬ್ಬಳಾದ ಆದರ್ಶ ರಮಣಿ ಮಂಡೋದರಿಯ ಕುರಿತು ಆರ್ಯ ಋಷಿಯಾದ ವಾಲ್ಮೀಕಿಯು ಮಾಡಿರುವ ತಪ್ಪನ್ನು ಸರಿಗೊಳಿಸಿರುವಂತಿದೆ. ಈ ನಾಟಕವು ಮಂಡೋದರಿಯ ಸಮುಜ್ವಲ ಪತಿಪ್ರೇಮವನ್ನು ಹೃದಯಂಗಮವಾಗಿ ಚಿತ್ರಿಸುವುದು ಮಾತ್ರವಲ್ಲದೆ, ಲಂಕಾಧಿಪತಿಯಾದ ರಾವಣನು ಎಷ್ಟೊಂದು ಗೌರವಾನ್ವಿತನು ಸ್ವಾಭಿಮಾನ, ಹಾಗೂ ಮಾನುಷೀಯ ಪಾಪ ಹೃದಯವುಳ್ಳವನೆಂಬುದನ್ನು ಮನಗಾಣಿಸುವದಿದ್ದು, ರಾವಣನು ಕ್ರೂರ ದಾನವನೆಂಬ ವಾಲ್ಮೀಕಿಯು ಚಿತ್ರವು [illegible] ಯೊಳಗೆ ಕೆಲವು ಲಕ್ಷ್ಯರ ವವರನ್ನು ಸೂಚಿಸಗೊಳಿಸದಿ[illegible] ಇನ್ನು ನಾಟಕಾಭಿನಯದ ವಿಷಯ [illegible] ಕೆಲವು ಮಾತ[illegible]ನ್ನು ಹೇಳಬೇಕಾಗಿದೆ. ಈಗ ತಾನೆ ಜನ್ಮ ತಾಳಿ, [illegible] ಕಾವಸ್ಥೆ[illegible] ಈ ನಾಟಕ ಸಂಘದವರು ಸ್ಟೇಜ್ [illegible] ಅಭಿನಯದ ಕೊರತೆಗಳ [illegible] ತಿಳಿಸ್ಸ [illegible] ಟೀಕೆ ಮಾಡದೆ, ಒಂದು [illegible] ಕೆಲವ ಕೊರತೆ[illegible] ಸೂಚಿಸುವುದೇ ನಮ್ಮ [illegible] ಕವು ಪ್ರಥಮವಾಗಿ ಮಂಡೋದರಿ ನಾಟಕವ [illegible] ಪ್ರದರ್ಶಿಸ[illegible] ಒಂದು ಸಂದೇ[illegible] [illegible] ತಿರುವಳಿ[illegible] [illegible] ಪಾತ್ರವನ್ನು [illegible] [illegible] ನೋಡ [illegible]

ಈ ನಾಟಕ [illegible] [illegible] [illegible] ಮಂಡೋದರಿ [illegible] [illegible] [illegible] ಹೃದಯ [illegible] ಹೇಳ[illegible]

ನಮ್ಮ ನಾಟಕ.

ರಂಗಭೂಮಿಯಲ್ಲಿ ಹೆಚ್ಚಿನ [illegible] ಸುಧಾರಣೆಗಳಾಗಬೇಕಾಗಿವೆ. ಇನ್ನೂ ಆಗುತ್ತಿವೆ. ಕನ್ನಡಿಗರು ಇಂಗ್ಲೀಷರ ಸಂಪರ್ಕದಿಂದಾಗಿ ಎಲ್ಲಾ ವಿಷಯಗಳಲ್ಲೂ ಬದಲಾವಣೆಯನ್ನು ಹೊಂದಿರುವರು. ಇದರ ನಾಟಕವೊಂದರಲ್ಲಿ ಮಾರ್ಪಾಟು ಹೊಂದಿರುವುದಿಲ್ಲ. ಇಂತಹ ಕಾಲದಲ್ಲೂ, ರಂಗಭೂಮಿಯಲ್ಲಿ ಪುರಾಣ ಪ್ರಸಿದ್ಧವಾದ [illegible]ಗಳನ್ನೇ ಪ್ರತಿ ನಾಟಕಕಂಪೆನಿಯವರಾಡುವುದಲ್ಲದೆ ಸಮಾಜದ ನ್ಯೂನತೆಗಳನ್ನು ತೋರಬಲ್ಲವ ನಾಟಕಗಳನ್ನು ಹೆಚ್ಚಾಗಿ ಯಾರೂ ಆಡುವುದಿಲ್ಲ. [illegible] ನಾಟಕ [illegible] ಸಾಮಾಜಿಕ ಸಮಸ್ಯೆಗಳಿಂತಲೂ [illegible] ಹೆಚ್ಚಿನ ಬೆಲೆಯನ್ನು ಕೊಡುವಂತೆ ಕಾಣುತ್ತದೆ.

[illegible]

[illegible]

೧೧೦೦ ರೂ. ಬಹುಮಾನ

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಶಾಸ್ತ್ರವಾಗಿ ತಯಾರಿಸಲ್ಪಟ್ಟಿದ

ಮದನಮಸ್ತ ಪಾಕ — ರಿಜಿಸ್ಟರ್ಡ್

ಅವರಿಂದ [illegible] [illegible]

ಸೋಟಿನ ಸರ್ಟಿಫಿಕೇಟು [illegible]

ಪತ್ತೆ — ವೈದ್ಯ ಮೋಹನಲಾಲ ಎಸ್. ಔಷಧಾಲಯ, [illegible]

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎನಾ. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಜಿಸ್ಟರ್ಡ್)

[illegible] ಈ ಚೂರ್ಣದಿಂದ ಯಾವ ತರದ [illegible] ಪೂರ್ಣ ಗುಣಕಾರಿ ಡಬ್ಬಿ ಕಿ ೪ ರೂ. ವಿ. ಪಿ. ಖರ್ಚು ೦॥೦

ವಿಳಾಸ — ಸಂಜೀವಿನೀ ಔಷಧಾಲಯ. ಮು. ಪೋ. ಮಿರಜ, S. M. C.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕೆಮ್ಮಿಕ್ಕು ಅಗ್ಗ ಫಲಕ್ಕಪ್ರಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S. I. R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ ವೈದ್ಯರತ್ನವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ. ವೈದ್ಯರತ್ನ ಪರಮೇಶ್ವರ ಮೂಸಾದ' ಅವರ [illegible]

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ಮೂಲವ್ಯಾಧಿ

ರಕ್ತ ಅಥವಾ ಶಷ್ಕವಾದ ಅತ್ಯಂತ ಹಳೆಯದು ... [illegible] ... ಸೇವನೆಮಾಡುವುದರಿಂದ ... ಪರಿಣಾಮವಾಗುವುದು ... ದಿನಗಳಲ್ಲಿ ಬೇನೆ ಸಹಿತ ನಾಶವಾಗುವುದು ... ಇಲ್ಲ ... ಪ್ರಶಂಸೆ ... ಗುಣಬರದಿದ್ದರೆ ನಾಲ್ಕು ಪಟ್ಟು ಹಣ ತಿರುಗಿ ಕೊಡುವೆವು ಬೆಲೆ ರೂ ೨—೦—೦

ಕಿವುಡುತನ

ಕಿವಿಯೊಳಗಿನ ಕೀವು ಒರುವುದು ತಿಂದಿಯಿಡುವುದು ಭಯಂಕರ ನೋವು, ಮತ್ತು ಕಿವುಡುತನ ಮುಂತಾದ ಕಿವಿಯ ಸಂಬಂಧವಾದ ಎಲ್ಲ ರೋಗಗಳ ಮೇಲೆ ನಮ್ಮ ಅದ್ಭುತ ... [illegible] ... ಫಾಯದೆಯಾಗದಿದ್ದರೆ ಹಣ ತಿರುಗಿ ಬೆಲೆ ರೂ ...

ವಿಳಾಸ — ಶಕ್ತಿಸುಧಾ ಕಾರ್ಯಾಲಯ
೨ ಕಾಂಬಾರವಾಡೆ ೧ನೇ ಗಲ್ಲಿ
ಮುಂಬಯಿ

ಶಾರದಾ ಛಾಪಖಾನೆ ಮಂಗಳೂರು

ನಮ್ಮಲ್ಲಿ ಬೇಕಾದ ರೀತಿಯ ಪ್ರಿಂಟಿಂಗ್ ಕೆಲಸವನ್ನೂ, ಅಂದವಾದ ರೀತಿಯ ವಿವಾಹ ಆಮಂತ್ರಣ ಪತ್ರಿಕೆಗಳನ್ನೂ, ಕಡಿಮೆ ದರದಲ್ಲಿ ತಯಾರಿಸಿಕೊಡುವೆವು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೊ-ಒಪರೇಟಿವ್ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟರುಗಳು, ರಶೀದಿ ಪುಸ್ತಕಗಳು, ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,
ರಥಬೀದಿ, ಮಂಗಳೂರು

ನಿಕೃಷ್ಟವಾದ ಎಲ್ಲವನ್ನು ಬಹಿಷ್ಕರಿಸಿ ಬಾಟ್ಲಿವಾಲರ
ಅತ್ಯುತ್ತಮವನ್ನೇ ಪಡೆಯಿರಿ.

ಬಾಟ್ಲಿವಾಲರ

ಎಗ್ಯೂ ಮಿಕ್ಶ್ಚರ್, ಮತ್ತು ಎಗ್ಯೂ ಮಾತ್ರೆಗಳು, ಬೇರೆ ಔಷಧಗಳು.

ಸ್ವದೇಶೀ ಔಷಧದಲ್ಲಿ ಪ್ರಾಶಸ್ತ್ಯ ಪಡೆದವರು. ೫೨ ವರುಷಗಳ ಖ್ಯಾತಿಯಿದೆ
ಎಲ್ಲಾ ನಮೂನೆಯ ಜ್ವರಗಳಿಗೊಳ್ಳೆಯದು
ಇಂಡಿಯನ್ ಇಂಡಸ್ಟ್ರಿಯಲ್ ವಸ್ತು ಪ್ರದರ್ಶನಗಳಲ್ಲಿ
ಭಂಗಾರ ಮತ್ತು ಬೆಳ್ಳಿಯ ಪಾರಿತೋಷಕಗಳು ದೊರೆತಿವೆ ಕ್ರಯ ಸೂಚಿಗೂ ಏಜನ್ಸಿಗೂ ಬರೆಯಿರಿ.

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್, ಮತ್ತು ಕಂಪೆನಿ ಲಿಮಿಟೆಡ್
ಕೇಡಲ್ ರೋಡ್ ಪೋ ಆ ದಾದರ್ ಮುಂಬಾಯಿ 14

Dr H L Batliwalla, Sons & Co., Ltd.
Kadell Road, P O Dadar Bombay 14.

ತಂತಿ ವಿಳಾಸ — 'CAVASPUR Bombay
ಶಪೂರ್ಜಿ ಎಚ್. ಎಲ್. ಬಾಟ್ಲಿವಾಲಾ — ಮುಖ್ಯ ಮೆನೆಜಿಂಗ್ ಡ್ಯಾರೆಕ್ಟರ್

The Zandu Pharmaceutical Works, Ltd, Bombay, 14.
ದಿ ಝಂಡೂ ಫಾರ್ಮಸ್ಯುಟಿಕಲ್ ವರ್ಕ್ಸ್, ಲಿಮಿಟೆಡ್, ಬೊಂಬಾಯಿ, 14.

ಲೋಕಪ್ರಸಿದ್ಧವಾದ

'ಝಂಡು ಚ್ಯವನಪ್ರಾಶ ಲೇಹವು.

ಅಮೋಘ ಟಾನಿಕ್ಕು! ಅಮೋಘ ಟಾನಿಕ್ಕು!!

... [illegible] ... ಕ್ಷಯರೋಗ, ಉಬ್ಬಸ ನಾನಾ ವಿಧವಾದ ದುರ್ಬಲತ್ವ ... ಸ್ವರಭಂಗ ... ಇವುಗಳಲ್ಲಿ ... ಎಲ್ಲಾ ಅಶಕ್ತಿಗಳನ್ನು ಸ್ವಲ್ಪ ಕಾಲದಲ್ಲಿಯೇ ಹೋಗಲಾಡಿಸಿ ಬಲವನ್ನು ಕೊಡತಕ್ಕದ್ದು ಇದನ್ನು ಒಂದು ಸಲ ಉಪಯೋಗಿಸಿದರೆ ತಿಳಿಯುವುದು.

5 ಪಾ ಜಾಡಿ ರೂ 10/- ಕ್ರಯ 1 ಪಾನು ಸೀಸೆ ರೂ 2/8. ½ ಪಾ ರೂ. 1/5 ¼ ಪಾ. ಆ 13.

ಮದ್ರಾಸು ರಾಜಧಾನಿಗೆ ಸೋಲ್ ಏಜಂಟರು — ದಾಮೋದರ್ ಅಂಡ್ ಕಂಪೆನಿ, 78 ಚೈನಾ ಬಜಾರು ರಸ್ತೆ, ಮದ್ರಾಸು.
ತೀರ್ಥಹಳ್ಳಿ ಏಜಂಟರು — ಮೆಸರ್ಸ್ ಪಂಡಿತ್ ಮತ್ತು ಕಂಪೆನಿ,
ಮಂಗಳೂರು ಏಜಂಟರು — ಷಾ ಅಂಡ್ ಕಂಪೆನಿ, ಡೈಮಂಡ್ ಬಿಲ್ಡಿಂಗು
ಸಿರ್ಸಿ ಏಜಂಟರು — ಎಸ್ ಎಲ್ ಧಾಕಪ್ಪಾ ಎಂಡ್ ಬ್ರದರ್ಸ್
ಸಬ್ ಏಜಂಟರು—ಮೈಸೂರು ಏಜಂಟರು — ಟಿ. ಸಿ ನಟರಾಜ್ ಅಂಡ್ ಕೊ, ಸಯಾಜಿರಾವ್ ರೋಡ್.
ಬೆಂಗಳೂರು ಏಜಂಟರು — ಬಿ ಪೋಪಟ್‌ಲಾಲ್ ಕಂಪೆನಿ ಚಿಕ್ಕಪೇಟೆ
☞ ಸಟಿಲರಾಗು ವಿವರ ಬೇಕಾದವರು ಸೋಲ್ ಏಜಂಟರಿಗೆ ಬರೆದುಕೊಳ್ಳಬೇಕು

ಮಂಡೋದರಿ ನಾಟಕ ಪ್ರದರ್ಶನ.

ಅದೊಂದು ಬಗೆಯ ಆರಂಭೋತ್ಸಾಹದಿಂದಲೋ, ವಿದ್ಯಮಾನಗಳ ಅನುಕೂಲತೆಯಿಂದಲೋ, ಜನ್ಮಕ್ಕೆ ಬಂದು ತುಸು ಕಾಲದಲ್ಲಿಯೇ ಅಂತ್ಯದುಸಿರು ಬಿಟ್ಟಿರುವ ನಾಟಕ ಕಂಪೆನಿಗಳು ಮಂಗಳೂರಲ್ಲಿ ಹಲವಾಗಿ ಹೋಗಿರುವವು. ಮಂಗಳೂರವರು ಆರಂಭಶೂರರಿರುವಂತೆಯೇ ಅಂತ್ಯ ಕ್ರಿಯಾ ಚತುರರಿರುವರು. ಯಾವುದಾದರೊಂದು ಹೊಸ ಸಂಘ ಸಂಸ್ಥೆಯಾದರೂ ಮಂಗಳೂರಲ್ಲಿ ಎಷ್ಟೊಂದು ಅವಸರದಲ್ಲಿ ಆರಂಭಿಸಲ್ಪಡುವುದೋ ಅಷ್ಟೇ ಜಾಗ್ರತೆಯಿಂದ ನಾಮಾವಶೇಷವಾಗುವುದು. ಮಂಗಳೂರಲ್ಲಿಲ್ಲದ ಚಟುವಟಿಕೆಯಿಲ್ಲ, ಹಾಗೆಂದು ಸಚೇತನವಾಗಿ ಇರುವುದಾವುದೂ ಇಲ್ಲ. ಇದೊಂದು ಮಂಗಳೂರಿನ ವೈಶಿಷ್ಟ್ಯ. ಇಂತಹ ಪರಿಸ್ಥಿತಿಯಲ್ಲಿ ಹೊಸ ಹೊಸ ಜನ್ಮ ತಾಳುವ ಯಾವುದಾದರೊಂದು ಚಟುವಟಿಕೆಯ ಕುರಿತು ಬರೆಯುವಾಗ ಬಹಳ ಜಾಗ್ರತೆಯಿಂದ ಹಿಂದೆ ಮುಂದೆ ನೋಡಿಕೊಳ್ಳಬೇಕಾಗುತ್ತದೆ. ಇತ್ತಲಾಗೆ ಮಂಗಳೂರಲ್ಲಿ ಎರಡು 'ನಾಟಕ' ಕಂಪೆನಿಗಳ ಜನ್ಮಕ್ಕೆ ಬಂದುವು. ಪ್ರತಿಷ್ಠಿತರಾದ ಜಿಲ್ಲಾಧಿಕಾರಿಗಳ ಆಶ್ರಯದಲ್ಲಿ ಮಂಗಳೂರು ನಾಟಕ ಸಂಘದವರು ತಮ್ಮ ಪ್ರಥಮ ಇಂಗ್ಲಿಷ್ ನಾಟಕವನ್ನು ಕಳೆದ ತಾ. ೩ರಲ್ಲಿ ಅಭಿನಯಿಸಿದರು. ಅದು ಹೇಗಿದ್ದಿತೆಂಬ ಸುದ್ದಿಯು ಯಾವ ಪತ್ರಿಕೆಯಲ್ಲಿಯೂ ಇಲ್ಲ. ಅಂತೂ, ಅದರಲ್ಲಿ ಸ್ತ್ರೀಯರೂ, ಪುರುಷರೂ, ಎಲ್ಲಾ ಮತಸ್ಥರೂ, ಯಾವ ಭೇದವೂ ಇಲ್ಲದೆ ಪಾತ್ರ ವಹಿಸಿದ್ದು ಸಂತೋಷಕರ. ಮಂಗಳೂರಲ್ಲಿ ಹೊಸತಾಗಿ ಜನ್ಮ ತಾಳಿರುವ ಇನ್ನೊಂದು ಸಂಘದವರು ಇದೇ ತಾ. ೭ರಲ್ಲಿ ಇಲ್ಲಿಯ ಹಿಂದೂಸ್ಥಾನ ಸಿನಿಮಾ ಮಂದಿರದಲ್ಲಿ ತಮ್ಮ ಪ್ರಥಮ ನಾಟಕವಾದ 'ಮಂಡೋದರಿ'ಯನ್ನು ತಕ್ಕ ಮಟ್ಟಿಗೆ ಜಯಶೀಲವಾಗಿ ಅಭಿನಯಿಸಿದರು. ಸರಿಯಾದ ಅಭ್ಯಾಸವಿಲ್ಲದೆ ಈ ನಾಟಕವನ್ನು ಅವಸರದಿಂದ ಪ್ರದರ್ಶಿಸಿರುವಂತಿದೆ. ನಾಟಕ ಕರ್ತರು [illegible] ಸರಕಾರದ ಮುಖ್ಯ ಟ್ರಾನ್ಸ್‌ಲೇಟರರಾದ ಶ್ರೀ ಸಿ. ಕೆ. ವೆಂಕಟರಾಮಯ್ಯ, ಎಮ್. ಎ., ಎಲ್. ಎಲ್. ಬಿ.ಯವರು ತಮ್ಮ ಕಲ್ಪನಾಚಾತುರ್ಯದಿಂದ ಹಿಂದುಗಳಿಗೆ ಪ್ರಾತಃಸ್ಮರಣೀಯರಾದ ಪಂಚಕನ್ಯೆಯರಲ್ಲೊಬ್ಬಳಾದ ಆದರ್ಶ ರಮಣಿ ಮಂಡೋದರಿಯ ಕುರಿತು ಆರ್ಯ ಋಷಿಯಾದ ವಾಲ್ಮೀಕಿಯು ಮಾಡಿರುವ ತಪ್ಪನ್ನು ಸರಿಗೊಳಿಸಿರುವಂತಿದೆ. ಈ ನಾಟಕವು ಮಂಡೋದರಿಯ ಸಮುಜ್ವಲ ಪತಿಪ್ರೇಮವನ್ನು ಹೃದಯಂಗಮವಾಗಿ ಚಿತ್ರಿಸುವುದು ಮಾತ್ರವಲ್ಲದೆ, ಲಂಕಾಧಿಪತಿಯಾದ ರಾವಣನು ಎಷ್ಟೊಂದು ಗೌರವಾನ್ವಿತನು; ಸ್ವಾಭಿಮಾನ, ಹಾಗೂ ಮಾನವೀಯ ಭಾವ, ಹೃದಯವೈಶಾಲ್ಯವೆಂಬುದನ್ನು ಮನಗಾಣಿಸುವದಿದ್ದು, ರಾವಣನು 'ಕ್ರೂರ ದಾನವ'ನೆಂಬ ವಾಲ್ಮೀಕಿಯ ಚಿತ್ರವು ಚಿತ್ತಭಿತ್ತಿಯೊಳಗೆ ಕೆತ್ತಲ್ಪಟ್ಟಿರುವವರನ್ನು ಸೋಜಿಗಗೊಳಿಸದಿರದು. ಇನ್ನು ನಾಟಕಾಭಿನಯದ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈಗ ತಾನೆ ಜನ್ಮ ತಾಳಿ, ಕೇವಲ ಪ್ರಾಥಮಿಕಾವಸ್ಥೆಯಲ್ಲಿರುವ ಈ ನಾಟಕ ಸಂಘದವರ ಸ್ಟೇಜ್ ವ್ಯವಸ್ಥೆ, ಅಭಿನಯದ ಕೊರತೆಗಳ ಕುರಿತಲ್ಲಿ ವಿಶೇಷವಾದ ಟೀಕೆ ಮಾಡದೆ, ಒಡೆದು ಕಾಣುವ ಕೆಲವು ಕೊರತೆಗಳನ್ನು ಸುಹೃದಯದಿಂದ ಸೂಚಿಸುವುದೇ ನನ್ನ ಉದ್ದೇಶವು. ಪ್ರಥಮವಾಗಿ 'ಮಂಡೋದರಿ' ನಾಟಕವು ರಂಗಭೂಮಿಯಲ್ಲಿ ಪ್ರದರ್ಶಿಸುವಷ್ಟು ಯೋಗ್ಯವಿರುವುದೋ ಎಂಬ ಸಂದೇಹ [illegible] ನಿಲುಕುವಷ್ಟು ಸುಲಭವಿರುವುದಿಲ್ಲ. [illegible] ಪಾತ್ರವನ್ನು ಬೇಕೆಂದು ತುರುಕಿದಂತಿದೆ. ಪ್ರೇಕ್ಷಕರ ನೋಡಿ ಹಾಸ್ಯಪಡುವ [illegible] ಭೂಮಿಕೆಗಳೇ ಇಲ್ಲ.

ಈ ನಾಟಕ ಸಂಘದವರ ಸ್ಟೇಜಿನ ವ್ಯವಸ್ಥೆಗೆ ಹೆಚ್ಚು ಲಕ್ಷ್ಯ ಕೊಟ್ಟಂತೆಯೂ, ಎಷ್ಟು [illegible] ಸ್ಟೇಜ್ ರಿಹರ್ಸಲ್ ಮಾಡಿದಂತೆಯೂ ತೋರುವುದಿಲ್ಲ. ಮಂಡೋದರಿ ಪಾತ್ರ ವಹಿಸಿದ ಶ್ರೀಮತಿ [illegible] ಸೀತಾದೇವಿಯವರ ಅಭಿನಯವು ಎಲ್ಲವರಿಗಿಂತಲೂ ಉತ್ಕೃಷ್ಟವಾಗಿದ್ದಿತು. [illegible] ಚಿತ್ತವೇದ್ಯವಾಗಿ ಹೇಳುವುದರಲ್ಲಿ ಅವರಿಗೆ ವಿಶೇಷ [illegible] ಯಿದೆ. ಹೃದಯಂಗಮವಾಗಿ [illegible] ಹೇಳಬಲ್ಲ ಅವರ [illegible]

ನಮ್ಮ ನಾಟಕ.

ರಂಗಭೂಮಿಯಲ್ಲಿ ಹೆಚ್ಚಿನ ಸುಧಾರಣೆಗಳಾಗಿವೆ, ಇನ್ನೂ ಆಗುತ್ತಿವೆ. ಕನ್ನಡಿಗರು ಆಂಗ್ಲೇಯರ ಸಂಪರ್ಕದಿಂದಾಗಿ ಎಲ್ಲಾ ವಿಷಯಗಳಲ್ಲೂ ಬದಲಾವಣೆಯನ್ನು ಹೊಂದಿರುವರು. ಆದರೆ ನಾಟಕವೊಂದರಲ್ಲಿ ಮಾರ್ಪಾಟು ಹೊಂದಿರುವುದಿಲ್ಲ. ಇಂತಹ ಕಾಲದಲ್ಲೂ, ರಂಗಭೂಮಿಯಲ್ಲಿ ಪುರಾಣ ಪ್ರಸಿದ್ಧವಾದ ಕಥೆಗಳನ್ನೇ ಪ್ರತಿ ನಾಟಕಕಂಪೆನಿಯವರಾಡುವುದಲ್ಲದೆ, ಸಮಾಜದ ನ್ಯೂನತೆಗಳನ್ನು ಹೊರಚಲ್ಲುವ ನಾಟಕಗಳನ್ನು ಹೆಚ್ಚಾಗಿ ಯಾರೂ ಆಡುವುದಿಲ್ಲ. ಇದರಿಂದ ಕನ್ನಡಿಗರು ಸಾಮಾಜಿಕ ಸಮಸ್ಯೆಗಿಂತಲೂ [illegible] ಹೆಚ್ಚಿನ ಬೆಲೆಯನ್ನು ಕೊಡುವಂತೆ ಕಾಣುತ್ತದೆ.

[illegible]

ನಾಟಕ ವಿಮರ್ಶಕ

[illegible]

ಈ ಸಂಘದ ಉದ್ದೇಶವು ಅತಿ ಪ್ರಶಂಸನೀಯವಿದೆ. ವ್ಯಾಪಕ ದೃಷ್ಟಿಯೂ, ಸಂಘಟನಾಶಕ್ತಿಯೂ, ಅಚಲ ಪರಿಶ್ರಮವೂ ಇದ್ದರೆ ಮಂಗಳೂರಲ್ಲಿ ಆ ಉದ್ದೇಶ ಸಾರ್ಥಕತೆಗೆ ಬೇಕಷ್ಟು ಅನುಕೂಲತೆಯಿರುವುದು.

ಕೆ. ಎಸ್. ಕೆ.

೧೧೦೦ ರೂ ಬಕ್ಷೀಸು.

೨೧ ವರ್ಷದ ಪ್ರಯೋಗದಿಂದ ಪೂರ್ಣ ಯಶಸ್ಸು ಪಡೆದ ಸುಪ್ರಸಿದ್ಧ ನಾಡಿ ಪರೀಕ್ಷಕ ವೈದ್ಯ ಮೋಹನಲಾಲ ಸಿಂಹರ ಅತ್ಯಂತ ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕನಾದಂಥ ಅಮೌಲ್ಯವಾದ ೬೦ ವನಸ್ಪತಿಗಳಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ

ಮದನಮಸ್ತ ಪಾಕು ರಿಜಿಸ್ಟರ್ಡ್

ಇದರಿಂದ ಸ್ವಪ್ನಾವಸ್ಥೆಯಲ್ಲಿಯೂ ಮೂತ್ರ ದ್ವಾರದಿಂದಲೂ ಧಾತು ಹೋಗುವದು ನಿಲ್ಲದಿದ್ದರೆ ಹಣವನ್ನು ತಿರುಗಿ ಕಳುಹಿಸುವೆವು. ಹಸ್ತ ಕ್ರಿಯೆಯಿಂದಲೂ ಅತಿ ಸ್ತ್ರೀಲಂಪಟತ್ವದಿಂದಲೂ ಒದಗಿದ ನಪುಂಸಕತ್ವ, ಧಾತುಕ್ಷೀಣತೆ, ಅಶಕ್ತತೆ, ಕಾಮೋಟಿ [illegible] ಯಾದ ಕೂಡಲೇ ವೀರ್ಯಪತನವಾಗೋಣ, ಗರ್ಭದ ಪರಿಣಾಮ ಎಂಥದಾದರೂ ಪರಮ, ಮೈನಸೋಣ, ಇತ್ಯಾದಿ ರೋಗಗಳು ನಾಶವಾಗಿ ಶರೀರಕ್ಕೆ ಸಾಶವಾಗುತ್ತದೆ. ಹೊಸ ಶಕ್ತಿ ಮತ್ತು ತೂಕ ಹೆಚ್ಚುತ್ತದೆ. ೨೧ ದಿವಸ ಸಾಲುವ ೪೪ ತೊಲೆಯ ಪೂರ್ಣ ಗುಣಪಡಿಸುವ ಡಬ್ಬಿಯ ಕಿಮ್ಮತ್ತು ರೂ ೫ ಟ. ಪಿ. ರೂ ೧. ಹಳೇ ರೋಗದ ಸಲುವಾಗಿ ೩ ಡಬ್ಬಿಗೆ ಖರ್ಚ ಸಹಿತ ರೂ ೧೧. ಮೂರ ಡಬ್ಬಿಗೆ ರೂ ೧೫ ಮಾತ್ರ. ಪಥ್ಯವಿಲ್ಲ. ಅನುಪಾನವು ಡಬ್ಬಿಯೊಡನೆ. ಸಾವಿರಾರು ಜನರು ಈ ಪಾಕದ ಸ್ತುತಿಯನು ಅತಿಶಯವಾಗಿ ಮಾಡಿದ್ದಾರೆ. ಅವರಲ್ಲಿ ಮುಖ್ಯರಾದ ಪದವೀಧರ ಡಾಕ್ಟರ, ರಾಜನೈಷ್ಯ ಹಾಗೂ ಹೊಸ ಸರ್ಟಫಿಕೇಟುಗಳನ್ನು ನೋಡಿರಿ.

ಡಾಕ್ಟರ ಎಮ್. ಆಯ್. ಏಟಿ.ಪಿ., ಎಲ್. ಎಮ್. ಎಂಡ್ ಎಸ್., ಜೆ. ಪಿ., ಮುಂಬಯಿ — ಈ ಪಾಕು ಧಾತುಪೌಷ್ಟಿಕ, ಶಕ್ತಿವರ್ಧಕ ಮತ್ತು ಕಾಮೋತ್ತೇಜಕವಿದ್ದು [illegible] ಪರಮಾ ಇವುಗಳನ್ನು ನಾಶ ಮಾಡುವದು. ಈ ಮದನಮಸ್ತಪಾಕವನ್ನು ನಮ್ಮ ರೋಗಿಗಳಿಗೆ ಬಹು ದಿವಸಗಳಿಂದ ಕೊಡುತ್ತಿರುವೆವು.

ಡಾಕ್ಟರ ಪಿ. ಎನ್. ದತ್ತ, ಎಮ್. ಬಿ. ಪ್ರಿನ್ಸಿಪಾಲ ಫಿಜಿಸಿಯನ್ಸ್ ಎಂಡ್ ಸರ್ಜನ್ಸ್ ಕಾಲೇಜ ಕಲಕತ್ತ — ಈ ಪಾಕವನ್ನು ಧಾತುಕ್ಷೀಣತೆ, ಸ್ವಪ್ನಾವಸ್ಥೆ, ನಪುಂಸಕತ್ವ, ಇಂದ್ರಿಯ ಶೈಥಿಲ್ಯ ಮತ್ತು ಅಶಕ್ತತೆ ಈ ರೋಗಗಳ ಮೇಲೆ ಪ್ರತಿಯೊಬ್ಬರು ತೆಗೆದುಕೊಂಡು ರೋಗದಿಂದ ಬಿಡುಗಡೆಯಾಗಿರಿ.

ಮೇಲಿನ ಸರ್ಟಫಿಕೇಟುಗಳು ಅಸತ್ಯವೆಂದು ಸಿದ್ಧಮಾಡಿದವರಿಗೂ ರೂ. ೧೧೦೦ ಇನಾಮು ಕೊಡುವೆವು.

ಪತ್ತೆ — ವೈದ್ಯ ಮೋಹನಲಾಲ ಎಸ್. ಔಷಧಾಲಯ, ಮು. ಪೋ. ಮಿರಜ, S. M. C.

ಮಿರಜದಲ್ಲಿರುವ ಸುಪ್ರಸಿದ್ಧ ವೈದ್ಯರಾದ ಎಸ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡಿಯುವುದರಿಂದ ಹೆಂಗಸರಿಗೆ ಅತಿಶಯ ಅಶಕ್ತಿಯಾಗುತ್ತದೆ. ಬಹಳ ಚಿಕ್ಕತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣ ಬಂದಾಗುವದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. 'ಮೊದಲೆ ಪೂರ್ಣ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಫಿಕೇಟು ವೈದ್ಯ ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಲ್ಹಾಪುರ ಹಿಮ್ಮತಬಹದ್ದೂರ ಶಾಸ್ತ್ರೀ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿ. ೪ ರೂ. ವಿ. ಪಿ. ಖರ್ಚು ೦॥೦

ವಿಳಾಸ — ಸಂಜೀವಿನೀ ಔಷಧಾಲಯ. ಮು. ಪೋ. ಮಿರಜ, S. M. C.

ALLIANZ UND STUTTGARTER
Life Insurance Bank, Ltd.
ಅಲಿಆನ್ಸ ಉಂಡ್ ಸ್ಟುಟಗಾರ್ಟರ ಲ್ಯಾಫ್‌ಇನ್ಶೂರೆನ್ಸ್ ಬೇಂಕ್, ಲಿಮಿಟೆಡ್

(ಜರ್ಮನಿಯಲ್ಲಿ ಸನ್ ... ರಲ್ಲಿ ಸ್ಥಾಪಿಸಲ್ಪಟ್ಟಿದು)

ಒಟ್ಟು ವಿಮಾ ಹಣವು ... ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ... ಕೋಟಿ ರೂ ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ... ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಕಗಳ ಮೇಲಿನ ಕಾಯ್ದೆಟ್ಟ ಕೇವುಗಳು ಹಿಂದೀ ಕಾರಣಗಳಲ್ಲಿಯೆ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರವಾಡ, ವಿಜಾಪುರ ಬೆಳಗಾಂವ, ಕಾರವಾರ ಸೊಲ್ಲಾಪುರ ಬಳ್ಳಾರಿ ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ವ ತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯ ... ಕೆಲಸವನ್ನು ಮಾಡಲು ... ಉತ್ಸಾಹಿ ... ಸಬ್ ಏಜಂಟರು ಬೇಕು ಹೆಚ್ಚಿನ ಮಾಹಿತಿಗಾಗಿ ... ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ... ಸಂಸ್ಥಾನಗಳ ... ಸೀನಿಯರ ಏಜಂಟರು ಇವರಿಗ ಬರೆಯ ಬೇ

"If every Wife knew what every Widow knows every Husband would be Insured

PLACE YOUR LIFE ASSURANCE WITH

THE SOUTH INDIAN

Securing for your clients

1. Low rates of Premium
2. Liberal Policy Conditions

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —

H R K IYENGAR
Chief Agent

The S I G A Co, Ltd,
Sanyasiguddy MANGALORE

Managing Agents —

K C PANDALAI & CO
7 8 Mclean Street G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ವಿಮೆಮಾಡಿರಿ

ನಿಮಗೂ, ನಿಮ್ಮ ಗಿರಾಕಿಗಳಿಗೂ ... ಪ್ರಯೋಜನ ಮತ್ತು ಸೌಕರ್ಯಗಳಿವೆ!

ಪ್ರಿಮಿಯಂ ದರಗಳು ಕಡಿಮೆ!

ಶರ್ತಗಳ ... ಸುಲಭ

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ ಧಾರಾಳವಾದ ಕಮಿಶನ್ನೂ ವೇತನವೂ ಸಂಭಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿ)

ಚೀಫ್ ಏಜಂಟರು—

ಎಚ್ ಆರ್ ಕೆ ಅಯ್ಯಂಗಾರ್
ಕನ್ನಡ ಜಿಲ್ಲಾ ಮತ್ತು ಹೈದರಾಬಾದ ಪ್ರಾಂತ್ಯಗಳಿಗ

ದಿ ಎಸ್ ಐ ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡೆ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲೆ ಎಂಡ್ ಕೋ.
7 8 ಮೆಕ್ಲೀನ್ ಸ್ಟ್ರೀಟ್ ಜಿ ಟಿ ಮದ್ರಾಸು

ಮೈಸೂರು ಸರಕಾರದ ವಿದ್ಯಾ ಇಲಾಖೆ ಮತ್ತು ... ಸೊಸೈಟಿಗಳಿಂದ ಶಿಫಾರಸು ಹೊಂದಿದೆ

ವೈದಿಕ ಧರ್ಮಾಭಿಮಾನಿಗಳೂ ಕನ್ನಡ ಭಾಷಾಭಿಮಾನಿಗಳು ಅವಶ್ಯವಾಗಿ ಓದತಕ್ಕ

ಯುಗಾದಿ ...] ಶ್ರೀ ಶೇಷಾಚಲ [ವರ್ಷಾರಂಭ

ಸದ್ಬೋಧ ಚಂದ್ರಿಕೆ.

... ರಿಂದ ಪ್ರಕಟವಾಗುತ್ತಿರುವ ಉಚ್ಚತರಗತಿಯ ತಿಳಿಗನ್ನಡ

ಮಾಸ ಪತ್ರಿಕೆಯು

ವಾ ಚಂದಾ ...] [... ಪ್ರಕಟ

ಆಗಡಿ ಆನಂದವನದಲ್ಲಿ ... ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ ಶ್ರೀ ಶೇಷಾಚಲ ... [illegible] ... ಸದ್ಬೋಧ ... [illegible]

... ಆಫೀಸು
... ಧಾರವಾಡ

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

[illegible]

ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ... ದಿನವೂ ... ಉಪಯೋಗಿಸು ... ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

... ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳುಳ್ಳ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿ ... ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ
(... ಸಿದ್ಧೌಷಧ)

... ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ
(ಕ್ಷಯರೋಗ ...)

... ವರ್ಷಗಳಿಂದ ... ರೋಗಿಗಳಿಗೆ ರೋಗವನ್ನು ನಂಬುಗೆಯಾಗಿ ಗುಣಪಡಿಸುತ್ತದೆ ... ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿಪಾತಜ್ವರಗಳಿಗೂ ಅಮೃತವಾಗಿರುತ್ತದೆ ಸೀಸೆ 1ಕ್ಕೆ ರೂ 1—0—0

ಶ್ರೀನಿವಾಸ ತೈಲ

ಪ್ಲೇಗು ರೋಗಿಯ ... ಗೆಡ್ಡೆಗೂ ... ಔಷಧ ಸೀಸೆ 1ಕ್ಕೆ ರೂ 0—8—0

"ಭಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್ ಸೀತಾರಾಘವ ವೈದ್ಯ ಶಾಲಾ ಮೈಸೂರು

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ...

ಡಾಕ್ಟರ ವಾಮನ ಗೋಪಾಳರವರ



ಬಿಡಿಡಾಯಿಜ್ಡ ಸಾರ್ಸಪರಿಲಾ

... ವರ್ಷ ... ಉಪಯೋಗಿಸಿ ...

ಡಾಕ್ಟರ್ ಗೌತಮರಾವ್ ಕೇಶವರವರ
ಪ್ರೆಸ್ಟರಸ ಗುಳಿಗೆಗಳು
...

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,
... ಮುಂಬಯಿ ... ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲಾಂಟರರಿಗೂ ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

EDITED, PRINTED & PUBLISHED BY V S KAMATH AT M T A. SHARADA PRESS, MANGALORE

ಮುಂಗಡಾ ನಿರ್ಣಯ — ವರ್ಷ ಒಂದಕ್ಕೆ ರೂಪಾಯಿ 2—0—0 ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷ್ಯುರ್ಮಹಾರ್ಹ್ಯಸ್ಸ್ವತುರ್ದೇವಂ ... ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲ ... ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೬. ಮಂಗಳೂರು ತಾ ೨೯ನೇ ಶುಕ್ರವಾರ ಎಪ್ರಿಲ ೧೯೩೨ (29-4-32) ಸಂಚಿಕೆ ೧೭

THE CANARA BANKING CORPORATION, UDIPI, LTD.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR & Mangalore
ಹೆಡ್ ಆಫೀಸು: ಉಡುಪಿ ಶಾಖೆ: ಕುಂದಾಪುರ ಮತ್ತು ಮಂಗಳೂರು

Authorised Capital Rs. 3,50,000 Subscribed & Paid up Rs. 25,000

ನಿಯಮಿತ ಮೂಲ ಧನ ರೂ 3,50,000 ...

NOTICE.

The rate of interest allowed on the undermentioned deposits will be as follows with effect from 15-4-1932.

Fixed deposits 3 months 4½ ... 6 and 9 months 5 ... 1 year ... 2 years 6 p. c.

Short term deposits 4 p. c.

Udipi ... 4-32 (By ...) N. ANANDA RAO

ಅಮೃತಾಂಜನ.

ತಲೆ ನೋವು ...

ಗಜಕರ್ಣ ಮುಲಾಮು — ...

ಅಮೃತಾಂಜನ ಡಿಪೋ,
ಮದರಾಸು ಮತ್ತು ಬೊಂಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.

ಇವನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು,

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜಂಟರು:— ... ಕಂಪೆನಿ, ಮಂಗಳೂರು

The Popular Insurance Co. Ltd.
First of its kind in the West Coast
Dewan Bahadur N. Subba Rao
STRIKING FEATURES
Policy Conditions Liberal
Claims Settled Prompt
Ensure the Absolute Safety Comfort and Happiness of your Dear Ones
WANTED INFLUENTIAL AGENTS
LIBERAL TERMS TO COMPETENT MEN
For further particulars ...

ALLIANZ UND STUTTGARTER
Life Insurance Bank, Ltd.

ಅಲಿಆನ್ಸ ಉಂಡ್ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್

ಬೇಂಕ್, ಲಿಮಿಟೆಡ್.

(ಜರ್ಮನಿಯಲ್ಲಿ ಸನ್ ೧೮೮೧ರಲ್ಲಿ ಸ್ಥಾಪಿಸಲ್ಪಟ್ಟಿದು.)

ಒಟ್ಟು ವಿಮಾ ಹಣವು ೨೦೯ ಕೋಟಿ ರೂ ಗಳಿಗಿಂತ ಹೆಚ್ಚಿಗಿರುವದು ವಾರ್ಷಿಕ ವಿಮಾ ಹಪ್ತೆಗಳ ಹಣವು ೯೯ ಕೋಟಿ ರೂ ಗಳಿಂತ ಹೆಚ್ಚಿಗಿರುವುದು ಒಟ್ಟು ಪ್ರಾಪ್ತಿ ೪೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗಿರುವುದು

ವಿಮಾ ಪತ್ರಕಗಳ ಮೇಲಿನ ಕಾಯ್ದಿಟ್ಟ ಕೇವುಗಳು ಹಿಂದೀ ಶಾರಣಗಳಲ್ಲಿಯೇ ಕೊಡಗಿಸಲ್ಪಡುವುವು

ಬೇಕಾಗಿದೆ ಧಾರ್ರವಾಡ, ವಿಜಾಪುರ ಬೆಳಗಾಂವ, ಕಾರವಾರ, ಕೊಲ್ಹಾಪುರ, ಬಳ್ಳಾರಿ ಮತ್ತು ಮಂಗಳೂರ ಜಿಲ್ಲೆಗಳಲ್ಲಿಯೂ ಕೊಲ್ಹಾಪುರ ಮತ್ತು ಇತರ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯೂ ಕೆಲಸವನ್ನು ಮಾಡಲು ಆಯಾ ಸ್ಥಳಗಳಲ್ಲಿ ತರುಣರೂ ಉತ್ಸಾಹಿಗಳೂ ಆದ **ಸಬ್ ಏಜಂಟರು ಬೇಕು** ಹೆಚ್ಚಿನ ಮಾಹಿತಿಗಾಗಿ **ಮೆರವಾನಜಿ ಆ್ಯಂಡ್** ಸನ್ಸ ಅಲಿಆನ್ಸ ಉಂಡ ಸ್ಟುಟಗಾರ್ಟರ ಲ್ಯಾಫ್ ಇನ್ಶೂರೆನ್ಸ್ ಬ್ಯಾಂಕಿನ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೋಸ್ಕರ **ಸೀನಿಯರ ಏಜಂಟರು,** ಇವರಿಗೆ ಬರೆಯಬೇಕು.

"If every Wife knew what every Widow knows every Husband would be Insured"

PLACE YOUR LIFE ASSURANCE WITH

THE SOUTH INDIAN

Securing for your clients –

1. Low rates of Premium
2. Liberal Policy Conditions.

AND FOR YOURSELF

An Agency with attractive Terms of Commission and Salary in

The South Indian General Assurance Co, Ltd.,

Any where in CANARA DISTRICTS & HYDERABAD STATE

For terms of Agency please apply to —

H R K IYENGAR
Chief Agent

The S I G A Co, Ltd,
Sanyasiguddy, MANGALORE

Managing Agents –

K C PANDALAI & CO
7 8 Mclean Street, G T MADRAS

ಜೀವವಿಮೆ ಮಾಡುವವರು

ದಿ ಸೌತ್ ಇಂಡಿಯನ್ ಜನರಲ್ ಎಸ್ಯೂರೆನ್ಸ್ ಕಂಪೆನಿ ಲಿಮಿಟೆಡ್ನಲ್ಲಿ ವಿಮೆಮಾಡಿರಿ.

ನಿಮಗೂ, ನಿಮ್ಮ ಗಿರಾಕಿಗಳಿಗೂ ಕೆಂಬಾ ಪ್ರಯೋಜನ ಮತ್ತು ಸೌಕರ್ಯಗಳವೆ!

ಪ್ರಿಮಿಯಂ ದರಗಳು ಕಡಿಮೆ!

ಕರಾರುಗಳು ಉದಾರ ಸ್ವಭಾವದ!!

ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಲ್ಲಿ ಈ ಕಂಪೆನಿಯ ಏಜಂಟರಾಗಿ ಕೆಲಸಮಾಡುವವರಿಗೆ

ಧಾರಾಳವಾದ ಕಮಿಶನ್ನೂ ಕೈತುಂಬಾ ಸಂಬಳವೂ ದೊರಕುವುದು

(ಹೆಚ್ಚಿನ ಮಾಹಿತಿಗಾಗಿ ವ್ಯವಹಾರ ನಡಿಸಿ)

ಚೀಫ್ ಏಜಂಟರು—

ಎಚ್. ಆರ್. ಕೆ. ಅಯ್ಯಂಗಾರ್
ಕನ್ನಡ ಜಿಲ್ಲಾ ಮತ್ತು ಹೈದರಾಬಾದು ಪ್ರಾಂತ್ಯಗಳಿಗೆ.

ದಿ ಎಸ್ ಐ. ಜಿ ಎ ಕಂಪೆನಿ ಲಿಮಿಟೆಡ್,
ಸನ್ಯಾಸಿಗುಡ್ಡ ಮಂಗಳೂರು

ಮೇನೇಜಿಂಗ್ ಏಜಂಟರು —

ಕೆ ಸಿ ಪಾಂಡಲಿ ಎಂಡ್ ಕೋ.
7 8 ಮೆಕಲೀನ್ ಸ್ಟ್ರೀಟ್, ಜಿ ಟಿ ಮದ್ರಾಸು

ಲೋಕಾಮಯಹರ ಕಸ್ತೂರೀ ಮಾತ್ರೆಗಳು

ಈ ಮಾತ್ರೆಗಳನ್ನು ಪ್ರತಿ ದಿನವೂ ತಾಂಬೂಲದೊಡನೆಯಾಗಲಿ ಹಾಗೆಯಾಗಲಿ ಉಪಯೋಗಿಸುತ್ತಿದ್ದರೆ ಆಹಾರ ನೀರು, ಗಾಳಿಗಳ ವ್ಯತ್ಯಾಸದಿಂದ ಯಾವ ರೋಗವೂ ಬಾರದಂತೆ ದೇಹವನ್ನು ಕಾಪಾಡುತ್ತದೆ

ಮಕ್ಕಳ ಮೊದಲು ಎಲ್ಲಾ ವಯಸ್ಸಿನವರಿಗೂ, ಶೀತ, ನೆಗಡಿ, ಕೆಮ್ಮು ಅಜೀರ್ಣ, ಶೀತಜ್ವರ, ಚಳಿಜ್ವರ ಮೊದಲಾದ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತದೆ

300 ಮಾತ್ರೆಗಳಿರುವ ಸೀಸೆ 1ಕ್ಕೆ 4 ಆಣೆ

ಎಲ್ಲಾ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ ನಮ್ಮ ವಿಳಾಸವನ್ನೂ ಲೋಕಾಮಯಹರ ಕಸ್ತೂರಿ ಮಾತ್ರೆಯೆಂಬ ಹೆಸರನ್ನೂ ನೋಡಿಕೊಂಡು ಕೊಳ್ಳಿರಿ

ವೈಶ್ವಾನರಾಸವ.

(ಕಾಲರಾ, ವಾಂತಿಭೇದಿಗೆ ಸಿದ್ಧೌಷಧ)

ಮುತ್ತಿನ್ನೂ ಕಪ್ಪುವುದಾಗಲಿ ಹೊಟ್ಟೆಯುಬ್ಬರಿಸುವುದಾಗಲಿ ಉಂಟಾಗಿದೆ ಕೊಟ್ಟ ಮೊದಲನೇ ವೇಳೆಯಿಂದಲೇ ರೋಗವನ್ನು ಸ್ವಾಧೀನಕ್ಕೆ ತರುತ್ತದೆ ಸೀಸೆ 1ಕ್ಕೆ ರೂ 1—0—0

ಲಕ್ಷ್ಮೀವಿಲಾಸರಸ.

(ಕ್ಷಯಕ್ಕೆ)

ಶತಮಾನಗಳ ವರ್ಷಗಳಿಂದ ಪ್ರತಿ ವರ್ಷವೂ ಸಾವಿರಾರು ಕ್ಷಯ ರೋಗಿಗಳಿಗೆ ರೋಗವನ್ನು ನಿಂಬುಗೆಯಾಗಿ ಗುಣಪಡಿಸಿರುತ್ತದೆ ಕ್ಷಯಕ್ಕೆ ಮಾತ್ರವಲ್ಲದೆ ಸಾಧಾರಣ ಜ್ವರಗಳಿಗೂ ಸನ್ನಿವಾತಜ್ವರಗಳಿಗೂ ಅಮೃತವಾಗಿರುತ್ತದೆ

ಸೀಸೆ 1ಕ್ಕೆ ರೂ. 1—0—0.

ಶ್ರೀನಿವಾಸ ತೈಲ.

ಕ್ಷಯ ರೋಗಿಯ ಪ್ರತಿಸಂದುಗಳಿಗೂ, ಗೆಡ್ಡೆಗೂ ಶಿಕ್ಷ್ಯತ ಔಷಧ. ಸೀಸೆ 1ಕ್ಕೆ ರೂ 0—8—0

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್ ಆಫೀಸ್, ಸೀತಾರಾಘವ ವೈದ್ಯ ಶಾಲಾ, ಮೈಸೂರು.

ಏಜಂಟರು —
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಕೋಡಿಯಾಲ್ ಬೈಲ್
ಮಂಗಳೂರು ಟಪಾಲು ಮಾತ್ರ.

ಮೈಸೂರು ಸರಕಾರದ ವಿದ್ಯಾ ಇಲಾಖೆ ಮತ್ತು ಕೊ. ಆ. ಸೊಸೈಟಿಗಳಿಂದ ಶಿಫಾರಸು ಹೊಂದಿದೆ.

ವೈದಿಕ ಧರ್ಮಾಭಿಮಾನಿಗಳೂ, ಕನ್ನಡ ಭಾಷಾಭಿಮಾನಿಗಳೂ ಅವಶ್ಯವಾಗಿ ಓದತಕ್ಕ

ಯುಗಾದಿಯಿಂದ] ಶ್ರೀ ಶೇಷಾಚಲ [ವರ್ಷಾರಂಭ

ಸದ್ಬೋಧ ಚಂದ್ರಿಕೆ.

೧೯೦೮ರಿಂದ ಪ್ರಕಟವಾಗುತ್ತಿರುವ ಉಚ್ಚತರಗತಿಯ ತಿಳಿಗನ್ನಡ **ಮಾಸ ಪತ್ರಿಕೆಯು.**

ವಾ. ಚಂದಾ ರೂ. ೩] [ಮಾದರಿ ಪ್ರತಿಗೆ...

ಆಗಡಿ ಆನಂದವನದಲ್ಲಿ ಈಗ ೨೫ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಿರುವ ಶ್ರೀ ಶೇಷಾಚಲ ವೇದ ಮತ್ತು ಸಂಸ್ಕೃತ ಪಾಠ ಶಾಲೆಗೆ ಇದರ ಆದಾಯವೆಲ್ಲ ವಿನಿಯೋಗಿಸಲ್ಪಡುತ್ತಿರುವುದಲ್ಲದೆ, ಅನೇಕ ಸದ್ಬೋಧ ಪೂರ್ಣವಾದ ಲೇಖಗಳಿಂದಲೂ, ವಿನೋದರಂಜಕ, ಸಾಮಾಜಿಕ, ಧಾರ್ಮಿಕ, ಐತಿಹಾಸಿಕ ಕಥೆ ಕಾದಂಬರಿಗಳಿಂದಲೂ ಕರ್ನಾಟಕದ ನವನಾಡ ಭಾಷಾ ಸೇವೆಯನ್ನು ಮಾಡುತ್ತಿರುವದು. ನಮ್ಮಲ್ಲಿ ಶ್ರೀ ಶೇ. ಗ್ರಂಥ ಮಾಲೆಯ ಪುಸ್ತಕಗಳೂ ದೊರೆಯುತ್ತವೆ

ಮ್ಯಾನೇಜರು ಆಫೀಸು,
ಪೋ. ಆನಂದವನ, ಜಿ ಧಾರವಾಡ

ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ

ಡಿಸ್ಟ್ರಿಕ್ಟ್ ಎಜ್ಯುಕೇಶನ್ ಕೌನ್ಸಿಲಿನವರು ತಯಾರಿಸಿದ ಹೊಸ ಪಾಠಪಟ್ಟಿಗೆ ಸರಿಯಾಗಿ ೨೦ ಇನ್ಸ್‌ಪೆಕ್ಟರ್ ಏಗಳಿಂದ ಪರೀಕ್ಷಿಸಲ್ಪಟ್ಟು ಒಪ್ಪಿಕೊಂಡ ಶಾಲಾ ಪಠ್ಯಪುಸ್ತಕಗಳು—

೪ನೇ, ೫ನೇ, ೬ನೇ ಮತ್ತು ೭ನೇ ವರ್ಗದ ವ್ಯಾಕರಣ ಮತ್ತು ನೀತಿಬೋಧೆ

೪ನೇ, ೫ನೇ, ೬ನೇ ವರ್ಗದ ಪ್ರಕೃತಿ ಶಾಸ್ತ್ರ ಮತ್ತು ಸಂವಾದ ಪಾಠಗಳು

೫ನೇ, ೬ನೇ ವರ್ಗದ ದೇಹಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ

೪ನೇ, ೫ನೇ, ೬ನೇ ವರ್ಗದ ಚರಿತ್ರೆ ಮತ್ತು ಭೂಗೋಳ, ಹೊಸ ನಕ್ಷೆ (೧ನೇ, ೨ನೇ ಭಾಗ) ಅಲ್ಲದೆ ಪುಸ್ತಕಗಳೂ ನಮ್ಮಲ್ಲಿ ದೊರೆಯುತ್ತವೆ ಪುಸ್ತಕ ವ್ಯಾಪಾರಿಗಳಿಗೆ ತಕ್ಕ ಕಮಿಶನು ಕೊಡಲ್ಪಡುವುದು.

ಪುಸ್ತಕ ದೊರೆಯುವ ಸ್ಥಳ —

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಜ್ಡ ಸಾರಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ ಇದು ವರ್ಷಾನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾಕ್ಟರ್ ಗೌತಮರಾವ್ ಕೇಶವರವರ

ಫೋಸ್ಫರಸ್ ಗುಳಿಗೆಗಳು

ಅತ್ಯುತ್ತಮ ಟಾನಿಕ್

ಡಾ ಗೌತಮರಾವ್ ಕೇಶವ ಅಂಡ್ ಸನ್ಸ್,

ಭೂಲೇಶ್ವರ, ಮುಂಬಾಯಿ ಎಜಂಟ್ ಸ್ಟೋಕಿಸ್ಟ ಏ ಕಂಪೆನಿ

ಚಿಕ್ಕವ್ಯವಹಾರಕ್ಕೆ ಸ್ಟಾಕ್ ಆದವ ಮಾರ್ಕೆಟ್ಟಿಲ್ಲ ಮಂಗಳೂರು

ಮಾರಾಟಕ್ಕಿವೆ ಮಾರಾಟಕ್ಕಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

EDITED, PRINTED & PUBLISHED BY V. S. KAMATH AT M. T. A. SHARADA PRESS, MANGALORE

ಚಂದಾ ನಿರ್ಣಯ:- ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 489. ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0.

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೬. ಮಂಗಳೂರು ... ಶುಕ್ರವಾರ ... 29-4-32 ಸಂಚಿಕೆ

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. Branches:—COONDAPOOR & Mangalore

ಹೆಡ್ ಆಫೀಸು:— ಉಡುಪಿ ಶಾಖೆ ಕುಂದಾಪುರ ಮತ್ತು ಮಂಗಳೂರು

Authorised Capital Rs. 3,50,000 Subscribed ... Rs. 25,000

NOTICE.

The rate of interest allowed on the undermentioned deposits will be as follows with effect from 15-4-1932.

Fixed deposits 3 months 4½ ... 6 and 9 months 5 ... 1 year and above 5 ...
2 years 6 p. c.

Short term deposits 4 p. c.

UDIPI, ... 4-'32 N. ANANDA RAO

(Regd

ಅಮೃತಾಂಜನ.

ಗಜಕರ್ಣ ಮುಲಾಮು

ಅಮೃತಾಂಜನ ಡಿಪೋ,

ಮದರಾಸು ಮತ್ತು ಬೊಂಬಾಯಿ.

ನಮ್ಮ ಹುಡುಗರ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜೆಂಟರು:— ... ಕಂಪೆನಿ, ಮಂಗಳೂರು

The Popular Insurance Co. Ltd.

First of its kind in the West Coast

Dewan Bahadur N. Subba Rao

STRIKING FEATURES

Policy Conditions Liberal
Claim Settlement Prompt

Ensure the Absolute Safety Comfort and Happiness of your Dear Ones

WANTED INFLUENTIAL AGENTS
LIBERAL TERMS TO COMPETENT MEN.

For further particulars ...



ಅತೀ ಅಗ್ಗವಾದ ಬಸ್ಸ್ ಒಂದನ್ನು ಪಡೆಕೊಳ್ಳಿರಿ.

ಅದನ್ನು ನಡೆಸಲು ತಗಲುವ ಖರ್ಚನ್ನು ಕಡಿಮೆಮಾಡಿರಿ.

ಫೋರ್ಡ್ ಬಸ್ಸಿನ ಚಲನೆಯಲ್ಲಿ ಅದು ಮಿಕ್ಕವುಗಳಿಗಿಂತ ಕಾಲಂಶ ಪೆಟ್ರೋಲ್ ಮೈಲೆಜನ್ನು ಕೊಡುತ್ತದೆ. 4 ಸಿಲಿಂಡರಿನ ಬಲವಾದ ಇಂಜಿನಿಗೆ ಲಗ್ಗವಾಗಿ ಬಹು ಕಡಿಮೆ ಸಾಮಾನುಗಳಿರುವುದರಿಂದ, ಯಾವುದೂ ಹಾಳಾಗದೆ, ಉತ್ತಮ ರೀತಿಯ ಕಾರ್ಬುರೇಟರಿನಿಂದಾಗಿ ಒಂದು ಗೆಲನಿಗೆ ಸುಮಾರು ಮೈಲುಗಳ ಲಾಭವಿದೆ.

ಪುಕ್ಕಟೆಯಾದ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದೆ. ಹಣ ಕಟ್ಟುವ ಸುಲಭ ಕಂತುಗಳಿವೆ

ಹೆಚ್ಚಿನ ಲಾಭವು ಬೇಕಾಗಿದ್ದರೆ ಫೋರ್ಡ್ ಬಸ್ಸನ್ನು ಪಡೆಯಿರಿ.

Ford

ಫೋರ್ಡ್ ಮೋಟರ್ ಕಂಪೆನಿ ಓಫ್ ಇಂಡಿಯಾ ಲಿಮಿಟೆಡ್

ಎಸೆಂಬ್ಲಿ ಸ್ಥಳ

ಮುಂಬಾಯಿ, ಕಲ್ಕತ್ತ, ಮದ್ರಾಸ್, ಮುಲ್ತಾನ, ಕೊಲೊಂಬೊ.

ENCOURAGE INDIAN COMPANIES & INDUSTRIES

SWADESHI MEANS PROVIDING FOOD FOR STARVING MILLIONS
DEAL IN INDIAN GOODS AND KEEP INDIAN MONEY IN INDIA

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್.

(REGISTERED UNDER COMPANY'S ACT I)

ಕಾಸರಗೋಡು, ದ ಕನ್ನಡ

ಮೂಲಧನ ರೂಪಾಯಿ ೫೦,೦೦೦. ಪಾಲು ಒಕ್ಕೆ ರೂ ೧೦ ರಂತೆ ೫೦೦೦ ಪಾಲುಗಳ

ಸೇವೆಮಾಡಿ ದೇಶವನ್ನು ವೃದ್ಧಿಗೊಳಿಸುವಂತೆ ಸಹಾಯಕರಾಗಿ ಸ್ವದೇಶಿ ಸಾಮಾನುಗಳನ್ನು ಪ್ರೋತ್ಸಾಹಿಸಿರಿ

ಕರ್ನಾಟಕ ಕೇರಳ ಮತ್ತು ಇತರ ಕಡೆಗಳಲ್ಲಿ ಪರಿಶುದ್ಧವಾದ ಖಾದಿಯ ಮತ್ತು ಸ್ವದೇಶಿ ಸಾಮಾನುಗಳ ಪ್ರಚಾರಕ್ಕಾಗಿ ಸ್ಥಾಪಿಸಿದ ಒಂದು ಕಂಪೆನಿಯು ಇಲ್ಲವೆಂದು ಇನ್ನು ಮುಂದೆ ಯಾರೂ ಹೇಳಬೇಕಾಗಿಲ್ಲ ಸ್ವದೇಶಿ ಸ್ನೇಹಿಗಳೆಂದು ಅಭಿಮಾನಿಸುವ ಪ್ರತಿಯೊಬ್ಬರು ಒಂದೊಂದು ಪಾಲು ತೆಗೆದುಕೊಂಡು ಕಂಪೆನಿಯನ್ನು ಪುಷ್ಟೀಕರಿಸದೆ ಇರಲಿಕ್ಕಿಲ್ಲ ಹಾಗೆ ಮಾಡುವುದು ಅವರ ಧರ್ಮವಾಗಿರುತ್ತದೆ ಕೂಡಲೇ ಅಪೇಕ್ಷಿಸಿರಿ

ಈ ಕಂಪೆನಿಯ ಹಿಂದೂಸ್ಥಾನದಲ್ಲಿ ತಯಾರಾದ ಸಾಮಾನುಗಳಲ್ಲಿ ವ್ಯಾಪಾರ ಮಾಡತಕ್ಕದೆಂದು ನಿಬಂಧನೆಯಿದೆ

ಖಾದಿ ಮತ್ತು ಸ್ವದೇಶಿ ಸಾಮಾನುಗಳ ರಖಂ ಮತ್ತು ಚಿಲ್ಲರೆಯಾಗಿ ಮಾರಾಟಕ್ಕೆ ಸಿದ್ಧವಿದೆ

ಇತರ ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ— ಮೆನೇಜಿಂಗ್ ಡೈರೆಕ್ಟರ್

ದಿ ಖಾದಿ ವರ್ಕ್ಸ್ ಮತ್ತು ಸ್ವದೇಶಿ ಸ್ಟೋರ್ಸ್ ಲಿಮಿಟೆಡ್, ಕಾಸರಗೋಡು, ದ ಕ

ಆಶ್ಚರ್ಯವಲ್ಲ — ಮೋಸವಿಲ್ಲ, ಬರೇ ರೂ ೩—೧೪—೦ಕ್ಕೆ

ಈ ಕೆಳಗಿನ ವಾಚುಗಳನ್ನೂ ಇನ್ನಿತರ ಸಾಮಾನುಗಳನ್ನೂ ಕೊಡುತ್ತೇವೆ ೩ ಬಾಟ್ಲಿ ನಮ್ಮ ಪ್ರಖ್ಯಾತ ಬಟ್ಲೋ ಪುಷ್ಪ ತೈಲ ಇದರ ೩ [illegible] ನಿಮಗೆ ಇಡೀ ದಿನ ಸುಗಂಧವನ್ನೀಯುತ್ತದೆ ೧ ಪೆಟ್ಟಿಗೆ ಹಲ್ಲು ಪುಡಿ ೧ ಪೆಟ್ಟಿಗೆ ಮುಖ ಲೇಪನ ೧ ಟೊಲೆಟ್ ಬಾಕ್ಸ್ (ತಕ್ಕ) ೧ ಫೆನ್ಸಿ ಫೌಂಟನ್ ಪೆನ್ನು ೧ ಜೋಡು ಬಾಳಿಕೆಯ ಕೆನ್ನಸ್ ಶೂ ೧ ಜರ್ಮನ್ [illegible] ಟೈಂಪೀಸು ೧ ದಪ್ಪ ಪಾಕೆಟು ವಾಚ್ (ಸರಪಳಿ ಸಮೇತ) ಅಥವಾ ನಿಕ್ಕಲ್ ಕೇಸಿನ ಸೆಫೋಲಿಯನ್ ರಿಸ್ಟ್ ವಾಚ್ ಎಲ್ಲಾ ಸಾಮಾನುಗಳಿಗೆ ಒಟ್ಟು ರೂಪಾಯಿ ೩—೧೪—೦ ಮಾತ್ರ ಪೇಕಿಂಗ್ ಮತ್ತು ಪೋಸ್ಟೇಜ್ ೧ ರೂಪಾಯಿ ಪ್ರತ್ಯೇಕ

ವಿ ಸೂ—ಓರ್ಡರ್ ಕೊಡುವಾಗ ನಿಮ್ಮ ಹಾದದ ಅಳತೆ ಕೊಡಿರಿ ಎಲ್ಲಾ ನಿಜವಾದ ವಾಚುಗಳಿಗೆ ೫ ವರ್ಷ ಗೇರಂಟಿ—ನಿಮಗೆ ಭರವಸೆ ಕೊಡುತ್ತೇವೆ

ಕೂಡಲೇ ಈ ವಿಳಾಸಕ್ಕೆ ಬರೆಯಿರಿ— ಆರ್. ಎಸ್. ಬ್ರದರ್ಸ್ ಎಂಡ್ ಕೊ.
ಟಪ್ಪಾಲ್ ಪೆಟ್ಟಿಗೆ ನಂಬ್ರ 6712, S B ಕಲ್ಕತ್ತಾ

ಪತ್ರವ್ಯವಹಾರ.

[ಪತ್ರಕಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಸಂ. ಸ್ವ]

ಬಂಟವಾಳದಲ್ಲಿ ವ್ಯಾಪಾರ ವಹಿವಾಟಿಕ್ಕೆ ಇನ್ನೊಂದು ಮಾರ್ಗದ ಆವಶ್ಯಕತೆ.

(ಜಿಲ್ಲಾ ಕಲೆಕ್ಟರರವರ ಅವಗಾಹನೆಯ ಬಗ್ಗೆ)

ಬಂಟ್ವಾಳದಲ್ಲಿ ಮೋಟರ್ ಬಸ್, ಟೆಕ್ಸಿ, ಲೋರಿ, ಕಾರ್, ಗಾಡಿ ಮುಂತಾದುವುಗಳ ಸಂಚಾರಕ್ಕೆ ಒಂದು ಮಾರ್ಗ ಮಾತ್ರವೇ ಇದೆ. ಈ ಮಾರ್ಗವು ಸಹ ಬಹಳ ವಿಶಾಲವಾಗಿರದೆ ಬಹು ಇಕ್ಕಟ್ಟಾಗಿದೆ ಸರಿಯಾಗಿ ಎರಡು ಬಸ್ಸುಗಳು ಅತ್ತಿತ್ತ ಹೋಗುವುದು ಕಷ್ಟ ಒಂದು ಬಸ್ಸು ಹೋಗುವಾಗಲೂ ಅಪಾಯ ಬಂದೀತೆಂದು ಕೋಡಿಗೆ ಇಳಿಯಬೇಕಾಗುತ್ತದೆ ಈ ವಾಹನಗಳು ಹೋಗುವಾಗ ಧೂಳು ವಿಶೇಷವಾಗಿ ಏಳುತ್ತದೆ ಮನೆಗಳೂ ಅಂಗಡಿ ಭಂಡಸಾಲೆಗಳೂ ಧೂಳಿನಿಂದ ತುಂಬಿಹೋಗುತ್ತವೆ ಶಾಲೆ ಮಕ್ಕಳು ಮಾರ್ಗದಲ್ಲಿ ನಡೆಯುವುದೇ ಕಷ್ಟವಾಗುತ್ತದೆ ಮಧ್ಯ ಪೇಟೆಯಲ್ಲಿರುವ ಕರ್ವ್ ಬಹಳ ಇಕ್ಕಟ್ಟಾಗಿ ಗಾಡಿ ಬಸ್ ಮುಂತಾದ್ದು ಬರುವಾಗ ಮಾರ್ಗದಲ್ಲಿ ನಡೆಯುವ ಜನರು ಅಂಗಡಿ ಜಗಲಿಯನ್ನು ಹತ್ತಬೇಕಾಗುತ್ತದೆ ಮಾಟಿಳ್ಪಪೇಟೆಯಲ್ಲಿ ಪೋಲೀಸ ಲ್ಯಾನ ಹತ್ತಿರದಿಂದ ಬಂಗ್ಲೆ ಗೇಟಿನ ವರೆಗೆ ಮಾರ್ಗವು ಬಹಳ ಇಕ್ಕಟ್ಟಾಗಿ ಬಸ್ ಓಡುವಾಗ ಮಾರ್ಗದಲ್ಲಿ ನಡೆಯುವವರಿಗೆ ಬಹಳ ಅಡಚಣೆಯುಂಟಾಗುತ್ತದೆ ಇಂಥಾ ಕಷ್ಟಗಳಿಂದ ಜನರನ್ನು ರಕ್ಷಿಸುವುದಕ್ಕಾಗಿ ಇನ್ನೊಂದು ಮಾರ್ಗವನ್ನು ಮಾಡಿಸುವುದು ಬಹಳ ಅಗತ್ಯವಾಗಿದೆ

ಹೊಸ ಮಾರ್ಗ ಕೆಲವು ವರುಷಗಳ ಹಿಂದೆ ಇಲ್ಲಿ ಪ್ಲೇಗು ಬಂದಾಗ ಕೆಲವು ಹೊಸ ರೋಡುಗಳನ್ನು ಸರಕಾರದವರು ಸಂಕಲ್ಪ ಮಾಡಿದ್ದರು ಇವುಗಳಲ್ಲಿ ಭೂತದ ಬಳಿ ಮಾರ್ಗ, ಹರಿಪೈಗಳ ಮಾರ್ಗ ಮಾರ್ಕೆಟು ಮಾರ್ಗ ಈ ಮೂರನ್ನು ಮಾಡಿಸಿದರು ಇವುಗಳಲ್ಲಿ ವ್ಯಾಪಾರ ವಹಿವಾಟಿಕ್ಕೆ ಒಂದೂ ಪ್ರಯೋಜನವಿಲ್ಲ. ವ್ಯಾಪಾರ ವಹಿವಾಟಿಕ್ಕೆ ಅಗತ್ಯವಿರುವ ಮಾರ್ಗಗಳೆರಡನ್ನು ಸರ್ವೆ ಮಾಡಿ ಸಂಕಲ್ಪ ಮಾಡಿ ಪ್ಲೇನ್ ಎಸ್ಟಿಮೇಟ್ ಮಾಡಿ ಇಟ್ಟಿದ್ದೂ ಇಷ್ಟರ ವರೆಗೆ ಮಾಡಿಸಲೇ ಇಲ್ಲ

1 **ಹೆಗಡೆಯವರ ಭಂಡಸಾಲೆ—ಹೊಸಪೇಟೆ ಮಾರ್ಗ—**

ಕಳೆದ ಸಾರಿ ಸೆಟಿಲ್‌ಮೆಂಟನ್ನು ಸರ್ವೆ ಮಾಡುವಾಗ ಹೆಗಡೆಯವರ ಭಂಡಸಾಲೆಯ [illegible] ಪಶ್ಚಿಮ ಪೋಲೀಸ ಲ್ಯಾನ [illegible] ಹತ್ತಿರದಿಂದ ಬಂಗ್ಲೆ [illegible] ಹೊಸಪೇಟೆ ಮಾರ್ಗಕ್ಕೆ ಕೂಡಿಸುವಂತೆ ಮಾರ್ಗ ಸರ್ವೆ ಮಾಡಿದ್ದರು ಈಗಲಾದರೂ ಈ ಮಾರ್ಗವನ್ನು ಮಾಡಿಸಿದರೆ [illegible] ಘಾಟಿಗೆ ಹೋಗುವ ಗಾಡಿಗಳು ಲೋರಿಗಳು ಈ ದಾರಿಯಾಗಿ ಹೋಗಲಿಕ್ಕೆ ಅನುಕೂಲವಾಗಿ [illegible] ಕಡಿಮೆಯಾಗುವುದು ಜನಸಂಚಾರಕ್ಕೆ ಹೆಚ್ಚು ಅನುಕೂಲತೆಯೂ ಆಗುವುದು ಈ ಮಾರ್ಗವನ್ನು ಮಾಡಿಸಲಿಕ್ಕೆ ಹೆಚ್ಚಿನ [illegible] ಬೇಕಾದರೆ [illegible] ಮಾಡಬೇಕಾದ ಸ್ಥಳವು ಬಹಳ ಕಡಿಮೆ ಒಂದೇ ಒಂದು ಕಟ್ಟೋಣವಾದರೂ ಈ ದಾರಿಯಲ್ಲಿಲ್ಲ ಹೆಚ್ಚು ಖರ್ಚು ತಗಲುವುದಿಲ್ಲ ಬಂಟ್ವಾಳ ಒಂದು [illegible] ಈ ಮಾರ್ಗವು ಆಗಿ ಜನರಿಗೆ [illegible] ಆದುದರಿಂದ ಮಾನ್ಯ ಕಲೆಕ್ಟರ ದೊರೆಗಳವರು ಈ ವಿಷಯವನ್ನು [illegible] ಈ ಮಾರ್ಗವನ್ನು ಬೇಗನೇ ಮಾಡಿಸುವಂತೆ ಮಾಡಿಸಿದರೆ ವ್ಯಾಪಾರ ವಹಿವಾಟಿಕ್ಕೂ ಜನಸಂಚಾರಕ್ಕೂ ಬಹಳ ಅನುಕೂಲವಾಗುತ್ತಿತ್ತು

2 **ರಿಜಿಸ್ಟ್ರಿ ಆಫೀಸ ಬಾಗಿಲು—ಮೂಡಬಿದ್ರೆ ಮಾರ್ಗ**

ಈ ಮಾರ್ಗವನ್ನು ಕಳೆದ ಸಾರಿ ಮೂಡಬಿದರೆ ಮಾರ್ಗದಿಂದ ಬೋರ್ಡು ಶಾಲೆಯ ಗೇಟಿನ ವರೆಗೆ ಸರ್ವೆ ಮಾಡಿರುತ್ತಾರೆ ಮಾರ್ಗವು ಮೂಡಬಿದ್ರೆ [illegible] ವಹಿವಾಟಿಕ್ಕೆ ಅತೀ ಅಗತ್ಯವಾದುದು ಇದರಲ್ಲಿ ಖಾಲಿ ಸ್ಥಳವೇ ಹೆಚ್ಚಾಗಿದೆ ದಾರಿಯಲ್ಲಿ ಒಂದು ಕಟ್ಟಡ ಮಾತ್ರವೇ ಸಿಕ್ಕುತ್ತದೆ ಅದು ವಿಶೇಷ ಕ್ರಯಬಾಳತಕ್ಕದ್ದಲ್ಲ ರಥೋತ್ಸವ ಮುಂತಾದ ಉತ್ಸವ ಕಾಲಗಳಲ್ಲಿ ದೇವಸ್ಥಾನದ ಬಾಗಿಲಿನಿಂದ ಕಲ್ಲುಗಳೊದೆ ಮುಂತಾದ ಸರಕುಗಳನ್ನು ಪೇಟೆಗೆ ತರುವ ಹಳ್ಳಿಯ ಜನರಿಗೆ ಹೋಗಲು ಬರಲು ಬಹಳ ಅಡಚಣೆಯಾಗುತ್ತದೆ ಮುಂಗಡೆಯಿಂದ ಮಾರಲಿಕ್ಕೆ ತರುವ ಮೀನು ಹೊರೆಗಳನ್ನು ತಗೆದುಕೊಂಡು ಹೋಗಲಿಕ್ಕೂ ಬಹಳ ಕಷ್ಟವಾಗುತ್ತದೆ ಮೋಟರ ಬಸ್, ಟೆಕ್ಸಿ ಮುಂತಾದ ವಾಹನಗಳು ಹೆಚ್ಚು ಸಮಯದ ವರೆಗೆ, ಉತ್ಸವ ಮುಗಿಯುವ ವರೆಗೆ ಸಮಯ ಕಳೆಯಬೇಕಾಗುತ್ತದೆ ಇದರಿಂದ ವ್ಯಾಪಾರ ವಹಿವಾಟಿಕ್ಕೆ ಬಹಳ ತೊಂದರೆಯುಂಟಾಗುತ್ತದೆ, ಅದುದರಿಂದ ಈ ಎಲ್ಲಾ ತರದ ಕಷ್ಟಗಳು ನಿವಾರಣೆಯಾಗುವಂತೆ ರಿಜಿಸ್ಟ್ರಿ ಆಫೀಸಿನ ಎದುರಿಗಿರುವ ಕಲ್ಲಿನ ಕಸದ ಗೂಡಿನಿಂದ ಬೋರ್ಡು ಶಾಲೆಯ ಗೇಟಿನ ದಾರಿಯಾಗಿ ಕೊಟ್ರದನಗಂಡಿ ಮೂಡಬಿದರೆ ಮಾರ್ಗಕ್ಕೆ ಕೂಡಿಸಿದರೆ ಎಲ್ಲಾ ತರದ ವ್ಯಾಪಾರ ವಹಿವಾಟಕ್ಕೂ, ಜನ ಸಂಚಾರಕ್ಕೂ ಅನುಕೂಲತೆಯುಂಟಾಗುವುದು ಅದುದರಿಂದ ಕಲೆಕ್ಟರ ದೊರೆಗಳು ಈ ಮಾರ್ಗವು ಸಹ ಆಗುವಂತೆ ಮಾಡಿದರೆ ಬಹಳ ಉಪಕಾರವುಂಟಾಗುವುದರಲ್ಲಿ ಸಂದೇಹವಿಲ್ಲ

ಬಂಟ್ವಾಳ ನಿವಾಸಿ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಂಕುಶ ತೈಲ.—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಳಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ —ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ.

[illegible]

ಯಮ್. ಪಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ

ಅಪೇಕ್ಷಿಸುವ ಬಹುಮಾನಗಳು.

[illegible] ರೂ 2 ವರೆಗೆ ಜರಿ ಕೆಲಸ ಮಾಡಿದ ಮತ್ತು ಸಾದಾ ಪಟ್ಟೆ ಸೀರೆಗಳು, ರವಿಕೆ ಖಣಗಳು, ಮಗ್ಗಗಳು, ಎಲಿವಸ್ತ್ರ, ಶಾಲು, ಪೇಟ, ಇತ್ಯಾದಿ ಉತ್ಕೃಷ್ಟ ಶಾಲು, ಬನ್ನ್ ... ಧಾರವಾಡ, ಕಸ್ತೂರಿ ಕೇಸರಿ, ಪಚ್ಚಕರ್ಪೂರ, ಹಿತ್ತಾಳೆಯ ಸಾಮಾನುಗಳು, ಪೂಜಾ ಸಾಮಗ್ರಿಗಳು, ಜರಿ ಟೊಪ್ಪಿ, ಸುಗಂಧ ದ್ರವ್ಯಗಳು ಸಹಾ ಯೋಗ್ಯ ದರದಿಂದ ಕಳುಹಿಸಲ್ಪಡುವವು. ಬಹುಮಾನಗಳನ್ನು ಅಪೇಕ್ಷಿಸುವವರು ಪತ್ರ ಮೂಲಕ ತಿಳಿದುಕೊಳ್ಳಬಹುದು.

ವಿಳಾಸ –

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್
ಮುಗಾಕಫೂಟ್ ಕಾಶೀ ಬನಾರಸ್ ಸಿಟಿ

The Udipi Mutual Benefit Fund, UDIPI.
ದಿ ಉಡುಪಿ ಮ್ಯೂಚುವಲ್ ಬೆನಿಫಿಟ್ ಫಂಡ್, ಉಡುಪಿ

(Regd 1918)

ಈ ಬೇಂಕಿನಲ್ಲಿ ಇತರ ಬೇಂಕುಗಳಲ್ಲಿ ವಾಡಿಕೆಯಾದ ಎಲ್ಲಾ ತರದ ವಹಿವಾಟುಗಳೂ, ಕುರಿಫಂಡುಗಳೂ ನಡೆಯಿಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಪ್ರೊಪ್ರೈಟರರಿಗೆ ಬರೆಯಬಹುದು.

ಎಂ. ಮುಖ್ಯಪ್ರಾಣಭಟ್ಟ. ಪ್ರೊಪ್ರೈಟರ್

Canara Bank Limited.
ಕೆನರಾ ಬ್ಯಾಂಕ್ ಲಿಮಿಟೆಡ್.

Head Office — **MANGALORE**

Established July 1906 — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

BRANCHES -Karkal Kasargod, Cochin Udipi Gangolli Coondapur, Bombay Puttur Calicut & Alleppey

ಬ್ರಾಂಚುಗಳು:–
ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ, ಕುಂದಾಪುರ, ಬೊಂಬಾಯಿ ಪುತ್ತೂರು ಕಲ್ಲಿಕೋಟೆ ಮತ್ತು ಅಲ್ಲೆಪ್ಪಿ

Authorised and fully paid up Capital Rs 300 000 0 - 0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಡಲ್ಪಟ್ಟ ಬಂಡವಾಳ ...
Reserve and other sinking Funds Rs 326 000 - 0 - 0	ರಿಸರ್ವ ಮತ್ತು ಇತರ ...
Amount Invested on G P Notes Rs 815,092 - 2 0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ...
Rates of interest on fixed deposits at Head Office and Branches are ... for ... Year ... Year	...

Current Account Deposits received and interest allowed ... and above that or multiple of Rs 10 @ % from 1st January ... from 1st July to 31st December. No interest will be allowed unless ... than Rs 5/ during a period of 6 months ending either 30th June or 31st December of any year.

Except by special arrangement no interest ... allowed ... exceeding Rs 10 000 in the case of Head Office and Cochin Branch ... exceeding ... 000 in the case of ... Branch ... other Branches.

For further particulars please apply to

Office of the Bank, — **K. Venkat Rao,**
Mangalore ... —'932 — *Secretary ...*

The Pangal Nayak Bank, Ltd.

Head Office Udipi	*Established 19..*	Branch Office Mangalore

Authorised Capital Rs 2,00,000-	Paid up Capital Rs- 1 75 000-
Issued Capital Rs 1 75,000	Reserve and other Funds Rs 1,80 000

NOTICE.

The rate of interest allowed on the under mentioned deposits will be as follows with effect from 19 4—1932.

Fixed Deposits 3 ... 4 ... 1
above ... 2 ... p ...

Short term deposits 4 ...

Office of the Bank — P Laxman Nayak,
Udipi ... 32 — Secretary

ಇಪ್ಪತ್ತು	ವಯಸ್ಸಿನಲ್ಲಿ	ಮದುವೆ
ಮೂವತ್ತು	...	ಮಕ್ಕಳು
ನಲವತ್ತು	...	ನರೆ ...
ಐವತ್ತು	...	ಆಲಸ್ಯ
ಅರುವತ್ತು	...	ಅರಳು ಮರಳು
ಎಪ್ಪತ್ತು	ವಯಸ್ಸಿಗೆ	ಏನಾಗುವಿರೋ?

ಈ ಸ್ಥಿತಿಗಳಲ್ಲಿ ನೀವು ಇದ್ದರೆ ಅಥವಾ ಈ ಸ್ಥಿತಿಗಳು ನಿಮಗೆ ಸಂಭವಿಸುವದಾದರೆ ಕೂಡಲೇ ಇವುಗಳನ್ನು ಪರಿಹರಿಸುವ ಅಥವಾ ನಿವಾರಣೆ ಮಾಡುವ

ಮದನಮಂಜರಿ ಟಾನಿಕ್

ಉಪಯೋಗಿಸಿ — ಡಬ್ಬಿ 1ಕ್ಕೆ ಕ್ರಯ ರೂ 1—0—0

ಹೆಚ್ಚಿನ ವಿಷಯ ತಿಳಿಯಲಪೇಕ್ಷಿಸುವವರು ಕ್ರಯ ಮತ್ತು ಅಂಚೆ ಹಾಸಲು ಇಲ್ಲದೆ ಮುಫತ್ತಾಗಿ ಕಳುಹಿಸಲ್ಪಡುವ **ವೈದ್ಯವಿದ್ಯ** ಎಂಬ ಪುಸ್ತಕವನ್ನು ಓದಿರಿ — ಮದನಮಂಜರಿ ಫಾರ್ಮಸಿ, 1.. ಚೀನಾ ಬಜಾರ್, ಮದ್ರಾಸ್

ಮದನಮಂಜರಿ ಮಾತ್ರೆಗಳ ಏಜಂಟರು — ಪಿ ಜಿ ಚಂದ್ರರಾವ್ ... ಬೀದಿ ಮಂಗಳೂರು

ದಕ್ಷಿಣಾಫ್ರಿಕದ ಹಿಂದೀಯರ ದೂರು

ಇಲ್ಲಿನ ಸರಕಾರವು ಕಳುಹಿದ ಪ್ರತಿನಿಧಿಗಳಿಗೂ ಅಲ್ಲಿನ ಸರಕಾರಕ್ಕೂ ಒಂದು ಕರಾರು ನಡೆಯಿತಾದರೂ, ಅಲ್ಲಿನ ಹಿಂದೀಯರ ಗೋಳು ಇನ್ನೂ ಜೋರಾಗಿಯೇ ಕೇಳಿಸುತ್ತಲಿದೆ. ಅಲ್ಲಿನ ಸರಕಾರವು ಅಲ್ಲಿರುವ ಹಿಂದೀಯರ ರಾಷ್ಟ್ರಸಭೆಯ ಪ್ರತಿನಿಧಿಗಳೊಡನೆ ಮಾತುಕತೆ ನಡೆಯಿಸಲಿಕ್ಕೂ ಒಪ್ಪುವುದಿಲ್ಲ ಹಿಂದೀಯರಿಗೆ ಅಲ್ಲಿ ಆಸ್ತಿಯ ಹಕ್ಕನ್ನು ನಿರಾಕರಿಸುವ ಮತ್ತು ನಿರ್ಧರಿಸುವ ಬಗ್ಗೆ ಒಂದು ಹೊಸ ಮಸೂದೆಯು ತಯಾರಾಗಿದೆ ಅದರಲ್ಲಿರುವ ವಿಷಯಗಳನ್ನು ಹಿಂದೀಯರೊಡನೆ ಚರ್ಚಿಸಿ ಇತ್ಯರ್ಥಿಸಬೇಕಾಗಿ ಬೇಡಿಕೊಂಡರೂ ಸರಕಾರವು ಒಲ್ಲದು ಹೀಗಾಗಿ, ಪಾರ್ಲಿಮೆಂಟಿನ ತನಕವೂ ಹಿಂದೀಯರು ಈ ದೂರನ್ನು ಒಯ್ಯದೆ ಬೇರೆ ಉಪಾಯ ಕಾಣದು ಆದರೆ, ಅಲ್ಲಿಯೇನು? ಆಫ್ರಿಕದಲ್ಲೇನು? ಹಿಂದೀಯರಿಗೆ ಕಿವಿಗೊಡುವ ಜನರೇ ಕಡಿಮೆ. ಇಂಡಿಯಾ ಸರಕಾರವಾದರೂ ಹಿಂದೀಯರ ಪಕ್ಷವಾಗಿ ವ್ಯವಹರಿಸಬಹುದು, ಆದರೆ ಅದಕ್ಕೂ ಅಷ್ಟು ಬಲವಿದೆಯೆ? ಎಂಬ ಪ್ರಶ್ನೆಯಿದೆ ಅಂತೂ ಇಂತೂ ಹಿಂದೀ ಮಕ್ಕಳಿಗೆ ವನವಾಸ ತಪ್ಪದು

ಸ್ವದೇಶೀ ಪ್ರಚಾರ ಚಳವಳವು

ಮದ್ರಾಸಿನಲ್ಲಿ ಸುಮುಹೂರ್ತದಲ್ಲಿ ಪ್ರಾರಂಭವಾಗಿದ್ದು, ಭರದಿಂದ ಸಾಗುತ್ತಲೇ ಇದೆ ಪ್ರತಿಯೊಂದು ಬೀದಿಯಲ್ಲಿ ಶಾಖೆಗಳಾಗಿವೆ, ಹಲವು ಜಿಲ್ಲಾ ಮತ್ತು ತಾಲೂಕು ಬೋರ್ಡುಗಳೂ ಮ್ಯುನಿಸಿಪಾಲಿಟಿಗಳೂ ಈ ಚಳವಳಕ್ಕೆ ಬೆಂಬಲ ಕೊಟ್ಟಿವೆ. ಕ್ರಮೇಣ ಭಾರತವರ್ಷದ ಇತರ ಪ್ರಾಂತ್ಯಗಳಲ್ಲಿ ಇಷ್ಟು ವ್ಯವಸ್ಥೆಯಿಂದ ಈ ಚಳವಳವು ನಡೆದ ಹರಡಿದಂತೆ ವ್ಯಕ್ತವಾಗುವುದಿಲ್ಲ ಮದ್ರಾಸಿನಲ್ಲಿ ವಿದ್ಯಾರ್ಥಿಗಳು ತಮ್ಮದೊಂದು ಸ್ವದೇಶೀ ಕೇಂದ್ರವನ್ನು ಸಂಸ್ಥಾಪಿಸಲು ತೊಡಗಿರುವರು ಇವರಿಗೆ ಪತ್ಯಕ್ಷ ಶಾಲಾ ಕಾಲೇಜುಗಳ ಅಧಿಕಾರಿಗಳ ಬೆಂಬಲವಾಗಿರುವರು ವಿದ್ಯಾರ್ಥಿಗಳ ತಮ್ಮ ಶಾಲಾ ಕಾಲೇಜುಗಳಲ್ಲೂ ತಮ್ಮ ಮನೆ ಸಂಪತ್ತಿನಲ್ಲೂ ಸ್ವದೇಶೀ ಪ್ರಚಾರ ಮಾಡಲು ಹೊರಟಿರುವುದು ಈ ಹೊಸ ಚಳವಳದ ಸಲ್ಲಕ್ಷಣವಾಗಿದೆ ಎಂದು ಸೆಕ್ರೆಟರಿಯವರು ವರದಿಯಲ್ಲಿ ಹೇಳುವರು ವಾರ್ಷಿಕ ಪರೀಕ್ಷೆಗಳ ಮುಗಿದ ಕಾರಣ ಒಂದೆರಡು ತಿಂಗಳ ಅವಕಾಶದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಾಕಷ್ಟು ಚಳವಳ ನಡೆಸಿ, ಇಂಗ್ಲೆಂಡಿನ ಸ್ಕೌಟರು ಸಹ ಅಲ್ಲಿನ ಸ್ವದೇಶೀ ಚಳವಳ ನಡೆಸಿ ಜಯವಾಗಿ ಹೊರಗೆ ಕೊಂಡಂತೆ, ಇಲ್ಲಿಯೂ ಚಳವಳವು ಕಡಿಮೆ ಅದಕ್ಕಿಂತಲೂ ಹೆಚ್ಚಾಗಿ ಪ್ರಜಾವರ್ಗದಲ್ಲಿ ಬರಮಾಡುವ ಆಶೀರ್ವಾದಕ್ಕೆ ಪಾತ್ರರಾಗಬಹುದಾಗಿ ನಿರೀಕ್ಷಿಸುವಷ್ಟು ಎನ್ನಾಗಿ ಸೆಕ್ರೆಟರಿಯವರ ರಿಪೋರ್ಟು ಇದೆ

ಮುಂಬಾಯಿ ಗಿರಣಿಗಳನ್ನು ಧ್ವಂಸಮಾಡಿ

ಆದರೂ ಒಡ ಕೂಲಿಗಾರರ ಜೀವನಕ್ಕೆ ಸಹಾಯವನ್ನುಂಟು ಮಾಡಲು ಸರಕಾರವು ಹಿಂತೆಗೆಯಬಾರದಾಗಿ ಕಲ್ಕತ್ತೆಯ ಸ್ಟೇಟ್ಸ್‌ಮನ್ ಪತ್ರಿಕೆಯ ಪ್ರಲಾಪ! ಸ್ವದೇಶಿ ಬಟ್ಟೆಗಳು ಸಲಭವಾಗಿ ಮಾರಲೆಂದು ಸರಕಾರವು ವಿದೇಶಿ ಬಟ್ಟೆಯ ಮೇಲೆ ಸುಂಕ ಏರಿಸಿದೆ, ಇದರಿಂದ ಸ್ವದೇಶಿ ಬಟ್ಟೆಯನ್ನು ಒಳ್ಳೇ ಸುಧಾರಣೆ ಮಾಡಿ ಗಿರಣಿಕಾರರು ತುಂಬ ಒಡವೆ ಹಣವನ್ನು ಸಂಗ್ರಹ ಮಾಡುತ್ತಾರಾದರೂ, ಕೂಲಿಯವರಿಗೆ ಪಕ್ಕಗಳನ್ನು ಎನ್ನಾಗಿ ಅವರೂ ಬಾಳಲು ಮಾಡಿ ಕೊಡುವುದಿಲ್ಲ, ಎಂದು ಈ ಪತ್ರಿಕೆಯು ಇವರ ಒಂದುವಾಗಿ ವ್ಯವಹರಿಸಿದೆ ಆದರ— ಒಳಗೆ ಬೇರೆಯಿದೆ ಇಂಗ್ಲಿಷ ಅರಿವೆಯ ಮೇಲೆ ಏರಿಸಿದ ಸುಂಕವನ್ನು ಇಳಿಸುವುದಕ್ಕೆ ಸರಕಾರಕ್ಕೊಂದು ಉಪಾಯ ಸೂಚಿಸಿದಂತೆ ಮಾಡಿ ಇಂಗ್ಲಿಷರ ಪಾರ್ಲಿಮೆಂಟಿನಲ್ಲಿ ಈ ಕುರಿತು ಚರ್ಚಿಸುವಂತೆ ಇದೊಂದು ಹಂಚಿಕೆ ಏಕೆಂದರೆ ಕಲ್ಕತ್ತದ ಸಣಬಿನ ಕಾರ್ಖಾನೆಗಳ ನಾಶವು ಜಗತ್ತಿನಲ್ಲೆಲ್ಲ ಮೂಗ ಹಚ್ಚಿದೆ ಇದರಿಂದಾಗಿ ಕಾರ್ಖಾನೆಗಳನ್ನು ಮುಚ್ಚುವ ಹಾಗೆ ಪ್ರಯತ್ನ ನಡೆಯುತ್ತಲಿದೆ ಪೈಪೋಟಿ ನಡೆಯಿಸಿ ಸಣಬಿನ ಧಾರಣೆ ಅರ್ಧಕ್ಕರ್ಧ ಇಳಿಯುವಂತೆ ಮಾಡಿ ಮಾರಾಟ ಸರಿಯಿಲ್ಲವೆಂದು ಕಾರ್ಖಾನೆಗಳನ್ನು ಮುಚ್ಚಿ ೧೫—೨೦೦೦೦ ಜನರಿಗೆ ಉದ್ಯೋಗವಿಲ್ಲದಂತೆ ಮಾಡಿದ ಕಲ್ಕತ್ತೆಯ ಯುರೋಪೀಯ ಕಾರ್ಖಾನೆದಾರರ ವಕೀಲನಾದ ಈ ಪತ್ರಿಕೆಯು ತನ್ನ ಊರಿನ ನಾಶವನ್ನು ಜನರು ಮರೆವ ಹಾಗೆ ಮುಂಬಾಯಿಯ ಹಿಂದೀ ವ್ಯಾಪಾರಿಗಳ ಕಡೆಗೆ ವಾಚಕರ ದೃಷ್ಟಿ ಹರಿಸಿಯದೆ. ಈ ವಿಷಯವಾಗಿ ಸ್ಟೇಟ್ಸ್‌ಮನ್ ಪತ್ರಿಕೆಯು ತನ್ನ ಕಾಲ ಬುಡದ ಕುಂಬಳವನ್ನೆ ಭಾವಿಸಿದ್ದರೆ ವಿವೇಕವಾಗುತ್ತಿತ್ತು.

ಎರಡು ಒಕ್ಕಣೆಯ ಮಾತುಗಳು

"ಕಳೆದ ಹತ್ತು ವರ್ಷಗಳಲ್ಲಿ ರಾಜಕೀಯ ಚಳವಳದಲ್ಲಿ ವ್ಯಯಿಸಿದ ಶಕ್ತಿಯ ಅರ್ಧದಷ್ಟನ್ನು ಕೈಗಾರಿಕೆಗಳ ಉಜ್ಜೀವನಕ್ಕಾಗಿ ವ್ಯಯಿಸಿದ್ದರೆ, ಈಗ ಕ್ರಾಂತಿಕಾರರಿಗೆ ಬೆಂಬಲವಾಗಿ ನಿಂತಿರುವ ಮುಖ್ಯ ಚೇತನವಾದ ನಿರುದ್ಯೋಗಿಗಳ ಗಲಭೆಯು ಉಂಟಾಗುತ್ತಲೇ ಇರಲಿಲ್ಲ" ಎಂದು ಸ್ಟೇಟ್ಸ್‌ಮನ್ ಪತ್ರಿಕೆಯ ಮುಖ್ಯ ಸಿದ್ಧಾಂತವಾಗಿದೆ. ಎಂದರೆ ಸ್ವರಾಜ್ಯದ ಮಾತು ಅಡಗಲಿ, ಕೈಗಾರಿಕೆ ನಡೆಯಲಿ, ಎಂದೇ ಇವರ ಡಂಗುರ ಕೈಗಾರಿಕೆಯ ಮೇಲೂ ರಾಜಕಾರಣದಿಂದಲೇ ಅಸ್ತ್ರಗಳು ಬಿದ್ದು, ಹಿಂದೂ ಕೈಗಾರಿಕೆಗಳು ನಿರ್ನಾಮವಾಗಲು ಕಾರಣವಾದುದನ್ನು ಆಧಾರಪೂರ್ವಕವಾಗಿ ಬ್ರಿಟಿಷ ಇತಿಹಾಸಕಾರರಾದ ಮಿ| ವಿಲ್ಸನರೇ ಬರೆದಿರುವುದನ್ನು ನಾವು ಮರೆಯಬಹುದೆ! ಹಾಗಿರುತ್ತಾ ರಾಜಕೀಯವು ಮುನ್ನಡೆದು ಭದ್ರವಾಗದೆ ಕೈಗಾರಿಕೆಗಳಿಗೆ ಬಲ ಕುಂದಿತು ಅದು ಕಾರಣ, ಸ್ಟೇಟ್ಸ್‌ಮನ್ ಪತ್ರಿಕೆಗೂ ನಾವು ಅದರ ಮಾತುಗಳಲ್ಲೇ ಹೀಗೆ ಹೇಳಬಹುದೆ? "ಕಳೆದ ಹತ್ತು ವರ್ಷಗಳಲ್ಲಿ ರಾಜಕೀಯ ಚಳವಳದಲ್ಲಿ ಎಂಗ್ಲೋ ಇಂಡಿಯನರು ಈ ರೀತಿಯಲ್ಲಿ ವ್ಯಯಿಸಿದ ಶಕ್ತಿಯ ಅರ್ಧದಷ್ಟನ್ನು ಹಿಂದೀಯರ ಉಜ್ಜೀವನಕ್ಕಾಗಿ ವ್ಯಯಿಸಿದ್ದರೆ, ಈಗ ಕ್ರಾಂತಿಕಾರರ ಬೆಂಬಲಕ್ಕಾಗಿ ನಿಂತಿರುವ ಮುಖ್ಯ ಚೇತನದ ಕಾರಣಗಳು ಉಂಟಾಗುತ್ತಲೇ ಇರಲಿಲ್ಲ ಮಾತ್ರವಲ್ಲ, ಬ್ರಿಟನ್ನಿಗೂ ಇಂಡಿಯಕ್ಕೂ ಉತ್ತಮ ಮೈತ್ರಿಯು ಸದಾ ಸರ್ವದಾ ಬೆಳೆದು ಬರಲು ಅನುಕೂಲವಾಗುತ್ತಿತ್ತು

ಯುರೋಪೀಯರ ಜಗಜಟ್ಟಿ

ಮಿ| ವಿಲ್ಸನ್ ಸಾಹೇಬರು ಬಂಗಾಲದಲ್ಲಿ ಇರುವುದು ಆರೋಗ್ಯಕರವಲ್ಲೆಂದು ಡಾಕ್ಟರರ ಶಿಫಾರಸಿನಂತೆ ಈಗ ಇಂಗ್ಲೆಂಡಿಗೆ ಹೋಗಲಿರುವರು ಇವರ ಆರೋಗ್ಯವು ಎಷ್ಟು ಕೆಟ್ಟಿರುವುದೆಂದರೆ, ಇವರು ಕಲ್ಕತ್ತದ ಯುರೋಪೀಯ ಸಂಘದಲ್ಲಿ ಕೊನೆಯ ಔತಣಕ್ಕೆ ಹೋದಾಗ ಸೊನ್ನೆ ಮಾಡಿದ ಭಾಷಣದಿಂದ ಆ ಭಾಷಣ ಓದುವವರ ಆರೋಗ್ಯವೂ ಕೆಡುವಂತಾಗಿದೆ! ನನ್ನ ಪಕ್ಷಕ್ಕೆ ಯಾರು ಸೇರರೋ ಅವರು ನನ್ನ ವಿರುದ್ಧ ಪಕ್ಷದವರು" ಎಂದೆನ್ನುತ್ತಾ ಮೊಡರೇಟರ ಮೃದು ನೀತಿಯನ್ನು ಹೀಯ್ಯಾಳಿಸಿ, 'ದೇಶದ ಮತ್ತು ಸಾಮ್ರಾಜ್ಯದ ಹಿತಕ್ಕಾಗಿ ಉತ್ತಮ ಸೇವೆಯನ್ನು ಮಾಡಲಾರದವರಿವರು! ಎಂದು ಶಿಫಾರಸು ಕೊಟ್ಟಿರುವರು ಇದಲ್ಲದೆ ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯ ಕೊಡುವುದರ ಮೂಲಕ ಸಹಾಯ ಮಾಡಲೇಬೇಕೆಂದೂ ಪುನಃ ಆರ್ಣವಮಾಡಿದರು ಮುಸ್ಲಿಮರನ್ನು ಬೆಂಬಲಕ್ಕೆ ಸೆಳೆದು ಕೊಳ್ಳಿರಿ ಎಂದು ಕೊನೆಯ ಬೋಧೆ ಒಂದು ಸಮಾಜದ ಬೆನ್ನು ತಟ್ಟಿ ಮತ್ತೊಂದು ಸಮಾಜದ ಗಂಟಲು ಹಿಸುಕುವ ಇವರ ತತ್ವವು ತಿಳಿದೇ ಇದೆ ಆದರೆ, ಇದೂ ಈವರೆಗ ಸಫಲವಾಗಿಲ್ಲ, ರಾಷ್ಟ್ರೀಯ ಅಥವಾ ಜನಾಂಗಿಕ ಭಾವನೆ ಕೆಡಿಸಿ, ಮುಸ್ಲಿಮರನ್ನು ತನ್ನ ಕಂಕುಳ ದೊಣ್ಣೆಯಾಗಿ ಇಟ್ಟುಕೊಳ್ಳಬೇಕೆಂದು ಇವರು ಸಾರಿಸಿದರೆ, ಇವರ ಪಕ್ಷವಾಗಿರುವದಕ್ಕಿಂತ ಇವರ ವಿರುದ್ಧವಾಗಿ ಯುರೋಪೀಯರೇ ನಿಲ್ಲಲಿರುವರೆಂದೂ ಇವರಿಗೆ ತಿಳಿದಿಲ್ಲದಷ್ಟು ಇವರ ದೇಹಸ್ಥಿತಿಯು ಕೆಟ್ಟಿರುವುದು

→← →←

* * *

ಇದರ ಫಲ ನಮ್ಮ ಒಬ್ಬನು ನವುಕರಿಗೆ ಹೋಗುವಾಗ್ಗ ಜಪಾನಿನಲ್ಲಿ ೫೦ ಜನರು ಉದ್ಯೋಗ ಹೊಂದುವರು ಜಪಾನಿನ ಸರಕನ್ನು ೫೦ ಜನರು ಇಲ್ಲಿಗೆ ಕಳುಹುವಾಗ ಇಲ್ಲಿನ ೫೦ ನವುಕರರೂ ತಾವು ದುಡಿದುದರಿಂದ ಅವರಿಗೆ ಕೊಡುವರು ೫೦ ನವುಕರರು ಇಲ್ಲಿ ದುಡಿಯುವಾಗ ಜಪಾನಿನಲ್ಲಿ ೫೦ x ೫೦ ಜನರು ಸಾಮಾನು ತಯಾರಿಸುವರು ಇತ್ಯಾದಿ ಇತ್ಯಾದಿ ನಮ್ಮ ಅಭ್ಯುದಯವು ಯುನಿವರ್ಸಿಟಿಗಳಿಂದ ಚೆನ್ನಾಗಿ ಸಾಗುತ್ತಲಿದೆ

• • • •

ಗಡಂಗಿನ ಅನುಕೂಲತೆಗಾಗಿ ಸಂಯುಕ್ತ ಪ್ರಾಂತ್ಯದಲ್ಲಿ ಸರಕಾರವು ಸೌಕರ್ಯವನ್ನುಂಟುಮಾಡುತ್ತಿದೆ ಅಲ್ಲಾಹಬಾದಿನಲ್ಲಿ ೭ ಗಡಂಗುಗಳಿದ್ದುವು, ಇನ್ನು ೧೧ ಆಗಬೇಕೆಂದು ಸರಕಾರದ ಅಪ್ಪಣೆ ಅಲ್ಲಿ ೭—೧೧ ಆಗುವಂತಾದುದಕ್ಕೂ ಇದೇ ಕಾರಣವೆ?

→← →←

ನೋಟಗಳು

NOTE....S

ಇಂಡಿಯದ ಹಕ್ಕು ಸಿಗದಂತೆ, ನುಖಂಡರನ್ನು ಜೈಲು ಪಾಲು ಮಾಡಿ, ಬಾಗಿಲು ಭದ್ರವಾಗಿಟ್ಟರೆ, ಇಂಗ್ಲೆಂಡಿನ ಕಾರ್ಖಾನೆಗಳ ಯಂತ್ರಗಳನ್ನು ಮಣ್ಣುಪಾಲು ಮಾಡಿ ಬಾಗಿಲು ಭದ್ರ ಮಾಡಿದಂತಾಯಿತು—ಎಂದು ಐರಿಷ್ ಪ್ರೆಸ್ ಪತ್ರಿಕೆ ಹೇಳುತ್ತಿದೆ.

• • • •

ಓರ್ಡಿನೆನ್ಸುಗಳ ಜ್ಯಾರಿಯಾದಂದಿನಿಂದ ವ್ಯಾಪಾರ ವಹಿವಾಟುಗಳು ಉತ್ತಮವಾಗುತ್ತ ಬರುತ್ತವೆ ಎಂದು ಪಾರ್ಲಿಮೆಂಟಿನಲ್ಲಿ ಸರ್ ಸಾಮುವೇಲ್ ಹೋರರು ನಂಬಿಸಿ ನುಡಿದ ರಿಕಾರ್ಡು ವಾಕ್ಯವು ಈ ಪತ್ರಿಕೆಗೇನು ಗೊತ್ತು? ಐರ್ಲೆಂಡಿಗೂ ಇಂಗ್ಲೆಂಡಿಗೂ ಚರ್ಚೆ ಎದ್ದುದಕ್ಕಾಗಿ ಈಗ ಹೀಗೆ ಅಸಂಬದ್ಧ ನುಡಿಯುವುದು ಸರಿಯೆ ?

• • • •

ಮೂವರು ನೆಲ್ಲೂರಲ್ಲಿ ಗಡಂಗು ಪಕೆಟ ಮಾಡಿದರು, ಪೋಲೀಸರು ಅವರನ್ನು ಓರ್ಡಿನೆನ್ಸು ಪ್ರಕಾರ ಕೈದು ಮಾಡಿದರು, ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಪ್ರತಿಯೊಬ್ಬನಿಗ ೮೦೦ ರೂಪಾಯಿ ಜುಲ್ಮಾನೆ ಮಾಡಿದರು.

• • • •

ಅಪ್ಪೀಲಾಯಿತು ಸೆಶನ್ಸು ಜಡ್ಜರು ಅವರ ಮೇಲೆ ತಕ್ಸೀರಿಲ್ಲವೆಂದರು ಯಾವ ಕಾಂಗ್ರೆಸ್ ಕಮಿಟಿಗೂ ಅವರು ಸೇರಿದ್ದಿಲ್ಲವಂತೆ ಮಾತಿನ ಆಧಾರವಲ್ಲದೆ, ಇತರ ರುಜುವಾತು ಇಲ್ಲದೆ ಪೋಲೀಸರು ಹೂಡಿದ ಮೊಕದ್ದಮೆಯಲ್ಲಿ ತಕ್ಸೀರು ತೋರುವುದಿಲ್ಲ' ಎಂದು ಜಡ್ಜರ ತೀರ್ಪು ತಕ್ಸೀರೇ ಇಲ್ಲ, ಅದು ಕಾರಣ ದಂಡನೆ ತೆಗೆದು ಹಾಕಲಾಯಿತು ಅವರನ್ನು ಇಷ್ಟು ದಂಡಿಸಿದ್ದು ಸಾಕೆಂದು - ರುಸಪಟ್ಟು, ಕಾಗದ ಪತ್ರಗಳ ವಿಕಾರ್ಯವನ್ನು ದಯಾಳುಗಳು ಹರಾಜು ಮಾಡಿಲ್ಲವೇನೋ!

• • • •

ಶೌಕತ್ ಅಲಿಯವರು ಒಂದನೇ ವಜಸ್ಸಿನಲ್ಲಿ ವಿವಾಹ ಮಾಡಿಕೊಂಡ ಯುವಕರ ವಿವಾಹದ ಫಲ,—ಇವರ ಚಟುವಟಿಕೆಗಳು ಇನ್ನು ಆ ದೇಶದಲ್ಲಿಲ್ಲ, ದೂರದ ಅರಬೀದೇಶದಲ್ಲಿ ಪತ್ನಿಯೊಡಗೂಡಿ ಹಗ್ಗ ಬಿಡಯುಂಗ್ಯದು ಇಂಡಿಯಾ ಪುರಾಣ ಕಥನ ಮಾಡುವರ

• • • •

ಇಂಡಿಯದಲ್ಲಿ ಇವರ ಪ್ರಚಾರ ಕಾರ್ಯಕ್ಕೆ ಇನ್ನು ಅಸ್ಪದವಿಲ್ಲವೇ? ಅಥವಾ, ಮಿಸ್ ಮೇಯೊ, ಚರ್ಚಿಲ್ ಬರ್ಕನಹೆಡ್ ಲಾರ್ಡರು ಮೊದಲಾದ ಪ್ರಚಾರಕರು ಪೂರ್ಣ ಸತ್ಯವನ್ನು ತಿಳಿಸ ಹೋಗಿ, ಇನ್ನೂ ಹೇಳದೆ ಬಿಟ್ಟಿರುವ ವಿಷಯಗಳನ್ನು ಇವರೇ ತಿಳಿಸಬೇಕಾಗಿದೆಯೆ?

• • • •

ಒಂಧಮುಕ್ತರಿಗೆ ಸಹಾಯಕ ಸಂಘದವರು ಮುಂಬಾಯಿಯಲ್ಲಿ ಕಳೆದ ವರ್ಷ ೬೦೩ ಕೈದಿಗಳಿಗೆ ಅವರು ಜೈಲಿನಿಂದ ಹೊರಬಿದ್ದ ಕೂಡಲೇ ರೂಪಾಯಿ ೬೫೭—೧೧—೦ನ್ನು ಸಹಾಯ ಮಾಡಿದರು, ತಲೆಗೆ ಒಂದು ರೂಪಾಯಿ ಮೀರಿದಂತಾಯಿತು

• • • •

೬೦೩ ಜನರಿಗೆ ರೂಪಾಯಿ ೬೫೭ ಸಹಾಯ ಮಾಡುವ ಸಂಘದ ಆಫೀಸಿನ ಸಿಬ್ಬಂದಿಯ ಖರ್ಚು ೧೪೦೯ ರೂಪಾಯಿ, ಇವರು ಎಷ್ಟು ಮಂದಿ ಎಂದು ಗೊತ್ತಾಗಿಲ್ಲ ಇನ್ನೂ ಇದೆ, ಇದೇ ಆಫೀಸಿನ ಖರ್ಚು ಒಟ್ಟಾಗಿ ರೂಪಾಯಿ ೪೬೩೦! ಸಹಾಯಕ್ಕಾಗಿ ಉಂಟಾದ ಸಂಘದ ಒಟ್ಟು ಖರ್ಚಿನ ರೂಪಾಯಿಯಲ್ಲಿ ಎರಡಾಣೆ ಕೈದಿಗಳಿಗೆ, ಅಬ್ಬಬ್ಬಾ, ಇವರು ಎಂತಹ ಕೈದಿಗಳು! ಎರಡಾಣೆ ದೊರತುದೇ ಅವರ ಪುಣ್ಯ

• • • •

ಮದ್ರಾಸಿನ ಕೂಲಿಕಾರರಿಗೆ ಉಪದೇಶ 'ದುಡಿಮೆಯ ಕಾಲಾಂಶವನ್ನಾದರೂ ಉಳಿಸುವವನೇ ವಿವೇಕಿಯು' ಪ್ರಶ್ನೆ - ಉಳಿಸಬೇಕಾದುದರ ಕಾಲಾಂಶದಷ್ಟು ಕಾರ್ಖಾನೆಯವರು ನುಜೂರಿ ಕೊಡದಿದ್ದರೆ, ಎಷ್ಟು ಉಳಿಸಿದರೆ ವಿವೇಕಿಯೆನಿಸಬಹುದು?

• • • •

ಜಪಾನಿನ ೩೬ ಯುನಿವರ್ಸಿಟಿಗಳಲ್ಲಿ ೩೦ ಉದ್ಯೋಗ ಶಿಕ್ಷಣ ಕೊಡುವುವು, ೬ ಮಾತ್ರ ನಮ್ಮ ಯುನಿವರ್ಸಿಟಿಗಳಂತೆ ಪುಸ್ತಕ ಪಾಠಕ್ಕಿವೆ ನಮ್ಮ ದೇಶದಲ್ಲಿ ೧೭ ಯುನಿವರ್ಸಿಟಿಗಳಿವೆ, ಉದ್ಯೋಗ ಶಿಕ್ಷಣದ ಯುನಿವರ್ಸಿಟಿಗಳೇ ಇಲ್ಲ.

1. Good Riding Quality.
2. Gripping Tread
3. Economical wear.
4. Maximum Resistance to shock.

These are a few points in the construction of Tires.
But they are the only points which earn you money & save you money.

THESE ARE

Seiberling's Exclusive Quality.



TRIED & PROVED.

USE A Seiberling Tube

IN

A Seiberling Tire.

You cannot find a better combination.

ಅನುಕ್ರಮಣಿಕೆ.

ಅಗ್ರಲೇಖ

ಹಳ್ಳಿಗಳ ಸಂಘಟನೆ . . . .

ಸ್ಫುಟವಿಚಾರಗಳು . . . ೪

ಸೂಚನೆಗಳು . . . . . . ,,

ವರ್ತಮಾನ ಸಂಗ್ರಹಗಳು

ವಿದೇಶ ವರ್ತಮಾನ ೮

ಒಳದೇಶ ವರ್ತಮಾನ . . ೬-೭

ದಕ್ಷಿಣ ಕನ್ನಡ — ಮಂಗಳೂರು, ಉಡುಪಿ, ಕಾರ್ಕಳ, ಕಾಸರಗೋಡು, ಕಿನ್ನಿಗೋಳಿ, ಕುಂಬಳೆ ,,

ಜೈ ಇಂಡಿಯನ್ ಲೀಗ್ . ೧೪

ವಿವಿಧ ಸಮಾಚಾರಗಳು . . ೯

ಪತ್ರವ್ಯವಹಾರ . ೨

ಸರೋಜಿನಿಯವರಿಗೆ ಒಂದು ವರ್ಷ! ಮಾಲವೀಯರ ಬಂಧನ! ೧೨

ಸ್ವದೇಶಾಭಿಮಾನಿ.

ತಾ. ೨೯ನೇ ಶುಕ್ರವಾರ ಏಪ್ರಿಲ್ ೧೯೩೨

ಹಳ್ಳಿಗಳ ಸಂಘಟನೆ.

ಈ ವಿಶಾಲವಾದ ಹಿಂದೂದೇಶದ ಉದ್ಧಾರವು ಹಳ್ಳಿಗಳ ಮೂಲಕವಾಗಬೇಕಲ್ಲದೆ, ಪಟ್ಟಣಗಳ ಸುಧಾರಣೆಗಳಿಂದಲ್ಲ ವೆಂಬುದು ಈಗ ಸಾಮಾನ್ಯ ಎಲ್ಲರೂ ತಿಳಿದಿರುವರು. ಪಟ್ಟಣಗಳ ಆಧಾರವು ಯಂತ್ರಗಳು, ಕೈಗಾರಿಕೆಗಳು. ಆದರೆ ಹಳ್ಳಿ ಆಧಾರವು ಕೃಷಿ ಕೈಗಾರಿಕೆ ಮತ್ತು ಯಂತ್ರಗಳಿಂದ ದೇಶದ ಮೇಲೆ ಯಾವ ಪರಿಣಾಮವು ಉಂಟಾಗುತ್ತದೆಂದು ಈಗಿನ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕವನ್ನು ನೋಡಿದರೆ ತಿಳಿಯುವುದು. ಯಂತ್ರ ರಚನೆಯು ಹೆಚ್ಚಿದಂತೆ ಮನುಷ್ಯರಿಗೆ ಕೆಲಸ ಕಡಿಮೆಯಾಗಿ ನಿರುದ್ಯೋಗ ಸಮಸ್ಯೆಯು ಬೆಳೆದಿದೆ. ಧಾಂಡಿಗರಾದ ಕೈಯೊಳಗೆ ದುಡ್ಡು ಜಮೆಗೊಂಡು, ನಿರುದ್ಯೋಗಿಗಳ ಕೃಪೆಯಿಂದಾಗಿ ಕೃಷಿ ಉತ್ಪನ್ನಗಳು ಹೆಚ್ಚಿದರೂ, ಅವುಗಳಿಗಾಗಿ ಹಸಿವ ಒಡ ನಿರುದ್ಯೋಗಿಗಳಿಗೆ ಅವು ತಲ್ಪುವ ಬದಲು, ಬಂಡವಲಗಾರರಿಂದ ಕೃಷಿ ಉತ್ಪನ್ನದ ಗಿರಾಕಿಗಳು ಕಡಿಮೆಯಾಗಿ ಅವುಗಳ ಬೆಲೆ ಬಿದ್ದು ಹೋಗಿ ಹೇರಳ ನಷ್ಟವಾಗುವುದೆಂಬ ಹೆದರಿಕೆಯಿಂದ ಅವು ಸುಡಲ್ಪಡುತ್ತಿವೆ. ಒಂದು ಕಡೆಯಲ್ಲಿ ಕೆಲಸವಿಲ್ಲದ ನಿರುದ್ಯೋಗಿಗಳು ಹಸಿವಿನ ಸಂಕಟದಿಂದ ಒಳಲುವುದು. ಇನ್ನೊಂದು ಕಡೆಯಲ್ಲಿ ದುಡ್ಡಿನ ನಷ್ಟವಾಗುವುದೆಂದು ಧನವಂತರು, ಹಸಿವನ್ನು ತಣಿಸಬಲ್ಲ ಕೃಷಿ ಉತ್ಪನ್ನಗಳನ್ನು ನಾಶಪಡಿಸುವುದು. ಇದಕ್ಕಿಂತ ಭೀಕರ ದೃಶ್ಯವು ಪ್ರಪಂಚದಲ್ಲಿ ಇನ್ನೊಂದಿರಲಾರದು.

ಇಂತಹ ಅವಮಾನದ ಪರಿಸ್ಥಿತಿಯು ನಮ್ಮ ದೇಶಕ್ಕೆ ಒದಗಬಾರದೆಂದೂ ಯಂತ್ರೋಪಯೋಗವು ಅವಶ್ಯಕತೆಯನ್ನು ವಿಚಾರಿಸಬಾರದೆಂದೂ, ಕೃಷಿಗೆ ಹೆಚ್ಚಿಗೆ ಪ್ರೋತ್ಸಾಹವೀಯಬೇಕೆಂದೂ ಮನೆ ಕೈ ಕೆಲಸ—ಗುಡಿಸಲು ಕೈಗಾರಿಕೆ—Cottage Industries—ಇವುಗಳೇ ಹಿಂದೂಸ್ಥಾನದ ರಾಷ್ಟ್ರೀಯ ಜೀವನದ ಆಧಾರವಾಗಿರಬೇಕೆಂದೂ ಆಗ ಮಾತ್ರವೇ ಹಿಂದೂಸ್ಥಾನವು ತನ್ನ ವಾಣಿಜ್ಯಕ್ಕಾಗಿ, ತನ್ನ ಅರ್ಜನೆಗಾಗಿ, ತನ್ನ ಆರ್ಥಿಕ ಅಭಿವೃದ್ಧಿಗಾಗಿ—ಇತರ ಪಾಶ್ಚಾತ್ಯ ರಾಷ್ಟ್ರಗಳು ಹೊಂದಿಕೊಂಡಿರುವಂತೆ—ಪರರಾಷ್ಟ್ರಗಳ ಮೇಲೆ ಹೊಂದಿಕೊಂಡಿರಬಾರದೆಂದೂ ಹಿಂದೂಸ್ಥಾನದ ಪ್ರಮುಖರ ಅಭಿಪ್ರಾಯವಿರುತ್ತದೆ. ಹಿಂದೂಸ್ಥಾನವು ತನ್ನ ಆರ್ಥಿಕ ಜೀವನ ಕ್ರಮವನ್ನು ಈ ರೀತಿಯಲ್ಲಿ ವ್ಯವಸ್ಥೆಗೊಳಿಸಬಲ್ಲದಾದರೆ, ಇತರ ರಾಷ್ಟ್ರಗಳ ಮೇಲೆ ಸ್ಪರ್ಧೆಯ ದೃಷ್ಟಿಯನ್ನು ಹಾಕಬೇಕೆಂದಿರುವುದಿಲ್ಲ. ಪಾಶ್ಚಾತ್ಯರೊಳಗೆ ಉಂಟಾಗಿರುವ ಸಾಮ್ರಾಜ್ಯಾಭಿಲಾಷೆಯ ಮೂಲ ಕಾರಣವು ಅವರ ಅತೀವ ಸ್ಪರ್ಧೆಯಿಂದಾದ ಅಸಂತುಷ್ಟಿಯು ಸಾಂಪತ್ತಿಕ ಪರಿಸ್ಥಿತಿಯಾಗಿರುತ್ತದೆ. ಪ್ರತಿ ರಾಷ್ಟ್ರವೂ ನೆರೆಯವರನ್ನು ಸೌಹಾರ್ದದಿಂದ ನೋಡಿ, ಧನ ಸಂಗ್ರಹದ ಅಭಿಲಾಷೆಯನ್ನು ಬಿಟ್ಟು ಆಹಾರ ವಸ್ತ್ರ ಮೊದಲಾದ ವಸ್ತುಗಳ ಸರಿಯಾದ ವಿತರಣೆಯನ್ನು ಕೈಕೊಂಡರೆ, ಜನಾಂಗ ಜನಾಂಗಗಳೊಳಗೆ ಸ್ಪರ್ಧೆಯಾಗಲಿ, ಸಾಮ್ರಾಜ್ಯ ವಿಸ್ತರಣೆಯ ಲೋಭವಾಗಲಿ ಅವಶ್ಯವೇ ಇರುವುದಿಲ್ಲ.

ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕವು ಸಾಧಾರಣ ಹಿಂದೂಸ್ಥಾನದಂತೆಯೇ ಇದೆ. ಅದಕ್ಕೆ ತನ್ನ ಕೈಗಾರಿಕೆಗಳ ಬಗ್ಗೆ ಬೇಕಾದ ಸಾಮಗ್ರಿಗಳು ಅಲ್ಲಿಯೇ ದೊರಕುತ್ತವೆ. ಕೃಷಿ ಉತ್ಪನ್ನವು ಆಹಾರ ವಸ್ತುಗಳು ಇತ್ಯಾದಿ ಅಲ್ಲಿನ ಜನ ಸಂಖ್ಯೆಗೆ ಬೇಕಾಗುವಷ್ಟು ಅಲ್ಲಿ ಉಂಟಾಗುತ್ತವೆ. ಆದರೂ ಈ ಯಂತ್ರಯುಗದ ಮೋಹಕ್ಕೆ ಬಿದ್ದು ಯುನೈಟೆಡ್ ಸ್ಟೇಟ್ಸು ಆರ್ಥಿಕ ಸುವ್ಯವಸ್ಥೆಯ ಹಾದಿಯನ್ನು ಬಿಟ್ಟಿತು. ಕೆಲಕಾಲಕ್ಕೆ ಯುನೈಟೆಡ್ ಸ್ಟೇಟ್ಸಿನಲ್ಲಿ ಎಲ್ಲಿ ನೋಡಿದರೂ ಸಮೃದ್ಧಿಯು ಕಾಣಲಾರಂಭಿಸಿತು. ಈ ಮೊದಲು ಲೋಕದಲ್ಲಿ ಶ್ರೀಮಂತರೆಂದರೆ ಲಕ್ಷಾಧೀಶರೆನ್ನಿಸುತ್ತಿದ್ದರು, ಆದರೆ ಮಿಲಿಯಾಧೀಶರೆಂಬ ಶಬ್ದವನ್ನು ಉಂಟು ಮಾಡಿದವರು ಅಮೇರಿಕದವರು. ಎಲ್ಲರೂ ಅಮೇರಿಕದ ಸಮೃದ್ಧಿಯನ್ನು ನೋಡಿ ಅಮೇರಿಕದ ಅನುಕರಣವೇ ಸಮೃದ್ಧಿಗೆ ಸಾಧನವೆಂದು ತಿಳಿದರು. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿ, ಪಾಶ್ಚಾತ್ಯರೆ—ಅಮೇರಿಕದಲ್ಲಿ ಯಂತ್ರಯುಗವು ಪರಮಾವಧಿಯನ್ನು ಮುಟ್ಟಿತು, ಯಂತ್ರೋಪಯೋಗವೇ ಅಮೇರಿಕದ ಪತನಕ್ಕೆ ಕಾರಣವಾಗುವುದು—ಎಂದು ಹೇಳುವರು.

ಹಿಂದೂಸ್ಥಾನವು ಇವೆಲ್ಲ ಅನುಭವದ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಪಟ್ಟಣಗಳ ವಾಣಿಜ್ಯದ ಅವಶ್ಯಕತೆಗಳಾಗಿ ರಚಿಸಲ್ಪಡಬೇಕೇ ಹೊರತು ರಾಷ್ಟ್ರೀಯ ಜೀವನದ ಕೇಂದ್ರವಾಗಿ ಮಾಡಲ್ಪಡಕೂಡದು. ಕೃಷಿಯು ಅಭಿವೃದ್ಧಿಗೊಳ್ಳಬೇಕು. ಸಾಧ್ಯವಿದ್ದ ಮಟ್ಟಿಗೆ ಕೈಗೆಲಸಗಳಿಗೆ ಪ್ರೋತ್ಸಾಹವೀಯಬೇಕು. ಇದಕ್ಕೆಲ್ಲ ಹಳ್ಳಿಗಳನ್ನು ಸಂಘಟಿಸುವುದು ಅವಶ್ಯಕ. ಒಂದು ಸಮಯದಲ್ಲಿ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಇದಕ್ಕೆ ಬಹಳ ಪ್ರಾಮುಖ್ಯತೆ ಕೊಡಲ್ಪಟ್ಟಿದ್ದಿತು. ಆದರೆ ರಾಜಕೀಯ ತೊಂದರೆಗಳ ಮಧ್ಯದಲ್ಲಿ ಇದನ್ನು ಮುಂದರಿಸುವುದು ಕಷ್ಟಸಾಧ್ಯವಾದಂತೆ ತೋರುತ್ತಿದೆ.

ಆದರೂ ಕೆಲಕಡೆಗಳಲ್ಲಿ ಗ್ರಾಮ ಸಂಘಟನೆಯ ಬಗ್ಗೆ ಪ್ರಯತ್ನಗಳು ನಡೆಯುವುದು ಆನಂದದ ಸಂಗತಿಯಾಗಿದೆ. ನಮ್ಮ ಜಿಲ್ಲೆಯಲ್ಲಿಯೇ ಕೋಲಂಬೆ, ಕುಂದಾಪುರ ಜಿಲ್ಲೆಗಳಲ್ಲಿ ಸ್ಥಾಪಿಸಲ್ಪಟ್ಟಿರುವ "ಒಕ್ಕಲಿಗರ ಸಮಿತಿ" ಎಂಬುದು ಇಂತಹ ಉದ್ದೇಶಗಳಿಗಾಗಿ ಯತ್ನಿಸುವುದಾಗಿ ಕಂಡುಬರುತ್ತಿದೆ. ಇಂತಹ ಸಮಿತಿಗಳಿಗೆ ಎಲ್ಲರೂ ಪ್ರೋತ್ಸಾಹಿಸುವುದು ಅವಶ್ಯಕವಲ್ಲದೆ, ಇಂತಹ ಸಮಿತಿಗಳು ಎಲ್ಲೆಲ್ಲಿಯೂ ಸ್ಥಾಪಿಸಲ್ಪಡುವಂತೆ ಯತ್ನಿಸುವುದೂ ಅಗತ್ಯವಿದೆ.

ಅಂತೂ ರಾಜಕೀಯ ವಿಚಾರದಲ್ಲಿ ಆಸಕ್ತರಿರದೆ ರಾಷ್ಟ್ರೀಯ ಸೇವೆಯನ್ನು ಮಾಡಲಿಚ್ಛಿಸುವವರು ಇಂತಹ ಅತ್ಯಾವಶ್ಯಕ ಚಳವಳಿಗಳನ್ನೇರ್ಪಡಿಸಿದರೇನೇ ದೇಶದ ಉನ್ನತಿಯು ಸಾಧಿಸಲ್ಪಡುವುದು.

ವಿದೇಶ ವರ್ತಮಾನ.

— ಅಮೇರಿಕದಲ್ಲಿ ೧೯೩೧ರಲ್ಲಿ ರಫ್ತಾದ ಸಾಮಾನುಗಳ ಕ್ರಯವು ೨,೪೩೩,೯೮೧,೦೦೦ ಡೊಲ್ಲರುಗಳು. ಅಂದರೆ ಕಳೆದ ವರ್ಷ ರಫ್ತಾದುದಕ್ಕಿಂತ ಶೇಕಡಾ ೩೭ರಷ್ಟು ಕಡಿಮೆ.

— ಇಟೆಲಿಯ ಕನ್ಸಲರಾದ ಸೀನ್ಯೊರ್ ಜೋನಾ ಪಿಕ್ಕೊ ಎಂಬವರು ಇಲ್ಲಿನೋಯಿ ಎಂಬಲ್ಲಿ ಒಂಭತ್ತು ವರ್ಷ ಪ್ರಾಯದ ತನ್ನ ಮಗನೊಡನೆ, ಸಹೋದರನ ಮನೆಯಿಂದ ಹಿಂದಿರುಗುವಾಗ ಮಾರ್ಗದಲ್ಲಿ ಒಬ್ಬ ಸೈನಿಕನಿಂದ ಕೊಲೆಮಾಡಲ್ಪಟ್ಟರು. ಹುಡುಗನು ಸುರಕ್ಷಿತನಾಗಿರುವನು.

— ಲಂಡನಿನಲ್ಲಿ ಪಾರ್ಲಿಮೆಂಟು ಸಭೆಯಲ್ಲಿ ಮಿ. ಮೋರ್ಗನ್ ಜೋನ್ಸ್ ಎಂಬವರು ದಿಲ್ಲಿಯಲ್ಲಿ ನಡೆದ ಕೈದುಗಳ ಕುರಿತು ಪ್ರಶ್ನಿಸಲಾಗಿ ಸರ್ ಸಾಮುವೆಲ್ ಹೋರರು ಪ್ರತ್ಯುತ್ತರವಾಗಿ ಕಾಂಗ್ರೆಸ್ಸು ನಿಷಿದ್ಧ ಸಂಸ್ಥೆಯಲ್ಲವೆಂದೂ ಅದರ ಸಭೆಕೂಟಗಳು ಕಾಯ್ದೆಬಾಹಿರವೆಂದೂ ಹೇಳಿದರು. ಮತ್ತು ಕಾಂಗ್ರೆಸಿನ ನಿಷಿದ್ಧ ಚಟುವಟಿಕೆಗಳನ್ನು ತಡೆಗಟ್ಟುವುದಕ್ಕಾಗಿ ದಿಲ್ಲಿಯಲ್ಲಿ ಬಂಧನಗಳು ನಡೆದುದು ಸರಿಯೆಂದೂ ಹೇಳಿದ್ದಾರೆ.

— ಹಿಂದೀಯ ಮುಖಂಡರಾದ ಗಾಂಧಿಜೀಯವರೊಡನೆ ಸಂಧಿ ಮಾಡಿದುದ ಬಹಳ ಸಂಟಕಗೇಡು ಸಂಗತಿಯೆಂದೂ, ಕ್ರಾಂತಿಕಾರರಿಗೆ ಹೆದರಿ ನಡೆದ ಗಾಂಧಿಅರ್ವಿನ್ ಸಂಧಿಗೆ ಬೆಲೆಯಿಲ್ಲವೆಂದೂ ಮಿ. ವಿನ್ಸೆಂಟ್ ಒಡ್ವಾಯರ ಮಹಾಶಯರ ಭಾಷಣ! ಇಂಗ್ಲಾಂಡಿನಲ್ಲಿ ಒಡ್ವಾಯರರೆಂದರೆ ಪ್ರಸಿದ್ಧ ಪುರುಷರು.

— ಚೀನಾ ಜಾಪಾನರೊಳಗಣ ಒಪ್ಪಂದಕ್ಕೆ ಪುನಃ ಒಂದು ಒಡಕು ತಟ್ಟಿದಂತಿದೆಯೆಂದೂ, ಇಂತಿಷ್ಟೇ ಸಮಯದ ಅವಧಿಯೊಳಗೆ ಜಾಪಾನರ ಸೈನ್ಯವು ಶಾಂಘೈಯಿಂದ ಹಿಂತೆರಳಬೇಕೆಂದು ನಿರ್ಧರಿಸಿದುದರಿಂದ ಜಾಪಾನರಿಗೆ ಸಂತೋಷವಿಲ್ಲವೆಂದೂ ತಿಳಿದುಬಂದಿದೆ.

ಒಳದೇಶ ವರ್ತಮಾನ

ಗುಜರಾಥ್ ವಿದ್ಯಾಪೀಠದ ಮಾಜೀ ಸ್ಪಿನ್ನಿಂಗ್ ಉಪಾಧ್ಯಾಯರಾಗಿದ್ದ ಶ್ರೀ ಮಹುಲಿಕಾರ್ ಎಂಬವರ ಮಗನಿಗೆ ಅಹ್ಮದಾಬಾದಿನಲ್ಲಿ ಉಪನಯನವು ನಡೆಯಿತು. ಆ ಬಗ್ಗೆ ಸೆರೆಮನೆಯಲ್ಲಿರುವ ಮಹಾತ್ಮಾಜೀಯವರಿಗೊಂದು ಆಮಂತ್ರಣವು ಹೋಗಿದ್ದಿತು. ಮಹಾತ್ಮಾ ಗಾಂಧಿಯವರು ಮಹುಲಿಕಾರರಿಗೊಂದು ಪತ್ರವನ್ನು ಬರೆಯುತ್ತಾ "ಜನಿವಾರ ಹಾಕುವ ಸಮಾರಂಭದಲ್ಲಿ ನನಗೆ ಈಗಿನ ಕಾಲದಲ್ಲಿ ಭರವಸೆಯಿಲ್ಲ. ಅದು ಒಂದು ವೇಳೆ ಅಗತ್ಯವೆಂದಾದರೆ ಅದನ್ನು ಹುಡುಗನ ಪ್ರೌಢಾವಸ್ಥೆಯಲ್ಲಿ ಮಾಡಬೇಕು. ಜನಿವಾರವನ್ನು ಧರಿಸುವುದೆಂದರೆ ಹೊಸ ಜೀವನಕ್ಕಾರಂಭಿಸುವುದು. ಅಂದಿನಿಂದ ಮೊದಲುಗೊಂಡು ಸ್ವಯಂಸ್ಫೂರ್ತಿ ಮತ್ತು ಸೇವೆಯ ಜೀವನಕ್ರಮವನ್ನು ಸಾಗಿಸಲು ಪ್ರಯತ್ನವನ್ನು ಮಾಡಬೇಕು" ಎಂದರು.

— ಕೊಲೊಂಬೋದ ಗೋಲ್ ಎಂಬಲ್ಲಿ ಬಹಳ ಶ್ರೀಮಂತ ಚೆಟ್ಟಿಯೊಬ್ಬರು ಮನೆಯಲ್ಲಿ ಕುಳಿತು ಜನಾನೆಯಲ್ಲಿದ್ದ ನೋಟಿನ ಮೂಟೆಯನ್ನು ತನ್ನ ಎದುರಿಗಿಟ್ಟು ಅದನ್ನು ಸಂತೋಷದಿಂದ ಲೆಕ್ಕ ಮಾಡುತ್ತಿದ್ದರು. ಒಡನೆ ಢಂ ಎಂಬ ಶಬ್ದ. ಅರು ಮಂದಿ ದರೋಡೆಕಾರರು ಅವರ ಕಣ್ಣೆದುರಿನಲ್ಲಿ. ಆದರೆ ಚೆಟ್ಟಿಯಾರರು ಹಣವಲ್ಲೆಷ್ಟು ಭಟ್ಟಿಯೋ ಅಷ್ಟೇ ಧೈರ್ಯ ದೇಹದಲ್ಲಿಯೂ ಇದ್ದುದರಿಂದ ದರೋಡೆಕಾರರಿಗಳ ಪೆಟ್ಟು ತಿಂದು ಬೊಬ್ಬೆ ಹಾಕಿ, ಅವರನ್ನು ಓಡಿಸಿಬಿಟ್ಟರು. ೧೦ ರೂಪಾಯಿಯ ಒಂದು ನೋಟು ಮಾತ್ರ ದರೋಡೆಕಾರರ ಒಟ್ಟಿಗೆ ಹೋಯಿತೆಂದು ತಿಳಿದುಬಂದಿದೆ.

ಮದ್ರಾಸಿನಲ್ಲಿ ಮಂತ್ರವಾದಿಯಾಗಿ ಜೀವಿಸುತ್ತಿದ್ದ ಮುಗೇಶ ಮುದಲಿಯಾರ್ ಎಂಬವನೊಬ್ಬನು ದೈವವಶಾತ್ ಕುಮಾರಸ್ವಾಮಿ ಎಂಬೊಬ್ಬ ಮದ್ಯ ಮಾರುವವನ ಅಂಗಡಿಯಲ್ಲಿ ಗುಮಾಸ್ತನಾಗಿ ನೇಮಿಸಲ್ಪಟ್ಟನು. ಮಂತ್ರವಾದಿಯು ಅಂಗಡಿಗೆ ಹೊಕ್ಕಂದಿನಿಂದ ಮೊದಲ್ಗೊಂಡು ವ್ಯಾಪಾರಕ್ಕೆ ಕಷ್ಟ. ಅವನು ಮಕ್ಕಳು ಮರಿಗಳು ತೀರಿಕೊಂಡರು. ಇದರ ಕಾರಣವೇನೆಂದು ಭಕ್ತಿಯೊಡನೆ ಕೇಳಲು ಅಂಗಡಿಯಲ್ಲಿರುವ ಮಂತ್ರಗಾರನ ಕುತಂತ್ರದ ಮಂತ್ರದ ಫಲವೆಂದೂ ಅವನ ಮಾಟಗಾರನನ್ನು ತೊಲಗಿಸಿದರೆ ಅವನ ಸ್ವತಃ ಹಲ್ಲುಗಳು ಸಿಗಬೇಕೆಂದೂ ತಿಳಿದು ಬಂತು. ಇದನ್ನು ಕೇಳಿ ಗಾಬರಿಯಾದ ಮರುದಿನ ತನ್ನ ಮಗನೊಡಗೂಡಿ ಮುಗೇಶನ ಕತ್ತನ್ನು ಹಿಸುಕಿಕೊಂಡು ಅವನ ಹಲ್ಲುಗಳನ್ನು ತೆಗೆದನು. ಪೋಲೀಸರು ತನಿಖೆ ನಡೆಸುತ್ತಿರುವರು.

— ಹೊಸತಾಗಿ ಯುರೋಪಿಯನ್ ಅಸೋಸಿಯೇಶನಿನ ಅಧ್ಯಕ್ಷರಾದ ಪ್ರಖ್ಯಾತ ಮಿ। ಕಿಲ್ಲಿಯರ್ಡ್ ದೊರೆಗಳು ಮೊನ್ನೆ ತಾ. ೨೨ನೇ ದಿನ ಲಂಡನಿಗೆ ತೆರಳಿದರು.

— ಮದರಾಸಿನಲ್ಲಿ ಮಹಾತ್ಮ ನಿರ್ಲಕ್ಷದ ಕಥೆಯೊಂದು ಹೊರಬಿದ್ದಿದೆ. ಮಧ್ಯರಾತ್ರಿಯಲ್ಲಿ ಮೊದಲು ಪೋಲೀಸು ಇನ್‌ಸ್ಪೆಕ್ಟರನಾಗಿದ್ದು ನಿವೃತ್ತಿಹೊಂದಿದ ಒಬ್ಬ ಪ್ರಾಯಸ್ಥನು ತನ್ನ ಮಿತ್ರರು ಕೆಲವರಿಗೆ ಬೈರಾಗಿ ವೇಷ ಹಾಕಿಸಿ ತನ್ನ ಮನೆಯ "ಮಹಾತ್ಮ"ನೆಂದು ಪ್ರಕಟಿಸಿ ಊರೂರು ತಿರುಗಿ ನಾಗರಿಕರ ಧನಿಕರ ಹಣವನ್ನು ಲಪಟಾಯಿಸಿದನು. ಒಂದು ನೋಟನ್ನು ಎರಡು ಮಾಡಿಕೊಡುವೆನೆಂದು ನೋಟುಗಳ ಕಟ್ಟುಗಳನ್ನು ತೆಗೆದುಕೊಂಡು ಅವುಗಳನ್ನು ಪಕ್ಕದಿಂದ ಹೊರಸಾಗಿಸಿಕೊಂಡು ಒಳಗಿನ ನೋಟುಗಳ ಬದಲು ಕಾಗದ ಚೂರುಗಳನ್ನು ಗಂಟು ಕಟ್ಟಿಕೊಟ್ಟು ಅದನ್ನು ಪೂಜಾ ಮಂದಿರದಲ್ಲಿ ಇಡಬೇಕೆಂದು ಹೇಳಿ ಪಲಾಯನ ಮಾಡಿ ಅನೇಕ ಜನರನ್ನು ಮೋಸಗೊಳಿಸಿದ ಇವನನ್ನು ಹಿಡಿದು ವಿಚಾರಿಸುತ್ತಿದ್ದಾರೆ.

— ಇದೇ ತಾ. ೧೬ರಲ್ಲಿ ಮುಂಬಯಿ ನಗರದ ಕೋಟೆಯೊಳಗಣ ಕೇಶವ ಬಾಗದ ಬಳಿ ಸುರತ್ಕಲ್ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಮಂಡಳಿಯು ಶ್ರೀಗಳಾದ ವಾಮನರಾಯರ ಚಿತ್ತಾಕರ್ಷ ಭಾಗವತಿಗೆಯಲ್ಲಿ 'ಕೃಷ್ಣಾರ್ಜುನ ಪ್ರಸಂಗವನ್ನು ಬಯಲಾಟ' ರೂಪದಲ್ಲಿ ಸರಸವಾಗಿ ಪ್ರದರ್ಶಿಸಿದರು. ಅಂದು ಸೇರಿದ ಪ್ರೇಕ್ಷಕವೃಂದದಿಂದ ಹರಿವಾಣದಲ್ಲಿ ಕೂಡಿದ ಹಣದಿಂದ ಖರ್ಚು ಕಳೆದುಳಿದ ರೂ ೪೧-೬-೯ನ್ನು ಮುಂಡಕಿಯ ಹೃಸ್ವಗಾರರಾದ ಬಿ. ಅಮ್ಮಣ್ಣನವರ ಮುಖಾಂತರ ಬ್ರಹ್ಮ ಶ್ರೀ ಸ್ವಾಮಿ ಶಿವಾನಂದ ಪರಮಹಂಸರಿಂದ ಸ್ಥಾಪಿಸಲ್ಪಟ್ಟ ತಿರುವನಂತಪುರದ ಸಿದ್ಧಾಶ್ರಮದ ಸಹಾಯಾರ್ಥವಾಗಿ ದಾನವಿತ್ತಿರುವರು. ಮುಂಬಯಿಯಲ್ಲಿ ನೆಲಸಿರುವ ಕನ್ನಡಿಗರು ಮಾತೃಭಾಷೆಯು ಹಾಗೂ ಸಮಾಜಸೇವೆಯನ್ನು ಬಿಡದೆ ಆಚರಿಸುವುದು ದಕ್ಷಿಣ ಕನ್ನಡಕ್ಕೆ ಗೌರವವೇ ಸರಿ.

ಮದರಾಸಿನಲ್ಲಿ ಕಳೆದ ಬುಧವಾರ ದಿನ ಶ್ರೀ ಕುಪ್ಪುಸ್ವಾಮಿ ಗ್ರಾಮನಿ ಎಂಬವನು ಇಬ್ಬರು ಪೋಲೀಸರ ಪೆಟ್ಟಿಗೆ ಆಹುತಿಯಾದನು. ಅವನ ಮರಣ ಕಾಲವು ಸಮೀಪಿಸುತ್ತಿದ್ದುದನ್ನು ನೋಡಿ ಆಸ್ಪತ್ರೆಯ ಅಧಿಕಾರಿಗಳು ಮೆಜಿಸ್ಟ್ರೇಟರೊಬ್ಬರನ್ನು ಕರೆದು ಸಾಯುತ್ತಿದ್ದವನ ಅಂತ್ಯೋಕ್ತಿಗಳನ್ನು ಬರೆಯಿಸಿಕೊಂಡರು. ಇಬ್ಬರು ಪೋಲೀಸರು ತನಗೆ ಬಲವಾಗಿ ಹೊಡೆದರೆಂದೂ, ತನ್ನ ಬೆನ್ನಲ್ಲಿರುವ ಘಾಯವನ್ನು ಅವರೇ ಉಂಟುಮಾಡಿದರೆಂದೂ ಮರಣೋನ್ಮುಖನು ನುಡಿದನು. ತನಿಖೆಯು ನಡೆಯುತ್ತಲಿದೆ.

ದಕ್ಷಿಣ ಕನ್ನಡ

ಮಂಗಳೂರು:— ೬ನೇ ಅಖಿಲ ಕರ್ನಾಟಕ ಹಿಂದೀ ಪರಿಷತ್ತು ಸದ್ಯ ಹಿಂದಕ್ಕಿರಿಸಲ್ಪಟ್ಟಿದೆಯಾದರೂ ಅದನ್ನು ಜರಗಿಸುವ ದಿನವನ್ನು ಸಾರ್ವಜನಿಕರಿಗೆ ಮುಂದೆ ತಿಳಿಸಲಾಗುವುದು ಆ ಸಂಬಂಧ ಶೇಖರಿಸಲ್ಪಟ್ಟಿದ್ದ ರೂ ೩೪೧–೧೪—೯ರಲ್ಲಿ ಮುದ್ರಣ, ಸ್ಟೇಶನರಿ, ಟಪ್ಪಾಲು ವೆಚ್ಚ ತಂತಿ ವೆಚ್ಚಗಳಿಗಾಗಿ ತಗಲಿದ ರೂ ೧೦೮–೧೧–೩ ಕಳೆಯಲ್ಪಟ್ಟು ಬಾಕಿ ಮೊಬಲಗು ರೂಪಾಯಿ ೨೩೩ ೩ ನ್ನು ತನ್ನ ಹೆಸರಿನಲ್ಲಿ ವಿಜಯ ಬೇಂಕಿನಲ್ಲಿ ಮುಂದಿನ ವೆಚ್ಚಕ್ಕಾಗಿ ಠೇವಣಾತಿಯಾಗಿ ಇಡಲ್ಪಟ್ಟಿದೆಯೆಂದೂ, ವಂತಿಗೆಗಳನ್ನು ಕೊಟ್ಟ ಮಹಾಶಯರಿಗೆ ತನ್ನ ಧನ್ಯವಾದಗಳೆಂದೂ ಸ್ವಾಗತ ಸಮಿತಿಯ ಚೆಯರ್‌ಮೇನರಾದ ಶ್ರೀಮತಿ ಎನ್ ಲಲಿತಾಬಾಯಿ ಸುಬ್ಬರಾಯರು ಬರೆಯುತ್ತಾರೆ

ತಾ ೨೩–೪ '೩೨ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೯೯ ಜನನಗಳೂ ೧೬ ಮರಣಗಳೂ ಆಗಿವೆ

ದಕ್ಷಿಣ ಕನ್ನಡ ಜಿಲ್ಲಾ ಕುಂದಾಪುರ ಮತ್ತು ಉಡುಪಿ ತಾಲೂಕು ಲೋಕಲ್ ಬೋರ್ಡುಗಳ ಬಗ್ಗಿನ ಪ್ರಾಥಮಿಕ ಇಲೆಕ್ಟರ ರೋಲ್ಸು ಪ್ರಕಟವಾಗಿದೆ, ಅದರಲ್ಲಿ ತಪ್ಪಿರುವ ಹೆಸರುಗಳ ಕುರಿತು ಆಕ್ಷೇಪಣೆಗಳಿದ್ದವರು ಮೊದಲನೆಯ ಪಟ್ಟಿಗೆ ಇದೇ ತಾರೀಖು ೩೦–೪–೩೨ ರೊಳಗೆ ಮತ್ತು ಎರಡನೆಯದಕ್ಕೆ ತಾ ೪–೫–೩೨ರೊಳಗೆ ಆಂಥ ಆಕ್ಷೇಪಣೆಗಳನ್ನು ಆಫೀಸರರಿಗೆ ದಾಖಲು ಮಾಡಬಹುದೆಂದು ಇಲೆಕ್ಷನ್ ಆಫೀಸರರು ಬರೆಯುತ್ತಾರೆ

ಮಂಗಳೂರು ಮುನಿಸಿಪಾಲಿಟಿಯ ಒಂದು ಸಭೆಯು ಮೇ ತಾ ೨ನೇ ದಿನ ೫–೩೦ಕ್ಕೆ ಜರಗಲಿರುವುದು

ತಾ ೨೪ನೇ ದಿನ ಸೆಂಟ್ರಲ್ ಮೈದಾನಿನಲ್ಲಿ ಬೆಳಿಗ್ಗೆ ಇಬ್ಬರು ಸ್ವಯಂಸೇವಕರು ಧ್ವಜಾರೋಹಣಮಾಡಿದರು ಪೋಲೀಸರು ಒಂದು ಧ್ವಜವನ್ನೆಳೆದುಕೊಂಡು ಪೆಟ್ಟು ಕೊಟ್ಟರು ನಾಲ್ವರು ದಸ್ತಗಿರಿ ಮಾಡಲ್ಪಟ್ಟು ರಾತ್ರಿ ಬಿಡಲ್ಪಟ್ಟರು

ಇಲ್ಲಿಯ ಶ್ರೀ ಕೃಷ್ಣಸಿನೆಮಾದಲ್ಲಿ ತಾ ೩೦ನೇ ದಿನ ರಾತ್ರಿ ೯–೩೦ಕ್ಕೆ ಅಮೇರಿಕದ ಸುಪ್ರಸಿದ್ಧ ನರ್ತಕಿಯಾದ ಶ್ರೀ ರಾಗಿಣೀ ದೇವಿಯು ಗಾಯನ ನರ್ತನವಿದೆ ಒಂದೇ ರಾತ್ರಿ ಶ್ರೀ ರಾಗಿಣಿದೇವಿಯೆಂದರೆ ಅಂಗ್ಲ ಮತ್ತು ಹಿಂದೀಯರಿಂದ ಪ್ರಶಂಸಿಸಲ್ಪಟ್ಟವರು ಹಿಂದೀಯ ನರ್ತನಕಲೆಯನ್ನು ವಿದೇಶಿಯರಿಗೆ ತಿಳಿಯಿಸಿದವರಲ್ಲಿ ಇವಳೆ ಗಣ್ಯಳು

ನಿನ್ನೆ ಬೆಳಿಗ್ಗೆ ಸುಮಾರು ೯ ಘಂಟೆಗೆ ಶ್ರೀಮತಿ ಸುಶೀಲಾಬಾಯಿ ಮತ್ತು ಸಂಜೀವಿಬಾಯಿ ಎಂಬವರು ಶಾನ್ಭೋಗರ ಅಂಗಡಿಯಲ್ಲಿ ಪಹರೆ ನಡೆಸಿದರು ಸ್ವಲ್ಪ ಸಮಯದಲ್ಲೇ ಒಬ್ಬ ಸಬ್ ಇನ್ಸ್‌ಪೆಕ್ಟರು ಬಂದು ಅವರನ್ನು ಕೈದು ಮಾಡಿ ಸ್ಟೇಶನಿಗೆ ಕೊಂಡೊಯ್ದರು ಆ ಮೇಲೆ ಶ್ರೀ ಗಳಂದ ತಿಮ್ಮಪ್ಪ ಶೇಟ್ ಮತ್ತು ಕೆ ತ್ಯಾಂಪಣ್ಣ ಶೆಟ್ಟಿ (ಇಂಟರ್ ವಿದ್ಯಾರ್ಥಿ) ಪಹರೆಗೆ ನಿಂತರು ಸುಮಾರು ಅರ್ಧ ತಾಸಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಮಿ ರವಣ್ಣನವರು ಪೋಲೀಸ ಬಸ್ಸಿನೊಡನೆ ಬಂದರು ಪಹರೆಗಾರರಿಗೆ ಸುಮಾರು ೧೦ ಪೆಟ್ಟಿನಂತೆ ಬೆತ್ತದಿಂದ ಹೊಡೆದು ಸುಮಾರು ೫೦ ಮಾರುಗಳ ವರೆಗೆ ದೂಡಿ ಪೋಲೀಸರು ಸುತ್ತುಗಟ್ಟಿ ನಿಂತರು ಕೂಡಲೇ ರಾಮಯ್ಯಶೆಟ್ಟಿ ಮತ್ತು ಉಗ್ಗಪ್ಪಯ್ಯರೆ ಎಂಬಿಬ್ಬರು ಸ್ವಯಂಸೇವಕರು ಪಹರೆಗೆ ನಿಂತರು ಅವರನ್ನೂ ಅದೇ ರೀತಿ ಹೊಡೆದು ದೂಡಿ ಎಳೆದೊಯ್ದು ಹಿಂದಿನವರೊಡನೆ ನಿಲ್ಲಿಸಿದರು ಆ ಮೇಲೆ ಶೇಷ ಶಿವಸ್ತಿ ಮತ್ತು ಪುರುಷೋತ್ತಮ ಕಾಮತ್ತರು ಪಹರೆಗೆ ನಿಲ್ಲಲು ಅವರಿಗೂ ಅದೇ ರೀತಿ ಮಾಡಿದರು ಮತ್ತೆ ಒಬಯಶೆಟ್ಟಿ ಮತ್ತು ಐತಪ್ಪ ಮೆಂಡನ್ ಇವರಿಬ್ಬರು ಪಹರೆಗೆ ನಿಂತರು ಅವರಿಗೂ ಹಾಗೆಯೇ ಮಾಡಿ ಸುಮಾರು ೧೨ ಘಂಟೆಯಾಗಲು ಸ್ವಯಂಸೇವಕರಲ್ಲಿ ೫ ಜನರನ್ನು ಮಾತ್ರ ಕೈದು ಮಾಡಿ ಸ್ಟೇಶನಿಗೊಯ್ದು ಉಳಿದವರನ್ನು ಬಿಟ್ಟರು

ಇತ್ತ ಸಾಧಾರಣ ೧೧ ಘಂಟೆಗೆ ಆರ್ ಬಿ ವಸಂತರಲ್ಲಿ ನಾರಾಯಣ ಕರುಣಾಕರ, ಮತ್ತು ಲಕ್ಷ್ಮಣ ಮೆಂಡನ್ ಎಂಬಿಬ್ಬರು ಸ್ವಯಂಸೇವಕರು ಪಹರೆ ಮಾಡಿದರು ಪೋಲೀಸರು ಅಲ್ಲಿಯೂ ಬಂದು ಅವರನ್ನು ಹೊಡೆದು ದೂರ ದೂಡಿದರು

ರಥಬೀದಿಯಲ್ಲಿ ಮಾಧವ ಶಿಂಗಳಾಯ ಮತ್ತು ಇನ್ನೊಬ್ಬ ಸ್ವಯಂಸೇವಕರು ಮುಲ್ಕಿಕಾರರಲ್ಲಿ ಹಾಗೆಯೇ ಹತ್ತಿರದ ೨ ೩ ಅಂಗಡಿಗಳಲ್ಲಿ ಪಹರೆ ಮಾಡಲು, ಅಂಗಡಿ ಮುಚ್ಚಿದ್ದರಿಂದ ಪಹರೆಯವರು ಹೋದರು

ಸಾಯಂಕಾಲ ಶ್ರೀ ಶಾಸ್ತ್ರಿಯವರಲ್ಲಿ ಎರಡೆರಡು ಮಂದಿಯ ೬ ತಂಡ ಸ್ವಯಂಸೇವಕರು ಪಹರೆ ನಡೆಸಿದರು (೧) ನಾರಾಯಣ ಬಂಗೇರ, (೨) ಕಾಂತಪ್ಪ ಮೆಂಡನ್, (೩) ಬಿ ರಾಮ, (೪) ಎಚ್ ರಾಮಪ್ಪ, (೫) ಎಸ್ ಬ್ಲಾಬು ಶೆಟ್ಟಿ, (೬) ಎಚ್ ನಾರಾಯಣ, (೭) ಬಿ ಶಿವಪ್ಪ (೮) ಶಂಕರ ಶೆಟ್ಟಿ, (೯) ಲೊರೆನ್ಸ ಫ್ರಾನ್ಸಿಸ್, (೧೦) ಲಕ್ಷ್ಮಣ ಕುಂದರ್, (೧೧) ಲಕ್ಷ್ಮೀನಾರಾಯಣ, (೧೨) ಎಮ್ ಬಾಬು ಮುತ್ತ ಇನ್ನಿಬ್ಬರು.

ಸಾಯಂಕಾಲದವರೆಗೆ ಬೆಳಿಗ್ಗಿನವರಂತೆಯೇ ಹೊಡೆಯುವುದೂ ದೂಡುವುದೂ ಆಯಿತು. ಸಾವಿರಾರು ಜನರು ದೂರದಲ್ಲಿ ನಿಂತು ನೋಡುತ್ತಿದ್ದರು. ಸಾಯಂಕಾಲದ ಹೊಡೆತವು ಸ್ವಲ್ಪ ಬಲ. ಕೆಲವು ಬಂದಿ ಸ್ವಯಂಸೇವಕರನ್ನು ಮದ್ರಾಸ್ ಲೋಜಿನ ವರೆಗೆ ದೂಡಿ ಅಲ್ಲಿ ಕೂಡ ಹೊಡೆದರು. ಕೊನೆಗೆ ಸುಮಾರು ೬ ಘಂಟೆಗೆ ಶ್ರೀ ಶಾಸ್ತ್ರಿಯವರು ಸಹಿಸಲಾರದೆ ಅಂಗಡಿಗೆ ಬಾಗಿಲು ಹಾಕಿ ಹೊರಟುಹೋದರು ಕೈದುಮಾಡಿದ ಸ್ವಯಂಸೇವಕರನ್ನೂ ದೇಶಸೇವಿಕೆಯರನ್ನೂ ಸಂಜೆ ೬ ಘಂಟೆಗೆ ಬಿಟ್ಟರು ದೇಶಸೇವಿಕೆಯರಿಗೆ ಊಟ ಕೊಟ್ಟಿರುವರಾಗಿಯೂ ಸ್ವಯಂಸೇವಕರಿಗೆ ಊಟ ಪಗೈರೆ ಕೊಡಲಿಲ್ಲವೆಂದೂ ತಿಳಿದುಬರುತ್ತದೆ

ಎಚ್ಚೆತ್ತ ಉಡುಪಿ

(ಉಡುಪಿಯ ಬಾತಮಿದಾರರಿಂದ)

ಕೆಲವು ತಿಂಗಳ ಮೊದಲು ನಿದ್ರಾವಸ್ಥೆಯಲ್ಲಿದ್ದ ಉಡುಪಿಯು ಈಗ ಅನೇಕ ವಿಧದಿಂದ ಎಚ್ಚರಗೊಂಡು ಜನರ ಮನಸ್ಸನ್ನು ಕಂಪಾಯಮಾನಗೊಳಿಸುತ್ತಿದೆ ಈ ವರ್ಷ ಶ್ರೀ ಸೋದೆಮಠದ ಶ್ರೀಪಾದಂಗಳವರು ಗದ್ದಿಗೆಯನ್ನು ಏರಿದಂದಿನಿಂದ ಶ್ರೀಕೃಷ್ಣನು ಅಸಮಾಧಾನಪಟ್ಟಿ ಹಾಗಿದೆ ಪರಿಯಾಯ ದಿವಸವೇ ರಾತ್ರಿ ಬ್ರಹ್ಮರಥೋತ್ಸವ ಸಮಯದಲ್ಲಿ ಮದ್ದುಸುಡುವಾಗ ಭೀಮನಕಟ್ಟೆ ಮಠದ ಚಪ್ಪರಕ್ಕೆ ಬೆಂಕಿ ಹಿಡಿಯಿತು. ಅನಂತರ ಇಪ್ಪತ್ತರ ವರೆಗೆ ೨–೩ ಸಾರಿ ಶ್ರೀ ಕೃಷ್ಣ ದೇವರ ಕೆಲಸಕ್ಕೆ ಉಂಟಾದ ಅಂಗಳದಲ್ಲಿ ಅಲ್ಪ ಪ್ರಮಾಣದಲ್ಲಿ ಬೆಂಕಿಯ ಅನಾಹುತ ಉಂಟಾಯಿತು. ಈಗಲಾದರೂ ಪ್ರತ್ಯಕ್ಷ ಹಾಗೆ ಹರ್ಷ ಮಾಡುವ ಗೊಂದಲವು ಪ್ರಾರಂಭವಾಗಿದೆ ಮದ್ರಾಸಿನಿಂದ ಆಂಧ್ರ ಪತ್ರಿಕೆಯ ಪ್ರತಿನಿಧಿಯಾಗಿ ಇಲ್ಲಿಗೆ ಪರಿಯಾಯ ಸಮಯಕ್ಕೆ ಬಂದ ಶ್ರೀ ಆರ್ ಕರಾಜು ಸುಬ್ರಾಯ ಶರ್ಮ ಎಂಬವರು ಇಲ್ಲಿಯ ಕೆಲವು ಮಠಾಧಿಪತಿಗಳ ಅಂತರಂಗ ವರ್ತಮಾನಗಳನ್ನು ಕೇಳಿ ಧರ್ಮಜಾಗ್ರತಿಗಾಗಿ ತಾನು ಹೆಣಗಾಡುವೆನೆಂದು ಇಲ್ಲಿಯೇ ಕಳೆದ ೪ ತಿಂಗಳಿಂದಲೂ ವಾಸಮಾಡಿಕೊಂಡಿದ್ದಾರೆ ಇವರ ವ್ಯಾಖ್ಯಾನಗಳಿಂದುಂಟಾದ ಜಾಗ್ರತಿಯ ವರ್ತಮಾನವು ಆಗಾಗ್ಗೆ ನಮ್ಮ ಜಿಲ್ಲೆಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಶ್ರೀಯುತ ಶರ್ಮರು ಒಳ್ಳೇ ವಿದ್ಯಾವಂತರಾಗಿದ್ದು ಧರ್ಮಶಾಸ್ತ್ರವನ್ನು ಬಲ್ಲವರೆಂಬುದು ಅವರ ವ್ಯಾಖ್ಯಾನಗಳಿಂದ ತಿಳಿಯಬಹುದು ಇಲ್ಲಿಯ ಶಿವಳ್ಳಿ ಬ್ರಾಹ್ಮಣರು ಇವರನ್ನು ದೂಷಿಸುತ್ತಾ ತಿರಸ್ಕರಿಸುತ್ತ—ತಾವು ಸ್ವತಃ ಹೇಳಿದ್ದರೂ ಅನ್ಯರುಗಳ ಹೆಸರಿನಲ್ಲಿ ಬರೆಯಿಸುವುದು ಅವರಿಗೆ ರುಚಿಸಲಿಲ್ಲ ಸನ್ಯಾಸಿಗಳ ಅಂತರಂಗದ ವರ್ತನೆಗಳನ್ನು ಬಹಿರಂಗವಾಗಿ ಸಭೆಯಲ್ಲಿ ಟೀಕಿಸಿದರು. ಸನ್ಯಾಸಿಗಳು ಬರೇ ಕೌಪೀನಧಾರಿ ಸನ್ಯಾಸಿಗಳಾಗದೆ ಐಶ್ವರ್ಯಸಂಪನ್ನರಾಗಿರುವ ಕಾರಣ ಶರ್ಮರನ್ನು ಈಗ ನಿರ್ನಾಮಗೊಳಿಸಲು ಬದ್ಧಕಂಕಣರಾಗಿರುವಂತೆ ತೋರುತ್ತದೆ ಪಬ್ಲಿಕ್ ಸ್ಥಳವಾದ ರಥಬೀದಿಯಲ್ಲಿ ಶರ್ಮರ ವಿಾಟಿಂಗು ನಡೆಯಕೂಡದಂತೆ ಇದಕ್ಕಾಗಿ ಕೆಲವು ಜನರಿಂದ ಪೋಲೀಸರಿಗೂ ಕಲೆಕ್ಟರವರಿಗೂ ಅರ್ಜಿಗಳಾಗಿರುವವಂತೆ

ಮೊನ್ನೆ ತಾ ೨೪ರಲ್ಲು ಸಾಯಂಕಾಲ ವಿಾಟಿಂಗಿಗೆ ಪ್ರಾರಂಭವಾಯಿತು ಈ ದಿವಸ ದಂಗೆಯಾಗಲಿದೆ ಎಂಬ ವರ್ತಮಾನವು ಊರಲ್ಲೆಲ್ಲಾ ಹಬ್ಬಿದುದರಿಂದ ಪೋಲೀಸರು ಅಲ್ಲಲ್ಲಿ ತಿರುಗುತ್ತಿದ್ದರು ಸರ್ಕಲ್ ಇನ್ಸ್‌ಪೆಕ್ಟರ್ ಲೋಟಿಯವರಲ್ಲಿಗೆ ಕಾರು ತೆಗೆದುಕೊಂಡು ಜನ ಹೋಯಿತು ಕಾರಿನಲ್ಲಿ ಮಂಗಳೂರಿನ ಪ್ರಸಿದ್ಧ ಪುರುಷರಾದ ಕಂಬಳದ ವಾದಿರಾಜರೂ ಇನ್ಸ್‌ಪೆಕ್ಟರೂ ಒಟ್ಟಿಗೆ ವಿಾಟಿಂಗಿನ ಸ್ಥಾನಕ್ಕೆ ಬಂದರು ಇನ್ಸ್‌ಪೆಕ್ಟರು ಸಮೀಪವಿರುವ ಪ್ರತ್ಯೇಕ ಮಠದ ಜಗಲಿಯ ಮೇಲೆ ಕುಳಿತರು ವಾದಿರಾಜರು ಲೆಕ್ಚರ್ ಕೊಡುತ್ತಿದ್ದ ಶರ್ಮರನ್ನು ಮಾತನಾಡಬಾರದಾಗಿ ತಡೆದರು. ಶರ್ಮರು ಎಷ್ಟು ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ ವಾದಿರಾಜರು ಬಲಾತ್ಕಾರದಿಂದ ಶರ್ಮರ ಕೈಯಲ್ಲಿದ್ದ ಧಾರ್ಮಿಕ ಚಿನ್ಹವಾದ ಕಾಷಾಯ ವಸ್ತ್ರದ ಬಾವಟೆಯನ್ನು ಕಿತ್ತುಕೊಂಡರು. ಅವರ ರಿಕಾರ್ಡು ಪುಸ್ತಕವು ಕಾಣೆಯಾಯಿತು. ಇಷ್ಟಾದ ಮೇಲೆ ಪ್ರತ್ಯೇಕ ಮಠದ ಜಗಲಿಯಿಂದ ನೋಡುತ್ತಿದ್ದ ಇನ್ಸ್‌ಪೆಕ್ಟರ ಸವಾರಿಯು ಅಲ್ಲಿಗೆ ಬಂದು ನಗುತ್ತಾ ಶರ್ಮರನ್ನು ಹೆಗಲ ಮೇಲೆ ಕೈಹಾಕಿ ಪೋಲೀಸ ಸ್ಟೇಶನಿಗೆ ಕರೆಕೊಂಡು ಹೋಗಿ ಅಲ್ಲಿ ಅವರ ಸ್ಟೇಟ್‌ಮೆಂಟನ್ನು ತೆಗೆದುಕೊಂಡರಂತೆ ಇರಲಿ ಬಲಾತ್ಕಾರ ನಡೆಸಿದ ವಾದಿರಾಜರ ವಿಚಾರವೇನು?

ತಾ ೨೫ ೪–೩೨ರಲ್ಲಿ ತಿರಿಗಿ ಶರ್ಮರ ವಿಾಟಿಂಗು ಇದೆಯಾಗಿ ಬಹಿರಂಗವಾಗಿ ನೋಟೀಸು ಕೊಟ್ಟರು. ಇಷ್ಟರಲ್ಲಿ ಅವರ ಮೇಲೆ ನೋಟೀಸು ಜ್ಯಾರಿಯಾಗಿ ಇವರನ್ನೂ ಇವರ ಮೇಲೆ ಅರ್ಜಿ ಕೊಟ್ಟ ಮಠದ ಕಡೆಯ ಜನರ ಕ್ಷಯೂ ಮೇಜಿಸ್ಟ್ರೇಟ ಕೋರ್ಟಿನಲ್ಲಿ ನಡೆಯಿತು ತನ್ನ ಸಮಯದಲ್ಲಿ ಇನ್ಸ್‌ಪೆಕ್ಟರರು—ಬಾವಟೆ, ಪುಸ್ತಕ ರಿಕಾರ್ಡು ಮೊದಲಾದ್ದನ್ನು ವಾದಿರಾಜರು ಎಳಕೊಂಡದ್ದು ತಾನು ನೋಡಲಿಲ್ಲವಾಗಿಯೂ, ಅಲ್ಲಿ ತಾನು ಇದ್ದಿಲ್ಲವಾಗಿಯೂ ಹೇಳಿದರಂತೆ ಪಾಪ ಮದ್ರಾಸಿನ ಶರ್ಮರಿಗೆ ಉಡುಪಿಯಲ್ಲಿ ಕೇಳುವವರಾರು? ಅವರ ಹತ್ತಿರ ಖರ್ಚಿಗೆ ಹಣವಿದೆಯೋ? ಸತ್ಯವಿದ್ದರೆ ಪ್ರಯೋಜನವೇನು? ಲೋಟಿಯವರು ೧೪೪ನೇ ಸೆಕ್ಷನ್ ಶರ್ಮರವರಿಗಾಗಿ ಉಡುಪಿಯಲ್ಲಿ ಜ್ಯಾರಿ ಮಾಡಲು ತಾನು ಪೋಲೀಸ ಸುಪರಿಂಟೆಂಡೆಂಟ್ ಇವರಿಗೆ ರಿಪೋರ್ಟು ಮಾಡಿರುವೆನಾಗಿ ತನ್ನ ಸಮಯ ಹೇಳಿರುವರಂತೆ ಮುಂದೇನಾಗಲಿದೆಯೋ ನೋಡಲಿದೆ

